# ತಿರುಮಲೆಯ ಆಲಯ

ಆಂಗ್ಲಮೂಲ - ಡಾ॥ ಎನ್. ರಮೇಶನ್ ಐ.ಎ.ಎಸ್.

ಎಂ.ಎ.ಪಿಎಚ್.ಡಿ., ಎಫ್ಆರ್.ಎ.ಎಸ್. (ಲಂಡನ್)

ಅನುವಾದ : ಬಿ.ಎನ್. ಶ್ರೀನಿವಾಸನ್

ಪ್ರಕಟನ ವಿಭಾಗ

ತಿರುಮಲ - ತಿರುಪತಿ ದೇವಸ್ಥಾನಗಳು

ತಿರುಪತಿ.

# TIRUMALEYA ALAYA (Kannada)

*Translated by:*

**B.N. Srinivasan**

*Original:*

**The Tirumala Temple** (English)

*by:*

Dr. N.Rameshan, I.A.S.,

© All Rights Reserved

*First Print:* 2016

*Copies:* 500

*Published by:*

**Dr. D. Sambasiva Rao, I.A.S.,**
Executive Officer,
Tirumala Tirupati Devasthanams,
Tirupati.

*D.T.P. Type Setting:*
Chief Editor's Office, TTD,Tirupati.

*Cover Design:* B. Gurukumar Reddy

*Photo setting:* P. Sivasankar Reddy

*Photos:* Markondaiah

*Printed at:*
Prajasakti Daily Printing Press
Renigunta Road,
Tirupati.

# ಪ್ರಕಾಶಕರ ಮಾತು

ತಿರುಮಲೆಯ ಆಲಯದ ಶ್ರೀವೆಂಕಟೇಶ್ವರಸ್ವಾಮಿ ಕಲಿಯುಗದ ಪರಮ ದೈವವೆಂದೂ, ನಭೂತೋ ನಭವಿಷ್ಯತಿ ಎಂದೂ ಪ್ರಸಿದ್ಧಿ ಪಡೆದಿರುವುದು ಜಗದ್ವಿದಿತವೇ ಆಗಿದ್ದು, ದಕ್ಷಿಣ ಭಾರತದ ಎಲ್ಲ ರಾಜ್ಯಗಳಿಂದಲೂ ಯಾತ್ರಿಕಭಕ್ತರು ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಸ್ವಾಮಿಯ ದರ್ಶನಕ್ಕೆಂದು ತಿರುಮಲೆಯತ್ತ ಪ್ರತಿದಿನ ಸಾಗಿ ಬರುತ್ತಿರುವರು. ಸ್ವಾಮಿಯ ಚರಿತ್ರೆಯನ್ನು, ಸ್ಥಳಪುರಾಣವನ್ನು ಕುರಿತು ತಿಳಿಯುವ ಆಸಕ್ತಿ, ಭಕ್ತಿ ಶ್ರದ್ಧೆಗಳು, ಇಲ್ಲಿಗೆ ಯಾತ್ರಾರ್ಥಿಗಳಾಗಿ ಬರುವರಿಗೂ ವಿವಿಧ ಪ್ರದೇಶಗಳಲ್ಲಿರುವ ವಿವಿಧ ಭಾಷಿಗರಿಗೂ ಇರುವುದು ಸಹಜವೇ ಆಗಿದೆ.

ಶ್ರೀ ವೆಂಕಟೇಶ್ವರಸ್ವಾಮಿಯನ್ನು ಕುರಿತು ಹತ್ತು ಪುರಾಣಗಳೂ, ಸಾವಿರ ಶಾಸನಗಳೂ, ನೂರಾರು ಲಿಖಿತ ದಾಖಲೆಗಳೂ ಉಂಟು ಎಂದರೂ, ಅವುಗಳೆಲ್ಲ ಒಟ್ಟಿಗೆ ಒಂದು ಕಡೆ ದೊರೆಯುವ, ಒಂದು ಪರಿಪೂರ್ಣ ಚಿತ್ರವನ್ನು ಕಟ್ಟಿಕೊಡುವ ಪ್ರಯತ್ನ 20ನೆಯ ಶತಮಾನದಲ್ಲಿ ಮಾತ್ರವೇ ನಡೆಯಿತು ಎನ್ನಬೇಕು. ಇಲ್ಲಿನ ಪುರಾಣ ಪ್ರಶಂಸೆಗಳೂ, ಶಾಸನ ಪ್ರಶಸ್ತಿಗಳೂ, ವಿಶೇಷ ಅಧ್ಯಯನಗಳೂ, ನಡೆದ ಮೇಲೆ ತಿರುಮಲೆಯ ಆಲಯವನ್ನು, ಆದರ ಸ್ವಾಮಿಯನ್ನು ಕುರಿತು ಆಂಗ್ಲಭಾಷೆಯಲ್ಲಿ ಹಲವು ಕೃತಿಗಳು ಹೊರಬಂದವು. ಅದರಲ್ಲಿ ಐ.ಎ.ಎಸ್. ಅಧಿಕಾರಿಯಾಗಿ, ತಿರುಮಲ ತಿರುಪತಿ ದೇವಸ್ಥಾನಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಉದ್ದಾಮ ಪಂಡಿತರಾದ ಡಾ॥ ಎನ್. ರಮೇಶನ್ ಅವರ 'ದಿ ತಿರುಮಲೆ ಟೆಂಪಲ್' ಒಂದು ವಿಶಿಷ್ಟ ಕೃತಿ ಎಂದು ಪರಿಗಣಿತವಾಗಿದೆ.

ಕನ್ನಡ ಸಪ್ತಗಿರಿಯ ಉಪಸಂಪಾದಕರಾಗಿ ಕಾರ್ಯನಿರ್ವಹಿಸಿದ ಶ್ರೀ ಬಿ.ಎನ್. ಶ್ರೀನಿವಾಸನ್ ಅವರು, ಡಾ॥ ಎನ್. ರಮೇಶನ್ ಐ.ಎ.ಎಸ್. ಆವರ ಆಂಗ್ಲ ಪುಸ್ತಕವನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಸಪ್ತಗಿರಿಯಲ್ಲಿ ಧಾರಾವಾಹಿಯಾಗಿ ಪ್ರಕಟವಾದ ಈ ಕೃತಿ ಪುಸ್ತಕರೂಪದಲ್ಲಿ ಪ್ರಸ್ತುತ ಪ್ರಕಟವಾಗುತ್ತಿದೆ. ಇದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ.

ಶ್ರೀವೆಂಕಟೇಶ್ವರ ಸ್ವಾಮಿಯನ್ನು ತಿಳಿದುಕೊಳ್ಳಬೇಕೆಂಬ ಜಿಜ್ಞಾಸು ಭಕ್ತರಿಗೆ ಈ ಪುಸ್ತಕ ಪ್ರಿಯವಾಗು ವುದೆಂದು ಆಶಿಸಲಾಗಿದೆ.

**ಕಾರ್ಯನಿರ್ವಹಣಾಧಿಕಾರಿ**

**ತಿ.ತಿ. ದೇವಸ್ಥಾನಗಳು, ತಿರುಪತಿ.**

# ಪ್ರಧಾನ ಸಂಪಾದಕರ ಮುನ್ನುಡಿ

ತಿರುಮಲೆ ಸ್ವಾಮಿಯನ್ನು ಕುರಿತ ಮೂಲಾಧಾರದ ಪುಸ್ತಕಗಳೆಂದರೆ ಸಂಸ್ಕೃತದಲ್ಲಿನ ವೇಂಕಟಾಚಲಮಹಾತ್ಮ್ಯ - ತಿರುಮಲೆ ಆಲಯದ ಶಾಸನಗಳು, ಸಾಹಿತ್ಯ ಸಂಗೀತ ಕೃತಿಗಳು, ದೇಶ ವಿದೇಶದ ಚಾರಿತ್ರಿಕ ದಾಖಲೆಗಳು - ಇವೆಲ್ಲದರ ವಿವರಣೆ ವಿಶ್ಲೇಷಣೆ ಆದದ್ದು ಬಹುತೇಕ ಆಂಗ್ಲಭಾಷೆಯಲ್ಲಿ. ಕನ್ನಡದಲ್ಲಿ ಶ್ರೀನಿವಾಸರಾವ್ ಕೊರಟಿ, ಆದ್ಯರಾಮಾಚಾರ್ಯ ಮುಂತಾದವರು ಬರೆದಿರುವುದುಂಟಾದರೂ ಅವು ಸಂಗ್ರಹವಾದವುಗಳಾಗಿ ಎಸ್.ಕೆ. ರಾಮಚಂದ್ರರಾಯರು ರಚಿಸಿದ ತಿರುಪತಿ ತಿಮ್ಮಪ್ಪ - (ಈ ಪುಸ್ತಕ ಸಾಹಿತ್ಯ ಅಕಾಡಮಿಯ ಪ್ರಶಸ್ತಿಯನ್ನು ಪಡೆದಿದೆ.) ಉದ್ಗ್ರಂಥವೆಂಬ ಹೆಸರು ಪಡೆದದ್ದು.

ಡಾ॥ ಎನ್. ರಮೇಶನ್ ಆಂಗ್ಲಭಾಷೆಯಲ್ಲಿ ಸಂಪಾದಿಸಿದ ಗ್ರಂಥ "ದಿ ತಿರುಮಲ ಟೆಂಪಲ್" 1980ರಲ್ಲಿ ಪ್ರಕಟವಾಯಿತು. ಇದರ ಮೂಲಗಳು ಎಂದರೆ ಸಾಧು ಸುಬ್ರಹ್ಮಣ್ಯಶಾಸ್ತ್ರಿಗಳ ತಿ.ತಿ.ದೇ. ಶಾಸನ ವರದಿ, ಟಿ.ಕೆ.ಟಿ. ವೀರರಾಘವಾಚಾರ್ಯರ "ಹಿಸ್ಟರಿ ಆಫ್ ತಿರುಪತಿ". ಸೀತಾಪತಿ ಐ.ಎ.ಎಸ್. ಅವರ ಶ್ರೀ ವೆಂಕಟೇಶ್ವರ ಮುಂತಾದ ಕೃತಿಗಳು. ಇವೆಲ್ಲಕ್ಕಿಂತ ಮುಂಚೆ ಖ್ಯಾತ ಇತಿಹಾಸ ಪ್ರಾಚಾರ್ಯ ಎಸ್. ಕೃಷ್ಣಸ್ವಾಮಿ ಅಯ್ಯಂಗಾರರು (ಇವರು ಬೆಂಗಳೂರು ಮಿಥಿಕ್ ಸೊಸೈಟಿಯ ಆರಂಭಿಕ ಕಾರ್ಯದರ್ಶಿಗಳಾಗಿದ್ದವರು. ರಾಬರ್ಟ್ ಸಿವೆಲ್ಲರ 'ಶಾಸನಾಧಾರದಲ್ಲಿ - ದಕ್ಷಿಣ ಭಾರತದ ರಾಜಕೀಯ ಚರಿತ್ರೆ' - ಪುಸ್ತಕವನ್ನು ಸಂಪಾದಿಸಿ ಕೊಟ್ಟವರು) ತಿರುಪತಿಯ ಚರಿತ್ರೆಯನ್ನು ಎರಡು ಭಾಗಗಳಲ್ಲಿ ತಿ.ತಿ.ದೇ. ವತಿಯಿಂದಲೇ ಪ್ರಕಟಿಸಿದ್ದರು. ಜೊತೆಗೇ ಅನಂತಾರ್ಯಗುಂಟಿ "ಶ್ರೀ ವೆಂಕಟಾಚಲೇತಿಹಾಸ ಮಾಲಾ" ಸಂಸ್ಕೃತ ಕೃತಿಯನ್ನು ವಿದ್ವತ್ಪೂರ್ಣ ಮುನ್ನುಡಿಯೊಡನೆ ಸಂಪಾದಿಸಿ ಪ್ರಕಟಿಸಿದ್ದರು. ಡಾ॥ ರಮೇಶನ್ ಮಾಡಿದ ಕೆಲಸದ ಮಹತ್ವವೆಂದರೆ ಈ ಎಲ್ಲ ಮೂಲಾಂಶಗಳನ್ನೂ, ಜೊತೆಗೇ ಹದಿನಾರನೆಯ ಶತಮಾನದ ನಂತರದ ಆಲಯದ ಇತಿಹಾಸವನ್ನೂ ವಿವಿಧ ದಾಖಲೆಗಳ ಮೂಲಗಳೊಡನೆ ಸಮಗ್ರವಾಗಿ ಸಾವಯವ ಕಾಲಾನುಕ್ರಮ ವಿವರಣೆಯೊಡನೆ ಸಂಯೋಜಿಸಿ ಸಂಪಾದಿಸಿ ನೀಡಿದ್ದು, ಸ್ವತಃ ಇತಿಹಾಸದ ವಿದ್ಯಾರ್ಥಿಯಾಗಿ, ಪುರಾತತ್ವ ಇಲಾಖೆಯ ನಿರ್ದೇಶಕರಾಗಿ, ಪುರಾತತ್ವ ವರದಿಗಳ, ಜಿಲ್ಲಾ ಗೆಜೆಟಿಯರುಗಳ, ಮತ್ತಿತರ ಚಾರಿತ್ರಿಕ ಪ್ರಕಟನೆಗಳ ಸಂಪಾದಕರಾಗಿ ಅನುಭವ ರೂಢಿಸಿಕೊಂಡ ಶ್ರೀಯುತರು ತಿರುಮಲೆಯಪ್ಪನಲ್ಲಿ, ಎಡೆಯಿಲ್ಲದ ಭಕ್ತಿಭಾವವನ್ನು ಹೊಂದಿ ಜೀವನ ನಡೆಸಿದವರು. ತಿ.ತಿ. ದೇವಸ್ಥಾನಗಳ ಧರ್ಮಕರ್ತರ ಮಂಡಲಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದವರು. ಅವರ ಸುದೀರ್ಘ - ಸುವ್ಯವಸ್ಥಿತ ಅಧ್ಯಯನದ ಫಲವಾಗಿ ಹೊಮ್ಮಿದ್ದೆ 'ದಿ ತಿರುಮಲ ಟೆಂಪಲ್'. ಇದರ ಅನುವಾದವನ್ನು ಮಾಡಿದವರು ಶ್ರೀ ಬಿ.ಎನ್. ಶ್ರೀನಿವಾಸನ್. ಕನ್ನಡ 'ಸಪ್ತಗಿರಿ' ಮಾಸಪತ್ರಿಕೆಯ ಉಪಸಂಪಾದಕರಾಗಿ ಮೂವತ್ತು ವರ್ಷಕ್ಕೂ ಮಿಕ್ಕಿ ಸೇವೆ ಸಲ್ಲಿಸಿದವರು. ಈ ಪುಸ್ತಕದ ಅನುವಾದವೂ ಕನ್ನಡ ಸಪ್ತಗಿರಿಯಲ್ಲಿ ಸುಮಾರು ನಾಲ್ಕು ವರ್ಷಗಳ ಕಾಲ ಧಾರಾವಾಹಿಯಾಗಿ ಪ್ರಕಟಗೊಂಡು ಜನಪ್ರಿಯವಾಗಿದೆ. ಕನ್ನಡ ಪುಸ್ತಕ ರೂಪ ಪ್ರಕಟವಾಗುತ್ತಿರುವ ಈ ಹೊತ್ತಿನಲ್ಲಿ ಇಬ್ಬರನ್ನೂ ಅಭಿನಂದಿಸುವುದು ಆನಂದದ ಕೆಲಸವಾಗಿದೆ. (ಇದರ ತೆಲುಗು ಆವೃತ್ತಿ ತೆಲುಗು ಸಪ್ತಗಿರಿಯಲ್ಲಿ ಅನುವಾದವಾಗಿದೆ.) ಮೂಲ ಆಂಗ್ಲ ಕೃತಿಯಲ್ಲಿರುವಂತೆಯೇ ಎಲ್ಲ ಚಿತ್ರಗಳನ್ನು ಇಲ್ಲಿಯೂ ಅದೇ ವಿನ್ಯಾಸದಲ್ಲಿ ನೀಡಲಾಗಿದೆ. ಜೊತೆಗೇ ಡಾ॥ ರಮೇಶನ್ ಅವರ ಮೂಲಕ್ಕೆ ಎರಡು ಅಧಿಕ ಅನುಬಂಧಗಳನ್ನು ಸೇರಿಸಲಾಗಿದೆ. ಇವೆರಡೂ ಅನುಬಂಧಗಳೂ ಮೂಲ ಪುಸ್ತಕದ ಚೌಕಟ್ಟಿನಲ್ಲಿಯೇ ಸೇರಿಬಂದಿವೆ.

ಕನ್ನಡದ ಓದುಗರು ತಿರುಮಲೆಯ ಆಲಯವನ್ನು ಕುರಿತಾದ ಈ ಪುಸ್ತಕವನ್ನು ಪ್ರೀತಿಯಿಂದ ಬರಮಾಡಿಕೊಳ್ಳುವರೆಂದು ಭಾವಿಸಲಾಗಿದೆ.

**- ಸಿ. ಶೈಲಕುಮಾರ್**
ಪ್ರಧಾನ ಸಂಪಾದಕರು,
**ತಿ.ತಿ. ದೇವಸ್ಥಾನಗಳು, ತಿರುಪತಿ.**

# ಅನುವಾದಕನ ಅರಿಕೆ

ಡಾ|| ರಮೇಶನ್ ಅವರು ಜಗ ತಿಳಿದ ವ್ಯಕ್ತಿ. ಅವರ ದೀರ್ಘ ಅಧ್ಯಯನದ ಫಲವೇ 'ದಿ ತಿರುಮಲೆ ಟೆಂಪಲ್' - ಈ ಪುಸ್ತಕದ ಕನ್ನಡಾನುವಾದ ಕನ್ನಡ ಸಪ್ತಗಿರಿಯಲ್ಲಿ 1996ರಿಂದ 2001ರವರೆಗೆ ಧಾರಾವಾಹಿಯಾಗಿ ಪ್ರಕಟವಾದ ಮೇಲೆ ಇದೀಗ ಪುಸ್ತಕರೂಪದಲ್ಲಿ ಓದುಗರ ಕೈ ಸೇರುತ್ತಿದೆ. ಇದ್ದರೆ ಒಳಿತನ್ನು ಕಾಣಬಹುದು - ಎಂಬ ಆರ್ಷವಾಕ್ಕು ಅರ್ಥಪೂರ್ಣ. ಈ ಮೂಲ ಪುಸ್ತಕದ ಹಿರಿಮೆಯೆಂದರೆ - ತಿರುಮಲೆ ದೈವ ನಿಸ್ಸಂದೇಹವಾಗಿ ವೈಷ್ಣವ ಮೂರ್ತಿಯೇ ಎಂಬ ಸತ್ಯಶೋಧನೆ, ಸ್ಥಾಪನೆ. ಜೊತೆಗೇ ವಿಜಯನಗರ ಪತನಾನಂತರ ಗೊಂದಲಮಯವಾದ ದಕ್ಷಿಣ ಭಾರತದ ಚರಿತ್ರೆಯಲ್ಲಿ ಆಲಯದ ಪ್ರಾಭವ, ವೈಭವ, ಜನಪ್ರಿಯತೆಗಳನ್ನು ದೇಶ ವಿದೇಶೀ ಮೂಲ ದಾಖಲೆಗಳಿಂದ ಸಂಗ್ರಹಿಸಿ ಕಾಲಾನುಕ್ರಮದಲ್ಲಿ ಪ್ರಸ್ತುತಪಡಿಸಿರುವುದತಿರುಮಲೆಯ ಆಲಯದ ನಿರ್ಮಾಣದ ವಿವಿಧ ಹಂತಗಳನ್ನು ಗುರುತಿಸಿರುವುದೂ ಈ ಪುಸ್ತಕದ ಹೆಮ್ಮೆಯೆನ್ನುವುದು ಸರಿ. ವಿವಿಧ ಅಂಶಗಳಲ್ಲಿ ಒಂದು ನಿರಂತರತೆಯನ್ನು - ಅನುಪೂರ್ವಿಯನ್ನು ಕಾಯ್ದುಕೊಳ್ಳುವಾಗ ಹಲವೆಡೆ ಪುನರುಕ್ತಿಯಂತೆ ಕಂಡುಬಂದರೆ ವಿಷಯದ ಪ್ರಾಧಾನ್ಯ - ಅವಧಾರಣೆಗಳಿಗಾಗಿ ಹಾಗಾಗಿದೆ ಎನ್ನಬೇಕು.

ಕನ್ನಡ ಅನುವಾದದ ಬಗ್ಗೆ - ಇದು ಯಥಾವತ್ತು ಆಂಗ್ಲಮೂಲ. ಅಲ್ಲಲ್ಲಿ ಮಧ್ಯಪ್ರವೇಶಿಸಿ ಅನುವಾದಕ ಟಿಪ್ಪಣಿಯನ್ನೂಕದಲ್ಲಿ ನೀಡಲಾಗಿದೆ. ಹದಿನೈದನೆಯ ಅಧ್ಯಾಯದಲ್ಲಿ ಮಾತ್ರವೇ ಅಡಿಟಿಪ್ಪಣಿಗಳನ್ನು ಪ್ರತ್ಯೇಕವಾಗಿ ನೀಡಲು ಕಾರಣ ಮೂಲದಲ್ಲಿಯೇ ಹಾಗಿರುವಿಕೆ. ನಿರೂಪಣೆಯ ರೀತಿ ರಿವಾಜುಗಳಲ್ಲಿ ಡಾ|| ಎನ್. ರಮೇಶನ್ ಅವರನ್ನೇ ಅನುಸರಿಸಲಾಗಿದೆ. ಎರಡು ಅನುಬಂಧಗಳನ್ನು ಹೆಚ್ಚಾಗಿ ಸೇರಿಸಲಾಗಿದೆ. ಒಂದು ಕಾಲದೃಷ್ಟಿಯಿಂದಾದ ಹೆಚ್ಚಳವಾದರೆ ಇನ್ನೊಂದು ಕನ್ನಡದ ದೃಷ್ಟಿಯಿಂದಾದ ಹೆಚ್ಚಳ. ಕನ್ನಡಿಗರು ಸ್ವೀಕರಿಸಿ ಸಂತೋಷಪಟ್ಟರೆ ಸ್ವಾಮಿಯ ಅನುಗ್ರಹ ದೊರೆತಂತೆ.

ಒಂದಷ್ಟು ಸ್ವ - ಕನ್ನಡ ಸಪ್ತಗಿರಿಯ ಉಪಸಂಪಾದಕನಾಗಿ ಮೂವತ್ತು ವರುಷದ ಅನುಭವ. ಇಲ್ಲಿ ಮೂವರು ಸಂಪಾದಕರು - ನನ್ನನ್ನು ಬೆಳೆಸಿದವರು. ಶ್ರೀ ಕಾಟ್ರಪಾಟಿ ಸುಬ್ಬರಾಯರು - ಪಿತೃವಾತ್ಸಲ್ಯ ತೋರಿದವರು - ಡಾ|| ಎನ್.ಎಸ್. ರಾಮಮೂರ್ತಿ ಸಹೋದರ ಪ್ರೀತಿಯಿಂದ ಸಲಹಿದವರು, ಡಾ|| ಸಿ. ಶೈಲಕುಮಾರ್ - ಮಿತ್ರ ಪ್ರೇಮದಿಂದ ಕಂಡವರು. ಎನ್.ಎಸ್. ರಾಮಮೂರ್ತಿ ಈ ಪುಸ್ತಕದ ಅನುವಾದ ಕನ್ನಡದಲ್ಲಿ ಬರಬೇಕೆಂಬ ಆಸಕ್ತಿಯನ್ನು, ಒತ್ತಾಯವನ್ನು ಹಾಕಿದವರು. ಮಿಕ್ಕಂತೆ - ಮೂಲವಾಗಿ - ನನ್ನ ಜೊತೆಗೆ ನನ್ನ ಈ ಎಲ್ಲಾ ಇತಿಹಾಸ ಪುರಾಣ ನಿಘಂಟುಗಳಿಗೆ - ಗಂಟುಗಳಿಗೆ - ಮನೆಯಲ್ಲಿ ಮನದಲ್ಲಿ ಸ್ಥಳ ನೀಡಿದ ನನ್ನ ಸಹಧರ್ಮಿಣಿ ಹೇಮಾವತಿ, ಮಕ್ಕಳು ವಿವೇಕ, ಸುಧಾ, ಕಾವ್ಯ,ವಿಕಾಸ, ಸಪ್ತಗಿರಿ ಪತ್ರಿಕಾಮಿತ್ರರು ಡಾ. ಕೆ. ರಾಧಾರಮಣ, ಕೆ.ವಾದಿರಾಜ, ಲಕ್ಷ್ಮೀನಾರಾಯಣ, ಫೋಟೋಗ್ರಾಫರ್ ಮಾರ್ಕೊಂಡಯ್ಯ ಇವರುಗಳಿಗೂ, ಹೆಸರು ಹೇಳುವುದನ್ನೊಪ್ಪದ ಮತ್ತು ಹಲವರಿಗೂ ಕೃತಜ್ಞತೆಗಳು.

**- ಬಿ.ಎನ್. ಶ್ರೀನಿವಾಸನ್.**

# ಮುನ್ನುಡಿ

ತಿರುಮಲೆಯ ಶ್ರೀವೆಂಕಟೇಶ್ವರಸ್ವಾಮಿ ದೇವಾಲಯ ದಕ್ಷಿಣಭಾರತದ ಆತಿಶ್ರೇಷ್ಠ ಪವಿತ್ರ ಆಲಯಗಳಲ್ಲಿ ಒಂದು. ಕಲಿಯುಗ ಸಂಕಷ್ಟಗಳಿಂದ ಮಾನವರನ್ನು ಉದ್ಧಾರಗೊಳಿಸಲು ಭಗವಂತನು ಇಲ್ಲಿ ಆವತರಿಸಿದನೆಂದು ಜನ ನಿಷ್ಠೆಯಿಂದ ನಂಬುವರು. ಇಲ್ಲಿನ ವರದ ಹಸ್ತನಾದ ಸ್ವಾಮಿಯನ್ನು ದರ್ಶಿಸಿ ಆತನಿಂದ ಅನುಗ್ರಹೀತರಾಗಲು ಲಕ್ಷಾಂತರಮಂದಿ ಬರುತ್ತಾರೆ. ಪೂರ್ವಗೋಳದಲ್ಲಿ ಇದು ಪ್ರಾಯಶಃ ಅತಿ ಸಂಪದ್ಭರಿತ ಆಲಯವಾಗಿದೆ. ಈ ಆಲಯವು ಪ್ರಾಚೀನ ವೈಭವದಿಂದ ಕೂಡಿದ್ದು, ಹಲವಾರು ವಿದ್ವಾಂಸರು ಆಲಯದ ಚರಿತ್ರೆಯನ್ನು ನಿರೂಪಿಸಲು ಪ್ರಯತ್ನಿಸಿದ್ದು, ಅವುಗಳಲ್ಲಿ ಡಾ।। ಎಸ್. ಕೃಷ್ಣಸ್ವಾಮಿ ಅಯ್ಯಂಗಾರರರ ''ದಿ ಹಿಸ್ಟರಿ ಆಫ್ ತಿರುಪತಿ'' ಹಾಗೂ ತಿರುವೆಂಗಡಾಚಾರಿಯವರ ಪುಸ್ತಕಗಳು ಗಮನಾರ್ಹ.

ಈ ಮುಂದಿನ ಪುಟಗಳಲ್ಲಿ ಡಾ।। ಎನ್. ರಮೇಶನ್ ಆವರು ಈ ಆಲಯದ ಚರಿತ್ರೆಯನ್ನು ಸಮಗ್ರವಾಗಿ ಆದರ ಎಲ್ಲ ವಿವರಗಳನ್ನೂ, ಸಮಸ್ಯೆಗಳನ್ನೂ ಕೂಲಂಕಷವಾಗಿ ಅಧ್ಯಯನ ಮಾಡಿ - ಕಟ್ಟಿ ಕೊಡಲು ಪ್ರಯತ್ನಿಸಿದ್ದಾರೆ. ಪಲ್ಲವ, ಚೋಳ, ಯಾದವರಾಯ, ವಿಜಯನಗರ ರಾಜವಂಶಗಳ ಭಕ್ತಿಶ್ರದ್ಧೆ ಸಮರ್ಪಣೆಗಳನ್ನು ಪಡೆದು ಬೆಳೆದ ಈ ಒಂದು ಪ್ರಸಿದ್ಧ ಯಾತ್ರಾಕೇಂದ್ರದ ಬಗೆಗಿನ ಬಹುಗಾತ್ರದ ಸಾಹಿತ್ಯಕ, ಶಾಸನಿಕ, ಶಿಲ್ಪಶಾಸ್ತ್ರ ವಿವರಗಳನ್ನು ಪುನಃಪರಿಶೀಲಿಸಿ, ಕಾಲಾನುಕ್ರಮದ ಬೆಳವಣಿಗೆಯನ್ನು ನಿರೂಪಿಸಲು ಪ್ರಯತ್ನಿಸಿದ್ದಾರೆ.

ಶಾಸನಗಳಲ್ಲಿ ಹೇಳಲಾಗಿರುವ ಆಲಯದ ವಿವಿಧ ಭಾಗದ ಕಟ್ಟಡಗಳನ್ನು ಗುರುತಿಸುತ್ತ ಆವುಗಳ ಕಾಲವನ್ನು ಗುರುತಿಸಿ ಈ ಆಲಯದ ನಿರ್ಮಾಣದ ಬೆಳವಣಿಗೆಯನ್ನು ವಿವರಿಸಿದ್ದಾರೆ. ನಮ್ಮ ಇಂದಿನ ಆಲಯದ ಬಗೆಗಿನ ತಿಳುವಳಿಕೆಗೆ ಇದೊಂದು ಹೆಚ್ಚಿನ ಸೇರ್ಪಡೆ.

ಈ ದೈವದ ಬಗ್ಗೆ ವಿದ್ವಾಂಸರಲ್ಲಿ ವಿವಿಧ ಆಭಿಪ್ರಾಯಗಳುಂಟು. ಇದೊಂದು ಶಿವಕ್ಷೇತ್ರವೆಂದು ಹಲವರು ನಂಬುವರಾದರೆ ಮತ್ತೂ ಹಲವರು ಇದೊಂದು ಶಕ್ತಿಪೀಠವೆಂದು ತಿಳಿದಿರುವರು. ಈ ವಾದಕ್ಕೆ ಇಂಬುಗೊಡುವಂತೆ ಈ ಕ್ಷೇತ್ರದಲ್ಲಿ ಶಕ್ತಿಕ್ಷೇತ್ರದ ಆರಾಧನೆ, ಸಮರ್ಪಣೆಗಳಲ್ಲಿ ನಡೆಯುವ ವಿಧಾನವೂ ಉಂಟು. ದೇವರಿಗೆ ಶುಕ್ರವಾರಗಳಂದು ಅಭಿಷೇಕ ನಡೆಸಿ, ವೈಭವ ಸಡಗರಸಂಭ್ರಮಗಳಿಂದ ದುರ್ಗಾಪೂಜೆ ನಡೆಯುವ ನವರಾತ್ರಿಯ ದಿನಗಳಲ್ಲಿ ಇಲ್ಲಿ ಬ್ರಹ್ಮೋತ್ಸವ ನಡೆಯುವುದು, ಇಲ್ಲಿನ ವಿಗ್ರಹವನ್ನು ವೈಯಕ್ತಿಕವಾಗಿ ಎಚ್ಚರಿಕೆಯಿಂದ ಸಮಗ್ರವಾಗಿ ಅಧ್ಯಯನ ಮಾಡಿ, ತತ್ಸಂಬಂಧಿ ದತ್ತಾಂಶಗಳನ್ನು ನೀಡುತ್ತ ಎಲ್ಲ ರೀತಿಯ ಸಂದೇಹಗಳನ್ನು ನಿವಾರಿಸಿ ಇದು ಮೂಲತಃ ಶ್ರೀ ವೆಂಕಟೇಶ್ವರಸ್ವಾಮಿಯ ವಿಗ್ರಹವೇ ಎಂದು ಸತ್ಯಸ್ಥಾಪನೆ ಮಾಡಿ, ಇದು ಆಗಮಶಾಸ್ತ್ರದ ಕ್ರೋಢೀಕರಣವಾಗುವುದಕ್ಕೂ ಮುಂಚಿನ ಪಲ್ಲವ ಪೂರ್ವಯುಗದ ಮೂರ್ತಿಯೆಂದೂ ಇದು ಸ್ವಯಂ ವ್ಯಕ್ತಮೂರ್ತಿಯೆಂದೂ ತೀರ್ಮಾನಿಸಿದ್ದಾರೆ.

ಆಲಯದ ಹಲವು ಹನ್ನೊಂದು ಪ್ರಾಚೀನ ಪರಂಪರೆಯ ಮುಖಗಳ ವಿವರದ ಹಿನ್ನೆಲೆಯಲ್ಲಿ ಆಧುನಿಕ ಕಾಲದ ಆಡಳಿತ ವಿಧಾನವನ್ನು ಯುರೋಪಿಯನ್ ದಾಖಲೆಗಳ ಆಧಾರದಲ್ಲಿ ಕಟ್ಟಿಕೊಟ್ಟಿದ್ದಾರೆ. ತಿರುಮಲ ತಿರುಪತಿ ದೇವಸ್ಥಾನಗಳ ಬಗೆಗಿನ ಸಾಹಿತ್ಯಕ್ಕೆ ಇದೊಂದು ಹೆಚ್ಚಿನ ಸ್ವಾಗತಾರ್ಹ ಸೇರ್ಪಡೆಯಾಗಿದೆ. ಡಾ।। ರಮೇಶನ್ ಆವರ ಮೇರುಸಮರ್ಪಣೆಗೆ ಕೃತಜ್ಞತೆ ಸಲ್ಲಬೇಕು.

**ಗುಂಟೂರು** **ಆರ್. ಸುಬ್ರಹ್ಮಣ್ಯಂ**

**2-1-1980.** **ನಾಗಾರ್ಜುನ ವಿಶ್ವವಿದ್ಯಾಲಯ**

# ಮೊದಲ ಮಾತು

- ಡಾ॥ ಎನ್. ರಮೇಶನ್
ಆಂಧ್ರಪ್ರದೇಶ ರೆವಿನ್ಯೂ ದ್ವಿತೀಯ ಕಾರ್ಯದರ್ಶಿ
ಅಧ್ಯಕ್ಷ - ತಿ.ತಿ. ದೇವಸ್ಥಾನಗಳು.

ತಿರುಮಲೆಯ ಸ್ವಾಮಿ ನಮ್ಮ ಮನೆದೇವರು. ಹಲವು ತಲೆಮಾರುಗಳಿಂದ ನಮ್ಮ ಕುಟುಂಬದ ಆಗುಹೋಗುಗಳ ಮಾರ್ಗ ದರ್ಶಕನಾದ ಕುಲದೈವ. ನನಗಂತೂ ಅತಿ ಸನ್ನಿಹಿತನಾದ, ಆಪ್ಯಾಯಮಾನವಾದ ವಾತ್ಸಲ್ಯಮಯಿ ಮಾತನಾಡುವ ದೇವರಾಗಿನನ್ನ ಸಂಕಷ್ಟ ಸಮಯದಲ್ಲಿ ಸಾಂತ್ವನದ ಆಶ್ರಯವಾಗಿ ಸಂತಸದಲ್ಲಿ ಆಲಂಬನವಾಗಿರುವ ದೇವರು. ಆತ ಬರಿಯ ಶಿಲಾವಿಗ್ರಹ ಮಾತ್ರವೇ ಆಗದೆ ಪರಮದಯಾಕರನಾಗಿ ಅತ್ಯಂತ ಆಪ್ತ ಅನುಗ್ರಹಕರ್ತನಾಗಿ ತನಗೆ ಶರಣಾಗತರಾದವರ ರಕ್ಷಕನಾಗಿರುವ ಚೈತನ್ಯದ ಜೀವಂತ ಸ್ರೋತವಾಗಿದ್ದಾನೆ.

ಸಪ್ತಗಿರೀಶನ ಕುರಿತಾದ ನನ್ನ ಅತಿ ಹಳೆಯ ನೆನಪೆಂದರೆ ನನ್ನ ಐದನೆಯ ವಯಸ್ಸಿನಲ್ಲಿ ನನ್ನ ಮನೆಯ ಹಿರಿಯರನ್ನುಹೊತ್ತ ಡೋಲಿಯ ಜೊತೆಗೆ ಏಳು ಮಲೆಯ ಹಾದಿಯನ್ನು ತುಳಿದ ಮಗುವಿನ ನೆನಪು. ಅಲ್ಲಿಂದಾಚೆಗೆ ನನಗೆ ತೋಚಿದಾಗೆಲ್ಲ, ಅಗತ್ಯವೆನಿಸಿ ದಾಗೆಲ್ಲ ಏಳುಮಲೆಯ ಹಾದಿಯನ್ನು ಹಿಡಿದು ನಡೆದಿದ್ದೇನೆ.

1942ರ ಮಂಜುಮುಸುಕಿದ ಒಂದು ದಿನ ಬ್ರಹ್ಮೋತ್ಸವದ ಮೆರವಣಿಗೆಯನ್ನು ಕಂಡಾಗ ಅದೇ ತಾನೇ ಶಾಸನಶಾಸ್ತ್ರ ಸಂಶೋಧನೆಯಲ್ಲಿ ತೊಡಗಿದ ವಿದ್ಯಾರ್ಥಿಯ ತಾರುಣ್ಯದಲ್ಲಿ, ಕಾಲ ಪರಿಪಕ್ವವಾದಂದು ಈ ಆಲಯದ ಶಾಸನಗಳ ವಿಶ್ಲೇಷಣಾತ್ಮಕ ವಿವರಣೆ ನೀಡುವ ಅವಕಾಶ ಸಿಗಬಹುದೆಂದು ಬಯಸಿದ್ದೆ. ಸರಿಸುಮಾರು ನಲವತ್ತು ವರ್ಷಗಳ ನಂತರ ಒಂದು ವಿಜಯದಶಮಿಯ ದಿನ 1979ರಲ್ಲಿ ತಿರುಮಲೆಯ ಆಲಯದ ಬಗೆಗಿನ ನನ್ನ ಈ ಪುಸ್ತಕಕ್ಕೆ ಮುನ್ನುಡಿ ಬರೆಯುತ್ತಿರುವುದು ವಿಧಿಗೈದ ಪವಾಡವೇ ಸರಿ.

ಈ ನಡುವಿನ ನಲವತ್ತು ವರ್ಷಗಳಲ್ಲಿ ನಾನು ಹಲವು ಪ್ರಮುಖ ಘಟ್ಟಗಳಲ್ಲಿ ಸಾಗಿ ಬಂದಿರುವೆ. ಈ ನಡುವೆಯ ಅವಧಿಯಲ್ಲಿ ಸರಾಸರಿ ಮೂರು ತಿಂಗಳಿಗೆ ಒಮ್ಮೆಯಾದರೂ ಸ್ವಾಮಿಯನ್ನು ಸಂದರ್ಶಿಸುತ್ತ ಬಂದಿದ್ದೇನೆ. 1956ರ ನಂತರ ಆಲಯದ ಬಗ್ಗೆನನ್ನ ಗಮನಕ್ಕೆ ಬಂದ ಅಂಶಗಳನ್ನೆಲ್ಲ -ಅದರ ಶಾಸನಗಳ ಬಗ್ಗೆ, ವಾಸ್ತುಶಿಲ್ಪದ ಬಗ್ಗೆ, ಇಲ್ಲಿನ ಆಗಮಿಕ ಪರಂಪರೆಯಸಂಪ್ರದಾಯಗಳ ಬಗ್ಗೆ ಇಲ್ಲಿಗೆ ಸಂಬಂಧಿಸಿದ ಎಲ್ಲದರ ಬಗ್ಗೆ ಟಿಪ್ಪಣಿಗಳನ್ನು ಮಾಡಿಟ್ಟುಕೊಂಡಿದ್ದೇನೆ.

ಭಾಗ್ಯದ ಬಾಗಿಲು ತೆರೆದಂತೆ ಸರ್ಕಾರದ ನನ್ನ ಸೇವಾವಧಿಯ ಕಡೆಕಡೆಯಲ್ಲಿ ಹಲವು ಹನ್ನೊಂದು ಫಲದಾಯಕ ಸನ್ನಿವೇಶಗಳ ಜೋಡಣೆಯಿಂದಾಗಿ ತಿರುಮಲ ತಿರುಪತಿ ದೇವಸ್ಥಾನಗಳ ಅಧ್ಯಕ್ಷ ರೂಪದಲ್ಲಿ ದೇವರ ಪ್ರಥಮ ಸೇವಕನಾಗಿ ಕಾರ್ಯನಿರ್ವಹದ ಭಾರಹೊಣೆ ನನ್ನ ಪಾಲಿಗೆ ದೊರೆಯಿತು. ಅತಿ ಕಡಿಮೆ ಅವಧಿಯದೇ ಆದರೂ ನನ್ನ ಜೀವನದಲ್ಲಿ ಇಂತಹ ಒಂದು ಮಹದವಕಾಶ ನನಗೆ ದೊರೆಯಬಹುದು ಎಂಬ ಕಲ್ಪನೆಯೂ ನನಗಿರಲಿಲ್ಲ. ನನ್ನ ಜೀವನದ ಅತ್ಯುಚ್ಚತಮ ಅನುಗ್ರಹವೆಂದು ನಾನು ಬಗೆಯುವ ಈ ಅವಕಾಶವನ್ನು ನೀಡಿದ, ಎಲ್ಲವನ್ನೂ ಕರುಣಿಸುವ ಆ ದೈವಕ್ಕೆ ನನ್ನ ಕೃತಜ್ಞತೆಯನ್ನು ಮೊದಲಿಗೆ ಸಲ್ಲಿಸುವೆನು. ಲೌಕಿಕ ದೃಷ್ಟಿಯಿಂದ ನೋಡಿದಲ್ಲಿ ಇದನ್ನ ಸಾಧ್ಯವಾಗಿಸುವಲ್ಲಿ ಮಾಧ್ಯಮವಾಗಿ ತಿರುಮಲೆಯ ಸ್ವಾಮಿ ಆಂಧ್ರಪ್ರದೇಶದ ಮುಖ್ಯಮಂತ್ರಿ ಡಾ॥ ಎಂ.ಚೆನ್ನಾರೆಡ್ಡಿ ಅವರನ್ನು ಬಳಸಿದ್ದಾನೆಯಾಗಿ ಅವರಿಗೆ ನನ್ನ ಗಾಢವಾದ ಕೃತಜ್ಞತಾಪೂರ್ಣ ವಂದನೆಗಳು ಸಲ್ಲುತ್ತವೆ.

ಈ ಪುಸ್ತಕದ ಬಗ್ಗೆ ಹೇಳುವುದಾದರೆ ನಾನು ಪಂಡಿತನೆಂದು ಹೇಳಲಾರೆ. ಇದು ಸ್ವತಂತ್ರ ಕೃತಿ ಎಂದೂ ಹೇಳಲಾರೆ. ವೃತ್ತಿಪರ ಇತಿಹಾಸ ತಜ್ಞನೆಂದಾಗಲೀ ಯಾವುದೇ ವಿಷಯದಲ್ಲಿ ಪರಿಣತನೆಂದಾಗಲೀ ಅಲ್ಲ. ಆದರೂ ನಾನು ಮೊದಲಿನಿಂದ ಚರಿತ್ರೆಯಲ್ಲಿ, ಧರ್ಮ ಹಾಗೂ ಆಗಮಗಳಲ್ಲಿ ಒಟ್ಟಾರೆ ಆಸಕ್ತಿ ಹೊಂದಿದ್ದು ಮಾನವ ಜೀವನದ ಮೂಲಭೂತ ತುಡಿತಗಳಿಗೆ ಕಾರಣವಾದ ಚಾರಿತ್ರಿಕ, ತಾತ್ವಿಕ ಮೂಲಸೆಲೆಗಳ ಬಗ್ಗೆ ಕುತೂಹಲ ಹೊಂದಿರುವವನು. ಯಾವುದೇ ಒಂದು ಕಾಲದ ಸಮಾಜದ ಚಿಂತನೆಯನ್ನು ನಡಾವಳಿ ಯನ್ನು ನಿರ್ದೇಶಿಸುವ ಪ್ರಭಾವೀ ಶಕ್ತಿಗಳ ನಾಟಕದ ಬೆಳವಣಿಗೆಯೇ ಚರಿತ್ರೆಯೆಂದು ನಂಬಿದವನು. ಹಾಗಾಗಿ ನನ್ನ ದೃಷ್ಟಿಯಲ್ಲಿ

ಘಟನಾವಳಿಗಳ ಚರಿತ್ರೆಯ ಗುರುತು ಹಿಡಿಯಲೂ ಅವುಗಳ ವಿಶ್ಲೇಷಣಾತ್ಮಕ ನಿರ್ಣಯಗಳನ್ನು ತಲುಪಲೂ ಚಿಂತನೆಯ ಬೆಳವಣಿಗೆ ಯನ್ನು ತಿಳಿಯಬೇಕು.

ಇಂತಹ ಗ್ರಹಿಕೆಯು ನಮ್ಮ ದೇಶದಲ್ಲಿ, ಮಾನವ ಚಿಂತನೆಯ ಚರಿತ್ರೆಯಲ್ಲಿ ಸಮಾಜದ ನಡಾವಳಿಯ ತಿರುವುಗಳಿಗೆ ವಂತಿಗ ನೀಡಿರುವ, ಹಾಗಾಗಿಯೇ ಜಾಗತಿಕ ಚರಿತ್ರೆಯನ್ನು ರೂಪಿಸಿರುವ ಧರ್ಮದ ಅಧ್ಯಯನಕ್ಕೆ ದಾರಿ ಮಾಡುತ್ತದೆ. ಆಲಯದ ಪುರೋ ಗತಿಯ ಬಗ್ಗೆ ಒಂದು ಸಮಗ್ರ ದೃಷ್ಟಿಯನ್ನು ಹೊಂದಿ ಈ ಪುಸ್ತಕವನ್ನು ಸಂಪಾದಿಸುವಲ್ಲಿ ನಾನು ವಿಶೇಷ ಪರಿಣತನಲ್ಲದ್ದರೂ ಇಂತಹ ಬೌದ್ಧಿಕ ಗ್ರಹಿಕೆಯೇ ನನ್ನನ್ನು ಪ್ರಚೋದಿಸಿದೆ.

ಏನೇ ಆದರೂ ತಥ್ಯವಾದ ವಿಚಾರಗಳ ಬಗ್ಗೆ ಮೂಲಭೂತ ಆಧಾರಗಳನ್ನು ಪಡೆಯುವುದರಲ್ಲಿ ನಾನು ತುಂಬ ಶ್ರಮಿಸಿರುವೆ ನಾದುದರಿಂದ ಈ ಕೃತಿಯು ಯಾವುದೇ ರೀತಿಯ ತಥ್ಯಾಂಶದ ಕೊರತೆಯನ್ನೂ ಹೊಂದಿಲ್ಲವೆಂದು ಭರವಸೆಯಿಂದ ತಿಳಿಸುತ್ತೇನೆ. ಇತರ ನ್ಯೂನತೆಗಳೇನೇ ಇದ್ದರೂ, ಇಲ್ಲಿ ಪ್ರಸ್ತುತ ಪಡಿಸಿರುವ ಸತ್ಯನಿರೂಪಣೆಯು, ವಿಶಾಲವಾದ ಗೌರವಾನ್ವಿತ ಅಧಿಕಾರ ಯುತ ಆಧಾರಗಳನ್ನು ಹೊಂದಿದೆ ಎಂದು ಒಪ್ಪಬಹುದು.

ತಿರುಮಲೆ ತಿರುಪತಿ ಆಲಯಗಳ ಶಾಸನಗಳ ಬಹುಭಾಗವನ್ನು ಸಂಗ್ರಹಿಸಿ, ಪಟ್ಟಿ ಮಾಡಿ ಅರ್ಥೈಸಿ, ವಿಮರ್ಶಾತ್ಮಕವಾಗಿ ಸಂಪಾದಿಸಿ ಕೊಡುವಲ್ಲಿ ದೇವಸ್ಥಾನದ ಶಾಸನ ತಜ್ಞ ಶ್ರೀ ಸಾಧುಸುಬ್ರಹ್ಮಣ್ಯ ಶಾಸ್ತ್ರಿಗಳು ಪರಮೋಪಕಾರ ಮಾಡಿರುತ್ತಾರೆ. ಅನ್ಯತ್ರ ಶ್ರೇಷ್ಠತರಗೊಳಿಸಲು ಅಸಾಧ್ಯವೆನ್ನುವಷ್ಟು ಅಧಿಕಾರಯುತವಾಗಿ, ಅರ್ಥವಂತಿಕೆಯಿಂದ ಕೂಡಿ, ವಿಷಯದ ಬಗ್ಗೆ ಪೂರ್ಣಹಿಡಿತ ಹೊಂದಿ ಈ ಕೆಲಸವನ್ನವರು ನಿರ್ವಹಿಸಿದ್ದಾರೆ. ಈ ಪುಸ್ತಕದ ಚಾರಿತ್ರಿಕ ವಿವರವನ್ನು ಸಿದ್ಧಪಡಿಸುವಲ್ಲಿ ಅವರು ನೀಡಿರುವ ವಿವರಣೆಯ ಗಣಿಯನ್ನು ಪೂರ್ಣವಾಗಿ ಬಳಸಿಕೊಂಡಿದ್ದೇನೆ. ಅವರು ನೀಡಿರುವ ವಿವರಣೆಯನ್ನು, ಅವರ ಅರ್ಥೈಸುವಿಕೆಯನ್ನು ಬಹುತೇಕ ಅವರ ಮಾತುಗಳಲ್ಲಿಯೇ ಪಡೆದಿರುವೆ. ಈ ವಿಷಯದಲ್ಲಿ ಈ ಪುಸ್ತಕದಲ್ಲಿನ ಶಾಸನಾಧಾರಿತ ವಿಷಯ ಸಂಗ್ರಹದಲ್ಲಿ- ಇದು ಸಾಧುಸುಬ್ರಹ್ಮಣ್ಯ ಶಾಸ್ತ್ರಿಗಳ ಕೆಲಸದ ಸಂಪಾದಿತ ಕೃತಿಯೆಂದು ಬಗೆಯಬೇಕು. ಇದವರೆಗೆ ಪ್ರಕಟವಾಗದೆ ದೇವಸ್ಥಾನದ ಕಚೇರಿಯಲ್ಲಿರುವಂತಹ ಆವರು ಬರೆದ ಹಲವು ಬಿಡಿ ಲೇಖನಗಳ ಸಂಗ್ರಹದ ಪ್ರಯೋಜನವನ್ನೂ ನಾನು ಪಡೆದಿರುವೆ. (ಈ ಪುಸ್ತಕ ನಂತರದ ಕಾಲದಲ್ಲಿ ಸಾಧು ಸುಬ್ರಹ್ಮಣ್ಯಶಾಸ್ತ್ರಿಗಳ ಹೆಸರಿನಲ್ಲಿಯೇ - ಗೋಪೀಕೃಷ್ಣ ಕಾವ್ಯನಾಮದ ಇತಿಹಾಸ ತಜ್ಞ ತೊಂಡವಾಡದ ಸೊರಕಾಯಲ ಕೃಷ್ಣಾರೆಡ್ಡಿ ಯವರಿಂದ ಸಂಪಾದಿತವಾಗಿ ಸಾಧು ಸುಬ್ರಹ್ಮಣ್ಯ ಶಾಸ್ತ್ರಿಗಳ ನಿಧನದ ನಂತರ ಪ್ರಕಟವಾಗಿ ಪುನರ್ಮುದ್ರಣವೂ ಆಗಿದೆ. ಭಹೋಯ ನಿಂದಾದ ಇದರ ಅನುವಾದವೂ ಕನ್ನಡ ಸಪ್ತಗಿರಿಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ - ಅನುವಾದಕ) ಆವರ ಮೇರುಕೃತಿಯಿಲ್ಲ ದಿದ್ದಲ್ಲಿ ಪ್ರಸ್ತುತ ಈ ಪುಸ್ತಕ ಬರವಣಿಗೆಯನ್ನೇ ಕಾಣಲು ಸಾಧ್ಯವಾಗುತ್ತಿರಲಿಲ್ಲ. ನಾನು ಹೆಮ್ಮೆಯಿಂದ ಈ ಪುಸ್ತಕದ ನಿರ್ಮಾಣದಲ್ಲಿ ಆವರ ಮೂಲಾಧಾರ ಆಭಾರನೆರವನ್ನು ಒಪ್ಪಿಕೊಳ್ಳುತ್ತೇನೆ.

1950ರ ಹೊತ್ತಿಗೆ ಶ್ರೀ ಟಿ.ಕೆ.ಟಿ. ವೀರರಾಘವಾಚಾರ್ಯರು ತಿರುಪತಿ ಆಲಯ ಚರಿತ್ರೆಯ ಬಗ್ಗೆ ಒಂದು ಪುಸ್ತಕವನ್ನು ರಚಿಸಿ ದರು. ಇದನ್ನು ಮೂರು ಭಾಗಗಳಲ್ಲಿ ತಿರುಮಲ ತಿರುಪತಿ ದೇವಸ್ಥಾದವರು ಪ್ರಕಟಿಸಿದ್ದಾರೆ. ಶ್ರೀ ವೀರರಾಘವಾಚಾರ್ಯರು ಘನವಾದ ವಿದ್ವಾಂಸರು. ಜೊತೆಗೇ ಸ್ವಾಮಿಯ ಉದ್ದಾಮ ಭಕ್ತರು. ಶ್ರೀ ಸಾಧು ಸುಬ್ರಹ್ಮಣ್ಯಶಾಸ್ತ್ರಿಗಳು ಸಮರ್ಪಿಸಿದ ಶಾಸನಸಾಹಿತ್ಯ ಮೂಲವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿದ್ದಾರೆ. ಅವರು ಬರೆದ ಪುಸ್ತಕಗಳಿಂದಲೂ ಯಥೇಚ್ಛವಾಗಿ ಪಡೆದು ಅವರ ಮಾತುಗಳಲ್ಲಿಯೇ ಪ್ರಸ್ತುತ ಪಡಿಸಿದ್ದೇನೆ. ಈ ಪುಸ್ತಕದ ಸಾಕಷ್ಟು ವಿವರಗಳಿಗಾಗಿ ಅವರಿಗೆ ನನ್ನ ಕೃತಜ್ಞತಾಪೂರ್ವಕ ವಂದನೆಗಳು.

ಡಾ|| ಎಸ್. ಕೃಷ್ಣಸ್ವಾಮಿ ಅಯ್ಯಂಗಾರರು 1929ರಲ್ಲಿ ತಿರುಪತಿಯ ಚರಿತ್ರೆಯನ್ನು ಮೊದಲಬಾರಿಗೆ ಬರೆದರು. ಇದು ಎರಡು ಭಾಗಗಳಲ್ಲಿ ಪ್ರಕಟವಾಗಿದೆ. ಇದರ ನಂತರದ್ದು ವೀರರಾಘವಾಚಾರ್ಯರ ಪುಸ್ತಕ. ಇಲ್ಲಿನ ಆರಾಧನಾ ವಿಧಾನ, ಉತ್ಸವಗಳು, ಸಂಪ್ರ ದಾಯ, ಆಡಳಿತದ ಬೆಳವಣಿಗೆಗಳ ಬಗ್ಗೆ ವಿಸ್ತಾರವಾದ ವಿವರಣೆ ನೀಡುತ್ತದೆ. 1949 ರಲ್ಲಿ ತಿರುಮಲೆಯ ಆಲಯದ ಬಗ್ಗೆ ಒಂದು ಕಿರುಪುಸ್ತಕವನ್ನು ವಿ. ಶ್ರೀನಿವಾಸರಾಯರು ಬರೆದಿರುವರು.

ತಿರುಮಲೆಯ ಆಲಯದ ವಾಸ್ತುಶಿಲ್ಪದ ಬೆಳವಣಿಗೆಯ ಬಗ್ಗೆ ವಿ.ಎಂ. ನರಸಿಂಹನ್ ಆವರು 25 ಪುಟದ ಒಂದು ಪುಸ್ತಿಕೆಯ್ನನು 1953ರಲ್ಲಿ ಬರೆದಿರುವರು. ಇದೊಂದು ಪ್ರಬಂಧ ರೂಪದ ಪುಸ್ತಿಕೆ.

ವೆಂಕಟೇಶ್ವರ ವಿಶ್ವವಿದ್ಯಾಲಯದ ಚರಿತ್ರೆಯ ಪ್ರಾಚಾರ್ಯ ಡಾ॥ ಎಂ. ರಾಮರಾಯರು 1963ರಲ್ಲಿ ತಿರುಮಲ ತಿರುಪತಿ ತಿರುಚಾನೂರು ಆಲಯಗಳ ಬಗ್ಗೆ ಕಿರುಹೊತ್ತಿಗೆಯನ್ನು ರಚಿಸಿದ್ದಾರೆ. ಇದು ಯಾತ್ರಿಕರ ಕೈಪಿಡಿಯಾದ ಪುಸ್ತಕ.

ನನ್ನ ನೆಚ್ಚಿನ ಸ್ನೇಹಿತರೂ, ಸಹ ಆಡಳಿತಗಾರರೂ ಆದ ಶ್ರೀ ಪಿ. ಸೀತಾಪತಿ ಐ.ಎ.ಎಸ್. ಅವರು ಜನಪ್ರಿಯ ಕೈಗನ್ನಡಿಯಾದ "ಶ್ರೀ ವೆಂಕಟೇಶ್ವರ" ಪುಸ್ತಕವನ್ನು ಬರೆದಿದ್ದಾರೆ. ಈ ಕೃತಿಯಲ್ಲಿ ತಿರುಮಲೆಯ ದೇವರ ಪವಿತ್ರ ಮೂರ್ತಿಯ ಬಗ್ಗೆ ಅನನ್ಯ ಸಾಧಾರಣವಾದ ಸುಭಗ ಶೈಲಿಯ ವಿವರಗಳುಂಟು. ಈ ಪುಸ್ತಕವನ್ನು ಭಾರತೀಯ ವಿದ್ಯಾಭವನದವರು ಪ್ರಕಟಿಸಿದ್ದಾರೆ. ಅದನ್ನು ಉತ್ತಮಗೊಳಿಸುವುದು ಅಸಾಧ್ಯ ಎನ್ನುವಷ್ಟು ಶ್ರೇಷ್ಠವಾಗಿರುವುದರಿಂದ ಅದನ್ನು ಪೂರ್ಣವಾಗಿ ಇಲ್ಲಿ ಉದ್ಧರಿಸಿದ್ದೇನೆ.

ತಿರುಮಲೆಯ ಆಲಯದ ಬಗೆಗಿನ ಪುಸ್ತಕಗಳೆಂದರೆ ಮೇಲೆ ಹೇಳಿದವುಗಳೇ. ಮೇಲಿನ ಗ್ರಂಥರಾಶಿಯನ್ನು ಗಮನಿಸಿದಾಗ ಶ್ರೀ ಸಾಧುಸುಬ್ರಹ್ಮಣ್ಯಶಾಸ್ತ್ರಿ ಮತ್ತು ಶ್ರೀ ಟಿ.ಕೆ.ಟಿ. ವೀರರಾಘವಾಚಾರ್ಯರ ಪುಸ್ತಕಗಳ ಹೊರತಾಗಿ ತಿರುಮಲೆಯ ಆಲಯದ ಬಗ್ಗೆ - ಆದರ ಭೌಗೋಳಿಕ ಚಾರಿತ್ರ್ಯಕ, ಶಾಸನಿಕ, ಶಿಲ್ಪಶಾಸ್ತ್ರೀಯ ಅಧ್ಯಯನ, ಅಲ್ಲಿನ ಉತ್ಸವ ವಿವರಗಳು ಸಾಹಿತ್ಯ ಸಂಗೀತಗಳಲ್ಲಿ ಆಲಯದ ಕಂಡರಣೆ, ಬೇರೆ ಬೇರೆ ರಾಜರ ಕಾಲದಲ್ಲಿ ಆಲಯದ ಆಡಳಿತ, ಕೊನೆಯದಾಗಿ ಆಂಗ್ಲರ ಕಾಲದಲ್ಲಿ ಆಲಯದ ಆಡಳಿತದ ಬಗ್ಗೆ ತಿಳಿಸುವಂತಹ ಯಾವುದೇ ಅಧಿಕಾರಯುತವಾದ ಅನುಸ್ಯೂತವಾದ ಅನ್ಯತ್ರ ವಿವರಣೆ ಇಲ್ಲ. ಸರಿ ಸುಮಾರು 2000 ವರ್ಷಗಳ ಇತಿಹಾಸವನ್ನು ಹೊಂದಿದ ಪ್ರಾಚೀನ ಪ್ರಸಿದ್ಧ ಆಲಯವು ಪರಿಣತರ ಪಂಡಿತರ ವಿಶೇಷಾಸಕ್ತಿಯನ್ನು ಸೆಳೆಯಲಿಲ್ಲ ಎಂಬುದು - ಅದರಲ್ಲಿಯೂ ಭಾರತೀಯ ಸಾಮಾಜಿಕ ಅಧ್ಯಯನದಲ್ಲಿ ಅವಿನಾಭಾವ ಸಂಬಂಧ ಹೊಂದಿದ ಆಲಯಗಳ ಅಧ್ಯಯನ ವಿಶೇಷ ಸ್ಥಾನಗಳಿಸಿದ ಕಳೆದೆರಡು ದಶಕಗಳಲ್ಲಿ ಈ ಬಗ್ಗೆ ಚಿಂತನೆ ನಡೆದಿಲ್ಲ ಎಂಬುದು- ಆಶ್ಚರ್ಯಕರವಾದ ಮಾತು. ಪ್ರಸ್ತುತ ಪುಸ್ತಕ ಈ ಕೊರತೆಯನ್ನು ತುಂಬಿಸುವಲ್ಲಿ ಕೆಲಮಟ್ಟಿನ ಪ್ರಯತ್ನವಾಗಿದೆ.

ಯಾವುದೇ ಸಂಶೋಧನೆ ಮಾಡುವುದಾಗಲೀ, ಹೊಸದಾಗಿ ಮೂಲಭೂತ ಅಂಶಗಳನ್ನು ಕಂಡುಕೊಳ್ಳುವುದಾಗಲೀ ನನ್ನ ಉದ್ದೇಶವಾಗಿಲ್ಲ. ತಿರುಮಲೆಯ ಆಲಯಕ್ಕೆ ವಿಶೇಷವಾಗಿ ಸಂಬಂಧಿಸಿದ ಆಲಯಾರ್ಚನೆಯ ವಿವಿಧ ನಡೆಗಳು, ಅವುಗಳ ವಿವಿಧ ಹಂತಗಳು, ಭಾಗಗಳು - ಅವುಗಳ ಪ್ರಮಾಣಾನುಪಾತಗಳನ್ನು ಗುರುತಿಸಿ, ಸಂಗ್ರಹಿಸಿ, ಕ್ರೋಢೀಕರಿಸಿ ನೀಡುವುದಷ್ಟೇ ಇಲ್ಲಿನ ಗುರಿಯಾಗಿದೆ. ಆಲಯದ ಬಗೆಗಿನ ಅರಿವಿಗೆ ಹೊಸದೇನನ್ನಾದರೂ ಸೇರಿಸುವುದು ನನ್ನ ಗಮ್ಯವಲ್ಲ ಹಾಗೂ ಹೊಸದೇನನ್ನೂ ಸೇರಿಸಿಲ್ಲವೆಂದೇ ನಾನು ಭಾವಿಸಿದ್ದೇನೆ. ಶ್ರೀ ಸಾಧು ಸುಬ್ರಹ್ಮಣ್ಯಶಾಸ್ತ್ರಿ, ಶ್ರೀ ಟಿ.ಕೆ.ಟಿ. ವೀರರಾಘವಾಚಾರ್ಯ ಮುಂತಾದ ಹಿರಿಯ ವಿದ್ವಾಂಸರ ಕೊಡುಗೆಯಾದ ಮೂಲಾಧಾರ ವಿವರಗಳನ್ನು ಅರಗಿಸಿಕೊಂಡು ಅವುಗಳನ್ನು ಭಕ್ತಜನರ ಮುಂದೆ ಸಾವಯವ ಸಂಬಂಧ ಹೊಂದಿದ ಪಠನೀಯವಾದ ರೀತಿಯಲ್ಲಿ ಪ್ರಸ್ತುತಪಡಿಸುವುದಷ್ಟೆ ನನ್ನ ಗುರಿ. ಈ ನನ್ನ ಸೀಮಿತ ಗುರಿಯನ್ನು ತಲುಪುವುದರಲ್ಲಿ ಇತರ ವಿದ್ವಾಂಸರಿಗಿಂತ ನನಗೆ ಹೆಚ್ಚಿನ ಅರ್ಹತೆಯಿದೆಯೆಂದು ನಾನು ಭಾವಿಸುತ್ತೇನೆ ಕಾರಣ - ನನಗೆ ನನ್ನ ಹೆಸರಿನ ಹೊರತು ಯಾವ ಬಿರುದು ಬಾವಲಿಯಾಗಲೀ, ಪ್ರೌಢಿಮೆಯ ಪ್ರಸಿದ್ಧಿಯಾಗಲೀ ಇಲ್ಲದೆ, ನನ್ನದು ಮಾತ್ರವೇ ಆದ ಪರಿಕಲ್ಪನೆಯ ಗೌರವ ಹೊಂದಿರುವುದಾಗಿದೆ. ಹಾಗಾಗಿ ಇತರ ಯಾರನ್ನೂ ನೋಯಿಸುವಂತಹ ತಪ್ಪು ಮಾಡದೆ ನೆಮ್ಮದಿಯಾಗಿರುವ ನೆಲೆಯಲ್ಲಿದ್ದೇನೆ. ಏನೇ ಆದರೂ ಏಳುಮಲೆಯೊಡೆಯನ ವೈಭವವೆಂತಹುದೆಂದರೆ ಯಾರು ಯಾವುದೇ ರೀತಿಯ ವಿಶ್ಲೇಷಣೆ ನಡೆಸಿದರೂ ಅದರ ದಿವ್ಯಭವ್ಯ ಪ್ರಾಭವ ಪಾರಮ್ಯಕ್ಕೆ ಗೌರವಕ್ಕೆ, ಪಾವಿತ್ರ್ಯಕ್ಕೆ ನ್ಯೂನತೆಯುಂಟಾಗದು. ಈ ಪುಸ್ತಕ ಹಿರಿಮೆಯೇನಾದರೂ ಪಡೆದಿದ್ದಲ್ಲಿ ಅದು ನನ್ನ ಪ್ರಯತ್ನದಿಂದಾದ್ದಲ್ಲ ಏದು ನಮ್ರತೆಯಿಂದ ಬಿನ್ನಯಿಸುವೆ.

ಆಲಯದ ಆಡಳಿತದಲ್ಲಿ ನನ್ನ ಎಲ್ಲ ವಿಧಿ ವಿಧಾನಗಳಲ್ಲಿ ನಿರಂತರ ಪ್ರೋತ್ಸಾಹ ನೀಡಿದವರೂ ಬೆನ್ನು ತಟ್ಟಿದವರೂ ಆದ ಆಂಧ್ರಪ್ರದೇಶದ ಮುಖ್ಯಮಂತ್ರಿ ಡಾ॥ ಮರ್ರಿ ಚೆನ್ನಾರೆಡ್ಡಿ ಆವರಿಗೆ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ನನ್ನ ಕಿರಿಯ ಮಿತ್ರ ಸಹೋದ್ಯೋಗಿ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಶ್ರೀ ಪಿ.ವಿ.ಆರ್.ಕೆ. ಪ್ರಸಾದ್ ಐ.ಎ.ಎಸ್. ಅವರಿಗೆ ನನ್ನ ವಿಶೇಷ ವಂದನೆಗಳು. ಅವರು ಉತ್ಸಾಹ ಸಡಗರದಿಂದ ಈ ಪುಸ್ತಕವನ್ನು ತಿ.ತಿ.ದೇ. ಪ್ರಕಟನೆಯಾಗಿ ಪರಿಗಣಿಸಿದ್ದಾರೆ. ಅವರ ಜೊತೆಗಿನ ಅನುಬಂಧ ಅಲ್ಪಕಾಲದ್ದೇ ಆದರೂ ಆಪ್ಯಾಯಮಾನವಾಗಿ ನನ್ನ ಪಾಲಿಗೆ ವರದಾಯಕವಾಗಿದೆ. ಅವರು ತಮ್ಮ

ಕೆಲಸವನ್ನು ಉದರಂಭರಣ ಉದ್ಯೋಗವೆಂದಲ್ಲದೆ ಸೇವೆ ಎಂಬ ಅರ್ಪಣಾ ಮನೋಭಾವದಿಂದ ಸ್ವೀಕರಿಸಿರುವವರು. ಹಾಗಾಗಿ ಅವರೊಂದಿಗಿನ ಒಂದು ವರ್ಷದ ಆಲಯ ಸಂಬಂಧದಿಂದಾಗಿ ಆಲಯಾಡಳಿತದಲ್ಲಿ ಅತಿಹೆಚ್ಚಿನ ಗುಣಾತ್ಮಕವಾದ ಅಭಿವೃದ್ಧಿ ಯುಂಟಾಗಿದೆ. ಅವರು ನನಗೆ ನೀಡಿದ ಸಹಕಾರಕ್ಕೆ ಕೃತಜ್ಞತೆಯಿಂದ ವಂದಿಸುವೆ.

ತಿ.ತಿ.ದೇ. ಪೌರಸಂಬಂಧಾಧಿಕಾರಿ ಶ್ರೀ ರಾವುಲ ಸೂರ್ಯನಾರಾಯಣಮೂರ್ತಿ ಅವರಿಗೂ, ಪುಸ್ತಕದ ಅಂದವಾದ ಮುದ್ರಣ ಕ್ಕಾಗಿ ತಿ.ತಿ.ದೇ. ಪ್ರೆಸ್ ಮ್ಯಾನೇಜರ ಶ್ರೀ ವಿಜಯಕುಮಾರರೆಡ್ಡಿ ಅವರಿಗೂ ನನ್ನ ವಂದನೆಗಳು.

ಶ್ರೀ ಆರ್.ಎಸ್.ಪಿ. ಸುಬ್ರಹ್ಮಣ್ಯಂ ಮತ್ತು ಶ್ರೀ ಸಯ್ಯದ್ ಹಬೀಬುಲ್ಲ ಅವರುಗಳು ನನ್ನ ವೈಯುಕ್ತಿಕ ಸಹಾಯಕರಂತೆ ಕೆಲಸ ಮಾಡಿ ಇಡೀ ಪುಸ್ತಕವನ್ನು ಪ್ರೀತಿಯ ಕೆಲಸವೆಂದು ಭಾವಿಸಿ ಬೆರಳಚ್ಚು ಮಾಡಿದ್ದಾರೆ. ಅವರಿಗೆ ವಂದನೆ.

ನಾಗಾರ್ಜುನ ವಿಶ್ವವಿದ್ಯಾಲಯದ ಇತಿಹಾಸದ ಪ್ರಾಧ್ಯಾಪಕರು ಡಾ॥ ಆರ್. ಸುಬ್ರಹ್ಮಣ್ಯಂ ಅವರೊಡನೆ ಆಲಯ ವಾಸ್ತು ಶಿಲ್ಪದ ಬಗ್ಗೆ - ವಿಶೇಷವಾಗಿ ವಿಜಯನಗರ ಕಾಲದ ಆಲಯ ವಾಸ್ತುಶಿಲ್ಪದ ಬಗ್ಗೆ ವ್ಯಾಪಕವಾಗಿ ಚರ್ಚಿಸಿದ್ದೇನೆ. ಮುಕ್ಕೋಟಿ ಪ್ರದಕ್ಷಿಣೆಯ ವಾಸ್ತುಶಿಲ್ಪದ ಬಗ್ಗೆ ಸಲಹೆ ಸೂಚನೆಗಳನ್ನು ಪಡೆದು ಆ ಬಗ್ಗೆ ಅವರ ಬರಹವನ್ನು ಈ ಪುಸ್ತಕದಲ್ಲಿ ಪೂರ್ಣವಾಗಿ ಬಳಸಿಕೊಂಡಿದ್ದೇನೆ. ಈ ಪುಸ್ತಕದ ಮುನ್ನುಡಿಯನ್ನು ಬರೆದು ನೀಡಿರುವ ಅವರಿಗೆ ನನ್ನ ಕೃತಜ್ಞತೆಗಳು.

ಹಿಂದಿನ ಮೂವತ್ತು ವರ್ಷಗಳಲ್ಲಿ ಆಲಯವನ್ನು ಅತಿಹತ್ತಿರದಿಂದ ಅಧ್ಯಯನ ಮಾಡಲು ಅವಕಾಶ ಮಾಡಿಕೊಟ್ಟ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಹಾಗೂ ಧರ್ಮಕರ್ತರ ಮಂಡಲಿಗೆ ನಂತರದಲ್ಲಿ ಅಧ್ಯಕ್ಷರಾಗಿ ಕಾರ್ಯಭಾರ ನಿರ್ವಹಿಸಿದ ಸಿ. ಅಣ್ಣಾ ರಾಯರಿಗೆ ನನ್ನ ಕೃತಜ್ಞತೆ. ಅವರ ನಿರಂತರವಾದ, ಸದಾಸಿದ್ಧವಾದ ಸಹಾಯಹಸ್ತವಿಲ್ಲದಿದ್ದಲ್ಲಿ ನಾನು ಆಲಯದ ಬಗ್ಗೆ ಅತ್ಯಂತ ಸಾನ್ನಿಹಿತ್ಯವನ್ನು ಪಡೆಯಲು ಸಾಧ್ಯವೇ ಆಗುತ್ತಿರಲಿಲ್ಲ.

ಮೊದಲ ಅಧ್ಯಾಯದಲ್ಲಿನ ಪ್ರಾಕೃತಿಕ ಭೌಗೋಳಿಕ ಕಮಾನಿನ ಬಗ್ಗೆ ವಿವರಗಳಿಗಾಗಿ ಭಾರತೀಯ ಭೌಗೋಳಿಕ ಸರ್ವೇಕ್ಷಣ ಇಲಾಖೆಯವರಿಗೆ ಕೃತಜ್ಞ. ಆಂಧ್ರಪ್ರದೇಶದ ಜಿಲ್ಲಾ ಗೆಜೆಟಿಯರುಗಳ ರಾಜ್ಯ ಸಂಪಾದಕನಾಗಿದ್ದಾಗ ಎರಡನೆಯ ಅಧ್ಯಾಯ ನನ್ನ ಉಸ್ತುವಾರಿಯಲ್ಲಿ ಸಂಪಾದಿತವಾಯಿತು. ಆಲಯದ ಚಾರಿತ್ರಿಕ ಹಿನ್ನೆಲೆ ಒಂದೇ ಆದ್ದರಿಂದಾಗಿ ಅಲ್ಪಸ್ವಲ್ಪ ಬದಲಾವಣೆಗಳೊಡನೆ ಅದನ್ನೇ ಇಲ್ಲಿ ಪುನಃ ಸಂಪಾದಿಸಿದ್ದೇನೆ.

ತಿ.ತಿ.ದೇ. ಶೀಘ್ರದಲ್ಲಿಯೇ ಪ್ರಕಟಿಸಲು ಸಿದ್ಧಪಡಿಸಿರುವ ತಿರುಮಲೆ ಆಲಯದ ಶಿಲ್ಪ ವಿವರದ ಬಗೆಗಿನ ಡಾ॥ ಕೆ.ವಿ. ರಾಮನ್ ಅವರ ಅಧಿಕಾರಯುತವಾದ ಹಾಗೂ ಪರಿಪೂರ್ಣವಾದ ಹಸ್ತಪ್ರತಿಯನ್ನು ಪರಿಶೀಲಿಸಿದ್ದೇನೆ. ಪಡಿಯಚ್ಚುಗಳನ್ನು ತಯಾರಿಸುವಲ್ಲಿ ಪುನರಾವೃತ್ತಿಯನ್ನು ತಪ್ಪಿಸಲೆಂದು ಅದೇ ಚಿತ್ರಗಳನ್ನೇ ಇಲ್ಲಿನ ಶಿಲ್ಪಕಲೆಯ ಅಧ್ಯಾಯದಲ್ಲಿ ಬಳಸಿದ್ದೇನೆ. ಇದಕ್ಕಾಗಿ ಡಾ॥ ಕೆ.ವಿ. ರಾಮನ್ ಅವರಿಗೆ ನನ್ನ ವಂದನೆ.

ಪ್ರಧಾನವಾಗಿ, ಕಡೆಯದಾಗಿ ಅಲ್ಲದೆ, ಇತರತ್ರ ತೊಡಗಿಸಿಕೊಂಡ ಪತಿಯನ್ನು ಅರಿತು, ಆತನ ಚರಿತ್ರೆಯ ವಿದ್ಯಾರ್ಥಿಯು ಹೊಂದಿದ ಸಂಶೋಧನೆಯ ಚಲಚ್ಚಲಚಿತ್ತವನ್ನು ಸಹಾನುಭೂತಿಯಿಂದ ಸಹಿಸಿದ ನನ್ನ ಪತ್ನಿ ಶ್ರೀಮತಿ ತ್ರಿಪುರ ಸುಂದರಿ ರಮೇಶನ್ ಅವರಿಗೆ ನನ್ನ ಕೃತಜ್ಞತೆಗಳು.

ನನ್ನ ಇತರ ಪುಸ್ತಕಗಳಂತೆ ನನ್ನ ಈ ಪುಸ್ತಕವನ್ನು ಸಹ, ಸರ್ವಕಾಲ ಸರ್ವಾವಸ್ಥೆಗಳಲ್ಲಿ ನನ್ನನ್ನು ಸನ್ಮಾರ್ಗ ಪ್ರವರ್ತನೆಯಲ್ಲಿ ತೊಡಗಿಸುತ್ತಿರುವ ನನ್ನ ಗುರು-ದೈವ-ವಾಗಿರುವ ಕಂಚಿಯ ಮಠದ ಜಗದ್ಗುರು ಶ್ರೀ ಶ್ರೀ ಚಂದ್ರಶೇಖರೇಂದ್ರ ಸರಸ್ವತೀಸ್ವಾಮಿ ಶಂಕರಾಚಾರ್ಯರಿಗೆ ಸಮರ್ಪಿಸುತ್ತೇನೆ.

**ತಿರುಮಲ**

**1979- ಅಕ್ಟೋಬರ್-1**
**ವಿಜಯದಶಮಿ.**

# ತಿರುಮಲೆಯ ಆಲಯ

## ಪರಿವಿಡಿ


| | | |
|---|---|---|
| ಅಧ್ಯಾಯ - 1 | ಭೌಗೋಳಿಕ ಸನ್ನಿವೇಶ | 1-8 |
| ಅಧ್ಯಾಯ - 2 | ಚಾರಿತ್ರಿಕ ಹಿನ್ನೆಲೆ | 9-32 |
| ಅಧ್ಯಾಯ - 3 | ಪ್ರಾಚೀನ ಸಾಹಿತ್ಯದಲ್ಲಿ ಆಲಯ | 33-60 |
| ಅಧ್ಯಾಯ - 4 | ಆಲಯ ವಿವರ | 61-74 |
| ಅಧ್ಯಾಯ - 5 | ಶ್ರೀವೆಂಕಟೇಶ್ವರಸ್ವಾಮಿ ಹಾಗೂ ಇತರ ವಿಗ್ರಹಗಳು | 75-94 |
| ಅಧ್ಯಾಯ - 6 | ಆಲಯದ ನಿತ್ಯಪೂಜೆ | 95-112 |
| ಅಧ್ಯಾಯ - 7 | ಆಲಯದ ಉತ್ಸವಗಳು | 113-128 |
| ಅಧ್ಯಾಯ - 8 | ತಿರುಮಲೆಯ ಸ್ಥಳ ಪುರಾಣ | 129-148 |
| ಅಧ್ಯಾಯ - 9 | ಸಾಹಿತ್ಯ - ಸಂಗೀತದಲ್ಲಿ ತಿರುಮಲೆ | 149-162 |
| ಅಧ್ಯಾಯ - 10 | ಆಲಯ ನಿರ್ಮಾಣದ ಏಳುಹಂತ | 163-184 |
| ಅಧ್ಯಾಯ - 11 | ಆಲಯ ವಾಸ್ತುಶಿಲ್ಪ - ವಿಗ್ರಹ ವಿವರ | 185-204 |
| ಅಧ್ಯಾಯ -12 | ಆಲಯ ಶಾಸನಗಳು | 205-234 |
| ಅಧ್ಯಾಯ -13 | ವಿಜಯನಗರ ಪೂರ್ವ ಆಲಯಾಡಳಿತ | 235-266 |
| ಅಧ್ಯಾಯ -14 | ವಿಜಯನಗರ ಕಾಲದಲ್ಲಿ ಆಲಯ | 267-288 |
| ಅಧ್ಯಾಯ -15 | ವಿಜಯನಗರ ಕಾಲದಲ್ಲಿ ಆಲಯದ ಆರ್ಥಿಕ ಪರಿಸ್ಥಿತಿ | 289-314 |
| ಅಧ್ಯಾಯ -16 | ವಿಜಯನಗರದ ಕಾಲದ ನಂತರ ಆಲಯ | 315-332 |
| ಅಧ್ಯಾಯ -17 | ಕರ್ನಾಟಿಕ ಯುದ್ಧಗಳ ನಡುವೆ ತಿರುಮಲೆ | 333-348 |
| ಅಧ್ಯಾಯ -18 | ಈಸ್ಟ್ ಇಂಡಿಯಾ ಕಂಪನಿಯ ಆಡಳಿತದಲ್ಲಿ ಆಲಯ | 349-370 |
| ಅಧ್ಯಾಯ -19 | ಆಂಗ್ಲ ಅಧೀನದಲ್ಲಿ ಆಲಯ | 371-394 |
| ಅಧ್ಯಾಯ -20 | 19ನೇ ಶತಮಾನದಲ್ಲಿ ಆಲಯ | 395-426 |
| ಅಧ್ಯಾಯ -21 | ಆಂಗ್ಲ ಸರ್ಕಾರ ಆಡಳಿತವನ್ನು ಮಹಂತರಿಗೆ ಒಪ್ಪಿಸಿದ್ದು - ನಂತರದ ಬೆಳವಣಿಗೆ | 427-450 |
| ಅಧ್ಯಾಯ -22 | ಸಮಗ್ರ ನೋಟ | 451-474 |
| ಅನುಬಂಧ - 1 | ಹರಿದಾಸರ ಹಾಗೂ ಶ್ರೀನಿವಾಸ | 475-482 |
| ಅನುಬಂಧ - 2 | ತಿ.ತಿ. ದೇವಸ್ಥಾನಗಳ ಧರ್ಮಕರ್ತರ ಮಂಡಳಿ (2014ರವರೆಗೆ) | 483-487 |

# ಪರಿವಿಡಿ

ಅಧ್ಯಾಯ - 1 *ಭೌಗೋಳಿಕ ಸನ್ನಿವೇಶ* ಪುಟ 1-8

ಸ್ಥಳ ವಿವರ - ಮೇಲ್ಮೈಲಕ್ಷಣ. ಹವಾಮಾನ - ಮಳೆ - ಉಷ್ಣೋಗ್ರತೆ - ಆರ್ದ್ರತೆ- ಮೋಡಗಳು - ಮಾರುತಗಳುಭೂಸ್ವಭಾವ - ಖನಿಜಸಂಪತ್ತು - ಕಾಡುಗಳು - ಪ್ರಾಣಿ ಸಂಪದ - ಸರೀಸೃಪಗಳು.

ಅಧ್ಯಾಯ - 2 *ಚಾರಿತ್ರಿಕ ಹಿನ್ನೆಲೆ* ಪುಟ 9-32

ಪ್ರಾಗೈತಿಹಾಸ - ಇತಿಹಾಸದ ಆರಂಭಕಾಲ - ಪಲ್ಲವರು - ರೇನಾಡು ಚೋಳರು - ರಾಷ್ಟ್ರಕೂಟರು- ಬಾಣರು- ವೈದುಂಬರು- ಪಶ್ಚಿಮಗಂಗರು - ನೊಳಂಬ ಪಲ್ಲವರು - ಕಲ್ಯಾಣಿ ಚಾಳುಕ್ಯರು - ಚೋಳ ಸಾಮ್ರಾಟರು - ನಂತರದಚೋಳರು - ಪಾಂಡ್ಯರು -ಯಾದವರಾಯರು - 1260 ರಿಂದ 1360 ವರೆಗೆ ತಿರುಮಲೆ - ವಿಜಯನಗರದ ಸಾಮ್ರಾಟರು - ವಿಜಯನಗರದ ಕಾಲದಲ್ಲಿ ತಿರುಮಲೆ - ಮಟ್ಲವಂಶದವರು - 1650 ರಿಂದ 1800 ವರೆಗೆ ತಿರುಮಲೆ - ಕುತುಬ್ ಷಾಹೀ ಆಳ್ವಿಕೆ - ಕರ್ನಾಟಕದ ನವಾಬರು - ಈ ಕಾಲದಲ್ಲಿ ತಿರುಮಲೆ ಆಲಯ - ಕಂಪನಿಯ ಪಾತ್ರ.

ಅಧ್ಯಾಯ - 3 *ಪ್ರಾಚೀನ ಕಾಲದ ಸಾಹಿತ್ಯದಲ್ಲಿ ತಿರುಮಲೆಯ ಆಲಯ* ಪುಟ 33-60

ಸಾಹಿತ್ಯಾಧಾರದಲ್ಲಿನ ಪ್ರಾಚೀನಕಾಲ - ಸಂಗಂ ಸಾಹಿತ್ಯದಲ್ಲಿ ತಿರುಮಲೆ - ತಿರುಪತಿ - ತಿರುಮಲೆಯ ಪ್ರತ್ಯೇಕ ಉಲ್ಲೇಖ ಇಲ್ಲದಿರುವಿಕೆ - ಆಳ್ವಾರರ ಕಾಲ - (4 ನೇ ಶತಮಾನದಿಂದ 9 ನೇ ಶತಮಾನ) ಪೊಯ್ಗೈಆಳ್ವಾರ್ - ಪೂದತ್ತಾಳ್ವಾರ್ ಪೇಯಾಳ್ವಾರ್- ಶಿಲಪ್ಪದಿಕಾರದಲ್ಲಿ ತಿರುಮಲೆ - ನಮ್ಮಾಳ್ವಾರ್ - ಇತರ ಆಳ್ವಾರರು - ಮಧ್ಯಕಾಲ - (9ನೇ ಶತಮಾನದಿಂದ 17 ನೇ ಶತಮಾನ) ಆಲಯಶಾಸನಗಳು - ಪ್ರಾಚೀನ ಶಾಸನ ದಾಖಲೆಗಳು - ತಿರುಮಲೆ ಹಾಗೂ ಪಲ್ಲವರು - ಚೋಳರ ಕಾಲದಲ್ಲಿ ತಿರುಮಲೆ - ಪಾಂಡ್ಯರ ಆಳ್ವಿಕೆಯಲ್ಲಿ ತಿರುಮಲೆ - ಪಾಂಡ್ಯ ಮಾಂಡಳಿಕ ಯಾದವರಾಯರು - ವಿಜಯನಗರದ ಅರಸುಗಳು - ಸಂಗಮವಂಶದ ಆಳ್ವಿಕೆಯಲ್ಲಿ ತಿರುಮಲೆ - ಸಾಳುವರ ಕಾಲದಲ್ಲಿ ತಿರುಮಲೆ - ತುಳುವ ದೊರೆಗಳ ಕಾಲದಲ್ಲಿ ತಿರುಮಲೆ - ಕೃಷ್ಣರಾಯ - ಮೊದಲ ಸಂದರ್ಶನ - ದ್ವಿತೀಯ - ತೃತೀಯ - ಚತುರ್ಥ - ಪಂಚಮ - ಷಷ್ಠ - ಸಪ್ತಮ ಸಂದರ್ಶನಗಳು - ಅಚ್ಯುತರಾಯ ಹಾಗೂ ತಿರುಮಲೆ- ಆತನ ಮೊದಲ, ಎರಡನೆಯ ಮೂರನೆಯ ಸಂದರ್ಶನಗಳು - ಸದಾಶಿವರಾಯನ ಕಾಲದ ತಿರುಮಲೆ - ಅರೀಡು ಆಳ್ವಿಕೆಯಲ್ಲಿ ತಿರುಮಲೆ - ಮಹಂತರ ಕಾಲದಲ್ಲಿ ತಿರುಮಲೆ - ಅರ್ವಾಚೀನ ತಿರುಪತಿ.

ಅಧ್ಯಾಯ - 4 *ಆಲಯ ವಿವರ* ಪುಟ 61-74

ಸಾಮಾನ್ಯ - ಆಲಯದ ಹೊರಗಿನ ಕಟ್ಟಡಗಳು - ಸಾವಿರಕಾಲಿನ ಮಂಟಪ - ಹತೀರಾಮಜೀ ಮಠ - ಪ್ರಾಕಾರಗಳು - ಪ್ರದಕ್ಷಿಣೆಗಳು - ಹೊರಗೋಪುರ - ಸಂಪಂಗಿ ಪ್ರದಕ್ಷಿಣೆ - ಪ್ರತಿಮಾಮಂಟಪ - ರಂಗಮಂಟಪ - ತಿರುಮಲರಾಯ ಮಂಟಪ - ಆಯಿನಾಮಹಲ್ - ಸಂಪಂಗಿ ಪ್ರದಕ್ಷಿಣೆಯ ಸುತ್ತ - ಧ್ವಜಸ್ತಂಬ ಮಂಟಪ - ಒಳಗೋಪರ - ವಿಮಾನ ಪ್ರದಕ್ಷಿಣೆ - ಶ್ರೀವರದರಾಜಸ್ವಾಮಿಗುಡಿ - ಪೋಟು ಕೊಟಡಿ - ಬಂಗಾರದ ಬಾವಿ - ಕಲ್ಯಾಣ ಮಂಟಪ - ಶ್ರೀರಾಮಾನುಜರ ಗುಡಿ - ಶ್ರೀನರಸಿಂಹಸ್ವಾಮಿ ಗುಡಿ - ಪ್ರಧಾನ ಆಲಯದ ಗುಡಿ - ಪ್ರಧಾನ ಆಲಯ ಕಟ್ಟಡ ವಿನ್ಯಾಸ - ತಿರುಮಾಮಣಿ ಮಂಟಪ - ಬಂಗಾರದ ಬಾಗಿಲು - ಸ್ನಪನ ಮಂಟಪ - ರಾಮರ್ ಮೇಡೈ - ಮುಕ್ಕೋಟಿಪ್ರದಕ್ಷಿಣೆ - ಶಯನ ಮಂಟಪ - ಗರ್ಭಗೃಹ - ಪ್ರಧಾನ ಆಲಯದ ವಾಸ್ತು ಲಕ್ಷಣ -

ಅಧ್ಯಾಯ - 5 *ತಿರುಮಲೆಯ ಆಲಯದ ವೆಂಕಟೇಶ್ವರಸ್ವಾಮಿ ಹಾಗೂ ಇತರ ವಿಗ್ರಹಗಳು* ಪುಟ 75-94

ಆಲಯವಾಸ್ತು ಹಾಗೂ ವೈಷ್ಣವ ಪರಂಪರೆ - ಶ್ರೀವೆಂಕಟೇಶ್ವರ ಸ್ವಾಮಿಯ ಮೂಲ ವಿಗ್ರಹ - ಸ್ವಯಂ ವ್ಯಕ್ತ ಮೂರ್ತಿಪರಂಪರೆ - ಮೂರ್ತಿ ಶಿಲ್ಪದ ಆಗಮಿಕ ನಿಯಮ - ವಿಷ್ಣುಮೂರ್ತಿಯ ಸಾಮಾನ್ಯ ಲಕ್ಷಣಗಳು. ವೈಖಾನಸ ಆಗಮದಂತೆ ಶ್ರೀವೆಂಕಟೇಶ್ವರಸ್ವಾಮಿ

ವಿಗ್ರಹದ ವಿವರ - ವಿಗ್ರಹವು ಶೈವ/ವೈಷ್ಣವ ಎಂಬ ವಿಚಾರ - ವಿಗ್ರಹದ ಶೈವತೆಯ ಪರಿಶೀಲನೆ - ವಿಗ್ರಹ ಶಕ್ತಿ ವಿಗ್ರಹವೇ ಎಂಬ ಪರಿಶೀಲನೆ - ವಿಗ್ರಹ ವೈಷ್ಣವವೇ ಹೊರತು ಬೇರಲ್ಲ ಎಂಬುದರ ಸ್ಥಾಪನೆ -

ಗರ್ಭಗೃಹದಲ್ಲಿ ಇತರ ವಿಗ್ರಹಗಳು - ಭೋಗ ಶ್ರೀನಿವಾಸ (ಕೌತುಕ ಬೇರ) ಉಗ್ರಶ್ರೀನಿವಾಸ (ಸ್ನಪನಮೂರ್ತಿ) ಬಲಿಬೇರ (ಕೊಲುವು ಶ್ರೀನಿವಾಸ) ಮಲೆಯಪ್ಪಸ್ವಾಮಿ (ಉತ್ಸವ ವಿಗ್ರಹ) - ಶ್ರೀ ಕೃಷ್ಣಮೂರ್ತಿ - ಶ್ರೀರಾಮಲಕ್ಷ್ಮಣಸೀತೆ ಸುಗ್ರೀವ ವಿಗ್ರಹಗಳು - ಚಕ್ರತ್ತಾಳ್ವಾರ್ (ಶ್ರೀ ಸುದರ್ಶನ)

ಅಧ್ಯಾಯ - 6 *ಆಲಯದ ನಿತ್ಯಪೂಜಾ ವಿವರ* ಪುಟ 95-112

ಪೀಠಿಕೆ - ಆಗಮಿಕ ಪೂಜಾ ವಿಧಾನ - ದೈನಂದಿನ ಪೂಜೆ ಸಮಯಗಳು ನೈವೇದ್ಯ - ಮಾತ್ರಾಸನ - ಶಾತ್ತುಮುರೈ - ಎರಡನೇ ಗಂಟೆ - ಸರ್ವದರ್ಶನ - ರಾತ್ರಿ ಪೂಜೆ - ಏಕಾಂತಸೇವೆ - ಪೂಲಂಗಿಸೇವೆ - ಅಭಿಷೇಕ - ವಾಹನ ಸೇವೆಗಳು - ಶಾಸನಗಳಲ್ಲಿ ಹೇಳಲಾದ ಪೂಜೆಗಳು - ನಿತ್ಯದೀಪ, ನಿತ್ಯನೈವೇದ್ಯ - ಸಂಧಿ ಸಮರ್ಪಣೆ - ವೇದಪಾರಾಯಣ - ಅಭಿಷೇಕ.

ಅಧ್ಯಾಯ - 7 *ಆಲಯದ ಉತ್ಸವಗಳು* ಪುಟ 113-128

ಪೀಠಿಕೆ - ಬ್ರಹ್ಮೋತ್ಸವ - ಅಧ್ಯಯನೋತ್ಸವ - ಪವಿತ್ರೋತ್ಸವ - ಸಂಕ್ರಾಂತಿ - ವಸಂತೋತ್ಸವ (ಗ್ರೀಷ್ಮೋತ್ಸವ) ತೈತಿರುನಾಳ್ - ಅನ್ನಾಊಂಜಲ್ ತಿರುನಾಳ್ - ತಿರುಪ್ಪಳ್ಳಿ ಓಡಂ ತಿರುನಾಳ್ - ಕಲ್ಯಾಣ ಉತ್ಸವ - ರಥಸಪ್ತಮಿ - ಲಕ್ಷ್ಮೀದೇವೀ ಮಹೋತ್ಸವ - ಫಲ್ಲವೋತ್ಸವ - ಪಲೋತ್ಸವ - ವಿಶೇಷ ದಿವಸಗಳು - ತಿಂಗಳ ದಿವಸಗಳು-

ಅಧ್ಯಾಯ - 8 *ಪರಂಪರೆ ಹಾಗೂ ಸ್ಥಳ ಪುರಾಣ* ಪುಟ 129-148

ಪೀಠಿಕೆ - ಸ್ಥಳ ಪುರಾಣ ಕರ್ತೃ - ಶ್ವೇತ ವರಾಹ ಕಲ್ಪದ ಕಥೆ - ಗರುಡನು ವೈಕುಂಠದಿಂದ ಕೀಡಾಚಲವನ್ನು ತರುವಿಕೆ - ತಿರುವೆಂಗಡದಲ್ಲಿ ವಿಷ್ಣು ಸಾನ್ನಿಧ್ಯ - ಶ್ರೀವರಾಹನ ದಿವ್ಯಲೀಲೆ - ಕ್ರೀಡಾದ್ರಿಯ ದೈವೀಕ ಶಕ್ತಿ - ಬೆಟ್ಟದ ಮೇಲೆ ವೆಂಕೇಶ್ವರಸ್ವಾಮಿ - ತರುಣನ ಕಥೆ - ಶಂಖಣನು ಪುನಃ ರಾಜ್ಯ ಪಡೆದ ಕಥೆ - ಆತ್ಮಾರಾಮನ ಐತಿಹ್ಯ - ಹದಿನೇಳು ತೀರ್ಥಗಳ ಐತಿಹ್ಯ - ತೀರ್ಥ ಮಾಹಾತ್ಮ್ಯ - ವೆಂಕಟಾದ್ರಿಗೆ ಶ್ರೀ ರಾಮನ ಆಗಮನ - ಬೆಟ್ಟದಲ್ಲಿ ಶ್ರೀನಿವಾಸನು ನೆಲೆಸಿದ ಕಥೆ - ಸ್ವಾಮಿಗೆ ಆಲಯ ನಿರ್ಮಾಣವಾದ ಕಥೆ - ಚೋಳರಾಜನ ಕಥೆ - ರಂಗದಾಸನ ಕಥೆ -ದೇವರು ಘಾತಗೊಂಡ ಕಥೆ - ಶ್ರೀನಿವಾಸ ಕಲ್ಯಾಣ ಇತರ ಐತಿಹ್ಯಗಳು.

ಅಧ್ಯಾಯ - 9 *ಸಾಹಿತ್ಯ - ಸಂಗೀತದಲ್ಲಿ ತಿರುಮಲೆ* ಪುಟ 149-162

ತಮಿಳು ಸಾಹಿತ್ಯ - ಪ್ರಾಚೀನ ಸಾಹಿತ್ಯಕಾಲ - ತೊಲ್ಕಾಪ್ಪಿಯಂ - ಶಿಲಪ್ಪದಿಕಾರಂ - ಸ್ತೋತ್ರಸಾಹಿತ್ಯ - ಪುರಾಣಕಾಲ - ಸಂಸ್ಕೃತ ಸಾಹಿತ್ಯ - ವಿಶ್ವಗುಣಾದರ್ಶ - ತೆಲುಗುಸಾಹಿತ್ಯ - ಕೃಷ್ಣದೇವರಾಯ - ಛಾಯಪತಿ - ಶ್ರೀವೆಂಕಟೇಶ್ವರ ಲಘುಕೃತುಲುವೆಂಕಟಾಚಲ ವಿಹಾರ ಶಥಕ - - ವೆಂಕಟಾಚಲ ಧಾಮ ತಾರಾವಳಿ - ಪಂಕಜಾತ ಭವಾಂಡೇಶ ಶತಕ - ವೆಂಕಟೇಶ್ವರ ಪಂಚಕ -ವೆಂಕಟಾಚಲಪತಿ ಶತಕ - ವೆಂಕಟನಗಾಧ್ಯಕ್ಷ ಶತಕ -ಶ್ರೀವೆಂಕಟೇಶ್ವರ ಕಲ್ಯಾಣ - ವೆಂಗಮಾಂಬ ಕೃತಿಗಳು - ಯೆರ್ರಾಪ್ರಗಡಕವಿ - ಚದಲವಾಡ ಮಲ್ಲಯ್ಯಕವಿ - ತಾಳ್ಳಪಾಕ ಅನ್ನಮಾಚಾರ್ಯ - ಪೆದತಿರುಮಲಾಚಾರ್ಯ - ರೇವಣೂರಿ ವೆಂಕಟಾರ್ಯ - ಕಾಕಮಾನಿ ಮೂರ್ತಿಕವಿ - ಸಿದ್ಧರಾಜು ತಿಮ್ಮರಾಜು - ತರಿಗೊಪ್ಪುಲ ಮಲ್ಲನ - ಪಿಂಗಳಿ ಸೂರನಾರ್ಯ - ಶ್ರೇಷ್ಠಲೂರಿ ವೆಂಕಟಾರ್ಯ - ಗಣಪವರಪು ವೆಂಕಟಕವಿ - ಮತ್ತಿತರರು - ಸಂಗೀತ - ಅನ್ನಮಾಚಾರ್ಯ - ಪೆದ ತಿರುಮಲಾಚಾರ್ಯ - ಚಿನ್ನ ತಿರುಮಲಾಚಾರ್ಯ - ಪುರಂದರದಾಸ - ವ್ಯಾಸರಾಯ - ತ್ಯಾಗರಾಜ - ಮುತ್ತುಸ್ವಾಮಿದೀಕ್ಷಿತ - ಶ್ಯಾಮಶಾಸ್ತ್ರಿ - ಇತರರು.

ಅಧ್ಯಾಯ - 10 *ಆಲಯ ನಿರ್ಮಾಣದ ಏಳು ಹಂತ* ಪುಟ 163-184

ಪೀಠಿಕೆ - ಆಗಮಗಳು - ವ್ಯೂಹ ಪ್ರಮೇಯ - ಆಗಮಿಕ ಆಲಯ ವೈವಿಧ್ಯ - ಏಕಮೂರ್ತಿ ಆಲಯ - ನವಷಟ್ ಪಂಚಮೂರ್ತಿ ಆಲಯ - ತ್ರಿತಾಳ ನವಮೂರ್ತಿ ಆಲಯ - ದ್ವಿತಾಳ ಆಲಯ ಪಂಚಮೂರ್ತಿ ಆಲಯ - ಏಕ ತಾಳಕ ವಿಮಾನ ನವಷಟ್ ಪಂಚ ಮೂರ್ತಿ ಆಲಯ -ಏಕತಾಳ ಏಕ ಮೂರ್ತಿ ಆಲಯ - ಗರ್ಭಗೃಹ ಪದ ವಿನ್ಯಾಸ - ಇತರ ದೇವತೆಗಳು - ಆಲಯ ನಿರ್ಮಾಣದ

ಮೊದಲಹಂತ (ಬಯಲು ಮಂಟಪ) - ಎರಡನೆಯ ಹಂತ (ಭಿತ್ತಿ ಸಹಿತ ಮಂಟಪ) - ಮೂರನೆಯ ಹಂತ - (ಗರ್ಭಗೃಹ ಅಂತರಾಳ) ಗರ್ಭಗೃಹದ ವಾಸ್ತು ವಿನ್ಯಾಸದ ಪರಿಶೀಲನೆ - ನಾಲ್ಕನೆಯ ಹಂತ (ಗರ್ಭಗೃಹದ ಈಗಿನ ಸ್ವರೂಪ ಹಾಗೂವಿಮಾನ ನಿರ್ಮಾಣ) ಐದನೆಯ ಹಂತ ( ರಾಮರ್ ಮೇಡೈಯ ಮುಚ್ಚುವಿಕೆ) ಆರನೆಯ ಹಂತ (ತಿರುಮಾಮಣಿ ಮಂಟಪ ನಿರ್ಮಾಣ) ಏಳನೆಯ ಹಂತ (ಗರುಡ ಮಂಟಪ) -ಆಲಯದ ಇತರ ನಿರ್ಮಾಣಗಳು - ಒಳಗೋಪುರ - ಧ್ವಜಸ್ತಂಭ ಮಂಟಪ - ತಿರುಮಲರಾಯಮಂಟಪ -ನಾಲ್ಕು ಮೂಲೆಯ ನಾಲ್ಕು ಮಂಟಪಗಳು - ಪ್ರತಿಮಾಮಂಟಪ -ರಂಗಮಂಟಪ - ಹೋರಗೋಪುರ - ಆಲಯ ನಿರ್ಮಾಣದ ಏಳು ಹಂತಗಳು - ನಿರ್ಣಯ ಸಂಗ್ರಹ.

ಅಧ್ಯಾಯ - 11 *ಆಲಯ ವಾಸ್ತು ಶಿಲ್ಪ - ವಿಗ್ರಹ ವಿವರ* ಪುಟ 185-204

ಸಾಮಾನ್ಯ - ಆಲಯವಾಸ್ತು ಪೀಠಿಕೆ - ಶಿಲ್ಪ - ವಿಗ್ರಹ ವಿವರ - ದ್ವಾರಗೋಪುರ - ಮಂಟಪ - ಪ್ರತಿಮಾಮಂಟಪ - ರತಿ ಚಿತ್ರಗಳು - ಧ್ವಜಸ್ತಂಭ ಮಂಟಪ - ತಿರುಮಲರಾಯ ಮಂಟಪ, ಕಲ್ಯಾಣಮಂಟಪ ,- ಪವಿತ್ರೋತ್ಸವ ಮಂಟಪ - ವಿಮಾನಪ್ರದಕ್ಷಿಣೆ - ರಂಗಮಂಟಪ - ನರಸಿಂಹ ಸ್ವಾಮಿಗುಡಿ - ಇತರ ವಿಗ್ರಹಶಿಲ್ಪಗಳು.

ಅಧ್ಯಾಯ -12 *ಆಲಯ ಶಾಸನಗಳು* ಪುಟ 205-234

ಪೀಠಿಕೆ - ಶಾಸನ ಸಂಖ್ಯೆ - ಶಾಸನ ಸಂರಕ್ಷಣೆ - ತಾಳ್ಲಪಾಕ ತಾಮ್ರಪತ್ರಗಳು -ಶಾಸನಗಳ ಕಾಲ -ಭಾಷೆ - ಸ್ಥಳವಿವರ - ರಾಯ ದಾನಿಗಳು - ನಿತ್ಯದೀಪ - ನಿತ್ಯ ನೈವೇದ್ಯ - ಸಂಧಿ ಸಮರ್ಪಣೆ - ವೇದಪಾರಾಯಣ - ಅಭಿಷೇಕ -ಉತ್ಸವಗಳು - ವಾಹನಗಳು - ನಂದನವನಗಳು - ದೇವದಾನ ಗ್ರಾಮಗಳು - ಸೋಪಾನ ಮಾರ್ಗ. ತಣ್ಣೀರ ಪಂದಲು - ರಾಮಾನುಜ ಕೂಟಗಳು - ಆಲಯ ವಿಸ್ತರಣ, ಜೀರ್ಣೋದ್ಧಾರ - ಜಿಯರ್ ಮಠ - ಶಾಸನದ ಹಲವು ಅಪರೂಪದ ಪದಗಳು.

ಅಧ್ಯಾಯ -13 *ವಿಜಯನಗರ ಪೂರ್ವ ಆಲಯಾಡಳಿತ* ಪುಟ 235-266

ಪೀಠಿಕೆ - ಪಲ್ಲವ ಪೂರ್ವಕಾಲದ ಆಲಯ - ಪಲ್ಲವರ ಕಾಲದಲ್ಲಿ ಆಲಯ - ಪ್ರಾಂತ್ಯ ವಿಂಗಡಣೆ - ಶಾಸನೋಕ್ತ ಪಲ್ಲವ ರಾಜರು - ಪಲ್ಲವ ಶಾಸನವಿವರ - ಪಲ್ಲವರ ಕಾಲದ ಆಲಯಾಡಳಿತ - ಆರ್ಥಿಕ ಪರಿಸ್ಥಿತಿ - ಚೋಳರ ಕಾಲದಲ್ಲಿ ಆಲಯ - ಪ್ರಾಂತ್ಯ ವಿಂಗಡಣೆ - ಚೋಳಶಾಸನವಿವರ - ಚೋಳರ ಆಳ್ವಿಕೆಯಲ್ಲಿ ಆಲಯಾಡಳಿತ - ಪಾಂಡ್ಯರು ಮತ್ತಿತರ ಸ್ಥಳೀಯರ ಅಧೀನದಲ್ಲಿ ಆಲಯಪೀಠಿಕೆ - ಆಲಯದೊಡನೆ ಪಾಂಡ್ಯರ ಸಂಬಂಧ- ಕಾಡವರಾಯರು - ಯಾದವರಾಯರು - ತೆಲುಗು ಪಲ್ಲವರು - ಈ ಕಾಲದ ಆರ್ಥಿಕ ಪರಿಸ್ಥಿತಿ - ತೆರಿಗೆಯ ವಿಧಾನ - ನೀರಾವರಿ - ಧಾರ್ಮಿಕ ದತ್ತಿ - ಸಾಲಿಯ ಶ್ರೀವೈಷ್ಣವರು - ಸ್ಥಾನತ್ತಾರ ಸಂಸ್ಥೆ - ದಾನವುಸ್ತುವಿನ ಬಗ್ಗೆ ಆಡಳಿತಗಾರರ ನಿಯಂತ್ರಣ - ಗೌರವನೀಯ ಸ್ಥಾನತ್ತಾರರು - ಸ್ಥಾನತ್ತಾರರು ಧರ್ಮದರ್ಶಿಗಳಾದ ಬಗ್ಗೆ - ಆಲಯ ಕರಣಿಕರು- ಸ್ಥಾನತ್ತಾರರ ಸ್ಥಿತ್ಯಂತರದ ಕಾರಣಗಳು - ಸ್ಥಾನತ್ತಾರರ ಸಂಘಟನೆ - ಆಲಯದೊಡನೆ ರಾಮಾನುಜರ ಸಂಬಂಧ - ಪ್ರಭಾವ - ಪಲ್ಲವ ಕಾಲದಿಂದ ವಿಜಯನಗರದ ಕಾಲದವರೆಗೆ ಆಲಯ ಚಿತ್ರಣ

ಅಧ್ಯಾಯ -14 *ವಿಜಯನಗರ ಕಾಲದಲ್ಲಿ ಆಲಯ* ಪುಟ 267-288

ಪೀಠಿಕೆ - ವಿಜಯನಗರ ಸಾಮ್ರಾಜ್ಯ ಆರಂಭದಲ್ಲಿ ಆಲಯ ಪರಿಸ್ಥಿತಿ - ಸಂಗಮ ವಂಶದ ಕಾಲದ ಆಲಯ - ಸಾಳುವರ ಅಧೀನದಲ್ಲಿ ಆಲಯ - ತುಳುವರ ಅಧೀನದಲ್ಲಿ ಆಲಯ - ಕೃಷ್ಣರಾಯ - ಆತನ ಸಮರ್ಪಣೆಗಳು - ಅಚ್ಯುತರಾಯ -ಸದಾಶಿವರಾಯ - ಅರವೀಡು ಅರಸರ ಅಧೀನದಲ್ಲಿ ಆಲಯ.

ಅಧ್ಯಾಯ -15 *ವಿಜಯನಗರ ಕಾಲದಲ್ಲಿ ಆಲಯದ ಆರ್ಥಿಕ ಪರಿಸ್ಥಿತಿ* ಪುಟ 289-314

ಪೀಠಿಕೆ: 16 ನೇ ಶತಮಾನದಲ್ಲಿ ಆಂಧ್ರದೇಶದಲ್ಲಿ ಭೂಕಂದಾಯ - ಹಿಡುವಳಿ ಆಲಯಭೂಮಿಗಳು - ಆಲಯ ಆದಾಯ - ಆಲಯದಿಂದ ನೀರಾವರಿ ಅಭಿವೃದ್ಧಿ- ದಾನಿಗಳ ವರ್ಗೀಕೃತ ಪಟ್ಟಿ - ಆಲಯದಿಂದ ದಾನಗಳ ಬಂಡವಾಳ ಹೂಡಿಕೆ - ನೀರಾವರಿ ಹೂಡಿಕೆಯಿಂದಾದ ಆದಾಯ - ಪ್ರಸಾದಗಳ ತಯಾರಿಕಾ ವೆಚ್ಚ - ಆಲಯ ಸಿಬ್ಬಂದಿಯಿಂದ ಪುದುವಟ್ಟು ನೀಡುವಿಕೆ. ಆಲಯದಿಂದ ನೀರಾವರೀ ಅಭಿವೃದ್ಧಿ - ಇತರ ಸಾಮಾಜಿಕ ಆರ್ಥಿಕ ವಿವರಗಳು - ಆಲಯ ಸಂಸ್ಥೆಯ ಪರಿವರ್ತನೆಗಳು - ನೈವೇದ್ಯದ ವಿತರಣೆ - ಆಲಯದ ತೂಕ ಅಳತೆಯ ವಿಧಾನ - ಪ್ರಸಾದಗಳ ಸಾಹಿತ್ಯ ವಿವರ -

ಅಧ್ಯಾಯ -16 *ವಿಜಯನಗರದ ಪತನದ ತರುವಾಯ* ಪುಟ 315-332

ಕ್ರಿ.ಶ. 1565 ರಲ್ಲಿ ವಿಜಯನಗರದ ಸಾಮ್ರಾಜ್ಯ ಪತನ - ನಂತರದ ಅರವೀಡು ಅರಸರು - ಈ ಗೊಂದಲದ ದಿನಗಳಲ್ಲಿ ಆಲಯದ ದತ್ತಿಗಳು - ಅರವೀಡು ಅರಸರ ಕೊನೆಗಾಲದಲ್ಲಿ ತಿರುಮಲೆ - ಶ್ರೀವೆಂಕಟಾಚಲವಿಹಾರ ಶತಕದಲ್ಲಿ ವಿವರಿಸಲಾಗಿರುವ ತಿರುಪತಿಯ ಅಂದಿನ ಸ್ಥಿತಿ - ಕುಬೇರನ ಬಳಿ ಶ್ರೀ ವೆಂಕಟೇಶ್ವರಸ್ವಾಮಿ ಸಾಲ ಮಾಡಿದ ಪ್ರಸಂಗ - ಗೋಲ್ಕೊಂಡ ಅರಸರ ಅಧೀನದಲ್ಲಿ ತಿರುಪತಿ - ಮರಾಠರ ಕಾಲದಲ್ಲಿ ತಿರುಪತಿ

ಅಧ್ಯಾಯ -17 *ಕರ್ನಾಟಿಕ ಯುದ್ಧಗಳ ನಡುವೆ ತಿರುಮಲೆ* ಪುಟ 333-348

ಆನಂದರಂಗಪಿಳ್ಳೆ ದಿನಚರಿ - ಕರ್ನಾಟಿಕ ಯುದ್ಧಗಳಿಂದಾಗಿ ತಿರುಮಲೆಯ ಧನ ಈಸ್ಟ್ ಇಂಡಿಯಾ ಕಂಪನಿವಶವಾದದ್ದು - ಈ ಕಾಲದಲ್ಲಿ ಆಲಯದ ಮೇಲಾದ ಸೈನಿಕ ದಾಂಧಲೆಗಳು - ಹೈದರಾಲಿಯ ಕಾಲದಲ್ಲಿ ತಿರುಮಲೆ - ಗೋಲ್ಕೊಂಡ ಆಡಳಿತ ವಿಭಾಗ ಕೇಂದ್ರವಾಗಿ ತಿರುಮಲೆ ಅಮಲ್ದಾರರ ಅಧೀನದಲ್ಲಿ ತಿರುಪತಿ - ಮೈಸೂರು ಅರಸರು ಹಾಗೂ ತಿರುಪತಿ

ಅಧ್ಯಾಯ -18 *ಈಸ್ಟ್ ಇಂಡಿಯಾ ಕಂಪನಿಯ ಆಡಳಿತದಲ್ಲಿ ಆಲಯ* ಪುಟ 349-370

ಪೀಠಿಕೆ- ಕಂಪನಿಯ ಆಧೀನದಲ್ಲಿ ಆಲಯ ನೇರ ಆಡಳಿತ - ತಿರುಪತಿಯ ಪ್ರಾಚೀನ ಸರಹದ್ದುಗಳು - ಯಾದ್‌ದಾಸ್ತ್ - ನೆನಪಿನೋಲೆ - ಪುರಜಾತಿ - ಶುಕ್ರವಾರದ ಅಭಿಷೇಕ, ದಿತ್ತ - ದೈನಿಕ ಸಮರ್ಪಣೆಗಳು - ವೆಚ್ಚಗಳು - ಅಮಲ್ದಾರರ ಪಟ್ಟಿ - ಹಲವು ಅಭಿವೃದ್ಧಿ ಕಾರ್ಯಗಳು.

ಅಧ್ಯಾಯ -19 *ಆಂಗ್ಲರ ಅಧೀನದಲ್ಲಿ ಆಲಯ* ಪುಟ 371-394

1831 ಏಸಿಯಾಟಿಕ್ ಜರನಲ್ ಉದ್ಧರಣ - ಅಭಿಷೇಕ , ನೈವೇದ್ಯ, ವಾಹನಸೇವೆ ರಸೀದಿಗಳು, ವಿತರಣೆಗಳು - ಸಾಧಾರಣ ದೇವಾಲಯಗಳ ಪಟ್ಟಿ - ಐದು ವಿಚಾರಣೆಗಳು - ಬ್ರೂಸ್ ಕೋಡ್ - ಮನ್ರೋದೊರೆಯ ಭೇಟಿ, ಸ್ಟ್ರಾಟನ್ ಮತ್ತಿತರರ ಪರಿಶೀಲನೆ - ಸ್ಟ್ರಾಟನ್‌ನ ಸಂಪೂರ್ಣವರದಿ.

ಅಧ್ಯಾಯ -20 *19 ನೇ ಶತಮಾನದಲ್ಲಿ ಆಲಯ* ಪುಟ 395-426

ನಾಲ್ಕು ದಾಖಲೆಗಳು - ಸವಾಲ್ ಜವಾಬ್ ಪಟ್ಟಿ ಪ್ರಶ್ನೆಗಳು - ಪಟ್ಟಿಯ ವಿವರ - ಪ್ರತ್ಯೇಕ ಆಲಯ ಗಣನೆ - ಕೈಂಕರ್ಯಪಟ್ಟಿ - ಪೈಮಾಯಿಶಿ ಪಟ್ಟಿ - ದಿತ್ತಂ - ನಾರಾಯಣರಾವ್ ದಿನಚರಿ -

ಅಧ್ಯಾಯ -21 *ಕಂಪನಿಯ ಆಡಳಿತ ಅಂತ್ಯ ಮಹಂತರ ಆಳ್ವಿಕೆ* ಪುಟ 427 - 450

ಪೀಠಿಕೆ - ಕಂಪನಿಯು ಆಲಯಾಡಳಿತ ತ್ಯಜಿಸಿದ್ದು - ಜಿಲ್ಲಾಧಿಕಾರಿಯ ಯೋಜನೆ - ಮಹಂತರ ಸುಪರ್ದಿನಲ್ಲಿ ಆಲಯ ತಕರಾರುಗಳು - ಆಡಳಿತ ಸುಧಾರಣಾ ಯೋಜನೆ - ಯೋಜನೆಯ ವಿವರ - ಪ್ರೀವಿಕೌನ್ಸಿಲ್ ತೀರ್ಮಾನ - ಆರುಮಂದಿ ಮಹಂತರು - ಗೋಪಾಲಾಚಾರ್ಲು ಕಥನ - ಮಹಂತ ಸೇವಾದಾಸ - ಮಹಂತ ಧರ್ಮದಾಸ - ಮಹಂತ ಭಗವಾನ್ ದಾಸ - ಮಹಂತ ಮಹಾವೀರದಾಸ - ಮಹಂತ ರಾಮ ಕಿಶೋರ ದಾಸ - ಮಹಂತ ಪ್ರಯಾಗದಾಸ - ಆಧುನಿಕ ಕಾಲದಲ್ಲಿ ತಿರುಮಲೆ ( 1980 ವರೆಗೆ) ಈಚಿನ ಸಾಧನೆಗಳು

ಅಧ್ಯಾಯ -22 *ಸಮಗ್ರ ನೋಟ* ಪುಟ 451-474

ಆಲಯದ ಪ್ರಾಮುಖ್ಯ - ಆಲಯಗಳು ಹಾಗೂ ತೀರ್ಥಗಳು - ಸಾಮಾಜಿಕ ಕೇಂದ್ರವಾಗಿ ಆಲಯ - ವಿಶಿಷ್ಟ ಆಚಾರಗಳು ದೇವರ ಗಲ್ಲದಲ್ಲಿ ಪಚ್ಚಕರ್ಪೂರ - ತಮಿಳು ಪ್ರಬಂಧ - ಪೂಜೆ - ಕೊಲುವು - ಮುಡಿನೀಡುವಿಕೆ, ಭಕ್ತಿ -ಭಕ್ತಿಭಾವದ ಉಗಮ - ಭಕ್ತಿ ತತ್ವ - ರಾಮಾನುಜಾಚಾರ್ಯ - ಪ್ರಪತ್ತಿ - ಮುಕ್ತಿ ಸಾಧನವಾಗಿ ಭಕ್ತಿ - ಮನೋಹರ ಮೂರ್ತಿ - ಸ್ವಾಮಿ ದರ್ಶನ - ಮಾರ್ಗದರ್ಶನ ಸ್ವಾಮಿಯ ಪ್ರಾಧಾನ್ಯ -

ಅನುಬಂಧ - 1 ಹರಿದಾಸರು ಹಾಗೂ ಶ್ರೀನಿವಾಸ ಪುಟ 475-495

ಅನುಬಂಧ - 2 ಧರ್ಮಕರ್ತರ ಮಂಡಳಿಯ ಅಮೃತೋತ್ಸವ

ಶ್ರೀ ವೆಂಕಟೇಶ್ವರ ಸುಪ್ರಭಾತ



# ಪ್ರಕಾಶಕರ ಮಾತು

ತಿರುಮಲೆಯ ಆಲಯದ ಶ್ರೀವೆಂಕಟೇಶ್ವರಸ್ವಾಮಿ ಕಲಿಯುಗದ ಪರಮ ದೈವವೆಂದೂ, ನಭೂತೋ ನಭವಿಷ್ಯತಿ ಎಂದೂ ಪ್ರಸಿದ್ಧಿ ಪಡೆದಿರುವುದು ಜಗದ್ವಿದಿತವೇ ಆಗಿದ್ದು, ದಕ್ಷಿಣ ಭಾರತದ ಎಲ್ಲ ರಾಜ್ಯಗಳಿಂದಲೂ ಯಾತ್ರಿಕಭಕ್ತರು ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಸ್ವಾಮಿಯ ದರ್ಶನಕ್ಕೆಂದು ತಿರುಮಲೆಯತ್ತ ಪ್ರತಿದಿನ ಸಾಗಿ ಬರುತ್ತಿರುವರು. ಸ್ವಾಮಿಯ ಚರಿತ್ರೆಯನ್ನು, ಸ್ಥಳಪುರಾಣವನ್ನು ಕುರಿತು ತಿಳಿಯುವ ಆಸಕ್ತಿ, ಭಕ್ತಿ ಶ್ರದ್ಧೆಗಳು, ಇಲ್ಲಿಗೆ ಯಾತ್ರಾರ್ಥಿಗಳಾಗಿ ಬರುವರಿಗೂ ವಿವಿಧ ಪ್ರದೇಶಗಳಲ್ಲಿರುವ ವಿವಿಧ ಭಾಷಿಗರಿಗೂ ಇರುವುದು ಸಹಜವೇ ಆಗಿದೆ.

ಶ್ರೀ ವೆಂಕಟೇಶ್ವರಸ್ವಾಮಿಯನ್ನು ಕುರಿತು ಹತ್ತು ಪುರಾಣಗಳೂ, ಸಾವಿರ ಶಾಸನಗಳೂ, ನೂರಾರು ಲಿಖಿತ ದಾಖಲೆಗಳೂ ಉಂಟು ಎಂದರೂ, ಅವುಗಳೆಲ್ಲ ಒಟ್ಟಿಗೆ ಒಂದು ಕಡೆ ದೊರೆಯುವ, ಒಂದು ಪರಿಪೂರ್ಣ ಚಿತ್ರವನ್ನು ಕಟ್ಟಿಕೊಡುವ ಪ್ರಯತ್ನ 20ನೆಯ ಶತಮಾನದಲ್ಲಿ ಮಾತ್ರವೇ ನಡೆಯಿತು ಎನ್ನಬೇಕು. ಇಲ್ಲಿನ ಪುರಾಣ ಪ್ರಶಂಸೆಗಳೂ, ಶಾಸನ ಪ್ರಶಸ್ತಿಗಳೂ, ವಿಶೇಷ ಅಧ್ಯಯನಗಳೂ, ನಡೆದ ಮೇಲೆ ತಿರುಮಲೆಯ ಆಲಯವನ್ನು, ಆದರ ಸ್ವಾಮಿಯನ್ನು ಕುರಿತು ಆಂಗ್ಲಭಾಷೆಯಲ್ಲಿ ಹಲವು ಕೃತಿಗಳು ಹೊರಬಂದವು. ಅದರಲ್ಲಿ ಐ.ಎ.ಎಸ್. ಅಧಿಕಾರಿಯಾಗಿ, ತಿರುಮಲ ತಿರುಪತಿ ದೇವಸ್ಥಾನಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಉದ್ದಾಮ ಪಂಡಿತರಾದ ಡಾ॥ ಎನ್. ರಮೇಶನ್ ಅವರ 'ದಿ ತಿರುಮಲೆ ಟೆಂಪಲ್' ಒಂದು ವಿಶಿಷ್ಟ ಕೃತಿ ಎಂದು ಪರಿಗಣಿತವಾಗಿದೆ.

ಕನ್ನಡ ಸಪ್ತಗಿರಿಯ ಉಪಸಂಪಾದಕರಾಗಿ ಕಾರ್ಯನಿರ್ವಹಿಸಿದ ಶ್ರೀ ಬಿ.ಎನ್. ಶ್ರೀನಿವಾಸನ್ ಅವರು, ಡಾ॥ ಎನ್. ರಮೇಶನ್ ಐ.ಎ.ಎಸ್. ಆವರ ಆಂಗ್ಲ ಪುಸ್ತಕವನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಸಪ್ತಗಿರಿಯಲ್ಲಿ ಧಾರಾವಾಹಿಯಾಗಿ ಪ್ರಕಟವಾದ ಈ ಕೃತಿ ಪುಸ್ತಕರೂಪದಲ್ಲಿ ಪ್ರಸ್ತುತ ಪ್ರಕಟವಾಗುತ್ತಿದೆ. ಇದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ.

ಶ್ರೀವೆಂಕಟೇಶ್ವರ ಸ್ವಾಮಿಯನ್ನು ತಿಳಿದುಕೊಳ್ಳಬೇಕೆಂಬ ಜಿಜ್ಞಾಸು ಭಕ್ತರಿಗೆ ಈ ಪುಸ್ತಕ ಪ್ರಿಯವಾಗು ವುದೆಂದು ಆಶಿಸಲಾಗಿದೆ.

**ಕಾರ್ಯನಿರ್ವಹಣಾಧಿಕಾರಿ**
**ತಿ.ತಿ. ದೇವಸ್ಥಾನಗಳು, ತಿರುಪತಿ.**

## ಅಧ್ಯಾಯ - 1

# ಭೌಗೋಳಿಕ ಸನ್ನಿವೇಶ

ದಕ್ಷಿಣ ಭಾರತದೇಶದ 13-14 ಅಕ್ಷಾಂಶಗಳ ಮಧ್ಯದಲ್ಲಿ 179 ಪೂರ್ವರೇಖಾಂಶದಲ್ಲಿರುವ ಭೂಭಾಗದಲ್ಲಿ ವ್ಯಾಪಿಸಿರುವ ತಿರುಮಲೆ ಬೆಟ್ಟಗಳೆಂಬ ಪರ್ವತಶ್ರೇಣಿ ದೇಶದಲ್ಲಿಯೇ ಒಂದು ಭೌಗೋಳಿಕ ವಿಶೇಷ ವೆನಿಸಿದೆ.ಇದನ್ನು ತಿರುಮಲೆ ಪರ್ವತ ಪಂಕ್ತಿ ಎನ್ನುವರು. ಇಲ್ಲಿ ಏಳು ಮುಖ್ಯ ಶಿಖರಗಳಿವೆ. ಎಲ್ಲವೂ ಅತಿ ಪವಿತ್ರವಾಗಿರುವ ಪುರಾಣ ಕಥೆಗಳಿಗೆ ಸಂಬಂಧಿಸಿವೆ.ಇವುಗಳಲ್ಲಿಅತಿ ಮುಖ್ಯವಾದ ಶೇಷಾಚಲದ ಮೇಲೆ ತಿರುಮಲೆಯ ದೇವಾಲಯವಿದೆ.ಇದರಿಂದಾಗಿಯೇ ಇಡೀ ಪರ್ವತಶ್ರೇಣಿ ಶೇಷಾಚಲವೆಂದು ಕರೆಯಲ್ಪಡುತ್ತದೆ.

ಆಂಧ್ರಪ್ರದೇಶದಲ್ಲಿನ ಉತ್ತರಭಾಗದಲ್ಲಿ ಆರಂಭವಾಗುವ ಪೂರ್ವ ಘಟ್ಟಗಳು ಸಮುದ್ರತೀರದಲ್ಲಿ ಅನತಿ ದೂರದಲ್ಲಿಹೆಕ್ಕಿ ದಕ್ಷಿಣಕ್ಕಿಳಿದು ಕೃಷ್ಣಾನದಿಯನ್ನು ದಾಟಿದ ನಂತರ ಅನೇಕ ಕವಲುಗಳಾಗಿ ಸಮಾನಾಂತರ ಶಾಖೆಗಳಾಗಿ ಮದ್ರಾಸಿನವರೆಗೆಎಂದರೆ 13ನೇ ಉತ್ತರ ಅಕ್ಷಾಂಶದವರೆಗೆ ವ್ಯಾಪಿಸಿವೆ.ಇಂತಹ ಸಮಾನಾಂತರ ಶ್ರೇಣಿಗಳು ಮೂರು ನೋಡಬಹುದು.ಮೊದಲನೆಯದು ಸಮುದ್ರತೀರದಲ್ಲಿನದು. ಎರಡನೆಯದು ಕೃಷ್ಣಾನದಿಯ ದಕ್ಷಿಣದಲ್ಲಿ ಕರ್ನೂಲಿನಿಂದ ಆರಂಭವಾಗಿ ಅರ್ಧವೃತ್ತಾಕಾರದಲ್ಲಿಕಡಪ ಪ್ರಾಂತವನ್ನು ಸೇರಿ ಅಲ್ಲಿ ಗುಡ್ಡಗಳ ಗುಂಪಾಗಿ ಕಾಣುತ್ತದೆ. ಇವುಗಳಲ್ಲಿ ಒಂದು ಶೇಷಾಚಲ. ಮುಖ್ಯಶಾಖೆ ದಕ್ಷಿಣಕ್ಕಿಳಿದುಮತ್ತೆ ತೀರ ಪ್ರಾಂತದಲ್ಲಿ ಮದ್ರಾಸಿಗೆ ಉತ್ತರದಲ್ಲಿ ಪೋನ್ನೇರಿಯನ್ನು ಸೇರುವುದು. ಮೂರನೇ ಶ್ರೇಣಿ ಹಲವಾರು ಬಳುಕುಗಳಿಂದೂ ಅಷ್ಟೇನೂ ಎತ್ತರವಲ್ಲದೆ ಮೈಸೂರು ಪ್ರಸ್ಥಭೂಮಿಯಲ್ಲಿ ಆರಂಭವಾಗಿ ಅನಂತಪುರ, ಕರ್ನೂಲು ಜಿಲ್ಲೆಗಳಲ್ಲಿ ಹರಡಿದೆ. ಈ ಮೂರರಲ್ಲಿ ಮಧ್ಯದ ಕರ್ನೂಲು ಜಿಲ್ಲೆಯ ಪರ್ವತಗಳು ನಲ್ಲಮಲೆಯೆಂದು ಪ್ರಸಿದ್ಧ. ಇದು ದಕ್ಷಿಣಕ್ಕೆ ಹರಡಿ ಪೂರ್ವದ ತೀರಪ್ರಾಂತದಲ್ಲಿಳಿಯುವುದು. ಈ ಪರ್ವತಾವಳಿ ಮದ್ರಾಸಿಗೆ ಅರ್ಧ ಡಿಗ್ರಿ ಉತ್ತರದಲ್ಲಿ ಒಂದು ಗಡಿಯನ್ನು ಏರ್ಪಡಿಸಿದೆ. ಪೂರ್ವದಲ್ಲಿನ ಪೋನ್ನೇರಿಯವರೆಗೆಪೂರ್ವ ಶಾಖೆಯಾಗಿರುವುದರಿಂದ ತಿರುಮಲೆಯು ಪೂರ್ವಶಾಖೆಯ ಭಾಗಮಾತ್ರವೇ. ಇದು ದಕ್ಷಿಣದಲ್ಲಿ ಅನಮಲೆಯಿಂದ ಹೊರಟು ಕೊಯಮತ್ತೂರು ಜಿಲ್ಲೆಯ ಮೂಲಕ ಮೈಸೂರಿನ ಗಡಿ ಪ್ರಾಂತವಾಗಿ ಹರಡಿ ಚಿತ್ತೂರು ಜಿಲ್ಲೆಯ ಪಲಮನೇರನ್ನು ಸೇರುವುದು. ತುಸು ಈಶಾನ್ಯದಿಕ್ಕಿನಲ್ಲಿ ತಲಕೋನ ಜಲಪಾತದವರೆಗೆ ಹೋಗಿ ಅಲ್ಲಿ ಮತ್ತೆ ಪೂರ್ವಕ್ಕೆ ತಿರುಗಿ ತಿರುಮಲೆಯನ್ನು ಸೇರುತ್ತದೆ. ತಿರುಮಲೆಗೆ ಪೂರ್ವದ ಒಂದು ತಪ್ಪಲಿನಲ್ಲಿ ಇದರ ಕೊನೆ. ತಲಕೋನದಿಂದ ತಿರುಮಲೆಯ ಮಧ್ಯದಲ್ಲಿ ಹದ್ದು ಹಾರಿದಂತೆ 12 ಮೈಲಿದೂರ. ಆದರೆ ಬೆಟ್ಟದ ಮೇಲೆ ಕಾಡಿನಲ್ಲಿ ನಡೆಯುವ ಹಾದಿ ಸುಮಾರು 20 ಮೈಲಿಯಾಗುವುದು. ಈ ಭಾಗವೆಲ್ಲ ಬಹು ಪ್ರಾಚೀನ ಕಾಲದಿಂದಲೇ ಪವಿತ್ರವೆಂದು ಭಾವಿಸಲ್ಪಟ್ಟಿದೆ. ತಲಕೋನ ಜಲಪಾತದಿಂದ ಸುರಿಯುವ ನೀರಿಗೆ ಪಾಪನಾಶನಂ ಜಲಪಾತ ಪಶ್ಚಿಮ ಗಡಿಯೆಂದು ತಿಳಿಯಲಾಗಿದೆ.

ತಲಕೋನ ಜಲಪಾತ ಹಾಗೂ ಆ ಝರಿ ಎರಡೂ ಅಲ್ಲಿನ ಬೆಟ್ಟದಲ್ಲಿ ಉತ್ತರದಿಂದ ಪೂರ್ವಕ್ಕೆ ತಿರುಗುತ್ತವೆಯಾಗಿ ಅಲ್ಲಿ ಪ್ರಕೃತಿ ಸಿದ್ಧವಾದ ಬಳುಕುಗಳಿವೆ. ಇಲ್ಲಿ ಬೆಟ್ಟ ಉತ್ತರದಲ್ಲಿ ಸುಮಾರು 3583 ಅಡಿ ಎತ್ತರ ಹಾಗೂ ಪೂರ್ವದಕ್ಷಿಣಗಳಲ್ಲಿ1800 ಅಡಿ ಎತ್ತರವಾಗಿದೆ. ನಿರಂತರ ಪ್ರವಾಹವಿರುವ ಜಲಪಾತದ ಎತ್ತರ ಸುಮಾರು 200 ಅಡಿಗಳು. ಬೆಟ್ಟದ ಪಶ್ಚಿಮದ ಮೈದಾನಸಮುದ್ರ ಮಟ್ಟಕ್ಕೆ 1800-2000 ಅಡಿ ಎತ್ತರ. ಈ ಕಣಿವೆ ಪ್ರಕೃತಿದತ್ತ ಸೌಂದರ್ಯದಿಂದ ಹಸಿರು ಕಾಡಿನಿಂದ ತುಂಬಿದೆ. ಬೆಟ್ಟ ಮೈದಾನದ ಕಡೆಗೆ ನೀಟಾಗಿ ವಾಲಿದೆ. ಬೆಟ್ಟಕ್ಕೆ ಹೊಂದಿಕೊಂಡಂತೆ ಪಶ್ಚಿಮದಲ್ಲಿ ಸಿದ್ಧೇಶ್ವರನ ಗುಡಿಯಿದೆ. ಬೆಟ್ಟದಲ್ಲಿರುವ ಅನೇಕ ಜಲಪಾತಗಳಲ್ಲಿ ಮೊದಲನೆಯದಾಗಿರುವ ಈ ಜಲಪಾತವನ್ನು ತಲಕೋನ ಎಂದು ಕರೆಯುವರು. ಪ್ರಾಚೀನ ಕಾಲದಲ್ಲಿದು ತಮಿಳುನಾಡಿಗೂ,

ಬಡಗನಾಡಿಗೂ ಸರಹದ್ದಿನ ಪ್ರಾಂತವಾಗಿದ್ದಿತು. ಬಡಗುದೇಶವೆಂದರೆ ಇಂದು ಕನ್ನಡ ತೆಲುಗು ಮಾತನಾಡುವ ಜನರಿರುವ ದೇಶ. ಈ ಸರಹದ್ದಿನಲ್ಲಿ ವೇಂಗಡ ಅಥವಾ ತಿರುಮಲೆ ಒಂದು ಮುಖ್ಯವಾದ ಸ್ಥಳ. ಮೇಲೆ ವಿವರಿಸಿದ ಮಧ್ಯಗಿರಿಪಂಕ್ತಿಯನ್ನು ಪುರಾಣಗಳಲ್ಲಿ ಮಲಗಿರುವ ಸರ್ಪಕ್ಕೆ ಹೋಲಿಸಿ ವರ್ಣಿಸಲಾಗಿದೆ. ಇದರ ಬಾಲದಲ್ಲಿ ಶ್ರೀಶೈಲವಿದ್ದು ಅಲ್ಲಿ ಮಲ್ಲಿಕಾರ್ಜುನ ದೇವಾಲಯವೂ, ಅಹೋ ಬಿಲದಲ್ಲಿನ ನರಸಿಂಹಸ್ವಾಮಿ ಆಲಯವನ್ನು ದೇಹಭಾಗವಾಗಿಯೂ,ತಿರುಮಲೆಯ ಶ್ರೀ ವೆಂಕಟೇಶ್ವರಸ್ವಾಮಿ ಆಲಯವನ್ನು ಫಣಾಗ್ರವಾಗಿಯೂ, ಶ್ರೀ ಕಾಳಹಸ್ತಿಯ ಶ್ರೀ ಕಾಳಹಸ್ತೀಶ್ವರಸ್ವಾಮಿ ಆಲಯವನ್ನು ಮುಖಾಗ್ರ ಭಾಗವೆಂದೂ ವರ್ಣಿಸಿದ್ದಾರೆ.

ತಿರುಪತಿ ತಿರುಚಾನೂರುಗಳು ಒಂದು ವಿಸ್ತಾರವಾದ ಕಣಿವೆಯಲ್ಲಿ ಪರ್ವತರಾಜಿಯಿಂದ ಆವರಿಸಲ್ಪಟ್ಟಿವೆ. ಈ ಸಾಲಿನಲ್ಲಿ ಉತ್ತರಕ್ಕೆ ತಿರುಮಲೆಯಿದೆ. ತಿರುಪತಿ ನಗರ ಇದಕ್ಕೆ ಎರಡು ಮೈಲು ದೂರದಲ್ಲಿ (ಹದ್ದು ಹಾರಿದಂತೆ) ಇದೆ.

ಶ್ರೀ ವೆಂಕಟೇಶ್ವರನ ಆಲಯವಿರುವ ಬೆಟ್ಟ ವೆಂಕಟಾಚಲವೆಂದು ಪ್ರಸಿದ್ಧವಾಗಿದೆ. ಇದು ಸ್ವಲ್ಪ ಹಳ್ಳದಂತೆ ಇದ್ದು ಸುತ್ತಲು ಎತ್ತರವಾದ ಬೆಟ್ಟಗಳಿವೆ. ಶ್ರೀಶೈಲದಲ್ಲಿ ಮಲ್ಲಿಕಾರ್ಜುನಸ್ವಾಮಿ ಆಲಯವೂ ಹೀಗೆಯೇ ಇದೆ. ವೆಂಕಟೇಶ್ವರಾಲಯವನ್ನು ಸೇರಲು ಐದು ಮಾರ್ಗಗಳಿವೆ. ಇವುಗಳಲ್ಲಿ ಎರಡು ತಿರುಪತಿಯಿಂದ ಹೊರಡುವವು. ಒಂದು ಮೆಟ್ಟಿಲು ಮಾರ್ಗ - 7 ಮೈಲಿದೂರದ್ದು. ಎರಡನೆಯದು ಮೋಟಾರು ವಾಹನಗಳ ಮಾರ್ಗ. (ಈಗ ಮೇಲೇರಲಿಕ್ಕೆ ಒಂದು,ಕೆಳಗಿಳಿಯಲಿಕ್ಕೆ ಮತ್ತೊಂದು - ಹೀಗೆಎರಡು ಮೋಟಾರು ಮಾರ್ಗಗಳು.) ಮೂರನೆಯದು ಚಂದ್ರಗಿರಿಯಿಂದ ಶ್ರೀವಾರಿಮೆಟ್ಟು ಮುಖಾಂತರವಾದದ್ದು. ನಾಲ್ಕನೆಯದು ಮಾಮಂಡೂರು ರೈಲ್ವೆ ಸ್ಟೇಷನ್ನಿಂದಲೂ, ಐದನೆಯದು ನಾಗಪಟ್ಲದ ಕಡೆಯಿಂದಲೂ ಹೊರಡುವುದು.

ತಿರುಮಲೆಯ ಗುಡಿಗೆ ಸಂಬಂಧಿಸಿದಂತೆ ಎರಡು ಕಣಿವೆಗಳು ಪ್ರಮುಖವಾದವು. ಒಂದು ಪೂರ್ವದಲ್ಲಿನ ಪಾಪನಾಶನಂ ಕಣಿವೆ. ಎರಡನೆಯದು ಅವ್ವಚಾರಿ ಕಣಿವೆ. ಇವುಗಳಲ್ಲಿ ಪಾಪನಾಶನಂ ಕಣಿವೆ ಬೆಟ್ಟದ ಮೇಲೆ ಉತ್ತರಕ್ಕೆ ಹರಿಯುವ ನೀರನ್ನು ಸಂಗ್ರ ಹಿಸಿದರೆ, ಅವ್ವಚಾರಿ ವಂಕ ಬೆಟ್ಟದ ಆಗ್ನೇಯಭಾಗದ ನೀರನ್ನು ಗ್ರಹಿಸುತ್ತದೆ. ಎರಡೂ ಕಣಿವೆಗಳೂ ಅನೇಕ ಪವಿತ್ರ ತೀರ್ಥಗಳನ್ನು ಹೊಂದಿ ಪ್ರಸಿದ್ಧವಾಗಿವೆ.

## 2. ಮೇಲ್ಮೈಲಕ್ಷಣ :

ಸಾಮಾಜಿಕ ಆರ್ಥಿಕ ಸ್ಥಿತಿಗಳಂತೆಯೇ ತಮಿಳು,ತೆಲುಗು ದಾಕ್ಷಿಣಾತ್ಯ ಸಂಸ್ಕೃತಿಗಳ ಸಮ್ಮೇಳನವೇ ಇಲ್ಲಿನ ಮುಖ್ಯಾಂಶವಾಗಿದೆ. ತಿರುಮಲೆಯ ಆಲಯವಿರುವ ಬೆಟ್ಟವೇ ವಿಶಿಷ್ಟವಾದದ್ದು. ಶಿಲಪ್ಪದಿಕಾರದಲ್ಲಿ ಹೀಗೆ ಹೇಳಲಾಗಿದೆ.

ವೆಂಗಡಮೆನ್ನು ಎಂಗುಯಿರ್

ಮಲೈಯತ್ತುಚ್ಚಿ ಮಿವನ್ನೈ

- ಈ ಸ್ವಾಮಿ ಉಚ್ಚಿಯಿಲ್ ನಿನ್ರಾನ್ - ಎಂದರೆ ಉನ್ನತ ಸ್ಥಳದಲ್ಲಿ ನಿಂತವನು ಎಂಬುದು ಕ್ರಿ.ಶ. 13ನೇ ಶತಕದ ಮಧ್ಯ ಭಾಗದವರೆಗೆ ಪ್ರಸಿದ್ಧವಾದ ಮಾತು. ಆದರೆ ದೇವರ ಗುಡಿ ಸುತ್ತಲಿರುವ ಪ್ರದೇಶಕ್ಕಿಂತ ತಗ್ಗಿನಲ್ಲಿದೆ ಎಂಬುದನ್ನುತ್ತರದಲ್ಲಿ ಗುರುತಿಸಿ ದಾಖಲಿಸಲಾಯಿತು. ಗುಡಿಯು 3426 ಅಡಿ ಎತ್ತರದ ಬೆಟ್ಟದ ಮೇಲಿದೆ. ಸ್ವಲ್ಪದೂರದ ಜಾಬಾಲಿ ತೀರ್ಥ 3177 ಅಡಿ ಎತ್ತರದಲ್ಲಿದೆ ಪೂರ್ವಕ್ಕೆ ಬೆಟ್ಟವು 2250 - 2750 ಅಡಿಗಳೂ,ನೈಋತ್ಯಕ್ಕಿರುವ ನಾರಾಯಣಗಿರಿಯು 3620 ಅಡಿ ಎತ್ತರವೂ ಆಗಿದೆ.

ತಿರುಮಲೆಯಿರುವ ಚಿತ್ತೂರು ಮಂಡಲದ ಭಾಗ ಮೈಸೂರು ಪ್ರಸ್ಥಭೂಮಿಯು ಮೂಲಕ ಹಾಯ್ದಿರುವ ಹಾಸುಗಲ್ಲಿನ ಶಿಲಾಖಂಡಗಳಿಂದುಂಟಾಗಿದೆ. ಪೂರ್ವಕ್ಕೆ ಹೋದಂತೆಲ್ಲ ಗುಡ್ಡಗಳು ವಿರಳವಾಗುತ್ತ ಅಲ್ಲಲ್ಲಿ ಹಲವು ಎತ್ತರವಾಗಿ ಕಡಿದಾಗೋಳಿಕ ಕಂಡುಬರುತ್ತವೆ. ವೆಲಿಗೊಂಡದ ದಕ್ಷಿಣದ ಕೊನೆ,ತಿರುಮಲೆ ಬೆಟ್ಟಗಳು,ಮಾಮಂಡೂರು ಕಣಿವೆಗಳು, ಹಿಟ್ಟುಗಲ್ಲುಬೆಣಚುಕಲ್ಲು

ಗಳಿಂದ ಕೂಡಿವೆ. ಅತಿ ವಿಸ್ತಾರವಾದ ಹಾಸುಗಲ್ಲುಗಳೂ ನೇರವಾದ ಕಡಿದಾದ ಶಿಖರಗಳು ಹೆಚ್ಚಾಗಿ ಶೇಷಾಚಲ ಪಂಕ್ತಿಯ ಬೆಟ್ಟಗಳಲ್ಲಿ ಮನೋಹರವಾಗಿ ಕಂಡುಬರುತ್ತವೆ.

**3 ಹವಾಮಾನ :-**

ಇಲ್ಲಿನ ಹವಾಮಾನ ಹದವಾಗಿ ಅನುಕೂಲವಾಗಿರುವುದು. ನಾಲ್ಕು ಋತುಗಳೂ ಕ್ರಮವಾಗಿ ಉಂಟಾಗುತ್ತವೆ. ಡಿಸೆಂಬರ್-ಫೆಬ್ರವರಿ ತಿಂಗಳು ತಂಪಾಗಿದ್ದು,ಮಾರ್ಚ್-ಮೇ ತಿಂಗಳುಗಳು ಬೇಸಿಗೆಯಾಗಿಯೂ, ಜೂನ್-ಸೆಪ್ಟಂಬರ್ ಮಧ್ಯದಲ್ಲಿ ನೈಋತ್ಯ ಪವನಗಳಿಂದಾಗಿ ಮಳೆಗಾಲವೂ, ಅಕ್ಟೋಬರ್-ನವಂಬರ್ ಮಧ್ಯೆ ಈಶಾನ್ಯ ಪವನಗಳಿಂದಾಗಿ ಮಳೆ ಸಾಧಾರಣವಾಗಿರುತ್ತದೆ.

**4 ಮಳೆ :-**

ವರ್ಷಕ್ಕೆ 34-35 ಅಂಗುಲ ಮಳೆಯಾಗುತ್ತದೆ. ಜೂನ್-ಸೆಪ್ಟಂಬರ್ ಮಧ್ಯದಲ್ಲಿ 64 ಶತಾಂಶ,ಮೇ ತಿಂಗಳಿನಲ್ಲಿ ಗಾಳಿಯೊಡನೆ ಸೇರಿದ ಸ್ವಲ್ಪ ಮಳೆಯುಂಟು. ಅಕ್ಟೋಬರ್ - ನವೆಂಬರ್‌ನಲ್ಲಿ ಮುಖ್ಯವಾದ ಮಳೆಗಾಲ. ಆದರೂ ಒಂದು ಸಂವತ್ಸರ ಹೆಚ್ಚಿನ ಮಳೆಯಾದರೆ ಇನ್ನೊಂದು ವರ್ಷ ಸಾಧಾರಣವಾಗಿ ಇರುವುದು. ಈ ಪ್ರದೇಶದ ಕಣಿವೆಗಳು ವಾಸಯೋಗ್ಯವಾಗಿ ಚೆನ್ನಾಗಿವೆ. ತಿರುಪತಿಯ ಬೆಟ್ಟದ ಮೇಲೆ ಹೆಚ್ಚಿಗೆ ಈ ಮುಂಚೆ ಅನಾರೋಗ್ಯಕರವಾಗಿ,ಕೆಲವು ವರ್ಷಗಳ ಹಿಂದಿನವರೆಗೆ ಮಲೇರಿಯಾ ಜ್ವರದ ಹಾವಳಿಯ ಭಯವಿದ್ದಿತು.

ಚಿತ್ತೂರು ಮಂಡಲದಲ್ಲಿ ವಾರ್ಷಿಕ ವರ್ಷಪಾತ ಅತಿ ಕಡಿಮೆಯಿದ್ದದ್ದರಿಂದ ಇಲ್ಲಿ ಹೆಚ್ಚಿಗೆ ಅನಾವೃಷ್ಟಿ ಮೂಲವಾದ ಕ್ಷಾಮಗಳ ಸಂಭವಿಸುತ್ತಿವೆ. ನೈಋತ್ಯ ಋತುಪವನಗಳಿಗಿಂತ ಈಶಾನ್ಯ ಪವನದಿಂದಾಗಿ ಇಲ್ಲಿ ಮಳೆ ಹೆಚ್ಚು. ಪಶ್ಚಿಮದಲ್ಲಿನ ವಾಯಲ್ಪಾಡು, ಮದನಪಲ್ಲಿ,ಪುಂಗನೂರು,ಪಲಮನೇರು,ಕುಪ್ಪಂ ಪ್ರಾಂತಗಳಲ್ಲಿ ಅನಾವೃಷ್ಟಿ ಹೆಚ್ಚು. ಈಶಾನ್ಯದಲ್ಲೂ ಸಹ ಆಗಾಗ್ಗೆ ಕ್ಷಾಮಗಳುಂಗಾಳಕೊಲ್ಲಿಯಲ್ಲಿ ಮದ್ರಾಸು ಸಮೀಪದಲ್ಲಿ ಉಂಟಾಗುವ ಅಲ್ಪಪೀಡನೆಯಿಂದ,ಉಂಟಾಗುವ ಮಳೆಗಳು ಕೆಲಮಟ್ಟಿಗೆ ಸಹಾಯಕವಾಗುತ್ತವೆ.

**5 ಉಷ್ಣೋಗ್ರತೆ :-**

ವರ್ಷದಲ್ಲಿ ಉಷ್ಣೋಗ್ರತೆ ಸಾಮಾನ್ಯವಾಗಿ 18 ಡಿಗ್ರಿಯಿಂದ 42 ಡಿಗ್ರಿ ಸೆಂಟಿಗ್ರೇಡ್‌ವರೆಗೆ. ನವೆಂಬರ್ ನಿಂದ ಫೆಬ್ರವರಿ ಮಧ್ಯದವರೆಗೆ ಅತಿ ಶೀತಲ ವಾಗಿರುತ್ತದೆ. ಡಿಸೆಂಬರಿನಲ್ಲಿನ ಅತ್ಯಧಿಕ ಉಷ್ಣ 25-3 ಸೆಂ (77.5ಫ್ಯಾ) ಕನಿಷ್ಠ 15.5ಸೆಂ. (59.5 ಫ್ಯಾ) ಫೆಬ್ರವರಿಯ ನಂತರ ವಾತಾವರಣ ಬಿಸಿಯೇರುತ್ತದೆ. ಏಪ್ರಿಲ್ ಮೇ ತಿಂಗಳಲ್ಲಿ ರಾತ್ರಿಗಳಲ್ಲಿ ಉಷ್ಣೋಗ್ರತೆ ತೀವ್ರ. ಮೇ ತಿಳ ಸರಾಸರಿ 23 ಸೆಂಟಿಗ್ರೇಡ್. ಹಲವು ದಿನಗಳಲ್ಲಿ ಧೂಳುಗಾಳಿಗಳಿಂದ ಕೂಡಿದ ಮಳೆಯೂ ಉಂಟು. ಹಾಗಾಗಿ ಸ್ವಲ್ಪ ತಂಪೂ ಆಗುತ್ತದೆಜೂನ್ ಮೊದಲ ವಾರದಲ್ಲಿ ನೈಋತ್ಯ ಪವನಗಳಿಂದಾಗಿ ಮಳೆ ಸಂಭವವಾಗಿ ಸ್ವಲ್ಪ ತಂಪೂ ಆಗುತ್ತದೆ. ವರ್ಷಋತು ಬೇಸಿಗೆಗಿಂತಅನುಕೂಲಕರವಾಗಿರುವುದು. ಅಕ್ಟೋಬರ್ ನಂತರ ರಾತ್ರಿಗಳ ಹೊತ್ತು ತಂಪಾಗಿರುತ್ತದೆ.

**6. ಆರ್ದ್ರತೆ :-**

ಸಾಧಾರಣವಾಗಿ ಜುಲೈ ಡಿಸೆಂಬರ್‌ಗಳ ಮಧ್ಯೆ ವಾತಾವರಣದಲ್ಲಿ 70 ರಿಂದ 80 ಶತಾಂಶ ಆರ್ದ್ರತೆ ಬೆಳಗ್ಗೆ ಹೊತ್ತಿನಲ್ಲಿ ಹಾಗೂ ಮಧ್ಯಾಹ್ನಗಳಲ್ಲಿ 60 ರಿಂದ 65 ಶತಾಂಶ ಒಣಹವೆ ಯಿಂದ ಕೂಡಿರುವುದು. ಈ ಕಾಲದಲ್ಲಿ ತೇವಾಂಶ 25 ರಿಂದ 40 ಶತಾಂಶವಿರುತ್ತದೆ.

**7 ಮೋಡಗಳು :-**

ಜೂನ್ ನಿಂದ ನವಂಬರ್ ವರೆಗೆ ಮೋಡ ಕವಿದ ವಾತಾವರಣ. ಹಲವು ದಿನಗಳಲ್ಲಿ ಪೂರ್ತಿಮೋಡಗಳು. ಮಿಕ್ಕ ದಿನಗಳಲ್ಲಿ ತಿರುಮಲೆಯ ಆಕಾಶವೆಲ್ಲ ಪೂರ್ತಿಯಾಗಿ ಶುಭ್ರವಾಗಿರುತ್ತದೆ.

**8 ಮಾರುತಗಳು :-**

ಇಲ್ಲಿನ ಗಾಳಿ ಹೆಚ್ಚು ಹಗುರವಾಗಿಯೂ,ಕೆಳಮಟ್ಟದಲ್ಲಿಯೂ ಸಂಚರಿಸುತ್ತದೆ. ಮೇ ನಿಂದ ಸೆಪ್ಟಂಬರ್ ರ ವರೆಗೆ ನೈಋತ್ಯ ದಿಂದಲೂ ಈಶಾನ್ಯದಿಂದಲೂ ಬೀಸುತ್ತವೆ. ಆಕ್ಟೋಬರ್ ಜನವರಿಗಳ ನಡುವೆ ವಾಯವ್ಯ, ಪೂರ್ವದಿಸೆಗಳಲ್ಲಿಯೂ, ಆನಂತರದ ಮೂರು ತಿಂಗಳು ಈಶಾನ್ಯ ದಿಸೆಯಲ್ಲೂ ಉಂಟಾಗುತ್ತವೆ.

**9 ಭೂ ಸ್ವಭಾವ :-**

ಇಲ್ಲಿನ ಭೂಗರ್ಭಶಿಲಾ ಸ್ವಭಾವ ಮೂರು ವಿಧವಾಗಿ ಕಂಡುಬರುತ್ತದೆ. ಜೆವಾಡಿ ರೀತಿಯ ಶಿಲೆ ಪೂರ್ವದ ಕಣಿವೆಗಳಲ್ಲೂ ಅವುಗಳ ಹಾಸುಗಲ್ಲು ಜಾತಿಯ ಶಿಲೆಗಳು ಆಗ್ನೇಯಭಾಗದಲ್ಲಿ ಅಲ್ಲಲ್ಲಿ ಹೆಚ್ಚು ಬೆಳೆಯದ ಕಿರು ಬೆಟ್ಟಗಳಾಗಿವೆ. ಈ ಕಲ್ಲುಗಳ ನಡುವೆ ಉತ್ತಮವಾದ ಹುಲ್ಲು ಬೆಳೆದು ಪಶುಗ್ರಾಸವಾಗುತ್ತದೆ. ಇದನ್ನು ಸಾಧಾರಣವಾಗಿ ಸುಟ್ಟು ಬಿಡುತ್ತಿದ್ದರು. ಆದು ಬೂದಿಯಾಗಿ ಮಣ್ಣಿನಲ್ಲಿ ಸೇರುತ್ತಿದ್ದು, ಮಳೆಯಾದ ನಂತರ ಮತ್ತೆ ಹಸಿರು ಹುಲ್ಲು ಮೊಳಕೆಯೊಡೆಯುತ್ತದೆ. ಹೀಗಾಗಿ ಒಣ ಹುಲ್ಲನ್ನು ಸುಡುವಾಗ ಗಿಡಗಳ ಬೆಳವಣಿಗೆಗೆ ಅಡ್ಡಿಯೊದಗಿ ಇಲ್ಲಿನ ಸಸ್ಯಗಳೆಲ್ಲ ಗಿಡ್ಡಾದ ಸಸ್ಯಗಳಾಗಿವೆ. ಆಲ್ಲಲ್ಲಿ ಮಾತ್ರ ಎತ್ತರವಾದ ಮರಗಳನ್ನು ಕಾಣಬಹುದು.

ಹಾಸುಗಲ್ಲುಗಳ ನಿಕ್ಷೇಪದೊಡನೆಯೇ ವಿಸ್ತಾರವಾದ ಅಡ್ಡ ಗಲ್ಲುಗಳೂ ಇಲ್ಲಿ ಕಂಡು ಬರುತ್ತವೆ. ಇಂತಹ ಅಡ್ಡವರಸೆಗಳು ಹಲವಾರು ಮೈಲಿ ಉದ್ದಕ್ಕೆ ವಿಸ್ತರಿಸಿರುವುದನ್ನು ಕಾಣಬಹುದು. ಇವೆಲ್ಲ ಪೂರ್ವ ಪಶ್ಚಿಮವಾಗಿಯೇ ವ್ಯಾಪಿಸಿದ್ದು ಬೆಟ್ಟಗಳ ಮೇಲೆ ನೇರವಾಗಿ ತಲೆಯೆತ್ತಿ ನಿಂತಿವೆ. ಈ ಅಡ್ಡುಗಲ್ಲುಗಳು ಬಹುಕಠಿಣವಾಗಿದ್ದು ಹಾಸುಗಲ್ಲುಗಳ ನಿರ್ಮಾಣಕ್ಕೆ ಮೂಲಾಧಾರವಾಗಿವೆ

ಇಲ್ಲಿನ ಶಿಲಾಭಾಗದಲ್ಲಿ ನೊರಜುಕಲ್ಲುಗಳು,ಮರಳುಕಲ್ಲುಗಳು ಬೆರೆತು ಸಿಡಿಗಲ್ಲುಗಳಾಗಿರುವುದನ್ನು ಕಾಣಬಹುದು. ಇವುಗಳಲ್ಲಿ ಸುಣ್ಣದ ಕಲ್ಲು, ಲಾವಾ ಜಾತಿಗೆ ಸೆರಿದ ಕಲ್ಲುಗಳನ್ನೂ ನೊಡಬಹುದು. ತಿರುಪತಿ ಬೆಟ್ಟಗಳ ದಕ್ಷಿಣ ಪಾದ ಭೂಮಿಯಲ್ಲಿ ನಗರಿ ಬೆಟ್ಟಗಳಲ್ಲಿಯಂತೆಯೇ ಅತಿವಿಶಾಲವಾದ,ತುಸು ಮೃದುವಾದ ಮರಳುಗಲ್ಲುಗಳು ನೂರಾರು ಅಡಿ ಮಂದವಾಗಿ ವಾಯವ್ಯ ದಿಕ್ಕಿನಲ್ಲಿ ಎರಡು ಮೂರು ಮೈಲಿವರಿಗೆ ವ್ಯಾಪಿಸಿವೆ. ಇದು ಸಾಧಾರಣವಾಗಿ ಕಲ್ಲಿದ್ದಲ ಗಣಿಗಳ ಪ್ರಾಂತದ ಕಲ್ಲುಗಳನ್ನೆ ಹೋಲಿರುತ್ತದೆ.

ಇವುಗಳ ಜೊತೆಗೆ ಕಾಳಹಸ್ತಿ ಪ್ರದೇಶದಲ್ಲಿ ಹಲವು ಹಾಸುಗಲ್ಲುಗಳನ್ನು ಕಾಣಬಹುದು. ಈ ಪ್ರದೇಶ ಸಮುದ್ರ ತೀರದಿಂದ ಹತ್ತಿರವಾಗಿದ್ದು, ಇಲ್ಲಿನ ಭೂಗರ್ಭ ಸ್ವಭಾವ ಮದರಾಸಿನದರಂತೆಯೇ. ನೆಲ ಕೆಂಪುಮಣ್ಣಿನಿಂದ ಕೂಡಿದ್ದು ಮರಳು ಹೆ ಕಂಡುಬರು ವುದು. ಈ ಭಾಗದಲ್ಲಿನ ಹಾಸುಗಲ್ಲುಗಳು ನೀರ ಪೆಟ್ಟು, ತಿಂದು, ನುಣ್ಪನ್ನು ಹೊಂದಿವೆ. ನಗರಿಯ ಬಳಿಯಲ್ಲಿನ ಹಾಸುಗಲ್ಲುಗಳು ವಿಶಾಲವಾಗಿಯೂ,ಅಸಂಖ್ಯಾಕವಾಗಿಯೂ ಇದ್ದರೂ, ಹೋಗಹೋಗುತ್ತ ಅವುಗಳ ಗಾತ್ರ ಸಂಖ್ಯೆ ತಗ್ಗುತ್ತ ತೀರಪ್ರಾಂತವನ್ನು ಸೇರುವಲ್ಲಿ ಕೇವಲ ನೊರಜು ಕಲ್ಲುಗಳಂತೆ ಸಣ್ಣ ಸಣ್ಣ ಗುಡ್ಡಗಳಾಗಿವೆ. ಭೂಮಿಯ ಮೇಲ್ಭಾಗವನ್ನು ಅಗೆದಾಗ ಮೊದಲಿಗೆ ಮೃದುವಾಗಿದ್ದರೂ ಗಾಳಿಯು ಸೋಕಿದನಂತರ ಗಟ್ಟಿಯಾಗುತ್ತದೆ. ಇದರಿಂದಾಗಿ ಕೆರೆ ಕಟ್ಟೆಗಳು,ಬಾವಿಯ ಅಂಚುಗಳು, ಗೃಹ ನಿರ್ಮಾಣದಲ್ಲಿ, ಹೊಲಗದ್ದೆಗಳ ಬದುವಿನಲ್ಲಿ ಉತ್ತಮ ಸಾಧನ ಸಾಮಾಗ್ರಿಯಾಗುತ್ತದೆ.

ತಿರುಮಲೆಯ ಬೆಟ್ಟವನ್ನೇರುವ ಯಾತ್ರಿಕರು, ಅನೇಕ ಕಡೆ, ಬೃಹತ್ ಬೆಣಚುಗಲ್ಲುಗಳು ಕಾಲಾಂತರದಲ್ಲಿ ಕರಗಿ ಗೋಡೆ ಗಳಂತಾಗಿರುವುದರಿಂದಾಗಿರುವ ಅತಿಸುಂದರ ದೃಶ್ಯಗಳನ್ನು ವೀಕ್ಷಿಸುವರು. ಈ ಬೃಹತ್ ಶಿಲಾ ಖಂಡಗಳು ತುಸು ಮಸಕು ಬಣ್ಣದ ವಾಗಿ, ಸೀಳುಸೀಳಾಗಿ,ಅತಿ ಮಂದವಾದ ಹಾಸುಗಳಂತೆ ಕಂಡುಬರುತ್ತವೆ. ಬಹುತೇಕ ಎಲ್ಲ ಶಿಲಾಖಂಡಗಳೂ,ಕೆಮ್ಮಣ್ಣು ಅಥವಾ ಮಸಕು ಕಿತ್ತಳೆ ವರ್ಣದವು. ಮುಖ್ಯ ಗಿರಿಪಂಕ್ತಿ ದಕ್ಷಿಣದತ್ತ ಮುಖ ಮಾಡಿದ್ದು ಅಲ್ಲಲ್ಲಿ ಗೋಡೆಯಂತೆ ನಿಂತಿರುವುದನ್ನು ಕಾಣುವೆವು.

ನಗರಿ ಬೆಣಚುಗಲ್ಲುಗಳ ಮೇಲ್ಮೈಲಕ್ಷಣಗಳನ್ನುಳ್ಳ ಬೆಣಚುಗಲ್ಲು ಪದರುಗಲ್ಲುಗಳಿಂದಲೇ ತಿರುಮಲೆಯ ಪರ್ವತಗಳ ಗಷ್ಟು ಶಿಲೆಗಳು ರೂಪತಾಳಿವೆ. ತಿರುಮಲೆಯ ದಕ್ಷಿಣ ಪಶ್ಚಿಮಗಳ ಮುಖ್ಯ ಅಮುಖ್ಯ ಗಿರಿಪಂಕ್ತಿಗಳ ಕಲ್ಲುಗಳು ಹಾಗೂ ತಿರುಮಲೆಯ ದಕ್ಷಿಣ ಹಾಗೂ ಪಶ್ಚಿಮದ ತಳಭಾಗದಲ್ಲೂ ಪದರುಗಲ್ಲುಗಳ ಮೇಲೆ ಈ ಬೆಣಚುಗಲ್ಲುಗಳು ನಿಂತಿವೆ. ಈ ನಗರಿ ಬೆಣಚುಗಲ್ಲುಗಳು ಕಡಪ ತಳಹದಿಯೆಂದು ಹೆಸರಾಗಿ ಪಶ್ಚಿಮದಲ್ಲಿ ದ್ರೋಣಾಚಲದವರೆಗೆ, ಉತ್ತರದಲ್ಲಿ ಶ್ರೀಶೈಲದಾಚೆಯವರೆಗೆ,ಪೂರ್ವದಲ್ಲಿ ಜಗ್ಗಯ್ಯಪೇಟ,ವಿನುಕೊಂಡ,ಉದಯಗಿರಿ,ವೆಂಕಟಗಿರಿಗಳವರೆಗೂ ಹರಡಿರುವ ಅರ್ಧವೃತ್ತಾಕಾರದ ಪರ್ವತ ಪ್ರದೇಶದ ಭಾಗ ವಾಗಿದೆ. ಡೋಲರೈಟ್, ಗ್ರಾನೈಟ್‌ಗಳ ತಳಪಾಯದ ಮೇಲಿರುವ ಈ ಭಾಗ 2500 ಮಿಲಿಯ ವರ್ಷಗಳಷ್ಟು ಹಳೆಯದು. ಕಡಪ ತಳದ ಪ್ರಾಚೀನತೆ 1700 ಮಿಲಿಯ ವರ್ಷಗಳಾದರೆ ನಗರಿ ಬೆಣಚುಗಲ್ಲು ತಳ 1500 ಮಿಲಿಯ ವರ್ಷಗಳಷ್ಟು ಹಳೆಯದಾಗಿ, ತಳದ್ದು ಮೇಲಿನ ಗಷ್ಟು ಶಿಲೆಗೂ ನಡುವಣ ಕಾಲ ವ್ಯತ್ಯಾಸದಿಂದಾಗಿ ಇದನ್ನು ‘‘ಅಪಾರ್ಚಿಯನ್ ಅನ್‌ಕನ್‌ಫರ್ಮಿಟಿ’’ ಎಂದು ಗುರುತಿಸಲಾಗಿದೆ. ತಿರುಮಲೆಯ ಗಷ್ಟು ಶಿಲೆಯ ಒಂದು ಭಾಗದಲ್ಲಿ ರಾಷ್ಟ್ರೀಯ ಭೌಗೋಳಿಕ ಸರ್ವೇಯವರು ಈ ಅಂಶವನ್ನು ಅವಧಾರಿಸಿದ್ದಾರೆ. ಹೊಸ ಘಟ್ಟದ ರಸ್ತೆಯಲ್ಲಿ 18 ನೇ ಕಿ.ಮೀ.ಬಳಿ ಘಟ್ಟದ ಶಿರವನ್ನು ಮುಟ್ಟುವ ಸ್ಥಳದಲ್ಲಿ ಈ ಕೇಂದ್ರವಿದೆ.

ನಗರಿ ಬೆಣಚುಗಲ್ಲಿನ ಆರಂಭ ತಿರುಮಲೆಯ ಪರ್ವತದಲ್ಲಿ ಉಂಟಾಗಿ ಪೂರ್ವಕ್ಕೆ ಸರಿದು ಕಪಿಲತೀರ್ಥದ ಬಳಿ ನೆಲಮಟ್ಟವನ್ನು ಸೇರಿ ಇನ್ನೂ ಮುಂದೆ ಭೂಗರ್ಭವನ್ನು ಸೇರುತ್ತದೆ. ನಗರಿ ಬೆಣಚುಗಲ್ಲುಗಳು,ಪದರು ಗಲ್ಲುಗಳು, ಹಾಸುಗಲ್ಲುಗಳು ಹೆಚ್ಚು ಕಡಿಮೆ ನೇರವಾದ ಸಾಲಿನಲ್ಲಿ ಹಲವಾರು ಕೊರಕಲುಗಳನ್ನುಂಟು ಮಾಡಿವೆ. ಇಂತಹ ಒಂದು ಕೊರಕಲು ತಿರುಮಲೆಯ ಆಲಯದ್ವಾರದಲ್ಲಿದ್ದರೆ ಮತ್ತೊಂದು ಅವ್ವಚಾರಿ ಬೆಟ್ಟದಲ್ಲಿದೆ. ಮತ್ತೊಂದು ತಿರುಪತಿಯ ಉತ್ತರಕ್ಕೆ ಮುಂದುವರೆದು ಕರಕಂಬಾಡಿ ಏರ್ಪೋಡುಗಳತ್ತ ನಡೆಯುತ್ತದೆ. ಕೊರಕಲುಗಳು ಸಾಮಾನ್ಯವಾಗಿ ಜಲಸಂಚಾರಕ್ಕೆ ಅವಕಾಶ ಮಾಡಿಕೊಡುತ್ತವೆ. ತಿರುಮಲೆಯ ಕೊರಕಲು ತಿರುಪತಿ ತಿರುಮಲೆಗಳಲ್ಲಿನ ನೀರಿನ ಸಂಗ್ರಹಕ್ಕೆ ಅವಕಾಶ ಮಾಡಿಕೊಟ್ಟಿವೆ.

ನಗರಿ, ನಾರಾಯಣ ವನಗಳ ಬೆಟ್ಟಗಳ ಮೇಲುಭಾಗವು,ಎಂದರೆ ಕಾಳಹಸ್ತಿ ಪುತ್ತೂರುಗಳ ನಡುವೆ ಯಿರುವ ಸ್ವರ್ಣಮುಖಿ, ಅರಣಿ ನದಿಗಳ ನಡುಭಾಗವೂ ನಗರಿ ಬೆಣಚುಗಲ್ಲಿನಿಂದಲೇ ಕೂಡಿದ್ದು ಬೆಟ್ಟಗಳ ತಳಭಾಗ ಪದರುಗಲ್ಲುಗಳಿಂದ ಕೂಡಿವೆ. ಕಡಪ ತಳದ ಸೀಮೆಗಳು ತಿರುಮಲೆ -ತಿರುಪತಿಗಳ ದಕ್ಷಿಣಕ್ಕೆ ಗಣನೀಯವಾಗಿ ವಿಸ್ತರಿಸಿದ್ದು ನಗರಿ ನಾರಾಯಣವನಗಳಲ್ಲಿನ ಬೆಟ್ಟಗಳು ಕೊರಕಲಿಗೂ ಸವೆತಕ್ಕೂ ಈಡಾಗಿವೆ. ತಿರುಮಲೆಯ ಪರ್ವತಾವಳಿ ನೆಮ್ಮಿನಿಂತ ಮಲೆಗಳಾದರೆ ಪದರುಗಲ್ಲುಗಳು ಹಾಸುಗಲ್ಲುಗಳು ಒಟ್ಟಿಗೆ ಗುಡ್ಡಗಳಾಗಿ ವಿಸ್ತರಿಸಿವೆ. ಕಾರಣ ಇಲ್ಲಿನ ಶಿಲೆಗಳಲ್ಲಿನ ವ್ಯತ್ಯಾಸ,ಬೆಣಚುಗಲ್ಲುಗಳು ಜಾರುಜಾರಾಗಿ,ನಿಲುವು ಜೋಡಣೆ ಯಿಂದಾಗಿ ಶಿಖರಗಳ ನಿರ್ಮಾಣವಾಗಿವೆ. ಪದರುಗಲ್ಲು ಬೆಣಚುಗಲ್ಲಿಗಿಂತ ಬೇಗ ಜೀರ್ಣವಾಗುವ ಗುಣ ಹೊಂದಿರುವುದರಿಂದ ಹೀಗೆ ಆಗಿದೆ. ಅನೇಕ ಕಡೆ ಪದರುಗಲ್ಲುಗಳಿಗೆ ಬೆಣಚುಗಲ್ಲು ರಕ್ಷಣೆ ಕವಚವಾಗಿದೆ. ತಿರುಮಲೆಯ ಆಲಯದ ಉತ್ತರಭಾಗದಲ್ಲಿ ನಗರಿ ಬೆಣಚುಗಲ್ಲು ಪ್ರಾಕೃತಿಕ ಜೀರ್ಣತೆಗೆ ಒಳಗಾಗಿ ಒಂದು ಸಹಜ ಶಿಲಾ ತೋರಣವನ್ನುಂಟಾಗಿಸಿದೆ. ಇದು ಸ್ವಾಮಿ ಆಲಯಕ್ಕೆ ಪ್ರಕೃತಿ ನೀಡಿದ ಕೊಡುಗೆ. ಶ್ರೀ ಸಾಮಾನ್ಯನಿಗೆ ಆಸಕ್ತಿಕರ ಅಂಶವಾಗಿ ವಿಜ್ಞಾನಿಗೆ ಪ್ರಮುಖವಾದ ಅಂಶವಾಗಿದೆ. ಹೀಗಾಗಿ ಈ ಅಪುರೂಪದ ಕೊಡುಗೆಯನ್ನು ರಾಷ್ಟ್ರೀಯ ಸ್ಮಾರಕವಾಗಿ ಕಾಯ್ದುಕೊಳ್ಳಬೇಕು. ತಿರುಮಲೆಯ ಪೂರ್ವದಲ್ಲಿ ಜೀರ್ಣವಾದ ಶಿಲೆಗಳಿಂದಾಗಿ ನೇರವಾದ ಕೊರಕಲುಗಳುಂಟಾಗಿದ್ದರೆ ತಿರುಮಲೆಯ ಪಶ್ಚಿಮಕ್ಕೆ ತುಸುವೆ ಜಾರಿದ ಕೊರಕಲುಗಳಾಗಿವೆ.

## 10 ಖನಿಜ ಸಂಪತ್ತು :-

ಇಲ್ಲಿನ ಪದರುಗಲ್ಲುಗಳಲ್ಲಿ ಧಾರವಾಡದ ಅಂದಿನ ಕಾಲಕ್ಕೆ ಸಂಬಂಧಿಸಿದ ಕಬ್ಬಿಣದ ಅದಿರು ದೊರೆಯುವುದು. ಕೆಲಕಡೆ ನಿರ್ಯಾತವೂ ಆಗುವುದಾದರೂ ಅದರಲ್ಲಿನ ಕಬ್ಬಿಣದ ಅಂಶ ಅರವತ್ತು ಶತಾಂಶಕ್ಕೂ ಕಡಿಮೆ ಹಾಗು ಗುಣಮಟ್ಟವು ಕೆಳಮಟ್ಟದ್ದು.

ಚಿನ್ನ, ಸೀಸ, ಹಲವಡೆಗಳಲ್ಲಿ ಅತಿ ಕಡಿಮೆ ಪ್ರಮಾಣದಲ್ಲಿ ದೊರೆಯುವುದು. ಜಮೀನ್ದಾರರ ಕಾಲದ ಗಣಿಗಳನ್ನು ಮುಚ್ಚಿ ಬಹುಕಾಲ ವಾಗಿದೆ.

## 11 ಸಸ್ಯ ಸಂಪತ್ತು :-

ಒಂದು ಪ್ರದೇಶದ ಇಡೀ ಅಭಿವೃದ್ಧಿಯ ಸಾಮಾನ್ಯ ಸ್ವರೂಪಗಳನ್ನು ಗುರುತಿಸಲು ಅಲ್ಲಿನ ಸಸ್ಯಸಂಪತ್ತು ಅಳತೆ ಗೋಲಾದರೂ,ಅಲ್ಲಿನ ಜೈವಿಕ ಚಟುವಟಿಕೆಯಿಂದ ಪರಿಸರದ ಯಶಸ್ಸು - ಬಹುತೇಕ ಕುಂಠಿತವಾಗುತ್ತದೆ. ಜೈವಿಕ ಚಟುವಟಿಕೆ ಇಡೀ ಜಿಲ್ಲೆಯಲ್ಲಿ ಅತಿ ಸಾಂದ್ರವಾಗಿದ್ದು,ಇಲ್ಲಿ ಸಸ್ಯಶಾಸ್ತ್ರ ಸಂಶೋಧಕನಿಗೆ ವಿಶಿಷ್ಟವಾದ ಸಸ್ಯರಾಶಿ ದೊರೆಯುತ್ತದೆ. ವಾತಾವರಣಮೇಲ್ಮೈ ಲಕ್ಷಣ, ಭೂಸಾರಗಳು ಈ ಪ್ರಾಂತದ ಸಸ್ಯ ವರ್ಗವನ್ನು ಪ್ರಭಾವಿಸಿವೆ. ಹವಾಗುಣ ಇಡಿಯಾಗಿ ಅನುಕೂಲಕರವಾದದ್ದು. ಸಿಂಹಾಚಲ ಹಾಗೂ ತಿರುಪತಿಗಳಲ್ಲಿನ ಪದರ ಗಲ್ಲುಗಳ ಪರ್ವತಾವಳಿ ಬಹುತೇಕ ತಮ್ಮೊಡನೆ ಕೆಂಪುಮೆಕ್ಕಲು ಮಣ್ಣನ್ನು, ಅದರೊಡನೆಯೇ ಸೇರಿದ ಕಾಡುಗಳನ್ನೂ, ಎತ್ತರವಾದ ಮೈದಾನಗಳನ್ನೂ,ಒಣ ಎಲೆಗಳ ಮರಗಳನ್ನೂ ಹೊಂದಿವೆ. ಚಾಮಲ,ಮಾಮಂಡೂರು, ತುಂಕೋನ ಕಣಿವೆಗಳಲ್ಲಿ ಮಣ್ಣಿನ ಅಳತೆ ಹೆಚ್ಚಾಗಿದ್ದು,ಶುಷ್ಕ ನಿತ್ಯ ಹರಿದ್ವರ್ಣದ ಸಸ್ಯಗಳೂ ಎಪಿಫೈಟಿಕ್ ಸಸ್ಯಗಳೂ ಕಂಡುಬರುತ್ತವೆ. ಕಲ್ಲು ಒಡೆದು ಜೀರ್ಣವಾಗುವುದರಲ್ಲಿ ಈ ಸಸ್ಯಗಳ ಪಾತ್ರ ಹಿರಿದು.

ಮಿಕ್ಕಂತೆ ಪರ್ವತ ಪ್ರದೇಶಗಳು ಹೊರತಾದ ಪ್ರದೇಶ,ಕಾಯ್ದಿಟ್ಟ ಕಾಡುಗಳು ಶುಷ್ಕ ಕುರುಚಲು ತರುಗಳ ಬೀಡುಗಳಾಗಿವೆ. ಇದು ಪಶ್ಚಿಮದ ಎತ್ತರ ಪ್ರದೇಶದಲ್ಲಿ ಮುಖ್ಯವಾಗುತ್ತದೆ. ನಡುನಡುವೆ ಕಲ್ಯಾಣಿ,ಸ್ವರ್ಣಮುಖಿ, ಕುಶಸ್ಥಲಿ, ಪಾಲಾರ್-ಮೊದಲಾದ ನದಿಗಳನ್ನು ಸೇರುವ ಹಲವಾರು ಹೊಳೆಗಳಿಂದಾದ ತಗ್ಗು ತೆವರುಗಳನ್ನು ಕಾಣಲಿಕ್ಕುಂಟು. ಅನೇಕ ಕಡೆ ಈ ಹೊಳೆಗಳಿಗೆ ಅಡ್ಡಕಟ್ಟಿ ಕೆರೆಗಳನ್ನಾಗಿಸಿ ಭತ್ತ ಮೊದಲಾದ ಬೆಳೆತೆಗೆಯುವರು. ಈ ತೇವದ ಭೂಮಿಯ ಬಳಿಯಲ್ಲಿ ಹಲವು ರೀತಿಯ ಕಾಡು ಜಾಲಿಯರಗಳೂ ಮಾವಿನ ಮರಗಳೂ ಉಂಟು. ಈ ಹೊಳೆಗಳ ದಡಗಳಲ್ಲಿ ಹುಲ್ಲೂ ಹಸನಾಗಿ ಬೆಳೆದಿರುವುದನ್ನು ಕಾಣಬಹುದು. ಜಿಲ್ಲೆಯಲ್ಲಿ ಹೊಸೆಯ ಮರಗಳು ಹೆಚ್ಚಾಗಿದ್ದರೂ ಈಗೀಗ ಅವುಗಳನ್ನು ವಿವಿಧ ಕಾರಣಗಳಿಂದಾಗಿ ಕಡಿಯಲಾಗುತ್ತಿದೆಯಾಗಿ,ಕಡಮೆ ಯಾಗುತ್ತಿವೆ.

## 12. ಕಾಡುಗಳು :-

ತಿರುಮಲೆಯಿರುವ ಚಿತ್ತೂರು ಜಿಲ್ಲೆಯಲ್ಲಿನ ಒಟ್ಟು 27.4 ಶತಾಂಶ ಕಾಡುಗಳಾಗಿವೆ. ಹಿಂದಿನ ಒಂದು ದಶಕದಿಂದ ಸರಕಾರ ಇಲ್ಲಿನ ಅರಣ್ಯವನ್ನು ಬೆಳಸಲೆಂದು ಖಾಸಗೀ ಜಮೀನುಗಳನ್ನು ಪರಿಹಾರ ನೀಡಿ ಪಡೆಯುತ್ತಿದೆ.(ತಿ.ತಿ.ದೇವಸ್ಥಾನಗಳು ತಿರುಮಲೆಯ ಅರಣ್ಯವನ್ನು ಹೆಚ್ಚಿಸಲು ಶ್ರೀ ವೇಂಕಟೇಶ್ವರ ವನಾಭಿವೃದ್ಧಿ ಯೋಜನೆಯನ್ನು 1983 ರಲ್ಲಿ ಆರಂಭಿಸಿ ಹಂತ ಹಂತವಾಗಿ ಬೆಟ್ಟದ ಮೇಲಿನ ವಾತಾವರಣ,ಅರಣ್ಯಾಚ್ಛಾದನೆಯನ್ನು ಅಭಿವೃದ್ಧಿ ಪಡಿಸುತ್ತಿದೆ. ಈಗ 21ನೇ ಶತಮಾನದ ಎರಡನೆಯ ದಶದಕಲ್ಲಿ ಇಡೀ ಪರ್ವತ ಸಸ್ಯಶ್ಯಾಮಲವಾಗಿರುವುದನ್ನು ಕಾಣಬಹುದು - ಅನುವಾದಕ)

ಇಲ್ಲಿನ ಕಾಡುಗಳಲ್ಲಿನ ಸಸ್ಯಗಳು ಶುಷ್ಕ ಸಸ್ಯಗಳು ಕಾಡುಜಾಲಿಗಳಿಂದ ಕೂಡಿದ್ದು ಅಲ್ಲಲ್ಲಿ ಶುಷ್ಕಹರಿತ್ತೂ ಕಂಡುಬಂದು ವಾತಾವರಣದ ಬೆಳವಣಿಗೆಯ ಎತ್ತರವನ್ನು ತಲುಪಿದಂತೆ ಕಂಡುಬರುತ್ತದೆ. ಭಾಕರಾಪೇಟೆ ತಿರುಮಲೆಗಳ ನಡುವಣ ಕಾಡುಗಳು ರಾಮಾಯಣ ಕಾಲದಲ್ಲಿ ದಂಡಕಾರಣ್ಯಕ್ಕೆ ಸೇರಿದ ಪ್ರದೇಶಗಳಾಗಿದ್ದವು ಎಂಬುದು ಪುರಾಣ ವಚನ. ದಂಡಕಾರಣ್ಯ ಹೆಸರೇ ಸೂಚಿಸು ವಂತೆ ಪುಗಲಸಾಧ್ಯವಾದ ಹಲವು ಹನ್ನೊಂದು ರೀತಿಯ ಜಾತಿಯ ಪಕ್ಷಿ ಪ್ರಾಣಿಗಳಿಂದ ಕೂಡಿ ವೈವಿಧ್ಯಮಯವಾದ ವನರಾಜಿಯಿಂದ ಕೂಡಿದ್ದದ್ದು. ಅಂತಹ ಅರಣ್ಯಗಳು ಇಂದು ಸುಲಭವಾಗಿ ನಿರ್ಮಾಣವಾಗಲು ಸಾಧ್ಯವಿಲ್ಲದಷ್ಟು ನಾಶವಾಗಿದ್ದು,ಬೋಳುಗುಡ್ಡಗಳ ಬಂಜರು ಭೂಮಿಯಾಗಿ ಬಿಟ್ಟಿದೆ.

ವನಸಿರಿಯ ವೈವಿಧ್ಯವನ್ನು ವೈಶಾಲ್ಯವನ್ನು ಪ್ರಭಾವಗೊಳಿಸುವ ಪ್ರಧಾನ ಪ್ರಾಕೃತಿಕ ಅಂಶವೆಂದರೆ ಜೈವಿಕ ಚಟುವಟಿಕೆಯೂ ಕೂಡಿದಂತೆ ಆದ ಸ್ಥಳೀಯ ಗುಣಗಣ. ಈ ಪ್ರಾಂತದ ಅರಣ್ಯಗಳು ಸಮುದ್ರ ಮಟ್ಟದ ಎತ್ತರದಲ್ಲಿ ಗಣನೀಯ ವೈವಿಧ್ಯವನ್ನು ಹೊಂದಿದ್ದು ಈ ತಗ್ಗು ತೆವರುಗಳು ಮಣ್ಣಿನ ತೇವಾಂಶವನ್ನು ಹವಾಗುಣವನ್ನು ಆ ಮೂಲಕವಾಗಿಯೇ ಗಿಡಗಳ ಬೆಳವಣಿಗೆಯನ್ನು ಕೆಲಮಟ್ಟಿಗಾದರೂ ಪ್ರಭಾವಿಸುತ್ತವೆ. ಜೈವಿಕ ಚಟುವಟಿಕೆಗಳು ಬೆಂಕಿ,ಕಾಡುಗಳ್ಳತನ,ಬೇಸಾಯ,ಪಶುಪಾಲನೆಗಳಲ್ಲಿ ಪ್ರತೀತವಾಗುತ್ತವೆ. ಪದೇ ಪದೇ ಉಂಟಾಗುವ ಕಾಳ್ಗಿಚ್ಚಿನ ತೀವ್ರತೆ ಇಲ್ಲಿನ ಎತ್ತರದೊಡನೆ ನೇರ ಸಂಬಂಧ ಹೊಂದಿರುವಂತೆಯೇ, ವನಾಚ್ಛಾದನೆಯ ಸಾಂದ್ರತೆಯನ್ನೂ ನೇರವಾಗಿ ಪ್ರಭಾವಿಸುತ್ತದೆ. ಆದರೆ ಶಿಖರವಹ್ನಿ ಇಲ್ಲಿ ಬಹುತೇಕ ಕಂಡು ಬಂದಿಲ್ಲವಾಗಿ, ನಾಶವಾಗುವುದೆಲ್ಲ ಪಾರ್ಶ್ವ ಅರಣ್ಯಾಚ್ಛಾದನೆಯೇ.

ಪ್ರಸ್ಥಭೂಮಿಯ ಕಾಡುಗಳು ಬಹುಮಟ್ಟಿಗೆ ತಿರುಮಲೆಯ ಎತ್ತರವಾದ ಪ್ರದೇಶಕ್ಕೆ ಭಾಕರಾಪೇಟೆಯ ಶೇಷಾಚಲ ಪವತಾವಳಿಗೆ ಪರಿಮಿತವಾಗಿವೆ. ಈ ಪ್ರಾಂತ್ಯದ ವಿಶಿಷ್ಟವಾದ ಅರಣ್ಯದಲ್ಲಿನ ಬೆಳೆಯ 80 ಶತಾಂಶ ಎಂಜಿನಿಯ ಅಲ್ಬನಿಫಿಲಿಯಾ ಆಗಿದೆ. ಘೋರಿಯ, ತಂಬಗಿಯ ಸಸ್ಯಗಳು ವಾಸ್ತವವಾಗಿ ಗುಡ್ಡಗಳಿಗೂ, ಕೊರಕಲುಗಳಿಗೂ ಸೀಮಿತ. ಹೆಚ್ಚಿನ ತೇವಾಂಶವಿರುವಲ್ಲಿ ಘೋರಿಯಾ ತಲೂರ ಸಸಿಗಳು ಕಂಡುಬರುತ್ತವೆ. ಇವುಗಳ ಜೊತೆಗೆ ಟರ್ಮಿನಾಲಿಯ ಪಾಲಿಡೆ,ಬುಕನಾನಿಯ ಲಾಟಿಪೋಲಿಯಾಗಳೂ ಉಂಟು,

## 13. ಪ್ರಾಣಿ ಸಂಪದ :-

ತಿರುಪತಿ ಹಾಗೂ ಭಾಕರಾಪೇಟೆಯ ಕಾಡುಗಳು ಪರಿರಕ್ಷಿತವೆಂದು ಘೋಷಿತವಾಗುವ ಮೊದಲೇ, ಪ್ರಾಣಿ ಪಕ್ಷಿಗಳ ಗಿಡ ಮರಗಳ ವೈವಿಧ್ಯಕ್ಕೂ ಸಮೃದ್ಧಿಗೂ ಹೆಸರು ಪಡೆದಿದ್ದವು. ಹಲವು ಜಾತಿಯ ಹಕ್ಕಿಗಳು,ಪ್ರಾಣಿಗಳು ಈ ಸ್ಥಳ ಸುರಕ್ಷಿತವೆಂದು ಕಂಡುಕೊಂಡು, ಸುಖದಿಂದ ಯಾವುದೇ ಅಡ್ಡಿ ಆತಂಕಗಳಿಲ್ಲದೆ ಜೀವಿಸಿದ್ದವು. 27-8-1652 ರಲ್ಲಿ ಈ ಪ್ರದೇಶದಲ್ಲಿ ಹಾದು ಹೋದ ಫ್ರೆಂಚ್ ಯಾತ್ರಿಕನೂ ರತ್ನಪಡಿ ವ್ಯಾಪಾರಿಯೂ ಆದ ಟ್ರಾವರ್ನಿರನು ತನ್ನ ಯಾತ್ರಾ ದಿನಚರಿಯಲ್ಲಿ ಈ ಪ್ರದೇಶ ಸುಖದಾಯಿಯಾಗಿದ್ದು, ಇಲ್ಲಿನ ಅಸಂಖ್ಯಾತ ಹೊಳೆಗಳು ಚಿಲುಮೆಗಳಿಂದಾಗಿ ತಂಪಾಗಿದೆ ಎಂದು ದಾಖಲಿಸಿ,ಮೇಜರ್ ಜುಮ್ಲಾನ ಸೈನ್ಯದಿಂದ ಆಗ ಇಲ್ಲಿ ಆನೆಗಳನ್ನು ಹಿಡಿಯುವ ಕಾರ್ಯಕ್ರಮ ನಡೆದಿದ್ದಿತು ಎಂದು ತಿಳಿಸಿದ್ದಾನೆ. ಇಂದಿನ ಇಲ್ಲಿನ ಕಾಡುಗಳ ಪರಿಸ್ಥಿತಿಯನ್ನು ಕಂಡವರಿಗೆ ಈ ಮಾತುಗಳನ್ನು ನಂಬಲು ಕಷ್ಟಸಾಧ್ಯ ಆಗಬಹುದಾದರೂ,ಕಳೆದ ಮೂರು ಶತಮಾನಗಳಿಂದ ಮನಷ್ಯ ಕಾಡುಗಳ ವಿನಾಶದಲ್ಲಿ ಮಾಡಿರುವ ಭೀಭತ್ಸವನ್ನು ನಾವು ಚಿತ್ರಿಸಿಕೊಳ್ಳುವುದು ಸಾಧ್ಯವಾದರೆ ಅವನ ಮಾತುಗಳು ನಿಜದಿಂದ ಬಹುದೂರವಾದದ್ದೇನಲ್ಲ ಎನ್ನಬಹುದು. ಆನೆ,ಕಾಡೆಮ್ಮೆಗಳಂತಹ ಹಿರಿಯ ಪ್ರಾಣಿಗಳು ನಿರ್ನಾಮ ಆದದ್ದೇ ಅಲ್ಲದೆ, ಹುಲಿ, ಚಿರತೆಗಳು ಬಹುತೇಕ ಇಲ್ಲವಾಗಿವೆ. ಇತರ ಕಾಡುಪ್ರಾಣಿಗಳಾದ ಜಿಂಕೆ, ಸಾರಂಗ ಕಡವೆಗಳೂ ಕಡಮೆಯಾಗಿ,ಅವುಗಳನ್ನು ಹಿಂಡುಗಳಲ್ಲಿ ನೋಡುವುದು, ಅಸಾಧ್ಯವಾಗಿದೆ. ಮೀಸಲು ವನಗಳ ಸುತ್ತಣ ಭೂಮಿಯನ್ನು ಕೃಷಿಗಾಗಿ ತೆರವುಮಾಡುವುದು,ಹೆಚ್ಚಿನ ರಸ್ತೆಗಳು,ವೇಗವಾಗಿ ಚಲಿಸುವ ವಾಹನಗಳು,ವಿಶೇಷವಾಗಿ ಅರಣ್ಯದ ಕಚ್ಚಾ ರಸ್ತೆಗಳಲ್ಲಿ ಚಲಿಸುವ ಜೀಪುಗಳು,ಪರವಾನಗಿಯಿಲ್ಲದ ಆಯುಧಗಳ ಹೆಚ್ಚಳ,ಎಂಡ್ರಿನ್ ಮುಂತಾದ ಅತಿ ಸುಲಭದರದ ತೀವ್ರ ವಿಷಗಳ ಆಗಮನ,ಮನುಷ್ಯನ ನಿಷ್ಕರುಣ ಬೇಟೆಯ ಸ್ವಭಾವ- ಇವೆಲ್ಲ ಸೇರಿ ವನ್ಯಪ್ರಾಣಿಗಳ ಸಂಪತ್ತಿಗೆ,ಜೀವನಕ್ಕೆ ದೊಡ್ಡ ಕುತ್ತಾಗಿದೆ. ಇಂದು ಹಪಾಪಿ ನವಿಲುಗಳೂ ಸಂಖ್ಯೆಯಲ್ಲಿ ಕಡಮೆಯಾಗುತ್ತಿವೆ. ವನ್ಯಪ್ರಾಣಿಗಳಿಗೆ ಜೀವಿಸುವ,ಬೆಳೆಯುವ ಅವಕಾಶ ನೀಡಲೆಂದು 1962 ರಿಂದ ಜಿಲ್ಲೆಯಲ್ಲಿ ಎಲ್ಲ ಕಾಡುಗಳನ್ನು ಬೇಟೆಗಾಗಿ ನಿಷೇಧಿಸಲಾಗಿದೆ.

ಕೊಂಬುಳ್ಳ ಪ್ರಾಣಿಗಳು ತಮಗೆ ವಾತಾವರಣ ಅನುಕೂಲವಾಗಿರುವುದರಿಂದ ತಿರುಪತಿ ಪ್ರಾಂತದಲ್ಲಿ ಹೆಚ್ಚಿಗೆ ಕಂಡುಬರುತ್ತವೆ

ಈ ಪ್ರಾಂತದಲ್ಲಿನ ಹಕ್ಕಿಗಳ ಬದುಕು ಸ್ವಲ್ಪಮಟ್ಟಿಗೆ ಚೆನ್ನವೆನ್ನಬಹುದು. ಕಾರಣ ಕಳ್ಳ ಬೇಟೆಗಾರರು ಪಕ್ಷಿಗಳ ವಿನಾಶದತ್ತ ದೃಷ್ಟಿ ಹರಿಸಿಲ್ಲದಿರುವುದು ಹಾಗೂ ಅವುಗಳ ಹಾರುವ ಶಕ್ತಿ ಹಾಗೂ ತಮ್ಮ ಕಿರುಗಾತ್ರದಿಂದಾಗಿ ನಾಲ್ಕುಕಾಲಿನ ಪ್ರಾಣಿಗಳಿಗಿಂತ

ಚೆನ್ನಾಗಿ ತಮ್ಮನ್ನು ತಾವು ರಕ್ಷಿಸಿಕೊಳ್ಳುವಲ್ಲಿ ಹೆಚ್ಚು ಸಮರ್ಥವಾಗಿರುವಿಕೆ. ಈ ಕಾಡುಗಳಲ್ಲಿ ವೈವಿಧ್ಯಮಯವಾದಹಕ್ಕಿಗಳು ಅನೇಕವಿದ್ದು ಚಳಿಗಾಲದಲ್ಲಿ ದೂರದೂರದಿಂದ ಬರುವ ಹಕ್ಕಿಗಳಿಂದಲೂ ಅವುಗಳ ಸಂಖ್ಯೆಗಣನೀಯವಾಗಿ ಹೆಚ್ಚುವುದು. ಬಬ್ಲರ್‌ಗಳಲ್ಲಿ ದೊಡ್ಡ ಕೆಂದು ಬಣ್ಣದ ಬಬ್ಲರ್‌ಗಳು ಬಹು ಸಾಮಾನ್ಯ. ಮಳೆಗಾಲದಲ್ಲಿ ಹೆಚ್ಚುವ ಹುಳಗಳ ಸಂಖ್ಯೆಯನ್ನು ಮಿತಿಗೊಳಿಸುವ, ಹಿಡಿಯುವ ದೊಡ್ಡ ಶ್ರೈ ಕ್‌ಗಳು ಜಿಲ್ಲೆಯ ಮುಖ್ಯ ರಸ್ತೆಗಳಲ್ಲಿ ಹುಳ ಹೆಕ್ಕುತ್ತಿರುವುದನ್ನು ಕಾಣಬಹುದು. ಕಾಗೆಗಳು ಮೈನಾಗಳು ಜಾನುವಾರುಗಳ ಬೆನ್ನಿನಲ್ಲಿ ಸದಾ ಕಾಣುತ್ತವೆ. ಇತರೆಯವಾದ ಜೀಈಟರ್ಸ್,ವಾರ್‌ಬ್ಲರ್ಸ್,ಹೂಪನ್ ಮೊದಲಾದವೂ ಕಂಡುಬರುತ್ತವೆ. ರಣಹದ್ದು ಗಳು ಇಡೀ ಜಿಲ್ಲೆಯಲ್ಲಿ ಕಾಣಬರುತ್ತವೆ. ಕ್ರಿಮಿಕೀಟಕಗಳ ಸಂಖ್ಯೆಯನ್ನು ಹದ್ದು ಬಸ್ತಿನಲ್ಲಿಡುವ ಗೃಧ್ರಗಳು,ಗೂಬೆಗಳು ಇವೆ. ಅಳಿಲು,ಮರಳು, ಹಸಿರು ಗಿಣಿಗಳೂ ಸ್ಥಳೀಯ ಯಾನಾದಿಗಳಿಂದಲೂ, ಕಳ್ಳ ಸಾಗಣೆದಾರರೂ, ಸುಂಡಿಲಿಗಳೂ ಹಿಡಿಯುವ ಪಕ್ಷಿ ಗಳಾಗಿವೆ. ಚಳಿಗಾಲದಲ್ಲಿ ಅಸಂಖ್ಯ ಬಾತುಕೋಳಿಗಳೂ,ಜಿಲ್ಲೆಯ ವಿವಿಧ ಕೆರೆಕಟ್ಟೆಗಳಲ್ಲಿ ಕಂಡುಬರುತ್ತವೆ. ವಿವಿಧ ಚುಕ್ಕೆಬಾತುಗಳು ಗಣನೀಯ. ಚಿನ್ನಗೊಟ್ಟಿಕಲ್ಲು ಕೆರೆಯಲ್ಲಿ ಚಳಿಗಾಲದಲ್ಲಿ ಕಾಣಬಹುದು. ಭತ್ತದ ಗದ್ದೆಗಳಲ್ಲಿ ಗುಬ್ಬಚ್ಚಿಗಳನ್ನು ಕಾಣಬಹುದು. ಭತ್ತದ ಗದ್ದೆಗಳು ಹೆರಾನ್‌ಗಳನ್ನು,ಎಗ್ರೆಟ್‌ಗಳನ್ನೂ ಆಕರ್ಷಿಸುತ್ತವೆ. ತಿರುಪತಿ,ಭಾಕರಾಪೇಟ ಮದನಪಲ್ಲಿಗಳಲ್ಲಿ ಈಗಲೂನವಿಲುಗಳನ್ನು ಎಲ್ಲಕಾಲದಲ್ಲೂ ನೋಡಬಹುದು. ತಿರುಮಲೆಯ ಘಟ್ಟದ ರಸ್ತೆಯ 6-8 ಮೈಲಿಗಳ ಮಧ್ಯದಲ್ಲಿ ಸಂಜೆ ಹೊತ್ತು ರಸ್ತೆಯನ್ನು ದಾಟು ತ್ತಿರುವುದನ್ನು ನೋಡಬಹುದಾಗಿದೆ.

## 14. ಸರಿಸೃಪಗಳು :-

ಜಿಲ್ಲೆಯಲ್ಲಿ ಅಸಂಖ್ಯವಾದ ವಿಷಪೂರಿತ ಹಾಗೂ ವಿಷಹೀನ ಹಾವುಗಳನ್ನು ಕಾಣಬಹುದು. ಹಿಂದೂಗಳು ದೇವರೆಂದೇ ಗೌರವಿ ಸುವ ನಾಗರಚೌತಿಯಂದು ಹಾಲನೆರೆಯುವ ಹುತ್ತುಗಳಲ್ಲಿನ ನಾಗರ ಹಾವು ಇವುಗಳಲ್ಲಿ ಸಾಮಾನ್ಯವಾದದ್ದು. ವೈಪರ್ಹೈಟಿಗಳು ಈ ಪ್ರದೇಶದಲ್ಲಿ ಸಾಮಾನ್ಯ. ಒಳಕಾಡುಗಳಲ್ಲಿ ಹೆಬ್ಬಾವು ಇದೆಯೆಂದು ಹೇಳಿದರೂ ಕಣ್ಣಿಗೆ ಕಂಡಿಲ್ಲ. ಮಿಕ್ಕಂತೆ ವಿಷಹೀನ ಹಾವುಗಳಲ್ಲಿ ಕೇರೆಹಾವು, ನೀರಹಾವುಗಳು ಕ್ರಿಮಿಕೀಟಕಗಳ ಸಂಖ್ಯೆಯನ್ನು ಹದ್ದಿನಲ್ಲಿಡುವ ಕೆಲಸದಲ್ಲಿ ತೊಡಗಿರುವುದನ್ನು ಹಳ್ಳಿಗಳ ಸುತ್ತ ಮುತ್ತ ಕಾಣಬಹುದು.

ಹಾವುರಾಣಿಗಳೂ, ಹಲ್ಲಿಗಳೂ ಸಾಮಾನ್ಯವಾಗಿವೆ. ಆಮೆಗಳಲ್ಲಿ ಮೃದುಚರ್ಮದ ಆಮೆಗಳು ಕೆರೆಬಾವಿಗಳಲ್ಲಿ ಕಂಡುಬರು ವುವು. ಇವು ಭೂಚರಗಳಾಗಿ ಕಲ್ಲುಗಳ ತೆಗ್ಗು ತೆವರುಗಳಲ್ಲಿ ಕುಳಿತ ಹಿನ್ನೆಲೆಯ ವರ್ಣದೊಂದಿಗೆ ಬೆರೆತಿರುತ್ತವೆಮೀನುಗಳು ವೈವಿಧ್ಯ ಮಯವಾಗಿ ಕೆರೆ,ಹೊಳೆಗಳಲ್ಲಿ ಕಂಡುಬರುತ್ತದೆ.

❀❀❀

## ಅಧ್ಯಾಯ - 2

# ಚಾರಿತ್ರಿಕ ಹಿನ್ನೆಲೆ

### 1. ಪ್ರಾಗೈತಿಹಾಸ :-

ಮನುಷ್ಯ ತನ್ನ ಅವಸರದ ಆಯುಧಗಳಾಗಿ, ಕಲ್ಲುಗಳನ್ನು ತಕ್ಕ ಆಕಾರ, ಗಾತ್ರಗಳಿಗೆ ಸಿಗುರೆಬ್ಬಿಸಿ ಸಿದ್ಧಮಾಡಿಕೊಂಡ ಪ್ರಾಚೀನ ಶಿಲಾಯುಗವು ತಿರುಪತಿ, ಸೀತಾರಾಮಪೇಟ, ಎಲ್ಲಂಪಲ್ಲಿ, ಮೇಕಲವಾಂಡ್ಲಪಲ್ಲಿ, ಪೀಲೇರು, ಗಟ್ಟು - ಪ್ರಾಂತಗಳಲ್ಲಿ ದೊರೆತಿರುವ ಕೈಕೊಡಲಿಗಳಿಂದ ಪ್ರತಿನಿಧಿಸಲ್ಪಟ್ಟಿದೆ. ಅಗ್ರಹಾರ, ಅರವಾಂಡ್ಲಪಲ್ಲಿ, ಚಿಂತಪರ್ತಿ, ಮರಾಟವಾಂಡ್ಲಪಲ್ಲಿ, ತಿರುಪತಿಗಳಲ್ಲಿ ದೊರೆತ ಬೆಣಚುಕಲ್ಲು ಉಪಕರಣಗಳಿಂದ ಮೇಲೆ ಹೇಳಿದ ಯುಗದ ಮುಂದಿನ ಘಟ್ಟವಾದ ಮಧ್ಯಕಾಲೀನ ಶಿಲಾಯುಗ ಪ್ರತಿನಿಧಿತವಾಗಿದೆ. ನೂತನ ಶಿಲಾಯುಗದ ಯಾವುದೇ ಗುರುತುಗಳೂ ಸಧ್ಯಕ್ಕೆ ಉಪಲಬ್ಧವಿಲ್ಲ.

### 2. ಇತಿಹಾಸದ ಆರಂಭಕಾಲ :-

ಎ) ಮೌರ್ಯರಕಾಲ, ಬಿ) ಶಾತವಾಹನರಕಾಲ.

ಪ್ರಾಗೈತಿಹಾಸಿಕ ಹಾಗೂ ಇತಿಹಾಸದ ಆರಂಭಕಾಲಗಳ ನಡುವೆ ಹಿರಿದಾದ ಕಂದಕವೊಂದಿದ್ದು, ಇತಿಹಾಸದ ಆರಂಭಕಾಲದಲ್ಲಿ ತಿರುಪತಿಗೆ ಸಂಬಂಧಿಸಿದ ಯಾವುದೇ ಅಂಶವೂ ಬೆಳಕಿಗೆ ಬಂದಿಲ್ಲ. ಆದರೂ ಎಲ್ಲ ಕಡೆಯಲ್ಲಿಯಂತೆ ನಂದರನ್ನು ಮೂಲೆಗುಂಪಾಗಿಸಿ ಮೇಲೆದ್ದ ಮೌರ್ಯರ ನಂತರ ನಾಲ್ಕು ನೂರು ವರ್ಷಗಳ ಕಾಲ ಆಳಿದ ಶಾತವಾಹನರ ಕೈಗೆ ಚಿತ್ತೂರು ಜಿಲ್ಲೆಯೂ ಸೇರಿದ ಈ ಪ್ರಾಂತವೂ ಸೇರಿತ್ತು.

### ಸಿ) ಪಲ್ಲವರು :-

ಶಾತವಾಹನರ ನಂತರ ಪ್ರಾಕೃತ ದಾಖಲೆಗಳ ಹಾಗೂ ಸಂಸ್ಕೃತ ದಾಖಲೆಗಳ ಹೇಳಿಕೆಯಂತೆ ಪ್ರಧಾನ ಪಲ್ಲವರ ಆಳ್ವಿಕೆಗೆ ಈ ನಾಡು ಒಳಗಾಯಿತು. ಪ್ರಾಚೀನ ಪಲ್ಲವರ ಸ್ಕಂದವರ್ಮನ ಕಾಲದಲ್ಲಿ ಆತನ ರಾಜ್ಯ ಉತ್ತರದಲ್ಲಿ ಕೃಷ್ಣಾ ನದಿಯವರೆಗೆ ಪಶ್ಚಿಮದಲ್ಲಿ ಅರಬ್ಬೀ ಸಮುದ್ರದವರೆಗೆ ಹರಡಿದ್ದಿತು. ಕ್ರಿ.ಶ.ನಾಲ್ಕನೇ ಶತಕದ ಮಧ್ಯದಲ್ಲಿ ಸಮುದ್ರಗುಪ್ತನು ದಕ್ಷಿಣ ದಂಡಯಾತ್ರೆ ಬಂದಾಗ, ಕಂಚಿಯ ಬಳಿ ಪಲ್ಲವರಾಜ ವಿಷ್ಣುಗೋಪನನ್ನು ಸೋಲಿಸಿದಾಗ ಚಿತ್ತೂರು ಜಿಲ್ಲೆಯಭಾಗ ಅವರ ಕೈತಪ್ಪಿತು. ಪಲ್ಲವರು ಮತ್ತೆ ಈ ಭಾಗದ ಪ್ರಭುಗಳಾದರೂ ತ್ರಿಲೋಚನ ಪಲ್ಲವನ ಕಾಲದಲ್ಲಿ ಈ ಪ್ರಾಂತ ಕರಿಕಾಲಚೋಳನ ವಶಕ್ಕೆ ಬಂದಿತು. ನಂತರ ಕ್ರಿ.ಶ.560 ರಿಂದ ಕ್ರಿ.ಶ.580 ವರೆಗೆ ಆಳಿದ ಸಿಂಹವಿಷ್ಣುವಿನಿಂದಾಗಿ ಈ ಪ್ರಾಂತ್ಯದ ಮೇಲಿನ ಪಲ್ಲವಾಧಿಕಾರ ಮತ್ತೆ ಸ್ಥಾಪಿತವಾಯಿತು.

ಈ ಪ್ರಾಂತ್ಯದ ಮುಖ್ಯಭಾಗ ಪಲ್ಲವ ರಾಜ್ಯದ ಈಶಾನ್ಯದ ಗಡಿಯಲ್ಲಿ ಬಾದಾಮಿ ಚಾಲುಕ್ಯರ ರಾಜ್ಯದ ಗಡಿಯೊಡನೆ ಹೊಂದಿಕೊಂಡದ್ದರಿಂದಾಗಿ, ಸ್ಪರ್ಧೆ ನಿರಂತರವಾಗಿದ್ದಿತು. ಪಶ್ಚಿಮದ ಚಾಲುಕ್ಯರ ಎರಡನೇ ಪುಲಿಕೇಶಿಗೆ ಇಲ್ಲಿನ ಬಹುಭಾಗವನ್ನು ಮಹೇಂದ್ರವರ್ಮ ಪಲ್ಲವ (ಕ್ರಿ.ಶ. 580 - 630) ಕಳೆದುಕೊಂಡ. ಆದರೂ ಈ ಜಿಲ್ಲೆಯಲ್ಲಿ ಪಲ್ಲವರ ಆಡಳಿತ ಒಂದನೇ ನರಸಿಂಹವರ್ಮ (ಕ್ರಿ.ಶ. 630 - 668) ನಿಂದ ಸ್ಥಾಪಿಸಲ್ಪಟ್ಟಿತು. ಆತನ ಉತ್ತರಾಧಿಕಾರಿಗಳು ಕಡೆಯವರೆಗೆ ಪ್ರಭಾವವನ್ನುಳಿಸಿ ಕೊಂಡಿದ್ದರು. ಈ ಜಿಲ್ಲೆಯಲ್ಲಿ ದೊರೆತ ಪಲ್ಲವ ರಾಜರುಗಳು ಎರಡನೇ ನರಸಿಂಹವರ್ಮ(ಕ್ರಿ.ಶ. 700 - 728) ಎರಡನೇ ಪರಮೇಶ್ವರವರ್ಮ (ಕ್ರಿ.ಶ. 728 - 731) ಎರಡನೇ ನಂದಿವರ್ಮ (731 - 796) ದಂತಿವರ್ಮ (796 -847) ಮೂರನೇ ನಂದಿವರ್ಮ (846 - 869)

ನೃಪತುಂಗವರ್ಮ (859 - 899) ಹಾಗೂ ಅಪರಾಜಿತ (885 - 903) - ಇವರುಗಳ ಶಾಸನಗಳು ದೊರೆಯುವುದರಿಂದ ಈ ಮಾತು ಪುಷ್ಟಿಯಾಗುತ್ತದೆ.

ತಿರುಪತಿ-ತಿರುಮಲೆ ಪ್ರಾಂತ್ಯವೂ ಅದನ್ನು ಒಳಗೊಂಡ ತೊಂಡಮಂಡಲ ಪ್ರಾಂತ್ಯದಲ್ಲೂ ಪಲ್ಲವರ ಕಾಲ ಪ್ರಥಮ ಪ್ರಧಾನ ಕಾಲವಾಗಿದೆ. ಈ ಪಲ್ಲವರು ಮೊದಲಿಗೆ ಶಾತವಾಹನರ ರಾಜ್ಯದ ದಕ್ಷಿಣದ ಗಡಿಯಾದ ತೊಂಡಮಂಡಲ ನಾಡಿನಲ್ಲಿದ್ದವರು. ಈ ವಂಶದ ಮೊದಲಿಗನಾದ ಸಿಂಹವರ್ಮನು (ವೀರಕುರುಚಿ) ವನವಾಸಿಯ ನಾಗವಂಶಕ್ಕೆ ಸೇರಿದ ರಾಜಕುಮಾರಿ ಯೊಬ್ಬಳನ್ನು ವಿವಾಹವಾಗಿ ಬಳುವಳಿಯಾಗಿ ರಾಜ ಪದವಿಯನ್ನು ರಾಜ ಮರ್ಯಾದೆಯನ್ನೂ ಪಡೆದ. ಅಂದಿನ ಕಾಲದಲ್ಲಿನ ಪ್ರಭಾವಶಾಲಿ ನಾಗವಂಶದ ಅಳಿಯನಾಗಿದ್ದುದರಿಂದ ಪ್ರಾಯಶಃ ತೊಂಡಮಂಡಲದ ಇತರ ನಾಗ ಸಂತತಿಗಳವರಿಂದ ನಾಯಕನೆಂದು ಗುರುತಿಸಲ್ಪಟ್ಟಿರಬೇಕು. ನಂತರ ಈತ ತೀರಪ್ರದೇಶಗಳನ್ನು ಆಕ್ರಮಿಸಿ,ಇಕ್ಷ್ವಾಕು ವಂಶವನ್ನು ಸೋಲಿಸಿ ನೆಲ್ಲೂರು,ಗುಂಟೂರು ಮತ್ತಿತರ ರಾಯಲಸೀಮೆಯ ಜಿಲ್ಲೆಗಳನ್ನು ವಶಪಡಿಸಿಕೊಂಡ. ಪ್ರಾಚೀನ ಕಂಚಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಅದರ ಖ್ಯಾತಿಯನ್ನು ಪುನರುದ್ಧರಿಸಿದ. ಆತ ಕಟ್ಟಿ ಬೆಳಸಿದ ಈ ರಾಜ್ಯ ಬಹುಕಾಲ ನಿಂತು ಅವನ ವಂಶಸ್ಥರಿಂದ ಕ್ರಿ.ಶ.9 ನೇ ಶತಕದ ಕೊನೆಯವರೆಗೆ ಆಳಲ್ಪಟ್ಟಿತು. ನಂತರ ಚೋಳರಿಂದ ಆಕ್ರಮಿಸಲ್ಪಟ್ಟಿತು.

ಈ ಭಾಗದ ಪಲ್ಲವ ವಂಶದ ಬಗ್ಗೆ ಕಡೆಯ ಮೂವರಲ್ಲಿ ಮೊದಲಿಗನಾದ ರಾಜನ ಎರಡು ಶಾಸನಗಳಿವೆ. (219 ಹಾಗೂ 223 ಜಿ.ಟಿ.) ಈ ರಾಜನು ಕೋವಿಜಯದಂತಿ ವಿಕ್ರಮರ್ ಎಂದು ಹೆಸರಿಸಲ್ಪಟ್ಟು ಕ್ರಿ.ಶ. 775 ರಿಂದ 826 ರ ವರೆಗೆ ಆಳಿದ ದಂತಿ ವರ್ಮನೆಂದು ಗುರುತಿಸಲಾಗಿದೆ. ಈ ಶಾಸನಗಳು ವೇಂಗಡದ ಅಲಯಕ್ಕೆ ನೀಡಿದ ಕಾಣಿಕೆಗಳನ್ನಲ್ಲದೆ-ತಿರುಚಾನೂರಿನಲ್ಲಿ ಅದರ ಪ್ರತಿನಿಧಿಯಾದ ಇನ್ನೊಂದು ಆಲಯಕ್ಕೆ ನೀಡಿದ ಕಾಣಿಕೆಯನ್ನು ಸೂಚಿಸುತ್ತವೆ.

(ಕಂಸದೊಳಗಿನ ಸಂಖ್ಯೆಗಳು ತಿರುಮಲೆ ತಿರುಪತಿ ದೇವಸ್ಥಾನಗಳು ಪ್ರಕಟಿಸಿರುವ ತಿ.ತಿ.ದೇ. ಶಾಸನಗಳ ಸಂಖ್ಯೆಯನ್ನು ಸೂಚಿಸುತ್ತವೆ. ಟಿ.ಟಿ./ತಿ.ತಿ. ಎಂಬುದು ತಿರುಮಲೆ ಆಲಯದ ಶಾಸನಗಳನ್ನೂ, ಜಿ.ಟಿ. ಎಂಬುದು ತಿರುಮಲೆ ಆಲಯದ ಹೊರತಾದ ಇತ ತಿ.ತಿ.ದೇ. ಆಲಯ ಶಾಸನಗಳ ಸಂಖ್ಯೆಯನ್ನೂ ಸೂಚಿಸುತ್ತವೆ. ಇವೆಲ್ಲ ಶಾಸನಗಳೂ ಆರು ಸಂಪುಟಗಳಲ್ಲಿ ಪ್ರಕಟವಾಗಿವೆ.)

ಈ ಪ್ರಾಂತವು ಪಲ್ಲವರ ಸಾಮಂತರಾದ ಬಾಣರ ಆಳ್ವಿಕೆಗೆ ಸೇರಿದ್ದಿತು. ಬಾಣರ ವಿಜಯಾದಿತ್ಯನು ಎರಡು ಶಾಸನಗಳಲ್ಲಿ ಹೆಸರಿಸಲ್ಪಟ್ಟಿದ್ದಾನೆ. (ಜಿ.ಟಿ.429,229) ಈ ವಿಜಯಾದಿತ್ಯನು ಕ್ರಿ.ಶ. ಒಂಭತ್ತನೇ ಶತಕದ ಮೊದಲರ್ಧದಲ್ಲಿ ಪ್ರಸಿದ್ಧನಾಗಿರಬೇಕು. ಪಲ್ಲವರ ಎರಡು ತಲೆಮಾರಿನ ನಂತರ ತೊಂಡಮಂಡಲವನ್ನು ಚೋಳರ ಆದಿತ್ಯ-1,ಆಕ್ರಮಿಸಿ ಪಲ್ಲವರ ರಾಜ ಅಪರಾಜಿತನನ್ನು ಸೋಲಿಸಿ ಈ ಭಾಗವನ್ನು ವಶಪಡಿಸಿಕೊಂಡ. ಇದರಿಂದಾಗಿ ಪಲ್ಲವರ ಆಧಿಪತ್ಯ ಕೊನೆಗೊಂಡಿತು

## 4. ರೇನಾಡು ಚೋಳರು

ಕರಿಕಾಲಚೋಳನ ವಂಶಸ್ಥರೆಂದು ಹೇಳಿಕೊಂಡ ಚೋಳರ ಒಂದು ಶಾಖೆಯ ಆಧೀನದಲ್ಲಿ ಈ ಪ್ರಾಂತ್ಯ ಬಾದಾಮಿ ಚಾಲುಕ್ಯರ, ಕಂಚಿಯ ಪಲ್ಲವರ ಕಾಲದಲ್ಲಿ ಇದ್ದುದಾಗಿ ತಿಳಿದುಬರುತ್ತದೆ. ಇದರ ರಾಜರನ್ನು ಕಡಪ ಜಿಲ್ಲೆಯ ರೇನಾಡು -7000 ಹೆಸರಿನಲ್ಲಿ ರೇನಾಡು ಚೋಳರೆಂದು ಕರೆಯಲಾಯಿತು. ಇವರಲ್ಲಿ ಚೋಳ ಮಹಾರಾಜ - ಬಿರುದು ಪಡೆದ ಮಹೇಂದ್ರ ವಿಕ್ರಮನ ಹಾಗೂ ಅವನ ಮಗ ಪುಣ್ಯಕುಮಾರರ ಶಾಸನಗಳು ಈ ಜಿಲ್ಲೆಯಲ್ಲಿ ದೊರೆತಿವೆ.

## 5. ರಾಷ್ಟ್ರಕೂಟರು

ಬಾದಾಮಿಯ ಚಾಲುಕ್ಯರನ್ನು ಕ್ರಿ.ಶ.757 ರಲ್ಲಿ ಅವರ ಸಾಮಂತರಾದ ರಾಷ್ಟ್ರಕೂಟರು ಉಚ್ಚಾಟಿಸಿದರು. ಕ್ರಿ.ಶ.ಒಂಬತ್ತನೇ ಶತಕದ ಕೊನೆಯಲ್ಲಿ ಪಲ್ಲವರು ಪಾಂಡ್ಯರ ಏಳ್ಗೆಯನ್ನು ಎದುರಿಸಬೇಕಾಯಿತು. ಪ್ರಾಯಶಃ ಕೆಲಕಾಲವಾದರೂ ಪಲ್ಲವರಿಗೆ ಪಾಂಡ್ಯರ

ವಿರುದ್ಧ ರಾಷ್ಟ್ರಕೂಟರು ನೆರವು ನೀಡಿರಬೇಕು. ಈ ಕಾಲಕ್ಕೆ ದಕ್ಷಿಣ ಭಾರತದಲ್ಲಿ ಚೋಳಸಾಮ್ರಾಜ್ಯ ತಲೆಯೆತ್ತಿ ನಿಂತಿತು. ಈ ವಂಶಾವಳಿಗಳು ಚಿತ್ತೂರು ಜಿಲ್ಲೆಯ ಮೇಲೆ ಸಾಕಷ್ಟು ಪ್ರಭಾವ ಬೀರುವಂತಾಯಿತು. ಇವರ ಸಾಮಂತರಾದ ಬಾಣರು, ನೊಳಂಬರು ಪಶ್ಚಿಮ ಗಂಗರು, ವೈದುಂಬರು ತಮ್ಮ ತಮ್ಮಲ್ಲಿ ಆಧಿಕ್ಯತೆಗಾಗಿ ಹೊಡೆದಾಡುತ್ತಿದ್ದುದರಿಂದಾಗಿ ಚಿತ್ತೂರು ಜಿಲ್ಲೆ ಈ ವಂಶಗಳ ಜಜಗಳಗಳಲ್ಲಿ ಆಗಾಗ ಕೈ ಬದಲಾಯಿಸುತ್ತ ಹೋಯಿತು.

ಏನೇ ಆದರೂ ಹಿಂದೆಯೇ ಹೇಳಿದಂತೆ ಚೋಳರಾಜ ಆದಿತ್ಯ-1 (ಕ್ರಿ.ಶ.871-907) ಪಲ್ಲವರ ಅಪರಾಜಿತನನ್ನು ಸೋಲಿಸಿದಾಗ ಈ ಪ್ರಾಂತದಲ್ಲಿ ಪಲ್ಲವರ ಆಳ್ವಿಕೆ ಕೊನೆಯಾಗಿ ಈ ಜಿಲ್ಲೆಯೂ ಸೇರಿದಂತೆ ಇಡಿಯಾಗಿ ಇದು ಚೋಳ ಸಾಮ್ರಾಜ್ಯದ ತೊಂಡಮಂಡಲಕ್ಕೆ ಸೇರಿಹೋಯಿತು. ಈ ಜಿಲ್ಲೆಯ ಶ್ರೀಕಾಳಹಸ್ತಿಯಲ್ಲಿ ಮರಣ ಹೊಂದುವುದಕ್ಕೆ ಮೊದಲು ಆದಿತ್ಯನು ಬಹು ಭೂಭಾಗವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ. ಹೀಗಾಗಿ ಇವನ ಮಗ ಪರಾಂತಕ -1 (ಕ್ರಿ.ಶ.907-955) ಪಟ್ಟಾಭಿಷಿಕ್ತನಾದಾಗ ಚೋಳ ಸಾಮ್ರಾಜ್ಯ ಉತ್ತರದಲ್ಲಿ ಶ್ರೀಕಾಳಹಸ್ತಿಯಿಂದ ಮದರಾಸಿನವರೆಗೂ ದಕ್ಷಿಣದಲ್ಲಿ ಕಾವೇರಿಯವರೆಗೂ ವಿಸ್ತರಿಸಿದ್ದಿತು. ಕ್ರಿ.ಶ.909-916ರ ಮಧ್ಯಕಾಲದಲ್ಲಿ ಪರಾಂತಕ -I ನು ವೈದುಂಬರನ್ನೂ ವಿಕ್ರಮಾದಿತ್ಯ -II ಹಾಗೂ ವಿಜಯಾದಿತ್ಯ -III ಎಂಬ ಬಾಣ ದೊರೆಗಳನ್ನೂ ಸೋಲಿಸಿ, ಪೆರುಂಬಾಣಪ್ಪಾಡಿವರೆಗೆ ವಿಸ್ತೃತವಾಗಿದ್ದ ಅವರ ರಾಜ್ಯವನ್ನು - ಪಾಲಾರ್ ನದಿಯ ಉತ್ತರಕ್ಕೆ-ಪಶ್ಚಿಮದಲ್ಲಿ ಪುಂಗನೂರಿನ ವರೆಗೆ ಹಾಗೂ - ಪೂರ್ವದಲ್ಲಿ ಶ್ರೀಕಾಳಹಸ್ತಿಯವರೆಗೆ ಇದ್ದ ರಾಜ್ಯವನ್ನು-ವಶಪಡಿಸಿಕೊಂಡ. ಇದರಿಂದಾಗಿ ವೈದುಂಬ ಬಾಣದೊರೆಗಳು ಚೋಳರ ಆಕ್ರಮಣಕ್ಕೆ ವಿರುದ್ಧವಾದ ರಾಷ್ಟ್ರಕೂಟರ ಕೃಷ್ಣ III ನನ್ನು ಆಶ್ರಯಿಸುವಂತಾಯಿತು. ಹಲವಾರು ಸಾಮಂತರ ಸೇನಾಧಿಪತಿಗಳ ನೆರವಿನಿಂದ ಮೂರನೇ ಕೃಷ್ಣನು ಚೋಳರ ಮೇಲೆ ದಂಡೆತ್ತಿ ನಡೆದದ್ದರಿಂದ ಪರಾಂತಕನಿಗೆ ಹಲವಾರು ಪ್ರದೇಶಗಳು ಕೈಬಿಟ್ಟು ಹೋದವು. ಈ ಜಿಲ್ಲೆಯಲ್ಲಿರುವ ಹಲವಾರು ಶಾಸನಗಳು ಪರಾಂತಕನ ಆಳ್ವಿಕೆಯ ಕೊನೆಗಾಲದವು. ಉದಾಹರಣೆಗೆ ಒಂದುಂದರೆ ಕ್ರಿ.ಶ.955 ರ ಪುಂಗನೂರಿನ ವನಮಲದಿನ್ನೆಯಲ್ಲಿ ದೊರೆತಿರುವ ಶಾಸನ ಈತನ ಆಳ್ವಿಕೆಯ 48ನೇ ವರ್ಷದ್ದು.

ಕೃಷ್ಣ -III ಶತ್ರುರಾಜ್ಯದಲ್ಲಿ ಬಹುಕಾಲವಿರಲಿಲ್ಲವಾದರೂ ತನ್ನ ದೀರ್ಘ ಆಡಳಿತಕಾಲದಲ್ಲಿ ಆಕ್ರಮಿಸಿದ ತೊಂಡಮಂಡಲದ ಆಳ್ವಿಕೆಯನ್ನು ನೋಡಿಕೊಳ್ಳಲು ಜನರನ್ನು ನಿಯಮಿಸಿ ತನ್ನ ಅಧೀನದಲ್ಲಿಯೇ ಇಟ್ಟುಕೊಂಡ. ಹೀಗೆ ಈ ಜಿಲ್ಲೆಯ ಪುಲಿನಾಡಿನ ಆಳ್ವಿಕೆ ವಜ್ಜರದೇವನಿಗೆ ಒಪ್ಪಿಸಲಾಯಿತು. ಮೂರನೇ ಕೃಷ್ಣನ ಕಾಲಕ್ಕೆ ಸೇರಿದ ಹಲವಾರು ಶಾಸನಗಳು ಇಲ್ಲಿ ದೊರೆತಿವೆ. ಅವನ ನಂತರ ಉಂಟಾದ ಗೊಂದಲಕರವಾದ ಪರಿಸ್ಥಿತಿಯಲ್ಲಿ ವಜ್ಜಲದೇವ ಅಥವಾ ವಜ್ಜರದೇವನು ದಂಗೆಯೆದ್ದಿರಬೇಕು. ಕಾರಣ ಪುಂಗನೂರಿನ ಬೋದಿನಾಯಕನ ಪಲ್ಲಿಯ ಒಂದು ಶಾಸನ ಇವನನ್ನು ಭೂಮಂಡಲವನ್ನು ಆಳುವವನೆಂದು ಕರೆದಿದೆ. ಆದರೆ ಇವನ ದಂಗೆಯನ್ನು ಅಡಗಿಸಲಾಯಿತು.

ಕೃಷ್ಣ -III ನಿಗೆ ಕಳೆದುಕೊಂಡ ಭೂಮಿಯನ್ನು ಮರಳಿಪಡೆಯಲು ಕ್ರಿ.ಶ.949-957 ರ ವರೆಗಿದ್ದ ಚೋಳರಾಜ ಗಂಡರಾದಿತ್ಯನು ಪ್ರಯತ್ನಿಸಿದರೂ ಫಲಕಾಣಲಿಲ್ಲ - ಅವನ ಮಗ ಅರಿಂಜಯನೂ, ಅವನ ಮಗ ಎರಡನೇ ಪರಾಂತಕನೂ (975 -973) ಈ ಪ್ರಯತ್ನಗಳನ್ನು ಮುಂದುವರಿಸಿದರು. ಚೋಳರ ಪ್ರಯತ್ನಗಳಿಗೆ - ವಿಶೇಷವಾಗಿ ಎರಡನೇ ಪರಾಂತಕನ ಕಾಲದಲ್ಲಿ ಉತ್ತರದಲ್ಲಿ ಸತ್‌ಫಲ ಕಂಡುಬಂದು ಅವನ ಮಗ ಉತ್ತಮ ಚೋಳನು (ಕ್ರಿ.ಶ.970-985) ಸಿಂಹಾಸನವನ್ನೇರಿದಾಗ ಇಡೀ ತೊಂಡಮಂಡಲವು ರಾಷ್ಟ್ರಕೂಟರಿಂದ ಚೋಳರ ಹಸ್ತಗತವಾಗಿದ್ದಿತು. ಗಂಡರಾದಿತ್ಯ ಎರಡನೇ ಪರಾಂತಕ ಉತ್ತಮ (ಸುಂದರ ಚೋಳ) ಮಧುರಾಂತಕ ಚೋಳರ ಆಳ್ವಿಕೆಯನ್ನು ಸೂಚಿಸುವ ಹಲವು ಶಾಸನಗಳು ಇಲ್ಲಿ ಕಂಡುಬಂದಿವೆ.

**6. ಬಾಣರು**

ಕೋಲಾರ (ಕರ್ನಾಟಕ ರಾಜ್ಯದ್ದು) ವನ್ನೂ ಸೇರಿದಂತೆ ಚಿತ್ತೂರು ಮತ್ತಿತರ ಹತ್ತಿರದ ಜಿಲ್ಲೆಗಳಲ್ಲಿ ಬಾಣರು ಪ್ರಭಾವಶಾಲಿಗಳಾಗಿದ್ದರು. ಇವರು ಪ್ರಮುಖ ಸಾಮಂತ ವಂಶದವರಲ್ಲಿ ಒಬ್ಬರಾಗಿದ್ದರು. ಈ ಜಿಲ್ಲೆಯಲ್ಲಿ ಈ ವಂಶದ 32 ಶಾಸನಗಳನ್ನು ಇದುವರೆಗೆ ಕಂಡುಕೊಳ್ಳಲಾಗಿದೆ. ಇವುಗಳಲ್ಲಿ 22 ರಷ್ಟು ಶಾಸನಗಳು ಪುಂಗನೂರು ಪ್ರಾಂತ್ಯದಲ್ಲಿವೆ. ಆದರೆ ಅವುಗಳಲ್ಲಿನ ಮಾಹಿತಿಗಳು ದಾಖಲಾಗುವಷ್ಟು ಖಚಿತವಾಗಿಲ್ಲ.

ಪೌರಾಣಿಕ ರಾಕ್ಷಸರ ರಾಜ ಮಹಾಬಲಿಯ ವಂಶಸ್ಥರು ತಾವು ಎಂದು ಬಾಣದೊರೆಗಳು ಹೇಳಿಕೊಂಡರು. ಕ್ರಿ.ಶ.ನಾಲ್ಕನೆಯ ಶತಕದ ಮಧ್ಯದಲ್ಲಿ ಕದಂಬರ ಮುಖ್ಯ ಮಯೂರ ಶರ್ಮನು ಶ್ರೀಶೈಲದ (ಶ್ರೀಪರ್ವತ) ದಟ್ಟವಾದ ಅರಣ್ಯಗಳಲ್ಲಿ ಹಾಗೂ ಕೊಂಡು ಇತರ ರಾಜರಿಂದ - ಬೃಹತ್ ಬಾಣನಿಂದಲೂ - ಕಪ್ಪವನ್ನು ಸ್ವೀಕರಿಸಿದ್ದನು. ಈ ಹೊತ್ತಿಗೆ ಬಾಣರು ಪಲ್ಲವರ ಸಾಮಂತರಾಗಿದ್ದರೆಂದು ತೋರುತ್ತದೆ.

ಬಾಣರಿಂದ ಆಳಲ್ಪಟ್ಟ ಪ್ರಾಂತವನ್ನು ಆಂಧ್ರಪಥ ಪಶ್ಚಿಮಕ್ಷಿತಿ ಎಂದರೆ-ಆಂಧ್ರದ ಪಥದಲ್ಲಿನ (ಆಂಧ್ರಪಥದ) ಪಶ್ಚಿಮ ಭೂಭಾಗವೆಂದು ಕರೆಯಲಾಗುತ್ತಿತ್ತು. ಇತರ ಹೆಸರುಗಳು ವಡಗುವಳಿಯಿನ್ ಮೇರ್ಕು, ವಡಗುವಳಿ 12000, ಮನ್ನೆ 2000. ಇದೇ ಬಾಣಪ್ರಾಂತ್ಯವನ್ನು ತಮಿಳಿನಲ್ಲಿ ಬಹುಶಃ ಪೆರುಂಬಾಣಪ್ಪಾಡಿ ಎಂದು ಕರೆದಿರಬೇಕು. ಹಿಂದೆಯೇ ಗಮನಿಸಿದಂತೆ ಪೆರುಂಬಾಣಪ್ಪಾಡಿಯು ಪಶ್ಚಿಮದಲ್ಲಿ ಪುಂಗನೂರಿನಿಂದ ಪೂರ್ವಕ್ಕೆ ಶ್ರೀಕಾಳಹಸ್ತಿಯವರೆಗೆ ವಿಸ್ತರಿಸಿದ್ದಿತು. ಪಾಲಾರ್ ನದಿಯ ಇದರ ದಕ್ಷಿಣಗಡಿಯಾಗಿದ್ದಿತು. ಶಾಸನಗಳು ಎಂಟು ಮಂದಿಯನ್ನು ಗುರುತಿಸುತ್ತವೆ, ನಂದಿವರ್ಮ, ವಿಜಯಾದಿತ್ಯ I, ಮಲ್ಲದೇವ, ವಿಕ್ರಮಾದಿತ್ಯ I, ವಿಜಯಾದಿತ್ಯ II, ವಿಕ್ರಮಾದಿತ್ಯ II, ವಿಜಯಾದಿತ್ಯ III, ವಿಕ್ರಮಾದಿತ್ಯ III - ಇವರುಗಳನ್ನು ಹೆಸರಿಸುತ್ತವೆ.

ಇವರಲ್ಲಿನ ಕೆಲವು ಪ್ರಮುಖರು ಪಲ್ಲವ, ರಾಷ್ಟ್ರಕೂಟ, ಚೋಳರೊಂದಿಗೂ ಸಾಮಂತರಾದ ವೈದುಂಬ, ಪಶ್ಚಿಮಗಂಗ, ನೊಳಂಬರೊಡನೆಯೂ ಸಂಘರ್ಷ ಹೊಂದಿದ್ದರು. ಸಾಮಂತರೊಡನೆ ವೈವಾಹಿಕ ಸಂಬಂಧಬೆಳೆಸಿ ಸಮರ್ಥರಾದರು. ಹೀಗೆ ಒಂದನೇ ವಿಕ್ರಮಾದಿತ್ಯನು ಪಶ್ಚಿಮಗಂಗರ ಒಂದನೇ ಪೃಥ್ವೀಪತಿಯ ಮಗಳನ್ನು ವಿವಾಹನಾದನು. ಇವನ ಮಗ ಎರಡನೇ ವಿಜಯಾದಿತ್ಯನ ಎರಡು ಶಾಸನಗಳು ಕ್ರಿ.ಶ.898 ಹಾಗೂ ಕ್ರಿ.ಶ.905 ಕಾಲದ್ದು,ನಮ್ಮನ್ನು ರಾಷ್ಟ್ರಕೂಟರ ಎರಡನೆ ಕೃಷ್ಣನ ಕಾಲಕ್ಕೆ ಒಯ್ಯುತ್ತವೆ. ಈ ಹೊತ್ತಿಗೆ ಪಲ್ಲವರು ಚೋಳಸಾಮ್ರಾಜ್ಯಕ್ಕೆ ಎಡೆಮಾಡಿಕೊಟ್ಟಿದ್ದರು. ವಿಜಯಾದಿತ್ಯನ ಮಗಳ ಮಗ ಕನ್ನರದೇವನಿಗೆ - ಅವನ ಮಲ ಸಹೋದರನಾದ ಒಂದನೇ ಪರಾಂತಕನ ಬದಲಿಗೆ ಚೋಳ ಸಿಂಹಾಸನವನ್ನು ದಕ್ಕಿಸಿಕೊಡುವಲ್ಲಿ ರಾಷ್ಟ್ರಕೂಟರ ಎರಡನೆಯ ಕೃಷ್ಣ ವಿಫಲನಾದದ್ದರಿಂದ ಬಾಣರು ಬಹು ತೊಂದರೆಗೊಳಗಾಗ ಬೇಕಾಯಿತು. ಪರಾಂತಕ -I ನಿಂದ ಆಜ್ಞಪ್ತನಾದ ಪಶ್ಚಿಮ ಗಂಗರ ಎರಡನೇ ಪೃಥ್ವೀಪತಿಯು, ಆಗ ಬಾಣ ಪ್ರಾಂತ್ಯದ ಪ್ರಭುಗಳಾಗಿದ್ದ ವಿಕ್ರಮಾದಿತ್ಯ -II ಹಾಗೂ ವಿಜಯಾದಿತ್ಯ -III ರನ್ನು ಪದಚ್ಯುತಗೊಳಿಸಿದ. ಹೀಗಾಗಿ ಬಾಣರಾಜ್ಯವು ಪರಾಂತಕನ ವಶವಾಯಿತು. ಅವ ತನ್ನ ಆಡಳಿತಾಧಿಕಾರಿಯನ್ನು ನೇಮಿಸಿದ. ಆದರೆ ಬಾಣರ ಪ್ರಾಬಲ್ಯ ಕಡಮೆಯಾಗಲಿಲ್ಲ. ನಂತರದ ಒಬ್ಬ ಬಾಣದೊರೆ 'ಕೃಷ್ಣರಾಜನ ನೆಚ್ಚಿನ ಗೆಳೆಯ', (ರಾಷ್ಟ್ರಕೂಟ ಕೃಷ್ಣ -III ಕ್ರಿ.ಶ. 939 - 967)ಎಂಬ ಬಿರುದನ್ನೂ ಪಡೆದ.

**7. ವೈದುಂಬರು**

ಇನ್ನೊಂದು ಸ್ಥಳೀಯ ಮನೆತನ ವೈದುಂಬರ ಆಳ್ವಿಕೆಯಲ್ಲೂ ಈ ಪ್ರಾಂತ್ಯಭಾಗವಿದ್ದಿತು. ಅವರ ರಾಜಧಾನಿ ವೈದುಂಬ ವ್ರೋಲು ಅಥವಾ ವೈದುಂಬನಗರ ಈ ಜಿಲ್ಲೆಯಲ್ಲಿದ್ದಿತು. ಈ ಮನೆತನದ ಹಲವಾರು ಶಾಸನಗಳು ಚಿತ್ತೂರು,ಕಡಪ ಜಿಲ್ಲೆಗಳಲ್ಲೂ ಮೈಸೂರು ರಾಜ್ಯದ ಕೋಲಾರದಲ್ಲೂ ದೊರೆತಿವೆ. ದೊರೆತ ಸುಮಾರು ಇಪ್ಪತ್ತು ಶಾಸನಗಳು ಶಿಲಾಲೇಖ ಶಾಸ್ತ್ರರೀತ್ಯಾ ಕ್ರಿ.ಶ. 8,9,10 ನೇ ಶತಕ

ಗಳಿಗೆ ಸೇರಿದ್ದು, ಬಹು ಕಡಮೆ ವಿವರಗಳನ್ನೊದಗಿಸುತ್ತವೆ. ಬಹುತೇಕವಾದವು ಬರೇ ವೀರಗಲ್ಲುಗಳಾಗಿ,ಯುದ್ಧದಲ್ಲಿ ಅಥವಾ ತುರು ಗೋಳ್ ಕಾಳಗದಲ್ಲಿ ಮೃತವೀರರ ನೆನಪಿಗಾಗಿ ಆದವು. ಹೀಗಾಗಿ ಈ ಮನೆತನದ ವಿವರಣೆ ನೀಡುವುದು ಸಾಧ್ಯವಿಲ್ಲ.

ಈ ಪಾಳಯಗಾರರು - ವೀರಕುಲದವರಂತೆ - ಅನೇಕ ಬಾರಿ ತಮ್ಮ ನೆರೆಯ ಲೆಂಕುಳರು,ರೇನಾಡು ಚೋಳರು, ಪೆರಬಾಣ ಪ್ಪಾಡಿಯ ಬಾಣರು,ನೊಳಂಬವಾಡಿಯ ನೊಳಂಬರುಗಳೊಡನೆ ಯುದ್ಧದಲ್ಲಿ ತೊಡಗಿರುತ್ತಿದ್ದರು. ಮನೆತನದ ಮೊದಲಪುರುಷ ವೈದುಂಬ ಮಹಾರಾಜ. ಅವನು ಇನ್ನೊಂದು ಬುಡಕಟ್ಟಿನ ಲೆಂಕುಳರೊಡನೆ ಯುದ್ಧಮಾಡಿದ. ವೈದುಂಬರ ಸೇನಾಪತಿ ಗಂಡರ ಮುತ್ತುರಾಜ ಯುದ್ಧದಲ್ಲಿ ಮಡಿದ. ಈ ಕಾಲದಲ್ಲಿ ವೈದುಂಬರು ಮದನಪಲ್ಲಿಯ ಚಿಪ್ಪಿಲ್ಲಿಯಲ್ಲಿ ರೇನಾಡು ಚೋಳರನ್ನು ಸೋಲಿಸಿ ಈ ಪ್ರಾಂತ್ಯವನ್ನು ವಶಪಡಿಸಿಕೊಂಡರು. ವೈದುಂಬರ ಮಹಾರಾಜನ ನಂತರ ಸಂಕಲಿ ಅಥವಾ ಗಂಡಸಂಕಲಿ ಬಂದಿರ ಬೇಕು. ಗಂಡ ತ್ರಿನೇತ್ರ ವೈದುಂಬ ಮಹಾರಾಜ ಮನೆತನದ ಮತ್ತೊಬ್ಬರಾಜ. ಈತ ಪ್ರಭಾವಿ ಹಾಗೂ ಮಹತ್ವಾಕಾಂಕ್ಷಿ, ಈತ ಇದ್ದದ್ದು ಹತ್ತನೆಯ ಶತಕದಾದಿಯಲ್ಲಿ, ಎಲ್ಲ ಕಾಲದಲ್ಲೂ ಯುದ್ಧದಲ್ಲಿ ತೊಡಗಿರುತ್ತಿದ್ದ. ತನ್ನ ಆಡಳಿತದ ಮೊದಲಿನಲ್ಲಿಯೇ ಜಟಾ ಚೋಡನನ್ನು ಸೋಲಿಸಿ ರೇನಾಡು -7000 ಅನ್ನು ವಶಪಡಿಸಿಕೊಂಡ. ನೊಳಂಬರೊಡನೆ ಎರಡು ಬಾರಿ -ಮದನಪಲ್ಲಿಯ ಮುದಿವೇಡು -ಮುದುಹುವು ನಲ್ಲೂ, ಅನಂತಪುರದ ಸೋರೆಮಡಿಯಲ್ಲೂ ಯುದ್ಧಮಾಡಿದ. ಈ ಯುದ್ಧಗಳಲ್ಲಿ ಜಯಶಾಲಿಯಾಗಿ ಕೋಲಾರ ಜಿಲ್ಲೆಯ ಹಲವು ಭಾಗಗಳನ್ನು ಕೈವಶ ಮಾಡಿಕೊಂಡ. ಈತನ ನಂತರ ಬಂದವರು ಮನುಜ ತ್ರಿನೇತ್ರ ಹಾಗೂ ಭುವನ ತ್ರಿನೇತ್ರ, ಭುವನ ತ್ರಿನೇತ್ರ ಸಿಂಹಾಸನ ವೇರಿದ್ದು ಕ್ರಿ.ಶ. 973 ರಲ್ಲಿ. ಈತನ ರಾಜ್ಯವು -ಇಡಿಯಾಗಿ ಅಲ್ಲದಿದ್ದರೂ - ರೇನಾಡು, ಪಾಕನಾಡು, ಮುಲಿಕಿನಾಡುಗಳ ಭಾಗಗಳನ್ನಾದರೂ ಒಳಗೊಂಡಿದ್ದಿತು. ಶಾಸನಗಳಿಂದ ತಿಳಿದು ಬರುವ ಇತರ ವೈದುಂಬ ಪ್ರಭುಗಳೆಂದರೆ - ಇರಿಗಯ ಮಹಾರಾಜ, ನನ್ನಿಮರಾಯರ್,(ತುಕ್ಕರೈಯ ಮಗ) ಮಧುರ ಮಹಾರಾಜ ಮತ್ತು ಅವನ ಮಗ ಕಲಿಗ ತ್ರಿನೇತ್ರ ಭೀಮ ಮಹಾರಾಜ.

## 8. ಪಶ್ಚಿಮದ ಗಂಗರು ಹಾಗೂ ನೊಳಂಬ ಪಲ್ಲವರು

ಈ ಪ್ರಾಂತ್ಯದಲ್ಲಿ ಪ್ರಭಾವಶಾಲಿಯಾಗಿದ್ದ ಮತ್ತೊಂದು ಮನೆತನವೆಂದರೆ ಕ್ರಿ.ಶ. ನಾಲ್ಕನೆಯ ಶತಮಾನದ ಕೊನೆಯಲ್ಲಿ ಆರಂಭವಾದದ್ದು ಎನ್ನಲಾದ ಪಶ್ಚಿಮ ಗಂಗರಸರ ಮನೆತನ. ಇವರು ಪಲ್ಲವರ ಸಾಮಂತರಾಗಿದ್ದರು. ಮನೆತನದ ಮುಖ್ಯನಾದ ಹರಿ ವರ್ಮ (ಕ್ರಿ.ಶ. 450 - 460) ನಿಗೆ ಪಲ್ಲವರಾಜ ಒಂದನೇ ಸಿಂಹವರ್ಮನು, ಈ ಪ್ರಾಂತದ ಬಾಣರ ಹುಟ್ಟಡಗಿಸಲೆಂದು ಪಟ್ಟಕಟ್ಟಿದ. ಪಶ್ಚಿಮ ಗಂಗರ ರಾಜ್ಯವು ಶಿವಮಾರನ ಕಾಲದನಂತರ (ಕ್ರಿ.ಶ. 788 - 812) ಎರಡು ಭಾಗವಾಗಿ ಅವನ ಮಗ ಮಾರಸಿಂಹ ಹಾಗೂ ತಮ್ಮ ವಿಜಯಾದಿತ್ಯರಲ್ಲಿ ಹಂಚಿ ಹೋಯಿತು. ಪುಂಗನೂರು ತಾಲ್ಲೂಕಿನಲ್ಲಿ ಕಂಡುಬಂದ ಒಂದು ಶಾಸನದ ಪ್ರಕಾರ ಈ ಭಾಗವು ಮಾರಸಿಂಹನಿಗೆ ಸೇರಿತೆಂದು ತಿಳಿದುಬರುತ್ತದೆ. ಪುಂಗನೂರು ತಾಲ್ಲೂಕಿನಲ್ಲಿ ದೊರೆತ ಶಾಸನಗಳಲ್ಲಿ ನಾಲ್ವರು ಗಂಗ ವಂಶ ಜರು -ಉತ್ತಮ ಚೋಳಗಂಗ (ಸೆನ್ನಗಚ್ಚಿ ಪತಿ ನಾಯನಾರ್) ಉತ್ತಮ ಚೋಳಗಂಗಯಾನೆ ಸೆಲ್ವಗಂಗನ್ ವೆಟ್ಟುಂ ಅಮರಾಭರಣಂ, ಉತ್ತಮ ಚೋಳಗಂಗ, ಯಾನೆ ಸೆಲ್ವಗಂಗ,(ಸೆಲ್ವಗಂಗ ಉತ್ತಮ ಚೋಳ ಗಂಗ, ಪದ್ಮದೇವನ ಮಗ) ಉಲ್ಲೇಖಿತರಾಗಿದ್ದಾರೆ. ಗಂಗ ವಂಶದ ಮುಖ್ಯಧಾರೆಯೊಡನೆ ಇವರುಗಳ ಸಂಬಂಧ ಖಚಿತವಾಗಿಲ್ಲ. ಚೋಳರು ಕ್ರಿ.ಶ. 1004 ರಲ್ಲಿ ಪಶ್ಚಿಮಗಂಗರ ರಾಜಧಾನಿ ತಲಕಾಡನ್ನು ವಶಪಡಿಸಿಕೊಂಡ ನಂತರ ಅವರ ಆಳ್ವಿಕೆ ಖಿಲವಾಯಿತು.

### ನೊಳಂಬ ಪಲ್ಲವರು

ನೊಳಂಬರು ಅಥವಾ ನೊಳಂಬ ಪಲ್ಲವರು ಎಂದು ಕರೆಯಲಾದ ಮತ್ತೊಂದು ವಂಶವೂ ಈ ಪ್ರದೇಶದ ಆಳ್ವಿಕೆಯೊಡನೆ ಸಂಬಂಧಿಸಿದ್ದಿತು. ಈ ವಂಶದಲ್ಲಿ ಹನ್ನೊಂದು ಮಂದಿ ರಾಜರು ಆಗಿಹೋದರು,ಇವರು ನೊಳಂಬವಾಡಿ 32000 ಅಧಿಪತಿಗಳಾಗಿ ದ್ದರು. ಇವರು ಬಾಣ,ವೈದುಂಬ,ಚೋಳ,ರಾಷ್ಟ್ರಕೂಟರೊಡನೆ ತಾಕಲಾಟದಲ್ಲಿತೊಡಗಿದ್ದರು.

ಕ್ರಿ.ಶ. 878ರಲ್ಲಿ ನೊಳಂಬವಂಶದ ಒಂದನೇ ಮಹೇಂದ್ರನ ಆಳ್ವಿಕೆಯಿಂದ ನೊಳಂಬ ವಂಶ ಪ್ರಮುಖವಾಯಿತು. ಈತ ನೊಳಂಬರಲ್ಲಿಯೇ ಅತಿ ಪ್ರಭಾವಶಾಲಿ. ತನ್ನ ರಾಜ್ಯವನ್ನು ಎಲ್ಲ ದಿಕ್ಕಿನಲ್ಲೂ ವಿಸ್ತರಿಸಿದ. ತನ್ನ ಒಡೆಯನಾದ ಒಂದನೇ ರಾಚವಲ್ಲನ ಅಪ್ಪಣೆಯಂತೆ ಪಶ್ಚಿಮ ಗಂಗರ ತಲಕಾಡನ್ನು ಹಿಡಿಯಲು ಹೊರಟು,ಆ ಹಾದಿಯಲ್ಲಿನ ಪುಲಿನಾಡನ್ನು ಆಕ್ರಮಿಸಲು ತನ್ನ ಪಾಳೆಗಳಾದ ಕಾಡುವೆಟ್ಟಿ, ಮತ್ತು ಮದುವ - ರಿಗೆ ಹೇಳಿದ. ಕಾಡುವೆಟ್ಟಿಯು ಕೊಯರೂರನ್ನು ಆಕ್ರಮಿಸಿ ವಶಪಡಿಸಿಕೊಂಡ (ಪುಂಗನೂರಿನ ಬಳಿಯ ಲದ್ದಿಗಂ) ಇದನ್ನು ತಿಳಿದ ಬಾಣರಾಜ ವಿಜಯಾದಿತ್ಯ ವೀರ ಚೂಡಾಮಣಿ ಪ್ರಭುಮೇರು ತನ್ನ ಸೈನ್ಯದೊಡನೆ ಬಂದು ಶತ್ರುಸೈನ್ಯ ವನ್ನು ಧೂಳೀಪಟ ಮಾಡಿದ. ಕಾಳಗ ಭಯಂಕರವಾಗಿ ಹಲವು ಪ್ರಮುಖರು ಮರಣಿಸಿದರು. ಈ ಜಿಲ್ಲೆಯಲ್ಲಿ ದೊರೆತ ಇತರ ಶಾಸನ ಗಳು ಇನ್ನೊಬ್ಬ ದೊರೆ ಎರಡನೇ ವೀರಮಹೇಂದ್ರನವು. ಚೋಳ ರಾಜ್ಯದ ತೊಂಡಮಂಡಲದ ಮೇಲೆ ಇವನು ದಂಡೆತ್ತಿ ನಡೆದ. ಅಲ್ಲಿಂದ ತಿರುಗಿ ಬಂದ ವೀರ ಮಹೇಂದ್ರನು ನೊಳಂಬವಾಡಿಗೆ ಬಂದು ಕೋಲಾರದಲ್ಲಿ ಪಾಳಯ ಹೂಡಿ ಒಬ್ಬನಿಗೆ ಅಧಿಕಾರ ನೀಡಿ ಪುಲಿನಾಡುವಿನ ಒಂದು ಗ್ರಾಮವನ್ನು ಬಳುವಳಿಯಾಗಿ ನೀಡಿದ. ಮತ್ತೊಬ್ಬ ನೊಳಂಬ ರಾಜ - ಎರಡನೇ ಇರಿವ ನೊಳಂಬ.- ಕ್ರಿ.ಶ. 10ನೇ ಶತಮಾನದ ಮಧ್ಯದಲ್ಲಿ ಪುಲಿನಾಡುವಿನ ಮತ್ತೊಂದು ಗ್ರಾಮವನ್ನು ಓರ್ವ ವರ್ತಕನಿಗೆ ಬಳುವಳಿಯಾಗಿ ನೀಡುವವರೆಗೆ ಪುಲಿನಾಡು ನೊಳಂಬರ ಅಧೀನದಲ್ಲಿಯೇ ಇದ್ದಿತೆಂದು ತೋರುತ್ತದೆ.

## 9. ಕಲ್ಯಾಣಿ ಚಾಲುಕ್ಯರು ಹಾಗೂ ಚೋಳ ಸಾಮ್ರಾಟರು

ಕ್ರಿ.ಶ. 973 ರಲ್ಲಿ ರಾಷ್ಟ್ರಕೂಟರನ್ನು ಕಲ್ಯಾಣಿಯ ಪಶ್ಚಿಮ ಚಾಳುಕ್ಯರು ಹಿಂದಿಕ್ಕಿದರು. ಆದರೆ ಈ ಭೂಭಾಗ ಚೋಳರ ಆಳ್ವಿಕೆ ದಲ್ಲಿಯೇ ಮುಂದುವರೆಯಿತು. ನಂತರ ಆಳಿದ ರಾಜರೆಂದರೆ ಒಂದನೇ ರಾಜರಾಜ (ಕ್ರಿ.ಶ. 985 -1016) ಒಂದನೇ ರಾಜೇಂದ್ರ (1012-1044) ಒಂದನೇ ರಾಜಾಧಿರಾಜ (1052-1063) ವೀರರಾಜೇಂದ್ರ (1063-1069) ಆಧಿರಾಜೇಂದ್ರ (1067-68 - 1070) ಇವರಲ್ಲಿನ ಒಂದನೇ ರಾಜೇಂದ್ರನ ಆಳ್ವಿಕೆಯ ಮೂವತ್ತು ವರ್ಷಗಳು ಚೋಳಸಾಮ್ರಾಜ್ಯದ ಉತ್ಥಾನ ಕಾಲವಾಯಿತು. ಅವನು ಸಿಂಹಾಸನವನ್ನೇರಿದಾಗ,ರಾಷ್ಟ್ರಕೂಟರ ಹೊಡೆತಗಳಿಂದ ಚೋಳಸಾಮ್ರಾಜ್ಯ ಬಹುಕಿರಿದಾಗಿತ್ತು. ಇದು ಹಿರಿದಾಗಿ ವ್ಯವಸ್ಥಿತವಾಗಿ ಇವನ ಕಾಲದಲ್ಲಿ ಬೆಳೆಯಿತು. ಇವನ ಮತ್ತಿತರ ಚೋಳರಾಜರ ಆಳ್ವಿಕೆಗಳು, ಇಲ್ಲಿನ ಹಲವಾರು ಆಲಯಗಳಿಗೆ ಆಗಿಂದಾಗ್ಗೆ ರಾಜರು ನೀಡುತ್ತಿದ್ದ ಕಾಣಿಕೆಗಳ ಶಾಸನಗಳಿಂದ ವಿವರವಾಗಿ ದಾಖಲೆಯಾಗಿವೆ. ಈ ದತ್ತಿ ದಾನಗಳಿಂದ ಬಂದ ಆದಾಯ ವನ್ನು ಇಲ್ಲಿನ ಆಲಯಗಳನ್ನು ನೋಡಿಕೊಳ್ಳುವಲ್ಲಿ ವ್ಯಯಮಾಡಲಾಗುತ್ತಿತ್ತು. ದೇವಾಲಯಗಳಿಗಾಗಿ ದಾನ ನೀಡಿದ ಜಾನುವಾರುಗಳನ್ನು ಗೊಲ್ಲರಿಗೆ ಒಪ್ಪಿಸಲಾಗುತ್ತಿದ್ದು. ಅವರು ಆಲಯದ ನಂದಾದೀಪಕ್ಕೆ ತುಪ್ಪವನ್ನು ಒದಗಿಸುತ್ತಿದ್ದರು' ಇತರ ಕೆಲವು ಶಾಸನಗಳು ಪುಷ್ಕರಿಣಿ ನಿರ್ಮಾಣವನ್ನು, ಗುಡಿ, ಗೋಪುರ ನಿರ್ಮಾಣವನ್ನು, ತೆರಿಗೆಯೆತ್ತುವುದನ್ನು, ಮನ್ನಾ ಮಾಡುವುದನ್ನು ವಿವರಿಸುತ್ತವೆ

ಕ್ರಿ.ಶ. 1070 ರಲ್ಲಿ ಪೂರ್ವ ಚಾಲುಕ್ಯರ ರಾಜಕುಮಾರ ರಾಜೇಂದ್ರನು ಚೋಳ ಸಿಂಹಾಸನವನ್ನು ಕುಲೋತ್ತುಂಗ ಎಂಬ ಹೆಸರಿನಲ್ಲಿ ಅಧಿರೋಹಿಸಿದ. (ಕ್ರಿ.ಶ. 1070 - 1120) ಚೋಳ ಚರಿತ್ರೆಯಲ್ಲಿ ಇವನ ಸಿಂಹಾಸನವೇರುವಿಕೆ ಒಂದು ಹೊಸಯುಗ ವನ್ನುಂಟು ಮಾಡಿತು. ವೆಂಗಿಯ ರಾಜ್ಯ ಚೋಳ ಸಾಮ್ರಾಜ್ಯದ ಒಂದು ಭಾಗವಾಗಿ, ರಾಜರು ಚಾಲುಕ್ಯ - ಚೋಳರಾಜರೆಂದು ಕರೆಯಲ್ಪಟ್ಟರು. ಇವನು ಅನಗತ್ಯವಾದ ಯುದ್ಧಗಳನ್ನು ತೊರೆದು,ಪ್ರಜಾಭಿವೃದ್ಧಿಯತ್ತ ನಿಜವಾದ ಆಸಕ್ತಿ ತೋರಿಸಿದ. ಕುಲೋತ್ತುಂಗನ ನಂತರ ಬಂದವರೆಂದರೆ ಕ್ರಮವಾಗಿ ವಿಕ್ರಮಚೋಳ (ಕ್ರಿ.ಶ. 1118 -1135) ಎರಡನೇ ಕುಲೋತ್ತುಂಗ (ಕ್ರಿ.ಶ. 1135 -1150) ಎರಡನೇ ರಾಜರಾಜ (ಕ್ರಿ.ಶ.1146 -1173) ಮತ್ತು ಎರಡನೇ ರಾಜಾಧಿರಾಜ. ಈ ಜಿಲ್ಲೆಯ ಮೇಲಣ ಅವರ ಹಿಡಿತ ಹೇಗಿತ್ತೆಂಬುದು ಅವರ ಶಾಸನಗಳಿಂದ ತಿಳಿದುಬರುತ್ತದೆ. ಒಂದು ವಿಶೇಷ ಲಕ್ಷಣವೆಂದರೆ ಈ ನೆರೆಹೊರೆಯ ಜಿಲ್ಲೆಗಳಲ್ಲಿ ಚೋಳ ಸಾಮ್ರಾಟರ ಆಶ್ರಿತ ರಾಜರಾಗಿ ತೆಲುಗು ಚೋಳರು ಪ್ರಭಾವಶಾಲಿಗಳಾದರು. ತಮ್ಮ ಸಾಮ್ರಾಟರನ್ನು ಮೀರಿ ನಡೆಯುವಷ್ಟು ಬಲವಿಲ್ಲದ ಇವರುಗಳು ಶ್ರೀಕಾಳಹಸ್ತಿ, ತಿರುಮಲೆ ದೇವಾಲಯಗಳಿಗೆ ಹಲವಾರು ಬಳುವಳಿಗಳನ್ನು ಕೊಟ್ಟಿರುವುದು ದಾಖಲೆಯಾಗಿದೆ.

ಒಂದನೇ ಆದಿತ್ಯನು ಆಕ್ರಮಿಸಿದ ನಂತರ ತೊಂಡಮಂಡಳವು ಚೋಳ ಸಾಮ್ರಾಜ್ಯದ ಒಂದು ಭಾಗವಾಗಿ 13 ನೇ ಶತಾಬ್ದಿಯ ರೆಗೆ ಮುಂದುವರಿಯಿತು. ಈ ಬಗ್ಗೆ ದೊರೆತಿರುವ ಮೊದಲಶಾಸನವೆಂದರೆ (232 ಜಿ.ಟಿ.) ಒಂದನೇ ಪರಾಂತಕನ (ಕ್ರಿ.ಶ907-955) ಆಡಳಿತದ 29 ನೇ ವರ್ಷಕ್ಕೆ ಸಂಬಧಿಸಿದ್ದು. ಕ್ರಿ.ಶ.956 ರಿಂದ ಹದಿನೈದು ವರ್ಷಗಳ ಕಾಲ ಅವನ ಮಗ ಪಾರ್ಥಿವೇಂದ್ರ ವರ್ಮನು ತೊಂಡ ಮಂಡಲದ ರಾಜ್ಯಪಾಲನಾಗಿದ್ದ. ಅವನ ಆಳ್ವಿಕೆಯ 14 ನೇ ವರ್ಷದಲ್ಲಿ ಎಂದರೆ ಕ್ರಿ.ಶ.970 ರಲ್ಲಿ ಅವನ ಆಧೀನದಲ್ಲಿದ್ದ ಪಲ್ಲವರಾಜನ ಪತ್ನಿ ಸಾಮವೈ ತಿರುಮಲೆಯ ದೇವಾಲಯದಲ್ಲಿ ಮೂಲವರರ ಹೋಲಿಕೆಯ ಮಣವಾಳ ಪೆರುಮಾಳ್ ಎಂಬ ಹೆಸರಿನ ರಜತ ಪ್ರತಿಮೆಯನ್ನು ಸ್ಥಾಪಿಸಿ ಉತ್ಸವಗಳನ್ನು ನಡೆಸಲು ದಾನ ನೀಡಿದಳು. (8, 9-ಟಿ.ಟಿ.) ಒಂದನೇ ರಾಜರಾಜನ (985 -1014) ಮೂರು ಶಾಸನಗಳು ಈ ಪ್ರಾಂತದಲ್ಲಿದ್ದು ಅವುಗಳಲ್ಲಿ ಒಂದು (170 ಟಿ.ಟಿ.) ತಿರುಮಲೆಗೆ ಸಂಬಂಧಿಸಿದ್ದು ಎರಡನೇ ಪರಾಂತಕನ ಪತ್ನಿ ನೀಡಿದ ಚಿನ್ನದ ಪಟ್ಟ (ಹಣೆಗೆ ಸುತ್ತುವ ಆಭರಣ) ದ ಸಮರ್ಪಣೆಯನ್ನು ಸೂಚಿಸುತ್ತದೆ

ನಂತರ ರಾಜನಾದ ರಾಜೇಂದ್ರ ಚೋಳನ ಕಾಲದ ಎರಡು ದಾಖಲೆಗಳಿವೆ. ಅದರಲ್ಲೊಂದು (ಜಿ,ಟಿ.224) ಕಪಿಲತೀರ್ಥದಲ್ಲಿ ಕಪಿಲೇಶ್ವರ ಆಲಯ ನಿರ್ಮಾಣವನ್ನು ಕುರಿತು ಹೇಳುವುದು.

ಒಂದನೇ ಕುಲೋತ್ತುಂಗನ ಹನ್ನೊಂದು ಶಾಸನಗಳು (ಕ್ರಿ.ಶ.1070 -1120) ಜಿ.ಟಿ. 381,382,387,388,ಹಾಗೂ ಟಿ.ಟಿ.71,110,112,131,144,298,657) ತಿರುಮಲೆಯಲ್ಲೂ,ಯೋಗಿಮಲ್ಲಾವರದಲ್ಲೂ ಇವೆ. ವಿಕ್ರಮಚೋಳನ (ಜಿ.ಟಿ.386) ಒಂದು ದಾಖಲೆಯೂ ಇದೆ.

ನಂತರದ ದೊರೆಯಾದ ಮೂರನೇ ರಾಜರಾಜನ ಏಳು ಶಾಸನಗಳಿವೆ. ಈ ಪ್ರಾಂತ್ಯದ ದೇವಾಲಯಗಳ ಲಕ್ಷಣವನ್ನು ಪರಿವರ್ತಿಸಿ,ಇಂದಿನ ರೂಪವನ್ನು ತಂದುಕೊಟ್ಟ ಒಂದು ಘಟನೆಯನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತ. ವೈಷ್ಣವ ಸಂತರಾದ ಆಳ್ವಾರರು ಭಕ್ತಿ ತತ್ವವನ್ನು ಹರಡಿ ಜನ ವಿಷ್ಣು ಪೂಜೆಗೆ ತೊಡಗುವುದರಲ್ಲಿ ನೆರವಾದರು. ನಂತರ ಬಂದ ಆಚಾರ್ಯರುಗಳು ಈ ವಿಷ್ಣುಭಕ್ತಿಗೆ ಭದ್ರ ಬುನಾದಿಯನ್ನು ಒದಗಿಸಿ, ವೈಷ್ಣವತೆಗೆ ಒಂದು ಸ್ವರೂಪವನ್ನು ತಂದುಕೊಟ್ಟರು. ಇವರಲ್ಲಿ ಅತ್ಯುನ್ನತಿಯನ್ನು ಪಡೆದವರು ರಾಮಾನುಜಾಚಾರ್ಯರು. ಅವರು ಶ್ರೀರಂಗವನ್ನು ಕೇಂದ್ರವಾಗಿಸಿಕೊಂಡು ತಮ್ಮ ವೈಷ್ಣವ ಭಕ್ತಿ ಪ್ರಸಾರದಲ್ಲಿ ನಿರತರಾದರು. ಅವರ ನೂತನ ವೇದಾಂತದರ್ಶನ-ವಿಶಿಷ್ಟಾದ್ವೈತವೆಂದು ಹೆಸರು ಪಡೆದು ಶೀಘ್ರ ಬೆಳವಣಿಗೆಗೆ ಒಳಗಾಯಿತು. ಆಲಯಗಳಲ್ಲಿ ತಮಿಳ್ ಪ್ರಬಂಧಗಳನ್ನು ಹಾಡುವ ಪರಂಪರೆಗೆ ಮೂಲಕಾರಕರಾದ ನಾಥಮುನಿಗಳು ತಮ್ಮ ತೀರ್ಥಯಾತ್ರೆಯ ಕಾಲದಲ್ಲಿ ತಿರುಮಲೆಗೂ ಆಗಮಿಸಿದ್ದರು. ನಂತರದ ಆಚಾರ್ಯರಾದ ಆಳವಂದಾರರೂ (ಯಮುನಾಚಾರ್ಯರು) ತಿರುಮಲೆಯನ್ನು ಸಂದರ್ಶಿಸಿದ್ದರು. ಅವರು ತಮ್ಮ ಮೊಮ್ಮಕ್ಕಳಲ್ಲಿ ಒಬ್ಬರಾದ ತಿರುಮಲ ನಂಬಿಯನ್ನು ತಿರುಮಲೆಯಲ್ಲಿಯೇ ವಾಸವಾಗಿದ್ದು ಪವಿತ್ರವಾದ ದೇವಾಲಯಕ್ಕೆ ಪುಷ್ಪ ಕೈಂಕರ್ಯ ಹಾಗೂ ತೀರ್ಥ ಕೈಂಕರ್ಯ ಮಾಡಿಕೊಂಡು ಬರಲು ನಿಯಮಿಸಿದ್ದರು. ತಿರುಮಲನಂಬಿ ತಿರುಮಲೆಗೆ ವಲಸೆ ಬಂದು ಇಲ್ಲಿಯೇ ನಿಂತು ತಮ್ಮ ಇಡೀ ಬಾಳನ್ನು ಸ್ವಾಮಿಯ ಸೇವೆಯಲ್ಲಿ ಕಳೆದರು, ನಂತರದವರೇ ರಾಮಾನುಜರು. ಈ ಆಚಾರ್ಯರು ತಿರುಮಲೆಯನ್ನು ಮೂರುಬಾರಿ ಸಂದರ್ಶಿಸಿರಬೇಕು, ಮೊದಲಬಾರಿ ಅವರು ತಿರುಮಲನಂಬಿ ಯೊಡನೆ ಒಂದು ವರ್ಷಕಾಲವಿದ್ದು ನಂಬಿಗಳಿಂದ ರಾಮಾಯಣ ರಹಸ್ಯಾರ್ಥವನ್ನು ತಿಳಿದರು. ಶೈವ ವೈಷ್ಣವರಲ್ಲಿ ತಿರುಮಲೆಯ ಆಲಯದ ದೇವರ ಬಗ್ಗೆ ವಿವಾದವುಂಟಾದಾಗ, ಆ ಜಗಳವನ್ನು ಪರಿಹರಿಸಲು ಎರಡನೆಯಬಾರಿಗೆ ಅವರು ತಿರುಮಲೆಗೆ ಬಂದರು. ಕಡೆಯ ಬಾರಿಗೆ ತಮ್ಮ 103 ನೆ ವಯಸ್ಸಿನಲ್ಲಿ ತಿರುಮಲೆಗೆ ಬಂದಾಗ ಆಚಾರ್ಯರು ತಿರುಪತಿಯಲ್ಲಿ ಶ್ರೀ ಗೋವಿಂದರಾಜನನ್ನು ಪ್ರತಿಷ್ಠಾಪಿಸಿ,ಗೋವಿಂದರಾಜಪಟ್ಟಣವೆಂದು ಈಗಲೂ ಕರೆಯಲ್ಪಡುವ ತಿರುಪತಿ ನಗರಕ್ಕೆ ಬುನಾದಿಯನ್ನುಂಟಾಗಿಸಿದರು.

## 10. ನಂತರದ ಚೋಳ ಸಾಮ್ರಾಟರು

ಚಿತ್ತೂರು ಜಿಲ್ಲೆಯೊಡನೆ ಚೋಳರಿಗಿದ್ದ ಸಂಬಂಧ ಮತ್ತೂ ಹಲವು ದಶಕಗಳ ಕಾಲ ಮುಂದುವರಿಯಿತು. ಮೂರನೇ ಕುಲೋತ್ತುಂಗ ಚೋಳನು (ಕ್ರಿ.ಶ.1178-1218) ಅನೇಕ ವಿರೋಧಗಳನ್ನು ಎದುರಿಸಿಯೂ ಸಾಮ್ರಾಜ್ಯದ ಏಕತೆಯನ್ನು ಕಾಪಾಡಿ ಕೊಂಡು ಬಂದ. ಈ ಕಾಲದಲ್ಲಿ ಚಿತ್ತೂರು,ಚೆಂಗಲ್ಪಟ್ಟು,ಎರಡು ಆರ್ಕಾಡು ಜಿಲ್ಲೆಗಳನ್ನು ಆಳಿದ ಶಂಭುವರಾಯರು, ಕಾಡವರಾಯರು, ಚೇದಿ ರಾಯರು, ಯಾದವರಾಯರು ಸಾಮಂತರಲ್ಲಿ ಪ್ರಬಲರಾಗಿದ್ದರು. ಕುಲೋತ್ತುಂಗನ ಆಳ್ವಿಕೆಯ ಕಾಲದ ಶಾಸನಗಳಲ್ಲಿ ಹೆಸರಿಸಲಾದ ಸಾಮಂತರ ಸಂಖ್ಯೆ ಇಲ್ಲಿನ ತ್ವರಿತ ಪರಿವರ್ತನ ಗತಿಯು ಹೇಗೆ ಹೀನಾಯವಾಗುತ್ತಿದ್ದಿತೆಂದು ಸೂಚಿಸುತ್ತದೆ. ಅವನ ನಂತರದ ಮೂರನೇ ರಾಜರಾಜನ (ಕ್ರಿ.ಶ.1216 -1260) ಆಳ್ವಿಕೆ ನಿರಂತರ ವಿರೋಧಗಳಿಂದ ತುಂಬಿದ್ದಿತು. ಅವನ ಆಳ್ವಿಕೆಯ 29 ನೇ ವರ್ಷದ ವರೆಗಿನ ಶಾಸನಗಳು ಚಿತ್ತೂರು ಹಾಗೂ ನೆರೆಯ ಜಿಲ್ಲೆಗಳಲ್ಲಿ ಕಂಡುಬರುತ್ತವೆ. ಇದರಿಂದಾಗಿ ಇಡೀ ಚಿತ್ತೂರು ಜಿಲ್ಲೆಯ ಮೇಲೆ ಚೋಳರ ಪ್ರಭುತ್ವ ಮುಂದುವರಿಯಿತೆಂದು ಹೇಳಬರುತ್ತದೆ. ಕಡೆಯ ಚೋಳರಾಜನಾದ ಮೂರನೇ ರಾಜೇಂದ್ರನ (ಕ್ರಿ.ಶ.12461279) ಆಡಳಿತದಲ್ಲಿ ಚೋಳರ ಪ್ರಭುತ್ವ ಕ್ಷೀಣವಾಗಿ, ತೆಲುಗುಪಲ್ಲವ ವಿಜಯಗಂಡ ಗೋಪಾಲನೂ,ಪಾಂಡ್ಯರ ಸನ್ನಿಹಿತನಾದ ಕೊಪ್ಪೆರುಂಜಿಂಗನೂ ತೊಂಡಮಂಡಲದಲ್ಲಿ ಕ್ರಮವಾಗಿ ಉತ್ತರ ದಕ್ಷಿಣ ಭಾಗಗಳನ್ನು ಹಂಚಿಕೊಂಡಿದ್ದಂತೆ ಕಂಡುಬರುತ್ತದೆ.

## 11. ಪಾಂಡ್ಯರು

ನಂತರ ಪ್ರವರ್ಧಮಾನಕ್ಕೆ ಬಂದದ್ದು ದಕ್ಷಿಣದಲ್ಲಿ ಪಾಂಡ್ಯರು ಹೊಯ್ಸಳರು ಹಾಗೂ ಉತ್ತರದಲ್ಲಿ ಕಾಕತೀಯ, ಯಾದವರ ರಾಜ್ಯಗಳು. ಕಿರಿಯ ಬಣಗಳಾದ ನೆಲ್ಲೂರಿನ ತೆಲುಗು ಚೋಳರು ಮುಂತಾದವರು ಮುಖ್ಯಬಣಗಳ ವಶವರ್ತಿಗಳಾಗಿದ್ದರು. ಒಂದನೇ ಜಟಾವರ್ಮ ಸುಂದರ ಪಾಂಡ್ಯನ ಸಿಂಹಾಸನಾರೋಹಣ (ಕ್ರಿ.ಶ.1251) ಒಂದು ಪ್ರಮುಖ ಘಟ್ಟ. ಅವನೊಬ್ಬ ಹೆಸರಾಂತ ಯೋಧನೂ, ಆಕ್ರಾಮಕನೂ ಆಗಿದ್ದು, ಪಾಂಡ್ಯರಾಜ್ಯ ಉನ್ನತಿಯನ್ನು ಪಡೆಯಿತು. ತನ್ನ ಆಳ್ವಿಕೆಯ ಆರಂಭದಲ್ಲಿಯೇ ಜಟಾವರ್ಮನು ಹೆಚ್ಚು ಭೂಭಾಗವನ್ನು ಆಕ್ರಮಿಸಿ ನೆಲ್ಲೂರಿಗಿಂತಲೂ ಆಚೆಗೆ ರಾಜ್ಯವನ್ನು ವಿಸ್ತರಿಸಿದನು. ಶ್ರೀಕಾಳಹಸ್ತಿಯ ಮಣಿಕಂಠೇಶ್ವರಾಲಯದ ಎದುರಿನ ಶಾಸನದ ಪ್ರಕಾರ ಕಾಕತೀಯ ಗಜಪತಿಯೊಡನೆಯೂ ಇವನು ಘರ್ಷಣೆ ಹೊಂದಿದ. ಈ ಜಿಲ್ಲೆಯಲ್ಲಿ ಇವನ ಐದು ಶಾಸನಗಳು ಕಂಡುಬಂದಿವೆ, ಜಿಲ್ಲೆಯ ಶಾಸನಗಳಲ್ಲಿ ದೊರೆಯುವ ಇನ್ನೊಬ್ಬ ಪಾಂಡ್ಯರಾಜನೆಂದರೆ ಒಂದನೇ ಮಾರವರ್ಮಕುಲಶೇಖರ (ಕ್ರಿ.ಶ.1268 - 1308) ಇವನು ಮೂರನೇ ರಾಜೇಂದ್ರ ಚೋಳನೊಡನೆ ಸೇರಿದ ಹೊಯ್ಸಳ ರಾಮನಾಥನೊಡನೆ ಯುದ್ಧ ಮಾಡಿ ಇಬ್ಬರನ್ನೂ ಸೋಲಿಸಿ ಅವರ ರಾಜ್ಯವನ್ನು ವಶಪಡಿಸಿಕೊಂಡ. ಇಲ್ಲಿ ಸೋತ ರಾಮನಾಥನು ಇವನ ಸೋದರ ಮೂರನೇ ನರಸಿಂಹನ ವಿರುದ್ಧ ಯುದ್ಧಮಾಡಿ ಸ್ವಲ್ಪ ರಾಜ್ಯವನ್ನು ವಶಪಡಿಸಿಕೊಂಡ. ಪುಂಗನೂರಿನಲ್ಲಿ ಇವನ ಆಳ್ವಿಕೆಯ 38 ನೇ ವರ್ಷದ (ಕ್ರಿ.ಶ. 1293) ಒಂದು ಶಾಸನ ದೊರೆತಿದ್ದು, ಅದು ವಾಮನವನಂ ಕುಟ್ಟು ಪೆರುಮಾಳ್ ಎಂಬುವ ಒಬ್ಬನು ಕರುಮಾನಿಕ್ಕತ್ತಾಳ್ವಾರ್ ದೇವಾಲಯಕ್ಕೆ ನಾಲ್ಕು ದಂಡದ ಜಮೀನನ್ನು ನೀಡಿದ್ದನ್ನು ದಾಖಲಿಸುತ್ತದೆ.

ಹದಿಮೂರನೇ ಶತಾಬ್ದಿಯ ಮಧ್ಯದಲ್ಲಿ ಚೋಳರ ಪ್ರಾಬಲ್ಯ ತಗ್ಗಿ ಒಂದನೇ ಮಾರವರ್ಮ ಸುಂದರ ಪಾಂಡ್ಯನ ಪ್ರಾಬಲ್ಯ ಹೆಚ್ಚಿತು. ಈತ ತೊಂಡಮಂಡಲವನ್ನು ಹಿಡಿದು ಚೋಳರನ್ನು ಸದೆಬಡಿದು ನೆಲ್ಲೂರಿನ ವರೆಗೂ ದಂಡೆತ್ತಿ ಅಲ್ಲಿ ವೀರಾಭಿಷೇಕವನ್ನು ಮಾಡಿಕೊಂಡ. ತಿರುಮಲೆಯ ಆಲಯದಲ್ಲಿ ಪಾಂಡ್ಯರಾಜರ ಹಲವು ಶಾಸನಗಳಿವೆ. (ಟಿ.ಟಿ.127, 164, 172, 175, 231, 239, 241, 140)

## 12. ಯಾದವರಾಯರು

ತೊಂಡಮಂಡಲದ ಪೂರ್ವ ಹಾಗೂ ಉತ್ತರ ಭಾಗಗಳಲ್ಲಿ ಪ್ರಭಾವಶಾಲಿಗಳಾಗಿದ್ದ ಸ್ಥಳೀಯ ಮನೆತನದವರು ಯಾದವ ರಾಯರು. ಈ ಮನೆತನದ ಮೂಲಪುರುಷ ತಿರುಕಾಳತ್ತಿದೇವ ಯಾದವರಾಯ. ಇವನು ಚಾಳುಕ್ಯನಾರಾಯಣ ಎಂಬ ಬಿರುದನ್ನು ಹೊಂದಿದ್ದನ್ನು ನೋಡಿದರೆ ಪೂರ್ವ ಚಾಳುಕ್ಯರೊಡನೆ ಸಂಬಂಧ ಹೊಂದಿ ವೆಂಗಿಯ ಸ್ವಲ್ಪ ಭಾಗವನ್ನು ಅವರಿಂದ ಪಡೆದಿದ್ದನೆಂದು ತೋರುತ್ತದೆ. ಇವನು ತೆಲುಗು ಚೋಳರೊಡನೆ ವೈವಾಹಿಕ ಸಂಬಂಧ ಬೆಳೆಸಿಕೊಂಡು ಹೆಚ್ಚು ಪ್ರಭಾವಶಾಲಿಯಾದ. ಇವನ ಶಾಸನಗಳು ನೆಲ್ಲೂರು, ಚಿತ್ತೂರು ಉತ್ತರ ಆರ್ಕಾಟು ಜಿಲ್ಲೆಗಳಲ್ಲಿ ದೊರೆತಿವೆ. ಇವನ ನಂತರ ಇವನ ಮಗ ವೀರರಾಕ್ಷಸ ಯಾದವರಾಯನೂ, ತದನಂತರ ವೀರನರಸಿಂಗ ಯಾದವರಾಯನೂ ಬಂದರು. ಈತ ಐವತ್ತೊಂದು ವರ್ಷ ರಾಜ್ಯಭಾರಮಾಡಿದ. ಚೋಳರಾಜ ಮೂರನೇ ರಾಜರಾಜನೊಡನೆ ಸೇರಿ ಕೊಪ್ಪರಂಜಿಂಗನ ಮೇಲೆ ಯುದ್ಧಮಾಡಿದ. ಈತ ಹಿರಿಯ ಕಾಡವರಾಯನಾದ ಅಳಗಿಯ ಸಿಯನ್ ನೊಡನೆಯೂ ಘರ್ಷಣೆಗೊಂಡ. ಜಟಾವರ್ಮ ಸುಂದರಪಾಂಡ್ಯನು ಯುದ್ಧದಲ್ಲಿ ಕೊಂದಿರಬಹುದಾದ ತೆಲುಗು ಪಲ್ಲವ ವೀರಗಂಡ ಗೋಪಾಲನಿಗೆ ಅಧೀನನಾಗಿದ್ದ. ಈ ವಂಶದ ಇನ್ನೊಬ್ಬ ಎಂದರೆ ತಿರುವೆಂಕಟನಾಥ ಯಾದವರಾಯ. ಈತ ಕ್ರಿ.ಶ.1336 -37 ವರೆಗೆ ಸುಮಾರು ಹದಿನೈದು ವರ್ಷ ಆಳ್ವಿಕೆ ನಡೆಸಿದ. ತಿರುವೆಂಕಟನಾಥ ಯಾದವರಾಯನು ತನ್ನ ಸೇನಾಧಿಪತಿಯಾದ ಸಿಂಗಯ ದಣ್ಣಾಯಕನ ಕೋರಿಕೆಯ ಮೇರೆಗೆ ಪುಂಗಲೂರು ಗ್ರಾಮದ ಅರ್ಧಭಾಗವನ್ನು ತಿರುವೆಂಕಟ ಮುಡೈಯಾನ್ ಆಲಯದಲ್ಲಿ ಆಡಿ ಉತ್ಸವವನ್ನು ನಡೆಸಲು ದತ್ತಿ ನೀಡಿದ. ಈತ ಹೊಯ್ಸಳರ ಮೂರನೇ ಬಲ್ಲಾಳನಿಗೆ ಸಾಮಂತನಾಗಿ -ವಲ್ಲಾಳದೇವ ವರಿ - ಎಂಬ ಹೆಸರಿನ ತೆರಿಗೆಯನ್ನೆತ್ತಿ ಬಲ್ಲಾಳನಿಗೆ ಕಪ್ಪವನ್ನು ನೀಡುತ್ತಿದ್ದ. ಈತ ತನ್ನ ವಂಶದ ಹಿರಿಯರೊಡನೆ ಅಥವಾ ನಂತರದ ಶ್ರೀರಂಗನಾಥನೊಡನೆ ಹೊಂದಿದ್ದ ಸಂಬಂಧ ಖಚಿತವಾಗಿಲ್ಲ. ಏನೇ ಆದರೂ ತಿರುವೆಂಕಟನಾಥನು ಶ್ರೀರಂಗನಾಥ ಯಾದವರಾಯನ ತಂದೆಯೆಂದು ಎಣಿಸಲಾಗಿದೆ. ಈ ಕಾಲದಲ್ಲಿ ಅನೇಕ ತೆರಿಗೆಗಳನ್ನು ವಿಧಿಸಲಾಯಿತು. ಸ್ವರ್ಣತೆರಿಗೆ, ಧಾನ್ಯತೆರಿಗೆ, ಉಚಿತ ಸೇವೆಗಳಿಗಾಗಿ - ಅಮಂಜಿವಗೈ-ತೆರಿಗೆ, ನಾಟ್ಟಾರರ ಪರಿಷತ್ತಿನ ತೆರಿಗೆ, ಮತ್ತು ಇತರ ಹಳೆಯ ಹೊಸ ತೆರಿಗೆಗಳು. ಜಾನುವಾರು ತೆರಿಗೆಗಳೂ,ರಸ್ತೆ ಪರವಾನಗಿ ತೆರಿಗೆಗಳೂ,ವ್ಯಾಪಾರಿಗಳ, ಕೆಲಸಗಾರರ ವೃತ್ತಿ ತೆರಿಗೆಗಳು, ತೋಟಗಾರಿಕೆಯ ಮೀನುಗಾರಿಕೆ ತೆರಿಗೆ, ತೊರಹಾಡಿಯ ತೆರಿಗೆ -ಮೊದಲಾದವು. ಎರಡು ತೆರಿಗೆಗಳು ರಾಜಮಾತೆಯ ಹಾಗೂ ಯುವರಾಜನ ಸಂಕ್ಷೇಮಕ್ಕೆ ಸಂಬಂಧಿಸಿದವು. ರಾಜಯುದ್ಧದಲ್ಲಿ ಶತ್ರುಗಳ ಸೆರೆ ಸಿಕ್ಕಾಗ ನೀಡುವ ಬಿಡುಗಡೆ ಧನದ ತೆರಿಗೆಯು ರಾಜನಿಗಾಗಿ ನೀಡುತ್ತಿದ್ದ ಕಾಣಿಕೆಯಾಗಿತ್ತು.

ಶ್ರೀರಂಗನಾಥ ಯಾದವರಾಯನು ಕ್ರಿ.ಶ. 1336 - 37 ರಲ್ಲಿ ರಾಜನಾಗಿ ಸುಮಾರು 20 ವರ್ಷಗಳಕಾಲ ಆಳಿದನು. ವಿಜಯನಗರ ರಾಜ್ಯ ಸ್ಥಾಪನೆಯಾದನಂತರ ಈತನು ತಾನೇ ಸ್ವತಃ ವಿಜಯನಗರದ ಆಶ್ರಿತನಾಗಿ ಒಂದನೇ ಹರಿಹರನ ಸಾಮಂತ ನಾದನು. ಈತನು ತನ್ನ ಆಜ್ಞೆಯನ್ನು ಮೀರಿದವರ ವಿರುದ್ಧ ಯುದ್ಧಮಾಡಿ ಅವರನ್ನು ನಗರಚ್ಯುತರನ್ನಾಗಿಸಿ ಅರಣ್ಯಕ್ಕೆ ಓಡುವಂತೆ ಮಾಡುತಿದ್ದನಂತೆ. ಈ ಕಾಲವೆಲ್ಲವೂ ರಾಜಕೀಯ ರಂಗದ ಏಳು ಬೀಳುಗಳಲ್ಲಿ ತುಂಬಿದ್ದರಿಂದಾಗಿ ಈತ ತನ್ನ ಮೇಲ್ಮೆಯನ್ನುಸ್ಥಾಪಿಸ ಲೆಂದೋ, ಅಥವಾ ವಿಜಯನಗರದ ಪರವಾಗಿಯೋ ಇಂತಹ ಯುದ್ಧಗಳಲ್ಲಿ ಭಾಗವಹಿಸಿದ್ದಿರಬೇಕು.

ಹದಿಮೂರನೇ ಶತಾಬ್ದಿಯ ಕೊನೆಗೆ ಆರಂಭವಾದ ದೆಹಲಿ ಸುಲ್ತಾನರ ಧಾಳಿಗಳು ದಕ್ಷಿಣದ ನಾಲ್ಕೂ ರಾಜ್ಯಗಳನ್ನು ಬುಡ ಮೇಲಾಗಿಸಿ, ಉಲ್ಲೋಲಕಲ್ಲೋಲವನ್ನುಂಟಾಗಿಸಿ ವಿಜಯನಗರ, ಬಹಮನಿ ರಾಜ್ಯಗಳು ಸ್ಥಾಪನೆಯಾಗಿ ಹದಿನಾಲ್ಕನೆಯ ಶತಕದ ಮಧ್ಯದಿಂದ ವಿಜಯನಗರ ರಾಜ್ಯದ ಅಂತ್ಯದವರೆಗೂ ವಿಜಯನಗರಕ್ಕೂ ಬಹುಮನಿ ರಾಜ್ಯಗಳಿಗೂ ತಾಕಲಾಟವಿದ್ದಿತು. ಕೃಷ್ಣಾ-ತುಂಗಭದ್ರಾ ನದಿಗಳ - ದೋಆಬ್ - ಪ್ರದೇಶ ಇವರ ಘರ್ಷಣೆಯ ಕಾರಣವಾಗಿತ್ತು. ಬಹುಮನಿರಾಜ್ಯ ಕ್ರಿ.ಶ. 1538ರಲ್ಲಿ ಕೊನೆ ಗೊಂಡಿತಾದರೂ ಅದಕ್ಕೂ ಬಹಳ ಹಿಂದೆಯೇ ಬಹಮನಿ ಸುಲ್ತಾನ ತನ್ನ ರಾಜ್ಯದ ಭಾಗಗಳ ರಾಜ್ಯಪಾಲರ ಮೇಲಿನ ಹಿಡಿತವನ್ನು ಕಳೆದುಕೊಂಡಿದ್ದ.

## 13. ಕ್ರಿ.ಶ.1260-1360 ವರೆಗೆ ತಿರುಮಲೆ

ಕ್ರಿ.ಶ.1336 ರಲ್ಲಿ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯದಲ್ಲಿ,ಅದು ಹುಟ್ಟಿದಾಗಲೇ ತೊಂಡಮಂಡಲವೂ ಅದರಲ್ಲಿ ಸೇರಿದ್ದಿತು. ಆದರೂ ತಿರುಮಲೆ -ತಿರುಪತಿ ಪ್ರಾಂತ್ಯದಲ್ಲಿ ದೊರಕಿರುವ ವಿಜಯನಗರದ ಮೊದಲಶಾಸನ ಕ್ರಿ.ಶ. 1359 ಕಾಲದ್ದು. ಸುಂದರಪಾಂಡ್ಯನ ಕಾಲ ಹಾಗೂ ವಿಜಯನಗರದ ಕಾಲದ ದಾಖಲೆಯ ಈ ವರ್ಷದ ಮಧ್ಯಕಾಲವನ್ನು ಪರಿವರ್ತನ ಕಾಲವೆಂದು ಕರೆಯಲಾಗಿದೆ. ಈ ಕಾಲದಲ್ಲಿ ಚೋಳರಾಜರ ದೌರ್ಬಲ್ಯದ ಪ್ರಯೋಜನ ಪಡೆದು ಅನೇಕ ಸಾಮಂತರು ಸ್ವತಂತ್ರರಾದರು. ಈಕಾಲ ದಲ್ಲಿ ಅವರುಗಳೆಲ್ಲ ಯಾವ ಒಡೆತನವನ್ನೂ ಹೇಳದೆಯೇ ಶಾಸನಗಳಲ್ಲಿ ಕಂಡುಬರುತ್ತಾರೆ.

ಈ ಸಾಮಂತ -ಸ್ವತಂತ್ರರಲ್ಲಿ ಇಬ್ಬರು - ತಂದೆ ಮಗ - ಅರ್ವಾಚೀನ ಪಲ್ಲವರ ಕೊಪ್ಪೆರುಂಜಿಂಗರು ಸಾಕಷ್ಟು ಗೊಂದಲವ ನ್ನುಂಟು ಮಾಡಿದರು. ಹಿರಿಯ ಕೊಪ್ಪರುಂಜಿಂಗ - ಕಾಡವರಾಯನು ಸೆಂದಮಂಡಲದ ಸುತ್ತಣ ಸಣ್ಣ ರಾಜ್ಯದ ಅಧಿಪತಿಯಾಗಿದ್ದ ಈತ ತೊಂಡಮಂಡಲದ ಒಂದು ಭಾಗವನ್ನು ಹಿಡಿದು ಕ್ರಿ.ಶ.1220 ರಲ್ಲಿ ಆಳಿದ. ಅವನ ಮಗ ಪ್ರಸಿದ್ಧ ಕೊಪ್ಪರುಂಜಿಂಗ -ಖಡ್ಗ ಮಲ್ಲನು ಕ್ರಿ.ಶ. 1243 ರಲ್ಲಿ ಸಿಂಹಾಸನಾರೋಹಣ ಮಾಡಿ, ತೊಂಡಮಂಡಲವನ್ನು ಆಕ್ರಮಿಸಿ ನರಸಿಂಗಯಾದವರಾಯನೊಡನೆ ಉರಟ್ಟೂರಿನ ಬಳಿ ಯುದ್ಧ ಮಾಡಿದ. ಇನ್ನೂ ಮುಂದುವರಿದು ಪೂರ್ವ ಗೋದಾವರಿಯ ದ್ರಾಕ್ಷಾರಾಮದವರೆಗೆ ದಂಡೆತ್ತಿಹೋಗಿ ಕಾಕತೀಯರ ಗಣಪತಿದೇವನಿಂದ ಸೋಲಿಸಲ್ಪಟ್ಟು ಅವಮಾನಿತನಾಗಿ ಹಿಂದಿರುಗಿದ. ನಂತರ ಇವನನ್ನು ಮೊದಲನೇ ಸುಂದರ ಪಾಂಡ್ಯನು ಅಧೀನಗೊಳಿಸಿಕೊಂಡನು. ಇವನ ಎರಡು ಶಾಸನಗಳು (ಟಿ.ಟಿ.226,227) ತಿರುಮಲೆಯಲ್ಲಿ ಕಂಡುಬರುತ್ತವೆ.

ಚೋಳರ ಅಧೀನರಾಗಿ ತೊಂಡಮಂಡಲವನ್ನು ಹಲವಾರು ತೆಲುಗು ಪಲ್ಲವರು ಆಳುತ್ತಿದ್ದರು. ಈಗಣ ನೆಲ್ಲೂರು, ಕಡಪ ಕರ್ನೂಲು. ಚಿತ್ತೂರು,ಉತ್ತರ ದಕ್ಷಿಣ ಆರ್ಕಾಟುಗಳು,ಚೆಂಗಲ್ಪಟ್ಟು ಜಿಲ್ಲೆಗಳು ಅಂದಿನ ತೊಂಡಮಂಡಲದ ಭಾಗಗಳಾಗಿದ್ದವು. ಇವರೂ ಸಹ ಸಮಕಾಲೀನ ಚೋಳರಾಜರ ದುರ್ಬಲತೆಯ ಕಾರಣದಿಂದಾಗಿ ಸ್ವತಂತ್ರರಾದರು. ಪಾಂಡ್ಯರಾಜನು ರಂಗಪ್ರವೇಶ ಮಾಡಿದಾಗ ಆ ಸಮಯಕ್ಕೆ ಅವನ ಸಾರ್ವಭೌಮತೆಯನ್ನು ಒಪ್ಪಿದರು. ಈ ಭಾಗದಲ್ಲಿ ಆಳಿದ ವಂಶಾವಳಿಯಲ್ಲಿ ತಿರುಮಲೆಯ ಆಲಯ ದಾಖಲಿಸುವ ರಾಜರೆಂದರೆ ವಿಜಯಗಂಡಗೋಪಾಲ, ರಾಜಗಂಡಗೋಪಾಲ ಹಾಗೂ ತ್ರಿಪುರಾಂತಕರುಗಳು, (ಟಿ.ಟಿ. 173,285,143,73,431,128,296,111,137,139,141,129,125,134,652,119, 123,126,443,221,72, ಹಾಗೂ ಜಿ.ಟಿ.127)

ತೊಂಡಮಂಡಲದಲ್ಲಿ ಸಾಕಷ್ಟು ಪ್ರಭಾವ ಬೀರಿದ ಮತ್ತೊಂದು ಕುಂಟುಂಬವೆಂದರೆ ನೆಲ್ಲೂರು ತೆಲುಗು ಚೋಳ ಮನೆತನ. ಅಲ್ಲುನ್ ತಿರುಕಾಳತ್ತಿದೇವ ಈ ವಂಶದವನಾಗಿ ಕೆಲವು ಕಾಲ ಸನಿಹದ ಕಂಚಿಯನ್ನೂ ಹಿಡಿದಿದ್ದನು. ಈತ ತಿರುಮಲೆಯ ಶಾಸನಗಳಲ್ಲಿ ಹೆಸರಿಸಲ್ಪಟ್ಟಿದ್ದಾನೆ.

ತಿರುಮಲೆ ತಿರುಪತಿ ಪ್ರಾಂತದ ಸಾಮಂತರಲ್ಲಿ ಅತಿಹೆಚ್ಚು ಪ್ರಮುಖರಾದ ಯಾದವರಾಯರು, ಇಲ್ಲಿನ ಆಲಯಗಳೊಡನೆ ಅತಿ ಸಮೀಪ ಸಂಬಂಧ ಹೊಂದಿ ಹಲವಾರು ಆಲಯೋಪಯೋಗಿ ಕಾರ್ಯಗಳನ್ನು ನಿರ್ವಹಿಸಿದರು. ನೆಲ್ಲೂರು,ಚಿತ್ತೂರು ಜಿಲ್ಲೆಗಳ ವೆಂಕಟಗಿರಿ, ಶ್ರೀಕಾಳಹಸ್ತಿ, ಚಂದ್ರಗಿರಿ ತಾಲ್ಲೂಕುಗಳನ್ನು ಆಳಿದರು. ಇವರಲ್ಲಿ ಮೊದಲಿಗನೆಂದರೆ ಚೋಳಸಾಮಂತನಾಗಿ ಕ್ರಿ.ಶ. 1184 ರಿಂದ 1227 ರ ವರೆಗೆ ಆಳಿದ ಘಟ್ಟಿದೇವ. ತಿರುಮಲೆಯಲ್ಲಿ ಶೈವ ವೈಷ್ಣವರ ನಡುವಣ ವಿವಾದವನ್ನು ಬಗೆಹರಿಸಲು ರಾಮಾನುಜಾಚಾರ್ಯರನ್ನು ಆಹ್ವಾನಿಸಿದವನು ಇವನೇ ಎಂಬ ಮಾತೂ ಇದೆ. ಆದರೆ ರಾಮಾನುಜಾಚಾರ್ಯರು ಕ್ರಿ.ಶ. 1130ರಲ್ಲಿ ವೈಕುಂಠವಾಸಿಗಳಾದ ಮೇಲೆ ಕ್ರಿ.ಶ. 1184 ರಲ್ಲಿ ಘಟ್ಟಿದೇವನು ರಾಜನಾದ ನೆಂಬ ಕಾರಣದಿಂದ ಈ ಮಾತಿನಲ್ಲಿ ಹುರುಳಿಲ್ಲವೆಂದು ಸಿದ್ಧ. ಘಟ್ಟಿದೇವನ ಮಗ ರಾಜಮಲ್ಲನು ಕ್ರಿ.ಶ. 1208-1237ರವರೆಗೆ ಆಳಿದ,ಇವನು ಪ್ರಾಯಶಃ ಯಾದವನಾರಾಯಣ ಮೂರ್ತಿ

ಯನ್ನು ಪ್ರತಿಷ್ಠಾಪಿಸಿದ. ನಂತರದ ರಾಜನೆಂದರೆ ಕ್ರಿ.ಶ.1237 ರಿಂದ 1246 ರ ವರೆಗೆ ಆಳಿದ ತಿರುಕಾಳತ್ತಿ ದೇವ. ತಿರುಷಣ್ಣಾಮಲೈ ಯಿಂದ ಕಾಳಹಸ್ತಿಯವರಗಿನ ವಿಶಾಲ ಭೂಭಾಗವನ್ನು ಆಳಿದ. ಇವನ ಮಗ ವೀರರಾಕ್ಷಸನು ಒಂದನೇ ಕುಲೋತ್ತುಂಗನ ಕಾಲದಲ್ಲಿ ಪ್ರಸಿದ್ಧನಾದ. ನಂತರ ಬಂದವನು ಯಾದವರಾಯ ಕುಲದಲ್ಲಿ ಅತಿ ಶ್ರೇಷ್ಠನಾದ ವೀರನರಸಿಂಗದೇವ, ಈತ ಮೊದಲಿಗೆ ಚೋಳ ಸಾಮಂತನಾದರೂ ನಂತರ ಪಾಂಡ್ಯರ ಅಧೀನನಾದನು. ತಿರುಮಲೆ -ತಿರುಪತಿ ಆಲಯಗಳಿಗಾಗಿ ಅನೇಕ ಕೆಲಸಗಳನ್ನು ಮಾಡಿದ. ವೀರನರಸಿಂಗನ ಮಗ ತಿರುವೆಂಕಟನಾಥನು ಕ್ರಿ.ಶ. 1310-ರಿಂದ 1336 ರ ವರೆಗೆ ಆಳಿದ. ಈ ಕಾಲದಲ್ಲಿ ತೊಂಡಮಂಡಲದ ಹೊರಗೆ ಹಲವಾರು ಪರಿವರ್ತನೆಗಳಾದವು. ಉತ್ತರ ಭಾರತದಲ್ಲಿ 12ನೇ ಶತಮಾನದ ಕೊನೆಗೆ ದೆಹಲಿ ಸುಲ್ತಾನರುದೆಹಲಿಯಲ್ಲಿ ತಮ್ಮರಾಜ್ಯವನ್ನು ಸ್ಥಾಪಿಸಿ, ಶೀಘ್ರವಾಗಿ ಹರಡುವ ತಮ್ಮ ಧಾಳಿಗಳನ್ನು ಆರಂಭಿಸಿದರು. ಹಿಂದೂಮತವೂ,ತುಸುವೇ ಉಳಿದ್ದ ಬೌದ್ಧ ಮತವೂ ಈ ಧಾಳಿಗಳಿಂದ ಬಹುವಾದ ಹೊಡೆತ, ಆಕ್ರಮಣವನ್ನೆದುರಿಸಬೇಕಾಯಿತು. 13ನೇ ಶತಮಾನದ ಕೊನೆಗೆ ದೆಹಲಿಯಲ್ಲಿ ಖಿಲ್ಜಿ ಸಾಮ್ರಾಜ್ಯ ಉದಯವಾಯಿತು. ಈ ವೇಳೆಗೆ ದಕ್ಷಿಣದಲ್ಲಿ ಎರಡು ಹಿರಿಯ ಹಿಂದೂ ಸಾಮ್ರಾಜ್ಯಗಳು - ಆಧುನಿಕ ದೌಲತಾಬಾದ್ ಆದ ದೇವಗಿರಿಯಲ್ಲಿ ಯಾದವ ರಾಜ್ಯವೂ, ತೆಲುಗು ಮಾತನಾಡುತ್ತಿದ್ದ ಇಡಿ ಪ್ರದೇಶವನ್ನು ಒಳಗೊಂಡ ಕಾಕತೀಯ ಸಾಮ್ರಾಜ್ಯವೂ ಸ್ಥಾಪನೆಯಾಗಿ ಇನ್ನೂ ದಕ್ಷಿಣಕ್ಕೆ, ಮೈಸೂರಿನ ದ್ವಾರಸಮುದ್ರವನ್ನು ರಾಜಧಾನಿಯಾಗಿಸಿಕೊಂಡ ಹೊಯ್ಸಳ ಸಾಮ್ರಾಜ್ಯವೂ ಮಧುರೆ ಯಲ್ಲಿ ಪ್ರಬಲರಾಗಿದ್ದ ಪಾಂಡ್ಯರಾಜ್ಯದೊಡನೆ ಪ್ರಸಿದ್ಧವಾಗಿದ್ದವು. ಅಲಹಾದಾಬಾದ್ ಹಾಗೂ ಖಾರ್‌ಗಳಲ್ಲಿನ ರಾಜ್ಯಪಾಲ ಆಗಿದ್ದ ಅಲ್ಲಾವುದ್ದೀನನು ದೇವಗಿರಿಯಮೇಲೆ ಕ್ರಿ.ಶ.1296 ರಲ್ಲಿ ದಂಡೆತ್ತಿ ಬಂದು ಅಸಾಧಾರಣ ಸಂಪದವನ್ನು ಸೂರೆ ಮಾಡಿದ. ನಂತರ ಬಹುಬೇಗನೆ ದೆಹಲಿಯ ಸಿಂಹಾಸನವನ್ನೂ ಆಕ್ರಮಿಸಿ ಸಾಮ್ರಾಟನಾದ. ಕ್ರಿ.ಶ. 1303ರಲ್ಲಿ ಆಂಧ್ರಪ್ರದೇಶದ ಮೇಲೆ ಧಾಳಿಮಾಡಿ ದ್ದರೂ ನಿಷ್ಫಲವಾಗಿ ಹಿಂದಿರುಗಬೇಕಾಯಿತು. ನಂತರ ಕ್ರಿ.ಶ. 1309 ರಲ್ಲಿ ತನ್ನ ಸೇನಾನಿ ಮಲ್ಲಿಕ್‌ಕಾಫರ್ ನ ನೇತೃತ್ವದಲ್ಲಿ ಮತ್ತೆ ದಂಡು ಕಳುಹಿಸಿದ, ಮಲ್ಲಿಕಾಫರ್‌ನು ಕಾಕತೀಯ ರಾಜಧಾನಿ ಓರುಗಲ್ಲನ್ನು ಆಕ್ರಮಿಸಿ ರಾಜಪ್ರತಾಪರುದ್ರದೇವನಿಂದ ಅಪಾರವಾದ ಐಶ್ವರ್ಯವನ್ನು ವಶಪಡಿಸಿಕೊಂಡ. ನಂತರ ದಕ್ಷಿಣದ ಹೊಯ್ಸಳ ರಾಜಧಾನಿಯನ್ನು ಮುತ್ತಿ ಅದನ್ನು ಲೂಟಿ ಮಾಡಿದ. ಆಮೇಲೆ ಪಾಂಡ್ಯ ರಾಜಧಾನಿಯನ್ನು ಬಳಸಿ ಸೂರೆಗೈದ. ಕ್ರಿ.ಶ.1310ರಲ್ಲಿ ಅಗಣಿತ ಸಂಪತ್ತಿನೊಡನೆ, ಅವನು ಹಿಂದಿರುಗಿದ. ತಿರುಮಲೆ - ತಿರುಪತಿ ಪ್ರಾಂತ್ಯಗಳು ಅವನ ಆಕ್ರಮಣದ ಹಾದಿಯಲ್ಲಿ ಇಲ್ಲದ್ದರಿಂದ ಉಳಿದು ಹೋದವು.

ಶ್ರೀರಂಗದಲ್ಲಿನ ಶ್ರೀರಂಗನಾಥಸ್ವಾಮಿ ಆಲಯದ ಪರಂಪರೆಯನ್ನು ಚಿತ್ರಿಸುವ - ಕೋಯಿಲ್‌ಒಳಗು - ಈ ಕಾಲದಲ್ಲಿ ನಡೆದ ಒಂದು ಘಟನೆಯನ್ನು ವಿವರಿಸುತ್ತದೆ. ಕ್ರಿ.ಶ.1327 ರಲ್ಲಿ ತನ್ನ ದಕ್ಷಿಣದ ದಂಡಯಾತ್ರೆಯಲ್ಲಿ ಮಲ್ಲಿಕಾಫರ್‌ನು ಶ್ರೀರಂಗದ ಸುಪಾಸಿ ನಲ್ಲಿ ಬಂದಿದ್ದ. ಆಗ ಸ್ಥಳೀಯರು ಆಲಯದ ವಾರ್ಷಿಕ ಉತ್ಸವವನ್ನು ನಡೆಸುತ್ತಲಿದ್ದದ್ದರಿಂದ ಅವರಿಗೆ ತಿಳಿದುಬಂದ ಈ ವಿಷಯವನ್ನು ತೀವ್ರವಾಗಿ ಪರಿಗಣಿಸಲಿಲ್ಲ. ಆದರೆ ಅವನು ಬಹು ಸಮೀಪಕ್ಕೆ ಬಂದಾಗ ವಿಷಯದ ಗಂಭೀರತೆಯನ್ನರಿತ ಅವರು ಹಲವು ತುರ್ತು ಕ್ರಮಗಳನ್ನು ಕೈಗೊಂಡರು. ಆಲಯದ ಗರ್ಭಗುಡಿಯನ್ನು ಮುಚ್ಚಿ,ಆಭರಣಗಳನ್ನು ಮುಚ್ಚಿಡಲಾಯಿತು. ಪಿಳ್ಳೈಲೋಕಾಚಾರ್ಯ ಮತ್ತಿತರ ಭಕ್ತರು ಶ್ರೀರಂಗನಾಥನ ಉತ್ಸವ ವಿಗ್ರಹವನ್ನು ಶ್ರೀರಂಗದಿಂದ ಹೊರಕ್ಕೆ ಸಾಗಿಸಿ, ಸ್ಥಳದಿಂದ ಸ್ಥಳಕ್ಕೆ ಸಾಗಿಸುತ್ತ ಕಡೆಗೆ ತಿರುಮಲೆ ಯನ್ನು ತಲುಪಿದರು. ಇಲ್ಲಿನ ಕಮರಿಯೊಂದರಲ್ಲಿ ಆ ಮೂರ್ತಿಯನ್ನು ಬಹುಕಾಲ ಇಡಲಾಗಿದ್ದಿತು. ಕೋಯಿಲ್ ಒಳಗು ಹೇಳುವ ಕಾಲ ಮಾತ್ರ ತಪ್ಪು-ಕಾರಣ ಮಲ್ಲಿಕಾಫರ್‌ನ ದಂಡಯಾತ್ರೆ ನಡೆದಿದ್ದು ಕ್ರಿ.ಶ.1309 -10 ರಲ್ಲಿ, ಕ್ರಿ.ಶ.1327 ರಲ್ಲಿ ಅಲ್ಲ. ಈ ಆಲಯಚರಿತ್ರೆಯಲ್ಲಿ ನಡೆದ ಘಟನೆಯ ಕಾಲವನ್ನು ಕ್ರಿ.ಶ.1310 ಎನ್ನಬೇಕು.

ಮಲ್ಲಿಕಾಫರ್‌ನು ದೆಹಲಿಗೆ ಹಿಂದಿರುಗಿದ ನಂತರದಲ್ಲಿ ದಕ್ಷಿಣದ ಹೈಂದವ ಸಾಮ್ರಾಜ್ಯಗಳ ತೊಂದರೆಗಳು ತೀರಲಿಲ್ಲ.ದೆಹಲಿಯ ಸಿಂಹಾಸನ ಖಿಲ್ಜಿಗಳಿಂದ ತೊಗ್ಲಖರಿಗೆ ಸೇರಿತು. ಕ್ರಿ.ಶ. 1321 ರಲ್ಲಿ ತನ್ನ ಮಗ ಉಲಗ್‌ಖಾನನ ನೇತೃತ್ವದಲ್ಲಿ ಒಂದುಸೈನ್ಯವನ್ನು

ಕಾಕತೀಯರ ಮೇಲೆ ದಂಡೆತ್ತಿ ಹೋಗಲು ಘಿಯಾಸುದ್ದೀನನು ಕಳುಹಿಸಿದ. ಆಂಧ್ರದ ಸೇನಾನಿಗಳು ತೀವ್ರ ವಿರೋಧವನ್ನೊಡ್ಡಿ ದಂಡನ್ನು ಹಿಮ್ಮೆಟ್ಟಿಸಿದರು. ಉಲಗ್‌ಖಾನನು ಕ್ರಿ.ಶ.1323 ರಲ್ಲಿ ಕಾಕತೀಯರು ಯಾವುದೇ ಸಿದ್ಧತೆಯನ್ನೂ ನಡೆಸದೆ ಇದ್ದಾಗ, ಪುನಃ ದಾಳಿಯನ್ನು ಆರಂಭಿಸಿದ. ಯುದ್ಧ ಕೋಲಾಹಲಭರಿತವಾಗಿ ಕಾಕತೀಯರ ರಾಜ ಸೆರೆಯಾಳಾದ. ಕಾಕತೀಯರ ಮೇಲಣ ವಾರಂಗಲ್ ಯುದ್ಧದ ನಂತರ ಸೈನ್ಯವು ಕರ್ನೂಲು, ಕಡಪಗಳನ್ನು ಮುತ್ತಿತು. ಉಲಗ್‌ಖಾನನು ಪೂರ್ವದ ನೆಲ್ಲೂರು ಪಶ್ಚಿಮದ ಕ್ವಿಲಾನ್‌ಗಳ ನಡುವಣ ಮಲಬಾರನ್ನು ಹಿಡಿದು,ಆಂಧ್ರ ಒರಿಸ್ಸಾಗಳ ತೀರಪ್ರದೇಶದಿಂದ ದೆಹಲಿಗೆ ಹಿಂದಿರುಗಿದ. ಹೀಗಾಗಿ ಎರಡನೆಯ ಬಾರಿಯೂ ತಿರುಪತಿ - ತಿರುಮಲೆಗಳು ಆಕ್ರಮಣಕಾರರ ಹಾದಿಯಲ್ಲಿಲ್ಲದೆ ಉಳಿದುಹೋಯಿತು.

ಉಲಗ್‌ಖಾನನು ತಾನು ಆಕ್ರಮಿಸಿದ ಪ್ರದೇಶಗಳಲ್ಲಿ ಸಮರ್ಥರಾದ ರಾಜಪ್ರತಿನಿಧಿಗಳನ್ನು ನೇಮಿಸಿದ. ದೆಹಲಿಗೆ ಹಿಂದಿರುಗಿದ ನಂತರ ತನ್ನ ತಂದೆಯನ್ನು ಹತ್ಯೆಗೈದು ಮಹಮದ್ ಬಿನ್ ತೊಗ್ಲಖ್ ನಾಮಧಾರಿಯಾಗಿ ಸಿಂಹಾಸನವನ್ನೇರಿದ. ಆನಂತರ ಆಂಧ್ರ ರಾಜ್ಯದವರು ತಮ್ಮ ಈ ಪರಾಧೀನತೆಯನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು. ಕಾಕತೀಯ ಪ್ರತಾಪರುದ್ರನ ಸೇನಾನಿಗಳು,ಸಾಮಂತರು ಪ್ರಜೆಗಳನ್ನು ಸೇರಿಸಿಕೊಂಡು ತಮ್ಮ ಮೇಲಣ ಸುಲ್ತಾನನ ರಾಜಪ್ರತಿನಿಧಿಗಳನ್ನು ಪದಚ್ಯುತಗೊಳಿಸಿ ಓಡಿಸಿದರು. ಹೀಗಾಗಿ ಆಂಧ್ರದ ತೀರಪ್ರದೇಶ,ತೆಲಂಗಾಣ, ರಾಯಲಸೀಮೆಗಳು ಸ್ವತಂತ್ರವಾದವು. ಉಲಗ್‌ಖಾನನು ಓರುಗಲ್ಲನ್ನು ಆಕ್ರಮಿಸಿದಾಗ ತಲೆ ತಪ್ಪಿಸಿಕೊಂಡವರಲ್ಲಿ, ಸಂಗಮ ವಂಶದವರೂ, ಕಾಕತೀಯ ಪ್ರತಾಪರುದ್ರನ ಕೋಶಾಧಿಕಾರಿಗಳೂ ಆಗಿದ್ದ ಹರಿಹರ, ಬುಕ್ಕಸೋದರರೂ ಇದ್ದರು. ಇವರಿಬ್ಬರೂ ತುಂಗಭದ್ರೆಯ ದಡದಲ್ಲಿದ್ದ ಕಿರುರಾಜ್ಯ ಕಂಪಿಲದಲ್ಲಿ ಆಶ್ರಯಪಡೆದರು. ಕಂಪಿಲರಾಯನ ಮೇಲೆ ಮಹಮದ್ ಬಿನ್ ತುಗ್ಲಖ್‌ನು ಕ್ರಿ.ಶ.1327 ರಲ್ಲಿ ಒಂದು ಸೈನ್ಯವನ್ನು ಕಳುಹಿಸಿದನು. ಕಂಪಿಲರಾಯನನ್ನು ಕೊಂದು ಹಲವರನ್ನುಸೆರೆಹಿಡಿಯಲಾಯಿತು. ಕಂಪಿಲ ರಾಜ್ಯವನ್ನಾಳಲು ಮುಸಲ್ಮಾನ ರಾಜ ಪ್ರತಿನಿಧಿಯೋರ್ವನ ನೇಮಕವಾಯಿತು. ಆದರೆ ಕೆಲವೇ ದಿನಗಳಲ್ಲಿ ಸ್ಥಳೀಯರು ದಂಗೆಯೆದ್ದು ರಾಜ ಪ್ರತಿನಿಧಿಯನ್ನು ಓಡಿಸಿದರು. ದೆಹಲಿಗೆ ಹೊರಟ ಸೆರೆಯಾದವರಲ್ಲಿ ಹರಿಹರ ಬುಕ್ಕರೂ ಇದ್ದು, ಸುಲ್ತಾನನು ಹರಿಹರನನ್ನು ರಾಜಪ್ರತಿನಿಧಿಯನ್ನಾಗಿಯೂ ಬುಕ್ಕನನ್ನು ಸೇನಾನಿಯಾಗಿಯೂ ಮಾಡಿ ಕೈ ತಪ್ಪಿದ ಕಂಪಿಲರಾಜ್ಯದಲ್ಲಿ ಶಾಂತಿ ಭದ್ರತೆಗಳನ್ನು ಸ್ಥಾಪಿಸಲು ಕಳುಹಿಸಿದ. ಈ ಸೋದರರು ದಂಗೆಯನ್ನಡಗಿಸಿ, ಇಡೀ ರಾಯಲಸೀಮೆಯ ಪ್ರಾಂತ್ಯದಲ್ಲಿ ಶಾಂತಿಯನ್ನು ಸ್ಥಾಪಿಸಿದರು. ನಂತರ ಸಂತ ವಿದ್ಯಾರಣ್ಯರ ಸಂಪರ್ಕಕ್ಕೆ ಬಂದ ಇವರು ಅವರ ಸ್ಫೂರ್ತಿಯಿಂದ ಒಂದು ಹೊಸ ಸಾಮ್ರಾಜ್ಯವನ್ನು ಕಟ್ಟಿ, ಹಿಂದೂಧರ್ಮ, ಸಂಸ್ಕೃತಿಗಳನ್ನು ವಿಧರ್ಮೀಯರ ಹೊಡೆತಗಳಿಂದ ರಕ್ಷಿಸಲು ಮುಂದಾದರು. ಹೀಗೆ ಕ್ರಿ.ಶ.1336 ರಲ್ಲಿ ತುಂಗಭದ್ರೆಯ ದಕ್ಷಿಣ ದಡದಲ್ಲಿ ವಿಜಯನಗರವೆಂಬ ನಗರವನ್ನು ಸ್ಥಾಪಿಸಿ, ಅದನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ತಮ್ಮ ಸ್ವಾತಂತ್ರ್ಯವನ್ನು ಘೋಷಿಸಿದರು. ಸುಲ್ತಾನನು ತೀವ್ರವಾದ ಇತರ ಸಮಸ್ಯೆಗಳ ಒತ್ತಡದಲ್ಲಿದ್ದುದರಿಂದ ಹರಿಹರ ಬುಕ್ಕರ ಅವಿಧೇಯತೆಯನ್ನು ತಡೆಯಲು ಯಾವ ಕ್ರಮವನ್ನೂ ಕೈಕೊಳ್ಳಲಾಗಲಿಲ್ಲ.

## 14. ವಿಜಯನಗರ ಸಾಮ್ರಾಟರು

ವಿಜಯನಗರದ ರಾಜರ ಕೈಸೇರಿತು ಚಿತ್ತೂರು ಜಿಲ್ಲೆ. ವಿಜಯನಗರ ಸಾಮ್ರಾಜ್ಯಸ್ಥಾಪನೆ ಆದನಂತರ ಕ್ರಿ.ಶ.1336 ರಿಂದ ಕ್ರಿ.ಶ.17 ಶತಮಾನದ ಕಡೆಯಭಾಗದವರೆಗೆ ನಾಲ್ಕು ವಂಶಗಳು - ಸಂಗಮ,ಸಾಳುವ,ತುಳುವ,ಅರವೀಡು - ವಂಶಗಳು ವಿಜಯನಗರವನ್ನು ಆಳಿದವು. ಕ್ರಿ.ಶ.1336 ರಲ್ಲಿ ಹರಿಹರನು ಸಂಗಮ ವಂಶದ ಸಾಮ್ರಾಜ್ಯ ಸ್ಥಾಪಿಸಿದಾಗ ರಾಜ್ಯವು ಪೂರ್ವದಲ್ಲಿ ನೆಲ್ಲೂರಿನಿಂದ ಪಶ್ಚಿಮದಲ್ಲಿ ಉತ್ತರ ಕರ್ನಾಟಕದ ಬಾದಾಮಿ ಧಾರವಾಡಗಳವರೆಗೆ ಹರಡಿತ್ತು. ಹರಿಹರನ ನಂತರ ಪ್ರಭುವಾದ ಬುಕ್ಕನು ತನ್ನ ಮಕ್ಕಳನ್ನು ಪ್ರಾಂತೀಯ ರಾಜಪ್ರತಿನಿಧಿಗಳನ್ನಾಗಿ ನಿಯಮಿಸಿ, ರಾಜ್ಯವನ್ನು ಒಂದುಗೂಡಿಸಿ ಪ್ರಭುಶಕ್ತಿಯನ್ನು ಹೆಚ್ಚಿಸಲುಪ್ರಯತ್ನಿಸಿದ. ಹೀಗಾಗಿ ಭಾಸ್ಕರ ಭವದೂರ ಉದಯಗಿರಿಯ ರಾಜ್ಯಪಾಲನಾಗಿಯೂ,ಕುಮಾರಕಂಪಣನು ಮುಳಬಾಗಿಲು, ಹಾಗೂ ಜಿಲ್ಲೆಯ ಒಂದು

ಭಾಗವನ್ನು ಒಳಗೊಂಡ ಪಡೈವೀಡುವಿಗೂ ರಾಜ್ಯಪಾಲಕನಾಗಿಯೂ ನೇಮಕವಾದರು. ಈ ಪ್ರಾಂತ್ಯದಲ್ಲಿ ಒಂದನೇ ಬುಕ್ಕನ ಹಾಗೂ ಕುಮಾರ ಕಂಪಣನ ಕೆಲವು ಶಾಸನಗಳಿವೆ. ಇವುಗಳಲ್ಲಿನ ಅತಿ ಪ್ರಾಚೀನವಾದದ್ದು ಬೇತಾರೀಖಿನದಾಗಿದ್ದು ಬುಕ್ಕನದಾಗಿದ್ದ ತಿರುಮಲೆಯ ಆಲಯಕ್ಕೆ ದಿನಕ್ಕೆರಡು ಸಂಧಿಗಳ ನೈವೇದ್ಯಕ್ಕಾಗಿ ನೀಡಿದ ಒಂದು ಗ್ರಾಮವನ್ನು ಗುರುತಿಸುತ್ತದೆ. ಕುಮಾರಕಂಪಣ ಹಾಗೂ ಅವನ ಅಧಿಕಾರಿಗಳ ಶಾಸನಗಳು ಹಲವೆಡೆ ದೊರೆತಿದ್ದು ಆಲಯಗಳಿಗೆ ನೀಡಿದ ದತ್ತಿಗಳನ್ನು ಗುರುತಿಸುತ್ತವೆ.ಅವನ ಅಧಿಕಾರಿಗಳಲ್ಲಿ ಸಾಳುವ ಮಂಗಿದೇವ,(ಕಂಪಣನ ಸೇನಾನಿ) ಸೋಮಪ್ಪ ; ಗೋಪಣ್ಣರುಗಳು ಉಲ್ಲೇಖಾರ್ಹರು. ಸಾಳುವ ಮಂಗಿದೇವನು ಚಿತ್ತೂರು, ಸುತ್ತಮುತ್ತಲ ಪ್ರದೇಶಗಳನ್ನು ಆಳುತ್ತಿದ್ದು ನಂತರ ಸಾಳುವರ ಕೇಂದ್ರವಾಯಿತು. ಸೋಮಪ್ಪನು ಕಂಪಣಪ್ರಧಾನಿಯಾಗಿದ್ದ. ಕಂಪಣನ ಎರಡು ಶಾಸನಗಳಲ್ಲಿ ಇವನು ಹೆಸರಿಸಲ್ಪಟ್ಟಿದ್ದಾನೆ. ಪುಲಿನಾಡು ಪ್ರಾಂತ್ಯದಲ್ಲಿ -ಸುಂಕ ವಸೂಲಿ ಮಾಡುತ್ತಿದ್ದ ಮಾಯದೇವರಿಗೆ ಚಿತ್ತೂರು ರಾಜ್ಯದಲ್ಲಿದ್ದ ಕೂರ್ಮಾನಿ ಗ್ರಾಮದ ವಿಷ್ಣುದೇವಾಲಯಕ್ಕಾಗಿ ಜಿಲ್ಲೆಯ ಮೂಲಕ ಹಾದುಹೋಗುವ ಎಲ್ಲ ವಸ್ತುಗಳ ಮೇಲೂ ಒಂದು ಭಾಗದ ಸುಂಕವನ್ನು ನೀಡಲು ಈತ ಆಜ್ಞೆಮಾಡಿದ. ಕಂಪಣನ ಬ್ರಾಹ್ಮಣ ಸೇನಾನಿಗಳಲ್ಲಿ ಒಬ್ಬ ಗೋಪಣ್ಣಚೆಂಜಿಯನ್ನು ಆಳುತ್ತಿದ್ದು, ಈತ ತಿರುಮಲೆಗೆ ತೀರ್ಥಯಾತ್ರೆಗೆಂದು ಹೋದಾಗ ಅಲ್ಲಿ ವೆಂಕಟೇಶ್ವರಸ್ವಾಮಿಯೊಡನೆ ಪೂಜೆಗೊಳ್ಳುತ್ತಿದ್ದ, ಶ್ರೀರಂಗಂ ಮೇಲಿನ ಮಹಮ್ಮದೀಯ ಧಾಳಿಯ ಕಾಲಕ್ಕೆ ಸುರಕ್ಷಿತವಾಗಿಡಲೆಂದು ಆಳಗಿಯ ಮಣವಾಳ ಪೆರುಮಾಳರನ್ನು ಶ್ರೀರಂಗದಿಂದ ತಿರುಮಲೆಗೆ ತರಲಾಗಿದ್ದುದನ್ನು ತಿರುಮಲೆಯ ಆಲಯದ ಅರ್ಚಕರ ಸಹಮತದೊಡನೆ ಮೊದಲು ಚೆಂಜಿಗೆ ತೆಗೆದುಕೊಂಡು ಹೋಗಿ ನಂತರ ಶ್ರೀರಂಗಕ್ಕೆ ಸೇರಿಸಿದ.

ಎರಡನೆ ಹರಿಹರನು ವಿಜಯನಗರದ ಸಿಂಹಾಸನವನ್ನು ಕ್ರಿ.ಶ.1377 ರಲ್ಲಿ ಏರಿದ ಹಾಗೂ ಕ್ರಿ.ಶ. 1404 ವರೆಗೆ ಆಳಿದ. 1370 ರಲ್ಲಿ ಆತನ ಮಗ ದೇವರಾಯನು ಉದಯಗಿರಿಯ ರಾಜ್ಯಪಾಲನಾದದ್ದು ವಿಜಯನಗರ ಕೊಂಡವೀಡುಗಳ ನಡುವಣ ಸಂಬಂಧದಲ್ಲಿ ಒಂದು ಹೊಸ ಘಟ್ಟ. ಈ ಪ್ರಾಂತ್ಯದಲ್ಲಿ ಎರಡನೇ ಹರಿಹರನ ಆಳ್ವಿಕೆಯನ್ನು ಹಲವು ಶಾಸನಗಳು ದಾಖಲಿಸುತ್ತವೆ. ತಮಿಳಿನ ಮಾಸಿ ತಿಂಗಳಿನಲ್ಲಿ ಶ್ರೀ ವೆಂಕಟೇಶ್ವರಸ್ವಾಮಿಯ ಆಲಯದಲ್ಲಿ ಒಂದು ಉತ್ಸವವನ್ನು ಆರಂಭಿಸಿದ ಸಂಗತಿಯನ್ನು ಇವುಗಳಲ್ಲಿ ಒಂದು ಹೆಸರಿಸುತ್ತದೆ. ಎರಡನೆ ಹರಿಹರನು ಕ್ರಿ.ಶ.1404 ರಲ್ಲಿ ತೀರಿಕೊಂಡನಂತರ ವಿಜಯನಗರ ರಾಜ್ಯದ ಉತ್ತರಾಧಿಕಾರಕ್ಕೆ ವಿವಾದವಾಯಿತು. ಈ ಒಂದು ಅವ್ಯವಸ್ಥೆಯ ಲಾಭ ಪಡೆಯಲು ಕೊಂಡವೀಡಿನ ರೆಡ್ಡಿಗಳು ಉದಯಗಿರಿ ರಾಜ್ಯದ ಮೇಲೆ ಆಕ್ರಮಣ ನಡೆಸಿ ಕ್ರಿ.ಶ. 1406 ರಲ್ಲಿ ಚಂದ್ರಗಿರಿ ಸೀಮೆಯಲ್ಲಿನ ಪುಲುಗುಲ ನಾಡಿನೊಂದಿಗೆ ಹಲವು ಸ್ಥಳಗಳನ್ನು ಆಕ್ರಮಿಸಿದರುಸೇನೆಯನ್ನು ಮುನ್ನಡೆಸಿದ ಮಲ್ಲರೆಡ್ಡಿಯು ರೆಡ್ಡಿರಾಜ -ಪೆದ್ದಕೋಮಟಿ ವೇಮ -ನದಾಯಾದಿ. ಕ್ರಿ.ಶ.1413 ರ ವರೆಗೆ ಆಕ್ರಮಿತ ಸೀಮೆಯುಲ್ಲಿಯೇ ಉಳಿದ. ಆದರೆ ಉದಯಗಿರಿಯಿಂದ ದೇವರಾಯನು ಸೇನೆಯನ್ನು ಕಳುಹಿಸಿ ಇವನನ್ನು ಸ್ಥಾನಭ್ರಷ್ಟನನ್ನಾಗಿಸಿದ. ಕ್ರಿ.ಶ.1405ರಿಂದ ಕ್ರಿ.ಶ.1418 ರ ವರೆಗಿನ ಹಲವು ಶಾಸನಗಳು ಒಂದನೇ ದೇವರಾಯನು ಈ ಪ್ರದೇಶದ ಹಿಡಿತ ಹೊಂದಿದ್ದನ್ನು ತಿಳಿಸುತ್ತವೆ. ಇವು ರಾಜನಿಂದಲೂ, ಯುವರಾಜ ವಿಜಯಬುಕ್ಕ ಅಥವಾ ವಿಜಯಭೂಪತಿ ಅಥವಾ ವೀರಬುಕ್ಕನಿಂದಲೂ, ಅವರ ಅಧೀನ ಅಧಿಕಾರಿಗಳಿಂದಲೂ ನೀಡಲಾದ ದತ್ತಿಗಳನ್ನು ದಾಖಲಿಸುತ್ತವೆ. ಈ ಪ್ರಾಂತ್ಯದಲ್ಲಿನ ಒಂದು ಶಾಸನ ಎರಡನೇ ಕಂಪಣನ ಮಗ ಜೊಮ್ಮನನ್ನು ಹೆಸರಿಸಿದೆ. ಎರಡನೇ ದೇವರಾಯನ (ಕ್ರಿ.ಶ.1422-1446) ಆಳ್ವಿಕೆಯನ್ನೂ ಹಲವಾರು ಶಾಸನಗಳು ದಾಖಲಿಸಿವೆ. ಈತನ ಅಧೀನನಾದ ಮಲ್ಲನ ಚಂದ್ರಗಿರಿ ರಾಜ್ಯವನ್ನು ಶಕ 1330 (ಕ್ರಿ.ಶ.1408) ರಿಂದ ಶಕವರ್ಷ 1366 (ಕ್ರಿ.ಶ.1444) ರ ವರೆಗೆ ಆಳಿದ. ಈತನ ಉತ್ತರಾಧಿಕಾರಿ ಸಾಳುವ,ಪೆರಿಮಲ್ಲಯದೇವ. ಗಜಪತಿರಾಜ ಕಪಿಲೇಂದ್ರನ ಮಗ ಹಮ್ಮೀರನು ಮಲ್ಲಿಕಾರ್ಜುನನ ಆಡಳಿತಕಾಲದಲ್ಲಿ (ಕ್ರಿ.ಶ.1463) ವಿಜಯನಗರದ ವಿರುದ್ಧ ದಂಡೆತ್ತಿ ಬಂದು ಅನೇಕ ಸ್ಥಳಗಳನ್ನು ಆಕ್ರಮಿಸಿದ್ದೇ ಅಲ್ಲದೆ ಚಂದ್ರಗಿರಿ ಕೋಟೆಯನ್ನೂ ಹಿಡಿದ. ಆದರೆ ಇದುವರೆಗೆ ತಿಳಿಯದಿರುವ ಕಾರಣಗಳಿಂದಾಗಿ, ಒರಿಸ್ಸಾದ ಸೈನ್ಯ ಈ ಪ್ರಾಂತ್ಯವನ್ನು ಬಿಟ್ಟು ಹೊರಟಿತು.

ವಿಜಯನಗರದ ಮೇಲಿನ ಗಜಪತಿಗಳ ಪದೇ ಪದೇ ಆಕ್ರಮಣಗಳು,ಮಲ್ಲಿಕಾರ್ಜುನನ ಹತ್ಯೆ, ಎರಡನೇ ವಿರುಪಾಕ್ಷನು ವಿಜಯನಗರ ಸಿಂಹಾಸನವನ್ನೇರಿದ್ದು - ದೀರ್ಘಕಾಲದಿಂದ ಕಾಯುತ್ತಿದ್ದ ವಿಚ್ಛಿದ್ರಕಾರಕ ಶಕ್ತಿಗಳಿಗೆ ಅವಕಾಶವನ್ನು ನೀಡಿದವು. ಕ್ರಿ.ಶ.1456 ರಲ್ಲಿ ಕುಲಧನವಾದ ಚಂದ್ರಗಿರಿ ರಾಜ್ಯವನ್ನು ಪಡೆದ ಚಂದ್ರಗಿರಿಯ ರಾಜ ಸಾಳುವಗುಂಡನ ಮಗ ಸಾಳುವನರಸಿಂಹನು ಅರಾಜಕತೆಯ ವರ್ಷಗಳಲ್ಲಿ ನಿಧಾನವಾಗಿ ತನ್ನ ಹಿಡಿತವನ್ನು ಚಿತ್ತೂರು,ಉತ್ತರ ದಕ್ಷಿಣ ಆರ್ಕಾಟುಗಳು, ಕೋಲಾರ ಜಿಲ್ಲೆಗೆ ವಿಸ್ತರಿಸಿದ. ಇವನ ಪ್ರಾಬಲ್ಯ ಎಷ್ಟು ಹೆಚ್ಚಿತೆಂದರೆ ಮಲ್ಲಿಕಾರ್ಜುನನ ಕಿರಿಯ ಮಗ ರಾಜಶೇಖರನು ಇವನ ಆಸ್ಥಾನದಲ್ಲಿ ಆಶ್ರಯಪಡೆದು ಹೆಚ್ಚಿನ ಒಳಸಂಚುಗಾರರಂತೆ ಸಾಳುವ ನರಸಿಂಹನೂ ರಾಜ್ಯದಲ್ಲಿ ಪ್ರಭುತ್ವವನ್ನು ಸ್ಥಾಪಿಸುವುದಕ್ಕಿಂತಲೂ, ಸಿಂಹಾಸನವನ್ನು ಕೈವಶಮಾಡಿ ಕೊಳ್ಳುವುದು ಸುಲಭವೆಂದು ಕಂಡುಕೊಂಡ. ಹೀಗಾಗಿ ಎರಡನೇ ವಿರುಪಾಕ್ಷನ ಉತ್ತರಾಧಿಕಾರಿಯಾಗಿ ಸಿಂಹಾಸನವನ್ನೇರಿದ ಪ್ರೌಢ ದೇವರಾಯನನ್ನು ಓಡಿಸುವಂತೆ, ನರಸನಾಯಕನ ಹಿರಿತನದಲ್ಲಿ ಒಂದು ಸೈನ್ಯವನ್ನು ಕಳುಹಿಸಿದ. ನರಸನಾಯಕನಿಗೆ ಯಾವುದೇ ಅಡ್ಡಿಯೂ ಉಂಟಾಗದೆ ಪ್ರೌಢದೇವರಾಯನು ರಾಜಧಾನಿಯನ್ನು ತ್ಯಜಿಸಿದ. ಸಾಳುವ ನರಸಿಂಹನು ನರಸನಾಯಕನ ಹಿಂದೆಯೇ ಬಂದು ಕ್ರಿ.ಶ.1485 ರಲ್ಲಿ ಪಟ್ಟಾಭಿಷಿಕ್ತನಾದ.

ಸಾಳುವ ನರಸಿಂಹನ ಪಟ್ಟಾಭಿಷೇಕದಿಂದಾಗಿ ವಿಜಯನಗರದಲ್ಲಿ ಎರಡನೇ ರಾಜವಂಶ -ಸಾಳುವವಂಶ ಅಧಿಕಾರಕ್ಕೆ ಬಂದಿತು. ಸಾಳುವ ನರಸಿಂಹನು ಕ್ರಿ.ಶ.1490 ರ ವರೆಗೆ ಆಳಿದ ಮೇಲೆ ಅವನ ಮಗ ಇಮ್ಮಡಿ ನರಸಿಂಹನು ಉತ್ತರಾಧಿಕಾರಿಯಾಗಿ ನರಸನಾಯಕನು ರಾಜಪ್ರತಿನಿಧಿಯಾದ. ಈ ಕಾಲದಲ್ಲಿ ಧರ್ಮಕ್ಕಾಗಿ ತನ್ನ ಜೀವನವನ್ನು ಮೀಸಲಾಗಿಟ್ಟ, ಕಂದಾಡೈ ರಾಮಾನುಜಯ್ಯಂಗಾರ್ಯನು ಪ್ರಮುಖನಾಗಿದ್ದ. ಸಾಳುವ ನರಸಿಂಹನಿಗೆ ಈತ ಗುರುವಾಗಿದ್ದಿರಬೇಕು ಹಾಗೂ ತಿರುಪತಿ-ತಿರುಮಲೆಗಳಲ್ಲಿ ಸಾಳುವ ನರಸಿಂಹನಿಂದ ಸ್ಥಾಪಿತವಾದ ಉಚಿತಾನ್ನ ಸತ್ರಗಳನ್ನು ನೋಡಿಕೊಳ್ಳುವುದರಲ್ಲಿ ನೆರವು ನೀಡಿರಬೇಕು. ಈತನ ನೆರವಿನಿಂದ ಸಂತುಷ್ಟನಾದ ಸಾಳುವನರಸಿಂಹನು ಈ ರಾಮಾನುಜ ಕೂಟಗಳಿಗಾಗಿ ತಾನು ದಾನ ನೀಡಿದ ಹಳ್ಳಿಗಳ ನಿರ್ವಹಣೆಯಲ್ಲಿ ಈತನಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡಿದ. ನರಸನಾಯಕನು ಕ್ರಿ.ಶ.1503 ರಲ್ಲಿ ಮರಣ ಹೊಂದಿ,ರಾಜ್ಯವನ್ನು ಹಾಗೂ ರಾಜ್ಯತ್ವವನ್ನು ಮಹತ್ವಾಕಾಂಕ್ಷಿಯಾದ ತನ್ನ ಮಗ ವೀರನರಸಿಂಹನಿಗೆ ಬಿಟ್ಟು ಹೋದ. ವೀರನರಸಿಂಹನು ಇಮ್ಮಡಿ ನರಸಿಂಹನನ್ನು ಸಿಂಹಾಸನಚ್ಯುತನನ್ನಾಗಿಸಿ ತಾನೇ ರಾಜನೆಂದು ಘೋಷಿಸಿಕೊಂಡು ಕ್ರಿ.ಶ.1505 ರಲ್ಲಿ ಪಟ್ಟಾಭಿಷಿಕ್ತನಾಗಿ ತುಳುವ ವಂಶವನ್ನು ಆರಂಭಿಸಿದ. ಕ್ರಿ.ಶ.1509 ರ ವರೆಗಿನ ಹಲವು ಶಾಸನಗಳು ಇವನ ಆಳ್ವಿಕೆಯನ್ನು ಗುರುತಿಸುತ್ತದೆ.

ವೀರನರಸಿಂಹನ ಮರಣಾನಂತರ ಅವನ ಮಲಸಹೋದರ ಕೃಷ್ಣದೇವರಾಯನು ವಿಜಯನಗರದ ಸಿಂಹಾಸನವನ್ನೇರಿದ ಈ ಪ್ರದೇಶದಲ್ಲಿ ಕಂಡುಬರುವ ಶಾಸನಗಳಲ್ಲಿ ಸುಮಾರು 85 ಇವನ ಆಳ್ವಿಕೆಯ ಕಾಲದವು. ಇವು ಶಕವರ್ಷ 1432 (ಕ್ರಿ.ಶ.1510) ರಿಂದ ಶಕವರ್ಷ 1451 (ಕ್ರಿ.ಶ.1529) ರ ವರೆಗಿನವು, ಇವುಗಳಲ್ಲಿ ಹಲವು ರಾಯ ಮತ್ತವನ ಇಬ್ಬರು ರಾಣಿಯರು ತಿರುಮಲ ದೇವಿ,ಚಿನ್ನಾದೇವಿಯರು,ತಿರುಮಲೆಗೆ ಹಲವುಬಾರಿ ಬಂದಾಗ (ಶ್ರೀ ವೆಂಕಟೇಶ್ವರಸ್ವಾಮಿ ಇವರ ಮನೆದೇವರು) ದೇವಾಲಯಕ್ಕೆ ನೀಡಿದ ದಾನಗಳನ್ನು ದಾಖಲಿಸುತ್ತವೆ. ಹಲವು ಶ್ರೀಕಾಳಹಸ್ತಿಯ ದೇವಾಲಯಕ್ಕೆ ನೀಡಿದ ದಾನಗಳನ್ನೂ, ಹಲವು ಶಾಸನಗಳು ಅವನ ಒಡೆತನವನ್ನು ಒಪ್ಪಿದ ಅವನ ಅಧಿಕಾರಿಗಳು ಹಲವು ದೇವಾಲಯಗಳಿಗೆ ನೀಡಿದ ದತ್ತಿಗಳನ್ನೂ ದಾಖಲಿಸುತ್ತವೆ. ಕೃಷ್ಣದೇವರಾಯನು ತಿರುಮಲೆಗೆ ಏಳು ಬಾರಿ ಆಗಮಿಸಿದ್ದು, ತನ್ನ ಕೃತಿಯಾದ -ಆಮುಕ್ತಮಾಲ್ಯದ - ವನ್ನು ಸ್ವಾಮಿಗೆ ಸಮರ್ಪಿಸಿದ್ದಾನೆ.

ಏನೇ ಆದರೂ ಅವನ ತಿರುಮಲೆಯ ಯಾತ್ರೆಗಳು ದೇವರನ್ನು ದರ್ಶಿಸಲೆಂದೇ ಮಾಡಿದ ತೀರ್ಥಯಾತ್ರೆಗಳಾಗಿರಲಿಲ್ಲ. ವಿಶೇಷವಾದ ಧಾರ್ಮಿಕ ಅವಧಾರಣೆಯನ್ನು ಹೊಂದಿದ ಕಡೆಯ ಎರಡು ಮೂರು ಯಾತ್ರೆಗಳ ಹೊರತು ಮಿಕ್ಕ ನಾಲ್ಕೂ ಅವನು ಗಜಪತಿ ರಾಜ್ಯದ ಮೇಲೆ ದಂಡೆತ್ತಿ ಹೋಗುವ ಕಾಲದಲ್ಲಿ ನೀಡಿದ ಭೇಟಿಗಳು. ಕ್ರಿ.ಶ.1413 ರ ಫೆಬ್ರವರಿ 10 ರಂದು ಅವನು ತನ್ನ

ಇಬ್ಬರು ರಾಣಿಯರೊಡನೆ ತಿರುಮಲೆಗೆ ಬಂದ. ಅಲ್ಲಿಂದ ಮುಂದಕ್ಕೆ ಶ್ರೀಕಾಳಹಸ್ತಿಗೆ ಬಂದು ಅಲ್ಲಿನ ದೇವರಿಗೆ ಆಭರಣಗಳನ್ನು ಅರ್ಪಿಸಿದ.

ಕ್ರಿ.ಶ.1513 ರ ಮೇ ತಿಂಗಳ ಎರಡರಂದು ಮತ್ತೆ ತಿರುಮಲೆಗೆ ಬಂದಿದ್ದ. ತಿರುಮಲೆಯಿಂದ ಹೊರಟ ಅವನು ಕ್ರಿ.ಶ1513 ರ ಮೇ ತಿಂಗಳ 11 ರಂದು ಶ್ರೀಕಾಳಹಸ್ತಿಯಲ್ಲಿದ್ದ. ಅದೇ ವರ್ಷದ ಜೂನ್ 8 ರಂದು ಮೂರನೆಯ ಬಾರಿಗೆ ವಿಜಯನಗರದಿಂದ ತಿರುಮಲೆ,ಶ್ರೀಕಾಳಹಸ್ತಿಗಳಿಗೆ ಹೊರಟು ರಾಜಧಾನಿಗೆ ಸೆಪ್ಟೆಂಬರ್ 20 ರಂದು ಹಿಂದಿರುಗಿದ. ತಿರುಮಲೆ ಕಾಳಹಸ್ತಿಗಳ ಈವಾಯು ವೇಗದ ಯಾತ್ರೆಗಳು ಕೆಲಕಾಲದಲ್ಲಿಯೇ ಕೊನೆಯಾದವು. ಕೃಷ್ಣದೇವರಾಯನ ಕೊನೆಗಾಲದಲ್ಲಿ ಉತ್ತರಾಧಿಕಾರಿಯ ಸಮಸ್ಯೆಅವನ ಕಾಲವನ್ನೂ, ಗಮನವನ್ನೂ ಸೆಳೆದಿರಬೇಕು. ಅವನು ತಾನೇ ಸೆರೆಗೊಳಿಸಿದ್ದ ತನ್ನ ಮಲಸಹೋದರ ಅಚ್ಯುತರಾಯನ್ನು ಚಂದ್ರಗಿರಿಯ ಸೆರೆಯಿಂದ ಬಿಡುಗಡೆಗೊಳಿಸಿ,ಅವನನ್ನು ತನ್ನ ಉತ್ತರಾಧಿಕಾರಿಯೆಂದು ಘೋಷಿಸಿದ. ಅಚ್ಯುತರಾಯನ ಪಟ್ಟಾಭಿಷೇಕ ಸರಳಸೂತ್ರ ವೇನಾಗಲಿಲ್ಲ. ಕೃಷ್ಣದೇವರಾಯನ ಅಳಿಯ ರಾಮರಾಜನು ಕೃಷ್ಣದೇವರಾಯನ ಚಿಕ್ಕ ಮಗನನ್ನು ಸಾಮ್ರಾಟನೆಂದು ಘೋಷಿಸಿ, ತಾನೇ ಸಿಂವಹಾಸನವನ್ನಾಕ್ರಮಿಸಲು ಪ್ರಯತ್ನಿಸಿದ. ಅದರೆ ಅಚ್ಯುತರಾಯನ ಆಪ್ತನೂ, ಸಾಮ್ರಾಜ್ಯದಲ್ಲಿಯೇ ಅತಿಪ್ರಭಾವ ಶಾಲಿಯೂ ಆಗಿದ್ದ ಸಾಳುವ ನಾಯಕನ ವಿರೋಧದಿಂದಾಗಿ ಈ ಪ್ರಯತ್ನ ನೆರವೇರಲಿಲ್ಲ. ಸಾಳುವ ನಾಯಕನು ರಾಜಧಾನಿಯನ್ನು ಆಕ್ರಮಿಸಿ ಚಂದ್ರಗಿರಿಯಿಂದ ಅಚ್ಯುತರಾಯನು ರಾಜಧಾನಿಗೆ ಬರುವವರಿಗೆ ಅದನ್ನು ರಕ್ಷಿಸಿದ.

ರಾಮರಾಜನ ವಿರೋಧವೇ ಅಚ್ಯುತರಾಯನನ್ನು ಒಂದು ಅಸಾಧಾರಣ ಕಾರ್ಯದಲ್ಲಿ ತೊಡಗಿಸಿರಬೇಕು. ತನ್ನ ಮಲಸಹೋದರನ ಮರಣ ವಾರ್ತೆಯನ್ನು ಕೇಳಿದ ಕೋಡಲೇ ಅಚ್ಯುತರಾಯನು ರಾಜಧಾನಿಗೆ ಪ್ರಯಾಣವಾಗುವ ಬದಲಿಗೆ ತಿರುಮಲೆನೆಡೆದು ಅಲ್ಲಿ ತನ್ನ ಪಟ್ಟಾಭಿಷೇಕವನ್ನು ನೆರವೇರಿಸಿಕೊಂಡ. ನಂತರ ಶ್ರೀಕಾಳಹಸ್ತಿಗೆ ಹೋಗಿ ಮತ್ತೊಮ್ಮೆ ಕಿರೀಟಧಾರಣ ಮಹೋತ್ಸವವನ್ನು ನಡೆಸಿಕೊಂಡ. ವಿಜಯನಗರದ ಅರಸರಲ್ಲಿ ಅಚ್ಯುತರಾಯನೇ ರಾಜಧಾನಿಯ ಹೊರಗೆ ಪಟ್ಟಾಭಿಷಿಕ್ತನಾದ ಮೊದಲ ರಾಜ ಎಂಬುದನ್ನು ಗಮನಿಸಬೇಕು. ಜೊತೆಗೇ ಒಂದಕ್ಕಿಂತ ಹೆಚ್ಚು ಬಾರಿ ಪಟ್ಟಾಭಿಷಿಕ್ತನಾದ ಮೊದಲ ರಾಜನೂ ಇವನೇ. ರಾಜಧಾನಿಯಲ್ಲಿತನ್ನ ವಿರೋಧಿಗಳು ಪ್ರಬಲರಾಗಬಹುದೆಂಬ ಅನುಮಾನದಿಂದ ಸಾಮ್ರಾಜ್ಯದ ಮೇಲೆ ತನ್ನ ಹಕ್ಕುದಾರಿಯನ್ನು ಬಲಗೊಳಿಸಲೆಂದು ಉದ್ದೇಶಪೂರ್ವಕವಾಗಿ ಎರಡು ಪುಣ್ಯಕ್ಷೇತ್ರಗಳಲ್ಲಿ ಅವನು ಪಟ್ಟಾಭಿಷಿಕ್ತನಾಗಿರಬೇಕು. ಸಾಮ್ರಾಜ್ಯದ ನಿರ್ವಹಣೆಯಲ್ಲಿರಾಮರಾಜರೊಡನೆ ಒಂದುರೀತಿಯ ರಾಜಿಯನ್ನೂ ಏರ್ಪಡಿಸಿಕೊಂಡ ನಂತರ ರಾಜಧಾನಿಗೆ ಬಂದು ಮೂರನೆಯ ಬಾರಿ ಪಟ್ಟಾಭಿಷಿಕ್ತನಾದ ಮೇಲೆ ಅವನ ಅಧಿಕಾರವನ್ನು ಎಲ್ಲರೂ ಗುರುತಿಸುವಂತಾಯಿತು. ಅಚ್ಯುತರಾಯನು ರಾಮರಾಜನೊಡನೆ ರಾಜಿಯಾದದ್ದು ಸಾಳುವ ನಾಯಕನಿಗೆ ಸರಿಬರದೆ ಅವನು ದಂಗೆಯೆದ್ದ. ಈ ದಂಗೆಯನ್ನು ಅಡಗಿಸಲು ಒಂದು ದೊಡ್ಡ ಸೈನ್ಯದೊಡನೆ ಅಚ್ಯುತರಾಯದಕ್ಷಿಣಕ್ಕೆ ಬಂದ. ಚಂದ್ರಗಿರಿಯಲ್ಲಿ ಸೈನ್ಯವನ್ನು ಬಿಟ್ಟು, ತಿರುಮಲೆ, ಕಾಳಹಸ್ತಿಗಳಿಗೆ ಹೋಗಿ ಅಲ್ಲಿನ ದೇವರುಗಳನ್ನು ಅರ್ಚಿಸಿ, ಬೆಲೆಬಾಳುವ ಆಭರಣಗಳನ್ನು ಅರ್ಪಿಸಿದ. ದಂಗೆಯನ್ನು ಅಡಗಿಸಿ,ಹಿಂದಿರುಗುವಾಗಲೂ ಈ ಆಲಯಗಳನ್ನು ದರ್ಶಿಸಿದ. ಅವನ ಈ ತಿರುಗು ಪ್ರಯಾಣದಲ್ಲಿ ಅವನೊಡನೆ ತಿರುವೆಂಗಡನಾಯಕನ ಆಲಯಕ್ಕೆ ಅವನ ಮಹಾರಾಣಿ ವರದಾದೇವಿಯೂ, ಕುಮಾರ ವೆಂಕಟಾದ್ರಿಯೂ ಇದ್ದರು. ಅವನು ಮಹಾದಾನಗಳನ್ನು - ಕಪಿಲ ಪಶುದಾನ - ಹಾಗೂ - ಸ್ವರ್ಣವರ್ಷಗಳನ್ನು - ಮಾಡಿ ಮುತ್ತುರತ್ನ,ವಜ್ರ ವೈಢೂರ್ಯಗಳಿಂದ ಕೂಡಿದ ಕಾಪು (ಕವಚ) ವನ್ನೂ ನಾಲ್ಕು ಚಿನ್ನದ ಬಳೆಗಳನ್ನೂ, ಶಿರೋಭೂಷಣವಾದ ವಜ್ರಗಳ ಜೋಡಿಉಚ್ಚಿಪ್ಪುಗಳನ್ನೂ, ವಜ್ರಕಿರೀಟದ ಮೌಳಿಮಣಿಯನ್ನೂ ವೆಂಕಟೇಶ್ವರಸ್ವಾಮಿಗೆ ಅರ್ಪಿಸಿದ. ಅವನ ಸಮರ್ಪಣೆಯಲ್ಲಿ - ಹವಳಗಳುಮುತ್ತುಗಳ ಹಾರಗಳೂ ಇದ್ದವು.

ಅಚ್ಯುತರಾಯನು ರಾಜಧಾನಿಯಲ್ಲಿ ಬಹುಕಾಲವಿರಲಾಗಲಿಲ್ಲ. ಅನಂತಪುರದ ಬಳಿಯ ಗುತ್ತಿಯು ದಂಗೆಕೋರರ ಕೈವಶವಾಗಿ ಅವರ ವಿರುದ್ಧ ಸೈನ್ಯ ನಡೆಸಬೇಕಾಯಿತು. ಸಮರ ಸಂಚಾರದ ಈ ಅವಕಾಶವನ್ನು ಅವನು ಮತ್ತೆ ತಿರುಮಲೆಯ ಯಾತ್ರೆಗಾಗಿ ಬಳಸಿಕೊಂಡು, ವರ್ಷದಲ್ಲಿ ಐದುದಿನಗಳಕಾಲ ತಿರುವೆಂಕಟಮುಡ್ಯೆಯಾನ್ ಹಾಗೂ ಅಲರಮೇಲ್ ಮಂಗೈಯರಿಗೆ,ಲಕ್ಷ್ಮೀದೇವಿ ಮಹೋತ್ಸವವೆಂಬ ಉತ್ಸವವನ್ನು ಪುನರ್ವಸು ತಿರುನಾಳ್ ಎಂಬ ಉತ್ಸವವನ್ನು ಪುನರ್ವಸು ನಕ್ಷತ್ರದ ದಿನದಲ್ಲಿ (ವರ್ಷದಲ್ಲಿ ಹದಿಮೂರು ದಿನ) ರಘುನಾಥ (ಶ್ರೀರಾಮ) ನಾಚ್ಚಿಯಾರ್ (ಸೀತೆ) ಹಾಗೂ ಇಳಯ ಪೆರುಮಾಳ್ (ಲಕ್ಷ್ಮಣ) ರಿಗೆ ನಡೆಸ ಬೇಕೆಂದೂ, ಎರಡು ಹೊಸ ಉತ್ಸವಗಳನ್ನು ಸ್ಥಾಪಿಸಿದ. ವಿಜಯನಗರಕ್ಕೆ ಶಕವರ್ಷ 1458 (ಕ್ರಿ.ಶ.1536) ರಲ್ಲಿ ಅವನು ಹಿಂದಿರುಗಿರಬೇಕು.

ಕ್ರಿ.ಶ.1542 ರಲ್ಲಿ ಅಚ್ಯುತರಾಯನ ಆಳ್ವಿಕೆ ಕೊನೆಯಾಗಿ,ಅವನ ಮಗ ವೆಂಕಟನೂ, ಅವನ ಭಾವಮೈದುನ ಸಲಕರಾಜು ತಿರುಮಲನೂ ಸ್ವಲ್ಪಕಾಲ ಸಿಂಹಾಸನಕ್ಕೆ ಬಂದಿರಬೇಕು. ಅಚ್ಯುತರಾಯನ ಮರಣವು ವೆಂಕಟನನ್ನು ಬೆಂಬಲಿಸಿದ ಸಲಕರಾಜತಿರುಮಲನಿಗೂ ಸದಾಶಿವರಾಯನನ್ನು (ಅಚ್ಯುತರಾಯನ ತಮ್ಮನಾಗಿ ನಿಧನ ಹೊಂದಿ ರಂಗರಾಯನ ಮಗನನ್ನು) ಬೆಂಬಲಿಸಿದ ಅಳಿಯ ರಾಮರಾಜನಿಗೂ ಪುನಃ ಘರ್ಷಣೆಯಲ್ಲಿ ತೊಡಗಲು ಬಾವುಟ ಬೀಸಿದಂತಾಯಿತು. ಆದರೆ ತುಮುಲವು ಸದಾಶಿವರಾಯನ ಗೆಲುವಿನಲ್ಲಿ ಕೊನೆಗೊಂಡಿತು. ಕ್ರಿ.ಶ.1543 ರಲ್ಲಿ ಸದಾಶಿವರಾಯನು ಸಿಂಹಾಸನವನ್ನೇರಿ, ರಾಮರಾಯನು ರಾಜಪ್ರತಿನಿಧಿಯಾದ.

ರಾಮರಾಜನ ಶತ್ರುಗಳು ತಮ್ಮ ವಿರೋಧಿಯು ಶಾಶ್ವತವಾಗಿ ಅಧಿಕಾರ ಪಡೆಯುವುದನ್ನು ಸಹಿಸಲಾಗದೆ ಅವನ ಅಧಿಕಾರವನ್ನು ಕೀಳ್ಗಳೆಯಲು ಪ್ರಯತ್ನಿಸಿದರು. ಅವರುಗಳು ಚಂದ್ರಗಿರಿ ಕೋಟೆ ಹಾಗೂ ಅವರ ಆ ಪ್ರಾಚೀನ ಪ್ರಾಂತ್ಯಗಳನ್ನು ಆಕ್ರಮಿಸಿದರು. ಇನ್ನೂ ದಕ್ಷಿಣದ ಸಾಮಂತರು ಕಪ್ಪಗಾಣಿಕೆಗಳನ್ನು ನೀಡದೆ ಹೋದರು. ಈ ದಂಗೆಯನ್ನು ಸೈನಿಕ ಕಾರ್ಯಾಚರಣೆಯಿಂದ ಅಡಗಿಸಲಾಯಿತು. ರಾಮರಾಜನ ನಿರಂತರ ಬೆಳೆಯುತ್ತಿದ್ದ ಪ್ರಭಾವ ಹಾಗೂ ತಮ್ಮೊಳಗಿನ ಅಂತರಂಗ ವ್ಯವಹಾರದಲ್ಲಿ ಅವನು ಕೈಹಾಕುವುದನ್ನು ದಕ್ಷಿಣದ ಬಹಮನಿ ಸುಲ್ತಾನರು ಸಹಿಸಲಾರದಾದರು. ಅವನ ಅಧಿಕಾರ ಅತ್ಯುನ್ನತವಾದಾಗ ಈ ಸುಲ್ತಾನರು ಒಂದಾಗಿ ಕ್ರಿ.ಶ.1565 ರಲ್ಲಿ ರಕ್ಕಸತಂಗಡಿ ಯುದ್ಧ ಮಾಡಿ ರಾಮರಾಜನನ್ನು ಮುಗಿಸಿದರು.

ಅಳಿಯ ರಾಮರಾಜನ ಮರಣಾನಂತರ ಅವನ ಸೋದರ ತಿರುಮಲನು ಸಾಮ್ರಾಟ ಸದಾಶಿವನ ಏಕಮಾತ್ರ ರಾಜಪ್ರತಿನಿಧಿಯೂ ರಾಜ್ಯ ರಕ್ಷಕನೂ ಆದ. ತನ್ನ ಅಪೇಕ್ಷೆಯಂತೆ ರಾಜಮುದ್ರೆಯನ್ನೂ ಲಾಂಛನಗಳನ್ನೂ ಹೊಂದುವಲ್ಲಿ ಅವನಿಗೆ ರಾಜಧಾನಿಯ ಅಂದಿನ ವಾತಾವರಣ ಅನುಕೂಲವಾಗಿಲ್ಲವೆನ್ನಿಸಿತು. ಹೀಗಾಗಿ ವಿಜಯನಗರವನ್ನು ತ್ಯಜಿಸಿ ಅನಂತಪುರದ ಪೆನುಗೊಂಡೆಗೆ ಆಗವಿಸಿದ. ನಂತರ ತನ್ನ ಸಾಮ್ರಾಜ್ಯವನ್ನು ಅದರ ಮೂರು ಪ್ರಧಾನ ಭಾಷೆಗಳಿಗನುಣವಾಗಿ ಮೂರುಭಾಗಮಾಡಿ ಒಂದೊಂದನ್ನೂ ತನ್ನ ಒಬ್ಬೊಬ್ಬ ಮಗನಿಗೆ ನೀಡಿದ. ಇದರಿಂದಾಗಿ ಅವನ ಕಿರಿಯಮಗ ವೆಂಗಟನು ತಮಿಳುಭಾಷೆಯ ರಾಜ್ಯದ ರಾಜ್ಯಪಾಲನಾಗಿ ಚಂದ್ರಗಿರಿ ಕೋಟೆಯಿಂದ ಆಡಳಿತ ನಡೆಸಿದ. ಕ್ರಿ.ಶ.1570 ರಲ್ಲಿ ಸದಾಶಿವನನ್ನು ಪದಚ್ಯುತಗೊಳಿಸಿ ತಿರುಮಲನು ತಾನೇ ಸಾಮ್ರಾಟನಾದ. ಆದರೆ ಕೆಲತಿಂಗಳಲ್ಲೆ ಮೃತನಾದ. ನಂತರ ಅವನ ಮಗ ಒಂದನೇ ಶ್ರೀರಂಗನು ರಾಜನಾದ. ಇವನ ಕಾಲದಲ್ಲಿ ಕ್ರಿ.ಶ1576 ರಲ್ಲಿ ಬಿಜಾಪುರದ ಸುಲ್ತಾನ ಅಲಿ ಅದಿಲ್‌ಶಹನ ಧಾಳಿಯನ್ನೆದುರಿಸ ಬೇಕಾಯಿತು. ಸುಲ್ತಾನನ ಧಾಳಿಯಾದಾಗ ರಾಜನು ಸಮಸ್ತ ಸಂಪತ್ತಿನೊಡನೆ ಚಂದ್ರಗಿರಿ ಕೋಟೆಗೆ ಹಿಂದೆಗೆದ. ರಾಯನೊಡನೆ ಸಂಧಿಯನ್ನು ಮಾಡಿಕೊಳ್ಳಲು ಸುಲ್ತಾನನು ಫಜಲ್‌ಖಾನನ್ನು ಚಂದ್ರಗಿರಿ ಕೋಟೆಗೆ ಕಳುಹಿಸಿದ. ಫಜಲ್‌ಖಾನನು ಶ್ರೀರಂಗರಾಯನನ್ನು ತನ್ನೊಡನೆ ಆಲಿ ಅದಿಲ್‌ಷಹನ ಬಳಿ ಬಂದು ಸಂಧಿಯನ್ನು ಮಾಡಿಕೊಳ್ಳಲು ಒಡಂಬಡಿಸಿದ. ಶ್ರೀರಂಗರಾಯನು ಕ್ರಿ.ಶ.1584 ರ ವರೆಗೆ ಆಳ್ವಿಕೆ ನಡೆಸಿ ಅಪುತ್ರಕನಾಗಿ ಮರಣಹೊಂದಿದ.

ಎರಡನೇ ವೆಂಕಟನು ಕ್ರಿ.ಶ.1585 ರಲ್ಲಿ ಗದ್ದುಗೆಯನೇರಿದ. ಇವನ ಆಳ್ವಿಕೆಯಲ್ಲಿ ಗೋಲ್ಕೊಂಡದ ಸುಲ್ತಾನ ಮಹಮದ್ ಕುಲಿಯ ಧಾಳಿಯಾಯಿತು. ಸುಲ್ತಾನನ ಸೈನ್ಯ ತನ್ನ ಎದುರಿಗೆ ಬಂದವರನೆಲ್ಲ ಧೂಳೀಪಟ ಮಾಡಿದ್ದರಿಂದ ವೆಂಕಟನು ಶಾಂತಿಗಾಗಿ

ಮೊರೆಯಿಡಬೇಕಾಯಿತು. ತನಗೆ ದೊರೆತ ಈ ಮಾತುಕತೆಯ ಅವಕಾಶವನ್ನು ಚೆನ್ನಾಗಿ ಬಳಸಿಕೊಂಡ ವೆಂಕಟನು ನಂತರಗೋಲ್ಕೊಂಡದ ಸುಲ್ತಾನನನ್ನು ಧಿಕ್ಕರಿಸಿದ. ಸುಲ್ತಾನನ ಒಂದು ಸೈನ್ಯ ರಾವಿಳ್ಳ ವಂಶದವರ ನೇತೃತ್ವದಲ್ಲಿ ದಂಡೆತ್ತಿ ಬರಯಾಯಲ್ಪಾಡು ತಾಲ್ಲೂಕಿನ ಗುರ್ರಂಕೊಂಡ ದುರ್ಗವನ್ನು ಸೇರಿತು. ಎರಡನೇ ವೆಂಕಟನು ಧಾಳಿಕಾರರನ್ನು ಓಡಿಸಲು ಮಟ್ಲ ಅನಂತನನ್ನು ನಿಯಮಿಸಿದ. ಮಟ್ಲ ಅನಂತನು ತನ್ನ ಸೈನ್ಯದೊಡನೆ ಗುರ್ರಂಕೊಂಡಕ್ಕೆ ಬಂದು ಕೋಟೆಗೆ ದಿಗ್ಬಂಧವನ್ನುಂಟುಮಾಡಿ ಕುಳಿತ. ರಾವಿಳ್ಳಸೇನಾನಿ ತನ್ನ ಬಳಿಯಿದ್ದ ಮದ್ದುಗುಂಡು ಸಾಮಾಗ್ರಿಯ ದಾಸ್ತಾನಿನಿಂದ ಧೈರ್ಯವಾಗಿ ಶತ್ರುವನ್ನೆದುರಿಸಿದರೂ ಅನಂತನು ಸ್ಥೈರ್ಯದಿಂದ ಘೋರ ನಡೆಸಿ ಮುತ್ತಿಗೆಯನ್ನು ಮುಂದುವರಿಸಿ ಕೊನೆಗೆ ಒಂದು ಕಡೆಯ ಕಾವಲು ಗೋಪುರವನ್ನುರುಳಿಸಿ ಒಳನುಗ್ಗಿದಾಗ, ರಾತ್ರಿ ಪಡೆಗಳು ಕೋಟೆಯನ್ನು ರಕ್ಷಿಸಿಕೊಳ್ಳಲಾಗಲಿಲ್ಲ. ರಾವಿಳ್ಳ ಸೇನಾನಿ ಪರಿಸ್ಥಿತಿಯ ತೀವ್ರತೆಯನ್ನರಿತು ಶಾಂತಿಯ ಧ್ವಜಹಾರಿಸಿದ. ಪ್ರಾಯಶಃ ಕೋಟೆಯನ್ನು ಒಪ್ಪಿಸಿ ಹಿಂದಿರುಗಿರಬೇಕು. ಎರಡನೇ ವೆಂಕಟನ ಆಳ್ವಿಕೆ ಒಳಸಂಚುಗಳನ್ನೂ ಎದುರಿಸಬೇಕಾಯಿತು. ನಾದೇಂಡ್ಲ ಕೃಷ್ಣಮರಾಜನು ದಂಗೆಯೆದ್ದ. ಅವನನ್ನು ಸೆರೆಹಿಡಿದು ಚಂದ್ರಗಿರಿಗೆ ಒಯ್ಯಲಾಯಿತು. ಅವನು ತನ್ನ ಮರಣದ ವರೆಗೆ ಸೆರೆಯಲ್ಲಿಯೇ ಇದ್ದ.

ಕ್ರಿ.ಶ.1614 ರಲ್ಲಿ ಎರಡನೇ ವೆಂಕಟ ತೀರಿಕೊಂಡು, ನಂತರ ಎರಡನೇ ಶ್ರೀರಂಗನೂ , ಅವನಾದ ಮೇಲೆ ರಾಮದೇವನೂ ಸಾಧಾರಣ ಶಾಂತಿಯ ಆಳ್ವಿಕೆ ನಡೆಸಿದರು. ರಾಮದೇವನ ಮರಣದಿಂದಾಗಿ ರಾಜ್ಯದಲ್ಲಿ ಅರಾಜಕತೆ,ಅಂತರ್ಯುದ್ಧಗಳು ತಲೆದೋರಿದವು. ಉತ್ತರಾಧಿಕಾರಿಯ ಯುದ್ಧದಲ್ಲಿ ಗೆದ್ದು ಬಂದ ಮೂರನೆಯ ವೆಂಕಟನಿಗೆ ಒಳಯುದ್ಧಗಳೂ, ಹೊರ ಆಕ್ರಮಣಗಳೂ ತಲೆನೋವಾದವು. ಹೊರಗಣ ಧಾಳಿಗಳಲ್ಲಿ ಕ್ರಿ.ಶ.1642ರ ಕುತುಬ್‌ಷಾಹಿ ರಾಜ ಅಬ್ದುಲ್ಲಾ ಕುತುಬ್‌ಷಹನ ಧಾಳಿ ಪ್ರಮುಖವಾದದ್ದು. ತಕ್ಕ ಪ್ರತಿರೋಧವನ್ನು ನೀಡಲಾಗದೆ ರಾಯನ ಸ್ನೇಹಿತರು ಅವನನ್ನು ತೊರೆಯುವಂತಾಗಿ ರಾಯನೆ ಚಿತ್ತೂರಿನ ಪರ್ವತಾವಳಿಯಲ್ಲಿ ವನವಾಸಿಯಾಗಬೇಕಾಯಿತು. ನಾರಾಯಣವನದ ಕಾಡುಗಳಲ್ಲಿ ರಾಯ ಮರಣೋನ್ಮುಖನಾಗಿದ್ದಾಗ ಅವನ ಸೋದರಳಿಯ ಮೂರನೇ ಶ್ರೀರಂಗ ವಿಜಯನಗರದ ಸಿಂಹಾಸನವನ್ನು ದಕ್ಕಿಸಿಕೊಳ್ಳಲು, ವಂಶ ಗೌರವವನ್ನುಳಿಸುವಂತೆ ಮುಂದೆ ಬಂದ.

ಕ್ರಿ.ಶ.1642 ರ ಅಕ್ಟೋಬರ್ 29 ರಲ್ಲಿ ಮೂರನೆಯ ಶ್ರೀರಂಗನು ಪಟ್ಟಾಭಿಷಿಕ್ತನಾದ. ಅವನು ಮಾಡಬೇಕಾಗಿದ್ದ ಮೊದಲ ಕೆಲಸವೆಂದರೆ ತನ್ನ ರಾಜ್ಯದಲ್ಲಿದ್ದ ಆಕ್ರಾಮಕರನ್ನು ಹೊರತಳ್ಳುವುದು. ಕ್ರಿ.ಶ.1643 ರಲ್ಲಿ ಗೋಲ್ಕೊಂಡದ ಸೈನ್ಯದ ಮುನ್ನಡೆಯನ್ನು ತಡೆಯಲು ಅವನು ತಿರುಪತಿಗೆ ಬಂದು ತಳವೂರಿದ. ಅವನ ಬಳಿ ದೊಡ್ಡದಾದ ಸೈನ್ಯವಿದ್ದರೂ ಹೆಚ್ಚು ಪ್ರಬಲ ಶಸ್ತ್ರಧಾರಿ ಶತ್ರುವನ್ನು ಎದುರಿಸಲು ಹೆದರಿದ. ಜೊತೆಗೇ ಅವನ ಸಾಮಂತರಲ್ಲಿ ಹಲವರ ಒಳಸಂಚುಗಳು ಅವನ ಅಸಹಾಯಕತೆಯ ನಿರ್ವಿಣ್ಣಭಾವವನ್ನು ಹೆಚ್ಚಿಸಿತ್ತು. ಶ್ರೀಕಾಳಹಸ್ತಿಯ ದಾಮೆರ್ಲ ವೆಂಕಟಪತಿ ನಾಯಕನು ಶ್ರೀರಂಗನು ರಾಜನಾಗಿದ್ದಾಗಿನಿಂದಲೇ ಅವನ ವಿರೋಧಿಯಾಗಿದ್ದ ಶತ್ರುವನ್ನು ಆಕ್ರಮಣಕ್ಕೆ ಹುರಿದುಂಬಿಸಿದ. ಗೋಲ್ಕೊಂಡದ ಸೈನ್ಯ ಬಂದಾಗ ಶ್ರೀರಂಗನು ಮೊದಲು ನಾರಾಯಣವನಕ್ಕೂ ನಂತರ ವೆಲ್ಲೂರಿಗೂ ಹಿಮ್ಮರಳಿದ. ತಿರುಗಿಬಂದಮೇಲೆ ವೆಂಕಟನಾಯಕನ ಒಳಸಂಚು ತಿಳಿದುಕೊಂಡು, ಅವನನ್ನು ಬಂಧಿಸಿ ಸೆರೆಯಲ್ಲಿಟ್ಟು, ಅವನನ್ನು ಮರಣದಂಡನೆಗೆ ಗುರಿಮಾಡಬಹುದಾಗಿದ್ದರೂ ಕ್ಷಮಿಸಿ ಅವನ ಸಂಪತ್ತಿನ ಒಂದು ಭಾಗವನ್ನು ಕಿತ್ತುಕೊಂಡ

ರಾಜ್ಯಕ್ಕೆ ಮತ್ತೆ ಬಿಜಾಪುರ, ಗೋಲ್ಕೊಂಡದವರಿಂದ ಕಿರಿಕಿರಿಯಾಯಿತು. ಬಿಜಾಪುರದ ಸುಲ್ತಾನನು ಮುಸ್ತಾಫಾಖಾನನ ನೇತೃತ್ವದಲ್ಲಿ ಸೈನ್ಯವನ್ನು ಕಳುಹಿದರೆ,ಗೋಲ್ಕೊಂಡ ಸೈನ್ಯವು ಮಹಮ್ಮದ್ ಮೀರ್‌ಜುಮ್ಲನ ನೇತೃತ್ವದಲ್ಲಿಧಾಳಿಯಿಟ್ಟಿತು. ಮುಸ್ತಾಫಾಖಾನನು ಜಿಲ್ಲೆಯ ಬುಕ್ಕಪಟ್ಟಣದ ಮೂಲಕ ವೆಲ್ಲೂರಿಗೆ ನಡೆದರೆ ಮತ್ತೊಂದು ಪಡೆ ಖಾನ್ - ಏ - ಖಾನ್ ನ ನೇತೃತ್ವದಲ್ಲಿ ಗುರ್ರಂಕೊಂಡಕ್ಕೆ ಲಗ್ಗೆ ಹಾಕಿತು. ಶ್ರೀರಂಗನು ಸ್ವರಕ್ಷಣೆಗೆಂದು ವೆಲ್ಲೂರಿನ ರಾಣಿಯರಿಂದ ಆಭರಣಗಳನ್ನೂ, ತಿರುಮಲೆಯ ಆಯದಿಂದ ಧನವನ್ನೂ ವೆಚ್ಚಗಳಿಗಾಗಿ ಪಡೆದು ನಾನಾವಿಧವಾಗಿ ಪ್ರಯತ್ನಿಸಿದ. ಗೋಲ್ಕೊಂಡದ ಸೈನ್ಯ ಮೀರ್‌ಜುಮ್ಲಾನ ಒಡೆತನದಲ್ಲಿಪೂರ್ವ ಕರಾವಳಿಯಲ್ಲಿ ನಡೆದು ಚಂದ್ರಗಿರಿ,ತಿರುಪತಿಗಳನ್ನು ಹಿಡಿಯಿತು. ಶ್ರೀರಂಗನೂ ರಾಜ್ಯವನ್ನು ರಕ್ಷಿಸುವ ಆಸೆಯನ್ನು ಕೈಬಿಟ್ಟು ಕೊಂಡಿರ

ಬೇಕು. ಗುರ್ರಂಕೊಂಡ ದುರ್ಗವೂ ಪತನವಾಯಿತು. ಅವನು ತಂಜಾವೂರು ನಂತರ ಮೈಸೂರು ಪ್ರಾಂತ್ಯಕ್ಕೆ ಓಡಿದ. ನಂತರದ ಮೂರು -ನಾಲ್ಕು ವರ್ಷಗಳಲ್ಲಿನ ಶ್ರೀರಂಗನ ಮೈಸೂರು ಸೀಮೆಯಲ್ಲಿನ ಅಲೆದಾಟದ ಬಗ್ಗೆ ಹೆಚ್ಚು ತಿಳಿದಿಲ್ಲ. ಮೈಸೂರುಸೀಮೆಯಲ್ಲಿ ಅವನ ಹಿಡಿತ ಹೆಚ್ಚು ಕಾಲವಿರಲಿಲ್ಲ. ಈ ಮಧ್ಯೆ ಕರ್ನಾಟಕದಲ್ಲಿ ಮೀರ್‌ಜುಮ್ಲಾನ ಪ್ರಭಾವ ಹೆಚ್ಚುತ್ತಿರುವುದನ್ನು ಗಮನಿಸಿದ ಕುತುಬ್ ಷಾಹಿ ಸುಲ್ತಾನ ಕುತುಬ್‌ಷಹನು ಮೀರ್‌ಜುಮ್ಲಾನ ಪ್ರಭಾವವನ್ನು ತಗ್ಗಿಸಬೇಕೆಂದುಕೊಂಡ. ಇದರಿಂದಾಗಿ ಇಬ್ಬರಲ್ಲೂ ಭಿನ್ನಾಭಿ ಪ್ರಾಯವುಂಟಾಯಿತು.

ಇದರಿಂದಾಗಿ ಶ್ರೀರಂಗನು ಕರ್ನಾಟಿಕಕ್ಕೆ ಹಿಂದಿರುಗಿ ಬಿಜಾಪುರದವರು ಆಕ್ರಮಿಸಿದ್ದ ಸ್ಥಳಗಳನ್ನು ಪುನಃ ಪಡೆಯಲು ಮೀರ್ ಜುಮ್ಲಾ ಪ್ರಚೋದಿಸಿದ. ಬಿಜಾಪುರದ ಸೇನಾನಿ ಖಾನ್‌ಮಹಮದನು ತಕ್ಷಣವೇ ವೆಲ್ಲೂರಿಗೆ ಬಂದು ಅಲ್ಲಿ ಬಿಜಾಪುರದ ಅಧಿಕಾರ ವನ್ನು ಪುನಃ ಸ್ಥಾಪಿಸಿಲು ಯತ್ನಿಸಿದ. ಯುದ್ಧದಲ್ಲಿ ಶ್ರೀರಂಗನು ಗೆದ್ದು ಖಾನನು ಚಂದ್ರಗಿರಿ ಹಾಗೂ ಸುತ್ತಣ ರಾಜ್ಯವನ್ನು ಬಿಟ್ಟುಕೊಟ್ಟು ಶಾಂತಿಯನ್ನು ಪಡೆಯಬಹುದೆಂದು ಒಪ್ಪಂದವಾಯಿತು. ಮೀರ್‌ಜುಮ್ಲನ ಸಂಚಿನಿಂದ ಕೋಪಗೊಂಡ ಅಬ್ದುಲ್ಲಾ ಕುತುಬ್‌ಷಹನು ಶ್ರೀರಂಗನೊಡನೆ ಒಪ್ಪಂದಮಾಡಿಕೊಂಡ. ಇದರಿಂದಾಗಿ ಶ್ರೀರಂಗನು ತಾನು ಕಳೆದುಕೊಂಡ ಪ್ರದೇಶವನ್ನೆಲ್ಲ ಮರಳಿಪಡೆಯುವಂತಾ ಯಿತು. ಅವನು ತಿರುಪತಿಯನ್ನು ವಶಪಡಿಸಿಕೊಂಡು ಇತರ ಪ್ರಾಂತ್ಯಗಳನ್ನು ಆಕ್ರಮಿಸುವ ಯೋಜನೆಗೈದ,ಆದರೆ ಗೋಲ್ಕೊಂಡದ ನವಾಬನು ತನ್ನ ಸ್ನೇಹದ ಧೋರಣೆಯನ್ನು ಬದಲಾಯಿಸಿ ಕರ್ಣಾಟಿಕದ ಮೇಲೆ ಮತ್ತೆ ದಂಡು ಕಳುಹಿಸಿದ. ಶ್ರೀರಂಗನು ಯುದ್ಧದಲ್ಲಿ ಸೋತು ಕ್ರಿ.ಶ.1653 ರಲ್ಲಿ ಬಿಜಾಪುರದ ಖಾನ್ ಮಹಮ್ಮದ್ ನಿಂದ ಪಡೆದ ಚಂದ್ರಗಿರಿ ಕೋಟೆ 1658 ರಲ್ಲಿ ಕೈತಪ್ಪಿ ಕುತುಬ್‌ಷಹನ ಕೈವಶವಾಯಿತು. ಶ್ರೀರಂಗನು ಎರಡನೆಯ ಬಾರಿ ಅಲೆಮಾರಿಯಾಗಬೇಕಾಯಿತು. ಕ್ರಿ.ಶ.1665 ರಲ್ಲಿ ಅವನು ಪೆನುಗೊಂಡೆಗೆ ಹಿಂದಿರುಗಿದಂತೆಯೂ 1681 ರ ವರೆಗೆ ರಾಜ್ಯದ ಒಂದು ಭಾಗವನ್ನು ಆಳಿದಂತೆಯೂ ಕಂಡುಬರುತ್ತದೆ.

## 15. ವಿಜಯನಗರದ ಕಾಲದಲ್ಲಿ ತಿರುಮಲೆ

ತೊಂಡಮಂಡಲವು ವಿಜಯನಗರದ ಆವಿರ್ಭಾವವಾದಾಗಲೇ ಅದರ ಒಂದು ಭಾಗವಾಗಿ ವಿಜಯನಗರದ ಪತನವಾಗುವ ವರೆಗೆ ಅದರ ಭಾಗವಾಗಿಯೇ ಇದ್ದಿತು. ತಿರುಮಲೆ -ತಿರುಪತಿ ಪ್ರಾಂತ್ಯಗಳ ಹಾಗೂ ಅಲ್ಲಿನ ಆಲಯಗಳ ಚರಿತ್ರೆಯಲ್ಲಿ ವಿಜಯನಗರದ ಸಂಗಮ, ಸಾಳುವ, ತುಳುವ, ಅರವೀಡು ವಂಶಗಳ ಆಳ್ವಿಕೆಯ ಕಾಲ ಬಹುಶೋಭಾಕರವಾದ ಕಾಲವಾಗಿದೆ.

*ಸಂಗಮ ವಂಶದ* ಅತಿಪ್ರಾಚೀನ ದಾಖಲೆಯೆಂದರೆ ಕ್ರಿ.ಶ.1355 ರಿಂದ ಕ್ರಿ.ಶ.1377 ರ ವರೆಗೆ ಆಳಿದ ಒಂದನೆಯ ಹರಿಹರನ ಕಾಲದ್ದು. ಶಾಸನಗಳಲ್ಲಿ ಕಂಡುಬರದೆ ಕೋಯಿಲ್-ಒಳಗುವಿನಲ್ಲಿ ಕಂಡುಬರುವ ಒಂದು ಅಂಶವೆಂದರೆ ತಿರುಮಲೆಯಲ್ಲಿದ್ದ ರಂಗ ನಾಥನ ಉತ್ಸವಮೂರ್ತಿಯನ್ನು ಶ್ರೀರಂಗಕ್ಕೆ ಸಾಗಿಸಿದ್ದು. ವಿಜಯನಗರದ ರಾಜಕುಮಾರ ಕುಮಾರ ಕಂಪಣನು ಮಧುರೆಯ ಮುಸ ಲ್ಮಾನ ದೊರೆಯ ಮೇಲೆ ದಂಡೆತ್ತಿ ಹೋಗಿ ಅವನ ಆಳ್ವಿಕೆಯನ್ನು ಕೊನೆಗೊಳಿಸಿದ. ಕಂಪಣನ ಬ್ರಾಹ್ಮಣ ಸೇನಾನಿ ಗೋಪಣ್ಣನು ರಂಗ ನಾಥನ ಉತ್ಸವಮೂರ್ತಿಯನ್ನು ಕ್ರಿ.ಶ.1371 ರಲ್ಲಿ ಶ್ರೀರಂಗದಲ್ಲಿ ಪ್ರತಿಷ್ಠಾಪಿಸಿದ. ಈ ಮೂರ್ತಿಯನ್ನು ಚೆಂಜಿಗೆ ತೆಗೆದುಕೊಂಡು ಹೋಗಿ ಅಲ್ಲಿ ಸ್ವಲ್ಪಕಾಲ ಇಟ್ಟುಕೊಂಡು ನಂತರ ಶ್ರೀರಂಗದ ದೇವಾಲಯಕ್ಕೆ ಅದನ್ನು ತಲುಪಿಸಲಾಯಿತು. ಪ್ರಾಯಶಃ ಕ್ರಿ.ಶ.1368 ರ ಹೊತ್ತಿಗೆ ಅದನ್ನು ತಿರುಮಲೆಯಿಂದ ಸಾಗಿಸಲಾಯಿತು. ನಂತರದ ರಾಜ ಎರಡನೇ ಹರಿಹರನು ತಿರುಮಲೆಯ ಶಾಸನವೊಂದರಲ್ಲಿ ಹೆಸರಿಸಲ್ಪಟ್ಟಿದ್ದಾನೆ.

ಸಂಗಮ ವಂಶದಲ್ಲಿಯೇ ಅತಿಶ್ರೇಷ್ಠನಾದ ಎರಡನೇ ದೇವರಾಯನು ಶ್ರೀ ವೆಂಕಟೇಶ್ವರನ ಹಿರಿಯ ಭಕ್ತನಾಗಿದ್ದ. ಅವನು ಕ್ರಿ.ಶ.1428 ರಲ್ಲಿ ತಿರುಮಲೆಗೆ ಬಂದು ದೇವರನ್ನು ಆರಾಧಿಸಿದ್ದೇ ಅಲ್ಲದೆ, ತಿರುಮಲೆಯ ಆಲಯದಲ್ಲಿ ವೇದಪಾರಾಯಣವನ್ನು ಪುನರುದ್ಧರಿಸಲು ಸಾಕಷ್ಟು ದಾನವನ್ನು ನೀಡಿದ.

ತಿರುಮಲೆ -ತಿರುಪತಿಗಳ ದಾಖಲೆಗಳಲ್ಲಿ ಸಂಗಮವಂಶದ ಕೊನೆಯ ದೊರೆ ಮಲ್ಲಿಕಾರ್ಜುನನ ಹೆಸರು ಇದೆ. ಈ ಪ್ರಾಂತ್ಯದಲ್ಲಿ ಕಂಡುಬರುವ ಇತರರೆಂದರೆ ಸಾಳುವ ಗೋಪಯ್ಯ, ಸಾಳುವ ತಿಮ್ಮರಾಜ, ಸಾಳುವ ಪರ್ವತರಾಜ, ಸಾಳುವ ತ್ರಿಪುರಾಂತಕ ಕಂಪಯ ದೇವ, ಸಾಳುವ ಯರ್ರಮರಾಜ, ತಮ್ಮಯ ದೇವಚೋಡ, ವಲ್ಲಭದೇವ. ಸಂಗಮ ವಂಶದ ಕೊನೆಯದಿನಗಳಲ್ಲಿ ವಿಜಯನಗರದ ಸರ್ವ ಸೇನಾನಿಯೂ, ಪರ್ಯಾಯ ಪ್ರಭುವೂ ಆಗಿದ್ದ ಸಾಳುವ ನರಸಿಂಹನು ತಿರುಮಲೆ -ತಿರುಪತಿ ಆಲಯಗಳ ದೊಡ್ಡ ರಾಕ್ಷಿಷಕ ನಾಗಿದ್ದ. ತಿರುಮಲೆಯ ಆಲಯದಲ್ಲಿ ವಿಶೇಷವಾಗಿ ನಿರ್ಮಿತವಾದ ಮಂಟಪದಲ್ಲಿ ಅಣ್ಣಾ ಊಂಜಲ್ ತಿರುನಾಳ್ ಉತ್ಸವವನ್ನು ಏರ್ಪಡಿಸಿದ್ದು ಒಂದು ಹಿರಿಯ ಕೊಡುಗೆಯಾಯಿತು.

*ಸಾಳುವ ವಂಶದ*ಸಾಳುವ ನರಸಿಂಹನು ತನ್ನ ಪ್ರಭುವನ್ನು ಪದಚ್ಯುತಗೊಳಿಸಿ,ತಾನೇ ಪ್ರಭುವಾದ. ಸಾಮ್ರಾಟನಾದ ಮೇಲೆ ಬೆಟ್ಟಕ್ಕೆ ಹೋಗುವ ಕಾಲುಹಾದಿಯ ಬದಿಯಲ್ಲಿ ಲಕ್ಷ್ಮೀನರಸಿಂಹನ ವಿಗ್ರಹವನ್ನು ಪ್ರತಿಷ್ಠಾಪಿಸಿದ.

*ತುಳುವ ವಂಶದ* ಆಳ್ವಿಕೆ (1507-1529) ಕೃಷ್ಣದೇವರಾಯನ ಆಗಮನದ ನಂತರ ತಿರುಮಲೆಯ ಶ್ರೀ ವೆಂಕಟೇಶ್ವರಸ್ವಾಮಿ ಆಲಯ ತನ್ನ ಪ್ರಸಿದ್ಧಿಯ ಉನ್ನತಿಯನ್ನು ಪಡೆಯಿತು. ಈ ರಾಜನಿಗೆ ಶ್ರೀ ವೆಂಕಟೇಶ್ವರ ಸ್ವಾಮಿ ಮನೆ ದೈವವಾದ. ಎಲ್ಲ ಪ್ರಮುಖ ಸಂದರ್ಭಗಳಲ್ಲೂ ರಾಯನು ಸ್ವಾಮಿಯನ್ನು ಸಂದರ್ಶಿಸಿ, ಆಶೀರ್ವಾದವನ್ನು ಬೇಡಿದ. ಈತನ ತಿರುಮಲೆಯ ಮೊದಲ ಸಂದರ್ಶನ ಕ್ರಿ.ಶ.1513 ರ ಫೆಬ್ರವರಿ 10 ರಂದು ನಡೆಯಿತು. ಶಾಸನಗಳು 1513,1514,1515,1517,1518,1521 ರಲ್ಲಿ ರಾಯನು ತಿರುಮಲೆಯನ್ನು ಸೇರಿದ ವಿವರಗಳನ್ನು ಒದಗಿಸುತ್ತವೆ. ಇದರಿಂದಾಗಿ ಶ್ರೀ ವೆಂಕಟೇಶ್ವರಸ್ವಾಮಿ ಹಲವಾರು ಅನರ್ಘ್ಯಾಭರಣಗಳನ್ನು ಕಾಣಿಕೆ ಪಡೆಯುವಂತಾಯಿತು.

ಕೃಷ್ಣದೇವರಾಯನಿಗೆ ಅವನ ಮಲಸಹೋದರ ಅಚ್ಯುತರಾಯನು ಉತ್ತರಾಧಿಕಾರಿಯಾದ (1529-1543) ಅಚ್ಯುತನು ತನ್ನ ಸಹೋದರನ ಆಳ್ವಿಕೆ ಕಾಲದಲ್ಲಿ ಚಂದ್ರಗಿರಿಯ ಕೋಟೆಯಲ್ಲಿ ಸೆರೆಯಾಗಿದ್ದ. ಕೃಷ್ಣದೇವರಾಯನು ಮರಣ ಹೊಂದಿದನಂತರ ಅಚ್ಯುತರಾಯನು ತಿರುಮಲೆಗೆ ಆಗಮಿಸಿ, ಶ್ರೀ ವೆಂಕಟೇಶ್ವರ ಸ್ವಾಮಿಯ ಶಂಖೋದಕ ಸ್ನಾತನಾಗಿ ಪಟ್ಟಾಭಿಷಿಕ್ತನಾದ. ಇವನೂ ಈ ದೇವರ ಹಿರಿಯ ಭಕ್ತನೇ. ಸಾಮ್ರಾಟನು ಮತ್ತೆ ಕ್ರಿ.ಶ.1533 ರಲ್ಲಿ ತಿರುಮಲೆಗೆ ತನ್ನ ಪತ್ನಿ ವರದಾಜಿಅಮ್ಮ, ಮಗ ಕುಮಾರ ವೆಂಕಟಾದ್ರಿ ಯರೊಡನೆ ಆಗಮಿಸಿದ ಅವನು ದೇವರಿಗೆ ಹಲವಾರು ಅಮೂಲ್ಯ ಆಭರಣಗಳನ್ನು ನೀಡಿದ. ಕ್ರಿ.ಶ.1538 ರಲ್ಲಿ ಶ್ರೀ ವೆಂಕಟೇಶ್ವರ ಸ್ವಾಮಿ ಹಾಗೂ ಅಲಮೇಲು ಮಂಗೆಯರಿಗಾಗಿ ತಿರುಮಲೆಯ ಆಲಯದಲ್ಲಿ ಮಹಾಲಕ್ಷ್ಮಿ ಮಹೋತ್ಸವವನು ಏರ್ಪಡಿಸಿದ.

ಸದಾಶಿವರಾಯನು ಅಚ್ಯುತರಾಯನ ಉತ್ತರಾಧಿಕಾರಿಯಾದ. ಇವನು ಬಹುಶಃ ಎರಡುಬಾರಿ ತಿರುಮಲೆಗೆ ಬಂದಿರಬೇಕು. ಮೊದಲಿಗೆ 1554 ರ ಫೆಬ್ರವರಿ 3 ರಂದೂ, ನಂತರ ಅದೇ ವರ್ಷದ ಜುಲೈ ತಿಂಗಳಿನಲ್ಲೂ ಆಗಮಿಸಿ,ಆಲಯಕ್ಕೆ ಹಲವಾರು ಕಾಣಿಕೆ ಗಳನ್ನು ನೀಡಿದ. ಅವನ ಅತಿ ಕಡಿಮೆಯಾದ ತಿರುಮಲೆ ಯಾತ್ರೆಗಳಿಗೂ, ಅವನ ಕಾಣಿಕೆಗಳಲ್ಲಿನ ಅತಿ ಕಡಿಮೆ ಬೆಲೆಗಳಿಗೂ ಹಲಕಾಲ ಅವನು ರಾಜನೆಂದೇ ಗುರುತಿಸಲ್ಪಟ್ಟಿದ್ದರೂ, ಅಳಿಯ ರಾಮರಾಯನೇ ನಿಜವಾದ ಪ್ರಭುವಾಗಿದ್ದದ್ದೇ ಕಾರಣವೆನ್ನಬಹುದು. ನಂತರ ರಾಮರಾಯನೇ ಸಾಮ್ರಾಟನಾಗಿ ಇವನು ಸೆರೆಮನೆಯ ಪಾಲಾದ.

*ಅರವೀಡು ವಂಶದ*ವನಾದ ಅಳಿಯ ರಾಮರಾಯನು ಸದಾಶಿವನನ್ನು ಸೆರೆಗೆ ತಳ್ಳಿ ತಾನೇ ವಿಜಯನಗರದ ಸಾಮ್ರಾಟನಾದ ಮೇಲೆ ಸಮಕಾಲೀನ ಬಹಮನೀ ಸುಲ್ತಾನರ ರಾಜಕೀಯದಲ್ಲಿ ಹಸ್ತಕ್ಷೇಪಮಾಡಿ ತನ್ನ ಅಹಂಕಾರದಿಂದಲೂ,ಪ್ರಾಬಲ್ಯದಿಂದಲೂ ಅವರನ್ನು ಕೀಳಾಗಿ ನಡೆಸಿಕೊಂಡ. ಸುಲ್ತಾನರು ತಮ್ಮ ಬಲವನ್ನೆಲ್ಲ ಒಟ್ಟುಗೂಳಿಸಿ ವಿಜಯನಗರವನ್ನು ಮುತ್ತಿದರು. ರಾಮರಾಯನು ರಕ್ಕಸ ತಂಗಡಿಯಲ್ಲಿ ಅವರೊಡನೆ ಯುದ್ಧಗೈದ. ಕ್ರಿ.ಶ.1565 ರಲ್ಲಿ ನಡೆದ ಯುದ್ಧದಲ್ಲಿ ರಾಮರಾಯನು ಹತನಾಗಿ,ವಿಜಯನಗರದ ಸೇನೆ ಪರಾಜಯ ಪಡೆಯಿತು.

ರಾಮರಾಯನ ತಮ್ಮ ತಿರುಮಲನು ತಿರುಮಲರಾಯನೆಂಬ ಹೆಸರಿನಿಂದ ಕ್ರಿ.ಶ.1570 ರಲ್ಲಿ ಸಿಂಹಾಸನವನ್ನೇರಿದ. ಇವನ ಹೆಸರು ತಿರುಮಲೆಯ ಆಲಯದ ಉಯ್ಯಾಲೆ ಮಂಟಪದೊಡನೆ ಸೇರಿ ತಿರುಮಲರಾಯ ಮಂಟಪವೆಂದಾಗಿದೆ - ತಿರುಮಲರಾಯನ ಅಲ್ಪಕಾಲದ ಆಳ್ವಿಕೆಯಲ್ಲೂ ಮುಸಲ್ಮಾನರ ಧಾಳಿ ನಡದೇ ಇತ್ತು. ಬಿಜಾಪುರದ ಸುಲ್ತಾನನ ಸೈನ್ಯಗಳು ಆನೆಗೊಂದಿ, ಪೆನುಗೊಂಡ, ಆದೋನಿಗಳನ್ನು ಮುತ್ತಿದವು. ಆದರೆ ತಿರುಮಲರಾಯನು ರಾಮರಾಯನ ರೀತಿಯನ್ನೇ ಅನುಸರಿಸಿ ಸುಲ್ತಾನರಲ್ಲಿ ಒಬ್ಬರಮೇಲೆ ಇನ್ನೊಬ್ಬರನ್ನು ಎತ್ತಿಕಟ್ಟಿ ಅಪಾಯದಿಂದ ತಪ್ಪಿಸಿಕೊಂಡ.

ಒಂದನೇ ಶ್ರೀರಂಗನು ಇವನ ಉತ್ತರಾಧಿಕಾರಿಯಾದ (ಕ್ರಿ.ಶ.1571-1585) ಈ ದೊರೆಯಕಾಲದ ಆರು ಶಾಸನಗಳು ತಿರುಮಲೆ - ತಿರುಪತಿಗಳಲ್ಲಿ ದೊರೆಯುತ್ತವೆ. ಎಲ್ಲವೂ ಖಾಸಗೀ ವ್ಯಕ್ತಿಗಳಿಂದ ಉಂಟಾದ ದಾನಗಳನ್ನು ಕುರಿತೇ ಹೇಳುತ್ತವೆ.

ನಂತರದ ರಾಜ ವೆಂಕಟಪತಿ (1585-1614) ಇವನು ತನ್ನ ಹಿಂದಿನ ಇಬ್ಬರ ಆಳ್ವಿಕೆಯಲ್ಲೂ ಚಂದ್ರಗಿರಿಯಲ್ಲಿ ರಾಜಪ್ರತಿನಿಧಿಯಾಗಿದ್ದು, ಉದಯಗಿರಿ, ಕೊಂಡವೀಡುಗಳಿಗೂ ಜವಾಬುದಾರನಾಗಿದ್ದ. ತಾನು ರಾಜನಾದಮೇಲೆ ರಾಜಧಾನಿಯನ್ನು ಪೆನುಗೊಂಡೆಯಿಂದ ಚಂದ್ರಗಿರಿಗೆ ಬದಲಾಯಿಸಿದ. ಇವನು ಸ್ವಾಮಿಯ ದೊಡ್ಡ ಭಕ್ತನಾಗಿದ್ದು ತಿರುಮಲೆಯ ಆಲಯದಲ್ಲಿ ತನ್ನ ಹಾಗೂ ತನ್ನ ತಂದೆತಾಯಿಯರ - ತಿರುಮಲ ಹಾಗೂ ವೆಂಗಳಾಂಬರ- ವಿಗ್ರಹಗಳನ್ನು ಸ್ಥಾಪಿಸಿದ. ತಿರುಮಲೆ ಹಾಗೂ ತಿರುಪತಿಗಳ ಹದಿನಾಲ್ಕು ಶಾಸನಗಳು ಇವನನ್ನು ಹೆಸರಿಸುತ್ತವೆ.

## 16. ಮಟ್ಲವಂಶದವರು

ಮಟ್ಲ ವಂಶದ ರಾಜರು ಈ ಜಿಲ್ಲೆಯೊಡನೆ ಅತಿ ನಿಕಟ ಸಂಬಂಧ ಹೊಂದಿದ್ದ ಸಾಮಂತ ವಂಶದವರು. ಇವರು ದೇವಚೋಡ ಮನೆತನದವರು. ಇವರು ರಾಯಚೋಟಿಯ ಮಟ್ಲದಿಂದ ಆಳ್ವಿಕೆ ನಡೆಸಿ ವಿಜಯನಗರದ ಪ್ರಸಿದ್ಧಿಯ ಮೇಲ್ತುದಿಯನ್ನು ತಲುಪಿದಾಗ ಮುಂಚೂಣಿಯಲ್ಲಿ ಬಂದಿದ್ದರು. ಸಾಮ್ರಾಟನ ಮನೆಯಲ್ಲಿ ಮದುವೆಯ ವ್ಯವಹಾರ ನಡೆಸುವಷ್ಟು ಮೇಲಿನೆತ್ತರಕ್ಕೆ ಏರಿದರು. ವಿಜಯನಗರದ ನಾಲ್ಕನೆಯ ಅರಸುವಂಶ - ಅರವೀಡು ವಂಶಕ್ಕೆ ನಿಷ್ಠೆಯಿಂದ ನಡೆದುಕೊಂಡು ವಿಜಯನಗರದ ವಿವಿಧ ಮುಖಂಡರಪರಂಪರೆಯನ್ನು ವಿಧವಿಧವಾಗಿ ಮುಂದುವರಿಸಲು ಕಾರಣರಾದರು.

ಈ ವಂಶದ ಮೂಲಪುರುಷ ಬೊಮ್ಮರಾಜ. ಅವನಿಗೆ ಸೋಮರಾಜ, ತಿಮ್ಮರಾಜ, ಮಂಗರಾಜ ಎಂಬ ಮೂವರು ಗಂಡು ಮಕ್ಕಳು. ಸೋಮರಾಜನಿಗೆ ಐವರು ಪುತ್ರರು, ಇವರಲ್ಲಿನ ಹಿರಿಯ ಪೋತರಾಜನಿಗೆ ಆರುಮಂದಿ ಮಕ್ಕಳಾಗಿ ಹಿರಿಯನಿಗೆ ವರದ ರಾಜನೆಂಬ ಹೆಸರು. ತಿಮ್ಮರಾಜನ ಮಗ ಕೋನರಾಜ ಅವನ ಮಗ ಎಲ್ಲಮರಾಜ. ಎಲ್ಲಮರಾಜನಿಗೆ ನಾಲ್ವರು ಪುತ್ರರು. ತಿರುಮಲ, ವರದ, ಚಿನ್ನತಿಮ್ಮ ಹಾಗೂ ಅನಂತ (ಮಟ್ಲ ಅನಂತರಾಜ - ಕಾಕುಸ್ಥ ವಿಜಯಮು - ಕರ್ತೃ) ಮಂಗರಾಜನಿಗೆ ಗುರವಯ್ಯ ದೇವಚೋಡನೆಂಬ ಮಗ. ಈ ಪಾಳಯಗಾರರಲ್ಲಿ ಕೃಷ್ಣದೇವರಾಯನ ಅಳಿಯನಾದ ವರದರಾಜನು ನಿಜವಾದ ರಾಜನಂತೆಯೇ ಪ್ರವರ್ತಿಸಿದ. ತಿರುಪತಿಯ ಕ್ರಿ.ಶ.1544 ರ ಒಂದು ಶಾಸನವು 312 ರೇಖೈಪೊನ್ (ಬಂಗಾರದ ನಾಣ್ಯ) ಗಳ ದಾನವನ್ನುದಾಖಲಿಸುತ್ತದೆ. ಇದನ್ನು ಅಧಿಕಾರಿಗಳು ಆಲಯಗ್ರಾಮಗಳ ಕೆರೆಕಾಲುವೆಗಳ ದುರಸ್ತಿಗಾಗಿ ಬಳಸಿದರು. ವರದರಾಜನಿಗೆ ಕಾಮಿನೀ ವಲ್ಲಭ, ಗಂಡಭೇರುಂಡ, ಮೊದಲಾದ ಬಿರುದುಗಳೂ ಇದ್ದವು. ಕೋನರಾಜನ ಮಗ ಎಲ್ಲಮರಾಜನು ಮಟ್ಲ ವಂಶದ ಗೌರವವನ್ನು ಹೆಚ್ಚಿಸಿದ. ವಿಜಯನಗರದ ರಾಯ ಎರಡನೇ ವೆಂಕಟನಿಗೆ ನಿಷ್ಠೆಯಿಂದ ಇದ್ದ ಇವನು, ಪಾಳಯಗಾರರಾದ ಸಿದ್ಧವಟದ ಸೋದರರು ಓಬರಾಜು ತಿರುಪತಿರಾಜು ಹಾಗೂ ಕೊಂಡರಾಜು ವೆಂಕಟರು ದಂಗೆಯಿದ್ದಾಗ ಅವರ ದಂಗೆಯನ್ನಡಗಿಸಿದ. ಎರಡನೆ ವೆಂಕಟನು ಚಂದ್ರಗಿರಿ ರಾಜ್ಯದ ಪುಲುಗುಲನಾಟಿ ಸೀಮೆಯನ್ನು ನೀಡುವುದರಿಂದ ಇವನ ಸೇವೆಯನ್ನು ಸತ್ಕರಿಸಿದ. ಮಟ್ಲವಂಶದಲ್ಲಿ ನಂತರ ಬಂದ ರಾಜರಲ್ಲಿ ಅನಂತರಾಜ ಪ್ರಮುಖ. ಇವನೊಬ್ಬ ಅಸಹಾಯ ಶೂರನೂ, ವಿದ್ವಾಂಸನೂ ಆಗಿದ್ದ. ಹಿಂದೆಯೇ ತಿಳಿಸಿರುವಂತೆ ಎರಡನೇ ವೆಂಕಟನ

ಆದೇಶದಂತೆ ಇವನು,ಕುತುಬ್‌ಷಾಹೀ ಸೈನ್ಯ ಆಕ್ರಮಿಸಿದ್ದ ಗುರ್‍ರಂಕೊಂಡವನ್ನು ವಶಪಡಿಸಿಕೊಂಡ.ಅನಂತ ರಾಜನು ಮಗ ತಿರು ವೆಂಗಳನಾಥ ಹಾಗೂ ಮೊಮ್ಮಗ ಕುಮಾರ ಅನಂತರಿಂದ ಹಿಂಬಾಲಿಸಲ್ಪಟ್ಟ, ಕುಮಾರ ಅನಂತನು ತಿರುಪತಿ ಹಾಗೂ ಅಹೋಬಿಲ ಪರ್ವತಗಳ ನಡುವಣ ರಾಜ್ಯದಲ್ಲಿ ಅಧಿಕಾರ ಚಲಾಯಿಸಿದ. ಇವನೊಬ್ಬ ಪ್ರತಿಷ್ಠಿತ ವಿದ್ವಾಂಸನೂ ಆಗಿದ್ದ. ರಾಮಾನುಜರ ವಿಶಿಷ್ಟಾದ್ವೈತವನ್ನು ಅವಲಂಬಿಸಿದರೂ ಪರಮತ ಸಹಿಷ್ಣುವಾಗಿದ್ದ. ತಿರುಮಲೆಯ ಬುಡದ ಅಲಿಪಿರಿಯಲ್ಲಿನ ಪಾದಾಲಮಂಟಪದ ಸೆಳೆಯ ಎರಡು ಶಾಸನಗಳಲ್ಲಿ (ಶಕವರ್ಷ 1550 - ಕ್ರಿ.ಶ. 1628) ಇವನ ಸಾಧನೆಗಳನ್ನು ವಿವರವಾಗಿ ದಾಖಲಿಸಲಾಗಿದೆ.ಸೇತುವಿನಿಂದ ಹಿಮಾಲಯದವರೆಗೆ ಹೊರಡುವ ಯಾತ್ರಿಕ ಭಕ್ತರಿಗಾಗಿ ಇವನು ಹಲವು ಅನ್ನಸತ್ರಗಳನ್ನು ನಿರ್ಮಿಸಿದ. ಈ ಅನ್ನಸತ್ರಗಳಲ್ಲಿ ಒಂದು ತಿರುಪತಿಯಲ್ಲಿಯೇ ಸ್ಥಾಪಿಸಲ್ಪಟ್ಟಿತು. ಇತರ ನಿರ್ಮಾಣಗಳೊಡನೆ ತಿರುಪತಿಯಲ್ಲಿನ ಅಗ್ರಗೋಪುರ, ಗಾಳಿಗೋಪುರವನ್ನೂ, ಅಲಿಪಿರಿಯಿಂದ ತಿರುಮಲೆಗೆ ಮೆಟ್ಟಿಲ ಮಾರ್ಗವನ್ನೂ, ಉನ್ನತ ಕೇಳೀಮಂಟಪವನ್ನೂ (ಬಯಲ ಮಂಟಪ) ವನ್ನೂ ನಿರ್ಮಿಸಿದ. ತಿರುಪತಿಯ ಇತರ ಶಾಸನಗಳು ಇವನು ಗೋವಿಂದರಾಜಸ್ವಾಮಿಯ ಏಳು ಅಂತಸ್ತಿನ ದ್ವಾರಗೋಪುರವನ್ನೂ, ತಿರುಮಲೆಯ ಕಾಲು ಹಾದಿಯ ಕೊತ್ತಗೋಪುರ ಮಂಟಪವನ್ನೂ, ನಿರ್ಮಿಸಿದ್ದನ್ನು ವಿವರಿಸುತ್ತವೆ. ಆಲಯಕ್ಕೆ ಇವನು ನೀಡಿದ ಕಾಣಿಕೆಗಳಲ್ಲಿ ದುಬಾರಿ ವಜ್ರ ಕಿರೀಟವು ಸೇರಿದೆ. ಶ್ರೀಕಾಳಹಸ್ತಿಯ ಆಲಯಕ್ಕೂ ಇವನು ಅನೇಕ ದತ್ತಿಗಳನ್ನು ನೀಡಿದ. ಇವೆಲ್ಲದರಿಂದ ಮಟ್ಲವಂಶವು ಕುಮಾರ ಅನಂತರಾಜನ ಕಾಲದಲ್ಲಿ ತನ್ನ ಕೀರ್ತಿಶಿಖರವನ್ನು ಮುಟ್ಟಿದ್ದಿತು ಎನ್ನಲಿಕ್ಕುಂಟು.

ಅನಂತರಾಜ ದೇವಚೋಡ ಅಥವಾ ಎರಡನೇ ಅನಂತನು ಕುಮಾರ ಅನಂತರಾಜನ ಉತ್ತರಾಧಿಕಾರಿಯಾದ. ಇವನ ಆಳ್ವಿಕೆಯಲ್ಲಿ ಮಟ್ಲದವರು ಸಾಕಷ್ಟು ಪ್ರದೇಶಗಳನ್ನು ಗೋಲ್ಕೊಂಡದ ಸುಲ್ತಾನನಿಗೆ (ಕ್ರಿ.ಶ.1644-1645) ಕಳೆದುಕೊಂಡರು. ಇಷ್ಟಾದರೂ ಅವರ ಆಳ್ವಿಕೆಯು ಚಂದ್ರಗಿರಿ ರಾಜ್ಯದ ಪುಲುಗುಲನಾಡುವಿನಿಂದ ಕಡಪ ಜಿಲ್ಲೆಯ ಪೊತ್ತಪಿನಾಡು ಹಾಗೂ ಸಿದ್ಧವಟ ಸೀಮೆಯವರೆಗೆ ಹರಡಿದ್ದಿತು.ಕುಮಾರ ಅನಂತನು, ತನಗೆ ಪಾಳಯಪಟ್ಟಿನ ಆಡಳಿತದಲ್ಲಿಯೂ ನೆರವು ನೀಡಿದ ತನ್ನ ಚಿಕ್ಕಪ್ಪ ಎಲ್ಲಮಸೊಡನೆ ಸೇರಿ ಅಬ್ದುಲ್ಲಾ ಕುತುಬ್‌ಷಹನು ಕಳುಹಿಸಿದ ಸೈನ್ಯಕ್ಕೆ ಘನವಾದ ಪೆಟ್ಟುಕೊಟ್ಟು ಓಡಿಸಿದ. ನಂತರ ಕುತುಬ್‌ಷಹನ ಪ್ರತಿಭಟನೆಗೆ ಹೆದರಿ ಕುಮಾರ ಅನಂತನು ಇಕ್ಕೇರಿ ಬಸವಾಪುರಕ್ಕೆ ಓಡಿಹೋದ. ನಿರೀಕ್ಷಿಸಿದಂತೆಯೇ ಮೀರ್‌ಜುಮ್ಲಾ ಸೈನ್ಯದೊಡನೆ ಬಂದು ಇವನ ರಾಜ್ಯವನ್ನು ಆಕ್ರಮಿಸಿ ಆಡಳಿತ ಸೂತ್ರಗಳನ್ನು ತ್ರಿಯಂಬಕ ಶಂಕರಜಿ ಪಂತನಿಗೆ ನೀಡಿದ. ಇದರಿಂದಾಗಿ ನಂತರ ಕಡಪ ಜಿಲ್ಲೆಯ ರಾಜಂಪೇಟೆಯಲ್ಲಿ ಇವರು ಆಡಳಿತ ನಡೆಸಿದರು ಎಂದು ವರದಿಯಿದ್ದರೂ ಈ ಸಿಮೆಯಲ್ಲಿನ ಮಟ್ಲ ವಂಶದ ಆಡಳಿತ ಇಲ್ಲಿಗೇ ಕೊನೆಗೊಂಡಿತು.

ತದನಂತರ ಈ ಸೀಮೆಯಲ್ಲಿನ ಮುಖ್ಯ ಗಮನಾರ್ಹ ಘಟನೆಯೆಂದರೆ ಶಿವಾಜಿಯು ಜಿಂಜಿಯಮೇಲೆ ದಂಡೆತ್ತಿಹೋದಾಗ ಕ್ರಿ.ಶ.1677-78 ರಲ್ಲಿ ತಿರುಪತಿ ಕಣಿವೆಯಲ್ಲಿ ಹಾದುಹೋದದ್ದು ಹಾಗೂ ಔರಂಗಜೇಬನು ಕುತುಬ್‌ಷಾಹೀ ಸುಲ್ತಾನ ರಾಜ್ಯವನ್ನು 1687 ರಲ್ಲಿ ಆಧೀನಕ್ಕೆ ತಂದುಕೊಂಡದ್ದು.

### 17. ಕ್ರಿ.ಶ.1650 ರಿಂದ 1800 ವರೆಗೆ ತಿರುಮಲೆ

ಹದಿನೇಳನೇ ಶತಮಾನದ ಮಧ್ಯದಲ್ಲಿ ತಿರುಮಲೆ - ತಿರುಪತಿ ಪ್ರಾಂತ್ಯವು ಗೋಲ್ಕೊಂಡ ಸುಲ್ತಾನರ ಆಳ್ವಿಕೆಯಲ್ಲಿ ಸೇರಿ ಸುಮಾರು ಒಂದೂವರೆ ಶತಮಾನಗಳ ಕಾಲ ಅವರ ಆಧೀನದಲ್ಲಿಯೇ ಇದ್ದಿತು.ಈ ಕಾಲವೆಲ್ಲ ಗೊಂದಲಗಳ,ಅರಾಜಕತೆಯ,ಅವ್ಯವಸ್ಥೆಯ ಕಾಲವಾಗಿದ್ದು,ಈ ಸೀಮೆಯಲ್ಲಿ ಹೆಸರು ಹೇಳುವ ಯಾವುದೇ ಆಡಳಿತವೂ ಇರಲಿಲ್ಲ. ವಿಜಯನಗರದ ಹಿಂದೂ ಸಾಮ್ರಾಜ್ಯ ಖಿಲವಾಗಿದ್ದು, ಕುತುಬ್‌ಷಹ, ಮೊಗಲರು,ನಿಜಾಮ, ಮರಾಠರು,ಆರ್ಕಾಟಿನ ನವಾಬರು,ಹೈದರಾಲಿ,ಆಂಗ್ಲರು ಮತ್ತು ಫ್ರೆಂಚರು ಸೀಮೆಯನ್ನು ಪ್ರವೇಶಿಸಿ,ಸೀಮೆಯ ಗೊಂದಲಗಳಿಗೂ,ಕಷ್ಟಗಳಿಗೂ ತಮ್ಮ ವಂತಿಗೆ ನೀಡಿದರು.

**ಕುತುಬ್‌ಷಾಹೀ ಆಳ್ವಿಕೆ :-**

ಕ್ರಿ.ಶ.1640 ರಲ್ಲಿ ವಿಜಯನಗರದ ರಾಜ ಎರಡನೇ ವೆಂಕಟನು ಆಂಗ್ಲರ ಈಸ್ಟ್‌ಇಂಡಿಯಾ ಕಂಪೆನಿಗೆ ಪೂರ್ವಸಮುದ್ರ ತೀರದಲ್ಲಿ ಸ್ವಲ್ಪಸ್ಥಳ ನೀಡಿದ. ಅವರು ಅಲ್ಲಿ ಸಂತಜಾರ್ಜ್ ಕೋಟೆಯನ್ನು ನಿರ್ಮಿಸಿದರು. ಇನ್ನೂ ಕೆಳಗಡೆ ಪಾಂಡಿಚೆರಿಯಲ್ಲಿ ಫ್ರೆಂಚರು ತಮ್ಮ ನೆಲೆಯನ್ನು ಏರ್ಪಡಿಸಿಕೊಂಡರು. ಇಬ್ಬರೂ ನಂತರದ ನೂರುವರ್ಷಗಳಲ್ಲಿ ಸ್ಥಳೀಯ ರಾಜರ ಒಳಜಗಳಗಳಲ್ಲಿ ಹಸ್ತಕ್ಷೇಪ ಮಾಡಿ ಲಾಭಪಡೆಯ ಹತ್ತಿದರು. ಕುತುಬ್‌ಷಾಹೀ ಸೇನಾನಿ ಮೀರ್‌ಜುಮ್ಲಾ 1646 ರಲ್ಲಿ ಈ ಪ್ರದೇಶದಲ್ಲಿ ಹಲವಾರು ಧಾಳಿಗಳನ್ನು ನಡೆಸಿದಾಗ ಅವನ ಕೈಗೆ ತೊಂಡಮನಾಡು,ತಿರುಪತಿ,ಚಂದ್ರಗಿರಿಗಳು ಸಿಕ್ಕಿ ಅವನು ಚಿತ್ತೂರು,ಉತ್ತರ ಆರ್ಕಾಟುಗಳನ್ನು ವಶಮಾಡಿದ. ಇನ್ನೂ ದಕ್ಷಿಣಕ್ಕಿಳಿದು ಪೊನ್ನೇರಿ,ಪೂಂದಮಲ್ಲಿ, ಕಂಚಿ,ಜಿಂಜಿ,ವಾಂಡಿವಾಷ್‌ಗಳನ್ನು ಹಿಡಿದ. ಇದಾದ ನಂತರ ಅವನು ಗೋಲ್ಕೊಂಡದ ಆಶ್ರಯವನ್ನು ತೊರೆದು ಮೊಗಲರನ್ನು ಸೇರಿದ. ಮೊಗಲರ ಸಾಮ್ರಾಟ ಷಹಜಹಾನನು ಕರ್ನಾಟಿಕವನ್ನು ಮೀರ್‌ಜುಮ್ಲಾನ ಜಾಗೀರು ಎಂದು ಗುರುತಿಸಿದ. ಸೇನಾನಿಯ ಈ ಜಾಗೀರನ್ನು ತುಪಾಕಿ ಕೃಷ್ಣಪ್ಪನು ನೋಡಿಕೊಂಡಿದ್ದ. 1663 ರಲ್ಲಿ ಮೀರ್‌ಜುಮ್ಲಾನ ಮರಣಾನಂತರ ಜಹಗೀರು ನೇಕ್ನಮ್ ಖಾನನಿಗೆ ನೀಡಲ್ಪಟ್ಟು ಅವನು ಚಿಂತಪಲ್ಲಿ ಮಿರ್ಜಾನ ನೆರವಿನಿಂದ ಆಳತೊಡಗಿದ. ಕ್ರಿ.ಶ.1676 ರಲ್ಲಿ ಹೆಸರಾಂತ ಮರಾಠ ಸೇನಾನಿ ಶಿವಾಜಿಯು ತಿರುಪತಿಯ ಬಳಿಯ ಕಲ್ಲೂರು ಕಣಿವೆಯನ್ನು ಹಾಯ್ದು,ಅರಣಿ,ವೆಲ್ಲೂರು,ಜಿಂಜಿಗಳನ್ನು ಹಿಡಿದ. ಐದುವರ್ಷಗಳನಂತರ ಗೋಲ್ಕೊಂಡದ ಮಂತ್ರಿ ಅಕ್ಕಣ್ಣನು ತಿರುಪತಿಯ ಬಳಿ ಬಂದು ವ್ಯವಸ್ಥೆಯನ್ನುಂಟುಮಾಡಲು ಪ್ರಯತ್ನಿಸಿದ. ಷಹಜಹಾನನ ಮಗ ಔರಂಗಜೇಬನು ಕುತುಬ್‌ಷಾಹೀ ರಾಜ್ಯವನ್ನು ಹಿಡಿದು ಮೊಗಲ್ ಸಾಮ್ರಾಜ್ಯಕ್ಕೆ ಅದನ್ನು ಸೇರಿಸಿಕೊಂಡ. ಇದರಿಂದಾಗಿ ತಿರುಮಲೆ -ತಿರುಪತಿ ಪ್ರಾಂತ್ಯವೂ ಸೇರಿದಂತೆ ಕರ್ನಾಟಿಕ ಸೀಮೆಯು ಮೊಗಲರ ವಶವಾಯಿತು.

**ಕರ್ನಾಟಿಕದ ನವಾಬರು :-**

ಪೂರ್ವ ಕರ್ನಾಟಿಕೆಯಲ್ಲಿ ಈ ಆಡಳಿತ ಪರಿವರ್ತನೆಯಿಂದಾಗಿ ಇನ್ನಷ್ಟು ಗೊಂದಲಕರ ಪರಿಸ್ಥಿತಿಯುಂಟಾಯಿತು. ಅನೇಕ ಮಂದಿ ರಕ್ಷಣೆಗಾಗಿ ಆಂಗ್ಲರ ಸೀಮೆಗಳತ್ತ ವಲಸೆ ಹೋದರು. ದಕ್ಷಿಣದ ಸುಬೇದಾರರು ಈ ಸೀಮೆಯಲ್ಲಿ ಅಧಿಕಾರ ಚಲಾಯಿಸಿದರು. ಈ ಸೀಮೆ ಹಲವು ಮೊಗಲ್ ಮರಾಠರ ಆಕ್ರಮಣಗಳನ್ನು ನೋಡಿತು.ಮೊಗಲರ ದೊರೆ ಒಂದನೇ ಷಹ ಆಲಂ ಕರ್ನಾಟಕ ಪ್ರಾಂತ್ಯವನ್ನು ಒಂದು ಪ್ರತ್ಯೇಕ ನವಾಬಿಯನ್ನಾಗಿ ಪರಿವರ್ತಿಸಿ ಕ್ರಿ.ಶ.1710 ರಲ್ಲಿ ಸಾದತುಲ್ಲಾಖಾನನನ್ನು ಕರ್ನಾಟಿಕದ ನವಾಬನಾಗಿ ನೇಮಿಸಿದ. ನವಾಬನ ಸಲಹೆಗಾರ ತೋದರಮಲ್ಲನು (ಲಾಲಾಖೇಮರಾಮ) ತಿರುಮಲೆಯ ಆಲಯವನ್ನು ಸಂದರ್ಶಿಸಿ ತನ್ನ ತಾಯಿ, ಪತ್ನಿ ಹಾಗೂ ತನ್ನ ವಿಗ್ರಹಗಳನ್ನು ಸ್ಥಾಪಿಸಿದ. ಮೊಗಲರ ದಕ್ಷಿಣದ ಸುಬೇದಾರ ಅಸಫ್-ಜಾ-ನಿಜಾಮುಲ್ ಮುಲ್ಕನು ಕ್ರಿ.ಶ.1724 ರಲ್ಲಿ ತಾನು ಸ್ವತಂತ್ರನೆಂದು ಘೋಷಿಸಿಕೊಂಡು ಕರ್ನಾಟಿಕದ ನವಾಬ ತನ್ನ ಅಧೀನ ಎಂದು ಸಾರಿದ. ಈ ಕಾಲದಲ್ಲಿ ಮರಾಠರು ಪೇಶ್ವೆಗಳ ನಾಯಕತ್ವದಲ್ಲಿ ಪ್ರಬಲರಾಗುತ್ತಿದ್ದು, ಕರ್ನಾಟಿಕವು ಪೇಶ್ವೆ ಹಾಗೂ ನಿಜಾಮರ ಜಗಳಗಳಲ್ಲಿ ಭಾಗ ಪಡೆಯುವಂತಾಯಿತು ಅಸಫ್ ಜಾನು ಕ್ರಿ.ಶ.1733 ರಲ್ಲಿ ದೋಸ್ತ್ ಆಲಿಯನ್ನು ಕರ್ನಾಟಿಕದ ನವಾಬನನ್ನಾಗಿಸಿದ. ಏಳು ವರ್ಷಗಳ ನಂತರ ರಘೋಜಿಯ ನಾಯಕತ್ವದಲ್ಲಿ ಮರಾಠರ ಸೈನ್ಯವು ಈ ಸೀಮೆಯನ್ನು ಆಕ್ರಮಿಸಿ ತಿರುಮಲೆಯ ಬಳಿಯ ದಾಮಲಚೆರುವು ಯುದ್ಧದಲ್ಲಿ ನವಾಬನನ್ನು ಘೋರ ಸಮರದಲ್ಲಿ ಕೊಂದು,ಸೀಮೆಯನ್ನು ಲೂಟಿಮಾಡಿತು. ಈ ಕಾಲದಲ್ಲಿ ಪೇಶ್ವೆ ಬಾಜೀರಾಯನ ತಾಯಿ ಪತ್ನಿಯರು ತಿರುಮಲೆಯನ್ನು ಸಂದರ್ಶಿಸಿದರು. ಸಫ್ದರ್ ಆಲಿಯು ನಂತರ ನವಾಬನಾದ. ಅವನು ತನ್ನ ಅಧೀನದಲ್ಲಿದ್ದ ತಿರುಮಲೆಯ ಆಲಯದ ಕೋಶಾಗಾರದ ಐವತ್ತು ಸಾವಿರ ರೂಪಾಯಿಗಳನ್ನು ಮರಾಠರಿಗೆ ನೀಡಿ ಶಾಂತಿಯನ್ನು ಪಡೆದ. ಕ್ರಿ.ಶ.1744 ರಲ್ಲಿ ಅನ್ವರುದ್ದೀನನು ನವಾಬನಾದ. ಆದರೆ ಹೈದರಾಬಾದಿನ ನಿಜಾಮನೂ, ಅವನ ಕರ್ನಾಟಿಕದ ಈ ನವಾಬನೂ ತೀರಿಕೊಂಡು ಉತ್ತರಾಧಿಕಾರದ ತುಮುಲ ಎರಡೂ ಕಡೆ ಭುಗಿಲೆದ್ದಿತು. ಇದೇ ಕಾಲದಲ್ಲಿ,ತಮ್ಮ ತವರೂರಿನಲ್ಲಿ ಯುದ್ಧ ಘೋಷಣೆಯಾದದ್ದರಿಂದ ಭಾರತದಲ್ಲಿದ್ದ ಫ್ರೆಂಚರೂ,ಆಂಗ್ಲರೂ ಪರಸ್ಪರ ಯುದ್ಧದಲ್ಲಿ ತೊಡಗಿದರು. ಆರ್ಕಾಟಿಗೆ ಮುತ್ತಿಗೆ ಹಾಕಿದ್ದ ಆಂಗ್ಲ ಸೇನಾನಿ ಕ್ಲೈವನಿಗೆ,ಆಂಗ್ಲರು ನವಾಬ ಪಟ್ಟಕ್ಕೆ ಏರಿಸಿದ ಮುಹಮದಾಲಿ (ಅನ್ವರುದ್ದೀನನ ಮಗ) ತಿರುಮಲೆ ಆಲಯದ ಕೋಶಾಗಾರದಿಂದ ಎರಡು ಲಕ್ಷ ರೂ.ಗಳನ್ನು ನೀಡಿದ.

ಕ್ರಿ.ಶ.1750 ರಲ್ಲಿ ಮಹಮದಾಲಿಯು ತನ್ನನೆರವಿಗರಾಗಿದ್ದ ಇಂಗ್ಲೀಷರ ಈಸ್ಟ್ ಇಂಡಿಯಾ ಕಂಪನಿಗೆ ತಿರುಪತಿ -ತಿರುಮಲೆ ದೇವಾಲಯಗಳ ಆದಾಯವನ್ನು ಬರೆದುಕೊಟ್ಟ. ಮುಂದಿನ ಇಪ್ಪತ್ತು ವರ್ಷಗಳು ತಿರುಪತಿ ಸೀಮೆಯಲ್ಲಿ ಅತಿ ಗೊಂದಲಕರ ಪರಿಸ್ಥಿತಿ ಯಿತ್ತು. ಮಹಮದ್‌ಕಮಾಲ್ ಎಂಬ ಸಾಹಸಿ, ಈ ಪ್ರದೇಶವನ್ನು ಕೊಳ್ಳೆ ಹೊಡೆದ. ಅವನನ್ನು ಆಂಗ್ಲ ಕಂಪನಿಯ ಸೈನ್ಯಹೊಡೆದೊಡಿ ಸಿತು. ವೆಂಕಟಗಿರಿ, ಕಾರ್ವೇಟಿನಗರ, ಕಾಳಹಸ್ತಿಗಳ ಜಮಿಂದಾರರು ಉಪಟಳ ನೀಡಿದರು. ನವಾಬನ ಸಹೋದರ ನಜೀಬುಲ್ಲಾ ತಿರುಪತಿ ಸೀಮೆಯ ಮೇಲೆ ಧಾಳಿ ನಡೆಸಿ ಹೆದರಿಸಿದ. ಅವನ ಇನ್ನೊಬ್ಬ ಸಹೋದರ ಅಬ್ದುಲ್ಲಾ ವಹಾಬನೂ ಇದೇ ಹಾದಿಯನ್ನು ಹಿಡಿದ. ಇಬ್ಬರು ಮರಾಠ ಸರದಾರರು - ಗೋಪಾಲರಾವ್ ಹಾಗೂ ನಾರಾಯಣರಾವ್ - ತಿರುಮಲೆಯ ಆಲಯವನ್ನು ಆಕ್ರಮಿಸಿ ದರು, ಆದರೆ ಓಡಿಸಲ್ಪಟ್ಟರು. ನಂತರ ಮೈಸೂರು ಸಿಂಹಾಸನವನ್ನು ವಶಪಡಿಸಿಕೊಂಡ ಹೈದರಾಲಿ ಇಲ್ಲಿ ಉಪಟಳವನ್ನು ಮಾಡಿದ. ನಿಜಾಮನೂ, ಕಂಪನಿಯವರೂ, ಹೈದರಾಲಿ ಮತ್ತು ಅವನ ಮಗ ಟಿಪ್ಪುಸುಲ್ತಾನನೊಡನೆ ಘನವಾದ ಯುದ್ಧಮಾಡಬೇಕಾಯಿತು. ಮೈಸೂರು ಯುದ್ಧಗಳ ಕಾಲದಲ್ಲಿ ಕಂಪನಿಯು ಕರ್ನಾಟಿಕದ ಆಳ್ವಿಕೆ ನೇರವಾಗಿ, ಕೈಗೆತ್ತಿಕೊಂಡಿತು.

## 18. ಈ ಕಾಲದಲ್ಲಿ ತಿರುಮಲೆಯ ಆಲಯ

ಈ ಕಾಲದಲ್ಲಿ ತಿರುಮಲೆಯ ಆಲಯಕ್ಕೆ ಕಾಣಿಕೆಯ ರೂಪದಲ್ಲಿ ಬರುವ ಸಂಪತ್ತಿನ ಒಡೆತನಕ್ಕಾಗಿ ಹಲವಾರು ಘರ್ಷಣೆಗಳಾ ದವು, ಬಹಳ ವರ್ಷಗಳಿಂದಲೂ ಆಲಯದ ಆದಾಯವನ್ನು ಈ ಸೀಮೆಯ ಆಡಳಿತಗಾರರಿಗೆ ನೀಡುವುದು ನಡೆದು ಬಂದಿದ್ದಿತು. ವರ್ಷಕ್ಕೆ ಎರಡು ಲಕ್ಷ ರೂಪಾಯಿಗಳ ಆದಾಯ ಪಡೆಯುತ್ತಿದ್ದ ಕರ್ನಾಟಿಕದ ನವಾಬ ಮಹಮದಾಲಿಯು ತನಗೆ ನೆರವು ನೀಡಿದ ಆಂಗ್ಲರಿಗೆ ಈ ಅಮೂಲ್ಯ ಸಂಪತ್ತಿನ ಆಸರೆಯನ್ನು ನೀಡಿದ. ಕ್ರಿ.ಶ.1753 ರಲ್ಲಿ ಮಹಮದ್ ಕಮಾಲ ಸರದಾರ ತಿರುಮಲೆಗೆ ನಡೆದು ಮುತ್ತಿಗೆ ಹಾಕಿದ. ಇದರಿಂದಾಗಿ ಆದಾಯದ ಸೆಲೆ ತಪ್ಪಿಹೋಗಬಹುದೆಂಬ ಭಯ ಮದರಾಸಿನಲ್ಲಿದ್ದ ಕಂಪನಿಯವರಲ್ಲಿ ಉಂಟಾ ಯಿತು. ಒಂದು ಸಣ್ಣ ತುಕಡಿಯನ್ನು ಕಳುಹಿಸಿದರೂ ಮಹಮದ್ ಕಮಾಲನ ಸೈನ್ಯ ಈ ತುಕಡಿಯನ್ನು ತಿರುಪತಿಯ ಮೈದಾನದಲ್ಲಿಯೇ ಎದುರಿಸಿ ಸೋಲಿಸಿ ಓಡಿಸಿತು. ಮಾರನೆಯ ದಿನ ಮತ್ತೊಂದು ಸೈನ್ಯವನ್ನು ಕಳುಹಿಸಿ ತೀವ್ರ ಸೆಣಸಾಟ ನಡೆಸಲಾಯಿತು. ಸಮರದಲ್ಲಿ ಮಹಮದ್ ಕಮಾಲನು ಏರಿದ್ದ ಆನೆಯನ್ನು ಕೊಂದು ಅವನನ್ನು ಸೆರೆಹಿಡಿದು ಅಲ್ಲಿಯೇ ಕೊಲ್ಲಲಾಯಿತು.

ಕ್ರಿ.ಶ.1754 ರಲ್ಲಿ ಮಹಮದಾಲಿಯ ತನ್ನ ಅಧೀನರಿಂದ ಹೆಚ್ಚಿನ ಕಪ್ಪಗಾಣಿಕೆ ವಸೂಲಿ ಮಾಡಬೇಕೆಂದು ಆಂಗ್ಲರ ನೆರವು ಕೋರಿದನು. ಈ ಸೀಮೆಯಲ್ಲಿದ್ದ ಕಾರ್ವೇಟಿನಗರ ಶ್ರೀಕಾಳಹಸ್ತಿಯ ಪಾಳೆಯಗಾರರು ಹೆಚ್ಚಿನ ರಾಜಕಾಣಿಕೆಯನ್ನು ಕೊಡಲು ನಿರಾಕರಿಸ ಬಹುದೆಂದು ಆಂಗ್ಲರ ನೆರವು ಬೇಡಲಾಯಿತು. ಎಲ್ಲರೂ ವಿರೋಧವಿಲ್ಲದೆ ವಿಧೇಯರಾದರು. ಮಹಮದಾಲಿಯ ಸೋದರ ನಜೀ ಬುಲ್ಲಾ 1756 ರಲ್ಲಿ ದಂಗೆಯೆದ್ದು ಉತ್ತರಕ್ಕೆ ತಿರುಗಿ ಶ್ರೀಕಾಳಹಸ್ತಿ, ಕಾರ್ವೇಟಿನಗರ ಪಾಳೆಯಗಾರರ ಪ್ರದೇಶಗಳಲ್ಲಿ ಧಾಳಿ ನಡೆಸಿ ನವಾಬನ ಕೋಟೆಯನ್ನು ಹಿಡಿದ. ಕ್ರಿ.ಶ.1757 ರಲ್ಲಿ ಮುಂದೆ ನಡೆಯುವ ಬ್ರಹ್ಮೋತ್ಸವದ ಆದಾಯವನ್ನು ಕೊಳ್ಳೆ ಹೊಡೆಯುವ ಅವನ ಉದ್ದೇಶವನ್ನು ಮನಗಂಡು ಮದರಾಸಿನಿಂದ ಒಂದು ಸೈನ್ಯವನ್ನು ಕಳುಹಿಸಿ ತಿರುಮಲೆಯ ಕೆಳಗಿನ ನಗರವನ್ನು ಪಾಳಯವನ್ನಾಗಿ ಮಾಡಲಾಯಿತು. ಇದರಿಂದಾಗಿ ನಿರಾಶನಾದ ನಜೀಬುಲ್ಲನು ಧಾಳಿಯನ್ನು ಹಿಂದೆಗೆದುಕೊಂಡು ಆದಷ್ಟು ತಿರುಮಲೆಯ ಯಾತ್ರಿಕ ರನ್ನು ತಿರುಮಲೆ ಸೇರದಂತೆ ಓಡಿಸಿದ. ಇದರಿಂದಾಗಿ ಆ ವರ್ಷ ತಿರುಮಲೆಯ ಆದಾಯ ಸಾಕಷ್ಟು ಕಡಿಮೆಯಾಯಿತು. ಇದೇ ವರ್ಷದಲ್ಲಿ ಮರಾಠರ ಬಲವಂತರಾಯನ ಸೈನ್ಯದ ಧಾಳಿಯನ್ನೂ ಕರ್ನಾಟಿಕ ಎದುರಿಸಬೇಕಾಯಿತು. ಬಲವಂತರಾಯನು ಕಡಪವನ್ನು ಆಕ್ರಮಿಸಿ ನವಾಬ ಅಬ್ದುಲ್ ಮಜೀದ್‌ಖಾನನನ್ನು (ಕ್ರಿ.ಶ.1753-1757) ಕೊಂದುಹಾಕಿದ. ಮಜೀದ್‌ಖಾನನ ಉತ್ತರಾಧಿಕಾರಿ ಯಾಗಿ ಮೂಚಾಮಿಯಾ ಅಥವಾ ಮುಹಸೀನ್ ಖಾನನು ಬಂದ. ಇವನು ಗುರ್ರಂಕೊಂಡವನ್ನು ಮರಾಠರಿಗೆ ಒಪ್ಪಿಸಿ ಶಾಂತಿಯನ್ನು ಪಡೆದ. ಬಲವಂತರಾಯನು ಆನಂತರ ಪಲಮನೇರಿನ ತಲಪುಲಗುಟ್ಟದ ಬಳಿಯ ಕಡಪನತ್ತಂ ಕೋಟೆಯನ್ನು ಹಿಡಿದ. ನಂತರ ಪುಂಗನೂರು ಪಾಳೆಯಗಾರರನ್ನು ಕೊಂದು ಅದನ್ನೂ ವಶಪಡಿಸಿಕೊಂಡ.

ಕ್ರಿ.ಶ.1758 ರಲ್ಲಿ ಆರ್ಕಾಟ್ ನವಾಬನ ಮತ್ತೊಬ್ಬ ಸೋದರ ಅಬ್ದುಲ್ ವಹಾಬನು ತಿರುಪತಿ ಸೀಮೆಯಲ್ಲಿ ಧಾಳಿಯಿಟ್ಟು ಬೆದರಿಸಿದ. ತನ್ನ ಸೋದರನೊಡನೆ ಜಗಳವಾಡಿದ ಅಬ್ದುಲ್ ವಹಾಬನು ತನ್ನ ತಾಯಿ ಮತ್ತು ಮಗನೊಡನೆ ಚಿತ್ತೂರುಸೀಮೆಗೆ ಓಡಿ ಬಂದ. ಚಿತ್ತೂರಿನ ಸ್ಥಳೀಯ ಪಾಳೆಯಗಾರರಿಂದ ಅವನು ಪೇಶ್‌ಕಶ್ ರಕಮನ್ನು ಪಡೆದು ತನ್ನ ಹಾಗೂ ಕಿರಿದಾದ ತನ್ನಪರಿವಾರವನ್ನು ನೋಡಿಕೊಂಡಿದ್ದ. ನಂತರ ತಿರುಪತಿಯನ್ನು ಆಕ್ರಮಿಸಿ ತನ್ನ ಅದೃಷ್ಟವನ್ನು ಪರೀಕ್ಷೆಮಾಡಿ ನೋಡಬೇಕೆಂದುಕೊಂಡಾಕಷ್ಟು ಸೈನ್ಯವನ್ನು ಕೂಡಿಸಿಕೊಂಡು ಬೆಟ್ಟದ ತಪ್ಪಲಿನ ನಗರವನ್ನು ಭೀತಿಗೊಳಿಸಿದರೂ,ಆಂಗ್ಲ ಸೈನ್ಯ ಬರುತ್ತಿದೆ ಎಂಬ ವಾರ್ತೆಯಿಂದ ಮೇಲಿನಆಲಯ ವನ್ನು ಸೂರೆಮಾಡಲಿಲ್ಲ.ಹಿಂದಿರುಗಿ ಚಂದ್ರಗಿರಿ ಕೋಟೆಯನ್ನು ಆಕ್ರಮಿಸಿ ಸೂಕ್ತ ಸಮಯಕ್ಕಾಗಿ ಕಾದು ಕುಳಿತ. ಹೈದರಾಬಾದಿನಿಂದ ಹಿಂದಿರುಗುತ್ತಿದ್ದ ಫ್ರೆಂಚ್ ದಳಪತಿ ಬುಸ್ಸಿಯು ತಿರುಪತಿ ಪಟ್ಟಣಕ್ಕೆ ಮುತ್ತಿಗೆ ಹಾಕಿ, ಅಲ್ಲಿದ್ದ ಆಂಗ್ಲರ ಅಧಿಕಾರಿಯನ್ನು ಆಲಯದ ಆದಾಯವನ್ನು ತನ್ನ ಪರಮಾಡಲು ಒತ್ತಾಯಿಸಿದ. ಅಬ್ದುಲ್ ವಹಾಬನು ಬುಸ್ಸಿಯೊಡನೆ ಸೇರಿ ದಕ್ಷಿಣಕ್ಕೆ ಬಂದು ಆಲಯದ ಆದಾಯ ತನ್ನ ಪರವಾಗಬಹುದೆಂದು ನಿರೀಕ್ಷಿಸಿದ. ಆದರೆ ಬುಸ್ಸಿಯಿಂದ ಪ್ರಯೋಜನವಾಗದೆ ಚಂದ್ರಗಿರಿಗೆ ಹಿಂದಿರುಗಬೇಕಾಯಿತು. ವತ್ತೆ 1758 ರ ಡಿಸೆಂಬರಿನಲ್ಲಿ ಮರಾಠರ ದೊಡ್ಡ ಸೈನ್ಯವು ಗೋಪಾಲರಾಯನ ನೇತೃತ್ವದಲ್ಲಿ ತಿರುಪತಿ ಯನ್ನು ಸೇರಿ ಬೆಟ್ಟವನ್ನೇರಿ 1759 ರ ಏಪ್ರಿಲ್ ತಿಂಗಳಿನ ಆದಾಯವನ್ನು ಸೂರೆಮಾಡಲು ಆಲಯವನ್ನು ವಶಪಡಿಸಿಕೊಂಡಿತು. ಆದರೆ ಸೈನ್ಯದ ಮುಖ್ಯಭಾಗವನ್ನು ಹಿಂದಕ್ಕೆ ಕಳುಹಿಸಿದ್ದರಿಂದ ಒಂದು ಸಣ್ಣಪಡೆಯು ನಾರಾಯಣಶಾಸ್ತ್ರಿಯ ನೇತೃತ್ವದಲ್ಲಿ ಆಲಯದ ಆಡಳಿತ ನಡೆಸುತ್ತಿತ್ತು. ಅಬ್ದುಲ್‌ವಹಾಬನು ತನ್ನ ಸೈನ್ಯದೊಡನೆ ಬಂದು ಈ ಸಣ್ಣ ಸೇನೆಯನ್ನು ಓಡಿಸಿ ವಿಷಯವನ್ನು ಮದರಾಸು ಸರ್ಕಾರಕ್ಕೆ ನಿವೇದಿಸುತ್ತ ಆಲಯದ ಆದಾಯವನ್ನು ತನ್ನ ಪರವಾಗಿಸಲು ಬೇಡಿದ. ಅವನ ಬೇಡಿಕೆಯನ್ನು ತಿರಸ್ಕರಿಸಿ ಹಿಂದಿನ ಅಧಿಕಾರಿಯನ್ನೇ ಪುನಃ ನಿಯಮನ ಮಾಡಲಾಯಿತು.

ನಾರಾಯಣಶಾಸ್ತ್ರಿಯು ತಿರುಪತಿಯ ಬಳಿಯ ಕರಕಂಬಾಡಿ ಪಾಳಯಕ್ಕೆ ಓಡಿಬಂದಿದ್ದ. 1759 ರ ಜುಲೈ ತಿಂಗಳಿನಲ್ಲಿ ಕರಕಂಬಾಡಿ ಪಾಳೆಯಗಾರನ ನೆರವಿನಿಂದ ಅವನು ಪುನಃ ಬೆಟ್ಟವನ್ನೇರಿ ಆಲಯವನ್ನು ಕೈವಶ ಮಾಡಿಕೊಂಡ. ಅವನನ್ನುಪದಚ್ಯುತ ಗೊಳಿಸಲು ಒಂದು ಸೈನ್ಯ ಬಂದಿತಾದರೂ ಅದು ಸೋತು ಹಿಂದಿರುಗಿತು. ಸೈನ್ಯ ಸಹಾಯಕ್ಕಾಗಿ ಮದರಾಸಿಗೆ ಅರ್ಜಿಯನ್ನು ಬರೆದುಕೊಳ್ಳ ಲಾಯಿತು. ಸೈನ್ಯದೊಡನೆ ಬಂದ ಆಂಗ್ಲಸೇನಾನಿ ಮೇಜರ್ ಕಲ್ಲಾಡನು ಶತ್ರುಗಳ ಗಮನವನ್ನು ಸೆಳೆಯಲು ದಾರಿತಪ್ಪುವಂತೆ ಕರಕಂ ಬಾಡಿಯ ಪಾಳೆಯವನ್ನು ಆಕ್ರಮಿಸಿದ.ಅದರ ಪಾಳೆಯಗಾರನನ್ನು ಕೊಂದನಂತರ ಕರಕಂಬಾಡಿ ಗ್ರಾಮವನ್ನು ಅಗ್ನಿಗಾಹುತಿಮಾಡ ಲಾಯಿತು. ಇದರಿಂದಾಗಿ ಮರಾಠರು ಮತ್ತವರ ಬೆಂಬಲಿಗರ ಧೈರ್ಯವುಡುಗಿತು. ಮಾರನೆ ದಿನ ಆಲಯದ ಮೇಲೆ ಬ್ರಿಟಿಷರು ಮಾಡಿದ ಆಕ್ರಮಣ ಸಫಲವಾಯಿತು. ನಾರಾಯಣಶಾಸ್ತ್ರಿಯು ಹಿಂದೆಗೆದ. ಹಳೆಯ ಆದಾಯ ವಸೂಲಿ ಅಧಿಕಾರಿಯನ್ನು ಪುನಃ ಎತ್ತಿ ಹಿಡಿಯಲಾಯಿತು. ಅವನ ರಕ್ಷಣೆಗಾಗಿ ಒಂದು ಸಣ್ಣ ಸೈನ್ಯವನ್ನು ಬಿಟ್ಟು ಆಂಗ್ಲರು ಹಿಂದಿರುಗಿದರು. ಮತ್ತೆ ತಿರುಪತಿ ನಿಜಾಂಅಲಿ ಹಾಗೂ ಆಂಗ್ಲರ ಸಮರಭೂಮಿಯಾಯಿತು. ನಿಜಾಮಾಲಿ ಸೈನ್ಯ ಸೋತು ಶ್ರೀಕಾಳಹಸ್ತಿಯ ಮೂಲಕ ನೆಲ್ಲೂರಿನತ್ತ ಓಡಿಹೋಯಿತು.

**ಕಂಪನಿಯ ಪಾತ್ರ :-**

ಮೈಸೂರಿನ ಯುದ್ಧಗಳಾದ ಮೇಲೆ ಕಂಪನಿಯು ಕರ್ನಾಟಿಕ ಸೀಮೆಯಲ್ಲಿ ವ್ಯವಸ್ಥೆಯನ್ನುಂಟಾಗಿಸಲು ಪ್ರಯತ್ನಿಸಿತು. ಮಹಮದಾಲಿಯ ಉತ್ತರಾಧಿಕಾರಿಗಳು ಇದನ್ನು ವಿರೋಧಿಸಿದರು. ಕಂಪನಿಯ ನವಾಬನಿಗೆ ಬಲತ್ಕಾರದಿಂದ ಪಿಂಛಣಿಯನ್ನು ನೀಡಿ ಕ್ರಿ.ಶ.1801 ರಲ್ಲಿ ಈ ಪ್ರದೇಶದ ಆಡಳಿತವನ್ನು ವಹಿಸಿಕೊಂಡಿತು. ಹಿಂದೂ ಆಲಯಗಳ ಆಡಳಿತವನ್ನು ನಡೆಸಲು ಇಷ್ಟಪಡದ ಕಂಪನಿಯು ತಿರುಮಲೆ-ತಿರುಪತಿ ಆಲಯಗಳನ್ನು ಕ್ರಿ.ಶ.1843 ರಲ್ಲಿ ಮಹಂತರಿಗೆ ಒಪ್ಪಿಸಿತು.

ಕ್ರಿ.ಶ.1933 ರಲ್ಲಿ ಮದರಾಸು ಸರ್ಕಾರವು ಆಲಯಗಳನ್ನು ಆಧೀನಪಡಿಸಿಕೊಂಡು,ಒಂದು ಧರ್ಮಕರ್ತರ ಮಂಡಳಿಯ ಕೈಗೆ ಆಡಳಿತವನ್ನೊಪ್ಪಿಸಿತು. ಆಂಧ್ರಪ್ರದೇಶದ ಅವತರಣವಾದ ಮೇಲೆ ಈ ಆಲಯಗಳು ಆಂಧ್ರಪ್ರದೇಶದ ಸರ್ಕಾರಕ್ಕೆ ಬಂದವು.

***

## ಅಧ್ಯಾಯ -3

# ಪ್ರಾಚೀನ ಕಾಲದ ಸಾಹಿತ್ಯದಲ್ಲಿ ಶ್ರೀವೆಂಕಟೇಶ್ವರಸ್ವಾಮಿ ಆಲಯ

## (ಕ್ರಿ.ಶ. ಮೊದಲ ಶತಮಾನದಿಂದ 9ನೇ ಶತಮಾನದವರೆಗೆ)

### ಸಾಹಿತ್ಯಾಧಾರದಲ್ಲಿನ ಪ್ರಾಚೀನಕಾಲ

ಪ್ರಾಚೀನ ತಮಿಳು ಸಾಹಿತ್ಯದಲ್ಲಿ ತಿರುಮಲೆಯ ಪವಿತ್ರ ದೇವಾಲಯವನ್ನುವೆಂಗಡಮ್ ಎಂಬ ಹೆಸರಿನಿಂದ ಗುರುತಿಸಲಾಗಿದೆ ಇದು ಸಾಧಾರಣವಾಗಿ ಬೆಟ್ಟಕ್ಕೆಂದೇ ಗುರುತಾದರೂ,ಬಹುಪಾಲು ಈ ಬೆಟ್ಟದ ಆಸುಪಾಸಿಗೂ ಅನ್ವಯವಾಗಿದೆ. ಪ್ರಾಚೀನ ತಮಿಳು ಸಾಹಿತ್ಯದಲ್ಲಿ ವೆಂಗಡ ಅಥವಾ ವಡವೆಂಗಡವೆಂಬುದು, ತಮಿಳು ಮಾತನ್ನು ಆಡುವ ಜನಪ್ರದೇಶದ ಉತ್ತರದ ಗಡಿ ಎನ್ನಲಾಗಿತ್ತು. ತಮಿಳು ಸಾಹಿತ್ಯದಲ್ಲಿ ತಮಿಳು ಮಾತನಾಡುವ ಜನ ಉತ್ತರದಲ್ಲಿ ವೆಂಗಡದಿಂದ ದಕ್ಷಿಣಕ್ಕೆ ಕುಮಾರಿ (ಕನ್ಯಾಕುಮಾರಿ) ವರೆಗೆ ಪೂರ್ವಪಶ್ಚಿಮಗಳಲ್ಲಿನ ಸಮುದ್ರಗಳ ನಡುವೆಯ ಭೂಭಾಗದವರೆಂದು ಗುರುತಿಸಿದೆ. ಹೀಗಾಗಿ ಬಹುಹಿಂದಿನ ಕಾಲದಲ್ಲಿಯೇ ತಮಿಳು ಮಾತನಾಡುವ ಜನ ತಮಿಳರಲ್ಲದ ಜನವನ್ನು ಸೇರಲು ವೆಂಗಡವನ್ನು ದಾಟಿ ಹೋಗಬೇಕಾಗಿದ್ದಿತು.

ವೆಂಗಡದ ಉತ್ತರಕ್ಕೆ ಇದ್ದ ಜನರು ವಡುಕು ಭಾಷಿಗರೆಂದು ತಮಿಳಿನ ಪ್ರಾಚೀನ ಸಾಹಿತ್ಯಕ್ಕೆ ತಿಳಿದಿದ್ದು,ಈ ಭೂಭಾಗದ ರಾಜಕುಮಾರರನ್ನು ವಡುಕು ರಾಜಕುಮಾರರೆಂದು(ವಡುಕರ್ ಪೆರುಮಗನ್) ಎಂದು ಗುರುತಿಸಿದ್ದರು. ಕಡೇಪಕ್ಷಒಬ್ಬನಾದರೂ ವಡುಕು ಪೆರುಮಗನ್ಎಂದು ಕರೆಸಿಕೊಂಡದ್ದು ಕಂಡುಬರುತ್ತದೆ. ಅದರಂತೆ ಎರುಮೈ ಎಂಬ ಈತ ಈಗಣ ಉತ್ತರ ಮೈಸೂರು ಮತ್ತದರ ಹಲಭಾಗಗಳನ್ನು ಆಳಿರಬೇಕೆಂದು ಈ ಉಲ್ಲೇಖವಿರುವ ಸಂದರ್ಭ ಸೂಚಿಸುತ್ತದೆ. ವಡುಗರನಾಡಿಗೆ ಸೇರುವ ರಸ್ತೆಯನ್ನು ವಡಗೂರ್‌ಮುನೈ ಎಂದು ತಮಿಳು ಸಾಹಿತ್ಯ ಸೂಚಿಸುವುದು. ಇದು ವಡಗು ನಾಡಿನ ರಾಜಮಾರ್ಗದಲ್ಲಿನ ತಮಿಳು ಪ್ರಾಂತ್ಯದ ಹೊರ ಉಕ್ಕಡವಾಗಿರಬೇಕು.

ಪ್ರಾಚೀನ ತಮಿಳು ವ್ಯಾಕರಣ ತೊಲ್‌ಕಾಪ್ಪಿಯಂ ಪ್ರಕಾರ ವೆಂಗಡಂ ಎಂಬುದು ಬೆಟ್ಟದ ಹೆಸರು. ಸಂಗಂ ಕಾಲದ ಕವಿ ಮಾಮೂಲನಾರನೂ ಬೆಟ್ಟವನ್ನು ಇದೇ ಹೆಸರಿನಿಂದ ಗುರುತಿಸಿದ್ದಾನೆ. ಮಾಮೂಲನಾರನು ಬೆಟ್ಟದ ಮೇಲಿನ ಉತ್ಸವ ಜಾತ್ರೆಗಳನ್ನು ಹೆಸರಿಸುತ್ತಾನೆ. ಇದರಿಂದಾಗಿ ಇಲ್ಲಿ ಒಂದು ಆಲಯ ಇದ್ದಿರಬೇಕು. ಇಲ್ಲಿ ತೊಲ್‌ಕಾಪ್ಪಿಯವಾಗಲೀ, ಮಾಮೂಲನಾರನಾಗಲೀ, ಆಲಯದ ಹೆಸರನ್ನಾಗಲೀ ತಿರುವೆಂಗಡ ಮುಡೈಯಾನ್ ನನ್ನಾಗಲಿ ಅಥವಾ ಈ ಹೆಸರಿನ ಯಾವುದೇ ಪರ್ಯಾಯ ಹೆಸರನ್ನಾಗಲೀ ಅಥವಾ ಇನ್ನಾವುದೇ ದೇವರ ಯಾವ ಹೆಸರನ್ನಾಗಲೀ ತಿಳಿಸುವುದಿಲ್ಲ.ಆದರೆ ತಮಿಳಿನ ಮತ್ತೊಂದು ಕೃತಿ ಶಿಲಪ್ಪದಿಕಾರಂವೆಂಗಡದ ಬೆಟ್ಟದ ಮೇಲಿನ ದೇವರ ವಿವರಣೆ ನೀಡುತ್ತದೆ. ಇದು ವಿಷ್ಣುವೇ ಎನ್ನಬೇಕು.

### 2. ಸಂಗಂ ಸಾಹಿತ್ಯದಲ್ಲಿ ತಿರುಮಲೆ

ತಮಿಳಿನ ಪ್ರಾಚೀನ ಸಾಹಿತ್ಯ ಸಂಗಂ ಸಾಹಿತ್ಯ ಹಲವಾರು ಕವನ ಸಂಗ್ರಹಗಳದ್ದಾಗಿದ್ದು,ಒಂದು ಕಾಲದಲ್ಲಿ ತಮಿಳು ನಾಡಿನಲ್ಲಿ ಅತ್ಯಂತ ಪ್ರಸಿದ್ಧವಾಗಿದ್ದಿತು.ಸಂಗಂ ಸಾಹಿತ್ಯವನ್ನು ಮೂರು ಭಾಗಗಳನ್ನಾಗಿಸಿದ್ದು, ಪ್ರತಿಯೊಂದೂ ಒಬ್ಬ ಹಿರಿಕವಿಯನ್ನು ಆಶ್ರಯಿಸಿತ್ತು. ಈ ಕವನಗಳ ಪ್ರಕೃತಿಯನ್ನು ಗಮನಿಸಿದರೆ ಅವುಗಳ ಕರ್ತೃಗಳ ಪ್ರತಿಭಾ ಶೈಲಿಗಳು ಪ್ರಕಟವಾಗುವಂತಿವೆ. ಹೀಗಾಗಿ ಇಡೀ ಸಂಗಂ ಸಾಹಿತ್ಯ ಕಾವ್ಯಸಂಗ್ರಹಗಳಾಗಿದ್ದು ವಿವಿಧ ರೀತಿಯ ಕಾಲ.ಛಂದಸ್ಸುಗಳಲ್ಲಿ ಪ್ರಕಟಗೊಂಡಿವೆ ಎನ್ನಬಹುದು.

ತಮಿಳಿನಲ್ಲಿ ಭಾರತ ಕಾವ್ಯವನ್ನು ರಚಿಸಿದ ಪ್ರಾಚೀನ ಕವಿಯೆಂದು ಪೆರುಂದೇವನಾರ್ ಹೆಸರು ಕೇಳಿ ಬರುತ್ತದೆ. ಈತ ತಮಿಳು ಸಾಹಿತ್ಯದಲ್ಲಿ ಸಾಮಾನ್ಯವಾಗಿ ಕಂಡುಬರುವ ಇತರ ಪೆರುಂದೇವನಾರುಗಳಗಿಂತ ಬೇರೆಯಾದವನು. ಈತ ಬಹು ಪ್ರಾಚೀನ ಕವಿಯಾಗಿದ್ದು ಎಟ್ಟು ತೊಗೈ ಸಂಗ್ರಹವನ್ನು ರಚಿಸಿದ್ದೇ ಅಲ್ಲದೇ ಅಂದಿಗೆ ಈ ಭೂಭಾಗದಲ್ಲಿ ಪೂಜೆಗೊಳ್ಳುತ್ತಿದ್ದ ಎಲ್ಲ ದೇವತೆಗಳ ಪ್ರಾರ್ಥನಾ ಪದ್ಯಗಳನ್ನೂ ರಚಿಸಿದ. ಇದರ ಕಾಲವನ್ನು ಖಚಿತವಾಗಿ ನಿರ್ಧರಿಸಲಾಗಿಲ್ಲವಾದರೂ ಕ್ರಿಸ್ತ ಶಕದ ಆರಂಭದಲ್ಲಿರಬೇಕೆಂದು ಬಹುತೇಕ ಒಪ್ಪಲಾಗಿದೆ. 10 ನೇ ಶತಮಾನದ ಪಾಂಡ್ಯರಾಜ ತಲೈಯಲಂಗಣಮ್ ವಿಜೇತನಿಗೂ ಮೊದಲಿನದಿರಬಹುದೆಂದು ಊಹಿಸ ಬಹುದಷ್ಟೆ.

ಈ ಕಾಲದ ಸಂಗಂ ಸಾಹಿತ್ಯದ ಹಲವಾರು ಕವನ ಸಂಗ್ರಹಗಳಲ್ಲಿ ತಿರುಪತಿಯನ್ನು ವೆಂಗಡವೆಂದು ಹೆಸರಿಟ್ಟು ಕರೆಯಲಾಗಿದೆ. ತೊಲ್‌ಕಾಪ್ಪಿಯದಂತೆಯೇ ಇಲ್ಲಿಯೂ ತಿರುಪತಿಯನ್ನು ತಮಿಳು ಮಾತನಾಡುವ ಜನರ ಪ್ರಾಂತ್ಯದ ಉತ್ತರದ ಗಡಿಯೆಂದು ಗುರುತಿಸಲಾಗಿದೆ.

ಹಿಂದೆಯೇ ಉಲ್ಲೇಖಗೊಂಡಿರುವ ತಲೈಯಲಂಗಣಮ್ ವಿಜೇತ ರಾಜ ಪಾಂಡ್ಯನೊಡನೆ ತಿರುಪತಿ ಯನ್ನು ಹೆಸರಿಸುವ ಇನ್ನಿಬ್ಬರು ಕವಿಗಳನ್ನು ಗುರುತಿಸಬಹುದು. ಕಲ್ಲಾಡನಾರ್ ಹಾಗೂ ನಕ್ಕೀರಾರ್, ವೆಂಗಡದ ಸುತ್ತಣ ಪ್ರಾಂತ್ಯದ ದೊರೆ ಪುಳ್ಳಿಯನ್ನು ಪ್ರಸಿದ್ಧ ಅಹನಾನೂರು ಕವಿತೆಯ 83 ನೆಯ ಪದ್ಯ ಹೆಸರಿಸುತ್ತದೆ. ಈ ಪದ್ಯದಲ್ಲಿ ಅವನನ್ನು ಇಳೈಜರ್ ಪೆರುಮಗನ್ ಎನ್ನಲಾಗಿದೆ. ಈ ಸಂದರ್ಭದಲ್ಲಿ ಬಳಸಲಾದ ತಮಿಳು ಪದ -ಕಳ್ವ-ಎಂದರೆ ಬೇಸಾಯಗೊಳ್ಳದ ಭೂಮಿಯಾಗಿರಬೇಕು.

ತಾತ್ಪರ್ಯವೆಂದರೆ ಈ ಉಲ್ಲೇಖವು ಪ್ರಾಯಶಃ ವ್ಯಾಪಕವಾದ ಬೇಸಾಯ ನಡೆಯದಿದ್ದ ಸ್ಥಿತಿಯನ್ನು ಸೂಚಿಸುತ್ತದೆ. ಇದೇ ಕವಿಯು ರಚನೆಯ ಅಹನಾನೂರಿನ 209 ನೇ ಪದ್ಯದಲ್ಲಿ ಪುಳ್ಳಿಯನ್ನೂ ಅವನ ವೆಂಗಡವನ್ನೂ ಮತ್ತೆ ಹೆಸರಿಸಿ,ಪುಳ್ಳಿಯನಾಡಿನಿಂದ ಉತ್ತರಕ್ಕೆ ಹೋಗಬೇಕಾದರೆ ಈ ಬೆಟ್ಟದಲ್ಲಿಯ ಇಕ್ಕಟ್ಟಾದ ದಾರಿಯ-ಸುರಂಗದ ಮೂಲಕ ಹೋಗಬೇಕು ಎಂದು ಹೇಳುತ್ತಾನೆ.

ನಕ್ಕೀರಾರ್ ತಮಿಳಿನ ಪ್ರಾಚೀನ ಪ್ರಸಿದ್ಧ ಕವಿಯಾಗಿ ಅವನ ಬಗ್ಗೆ ಅನೇಕ ಕಥೆಗಳೂ ಹರಡಿವೆ. ಅವನು ವೆಂಗಡವೆಂದು ಹೇಳದಿದ್ದರೂ ವೆಂಗಡ ಸುತ್ತಮುತ್ತಲಲ್ಲಿ ವೆಂಗಡದ ಪ್ರಭಾವವನ್ನು ಗುರುತಿಸಿದ್ದಾನೆ. ಈಗಣ ಗೂಡೂರು ತಾಲ್ಲೂಕಿನ ಸೆಡ್ಡಿಪಾಳಯಂ ಒಮ್ಮೆ ಪವತ್ತಿರಿಯಾಗಿ ತರ್ರೈಯನ್‌ನ ರಾಜಧಾನಿಯಾಗಿದ್ದಿತು. 253 ನೇ ಪದ್ಯದಲ್ಲಿ ನಕ್ಕೀರಾರ್ ಮತ್ತೆ ವಡುಕೂರ್ ಪೆರುಮಗನಾದ ಎರುಮೈಯ ಬಗ್ಗೆ ಹೇಳುತ್ತಾನೆ. ಈ ಎರುಮೈಯನ್ನು ವಡುಕೂರು ದೊರೆಯೆಂದು ಇತರ ಅನೇಕ ಕವಿಗಳು ಬೇರೆ ಬೇರೆ ಪದ್ಯಗಳಲ್ಲಿ ಗುರುತಿಸಿದ್ದಾರೆ. ನಕ್ಕೀರಾರನು ತನ್ನ ಪದ್ಯದಲ್ಲಿ ವಡುಕೂರು ರಾಜನ ಪ್ರಾಂತ್ಯ ಅಯಿರಿ ನದಿಯ ಪ್ರಾಂತ್ಯದಲ್ಲಿದೆಯೆಂದೂ ಈ ನದಿಯನ್ನು ದಾಟುವುದರಿಂದ ತಮಿಳು ಪ್ರಾಂತ್ಯದಿಂದ ವಡುಕರ ನಾಡನ್ನು ಸೇರಬಹುದೆಂದೂ ಹೇಳುತ್ತಾರೆ. ಅಯಿರಿಯು ಈಗಣ ಕರ್ನಾಟಕದ ಹಗರಿ ನದಿಯಾಗಿದ್ದಿರಬೇಕು. (ಆಂಧ್ರದ ಆದೋನಿಯ ಬಳಿಯದು) ಇದು ನಂತರದ ಕಾಲದಲ್ಲಿ ತಮಿಳರ ಹಾಗೂ ಉತ್ತರದ ಜನರ ನಡುವಿನ ಗಡಿಯಾಗಿದ್ದಿತು.

ಇನ್ನೊಬ್ಬ ಪ್ರಾಚೀನ ತಮಿಳುಕವಿ ಕನಕ್ಕಯನಾರ್‌ನು (ಪ್ರಾಯಶಃ ನಕ್ಕೀರಾರನ ತಂದೆ; ಕಾರಣ ನಕ್ಕೀರಾರನನ್ನು ಹಲವು ಬಾರಿ ಕನಕ್ಕಯನಾರನ ಮಗ ಎಂದು ಗುರುತಿಸಲಾಗಿದೆ.) ಅಹಂನ 27 ನೇ ಪದ್ಯದಲ್ಲಿ ವಡವೆಂಗಡವನ್ನು ಹೆಸರಿಸಿ,ಇಲ್ಲಿನ ಅರಣ್ಯಗಳು ಆನೆಗಳಿಂದ ತುಂಬಿರುವುದನ್ನೂ,ಪಾಂಡ್ಯನೊಬ್ಬನ ಪ್ರಸಿದ್ಧ ಮುತ್ತಿನ ತಯಾರಿಕೆಯ ಬಂದರು ಸ್ಥಳವಾದ ಕೋರ್ಕೈಯನ್ನೂ ವಿವರಿಸುವಲ್ಲಿ ತಿಳಿಸುತ್ತಾನೆ. ವೆಂಗಡವನ್ನು ತೊಂಡೈಯರ್‌ಗೆ ಸೇರಿದ್ದೆಂದೂ,ಇದರಾಚೆಯ ವಡುಕುನಾಡನ್ನು ವಿವರಿಸಿದ್ದಾನೆ. ಕಾಟ್ಟೂರ್ ಕಿಳಾರ್‌ನ ಮಗ ಕಣ್ಣನು ವೆಂಗಡವು ತರ್ರೈಯಾನ್‌ಗೆ ಸೇರಿದ್ದೆಂದೂ ಇಲ್ಲಿನ ಆನೆಗಳು ಬಿದಿರು ಹುಲ್ಲಿನ ಎಳೇ ಗರಿಕೆಯನ್ನೂ ತಿನ್ನುತ್ತಿದ್ದವು ಎಂದು ವಿವರಿಸಿದ್ದಾನೆ.

ಈ ಪ್ರಾಚೀನ ತಮಿಳು ಕವಿಗಳಲ್ಲಿ ಕಡೆಯದಾಗಿ ಹಾಗೂ ಅತಿಪ್ರಸಿದ್ಧ,ಅತಿ ಪ್ರಾಚೀನನಾದವನು ಮಾಮೂಲನಾರ್,ಇವನ ಕಾವ್ಯ ಸಂಗ್ರಹದಲ್ಲಿ ಏಳು ಪದ್ಯಗಳು ವೆಂಗಡವನ್ನು ಪ್ರತ್ಯಕ್ಷ,ಅಥವಾ ಪರೋಕ್ಷವಾಗಿ ಉಲ್ಲೇಖಿಸಿವೆ. 61 ನೇ ಪದ್ಯದಲ್ಲಿ ವೆಂಗಡವು ಕಾಲವರ್ ದೊರೆಯಾದ ಪುಳ್ಳಿಗೆ ಸೇರಿದ್ದು ಎನ್ನುತ್ತಾ ವೆಂಗಡವು ತನ್ನ ಜಾತ್ರೆಗಳಿಗೆ ಉತ್ಸವಗಳಿಗೆ ಪ್ರಸಿದ್ಧವಾಗಿದೆ ಎನ್ನುತ್ತಾನೆ. ಈ ಜಾತ್ರೆ ಉತ್ಸವಗಳ ಉಲ್ಲೇಖ ಪ್ರಮುಖವಾಗಲು ಕಾರಣ ಇಲ್ಲೊಂದು ಆಲಯ ಇರಬೇಕೆಂದು ನಾವು ನಿರ್ಧಾರಕ್ಕೆ ಬರಲು ಅನುಕೂಲ ಮಾಡಿಕೊಡುವ ಸಾಕ್ಷಿ ಪ್ರಾಚೀನ ತಮಿಳನಲ್ಲಿ ಇದೊಂದೇ ಆಗಿರುವುದು.

ಈ ಭಾಗ ಅಹನಾನೂರಿನ 61 ನೇ ಪದ್ಯದಲ್ಲಿ ಬರುತ್ತದೆ. ಈ ಭಾಗವನ್ನು ಸ್ವಚ್ಛಂದವಾಗಿ ಅನುವದಿಸಿದಾಗ ಉಂಟಾಗುವ ನಿಷ್ಪತ್ತಿ ಹೀಗೆ-ಯುದ್ಧ ಕಲೆಗೆ ಹೆಸರಾದ ಕಾಲ್ಬಳೆ ತೊಡುವ,ಭತ್ತದಿಂದ ಮಾಡಿದ ಕಳ್ಳಿಗೆ ಬದಲಾಗಿ ಆನೆಯ ದಂತಗಳನ್ನುಕೊಡುವ ಕಾಲವರ ದೊರೆ ಪುಳ್ಳಿಯು ಮಾಲವರ ಪ್ರದೇಶವನ್ನು ಆಕ್ರಮಿಸಿ ಪ್ರಸಿದ್ಧನಾಗಿದ್ದು,ತನ್ನನ್ನು ಸೇರಿದವರಿಗೆ ಬಹು ಮೌಲ್ಯದ ಉಡುಗೊರೆ ಗಳನ್ನು ನೀಡುತ್ತಾನೆ. ಪುಳ್ಳಿಯ ರಾಜಧಾನಿ ವೆಂಗಡವು ತನ್ನಲ್ಲಿ ನಡೆಯುವ ಉತ್ಸವಜಾತ್ರೆಗಳಿಂದಾಗಿ ಶ್ರೀಮಂತವಾಗಿದ್ದು ಅಲ್ಲಿ ಸೇರಿದ ಮೇಲೆ (ನಿನ್ನ ಪ್ರಿಯನು) ತಿರುಗಿಬರುವುದು ಕಷ್ಟವಾಗಬಹುದು. ಕಥಾಭಾಗದ ತಾತ್ಪರ್ಯವೆಂದರೆ -ಐಶ್ವರ್ಯದ ಅನ್ವೇಷಣೆಯಲ್ಲಿ ಪ್ರೇಯಸಿಯನ್ನುತೊರೆದ ಪ್ರಿಯಕರ ದೂರತೀರವನ್ನು ಸೇರಿ ನಿರೀಕ್ಷಣೆಗಿಂತ ಹೆಚ್ಚು ಕಾಲ ಹಿಂದಿರುಗದಿದ್ದಾನೆ. ಅವನು ಹಿಂತಿರುಗುವುದು ನಿಧಾನವಾಗಬಹುದಾದರೂ ಬಂದೇ ತೀರುತ್ತಾನೆ ಎಂದು ಪ್ರೇಯಸಿಗೆ ಸಮಾಧಾನ ಮಾಡಲಾಗುತ್ತಿದೆ.ಆ ಮಾತಿಗೆ ಒತ್ತು ಕೊಡಲು, ತನ್ನ ಸಂಪದದನ್ವೇಷಣೆಯಲ್ಲಿ ಆತ ಐಶ್ವರ್ಯಭರಿತವಾದ ವೆಂಗಡವನ್ನು ಪಡೆದರೂ,ಅಲ್ಲಿಯೇ ನಿಲ್ಲದೇ ಅವಳ ಬಳಿಗೆ ಹಿಂತಿರುಗುತ್ತಾನೆ ಎನ್ನಲಾಗಿದೆ. ಇಲ್ಲಿ ಗಮನಿಸತಕ್ಕ ಅಂಶವೆಂದರೆ ವೆಂಗಡದ ಪ್ರಸಿದ್ಧಿಗೆ ಅಲ್ಲಿ ಆಗಿಂದಾಗ್ಗೆ ನಡೆಯುತ್ತಿದ್ದ ಜಾತ್ರೆ ಉತ್ಸವಗಳು-ಈಗ ಈ ದೇವಾಲಯ ನಗರದ ಪ್ರತ್ಯೇಕ ವೈಶಿಷ್ಟ್ಯವಾದವುಗಳು-ಕೆಲಮಟ್ಟಿಗಾದರೂ ಕಾರಣವಾಗಿದ್ದವು ಎಂಬ ಮಾಮೂಲನಾರನ ಅಭಿಪ್ರಾಯ.

ಇದೇ ಕವಿಯ 115 ಹಾಗೂ 281 ನೇ ಪದ್ಯಗಳು ಕೂಡ ನಾಡುವಿನ ಎರಿಮೈ ಹಾಗೂ ವಡುಕರನ್ನು ಕುರಿತದ್ದು. ಇಲ್ಲಿನ ಒಂದು ಹೇಳಿಕೆಯಲ್ಲಿ ಕವಿ ಹೇಳುವಂತೆ ಮೌರ್ಯರು ತಮ್ಮದಕ್ಷಿಣದ ಧಾಳಿಯಲ್ಲಿ ಹಿಂದೆಯೇ ಹೇಳಿದಂತೆ ಇಲ್ಲಿನ ಒಂದು ಸುರಂಗದ ಮೂಲಕ ವಡುಕರನ್ನು ಮುಂದೆ ಒತ್ತಿಕೊಂಡು ಬಂದರು.295 ನೇ ಪದ್ಯದಲ್ಲಿ ತಿರುಪತಿಯನ್ನು ಅತ ಪುಳ್ಳಿಕುನ್ರಂ-ಪುಳ್ಳಿದೊರೆಯ ಬೆಟ್ಟವೆಂದು ಹೇಳುತ್ತಾ ಈ ಪ್ರಾಂತ್ಯ ವಡುಕರದೆಂದೂ ಇಲ್ಲಿನ ಆಡುಭಾಷೆ ಬೇರೆಯೆಂದೂ ಹೇಳುತ್ತಾನೆ.311 ನೇ ಪದ್ಯದಲ್ಲಿ ಇಲ್ಲಿನ ಜನಜೀವನವನ್ನು ವಿವರಿಸುತ್ತ ಇವರು ಅನ್ನವನ್ನು ಹುಳಿಯೊಂದಿಗೆ ಮುತ್ತುಗದೆಲೆಯಲ್ಲಿ ಊಟ ಮಾಡುವರೆಂದು ಹೇಳುತ್ತಾನೆ. 359ನೇ ಪದ್ಯದಲ್ಲಿ ಪುಳ್ಳಿದೊರೆ ಉದಾರವಾಗಿ ಉಡುಗೊರೆಗಳನ್ನು ನೀಡುವವನು ಎನ್ನಲಾಗಿದೆ.393 ಪದ್ಯದಲ್ಲಿ ಇಲ್ಲಿನ ಹಲವು ಭಾಷೆಗಳ ಲಕ್ಷಣದಂತೆ ಪುಳ್ಳಿದೊರೆ ಉದ್ದುದ್ದ ಮಾತಿನವನೆಂದು ವರ್ಣಿಸಲಾಗಿದೆ. ಇತರ ಹಲವು ಕವಿಗಳು ಹಲವಾರು ಬಾರಿ ಇಲ್ಲಿನ ಯಾವುದಾದರೊಂದು ಅಂಶವನ್ನು ಎತ್ತಿ ಹೇಳಿದರೂ, ವೆಂಗಡಂ ಎಂಬುದು ಪ್ರತ್ಯೇಕವಾಗಿ ಹೇಳಲ್ಪಟ್ಟಿಲ್ಲ.

### 3. ತಿರುಪತಿ - ತಿರುಮಲೆಯ ಪ್ರತ್ಯೇಕ ಉಲ್ಲೇಖ ಇಲ್ಲದಿರುವಿಕೆ

ಈ ಪ್ರಾಚೀನ ಸಾಹಿತ್ಯದ ದಾಖಲೆಗಳಲ್ಲಿ ಹಲವಾರು ಪ್ರಸಿದ್ಧ ಕವಿಗಳು ಅಂದಿನ ಕಾಲದ ಬೆಟ್ಟ ಹಾಗೂ ಬದಿಯ ಹಲವು ಪ್ರಾಂತ್ಯಗಳ ವಿಶಿಷ್ಟ ಲಕ್ಷಣಗಳೆಂದು ಕರೆಯಬಹುದಾದ ವೆಂಗಡವನ್ನು ವಿವರಿಸಿದ್ದರೂ,ಇಂದು ಇಡೀ ಪ್ರಾಂತ್ಯದಲ್ಲಿ ಪ್ರಮುಖವಾಗಿರುವ ಹಿರಿಯ ದೇವಾಲಯದ ಬಗ್ಗೆ ಪ್ರತ್ಯೇಕವಾಗಿ ಹೇಳಿಲ್ಲ ಎಂಬುದು ಆಸಕ್ತಿದಾಯಕ ಅಂಶ. ಮಾಮೂಲನಾರನ ಪದ್ಯ 61 ರಲ್ಲಿ ಇಲ್ಲಿ ನಡೆಯುತ್ತಿದ್ದ ಉತ್ಸವಗಳ ಬಗ್ಗೆ ಬಂದಿರುವುದನ್ನು ಹೇಳಿಯಾಗಿದೆ. ಇದರಿಂದಾಗಿ ಇಲ್ಲೊಂದು ಆಲಯವೂ,ಅದಕ್ಕೆ ಸಂಬಂಧಿಸಿದ ಉತ್ಸವಗಳೂ ಖಚಿತವಾಗಿ, ಸಂಗಂ ಸಾಹಿತ್ಯಕಾಲದಲ್ಲಿ,ಆಲಯಕ್ಕಿಂತ ಪರ್ವತಕ್ಕೇ ಪ್ರಾಧಾನ್ಯವಿದ್ದು,ಅಂದಿಗೆ ಇಲ್ಲಿನ ಆಲಯ ಪ್ರಾಮುಖ್ಯತೆಯನ್ನು ಪಡೆದಿರಲಿಲ್ಲ ಎನ್ನಬರುತ್ತದೆ.

**4. ಆಳ್ವಾರರ ಕಾಲ (ಸು- 4ನೇ ಶತಮಾನದಿಂದ ಸು - 9ನೇ ಶತಮಾನ)**

ಭಗವಾನ್ ವಿಷ್ಣುವು ಆರಾಧಿಸಲ್ಪಡುತ್ತಿರುವ 108 ಸ್ಥಳಗಳ ಮಹಿಮೆಯನ್ನು ವಿವರಿಸುವ ನಾಲ್ಕುಸಾವಿರ ಪದ್ಯಗಳ, ಪಾಶುರಗಳ, ಸಂಗ್ರಹವೇ ಪ್ರಾಚೀನ ತಮಿಳಿನ -ನಾಲಾಯಿರಪ್ರಬಂಧಗಳು. ಪಾರಂಪರಿಕವಾಗಿ ಹನ್ನೆರಡುಮಂದಿಯೆಂದು ಗುರುತಿಸಲಾಗಿರುವ ದೈವಭಕ್ತರಾದ ಆಳ್ವಾರರು ಇದನ್ನು ರಚಿಸಿದರು.ತಿರುಮಲೆಯ ಪ್ರಾಚೀನ ಇತಿಹಾಸದ ಮೇಲೆ ಈ ಪ್ರಬಂಧಗಳು ಸಾಕಷ್ಟು ಬೆಳಕು ಚೆಲ್ಲುತ್ತವೆ. ಇಡೀ ನಾಲಾಯಿರ ಪ್ರಬಂಧ ಕ್ರಿ.ಶ.4 ನೇ ಶತಮಾನದಿಂದ 9 ನೇ ಶತಮಾನದ ವರೆಗಿನ ಸ್ಥೂಲವಾಗಿ ಐದುಶತಮಾನಗಳನ್ನು ಪ್ರತಿನಿಧಿಸುತ್ತವೆ ಎನ್ನಬಹುದು. ಇಲ್ಲಿ ಹನ್ನೆರಡು ಮಂದಿ ಆಳ್ವಾರರಲ್ಲಿ ಮೂವರನ್ನು ಮೊದಲಾಳ್ವಾರರೆಂದು ಸೆಂದಮಿಳಿನಲ್ಲಿ ಹಾಡಿದವರೆಂದೂ ತಿರುಮಂಗೈ ಆಳ್ವಾರರು ಹೇಳುತ್ತಾರೆ. ಇವರುಗಳೆಂದರೆ ಪೊಯ್ಗೈ ಆಳ್ವಾರ್ ಪೂದತ್ತಾಳ್ವಾರ್ ಹಾಗೂ ಪೇಯಾಳ್ವಾರ್. ಇವರ ನಂತರ ಬಂದ ತಿರುಮಳಿಶೈ ಆಳ್ವಾರರನ್ನೂ ಇವರೊಡನೆಯೇ ಆದ್ಯರಲ್ಲಿ ಸೇರಿಸುವುದುಂಟು.

ಇವರುಗಳ ಸಾಹಿತ್ಯದ ಆಂತರಿಕ ಸಾಕ್ಷ್ಯಗಳೊಡನೆ, ಅವರ ಕಾಲದ ಚಟುವಟಿಕೆಗಳ ಪರಿಚಯವಾಗಿ ತಿರುಮಲೆಯ ಆಲಯದ ಇತಿಹಾಸದ ಬಗ್ಗೆ ಹೆಚ್ಚಿನ ಬೆಳಕು ಮೂಡುವುದೇ ಅಲ್ಲದೇ,ಭಕ್ತಿಪಂಥದ ಉದಯ, ಸಾಮಾನ್ಯವಾಗಿ ಪಾಂಚರಾತ್ರವೆಂದುಕರೆಯಲಾದ ವೈಷ್ಣವ ಪಂಥದ ವಿಕಾಸಗಳ ಬಗ್ಗೆ ತಿಳಿದುಬರುತ್ತದೆ. ಪಾಂಚರಾತ್ರ ಸಾಹಿತ್ಯ ಭಕ್ತ ಜೀವನದ ನಿಯಮ ನಡವಳಿಕೆಗಳನ್ನೂ, ಮೋಕ್ಷ ಮಾರ್ಗದ ಸಾಧನೆಯನ್ನೂ ಕುರಿತು ವಿವರಿಸುತ್ತದೆ.

**5. ಪೊಯ್ಗೈ ಆಳ್ವಾರ್**

ಆಳ್ವಾರರಲ್ಲಿ ಪ್ರಥಮರು ಪೊಯ್ಗೈ ಆಳ್ವಾರ್,ನಾಲಾಯರ ದಿವ್ಯಪ್ರಬಂಧದ ಕಡೆಯ ಸಹಸ್ರದ ಮೊದಲ ಶತಕದ ಕರ್ತೃವಾದಇವರು ವೈಷ್ಣವ ಭಕ್ತರೇ ಅಲ್ಲದೆ ತಮಿಳು ಸಾಹಿತ್ಯದ ಪ್ರಮುಖರಲ್ಲಿ ಒಬ್ಬರೆಂದು ಗಣಿತರಾಗಿದ್ದಾರೆ. ಇವರ ಮೊದಲಾಂ ತಿರುವಂದಾದಿಯಲ್ಲಿ (ಮೊದಲ ಶತಕ ಪಾಶುರಗಳು) ಹನ್ನೆರಡರಿಂದ ಹದಿನೈದು ಬಾರಿ ತಿರುಮಲೆಯ ಬಗ್ಗೆ ನೇರವಾದ ಉಲ್ಲೇಖಗಳಿವೆ. ಭಗವನ್ನಾರಾಯಣನು ಪರಮ ಕರುಣೆಯಿಂದ ಪ್ರತ್ಯಕ್ಷವಾದ ಪವಿತ್ರಸ್ಥಳ ಇದು ಎಂದು ಅವರು ತಿಳಿಸುತ್ತಾರೆ. 5 ಹಾಗೂ 74 ನೆಯಪಾಶುರಗಳು ಇಲ್ಲಿನ ದೇವರ ಲಕ್ಷಣಗಳನ್ನೂ ಅವನು ಹಿಡಿದಿರುವ ಆಯುಧಗಳನ್ನೂ ವಿವರಿಸುತ್ತವೆ. 26 ನೇ ಪಾಶುರ ತಿರುಮಲೆಯದೇವತೆಗಳೂ ಇರಲು ಬಯಸತಕ್ಕ ಪವಿತ್ರಕ್ಷೇತ್ರವೆನ್ನುತ್ತದೆ. 37 ನೇ ಪಾಶುರ ಇನ್ನೂ ಮುಂದುವರಿದು ವೆಂಗಡವನ್ನು ಬಹುಸುಂದರವಾದ ಶಂಖವನ್ನು ಧ್ವನಿಗೊಳಿಸುವ ದೇವನು ನೆಲೆಸಲು ಆಯ್ಕೆಮಾಡಿಕೊಂಡ ಸ್ಥಳವೆಂದೂ,ಭಕ್ತ ಜನರೂ ಹಿರಿಯ ಜ್ಞಾನಿಗಳೂ ಬೇರೆ ಬೇರೆ ದೇಶಗಳಿಂದ ಇಲ್ಲಿಗೆ ಬಂದು,ದಿನವೂ ಈ ದೇವರನ್ನು ಕರ್ಪೂರ ಆರತಿ ನೀಡಿ ಗಂಧದಿಂದ ಅರ್ಚಿಸುವರು ಎಂದು ವಿವರಿಸಲಾಗಿದೆ. ಇಂತಹದೇ ವಿವರಣೆ 39ನೇ ಪಾಶುರದಲ್ಲಿ ಮತ್ತೊಂದು ಉಲ್ಲೇಖವಿದೆ. 40ನೇ ಪಾಶುರದಲ್ಲಿ ಇಲ್ಲಿನ ಪಂಥಾತೀತ ಪ್ರಕೃತಿಯನ್ನು ವಿವರಿಸುತ್ತ, ಆಕಾಶದಿಂದ ಬೀಳುತ್ತಿರುವ ಉಲ್ಕೆಗಳನ್ನು, ತಮಗಾಗಿ ಅಟ್ಟಿಸಿಕೊಂಡು ಬರುತ್ತಿರುವ ಕುರುವರು ಹಿಡಿದು ದೊಂದಿಗಳೆಂದು ಭ್ರಮಿಸುವ ಆನೆಗಳನ್ನು ವರ್ಣಿಸಲಾಗಿದೆ. 68ನೇ ಪಾಶುರದಲ್ಲಿ ಮತ್ತೊಂದು ಉಲ್ಲೇಖವಿದೆ. 76 ನೇ ಪಾಶುರ ಇಲ್ಲಿನ ದೇವರನ್ನು ಭೂಮಿಯನ್ನಳೆದವ-ತ್ರಿವಿಕ್ರಮನೆಂದು ವರ್ಣಿಸಲಾಗಿದೆ. 77 ನೇ ಪಾಶುರವು ವೆಃಕಾ,ವಿಣ್ಣಗರ್ ಹಾಗೂ ಕೋವಲೂರುಗಳಲ್ಲಿ ಯಂತೆಯೇ ವೆಂಗಡವೂ ಭಗವಂತ ನೆಲೆನಿಂತ ತಾಣವೆಂದು ವರ್ಣಿಸಲಾಗಿದೆ. ಕಡೆಯ ಉಲ್ಲೇಖ 99ನೇ ಪಾಶುರದಲ್ಲಿದ್ದು, ಭಗವನ್ನಾರಾಯಣನು ಶಾಶ್ವತನಾಗಿದ್ದು ಪ್ರತಿಯೊಬ್ಬರ ಹೃದಯದಲ್ಲೂ ಇದ್ದು ಅವರನ್ನು ಉದ್ಧರಿಸುವುದೇ ಅಲ್ಲದೇ ಕ್ಷೀರಸಾಗರದಲ್ಲೂ ವೆಂಗಡದಲ್ಲಿಯೂ,ಇರುವವನಾಗಿದ್ದಾನೆ ಎಂಬುದಾಗಿದೆ.

ಈ ಶತಕದ 25,58,64, 65 ಪಾಶುರಗಳು ನಿಸ್ಸಂದೇಹವಾಗಿ ಆಳ್ವಾರರು ವಿಷ್ಣುವನ್ನಲ್ಲದೆ ಇತರ ದೇವತೆಗಳ ಬಗ್ಗೆ ಭಕ್ತಿಯಿಲ್ಲವೆಂಬುದಾಗಿ ಸ್ಪಷ್ಟವಾಗಿ ಹೇಳುವುದರಿಂದಾಗಿ ಈ ಹಂತದಲ್ಲಿ ತಿರುಮಲೆಯ ಆಲಯದ ವೈಷ್ಣವ ಆಲಯವಾಗಿದ್ದಿತೆಂಬುದು

ತಿಳಿದುಬರುತ್ತದೆ. 53 ನೇ ಪಾಶುರದಲ್ಲಿ ಶೇಷ ಅಥವಾ ಅನಂತ ಹಾಗೂ ವಿಷ್ಣುವಿನ ನಡುವಿನ ಸಂಬಂಧವನ್ನು ಪುರುಷೋತ್ತಮನ ಪ್ರತಿ ಆತ್ಮದೊಡನೆ ಹೊಂದಿರುವ ಸಂಬಂಧದಂತೆ ದೇಹಾತ್ಮಸಂಬಂಧವೆಂದು ಹೇಳಲಾಗಿದೆ. ಇಲ್ಲಿ ದೇವರು ನಿಂತಾಗ ಶೇಷು ಪೀಠ ವಾಗುವನೆಂದೂ, ಪಾದರಕ್ಷೆ ಆಗುವನು ಎಂದೂ, ಸಮುದ್ರದಲ್ಲಿ ಮಲಗಿದಾಗ ಶಯ್ಯಾಸನವಾಗುವನೆಂದೂ ಹೇಳಲಾಗಿದೆ.ತಿರುಮ ಲೆಯ ಆಲಯದ ದೇವರ ಮೂರ್ತಿ ಮೇಲೆ ಹಲವು ಬಾರಿ ಕಾಣಿಸಿಕೊಳ್ಳುವುದರ ಪ್ರತೀಕವೆಂದು ಈ ಸಂಗತಿಯನ್ನು ವಿವರಿಸಲಾಗಿದೆ.

### 6. ಪೂದತ್ತಾಳ್ವಾರರು

ಎಂಟು ಪಾಶುರಗಳಲ್ಲಿ ತಿರುಮಲೆಯ ಬಗ್ಗೆ ನೇರವಾಗಿ ಹೇಳಿದ್ದಾರೆ. ಮೊದಲನೆಯ ಬಾರಿಗೆ 25 ನೇ ಪಾಶುರದಲ್ಲಿ ತಿರುಮ ಲೆಯ ಬೆಟ್ಟದಲ್ಲಿ ನಿಂತಿರುವ ಭಗವಂತನೆಂಬ ಉಲ್ಲೇಖವಿದೆ. 33,45,46 ನೇ ಪಾಶುರಗಳಲ್ಲಿ ತಿರುಮಲೆ ಹಾಗೂ ವಿಷ್ಣುವನ್ನು ಕುರಿತಾಗಿದೆ. 70 ನೇ ಪಾಶುರದಲ್ಲಿ ಹಲವಾರು ವೈಷ್ಣವ ದೇವಾಲಯಗಳ ಉಲ್ಲೇಖಗಳಿವೆ. 72,75 ರಲ್ಲಿಯೂ ಇಂತಹವೇ ವಿಷಯ ಗಳಿವೆ. 28 ನೇ ಪಾಶುರವು ವೆಂಗಡದ ದೇವರೂ,ಶ್ರೀರಂಗದ ದೇವರೂ ಒಬ್ಬರೇ ಎಂದು ಹೇಳುತ್ತದೆ.

ಹೀಗಾಗಿ ಪೊಯ್ಗೈ ಆಳ್ವಾರರಂತೆಯೇ ಪೂದತ್ತಾಳ್ವಾರರೂ ತಿರುಮಲೆಯಲ್ಲಿನ ವಿಷ್ಣುದೇವಾಲಯವನ್ನು ಅತ್ಯಂತ ಭಕ್ತಿಯಿಂದ ನೆನೆಯುತ್ತಾರೆ ಎನ್ನಬೇಕು. ಈ ತಿರುವಂದಾದಿಯಲ್ಲಿ ಸಾಧಾರಣ ಶ್ರೀವೈಷ್ಣವರ ಪೂಜಾ ವಿಧಾನಗಳ ವಿವರಗಳನ್ನು ಕಾಣಬಹುದು. ಇತರ ಆಳ್ವಾರರಂತೆಯೇ ಇವರಲ್ಲಿಯೂ ಕಂಡುಬರುವ ಅಂಶವೆಂದರೆ ಅತಿಶ್ರೇಷ್ಠ ಆರಾಧನಾ ವಿಧಾನವೆಂದರೆ ಪರಂಪರಾಗತ ವೈದಿಕ ವಿಧಾನವೇ ಆದರೂ ಅದು ಎಲ್ಲರಿಗೂ ಸಾಧ್ಯವಿಲ್ಲ. ಇದನ್ನು ಅನುಸರಿಸಬಲ್ಲವರಿಗೆ ಇದು ಅತಿಶ್ರೇಷ್ಠವೇ ಆದರೂ,ಇತರ ಆರಾಧನಾ ಮಾರ್ಗ-ಇಷ್ಟೇ ಫಲಕಾರಿಯಾದ ಸುಲಭಮಾರ್ಗವೆಂದರೆ-ಉತ್ತಾರಕವಾದ ನಾಮಜಪ ಮಾರ್ಗ, ಭಗವತ್ ನಾಮಸ್ಮರಣೆಯಿಂದ ನಮ್ಮೆಲ್ಲರ ರಕ್ಷಣೆಯಾಗುತ್ತದೆ, ಎಂಬುದು.

### 7. ಪೇಯಾಳ್ವಾರರು

ಪೇಯಾಳ್ವಾರರೂ ವೆಂಗಡವನ್ನು ವರ್ಣಿಸಿದ್ದಾರೆ. ಅವರ ತಿರುವಂದಾದಿಯಲ್ಲಿನ ಹದಿನಾಲ್ಕನೇ ಪಾಶುರದಲ್ಲಿ ವೆಂಗಡವಿದೆ. 26,31,32ನೇ ಪಾಶುರಗಳಲ್ಲಿ ವೆಂಗಡದ ಬಗ್ಗೆ ಸಾಮಾನ್ಯ ಉಲ್ಲೇಖವಿದೆ. ಪುನಃ 58 ನೆಯ ಪಾಶುರದಲ್ಲಿನ ಕಡೆಯ ಸಾಲಿನಲ್ಲಿ ವೆಂಗಡದ ದೇವರ ಬಗ್ಗೆ ಹೇಳುತ್ತ ನಾರಾಯಣನ ತ್ರಿವಿಕ್ರಮಾವತಾರದಲ್ಲಿ ಬಲಿಯನ್ನು ಮೂರಡಿ ನೆಲದ ದಾನ ಬೇಡಿ -ನೈಜಸ್ವಭಾವವಾದ ಬುದ್ಧಿಮತ್ತೆಯಿಂದ ಧರೆಯನ್ನುದ್ಧರಿಸಿದ ದೇವರು-ಎನ್ನುತ್ತಾರೆ. 59 ನೇ ಪಾಶುರದಲ್ಲಿ ವಿಷ್ಣುವನ್ನು ಆಶ್ರಯಿಸುವುದರ ಮೂಲಕ ತಮಗೆ ಮೋಕ್ಷ ದೊರೆಯುವುದೆಂಬ ಸನ್ಮಾರ್ಗ ಪ್ರವರ್ತನೆಯಿಂದಾಗಿ ತಮಗೆ ತೃಪ್ತಿಯಿದೆ ಎನ್ನುವರು, ಹೀಗೆಯೇ 69,70,71,72,73,75 ರಲ್ಲಿ ವೆಂಗಡದ ಬಗ್ಗೆ ಸಾಮಾನ್ಯ ಉಲ್ಲೇಖಗಳಿವೆ. 69,70 ರಲ್ಲಿ ಸಾಮಾನ್ಯ ಲಕ್ಷಣಗಳನ್ನು ಹೇಳಿದರೆ, 71 ರಲ್ಲಿ 68 ರಲ್ಲಿ ಹೇಳಿದ ಘಟನೆಗಳೇ ಪುನರಾವೃತವಾಗಿವೆ. 72 ರಲ್ಲಿ ವೆಂಗಡದಲ್ಲಿ ಯುವಕರ ರಾಜಕುಮಾರನ ಮನೆಯಿದೆ (ಇಳಂ ಕುಮಾರಕೋಮಾನ್) ಎನ್ನುವರು. 73ರಲ್ಲಿ ಸಾಮಾನ್ಯ ಉಲ್ಲೇಖವಿದ್ದರೆ 75 ರಲ್ಲಿ ತಿರುಮಲೆಯ ವಿಷ್ಣು-ಕೃಷ್ಣರ ಬೆಟ್ಟವೆಂಬ ವರ್ಣನೆಯಿದೆ. 76 ರಲ್ಲಿ ವೆಃಕ್ಕಾದಲ್ಲಿ ದೇವರಿಗೆ ಹೂವನ್ನರ್ಪಿಸಿ,ದೇವರ ಮುಂದೆ ಕೈಮುಗಿದು ನಿಂತರೆ ಯಾವುದೇ ದುಃಖ ಪಾಪವೂ ಅವನನ್ನು ಸೋಕದು. ಇದಕ್ಕಾಗಿ,ಬೆಟ್ಟಗಳ ಮೇಲೆ,ನೀರಿನಲ್ಲಿ,ಬೆಂಕಿಯಲ್ಲಿ ನಿಂತು ತಪಸ್ಸು ಮಾಡಬೇಕಾಗಿಲ್ಲ ಎನ್ನುವರು. 77,78 ರಲ್ಲಿ ವಿಷ್ಣುವಿನಲ್ಲಿನ ಅಚಂಚಲ ಭಕ್ತಿಯಿಂದ ಆ ಪದಗಳಿಂದ ದೂರವಾಗಿ ನಿಶ್ಚಯವಾಗಿಯೂ ಮೋಕ್ಷ ಪಡೆಯಬಹುದೆಂದು ಹೇಳುವರು. 89 ನೇ ಪಾಶುರವು ವೆಂಗಡವು ಮುರಳೀಧರನ ಪವಿತ್ರಧಾಮವಾಗಿದೆ ಎನ್ನುತ್ತದೆ. 90,93 ನೇ ಪಾಶುರಗಳು ಸಾಮಾನ್ಯ ಉಲ್ಲೇಖವಾದರೂ

94 ನೇ ಪಾಶುರ ಧ್ಯಾನದ ದೀಪದಿಂದ ತನ್ನಲ್ಲಿ ಬೆಳಕು ಉಂಟಾಗಿಸಿ ಇತರೆಡೆಗಳಲ್ಲಿ ಕುಳಿತು ನಿಂತು ಮಲಗಿರುವ ಅವನನ್ನು ತನ್ನ ಹೃದಯದಲ್ಲಿ ಕುಳ್ಳಿರಿಸಿಕೊಂಡು ನಿಲ್ಲಿಸಿ,ಪ್ರತಿಷ್ಠೆ ಮಾಡಿಕೊಂಡೆ ಎಂದು ತೃಪ್ತಿಪಟ್ಟಿದ್ದಾರೆ.

ಈ ಮೂವರು ಆಳ್ವಾರರೂ ಸಮಕಾಲೀನರಾಗಿದ್ದರೆಂಬುದರಿಂದ ಇವರನ್ನು ಮೊದಲಾಳ್ವಾರರೆಂದು ಕರೆಯಲಾಗಿದೆ. ಇವರುಗಳ ತಿರುವಂದಾದಿಗಳು ಎಷ್ಟು ಸಮಾನ ಅಂಶಗಳನ್ನು ಹೊಂದಿವೆಯೆಂದರೆ ಅವುಗಳಿಂದಾಗಿಯೇ ಮೂವರೂ ಏಕ ಕಾಲದಲ್ಲಿ ಪ್ರವರ್ಧಮಾನರಾಗಿರಬೇಕು ಎಂದು ತಿರ್ಮಾನಿಸಬಹುದು. ವಿಷ್ಣುವಿನ ಭಕ್ತರಾಗಿದ್ದರಿಂದ ಹಲವಾರು ವೈಷ್ಣವಕ್ಷೇತ್ರಗಳಬಗ್ಗೆ ಹೇಳುತ್ತ ತಿರುಮಲೆಯ ಬಗ್ಗೆ ಹೆಚ್ಚಿಗೆ ಹೇಳಿದರು. ಇದರಿಂದಾಗಿ ವ್ಯಾಖ್ಯಾನಕಾರರು ಇವರ ಪಾಶುರಗಳು ವೆಂಗಡಕ್ಕೇ ಮೀಸಲೆಂದುಭಾವಿಸಿದರು.

ವೈದಿಕ ಆಚಾರಗಳನ್ನು ಬಹುಮುಖವೆಂದು ಆಳ್ವಾರರು ಉಲ್ಲೇಖಿಸುತ್ತಾರೆ. ಮೊದಲ ತಿರುವಂದಾದಿಯಲ್ಲಿ ಪೊಯ್ಗೈ ಆಳ್ವಾರ್ ಹೇಳುತ್ತಾರೆ- ಇನ್ನು ಮುಂದೆ ನರಕವನ್ನಾರು ಪ್ರವೇಶಿಸುತ್ತಾರೆ? ಅದರ ಬಾಗಿಲು ಮುಚ್ಚಿರಿ,ಯಾವ ದಾಕ್ಷಿಣ್ಯವೂ ಬೇಡ. ಕಾರಣ ನೇರಿಳೆಮರದ ಈ ನೆಲದಲ್ಲಿ ಕರುವಿನ ವೇಷದಲ್ಲಿ ಬಂದ ವತ್ಸಾಸುರನನ್ನು ಮೇಲೆಸೆದು ಬಿಲ್ವದ ಮರದ ಹಣ್ಣುಗಳನ್ನು ಬೀಳಿಸಿದ ಕೃಷ್ಣಾವತಾರಿ, ನಾರಾಯಣನೇ ಸರ್ವರನ್ನೂ ರಕ್ಷಿಸುವನೆಂಬುದು ಚೆನ್ನಾಗಿ ತಿಳಿದಿದೆ.- ಇದರಿಂದಾಗಿ ಅಂದಿಗೆ ಧರ್ಮಬೋಧನೆ ಪಡೆದಿದ್ದ ವ್ಯಾಪ್ತಿ ಹಾಗೂ ಪ್ರಸಿದ್ಧಿಯನ್ನು ತಿಳಿಯಬಹುದು.

## 8. ಶಿಲಪ್ಪದಿಕಾರದಲ್ಲಿ ತಿರುಮಲೆ

ತಮಿಳು ಪ್ರಾಚೀನ ಮಹಾಕಾವ್ಯ ಶಿಲಪ್ಪದಿಕಾರದ ಕರ್ತೃಜೈನನಾದರೂ ತಿರುಮಲೆಯು ವಿಷ್ಣುದೇವಾಲಯದ ಸ್ಥಳವೆಂದು ಹೇಳಿದ್ದಾನೆ. ಈ ಕೃತಿಯ ಕರ್ತೃ ಇಳಂಗೋ ಅಡಿಗಳ್ ತನ್ನ ಪುಸ್ತಕದ 2 ನೇ ಅಧ್ಯಾಯದಲ್ಲಿ ಬೆಟ್ಟದ ಮೇಲಿನ ವೆಂಕಟೇಶ್ವರನ್ನು ವರ್ಣಿಸಿರುವುದು ಹೀಗೆ -

ತುಂಬಿ ಹರಿಯುವ ಝರಿಗಳಿಂದಾವೃತನಾದ
ಸೂರ್ಯಚಂದ್ರರ ಪ್ರಕಾಶದಲಿ ಹೊಳೆಯುವ
ವೆಂಗಡದ ಶಿಖರಾಗ್ರದ ಕೊನೆಯಲ್ಲಿ
ಮಿಂಚಿನಾಗಸದ ಮಧ್ಯದ ನೀಲಿಮೆಯೊಲು
ಕಾಮನ ಬಿಲ್ಲಿನೆಲ್ಲ ವಿಭವದಲ್ಲಿ
ನಿಂತಿರುವ ಮಹಾನುಭಾವ ರಕ್ತನೇತ್ರ
ಕುಸುಮ ಸದೃಶದುಡುಗೆಯಲ್ಲಿ,
ಬೆಳಗುವ ಹಾರದೊಡನೆ
ಕಮಲಕರದಲಿ ಚಕ್ರಹಿಡಿದವ,
ಹಾಲುಬಿಳಿಶಂಖ ಹಿಡಿದವನು

- ಮಲೈನಾಡುವಿನ ಮಾಂಗಾಡುವಾಸಿಯಾದ ಒಬ್ಬ ಬ್ರಾಹ್ಮಣ ಯಾತ್ರಿಕನ ಬಾಯಲ್ಲಿ ಈ ವಿವರಣೆ ಹೊರಬರುತ್ತದೆ. ಈ ಯಾತ್ರಿಕನು ಪಾಂಡ್ಯನಾಡಿನಲ್ಲಿ ಹಾಯ್ದು ಹೋಗುವಾಗ ರಾತ್ರಿಯಲ್ಲಿ ಚೋಳರಾಜಧಾನಿ ಉರೈಯೂರಿನಲ್ಲಿ ತಂಗಿದ್ದ. ತನ್ನಯಾತ್ರೆಯ ಸಂದರ್ಭದಲ್ಲಿ ಈತ ಶಿಲಪ್ಪದಿಕಾರದ ನಾಯಕ ಕೋವಲನ್ ಅನ್ನು ಸಂಧಿಸಿ, ಮಾತನಾಡುವಾಗ ಪಾಂಡ್ಯನಾಡನ್ನು ಕುರಿತು ಹೇಳಿ ತಾನು ತೀರ್ಥಯಾತ್ರೆಗಾಗಿ ಹೊರಟಿರುವುದಾಗಿಯೂ ಶ್ರೀರಂಗ ಹಾಗೂ ವೆಂಗಡಗಳ ವಿಷ್ಣು ದೇವಾಲಯಗಳನ್ನು ಕಾಣುವುದಾಗಿಯೂ ಹೇಳುವನು. ತಿರುಮಲೆಯ ಉಲ್ಲೇಖ ಈ ಸಮಯದಲ್ಲಿ ಬರುತ್ತದೆ.

ಈ ಹೇಳಿಕೆಯಿಂದಾಗಿ ಅಂದಿನ ಕಾಲದಲ್ಲಿ ತಿರುಮಲೆಯನ್ನು ಒಂದು ಪವಿತ್ರ ವೈಷ್ಣವ ಕೇಂದ್ರವೆಂದು ಪರಿಗಣಿಸಲಾಗಿತ್ತಿತ್ತು ಎಂಬುದು ಖಚಿತವಾಗುತ್ತದೆ. ಇಲ್ಲಿ ಉಲ್ಲೇಖಿತವಾದ ಶ್ರೀರಂಗ ಹಾಗೂ ತಿರುಮಲೆಗಳ ಮತ್ತು ತಿರುಮಾಲ್ ಇರುಂಸೋಲೈಗಳ ಆಲಯಗಳು, ಅಂದಿಗೇ ತಿರುಮಲೆಯಲ್ಲಿನ ವಿಷ್ಣು ದೇವಾಲಯ ಬಹು ಪ್ರಸಿದ್ಧವಾಗಿದ್ದಿತೆಂಬುದನ್ನೂ ಅದರ ಪ್ರಸಿದ್ಧಿ ಪಶ್ಚಿಮಸಮುದ್ರದ ವರೆಗೆ ಹರಡಿದ್ದಿತೆಂದೂ, ಇಂದಿನಂತೆಯೇ ಅಂದೂ ಜನರು ಈ ತೀರ್ಥಕ್ಷೇತ್ರಯಾತ್ರೆಗೆ ಹೋಗುತ್ತಿದ್ದರೆಂದೂ ನಿರ್ದಂಧ್ವವಾಗಿ ಹೇಳಿಕೆ ನೀಡುವುದರಿಂದಲೇ ತಿರುಮಲೆಯು ವಿಷ್ಣುವಿನ ದೇವಾಲಯವನ್ನು ಹೊಂದಿ ಪ್ರಸಿದ್ಧವಾಗಿದ್ದಿತು ಎಂಬುದು ಸ್ಪಷ್ಟವಾಗುತ್ತದಿ

## 9. ತಿರುಮಳಿಶೈ ಆಳ್ವಾರ್

ಈ ಆಳ್ವಾರರೂ ವಿಷ್ಣುವನ್ನು ನೂರು ಆಂತಾದಿಗಳಲ್ಲಿ ಕೀರ್ತಿಸಿದ್ದಾರೆ. 42 ಹಾಗೂ 43 ನೇ ಪಾಶುರಗಳಲ್ಲಿ ಆಳ್ವಾರರು ವೆಂಗಡ ದಲ್ಲಿ ಬ್ರಹ್ಮ ಹಾಗೂ ಶಿವ ಇಬ್ಬರೂ ಅರ್ಚನೆ ಗೈಯುತ್ತಾರೆಂದು ತಿಳಿಸುತ್ತಾರೆ.

ಮೊದಲನೆಯ ಉಲ್ಲೇಖ 31 ನೇ ಪಾಶುರದಲ್ಲಿದೆ. ಇಲ್ಲಿ ಕೊಟ್ಟಿಯೂರಿನ ಇತರ ವೈಷ್ಣವ ಕ್ಷೇತ್ರಗಳೊಡನೆ ವೆಂಗಡದ ಪ್ರಸ್ತಾಪಣ ಉಲ್ಲೇಖವಿದೆ. 39 ನೇ ಪಾಶುರದಲ್ಲೂ ಸಾಮಾನ್ಯ ಹೆಸರಿದೆ. 40 ನೇ ಪಾಶುರದಲ್ಲಿ ಆಳ್ವಾರರು ವೆಂಗಡದ ದೈವದಲ್ಲಿ ತನಗೆ ಭಕ್ತಿಯುಂಟೆಂದು ಹೇಳುತ್ತ - ವಿಜ್ಞಾನದಲ್ಲಿ ಅತಿ ಹಿರಿಯಳಾದವಳಿಗೆ ಪ್ರಿಯನಾದ ಅವನ ಪಾದಗಳ ಬಲೆಯಲ್ಲಿ ಬಿಡಿಸಿಕೊಳ್ಳಲಾಗದಂತೆ ಸೇರಿಹೋಗಿದ್ದೇನೆ - ಎನ್ನುತ್ತಾರೆ. 41 ನೇ ಪಾಶುರದಲ್ಲಿ ಆಸಕ್ತಿದಾಯಕವಾದ ರೀತಿಯಲ್ಲಿ ವೆಂಗಡದ ಬೆಟ್ಟದಲ್ಲಿ ನೆಲೆಸಿರುವವನು ತನ್ನ ಮನವನ್ನು ಪ್ರವೇಶಿಸಿದ್ದಾನೆ ಎನ್ನುವರು. ಈ ಬೆಟ್ಟವನ್ನು ವರ್ಣಿಸುವಾಗ ಎರಡು ಅಂಶ ಪ್ರಕಟವಾಗುತ್ತವೆ. ಮೊದಲನೆಯದು ಬೆಟ್ಟದಲ್ಲಿನ ಝರಿಗಳು ನೀರನ್ನು ಕೆಳಕ್ಕೆ ತರುವಾಗ ಮುತ್ತುಗಳನ್ನು ಹೊರ ಹಾಕುತ್ತವೆ. ಇದರಿಂದಾಗಿ ಝರಿ ಹರಿವಾಗ ಝುಳು ಝುಳುನಾದ ಮುಖ್ಯ ವಾಗುತ್ತದೆ. ವೆಂಗಡದಲ್ಲಿ ಇನ್ನೊಂದು ಸಾಮಾನ್ಯ ಶಬ್ದವೆಂದರೆ ಇಲ್ಲಿ ಓಣಂ ಹಬ್ಬದ ದಿನಗಳಲ್ಲಿ ನಡೆಯುವ ಉತ್ಸವಗಳ ಕಲರವ. ಈ ನಕ್ಷತ್ರೋತ್ಸವ ವಿಷ್ಣುವಿನೊಂದಿಗೆ ಸಂಬಂಧ ಹೊಂದಿದ್ದು ಅವನ ಹುಟ್ಟಿಗೆ (ಹುಟ್ಟಿಲ್ಲದವನಿಗೆ) ಹೊಂದಿಕೊಂಡದ್ದು. ಈ ನಕ್ಷತ್ರದ ಹಬ್ಬ ಹರಿದಿನಗಳು ತಿರುಮಲೆಗೆ ವಿಶಿಷ್ಟವಾದದ್ದು ಹಾಗೂ ಶ್ರೀನಿವಾಸ ದೇವರಿಗೆ (ಲಕ್ಷ್ಮಿದೇವಾಲಯಕ್ಕೆ) ವಿಶಿಷ್ಟವಾದದ್ದು. ವರ್ಷದಲ್ಲಿ ಅತಿ ಪವಿತ್ರವಾದ ದಿನವೆಂದರೆ ಭಾದ್ರಪದ ತಿಂಗಳಿನಲ್ಲಿ ಬರುವ ಶ್ರವಣ ನಕ್ಷತ್ರದ ದಿನ. ಮುಂದಿನ ಪಾಶುರದಲ್ಲಿ ವೆಂಗಡವನ್ನು ಕುರಿತು ಹೇಳುತ್ತಾ ಆಳ್ವಾರರು ತಿರುಮಲೆಯ ದೇವರ ಪಾದಗಳಲ್ಲಿ ಕಮಲಪುಷ್ಪಗಳನ್ನು ಶಿವ ಬ್ರಹ್ಮರೂ ಇಟ್ಟು ಅರ್ಚಿಸುವವರಾಗಿ, ಸರ್ವಪಾಪಹರನಾದ ಈ ದೇವರ ಸನ್ನಿಧಿ ಸೇರಿ ಅರ್ಚಿಸಲು ಎಲ್ಲ ಜನರಿಗೂ ಕರೆನೀಡುತ್ತಾರೆ. ಮುಂದಿನ ಪಾಶುರದಲ್ಲಿಯೂ ಬ್ರಹ್ಮ ಶಿವರು ವೆಂಗಡದ ದೈವವನ್ನು ಅರ್ಚಿಸುವ ಚಿತ್ರವಿದೆ. 44 ನೇ ಪಾಶುರ ಗಮನಾರ್ಹವಾಗಲು ಕಾರಣ ಆಳ್ವಾರರು ಯುವಕರನ್ನು ವೆಂಗಡದ ದೈವವನ್ನು ಆರಾಧಿಸಲು ಒತ್ತಾಯಿಸುವುದೇ ಆಗಿದೆ.

ಸಾಮಾನ್ಯವೇ ಆದರೂ 90 ನೇ ಪಾಶುರದಲ್ಲಿ ಮತ್ತೆ ವೆಂಗಡದ ಉಲ್ಲೇಖವಿದೆ. ತಿರುಮಳಿಶೈ ಆಳ್ವಾರರ ಈ ನೂರು ಪಾಶುರಗಳಲ್ಲಿ ಪದೇ ಪದೇ ಅವಧಾರಿತವಾಗುವ ಅಂಶವೆಂದರೆ ವೆಂಗಡವು ವಿಷ್ಣುವಿನ ಪವಿತ್ರ ಕ್ಷೇತ್ರಗಳಲ್ಲಿ ಒಂದು ಎಂಬುದೂ, ಇಲ್ಲಿರುವ ದೈವ ವಿಷ್ಣುವಿನ ಹೊರತು ಬೇರಲ್ಲವೆಂಬುದು. ಇತರ ದೇವರುಗಳ ವಿಶೇಷವಾಗಿ ಬ್ರಹ್ಮಶಿವರುಗಳ ಉಲ್ಲೇಖವಿದ್ದರೂ ಅವನ ದೇಹದ ಭಾಗಗಳಾಗಿ ಮಾತ್ರ. ಏನೇ ಆದರೂ ಇಲ್ಲಿ ಆರಾಧಿತನಾಗುವವ ವಿಷ್ಣು,

## 10. ನಮ್ಮಾಳ್ವಾರ್

ವೈಷ್ಣವ ಸಂಪ್ರದಾಯದಲ್ಲಿ ಸಾಮಾನ್ಯವಾಗಿ ನಮ್ಮಾಳ್ವಾರ್ ಅವರನ್ನು ಅತಿ ಶ್ರೇಷ್ಠರೆನ್ನಲಾಗಿದೆ. ಅವರ ಪಾಶುರಗಳನ್ನು ಸರ್ವ ವೇದಸಾರ ಎನ್ನಲಾಗಿದೆ. ಅವರ ತಿರುವಾಯ್ಮೊಳಿಯನ್ನು ತಮಿಳು ವೇದವೆನ್ನಲಾಗಿದೆ. ಪ್ರಾಚೀನ ತಮಿಳರು ವೇದ ಉಪನಿಷತ್ತುಗಳಲ್ಲಿನ

ಪ್ರತ್ಯೇಕತೆಯನ್ನು ವೇದಗಳನ್ನು ವಾಯ್ಮೊಳಿ ಎಂದೂ ಉಪನಿಷತ್ತುಗಳನ್ನು ಮರ್ರೈ ಎಂದೂ ಕರೆದು ಗುರುತಿಸಿರಬಹುದಾದರೂ ಮರ್ರೈ ಎಂಬುದೇ ಇಂದು ಇಡೀ ವೈದಿಕ ಸಾಹಿತ್ಯಕ್ಕೆ ಅನ್ವಯಿಸುತ್ತದೆ.

ನಮ್ಮಾಳ್ವಾರರು ಮೊದಲಾಳ್ವಾರರ ನಂತರದವರೂ, ತಿರುಮಂಗೈ ಆಳ್ವಾರರೊಡನೆ ಕೊನೆಯಾಗುವ ಆಳ್ವಾರರ ಸಮಕಾಲೀನರಾದವರು ಎಂದು ಪರಿಗಣಿತರಾಗಿದ್ದಾರೆ. ಮೊದಲಾಳ್ವಾರರು ವೆಣ್ಬಾ ವೃತ್ತದಲ್ಲಿ ಪಾಶುರ ರಚನೆ ಮಾಡಿದ್ದಾರೆ, ನಾಲ್ಕನೆಯವರು ವಿರುತ್ತಂ ಛಂದಸ್ಸಿನಲ್ಲಿ ಹಾಡಿದರು.

ಮೊದಲಾಳ್ವಾರರಂತಲ್ಲದೆ ನಮ್ಮಾಳ್ವಾರರ ತಿರುಮಲೆಯ ಉಲ್ಲೇಖ ಒಂದು ಸಾಹಿತ್ಯಕ ಅಭಿವ್ಯಕ್ತಿ. ತಿರುವಾಯ್ಮೊಳಿಯ ಹತ್ತು ಪಾಶುರಗಳನ್ನು ತಿರುಮಲೆಗೆ ಮೀಸಲಿಟ್ಟಿದ್ದಾರೆ. ಇಲ್ಲಿನ ಶ್ರೇಷ್ಠದೇವಾಲಯದ ವಿಶೇಷ ವರ್ಣನೆ ಮಾಡಿದ್ದಾರೆ. ಇತರ ಪಾಶುರಗಳಲ್ಲೂ ತಿರುಮಲೆಯ ಬಗ್ಗೆ ಅಪ್ರತ್ಯಕ್ಷವಾಗಿ ಅಲ್ಲಲ್ಲಿ ಹೇಳಿದ್ದರೂ, ಈ ಗುಡಿಯನ್ನೇ ಮನಸಿನಲ್ಲಿಟ್ಟುಕೊಂಡು ಹಾಡಿರುವುದು ಸ್ಪಷ್ಟವಾಗಿದೆ.

ನಮ್ಮಾಳ್ವಾರರ ತಿರುವಿರುತ್ತಂ ನಲ್ಲಿ ತಿರುಮಲೆಯ ಬಗ್ಗೆ ಏಳು ಉಲ್ಲೇಖಗಳಿವೆ. ತಿರುಪತಿಯ ಸಮೀಪದ ಬೆಟ್ಟಗಳಲ್ಲಿ ಶೋಭಾಕರವಾದ ಪುಷ್ಪಗಳ ತೋಟಗಳು ಉಂಟು. ತಿರುಮಲೆಯ ಬಗ್ಗೆ ನೇರವಾಗಿ ಹೇಳಿಲ್ಲವಾದರೂ ಪೆರಿಯ ತಿರುವಂದಾದಿಯಲ್ಲಿ ಏಳನೇ ಪಾಶುರದಲ್ಲಿ ವಿಷ್ಣುವಿನ ವಕ್ಷಃಸ್ಥಲದಲ್ಲಿನ ಲಕ್ಷ್ಮಿಯನ್ನು, ತಿರುಮಲೆಯ ದೇವರ ಹೆಸರು-ಶ್ರೀನಿವಾಸ-ಎಂಬುದರ ಅರ್ಥ ಇದೇ-ಎಂಬುದನ್ನು ಕುರಿತು ಹೇಳಲಾಗಿದೆ.

## 11.ಇತರ ಆಳ್ವಾರರು

ನಮ್ಮಾಳ್ವಾರರ ನಂತರ ಏಳು ಮಂದಿ ಆಳ್ವಾರರಿದ್ದು ತಮ್ಮ ಪ್ರಬಂಧಗಳಲ್ಲಿ ತಿರುಮಲೆಯನ್ನು ಕುರಿತು ಹಾಡಿದ್ದಾರೆ.

ವೈಷ್ಣವ ದೇವಾಲಯಗಳಲ್ಲಿ ಸಾಮಾನ್ಯವಾಗಿ ಆರಾಧಿಸಲ್ಪಡುವ ಗೋದಾದೇವಿಯ ನಾಚ್ಚಿಯಾರ್ ತಿರುಮೊಳಿಯನ್ನು ಹಾಗೂ ಚೇರದೇಶದ ರಾಜರಾಗಿದ್ದ ಕುಲಶೇಖರ ಆಳ್ವಾರರನ್ನು ವಿಶೇಷವಾಗಿ ಗುರುತಿಸಬೇಕು. ಕಾಲದಲ್ಲಿ ಅರ್ವಾಚೀನರಾದ ತಿರುಮಂಗೈ ಆಳ್ವಾರರ ತಿರುಮಲೆಯ ದೇವರನ್ನು ಹತ್ತಕ್ಕಿಂತ ಹೆಚ್ಚುಬಾರಿ ಹೆಸರಿಸುವರು.

ಹೀಗಾಗಿ ಕ್ರಿ.ಶ. 3 ನೇ ಶತಕದಿಂದ 8 ನೇ ಶತಕದವರೆಗೆ ಹರಡಿರಬಹುದಾದ ಕಾಲಘಟ್ಟದಲ್ಲಿ ತಿರುಮಲೆಯಲ್ಲಿ ವೆಂಗಡಮು ದೇವಾಲಯ ವಿಷ್ಣುವಿಗೆ ಮೀಸಲಾಗಿದ್ದಿತು - ಎಂದು ಆಳ್ವಾರರ ಸಾಹಿತ್ಯಾಧಾರದಲ್ಲಿ ನಿರ್ಧರಿಸಬಹುದು. ಜ್ಞಾತ ಇತಿಹಾಸದ ಈ ದಾಖಲೆಗಳು ಕ್ರಿ.ಶ. 8 ನೇ ಶತಕದವರೆಗೆ ತಿರುಮಲೆಯನ್ನು ಒಂದು ಪವಿತ್ರಕ್ಷೇತ್ರವೆಂದು ಗುರುತಿಸಿವೆ. ಕ್ರಿ.ಶ8ನೇ ಶತಕದ ನಂತರ ಶಾಸನಾಧಾರಗಳು ತಿರುಮಲೆಯ ಬಗ್ಗೆ ಆರಂಭವಾಗುವುವು.

## ಮಧ್ಯಕಾಲ - 9ನೇ ಶತಮಾನದಿಂದ 17ನೇ ಶತಮಾನ

## 12. ಆಲಯ ಶಾಸನಗಳು

ಇತರ ಅನೇಕ ದೇವಾಲಯಗಳಂತೆಯೇ ತಿರುಮಲೆಯ ಆಲಯವೂ ಸಹ ಹಲವಾರು ಶಾಸನಗಳನ್ನು ಹೊಂದಿ ಆಲಯದ ಬಗ್ಗೆ ಪೂರ್ಣ ವಿವರವನ್ನೊದಗಿಸಿ ಆಸಕ್ತಿಯನ್ನು ಹೆಚ್ಚಿಸುತ್ತವೆ. ಇಲ್ಲಿನ ಶಾಸನಗಳು, ತಿರುಪತಿ, ತಿರುಚಾನೂರಿನಲ್ಲಿ ಕಂಡುಬಂದಿರುವ ಶಾಸನಗಳೊಡನೆ ಸೇರಿ ಈ ಪ್ರಾಂತ್ಯದ ಆಲಯ ವ್ಯವಹಾರಗಳ ಬಗ್ಗೆ ಎಂಟು ಹತ್ತು ಶತಮಾನಗಳ ನಿರಂತರವಾದ ದಾಖಲೆಗಳನ್ನೊದಗಿಸಿವೆ. ಉದಾಹರಣೆಗೆ ವಿಜಯನಗರದ ರಾಜರ- ವಿಶೇಷವಾಗಿ ಕೃಷ್ಣದೇವರಾಯ ಹಾಗೂ ಅಚ್ಯುತರಾಯರ ತಿರುಮಲೆ ಯಾತ್ರೆಗಳ ಬಗ್ಗೆ, ಅವರುಗಳು ಆಲಯಕ್ಕೆ ನೀಡಿದ ದಾನಗಳ ಬಗ್ಗೆ, ನಿರ್ಮಿಸಿದ ಕಟ್ಟಡಗಳ ಬಗ್ಗೆ - ಪೂರ್ಣ ಮಾಹಿತಿ ದೊರೆತಿದೆ. ತಿರುಮಲೆಯ

ಆಲಯದೊಡನೆ ದಕ್ಷಿಣ ಭಾರತದ ಅತಿ ಶ್ರೇಷ್ಠ ಸಾಮ್ರಾಟರಲ್ಲಿ ಒಬ್ಬನಾದ ರಾಜರಾಜ ಚೋಳನು ನೇರ ಸಂಬಂಧ ಹೊಂದಿದ್ದನೆಂಬುದು ಅವನ ಆಳ್ವಿಕೆಯ 16 ನೇ ವರ್ಷದ ಒಂದು ದೋಷಪೂರ್ಣ, ಅಪೂರ್ಣ ಪ್ರತಿಯಾದ ಶಾಸನದಿಂದ ತಿಳಿದು ಬಂದಿದೆ. ಹದಿಮೂರು ಹದಿನಾಲ್ಕನೆಯ ಶತಾಬ್ದಗಳ ಹಾಗೂ ನಂತರದ ಆಲಯ ಜೀರ್ಣೋದ್ಧಾರ ಕಾರ್ಯಗಳಲ್ಲಿ ಅಂದಿಗಿಂತ ಮೊದಲು ಇದ್ದ ಅಸಂಖ್ಯ ಶಾಸನಗಳು ಲುಪ್ತವಾಯಿತೆಂಬುದನ್ನು ಈ ಆಸುಪಾಸಿನಲ್ಲಿ ದೊರೆತ ದಂತಿವರ್ಮನೇ ಮೊದಲಾದವರ ತ್ರುಟಿತ ಶಾಸನಗಳಿಂದ ತೀರ್ಮಾನಿಸಬಹುದು. ಏನೇ ಆದರೂ ಒಂದು ಸಾವಿರಕ್ಕೂ ಮಿಗಿಲಾದ ದೊರೆತಿರುವ ಶಾಸನಗಳನ್ನು ಸರಿಯಾಗಿ ವಿಶ್ಲೇಷಿಸಿದ್ದೇ ಆದರೆ,ಆಲಯದ ಇತಿಹಾಸದ ಬಗ್ಗೆ ಸಾಕಷ್ಟು ಖಚಿತವೂ,ನಿರಂತರವೂ ಆದ ವಿವರ ದೊರೆಯುತ್ತದೆಯೆಂದು ಈ ದಿಸೆಯಲ್ಲಿನ ಪ್ರಯತ್ನವನ್ನು ಸಾದರಪಡಿಸಲಾಗಿದೆ.

## 13. ಪ್ರಾಚೀನ ಶಾಸನ ದಾಖಲೆಗಳು

ತಿರುಮಲೆಯ ಆಲಯದಲ್ಲಿ ದೊರೆತಿರುವ ಅತಿ ಪ್ರಾಚೀನ ಶಾಸನ ಕ್ರಿ.ಶ.9 ನೇ ಶತಮಾನದ ಆದಿಭಾಗದಲ್ಲಿದ್ದ ಬಾಣ ರಾಜಕುಮಾರ ವಿಜಯಾದಿತ್ಯನ ಜನನವನ್ನು ಸೂಚಿಸುತ್ತದೆ. (ತಿ.ತಿ.429) ಈ ರಾಜಕುಮಾರ ತಿರುಚಾನೂರಿನ ಶ್ರೀ ವೆಂಕಟೇಶ್ವರ ಸ್ವಾಮಿಗೆ ಒಂದು ಕಾಣಿಕೆ ನೀಡಿದ (ಜಿ.ಟಿ.229).

## 14. ತಿರುಮಲೆ ಹಾಗೂ ಪಲ್ಲವರು

ಪಲ್ಲವ ರಾಜರಲ್ಲಿ ಈಚಿನವನಾದ ಕೋ ವಿಜಯದಂತಿ ವಿಕ್ರಮ ವರ್ಮನ್ ತಿರುಚಾನೂರಿನ ಎರಡು ಶಾಸನಗಳಲ್ಲಿ ಪ್ರತಿನಿಧಿಸಲ್ಪಟ್ಟಿದ್ದಾನೆ. ಇದರಲ್ಲಿ ಒಂದು ಅವನ ಆಳ್ವಿಕೆಯ ಐವತ್ತೊಂದನೆಯ ವರ್ಷವನ್ನು ಸೂಚಿಸಿ ಇದು ಕ್ರಿ.ಶ. 830ಕ್ಕೆ ಹೊಂದುತ್ತದೆ. (ತಿ.ತಿ.219 ಜಿ.ಟಿ.223) ನಂತರದ ಶಾಸನದಲ್ಲಿ ತೇದಿಯಿಲ್ಲ.ಎರಡೂ ಶಾಸನಗಳೂ ಆಲಯದಲ್ಲಿ ನಂದಾದೀಪವನ್ನುರಿಸಲು ನೀಡಿದ ಚಿನ್ನದ ಕಾಣಿಕೆಯನ್ನು ವಿವರಿಸುತ್ತವೆ.

ಎರಡನೇ ಪರಾಂತಕನ ಸುಂದರ ಚೋಳನ ಸಮಕಾಲೀನ -ಕೋ ಪಾರ್ಥಿವೇಂದ್ರವರ್ಮನು ಒಂದನೇ ಆದಿತ್ಯನಿಂದ,ತೊಂಡ ಮಂಡಲದಿಂದ ಉಚ್ಚಾಟಿಸಲ್ಪಟ್ಟ ಪಲ್ಲವ ದೊರೆಗಳ ವಂಶಕ್ಕೆ ಪ್ರಾಯಶಃ ಸೇರಿರಬೇಕು. ಇವನ ಕೈಕೆಳಗೆ ಶಕ್ತಿ ವಿಟಂಕನೆಂಬ ಕಾಡವ ಅಧಿಕಾರಿಯಿದ್ದ. ಈ ಶಕ್ತಿ ವಿಟಂಕನ ರಾಣಿ ಸಾಮವೈ ದೇವಾಲಯಕ್ಕೆ ಎರಡು ದಾನಗಳನ್ನು ನೀಡಿದ ದಾಖಲೆಗಳಿವೆ. ಈಕೆ ಒಬ್ಬ ಪಲ್ಲವ ಪೆರ್ಗಡೆಯ ಮಗಳೆಂದು ಹೇಳಲಾಗಿದೆ. ಒಂದನೇ ರಾಜರಾಜ ಚೋಳನ ಮಹಾರಾಣಿ ದಂತಿಶಕ್ತಿ ವಿಟಂಕಿ ಲೋಕಮಹಾದೇವಿಯೊಂದಿಗೆ ಈ ಕಾಡವ ದೊರೆ ಶಕ್ತಿ ವಿಟಂಕನಿಗೆ ಬಂಧುತ್ವವಿದ್ದಿತು.

ಮಣವಾಳ ಪ್ಪೆರುಮಾಳರಿಗೆ ತಿರುಮುಡಿ,ಮಾಲೆಗಳು,ಉದರ ಬಂಧ,ತಿರುಮರೈ ಪಟ್ಟಿಕೆ, ಬಾಹುವಲಯ, ತಿರುಚಂದನ, ವಡಿಯಲ್, ಕರೈ, ಪಾದಚಯಲಂ,ಪ್ರಭಾವಳಿ - ಮೊದಲಾದ ಅತಿ ಬೆಲೆ ಬಾಳುವ ಆಭರಣಗಳನ್ನು ಸಾಮವೈ ನೀಡಿದಳು. ಎರಡು ವಿಷು ಸಂಕ್ರಾಂತಿಗಳಲ್ಲಿ ಹಾಗೂ ಎರಡು ಆಯನ ಸಂಕ್ರಾಂತಿಗಳಲ್ಲಿ ದಿನವೂ ಅಭಿಷೇಕದ ನಂತರ ಅನ್ನ ನೈವೇದ್ಯಕ್ಕೂ ಏರ್ಪಾಡು ಮಾಡಿದಳು. ಚಿತ್ತಾ ನಕ್ಷತ್ರದಲ್ಲಿ ಅಂಕುರಾರ್ಪಣೆಯೊಂದಿಗೆ ಆರಂಭವಾಗುವ ಒಂಬತ್ತು ದಿನಗಳ ಪುರಟ್ಟಾಸಿ ಉತ್ಸವಗಳನ್ನು,ಅದಕ್ಕೂ ಮೊದಲು ಎರಡು ದಿನಗಳ ಉತ್ಸವವನ್ನೂ ಏರ್ಪಡಿಸಿದಳು (ತಿ.ತಿ.8) ಮಣವಾಳ ಪ್ಪೆರುಮಾಳರಿಗೆ ಮುಕ್ಕೋಟಿ ದ್ವಾದಶಿಯಿಂದ ಮೊದಲು ಏಳುದಿವಸಗಳ ಉತ್ಸವಕ್ಕಾಗಿ ವೆಚ್ಚಗಳಿಗೆ ಭೂಮಿಯನ್ನೂ ದತ್ತಿ ನೀಡಿದಳು (ತಿ.ತಿ.9).

## 15. ಚೋಳರ ಕಾಲದಲ್ಲಿ ತಿರುಮಲೆ

ಒಂದನೇ ಪರಾಂತಕ ಅಥವಾ ಮಧುರೈಕೊಂಡ ಕೋ ಪರಕೇಸರಿವರ್ಮನು ಕ್ರಿ.ಶ.905 ರಿಂದ 953 ರವರೆಗೆ ಆಳಿದ. ಇವನ ಶಾಸನವೇ ಆಲಯದ ಅತಿ ಪ್ರಾಚೀನ ಚೋಳಶಾಸನ. ಅವನ ಆಳ್ವಿಕೆಯ 20ನೇ ಹಾಗೂ 29ನೇ ವರ್ಷದಲ್ಲಿ ಆಲಯಕ್ಕೆ ದೀಪಗಳನ್ನು ನೀಡಿದ್ದನ್ನಿವು ದಾಖಲಿಸುತ್ತವೆ (ಜಿ.ಟಿ.232,234). ಜಿ.ಟಿ.232 ಅಂದು ತಿರುಚುಕನೂರು (ತಿರುಚಾನೂರು) ನಲ್ಲಿನ ಪ್ರತಿನಿಧಿ ಸಭೆಯನ್ನು ಕುರಿತು ಹೇಳುತ್ತದೆ. ಇದರಿಂದಾಗಿ ಪಲ್ಲವರಕಾಲದಲ್ಲಿ ಪ್ರಚಲಿತವಿದ್ದ ರಾಜ್ಯ ವಿಭಾಗಗಳೇ ಈ ಕಾಲದಲ್ಲೂ ಪ್ರಚಲಿತವಿದ್ದಿತೆಂದು ತಿಳಿದುಬರುತ್ತದೆ. ತೊಂಡಮಂಡಲವನ್ನು ವಶಪಡಿಸಿಕೊಂಡ ಚೋಳರು ತಮಗೆ ಸಿದ್ಧರೂಪದಲ್ಲಿ ದೊರೆತ ಪಲ್ಲವ ಆಡಳಿತ ವ್ಯವಸ್ಥೆಯನ್ನು ತಮ್ಮದಾಗಿಸಿಕೊಂಡರೆಂದು ತೋರುತ್ತದೆ. ಇರುಂಗೋಲಕನ್ ಅಥವಾ ಗುಣವಾನ್ ಅಪರಾಜಿತನ್ ಸ್ವಲ್ಪಸ್ವರ್ಣವನ್ನು ದತ್ತಿ ನೀಡಿ ಇಬ್ಬರು ಬ್ರಾಹ್ಮಣರಿಗೆ ಸಮಾರಾಧನೆಯ ಏರ್ಪಾಡು ಮಾಡಿದ (ಜಿ.ಟಿ.220) ಇವನು ಬಹುಶಃ ಒಂದನೇ ಪರಾಂತಕನ ಅಧೀನ ಅಧಿಕಾರಿಯಾಗಿರಬೇಕು.

ಎರಡನೇ ಪರಾಂತಕ ಸುಂದರ ಚೋಳನ ಬಗ್ಗೆ ನೇರ ಸಾಕ್ಷಿಯಿಲ್ಲದಿದ್ದರೂ,ತಿರುಮಲೆಯ ವೆಂಕಟೇಶ್ವರ ಆಲಯದ ಜೀರ್ಣೋದ್ಧಾರ ಮಾಡುವಾಗ ವೀರನರಸಿಂಹ ಯಾದವರಾಯನ ಆಜ್ಞೆಯಂತೆ ಪುನಃ ಲಿಖಿಸಲಾದ ಒಂದು ಶಾಸನದ ಮೂಲಕ ಪೊನ್‌ಮಾಳಿಗೈಯಿಲ್ ತೂಂಜಿನಾನ್ ನ (ಚಿನ್ನದ ಮಾಳಿಗೆಯಲ್ಲಿ ಮಲಗಿದವನು) ರಾಣಿಯೆಂದು ಹೇಳಲಾದ ಪರಾಂತಕದೇವಿಯಮ್ಮನ್, ರಾಜ ರಾಜ ಚೋಳನ ಆಳ್ವಿಕೆಯ 16 ನೇ ವರ್ಷದಲ್ಲಿ ದೇವರಿಗೆ ಅನರ್ಘ್ಯ ವಜ್ರಗಳಿಂದ ಕೂಡಿದ ಒಂದು ಪಟ್ಟವನ್ನು ಸಮರ್ಪಿಸಿದಳೆಂದು ತಿಳಿದುಬರುತ್ತದೆ. (ಚಿನ್ನದ ಮಾಳಿಗೆಯಲ್ಲಿ ಮಲಗಿದವನು ಎರಡನೇ ಪರಾಂತಕ ಸುಂದರ ಚೋಳನೇ ಎಂಬುದು ಇತರಶಾಸನಗಳಿಂದ ಸ್ಪಷ್ಟ) ಈ ಎರಡು ದಾಖಲೆಗಳು ತಿರುಮಲೆಗೆ -ಪಟ್ಟ-ದ ದಾನ ನೀಡಿದ ಪರಾಂತಕ ದೇವಿ ಅಮ್ಮನು ಸುಂದರ ಚೋಳನ ರಾಣಿಯೆಂಬುದನ್ನು ಖಚಿತ ಪಡಿಸುತ್ತವೆ.

ಒಂದನೇ ರಾಜರಾಜನು ಮೂರುಶಾಸನಗಳಲ್ಲಿ ಕಂಡುಬರುತ್ತಾನೆ. (ತಿ.ತಿ.17.ಜಿ.ಟಿ. 214,215) 28 ಮುತ್ತುಗಳು,ನಾಲ್ಕು ವಜ್ರಗಳು,ಆರು ಗೋಮೇಧಿಕಗಳ 52 ಕಳಂಜು ತೂಕದ ಚಿನ್ನದ ಪಟ್ಟವನ್ನು ಶ್ರೀ ವೆಂಕಟೇ ಶ್ವರಸ್ವಾಮಿಗೆ ನೀಡಿದಪರಾಂತಕದೇವಿ ಅಮ್ಮನ ಶಾಸನವನ್ನು ಕುರಿತು ಈಗಾಗಲೇ ಹೇಳಲಾಗಿದೆ. ಮಿಕ್ಕೆರಡು ಶಾಸನಗಳೂ ತ್ರುಟಿತವಾಗಿವೆ. ಮೊದಲನೆಯದುಪ್ರಶಸ್ತಿಯ ಒಂದು ಭಾಗವನ್ನು ಉಲ್ಲೇಖಿಸಿದರೆ ಎರಡನೆಯದು ರಾಜರಾಜ ಮುವೇಂದವೇಲನ್ 40 ಕಳಂಜು ತೂಕದ ಚಿನ್ನವನ್ನು ದೇವರ ದೀಪಕ್ಕಾಗಿ ಆಲಯದ ಭಂಡಾರಕ್ಕೆ ಜಮೆ ಮಾಡಿದ್ದನ್ನು ಸೂಚಿಸುತ್ತದೆ.

ತಿರುಮಂಡ್ಯೈಯಂನ ಆಲಯದ ಸಭೆಯಾರರು ತಮ್ಮ ಕರ್ತವ್ಯವಾದ 24 ತುಪ್ಪದ ದೀಪಗಳನ್ನೂ, ಆರತಿಯನ್ನೂ ಮಾಡದೆ ಹೋದಾಗ, ರಾಜೇಂದ್ರ ಚೋಳನ ಆಳ್ವಿಕೆಯ ಮೊದಲವರ್ಷದಲ್ಲಿ ಒಬ್ಬ ಸ್ಥಳೀಯ ಅಧಿಕಾರಿ ವಿಚಾರಣೆ ನಡೆಸಿ,ವ್ಯವಸ್ಥೆಯನ್ನುಪುನಃ ನೆಲೆಗೊಳಿಸಿದಂತೆ ತಿ.ತಿ.20 ನೇ ಶಾಸನದಿಂದ ತಿಳಿದುಬರುತ್ತದೆ. ಈ ಶಾಸನದಲ್ಲಿ ವಿಚಾರಣೆಯ ಪೂರ್ತಿ ವಿವರಗಳಿದ್ದು, ವಿಚಾರಣಾಕರ್ತನು ತಿರುವೆಂಗಡದೇವನ ಆಡಳಿತಗಾರರು, ಸೇವಕರನ್ನು ಕರೆದು ದೇವರಿಗೆ ನಿತ್ಯವೂ ನೈವೇದ್ಯ ನೀಡುವುದುಮುಂದನಪ್ಪಡಿಯಲ್ಲಿ ಅರೆಕೊರೆಗಳೇನಾದರೂ ಇದ್ದವೇ ಎಂಬುದನ್ನು ವಿಚಾರಿಸಿದ. ದೇವದಾನಕ್ಕೆಂದು ಸ್ವೀಕರಿಸಲಾದ ತಿರುಮಂಡ್ಯೈಯಂ ಗ್ರಾಮದ ಪಂಚಾಯತಿಯು 23 ಪೊನ್‌ಗಳನ್ನು ಪಡೆದು ಶಿಲಾಶಾಸನೋಕ್ತವಾದಂತೆ ಶ್ರೀ ವೆಂಕಟೇಶ್ವರಸ್ವಾಮಿಯ ಆಲಯದಲ್ಲಿ 23 ದೀಪಗಳು ಹಾಗೂ ಒಂದು ಕರ್ಪೂರದ ಆರತಿಯನ್ನು ಬೆಳಗಿಸುವಲ್ಲಿ,ತಮ್ಮ ಕರ್ತವ್ಯಲೋಪ ಮಾಡಿ,ಗ್ರಾಮಸ್ಥರ ಅಸಾಮರ್ಥ್ಯದಿಂದ ಎರಡೇ ದೀಪಗಳನ್ನು ಬೆಳಗಿಸುತ್ತಿರುವರೆಂದು ಪ್ರಕಟವಾಯಿತು. ವಿಚಾರಣೆಯಿಂದ ತಿರುಮಂಡ್ಯೈಯಂ ಗ್ರಾಮಸಭೆಯ ಉದಾಸೀನ ಮನೋಭಾವ ಹಾಗೂ ನಂಬಿಕೆ ದ್ರೋಹದ ಅರಿವಾದ ಅಧಿಕಾರಿಯು,ತಿರುಚಾನೂರಿನಲ್ಲಿದ್ದ ತಿರುಮಂಡ್ಯೈಯಂ ಸಭೆಯ 20 ಪೊನ್

ಗಳನ್ನು ಆಲಯಕ್ಕೆ ಹಿಂದಿರುಗಿಸಬೇಕೆಂದೂ, ತಿರುಮಂಡ್ಯೆಯಂ ಸಭೆಯ ಸೇವೆಗಾಗಿ ನೀಡಬೇಕಾದ ಆಲಯ ಬಾಕಿಯಿದ್ದ ಮೂರು ಪೊನ್‌ಗಳು ಸೇರಿಸಿ 23 ಪೊನ್‌ಗಳನ್ನಾಗಿಸಿ ಆಲಯದ ಅಧಿಕಾರಿಗಳು ಆಲಯಕ್ಕೆ 23 ದೀಪಗಳಿಗೆ ಬೇಕಾದ ತುಪ್ಪವನ್ನೂ ಆರತಿಗೆ ಬೇಕಾದ ಕರ್ಪೂರವನ್ನೂ ಒದಗಿಸಬೇಕೆಂದೂ,ಆಜ್ಞೆ ಮಾಡಿದ.

ತಿರುಮಲೆಯ ಹಲವು ಶಾಸನಗಳಲ್ಲಿ ಕುಲೋತ್ತುಂಗನ ಮೈಕೀರ್ತಿಯ ಐತಿಹಾಸಿಕ ದಾಖಲೆಗಳು ಚೂರುಪಾರಾಗಿ ದೊರೆತಿವೆ. ಒಂದನೇ ಕುಲೋತ್ತುಂಗನ ರಾಣಿಯು ಆಲಯಕ್ಕೆ ಹಾಲು ಮೊಸರುಗಳಿಗಾಗಿ ದಾನ ನೀಡಿದಳು. (ತಿ.ತಿ.71) ಮೂರನೇ ರಾಜರಾಜು ಆಳ್ವಿಕೆಯ 19 ನೇ ವರ್ಷದಲ್ಲಿ ತಿರುಪತಿಯ ಗೋವಿಂದ ರಾಜಸ್ವಾಮಿ ಆಲಯದ ಶಾಸನವು (ಜಿ.ಟಿ.126) ಸ್ಥಳೀಯ ರಾಜಕಾರಣದ ಸಭೆಗಳ ಕೆಲಸಗಳು ಹಾಗೂ ಅಧಿಕಾರಗಳನ್ನು ವಿವರಿಸಿ ಆಲಯಕ್ಕೆ ಬೇಕಾದ ಭೂಮಿಯ ದೇಣಿಗೆಗಾಗಿ ರಾಜನಲ್ಲಿ ಮನವಿ ಮಾಡಿದ ವಿಧಾನಗಳನ್ನು ಕುರಿತು ಹೇಳುತ್ತದೆ. ತಿರುಕ್ಕುಡವೂರಿನ ಪೆರಿಯನಾಟ್ವಾರನು ಗೋವಿಂದರಾಜಸ್ವಾಮಿ ಆಲಯದಲ್ಲಿ ತಿರುವಂಗೈ ಆಳ್ವಾರರ ವಿಗ್ರಹವನ್ನು ಪ್ರತಿಷ್ಠಾಪಿಸಿದ, ಆದರೆ ಅದರ ದಿನವಹಿ ಪೂಜೆಗೆ ಏರ್ಪಾಡು ಮಾಡಲಿಲ್ಲ.ಶಠಗೋಪದಾಸರ್ಸ್ಥೈಮುತ್ತಿತರ ಮೂವರು ಆಲೋಚಿಸಿ, ಆಲಯದಲ್ಲಿ ಪೂರ್ಣಪ್ರಮಾಣದಲ್ಲಿ ಸಮಾವೇಶವಾದ ತಿರುಚಾನೂರು ಸಭೆಯಾರರ ಮುಂದೆ ವಿಷಯ ವನ್ನು ತಂದಾಗ ಅವರು ಒಂದು ತೀರ್ಮಾನ ಮಾಡಿದರು. ಸಭೆಯಾರರ ತೀರ್ಮಾನ ಶಿಫಾರಸು ಮಾತ್ರವೇ ಆದಾಗಲೂ ರಾಜ ಅದನ್ನು ಪೂರ್ತಿಯಾಗಿ ಅನುಮೋದಿಸಿ ಅದರಂತೆ ಕ್ರಮಗಳನ್ನು ಕೈಗೊಳ್ಳಲು ಆಜ್ಞೆ ನೀಡಿದ. ತಿರುಕ್ಕುಡುವೂರ್ ನಾಟ್ವಾರನು, ಕುಡುವೂರು ಗ್ರಾಮದ ಮಾರಿಪತ್ತಿನಲ್ಲಿ ಚಳುಕ್ಕಿ (ಚಾಲುಕ್ಯ ನಾರಾಯಣಕಲ್) ಅಳತೆಯಲ್ಲಿ ಪಟ್ಟಿಗೆ ಐದು ತೂಂಬು ಧಾನ್ಯಬೆಳೆಯುವ ಒಂದು ಸ್ಥಳವನ್ನು ಪೂಜೆಗೆಂದು ಬಿಟ್ಟುಕೊಟ್ಟು ರಾಜಾಜ್ಞೆಯನ್ನು ಅಮಲಿಗೆ ತಂದ.ದೈನಂದಿನ ಪೂಜೆಯ ಸಾಹಿತ್ಯವು ಹೀಗೆತಿರುಮಂಗೈ ಆಳ್ವಾರರ ವಿಗ್ರಹವನ್ನು ಪ್ರತಿಷ್ಠಾಪಿಸಿದ ಪೆರಿಯನಾಟ್ವಾರ ನಿಂದಲೇ ದೊರೆಯುವಂತಾಗಿ ತಿರುಕ್ಕುಡುವೂರಿನ ಮಹಾಜನಗಳಸಮ್ಮತಿ ಯಂತೆ ಪೆರಿಯನಾಟ್ಟು ವೇಲನು ಈ ದಾಖಲೆಗೆ ಸಹಿ ಮಾಡಿದ.

**16. ಪಾಂಡ್ಯರ ಆಳ್ವಿಕೆಯಲ್ಲಿ ತಿರುಮಲೆ**

ಒಂದನೇ ಜಟಾವರ್ಮ ಸುಂದರ ಪಾಂಡ್ಯನ ಪ್ರಶಸ್ತಿಯನ್ನು ಸಂಸ್ಕೃತದಲ್ಲಿ ಹೊಂದಿದ ಒಂದೇ ಒಂದು ಪಾಂಡ್ಯರಾಜ ಶಾಸನ ಉಪಲಬ್ದವಾಗಿದೆ.

ಜಿ.ಟಿ. 175 ರಲ್ಲಿ ನೀಡಲಾಗಿರುವ ಅವನ ಪ್ರಶಸ್ತಿಯಂತೆ ಅವನು ಸೋಮಕುಲ ತಿಲಕ.ಮಧುರೆಯ ರಾಜ (ಮಧುರಪುರಿ ಮಾಧವ) ಕೇರಳಿಗರ ಹರ (ಕೇರಳ ವಂಶ ನಿರ್ಮೂಲನ) ಲಂಕಾಪುರದ ನಾಶಕನಾದ (ಲಂಕಾಪುರಿ ಲುಂಠನ ದ್ವಿತೀಯ ರಾಮ) ಎರಡನೇ ಶ್ರೀರಾಮಚಂದ್ರ,ಚೋಳಕುಲ ಶೈಲ ಕುಲಿಶ,ಕರ್ನಾಟಕ ರಾಜನನ್ನು ಓಡಿಸಿದವ (ಕರ್ನಾಟಕ ರಾಜ ವಿದ್ರಾವಣ) ಹಲವು ಮಂದಿ ಶತ್ರುಗಳ ಕೋಟೆಗಳನ್ನು ನಾಶಮಾಡಿದವ (ವಿವಿಧ ರಿಪು ದುರ್ಗ ಮಥನ) ವೀರಗಂಡ ಗೋಪಾಲನೆಂಬ ಅರಣ್ಯದಬೆಂಕಿ (ವೀರಗಂಡ ಗೋಪಾಲ ವಿಪಿನ ದಾವದಹನ) ನಗರ ಶ್ರೇಷ್ಠ ಕಂಚಿಯ ಪ್ರಭು (ಕಾಂಚೀಪುರವರಾಧೀಶ್ವರ) ಗಣಪತಿಯೆಂಬಜಿಂಕೆಗೆ ಹುಲಿಯಾದವ (ಗಣಪತಿ ಹರಿಣ ಶಾರ್ದೂಲ) ಆಶ್ರಿತ ರಾಜರ ಪ್ರತಿಷ್ಠಾಪಕ (ಪ್ರಣತ ರಾಜ ಪ್ರತಿಷ್ಠಾಧಿಪತಿ) ಅಧಿರಾಜ ಮಹಾರಾಜರ ರಾಜ (ತ್ರಿಭುವನ ಚಕ್ರವರ್ತಿ) ಅವನು ಸುಂದರಪಾಂಡ್ಯ ಪ್ಪೆರುಮಾಳ್. ಈ ರಾಜನಿಗೆ ಸಂಬಂಧಿಸಿದಂತೆ ತಿರುಮಲೆಯ ಆಲಯದಲ್ಲಿ ಇನ್ನೂ ಹಲವಾರು ಶಾಸನಗಳಿದ್ದರೂ (127,140, 164,172,175,230,241,ತಿ.ತಿ. ಹಾಗೂ ಜಿ.ಟಿ.11) ಅವುಗಳಲ್ಲಿ ಇತರ ಯಾವುದೇ ಉಪಯುಕ್ತ ಸಾಮಗ್ರಿಯಿಲ್ಲ.

## 17.ಪಾಂಡ್ಯ ಮಾಂಡಳಿಕ ಯಾದವರಾಯರು

ಈ ಭಾಗದ ತೊಂಡಮಂಡಲವನ್ನು ಮೊದಲಿಗೆ ಚೋಳರ ಮಾಂಡಳಿಕರಾಗಿ ನಂತರ ಪಾಂಡ್ಯರ ಸಾಮಂತರಾಗಿ ನಂತರ ಸ್ವತಂತ್ರ ದೊರೆಗಳಾಗಿ ಆಳಿದ ಯಾದವರಾಯರು ತಿರುಮಲೆಯ ಹಿರಿಯ ಭಕ್ತರಾಗಿದ್ದು, ಆಲಯದ ಪೋಷಕರಾಗಿದ್ದರು. ತಿರುಮಲೆಯ ಆಲಯದೊಡನೆ ಸಂಬಂಧ ಹೊಂದಿದ ಮೊದಲಿಗರಲ್ಲಿ ವೀರನರಸಿಂಹದೇವನು ಪ್ರಥಮ. ಈ ದೊರೆಯು ಆಲಯ ದಲ್ಲಿ ಪ್ರತಿದಿನ ನೈವೇದ್ಯಕ್ಕಾಗಿ ಅಕ್ಕಿ,ತುಪ್ಪಗಳನ್ನು ದೊರಕಿಸಿಕೊಡಲು ಒಂದು ಗ್ರಾಮವನ್ನು ದತ್ತಿ ನೀಡಿದ. (ತಿ.ತಿ.164) ಅವಿಲಾಲದ ಬಳಿಯ ಸ್ವಲ್ಪ,ಜಮೀನನ್ನು ಇನ್ನೊಬ್ಬ ಸದಸ್ಯ ತಿರುಕಾಳತ್ತಿದೇವನು ಆಲಯಕ್ಕೆ ನೀಡಿದ (ತಿ.ತಿ.170) ವೀರರಾಕ್ಷಸ ಯಾದವರಾಯನೂ ಸ್ವಲ್ಪ ಜಮೀನನ್ನು ಆಲಯಕ್ಕೆ ನೀಡಿದ (ತಿ.ತಿ.293) ವೀರನರಸಿಂಗನ ರಾಣಿಯು ಎರಡು ನಂದಾದೀಪಗಳ ತುಪ್ಪಕ್ಕಾಗಿ 64 ಹಸು ಗಳನ್ನೂ ಎರಡು ಗೂಳಿಗಳನ್ನೂ ನೀಡಿದಳು. (ತಿ.ತಿ.381) ವೀರನರಸಿಂಗನ ಆಳ್ವಿಕೆಯ ನಲವತ್ತನೆಯ ವರ್ಷದಲ್ಲಿ ಇಲ್ಲಿಗೆ ಯಾತ್ರಿಕನಾಗಿ ಬಂದ ತಿರುಪುಲ್ಲಾಣಿದಾಸರು ಶ್ರೀ ವೆಂಕಟೇಶ್ವರನ ಆಲಯವನ್ನು ದೊರೆಯ ಅನುಮತಿ ಪಡೆದು ಜೀರ್ಣೋದ್ಧಾರ ಗೊಳಿಸಿದ ಈ ದೊರೆಯು ತಿರುಮಲೆಯಲ್ಲಿ ತುಲಾಭಾರವನ್ನು ನಡೆಸಿ ವೆಂಕಟಗಿರಿಯನ್ನು ಮೇರುಪರ್ವತವೆನ್ನಿಸಿದ. (ತಿ.ತಿ.371) ಈ ವಂಶದ ಇನ್ನೊಬ್ಬ ರಾಜ ತಿರುವೆಂಕಟನಾಥನು ದೇವರ ಆಡಿ-ತಿರುನಾಳ್ ಮಹೋತ್ಸವ ನಡೆಸಲು ಒಂದು ಗ್ರಾಮವನ್ನು ಸರ್ವಮಾನ್ಯವಾಗಿ ನೀಡಿದ.(ತಿ.ತಿ.189) ಇವನ ಮಾವ ಮಹಾಪ್ರಧಾನಿ ಸಿಂಗಯ ದಣ್ಣಾಯಕನು ಆಲಯದಲ್ಲಿ ಸಿತಕರ ಸಂಧಿಯ ನೈವೇದ್ಯದ ಏರ್ಪಾಡು ಮಾಡಿದ (ತಿ.ತಿ.195) ಈ ಕುಟುಂಬದ ಇನ್ನೊಬ್ಬ ರಾಜ ಶ್ರೀರಂಗನಾಥನ ಆಡಳಿತದ ಮೂರನೇ ವರ್ಷದ ದಾಖಲೆಯು ಬೆಟ್ಟದ ಮೇಲಿನ ಮಠಗಳು, ಹೂದೋಟಗಳನ್ನು ಹೇಳಿ, ಶ್ರೀ ವೆಂಕಟೇಶ್ವರಸ್ವಾಮಿಯ ಪಾರುವೇಟೆ ಉತ್ಸವನ್ನು ವಿವರಿಸುತ್ತದೆ. ಹದಿನಾರು ವರ್ಷಗಳ ನಂತರದ ಇನ್ನೊಂದು ದಾಖಲೆ; ಲೋಹದ ಮಲೈಕುನಿಯ ನಿನ್ರ ಪೆರುಮಾಳ್ ಹಾಗೂ ಅವನ ನಾಯಕಿಯರನ್ನು ವಿವರಿಸು ತ್ತದೆ. (1-106) ಒಂದು ದಾಖಲೆ ವಸಂತೋತ್ಸವದ್ದು (1-113 337 ತಿ.ತಿ.) ಹೋಬಲ ಯಾದವರಾಯನು ದೇವರ ವರದ ಹಸ್ತಕ್ಕೆ (ಬಲಗಡೆಯ ಕೆಳಗೈಗೆ) ಒಂದು ಆಭರಣ ನೀಡಿದ (56ಎ ತಿ.ತಿ. 1-117).

ಈ ಶಾಸನಗಳಿಂದ ಆಲಯಕ್ಕೆ ನೀಡಲಾದ ದತ್ತಿಗಳ ಬಗ್ಗೆ ಹಲವು ಆಸಕ್ತಿಕರ ವಿವರಗಳು ತಿಳಿದುಬರುತ್ತವೆ. ತಿ.ತಿ.165- ರಾಜರು ನೀಡುತ್ತಿದ್ದ ಜಮೀನು ಅಥವಾ ಹಳ್ಳಿಗಳ ದಾನವನ್ನು ವಿವರಿಸುತ್ತದೆ. ಆಲಯದ ಸ್ಥಾನತ್ತಾರರು ಅಗರಪ್ಪರುಪ್ಪಿಲ್ಲಿ ಜಮೀನಿನ ದೇಣಿಗೆಗಾಗಿ ಬಿನ್ನಹ ಸಲ್ಲಿಸಿದಾಗ, ಕುಡವೂರು ನಾಡು ಹಾಗೂ ತೊಂಡಪಡಿಪ್ಪರ್ ನಾಡವರು ಅದನ್ನು ಒಪ್ಪಿ ಕೊನೆಗೆ ವಿಜಯವಿಮಾ ನಾಟ್ಟನ್ (ಕಂದಾಯಾಧಿಕಾರಿ) ಅದನ್ನು ಅನುಮೋದಿಸಿದ ನಂತರ ರಾಜನು ಬಿನ್ನಹದಲ್ಲಿ ಸೂಚಿಸಿರುವಂತೆಯೇ ದೇಣಿಗೆ ನೀಡಲು ಒಪ್ಪಿ ಯಾದವರಾಯನ ಮೂಲಕ ಬಾಯಿಮಾತಿನಲ್ಲಿ ಆಜ್ಞೆ ನೀಡುತ್ತಿದ್ದ. ಈ ಪದ್ಧತಿ ಚೋಳರ ಕಾಲದಲ್ಲಿ-ವಿಶೇಷವಾಗಿ ಮೂರನೆ ರಾಜೇಂದ್ರನ ಕಾಲದಲ್ಲಿ ಜಾರಿಯಲ್ಲಿದ್ದಿತು. (ಜಿ.ಟಿ.126)

## 18. ವಿಜಯನಗರದ ಅರಸುಗಳು

ಕ್ರಿ.ಶ.1336 ರಲ್ಲಿ ವಿಜಯನಗರದ ಸಾಮ್ರಾಜ್ಯ ಸ್ಥಾಪನೆಯು ದಕ್ಷಿಣ ಭಾರತದ ಧಾರ್ಮಿಕ,ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಪ್ರಮುಖ ತಿರುವು. ಹದಿನಾಲ್ಕನೇ ಶತಮಾನದ ಮೊದಲ ಮೂರು ದಶಕಗಳಲ್ಲಿ ನಡೆದ ಮುಸಲ್ಮಾನ ಧಾಳಿಗಳಿಂದಾಗಿ ಈ ಭಾಗದ ಆಲಯಗಳು ಹಾಗೂ ದೇವರ ವಿಗ್ರಹಗಳು ಒಂದು ಕಠಿಣವಾದ ಪರಿಸ್ಥಿತಿಯನ್ನೆದುರಿಸ ಬೇಕಾಯಿತು. ಹೈಂದವ ಸಾಮ್ರಾಜ್ಯ ಇವುಗಳಿಗೆ ಅಗತ್ಯವಿದ್ದ ಎಲ್ಲ ರಕ್ಷಣೆ ಹಾಗೂ ಪೋಷಣೆಗಳನ್ನು ನೀಡಿತು. ತಿರುಮಲೆಯ ಆಲಯವು ಸಾಮ್ರಾಜ್ಯದ ಎಲ್ಲ ರಾಜರ ಭಕ್ತಿಯನ್ನು ಆಕರ್ಷಿಸಿ,ಅಪೂರ್ವವಾದ ಪ್ರಸಿದ್ಧಿಯ ಘಟ್ಟಕ್ಕೇರಿತು.

## 19. ಸಂಗಮವಂಶದ ಆಳ್ವಿಕೆಯಲ್ಲಿ ತಿರುಮಲೆ

ಆಲಯದ ಶಾಸನಗಳಲ್ಲಿ ಸುಲಭವಾಗಿ ಗುರುತಿಸಲ್ಪಡುವ ಸಂಗಮ ವಂಶದ ರಾಜನೆಂದರೆ ಎರಡನೇ ಹರಿಹರ. ಪ್ರಭವ ಶಕವರ್ಷ 1309 ರಲ್ಲಿ ತಿ.ತಿ.103 ರಲ್ಲಿ ಹೆಸರಿಸಲ್ಪಟ್ಟ ಹಿರಿಯ.ಆದರೆ ಇವನಿಗೂ ಮೊದಲಿನ ಬುಕ್ಕನ ಶಾಸನಗಳು ಹಲವು ಇವೆ. (ತಿ.ತಿ.487, 237, 238 ಹಾಗೂ 485) ಇವುಗಳಲ್ಲಿ ಯಾವುದರಲ್ಲೂ ರಾಜನ ಹೆಸರು ಸೂಚಿತವಾಗಿಲ್ಲವಾದರೂ, ಜೀರ್ಣಾವಸ್ಥೆ ಯಲ್ಲಿರುವ ಕಾಲಸೂಚನೆಯಿಲ್ಲದ 487, ತಿ.ತಿ.ಶಾಸನವು ಬುಕ್ಕರಾಯನ್ ಸಂಧಿ ಎಂಬ ಹೆಸರಿನಲ್ಲಿ ಸಂಧಿಕಾಲದ ನೈವೇದ್ಯಕ್ಕಾಗಿ ಒಂದು ಗ್ರಾಮದ ದೇಣಿಗೆಯನ್ನು ತಿಳಿಸುತ್ತದೆ. ತಿ.ತಿ.44 ರಲ್ಲಿ ಇದೇ ಬುಕ್ಕರಾಯನ್ ಸಂಧಿ ನೈವೇದ್ಯವನ್ನು ಶಕ 1379ರಲ್ಲಿ (ಕ್ರಿ.ಶ. 1457) ಉಲ್ಲೇಖಿಸಲಾಗಿದೆ.

ಆಲಯದ ಗರ್ಭಗೃಹವನ್ನು ಚಿನ್ನದ ಗಿಲೀಟು ಮಾಡಿಸಿ ವಿಮಾನಶಿಖರದಲ್ಲಿ ಒಂದು ಚಿನ್ನದ ಕಳಶವನ್ನು ಪ್ರಮುಖ ಮಾಂಡಳಿ ನಾದ ಮಹಾ ಮಂಡಲೇಶ್ವರ ಮಂಗಿದೇವನು ಕ್ರಿ.ಶ.1369 ರಲ್ಲಿ ಸ್ಥಾಪಿಸಿದ. (ತಿ.ತಿ.237) ಕಂಪಣನ ಒಬ್ಬ ಮಂತ್ರಿಯು ಆಲಯಕ್ಕೆ 26 ಹಸು ಹಾಗೂ ಒಂದು ಗೂಳಿಯನ್ನು ನೀಡಿದ. (ತಿ.ತಿ.373,485) ಕ್ರಿ.ಶ.1388 ರಲ್ಲಿ ಅಂದು ರಾಜ್ಯವಾಳುತ್ತಿದ್ದ ಹರಿಹರರಾಯ ಹೆಸರಿನಲ್ಲಿ ಮುಲ್ಲೈ ತಿರುವೆಂಕಟ ಜಿಯರು ಮಾಸಿ ತಿರುನಾಳ್ ಉತ್ಸವವನ್ನೇರ್ಪಡಿಸಿದರು (ತಿ.ತಿ.103) ಕ್ರಿ.ಶ.1390 ರ ಒಂದು ದಾಖಲೆ ಉತ್ಸವ ಮೂರ್ತಿಗಳ ಮುಂದೆ ಪಾಶುರಗಳನ್ನು ಹಾಡುವ ತಿರುಪ್ಪಾವೈ ಉತ್ಸವವನ್ನು ವಿವರಿಸುತ್ತದೆ. ಮೂರು ವರ್ಷಗಳ ನಂತರದ ಒಂದು ಶಾಸನ ಪ್ರತಿ ಉತ್ಸವದ ವಿಡಯಾಟ್ರು (ವಿದಾಯ ಹೇಳುವ ದಿನ) ದಿನವನ್ನು ಕುರಿತು ಹೇಳುತ್ತದೆ. (ತಿತಿ.143) ಕ್ರಿ.ಶ.1404 ರ ಒಂದು ಶಾಸನ ಕೊಡ್ಡೈ ತಿರುನಾಳನ್ನು ಕುರಿತು ಹೇಳುತ್ತದೆ (ತಿ.ತಿ.340).

ಎರಡನೇ ಹರಿಹರನ ಒಂದು ಶಾಸನ (ತಿ.ತಿ.103) ಶ್ರೀ ವೆಂಕಟೇಶ್ವರಸ್ವಾಮಿಗೆ ತನ್ನ ಹೆಸರಿನಲ್ಲಿ ಮಾಡಿಸಿದ ಉತ್ಸವೊಂದರ ವ್ಯವಸ್ಥೆಯನ್ನು ವಿವರಿಸಿ ಅದರ ಏರ್ಪಾಡಿಗೆ ಪೂಂಗೋಡು ಗ್ರಾಮದ ವಾರ್ಷಿಕ ಆದಾಯವಾದ ನೂರು ಪಣಂ ಅನ್ನು ಶ್ರೀ ವೈಷ್ಣವ ಮಠದ ಅಧಿಕಾರಿಯು ನೀಡಬೇಕೆಂದು ತಿಳಿಸುತ್ತದೆ. ಮಠದ ಅಧಿಕಾರಿಗೆ ಗ್ರಾಮವನ್ನು ಒಪ್ಪಿಸಿರಬೇಕೆಂದು ತೋರುತ್ತದೆಈ ಮಠದ ಧಾರ್ಮಿಕ ಪ್ರಭಾವಕ್ಕೆ ವಿಜಯನಗರದ ಅರಸರ ಮೊದಲ ವಂಶ ನಿಧಾನವಾಗಿ ಒಳಗಾಗಿ, ಈ ದೇವಾಲಯದಲ್ಲಿ ವೇದಪಾರಾಯಣವು ಎರಡನೇ ದೇವರಾಯನ ಕಾಲದಲ್ಲಿ ಮೊದಲಿಯಾರ್ ತಿರುಕಲಿಕನ್ರಿದಾಸರ್ ಅಳಗಪ್ಪಿರನಾರ್ ಅವರ ಪ್ರಯತ್ನದಿಂದಾಗಿ ಉಂಟಾ ಯಿತು. ಜೊತೆಗೇ ಮಂಟಪ,ಗೋಪುರಗಳ ನಿರ್ಮಾಣವೂ ಆಯಿತು. ಇದರೊಡನೆಯೇ ಅನ್ನಸತ್ರಗಳು, ತುಳಸೀತೋಟಗಳು ಹೆಚ್ಚಾಗಿ ಉತ್ಸವಗಳು ಹೆಚ್ಚಾಗಿ ಅವುಗಳ ನಿರ್ವಹಣೆಗಾಗಿ ಗ್ರಾಮಗಳ ಮಾನ್ಯಗಳೂ ಕಂದಾಡ್ಡೈ ರಾಮಾನುಜ ಅಯ್ಯಂಗಾರ್ಯನ ಪ್ರಭಾವದಿಂದ ಸಾಳುವ ನರಸಿಂಹನು ನೀಡುವಂತಾಯಿತು.

ಎರಡನೇ ದೇವರಾಯನು ಅರೆಡಜನ್ ಶಾಸನಗಳಲ್ಲಿ ಪ್ರತಿನಿಧಿಸಲ್ಪಟ್ಟಿದ್ದಾನೆ. ಶಕ 1351ರ ಸೌಮ್ಯ ನಾಮ ಸಂವತ್ಸರದಲ್ಲಿ (5-12-1429) ಆಲಯದ ನಿತ್ಯನಿವೇದನಕ್ಕಾಗಿ ಈತ ಮೂರು ಹಳ್ಳಿಗಳನ್ನು ಮಾನ್ಯನೀಡಿ, 1200 ಪೊನ್‌ಗಳನ್ನೂ ನೀಡಿದ. (ತಿ.ತಿ.188) ಶಕ 1355 ರ ಪ್ರಮಾದೀಚನಾಮ ಸಂವತ್ಸರದಲ್ಲಿ ದೇವಣ್ಣ ಒಡೆಯರ ಶಿಫಾರಸ್ಸಿನಂತೆ ಸಿದ್ಧಕುಟ್ಟೈ ಅಥವಾ ಶ್ರೀನಿವಾಸ ಪುರದ ರಾಜಾದಾಯದ ಅರ್ಧಭಾಗವನ್ನು (ವರ್ಷಕ್ಕೆ ಪ್ರಾಯಶಃ 200 ಪೊನ್ ಆದಾಯದ್ದು) ಆಲಯದ ಶ್ರೀ ಭಂಡಾರಕ್ಕೆ ಮೊದಲೇ ಸೇರಿದ್ದ ಉಳಿದ ಅರ್ಧ ಭಾಗದಂತೆಯೇ ಸೇರಿಸಿ ಆ ವರ್ಷ ಪುನಃ ನವೀಕೃತವಾದ ವೇದಪಾರಾಯಣ ಮಾಡುವ 24 ಮಂದಿ ಬ್ರಾಹ್ಮ ಣರಿಗೆ ಇನಾಮು ನೀಡಿದ.(ತಿ.ತಿ 89,149) ಈ ಹಳ್ಳಿ ಕೊತ್ತಲಸ್ಥಳದಲ್ಲಿ ವೈಕುಂಡ-ವಲನಾಡುಗಳ ಉಪವಿಭಾಗವಾಗಿರ ಬೇಕು. ಕೊಟ್ಟಂ ಹೆಸರನ್ನು ಹೇಳದಿದ್ದರೂ,ವೈಕುಂಡವಲನಾಡು ಮತ್ತು ತಿರುಕ್ಕುಡ ವೂರುಗಳೆರಡೂ ಚಂದ್ರಗಿರಿ ರಾಜ್ಯದ ತಿರುವೆಂಕಟಕೊಟ್ಟಂ ಜಿಲ್ಲೆಯದೆಂದು ತಿಳಿಯುವುದು.

ದೇವಣ್ಣ ಒಡೆಯರಲ್ಲದೆ ಎರಡನೇ ದೇವರಾಯನ ಇನ್ನೊಬ್ಬ ಅಧಿಕಾರಿ ಮಲ್ಲಣ್ಣನೂ ಶಕ 1330 ರ ಸರ್ವಧಾರಿ(13-3-1409) ಸಂವತ್ಸರದ ಶಾಸನದಲ್ಲಿ ಉಲ್ಲೇಖಿತನಾಗಿದ್ದಾನೆ. ಈತನು ಮೊದಲಿಗೆ ಮೈಸೂರು ಪ್ರಾಂತ್ಯದ ಆಡಳಿತಾಧಿಕಾರಿಯಾಗಿ ಕೆಲಸ ನಿರ್ವಹಿಸಲು ಕಳುಹಿಸಲ್ಪಟ್ಟು ನಂತರ ಚಂದ್ರಗಿರಿಯ ರಾಜ್ಯಪಾಲನಾದ. ಮೇಲೆ ಹೇಳಿದ ಶಕ 1330 ಪ್ರಾಯಶಃ ಆತ ಆಡಳಿತ ಸ್ವೀಕರಿಸಿದ ವರ್ಷವಾಗಿರಬೇಕು. ಈತ ಶ್ರೀ ವೆಂಕಟೇಶ್ವರಸ್ವಾಮಿಗೆ ನೈವೇದ್ಯ ಹಾಗೂ ನಿತ್ಯದೀಪದ ಏರ್ಪಾಡು ಮಾಡಿದ.

ಆತನ ಹೆಸರು ಮೂಡಿಬರುವ ನಂತರದ ಶಾಸನವೆಂದರೆ ಶಕವರ್ಷ 1339 ರ ಹೇವಿಳಂಬಿ ಸಂವತ್ಸರ (25-8-1417) (ತಿ.ತಿ.88), ಈ ಬಾರಿ ಆತ ಮಧ್ಯದೇವಾಲಯದ ಮುಂದಿರುವ ತಿರುಮಾಮಣಿ ಮಂಟಪ ನಿರ್ಮಾಣವನ್ನು ತಳದಿಂದ ಮೇಲು ಛಾವಣಿಯವರಿಗೆ ಪೂರ್ತಿಗೊಳಿಸಿ, ಆನಂದನಿಲಯ (ಗರ್ಭಗುಡಿಯ ಮೇಲಿನ) ವಿಮಾನದ ಜೀರ್ಣೋದ್ಧಾರ ಮಾಡಿರಬೇಕು. (ತಿ.ತಿ.235) ಆತನ ಅತಿ ಈಚಿನ ಶಾಸನ ವೆಂದರೆ ಶಕ 1336 ರ ರಕ್ತಾಕ್ಷಿ ಸಂವತ್ಸರದ್ದು (2-10-1444)(ತಿ.ತಿ.64) ಇದು ಎರಡನೇ ದೇವರಾಯನ ಆಳ್ವಿಕೆಯ ಕೊನೆಯ ಐದಾರು ವರ್ಷಗಳ ಮೊದಲಿಗೆ ನಮ್ಮನ್ನು ಕರೆದೊಯ್ಯುತ್ತದೆ. ಪ್ರಾಯಶಃ ಶ.1347 ವರ್ಷದಲ್ಲಿ ಇರಗಪ್ಪ ಒಡೆಯನ ಉತ್ತರಾಧಿಕಾರಕ್ಕೆ ಪ್ರಾಯಶಃ ಈತನು (ಆ.ಸ. ವರದಿ - 1907. 08 ಪುಟ-248) ವರ್ಗಾಯಿತನಾಗಿರಬೇಕು.

(ತಿ.ತಿ.92) ಶಾಸನ ಸಂಸ್ಕೃತ ಶಾರ್ದೂಲ ವಿಕ್ರೀಡಿತ ವೃತ್ತದ ಪದ್ಯವಾಗಿದ್ದು, ಆತನನ್ನು ಅಮಾತ್ಯಶೇಖರ ಎಂದು ಕರೆದಿದೆ. ಈ ಪದವಿ ವಿಜಯನಗರದ ರಾಜಪ್ರತಿನಿಧಿಗಳು, ರಾಜ್ಯಪಾಲರು, ಮಂತ್ರಿಗಳ ಪದವಿಗೆ ಸಮಾನವಾಗಿದ್ದು, ಶಕ 1309 ರ ವೇಳೆಗೆ ಎರಡನೇ ಹರಿಹರನ ಕಾಲದಲ್ಲಿಯೇ ಮಲ್ಲಣನು ಈ ಪದದಿಂದ ಸನ್ಮಾನಿತನಾಗಿರಬೇಕು. ಆತನ ಬಗೆಗಿನ ದೀರ್ಘ ಅವಧಿಯ ಕಾಲಾಂತರವು ಶಾಸನಗಳಲ್ಲೆಲ್ಲ ಆತ ಚಂದ್ರಗಿರಿ ವಾಸಿ ಎಂದು ಗುರುತಿಸಲಾಗಿರುವುದರಿಂದ ಚಂದ್ರಗಿರಿ ರಾಜ್ಯವನ್ನು ಆತ ಶಕವರ್ಷ 1330 ರಿಂದ 1366 ರ ವರೆಗೆ ಪಾಲಿಸಿದನೆಂದು ತೀರ್ಮಾನಿಸಬಹುದು. ಆದರೆ ಶಕವರ್ಷ 1335 ರಲ್ಲಿ ದೇವಣ್ಣ ಒಡೆಯನು ಚಂದ್ರಗಿರಿ ರಾಜ್ಯವನ್ನಾಳುತ್ತಿದ್ದನೋ ಅಥವಾ ಸಾದಲಿಯ ರಾಜ್ಯವನ್ನಾಳುತ್ತಿದ್ದನೋ ಎಂಬುದು ತಿಳಿದುಬರುವುದಿಲ್ಲ.

ಮಲ್ಲಣನು ದೇವರಸರ ಮಗ ಹಾಗೂ ಗೋಪೀನಾಥಯ್ಯನ ಶಿಷ್ಯ. ತನ್ನ ಗುರುವಿನ ಹೆಸರು ಹೇಳುವುದು ಹಾಗೂ ಶ್ರೀಮಾಧವ ದಾಸ ಎಂಬ ಅಂಕಿತವನ್ನು ಬಳಸಿರುವುದು ಆತ ಅತಿ ಹೆಚ್ಚಿನ ಧಾರ್ಮಿಕ ಶ್ರದ್ಧೆ ಹೊಂದಿದ್ದವ ನಾಗಿದ್ದ ಎಂಬುದನ್ನು ಸೂಚಿಸುತ್ತದೆ.

## 20. ಸಾಳುವರ ಕಾಲದ ತಿರುಮಲೆ

ಎರಡನೇ ದೇವರಾಯನ ಕಾಲದಲ್ಲಿಯೇ ಸಾಳುವರು ಪ್ರಭಾವಶಾಲಿ ಗಳಾಗಿ ಬೆಳೆಯುತ್ತಿದ್ದರೆಂದು ತಿಳಿದುಬರುತ್ತದೆ. ಶಕವರ್ಷ 1368 ರ ಕ್ಷಯನಾಮಸಂವತ್ಸರದಲ್ಲಿ (10-10-1446) ಎರ್ರ ಕಂಪಯರಾಯನ ಮಗ ಸಾಳುವ ಪೆರಿ ಮಲ್ಲಯದೇವ ಮಹಾರಾಜನು (ತಿ.ತಿ.13) ಶಾಸನದಲ್ಲಿ ಕಂಡು ಬರುತ್ತಾನೆ.

ಶಕವರ್ಷ 1364 ರ ದುಂದುಭಿ ಸಂವತ್ಸರದಲ್ಲಿ ಮುದ್ದಿಯ ನಾಯಕನ ಮಗ ತೆಪ್ಪದ ನಾಗಯ್ಯ ನಾಯಕರು ದೇವರಿಗೆ 3000 ಹೊನ್ನಿನ ಕಾಣಿಕೆ ನೀಡಿದನೆಂದು ತಿಳಿದುಬರುತ್ತದೆ.(ತಿ.ತಿ.100) ಈತ ಪ್ರಾಯಶಃ ಚಂದ್ರಗಿರಿಯಲ್ಲಿ ನೆಲೆಯಾದ ಎರಡನೇ ದೇವರಾಯನ ಸೇನಾಪತಿಗಳಲ್ಲಿ ಒಬ್ಬನಾಗಿದ್ದಿರಬೇಕು.

ಶಕವರ್ಷ 1352 ರ ಸಾಧಾರಣ ಸಂವತ್ಸರದಲ್ಲಿ (1-7-1430) ಒಂದು ಚಿನ್ನದ ಪಟ್ಟವನ್ನು ಶ್ರೀಗಿರಿಯು ದೇವರಿಗೆ ನೀಡಿದ- ಎಂಬ ಸಂಗತಿಯು ನಯನಗಳು-(2)ಬಾಣಗಳು (5) ರಾಮ-(3)ಚಂದ್ರ-(1) ವರ್ಷದಲ್ಲಿ ಎಂದರೆ -2531 (ಶಕ 1352) ರಲ್ಲಿ ಹೇಳಲಾಗಿದೆ. ಈತ ಎರಡನೇ ದೇವರಾಯನ (ಗಜವೇಂಟೆಗಾರ) ತಮ್ಮನಾದ ಪ್ರತಾಪದೇವರಾಯ - ಶ್ರೀಗಿರಿ ಭೂಪಾಲನೇ ಇದ್ದು

ಈತ ಶಕವರ್ಷ 1346 ರಲ್ಲಿ ಆರ್ಕಾಟು ಜಿಲ್ಲೆಯ ಮರಕತನಗರ ಪ್ರಾಂತದ ಆಡಳಿತಗಾರನಾಗಿರಬೇಕು. (ಆ.ಸ. ವರದಿ -1907-8 ಪುಟ-248)

ಮಲ್ಲಿಕಾರ್ಜುನನ ಬಗ್ಗೆ ಒಂದೇ ಒಂದು ದಿನಾಂಕ ದೊರೆಯುತ್ತದೆ. ಅದು ಶಕ ವರ್ಷ 1371ರ ಶುಕ್ಲ ವರ್ಷದ್ದಾಗಿ (4-3-1450) ಇದು ಅವನ ಆಳ್ವಿಕೆಯ ಎರಡನೇ ವರ್ಷದ್ದು. ಚಂದ್ರಗಿರಿಯಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣ ನಿಯೋಗಿ ರಾಜಮಾಲಿಕ್ಕಂ ಚೆನ್ನಪ್ಪ ಒಡೆಯರ್‌ಗೆ ತಿರುಪತಿಯ ಶ್ರೀವೈಷ್ಣವರಿಬ್ಬರು ಮನೆ ಹಾಗೂ ಮನೆಯ ಮುಂದಿನ ಸ್ಥಳವನ್ನು ಮಾರಿದ ವಿವರವನ್ನು ನೀಡುತ್ತದೆ. ಬಹುಶಃ ಈ ಚಿನ್ನಪ್ಪ ಒಡೆಯರು ವಿಶೇಷದಿನ ಗಳಲ್ಲಿ ರಾಜನಿಗೆ ಹಾಗೂ ಮನ್ನೆಯರಿಗೆ ಹೂವನ್ನು ನೀಡುವ ಹೂವಾಡಿಗನಾಗಿರಬೇಕು.

ತಿರುಪತಿ ಚಂದ್ರಗಿರಿಗಳು ಹತ್ತುಮೈಲಿ ಮಾತ್ರವೇ ದೂರವಿದ್ದು, ಈ ಶಾಸನದಲ್ಲಿರುವಂತೆ ತಿರುವೆಂಕಟಕೋಟೆಯಲ್ಲಿ ತಿರುಪತಿ-ತಿರುಕ್ಕುಡವೂರು ಎಂತಲೂ, ಚಂದ್ರಗಿರಿ- ವೈಕುಂಠವಲನಾಡು ಎಂತಲೂ ಎರಡು ಉಪವಿಭಾಗಗಳಾಗಿದ್ದವು.

ಸಾಳುವ ವಂಶದವರಿಂದಾದ ಶಾಸನಗಳಿಂದ ಆಲಯದ ಬಗ್ಗೆ ಕೆಳಗಿನಂತೆ ವಿವರಗಳು ತಿಳಿದುಬರುತ್ತವೆ-(ಮೊದಲು ಬರುವುದು ಶಾಸನಸಂಖ್ಯೆ)

ತಿ.ತಿ.3- ಒಂದು ಗ್ರಾಮದ ಸ್ವರ್ಣದಾಯ ತೆರಿಗೆಯ ದೇಣಿಗೆಯಿಂದ ಸಾಳುವ ನರಸಿಂಹನ ಹೆಸರಿನಲ್ಲಿ ಒಂದು ಸಂಧಿಯನ್ನುಂಟುಮಾಡಲಾಯಿತು.(ನೈವೇದ್ಯದ ಏರ್ಪಾಡು)

ತಿ.ತಿ.361- ಪ್ರತಿ ಶನಿವಾರವೂ ಒಂದು ದೀಪವನ್ನು ಹಚ್ಚಲು ಕ್ರಿ.ಶ.1461 ರಲ್ಲಿ ದಾನಿಗಳೊಬ್ಬರು ಏರ್ಪಾಡು ಮಾಡಿದರು.

ತಿ.ತಿ.157- ಕ್ರಿ.ಶ.1464 ರ ಒಂದು ಶಾಸನದಲ್ಲಿ ತಿರುಪವಿತ್ರ ತಿರುನಾಳ್ ಅಥವಾ ಪವಿತ್ರೋತ್ಸವ ಹೆಸರಿಸಲ್ಪಟ್ಟಿದೆ.

ತಿ.ತಿ.66- ಕ್ರಿ.ಶ.1468ರ ಶಾಸನದಲ್ಲಿ ಸಾಳುವ ನರಸಿಂಹನು ತಿರುಮಲೆಯಲ್ಲಿ ಒಂದು ಗೋಪುರವನ್ನು ಕಟ್ಟಿಸಿದನೆಂದೂ,ಅದರ ಬಳಿಯ ಸತ್ರದಲ್ಲಿ ಯಾತ್ರಿಕರಿಗೆ ಅನ್ನದಾನದ ವ್ಯವಸ್ಥೆಯನ್ನುಂಟು ಮಾಡಿದನೆಂದೂ ಹೇಳಲಾಗಿದೆ.

ತಿ.ತಿ.70- ಅದರ ನಂತರದ ವರ್ಷದ ಈ ಶಾಸನದಲ್ಲಿ ದಿನವೂ ತೋಮಾಲಸೇವೆಯ ಆರಂಭದಲ್ಲಿ ಶ್ರೀ ವೆಂಕಟೇಶ್ವರಸ್ವಾಮಿಯ ನಿವೇದನೆಗೆಂದು ದಧ್ಯೋದನ ಸಂಧಿಯನ್ನು ಏರ್ಪಡಿಸಿದ್ದಾಗಿಯೂ,ಪಂಗುಣಿ ಅಮಾವಾಸ್ಯೆ ಹಾಗೂ ವಹಿತ ಪೂರ್ಣಿಮೆಗಳಲ್ಲಿ ನೃಸಿಂಹದೇವರಿಗೆ ತಿರುಮಂಜನ ಮಾಡುವ ಪದ್ಧತಿಯನ್ನು ಆರಂಭಿಸಲಾಯಿತು ಎಂದಿದೆ.

ತಿ.ತಿ.197. ಈ ಶಾಸನದಂತೆ ಪುರಟ್ಟಾಶಿ ತಿರುನಾಳಿನ ಉತ್ಸವದ ಹತ್ತುದಿನಗಳಲ್ಲಿಯೂ ನರಸಿಂಗರಾಯ ಕೋನೇರಿಯ ದಡದಲ್ಲಿ ಸತ್ರವನ್ನು ನಡೆಸುತ್ತಿದ್ದರೆಂದು ತಿಳಿದುಬರುತ್ತದೆ.

ತಿ.ತಿ.197. ಈ ಶಾಸನವು ಸಾಳುವನರಸಿಂಹನಿಂದ ಏರ್ಪಾಡಾದ ಡೋಲೋತ್ಸವ ಅಥವಾ ಅನ್ನಾ ಊಂಜಲ್ ತಿರುನಾಳ್ ಬಗ್ಗೆ ಹೇಳುತ್ತದೆ. ಇದರ ಕಾಲ ಕ್ರಿ.ಶ.1473.

ತಿ.ತಿ.200 ಕ್ರಿ.ಶ.1476 ರ ದಾಖಲೆಯಿದು. ಮಲೈಕುನಿಯ ನಿನ್ರ ಪೆರಿಮಾಳರು ಪಂಗುಣಿ ಹಾಗೂ ಪುರಟ್ಟಾಶಿ ಉತ್ಸವಗಳಲ್ಲಿ ರಥವನ್ನೇರಲು ವರಾಹಸ್ವಾಮಿ ಆಲಯದ ಮಂಟಪಕ್ಕೆ ಬರುತ್ತಿದರೆಂದೂ,ಕನುಪ್ಪಡಿಯ ವೇಳೆಗೆ ಅರಿಷಿಣದಿಂದ ಲೇಪಿತಳಾದ ತಾಯಾರಿಗೆ ತಿರುಮಂಜನ ನಡೆಯುತ್ತಿದ್ದಿತೆಂದೂ ತಿಳಿಸುತ್ತದೆ.

ತಿ.ತಿ.50.ಕ್ರಿ.ಶ.1477 ರ ಈ ದಾಖಲೆಯಿಂದ ಅಲಮೇಲು ಮಂಗೈ ಸಂಧಿ ಎಂಬ ಹೊಸ ನೈವೇದ್ಯ ಸಂಧಿ ಏರ್ಪಟ್ಟಿತೆಂದು ತಿಳಿದುಬರುತ್ತದೆ.

ತಿ.ತಿ.522.ಈ ಜೀರ್ಣಶೀರ್ಣವಾದ ದಾಖಲೆ ಪಾಪನಾಶನಂ ಉತ್ಸವದ ಬಗ್ಗೆ ಹೇಳುತ್ತದೆ.

ತಿ.ತಿ.248. ಕ್ರಿ.ಶ.1482 ರಲ್ಲಿ ನರಸಿಂಹರಾಯನು ಉತ್ಥಾನ ದ್ವಾದಶಿಯಂದು ಒಂದು ಗ್ರಾಮವನ್ನು ದೇಣಿಗೆ ನೀಡಿದನೆಂದು ದಾಖಲಿಸುತ್ತದೆ. ಇದರ ಆದಾಯವನ್ನು ತಿರುಮಲೆ ತಿರುಪತಿಗಳಲ್ಲೂ ತಿರುಮಲೆಯ ನರಸಿಂಹರಾಯ ಮಂಟಪದಲ್ಲಿಯೂ ಗೋಪುರಗಳನ್ನು ನಿರ್ಮಿಸಲು ಬಳಸಬೇಕೆಂದು ಕಟ್ಟಳೆ ಮಾಡಿದ.

ತಿ.ತಿ.193. ಮಾರ್ಗಳಿ ತಿಂಗಳ ಧನುರ್ಮಾಸ ಉತ್ಸವದ ತಿರುಪ್ಪಳ್ಳಿಯೆಳುಚ್ಚಿಯನ್ನು ಕ್ರಿ.ಶ.1486 ರ ಈ ಶಾಸನ ವಿವರಿಸ್ತುತೆ

ತಿ.ತಿ. 564. ಈ ಶಾಸನವು ಉತ್ಥಾನದ್ವಾದಶಿಯಂದು ಹಾಗೂ ಶ್ರೀ ಜಯಂತಿಯಂದು ಪುರವೀಧಿಗಳಲ್ಲಿ ಮೆರವಣಿಗೆ ಹೊರಟದ್ದನ್ನು ಹೇಳುತ್ತದೆ.

ತಿ.ತಿ.250.ಕ್ರಿ.ಶ.1491 ರ ಈ ಶಾಸನವು ಯುಗಾದಿ, ದೀಪಾವಳಿಗಳಂದು ಶ್ರೀ ವೆಂಕಟೇಶ್ವರಸ್ವಾಮಿಯನ್ನು ಸೂರ್ಯ,ಚಂದ್ರರಂತೆ ಕಂಡುಬರುವ ಹಾರಗಳಿಂದ ಅಲಂಕರಿಸುತ್ತಿದ್ದುದನ್ನು ತಿಳಿಸುತ್ತದೆ.

ತಿ.ತಿ. 253 ಕ್ರಿ.ಶ. 1491ರಲ್ಲಿನ ಈ ಶಾಸನವು ಮಾರ್ಗಳಿ ಮಾಸದಲ್ಲಿ ನಡೆಯುತ್ತಿದ್ದ ತಿರುವಧ್ಯಯನದ ಹಿಂದಿನ ದಿನ ಆಕಾಶಗಂಗೆಗೆ ಹೋಗುವ ದಾರಿಯನ್ನು ದುರಸ್ತಿ ಮಾಡುತ್ತಿದ್ದ ಅಂಶವನ್ನು ತಿಳಿಸುತ್ತದೆ.

ತಿ.ತಿ.283. ಇದೇ ವರ್ಷದ ಈ ದಾಖಲೆ ಮಲೈಕುನಿಯ ನಿನ್ರ ಪೆರುಮಾಳರು ತಾಯಾರರೊಡನೆ ಎಂಟನೆಯ ಉತ್ಸವ ದಿನಗಳಲ್ಲಿ ಕುದುರೆಯ ಮೇಲೆ ಮೆರವಣಿಗೆ ಹೊರಡುವರೆಂದು ತಿಳಿಸುತ್ತದೆ.

ತಿ.ತಿ.280. ಎರಡು ವರ್ಷಗಳ ನಂತರದ ಈ ಶಾಸನವು ಶ್ರೀಜಯಂತಿ,ಶ್ರೀರಾಮನವಮಿ,ವಸಂತ ಪಂಚಮಿ ಹಬ್ಬಗಳನ್ನು ವಿವರಿಸುತ್ತದೆ.

ತಿ.ತಿ.615. ಅದೇ ವರ್ಷದಲ್ಲಿ ಆನಂದಾಂಪಿಳ್ಳೈ ಮಂಟಪವನ್ನು ಕೊಮ್ಮರಾಜ ಪೆರಿಯ ತಿಮ್ಮರಾಜನ ಪತ್ನಿ ನರಸಮ್ಮನು ಪುನರ್ನಿರ್ಮಾಣ ಗೊಳಿಸಿದ ದಾಖಲೆಯಿದು.

ತಿ.ತಿ.337. ಕ್ರಿ.ಶ.1493 ರ ದಾಖಲೆ. ಇಲ್ಲಿ ಮಾರ್ಗಳಿ ತಿಂಗಳಿನಲ್ಲಿ ನಡೆಯುತ್ತಿದ್ದ ತಿರುವಧ್ಯಯನ ಉತ್ಸವ ವಿವರಿತ.

ತಿ.ತಿ.307.ಇದೇ ವರ್ಷದ ಈ ದಾಖಲೆಯಲ್ಲಿ ತಿರುಕ್ಕೊಡಿ ತಿರುನಾಳ್‌ನಲ್ಲಿ ರಥೋತ್ಸವ ನಡೆಯುತ್ತಿದ್ದಿ ತೆಂದು ತಿಳಿಸಲಾಗಿದೆ.

ತಿ.ತಿ.313.ಕ್ರಿ.ಶ.1494 ರ ದಾಖಲೆ. ಇಲ್ಲಿ ಅಲ್ಪಸಿ ತಿರುನಾಳ್ ಉತ್ಸವ ನಡೆಯುತ್ತಿದ್ದ ಪದ್ಧತಿಯಿದ್ದಿತೆಂದು ವಿವರಣೆಯಿದೆ.

ತಿ.ತಿ.617. ಆಡಿ ಆಯನಂ ಉತ್ಸವವನ್ನು ಹೆಸರಿಸುವ ಈ ದಾಖಲೆಯು ಚಾತುರ್ಮಾಸದಲ್ಲಿನ ಉತ್ಥಾನ ಏಕಾದಶೀ ದಿನದಂದು ಸ್ವಾಮಿಯು ಕೈಶಿಕಪುರಾಣವನ್ನು ಕೇಳುತ್ತಿದ್ದರೆಂದು ವಿವರಿಸುವುದು.

ತಿ.ತಿ.628.ಕ್ರಿ.ಶ.1495 ರ ಈ ಶಾಸನವು ಆಲಯದ ಆಭರಣ ಕೋಶದಲ್ಲಿನ ಆಭರಣಗಳನ್ನು ವಂಶ ಪಾರಂಪರ್ಯವಾದ ಹೊಣೆಯಲ್ಲಿಡಬೇಕೆಂದೂ,ಕಂದಾಡೈ ರಾಮಾನುಜ ಅಯ್ಯಂಗಾರ್ಯನು ಆಭರಣಗಳಿಗೆ ಆಗಬೇಕಿದ್ದ ಅಗತ್ಯವಾದ ರಿಪೇರಿ ಕೆಲಸಗಳನ್ನೂ ಮಾಡಿಸಬೇಕೆಂದು ನರಸಿಂಹರಾಯನು ಆಜ್ಞೆ ನೀಡಿದ್ದನ್ನು ವಿವರಿಸುತ್ತದೆ.

ತಿ.ತಿ.626.ಮಾರನೇ ವರ್ಷದ ಈ ದಾಖಲೆಯು ನವಲೂಟ್ಟು ಮಂಟಪಕ್ಕೆ ಮೆರವಣಿಗೆ ಹೊರಟದ್ದನ್ನು ವಿವರಿಸಿ,ಆಲಯ ಸೇವಾಕರ್ತರಾದ ತಿರುಪ್ಪಣಿ ಪಿಳ್ಳೈ, ಲಚ್ಚಿನಾಯಕರು,ಪ್ರಬಂಧವಾಚಕರು,ಕಂಗಾಣಿಪ್ಪಾನ್ ವಾಹನ ಹೊರುವವರು,ಅಧಿಕಾರಿ, ಪಚ್ಚಡಿಕಾರಿ, ದೀಪ ಹಿಡಿಯುವವರು, ಬಿನ್ನಹಗಾರರು, ಕಟ್ಟಿಗೆ ತರುವವರು, ಪರಾಕುಭಟರು, ನಾಟ್ಯಾಚಾರ್ಯ, ಕಾಲಹಸ್ತನರ್ತಕರು, ವಾದ್ಯಗಾರರು,ಮೇಳಗಾರರು,ಕುಂಬಾರರು, ಗಾಯಕರು,ಶಿಲ್ಪಿಗಳು,ಸಂರಕ್ಷಕರುಗಳನ್ನು ಹೆಸರಿಸುತ್ತದೆ.

ತಿ.ತಿ.336. ಇದು 1496 ರ ದಾಖಲೆಯಾಗಿದ್ದು ಶ್ರೀ ವೆಂಕಟೇಶ್ವರಸ್ವಾಮಿಗೆ ಹಾಗೂ ಅಲಮೇಲುಮಂಗೈ ತಾಯಾರಿಗೆ ಪುನುಗುಕಾಪ್ಪುವನ್ನು ಒಂದು ಬಿಟ್ಟೊಂದು ಶುಕ್ರವಾರ (ಹದಿನೈದು ದಿನಕ್ಕೆ ಒಮ್ಮೆ) ಹಚ್ಚುವ ಪುನಗುಕಾಪ್ಪುಷ್ಯೆಯನ್ನು ವಿವರಿಸುತ್ತದೆ.

ತಿ.ತಿ.271.ಕ್ರಿ.ಶ.1504 ರ ಈ ಶಾಸನವುಚಂಪಕಚುರ್ರುವಿನಲ್ಲಿನ ರಾಯರ್ ಮಂಟಪವನ್ನು ಕುರಿತು ಹೇಳುತ್ತದೆ.(ಸಂಪಂಗಿ ಪ್ರದಕ್ಷಿಣೆಯ ಸಾಳುವ ನರಸಿಂಹ ಮಂಟಪ)

## 21. ತುಳುವ ದೊರೆಗಳ ಕಾಲದಲ್ಲಿ ತಿರುಮಲೆ

ತುಳುವ ದೊರೆಗಳ ಆಳ್ವಿಕೆಯ ಕಾಲದಲ್ಲಿ ತಿರುಮಲೆಯ ಆಲಯ ರಾಜಮಾನ್ಯತೆಯನ್ನು ಪಡೆಯಿತು. ಈ ವಂಶದ ಅತಿ ಪ್ರಸಿದ್ಧ ರಾಜರು-ಶ್ರೀಕೃಷ್ಣದೇವರಾಯ ಹಾಗೂ ಅಚ್ಯುತರಾಯರು ತಿರುಮಲೆಯ ದೇವರ ವಿನಮ್ರ ಭಕ್ತರಾಗಿ ಹಲವು ಹನ್ನೊಂದು ಕಾಣಿಕೆ,ದೇಣಿಗೆಗಳನ್ನು ನೀಡಿದ್ದಾರೆ.

### ಕೃಷ್ಣರಾಯನ ಕಾಲದ ತಿರುಮಲೆ;-

ಕೃಷ್ಣದೇವರಾಯನೂ ಅವನ ಇಬ್ಬರು ಪತ್ನಿಯರು-ಚಿನ್ನಾಜಿದೇವಿ ಹಾಗೂ ತಿರುಮಲದೇವಿ-ತಿರುಮಲೆಯಲ್ಲಿನ ಸುಮಾರು ಐವತ್ತು ಶಾಸನಗಳಲ್ಲಿ ಹೆಸರಿಸಲ್ಪಟ್ಟಿದ್ದಾರೆ. ಇವು ಶಕವರ್ಷ 1434 ರಿಂದ (ಕ್ರಿ.ಶ.1513) ಶಕ 1445 ರ ವರೆಗಿನ (ಕ್ರಿ.ಶ.1524) ಕಾಲಾವಧಿಗೆ ಸೇರಿದ್ದು,ಕೃಷ್ಣದೇವರಾಯನು ತನ್ನ ಕುಲದೈವವಾಗಿದ್ದ ತಿರುಮಲೆಯ ಪ್ರಭುವಿಗೆ,ತಾನು ತಿರುಮಲೆಗೆ ಬಂದಾಗ ನೀಡಿದ ದೇಣಿಗೆಗಳನ್ನು ಗುರುತಿಸುತ್ತವೆ. ಕೃಷ್ಣದೇವರಾಯನ ಇತರೆಲ್ಲ ಶಾಸನಗಳಂತೆಯೇ ತಿರುಮಲೆಯಲ್ಲಿನ ಶಾಸನಗಳು ಕನ್ನಡ, ತೆಲುಗು, ತಮಿಳು ಗಳಲ್ಲಿದ್ದು,ದಕ್ಷಿಣ ಭಾರತದಲ್ಲಿ ಈ ಮಾತನ್ನಾಡುತ್ತಿದ್ದ ಜನರಲ್ಲಿ ಅವನಿಗಿದ್ದ ಅಧಿಕಾರಕ್ಕೆ ದ್ಯೋತಕವಾಗಿವೆ.

### ಮೊದಲ ಸಂದರ್ಶನ :-

ಕೃಷ್ಣದೇವರಾಯನು ತನ್ನ ಇಬ್ಬರು ರಾಣಿಯರನ್ನು ಜೊತೆಗೆ ಕರೆದುಕೊಂಡು, ಶಕವರ್ಷ1434 ರ (ಕ್ರಿ.ಶ.1513 ಫೆಬ್ರವರಿ 10) ಆಂಗೀರಸ ವರ್ಷದ ಫಾಲ್ಗುಣ ಮಾಸದ ಶುದ್ಧ ಪಂಚಮಿಯಂದು ತಿರುಮಲೆಗೆ ಆಗಮಿಸಿದ. ಈ ಸಂದರ್ಭದಲ್ಲಿ, ನವರತ್ನ ಖಚಿತವಾದ ಕಿರೀಟವನ್ನು ಸಮರ್ಪಿಸಿ ಕರ್ಪೂರ ದೀಪಾರತಿಗಾಗಿ 25 ಬೆಳ್ಳಿಯ ಆರತಿ ತಟ್ಟೆಗಳನ್ನು ನೀಡಿದ. ಈ ವಿಷಯವನ್ನು ಕುರಿತು ಎಂಟು ಶಾಸನಗಳಿದ್ದು ಅವುಗಳಲ್ಲಿ ಎರಡು ತೆಲುಗುನಲ್ಲೂ (2 ಹಾಗೂ ತಿ.ತಿ.582.) ಮೂರು ತಮಿಳಿನಲ್ಲೂ (84,356,696) ಎರಡು ಕನ್ನಡದಲ್ಲೂ (31 ಹಾಗೂ ತಿ.ತಿ.40) ಇದ್ದು ಆಯಾ ಲಿಪಿಯಲ್ಲಿದ್ದರೂ,ತಿ.ತಿ.550 ಕನ್ನಡದಲ್ಲಿದ್ದರೂ, ನಂದಿನಾಗರಿ ಲಿಪಿಯಲ್ಲಿದೆ. ಇದರಂತೆ ದೇವರಿಗೆ ಕ್ಷೀರ ನೈವೇದ್ಯಕ್ಕೆ ಎಂದು ಅವನ ರಾಣಿಯರು ತಲಾ ಒಂದು ಚಿನ್ನದ ಬಟ್ಟಲನ್ನು ನೀಡಿದ್ದನ್ನು ಗುರುತಿಸುವ ಶಾಸನಗಳು ಎರಡೆರಡು ಗುಂಪುಗಳಲ್ಲಿದ್ದು ಮೂರು ಕನ್ನಡದಲ್ಲಿಯೂ ತಿ.ತಿ.- 1)8,39,483 ಹಾಗೂ 9,34,484. ಮೂರು ತಮಿಳಿನಲ್ಲಿಯೂ (ತಿ.ತಿ. 85, 359, 694, ಹಾಗೂ 86, 355, 695)ಇದ್ದು ಎರಡು ತೆಲಗಿನಲ್ಲಿ (12,699 ಹಾಗೂ 11, 670) ಇದ್ದು ಮತ್ತೊಂದು ಕನ್ನಡ ಭಾಷೆಯಲ್ಲಿ-ನಂದಿನಾಗರಿ (635, 638, ಹಾಗೂ 636, 637)ಲಿಪಿಯಲ್ಲಿವೆ.

### ದ್ವಿತೀಯ ಸಂದರ್ಶನ :

ಶಕವರ್ಷ 1435 ರ ಶ್ರೀಮುಖ ಸಂವತ್ಸರದಲ್ಲಿನ ವೈಶಾಖಮಾಸದ ಬಹುಳ ದ್ವಾದಶಿಯಂದು ಮಂಗಳವಾರ (ಕ್ರಿ.ಶ 1513 ರ ಮೇ 2 ರಂದು) ಆತ ಮೊದಲ ಸಂದರ್ಶನವಾದ ಮೂರು ತಿಂಗಳಿನಲ್ಲಿ ಮತ್ತೆ ತಿರುಮಲೆಗೆ,ಪತ್ನಿಯರ ಹೊರತಾಗಿ ಆಗಮಿಸಿದ. ಈ ಬಾರಿ ಸ್ವಾಮಿಗೆ ಹಲವಾರು ಆಭರಣಗಳನ್ನು ಸಮರ್ಪಿಸಿದ್ದೇ ಅಲ್ಲದೇ,ಉತ್ಸವ ಮೂರ್ತಿಗೂ, ಶ್ರೀದೇವಿ ಭೂದೇವಿಯರಿಗೂ ಸಣ್ಣ ಕಿರೀಟಗಳನ್ನು ಸಮರ್ಪಿಸಿದ್ದು ಪುನಃ ಮೂರೂ ಭಾಷೆಗಳಲ್ಲಿ ದಾಖಲಾಗಿದೆ.(1-ತಿ.ತಿ.-ತೆಲುಗು,41-ತಿ.ತಿ.-ತಮಿಳು,95,96,ತಿ.-ಕನ್ನಡ)

**ಮೂರನೆಯ ಸಂದರ್ಶನ :**

ಶಕ ಸಂವತ್ಸರ 1435 ರ ಶ್ರೀಮುಖನಾಮ ಸಂವತ್ಸರದ ಆಷಾಢ ಮಾಸದ ಶುದ್ಧ ಏಕಾದಶಿಯಂದು ಸೋಮವಾರ (ಕ್ರಿ.ಶ.1513 ರ ಜೂನ್ 13 ರಂದು) ಕೃಷ್ಣದೇವರಾಯನು ಮೂರನೆಯಬಾರಿ ತಿರುಮಲೆಗೆ ಬಂದನು. ಚಾಂದ್ರಮಾನದ ಶ್ರಾವಣ ಮಾಸದ ಮೊದಲಿನಲ್ಲಿ ಜಾರಿಗೆ ಬರುವಂತೆ, ವೆಂಕಟೇಶ್ವರಸ್ವಾಮಿಗೆ, ನಿತ್ಯನೈವೇದ್ಯದ ವೆಚ್ಚಗಳಿಗಾಗಿಯೂ,ತಮಿಳು ತೈಮಾಸದಲ್ಲಿ ತನ್ನ ತಂದೆ ನರಸನಾಯಕ ಒಡೆಯರು ಹಾಗೂ ತಾಯಿ ನಾಗಾಜಮ್ಮನವರುಗಳ ನೆನಪಿನಲ್ಲಿ ಮಾಡುವಂತೆ ಏರ್ಪಾಡು ಮಾಡಿದ ವಸಂತಮಹೋತ್ಸವದ ವೆಚ್ಚಗಳಿಗಾಗಿಯೂ,ಐದು ಗ್ರಾಮಗಳನ್ನು ಸ್ವಾಮಿಗೆ ಧಾರಾದತ್ತವನ್ನಾಗಿಸಿದ. (459-ತಿ.ತಿ.) ಈ ಹಿಂದಿನ ಸಂದರ್ಶನ ದೊಡನೆ ಇರುವ ಸನ್ನಿಹಿತಕಾಲ ಹಾಗೂ ಇದೇ ದಿನದಲ್ಲಿ ಆತ ಕಾಳಹಸ್ತಿಗೆ ಹೋಗಿ ಬಂದನೆಂಬ ವರದಿಯ (1924 - 151 ಹಾಗೂ 162) ಆಧಾರದಿಂದಾಗಿ, ಈ ದತ್ತಿಯನ್ನು ಕೃಷ್ಣದೇವರಾಯನು ತಿರುಮಲೆಯಲ್ಲಿ ಸ್ವಾಮಿಯ ಸನ್ನಿಧಿಯಲ್ಲಿಯೇ ನೀಡಿರ ಬೇಕೆಂದು ತೋರುತ್ತದೆ.

**ನಾಲ್ಕನೆಯ ಸಂದರ್ಶನ :-**

ಪ್ರತಾಪರುದ್ರ ಗಜಪತಿಯನ್ನು ಕೊಂಡವೀಡುವರೆಗೆ ಅಟ್ಟಿಸಿಕೊಂಡು ಹೋಗಿ,ಉದಯಗಿರಿ ಕೋಟೆಯನ್ನು ಆಕ್ರಮಿಸಿದನಂತರ ತನ್ನ ರಾಜಧಾನಿಯಾದ ವಿಜಯನಗರಕ್ಕೆ ಹಿಂದಿರುಗುವಾಗ್ಗೆ (6-7-1514) ಶಕವರ್ಷ 1436 ರ ಭಾವನಾಮಸಂವತ್ಸರದ ಆಷಾಢ ಮಾಸದ ಪೌರ್ಣಮಿಯಂದು ಗುರುವಾರ ತಿರುಮಲೆಗೆ ಆಗಮಿಸಿದ. ಈ ಬಾರಿ 30,000 ವರಹಗಳನ್ನು ನೀಡಿ ತಿರುವೆಂಗಳನಾಥನಿಗೆ ಕನಕಾಭಿಷೇಕ ಮಾಡಿಸಿದ್ದೇ ಅಲ್ಲದೆ, ಹಲವಾರು ಆಭರಣಗಳನ್ನು ಅರ್ಪಿಸಿ ಸ್ವಾಮಿಯ ದೈನಂದಿನ ಪೂಜೆಗೆಂದು ಪೊತ್ತಪಿನಾಟಿ ಸೀಮೆಯ ತಾಳ್ಳಪಾಕ ಗ್ರಾಮವನ್ನು ದಾನ ನೀಡಿದ. ನಿತ್ಯ ನೈವೇದ್ಯದ ನಂತರ ದಾನಿಯ ಹಕ್ಕಿನ ದೈನಂದಿನ ಪ್ರಸಾದದಒಂದು ಭಾಗವನ್ನು ರಂಗದೀಕ್ಷಿತ, ಶಿವದೀಕ್ಷಿತ ಹಾಗೂ ತಿರುಪ್ಪಣಿ ಪಿಳ್ಳೆಯವರಿಗೂ ಮಿಕ್ಕದ್ದನ್ನು ಸತ್ರದಲ್ಲಿ ಬ್ರಾಹ್ಮಣ ಭೋಜನಕ್ಕಾಗಿ ತಿರುಪ್ಪಣಿಪಿಳ್ಳೈಗೂ ಕೊಡತಕ್ಕದೆಂದು ಕಟ್ಟಳೆಮಾಡಿದ.(ತಿ.ತಿ.-201,254,256)

ಅವನ ಜೈತಯಾತ್ರೆಯಲ್ಲಿ ಅವನೊಂದಿಗಿದ್ದ ಇಬ್ಬರು ರಾಣಿಯರಲ್ಲಿ ಚಿನ್ನಾದೇವಿಯು ಸ್ವಾಮಿಗೆ ಒಂದು ಪದಕವನ್ನೂ,ಒಂದು ಕಂಠಮಾಲೆಯನ್ನೂ ಅರ್ಪಿಸಿ,ತೊಂಡಮಂಡಲದ ಮುಡಿಯೂರು ಗ್ರಾಮವನ್ನು ಸ್ವಾಮಿಯ ನಿತ್ಯ ನೈವೇದ್ಯಕ್ಕಾಗಿ ದಾನ ನೀಡಿದಳು.ಆಯ ದಾಯ ಭಾಗದ ಪ್ರಸಾದವನ್ನು ತಿರುಪ್ಪಣಿ ಪಿಳ್ಳೆಗೆ ಒಂದು ಭಾಗ ಸ್ವಂತಕ್ಕಾಗಿಯೂ, ಮಿಕ್ಕದ್ದು ಇದೇ ಸತ್ರದಲ್ಲಿನ ಬ್ರಾಹ್ಮಣ ಭೋಜನ ಕ್ಕಾಗಿಯೂ ನೀಡತಕ್ಕದೆಂದು ಕಟ್ಟುಮಾಡಿದಳು.(ತಿ.ತಿ.202,257 ಹಾಗೂ 262) ತಿರುಮಲದೇವಿಯೂ ಒಂದು ಪದಕವನ್ನು ಅರ್ಪಿಸಿ ಇದೇ ರೀತಿಯ ನೈವೇದ್ಯ ವಿತರಣೆಗಾಗಿ ಶೋಲಿಂಗವರ ಪಟ್ಟುವಿನ ಪಿರಾಟಿ ಕುಳತ್ತೂರ್ ಗ್ರಾಮವನ್ನು ನೀಡಿದಳು. (ತಿ.ತಿ.- 203,255,261) ಇವರೊಡನೆಯೇ ಬಂದಿರಬಹುದಾದ ಕೃಷ್ಣರಾಯನ ಪುರೋಹಿತ ಯಜ್ಞನಾರಾಯಣ ದೀಕ್ಷಿತನ ಮಗ ರಂಗ ದೀಕ್ಷಿತುಲು ನಾಲ್ಕೇ ದಿನಗಳ ನಂತರದಲ್ಲಿ ಕ್ರಿ.ಶ.1514 ರ ಜುಲೈ 10 ರಂದು ಹಲವು ಸೇವೆಗಳಿಗೆಂದು 10,000 ನರ್ಪಣಗಳನ್ನು ನೀಡಿದ್ದಾನೆ.(ತಿ.ತಿ.-192,254) ರಾಜನ ಹಿಂದೆಯೇ ಇವನ ತಂದೆಯೂ ಬಂದು ಪ್ರಸಾದವನ್ನು ಸ್ವೀಕರಿಸಿರಬೇಕು.

ನಾಲ್ಕು ಭಾಷೆಗಳಲ್ಲಿನ-ತೆಲುಗು,ಕನ್ನಡ,ತಮಿಳು,ಸಂಸ್ಕೃತ-ನಾಲ್ಕು ಶಾಸನಗಳು (579, 580, 619, 620 ತಿ.ತಿ.) ಕ್ರಿ.ಶ,1515 ಅಕ್ಟೋಬರ್ 25 ರಂದು ಶಕವರ್ಷ 1437 ರ ಯುವ ಸಂವತ್ಸರ ಕಾರ್ತೀಕ ಮಾಸದ ಬಹುಳ ತೃತೀಯೆಯಗುರುವಾರ ದಂದು ವಿಜಯನಗರದಲ್ಲಿ ನಿಂದ ಕೃಷ್ಣರಾಯನು ತಿರುವೆಂಗಳ ನಾಥನಿಗೆ ನೀಡಿದ ಮಕರ ತೋರಣ ಅಥವಾ ನವರತ್ನಪ್ರಭಾವಳಿಯ ಬಗ್ಗೆ ನಮಗೆ ತಿಳಿಸುತ್ತವೆ.

**ಐದನೆಯ ಸಂದರ್ಶನ :-**

ಕೃಷ್ಣದೇವರಾಯನು ಐದನೆಯ ಬಾರಿಗೆ ಶಕವರ್ಷ 1438 ರ ಧಾತುನಾಮ ಸಂವತ್ಸರದ ಪುಷ್ಯಮಾಸದ ದಶಮಿಯ ಶುಕ್ರವಾರದಂದು (2-1-1517) ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ಸಂದರ್ಶಿಸಿದ. (ತಿ.ತಿ.-578) ಇದು ನಡೆದದ್ದು ಗಜಪತಿಯೊಡನೆ ಅವನ ಯುದ್ಧಮುಗಿದಾಗ. ಈ ಶಾಸನವು ಆತನು ಅಮರೇಶ್ವರದಲ್ಲಿ ತುಲಾಪುರುಷ ಮಹಾದಾನ ಮಾಡಿ ವಿಜಯನಗರಕ್ಕೆ ಹಿಂದಿರುಗುವವರೆಗೆ ಅವನ ವಿಜಯಯಾತ್ರೆಯಲ್ಲಿ ನಡೆದ ಘಟನೆಗಳನ್ನು ವಿವರಿಸಿ,ರಾಜ್ಯಭಾರ ಮಾಡುತ್ತಿರುವಾಗಲೇ ಆತನು ಕಳಿಂಗದೇಶದ ಮೇಲೆ ದಂಡೆತ್ತಿ ಹೋಗಿ ಬೆಜವಾಡ, ಕೊಂಡಪಲ್ಲಿ ದುರ್ಗಗಳನ್ನು ಹಿಡಿದು ಕೋಟೆಯಲ್ಲಿದ್ದ ಪ್ರಹಾರರಾಜ,ಶಿರಶ್ಚಂದ್ರ ಮಹಾಪಾತ್ರ,ಬೋಧಜನ ಮಹಾಪಾತ್ರ, ಬಿಜಿಲಿಖಾನ್, ಮತ್ತಿತರರನ್ನು ಸೆರೆಹಿಡಿದು ಅವರಿಗೆ ಅಭಯನೀಡಿ, ಅನಂತಗಿರಿ, ಉರ್ಲಕೊಂಡ, ಉಂಡ್ರಕೊಂಡ ಅರುವಪಲ್ಲಿ, ಜಲ್ಲಿಪಲ್ಲಿ, ಕೊಂಡಿಕೊಂಡ, ಕಪ್ಪುಲವಾಯಿ, ನಲ್ಲಗೊಂಡ, ಕಂಭಮೆಟ್ಟು, ಕನಕಗಿರಿ, ಶಂಕರಗಿರಿ ಮೊದಲಾದ ಕೋಟೆಗಳನ್ನು ಒಂದೇ ಧಾಳಿಯಲ್ಲಿ ಹಿಡಿದು ಸಿಂಹಾದ್ರಿ ಪೊತ್ನೂರುನಲ್ಲಿ ವಿಜಯಸ್ತಂಭವನ್ನು ಮಾಡಿಸಿ, ರಾಜಮಹೇಂದ್ರವರಕ್ಕೆ ಆಗಮಿಸಿ, ಅಲ್ಲಿ ತನ್ನ ರಾಣಿಯರಾದ ಚಿನ್ನಾದೇವಿ,ತಿರುಮಲದೇವಿಯರಿಂದ ಮಹಾದಾನಗಳನ್ನು ಮಾಡಿಸಿ, ನಂತರ ವಿಜಯನಗರಕ್ಕೆ ಹಿಂದಿರುಗಿದ. ಮೇಲೆ ಹೇಳಿದ ದಿನದಂದು ತಿರುಮಲೆಯಲ್ಲಿದ್ದು ಸ್ವಾಮಿಗೆ ಕಂಠಮಾಲೆಯನ್ನೂ ಪದಕವನ್ನೂ ಸಮರ್ಪಿಸಿದ. ಗರ್ಭಗುಡಿಯ ಮೇಲಿನ ವಿಮಾನವನ್ನು ಚಿನ್ನದ ಗಿಲೀಟು ಮಾಡಲು 30,000 ವರಹಗಳನ್ನು ನೀಡಿ,ಜೊತೆಗೇ ಪ್ರತಿವಾರವೂ ನಡೆಯತಕ್ಕ ಪುಳಿಕಾಪ್ಪು ಸೇವೆಗೆಂದು ತಿರುಪತಿಯ ಗೊಡುಗರನಾಡುವಿನ (ಕುಡುವರನಾಡು) ಸಾವಿರ ವರಹದ ನಿತ್ಯಮುಲವೀಸನ್ನದು (ಸುಂಕವನ್ನೂ), ತಳವಾರಸುಂಕ, ಮಾದಾರಿಸುಂಕದ ಐದುನೂರುವರಹಗಳನ್ನು ಬೆಳಗಿನ ಪೂಜೆಗೆಂದೂ ನೀಡಿ ಹಿಂದಿರುಗಿದನು.

ತಿರುಮಲೆಗೆ ನಂತರದಲ್ಲಿ ಕೃಷ್ಣದೇವರಾಯನ ಕಾಣಿಕೆಯನ್ನು ಗುರುತಿಸುವ ದಾಖಲೆಯಂದರೆ (ತಿ.ತಿ.-576) ಶಕವರ್ಷ 1440ರ ಬಹುಧಾನ್ಯ ಸಂವತ್ಸರದ ಕನ್ಯಾಮಾಸದ ಶುದ್ಧ ಪಂಚಮಿಯಂದು ಸ್ವಾತಿ ನಕ್ಷತ್ರ ವಿದ್ದ ಗುರುವಾರ (9-9-1518) ಲಿಖಿತವಾಗಿದ್ದು, ರಾಜಮಹೇಂದ್ರವರದಿಂದ ವಿಜಯನಗರಕ್ಕೆ ಹಿಂದಿರುಗಿದ ಮೇಲೆ ಆತ ತಿರುವೆಂಗಳನಾಥನ ಆಲಯದ ಗರ್ಭಗುಡಿಯ ಮೇಲಿನ ದಿವ್ಯ ವಿಮಾನಕ್ಕೆ ಚಿನ್ನದ ಮುಲಾಮು ಹಾಕಿಸಿದನೆಂದು ತಿಳಿಸುತ್ತದೆ. ಈ ಶಾಸನವು ಗಜಪತಿಯ ವಿರುದ್ಧವಾದ ಆತನ ದಂಡಯಾತ್ರೆಯ ವಿವರಗಳನ್ನು ಈ ಹಿಂದೆ ಗಮನಿಸಿದ ತಿ.ತಿ.578 ಶಾಸನದಂತೆಯೇ ನೀಡುತ್ತದೆ. ಆತನ ಈ ಹಿಂದಿನ ಶಾಸನದ ಸಂದರ್ಶನದಲ್ಲಿ ಆತ ವಿಮಾನದ ಚಿನ್ನದ ಗಿಲೀಟಿಗಾಗಿ 30,000 ವರಹಗಳನ್ನು ನೀಡಿದ್ದು ಈ ಕೆಲಸ 9-9-1518ರಲ್ಲಿ ಪೂರ್ತಿ ಆಯಿತು.ತಿ.ತಿ.576 ತಮಿಳಿನಲ್ಲಿದ್ದು ಇದರ ಸಾರಾಂಶವು ತಿ.ತಿ.577ಯಲ್ಲಿ ತೆಲುಗಿನಲ್ಲಿದ್ದು ಅದು ಚಿನ್ನದ ಮುಲಾಮನ್ನು ವಿವರಿಸುತ್ತದೆ.

**ಆರನೆಯ ಸಂದರ್ಶನ :-**

ವಿಮಾನಕ್ಕೆ ಚಿನ್ನದ ಮುಲಾಮು ಹಚ್ಚುವ ಕೆಲಸವಾದ ಮೇಲೆ ಐದು ವಾರಗಳಲ್ಲಿಯೇ ಆತ ತನ್ನ ಹಿರಿಯ ಪತ್ನಿ ತಿರುಮಲದೇವಿಯೊಡನೆ ಶಕವರ್ಷ 1440 ರ ಬಹುಧಾನ್ಯ ಸಂವತ್ಸರದಲ್ಲಿ (1518-ಅಕ್ಟೋಬರ್ 16) ತಿರುವೆಂಗಳನಾಥನನ್ನು ಸಂದರ್ಶಿಸಿದನೆಂದು ಬಳ್ಳಾರಿಯ ಕಮಲಾಪುರದ 697ನೆ ಶಾಸನ ತಿಳಿಸುತ್ತದೆ. ಇದರಂತೆ ಆತ ತನಗೆ ಪುತ್ರ ಸಂತಾನವಾದ ವರ್ಷದಲ್ಲೇ ಆ ಪುತ್ರನ ಹೆಸರಿನಲ್ಲಿ (ತಿರುಮಲರಾಯ ಮಹಾರಾಯ) ಹಲವು ಗ್ರಾಮಗಳನ್ನು ದೇವರಿಗೆ ಸಮರ್ಪಿಸಿದ. ತನಗೆ ಪುತ್ರಸಂತಾನವಾದದ್ದು ಭಗವತ್ಕೃಪೆಯೆಂದು ಭಾವಿಸಿದ ಆತ ತನ್ನ ಮಗುವಿನ ಆಯುರಾರೋಗ್ಯಗಳಿಗಾಗಿ ಭಗವಂತನಲ್ಲಿ ಪ್ರಾರ್ಥಿಸಲು ಹೀಗೆ ತುರ್ತಾಗಿ ತಿರುಮಲೆಗೆ ಬಂದಿರಬೇಕು.(ಆದರೆ ಅವನ ಈ ಸಂತೋಷ, ಆರೇ ವರ್ಷಗಳಲ್ಲಿ ತಿರುಮಲರಾಯನು ಪರಮಪದವೈದಿದಾಗ ಚೂರಾಯಿತು.)

**ಏಳನೆಯ ಸಂದರ್ಶನ :-**

ಏಳನೆಯ ಹಾಗೂ ಕಡೆಯ ಬಾರಿಗೆ ಕೃಷ್ಣದೇವರಾಯನು ಶಕವರ್ಷ 1442 ರ ವಿಕ್ರಮ ಸಂವತ್ಸರ ಪಾಲ್ಗುಣ ಮಾಸದ ಶುಕ್ಲ ಏಕಾದಶಿಯಂದು ಭಾನುವಾರ (17-2-1521) ದಂದು ತಿರುವೆಂಗಳನಾಥನನ್ನು ಸಂದರ್ಶಿಸಿ ಪೂಜಿಸಿದ. ಸ್ವಾಮಿಗೆ ಪೀತಾಂಬರ ವನ್ನೂ, ನವರತ್ನಗಳನ್ನೂ,ಮುತ್ತು,ರತ್ನ, ಹವಳ,ನೀಲ,ಪಚ್ಚೆಗಳಿಂದ ಕೂಡಿದ ಕುಲಾವಿಯನ್ನು ಎರಡು ವಜ್ರ ಖಚಿತ ಚಾಮರಗಳು, ಒಂದು ಪದಕ ಹಾಗೂ 10,000 ವರಹಗಳನ್ನು ನೀಡಿದ. ಆತನ ರಾಣಿ ತಿರುಮಲದೇವಿಯು ಒಂದು ನವರತ್ನ ಪದಕವನ್ನು ನೀಡಿದಳು. ಈ ಕಾಣಿಕೆಗಳು ತಿ.ತಿ.578 ರಲ್ಲೂ ವಿಮಾನದ ಗಿಲೀಟಿಗಾಗಿ 30,000 ವರಹಗಳ ದಾನದ ನಂತರದ ಕಾಣಿಕೆಯಾಗಿ ದಾಖಲಾಗಿವೆ. ಇದೇ ದಿನದಲ್ಲಿ ಈ ದಾನಗಳನ್ನು ಗುರುತಿಸುವ ಇನ್ನೂ ನಾಲ್ಕು ಶಾಸನಗಳಿವೆ. ತಿ.ತಿ.301 ಹಾಗೂ 594 ಗಳು ಕನ್ನಡದಲ್ಲಿಯೂ, ತಿ.ತಿ.302 ತಮಿಳಿನಲ್ಲೂ,ತಿ.ತಿ.586 ತೆಲುಗು ಹಾಗೂ ನಂದಿನಾಗಿರಿ ಲಿಪಿಯಲ್ಲಿಯೂ,ಇವೆಯಾದರೂ ಇವಾವುದೂ 578 ರಂತೆ ಗಜಪತಿಯ ಮೇಲಿನ ದಂಡಯಾತ್ರೆಯ ವಿವರಗಳನ್ನು ನೀಡುವುದಿಲ್ಲ.

ಕೃಷ್ಣರಾಯನು ತಿರುಮಲೆಗೆ ನೀಡಿದ ಕಾಣಿಕೆಗಳ ಕೊನೆಯ ಉಲ್ಲೇಖವನ್ನು ತಿ.ತಿ.246 ಯಲ್ಲಿ (1524 ಜನವರಿ 12 ರಂದು) ಶಕವರ್ಷ 1445 ರ ಸ್ವಭಾನು ಸಂವತ್ಸರದ ಮಕರಮಾಸದ ಶುಕ್ಲ ಸಪ್ತಮಿಯಂದು ಮಂಗಳವಾರ ಅಶ್ವಿನಿ ನಕ್ಷತ್ರವಿದ್ದ ದಿನದಲ್ಲಿ ಕಾಣ ಬಹುದು. ಈ ಶಾಸನವು ತಿರುಮಲೆಯ ಹಾಗೂ ತಿರುಪತಿಯಲ್ಲಿನ ಸ್ಥಾನತ್ತಾರರ ಎರಡು ಮನೆಗಳು ಹಾಗೂ ಮನೆ ನಿವೇಶನಗಳನ್ನು ಮಾಧ್ವಯತಿಗಳಾದ ವ್ಯಾಸತೀರ್ಥ ಶ್ರೀಪಾದ ಒಡೆಯರಿಗೆ ವರ್ಗಾಯಿಸಿದ್ದನ್ನು ತಿಳಿಸುತ್ತದೆ. ಇದರ ಜೊತೆಗೇ ಪುರಟ್ಟಾಸಿ ತಿರುನಾಳ್ ಉತ್ಸವದ ಪ್ರಸಾದವನ್ನು ನೀಡಲೆಂದು ಉಳ್ ಮಂಡಲದ ಕಡೈಕುಟ್ಟನ್ ಪಾಡಿ ಗ್ರಾಮಾದಾಯದ ಅರ್ಧಭಾಗ ಹಾಗೂ ತಾಳ್ಳಪಾಕ, ಪರಿಟಂ, ದಾರತ್ತೂರ್,ಮುಡಿಯೂರ್, ಚತ್ರವಾಡಿ ಮತ್ತು ತುರ್ರೈಯೂರು (ಎಲ್ಲವೂ ಪುರಮಂಡಲ ದಲ್ಲಿರುವವು) ಗ್ರಾಮಗಳ ಪೂರ್ಣ ಆದಾಯವನ್ನು ಕೃಷ್ಣರಾಯನು ನೀಡಿದನು. ಈ ಶಾಸನದಿಂದ ತಿಳಿದು ಬರುವ ಅಂಶವೆಂದರೆ ದಾನಿಯ ಭಾಗಕ್ಕೆ ಬರುವ ಪ್ರಸಾದ ಭಾಗದಿಂದ ಬ್ರಾಹ್ಮಣ ಭೋಜನವಾಗುವ ಸತ್ರವೊಂದು ನಡೆಯುತ್ತಿದ್ದಿತೆಂದೂ,ಕೃಷ್ಣದೇವರಾಯನು ಈ ಪ್ರಸಾದದ ಭಾಗವನ್ನು ವ್ಯಾಸತೀರ್ಥರಿಂದ,ಅವರಿಗೆ ನೀಡಲಾದ ಈ ನಿವೇಶನದಲ್ಲಿ ನಿರ್ಮಿಸಲಾಗುವ ಮಠದಲ್ಲಿ ವಿತರಣೆಯಾಗಬೇಕೆಂದು ಆಜ್ಞೆ ಮಾಡಿದ. ಈಗ ವ್ಯಾಸತೀರ್ಥರಿಗೆ ನೀಡಿದ ನಿವೇಶನವು ಮೊದಲಿಗೆ ಆಲಯದ ಅರ್ಚಕನಾಗಿದ್ದ ನಂಬಿ ಸಿರ್ರಪ್ಪಯ್ಯನಿಗೆ ಸೇರಿದ್ದಿತು. ಆತ ದೇವಾಲಯದ ಹಲವು ಆಭರಣಗಳ ದುರುಪಯೋಗ ಮಾಡಿದ್ದರಿಂದ ಸಾಳುವ ನರಸಿಂಹ-ನರಸಿಂಹರಾಯ ಮಹಾರಾಯರು- ಆತನ ಆಸ್ತಿಯನ್ನು ಮುಟ್ಟುಗೋಲು ಮಾಡಿಸಿ ಆಲಯಕ್ಕೆ ಸೇರಿಸಿದ್ದನು. ಮೇಲೆ ಹೇಳಿದ ಗ್ರಾಮಗಳಲ್ಲಿ ದಾರತ್ತೂರು, ಚತ್ರವಾಡಿ, ತುರ್ರೈಯೂರುಗಳನ್ನು 13-6-1513 ರಲ್ಲಿ ಕೃಷ್ಣದೇವರಾಯನು ದಾನ ನೀಡಿದವುಗಳಾದರೆ (ತಿ.ತಿ.330,459) ತಾಳ್ಳಪಾಕ 6-7-1514 (ತಿ.ತಿ.201,254,256) ರಲ್ಲಿಯೂ, ಮುಡಿಯೂರು ನಂತರದಲ್ಲಿ ಚಿನ್ನಾಜಿ ದೇವಿಯಿಂದಲೂ (ತಿ.ತಿ.202,257,262) ಪರಿಟಂ-(ಪ್ರಾಯಶಃ ಪಿರಾಟಿಕೊಳತೂರು) ತಿರುಮಲದೇವಿಯಿಂದಲೂ,(ತಿ.ತಿ.203,255,261) ನೀಡಿದವಾಗಿವೆ. ಕಡೈಕುಟ್ಟನ್ ಪಡಿಯು ಬೇರಾವ ಶಾಸನದಲ್ಲೂ ಕಂಡುಬರದು.ಕರಕನಂಬಾಡು ಮಾತ್ರ ತಿ.ತಿ.330 ಹಾಗೂ 459 ರಲ್ಲಿ ಕಂಡುಬಂದರೂ ಈ ಪಟ್ಟಿಯಿರುವ ತಿ.ತಿ.246 ಯಲ್ಲಿ ಕಂಡುಬರದು. ಪ್ರಾಯಶಃ ತಿ.ತಿ.246 ಯಲ್ಲಿ ಕಂಡುಬರುವ ಕಡೈಕುಟ್ಟನ್ ಪಡಿಗೇ ಇವೆಲ್ಲೀ ಬೇರೆ ಬೇರೆ ಹೆಸರುಗಳಾಗಿರಬೇಕು.

**ಅಚ್ಯುತರಾಯ ಹಾಗೂ ತಿರುಮಲೆ**

ಕೃಷ್ಣದೇವರಾಯನ ಮಲ ಸಹೋದರನೂ,ಉತ್ತರಾಧಿಕಾರಿಯೂ ಆದ ಅಚ್ಯುತರಾಯನು ಹೆಚ್ಚಿನ ಶಾಸನಗಳಲ್ಲಿ ಹೆಸರಿಸಲ್ಪಟ್ಟಿದ್ದಾನೆ. ಇವನ ಅತಿ ಪ್ರಾಚೀನ ಶಾಸನವೆಂದರೆ ಜಿ.ಟಿ.318 ಆಗಿದ್ದು ಇಲ್ಲಿ ರಘುನಾಥ ಸ್ವಾಮಿಗೆ ಎಂದರೆ ತಿರುಪತಿಯ

ಶ್ರೀರಾಮ ಅಥವಾ ಕೊದಂಡರಾಮಸ್ವಾಮಿಗೆ,ಅಚ್ಯುತರಾಯನ ಮೇಲ್ಮೆಗಾಗಿ ಕುಮಾರ ರಾಮಾನುಜಯ್ಯಂಗಾರ್ಯನು ರಥವನ್ನು ನಿರ್ಮಿಸಿದುದನ್ನು ಹೇಳಲಾಗಿದೆ.ಇದರ ಕಾಲ (1530 ರ ಜನವರಿ 14 ರ ಶುಕ್ರವಾರ) ಶಕವರ್ಷ 1451 ರ ವಿರೋಧಿ ನಾಮ ಸಂವತ್ಸರದ ತೈ ಮಾಸದ 18 ನೇ ದಿನ. ಆದರೆ ಅಚ್ಯುತರಾಯನು ಈ ಹಿಂದೆಯೆ ಶ್ರೀ ವೆಂಕಟೇಶ್ವರಸ್ವಾಮಿಯ ಶಂಖೋದಕದಿಂದ ಸ್ನಾತಗಾಗಿ ತಿರುಮಲೆಯಲ್ಲಿ ಪಟ್ಟಾಭಿಷಿಕ್ತನಾದಾಗಿನಿಂದಲೇ ರಾಜ್ಯವಾಳಲಾರಂಭಿಸಿದ್ದ.

**ಮೊದಲ ಸಂದರ್ಶನ:-** ಅಚ್ಯುತರಾಯನು ತಿರುಮಲೆಯಲ್ಲೂ, ತಿರುಪತಿಯಲ್ಲೂ ಹಲವಾರು ರೀತಿಯ ಬೆಲೆಬಾಳುವ ಕಾಣಿಕೆ ದೇಣಿಗೆಗಳನ್ನು ನೀಡಿದ್ದರೂ ಕೃಷ್ಣದೇವರಾಯನಂತೆ ಪದೇ ಪದೇ ತಿರುಮಲೆಗೆ ಬಂದು ಸ್ವಾಮಿಯನ್ನು ಸೇವಿಸಿದವನಲ್ಲ. ಸ್ಪಷ್ಟವಾಗಿ ಕಂಡುಬರುವ ಒಂದು ಭೇಟಿಯೆಂದರೆ (1533 ರ ಜನವರಿ 31 ರಂದು) ಶಕವರ್ಷ 1454 ರ ನಂದನ ಸಂವತ್ಸರದ ಕುಂಭ ಮಾಸದ್ದು. ಆತ ತಿರುವೆಂಕಟ ಮುಡೈಯಾನನ ದರ್ಶನಕ್ಕೆ ಈ ಬಾರಿ ತನ್ನ ಪತ್ನಿ ವರದಾಜಿ ಅಮ್ಮ ಹಾಗೂ ಮಗ ಕುಮಾರ ವೆಂಕಟಾದ್ರಿ ಅವರೊಡನೆ ಬಂದಿದ್ದ. ಕಪಿಲ ಪಶು (ಕಪಿಲಧೇನು) ಸ್ವರ್ಣವರ್ಷ (ಸ್ವರ್ಣಮೇರು ಅಥವಾ ಕಾಂಚನಮೇರು ಅಥವಾ ಮಹಾಮೇರು) ದಾನಗಳನ್ನು ಮಾಡಿ, ಶ್ರೀ ವೆಂಕಟೇಶ್ವರಸ್ವಾಮಿಗೆ,ಮುತ್ತು,ರತ್ನ,ವಜ್ರ,ವೈಢೂರ್ಯ ಖಚಿತವಾದ ನಿಲುವಂಗಿಯನ್ನು ಅರ್ಪಿಸಿ, ನಾಲ್ಕು ಪೊನ್ ವಳೈಯಲ್, (ಚಿನ್ನದ ಬಾಹುವಲಯ) ವಜ್ರಖಚಿತವಾದ ಜೋಡಿ ಉಚ್ಚಿಪ್ಪುಗಳನ್ನೂ,ಕಿರೀಟದ ಕೊನೆಗೆ ವಜ್ರಖಚಿತ ಕೂಟವನ್ನೂ , ವಿವಿಧ ಆಕಾರದ ಚಿನ್ನದ ಮಣಿಗಳ ನೀಳವಾದ ಹಾರವನ್ನೂ ಸಮರ್ಪಿಸಿದ. ಈ ಬಾರಿ ಅರ್ಚಕರು ಶ್ರೀನಿವಾಸ ಸಹಸ್ರನಾಮವನ್ನು ಹೇಳುತ್ತಿರಲು ತಾನೇ ಸ್ವಾಮಿಗೆ ಅರ್ಚನೆಯನ್ನು ಮಾಡಿದ. (ತಿ.ತಿ.-453) 1533 ರ ಜನವರಿ 31 ರಲ್ಲಿನ ಅಚ್ಯುತರಾಯನು ಈ ಸ್ವಾಮಿ ಸಂದರ್ಶನವೂ,ಆತ ತಿರುವಾಂಕೂರಿನ ಮೇಲೆ ಧಾಳಿಮಾಡಿ ಅಲ್ಲಿನ ತಿರುವಾಡಿಯಿಂದ ಕಪ್ಪಗಾಣಿಕೆ ವಸೂಲು ಮಾಡಿ,ತಂಬುಚ್ಚಿ ನಾಯಕ ಸಾಳುವ ನಾಯಕರನ್ನು ಅಧೀನಪಡಿಸಿಕೊಂಡು,ಪಾಂಡ್ಯರಾಜ ಕುವರಿಯನ್ನು ಮದುವೆಯಾಗಿ, ತಾಮ್ರಪರ್ಣಿ ನದಿಯ ದಡದಮೇಲೆ ವಿಜಯ ಸ್ತಂಭವನ್ನು ನಿಲ್ಲಿಸಿದನಂತರ, ತನ್ನ ರಾಣಿ ವರದಾಂಬಿಕೆ ಮತ್ತು ಮಗ ಚಿಕ್ಕ ವೆಂಕಟಾದ್ರಿಯವರೊಡನೆ ಶಕವರ್ಷ 1455 ನಂದನ ಸಂವತ್ಸರದಲ್ಲಿ (14-7-1532) ಕಂಚಿಯ ಶ್ರೀಹರಿಯ ಸನ್ನಿಧಿಯಲ್ಲಿ ತನ್ನ ವಿಜಯದ ಗುರುತಿಗೆ ಮಾಡಿದ ಮುಕ್ತತುಲಾಭಾರ ಸೇವೆಯ ಒಂದು ವರ್ಷದ ನಂತರದ್ದು. (ಮ.ಶಾವ-1924. ಪ್ಯಾರ - 45 ಹಾಗೂ 1924ಏ - 178.)

**ಎರಡನೆಯ ಸಂದರ್ಶನ:** ಮನ್ಮಥ ನಾಮ ಸಂವತ್ಸರದ ಶಕ 1457 ರ (1535 ರ ಡಿಸೆಂಬರ್ 26) ಎರಡು ದಾಖಲೆಗಳ ಮೂಲಕ (ತಿ.ತಿ.544,546) ಅಚ್ಯುತರಾಯನು ವೆಂಕಟೇಶ್ವರಸ್ವಾಮಿಯನ್ನು ಎರಡನೆಯ ಬಾರಿ ದರ್ಶಿಸಿದ್ದನ್ನು ತಿಳಿಯಬಹುದು ಈ ಬಾರಿ ಆತ ಎರಡು ಹೊಸ ಉತ್ಸವಗಳನ್ನು ಏರ್ಪಡಿಸಿದ. ತಿರುವೆಂಕಟ ಮುಡೈಯಾನ್ ಹಾಗೂ ಅಲಮೇಲುಮಂಗೈ ನಾಚ್ಚಿಯಾರುಗಳಿಗೆ ವರ್ಷದಲ್ಲಿ ಐದು ದಿನ ನಡೆಸುವ ಲಕ್ಷ್ಮೀದೇವಿ ಮಹೋತ್ಸವ ಹಾಗೂ ವರ್ಷದಲ್ಲಿ ಪುನರ್ವಸು ನಕ್ಷತ್ರ ವಿರುವ ಹದಿಮೂರು ದಿನಗಳಲ್ಲಿ ರಘುನಾಥ (ಶ್ರೀರಾಮ) ಸೀತಾದೇವಿ ಹಾಗೂ ಇಳೆಯ ಪೆರುಮಾಳ್ (ಲಕ್ಷ್ಮಣ) ಗಳಿಗೆಂದು ಪುನರ್ವಸು ತಿರುನಾಳ್‌ಉತ್ಸವದ ಏರ್ಪಾಡು ಮಾಡಿದನು. ಈ ಎರಡೂ ಉತ್ಸವಗಳಿಗಾಗಿ ಕೊಂಡವೀಡು ಸೀಮೆಯಲ್ಲಿನ ಎರಡು ಗ್ರಾಮಗಳ 300 ಹಾಗೂ 60 ರೇಖೈಪೊನ್‌ಗಳ ಉತ್ತರಾಯವನ್ನು ಆಲಯಕ್ಕೆ ನೀಡಬೇಕೆಂದೂ,ಶ್ರೀ ಭಂಡಾರದಿಂದ ಎಲ್ಲ ವಸ್ತುಗಳನ್ನೂ ನೀಡಬೇಕೆಂದು ಏರ್ಪಡಿಸಿದ.

**ಮೂರನೆಯ ಸಂದರ್ಶನ:** ಶಕ 1448 ನೇ ದುರ್ಮುಖಿ ವರ್ಷದಲ್ಲಿ ಅಚ್ಯುತರಾಯನು ಶ್ರೀ ವೆಂಕಟೇಶ್ವರಸ್ವಾಮಿ ಆಲಯಕ್ಕೆ ಬಂದಿರಬೇಕು ಎಂಬುದು ಅವನ ಹಲವು ಅಧಿಕಾರಿಗಳು-ಬಚ್ಚರಸಯ್ಯ, ರಾಮಭಟ್ಲು,ಅದೈಯಪ್ಪಂ ವಿಶ್ವನಾಥನಾಯಕ,ಸಲಕರಾಜ ಸಿಂಗರಾಜ,ಇಮ್ಮಡಿಎಲ್ಲಪ್ಪಯ್ಯ ಹಾಗೂ ಕೃಷ್ಣಪ್ಪನಾಯಕ-ಮೊದಲಾದವರು ತಮ್ಮಗಳಲ್ಲಿನ ಪ್ರತಿಯೊಬ್ಬರ ಹೆಸರಿನಲ್ಲೂ ವರ್ಷಕ್ಕೆ

ಒಮ್ಮೆ300 ಅಪ್ಪಪಡಿಗಳನ್ನು ದೇವರಿಗೆ ನೈವೇದ್ಯ ಮಾಡಬೇಕೆಂದು ಪ್ರತಿಯೊಬ್ಬರೂ 15000 ನರ್ಪಣಗಳನ್ನು ಶ್ರೀ ಭಂಡಾರಕ್ಕೆ ನೀಡಿದರು ಎಂಬುದರಿಂದ ನಿರ್ಧಾರವಾಗುತ್ತದೆ. (ಕ್ರಿ.ಶ.12-1-1537) ತಿ.ತಿ.396 ಶಾಸನವು ಹೆಸರು ಲುಪ್ತವಾದ ಒಬ್ಬ ಅಧಿ ಕಾರಿಯು, ಅಚ್ಯುತರಾಯನ ಅಪ್ಪಣೆಯಂತೆ ತಿರುವೆಂಕಟ ಮುಡೈಯಾನನಿಗೆ ತಿರುಮಲೆಯಲ್ಲಿ ವರ್ಷದಲ್ಲಿ ನಡೆಯುವ ಎಂಟು ತಿರುಕ್ಕೊಡಿ ತಿರುನಾಳುಗಳ ಏಳನೇ ದಿನಗಳಲ್ಲಿ ನೈವೇದ್ಯಕ್ಕಾಗಿ ಮಲ್ಲಪುರಂ ಗ್ರಾಮವನ್ನು ದತ್ತಿ ಹಾಕಿ ಕೊಟ್ಟಿದ್ದನ್ನೂ,ದಾನಿಯ ಭಾಗದ ಪ್ರಸಾದದ ಕಾಲಸೋಲವನ್ನು ಒಬ್ಬಾನೊಬ್ಬ ಅಪ್ಪಯ್ಯನಿಗೆ ನೀಡಬೇಕೆಂದೂ ಕಟ್ಟುಮಾಡಿದ್ದನ್ನು ದಾಖಲಿಸುತ್ತದೆ.

ಶಕವರ್ಷ 1454ರ ನಂದನ ಸಂವತ್ಸರದಲ್ಲಿ ತಾನು ತಿರುಮಲೆಯನ್ನು ಮೊದಲಬಾರಿ ದರ್ಶಿಸುವುದಕ್ಕೂ ಮೊದಲು ಒಂದೂವರೆ ವರ್ಷದ ಹಿಂದೆ ಅಚ್ಯುತರಾಯನು ಕಪಿಲ ತೀರ್ಥದ ಪುಷ್ಕರಿಣಿಗೆ ಹಾಸುಗಲ್ಲು ಮೆಟ್ಟಿಲುಗಳನ್ನು ಮಾಡಿಸಿ ಆಳ್ವಾರ್ ತೀರ್ಥ ವೆಂದು ಪುನರ್ನಾಮಕರಣ ಮಾಡಿ,ಅದರ ಎಡ ಬಲ ಭಾಗಗಳಲ್ಲಿ- ಸಂಧ್ಯಾವಂದನ ಮಂಟಪಗಳನ್ನು ಕಟ್ಟಿಸಿ,ಪುಷ್ಕರಿಣಿಯ ನಾಲ್ಕೂ ಕಡೆಯಲ್ಲೂ ಕಲ್ಲಿನಲ್ಲಿ ಸುದರ್ಶನ ಚಕ್ರವನ್ನು ಕೆತ್ತಿಸಿದ. ಇವುಗಳಲ್ಲಿನ ಮೂರು ಕಂಡುಬರುತ್ತಿದ್ದು ನಾಲ್ಕನೆಯದ ನಂತರದ ಕಾಲದ ಕಟ್ಟಡದ ಗೋಡೆಯಲ್ಲಿ ಸೇರಿಹೋಗಿದೆ. ಇವು ಶಕ 1453 ರ ಖರ ಸಂವತ್ಸರದವಾಗಿದ್ದು (25-ಜೂನ್-1531) ತೆಲುಗು, ಕನ್ನಡ, ತಮಿಳುಗಳಲ್ಲಿ ಅಚ್ಯುತರಾಯನ ಚತುರ್ವಿಧ ಪುರುಷಾರ್ಥ ಸಿದ್ಧಿಗಾಗಿ ಈ ಧರ್ಮಕಾರ್ಯ ನಡೆಯಿತೆಂದು ದಾಖಲು ಮಾಡುತ್ತಿವೆ.ಈ ದಾನ ಕಾರ್ಯಗಳ ಜೊತೆಗೇ ಅಚ್ಯುತರಾಯನು ತಿರುಪತಿಯಲ್ಲಿ ಅಚ್ಯುತರಾಯ ಪೆರುಮಾಳ್ ದೇವಾಲಯವನ್ನು ಕೊತ್ತೂರು ಗ್ರಾಮ ದಲ್ಲಿನ (ತಿರುವೆಂಗಡ ಮುಡೈಯಾನನ ತಿರುವಿಡೈಯಾಟದ ಗ್ರಾಮದ ಈ ಸ್ಥಳಕ್ಕೆ ಪರಿಹಾರವಾಗಿ 2400 ನರ್ಪಣಗಳನ್ನು ಶ್ರೀಭಂಡಾ ರಕ್ಕೆ ಸಲ್ಲಿಸಿ,) ಆಲಯದ ಸುತ್ತಲೂ 120 ಮನೆಗಳ ಒಂದು ಅಗ್ರಹಾರವನ್ನೂ ನಿರ್ಮಿಸಿದ. ಈ ಆಲಯದ ನಿತ್ಯಪೂಜೆಗಾಗಿ ಪರಟಿ ಪುತ್ತೂರು ಗ್ರಾಮವನ್ನು ದತ್ತವಾಗಿಸಿ ಅದರ ಆದಾಯವನ್ನು ಇಪ್ಪತ್ತು ಭಾಗಗಳನ್ನಾಗಿ ಮಾಡಿ ಆಲಯಕ್ಕೆ ನೀಡಿದ. ಶಕ 1450ರ ವಿಳಂಬಿ ಸಂವತ್ಸ ರದಲ್ಲಿ (8-2-1539) 120 ಮನೆಗಳಲ್ಲಿ ನೂರು ಮನೆಗಳನ್ನು ಅಲ್ಲಿ ವಾಸಿಸುವವರಿಗೆ ಎಲ್ಲ ವಿಧ ಹಕ್ಕಗಳೊಡನೆ ದಾನಮಾಡಿ,ಆಲಯದ ನಿತ್ಯಪೂಜೆ ಕೈಂಕರ್ಯಗಳನ್ನು ನೋಡಿಕೊಂಡು,ಆದಾಯದ ಇಪ್ಪತ್ತು ಭಾಗದ ಹಕ್ಕುದಾರರಾದ ಇಪ್ಪತ್ತು ಕುಟುಂಬಗಳಿಗೆ ಮಾತ್ರ ವಾಸಿಸುವ ಹಕ್ಕಿನೊಡನೆ ಇಪ್ಪತ್ತು ಮನೆಗಳನ್ನು ನೀಡಿದ. ಹೀಗೆ ಕಟ್ಟಲೆಗಳನ್ನು ವಿಧಿಸಲು ಕಾರಣ ಮನೆಗಳ ಪರಭಾರೆಯಿಂದಾಗಿ ಭವಿಷ್ಯದಲ್ಲಿ ಅರ್ಚಕ ಸೇವಾ ಸಿಬ್ಬಂದಿ ಮನೆಯಿಲ್ಲದವರಾದಾಗಿ ಆಲಯದ ನಿತ್ಯಪೂಜೆ,ಸೇವೆಗಳು ನಿಂತು ಹೋಗಬಹುದು ಎಂಬ ಭಯವೇ ಆಗಿರಬೇಕು. ಅಚ್ಯುತರಾಯಪುರವೆಂಬ ಈ ಅಗ್ರಹಾರವು ತಿರುಪತಿಯ ಉತ್ತರದ ಭಾಗದಲ್ಲಿ ಕಪಿಲತೀರ್ಥದ ಬಳಿ ಉಂಟಾಗಿರಬೇಕು. ಈಗ ಅಲ್ಲಿ ಜೀರ್ಣಶೀರ್ಣ ವಾದ ಒಂದು ಮಹಾದ್ವಾರಗೋಪುರ ಮಾತ್ರವೇ ನಿಂತಿದ್ದು ಅದರ ಪಶ್ಚಿಮಕ್ಕೆ ಧರಾಶಾಯಿಯಾದ ತಳಗಟ್ಟು ಜೀರ್ಣವಾದ ಕಲ್ಲಿನ ಮೂರ್ತಿಗಳು ಮಾತ್ರವೇ ಇವೆ.

(ಶಿಥಿಲವಾದ ಈ ಮಹಾದ್ವಾರ ಗೋಪುರವನ್ನು1998 ರಲ್ಲಿ ತಿರುಮಲೆಯ ಮೆಟ್ಟಿಲಹಾದಿಯ ಮೊಣಕಾಲುಮುರಿ ಸ್ಥಳದಲ್ಲಿ ಬೆಟ್ಟಕ್ಕೆ ಹೋಗುವ ಹಾಗೂ ಬೆಟ್ಟದಿಂದ ಇಳಿಯುವ ವಾಹನ ಮಾರ್ಗಗಳ ಸಂಧಿಸ್ಥಾನದಲ್ಲಿ ಸ್ಥಾಪಿಸಲಾಗಿದೆ - ಅನುವಾದಕ)

ಹೈಂದವ ಧರ್ಮಕ್ಕೆ ಈ ರೀತಿಯ ಸೇವೆಯನ್ನು ಸಲ್ಲಿಸಿದ್ದೇ ಅಲ್ಲದೆ ಅಚ್ಯುತರಾಯನು ತನ್ನ ರಾಜಧಾನಿಯಾದ ವಿಜಯನಗರ ದಿಂದ ಸ್ವಾಮಿಯ ಸೇವೆಯನ್ನು ಮಾಡಲು ನರ್ತಕಿಯರನ್ನು ಕಳುಹಿಸಿ,ಅವರು ಆಲಯದಿಂದ ದೊರೆಯುವ ಪ್ರಸಾದಗಳಿಂದ ಜೀವನವನ್ನು ನಡೆಸುವಂತೆ ಏರ್ಪಾಡು ಮಾಡಿದ.

- ಹೀಗೆ ಅಚ್ಯುತರಾಯನಿಂದ ಶಕ 1453 ರ ಖರ ಸಂವತ್ಸರದಲ್ಲಿ (ಕ್ರಿ,ಶ,6-6-1531) ಕಳುಹಿಸಲ್ಪಟ್ಟವರಲ್ಲಿ ವಿದ್ವತ್ ಸಭಾರಾಯರಂಜಕ ಬಿರುದಾಂಕಿತ ಶ್ರೀರಂಗರಾಜನ ಮಗಳು ಕುಪ್ಪಾಯಿಯ ಮಗಳು ಮುದ್ದು ಕುಪ್ಪಾಯಿಯೂ ಒಬ್ಬಳು. (ಚಿತ್ರ-1) ಈಕೆ ತಿರುಪತಿಯಲ್ಲಿ ಶಾಶ್ವತವಾಗಿ ಇರುವಂತೆಯೂ,ಇವಳಿಗೆ ಗೋವಿಂದರಾಜಸ್ವಾಮಿ ಆಲಯದಿಂದ ದಿನವೂ ಒಂದು ತಳಿಗೆ

ಪ್ರಸಾದ ನೀಡಬೇಕೆಂದೂ ಆಜ್ಞೆ ಹೊರಟಿದ್ದಿತು. ಆಕೆಯ ವಂಶಸ್ಥರು ಈ ರೀತಿಯಲ್ಲಿಯೇ ತಮ್ಮ ಸೇವೆಯನ್ನು ಮುಂದುವರಿಸಬೇಕೆಂದು ತಿಳಿಸಲಾಗಿದ್ದಿತು.

ಉತ್ತಿಡ ತಿಮ್ಮಯ್ಯನ ಮಗಳು ಹನುಮಾಸಾನಿ ಇಂತಹ ನರ್ತಕಿಯರಲ್ಲಿ ಇನ್ನೊಬ್ಬಳು. ತಿ.ತಿ.820 ನರ್ಪಣಗಳ ದಾನವನ್ನು ನೀಡಿದಳೆಂದೂ,ತಿರುಪತಿಯ ನಿವಾಸಿಯಾದ ಈಕೆಯು ದೇವರ ಸೇವೆಗಾಗಿ ಅಚ್ಯುತರಾಯನಿಂದ ಕಳುಹಿಸಲ್ಪಟ್ಟವಳೆಂದೂ ತಿಳಿಸುತ್ತೆ

ಕ್ರಿ.ಶ.1561 ರ ಒಂದು ಶಾಸನವು ಅರವೀಡು ತಿರುಮಲರಾಯನು ಆಲಯದ ಸಂಪಂಗಿ ಪ್ರದಕ್ಷಿಣೆಯಲ್ಲಿ ಒಂದು ಊಂಜಲ್ ಮಂಟಪವನ್ನು ನಿರ್ಮಿಸಿದ ಎಂದೂ (ಇಲ್ಲಿ ಮೊದಲೇ ಸಾಳುವನರಸಿಂಹನು ಊಂಜಲ್ ಸೇವೆಯನ್ನು ಆರಂಭಿಸಿದ್ದ) ತಿಳಿಸುತ್ತದಿ (ತಿ.ತಿ.633) ಆ ಕಾಲದಲ್ಲಿ ಆಲಯದಲ್ಲಿ ನಡೆಯುತ್ತಿದ್ದ ಉತ್ಸವಗಳನ್ನು ಈ ಶಾಸನವು ಹೆಸರಿಸುತ್ತದೆ. ಅವುಗಳೆಂದರೆ-ಪವಿತ್ರೋತ್ಸವ, ಸಹಸ್ರನಾಮಾರ್ಚನೆ, ಸಹಸ್ರ ಕಲಶಾಭಿಷೇಕ, ಅಧ್ಯಯನೋತ್ಸವ, ವಸಂತೋತ್ಸವ, ಊಂಜಲ್ ಉತ್ಸವ, ಪೆಂಡ್ಲಿ ತಿರುನಾಳ್, ಲಕ್ಷ್ಮೀ ದೇವಿ ಉತ್ಸವ, ಕೋಡೈ ತಿರುನಾಳ್, ಪ್ಲವೋತ್ಸವ, ಪಲ್ಲವೋತ್ಸವ, ಫಲೋತ್ಸವ, ಮೇಷ ಸಂಕ್ರಮಣ, ಅಮಾವಾಸ್ಯೆ, ಪುರ್ಣಿಮೆ, ಉತ್ತರ, ಮೂಲ, ಪೂರ್ವಾಷಾಢ, ಉತ್ತರಾಷಾಢ - ನಕ್ಷತ್ರ ದಿನಗಳೂ, ಶ್ರೀ ಜಯಂತಿ, ಉರಿ ಅಡಿ, ಉತ್ಥಾನ ದ್ವಾದಶಿ, ಅಲ್ಪಸಿ ಪುರಾಢಂ, ದೀಪಾವಳಿ, ಯುಗಾದಿ, ಕಾರ್ತೀಕ, ಮಕರ ಸಂಕ್ರಮಣ, ಪಡಿಯವೇಟ್ಟು, ತೈಪೂಸಂ, ತನ್ನೀರಮುದು. (ತಿ.ತಿ.633). ಕ್ರಿ.ಶ.1564ರ ಒಂದು ಶಾಸನವು ರಥಸಪ್ತಮಿ ಉತ್ಸವವನ್ನು (ಜಿ.ಟಿ.376) ಹೆಸರಿಸುತ್ತದೆ.

ಕ್ರಿ.ಶ.1586ರ ಒಂದು ಶಾಸನವು ಹೇಳುವಂತೆ ಒಬ್ಬಾನೊಬ್ಬ ಅವಸರದ ಚೆನ್ನಪ್ಪನೆಂಬುವವನು ಕಲ್ಯಾಣ ಮಂಟಪವನ್ನು ನಿರ್ಮಿಸಿದನು.(ತಿ.ತಿ.150) ಕ್ರಿ.ಶ.1614 ಒಂದು ದಾಖಲೆಯು ಶ್ರೀರಾಮನವಮಿಯ ನಂತರದ ದಿನದಲ್ಲಿ ತಿರುಮಲೆಯ ವೆನ್ರುಮಲೈಯಿಟ್ಟಾನ್ ಮಂಟಪದಲ್ಲಿ ರಾಮಪಟ್ಟಾಭಿಷೇಕ ಮಹೋತ್ಸವವು ನಡೆಯುತ್ತಿತ್ತೆಂದು ತಿಳಿಸುತ್ತದೆ. ಉತ್ಸವದಲ್ಲಿ ವಾಯು ಪುರಾಣ ಪಠಣ ಸಂಪ್ರದಾಯ ಇದ್ದಿತು. (ತಿ.ತಿ.686) ಕ್ರಿ.ಶ.1623 ರ ಎರಡು ದಾಖಲೆಗಳು ಮಟ್ಲ ಅನಂತರಾಜನು ಸ್ವರ್ಣಾಶ್ವ, ಗಜ,ಸಮರ ಭೂಪಾಲ ವಾಹನಗಳು, ಪದ್ಮಪೀಠ,ಉನ್ನತ ಕೇಳಿ ಮಂಟಪಗಳನ್ನು ನಿರ್ಮಿಸಿ ನೀಡಿದನೆಂದೂ ಮೆಟ್ಟಿಲ ಮಾರ್ಗದಲ್ಲಿನ ಗಾಳಿಗೋಪುರವನ್ನು ನಿರ್ಮಿಸಿದನೆಂದೂ ತಿಳಿಸುತ್ತವೆ. (6-25-26) ಇದೇ ರಾಜನು ಅಲಿಪಿರಿಯ ಬಳಿಯ ಕೊತ್ತ ಗೋಪುರವನ್ನೂ ನಿರ್ಮಿಸಿದ.(ಜಿ.ಟಿ.279)

(ಮೇಲಿನ ಎರಡು ಪ್ಯಾರಾಗಳಲ್ಲಿನ ವಿಷಯ ಸದಾಶಿವರಾಯನ ಹಾಗೂ ನಂತರದ ಅರವೀಡು ಮನೆತನದ ಕಾಲದವು. ಶಾಸನ ಸಂಪುಟ - 5,6 ಗಳಲ್ಲಿ ದಾಖಲಾಗಿರುವ ಅನುಕ್ರಮವಾಗಿ 168 (ಪು -445) 173 ಪು(459) ಹಾಗೂ 7 (ಪು 45) 18 (ಪು 103) ಹಾಗೂ 25, 26(ಪು151) ರ. ಸಂಖ್ಯೆಯವುಗಳು. - ಅನುವಾದಕ)

## 23. ಸದಾಶಿವರಾಯನ ಕಾಲದ ತಿರುಮಲೆ

ನಂತರದ ರಾಜನಾದ ಸದಾಶಿವರಾಯನ ಕಾಲದಲ್ಲಿ ತಿರುಮಲೆಯ ಆಲಯದ ಗೋಡೆಗಳ ಮೇಲೆ ಸುಮಾರು ನೂರ ಐವತ್ತು ಶಾಸನಗಳನ್ನು ಕೆತ್ತಿಸಲಾಗಿದೆ. ಇಲ್ಲಿನ ಪ್ರಶಸ್ತಿಗಳ ಒಂದು ವೈಶಿಷ್ಟ್ಯವೆಂದರೆ ಪೂರ್ವ ಪಶ್ಚಿಮ ದಕ್ಷಿಣ ಸಮುದ್ರಗಳವರೆಗಿನ ರಾಜನೆಂದು ಇವನನ್ನು ಕರೆದಿರುವುದು. ಭೂಭಾಗದ ದೃಷ್ಟಿಯಿಂದ ಸರಿಯಿರಬಹುದಾದರೂ ಇಂಡಿಯಾದ ಮೇಲ್ಮೈಲಕ್ಷಣದಲ್ಲಿಯೇ ಇಲ್ಲದ ಉತ್ತರ ಸಮುದ್ರದವರೆಗಿನ ಭೂಮಿಯನ್ನೂ ಇವನ ಆಳ್ವಿಕೆಗೆ ಸೇರಿಸಲಾಗಿರುವುದು. ಈತನ ಶಾಸನಗಳಲ್ಲಿ ಕಂಡು ಬರುವ ಅತಿ ಹಿಂದಿನ ದಿನಾಂಕವೆಂದರೆ ಶಕ ವರ್ಷ 1463 ರ ಪ್ಲವನಾಮ ಸಂವತ್ಸರದ ಕರ್ಕಾಟಕ ಮಾಸದ ಬಹುಳ ದ್ವಾದಶಿಯ ಪುನರ್ವಸು ನಕ್ಷತ್ರವಿದ್ದ ಗುರುವಾರದ್ದು. (ಕ್ರಿ.ಶ.21-7-1541) ಇದು (ತಿ.ತಿ.659) ರಲ್ಲಿದ್ದು- ತಿರುಮಲೈ ಜೋಯಿಸರ ಮಗ್ರಶ್ರೀರಾಮಭಟ್ಟರ್

ಆಲಯಕ್ಕೆ ಮುತ್ತೂರು ಮತ್ತು ಇನ್ನೊಂದು ಗ್ರಾಮವನ್ನು ನೀಡಿದ್ದನ್ನು ಗುರುತಿಸುತ್ತದೆ. ಇದು ತಿ.ತಿ.504 ರಲ್ಲಿ ಇವನ ಪೂರ್ವಿಕನಾದ ಅಚ್ಯುತರಾಯನಿಗೆ ನೀಡಿದ ಈಚಿನ ದಿನಕ್ಕಿಂತ ಎಂದರೆ ಶಕವರ್ಷ 1463 ರ ಪ್ಲವ ಸಂವತ್ಸರದ ಮೀನಮಾಸದ ಶುದ್ಧ ಸಪ್ತಮಿ ಆರ್ದ್ರಾ ನಕ್ಷತ್ರದ ಗುರುವಾರಕ್ಕಿಂತ ಎಂಟು ತಿಂಗಳು ಹಿಂದಿನದು. (ಕ್ರಿ.ಶ. 1537-ಮಾರ್ಚ್ 23) ಸುಮಾರು ಐದು ವರ್ಷಗಳ ಮೊದಲೇ ಎಂದರೆ ಶಕವರ್ಷ 1459 ಹೇವಿಳಂಬಿ ನಾಮಸಂವತ್ಸರದಲ್ಲಿ (ಕ್ರಿ.ಶ.1537-ರಲ್ಲಿ) ಈತನನ್ನು ಯುವರಾಜನಾಗಿ ಘೋಷಿಸಲಾಯಿತು ಎಂದು ಹೇಳಲಾಗಿದೆ. ಈ ಹೇಳಿಕೆಯು ದೇವರಾಯಪುರಕ್ಕೆ ಸದಾಶಿವಪುರವೆಂಬ ಹೆಸರು ನೀಡಿದ ಶಾಸನದಿಂದ (ಶಕ-1460) ಸಮರ್ಥಿತವಾಗುತ್ತದೆ.

ಅರವೀಡು ವಂಶದವರೊಬ್ಬರ ದತ್ತಿಯನ್ನು ದಾಖಲಿಸುವ ಜಿ.ಟಿ 133 ರ ಶಾಸನವು ಸದಾಶಿವರಾಯನ ಇಲ್ಲಿನ ತೀರ ಈಚಿನ ಶಾಸನದ ವರ್ಷವನ್ನು ಶಕವರ್ಷ 1495 ಶ್ರೀಮುಖ ಸಂವತ್ಸರದ ಕುಂಭ ಮಾಸದ್ದು (ಕ್ರಿ.ಶ. 1574 ಜನವರಿ 20). ಆದರೆ ಬೇರೆ ಕಡೆ ದೊರೆಯುವ ಒಂದು ಇತ್ತೀಚಿನ ಶಾಸನವು ಕ್ರಿ.ಶ.1575ಕ್ಕೆ ಸಮನಾದ ಶಕವರ್ಷ 1497 ರ ಯುವನಾಮ ಸಂವತ್ಸರದ್ದು ಎಂದು ಗುರುತಿಸಿದ್ದು ಇದರಿಂದಾಗಿ ಒಂದನೇ ತಿರುಮಲನು ಮಹಾಮಂಡಲೇಶ್ವರ ಮೊದಲಾದ ಚಕ್ರವರ್ತಿಯ ಬಿರುದುಗಳನ್ನು ಪಡೆದ ಮೇಲೂ ಎಂದರೆ ಶಕವರ್ಷ 1492 ರ ನಂತರವೂ ಸದಾಶಿವರಾಯನು ನಾಮ ಮಾತ್ರ ರಾಜನಾಗಿದ್ದನೆಂಬುದನ್ನು ತಿಳಿಯ ಬಹುದು. ಹೀಗಾಗಿ ಸದಾಶಿವರಾಯನ ಆಳ್ವಿಕೆಯು ಅಚ್ಯುತರಾಯನ ಕೊನೆಯ ದಿನಗಳನ್ನೂ ಸೇರಿದಂತೆ ಶಕ 1459 ರಿಂದ ಶಕ 1497 ರ ವರೆಗೆ ಸುಮಾರು 40 ವರ್ಷಕಾಲ ವಿಸ್ತರಿಸಿದ್ದಿತು ಎನ್ನಬಹುದು.

ಶ್ರೀ ವೆಂಕಟೇಶ್ವರಸ್ವಾಮಿ ಆಲಯಕ್ಕೆ ಸದಾಶಿವರಾಯನು ಎರಡು ಬಾರಿ ಭೇಟಿ ನೀಡಿದ ಎನ್ನಲಾಗಿದೆ. ಪ್ರಮಾದೀಚ ಸಂವತ್ಸರದ ಕುಂಭ ಮಾಸದಲ್ಲಿ ಎಂದರೆ ಶಕವರ್ಷ 1475 ರಲ್ಲಿ (ಕ್ರಿ.ಶ.1554-ಫೆಬ್ರವರಿ 3) ಈ ಹಿಂದೆ ಅಚ್ಯುತರಾಯನಿಂದ ತಿರುವೆಂಕಟ ಮುಡೈಯಾನನ ಸೇವೆಯಲ್ಲಿ ನಿವೇದನೆಯಾದ ಪ್ರಸಾದದ ದಾಯ ಭಾಗವು ಅನ್ನ ಸತ್ರದಲ್ಲಿ ಬಳಕೆಯಾಗುತ್ತಿದ್ದು ಅದರ ಒಂದು ಭಾಗವನ್ನು ಈಗ ಸದಾಶಿವರಾಯನು ಶ್ರೀನಿವಾಸನ್ ಮತ್ತಿತರರಿಗೆ ಧಾರಾಪೂರ್ವಕವಾಗಿ ದಾನಮಾಡಿದ. ಈ ದಾನವು ಅಳಿಯ ರಾಮರಾಜದೇವನ ಹೆಸರಿನಲ್ಲಿಯೇ ನಡೆಯಿತು. (ತಿ.ತಿ.393) ಶಕವರ್ಷ 1476 ರಲ್ಲಿನ ಆನಂದ ಸಂವತ್ಸರಕ್ಕೆ ಮೊದಲು ಪ್ರಮಾದೀಚ ಸಂವತ್ಸರದಲ್ಲಿನ ಮಕರ ಸಂಕ್ರಮಣ (ಕ್ರಿ.ಶ.1553 ಡಿಸೆಂಬರ್ 28 ರಂದು) ಸದಾಶಿವರಾಯನು ಎರಡನೆ ಬಾರಿ ತಿರುಮಲೆಗೆ ಬಂದಿರಬೇಕು. ಪಡೈವೀಡು ರಾಜ್ಯ, ಜಿಂಜಿ, ತಿರುವಾಡಿ, ಚೋಳಮಂಡಲಂ, ತಿರುವಣ್ಣಾಮಲೈ, ಕಾಂಚಿಪುರಂ, ಚಂದ್ರಗಿರಿ ರಾಜ್ಯಂ, ಪಳೈಯಂ,ಪಾಲವೇರ್ಕಾಡು, ಪೊನಗಿರಿ (ಭುವನಗಿರಿ),ಮುದುಪನಕರೈ,ಪಟ್ಟಣ (ಕಾವೇರಿ ಪಟ್ಟಣ) ಪೆರುಂಕೋಡಿ ಸೀಮೈಗಳಿಂದ ತಿರುಪತಿಗೆ ಬಂದ 200 ಎತ್ತುಗಳು ಹೊತ್ತುತಂದ ವಸ್ತುಗಳ ಮೇಲಣ ಉಳ್ಳಾಯಂ,ಪೇರಾಯಂ,ಮಕಮ್ಮೈ,ಕೊಂಡೈ ಮೊದಲಾದ ಎಲ್ಲರೀತಿಯ ತೆರಿಗೆಗಳನ್ನೂ, ಜೊತೆಗೇ ಇತರ ಸೀಮೆಗಳಿಂದ ಬರುವ ವಸ್ತುಗಳ ಮೇಲಿನ ಆಯಂ,ಅರುಪ್ಪು ಉಳ್ಳಾಯಂ,ಪೇರಾಯಂ, ಮಕಮ್ಮೈ ಮೂಲೈ ವೀಸಂ ಹಾಗೂ ತರಕು ಸುಂಕಗಳನ್ನೂ ಆತ್ರೇಯ ಗೋತ್ರದವನೂ ಆಪಸ್ತಂಭ ಸೂತ್ರದವನೂ,ಯಜುರ್ವೇದ ಶಾಖೆಯವನೂ ಆದ ರಾಮರಾಜ-ಕೋನೇಟಯ್ಯನ ಮಗನಾದ ಶ್ರೀಮನ್ಮಹಾಮಂಡಲೇಶ್ವರ ಕೊಂಡರಾಜ ಕಟ್ಟಿಸಿದ ನಮ್ಮಾಳ್ವಾರ್ ರಾಮಾನುಜ ಕೂಟದ ಬಳಿಕೆಗೆಂದು ಧಾರಾಪೂರ್ವಕವಾಗಿ ಸರ್ವಮಾನ್ಯ ದತ್ತಿಯನ್ನಾಗಿ ಬಿಟ್ಟುಕೊಟ್ಟನು. ಜೊತೆಗೇ ಈ ರಾಯಸದ ಸಂಗತಿಯನ್ನು ತಿರುಪತಿಯ ಸ್ಥಾನತ್ತಾರರಿಗೂ,ಎಲ್ಲ ಸೀಮೆಗಳ ಮುಖ್ಯಸ್ಥರಿಗೂ ತಿಳಿಸಲಾಯಿತು. ಈ ಸೀಮೆಗಳು ವಿಜಯನಗರದ ಮಧ್ಯಭಾಗದಲ್ಲಿದ್ದು ವಿಜಯನಗರ ಸಾಮ್ರಾಜ್ಯ ಇನ್ನೂ ಉತ್ತರಕ್ಕೆ ಕೃಷ್ಣಾನದಿಯವರೆಗೆ ದಕ್ಷಿಣಕ್ಕೆ ಸಮುದ್ರದವರೆಗೆ ಹರಡಿದ್ದಿತು.

ಹಲವರು ಖಾಸಗೀ ವ್ಯಕ್ತಿಗಳಿಗೆ ರಾಜನು ನೀಡಿದ ದಾನಗಳು ಗಮನಕ್ಕೆ ಬರುತ್ತವೆ. ತಿ.ತಿ.651 ರಲ್ಲಿ ಶ್ರೀ ವೆಂಕಟೇಶಸ್ವಾಮಿಯ ನಿತ್ಯನೈವೇದ್ಯಕ್ಕೆ ಪ್ರಭವ ಸಂವತ್ಸರದಲ್ಲಿ ಶಕವರ್ಷ 1468 ರಲ್ಲಿ (ಕ್ರಿ.ಶ.1546-ಆಗಸ್ಟ್-19) ಅರ್ಧ ಗ್ರಾಮವನ್ನು ದತ್ತಿ ನೀಡಿದ ತಿಮ್ಮರಸ ಪದಂಡಯರ್‌ನ ಮಗ ಪದುಡಯರ್‌ಗೆ ಪೆರುಕೊಂಡ (ಪೆನುಗೊಂಡ)ದ ಬಳಿಯ ಒಂದು ಹಳ್ಳಿಯನ್ನು ದಾನ ನೀಡಿದಂತೆ

ಕಂಡುಬರುತ್ತದೆ. ಈ ಅರ್ಧ ಗ್ರಾಮವು ವಾರ್ಷಿಕ ನೂರು ಗಟ್ಟಿ ವರಹಗಳ ಆದಾಯ ಹೊಂದಿದ್ದಂತೆ ತಿಳಿದುಬರುತ್ತದೆ. ಇಂತಹದೇ ಇನ್ನೊಂದು ದಾನವು ಶಕವರ್ಷ 1469 ರ ಪ್ಲವಂಗನಾಮ ಸಂವತ್ಸರದ ಮಿಥುನ ಮಾಸದಲ್ಲಿ (ಕಿ.ಶ.1547-ಜೂನ್-3) ಯಜು ಶ್ಯಾಖೆಯ ಆಪಸ್ತಂಭ ಸೂತ್ರದ ಶಠಮರ್ಷಣ ಗೋತ್ರದ ಸೊಟ್ಟೈ ಏಟ್ಟೂರ್ ತಿರುಮಲನಂಬಿ ಕುಮಾರ ತಾತಯ್ಯಂಗಾರ್ಯನ ಮಗ ಶ್ರೀನಿವಾಸಯ್ಯಂಗಾರ್‌ನಿಗೆ ಜಗದಾಪಿ-ಗುತ್ತಿ ಸೀಮೆಯ ಪೆರಿಯ ಎಕ್ಕಲೂರು ಹಳ್ಳಿಯನ್ನು ದಾನ ನೀಡಿದ್ದಾಗಿಯೂ, ಅದನ್ನು ತಾಮ್ರ ಶಾಸನದಲ್ಲಿ ದಾಖಲು ಮಾಡಿದಂತೆಯೂ ಜಿ.ಟಿ.415 ರಲ್ಲಿ ಹೇಳಲಾಗಿದ್ದು, ಇದನ್ನು ದಾನ ನೀಡಿದವನು ಆಲಯಕ್ಕೆ ಕೊಟ್ಟಂತೆಯೂ ಆತ ಆರಂಭಿಸಿದ ಪಲ್ಲವೋತ್ಸವನ್ನು ನಡೆಸಲೂ,ಆ ಉತ್ಸವದ ದಿನಗಳಲ್ಲಿ ನಿತ್ಯ ನೈವೇದ್ಯಕ್ಕೆ ಬಳಸಲೂ ಇದರ ಆದಾಯವನ್ನು ಉಪಯೋಗಿಸಲು ತಿಳಿಸಲಾಗಿದೆ. ಈ ಹಳ್ಳಿಯ ವಾರ್ಷಿಕ ಆದಾಯ 2000 ಚಕ್ರಪೊನ್ ಎಂದು ಹೇಳಲಾಗಿದೆ. ಇಷ್ಟು ಹೆಚ್ಚಿನ ಆದಾಯದ ಹಳ್ಳಿ ಯೆಂದರೆ ಅದು ದೊಡ್ಡದಾಗಿಯೂ ಫಲವತ್ತಾಗಿಯೂ ಇದ್ದಿರಬೇಕು. ಅನ್ನಮಯ್ಯಂಗಾರ್ಯನ ಮಗ ತಾಳ್ಳಪಾಕ ತಿರುಮಲಯ್ಯಂಗಾ ರ್ಯನು ಸದಾಶಿವರಾಯನಿಂದ ರಾಯಸವನ್ನೂ ರಾಮರಾಜಯ್ಯನಿಂದ ತಿರುಮುಖವನ್ನೂ, ಮುತ್ಯಾಲಪಟ್ಟು ಗ್ರಾಮವನ್ನು ತೆರಿಗೆ ಮುಕ್ತವಾಗಿಸಲು ಪಡೆದ. ತಿರುಮಲೈಯ್ಯಂಗಾರ್ಯನು ಶಕ 1467 ರ ವಿಶ್ವಾವಸು ನಾಮಸಂವತ್ಸರದ ಕರ್ಕಾಟಕ ಮಾಸದಲ್ಲಿ (3-7-1545) ತಾನು ತಿರುಮಲೆಯಲ್ಲಿ ಆರಂಭಿಸಿದ ಉತ್ಸವದ ವೆಚ್ಚಗಳಿಗೆಂದು ಇದನ್ನು ಆಲಯಕ್ಕೆ ನೀಡಿದಾಗ, ಅವನಿಂದ ನೂರು ಪೊನ್ ವೆಚ್ಚದಲ್ಲಿ ನೀರಾವರಿ ಕಾಮಗಾರಿ ಕೆಲಸಗಳು ನಡೆಸಲಾಗಿದ್ದರೂ ವಾರ್ಷಿಕ 280 ರೇಖೈ ಹಣ ಮಾತ್ರವೇ ಆದಾಯ ವಾಗುವಂತೆ ಈ ಹಳ್ಳಿಯ ಉತ್ಪನ್ನವಿದ್ದಿತು. (681 ತಿ.ತಿ.)

### 24. ಅರವೀಡು ಆಳ್ವಿಕೆಯಲ್ಲಿ ತಿರುಮಲೆ:

ತಾಳಿಕೋಟೆಯುದ್ಧದಲ್ಲಿ ಅಳಿಯ ರಾಮರಾಜನು ತೀರಿಕೊಂಡಮೇಲೆ 1565 ರಲ್ಲಿ ಸದಾಶಿವರಾಯನ ಮುಖ್ಯಮಂತ್ರಿಯಾಗಿ ಅಧಿಕಾರವಹಿಸಿಕೊಂಡ ಅರವೀಡು ವಂಶದ ತಿರುಮಲನು 1575ರಲ್ಲಿ ಪಟ್ಟಾಭಿಷಿಕ್ತ ನಾದರೂ, 1565ರಲ್ಲಿ ರಾಜಧಾನಿಯನ್ನು ಪೆನುಗೊಂಡೆಗೆ ವರ್ಗಾಯಿಸಿದಂದಿನಿಂದ ಅವನ ಆಳ್ವಿಕೆ ಆರಂಭವಾಯಿತು. ರಾಜನಾದ ಮೇಲೆ ಅವನ ಆಳ್ವಿಕೆ ಸ್ವಲ್ಪಕಾಲದ್ದಾಗಿ ಅವನ ಮಗ ಶ್ರೀರಂಗರಾಜ ಅಥವಾ ಎರಡನೇ ರಂಗರಾಜ ಅವನೊಡನೆಯೇ ಸೇರಿ ಆಡಳಿತ ನಡೆಸಿದ. ಆನೆಗಳ ಪ್ರತಿಮೆಗಳನ್ನು ಒಳಗೊಂಡ ಎತ್ತರವಾದ ಕಂಬಗಳಿರುವ ಊಂಜಲ್ ಮಂಟಪವು ತಿರುಮಲರಾಯ ಮಂಟಪವೆಂಬ ಹೆಸರಿನಿಂದ ಇವನ ಸೇವೆಯ ಕುರುಹಾಗಿ ಇಂದಿಗೂ ಆಲಯದ ಪ್ರಮುಖ ಭಾಗವಾಗಿದ್ದು, ವಾರ್ಷಿಕ ಬ್ರಹ್ಮೋತ್ಸವಕಾಲದಲ್ಲಿ ಉತ್ಸವಮೂರ್ತಿಯ ಆಸ್ಥಾನ ಇಲ್ಲಿಯೇ ನಡೆಯುತ್ತದೆ. ಶ್ರೀರಂಗದೇವ ಮಹಾರಾಯನ ಶಕ 1501 ರಿಂದ 1508ರವರೆಗಿನ ಅವಧಿಯ (ಕ್ರಿ.ಶ.1579 ರಿಂದ 1586) ಸುಮಾರು ಒಂದು ಡಜನ್ ಶಾಸನಗಳು ಇವನ ಆಡಳಿತವನ್ನು ಗುರುತಿಸುತ್ತವೆ.

ಶಕ 1514 ರಿಂದ ಶಕ 1538 ರ ವರೆಗಿನ (ಕ್ರಿ.ಶ.1592 ರಿಂದ 1616) ಸುಮಾರು ಹನ್ನೆರಡು ಶಾಸನಗಳು ವೆಂಕಟಪತಿರಾಯ ಎಂದು ಹೆಸರಾದ ಒಂದನೇ ವೆಂಕಟನ ಆಳ್ವಿಕೆಯನ್ನು ಸೂಚಿಸುತ್ತವೆ. ಈತ ತಿರುಮಲನ ನಾಲ್ಕನೇ ಮಗ ಹಾಗೂ ಎರಡನೇ ಶ್ರೀರಂಗನ ಕೊನೆಯ ತಮ್ಮ. ಕರ್ನೂಲಿನ ಮಾರ್ಕಾಪುರದ ಒಂದು ಶಾಸನದಂತೆ ಶಕ 1489 ರಲ್ಲಿ (ಕ್ರಿ.ಶ.1567) ಇವನು ಸದಾಶಿವರಾಯನ ಒಬ್ಬ ಅಧಿಕಾರಿಯಾಗಿದ್ದನೆಂದು ತೋರುತ್ತದೆ. ಸೇಲಂ ಮತ್ತು ಆರ್ಕಾಟ್‌ಗಳಲ್ಲಿ ದೊರೆತಿರುವ ಎರಡು ಶಾಸನಗಳಲ್ಲಿ ಇವನು ತನ್ನ ಬಿರುದು -ವೀರವಸಂತರಾಯ- ಎಂಬುವುದರಿಂದ ಮಾತ್ರವೇ ಹೆಸರಿಸಲ್ಪಟ್ಟಿದ್ದಾನೆ. (ಆ.ಸ. ವರದಿ-1911-12 ಪುಟ-187) ತನ್ನ ತಂದೆ ತಿರುಮಲ ಹಾಗೂ ಅಣ್ಣ ಶ್ರೀರಂಗರಾಜರುಗಳ ಕಾಲದಲ್ಲಿ ಇವನು ಚಂದ್ರಗಿರಿ ರಾಜ್ಯದ ರಾಜಪ್ರತಿನಿಧಿಯಾಗಿ ಅಧಿಕಾರ ನಡೆಸಿದ್ದ ನೆಂಬುದು ವಸುಚರಿತ್ರೆ ಕಾವ್ಯದ ಮೊದಲ ಅಧ್ಯಾಯದ ಎಂಬತ್ತೊಂದನೆಯ ಪದ್ಯದಿಂದಲೂ, ಶಕ 1494 ರ ಅಂಗೀರಸ ಸಂವತ್ಸರದ ಆಷಾಢ ಮಾಸದ (ಕ್ರಿ.ಶ.1572 ಜುಲೈ 9) ಶಾಸನದಿಂದಲೂ ಶ್ರೀರಂಗನ ಕಾಲದಲ್ಲಿ ಉದಯಗಿರಿ,ಕೊಂಡವೀಡು ಮೊದಲಾದ

ಗಡಿಪ್ರಾಂತ್ಯಗಳ ಆಳ್ವಿಕೆಯನ್ನೂ ವಹಿಸಿಕೊಂಡಿದ್ದನೆಂದು ತಿಳಿದು ಬರುತ್ತದೆ. ಇವನಿಗೆ ಐವರು ರಾಣಿಯರಿದ್ದು,ತಿ.ತಿ.97 ರಲ್ಲಿಬ್ಬಾಕೆ-ಕೃಷ್ಣಮಾಂಬ-ಕೃಷ್ಣಾಜಮ್ಮನು ಹೆಸರಿಸಲ್ಪಟ್ಟಿದ್ದಾಳೆ.

ಎರಡನೇ ಶ್ರೀರಂಗನ ಆಳ್ವಿಕೆಯಕಾಲದ ಶಕ 1505 ಕ್ಕೆ ಸೇರುವ ತಿ.ತಿ.671 ರಲ್ಲಿ ಹೇಳಿರುವಂತೆ ಇವನ ಮನೆತನದ ಪುರೋಹಿತರಾದ ಏಟ್ಟೂರು ತಿರುಮಲೈ ಕುಮಾರ ತಾತಾಚಾರ್ಯರು ಇವನ ಪಟ್ಟಾಭಿಷೇಕವನ್ನು ನಡೆಸಿದರು.

ಶಕ 1553 (ಕ್ರಿ.ಶ.1631) ಹಾಗೂ ಶಕ 1557 (ಕ್ರಿ.ಶ.1636) ಗಳಿಗೆ ಸೇರಿದ ಜಿ.ಟಿ.ಯ 328 ಹಾಗೂ 63 ನೇ ಎರಡು ದಾಖಲೆಗಳು ಕುಮಾರ ವೆಂಕಟನು-ಎರಡನೇ ಪೆದ್ದ ವೆಂಕಟನೆಂದೂ ಹೆಸರಾದ ಈತ -ಅಳಿಯ ರಾಮರಾಜನ ಮಗನಾದ ಸ್ಥಾನೇ ರಂಗನ ಮಗನಾಗಿದ್ದು, ಇವನನ್ನು ಶಕ 1544 ರಲ್ಲಿ (ಕ್ರಿ.ಶ. 1622) ಯುವರಾಜನೆಂದೂ ಆರನೇ ರಂಗನನ್ನು ಆವಸ್ಥಾರಸನೆಂದೂ ನಾಲ್ಕನೆಯ ರಾಮನಿಂದ ಆಯ್ಕೆ ಮಾಡಲಾಯಿತು. ಇವನು ಶಕ 1552 ರಲ್ಲಿ (ಕ್ರಿ.ಶ.1630) ತಿರುಮಲ ತಾತಾಚಾರ್ಯನಿಂದ ಪಟ್ಟಾಭಿಷಿಕ್ತನಾಗಿರಬೇಕು ಎಂದು ತಿಳಿದುಬರುತ್ತದೆ.

ಶಕ 1553 ರ ಪ್ರಜೋತ್ಪತ್ತಿಯ ಕನ್ಯಾಮಾಸದಲ್ಲಿ ಶ್ರೀ ಗೋವಿಂದರಾಜಸ್ವಾಮಿ ಹಾಗೂ ಶ್ರೀ ವೆಂಕಟೇಶ್ವರಸ್ವಾಮಿಗಳಿಗೆ ಒಬ್ಬಾನೊಬ್ಬ ರಾಮಚಂದ್ರಯ್ಯನೆಂಬುವವನು ಹಲವು ದಾನ ನೀಡಿದ್ದು, ದಕ್ಷಿಣದ ಸನ್ನಿಧಿ ವೀಧಿಯ ಇಳಂಕೋಯಿಲ್ ಜೀಯರ್ ಮಠದ ಪಶ್ಚಿಮದಲ್ಲಿ ಒಂದು ಮಂಟಪವನ್ನು ನಿರ್ಮಿಸಿದನೆಂದು ಜಿ.ಟಿ.328 ತಿಳಿಸುತ್ತದೆ. ವರದರಾಜ ಪುರದಲ್ಲಿ ಜೀರ್ಣವಾಗಿದ್ದ ನೀರಾವರಿ ಕಾಲುವೆಯನ್ನು ಪುನರುದ್ಧಾರ ಮಾಡಿದ. ಯಜುಶ್ಯಾಖೆಯ ಆಪಸ್ತಂಭ ಸೂತ್ರದ,ಶ್ರೀವತ್ಸಗೋತ್ರದ ಆಳಗರ್ಯಿಯಾರ್‌ನು ತಿರುವಿಡೈಯಾಟ್ಟಂ ಹಳ್ಳಿಯಾದ ಅವಿಲಾಲಿಯಲ್ಲಿ ಕುಲಗೆಟ್ಟ ನೀರಾವರಿ ಕಾಲುವೆಯನ್ನು ಸರಿಮಾಡಿಸಿ,ಹಲವಾರು ಭೂಮಿ ಕಾಣಿಕೆಯನ್ನು ನೀಡಿದನೆಂದೂ ಇದು ತಿಳಿಸುತ್ತದೆ. ಮುವತ್ತೆರಡು ಅಡಿಯ ಅಳತೆಗೋಲನ್ನು ಕುರಿತೂ ಇದು ತಿಳಿಸುವುದು

ಎರಡನೇ ವೆಂಕಟನ ತಮ್ಮನಾದ, ಮೂರನೇ ಪಿನವೆಂಕಟನ ಮಗನೇ ಆರನೇ ರಂಗನೆಂದು ಹೆಸರಾದ ಶ್ರೀರಂಗದೇವ ಮಹಾರಾಯ. ನಾಲ್ಕನೇ ರಾಮ ಹಾಗೂ ಎರಡನೇ ವೆಂಕಟನ ಕಾಲದಲ್ಲಿ ಯುವರಾಜನಾಗಿದ್ದ ಇವನು ಕ್ರಿ.ಶ.1642 ಅಕ್ಟೋಬರ್ 29 ರಂದು ಕರ್ನಾಟಕದ ಸಿಂಹಾಸನವನ್ನೇರಿದ. ಇವನ ಆಳ್ವಿಕೆ 1665 ರ ವರೆಗೆ ಇಪ್ಪತ್ತೈದು ವರ್ಷ ನಡೆಯಿತು. ಇವನಕಾಲದಲ್ಲಿ ಗೋಲ್ಕೊಂಡ,ಬಿಜಾಪುರದ ಸುಲ್ತಾನರು ಕರ್ನಾಟಕವನ್ನು ಆಕ್ರಮಿಸಿದರು ಹಾಗೂ ಕಡೆಗೆ ಸಮರ್ಥನಾದ ಸೇನಾನಿ ಮೀರ್‌ಜುಮ್ಲಾನು ಇದರ ನವಾಬನಾದ. ರಾಜ ರಂಗನು ದಕ್ಷಿಣಾಭಿಮುಖವಾಗಿ ಓಡಿಹೋಗಿ ಅಧೀನ ಸಂಸ್ಥಾನಿಕರಲ್ಲಿ ಒಬ್ಬನಾದ ಕೆಳದಿಯ ಪ್ರಮುಖನ ಆಶ್ರಯ ಪಡೆದ. (ಆ.ಸ.ವ 1911-12 ಪುಟ 193)

ಆಲಯದ ಎರಡು ಶಾಸನಗಳಲ್ಲಿ ಶ್ರೀರಂಗರಾಯನು ಹೆಸರಿಸಲ್ಪಟ್ಟಿದ್ದರೂ ಅವುಗಳಲ್ಲಿ ಒಂದು ಮಾತ್ರವೇ ದಿನವನ್ನು ಸೂಚಿಸುತ್ತದೆ. ಶಕ 1560 ಬಹುಧಾನ್ಯ ಸಂವತ್ಸರ ಮಿಥುನ ಮಾಸ (15-6-1638) ಈ ದಿನದಲ್ಲಿ ಆಪಸ್ತಂಭ ಸೂತ್ರದ ಕಾಶ್ಯಪ ಗೋತ್ರದ ಮೂಲ ನಕ್ಷತ್ರದಲ್ಲಿ ಹುಟ್ಟಿದ ಒಬ್ಬ ಬ್ರಾಹ್ಮಣನು ದೇವಾಲಯಕ್ಕೆ 95 ರೇಖೈಯಷ್ಟರ ನೈವೇದ್ಯಗಳಿಗಾಗಿ ಎರಡು ನೀರಾವರಿ ಕಾಲುವೆಗಳನ್ನು ಒಪ್ಪಿಸಿದ. ಇವುಗಳಲ್ಲಿ ಒಂದು 160 ಪುಟ್ಟಿ ಭತ್ತವನ್ನು ತರುವಂತಿದ್ದು,ಇನ್ನೊಂದು ತಿರುವಿಡೈಯಾಟ್ಟಿಯಾಳ್‌ಮಂಡಲಂ ನ ಗ್ರಾಮಗಳಲ್ಲಿ ಒಂದಾದ ಮಾನಿಯಕ್ಕೋನಪಟ್ಟುವಿನಲ್ಲಿದ್ದಿತು. (ಜಿ.ಟಿ.-5) ಎರಡನೇ ಶಾಸನವು (ತಿ.ತಿ.436) ಶ್ರೀರಂಗರಾಜನ ಸೇವಕರಲ್ಲಿ ಒಬ್ಬನಾದ ತಿರುಪತಿಯ ರಾಮುಡು ಎಂಬುವವನು ರಘುನಾಥಸ್ವಾಮಿಯಲ್ಲಿಟ್ಟಿದ್ದ ಅತ್ಯಂತ ಭಕ್ತಿಯನ್ನು ವಿವರಿಸುತ್ತದೆ.

ನಂತರದ ಎರಡು ಶಾಸನಗಳು ರಾಜನ ಹೆಸರು ಹೇಳದಿದ್ದರೂ ರುಧಿರೋದ್ಗಾರಿ (ಕ್ರಿ.ಶ.1683) ಹಾಗೂ ಶಕ 1606 ರ ರಕ್ತಾಕ್ಷಿಗಳ (ಕ್ರಿ.ಶ.1684) ನಾಲ್ಕನೇ ವೆಂಕಟನ ಆಳ್ವಿಕೆಯನ್ನು ಹೇಳುವುವು. ಇವೆರಡು ಶಾಸನಗಳು ಹಾಗೂ ಜಿ.ಟಿ.290 ಸೇರಿ

ಮೂರು ಶಾಸನಗಳು ಈ ಪ್ರದೇಶದ ಆಡುಭಾಷೆಯಾಗಿದ್ದ ತೆಲುಗುನಲ್ಲಿವೆ.ಶಕ 1605 ರುಧಿರೋದ್ಗಾರಿಯ ವೈಶಾಖದ ಜಿ.ಟಿ.291 ಶಾಸನವು ರಾಜಶ್ರೀ ಸಿದ್ಧಲೂರಿ ರಾಮಜಿ ಮಾದರಸುಪಂತುಲು ಗಾರು ಮಾಡಿದ ಉಭಯವನ್ನು ಕುರಿತು ಉಲ್ಲೇಖಿಸುವುದು. ಕ್ರಿ.ಶ.1684 ರ ರಕ್ತಾಕ್ಷಿ ಸಂವತ್ಸರದ ಚೈತ್ರಮಾಸದಲ್ಲಿ ತಿರುವೆಂಗಳನಾಥ ಸ್ವಾಮಿ ಹಾಗೂ ವರಾಹಸ್ವಾಮಿಯವರ ಸೇವೆಯಲ್ಲಿ 575 ಶ್ರೀರಂಗರಾಜ ವರಹಗಳ ಬೆಲೆಯ ಸರವನ್ನು ಕೊಟ್ಟಿದ್ದನ್ನು ತಿ.ತಿ.263 ವಿವರಿಸುತ್ತದೆ.

**25. ಮಹಂತರ ಕಾಲದಲ್ಲಿ ತಿರುಮಲೆ :**

ವಿಜಯನಗರ ಸಾಮ್ರಾಜ್ಯ ಖಿಲವಾಗುತ್ತಿದ್ದಂತೆ ಆಲಯ ಚರಿತ್ರೆಯನ್ನು ತಿಳಿಸುವ ಶಾಸನಗಳು ಕಡಿಮೆಯಾಗುತ್ತ ಹೋದವು. ಆಂಗ್ಲರು ದಕ್ಷಿಣಭಾರತದಲ್ಲಿ ತಳವೂರಿದ ಮೇಲೆ ಕ್ರಿ.ಶ.1801 ರಲ್ಲಿ ತಮ್ಮ ಆಡಳಿತ ಪ್ರಾಂತ್ಯಗಳಲ್ಲಿನ ದೇವಾಲಯಗಳ ಆಡಳಿತವನ್ನೂ ವಶಪಡಿಸಿಕೊಂಡು ಆಲಯಗಳ ಆದಾಯವನ್ನೂ, ರಾಜ್ಯದ ಸಾಧಾರಣ ಆದಾಯದಲ್ಲಿಯೇ ಸೇರಿಸಿದರು. ನಂತರ 19 ನೇ ಶತಮಾನ ದಲ್ಲಿ, ಅವರು ಭಾರತದ ಧಾರ್ಮಿಕ ಸಂಸ್ಥೆಗಳ ಆಡಳಿತವನ್ನು ಬಿಟ್ಟು ಬಿಡಬೇಕೆಂದುಕೊಂಡಾಗ ತಿರುಮಲೆಯ ಶ್ರೀ ವೆಂಕಟೇಶ್ವರಸ್ವಾಮಿ ಆಲಯ ಹಾಗೂ ತಿರುಪತಿ ತಿರುಚಾನೂರು ಆಲಯಗಳ ಆಡಳಿತವನ್ನು 1843 ರಲ್ಲಿ ಹತಿರಾಮಜೀ ಮಠದ ಅಂದಿನ ಮಹಂತ ಸೇವಾದಾಸಜೀ ಅವರಿಗೆ ಉತ್ತರ ಆರ್ಕಾಟ್ ಜಿಲ್ಲಾಧಿಕಾರಿಯ ಒಂದು ಸನ್ನದಿನ ಮೂಲಕ ಒಪ್ಪಿಸಿದರು.

ಹೀಗೆ ಆಲಯಗಳ ಆಡಳಿತ ಹತಿರಾಮಜೀ ಮಠದ ಮಹಂತರ ಹಸ್ತಾಂತರವಾದ ಮೇಲೆ ವಿಚಾರಣ ಕರ್ತರಾಗಿ ಅವರು ಕಾಲದಿಂದ ಕಾಲಕ್ಕೆ ಆಲಯಗಳ ಜೀರ್ಣೋದ್ಧಾರ ಕಾರ್ಯಗಳು,ಹೊಸ ನಿರ್ಮಾಣಗಳನ್ನು ಕೈಗೆತ್ತಿಕೊಂಡರು. ಶಕವರ್ಷ 1771 ರ ಸೌಮ್ಯ ಸಂವತ್ಸರದ ಭಾದ್ರಪದದಲ್ಲಿ (1849 ಆಗಸ್ಟ್ 31) ಮಹಂತ ಸೇವಾದಾಸನು ಒಂಭತ್ತು ತೀರ್ಥಗಳನ್ನು ಹೊಂದಿದ್ದ ಸ್ವಾಮಿ ಪುಷ್ಕರಿಣಿಯನ್ನು ಜೀರ್ಣೋದ್ಧಾರಗೊಳಿಸಿದ ಬಗೆಯನ್ನು ತಿ.ತಿ.350 ದಾಖಲೆಗೊಳಿಸುತ್ತದೆ.ಜೊತೆಗೇ ಆತ ಜಲಕೇಳಿ ಮಹೋತ್ಸವ ವನ್ನು ಪುನಃಪ್ರಾರಂಭಿಸಿದ ನೆಂದು ತಿಳಿಸಿದೆ. ಇದೇ ಸೇವಾದಾಸನು ಆಲಯದ ಹಲವಾರು ಭಾಗಗಳನ್ನು ಸರಿಪಡಿಸಿದನೆಂದು ಶ್ರೀ ವೆಂಕಟೇಶ್ವರಸ್ವಾಮಿಯ ಮಹಾದ್ವಾರ ಗೋಪುರದ ಮೇಲಿನ ಗಾರೆಯಲ್ಲಿನ ತೆಲುಗು ಶಾಸನವು ತಿಳಿಸುತ್ತದೆ.2-2-1865 ರಲ್ಲಿನ ರಕ್ತಾಕ್ಷಿ ಸಂವತ್ಸರದ ಮಾಘಮಾಸದಲ್ಲಿ ಇವನ ಉತ್ತರಾಧಿಕಾರಿಯಾದ ಇವನ ಶಿಷ್ಯನೇ ಆದ ಮಹಂತ ಧರ್ಮದಾಸಜೀಯು ಮಠದಲ್ಲಿನ ತನ್ನ ಗುರುವಾದ ಸೇವಾದಾಸನು ಸಮಾಧಿಯಾದ ಸ್ಥಳದ ಬೃಂದಾವನದಲ್ಲಿ ಹಾಕಿಸಿದ ಶಾಸನವು ಸೇವಾದಾಸನು ಅನಭಿಹಾನಂದಜೀಯ ಶಿಷ್ಯನೆಂದು (ಜಿ.ಟಿ.283) ಹೇಳುತ್ತದೆ. ಈ ಧರ್ಮದಾಸಜೀಯು ಕಪಿಲತೀರ್ಥದ ಪುಷ್ಕರಿಣಿಯನ್ನೂ ಅದರ ಸುತ್ತಲ ಮಂಟಪಗಳನ್ನೂ ರಿಪೇರಿ ಮಾಡಿದನೆಂದು 1865-2-10 ರಲ್ಲಿನ ಜಿ.ಟಿ.209 ತಿಳಿಸುತ್ತ, ತಿರುಮಲೆಯ ಆಲಯದ ಪಡಿಕಾವಲಿ ಗೋಪುರದ ಹೊರಗೋಪುರವನ್ನು, ಶೇಷಗಿರಿವಾಸನ ಸೇವೆಯಲ್ಲಿ ನಿರ್ಮಿಸಿದನೆಂದು ಹೇಳುತ್ತದೆ.(ತಿ.ತಿ.322- 1878-7-11) ಆಲಯದ ತೀರ ಈಚಿನ ಶಾಸನವೆಂದರೆ ತಿರುಮಲೆಯ ಆಲಯದ ಗರ್ಭಗುಡಿಯ ವಿಮಾನದ ಮೇಲೆ ಕನಕ ಕಲಶವನ್ನು ಮಹಂತ ಪ್ರಯಾಗದಾಸನ ಸಹೋದರ ಶಿಷ್ಯನಾದ ರಾಮಲಕ್ಷ್ಮಣದಾಸನು ಕೀಲಕ ಸಂವತ್ಸರದ ಆಶ್ವಯುಜದಲ್ಲಿ (1908-9-30) ಸ್ಥಾಪಿಸಿದನೆಂದು ತಿಳಿಸುವ ತಿ.ತಿ.240.

**26. ಅರ್ವಾಚೀನ ತಿರುಪತಿ :**

ವಿಚಾರಣ ಕರ್ತ ಮಹಂತರ ಆಳ್ವಿಕೆಯು ಧರ್ಮಕರ್ತರ ಸಮಿತಿ ವ್ಯವಸ್ಥೆಗೆ ಪರಿವರ್ತಿಸಿದಾಗ 1933 ರಲ್ಲಿ ಮಠದ ಆಡಳಿತ ಕೊನೆಯಾಯಿತು.ನಂತರ 1951 ರಲ್ಲಿ ಹಿಂದೂ ಧರ್ಮ ದತ್ತಿ ಸಂಸ್ಥೆಗಳ ಕಾನೂನು ಹಾಗೂ 1966 ರ ಆಂಧ್ರಪ್ರದೇಶದುಜರಾಯಿ ಶಾಸನಗಳ ಪ್ರಕಾರ ಸಾರ್ವಜನಿಕಾಭಿಪ್ರಾಯವನ್ನು ಪ್ರತಿನಿಧಿಸುವ ಒಂದು ಧರ್ಮಕರ್ತರ ಮಂಡಳಿಗೆ ಆಡಳಿತವನ್ನು ಒಪ್ಪಿಸಾಯಿತು.

1979 ರಲ್ಲಿ ತಿರುಮಲ ತಿರುಪತಿ ದೇವಸ್ಥಾನಗಳ ಕಾಯದೆಯುಂಟಾಗಿ ಆಲಯಗಳ ಆಡಳಿತ ಸ್ವಾಯತ್ತವಾಗಿ ಧರ್ಮಕರ್ತರುಮಂಡಳಿಯೂ ಆಡಳಿತ ಸಮಿತಿಯೂ ಏರ್ಪಾಡಾದವು. ಇದರಿಂದಾಗಿ ಆಲಯಗಳ ಆಡಳಿತ ಸ್ವಯಂಪೂರ್ಣವಾಗಿರುವ ವ್ಯವಸ್ಥೆಯಾಗಿದೆ

ಹೀಗಾಗಿ ಆಲಯದ ಚರಿತ್ರೆಯನ್ನು ತಿಳಿಯಲು ಇಲ್ಲಿನ ಶಾಸನಗಳು ಮುಖ್ಯ ಆಧಾರವಾಗಿವೆ. ಕ್ರಿ.ಶ.9 ನೇ ಶತಕದ ವರೆಗಿನ ಸಾಹಿತ್ಯಕ ಆಧಾರಗಳೊಡನೆ ಆಲಯವನ್ನು ಕ್ರಿಸ್ತಶಕದಾರಂಭದಿಂದ ಇಂದಿನವರೆಗೆ ಗಮನಿಸಬಹುದಾಗಿದೆ.

## ಅಧ್ಯಾಯ - 4

# ತಿರುಮಲೆಯ ಆಲಯ ವಿವರ

### 1. ಪೀಠಿಕೆ:

ಶತಮಾನಗಳ ಕಾಲಾವಧಿಯಲ್ಲಿ ತಿರುಮಲೆಯ ಶ್ರೀ ವೆಂಕಟೇಶ್ವರಸ್ವಾಮಿ ಆಲಯವು ಹಲವಾರುಬಾರಿ ಹತ್ತು ಹಲವು ಹೆಚ್ಚಿನ ನಿರ್ಮಿತಿಗಳನ್ನು,ಪರಿವರ್ತನೆಗಳನ್ನು ಹೊಂದಿ ಮುಂದುವರಿದಿದೆ. ಇದು ಮೊದಲಬಾರಿ ನಿರ್ಮಾಣವಾದಾಗ ಪ್ರಾಯಶಃ ಒಂದು ಗರ್ಭಗುಡಿ, ಒಂದು ಮುಖಮಂಟಪ,ಜೊತೆಗೇ ಅಂತರಾಳ ಪ್ರದಕ್ಷಿಣಾಪಥಗಳನ್ನು ಮಾತ್ರವೇ ಹೊಂದಿದ್ದ ಸರಳ ವೇದಿಯಾಗಿರಬೇಕು. ಆಲಯದಲ್ಲಿ ದೊರೆತಿರುವ ಅಸಂಖ್ಯ ಶಾಸನಗಳು ನಂತರದ ಕಾಲಘಟ್ಟಗಳಲ್ಲಿ ನಡೆದ ಅನೇಕ ಹೊಸ ಸೇರ್ಪಡೆ, ಪುನರ್ನಿರ್ಮಾಣ, ಮೊದಲಾದವುಗಳ ಬಗ್ಗೆ ತಿಳಿಸಿಕೊಡುತ್ತವೆ. ಕುತೂಹಲಕರ ಅಂಶವೆಂದರೆ ಶ್ರೀ ವೆಂಕಟೇಶ್ವರಸ್ವಾಮಿಯನ್ನು ಹೆಸರಿಸುವ ಮೊದಲ ಶಾಸನವು ಆಧುನಿಕ ತಿರುಚಾನೂರು ಆದ ತಿರುಚೋಕಿನೂರಿನಲ್ಲಿನದಾಗಿದ್ದು, ಇದು ವೆಂಕಟಾದ್ರಿ ಬೆಟ್ಟದ ಮೇಲಿನ ತಿರುಮಲೆಯ ಆಲಯಕ್ಕೆ ಸಂಬಂಧಿಸಿದ್ದಲ್ಲ. ಕ್ರಿ.ಶ.826 ರಲ್ಲಿನ- ಕೋ ವಿಜಯದಂತಿವರ್ಮನ ಆಳ್ವಿಕೆಯ 51 ನೇ ವರ್ಷದ ತಿರುಚೋಕಿನೂರಿನ ತಿರುವಿಳಂಕೋಯಿಲಿನಲ್ಲಿದ್ದ ತಿರುವೆಂಗಡತ್ತುಪ್ಪೆರುಮಾನಡಿಗಳ ಬಗ್ಗೆ ಪರೋಕ್ಷವಾಗಿ ತಿಳಿಸುತ್ತದೆ. ಶಾಸನದ ಪದಪ್ರಯೋಗದಿಂದಾಗಿ, ತಿರುಚಾನೂರಿನಲ್ಲಿದ್ದ ಈ ದೈವ ತಿರುವೆಂಗಡದ ದೈವವನ್ನು ಪ್ರತಿನಿಧಿಸುತ್ತಿದ್ದಿರಬೇಕೆಂದು ಖಚಿತವಾಗುತ್ತದೆ. 13 ನೇಶತಮಾನದಲ್ಲಿ ತಿರುಮಲೆಯ ಆಲಯದ ಜೀರ್ಣೋದ್ಧಾರ ನಡೆದಾಗ ಗರ್ಭಗುಡಿಯ ಹೊರಗೋಡೆಗಳನ್ನು ಉಳಿಸಿಕೊಂಡು ಅದನ್ನು ಮುಚ್ಚುವಂತೆ ನಿರ್ಮಾಣ ಕಾರ್ಯ ನಡೆದದ್ದರಿಂದ,ಇಂದು ಮೂಲಗರ್ಭಗುಡಿಯ ಹೊರಗೋಡೆಗಳನ್ನು ಪರೀಕ್ಷಿಸಿ, ಇದಕ್ಕೂ ಮೊದಲು ಆಲಯ ಯಾವ ರೀತಿ ನಿಂತಿದ್ದಿತೆಂಬುದನ್ನು ನಿರ್ಧರಿಸುವುದು ಸಾಧ್ಯವಿಲ್ಲ.

ಈಗಣ ದೇವಾಲಯ ಹಲವಾರು ನಿರ್ಮಾಣಗಳು,ಗೋಪುರಗಳು,ಪ್ರಕಾರಗಳನ್ನು ಹೊಂದಿದ್ದು,ಆಲಯದ ಕಟ್ಟಡಗಳ ಹರವು, ಸಾಮಾನ್ಯ ವಾಸ್ತು ವಿನ್ಯಾಸಗಳನ್ನು ತಿಳಿಯುವುದು,ಒಟ್ಟು ಆಲಯದ ಅಧ್ಯಯನದ ದೃಷ್ಟಿಯಿಂದ ಅತ್ಯಗತ್ಯವಾಗುತ್ತದೆ.

ಮೊದಲೇ ತಿಳಿಸಿರುವಂತೆ ಹಲವು ಎಕರೆ ಸ್ಥಳದಲ್ಲಿ ಹರಡಿರುವ ಈ ಆಲಯವು 415 ಅಡಿ ಉದ್ದ ಹಾಗೂ 263 ಅಡಿ ಅಗಲ ವಾಗಿದೆ. ಶ್ರೀ ವೆಂಕಟೇಶ್ವರಸ್ವಾಮಿ ಕೇಂದ್ರವಾದಂತೆ ಮೂರು ಒಂದರೊಳಗೊಂದು ಪ್ರಾಕಾರಗಳಲ್ಲಿ ಹರಡಿದೆ. ಅತಿ ಒಳ ಪ್ರಾಕಾರವನ್ನು ಮುಕ್ಕೋಟಿ ಪ್ರದಕ್ಷಿಣಾಪಥವೆಂದು ಕರೆಯಲಾಗುತ್ತಿದ್ದು, ದಕ್ಷಿಣ,ಪಶ್ಚಿಮ,ಉತ್ತರಗಳಲ್ಲಿ ಮಾತ್ರ ನಿರ್ಮಾಣವಾಗಿದ್ದು ಮುಕ್ಕೋಟಿ ಏಕಾದಶಿಯಂದು-ವೈಕುಂಠ ಏಕಾದಶಿಯಂದು- ಮಾತ್ರವೇ (ಸಾಮಾನ್ಯವಾಗಿ ಡಿಸೆಂಬರ್ ಕೊನೆಗೆ ಅಥವಾ ಜನವರಿ ಮೊದಲಿಗೆ ಬರುವಂತಹದು) ಭಕ್ತರು ಪ್ರದಕ್ಷಿಣೆ ಮಾಡಲು ತೆರೆಯಲಾಗುತ್ತದೆ.

### 2. ದೇವಾಲಯದ ಹೊರಗಡೆಯ ನಿರ್ಮಾಣಗಳು:

ಬೆಟ್ಟದ ಮೇಲಿರುವ ಆಲಯಕ್ಕೆ ಬರುವಾಗ ಹಳೆಯ ದಾರಿಯಲ್ಲಿ ದಕ್ಷಿಣಕ್ಕೆ ಮುಖಮಾಡಿದ ಜೀರ್ಣಗೊಂಡ ಅರ್ಧಮಂಟಪದ ಗೋಪುರದ್ವಾರದಲ್ಲಿ ಹೊರಟು ಉತ್ತರಕ್ಕೆ ಬಂದರೆ ಅಲ್ಲಿ ಮತ್ತೊಂದು ಗೋಪುರವೂ ಅಂಗಳವೂ-ಇವೂ ಪ್ರಾಚೀನವೇ-ಕಂಡುಬರುತ್ತವೆ.

ಈ ದ್ವಾರಗೋಪುರವನ್ನು ದಾಟಿದರೆ ಪೂರ್ವದಿಂದ ಪಶ್ಚಿಮಕ್ಕೆ ಆಲಯದ ಮಹಾದ್ವಾರವನ್ನು ಸೇರುವ ಸನ್ನಿಧಿ ಬೀದಿಗೆ ಬರುತ್ತವೆ. (ಇವೆರಡೂ ಗೋಪುರಗಳೂ ಈಗ ಇಲ್ಲ. ತಿರುಮಲೆಯಲ್ಲಿನ ಕಲ್ಯಾಣಕಟ್ಟೆ ಹಾಗೂ ಹಳೆಯ ಅನ್ನದಾನಯೋಜನೆಯ ನಡುವಣ ತೋರಣ ದ್ವಾರ ಮಂಟಪ-ವೈಕುಂಠತೋರಣ-ಯಾತ್ರಿಕರನ್ನು ಸ್ವಾಗತಿಸುತ್ತದೆ.) ಅದನ್ನು ದಾಟಿ ನಡೆದರೆ ಸನ್ನಿಧಿಯಲ್ಲಿ ಆಲಯಕ್ಕೆ ಎದುರಾಗಿ ಆಂಜನೇಯ ಸ್ವಾಮಿ ಆಲಯ.



**ತಿರುಮಲೆಯ ದೇವಾಲಯ:**

| | |
|---|---|
| 1. ಮಹಾದ್ವಾರ ಗೋಪುರ | 2. ಪ್ರತಿಮಾ ಮಂಟಪ |
| 3. ರಂಗನಾಯಕ ಮಂಟಪ | 4. ಊಂಜಲ್ ಮಂಟಪ (ಸಾಳುವ ನರಸಿಂಹ ನಿರ್ಮಿತ) |
| 5. ತಿರುಮಲರಾಯ ಮಂಟಪ | 6. ಧ್ವಜಸ್ತಂಭ ಮಂಟಪ |
| 7. ಮುಕುರ ಮಂಟಪ | 8. ಪೂಲಬಾವಿ |
| 9. ಸಂಪಂಗಿ ಪ್ರದಕ್ಷಿಣ | 10. ಬೆಳ್ಳಿಯ ಬಾಗಿಲು |
| 11. ವರದರಾಜಸ್ವಾಮಿ ಗುಡಿ | 12. ಪೋಟು |
| 13. ಬಂಗಾರದ ಬಾವಿ | 14. ಕಲ್ಯಾಣ ಮಂಟಪ |
| 15. ಮಧ್ಯ ಮಂಟಪ | 16. ಪಶ್ಚಿಮದ ಮಂಟಪಗಳು |
| 17. ತಾಳ್ಳಪಾರ ಅರ | 18. ರಾಮಾನುಜರ ಗುಡಿ |
| 19. ನರಸಿಂಹಸ್ವಾಮಿ ಗುಡಿ | 20. ವಿಮಾನ ಪ್ರದಕ್ಷಿಣ |
| 21. ತಿರುಮಾಮಣಿ ಮಂಟಪ | 22. ಗರುಡಾಳ್ವಾರ್ ಸನ್ನಿಧಿ |

23. ಬಂಗಾರು ವಾಕಿಲಿ 24. ಹುಂಡಿ
25. ಸ್ನಪನ ಮಂಟಪ 26. ರಾಮರ್ ಮೇಡೈ
27. ಸಾಯಣ ಮಂಟಪ 28. ಗರ್ಭಗುಡಿ, ಆನಂದನಿಲಯ
29. ಮುಕ್ಕೋಟಿ ಪ್ರದಕ್ಷಿಣ 30. ವಿಶ್ವಕ್ಸೇನರ ಗುಡಿ

ವಿಶಾಲವಾದ ಬಯಲಿನಲ್ಲಿ ಸ್ವಲ್ಪ ತಗ್ಗಿನಲ್ಲಿ ಆಲಯದ ಮುಖದ್ವಾರ. ಪೆರಿಯ ತಿರುವಾಸಲ್ ಅಥವಾ ಪಡಿಕಾವಲಿ ಗೋಪುರ. ಈ ಬಯಲಿನ ಪೂರ್ವದ ಕೊನೆಯಲ್ಲಿ ಆಂಜನೇಯ ಮಂದಿರವೂ ಎಡಬಾಗದಲ್ಲಿ ಸಾವಿರಕಂಬದ ಮಂಟಪವೂ ಇದ್ದು (ಈಗ ವಿಶಾಲವಾದ ಬಯಲು 2015) ರಸ್ತೆಯ ಉತ್ತರಕ್ಕೆ ಪೆರಿಯ ಜಿಯರ್ ಮಠವೂ ಪಶ್ಚಿಮದಲ್ಲಿ ಮಹಾದ್ವಾರ ಗೋಪುರದ ಎದುರಿಗೆ ಕಿರಿದಾದರೂ ಎತ್ತರವಾದ ನಾಲ್ಕು ಕಂಭಗಳ ಒಂದು ಮಂಟಪ-ಪ್ರಾಚೀನಕಾಲದಲ್ಲಿ ಉತ್ಸವ ಸಂದರ್ಭಗಳಲ್ಲಿ ಬಳಸಲಾಗುತ್ತಿದ್ದ ಮಂಟಪ ಇದೆ. ಈ ಮಂಟಪದಿಂದ ಕೆಳಕ್ಕೆ ಆಲಯದ ಮುಂಭಾಗಕ್ಕೆ ಆಲಯದ ಪೂರ್ವಕ್ಕೆ ಬರುವಂತೆಯೂ,ಉತ್ತರದಿಂದ ದಕ್ಷಿಣಕ್ಕೆ ನಡೆಯುವ ರಥಬೀದಿಯನ್ನು ಸೇರುವಂತೆಯೂ ಇರುವ ಮೆಟ್ಟಲುಗಳಿವೆ. (ಈಗ ಈ ಮಂಟಪ ಕಾವಲು ಗೋಪುರವಾಗಿದ್ದು ರಥಬೀದಿಯಲ್ಲಿ ಸೇರಿಹೋಗಿದೆ.2015)

ದೇವಾಲಯದ ಎದುರಿಗೆ ನಿಂತುಕೊಂಡರೆ ಆಲಯದ ಉತ್ತರದ ಪ್ರಾಕಾರದ ಗೋಡೆಗೆ ಹೊಂದಿದಂತೆ ಒಂದು ಕಿರಿಯ ಕೊಳ-ಸ್ವಾಮಿ ಪುಷ್ಕರಿಣಿ-ಎಂಬ ತಿರುಕೋನೇರಿಯಿದೆ. ಈ ಪುಷ್ಕರಿಣಿಯ ವಾಯವ್ಯದಲ್ಲಿ ಉತ್ತರ ರಥ ಬೀದಿಯ ಮಧ್ಯದಲ್ಲಿ ಶ್ರೀವರಾಹಸ್ವಾಮಿ ದೇವಾಲಯವಿದೆ.

ಉತ್ತರ ದಕ್ಷಿಣ ರಥಬೀದಿಗಳು ಪ್ರತಿಯೊಂದೂ 800 ಅಡಿ ಉದ್ದವಿದ್ದರೆ ಪಶ್ಚಿಮ ರಥಬೀದಿ 900 ಅಡಿ ಉದ್ದವಾಗಿದೆ. ಆಲಯದ ಹಾಗೂ ಪುಷ್ಕರಿಣಿಯ ಪೂರ್ವಕ್ಕೆ ಇರುವ ಪೂರ್ವದ ರಥಬೀದಿ ಸುಮಾರು 750 ಅಡಿ ಉದ್ದವಿದೆ. ಈ ವಿಸ್ತಾರ ವಾದ ಹಾಸು ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರು ಆಗಿದ್ದು ಈ ನಾಲ್ಕು ಬೀದಿಗಳ ನಡುವಣ ನೆಲ ತಗ್ಗಿನಲ್ಲಿದೆ.

ರಥಬೀದಿಗಳ ನಡುವೆ ಇರುವ ಹದಿನಾರು ಎಕರೆ ಸ್ಥಳದಲ್ಲಿ ಶ್ರೀ ವೆಂಕಟೇಶ್ವರಸ್ವಾಮಿ ಆಲಯವು 2.2ಎಕರೆಗಳ ಸ್ಥಳ ಹೊಂದಿದೆ. ಸ್ವಾಮಿಪುಷ್ಕರಿಣಿ 1.5 ಎಕರೆಯಿದ್ದು,ಪಾತ ಪುಷ್ಕರಿಣಿ ಎನ್ನುವ ಹೆಸರಿನಲ್ಲಿದ್ದ ನಂತರದಲ್ಲಿ ಹೂದೋಟವಿದ್ದ ಈಗಿನ ಪಾಪವಿನಾಶನಂ ಷೆಡ್‌ಗಳ 2.5 ಎಕರೆ ಸ್ಥಳದಲ್ಲಿದ್ದು,ಮಿಕ್ಕ ಹತ್ತು ಎಕರೆಯಲ್ಲಿ ಹಲವಾರು ಮಠಗಳು ಮನೆಗಳು ನೆಲೆಯಾಗಿವೆ. ಮಾಡವೀಧಿಗಳಲ್ಲಿ ರಾಜಾಶ್ರಯದಲ್ಲಿ ಶತಮಾನಗಳ ಕಾಲಾವಧಿಯಲ್ಲಿ ಸ್ಥಾಪಿತವಾದ ಸತ್ರಗಳು ಮಠಗಳು ಇವೆ.(ಈಗ ಇವೆಲ್ಲವನ್ನೂ ತೆರವುಗೊಳಿಸಿ, ಬಯಲನ್ನುಂಟಾಗಿಸಿ ಯಾತ್ರಿಕರಿಗೆ ಕುಳಿತು ಮೆರವಣಿಗೆ ನೋಡಲು ಏರ್ಪಾಡು ಮಾಡಲಾಗಿದೆ.-2015)

**3. ಸಾವಿರ ಕಾಲಿನ ಮಂಟಪ :**

ಇದು ಆಯತಾಕಾರದಲ್ಲಿದ್ದು ಪಶ್ಚಿಮಕ್ಕೆ ಆಲಯದ ಪೂರ್ವ ರಥ ಬೀದಿಯೂ, ಉತ್ತರದಲ್ಲಿ ಸನ್ನಿಧಿಬೀದಿಯೂ,ಪೂರ್ವದಲ್ಲಿ ಈಗಿನ ಹೊಸ ವೈಕುಂಠ ತೋರಣದ ಬೀದಿಯೂ,ದಕ್ಷಿಣಕ್ಕೆ ಹತಿ ರಾಮಜೀ ಮಠವೂ ಇದೆ. ಕ್ರಿ.ಶ.1472 ರಲ್ಲಿ ವಿಜಯನಗರದ ಸಾಮ್ರಾಟನಾದ ಸಾಳುವನರಸಿಂಹನು ಆಲಯಕ್ಕೆ ಅನುಬಂಧವಾಗಿ ಮಂಟಪ,ಪ್ರಾಕಾರ,ಗೋಪುರಗಳನ್ನು ನಿರ್ಮಿಸಲು ದುರ್ಗಸಮುದ್ರವೆಂಬ ಗ್ರಾಮವನ್ನು ನೀಡಿದ್ದರಿಂದ ಬಂದ ಆದಾಯದಲ್ಲಿ ಈ ಮಂಟಪವನ್ನು ನಿರ್ಮಿಸಲಾಯಿತು. ಈ ಮಂಟಪವನ್ನು ಮೊದಲಿಗೆ ಸದಸ್‌ಹಾಲ್ ಆಗಿಯೂ,ಕಲ್ಯಾಣಕಟ್ಟೆಯಾಗಿಯೂ,ಬಳಸಲಾಗುತ್ತಿತ್ತು,ಈಗ ಬೆಟ್ಟದ ಮೇಲಣ ಆಲಯ ಪುರಾವಸ್ತು ಪ್ರದರ್ಶನ ಶಾಲೆಯೂ,(ಈಗ ಈ ಸಾವಿರ ಕಾಲಿನ ಮುಟಪ ಇಲ್ಲ. 2015) ಆಗಿದೆ.

**4. ಹತಿರಾಮಜೀ ಮಠ :**

ತಿರುಮಲೆಯ ಆಲಯ ಪ್ರಾಂತ್ಯದಲ್ಲಿ ಈ ಮಠವು ಈಗಲೂ ಒಂದು ಪ್ರಮುಖ ಗುರುತು ಆಗಿದೆ. ಈ ಮಠದ ಹಲವಾರು ಅಧಿಪತಿಗಳ ಸಮಾಧಿಗಳೂ,ದಶಾವತಾರವೇ ಮೊದಲಾದ ಹಲವಾರು ಅಪೂರ್ವ ಶಿಲ್ಪಗಳು ಇಲ್ಲಿವೆ. ಶ್ರೀ ವೆಂಕಟೇಶ್ವರಸ್ವಾಮಿಯು ಈ ಮಠದ ಒಬ್ಬಾನೊಬ್ಬ ಪ್ರಾಚೀನ ಮಠಾಧಿಪತಿ ಯೊಡನೆ ಲೆತ್ತವನಾಡುತ್ತಿರುವ ಅಪೂರ್ವವಾದ ವರ್ಣ ಚಿತ್ರವೂ ಇದೆ.

**5. ಪ್ರಾಕಾರಗಳು - ಪ್ರದಕ್ಷಿಣಾ ಪಥಗಳು:**

ಆಲಯವು ಮೂರು ಆವರಣ ಗೋಡೆಗಳಿಂದ ಸುತ್ತುವರೆದಿದೆ. ಇವುಗಳಲ್ಲಿ ಅತಿಕಿರಿಯದು ಎಂದರೆ ಗರ್ಭಗುಡಿ ಹಾಗೂ ಮೊದಲ ಪ್ರದಕ್ಷಿಣಾ ಪಥದ ನಡುವೆಯಿದೆ. ಈ ಪ್ರದಕ್ಷಿಣಾ ಪಥಗಳು ಎಂದರೆ--

1) **ಮುಕ್ಕೋಟಿ ಪ್ರದಕ್ಷಿಣ**-ಗರ್ಭಗುಡಿಯ ಅತಿ ಸಮೀಪದ್ದು. ಇದನ್ನು ವೈಕುಂಠ ಏಕಾದಶಿಯಂದು ಮಾತ್ರವೇ ಭಕ್ತರಿಗಾಗಿ ತೆರೆಯಲಾಗುತ್ತದೆ.

2) **ವಿಮಾನ ಪ್ರದಕ್ಷಿಣ**-ಇದು ಈಗ ಪ್ರಮುಖವಾದ ಪ್ರದಕ್ಷಿಣಾಪಥವಾಗಿದ್ದು ಇದರ ಉತ್ತರದ ಕಡೆಯಿಂದ ಗರ್ಭಗುಡಿಯ ಮೇಲಿನ ಆನಂದನಿಲಯ ವಿಮಾನವನ್ನೂ ವಿಮಾನವೇಂಕಟೇಶ್ವರನನ್ನೂ ನೋಡಲಾಗುತ್ತದೆ.

3) **ಸಂಪಂಗಿ ಪ್ರದಕ್ಷಿಣ**- ದೇವಾಲಯದ ಒಳಗಡೆಯ ಅತಿ ದೊಡ್ಡ ಪ್ರದಕ್ಷಿಣಾಪಥವಾಗಿದ್ದು,ಯಾತ್ರಿಕರು ಇದನ್ನು ಬಳಸಲಾಗದು. (ಇಲ್ಲಿನ ಒಂದು ಭಾಗದಲ್ಲಿ ಉತ್ತರ ಪಥದಲ್ಲಿ ಆಲಯದ ಲಾಡು ಪ್ರಸಾದಗಳನ್ನು ಮಾಡುವ ಅಡಿಗೆಯ ಮಂಟಪ ಗಳೂ, ದಕ್ಷಿಣದಲ್ಲಿ ಸ್ವಾಮಿಯ ಕಲ್ಯಾಣೋತ್ಸವವನ್ನು ನಡೆಸುವ ಕಲ್ಯಾಣಮಂಟಪವೂ,ಪಶ್ಚಿಮದಲ್ಲಿ ಉಗ್ರಾಣಗಳೂ ಇವೆ)

**6. ಹೊರಗೋಪುರ :**

ಹೊರದ್ವಾರ ಗೋಪುರವು ಚೌಕೋನ ತಳಹದಿಯಲ್ಲಿ ಪೂರ್ವಪಶ್ಚಿಮ-32 ಅಡಿಗಳು ಹಾಗೂ ಉತ್ತರದಕ್ಷಿಣ-38 ಅಡಿಗಳ ಅಳತೆಯಲ್ಲಿ ನಿರ್ಮಾಣವಾಗಿದೆ. ಇದರ ನಡುವೆಯಿರುವ ತಿರುವಾಸಲ್ ಅಥವಾ ಮಹಾದ್ವಾರವು 11 ಅಡಿ ಅಗಲವಾಗಿದೆ. ಎರಡೂ ಕಡೆಗಳಲ್ಲಿಯೂ ಕಲ್ಲಿನಲ್ಲಿ ಕೆತ್ತಿದ ಸಮಾನಾಂತರ ದ್ವಾರಬಂಧಗಳಿವೆ. ಹೊಸ್ತಿಲು,ನಾಗವಾಸವೆಲ್ಲವೂ ಕಲ್ಲಿನ ಕೆತ್ತನೆಯಮುಖದ್ವಾರವು ಮುಚ್ಚಿಕೊಳ್ಳುವ, ಕೆತ್ತನೆಯ ಕೆಲಸದ ಮರದ ಹಲಗೆಗಳಿಂದಾಗಿದ್ದು ಈ ಹಲಗೆಗಳನ್ನು ಕಲಾತ್ಮಕವಾದ ಕಬ್ಬಿಣದ ಮೊಳೆಗಳಿಂದ ಬಲವಾಗಿ ಕೂಡಿಸಲಾಗಿದೆ. ದ್ವಾರದ ಎಡಗಡೆಯಲ್ಲಿ ಒಂದು ಕಿರುಬಾಗಿಲೂ ಇದೆ. ಹೊರಗೋಪುರದಿಂದುಂಟಾಗುವ ಆಲಯ ಪ್ರಾಕಾರದ ಗೋಡೆ ಪೂರ್ವ ಪಶ್ಚಿಮ 414 ಅಡಿಗಳೂ,ಉತ್ತರ ದಕ್ಷಿಣ 263 ಅಡಿಗಳೂ ಆಗಿವೆ.

ಗೋಪುರದ ತಳಗಟ್ಟಿನಲ್ಲೂ,ಗೋಡೆಗಂಬಗಳಲ್ಲಿಯೂ ಉತ್ತಮವಾದ ಕೆತ್ತನೆಕೆಲಸವಿದೆ. ಗೋಪುರದ ತಳಭಾಗವೂಗೋಡೆ ಗಂಬಗಳ ಕೆತ್ತನೆಯೂ ಅರ್ವಾಚೀನ ಚೋಳರ ಕಾಲದ ಶಿಲ್ಪಕಲೆಯನ್ನು ಪ್ರತಿನಿಧಿಸುತ್ತದೆ. ಪ್ರದಕ್ಷಿಣಾಪಥದ ಮುಂಭಾಗದಲ್ಲಿ ಬಾಗಿಲ ದಾಲಮಂದ್ರದ ಬಲಭಾಗದಲ್ಲಿ ತ್ರಿಭುವನ ಚಕ್ರವರ್ತಿ ಶ್ರೀ ಯಾದವರಾಯ ನರಸಿಂಗದೇವನ ಆಳ್ವಿಕೆಯ 12 ನೇ ವರ್ಷದಲ್ಲಿಆತನ ಪತ್ನಿ ಯಾದವರಾಯ ನಾಚ್ಚಿಯಾರ್, ಆಲಯದ ನಂದಾದೀಪವನ್ನು ಶಾಶ್ವತವಾಗಿ ಬೆಳಗಿಸಲು ಬೇಕಾಗುವ ತುಪ್ಪದ ಉತ್ಪಾದನೆಗಾಗಿ 62 ಹಾಲು ಕರೆಯುವ ಹಸುಗಳನ್ನೂ ಎರಡು ಗೂಳಿಗಳನ್ನು ನೀಡಿದ ವಿವರ ತಿಳಿಸುವ ಶಾಸನವಿದೆ. ಇದರ ಕಾಲ ಕ್ರಿ.ಶ.1217. ಗೋಪುರದ ತಳಗಟ್ಟಿನಲ್ಲಿ ಹದಿಮೂರನೇ ಶತಮಾನದ ಇನ್ನೂ ಹಲವಾರು ಶಾಸನಗಳು ಇವೆ.

ಗೋಪುರದ ಅಧಿಷ್ಠಾನವು ಎರಡು ಅಂತಸ್ತಿನದಾಗಿದ್ದು ದೇವಕೋಷ್ಠ ಅಥವಾ ಇನ್ನಿತರ ಶಿಲ್ಪಗಳಿಲ್ಲದ ಗೋಡೆಗಂಬಗಳ ಆಧಾರ ದಲ್ಲಿದೆ. ಕ್ರಿ.ಶ.12,13 ನೇ ಶತಮಾನದಲ್ಲಿ ಪ್ರಚಲಿತವಿದ್ದ ಗಂಟೆಯಾಕಾರದ ಬೋದಿಗೆಗಳಿವೆ. ಗೋಪುರವು ನೆಲದಿಂದ ಐವತ್ತು ಅಡಿ ಎತ್ತರಕ್ಕೇರಿದ್ದು ಇಟ್ಟಿಗೆ ಗಾರೆಗಳಿಂದಾಗಿದೆ. ದ್ವಾರಪಾಲಕರನ್ನು ಹೊಂದಿದ ಐದು ಕಿರುಬಾಗಿಲುಗಳನ್ನು ಹೊಂದಿದ

ಐದು ಅಂತಸ್ತುಗಳಾಗಿವೆ. ಗೋಪುರದ ಪ್ರತಿ ಪಾರ್ಶ್ವವೂ ಸಣ್ಣ ಸಣ್ಣ ಶಾಲಗಳು ಪಂಜರಗಳನ್ನೂ ಹೊಂದಿದೆ. ಗೋಪುರ ಶಿಖರವು ಕೀರ್ತಿಮುಖವಾಗಿದೆ.

ಗೋಪುರದಲ್ಲಿ ಹಲವಾರು ವೈಷ್ಣವ ದೇವತೆಗಳ ವಿಗ್ರಹಗಳು-ಹನುಮಂತ,ಕೇವಲ ನರಸಿಂಹ, ಲಕ್ಷ್ಮೀನರಸಿಂಹ ಮೊದಲಾದ ವಿಗ್ರಹಗಳನ್ನೊಳಗೊಂಡಿದ್ದು ಈ ಗೋಪುರ ಕಾಲದಿಂದ ಕಾಲಕ್ಕೆ ಜೀರ್ಣೋದ್ಧಾರವಾಗಿ,ಆಧುನಿಕ ವಿಕಾರವಾದ ಬಣ್ಣಗಳನ್ನು ಹೊಂದಿದೆ

**7. ಸಂಪಂಗಿ ಪ್ರದಕ್ಷಿಣ :**

ಮಹಾದ್ವಾರ ಗೋಪುರವನ್ನು ದಾಟಿದ ಒಳಬಂದರೆ ಆಲಯದ ಒಳಪ್ರಾಕಾರವನ್ನು ಸೇರಬಹುದು. ತಕ್ಷಣ ಸಿಗುವುದೆಂದರೆ ಗೋಪುರಕ್ಕೆ ಹೊಂದಿಕೊಂಡಂತಿರುವ ಎರಡೂ ರೆಕ್ಕೆಗಳಿರುವ ಕಿರಿದಾದ ಮಂಟಪ ಹಾಗೂ ಮಧ್ಯದ ಪಥ. ಇದು ಆಲಯದ ಅತಿ ದೊಡ್ಡ ಪ್ರಾಕಾರವಾಗಿದ್ದು ಆಲಯದ ಹಲವಾರು ಕಾರ್ಯಕ್ರಮಗಳು ನಡೆಯುವಂತಹ ಹಲವು ನಿರ್ಮಾಣಗಳನ್ನು ಒಳಗೊಡಿದೆ.

**8. ಪ್ರತಿಮಾ ಮಂಟಪ ಅಥವಾ ಕೃಷ್ಣರಾಯ ಮಂಟಪ :**

ದ್ವಾರಗೋಪುರಕ್ಕೆ ಹೊಂದಿಕೊಂಡಂತಿರುವ ಕಿರುಮಂಟಪ ಎರಡು ಪಾರ್ಶ್ವಪಕ್ಷಗಳಿಂದ ಕೂಡಿದ್ದು,ಪ್ರತಿ ಪಕ್ಷವೂ ನಾಲ್ಕು ಕಂಬಗಳ ಎರಡು ಸಾಲನ್ನು ಹೊಂದಿದೆ. ಹೊರಗಡೆಯ ಸಾಲಿನ ಕಂಬಗಳು ಸಾಧಾರಣವಾಗಿದ್ದು ತಳದಲ್ಲಿ ಸಾಲಕೋಷ್ಠ ಹೊದಿವೆ. ಒಳಗಡೆಯ ಸಾಲಿನ ಕಂಬಗಳು ಪ್ರಾಣಿಗಳ ಚಿತ್ರಗಳನ್ನು ಹೊಂದಿದ್ದು ಮಕರದ ಮೇಲೆ ಹಿಂಗಾಲನ್ನಿಟ್ಟು ಸವಾರನನ್ನೆತ್ತಿ ಸಿಂಹವನ್ನು ಹೊಂದಿವೆ.

ಇದನ್ನು ಪ್ರತಿಮಾಮಂಟಪವೆಂದು ಕರೆಯಲು ಕಾರಣ- ಇಲ್ಲಿ ವಿಜಯನಗರದ ರಾಜ ಶ್ರೀ ಕೃಷ್ಣದೇವರಾಯ ಹಾಗೂ ಇವನ ಪತ್ನಿಯರು ತಿರುಮಲದೇವಿ,ಚಿನ್ನಾದೇವಿಯರ ಮತ್ತು ವೆಂಕಟಪತಿಯ , ಇತರರ ಕಂಚಿನ ಪ್ರತಿಮೆಗಳನ್ನು (ಅಚ್ಯುತರಾಯ ವರದಾಜಿ ಅಮ್ಮನವರ ಮೂರ್ತಿಗಳು ಶಿಲಾಮೂರ್ತಿಗಳು)ಇಡಲಾಗಿರುವುದು.

ಕಂಬಗಳ ಕೆತ್ತನೆಯ ಶೈಲಿಯಿಂದಾಗಿ ಈ ಮಂಟಪವನ್ನು ವಿಜಯನಗರದ ಅರ್ವಾಚೀನ ಕಾಲದಲ್ಲಿ ಎಂದರೆ 16ನೇ ಶತಮಾನದಲ್ಲಿ ನಿರ್ಮಿಸಲಾಗಿದೆಯೆಂದು ಹೇಳಬಹುದು. ಈ ಮಂಟಪವು ಸುಂದರವಾಗಿದ್ದು, ರಾಮಪಟ್ಟಾಭಿಷೇಕ, ಅಶೋಕವನದಲ್ಲಿ ಸೀತೆಯನ್ನು ಸಂದರ್ಶಿಸಿದ ಆಂಜನೇಯ, ಕೃಷ್ಣಲೀಲೆಯ ಸಂದರ್ಭಗಳು - ಮೊದಲಾದ ಶಿಲ್ಪಗಳನ್ನು ಹೊಂದಿದೆ. ಎರಡು ಕಂಬಗಳ ಮೇಲೆ ವೈಷ್ಣವ ಚಿಹ್ನೆಗಳಾದ ಊರ್ಧ್ವಪುಂಡ್ರಗಳು,ಶಂಖ,ಚಕ್ರಗಳನ್ನು ಕೆತ್ತಲಾಗಿದೆ. ಈ ಮಂಟಪದಲ್ಲಿರುವ ಎತ್ತರವಾದ ಕಂಬಗಳು ಆಸಕ್ತಿದಾಯಕವಾದ ಬೋದಿಗೆಗಳನ್ನು ಹೊಂದಿದ್ದು,ಹಲವು ವ್ಯಾಳಿಗಳನ್ನು ಇನ್ನು ಕೆಲವು ಸಿಂಹಗಳನ್ನು, ಪ್ರೇಕ್ಷಕರನ್ನು ನೇರವಾಗಿ ದಿಟ್ಟಿಸುವ ಗಣಗಳನ್ನು ಇತರೆಯವು - ಹೊಂದಿವೆ.

**9. ರಂಗಮಂಟಪ :**

ಒಳಪ್ರಕಾರದ ಆಗ್ನೇಯಭಾಗದ ಮೂಲೆಯಲ್ಲಿ ರಂಗಮಂಟಪವೆಂದು ಪ್ರಸಿದ್ಧ ವಾಗಿರುವ ಹಿರಿಯ ಮಂಟಪವಿದೆ. ಇದು ಎತ್ತರದ ತಳಹದಿಯ ಮೇಲಿದ್ದು ಪೂರ್ವಪಶ್ಚಿಮಕ್ಕೆ 60 ಅಡಿಯೂ ಉತ್ತರದಕ್ಷಿಣಕ್ಕೆ 109 ಅಡಿಯೂ ಇದೆ. ಇದರ ದಕ್ಷಿಣದಲ್ಲಿ12 ಅಡಿ ಚೌಕಾಕಾರದ ಕಿರುಗುಡಿ ಒಂದಿದ್ದು ಇದನ್ನು ಶಾಶ್ವತವಾಗಿ ಬೀಗ ಹಾಕಲಾಗಿದೆ.

ಮಲ್ಲಿಕಾಫರನ ಮುಂದಾಳುತ್ವದಲ್ಲಿ ಮುಸಲ್ಮಾನ ಸೈನ್ಯವು ಶ್ರೀ ರಂಗವನ್ನು ಆಕ್ರಮಿಸಿದಾಗ ಅಲ್ಲಿನ ಶ್ರೀರಂಗನಾಥನ ಉತ್ಸವಮೂರ್ತಿಯನ್ನು ತಂದು ಇಲ್ಲಿರಿಸಿದ್ದರೆಂಬ ಕಾರಣದಿಂದಾಗಿ ಇದನ್ನು ರಂಗನಾಯಕ ಮಂಟಪವೆಂದೂ ಕರೆಯುತ್ತಾರೆ.

ಶಕ 1320 ರಿಂದ ಕ್ರಿ,ಶ,1360 ರ ಒಳಗೆ ಯಾದವರಾಜ ಶ್ರೀ ರಂಗನಾಥ ಯಾದವರಾಯನಿಂದ ಈ ಮಂಟಪವು ನಿರ್ಮಾಣ ವಾಗಿರಬೇಕು. ಆದರೆ ಈ ಅಂಶವನ್ನು ಸಮರ್ಥಿಸುವ ಯಾವ ಶಾಸನವೂ ದೊರೆಯದು. ಏನೇ ಆದರೂ ಶೈಲಿಯ

ಆಧಾರದಿಂದ ನೋಡಿದಲ್ಲಿ ಈ ಮಂಟಪವು ಕ್ರಿ.ಶ.14 ನೇ ಶತಮಾನಕ್ಕೆ ಸೇರಿದ್ದಾಗಿರದೆ, ವಿಜಯನಗರದ ಕಾಲದ ಖಚಿತ ಗುರುತುಗಳನ್ನು ಪಡೆದ ನಂತರದ ಕಾಲದ್ದಾಗಿರಬೇಕು. ವ್ಯಾಳಿ,ಸಿಂಹ,ಓಡುವ ಕುದುರೆಗಳು,ಬೋದಿಗೆಗಳು, ಸುಂದರ ಸುಯುಕ್ತ ಕಂಬಗಳು, ಸ್ಪಷ್ಟವಾಗಿ ವಿಜಯನಗರದ ಕಾಲದ ಕೆತ್ತನೆಯನ್ನು ಸೂಚಿಸುತ್ತವೆ. ಜೊತೆಗೇ ಕಂಭಗಳ ಮೇಲೆ ಕೆತ್ತಲಾಗಿರುವ ವಿಜಯನಗರದ ಅರಸರ ರಾಜಲಾಂಛನ ವರಾಹ ಮುದ್ರೆ ಈ ವಿಷಯದಲ್ಲಿ ಯಾವ ಸಂದೇಹವನ್ನೂ ಉಳಿಯಗೊಡದು,ಮೇಲ್ಚಾವಣಿಯಲ್ಲಿ ರಾಮ ರಾವಣ ಯುದ್ಧ,ಮಹಾಬಲಿ,ವಾಮನ,ರಾಮ ಲಕ್ಷ್ಮಣರ ಕಿರು ವಿಗ್ರಹಗಳೂ ಕಂಡುಬರುವಂತಿವೆ. ಹೀಗಾಗಿ ಕ್ರಿ.ಶ.15,16ನೇ ಶತಮಾನದ ವಿಜಯನಗರದ ಪ್ರೌಢಕಲಾವಂತಿಕೆಯನ್ನು ಈ ಮಂಟಪ ಎತ್ತಿತೋರುವುದು.

ಕಂಬಗಳ ಮೇಲಿನ ಅಡ್ಡ ತೊಲೆಗಳು ಅಲ್ಲಲ್ಲಿ ಎರಡನೆಯ ಹಂತವನ್ನೂ ಹೊಂದಿದ್ದು,ಮಧ್ಯದ ಸ್ಥಳದಲ್ಲಿನ ಕಪೋತಗಳಲ್ಲಿ ವೈಷ್ಣವ ಪುರಾಣಗಳ ದೃಶ್ಯಗಳು ಹಾಗೂ ನೃತ್ಯಗಳನ್ನು ಚಿತ್ರಿಸುವ ಶಿಲ್ಪಗಳಿವೆ.

ಮಂಟಪದ ದಕ್ಷಿಣದ ಕೊನೆಯಲ್ಲಿ ಒಂದು ಗುಡಿಯೂ ಒಂದು ಆವರಣವೂ ಇವೆ. ಈ ಆವರಣವು ಕಪ್ಪು ಗ್ರಾನೈಟ್ ಶಿಲೆಯಾಗಿದ್ದು ಈಗ ವಾಹನವನ್ನಿಡುವ ಸ್ಥಳವಾಗಿದೆ. ಇಲ್ಲಿನ ಗುಡಿಯು ಗರ್ಭಗುಡಿ, ಅಂತರಾಳಗಳಿಂದ ಕೂಡಿದ್ದು,ಕುಂಭಪಂಜರ, ಗೋಡೆಗಂಬ, ಸಾಲಕೋಷ್ಠಗಳಿಂದಾದ ಗೋಡೆಗಳನ್ನು ಹೊಂದಿದೆ. ಮಂದಿರದ ಮುಂಭಾಗದಲ್ಲಿ ಎರಡೂ ಕಡೆಗೆ ಸಾಲಕೋಷ್ಠವಿರುವ ದ್ವಾರವಿದೆ.ಇಡೀ ಮುಂಭಾಗವು ಸಿಂಹಲಲಾಟದ ಮೇಲಿರುವ ನಾಸಿಕಾಲಂಕೃತ ಕಪೋತದಿಂದ ಕೂಡಿದೆ.

**10. ತಿರುಮಲರಾಯ ಮಂಟಪ :**

ರಂಗ ಮಂಟಪದ ಪಕ್ಕದಲ್ಲಿ,ಒಳಪ್ರಾಕಾರದ ಗೋಡೆಯ ಪೂರ್ವಕ್ಕೆ12 ಅಡಿ ದೂರದಲ್ಲಿ ಪೂರ್ವಪಶ್ಚಿಮ 40 ಅಡಿ ಹಾಗೂ ಉತ್ತರದಕ್ಷಿಣ 80 ಅಳತೆಯ ಮತ್ತೊಂದು ಮಂಟಪವಿದೆ. ಇದನ್ನು ತಿರುಮಲರಾಯ ಮಂಟಪ ಅಥವಾ ಅನ್ನಾ ಊಂಜಲ್ ಮಂಟಪವೆನ್ನುತ್ತಾರೆ.ಇದರ ಮುಂಭಾಗ ತಗ್ಗಿನಲ್ಲಿದ್ದು ಹಿಂಭಾಗ ಎತ್ತರದಲ್ಲಿದೆ. ಬೇರೆ ಬೇರೆ ಕಾಲದಲ್ಲಿ ನಿರ್ಮಾಣವಾಗಿರಬೇಕು.ಹಿಂದಿನ ಭಾಗವೆಂದರೆ ದಕ್ಷಿಣಭಾಗವು 45×10 ಅಡಿಗಳಾಗಿದ್ದು ಸ್ವಲ್ಪ ಎತ್ತರದ ತಳಹದಿಯಲ್ಲಿ ನಿಂತಿದ್ದು , ಪರಂಪರೆಯ ಪ್ರಕಾರ ಸಾಳುವ ನರಸಿಂಹರಾಯನು ತಾನು ಆರಂಭಿಸಿದ ಅನ್ನಾ ಊಂಜಲ್ ಸೇವೆಯನ್ನು ನಡೆಸಲು ಕ್ರಿ.ಶ.1473 ರಲ್ಲಿ ಇದನ್ನು ನಿರ್ಮಿಸಿದನು.ಇದನ್ನು 16 ನೇ ಶತಮಾನದಲ್ಲಿ ಅರವೀಡು ಬುಕ್ಕರಾಯ ರಾಮರಾಜ, ಶ್ರೀರಂಗರಾಜ ತಿರುಮಲರಾಜನು ಜೀರ್ಣೋದ್ಧಾರ ಮಾಡಿ ಈಗಣ ಸ್ಥಿತಿಗೆ ಹಿಗ್ಗಲಿಸಿದನು.ತಿರುಮಲರಾಜನ ಕಾಲದಲ್ಲಿ ಈ ಮಂಟಪದಲ್ಲಿ ವಸಂತೋತ್ಸವವೇ ಮೊದಲಾದ ಉತ್ಸವಗಳೂ ನಡೆಯುತ್ತಿದ್ದವು. ಬ್ರಹ್ಮೋತ್ಸವದ ಆರಂಭವನ್ನು ಸೂಚಿಸುವ ಧ್ವಜಾರೋಹಣದ ಸಮಯದಲ್ಲಿ ಗರುಡ ಧ್ವಜ ಹಾರಾಟವಾದಾಗ ಮಲೆಯಪ್ಪ ಸ್ವಾಮಿಯು ಈ ಮಂಟಪದಲ್ಲಿಯೇ ಓಲಗ ನಡೆಸುವುದು. ನಿಜವೆಂದರೆ ಈ ಸಂದರ್ಭದಲ್ಲಿ ಹಂಚಲಾಗುವ ಪ್ರಸಾದ ತಿರುಮಲರಾಯ ಪೊಂಗಲ್ ಎಂದೇ ಈಗಲೂ-ಆ ದೊರೆಯು ದೇಣಿಗೆ ಕೊಟ್ಟ ಪ್ರಸಾದ ವಿತರಣೆ ಬಹು ಹಿಂದೆಯೇ ಕೊನೆಗೊಂಡಿದ್ದರೂ-ಅವನ ಹೆಸರಿನಲ್ಲೇ ವಿತರಣೆ ಆಗುವುದು. ಈ ಮಂಟಪವು ಧ್ವಜಸ್ತಂಭ ಮಂಟಪವನ್ನು ಮುಟ್ಟುವಂತಿದೆ.

ಈ ಮಂಟಪದ ದಕ್ಷಿಣ ಭಾಗವನ್ನು ನಿರ್ಮಿಸಿದ ಸಾಳುವ ನರಸಿಂಹನು,ಎರಡನೇ ವಿರುಪಾಕ್ಷನು ಕೊಲೆಯಾದನಂತರ ಸಾಮ್ರಾಜ್ಯವನ್ನು ಅರಾಜಕತೆಯಿಂದ ರಕ್ಷಿಸಿ ನಲವತ್ತು ವರ್ಷಕಾಲ ಸುಸ್ಥಿರ ಪ್ರಭುತ್ವವನ್ನು ನೀಡಿದ ಖ್ಯಾತ ಸೇನಾನಿಯಾಗಿದ್ದ ಇವನು ವೈಷ್ಣವ ಭಕ್ತನಾಗಿ ಆಲಯಕ್ಕೆ ಅನೇಕ ಕಾಣಿಕೆಗಳನ್ನು ನೀಡಿದ. ಹಲವಾರು ಶಾಸನಗಳಲ್ಲಿ ಹೆಸರಿಸಲ್ಪಟ್ಟವನಾದ, ಕಂದ್ಯಾಡ ರಾಮಾನುಜ ಅಯ್ಯಂಗಾರ್ಯನು ಸಾಮ್ರಾಟನಿಗೆ ಸ್ವಾಮಿಯ ಸೇವೆಯಲ್ಲಿ ಬಹುಮುಖವಾದ ನೆರವು ನೀಡಿದನೆಂದು ಹೇಳಬಹುದು. ಸಾಳುವ ನರಸಿಂಹನ ರಾಣಿ ಶ್ರೀ ರಂಗದೇವಿ,ಮತ್ತಿತರ ರಾಜ ಪರಿವಾರದವರೂ ಆಲಯಕ್ಕೆ ಹತ್ತು ಹಲವು ಕಾಣಿಕೆಗಳನ್ನು ನೀಡಿದರು.ಕ್ರಿ.ಶ.1485 ರಲ್ಲಿ ಈತನು ಶೇಷಾದ್ರಿಶಿಖರಕ್ಕೆ ಹೋಗುವ ಕಾಲುದಾರಿಯಲ್ಲಿ ಲಕ್ಷ್ಮೀ ನರಸಿಂಹಸ್ವಾಮಿ ಆಲಯವನ್ನು ನಿರ್ಮಿಸಿದ.(ಜಿ.ಟಿ.273)

ಈ ಮಂಟಪವು ವಿಜಯನಗರದ ಕಾಲದ ಮಾದರಿ ಕಂಬಗಳನ್ನು ಒಳಗೊಂಡಿದೆ. ಒಂದೇ ಕಲ್ಲಿನಲ್ಲಿ ಕೇಂದ್ರಸ್ತಂಭದ ಸುತ್ತ ನಾಲ್ಕು ಸಣ್ಣ ಗಾತ್ರದ ಕಂಬಗಳಿದ್ದು ಕಲ್ಲಿನಲ್ಲಿ ಬಡಿಯುವುದರಿಂದ ಸಪ್ತಸ್ವರಗಳನ್ನುಂಟು ಮಾಡುವಂತಹವುಗಳುಮುಖ್ಯಸ್ತಂಭಗಳು, ರಾವುತರನ್ನು ಹೊಂದಿ ಓಡುತ್ತಿರುವ ಕುದುರೆಗಳನ್ನು ಹೊಂದಿವೆ.ಈ ಮಂಟಪದಲ್ಲಿನ ಉಬ್ಬುಶಿಲ್ಪಗಳು ಇಡೀ ಆಲಯದಲ್ಲಿಯೇ ಅತ್ಯುತ್ತಮವಾದವು.

ಹೊರಗಡೆಯ ಎರಡು ಸಾಲಿನ ಕಂಬಗಳು ಶಿಲ್ಪಶೂನ್ಯವಾದವುಗಳಾದರೆ ಒಳಗಡೆಯ ಕಂಬಗಳಲ್ಲಿ ಪ್ರಾಣಿ ಶಿಲ್ಪಗಳಿವೆ. ಮಂಟಪದ ಹಿಂಭಾಗದಲ್ಲಿಯೂ ಎರಡೂ ಕಡೆ ನಾಲ್ಕು ಕಂಬಗಳ ಎರಡು ಸಾಲುಗಳಿವೆ. ಮಂಟಪದ ಮಧ್ಯಭಾಗದಲ್ಲಿ ನಾಲ್ಕು ಕಂಬಗಳಿದ್ದು ಪ್ರತಿ ಕಂಬವೂ ಮೂರು ಕಿರುಕಂಬಗಳನ್ನು ಹೊಂದಿದೆ.

ತಿರುಮಲರಾಯ ಮಂಟಪದ ಒಂದು ಮೂಲೆಯಲ್ಲಿ ತೋದರಮಲ್, ಈತನ ಹೆಸರು ಲಾಲಾಖೇಮರಾಮ. ಅವನ ತಾಯಿ ಮಾತಾ ಮೋಹನ ದೇವಿ ಹಾಗೂ ಪತ್ನಿ ಪಿತಾಬೀಬಿಯವರುಗಳ ವಿಗ್ರಹಗಳನ್ನಿಡಲಾಗಿದೆ. ಕೃಷ್ಣದೇವರಾಯನ ಕಂಚಿನ ವಿಗ್ರಹಗಳಂ ತೆಯೇ ಈ ವಿಗ್ರಹಗಳ ಭುಜಗಳ ಮೇಲೂ ಹೆಸರುಗಳನ್ನು ಕೆತ್ತಲಾಗಿದೆ. ಕ್ರಿ.ಶ.18 ನೇ ಶತಮಾನದ ಆರಂಭದ ವರ್ಷಗಳಲ್ಲಿ ಗೋಲ್ಕೊಂಡದ ನವಾಬರ ಪರವಾಗಿ ಕರ್ನಾಟಿಕ ಪ್ರಾಂತ್ಯವನ್ನು ತೋದರಮಲ್ಲನು ನೋಡಿಕೊಳ್ಳುತ್ತಿದ್ದ. ಈತ ಕರ್ನಾಟಕದ ನವಾಬರ ಒಬ್ಬ ಸೇನಾನಿ.

### 11. ಅಯಿನಾ ಮಹಲ್ :

ತಿರುಮಲರಾಯ ಮಂಟಪದ ಉತ್ತರದಲ್ಲಿ 42 ಅಡಿ ಚಚ್ಚೌಕದ ಒಂದು ಮಂಟಪವೂ ಅಷ್ಟೇ ವಿಸ್ತಾರವಾದ ಒಂದು ಮುಚ್ಚಿದ ಕೋಣೆಯೂ ಇವೆ.ಈ ಕೋಣೆಯನ್ನು ಅಯಿನಾಮಹಲ್ ಎಂದು ಕರೆಯುವರು,ಇದು ನಿಸ್ಸಂದೇಹವಾಗಿ ಈಚಿನ ಕಟ್ಟಡ.ಇದು ಎರಡು ಭಾಗವಾಗಿದ್ದು ಮುಂದುಗಡೆ ಆರು ಕಂಬಗಳ ಆರು ಸಾಲಿನ ವಿಶಾಲ ಸ್ಥಳ ಇದ್ದು,ಇದರ ಹಿಂದೆ ಒಂದು ಅಂತರಾಳದೊಂದಿನ ಗರ್ಭಗೃಹ ಹೊಂದಿದ ಗುಡಿ ಇದೆ. ಈ ಗುಡಿಯಲ್ಲಿನ ಗೋಡೆಗಳಲ್ಲಿ ಕನ್ನಡಿಗಳಿದ್ದು ಮಧ್ಯದಲ್ಲಿ ಒಂದು ಉಯ್ಯಾಲೆಯನ್ನು ಹೊಂದಿದ್ದು ಸ್ವಾಮಿಯನ್ನು ಇದರಲ್ಲಿ ಕೂಡಿಸಿ ಉತ್ಸವ ಮಾಡುತ್ತಾರೆ. ತಿರುಮಲೆಯ ಇಡೀ ಆಲಯದಲ್ಲಿ ಈ ಭಾಗದ ಹೆಸರು ಮಾತ್ರವೇ ಯಾವ ಶಾಸನದಲ್ಲೂ ಇಲ್ಲ. ಜಿಲ್ಲೆಯ ಅತ್ಯುನ್ನತ ಕಂದಾಯ ಶಾಖಾಧಿಕಾರಿಯು 1831 ರಲ್ಲಿ ಏಷಿಯಾಟಿಕ್ ಜರ್ನಲ್‌ನಲ್ಲಿ ಬರೆಯುತ್ತ ದೊಡ್ಡ ದೊಡ್ಡ ಕನ್ನಡಿಗಳನ್ನು ಹೊಂದಿದ ಈ ಮಂಟಪದಲ್ಲಿ ಬಹುಶಃ ಮುಕುರ ಉತ್ಸವವು ನಡೆಯುತ್ತಿರಬಹುದೆಂದು ಹೇಳಿದ್ದಾನೆ.

### 12. ಸಂಪಂಗಿ ಪ್ರದಕ್ಷಿಣೆಯ ಆವರಣ :

ಸಂಪಂಗಿ ಪ್ರದಕ್ಷಿಣೆಯ ಸುತ್ತು ಆವರಣದಲ್ಲಿ ವಿಜಯನಗರದ ಕಾಲದ ಮಾದರಿ ಕಂಬಗಳು- ದೇವತೆಗಳು ಹನುಮ ಗರುಡ ಮೊದಲಾದ ಶಿಲ್ಪಗಳೊಂದಿಗೆ ಕೂಡಿದ್ದು - ಇವು ಉತ್ತಮ ದರ್ಜೆಯ ಶಿಲ್ಪಕೃತಿಗಳಾಗಿಲ್ಲ.

ಸಂಪಂಗಿ ಪ್ರದಕ್ಷಿಣೆಯ ನಾಲ್ಕು ಮೂಲೆಗಳಲ್ಲೂ ಮೆರವಣಿಗೆ ಬರುವ ಉತ್ಸವ ಮೂರ್ತಿಯನ್ನು ನಿಲ್ಲಿಸಲು ಸ್ಥಳಾವಕಾಶ ನೀಡುವ ನೀಡುವ ನಾಲ್ಕು ಸುಂದರವಾದ ಮಂಟಪಗಳಿವೆ. ಕ್ರಿ.ಶ.1470 ರಲ್ಲಿ ಸಾಳುವ ನರಸಿಂಹ ನಿಂದ ತನ್ನ ಹೆಸರಿನಲ್ಲಿಯೂ ತನ್ನ ಪತ್ನಿ ಹಾಗೂ ಇಬ್ಬರ ಪುತ್ರರ ಹೆಸರಿನಲ್ಲಿಯೂ ನಿರ್ಮಿಸಲ್ಪಟ್ಟವು. (ತನ್ನ ಹಾಗೂ ತನ್ನ ಮೂವರು ಪುತ್ರರ ಹೆಸರಿನಲ್ಲಿಯೂ ನಿರ್ಮಿಸಿದ ನಾಲ್ಕು ಮಂಟಪ - ಪು - 98 ಸಂ - 51 - 197 ಎ. ತಿ.ತಿ. ಸಂಪುಟ - 2 - ಅನುವಾದಕ) ಈ ನಾಲ್ಕು ಮಂಟಪಗಳಲ್ಲಿ ಉತ್ಸವ ಮೂರ್ತಿಯನ್ನು ವಿಶ್ರಾಂತಿಗೆಂದು ಇಳಿಸಿ ಪ್ರಸಾದವನ್ನು ಭಕ್ತರಲ್ಲಿ ವಿತರಣೆ ಮಾಡಬೇಕೆಂದು ನಿಯಮಹಾಕಿದ. ನಂತರ ಯುಗಾದಿಯ ನಂತರದ ದಿನಗಳ ವಸಂತೋತ್ಸವ ದಲ್ಲಿ ಮಾತ್ರವೇ ಈ ಉದ್ದೇಶದಲ್ಲಿ ಕೆಲಸಕ್ಕೆ ಬರುತ್ತಿದ್ದವು. ಶಾಸನಗಳಲ್ಲಿ ಈ ಪ್ರದಕ್ಷಿಣಾಪಥವನ್ನು ಸಂಬಗಚ್ಚುರ್ರ ಎಂದು ಕರೆಯಲಾಗಿದೆ. ತಮಿಳುನಲ್ಲಿ ಸಂಬಗ ವೆಂದರೆ ಸಂಪಂಗಿ ಅಥವಾ ಚಂಪಕ. ಪ್ರಾಯಶಃ ಈ ದಾರಿಯಲ್ಲಿ ದೇವರಿಗೆ ನಿತ್ಯಪೂಜೆಯಲ್ಲಿಸಲ್ಲಿಸುವ ಸುವಾಸನೆಗೆ ಹೆಸರಾದ ಹಲವಾರು ಸಂಪಿಗೆ ಗಿಡಗಳಿದ್ದಿರಬೇಕು.

ಈಗ ಈ ನಾಲ್ಕು ಮಂಟಪಗಳೂ ಅವುಗಳ ನಿರ್ಮಾಣದ ಉದ್ದೇಶಕ್ಕೆ ಬಳಿಕೆಯಾಗುತ್ತಿಲ್ಲ. ಇವುಗಳು ತಮ್ಮ ಶಿಲ್ಪ ಕೌಶಲ್ಯದಿಂದ ಸಾಮಾನ್ಯವೇ ಆದರೂ ವಾಸ್ತು ಶಿಲ್ಪದ ಹಾಗೂ ಸುಂದರ ಮುಕ್ತಾಯದ ದೃಷ್ಟಿಯಿಂದ ಗಮನಾರ್ಹ.

ಸಂಪಂಗಿ ಪ್ರದಕ್ಷಿಣೆಯ ಉದ್ದುದ್ದ ಮಂಟಪಗಳನ್ನು ಈಗ ಕಬ್ಬಿಣದ ಸರಳುಗಳಿಂದ ವಿಭಾಗಿಸಿಕೊಂಡು ಉಗ್ರಾಣಗಳನ್ನಾಗಿ ಮಾಡಿಕೊಂಡು ಬೆಲ್ಲ,ಅಕ್ಕಿ ಇತ್ಯಾದಿಗಳನ್ನು ಸಂಗ್ರಹಿಸಲು ಬಳಸಲಾಗುತ್ತದೆ. ಪಟ್ಟಾಡೈಯೂ ಆಗಿದೆ. (ದೇವರ ರೇಷ್ಮೆ ವಸ್ತ್ರಾಗಾರ) ಪಡಿಪೋಟ್ಟು (ದೇವರ ಪ್ರಸಾದಗಳನ್ನು - ಲಾಡು - ಮಾಡುವ ಅಡುಗೆ ಮನೆ) ಯಾಮುನತುರೈ (ದೇವರ ಪೂಜೆಗೆಂದು ಹೂವಿನ ಹಾರಗಳನ್ನು ಮಾಡುವ ಸ್ಥಳ) ಗಳೂ ಇಲ್ಲಿಯೇ ಇವೆ. ಯಾಮುನ ತುರೈ ಎಂಬುದಕ್ಕೆ ಮೂಲ ಆಳವಂದಾರ್ ಎಂದು ಪ್ರಸಿದ್ಧರಾಗಿ, ತಿರುಮಲೆಯಲ್ಲಿ ಪುಷ್ಪ ಕೈಂಕರ್ಯವನ್ನು ಆರಂಭಿಸಿರಬಹುದಾದ ಯಾಮುನಾಚಾರ್ಯರು. ತೆಪ್ಪೋತ್ಸವಕ್ಕೆ ಬೇಕಾಗುವ ವಸ್ತುಗಳನ್ನು ಸಂಗ್ರಹಿಸಿಡುವ ಮತ್ತೊಂದು ಕೋಣೆಯೂ ಇಲ್ಲಿಯೇ ಇದೆ. ಮೊದಲಿಗೆ ಈ ಜಗಲಿಯ ಆವರಣಗಳು ಮಳೆಗಾಲದಲ್ಲಿ ಉತ್ಸವ ಮೂರ್ತಿಗಳ ಮೆರವಣಿಗೆಗೆಂದು,ಯಾತ್ರಿಕರ ರಕ್ಷಣೆಗೆಂದು ಬಳಕೆ ಯಾಗುತ್ತಿದ್ದು ಈಗ ಉಗ್ರಾಣಗಳಾಗಿ ಬಳಕೆಗೆ ಬಂದಿವೆ.

## 13. ಧ್ವಜಸ್ತಂಭ ಮಂಟಪ :

ಈ ಪ್ರಾಕಾರದಲ್ಲಿರುವ ಮತ್ತೊಂದು ಮುಖ್ಯ ಮಂಟಪವೆಂದರೆ ಧ್ವಜಸ್ತಂಭದ ಸುತ್ತ ಇರುವ ಮಂಟಪ. ಈ ಪ್ರಾಕಾರದ ಪಶ್ಚಿಮದಲ್ಲಿ ಎರಡನೆಯ ಗೋಪುರವನ್ನು ತಾಗಿ ನಿಂತ ಈ ಮಂಟಪ ಕಿರಿದಾಗಿದೆ. ಉತ್ತರ ದಕ್ಷಿಣಗಳಲ್ಲಿ ಐದು ಕಂಬಗಳ ಎರಡೆರಡು ಸಾಲುಗಳಿದ್ದು ಒಳಕಂಬಸಾಲಿನ ಕಂಬಗಳು ಒಂದೊಂದು ಕಿರುಗಂಬಗಳನ್ನು ಹೊಂದಿವೆ. ಮಂಟಪದ ನಡುವೆ ಬಲಿಪೀಠ ಹಾಗೂ ಧ್ವಜಸ್ತಂಭಗಳಿವೆ.

ಇಲ್ಲಿನ ಪ್ರತಿ ಕಂಬದಲ್ಲೂ ಆಸಕ್ತಿದಾಯಕ ವಿಗ್ರಹ ಶಿಲ್ಪಗಳಿವೆ. ಯೋಗನರಸಿಂಹ,ಮತ್ಸ್ಯ,ಹನುಮಂತ, ಬಕಾಸುರ ವಧೆಯಲ್ಲಿ ಕೃಷ್ಣ, ಶ್ರೀನಿವಾಸ ಕಲ್ಯಾಣ ಮೊದಲಾದವು ಪ್ರಮುಖ. ಧ್ವಜಸ್ತಂಭದ ಮೇಲೆಯೇ ಕಿರುಗಾತ್ರದ ಕೃಷ್ಣ,ಕಾಳೀಯ ಮರ್ದನ ಮೊದಲಾದ ಉಬ್ಬು ಶಿಲ್ಪಗಳನ್ನು ಕಾಣಬಹುದು.

ಟಿ.ಕೆ.ಟಿ.ವೀರರಾಘವಾಚಾರ್ಯರು ಈ ನಿರ್ಮಾಣದ ಬಗ್ಗೆ ಒಂದು ವಿಶಿಷ್ಟ ಲಕ್ಷಣವನ್ನು ಗಮನಿಸಿದ್ದಾರೆ. ಗರುಡ,ಧ್ವಜಸ್ತಂಭ ಬಲಿಪೀಠಗಳು ಮೊದಲ ಆವರಣದಲ್ಲಿರಬೇಕು. ಎಂದರೆ ಇಲ್ಲಿ ಎರಡನೆ ಹಾಗೂ ಮೂರನೇ ಆವರಣಗಳ ನಡುವೆಯಿರಬೇಕು. ಆಗಮ ಶಾಸ್ತ್ರದಂತೆ ನಿಯಮವಾಗಿ ಗರುಡ, ಧ್ವಜಸ್ತಂಭ,ಬಲಿಪೀಠಗಳನ್ನು ಮೊದಲ ಆವರಣದಲ್ಲಿಯೇ ಸ್ಥಾಪಿಸಬೇಕು-ಗರುಡನು ವಿಮಾನಕ್ಕೆ ಅತಿಹತ್ತಿರವಾಗಿದ್ದು ನಂತರ ಧ್ವಜಸ್ಥಂಭವಿದ್ದು ನಂತರ ಬಲಿಪೀಠ ವಿರಬೇಕು. ಆಲಯದಲ್ಲಿ ಎರಡನೇ ಆವರಣವಿದ್ದಲ್ಲಿ ಗರುಡನು ಆವರಣದ ಎರಡನೇ ಕಕ್ಷೆಯಲ್ಲಿಯೂ ಧ್ವಜಸ್ತಂಭ ಬಲಿಪೀಠಗಳು ಮೂರನೇ ಕಕ್ಷೆಗೂ ಹೋಗುತ್ತವೆ. ತಿರುಮಲೆಯ ಆಲಯದಲ್ಲಿ ಎರಡನೇ ಆವರಣವನ್ನು ಕ್ರಿ.ಶ.1190 ರ ಹೊತ್ತಿಗೆ ನಿರ್ಮಿಸಲಾಯಿತು. ಹೀಗಾಗಿ ಕ್ರಿ.ಶ.1417 ರಲ್ಲಿ ತಿರುಮಾಮಣಿ ಮಂಟಪ ನಿರ್ಮಾಣವಾಗುವವರೆಗೆ ಗರುಡ ಧ್ವಜ ಸ್ತಂಭ ಬಲಿಪೀಠಗಳು ಎರಡನೆ ಆವರಣದಲ್ಲಿ ಇದ್ದಿರಬೇಕು. ತಿರುಮಾಮಣಿ ಮಂಟಪ ನಿರ್ಮಾಣದನಂತರ ಸ್ಥಳ ಸಂಕೋಚವಾಗಿ ಧ್ವಜಸ್ತಂಭ ಬಲಿ ಪೀಠಗಳನ್ನು ಮೂರನೇ ಆವರಣಕ್ಕೆ ಸ್ಥಳಾಂತರಿಸಬೇಕು. ಈ ವ್ಯವಸ್ಥೆಯನ್ನು ಕಡೆಯ ಅವಕಾಶವೆಂದು ವೈಖಾನಸ ಆಗಮ ಗುರುತಿಸಿದರೂ ಆಗಮ ನಿಯಮದಂತೆ ಇವು ಮೂರನೇ ಆವರಣ ದಲ್ಲಿಯೇ ಇರಬೇಕು. ಈಗಿರುವಂತೆ ಮೊದಲ ಆವರಣದಲ್ಲಿ ಅಲ್ಲ.

(ಈ ಧ್ವಜಸ್ತಂಭ ಮಂಟಪದ ಕಂಬಗಳೊಂದರಲ್ಲಿ ಗಂಟೆಕಟ್ಟಿದಬಾಲ ಇರುವ ಹನುಮಂತರಾಯನ ಉಬ್ಬುಚಿತ್ರ ಇದ್ದು, ಈ ಮಂಟಪವು ವ್ಯಾಸರಾಯ ನಿರ್ಮಾಣವೆಂದು ಪರೋಕ್ಷವಾಗಿ ಸೂಚಿಸುವಂತಿದೆ. ವ್ಯಾಸರಾಯರು ವೆಂಕಟೇಶ್ವರಸ್ವಾಮಿಯನ್ನು ಸಾಳುವನರಸಿಂಹನ ಕಾಲದಲ್ಲಿ ಹನ್ನೆರಡು ವರ್ಷ ಪೂಜಿಸಿ ಹಿಂದಿರುಗಿದರು. ಧ್ವಜಸ್ತಂಭ ಮಂಟಪ ನಿರ್ಮಾಣದ ಬಗ್ಗೆಯೂ ಯಾವುದೇ ಶಾಸನವೂ ವಿವರಣೆ ನೀಡುವುದಿಲ್ಲ ಎಂಬುದನ್ನೂ ಗಮನಿಸಬೇಕು - ಅನುವಾದಕ.)

**14. ಒಳಗೋಪುರ :**

ಒಳ ಆವರಣ ಅಥವಾ 2ನೇ ಆವರಣವನ್ನು ಎರಡನೇ ಗೋಪುರದಿಂದ ರಕ್ಷಿತವಾದ ದ್ವಾರದಿಂದ ಮಾತ್ರವೇ ಪ್ರವೇಶಿಸ ಬಹುದು. ಒಳಗೋಪುರವು ತಳದಲ್ಲಿ ಪೂರ್ವಪಶ್ಚಿಮ 24 ಅಡಿಗಳೂ ಉತ್ತರ ದಕ್ಷಿಣ 36ಅಡಿ ಗಳಿದ್ದು, ದ್ವಾರದ ಅಗಲಅಡಿಗಳಾಗಿವೆ. ಆಕೃತಿಯಲ್ಲಿ ಮಹದ್ವಾರ ಗೋಪುರದಂತೆ ಇದೆ. ಈ ಗೋಪುರದಿಂದಾದ ಆವರಣದ ಗೋಡೆಗಳು ಪೂರ್ವಪಶ್ಚಿಮದಲ್ಲಿ 235, ಉತ್ತರದಕ್ಷಿಣದಲ್ಲಿ 160 ಅಡಿಗಳೂ ಉದ್ದವಾಗಿವೆ.

ಈ ಆವರಣದ ಹೊರಗೋಡೆಗಳ ಮೇಲೆ ಅಸಂಖ್ಯ ಶಾಸನಗಳಿವೆ. ಮಿಕ್ಕಂತೆ ದ್ವಾರದ ಮೇಲಿರುವ ಶ್ರೀ ವೈಷ್ಣವ ಚಿಹ್ನೆಯ ಹೊರತು ಯಾವುದೇ ಶಿಲ್ಪಾಕೃತಿಗಳೂ ಇಲ್ಲ. ದ್ವಾರ ಬಂಧದಲ್ಲಿನ ಉಬ್ಬು ಶಿಲ್ಪಗಳು ಸುಂದರವಾಗಿವೆ. ಕ್ರಿ.ಶ.1345-55 ರಲ್ಲಿನ ಶ್ರೀ ರಂಗನಾಥ ಯಾದವರಾಯನ ಆಳ್ವಿಕೆಯ 16 ನೇ ವರ್ಷದಲ್ಲಿನ ಶಾಸನವೇ ಅತಿಪ್ರಾಚೀನವಾದದ್ದು. ಸಾಮಾನ್ಯವಾಗಿ ಪ್ರಾಚೀನಕಾಲದ ಶಾಸನಗಳು ಗೋಪುರಗಳ ತಳಗಟ್ಟಿನ ಗೋಡೆಗಳಲ್ಲಿದ್ದು,ಪ್ರಾಕಾರದ ಒಳಗೋಡೆಗಳಲ್ಲಿ ನಂತರದ ಕಾಲದ ಶಾಸನಗಳಿರುತ್ತವೆ. ಈ ಗೋಡೆಗಳ ಹೊರ ಮುಖದಲ್ಲಿ 15,16 ನೇ ಶತಕದ ಶಾಸನಗಳಿವೆ. (ಈ ಒಳಗೋಪುರದ್ವಾರವನ್ನು ಬೆಳ್ಳಿಯ ಬಾಗಿಲು ಎಂದು ಕರೆಯುವರು. ಇಲ್ಲಿ ಎಡಗಡೆಗೆ ಹಥೀರಾಮಜಿಸ್ವಾಮಿಯೊಡನೆ ಪಗಡೆಯಾಡುವ, ಬಲಗಡೆಗೆ ಶ್ರೀ ರಾಮಪಟ್ಟಾಭಿಷೇಕದ ಉಬ್ಬು ಚಿತ್ರಗಳಿವೆ - ಅನುವಾದಕ)

**15. ವಿಮಾನಪ್ರದಕ್ಷಿಣ :**

ಎರಡನೇ ಪ್ರಾಕಾರ ಗೋಡೆಗಳು,ಒಳಗೋಪುರ ಹಾಗೂ ಗರ್ಭಗುಡಿಯನ್ನು ಆವರಿಸಿರುವ ಮೊದಲ ಪ್ರಾಕಾರದ ಗೋಡೆಗಳ ನಡುವೆಯಿರುವ ಆಯತಾಕೃತಿಯ ಸ್ಥಳವಿದು. ಒಳಗೋಪುರದ ನಂತರದ ಹಾಗೂ ತಿರುಮಾಮಣಿ ಮಂಟಪದ ನಡುವಿನ ಅಗಲ 18 ಅಡಿಗಳೂ ಇಲ್ಲ. ಮುಖ್ಯ ವಿಮಾನವನ್ನು ಹೊಂದಿದ ಕಟ್ಟಡದೊಡನೆಯೇ ಹಲವಾರು ಕಲ್ಲಿನ ನಿರ್ಮಾಣಗಳನ್ನೂ, ಗುಡಿಗಳನ್ನೂ, ಮಂಟಪಗಳನ್ನೂ, ವಿಮಾನಪ್ರದಕ್ಷಿಣೆಯನ್ನೂ ಒಳಗೆ ಹೊಂದಿದ್ದು,ಮುಖ್ಯ ಆಲಯದ ಹೊರಗೆ ತುಸುವೇ ಸ್ಥಳಾಕಾಶವಿದೆ. ಅಂಗ ಪ್ರದಕ್ಷಿಣೆಯನ್ನು ಮಾಡುವ ಹರಕೆ ಹೊತ್ತಿರುವ ಭಕ್ತರು ಈ ಪ್ರದಕ್ಷಿಣಾ ಪಥದಲ್ಲಿಯೇ ಅಂಗಪ್ರದಕ್ಷಿಣೆ ಮಾಡುವರು.

ವಿಮಾನ ಪ್ರದಕ್ಷಿಣೆಯ ಹೊರ ಸುತ್ತಿನಲ್ಲಿರುವ ಮಂಟಪಗಳಲ್ಲಿ ವಿಜಯನಗರದ ಕಾಲದ ಮಾದರಿ ಕಂಬಗಳಿದ್ದು,ಸುಂದರವಾದ ಕಂಸ, ಪೂತನಿ,ಬಿಲ್ಲಿನ ಕನ್ಯೆ,ಕೋತಿ,ಒರಳಿಗೆ ಕಟ್ಟಿದ ಕೃಷ್ಣ - ಮುಂತಾದ ಶಿಲ್ಪಗಳಿವೆ. ಈ ಮಂಟಪಗಳಲ್ಲಿ ಪಶ್ಚಿಮ ಮಂಟಪಗಳಲ್ಲಿ ವೇದಪಾರಾಯಣ ಮಾಡುವರು.(ಇದೀಗ ಇಲ್ಲಿ ಯಾತ್ರಿಕರ ಕಾಣಿಕೆಗಳನ್ನು ಲೆಕ್ಕಿಸುವ ಪರಕಾಮಣಿ ನಡೆಯುತ್ತದೆ.ಮಂಟಪಗಳನ್ನು ಗಾಜಿನ ಕೋಣೆಗಳನ್ನಾಗಿಸಿ,ಹವಾ ನಿಯಂತ್ರಿತವಾಗಿಸಲಾಗಿದೆ.ಇದರಿಂದಾಗಿ ಯಾತ್ರಿಕರು ಪ್ರದಕ್ಷಿಣಾಪಥದಲ್ಲಿ ನಡೆಯುವಾಗ ಮಂಟಪದ ಹೊರಗಿನಿಂದ,ಒಳಗಡೆ ಹಣವೆಣಿಸುವ ಕಾರ್ಯವನ್ನು ನೋಡಬಹುದು-ಅನುವಾದಕ) ಈ ಮಂಟಪಗಳಲ್ಲಿಯೇ ಹಲವಾರು ಕೋಣೆಗಳ ವಿಂಗಡನೆಯಾಗಿ,ದೀಪಗಳ ಕೋಣೆ,ಪಲ್ಲಕ್ಕಿ ಕೋಣೆ-ಮೊದಲಾದವುಗಳು ಉಂಟಾಗಿವೆ. ಉತ್ತರದಡೆಯಲ್ಲಿ ವಿಮಾನ ವೆಂಕಟೇಶ್ವರಸ್ವಾಮಿ ದರ್ಶನ ಪೀಠದ ನಂತರ ಸ್ವಾಮಿಯ ಹುಂಡಿಯ ಎದುರು ಇರುವ ಸಂಕೀರ್ತನಾ ಭಂಡಾರವಿಶೇಷವಾಗಿ ಗಮನ ಸೆಳೆಯುತ್ತದೆ. ಕಾರಣ ಇಲ್ಲಿ ಅನ್ನಮಾಚಾರ್ಯರ ಸಂಕೀರ್ತನೆಗಳನ್ನು ಕೆತ್ತಿದ ತಾಮ್ರಪಟಗಳನು ಸಂಗ್ರಹಿಸ್ದಿದೆ.ಈ ಗೋಡೆಗಳ ಬಾಗಿಲ ಮೇಲೆ ಅನ್ನಮಾಚಾರ್ಯರ ವಿಗ್ರಹವನ್ನು ಕೆತ್ತಲಾಗಿದೆ.

## 16. ಶ್ರೀ ವರದರಾಜ ಆಲಯ:

ಗೋಪುರದ್ವಾರದ ಮೂಲಕ ಒಳಬಂದ ಕೂಡಲೇ ಗೋಪುರದಿಂದ ಏಳು ಅಡಿ ದಕ್ಷಿಣಕ್ಕೆ ಪೂರ್ವದ ಪ್ರಾಕಾರದ ಗೋಡೆಯಿಂದ ಎರಡು ಅಡಿ ದೂರದಲ್ಲಿ 20 ಅಡಿ ಉದ್ದ ಹಾಗೂ 15 ಅಡಿ ಅಗಲದ ಶ್ರೀ ವರದರಾಜಸ್ವಾಮಿ ಆಲಯವಿದೆ. ಎತ್ತರವಾದ ಅಧಿಷ್ಠಾನದಲ್ಲಿ ಅಂತರಾಳ,ಗರ್ಭಗೃಹ,ಗರ್ಭಗೃಹದ ಮೇಲಿನ ವಿಮಾನಗಳೊಡನೆ ಕೂಡಿದ ಆಲಯವಿದು. ವೇಸರ ಶೈಲಿಯಲ್ಲಿದೆ. ಗರ್ಭಗೃಹದ

ಗೋಡೆಗಳು ನಾಲ್ಕು ಗೋಡೆಗಂಬಗಳಿಂದ ಕೂಡಿವೆ. ದ್ವಾರದಲ್ಲಿ ಎರಡು ಗೋಡೆಗಂಬಗಳಿದ್ದು,ನಾಸಿಕಾಲಂಕೃತ ಕಪೋತದಿಂದ ಕೂಡಿದ್ದು ಸಿಂಹಲಲಾಟವಿದೆ.

**17. ಪೋಟ್ಟು ಕೊಠಡಿ:**

ವರದರಾಜಸ್ವಾಮಿ ಅಲಯದ ದಕ್ಷಿಣದಲ್ಲಿ ಎರಡೂವರೆ ಅಡಿ ಎತ್ತರದ ತಳಹದಿಯಲ್ಲಿ 61 ಅಡಿ ಉದ್ದ 30 ಅಡಿ ಅಗಲದ ಮುಖ್ಯ ಅಡುಗೆಯ ಮನೆಯಿದೆ. ಆಲಯದ ಎಲ್ಲ ನೈವೇದ್ಯಗಳೂ ಅಡಿಗೆಯಾಗುವುದು ಇಲ್ಲಿಯೇ. ಈಗಲೂ ಇಲ್ಲಿ ಕೇವಲ ಮಣ್ಣಿನ ಪಾತ್ರೆಗಳು ಬಳಕೆಯಲ್ಲಿವೆ. ಬಾಗಿಲಿನಿಂದ ಒಳ ಹೊಕ್ಕರೆ ಒಂದು ಕಿರಿದಾದ ಮಂದಿರದಲ್ಲಿ ಮಡಪಲ್ಲಿ ನಾಚ್ಚಿಯಾರ್ ಎಂಬ ಬಕುಳಾ ದೇವಿಯ ವಿಗ್ರಹವಿರುವುದು. ಈಕೆ ಶ್ರೀನಿವಾಸನ ತಾಯಿಯಾಗಿದ್ದು ಅಡುಗೆಯ ಮನೆಯಲ್ಲಿನ ಆಗುಹೋಗುಗಳನ್ನು ನೋಡಿ ಕೊಳ್ಳುವಳೆಂಬ ಪ್ರತೀತಿಯಿದೆ.

**18. ಬಂಗಾರದ ಬಾವಿ:**

ಪೋಟ್ಟು ಕೋಣೆಯ ಈಚೆಗೆ ಅಂಗಳದಲ್ಲಿ ಬಂಗಾರದ ಬಾವಿ ಎಂದು ಪ್ರಸಿದ್ಧವಾಗಿರುವ ಬಾವಿಯಿದೆ. ಆಲಯಕ್ಕೂ ಅಲ್ಲಿನ ಅಡುಗೆ ಮನೆಗೂ ಬೇಕಾಗುವ ನೀರನ್ನು ಇಲ್ಲಿಂದ ಕಲ್ಲಿನ ಕಾಲುವೆಗಳ ಮೂಲಕ ಹರಿಯುವಂತೆ ಮಾಡಲಾಗಿದೆ. ಪವಿತ್ರವಾದ ಈ ಬಾವಿಯ ಸ್ಥಳವು ಆಗಮನಿರ್ದೇಶಿತವಾದದ್ದು. ಇಲ್ಲಿನ ನೀರು ಸರಬರಾಜು ಪದ್ಧತಿ,ಅಂದಿನ ವಿಜಯನಗರದ ರಾಜಧಾನಿ ಹಂಪೆ ಯಲ್ಲಿನ ನೀರಿನ ಸರಬರಾಜು ವ್ಯವಸ್ಥೆಯನ್ನು ನೆನಪಿಗೆ ತರುತ್ತದೆ. ಈಗ ಬಳಕೆಯಲಿಲ್ಲದ,ವಿಜಯನಗರ ಸಾಮ್ರಾಜ್ಯಕಾಲಕ್ಕೂಪೂರ್ವ ಪದ್ಧತಿಯಿದು. (ಈಗ ಈ ಬಾವಿಯ ನೀರನ್ನು ಬಳಸಲಾಗುತ್ತಿಲ್ಲ.ಇಲ್ಲಿನ ನೀರನ್ನು ಶುದ್ಧೀಕರಿಸುವ ಕಾರ್ಯ ಇದೀಗ ನಡೆದಿದೆ-ಅನು ವಾದಕ.)

**19. ಕಲ್ಯಾಣ ಮಂಟಪ :**

ವಿಮಾನ ಪ್ರದಕ್ಷಿಣಾ ಪಥದಲ್ಲಿ ಬಂಗಾರದ ಬಾವಿಯಿಂದ ಮುಂದುವರಿದರೆ ಎಡಕ್ಕೆ ನೈಋತ್ಯದ ಮೂಲೆಯಲ್ಲಿ ತನ್ನ ಶಿಲ್ಪಸೌಂದರ್ಯದಿಂದ ಖ್ಯಾತವಾಗಿರುವ ಕಲ್ಯಾಣ ಮಂಟಪವಿದೆ. 80 ಅಡಿ ಉದ್ದ ಹಾಗೂ 36 ಅಡಿ ಅಗಲವಿರುವ ಈ ಮಂಟಪವು ವಾಸ್ತು ಶಿಲ್ಪದ ವಿವರದಲ್ಲಿ ಹೊರಗಡೆ ಇರುವ ತಿರುಮಲರಾಯ ಮಂಟಪವನ್ನು ಹೋಲುತ್ತದೆ. ಇದರ ಪಶ್ಚಿಮದ ಕೋಣೆಯಲ್ಲಿ ಕಪ್ಪುಗ್ರಾನೈಟ್ ಶಿಲೆಯಿಂದ ಮಾಡಿದ ಒಂದು ಚಿಕ್ಕ ಅಂತರ್ ಮಂಟಪವಿದ್ದು ಇದರ ನಾಲ್ಕು ಮೂಲೆಯಲ್ಲೂ, ಮೂರು ಮೂರು ಒಳಗಂಬಗಳನ್ನು ಹೊಂದಿದ ನಾಲ್ಕು ಕಂಬಗಳಿವೆ. ಇದರ ಹಿಂದೆ ಎತ್ತರವಾದ ಯಾಗಶಾಲೆಯಿದೆ.

ಇಲ್ಲಿನ ಕಂಬಗಳು ವೈವಿಧ್ಯಮಯವಾಗಿ ಚೌಕಾಕಾರ ಹಾಗೂ ಷಡ್ಭುಜಾಕಾರದಲ್ಲಿದ್ದು ಕುಸುರಿ ಕೆಲಸದ ಬೋದಿಗೆಗಳನ್ನು ಹೊಂದಿವೆ. ನಾಲ್ಕು ಕಂಬಗಳ ಒಳ ಮಂಟಪವು ಕಪ್ಪು ಶಿಲೆಯಲ್ಲಿ ಅತ್ಯಂತ ನಯವಾದ ಕುಸುರಿ ಕೆಲಸವನ್ನು ಪ್ರಕಟಿಸಿದೆ. ಮೇಲು ಛಾವಣಿಯಲ್ಲಿ ಕಿಕ್ಕಿರಿದ ನೃತ್ಯಗಾರ್ತಿಯರು,ಕಂಬಗಳ ಎಲ್ಲ ಮುಖಗಳಲ್ಲೂ ತುಂಬಿರುವ ಕಿರು ಶಿಲ್ಪಗಳೂ ಒಂದು ರೀತಿಯ ಶಿಲ್ಪ ಮಾಧುರ್ಯವನ್ನುಂಟುಮಾಡಿದೆ. ಹೊಯ್ಸಳರ ಕಾಲದ ಪ್ರಸಿದ್ಧ ಕೆತ್ತನೆಯಿಂದ ಪ್ರಭಾವಿತವಾಗಿರುವಂತಿದೆ- ಇಲ್ಲಿನ ಶಿಲ್ಪದ ಕುಸುರಿ ಗೆಲಸ.

ಕಲ್ಯಾಣ ಮಂಟಪವೂ ಅದರೊಳಗಿನ ಅಂತರ್ ಮಂಟಪವೂ ಅಸಂಖ್ಯ ಉಬ್ಬು ಶಿಲ್ಪಗಳನ್ನು ಹೊಂದಿದ್ದು, ತ್ರಿವಿಕ್ರಮ, ಸುದ ರ್ಶನ,ಷೋಡಶಕರ ನರಸಿಂಹ,ಹಯಗ್ರೀವ-ಮೊದಲಾದವರ ಶಿಲ್ಪಗಳು ಅತ್ಯುತ್ತಮವಾಗಿವೆ.

ಬ್ರಹ್ಮೋತ್ಸವದ ಧ್ವಜಾರೋಹಣದಿಂದ ಮೊದಲುಗೊಂಡು ದೀಪಾವಳಿಯವರೆಗೆ ಮಲೆಯಪ್ಪಸ್ವಾಮಿಯು ಗರ್ಭಗುಡಿಯನ್ನು ಬಿಟ್ಟು ಇಲ್ಲಿನ ಮಂಟಪದಲ್ಲಿರುತ್ತಾನೆ. ಇದರಂತೆಯೇ ಡಿಸೆಂಬರ್ ತಿಂಗಳಲ್ಲಿನ 20 ದಿನ ನಡೆಯುವ ಅಧ್ಯಯನೋತ್ಸವ ಕಾಲದಲ್ಲೂ ಇಲ್ಲೇ ನೆಲೆಸುವನು. ಉತ್ಸವಗಳಲ್ಲಿನ ಆಸ್ಥಾನಗಳೂ ಇಲ್ಲಿಯೇ ನಡೆಯುತ್ತವೆ.(ಈಗ ಈ ಕಲ್ಯಾಣಮಂಟಪದಲ್ಲಿ ಹುಂಡಿಯ ಚಿಲ್ಲರೆಯನ್ನು ಬೇರ್ಪಡಿಸಿ ಎಣಿಸುವ ಪರಕಾಮಣಿ ನಡೆಯುತ್ತದೆ. ಭಕ್ತರು ಸ್ವಾಮಿದರ್ಶನ ಪಡೆದನಂತರ ತೀರ್ಥ ಶಠಾರಿ ಯನ್ನು ಪಡೆದು ಇದನ್ನು ಸುತ್ತಿಕೊಂಡು ಪ್ರದಕ್ಷಿಣಾಪಥದ ಹಿಂಭಾಗಕ್ಕೆ ಬರುವಾಗ ಈ ಪರಕಾಮಣಿಯನ್ನೂ ನೋಡಬಹುದು-ಅನುವಾದಕ)

## 20. ರಾಮಾನುಜ ಮಂದಿರ :

ವಿಮಾನ ಪ್ರದಕ್ಷಿಣಾಪಥದಲ್ಲಿನ ಉತ್ತರದಲ್ಲಿನ ಸಂಕೀರ್ತನ ಭಂಡಾರದ ಬದಿಯಲ್ಲಿ ಶ್ರೇಷ್ಠ ಶ್ರೀವೈಷ್ಣವ ಆಚಾರ್ಯರಾದ ರಾಮಾನುಜರ ಮಂದಿರವಿದೆ. ಈ ಆಲಯದಲ್ಲಿ ಯಾವುದೇ ಸ್ವತಂತ್ರವಾದ ಪೂಜೆ ನಡೆಯದಿದ್ದರೂ ಮೂಲವರಿಗೆ ಸಮರ್ಪಿಸಿದ ಎಲ್ಲ ಪ್ರಸಾದಗಳಲ್ಲಿಯೂ ಪ್ರಥಮವಾದ ಒಂದು ಪಾಲು ಈ ಆಲಯದಲ್ಲಿ ಆಚಾರ್ಯರಿಗಾಗಿ ನೀಡಲಾಗುವುದು. ವಿಶೇಷ ಉತ್ಸವಗಳ ದಿನಗಳಲ್ಲಿ ಆಚಾರ್ಯರಿಗೆ ವಿಶೇಷವಾದ ಗೌರವವನ್ನು ಸಮರ್ಪಿಸಲಾಗುವುದು; ಕಾರಣವೆಂದರೆ ಈ ಆಲಯದ ಪೂಜಾ ವ್ಯವಸ್ಥೆಯನ್ನು ತಿದ್ದಿ ನೇರ್ಪುಗೊಳಿಸಿದವರಲ್ಲಿ ಆಚಾರ್ಯರು ಬಹುಮುಖ್ಯವಾಗಿರುವುದು.

ರಾಮಾನುಜರ ಮಂದಿರದ ವಾಸ್ತುಶಿಲ್ಪವನ್ನು ಗಮನಿಸಿದರೆ ಇದನ್ನು ಹದಿಮೂರನೇ ಶತಮಾನದಲ್ಲಿ ನಿರ್ಮಿಸಿರ ಬಹುದೆಂದು ತೋರುತ್ತದೆ. ಪ್ರವೇಶ ದ್ವಾರದ ಪಕ್ಕದ ಗೋಡೆಯ ಮೇಲೆ ಪಾಂಡ್ಯರಾಜ ಚಿಹ್ನವಾದ ಎರಡು ಮೀನು ಹಾಗೂ ಗಾಳವನ್ನು ಕೆತ್ತಲಾಗಿದೆ. ಪ್ರಾಯಶಃ ಪಾಂಡ್ಯರಾಜರ ಅಧೀನನಾಗಿ ಯಾದವರಾಯನು ಆಳುತ್ತಿರುವಾಗ ಈ ಮಂದಿರದ ನಿರ್ಮಾಣವಾಗಿರಬೇಕು. ಆದರೆ ಮಂದಿರದ ಮುಂದಿನ ಮುಖಮಂಟಪವನ್ನು ಒಂದೆರಡು ಶತಮಾನಗಳ ನಂತರ ವಿಜಯನಗರದರಸರ ಕಾಲದಲ್ಲಿ ನಿರ್ಮಿಸಿರಬಹುದು. ಆಚಾರ್ಯ ರಾಮಾನುಜರನ್ನು ಪೂಜಾರ್ಹರನ್ನಾಗಿಸಿ ಅವರಿಗಾಗಿ ಒಂದು ಮಂದಿರದ ನಿರ್ಮಾಣವಾದದ್ದು, ಅವರು ತಿರುಮಲೆ-ತಿರುಪತಿಗಳಿಗೆ ಮಾಡಿದ ಅತ್ಯಂತ ಹೆಚ್ಚಿನ ಸೇವೆಯಿಂದಲೇ ಎನ್ನಬಹುದು. ಪರಂಪರೆಯ ಪ್ರಕಾರ ತಿರುಮಲೆ ತಿರುಪತಿಗಳಲ್ಲಿನ ರಾಮಾನುಜ ಮಂದಿರಗಳ ನಿರ್ಮಾಣ ಈ ಶ್ರೇಷ್ಠ ಆಚಾರ್ಯರು ವೈಕುಂಠ ವಾಸಿಗಳಾದ ಸ್ವಲ್ಪಕಾಲದಲ್ಲಿಯೇ ನಡೆಯಿತು. ರಾಮಾನುಜರಿಗೆ ಸ್ವಾಮಿ ತೀರ್ಥವನ್ನೂ ಪ್ರಸಾದವನ್ನೂ ನಿತ್ಯವೂ ನೀಡುವ ವೈಖಾನಸ ಅರ್ಚಕರ ಹಾದಿಯಲ್ಲಿ ರಾಮಾನುಜಾಚಾರ್ಯರ ಪಾಂಚರಾತ್ರಾಗಮ ಪೂಜಾಪದ್ಧತಿ ಯೇನೂ ಅಡ್ಡಬರಲಿಲ್ಲ.

## 21. ನರಸಿಂಹಸ್ವಾಮಿ ಆಲಯ:

ವಿಮಾನ ಪ್ರದಕ್ಷಿಣಾಪಥದ ಈಶಾನ್ಯ ಮೂಲೆಯಲ್ಲಿ ಎತ್ತರವಾದ ತಳಗಟ್ಟಿನಲ್ಲಿ ಕಂಬಗಳಿರುವ ಅಂಗಳದಲ್ಲಿ ಈ ಆಲಯವಿದೆ. ಒಂದು ನಯವಾದ ಕಲ್ಲಿನ ಮಂಟಪದಲ್ಲಿದ್ದು ಪ್ರಾಯಶಃ 15 ನೇ ಶತಮಾನದಲ್ಲಿ ನಿರ್ಮಿತವಾಗಿರಬೇಕು. ಇಲ್ಲಿನ ಕಂಬಗಳ ಮೇಲೆ ನೃತ್ಯದ ಆಸಕ್ತಿದಾಯಕ ನಮೂನೆಗಳನ್ನು ಕಾಣಬಹುದು.

ಕ್ರಿ.ಶ.1469 ರ ಒಂದು ಶಾಸನದಲ್ಲಿ (ಅತಿ ಪ್ರಾಚೀನವಾದ ಉಲ್ಲೇಖ) ಈ ದೈವವನ್ನು ಆಳಗಿಯಸಿಂಗರ್ ಎಂದು ಕರೆದು ಇವರಿಗೆ ಮಾಡಿದ ನಿವೇದನೆಯ ಬಗ್ಗೆ ಹೇಳಲಾಗಿದೆ. (70-ಎ. ತಿ.ತಿ.) ಇನ್ನೊಂದು ಶಾಸನವು ಧನುರ್ಮಾಸದ ಮುವತ್ತು ದಿನಗಳಲ್ಲಿ, ವಸಂತ ಪಂಚಮಿಯಂದು,ಶ್ರೀರಾಮ ನವಮಿಯ ದಿನದಂದು ಹಾಗೂ ತಿರುಕ್ಕೊಡಿ ತಿರುನಾಳ್ ಉತ್ಸವದ ಏಳನೆಯ ದಿನದಂದು ಮಾಡತಕ್ಕ ನಿವೇದನೆಯ ಬಗ್ಗೆ ತಿಳಿಸುತ್ತದೆ.(280 ತಿ.ತಿ.) ಇನ್ನೊಂದು ವಸಂತ ಪಂಚಮಿಯ ನೈವೇದ್ಯದ ಬಗ್ಗೆ ಹೇಳುತ್ತದೆ. (599-ತಿ.ತಿ.) ಕಂದಾಡೈ ರಾಮಾನುಜ ಅಯ್ಯಂಗಾರ್ಯನು ಈ ದೇವರಿಗೆ ತಿರುಮಂಜನಕ್ಕಾಗಿ ಹಾಗೂ ಪಂಗುಣಿ ಅಮಾವಾಸ್ಯೆ ಮತ್ತು ವಸಂತ ಪೂರ್ಣಿಮೆಯ ದಿನಗಳಲ್ಲಿ ನಿವೇದನಕ್ಕೆ ಒದಗಿಸಿದ.(70 ತಿ.ತಿ.)

ಮೊದಲಿಗೆ ಮತ್ತೆರಡು ಕೋಣೆಗಳು-ಚಂದನ ಕೋಣೆ ಹಾಗೂ ಪರಿಮಳ ಕೋಣೆ-ಇದ್ದವಾದರೂ ಈಗ ಇವೆರಡೂ ಇಲ್ಲ.

## 22. ಮುಖ್ಯಾಲಯದ ಸಂಕೀರ್ಣ ನಿರ್ಮಾಣ :

ಗರ್ಭಗೃಹವನ್ನೊಳಗೊಂಡ ಮುಖ್ಯಾಲಯವು ಹಲವು ನಿರ್ಮಿತಿಗಳನ್ನು ಒಳಗೊಂಡ ಸಂಕೀರ್ಣವಾಗಿದೆ. ಪೂರ್ವದಲ್ಲಿ ತಿರುಮಾಮಣಿ ಮಂಟಪದಿಂದ ಆರಂಭವಾಗಿ ಅನುಕ್ರಮವಾಗಿ ಬಂಗಾರದ ಬಾಗಿಲು,ಸ್ನಪನ ಮಂಟಪ,ರಾಮರ್ ಮೇಡೈ.ಸಾಯಣ ಮಂಟಪ, ಗರ್ಭಗೃಹವನ್ನು ಸೇರುವುದು. ಈ ಸ್ಥಳದ ಒಂದು ಭಾಗ ಉತ್ತರ ದಕ್ಷಿಣಗಳಲ್ಲಿ ಮುಕ್ಕೋಟಿ ಪ್ರದಕ್ಷಿಣದಿಂದ ಆವೃತವಾಗಿ ಒಳಗಡೆ ಚಿತ್ರಗಳಿಲ್ಲದ ದಪ್ಪ ಗೋಡೆಗಳಿಂದ ಆಗಿದೆ. ಮುಕ್ಕೋಟಿ ಪ್ರದಕ್ಷಿಣದ ಉತ್ತರದ ಗೋಡೆ ಸ್ವಲ್ಪ ಉದ್ದಕ್ಕಿದ್ದುಹೆಚ್ಚು ಸ್ಥಳವನ್ನು ಆಕ್ರಮಿಸಿದೆ. ಪ್ರದಕ್ಷಿಣೆಯ ಎರಡೂ ಪಾರ್ಶ್ವಗಳಲ್ಲಿ ಪೂರ್ವಕ್ಕೆ ಸ್ನಪನ ಮಂಟಪ,ತಿರುಮಾಮಣಿ ಮಂಟಪಗಳು ಮುಂದೆ ಚಾಚಿ ಕೊಂಡಿವೆ. ಹೀಗಾಗಿ ಉತ್ತರದಿಂದ ನೋಡಿದರೆ ಗುಡಿಯು ಮೂರು ಭಾಗಗಳಾಗಿ ಕಂಡುಬರುವುದು.

## 23. ತಿರುಮಾಮಣಿ ಮಂಟಪ:

ಉತ್ತರ ದಕ್ಷಿಣದ ಕಂಬಗಳ ಮೂರು ಭಾಗವಾಗಿದ್ದು ಮಧ್ಯ ಭಾಗವು ಇತರ ಎರಡು ವಿಭಾಗಗಳಿಗಿಂತ ದೊಡ್ಡದಾಗಿರುವ ಬಯಲು ಮಂಟಪವಿದು. ಮುಂದಿನ ಮತ್ತು ಹಿಂದಿನ ಭಾಗಗಳು ಉಪಾನ, ಪಟ್ಟ, ಪದ್ಮ, ಗಳ, ತ್ರಿಪಟ್ಟಗಳು ಮಟ್ಟಸವಾಗಿ ಹರಡಿದ ಅಧಿಷ್ಠಾನದ ಮೇಲಿದ್ದು ಮತ್ತೊಂದು ಕಡೆ ಗೋಡೆಗಂಬಗಳಿಂದ, ಕಪೋತಗಳಿಂದ ಅಲಂಕೃತವಾಗಿದ್ದು ಸಿಂಹಲಲಾಟ,ನಾಸಿಕಗಳಿಂದ ಕೂಡಿದೆ. ಮಧ್ಯದಲ್ಲಿನ ಕಪೋತದ ಮೇಲೆ ಒಂದು ಅಲಂಕಾರ ಪಟ್ಟಿಕೆಯೂ ಮಕರಗಳ ಸಾಲೂ ಕಂಡುಬರುತ್ತವೆ. ಮಧ್ಯದ ವಿಭಾಗ ದಲ್ಲಿನ ಕಂಬಗಳಲ್ಲಿ ಎರಡು ಒಳಗಂಭಗಳ ನಡುವೆ ಕೋಷ್ಠಗಳಿವೆ.

ಈ ಮಂಟಪದ ಅತಿ ಪೂರ್ವದಲ್ಲಿ ಸ್ವಾಮಿಯತ್ತ ಮುಖ ಮಾಡಿದ ಗರುಡ ಮಂಟಪವಿದೆ. ಈ ಗರುಡ ಮಂಟಪದ ಹೊರಗೋಡೆಯ ಮೇಲೆ ಶಯನ ಭಂಗಿಯ ವಿಷ್ಣುವಿದ್ದಾನೆ. ತಿರುಮಾಮಣಿ ಮಂಟಪದ ಪಶ್ಚಿಮದ ಕೊನೆಯ ಬಂಗಾರದ ಬಾಗಿಲಿನ ಎದುರಿಗಿರುವ ಈ ಗರುಡ ಮಂಟಪವು ಒರಟಾದ ನಿರ್ಮಾಣವಾಗಿದೆ.

ತಿರುಮಾಮಣಿ ಮಂಟಪವು 43 ಅಡಿ ಹಾಗೂ 40 ಅಡಿ ವಿಸ್ತಾರವಾಗಿದೆ. ಇಲ್ಲಿ 16 ಕಂಬಗಳಿದ್ದು ಇಳಿಬಿಟ್ಟ ಕಪೋತವೂ ಉಂಟು. ಈ ಮಂಟಪದ ವಾಯವ್ಯದಲ್ಲಿ ಸ್ವಾಮಿಯ ಹುಂಡಿಯನ್ನಿಡಲಾಗಿದೆ. ಇದರ ನೈಋತ್ಯದಲ್ಲಿ ಎರಡು ದೊಡ್ಡ ಗಾತ್ರದ ಗಂಟೆ ಗಳಿದ್ದು ಶಾಸನಗಳಿರುವ ಈ ಗಂಟೆಗಳಿಂದಲೇ ಮಂಟಪಕ್ಕೆ ಈ ಹೆಸರು ಬಂದಿದೆ-ಮಂಟಪದ ಹೊರಗಂಬಗಳು ಸಿಂಹಗಳ ಮೇಲಿದ್ದು ಸಂಕೀರ್ಣವಾಗಿವೆ. ಆನೆಯ ಮೇಲೆ ಕುಳಿತಿರುವಂತಿರುವ ನಾಲ್ಕು ಕೈಗಳ ವಿಷ್ಣುವಿನ ಉಬ್ಬು ಶಿಲ್ಪ ಅಪೂರ್ವವಾದದ್ದು. ಸ್ತಂಭವನ್ನು ಸೀಳಿಕೊಂಡು ಹೊರಬರುತ್ತಿರುವ ನರಸಿಂಹಸ್ವಾಮಿಯ ಚಿತ್ರ ಆಕರ್ಷಕ ಆಗಿದೆ.

ಕ್ರಿ.ಶ.1417ರಲ್ಲಿ ಚಂದ್ರಗಿರಿಯ ಮಾಧವದಾಸನೆಂಬ ಮಲ್ಲಣ್ಣನು ಈ ಮಂಟಪವನ್ನು ನಿರ್ಮಿಸಿದ. ಈ ಮಂಟಪವು ತನ್ನ ಸುಂದರವಾದ ಕಂಬಗಳು,ಗೋಡೆಗಂಬಗಳು,ಅವುಗಳ ಮೇಲಿನ ಸ್ತ್ರೀ ಶಿಲ್ಪಗಳಿಂದಾಗಿ ವಿಜಯನಗರದ ಆದಿಕಾಲದ ವಾಸ್ತುಶಿಲ್ಪದ ಉತ್ತಮ ಉದಾಹರಣೆಯಾಗಿದೆ.(21ನೆಯ ಶತಮಾನದಲ್ಲಿ ಈ ಮಂಟಪವನ್ನೂ ಕಂಬಗಳನ್ನೂ ಚಿನ್ನದ ಮುಲಾಮಿನ ಹೊದಿಕೆಯಿಂದ ಶೋಭಾಯಮಾನವಾಗಿಸಲಾಗಿದೆ - 2014)

## 25. ಬಂಗಾರದ ಬಾಗಿಲು:

ಗರ್ಭಗೃಹದತ್ತ ನಡೆಯಲು ತಿರುಮಾಮಣಿ ಮಂಟಪದಿಂದ ಬಂಗಾರದ ಬಾಗಿಲಿನ ಮೂಲಕ ಒಳಹೋಗಬೇಕು. ಬಂಗಾರದ ಬಾಗಿಲಿನ ಎರಡೂ ಬದಿಗಳಲ್ಲಿ ಎತ್ತರವಾದ ಜಯವಿಜಯ ದ್ವಾರ ಪಾಲಕರ ತಾಮ್ರ ವಿಗ್ರಹಗಳನ್ನು ಕಾಣಬಹುದು. ಬಾಗಿಲುಗಳು ಬಂಗಾರದ ತೆಳುವಾದ ತಗಡಿನಿಂದ ಹೊದಿಸಲ್ಪಟ್ಟಿದ್ದಾಗಿ ವಿವಿಧ ಭಂಗಿಗಳಲ್ಲಿ ಇರುವ ವಿಷ್ಣು ಪ್ರತಿಮೆಗಳನ್ನು ಹೊಂದಿವೆ. ವಿಷ್ಣುವು

ತನ್ನ ಐದೂ ರೂಪಗಳಲ್ಲಿ - ಪರ,ವ್ಯೂಹ,ವಿಭವ,ಅರ್ಚಾ ಅಂತರ್ಯಾಮಿ ರೂಪಗಳಲ್ಲಿ ಚಿತ್ರಿತವಾಗಿರುವ ಈ ಬಾಗಿಲ ಬಳಿಯಲ್ಲಿಯೇ ಸುಪ್ರಭಾತವನ್ನು ಹಾಡಲಾಗುತ್ತದೆ. ಗರ್ಭಗೃಹದಲ್ಲಿರುವ ಅರ್ಚಾಮೂರ್ತಿಯ ಮುಂದೆ ಅಲ್ಲವೆಂಬುದೂ ಗಮನಾರ್ಹವಾಗುತ್ತದೆ.

## 26. ಸ್ನಪನ ಮಂಟಪ:

ಬಂಗಾರದ ಬಾಗಿಲನ್ನು ದಾಟಿ ಅರೆಗತ್ತಲಾದ ಸ್ನಪನ ಮಂಟಪಕ್ಕೆ ಬರುತ್ತೇವೆ. ಇದನ್ನು ತಿರುವಿಳಂಕೋಯಿಲ್ ಎಂದೂ ಕರೆಯುವರು. ಈ ಮಂಟಪದ ಮುಂಭಾಗವನ್ನು ಎರಡೂ ಕಡೆಯಲ್ಲಿ ಎರಡು ಕೋಣೆಗಳಾಗಿ ವಿಂಗಡಿಸಲಾಗಿದೆ. ಈಗಿರುವ ಸ್ನಪನ ಮಂಟಪವನ್ನು ವಿಜಯನಗರದ ಕಾಲಕ್ಕೆ ಒಯ್ಯಬಹುದು. ಇಲ್ಲಿನ ಕಂಬಗಳಲ್ಲಿ ಉತ್ತಮವಾದ ಉಬ್ಬು ಶಿಲ್ಪಗಳಿದ್ದು ವಿಜಯನಗರ ಕಾಲಕ್ಕೆ ಸೇರಿದ ಮಾದರಿಗಳಾಗಿವೆ. ಬಾಲಕೃಷ್ಣ, ಯೋಗನರಸಿಂಹ, ಕಾಳೀಯಮರ್ದನ ಮುಂತಾದಶಿಲ್ಪಗಳಿವೆ. ಒಂದು ಗಮನಾರ್ಹ ಉಬ್ಬು ಶಿಲ್ಪವೆಂದರೆ ಕುಳಿತ ಭಂಗಿಯ ವಿಷ್ಣುಮೂರ್ತಿ. ನಾಲ್ಕು ಕೈಗಳಿದ್ದು ಮೇಲಿನ ಕೈಗಳಲ್ಲಿ ಚಕ್ರಶಂಖಗಳನ್ನು ಹಿಡಿದಿದ್ದಾನೆ. ಶ್ರೀದೇವಿ ಭೂದೇವಿಯರು ಎಡಬಲಗಳಲ್ಲಿ ಸುಖಾಸನ ಭಂಗಿಯಲ್ಲಿ ಕುಳಿತಿದ್ದಾರೆ.

## 27. ರಾಮರ್ ಮೇಡೈ:

ಸ್ನಪನ ಮಂಟಪವನ್ನು ದಾಟಿದ ನಂತರ ರಾಮರ್ ಮೇಡೈಗೆ ಬರುತ್ತೇವೆ.ಮೊದಲಿಗೆ ಮುಕ್ಕೋಟಿ ಪ್ರದಕ್ಷಿಣದ ಮೂರು ಕಡೆಗಳ ಪ್ರದಕ್ಷಿಣಾ ಪಥ ರಾಮರ್ ಮೇಡೈ ಯೊಡನೆ ಸೇರಿ ಪೂರ್ತಿಯಾದ ಪ್ರದಕ್ಷಿಣಾ ಪಥವಾಗಿದ್ದಿರಬೇಕು. ಕ್ರಿ.ಶ.1262-1265 ರಲ್ಲಿ ರಾಮರ್ ಮೇಡೈಯ ಎರಡು ಕಡೆಗಳಲ್ಲಿ ಪಥವನ್ನು ಮುಚ್ಚಿ ಒಂದು ಕೋಣೆಯನ್ನಾಗಿಸಿರಬೇಕು. ಈಗ ರಾಮರ್ಮೇಡೈಯಲ್ಲಿ ಎರಡು ಸಣ್ಣ ಜಗಲಿಗಳಿದ್ದು ಅಂಗದ, ಹನುಮಂತ ಮೊದಲಾದ ವಿಗ್ರಹಗಳನ್ನು ಇಡಲಾಗಿದೆ. ಒಬ್ಬ ಪರಿಚಾರಕನು ದೀಪವನ್ನು ಹಿಡಿದಿರುವ ವಿಗ್ರಹವೂ ಒಂದಿದೆ. ಮೂಗಿನ ಮೇಲೆ ಬೆರಳಿಟ್ಟು ಆಶ್ಚರ್ಯವನ್ನು ಸೂಚಿಸುತ್ತಿರುವ ವಾನರ ಶಿಲ್ಪ ಗಮನಾರ್ಹವಾದದ್ದು. ಈ ಶಿಲ್ಪವನ್ನು ವಾಲಿಯ ಸೋದರ ಸುಗ್ರೀವನದೆಂದು ಕಲಾ ಚರಿತ್ರಕಾರ ಪ್ರಾಚಾರ್ಯ ಸಿ.ಶಿವರಾಮ ಮೂರ್ತಿ ಅವರು ಸರಿಯಾಗಿಯೇ ಗುರುತಿಸಿದ್ದಾರೆ. ಈಗ ಮದರಾಸು ಪುರಾವಸ್ತು ಸಂಗ್ರಹಾಲಯದಲ್ಲಿರುವ ತಂಜಾವೂರಿನ ವಡಕ್ಕು ಪುನಿಯೂರಿನ ಹನುಮಂತ ವಿಗ್ರಹ ದಂತೆಯೇ ಈ ವಿಗ್ರಹವೂ ಇರುವುದರಿಂದ ಎರಡೂ ವಿಗ್ರಹಗಳೂ ಚೋಳರ ಆದಿಕಾಲಕ್ಕೆ ಸೇರಿದವಾಗಿರಬೇಕು.

## 28. ಮುಕ್ಕೋಟಿ ಪ್ರದಕ್ಷಿಣ:

ಮೂಲ ಗರ್ಭಗುಡಿಗೂ ಅದರ ಮುಖಮಂಟಪವಾದ- ಇಂದು ಸಾಯಣ ಮಂಟಪವೆಂದು ಕರೆಯಲಾಗುವ ಅದರ ಮುಖ ಮಂಟಪಕ್ಕೂ, ಹತ್ತಿರವಾದ ಮೂಲ ಪ್ರದಕ್ಷಿಣಾ ಪಥವೆಂದರೆ ಮುಕ್ಕೋಟಿ ಪ್ರದಕ್ಷಿಣ. ಆಲಯದಲ್ಲಿ ಈಗ ಈ ಪ್ರದಕ್ಷಿಣಾ ಪಥವನ್ನು ವೈಕುಂಠ ಏಕಾದಶಿಯಂದು ಮಾತ್ರವೇ ತೆರೆಯಲಾಗುತ್ತದೆ.ಇದು ಉತ್ತರ ದಕ್ಷಿಣ ಪಶ್ಚಿಮಗಳಲ್ಲಿ ಮಾತ್ರವೇ ಸುತ್ತು ಬರುವುದು. ಇದೊಂದು ಮೂರು ಭಾಗದ ಕಂಬಗಳಿಂದ ಕೂಡಿದ ನಿರ್ಮಾಣ. ದಕ್ಷಿಣಭಾಗದಲ್ಲಿ ಆರು ಕಂಭಗಳು,ಪಶ್ಚಿಮದಲ್ಲಿ ನಾಲ್ಕು , ಉತ್ತರದಲ್ಲಿ ಏಳು ಕಂಬಗಳ ಎರಡು ಸಾಲುಗಳಿವೆ. ಎಲ್ಲ ಕಂಬಗಳೂ ದುಂಡಗಿದ್ದು ಚೋಳರ ಕಾಲದ ಬೋದಿಗೆಗಳನ್ನುಹೊಂದಿವೆ. ಉತ್ತರದಲ್ಲಿ ವಿಶ್ವಕ್ಸೇನರ ಮಂದಿರವಿದೆ. ಉತ್ತರದ ಗೋಡೆಯಲ್ಲಿ ಹಲವು ಶಿಲ್ಪಗಳಿವೆ.

## 29. ಸಾಯಣ ಮಂಟಪ:

ಇನ್ನೂ ಪಶ್ಚಿಮದಲ್ಲಿ ಮೊಟ್ಟಮೊದಲಿಗೆ ಅಂತರಾಳವಾಗಿರಬಹುದಾದ ಸಾಯಣ ಮಂಟಪವಿದೆ. 18 ಅಡಿ 6 ಅಡಿಗಳ ಆಯತಾಕಾರದ ಕೋಣೆಯಿದು. ಈ ಕೋಣೆಯಲ್ಲಿ ಗಮನಿಸತಕ್ಕ ಯಾವುದೇ ಶಿಲ್ಪವಾಗಲೀ ಚಿತ್ರವಾಗಲೀ ಇಲ್ಲ. ಸ್ವಾಮಿಯನ್ನು ಏಕಾಂತಸೇವೆಯ ಹೊತ್ತಿನಲ್ಲಿ ಇಲ್ಲಿ ನಿ ದ್ದೆಗೊಳಿಸಲಾಗುತ್ತದೆ.(ಶಯನ ಮಂಟಪವೇ ಸಾಯಣ ಮಂಟಪವಾಗಿದೆ.)

## 30. ಗರ್ಭಗೃಹ:

ಸಾಯಣ ಮಂಟಪದ ಪಶ್ಚಿಮಕ್ಕೆ ಇರುವುದೇ ಗರ್ಭಗೃಹ.ಗರ್ಭಗುಡಿಗೂ ಸಾಯಣ ಮಂಟಪಕ್ಕೂ ನಡುವೆಯಿರುವ ಹೊಸ್ತಿಲನ್ನು ಕುಲಶೇಖರ ಆಳ್ವಾರರ ಸ್ಮರಣಾರ್ಥವಾಗಿ ಗೌರವದಿಂದ ಕುಲಶೇಖರಪ್ಪಡಿ ಎನ್ನುವರು. ಯಾವ ಭಕ್ತರೂ ಇದರ ಮೇಲೆ ನಿಲ್ಲುವುದಾಗಲೀ, ಇಲ್ಲಿಂದ ಮುಂದಕ್ಕೆ ನಡೆದು ಗರ್ಭಗೃಹವನ್ನು ಸೇರುವುದಾಗಲೀ ಮಾಡುವುದಿಲ್ಲ.

ಗರ್ಭಗೃಹವು 12 ಅಡಿ ಚೌಕಾಕಾರದ ನಿರ್ಮಿತ. ಇದರ ಹಾಗೂ ಸಾಯಣ ಮಂಟಪದ ಗೋಡೆಗಳು ಮಧ್ಯೆ ಗಾಳಿಯಾಡುವ ಎರಡೆರಡು ಗೋಡೆಗಳ ಸಂಯುಕ್ತಗಳು. ಈಗಿರುವ ಗರ್ಭಗೃಹದ ಗೋಡೆಗಳು ಕತ್ತರಿಸಿದ ಕಲ್ಲುಗಳಿಂದಾಗಿದ್ದು 8-9 ನೇ ಶತಮಾನದ್ದಾಗಿರಬೇಕು. ದಕ್ಷಿಣಭಾರತದಲ್ಲಿ ಗರ್ಭಗೃಹ ಮುಖ ಮಂಟಪ ಪ್ರದಕ್ಷಿಣಾ ಪಥಗಳ ಆಲಯ ನಮೂನೆಯು 8 ನೇ ಶತಮಾನದ ಹೊತ್ತಿಗೆ ಪ್ರತಿಸ್ಥಾಪಿತವಾಗಿರಬೇಕು,

## 31. ಮುಖ್ಯಾಲಯದ ವಾಸ್ತುಶಿಲ್ಪ ಲಕ್ಷಣಗಳು:

ಸಾಯಣಮಂಟಪ,ಅಂತರಾಳ,ಗರ್ಭಗೃಹಗಳಲ್ಲಿ ಕಂಡುಬರುವ ವಾಸ್ತು ಶಿಲ್ಪ ಲಕ್ಷಣಗಳು ವೈವಿಧ್ಯಮಯವಾಗಿದೆ. ಉತ್ತರ ದಕ್ಷಿಣದ ಗೋಡೆಗಳು ಪೂರ್ವಪಶ್ಚಿಮವಾಗಿ ನಾಲ್ಕು ವಿಭಾಗವಾಗಿವೆ. ನಡುವಣ ಎರಡು ವಿಭಾಗಗಳು ಹೆಚ್ಚು ಅಗಲವಾಗಿವೆ.1,2,4 ನೇ ವಿಭಾಗಗಳು ಎತ್ತರದ ಅಧಿಷ್ಠಾನದಲ್ಲಿದ್ದು ಇಲ್ಲಿ ಉಪಾನ,ಪಟ್ಟ,ಅರ್ಧಪದ್ಮ,ಎರಡು ಪಟ್ಟಾಗಳು,ಗಳ,ಪಟ್ಟ,ತ್ರಿಪಟ್ಟ,ಊರ್ಧ್ವಪದ್ಮ ಪಟ್ಟ ಮೊದಲಾದವುಗಳಿವೆ.ಈ ಮೂರು ವಿಭಾಗಗಳಲ್ಲಿನ ಗೋಡೆಗಳ ಮೇಲಿನ ಅಲಂಕಾರಗಳೂ ವಿಭಿನ್ನವಾಗಿವೆ. ಒಂದನೇ ಭಾಗದ ಗೋಡೆಗಳು- ಸಾಲಕೋಷ್ಟ. ಎರಡು ಗೋಡೆಗಂಬಗಳು,ಕೂಟ ಪಂಜರ ಹೊಂದಿವೆ. ಎರಡನೇ ವಿಭಾಗದ ಗೋಡೆಗಳು ಗೋಡೆಗಂಬ, ಎರಡು ಕಂಬಗಳ ನಡುವೆ ಕುಂಭ ಪಂಜರ,ಕೂಟ ಪಂಜರಗಳನ್ನು ಒಳಗೊಂಡಿವೆ. ಮೂರನೇ ವಿಭಾಗದ ಗೋಡೆಗಳು ಎರಡು ಒಳ ಕಂಬಗಳ ನಡುವೆ ಸಾಲಕೋಷ್ಠಗಳನ್ನು ಹೊಂದಿವೆ. ನಾಲ್ಕನೇ ವಿಭಾಗದ ಗೋಡೆಗಳಲ್ಲಿ ಕುಂಭಪಂಜರ ಕಂಬಗಳ ಅನುಕ್ರಮಣಿಕೆಯಲ್ಲಿವೆ. ಗರ್ಭಗೃಹದ ಹಿಂದಿನ ಗೋಡೆ ಮೂರುಭಾಗವಾಗಿ ನಡುವಿನದು ಸ್ವಲ್ಪ ಪಶ್ಚಿಮಕ್ಕೆ ಚಾಚಿದ್ದು.ಎರಡು ಗೋಡೆಗಂಬಗಳ ನಡುವೆ ಸಾಲಕೋಷ್ಠವಿದೆ. ಉತ್ತರ ದಕ್ಷಿಣಗಳಲ್ಲಿ ಒಳಗಂಬ, ಕೂಟಪಂಜರ, ಒಳಗಂಬ, ಕೂಟಪಂಜರ, ಒಳಗಂಬ, ಕುಂಭಪಂಜರಗಳುಂಟು. ಗರ್ಭಗೃಹ ಅಂತರಾಳಗಳು ಆಕಾರದಲ್ಲಿ ಚಚ್ಚೌಕವಾಗಿದ್ದು ಹೊರಗೋಡೆಗಳ ಮೇಲೆ ಹಲವು ವಾಸ್ತು ಲಕ್ಷಣಗಳನ್ನು ಕಾಣಬಹುದಾಗಿದೆ.

ಗರ್ಭಗೃಹದ ಗೋಡೆಗಳು 7 ಅಡಿ 2 ಅಂಗುಲ ದಪ್ಪವಾಗಿವೆಂದು ತಿಳಿದು ಬರುತ್ತದೆ. ಇದು ಒಟ್ಟು ಸುಮಾರು ಐದು ಹಸ್ತಗಳ ದಪ್ಪವಾಗುವುದು. ಗರ್ಭಗೃಹದ ಒಳ ಅಳತೆ 12 ಅಡಿ 9 ಅಂಗುಲ ಚೌಕ, ಅಥವಾ 9 ಹಸ್ತ ಚೌಕ. ಆಗಮಗಳಲ್ಲಿ ಹೇಳಿರುವಂತೆ ಇದು ಅತಿ ಹಿರಿದಾಗಿದ್ದು ಧ್ರುವಮೂರ್ತಿ ಎತ್ತರವಾಗಿರುವುದರಿಂದ ಈ ವಿಸ್ತಾರದ ಅಳತೆಯನ್ನು ಹೊಂದಲಾಗಿದೆ. ಗೋಡೆಗಳು ಅತಿ ದಪ್ಪವಾಗಿರಲು ಕಾರಣ ಹಿಂದೆಯೇ ತಿಳಿಸಿದಂತೆ ಗಾಳಿಯ ಸ್ಥಳವಿರುವ ಎರಡು ಗೋಡೆಗಳಿಂದಾಗಿರುವಿಕೆಯೇ ಆಗಿದೆ. ಆಲಯಗಳಲ್ಲಿ ಜೀರ್ಣೋದ್ಧಾರಕಾರ್ಯ ನಡೆಯುತ್ತಲೇ ಇರುವುದು ಎಂಬ ಮಾತಿಗೆ ತಿರುಮಲೆಯ ಆಲಯ ಹೊರತೇನಲ್ಲ. ತಿ.ತಿ.17 ನೇ ಶಾಸನವು ವೀರನರಸಿಂಹ ಯಾದವರಾಯನು ತನ್ನ ಆಳ್ವಿಕೆಯ 40 ನೇ ವರ್ಷದಲ್ಲಿ ನಡೆಸಿದ ಜೀರ್ಣೋದ್ಧಾರ ಕಾರ್ಯವನ್ನು ವಿವರಿಸುತ್ತದೆ. ಗರ್ಭಗುಡಿಯಲ್ಲಿ ಒಂದೇ ಒಂದು ಮೂಲಮೂರ್ತಿಯಿದೆ. ಇದೊಂದು ವೈಶಿಷ್ಟ್ಯ. ಕಾರಣ ದೇಶದಲ್ಲಿರುವ ವೈಷ್ಣವ ಆಲಯಗಳಲ್ಲಿ ಇದು ಒಂದೇ ಏಕಮೂರ್ತಿ ಆಲಯವಾಗಿರುವುದು.

ಹೀಗಾಗಿ ಹಳೆಯ ಕಟ್ಟಡಗಳು ಬಹುಕಾಲ ನಿಲ್ಲದೆ ಪುನಃ ದುರುಸ್ತು ಹೊಂದಿ ಜೀರ್ಣೋದ್ಧಾರವಾದವೆಂದು ತಿಳಿಯುವುದರಲ್ಲಿ ತಪ್ಪೇನಿಲ್ಲ. ಗರ್ಭಗೃಹದ ಎರಡು ಗೋಡೆಗಳು ವಾಸ್ತುಶಿಲ್ಪದ ಬೆಳವಣಿಗೆಯಲ್ಲಿ ಒಂದು ಸಮಸ್ಯೆಯನ್ನು ಸೃಷ್ಟಿಸಿದೆ. ಈ ಅಂಶವನ್ನು ಇನ್ನೊಂದು ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

# ಅಧ್ಯಾಯ - 5

# ಶ್ರೀವೆಂಕಟೇಶ್ವರ ಸ್ವಾಮಿ ವಿಗ್ರಹ ಹಾಗೂ ಗರ್ಭಗುಡಿಯ ಇನ್ನಿತರ ವಿಗ್ರಹಗಳು

**ಪೀಠಿಕೆ:**

**1. ವೈಷ್ಣವಾಲಯ ಲಕ್ಷಣಗಳು:** ಹಿಂದೂ ದೇವಾಲಯವನ್ನು ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಸರ್ವಸೃಷ್ಟಿಕರ್ತನನ್ನು ಪ್ರತಿನಿಧಿಸುವ ದೇವರ ಸುತ್ತ ತಿರುಗುವ ಕಿರಿಯ ವಿಶ್ವದ ಪ್ರತೀಕವೆಂದು ಪರಿಕಲ್ಪಿಸಲಾಗಿದೆ. ಹಾಗೆಂದೇ ಎಲ್ಲ ದೇವಾಲಯಗಳೂ ತಮ್ಮ ಆವರಣದಲ್ಲಿ ಮರಗಿಡ ಬಳ್ಳಿ,ಪ್ರಾಣಿ ಪಶುಪಕ್ಷಿ,ಮಾನವ ಯಕ್ಷ ಕಿನ್ನರ ಕಿಂಪುರುಷ ಗಂಧರ್ವರ ವೈವಿಧ್ಯಮಯ ರೂಪಗಳನ್ನು ಹೊಂದಿರುತ್ತವೆ. ಹೀಗಾಗಿ ಹಿಂದೂ ದೇವಾಲಯಗಳೆಂದರೆ ಬದುಕಿನ ಬಹುಮುಖತೆಯನ್ನು ಅದರ ಎಲ್ಲ ಪರಿವರ್ತನಶೀಲ ಪರಿಸ್ಥಿತಿಗಳನ್ನೂ ಬಿಂಬಿಸುವ ಶಿಲ್ಪಕಳಾ ಖಂಡಗಳಾಗಿರುತ್ತವೆ.

ತಿರುಮಲೆಯ ಆಲಯ ಈ ನಿಯಮಕ್ಕೆ ಹೊರತಾದುದೇನಲ್ಲ. ವಿಷ್ಣುದೇವಾಲಯದಲ್ಲಿ ವಿಷ್ಣುವಿನ ಅವತಾರಗಳ ವೈವಿಧ್ಯವನ್ನು ರೂಪಿಸುವುದೇ ಮುಖ್ಯ ಗುರಿಯಾಗಿರುವುದರಿಂದ ಈ ಆಲಯದಲ್ಲಿನ ಶಿಲ್ಪಗಳಲ್ಲಿ ವಿಷ್ಣುವಿನ ವಿವಿಧ ಅವತಾರಗಳು ಪುನಃ ಪುನಃ ಪ್ರಕಟವಾಗಿವೆ. ರಾಮಾಯಣದ ವಿವಿಧ ಘಟ್ಟಗಳು,ನರಸಿಂಹನ ವಿವಿಧ ರೂಪಗಳು,ಹಲವು ಹನ್ನೊಂದು ಕೃಷ್ಣಲೀಲೆಗಳು,ಕೃಷ್ಣಾವತಾರದೊಡನೆ ಸಂಬಂಧ ಪಡೆದ ಅನೇಕ ಸಂಘಟನೆಗಳು-ಈ ಆಲಯದ ವಿವಿಧ ಸ್ತಂಭಗಳಲ್ಲಿ ಕೆತ್ತನೆಗೊಂಡಿವೆ. ವಿಷ್ಣುವಿನ ಹಲವು ರೂಪಗಳು, ಗುಪ್ತರು, ಚೋಳರು,ಪಲ್ಲವರ ಕಾಲದಲ್ಲಿ ನರಸಿಂಹ,ವರಾಹ,ಅವತಾರಗಳು ಪ್ರಖ್ಯಾತವಾಗಿ,ಇಂದಿಗೂ ಇದೇ ಪರಂಪರೆ ಮುಂದುವರೆದುಕೊಂಡು ಬಂದಿದೆ. ಹೀಗಾಗಿ ತಿರುಮಲೆಯಲ್ಲಿ ಆಳ್ವಾರರಿಂದ ಜ್ಞಾನಪ್ಪಿರಾನ್ ಎಂದು ಕರೆಸಿ ಕೊಂಡ ವರಾಹಸ್ವಾಮಿಗೆ ಪ್ರತ್ಯೇಕ ಆಲಯವಿದ್ದು ತಿರುಮಲೆಯಲ್ಲಿ ಯೋಗ ನರಸಿಂಹಸ್ವಾಮಿಗೂ ಆಳ್ವಾರ್ ತೀರ್ಥದಲ್ಲಿ ಲಕ್ಷ್ಮೀನರಸಿಂಹಸ್ವಾಮಿಗೂ ಪ್ರತ್ಯೇಕ ಆಲಯಗಳಿವೆ. ಆಗಮಗಳಲ್ಲಿ ಉಕ್ತವಾಗಿರುವ ರೀತಿಯಲ್ಲಿ ಈ ದೇವರೂಪಗಳು ವಿಮಾನಗಳಲ್ಲೂ,ಗೋಪುರಗಳಲ್ಲಿಯೂ ಕಂಡು ಬರುತ್ತವೆ.

ಇದರಂತೆಯೇ ಭಾರತದ ಸಂಸ್ಕೃತಿ ಹಾಗೂ ಸಾಮಾಜಿಕ ಜೀವನವನ್ನು ಎರಡು ಸಾವಿರ ವರ್ಷಗಳಿಂದಲೂ ಪ್ರಭಾವಿತಗೊಳಿಸಿರುವ ರಾಮಾಯಣದ ಕಥೆಯೂ ಆಲಯದಲ್ಲಿ ಪ್ರಾತಿನಿಧ್ಯ ಪಡೆದಿದೆ. ತಿರುಮಲೆಯಲ್ಲಿ ರಾಮಲಕ್ಷ್ಮಣ ಸೀತೆಯರ ಉತ್ಸವಮೂರ್ತಿಗಳಿಗಾಗಿ ಆಲಯವೂ ಇದೆ. ವಿಜಯನಗರದರಸರ ಕಾಲದಲ್ಲಿ ಹನುಮಂತನ ಬಗ್ಗೆ ಭಕ್ತಿ ಹೊಸ ಎತ್ತರವನ್ನು ತಲುಪಿತು. (ದಾಸ ವ್ಯಾಸ ಸಾಹಿತ್ಯದ ಹಿರಿಯ ನೇತಾರ ವ್ಯಾಸರಾಯರು ಹನುಮಂತನ ಪ್ರತಿಮೆಗಳನ್ನು ದೇಶಾದ್ಯಂತ ಪ್ರತಿಷ್ಠಾಪಿಸಿದ್ದು ಇದೇ ಕಾಲದಲ್ಲಿಯೇ. ಅವರು ತಿರುಮಲೆಯೊಡೆಯನನ್ನೂ ಹನ್ನೆರಡು ವರ್ಷ ಪೂಜಿಸಿದರೆಂದು ಇತಿಹಾಸ - ಅನುವಾದಕ) ಹನುಮಂತನು ಪಂಚಮುಖಿಯಾಗಿ ಪೂಜೆಗೊಳ್ಳಲು ಆರಂಭವಾಯಿತಾಗಿ,ಈ ದೇವರೂ ಗೋವಿಂದರಾಜಸ್ವಾಮಿ ಆಲಯದಲ್ಲಿನ ಶಿಲ್ಪ ಸಂಪತ್ತಿನಲ್ಲಿ ಸೇರಿದ್ದಾಯಿತು.

ತಿರುಮಲೆಯ ಆಲಯದಲ್ಲಿ ಅತಿಹೆಚ್ಚು ಪ್ರಭಾವಯುತವಾಗಿ,ಪ್ರಸಿದ್ಧವಾಗಿರುವ ಒಂದು ವೈಷ್ಣವ ಪದ್ಧತಿಯೆಂದರೆ ಅದು ಭಾಗವತದಲ್ಲಿ ಬರುವ ಕೃಷ್ಣಕಥೆ. ಕೃಷ್ಣಾವತಾರದ ಕಥೆಗಳು ಕವಿಗೆಷ್ಟೋ ಶಿಲ್ಪಕಾರನಿಗೂ ಅಷ್ಟೇ ಸೃಷ್ಟ್ಯಾತ್ಮಕ ಅವಕಾಶವನ್ನು ಕಲ್ಪಿಸುತ್ತವೆ. ಗ್ರಾಮೀಣ ಚಿತ್ರಗಳಾದ ಗೋಪಾಲಕರ ಕೇರಿಗಳು,ಗೋಪಿಕೆಯರ ದೈನಂದಿನ ಜೀವನದ ವಿವಿಧ ಹಂತಗಳು,ಹಾಲು ಕರೆಯುವಿಕೆ, ಮೊಸರು ಕಡೆಯುವಿಕೆ,ದೇವರ ಬಾಲಲೀಲೆಗಳು ಭಾರತೀಯ ಭಾಗವತ ಪರಂಪರೆಯಲ್ಲಿ ಪ್ರಸಿದ್ಧವಾಗಿರುವಂತೆಯೇ ಚಿತ್ರಿತವಾಗಿ ಗ್ರಾಮೀಣ ವಾತಾವರಣವನ್ನುಂಟುಮಾಡಿದೆ.

ಭಗವಾನ್ ವಿಷ್ಣುವಿನ ಇತರ ಆಗಮ ಸ್ವರೂಪಗಳಾದ ಹಯಗ್ರೀವ,ಆದಿಮೂಲ.ವರದರಾಜ, ಶ್ರೀನಿವಾಸನ ರೂಪಗಳೂ ಸಾಕಷ್ಟು ಪ್ರತಿನಿಧಿಸಲ್ಪಟ್ಟಿದೆ. ದೇವರು ಕೈಲಿ ಹಿಡಿದ ಚಕ್ರಾಯುಧವನ್ನು ಪ್ರತ್ಯೇಕವಾಗಿ ಸುದರ್ಶನಚಕ್ರವೆಂದು ಕರೆದು ಗುಡಿಕಟ್ಟಿ ಪೂಜಿಸಲಾಗಿದೆ. ಇದರ ಹಲವಾರು ಸಪುಷ್ಟ ಉದಾಹರಣೆಗಳು ತಿರುಮಲೆಯಲ್ಲಿ ಕಂಡು ಬರುತ್ತವೆ.

ಜೊತೆಗೇ ಶ್ರೀ ವೈಷ್ಣವ ಸಂಪ್ರದಾಯದಲ್ಲಿರುವಂತೆ ಲಕ್ಷ್ಮಿಗೆ ಈ ಆಲಯದಲ್ಲಿ ಬಹು ಮುಖ್ಯವಾದ ಸ್ಥಾನ ನೀಡಲಾಗಿದೆ. ಶ್ರೀ ವೈಷ್ಣವ ತತ್ತ್ವವೆನ್ನಲಾಗುವ ರಾಮಾನುಜ ಮತದಂತೆ ಲಕ್ಷ್ಮಿಯು ಸಕಲಲೋಕಮಾತೆಯಾಗಿ, ದೇವರಲ್ಲಿ ಸಕಲ ಜೀವರ ಪರವಾಗಿ ಕರುಣೆಯ ಪ್ರಾರ್ಥನೆ ಮಾಡುವವಳಾಗಿದ್ದಾಳೆ. ತಾಯ್ತನದ ಮಾತೃವಾತ್ಸಲ್ಯದ ಈ ಒಂದು ಅಂಶವನ್ನು ಭಕ್ತರು ಎಷ್ಟು ಗೌರವಾದರಗಳಿಂದ ನೋಡುವರೆಂಬುದು ಸುಪ್ರಭಾತದ ಒಂದು ಪದ್ಯದಿಂದ ತಿಳಿದುಬರುತ್ತದೆ.

''ಸರ್ವಲೋಕ ಜನನಿ,ಮಧುಕೈಟಭರನ್ನು ಕೊಂದಂತಹ ಮಹಾವಿಷ್ಣುವಿನ ವಕ್ಷಃಸ್ಥಲದಲ್ಲಿ ನೀನು ಶಾಶ್ವತವಾಗಿ ನೆಲೆಸಿರುವೆ. ವೆಂಕಟೇಶ್ವರಸ್ವಾಮಿಗೆ ಅತ್ಯಂತ ಪ್ರಿಯಳಾಗಿರುವೆ. ಭವ್ಯ ದಿವ್ಯ ಸೌಂದರ್ಯಶಾಲಿ ಯಾದ ನೀನು ನಮ್ಮೆಲ್ಲರ ಮಾತೆಯಾಗಿರುವೆ. ಭಕ್ತರ ಎಲ್ಲ ಅಪೇಕ್ಷೆಗಳನ್ನು ಪೂರೈಸುವವ ತಾಯೇ,ನಿನಗೆ ಸುಪ್ರಭಾತವಾಗಲಿ.''

ವೈಷ್ಣವ ದೇವಾಲಯಗಳ ಮತ್ತೊಂದು ಮುಖ್ಯ ಲಕ್ಷಣವೆಂದರೆ ಆಚಾರ್ಯರಿಗೂ,ಆಳ್ವಾರರಿಗೂ,ಏರ್ಪಾ ಡಾಗುವ ಪ್ರತ್ಯೇಕ ಪೂಜಾಸ್ಥಾನ. ಇದರಲ್ಲಿ ಅಂಡಾಳ್ ಎಂಬ ಗೋದಾದೇವಿ ಸಹ ಒಬ್ಬಳು. ಗೋವಿಂದರಾಜ ಸ್ವಾಮಿ ಆಲಯದಲ್ಲಿ ಅಂಡಾಳ್ ಆಲಯವೂ ಇದೆ. ಕೃಷ್ಣದೇವರಾಯನ ಆಮುಕ್ತಮಾಲ್ಯದ ತೆಲುಗು ಗ್ರಂಥ ಈಕೆಯನ್ನು ಕೀರ್ತಿಸುವ ಕೃತಿಯೇ ಆಗಿದೆ. ತಿರುಮಲೆಯಆಲಯದಲ್ಲಿ ಈಕೆಯ ಹೃದಯಂಗಮವಾದ ತಿರುಪ್ಪಾವೈ ಪಾಶುರಗಳನ್ನು ಇಂದಿಗೂ ಹಾಡಲಾಗುತ್ತದೆ. ಈಕೆ ಸ್ವಾಮಿಯನ್ನು ಪರಿಣಯವಾದ ದಿವ್ಯ ಉತ್ಸವ ಫಂಗುಣಿಮಾಸದಲ್ಲಿ ನಡೆಯುತ್ತದೆ.

ವೈಷ್ಣವ ಸಂಪ್ರದಾಯದ ಋಷಿ ಸಂತರನ್ನು ದಿವ್ಯ ಸೂರಿಗಳು ಎಂದು ಕರೆಯಲಾಗುತ್ತದೆ. ಅವರ ಕೃತಿಗಳು ದಿವ್ಯಪ್ರಬಂಧಗಳು, ಅವರು ಹಾಡಿದ ಕ್ಷೇತ್ರಗಳೆಲ್ಲ ದಿವ್ಯಕ್ಷೇತ್ರಗಳು.(ದಿವ್ಯದೇಶಗಳು) ಬಹುತೇಕ ಎಲ್ಲ ಆಳ್ವಾರರೂ (ಮಧುರಕವಿಹೊರತು) ಹಾಡಿಹೊಗಳಿದ ಸ್ವಾಮಿಯ ಕ್ಷೇತ್ರವಾದ ತಿರುಮಲೆಯೂ ಒಂದು ದಿವ್ಯದೇಶ. ತಿರುಮಲೆಯಲ್ಲಿ ಇವರಿಗೆಂದು ಪ್ರತ್ಯೇಕ ಪೂಜಾಸ್ಥಳವಿಲ್ಲದಿದ್ದರೂ,ಆಲಯದ ಕಂಬಗಳಲ್ಲಿ ಅವರ ಸನ್ನಿಧಿಯಿದ್ದು ಆಲಯದಲ್ಲಿ ಅವರ ಪಾಶುರಗಳನ್ನು ಹಾಡಲಾಗುತ್ತದೆ.

ರಾಮಾನುಜರ ಪರಂಪರೆಯ ಲಕ್ಷಣದಂತೆ ತಿರುಮಲೆಯ ಆಲಯದಲ್ಲಿ ಶ್ರೀವೈಷ್ಣವ ತತ್ವ ಪ್ರತಿಷ್ಠಾಪಕ ರಾಮಾನುಜರಿಗಾಗಿ ಪ್ರತ್ಯೇಕವಾದ ಆಲಯವಿದೆ.

ವೈಷ್ಣವ ಆಲಯಗಳ ಇನ್ನೊಂದು ಮುಖ್ಯ ಲಕ್ಷಣವೆಂದರೆ ವಿಶ್ವಕ್ಸೇನ,ಅನಂತ,ಗರುಡರಿಗೆ ಇಲ್ಲಿ ನೀಡಲಾಗಿರುವ ಪ್ರಾಧಾನ್ಯ ಶ್ರೀವೈಷ್ಣವರು ಸೇನೈಮೊದಲಿಯೆಂದು ಕರೆಯುವ ವಿಶ್ವಕ್ಸೇನನು ಸ್ವಾಮಿಯ ಗೃಹಕೃತ್ಯಗಳನ್ನು ನೋಡಿಕೊಳ್ಳುತ್ತಾನೆ.ಹೀಗಾಗಿ ಆಚಾರ್ಯ ಪರಂಪರೆಯಲ್ಲಿ ಮುಖ್ಯಸ್ಥಳ ಪಡೆದಿದ್ದಾನೆ. ತಿರುಮಲೆಯ ಆಲಯದಲ್ಲಿ ಈತನ ವಿಗ್ರಹವಿದೆ.

ಹೀಗೆಯೇ ಸ್ವಾಮಿಯ ಹಾಸಿಗೆಯಾದ ಅನಂತನೂ,ವಾಹನನಾದ ಗರುಡನೂ, ಸ್ವಾಮಿಯ ನಿತ್ಯ ಸೇವಕರು. ಆಲಯದಲ್ಲಿ ಬಹುತೇಕ ಎಲ್ಲಕಡೆಯೂ ಗರುಡನ ವಿಗ್ರಹ ಕಾಣುವಂತಿದೆ. ಜೊತೆಗೇ ಇಂದ್ರ,ವರುಣ, ಕುಬೇರ,ಅಗ್ನಿ ಮೊದಲಾದ ಅಷ್ಟದಿಕ್ಪಾಲಕರನ್ನೂ,ವಿದ್ಯಾಧರರು,ಯಕ್ಷರು,ಅಪ್ಸರೆಯರನ್ನು ಕಾಣಬಹುದು. ಕುಬೇರನ ನವನಿಧಿಗಳಲ್ಲಿ ಎರಡು-ಶಂಖನಿಧಿ,ಪದ್ಮನಿಧಿಗಳ-ವಿಗ್ರಹಗಳನ್ನೂ ಕಾಣಬಹುದು. ಕಾಮಧೇನು ಗಜೇಂದ್ರ, ಹಂಸ, ಸಿಂಹ,ಕಲ್ಪಲತೆ,ಮೊದಲಾದವುಗಳೂ ತಿರುಮಲೆಯಲ್ಲಿ ಕಂಡು ಬರುತ್ತವೆ.

ಆಲಯದ ಪಾವಿತ್ರ್ಯವೆಷ್ಟು ಘನವಾದದ್ದೆಂದರೆ ಸಿದ್ಧರು,ಯೋಗಿಗಳು,ಋಷಿಗಳು,ಚಕ್ರವರ್ತಿಗಳು ಸಾಮಾನ್ಯರೊಡನೆ ಸೇರಿ ಸ್ವಾಮಿಯನ್ನು ಅರ್ಚಿಸಲು ಕಾಯುತ್ತಾರೆ. ತಿರುಪ್ಪಾಣ ಆಳ್ವಾರರು ಹಾಡಿದ ಹಾಡಿನಲ್ಲಿ ಈ ಮಾತು ಸ್ಪಷ್ಟವಾಗಿದೆ.

## ಭಾಗ - 2

### 1. ಶ್ರೀವೆಂಕಟೇಶ್ವರಸ್ವಾಮಿ ಧ್ರುವಬೇರ-ಸ್ವಯಂಭು ಮೂರ್ತಿ ಪರಂಪರೆ:

ತಿರುಮಲೆಯಲ್ಲಿರುವ ಮೂರ್ತಿಗಳೆಂದರೆ ಶ್ರೀ ವೆಂಕಟೇಶ್ವರಸ್ವಾಮಿಯ ಮೂಲಮೂರ್ತಿ-ಧ್ರುವಬೇರ ಜೊತೆಗಿರುವ ಪಂಚಲೋಹ ವಿಗ್ರಹಗಳು,ಹಾಗೂ ಕಂಚಿನ ರಾಮಕೃಷ್ಣರ ಉತ್ಸವಮೂರ್ತಿಗಳು.

ಪರಂಪರೆಯ ಹೇಳಿಕೆಯಂತೆ ತಿರುಮಲೆಯ ಆಲಯದಲ್ಲಿನ ಮೂರ್ತಿಯನ್ನು ಮಾನವ ಹಸ್ತವು ನಿರ್ಮಾಣ ಮಾಡದೆ, ದೇವರೇ ಮಾನವ ಮಸ್ತಿಷ್ಕಕ್ಕೆ ಅರಿವಾಗುವ ರೀತಿಯಲ್ಲಿ ವಿಗ್ರಹರೂಪದಲ್ಲಿ ಪ್ರತ್ಯಕ್ಷನಾದ. ಹೀಗಾಗಿ ಪರಮೂರ್ತಿಯೆಮ್ಮ ಆಧ್ಯಾತ್ಮಿಕ ಉನ್ನತಿಕೆಗಾಗಿ ಭೂಮಿಗೆ-ತಿರುಮಲೆಗೆ ಅರ್ಚಾರೂಪದಲ್ಲಿ ಬಂದಿದೆಯೆಂದು ನಮ್ಮಾಳ್ವಾರರು ಹೇಳುತ್ತಾರೆ. ನಾವು ಇಂದು ಪೂಜಿಸುತ್ತಿರುವಂತೆಯೇ ಸರ್ವದೇವತೆಗಳೂ ದಿನವೂ ಬೆಟ್ಟದಮೇಲಿನ ಸ್ವಾಮಿಯನ್ನು ಪೂಜಿಸುವರೆಂದು ಎಲ್ಲ ಆಳ್ವಾರರೂ ಹೇಳಿದ್ದಾರೆ.ಶ್ರೇಷ್ಠ ಶ್ರೀವೈಷ್ಣವ ಸಂತರಾದ ರಾಮಾನುಜರು ತಮ್ಮ ಮೇರುಕೃತಿ ಶ್ರೀಭಾಷ್ಯದ ಮಂಗಳ ಶ್ಲೋಕಗಳಲ್ಲಿ ಶ್ರೀನಿವಾಸನನ್ನು ಬ್ರಹ್ಮನೆಂದೇ ಹೇಳುತ್ತ ಮಾನವ ಜಗತ್ತಿನ ಉತ್ತಾರಕವಾದ ಸ್ವಾಮಿಯ ಕರುಣೆಯನ್ನು ಅವಧಾರಿಸುತ್ತಾರೆ. ಹೀಗಾಗಿ ನಮ್ಮ ಉದ್ಧಾರಕ್ಕಾಗಿಯೇ ಬ್ರಹ್ಮನು ಶ್ರೀನಿವಾಸನಾಗಿ ತಿರುಮಲೆಯಲ್ಲಿ ಸ್ವಯಂಭುವಾಗಿ ಅವತರಿಸಿದ ಎಂಬುದು ಪರಂಪರೆಯಾಗಿದೆ.

### 2. ಆಗಮ ಪ್ರಮಾಣ:

ವೈಖಾನಸ ಆಗಮ,ಪಾಂಚರಾತ್ರ ಆಗಮ,ತಂತ್ರಶಾಸ್ತ್ರ, ವಿಷ್ಣು ಧರ್ಮೋತ್ತರ - ಮೊದಲಾದ ಆಗಮ ಶಾಸ್ತ್ರ ಗ್ರಂಥಗಳು ದೇವಾಲಯ ನಿರ್ಮಾಣ ಹಾಗೂ ವಿಗ್ರಹ ರಚನಾ ವಿಧಾನಗಳಲ್ಲಿನ ನೀತಿ ನಿಯಮಗಳನ್ನು ತಿಳಿಸುವ ಮೂಲ ಗ್ರಂಥಗಳಾಗಿವೆ. ಆಗಮಶಾಸ್ತ್ರ ಕೃತಿಗಳಲ್ಲಿ ವಿಗ್ರಹಗಳ ಪ್ರಮಾಣಗಳು,ಭಂಗಿಗಳು, ಕೈಕಾಲುಗಳ ಸ್ಥಿತಿ, ಆಯುಧಸ್ವರೂಪ,ಅವುಗಳಿಗೆ ಅಲಂಕಾರವಾಗಿ ತೊಡಿಸುವ ಆಭರಣಗಳು - ಮೊದಲಾದ ವಿವರಗಳನ್ನೆಲ್ಲ ನೀಡಲಾಗಿದೆ. ಇವುಗಳನ್ನು ಆಚರಣೆಗೆ ತರುವಲ್ಲಿ ದೋಷವೇನೇ ಇದ್ದರೂ,ಅಥವಾ ವ್ಯತ್ಯಾಸವೇನೇ ಆದರೂ ಆ ಮೂರ್ತಿಯನ್ನು ಪ್ರತಿಷ್ಠಾಪಿಸುವುದಾಗಲೀ,ಪೂಜಿಸುವುದಾಗಲೀ ನಡೆಯದು.

ಶುಕ್ರ ನೀತಿಯಂತೆ ದರ್ಶಕರನ್ನು ಧ್ಯಾನದ, ಕ್ರಿಯೆಯ ಮೇಲಿನ ಸ್ತರಕ್ಕೆ ತೆಗೆದುಕೊಂಡು ಹೋಗಬಲ್ಲ ವಿಗ್ರಹ ಮಾತ್ರವೇ ಆದರ್ಶವಾದದ್ದು. ಭಕ್ತರಿಗೆ ವಿಗ್ರಹದ ನೇತ್ರಗಳು ವಿಶೇಷ ಧ್ಯಾನಾಕರ್ಷಕವಾಗಿರುವುದರಿಂದ, ನಯನಗಳು ಮೇಕೆಳಗೆ ನೋಡದಂತೆ, ಮುಚ್ಚಿರದಂತೆ, ನೇರವಾಗಿ ನೋಡುತ್ತ ತೃಪ್ತಿದಾಯಕವಾಗಿರಬೇಕು. ಪ್ರತಿಮಾ ಮಾನ ಲಕ್ಷಣದ ಪ್ರಕಾರ ವಿಗ್ರಹದ ಬಾಯಿ ಮುಗುಳು ನಗೆಯಿಂದಲೂ, ಮುದ ಸೂಚನೆಯಿಂದಲೂ, ಒಳ್ಳೆಯ ಗುಣಗಳಿಂದಲೂ ಆಕರ್ಷಕವಾಗಿರಬೇಕು. ಬಾಯಿ ಒರಟಾಗಿ, ಪ್ರಚೋದಕವಾಗಿ, ಕಪಿಯಾಗಿ, ವೃತ್ತಾಕಾರವಾಗಿ ಇರಬಾರದು. ಪ್ರತಿಮಾ ಮಾನ ಲಕ್ಷಣದ ಪ್ರಕಾರ ಕೊಡೆಯಂತೆ ಕೆತ್ತಿರುವ ಶಿರವು ಪುಷ್ಟಿಯನ್ನು ಉಂಟು ಮಾಡುತ್ತದೆ. ಎತ್ತರವಾದ ಹಣೆ ಹಾಗೂ ಸುಂದರವಾಗಿ ಕೆತ್ತಲಾದ ಹುಬ್ಬುಗಳಿರುವ ವಿಗ್ರಹದಿಂದ ಶಾಶ್ವತವಾದಅಭಿವೃದ್ಧಿ ಉಂಟಾಗುತ್ತದೆ. ಗಳವು-ಕೊರಳು-ಶಂಖದಾಕಾರದಲ್ಲಿದ್ದು, ದೇಹ ಸಿಂಹ ಸದೃಶವಾಗಿ, ಕೈಗಳು ಆನೆಯ ಸೊಂಡಿಲನ್ನುಹೋಲುತ್ತ, ತೊಡೆಗಳು ಬಾಳೆಯ ಕಂಭಗಳನ್ನು ಹೋಲುವಂತಿರಬೇಕು. ಸುಂದರವಾದ ಉದರ ಹಾಗೂ ಪ್ರಸನ್ನವಾದ ಪಾದಗಳುಯಾವುದೇ ವಿಗ್ರಹಕ್ಕೂ ಶೋಭೆಯನ್ನು ತರುತ್ತವೆ. ವಿಗ್ರಹಗಳು ಸುಂದರವಾಗಿರ ಬೇಕೆಂದೂ ಶುಕ್ರನೀತಿ ಹೇಳುತ್ತದೆ. ಶಾಸ್ತ್ರೀಯ ಸೂತ್ರಗಳನ್ನು ಅನುಸರಿಸುತ್ತಲೇ ವಿಗ್ರಹವನ್ನು ಸುಂದರಗೊಳಿಸುವ ದಿಸೆಯಲ್ಲಿ ಶಿಲ್ಪಿಗಳಿಗೆ ತಕ್ಕಮಟ್ಟಿಗಿನ ಸ್ವಾತಂತ್ರ್ಯವನ್ನು ನೀಡಲಾಗಿದೆ.ಆದರೆ

ವಿಗ್ರಹವನ್ನು ನಿರ್ಮಿಸುವಾಗ ವಿಗ್ರಹದ ಉದ್ದೇಶ ನೋಡುಗರ ಧ್ಯಾನಕ್ಕೆ ಯೋಗಕ್ಕೆ ಪ್ರೋತ್ಸಾಹ ನೀಡುವುದೇ ಆಗಿರಬೇಕು ಎಂಬ ಅಂಶವನ್ನು ಮನದಲ್ಲಿಟ್ಟುಕೊಳ್ಳಬೇಕಿತ್ತು.

ಮರೀಚಿ ಸಂಹಿತೆಯು ವಿಷ್ಣುವಿನ ಅರ್ಚಾರೂಪವನ್ನು ಮೂರು ಮುಖ್ಯವಿಧಗಳಾಗಿ ಚಿತ್ರಿಸಿದೆ. ಸ್ಥಾನಕ (ನಿಂತಿರುವುದು) ಆಸನ (ಕುಳಿತಿರುವುದು) ಶಯನ (ಮಲಗಿರುವುದು) ಭಂಗಿಗಳಲ್ಲಿದ್ದು, ಈ ಮೂರೂ, ಅವುಗಳ ವಿವಿಧ ಸ್ವರೂಪಗಳನ್ನ ಅನುಸರಿಸಿ ಪುನಃ ನಾಲ್ಕು ವಿಧಗಳಾಗಿ ವಿಂಗಡಿಸಲ್ಪಟ್ಟಿವೆ. ಇವುಗಳೆಂದರೆ ಯೋಗ, ಭೋಗ, ವೀರ ಹಾಗೂ ಅಭಿಚಾರಕ. ಯಾವ ರೂಪದ ವಿಗ್ರಹ ವಾಗಿರಬೇಕು ಎಂಬುದನ್ನು ವಿಗ್ರಹ ಸ್ಥಾಪನೆಯ ಉದ್ದೇಶ ಹಾಗೂ ಪರಿಸರಗಳು ತೀರ್ಮಾನಿಸುತ್ತವೆ. ಭಕ್ತರು ಯೋಗಮಾರ್ಗವನ್ನು ಅಪೇಕ್ಷಿಸಿದರೆ ಯೋಗ ಮೂರ್ತಿಯನ್ನು ಆಯ್ಕೆ ಮಾಡಲಾಗುತ್ತದೆ. ಇಂತಹ ಮೂರ್ತಿಯನ್ನು ಊರಿಂದ ಹೊರಗೆ, ಕಾಡಿನಲ್ಲಿಯೋ, ಬೆಟ್ಟದ ಮೇಲೆಯೋ, ನದಿಗಳ ದಡದಲ್ಲಿಯೋ, ಸಂಗಮದಲ್ಲಿಯೋ ಪ್ರತಿಷ್ಠಾಪನೆ ಮಾಡಬೇಕು. ಇದು ಊರಿನ-ನಗರದ ನಡುವೆ ಪ್ರತಿಷ್ಠಿತವಾದರೆ ಊರಿನ ಅವಗಢಕ್ಕೆ ಕಾರಣವಾಗುತ್ತದೆ. ಭೋಗಮೂರ್ತಿಯನ್ನು ವಿಧಿಯಾಗಿ ಊರಿನ, ನಗರದ ಮಧ್ಯದಲ್ಲಿಯೇ ಸ್ಥಾಪಿಸಬೇಕು. ಗ್ರಾಮದ ಹೊರಭಾಗದಲ್ಲಿ ವೀರಮೂರ್ತಿ ಇರಬೇಕು. ಅಭಿಚಾರಕ ಮೂರ್ತಿಯನ್ನು ಅಡವಿಯಲ್ಲಿ, ಬೆಟ್ಟದಲ್ಲಿ ಕೋಟೆ ಕೊತ್ತಲಗಳಲ್ಲಿ, ರಾಷ್ಟ್ರದ ಗಡಿ ಪ್ರದೇಶದಲ್ಲಿ, ಶತ್ರು ರಾಷ್ಟ್ರವನ್ನು ನೋಡುತ್ತಿರುವಂತೆ ಸ್ಥಾಪಿಸಬೇಕು. ತಿರುಮಲೆಯು ಬೆಟ್ಟದಮೇಲೆ ಅರಣ್ಯ ಮಧ್ಯದಲ್ಲಿದೆ. ಇಲ್ಲಿ ಹಿಂದಿನ ಕಾಲದಲ್ಲಿ ಕೋಟೆಯಾಗಲೀ, ಗ್ರಾಮವಾಗಲಿ ಇದ್ದಿರಲಾರದು. ರಾಜಕೀಯವಾಗಿ ಎರಡು ರಾಷ್ಟ್ರ ಗಡಿಯಾಗಿದ್ದಿರಬೇಕು. ಹೀಗಾಗಿ ಯೋಗ ಅಥವಾ ಅಭಿಚಾರಕ ಮೂರ್ತಿಯ ಆಯ್ಕೆ ಆಗಬೇಕು. ವೀರಮೂರ್ತಿಯಲ್ಲ, ಭೋಗ ಮೂರ್ತಿಯಂತೂ ಅಲ್ಲವೇ ಅಲ್ಲ.

ಪ್ರತಿಯೊಂದು ಸನ್ನಿವೇಶಕ್ಕೂ ತಕ್ಕ ಮೂರ್ತಿರೂಪವನ್ನು ಆಗಮಗಳು ಸೂಚಿಸಿವೆ. ಉತ್ತಮ ಮಧ್ಯಮ ಅಧಮವೆಂಬ ಮೂರು ರೀತಿಯ ಆಲಯಗಳು, ಅವುಗಳಲ್ಲಿನ ದೇವತೆಗಳನ್ನು-ಅರ್ಚಾರೂಪಗಳನ್ನು-ಆಧರಿಸಿ ಉಂಟಾಗುತ್ತವೆ. ಉತ್ತಮ ದೇವಾಲಯದಲ್ಲಿನ ಮೂರ್ತಿ ಪರಿವಾರ ದೇವತೆಗಳೊಡನೆ-ಬ್ರಹ್ಮಶಂಕರ, ಮಾರ್ಕಂಡೇಯ, ಭೃಗು, ಸನಕ, ಸನಂದನ, ಸನತ್ಕುಮಾರ - ಮೊದಲಾದವ ರೊಡನೆಯೂ ಇದ್ದರೆ, ಮಧ್ಯಮ ಆಲಯಗಳಲ್ಲಿ ಮಾರ್ಕಂಡೇಯ, ಭೃಗು ಮೊದಲಾದವರನ್ನು ಬಿಟ್ಟರೂ ಬ್ರಹ್ಮಶಿವ ಮೊದಲಾದವರಿರು ವರು. ಅಧಮ ರೀತಿಯ ಆಲಯಗಳಲ್ಲಿ ಬ್ರಹ್ಮಶಿವರನ್ನೂ ಹೊರತು ಪಡಿಸಿ, ಒಂದೇ ವಿಗ್ರಹವಿರುತ್ತದೆ. ಈ ನಿಯಮವು ಯೋಗ, ಭೋಗ, ವೀರ ಮೂರ್ತಿಗಳ ಸ್ಥಾಪನೆಯಲ್ಲಿ ಸಾಮಾನ್ಯ. ಅಭಿಚಾರಕ ಮೂರ್ತಿಯ ಸ್ಥಾಪನೆಯ ವಿಷಯದಲ್ಲಿ ಮಾತ್ರ ಒಂದೇ ವಿಧಾನ ವಿದೆ. ಅದು ಅಧಮ ಆಲಯವಾಗಿದ್ದು ಒಂದೇ ವಿಗ್ರಹವಿರುತ್ತದೆ. ಇನ್ನೂ ಮುಂದುವರಿದರೆ ಮೊದಲ ಮೂರು ವಿಧಾನಗಳಲ್ಲಿಯೂ ಆಲಯದಲ್ಲಿ ಗೋಪುರಗಳಿದ್ದು, ಒಂದು ಸ್ಥಿರ ಲಗ್ನದಲ್ಲಿ ವಿಗ್ರಹ ಪ್ರತಿಷ್ಠಾಪನೆ ನಡೆಯುವುದು. ಅಭಿಚಾರಕ ಮೂರ್ತಿಗೆ ಪ್ರತಿಷ್ಠಾಪನೆ ಅಮಂಗಳ ಕ್ಷಣದಲ್ಲಿಯೂ ಚರಲಗ್ನ ದಲ್ಲಿಯೂ ಆಗಬೇಕು. ಈ ಇಂತಹ ಆಲಯದಲ್ಲಿ ವಿಮಾನಗೋಪುರವಿರದು.

## 3. ವಿಷ್ಣು ವಿಗ್ರಹ ಲಕ್ಷಣ:

ವಿಷ್ಣು ವಿಗ್ರಹಗಳು ಸಾಮಾನ್ಯವಾಗಿ ನಾಲ್ಕು ಕೈಗಳನ್ನು ಹೊಂದಿದ್ದು, ಚಕ್ರ, ಶಂಖ, ಬಿಲ್ಲು, ಗದೆಗಳನ್ನು ಆಯುಧಗಳಾಗಿ ಹೊಂದಿರು ತ್ತವೆ. ವಿಷ್ಣುವಿನ ಇತರ ಆಯುಧಗಳು ಖೇಟಕ, ಕಠಾರಿ, ಪರಶು, ಹಲ, ಇನ್ನು ಕೆಲಬಾರಿ ಚಾವಟಿ (ಗೋಪಾಲಕೃಷ್ಣ) ಆಗಬಹುದು. ಕೈಗಳು ಸಾಮಾನ್ಯವಾಗಿ ಅಭಯ, ವರದ, ಕಟ್ಯವಲಂಬಿತ-ಮುದ್ರೆಗಳಲ್ಲಿ ಇರುತ್ತವೆ. ಯೋಗಶಾಸ್ತ್ರವು ಕೈಗಳ ಮುದ್ರೆಗಳಲ್ಲಿ ಇಪ್ಪತ್ತೈದು ರೀತಿಗಳನ್ನು ಗುರುತಿಸುತ್ತದೆ ಎಂಬುದು ಇಲ್ಲಿ ಗಮನಾರ್ಹ ಅಂಶವಾಗುತ್ತದೆ. ಅಭಯ ಮುದ್ರೆಯೆಂದರೆ ಸ್ವಾಮಿಯ ಬಲಹಸ್ತ ಭಕ್ತನತ್ತ ಮುಖಮಾಡಿ, ಎಲ್ಲ ಬೆರಳುಗಳೂ ಮೇಲೆ ಚಾಚಿರುವಂತಹ ರೂಪ. ಈ ಮುದ್ರೆಯಲ್ಲಿ ದೇವರು ಭಕ್ತನನ್ನು ಭಯದೂರನನ್ನಾಗಿಸಿ, ಅವನಿಗೆ ಅಭಯವನ್ನು ನೀಡುತ್ತಾನೆ. ವರದ ಹಸ್ತವೆಂದರೆ ಭಕ್ತನತ್ತ ಮುಖಮಾಡುವ ಅಂಗೈಯಲ್ಲಿ ಎಲ್ಲ ಬೆರಳುಗಳೂ ಭೂಮಿಯತ್ತ

ಚಾಚಿರುವುದು. ಈ ಮುದ್ರೆಯು ದೇವರು ವರಪ್ರದಾತ ಎಂಬುದನ್ನು ಸೂಚಿಸುತ್ತದೆ. ಮಯ ಶಾಸ್ತ್ರದ ಪ್ರಕಾರ ಹೆಬ್ಬೆರಳಿನಗ್ರಭಾಗವು ಎದೆಯನ್ನು ತಾಕುತ್ತಿದ್ದರೆ ಅದು ಅಭಯ ಅಥವಾ ರಕ್ಷಣೆಯ ಸಂಕೇತ. ಹಸ್ತವು ಸೊಂಟದ ಮೇಲಿದ್ದಲ್ಲಿ ಅದು ವರದ ಮುದ್ರೆ. ಕಟ್ಯ ವಲಂಬಿತ ಹಸ್ತ ಮುದ್ರೆಯಲ್ಲಿ ದೇವರು ವಾಮಹಸ್ತವನ್ನು ಸೊಂಟದ ಮೇಲಿಟ್ಟಿರುವಂತಿರುತ್ತದೆ. ಇದರಿಂದಾಗಿ ನಿರಂತರಭಕ್ತಿ ಪ್ರಪತ್ತಿ ಗಳಿಂದ ಅವನನ್ನು ಆರಾಧಿಸಿದವರಿಗೆ ದೇವರು ರಕ್ಷಣೆ ಹಾಗೂ ಕರುಣೆಯನ್ನು ದಯಪಾಲಿಸುವನೆಂದು ತಿಳಿಯುತ್ತದೆ. ಇನ್ನೊಂದು ಸೂಚಕ ಅರ್ಥದಂತೆ ದೇವರ ಪಾದಗಳಲ್ಲಿ ನಂಬಿಕೆಯಿದ್ದವರಿಗೆ ಸಂಸಾರಸಾಗರವು ಜಾನುಮಾತ್ರ ಆಳವಾಗಿರುವುದು. ವಿಷ್ಣುವಿನ ವಿಗ್ರಹಗಳು ಹಲವಾರು ಆಭರಣಗಳನ್ನು ತೊಟ್ಟಿರುವಂತೆ- ಪದ್ಮ,ಕಿರೀಟ,ಮಕರ ಕುಂಡಲ,ಕೇಯೂರ,ಕಂಕಣ, ಉದರಬಂಧ, ಕಟಿಬಂಧ, ಜನಿವಾರ, ಮೊದಲಾದವನ್ನೂ ತೊಟ್ಟಿರುವಂತೆ ತೋರಿಸಲಾಗಿದೆ. ಸಾಮಾನ್ಯವಾಗಿ ಎದೆಯ ಬಲಭಾಗದಲ್ಲಿ ಒಂದು ಮಚ್ಚೆಯೋಪಾದಿಯಲ್ಲಿ ಶ್ರೀವತ್ಸವಿದ್ದು, ಜಾನುವಿನವರೆಗೆ ಇಳಿಯುವ ವೈಜಯಂತಿಮಾಲೆಯಿರುವುದು. ಎದೆಯ ಮೇಲೆರುವ ವಜ್ರ ಖಚಿತವಾದ ಕೌಸ್ತುಭ ಲಕ್ಷ್ಮಿಗೆ ಬಹುಪ್ರಿಯವಾದದ್ದು. ಶ್ರೀಲಕ್ಷ್ಮಿಯನ್ನು ಕೌಸ್ತುಭ ಹಾಗೂ ಶ್ರೀವತ್ಸಗಳ ಬಳಿಯಲ್ಲಿ ಚಿತ್ರಿಸಲಾಗುವುದು.

ಸಾಮ್ಯಾನವಾಗಿ ಯೋಗ ಮೂರ್ತಿಗಳನ್ನು ಯೋಗಮುದ್ರೆಯಲ್ಲಿಯೇ ಸ್ಥಾನಕ ಭಂಗಿಯಲ್ಲಿ ಕೆತ್ತಲಾಗುವುದು.ದೇವರಿಗೆ ನಾಲ್ಕು ಕೈಗಳಿದ್ದು ಮೇಲಿನೆರಡು ಕೈಗಳಲ್ಲಿ ಶಂಖಚಕ್ರಗಳಿವೆ. ಮಿಕ್ಕೆರಡು ಹಸ್ತಗಳು ಅಭಯ ಕಟ್ಯವಲಂಬಿತ ಮುದ್ರೆಗಳಲ್ಲಿವೆ. ಯೋಗಾಸನ ಮೂರ್ತಿಯನ್ನು ಘೇರಂಡ ಸಂಹಿತೆಯು ಈ ರೀತಿ ವಿವರಿಸಿದೆ.

- ಆಸನದ ಮೇಲೆ ಕುಳಿತು ಮೊಣಕಾಲುಗಳನ್ನು ಮೇಲ್ಮುಖ ಮಾಡಿ,ಕೈಗಳನ್ನು ಮೊಣಕಾಲುಗಳ ಮೇಲಿಟ್ಟು, ಅಂಗೈ ಮೇಲ್ಮುಖವಾಗಿರುವಂತೆ ಹಸ್ತಗಳನ್ನಿಟ್ಟು ದೃಷ್ಟಿ ಮೂಗಿನ ತುದಿಯಲ್ಲಿರಲಿ.-

- ಈ ಭಂಗಿಯ ಒಂದು ಅತ್ಯುತ್ತಮ ಉದಾಹರಣೆಯಂದರೆ ಬದರೀನಾರಾಯಣ ಕ್ಷೇತ್ರದಲ್ಲಿನ ಬದರೀನಾರಾಯಣ ದೇವರು. ಯೋಗಮೂರ್ತಿಯ ಶಯನ ಭಂಗಿಯಲ್ಲಿ ಎರಡೇ ಕೈಗಳನ್ನು ಹೊಂದಿದ್ದು, ಬಲಗೈಯನ್ನು ತಲೆಯಡಿಯಲ್ಲಿಡಲಾಗುತ್ತದೆ. ದಕ್ಷಿಣ ಭಾರತದ ಶ್ರೀರಂಗದಲ್ಲಿನ ಶ್ರೀರಂಗನಾಥ ಸ್ವಾಮಿ ಈ ರೀತಿಯ ಮಾದರಿಯಾಗಿದೆ. ಸ್ಥಾನಕ ಭಂಗಿಯ ವಿಷ್ಣುವಿನ ವಿಗ್ರಹಕ್ಕೂ 4 ಕೈಗಳಿದ್ದು ಮೇಲಿನ ಕೈಗಳಲ್ಲಿ ಶಂಖಚಕ್ರಗಳಿರುತ್ತವೆ. ಕೆಳಗಡೆಯಲ್ಲಿ ಅಭಯ ವರದ ಅಥವಾ ಕಟ್ಯವಲಂಬಿತ ಹಸ್ತಗಳಿರುತ್ತವೆ. ಆಸನ ಭಂಗಿಯಲ್ಲಿನ ಭೋಗಮೂರ್ತಿಯು ಸುಖಾಸನದಲ್ಲಿ ಕುಳಿತಿರುವಂತೆಯೂ ಬಲಗಾಲು ಇಳಿಬಿಟ್ಟಂತೆ ಹಾಗೂ ಎಡಗಾಲು ಬಲ ತೊಡೆಯನ್ನು ತಗಲುವಂತೆ ಮಡಚಿರುವ ಹಾಗೆ ಚಿತ್ರಿತವಾಗಿರುತ್ತದೆ. ಮಲಗಿರುವ ಭೋಗಮೂರ್ತಿಗೆ ಎರಡು ಅಥವಾ ನಾಲ್ಕು ಕೈಗಳಿದ್ದು ದೃಢವಾದ ಬಲವಾದ ದೇಹವಿರುವುದು. ಈ ವಿಧದಲ್ಲಿ ಲಕ್ಷ್ಮಿಯನ್ನು ಸ್ವಾಮಿಯ ತೋಳಿನ ಬಳಿ ಕುಳಿತಿರುವಂತೆಯೂ ಬ್ರಹ್ಮನನ್ನು ಮುಖ್ಯ ಮೂರ್ತಿಯ ನಾಭಿಯ ಬಳಿಯಲ್ಲೂ,ಭೂದೇವಿಯು ಸ್ವಾಮಿಯ ಪಾದಗಳ ಬಳಿಯೂ ಇರುವಂತೆ ತೋರಿಸಲಾಗುವುದು.

ಸ್ಥಾನಕ ಭಂಗಿಯ ವೀರ ಮೂರ್ತಿಯೂ ಸ್ಥಾನಕ ಯೋಗಮೂರ್ತಿಯಂತೆಯೇ ಇದ್ದರೂ ಇಲ್ಲಿ ಒಬ್ಬನೇ ನಿಂತಿರುವಂತೆಯೋ ಅಥವಾ ಸೂರ್ಯ,ಚಂದ್ರ,ಬ್ರಹ್ಮ,ಶಿವರಿಂದ ಆವೃತನಾಗಿರುವಂತೆಯೋ ಚಿತ್ರಿತವಾಗಿರು ವನು. ಆಸನ ಭಂಗಿಯ ವೀರಮೂರ್ತಿಯು ಸಿಂಹಾಸನದಲ್ಲಿ ಕುಳಿತಂತೆ ಎಡಗಾಲು ಮಡಚಿದಂತೆಯೂ ಬಲಗಾಲು ಮುಂದೆ ಚಾಚಿದಂತೆ ಇರುವುದು. ಮಲಗಿದ ವೀರಮೂರ್ತಿ ನಾಲ್ಕು ಕೈಗಳಿದ್ದು,ಒಂದು ತಲೆದಿಂಬಾಗಿ ಬಳಸಿ,ಇನ್ನೊಂದು ಕೈಯಲ್ಲಿ ಚಕ್ರ ಹಿಡಿದಂತೆಯೂ ಮತ್ತೊಂದು ಮೊದಲ ಎಡಗೈ ನೇರವಾಗಿ ದೇಹಕ್ಕೆ ಹೊಂದಿಕೊಂಡಂತೆಯೂ,ಎರಡನೆಯ ಎಡಗೈಯಲ್ಲಿ ಶಂಖ ಹಿಡಿದಂತೆಯೂ ಇರುವುದು.

ಅಭಿಚಾರಕ ನಮೂನೆಯ ಮೂರ್ತಿ ಸಾಮಾನ್ಯವಾಗಿ ಕಪ್ಪುಬಣ್ಣದಿಂದ ಕೂಡಿದ್ದು ಕ್ರೋಧವನ್ನು ಪ್ರದರ್ಶಿಸುತ್ತದೆ. ಸ್ಥಾನಕ ಮೂರ್ತಿ ಎರಡು ಅಥವಾ ನಾಲ್ಕು ಕೈಗಳನ್ನು ಹೊಂದಿ ಅಲಂಕಾರ ರಹಿತ ಪೀಠದ ಮೇಲಿರುವುದು. ಶಯನ ಮೂರ್ತಿಯು ಎರಡು ಅಥವಾ ನಾಲ್ಕು ಕೈಗಳೊಡನೆ ಮಲಗಿರುವಂತಿರುವುದು. ಈ ವಿಧದ ಮೂರ್ತಿಗಳಿಗೆ ದೇವನಾಯಕಿಯರು ಸಂಗಡವಿರುವುದಿಲ್ಲ. ಆದರೆ ಋಷಿಮುನಿಗಳನ್ನೂ,ಮಧುಕೈಟಭ ರಾಕ್ಷಸರನ್ನೂ ಪರಿವಾರವಾಗಿ ಕಾಣಿಸಲಾಗುವುದು.

ಹೀಗಾಗಿ ಸ್ಥಾನಕ ಅಸನ ಶಯನ ಭಂಗಿಗಳಲ್ಲಿನ ಯೋಗ,ಭೋಗ,ವೀರ,ಅಭಿಚಾರಕ ಮೂರ್ತಿಗಳಿದ್ದು, ಇವುಗಳಿಗಾಗಿ ಉತ್ತಮ ಮಧ್ಯಮ ಅಧಮ ವಿಧದ ದೇವಾಲಯಗಳುಂಟಾಗಿ ಒಟ್ಟು ಮೂವತ್ತಾರು ರೀತಿಯ ಆಲಯಗಳನ್ನು ಆಗಮಗಳಲ್ಲಿ ಕಾಣುತ್ತೇವೆ. ವಿಷ್ಣು ವಿಗ್ರಹ ಈ ಮೂವತ್ತಾರರಲ್ಲಿ ಯಾವುದಾದರೂ,ಒಂದು ರೀತಿಯದಾಗಿರಬೇಕು.

## 4. ವೈಖಾನಸವೂ ವೆಂಕಟೇಶನೂ:

ತಿರುಮಲೆಯ ಆಲಯದಲ್ಲಿನ ಶ್ರೀ ವೆಂಕಟೇಶ್ವರಸ್ವಾಮಿ ನಿಂತ ಭಂಗಿಯಲ್ಲಿದ್ದು ಸ್ಥಾನಕ ಮೂರ್ತಿಯ ವಿಧವಾಗಿರುತ್ತದೆ. ಸ್ಥಾನಕ ಮೂರ್ತಿ ಯೋಗ ಭೋಗ ವೀರ ಅಭಿಚಾರಕ ಮೂರ್ತಿಗಳಾಗಿ ಉತ್ತಮ ಮಧ್ಯಮ ಅಧಮ ಆಲಯಗಳಲ್ಲಿರಬಹುದು. ಹೀಗಾಗಿ ಮೇಲಿನ ಹನ್ನೆರಡು ವಿಭಾಗಗಳಲ್ಲಿ ಒಂದರ ವರ್ಗದಲ್ಲಿ ಶ್ರೀ ವೆಂಕಟೇಶ್ವರಸ್ವಾಮಿ ಪರಿಗಣಿತವಾಗಬೇಕು.

ಮೇಲಿನ ಹನ್ನೆರಡು ವಿಧಗಳನ್ನೂ ಮರೀಚಿ ಸಂಹಿತೆಯ ಪ್ರಕಾರವಾಗಿ ವರ್ಗೀಕರಿಸಿದ ರೀತಿಯನ್ನು ಪ್ರತ್ಯೇಕವಾದ ಪಟ್ಟಿಯಲ್ಲಿ ಕಾಣಬಹುದಾಗಿದೆ.

ಈ ಹಿಂದೆ ಹೇಳಿದ ಲಕ್ಷಣಗಳೊಡನೆ ಆಗಮ ಶಾಸ್ತ್ರದನುಸಾರವಾಗಿ ಯಾವ ನಮೂನೆಯ ವಿಗ್ರಹವಿದೆ ಯೆಂಬುದನ್ನು ನಾವೀಗ ಗಮನಿಸಬಹುದು.

**ಮರೀಚಿ ಸಂಹಿತೆಯಲ್ಲಿ ಕಂಡು ಬರುವಂತೆ ಸ್ಥಾನಕ ಮೂರ್ತಿಯ ಹನ್ನೆರಡು ಬಗೆಯ ವಿವರ**

| ಕ್ರಸಂ. | ಮೂರ್ತಿಯ ಬಗೆ | ಮೂರ್ತಿಯ ವರ್ಣ | ಕೈಗಳ ವಿವರ | ಪರಿವಾರ 8 ದೇವತೆಗಳು |
|---|---|---|---|---|
| 1. | ಯೋಗ ಉತ್ತಮ | ಶ್ಯಾಮಲ | 4ಕೈಗಳು, ಮೇಲಿನವುಗಳಲ್ಲಿ ಶಂಖ, ಚಕ್ರಗಳಿವೆ. ಕೆಳಗಡೆ ಬಲಗೈ ಅಭಯ ಎಡಗೈ ಕಟ್ಯವಲಂಬಿತ | ಬಲಗಡೆ ಭೃಗು, ಮಾರ್ಕಂಡೇಯ, 4ಕೈ ಬ್ರಹ್ಮ ದಕ್ಷಿಣ ಭಾಗಕ್ಕೆ ಬಿಳಿಯಬಣ್ಣದ ಶಿವ |
| 2. | ಯೋಗ ಮಧ್ಯಮ | ಶ್ಯಾಮಲ | ಮೇಲಿನಂತೆಯೇ | ಬ್ರಹ್ಮಶಿವರಿಲ್ಲ ಮಿಕ್ಕ ಪರಿವಾರವಿದೆ. |
| 3. | ಯೋಗ ಅಧಮ | ಶ್ಯಾಮಲ | ಮೇಲಿನಂತೆಯೇ | ಭೃಗು ಮಾರ್ಕಂಡೇಯರಿಲ್ಲ. |
| 4. | ಭೋಗ ಉತ್ತಮ | ಶ್ಯಾಮಲ | ನಾಲ್ಕು ಕೈಗಳು ಮೇಲಿನವುಗಳಲ್ಲಿ ಶಂಖ ಚಕ್ರ. ಕೆಳಗಡೆ - ಬಲಗೈ ಅಭಯ ಅಥವಾ ವರದ ಹಸ್ತ. ಎಡಗೈ ಕಟ್ಯವಲಂಭಿತ ಸಿಂಹಕರಣ ಭಂಗಿ | ಬಲಕ್ಕೆ ಶಿವಬ್ರಹ್ಮರು, ಕಮಲ ಹಿಡಿದ ಎಡಗೈ, ಬಲಕ್ಕೆ ಬಾಚಿದ ಬಲಹಸ್ತದ ಶ್ರೀದೇವಿ ಎಡಕ್ಕೆ ಪ್ರಸರಿತಹಸ್ತ ಧೃತೋತ್ಪಲ ಹಸ್ತದ ಭೂದೇವಿ ಭೃಗು, ವ್ಯಾಸ ತುಂಬುರು, ನಾರದ, ಸನಕ, ಸನತ್ಕುಮಾರ, ಸೂರ್ಯ, ಚಂದ್ರ ಮಯ, ಸಂಹ್ಲಾದಿನಿ ಕಿನ್ನರ, ಮಿಥುನ, ವಿದ್ಯಾಧರಯಕ್ಷ, ಸನಂದನ. |
| 5. | ಭೋಗ ಮಧ್ಯಮ | ಶ್ಯಾಮಲ | ಮೇಲಿನಂತೆಯೇ | ತುಂಬುರು, ನಾರದ,ಯಕ್ಷ, ವಿದ್ಯಾಧರರಿಲ್ಲ. |
| 6. | ಭೋಗ ಅಧಮ | ಶ್ಯಾಮಲ | ಮೇಲಿನಂತೆಯೇ | ಸೂರ್ಯಚಂದ್ರರಿಲ್ಲ. |
| 7. | ವೀರ ಉತ್ತಮ | ಶ್ಯಾಮಲ | ನಾಲ್ಕು ಕೈಗಳು ಶಂಖ ಚಕ್ರಗಳುಂಟು. | ಬ್ರಹ್ಮಶಿವರು ಎಡಬಲದಲ್ಲಿ ಕಿಷ್ಕಿಂಧ, ಭೃಗು, ಮಾರ್ಕಂಡೇಯ, ಸುಂದರ, ಸನತ್ಕುಮಾರಸನಂದನ. ಸೂರ್ಯಚಂದ್ರರಿದ್ದಾರೆ. |
| 8. | ವೀರ ಮಧ್ಯಮ | ಶ್ಯಾಮಲ | ಮೇಲಿನಂತೆಯೇ | ಕಿಷ್ಕಿಂಧ, ಸುಂದರ, ಸನತ್ಕುಮಾರಸನಂದನ. |
| 9. | ವೀರ ಅಧಮ | ಶ್ಯಾಮಲ | ಮೇಲಿನಂತೆಯೇ | ಸೂರ್ಯ, ಚಂದ್ರ ಮುನಿಗಳಿಲ್ಲ. |
| 10. | ಅಭಿಚಾರಕ ಉತ್ತಮ | ಧೂಮ್ರ ವರ್ಣ | ಎರಡು ಅಥವಾ ನಾಲ್ಕು ಕೈಗಳು ಕಪ್ಪು ತುಟಿಗಳು, ಬಾಗಿದಕಾಲುಗಳು, ಮೇಲೆ ನೋಡುವ ಕಣ್ಣು (ತಮೋಗುಣ) | ಪರಿವಾರ ದೇವತೆಗಳು ಬ್ರಹ್ಮ,ಇಲ್ಲ .ಪಿಶಾಚಗಣಗಳ ಪರಿವೃತವಾಗಿರುವುದು. |
| 11. | ಅಭಿಚಾರಕ ಮಧ್ಯಮ | ಧೂಮ್ರ ವರ್ಣ | ಮೇಲಿನಂತೆಯೇ | ಮೇಲಿನಂತೆಯೇ |
| 12. | ಅಭಿಚಾರಕ ಅಧ್ಯಮ | ಮೇಲಿನಂತೆಯೆ | ಮೇಲಿನಂತೆಯೇ | ಮೇಲಿನಂತೆಯೇ |

ದೇವರು ಬೆಟ್ಟದ ಮೇಲಿರುವುದರಿಂದಲೂ ಕಾಡಿರುವುದರಿಂದಲೂ,ಪ್ರಾಚೀನ ಕಾಲದಲ್ಲಿ ಇಲ್ಲಿ ಯಾವುದೇ ಗ್ರಾಮವಾಗಲೀ ಕೋಟೆಯಾಗಲೀ ಇರಲಿಲ್ಲವಾದ್ದರಿಂದ ಇದು ಯೋಗ ಅಧಮಸ್ಥಾನಕ ಅಥವಾ ಅಭಿಚಾರಕ ಸ್ಥಾನಕ ಅಥವಾ ವೀರ ಅಧಮ ಸ್ಥಾನಕ ಮೂರ್ತಿ ಆಗಿರಬೇಕು. ಆ ಕಾಲದಲ್ಲಿ ಇದು ಭೋಗಮೂರ್ತಿ ಆಗಿರಲು ಸಾಧ್ಯವಿಲ್ಲ. ಆಲಯದಲ್ಲಿ ಏಕಮೂರ್ತಿ ಇರುವುದಾಗಿ ಇದು ಅಧಮ ರೀತಿಯದು.

ಯೋಗ ಅಧಮ ಸ್ಥಾನಕ ಮೂರ್ತಿಯು ನಾಲ್ಕು ಕೈಗಳನ್ನು ಹೊಂದಿ,ಮೇಲಿನೆರಡು ಕೈಗಳಲ್ಲಿ ಶಂಖ ಚಕ್ರಗಳಿದ್ದು, ಬಲಗಡೆ ಕೆಳಹಸ್ತ ಕಟ್ಯವಲಂಬಿತವಾಗಿಯೂ ಇರಬೇಕು. ಎದೆಯಲ್ಲಿ ಶ್ರೀದೇವಿಯು ಉಪಸ್ಥಿತಿಯನ್ನು ಕುರಿತು ಆಗಮಗಳಲ್ಲಿ ಹೇಳಿಲ್ಲ.ವಿಗ್ರಹದ ಬಲಭಾಗದ ಎದೆಯ ಮೇಲೆ ಶ್ರೀದೇವಿಯನ್ನು ವಿಗ್ರಹದ ಅಂಗವಾಗಿಯೇ ಕೆತ್ತಲಾಗಿದೆಯೇ ಹೊರತು ನಂತರದ ಕಾಲದಲ್ಲಿ ತೆಗೆದು ಸೇರಿಸುವಂತಹ ಜೋಡಣೆಯಾಗಿ ಬಂದಿಲ್ಲ. ನಿಯಮ ವಿರುದ್ಧವಾಗಿ ಕೆಳಗಡೆಯ ಬಲಹಸ್ತ ಅಭಯ ಹಸ್ತವಾಗಿರದೆ ವರದ ಹಸ್ತವಾಗಿದೆ. ಮೇಲಿನೆರಡು ಕೈಗಳ ಶಂಖ ಚಕ್ರಗಳೆರಡೂ ವಿಗ್ರಹದ ಅವಿನಾಭಾವಿ ಭಾಗಗಳಾಗದೆ ತೆಗೆದಿಡಬಹುದಾದವುಗಳಾಗಿ.ಹೀಗಾಗಿ ಈ ವಿಗ್ರಹವು ಆಗಮ ಶಾಸ್ತ್ರದನುಸಾರವಾದ ಯೋಗ ಅಧಮಸ್ಥಾನಕ ಮೂರ್ತಿ ಅಲ್ಲ.

ಅಭಿಚಾರಕ ಸ್ಥಾನಕ ಮೂರ್ತಿಯು ಉತ್ತಮ ಮಧ್ಯಮ ಅಧಮ ಮೂರ್ತಿ ಆಗಿದ್ದು ಎರಡು ಅಥವಾ ನಾಲ್ಕು ಕೈ ಹೊಂದಿರಬಹುದಾದರೂ ಯಾವುದೇ ದೈವಿಕ ಆಯುಧಗಳೂ ಇರದು. ಆಗಮ ಶಾಸ್ತ್ರಗಳಲ್ಲಿ ಈ ಮೂರ್ತಿಯ ಕೈಗಳು ಅಭಯ ವರದ ಕಟ್ಯವಲಂಬಿತ ಮುದ್ರೆ ಹೊಂದಿರುವುದರ ಬಗ್ಗೆ ಹೇಳಿಲ್ಲ. ಹೀಗಾಗಿ ಈ ಮೂರ್ತಿ ಅಭಿಚಾರಕ ಸ್ಥಾನಕ ಮೂರ್ತಿ ಆಗಿರಬಹುದಾದರೂ ಕೆಲವು ವಿನಾಯಿತಿಗಳುಂಟು. ಅಭಿಚಾರಕ ಮೂರ್ತಿಯು ತಗ್ಗಾದ ಗಲ್ಲ,ಸಣ್ಣ ಅಂಗಗಳನ್ನು ಹೊಂದಿರಬೇಕು. ಎಂದರೆ ಒಟ್ಟುವಿಗ್ರಹ ಸಣಕಲಾಗಿ ದೃಷ್ಟಿ ಮೇಲಕ್ಕಿದ್ದು ತಮೋಗುಣವನ್ನು ತೋರಿಸಬೇಕು. ತಿರುಮಲೆಯ ದೇವರ ವಿಗ್ರಹ ಅತ್ಯಂತ ಸುಂದರವಾಗಿದ್ದು, ಅಳತೆಯ ಪ್ರಮಾಣಗಳಲ್ಲಿ ಅತಿಸೂಕ್ತವಾದ ಅಂಗಾಂಗಗಳನ್ನು ಹೊಂದಿದ್ದು,ದೈವಿಕ ಆಭರಣಗಳೊಂದಿಗೆ ಪರವಾಸುದೇವನನ್ನು ಹೋಲಿ ನಿತ್ಯಾನಪಾಯಿನಿಯಾದ,ಜಗನ್ಮಾತೆ ಶ್ರೀದೇವಿಯನ್ನು ವಿಗ್ರಹದ ಅವಿಭಾಜ್ಯ ಅಂಗವಾಗಿ ಹೊಂದಿದೆ. ಹೀಗಾಗಿ ಈ ವಿಗ್ರಹ ಉತ್ತಮ ಮಧ್ಯಮ ಅಧಮ ರೀತಿಗಳಿಗೆ ಸೇರುವ ಅಭಿಚಾರಕ ಮೂರ್ತಿ ಅಲ್ಲ.

ವೀರ ವಿಗ್ರಹ ಮೂರ್ತಿಯು ಶಂಖ ಚಕ್ರಗಳನ್ನು ನಿತ್ಯವೂ ಹೊಂದಿರಬೇಕಾದರೂ ವಿಗ್ರಹದ ಭಾಗವಾಗಿ ಶ್ರೀದೇವಿಯನ್ನು ಹೇಳಲಾಗಿಲ್ಲ. ಕೆಳಗಿನ ಕೈಗಳ ಮುದ್ರೆಗಳು ವರದ ಅಥವಾ ಅಭಯವೆಂದು ಹೇಳದೇ ಇದ್ದರೂ ಶ್ರೀದೇವಿ,ಶಂಖ ಹಾಗೂ ಚಕ್ರಗಳ ಇರುವಿಕೆಯು ವಿಗ್ರಹದ ಅವಿಚ್ಛಿನ್ನ ಲಕ್ಷಣವಾಗದಿರುವುದರಿಂದ ಈ ಸಾಧ್ಯತೆಯನ್ನು ಅಲ್ಲಗಳೆಯಬೇಕು. ಭೋಗಮೂರ್ತಿಯ ವಿಷಯದಲ್ಲಿಯೂ,ಶಂಖ ಚಕ್ರಗಳು ನಿತ್ಯವಾಗಿಯೂ, ಶ್ರೀದೇವಿ ಭೂದೇವಿಯರು ಎದೆಯ ಮೇಲೆಯೂ ಇರಲೇಬೇಕು. ಇನ್ನೊಂದು ಕೈ ಕಟ್ಯವಲಂಬಿತ ಸಿಂಹಕರಣವಾಗಿರಬೇಕು. ಈ ಲಕ್ಷಣಗಳು ವಿಗ್ರಹದಲ್ಲಿಲ್ಲ. ಈ ವಿಗ್ರಹದಲ್ಲಿ ಹೇಳಲಾದ ಒಂದೇ ಒಂದು ಲಕ್ಷಣವೆಂದರೆ ಕೆಳಗಡೆಯ ಬಲಗೈ ವರದ ಹಸ್ತವಾಗಿರುವಿಕೆ.

ದೇವರು ಶ್ಯಾಮಲ ಅಥವಾ ಕಪ್ಪುವರ್ಣದವನಾಗಿರುವುದೂ,ಎರಡು ಕದಲುವ ಕೈ ಆಯುಧಗಳು ಸೇರಿದಂತೆ ನಾಲ್ಕು ಕೈಗಳನ್ನು ಹೊಂದಿರುವುದರಿಂದಲೂ,ಆಗಮ ಶಾಸ್ತ್ರದ ವಿಗ್ರಹ ಲಕ್ಷಣಗಳಂತೆ ಧ್ರುವಮೂರ್ತಿಯ ಪ್ರತಿಷ್ಠಾಪನೆಯಲ್ಲಿ ಆಗಮ ಶಾಸ್ತ್ರ ಹೇಳುವ ಯಾವುದೇ ನಮೂನೆಯಲ್ಲೂ ಇಲ್ಲ.

ಇದರಿಂದಾಗಿ ಉಳಿದಿರುವ ಒಂದು ಮಾರ್ಗವೆಂದರೆ ಇಲ್ಲಿನ ದೇವರು ಪರಬ್ರಹ್ಮ ಅಥವಾ ಪರವಾಸುದೇವ ಮಾದರಿಗೆ ಹೊಂದುವುದೇ ಎಂಬುದರ ಪರಿಶೀಲನೆ.

ದಿವ್ಯಲೋಕದಲ್ಲಿರುವ ಅವನನ್ನು ಕುರಿತು ವಿವಿಧ ಸಂಹಿತೆಗಳು ವಿಧವಿಧವಾಗಿ ವರ್ಣಿಸುತ್ತವೆ. ಭೃಗು ಸಂಹಿತೆಯ 33ನೇ ಅಧ್ಯಾಯದಲ್ಲಿ ಅವನು ನಾಲ್ಕು ಕೈ ಹೊಂದಿ,ಐದು ಆಯುಧ ಹೊಂದಿರುವನೆಂದು ಹೇಳಲಾಗಿದೆ.ಅವನ ದೇಹದ ಎಡ ಬಲಭಾಗಳು ಒಂದರೊಡನೊಂದು ಹೋಲುತ್ತ ಅತ್ಯಂತ ಸುಂದರವಾಗಿವೆ. ಅವನಿಗೆ ಎಲ್ಲ ದಿವ್ಯಾಭರಣಗಳುಂಟು. ಅವನಲ್ಲಿಯೇ ಶ್ರೀದೇವಿಯು ಇರುವಳೆಂದು ಅವನು ಸರ್ವ ಕಲ್ಯಾಣಗುಣಾಕರನೆಂದೂ, ನಿರಪೇಕ್ಷನೆಂದೂ, ಆರು ಸದ್ಗುಣಗಳಿಂದ ಶೋಭಿತನಾಗಿರುವನೆಂದು ಹೇಳುತ್ತದೆ. ಆದರೆ ಈ ವಿವರಣೆ ಸಂಪೂರ್ಣವಾಗಿಲ್ಲ. ಇಲ್ಲಿ ಹೇಳಲ್ಪಟ್ಟ ಎಲ್ಲ ಆಯುಧಗಳೂ ವೆಂಕಟೇಶ್ವರಸ್ವಾಮಿಯಲ್ಲಿಲ್ಲ.ಷಡ್ಗುಣಗಳ ಉಲ್ಲೇಖ ಇಲ್ಲಿ ಗಮನಾರ್ಹ,ಪಾಂಚರಾತ್ರ ಆಗಮಗಳು ಪರವಾಸುದೇವನನ್ನು ವಿವಿಧ ರೀತಿಯಲ್ಲಿ ವರ್ಣಿಸುತ್ತವೆಯಾದರೂ ಹುತೇಕ ಅನಂತನಾಗನ ಮೇಲೆ ಕುಳಿತಂತೆಯೂ,ಶಯನರೂಪಿಯಾಗಿಯೂ ಇರುವಂತೆ ವಿವರಿಸುತ್ತದೆ.ನಮ್ಮ ಸಧ್ಯದ ಪ್ರಶ್ನೆಯ ಪರಿಹಾರದಲ್ಲಿ ಇವೆಲ್ಲವೂ ದೂರದ ಸಂಬಂಧಿಗಳಷ್ಟೆ.

ವಿಷ್ಣುಪುರಾಣದ ಏಳನೇ ಅಧ್ಯಾಯದ ಆರನೇ ಅಂಶದಲ್ಲಿ ಧ್ಯಾನಕ್ಕೆ ಅನುಕೂಲವಾಗುವಂತಹ ವಿಷ್ಣುವಿನ ಮೂರ್ತಿರೂಪದ ವಿವರಣೆಯಿದೆ. ಧ್ಯಾನದ ನಾಲ್ಕು ಸ್ತರಗಳನ್ನು ಕುರಿತು ಹೇಳಲಾಗಿದೆ. ಅತಿ ಕೆಳಸ್ತರದಲ್ಲಿ ಎಲ್ಲ ಆಯುಧ ಆಭರಣಗಳೊಡನೆ ಎಂಟು ಅಥವಾ ನಾಲ್ಕು ಕೈಗಳ ಮೂರ್ತಿಯನ್ನು ಹೇಳಲಾಗಿದೆ. ನಂತರದ ಧ್ಯಾನದ ಹಂತದ ಧ್ಯಾನದ ಮೂರ್ತಿಗೆ ಆಯುಧಗಳಿಲ್ಲ.ಇದಕ್ಕೂ ಮೇಲಿನ ಹಂತದಲ್ಲಿ ಆಭರಣಗಳೂ ಇಲ್ಲ. ಅತ್ಯುಚ್ಚ ಸ್ತರದಲ್ಲಿ ಮೂರ್ತಿಯ ಅವಯವಗಳು,ಎರಡು ಕೈಗಳು ಮಾತ್ರ ಕಂಡುಬರುತ್ತವೆ. ಈ ಮೂರ್ತಿಯನ್ನು ಪ್ರಸನ್ನ ವದನನಾಗಿ,ಕಮಲ ದಳಾಯತಾಕ್ಷನಾಗಿ,ಸುಂದರವಾದ ಹುಬ್ಬುಗಳು,ವಿಶಾಲವಾದ ಹಣೆ,ವಿಶಾಲವಾದ ಕರ್ಣಕುಂಡಲಗಳು,ಸುಂದರವಾದ ವರ್ತುಲಾಕಾರದ ಬಲಮುರಿ ಶಂಖ ಸದೃಶ ಗಳ, ಶ್ರೀವತ್ಸದ ಗುರುತುಗಳ ಮೇಲೆ ಕುಳಿತ ಭಂಗಿಯಲ್ಲಿನ ಲಕ್ಷ್ಮೀದೇವಿಯನ್ನು ಹೊಂದಿದ ವಿಶಾಲವಾದ ವಕ್ಷಃಸ್ಥಲ,ತ್ರಿವಳಿಯ ಉದರ, ನಿಮ್ನನಾಭಿ, ಎಂಟು ಅಥವಾ ನಾಲ್ಕು ದೀರ್ಘಬಾಹುಗಳು, ಪರಿಶುದ್ಧ ಪೀತಾಂಬರ, ಕಿರೀಟ, ಕೇಯೂರ, ಹಾರ, ಕಡಗ ಉಂಗುರ, ಕಾಲುಂಗುರ ಮೊದಲಾದವುಗಳನ್ನು ಧರಿಸಿರುವಂತಿದೆ. ಅವನ ಕೈಲಿರುವ ಆಯುಧ ಗಳೆಂದರೆ ಶಾರ್ಙ್ಗ, ಶಂಖ, ಗದೆ, ಖಡ್ಗ, ಚಕ್ರ. ಅಕ್ಷಮಾಲೆಯು ಆರನೆಯ ಕೈಯಲ್ಲಿರುವುದು. ಮಿಕ್ಕ ಎರಡು ಕೈಗಳಲ್ಲಿ ಒಂದು ಅಭಯಹಸ್ತ ಮತ್ತೊಂದು ವರದ ಹಸ್ತ. ಕಮಲದ ಹೂವು ಅಲಂಕಾರವಾಗಿದೆ.ಮೇಲಿನ ಈ ರೂಪವು ಧ್ಯಾನದ ಪ್ರಥಮ ಹಂತಕ್ಕೆ ಸಂಬಂದಿಸಿದ್ದು. ಈ ವಿವರಣೆಯು ವೆಂಕಟೇಶ್ವರಸ್ವಾಮಿಗೆ ಅನ್ವಯವಾಗುವುದಿಲ್ಲ. ನಂತರದ ಸ್ತರದಲ್ಲಿ ಎಲ್ಲ ಆಯುಧಗಳನ್ನು ಹೊರತುಪಡಿಸಿ,ನಾಲ್ಕು ಕೈಗಳು ಖಾಲಿಯಾಗಿರುತ್ತವೆ. ಆದರೆ ಇತರ ಎಲ್ಲ ಆಭೂಷಣಗಳೂ ದೇವರಿಗುಂಟು. ಹೀಗಾಗಿ ಒಂದು ಸಾಮಾನ್ಯ ಅರ್ಥದಲ್ಲಿ ಈ ವಿವರಣೆ ವೆಂಕಟೇಶ್ವರಸ್ವಾಮಿಗೆ ಹೊಂದಬಹುದು. ಕೆಳಗಣ ಎರಡು ಕೈಗಳು ಖಾಲಿಯಾಗಿರುವಾಗಿದ್ದು ಒಂದು ವರದ ಹಸ್ತವಾಗಿ ಒಂದು ಕಟಿ ಅವಲಂಬಿತವಾಗಿ ಎರಡನೆಯ ಹಂತದ ಧ್ಯಾನ ಮೂರ್ತಿಗೆ ಸರಿಹೋಗುತ್ತದೆ.ಆದರೆ ತಿರುಮಲೆಯ ಮೂರ್ತಿ ಈ ನಿಯಮಗಳಿಗೆ ಒಳಪಡುವುದಿಲ್ಲ.

ಹೀಗಾಗಿ ಆಗಮಗಳ ನಿಯಮ ನಿರ್ದೇಶಗಳ ಅಧ್ಯಯನದ ನಂತರ ಯಾರಾದರೂ ಈ ಕೆಳಗಣ ಎರಡು ನಿರ್ಧಾರಗಳಲ್ಲಿ ಒಂದರತ್ತ ಬರಬಹುದು.

1.ತಿರುಮಲೆಯ ಆಲಯದಲ್ಲಿನ ಮೂರ್ತಿಯು ಆಗಮಗಳಲ್ಲಿನ ನಿಯಮಗಳ ಪ್ರಾಚುರ್ಯ,ದಾಖಲಾತಿ ಗಳಿಗೆ ಮೊದಲಿನಿಂದ ಇರುವಂತಹದು.

ಅಥವಾ

2.ಇಲ್ಲಿನ ಮೂರ್ತಿಯು ಆದಿಕಾಲದಿಂದಲೂ ಆದರದೇ ಆದ ವರ್ಗಕ್ಕೆ ಸೇರಿದ್ದು,ದೇವರು ಸ್ವಯಂಭು ಅಥವಾ ಸರ್ವತಂತ್ರ ಸ್ವತಂತ್ರ ಎಂಬುದನ್ನು ಅವಧಾರಿಸಲು ಶಿಲ್ಪಿಯಿಂದ ಈ ರೀತಿಯಲ್ಲಿ ಪರಿಕಲ್ಪಿತವಾಯಿತು.

## 5. ವಿಗ್ರಹ ವಿವರಣೆ:

ದೇವರ ಮೂರ್ತಿಯು ಸುಂದರವಾಗಿ,ಭವ್ಯವಾಗಿ,ಉತ್ಕೃಷ್ಟವಾಗಿ,ಇದೆ. ದೇವರ ಭವ್ಯತೆ, ಸೌಂದರ್ಯ, ಕಾರುಣ್ಯಗಳು ಸರ್ವರಿಗೂ, ಸಾಧಾರಣ ಅಲಂಕಾರಗಳಲ್ಲಿದ್ದಾಗಲಾಗಲೀ,ಶುಕ್ರವಾರದ ಅಭಿಷೇಕ ದಲ್ಲಾಗಲೀ ನೋಡಿದ ಮಾತ್ರದಿಂದ ಅನುಭವಕ್ಕೆ ಬರುವ ಸಂಗತಿಯಾಗಿದೆ. ದೇವರಲ್ಲಿ ಅತ್ಯಂತ ಆಕರ್ಷಕವಾದ ಅಂಶವೆಂದರೆ ಚುಂಬಕದಂತೆ ದೃಷ್ಟಿಯನ್ನು ಸೆಳೆದುಕೊಳ್ಳುವ ದಿವ್ಯ ಸೌಂದರ್ಯ, ಅದರಲ್ಲಿನ ಸಮುದ್ರ ಸದೃಶ ಕರುಣೆ, ಸಮದೃಷ್ಟಿಯನ್ನು ಹೊಂದಿದ ವಿಶಾಲ ಶ್ಯಾಮಲ ನಯನಗಳು ಅನಂತವಾದ ಕಿರುನಗೆ,ಅತ್ಯಂತ ವಿಶೇಷವಾದ ಶಾಂತಿ,ಸೌಲಭ್ಯವನ್ನು ಸೂಚಿಸುತ್ತ,ಪರಿಪೂರ್ಣ ಪ್ರೇಮವಾತ್ಸಲ್ಯಗಳನ್ನು ಪ್ರಕಟಿಸುತ್ತವೆ. ಪಂಥಗಳ ನಾಮಮಾತ್ರ ವೈವಿಧ್ಯದಿಂದ ಮೇಲೇರುವ ಸಾಮರ್ಥ್ಯವುಳ್ಳ ಪ್ರತಿಯೊಬ್ಬರೂ,ಬೇರೆ ಬೇರೆಡೆಯ ದೇವ ಸನ್ನಿಧಿಯಲ್ಲಿ ಪಡೆಯುವ ಸಂಯೋಗ ಚಿತ್ತಶಾಂತಿ ಸಮತೆಗಳನ್ನು ಇಲ್ಲಿಯೂ ಪಡೆಯಬಲ್ಲರು.ನಮ್ಮಲ್ಲಿನ ಅಹಂಕಾರವನ್ನು ನಾಶಪಡಿಸಿ, ನಾವು ದೇವಾಂಶುಗಳೆಂಬ ಭಾವದಲ್ಲಿ ಕುಟಿಲವಿಲ್ಲದೆ ಆನಂದ ಪಡುವ ಕ್ಷಣ ತಿರುಮಲೇಶನ ಸನ್ನಿಧಿಯಲ್ಲಿ ಉಂಟು. ಅವನು ಎಲ್ಲರಲ್ಲಿಯೂ ಇರುವುದರಿಂದ ಎಲ್ಲರೂ ಅವನ ಅಂಶಗಳೇ ಆಗಿ ಅವನಿಗೆ ಶರಣಾದವರನ್ನು ಅವನೇ ನೋಡಿಕೊಳ್ಳುತ್ತಾನೆ. ನಮ್ಮ ಎಲ್ಲ ಎಚ್ಚರಗಳನ್ನು ಆ ನಿತ್ಯಸತ್ಯನು ನೋಡಿಕೊಳ್ಳುವಾಗ,ನಮಗೇತರ ಭಯ!ಯಾತರ ಚಿಂತೆ!ಆತ ಇವೆಲ್ಲಕ್ಕೂ ಕೇಳುವುದು ಒಂದೇ ಬೆಲೆ-ಒಟ್ಟು ಬೆಲೆ-ನಮ್ಮ ಶರಣಾಗತಿ! ಅದನ್ನು ಒಪ್ಪಿಸುವುದು ಎಷ್ಟು ಸುಲಭ.!!

ಸ್ವಾಮಿಯ ವಿಗ್ರಹವು ಶಿರೋಜಗಳಿಂದ ಕೂಡಿದ್ದು ಈ ಗುಂಗುರು ಹಲವು ಭಾಗ ಸ್ವಾಮಿಯ ಭುಜಗಳ ಮೇಲೆ ಇಳಿದು ಬಿದ್ದಿದೆ. ನಾಸಿಕವನ್ನು ಅತ್ಯಂತ ಎಚ್ಚರಿಕೆಯಿಂದ ತಿದ್ದಲಾಗಿದ್ದು ಅತಿ ಎತ್ತರವೂ ಅಲ್ಲದ ಅತಿ ಚಪ್ಪಟೆಯೂ ಅಲ್ಲದಂತಿದೆ. ದೇವರುಬಾಯಿ ಕೂಡ ಅತಿ ಸುಂದರವಾಗಿದೆ. ಗಲ್ಲ ಹಾಗೂ ಕಿವಿಗಳು ಪ್ರಮಾಣಾನುಸಾರವಾಗಿವೆ. ದೇವರ ವಕ್ಷ ಪ್ರದೇಶವು ವಿಶಾಲವಾಗಿದ್ದು, ಉನ್ನತವಾಗಿದ್ದು,ಅಳತೆಮಾಡಿದರೆ 36 ಇಂಚಿನಿಂದ 40 ಇಂಚು ಇರಬಹುದು ಹಾಗೂ ಸೊಂಟದ ಅಳತೆ-24 ರಿಂದ 27 ಇಂಚು ಆಗಿರಬಹುದು. ಕಂಠವು ಶಂಖಾಕಾರವಾಗಿದ್ದು ದೇಹವು ಸಿಂಹ ಸದೃಶವಾಗಿದೆ. ಹೊಟ್ಟೆಯೂ ಸುಂದರಾಕಾರ. ದೇವರಿಗೆ ನಾಲ್ಕು ಕೈಗಳಿದ್ದು ಮೇಲಿನೆರಡರಲ್ಲಿ ಚಕ್ರ ಶಂಖಗಳನ್ನು ಹಿಡಿದಿದ್ದಾನೆ. ಆದರೆ ಮೂಲವಿಗ್ರಹದ ಭಾಗಗಳಲ್ಲ ಈ ಶಂಖಚಕ್ರಗಳು.ಮೇಲಿನ ಬಲಗೈ ಸುದರ್ಶನ ಚಕ್ರವನ್ನು ಹಿಡಿದಿದ್ದರೆ ಮೇಲಿನ ಎಡ ಗೈಯಲ್ಲಿ ಪಾಂಚಜನ್ಯ ಶಂಖವಿದೆ. ಕೆಳಗಡೆಯ ಬಲಗೈ ವರಹಸ್ತವಾಗಿದೆ. ಕೆಳಗಡೆಯ ಎಡಗೈ ಕಟ್ಯವಲಂಬಿತ ಹಸ್ತವಾಗಿದೆ. ಕೆಳಗಡೆಯ ಎಡಗೈನ ಬೆರಳುಗಳು ಎಡಭಾಗದ ತೊಡೆಯನ್ನು ತಗಲುವಂತಿದ್ದು, ಹೆಬ್ಬೆರಳು ಹಾಗೂ ಕೈ ಮುಂಗೈಗಳು ಸೊಂಟದ ನೇರಕ್ಕೆ ಬಹುತೇಕ ಸಮಾನಾಂತರವಾಗಿವೆ.ವಿಗ್ರಹವು ತ್ರಿಭಂಗಿಯಲ್ಲಿಂತ ನಿಲುವಿನ ದಾಗಿರದಿದ್ದರೂ, ಸೊಂಟದ ಹತ್ತಿರ ಹಾಗೂ ಕೆಳಗಡೆಯ ನಿಲುವು ತುಸು ಎಡಕ್ಕೆ ವಾಲಿದಂತೆ ಇದೆ. ಮೊಣಕಾಲುಗಳು ತುಸ ಬಾಗಿ, ಹೊರಕ್ಕೆ ತೆರೆದುಕೊಂಡು ವಿಗ್ರಹಕ್ಕೆ ಒಂದು ವಿಶೇಷ ಆಕರ್ಷಣೆಯನ್ನು ಒದಗಿಸಿದೆ. ಮೂಲಮೂರ್ತಿಯ ಎದೆಯ ಎಡಭಾಗದಲ್ಲಿ ವಿಗ್ರಹದ ಅವಿನಾಭಾವಿ ಅಂಗವಾಗಿ ಕುಳಿತ ಭಂಗಿಯಲ್ಲಿ ಲಕ್ಷ್ಮಿಯ ಚಿತ್ರವನ್ನು ಕೆತ್ತಲಾಗಿವೆ. ತೋಳುಗಳಿಗೆ ತೋಳಬಂದಿಯಿವೆ. ಸೊಂಟದಿಂದ ಕೆಳಕ್ಕೆ ವಿಗ್ರಹವು ಪಂಚೆಯನ್ನುಟ್ಟಂತೆ ಇದೆ. ಮೇಲಿನ ಭಾಗ ಯಾವುದೇ ವಸ್ತ್ರದಿಂದ,ಉತ್ತರೀಯದಿಂದ ಬಳಸಲ್ಪಟ್ಟಿಲ್ಲ. ದೇವರ ಎದೆಯಲ್ಲಿ ಎರಡೂ ಚೂಚುಕಗಳೂ ಪ್ರಮುಖವಾಗಿವೆ. ಕಟಿಬಂಧವೊಂದಿದ್ದು ಇದು ಅಗಲದಲ್ಲಿ ಎರಡು ಅಂಗುಲ ಇರ ಬಹುದು. ದೇವರು ಕಾಲುಗಳು ಹಾಗೂ ಪಾದಗಳು ಸಮಪ್ರಮಾಣವಾಗಿ,ಸುಂದರವಾಗಿವೆ. ಎರಡೂ ಮೊಣಕಾಲುಗಳು ಸ್ವಲ್ಪ

ಬಾಗಿ ಹೊರಕ್ಕೆ ತೆರೆದುಕೊಂಡಂತೆ ಇದ್ದು,ವಿಗ್ರಹಕ್ಕೆ ಭವ್ಯತೆಯನ್ನು ತಂದುಕೊಟ್ಟಿವೆ. ಪಾದಗಳು ಪರಿಪೂರ್ಣತೆಯ ನಮೂನೆಗಳಾಗಿ, ಮೀನಖಂಡದ ಬಳಿಯಲ್ಲಿ ಆಭರಣಗಳಿವೆ. ದೇವರ ಭುಜಗಳಲ್ಲಿ ಬಿಲ್ಲು ಬಾಣಗಳನ್ನು ತೂಣೀರ ಧರಿಸಿದ ಗುರುತುಗಳಿವೆ.

ದೇವರ ವಿಗ್ರಹವು ದಿವ್ಯ ಮನೋಹರಮೂರ್ತಿಯ ಒಂದು ವಿಶೇಷ ಮಾದರಿ,ಅಮೃತವಾದ ಶಾಶ್ವತ ತತ್ವದ ಮೂರ್ತಿರೂಪವೇ ಈ ವಿಗ್ರಹವೆಂದು ಎಲ್ಲರೂ ಒಪ್ಪುವುದಾಗಿ,ಅತ್ಯಂತ ದಯಾಭಾವನೆಯ ತನ್ನ ಕರವನ್ನು ಮುಂದಕ್ಕೆ ಚಾಚಿ,ಮನುಷ್ಯನನ್ನು ಮುಟ್ಟಿ ಅವನಲ್ಲಿ ತಾನೇನು ಎಂಬುದರ ಬಗ್ಗೆ ನಿಜವನ್ನು ನಿರುಕಿಸುವಂತೆ ಮಾಡಿ,ಅವನ ಆತ್ಮವನ್ನು ಉದ್ಧಾರಮಾಡಲು ಇಳಿದು ಬಂದಿರುವ ಮೂರ್ತಿಯಿದು. ತಿರುಮಲೆಯ ದೇವರ ದರ್ಶನ ಮಾಡಿದವನು ಯಾವನೂ ಇನ್ನೊಬ್ಬನನ್ನು ಎಂದಿಗೂ ದ್ವೇಷಿಸುವುದಿಲ್ಲ. ತಿರುಮಲೆಯ ದೇವರ ದರ್ಶನವೇ ಒಂದು ಆಧ್ಯಾತ್ಮಿಕ ಅನುಭವವಾಗಿದ್ದು ಅದಾದ ನಂತರ ಪ್ರತಿಯೊಬ್ಬರೂ ತಾವು ಮೊದಲಿಗಿಂತಲೂ ಪೂರ್ಣ ಬೇರೆಯಾದವರಂತೆ ಅನುಭವ ಪಡೆಯುವರು. ಅಸಂಖ್ಯ ಜನರು ಸ್ವಾಮಿಯ ಬಳಿಗೆ ಉದ್ದುದ್ದ ಕೋರಿಕೆ, ಪ್ರಾರ್ಥನೆಪಟ್ಟಿ ಹಿಡಿದು ಹೋಗುವರು. ಅವರವರ ಅಭಿಲಾಷೆಗಳು ಈಡೇರುವುವೋ ಇಲ್ಲವೋ, ಅವನತ್ತ ನಿಷ್ಕಳಂಕ ಹೃದಯದಿಂದ ತಿರುಗಿದ ಶರಣಾಗತನಿಗೆ ಅಪರೂಪವಾದ ಶಾಂತಿ ಸಮತೆಗಳು ದಕ್ಕಿ,ಒಂದು ದಿವ್ಯಶಕ್ತಿಯ ಸನ್ನಿಧಿಯಲ್ಲಿರುವ ಅನುಭವವಂತೂ ಆಗಿಯೇ ತೀರುವುದು.

ವಾಚಾಮಗೋಚರನಾದವನನ್ನು ವಾಕ್ಕಿನಲ್ಲಿ ವಿವರಿಸಲೂ, ಕಾಲಾತೀತನಾದವನನ್ನು ಕಾಲಿಕವಾದದ್ದರಿಂದ ಮಿತಿಗೊಳಿಸಲೂ ಯಾರಿಗೆ ಸಾಧ್ಯ!. ನಾವು ನಮ್ಮ ಅಂಹಂಕಾರದಿಂದಾಗಿ ಅವನ ಸೇವೆ ಮಾಡಲು ಯೋಚಿಸುತ್ತೇವೆ. ನಾವೇನೇ ಮಾಡಿದರೂ ದೇವರ ದಯೆ ಕರುಣೆ ಅಪಾರವಾಗಿದ್ದು,ಭಕ್ತನಿಗೆ ಏನೇ ಸಿಗಬಹುದು ಅಥವಾ ಬಿಡಬಹುದು. ಅವನಿಗೆ ಚಿತ್ತ ಸಮತೆ,ಯಾವುದನ್ನಾದರೂ ಸಹಿಸ ಬಲ್ಲ ದೃಢತೆ ಸಿಗುವುದರಲ್ಲಿ ಸಂದೇಹವಿಲ್ಲ.

ದೇವಾಲಯಗಳು ಜೀವಂತ ಸಂಸ್ಥೆಗಳೆನ್ನಲು ಆಧಾರವೇನಾದರೂ ಬೇಕಿದ್ದಲ್ಲಿ ತಿರುಮಲೆಯ ಆಲಯ ಅಂತಹ ಒಂದು ದಾಖಲಾದ ಸಾಕ್ಷ್ಯವೆನ್ನಬಹುದು.

**ವಿಗ್ರಹದ ವೈಷ್ಣವತೆ :**

ತಿರುಮಲೆಯ ಆಲಯದಲ್ಲಿನ ವಿಗ್ರಹವು ವಿಷ್ಣುವೋ ಶಿವನೋ ಎಂಬ ವಾದ ಬಹುಕಾಲದಿಂದಲೂ ನಡೆದು ಬಂದಿದೆ.ಈ ವಿಗ್ರಹ ಸುಬ್ರಹ್ಮಣ್ಯನದು ಎನ್ನುವ ಒಂದು ವಾದವೂ ಉಂಟು. ಅತಿ ಕೊನೆಯಲ್ಲಿ ವಿಗ್ರಹ ಶಕ್ತಿಯದು ಎನ್ನುವವರೂ ಉಂಟು. ಈ ಆಲಯದ ಪಾವಿತ್ರ್ಯವನ್ನು ನಂಬುವ ಭಕ್ತರ ಮನದಲ್ಲಿ ಆಗಾಗ ಕೋಲಾಹಲ ವೆಬ್ಬಿಸುವ ತೀವ್ರವಾದ ಪ್ರಶ್ನೆಗಳಿವು. ಹೀಗಾಗಿ ಈ ಪ್ರಶ್ನೆಯನ್ನು ಆಮೂಲಾಗ್ರ ಪರಿಶೀಲಿಸಿ,ಒಂದು ಕಡೆಯ ಮಾತಿಗೆ ಬರಬೇಕಾದ ಅಗತ್ಯವಿದೆ.

ಅ. ಇಲ್ಲಿನ ವಿಗ್ರಹ ಶಿವನೆಂದು ವಾದ ಮಾಡುವ ಜನರು ಮುಂದಿಡುವ ಸಾಕ್ಷ್ಯಗಳು ಈ ರೀತಿಯಿವೆ-

1. ಇಪ್ಪತ್ತು ಅಂಗುಲಗಳಿಗಿಂತಲೂ ಉದ್ದವಿರುವ ದೇವರ ಕಿರೀಟದಿಂದ ಇಳಿದು ಬಂದಿರುವ ಜಟಾಜೂಟ, ಇದರ ಬಹು ಭಾಗ ಭುಜಗಳನ್ನು ಆವರಿಸಿದೆ.

2. ದೇವರ ತೋಳ ಬಂದಿಗಳಲ್ಲಿ ಬೆರಳಿನಾಕಾರ ಹೊರಬಂದ ಭಾಗವಿದ್ದು ನಾಗಭೂಷಣದಂತಿದ್ದು ದೇವರ ಬಲ ತೋಳಿನಲ್ಲಿ ಒಂದು ನಾಗಾಭರಣವೂ ಇದೆ.

3. ಆಲಯದಲ್ಲಿ ಶಿವಪೂಜೆಯಲ್ಲಿ ಮಾತ್ರವೇ ಬಳಸಲಾಗುವ ಬಿಲ್ವಪತ್ರವನ್ನು ಪೂಜೆಯಲ್ಲಿ ಬಳಸಲಾಗುತ್ತದೆ.

4. ದೇವರ ತಲೆಯಲ್ಲಿ ಚಂದ್ರನ ಗುರುತೂ ಇದ್ದು ವಿಗ್ರಹವು ಶಿವನದೇ ಎಂಬುದಾಗಿ ಸಾಬೀತು ಪಡಿಸುತ್ತದೆ.

5. ತಿರುಮಲೆಯ ಆಲಯದಲ್ಲಿ ಒಂದು ಸ್ಪಟಿಕಲಿಂಗವಿದ್ದು ಪ್ರಾಚೀನಕಾಲದಲ್ಲಿ ಇದು ಶಿವ ದೇವಾಲಯವಾಗಿದ್ದಿರಬೇಕು.

ನಂತರದ ಕಾಲದಲ್ಲಿ ರಾಮಾನುಜರಿಂದ ನಿತ್ಯಾರ್ಚನೆ ಮುಂತಾದವುಗಳಲ್ಲಿ ಉಂಟಾದ ಪರಿವರ್ತನೆಗಳೊಡನೆ ಇದು ವೈಷ್ಣವ ಆಲಯವಾಗಿರಬೇಕು.

- ಮೇಲಿನ ಈ ವಾದಗಳೆಲ್ಲ ನಿಲ್ಲಲಾರವು

ಮೊದಲನೆಯದಾಗಿ ದೇವರ ಕಿರೀಟದಲ್ಲಿ ಶಿವಮೂರ್ತಿಯನ್ನು ಹೋಲುವ ಜಟಾಜೂಟವಿದೆ ಎಂದು ಹೇಳುವುದು ಸರಿಯಲ್ಲ.ಶ್ರೀ ವೆಂಕಟೇಶ್ವರಸ್ವಾಮಿಯ ಧ್ರುವಬೇರದ ಲಕ್ಷಣಗಳು ಈ ರೀತಿಯಿವೆ.

ಅ. ವಿಗ್ರಹದ ಬಲಗಡೆಯ ವಕ್ಷದ ಶ್ರೀವತ್ಸದ ಮೇಲೆ ಶ್ರೀಲಕ್ಷ್ಮಿ ಕುಳಿತಿದ್ದಾಳೆ.

ಆ. ತೋಳಿನ ಮೇಲೆ ಗಾಯದ ಗುರುತುಗಳಿವೆ.

ಇ. ಮುಕ್ತವಾದ ಹಾಗೂ ಸುಲಭವಾದ ಮೇಲಿನ ಎರಡೂ ಕೈಗಳಲ್ಲಿ ಶಂಖ ಚಕ್ರಗಳನ್ನಿಡಲಾಗಿದೆ.

ಈ. ಕೆಳಗಣ ಬಲಗೈ ವರದ ಹಸ್ತವಾಗಿಯೂ ಕೆಳಗಣ ಎಡಹಸ್ತವು ಕಟ್ಯವಲಂಬಿತ ವಾಗಿಯೂ ಇರುತ್ತದೆ.

ಇಲ್ಲಿನ ವರದ ಹಸ್ತವು ಎಂದರೆ ಅಂಗೈ ಹಾಗೂ ಬೆರಳುಗಳು ಕೆಳಮುಖವಾಗಿರುವಿಕೆಯು ಯಾವುದೇ ಆಗಮದಲ್ಲಿಯೂ ಹೇಳಲಾಗಿಲ್ಲವೆಂಬುದನ್ನು ಇಲ್ಲಿ ಉಲ್ಲೇಖಿಸಬೇಕು. ಮೇಲೆಯೇ ತಿಳಿಸಿದಂತೆ ದೇವರ ಮೂರ್ತಿಯು ಸ್ವಯಂಭು ಆಗಿರಬೇಕು ಅಥವಾ ಯಾವುದೇ ಆಗಮಶಾಸ್ತ್ರವೂ ಬರೆಯಲ್ಪಡುವ ಮೊದಲಿಗೆ ಬಂದ ಇದು ಅತ್ಯಂತ ಪ್ರಾಚೀನ ಮೂರ್ತಿಯಾಗಿರಬೇಕು. ವಿಗ್ರಹದ ಅಂಗೈ ಹಾಗೂ ಬೆರಳುಗಳು ಬಲಗಾಲನ್ನು ತೋರಿಸುತ್ತ ಕೆಳಮುಖವಾಗಿರುವುದು ದೇವರಲ್ಲಿ ಶರಣು ಬಂದವರ ಕೋರಿಕೆಗಳನ್ನು ತೀರಿಸುವ ದೇವರ ಕರುಣೆಯ ಸಂಕೇತ ಆಗಿದೆಯಷ್ಟೆ. ಮಹಾಬಲಿಗೆ ಕೇಳದೆಯೇ ನೀಡಿದ ವರದತ್ತ ಗಮನ ಸೆಳೆಯುವಂತಿದೆ. ನಮ್ಮಾಳ್ವಾರರು ಇದನ್ನು ಉಲ್ಲೇಖಿಸಿದ್ದಾರೆ. ಶ್ರೀವೈಷ್ಣವ ಸಂತಶ್ರೇಷ್ಠರಾದ ಆಳವಂದಾರರೂ ಸ್ವಾಮಿಯನ್ನು ಹೊಗಳುತ್ತಾ ಸ್ವಾಮಿಯ ಪಾದಗಳನ್ನು ತಮ್ಮ ತಲೆಯ ಮೇಲಿರಿಸಲು ಪ್ರಾರ್ಥಿಸಿದ್ದಾರೆ,ತಮ್ಮ ಸ್ತೋತ್ರರತ್ನದಲ್ಲಿ, ವಿಷ್ಣುವಿನ ತ್ರಿವಿಕ್ರಮಾವತಾರದಲ್ಲಿ ಬಲಗಾಲನ್ನು ತೋರಿಸುತ್ತ ಇಡೀ ವಿಶ್ವವನ್ನು ಎರಡೇ ಪಾದದಿಂದ ಅಳೆದುಕೊಂಡ ಮೇಲೆ ಮೂರನೆಯ ಪಾದವನ್ನು ಇಡಲು ಸ್ಥಳವೆಲ್ಲಿ ಎಂದು ಬಲಿಯನ್ನು ಕೇಳುತ್ತಾನೆ. ಬೇರೇನೂ ತೋರಿಸಲಾಗದ ಬಲಿ ತನ್ನ ತಲೆಯನ್ನೇ ತೋರಿಸಿ ಪಾದವನ್ನು ಅಲ್ಲಿಡಲು ಹೇಳಿದಾಗ ಸ್ವಾಮಿ ಬಲಿಯನ್ನು ತನ್ನ ಪಾದದತ್ತ ಸೆಳೆದುಕೊಂಡು ಅತ್ಯಂತ ಉನ್ನತ ಪದವನ್ನು ನೀಡುವನು. ಆಗಮ ಶಾಸ್ತ್ರಗಳು ಸ್ಪಷ್ಟವಾಗುವ ಮೊದಲು ವಿಗ್ರಹದ ವರದ ಹಸ್ತಕ್ಕೆ ಇದೇ ವಿವರಣೆಯಾಗಿದ್ದಿರಬೇಕು.

ಬೆರಳುಗಳ ಸ್ಥಾನ,ವಿಶೇಷವಾಗಿ ತೊಡೆಯನ್ನು ಮುಟ್ಟುವ ಎಡಗೈ ಹೆಬ್ಬೆರಳಿನ ರೀತಿಯು, ಶ್ರೀರಾಮನ ಕೋದಂಡವು ಬೆರಳಿನ ಮೂಲಕ ಹೊರಟಿದ್ದನ್ನು ಸೂಚಿಸುವಂತಿದೆ.

ವಿಗ್ರಹದ ಮತ್ತೊಂದು ಪ್ರಧಾನ ಲಕ್ಷಣವೆಂದರೆ ಇಲ್ಲಿನ ಪ್ರಲಂಬಸೂತ್ರ ಹಾಗೂ ಕಟಿಸೂತ್ರ. ಮೊದಲನೆಯದು ಯಜ್ಞೋಪವೀತವಾದರೆ ಎರಡನೆಯದು ಕನ್ನಡದಲ್ಲಿ ಹೇಳುವ ಉಡಿದಾರ. ಇವು ಶ್ರೀವಿಷ್ಣುವಿಗೆ ಇರುವಂತಹವು.

ಹೀಗಾಗಿ ವಿಗ್ರಹವು ಶಿವ ವಿಗ್ರಹವಾಗದೆ ವಿಷ್ಣುವಿಗ್ರಹವೇ ಎಂಬುದನ್ನು ಕೆಳಗಣ ಅಂಶಗಳಿಂದ ದೃಢೀಕರಿಸಬಹುದು.

ಅ. ಎದೆಯ ಮಧ್ಯದಲ್ಲಿರುವ ಕೌಸ್ತುಭವು ವಿಷ್ಣುವಿನ ಲಕ್ಷಣಗಳಲ್ಲಿ ಒಂದು. ಇದು ಕ್ರಿ.ಶ.ದ ಆದಿಭಾಗಕ್ಕೆ ಸೇರಿದ ತಮಿಳು ಕೃತಿ ಶಿಲಪ್ಪದಿಕಾರದಲ್ಲಿಯೂ ವಿವರಿತವಾಗಿದೆ.

ಆ. ಆಗಮ ಶಾಸ್ತ್ರನಿಯಮದಂತೆ ಕೌತುಕ ಬೇರವು ಧ್ರುವಬೇರದ ಪ್ರತಿಮೂರ್ತಿ ಆಗಿರಬೇಕು. ತಿರುಮಲೆಯ ಕೌತುಕಬೇರದ ಸೂಕ್ಷ್ಮ ಪರಿಶೀಲನೆ ಮಾಡಿದರೆ ಅದು ವಿಷ್ಣುಮೂರ್ತಿಯೆಂದೇ ಸಿದ್ಧವಾಗುವುದು.

ಇ. ಧ್ರುವ ಮೂರ್ತಿಯ ತೋಳುಗಳಲ್ಲಿ ನಾಗಾಭರಣವೇನೂ ಇಲ್ಲವೆಂಬುದು ಖರೆ. ತೋಳಿಗೆ ತೊಡಿಸಿರುವ ಆಭರಣ

ನಂತರದ ಕಾಲದಲ್ಲಿ ಭಕ್ತರಿಂದ ಕಾಣಿಕೆಯಾಗಿ ಬಂದದ್ದಿರಬೇಕು. ಆದಿಶೇಷ ಅಥವಾ ನಾಗ ವಿಷ್ಣುವಿನೊಡನೆ ಅವಿನಾಭಾವದಿಂದ ಬೆರೆತಿದ್ದು, ದೇವರ ಮಂತ್ರಪುಷ್ಪದಲ್ಲಿ ಸ್ಥಳ ಪಡೆದಿದ್ದು ನಿತ್ಯವೂ ಆಲಯದಲ್ಲಿ ಈ ಬಗ್ಗೆ ಪಾರಾಯಣವುಂಟು.

ಈ. ದೇವರ ವಿಗ್ರಹದ ತಲೆಯಲ್ಲಿ ಜಟೆಯೆಂಬುದಿಲ್ಲ. ದೇವರ ಕಿರೀಟದಲ್ಲಿ ಶ್ರೀ ಚಕ್ರವಾಗಲೀ ಯಂತ್ರವಾಗಲೀ ಇಲ್ಲ.

ಉ. ಆಚಾರ್ಯ ಪುರುಷರೂ ವಿಗ್ರಹವನ್ನು ಅತ್ಯಂತ ನಿಕಟವಾಗಿ ಪರಿಶೀಲಿಸುವ ಪರಂಪರೆಯಿಲ್ಲ. ಭಕ್ತರು ಸ್ವಾಮಿಯನ್ನು ಅತಿಹತ್ತಿರದಿಂದ ನೋಡಬಹುದಾದ ಕುಲಶೇಖರ ಪಡಿಯಿಂದ (ಗರ್ಭಗುಡಿಯ ಹೊಸ್ತಿಲಿನಿಂದ) ನೋಡುತ್ತ,ವರ್ಷಗಳಿಂದಲೂ ಸ್ವಾಮಿಸೇವೆಯಲ್ಲಿ ತೊಡಗಿರುವ ಅರ್ಚಕರ ಹೇಳಿಕೆಗಳಿಂದಲೂ, ನಿರ್ಧರಿಸುವ ವಿಷಯ ಎಂದರೆ ಸ್ವಾಮಿಯ ವಿಗ್ರಹದ ಮೇಲೆಯೇ ಅಲ್ಲದೆ ಗರ್ಭಗುಡಿಯಲ್ಲಿಯೇ ಎಲ್ಲಿಯೂ ಸರ್ಪದ ಸುಳಿವೇ ಇಲ್ಲ. ಹೇಗೊ,ಏನೋ,ದೇವರ ವಿಗ್ರಹದಲ್ಲಿ ಉರಗದ ಗುರುತಿವೆಂಬ ಅಪಪ್ರಥೆ ಚಾಲ್ತಿಗೆ ಬಂತು. ವಾಸ್ತವವಾಗಿ ಇದು ಸುಳ್ಳೇ ಆದರೂ ಇಂದಿಗೂ ಪ್ರಚಲಿತವಾಗಿದೆ.

ಊ. ಸಿಂಹ ಲಲಾಟ ವೆಂಬುದು ದೇವರ ಹಾಗೂ ದೇವನಾಯಕಿಯರ ಅಂಗಾಂಗಳಿಗೆ ಒಪ್ಪುವ ಸಾಧಾರಣ ಆಭರಣವಷ್ಟೆ. ವಿಗ್ರಹದ ಮೇಲಿರುವುದೆಲ್ಲ ಒಂದು ಒರಟಾದ ಚಿತ್ರಣವಷ್ಟೇ. ಇಂತಹ ಆಭರಣದ ಗುರುತುಗಳು ಹಲವಾರು ವಿಗ್ರಹಗಳಲ್ಲೂ ಕಾಣ ಸಿಗುವುದುಂಟು.

ಋ. ದೇವರ ವಿಗ್ರಹದಲ್ಲಿ ನಾಗಾಭರಣವು ಒಂದು ಅವಿನಾಭಾವಿ ಅಂಗವಲ್ಲ. ಇದು ಯಾವುದನ್ನೂ ಸಂಕೇತಿಸುವುದಿಲ್ಲ. ವಿಷ್ಣುವಿನೊಂದಿಗೆ ಯಾವಾಗ್ಯೂ ಇರುವ ನಿತ್ಯರಲ್ಲಿ ನಾಗನೂ ಒಬ್ಬನಷ್ಟೆ.

ೠ.ಪೂಜೆಯಲ್ಲಿ ಬಳಸಲಾಗುವ ಬಿಲ್ವಪತ್ರೆ ಶಿವಪೂಜೆಗೆಂದೇ ಮೀಸಲಾದದ್ದೇನಲ್ಲ. ವಿಷ್ಣುಪೂಜೆಯಲ್ಲಿ ಬಳಸಲಾಗುವ ಅಷ್ಟ ಪುಷ್ಪಗಳಲ್ಲಿ ಇದೂ ಒಂದು. ಈ ಮಾತನ್ನು ಪದ್ಮಸಂಹಿತೆಯ 12 ಅಧ್ಯಾಯವೂ,ಭೃಗು ಸಂಹಿತೆಯೂ ಸಮರ್ಥಿಸುತ್ತವೆ.

ಎರಡೂ ಆಗಮಗಳೂ ವಿಷ್ಣುಪೂಜೆಯಲ್ಲಿ ಬಿಲ್ವಪತ್ರೆಯನ್ನು ಬಳಸಲು ಶಿಫಾರಸು ಮಾಡುತ್ತವೆ. ಹೀಗಾಗಿ ಇಲ್ಲಿ ಪೂಜೆಯಲ್ಲಿ ಬಿಲ್ವಪತ್ರೆಯ ಬಳಕೆಯಿಂದಾಗಿ ಎಂದೋ ಒಂದಾನೊಂದು ಕಾಲದಲ್ಲಿ ಆಲಯ ಶಿವಾಲಯ ವಾಗಿತ್ತೆನ್ನುವ ಅರ್ಥವೇನೂ ಹೊರಡುವುದಿಲ್ಲ. ಜೊತೆಗೇ ವಿಷ್ಣು ಪೂಜೆಯಲ್ಲಿ ಪವಿತ್ರವಾದ ತುಳಸೀ ದಳದೊಡನೆ ಇದನ್ನು ಬಳಸುವುದಿಲ್ಲವಾಗಿ ಬಿಲ್ವವು ವಿಷ್ಣುಪೂಜೆಯಲ್ಲಿ ಒಪ್ಪಲಾಗುವ ಎಂಟು ಪುಷ್ಪಗಳಲ್ಲಿ ಒಂದಾಗಿ ಮಾತ್ರವೇ ಬಳಕೆಯಲ್ಲಿದೆಯೆಂದು ದೃಢವಾಗುತ್ತದೆ.

ಎ. ವಿಷ್ಣುವಿನ ಸ್ಥಾನಕ,ಆಸೀನ,ಶಯನ ಮೂರ್ತಿಗಳ ಪ್ರತಿಷ್ಠೆಯಲ್ಲಿ ಧ್ರುವಮೂರ್ತಿಗಳು ದೈವಿಕ ಆಸನವನ್ನು ಹೊಂದಿರಬೇಕೆಂದು ಆಗಮ ಶಾಸ್ತ್ರಗಳು ಒತ್ತಿಹೇಳುತ್ತವೆ. ಸ್ವಾಮಿಯ ವಿಗ್ರಹವೂ ಇದೇ ರೀತಿಯ ತಳಗಟ್ಟಿನಲ್ಲಿದೆ. ಹೀಗಾಗಿ ಗರ್ಭಗೃಹದ ಮಧ್ಯಭಾಗದಲ್ಲಿರುವುದರಿಂದ ವಿಗ್ರಹವು ಶೈವ ವಾಗಿರಬೇಕು ಎಂಬುದರಲ್ಲಿ ಹುರುಳಿಲ್ಲ.

ಏ. ಭೃಗುಸಂಹಿತೆಯ ಲಕ್ಷ್ಮಿಕಲ್ಪದಲ್ಲಿ ಹೇಳಿರುವಂತೆ ಯೋಗಲಕ್ಷ್ಮಿಯೂ ಶ್ರೀವತ್ಸವೂ ಸರಿಯಾದ ಸ್ಥಳದಲ್ಲಿವೆ. ಅದರಂತೆ ಲಕ್ಷ್ಮಿಯು ಎದೆಯ ಬಲಭಾಗದಲ್ಲಿ ಶ್ರೀವತ್ಸದ ಮೇಲಿರಬೇಕು. ಶ್ರೀವತ್ಸದ ಗುರುತುಗಳು ಮೂರ್ತಿಯ ಇರತಕ್ಕ ರೂಪವನ್ನು ಅನುಸರಿಸಿದ್ದು ಇದಕ್ಕಾಗಿ ಪ್ರತ್ಯೇಕವಾದ ನಿಯಮಗಳಿಲ್ಲ, ಸ್ಥೂಲವಾಗಿ ಹೇಳುವುದಾದರೆ ಶ್ರೀವತ್ಸವು ಮೂಲಪ್ರಕೃತಿಯನ್ನೂ ಲಕ್ಷ್ಮಿಯು ಅಧಿಷ್ಠಾನ ದೇವತೆಯನ್ನು ಪ್ರತಿನಿಧಿಸಿದ್ದು,ಸ್ವಾಮಿಯ ವಿಗ್ರಹದ ಮೇಲಿರುವ ಲಕ್ಷ್ಮಿಯ ಚಿತ್ರ ಈ ನಿಯಮವನ್ನಾಧರಿಸಿದೆ.

ಐ. ಇದವರೆಗೆ ನಡೆದಿರುವ ಪರಿಶೀಲನೆಯಲ್ಲಿ ತಿರುಮಲೆಯ ಆಲಯದಲ್ಲಿ ಎಲ್ಲೂ ಸ್ಪಟಿಕಲಿಂಗವಿಲ್ಲ. ಈ ಬಗ್ಗೆ ಪ್ರಾಯಶಃ ವಿದ್ಯಾರಣ್ಯರು ಎಲ್ಲಿಯೋ ಹೇಳಿರಬಹುದು. ವಿದ್ಯಾರಣ್ಯರು ಕ್ರಿ.ಶ.14ನೇ ಶತಮಾನದಲ್ಲಿದ್ದ ವೇದಾಂತದೇಶಿಕರ ಸಮಕಾಲೀನರಾಗಿದ್ದು, ಈ ಆಲಯದಲ್ಲಿ ಅದಕ್ಕೂ ಹಿಂದೆ ಆರುನೂರು ವರ್ಷಗಳ ಶಾಸನೋಕ್ತ ಇತಿಹಾಸವಿದ್ದು,ಎಲ್ಲಿಯೂ ಸ್ಪಟಿಕ ಲಿಂಗದ ಮಾತೇ ಇಲ್ಲ

ಒ. ಬೆಟ್ಟದ ಬುಡದಲ್ಲಿರುವ ಕಪಿಲೇಶ್ವರಸ್ವಾಮಿ ಆಲಯದಿಂದಾದ ಕಪಿಲ ಸಂಬಂಧಕ್ಕೂ ಪ್ರಾಮುಖ್ಯವನ್ನು ನೀಡಬೇಕಿಲ್ಲ, ಕಾರಣವೆಂದರೆ; ವೈಷ್ಣವ ಆಗಮಗಳ ಪ್ರಕಾರ ಕಪಿಲ,ಭೃಗು,ಗಣೇಶ,ದುರ್ಗ,ಶಿವ,ಬ್ರಹ್ಮ ಮೊದಲಾದವರೆಲ್ಲ ಉಪಹೆವತೆಗಳು.

ಓ. ಗೋಮುಖದ ಹೊರಬರುವಿಕೆ,ಗರ್ಭಗೃಹದ ಎತ್ತರ ಮೊದಲಾದವೆಲ್ಲವನ್ನೂ ಇದು ಶಿವಾಲಯವೆನ್ನಲು ಗುರುತು ಗಳೆಂದು ಹಲಬಾರಿ ಹೇಳಲಾಗುತ್ತದೆ. ಆಲಯದ ವಾಸ್ತುಶಿಲ್ಪ ಹಲವಾರು ಶತಮಾನಗಳ ಕಾಲ ಬೆಳೆದು ಬಂದಿರುವುದರಿಂದ ಈ ರೀತಿಯ ಅಪಪ್ರಥೆಗಳಿಗೆ ಅವಕಾಶವಾಗಿರಬೇಕು.

ಗರ್ಭಗೃಹದ ಗೋಮುಖದಲ್ಲಿ ಒಂದು ಹೊರಗೊಳವೆ ನಿಜವಾಗಿ ಇದ್ದರೂ ಅದು ಬಹು ಹಿಂದಿನಿಂದಲೂ ಕೆಲಸ ಮಾಡುತ್ತಿಲ್ಲ. ಗರ್ಭಗೃಹದ ಎತ್ತರವು ಮೂರ್ತಿಯ ಎತ್ತರದೊಡನೆ ಅನುಪಾತದಲ್ಲಿದ್ದು ಈ ಆಲಯದಲ್ಲಿ ಈ ನಿಯಮವು ಪಾಲಿತವಾಗಿದೆ. ಇದರಂತೆಯೇ ಧ್ರುವಬೇರದ ಪೀಠದ ಎತ್ತರ ಗರ್ಭಗೃಹದ ಹೊಸಿಲಿನ ಭುವಂಗದ ಎತ್ತರದೊಡನೆ ಅನುಪಾತದಲ್ಲಿದೆ

**ಇವುಗಳಿಂದಾಗಿ ನಿರ್ಧಾರ ಪೂರ್ವಕವಾಗಿ ಹೇಳುವುದೆಂದರೆ ಇಲ್ಲಿನ ವಿಗ್ರಹವು ಯಾವುದೇ ಕಾರಣಕ್ಕೂ ಶೈವವಿಗ್ರಹವೆಂದು ಇಂದಾಗಲೀ ಮುಂದಾಗಲೀ ತಪ್ಪು ತಿಳಿಯಬಾರದು.**

ಸ್ವಾಮಿಯ ವಿಗ್ರಹವು ಶಕ್ತಿಯದೇ ಎಂಬ ಜಿಜ್ಞಾಸೆ.

ಹಲವು ಬಾರಿ ಈ ದೇವಾಲಯವು ಯಾವುದೋ ದೇವತೆಯದೆಂದೂ ಒಳಗಿನ ವಿಗ್ರಹ ದುರ್ಗೆಯದೆಂದೂ ಹೇಳುವುದುಂಟು. ಇದಕ್ಕಾಗಿ ನೀಡಲಾಗುವ ಕಾರಣಗಳು ಹೀಗಿವೆ :-

1. ಉತ್ತರಭಾರತದವರು ಈ ದೇವರನ್ನು ಬಾಲಾಜಿ ಎಂದು ಕರೆಯುವುದುಂಟು. ದುರ್ಗೆಯನ್ನು ಬಾಲಾ ಎಂದು ಕರೆಯುವುದು ಆದ್ದರಿಂದ ವಿಗ್ರಹವು ಶಕ್ತಿಯದು ಎನ್ನಬರುವುದು.

2. ದುರ್ಗೆಯ ಒಂದು ರೂಪವಾದ ಮೇರುಚಕ್ರವೆಂದು ಬೆಟ್ಟವನ್ನು ಕರೆಯುವರು.

3. ಗಾಳಿಗೋಪುರವನ್ನು ಕಾಳಿಗೋಪುರವೆಂದು ಕರೆದು,ಹಾಗಾಗಿ ಇದು ಶಕ್ತಿಯ ಗೋಪುರ ಎನ್ನುವರು.

4. ಮಧ್ಯದ ವಿಮಾನದಲ್ಲಿ ಕುಳಿತಿರುವ ಸಿಂಹದ ವಿಗ್ರಹವಿದೆ. ಸಿಂಹ ದುರ್ಗೆಯ ವಾಹನವಾಗಿ ಶಕ್ತಿ ಮುದ್ರೆ ಕಂಡುಬರುತ್ತದೆ.

5. ದೇವರ ಒಳವಸ್ತ್ರ ಬಹಳ ದೀರ್ಘವಾಗಿದ್ದು ತಮಿಳಿನಲ್ಲಿ ಉಳ್‌ಚಾತ್ ಎಂದು ಕರೆದಿರುವುದು ಸೀರೆಯನ್ನು ಹೋಲುತ್ತದೆ ಯಾಗಿ ವಿಗ್ರಹವು ದುರ್ಗೆಯ ಅಥವಾ ಶಕ್ತಿಯದಾಗಿರಬೇಕು.

6. ಚಂದನ ಚೂರ್ಣವನ್ನು ಆರಾಧನೆಯಲ್ಲಿ ಬಳಸುವುದರಿಂದ ಇದು ಸ್ತ್ರೀ ವಿಗ್ರಹ.

7. ವಿಶೇಷವಾಗಿ ಸ್ತ್ರೀಯರ ಸಿಂಗಾರ ಸಾಧನವಾದ ಹರಿಷಿಣವನ್ನು ದೇವರ ಅಭಿಷೇಕದಲ್ಲಿ ಬಳಸುವರು. ಜೊತೆಗೇ ದೇವರಿಗೆ ನೀಡುವ ನೈವೇದ್ಯವು ಸ್ತ್ರೀ ದೇವತೆಯರ ನೈವೇದ್ಯಕ್ಕೆ ಹತ್ತಿರವಾಗಿದ್ದು ಪ್ರಾಚೀನಕಾಲದಲ್ಲಿ ಈ ಮೂರ್ತಿ ಸ್ತ್ರೀ ಮೂರ್ತಿ ಆಗಿರಬೇಕು.

8. ದೇವೀ ಭಾಗವತದ ಒಂದು ಪದ್ಯವು ಕಲಿಯುಗದ ಏಕಮೇವ ದೇವತೆ ಎಂದು ಶ್ರೀವೆಂಕಟೇಶ್ವರಿಯನ್ನು ವಿವರಿಸುತ್ತದೆ.

9. ಸ್ತ್ರೀಯರು ಮಂಗಳಸ್ನಾನ ಮಾಡುವ ಶುಕ್ರವಾರಗಳಲ್ಲಿಯೇ ಈ ದೇವರಿಗೆ ಅಭಿಷೇಕ ನಡೆಯುವುದು.

10. ತೋಮಾಲೆ ಸೇವೆಯನ್ನು ಭಗವತಿ ಆರಾಧನೆಯೆನ್ನುವರು. ಹೀಗಾಗಿ ನಿಜವಾದ ಪೂಜೆ ನಡೆಯುವುದು ಶಕ್ತಿಗೆ.

11. ದೇವರ ಅಭಿಷೇಕದಲ್ಲಿ ಶ್ರೀಸೂಕ್ತ ಮಂತ್ರಗಳನ್ನು ಹೇಳುವುದರಿಂದ ಪೂಜೆ ನಡೆಯುವುದು ಶಾಕ್ತೇಯವೇ ಆಗಿರಬೇಕು.

ಮೇಲಿನ ಕಾರಣಗಳನ್ನು ಸಾಧಾರಣವಾಗಿ ದೇವರ ವಿಗ್ರಹ ಶಕ್ತಿಯದೆನ್ನಲು ನೀಡುವರು. ಆದರೆ ಸೂಕ್ಷ್ಮಾವಲೋಕದಿಂದ ಈ ಕಾರಣಗಳನ್ನು ಅಲ್ಲಗಳೆಯಲಾಗುವುದು.

ಮೇಲಿನ ಅಂಶಗಳು ತಥ್ಯವಲ್ಲವೆನ್ನಲು ಕಾರಣಗಳು ಹೀಗಿವೆ.

1. ಆಲಯದಲ್ಲಿನ ಶಾಸನಗಳ ಅಧ್ಯಯನದಿಂದ ಉತ್ತರ ಭಾರತದ ಜನ ದೇವರನ್ನು ಬಾಲಾಜೀ ಎಂದು ಕರೆಯುತ್ತಿರುವುದು ತೀರ ಈಚೆಗೆ ಎಂದು ತಿಳಿದುಬರುತ್ತದೆ. ಕ್ರಿ.ಶ.17ನೇ ಶತಮಾನದ ಮೊದಲ ಯಾವುದೇ ಶಾಸನದಲ್ಲಿಯಾಗಲೀ, ಸಾಹಿತ್ಯದಲ್ಲಿ ಯಾಗಲೀ ಬಾಲಾಜಿ ಎಂಬ ಪ್ರಯೋಗವಿಲ್ಲ. ವಾಸ್ತವವೆಂದರೆ ಉತ್ತರ ಭಾರತದವರು ಶಿವಾಜಿಯ ಕಾಲದಿಂದ ತಿರುಪತಿಗೆ ಬರುವ ಪರಂಪರೆ ಬೆಳೆಸಿಕೊಂಡರು (ಕ್ರಿ.ಶ.17 ನೇ ಶತಮಾನದ ಮಧ್ಯಭಾಗ) ಹೀಗಾಗಿ ಉತ್ತರ ಭಾರತದ ಜನ ದೇವರನ್ನು ಯಾವ ಹೆಸರಿನಿಂದ ಕರೆದರೂ ಅದು ಆಲಯದ ಪ್ರಾಚೀನತೆಯನ್ನು ಸೂಚಿಸದು.

ಪರ್ಯಾಯವಾಗಿ, ಮಗುವೆಂದು ಗುರುತಿಸಲಾದ ಶ್ರೀಕೃಷ್ಣನೊಡನೆ ವಿಷ್ಣುವಿನ ಕಥೆ ಅವತಾರ ಕಥೆಯಾಗಿ ಹೊಂದಿಕೊಂಡಿದೆ. ಭಾಗವತದಲ್ಲಿ -ತಮದ್ಭುತಂ ಬಾಲಕಮಂಬುಜೇಕ್ಷಣಂ- ಎಂದು ಕೃಷ್ಣ ಹುಟ್ಟಿದಾಗ ಆತ ತನ್ನ ತಂದೆ ವಸುದೇವನಿಗೆ ನೀಡಿದ ದರ್ಶನ ವನ್ನು ವಿವರಿಸಲಾಗಿದೆ. ಹೀಗಾಗಿ ದುರ್ಗೆಯ ಹೆಸರಾದ ಬಾಲಾ ಎಂಬ ಪದದೊಡನೆ ಅಲ್ಲದೆ ಭಾಗವತದಲ್ಲಿ ಹೇಳಲಾದ ಶ್ರೀಕೃಷ್ಣಾವ ತಾರ ವಿವರಣೆಯಾಗಿರುವ ಬಾಲಕ ಪದದೊಡನೆ ಬಾಲಾಜಿ ಎಂಬ ಹೆಸರು ಸಂಬಂಧ ಹೊಂದಿರುವುದು ಸಂಭವನೀಯ.

ಏನೇ ಆದರೂ ಈ ವಿವಾದವನ್ನು ಗಟ್ಟಿಯಾಗಿ ಹಿಡಿಯಲು ಯಾಕೆ ಸಾಧ್ಯವಿಲ್ಲವೆಂದರೆ ಉತ್ತರ ಭಾರತೀಯರು ಆಲಯಕ್ಕೆ ಬರಲು ಆರಂಭಿಸಿದ್ದೇ ತೀರ ಈಚೆಗೆ. ವಿಜಯನಗರದ ಅರಸರ ಕಾಲದವರೆಗೆ ಆಲಯವು ಉತ್ತರದತ್ತಣಿಂದ ಈಗ ಕಂಡುಬರುವಂತೆ ಭಕ್ತರನ್ನು ಸೆಳೆಯುತ್ತ ಇದ್ದಿತೆಂಬುದಕ್ಕೆ ಆಧಾರಗಳಿಲ್ಲ.

2. ಈ ಪರ್ವತ ಪಂಕ್ತಿಯನ್ನು ಸರ್ವದಾ ವೆಂಗಡವೆಂದು ಕರೆದದ್ದುಂಟು. ಶೇಷಾಚಲ ಎಂಬ ಹೆಸರೂ ಈಚಿನದೇ. ಇದರಿಂದಾಗಿ ದೇವಿಯ ರೂಪವಾದ ಮೇರು ಚಕ್ರವೆಂಬ ಆಕಾರಕ್ಕೆ ಪ್ರತ್ಯೇಕ ವೈಶಿಷ್ಟ್ಯವಿಲ್ಲದೆ ಪರ್ವತವು ವೆಂಗಡವೂ,ಪರ್ವತದೊಡೆಯ ವೆಂಕಟಾಚಲ ಪತಿಯೂ ಆದರು.

3. ಕ್ರಿ.ಶ.1628 ರ ಸುಮಾರಿನಲ್ಲಿ ಶ್ರೀವೈಷ್ಣವನಾದ,ಮಟ್ಲಕುಮಾರ ಅನಂತರಾಜನಿಂದ ನಿರ್ಮಾಣ ಆದದ್ದು ಗಾಳಿಗೋಪುರ ಎನ್ನಲು ಶಾಸನದ ಸಾಕ್ಷಿಯಿದೆ. ಈ ಮಟ್ಲಕುಮಾರನು ಶ್ರೀವೈಷ್ಣವನೆಂಬುದು ಪ್ರಸಿದ್ಧವಾಗಿ ಒಂದು ಶ್ರೀವೈಷ್ಣವ ಆಲಯಕ್ಕೆ 17 ನೇ ಶತಮಾನದಲ್ಲಿ ಕಾಳಿಗೋಪುರ ನಿರ್ಮಿಸಿದ ಎಂಬುದು ಅಸಂಬದ್ಧವಾಗುತ್ತದೆ. ಹಾಗಾಗಿ ಈ ವಾದದಲ್ಲಿ ಗಟ್ಟಿತನವಿಲ್ಲ.

4. ಆಲಯ ವಿಮಾನದಲ್ಲಿ ಒಂದು ಕಿರಿಯ ಸಿಂಹವಿದ್ದು ಶಕ್ತಿಯ ಸಂಕೇತವಾಗಿದೆ. ಸಿಂಹ ಸಂಕೇತ ಶಕ್ತಿಯ ಸಂಕೇತ ಎಂಬರ್ಥ ದಲ್ಲಿ ಮಾತ್ರವೇ ಬಳಕೆಯಾಗಿಲ್ಲ. ವೈಷ್ಣವ ಪರಂಪರೆಯನ್ನು ಎತ್ತಿ ಹಿಡಿಯುವ ವೈಖಾನಸ ಹಾಗೂ ಪಾಂಚರಾತ್ರ ಆಗಮಗಳು ವಿಮಾನದ ಮೂಲೆಗಳಲ್ಲಿ ಸಿಂಹಗಳನ್ನಾಗಲೀ ಗರುಡನನ್ನಾಗಲೀ ಸ್ಥಾಪಿಸಬಹುದೆಂದು ಸ್ಪಷ್ಟವಾಗಿ ಹೇಳಿವೆ. ಭೃಗು ಸಂಹಿತೆ ಈ ವಿಷಯವನ್ನು ಖಚಿತಗೊಳಿಸಿದೆ.

ಆಗಮ ಶಾಸ್ತ್ರಗಳು ವಿಮಾನಗೋಪುರದ ಮೂಲೆಗಳಲ್ಲಿಯೇ ಅಲ್ಲದೆ,ಮಂಟಪಗಳ ಮೇಲೂ ಒಂದೊ ಸಿಂಹ ಅಥವಾ ಗರುಡನನ್ನು ಸ್ಥಾಪಿಸಬೇಕೆಂದು ಹೇಳುತ್ತವೆ. ಪದೇ ಪದೇ ಶತ್ರುಗಳಿಂದ ಧಾಳಿಗಳಾಗುವ ನಿರೀಕ್ಷೆಯಿರುವ ಮಂದಿರಗಳ ಶಿಖರಗಳಲ್ಲಿ ಸಿಂಹಗಳನ್ನು ಸ್ಥಾಪಿಸುವುದು ಸಾಮಾನ್ಯ. ಆಲಯವು ಜನರಿಂದ ದೂರಪ್ರಾಂತ್ಯದಲ್ಲಿ,ಮೂಲೆಯಲ್ಲಿರುವಾಗ ಆಧ್ಯಾತ್ಮಿಕ,ಸಾಂಸ್ಕೃತಿಕ ಕಾರಣಗಳಿಂದಾಗಿ ಗರುಡನನ್ನು ಬಳಸುವರು.

ಕ್ರಿ.ಶ.13 ನೇ ಶತಮಾನದಲ್ಲಿ ವೀರನರಸಿಂಗಯಾದವರಾಯನು ನಿರ್ಮಿಸಿದಂತೆಯೇ ನಾವು ಇಂದು ಕಾಣುವ ಆಲಯ ವಿಮಾನವಿದೆಯೆಂಬುದು ಶಾಸನಗಳಿಂದ ತಿಳಿದು ಬರುತ್ತದೆ. ಆ ರಾಯನ ಶಿಲ್ಪಿಗಳಿಗೆ ಸಿಂಹವನ್ನು ಅಥವಾ ಗರುಡನನ್ನು ಆಯ್ದು ಕೊಳ್ಳುವ ಸ್ವಾತಂತ್ರ್ಯವಿದ್ದಿತು. ತಮ್ಮ ಆಶ್ರಯದಾತ ವೀರನರಸಿಂಗರಾಯನು ತನ್ನ ಹೆಸರಿನಲ್ಲಿಯೇ ಸಿಂಹವನ್ನು ಹೊದಿದ್ದರಿಂದಾಗಿ ಅವರು ಸಹಜವಾಗಿ ಸಿಂಹವನ್ನು ಆಯ್ದುಕೊಂಡರು.

ಆಲಯದ ಯಾವ ಭಾಗದಲ್ಲಿಯಾದರೂ ಗಣೇಶ ಅಥವಾ ದುರ್ಗೆಯ ಮೂರ್ತಿಗಳಿದ್ದರೂ ವೈಷ್ಣವ ಆಲಯದ ನಿರ್ಮಾಣದ ಬಗ್ಗೆಯಿರುವ ಆಗಮಶಾಸ್ತ್ರ ನಿಯಮವನ್ನು ಮೀರಿದಂತೆ ಆಗುವುದಿಲ್ಲ. ಕಾರಣ ಇವರೆಲ್ಲರೂ ಪರಿವಾರ ದೇವತೆಗಳ ಸಾಲಿನಲ್ಲಿ ಬರುತ್ತಾರೆ. ಹೀಗಾಗಿ ಎಲ್ಲೋ ಒಂದು ಕಡೆ ಒಬ್ಬದೇವತೆಯ ಇರುವಿಕೆಗಳು ಆಲಯ ವಿಗ್ರಹದ ಬಗ್ಗೆ ಪರಿಣಾಮಕಾರಿಯಾಗದು.

5. -ಉಳ್‌ಚಾತ್- ನಿಸ್ಸಂದೇಹವಾಗಿ ಬಹುದೀರ್ಘವಾದದ್ದೇ. ಇಲ್ಲಿಯೂ ಶಾಸನಗಳನ್ನು ಗಮನವಿಟ್ಟು ಓದಿದಲ್ಲಿ ಈ ಒಳವಸನ -ಉಳ್‌ಚಾತ್-ಅರ್ವಾಚೀನವೆಂಹುದು ಸ್ಪಷ್ಟ ಆಗುತ್ತದೆ. ದೇವರನ್ನು ಅಲಂಕರಿಸುವ ಅಸಂಖ್ಯ ಆಯುಧ ಆಭರಣಗಳಿಂದಾಗಿ ಈ ಬಟ್ಟೆ ಬಹಳ ಉದ್ದವಾಯಿತು. ವಿಗ್ರಹ ಅತ್ಯಂತ ಪವಿತ್ರವಾಗಿ ಅತ್ಯಂತ ಗೌರವಪ್ರದ ಆಗಿ ಇರುವುದರಿಂದ ಯಾವುದೇ ಆಭರಣದ ಅಲಂಕಾರದಿಂದಲೂ ವಿಗ್ರಹದಲ್ಲಿ ಗೆರೆ ಬೀಳಬಾರದು. ಇದಕ್ಕಾಗಿ ಆಭರಣಗಳ ಅಡಿಯಲ್ಲಿ ದಪ್ಪವಾದ ಒತ್ತುಗಡೆಯಿರುವುದು. ಉದ್ದವಾದ ವಸ್ತ್ರವು ಈ ಒಂದೇ ಕಾರಣದಿಂದಲೇ ಬಂದಿದೆಯೆಂದು ಯಾರಾದರೂ ಒಪ್ಪುತ್ತಾರೆ. ಇದರಿಂದಾಗಿ ಈ ವಸ್ತ್ರದ ಉದ್ದೇಶವೂ ವಿಗ್ರಹ ದೇವರೊ ದೇವನಾಯಕಿಯೋ ಆಗಿರುವುದಕ್ಕೂ ಸಂಬಂಧವಿಲ್ಲ. ಹಾಗಲ್ಲದೇ ಇದೇ ವಾದವನ್ನು ಹಿಡಿದು ಮುಂದುವರೆದರೆ ಪವಿತ್ರವಾದ ಸಂದರ್ಭಗಳಲ್ಲಿ ಪುರುಷರು ಉಡುವ ಹತ್ತು ಮೊಳ ಪಂಚೆಯಿಂದಾಗಿ ಅವರೆಲ್ಲ ಮಹಿಳೆಯರೆಂದು ವಾದಿಸಬಹುದೀತು.

6. ಆಲಯದ ಪೂಜಾ ಪರಿಕರಗಳಲ್ಲಿ ಚಂದನವು ವಿಜಯನಗರದ ಕಾಲದಿಂದ ಎಂದರೆ ಕ್ರಿ.ಶ.15 ನೇ ಶತಮಾನದ ನಂತರ ಮಾತ್ರವೇ ಸ್ಥಳಪಡೆಯಿತೆಂಬುದನ್ನು ಶಾಸನಗಳ ಶುದ್ಧಮನಸ್ಕ ಅಧ್ಯಯನದಿಂದ ತಿಳಿಯಬಹುದು.ಅದಕ್ಕೂ ಮುಂಚೆ ಚಂದನದ ಉಲ್ಲೇಖವಿಲ್ಲ. ವಕ್ಷಃಸ್ಥಲದ ಲಕ್ಷ್ಮಿಗೆ ರಾತ್ರಿಯ ಹೊತ್ತಿನಲ್ಲಿ ಚಂದನವನ್ನು ಹಚ್ಚುವರು ಹಾಗೂ ದೇವರ ಪಾದಗಳಲ್ಲಿ ಚಂದನ ಪಾತ್ರೆಗಳೆರಡನ್ನೂ ಇಡುವರು. ವಿಷ್ಣುವನ್ನು ಅಲಂಕಾರ ಪ್ರಿಯ ದೇವರೆಂದೂ,ಶಿವನನ್ನು ಅಭಿಷೇಕ ಪ್ರಿಯ ದೇವರೆಂದೂ,ಸ್ವಾಮಿಗೆ (ಹರಿಗೆ) ಚಂದನಗಂಧವು ಅಪೇಕ್ಷಿತವೆಂದೂ ಹಿಂದೂಗಳಲ್ಲಿನ ಪರಂಪರಾಗತ ನಂಬಿಕೆಯಾಗಿದೆ. ಚಂದನವನ್ನು ಸ್ತ್ರೀಪುರುಷರಿಬ್ಬರಿಗೂ ಕೊಡಬಹುದಾದದ್ದು. ಅದರಲ್ಲಿ ಸ್ತ್ರೀಯರಿಗೆ ಮಾತ್ರವೆಂಬುದೇನಿಲ್ಲ.

7. ನಿಜವೆಂದರೆ ಸ್ವಾಮಿಗೆ ಶುಕ್ರವಾರದಂದು ಹರಿಷಿಣದ ಸ್ನಾನಮಾಡಿಸುವುದಿಲ್ಲ. ಹರಿಷಿಣದ ಹುಡಿಯನ್ನು ನೀರಿನಲ್ಲಿ ಬೆರಸಲಾಗುತ್ತದೆ. ಎಲ್ಲ ವಿಷ್ಣುಮೂರ್ತಿಗಳ ಸ್ನಪನ ತಿರುಮಂಜನದಲ್ಲಿಯೂ ಹರಿಷಿಣ ಒಂದು ಅವಿಭಾಜ್ಯ ಅಂಗ. ಹೀಗಾಗಿ ಈ ಆಲಯದಲ್ಲಿ ಮಾತ್ರವೇ ಕಂಡುಬರುವ ವಿಶೇಷವಲ್ಲ. ತಿರುಮಂಜನ ವಾದನಂತರ ವಡೆಯ ಅಥವಾ ಪಾಯಸದ ನೈವೇದ್ಯವಿಲ್ಲ. ಎರಡನೆಯ ಗಂಟೆಯಲ್ಲಿ ಹೋಳಿಗೆಯನ್ನು ಅರ್ಪಿಸುವರು. ಆದರೆ ಈ ಸಂಪ್ರದಾಯವೂ ತೀರ ಈಚಿನದೇ ಆಗಿ ಪ್ರಾಚೀನತೆಯನ್ನೇನೂ ಹೊಂದ್ದಿಲ

8. ಆಗಮಶಾಸ್ತ್ರಗಳು ಹೇಳುವಂತೆ ಧ್ರುವಬೇರದೊಡನೆಯೇ ಒಂದು ಕಿರಿಯ ಭೋಗಮೂರ್ತಿಯ ಅಗತ್ಯ ವುಂಟು. ಕಾರಣ ಧ್ರುವ ಬೇರಕ್ಕೆ ಪರ್ಯಂಕಾಸನ,ನಿತ್ಯ ಅಭಿಷೇಕ ಮೊದಲಾದುವು ಸಾಧುವಲ್ಲ,ಸಾಧ್ಯವೂಅಲ್ಲ.

ಶಾಸನಗಳು ತಿಳಿಸುವಂತೆ ಶುಕ್ರವಾರಾಭಿಷೇಕವು ಪ್ರಾಚೀನ ಪರಂಪರೆಯೆನ್ನಬಹುದಾದರೂ,ಭೋಗ ಮೂರ್ತಿಯು ಆಲಯದಲ್ಲಿರುವುದೇ ಧ್ರುವಬೇರಕ್ಕೆ ಬದಲಾಗಿ, ಅದಕ್ಕೆ ಅಭಿಷೇಕ ಮಾಡಬಹುದು ಎಂಬುದಕ್ಕಾಗಿ. ಈ ಆಲಯದಲ್ಲಿ ಮೊದಲಿಗೆ ಭೋಗ ಮೂರ್ತಿಯ ಪ್ರತಿಷ್ಠಾಪನೆ (ಮಣವಾಳಪ್ಪೆರುಮಾಳ್) ಆದಾಗ ಮೂಲಮೂರ್ತಿಗೂ (ಅದೊಂದು ಐತಿಹಾಸಿಕ ಉತ್ಸವವಾದದ್ದರಿಂದ) ಅಭಿಷೇಕ ನಡೆದಿರಬಹುದು. ಹೀಗೆ ನಡೆದದ್ದು ಪ್ರಾಯಶಃ ಶುಕ್ರವಾರವಾದದ್ದರಿಂದ ಎಲ್ಲ ನಂತರದ ಶುಕ್ರವಾರಗಳಲ್ಲಿಯೂ ಮೂಲಮೂರ್ತಿಗೆ ವಿಧಿವತ್ತಾದ ಅಭಿಷೇಕದ ಆಚರಣೆ ಆರಂಭವಾಗಿರಬೇಕು. ಹೀಗಾಗಿ ಶುಕ್ರವಾರದ ಅಭಿಷೇಕವೆಂಬುದು ವಿಷ್ಣುಮೂರ್ತಿಯ ಅರ್ಚನೆಯ ವಿಧಾನದಲ್ಲಿಯೇ ಹೊಂದಿಕೊಂಡಿದ್ದು, ಕ್ರಿ.ಶ.9 ನೇ ಶತಕದಲ್ಲಿ ಭೋಗ ಶ್ರೀನಿವಾಸಮೂರ್ತಿಯ ಪ್ರತಿಷ್ಠಾಪನೆಯ ನಂತರ ಆಲಯದ ನಿತ್ಯ ಅರ್ಚನಾ ವಿಧಾನದಲ್ಲಿ ಸ್ಥಳ ಪಡೆದಿರುವುದು ಸ್ಪಷ್ಟವಾಗಿಯೇ ಇದೆ.

9. ತೋಮಾಲೆ ಸೇವೆಯೆಂಬುದು ಅಲಂಕರಿಸಿದ ಪುಷ್ಪಗಳ ಹಾರವೆಂಬ ಅರ್ಥದ ತಮಿಳಿನ ತೊಡುತ್ತ ಮಾಲೈಯೆಂಬುದರ ಅಪಭ್ರಂಶವಾಗಿದೆ. ಈ ರೀತಿಯ ಅಲಂಕಾರ ವಿಷ್ಣುಮೂರ್ತಿಯಿರುವ ಆಲಯಗಳಲ್ಲಿನ ಧ್ರುವ ಮೂರ್ತಿಗೆ ಸರ್ವಸಾಮಾನ್ಯ. ತೋಮಾಲೆ ಸೇವೆಯೆಂಬ ಪದವು ಪೂಜೆಯ ಕೊನೆಯಲ್ಲಿ ಬರುವ ಪುಷ್ಪಾಲಂಕಾರದತ್ತ ಭಕ್ತರನ್ನು ಆಕರ್ಷಿಸುವ ಪದವಾಗಿದೆ. ಆಲಯದಲ್ಲಿನ ಪೂಜೆಯಲ್ಲಿ ಕಾಲಯಾಪನೆಯಾಗದಂತೆ ಹಲವು ರೀತಿಯಲ್ಲಿ ಹೂವನ್ನು ಕಟ್ಟಿ ಅದನ್ನು ತೊಡಿಸುವಾಗ ಒಂದೇ ಹಾರವಾಗುವಂತೆ ಸೇರಿಸಲಾಗುತ್ತದೆ. ಭಗವದಾರಾಧನೆ ಎಂಬುದರ ಇನ್ನೊಂದು ರೂಪವೇ - ಅದರ ಬಗ್ಗೆ ಎಲ್ಲಿಯೂ ಉಲ್ಲೇಖವಿಲ್ಲದಿದ್ದರೂ ಇದು ಭಗವದ್ ಆರಾಧನೆಯೇ ಅಪಭ್ರಂಶವಾಗಿ ಕೆಲವರು ಹೇಳುವ ಭಗವತೀ ಆರಾಧನೆಯಾಗಿದೆಯಷ್ಟೆ.

10. ಈ ವಿಗ್ರಹವು ಸ್ವಯಂಭು ಎಂದು ಈಗಾಗಲೇ ಹೇಳಿಯಾಗಿದೆ. ಇಲ್ಲಿನ ದೇವರು ಎಲ್ಲ ದೇವತೆಗಳ ಎಲ್ಲ ಗುಣಗಳನ್ನೂ ತನ್ನಲ್ಲಿ ಹೊಂದಿದ್ದಾನೆ. ಹೀಗಾಗಿಯೇ ಶ್ರೀಸೂಕ್ತವೊಂದೇ ಅಲ್ಲದೆ ಪುರುಷಸೂಕ್ತವೂ, ಮತ್ತಿತರ ಮೂರು ಸೂಕ್ತಗಳೂ ಪಾರಾಯಣ ಹೊಂದುತ್ತವೆ.

ಅಭಿಷೇಕ ಕಾಲದಲ್ಲಿ ಪಠಿಸಲ್ಪಡುವ ಐದು ಸೂಕ್ತಗಳಲ್ಲಿ ಪುರುಷಸೂಕ್ತವಾದ ಮೇಲೆ ಬರುವ ಶ್ರೀಸೂಕ್ತದ ಪಠನೆಯಿಂದ ಮಾತ್ರವೇ ಈ ವಿಗ್ರಹ ಹಿಂದೆಂದೋ ಶಕ್ತಿಯದಾಗಿತ್ತು ಎನ್ನಬರುವುದಿಲ್ಲ.

ಇದರಿಂದಾಗಿ ಹಿಂದಿನ ಯಾವುದೇ ಕಾಲದಲ್ಲೂ ವಿಗ್ರಹವು ಶಕ್ತಿ ವಿಗ್ರಹವೆಂದು ಪರಿಕಲ್ಪಿತವಾಗಿಲ್ಲ ಎಂಬುದು ಖಚಿತವಾಗುವುದು.

ಇದಕ್ಕೆ ಪ್ರತಿಯಾಗಿ ಶಕ್ತಿ ವಿಗ್ರಹಲಕ್ಷಣಗಳಾದ ಉನ್ನತಸ್ತನವೇ ಮುಂತಾದ ಶಕ್ತಿ ವಿಗ್ರಹ ಲಕ್ಷಣಗಳಾವುವೂ ಈ ವಿಗ್ರಹದಲ್ಲಿ ಕಂಡುಬರುವುದಿಲ್ಲ. ಹೀಗಾಗಿಯೂ ಹಿಂದೆ ಯಾವುದೇ ಕಾಲದಲ್ಲಿಯೂ ಈ ವಿಗ್ರಹವು ಶಕ್ತಿ ವಿಗ್ರಹವೆಂದು ಪೂಜೆಗೊಂಡಿರಲಿಲ್ಲ ಎನ್ನಲುಂಟು.

**ಸುಬ್ರಹ್ಮಣ್ಯ ವಿಗ್ರಹ ಜಿಜ್ಞಾಸೆ :**

ಈ ಆಲಯವು ಸುಬ್ರಹ್ಮಣ್ಯಸ್ವಾಮಿಯದಿರಬೇಕು ಎಂದು ಸೂಚಿಸಲಾಗುತ್ತದೆ. ಕಾರಣ ವೆಂದರೆ -ಸ್ವಾಮಿ ಪುಷ್ಕರಿಣಿ- ಯಲ್ಲಿನ ಸ್ವಾಮಿ ಪದವು ಕುಮಾರ ಸ್ವಾಮಿಗೆ ಪ್ರತೀಕವಾದದ್ದು.

ಇದು ವಾದವೇ ಅಲ್ಲವೆನ್ನಲು ಕಾರಣ -ಸ್ವಾಮಿ- ಪದವು ಕುಮಾರಸ್ವಾಮಿಗೆ ಮಾತ್ರವೇ ಅನ್ವಯವಾಗುವು ದಿಲ್ಲ ಎಂಬ ಒಂದೇ ಪ್ರತಿವಾದ ಸಾಕು. ಸ್ವಾಮಿ ಪುಷ್ಕರಿಣಿ ಎಂಬುದನ್ನು ಎಲ್ಲ ಪವಿತ್ರ ತೀರ್ಥಗಳಲ್ಲಿ ಅತಿಶ್ರೇಷ್ಠ ಎಂಬರ್ಥದಲ್ಲಿ ಬಳಸಲಾಗಿದೆ. ಜೊತೆಗೇ ಕುಮಾರಸ್ವಾಮಿಯ ಸಂಬಂಧ ಪಡೆದ ತೀರ್ಥಗಳನ್ನು ಪುಷ್ಕರಿಣಿ ಎಂದು ಕರೆಯದೆ ಕುಮಾರಧಾರಾ ಎಂದು ಕರೆಯುವರು. ಸಾಕ್ಷಾತ್ ವಿಷ್ಣುವೇ ಸ್ವಾಮಿಪುಷ್ಕರಿಣಿಯನ್ನು ವೈಕುಂಠದಿಂದ ತಂದನೆಂಬುದಾಗಿ ವರಾಹ ಪುರಾಣ ಅಧಿಕಾರದಿಂದ ಘೋಷಿಸುತ್ತಿದೆ ಎಲ್ಲ ಪುರಾಣಗಳೂ ಹೇಳುವಂತೆ ತಿರುಮಲೆಗೆ ಸ್ಕಂದಸ್ವಾಮಿಯು ವೆಂಕಟೇಶನನ್ನು ಅರ್ಚಿಸಲು ಬಂದ ಎಂಬುದು ನಿಜವಾದದ್ದಲ್ಲಿ ಸೇವೆಗಾಗಿ ಬಂದ ಭಕ್ತನೇ ಕ್ಷೇತ್ರದೇವತೆಯಾದ ಎಂಬುದು ಊಹಿಸಲಾಗದ ಅಂಶವಾಗುತ್ತದೆ. ಜೊತೆಗೇ ಇಲ್ಲಿನ ದೇವರಿಗೆಒಂದು ಮುಖ ಹಾಗೂ ನಾಲ್ಕು ಕೈಗಳಿವೆ. ಸಾಮಾನ್ಯವಾಗಿ ಕುಮಾರಸ್ವಾಮಿಗೆ ಆರುಮುಖ ಹನ್ನೆರಡು ಕೈಗಳು.

**ಮೇಲಿನ ಎಲ್ಲ ಅಧ್ಯಯನಗಳ ಫಲಿತಾಂಶದಿಂದ ಮನದಟ್ಟಾಗುವ ಸತ್ಯವೆಂದರೆ ಇಲ್ಲಿನ ವಿಗ್ರಹ ಮೊದಲಿನಿಂದಲೂ ವೈಷ್ಣ ವಿಗ್ರಹವೇ ಆಗಿದೆ.**

ಕ್ರಿ.ಶ.8 ನೆಯ ಶತಮಾನ ಮೊದಲಿಗೆ ಆಳ್ವಾರರುಗಳ ಅನುಭಾವ ಸಾಹಿತ್ಯ ನಮಗುಂಟು. ಇವರೆಲ್ಲರೂ ಬೆಟ್ಟದ ದೇವರನ್ನು ವಿಷ್ಣುವೆಂದೇ ತಿಳಿದು ಹಾಡಿದ್ದಾರೆಯಾಗಿ ಇಡೀ ಕಾಲಮಾನದಲ್ಲೆಲ್ಲ ಈ ವಿಗ್ರಹವನ್ನು ವಿಷ್ಣುವಿಗ್ರಹವಾಗಿಯೇ ಗುರುತಿಸಲಾಗಿದೆ ಯೆಂದು ಹೇಳಬಹುದು.

## ಭಾಗ - 3

## ಗರ್ಭಗೃಹದ ವಿಗ್ರಹಗಳು:

ಇಲ್ಲಿಯೇ ಸ್ಪಷ್ಟವಾಗಿ ಖಚಿತವಾಗುವ ವಿಷಯವೆಂದರೆ ತಿರುಮಲೆಯ ದೇವರಲ್ಲಿ ಕಾಣುವ ಬಹಿರಂಗ ಲಕ್ಷಣಗಳೆಲ್ಲವೂ ವಿಷ್ಣುವಿನದೇ ಆಗಿದೆಯೆಂಬುದು. ಆದರೆ ಆತನನ್ನು ಸರ್ವಭೂತಾಂತರಾತ್ಮ ಎಂಬುದರಿಂದ ಶೈವರು ಶಿವನೆಂದೂ ಸುಬ್ರಹ್ಮಣ್ಯಸ್ವಾಮಿಯನ್ನು ಆರಾಧಿಸುವವರು ಸ್ಕಂದನೆಂದೂ ಪೂಜಿಸಲೂ, ದೇವಿ/ಶಕ್ತಿ ಪೂಜಕರು ದುರ್ಗೆಯೆಂದೂ ಪೂಜಿಸಲು ಮನ ಮಾಡಬಹುದು. (ಯಂ ಶೈವಾ: ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ.., 'ಎಂತ ಮಾತ್ರಮುನ ಎವ್ವರು, ತಲಚಿನ ಅಂತ ಮಾತ್ರಮೇ ನೀವು' ಅನ್ನಮಾಚಾರ್ಯರ ಕೀರ್ತನೆಯನ್ನು ನೆನಯಬೇಕು - ಅನುವಾದಕ) ತಿರುಮಲೆಯ ದೇವರು ಪಂಥೀಯ ದೇವರಲ್ಲ - ಬಹಿರ್ಗತ ರೂಪ ಮಾತ್ರ ವಿಷ್ಣುವಿನದೇ, ಆತ ಶಿವ, ಸ್ಕಂದ, ಸರಸ್ವತಿ, ಕಾಳಿ, ಭಗವತಿ, ಬ್ರಹ್ಮ ಅಥವಾ ಭಕ್ತರು ಅಪೇಕ್ಷಿಸುವ ಮತ್ತಾವ ರೂಪವೂ ಆಗಬಹುದು. ಈ ದೇವರಿಗೆ ಮಾಡಿದ ಎಲ್ಲ ಸೇವೆ ಉಪಚಾರಗಳೂ, ನಿತ್ಯಸತ್ಯ ಚಿದಾನಂದ ಮೂರ್ತಿಗೆ ಮಾಡಿದಹಾಗೆಯೇ ಆಗುತ್ತದೆ ಎಂಬುದೇ ತಿರುಮಲೆಯ ದೇವರ ರಹಸ್ಯವೂ ಹೌದು.

## ಭೋಗ ಶ್ರೀನಿವಾಸ;

ಈ ವಿಗ್ರಹ ಬೆಳ್ಳಿಯದಾಗಿದ್ದು ಕ್ರಿ.ಶ.966 ರಲ್ಲಿ ಪಲ್ಲವ ರಾಣಿ ಸಾಮವೈ ನೀಡಿದುದಾಗಿದೆ. ದೇವಾಲಯದ ಉತ್ತರ ಪ್ರಾಕಾರದ ಗೋಡೆಯ ಮೇಲಿನ ತಿರುಮಲೆಯ ಆಲಯದ ಅತಿ ಪ್ರಾಚೀನ ಶಾಸನದಲ್ಲಿ ಈ ವಿಷಯ ಉಕ್ತವಾಗಿದೆ. ಈ ಶಾಸನವು ಕಾಡವನ್ ಪೆರುಂದೇವಿ ಎಂದೂ ಹೆಸರಾಗಿದ್ದ ಸಾಮವೈ ಎಂಬ ಶಕ್ತಿ ವಿಟಂಕನ ಪತ್ನಿಯಾದ ಈಕೆ ದೊರೆ ಕೊಪ್ಪಾಟ್ರ ಮಹೇಂದ್ರ ಪೆನ್ಮಾರನ ಆಳ್ವಿಕೆಯ ಹದಿನಾಲ್ಕನೆಯ ವರ್ಷದಲ್ಲಿ ತಿರುಮಲೆಯಲ್ಲಿ ಪ್ರತಿದಿನದ ನೈವೇದ್ಯಕ್ಕಾಗಿ ನಾಲ್ಕು ನಾಳಿ ತಿರುವಮುದುಕ್ಕೆಂದೂನಂದಾ ದೀಪಕ್ಕಾಗಿಯೂ, ಎರಡು ಆಯನ ಸಂಕ್ರಾಂತಿಗಳಲ್ಲಿ ತಿರುಮಂಜನಕ್ಕಾಗಿಯೂ,ಮತ್ತು ಪುರಟ್ಟಾಸಿಯ ಒಂಭತ್ತು ದಿನದ ಉತ್ಸವದ ಮೊದಲ ಎರಡು ದಿನಗಳ ಉತ್ಸವಕ್ಕಾಗಿಯೂ,ಈ ವಿಗ್ರಹವನ್ನು ಪವಿತ್ರವಾದ ವೆಂಕಟನಗರದ ತಿರುವಿಳಂಕೋಯಿಲ್ (ತಿರುಮಲೆಯ ಆಲಯದಲ್ಲಿ ಗರ್ಭಗೃಹವನ್ನು ಅಂದು ಹೆಸರಿಸಿದ ರೀತಿ) ನಲ್ಲಿ ಪ್ರತಿಷ್ಠಾಪಿಸಿದುದಾಗಿ ತಿಳಿಸುತ್ತದೆ. ಆಕೆ 47 ಕಳಂಜುಗಳ ಸ್ವರ್ಣಾಭರಣಗಳನ್ನೂ ಜೊತೆಗೇ ನೀಡಿದ್ದಾಳೆ. ಮಣವಾಳಪ್ಪೆರುಮಾಳ್ ಎಂದು ಹೆಸರಾದ ಕೌತುಕ ಬೇರಕ್ಕೆಂದು ಭೂಮಿಯನ್ನೂ ನೀಡಲಾಯಿತು. ಆಲಯದ ಅಧಿಕಾರಿಗಳಿಗೆ (ಮಡಪತ್ಯಂ) ಈ ಸೇವೆಗಳನ್ನು ನಡೆಸಿಕೊಂಡು ಬರಲೂ,ಸಭೈಯಾರರು ದತ್ತಿ ನೀಡಿದ ಭೂಮಿಯು ಕರಮುಕ್ತವಾಗಿರುವಂತೆ ರಕ್ಷಿಸಬೇಕೆಂದೂ ಆಜ್ಞೆ ಮಾಡಲಾಯಿತು.

ಶ್ರೀನಿವಾಸನಿಗೆ ಶಂಖ ಚಕ್ರಗಳು ಶಾಶ್ವತವಾಗಿ ಸೇರಿ ಹೋಗಿರುವುದರ ಹೊರತು,ಕೌತುಕಬೇರ ಮೂಲ ಬೇರದ ಥಾವತ್ ಪ್ರತಿರೂಪವಾಗಿದೆ. ಕೌತುಕ ಬೇರದ ಪೀಠದಲ್ಲಿ ಪಾದಗಳ ಕೆಳಗೆ ಸಮಕೋನ ತ್ರಿಭುಜಗಳೆರಡು ಒಂದರೊಳಗೊಂದು ಸೇರಿದಂತಿರುವ ಯಂತ್ರವನ್ನು ಕೆತ್ತಲಾಗಿದೆ. ಮೂಲದೇವರ ವಿಗ್ರಹದಲ್ಲೂ ಇಂತಹ ಒಂದು ಯಂತ್ರ ಇದ್ದಿರಬಹುದಾದ ಸಂಭಾವ್ಯತೆ ಉಂಟು. ನಮ್ಮಾಳ್ವಾರರು ತಮ್ಮ 3-4-4 ನೇ ಪಾಶುರದಲ್ಲಿ ತಿರುವೆಂಗಡಮುಡೈಯಾನನಿಗೆ ಕಾಂತಿ ಹೊರಚಿಮ್ಮುವ ಸುಂದರವಾದ ಪಾದಗಳೂ ಕೈಗಳೂ ಇವೆಯೆಂದು ವರ್ಣಿಸಿದ್ದಾರೆ. ಇದು ಷಡ್ಗುಣ ಯಂತ್ರವನ್ನು ಪ್ರತಿನಿಧಿಸಿರಬಹುದು. ಮಣವಾಳಪ್ಪೆರುಮಾಳ್ ಪ್ರತಿಮೆಯ ಪ್ರತಿಷ್ಠೆಗಿಂತ ಎರಡು ಶತಮಾನಗಳ ಮೊದಲಿಗೆ ಹಾಡಿದವರು ನಮ್ಮಾಳ್ವಾರರು. ವೈಖಾನಸ ಆಗಮದಲ್ಲಿ ಗುರುತಿಸಲಾಗಿರುವ ವ್ಯೂಹ,ಪರ,ಮೂರ್ತಿಗಳ ಆರು ಗುಣಗಳನ್ನು ಈ ರೀತಿಯ ಯಂತ್ರ ಪ್ರತಿನಿಧಿಸಬಹುದು.

ಭೋಗ ಶ್ರೀನಿವಾಸನಿಗೆ ಪ್ರತಿನಿತ್ಯವೂ ಮಂತ್ರೋಕ್ತ ಅಭಿಷೇಕ ನಡೆಯುವುದು. ಮೂಲಮೂರ್ತಿಗೆ ಶುಕ್ರವಾರಗಳಲ್ಲಿ ಮಾತ್ರವೇ ಅಭಿಷೇಕ.

ರಾತ್ರಿಯ ಹೊತ್ತು ಈ ಮೂರ್ತಿಯನ್ನು ಪರ್ಯಂಕಾಸನದಲ್ಲಿ ಶಯನಗೊಳಿಸಲಾಗುತ್ತದೆ. ಪ್ರತಿ ರಾತ್ರಿ ಏಕಾಂತ ಸೇವೆಯಲ್ಲಿ ಈ ವಿಗ್ರಹವನ್ನು ಸಾಯಣ ಮಂಟಪದ ಉಯ್ಯಾಲೆಯಲ್ಲಿ ಆಸೀನಗೊಳಿಸಿ,ತಾಳ್ಳಪಾಕ ಕವಿಗಳ ಕೀರ್ತನೆಗಳ ಸಂಗೀತದ ಹಿನ್ನೆಲೆಯಲ್ಲಿ ಹಾಲೂ ನಿವೇದನವಾಗುತ್ತದೆ, ಪ್ರತಿ ರಾತ್ರಿ ಈ ದೇವರಿಗೆ ಗಂಧವನ್ನೂ ಪೂಸಲಾಗುತ್ತದೆ. ಆಲಯದ ಒಂದು ವಿಶೇಷವೆಂದರೆ ಧನುರ್ಮಾಸದ ಹೊರತು ಮಿಕ್ಕ ಎಲ್ಲ ತಿಂಗಳಿನಲ್ಲೂ ಈ ಮೂರ್ತಿಗೆ ಏಕಾಂತಸೇವೆ ನಡೆಯುವುದು. ಧನುರ್ಮಾಸದಲ್ಲಿ ಮಾತ್ರ ಶ್ರೀಕೃಷ್ಣಸ್ವಾಮಿಗೆ ಏಕಾಂತಸೇವೆಯಾಗುವುದು.

ಮೂಲ ಮೂರ್ತಿಯೊಡನೆ ಅತಿ ಸನ್ನಿಹಿತವಾಗಿ ಒಂದು ರೇಷ್ಮೆ ಸೂತ್ರದಿಂದ ಈ ಮೂರ್ತಿಯನ್ನು ಸೇರಿಸಲಾಗಿದೆ. ಉತ್ಸವ ಸಮಯಗಳಲ್ಲಿ ಗರ್ಭಗೃಹದಿಂದ ಈ ವಿಗ್ರಹವನ್ನು ಹೊರತಂದಾಗ ಒಂದು ಸ್ವರ್ಣದ ಕೊಂಡಿಯಿಂದಲೂ ರೇಷ್ಮೆಸೂತ್ರದಿಂದಲೂ ಮೂಲವರರೊಡನೆ ಸಂಬಂಧವನ್ನೂ ಸ್ಥಾಪಿಸಲಾಗುತ್ತದೆ.

### 2. ಉಗ್ರ ಶ್ರೀನಿವಾಸ:

ಈ ವಿಗ್ರಹವನ್ನು ಪ್ರಾಚೀನಕಾಲದಲ್ಲಿ ವೆಂಕಟತ್ತುರೈವಾರ್ ಎಂದು ಕರೆಯಲಾಗುತ್ತಿತ್ತು.ಉಗ್ರ ಶ್ರೀನಿವಾಸ ದೇವರ ಕೋಪದ ಪ್ರತಿನಿಧಿ. ಧ್ರುವಬೇರದ ಹೊರತು ಪ್ರಾಯಶಃ ಇದೇ ಆಲಯದ ಅತ್ಯಂತ ಪ್ರಾಚೀನ ವಿಗ್ರಹ ವಾಗಿದ್ದು ಮೊದಲಿಗೆ ಉತ್ಸವಮೂರ್ತಿಯಾಗಿ ಬಳಕೆಯಲ್ಲಿರಬೇಕು. ಏಳು ಅಂಗುಲ ಎತ್ತರದ ಪೀಠದ ಮೇಲೆ 18ಅಂಗುಲ ಎತ್ತರಕ್ಕೆ ನಿಂತ ಮೂರ್ತಿ. ಇದರ ಚಕ್ರ ತುಸು ತಿರುಗಿದ್ದು ಪ್ರಾಯಶಃ ಪ್ರಯೋಗಚಕ್ರವಾಗಿದೆ ಎನ್ನಬೇಕು. ನಿಂತ ಭಂಗಿಯಲ್ಲಿನ ಶ್ರೀದೇವಿ ಭೂದೇವಿಯರನ್ನೂ ಕಾಣಬಹುದು. ಭೋಗ ಶ್ರೀನಿವಾಸನ ಪ್ರತಿಷ್ಠೆಯಾಗುವ ಮೊದಲು ಆಲಯದ ಉತ್ಸವಮೂರ್ತಿ ಇದಾಗಿತ್ತು ಎಂಬುದನ್ನು ತಮಿಳಿನ ಸಮಾಸ ಪದ ವೆಂಗಡತ್ತುರೈವಾರ್ ಎಂಬುದು ತಿಳಿಸುತ್ತದೆ. ಈಗ ಮೂರು ಸಂದರ್ಭಗಳಲ್ಲಿ ಉಗ್ರ ಶ್ರೀನಿವಾಸ ಮಾತ್ರವೇ ಇರುವಂತೇದೆ. ಅವುಗಳೆಂದರೆ ಉತ್ಥಾನ ಏಕಾದಶಿ,ಮುಕ್ಕೋಟಿ ದ್ವಾದಶಿ,ಹಾಗೂ ದ್ವಾದಶಾರಾಧನೆ. ಪರಂಪರೆಯ ಹೇಳಿಕೆಯಂತೆ ಸೂರ್ಯಕಿರಣಗಳು ಈ ವಿಗ್ರಹವನ್ನು ತಾಕಬಾರದು. ಹಾಗೇನಾದರೂ ತಾಕಿದರೆ ವಿಶ್ವಕ್ಕೆ ಆಪತ್ತುಂಟಾಗುವುದು

### 3. ಕೊಲುವು ಶ್ರೀನಿವಾಸ:

ಪ್ರತಿದಿನ ತೋಮಾಲೆ ಸೇವೆಯಾದ ನಂತರ ತಿರುಮಾಮಣಿ ಮಂಟಪದಲ್ಲಿ ದರ್ಬಾರ್ ನಡೆಯುತ್ತದೆ. ಇದಕ್ಕೆಂದು ಗರ್ಭಗೃಹದಿಂದ ಸ್ವಾಮಿಯನ್ನು ಕರೆತಂದು ಬೆಳ್ಳಿಯ ಸಿಂಹಾಸನದಲ್ಲಿ ಶ್ವೇತಛತ್ರ ದಡಿಯಲ್ಲಿ ಆಸೀನಗೊಳಿಸಲಾಗುತ್ತದೆ. ಈ ವಿಗ್ರಹವು ಸ್ವಾಮಿಯನ್ನು ಈ ಓಲಗದಲ್ಲಿ (ಕೊಲುವು) ಪ್ರತಿನಿಧಿಸುವುದರಿಂದ ಇದು ಕೊಲುವು ಬೇರವಾಯಿತು. ಆಲಯದ ಮುಖ್ಯ ಸಂರಕ್ಷಕನಾಗಿ, ಆಲಯದ ಎಲ್ಲ ವ್ಯವಹಾರಗಳನ್ನೂ ಗಮನಿಸುತ್ತ,ಆದಾಯ ವೆಚ್ಚಗಳ ಲೆಕ್ಕವನ್ನೂ ತಿಳಿದುಕೊಳ್ಳುತ್ತ ಇರುವವನು.ಪ್ರತಿದಿನವೂ ಈ ವಿಗ್ರಹಕ್ಕೆ ಪಂಚಾಂಗ ಪಠನವಾಗಿ,ಇಲ್ಲಿಯೇ ನಿವೇದನೆಯನ್ನದ ಮಾತ್ರಾದಾನ ರೂಪಿಸಿ,ಅರ್ಚಕರ ಪಾಲನ್ನು ನಿರ್ಧರಿಸುವುದು. ಬಲಿಬೇರವೆಂದು ಹೆಸರಾಗಿದ್ದರೂ,ನಿತ್ಯ ಪೂಜೆಯನಂತರ ಈ ವಿಗ್ರಹವನ್ನು ಎಂದೂ ಆಲಯದ ಹೊರತಂದು ನೈವೇದ್ಯ ಹಾಕುವುದಿಲ್ಲ.

### 4. ಮಲೆಯಪ್ಪನ್ ಅಥವಾ ಉತ್ಸವಮೂರ್ತಿ:

ಕ್ರಿ.ಶ. 1339ರ ಶಾಸನದಲ್ಲಿ ಪ್ರಥಮಬಾರಿಗೆ ಮಲೈಯಕುನಿಯ ನಿನ್ರಪೆರುಮಾಳ್ ಎಂಬ ಉಲ್ಲೇಖ ದೊರೆಯುತ್ತದೆ. ಈ ವಿಗ್ರಹ ನಿಂತ ಭಂಗಿಯಲ್ಲಿದ್ದು ಧ್ರುವಬೇರದ ಪ್ರತಿರೂಪವಾಗಿದೆ. ಮೇಲಿನ ಎರಡು ಕೈಗಳಲ್ಲಿ ಶಂಖಚಕ್ರಗಳಿದ್ದರೆ ಕೆಳಗಿನ ಎಡ ಹಸ್ತ

ಕಟ್ಯವಲಿಂಬಿತವಾಗಿಯೂ ಬಲದ ಹಸ್ತ ವರದ ಹಸ್ತವಾಗಿಯೂ ಇವೆ. ಈ ವಿಗ್ರಹಕ್ಕೆ ಚಿನ್ನ ಪ್ಲಾಟಿನಂಗಳಿಂದ ಮಾಡಿದ ಅತ್ಯಂತ ಸಿರಿವಂತವಾದ ಆಭರಣಗಳ ಭಂಡಾರವಿದೆ.

ಬ್ರಹ್ಮೋತ್ಸವದ ಒಂದು ಸಂದರ್ಭದಲ್ಲಿ ಗ್ರಾಮದಲ್ಲಿ ಬೆಂಕಿ ಕಾಣಿಸಿಕೊಂಡು ಬಹುವಾದ ನಷ್ಟವುಂಟಾಯಿತಂತೆ. ಅರ್ಚಕರಿಗೆ ಏಕೆ ಹೀಗಾಯಿತೆಂದು ಅರ್ಥವಾಗಲಿಲ್ಲ. ದೇವರು ಒಬ್ಬ ಮನುಷ್ಯನ ಮೂಲಕ ಹೇಳಿಸಿದನಂತೆ; 'ಕಾಲಪರಿವರ್ತನೆಯಾಗಿದೆ. ಇದುವರೆಗೆ ಉತ್ಸವಕ್ಕೆ ಬಳಸುವ ಉಗ್ರ ಶ್ರೀನಿವಾಸನ ಮೂರ್ತಿಯನ್ನು ಬಿಟ್ಟು ಹೊಸ ಉತ್ಸವಮೂರ್ತಿಯನ್ನು ಹುಡುಕಿ ತೆಗೆಯಿರಿ' ಎಂಬುದಾಗಿ. ಪ್ರಾಯಶಃ ಇದರಿಂದಾಗಿಯೇ ಮೊದಲಿನ ಮೂರ್ತಿಗೆ ಉಗ್ರಮೂರ್ತಿಯೆಂದು ಹೆಸರು ಬಂದಿರಬೇಕು. ಬೆಟ್ಟದಮೇಲೆ ಒಂದು ಕಣಿವೆಯಲ್ಲಿ ಈಗಿನ ಉತ್ಸವಮೂರ್ತಿಯೂ,ನಾಚ್ಚಿಯಾರರೂ ಕಾಣಿಸಿಕೊಂಡರು. ಬೆಟ್ಟದ ತಗ್ಗಿನಲ್ಲಿ ಕಂಡುಬಂದ ದೇವರ್‍ದಾದ ರಿಂದ ಮಲೈಕುನಿಯ ನಿನ್ರಪೆರುಮಾಳ್ ಎಂದೇ ಹೆಸರಾಗಿ,ಮುಂದೆ ಇದೇ ಸಂಕ್ಷಿಪ್ತವಾಗಿ ಮಲೆಯಪ್ಪನ್ ಆಗಿದೆ. ಆತ ಕಂಡಬಂದ ಕಣಿವೆಯನ್ನೇ ಮಲೆಯಪ್ಪಕೋನ ಎಂದು ಗುರುತಿಸಲಾಗಿದೆ.

ಧ್ರುವ ಬೇರವನ್ನು ಪ್ರತಿನಿಧಿಸುವ ವಿಗ್ರಹಗಳ ಆದ್ಯತೆಯೆಂದರೆ ಭೋಗ ಶ್ರೀನಿವಾಸ,ಮಲೆಯಪ್ಪ ಮತ್ತಿಬ್ಬರು ನಾಚ್ಚಿಯಾರು, ಉಗ್ರ ಶ್ರೀನಿವಾಸ ಹಾಗೂ ಕೊಲುವು ಶ್ರೀನಿವಾಸ. ಆಗಮಶಾಸ್ತ್ರ ರೀತ್ಯ ಇವರುಗಳು ಕೌತುಕ. ಉತ್ಸವ,ಸ್ನಪನ,ಬಲಿ ಬೇರಗಳಾಗು ತ್ತವೆ.ಆಗಮ ಶಾಸ್ತ್ರಪ್ರಕಾರ ಕೌತುಕ ಬೇರವನ್ನು ನೇರವಾಗಿ ಧ್ರುವಬೇರದಿಂದಲೂ,ಉತ್ಸವ ಬೇರವನ್ನು ಕೌತುಕದಿಂದಲೂ ಹೀಗೇ ಮುಂದುವರೆದು ಸಂಬಂಧಿಸಬೇಕು. ಆದರೆ ಆಲಯದ ಶಾಸನಗಳಾವುವೂ ಮಲೆಯಪ್ಪನನ್ನು ಉತ್ಸವಬೇರವೆಂದಾಗಲೀಭೋಗ ಶ್ರೀನಿವಾಸನನ್ನು ಕೌತುಕ ಬೇರವೆಂದಾಗಲೀ ಹೇಳುವುದಿಲ್ಲ.

ಹದಿನಾಲ್ಕು ಅಂಗುಲ ಎತ್ತರವಿರುವ ಪೀಠದ ಮೇಲೆ ನಿಂತಿರುವ ಭಂಗಿಯ ಮಲೆಯಪ್ಪ ಮೂರು ಅಡಿಗಳ ಎತ್ತರವಿರಬಹುದ ಬಲಗಡೆಗೆ ನಾಲ್ಕು ಅಂಗುಲದ ಪೀಠದ ಮೇಲೆ ಮೂವತ್ತು ಅಂಗುಲ ಎತ್ತರದ ಶ್ರೀದೇವಿಯಿದ್ದಾಳೆ. ಇದೊಂದು ಪಂಚಲೋಹದ ವಿಗ್ರಹ. ಆಕೆಯ ಎಡಗೈ ಕಟಿಹಸ್ತವಾಗಿಯೂ ಬಲಗೈ ಗಜಮುದ್ರೆಯಲ್ಲಿ ನೀಳವಾಗಿರುವುದೂ ಆಗಿದೆ. ಶ್ರೀಭೂದೇವಿಯರಲ್ಲಿನ ವ್ಯತ್ಯಾಸವೆಂದರೆ ಭೂದೇವಿಯ ಬಲಹಸ್ತ ಕಟಿಹಸ್ತವಾಗಿಯೂ ಎಡಗೈ ಗಜಮುದ್ರೆಯಲ್ಲಿ ನೀಳವಾಗಿರುವುದೂ ಆಗಿದೆ.

ವರದರಾಜಸ್ವಾಮಿ ದೇವಾಲಯದ (ತಿರುಮಲೆಯ ಆಲಯದ ಬಲಗಡೆ ಇದೆ.) ಉತ್ತರದ ಗೋಡೆ ಮೇಲೆ ತ್ರಿಭುವನ ಚಕ್ರವರ್ತಿ ಶ್ರೀರಂಗನಾಥಯಾದವರಾಯನ ಒಂದು ಶಾಸನದಲ್ಲಿ ಮಲೆಯಕುನಿಯ ನಿನ್ರ ಪೆರುಮಾಳ್ ಹಾಗೂ ನಾಚ್ಚಿಯಾರರ ಉಲ್ಲೇಖವಿದ್ದು ಕ್ರಿ.ಶ.1339 ಕ್ಕೆ ಸೇರಿದ ಇದೇ ಈ ವಿಗ್ರಹಗಳ ಮೊದಲ ಉಲ್ಲೇಖ.

### 5. ರುಕ್ಮಿಣೀ ಶ್ರೀಕೃಷ್ಣಸ್ವಾಮಿ:

ಗರ್ಭಗೃಹದಲ್ಲಿ ರುಕ್ಮಿಣಿಯೊಡನಿರುವ ಬಹುಸುಂದರವಾದ ನವನೀತನೃತ್ಯ ಭಂಗಿಯ ಶ್ರೀಕೃಷ್ಣ ವಿಗ್ರಹವಿದೆ. ಮುದ್ದಾದ ಮಗುವಿನ ರೂಪದಲ್ಲಿ ದೇವರು ನಾಟ್ಯಮಾಡುತ್ತಿರುವಂತೆ ಚಿತ್ರಿಸಲಾಗಿದ್ದು ಕಮಲದ ಮೇಲೆ ನಿಂತು ಎಡಗಾಲಿನ ಮೇಲೆ ಬಲಗಾಲನ್ನು ಅಡ್ಡವಾಗಿಟ್ಟ ಭಂಗಿಯಲ್ಲಿದೆ. ಬಲಗೈಯಲ್ಲಿ ಬೆಣ್ಣೆ ಮುದ್ದೆಯನ್ನು ಹಿಡಿದಿದ್ದರೆ ಎಡಗೈ ಆನಂದದಿಂದ ನೀಳವಾಗಿ ಚಾಚಿದೆ.

ಈ ವಿಗ್ರಹದ ಬಗ್ಗೆ ದೊರೆಯುವ ಅತಿ ಪ್ರಾಚೀನ ಶಾಸನವೆಂದರೆ ಕ್ರಿ.ಶ. 1100 ರ ಕಾಲದ್ದು. ಇತರ ಶಾಸನಗಳು ಶ್ರೀಕೃಷ್ಣ ಜಯಂತಿಯಂದು ವಿಗ್ರಹಕ್ಕೆ ನೀಡುವ ನೈವೇದ್ಯದ ಬಗ್ಗೆಯೂ, ಬ್ರಹ್ಮೋತ್ಸವಗಳ ನಿವೇದನೆಯ ಬಗ್ಗೆಯೂ ವಿವರಿಸುತ್ತವೆ.ನಮಾಸ

ದಲ್ಲಿ ಏಕಾಂತಸೇವೆಯನ್ನು ಸ್ವೀಕರಿಸುವ ವಿಗ್ರಹ ಇದು. ಶ್ರೀಕೃಷ್ಣಸ್ವಾಮಿಯ ವಿಗ್ರಹವಾಗಲೀ ಶ್ರೀರಾಮನ ವಿಗ್ರಹವಾಗಲೀ ನಿತ್ಯಪೂಜೆ ಪಡೆಯುವುದಿಲ್ಲ. ಇವರು ಶ್ರೀ ವೆಂಕಟೇಶ್ವರಸ್ವಾಮಿಯ ನಿತ್ಯಾರ್ಚನೆಯನ್ನೇ ಸ್ವೀಕರಿಸುವರು. ಶ್ರೀರಾಮ ಶ್ರೀಕೃಷ್ಣರ ನೈವೇದನೆಯನ್ನೂ ವೆಂಕಟೇಶ್ವರಸ್ವಾಮಿಗೆ ಮೊದಲು ಒಪ್ಪಿಸಲಾಗುತ್ತದೆ. ಆದರೆ ಆಸ್ಥಾನಗಳಲ್ಲೂ,ಹೊರಗಣ ಉತ್ಸವಗಳಲ್ಲಿಯೂ ಈ ವಿಗ್ರಹಕ್ಕೇ ಮೊದಲು ನೇರ ಸಮರ್ಪಣೆ,ಈ ಪದ್ಧತಿಯು ವಿಜಯನಗರ ಕಾಲದ 12-8-1486 ರ 142 ನೇ ಜಿ.ಟಿ. ಶಾಸನದಲ್ಲಿ ವಿವರಿತವಾಗಿದೆ.

## 6. ಶ್ರೀರಾಮ, ಸೀತೆ, ಲಕ್ಷ್ಮಣ, ಸುಗ್ರೀವರ ವಿಗ್ರಹಗಳು:

ಶ್ರೀರಾಮ (ರಘುನಾಥ) ಸೀತೆ,ಲಕ್ಷ್ಮಣ,ಸುಗ್ರೀವರ ನಾಲ್ಕು ತಾಮ್ರದ ವಿಗ್ರಹಗಳೂ ಗರ್ಭಗೃಹದಲ್ಲಿವೆ. ಕ್ರಿ.ಶ. 1476 ರ ಮೊದಲಿನ ಯಾವುದೇ ಶಾಸನದಲ್ಲೂ ಈ ವಿಗ್ರಹಗಳ ಬಗ್ಗೆ ಉಲ್ಲೇಖವಿಲ್ಲ. ಕ್ರಿ.ಶ.1245 ರಲ್ಲಿ ರಾಮರ್ ಮೇಡೈ (ತಿರುಮಲೆಯ ಆಲಯದಲ್ಲಿ) ಯನ್ನು ಪೂರ್ಣಗೊಳಿಸಿ ಒಂದು ಕೊಠಡಿಯನ್ನಾಗಿಸಿದಾಗ ಈ ವಿಗ್ರಹಗಳನ್ನು ಅಲ್ಲಿ ಸ್ಥಾಪಿಸಿದುದರಿಂದ ಈ ಕೋಣೆಯನ್ನು ರಾಮರ್ ಮೇಡೈ ಎಂದು ಕರೆದಿರಬಹುದು. ರಾಮಾನುಜರೇ ಈ ಮೂರ್ತಿಗಳನ್ನು ಆಲಯದಲ್ಲಿ ಸ್ಥಾಪಿಸಿರಬಹುದು ಎಂದೂ ಹೇಳುವರುಂಟು.

ಶ್ರೀರಾಮನ ವಿಗ್ರಹ ಮಧ್ಯಮ ತಾಳದ ತ್ರಿಭಂಗದಲ್ಲಿದೆ. ಎಡಗೈ ಮೇಲಿದ್ದು ಬಿಲ್ಲನ್ನು ಹಿಡಿಯುವಂತೆಯೂ ಬಲಗೈ ನೆಲಮುಖವಾಗಿ ಬಾಣವನ್ನು ಹಿಡಿಯಲು ಸಿದ್ಧವಾಗಿರುವಂತೆಯೂ ಇವೆ. ಇದು ನಿಂತ ನಿಲುವಿನ ವಿಗ್ರಹವಾಗಿದ್ದು ತಲೆಯಲ್ಲಿ ಕಿರೀಟವಿದೆ. ರಾಮಚಂದ್ರನ ಎಡಗಡೆಗೆ ಸೀತೆ ನಿಂತ ಭಂಗಿಯಲ್ಲಿದ್ದು ಬಲಗೈ ನೆಲಮುಖವಾಗಿಯೂ,ಎಡಗೈಯಲ್ಲಿ ಪದ್ಮವನ್ನು ಹಿಡಿದಂತೆಯೂ ಇದೆ. ರಾಮನ ವಿಗ್ರಹದಂತೆಯೇ ಲಕ್ಷ್ಮಣನ ವಿಗ್ರಹ. ಸುಗ್ರೀವನ ವಿಗ್ರಹ ನಿಂತ ನಿಲವಿನದ್ದು ಕೈಗಳೆರಡನ್ನೂ ಮುಂದೆ ತಂದು ಜೋಡಿಸಿ ನಮಸ್ಕಾರ ಮಾಡುತ್ತಿದ್ದಾನೆ.

ಆನಂದ ನಿಲಯದಲ್ಲಿನ ರಾಮರ್ ಮೇಡೆಯ ಅಂತರಾಳ ಮಂಟಪದಲ್ಲಿ ಅಂಗದ ಹಾಗೂ ಹನುಮಂತರ ಸುಂದರ ತಾಮ್ರ ವಿಗ್ರಹಗಳೂ ಇವೆ. ಇವುಗಳೆದುರಿಗೆ ವಿಷ್ವಕ್ಸೇನ,ಅನಂತ,ಗರುಡರ ಸುಂದರ ತಾಮ್ರ ವಿಗ್ರಹಗಳನ್ನು ಕಾಣಬಹುದು.

## 7. ಚಕ್ರತ್ತಾಳ್ವಾರ್:

ಈ ಮೂರ್ತಿಯು ಉತ್ಸವ ಮೂರ್ತಿಯ ಮೆಗವಣಿಗೆಯಲ್ಲಿ ಯಾವಾಗಲೂ ಮುಂಬರುತ್ತದೆ. ಆದರೆ ಅಂಕುರಾರ್ಪಣೆ, ತೀರ್ಥವಾರಿಗಳಂದು ಪ್ರತ್ಯೇಕವಾಗಿ ನಡೆಯುತ್ತಾನೆ. ಬ್ರಹ್ಮೋತ್ಸವದ ಅವಭೃತವೂ ಚಕ್ರತ್ತಾಳ್ವಾರರಿಗೆ ನಡೆಯುವುದು

***

ಅಧ್ಯಾಯ - 6

# ತಿರುಮಲೆಯ ಆಲಯದಲ್ಲಿ ನಿತ್ಯಪೂಜಾ ವಿವರ

## 1. ಆರಾಧನಾ ವಿವರ :

ಪರಮ ಪುರುಷನ ಅಸೀಮ ಶಕ್ತಿಯ ಸೀಮಿತ ಅಭಿವ್ಯಕ್ತಿಯಾಗಿ ಆತನ ವಿಗ್ರಹ, ಅರ್ಚಾಮೂರ್ತಿಯಿರುತ್ತದೆ ಎಂಬುದು ಹೈಂದವ ಪರಂಪರೆಯಲ್ಲಿ ಹರಿದು ಬಂದಿರುವ ಪ್ರಬಲವಾದ ನಂಬಿಕೆಯಾಗಿದೆ. ಪುರುಷಸೂಕ್ತವು ದೇವರು ಸಾವಿರ ತಲೆಗಳನ್ನೂ-ಅಸಂಖ್ಯ ಶಿರಗಳನ್ನು - (ಸಹಸ್ರ ಶೀರ್ಷಃ ಪುರುಷಃ)- ಹೊಂದಿರುವನೆಂದು ಘೋಷಿಸುವುದು. ಹೀಗಾಗಿ ಅತ್ಯಂತ ಅಮೇಯನಾದ ಆತನನ್ನು ವಿವರಿಸುವ ರೂಪಗಳಿಗೆ ಕೊನೆಯೇ ಇಲ್ಲವೆಂಬುದು ಸಿದ್ಧವಾಗುವುದು. ಇದರಿಂದಾಗಿಯೇ ಹಲವು ಹನ್ನೊಂದು ಗುಡಿ ಮಂದಿರಗಳಲ್ಲಿ ಸುವ್ಯವಸ್ಥಿತರೀತಿಯಲ್ಲಿ ನಡೆಯುವ ಪೂಜಾವಿಧಾನದಿಂದ ಭಕ್ತ ಮನುಷ್ಯನ ಗಮನವನ್ನು ಹಂತಹಂತವಾಗಿ ಮೇಲ್ಮಟ್ಟಕ್ಕೆ ಒಯ್ಯುತ್ತ ಆ ಪರಮಪುರುಷನ ಸಾಕ್ಷಾತ್ಕಾರಕ್ಕೆ ಸಾಧನವಾಗುವಂತೆ ಏರ್ಪಾಡುಗಳನ್ನು ಮಾಡಲಾಗಿದೆ. ಆಲಯ ಪೂಜಾ ವಿಧಾನವು ಮನುಷ್ಯನಿಗೆ ತನ್ನ ಒಳಗೇ ಇರುವ ಆ ಪರಮಾತ್ಮನ ಸಾಕ್ಷಾತ್ಕಾರದ ಹಾದಿಯಲ್ಲಿ ಸಾಧನೆಗೆ ಇಂಬು ನೀಡುವುದು.

ಶ್ರೀಕೃಷ್ಣ ಪರಮಾತ್ಮನು ತನ್ನ ಬಳಿಗೆ ಬರುವವರನ್ನು ನಾಲ್ಕು ವಿಧವೆಂದು ವಿಂಗಡಿಸಿದ್ದಾನೆ.

1) ಅರ್ತಿಗಳು 2) ಅರ್ಥಾರ್ಥಿಗಳು 3) ಜಿಜ್ಞಾಸುಗಳು 4) ಜ್ಞಾನಿಗಳು.

ಈ ನಾಲ್ಕು ವಿಧದವರು ಸ್ವಾಮಿ ಶ್ರೀ ವೆಂಕಟೇಶ್ವರನಲ್ಲಿಗೂ ಬರುತ್ತಾರೆ. ಆತನ ಕರುಣೆಯೆಂದರೆ ಅವರವರು ಅಪೇಕ್ಷಿತವನ್ನು ನೀಡುವುದು. ದೇವರ ದಯೆ ಎಲ್ಲರಮೇಲೂ ಸಮಾನವಾಗಿಯೇ ಹರಿದರೂ ಪ್ರತಿಯೊಬ್ಬರೂ ತಮ್ಮ ಆಧ್ಯಾತ್ಮ ಸಾಧನೆಯ ಸಾಮರ್ಥ್ಯಕ್ಕನುಗುಣವಾಗಿ ಪಡೆಯುತ್ತಾರೆ. ದೇವರ ದಯಾಕಿರಣ ಆ ದಾರಿಯಲ್ಲಿ ಬಂದವರ ಮೇಲೆಲ್ಲ ಸಮವಾಗಿ ಬೀಳುತ್ತದೆ. ಆದರೆ ಯಾರಾದರೂ ಇತರತ್ರ ನೆರಳಿನಲ್ಲಿದ್ದರೆ, ಕೋಣೆಯಲ್ಲಿದ್ದರೆ (ತಮ್ಮದೇ ಆದ ಕತ್ತಲೆಯಲ್ಲಿದ್ದರೆ) ಅವರಿಗೆ ಕಡಮೆ ಬೆಳಕು ಸಿಗುವುದು ಸಹಜ.

ಆಗಮ ಶಾಸ್ತ್ರಗಳ ವಿಧಿಯಂತೆ ಪೂಜೆ ಆರಾಧನೆಗಳನ್ನು ಮಾಡುವುದು ಎಂದರೆ ಒಂದು ಮೇಲ್ಮಟ್ಟದ ಆಧ್ಯಾತ್ಮಿಕ ಜಾಗೃತಿಗಾಗಿ ಹಂಬಲಿಸುವುದು. ಇದು ತಮ್ಮದೇ ಆದ ತಮಸ್ಸಿನ ಕೋಣೆಯಿಂದ ವಿಸ್ತಾರದ ಹೊರಬಯಲಿಗೆ ಬೆಳಕಿಗೆ ಬರುವುದರಂತೆ.ಎಲ್ಲರೂ ತನ್ನ ಕೃಪೆಗೆ ಪಾತ್ರರಂತೆ ಬಗೆಯುವ ದೈವ ಎಲ್ಲರ ಮೇಲೂ ತನ್ನ ಕೃಪೆಯನ್ನು ವರ್ಷಿಸುತ್ತದೆ. ಹೀಗಾಗಿ ಭಕ್ತನು ಪಡೆಯುವುದು ಅವನ ಸ್ಥಿತಿಯನ್ನೇ ಅವಲಂಬಿಸುವುದು. ಅವನ ಸಧ್ಯದ ಅಗತ್ಯ ದೈಹಿಕ,ಆರ್ಥಿಕ ಆಗಿದ್ದಲ್ಲಿ ಅದನ್ನೇ ಪಡೆಯುತ್ತಾನೆ. ಇನ್ನೂ ಮೇಲ್ಮಟ್ಟದಲ್ಲಿರುವವರು ದೈವದ ಅಪರಂಪಾರ ಕರುಣೆಗೆ ಈಡಾಗಿ ತಮ್ಮ ಆತ್ಮೋದ್ಧಾರ ಮಾಡಿಕೊಳ್ಳುವರು. ಇಂತಹವರು ಹಲವರು ಮಾತ್ರವೇ ಎಂದರೂ, ಇಂತಹವರೂ ಇದ್ದಾರೆ ಎಂಬುದು ನಿಜ. ಇಂತಹವರ ಎದುರಿಗೆ ಬಂದಾಗ ಸಂತಸವುಂಟಾಗಿ ಮೇಲಿನ ಹಂತವನ್ನೇರಿದಂತೆ ಭಾಸವಾಗುತ್ತದೆ. ಇಂತಹ ಉನ್ನತಿಯನ್ನು ಪಡೆಯಲು,ನಿಧಾನವಾಗಿ ಐಹಿಕ ಆಸೆ ಆಕಾಂಕ್ಷೆಗಳನ್ನು ದೂರೀಕರಿಸಿ,ಆಧ್ಯಾತ್ಮಿಕ ತೃಪ್ತಿಯನ್ನು ಪಡೆಯುತ್ತ ಲೌಕಿಕ ಅಗತ್ಯಗಳಿಲ್ಲದಂತೆ ಆಗಲು,ದೈವವನ್ನು ಅದಕ್ಕಾಗಿಯೇ ಆಶ್ರಯಿಸುವಂತಾಗಲು ಆಗಮಶಾಸ್ತ್ರಗಳು ಪೂಜಾ ವ್ಯವಸ್ಥೆ ಪೂಜಾ ವಿಧಾನಗಳನ್ನು ಏರ್ಪಡಿಸಿವೆ.

**2. ಆಗಮವಿಚಾರ:**

ತಿರುಮಲೆಯ ಆಲಯದ ಪೂಜಾ ವಿಧಾನವು ವೈಖಾನಸ ಆಗಮದ ಅನುಸಾರವಾಗಿ ನಡೆಯುತ್ತದೆ. ಭವಿಷ್ಯೋತ್ತರ ಪುರಾಣದಲ್ಲಿ ಹೇಳಿರುವಂತೆ ವಿಖನಸ ಮಹರ್ಷಿಯು ಶ್ರೀಕೃಷ್ಣನ ಬಾಲಲೀಲೆಗಳನ್ನು ಅನುಭವಿಸಿ ಆನಂದಿಸಿ ಬಾಲಕೃಷ್ಣನ ದರ್ಶನಕ್ಕಾಗಿ ತಪಸ್ಸು ಮಾಡಿದನು. ಅದರಂತೆ ಶ್ರೀಕೃಷ್ಣನು ಅವನಿಗೆ ದರ್ಶನವಿತ್ತು ವೆಂಕಟಾಚಲದ ಮೇಲೆ ತನ್ನನ್ನು ಶ್ರೀನಿವಾಸರೂಪದಲ್ಲಿ ಅರ್ಚಿಸಿ ತೃಪ್ತನಾಗಬೇಕೆಂದೂ ಬೆಟ್ಟದ ಮೇಲೆ ತನ್ನ ಇರುವಿಕೆಯನ್ನು ಗುರುತಿಸುವಲ್ಲಿ ರಂಗದಾಸನೆಂಬ ಭಕ್ತನು ನೆರವೀಡುವನೆಂದೂ ತಿಳಿಸಿದನು. ವಿಖನಸ ಮಹರ್ಷಿಯು ನಂತರ ತಿರುಮಲೆಗೆ ಆಗಮಿಸಿ ರಂಗದಾಸನ ನೆರವಿನಿಂದ ಶ್ರೀನಿವಾಸನ ನೆಲೆಯನ್ನು ಕಂಡುಕೊಂಡು ಸ್ವಾಮಿಯನ್ನು ಅರ್ಚಿಸಿದ. ಹೀಗಾಗಿ ತಿರುಮಲೆಯ ದೇವರನ್ನು ಅರ್ಚಿಸಿದವರಲ್ಲಿ ಮೊದಲಿಗ ವಿಖನಸಮಹರ್ಷಿ. ಹೀಗಾಗಿ ಇಂದಿಗೂ ವೈಖಾನಸ ಆಗಮದ ಅನುಸಾರವಾಗಿಯೇ ತಿರುಮಲೆಯಲ್ಲಿ ಪೂಜೆ ನಡೆಯುತ್ತದೆ--ವೈಖಾನಸ ಆಗಮವು ದಿನವೊಂದಕ್ಕೆ ಆರು ಬಾರಿ ಪೂಜೆ ನಡೆಸಬೇಕೆನ್ನುತ್ತದೆ.

1) ಪ್ರತ್ಯೂಷ (ಅರುಣೋದಯ) 2) ಪ್ರಭಾತ (ಪ್ರಾತಃಕಾಲ) 3) ಮಧ್ಯಾಹ್ನ 4) ಅಪರಾಹ್ನ 5) ಸಾಯಂಕಾಲ 6) ನಿಶೆ (ಅರ್ಧಯಾಮ ಅಥವಾ ಮಧ್ಯರಾತ್ರಿ)

ಒಂದು ದಿನಕ್ಕೆ ಆರುಬಾರಿ ಆಗಮದಲ್ಲಿ ವಿಧಿಸಿದಂತೆ ತಿರುಮಲೆಯಲ್ಲಿ ಎಂದಾದರೂ ಪೂಜೆ ನಡೆಯುತ್ತಿತ್ತು ಎನ್ನಲು ಆಧಾರಗಳಿಲ್ಲ. ಕುಲಶೇಖರ ಆಳ್ವಾರರು ತಿರುಮೊಳಿಯ 1 - 7 ನೇ ಪಾಶುರಗಳಲ್ಲಿ ಶ್ರೀರಂಗದಲ್ಲಿ ದಿನಕ್ಕೆ ಆರುಬಾರಿ ಪೂಜೆ ಆಗುವುದು ಎಂದು ಹೇಳಿದರೂ ತಿರುಮಲೆಯ ಬಗ್ಗೆ ಹೇಳಿಲ್ಲ. ಈಗ ಮಾರ್ಗಶಿರ ಮಾಸದ ಹೊರತು ಮತ್ತೆಂದೂ ಆಲಯದಲ್ಲಿ ಪ್ರಾತಃಕಾಲದ ಮೊದಲು ಪೂಜೆ ನಡೆಯುತ್ತಿಲ್ಲ. ಸೂರ್ಯ ಹುಟ್ಟಿದ ತತ್‌ಕ್ಷಣದ ಪೂಜೆಯೂ ಇಲ್ಲ. ಮಧ್ಯಾಹ್ನ ಪೂಜೆಯು ಸ್ಥೂಲವಾಗಿ ಇಂದಿನ ತೋಮಾಲಸೇವೆಗೆ ಅರ್ಚನೆಗೆ ಹೊಂದುವುದು. ಆಲಯದಲ್ಲಿ ಎರಡನೇ ಗಂಟೆಯ ಹೊತ್ತಿನಲ್ಲಿ ನಡೆಯುವ ಎರಡನೆ ಅರ್ಚನೆ ಅಪರಾಹ್ನ ಪೂಜೆಗೆ ಹೊಂದುವುದು. ಇದನ್ನೂ ಸಹ ಸಂಗ್ರಹವಾಗಿ ನಡೆಸಲಾಗುವುದು. ಸಾಯಂಕಾಲ ಪೂಜೆಯು ಪರಿಪೂರ್ಣವಾಗಿ ಖಾಸಗಿಯಾಗಿ ಅರ್ಚಕರು ಮಾತ್ರವೇ ಇದ್ದು ಮಾಡುವಂತಹದು. ನಿಶಿಪೂಜೆಯು ರಾತ್ರಿಯ ಏಕಾಂತ ಸೇವೆಗೆ ಹೊಂದಿದಂತೆ ಇದ್ದರೂ ಅದು ಶಾಸ್ತ್ರಪ್ರೋಕ್ತ ಪೂಜೆಯೇ ಅಲ್ಲ.

ಪ್ರಾಚೀನ ಕಾಲದಿಂದಲೂ ವೈಖಾನಸಾಗಮರೀತ್ಯಾ ಪೂಜಾವಿಧಾನಗಳು ನಡೆದು ಬಂದಿದೆ ಯೆಂಬ ಶಾಸನಾಧಾರದ ಚರಿತ್ರೆಯಿದ್ದರೂ ನಿಯಮಬದ್ಧವಾದ ಷಟ್ಕಾಲಪೂಜೆ ನಡೆದಿಲ್ಲ. ಉದಾಹರಣೆಗೆ ಕ್ರಿ.ಶ.966 ರಲ್ಲಿ ರಜತ ಭೋಗಶ್ರೀನಿವಾಸಮೂರ್ತಿಯನ್ನು ಆಲಯದಲ್ಲಿ ಸ್ಥಾಪಿಸಿದ ಪಲ್ಲವ ರಾಣಿ ಸಾಮವೈ ಹಾಕಿದ ಶಾಸನದಂತೆ ದೇವರಿಗೆ ಪ್ರತಿನಿತ್ಯವೂ ನಾಲ್ಕು ನಾಳಿ ಅನ್ನದ ನೈವೇದ್ಯವಿದೆ. ಈ ಆಹಾರ ನಿವೇದನೆಯು ಒಮ್ಮೆ ಮಾತ್ರವೇ ನಿವೇದಿಸುವಷ್ಟು ಮಾತ್ರವೆನ್ನಬಹುದು. ಷಟ್ಕಾಲ ಪೂಜೆ ನಡೆದಿತ್ತು ಎನ್ನುವ ಯಾವುದೇ ಶಾಸನದ ದಾಖಲೆಯೂ ನಮಗೆ ದೊರೆತಿಲ್ಲ. ಕ್ರಿ.ಶ.1434 ರ ತಿರುಕ್ಕಲಿಕನ್ರಿದಾಸರ್ ಹಾಕಿದ ಶಾಸನದಂತೆ ಅರುಣೋದಯಕಾಲದ ಪೂಜೆ ನಡೆದರೂ ಇದು ದಕ್ಷಿಣಾಯನ ಕಾಲಕ್ಕೆ ಮಾತ್ರ ಸೀಮಿತವಾಗಿದ್ದಿತು. ಹೀಗಾಗಿ ಆಲಯದಲ್ಲಿನ ಪೂಜಾ ಪದ್ಧತಿಯು ವೈಖಾನಸ ಆಗಮ ಶಾಸ್ತ್ರಾನುಸಾರಿ ಆಗಿದ್ದರೂ, ಈ ಶಾಸ್ತ್ರವೇ ಹೇಳುವ ಕಟ್ಟುನಿಟ್ಟಾದ ಷಟ್ಕಾಲ ಪೂಜಾ ನಿಯಮವನ್ನು ಇಲ್ಲಿ ಪರಿಪಾಲಿಸಲಾಗಿಲ್ಲವೆನ್ನಬಹುದು.

ವೈಖಾನಸ ಆಗಮದ ಪ್ರಕಾರ ಷಟ್ಕಾಲಪೂಜೆಯು ಭಕ್ತರ ಐಹಿಕ ಅಭಿವೃದ್ಧಿಗಾಗಿ ಮಾಡಲಾಗುವುದು. ಉಷಃಕಾಲ ಪೂಜೆಯಿಂದ ಸಂತಾನ, ಗೋಸಂಪದಾಭಿವೃದ್ಧಿ, ಪ್ರಾತಃಕಾಲ ಪೂಜೆಯಿಂದ ಜಪ ಹೋಮಾಭಿವೃದ್ಧಿ-ಮಧ್ಯಾಹ್ನ ಕಾಲಪೂಜೆಯಿಂದ ಸಂಪದಾಭಿವೃದ್ಧಿ, ಹಾಗೂ ರಾಜ್ಯಾಭಿವೃದ್ಧಿ, ಅಪರಾಹ್ನ ಕಾಲಪೂಜೆಯಿಂದ ದುಷ್ಟದಮನ, ಸಾಯಂಕಾಲ ಪೂಜೆಯಿಂದ ವ್ಯವಸಾಯೋ

ತ್ಪನ್ನಗಳ ಹೆಚ್ಚಳ,ನಿಶಿಪೂಜೆಯಿಂದ ಜಾನುವಾರು ಸಂಪತ್ತು ಸಾಧನೆಯಾಗುತ್ತವೆ. ಷಟ್ಕಾಲ ಪೂಜೆಯು ಹಲವಾರು ಕಾರಣಗಳಿಂದ ಆಚರಣೀಯ ಆಗದೆ ಅಸಾಧ್ಯವಾಗಬಹುದೆಂದು ಆಗಮಗಳು ಗ್ರಹಿಸಿಯೇ ಷಟ್ಕಾಲ ಪೂಜೆಗೆ ಪರ್ಯಾಯ ಆಗಿ ತ್ರಿಕಾಲ, ದ್ವಿಕಾಲ, ಏಕಕಾಲ ಪೂಜೆಗಳನ್ನು ವಿಧಿಸಿದವು.

ಪಾಂಚರಾತ್ರ ಆಗಮವು ವೈಖಾನಸ ಆಗಮದಿಂದ ಮುಂದುವರೆದು ಭಕ್ತರ ಅನುಕೂಲಕ್ಕೆ ತಕ್ಕಂತೆ ಒಂದು, ಎರಡು,ಮೂರು, ಆರು, ಕಡೆಗೆ ಹನ್ನೆರಡು ಬಾರಿಯೂ ಪೂಜೆ ಮಾಡುವ ಅವಕಾಶ ನೀಡುತ್ತದೆ.

ಪ್ರಸ್ತುತ ತಿರುಮಲೆಯಲ್ಲಿ ನಿಜವಾಗಿ ಮೂರು ಪೂಜೆಗಳುಂಟು. ಬೆಳಗ್ಗೆಗಳಲ್ಲಿ ಭಕ್ತರು ಭಾಗವಹಿಸಲು ಅವಕಾಶವಿರುವ ತೋಮಾಲಸೇವೆ, ಮಧ್ಯಾಹ್ನದಲ್ಲಿ ಒಂದು.ಸಂಗ್ರಹ ಪೂಜೆಗಳಾಗಿ ರಾತ್ರಿಯಲ್ಲಿ ಖಾಸಗಿಯಾಗಿ ನಡೆಯುವ ಪೂಜೆಯಲ್ಲಿ ಅರ್ಚಕ, ಆಚಾರ್ಯಪುರುಷರು ಮಾತ್ರ ಭಾಗವಹಿಸುವರು.

ನಿತ್ಯನೈಮಿತ್ತಿಕ ಪೂಜೆಗಳು ತಿರುಮಲೆಯಲ್ಲಿ ವೈಖಾನಸ ಆಗಮದ ಪ್ರಕಾರವೇ ನಡೆಯುತ್ತದೆಯಾದರೂ ಅಲ್ಲಲ್ಲಿ ಕ್ವಚಿತ್ತಾಗಿ ಕಾಲದ ಅಗತ್ಯಕ್ಕೆ ತಕ್ಕಂತೆ ಸ್ವಲ್ಪ ಬದಲಾವಣೆಯೂ ಉಂಟು. ವೈಖಾನಸ ಶಾಸ್ತ್ರವು ವೈಖಾನಸರಾಗಿ ಹುಟ್ಟಿದವರಿಗೆ ಪೂಜಾಧಿಕಾರವನ್ನೇ ನೀಡುವುದಿಲ್ಲ. ಪ್ರಾಯೋಗಿಕವಾದ ಅಗತ್ಯಗಳಿಂದಾಗಿ ಇತರರು ಮಾಡಿದರೆ ಅವರನ್ನು ದೇವಲಕ ಎಂದು ಕರೆಯಲಾಗುತ್ತದೆ.ತಿರುಮಲೆ ಯಲ್ಲಿ ಪರಿಚಾರಕ ಸನ್ಯಾಸಿಯಾಗಿ, ಮಂತ್ರ ಪುಷ್ಪ ಪಾರಾಯಣ ಮಾಡುವವರು ಆಚಾರ್ಯಪುರುಷರು. ಇವರುಗಳು ವೈಖಾನಸರಲ್ಲ ವೆಂದು ಹೇಳುವುದಾದರೂ ದೇವರ ಭಕ್ತರಾಗಿ ಪೂಜೆಯಲ್ಲಿ ಪಾಲುಗೊಳ್ಳುವರು.

**3. ನಿತ್ಯ ಪೂಜೆ ಹಾಗೂ ಪೂಜಾ ಕಾಲ :**

ಮುಂದೆ ನೀಡಲಾಗಿರುವ ವಿವರಗಳು ಆಲಯದಲ್ಲಿ ಈಚಿನವರೆಗೆ ಅನುಸರಣೆಯಾಗುತ್ತಿದ್ದ ಕಾಲಮಾನಗಳನ್ನು ತಿಳಿಸುತ್ತವೆ 1979 ರಲ್ಲಿ ತಿ.ತಿ.ದೇವಸ್ಥಾನಗಳು ಸೇವೆಗಳ ಕಾಲಗಳನ್ನು ಪರಿಷ್ಕರಿಸಿ ಬೆಳಗ್ಗೆ 6 ಗಂಟೆಗೆ ಮೊದಲು ಎಲ್ಲ ಸೇವೆಗಳೂ ಪೂರ್ಣವಾಗುವಂತೆ ಮಾಡಿ ನಂತರ ಮಧ್ಯ ರಾತ್ರಿಯವರೆಗೆ ದರ್ಶನಾವಕಾಶವನ್ನು ಕಲ್ಪಿಸಿದೆ. ಆರ್ಜಿತ ಸೇವಾಶುಲ್ಕಗಳನ್ನೂ ಬದಲಾಯಿಸಲಾಗಿದೆ(ಇದನ್ನು ಎನ್.ರಮೇಶನ್ ಬರೆದದ್ದು 1980 ರಲ್ಲಿ. ಅನಂತರದಲ್ಲಿಯೂ ನಿತ್ಯಪೂಜೆಯ ಕಾಲ - ಆರ್ಜಿತ ಸೇವಾ ಶುಲ್ಕಗಳು ಹೆಚ್ಚಿನ ಜನದ ಅನುಕೂಲಕ್ಕೆ ತಕ್ಕಂತೆ ಪರಿಷ್ಕೃತವಾಗಿವೆ-ಅನುವಾದಕ - 2015)

ಸುಪ್ರಭಾತ: 4 ರಿಂದ 4.30, ಈ ಸೇವೆಯಲ್ಲಿ ಸ್ವಾಮಿಯ ಸುಪ್ರಭಾತ,ಸ್ತೋತ್ರ,ಪ್ರಪತ್ತಿ,ಮಂಗಳಾಶಾಸನಗಳನ್ನು ಹಾಡಲಾಗುತ್ತದೆ. ತಾಳ್ಳಪಾಕ ಅನ್ನಮಾಚಾರ್ಯರ ವಂಶದವರು ಕೀರ್ತನೆಯನ್ನು ಹಾಡುವರು.

ಶ್ರೀವೆಂಕಟೇಶ್ವರ ಸುಪ್ರಭಾತವು ನಾಲ್ಕು ಭಾಗಗಳಲ್ಲಿದೆ.

ಅ) ಸುಪ್ರಭಾತ - ಸ್ವಾಮಿಯನ್ನು ನಿದ್ದೆಯಿಂದೆಬ್ಬಿಸುವ 29 ಶ್ಲೋಕಗಳು.

ಆ) ಸ್ತೋತ್ರ - ಸ್ವಾಮಿಯ ಮಹಿಮೆಯನ್ನು ಕೀರ್ತಿಸುವ 11 ಶ್ಲೋಕಗಳು.

ಇ) ಪ್ರಪತ್ತಿ - ಸ್ವಾಮಿಯಲ್ಲಿ ಶರಣಾಗುವುದನ್ನು ಸೂಚಿಸಿ ಹಾಡುವ 16 ಶ್ಲೋಕಗಳು.

ಈ) ಮಂಗಳಾಶಾಸನ - ಸ್ವಾಮಿಯ ಕೀರ್ತಿಯನ್ನು ಬೆಳೆಸುವ 14 ಶ್ಲೋಕಗಳು- ಒಟ್ಟು ಎಪ್ಪತ್ತು.

ಸುಪ್ರಭಾತದ ಮೊದಲ ಶ್ಲೋಕ ಕೌಸಲ್ಯೆಯ ಮಗ ರಾಮನಿಗೆ ಹೇಳಿದ್ದು,ಎರಡನೆಯದು ಕಮಲಾಪತಿ ಗೋವಿಂದನಿಗೆ, ಮೂರು,ನಾಲ್ಕು ಲಕ್ಷ್ಮಿಯದು. ನಂತರದ 24 ಶ್ಲೋಕಗಳು ವೆಂಕಟಾಚಲಪತಿ,ಶೇಷಾಚಲಪತಿ, ಶ್ರೀನಿವಾಸ,ಶೇಷಾದ್ರಿವಿಭುಮೊದ ಲಾದ ಹೆಸರಿನ ವೆಂಕಟನಾಯಕನನ್ನು ಉದ್ದೇಶಿಸಿ ಹೇಳಿದ್ದು,29 ನೆಯ ಶ್ಲೋಕವು ಭಕ್ತನನ್ನು ಮೋಕ್ಷ ಕಾಮಿಯಾಗಲು ತೂಗಾಯಿಸುತ್ತದೆ.

ಸ್ತೋತ್ರವು ಪರಮಾತ್ಮನಿಗೆ ತನ್ನ ಸರ್ವವನ್ನೂ ಅರ್ಪಿಸುವುದನ್ನೂ ಅವನ ರಕ್ಷಣೆ ಕೋರುವುದನ್ನೂ ವಿವರಿಸುತ್ತದೆ. ಹತ್ತನೆಯ ಶ್ಲೋಕವಂತೂ ಹೃದ್ರಮ್ಯವಾಗಿ ಭಕ್ತನ ಆಕಾಂಕ್ಷೆಯನ್ನು ವಿವರವಾಗಿ ಚಿತ್ರಿಸುತ್ತದೆ. ತಾನು ಬಹುದೂರದಿಂದ ಬಂದವನೆಂದೂ, ಅಡಿಗಡಿಗೆ ಬರಲಾಗದವನೆಂದೂ,ಆದರೂ ದೇವರು ತನ್ನನ್ನು ಪದೇ ಪದೇ ಸೇವಿಸುವ ಹತ್ತಿರದ ಭಕ್ತನಂತೆಯೇ ಕಂಡು ಅನುಗ್ರಹಿಸ ಬೇಕೆಂದು ಬೇಡಿಕೆಯಿದೆ.

ಅಹಂದೂರತಸ್ತೇ ಪದಾಂಭೋಜಯುಗ್ಮ

ಪ್ರಣಾಮೇಚ್ಛಯಾಗತ್ಯ ಸೇವಾಂ ಕರೋಮಿ

ಸಕೃತ್ಸೇವಯಾ ನಿತ್ಯಸೇವಾಫಲಂ ತ್ವಂ

ಪ್ರಯಚ್ಛ ಪ್ರಯಚ್ಛ ಪ್ರಭೋ ವೇಂಕಟೇಶ

(ಈ ಸ್ವಲ್ಪ ಸೇವೆಯಿಂದಾಗಿ ಇದಕ್ಕೆ ಫಲವಾಗಿ ನಿತ್ಯಸೇವೆ ಮಾಡುವ ಭಾಗ್ಯವನ್ನು ಕರುಣಿಸಬೇಕು - ಇತರ ಫಲದ ಆಸೆಯಿಲ್ಲ ಎಂಬುದೂ ಸೂಚ್ಯವಾಗಿದೆ - ಅನುವಾದಕ)

ಪ್ರಪತ್ತಿಯಲ್ಲಿನ ಮೊದಲ ಪದ್ಯ ಶ್ರೀಲಕ್ಷ್ಮಿಯನ್ನು ಉದ್ದೇಶಿಸಿದ್ದು ಆಕೆಯನ್ನು ವಾತ್ಸಲ್ಯಮಯಿ ಮಾತೆಯೆಂದು ಕರೆದ ಚಿತ್ರಣವಿದೆ.

ಮುಂದಿನ ಹದಿನೈದು ಪದ್ಯಗಳಲ್ಲಿ ಅನುಪಮವಾದ ಪದಜಾಲದಿಂದಲೂ ಅತುಲವಾದ ಭಕ್ತಿಯಿಂದಲೂ ಅಹಂಕಾರವನ್ನು ಪೂರ್ಣವಾಗಿ ತೊರೆದು ತನ್ನನ್ನು ತಾನು ತನ್ನೆಲ್ಲದರೊಡನೆ ಸ್ವಾಮಿಯಲ್ಲಿ ಶರಣಾಗುವುದನ್ನು ಕಾಣಬಹುದು. ಮೊದಲನೆಯ ಪದ್ಯದಲ್ಲಿ ಲಕ್ಷ್ಮಿಯನ್ನು ಕುರಿತ ಪ್ರಾರ್ಥನೆಯಲ್ಲಿ - ತಂದೆಯತ್ತ ತಿರುಗಿದ ಮಗುವು ತಾಯಿಯ ಪ್ರೋದ್ಬಲವನ್ನು ನಿರೀಕ್ಷಿಸುವಂತೆ,ಭಗವಂತನಲ್ಲಿ ಶರಣಾಗುವ ಮುನ್ನ ಸಕಲ ಜೀವಜಾಲದ ಮಾತೆಯ ನೆರವನ್ನು ಪಡೆಯುವ ಅಪೇಕ್ಷೆಯಿದೆ. ಪ್ರಪತ್ತಿಯ ಕೊನೆಯ ಅಥವಾ ಹದಿನಾರನೆಯ ಪದ್ಯದಲ್ಲೂ ಇದೇ ಭಾವನೆಯಿದೆ.

ಋಗ್ವೇದವು ಹೇಳುವಂತೆ ಮನುಷ್ಯ ಪಡೆಯಬಹುದಾದ ಸರ್ವೋತ್ತಮ ಪದವಿಯಾದ ಸ್ವಾಮಿಯ ಪಾದಸಾಕ್ಷಾತ್ಕಾರವನ್ನು ಪ್ರಪತ್ತಿಯ ಇತರ ಪದ್ಯಗಳು ಹೇಳುತ್ತವೆ. ಇದನ್ನೇ ಪಾರ್ಥಸಾರಥಿಯು ಅರ್ಜುನನಿಗೆ ಸೂಚಿಸಿದಂತೆ ಆಲಯದ ಧ್ರುವಬೇರದ ಹಸ್ತವು ಸೂಚಿಸುವುದು.

ಮಂಗಳಶಾಸನದಲ್ಲಿ ಒಂದು ಪದ್ಯದಲ್ಲಿ - 9 ನೆಯ ಪದ್ಯದಲ್ಲಿ - ಸ್ವಾಮಿಯು ತನ್ನ ಪಾದಗಳನ್ನು ತನ್ನ ಕೈಯಿಂದ ತೋರಿಸುತ್ತ ಇವೇ ಮಾನವ ಪಡೆಯಬಹುದಾದ ಅತ್ಯುನ್ನತ ಪದವೆಂದು ಸೂಚಿಸುವ ಅರ್ಥದ ಮನೋಹರವಾದ ಮಾತುಗಳಿವೆ.

ಪ್ರಾಯಸ್ಯ ಚರಣೌ ಪುಂಸಾಂ ಶರಣ್ಯತ್ವೇನ ಪಾಣಿನಾ

ಕೃಪಯಾ ದಿಶತೇ ಶ್ರೀಮದ್ವೇಂಕಟೇಶಾಯ ಮಂಗಳಂ

ಭಕ್ತನು ಭಗವಂತನ ಸಾಮೀಪ್ಯವನ್ನು,ಸರ್ವಕಾಲದಲ್ಲಿಯೂ ಪಡೆದು,ತನ್ನ ಆತ್ಮವನ್ನು,ದೇವರ ಶಾಶ್ವತವಾದ ಕಾರುಣ್ಯದಲ್ಲಿ ಉದ್ಧಾರಗೊಳಿಸಿಕೊಳ್ಳುವ ಅವಕಾಶವಿದು. ನಿಜವೆಂದರೆ ದೇವರಲ್ಲಿ ನಿಜವಾದ ಶರಣಾಗತಿಯನ್ನು ಮಾಡಲು ಬಂದವರಲ್ಲಿ ಅನೇಕರ ಅನುಭವವೂ ಇದೇ ಆಗಿರುತ್ತದೆ. ಸ್ವಾಮಿಯ ಮೃದು ಮಧುರ ಮಂದಹಾಸದ ಭವ್ಯತೆ ಯೆಂದರೆ ಅದನ್ನು ದರ್ಶಿಸುವ ಪ್ರತಿಯೊಬ್ಬನೂ ತನ್ನ ಅಹಂಕಾರವನ್ನು ಕೂಡಲೇ ಕಳೆದುಕೊಳ್ಳುತ್ತಾನೆ.

ಬಂಗಾರದ ಬಾಗಿಲ ಬಳಿ ಸುಪ್ರಭಾತವನ್ನು ಹಾಡಿದ ಮೇಲೆ ಹಿಂದಿನ ರಾತ್ರಿ ಸ್ನಪನ ಮಂಟಪದಲ್ಲಿ ನಿದ್ದೆಗೊಳಿಸಿದ್ದ ಭೋಗ ಶ್ರೀನಿವಾಸ ಮೂರ್ತಿಯನ್ನು ಎಬ್ಬಿಸಿ ಮತ್ತೆ ಗರ್ಭಗೃಹ ಸೇರಿಸಲಾಗುವುದು. ದೇವರಿಗೆ ನವನೀತ ಆರತಿಯನ್ನು ನೀಡಲಾಗುತ್ತದೆ ಹಾಗೂ

ಹಸುವಿನ ಹಾಲಿಗೆ ಬೆಣ್ಣೆ ಸಕ್ಕರೆಗಳನ್ನು ಬೆರೆಸಿ ನಿವೇದಿಸಲಾಗುತ್ತದೆ. ನಂತರ ಈ ಪ್ರಸಾದವನ್ನು ಸರ್ವದರ್ಶನಕ್ಕೆ ಬಂದ ಭಕ್ತರಲ್ಲಿ ವಿತರಿಸಲಾಗುವುದು.

ವೇದಾಂತ ದೇಶಿಕರ ಜೀವನದ ಅಂತ್ಯಕಾಲದಲ್ಲಿದ್ದಿರಬಹುದಾದ ಪ್ರತಿವಾದಿ ಭಯಂಕರ ಅಣ್ಣನ್ ಸುಪ್ರಭಾತವನ್ನು ರಚಿಸಿದರೆಂದು ನಂಬಲಾಗಿದೆ.

15ನೇ ಶತಮಾನದ ಪೂರ್ವದಲ್ಲಿ ಆಲಯದಲ್ಲಿ ಪ್ರಾತಃಕಾಲವನ್ನು ಯಾವರೀತಿ ಸ್ವಾಗತಿಸುತ್ತಿದ್ದರೆಂಬು ದರ ಬಗ್ಗೆ ಶಾಸನಾಧಾರಗಳು ಯಾವುವೂ ಇಲ್ಲ. ಕ್ರಿ.ಶ.1430 ರ ಒಂದು ಶಾಸನವು ದೇವರಾಯ ಮಹಾರಾಯನು ಆಲಯದಲ್ಲಿ ವೇದಪಾರಾಯಣದ ಏರ್ಪಾಡುಗಳನ್ನು ಮಾಡಿದನೆಂದು ಹೇಳುತ್ತದೆ. ಇದರಂತೆಯೇ ಕ್ರಿ.ಶ.1476 ಕ್ಕೆ ಮುಂಚೆ ಆಲಯದಲ್ಲಿ ತಾಳ್ಳಪಾಕ ಪ್ರಬಂಧಗಳ ಕೀರ್ತನೆ ನಡೆಯುತ್ತ ಇತ್ತೆಂಬ ಆಧಾರಗಳಿಲ್ಲ. ತಮಿಳುಪ್ರಬಂಧ ತಿರುಪ್ಪಳ್ಳಿಯೆಳುಚ್ಚಿ ಸಂಸ್ಕೃತದ ಸುಪ್ರಭಾತದ ಪರ್ಯಾಯವಾಗಿದ್ದು, ಈಗ ಸುಪ್ರಭಾತದ ಹೊತ್ತಿನಲ್ಲಿ ಹಾಡದೆ ನಂತರ ತೋಮಾಲ ಸೇವಾಕಾಲದಲ್ಲಿ ಹಾಡಲಾಗುತ್ತದೆ. ಕ್ರಿ.ಶ.1434ರ ಒಂದು ಶಾಸನವು ಆ ವರ್ಷವೇ ಸ್ವಾಮಿಗೆ ಅರುಣೋದಯ,ಸಂಧಿಯ ನಿವೇದನೆಯಾದ ಮೊದಲ ವರ್ಷವೆಂದು ತಿಳಿಸುತ್ತದೆ.

ಸಧ್ಯಕ್ಕೆ ತಿಳಿಯಬಹುದಾದ ಅಂಶವೆಂದರೆ 15 ನೇ ಶತಮಾನದ ಪೂರ್ವದಲ್ಲಿ ಆಲಯದಲ್ಲಿ ಬೆಳಗಿನ ಹೊತ್ತಿಗೆ ಪೂಜೆಯೆಂದರೆ ಮೌನ ಪೂಜೆ ಮಾತ್ರವಾಗಿದ್ದಿತು.

**ಆ. ವಿಶ್ವರೂಪ ಸರ್ವದರ್ಶನ;**

ಸುಪ್ರಭಾತವಾದನಂತರ ಆಲಯದ ಹೊರಗೆ ಕಾದಿರುವ ಭಕ್ತರಿಗೆ ವಿಶ್ವರೂಪ ಸರ್ವದರ್ಶನದ ಅವಕಾಶ ನೀಡಲಾಗುವುದು. ಇದನ್ನು ಆರ್ಜಿತಸೇವೆಯನ್ನಾಗಿ ಮಾಡಲಾಗಿದ್ದು, ಇಂದು ಇದೇ ಸುಪ್ರಭಾತಸೇವೆ ಎಂದಾಗಿದೆ.

ಆಲಯದಲ್ಲಿನ ಒಂದು ಪರಂಪರಾಗತ ನಂಬಿಕೆಯಂತೆ ಬ್ರಹ್ಮನೂ ಇತರ ದೇವತೆಗಳೂ ರಾತ್ರಿಯಲ್ಲಿ ಬಂದು ಸ್ವಯಂಭುವಾದ ಈ ತಿರುಮಲೆಯಪ್ಪನನ್ನು ಸರ್ವಜನಹಿತಕ್ಕಾಗಿ ಪೂಜಿಸುವರು. ಇಂದಿಗೂ ರಾತ್ರಿಯ ವೇಳೆಯಲ್ಲಿ ಗರ್ಭಗುಡಿಯ ಬಾಗಿಲು ಮುಚ್ಚುವ ಮೊದಲು ಆಗಮಶಾಸ್ತ್ರದ ಪ್ರಕಾರವಾದ ಪೂಜಾದ್ರವ್ಯಗಳನ್ನು ಒಳಗೊಂಡ ಐದು ಶುದ್ಧ ನೀರಿನ ಬಟ್ಟಲುಗಳನ್ನು ದೇವರ ಪಾದದ ಬಳಿಯಿಡುತ್ತಾರೆ. ಇಲ್ಲಿಗೆ ನಂತರ ಬ್ರಹ್ಮನೇ ಆಗಮಿಸಿ ಪೂಜೆ ನಡೆಸುವನೆಂದು ಪ್ರತೀತಿ. ಹೀಗಾಗಿ ಬ್ರಹ್ಮನು ಪೂಜಿಸಿದ ತೀರ್ಥದ ಬಟ್ಟಲುಗಳಲ್ಲಿ ಉಳಿದ ನೀರನ್ನು ಭಕ್ತರಲ್ಲಿ ಪ್ರಸಾದವೆಂದು ವಿತರಣೆ ಮಾಡಲಾಗುತ್ತದೆ. ಈ ಸೇವೆಯನ್ನು ಸರ್ವದರ್ಶನವೆಂದು - ಶುಕ್ರವಾರಗಳ ಹೊರತು ಮಿಕ್ಕ ದಿನಗಳಲ್ಲಿ - ಸರ್ವರಿಗೂ ಉಚಿತವೆಂದು ಕರೆಯಲಾಗಿದೆ.

**ಇ. ಶುದ್ದಿ :**

ವಿಶ್ವರೂಪದರ್ಶನವಾದ ಬಳಿಕ ಬಂಗಾರದ ಬಾಗಿಲ ಬಳಿಯ ಪರದೆಯನ್ನೆಳೆದು ಗರ್ಭಗುಡಿಯಲ್ಲಿ ಸ್ವಾಮಿಯ ಹಿಂದಿನ ದಿನದ ಎಲ್ಲ ಪುಷ್ಪಾಲಂಕಾರವನ್ನೂ ತೆಗೆದು ಶುದ್ಧಗೊಳಿಸಲಾಗುತ್ತದೆ. ಪೂಜಾ ಪಾತ್ರೆ, ಪರಿಕರಗಳನ್ನು ಶುದ್ಧಗೊಳಿಸಲಾಗುವುದು. ಎಲ್ಲ ಪುಷ್ಪಗಳನ್ನೂ - ಆಗಮ ಶಾಸ್ತ್ರದ ಆದೇಶಾನುಸಾರ ವಿಶ್ವಕ್ಸೇನರಿಗೆ ಅಲಂಕಾರಮಾಡುವ ಹೂಗಳ ಹೊರತು-ಇನ್ನಿತರ ಬಳಸಲಾಗದಂತೆ ಒಂದು ಬಾವಿಗೆ ಎಸೆಯಲಾಗುವುದು. ತಾಂತ್ರಿಕವಾಗಿ ಇದನ್ನು ನಿರ್ಮಾಲ್ಯ ಶೋಧನವೆನ್ನುವರು. ರಂಗದಾಸನಿಂದ ಸಂಪಂಗಿ ಪ್ರದಕ್ಷಿಣೆಯಲ್ಲಿ ನಿರ್ಮಿತವಾದ ಬಾವಿಗೆ ಈ ಹೂವುಗಳನ್ನು ಹಾಕಲಾಗುತ್ತಿದ್ದಿತು,

ಈ ನಡುವೆ ಪೂಜೆಗಾಗಿ ಶುದ್ಧ ನೀರು ಆಕಾಶಗಂಗೆಯಿಂದ ಬರುತ್ತದೆ. ತಿರುಮಲೆ ಆಲಯದ ಪ್ರಧಾನ ಆಚಾರ್ಯರಾದ ತಿರುಮಲ ನಂಬಿ ಅವರ ಕುಟುಂಬದ ಹಕ್ಕು - ಈ ನೀರಿನ ಜವಾಬ್ದಾರಿ. ಈ ಆಕಾಶಗಂಗೆಯ ನೀರನ್ನೇ ಬೆಳಗಿನ,ಸಂಜೆಯ ಪೂಜೆಗಳಲ್ಲಿ ಬಳಸಲಾಗುತ್ತದೆ ಹಾಗೂ ರಾತ್ರಿಯ ವೇಳೆಯಲ್ಲಿ ಬ್ರಹ್ಮಕೃತ ಪೂಜೆಗೂ ಇದನ್ನೇ ಮೀಸಲಿಡಲಾಗುತ್ತದೆ. ವೈಖಾನಸ ಸಂಹಿತೆಯ ಪ್ರಕಾರ ಪೂಜೆಯ ತೀರ್ಥವನ್ನು ಮಂಗಳವಾದ್ಯಗಳ ಗಾಯನದೊಡನೆ ಆನೆಯ ಮೇಲೆ ಮೆರವಣಿಗೆಯಲ್ಲಿ ತರಬೇಕು. ಮರೀಚಿ

ಸಂಹಿತೆಯಲ್ಲಿ ಈ ಮಾತು ಇಲ್ಲ. ತಿರುಮಲೆಯ ಆಲಯದಲ್ಲಿ ಇಂದು ಬ್ರಹ್ಮೋತ್ಸವಗಳಲ್ಲಿ ಮಾತ್ರವೇ ಮೆರವಣಿಗೆಯಲ್ಲಿ ಜಲವನ್ನ ತರಲಾಗುತ್ತದೆ. ಆಗಲೂ ಹೀಗೆ ತೆಗೆದುಕೊಂಡು ಬಂದ ತೀರ್ಥವನ್ನು ಪೂಜೆಗೆ ಬಳಸದೆ, ಭಕ್ತರು ತಲೆಯಮೇಲಿಟ್ಟುಕೊಂಡು ತಂದ ನೀರನ್ನೇ ಬಳಸಲಾಗುವುದು.

**ಈ. ತೋಮಾಲ ಸೇವೆ :**

(ಆರ್ಜಿತ) ಆರ್ಜಿತವೆಂದರೆ ನಿರ್ದಿಷ್ಟ ಹಣವನ್ನು ದೇವಸ್ಥಾನಕ್ಕೆ ನೀಡುವುದರ ಮೂಲಕ ದೇವರಿಗೆ ಮಾಡುವ ಸೇವೆ. ಈ ತೋಮಾಲೆ ಸೇವೆಯಲ್ಲಿ, ಭೋಗಮೂರ್ತಿಗೆ ಸ್ನಪನವಾಗುವಲ್ಲಿ ಹಾಗೂ ಮೂಲಮೂರ್ತಿಗೆ ಪ್ರಬಂಧ ಪಠಣದೊಡನೆ ನಡೆಯುವ ಪುಷ್ಪ ಕೈಂಕರ್ಯದಲ್ಲಿ ಹಾಜರಾತಿಗೆ ಭಕ್ತರಿಗೆ ಅನುಮತಿ ದೊರೆಯುವುದು.

ತೋಮಾಲೆ ಎನ್ನುವ ಪದ ತಮಿಳಿನಲ್ಲಿ ಕಟ್ಟಿದ ಹೂವುಗಳ ಮಾಲೆ ಎಂಬರ್ಥಕೊಡುವ ತೊಡುತ್ತಮಾಲೆ ಎಂಬುದರ ಸಂಕ್ಷೇಪರೂಪ. ಹೂವುಗಳನ್ನು ವಿವಿಧ ಗುಚ್ಛಗಳಲ್ಲಿ ಕಟ್ಟಿ ಕಣ್ಣಿಗೆ ಕಟ್ಟುವಂತೆ ಅಲಂಕರಿಸಲಾಗುತ್ತದೆ.

ತೋಮಾಲೆ ಸೇವೆಯ ಹೊತ್ತಿನಲ್ಲಿ ದೇವರಿಗೆ ನಿತ್ಯಾವಸರಕ್ಕಾಗಿ ನೀರನ್ನರ್ಪಿಸಲಾಗುತ್ತದೆ. ಮೂಲವರನ್ನೂ ಭೋಗಶ್ರೀನಿವಾಸನನ್ನೂ ಆವರಿಸುವ ಬಂಗಾರದ ಕವಚಗಳಿಗೆ ಅಭಿಷೇಕ ಮಾಡಲಾಗುತ್ತದೆ. ಅಭಿಷೇಕವನ್ನು ಮಂತ್ರಘೋಷದ ನಡುವೆ ಮಾಡಲಾಗುತ್ತದೆ. ನಂತರ ದೇವರನ್ನು ಬಹು ದೊಡ್ಡದಾದ ಹೂವಿನ ಹಾರಗಳಿಂದ ಅಲಂಕರಿಸಿ ತೋಮಾಲಸೇವೆ ಮಾಡಲಾಗುವುದು.

ಆಕಾಶಗಂಗೆಯಿಂದ ತಂದ ನೀರಿಗೆ ಪೂಜಾದ್ರವ್ಯಗಳನ್ನು ಸೇರಿಸಿ ವಿಧಿವತ್ತಾಗಿ ಅರ್ಚನೆ ಮಾಡುವುದರಿಂದ ನಿತ್ಯಾರ್ಚನೆ ಆರಂಭವಾಗುವುದು. ನಂತರ ಕೆಳಕಾಣುವ ರೀತಿಯಲ್ಲಿ ಅವರ ಅರ್ಚನೆ ನಡೆಯುವುದು.

<u>ಮಂತ್ರಾಸನ :</u> ದೇವರಿಗೆ ಅರ್ಘ್ಯ,ಪಾದ್ಯ ಆಚಮನಗಳಿಗಾಗಿ ತೀರ್ಥ ನೀಡುವುದು.

<u>ಸ್ನಾನಾಸನ :</u> ಧ್ರುವ ಮೂರ್ತಿಗೆ ಪ್ರತಿದಿನವೂ ಅಭಿಷೇಕ ಮಾಡುವುದು ಸಾಧ್ಯವಿಲ್ಲದ ಮಾತಾಗಿ ಕೌತುಕಬೇರಕ್ಕೆ ಮಾಡಲಾಗುತ್ತದೆ. ಧ್ರುವ ಮೂರ್ತಿಯ ಪಾದಗಳಿಗಿರುವ ಬಂಗಾರದ ಕವಚಗಳನ್ನು ದಿನವೂ ತೆಗೆದು ಅವುಗಳಿಗೆ ಪ್ರತ್ಯೇಕವಾಗಿ ಅಭಿಷೇಕ ಮಾಡಲಾಗುವುದು. ಭೋಗ ಶ್ರೀನಿವಾಸಮೂರ್ತಿ ಅಥವಾ ಕೌತುಕ ಬೇರವನ್ನು ಅದರ ಸ್ಥಾನದಿಂದ ತೆಗೆದು ಸ್ನಪನ ಪೀಠದಮೇಲೆ ಆಸೀನಗೊಳಿಸಲಾಗುವುದು. ಹಗುರುವಸ್ತ್ರದ ಆವರಣದಲ್ಲಿ ವೇದ ಮಂತ್ರಗಳೊಡನೆ ಅಭಿಷೇಕ ಮಾಡಲಾಗುವುದು. ಎಣ್ಣೆಯನ್ನೂ ಹಚ್ಚಿ, ಹುಣಿಸೆಯ ಹಣ್ಣಿನಿಂದ ತೊಳೆದು ನೀರಿನಿಂದ ಶುಭ್ರಗೊಳಿಸುವರು. ನಂತರ ಹಸುವಿನ ಹಾಲು,ಚಂದನ,ಹರಿದ್ರೋದಕಗಳಿಂದ ಅಭಿಷೇಕವಾಗುವುದು. ಪ್ರತಿ ಅಭಿಷೇಕಾನಂತರವೂ ಜಲಶುದ್ಧಿ ಇರುತ್ತದೆ. ಕೊನೆಯಲ್ಲಿ ಗಂಧೋದಕಸ್ನಾನ ಮಾಡಿಸಿ ನಡುವೆ ಶುದ್ಧೋದಕ ಸ್ನಾನವಾಗುವುದು. ಕೌತುಕ ಬೇರವನ್ನು ಒಣಗಿದ ವಸ್ತ್ರದಿಂದ ಒರೆಸಿ,ಪುಷ್ಪಾಂಜಲಿ ಯನ್ನರ್ಪಿಸಿಅದರ ಜೀವಸ್ಥಾನಕ್ಕೇರಿಸಲಾಗುವುದು. ಧ್ರುವಬೇರಕ್ಕೆ ಪ್ರೋಕ್ಷಣೆ ಆದನಂತರ ಎರಡೂ ವಿಗ್ರಹಗಳ ನಡುವಣ ಚಿನ್ನದ ದಾರಬಂಧವನ್ನು ಪುನಃ ಸ್ಥಾಪನೆ ಮಾಡಿ,ಮುಖ್ಯದೇವರಿಗೆ ಪುಷ್ಪನ್ಯಾಸ ಮಾಡಲಾಗುವುದು. ಇವೆಲ್ಲವನ್ನೂ ಸೂಕ್ತ ಮಂತ್ರ ಘೋಷಗಳ ನಡುವೆ ನಡೆಸಲಾಗುವುದು.

**ಪುಷ್ಪನ್ಯಾಸ :**

ಪುಷ್ಪನ್ಯಾಸವು 1,2,3 ನೇ ಆವರಣಗಳಲ್ಲಿರುವ ದೇವತೆಗಳಿಗೆ ಪುಷ್ಪಸಲ್ಲಿಸುವ ಸೇವೆ.

ಇದು ಆರಂಭವಾಗುವುದು ಪೂರ್ವದಲ್ಲಿರುವ ಪುರುಷ ವಿಗ್ರಹದಿಂದ. ನಂತರ ಮಾರ್ಕಂಡೇಯ, ದ್ವಾರಪಾಲಕರು, ವಿಮಾನ ಪಾಲಕರು- ಮೊದಲಾದವರಿಗೆ ನಡೆಯುತ್ತದೆ. ನಂತರ ಗರ್ಭಗೃಹದ ಬಾಗಿಲ ಹೊಸ್ತಿಲನ್ನು ನೀರಿನಿಂದ ತೊಳೆದು ಅರ್ಚನೆ ಆರಂಭವಾಗಬೇಕು. ಈಗ ಈ ಸೇವೆ ನಡೆಯುವುದಿಲ್ಲ.

ಆಗಮಶಾಸ್ತ್ರದ ಪ್ರಕಾರ ಹಾಜರಿಲ್ಲದ ದೇವತೆಯ ನಿವೇದನೆಯನ್ನು ಸ್ವಾಮಿಯ ಪಾದದಲ್ಲಿಡಬೇಕು. ತಿರುಮಲೆಯ ಆಲಯ ದಲ್ಲಿ ಇತರ ಯಾವ ಸ್ಥಾವರ ಮೂರ್ತಿಯೂ ಇಲ್ಲವಾಗಿ,ಎಲ್ಲ ಹೂವುಗಳನ್ನೂ ಸ್ವಾಮಿಯ ಪಾದದಲ್ಲಿಯೇ ನಿವೇದನ ಗೊಳಿಸಲಾಗುತ್ತದೆ. ಎಲ್ಲ ದೇವತೆಗಳಿಗೂ ಸೇರುವ ಎಲ್ಲ ಪುಷ್ಪಗಳನ್ನೂ ದೇವರ ಪಾದದಲ್ಲಿಯೇ ಸಮರ್ಪಿಸಲಾಗುವುದರಿಂದ ಸ್ವಾಮಿಯ ಪ್ರಸಾದವಾಗಿ ತುಲಸಿಯನ್ನು ಭಕ್ತರಿಗೆ ನೀಡಲಾಗುವುದಿಲ್ಲ.

**ಅಲಂಕಾರಾಸನ;**

ಈ ಆಸನದಲ್ಲಿ ವಸ್ತ್ರ,ಭೂಷಣ,ಉತ್ತರೀಯಗಳನ್ನು ತೊಡಿಸುವರು. ಊರ್ಧ್ವ ಪುಂಡ್ರವನ್ನು ಕರ್ಪೂರದಿಂದ ತಿದ್ದಿ ಯಜ್ಞೋಪ ವೀತವನ್ನು ತೊಡಿಸಲಾಗುತ್ತದೆ. ಶಾಸನಗಳಲ್ಲಿ ಕಂಡು ಬರುವಂತೆ,ಊರ್ಧ್ವ ಪುಂಡ್ರಕ್ಕಾಗಿ ಕರ್ಪೂರ ಹಾಗೂ ಚಂದನವನ್ನು ಕ್ರಿ.ಶ.1465 ರಿಂದ ಈಚೆಗೆ ಬಳಸಲಾಗುತ್ತಿದೆ.

**ಉ. ಕೊಲುವು :**

(ಓಲಗ ಅಥವಾ ದರ್ಬಾರ್) ಕೊಲುವು ಶ್ರೀನಿವಾಸ ಮೂರ್ತಿಯನ್ನು ಹೊರತಂದು ತಿರುಮಾಮಣಿ ಮಂಟಪದಲ್ಲಿ ರಜತ ಪೀಠದಲ್ಲಿ ಶ್ವೇತಛತ್ರದಡಿಯಲ್ಲಿ ಆಸೀನಗೊಳಿಸಲಾಗುವುದು. ಈ ಶ್ವೇತಛತ್ರವನ್ನು ಮೈಸೂರು ಮಹಾರಾಜರು ನೀಡಿದರೆಂದು ಹೇಳಲಾಗಿದೆ. ಕೊಲುವು ಶ್ರೀನಿವಾಸನಿಗೆ ಕರಿದ ಶುಂಠಿಯ ಬೀಜವನ್ನು ಬೆಲ್ಲದೊಡನೆ ಬೆರೆಸಿ ನಿವೇದಿಸಲಾಗುವುದು. ನಡುವೆ ಹಿಂದಿನ ದಿನದ ಆದಾಯ ವೆಚ್ಚದ ಲೆಕ್ಕವನ್ನೊಪ್ಪಿಸಿ, ಹಿಂದಿನ ದಿನದ, ಅಂದಿನ ಹಾಗೂ ಮುಂದಿನ ದಿನದ ಪಂಚಾಂಗವನ್ನು ಓದಲಾಗುವುದು.

ಸಾಮಾನ್ಯವಾಗಿ ಗರ್ಭಗುಡಿಯಲ್ಲಿ ಮಾಡಿದ ಅಲಂಕಾರಾಸನವೇ ದರ್ಬಾರ್ ಆಗಿರುವುದು. ಆದರೆ ಈ ಆಲಯದಲ್ಲಿ ತಿರುಮಾಮಣಿ ಮಂಟಪವೆನ್ನುವ ಮುಖಮಂಟಪದಲ್ಲಿ ಓಲಗವನ್ನು ನಡೆಸಲಾಗುತ್ತದೆ. ಈ ಸಮಯದಲ್ಲಿ ಅರ್ಚಕರಿಗೆ ಆಧಿಕವಾಗಿ ಮಾತ್ರಾದಾನವೆಂದು ಕರೆಯುವ ಅಕ್ಕಿ,ಶುಂಠಿ,ಅಡಿಕೆಗಳ ಪಡಿಯನ್ನು ನೀಡಲಾಗುವುದು

ಈ ವಿಧಿಯಾಗಲೀ,ಕೊಲುವು ಶ್ರೀನಿವಾಸಮೂರ್ತಿಯಾಗಲೀ ಯಾವುದೇ ಶಾಸನದಲ್ಲಿಯೂ ಈ ಸಂಬಂಧದಲ್ಲಿ ಹೆಸರಿಸಲ್ಪ ಟ್ಟಿಲ್ಲ. ಆಲಯದಲ್ಲಿ ಈ ಕ್ರಮ ಎಂದು ಆರಂಭವಾಯಿತೆಂಬುದು ತಿಳಿಯದು.

**ಊ. ಸಹಸ್ರನಾಮಾರ್ಚನೆ :**

(ಆರ್ಜಿತ) ಇಂದೊಂದು ಆರ್ಜಿತ ಸೇವೆಯಾಗಿ ನಿಗದಿಯಾದ ಆರ್ಜಿತ ಸೇವಾ ಶುಲ್ಕ ನೀಡುವುದರಿಂದ ಪ್ರವೇಶ ಪಡೆಯ ಬಹುದಾಗಿದೆ.

ಸಹಸ್ರನಾಮಾರ್ಚನೆಯ ಕಾಲದಲ್ಲಿ ಸ್ವಾಮಿಯನ್ನು ಸಾವಿರ ನಾಮಗಳಿಂದ ಅರ್ಚಿಸಿ,ಸೇವಾದಾರರ ಗೋತ್ರ,ಹೆಸರುಗಳನ್ನು ತಿಳಿಸಿ ಆಶೀರ್ವಾದವನ್ನು ಬೇಡಲಾಗುತ್ತದೆ. ಆಲಯಕ್ಕೆ ಒಂದೇ ಬಾರಿಗೆ ಒಂದು ಧನದ ಮೊತ್ತವನ್ನು ನೀಡುವುದರಿಂದ ಸೇವೆಯನ್ನು ಗೊತ್ತಾದ ದಿನದಲ್ಲಿ ನಡೆಯುವಂತೆಯೂ ಮಾಡಬಹುದು. ಇತರ ದೇವಾಲಯಗಳಲ್ಲಿ ಪ್ರತಿ ಗೃಹಸ್ಥರಿಗಾಗಿ ಪ್ರತ್ಯೇಕವಾದಅರ್ಚನೆ ನಡೆದರೆ ತಿರುಮಲೆಯಲ್ಲಿ ಮಾತ್ರ ಒಂದೇ ಸಹಸ್ರನಾಮಾರ್ಚನೆಯಾಗಿ ನಂತರ ಗೋತ್ರ,ಹೆಸರುಗಳನ್ನು ಓದಲಾಗುವುದು.

ಇಲ್ಲಿನ ಸಹಸ್ರನಾಮಾರ್ಚನೆಯು ಶ್ರೀವೆಂಕಟೇಶ್ವರ ಸ್ವಾಮಿಯ ಸಹಸ್ರನಾಮ ಆಗಿದ್ದು,ಇದನ್ನು ತಿರುಮಲೆಯ ಆಲಯದಲ್ಲಿ ಮಾತ್ರವೇ ಮಾಡಬಹುದು. ಇತರ ವಿಷ್ಣು ಆಲಯಗಳಲ್ಲಿ ವಿಷ್ಣುಸಹಸ್ರನಾಮವು ಸಾಮಾನ್ಯವಾಗಿರುತ್ತದೆ. ಕ್ರಿ.ಶ.1518ರಲ್ಲಿನ ಒಂದು ಶಾಸನವು ಇಲ್ಲಿನ ಸಹಸ್ರನಾಮಾರ್ಚನೆಯನ್ನು ಮೊದಲಬಾರಿಗೆ ಉಲ್ಲೇಖಿಸುವುದು.

ಶ್ರೀ ವೀರಪ್ರತಾಪ ವೀರ ಅಚ್ಯುತರಾಯನು,ಅರ್ಚಕರು ದೇವರ ನಾಮಾವಳಿಯ ಪಾರಾಯಣ ಮಾಡುತ್ತಿರುವಂತೆ ಈ ಅರ್ಚನೆ ಯನ್ನು ಸ್ವಾಮಿಗೆ ಒಮ್ಮೆ ತಾನೇ ಮಾಡಿದ.

**ಎ. ನೈವೇದ್ಯ;** (ಮೊದಲಗಂಟೆ) ಎರಡು ದೊಡ್ಡ ಗಂಟೆಗಳ ಗಣಗಣ ಸದ್ದು ಆದನಂತರ ಜಿಯ್ಯಂಗಾರ್ಯರೂ ಅವರ ಶಿಷ್ಯರೂ,ಇತರ ವೈಷ್ಣವ ಆಚಾರ್ಯಪುರುಷರೂ,ದ್ರಾವಿಡಪ್ರಬಂಧಗಳ ಪಠಣವಾದ ಶಾತ್ತುಮೊರೆಯನ್ನು ಹೇಳುತ್ತಿರುವಾಗ ದೇವರಿಗೆ ಆಹಾರ ನಿವೇದನೆಯಾಗುತ್ತದೆ. ಇದಾದ ನಂತರ ಶಾತ್ತುಮೊರೆಯಲ್ಲಿ ಭಾಗವಹಿಸಿದವರಿಗೆ ಮಾತ್ರ ಅಥವಾ ದಧ್ಯೋದನ ವಿತರಣೆ ಯಾಗುವುದು.

1) ***ಗಂಟೆಗಳ ಅನುರಣನ*** ಹಾಗೂ ನೈವೇದ್ಯಗಳನ್ನು ಆಲಯದಲ್ಲಿ ಮೊದಲನೆಯಗಂಟೆ ಎಂದು ಕರೆಯಲಾಗಿದೆ. ದೇವರಿಗೆ ಆಹಾರ ನಿವೇದನೆಯಾಗುವ ಸಮಯದಲ್ಲಿ ಅರ್ಚಕರು ಮಾತ್ರವೇ ಇದ್ದು ಬಂಗಾರದ ಬಾಗಿಲನ್ನು ಮುಚ್ಚಿರುವರು. ಈ ಹೊತ್ತಿಗೆ ದೊಡ್ಡ ದೊಡ್ಡ ಗಂಗಾಳಗಳಲ್ಲಿ-ಸೋಲ,ಅರ್ಧಸೋಲಗಳ-ಅಳತೆಯವು - ಪಕ್ವವಾದ ಅನ್ನವನ್ನು ಮಂಟಪದ ಒಳಕ್ಕೆ ತಂದಿಡಲಾಗು ವುದು. ವಿಶ್ವಕ್ಸೇನ,ಗರುಡ,ನಿತ್ಯಸೂರಿಗಳಿಗೂ ನಿವೇದನೆಯಾಗುವುದು.

ಮಧುಪರ್ಕವನ್ನು ನಿವೇದಿಸುವ ಪ್ರಯತ್ನ ಒಂದೊಮ್ಮೆ ನಡೆಯಿತಾದರೂ ಸ್ಥಳೀಯ ಸಂಪ್ರದಾಯಗಳಿಗೆ ವಿರುದ್ಧವಾದ್ದರಿಂದ ಈ ಪ್ರಯತ್ನವನ್ನು ಕೈಬಿಡಲಾಯಿತೆಂದು ತಿಳಿದುಬರುತ್ತದೆ.

ಆಗಮ ಹೇಳುವಂತೆ ನಿವೇದನೆಯಾದ ಮೇಲೆ ಪ್ರತಿದಿನವೂ ಮೂರು ಬಾರಿ ಹೋಮವನ್ನು ಮಾಡಬೇಕು. ಕನಿಷ್ಠ ಬೆಳಗಿನ ಪೂಜೆಯ ನಂತರವಾದರೂ ಮಾಡಬೇಕು ಎಂದಿದ್ದರೂ ತಿರುಮಲೆಯ ಆಲಯದಲ್ಲಿ ಇದು ನಡೆಯುವುದಿಲ್ಲ.

**2) *ಮಾತ್ರಾಸನ;*** ಆಲಯದ ಪ್ರಾಕಾರದಲ್ಲಿರುವ ಎಲ್ಲ ದೇವತೆಗಳಿಗೆ ಬಲಿಯನ್ನು ನೀಡಲು ಬಲಿಬೇರ ಅಥವಾ ಕೊಲುವು ಶ್ರೀನಿವಾಸನನ್ನು ಮಂತ್ರ ಪುರಸ್ಸರವಾಗಿ,ಮಂಗಳ ವಾದ್ಯಗಳೊಡನೆ ಕರೆದು ಕೊಂಡು ಹೋಗಬೇಕು. ತಿರುಮಲೆಯ ಆಲಯದಲ್ಲಿ ಈ ಪದ್ಧತಿಯಿರುವಂತೆ ಕಾಣುವುದಿಲ್ಲ. ಅರ್ಚಕ ಪರಿಚಾರಕರು ವಿಮಾನಪ್ರದಕ್ಷಿಣೆಯಲ್ಲಿ ನಡೆದು ಬಂದು ವಿಶ್ವಕ್ಸೇನ, ಗರಡಧ್ವಜ, ಬಲಿಯನ್ನು ನೀಡಿ ಮಿಕ್ಕ ಬಲಿಯನ್ನು ಬಲಿಪೀಠ ಧ್ವಜಸ್ತಂಭಗಳ ನಡುವಿನ ಕಲ್ಲಿನ ಮೇಲಿಡುವರು.

**3) *ಶಾತ್ತುಮೊರೈ;*** ಆಳ್ವಾರರ ಪ್ರಬಂಧಗಳ ವಿಧಿವತ್ತಾದ ವಾಚನವನ್ನು ಶಾತ್ತುಮೊರೈ ಎನ್ನುವರು. ನಾಲಾಯಿರ ಪ್ರಬಂಧ ಗಳನ್ನು ಈಗ ಶ್ರೀವೈಷ್ಣವರು ಮಾತ್ರವೇ ಇದ್ದಾಗ ವಿಧಿವತ್ತಾಗಿ ವಾಚಿಸಲಾಗುತ್ತದೆ. ಅರ್ಚಕರು ಬಲಿಯನ್ನರ್ಪಿಸಿ ಬಂದ ಮೇಲೆ ಗರ್ಭ ಗೃಹದ ಬಳಿಗೆ ಶ್ರೀವೈಷ್ಣವರು ಮಾತ್ರವೇ ಜೀಯಂಗಾರರ ನೇತೃತ್ವದಲ್ಲಿ ಸೇರುವರು. ಪ್ರಬಂಧಗಳ ಭಾಗಗಳನ್ನು ಪಾತ್ರದಿಂದ ಆರಂಭಿಸಿ ವಾಳಿ ತಿರುನಾಮಂ ದೊಡನೆ ಕೊನೆಗೊಳ್ಳುವಂತೆ ಹೇಳಲಾಗುವುದು. ನಂತರ ಇದ್ದವರಿಗೆಲ್ಲ ಅನುಕ್ರಮವಾಗಿ ತೀರ್ಥದೊಡನೆ ಪ್ರಸಾದ ವಿತರಣೆಯಾಗುತ್ತದೆ.

ಕ್ರಿ.ಶ.1476 ರಲ್ಲಿನ ಒಂದು ಶಾಸನವು ದೇವರಿಗಾದ ಶಾತ್ತುಮೊರೆಯನ್ನಲ್ಲದೆ ಆಳ್ವಾರರ ಶಾತ್ತುಮೊರೈಯನ್ನು ಹೆಸರಿಸಿದರೂ,ಈ ಆಚಾರವನ್ನು ಇತರ ಯಾವ ಶಾಸನವೂ ಹೇಳುವುದಿಲ್ಲ. ಪೂರ್ವೋಕ್ತ ಶಾಸನದಲ್ಲೂ ಶಾತ್ತುಮೊರೈ ಆದದ್ದು ರಾಮಾನುಜರ ಗುಡಿ ಯಲ್ಲಿಯೇ ಹೊರತು ಗರ್ಭಗೃಹದಲ್ಲಿ ಅಲ್ಲ. ಶಾತ್ತುಮೊರೈ ಎಲ್ಲಿಯೇ ಆಗುವಂತಿದ್ದರೂ,ಅದು ಶ್ರೀವೈಷ್ಣವರಿಗೇ ಮೀಸಲಾದ ಹಕ್ಕು ಎಂದು ಪರಿಗಣಿತವಾಗಿದ್ದು,ತೋಮಾಲ ಸೇವೆ ಶಾತ್ತುಮೊರೆಯೊಡನೆ ಪೂರ್ಣಗೊಳ್ಳುತ್ತದೆ.

**ಏ. ಸರ್ವದರ್ಶನ :**

ಈ ಸಮಯದಲ್ಲಿ ಸ್ವಾಮಿಯನ್ನು ಎಲ್ಲರೂ ದರ್ಶನಮಾಡಬಹುದಾಗಿದೆ. ಈ ದಿನಗಳಲ್ಲಿ ಸ್ವಾಮಿಯ ದರ್ಶನಭಾಗ್ಯದ ಸಂದಣಿ ಎಷ್ಟುಹೆಚ್ಚಾಗಿದೆಯೆಂದರೆ ಯಾವಾಗಲೂ ಚಲಿಸುತ್ತಿರುವ ಸಾಲಿನಲ್ಲಿಯೇ ಸ್ವಾಮಿಯನ್ನು ಒಂದೆರಡು ಕ್ಷಣಕಾಲ ನೋಡುವಂತಾಗಿದೆ

**ಐ. ಅಪರಾಹ್ನ ಪೂಜೆ;**

(ಎರಡನೇ ಗಂಟೆ) ಎರಡನೇ ಬಾರಿಯ ನಿವೇದನೆಯು ಮಧ್ಯಾಹ್ನದ ಎರಡನೇ ಅರ್ಚನೆ. 108 ನಾಮಾರ್ಚನೆಯ ಬಳಿಕ ನಡೆಯುವುದು. ಇದು ಪೂರ್ಣವಾಗಿ ದೇವಸ್ಥಾನಕ್ಕೆ ಸಂಬಂಧಿಸಿದ್ದು. ವರಾಹ ಪುರಾಣದಲ್ಲಿನ ಅಷ್ಟೋತ್ತರ ಶತನಾಮವನ್ನು ಈಗ ಬಳಸುವರು.

ಈ ನಿವೇದನೆಯ ಸಮಯದಲ್ಲಿ ಗೃಹಸ್ಥರು ದೇವರ ನೈವೇದ್ಯಕ್ಕಾಗಿ ನೀಡಿದ ಚೆರುಪುಗಳನ್ನು-ಅನ್ನಪ್ರಸಾದಗಳು,ಭಕ್ಷ್ಯಾರಗಳು- ದೇವರಿಗೆ ನಿವೇದಿಸಲಾಗುವುದು. ಇದೊಂದು ಆರ್ಜಿತ ಸೇವೆಯಾಗಿದ್ದು,ಗೃಹಸ್ಥರು ನಿವೇದನೆಗಾಗಿ ಶುಲ್ಕವನ್ನು ಸಲ್ಲಿಸುವರು. ಆಲಯ ದವರು ಪ್ರಸಾದಗಳನ್ನು ನಿವೇದಿಸಿ,ಆಲಯದಲ್ಲಿ ವಿತರಣೆಗಾಗಿ ಸ್ವಲ್ಪಪ್ರಸಾದವನ್ನು ಇಟ್ಟುಕೊಂಡು ಮಿಕ್ಕದನ್ನು ಗೃಹಸ್ಥರಿಗೆ ನೀಡುವರು.

ಎರಡನೇ ಗಂಟೆಯ ನಂತರ ಆಲಯದ ನಿತ್ಯಕಾರ್ಯಕ್ರಮದಲ್ಲಿ ಮೊದಲ ಅರ್ಧಕಾರ್ಯಕ್ರಮ ಮುಗಿದಂತಾಗಿ,ಆಲಯದ ಒಳಗಡೆ ಭಕ್ತಾದಿಗಳು ನೀಡಿದ ಸಮರ್ಪಣೆಗಳನ್ನು ಪಾರುಪತ್ಯದಾರರ (ಆಲಯದ ಕೋಶಾಧಿಕಾರಿ) ಬಳಿಗೆ ತರಲಾಗುವುದು.ನಂತರ ಆಲಯದ ಬಾಗಿಲನ್ನು ಮುಚ್ಚುವರು.

**ಒ. ಸರ್ವದರ್ಶನ :**

ಹೆಚ್ಚಿನ ಜನ ಸಂದಣಿಯಿಂದಾಗಿ ಎರಡನೇ ನಿವೇದನೆಯಾದ ಕೂಡಲೇ ಸರ್ವದರ್ಶನವನ್ನು ಅನುಮತಿಸಲಾಗುತ್ತದೆ.

**4 ಓ.ರಾತ್ರಿಪೂಜೆ:**

ರಾತ್ರಿಯಲ್ಲಿ ದೇವರಿಗೆ ಮಾಡುವ ಪೂಜೆ. ಬೆಳಗಿನ ತೋಮಾಲಸೇವೆಯಂತೆಯೇ ಇರುವುದು. ಇದು ಖಚಿತವಾಗಿ ಆಲಯದ ಅಂತರ್ಭಾಗವಾಗಿದ್ದು,ಧಾರ್ಮಿಕ ಕ್ರಿಯಾ ಕಲಾಪವಿಲ್ಲದೆ- ಸಂಬಂಧಿಸದ- ವ್ಯಕ್ತಿಗಳಿಗೆ ಪ್ರವೇಶವಿರದು.

ಅರ್ಧಯಾಮ ಪೂಜೆ ಅಥವಾ ರಾತ್ರಿಪೂಜೆಯನ್ನು ನಿಶಿಪೂಜೆಯೆನ್ನುವರು. ಇದು ಆಲಯದ ಪೂಜೆಯಾಗಿದ್ದು ಪಾಯಸ, ಸಿಹಿಗಳ ನಿವೇದನೆಯುಂಟು.

**ಔ. ನಂತರ ರಾತ್ರಿಯ ಸರ್ವದರ್ಶನವುಂಟು.**

**ಅಂ. ಏಕಾಂತಸೇವೆ; (ಪವಳಿಂಪು ಸೇವೆ):**

ಇದೊಂದು ಆರ್ಜಿತ ಸೇವೆಯಾಗಿದ್ದು, ಶುಲ್ಕ ಸಹಿತವಾದ(ಆಲಯದ ಅನುಕೂಲವನ್ನು ಅವಲಂಬಿಸಿ) ದರ್ಶನಾವಕಾಶ ವಿರುವುದು. ಮಾರ್ಗಶಿರ ಮಾಸದ ಹೊರತು ಮಿಕ್ಕ ಮಾಸಗಳಲ್ಲಿ ಭೋಗಶ್ರೀನಿವಾಸನನ್ನು ಸಾಯಣ ಮಂಟಪವೆನ್ನುವ ಮುಖ ಮಂಟಪದ ರಜತ (ಈಗ ಚಿನ್ನದ ಉಯ್ಯಾಲೆ -2 14) ಉಯ್ಯಾಲೆಯಲ್ಲಿ ಮಲಗಿಸಿ ತೂಗಲಾಗುವುದು. ಇದನ್ನೇ ಏಕಾಂತ ಸೇವೆಯೆನ್ನುವರು. ಈ ಸಮಯದಲ್ಲಿ ಹಾಲು, ಹಣ್ಣುಗಳನ್ನು ದೇವರಿಗೆ ಅರ್ಪಿಸಿ ಒಂದು ಭಾಗವನ್ನು ಪ್ರಸಾದವಾಗಿ ಭಕ್ತರಿಗೆ ನೀಡಲಾಗುವುದು. ಮೂಲಮೂರ್ತಿಯ ಪಾದಗಳಿಗಿರುವ ಕವಚವನ್ನು ತೆಗೆದು ಎರಡು ಚಂದನದ ಬಿಲ್ಲೆಗಳನ್ನು ದೇವರ ಪಾದದ ಬಳಿಯಿಡಲಾಗುವುದು. ಭೋಗ ಶ್ರೀನಿವಾಸ ದೇವರ ವಕ್ಷದ ಮೇಲೆ ಚಂದನದ ಬಿಲ್ಲೆಯ ಅರ್ಧ ಇಡಲಾಗುವುದು. ಧ್ರುವಮೂರ್ತಿಯ ವಕ್ಷಃಸ್ಥಲದಲ್ಲಿರುವ ಅಲರ್ ಮೇಲ್ ಮಂಗೈಗೆ ನಾಲ್ಕನೇ ಒಂದು ಭಾಗದ ಚಂದನದ ಬಿಲ್ಲೆಯನ್ನು ಇಟ್ಟುಬಿಟ್ಟು,ರಾತ್ರಿ ಪೂಜೆ ಮಾಡಲೆಂದು ಬ್ರಹ್ಮನಿಗಾಗಿ ಮತ್ತೊಂದು ಕಾಲುಭಾಗದ ಬಿಲ್ಲೆ ಯನ್ನು ಬಿಡಲಾಗುವುದು. ದೇವರಿಗೆ ಹಾಲು,ಗೋಡಂಬಿಗಳ ನಿವೇದನೆಯಾದ ನಂತರ ತರಿಗೊಂಡ ವೆಂಗಮಾಂಬ ವಂಶಸ್ಥರು ತರುವ ಮುತ್ತಿನ ದಶಾವತಾರ ಚಿತ್ರದ ಆರತಿ ತಟ್ಟೆಯಲ್ಲಿ ಆರತಿ ಮಾಡಲಾಗುವುದು. ತಾಳ್ಳಪಾಕ ಅನ್ನಮಾಚಾರ್ಯರ ವಂಶದವರು ಇಲ್ಲಿ ಸಂಕೀರ್ತನವನ್ನು ಸಮರ್ಪಿಸುವರು.

ವರ್ಷದ ಹನ್ನೊಂದು ತಿಂಗಳಿನಲ್ಲಿ ಈ ಸೇವೆಯನ್ನು ಭೋಗ ಶ್ರೀನಿವಾಸಮೂರ್ತಿಗೆ ಮಾಡಿದರೆ ಮಿಕ್ಕ ಒಂದು ತಿಂಗಳು- ಧನುರ್ಮಾಸದಲ್ಲಿ - ಶ್ರೀಕೃಷ್ಣಸ್ವಾಮಿಗೆ ಈ ಸೇವೆ ನಡೆಯುವುದು.

ಈ ಸೇವೆಯ ಹೊತ್ತಿನಲ್ಲಿಯೇ ನೀರು ತುಂಬಿದ ಬೆಳ್ಳಿಯ ಬಟ್ಟಲುಗಳನ್ನು ಬ್ರಹ್ಮನು ಪೂಜೆ ಮಾಡಲಿಕ್ಕೆಂದು ಇಡಲಾಗುತ್ತದೆ ಚಂದನ, ಅರ್ಘ್ಯಫಲ ಇಡಲಾಗುತ್ತದೆ.

ಕ್ರಿ.ಶ.1513 ಒಂದು ಶಾಸನವು ಶ್ರೀಕೃಷ್ಣದೇವರಾಯನ ಪತ್ನಿಯರಾದ ಚಿನ್ನಾಜಿದೇವಿ,ತಿರುಮಲ ದೇವಿಯರಿಬ್ಬರೂ ಈ ಸೇವೆಯಲ್ಲಿ ಹಾಲಿನ ಬಳಕೆಗಾಗಿ 374 ತೂಕದ ಎರಡು ಚಿನ್ನದ ಬಟ್ಟಲುಗಳನ್ನು ನೀಡಿದರೆಂದು ತಿಳಿಸುವುದು. ಇನ್ನೊಂದುಶಾಸನದ ಪ್ರಕಾರ ಅರ್ಧಯಾಮಸೇವೆಯಲ್ಲಿ ಪಾಲೇಡು ಕುಳಂಬು- ಕಾಯಿಸಿ ಗಟ್ಟಿ ಗೊಳಿಸಿದ ಸುಗಂಧಭರಿತ ಹಾಲು- ಸಿದ್ಧಪಡಿಸಲುಕೃಷ್ಣದೇವ ರಾಯನ ಸೇನಾಪತಿ ಓಬುಲನಾಯಕ ರಾಮನಾಯಕ 200 ಹಸುಗಳನ್ನು ಕ್ರಿ.ಶ. 1514 ರಲ್ಲಿ ನೀಡಿದನು.

ಆಲಯದಲ್ಲಿ ನಿತ್ಯವೂ ನಡೆಯುವ ಸಾಮಾನ್ಯವಾದ ಪೂಜೆ ಎಂದರೆ ಇಷ್ಟೆ. ಆದರೆ ಗುರು ಶುಕ್ರವಾರಗಳಲ್ಲಿ ಆಯಾ ದಿನಗಳ ವಿಶೇಷಪೂಜೆಗಾಗಿ ಎಡೆಮಾಡಿಕೊಡಲಾಗಿದೆ. (ಈಗ 2015ರಲ್ಲಿ - ವಾರದುದ್ದಕ್ಕೂ ಪ್ರತಿವಾರವೂ ಒಂದೊಂದು ವಿಶೇಷ ಪೂಜೆ ಯುಂಟು. ಶನಿ ಭಾನುವಾರಗಳ ಹೊರತು.ಅದರ ಪಟ್ಟಿ.)

**ಅಃ ಪೂಲಂಗಿಸೇವೆ :**

ಗುರುವಾರಗಳಲ್ಲಿ ಮಧ್ಯಾಹ್ನ ಪೂಜೆಯಾದ ಮೇಲೆ ದೇವರು ಪಂಚೆ ಉತ್ತರೀಯಗಳಲ್ಲಿ ಅಲಂಕಾರಗೊಂಡು ಇರುವರು. ಕಸ್ತೂರಿಯನ್ನೂ ಅತಿ ತೆಳುವಾದ ಗೆರೆಯಂತೆ ಇಟ್ಟು ಹೆಚ್ಚಿನದನ್ನು ತೆಗೆಯ ಲಾಗುವುದು. ಸಂಜೆಯಲ್ಲಿ ಶುದ್ಧಿಯಾದ ನಂತರಅಲಂಕಾರ ಕ್ಕಾಗಿ ಹೂಗಳನ್ನೂ ತರಲಾಗುವುದು. ಈಗ ದೇವರಿಗೆ ಸಾಧಾರಣ ಧೋತಿಯಲ್ಲಿ ಅಲಂಕಾರ. ಇದನ್ನು ಎಂದರೆ ಇತರೆಲ್ಲ ಆಭರಣಗಳನ್ನು ತೆಗೆಯುವ ಕ್ರಿಯೆಯೇ ಸಳ್ಳಿಂಪು ಅಥವಾ ಸಡಲಿಂಪು.

ಸಂಜೆಯ ಪೂಜೆ,ನೈವೇದ್ಯಗಳಾದ-ಪಾನಕ,ಹೆಸರುಬೇಳೆಯ ಕೋಸಂಬರಿ ನೀಡಿದ ಬಳಿಕ ಸ್ವಾಮಿಯನ್ನು ಕಸೂತಿ ಹಾಕಿದ ವೆಲ್ವೆಟ್‌ನಿಂದ ಅಲಂಕರಿಸಿ,ಕಿರೀಟದಿಂದ ಪಾದದವರೆಗೆ ಉದ್ದವಾದ ಹಾರಗಳಿಂದ ಅಲಂಕರಿಸುವರು. ಹೂವುಗಳಿಂದಲೇ ಆದ ಈ ಅಲಂಕಾರವನ್ನು ಪೂಲಂಗಿ ಸೇವೆಯೆಂದು ಕರೆಯುವರು. ಇದು ಮೊದಲಿಗೆ ಈ ಆರ್ಜಿತ ಸೇವೆಯಾಗಿದ್ದರೂ ಈಗ ಎಲ್ಲರಿಗೂ ದರ್ಶನಾವಕಾಶ ವಿದ್ದು ಪೂಲಂಗಿ ಸರ್ವದರ್ಶನವೆನ್ನುವರು. ಇದಾದ ನಂತರ ದಿನ ನಿತ್ಯದಂತೆ ಏಕಾಂತಸೇವೆ ನಡೆಯುವುದು

ಈ ಪದ್ಧತಿಯು ಯಾವಾಗ ಯಾರಿಂದ ಏಕೆ ಉಂಟಾಯಿತೆಂಬ ಬಗ್ಗೆ ಶಾಸನಗಳಿಂದ ಏನೂ ತಿಳಿದು ಬರುವುದಿಲ್ಲ. ಪ್ರಾಚೀನ ತಮಿಳು ಕಾವ್ಯ ಶಿಲಪ್ಪದಿಕಾರದಲ್ಲಿ -ಪೂವಾಡೈಯಿಲ್ ಪೊಳಿಂದು ತೋನ್ರಿಯ- ಎಂಬ ಮಾತಿದೆ. ತಮಿಳು ಪದ ಪೂವಾಡೈ ಎಂಬುದು ತೆಲುಗಿನ ಪೂಲಂಗಿ- ಕನ್ನಡದ ಹೂವಿನಂಗಿ ಎಂಬುದರ ಅನುವಾದವಷ್ಟೆ. ಹೀಗಾಗಿ ಕ್ರಿ.ಶ.ಎರಡನೆಯ ಶತಮಾನದಲ್ಲಿಯೇ ಪೂಲಂಗಿಸೇವೆ ಇದ್ದಿತು ಎಂದು ನಿರ್ಧರಿಸಬಹುದು.

ಶುಕ್ರವಾರದಲ್ಲಿ ನಡೆಯುವ ಅಭಿಷೇಕಕ್ಕೆ ಮೊದಲು ಸ್ವಾಮಿಯ ಅಲಂಕಾರಗಳನ್ನು ಬಿಚ್ಚುವಲ್ಲಿನ ಕಷ್ಟವೇ ಪ್ರಾಯಶಃಗುರುವಾರ ಸಂಜೆಯ ಈ ಪೂಲಂಗಿಸೇವೆಗೆ ಕಾರಣವಾಗಿರಬೇಕು.

**ಕ. ಅಭಿಷೇಕ;**

ಸ್ವಾಮಿಗೆ ಶುಕ್ರವಾರಗಳಲ್ಲಿ ಮಾತ್ರ ಅಭಿಷೇಕ ಮಾಡಲಾಗುತ್ತದೆ.ಶುಕ್ರವಾರ ಬೆಳಗ್ಗೆ ಸುಪ್ರಭಾತದ ನಂತರ ತೋಮಾಲಸೇವೆ, ಅರ್ಚನೆಗಳು ಏಕಾಂತದಲ್ಲಿ ನಡೆಯುತ್ತಿರುವಾಗ ಅಭಿಷೇಕದ ಏರ್ಪಾಡುಗಳು - ಪಚ್ಚ ಕರ್ಪೂರವನ್ನು ಪುಡಿ ಮಾಡುವುದು,ಕೇಸರಿಯನ್ನು ಕಲೆಸುವುದು,ಪುನುಗೆಣ್ಣೆಯಿಂದ ಕಲೆಸಿದ ಚಂದನವನ್ನು ಲೇಪಿಸುವುದು, ಪುನುಗು ಸಂಗ್ರಹಿಸುವುದು - ನಡೆಯುತ್ತವೆ.ಇವುಗಳನ್ನು ತೆಗೆದುಕೊಂಡು ವಿಮಾನ ಪ್ರದಕ್ಷಿಣೆಯಲ್ಲಿ ಗರ್ಭಗೃಹದ ಪ್ರದಕ್ಷಿಣೆ ಮಾಡಲಾಗುವುದು.

ಸ್ವಾಮಿಯ ಪಾದದ ಬಳಿ ಕರ್ಪೂರ ಪುನುಗು ಬೆರೆಸಿದ ಉಂಡೆಯನ್ನು ಇರಿಸಲಾಗುವುದು. ಈ ಕಾರ್ಯಕ್ರಮ 60 ರಿಂದ 90 ನಿಮಿಷದ ಮಂತ್ರ ಸಹಿತವಾದ ಕಾರ್ಯಕ್ರಮ. ಪುರುಷಸೂಕ್ತ,ನಾರಾಯಣಸೂಕ್ತ, ಶ್ರೀಸೂಕ್ತ,ಭೂಸುಕ್ತ,ನೀಳಾಸೂಕ್ತ ಹಾಗೂ ಪ್ರಬಂಧ ಗಳನ್ನು ಹಾಡಲಾಗುವುದು. ಅಭಿಷೇಕವು ಮೊದಲಿಗೆ ಶುದ್ಧೋದಕದಿಂದ ಆರಂಭವಾಗಿ ನಂತರ ಅನುಕ್ರಮವಾಗಿ, ಕ್ಷೀರ,ಚಂದನಾಭಿ ಷೇಕ ಮೊದಲಾದವು ನಡೆಯುವವು.ದೇವರ ವಿಗ್ರಹವನ್ನು ಶುದ್ಧಗೊಳಿಸಿದ ಕೆಂಪು ಬಣ್ಣದ ಕೇಸರಿಜಲವನ್ನು ದೊಡ್ಡ ದೊಡ್ಡ ಬೆಳ್ಳಿಯ ಪಾತ್ರೆಗಳಲ್ಲಿ ಸಂಗ್ರಹಿಸಲಾಗುವುದು. ನಂತರ ದೇವರ ದೇಹವನ್ನು ಒರೆಸಿ ದೇಹಾದ್ಯಂತ ಪುನುಗು ಎಣ್ಣೆಯ ಲೇಪನವಾಗುವುದು. ಶುದ್ಧವಾದ ಕರ್ಪೂರದ ಸ್ವಲ್ಪ ಬಿಳಿಯ ನಾಮವನ್ನೂ ಊರ್ಧ್ವಪುಂಡ್ರವನ್ನೂ ತಿದ್ದಲು ಶ್ರೀಗಂಧದೊಡನೆಯೇ ಇಡಲಾಗುವುದು. ನಂತರ ಶ್ರೀಸೂಕ್ತ ಪಠನ ಮಾಡುತ್ತಿರುವಂತೆ ಸ್ವಾಮಿಯ ಹೃದ್ದೇಶದಲ್ಲಿ ಇರುವಂತಹ ಶ್ರೀಲಕ್ಷ್ಮಿಯ ಅಭಿಷೇಕ ಮಾಡಲಾಗುವುದು. ಈ ಆರತಿಯನ್ನು ಮುಗಿಸಿದಾಗ ಬಿಳಿಯ ನಾಮವನ್ನು ದೊಡ್ಡದೂ ಆಳವೂ ಆಗಿರುವಂತೆ ಮಾಡಲಾಗುವುದು ಮತ್ತು ದೇವರು ಪೀತಾಂಬರವೂ ವನ್ನುಟ್ಟು,ಬೆಲೆಬಾಳುವ ವಜ್ರ ವೈಡೂರ್ಯಗಳ ಆಭರಣಗಳನ್ನು ಪಡೆಯುವನು.

ಭೋಗ ಶ್ರೀನಿವಾಸಮೂರ್ತಿಯು ತಿರುಮಲೆಯ ಆಲಯವನ್ನು ಸೇರಿದ ಮೇಲೆ ಅದರ ಮೊದಲ ಅಭಿಷೇಕ-ಭೋಗ ಶ್ರೀನಿವಾಸನಿಗೆ - ಶುಕ್ರವಾರವಾಗಿರಬೇಕೆಂದು ಊಹಿಸಬಹುದು. ನಂತರ ಅದೇ ಸಂಪ್ರದಾಯವಾಗಿರಬಹುದು.

ಕ್ರಿ.ಶ.1429ರಲ್ಲಿ ದೇವರಾಯನ ಕಾಲಕ್ಕೆ ಪ್ರಥಮ ಬಾರಿಗೆ ಪುನುಗು ಬೆಕ್ಕಿನ ಉಲ್ಲೇಖ ವಿರುವ ಶಾಸನವುಂಟು.ಕ್ರಿ.ಶ.1496 ರಂದು ಶಾಸನದ ಪ್ರಕಾರ-ಕಂದಾಡೈ ಅಪ್ಪಚ್ಚಿ ಅಣ್ಣ ಅಯ್ಯಂಗಾರ ಹೇಳುವಂತೆ ಪ್ರತಿ ಪಕ್ಷದ ಶುಕ್ರವಾರದಲ್ಲಿ ಸಹ ಪುನುಗು ಕಾಪ್ಪುವಿನ ರಕ್ಷೆಯನ್ನಿಕ್ಕಿದ. ಕ್ರಿ.ಶ.1506 ರ ಒಂದು ಶಾಸನದಂತೆ ಪುನುಗು ಕಾಪ್ಪು ಹಚ್ಚುತ್ತಿದ್ದದ್ದು ಮೂಲಮೂರ್ತಿಯ ಅಭಿಷೇಕದಲ್ಲಿ ಮಾತ್ರ. ಅಲರ್ ಮೇಲ್ ಮಂಗೈಗೆ ಅಭಿಷೇಕ ಮಾತ್ರವೇ ಆಗುತ್ತಿದ್ದಿತು. ಈಗಲೂ ಹೀಗೆಯೇ ನಡೆದಿದೆ.

ಕ್ರಿ.ಶ.1517 ರಲ್ಲಿನ ಕೃಷ್ಣದೇವರಾಯನ ಒಂದು ಶಾಸನದಿಂದ ಶುಕ್ರವಾರದ ಅಭಿಷೇಕವು ಪ್ರತಿ ವಾರ ಸೇವೆಯ ಒಂದು ಸಾಧಾರಣ ಅಂಶವಾಯಿತು ಎಂದು ತಿಳಿದುಬರುತ್ತದೆ. ಈ ಶಾಸನವು ಪ್ರತಿ ಎಂಟನೇ ದಿನದಂದು ಪುನುಗು ಕಾಪ್‌ಗಾಗಿ 1000 ವರಹಗಳ ಶುಲ್ಕವನ್ನು ವಿಧಿಸುತ್ತದೆ. ಇದರಿಂದಾಗಿ ತಿರುಮಂಜನವು ವಾರಕ್ಕೆ ಒಮ್ಮೆ ಶುಕ್ರವಾರಗಳಲ್ಲಿ ನಡೆದಿತ್ತೆಂಬುದು ಸ್ಪಷ್ಟ.

ಕ್ರಿ.ಶ.1583 ರಲ್ಲಿನ ಏಟ್ಟೂರು ತಿರುಮಲೈ ಕುಮಾರ ತಾತಾಚಾರ್ಯನ ಒಂದು ಶಾಸನವು ಅಭಿಷೇಕ ಸಾಮಾಗ್ರಿಯ ವಿವರವನ್ನೊದಗಿಸುವ ಆಸಕ್ತಿದಾಯಕ ಶಾಸನವಾಗಿದೆ.ಅದರಂತೆ-

ಚಂದನ - 4 ಕುದಿರ (1 ಕುದಿರ = 210 ವರಹಗಳ ತೂಕ)

ಪುನುಗು ಚೀಲ - 200

ಕೇಸರಿ - 30 ಪಣಂ ತೂಕ

ಬಿಳಿವಸ್ತ್ರ - 1 (ಸೇಲೈ)

ಈ ಪಟ್ಟಿಯಲ್ಲಿ ಕಸ್ತೂರಿ ಹಾಗೂ ಅರಿಷಿಣಗಳು ಹೇಳಲ್ಪಟ್ಟಿಲ್ಲ. ಈಗ (1980) ಅಭಿಷೇಕದಲ್ಲಿ ಬಳಕೆಯಾಗುತ್ತಿರುವ ಸಾಮಾಗ್ರಿಗಳೆಂದರೆ-

ಚಂದನ - ಮೂರುವರೆ ಸೇರು

ಪುನುಗು - ಒಂದುವರೆ ವೀಸೆ

ಕೇಸರಿ - 36 ತೊಲ

ಕಸ್ತೂರಿ - 3 ಸೇರು

ಅರಿಷಿಣ - ಕಾಲುಸೇರು

ಕ್ರಿ.ಶ.1465 ರ ಕಂದಾಡೈ ರಾಮಾನುಜ ಅಯ್ಯಂಗಾರ್ಯನ ಶಾಸನದಲ್ಲಿ ಮೊದಲಬಾರಿಗೆ ಅಭಿಷೇಕದಲ್ಲಿ ಅರಿಷಿಣದ ಬಳಕೆಯ ಮಾತು ಬರುತ್ತದೆ. 1583 ರಲ್ಲಿನ ಕುಮಾರ ತಾತಾಚಾರ್ಯನ ಶಾಸನದಲ್ಲಿ ಪ್ರಾಯಶಃ ಅತಿ ಹೆಚ್ಚಾಗಿದ್ದ ಕೇಸರಿಪ್ರಮಾಣ ದಿಂದಾಗಿ ಅರಿಷಿಣ ಬಿಟ್ಟುಹೋಗಿರಬೇಕು.

ಪಚ್ಚಕರ್ಪೂರ ಅಥವಾ ತಿರುಮಣ್ ಕಾಪ್ ಕ್ರಿ.ಶ.1380 ರ ಹೊತ್ತಿಗೇ ಉತ್ಸವ ಮೂರ್ತಿಯ ಅಭಿಷೇಕದಲ್ಲಿ ಬಳಿಕೆಯಾಗಿದೆ. ಇಲ್ಲಿಯೇ ಕಸ್ತೂರಿಯನ್ನೂ ಬಳಸಲಾಗಿದೆ.

ತಿರುಮಣ್ ಕಾಪು ಅಭಿಷೇಕವಾದ ಕೂಡಲೇ ಆಗುವುದು. ಇದಾದ ನಂತರವೇ ಧ್ರುವ ಮೂರ್ತಿಯ ಅಲಂಕಾರ ಆರಂಭ ವಾಗುತ್ತದೆ.

**ಖ. ಶ್ರೀಪಾದರೇಣು;**

ಶುದ್ಧ ಪಚ್ಚಕರ್ಪೂರ ಪುನುಗು ಬೆರೆಸಿದ ಶ್ರೀಪಾದರೇಣುವನ್ನು ದೇವರಿಗೆ ವಂಶಪಾರಂಪರ್ಯವಾಗಿ ಸೇವೆ ಸಲ್ಲಿಸುವವರಿಗೂ, ಹಲವು ಗೃಹಸ್ಥರಿಗೂ ಪ್ರಸಾದ ರೂಪದಲ್ಲಿ ನಿಡಲಾಗುತ್ತಿತ್ತು.

ಸ್ವಾಮಿಯ ಗಲ್ಲದ ಮೇಲೆ ಕರ್ಪೂರವನ್ನು ಹಚ್ಚುವ ಕಾರಣ ತಿಳಿಸುವ ಒಂದು ಪರಂಪರೆಯ ಕಥೆ ಹೀಗಿದೆ. ರಾಮಾನುಜರ ಶಿಷ್ಯನಾದ ಅನಂತಾಳ್ವನ್, ಈಗ ಆಳ್ವಾರ್ ಟ್ಯಾಂಕ್ ಎಂದು ಕರೆಯಲಾಗುವ ಕೆರೆಯನ್ನು ನಿರ್ಮಿಸಲು ತೊಡಗಿದ. ತನ್ನ ಹೆಂಡತಿಯನ್ನು ತನ್ನ ಸಹಾಯಕ್ಕೆ ತೆಗೆದುಕೊಂಡು ಕೆಲಸ ಮಾಡುತ್ತಿದ್ದ. ಅಲ್ಲಿಗೆ ಅನಗತ್ಯವಾಗಿ ನೆರವು ನೀಡಲು ಬಂದ ಯುವಕನ ಗಲ್ಲಕ್ಕೆ ಗಾಯವಾಗು ವಂತೆ ಹೊಡೆದ. ಆಲಯಕ್ಕೆ ಪೂಜೆಗೆಂದು ಹೋದಾಗ ಸ್ವಾಮಿಯ ಗಲ್ಲದಿಂದ ರಕ್ತ ಬರುತ್ತಿರುವುದನ್ನು ಕಂಡು ಗಲ್ಲದ ಗಾಯಕ್ಕೆ ಕರ್ಪೂರ ವನ್ನು ಔಷಧಿಯಾಗಿ ಹಚ್ಚಿದ. ಇದರ ನೆನಪಿನಲ್ಲೇ ಇಂದಿಗೂ ಸ್ವಾಮಿಯ ಅಭಿಷೇಕವಾದ ಮೇಲೆ ಗಲ್ಲಕ್ಕೆ ಕರ್ಪೂರ ಹಚ್ಚುವರು.

ಶ್ರೀಪಾದರೇಣುವನ್ನು ಜೀಯಂಗಾರ್ಯರು ಸ್ವತಃ ಕೈಯಿಂದ ನಾದುವರು. ಇದು ಅಂತಸ್ತಿಗೆ ತಕ್ಕಂತೆ ವಿತರಣೆಯಾಗುತ್ತದೆ. ಕೈಯಲ್ಲಿ ಮಿಕ್ಕದ್ದು ಎಂದು ಸೂಚಿಸುವ ಸ್ವಲ್ಪಭಾಗವನ್ನು - ಕೈನಿಧಿಯನ್ನು - ಯಾತ್ರಿಕರಿಗೂ ಹಂಚುವರು.

**ಗ. ತಿರುಮಂಜನ ತೀರ್ಥ :**

ಸ್ವಲ್ಪ ಕರ್ಪೂರ ಸ್ವಲ್ಪ ಕೇಸರಿ ಬೆರೆತ ಸ್ವಾಮಿಯ ಅಭಿಷೇಕ ತೀರ್ಥವನ್ನೂ ಸರ್ವದರ್ಶನದ ನಂತರ ಯಾತ್ರಿಕರಿಗೆ ನೀಡಲಾಗು ವುದು. ಗೃಹಸ್ಥರಿಗೆ ಶುಷ್ಕ ಚಂದನ,ಶ್ರೀಪಾದರೇಣುಗಳೊಡನೆ ಪಣ್ಯಾರಗಳನ್ನೂ ನೀಡಲಾಗುವುದು. ಅವರು ಇವನ್ನು ಊರುಗಳಲ್ಲಿ ತಮ್ಮ ಬಂಧು ಬಾಂಧವರಲ್ಲಿ ಹಂಚುವರು. ಶುಕ್ರವಾರಗಳಲ್ಲಿ ಸರ್ವದರ್ಶನವಾದ ನಂತರ ರಾತ್ರಿಯಲ್ಲಿ ತೋಮಾಲೆ ಸೇವೆ ಅರ್ಚನೆಗಳನ್ನು ನಿವೇದನೆಯೊಡನೆ ಮಾಡಲಾಗುವುದು. ಏಕಾಂತಸೇವೆಯೂ ಉಂಟು.

**ಘ. ಶಾಸನಗಳಲ್ಲಿ ನಿತ್ಯ ಪೂಜಾ ವಿಧಿಗಳು :**

ತಿರುಮಲೆಯ ಆಲಯದ ಶಾಸನಗಳನ್ನು ಪರಿಶೀಲಿಸಿದಾಗ ಕಾಲಾಂತರದಲ್ಲಿ ತಿರುಮಲೆಯ ಆಲಯದಲ್ಲಿ ದಿನವೂ ಸಾಧಾರಣ ವಾಗಿ ನಡೆಯುತ್ತಿದ್ದ ಪೂಜಾ ವಿಧಿಗಳನ್ನು ತಿಳಿಯಬಹುದಾಗಿದೆ. ಇವುಗಳಲ್ಲಿ ಹಲವಾರುಪೂಜೆಗಳು ನಿಂತು ಹೋಗಿದ್ದರೂ ಕೆಲವು ಇನ್ನೂ ಮುಂದುವರಿದಿವೆ. ಇವುಗಳಲ್ಲಿ ಕೆಲವೆಂದರೆ-

ನಿತ್ಯದೀಪ - ನಿತ್ಯನೈವೇದ್ಯ ವೇದಪಾರಾಯಣ ಸಂಧಿಗಳು - ಅನ್ನಪ್ರಸಾದಗಳು-ಅಭಿಷೇಕ.

***ಅ. ನಿತ್ಯದೀಪ-ನಿತ್ಯನೈವೇದ್ಯ:*** ಕ್ರಿ.ಶ. 830 ಕ್ಕೆ ಸಮನಾಗುವ ಪಲ್ಲವ ಕೋ ವಿಜಯದಂತಿ ವಿಕ್ರಮ ವರ್ಮನ ಆಳ್ವಿಕೆಯ 51 ನೇ ವರ್ಷದ ಶಾಸನವು (219 ಜಿ.ಟಿ.) ದಾಖಲೆಗಳ ಸಂಗ್ರಹದಲ್ಲಿ ಅತಿ ಪ್ರಾಚೀನವಾಗಿದ್ದು,ತಿರುವೆಂಕಟತ್ತು ಎಂಬೆರುಮಾನಡಿಗಳ್ ದೇವರ ಆಲಯದಲ್ಲಿ ನೂತನವಾಗಿ ಪ್ರತಿಷ್ಠಾಪಿತವಾದ ಉತ್ಸವ ಮೂರ್ತಿಯ ಮುಂದೆ ದೀಪದ ಏರ್ಪಾಡು ಮಾಡಿದ್ದನ್ನು ವಿವರಿಸುತ್ತದೆ.

ಚೋಳ ಶಾಸನಗಳು ನಂದಾದೀಪದ,ಆರಾಧನದ (ನೈವೇದ್ಯದ) ಏರ್ಪಾಡುಗಳನ್ನು ಮಾಡಿರುವಿಕೆಯನ್ನು ವಿವರಿಸುತ್ತದೆ. 1 ನೇ ಪರಾಂತಕನ ಅಥವಾ ಮದಿರೈಕೊಂಡ ಕೋ ಪರಕೇಸರಿ ವರ್ಮನ ಆಳ್ವಿಕೆಯ 29ನೇ ವರ್ಷದ ಶಾಸನವು (ಜಿ.ಟಿ.232) ಮಲೈ ನಾಡುವಿನ ಕೊಡುಂಗೋಲೂರನ್ ಹಾಗೂ ತಿರುಚೋಕನೂರು ಪಂಚಾಯಿತಿ (ಸಭೆಯರ್) ಮಾಡಿಕೊಂಡ ಒಪ್ಪಂದವನ್ನು ಕುರಿತು ಆಡುತ್ತ ತಿರುಚೋಕನೂರು ಸಭೈ ನಂದಾದೀಪವನ್ನು ಬೆಳಗಿಸಲು ಒಪ್ಪಿದ್ದನ್ನು ಹೇಳುತ್ತದೆ.

ಇನ್ನೊಂದು ಶಾಸನವು (ಜಿ.ಟಿ.234) ಇದೇ ರಾಜನ ಆಡಳಿತದ 10 ನೇ ವರ್ಷದ್ದಾಗಿ ನಂದಾದೀಪಕ್ಕಾಗಿ ಬಿಟ್ಟ ಒಂದು ಠೇವಣಿಯನ್ನು ಕುರಿತು ಹೇಳುತ್ತದೆ. 1 ನೇ ರಾಜರಾಜನ ಕಾಲದಲ್ಲಿ ಒಬ್ಬಾನೊಬ್ಬ ಅರುಳಕ್ಕಿ ಅಥವಾ ರಾಜರಾಜ ಮೂವೇಂದ್ರಚೋಲನ್ ಆಲಯದಲ್ಲಿ ದೀಪವನ್ನು ಬೆಳಗಿಸಲು 40 ಕಳಂಜು ಚಿನ್ನವನ್ನು ಆಲಯದ ಭಂಡಾರಕ್ಕೆ ಸಮರ್ಪಿಸಿದ ಎನ್ನುತ್ತದೆ. (ಜಿ.ಟಿ.221ರಿಂದ 216) ಟಿ.ಟಿ.20 ನೇ ಶಾಸನವು ರಾಜೇಂದ್ರ ಚೋಳದೇವ ಅಥವಾ ಶ್ರೀ ಕೊಪ್ಪಾಟ್ರ ಕೇಸರಿ - ಪನ್ಮಾರ್ ಆಳ್ವಿಕೆಯಲ್ಲಿ ನಂದಾದೀಪದ ಏರ್ಪಾಡಿಗೆ ಮಾಡಿದ ವ್ಯವಸ್ಥೆಯನ್ನು ವಿವರಿಸುತ್ತದೆ. ಜೊತೆಗೇ ಅಂದಿನ ಕಾಲದಲ್ಲಿ ಆಲಯಗಳ ಆಡಳಿತದಲ್ಲಿ ರಾಜ್ಯಾಧಿಕಾರದ ಉಸ್ತುವಾರಿಯ ಬಗ್ಗೆಯೂ ವಿವರಗಳನ್ನು ನೀಡುತ್ತದೆ. ತಿರುಮಲೆಯ ಆಲಯದಲ್ಲಿ 24 ನಂದಾದೀಪಗಳನ್ನು ಹಚ್ಚುವ ಒಪ್ಪಂದ ಮಾಡಿಕೊಂಡ ತಿರುಮಂಡೆಯಂ ಪಂಚಾಯಿತಿಯು 22 ದೀಪಗಳನ್ನು ಬಿಟ್ಟು ಎರಡೇ ದೀಪಗಳನ್ನು ಬೆಳಗಿಸುತ್ತಿರುವ ವಿಷಯ ರಾಜ ಪ್ರತಿನಿಧಿಯಾದ ಅಧಿಕಾರಿ ಕ್ರೊರಮಂಗಲಂ ಒಡೆಯನ್‌ನ ಗಮನಕ್ಕೆ ಬಂದಾಗ, ಅಧಿಕಾರಿಯು ಅದನ್ನು ವಿಚಾರಿಸಿ, ಪಂಚಾಯಿತಿಯವರು ನಿರ್ಲಕ್ಷ್ಯ ಹೊಂದಿರುವುದನ್ನು ತಿಳಿದುಕೊಂಡು ಇಡೀ ವ್ಯವಸ್ಥೆಯನ್ನು ಆಲಯದ ಅಧಿಕಾರಿಗಳೇ ನಿರ್ವಹಿಸಬೇಕೆಂದು ಆಜ್ಞೆ ಮಾಡಿದನು. ನೈವೇದ್ಯಕ್ಕೆ ಬೇಕಾದ ಎಲ್ಲ ಸಾಮಾಗ್ರಿಗಳನ್ನೂ ತಿರುಪತಿಯಿಂದ ತಿರುಮಲೆಗೆ ದಿನವೂ ಸಾಗಿಸುತ್ತಿದ್ದರೆಂದು ಪ್ರಾಸಂಗಿಕವಾಗಿ ತಿಳಿಸುವ ಈ ಶಾಸನವು ತಿರುಮಂಡೆಯಂ ಪಂಚಾಯಿತಿಗೆ ತಿರುಮಲೆಯ ಯಾವುದೋ ಒಂದು ಸೇವೆಯ (ಪರಿಚಾರಿಕೆ) ಸಂಬಂಧದಲ್ಲಿ ಆಲಯವು 3 ಪೊನ್ ಹಣವನ್ನು ಸಂದಾಯ ಮಾಡಬೇಕಾಗಿದ್ದಿತು ಎಂದೂ ತಿಳಿಸುವುದು.

13 ನೇ ಶತಮಾನದಲ್ಲಿ ಭಕ್ತರು ನಿತ್ಯ ದೀಪಕ್ಕೂ ನಿತ್ಯ ನೈವೇದ್ಯಕ್ಕೂ ಏರ್ಪಾಡು ಮಾಡಿದ್ದನ್ನು ನಾವು ಕಾಣಬಹುದು.ಅಂದಿನ ದಿನಗಳಲ್ಲಿ ಒಂದು ನಂದಾದೀಪದ ವೆಚ್ಚಕ್ಕೆಂದು 40 ಕಳಂಜು ಚಿನ್ನವನ್ನು ಆಲಯಕ್ಕೆ ನೀಡುವುದರ ಬದಲಿಗೆ, ಇದೇ ಸೇವೆಗಾಗಿ ಆಲಯಕ್ಕೆ ಹಸುಗಳನ್ನು ದಾನ ಮಾಡಿದ್ದೂ ಉಂಟು.ತ್ರಿಭುವನ ಚಕ್ರವರ್ತಿಗಳ್ ಶ್ರೀ ವೀರನರಸಿಂಹ ಯಾದವರಾಯರ ಆಳ್ವಿಕೆಯ 101,118,176,ಟಿ.ಟಿ. ಹಾಗೂ 112,113 ಜಿ.ಟಿ. ಶಾಸನಗಳೂ,ತ್ರಿಭುವನ ಚಕ್ರವರ್ತಿಗಳ್ ವಿಜಯಗಂಡ ಗೋಪಾಲದೇವರ ಆಳ್ವಿಕೆಯ 73,111,173 ಟಿ.ಟಿ.ಶಾಸನಗಳೂ,ನಂದಾದೀಪವನ್ನು ಬೆಳಗಿಸಲು ಚಿನ್ನ,ಬೆಳ್ಳಿ ನಾಣ್ಯಗಳನ್ನು ನೀಡುವಿಕೆಯ ಅಥವಾ ಹಸುಗಳ ದಾನದ ಮೂಲಕ ಏರ್ಪಾಡು ಮಾಡಿದ್ದನ್ನು ವಿವರಿಸುತ್ತವೆ.

ವಿಜಯನಗರದರಸರ ಕಾಲದಲ್ಲಿ ನಂದಾದೀಪದ ಏರ್ಪಾಡು ಹಿಂದಾಗಿ,ನೈವೇದ್ಯಸೇವೆಯು ಮುಂದಾಯಿತು. ಜೊತೆಗೇ ಅಂದು ಪ್ರಚಲಿತವಾಗಿದ್ದ 40 ಕಳಂಜು ಚಿನ್ನಕ್ಕೆ ಬದಲಾಗಿ ಹಸುಗಳನ್ನು ದಾನ ನೀಡುವ ಪ್ರವೃತ್ತಿ ಹೆಚ್ಚಾದದ್ದನ್ನೂ ನಾವು ಕಾಣಬಹುದು. ಕಾರಣ ತುಪ್ಪದ ಉತ್ಪಾದನೆಯಲ್ಲಿ ಹಸುಗಳು ನೇರವಾಗಿ ಸಹಾಯವಾಗುವುದೇ ಅಲ್ಲದೆ ಯಾತ್ರಿಕರಿಗೆ ಅಗತ್ಯವಾದ ಇನ್ನಿತರ ಉತ್ಪಾದನೆಗಳು, ಹಾಲು,ಮೊಸರು ಬೆಣ್ಣೆಗಳಲ್ಲೂ - ಇವುಗಳು ಪ್ರಯೋಜನಕಾರಿಗಳಾಗಿದ್ದದ್ದು. ಶ್ರೀ ವೆಂಕಟೇಶ್ವರಸ್ವಾಮಿಯ ನಿತ್ಯದೀಪ ನೈವೇದ್ಯ

ಗಳಲ್ಲಿ ವಿಜಯನಗರದ ಪ್ರಥಮ ವಂಶದ ದೇವರಾಯ 1 ಹಾಗೂ ಎರಡನೇ ದೇವರಾಯ ಅವರ ಅಮಾತ್ಯನಾಗಿದ್ದ ಅಮಾತ್ಯ ಶೇಖರ ಮಲ್ಲಣನನ್ನು ಉಲ್ಲೇಖಿಸುವ ಸಂಸ್ಕೃತಶಾಸನ ಟಿ.ಟಿ. 92 ಅನ್ನು ನೋಡಬಹುದು.

ಸಾಳುವ ನರಸಿಂಹನ ಕಾಲದ (70 ಟಿ.ಟಿ.) ಒಂದು ಶಾಸನವು ಶ್ರೀ ವೆಂಕಟೇಶ್ವರಸ್ವಾಮಿಯ ಪೂಜೆಯಲ್ಲಿ ದಿನವೂ ನಿವೇದಿಸಲು ದಧ್ಯೋದನದ ಮೊಸರಿಗಾಗಿ 40 ಹಸುಗಳನ್ನು ಶ್ರೇಷ್ಠ ವೈಷ್ಣವಾಚಾರ್ಯ ಕಂದಾಡೈ ರಾಮಾನುಜೈಂಗಾರ್‌ನು ಆಲಯಕ್ಕೆ ಶಕ 1390 (28-2-1462) ರಲ್ಲಿ ನೀಡಿದ್ದನ್ನು ವಿವರಿಸುವುದು.

ತಿ.ತಿ.59 ಸ್ವಲ್ಪ ವಿಶಿಷ್ಟವಾದ ದಾಖಲೆಯಾಗಿದೆ. ಸಾಳುವ ನರಸಿಂಹನ ಕೀರ್ತಿ ಬೆಳಗುವಂತೆ ಶಕ ವರ್ಷ 1384 ರಲ್ಲಿ (ಕ್ರಿ.ಶ.1462) ಚಂದ್ರಗಿರಿ ರಾಜ್ಯದ ನಾರಾಯಣಪುರ ಪರ್ರುವಿನ ಉಪವಿಭಾಗವಾದ ಸಾತ್ತುಕುಡಿ ಮರುದೂರು ಗ್ರಾಮದವರಾದ (ಹೆಗ್ಗಡೆಗಳು) ಕೊನೇರಿ ಹಾಗೂ ಉಲಗಳಂದವೇಲನರು ತಮ್ಮ ಗ್ರಾಮದ ಹಲವು ನಿವಾಸಿಗಳನ್ನು, - ಅವರಲ್ಲಿ ನಾಲ್ವರ ಹೆಸರನ್ನು ತಿಳಿಸುತ್ತ ತಿರುವೆಂಕಟ ಮುಡಿಯಾನನ ನಂದಾದೀಪವನ್ನು ಹಚ್ಚುವ ಕೆಲಸಕ್ಕೆ (ತಿರುವಿಳಕ್ಕುಕುಡಿ) ಕಳುಹಿಸಿಕೊಡುತ್ತ ವಿಧದಲ್ಲಿಯೇ ದೇವರಿಗೆ ತಮ್ಮ ಸಂತಾನದ ಮೂಲಕ ನಿರಂತರ ಸೇವೆ ಸಲ್ಲಿಸಬೇಕೆಂದು ನಿರ್ದೇಶಿಸಿರುವುದನ್ನು ನಾವು ಕಾಣಬಹುದಾಗಿದೆ. ಅಂದು ಪ್ರಚಲಿತವಿದ್ದ ಚಾಳುಕ್ಯ ನಾರಾಯಣನ್ ಕಲ್ ಅಳತೆಯಲ್ಲಿ ಎರಡು ಮರಕ್ಕಲ್ ತುಪ್ಪವನ್ನು ವಾರ್ಷಿಕವಾಗಿ ಇವರುಗಳು ನೀಡ ಬೇಕೆಂದೂ ಅದಕ್ಕಾಗಿ ಜೀಯರ್ ಸಹಿಹಾಕಿದ ರಸೀದಿಯನ್ನು ಪಡೆಯಲರ್ಹರೆಂದೂ ತಿಳಿಸಲಾಗಿದೆ.

***ಆ . ಸಂಧಿಗಳು (ನೈವೇದ್ಯ)*** ಮೊದಲ ಶತಮಾನಗಳಲ್ಲಿ ದೇವರ ಮುಂದೆ ಬೆಳಗಿಸುತ್ತಿದ್ದ ದೀಪಗಳಿಗೆಂದು ದಾನ ನೀಡುವುದು ಹಿಂದಾಗಿ ವಿಜಯನಗರದರಸರ ಕಾಲದಲ್ಲಿ ಭಕ್ತರಿಗೆ ಅಗತ್ಯವೆನ್ನಲಾದ ಆಹಾರ ನಿವೇದನೆಗಳು ಹೆಚ್ಚಾದವು ಎಂಬುದನ್ನು ಹಿಂದೆಯೇ ಹೇಳಿದೆಯಷ್ಟೆ. ಈ ವಿಧಾನ ಎಷ್ಟು ಪ್ರಸಿದ್ಧವಾಯಿತೆಂದರೆ ಬೇರೆ ಬೇರೆ ಉತ್ಸವಕಾಲಗಳಲ್ಲಿ ಮಾತ್ರವೇ ಅಲ್ಲದೇ ದೈನಂದಿನ ನಿವೇದನೆ ಯಲ್ಲೂ ಪ್ರತಿದಿನದ ಬೇರೆ ಬೇರೆ ಸಮಯದ ಪೂಜೆಗಳಲ್ಲಿಯೂ ನಿವೇದನೆಗಾಗಿ ಏರ್ಪಾಡು ಮಾಡಲಾಯಿತು. ಹೀಗಾಗಿ ಪ್ರತಿಷ್ಠಿತ ದೇವರಿಗೆ ಅರ್ಪಿತವಾಗುವ ಆಹಾರ ಹಾಗೂ ವಿವಿಧ ಕಾಲಗಳಲ್ಲಿ ನೈವೇದ್ಯ ಮಾಡುವಿಕೆ ಎಷ್ಟು ಹೆಚ್ಚಾಯಿತೆಂದರೆ ಇದು ದಿನದ ಬಹು ಪಾಲು ಸಮಯವನ್ನೂ ಹಲವಾರು ಮಂದಿಯ ಅಡುಗೆಯ ಸಹಾಯವನ್ನೂ ಆಪೇಕ್ಷಿಸುವಷ್ಟು ದೊಡ್ಡದಾಗಿ ಬೆಳೆಯಿತು. ಈ ರೀತಿಯ ಪವಿತ್ರ ನಿವೇದನೆಗಳ ಜೊತೆಗೇ ಹಲವಾರು ಭಕ್ತರು ವಿಶೇಷ ಸನ್ನಿವೇಶಗಳಲ್ಲಿ ತಿರುಪ್ಪಾವಾಡೈ ಎಂಬ ಹೆಸರಿನಲ್ಲಿ 20 ಮರಕ್ಕಲ್‌ಗಳಷ್ಟು ಪಕ್ವಾನ್ನವನ್ನು ಅರ್ಪಿಸಿರುವುದೂ ಉಂಟು. (54,197,253 ತಿ.ತಿ,151 ಜಿ.ಟಿ.)

ಯಾವುದೇ ವಿಧದ ಅಥವಾ ಪ್ರಮಾಣದ ನೈವೇದ್ಯದರ್ಪಣೆ ಈಗ - ತ್ರಿಕಾಲ ಪೂಜೆಯ - ದೇವರ ಪೂಜೆಯ - ಎಲ್ಲ ಕಾರ್ಯ ಕ್ರಮಗಳ ಕೊನೆಯಲ್ಲಿ ನಡೆಯುತ್ತದೆ. ಇದು ಮುಂಜಾನೆ ಆರಂಭವಾಗಿ ರಾತ್ರಿ ಮುಗಿಯುವುದು. ಪ್ರಾಚೀನ ಕಾಲದಲ್ಲಿ ಈ ಮೂರು ಹೊತ್ತಿನ ಪೂಜೆಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪೂಜಾ ಕಾರ್ಯಕ್ರಮಗಳಿದ್ದು ಹೆಚ್ಚು ಹೆಚ್ಚು ಬಾರಿ ನಿವೇದನೆಯಾಗುತ್ತಿದ್ದವು. ಎರಡು ಅನುಕ್ರಮ ಪೂಜೆಗಳ ನಡುವೆಯಲ್ಲಿ ಸಂಧಿಕಾಲವಿದ್ದು ಈ ಸಂಧಿಯಲ್ಲಿ ನಿವೇದನೆಗಳಾಗುತ್ತಿದ್ದವು. ಶಾಸನಗಳಲ್ಲಿ ಮೊದಲಿಗೆ ಸಂಧಿಯೆಂಬುದು ಎರಡು ಪೂಜೆಗಳ ನಡುವೆ ನೈವೇದ್ಯ ಸಮರ್ಪಣೆಯ ಕಾಲವನ್ನು ಸೂಚಿಸುವಂತಿದ್ದರೂ ಕಾಲಕ್ರಮೇಣ ವಿವಿಧ ಅರ್ಥಗಳಿಗೆಡೆಯಾಯಿತು. ಉದಾ; ಸಂಧಿ ಮುಪ್ಪದು (ಪಕ್ವಾನ್ನದ ಮೂವತ್ತು ಘಟಕ) ಪಗಲ್ ಸಂಧಿ - ದಿನದ ನೈವೇದ್ಯ- ಮೊದ ಲಾಗಿ. ಶಾಸನಗಳಲ್ಲಿ ಇಂತಹ ಅನೇಕ ಸಂಧರ್ಭಗಳುಂಟು - ಉದಯಕಾಲ,ಸಿರುಕಾಲಂ, ಅರುಣೋದಯಕಾಲಂ,ಅರ್ಧಯಾಮಂ - ಮೊದಲಾದವುಗಳು. ಈಗಲೂ ಬೆಳಗಿನಿಂದ ರಾತ್ರಿಯವರಿಗೆ ಹಲವಾರು ಪ್ರತ್ಯೇಕ ಕಾರ್ಯಕ್ರಮಗಳಿಂದ ಒಂದು ನಿರಂತರವಾದ ಪೂಜಾ ವ್ಯವಸ್ಥೆಯನ್ನು - ಸುಪ್ರಭಾತ, ತೋಮಾಲಸೇವೆ,ಕೊಲುವು,ಪಂಚಾಂಗಶ್ರವಣ,ಲೆಕ್ಕಪತ್ರ ನಿವೇದನ, ಸಹಸ್ರನಾಮಾರ್ಚನೆ,

ಮಹಾನೈವೇದ್ಯ ಮೊದಲಾದವುಗಳು - ಸಾಲು - ಕಂಡುಬರುತ್ತದೆ. ಹೀಗಾಗಿ ಯಾವ ಒಂದು ಕಾರ್ಯಕ್ರಮದ ಮೊದಲೋ, ನಂತರವೋ ನಿವೇದನೆ ಮಾಡಲು ಹಿರಿಕಿರಿಯ ದತ್ತಿ ದಾನಗಳಿಂದಾಗಿ ಪ್ರಾಚೀನಕಾಲದಲ್ಲಿಯೂ ಇದೇ ರೀತಿ ನಡೆಯುತ್ತಿದ್ದಿತ್ತು ಎಂಬ ತಿಳಿಯಬಹುದು. ಇವುಗಳಲ್ಲಿ ಮೂರು ಅವಧಿಗಳನ್ನು ಸ್ಪಷ್ಟವಾಗಿ ತಿಳಿಯಬಹುದು. ಉದಯಕಾಲಂ (ಉಷಃಕಾಲ)ನಲ್ಲಿ ನೀಡುವ ಹಗುರ ನೈವೇದ್ಯ. ತಿರುವಡಿವಿಳಕ್ಕಿನ ಪೊಳುದು (ಸ್ವಾಮಿಯ ಪವಿತ್ರ ಪಾದಗಳನ್ನು ತೊಳೆಯುವ ಸಮಯ) ಇದು ತೋಮಾಲೆ ಸೇವೆಯ ಭಾಗ. ಅರ್ಧಯಾಮ - ರಾತ್ರಿಯ ಆರಂಭದ ಸಮಯ. ಮಿಕ್ಕದ್ದನ್ನು ಗುರುತಿಸಲಾಗದು.

ತಿ.ತಿ. 195 ರಲ್ಲಿ ಉಕ್ತವಾಗಿರುವ ಸಿತಕರಗಂಡನ್ ಸಂಧಿಯೇ ಈ ರೀತಿಯ ನೈವೇದ್ಯ ಸಮರ್ಪಣೆಯ ಮಾಹಿತಿಯನ್ನು ಒದಗಿಸುವ ಮೊದಲ ಶಾಸನವಾಗಿದೆ. ಇದು ವಿಜಯನಗರದ ಕಾಲಕ್ಕೆ ಸೇರಿದ್ದು, ತಿರುವೆಂಕಟನಾಥಯಾದವರಾಯನ ಸೇನಾಪತಿ ಯಾಗಿದ್ದ ರಾಹುತ್ತರಾಯ ಸಿಂಗಯದಣ್ಣಾಯಕನು ಇಳತ್ತೂರು ನಾಡಿನ ಪೊಂಗಲೂರು (ಸಿಂಗಾನಲ್ಲೂರು) ಗ್ರಾಮವನ್ನು (ಇದ್ನು ಮೊದಲಿಗೆ ತಿರುವೆಂಕಟನಾಥಯಾದವರಾಯನು ಸಿಂಗಯದಣ್ಣಾಯಕನಿಗೆ ಸರ್ವಮಾನ್ಯಗ್ರಾಮವಾಗಿ ನೀಡಿದ್ದ,) ಆಲಯಕ್ಕೆ ತಿರುವಿಡ್ಡೈಯಾಟ್ಟಂ ಗ್ರಾಮವಾಗಿ ದಾನ ಮಾಡುತ್ತ ಆಲಯದಲ್ಲಿ ನಿತ್ಯ ನೈವೇದ್ಯದ ಏರ್ಪಾಡು ಮಾಡಿದ.

ತಿ.ತಿ. 106 ನೇ ಶಾಸನ ಹೇಳುವಂತೆ ತಿರುಮಲೆಯ ಪಂಕಯಚ್ಚೆಲ್ಲಿ ತಿರುನಂದನವನದ ಪರ್ಯವೇಕ್ಷಕರಾದ ಕೋಯಿಲ್ ಕೇಳ್ವಿ ಎಂಬೆರುಮಾನಾರ್ ಜೀಯರು ಪ್ರತಿದಿನವೂ ಒಂದು ತಿರುಪ್ಪೋನಕ (ತಿರುಬೋನ- ಅಕ್ಕಿ ತುಪ್ಪಗಳಿಂದ ಮಾಡಿದ ಪಕ್ವಾನ್ನ)ನಿವೇದನೆ ಯನ್ನು ಆಲಯದಲ್ಲಿ ಶಕ 1367ರಲ್ಲಿ ಏರ್ಪಡಿಸಿದರು. ಇದರಂತೆಯೇ ಶಕ 1380 ರಲ್ಲಿ ಪೆರಿಯ ಪೆರುಮಾಳ್ ಜೀಯರು ಎರಡು ತಿರುಪ್ಪೋನಕಗಳನ್ನು ಏರ್ಪಡಿಸಿದರು. ಶಕ 1372 (ಕ್ರಿ.ಶ. 1450) ರ ತಿ.ತಿ. 23 ನೇ ಶಾಸನವು ರಾಯರ್ ಸಂಧಿಯನ್ನು ಕುರಿತು ಹೇಳುತ್ತದೆ.

ಕೃಷ್ಣರಾಯ ಅಚ್ಯುತರಾಯರು ಏರ್ಪಡಿಸಿದ ನೈವೇದ್ಯಗಳ ಬಗ್ಗೆ ಶಾಸನಗಳು ನೇರವಾಗಿ ಹೇಳುವುದಿಲ್ಲವಾದರೂ ಅಚ್ಯುತ ರಾಯನ ಪತ್ನಿ ವರದಾಜೀ ಅಮ್ಮನವರು ಏರ್ಪಡಿಸಿದ ನಿವೇದನೆಗಳ ಸಮರ್ಪಣೆಯ ಕಾಲವನ್ನು ಸೂಚಿಸುತ್ತ ಇವರಿಬ್ಬರ ನಿವೇದನೆಗಳ ಸಮರ್ಪಣೆಯಾದ ನಂತರ ಆಗಬೇಕು ಎಂದು ಸೂಚಿಸಲಾಗಿದೆ. (ತಿ.ತಿ.49) ಸದಾಶಿವರಾಯನ ಆಡಳಿತದ ಕಾಲದಲ್ಲಿ ಶಕ 140 ರ ಅಳಿಯ ರಾಮರಾಯನ ಏರ್ಪಾಡುಗಳನ್ನು ಪ್ರಾಯಶಃ 'ರಾಮರಾಜಯ್ಯನವಸರಂ' ಸೂಚಿಸುತ್ತಿರಬಹುದು.

**ಇ. ವೇದಪಾರಾಯಣ**

ಆಲಯದ ಸಂಪ್ರದಾಯ ಕಲಾಪಗಳಲ್ಲಿ ವೇದಪಾರಾಯಣವು ಒಂದು ಅಂಗವಾಗಿದ್ದು, ಅದಿಲ್ಲದಿದ್ದಲ್ಲಿ ಅನಾಹುತವಾಗುವು ದೆಂದು, ಕಾತರ ಹಾಗೂ ಕಳವಳದಿಂದ ನೋಡಲಾಗುತ್ತದೆ. ತಿರುಮಲೆಯ ಆಲಯ ಚರಿತ್ರೆಯಲ್ಲಿ 15ನೇ ಶತಮಾನದಲ್ಲಿ ಕೆಲಕಾಲ ಇಂತಹ ಪರಿಸ್ಥಿತಿ ಉಂಟಾಗಿದ್ದಿತು. ವಿಜಯನಗರದ ರಾಜವಂಶಗಳ ಮೊದಲವಂಶದ ಎರಡನೇ ದೇವರಾಯನ ಪುಣ್ಯಕ್ಕೆಂದು ಪುನರುದ್ಧರಿಸಿ ಅಲ್ಲಿಯೂ ಭವ್ಯತೆಯನ್ನುಂಟು ಮಾಡಬೇಕೆಂದು ಒಬ್ಬಾನೊಬ್ಬ ತಿರುಕ್ಕಲಿಕನ್ರಿದಾಸ ಅಳಗಪ್ಪಿರನಾರನು ಅಧಿಕಾರಿ ದೇವಣ್ಣ ಒಡೆಯರ ಗಮನಕ್ಕೆ ತಂದನು.ಸಿದ್ಧಕುಟ್ಟೈ ಗ್ರಾಮದ ಇಪ್ಪತ್ತನಾಲ್ಕು ಮಂದಿ ಪಂಡಿತ ಬ್ರಾಹ್ಮಣರನ್ನು ಶ್ರೀವೆಂಕಟೇಶ್ವರ ಸ್ವಾಮಿಯ ಮುಂದೆ ವೇದಪಾರಾಯಣ ಮಾಡಲು ನಿಯಮಿಸಲಾಯಿತು. ದೇವರಾಯನು ಈ ಏರ್ಪಾಡನ್ನು ಅನುಮೋದಿಸಿ, ರಾಜಭಂಡರಕ್ಕೆ ಸೇರಿದ ಸಿದ್ಧಕುಟ್ಟೈಯಾನೆ ಶ್ರೀನಿವಾಸಪುರದ ವರ್ಷದ ಆದಾಯದ ಅರ್ಧಭಾಗವನ್ನು ಶ್ರೋತ್ರೀಯವಾಗಿ ಬ್ರಾಹ್ಮಣ

ಸಂಭಾವನೆಯಾಗಿ - ನೀಡಿದನು. ಈ ಸಿದ್ದಕುಟ್ಟೈಗ್ರಾಮವು ವೈಕುಂದವಲನಾಡುವಿನ 'ಕೊತ್ತಾಲ ಸ್ಥಳ'ದಲ್ಲಿ ಇದ್ದಿತು. ಹೀಗೆ ಅಳಪ್ಪಿರನಾರನು ಪಡೆದ ಅರ್ಧವರ್ಷಾದಾಯವನ್ನು ಬ್ರಾಹ್ಮಣ ಪಂಡಿತರಿಗೆ ವರ್ಗಾಯಿಸಲಾಯಿತು. ಈ ಅರ್ಧವಾರ್ಷಿಕ ಆದಾಯವು ತಮ್ಮ ಜೀವನ ನಿರ್ವಹಣೆಗೆ ಸಾಲುವುದಿಲ್ಲವೆಂದು ಬಗೆದ ಬ್ರಾಹ್ಮಣ ಪಂಡಿತರು, ಆಲಯದ ಶ್ರೀಭಂಡಾರಕ್ಕೆ ಮೊದಲೇ ಸೇರಿದ್ದ ಮಿಕ್ಕ ಅರ್ಧ ಗ್ರಾಮಾದಾಯವನ್ನೂ ತಮಗೇ ನೀಡಬೇಕೆಂದು ಆಲಯದ ಸ್ಥಾನತ್ತಾರರಲ್ಲಿ ವಿನಂತಿಸಿದರು. ಯಾವುದೋ ಒಂದು ಸೇವೆಗಾಗಿ ತಮಗೆ ಸೇರಿದ್ದ ಅರ್ಧಗ್ರಾಮಾದಾಯವನ್ನು ಆಲಯದವರು ಇತರತ್ರ ವಿನಿಯೋಗಿಸುವಂತಿರಲಿಲ್ಲ. ಹೀಗಾಗಿ ಆಲಯದ ಆಡಳಿತವು ತನ್ನ ಜವಾಬ್ದಾರಿಯಾದ ಸೇವೆಯನ್ನು ಮಾಡಲು ಅರ್ಧಗ್ರಾಮಾದಾಯವನ್ನೂ ಉಳಿಸಿಕೊಂಡು, ವೇದಪಾರಾಯಣದ ಕೆಲಸದಲ್ಲಿ ನಿರತರಾದ ಇಪ್ಪತ್ತನಾಲ್ಕು ಮಂದಿ ಬ್ರಾಹ್ಮಣರಿಗೆ ಜೀವನಕ್ಕೆ ಬೇಕಾದಂತೆ ಪೂರ್ತಿ ಗ್ರಾಮಾದಾಯವನ್ನು ನೀಡಲು ಒಂದು ಯೋಜನೆಯನ್ನು ಹುಟ್ಟು ಹಾಕಿದರು. ಇಲ್ಲಿಯೂ ಯೋಜನೆಯನ್ನು ಚಾಲ್ತಿಗೆ ತಂದವನು ತಿರುಕ್ಕಲಿಕನ್ರಿದಾಸನೇ.

ಸಿದ್ಧಕುಟ್ಟೈ (ಶ್ರೀನಿವಾಸಪುರ) ಗ್ರಾಮದಿಂದ ಆಲಯದ ಪಾಲಿಗೆ ಬರಬೇಕಾಗಿದ್ದ ವಾರ್ಷಿಕ ಆದಾಯ 200 ಪಣಂಗಳು ಎಂದು ತೋರುತ್ತದೆ. ಈ ಹಣವನ್ನು ಕಳೆದುಕೊಂಡರೆ, ಹೇಗಾದರೂ ಮಾಡಿ ಆಲಯಕ್ಕೆ 200 ಪಣಂ ವಾರ್ಷಿಕ ಆದಾಯ ಬರುವಂತೆ ಮಾಡಬೇಕಾಗಿದ್ದಿತು. ತಿರುಕ್ಕುಡವೂರುನಾಡು ಹಾಗೂ ವೈಕುಂಠ ವಲನಾಡುಗಳಲ್ಲಿನ ದೇವದಾನದ ಗ್ರಾಮಗಳ ಎಲ್ಲಾ ಗ್ರಾಮಸ್ಥರನ್ನೂ ಈ ಇನ್ನೂರು ಪಣಂಗಳನ್ನು ಕೂಡಿಸಲು ತಂತಮ್ಮ ವಂತಿಗೆಗಳನ್ನು ನೀಡಬೇಕೆಂದು ಕರೆ ನೀಡಲಾಯಿತು. ವೇದಪಾರಾಯಣ ಮಾಡಲು ತಗುಲವ ಈ ವೆಚ್ಚವನ್ನು ತುಂಬಿಕೊಡಲು ಆದೇ ವರ್ಷದಿಂದಲೇ ತಮ್ಮ ಕಾಣಿಕೆಯನ್ನು ನೀಡಲು ಸಮ್ಮತಿಸಿ ಚಿನ್ನ ಹಾಗೂ ನೀರಿನ ಧಾರಾಪೂರ್ವಕವಾಗಿ ಗ್ರಾಮಸ್ಥರು ಪ್ರತಿಜ್ಞೆಗೈದರು. ಇದು ನಡೆದದ್ದು ಶಕ 1355, ಪ್ರಮಾದೀಚ ಸಂವತ್ಸರದ ಉತ್ಥಾನದ್ವಾದಶಿಯ ದಿವಸ. ಪೆರಿಯನಾಟ್ಟುವೇಲನ್ ಹಾಗೂ ಊರ್ ಕಣಕ್ಕು (ಶಾನುಭೋಗ) ಅಥವಾ ವೇಲನ್ (ಗ್ರಾಮದ ದಂಡಧರ) ರವರ ಸಹಿ ಮಾಡಿದ ಘೋಷಣಾ ಪತ್ರದ ಬೆಂಬಲ ಪಡೆದ ಆಲಯಾಧಿಕಾರಿಗಳು ಆತಂಕ ರಹಿತರಾಗಿ, ಸಿದ್ಧಕುಟ್ಟೈ ಗ್ರಾಮದ ಮಿಕ್ಕ ಅರ್ಧ ಆದಾಯವನ್ನು ವೇದಪಾರಾಯಣದಾರರಿಗೆ ಬಿಟ್ಟುಕೊಟ್ಟರು. ಹೀಗಾಗಿ ಎರಡೂ ಪ್ರಯೋಜನಗಳೂ ಸಿದ್ಧಿಸಿದವು. ದಾನವಾಗಿ ನೀಡಿದ ಆಸ್ತಿಯ ಬಗ್ಗೆ ದಾನದ ಉದ್ದೇಶದಿಂದ ದೂರಸರಿದು ತಾಂತ್ರಿಕವಾಗಿ ಈ ಏರ್ಪಾಡು ಪರೋಕ್ಷ ಉಲ್ಲಂಘನೆಯೇ ಆದರೂ, ಪ್ರತಿಯಾಗಿ ಯಾವುದೇ ಪರಿಹಾರ ನೀಡುವಂತಿದ್ದರೂ ಇದು ನಂಬಿಕೆಯನ್ನು ಮುರಿಯುವಿಕೆಯೇ ಆಯಿತು. ಆಲಯದಲ್ಲಿ ವೇದಪಾರಾಯಣವನ್ನು ಪುನರುದ್ಧರಿಸುವ ವಿಚಾರದಲ್ಲಿನ ಒತ್ತಡ, ಅವಸರಗಳು, ಅಧಿಕಭಾರವಾಗಿ ತೋರಿ ಬಂದು ಈ ಕ್ರಮದಲ್ಲಿ ಕೈಹಾಕುವಂತೆ ಮಾಡಿರಬೇಕು.

ಗ್ರಾಮಸ್ಥರು ಈ ವ್ಯವಸ್ಥೆಯನ್ನು ಅಂಗೀಕರಿಸುವುದಕ್ಕೂ ಮುಂಚೆ ಒಂದು ತತ್ಕಾಲಿಕ ಕ್ರಮವನ್ನೂ ಕೈಗೆತ್ತಿಕೊಳ್ಳಲಾಯಿತು. ಸಿದ್ಧಕುಟ್ಟೈಗ್ರಾಮದ ಅರ್ಧಭಾಗವನ್ನು ತಿರುಕ್ಕಲಿಕನ್ರಿದಾಸರಿಗೆ ಭೋಗ್ಯಕ್ಕೆ ನೀಡಲಾಯಿತು. ಆತ ಆಲಯಕ್ಕೆ ಭೋಗ್ಯದಹಣವಾಗಿ ಅರ್ಧ ಗ್ರಾಮಾದಾಯವನ್ನು ಸಲ್ಲಿಸಿದ್ದೇ ಅಲ್ಲದೆ, ಇಪ್ಪತ್ತನಾಲ್ಕು ಮಂದಿ ಬ್ರಾಹ್ಮಣರಿಗೆ ಅರ್ಧಗ್ರಾಮಾದಾಯದ ಅನುಭೋಗಿಕೆಯನ್ನು ನೀಡಿದ. ಈ ಕ್ರಮವು ಆಲಯದ ಅರ್ಧಭಾಗದ ಆದಾಯವನ್ನು ತುಂಬಿಕೊಡುವ ಗ್ರಾಮಸ್ಥರ ಅನುಮೋದನೆಗೂ ಮೊದಲು ಏರ್ಪಡಿಸಿದ ನಡುಗಾಲದ ಪರಿಹಾರ ಮಾತ್ರವಾಗಿದ್ದಿತು.

ನಂತರದ ಕಾಲದಲ್ಲಿ ಎಂದರೆ ವಿಜಯನಗರದ ಎರಡನೆಯ ರಾಜವಂಶದ ಕಾಲದಲ್ಲಿ ವೇದ ಪಾರಾಯಣದ ಉಲ್ಲೇಖಗಳಿದ್ದು, ಎರಡನೇ ದೇವರಾಯನು ವೇದಪಾರಾಯಮವನ್ನು ಪುನಃ ಸ್ಥಾಪಿಸಿದ ನಂತರ ಇಂದಿನವರೆಗೆ ವೇದಪಾರಾಯಣದಲ್ಲಿ ನಿಲುಗಡೆ

ಯೆಂಬುದಿಲ್ಲದೆ ನಿರಂತರವಾಗಿ ಸಾಗುತ್ತ ಬಂದಿದ್ದು ಆಲಯದ ಇತರೆಲ್ಲ ವೈಭವಗಳೊಂದಿಗೆ ಸೇರಿ ಆಲಯದ ಕೀರ್ತಿ ಹಾಗೂ ಪಾವಿತ್ರ್ಯವನ್ನು ಹೆಚ್ಚಿಸಿದೆ ಎಂದು ಹೇಳಬಹುದು.

ವೇದಪಾರಾಯಣವೇ ಅಲ್ಲದೆ ಹಲವು ಹರಿದಿನಗಳಲ್ಲಿ ಪುರಾಣಪಠಣವೂ ನಡೆಯುತ್ತಿದ್ದಿತೆಂಬುದನ್ನು ಗಮನಿಸಬಹುದು. 16 ನೇ ಶತಮಾನದ ಒಂದು ದಾಖಲೆಯಲ್ಲಿ (ಜಿ.ಟಿ.3) ಕೈಶಿಕ ದ್ವಾದಶಿಯ ದಿನ (ಕಾರ್ತೀಕ ಮಾಸದ ಶುದ್ಧ ದ್ವಾದಶಿಯ ದಿನ) ಅನಂತವ್ರತದ ಪುರಾಣವನ್ನು (ಉತ್ಥಾನ ದ್ವಾದಶಿ) ಪ್ರಾಯಶಃ ಗೋವಿಂದರಾಜಸ್ವಾಮಿ ಆಲಯದಲ್ಲಿ ಓದುತ್ತಿದ್ದರೆಂಬುದು ತಿಳಿದು ಬರುತ್ತದೆ. ಇದರಂತೆಯೇ ಶಕ 1413 ರಲ್ಲಿ (ತಿ.ತಿ. 253) ಪಸಿಂದಿ ವೆಂಕಟತ್ತುರೈವಾನ್ ಜೀಯರು ರಾಮಾನುಜಯ್ಯನ್ ತಾವು ರಚಿಸಿದ ತಿರುವೆಂಕಟಮಾಹಾತ್ಮ್ಯವನ್ನು ಮಾರ್ಗಳಿ ಮಾಸದಲ್ಲಿ ಓದಲು ಏರ್ಪಾಡು ಮಾಡಿದ್ದರು.

### ಈ. ಅಭಿಷೇಕ (ತಿರುಮಂಜನ)

ಹಲವು ಶಾಸನಗಳು ತಿರುಮಲೆಯ ಶ್ರೀವೆಂಕಟೇಸ್ವರ ಸ್ವಾಮಿಯ ಹಾಗೂ ತಿರುಪತಿಯ ಶ್ರೀಗೋವಿಂದ ರಾಜಸ್ವಾಮಿಯ ನಿತ್ಯಾಭಿಷೇಕ ಅಥವಾ ತಿರುಮಂಜನವನ್ನು ಕುರಿತು ಹೇಳುತ್ತವೆ. ಶ್ರೀ ವೆಂಕಟೇಶ್ವರ ಸ್ವಾಮಿಗೆ ಅಳಗಪ್ಪಿರನಾರ್ ತಿರುಮಂಜನವನ್ನು ಕಂದಾಡೈ ರಾಮಾನುಜಯ್ಯಂಗಾರ್ ತನ್ನ ಕೈಂಕರ್ಯವೆಂದು ಏರ್ಪಡಿಸಿದ, ಶಕ 1386 ರ ತಿ.ತಿ. 4 ನೇ ಶಾಸನವೇ ಅತಿ ಪ್ರಾಚೀನ ಉಲ್ಲೇಖವೆನ್ನಬೇಕು. ಇಲ್ಲಿ ಆತನು ತನ್ನ ಏಕಾಂಗಿ ಶಾತ್ತಾದ ಶ್ರೀವೈಷ್ಣವ ಶಿಷ್ಯರು ಆಲಯಕ್ಕೆ ತಿರುಮಂಜನಕ್ಕೆ ಬೇಕಾದ ಸುಗಂಧ ದ್ರವ್ಯಗಳನ್ನು ಸರಬರಾಜು ಮಾಡುವಂತೆ ತಿಳಿಸಿದ್ದಾನೆ. ಮೆಡಿತ್ತ ಶಾತ್ತುಪ್ಪಡಿ (ಚಂದನದ ಮುದ್ದೆ) ಮಂಜಲ್ ಕಾಪ್ಪು (ಅರಿಷಿಣ) ಮಲ್ಲಿಕಾಪ್ಪು (ಕಸ್ತೂರಿ) ಕರ್ಪೂರಕಾಪ್ಪು (ಪಚ್ಚಕರ್ಪೂರ) ಇವುಗಳೊಂದಿಗೆ ವೀಳಯದೆಲೆ ಅಡಿಕೆ, ಚಿಕ್ಕವಸ್ತ್ರಗಳನ್ನಿವರು ಸರಬರಾಜು ಮಾಡಬೇಕಾಗಿದ್ದಿತು.

ತಿ.ತಿ.163 ರಲ್ಲಿ - ಇದೇ ಕಂದಾಡೈ ರಾಮಾನುಜಯ್ಯಂಗಾರ್ಯನೇ ದಾನಿಯಾಗಿರುವ ಇನ್ನೊಂದು ಶಕ 1406ರ ಶಾಸನದಲ್ಲಿ ಅಳಗಪ್ಪಿರನಾರ್ ತಿರುಮಂಜನ ಮತ್ತೆ ಕಂಡು ಬರುತ್ತದೆ. ಶ್ರೀವೆಂಕಟೇಶ್ವರ ಸ್ವಾಮಿಯ ನಿತ್ಯ ತಿರುಮಂಜನದಲ್ಲಿ ಸ್ವಲ್ಪಂತಹ ಮೇಲಿನ ವಿವರವನ್ನು ನೀಡುವುದೇ ಅಲ್ಲದೆ, ತಿರುಮಗಳುಡನ್ ವರುವಾರ್ - ತಿರುಪತಿಯ ಗೋವಿಂದರಾಜಸ್ವಾಮಿಯ ತಿರುಮಂಜನನ್ನೂ ಕುರಿತು ಹೇಳುವುದಲ್ಲದೆ, ಶ್ರೀಕುಲಶೇಖರ ಪೆರುಮಾಳ್ ತಿರುವಾರಾಧನಂ ಎಂಬ ಆರಾಧನೆಯನ್ನು ಕುರಿತು ಹೇಳುವುದು. ಎರಡೂ ಮಜ್ಜನಗಳಲ್ಲಿ ಎರಡೂ ಕಡೆ ಆರತಿ ಮಾಡಲು ಕರ್ಪೂರವನ್ನು ಸರಬರಾಜು ಮಾಡಬೇಕು ಎಂಬ ಅಧಿಕವಿವರದೊಡನೆ ಶ್ರೀಗೋವಿಂದ ರಾಜಸ್ವಾಮಿ ಆಲಯದಲ್ಲಿ ಪರಿವಟ್ಟವನ್ನು (ತಲೆಗೆ ಸುತ್ತುವ ವಸ್ತ್ರ) ಕೊಡಬೇಕು. ಈ ಶಾಸನದ ಪ್ರಾಧಾನ್ಯವಿರು ವುದುಇಲ್ಲಿನ ವೆಚ್ಚಗಳಿ ಗೆಂದು ನಿರ್ದೇಶ ಮಾಡಿರುವ ಗುಂಡಿಪೂಂಡಿ ಎಂಬ ಗ್ರಾಮದ ದಾನವಾಗಿರುವುದರಲ್ಲಿ. ರಾಮಾನುಜ ಕೂಟದ ವೆಚ್ಚಗಳಿಗಾಗಿ ಈ ಗ್ರಾಮಾದಾಯವನ್ನು ಸಾಳುವ ನರಸಿಂಹರಾಯನು ಬಿಟ್ಟಾಗ ರಾಮಾನುಜ ಕೂಟದ ವತಿಯಿಂದಲೇ ತಿರುಮಂಜನ ದ್ರವ್ಯಗಳನ್ನು ಬಳಸಬೇಕು ಎಂಬ ಅನುಮತಿ ಇಲ್ಲಿದೆ. ಮೊದಲ ಶಾಸನದಲ್ಲಿ ಇಂತಹ ಉಲ್ಲೇಖವಿಲ್ಲ.

ಇನ್ನೊಂದು ದಾಖಲೆಯಂತೆ (ತಿ.ತಿ.187) ತಿರುಕ್ಕಲಿಕನ್ರಿದಾನರ್ ಅಳಗಪ್ಪಿರನಾರ್ ದೇವರ ಮುಖಕ್ಕೆ ಮಾರ್ಜನ ಮಾಡಲು ಆರುತಿಂಗಳ ಕಾಲದ ಪುಲುಗುಕಾಪ್ಪು ಮತ್ತು ಚಂದನ ಹಾಗೂ ಆರತಿಗೆ ಕರ್ಪೂರವನ್ನು ಸರಬರಾಜು ಮಾಡಲು ಏರ್ಪಾಡು ಮಾಡಿದನು.

ಪುಲುಗು ಕಾಪ್ಪು ಬಗ್ಗೆ ಮೊದಲಿನ ಉಲ್ಲೇಖ ಇಲ್ಲಿಯೇ ದೊರೆಯುವುದು. ಇಲ್ಲಿ ಹೇಳಿರುವಂತೆ ಇದು ಪ್ರತಿದಿನವೂ ಆರು ತಿಂಗಳ ಕಾಲ ನಡೆಯಬೇಕು. ನಂತರದ ಉಲ್ಲೇಖವನ್ನು ಶಕ 1418 ರ ತಿ.ತಿ. 336 ನೇ ಶಾಸನದಲ್ಲಿ ಕಾಣುತ್ತೇವೆ. ಇದನ್ನು ಏರ್ಪಡಿಸಿ

ದವರು ಕಂದಾಡೈ ಅಪ್ಪಚ್ಚಿಯ್ಯರ್ ಅಣ್ಣಾ. ಇದರಂತೆ ಶ್ರೀವೆಂಕಟೇಶ್ವರ ಸ್ವಾಮಿಗೆ ಹದಿನೈದು ದಿನಕ್ಕೆ ಒಮ್ಮೆ ಶುಕ್ರವಾರದಂದು ಪುಲುಗುಕಾಪ್ಪು ಆಗಬೇಕು, ಕಂದಾಡೈ ರಾಮಾನುಜ ಅಯ್ಯಂಗಾರನ 'ಉಳಾ' ಶ್ಲಾಘನೆಯ ಹಾಡು (ಉಘೇ ಗೀತ) ಹೇಳುತ್ತ ಪುನುಗು ಹಚ್ಚುವ ಹೊತ್ತಿನಲ್ಲಿ ಸ್ವಾಮಿಗೆ ಎರಡು ಅತಿರಸಪ್ಪಡಿ ನೈವೇದ್ಯ ಆಗಬೇಕು. ಇಲ್ಲಿನ ಮಾತಿನ ಧೋರಣೆಯಿಂದಾಗಿ ಪುಲುಗುಕಾಪ್ಪು ಕಾರ್ಯಕ್ರಮ ಆ ವೇಳೆಗೆ ಸಂಪ್ರದಾಯವಾಗಿ, ಜನಕ್ಕೆ ಚೆನ್ನಾಗಿ ಪರಿಚಯವಾಗಿದ್ದಿತು ಎನ್ನಬೇಕು.

ಆಲಯದಲ್ಲಿ ಶುಕ್ರವಾರಗಳೆಂದು ನಡೆಯುವ ಒಂದು ಕಲಾಪದಲ್ಲಿ ಮುಖ ಮಂಡಲವನ್ನೂ ಒಳಗೊಂಡಂತೆ ಸ್ವಾಮಿಯ ಇಡೀ ತಿರುಮೇನಿಯನ್ನು - ಶರೀರವನ್ನು ಪುಲುಗುಕಾಪ್ಪುಗೆ ಒಳಪಡಿಸಿ, ನಂತರ ತಿರುಮಣ್‌ಕಾಪ್ಪು ವೈಷ್ಣವ ಚಿಹ್ನೆಯಾದ ಎರಡು ಬಿಳಿಯ ನಾಮವನ್ನಿಟ್ಟು (ಪಚ್ಚ ಕರ್ಪೂರದ ನಾಮ ) ಕಸ್ತೂರಿಯ ಒಂದು ಒಳನಾಮ ಇಡುವ ಕ್ರಮವಿದೆ. ಇಂದಿನ ಆಲಯದ ಭಾಷೆಯಲ್ಲಿ ಪುನುಗುಕಾಪ್ಪು ಎಂದರೆ ಪುನುಗು ಎಣ್ಣೆ ಕರ್ಪೂರಗಳು ಮಾತ್ರವಲ್ಲದೆ ಕಸ್ತೂರಿ, ಕೇಸರಿಗಳೂ ಸೇರಿದುದೇ ಅರ್ಥ. ಕಸ್ತೂರಿಯನ್ನು ಮಧ್ಯದ ನಾಮ - ಕಸ್ತೂರಿ ತಿಲಕವನ್ನಿಡಲು ಬಳಸಿದರೆ ಕೇಸರಿ ಪುಷ್ಪವನ್ನು ಚಂದನದ ಮುದ್ದೆ ತಯಾರಿಸಲೂ, ಅಭಿಷೇಕದ ಸುಗಂಧ ದ್ರವ್ಯಗಳಲ್ಲಿ ಒಂದಾಗಿಯೂ ಬಳಸುವರು. ಹೀಗಾಗಿ ಪುಲುಗುಕಾಪ್ಪು - ಪುನುಗುಕಾಪ್ಪು - ಎರಡೂ ಒಂದೇ ಅರ್ಥದವಾಗಿ ಪುನುಗು, ಪಚ್ಚಕರ್ಪೂರ, ಕಸ್ತೂರಿ, ಕೇಸರಿಗಳ ಮಿಶ್ರಣವಾಗಿರಬೇಕು.

## ಅಧ್ಯಾಯ - 7

# ಆಲಯದ ಉತ್ಸವಗಳು

### 1. ಪೀಠಿಕೆ :

ಪ್ರಾಚೀನ ಕಾಲದಿಂದಲೂ ತಿರುಮಲೆಯ ಆಲಯವು ಬೆಟ್ಟದಲ್ಲಿ ನಡೆಯುವ ಉತ್ಸವಗಳಿಗೆ ಹೆಸರಾದ ಸ್ಥಳ. ಇಲ್ಲಿನ ಆಲಯ ಉತ್ಸವಗಳು ಇಂದಿಗೂ ತಮ್ಮ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳುತ್ತ ಆಚರಣೆಯಲ್ಲಿವೆ.

ಇತಿಹಾಸ ಕಾಲದಲ್ಲಿ ಈ ಆಲಯವು ರಾಜಾಧಿರಾಜರಿಂದ ದಾನದತ್ತಿಗಳನ್ನು ಪ್ರಾಥಮಿಕವಾಗಿ ದೈನಂದಿನ ಪೂಜಾ ಕೈಂಕರ್ಯಗಳಿಗೆಂದೇ ಪಡೆದರೂ,ಆಲಯದ ಶೋಭೆಯನ್ನು ಹೆಚ್ಚಿಸುವ,ಆಕರ್ಷಕತೆಯನ್ನು ಹೆಚ್ಚಿಸಿ ಜನವನ್ನು ಸೆಳೆದುಕೊಳ್ಳಬಲ್ಲಂತಹ ವ್ಯಾಪಕವಾದ ಉತ್ಸವಗಳಿಗಾಗಿಯೂ ದತ್ತಿಗಳನ್ನು ಪಡೆದಿದೆ. ವಿಶಾಲವಾದ,ಕಲಾಮಯವಾದ ಮಂಟಪಗಳು,ವಿಸ್ತರಣಗಳು ಪ್ರಾಕಾರಗಳೂ ಈ ಉದ್ದೇಶದಿಂದಲೇ ನಿರ್ಮಾಣ ವಾದವುಗಳು.

ಶ್ರೀ ವೆಂಕಟೇಶ್ವರಸ್ವಾಮಿಯ ಆಲಯದಲ್ಲಿನ ಉತ್ಸವಗಳನ್ನು ಸ್ಥೂಲವಾಗಿ ಎರಡು ವಿಧವಾಗಿ ವಿಂಗಡಿಸಬಹುದು. ಆಗಮಗಳು, ಶಾಸ್ತ್ರಗಳಿಂದ ಆಲಯದಲ್ಲಿ.ನಡೆಯಬೇಕೆಂದು ನಿರ್ಣಾಯಕವಾದ ಪ್ರಾಥಮಿಕ ಉತ್ಸವಗಳು ಹಾಗೂ ಭಕ್ತರ ಕೋರಿಕೆಯಂತೆ ಅವರ ದೇಣಿಗೆಗಳಿಗೆ ತಕ್ಕಂತಹ ವ್ಯವಸ್ಥೆಯಲ್ಲಿ ಮಾಡತಕ್ಕ ಉತ್ಸವಗಳು. ಪ್ರಾಥಮಿಕ ಉತ್ಸವಗಳುಆಗಮಶಾಸ್ತ್ರಗಳ ಅನುಮೋದನೆ ಪಡೆದು ಪಂಚಾಂಗದ ಪ್ರಕಾರ ಆಚರಿಸಲೇಬೇಕಾದ ಉತ್ಸವಗಳಾಗಿದ್ದು,ಇವುಗಳನ್ನು ಬಿಡುವುದೆಂದರೆ ಅಪಚಾರ ಮಾಡಿದಂತೆ ಆಗುತ್ತದೆ. ಹಲವಾರು ಆಲಯಗಳಲ್ಲಿ ಇಂತಹ ಉತ್ಸವಗಳು ಪುನಃ ಪ್ರಾರಂಭವಾಗಬೇಕಾದರೆ ಪ್ರತ್ಯೇಕವಾ ಶಾಸ್ತ್ರೀಯ ಶುದ್ಧಿ ಇತ್ಯಾದಿ ಕಾರ್ಯಕ್ರಮಗಳು ನಡೆಯಬೇಕು. ತಿರುಮಲೆಯ ಬಹುಮುಖ್ಯ ಉತ್ಸವವಾದ -ಬ್ರಹ್ಮೋತ್ಸವವು- ಈ ರೀತಿಯ ಪ್ರಾಥಮಿಕ ಉತ್ಸವಗಳ ಗುಂಪಿನಲ್ಲಿ ಸೇರುವುದು.

ಆಲಯಗಳಲ್ಲಿರುವ ವಿಶಿಷ್ಟವಾದ ವಿಗ್ರಹದ ಸಂಬಂಧವಾದ ಪರಂಪರೆಯ ಕಥಾನಕಗಳೊಡನೆ ಸಂಬಂಧ ಹೊಂದಿದ ದ್ವಿತೀಯ ಹಂತದ ಉತ್ಸವಗಳೂ ಉಂಟು.ಅಥವಾ ಇಂತಹ ಉತ್ಸವಗಳು ರಾಜಕುಟುಂಬದವರೋ, ಶ್ರೀಮಂತ ಮನೆಯವರೋ ದೇವರ ಆಶೀರ್ವಾದವನ್ನು ಪಡೆಯಲು ಆರಂಭಿಸಿರುವರು. ಇಂತಹ ಉತ್ಸವಗಳ ವೆಚ್ಚದಲ್ಲಿ ಉಪಯೋಗಿಸಲೆಂದೇ ವಿಶೇಷವಾದ ಆದಾಯ ಬರುವಂತಹ ದೇಣಿಗೆಗಳನ್ನು ನೀಡಲಾಗುತ್ತಿದ್ದಿತು. ಈ ಉತ್ಸವಗಳು ದಾನಿಯ,ಅವನ ಗುರುವಿನ,ರಾಜನ ತಿರುನಕ್ಷತ್ರದ ದಿನಗಳಲ್ಲಿಯೂ ಆಗುತ್ತಿದ್ದವು. ತಿರುಮಲೆಯ ಆಲಯದಲ್ಲಿಯೂ ಮೇಲಿನ ರೀತಿಯ ಉತ್ಸವಗಳು ಆಚರಣೆಯಲ್ಲಿದ್ದವು - ಇವೆ

### 2. ಬ್ರಹ್ಮೋತ್ಸವ

ತಿರುಮಲೆಯಲ್ಲಿ ಅತ್ಯಂತ ಹೆಚ್ಚಿನ ಜನವನ್ನು ಆಕರ್ಷಿಸಿ ಆಚರಿಸಲ್ಪಡುವ ಪ್ರಮುಖವಾದ ಉತ್ಸವವೆಂದರೆ ಅದು ಬ್ರಹ್ಮೋತ್ಸವ ಶಾಸ್ತ್ರಗಳು ಹೇಳಿದಂತೆಯೇ ನಡೆಯುವ ಈ ಉತ್ಸವ ಪ್ರಾಥಮಿಕ ಪ್ರಾಧಾನ್ಯದ ಉತ್ಸವ. ಪ್ರಪಥಮವಾಗಿ ಸೃಷ್ಟಿಕರ್ತನಾದ ಬ್ರಹ್ಮನಿಂದಲೇ ಸ್ವಾಮಿಗೆ ಏರ್ಪಡಿಸಿದುದಾಗಿ ಬ್ರಹ್ಮೋತ್ಸವವೆಂದು ಹೆಸರು ಪಡೆಯಿತು. ಶಾಸ್ತ್ರಗಳು ಹಾಕಿ ಕೊಟ್ಟ ನಿಯಮಾವಳಿಗಳ ಪ್ರಕಾರವೇ ಈ ಉತ್ಸವ ನಡೆಯುತ್ತದೆ.

ಕ್ರಿ.ಶ.966 ಕ್ಕೆ ಪೂರ್ವದಲ್ಲಿ ತಿರುಮಲೆಯಲ್ಲಿ ವರ್ಷಕ್ಕೆ ಪ್ರಾಯಶಃ ಒಂದೇ ಬ್ರಹ್ಮೋತ್ಸವ ನಡೆಯುತ್ತಿದ್ದಿರ ಬೇಕು. ಕ್ರಿ.ಶ.966 ರಲ್ಲಿ ಪಲ್ಲವರಾಣಿ ಸಾಮವೈ ಭೋಗಶ್ರೀನಿವಾಸಮೂರ್ತಿಯನ್ನು ಆಲಯಕ್ಕೆ ನೀಡಿ ಮುಕ್ಕೋಟಿದ್ವಾದಶಿ ಹಾಗೂ ಪುರಟ್ಟಾಸಿ ತಿಂಗಳುಗಳಲ್ಲಿ ಒಂದೊಂದರಂತೆ ಎರಡು ಬ್ರಹ್ಮೋತ್ಸವಗಳ ಆಚರಣೆಗೆ ಏರ್ಪಾಡು ಮಾಡಿದಳು. ಇದೇ ರಾಣಿಯು ಉತ್ಸವ ದೇವರಿಗೊಂದು ಕಿರೀಟವನ್ನೂ ಇತರ ಹಲವಾರು ಆಭರಣಗಳನ್ನೂ ಕಾಣಿಕೆಯಾಗಿ ನೀಡಿ, ಪುರಟ್ಟಾಸಿಯ ಚಿತ್ತಿ ರೈ ನಕ್ಷತ್ರದಲ್ಲಿ ಆರಂಭವಾಗಿ ಒಂಭತ್ತು ದಿನಗಳ ಕಾಲ ನಡೆಯುವ ಉತ್ಸವದಲ್ಲಿಯೂ, ಉತ್ಸವ ಮುಗಿದಾಗಲೂ ಭೋಗ ಶ್ರೀನಿವಾಸಮೂರ್ತಿಯ ಮೆರವಣಿಗೆಗೂ ಏರ್ಪಾಡು ಮಾಡಿದಳು, ಇದೇ ವರ್ಷದಲ್ಲಿ ಇದೇ ರಾಣಿಯು ಮತ್ತೆ ಮಾರ್ಗಳಿ ಮಾಸದ ತಿರುದ್ವಾದಶಿ - ಮುಕ್ಕೋಟಿ ದ್ವಾದಶಿಯಂದು ಇದೇ ಬೆಳ್ಳಿಯ ಮೂರ್ತಿಯ ಏಳುದಿನಗಳ ಉತ್ಸವ ಕಾಲದ ಪ್ರಾತಃಕಾಲ ಸಾಯಂಕಾಲ ಮೆರವಣಿಗೆಗೆ ಏರ್ಪಾಡುಗಳನ್ನು ಮಾಡಿದಳು. ಈ ಉತ್ಸವ ಗಳ ವೆಚ್ಚಗಳಿಗಾಗಿ ರಾಣಿಯು ಆಲಯಕ್ಕೆ ಹಲವು ಭೂಮಿಯ ದೇಣಿಗೆ ನೀಡಿ ಇದರ ಮೇಲು ವಿಚಾರಣೆಯನ್ನು ನೋಡಿಕೊಳ್ಳುವ ತಿರುಚಾನೂರು ಸಭೆಯವರಿಗೆ ಇತರ ಯಾವುದೇ ತೆರಿಗೆಯನ್ನೂ ಈ ಜಮೀನುಗಳ ಮೇಲೆ ಹೇರಬಾರದೆಂದು ಕಟ್ಟುಮಾಡಿದಳು.

ಚೋಳರ ಯಾವ ದಾಖಲೆಯೂ ಈ ಉತ್ಸವಗಳ ಬಗ್ಗೆ ಯಾವ ಮಾತನ್ನೂ ಆಡದೆ ಇದ್ದರೂ ನಂತರದ ಶಾಸನಗಳು ಈ ಉತ್ಸವಗಳಲ್ಲಿ ಹೆಚ್ಚಾದ ಅನ್ನ ಪ್ರಸಾದಗಳ ಪ್ರಮಾಣ ಹಾಗೂ ವೈವಿಧ್ಯಗಳ ಬಗ್ಗೆ ಹೇಳುವುದರಿಂದಾಗಿ ಈ ಉತ್ಸವಗಳ ಪ್ರಾಧಾನ್ಯ ಎಷ್ಟರ ಮಟ್ಟಿಗೆ ಹೆಚ್ಚಿತು ಎಂಬುದನ್ನು ತಿಳಿಯಬಹುದು. ಹಲವಾರು ಸಾಮಂತರಾಜರು - ಕಾಡವರಾಯ, ಯಾದವರಾಯ, ಗಂಡಗೋಪಾಲ, ಸಂಭುವರಾಯ ಮೊದಲಾದವರು - ಹಲವಾರು ರೀತಿಯ ನಿತ್ಯನೈವೇದ್ಯ, ನಿತ್ಯದೀಪಾರತಿಗಳಿಗೂ ವಿವಿಧ ಉತ್ಸವಗಳಿಗೂ ದಾನಗಳನ್ನು ನೀಡಿದರು. ಹೀಗಾಗಿ ಕ್ರಿ.ಶ. 13 ನೇ ಶತಮಾನದಲ್ಲಿ ತಿರುಮಲೆಯಲ್ಲಿ ಪುರಟ್ಟಾಸಿ, ಮಾಸಿ ತಿಂಗಳಿನಲ್ಲಿ ಹತ್ತನೇ ಶತಮಾನದಲ್ಲಿ ನಡೆಯುತ್ತಿದ್ದ ಎರಡು ಬ್ರಹ್ಮೋತ್ಸವಗಳ ಜೊತೆಗೆ ಆಡಿ ಮಾಸದಲ್ಲಿಯೂ ಒಂದು ಬ್ರಹ್ಮೋತ್ಸವ ನಡೆಯುತ್ತಿದ್ದುದನ್ನು (189 ತಿ.ತಿ.) ಕಾಣುತ್ತೇವೆ. ಜೊತೆಗೇ ತಿರುಪತಿಯಲ್ಲಿ ವೈಕಾಶಿ ಯಲ್ಲಿಯೂ ಒಂದು ನಡೆಯುತ್ತಿದ್ದಿತು (111 ಜಿ.ಟಿ.) ಆಡಿ ಮಾಸದ ಎರಡನೆಯ ಉತ್ಸವವನ್ನು ವೀರನರಸಿಂಹ ಯಾದವರಾಯನ ಆಳ್ವಿಕೆಯ ಮುವತ್ತನೆಯ ವರ್ಷದಲ್ಲಿ ಆತನ ಹೆಂಡತಿಯು ಏರ್ಪಡಿಸಿದಳು. ಇದರ ವೆಚ್ಚಗಳಿಗಾಗಿ ರಾಣಿಯು ಪೈಂಡಿಪಲ್ಲಿಯ ಗ್ರಾಮದ ಅರ್ಧರಾಜಾದಾಯವನ್ನು ದೇಣಿಯಾಗಿ ನೀಡಿದಳು. (ಉಳಿದರ್ಧ ರಾಜಾದಾಯವನ್ನು ಮೊದಲೇ ಆಲಯಕ್ಕೆ ನೀಡಲಾಗಿದ್ದಿತು.) ಇದರ ಜೊತೆಗೇ ಆಕೆಯು ದೇವರಿಗಾಗಿ ಮೆರವಣಿಗೆಗೆ ನಾಲ್ಕು ಪಾರ್ಶ್ವಗಳ ದಾರುರಥವನ್ನು ನಿರ್ಮಿಸಿ ಆಲಯಕ್ಕೆ ನೀಡಿದಳು. ಇದರ ಅಲಂಕಾರ ದುರಸ್ತಿ ವೆಚ್ಚಗಳಿಗೂ ಇದೇ ದೇಣಿಯ ಆದಾಯವನ್ನು ಬಳಸಬೇಕೆಂದು ಆಕೆ ತಿಳಿಸಿದಳು. ಈ ಗ್ರಾಮಾದಾಯದಲ್ಲಿ ಉತ್ಸವವೆಚ್ಚ ರಥ ದುರಸ್ತಿಗಳ ವೆಚ್ಚದ ನಂತರ ಮಿಕ್ಕ ಹಣವನ್ನು ಆಲಯದ ದುರಸ್ತಿ ಕೆಲಸಗಳಿಗೆ ಬಳಸಲು ಅಧಿಕಾರಿಗಳಿಗೆ ಆಕೆ ಅನುಮತಿಯನ್ನು ನೀಡಿದಳು. ಹೀಗಾಗಿ, 14 ನೇ ಶತಮಾನದ ಹೊತ್ತಿಗೆ ತಿರುಕ್ಕೊಡಿ ತಿರುನಾಳ್ ಎಂಬ ಹೆಸರಿನಲ್ಲಿ ಬ್ರಹ್ಮೋತ್ಸವವು ವರ್ಷಕ್ಕೆ ಮೂರುಬಾರಿ ತಿರುಮಲೆಯಲ್ಲಿಯೂ, ಎರಡ ಬಾರಿ ತಿರುಪತಿಯಲ್ಲಿಯೂ ನಡೆಯುತ್ತಿದ್ದಿತು. ತಿ.ತಿ. 102 ನೇ ಶಾಸನದಿಂದ ಆ ಕಾಲದಲ್ಲಿ ಒಂದಕ್ಕಿಂತ ಹೆಚ್ಚು ಉತ್ಸವಗಳು - ಅವುಗಳ ವಿವರ, ಪ್ರಮಾಣ, ತಿಳಿಯದಿದ್ದರೂ - ನಡೆಯುತ್ತಿದ್ದವೆಂಬುದು ತಿಳಿದುಬರುತ್ತದೆ.

ಎರಡನೇ ಹರಿಹರನ ಕಾಲದಲ್ಲಿ ಈತ ಮುಲ್ಲೈ ತಿರುವೆಂಕಟಜೀಯರ್ ಅವರ ಮೂಲಕ ಮಾಸಿ ತಿಂಗಳಿನಲ್ಲಿ ಒಂದು ಹೊಸ ಉತ್ಸವವನ್ನು ಆರಂಭಿಸಿದಂತೆ ತಿಳಿದುಬರುತ್ತದೆ. ಪೂಂಗೋಡು ಗ್ರಾಮವನ್ನು ಉತ್ಸವ ವೆಚ್ಚಗಳಿಗಾಗಿ ಈತ ಆಲಯಕ್ಕೆ ನೀಡಿದ (61, 103 ತಿ.ತಿ.) ಹೀಗೆ ಕಾಲಾನುಕ್ರಮದಲ್ಲಿ ಇವುಗಳ ಸಂಖ್ಯೆ ಹೆಚ್ಚಾಗುತ್ತಾ 16 ನೇ ಶತಮಾನದಲ್ಲಿ ವರ್ಷಕ್ಕೆ ಹತ್ತು ಬ್ರಹ್ಮೋತ್ಸವಗಳಾಗುತ್ತಿದ್ದವೆಂದು ಶಾಸನಗಳ ಅಧ್ಯಯನದಿಂದ ತಿಳಿದುಬರುತ್ತದೆ. ವೈಕಾಸಿ, ಆಣಿಮಾಸಗಳಲ್ಲಿ ತಿರುಪತಿಯಲ್ಲಿ ಗೋವಿಂದರಾಜ ಸ್ವಾಮಿಗೆ ಬ್ರಹ್ಮೋತ್ಸವಗಳು ನಡೆಯುತ್ತಿದ್ದದ್ದರಿಂದ ಉಳಿದ ಹತ್ತು ತಿಂಗಳುಗಳಲ್ಲಿ ಈ ಬ್ರಹ್ಮೋತ್ಸವಗಳು ತಿರುಮಲೆಯಲ್ಲಿ ನಡೆಯುತ್ತಿರಬೇಕು.

ಬ್ರಹ್ಮೋತ್ಸವವು ನವಧಾನ್ಯಗಳನ್ನು ಕುಂಭಗಳಲ್ಲಿಟ್ಟು ಅಂಕುರಾರ್ಪಣೆ ಮಾಡುವ ದಿನದಿಂದ ದೇವತೆಗಳಿಗೆ, ವಿದಾಯಹೇಳಿ ಆಲಯದ ಸಿಬ್ಬಂದಿಯನ್ನು ಕಾರ್ಯವಿಶ್ರಾಮಗೊಳಿಸುವ ವಿದಾಯದವರಿಗೆ ಹನ್ನೆರಡು ದಿನಗಳ ಕಾಲ ನಡೆಯುತ್ತಿದ್ದಿತು. ಪ್ರತಿದಿನವೂ ಮೆರವಣಿಗೆ ಆದಮೇಲೆ ಉತ್ಸವಮೂರ್ತಿಯನ್ನು ಆಲಯದ ಒಂದು ಪ್ರತ್ಯೇಕವಾದ ಆಸ್ಥಾನ ಮಂಟಪದಲ್ಲಿ ಆಸೀನಗೊಳಿಸಿ, ಭಕ್ತರು ನೀಡಿದ ನೈವೇದ್ಯವನ್ನು ಸಮರ್ಪಿಸಲಾಗುತ್ತಿದ್ದಿತು. ಇಂತಹದೇ ಮಂಟಪಗಳು ಆಲಯದ ಸುತ್ತಲೂ ಬೆಳಸಲಾಗುತ್ತಿದ್ದು ಉದ್ಯಾನವನ ಗಳಲ್ಲಿಯೂ ಇದ್ದು ದೇವರು ಊರಮೆರವಣಿಗೆ ಬಂದಾಗ ಈ ಮಂಟಪಗಳಿಗೂ ಬಿಜ ಮಾಡಿಸುತ್ತಿದ್ದರು. ಬ್ರಹ್ಮೋತ್ಸವವೇ ಅಲ್ಲದೆ ಇತರ ಉತ್ಸವಗಳಲ್ಲಿಯೂ ಆಸ್ಥಾನದಲ್ಲಿ ಓಲಗ ನೀಡುವುದು ಸಹಜವಾದ ಉತ್ಸವಾಂಗವೇ ಆಗಿದ್ದಿತು.

ಹಲವು ವರ್ಷಗಳ (20ನೇ ಶತಮಾನದಲ್ಲಿ), ಹಿಂದಿನವರೆಗೆ ಆಲಯದಲ್ಲಿ ವರ್ಷಕ್ಕೆ ನಾಲ್ಕು ಬ್ರಹ್ಮೋತ್ಸವಗಳಾಗುತ್ತಿದ್ದವು. ಮೊದಲನೆಯದು ಪುರಟ್ಟಾಸಿ ಮಾಸದಲ್ಲಿ, ಎರಡನೆಯದು ರಥಸಪ್ತಮಿಯಂದು, ಮೂರನೆಯದು ಕಾರ್ತೀಕ ಮಾಸದ ಕೈಶಿಕ ಏಕಾದಶಿ ಯಂದು ಹಾಗೂ ನಾಲ್ಕನೆಯದು ಮುಕ್ಕೋಟಿ ಏಕಾದಶಿ ಯಾದ ವೈಕುಂಠ ಏಕಾದಶಿಯಂದು. ರಥಸಪ್ತಮಿಯಂದು ಮಾಡುವ ಬ್ರಹ್ಮೋತ್ಸವವನ್ನು ಆರ್ಷ ಬ್ರಹ್ಮೋತ್ಸವ ಎಂದೂ, ಕೈಶಿಕ ದ್ವಾದಶಿಯಂದು ಮಾಡುವ ಉತ್ಸವವನ್ನು ರಾಕ್ಷಸವೆಂದೂ ಕರೆಯುವು ದುಂಟು. ಇವುಗಳಲ್ಲೆಲ್ಲ ಬಹು ಪ್ರಮುಖವೆನ್ನುವಂತಹದ್ದು ಪುರಟ್ಟಾಸಿ ತಿಂಗಳಿನಲ್ಲಿ ನಡೆಯುವ ಬ್ರಹ್ಮೋತ್ಸವ. ಇದು ಸಾಧಾರಣವಾಗಿ ಸೆಪ್ಟಂಬರ್- ಅಕ್ಟೋಬರ್ ತಿಂಗಳುಗಳಲ್ಲಿ ಬರುತ್ತವೆ. ಈಗ ಸಧ್ಯಕ್ಕೆ ಇದೊಂದೇ ಬ್ರಹ್ಮೋತ್ಸವ (ಎಂಬ ಖಚಿತವಾದ ಹೆಸರಿನಲ್ಲಿ) ನಡೆಯುತ್ತಿದೆ. ಇದು ಶ್ರವಣ ನಕ್ಷತ್ರದಲ್ಲಿ ಕೊನೆಗೊಳ್ಳುವಂತೆ ಇರುತ್ತದೆ.

ಶ್ರವಣ ನಕ್ಷತ್ರ ಬರುವ ಒಂಭತ್ತು ದಿನ ಮುಂಚೆ, ಅಂಕುರಾರ್ಪಣೆ ಆಗುತ್ತದೆ. ಹೊಸದಾಗಿ ಅಲಂಕಾರ ಮಾಡಿದ ಮಡಿಕೆಗಳಲ್ಲಿ ನವಧಾನ್ಯಗಳನ್ನು ಬೀಜವಾಗಲು ತುಂಬಿಸಿಡುವರು. ಇದು ನಿತ್ಯಸೂರಿಗಳಿಗೆ ಅರ್ಪಿತ ವಾಗುವ ಪ್ರಸಾದವೆಂದು ಭಾವಿಸಲ್ಪಟ್ಟಿದೆ. ಯಾಗಶಾಲೆಯಲ್ಲಿ ಒಂದು ಪೂರ್ಣ ಕುಂಭವನ್ನು ಸ್ಥಾಪಿಸಲಾಗುವುದು.

ಬ್ರಹ್ಮೋತವವು ವಾಸ್ತವದಲ್ಲಿ ಧ್ವಜಾರೋಹಣದಿಂದ ಆರಂಭ ಆಗುವುದು. ಆಲಯದ ಬಲಿಪೀಠದ ಬಳಿಯಿರುವ ಧ್ವಜಸ್ತಂಭಕ್ಕೆ ಗರುಡಧ್ವಜ ಜೋಡಿಸಿ,ನೋಡುವವರಿಗೆ ಆಕರ್ಷಕವಾಗುವಂತೆ ಮಾಡಲಾಗಿದೆ. ಪ್ರತಿದಿನವೂ ಸ್ವಾಮಿಯ ಭೋಗವನ್ನು ಹೋಮವನ್ನು ನಡೆಸುವ ಪರಿಪಾಠಿಯಿದೆ. ಸ್ವಾಮಿಯ ಉತ್ಸವ ವಿಗ್ರಹವನ್ನು ( ಶ್ರೀ ಭೂ ರಹಿತ ಹಾಗೂ ಶ್ರೀ ಭೂ ಸಹಿತವಾಗಿ) ಎರಡು ಬಾರಿ ಮೆರವಣಿಗೆಯಲ್ಲಿ ಒಯ್ಯಲಾಗಿವುದು. 1,2,3.4,5,6,7,8,9,10, ನೇ ದಿನಗಳಲ್ಲಿ ಹೊರಡುವ ವಾಹನಗಳೆಂದರೆ ಕ್ರಮವಾಗಿ ದೊಡ್ಡಶೇಷ, ಹಂಸ, ಸಿಂಹ, ಪುಣ್ಯಕೋಟಿ ವಿಮಾನ, ಗರುಡ, ಗಜ, ಚಂದ್ರಪ್ರಭ, ಅಶ್ವ, ದಂತದ ಪಲ್ಲಕ್ಕಿ, ತಿರುಚ್ಚಿವಾಹನ ಗಳು. (ಈಗ ವಾಹನಗಳ ವಿವರ ಬೇರೆಯೇ ಆಗಿದೆ. ಇದಕ್ಕಾಗಿ ಉತ್ಸವ ಕಾರ್ಯಕ್ರಮಪಟ್ಟಿಯನ್ನು ನೋಡಬಹುದು.)

ಉತ್ಸವದ ಮುಖ್ಯವಾದ ದಿನಗಳೆಂದರೆ ಐದು, ಎಂಟು ಮತ್ತು ಹನ್ನೊಂದನೆಯ ದಿನಗಳು. ಏಳನೆಯ ದಿನದ ಸೂರ್ಯಪ್ರಭವಾಹನವೂ ಆಕರ್ಷಕವಾಗಿರುತ್ತದೆ.

ಐದನೆಯ ದಿನದ ರಾತ್ರಿ ನಡೆಯುವ ಉತ್ಸವವನ್ನು ಗರುಡಸೇವೆ ಎಂದು ಕರೆಯಲಾಗಿದೆ. ಈ ಸಮಯ ದಲ್ಲಿ ಮಲೆಯಪ್ಪ ಸ್ವಾಮಿಯನ್ನು ಮಾತ್ರವೇ ಗರುಡವಾಹನದಲ್ಲಿ ಮೆರವಣಿಗೆ ಮಾಡಲಾಗುತ್ತದೆ. ಸಾಧಾರಣವಾಗಿ ದೇವರ ಎಡ ಬಲ ಭಾಗಗಳಲ್ಲಿ ಯಾವಾಗಲೂ ಇರುವಂತೆ ಉಭಯ ನಾಯಕಿಯರು ಇರುವುದಿಲ್ಲ.ಊಂಜಲ್ ಸೇವೆಯಿರುತ್ತದೆ. ಗುಡಿಯಿಂದ ಹೊರಗೆ ಧ್ವಜಸ್ತಂಭದ ಬಳಿ ನಡೆಯುವ ಈ ಊಂಜಲ್ ಸೇವೆಗೆ ಸ್ವಾಮಿ ತಿರುಚ್ಚಿಯಲ್ಲಿ ಆಗಮಿಸುವರು. ತಿರುಚ್ಚಿಯನ್ನು ಉದ್ದವಾದ ಛಾವಣಿಗೆ ಕಟ್ಟಿದ ಸರಪಳಿಗೆ ಸೇರಿಸಿ ಉಯ್ಯಾಲೆಯನ್ನಾ ಗಿಸಲಾಗುವುದು. ಇದನ್ನು ತೂಗುತ್ತ ವೇದಮಂತ್ರಗಳ ನಂತರ ಸ್ವಾಮಿಯನ್ನು ಗರುಡವಾಹನದಲ್ಲಿ ಆಸೀನಗೊಳಿಸಲಾಗುವುದು.

ಮೂಲವಿಗ್ರಹಕ್ಕೆ ಅಲಂಕಾರವಾಗಿರುವ ಮಕರಕಂಠಿ ಹಾಗೂ ಲಕ್ಷ್ಮೀಹಾರಗಳನ್ನು ತಂದು ಗರುಡ ವಾಹನನಾದ ಸ್ವಾಮಿಗೆ ಅಲಂಕಾರ ಮಾಡಲಾಗುವುದು. ನಂತರ ಆಲಯದ ಸುತ್ತ ಪೂರ್ವ ದಕ್ಷಿಣ ಪಶ್ಚಿಮ ಉತ್ತರ ಮಾಡ ವೀಧಿಗಳಲ್ಲಿ ಮೆರವಣಿಗೆಯಲ್ಲಿ ಸ್ವಾಮಿಯನ್ನು ಕರೆದೊಯ್ಯಲಾಗುವುದು. ಈ ಮೆರವಣಿಗೆಯಲ್ಲಿ ಸ್ವಾಮಿಗೆ ಚತ್ರ, ಚಾಮರ, ಮಂಗಳವಾದ್ಯ, ವೇದಪಾರಾಯಣ ಪ್ರಬಂಧ ಪಠಣಗಳ ಭಜನ, ಕೀರ್ತನೆಗಳ ಸೇವೆ ಯಥಾಪ್ರಕಾರವಾಗುರುವುದು.

ಎಂಟನೆಯ ದಿನ ರಥೋತ್ಸವ. ಬ್ರಹ್ಮೋತ್ಸವದ ಹಬ್ಬಗಳಲ್ಲಿ ಅತ್ಯಂತ ಹೆಚ್ಚಿನ ಮಂದಿಯನ್ನು ಆಕರ್ಷಿಸುವ ಉತ್ಸವ ಇದು ಉಷಃಕಾಲದಲ್ಲಿ ಆಲಯದಿಂದ ಉತ್ಸವ ಮೂರ್ತಿಯನ್ನೂ ಉಭಯನಾಯಕಿಯರನ್ನೂ ತೇರಿನ ಬಳಿ ತಂದು ಅವರನ್ನು ರಥಾರೂಢರನ್ನಾಗಿ ಮಾಡಿ ವಿವಿಧ ರೀತಿಯಲ್ಲಿ ಅಲಂಕರಿಸಲಾಗುತ್ತದೆ. ನಂತರ ಮೆರವಣಿಗೆ ಮಾಡಲಾಗುವುದು. ಬ್ರಹ್ಮೋತ್ಸವದ ಹನ್ನೊಂದನೆಯ ದಿನ ಉತ್ಸವ ಮೂರ್ತಿಯನ್ನು ತಿರುಚ್ಚಿಯಲ್ಲಿ ಸ್ವಾಮಿ ಪುಷ್ಕರಿಣಿಗೆ ಕರೆತರಲಾಗುವುದು. ಸ್ವಾಮಿ ಪುಷ್ಕರಿಣಿಯಲ್ಲಿ ಚಕ್ರತ್ತಾಳ್ವಾರರಿಗೆ - ಸ್ವಾಮಿಯ ಚಕ್ರಾಯುಧಕ್ಕೆ -ಸ್ನಾನ-ಚಕ್ರಸ್ನಾನವಾಗುವುದು. ಈ ಸಮಯದಲ್ಲಿ ಸ್ವಾಮಿಯ ಭಕ್ತರುಸ್ವಾಮಿ ಪುಷ್ಕರಿಣಿ ಯಲ್ಲಿ ಮುಳುಗಿ ಸ್ನಾನ ಮಾಡುವುದು ಅತಿ ಪುಣ್ಯದಾಯಕವೆಂದು ಹೇಳಲಾಗಿದೆ. ಈ ಸ್ನಾನದೊಡನೆ ಬ್ರಹ್ಮೋತ್ಸವ ಕೊನೆಗೊಳ್ಳುತ್ತದೆ.

## 3. ಅಧ್ಯಯನೋತ್ಸವ

ಶಾಸನಗಳ ಪ್ರಕಾರ ತಿರುಮಲೆಯಲ್ಲಿ ಮುಕ್ಕೋಟಿ ಏಕಾದಶಿಗೆ ಹತ್ತು ದಿನಗಳು ಮುಂಚೆ ಈ ಉತ್ಸವ ಆರಂಭವಾಗಿ ನತರ 10 ದಿನಗಳ ಕಾಲ ನಡೆಯುತ್ತದೆ ಎಂದು ತಿಳಿದುಬರುತ್ತದೆ. ಸಂಸ್ಕೃತ ಬರದವರಿಗಾಗಿ ಶ್ರೀ ವೈಷ್ಣವ ಆಳ್ವಾರರು ಹಾಡಿದ ನಾಲಾಯಿರ ದಿವ್ಯ ಪ್ರಬಂಧಗಳನ್ನು ಹೇಳುತ್ತ ಉತ್ಸವ ಮೂರ್ತಿಗಳನ್ನು ಈ ಉತ್ಸವದಲ್ಲಿ ಮೆರವಣಿಗೆ ಮಾಡಲಾಗುವುದು. ಈ ಉತ್ಸವವನ್ನು ಎರಡಾಗಿ ವಿಭಜಿಸಿ, ಮೊದಲನೆಯ ಹತ್ತು ದಿನಗಳನ್ನು ಪಗಲ್ ಪತ್ತು ಎಂದೂ ವೈಕುಂಠ ಏಕಾದಶಿಯಲ್ಲಿ ಆರಂಭ ಆಗುವ ಎರಡನೆಯ ಹತ್ತು ದಿನಗಳನ್ನು ಇರಾಪತ್ತು ಎಂದೂ ಕರೆಯಲಾಗಿದೆ. ಬ್ರಹ್ಮೋತ್ಸವದಲ್ಲಿಯಂತೆಯೇ ಅಧ್ಯಯನೋತ್ಸವ ದಿನಗಳಲ್ಲಿಯೂ ಭಕ್ತರು ದೇವರಿಗೆ ನಿವೇದನೆಗೆಂದು ದಾನಗಳನ್ನು ನೀಡಿರುವರು.

ತಿರುಪತಿಯ ಗೋವಿಂದರಾಜಸ್ವಾಮಿ ಆಲಯದಲ್ಲೂ, ಕೋದಂಡ ರಾಮಾಲಯದಲ್ಲಿಯೂ ಅಧ್ಯಯನೋತ್ಸವ ನಡೆದಿತ್ತು. ಐವರು ಆಳ್ವಾರರಿಗೆ ಹನ್ನೆರಡು ದಿನಗಳ ಕಾಲ ನಡೆಯುತ್ತಿದ್ದಿತು, ಕಡೆಯ ದಿನ - ಶಾತ್ತು ಮೊರೆಯ ದಿವಸದಂದು ತಿರುಮಲೆಯಲ್ಲಿ ಸ್ವಾಮಿಗೆ ಮೊದಲು ನಿವೇದನೆಯಾಗಿ ನಂತರ ಅದನ್ನು ತಿರುಪತಿಗೆ ತಂದು ಆಳ್ವಾರರಿಗೆ ಅರ್ಪಿಸುತ್ತಿದ್ದರು. ಈ ಉತ್ಸವದ ಬಗ್ಗೆಅತಿ ಪ್ರಾಚೀನ ಉಲ್ಲೇಖ ವೆಂದರೆ ಕ್ರಿ.ಶ.1400 ರದ್ದು ಹಾಗೂ ಅತಿ ಈಚಿನ ಉಲ್ಲೇಖ ಕ್ರಿ.ಶ.1635 ರದ್ದು.

ಪ್ರಾಚೀನ ಕಾಲದಲ್ಲಿ ಶ್ರೀ ರಾಮಾನುಜರ ಬಳಿಯಲ್ಲಿಯೂ ಚಿತ್ತರೈ ತಿಂಗಳಿನಲ್ಲಿ ಒಂದು ಅಧ್ಯಯನೋತ್ಸವ ನಡೆಯುತ್ತಿತ್ತು. ಈ ಉತ್ಸವದಲ್ಲಿ ಉತ್ಸವ ಮೂರ್ತಿಯ ಆಸ್ಥಾನಕ್ಕಾಗಿ ಕಲ್ಯಾಣಮಂಟಪವನ್ನು ಬಳಸಲಾಗುತ್ತಿದ್ದಿತು. ಇಂದಿಗೂ(1980) ಉತ್ಸವಮೂರ್ತಿಯಾದ ಮಲೆಯಪ್ಪಸ್ವಾಮಿಯನ್ನು ಬ್ರಹ್ಮೋತ್ಸವ, ಅಧ್ಯಯನೋತ್ಸವಗಳಲ್ಲಿ ಕಲ್ಯಾಣ ಮಂಟಪದಲ್ಲಿಯೇ ಇಡಲಾಗುತ್ತದೆ.

## 4. ಪವಿತ್ರೋತ್ಸವ

ಪ್ರಾಚೀನ ಕಾಲದಿಂದಲೂ ತಿರುಮಲೆಯ ದೇವಾಲಯದಲ್ಲಿ ಹಲವಾರು ಉತ್ಸವಗಳು ನಿರ್ವಹಣೆಗೆಂದು ದಾನಗಳನ್ನು ನೀಡಲಾಗಿದ್ದುದನ್ನು ಕಾಣಬಹುದು. ಈ ಉತ್ಸವಗಳು ಇಂದೂ ಮುಂದುವರೆದಿವೆ. ಪವಿತ್ರೋತ್ಸ ವದ ವಿಷಯದಲ್ಲಿಯೂ ಹಾಗೆಯೇ. ಪ್ರಾಚೀನ ಕಾಲದಲ್ಲಿ ಹಲವಾರು ಶಾಸನಗಳಿದ್ದರೂ ಮಧ್ಯಕಾಲದಲ್ಲಿ ಬಿಟ್ಟುಹೋಗಿದ್ದು,1962 ರಲ್ಲಿ ಮತ್ತೆ ಆರಂಭಗೊಂಡು ಇಂದಿಗೂ ನಡೆಯುತ್ತದೆ. ಇದರ ಆಚರಣೆ ಮಧ್ಯದಲ್ಲಿ ನಿಂತದ್ದಕ್ಕಾಗಲೀ ಆಮೇಲೆ ನಡೆಯದೆ ಇದ್ದದ್ದಕ್ಕಾಗಲೀ ಕಾರಣಗಳು ತಿಳಿದುಬಂದಿಲ್ಲ.

ಇದರ ಹೆಸರೇ ಸೂಚಿಸುವಂತೆ ಇದೊಂದು ಶುದ್ಧೀಕರಣ ಉತ್ಸವ. ಇದು ಒಂದು ವಾರ್ಷಿಕ ಉತ್ಸವ. ಆಲಯದಲ್ಲಿ ನಿತ್ಯವೂ ಮಾಡುವ ಪೂಜಾದಿಗಳಲ್ಲಿ,ಸೇವೆಗಳಲ್ಲಿ ಲೋಪ ದೋಷಗಳ ಪರಿಣಾಮವನ್ನು ಪರಿಹರಿಸಿ ಕೊಳ್ಳುವ ಉತ್ಸವ.

ಈ ಪವಿತ್ರೋತ್ಸವನ್ನು ಶ್ರಾವಣ ಶುದ್ಧ ದಶಮಿಯ ದಿನ ನಡೆಸಲಾಗುವುದು. ಸಾಳುವ ನರಸಿಂಹನ ಆಳ್ವಿಕೆಯ ಕಾಲದಲ್ಲಿ 1463 ರಲ್ಲಿ ಸಾಳುವ ಮಲ್ಲಯ್ಯದೇವರಾಯನಿಂದುಂಟಾದ ಉತ್ಸವ ಇದು. (157 ತಿ.ತಿ.) ಅಂದಿಗೆ ಮೊದಲಬಾರಿಗೆ ಪ್ರವೇಶ ಗೊಳಿಸಿದ ಹೊಸ ಉತ್ಸವವಾದ್ದರಿಂದ ಐದುದಿನಗಳ ಕಾಲ ನಡೆಯುತ್ತಿದ್ದ ಉತ್ಸವದ ಸಂಪೂರ್ಣ ವಿವರಗಳನ್ನು ಶಾಸನವುನೀಡುತ್ತದೆ. (ಮೊದಲನೆಯ ದಿನದ ಅಂಕುರಾರ್ಪಣೆಯನ್ನು ಸೇರಿಸಿದರೆ ಒಟ್ಟು ಆರುದಿನ - ಆ ಕಾಲದಲ್ಲಿ) ಈ ಉತ್ಸವದಲ್ಲಿ ಐದೂ ದಿನವೂ ಪುರಾಣಪ್ರವಚನವೂ ಇದ್ದು ಪ್ರವಚನಕಾರರಿಗೆ ದಕ್ಷಿಣೆಯನ್ನೂ ನೀಡಲಾಗುತ್ತಿದ್ದಿತು.

ಕ್ರಿ.ಶ.1463 ರಲ್ಲಿ ಪ್ರಥಮ ಬಾರಿಗೆ ಈ ಉತ್ಸವ ಪ್ರವೇಶವಾಯಿತು. ಶಾಸನಗಳಲ್ಲಿ ಇದರ ಬಗ್ಗೆ ವಿವರಗಳಿರುವುದನ್ನು ತಿಳಿಯುವುದು ಆಸಕ್ತಿಕರವಾಗಬಲ್ಲದು. ತಿರುಮಲೆಯ ಆಲಯದ ಒಳಗೆ ಉತ್ತರ ಪ್ರಾಕಾರದ ಗೋಡೆಯ ಮೇಲೆ ಬರೆದಿರುವುದು ಶಾಸನ ಈ ಕೆಳಕಂಡ ವಿವರಗಳನ್ನು ನೀಡುತ್ತದೆ.

'ಸರ್ವರಿಗೆ ಸನ್ಮಂಗಳವಾಗಲಿ. ಶಕವರ್ಷ 1385 ಕ್ಕೆ ಸರಿಯಾದ ಸುಭಾನು ಸಂವತ್ಸರದ ಮಕರಮಾಸದ ಶುದ್ಧದಶಮಿಯಂದು ರೋಹಿಣಿ ನಕ್ಷತ್ರ ಇರುವ ಬುಧವಾರದಲ್ಲಿ (18 ಜನವರಿ 1464) ತಿರುಮಲೆಯ ಆಲಯದ ಸ್ಥಾನತ್ತಾರರು ಶ್ರೀಮನ್ಮಹಾಮಂಡಲೇ ಶ್ವರ ಮೇದಿನೀಮೀಸರಗಂಡ ಕಠಾರಿಸಾಳುವ ಮಲ್ಲಯದೇವ ಮಹಾರಾಜರು-ಸಾಳುವ ಯರ್ರಕಂಪಯ ದೇವರಾಜರ ಮಕ್ಕಳು-ಇವರ ಹೆಸರಿನಲ್ಲಿ ಈ ಶಾಸನವನ್ನು ಹಾಕಿಸಿದ್ದಾರೆ. ಅಂಕುರಾರ್ಪಣದಲ್ಲಿ ನವಧಾನ್ಯಬೀಜಗಳನ್ನು ಕುಂಭಗಳಲ್ಲಿ ಬೀಜಾವಾಪನಮಾಡು ವುದರಿಂದ ಶುದ್ಧ ದಶಮಿಯಂದು ರಾತ್ರಿ- ಆವನಿಮಾಸದ ಶುಕ್ಲಪಕ್ಷದಲ್ಲಿ ಆರಂಭವಾಗುವ ಐದುದಿನಗಳ ತಿರುಪವಿತ್ರಗಳನ್ನು ತಮ್ಮ ಹೆಸರಿನಲ್ಲಿ ನಡೆಸಬೇಕೆಂದು ನಿಶ್ಚಯಿಸಿ,ತತ್ಸಂಬಂಧಿ ವಸ್ತುಗಳ ಪ್ರಬಂಧಕ್ಕಾಗಿಯೂ - ಏಕಾದಶಿ ದ್ವಾದಶಿಗಳಂದು ತಿರುಮಾಮಣಿ ಮಂಟಪದ ಹಾಗೂ ಮಲೈಕುನಿಯ ನಿನ್ರ ಪೆರುಮಾಳರ,ನಾಚ್ಚಿಯಾರರ,ಆಸನದ ಅಲಂಕಾರಕ್ಕಾಗಿಯೂ ಅವರಿಗೆ ಪವಿತ್ರ ಸಮರ್ಪಣೆ ಗಾಗಿಯೂ, ನಂತರ ಮಾಡ ವೀಧಿಗಳಲ್ಲಿ ಮೆರವಣಿಗೆ ಮಾಡಲೂ ಬೇಕಾದ ವೆಚ್ಚಗಳಿಗೆಂದು ಈ ವಿವರವಾದ ಪ್ರಬಂಧ ಮಾಡಿದ್ದಾರೆ.

- ಯಜ್ಞೋಪವೀತ,ಪ್ರತಿಮೆ ಜಲ ಕುಂಭಗಳಿಗಾಗಿ- 103 ಪಣಗಳು
- ಆಚಾರ್ಯರ ಹಸ್ತಪತ್ರ, ಕರ್ಣಪತ್ರಿಗಳಿಗಾಗಿ (ಆಭರಣಗಳು)- 10 ಪಣಗಳು.
- ಸುವರ್ಣ,ಭೂ, ಗೋದಾನ, ದಕ್ಷಿಣೆಗಳಿಗಾಗಿ- 12 ಪಣಗಳು
- ಪಂಚ ಶಯನಕ್ಕಾಗಿ - ರತ್ನಕಂಬಳಿ, ಮೆತ್ತೆ ನವಿಲಗರಿಯ ಬೀಸಣಿಗೆ,ಕೃಷ್ಣಾಜಿನ,ರೇಷ್ಮೆವಸ್ತ್ರಗಳಿಗಾಗಿ - 40 ಪಣಗಳು.
- ವೇದಗಳನ್ನು ಹಾಡುವ ಪುರಾಣಭಟ್ಟರು ಬ್ರಾಹ್ಮಣರಿಗೆ ದಕ್ಷಿಣೆಗಾಗಿ - 5 ಪಣಗಳು.
- ಮೇಲಿನ ಎಲ್ಲಾ ವ್ಯಕ್ತಿಗಳ ದಕ್ಷಿಣೆಗಾಗಿ - 10 ಪಣಗಳು.
- ಪಂಚವರ್ಣದ ದಾರಗಳನ್ನು ಮಾಡಲು ನೀಲಿ ರಂಗು ತರುವವನಿಗೆ ಕೆಂಪು, ಕಪ್ಪು, ಹಸಿರು ದಾರ ತರುವವನಿಗೆ ಮೂರೂಕಾಲು ಪಣ.
- ಹಳದಿ ಬಣ್ಣ ತರುವವನಿಗೆ ಅರ್ಧಪಣ.
- ಕುಂಭಕಾರನಿಗೆ ದೊಡ್ಡ ಕುಂಭ, ಪಾಲಿಕೆ, ಮಿಕ್ಕ ಮಣ್ಣಿನ ಪ್ರಾತ್ರೆಗಳಿಗಾಗಿ- 7 ಪಣ.
- ಹಾರುಪಟ (ದೇವರ ಚಿತ್ರದ ಪಟ) ಹಾಗೂ ಎರಡು ಮಕರಗಳನ್ನುಳ್ಳ ಉತ್ಸವಕಾರ್ಯದ ದ್ವಾರವನ್ನು ತೋರುವಮಕರ ತೋರಣ ಮಾಡಲು ಬಡಗಿಗೆ - 8 ಪಣಗಳು.
- ಒಟ್ಟು 198.75 ಪಣಗಳು.....

ಎರಡು ಶಾಸನಗಳು ತಿರುಪತಿಯಲ್ಲೂ ಎರಡು ಶಾಸನಗಳು ತಿರುಮಲೆಯಲ್ಲಿಯೂ ಇದ್ದು ಒಟ್ಟು ನಾಲ್ಕು ಶಾಸನಗಳಲ್ಲಿ ಪವಿತ್ರೋತ್ಸವ ಕಂಡುಬರುತ್ತದೆ. ಶ್ರೀರಂಗಂ,ಕಂಚಿಗಳಲ್ಲಿಯೂ ಈ ಪವಿತ್ರೋತ್ಸವ ವೈಭವ ಭಕ್ತಿ ಪ್ರಪತ್ತಿಗಳಿಂದ ಆಚರಿಸಲ್ಪಡುತ್ತಿರುವುದ

ರಿಂದಾಗಿ ಇಂತಹ ಒಂದು ಮುಖ್ಯವೂ, ಹಿರಿಯದೂ ಆದ ಉತ್ಸವ ಹೇಗೆ ಎಂದು ನಿಂತು ಹೋಯಿತೆಂದು ತಿಳಿಯದಾಗುತ್ತದೆ. (20 ನೆ ಯ ಶತಮಾನದಲ್ಲಿ ಪುನಃ ಪ್ರಾರಂಭಿಸಲ್ಪಟ್ಟಿದೆ -ಅನುವಾದಕ)

## 5. ಸಂಕ್ರಾಂತಿ

ಸಂಕ್ರಾಂತಿ ಹಬ್ಬವು ಸೂರ್ಯನ ಆಗಸ ಸಂಚಾರದಿಂದ ಉಂಟಾಗುವ ಒಂದು ಹಬ್ಬ.ಮಕರ ಸಂಕ್ರಾಂತಿ,ಕರ್ಕಾಟಕ ಸಂಕ್ರಾಂತಿಗಳು ಉತ್ತರಾಯಣ,ದಕ್ಷಿಣಾಯಣ ಪುಣ್ಯಕಾಲಗಳನ್ನು ಸೂಚಿಸಿ ಅತ್ಯಂತ ಪ್ರಮುಖವಾದ ಹಬ್ಬಗಳಾಗಿವೆ. ವಿಷುವದ್ರೇಖೆಯನ್ನು ದಾಟುವ ವಿಷುವತ್ ಸಂಕ್ರಾಂತಿಗಳು ಅಷ್ಟೊಂದು ಪ್ರಮುಖವಲ್ಲ.ಆದರೂ ಇವುಗಳನ್ನು ಅಮಾವಾಸ್ಯೆಗಳ ಜೊತೆಗೆ ಸೇರಿಸಿ ಪವಿತ್ರವೆಂದು ತಿಳಿಯಲಾಗಿದ್ದು ಬಹುತೇಕ ಎಲ್ಲ ದೇವಸ್ಥಾನಗಳಲ್ಲೂ ಆಚರಿಸಲಾಗುತ್ತದೆ.

ಅನೇಕ ದಾನಿಗಳು ಈ ಹಬ್ಬಗಳ ಆಚರಣೆಗಾಗಿ ಹಲವಾರು ದೇಣಿಗೆಗಳನ್ನು ನೀಡಿರುತ್ತಾರೆ. ಇಂತಹವುಗಳಲ್ಲಿ ಮೊದಲನೆಯದು ಎರಡು ಆಯನ ಸಂಕ್ರಾಂತಿಗಳನ್ನು,ಎರಡು ವಿಷುಸಂಕ್ರಾಂತಿಗಳನ್ನು ಆಚರಿಸಲು ಕ್ರಿ.ಶ.966 ರಲ್ಲಿ ಸಾಮವೈ ರಾಣಿಯು ನೀಡಿದ ದೇಣಿಗೆ ಆಗಿದೆ. (8 ತಿ.ತಿ.) ಅಂದಿನಿಂದ ಈಚೆಗೆ ಒಂದು ಸಾವಿರ ವರ್ಷಗಳಲ್ಲಿ ಸಂಕ್ರಾಂತಿ ಹಬ್ಬವನ್ನು ಆಚರಿಸಲು ಹಲವಾರು ಮಂದಿ ಭಕ್ತರು ವಿಶೇಷವಾದ ದೇಣಿಗೆಗಳನ್ನು ನೀಡಿದ್ದಾರೆ. ಒಂದು ವಿಶೇಷ ಸಂದರ್ಭದಲ್ಲಿ ಸೂರ್ಯ,ಚಂದ್ರಗ್ರಹಣಗಳು ಬರುವಂತಹ ಅಮಾವಾಸ್ಯೆ ಪೌರ್ಣಿಮೆಗಳನ್ನು ವಿಶೇಷ ದಿನಗಳೆಂದು ಪರಿಗಣಿಸಿ ತಿಂಗಳ ದಿವಸಗಳಿಂದ ಬೇರೆಯೆಂದು ತಿಳಿದದ್ದು ಉಂಟು.

ನಮ್ಮ ವಿಶೇಷ ಗಮನಕ್ಕೆ ಬರುವಂತಹುದು ಎಂದರೆ ಆಡಿ ಆಯನ. ಇಲ್ಲಿ ದೇವಸ್ಥಾನದ ವಾರ್ಷಿಕ ಆದಾಯ ವೆಚ್ಚಗಳ ಪಟ್ಟಿ ಹೊಸ ಜಾತಿ ಮೊದಲಿನಿಂದ ಬರೆಯಲ್ಪಡುತ್ತದೆ. ಈ ಆಡಿ ಆಯನವನ್ನು ಶಾಸನಗಳಲ್ಲಿ ವಿವಿಧ ರೀತಿಯಲ್ಲಿ ತಿರುಅಂಡೆಳುತ್ತು ಇಡುಂಪೋಡು, ತಿರುವಾಂಡೆಳುತ್ತು ಸಾತ್ತಿ ಅರುಳುಂಪೋದು. ತಿರುವಂಡೇಳುತ್ತಿಟ್ಟ ತಿರುವಾಯಿಲೆ - ಇತ್ಯಾದಿಯಾಗಿ ಕರೆಯಲಾಗಿದೆ.

## 6. ವಸಂತೋತ್ಸವ

ಜಗತ್ತಿನ ಪ್ರಭುವು ಮನುಷ್ಯನಂತೆಯೇ ಪರಿಕಲ್ಪಿತನಾಗಿರುವುದರಿಂದ ಮನುಷ್ಯನ ಹಬ್ಬಗಳಲ್ಲಿ - ವಸಂತೋತ್ಸವ, ಗ್ರೀಷ್ಮೋತ್ಸವ, ಊಂಜಲ್ ತಿರುನಾಳ್,ಪ್ಲವೋತ್ಸವ- ಇತ್ಯಾದಿಗಳಲ್ಲಿ ದೇವರೂ ಸಹ ಭಾಗವಹಿಸುತ್ತಾನೆ. ವಸಂತ ಋತುವಿನಲ್ಲಿ ವೈಕಾಸಿ ತಿಂಗಳಿನಲ್ಲಿ ತಿರುಪತಿಯ ಗೋವಿಂದರಾಜಸ್ವಾಮಿ ಬ್ರಹ್ಮೋತ್ಸವ ನಡೆಯುತ್ತದೆ. ಅಲ್ಲಿ ಆರನೆಯ ದಿನ ದೇವರನ್ನು ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯಲ್ಲಿ ಕೊಂಡೊಯ್ದು ವಸಂತೋತ್ಸವವನ್ನು ಆಚರಿಸಲಾಗುತ್ತದೆ. ಈ ದಿನಗಳಲ್ಲಿ ಸಂಜೆಯ ಹೊತ್ತಿನಲ್ಲಿ ಉತ್ಸವವನ್ನು ಆಚರಿಸಿ ಚಂದನವನ್ನು ವಿತರಿಸುತ್ತಾರೆ. ಶಾಸನಗಳಲ್ಲಿ ಕಂಡುಬರುವಂತೆ ಹಿಂದೆ ಈ ಹಬ್ಬದಂದು ಹೆಚ್ಚಿನ ಪ್ರಮಾಣದ ಚಂದನವನ್ನು ವಿತರಿಸುವ ಒಂದು ಕ್ರಮ ಪರಂಪರೆಯಿಂದ ಬಂದದ್ದು ಎಂದು ಹೇಳಬಹುದು.

ವಸಂತೋತ್ಸವವು ಬ್ರಹ್ಮೋತ್ಸವದಲ್ಲಿ ಒಂದು ಅಂಗವಾಗಿರುವುದಿಂದಲೂ ಬ್ರಹ್ಮೋತ್ಸವದ ಆರನೆಯ ದಿನದಂದು ನಡೆಯುವುದರಿಂದಲೂ ಹದಿಮೂರನೆಯ ಶತಮಾನದಿಂದ ಹದಿನಾರನೆಯ ಶತಮಾನದವರೆಗೆ ಬ್ರಹ್ಮೋತ್ಸವಗಳು ಎರಡು ಹೆಚ್ಚು ಸೇರಿದ್ದರಿಂದ ಇದನ್ನೂ ಬ್ರಹ್ಮೋತ್ಸದ ಅಂಗವೆಂದೇ ಹೇಳಿ ಹೆಚ್ಚಿಸಿದ್ದನ್ನು ಕಾಣಬಹುದು. ಕೃಷ್ಣದೇವರಾಯನ ಕಾಲದಲ್ಲಿ ನಡೆಯುತ್ತಿದ್ದ ಕೊಡೈ ತಿರುನಾಳ್‌ಗೆ ಅಂಗವಾಗಿ ಕಡೆಯ ಎರಡು ದಿನ ವಸಂತೋತ್ಸವವನ್ನು ಸೇರಿಸಲಾಯಿತು.

ಚಿತ್ತರೈ ನಕ್ಷತ್ರದಿನದಲ್ಲಿ ಪೌರ್ಣಮಿಯ ಜೊತೆಗೆ ಬರುವಂತೆ ಚಿತ್ರಾಮಾಸದಲ್ಲಿ ಮೂರುದಿನಗಳ ಕಾಲ ವಸಂತೋತ್ಸವವನ್ನೇ ಪ್ರತ್ಯೇಕ ಉತ್ಸವವಾಗಿ ಆಚರಿಸಿದ ಘಟನೆಯು ಉಂಟು.(105 ತಿ.ತಿ.). ಅಚ್ಯುತರಾಯನ ಕಾಲದಲ್ಲಿ ಶಕ ಸಾವಿರದ ನನ್ನೂರ ಆರುಹತ್ತು, ವಿಳಂಬಿ ಸಂವತ್ಸರದಲ್ಲಿ ಮೂರು ಸಾವಿರ ನರ್ಪಣಗಳು ಠೇವಣಿ ಯಾಗಿಟ್ಟು ತಿರುಮಲೆಯಲ್ಲಿ ಆಲಯದ ಲೆಕ್ಕಿಗರೊಬ್ಬರ ಮಗನಾದ

ಪೆರಿಯ ಶೋಲೈ ಎನ್ನುವಾತ ಒಂದು ಹೊಸ ವಸಂತೋತ್ಸವವನ್ನು ಆರಂಭಿಸಿದನು. ಇಲ್ಲಿ ಪಂಗುಣಿ ಮಾಸದ ಉತ್ತರಾಭಾದ್ರ ನಕ್ಷತ್ರದಲ್ಲಿ ಅಂಕುರಾರ್ಪಣೆ ಆಗಬೇಕಾಗಿತ್ತು. ಹಾಗೂ ನಾಲ್ಕು ದಿನಗಳ ಉತ್ಸವಾಚರಣೆಯ ನಂತರ ಕೃತ್ತಿಕಾ ನಕ್ಷತ್ರದ ದಿನ ಶಾತ್ತುಮೊರೈ ಆಗಬೇಕಾಗಿದ್ದಿತು.

ಈ ಉತ್ಸವಗಳು ಪ್ರಾಥಮಿಕ ಉತ್ಸವಗಳಾಗದೆ ಸಂದರ್ಭೋಚಿತ ಉತ್ಸವಗಳಾದ್ದರಿಂದ ಇವುಗಳನ್ನು ಭಕ್ತರು ತಮ್ಮ ಸಾಪೇಕ್ಷ ಅಗತ್ಯಗಳಿಗೆ ತಕ್ಕಂತೆ ಹೆಚ್ಚಿಸುವ ಅಥವಾ ತಗ್ಗಿಸುವ ಸೌಲಭ್ಯ ಹೊಂದಿದ್ದರಿಂದ ಇವುಗಳ ಆಚರಣೆಯಲ್ಲಿ ವೈವಿಧ್ಯತೆ ನೋಡಬಹುದು.

## 7. ಕೊಡೈತಿರುನಾಳ್

ಕೊಡೈತಿರುನಾಳ್ ಎಂಬುದು ವಸಂತ ಋತುವಿನಲ್ಲಿ ವಸಂತೋತ್ಸವವಿದ್ದಂತೆ ಗ್ರೀಷ್ಮಋತುವಿನಲ್ಲಿ ಆಚರಿಸುವ ಹಬ್ಬ. ಇದು ಇಪ್ಪತ್ತು ದಿನಗಳ ಕಾಲ ಎರಡು ಭಾಗದಲ್ಲಿ ಆಚರಿಸಲ್ಪಡುತ್ತಿದ್ದಿತು. ಈ ಹಬ್ಬ ತಿರುಮಲೆಯಲ್ಲಿ ಮಲೆಯಪ್ಪಸ್ವಾಮಿಗೂ ಉಭಯ ನಾಯಕಿಯರಿಗೂ ವಿಶ್ವಕ್ಸೇನರಿಗೂ ನಡೆಸಲಾಗುತ್ತಿತ್ತು. ಆದರಂತೆಯೇ ತಿರುಪತಿಯಗೋವಿಂದರಾಜಸ್ವಾಮಿಗೂ ನಡೆಸಲಾಗುತ್ತಿತ್ತು. (105 ಜಿ.ಟಿ. 277, 281 ತಿ.ತಿ.) ಶಕ 1454 ರ ಖರ ಸಂವತ್ಸರದಲ್ಲಿ ಶ್ರೀ ಕೋದಂಡರಾಮಸ್ವಾಮಿಗೂ ಕೊಡೈತಿರುನಾಳ್ ಉತ್ಸವವನ್ನು ಮಾಡಲಾಗುತ್ತಿತ್ತು.(ಜಿ.ಟಿ. 251)

ತಿರುಮಲೆಯಲ್ಲಿನ ಮುಕ್ಕೋಟಿ ಪ್ರದಕ್ಷಿಣೆಯ ಪಶ್ಚಿಮದ ಗೋಡೆಯಮೇಲೆ ದೊರೆತಿರುವ ಅಸಂಪೂರ್ಣ ಶಾಸನದಲ್ಲಿ ಇದು ಮೊದಲಬಾರಿಗೆ ಕಂಡು ಬರುತ್ತದೆ. ಶಾಸನ ಶಾಸ್ತ್ರದ ಪ್ರಕಾರ ಹನ್ನೆರಡು ಅಥವಾ ಹದಿಮೂರನೇ ಶತಮಾನದಲ್ಲಿನ ಯಾವನೋ ಒಬ್ಬ ರಾಜನ ಆಳ್ವಿಕೆಯ ಹದಿನೇಳನೆಯ ವರ್ಷದಲ್ಲಿ ಕೊಡೈತಿರುನಾಳ್ ಉತ್ಸವಕ್ಕಾಗಿ ಬಳಸಲು ನಾಲ್ಕುನೂರು ಪಣಗಳನ್ನು ಈ ಶಾಸನವು ನೀಡುತ್ತದೆ. ಈ ಉತ್ಸವವನ್ನು ಮಹಂತರ ಆಳ್ವಿಕೆಯ ಕಾಲದಲ್ಲೂ ತಿರುಮಲೆಯಲ್ಲಿ ನಡೆಸಲಾಗುತ್ತಿತ್ತು. ಈಗ ಈ ಉತ್ಸವ ಆಚರಣೆಯಲ್ಲಿಲ್ಲ.

## 8.ಅನ್ನಾ ಊಂಜಲ್ ತಿರುನಾಳ್

ವಸಂತ ಉತ್ಸವ, ಕೊಡೈತಿರುನಾಳ್ ಜೊತೆಗೆ ಅನ್ನಾ ಊಂಜಲ್ (ಹಂಸತೂಲಿಕಾ) ತಿರುನಾಳ್ ಎಂಬ ಹಬ್ಬವೂ ತಿರುಪ್ಪಳ್ಳಿ ಓಡಂ ತಿರುನಾಳ್ ಎಂಬ ಹಬ್ಬವೂ ಉತ್ಸವ ವಿಗ್ರಹಗಳಿಗಾಗಿ ನಡೆಸಲ್ಪಡುತ್ತಿದ್ದವು. ಶಕ 1395 ರ ವಿಜಯನಾಮ ಸವಂತ್ಸರದಲ್ಲಿ ಸಾಳುವ ನರಸಿಂಹನಾಯಕನು ಮೊದಲಬಾರಿಗೆ ಅನ್ನಾಊಂಜಲ್ ಉತ್ಸವವನ್ನು ಆರಂಭಿಸಿದನು. ಮೊದಲ ಹಾಗೂ ಕೊನೆಯ ಎರಡು ದಿನಗಳನ್ನು ಬಿಟ್ಟು ಐದು ದಿನಗಳ ಉತ್ಸವವಿದು. ಚಿತ್ತಿರೈ ತಿಂಗಳಿನ ಶುಕ್ಲಪಕ್ಷದ ಷಷ್ಠಿಯಂದು ರಾತ್ರಿ ಅಂಕುರಾರ್ಪಣೆಯಿಂದಾಗಿ ಮಾರನೆಯ ದಿನದಿಂದ ಆಚರಿಸಲ್ಪಡುತ್ತಿದ್ದ ಈ ಉತ್ಸವದಲ್ಲಿ ಬಳಸಲಾಗುತ್ತಿದ್ದ ಎಲ್ಲ ವಸ್ತುಗಳನ್ನು - ಹೋಮ ಪುಣ್ಯಾಹ ಅಂತ್ಯ ಹೋಮಗಳ ಸಾಹಿತ್ಯವನ್ನು - ವರಸೆಯಾಗಿ ಹೆಸರಿಸಲಾಗಿದೆ. ಹಗಲು ರಾತ್ರಿಯಲ್ಲಿ ಸುಗ್ರಾಸ ನೈವೇದ್ಯಕ್ಕೆ ಅನುಕೂಲ ಮಾಡಿಕೊಡಲಾಗಿದೆ. ಇದರ ಎಲ್ಲ ವೆಚ್ಚಗಳಿಗಾಗಿ ಸಾಳುವ ನರಸಿಂಹನು ಪಡೈವೀಡು ರಾಜ್ಯದ ಉಪವಿಭಾಗವಾದ ಕಾಲುವೈಪರ್ರುವಿನ ದಮ್ಮರಪಟ್ಟಿ ಗ್ರಾಮವನ್ನು ದೇಣಿಗೆಯಾಗಿ ನೀಡಿದ್ದನು.

ಈ ಊಂಜಲ್ ಉತ್ಸವ ಪ್ರತ್ಯೇಕವಾಗಿ ಸ್ವತಂತ್ರವಾದ ಉತ್ಸವದಂತೆ ಆಚರಿಸಲ್ಪಡುತ್ತಿದ್ದದ್ದೇ ಅಲ್ಲದೇ ಕೊಡೈತಿರುನಾಳ್ ಉತ್ಸವದ ಹತ್ತನೆಯ ದಿನದ ಅಂಗವಾಗಿಯೂ, ಸಂಕ್ರಮಣದಲ್ಲಿ ಎಂದರೆ ಮಕರಸಂಕ್ರಾಂತಿ ಯಲ್ಲಿ ಒಂದು ದಿನದ ಉತ್ಸವವಾಗಿ ಸಾಳುವ ನರಸಿಂಹನಿಂದಲೇ ಏರ್ಪಾಡುಮಾಡಲ್ಪಟ್ಟಿತು. ಹೀಗಾಗಿ ಅಂದಿಗೆ ವರ್ಷಕ್ಕೆ ಒಂಬತ್ತು ಊಂಜಲ್ ಉತ್ಸವಗಳು ನಡೆಯುತ್ತಿದ್ದವು (197 ತಿ.ತಿ.).

ಸಾಳುವ ನರಸಿಂಹನಿಂದ ತಿರುಮಲೆಯಲ್ಲಿ ಮಲೆಯಪ್ಪನಿಗಾಗಿ ಊಂಜಲ್ ಸೇವೆ ಆರಂಭವಾದಂತೆ ತಿರುಪತಿಯ ಗೋವಿಂದರಾಜಸ್ವಾಮಿಗೂ ಇಂಥ ಒಂದು ಸೇವೆ ಆರಂಭವಾಯಿತು. ಶಕ 1430 ರಲ್ಲಿ ರಾಜೇಂದ್ರ ಚೋಳ ಚತುರ್ವೇದಿ ಮಂಗಲದ ಮಹಿಪಾಲಕುಲ ಕಳಚ್ಚೇರಿಯ ಆಪಸ್ತಂಭ ಸೂತ್ರದ ಕೌಂಡಿಣ್ಯಗೋತ್ರದ ಕರವೆಟ್ಟಿ ಪುಳಿ ಆಳ್ವಾರ್‌ರ ಮಗ ಅಪ್ಪಾಪಿಳ್ಳೈ ಅಥವಾ ಶ್ರೀಮಾನ್ ಉತ್ತರಮೇರೂರನು ಗೋವಿಂದರಾಜಸ್ವಾಮಿಗೆ ಊಂಜಲ್‌ಸೇವೆಯನ್ನು ಆಡಿಮಾಸದ ಚಿತ್ತಾನಕ್ಷತ್ರದಲ್ಲಿ ಅಂಕುರಾರ್ಪಣದೊಂದಿಗೆ ಮತ್ತು ಉತ್ತರಾಷಾಢದ ಶಾತ್ತುಮೊರೆಯೊಂದಿಗೆ ಕೊನೆಯಾಗುವಂತೆ ಊಂಜಲ್ ತಿರುನಾಳನ್ನು ಏರ್ಪಡಿಸಿದನು (ಜಿ.ಟಿ. 265). ಹೀಗಾಗಿ ಉತ್ಸವವು 8 ದಿನಗಳು ನಡೆಯಲು ತಕ್ಕ ಅನುಕೂಲಗಳೆಲ್ಲ ಒದಗಿಸಲಾಗಿದ್ದಿತು. ಎಲ್ಲ ಸೇವೆಗಳಿಗೂ ಸಂಭಾವನೆ ಕೊಡಲಾಗಿದ್ದಿತು. ಈಗ ದೇವಸ್ಥಾನದಲ್ಲಿ ಈ ಉತ್ಸವವನ್ನು ಆಚರಿಸಲಾಗುತ್ತಿಲ್ಲ.

## 9. ತಿರುಪ್ಪಳಿ ಓಡಂ ತಿರುನಾಳ್

ಸಾಳುವ ನರಸಿಂಹನಿಂದ ತಿರುಮಲೆಯಲ್ಲಿ ಉಯ್ಯಾಲೋತ್ಸವ ಆರಂಭ ಆದದ್ದನ್ನು ಗುರುತಿಸುವ 197 ತಿ.ತಿ.ಶಾಸನವು ಸಾಳುವ ನರಸಿಂಹನ ದೇಣಿಗೆಯಿಂದ ತಿರುಪ್ಪಳ್ಳಿ ಓಡ ತಿರುನಾಳನ್ನೂ ಆರಂಭಿಸಿ ದಂತೆಯೂ ಅದಕ್ಕಾಗಿ ಈ ಸಂದರ್ಭದಲ್ಲಿ ನಾಲ್ಕು ಅಪ್ಪ ಪಡಿಗಳನ್ನು ನಿವೇದಿಸಲು ಸೌಲಭ್ಯವನ್ನುಂಟು ಮಾಡಲಾಗಿದ್ದಿತೆಂದೂ ತಿಳಿಸುತ್ತದೆ.

ಊಂಜಲ್ ಹಾಗೂ ತೆಪ್ಪ ಉತ್ಸವಗಳ ಬಗ್ಗೆ ನಂತರದ ಕಾಲದ ದಾಖಲೆಗಳು ತಿಳಿಸುತ್ತವೆ. ಶಕ 1445ರ 97 ಜಿ.ಟಿ.ಹಾಗೂ 271 ತಿ.ತಿ.ಶಾಸನಗಳು, ಎರಡು ಆಲಯಗಳಲ್ಲಿಯೂ ಐದು ದಿನಗಳ ಊಂಜಲ್ ಉತ್ಸವ ನಡೆಯುತ್ತಿದ್ದಿತೆಂದು ತಿಳಿಸುತ್ತವೆ. ಜಿ.ಟಿ.256 ಹಾಗೂ 281 (ಶಕ 1426) ತಿ.ತಿ. ಶಾಸನಗಳಲ್ಲಿ ದಾಖಲಾಗಿರುವಂತೆ ತಿರುಪ್ಪಳ್ಳಿ ಓಡಂ ಉತ್ಸವ ಒಂದು ದಿನದ ಉತ್ಸವವನ್ನು ಮಾತ್ರವೆ ಸೂಚಿಸುವುವು. ಜಿ.ಟಿ.97 ರಲ್ಲಿ ಮಾತ್ರ ಈ ಉತ್ಸವವು ಕೋಡೈತಿರುನಾಳಿನ ಹತ್ತನೆಯ ದಿನ ನಡೆಯುವ ಒಂದು ದಿನದ ಉತ್ಸವವೆನ್ನಲಾಗಿದೆ. ಶಕ 1445ರ ವಿಜಯ ನಾಮ ಸಂವತ್ಸರದ ತಿ.ತಿ.83 ಶಾಸನವು ಅಚ್ಯುತರಾಯರ್ ಕೋನೇರಿ ಯಲ್ಲಿ ಜಲಕ್ರೀಡೈ ತಿರುಪ್ಪಳ್ಳಿಯೋಡಂ ತಿರುನಾಳ್ ಒಂಭತ್ತು ದಿನ ನಡೆಯಬೇಕೆನ್ನುತ್ತದೆ. ಆಗಮ ಶಾಸ್ತ್ರಗಳು ಈ ಉತ್ಸವಗಳನ್ನು ನಡೆಸಲು ಯಾವುದೇ ಮುಹೂರ್ತವನ್ನೂ ನಿರ್ಧರಿಸಿಲ್ಲ. ಹಾಗಾಗಿ ಈ ಉತ್ಸವಗಳ ಕರ್ತರ ಅನುಕೂಲಕ್ಕೆ ತಕ್ಕಂತೆ ನಡೆಸಬಹುದು

## 10. ಜಯಂತಿ ಉತ್ಸವಗಳು

ಆಲಯದಲ್ಲಿ ನಡೆಯತಕ್ಕ ಉತ್ಸವಗಳಿಗೆ ಮತ್ತೊಂದು ಆಸರೆಯೆಂದರೆ ವಿವಿಧ ದೇವತೆಗಳ ಆವಿರ್ಭಾವದ ನಕ್ಷತ್ರದ ಆಚ ರಣೆಗಳಿಗಾಗಿ ದಾನಿಗಳು ನೀಡಿರುವ ದೇಣಿಗೆಗಳು. ಹಲವಾರು ಜಯಂತಿಗಳು-ಶ್ರೀರಾಮನವಮಿ, ಶ್ರೀಕೃಷ್ಣಾಷ್ಟಮಿ, ನೃಸಿಂಹಜಯಂತಿ, ಹನುಮಜ್ಜಯಂತಿ, ಮೊದಲಾದವನ್ನು ವರ್ಷದ ಒಂದು ನಿರ್ದಿಷ್ಟ ದಿನದಲ್ಲಿ ಆಚರಿಸಲಾದರೆ,ಹಲವಾರು ಆಲಯ ಗಳ ಮೂಲ ಮೂರ್ತಿಗಳ ಆವಿರ್ಭಾವದ ನಕ್ಷತ್ರದ ದಿನ ಬಹಳ ಪವಿತ್ರ ವಾಗಿರುತ್ತದೆಯಾಗಿ,ಪ್ರತಿತಿಂಗಳಲ್ಲಿಯೂ ಅದೇ ನಕ್ಷತ್ರದ ದಿನದುದು ಉತ್ಸವವನ್ನುವೈಭವದಿಂದ ಮಾಡಲಾಗು ತ್ತದೆ. ಉದಾಹರಣೆಗಾಗಿ ಶ್ರವಣ ನಕ್ಷತ್ರ ಶ್ರೀ ವೆಂಕಟೇಶ್ವರಸ್ವಾನಿಗೆ (ತಿತಿ3) ಶ್ರೀರಾಮನಿಗೆ ಪುನರ್ವಸು (ತಿ.ತಿ.280) ಶ್ರೀ ಗೋವಿಂದರಾಜಸ್ವಾಮಿಗೆ ಉತ್ತರಾ ನಕ್ಷತ್ರ (ಜಿ.ಟಿ.47) ಶ್ರೀಕೃಷ್ಣನಿಗೆ ರೋಹಿಣಿ. (ಜಿ.ಟಿ.47).

ಇಂತಹ ದೇವಾನು ದೇವತೆಗಳ ಉತ್ಸವಗಳೊಂದಿಗೇ ಆಳ್ವಾರಾಚಾರ್ಯರ ಹುಟ್ಟಿದ ದಿನಗಳ ತಿರುನಕ್ಷತ್ರ ವನ್ನಾಚರಿಸಲೂ ರಾಜ, ರಾಣಿ, ಮಂತ್ರಿ, ಮನ್ನೆಯ, ಸಾಮಂತ, ಶ್ರೀಮಂತ, ಮಾನ್ಯ, ಶ್ರೀಸಾಮಾನ್ಯ - ಹುಟ್ಟು ಹಬ್ಬವನ್ನಾಚರಿಸಲೂ ಜನ ನೀಡಿದ ದೇಣಿಗೆಗಳಿಂದಾಗಿ ನಡೆಯುವ ಉತ್ಸವಗಳೂ ಉಂಟು.ದೇವರ ಅನುಗ್ರಹವುಂಟಾಗಲಿ ಎಂಬ ಅಪೇಕ್ಷೆಯಿಂದ ಮಾಡುವ ಈ ಉತ್ಸವಗಳಲ್ಲಿ ವಿಶೇಷ ಪೂಜೆ,ನೈವೇದ್ಯ,ಮೆರವಣಿಗೆಗಳೂ ಏರ್ಪಾಡಾಗುತ್ತ ಇದ್ದವು.

ಇವುಗಳೊಂದಿಗೆ ಇನ್ನೂ ಹಲವು ವಿಶಿಷ್ಟ ದಿನಗಳು - ತೈ ಅಮಾವಾಸ್ಯೆ, ಆಣಿ ಅಮಾವಾಸ್ಯೆ, ದೀಪಾವಳಿ, ಕಾರ್ತೀಕ, ಯುಗಾದಿ, ಮಹಾನವಮಿ, ರಥಸಪ್ತಮಿ - ಮೊದಲಾದ ಹಿಂದೂಗಳು ಪವಿತ್ರವೆಂದು ಬಗೆಯುವ ದಿನಗಳು. ಪವಿತ್ರವೆಂದು ಪರಿಗಣಿತ ಆಗಿ ದೇವರಿಗೆ ಹೆಚ್ಚಿನ ಪೂಜೆ ಆರಾಧನೆ ನೈವೇದ್ಯಗಳನ್ನು ಅರ್ಪಿಸಿ ವಿವಿಧ ವಾಹನಗಳನ್ನು ಬಳಸಿ ಮೆರವಣಿಗೆ ಮಾಡಲಾಗುತ್ತಿತ್ತು.

## 11. ಕಲ್ಯಾಣ ಉತ್ಸವ

ಕಲ್ಯಾಣೋತ್ಸವವನ್ನು ಕಲ್ಯಾಣಮಂಟಪದಲ್ಲಿ ಅಥವಾ ತಿರುಮಲರಾಯನಾಯಕ ಮಂಟಪದಲ್ಲಿ ನಡೆಸ ಲಾಗುವುದು. (ಈಗ 2014 ರಲ್ಲಿ ಸಂಪಂಗಿ ಪ್ರದಕ್ಷಿಣೆಯಲ್ಲಿ ಇದಕ್ಕಾಗಿ ಸ್ಥಳ ನಿರ್ದೇಶವಾಗಿದೆ.) ಈ ಉತ್ಸವದಲ್ಲಿ ಮಲೆಯಪ್ಪಸ್ವಾಮಿಯ ವಿವಾಹವನ್ನು ಶ್ರೀದೇವಿ ಭೂದೇವಿಯರೊಡನೆ ನಡೆಸಲಾಗುವುದು. ವೈಖಾನಸ ಆಗಮದ ಅನುಸಾರವಾಗಿ ಪಂಚಮೂರ್ತಿಪೂಜೆಯೊಡನೆ ಆರಂಭವಾಗುವ ಈ ಉತ್ಸವ ಅತ್ಯಂತ ಆಕರ್ಷಕ. ವೈದಿಕ ಪದ್ಧತಿಯಂತೆ ಮಂಗಳಸೂತ್ರ ಧಾರಣೆಯಾಗುತ್ತದೆ. ಪದ್ಧತಿಯಂತೆ ಅಂತರಪಟ ಜೀರಿಗೆ ಬೆಲ್ಲಗಳನ್ನೂ ಬಳಸಲಾಗುವುದು. ಉಭಯ ನಾಯಕಿಯರೂ,ದೇವರೂ ಹಾರಗಳಿಂದ ಅಲಂಕೃತರಾಗುವರು.

ಇದೊಂದು ಆರ್ಜಿತ ಸೇವೆ. ನಿಗದಿಯಾದ ಸೇವಾ ಶುಲ್ಕವನ್ನು ನೀಡಿ ನಡೆಸುವಂತಹದು. ಈ ಸೇವೆಯನ್ನು ಮಾಡುವ ಗೃಹಸ್ಥರಿಗೆ ಆಲಯದ ವತಿಯಿಂದ ವಸ್ತ್ರ ಬಹುಮಾನವುಂಟು. ಅಕ್ಷತೆಯನ್ನೂ ನೀಡಲಾಗುತ್ತದೆ. ಏನೇ ಆದರೂ ಕ್ರಿ.ಶ.1546 ಕ್ಕೆ ಬರುವವರೆಗೆ ಯಾವುದೇ ಶಾಸನವೂ ಕಲ್ಯಾಣೋತ್ಸವವನ್ನು ಹೆಸರಿಸುವುದಿಲ್ಲ. ಆ ಸಂವತ್ಸರದಲ್ಲಿ ಹಿಂದೂ ಸಂಪ್ರದಾಯದಂತೆ ದೇವರಿಗೆ ಐದು ದಿನಗಳ ಕಾಲದ ಕಲ್ಯಾಣೋತ್ಸವವನ್ನು ನಡೆಸಬಹುದೆಂದು ತಾಳ್ಳಪಾಕ ತಿರುಮಲ ಅಯ್ಯಂಗಾರ್ಯರು ತೀರ್ಮಾನಿಸಿದರು. ಫಾಗುಣಿ ತಿಂಗಳಿನಲ್ಲಿ 500 ಗಟ್ಟಿ ವರಹಗಳ ವೆಚ್ಚದಲ್ಲಿ ಉತ್ಸವವನ್ನು ಏರ್ಪಡಿಸಲಾಯಿತು. ಅಂದಿಗೆ ಕಲ್ಯಾಣ ಮಂಟಪ ಇರಲಿಲ್ಲವಾಗಿ ತಿರುಮಾಮಣಿ ಮಂಟಪದಲ್ಲಿಯೇ ಕಲ್ಯಾಣೋತ್ಸವ ನಡೆಯಿತು. ತಿ.ತಿ. 669 ನೇ ಶಾಸನದಲ್ಲಿ ನೀಡಲಾಗಿರುವ ವಿವರಗಳೀಗಿವೆ-

ಮೊದಲನೆಯ ದಿನ ಸದ್ಯೋಂಕುರವೆಂಬ ಅಂಕುರಾರ್ಪಣೆ ಆಯಿತು. ಸೋಮ ಪ್ರತಿಮೆ, ಬ್ರಹ್ಮಪ್ರತಿಮೆ ಗಳನ್ನು ಪ್ರತಿಷ್ಠಾಪಿಸ ಲಾಯಿತು. ತಿರುಮಾಮಣಿ ಮಂಟಪದಲ್ಲಿ ಮಲೈಕುನಿಯ ನಿನ್ರ ಪೆರಿಮಾಳರಿಗೂ ಉಭಯ ನಾಯಕಿಯರಿಗೂ (ಶ್ರೀದೇವಿ - ಭೂದೇವಿ) ತಿರುಮಂಜನ ಮಾಡಲಾಯಿತು. ಇದರ ನಂತರ ಅವರನ್ನು ಮೆರವಣಿಗೆಯಲ್ಲಿ ಊರಿನಲ್ಲಿ ಕರೆತರಲಾಯಿತು. ಆಲಯಕ್ಕೆ ಹಿಂದಿರುಗಿದ ನಂತರ ಅವರಲ್ಲಿ ವರನನ್ನು ತಿರುಮಾಮಣಿ ಮಂಟಪದ ಊಂಜಲಿನಲ್ಲಿ ಕೂಡಿಸಲಾಯಿತು. ಉಭಯ ನಾಯಕಿಯರಲ್ಲಿ ಒಬ್ಬರನ್ನು ಚಾತಕ ಪಕ್ಷಿ ವಾಹನದಲ್ಲಿ ಕೂರಿಸಲಾಯಿತು.ಮತ್ತೊಬ್ಬರನ್ನು ಹಂಸ ವಾಹನದಲ್ಲಿ ಕೂರಿಸಲಾಯಿತು. ಹಿಂದೂವಿವಾಹ ಪದ್ಧತಿಯಲ್ಲಿನಂತೆಯೇ ವಧುಗಳಿಬ್ಬರ ಹಾಗೂ ವರನ ಹಾರಗಳನ್ನು ಪರಸ್ಪರ ಬದಲಾಯಿಸಲಾಯಿತು. ನಂತರ ಉಭಯನಾಯಕಿಯ ರನ್ನೂ ಮಲೈ ಕುನಿಯ ನಿನ್ರ ಪೆರುಮಾಳರ ಎರಡೂ ಪಕ್ಕಗಳಲ್ಲಿ ನಿಲ್ಲಿಸಲಾಯಿತು. ಅವರ ಪಾದಗಳನ್ನು ಕ್ಷೀರದಿಂದ ಅಭಿಷೇಚಿಸಿ, ಪಂಚವರ್ಣಪಿಡಿ ಆರತಿಯನ್ನು ನೀಡಲಾಯಿತು. ಅಭಿಜಿಲ್ಲಗ್ನದಲ್ಲಿ ಮೂರ್ತಿಗಳನ್ನು ತಿರುಮಾಮಣಿ ಮಂಟಪಕ್ಕೆ ತಂದು ಮೂಹೂರ್ತಕ್ಕೆ ಬೇಕಾದ ಎಲ್ಲ ಸಾಮಾಗ್ರಿಗಳನ್ನೂ ತರಲಾಗುತ್ತದೆ. ಈ ಸಾಮಾಗ್ರಿಗಳೆಂದರೆ ಮುಖ್ಯವಾಗಿ ಉಭಯ ನಾಯಕಿಯರಿಗಾಗಿ ವಸ್ತ್ರಾಲಂಕಾರ, ಚಂದನ, ತಿರುಕಾಪ್ಪು ಸೂತ್ರದ ಬಂಧನಕ್ಕಾಗಿ ಸಂಭಾವನೆ ಹಾಗೂ ಅಂತರ ಪಟವಸ್ತ್ರ.

## 12. ರಥಸಪ್ತಮಿ

ಮಾಘ ಶುದ್ಧ ಸಪ್ತಮೀ ತಿಥಿಯಂದು ಸೂರ್ಯೋದಯದಲ್ಲಿ ಆಚರಿಸಲಾಗುವ ಪ್ರಸಿದ್ಧ ಉತ್ಸವವಿದು. ಇದೊಂದು ಹರಿದಿನ ವಾಗಿದ್ದು ಎಲ್ಲ ವಿಷ್ಣು ಆಲಯಗಳಲ್ಲಿಯೂ ಆಚರಣೆಯಲ್ಲಿದೆ. ಕ್ರಿ.ಶ.1564 ರ ಒಂದು ಶಾಸನದಲ್ಲಿ ಮೊದಲಬಾರಿಗೆ ಉಲ್ಲೇಖವಾಗಿದ ಇದಕ್ಕೆ ಕಾರಣ ಕ್ರಿ.ಶ.1564 ರ ವರೆಗೆ ಯಾವುದೇ ದಾನವೂ ಪ್ರತ್ಯೇಕವಾಗಿ ಇದಕ್ಕೆಂದು ಆಗದೆ ಇರುವಿಕೆ.

ಕ್ರಿ.ಶ.1538 ರಲ್ಲಿ ತಿರುವನಂತಾಳ್ವಾರ್ ಕುಪ್ಪಯನ್ ಶ್ರೀ ಗೋವಿಂದರಾಜಸ್ವಾಮಿ ಆಲಯದಲ್ಲಿ ತೈಮಾಸದ ಶುಕ್ಲ ಸಪ್ತಮಿಯಂದು ರಥಸಪ್ತಮಿ ಉತ್ಸವ ನಡೆಸಲು 700 ಪಣಂಗಳ ಉತ್ಪನ್ನದ ದೇಣಿಗೆಯನ್ನು ನೀಡಿದರು. ಈ ಸಂದರ್ಭದಲ್ಲಿ ತಿರುಮಂಜನವೂ ನಾಚ್ಚಿಯಾರ್ ಹಾಗೂ ಸೇನೈ ಮೊದಲಿಗಳ ಸಮೇತವಾದ ಸೂರ್ಯಪ್ರಭವಾಹನದ ಮೆರವಣಿಗೆ ಇದ್ದಿತು.

ಕ್ರಿ.ಶ.1564 ಕ್ಕೆ ಮೊದಲು ಈ ಹಬ್ಬವನ್ನು ತಿರುಮಲೆಯಲ್ಲಿ ಆಚರಿಸಿದಂತೆ ಕಂಡುಬರುವುದಿಲ್ಲ. ಆ ವರ್ಷದಲ್ಲಿ ಗಂಡಿಕೋಟ್ಟೈ ಸೀಮೈನಾಡಿನಲ್ಲಿ ವಾರ್ಷಿಕ 150 ರೇಖೈ ಪೊನ್‌ಗಳ ಆದಾಯವಿದ್ದ ಸೆಂಗಲ್ಲೂರು ಗ್ರಾಮವನ್ನು ಕರ್ಣಿಕ್ಕಾರ ಅಪ್ಪಲಯ್ಯನು ಉಂಬಳಿಯಾಗಿ ನೀಡಿದನು. ಈ ಹಣದಲ್ಲಿ 34 ರೇಖೈ ಪೊನ್ 5 ಪಣಂಗಳ ವೆಚ್ಚದಲ್ಲಿ ತಿರುಮಲೆಯಲ್ಲಿ ರಥಸಪ್ತಮಿ ಉತ್ಸವ ಮಾಡಬೇಕೆಂದು ಕಟ್ಟಳೆಯಾಗಿದ್ದಿತು. ಶಾಸನದಲ್ಲಿ ಈ ಹಬ್ಬದ ಆಚರಣೆಯ ವಿವರ ಹೀಗಿದೆ -

ಹಬ್ಬದ ಹಿಂದಿನ ದಿನ ರಾತ್ರಿ ಪೆರಿಯ ಪೆರುಮಾಳರಿಗೆ ಘನವಾದ - ಉತ್ಕೃಷ್ಟ ನೈವೇದ್ಯ ಸಮರ್ಪಣೆ ಆಗಬೇಕು. ಹಬ್ಬದಂದು ಬೆಳಗ್ಗೆ ಸೂರ್ಯೋದಯದ ಹೊತ್ತಿನಲ್ಲಿ ಬ್ರಹ್ಮಸೇನಾಪತಿಗಳಿಗೆ ನೈವೇದ್ಯವಾಗಬೇಕು. ನಂತರ ಚಕ್ರತ್ತಾಳ್ವಾರರು ನಾಲ್ಕು ಬೀದಿಗಳಲ್ಲಿ ಮೆರವಣಿಗೆ ಹೊರಟು ದಿಗ್ಬಲಿ ನೀಡಬೇಕು. ನಂತರ ಗುಡಿಯಲ್ಲಿ ಹೋಮವನ್ನು ಮಾಡಿ ಮಲೈಕುನಿಯ ನಿನ್ರ ಪೆರುಮಾಳರಿಗೂ ಉಭಯ ನಾಯಕಿಯರಿಗೂ ತಿರುಮಂಜನ ನಡೆಸಬೇಕು. ನಂತರ ಅವರನ್ನು ಸೂರ್ಯಪ್ರಭವಾಹನದಲ್ಲಿ ಮೆರವಣಿಗೆ ಮಾಡಬೇಕು. ತಿರುಮಾಮಣಿ ಮಂಟಪಕ್ಕೆ ಹಿಂದಿರುಗಿದ ನಂತರ ಚೂರ್ಣಾಭಿಷೇಕ ಮಾಡಬೇಕು. ಚಕ್ರತ್ತಾಳ್ವಾರ್ ಅವರನ್ನು ನಂತರ ವರಾಹಸ್ವಾಮಿ ಆಲಯಕ್ಕೆ ಕರೆತಂದು ಸ್ವಾಮಿ ಪುಷ್ಕರಿಣಿಯಲ್ಲಿ ಚಕ್ರಸ್ನಾನವಾಗಬೇಕು. ಅಂದು ರಾತ್ರಿ ವೈಕುಂಠ ವಾಹನದಲ್ಲಿ ಮೆರವಣಿಗೆಯೂ ನೈವೇದ್ಯವೂ ಇರುತ್ತಿತ್ತು. ಈ ಉತ್ಸವವು ತಿರುಪತಿಯಲ್ಲಿಯೇ ಮೊದಲು ಆರಂಭವಾಗಿದ್ದರೂ ತಿರುಮಲೆಯಲ್ಲಿ ಹೆಚ್ಚಿನ ವೈಭವದಿಂದ ನಡೆಯುತ್ತಿದ್ದಿತೆಂಬುದನ್ನು ಕಾಣಬಹುದು.

ಈಗಣ ಕಾಲದಲ್ಲಿ ತಿರುಮಲೆಯಲ್ಲಿ ರಥಸಪ್ತಮಿಯ ಆಚರಣೆಯಲ್ಲಿ ವ್ಯಾಪ್ತಿ ಹೆಚ್ಚಾಗಿದೆ. ಬೆಳಗಾಗುವ ಮೊದಲೆ ಪೆರಿಯ ಪೆರುಮಾಳರ ದೈನಿಕ ತಿರುವಾರಾಧನೆಯನ್ನು ಪೂರ್ತಿಗೊಳಿಸಿ, ಉತ್ಸವಮೂರ್ತಿಯನ್ನು ಸೂರ್ಯಪ್ರಭ ವಾಹನದಲ್ಲಿ ಮೆರವಣಿಗೆ ಮಾಡಲಾಗುವುದು. ನಂತರ ಅನುಕ್ರಮವಾಗಿ ಚಿಕ್ಕ ಶೇಷವಾಹನ, ಗರುಡವಾಹನ, ಹನುಮಂತವಾಹನಗಳಲ್ಲಿ ಉತ್ಸವಮೂರ್ತಿಯನ್ನು ಆಸೀನಗೊಳಿಸಿ ಮೆರವಣಿಗೆ ಮಾಡಲಾಗುವುದು. ಈ ವಾಹನೋತ್ಸವಗಳಾದ ಮೇಲೆಯೇ ಚಕ್ರತ್ತಾಳ್ವಾರರು ವರಾಹಸ್ವಾಮಿ ಆಲಯಕ್ಕೆ ಆಗಮಿಸುವರು. ಅಲ್ಲಿ ಚಕ್ರಸ್ನಾನವಾಗುವುದು. ಚಕ್ರಸ್ನಾನವಾದ ಮೇಲೆ ಪೆರಿಯ ಪೆರುಮಾಳರಿಗೆ ಎರಡನೇ ಅರ್ಚನೆ ನಿವೇದನೆಗಳು ನಡೆಯುವವು. ಇದಾದ ನಂತರ ಭಕ್ತರು ಪೆರಿಯ ಪೆರುಮಾಳ್ ದರ್ಶನ ಪಡೆಯುತ್ತಿದ್ದಂತೆ ಉತ್ಸವಮೂರ್ತಿ ಮತ್ತೆ ಸರ್ವಭೂಪಾಲ ವಾಹನ, ಕಲ್ಪವೃಕ್ಷವಾಹನ, ಚಂದ್ರಪ್ರಭವಾಹನಗಳಲ್ಲಿ ಮೆರವಣಿಗೆ ಹೊರಡುವರು. ಹೀಗಾಗಿ ಸೂರ್ಯ ಮುಳುಗುವುದಕ್ಕೆ ಮುನ್ನ ಸಪ್ತವಾಹನಗಳಲ್ಲಿ ಸಪ್ತ ಪ್ರದಕ್ಷಿಣೆ ಯಾಗುತ್ತದೆ. ಈ ಪರಿವರ್ತನೆ ಎಂದು ಉಂಟಾಯಿತೆಂದು ಹೇಳುವುದು ಸಾಧ್ಯವಿಲ್ಲ. (ಈಗ 2013ರಲ್ಲಿ ಸ್ವಾಮಿ ಉಭಯ ನಾಯಕಿಯರೊಡನೆ ಸ್ವಾಮಿ ಚಿನ್ನದ ರಥದಲ್ಲಿ ಮೆರವಣಿಗೆ ಬರುತ್ತಾರೆ - ಅನುವಾದಕ)

## 13. ಲಕ್ಷ್ಮೀದೇವಿ ಮಹೋತ್ಸವ

ಕ್ರಿ.ಶ.1535 ರಲ್ಲಿ ಅಚ್ಯುತರಾಯ ಮಹಾರಾಯನು ಈ ಉತ್ಸವವನ್ನು ಮೊದಲಬಾರಿಗೆ ಆರಂಭಿಸಿದ. 54 ನೇ ಶಾಸನದಲ್ಲಿ ತಿಳಿಸಿರುವಂತೆ ಅಲರ್‌ಮೇಲ್ ಮಂಗೈ ತಿರುವೆಂಕಟ ಮುಡ್ಡೈಯಾನನನ್ನುಸೇರಿದ್ದನ್ನು ನೆನಸಿಕೊಂಡು ನಡೆಸಿದ ಉತ್ಸವ.

ಈ ಉತ್ಸವವು ಅಂಕುರಾರ್ಪಣೆಯಿಂದ ಆರಂಭವಾಗಿ ಉತ್ತರಾಷಾಢ ನಕ್ಷತ್ರದಿಂದ ರೋಹಿಣೀ ನಕ್ಷತ್ರದಲ್ಲಿ ಶಾತ್ತುಮೊರೈ ಯಿಂದ ಪೂರ್ಣಗೊಳ್ಳಬೇಕು.(ಒಟ್ಟು ಆರು ದಿನಗಳು) ಕಡೆಯ ಸಾಲಿನಲ್ಲಿ ಈ ಉತ್ಸವಕ್ಕೆ ಲಕ್ಷ್ಮೀ ದೇವಿ ಮಹೋತ್ಸವ ಎಂದು ಹೆಸರು ನೀಡಲಾಗಿದೆ. ಈ ಉತ್ಸವದ ವೆಚ್ಚ 300 ರೇಖೈ ಪೊನ್‌ಗಳು. ಪ್ರತಿವರ್ಷ ಕೊಂಡವೀಡು ಸೀಮೆಯ ಆದಾಯದಿಂದ ಈ ಹಣವನ್ನು ತೆಗೆದುಕೊಡುವ ಹೊಣೆ ರಾಜನದೇ ಆಗಿದ್ದಿತು.

ಧ್ವಜಾರೋಹಣ ಹಾಗೂ ತೀರ್ಥವಾರಿಗಳ ಹೊರತು ಐದು ದಿನಗಳ ಉತ್ಸವದ ಎಲ್ಲ ವೆಚ್ಚಗಳಿಗೂ ಪ್ರಬಂಧ ಮಾಡಲಾಗಿದ್ದಿತು ಬ್ರಹ್ಮಮಂಡಲಕ್ಕೆ ಬೇಕಾದ ಬ್ರಹ್ಮಸೋಮ,ಶೇಷ ಮೊದಲಾದ ಎಲ್ಲ ಸ್ವರ್ಣಪ್ರತಿಮೆ ಗಳನ್ನೂ ಸ್ವರ್ಣದ ಲಕ್ಷ್ಮೀ ಪ್ರತಿಮೆಯನ್ನೂ ಮಾಡಿಸಿ ಪ್ರತಿಷ್ಠಾಪಿಸಲಾಗಿದ್ದಿತು. ಪ್ರತಿದಿನವೂ ಶ್ರೀಸೂಕ್ತ,ಕಲ್ಪಮಂತ್ರ, ಲಕ್ಷ್ಮೀಸಹಸ್ರನಾಮ,ಲಕ್ಷ್ಮೀ ಗಾಯತ್ರಿ ಜಪಗಳನ್ನು ಪಠಿಸಲಾಗುತ್ತಿದ್ದಿತು. ದಿನವೂ ಹೋಮವನ್ನು ಮಾಡಿ ಇದಕ್ಕಾಗಿ ಹವಿಸ್ಸು,ಪಾಯಸ,ವಿವಿಧ ಭಕ್ಷ್ಯಗಳನ್ನೂ ಏರ್ಪಡಿಸಲಾಗಿದ್ದಿತು. ಸುಮಂಗಲಿಯರಿಗೂ ದಕ್ಷಿಣೆ,ವಸ್ತ್ರಗಳನ್ನು ನೀಡಲಾಗುತ್ತಿದ್ದಿತು. ದಿನವೂ ಮೆರವಣಿಗೆ ನಡೆಯುತ್ತಿದ್ದು ಅಚ್ಯುತರಾಯನು ನಿರ್ಮಿಸಿದ್ದ ಅಚ್ಯುತರಾಯ, ವರದಾಜಿ ಅಮ್ಮ ಮತ್ತವರ ಮಕ್ಕಳ ಹೆಸರಿನಲ್ಲಿ ನಿರ್ಮಿಸಿದ ಏಳು ಮಂಟಪಗಳಲ್ಲಿ ಸ್ವಾಮಿ ವಿಶ್ರಾಂತಿ ಪಡೆದಾಗ ನಿವೇದನೆ ಮಾಡಲಾಗುತ್ತಿದ್ದಿತು. ಕ್ರಿ.ಶ.1562 ರ ವರೆಗೂ ಈ ಉತ್ಸವ ನಡೆಯುತ್ತ ಬಂದಿತು. ಉತ್ಸವ ದಿನಗಳಲ್ಲಿ ನಿವೇದನೆಗಾಗಿ ಅರವೀಡು ತಿರುಮಲ ರಾಜಯ್ಯ ಹಾಗೂ ಸೊಟ್ಟೈತಿರುಮಲೈ ನಂಬಿ ಶ್ರೀನಿವಾಸ ಅಯ್ಯಂಗಾರ್ಯರು ದೇಣಿಗೆಗಳನ್ನು ನೀಡಿದ್ದರು. ಆ ನಂತರ ಈ ಉತ್ಸವವನ್ನು ನಾವು ಕಾಣಲಾಗಲಿಲ್ಲ.

ಕ್ರಿ.ಶ.1537 ರ ಹೊತ್ತಿಗೆ ತಿರುಪತಿಯಲ್ಲಿಯೂ ಇಂತಹದೇ ಉತ್ಸವ ನಡೆಯುತ್ತಿದ್ದಿತು. (ಜಿ.ಟಿ.258) ಆದರೆ ಇದು ಒಂದು ಒಂದು ದಿನದ ಕಾರ್ಯಕ್ರಮ ಆಗಿದ್ದು ನವಮಿಯಂದು ನಡೆಯುವ ಉತ್ಸವವಾಗಿದ್ದಿತು.

## 14. ಪಲ್ಲವೋತ್ಸವ

ಕ್ರಿ.ಶ.1545ರಲ್ಲಿ ಅರವೀಟಿ ಬುಕ್ಕರಾಜ ರಾಮರಾಜ ತಿಮ್ಮರಾಜಯ್ಯನ ಮಗನಾದ ಶ್ರೀಮಾನ್ ಮಹಾಮಂಡಲೇಶ್ವರ ವಿಠಲೇಶ್ವರ ಮಹಾರಾಜನು ಈ ಉತ್ಸವವನ್ನು ಆರಂಭಿಸಿದ.ಹಲವಾರು ಕೈಂಕರ್ಯಗಳಿಗಾಗಿ ಒಟ್ಟು 1000 ರೇಖೈ ಪೊನ್ ವಾರ್ಷಿಕ ಆದಾಯವಿರುವ ಮೂರು ಗ್ರಾಮಗಳನ್ನು ಅವನು ದಾನ ಮಾಡಿದ್ದಾನೆ.ಈ ಹಣದಲ್ಲಿ ಪಲ್ಲವೋತ್ಸವವನ್ನು ಮಾಡಲು 492 ರೇಖೈ ಪೊನ್ ಗಳನ್ನು ಬಳಸಬೇಕು. ದಾನಿಯ ಜನ್ಮನಕ್ಷತ್ರವಾದ ರೋಹಿಣೀ ನಕ್ಷತ್ರದಲ್ಲಿ ಶಾತ್ತುಮೊರೆಯಾಗಿ ಪೂರ್ಣವಾಗುವಂತೆ ವೈಗಾಸಿ ಮಾಸದಲ್ಲಿ ನಡೆಸಬೇಕಾಗಿದ್ದಿತು. ಈ ಉತ್ಸವವೂ ಇತರ ಉತ್ಸವಗಳಂತೆಯೇ ಅಂಕುರಾರ್ಪಣೆಯಲ್ಲಿ ಆರಂಭವಾಗಿ, ಸ್ಥಾಪನೆ, ತಿರುಮಂಜನ,ಹೋಮ,ಪಂಚ ಹವಿಸ್ಸು,ನಾಮಾರ್ಚನಗಳೊಡನೆ ವೇದಪಾಠ,ಪ್ರಬಂಧಪಠನ,ಪುರಾಣ ಪ್ರವಚನಗಳಲ್ಲಿ ಮುಂದುವರೆಯಬೇಕು. ಆಸ್ಥಾನದಲ್ಲಿ ಓಲಗವೂ ನಿವೇದನೆಯೂ ಇದ್ದವು. ಮೆರವಣಿಗೆಯೂ ಇದ್ದಿತು. ಉತ್ಸವಮೂರ್ತಿಯು ಉಭಯನಾಯಕಿಯರೂ ಬೀದಿಯಲ್ಲಿ ಮೆರವಣಿಗೆಯಲ್ಲಿ ಬಂದು ದರ್ಶನ ವೀಯುತ್ತಿದ್ದರು.ಅಂಕುರಾರ್ಪಣೆಯ ಹೊತ್ತಿನ ಹೋಮ ನಿರ್ವಹಣೆಗೆ ಅಗತ್ಯವಾದ ಶೇಷ, ಜಯವಿಜಯರು, ಬ್ರಹ್ಮಗರುಡ, ಅಷ್ಟಾವರಣ, ನವಗ್ರಹಗಳ ಪ್ರತಿಮೆಗಳನ್ನು ಸ್ಥಿರಗೊಳಿಸಿ ಸ್ಥಾಪಿಸ ಲಾಗಿದ್ದಿತು. ಆಚಾರ್ಯರನ್ನೂ, ಋತ್ವಿಜರನ್ನೂ ನೇಮಕಗೊಳಿಸಿ ಸಂಭಾವನೆ ನೀಡಲಾಯಿತು. ಜಿ.ಟಿ.428 ರ ಪ್ರಕಾರ ಈ ಉತ್ಸವ ಕ್ರಿ.ಶ.1562ರ ವರೆಗೆ ಆಚರಣೆಯಲ್ಲಿದ್ದಿರಬೇಕು. ಉತ್ಸವದ ಐದೂ ದಿನಗಳ ನಿವೇದನೆಗಾಗಿ ಇತರ ದಾನಿಗಳೂ ದತ್ತಿಯನ್ನು ನೀಡಿದ್ದರು.

## 15. ಫಲೋತ್ಸವ

ಐದು ದಿನಗಳ ಈ ಉತ್ಸವ ಪಲ್ಲವೋತ್ಸವದಂತಲ್ಲ. ನಿಜಕ್ಕೆ ಇದು ಫಲಗಳ ಉತ್ಸವ. ಸೊಟ್ಟೈ ತಿರುಮಲೈ ನಂಬಿ ಶ್ರೀನಿವಾಸ ಅಯ್ಯಂಗಾರ್ಯನು ಗುತ್ತಿ ಸೀಮೆಯ ಪೆರಿಯ ಎಕ್ಕಲೂರು ಗ್ರಾಮವನ್ನು ದೇಣಿಗೆ ನೀಡಿದಾಗ ಈ ಉತ್ಸವವನ್ನು ಮಾಡಬೇಕೆಂದು

ಕಟ್ಟು ಮಾಡಿದ. ಇತರ ಉತ್ಸವಗಳ ಮಾದರಿಯಲ್ಲಿಯೇ ಇದನ್ನೂ ನಡೆಸಲಾಗುತ್ತಿತ್ತು. ಅಂಕುರಾರ್ಪಣೆಯಿಂದ ಆರಂಭವಾಗುತ್ತಿತ್ತು. ಎಲ್ಲ ಅಗತ್ಯವಾದ ಮೂರ್ತಿಗಳನ್ನು ತಯಾರಿಸಿ ಸ್ಥಾಪಿಸಲಾಯಿತು. ದಿನವೂ ಹೋಮಕಾರ್ಯ ನಡೆದಿತ್ತು. ಆಚಾರ್ಯರೂ ಋತ್ವಿಜರು ಇದ್ದು ಪ್ರತಿದಿನ ನಾಮಾರ್ಚನೆಯೂ ನಡೆದಿತ್ತು. ತಿರುವೆಂಕಟ ಮಾಹಾತ್ಮ್ಯ ಪಠಣ,ವೇದ ಪಠಣ, ಪುರಾಣ ವಾಚನಗಳಿದ್ದವು. ಉತ್ಸವ ವನ್ನು ಆರಂಭಿಸುವ ಪವಿತ್ರ ಘಳಿಗೆಯನ್ನು ಜ್ಯೋತಿಷಿಗಳು ನಿರ್ಧರಿಸುತ್ತಿದ್ದರು. ಉತ್ಸವದ ನಿಜವಾದ ವೈಶಿಷ್ಟ್ಯವೆಂದರೆ ನೈವೇದನೆಯಲ್ಲಿ ಸಮರ್ಪಿಸಲಾಗುತ್ತಿದ್ದ ಬಹು ಪ್ರಮಾಣದ್ದೂ, ಅರಣ್ಯ ಹಾಗೂ ಉದ್ಯಾನಗಳಲ್ಲಿ ಬೆಳೆದ ಬಹುವಿಧವಾದದ್ದು ಆದ ಫಲರಾಶಿ. ನಿವೇದನೆ ಯಾದ ನಂತರ ನೆರೆದ ಭಕ್ತರಿಗೆ ಈ ಹಣ್ಣುಗಳನ್ನು ಉಚಿತವಾಗಿ ವಿತರಣೆ ಮಾಡಲಾಗುತ್ತಿದ್ದಿತು. ಮಾವು, ಹಲಸು, ಸೇಬು, ಮರಸೇಬು, ನೇರಿಳೆ, ಗಿಳಿಮಾವು, ಬಾಳೆ, ಕಿತ್ತಳೆ, ಸಿದ್ದೋಟಿ - ಮೊದಲಾದ ಫಲಗಳನ್ನು ನಿವೇದಿಸಿ ವಿತರಿಸಲಾಗುತ್ತಿತ್ತು. ಈ ರೀತಿಯಲ್ಲಿ ಪ್ರತಿದಿನವೂ ನಿವೇದಿಸಲಾಗುತ್ತಿದ್ದ ಹಣ್ಣುಗಳು 1200. ಈ ಉತ್ಸವ ಕಾಲದಲ್ಲಿ ಉತ್ಸವ ಮೂರ್ತಿ ಹಾಗೂ ಉಭಯ ನಾಯಕಿಯರ ತಿರುಮಂಜನ ಉಲಗಮುಂಡಾನ್ ಪುಷ್ಪೋದ್ಯಾನದಲ್ಲಿನ ಮಂಟಪದಲ್ಲಿ ನಡೆಯುತ್ತಿತ್ತು. ಈ ಉತ್ಸವವನ್ನು ತಮಿಳು ಮಾಸಿ ತಿಂಗಳಿನಲ್ಲಿ ಐದು ದಿನಗಳಕಾಲ ನಡೆಯುವಂತೆ ಏರ್ಪಡಿಸಲಾಗಿದ್ದಿತು. ಪುನರ್ವಸು ನಕ್ಷತ್ರದಲ್ಲಿ ಅಂಕುರಾರ್ಪಣೆಯಾಗಿ ಪೂರಂ ನಕ್ಷತ್ರದಲ್ಲಿ ಶಾತ್ತುಮೊರೈ ಆಗುತ್ತಿದ್ದಿತು. ಕ್ರಿ.ಶ.1562 ರಲ್ಲಿ ಈ ಉತ್ಸವದಲ್ಲಿ ನೈವೇದ್ಯ ನೀಡಲು ಒಂದು ದತ್ತಿಯೂ ಉಂಟಾಯಿತು.

### 16. ತಿಂಗಳ ವಿಶೇಷ ದಿನಗಳು

ಆಲಯದಲ್ಲಿ ನಡೆಯುತ್ತಿದ್ದ ಉತ್ಸವಗಳ ಬಗ್ಗೆ ನಮಗೆ ದೊರೆಯುವ ಪ್ರಧಾನ ಸಾಕ್ಷಿಗಳಾದ ಶಾಸನಗಳು ಹಲವಾರು ವಿವರಗಳನ್ನು ನೀಡುತ್ತವೆ.

ತಿರುಮಲೆಯಲ್ಲಿ ಶ್ರೀ ವೆಂಕಟೇಶ್ವರ ಸ್ವಾಮಿಯ ಹಲವು ಉತ್ಸವಗಳ ಬಗ್ಗೆ ಪೂರ್ಣ ವಿವರಗಳನ್ನು 633 ತಿ.ತಿ.ಹಾಗೂ 428 ಜಿ.ಟಿ. ಶಾಸನಗಳು ನೀಡುತ್ತವೆ.

ಸಾಳುವ ನರಸಿಂಹನು ನಿರ್ಮಿಸಿದ್ದನ್ನು ಜೀರ್ಣೋದ್ಧಾರ ಮಾಡಿದಮೇಲೆ ಉಂಟಾದ, ಸಂಪಗಿ ಪ್ರದಕ್ಷಿಣೆಯ ಧ್ವಜಸ್ತಂಭದ ಎದುರು ಇರುವ ತಿರುಮಲರಾಯ ಮಂಟಪದಲ್ಲಿ ಹದಿನಾಲ್ಕು ದಿನಗಳ ಕಾಲ ಉತ್ಸವ ಮೂರ್ತಿಗಳು ಓಲಗ ಮಾಡುವ ಹತ್ತು ಬ್ರಹ್ಮೋತ್ಸವಗಳು ನಡೆಯುತ್ತಿದ್ದವು.

ಸಾಳುವ ನರಸಿಂಹನು ಪ್ರವೇಶಗೊಳಿಸಿದ ಅನ್ನಾ ಊಂಜಲ್ ಅಥವಾ ಹಂಸಡೋಲಿಕೆಯಲ್ಲಿ ಉತ್ಸವ ವಿಗ್ರಹಗಳನ್ನು ತೂಗುವ ಉತ್ಸವ ಐದು ದಿನಗಳು ನಡೆಯುವಂತಹದ್ದು (ತಿ.ತಿ.197)

ಸಾಳುವ ಮಲ್ಲಯ್ಯ ದೇವ ಮಹಾರಾಯನಿಂದ ಕ್ರಿ,ಶ,1464 ರಲ್ಲಿ ಉಂಟಾದ ಪವಿತ್ರೋತ್ಸವ ಐದು ದಿನಗಳು ನಡೆಯುವಂತಹದ್ದು (ತಿ.ತಿ.157).

ಸಹಸ್ರ ನಾಮಾರ್ಚನ ಉತ್ಸವ (ಶ್ರೀ ವೆಂಕಟೇಶ್ವರಸ್ವಾಮಿಯ ಅಷ್ಟೋತ್ತರ ಸಹಸ್ರನಾಮಾರ್ಚನೆ) ಇದು ಐದು ದಿನಗಳು ನಡೆಯುವಂತಿದ್ದಿತು. (ಈಗ ಪ್ರತಿದಿನವೂ ಅರ್ಚನೆಯ ಹೊತ್ತಿನಲ್ಲಿ ತುಲಸಿಯಿಂದ ಸಹಸ್ರನಾಮಾರ್ಚನೆ ಮಾಡಲಾಗುತ್ತಿದೆ.) ಪ್ರಾಯಶಃ 16 ನೇ ಶತನಾಮದಲ್ಲಿ ಈ ದೈನಂದಿನ ಸೇವೆ ಪ್ರಚಲಿತ ವಾಗಿರಲ್ಲಿಲ್ಲವೆನಿಸುತ್ತದೆ. ಆಗ ಅಷ್ಟೋತ್ತರ ಶತನಾಮ ಮಾತ್ರವೇ ಪಠಣವಾಗುತ್ತಿದ್ದಿರಬಹುದು. ಹೀಗಾಗಿ ಅಷ್ಟೋತ್ತರ ಸಹಸ್ರನಾಮಾರ್ಚನೆಯ ಉತ್ಸವ ಆರಂಭವಾಗಿರಬೇಕು.

ಒಂದು ದಿನದ ಸಹಸ್ರ ಕಲಶಾಭಿಷೇಕ (ಸಾವಿರದೆಂಟು ಬೆಳ್ಳಿಯ ಕಳಶಗಳಲ್ಲಿ ಜಲವನ್ನು ತುಂಬಿ ಉತ್ಸವ ಮೂರ್ತಿಗಳಿಗೆ ಅಭಿಷೇಕ ಮಾಡುವಿಕೆ. ಈಗ ಇದೊಂದು ಆರ್ಜಿತಸೇವೆ. ಜಿ.ಟಿ. 423 ನೇ ಶಾಸನವು ವೆಂಕಟತ್ತುರೈವರ್‌ಗೆ (ಉಗ್ರ ಶ್ರೀನಿವಾಸ ಮೂರ್ತಿ) ಪ್ರತ್ಯೇಕ ನಿವೇದನೆಗಾಗಿ ದೇಣಿಗೆಯನ್ನು ನೀಡುತ್ತದೆ.

ತಮಿಳು ಪ್ರಬಂಧಗಳ ಹಲವು ಭಾಗಗಳನ್ನು ಹಾಡುವ 25 ದಿನಗಳ ಕಾಲ ನಡೆಯುವ ಅಧ್ಯಯನೋತ್ಸವ.

ತಿರುಮಲ ರಾಯನು ಆರಂಭಿಸಿದ ವಸಂತ ಋತುವಿನಲ್ಲಿ ಆಚರಿಸುವ ವಸಂತೋತ್ಸವ.

ಆಣಿ ಮಾಸದಲ್ಲಿ ಸುವಾಸನೆಯ ದವನದಿಂದ ಉತ್ಸವಮೂರ್ತಿಗಳನ್ನು ಆವೃತಗೊಳಿಸುವ ದವನ ಆರೋಹಣ ವಸಂತೋತ್ಸವವು 5 ದಿನಗಳ ಕಾಲ ನಡೆದಿತ್ತು.

9 ದಿನಗಳ ಉಯ್ಯಾಲೋತ್ಸವ ನಡೆದಿದ್ದಿತು.

ಕ್ರಿ.ಶ.1546 ರಲ್ಲಿ ತಾಳ್ಳಪಾಕ ತಿರುವೆಂಕಟನಾಥ ಅಥವಾ ಚಿನ್ನನ್ನ ಆರಂಭಿಸಿದ 5 ದಿನಗಳ ಕಾಲ ನಡೆಯುವ ಪೆಂಡ್ಲಿ ತಿರುನಾಳ್.(ಕಲ್ಯಾಣೋತ್ಸವ.)

ಐದು ದಿನಗಳ ಲಕ್ಷ್ಮೀದೇವಿ ತಿರುನಾಳ್.

20 ದಿನಗಳ ಬೇಸಿಗೆಯಲ್ಲಿ ನಡೆಯುವ ಕೊಡೈ ತಿರುನಾಳ್.

9 ದಿನಗಳ ತೆಪ್ಪೋತ್ಸವ.

5 ದಿನಗಳ ಪಲ್ಲವೋತ್ಸವ.

3 ದಿನಗಳ ಫಲೋತ್ಸವ.

ರಾಮಾನುಜರಿಗೆ ಆರುದಿನಗಳ ಕಾಲ ನಡೆಯುವ ಅಧ್ಯಯನೋತ್ಸವ.

ಹತ್ತು ಬ್ರಹ್ಮೋತ್ಸವಗಳ ಹೊರತು ಈ ಹದಿನೈದು ಉತ್ಸವಗಳನ್ನು ವಿಶೇಷ ಉತ್ಸವಗಳೆಂದು ಹೇಳಲಾಗಿದೆ.

ಪ್ರತಿ ತಿಂಗಳೂ ಪ್ರತ್ಯೇಕವಾಗಿ ದೇವರಿಗೆ ವಿಶೇಷವಾದ ಪೂಜೆಯನ್ನು ಮಾಡುವ ಹಬ್ಬದ ದಿನಗಳು 12 ತಿಂಗಳಿನಲ್ಲೂ ಇದ್ದವು.

12 ಮಾಸ ಸಂಕ್ರಮಣಗಳು. (ತಮಿಳು ತಿಂಗಳುಗಳ ಮೊದಲ ದಿನಗಳು.)

13 ಅಮಾವಾಸ್ಯೆಗಳು.

13 ಪೌರ್ಣಮಿಗಳು.

25 ದಶಮಿಗಳು (ಚಾಂದ್ರಮಾಸ ಶುಕ್ಲ, ಬಹುಳ ದಶಮಿಗಳು)

25 ಏಕಾದಶಿಗಳು.

25 ದ್ವಾದಶಿಗಳು.

13 ನಕ್ಷತ್ರ ದಿನಗಳು - ರೋಹಿಣಿ, ಮೃಗಶಿರ, ಪುನರ್ವಸು, ಪುಷ್ಯಮಿ, ಉತ್ತರಫಲ್ಗುಣಿ, ಮೂಲ, ಪೂರ್ವಾಷಾಢ, ಉತ್ತರಾಷಾಢ, ಶ್ರವಣ- ಇತ್ಯಾದಿ.

ಇದರಂತೆಯೇ ವಿಶೇಷದೇವತೆಗಳಿಗೆ ವಿಶೇಷ ಪೂಜೆಯಾಗುವ ಬಿಡಿದಿನಗಳು - ಶ್ರೀ ಜಯಂತಿ,ಉರಿ-ಅಡಿ,ಉತ್ಥಾನ ದ್ವಾದಶಿ,ಅಲ್ಪಸಿ-ಪೂರ್ವಾಷಾಢ,ದೀಪಾವಳಿ,ಕೃತ್ತಿಕಾ,ಮಕರ ಸಂಕ್ರಮಣ,ಪಡಿಯವೇಟ್ಟೈ, ತೈಪೂಸಂ, ತಣ್ಣೀರ್ ಅಮುದು, ಯುಗಾದಿ,ಶ್ರೀರಾಮನವಮಿ,ವೈಗಾಸಿ-ವಿಶಾಖ,ಮಾಸಿ,ಮಖ.

ಇವುಗಳೊಂದಿಗೇ ಹಲವಾರು ದಾನಿಗಳು ತಮ್ಮ ಹುಟ್ಟಿದ ದಿನಗಳ ನೆನಪಿನಲ್ಲಿಯೇ ವಿಶೇಷ ಪೂಜೆ ಮೆರವಣಿಗೆಗಳನ್ನು ಮಾಡಿದರು.

ತಿಂಗಳ ದಿವಸಗಳೆಂದರೆ ತಿಂಗಳಲ್ಲಿ ಬರುವ ಹಲವು ತಿಥಿ ನಕ್ಷತ್ರದ ದಿನಗಳು. ವ್ರತಗಳಿಗೆ ಮುಹೂರ್ತವನ್ನು ನಿರ್ಣಯಿಸುವಂತೆಯೇ ಇಲ್ಲಿಯೂ ಮುಹೂರ್ತ ನಿರ್ಣಯವಾಗುತ್ತದೆ. ವಿಶೇಷ ದಿವಸ ಗಳೆಂದರೆ ಆಚಾರ್ಯ ಪುರುಷರ ಆಳ್ವಾರರ ಜನ್ಮನಕ್ಷತ್ರದ ದಿನಗಳು. ವಿಷ್ಣುವಿನ ಅವತಾರೋತ್ಸವಗಳು ಪ್ರಧಾನವಾದವು.

ಕ್ರಿ.ಶ,1308 ರ ಶಾಸನದಲ್ಲಿ ಮೊದಲಬಾರಿಗೆ ವಿಶೇಷೋತ್ಸವದ ಆಚರಣೆ ಕಂಡುಬರುತ್ತದೆ. ಈ ಶಾಸನದಲ್ಲಿ ತಿರುವೆಂಡ ಮುಡೈಯಾನನಿಗೆ ಕೈಶಿಕ ದ್ವಾದಶಿ,ಮಾರ್ಗಳಿ ತಿರುದ್ವಾದಶಿ,ಸಂಕ್ರಮಣ,ಚಿತ್ತರೈ ವಿಷು ದಿನಗಳಲ್ಲಿ ತಿರುಮಂಜನ ಮಾಡಲಾಗು ತ್ತಿತ್ತೆಂದು ಹೇಳಲಾಗಿದೆ. ನಂತರ ಕ್ರಿ.ಶ.1488 ರಲ್ಲಿನ ಒಂದು ಶಾಸನವು ಆಚಾರ್ಯ ಪುರುಷರ ತಿರುನಕ್ಷತ್ರಗಳನ್ನು (ಜಿ.ಟಿ.142) ತಿಂಗಳ ದಿನಗಳೆಂದು ಸೂಚಿಸುತ್ತದೆ.

ಶಾಸನಗಳಲ್ಲಿ ಕೆಳಕಂಡ ದಿನಗಳನ್ನು ವಿಶೇಷ ದಿನಗಳೆಂದು ಹೆಸರಿಸಲಾಗಿದೆ. ಆಡಿ ಅಯನ, ಅಲ್ಪಸಿ ವಿಷು,ಮಕರ ಸ್ರಹಣ, ಚಿತ್ತಿರೈ ವಿಷು,ಶ್ರೀ ಜಯಂತಿ,ಮಹಾನವಮಿ,ತಿರುಕೃತ್ತಿಕೈ,ಕನು,ತಿರುಪ್ಪುಡಿಯಡು,ತೈ ಅಮಾವಾಸ್ಯೆ,ಫಂಗುಣಿ,ಉತ್ತರಂ, ವೈಕಾಸಿ, ವಿಶಾಖ ಮತ್ತು ಸೂರ್ಯಚಂದ್ರ ಗ್ರಹಣದಿನಗಳು. ಈ ದಿನಗಳಲ್ಲಿ ತಿರುಮಂಜನ ವಿರುತ್ತಿದ್ದಿತು. ಇವು ಇಂದಿನ ಉತ್ಸವ ಷೋಡನೆ ಏಕ ತಾಳದಲ್ಲಿದೆ ಎನಿಸುತ್ತದೆ. 1504 ರಲ್ಲಿ ಮತ್ತೆ ಹಲವು ದಿನಗಳನ್ನು ಸೇರಿಸಿದುದನ್ನು ಕಾಣಬಹುದು. ಇವುಗಳೆಂದರೆ ಅಲ್ಪಸಿ, ಪುರಾಢಂ,ವಿಶ್ವಕ್ಸೇನರ ನಕ್ಷತ್ರ,ಆಣಿ ಪುರಾಢಂ,ಆಣಿ ಪೂಸಂ, ಶ್ರೀರಾಮನವಮಿ,ವಸಂತ ಪೂರ್ಣಿಮಾ.

ಕ್ರಿ.ಶ.1562 ಒಂದು ಶಾಸನವು ಬಹುಮಟ್ಟಿಗೆ ಒಂದು ಒಟ್ಟಾರೆ ಚಿತ್ರವನ್ನು ನೀಡುತ್ತದೆ.

| ವಿಶೇಷ ತಿರುನಾಳ್ | ದಿನಗಳು |
|---|---|
| 13 ದಿನಗಳ ಹತ್ತು ಬ್ರಹ್ಮೋತ್ಸವಗಳು | 130 ದಿನ |
| ಅನ್ನಾ ಊಂಜಲ್ ತಿರುನಾಳ್ | 5 ದಿನ |
| ಪವಿತ್ರೋತ್ಸವ | 5 ದಿನ |
| ಸಹಸ್ರ ನಾಮಾರ್ಚನೆ ಉತ್ಸವ | 5 ದಿನ |
| ಉಗ್ರ ಶ್ರೀನಿವಾಸರಿಗೆ ಕಲಶ ಅಭಿಷೇಕ | 1 ದಿನ |
| ದವನಾರೋಹಣ ವಸಂತೋತ್ಸವ | 5 ದಿನ |
| ಲಕ್ಷ್ಮೀದೇವಿ ಉತ್ಸವ | 5 ದಿನ |
| ಪೆಂಡ್ಲಿ ತಿರುನಾಳ್ | 5 ದಿನ |
| ವಸಂತೋತ್ಸವ (ಬೇಸಿಗೆಯಲ್ಲಿ) | 20 ದಿನ |
| ತಿರುಪ್ಪಳ್ಳಿಯೋಡಂ (ಪ್ಲವೋತ್ಸವ) | 9 ದಿನ |
| ಪಲ್ಲವೋತ್ಸವ | 5 ದಿನ |
| ಫಲೋತ್ಸವ | 3 ದಿನ |
| ತಿರುಮಲೈ ಉಡೆಯವರ್ ಅಧ್ಯಯನೋತ್ಸವ | 6 ದಿನ |
| | 204 ದಿನಗಳು |

| ತಿಂಗಳ ದಿವಸಗಳು | ದಿನಗಳು |
|---|---|
| ಮಾಸ ಸಂಕ್ರಮಣಗಳು | 12 ದಿನ |
| ಅಮಾವಾಸ್ಯೆ | 13 ದಿನ |
| ಪೌರ್ಣಿಮೆಗಳು | 13 ದಿನ |
| ದಶಮಿಗಳು | 25 ದಿನ |

| | |
|---|---|
| ಏಕಾದಶಿಗಳು | 25 ದಿನ |
| ದ್ವಾದಶಿಗಳು | 25 ದಿನ |
| ರೋಹಿಣಿ ನಕ್ಷತ್ರ ದಿನ | 13 ದಿನ |
| ಮೃಗಶಿರ ನಕ್ಷತ್ರ ದಿನ | 13 ದಿನ |
| ಪುನರ್ವಸು ನಕ್ಷತ್ರ ದಿನ | 13 ದಿನ |
| ಉತ್ತರಾ ನಕ್ಷತ್ರ ದಿನ | 13 ದಿನ |
| ಮೂಲಾ ನಕ್ಷತ್ರ ದಿನ | 13 ದಿನ |
| ಪೂರ್ವಾಷಾಢ ನಕ್ಷತ್ರ ದಿನ | 13 ದಿನ |
| ಉತ್ತರಾಷಾಢ ನಕ್ಷತ್ರ ದಿನ | 13 ದಿನ |
| ತಿರುವೋಣಂ (ಶ್ರವಣ) ನಕ್ಷತ್ರದ ದಿನ | 13 ದಿನ |
| | 217 ದಿನಗಳು |

| ವಿಶೇಷ ದಿವಸಗಳು | ದಿನಗಳು |
|---|---|
| ಉಟ್ಲ ಉತ್ಸವ | 1 ದಿನ |
| ಎಣ್ಣೆಯಾಡ್‌ಲ್ (ಶ್ರೀಕೃಷ್ಣನಿಗೆ) | 1 ದಿನ |
| ಶ್ರೀಜಯಂತಿ (ಕೃಷ್ಣಜನ್ಮ) | 1 ದಿನ |
| ಬೊಟ್ಟು ಉತ್ಸವ | 1 ದಿನ |
| ದೀಪಾವಳಿ | 1 ದಿನ |
| ಕೃತ್ತಿಕೈ | 1 ದಿನ |
| ಮಕರ ಸಂಕ್ರಮಣ | 1 ದಿನ |
| ಪಡಿಯ ವೇಟ್ಟೈ | 1 ದಿನ |
| ತೈಪೂಸಂ | 1 ದಿನ |
| ಮಾಸಿಮಖಂ | 1 ದಿನ |
| ಶ್ರೀರಾಮನವಮಿ | 1 ದಿನ |
| ವೈಕಾಶಿ ವಿಶಾಖ | 1 ದಿನ |
| | 12 ದಿನಗಳು |

ವಿಶೇಷ ತಿರುನಾಳ್‌ಗಳು 204,ತಿಂಗಳ ದಿವಸಗಳು217, ವಿಶೇಷ ದಿವಸಗಳು 12 ಇದರಿಂದಾಗಿ 365 ದಿನಗಳ ವರ್ಷದಲ್ಲಿ 433 ಹಬ್ಬಗಳನ್ನಾಚರಿಸಲಾಗುತ್ತಿದ್ದಿತು ಎಂದರೆ ಹಲವು ಒಂದೇ ದಿನದಲ್ಲಿ ನಡೆಸುವಂತಿದ್ದವು.

ಈಸ್ಟ್ ಇಂಡಿಯಾ ಕಂಪನಿಯವರು ಕ್ರಿ.ಶ.1819 ರಲ್ಲಿ ಆಲಯದ ಆಡಳಿತವನ್ನು ವಶಪಡಿಸಿಕೊಂಡಾಗ ತೀರ್ಮಾನಿಸಿದ ಪಟ್ಟಿಯಂತೆ ವಿಶೇಷ ದಿವಸಗಳು - 1) ಆನಿವರ ಆಸ್ಥಾನ - ಇದು ಆಣಿಮಾಸದ ಆರಂಭದಲ್ಲಿ ನಡೆಯುತ್ತಿದ್ದು ಹನ್ನೊಂದುವರೆ ಸೇರು ಅಕ್ಕಿಯ ನಿವೇದನೆ,2) ವರಲಕ್ಷ್ಮೀವ್ರತ - ಹೊಸ ಅಂಶವಿದು, 3)ಶ್ರಾವಣ ಪೂರ್ಣಿಮೆ, 4) ಗೋಕುಲಾಷ್ಟಮಿ (ಶ್ರೀಜಯಂತಿಯ್ಲು),

5) ಉಗಾದಿಗಾಗಿ ಉಟ್ಲ ಉತ್ಸವ, 6)ವಿನಾಯಕ ಚತುರ್ಥಿ (ಹೊಸ ಅಂಶ), 7) ಅನಂತಚತುರ್ದಶಿ (ಹೊಸ ಅಂಶ). 8)ದೀಪಾವಳಿ ಆಸ್ಥಾನ (ಸ್ವಾಮಿ ಪುಷ್ಕರಿಣಿಗೆ ಹೊಸದಾಗಿ ನೀರು ತುಂಬುವ ಹಬ್ಬದ ಸನ್ನಿವೇಶ) 9) ಕೈಶಿಕ ದ್ವಾದಶಿ 10) ಒಂದು ಹೊಸಉತ್ಸವ(?) 11) ಧನುರ್ಮಾಸ - 30 ದಿನಗಳು 12) ಚಕ್ರತೀರ್ಥದಲ್ಲಿ ಆಳ್ವಾರ್ ಅಭಿಷೇಕ (ಹೊಸದು) 13) ಕಾರ್ತೀಕ ದೀಪಾರಾಧನೆ 14) 25 ದಿನಗಳ ತಿರುವಧ್ಯಯನ ಉತ್ಸವ 15) ಪ್ರೇಮ ಕಲಹೋತ್ಸವ (ಹೊಸದು) 16) ತಣ್ಣೀರಮುದು ಉತ್ಸವ 17)ಮುಕ್ಕೋಟಿ ಉತ್ಸವ 18) ಮಕರಸಂಕ್ರಾಂತಿ 19) ರಾಮಕೃಷ್ಣತೀರ್ಥ ಮುಕ್ಕೋಟಿ- ಬಹುಶಃ ಪುನಸ್ಥಾಪಿತ ಪ್ರಾಚೀನ ನವಲೂಟ್ಟು ಉತ್ಸವ 20) ರಥ ಸಪ್ತಮಿ 21) ಕ್ಷೇತ್ರ ಪಾಲಕ ಅಭಿಷೇಕ (ಹೊಸದು) 22) ಕೋಯಿಲಾಳ್ವಾರ್ ತಿರುಮಂಜನ 23) ಸಂವತ್ಸರಾದಿ 23) ಸಂವತ್ಸರಾದಿ ಆಸ್ಥಾನಂ (ಹೊಸದು) 24) ಶ್ರೀರಾಮ ನವಮಿ.

ಮೇಲಿನ ಪಟ್ಟಿಯನ್ನು ಗಮನಿಸಿದಲ್ಲಿ ಹಲವಾರು ವಿಶೇಷ ಉತ್ಸವಗಳನ್ನು ವಿಶೇಷ ದಿವಸಗಳೆಂದು ಪರಿಗಣಿಸಿರುವುದೂ,ಆಲಯದ ಆಡಳಿತದಲ್ಲಿ ವೈಷ್ಣವೇತರ ಪ್ರಭಾವಗಳನ್ನು ಸೂಚಿಸುವ ಎಂಟು ಹೊಸ ದಿನಗಳನ್ನು ಸೇರಿಸಿರುವುದು ಕಂಡು ಬರುತ್ತದೆ. ಈ ದಿನಗಳಲ್ಲಿನ ನೈವೇದ್ಯಗಳಿಗಾಗಿ ನೀಡಲಾಗುತ್ತಿದ್ದ ತಸದೀಕು ವಿವರಗಳನ್ನೂ ಸಾಕಷ್ಟು ಕಡಿಮೆ ಮಾಡಲಾಯಿತು.

ಈ ಗಣ (1980 ರಲ್ಲಿನ) ಪ್ರಚಲಿತ ಉತ್ಸವಗಳ ವಿವರ ಈ ರೀತಿ ಇದೆ.

| | |
|---|---|
| ಏಕಾದಶಿ ದ್ವಾದಶಿಗಳು | 50 ದಿನ |
| ನಕ್ಷತ್ರಗಳು ಶ್ರವಣ,ರೋಹಿಣಿ,ಆರುದ್ರ, - ದತ್ತಿಯಿಂದಾದ ಉತ್ಸವಗಳು ಪುನರ್ವಸು ಚಿತ್ರಾ ಪ್ರತಿಯೊಂದು 13 ದಿನ | 65 ದಿನ |
| ಸಂವತ್ಸರಾದಿ ಆಸ್ಥಾನ | 1 ದಿನ |
| ವಸಂತೋತ್ಸವ | 3 ದಿನ |
| ನಿತ್ಯೋತ್ಸವ ಸಂವತ್ಸರಾದಿ ನಂತರ | 2 ದಿನ |
| ತೆಪ್ಪೋತ್ಸವ ಸಂವತ್ಸರಾದಿ ನಂತರ | 2 ದಿನ |
| ತೆಪ್ಪೋತ್ಸವ (ಪ್ಲವೋತ್ಸವ) | 3 ದಿನ |
| ಧನುರ್ಮಾಸ | 30 ದಿನ |
| ಅಧ್ಯಯನೋತ್ಸವ | 25 ದಿನ |
| ರಥಸಪ್ತಮಿ | 01 ದಿನ |
| ಬ್ರಹ್ಮೋತ್ಸವ | 10 ದಿನ |
| ಅಧಿಕ ಮಾಸದ ವರ್ಷದ ಬ್ರಹ್ಮೋತ್ಸವ | 10 ದಿನ |
| ಒಟ್ಟು | 202 ದಿನ |

## ಅಧ್ಯಾಯ- 8

# ಪರಂಪರೆ ಹಾಗೂ ಸ್ಥಳ ಪುರಾಣ

### 1. ಪೀಠಿಕೆ :

ಶ್ರೀ ವೆಂಕಟೇಶ್ವರಸ್ವಾಮಿಯ ಸ್ಥಳ ಪುರಾಣವನ್ನು ಶ್ರೀ ವೆಂಕಟಾಚಲ ಮಹಾತ್ಮೆಯೆನ್ನುವರು, ಈ ಅಂಶವನ್ನು ವರಾಹಪುರಾಣ, ಪದ್ಮಪುರಾಣ, ಗರುಡಪುರಾಣ, ಮಾರ್ಕಂಡೇಯ ಪುರಾಣ, ವಾಮನ ಪುರಾಣ, ಆದಿತ್ಯ ಪುರಾಣ, ಸ್ಕಂದ ಪುರಾಣ, ಭವಿಷ್ಯೋತ್ತರ ಪುರಾಣ, ಹರಿವಂಶ - ಮೊದಲಾದವುಗಳಲ್ಲಿ ಹೇಳಲಾಗಿದೆ. ಇವುಗಳಲ್ಲೆಲ್ಲ ವರಾಹ ಪುರಾಣ, ಭವಿಷ್ಯೋತ್ತರ ಪುರಾಣಗಳು ಪ್ರಮುಖ.

ತಿರುಮಲೆಯ ಬಗ್ಗೆಯೂ ಶ್ರೀ ವೆಂಕಟೇಶ್ವರಸ್ವಾಮಿಯ ಬಗ್ಗೆಯೂ,ಅಸಂಖ್ಯವಾದ ಪಾರಂಪರಿಕ ಕಥೆಗಳೂ, ನಂಬಿಕೆಗಳೂ ನಡೆದುಬಂದಿವೆ. ಒಂದು ಶಾಸನವು ಇಲ್ಲಿನ ದೇವರ ಮುಂದೆ ಪಾರಾಯಣ ಮಾಡ ಲಾಗುತ್ತಿದ್ದ ವೆಂಕಟಾಚಲಮಹಾತ್ಮೆಯ್ನನ್ನು ಕುರಿತು ಹೇಳುತ್ತದೆ. ಆದರೆ ಇಂದು ಪ್ರಕಟವಾಗಿ ಪ್ರಚಲಿತವಾಗಿರುವ ಪುಸ್ತಕವೇ ಈ ಪಾರಾಯಣ ಗ್ರಂಥವೇ ಎಂಬುದನ್ನು ಖಚಿತವಾಗಿ ಹೇಳಬರುವುದಿಲ್ಲ. ಸ್ಥಳ ಪುರಾಣದ ಅನೇಕ ಐತಿಹ್ಯಗಳು ತಿರುಮಲೆಯ ಆಲಯದ ಹಾಗೂ ಇಲ್ಲಿನ ತೀರ್ಥಗಳ ಪಾವಿತ್ರ್ಯವನ್ನೂ, ಔನ್ನತ್ಯವನ್ನೂ ವಿವರಿಸುತ್ತವೆ.

### 2. ಸ್ಥಳಪುರಾಣ ಕರ್ತೃ ವಿಚಾರ

ಕ್ರಿ.ಶ.15 ನೇ ಶತಮಾನದ ಕಡೆಯ ಕಾಲು ಭಾಗದಲ್ಲಿದ್ದಿರಬಹುದಾದ ತಿರುಪತಿಯ ಪಸಿಂಡಿ ವೆಂಕಟತ್ತು ರೈವರ್ ಅಥವಾ ಜೀಯರ್ ರಾಮಾನುಜಯ್ಯನ್ ಸ್ಥಳಪುರಾಣ ಸಂಗ್ರಾಹಕನಾಗಿರಬೇಕು - ಕಾರಣ ಕ್ರಿ.ಶ. 1491 - ಜೂನ್ 27 ರಂದಿಗೆ ಸರಿಹೊಂದುವ ಶಕವರ್ಷ 1413 ರ ವಿರೋಧಿಕೃನ್ನಾಮ ಸಂವತ್ಸರದ ಮಿಥುನ ಮಾಸದ ಬಹುಳ ಪಕ್ಷದ ಸಪ್ತಮಿ ಸೋಮವಾರದಲ್ಲಿ ಉತ್ತರಾಭಾದ್ರ ನಕ್ಷತ್ರವಿರುವಂತೆ ದಾಖಲಾದ ಒಂದು ದಾನ ಶಾಸನವು (253 ತಿ.ತಿ.) ತಿರುವೆಂಕಟಮುಡೈಯಾನನ ಓಲಗದಲ್ಲಿ (ಆಸ್ಥಾನದಲ್ಲಿ) ಈತ ಸಂಗ್ರಹಿಸಿ ವಿನಯದಿಂದ ಸಮರ್ಪಿಸಿದ ತಿರುವೆಂಕಟ ಮಹಾತ್ಮೆಯನ್ನು ತಿರುಮಲೆಯಲ್ಲಿ ಸ್ವಾಮಿಗೆ ನಡೆಯುವ ಅಧ್ಯಯನೋತ್ಸವದ ಒಂದು ದಿನ - ವಿಶೇಷವಾಗಿ ಆಲಯಕ್ಕೆ ನೀರನ್ನು ದಿನವೂ ತರುವ ಆಕಾಶಗಂಗೆಯ ರಸ್ತೆಯ ದುರಸ್ತಿಯಾದಂದು - ಪಾರಾಯಣ ಮಾಡಲು ದೇವಾಲಯದ ಅಧಿಕಾರಿಗಳನ್ನು ಕಟ್ಟು ಮಾಡುತ್ತದೆ.

ತಿರುವೆಂಕಟ ಮಾಹಾತ್ಮ್ಯೆಯ ಬಗ್ಗೆ ನಮಗೆ ದೊರೆಯುವ ಅತಿಪ್ರಾಚೀನ ಶಾಸನಾಧಾರವೆಂದರೆ ಇದೇ ಆಗಿದ್ದು, ಇದನ್ನು ಪಸಿಂಡಿ ವೆಂಕಟತ್ತುರೈವರ್ ವಿನಯದಿಂದ ಸಮರ್ಪಿಸಿದನೆಂದು ಹೇಳಲಾಗಿದೆ. ಇದರಿಂದಾಗಿ ತೀರ್ಮಾನಿಸಬಹುದಾದ ತಾತ್ಪರ್ಯವೆಂದರೆ ಹನ್ನೆರಡು ಪುರಾಣಗಳ ತತ್ಸಂಬಂಧಿ ವಿವರಗಳನ್ನು ಬೇರ್ಪಡಿಸಿ, ಆಳ್ವಾರುಗಳ ತಮಿಳು ಮಂಗಳಾಶಾಸನಗಳನ್ನೂ ಗಮನಿಸಿ, ಇದರ ಆಧಾರದಲ್ಲಿ ಪಸಿಂಡಿ ವೆಂಕಟತ್ತುರೈವರ್ ತನ್ನದೇ ಆದ ಅನುಭವವನ್ನೂ ಸೇರಿಸಿ, ಶಕವರ್ಷ 1413 ರ ವಿರೋಧಿಕೃತ್ ಸಂವತ್ಸರ (ಕ್ರಿ.ಶ. 1491) ಕ್ಕೆ ಮೊದಲು ತಿರುವೆಂಕಟ ಮಾಹಾತ್ಮ್ಯವನ್ನು ರೂಪಿಸಿರಬೇಕು. ಶಾಸನದಲ್ಲಿ ಉಕ್ತವಾಗಿರುವ ಈ ತಿರುವೆಂಕಟ ಮಹಾತ್ಮ್ಯವೇ ದೇವಸ್ಥಾನಗಳವರು ಪ್ರಕಟಿಸಿರುವ ವೆಂಕಟಾಚಲ ಮಾಹಾತ್ಮ್ಯದ ಮೂಲಾಧಾರವಾಗಿರಬೇಕು.

ಶ್ರೀ ವೆಂಕಟಾಚಲಮಾಹಾತ್ಮ್ಯವು ಕ್ರಿ.ಶ. 1884 ರಲ್ಲಿ ಅಂದಿನ ದೇವಸ್ಥಾನದ ವಿಚಾರಣಕರ್ತರಾದ ಹತೀರಾಮಜೀ ಮಠದ ಮಹಂತ ಭಗವಾನದಾಸ್‌ಜೀ ಅವರ ಮೂಲಕ ಅಧಿಕೃತವಾಗಿ ತೆಲುಗುಲಿಪಿಯಲ್ಲಿ ಮೊದಲಬಾರಿಗೆ ಮುದ್ರಿತವಾಗಿದ್ದು, 1896ರಲ್ಲಿ

ಅವರ ಪ್ರಶಿಷ್ಯರಾದ ಮಹಂತ ರಾಮಕಿಶೋರದಾಸರಿಂದ ಪರಿಷ್ಕೃತ ಆವೃತ್ತಿಯಾಗಿ ಪುನರ್ಮುದ್ರಿತವಾಯಿತು. ನಂತರ 1928 ರಲ್ಲಿ ಅವರ ಶಿಷ್ಯರಾದ ಮಹಂತ ಪ್ರಯಾಗದಾಸಜೀಯವರಿಂದ (ಕಡೆಯ ವಿಚಾರಣಕರ್ತ) ಪುನಃ ಮುದ್ರಣವಾಯಿತು. ಈ ನಡುವೆ ದೇವನಾಗರಿ ಲಿಪಿಯಲ್ಲಿಯೂ ಎರಡು ಬಾರಿ ಮುದ್ರಣವಾಯಿತು. ಇವುಗಳಲ್ಲಿನ ಎರಡನೆಯ ಮುದ್ರಣ ನಡೆದದ್ದು 1904ರಲ್ಲಿ. ಇದಾದನಂತರ 1930 ರಲ್ಲಿ ಒಂದು ಹಿಂದಿ ಆವೃತ್ತಿಯನ್ನೂ ಹೊರತರಲಾಗಿದೆ. (ಇದು 1985 ರಲ್ಲಿ ಡಾ|| ಎಸ್.ಬಿ. ರಘುನಾಥಾಚಾರ್ಯರಿಂದ ಸಂಪಾದಿತವಾಗಿ ಪುನರ್ಮುದ್ರಿತವಾಗಿದೆ. ಆನಂತರದಲ್ಲಿ ಎಸ್.ವಿ.ವಿ.ವಿ.ಯ ಪ್ರಾಚ್ಯ ಸಂಶೋಧನ ಸಂಸ್ಥೆಯಿಂದ ಪುನರ್ಮುದ್ರಣವಾಗಿದೆ - ಅನುವಾದಕ)

ಈ ಸಂಗ್ರಹದ ಹೆಸರೇ ಶ್ರೀ ವೆಂಕಟಾಚಲಮಾಹಾತ್ಮ್ಯ. ಇದು ವರಾಹಪುರಾಣದಲ್ಲಿ ವಿವರಿತವಾದ ವರಾಹಕಲ್ಪದೊಡನೆ ಆರಂಭವಾಗುವುದು. ಕಾರಣ ಈ ಕಲ್ಪದಿಂದಲೇ ಲೌಕಿಕ ಜಗತ್ತು ಸೃಜನೆಯಾಯಿತೆಂಬು ದೊಂದಾದರೆ, ಶ್ವೇತವರಾಹ ಅವತಾರಿಯು ಪಾತಾಳದಿಂದ ಭೂಮಿಯನ್ನು ಮೇಲೆತ್ತಿ ರಕ್ಷಿಸಿದಂದಿನಿಂದ ಈ ಪರ್ವತಾವಳಿಯಲ್ಲಿ ವಾಸ ಮಾಡಲು ನಿರ್ಧರಿಸಿದನೆಂಬುದೂ, ಈ ಸುತ್ತಲ ಕ್ಷೇತ್ರವು ವರಾಹ ಕ್ಷೇತ್ರವೆಂದಾಯಿ ತೆಂಬುದೂ ಮತ್ತೊಂದು ಕಾರಣವಾಗುವುದು.

## 3. ಶ್ವೇತ ವರಾಹಕಲ್ಪದ ಕಥೆ

ನೈಮಿಷಾರಣ್ಯದಲ್ಲಿ ಋಷಿ ಮುನಿಗಳೆಲ್ಲ ಒಮ್ಮೆ ಸೇರಿದಾಗ ಅಪರ ವೇದವ್ಯಾಸರಾದ ಸೂತ ಪುರಾಣಿಕರನ್ನು ಋಷಿಗಳು ಒಂದು ಪ್ರಶ್ನೆ ಕೇಳಿದರು - ಮಹಾ ವಿಷ್ಣುವಿಗೆ ಅತ್ಯಂತ ಪ್ರಿಯವಾದ ಕ್ಷೇತ್ರ ಯಾವುದು? ಸೂತರು ಈ ಪ್ರಶ್ನೆಗೆ ಉತ್ತರವಾಗಿ ಶೇಷಾಚಲವನ್ನು ವಿವರಿಸಿ, ವರಾಹಕಲ್ಪದಲ್ಲಿ ಸ್ವಾಮಿಯ ಲೀಲೆಯನ್ನೂ, ಆತನಾಡಿದ ವಿವಿಧ ಕ್ರೀಡೆಗಳನ್ನು ವಿವರಿಸಿದರು. ಈ ಕ್ಷೇತ್ರವು ಮಾನವರ ಎಲ್ಲ ಅಭೀಷ್ಟಗಳನ್ನು ನೆರವೇರಿಸುವ ಹಾಗೂ ಹೆಚ್ಚಿನ ಸಂಪನ್ನತೆಯನ್ನುಂಟು ಮಾಡುವ ಮಹಿಮೆಯುಳ್ಳ ಕ್ಷೇತ್ರವೆಂದು ಹೇಳಲಾಗಿದೆ. ಈ ಕಥೆ ನಡೆಯುವುದು ಹೀಗೆ -

ಕಲ್ಪದಾದಿಯಲ್ಲಿ ವಿಷ್ಣುವು ಯೋಗನಿದ್ರಾವಶನಾಗಿ ಆಲದಲೆಯ ಮೇಲಿನ ಮಗುವಾಗಿ ಪವಡಿಸಿದ್ದಾಗ ಭೂಮಿಯನ್ನು ಅಗಾಧವಾದ ಸಾಗರವು ಆವರಿಸಿದ್ದಿತು. ಬಹುಕಾಲ ನೀರು ನಿಂತೇ ಇರಲು ವಿಷ್ಣು ಜಗತ್ಸೃಷ್ಟಿಯ ಮನಮಾಡಿದ.

ಮುನಿಗಳು ಪ್ರಳಯಕಲ್ಪವು ಹೇಗಾಯಿತೆಂದು ವಿವರಿಸಲು ಕೇಳಿದರು. ಪ್ರಳಯವಾಗುವಷ್ಟು ನೀರು ಎಲ್ಲಿಂದ ಹೇಗೆ ಬಂದಿತು? ಆಗ ಭೂಮಿ ಎಲ್ಲಿದ್ದಿತು - ಎಂದೆಲ್ಲ ವಿವರ ತಿಳಿಯ ಬಯಸಿದ ಮುನಿಗಳ ಕುತೂಹಲತರಣವಾಗಿ ಸೂತರು ಮುಂದುವರೆದು ಕಥೆಯನ್ನು ಬೆಳೆಸಿದರು.

ಒಂದು ಸಾವಿರ ಚತುರ್ಯುಗಗಳು ಬ್ರಹ್ಮನ ಒಂದು ದಿನವಾಗಿ, ಅದೇ ಕಾಲ ಪ್ರಮಾಣವೇ ಒಂದು ರಾತ್ರಿಯಾಗುತ್ತದೆ. ಇಂತಹ ಎರಡು ಸಾವಿರ ಚತುರ್ಯುಗ ಚಕ್ರವಾದ ಮೇಲೆ ಸೂರ್ಯನು ಬೆಂಕಿಯನ್ನುಗುಳಿ, ವರ್ಷಗಳ ಕಾಲ ವರ್ಷವಿಲ್ಲದಾಯಿತು. ರಾತ್ರಿಯಾಗಿ ಬೆಂಕಿಯು ಗಿರಿ ಕಂಧರಗಳನ್ನಾವರಿಸಿ ಎಲ್ಲವನ್ನು ನುಂಗಲು ಆರಂಭಿಸಿದಾಗ ತಪೋಧನರೆಲ್ಲ ಭೂಮಿಯನ್ನು ಬಿಟ್ಟು ಜನ ಲೋಕವನ್ನು ಸೇರಿದರು. ನಂತರ ವಾಯುವು ಘನಘೋರವಾಗಿ ಬೀಸಿ, ಕಲ್ಪಾಂತ ಮೇಘಗಳು ನಿಲ್ಲದ ನಿರಂತರ ಮಳೆ ಸುರಿಸಿದವು, ಭೂಮಿಯು ಕರಗಿ ಪಾತಾಳಕ್ಕಿಳಿಯಿತು. ನಂತರ ಸಪ್ತಸಾಗರಗಳು ಒಂದಾಗಿ ಮಹರ್ಲೋಕದವರೆಗೆ ಬೆಳೆದವು. ಹೀಗೆಯೇ ಬ್ರಹ್ಮನ ರಾತ್ರಿಯ ಒಂದು ಭಾಗ ಕಳೆದುಹೋಯಿತು. ಮಧ್ಯರಾತ್ರಿಯ ನಂತರ ಸೃಷ್ಟಿಸ್ಥಿತಿಲಯಕಾರನಾದ ಮಹಾವಿಷ್ಣುವು ಬ್ರಹ್ಮ ಶಯಿಸಿದಾಗ ದಂತಹ ಭೂಮಿಯನ್ನು ಉದ್ಧರಿಸುವ ಕೆಲಸವನ್ನು ಕೈಗೊಳ್ಳಲು ನಿರ್ಧರಿಸಿ ಭೂಮಿಯ ಅನ್ವೇಷಣೆಯಲ್ಲಿ ಶ್ವೇತವರಾಹ ರೂಪಿಯಾಗಿ ಪಾತಾಳಲೋಕಕ್ಕೆ ಇಳಿದನು. ಅಲ್ಲಿ ರಾಕ್ಷಸನಾದ ಹಿರಣ್ಯಾಕ್ಷ ನೊಡನೆ ಬಹುದೀರ್ಘಕಾಲದ ಮಲ್ಲಯುದ್ಧ ಮಾಡಬೇಕಾಯಿತು. ಅತ್ಯಂತ ಕ್ರೋಧ ಹೊಂದಿದ ಶ್ವೇತವರಾಹನು ಮೇರು ಪರ್ವತ ಸಮಾನವಾದ ಹಿರಣ್ಯಾಕ್ಷನ ಬೃಹದ್ದೇಹವನ್ನು ಎರಡಾಗಿ

ಸೀಳಿದನು. ಅದರಿಂದಾಗಿ ಅವನ ರಕ್ತವು ನೀರಿನಲ್ಲಿ ಬೆರೆತು ನೀರೆಲ್ಲ ಕೆಂಪಗಾಯಿತು. ಜನಲೋಕದಲ್ಲಿನ ಮುನಿಗಳು ರಕ್ತವರ್ಣವನ್ನು ಕಂಡು ತಮ್ಮ ಯೋಗದೃಷ್ಟಿಯಿಂದ ಈ ಬೃಹತ್ ಕೃತ್ಯವನ್ನು ಮಾಡಲು ಮಹಾವಿಷ್ಣುವೇ ಸಮರ್ಥನೆಂದು ತಿಳಿದು ಹರಿಯನ್ನು ಹೊಗಳಿದರು. ಶ್ವೇತವರಾಹನು ವಿಶಾಲವಾದ ಜಲರಾಶಿಯನ್ನು ತನ್ನ ದಂಷ್ಟ್ರಗಳಿಂದ ವಿಭಾಗಿಸಿ, ಭೂಮಿಯನ್ನು ಮೇಲಕ್ಕೆ ತಂದನು. ತನ್ನ ಒಂದು ಪಾದವನ್ನು ಆದಿ ಶೇಷನ ಮೇಲಿಟ್ಟು ಜನಲೋಕದಲ್ಲಿ ಪರ್ವತೋಪಮವಾಗಿ ನಿಂತುಕೊಂಡನು. ಬ್ರಹ್ಮನೇ ಮೊದಲಾದ ದೇವತೆಗಳು ಪುಷ್ಪವೃಷ್ಟಿಯನ್ನು ಮಾಡುತ್ತ ವೇದಮಂತ್ರಗಳಿಂದ ಸ್ವಾಮಿಯನ್ನು ಶ್ಲಾಘಿಸಿದರು. ಅಪ್ಸರೆಯರು ನರ್ತಿಸಿದರು. ದೇವದುಂದುಭಿ, ಗಂಟೆ, ಕಹಳೆ, ನಿಸ್ಸಾಳ, ಶಂಖ, ಜಾಗಟೆಗಳ ಧ್ವನಿಯಾಯಿತು. ಹಿರಣ್ಯಾಕ್ಷ ಸಂಹಾರಿಯನ್ನು ಆತನ ಚಾತುರ್ಯಕ್ಕಾಗಿ ದೇವತೆಗಳು ಹೊಗಳಿ, ಭೂಮಿಯನ್ನೂ ಮೊದಲಿನಂತೆ ಸ್ಥಿರಾ ಆಗಿ ಸ್ಥಾಪಿಸಬೇಕೆಂದು ಬೇಡಿದರು.

ವರಾಹ ಪುರಾಣದಲ್ಲಿ 33 ನೇ ಅಧ್ಯಾಯವಾದ ಶ್ವೇತವರಾಹನು ಹಿರಣ್ಯಾಕ್ಷನನ್ನು ಕೊಂದು ಭೂಮಿಯನ್ನು ಪುನರುದ್ಧಾರ ಮಾಡುವ ಈ ಪ್ರಸಂಗವು ವೆಂಕಟಾಚಲ ಮಾಹಾತ್ಮದ ಪ್ರಥಮಾಧ್ಯಾಯವಾಗಿದೆ.

**4. ವೈಕುಂಠದಿಂದ ಗರುಡನು ಕ್ರೀಡಾಚಲವನ್ನು ತರುವಿಕೆ**

ಭೂಮಿಯನ್ನು ಪ್ರತಿಷ್ಠಾಪಿಸಿದ ನಂತರ ವರಾಹನು ಸಪ್ತಸಾಗರಗಳನ್ನು ಮರ್ಯಾದೆಗೆ ಒಳಪಡಿಸಿ, ಸಪ್ತಲೋಕಗಳನ್ನು ಸ್ಥಿರ ಗೊಳಿಸಿ ಬ್ರಹ್ಮನನ್ನು ಕರೆದು ಮೊದಲಿನಂತೆ ಜಗತ್ ಸೃಷ್ಟಿಯನ್ನುಂಟುಮಾಡಲು ಹೇಳಿದ. ಅದರಂತೆಯೇ ಚತುರ್ಮುಖನು ಮೊದಲಿಗೆ ಸೂರ್ಯಚಂದ್ರರನ್ನು ಉಂಟಾಗಿಸಿದನು. ಮಾನವರನ್ನು ಉದ್ಧಾರ ಮಾಡುವ ಉದ್ದೇಶದಿಂದ ಭೂಮಿಯ ಮೇಲೆ ಕೆಲಕಾಲವಿರಲು ಬಯಸಿದ ವಿಷ್ಣುವು ವೈಕುಂಠದಿಂದ ಕ್ರೀಡಾಚಲವನ್ನು ಎತ್ತಿಕೊಂಡು ಬರಲೂ, ಜೊತೆಗೇ ವಿಶ್ವಕ್ಸೇನರಾದಿಯಾದ ಪರಿಷತ್ತನ್ನೂ ಕರೆತರಲು ಗರುಡನಿಗೆ ಹೇಳಿದನು. ಕೂಡಲೇ ಕ್ರೀಡಾಚಲವನ್ನು ತರಲು ಗರುಡನು ಹೊರಹೊರಟನು. ಹರಿಯು ಗೋಮತೀ ನದಿಗೆ ದಕ್ಷಿಣದಲ್ಲಿ 70 ಯೋಜನ (700 ಮೈಲಿ) ದೂರ ಹಾಗೂ ಪೂರ್ವಸಾಗರದಿಂದ ಐದು ಯೋಜನ ದೂರದಲ್ಲಿನ ಸುವರ್ಣಮುಖೀ ನದಿಯ ಉತ್ತರಭಾಗದ ರುಕ್ಮನಾಡಿಯ ಪೂತಾತ್ಮರ ಪವಿತ್ರ ಪ್ರದೇಶವನ್ನು ಆಯ್ಕೆ ಮಾಡಿಕೊಂಡು ಗರುಡನಿಗಾಗಿ ಕಾಯ್ದನು.

ಭೂವರಾಹನಿಂದ ಆಜ್ಞಪ್ತನಾದ ಗರುಡನು, ಪಂಚೋಪನಿಷತ್ ರೂಪದಲ್ಲಿ ಕಂಡುಬರುತ್ತಿದ್ದ ಅಮೂಲ್ಯ ಹರಳುಗಳ, ಚಿನ್ನವೇ ಮೊದಲಾದ ಅಮೂಲ್ಯ ಲೋಹಗಳ ವಿಶಾಲವಾದ ಸಹಜವಾದ ಪರ್ವತಾವಳಿಯ ಕ್ರೀಡಾಚಲವನ್ನು ತರಲು ಹೊರಟನು. ಆ ಪರ್ವತವಾದರೋ ಸ್ವರ್ಗ ಮರ್ತ್ಯಗಳಲ್ಲಿನ ಎಲ್ಲ ಉನ್ನತವಾದ ತರು ಲತೆಗಳಿಂದಲೂ, ಅಸಂಖ್ಯವಾದ ಸುಗಂಧಭರಿತವಾದ ಪುಷ್ಪಗಳ ಗಿಡಬಳ್ಳಿಗಳಿಂದಲೂ, ಮೃದು ಮಧುರ ಪಕ್ಷಿಗಳ ಸ್ವರದಿಂದ ಪುನಃ ಪುನಃ ಪುಲಕಿತವಾಗುವ, ಎಚ್ಚರವಾಗುವ ವನರಾಜಿಯಿಂದಲೂ, ಎಲ್ಲರೀತಿಯ ಕಾಡು ಪ್ರಾಣಿಗಳೂ ಕೂಡಿದ್ದು, ಅಲ್ಲಿ ಇಂಪಾಗಿ ಹಾಡುವ ಕಿನ್ನರ ಕಿನ್ನರಿಯರೂ, ಮಂಜುಳ ನಾದದಿಂದ ಹರಿಯುವ ತೊರೆನದಿಗಳಿಂದಲೂ, ಮುಕ್ತರು, ನಿತ್ಯರು, ಕಾಮರೂಪರು, ನಾಮರೂಪರುಗಳಿಂದ ಕೂಡಿ ನಾರಾಯಣಗಿರಿಯೆಂಬ ಅಭಿಧಾನ ದಿಂದ ಪರಮೇಷ್ಠಿಯ (ಮಹಾವಿಷ್ಣುವಿನ) ಕ್ರೀಡಾಚಲವಾಗಿದ್ದಿತು. ವೈಶಾಲ್ಯದಲ್ಲಿ ಮೂರು ಯೋಜನ ಅಗಲವೂ ಮೂವತ್ತು ಯೋಜನ ಉದ್ದವೂ, ಆಗಿದ್ದ ಇದು ಶೇಷನನ್ನು ಹೋಲುತ್ತಿದ್ದಿತು. ಮಾನವರನ್ನು ಉದ್ಧರಿಸುವ ಪುರುಷೋತ್ತಮನು ಇರಲು ತಕ್ಕ ಸ್ಥಳವಾಗಿದ್ದಿತು. ಗಿರಿಯ ಶಂಖದಾಕಾರವಾಗಿದ್ದು, ಎಲ್ಲಕ್ಕಿಂತ ಹೆಚ್ಚು ಪವಿತ್ರವಾಗಿದ್ದು, ತನ್ನನ್ನು ದರ್ಶಿಸಿದವರಿಗೆಲ್ಲ ಮುಕ್ತಿಯನ್ನು ನೀಡುವಂತಿದ್ದಿತು.

ಸರ್ವ ದೇವ ಪರಿಚಾರಕ ಗಣದೊಡನೆ ಆ ಪರ್ವತವನ್ನು ತನ್ನ ಭಾರಿ ಭುಜದಲ್ಲಿ ಹೊತ್ತು ವರಾಹಸ್ವಾಮಿಯ ಬಳಿಗೆ ಗರುಡನು ಹಾರಿಬಂದ. ತಾನು ಆಯ್ಕೆಮಾಡಿದ ಸ್ಥಳದಲ್ಲಿ ಅದನ್ನು ಇಡಲು ಹೇಳಿದ ಶ್ವೇತವರಾಹನು ಅದರಲ್ಲಿನ

ಅಮೂಲ್ಯವಾದ ಅನರ್ಘ್ಯವಾದ ರತ್ನಖಚಿತ ಕಂಭಗಳ ಅತ್ಯುತ್ತಮ ವಜ್ರಗಳಿಂದ ಕೂಡಿದ ವಿಮಾನಗಳಿಂದಲೂ ತುಂಬಿ ಶೋಭಿಸುತ್ತಿದ್ದ ಮಹಾಮಣಿ ಮಂಟಪದಲ್ಲಿ ನಿವಾಸಿಯಾದ. ಈ ಮಂಟಪದ ಬದಿಯ ಸ್ವಾಮಿ ಪುಷ್ಕರಿಣೀತೀರದಲ್ಲಿನ ಆನಂದ ನಿಲಯ ವಿಮಾನದಡಿಯಲ್ಲಿ ವಕ್ಷಃಸ್ಥಳ ಲಕ್ಷ್ಮಿಯಿಂದಲೂ ಕೌಸ್ತುಭ ರತ್ನದಿಂದ ಕೂಡಿದ ಸ್ವಾಮಿಯು ಮುಂದೊಂದು ದಿನ ಬಂದು ನೆಲೆಸಲನುವಾಯಿತು.

ವರಾಹ ಪುರಾಣದಲ್ಲಿ ಕ್ರೀಡಾಚಲವನ್ನು ಭೂಮಿಗೆ ತರುವ ಈ ಭಾಗ 34 ನೇ ಅಧ್ಯಾಯ ವಾಗಿದ್ದು ಶ್ರೀ ವೆಂಕಟಾಚಲ ಮಾಹಾತ್ಮ್ಯದ ಎರಡನೇ ಅಧ್ಯಾಯವಾಗಿದೆ.

## 5. ತಿರುವೆಂಗಡಲ್ಲಿ ವಿಷ್ಣು

ಹಿರಣ್ಯಾಕ್ಷನನ್ನು ಕೊಂದ ಉಗ್ರರೂಪವನ್ನು ದೂರಮಾಡಿ ಸೌಮ್ಯರೂಪವನ್ನು ಧರಿಸಬೇಕೆಂದು ಋಷಿ ಮುನಿಗಳು ವೇತೆಗಳು ಪ್ರಾರ್ಥಿಸಲು ವಿಷ್ಣುವು ಶಾಂತಾಕಾರನಾಗಿ ತಾನು ವೈಕುಂಠಕ್ಕಿಂತಲೂ ಹೆಚ್ಚಾಗಿ ವೆಂಕಟಾದ್ರಿಯಲ್ಲಿರಲು ಅಪೇಕ್ಷಿಸುವುದಾಗಿಯೂ, ಹಾಗಾಗಿ, ಮಾನವರ ಉದ್ಧಾರಕ್ಕಾಗಿ ಶ್ರೀದೇವಿ ಭೂದೇವಿಯರೊಡನೆ ವೆಂಕಟಾದ್ರಿಯಲ್ಲಿ ನೆಲಸುವುದಾಗಿಯೂ ವಚನವಿತ್ತನು.

ವೆಂಕಟಾದ್ರಿಯ ಮಹಿಮೆಯ ವಿವರವೇನೆಂದು ಮುನಿಗಳು ಕೇಳಲು ಶ್ವೇತವರಾಹನು ಸ್ವಾಮಿ ಪುಷ್ಕರಿಣಿಯ ಬಗ್ಗೆ ಈ ರೀತಿ ಯಾಗಿ ತಿಳಿಸಿದನು.

ಸ್ವಾಮಿ ಪುಷ್ಕರಿಣಿಯು ವೈಕುಂಠದಲ್ಲಿನ ಭಗವಂತನ ಕ್ರೀಡಾತಟಾಕವಾಗಿದ್ದು ಶ್ರೀ ಭೂಸಹಿತವಾಗಿ ರುವುದಾಗಿ, ಮನುಷ್ಯರ ಪಾಪಗಳನ್ನು ಪರಿಮಾರ್ಜಿಸಿ ಅವರಿಗೆ ಪುಣ್ಯವನ್ನುಂಟುಮಾಡುವುದು. ಇದರ ಜಲವು ಪವಿತ್ರವೂ, ಸುವಾಸನಾಭರಿತವೂ, ಅರ್ಹವೂ, ಶ್ರೇಷ್ಠವೂ ಆಗಿದೆ. ಇದು ಗಂಗಾದಿ ನದಿಗಳ ಜನ್ಮಸ್ಥಾನವೂ ಆಗಿದೆ. ಇಲ್ಲಿ ದೇವರ ಕ್ರೀಡೆಗಾಗಿ ಗರುಡನಿಂದಲೇ ತಂದಿಡಲ್ಪಟ್ಟಿದೆ. ವಿರಜಾನದಿಯಂತೆಯೇ ಇಲ್ಲಿ ಸ್ನಾನಮಾಡು ವುದರಿಂದ ಪಾಪಗಳು ನಾಶವಾಗುತ್ತವೆ. ನಿತ್ಯವೂ ಸ್ನಾನಮಾಡುವವರಿಗೆ ಸುಖಾಭಿವೃದ್ಧಿ ಯಾಗಿ, ದರ್ಶನ, ಸ್ಪರ್ಶನ, ಪೂಜನ, ಕೀರ್ತನ, ವಾಸನ ಮಾತ್ರದಿಂದಲೇ ಅಭೀಷ್ಟಗಳು ಈಡೇರುವುವು. ಇದರ ಮಹಿಮೆಯನ್ನು ಪೂರ್ಣವಾಗಿ ಇಂತಿಷ್ಟೇ ಎಂದು ಹೇಳಲಾಗದು. ಈ ಪರ್ವತವು ಸಾಧಾರಣವೆಂದು ಮೇಲುನೋಟಕ್ಕೆ ಕಂಡುಬಂದರೂ ಈ ಬೆಟ್ಟದ ಮೇಲೆಯೇ ಮನುಷ್ಯರ ಭಕ್ತಿ ಪಕ್ವವಾಗುತ್ತದೆ. ಇಲ್ಲಿ ಅವರು ಹೊಂದಿರುವ ಭಕ್ತಿಗೆ ತಕ್ಕ ಫಲವನ್ನು ಪಡೆಯುವರ.

ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನ, ಸೂಕ್ತಗುರುವಿನ ಪಾದಪೂಜನ, ಏಕಾದಶೀವ್ರತಾನುಷ್ಠಾನ - ಈ ಮೂರು ಆಚರಣೆಯಲ್ಲಿ ಅಷ್ಟು ಸುಲಭವಲ್ಲ. ಹಾಗೆಯೇ ಮಾನವ ಜನ್ಮಧಾರಣ, ಪೂರ್ಣಆಯುಃಪ್ರಮಾಣದ ಜೀವನ, ಸ್ವಾಮಿಪುಷ್ಕರಿಣೀ ಅಭ್ಯಂಜನ ವೆಂಬುವು ಕಷ್ಟಸಾಧ್ಯಗಳು. ಹೀಗಾಗಿ ಸ್ವಾಮಿಪುಷ್ಕರಿಣೀ ಸ್ನಾನಮಹಿಮೆಯನ್ನು ಪೂರ್ಣವರ್ಣಿಸಲಳವಲ್ಲ.ತಾರಕಾಸುರನನ್ನುಕೊಂದ ಸುಬ್ರಹ್ಮಣ್ಯಸ್ವಾಮಿಯ ಪಾಪಶಮನದ ಮಹಾತ್ಮೆಯು ವಿಷದವಾಗಿದೆ. ವೆಂಕಟಾದ್ರಿಯನ್ನು ದರ್ಶಿಸುವವರಿಗೆ ಇಲ್ಲಿ ನಿತ್ಯಸೇವೆಮಾಡಿದ ಪುಣ್ಯಪ್ರಾಪ್ತವಾಗುವುದಾದರೆ, ಇಲ್ಲಿ ನೈಮಿತ್ತಿಕ ಸೇವೆಗಳನ್ನು ನಡೆಸುವುದರಿಂದ ದೈಹಿಕ ನ್ಯೂನತೆಗಳೇನಾದರೂ ಇದ್ದರೆ ಸರಿಹೋಗುವುದೆಂಬುದು ವಾಸವನ (ಇಂದ್ರನ) ಉದಾಹರಣೆಯಿಂದ ಸ್ಪಷ್ಟವಾಗುತ್ತದೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಪುರುಷಾರ್ಥ ಗಳನ್ನು ಅಪೇಕ್ಷಿಸುವ ಮಾನವಕಾಮನೆ ಇಲ್ಲಿ ಈಡೇರುವುದು ಹಾಗೂ ವೇದೋಕ್ತ ಕ್ರಿಯೆಗಳನ್ನು ಆಚರಿಸಲಾಗದವರೂ ವೆಂಕಟಾದ್ರಿ ಯಲ್ಲಿ ಸೇವೆ ಸಲ್ಲಿಸುವುದರಿಂದ ಸರ್ವ ಪಾಪಪರಿಹಾರವಾಗಿ ಸಕಲಾಭೀಷ್ಟಗಳೂ ನೆರವೇರುವುವು.

ವರಾಹ ಪುರಾಣದ 35 ನೇ ಅಧ್ಯಾಯದಲ್ಲಿ ಈ ವಿಷಯವಿದ್ದು ಇದು ವೆಂಕಟಾಚಲ ಮಹಾತ್ಮೆಯ 3ನೇ ಅಧ್ಯಾಯವಾಗಿದೆ.

### 6. ಶ್ರೀ ವರಾಹಸ್ವಾಮಿ ಲೀಲೆ

ಮುನಿಗಳ ಅಪೇಕ್ಷೆಯಂತೆ ಸೂತನು ವೆಂಕಟಾದ್ರಿಯಲ್ಲಿ ವರಾಹಸ್ವಾಮಿಯು ಆಗಮಾಡಿದ ಲೀಲೆಗಳನ್ನು ವಿವರಿಸಿದನು. ವರಾಹಸ್ವಾಮಿಯು ಭೂಮಿಯನ್ನು ಮೇಲೆತ್ತಿದ ಮೇಲೆ ಗರುಡನು ಕ್ರೀಡಾದ್ರಿಯನ್ನು ತಂದು ಸ್ಥಾಪಿಸಿದ ನಂತರ,ಕಲ್ಪದಾದಿಯಿಂದಲೂ ವರಾಹಸ್ವಾಮಿಯು ಲಕ್ಷ್ಮಿಯೊಡನೆ ಕೂಡಿದವನಾಗಿ ಇಲ್ಲಿನ ನದಿ ದಡಗಳಲ್ಲೂ, ಪರ್ವತಗಳ ಕೊರಕಲುಗಳಲ್ಲೂ ವಿಹಾರಮಾಡುತ್ತಿರುವವನಾಗಿ, ಮನುಷ್ಯರಿಗೆ ಹಲಬಾರಿ ಕಂಡುಬರುತ್ತಲೂ, ಬಹುಸಾರಿ ಅದೃಷ್ಯನಾಗಿಯೂ ಈಗಲೂ ಇಲ್ಲಿಯೇ ಇದ್ದಾನೆ. ಕಲ್ಪಾಂತದ ವರೆಗೂ ಹೀಗೆಯೇ ಅವನ ಸನ್ನಿಧಿ ಇಲ್ಲಿರುವುದೆಂದು ಬ್ರಹ್ಮನೂ ವಚನ ನೀಡಿರುವನು. ಕಾರಣ ಪ್ರತಿ ಕಲ್ಪದಾದಿಯಲ್ಲೂ ಶ್ವೇತವರಾಹನು ಭೂಮಿಯನ್ನು ರಕ್ಷಿಸುವನೆಂಬುದು ಶ್ರುತವಾಗಿದೆ. ಈ ಕಾಲ ಘಟ್ಟವನ್ನು ಮುನಿಗಳು ಶ್ವೇತವರಾಹ ಕಲ್ಪವೆಂದು ಕರೆದರು. ದುಷ್ಟತೆಯು ಯಾವಾಗ ಹೆಚ್ಚಾಗಿ ಒಳಿತಿಗೆ ಹಾನಿಯುಂಟಾಗುವುದೊ, ಧರ್ಮವು ಕಳೆಗುಂದಿ ಅಧರ್ಮವು ಮೇಲುಗೈ ಆಗುವುದೋ, ದುಷ್ಟರು ದರ್ಬಾರು ಮಾಡುವರೋ ಆಗ ಅವನು ಕಾಣಿಸಿಕೊಂಡು ಧರ್ಮೋದ್ಧರಣ ಮಾಡುವನು. ಧರ್ಮಾತ್ಮರನ್ನು ಕಾಪಾಡುತ್ತಾ ವೇದವಿದ್ಯೆಯನ್ನು ಪ್ರೋತ್ಸಾಹಿಸುವನು. ಈತನು ರಮಾ ಸಹಿತನಾಗಿ, ನಿತ್ಯರು, ಮುಕ್ತರು, ದೇವತೆಗಳು ಕಾಮರೂಪಿಗಳೊಡನೆ ಸದಾ ಶೇಷಾಚಲದಲ್ಲಿ ನಿವಾಸಿ ಯಾಗಿರುವನು. ವೆಂಕಟನಗವು ಆತನಿಗೆ ಸ್ವರ್ಗ, ಸತ್ಯಲೋಕ, ವೈಕುಂಠಗಳಿಗಿಂತ ಹೆಚ್ಚು ಪ್ರಿಯವಾದದ್ದು.

### 7. ಸ್ವಾಮಿ ಸನ್ನಿಧಿಯಿಂದಾಗಿ ಕ್ರೀಡಾದ್ರಿಯ ದೈವಿಕತೆ

ಭಗವಾನನಿಗೆ ಈ ಪರ್ವತವು ಪ್ರಿಯವಾಗಿರುವುದರಿಂದ ಇಲ್ಲಿ ಸಕಲ ಸಿದ್ಧಿಗಳನ್ನೂ - ಮಂತ್ರಸಿದ್ಧಿ - ತಪಃಸಿದ್ಧಿ - ಯಜ್ಞಸಿದ್ಧಿ ಕಾಮ್ಯಸಿದ್ಧಿ ಗಳನ್ನು ಪಡೆಯಬಹುದಾಗಿದೆ. ಯಾವುದೇ ಅಡತಡೆಗಳೂ, ಇಲ್ಲಿ ಸಾಧನೆಮಾಡುವವನಿಗೆ ಎದುರಾಗದು. ಈ ಪರ್ವತದ ಮೇಲೆ ಮಾಡುವ ಕಿರಿಯ ಧರ್ಮಕಾರ್ಯಗಳೂ ಬಹುಫಲಪ್ರದವಾಗುವವು. ಎಲ್ಲ ಪವಿತ್ರ ತೀರ್ಥಗಳೂ ಈ ಪರ್ವತದಲ್ಲಿವೆ. ಜ್ಞಾನಾರ್ಥಿಯಾಗಿ ನಿರಂತರ ಸಾಧನೆ ಮಾಡುವ ಭಕ್ತನು ಜ್ಞಾನವನ್ನು ಪಡೆಯುವುದರಲ್ಲಿ ಸಂದೇಹವಿಲ್ಲ. ಅರ್ಥಾರ್ಥಿಯು ಸಂಪತ್ತನ್ನು ಪಡೆಯುವನು. ಪುತ್ರಾರ್ಥಿಯು ಪುತ್ರರನ್ನು ಪಡೆಯುವನು. ರಾಜ್ಯವನ್ನು ಬಯಸುವವನಿಗೆ ರಾಜ್ಯವೂ, ದೈಹಿಕನ್ಯೂನತೆಗಳು ದೋಷಗಳ ನಿವಾರಣೆ ಬಯಸುವವನಿಗೆ ಸುಂದರ ಸುದೃಢ ಶರೀರವೂ ದೊರೆಯುವವು. ಬೇರೆ ಬೇರೆ ಕಾರಣಗಳಿಂದ ಕ್ರೀಡಾದ್ರಿಗೆ ವಿವಿಧವಾದ ಹೆಸರುಗಳಿವೆ. ಅವುಗಳೆಂದರೆ-

- ಅಪೇಕ್ಷಿತ ವಸ್ತುಗಳನ್ನು ನೀಡುವುದರಿಂದ ಚಿಂತಾಮಣಿಯೆಂದೂ,
- ಜ್ಞಾನವನ್ನು ನೀಡುವುದರಿಂದ ಜ್ಞಾನಾದ್ರಿಯೆಂದೂ,
- ಸರ್ವತೀರ್ಥಗಳನ್ನೂ ಹೊಂದಿರುವುದರಿಂದ ತೀರ್ಥಾದ್ರಿಯೆಂದೂ,
- ಕೆಂಪುಕಮಲಗಳಿಂದಾಗಿ ಪುಷ್ಕರಾದ್ರಿಯೆಂದೂ,
- ಧರ್ಮದೇವತೆಯ ತಪಸ್ಸಿನಿಂದಾಗಿ ಧರ್ಮಾದ್ರಿ- ವೃಷಾದ್ರಿಯೆಂದೂ,
- ಅಗಣಿತ ಸುವರ್ಣದ ಉಪಸ್ಥಿತಿಯಿಂದಾಗಿ ಕನಕಾದ್ರಿಯೆಂದೂ,
- ನಾರಾಯಣನೆಂಬ ಬ್ರಾಹ್ಮಣನು ತನ್ನ ಹೆಸರೇ ಬೆಟ್ಟಕ್ಕೆ ಇಡಬೇಕೆಂದು ತಪಸ್ಸು ಮಾಡಿದ್ದರಿಂದ ನಾರಾಯಣಾದ್ರಿಯೆಂದೂ,
- ವೈಕುಂಠದಿಂದ ಸ್ಥಾನ ಪಲ್ಲಟ ಪಡೆದದ್ದರಿಂದಾಗಿ ವೈಕುಂಠಾದ್ರಿಯೆಂದೂ,
- ಪ್ರಹ್ಲಾದನನ್ನು ರಕ್ಷಿಸಿ ಹಿರಣ್ಯಕಶ್ಯಪನನ್ನು ಕೊಲ್ಲಲು ನರಸಿಂಹ ರೂಪವನ್ನು ಈ ಪರ್ವತದಲ್ಲಿ ಪಡೆದದ್ದರಿಂದ ಸಿಂಹಾದ್ರಿ,
- ದೇವತೆಗಳಿಗೆ ನೆರವುನೀಡಿದ ಆಂಜನೇಯನನ್ನು ಪಡೆದ ಅಂಜನಾದೇವಿ ತಪಸ್ಸು ಮಾಡಿದ್ದರಿಂದ ಅಂಜನಾದ್ರಿಯೆಂದೂ,

- ಇಲ್ಲಿ ವರಾಹ ಕ್ಷೇತ್ರವಿರುವುದರಿಂದ ವರಾಹಾದ್ರಿಯೆಂದೂ,

- ವಾನರ ಮುಖ್ಯನಾದ ನೀಲನು ಇಲ್ಲಿರುವುದರಿಂದ ನಿಲಾದ್ರಿಯೆಂದೂ, (ನೀಲಗಿರಿ)

- ಅಮೃತತ್ವವನ್ನೂ ಮೋಕ್ಷವನ್ನೂ ನೀಡುವುದರಿಂದ ವೆಂಕಟಾದ್ರಿಯೆಂದೂ,

- ಶ್ರೀನಿವಾಸನು (ಲಕ್ಷ್ಮಿಗೆ ನಿವಾಸನಾದವನು) ವಾಸಿಸುವುದರಿಂದ ಶ್ರೀನಿವಾಸಾದ್ರಿ ಎಂದೂ,

- ವೈಕುಂಠದಲ್ಲಿ ವಾಸಿಸುವವರು ಇಲ್ಲಿ ದೇವರ ಕ್ರೀಡೆಯನ್ನು ಕಂಡದ್ದರಿಂದ ಆನಂದಾದ್ರಿಯೆಂದೂ,

- ಅಗಣಿತ ಐಶ್ವರ್ಯವನ್ನು ನೀಡುವುದರಿಂದಾಗಿ ಶ್ರೀಶೈಲವೆಂದೂ,

- ಕರೆಯಲಾಗಿದೆ. ಹೀಗೆಯೇ ಕಲ್ಪಗಳು ಪರಿವರ್ತಿತವಾದಂತೆ ಈ ಪರ್ವತಕ್ಕೂ ವಿವಿಧ ಹೆಸರುಗಳಾದವು. ಸ್ವಾಮಿಯಂತೆಯೇ ಬಹುವಿಧ ಶಕ್ತಿಯನ್ನು ಪಡೆದ ಪರ್ವತವಿದು. ನಾಲ್ಕು ಮುಖಗಳ ಬ್ರಹ್ಮನಾಗಲೀ, ಸಾವಿರನಯನದ ಇಂದ್ರನಾಗಲೀ ಎರಡುಸಾವಿರ ನಾಲಿಗೆಯ ಆದಿಶೇಷನಾಗಲೀ ಈ ಪರ್ವತದ ಮಹಿಮೆಯನ್ನು ವರ್ಣಿಸಲು ಶಕ್ತರಲ್ಲ.

ನೈಮಿಷಾರಣ್ಯದ ಋಷಿಗಳಿಗೆ ಸೂತನು ಹೇಳಿದ ಇಷ್ಟು ಕಥೆಯಿಂದ ತೃಪ್ತಿ ಆಗಲಿಲ್ಲ. ಹೆಚ್ಚಿಗೆ ತಿಳಿಯುವ ಆಸಕ್ತಿ ಕುತೂಹಲ ಅವರಲ್ಲಿ ಮಿಗಿಲಾಯಿತು.

ಇದು ವರಾಹಪುರಾಣದ 36 ನೇ ಅಧ್ಯಾಯದ ವಸ್ತು. ಶ್ರೀ ವೆಂಕಟಾಚಲಮಹಾತ್ಮೆಯ ನಾಲ್ಕನೆಯ ಅಧ್ಯಾಯವಾಗಿದೆ.

## 8. ಬೆಟ್ಟದ ಮೇಲೆ ಸ್ವಾಮಿ

ಬೆಟ್ಟದೊಡೆಯನ ಹಲವಾರು ಲೀಲೆಗಳನ್ನು ಮಹಿಮೆಗಳನ್ನು ಸೂತ ವಿವರಿಸಿದ. ಒಂದಾನೊಂದು ಕಾಲದಲ್ಲಿ ಸ್ವಾಮಿಯ ತನ್ನ ನಿತ್ಯಾನಪಾಯಿನಿಯಾದ ರಮೆಯೊಡನೆ ಪರ್ವತದ ಉತ್ತರಭಾಗದಲ್ಲಿ ವಿಹರಿಸುತ್ತಿದ್ದ. ಆಗ ಇಪ್ಪತ್ತನಾಲ್ಕು ತತ್ತ್ವಗಳನ್ನು ತಿಳಿದವರು, ಹಾಗಾಗಿಯೇ ಅವುಗಳ ಅನುಸಂಧಾನವನ್ನು ಶ್ಲಾಘಿಸಬಲ್ಲ ಸಮರ್ಥರೂ, ಪರ್ವತದ ಹಿರಿಮೆಯನ್ನು ಅರಿತವರೂ, ಆದ ಹಲವಾರು ಮುನಿಗಳು ಬೆಟ್ಟದಲ್ಲಿಯೇ ನಿತ್ಯನಿವಾಸವಾಗುವ ಅಪೇಕ್ಷೆಯಿಂದಲೂ, ಇಲ್ಲಿಯೇ ತಪೋಧ್ಯಾನ ನಿರತರಾಗುವ ಅಪೇಕ್ಷೆಯಿಂದಲೂ, ವಿಷ್ಣುವನ್ನು ಕುರಿತು ಒಂದು ಯಜ್ಞಮಾಡಲು ತೀರ್ಮಾನಿಸಿದರು. ವಿವಿಧ ಸ್ವಭಾವದ ಪ್ರಾಣಿಗಳು ಶಾಂತವಾಗಿ ಇರುವುದೂ, ದುಷ್ಟ ರಾಕ್ಷಸರ ಭಾದೆಗಳಿಂದ ಮುಕ್ತವಾಗಿರುವುದೂ, ಯಜ್ಞಕ್ರಿಯೆಯಲ್ಲಿ ಪ್ರಯೋಜನಕ್ಕೆ ಬರುವ ಅನೇಕ ರೀತಿಯ ತರುಮೂಲಗಳಿಂದ ಕೂಡಿದ್ದುದೂ, ತಪಸ್ವಿಗಳು ವಿಶ್ರಾಂತಿ ಪಡೆಯಲು ಬಳಕೆಗೆ ಬರುವ ವಿಶಾಲ ವೃಕ್ಷರಾಜಿಗಳೂ ಇದ್ದುದೂ, ತಮ್ಮ ಸುಂದರಬಂಧುರತೆಯಿಂದ ಹೃನ್ನಯನ ಮನೋಹರವಾಗಿಯೂ ಇದ್ದ ಕಾನನ ರಾಜಿಯಿಂದಲೂ ಶೋಭಿಸುತ್ತಿದ್ದ ಪರ್ವತ. ಅವರು ಯಜ್ಞಮಾಡಲು ತಕ್ಕ ಸ್ಥಳವಾಗಿದ್ದಿತು. ಹೀಗಾಗಿ ಶಾಸ್ತ್ರೋಕ್ತ ವಿಧಾನದಲ್ಲಿ ಅವರು ಯಜ್ಞವನ್ನು ಕೈಗೊಂಡರು.

ವಿಷ್ಣುವು ಲಕ್ಷ್ಮಿಯೊಡನೆ ಪ್ರಚ್ಛನ್ನ ವೇಶದಲ್ಲಿ ಬಂದು ಯಜ್ಞವೇದಿ ಹತ್ತಿರ ಬಂದು ನಿಂತನು. ಅಂದವಾದ ಪೀತಾಂಬರವಸ್ತ್ರ, ತಲೆಯಲ್ಲಿ ಸುತ್ತಿದ ರುಮಾಲು, ಎಡಗೈಯಲ್ಲಿ ಖಡ್ಗ, ತಾಂಬೂಲಚರ್ವಣದಿಂದ ಶೋಭಿಸುತ್ತಿದ್ದ ತಾವರೆಯ ವರ್ಣದ ಮುಖ, ಮೈಗೆ ಬಳಿದ ಹರಿಚಂದನದಿಂದ ಸುವಾಸನಾ ಭರಿತ ಪರಿಸರ, ಕಮಲದಂತಹ ವಿಶಾಲವಾದ ನಯನಗಳು, ಶಂಖದಂತಹ ಕಂಠ, ಆಜಾನು ಬಾಹು, ಕಂದರ್ಪನ ವಿಶ್ವಮೋಹನ ಸೌಂದರ್ಯವನ್ನು ಮೀರಿದ ಸೌಂದರ್ಯ, ಚಿನ್ನದ ಯಜ್ಞೋಪವೀತ, ಮೃದುಕೋಮಲ ಸುಪುರಾದ ತನು - ಈ ರೀತಿಯಲ್ಲಿ ರೂಪದಲ್ಲಿ ಆತ ಮಹಾತ್ಮರು ತುಂಬಿದ್ದ ಯಜ್ಞಶಾಲೆಯನ್ನು ಪ್ರವೇಶಿಸಿದ. ಬಿಳಿಯ ಕಮಲದಂತಹ ವಿಶಾಲನಯನದ ಆತನನ್ನು ಮುನಿಗಳೆಲ್ಲ ನೋಡಿದರು. ಆತನೊಡನೆ ಕೈಯಲ್ಲಿ ಕಮಲವನ್ನು ಹಿಡಿದ ಜಗನ್ಮಾತೆಯನ್ನೂ ಕಂಡರು. ಆಕೆಯ ದೇಹ ಕರಗಿದ ಚಿನ್ನದ ಕಾಂತಿಯಿಂದ ಶೋಭಿಸುತ್ತಿತ್ತು. ಕಮಲ ಕೇಸರದ, ಹರಿದ್ರಾಂಕಿತ ವರ್ಣವಾಗಿದ್ದಿತು. ತುಂಬಿದ ಕಾಳ ಮೇಘದಂತಹ

ಮುಂಗುರುಳು ಪೂರ್ಣಿಮೆಯ ಚಂದ್ರನಂತಹ ಶ್ವೇತವರ್ಣದ ಮುಖಬಿಂಬವು ತಾಂಬೂಲ ಚರ್ವಣದಿಂದ ರಾಗರಂಜಿತವಾಗಿದ್ದಿತ ನಯನಗಳು ಕಿವಿಯನ್ನು ಮುಟ್ಟುವಷ್ಟು ಹಿರಿದಾಗಿದ್ದವು. ಸೂರ್ಯನಂತೆಯೇ ಪ್ರಖರವಾಗಿದ್ದ, ಹಿಂದೆಂದೂ ಯಾರೂ ಪಡೆಯದಿದ್ದಂತಹ ಪ್ರಮಾಣಬದ್ಧವಾದ ದೇಹವಿದ್ದು ಲಕ್ಷ್ಮಿಯಂತೆಯೇ ಇದ್ದಳು. ಈ ದಿವ್ಯ ದಂಪತಿಗಳನ್ನು ಕಂಡು ಅಚ್ಚರಿಪಟ್ಟ ಮುನಿಗಳು ಕೇಳಿದರು. "ಓ! ರಾಜಪುರುಷ! ಭೂಮಿಯನ್ನು ಆಳಲು ಅರ್ಹತೆ ಉಳ್ಳ ರಾಜನಂತೆ ತೋರುತ್ತಿರುವ ನೀನು ಯಾರು? ರಾಜಪುತ್ರರಿಗಿರಬೇಕಾದ ಮೂವತ್ತೆರಡು ಲಕ್ಷಣಗಳನ್ನು ಹೊಂದಿ ದಶರಥ ಪುತ್ರನಾದ ಶ್ರೀರಾಮನಂತೆ ಕಂಡುಬರುತ್ತಿರುವೆ. ನೀನು ಇಲ್ಲಿಗೇಕೆ ಬರೋಣವಾಯಿತು? ನಿನ್ನ ಸ್ವಸ್ಥಳ ಯಾವುದು? ನಿನ್ನ ತಾಯ್ತಂದೆಗಳು ಯಾರು? ನಿನ್ನ ಹೆಸರೇನು?"

ಈ ಪ್ರಶ್ನೆಗಳಿಗೆ ಭಗವಂತನು ಹೀಗೆ ಉತ್ತರಿಸಿದನು - ನಾನು ರಾಜನೂ ಅಲ್ಲ, ಬ್ರಾಹ್ಮಣನೂ ಅಲ್ಲ. ನನಗೆ ಜಾತಿ ಕುಲಗಳಿಲ್ಲ ತಂದೆ - ತಾಯಿಯರೂ ಇಲ್ಲ. ಸ್ಥಳವೆಂಬುದೂ ಇಲ್ಲ. ಎಲ್ಲ ಕಡೆಯಲ್ಲೂ ನಾನಿದ್ದು ಎಲ್ಲವನ್ನೂ ತಿನ್ನುವೆ. ಎಲ್ಲಡೆಯಲ್ಲೂ ಚರಿಸುತ್ತ ಎಲ್ಲ ರೂಪವನ್ನು ಧಾರಣ ಮಾಡುವೆ. ನನಗೆ ಹೆಸರಿಲ್ಲವಾಗಿ ಯಾವುದೇ ಲಕ್ಷಣಗಳಿಂದಲೂ ಅತೀತನಾಗಿರುವೆ. ನಿಮ್ಮನ್ನು ನೋಡಲೆಂದು ಬಂದಿರುವೆ. ಓ!ಮುನಿಗಳೆ! ವೇದ ವೇದಾಂತಗಳಲ್ಲಿ ನಿಷ್ಣಾತರಾದ ನೀವು ನನ್ನ ಸಂದೇಹವನ್ನು ಪರಿಹರಿಸಿ. ಉದ್ಗಾತನುಸಾಮವನ್ನು ಹಾಡುವಾಗ, ಅರಳಿಗೆ ಕಟ್ಟಿದ ಹುಲಿಯ ಚರ್ಮ ಹೇಗೆ ಪವಿತ್ರವಾಗುತ್ತದೆ.? ಯಜ್ಞದ ಲೋಪಗಳ ಬಗ್ಗೆ ಆತ ಮುನಿಗಳನ್ನು ಹೀಗೆ ಪ್ರಶ್ನಿಸಿದಾಗ ಮುನಿಗಳು ತಮ್ಮತಮ್ಮಲ್ಲೇ ವಿಚಾರ ವಿನಿಮಯ ನಡೆಸುತ್ತ, ಬಲಿಯನ್ನು ನೀಡುವ ಮುಹೂರ್ತ ದಾಟಿ ಹೋದೀತೆಂಬ ಕಾತರದಿಂದ ಶಾಸ್ತ್ರ ಪ್ರಕಾರವಾದ ರೀತಿಯಲ್ಲಿ ಅಗ್ನಿಯಲ್ಲಿ ಸುವಾಸನೆಯ ಆಜ್ಯವನ್ನರ್ಪಿಸುತ್ತ ವಾಪಹೋಮವನ್ನು ಮಾಡಿದರು. ಆತನು ಕೂಡಲೇ ಹೋಮ ಗುಂಡಕ್ಕೆ ಧಾವಿಸಿ ವಾಪವನ್ನು ಎರಡು ಕೈಗಳಿಂದ ಸ್ವೀಕರಿಸಿದನು. ಅದೇ ಸಮಯದಲ್ಲಿಯೇ ಶಂಖಚಕ್ರಗದಾಪದ್ಮಗಳೊಡನೆ ಎದೆಯಲ್ಲಿ ಶ್ರೀವತ್ಸ ಲಾಂಛನ ದೊಡನೆಯೂ, ವಕ್ಷಃಸ್ಥಲ ಲಕ್ಷ್ಮಿಯೊಡನೆಯೂ ಸರ್ವಾಭರಣಭೂಷಿತನಾಗಿ ಕಂಡು ಬಂದನು. ಆತನ ಶೋಭೆಯಿಂದ ಕಣ್ಣು ಕೋರೈಸಿದ ಮುನಿಗಳು ಕ್ಷಣಕಾಲ ಸ್ಥಬ್ದರಾಗಿ ನಿಂತರು. ಅವರು ಮಾಡುತ್ತಿದ್ದ ಯಜ್ಞದ ಬಗ್ಗೆ ತನ್ನ - ತೃಪ್ತಿಯನ್ನು ವ್ಯಕ್ತಪಡಿಸಿದ ಪರಮಾತ್ಮ ಅದೃಶ್ಯನಾದನು.

ತಮ್ಮ ವಾಪದ ಅರ್ಪಣೆಯನ್ನು ಪಡೆಯಲು ಸ್ವಾಮಿಯು ಸ್ವತಃ ಬಂದದ್ದನ್ನು ಕುರಿತು ಸಂತಸಗೊಂಡ ಮುನಿಗಳು ಅದನ್ನು ತಮ್ಮ ಭಾಗ್ಯವೆಂದು ಭಾವಿಸಿ, ತಮ್ಮ ಜೀವನಗಳು ಸಾರ್ಥಕವಾಯಿತೆಂದೂ, ತಾವೆಲ್ಲ ಅನುಗ್ರಹೀತರಾದೆವೆಂದೂ ತಿಳಿದರು. ಹೀಗೆ ಈ ಕೃತಾರ್ಥ ಭಾವದಿಂದ ಅವರು ಯಾಗವನ್ನು ಪೂರ್ಣಗೊಳಿಸಿದರು.

## 9. ಯುವಕನ ಕಥೆ

ಒಂದೊಮ್ಮೆ ವೆಂಕಟಾದ್ರಿಯ ಶಿಖರವೊಂದರಲ್ಲಿ ಸುಂದರ ಯುವಕನ ರೂಪದಲ್ಲಿ ವಿಹರಿಸುತ್ತ ಸ್ವಾಮಿಯು, ಕಾಲುಗಳಲ್ಲಿ ಶಕ್ತಿಯುಡಗಿದ ಒಬ್ಬ ಮುದುಕನನ್ನು ಕಂಡನು. ವೃದ್ಧನ ಕಣ್ಣುಗಳು ಗುಳಿಬಿದ್ದು ದೃಷ್ಟಿಮಂದವಾಗಿ ಕಾಲುಗಳು ಬಾಗಿದ್ದವು. ದೇಹವು ಹಸಿವು ಬಾಯಾರಿಕೆಗಳಿಂದ ಆಯಾಸ ಗೊಂಡಿದ್ದಿತು. ಬೆಟ್ಟದ ಹಾದಿಯಲ್ಲಿ ದಾರಿ ತಪ್ಪಿದವನಾಗಿ ಒಂದಡೆ ಕುಳಿತು ತನ್ನ ಯುವಕ ಮಗನನ್ನು ಕೂಗಿ ಕರೆಯುತ್ತಿದ್ದನು. ವಯಸ್ಸಾದ ತನ್ನನ್ನು ಬಿಟ್ಟು ಒಬ್ಬನೇ ಎಲ್ಲಿಗೆ ಹೊರಟುಬಿಟ್ಟನೊ ಎಂಬ ಅಳುಕೂ ಇದ್ದಿತು. ಆಗಾಗ ದುಃಖವುಮ್ಮಳಿಸಿ ಅತ್ತದ್ದರಿಂದ ಅವನ ಗಂಟಲು ಕಟ್ಟಿ ನಾಲಿಗೆ ಒಣಗುತ್ತ ಬಂದಿದ್ದಿತು. ಯುವಕ ರೂಪಿ ವೆಂಕಟೇಶನು ಅವನ ಹತ್ತಿರ ಬಂದು ಯಾರನ್ನು ಕರೆಯುತ್ತಿರುವೆಯೆಂದು ವಿಚಾರಿಸುತ್ತಾ ಆತ ಕರೆಯುತ್ತಿರುವ ಕೌಂಡಿಣ್ಯ ಎಂಬ ಯಾವ ವ್ಯಕ್ತಿಯೂ ಹತ್ತಿರದಲ್ಲಿ ಎಲ್ಲೂ ಇಲ್ಲವೆಂದು ತಿಳಿಸಿದನು. ವೃದ್ಧನಾದರೋ ಬಹುದುಃಖದಿಂದ ತಾನು ಸಾಯುವುದಕ್ಕೆ ಮುನ್ನ ತನ್ನ ದೂರದ ಆಶ್ರಮವನ್ನು ಸೇರಲು ನೆರವು ನೀಡಬೇಕೆಂದೂ, ಯಾವುದೇ ಧನ ಸಂಪತ್ತಿಲ್ಲದೆ ದರಿದ್ರನಾಗಿ, ಬಂಧುಬಾಂಧವರಿಲ್ಲದವನಾಗಿದ್ದರೂ ವೃದ್ಧಾಪ್ಯದಲ್ಲಿ ಯಾವುದಕ್ಕೂ ಕೈಲಾಗದಿರುವ ನಿಸ್ಸಹಾಯಕ ಸ್ಥಿತಿಯಲ್ಲಿಯೂ ದೇವರು ತನ್ನನ್ನು ಬದುಕುವ ಶಿಕ್ಷೆಗೆ ಗುರಿಮಾಡಿದ ಬಗ್ಗೆ

ಅಲವತ್ತುಕೊಂಡನು. ಆಗ ಸ್ವಾಮಿಯು ಹಾಸ್ಯಕ್ಕಾಗಿಯೋ ಎಂಬಂತೆ ಗುಳಿಬಿದ್ದ ಕಣ್ಣುಗಳ, ಉಡುಗಿದ ಕೈಕಾಲುಗಳ ಹಲ್ಲುಹೋಗಿ ಬೆನ್ನು ಬಾಗಿದ ಈ ಸ್ಥಿತಿಯಲ್ಲಿಯೂ ಮುದುಕನಿಗೆ ಇನ್ನೂ ಬದುಕಿರುವ ಆಪೇಕ್ಷೆಯಿದೆಯೇ ಎಂದು ಕೇಳಿದನು. ಮುದುಕನು ಉತ್ತರ ನೀಡುತ್ತ ತನಗೆ ಅಂತಹ ದುರಾಸೆಯೇನಿಲ್ಲವೆಂದೂ ಆ ದಿನದ ನೈಮಿತ್ತಿಕ ಕರ್ಮಗಳನ್ನು ಮುಗಿಸಬೇಕೆಂದೂ ಅಂದಿನ ಜ್ಯೋತಿಷ್ಟೋಮವನ್ನು ನಡೆಸುವ ದೇವತಾಕಾರ್ಯಗಳ ಅಪೇಕ್ಷೆ ಮಾತ್ರ ಇರುವುದೆಂದೂ ನುಡಿದನು. ಈ ಉತ್ತರವನ್ನು ಕೇಳಿದ ಸ್ವಾಮಿಯು ಆ ಮುದುಕನ ಕೈಹಿಡಿದು ನಡೆಸಿಕೊಂಡು ಹತ್ತಿರದಲ್ಲಿನ ಹೊಳೆಯ ಬಳಿ ಬಂದು ಮುದುಕನು ಆ ಕೊಳದಲ್ಲಿ ಸ್ನಾನಮಾಡಿದ ನಂತರ ತನ್ನ ಆಶ್ರಮಕ್ಕೆ ಕರೆದೊಯ್ಯುವುದಾಗಿ ಹೇಳಿದನು. ಅದರಂತೆ ಮುದುಕನು ಹೊಳೆಯಲ್ಲಿ ಸ್ನಾನಮಾಡಿ ಎದ್ದು ಹೊರಬರಲು ಹದಿನಾರು ವರ್ಷದ ಯುವಕನಂತಾದನು. ಆಗ ಸ್ವಾಮಿಯ ಸಹಸ್ರ ಶೀರ್ಷ ಸಹಸ್ರಾಕ್ಷ ಸಹಸ್ರಪಾದನಾಗಿ ಅವನಿಗೆ ಪ್ರತ್ಯಕ್ಷನಾಗಿ, ಆ ಮುದುಕನಾಗಿದ್ದ ಯುವಕನು ತನ್ನ ನಿತ್ಯ ನೈಮಿತ್ತಿಕ ದೈವಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗಬೇಕೆಂದೂ ತಾನು ಅವನಿಗೆ ಸಾಕಾಗುವಷ್ಟು ಸಂಪತ್ತನ್ನು ಅನುಗ್ರಹಿಸುವು ದಾಗಿಯೂ ವರವನ್ನು ನೀಡಿದನು. ಆಕಾಶದಲ್ಲಿ ಅಮರರು ನೆರೆದು ದೇವರ ಈ ಉದಾತ್ತ ಕಾರ್ಯರೀತಿಗೆ ಉಘೇ ಉಘೇ ಎನ್ನುತ್ತ ಪುಷ್ಪವರ್ಷ ಮಾಡಿದರು. ಸ್ವಾಮಿಯು ಅದೃಶ್ಯನಾದ. ಆಗ ದೇವತೆಗಳು ವೃದ್ಧನಾದ ಒಬ್ಬ ವ್ಯಕ್ತಿಯನ್ನು ಯುವಕನನ್ನಾಗಿ ಮಾಡಿದ ಆ ಹೊಳೆಯ ನೀರು ಕುಮಾರಧಾರಾ ತೀರ್ಥವೆಂದು ಪ್ರಸಿದ್ಧವಾಗಲೆಂದು ಹರಸಿದರು. ಇಲ್ಲಿ ಮೂರು ತಿಂಗಳು ಕಾಲ ತ್ರಿಕಾಲ ಸ್ನಾನಮಾಡುವವನು ತನ್ನ ಇಂದ್ರಿಯಗಳನ್ನು ಹತೋಟಿಯಲ್ಲಿ ಪಡೆದು, ಪಾಪಗಳನ್ನೆಲ್ಲ ಕಳೆದುಕೊಂಡು ವಿಷ್ಣುಪಾದವನ್ನು ಸೇರುವನು. - ಹೀಗೆಂದು ಹೇಳುತ್ತ ದೇವತೆಗಳು ಸಂತಸಭರಿತರಾಗಿ ತಮ್ಮ ಸ್ವಸ್ಥಳಗಳಿಗೆ ಹಿಂದಿರುಗಿದರು.

## 10. ಶಂಖಣನು ರಾಜ್ಯವನ್ನು ಮರಳಿ ಪಡೆದದ್ದು

ಸಂಕಾಸ್ಯಪುರದಲ್ಲಿ ಸೋಮವಂಶದ ಮಹಾಪರಾಕ್ರಮಿ ಶಂಖಣನು ರಾಜ್ಯಾಭಾರ ಮಾಡುತ್ತಿದ್ದನು. ಆತನು ತನಗೆ ಹಿರಿಯರಿಂದ ದತ್ತವಾದ ವಿಶಾಲವಾದ ಸಾಮ್ರಾಜ್ಯದ - (ಅದರಲ್ಲಿ ಅನೇಕ ಸಾಮಂತ ರಾಜಳಿದ್ದವು) - ರಾಜ್ಯಭಾರ ಮಾಡುತ್ತಿರಲು ಒಮ್ಮೆ ಕ್ಷೀಣಪುಣ್ಯನಾದ ಕಾರಣದಿಂದ ಸಾಮಂತರಾಜರು ಅವನನ್ನು ಪದಚ್ಯುತಗೊಳಿಸಿದರು. ಇದರಿಂದಾಗಿ ರಾಜನು ರಾಣಿ ಹಾಗೂ ಮಂತ್ರಿಗಳೊಡನೆ ದೇಶಾಂತರ ಹೊರಟವನಾಗಿ, ದಕ್ಷಿಣದಲ್ಲಿ ರಾಮಸೇತುವಿನವರೆಗೆ ಹೊರಟು ಅದರ ಬಳಿಯ ಪವಿತ್ರ ಸಮುದ್ರ ಜಲದಲ್ಲಿ ಸ್ನಾನ ಮಾಡಿದನು. ನಂತರ ಹಿಂದಿರುಗಿ ಬರುತ್ತ ಸುವರ್ಣಮುಖಿ ನದಿಯಲ್ಲಿಯೂ ಅದರ ಉತ್ತರದ ಪದ್ಮ ಸರೋವರದಲ್ಲಿಯೂ ಸ್ನಾನ ಮಾಡಿದನು. ಇಲ್ಲಿ ಹಲವು ದಿನಗಳ ಕಾಲ ಪಾಳಯ ಹಾಕಿ ದೈನಂದಿನ ದೇವ ಕಾರ್ಯಗಳನ್ನು ಭಕ್ತಿಯಿಂದ ಮಾಡುತ್ತ ಬಹುದುಃಖಿತನಾಗಿ 'ನಾನು ನನ್ನ ರಾಜ್ಯವನ್ನು ಕಳೆದುಕೊಂಡು ಅರಣ್ಯ ಸಂಚಾರಿ ಆಗಿದ್ದೇನೆ. ನನ್ನ ಸ್ಥಾನ ಅಧಿಕಾರಗಳನ್ನು ನನ್ನ ಶತ್ರುಗಳು ಅಪಹರಿಸಿದ್ದು, ಈ ಪಾರತಂತ್ಯ ನನಗೆ ಸಾವಿಗಿಂತಲೂ ಹೆಚ್ಚಿನ ನೋವನ್ನುಂಟುಮಾಡುತ್ತಿದ್ದು, ನಾನು ಎಲ್ಲಿ ಹೋಗಿ ಯಾರ ಶರಣು ಪಡೆಯಲಿ - ದಾರಿಯಾವುದು' ಎಂದು ಯೋಚಿಸುತ್ತ ಒಂದು ದಿನ ನಿದ್ದೆ ಹೋದನು.

ಅವನಿಗೆ ಒಂದು ಅಶರೀರವಾಣಿ ಕೇಳಿಸಿತು. "ಓ! ದೊರೆಯೇ ವ್ಯಥೆ ಪಡದೆ ಧೈರ್ಯವನ್ನು ಕೈಹಿಡಿ. ಇಲ್ಲಿಗೆ ಉತ್ತರಕ್ಕೆ ಒಂದು ಕ್ರೋಷದ (ಎರಡುವರೆ ಮೈಲಿ) ದೂರದಲ್ಲಿ ಭೂಮಿಯಲ್ಲೆಲ್ಲ ಅತ್ಯಂತ ಪವಿತ್ರವಾದ ವೆಂಕಟಾಚಲ ಇದೆ. ಆ ಪರ್ವತದ ಮೇಲೆ ಆಶ್ರಿತರ ಕಾಮಧೇನುವು ಆರ್ತಿಗಳ ಕಲ್ಪವೃಕ್ಷವೂ, ಬಯಸಿದವರ ಚಿಂತಾಮಣಿಯೂ ಆದ ಕಮಲಾಪತಿಯ ಸನ್ನಿಧಿಯಿದೆ. ಆತನ ನಿವಾಸವಿರುವಲ್ಲಿಯೇ ಕೆಂಪುತಾವರೆ ಗಳಿಂದ ತುಂಬಿದ ಪವಿತ್ರ ಜಲದ ಸ್ವಾಮಿ ಪುಷ್ಕರಿಣಿಯಿದೆ. ಅಲ್ಲಿಗೆ ಪಶ್ಚಿಮದಲ್ಲಿ ಒಂದುಹುತ್ತವಿದೆ. ಅಲ್ಲಿಂದ ಮುಂದೆ ಹೋಗಿ ಒಂದು ಗುಡಿಸಲನ್ನು ನಿನಗಾಗಿ ಹಾಕಿ ಕೊಂಡು ಅಲ್ಲಿಯೇ ಇದ್ದುಕೊಂಡು ಪುಷ್ಕರಿಣಿಯಲ್ಲಿ ಮೂರು ಬಾರಿ ಸ್ನಾನಮಾಡು, ಅಲ್ಲಿನ ಹುತ್ತದಲ್ಲಿಯೇ ನಾಲ್ಕು ಕೈಗಳನ್ನು ಹೊಂದಿದ ಶ್ರೀ ವೆಂಕಟೇಶ್ವರಸ್ವಾಮಿ ಇದ್ದಾನೆ. ಶಂಖಚಕ್ರಾಂಕಿತನಾದ ಸ್ವಾಮಿ, ವರದ ಹಸ್ತನಾದ ಹರಿಯಾಗಿದ್ದು, ಒಂದೇ ಮನಸ್ಸಿನಿಂದ ಅವನನ್ನು ಧ್ಯಾನಿಸು. ಆರು ತಿಂಗಳಲ್ಲಿ ನಿನ್ನ ಸಾಮ್ರಾಜ್ಯ ನಿನಗೆ ಪುನಃ ದೊರೆಯುತ್ತದೆ. "

ಅಶರೀರವಾಣಿಯನ್ನು ಕೇಳಿ ಎಚ್ಚರಗೊಂಡ ಶಂಖಣನು ದುಃಖದೂರನಾಗಿ ಪವಿತ್ರವಾದ ಬೆಟ್ಟವನ್ನೇರಿದನು. ವಿವಿಧ ತರು ಲತೆಗಳಿಂದಲೂ, ಪ್ರಾಣಿಪಕ್ಷಿಗಳಿಂದಲೂ, ಪಕ್ಷಿ ಕೂಜನದಿಂದಲೂ, ಕಲರವ ದಿಂದಲೂ ಕೂಡಿದ ಆ ಗಿರಿಶಿಖರ ಕಾನನದಲ್ಲಿ ಸ್ವಾಮಿ ಪುಷ್ಕರಿಣಿಯನ್ನು ಕಂಡು ಆನಂದಿತನಾದನು. ಆ ತೀರ್ಥವು ಸ್ಪಟಿಕ ಶುದ್ಧವಾಗಿ ಮೀನು, ಆಮೆಗಳಿಂದಲೂ ವಿವಿಧ ಬಗೆಯ ಪುಷ್ಪಗಳಿಂದಲೂ ಕೂಡಿದ ಬಳ್ಳಿಗಳಿಂದಲೂ ತುಂಬಿದ್ದಿತು. ಅದರ ದಡದಲ್ಲಿ ಹಲವು ಬಗೆಯ ಹೂ ಹಣ್ಣುಗಳನ್ನು ಬಿಡುವ ಗಿಡ ಮರ ಬಳ್ಳಿಗಳಿದ್ದವು. ರಾಜನು ಅಲ್ಲಿ ಬಂದು ಗುಡಿಸಲನ್ನು ಹಾಕಿಕೊಂಡು ದಿನವೂ ಬೆಳಗ್ಗೆ ಮಧ್ಯಾಹ್ನ ಸಂಜೆಗಳಲ್ಲಿ ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನ ಮಾಡುತ್ತ ಸ್ವಾಮಿಯು ಧ್ಯಾನದಲ್ಲಿ ದಿನಕಳೆಯ ತೊಡಗಿದನು. ಹೀಗೆ ಆರು ತಿಂಗಳಾಯಿತು.

ಒಂದು ದಿನ ಸ್ವಾಮಿ ಪುಷ್ಕರಿಣಿಯ ಮಧ್ಯದಿಂದ ಒಂದು ವಿಮಾನವು ಮೇಲೇರಿ ಬಂದಿತು. ಅದರ ಕಾಂತಿಯು ಹಲವಾರು ಸೂರ್ಯರ ಕಾಂತಿಯನ್ನು ಒಟ್ಟು ಸೇರಿಸಿದಂತೆ ಇದ್ದು ಹತ್ತು ದಿಕ್ಕಿಗೂ ಹರಡಿತ್ತು. ಅದರಲ್ಲಿ ಸ್ವಾಮಿಯು ಶಂಖ, ಚಕ್ರ, ಗದಾಪಾಣಿಯಾಗಿ, ಶ್ರೀದೇವಿ ಭೂದೇವಿಯರೊಡನೆ ಭವ್ಯವಾಗಿ ನಿಂತಿದ್ದನು. ಹಿಂದೆಯೇ ಬ್ರಹ್ಮ ರುದ್ರ, ಇಂದ್ರ, ಮೊದಲಾದವರೂ, ದೇವತೆಗಳೂ, ವಿದ್ಯಾಧರರೂ, ಕಿನ್ನರ, ಕಿಂಪುರುಷ, ದಿಕ್ಪಾಲಕರು, ವಸುಗಳು, ಸಪ್ತಋಷಿಗಳು ಮೊದಲಾದವರೆಲ್ಲ ಆಕಾಶದಲ್ಲಿ ನೆರೆದು ಬಂದರು. ದೇವದುಂದುಭಿ ಮೊಳಗಿತು. ಭೇರಿ, ಮುರಜ, ಕಹಳೆ, ನಿಸ್ಸಾಳೆ, ಢಕ್ಕೆ, ಕೊಂಬು, ಢಮರುಗಳು ನಾದಗೈದವು. ಅಪ್ಸರೆಯರು ನಾಟ್ಯ ಮಾಡಿದರು. ದೇವತೆಗಳು ವೇದಮಂತ್ರಗಳಿಂದ ಸ್ವಾಮಿಯನ್ನು ಸ್ತುತಿಸಿದರು. ಎಲ್ಲವನ್ನೂ ಕಂಡ ಶಂಖಣ ನಿಗೆ ಭಕ್ತಿಯಿಂದ ನಡುಕ, ಪುಳಕವೇರಿ, ದೇವರ ಮುಂದೆ ಅಡ್ಡಬಿದ್ದ. ''ಓ! ದೇವ ದೇವ! ಜಗತ್ತನ್ನು ಸದಾ ಸರ್ವದಾ ರಕ್ಷಿಸಲು ಕಟಿಬದ್ಧನಾದ ಮಹಿಮನೆ! ಜಗನ್ನಾಥ! ದಯಾಸಾಗರನೆ! ನನ್ನ ರಾಜ್ಯ ಕೋಶಗಳನ್ನು ಶತ್ರುಗಳು ಆಕ್ರಮಿಸಿದ್ದು, ನಾನು ನಿರ್ಗತಿಕನಾದೆ. ವರದನೆ! ನನ್ನನ್ನು ಕಾಪಾಡು, ನನಗೆ ಯಜ್ಞಯಾಗಾದಿಗಳ ರಚನೆಯ ಶಾಸ್ತ್ರೀಯ ಪರಿಜ್ಞಾನವಿಲ್ಲ. ಧ್ಯಾನ ಪೂಜೆಗಳ ಪರಿಯನ್ನು ತಿಳಿದಿಲ್ಲ, ಆದರೆ ನಿನ್ನನ್ನು ಈ ರೂಪದಲ್ಲಿ ಕಂಡು ಧನ್ಯನಾದೆ ಸ್ವಾಮಿ!'' ಎಂದ. ಆಗ ಕಪ್ಪುಕಣ್ಣಿನ ಶ್ರಿಯಃಪತಿಯು ಹೀಗೆ ಹೇಳಿದ. ''ದುಃಖ ಪಡದಿರು ನಿನ್ನ ಭಕ್ತಿಗೆ ಮೆಚ್ಚಿ ನಿನಗೆ ಹಿಂದಿನ ರಾಜ್ಯವನ್ನು ಮತ್ತೆ ನೀಡಿದ್ದೇನೆ. ಸ್ವಾಮಿ ಪುಷ್ಕರಿಣಿಯಲ್ಲಿ ಯಾರೇ ಸ್ನಾನ ಮಾಡಿದರೂ ಸ್ವಾಮಿತ್ವವನ್ನು ಪಡೆಯುವರು. ಅವರಿಗೆಲ್ಲ ತಮ್ಮ ಭಕ್ತಿಭಾವಕ್ಕೆ ತಕ್ಕಂತೆ ಸ್ವಾಮಿತ್ವ ಲಭ್ಯವಾಗುವುದಾಗಿ, ಇತರರಿಗೆ ಇತರಕ್ಕೆ ಆಧೀನರಾಗಿರುವುದಿಲ್ಲ. ಹೇ! ರಾಜನೆ! ಹೋಗಿ ನಿನ್ನ ರಾಜ್ಯವನ್ನು ಪುನಃ ವಶಪಡಿಸಿಕೋ'' ಹೀಗೆಂದು ದೇವತೆಗಳ ಸಮಕ್ಷಮದಲ್ಲಿ ವರನೀಡಿದ ಸ್ವಾಮಿಯು ಅದೃಶ್ಯನಾದನು.

ನಂತರ ದೇವತೆಗಳು ನುಡಿದರು - ಪೂರ್ವಿಕರು ಸ್ವಾಮಿ ಪುಷ್ಕರಿಣಿ ಎಂದು ಈ ತೀರ್ಥಕ್ಕೆ ಹೆಸರಿಟ್ಟದ್ದು ಸಾರ್ಥಕವಾಗಿದೆ. ಸ್ವಾಮಿತ್ವ ಪ್ರಸಾದದ ಈ ತೀರ್ಥ ಅನ್ವರ್ಥಕನಾಮವಾಗಿದೆ. ಇದರ ದರ್ಶನ ಮಾತ್ರದಿಂದ ಪಾತಕ ನಾಶವಾಗಿ ಈ ಕ್ಷೇತ್ರದಲ್ಲಿ ನೆಲೆಸುವರು ಪವಿತ್ರರೂ ಅನುಗ್ರಹೀತರೂ ಆಗುವರು -ಹೀಗೆಂದು ಹೇಳುತ್ತಾ ಅವರೆಲ್ಲ ಹಿಂದಿರುಗಿದರು.

ಸಂತಸಗೊಂಡು ಶಂಖಣನು ತನ್ನ ಪತ್ನಿಯೊಡನೆ ಬೆಟ್ಟವನ್ನಿಳಿದು ತನ್ನ ರಾಜ್ಯದತ್ತ ಹಾಯ್ದು ಬಂದನು. ಈ ಮಧ್ಯದಲ್ಲಿ ಇವನನ್ನು ಪದಚ್ಯುತಗೊಳಿಸಿದ ರಾಜರು ಪರಸ್ಪರ ಅಸೂಯೆಯಿಂದಾಗಿ ತಮ್ಮ ತಮ್ಮಲ್ಲಿಯೇ ಏಕಾಧಿಕಾರಕ್ಕಾಗಿ ಹೊಡೆದಾಡಿ ಸರ್ವನಾಶವಾದರು. ಪ್ರಜೆಗಳು ಶಂಖಣನನ್ನು ಹುಡುಕಿ ರಾಜ್ಯವನ್ನು ಒಪ್ಪಿಸಲು ಕಾತರರಾದರು. ವಾರ್ತಾಹರರು ನಾಲ್ಕು ದಿಕ್ಕಿಗೆ ಹೊರಟರು. ಗೋದಾವರೀ ನದಿಯ ಬಳಿಯಲ್ಲಿ ಶಂಖಣನನ್ನು ಕಂಡ ದೂತರು ಶತ್ರುಗಳು ನಾಶವಾದದ್ದನ್ನು ತಿಳಿಸಿ ಅವನನ್ನು ಅವನ ಕಾಂಭೋಜ ರಾಜ್ಯಕ್ಕೆ ಕರೆತಂದರು. ಶ್ರೀನಿವಾಸನ ದಯೆಯಿಂದ ಶಂಖಣನು ರಾಜ್ಯವನ್ನು ಶಾಂತಿಯಿಂದ ಪರಿಪಾಲಿಸಿದನು.

## 11. ಆತ್ಮಾರಾಮನ ಐತಿಹ್ಯ

ಮಧ್ಯದೇಶದಲ್ಲಿ ದೇವ ಬ್ರಾಹ್ಮಣರ ಸೇವೆ ಮಾಡುತ್ತ ಪ್ರಸಿದ್ಧನಾದ ಬ್ರಾಹ್ಮಣನಿದ್ದನು.ಅವನ ತಂದೆಯೂ ಸಹ ಪ್ರಖ್ಯಾತ ವೇದವೇದಾಂತ ವಿದ್ವಾಂಸನಾಗಿದ್ದು ವಿಷ್ಣುವಿನ ಪರಮಭಕ್ತನಾಗಿದ್ದನು. ತಂದೆಯಂತೆಯೇ ಪುತ್ರನೂ ಸಹ ವಿದ್ಯಾವಿನಯ ಸಂಪನ್ನನಾಗಿದ್ದು ಹತ್ತಿರದಲ್ಲಿ ಬಂದವರಿಗೆಲ್ಲ ಪ್ರಿಯನಾಗುತ್ತಿದ್ದನು. ತಂದೆಯ ಮರಣಾನಂತರ ಆತ್ಮಾರಾಮನು ಪಿತ್ರಾರ್ಜಿತ ಆಸ್ತಿಯನ್ನೆಲ್ಲ

ಕ್ರಮೇಣ ಕಳೆದುಕೊಂಡು ದಟ್ಟ ದರಿದ್ರನಾಗಿ, ಹೀನಾಯ ಜೀವನವನ್ನು ನಡೆಸಬೇಕಾಯಿತು. ಅವನು ತನ್ನಲ್ಲಿಯೇ ಯೋಚಿಸತೊಡಗಿದ - ಉನ್ನತವಾದ ಸ್ಥಿತಿವಂತರ ಕುಲದಲ್ಲಿ ಹುಟ್ಟಿದ ನಾನು ವಿದ್ಯಾವಿನಯಗಳಿಂದ ಕೂಡಿದವನಾದರೂ ಹೀಗೇಕೆ ನಿರ್ಗತಿಕನಾಗಿ, ಅನ್ನಾನ್ನಪರದೇಸಿಯಾಗಿ ಮರ್ಯಾದಾಹೀನ ಕನಿಷ್ಠನಾಗಬೇಕಾಯಿತು? ನನಗೂ ನನ್ನ ಹಿರಿಯರಿಗೂ ಈಗ ಉಂಟಾಗಿರುವ ಈ ದುರವಸ್ಥೆ ಅವಮಾನಗಳನ್ನು ಹೇಗೆ ತಾನೆ ನಿವಾರಿಸಿಕೊಳ್ಳಲಿ? ಎಲ್ಲಿ ಹೋಗಿ ಯಾರನ್ನು ಆಶ್ರಯ ಹೊಂದೋಣದರಿಂದ ನೆಪೂರ್ವ ಉನ್ನತಿ, ಸಂಪತ್ತಿ ಪ್ರಾಪ್ತವಾಗಬಲ್ಲದು? ಹೀಗೆಂದು ಚಿಂತಾಗ್ರಸ್ತನಾಗಿ ಅವನು ವೆಂಕಟಾದ್ರಿಯತ್ತ ಬಂದು ಅದರ ತಪ್ಪಲಿನಲ್ಲಿದ್ದ ಕಪಿಲೇಶ್ವರಸ್ವಾಮಿ ಆಲಯದ ಕಪಿಲತೀರ್ಥದಲ್ಲಿ ಸ್ನಾನಮಾಡಿದ. ಇದರಿಂದಾಗಿ ಅವನ ಪೂರ್ವಪಾತಕಗಳು ನಾಶವಾಗಿ ಅವನು ಪರಿಶುದ್ಧನಾದನು. ಇದರಿಂದಾಗಿ ಏಕಾಂತ ಸ್ಥಳ ವೊಂದರಲ್ಲಿ ಕುಳಿತ ಅವನು ತನ್ನ ದುಃಸ್ಥಿತಿ ನಿವಾರಣೆಗಾಗಿ ಯೋಚಿಸತೊಡಗಿದನು.

ಈ ಸಮಯದಲ್ಲಿ ಹತ್ತಿರದ ಗುಹೆಯೊಂದರಲ್ಲಿ ಧ್ಯಾನಾಸಕ್ತನಾಗಿದ್ದ ಸನತ್ಕುಮಾರ ಯೋಗೀಂದ್ರನನ್ನು ಆತ್ಮಾರಾಮನು ಕಂಡನು. ಆ ಯೋಗಿಯಾದರೋ ಧ್ಯಾನಯೋಗದಲ್ಲಿ ಮಗ್ನನಾಗಿದ್ದು ಸೂರ್ಯನೋಪಾದಿಯಲ್ಲಿ ಕಂಗೊಳಿಸುತ್ತ ಇದ್ದನು. ಈತ ಸಾಮಾನ್ಯ ಮಾನವರಿಗೆ ಸಾಧಾರಣವಾಗಿ ದೊರೆಯುವ ಯೋಗಿಯಲ್ಲವೆಂದು ತಿಳಿದ ಆತ್ಮಾರಾಮನು ಈತನಿಗೆ ಇಡೀ ಜಗತ್ತು ದೃಷ್ಟಿ ಗೋಚರ ವಾಗುವುದರಿಂದ ಈತನಿಂದ ಏನಾದರೂ ಕಲಿಯಹುದೆಂದು ಯೋಚಿಸಿ, ದೀರ್ಘದಂಡ ನಮಸ್ಕಾರಮಾಡಿ ಹೇಳಿದ, 'ಸ್ವಾಮಿ ನನ್ನ ಪಾಪಕಾರ್ಯ ಗಳಿಂದಾಗಿ ನರಕಕ್ಕಿಂತಲೂ ಮಿಗಿಲಾದ ನೋವನ್ನು ಅನುಭವಿಸುತ್ತಿದ್ದೇನೆ. ಈ ದುಃಸ್ಥಿತಿಯಿಂದ ದೂರವಾಗುವ ದಾರಿಯನ್ನು ತಾವು ದಯವಿಟ್ಟು ತಿಳಿಸಬೇಕು. ನಾನು ನಿಮ್ಮ ಆಶ್ರಯ ಬೇಡುತ್ತೇನೆ.' ಆ ಮುನಿ ಬ್ರಾಹ್ಮಣನನ್ನು ಗಮನಿಸಿ ತುಸುಹೊತ್ತು ಯೋಚಿಸಿ, ಹೀಗೆಂದು ಹೇಳಿದರು. - ಎಚ್ಚರವಾಗು ಮಗುವೆ. ಹಿಂದಿನ ಜನ್ಮಗಳಲ್ಲಿ ನೀನು ಮಾಡಿದ ದುಷ್ಟಕರ್ಮಗಳು ಈಜನ್ಮದಲ್ಲಿ ಫಲನೀಡಲು ಸಿದ್ಧವಿರುವಾಗ ಈ ಪರಿಸ್ಥಿತಿಯಲ್ಲದೆ ಬೇರೆ ರೀತಿಯ ಪರಿಣಾಮಗಳಾಗಲು ಸಾಧ್ಯವಿಲ್ಲ. ನೀನು ಹಿಂದಿನ ಜನ್ಮಗಳಲ್ಲಿ ದಾನ ಕಾರ್ಯಗಳಿಗೆ ದೊಡ್ಡ ಅಡ್ಡಿಯಾಗುತ್ತ ದಾನಿಯನ್ನೂ ದಾನಪಾತ್ರರನ್ನೂ ಹೀಯಾಳಿಸುತ್ತಿದ್ದೆ. ಸುಜನರಿಗೆ ಅನೇಕರೀತಿಯಲ್ಲಿ ತೊಂದರೆ ಉಂಟಾಗಿಸುತ್ತ ನಡೆದಿದ್ದೆ. ಧನ, ಧಾನ್ಯ, ದನ, ಮನೆ - ಯಾವ ದಾನವನ್ನೂ ಮಾಡದೆ ಇಡೀ ಜೀವನವನ್ನು ಅಕ್ರಮ ಗಳಲ್ಲಿಯೇ ಕಳೆದಿದ್ದೆ. ಪಾಪಹರನೂ, ಮೋಕ್ಷದಾತನೂ ಆದ ಹರಿಯನ್ನು ನೆನೆಯದೆ ಹೋದೆ. ಹೀಗಾಗಿ ಈ ಜನ್ಮದಲ್ಲಿ ಸುಖ ಸಂತೋಷವನ್ನು ಹೇಗೆ ನಿರೀಕ್ಷಿಸಲಾದೀತು? ಆದರೂ ಒಂದು ಮಾರ್ಗವಿದೆ. ಕೇಳುವಂತಹ ನಾಗು.'

ಈ ಮಾತುಗಳನ್ನು ಕೇಳಿದ ಆತ್ಮಾರಾಮನು ಎರಡೂ ಕೈಜೋಡಿಸಿ ತುಂಬ ಗೌರವದಿಂದ ಮಾತನ್ನು ಮುಂದುವರಿಸಿದನು - 'ಹೇ ಮುನಿಕುಲೋತ್ತಮ! ದುಃಖಾಂಧಕಾರ ಸಾಗರದಲ್ಲಿ ಮುಳುಗಿದ ನನಗೆ ತಮ್ಮ ಮಾತು ಬೆಳಕಿನ ಕಿರಣದ ನೌಕೆಯ ಸದ್ದಿನಂತೆ ಕೇಳಿಬರುತ್ತಿದೆ. ಸೂರ್ಯತೇಜದಿಂದ ಒಣಗಿದ ಪೈರಿಗೆ ತಂಪು ನೀಡುವ ಮಳೆಯ ಹನಿಯಂತೆ, ದರಿದ್ರನಿಗೆ ಧನದಂತೆ, ರೋಗಿಗೆ ವೈದ್ಯನಂತೆ ನಿಮ್ಮ ಮಾತುಗಳಿವೆ. ನಿಮ್ಮನ್ನು ಇಲ್ಲಿ ಕಾಣುವಂತಾದ್ದು ನನ್ನ ಪುಣ್ಯ. ಅತಿ ಹೇಯವಾದ ಪಾಪಗಳನ್ನು ಮಾಡಿದ ನನ್ನನ್ನು ದಯವಿಟ್ಟು ರಕ್ಷಿಸಿರಿ.' ಈ ಮಾತು ಕೇಳಿದ ಸನತ್ಕುಮಾರಯೋಗೀಂದ್ರನು 'ನಿನಗೆ ದೊಡ್ಡ ರಹಸ್ಯವಾದ ತತ್ವಾರ್ಥವನ್ನು ತಿಳಿಹೇಳುವೆರದು ವಿವರಿಸಿದ.

ಹೀಗೆ ತತ್ವರಹಸ್ಯವನ್ನು ಯೋಗಿಯಿಂದ ತಿಳಿದವನಾದ ಆತ್ಮಾರಾಮನು ಆನಂದದಿಂದಲೂ ಅಚ್ಚರಿಯಿಂದಲೂ, ಭಯಗೌರವ ಗಳಿಂದಲೂ ತುಂಬಿದವನಾಗಿ ಅದೇ ಮಂತ್ರವನ್ನು ಜಪಿಸುತ್ತ, ತನ್ನ ಜನ್ಮ ಸಾರ್ಥಕ ಆಯಿತೆಂದು ತಿಳಿಯುತ್ತ ಅಲ್ಲಲ್ಲಿ ಹರಿಯುವ ಸುಂದರ ತೀರ್ಥಸ್ರೋತಗಳನ್ನು ನೋಡಿ ನಲಿಯುತ್ತ ಬೆಟ್ಟವನ್ನೇರಿ ಸ್ವಾಮಿಪುಷ್ಕರಿಣಿಯ ವರೆಗೆ ಬಂದನು. ಈ ಸ್ವಾಮಿಪುಷ್ಕರಿಣಿ ಯಾದರೋ ದೇವನದಿಗಳಾದ ಗಂಗಾ, ವಿರಜಾ ನದಿಗಳ ಸಮಾನವಾದ ಶೋಭೆಯಿಂದಲೂ, ಅಷ್ಟೇ ಪಾಪಹಾರಕ ಗುಣದಿಂದಲೂ ಕೂಡಿದ್ದು, ತನ್ನಲ್ಲಿ ಸ್ನಾನ ಮಾಡುವವರ ಅಖಂಡ ಪುಣ್ಯಕ್ಕೆ ಕಾರಣವಾಗಿದ್ದಿತು. ಆತ್ಮಾರಾಮನು ಈ ಸ್ವಾಮಿಪುಷ್ಕರಿಣಿಯಲ್ಲಿ ಶಾಸ್ತ್ರೋಕ್ತ ವಾಗಿ ಸ್ನಾನ ಮಾಡಿದವನಾಗಿ, ಒಂದು ಹೊಸ ಶೋಭೆಯನ್ನು ಹೊಂದಿದ ದೇಹವನ್ನು ಪಡೆದವನಾದನು. ಅನಂತರದಲ್ಲಿ ಸಮೀಪ

ದಲ್ಲಿಯೇ ಇದ್ದ ಸುಂದರವಾದ ಕಾನನದಲ್ಲಿ ಸಿದ್ಧರಿಂದ ರಕ್ಷಿತವಾದ ಗಗನಚುಂಬಿಯಾದ ಶಿಖರ ವಿಮಾನವನ್ನು ಕಂಡನು. ಅದು ವಜ್ರಖಚಿತವಾದ ಚಿನ್ನದ ಕಂಬಗಳುಳ್ಳ ಮಂಟಪಗಳಿಂದ ಗಂಧರ್ವನಗರದೊಡನೆ ಸ್ಪರ್ಧಿಸುತ್ತಿದೆಯೋ ಎಂಬಂತಿದ್ದು ಅಲ್ಲಿ ವಿವಿಧ ದೇವತೆಗಳು ಪೂಜೆಯಲ್ಲಿ, ಗಾನಸಂಕೀರ್ತನೆಯಲ್ಲಿ ತೊಡಗಿರುವುದನ್ನು ಕಂಡನು.

ಈ ಅದ್ಭುತವಾದ ವಿಮಾನವನ್ನು ಕಂಡು ಆತ್ಮಾರಾಮನಿಗೆ ದಿಗ್ಭ್ರಮೆಯಾಯಿತು. ಅವನು ಅದರ ಬಳಿಗೆ ಬಂದು ಆದರೊಳಗೆ ವಿರಾಜಮಾನನಾಗಿದ್ದ ಶಂಖಚಕ್ರಧಾರಿಯೂ ವರದಹಸ್ತನೂ, ಕಿರೀಟಧಾರಿಯೂ, ಪ್ರಕಾಶಮಾನವಾದ ಕರ್ಣಕುಂಡಲ ಶೋಭಿತನೂ, ಸರ್ವಾಭರಣ ಭೂಷಿತನೂ ವಕ್ಷಃಸ್ಥಲ ಲಕ್ಷ್ಮಿಯ ನಿವಾಸನಾದವನೂ ಆದ ಶ್ರೀ ವೆಂಕಟೇಶ್ವರಸ್ವಾಮಿಯನ್ನು ಕಂಡನು. ಪೀತಾಂಬರಧಾರಿಯಾದ ಸ್ವಾಮಿಯ ನೇತ್ರಗಳು ಕಮಲಪುಷ್ಪದಂತೆ ಅರಳಿದ್ದು ಸಾವಿರಾರು ಕಂದರ್ಪರನ್ನು ಮೀರಿಸಿದ ಸೌಂದರ್ಯದ ದೇಹದ ಕಾಂತಿಯಿಂದ ಶ್ರೀದೇವಿಭೂದೇವಿಯರೊಡನೆ ಇದ್ದನು. ಬ್ರಹ್ಮಶಿವರುಗಳು ಜಗತ್ತಿನ ಏಕೈಕ ಶರಣ್ಯವೆಂದು ಸ್ತುತಿಸುತ್ತಿದ್ದರು.

ಇಂತಹ ಶ್ರೀ ವೆಂಕಟೇಶನಿಗೆ ಆತ್ಮಾರಾಮನು ವಿನಯದಿಂದ ದಿಂಡುರುಳಿ ಎದ್ದು ನಿಂತು ಅಂಜಲೀ ಬದ್ಧನಾಗಿ ಹೇಳಿದ - ಸರ್ವಾಂತರ್ಯಾಮಿಯಾದ ಸರ್ವಶಕ್ತನೇ ನಿನಗೆ ನಮನ - ಹೀಗೆಂದು ಹೇಳಿ ಮಾತು ಬರದವನಾಗಿ ಸರ್ವಜ್ಞನಾದ ಸ್ವಾಮಿಯ ಮುಂದೆ ನತಮಸ್ತಕನಾಗಿ ನಿಂತ ಆತ್ಮಾರಾಮನನ್ನು ಕುರಿತು ಸ್ವಾಮಿಯು ಹೀಗೆಂದನು - 'ಭೀತನಾಗದಿರು, ದುಃಖಿಸದಿರು, ನೀನು ವ್ಯೂಹ ಲಕ್ಷ್ಮಿಯನ್ನು ಜಾಗೃತಗೊಳಿಸಿರುವೆಯಾಗಿ ನಿನ್ನ ಎಲ್ಲ ಪಾಪಗಳೂ ಪರಿಹಾರವಾಗಿವೆ. ಸಕಲ ಸಮೃದ್ಧಿ ಉಂಟಾಗುವ ವರವನ್ನೂ ನೀಡಲಾಗಿದೆ. ದೀರ್ಘಾಯಸ್ಸು, ಆರೋಗ್ಯಗಳನ್ನು ನೀಡಲಾಗಿದೆ. ಬಹುಕಾಲ ನೀನು ಸುಖವಾಗಿರು.' ದೇವರ ಮಂದಹಾಸಭರಿತ ಮಾತುಗಳನ್ನು ಸವಿದ ಆತ್ಮಾರಾಮನು ಸಾಷ್ಟಾಂಗ ನಮಸ್ಕಾರ ಮಾಡಿದನು. ಎದ್ದು ನೋಡಲು ಸ್ವಾಮಿಯೂ ವಿಮಾನವೂ,ಅದೆಲ್ಲ ಇದ್ದ ಕಾನನವೂ ಕಣ್ಮರೆಯಾಗಿದ್ದವು. ಇದರಿಂದಾಗಿ ಸ್ವಾಮಿಪುಷ್ಕರಿಣಿಗೆ ಹಿಂದಿರುಗಿದ ಆತ್ಮಾರಾಮನು ಇದುವರೆಗೆ ನಡೆದದ್ದು ಕನಸೋ, ಭ್ರಮೆಯೋ, ಪವಾಡವೋ, ದೇವರ ಅನುಗ್ರಹವೋ ತಿಳಿಯದವನಾಗಿ, ಓ ದೇವರೇ! ಇದು ಕನಸೋ ನನಸೋ ತಿಳಿಯದವನಾಗಿರುವೆ. ಆದರೂ ನಿನ್ನ ಕೃಪೆಯ ಬಲದಿಂದ ನನಸೆಂದೇ ನಂಬುವೆ, ಎಂದು ನಿರ್ಧರಿಸಿದನು. ನಂತರದಲ್ಲಿ ಬೆಟ್ಟವನ್ನಿಳಿದು ವೆಂಕಟಾದ್ರಿಯ ಬಳಿಯೇ ಮನೆ ಮಾಡಿಕೊಂಡು ಬಹುಕಾಲ ಸುಖ ಸಂತಸಗಳಿಂದ ಬಾಳಿದನು.

## 12. ಹದಿನೇಳು ತೀರ್ಥ ಮಾಹಾತ್ಮೆ

ಕಪಿಲ ತೀರ್ಥದೊಡನೆ ಮೊದಲಾಗುವ ವೆಂಕಟಾದ್ರಿಯ ಹದಿನೇಳು ತೀರ್ಥಗಳ ಮಾಹಾತ್ಮೆಯನ್ನು ಮುನಿಗಳಿಗೆ ಸೂತನು ಹೇಳಲುಪಕ್ರಮಿಸಿದನು.

**1. *ಕಪಿಲತೀರ್ಥ:*** ಮೊದಲಿಗೆ ಪಾತಾಳ ಲೋಕದಲ್ಲಿ ಕಪಿಲ ಮಹರ್ಷಿಯು ಪೂಜೆಮಾಡಿದ ಕಪಿಲೇಶ್ವರಸ್ವಾಮಿಯು ಲಿಂಗ ರೂಪದಲ್ಲಿ ಬೆಟ್ಟದ ತಪ್ಪಲಿನಲ್ಲಿ ಇದ್ದು, ಯಾವುದೋ ಕಾರಣಕ್ಕೆ ಒಮ್ಮೆ ಪಾತಾಳದಲ್ಲಿದ್ದ ಈ ಲಿಂಗವು ಭೂಮಿಯನ್ನು ಸೀಳಿಕೊಂಡು ಮೇಲೆ ಬಂದಾಗ, ಋಷಿಗಳು ಇದೇ ರೂಪದಲ್ಲಿ ಇಲ್ಲಿಯೇ ಇರಬೇಕೆಂದು ಬೇಡಿದ್ದರಿಂದ ಈ ರೂಪ ಇಲ್ಲಿಯೇ ಸ್ಥಿರವಾಯಿತು. ಇದರ ಮುಂದೆ ಭೂಮಿಯನ್ನು ಸೀಳಿಕೊಂಡು ಕಪಿಲ ಧೇನುವು ನಂತರ ಬಂದಿತು. ಈ ಕಪಿಲಧೇನು ಬಂದದ್ದರಿಂದ ಉಂಟಾದ ಹಳ್ಳದಲ್ಲಿ ಗಂಗೆಯು ನೆಲೆಸಿದ್ದು ಕಪಿಲತೀರ್ಥವಾಗಿ ಸರ್ವಪಾಪಹರವೆಂದು ಪ್ರಸಿದ್ಧವಾಗಿದೆ.

**2. *ಶಕ್ರತೀರ್ಥ:*** ಅಹಲ್ಯಾದೃಷ್ಟಾಂತದಲ್ಲಿ ಗೌತಮ ಶಾಪಗ್ರಸ್ತನಾದ ಇಂದ್ರನು ಸ್ನಾನಮಾಡಿ ಪುನೀತನಾದ ತೀರ್ಥವೇ ಕಪಿಲತೀರ್ಥದ ಮೇಲಿರುವ ಶಕ್ರತೀರ್ಥವೆಂದು ಪ್ರಸಿದ್ಧವಾಗಿರುವ ತೀರ್ಥವಾಗಿದೆ.

**3. *ವಿಶ್ವಕ್ಸೇನ ಸರಸ್:*** ವರುಣ ಪುತ್ರನಾದ ವಿಶ್ವಕ್ಸೇನನು ತಪಸ್ಸುಮಾಡಿ ವಿಷ್ಣುವಿನಂತಹ ದಿವ್ಯ ದೇಹವನ್ನು ಪಡೆದು ವಿಷ್ಣುವಿನ ಪರಿವಾರದ ಸೇನಾಪತಿಯಾಗುವ ವರವನ್ನು ಪಡೆದ ಸ್ಥಳವಿದು. ಶಕ್ರತೀರ್ಥದ ಮೇಲುಭಾಗದ ಬೆಟ್ಟದಲ್ಲಿದೆ

**4-8. *ಪಂಚಾಯುಧ ತೀರ್ಥ:*** ವಿಶ್ವಕ್ಸೇನ ತೀರ್ಥದಿಂದ ಮೇಲುಗಡೆ ಪರ್ವತದಲ್ಲಿ ವಿಷ್ಣುವಿನ ಪಂಚಾಯುಧಗಳಾದ ಶಂಖ. ಚಕ್ರ, ಗದಾ, ಶಾರ್ಙ್ಗ, ನಂದಕಗಳ ಹೆಸರು ಪಡೆದ ಐದು ತೀರ್ಥಗಳಿವೆ.

**9. *ಅಗ್ನಿ ಕುಂಡ ತೀರ್ಥ:*** ಪಂಚಾಯುಧ ತೀರ್ಥಗಳಿಂದ ಮೇಲೆ ಇರುವ ಈ ತೀರ್ಥವನ್ನು ತಲುಪುವುದು ಸಾಧ್ಯವಿಲ್ಲ.

**10. *ಬ್ರಹ್ಮತೀರ್ಥ:*** ಅಗ್ನಿಕುಂಡ ತೀರ್ಥದ ಬಳಿಯಲ್ಲಿ ಮೇಲಕ್ಕೆ ಇರುವುದು.

**11-17. *ಸಪ್ತರ್ಷಿ ತೀರ್ಥ:*** ಬ್ರಹ್ಮತೀರ್ಥದ ಬಳಿಯಿರುವ ಸಪ್ತರ್ಷಿ ತೀರ್ಥದಲ್ಲಿ ಹಲವಾರು ಶ್ರೇಷ್ಠತೆಗಳು ಮನೆ ಮಾಡಿವೆ. ಇವುಗಳಲ್ಲಿ ಮೊದಲನೆಯದು ಅದಕ್ಕಿಂತ ಹಿಂದೆ ಹೇಳಿದ ಹತ್ತು ತೀರ್ಥಗಳ ಒಟ್ಟು ಮೊತ್ತದ ಹತ್ತು ಪಟ್ಟು ಹೆಚ್ಚುಮಹತ್ವ ಪಡೆದಿದೆ. ಜೊತೆಗೇ ಅನುಕ್ರಮವಾಗಿ ಒಂದೊಂದೂ ಹಿಂದಿನ ತೀರ್ಥಗಳ ಹತ್ತು ಪಟ್ಟು ಹೆಚ್ಚು ಮಹಿಮೆ ಹೊಂದಿದವುಗಳಾಗಿವೆ.

## 13. ತೀರ್ಥಗಳ ಐತಿಹ್ಯಗಳು

ಸೂತನು ತನ್ನ ಮಾತು ಮುಂದುವರೆಸಿದ - ಒಂದೊಮ್ಮೆ ಒಬ್ಬಾನೊಬ್ಬ ಬ್ರಾಹ್ಮಣನು ತೀರ್ಥಯಾತ್ರೆ ಮಾಡುವುದಾಗಿ ನಿಶ್ಚಯಿಸಿದಾಗ ಅಂದಿನ ರಾತ್ರಿ ಅವನ ಕನಸಿನಲ್ಲಿ ನಾರಾಯಣನು ಕಾಣಿಸಿಕೊಂಡು ಆತನ ತೀರ್ಥಯಾತ್ರೆಗೆ ಕಾರಣವನ್ನು ವಿಚಾರಿಸಿ ಹೀಗೆಂದು ಅಪ್ಪಣೆಕೊಟ್ಟ - ಇಲ್ಲಿರುವ ಪುಷ್ಕರ ಶೈಲದ ಮೇಲೆ ಹದಿನೇಳು ಉತ್ತಮ ತೀರ್ಥಗಳಿದ್ದು ಅವುಗಳಲ್ಲಿ ಕಪಿಲ ಸರಸ್ಸು ಅತಿ ಪವಿತ್ರ. ಈ ಹದಿನೇಳು ತೀರ್ಥಗಳಲ್ಲಿಯೂ ಶಾಸ್ತ್ರೋಕ್ತ ರೀತಿಯಲ್ಲಿ ಸ್ನಾನಮಾಡುವುದರಿಂದ ಭೂಮಿಯ ಮೇಲಿನ ಎಲ್ಲ ತೀರ್ಥ ಕ್ಷೇತ್ರಗಳಲ್ಲಿ ಸ್ನಾನ ಮಾಡಿದ ಪುಣ್ಯ ಸಂಪಾದನೆ ಆಗುತ್ತದೆ. ದೇವರ ಮಾತು ಕೇಳಿದ ಬ್ರಾಹ್ಮಣನು ತಾನು ಮಾಡಬೇಕೆಂದಿದ್ದ ತೀರ್ಥ ಯಾತ್ರೆಯ ಯೋಚನೆ ಬಿಟ್ಟುಕೊಟ್ಟು ವೆಂಕಟಾಚಲಕ್ಕೆ ಆಗಮಿಸಿ ಇಲ್ಲಿನ ಹದಿನೇಳು ತೀರ್ಥಗಳಲ್ಲಿ ಸ್ನಾನ ಮಾಡುವುದರಿಂದದೇವರು ಹೇಳಿದಂತೆಯೇ ಫಲವನ್ನು ಪಡೆದನು ಎಂದು ಕೇಳಿದ್ದೇನೆ. ಈ ಹರಿಗಿರಿಯಲ್ಲಿ ಮೂರು ಲೋಕಗಳಲ್ಲಿನ ಮೂರುವರೆಕೋಟಿ ತೀರ್ಥ ಗಳೂ ಉಪಸ್ಥಿತವಾಗಿದೆ. ಈ ಪವಿತ್ರ ತೀರ್ಥಗಳಿಂದಲೂ, ಪವಿತ್ರ ಸ್ಥಳಗಳಿಂದಲೂ ಕೂಡಿದ ಈ ವೆಂಕಟಗಿರಿಯ ಪ್ರದಕ್ಷಿಣೆ ಮಾಡುವುದ ರಿಂದ ಇಡೀ ಜಗತ್ತನ್ನು ಪ್ರದಕ್ಷಿಣೆ ಮಾಡಿದಷ್ಟು ಪುಣ್ಯ ಫಲವುಂಟು. ವೆಂಕಟಾಚಲ ಶಿಖರಾಗ್ರವನ್ನು ನೋಡುವುದರಿಂದಮಾತ್ರವೇ ಇಡೀ ತೀರ್ಥಯಾತ್ರಾಫಲವನ್ನು ಬಲರಾಮನು ಪಡೆದನೆಂದು ಕೇಳಿದ್ದೇನೆ.

### 1. ಪಾಂಡವ ತೀರ್ಥ ಮಹಾತ್ಮೆ:

ಕೃಷ್ಣನ ಸಲಹೆಯಂತೆ ಪಾಂಡವರೈವರೂ ವೆಂಕಟಾಚಲಕ್ಕೆ ಆಗಮಿಸಿ ಒಂದು ವರ್ಷ ಇಲ್ಲಿದ್ದರು. ಇಲ್ಲಿ ಕ್ಷೇತ್ರಪಾಲ ದೇವತೆ ಯಿಂದ ರಕ್ಷಿಸಲ್ಪಟ್ಟ ಒಂದು ತೀರ್ಥದ ನೀರನ್ನು ಸ್ನಾನಕ್ಕೆ, ಅಡಿಗೆಗೆ, ಕುಡಿಯಲು ಬಳಸುತ್ತಿದ್ದರು. ವರ್ಷದ ಕೊನೆಯಲ್ಲಿ ಒಂದುದಿನ ಧರ್ಮರಾಯ ತಮ್ಮ ಎಲ್ಲ ಪಾಪಗಳು ನಾಶವಾಗಿರುವುದಾಗಿ ಕನಸುಕಂಡ. ತಮ್ಮ ರಾಜ್ಯವು ಮರಳಿ ದೊರೆಯುವಂತೆ ಯುದ್ಧ ಜಯ ಲಭಿಸು ವಷ್ಟು ಪುಣ್ಯಆರ್ಜಿತವಾಗಿದೆಂದೂ ಅಲ್ಲೇ ತಿಳಿದನು. ಆವರು ಬಳಿಯಲ್ಲಿದ್ದು ಬಳಸುತ್ತಿದ್ದ ತೀರ್ಥವೇ ಪಾಂಡವತೀರ್ಥವಾಯಿತು.

### 2. ಜರಾಹರ ಮತ್ತಿತರ ತೀರ್ಥಗಳು:

ಸ್ವಾಮಿಪುಷ್ಕರಿಣಿಯ ಪೂರ್ವಭಾಗದಲ್ಲಿನ 22 ಬಾಣಗಳ ಅಂತರ ದಲ್ಲಿಯೇ ಚಿಂತಾಮಣಿಗಿರಿಯಲ್ಲಿನ ಗುಹೆಗಳಲ್ಲಿ ಜರಾಹರತೀರ್ಥ, ವಲಿಘ್ನತೀರ್ಥ, ರಾಸಾಯನತೀರ್ಥ ಮೊದಲಾದವಿವೆ. ಆದರೆ ಇವೆಲ್ಲ ದೈವಮಾಯೆಯಿಂದ ಆವರಿಸಲ್ಪಟ್ಟಿದೆ. ದೇವತೆಗಳೂ ಈ ಬಹುಸುಂದರ ತೀರ್ಥಗಳನ್ನು ನೋಡಿಲ್ಲವೆನ್ನುವರು.

ಕನಕಾಚಲದಲ್ಲಿ ಅಷ್ಟವಿಧವಾದ ಲೋಹಗಳಿದ್ದು, ವಿವಿಧ ಯುಗಗಳಲ್ಲಿ ತಮ್ಮ ಶ್ರೇಷ್ಠತೆಯಿಂದ ಪ್ರಸಿದ್ಧವಾಗಿದೆ. ಭಕ್ತಿಯಿದ ಬೆಟ್ಟವನ್ನೇರಿದಲ್ಲಿ ಕಾಲಿಗೆ ಬಲಬರುವುದು. ಪಂಗುಗಳು ಗಿರಿಯನ್ನು ಲಂಘಿಸುವಂತಹವಾಗುವರು. ಕುರುಡರಿಗೆ ಸುಂದರವಾದ

ದೃಷ್ಟಿಶಕ್ತಿಯುಳ್ಳ ಕಣ್ಣುಗಳು ಬಂದಾವು. ವಂಧ್ಯೆಯರಿಗೆ ಸಂತಾನ ಪ್ರಾಪ್ತಿಯಾಗುವುದು. ದರಿದ್ರರಿಗೆ ಸಂಪತ್ತು ದೊರೆಯುವುದು. ಇವೆಲ್ಲವೂ ಬೆಟ್ಟದ ಬಗೆಗಿನ ಭಕ್ತಿಯಿಂದ ಮಾತ್ರವೇ ಸಾಧ್ಯ. ವೆಂಕಟಾದ್ರಿಯ ನಿಜವಾದ ಸ್ವಭಾವ,ಮಹಿಮೆ ಔನ್ನತ್ಯಗಳನ್ನು ಯಾವ ಮರ್ತ್ಯನು ತಾನೆ ತಿಳಿಯ ಬಲ್ಲ? ಇದನ್ನು ಹಲಬಾರಿ ಕನಕಾಚಲವೆಂದೂ ಹಲಬಾರಿ ಶ್ರೀನಿವಾಸಗಿರಿಯೆಂದೂ ಕರೆಯಲಾಗಿದೆ. ಇದು ಹಲವೊಮ್ಮೆ ಜ್ಞಾನವೇ ಗಡ್ಡೆಕಟ್ಟಿದ ಗುಡ್ಡವೊ ಎಂಬಂತೆ ಕಂಡುಬಂದರೆ ಹಲವು ಬಾರಿ ಮುತ್ತುರತ್ನಗಳ ಬೆಟ್ಟವೊ ಎಂಬಂತೆ ತೋರುವುದು. ಇನ್ನೂ ಕೆಲವೊಮ್ಮೆ ಸರ್ವ ಆಭರಣ ಭೂಷಿತನಾದ ಶ್ರೀನಿವಾಸನಂತೆಯೇ ಕಂಡು ಬರುತ್ತದೆ, ಹೀಗಾಗಿ ಈ ಪರ್ವತದ ಹಿರಿಮೆ ಗರಿಮೆಗಳನ್ನು ಬಲ್ಲವರಾರು!

ನಾನು ಕಂಡು ಹೇಳಿದ ಎಲ್ಲವನ್ನೂ ಹೇಳಲು ನನಗೆ ಬರುವುದಿಲ್ಲವಾಗಿ ಈಗ ಮನಸ್ಸಿಗೆ ತೋಚಿದಷ್ಟು ಹೇಳಿದ್ದೇನೆ.

## 14. ವೆಂಕಟಾದ್ರಿಗೆ ಶ್ರೀರಾಮನ ಆಗಮನ:

ವೆಂಕಟಾದ್ರಿಗೆ ಶ್ರೀರಾಮಚಂದ್ರನು ಬಂದದ್ದನ್ನು ಸೂತನು ಈ ರೀತಿ ವಿವರಿಸತೊಡಗಿದ.

ಸರ್ವಶಾಸ್ತ್ರಗಳನ್ನೂ ಸರ್ವ ಗ್ರಂಥಗಳನ್ನೂ ಓದಿ ತಿಳಿದವನೂ, ಸರ್ವಗುಣ ಸಂಪನ್ನನೂ, ತಾವರೆ ಕಣ್ಣಿನವನೂ ಆದ ಶ್ರೀರಾಮನು ದಶರಥನ ಮಗ. ರಾವಣನನ್ನು ಎದುರಿಸಲು ವಾನರ ಸೇನೆಯೊಡನೆ ಲಂಕೆಗೆ ಹೋಗುವ ಸಮಯದಲ್ಲಿ ಮಿತ್ರಿಯೊಡನೆ ಹಾಗೂ ಹನುಮಂತ ಸುಗ್ರೀವರೊಡನೆ ಇಲ್ಲಿ ತಂಗಿದ್ದ. ಪಂಪಾ ಸರೋವರದಲ್ಲಿ ಮಿಂದ ಬಳಿಕ ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನಮಾಡಿದ ಶ್ರೀರಾಮನು ರಾವಣ ನನ್ನು ಅವನೆಲ್ಲ ಹಿಂಬಾಲಕರೊಡನೆ ನಾಶಮಾಡಿದ. ಹಾಗಾಗಿ ನಿಮಗೆ ಮುಂದೆ ಹೇಳುವ ಕಥೆಯನ್ನು ನಾನು ಕೇಳಿದಂತೆಯೇ ಹೇಳುವೆ. ಗಮನವಿಟ್ಟು ಕೇಳುವಂತಹವರಾಗಿರಿ.

ಋಷ್ಯಮೂಕ ಪರ್ವತದಿಂದ ಶ್ರೀರಾಮಚಂದ್ರನು ವಾನರಸೇನೆಯೊಡನೆ ಶೇಷಾಚಲವನ್ನು ತಲುಪಿದಾಗ, ಅಲ್ಲಿ ಅನುಗ್ರಹೀತಳಾದ ಆಂಜನೇಯನ ತಾಯಿ ಅಂಜನಾದೇವಿ ಆತನನ್ನು ಕುರಿತು ಹೇಳಿದಳು. ‘ಓ ಆಜಾನು ಬಾಹುವೇ! ನಿನ್ನ ಆಗಮನ, ಆನುಗ್ರಹಗಳಿಗಾಗಿ ನಾನು, ಇತರ ಮುನಿ ಶ್ರೇಷ್ಠರೂ ಇಲ್ಲಿ ಬಹುಕಾಲದಿಂದ ತಪಸ್ಸು ಮಾಡುತ್ತಿದ್ದೇವೆಯಾಗಿ ನೀನು ನಮ್ಮೆಲ್ಲರನ್ನೂ ಅನುಗ್ರಹಿಸಿ, ನಿನ್ನ ಪ್ರಯಾಣವನ್ನು ಮುಂದುವರಿಸು’ ರಾವಣನನ್ನು ಮೂಲೋತ್ಪಾಟನ ಮಾಡುವ ತುರ್ತು ಪ್ರಯಾಣದಲ್ಲಿ ತೊಡಗಿದ್ದ ಶ್ರೀರಾಮನು ‘ನನ್ನ ಸಧ್ಯದ ಕಾರ್ಯಗೌರವದ ತುರ್ತು ಹೆಚ್ಚು ಎಂದು ನನ್ನನ್ನು ನೋಡಬಯಸುವ ಮುನಿಗಳನ್ನು ನನ್ನ ತಿರುಗು ಪ್ರಯಾಣದಲ್ಲಿ ನೋಡಿ ಮಾತನಾಡಿಸುವೆ’ ಎಂದಾಗ, ಹನುಮಂತನು ‘ವಾನರರೆಲ್ಲ ಬಿಡುವಿಲ್ಲದೆ ನಡೆದು ಆಯಾಸ ಪಟ್ಟಿದ್ದಾರೆ. ಹತ್ತಿರದಲ್ಲಿಯೇ ಎಲ್ಲಿಯಾದರೂ ವಿಶ್ರಾಂತಿಗಾಗಿ ನಿಲ್ಲಬೇಕಾಗುವುದು. ಈ ಬೆಟ್ಟ ಅಂಜನಗಿರಿಯೆಂದು ಪ್ರಸಿದ್ಧವಾಗಿದ್ದು ನಮ್ಮ ದಾರಿಯಲ್ಲಿಯೇ ಇದೆ ಹಾಗೂ ಇಲ್ಲಿ ವಿಶಾಲ ನೆರಳನ್ನು ನೀಡುವ ದೊಡ್ಡ ದೊಡ್ಡ ಮರಗಳೂ, ನೀರಿನ ಝರಿಗಳೂ, ಜಲಪಾತಗಳೂ, ಫಲ ಪುಷ್ಪಭರಿತವಾದ ಗಿಡಮರಗಳೂ, ಯಥೇಚ್ಛ ವಾಗಿವೆಯಾಗಿ ನಿನ್ನ ಅಭಿಪ್ರಾಯದಂತೆ ನಡೆಯಬಹುದು’ ಎಂದನು. ಹನುಮಂತನ ಮಾತಿಗೆ ಒಪ್ಪಿದ ರಾಮಚಂದ್ರನು ‘ನಿನ್ನ ಮಾತಿನಂತೆಯೇ ನಡೆಯುತ್ತೇನೆ. ಆದರೆ ನೀನು ಮಾತ್ರ ನಮ್ಮ ಕಾರ್ಯದಲ್ಲಿ ಮುಂದಿನ ಮಾರ್ಗಾನ್ವೇಷಕನಾಗಿ ಮುಂದುವರಿಯಬೇಕು’ ಎಂದನು. ಹೀಗೆಂದು ಹೇಳಿ ಶ್ರೀರಾಮನು ತನ್ನ ಹಿರಿದಾದ ವಾನರ ಸೈನ್ಯದೊಡನೆ ಗಿರಿ ವನರಾಜಿಯ ವೆಂಕಟಾದ್ರಿಯಲ್ಲಿ ಉಳಿದನು.

ಆ ಪರ್ವತದ ಉತ್ತರಭಾಗದಲ್ಲಿ ನಿರ್ಲೋಮನೆಂಬ ಬ್ರಾಹ್ಮಣನು ಬ್ರಹ್ಮಲೋಕವನ್ನು ಪಡೆಯುವ ಆಕಾಂಕ್ಷೆಯಿಂದ ಸ್ವಯಂಭುವನ್ನು ಕುರಿತು ತಪಸ್ಸು ಮಾಡುತ್ತಿದ್ದನು. ಬ್ರಹ್ಮನು ಅವನಿಗೆ ಪ್ರತ್ಯಕ್ಷನಾಗಿ ಸೌಮಿತ್ರಿಯೆಡನೆ ವೆಂಕಟಗಿರಿಗೆ ಆಗಮಿಸುವ ಶ್ರೀರಾಮಚಂದ್ರನ ದರ್ಶನ ಮಾಡಿಕೊಂಡನಂತರ ಅವನು ಬ್ರಹ್ಮಲೋಕವನ್ನು ಪ್ರವೇಶಿಸಲು ಅರ್ಹನಾಗುವನು ಎಂದು ವರ ನೀಡಿದ್ದನು. ಅದರಂತೆಯೇ ನಿರ್ಲೋಮನು ಶ್ರೀರಾಮನನ್ನು ಕಂಡು ಅವನಿಗೆ ಹೂ ಹಣ್ಣುಗಳನ್ನರ್ಪಿಸಿ, ‘ನಿನ್ನ ಮುಖಚಿತ್ರದರ್ಶನದಿಂದ ನನ್ನ ಜೀವನ ಅನುಗ್ರಹೀತವಾಯಿತು ಮತ್ತು ನನ್ನ ದೀರ್ಘತಪಸ್ಸು ಫಲನೀಡಿತು. ಹಾಗಾಗಿ ಎಲೆ ದೇವ, ನಾನು ಬ್ರಹ್ಮಲೋಕವನ್ನು

ಸೇರಲು ಅನುಮತಿ ನೀಡು' ಎಂದು ಕೇಳಿಕೊಂಡನು. ಅವನಿಗೆ ತಥಾಸ್ತು ಎಂದು ವರ ನೀಡಿದ ರಾಮನು ಬೆಟ್ಟವನ್ನು ಏರಿ ಮುಂದೆ ಬರುತ್ತ ಅಲ್ಲಿ ಹಲವು ಯಕ್ಷರಿಗೆ ಶಾಪವಿಮೋಚನೆಯಾಗುವಂತೆ ಅನುಗ್ರಹಿಸಿ, ಆಕಾಶಗಂಗೆಯ ಬಳಿಯಲ್ಲಿದ್ದ ಅಂಜನಾದೇವಿಯ ಆಶ್ರಮವನ್ನು ತಲುಪಿದನು. ಆಕೆಯ ಆದರ ಪೂರ್ವಕವಾದ ಉಪಚಾರವನ್ನು ಪಡೆದ ನಂತರ ಲಕ್ಷ್ಮಣ ಸಹಿತನಾದ ಶ್ರೀರಾಮನು ಹನುಮಂತ, ಸುಗ್ರೀವ, ಅಂಗದ ಮುಖ್ಯರಾದ ವಾನರರೊಂದಿಗೆ ಸರ್ವಕಾಮನೆಗಳ ಪೂರೈಸುವುದೂ, ಸರ್ವ ವಿಜಯವನ್ನು ನೀಡುವುದೂ ಆದ ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನ ಮಾಡಿದನಂತರ ಅಲ್ಲಿನ ಹಣ್ಣುಗಳನ್ನು ಸಂಗ್ರಹಿಸಿ ತನ್ನನ್ನು ಕಾಣಲೆಂದು ಬಂದ ಮುನಿಗಳಿಗೆ ನೀಡಿದನು. ಸ್ವಾಮಿ ಪುಷ್ಕರಿಣಿಯ ದಡದಲ್ಲಿ ಹನುಮಂತನು ವಾನರ ಪ್ರಮುಖರಿಗಾಗಿ ವಿಶ್ರಾಮಕ್ಕೆ ಪರ್ಣಶಾಲೆಗಳನ್ನು ರಚಿಸಿ ತಕ್ಕ ಪ್ರಮಾಣದಲ್ಲಿ ಹಣ್ಣು,ಹಂಪಲು ಗೆಡ್ಡೆ ಗೆಣಸುಗಳನ್ನು ಸಂಗ್ರಹಿಸಿಟ್ಟನು. ಇದರಿಂದ ತುಂಬ ಸಂತಸ ಹೊಂದಿದ ಶ್ರೀರಾಮ ಚಂದ್ರನು ಇಲ್ಲಿಯೇ ಕೆಲಕಾಲ ತಂಗಿದ್ದು ವಿಶ್ರಾಂತಿ ಪಡೆದನು. ವಾನರ ವೀರರೂ ವಿಶ್ರಾಂತಿ ಪಡೆದವರಾಗಿ ಕಾಡಿನ ಗೆಡ್ಡೆ ಗೆಣಸುಗಳು, ಜೇನು, ಹಣ್ಣುಗಳ ಆಹಾರವನ್ನುಂಡು ವಿಹರಿಸುತ್ತ ಹೊಸ ಉತ್ಸಾಹ ಪಡೆದರು. ಹಲವರು ಮೇಲು ಮೇಲೆ ನೀರಿನಲ್ಲಿ ಈಜಿದರೆ ಹಲವರು ತಳದ ವರೆಗೆ ಹೋಗುವಂತೆ ಮುಳುಗಿ ಎದ್ದರು. ಹಲವರು ನಡೆದಾಡಿದರೆ ಹಲವರು ನೆಗೆದಾಡಿದರು. ಉತ್ಸಾಹ ಭರಿತರಾದ ಅವರ ರಣಪರಾಕ್ರಮದ ಮಾತುಗಳು, ಈ ರೀತಿಯಲ್ಲಿ ನಡೆದವು 'ನಾವು ರಾವಣನನ್ನು ನೋಡಿದ ಕೂಡಲೇ ಸುಟ್ಟುಬಿಡುತ್ತೇವೆ. ಲಂಕೆಯನ್ನು ಅದರ ತಳಪಾಯದೊಡನೆ ಕಿತ್ತುಬಿಡುತ್ತೇವೆ. ಅಥವಾ ಲಂಕೆಯು ನಿಂತಿರುವ ತ್ರಿಕೂಟಾಚವಲನ್ನೇ ಮೇಲಕ್ಕೆತ್ತಿಬಿಡುತ್ತೇವೆ. ಸಮುದ್ರವನ್ನು ಲಂಘಿಸಿ, ಸೂರ್ಯಚಂದ್ರರನ್ನು ಎಳೆದು ಸೆಳೆದು ತರಬಲ್ಲೆವು, ರಾಮನಿಗಾಗಿ ಪರ್ವತಗಳ ಪುಡಿಮಾಡಿ ಪಾತಾಳಕ್ಕು ಇಳಿದು, ರಸಾತಲದಲ್ಲಿ ಅಡಗಿದರೂ ರಾವಣನನ್ನು ಹುಡುಕಿ ಹೊರದಬ್ಬುತ್ತೇವೆ. ಜಗತ್ತಿನಲ್ಲಿ ಕಳಂಕವೆಂಬಂತೆ ತಿರುಗುತ್ತಿರುವ ಈ ರಣಹೇಡಿ ರಾವಣನನ್ನು ನಾವೇ ನಾಶಮಾಡುತ್ತೇವೆ; ರಾಮ ಹೇಳಿದರೆ ಸಾಕು. - ಎಂದಿತ್ಯಾದಿಯಾಗಿ ಕೂಗಾಡುತ್ತ ನೂರುಕೋಟಿಗೂ ಹೆಚ್ಚಾದ ಸಂಖ್ಯೆಯ ವಾನರರು ವೆಂಕಟಾದ್ರಿಯಲ್ಲಿ ಸಂತಸೋತ್ಸಾಹಗಳಿಂದ ತಿರುಗಾಡ ತೊಡಗಿದರು.

### 15. ಶ್ರೀನಿವಾಸನು ಪರ್ವತ ಸೇರಿದ ಪುರಾಣ :

ಶ್ರೀನಿವಾಸನು ಈ ಬೆಟ್ಟದಲ್ಲಿ ಉಪಸ್ಥಿತನಾದುದರ ಕಥೆ ಬ್ರಹ್ಮಪುರಾಣದಲ್ಲಿ ಈ ರೀತಿಯಾಗಿ ವಿವರಿತವಾಗಿದೆ.

ಒಂದೊಮ್ಮೆ ವೈಕುಂಠವನ್ನು ಬಿಟ್ಟು ಬೇರೆಡೆ ವಾಸ ಮಾಡಲು ವಿಷ್ಣುವಿಗೆ ಅಪೇಕ್ಷೆ ಮೂಡಿತು. ಆಗ ನಾರದನನ್ನು, ತನ್ನ ಸ್ಥಳ ಪರಿವರ್ತನೆ ಹಾಗೂ ಲೀಲೆಗೆ ಒಂದು ಸೂಕ್ತ ಸ್ಥಳವನ್ನು ಸೂಚಿಸಲು ಕೇಳಿದ. ನಾರದನು ನಂತರದ ಕಾಲದಲ್ಲಿ ಶೇಷಾಚಲವು ಬಂದು ನೆಲೆಸಿದ ಸ್ಥಳವನ್ನು ಸೂಚಿಸಿದನು. ನಂತರದಲ್ಲಿ ಶೇಷ ವಾಯುಗಳು ಪರಸ್ಪರದಲ್ಲಿ ಬಲಾಧಿಕ್ಯರು ಯಾರೆಂಬ ವಿವಾದಕ್ಕೆ ತೊಡಗಿದರು. ಮೇರು ಪರ್ವತವನ್ನು ಸುತ್ತಿ ಹಿಡಿದ ಶೇಷನು ತನ್ನನ್ನು ಕದಲಿಸಲು ವಾಯುವಿಗೆ ಪಂಥಾಹ್ವಾನ ನೀಡಿದನು. ವಾಯು ಪೂರ್ವಪ್ರಯತ್ನ ಪಟ್ಟರೂ ಪರ್ವತವನ್ನು ಕದಲಿಸಲಾಗಲಿಲ್ಲ. ಕಡೆಗೆ ಉಸಿರಾಡಲು ಶೇಷನು ಬಾಯಿ ತೆರೆದೊಡನೆಯೇ ವಾಯುವು ಆ ತೆರೆದ ಬಾಯ ಮೂಲಕ ಶೇಷನ ದೇಹವನ್ನು ಪ್ರವೇಶಿಸಿ, ಬೆಟ್ಟದ ಒಂದು ಭಾಗವನ್ನು ಹೊರಬೀಳುವಂತೆ ಊದಿದನು. ಬಹುದೂರ ಆಕಾಶದಲ್ಲಿ ಹಾರಾಡಿದ ನಂತರ, ಮೇರುವು ವಾಯುವಿಗೆ ತನ್ನನ್ನು ಬಿಟ್ಟುಬಿಡಲು ಕೇಳಿಕೊಂಡಾಗ, ವಾಯುವು ಮೇರುವನ್ನು ಇಳಿಸಿಬಿಟ್ಟನು. ಅವಮಾನಿತನಾದ ಶೇಷನು ವಿಷ್ಣುವನ್ನು ಕುರಿತು ತಪಸ್ಸು ಮಾಡಲಾಗಿ ವಿಷ್ಣುವು ಪ್ರತ್ಯಕ್ಷನಾಗಿ ವರವನ್ನು ಬೇಡು ಎನ್ನಲು ಶೇಷನು ಪರ್ವತಾಕಾರ ತಳೆದು ತನ್ನ ಶಿಖರಾಗ್ರದಲ್ಲಿ ನೆಲೆಸಲು ಕೇಳಿಕೊಂಡನು. ಈ ಪರ್ವತವು ಶೇಷಾಚಲವೆಂದು ಪ್ರಸಿದ್ಧವಾಗಲಿ ಎಂದು ಬೇಡಿದನು. ಹಿಂದೆ ನಾರದನು ನೀಡಿದ ಸಲಹೆಯನ್ನು ನೆನೆದ ಶ್ರೀಹರಿಯು ಶೇಷಾಚಲದಲ್ಲಿ ನಿಲ್ಲಲು ನಿರ್ಧರಿಸಿದನು.

ಭವಿಷ್ಯೋತ್ತರ ಪುರಾಣವು ಮತ್ತೊಂದು ರೀತಿಯ ಐತಿಹ್ಯವನ್ನು ಹೇಳುವುದು. ಒಂದೊಮ್ಮೆ ಗಂಗಾತೀರದಲ್ಲಿ ಸೇರಿದ ಮುನಿಗಳೆಲ್ಲ ಒಂದು ಯಾಗವನ್ನು ನಡೆಸಲು ತೀರ್ಮಾನಿಸಿದರು. ಅವರಲ್ಲಿಗೆ ಬಂದ ನಾರದನು ಯಾವ ದೇವರ ಪ್ರೀತ್ಯರ್ಥವಾಗಿ ಈ ಯಾಗವನ್ನು ನಡೆಸಲು ಯೋಜಿಸಲಾಗಿದೆಯೆಂದು ಕೇಳಲು ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿಬಿದ್ದ ಋಷಿಗಳು ಭೃಗುವನ್ನು ಸಮಸ್ಯಾಪರಿಹಾರಕ್ಕಾಗಿ

ಪ್ರಾರ್ಥಿಸಿದರು. ಭೃಗುವು ಮೂರು ಮುಖ್ಯದೇವತೆಗಳನ್ನು ಪರೀಕ್ಷಿಸಿ ಯಾರು ಶ್ರೇಷ್ಠರೆಂದು ತಿಳಿಯಲು ಹೊರಟ. ಮೊದಲು ಬ್ರಹ್ಮಲೋಕಕ್ಕೆ ಹೋಗಿ ನೋಡಿದರೆ ಅಲ್ಲಿ ಬ್ರಹ್ಮನು ಒಂದು ಮುಖದಿಂದ ವೇದಪಾರಾಯಣ ಮಾಡುತ್ತಲೂ, ಒಂದು ಮುಖದಿಂದ ನಾರಾಯಣ ನಾಮಸ್ಮರಣೆಯನ್ನೂ, ಮೂರನೆಯ ಮುಖದಿಂದ ವಾಣಿಯನ್ನೂ, ನೋಡುವುದರಲ್ಲಿಯೂ ಮಗ್ನನಾಗಿ, ಭೃಗು ಬಂದದ್ದನ್ನು ಗಮನಿಸಲೇ ಇಲ್ಲ. ನಂತರ ಋಷಿಯು ಶಿವನನ್ನು ಕಾಣಲು ಹೊರಟಾಗ, ಶಿವನು ಪತ್ನಿಯೊಡನೆ ಆನಂದ ತಾಂಡವದಲ್ಲಿ ತೊಡಗಿದ್ದು ಭೃಗುವಿನ ಇರುವಿಕೆ ಆಗಮನಗಳ ಬಗ್ಗೆ ಪ್ರತಿಸ್ಪಂದಿ ಸಲೇ ಇಲ್ಲ. ಹೀಗೆಯೇ ಭೃಗುವು ವೈಕುಂಠಕ್ಕೆ ಹೋದಾಗಲೂ, ಹರಿಯು ಲಕ್ಷ್ಮಿಯೊಡನೆ ಸಲ್ಲಾಪದಲ್ಲಿದ್ದದ್ದನ್ನು ಕಂಡು ಕುಪಿತನಾಗಿ, ಹರಿಯ ವಕ್ಷವನ್ನು ಕಾಲಿನಿಂದ ಒದ್ದ. ಕೂಡಲೇ ಭೃಗುವಿನತ್ತ ತಿರುಗಿದ ಹರಿಯು ಅವನ ಪಾದೋಪಚಾರ ಮಾಡಿ ಕ್ಷೇಮ ಸಮಾಚಾರ ವಿಚಾರಿಸಿದ. ಇದರಿಂದ ಹರ್ಷಿತನಾದ ಭೃಗುವು ಹಿಂದಿರುಗಿ ಬಂದು ಋಷಿಗಳಿಗೆ ನಡೆದದ್ದನ್ನು ತಿಳಿಸಿ ಹರಿಯೇ ಸರ್ವೋತ್ತಮನೆಂದು ಅವನ ಪ್ರೀತ್ಯರ್ಥವಾಗಿಯೇ ಯಜ್ಞಕರ್ಮ ನಡೆಯಬೇಕೆಂದೂ ಸೂಚಿಸಿದ. ಹರಿಯ ವಕ್ಷಃಸ್ಥಳವನ್ನು ಭೃಗುವು ಕಾಲಿನಿಂದ ಒದೆದ ಕಾರಣದಿಂದಲೂ, ಅವನ ಉದ್ಧಟತನವನ್ನು ಶಿಕ್ಷಿಸದೆ ಅವನನ್ನು ಪುರಸ್ಕರಿಸಿದ ಹರಿಯ ವರ್ತನೆಯ ಕಾರಣದಿಂದಲೂ ಬೇಸರಗೊಂಡ ಲಕ್ಷ್ಮಿಯು ವೈಕುಂಠವನ್ನು ಬಿಟ್ಟು ಕರವೀರಪುರ ಅಥವಾ ಕೊಲ್ಲಾಪುರಕ್ಕೆ ಬಂದು ಸೇರಿದಳು. ಏಕಾಂಗಿಯಾದ ಹರಿಯು ವೈಕುಂಠವನ್ನು ಬಿಟ್ಟು ಅಲೆಮಾರಿಯಾಗಿ ತಿರುಗುತ್ತ ಶೇಷಾಚಲಕ್ಕೆ ಬಂದು, ಸ್ವಾಮಿ ಪುಷ್ಕರಿಣಿಯ ಬಳಿಯಲ್ಲಿನ ಹುತ್ತ ವೊಂದರದಲ್ಲಿ ಸೇರಿಹೋದ.

### 16. ಸ್ವಾಮಿಗೆಂದು ಆಲಯ ನಿರ್ಮಾಣವಾದ ಬಗೆ :

ವೆಂಕಟಾದ್ರಿಯಲ್ಲಿ ಸ್ವಾಮಿಯ ಪೂಜೆಯನ್ನು ಮಾಡಿದ ಹಲವು ರಾಜರ ಬಗ್ಗೆ ಹಲವಾರು ಪುರಾಣಗಳ ವಿವರಣೆ ನೀಡುತ್ತವೆ. ಅವುಗಳಲ್ಲಿ ಕೆಲವು ಹೀಗಿವೆ-

***ಅ. ಶಂಖನ ಕಥೆ:*** ಕೃತಯುಗದಲ್ಲಿ ಸೂರ್ಯ ವಂಶದಲ್ಲಿ ಶಂಖನೆಂಬ ಒಬ್ಬ ರಾಜ ಬಂದ. ಶಾಶ್ವತವಾಗಿರ ಬಲ್ಲಂತಹದ್ದು ಏನಾದರೂ ಮಾಡಬೇಕೆಂದು ಆತ ತನ್ನ ಗುರು ವಸಿಷ್ಠರನ್ನು ವಿಚಾರಿಸಿದ. ವೆಂಕಟಾದ್ರಿಗೆ ಹೋಗಿ ಸ್ವಾಮಿಯನ್ನು ಪ್ರಾರ್ಥಿಸಲು ಗುರುಗಳು ಸೂಚಿಸಿದರು. ರಾಜನು ಬೆಟ್ಟಕ್ಕೆ ಬಂದು ತಪಸ್ಸನ್ನೆಸಗಲು, ಒಂದು ವಿಮಾನದಲ್ಲಿ ಅವನಿಗೆ ಪ್ರತ್ಯಕ್ಷನಾದ ಸ್ವಾಮಿಯು, ತಾನು ಬಂದಂತಹ ವಿಮಾನವನ್ನು ಹೋಲುವ ಗುಡಿಯನ್ನು ಕಟ್ಟಿ ತನ್ನನ್ನು ಹೋಲುವ ವಿಗ್ರಹವನ್ನು ಅದರಲ್ಲಿ ಪ್ರತಿಷ್ಠಾಪನೆ ಮಾಡಲು ಹೇಳಿದ. ಇದರಂತೆಯೇ ನಡೆದ ಶಂಖನು ಆ ವಿಮಾನದಂತಹ ದೇವಳವನ್ನು ನಿರ್ಮಿಸಿ ಅದರಲ್ಲಿ ವಿಗ್ರಹವನ್ನು ಸ್ಥಾಪಿಸಿದನು. ಕಲ್ಪಾಂತರದಲ್ಲಿ ಈ ಆಲಯವು ಭಗ್ನವಾಗಿ ವಿಗ್ರಹವು ಮೊಣಕಾಲವರೆಗೆ ಭೂಮಿಯಲ್ಲಿ ಇಳಿದು, ಅದರ ಸುತ್ತ ಹುತ್ತವೊಂದು ಬೆಳೆಯಿತು. ಪಕ್ಕದಲ್ಲಿಯೇ ಹುಣಿಸೆಯ ಮರವೊಂದು ಬೆಳೆದು ನೆರಳನ್ನು ಒದಗಿಸಿದ್ದಿತು.

***ಆ. ಚೋಳರಾಜನ ಕಥೆ:*** ಕಲಿಯುಗದಲ್ಲಿ ಒಬ್ಬ ಚೋಳರಾಜನಿದ್ದು, ಒಂದು ದಿನ ಅವನು ಒಂದು ಸ್ಥಳದಲ್ಲಿ ಆಯಾಸ ಪರಿಹಾರಾರ್ಥವಾಗಿ ಕುಳಿತಿರುವಾಗ, ಓರ್ವತರುಣಿ, ಪುಷ್ಪ ಸಂಗ್ರಹ ಮಾಡುತ್ತಿರುವುದನ್ನು ಕಂಡನು. ನೀನಾರು ಎಂದು ಅವಳನ್ನು ಪ್ರಶ್ನಿಸಲು, ತಾನು ಪಾತಾಳಲೋಕದ ನಾಗರ ಧನಂಜಯನ ಮಗಳೆಂದು ತಿಳಿಸಿದಳು. ರಾಜನು ಅವಳ ಬಗ್ಗೆ ತನ್ನ ಪ್ರೀತಿಯನ್ನು ವ್ಯಕ್ತಪಡಿಸಿ ತನ್ನನ್ನು ಪರಿಣಯ ಮಾಡಿಕೊಳ್ಳಲು ಒಪ್ಪಿಗೆ ಯಿದೆಯೇ ಎಂದು ಕೇಳಲಾಗಿ, ಆಕೆ ತನ್ನ ತಂದೆಯ ಒಪ್ಪಿಗೆಯನ್ನು ಪಡೆದೇ ಆಗ ಬಹುದು ಎಂದಳು. ಇಷ್ಟುಸುತ್ತು ಬಳಸಿ ಬರುವ ಸಹನೆಯಿಲ್ಲದ ರಾಜನು, ಅವಳನ್ನು ಗಾಂಧರ್ವ ವಿವಾಹವಾಗಿ ರಾತ್ರಿ ಕಳೆದನು. ಮಾರನೆಯ ದಿನ ತನ್ನ ತವರಿಗೆ ಆಕೆ ಹಿಂದಿರುಗಿದಳು. ಆಕೆಯ ವಿವಾಹದ ಸಂಗತಿಯನ್ನು ತಿಳಿದ ಆಕೆಯ ತಂದೆ ಸಂತಸ ಪಟ್ಟ. ಆಕೆ ಗರ್ಭಿಣಿಯಾಗಿ ಓರ್ವ ಪುತ್ರನನ್ನು ಪಡೆದಳು. ಈ ಮಗು ಯುವಕನಾಗಿ ಬೆಳೆಯಲು, ಒಂದು ದಿನ ತನ್ನ ತಂದೆಯನ್ನು ತೋರಿಸಲು ಕೇಳಿದ. ತಾಯಿಯು ಅವನ ತಂದೆ ಯಾರು ಎಂಬುದನ್ನು ತಿಳಿಸಿ, ಭೂಮಿಯ ಮೇಲೆ ಹೋಗಲು ಹಾದಿಯನ್ನು ತೋರಿಸಿದಳು. ತಾಯಿಯು, ತೋರಿದ ಹಾದಿಯಲ್ಲಿ ನಡೆದ ಯುವಕನು ಚೋಳರಾಜನನ್ನು ಸೇರಿದಾಗ ನಾಗ ಸ್ತ್ರೀಯ ಬಗ್ಗೆ ಮರೆತು ಹೋಗಿದ್ದ

ರಾಜನು, ಆ ಯುವಕನು ಹೇಳುವ ಕಥೆಯ ಸತ್ಯದ ಬಗ್ಗೆ ಸಂದೇಹಗ್ರಸ್ತನಾದ. ಆಗ ಒಂದು ಅಶರೀರವಾಣಿಯು, ಈ ಯುವಕ ರಾಜನ ಮಗನೇ ಎಂದೂ, ಅವನಿಗೆ ಪಟ್ಟಾಭಿಷೇಕ ಮಾಡಬೇಕೆಂದೂ ಹೇಳಿತು. ಈ ಸಮರ್ಥನೆಯಿಂದ ಸಂತಸಪಟ್ಟ ಚೋಳರಾಜನು ತಾನು ನಾಗಸ್ತ್ರೀಯನ್ನು ನೋಡಿದ ಸ್ಥಳದಲ್ಲಿ ಒಂದು ನಗರವನ್ನು ನಿರ್ಮಿಸಿ ಯುವಕನನ್ನು ಅದರ ರಾಜನನ್ನಾಗಿಸಿದ. ಈ ಯುವಕ ಚೋಳ ಚಕ್ರವರ್ತಿಯೆಂದು ಪ್ರಸಿದ್ಧನಾದನು.

ಒಂದು ದಿನ ಚಕ್ರವರ್ತಿಯ ಗೋಶಾಲೆಯ ಗೋವಳಿಗರು ಬಂದು ಅಂದು ತಾವು ಒಂದು ಹುತ್ತವನ್ನು ಸುತ್ತಿ ಬರುತ್ತಿದ್ದಾಗ, ಹಾಲಿನ ಕುಂಭವು ಜಾರಿಬಿದ್ದು ಹುತ್ತದ ಮೇಲೆ ಹಾಲು ಚೆಲ್ಲಿಹೋಯಿತೆಂದು ತಿಳಿಸಿದರು. ಚಕ್ರವರ್ತಿಗೆ ಅಂದು ಒಂದು ಕನಸು ಬಿದ್ದಿತು. ಕೃಷ್ಣವರ್ಣದ ಒಬ್ಬ ಸುಂದರ ಪುರುಷನು ಅವನಿಗೆ ಕಾಣಿಸಿಕೊಂಡು 'ಎಲೈ ರಾಜನೆ, ನಾನು ಶ್ರೀನಿವಾಸನೊಡನೆ ಬಂದು ಶೇಷಾಚಲದಲ್ಲಿರುವೆನು. ಆತ ಭೂದೇವಿಯೊಡನಿರುವನು. ನೀನು ಬಂದು ಅವನ ದರ್ಶನ ಮಾಡಿಕೋ' ಎಂದನು. ಕನಸಿನಲ್ಲಿಯೇ ಅವನನ್ನು ಹಿಂಬಾಲಿಸಿ ಶೇಷಾಚಲಕ್ಕೆ ಬಂದ ಚಕ್ರವರ್ತಿಗೆ ಒಂದು ಸುಂದರ ವಿಮಾನ ಕಾಣಿಸಿತು. ಮಾರನೆಯ ದಿನ ಒಬ್ಬ ಶಬರನು ಬಂದು ಅವನಿಗೆ ಆಶ್ಚರ್ಯಕರವಾದ ಒಂದು ಘಟನೆಯನ್ನು ತಿಳಿಸಿದನು. 'ಸ್ವಾಮೀ ನಾನು ಶೇಷಾಚಲದ ಮೇಲೆ ಪ್ರಿಯಂಗು (ನವಣೆ) ವನ್ನು ಬೆಳೆದು, ಸ್ವಲ್ಪ ಸ್ವಾಮಿಗೆ ನಿವೇದಿಸಿ ಮಿಕ್ಕದ್ದನ್ನು ಭಕ್ಷಿಸುವೆನು. ನಾನು ನನ್ನ ಮಗನನ್ನು ಹೊಲದ ರಕ್ಷಣೆಯಲ್ಲಿ ಬಿಟ್ಟು ಜೇನು ಹುಡುಕ ಹೊರಟಿದ್ದೆ. ಹಿಂದಿರುಗಿ ಬಂದು ನೋಡಲು ದೇವರಿಗೆ ನಿವೇದನೆ ಮಾಡದೆಯೇ ಹುಡುಗ ಊಟ ಮಾಡಿದ್ದ. ಅವನನ್ನು ಕೊಂದು ಬಿಡಬೇಕು ಎನ್ನುವಷ್ಟು ಕೋಪಬಂದಿತು. ಆದರೆ ಅಷ್ಟರಲ್ಲಿ ಆಕಾಶವಾಣಿಯೊಂದು 'ದೇವರು ನಿವೇದನೆಯನ್ನು ಹುಡುಗನಿಗಿಂತ ಮೊದಲೇ ಪಡೆದಿರುವನೆಂದೂ; ನಿಮ್ಮನ್ನು ಶೇಷಾದ್ರಿಗೆ ಕರೆತರಬೇಕೆಂದು' ತಿಳಿಸಿತು - ಎಂದನು. ರಾಜನು ಶಬರನನ್ನು ಅನುಸರಿಸಿದ ಹಾಗೂ ತನ್ನ ಮಂತ್ರಿಗೆ ಒಂದು ಸಾವಿರ ಕಳಶಗಳಲ್ಲಿ ಹಾಲು ತರಲು ಹೇಳಿದನು. ಬೆಟ್ಟದ ಮೇಲೆ ಬಂದಾಗ ಶಬರನು ಹುತ್ತವನ್ನು ತೋರಿಸುತ್ತ ಅದನ್ನು ಅಗೆಯಲು ಸೂಚಿಸಿದ. ಹುತ್ತವನ್ನು ಬಗೆಯಲು ಹೆದರಿದ ರಾಜನು ಮಂತ್ರಿಗಳು ಕಳುಹಿಸಿದ ಹಾಲಿನ ಕೊಡಗಳ ಹಾಲನ್ನು ಹುತ್ತಕ್ಕೆ ಎರೆದು ಅದನ್ನು ಕರಗಿಸಿದ. ಹುತ್ತ ಕರಗಲು ಶಂಖ ಚಕ್ರಗಳನ್ನು ಮೇಲುಗೈಗಳಲ್ಲಿಯೂ, ಕೆಳಗಣ ಬಲಗೈ ವರದ ಹಸ್ತ ಆಗಿಯೂ ಕೆಳಗಿನ ಎಡಹಸ್ತ ಕಟ್ಯವಲಂಬಿತ ಹಸ್ತವಾಗಿಯೂ ಇರುವಂತಹ ಸುಂದರ ಪುರುಷನಾದ ಸ್ವಾಮಿಯು ಕಂಡುಬಂದನು. ಸ್ವಾಮಿಯನ್ನು ಹಲವು ಹತ್ತು ರೀತಿಯಲ್ಲಿ ಸ್ತುತಿಸಿದ ರಾಜನು ಸ್ವಾಮಿಯು ಅಲ್ಲಿಯೇ ಹಾಗೆಯೇ ಶಾಶ್ವತವಾಗಿ ನಿಂತು ಅನುಗ್ರಹಿಸಬೇಕೆಂದು ಕೋರಿದನು. ಹಾಗೆಯೇ ಆಗಲೆಂದು ಸ್ವಾಮಿಯು ತನಗೆ ದಿನವೂ ರಾಜನು ಪೂಜೆ ಮಾಡಬೇಕೆಂದು ಹೇಳಿದನು. ಪ್ರತಿದಿನವೂ ಸ್ವಾಮಿಯು ತನ್ನನ್ನು ಪೂಜಿಸಲು ಬರುವ ರಾಜನ ಬಳಿ ಸ್ನೇಹಿತನಂತೆಯೇ ಮಾತನಾಡುತ್ತಿದ್ದನು.

ಒಂದೊಮ್ಮೆ ರಾಜನ ಬಳಿಗೆ ಕೃಷ್ಣ ಶರ್ಮನೆಂಬ ಒಬ್ಬ ಬ್ರಾಹ್ಮಣನು ಪತ್ನೀಪುತ್ರರೊಡನೆ ಬಂದು, ತಾನು ತೀರ್ಥಯಾತ್ರೆಗೆರಳು ಹೋಗುತ್ತಿರುವುದಾಗಿಯೂ ತಾನು ಹಿಂದಿರುಗಿ ಬರುವವರೆಗೆ ತನ್ನ ಹೆಂಡತಿ ಹಾಗೂ ಮಗನನ್ನು ಆಶ್ರಯವಿತ್ತು ಸಲಹಬೇಕಾಗಿಯೂ ಪ್ರಾರ್ಥಿಸಿಕೊಂಡನು. ಒಪ್ಪಿದ ರಾಜನು ಆ ಹೆಂಗಸಿಗೆ ಒಂದು ಬೇರೆಯಾದ ಮನೆಯನ್ನು ಏರ್ಪಡಿಸಿ ಆರು ತಿಂಗಳಿಗೆ ಸಾಕಾಗುವ ದವಸ ಧಾನ್ಯವನ್ನು ನೀಡಿದನು. ಕಾಲಕ್ರಮದಲ್ಲಿ ಈ ಹೆಂಗಸು ಮತ್ತು ಈಕೆಯ ಮಗನ ಬಗ್ಗೆ ರಾಜನು ಮರೆತು ಹೋದನು. ಕಾಲಾನಂತರ ಹಿಂದಿರುಗಿದ ಕೃಷ್ಣಶರ್ಮನು ತನ್ನ ಪತ್ನೀ ಪುತ್ರರ ಬಗ್ಗೆ ಕೇಳಿದಾಗಲೇ ನೆನಪಿಸಿಕೊಂಡ ರಾಜನು ಅವರನ್ನು ಕರೆತರಲು ಸೇವಕನನ್ನು ಕಳುಹಿಸಿದನು. ಆಕೆಯ ಮನೆಗೆ ಹೋಗಿ ನೋಡಿಕೊಂಡು ಬಂದ ಸೇವಕನು ರಾಜನಿಗೆ ರಹಸ್ಯವಾಗಿ ಅವರ ಮನೆಯಲ್ಲಿ ಮಹಿಳೆ ಮತ್ತು ಮಗುವಿನ ಅಸ್ಥಿಪಂಜರಗಳು ಮಾತ್ರವೇ ಇರುವುದಾಗಿ ವರದಿಯೊಪ್ಪಿಸಿದ. ದಿಗ್ಭ್ರಮಿತನಾದ ರಾಜನು, ತಾನು ಮೊದಲೇ ವಿಚಾರಿಸದೆ ತಪ್ಪು ಮಾಡಿದ್ದನ್ನು ಗ್ರಹಿಸಿ, ಪಶ್ಚಾತ್ತಾಪಪಟ್ಟರೂ ಯಾವುದನ್ನೂ ತೋರಿಸಿಕೊಳ್ಳದೆ ಬ್ರಾಹ್ಮಣನಿಗೆ ಆತನ ಹೆಂಡತಿ ಶೇಷಾಚಲಕ್ಕೆ ಸ್ವಾಮಿಯನ್ನು ನೋಡಿ ಬರಲು ಹೋಗಿರುವುದಾಗಿ, ಮಾರನೆಯದಿನ ಬ್ರಾಹ್ಮಣನು ತನ್ನ ಸಂಸಾರವನ್ನು ಕಾಣಬಹುದೆಂದೂ ತಿಳಿಸಿ, ಬೆಟ್ಟದತ್ತ ಬಂದು ಸ್ವಾಮಿಯಲ್ಲಿ ಕಾಪಾಡಬೇಕೆಂದು ಬೇಡಿದನು. ದೇವರು ತನ್ನ ಸೇನಾಪತಿಯಾದ ವಿಶ್ವಕ್ಸೇನನನ್ನು ಕರೆದು ಅಸ್ಥಿಕೊಟ

ತೀರ್ಥದಿಂದ ಜಲವನ್ನು ತಂದು ಅಸ್ಥಿಪಂಜರಗಳ ಮೇಲೆ ಚಿಮುಕಿಸಲು ತಿಳಿಸಿದನು. ಹಾಗೆ ಮಾಡಿದ ಕೂಡಲೇ ಆ ಮಹಿಳೆಯೂ ಮಗುವೂ ಮೊದಲಿನ ರೂಪ ಪಡೆದು ನಿದ್ರೆಯಿಂದ ಎದ್ದವರಂತೆ ಎಚ್ಚರಾದರು. ರಾಜನು ಅವರನ್ನು ಕೃಷ್ಣಶರ್ಮನಿಗೊಪ್ಪಿಸಿದನು.

ಕೆಲಕಾಲನಂತರ ಸಿಂಹಾದನೆಂಬ ರಾಕ್ಷಸನು ಬೆಟ್ಟದ ಮೇಲೆ ಸ್ಥಿರವಾದನು. ತಪಸ್ಸು ಮಾಡಿ ದೇವ ದಾನವ ಮಾನವರಾರಿಂದಲೂ ತನಗೆ ಮೃತ್ಯು ಬಾರದಿರುವ ವರವನ್ನು ಪಡೆದು, ದೇವತೆಗಳಿಗೆ ಕಿರುಕುಳ ನೀಡಲು ಪ್ರಾರಂಭಿಸಿದನು. ದೇವತೆಗಳು ಸ್ವಾಮಿಯ ಶರಣು ಕೋರಿದರು. ಹರಿಯು ಅವರುಗಳೆಲ್ಲ ತನ್ನ ಸ್ನೇಹಿತನಾದ ಚಕ್ರವರ್ತಿಯ ಬಳಿಗೆ ಹೋಗಿ ಅವನ ದೇಹದಲ್ಲಿ ತಮ್ಮ ತಮ್ಮ ಅಂಶಗಳಿಂದ ಕೂಡಬೇಕೆಂದು ಹೇಳಿದನು. ಅವರ ಕೋರಿಕೆಯನ್ನು ತಿಳಿದ ಚಕ್ರವರ್ತಿಯು ಶೇಷಾಚಲಕ್ಕೆ ಬಂದು ಸ್ವಾಮಿಯ ಆಜ್ಞೆಯನ್ನು ಬಯಸಿದನು. ಹರಿಯು ತನ್ನ ಶಂಖ ಚಕ್ರಗಳನ್ನು ನೀಡಿ ರಾಕ್ಷಸನನ್ನು ಎದುರಿಸಲು ತಿಳಿಸಿದನು. ರಾಜನು ತನ್ನ ಸೈನ್ಯದೊಡನೆ ಪಾಪನಾಶನಕ್ಕೆ ಆಗಮಿಸಿ ಅಲ್ಲಿ ನೆಲೆಸಿದ್ದ ರಾಕ್ಷಸನನ್ನು ಯುದ್ಧಕ್ಕೆ ಕರೆದನು. ಮುಂದೆ ನಡೆದ ಘೋರವಾದ ಸಂಗ್ರಾಮದಲ್ಲಿ ರಾಜನು ಕಡೆಗೆ ಸ್ವಾಮಿಯ ಚಕ್ರವನ್ನು ಬಳಸಿ ರಾಕ್ಷಸನ ತಲೆಯನ್ನು ಕತ್ತರಿಸಿ ಹಾಕಿದನು. ನಂತರ ಸ್ವಾಮಿಯ ಬಳಿಗೆ ಹಿಂದಿರುಗಿದ ರಾಜನು, ದೇವರ ಕೃಪೆಗಾಗಿ ವಂದಿಸುತ್ತ, ಶಂಖ ಚಕ್ರಗಳನ್ನು ಹಿಂದಿರುಗಿಸಬಯಸಿದನು. ಹರಿಯು ಶಂಖ ಚಕ್ರಗಳಿಗೆ 'ನೀವುಗಳು ನಿಮ್ಮ ಹೆಸರಿನ ತೀರ್ಥಗಳಲ್ಲಿ ಕೆಲಕಾಲವಿರಿ. ನಾನು ಕೆಲಕಾಲ ಹೀಗೆಯೇ ಇದ್ದು, ಕಲಿಯುಗದಲ್ಲಿ ಒಬ್ಬಾನೊಬ್ಬರು ನನಗೆ ಬೇರೆಯಾದ ಶಂಖ ಚಕ್ರಗಳನ್ನು ತೊಡಿಸುವರು. ನಾವು ಅವುಗಳನ್ನು ತೊಟ್ಟುಕೊಂಡೇ, ಜಗತ್ತನ್ನು ನೋಡುವೆನು' ಎಂದನು.

### 17.ರಂಗದಾಸನ ಕಥೆ:

ಬ್ರಹ್ಮಾಂಡ ಪುರಾಣದಲ್ಲಿ ಸ್ವಾಮಿಯ ಭಕ್ತನಾದ ರಂಗದಾಸನ ಕಥೆ ಹೀಗೆ ಉಕ್ತವಾಗಿದೆ.

ಚೋಳನಾಡಿನಲ್ಲಿ ಒಂದೊಮ್ಮೆ ಗೋಪಿನಾಥನೆಂಬ ವೈಖಾನಸನಿದ್ದನು. ಈತನು ಕೃಷ್ಣನ ಹಿರಿಯ ಭಕ್ತನಾಗಿದ್ದನು. ಮೋಕ್ಷವನ್ನು ನೀಡಬೇಕೆಂದು ಈತ ಕೃಷ್ಣನಲ್ಲಿ ಪ್ರಾರ್ಥಿಸಲು, ಕೃಷ್ಣನು 'ಶೇಷಾದ್ರಿಗೆ ಹೋಗಿ ಶ್ರೀನಿವಾಸನನ್ನು ಅರ್ಚಿಸಲು' ತಿಳಿಸಿದನು ಜೊತೆಗೇ 'ಬೆಟ್ಟದ ಹಾದಿಯಲ್ಲಿ ರಂಗದಾಸನೆಂಬ ಶೂದ್ರನು ಸಿಗುವನೆಂದೂ ಅವನಿಗೆ ಉಪಕಾರ ಮಾಡಬೇಕೆಂದೂ' ಹೇಳಿದನು. ಬ್ರಾಹ್ಮಣನು ಬೆಟ್ಟದ ತಪ್ಪಲಿಗೆ ಬಂದಾಗ ರಂಗದಾಸನ ಭೇಟಿಯಾಯಿತು. ಇಬ್ಬರೂ ಬೆಟ್ಟವನ್ನೇರಿ, ಹುತ್ತವನ್ನು ಅಗೆದು ವಿಗ್ರಹವನ್ನು ಹೊರತೆಗೆದರು. ಈ ವಿಗ್ರಹವನ್ನು ಒಂದು ಗುಡಿಸಿಲಿನಲ್ಲಿ ಪ್ರತಿಷ್ಠಾಪಿಸಿ, ಸುತ್ತಲೂ ಕಲ್ಲಿನ ಗೋಡೆಯನ್ನು ಎಬ್ಬಿಸಿದರು. ರಂಗದಾಸನು ಹೂವುಗಳನ್ನು ಕುಯಿದು ತಂದು ಮಾಲೆ ಕಟ್ಟುತ್ತಿದ್ದನಾದರೆ ಗೋಪೀನಾಥನು ಅವುಗಳನ್ನು ದೇವರಿಗೆ ಅರ್ಪಿಸಿ ಪೂಜೆ ಮಾಡುತ್ತಿದ್ದನು. ಒಂದು ದಿನ ರಂಗದಾಸನು ಮಾಲೆ ಕಟ್ಟುತ್ತಿರಲು ಅವನಿಗೆ ಕ್ರೀಡೆಯಲ್ಲಿ ತೊಡಗಿದ ಗಂಧರ್ವರು ಕಾಣಿಸಿದರು. ಇದರಿಂದ ವಿಚಲಿತನಾದ ರಂಗದಾಸನು ತನ್ನ ಇಂದ್ರಿಯ ದೌರ್ಬಲ್ಯಕ್ಕೆ ಪಶ್ಚಾತ್ತಾಪಪಟ್ಟು ತಾನು ಈಗಾಗಲೇ ಕಟ್ಟಿದ ಮಾಲೆಗಳನ್ನು ಬಿಸಾಡಿ, ಸ್ನಾನ ಮಾಡಿ ಬೇರೆ ಮಾಲೆಕಟ್ಟಿ ಗುಡಿಗೆ ತಂದನು. ಗೋಪೀನಾಥನು ತಡವಾದದ್ದಕ್ಕಾಗಿ ಅವನನ್ನು ಬಯ್ದರೂ, ನಾಚಿಕೆಯಿಂದಾಗಿ ರಂಗದಾಸನು ಮೌನದಿಂದಿದ್ದನು. ಆಗ ದೇವವಾಣಿ ಕೇಳಿಬಂದಿತು - 'ನಿನ್ನ ಮನ ವಿಚಲಿತವಾಗಿದೆ. ಯಾವುದೇ ಒಳ್ಳೆಯ ಕೆಲಸ ಮಾಡಲಾರೆ. ಆದ್ದರಿಂದ ಮತ್ತೆ ಮನುಷ್ಯನಾಗಿ ಜನ್ಮತಳೆದು ಬಾ. ಈ ಬಾರಿ ಒಬ್ಬ ರಾಜನಾಗಿ ಹುಟ್ಟಿ. ಎಲ್ಲ ಐಹಿಕ ಭೋಗಗಳನ್ನು ಅನುಭವಿಸು. ನನಗೆ ಒಂದು ಚೆನ್ನಾದ ಗುಡಿಯನ್ನು ನಿರ್ಮಾಣಮಾಡು. ಒಮ್ಮೆ ನಿನ್ನ ಶತ್ರುಗಳು ನಿನ್ನನ್ನು ಮುತ್ತುವರು. ಆಗ ನನ್ನ ಶಂಖ ಚಕ್ರಗಳನ್ನು ನಿನಗೆ ನೀಡುವೆನು. ನೀವು ಅವುಗಳ ನೆರವಿನಿಂದ ಗೆಲುವು ಪಡೆಯುವಂತಹವನಾಗುತ್ತೀಯೆ.'

ರಂಗದಾಸನು ಮರಣ ಹೊಂದಿ ಮತ್ತೆ ರಾಜನಾಗಿ ಹುಟ್ಟಿದನು. ಅವನೊಬ್ಬ ಚಕ್ರವರ್ತಿಯಾಗಿ ಬೆಳೆದು, ದ್ರಾವಿಡ ದೇಶದ ಜನರು ಅವನನ್ನು ತೊಂಡಮಾನ ಎಂದು ಕರೆದರು. ಇವನು ನಾರಾಯಣವನದಲ್ಲಿದ್ದು ಪ್ರತಿದಿನವೂ ಶೇಷಾಚಲಕ್ಕೆ ಹೋಗಿ ಪೂಜೆ ಮಾಡುತ್ತಿದ್ದನು. ಕಾಲಾನುಕ್ರಮದಲ್ಲಿ ಎರಡು ಗೋಪುರಗಳಿಂದ ಕೂಡಿದ ಎರಡು ಪ್ರಾಕಾರಗಳನ್ನು ನಿರ್ಮಿಸಿದ. ಅದರಲ್ಲಿಯೇ ಗರ್ಭಗೃಹ, ಯಾಗಶಾಲೆ, ಪಾಕಶಾಲೆ, ಸಾಮಾಗ್ರಿಶಾಲೆ, ಆಭರಣಶಾಲೆಗೆ ಅವಕಾಶ ಮಾಡಿಕೊಟ್ಟ. ಹಲವಾರು ಆಭರಣಗಳನ್ನು

ಮಾಡಿಸಿ, ಹಲವಾರು ಉತ್ಸವಗಳನ್ನು ಸ್ವಾಮಿಗೆಂದು ಆರಂಭಿಸಿದನು. ಒಮ್ಮೆ ಹಲವಾರು ಶತ್ರುಗಳು ಒಟ್ಟಿಗೆ ಈತನ ಪ್ರಾಂತ್ಯವನ್ನು ಆಕ್ರಮಿಸಿ, ಈತನಿಗೆ ತೊಂದರೆ ಕೊಡಲುಪಕ್ರಮಿಸಿದಾಗ, ರಾಜನು ದೇವರ ಬಳಿ ಬಂದು ನೆರವು ಕೇಳಿದನು. ದೇವರು ತನ್ನ ಶಂಖ ಚಕ್ರಗಳನ್ನು ಇವನಿಗೆ ನೀಡಿದನು. ಇವುಗಳ ನೆರವಿನಿಂದ ಶತ್ರುಗಳನ್ನು ಸೋಲಿಸಿ, ಓಡಿಸಿದ ರಾಜನು ದೇವರ ಬಳಿ ಬಂದು ಸ್ವಾಮಿಯ ಶಂಖಚಕ್ರ ರಹಿತನಾಗಿ, ಅರ್ಚಾರೂಪದಲ್ಲಿ ನಿಲ್ಲಬೇಕೆಂದು ಕೇಳಿಕೊಂಡನು. ದೇವರು ತಥಾಸ್ತು ಎಂದನು.

## 18.ದೇವರು ಪೆಟ್ಟುತಿಂದ ಬಗೆ :

ಭವಿಷ್ಯೋತ್ತರ ಪುರಾಣದಲ್ಲಿ ಈ ಕಥೆಯಿದೆ -

ಒಮ್ಮೆ ಲಕ್ಷ್ಮೀಯು ಬ್ರಹ್ಮನನ್ನು ಹಸುವಾಗಿಯೂ, ಶಿವನನ್ನು ಕರುವಾಗಿಯೂ ಮಾಡಿ ಚೋಳರಾಜನ ಬಳಿಗೆ ಕರೆದುಕೊಂಡು ಹೋದಳು. ಹಸುವು ಶೇಷಾಚಲದಲ್ಲಿ ತಿರುಗಾಡುತ್ತ ಸ್ವಾಮಿಯ ಸನ್ನಿಧಿಯಿದ್ದ ಹುತ್ತವನ್ನು ಕಂಡುಕೊಂಡಿತು. ಆ ನಂತರದಲ್ಲಿ ಈ ಹಸುವು ತನ್ನೆಲ್ಲ ಹಾಲನ್ನೂ ಈ ಹುತ್ತಕ್ಕೆರೆದು ರಾಜನ ಗೌಳಿಗಳಿಗೆ ಒಂದು ಹನಿಯಷ್ಟು ಹಾಲನ್ನೂ ಕೊಡದೆಹೋಯಿತು. ರಾಣಿಯು ಗೌಳಿಗನನ್ನು ತರಾಟೆಗೆ ತೆಗೆದುಕೊಂಡು ಹಾಲನ್ನೆಲ್ಲ ಅವನೇ ಕದಿಯುತ್ತಿರಬೇಕೆಂದು ದೂರಿದಳು. ಒಂದು ದಿನ ಹಸುವನ್ನು ಹಿಂಬಾಲಿಸಿದ ಗೌಳಿಗನು ಹಸುವು ಹುತ್ತಕ್ಕೆ ಹಾಲೆರೆಯುವದನ್ನು ಕಂಡನು. ಕೋಪೋದ್ರಿಕ್ತನಾದ ಅವನು ಕೊಡಲಿಯನ್ನೆತ್ತಿ ಹಸುವನ್ನು ಕೊಲ್ಲುವಂತೆ ಮುನ್ನುಗ್ಗಿ ಹೊಡೆದಾಗ, ಹುತ್ತದಿಂದ ಹೊರಬಿದ್ದ ಸ್ವಾಮಿಯು ದಿಡೀರನೆ ನಿಂತು ತಾನೇ ಕೊಡಲಿಯ ಘಾತವನ್ನು ಸ್ವೀಕರಿಸಿದನು. ಇದರಿಂದಾಗಿ ಸ್ವಾಮಿಯ ಹಣೆ ಗಲ್ಲಗಳಲ್ಲಿ ಗಾಯವಾಗಿ ರಕ್ತ ಚಿಮ್ಮಿತು. ಭಯದಿಂದ ನಡುಗಿದ ಗೌಳಿಗನು ಆ ಕ್ಷಣದಲ್ಲಿಯೇ ಪ್ರಾಣ ಬಿಟ್ಟನು. ಹಸು ಬೆಟ್ಟವನ್ನಿಳಿದು ರಾಜನ ಬಳಿ ಬಂದು ದೀನವದನದಿಂದ ನಿಂತಿತು. ರಾಜನು ಹಸುವನ್ನು ಹಿಂಬಾಲಿಸಿ ಬೆಟ್ಟಕ್ಕೆ ಬಂದು ದಾರುಣವಾದ ಗೌಳಿಗನ ಮರಣವನ್ನು ಕಂಡನು. ಸ್ವಾಮಿಯು ರಾಜನಿಗೆ ಪಿಶಾಚವಾಗೆಂದು ಶಪಿಸಿ, 'ಮುಂದೊಮ್ಮೆ ಆಕಾಶ ರಾಜನು ತನ್ನ ಮಗಳು ಪದ್ಮಾವತಿಯನ್ನು ನನಗೆ ವಿವಾಹ ಮಾಡಿಕೊಟ್ಟು, ನನಗೆ ಶುಕ್ರವಾರಗಳಲ್ಲಿ ಧರಿಸಲು ಒಂದು ಕಿರೀಟವನ್ನು ನೀಡುವನು. ಅದನ್ನು ಧರಿಸಿದಾಗ ನನಗೆ ತಲೆಯಲ್ಲಿನ ಗಾಯದ ನೋವು ಮರೆಯಾಗುತ್ತದೆ. ನೀನೂ ಶಾಪ ವಿಮೋಚನೆ ಹೊಂದುವೆ'ಎಂದನು.

## 19. ಶ್ರೀನಿವಾಸನ ವಿವಾಹ :

ಭವಿಷ್ಯೋತ್ತರ ಪುರಾಣದಲ್ಲಿ ಸ್ವಾಮಿಯ ವಿವಾಹದ ಬಗ್ಗೆ ಹೀಗಿದೆ -

ಒಮ್ಮೆ ಶ್ರೀನಿವಾಸನು ಉತ್ತಮ ವಸ್ತ್ರಧಾರಣೆ ಮಾಡಿ ಬೇಟೆಗೆ ಹೊರಟ. ಒಂದು ಆನೆಯನ್ನು ಓಡಿಸಿಕೊಂಡು ಬಹುದೂರ ಬಂದು ಒಂದು ಉದ್ಯಾನವನವನ್ನು ಪ್ರವೇಶಿಸಿದ. ಅಲ್ಲಿ ಹೂ ಕೀಳುತ್ತಿದ್ದ ಸಖಿಯರೊಡನಿದ್ದ ಒಬ್ಬ ಸುಂದರಿಯು, ಆನೆಯನ್ನು ಕಂಡು ಹೆದರಿ ಸಖಿಯರೊಡನೆ ಮರವೊಂದರ ಮರೆಯಲ್ಲಿ ನಿಂತಳು. ಈ ಕುಮಾರಿ ಆಕಾಶರಾಜನ ಸಾಕುಮಗಳಾದ ಪದ್ಮಾವತಿಯಾಗಿದ್ದಳು. ಈ ಆಕಾಶರಾಜನೂ ಅವನ ತಮ್ಮ ತೊಂಡಮಾನನೂ ಚಂದ್ರವಂಶದ ಸುವೀರ ರಾಜನ ಮಕ್ಕಳು. ಆಕಾಶರಾಜನು ಒಮ್ಮೆ ಯಾಗಶಾಲೆಯ ನಿರ್ಮಾಣಕ್ಕಾಗಿ ಭೂಮಿಪೂಜೆ ಮಾಡಲೆಂದು ಉಳುವಾಗ ಭೂಮಿಯಲ್ಲಿ ಒಬ್ಬ ಹೆಣ್ಣುಮಗುವನ್ನು ಕಂಡು, ಮಕ್ಕಳಿಲ್ಲದ ಆತ ಈ ಮಗುವನ್ನು ಪದ್ಮಾವತಿ ಎಂಬ ಹೆಸರಿಟ್ಟು ಸಾಕಿದನು. ನಂತರ ಆತನಿಗೊಬ್ಬ ಮಗ ಹುಟ್ಟಲು ವಸುದಾನ ಎಂಬ ಹೆಸರನ್ನಿಟ್ಟರು. ಶ್ರೀನಿವಾಸನು ಪದ್ಮಾವತಿಯನ್ನು ನೋಡಿ ತಾನು ವಸುದೇವ ದೇವಕಿಯರ ಮಗನಾದ ಕೃಷ್ಣನೆಂದೂ ಬಲರಾಮ ಸುಭದ್ರೆಯರ ಸೋದರನೆಂದೂ ಪರಿಚಯ ನೀಡಿದ. ತನ್ನನ್ನು ಮದುವೆಯಾಗಬೇಕೆಂದು ಕೇಳಿದ. ಜೊತೆಗೆ ಬಂದಿದ್ದ ಸಖಿಯರೂ ಸೇವಕಿಯರೂ ಈ ಅಪರಿಚಿತನ ಮಾತುಗಳಿಂದ ಕೋಪಗೊಂಡು ಕಲ್ಲುಗಳಿಂದ ಅವನನ್ನು ಹೊಡೆಯಲು ತೊಡಗಿದಾಗ ಅವನ ಕುದುರೆಗೆ ಕಲ್ಲು ತಾಗಿ ಸತ್ತುಬಿದ್ದಿತು. ಶ್ರೀನಿವಾಸನು ಉತ್ತರ ದಿಕ್ಕಿನಲ್ಲಿ ನಡೆದು ಮರೆಯಾದನು.

ಸ್ವಾಮಿಯು ಹಿಂದಿರುಗಿ ಬಂದು ಶೋಕಾಕುಲನಾಗಿ ಮುದುಡಿ ಮಲಗಿದ. ಅವನನ್ನು ನೋಡಿಕೊಳ್ಳುತ್ತಿದ್ದ ವಕುಳಮಾಲಿಕೆಯು ಅವನನ್ನು ವಿಧವಿಧವಾಗಿ ಉಪಚರಿಸಿ ಉಪಾಯದಿಂದ ಅವನು ಪದ್ಮಾವತಿಯಲ್ಲಿ ಅನುರಕ್ತನಾಗಿರುವುದನ್ನು ತಿಳಿದಳು. ಆಕಾಶರಾಜನ ಬಳಿಗೆ ಆಕೆ ಹೋಗಿ ಮಾತನಾಡಿ ತನ್ನ ಪರಿಣಯದ ಬಗ್ಗೆ ಹಾದಿ ಸುಗಮಗೊಳಿಸಬೇಕೆಂದು ಸ್ವಾಮಿಯು ಹೇಳಿದನು. ತಾನು ಕಣಿ

ಹೇಳುವ ಹೆಂಗಸಿನ ವೇಷ ತೊಟ್ಟು ಆಕಾಶರಾಜನ ಹೆಂಡತಿ ಧರಣೀದೇವಿಯ ಬಳಿಸೇರಿ, ಪದ್ಮಾವತಿಯನ್ನು ಶ್ರೀನಿವಾಸನಿಗೆ ಕೊಟ್ಟು ವಿವಾಹ ಮಾಡಬೇಕೆಂದು ಸೂಚಿಸಿದ. ಪದ್ಮಾವತಿಯೂ ತಾನು ಉದ್ಯಾನವನದಲ್ಲಿ ನೋಡಿದ ತರುಣನಿಗಾಗಿ ತಪಿಸುತ್ತಾ ಅವನಲ್ಲಿ ಅನುರಕ್ತಳಾಗಿದ್ದು, ವಕುಳಮಾಲಿಕೆಯು ರಾಜನ ಅರಮನೆಯನ್ನು ತಲುಪುವ ಹೊತ್ತಿಗೆ ಮದುವೆಯ ಬುನಾದಿಯೆಲ್ಲ ಪಕ್ವವಾಗಿ ವಿವಾಹದ ಮಾತುಕತೆ ಸುಗಮವಾಯಿತು. ಶ್ರೀನಿವಾಸನು ಎಲ್ಲ ದೇವ ದೇವಿಯರನ್ನು ತನ್ನ ಪರಿವಾರವೆಂಬಂತೆ ಕರೆತಂದುಪದ್ಮಾವತಿ ಯನ್ನು ಮದುವೆಯಾದನು.

ಮದುವೆಯಾದ ತುಸುವೆ ಸಮಯದಲ್ಲಿ ಆಕಾಶರಾಜನು ಮರಣವಡೆದನು. ರಾಜ ಸಿಂಹಾಸನಕ್ಕಾಗಿ ರಾಜನ ತಮ್ಮ ತೊಂಡ ಮಾನನೂ ಮಗ ವಸುದಾನನೂ ಕಲಹ ಮಾಡಿದರು. ಪದ್ಮಾವತಿಯ ಅಪೇಕ್ಷೆಯ ಮೇರೆಗೆ ಶ್ರೀನಿವಾಸನು ಇಬ್ಬರ ಮಧ್ಯದಲ್ಲಿ ಒಂದು ರಾಜೀ ಸೂತ್ರವೇರ್ಪಡಿಸಿ ರಾಜ್ಯವನ್ನು ಎರಡು ಭಾಗಮಾಡಿ, ತೊಂಡಮಾನನಿಗೆ ತೊಂಡಮಂಡಲವನ್ನೂ, ವಸುದಾನನಿಗೆ ನಾರಾಯಣವನ ಭಾಗವೂ ಬರುವಂತೆ ಹಂಚಿಕೊಟ್ಟನು.

ತೊಂಡಮಾನನೇ ಹಿಂದಿನ ಜನ್ಮದಲ್ಲಿ ರಂಗದಾಸನಾಗಿದ್ದನು. ಹೀಗಾಗಿ ಸ್ವಾಮಿಯು ತನ್ನ ವಾಸಕ್ಕಾಗಿ ಒಳ್ಳೆಯ ಆಲಯವನ್ನು ನಿರ್ಮಿಸಲು ಅವನಿಗೆ ಹೇಳಿದನು. ಅದರಂತೆ ತೊಂಡಮಾನನು ನಿರ್ಮಿಸಿದ ಆಲಯದಲ್ಲಿ ಸ್ವಾಮಿಯು ಸಂತಸದಿಂದ ನೆಲೆಸಿದನು. ತೊಂಡಮಾನನು ಸ್ವಾಮಿಗಾಗಿ ವಿವಿಧ ವಾಹನಗಳನ್ನು, ಉತ್ಸವಗಳನ್ನೂ ಏರ್ಪಡಿಸಿದನು.

## 20.ಇತರ ಐತಿಹ್ಯಗಳು:

ಹಲವಾರು ಪುರಾಣಗಳು ಅನೇಕವಾದ ಇತರ ಐತಿಹ್ಯಗಳನ್ನು ಒಳಗೊಂಡಿವೆ.

ಪದ್ಮಪುರಾಣವು ಮಧುಕೈಟಭರನ್ನು ನಾಶಮಾಡಿದ ಕಥೆಯನ್ನು ತಿಳಿಸುತ್ತದೆ. ಇವರಿಬ್ಬರು ರಾಕ್ಷಸರೂ ಬಹು ಬಲವಂತರಾಗಿ ಯಾರಿಂದಲೂ ನಿಯಮನಕ್ಕೆ ಒಳಗಾಗದಷ್ಟು ಉದ್ಧಟರಾಗಿದ್ದರು. ಹರಿಯು ಉಪಾಯದಿಂದ ತನ್ನ ಕೈಗಳಿಂದ ಅವರು ಸಾಯುವರೆಗೆ ಅವರಿಂದ ವರವನ್ನು ಪಡೆದನು. ನೀರಿಲ್ಲದ ಸ್ಥಳದಲ್ಲಿ ತಮ್ಮನ್ನು ಹರಿ ಕೊಲ್ಲುವಂತೆ ಅವರೂ ಪ್ರತಿಯಾಗಿ ವರ ಪಡೆದರು. ಹರಿಯು ಅವರಿಬ್ಬರನ್ನೂ ತನ್ನ ಬೃಹತ್ತಾದ ತೊಡೆಗಳ ಮೇಲೆ ಸೆಳೆದುಕೊಂಡು ಚಕ್ರದಿಂದ ಸಂಹಾರ ಮಾಡಿದನು. ಇಂದಿಗೂ ತಿರುಮಲೆಯ ಸ್ವಾಮಿಯನ್ನು ಮಧುಕೈಟಭರನ್ನು ಕೊಂದವನೆಂದು ಮಧುಕೈಟಭಾರಿ ಎಂದು ಆರಾಧಿಸಲಾಗುವುದು.

ಪದ್ಮಪುರಾಣವೂ ಸಹ ಭೃಗುವು ಸ್ವಾಮಿಯನ್ನು ತಿರಸ್ಕರಿಸುವುದನ್ನೂ ಸ್ವಾಮಿಯು ಭೂಮಿಗೆ ಬರುವುದನ್ನೂ ತೊಂಡಮಾನ ನಿಂದ ಅರ್ಚಿತನಾಗುವುದನ್ನೂ ತಿಳಿಸುವುದು.

ಬ್ರಹ್ಮಾಂಡ ಪುರಾಣದ ಪ್ರಕಾರ ತಿರುಮಲೆಯ ದೇವರು ಪೂತನಿಯ ಸ್ತನ್ಯವನ್ನುಂಡು ಆಕೆಯನ್ನು ಕೊಂದ ಶ್ರೀಕೃಷ್ಣನೇ ಆಗಿದ್ದಾನೆ. ಶ್ರೀ ವೆಂಕಟೇಶ್ವರ ಸಹಸ್ರನಾಮದಲ್ಲಿ ಆತನನ್ನು ವಾಸುದೇವನೆಂದು, ನವನೀತ ಪ್ರಿಯನೆಂದೂ, ಹೇಳಲಾಗಿದೆ. ನಳಕೂಬರ ಮಣಿಗ್ರೀವರನ್ನು ನಾರದ ಮುನಿಯ ಶಾಪದಿಂದ ರಕ್ಷಿಸಿದವನೂ ಇವನೇ. ಈ ಕಥೆಯು ಬ್ರಹ್ಮವೈವರ್ತ ಪುರಾಣದಲ್ಲಿ ಬರುತ್ತದೆ. ವಿಷ್ಣುವಿನ ಇತರ ನಾಮಗಳಾದ ನಂದಗೋಪ ಮನೋಹರ, ಬೃಂದಾರಣ್ಯನಿವಾಸಕ, ಗೋಪಾಂಗನಾಚೇಲಚೋರ, ಕಾಳೀಯಫಣಿ ದರ್ಪಜ್ಞ, ರಾಸಕ್ರೀಡಾ ಪಾರಾಯಣ, ರುಕ್ಮಿಣೀ ನಯನೋತ್ಸವ, ಮೊದಲಾದವೂ, ಬ್ರಹ್ಮವೈವರ್ತಪುರಾಣ ಹಾಗೂ ಭಾಗವತಗಳಲ್ಲಿನ ಕಥೆಗಳೂ ತಿರುಮಲೆಯ ದೇವರು ಶ್ರೀಕೃಷ್ಣನೇ ಎಂದು ಹೇಳುತ್ತವೆ. ಇದರಂತೆಯೇ ಬ್ರಹ್ಮಾಂಡ ಪುರಾಣದಲ್ಲಿ ಬರುವ ಹರಿಯ ಹೆಸರುಗಳಾದ ಕೌಸಲ್ಯಾತನಯ, ದಶಕಂಠ ಶಿರೋಧ್ವಂಸಿ, ಮೊದಲಾದವು ಶ್ರೀನಿವಾಸನು ಶ್ರೀರಾಮನ ಹೊರತು ಬೇರೆಯಲ್ಲವೆಂದು ತಿಳಿಸುತ್ತವೆ. ಈ ಕಥೆಗಳೆಲ್ಲ ಪುನಃ ಹೇಳಬೇಕಾದ ಅಗತ್ಯವಿಲ್ಲದಷ್ಟು ಪ್ರಸಿದ್ಧವಾಗಿವೆ.

ಸ್ಕಂದಪುರಾಣದಲ್ಲಿ ಬರುವ ಸ್ವಾಮಿಪುಷ್ಕರಿಣಿಯ ಬಗೆಗಿನ ಗಮನಾರ್ಹ ಕಥೆಯನ್ನು ಶ್ರೀ ಜೆ.ಎಚ್. ದವೆಯವರು ಉಲ್ಲೇಖಿಸುತ್ತಾರೆ. ಅದು ಹೀಗಿದೆ -

ಸ್ಕಂದಪುರಾಣವು ರಾಜಾ ನಂದನ ಮಗನಾದ ಧರ್ಮಗುಪ್ತನ ಕಥೆಯನ್ನು ದಾಖಲಿಸುತ್ತದೆ. ರಾಜಾನಂದನು ತನ್ನ ಅಪರ ವಯಸ್ಸಿನಲ್ಲಿ ಸನ್ಯಾಸಾಶ್ರಮವನ್ನು ಸ್ವೀಕರಿಸಿ ರಾಜ್ಯವನ್ನು ಧರ್ಮಗುಪ್ತನಿಗೆ ಬಿಟ್ಟು ಹೋದನು. ಧರ್ಮಗುಪ್ತನು ಒಮ್ಮೆ ಬೇಟೆಯಲ್ಲಿ ತೊಡಗಿ ಒಂದು ಕಾಡಿನಲ್ಲಿ ರಾತ್ರಿ ಕಳೆಯಬೇಕಾಯಿತು. ಆಗ ಒಂದು ಸಿಂಹದಿಂದ ತಪ್ಪಿಸಿಕೊಳ್ಳಲು ಧರ್ಮಗುಪ್ತನು ಒಂದು ಮರ ವನ್ನೇರಿದನು. ಕೆಳಗೆ ಕಾದು ಕುಳಿತ ಸಿಂಹದ ಭಯದಿಂದಾಗಿ ಒಂದು ಕರಡಿಯೂ ಅದೇ ಮರವನ್ನು ಏರಿತು. ರಾಜನೂ, ಕರಡಿಯೂ ಸರದಿಯಲ್ಲಿ ಕಾವಲಿದ್ದು ಪರಸ್ಪರರ ರಕ್ಷಣೆಯಲ್ಲಿ ತೊಡಗಬೇಕೆಂದು ತೀರ್ಮಾನಿಸಿದ ಮೇಲೆ ರಾಜನು ನಿದ್ದೆ ಹೋದನು. ಕರಡಿಯು ಎಚ್ಚರವಾಗಿದ್ದು ಅವನನ್ನು ಕಾಪಾಡಿತು. ಸಿಂಹವು - ರಾಜನನ್ನು ತಳ್ಳಿಬಿಡು, ನಿನ್ನನ್ನು ಬಿಡುವೆನು- ಎಂದು ಆಸೆ ತೋರಿಸಿದರೂ ಕರಡಿ ತಾನು ರಾಜನಿಗೆ ನೀಡಿದ್ದ ಮಾತಿನಂತೆಯೇ ನಡೆಯಿತು. ಅರ್ಧರಾತ್ರಿ ಕಳೆದನಂತರ ಕರಡಿಯನ್ನು ನೋಡಿಕೊಳ್ಳುವ ಸರದಿ ರಾಜನದಾಯಿತು. ಸಿಂಹವು ರಾಜನಿಗೂ ಅದೇ ರೀತಿಯ ಪ್ರಲೋಭನೆಯನ್ನು ಒಡ್ಡಿತು. ಉಪಕಾರ ಸ್ಮರಣೆಯಿಲ್ಲದ ರಾಜನು ಕರಡಿಯನ್ನು ನೂಕಿದನು. ಕೆಳಗೆ ಬಿದ್ದ ಕರಡಿ ತನ್ನ ನಿಜವಾದ ಯಕ್ಷನ ರೂಪಧರಿಸಿ, ವಿಶ್ವಾಸ ದ್ರೋಹಮಾಡಿದ ರಾಜನನ್ನು ಹುಚ್ಚನಾಗುವಂತೆ ಶಾಪ ನೀಡಿತು. ಸನ್ಯಾಸಿಯಾಗಿದ್ದ ನಂದ ಮಹಾರಾಜನಿಗೆ ಈ ವಿಷಯ ತಿಳಿಯಿತು. ಅವನು ಬಂದು ತನ್ನ ಹುಚ್ಚ ಮಗನನ್ನು ಕರೆದುಕೊಂಡು ಸ್ವಾಮಿಪುಷ್ಕರಿಣಿಗೆ ಬಂದು ಸ್ನಾನ ಮಾಡಿದನು. ಆಗ ಧರ್ಮಗುಪ್ತನು ಮಾಡಿದ ವಿಶ್ವಾಸ ದ್ರೋಹದ ಶಾಪವಾದ ಹುಚ್ಚು ತೊಲಗಿತು.

ಕಶ್ಯಪ ಋಷಿಯು ಮಾಡಿದ ಕೆಡುಕನ್ನು ಸಹ ವೆಂಕಟಾಚಲದ ಯಾತ್ರೆ ಹಾಗೂ ಸ್ವಾಮಿ ಪುಷ್ಕರಿಣಿಯ ಸ್ನಾನಗಳಿಂದ ಕಳೆಕೊಳ್ಳಲಾಯಿತು. ಇವನಿಗೆ ಸರ್ಪ ದಂಷ್ಟ್ರದ ಔಷಧಿ ತಿಳಿದಿದ್ದರೂ, ತಕ್ಷಕನಿಂದ ಆಭರಣಗಳನ್ನು ಪಡೆದು ತಕ್ಷಕನಿಂದ ಕಡಿಯಲ್ಪಟ್ಟ ಪರೀಕ್ಷಿತನಿಗೆ ಔಷಧಿಯನ್ನು ನೀಡದೇ ಮನೆಗೆ ಹಿಂದಿರು ಗಿದ್ದರಿಂದ ಪರೀಕ್ಷಿತನು ಸಾವನ್ನಪ್ಪಬೇಕಾಯಿತು. ಯಾರಿಗೇ ಆಗಲಿ ಔಷಧಿ ತಿಳಿದಿದ್ದಲ್ಲಿ ರೋಗಿಗಳನ್ನು ಕಾಪಾಡಲೇಬೇಕು ಎಂಬುದು ಕರ್ತವ್ಯ.

ಸ್ಕಂದಪುರಾಣವು ಆಯುರ್ವೇದೋಕ್ತಿಗಳನ್ನುದ್ಧರಿಸುತ್ತ ವೈದ್ಯರಿಗೆ ಸಲಹೆ ನೀಡುತ್ತದೆ. ಬದುಕಿನ ಲವಲೇಶವಾದ ಸಾಧ್ಯತೆ ಇದ್ದರೂ ಸಾಯುತ್ತಿರುವ ಮನುಷ್ಯನಿಗೆ ತಕ್ಕ ರೋಗ ನಿವಾರಣೋಪಾಯದ ಔಷಧಿಗಳನ್ನು ನೀಡುತ್ತಲೇ ಇರಬೇಕು. ಕಾರಣ ಕಾಲನ ಪ್ರವೃತ್ತಿಯನ್ನು ಅರಿತವರಾರೂ ಇಲ್ಲ. ಕಶ್ಯಪನು ತನ್ನ ಕರ್ತವ್ಯ ಲೋಪ ಮಾಡಿದ್ದರಿಂದ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಯಿತು.

❀❀❀

## ಅಧ್ಯಾಯ - 9
# ಸಾಹಿತ್ಯ ಸಂಗೀತಗಳಲ್ಲಿ ತಿರುಮಲೆ

### ಭಾಗ - 1. ತಮಿಳು ಸಾಹಿತ್ಯ

**1. ಸಾಮಾನ್ಯಾಂಶ**

ತಿರುಮಲೆಯ ಬೆಟ್ಟದ ಮೇಲಿರುವ ಆಲಯವನ್ನು ತಿರುವೆಂಗಡಂ ಎಂದು ಸಾಧಾರಣವಾಗಿ ತಿಳಿಯಲಾಗಿದ್ದು ಇಲ್ಲಿನ ದೈವವನ್ನು ವೆಂಗಡತ್ತಾನ್ ಅಥವಾ ತಿರುವೆಂಗಡತ್ತಾನ್ ಎಂದು ತಿಳಿಯಲಾಗಿದೆ.(ವೆಂಗಡದವನು, ತಿರುವೆಂಗಡದವನು ಎಂಬ ಅರ್ಥದಲ್ಲಿ) ತಮಿಳು ಸಾಹಿತ್ಯದ ಅತಿ ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ಆ ಸಾಹಿತ್ಯದಲ್ಲಿ ವೆಂಕಟೇಶ್ವರಸ್ವಾಮಿಗೆ ಒಂದು ಪ್ರಮುಖ ಸ್ಥಾನವಿದ್ದು ಅವನ ಮಹಿಮೆಗಳನ್ನು ಸ್ತುತಿಸಲಾಗಿದೆ. ದಕ್ಷಿಣ ಭಾರತದ ಮೇಲ್ಮೈಲಕ್ಷಣದಲ್ಲಿ ತಿರುಪತಿಯ ಪರ್ವತಾವಳಿ ಒಂದು ಪ್ರಮುಖ ಲಕ್ಷಣವಾಗಿ ತಮಿಳು ಮಾತನಾಡುತ್ತಿದ್ದ ಜನತೆಯ ಹರವಿನ ಸರಹದ್ದುಗಳನ್ನು ಸೂಚಿಸುವಂತಿದ್ದಿತು ಹಾಗೂ ಹಲವಾರು ಮಾತಿನ ಜನ ಸೇರುವ ಸಂಧಿಸ್ಥಾನವಾಗಿದ್ದಿತು.

**2. ಸಾಹಿತ್ಯ ಕಾಲ:**

ವಿದ್ವಾಂಸರು ತಮಿಳಿನ ದೊರೆತಿರುವ ಮೊದಲ ಸಂಪೂರ್ಣ ಕೃತಿ ತೊಲ್ಕಾಪ್ಪಿಯಂ, ಸಂಸ್ಕೃತ ವೈಯಾಕರಣ ಪಾಣಿನಿಗಿಂತ ಮುಂಚಿನ ಕಾಲದ್ದೆಂದು ಪರಿಗಣಿಸಿದ್ದು, ಇದು ತಮಿಳು ಮಾತನಾಡುವವರ ಸೀಮೆಯನ್ನು ಸೂಚಿಸುತ್ತದೆ.

ವಡವೆಂಗಡಂ ತೆನ್‌ಕುಮರಿ ಯಾಯಿಡೈತ್ತಮಿಳ್ ಕೂರು ನಲ್ಲಗಂ

ದಕ್ಷಿಣದ ಕುಮಾರಿಯಿಂದ (ಕನ್ಯಾಕುಮಾರಿಯಿಂದ) ಉತ್ತರದ ವೆಂಗಡದ ವರೆಗಿನ ಒಳ್ಳೆಯ ತಮಿಳನ್ನು ಮಾತನಾಡುವ ಪ್ರದೇಶ.

ಇದರಿಂದಾಗಿ ಕ್ರಿಸ್ತಶಕದ ಆದಿಯಿಂದಲೂ ದಕ್ಷಿಣ ಭಾರತದ ತಿರುಮಲೆ ಪ್ರಸಿದ್ಧವಾಗಿದ್ದಿತೆಂದು ತಿಳಿದು ಬರುತ್ತದೆ.

**3. ಪ್ರಾಚೀನ ಕಾಲ:**

ತಮಿಳು ಸಾಹಿತ್ಯದ ಪ್ರಾಚೀನಕಾಲದಲ್ಲಿ ಸಂಗಂಸಾಹಿತ್ಯದ ಪತ್ತು ಪಾಟ್ಟು , ಎಟ್ಟು ತೊಗೈ, ಪುರನಾನುರುಗಳು ಹಾಗೂ ಮಹಾ ಕಾವ್ಯಗಳಾದ ಶಿಲಪ್ಪದಿಕಾರಂ, ಮಣಿ ಮೇಖಲೈಗಳ ರಚನಾ ಕಾಲದಲ್ಲಿ ನಾವು ಶಿಲಪ್ಪದಿಕಾರಂನಲ್ಲಿ ತಿರುಮಲೆಯ ಉಲ್ಲೇಖವನ್ನು ಕಾಣಬಹುದಾಗಿದೆ. ಈ ಕೃತಿಯು ಕ್ರಿ.ಶಕದ ಎರಡನೇ ಶತಕಕ್ಕೆ ಸೇರಿದ್ದು, ಸಂಗಂ ಸಾಹಿತ್ಯದ ಕೃತಿಗಳಿಗಿಂತ ಈಚಿನದೆಂದು ತಿಳಿಯ ಲಾಗಿದೆ. ಹಲವು ವಿದ್ವಾಂಸರು ಕಾಲಾನುಕ್ರಮವಾಗಿ ಇದು ಕ್ರಿ.ಶಕದ ಎಂಟನೆಯ ಶತಮಾನದಲ್ಲಿ ರಚಿತವಾಗಿರಬಹುದೆಂದು ಬೆಟ್ಟ ವನ್ನು 'ನೆಡಿಯೋನ್ ಕುನ್ರಂ' (ವಿಷ್ಣುಪರ್ವತ) ಎಂದು ಕರೆಯಲಾಗಿದ್ದು ಅದರ ದೇವರನ್ನು ಹೀಗೆ ಹೊಗಳಲಾಗಿದೆ.

ವೆಂಗಡದ ಶಿಖರದಮೇಲೆ ಎರಡೂ ಕಡೆಯಿಂದ ಸುರಿಯುವ ಝರಿಗಳ ನಡುವೆ ಸೂರ್ಯ ಚಂದ್ರರ ಕಿರಣಗಳ ಬೆಳಕಿನಂತೆ ಪ್ರಕಾಶಿಸುತ್ತಿರುವ ಕಮಲದ ಕಣ್ಕಾಂತಿ ಹೊಂದಿದ ವಿಷ್ಣು (ನೆಡಿಯೋನ್) ವು ತನ್ನ ನಡುವಿನಲ್ಲಿ ಪೀತಾಂಬರ ಧಾರಿಯಾಗಿ ಸುಂದರ ವಾದ ಹಾರವನ್ನು ಕಂಠದಲ್ಲಿ ಧರಿಸಿ, ಕಮಲವನ್ನು ಹೋಲುವ ಕೈಗಳಲ್ಲಿ ಅಜೇಯವಾದ ಚಕ್ರ ಹಾಗೂ ಕ್ಷೀರ ಶುದ್ಧ ಶಂಖವನ್ನು ಹೊಂದಿ ನಿಂತ ಭಂಗಿಯಲ್ಲಿದ್ದಾನೆ. ಆತ ಮಿಂಚು, ಮಳೆಬಿಲ್ಲಿನಿಂದ ಕೂಡಿದ ಕಾಳಮೇಘದಂತಿದ್ದಾನೆ.

ಈ ಕೃತಿಯಲ್ಲಿ ಕೀರ್ತಿತವಾಗಿರುವ ಮೂರುಸ್ಥಳಗಳೆಂದರೆ ಶ್ರೀರಂಗಂ, ತಿರುಪತಿ, ತಿರುಮಾಲ್ ಕುನ್ರಂಗಳಾಗಿದ್ದು ಇಲ್ಲಿ ಇತರ ಎರಡು ಸ್ಥಳಗಳಿಗಿಂತ ಹೆಚ್ಚಿನ ಪ್ರಾಮುಖ್ಯವನ್ನು ವೆಂಗಡಕ್ಕೆ ನೀಡಲಾಗಿದೆ.

ಇದರಿಂದಾಗಿ ಮಹಾಕಾವ್ಯಗಳ ಕಾಲದಲ್ಲಿ ತಿರುಮಲೆಯನ್ನು ಪವಿತ್ರ ಕ್ಷೇತ್ರವೆಂದು ತಿಳಿಯಲಾಗಿದ್ದಿತು ಎಂಬುದು ಸ್ಪಷ್ಟವಾಗುತ್ತದೆ.

## 4. ಸ್ತೋತ್ರಸಾಹಿತ್ಯ ಕಾಲ:

ಪ್ರಾಚೀನ ಮಹಾಕಾವ್ಯಗಳ ಕಾಲದಿಂದ ನಾವು ಮುಂದಕ್ಕೆ ಬಂದರೆ ಸ್ತೋತ್ರ ಸಾಹಿತ್ಯ ಕಾಲಕ್ಕೆ ಬರುತ್ತೇವೆ. ಇಲ್ಲಿ ವೈಷ್ಣವ ಆಳ್ವಾರರ ನಾಲಾಯಿರ ದಿವ್ಯ ಪ್ರಬಂಧಗಳಲ್ಲಿ ಹಲವಾರು ಕಡೆ ವೆಂಗಡದ ಕೀರ್ತನೆಯನ್ನು ಕಾಣಬಹುದು. ಈ ಹನ್ನೆರಡುಮಂದಿಯಲ್ಲಿ ಮಧುರ ಕವಿ ಆಳ್ವಾರ್ ಹಾಗೂ ತೊಂಡರಡಿಪ್ಪೊಡಿ ಆಳ್ವಾರರು ಮಾತ್ರವೇ ತಿರುಪತಿಯ ಬಗ್ಗೆ ಉಲ್ಲೇಖಿಸುವುದಿಲ್ಲ. ಮಿಕ್ಕ ಹತ್ತು ಮಂದಿಯೂ ತಿರುಮಲೆಯನ್ನು ಅದರ ದೇವರನ್ನೂ ಸ್ತುತಿಸಿದ್ದಾರೆ.

ಆಳ್ವಾರರುಗಳಲ್ಲಿ ಮೊದಲಿಗರೆನ್ನಲಾದ ಪೊಯ್ಗೈ ಪೂದತ್ತ, ಪೇಯಾಳ್ವಾರರು ತಿರುಪತಿಯ ಬಳಿಯಲ್ಲಿನ ಇಂದಿನ ಚೆಂಗಲ್ಪಟ್ಟು ಆರ್ಕಾಡುಗಳನ್ನು ಒಳಗೊಂಡು ಅಂದಿನ ತೊಂಡೈನಾಡುವಿನಲ್ಲಿ ಪರಸ್ಪರ ಸಮಕಾಲೀ ನರಾಗಿ ಜೀವಿಸಿದ್ದರೆಂದು ತಿಳಿಯಲಾಗಿದೆ. ಒಂದು ಖಚಿತವಾದ ಕಾಲದ ನಿರ್ಣಯ ಮಾಡುವುದು ಕಷ್ಟಸಾಧ್ಯವಾದರೂ ಅವರನ್ನು ಮೊದಲಾಳ್ವಾರರೆಂದು ಕರೆಯುವುದ ರಿಂದಲೂ, ಅವರುಗಳು ಪಾಶುರಗಳಲ್ಲಿನ ಆಂತರಿಕ ಸಾಕ್ಷಿಗಳಿಂದಲೂ ಅವರು ಕ್ರಿ.ಶ.ಏಳನೇ ಶತಕದ ಸುಮಾರಿನಲ್ಲಿದ್ದವರೆಂದರೆ ಸತ್ಯಕ್ಕೆ ಬಹುದೂರ ವಾಗದು ಎನ್ನಬಹುದು. ಇವರು ಮೂವರೂ ನಾಲಾಯಿರ ಪ್ರಬಂಧಗಳಿಗೆ ತಲಾ ನೂರು ಪ್ರಬಂಧಗಳ ವಂತಿಗೆ ನೀಡಿದ್ದು, ಪೊಯ್ಗೈಆಳ್ವಾರರು ತಮ್ಮ ನೂರು ಪಾಶುರಗಳಲ್ಲಿ ಒಂಭತ್ತು ಪಾಶುರಗಳಲ್ಲಿನ ವೆಂಗಡವನ್ನು ಕುರಿತು ಹಾಡಿದ್ದಾರೆ. ಈ ಆಳ್ವಾರರು ತಿರುವಿಣ್ಣಗರಂ ತಿರುವೇಃಕಾ, ತಿರುಕೋಯಿಲೂರುಗಳೊಂದಿಗೆ ವೆಂಗಡವನ್ನು ಸೇರಿಸಿ ಒಟ್ಟು ನಾಲ್ಕು ಪ್ರಸಿದ್ಧ ಆಲಯಗಳನ್ನು ಹೆಸರಿಸಿದ್ದಾರೆ. ಅವರ ಪ್ರಕಾರ ವೆಂಗಡವು ದೇವತೆಗಳಿಗೆ ಪ್ರಿಯವಾಗಿ ತಿಳಿದವರ ಆರಾಧನೆಯ ಸ್ಥಳವಾಗಿ, ನಾಲ್ಕು ವೇದಗಳ ದೈವದ ಸ್ಥಳವಾಗಿದೆ.

ಭೂದತ್ತಾಳ್ವಾರರು ತಮ್ಮ ತಿರುವಂದಾದಿಯಲ್ಲಿ ಎಂಟು ಪಾಶುರಗಳಲ್ಲಿ ವೆಂಗಡವನ್ನು ವರ್ಣಿಸಿದ್ದಾರೆ. ಇವರ ಪ್ರಕಾರ ಅಪೇಕ್ಷೆಗರ್ಹವಾದ ಅತ್ಯುನ್ನತ ವಸ್ತು ವೆಂಗಡವಾಗಿದ್ದು ಇಲ್ಲಿನ ದೈವ ದೇವಾದಿದೇವನಾಗಿ ವೇದಗಳಲ್ಲಿ ಕಂಡುಬರುವ ಪರಮ ಪುರುಷ ನಾಗಿದ್ದಾನೆ. ಪೇಯಾಳ್ವಾರರು ತಮ್ಮ ತಿರುವಂದಾದಿಯಲ್ಲಿ 15ಕಡೆ ತಿರುಮಲೆಯನ್ನು ಹೆಸರಿಸುವರು. ಈ ಶತಕದ 63,75ನೇ ಪಾಶುರ ಗಳಲ್ಲಿ ಮೊದಲಬಾರಿಗೆ ತಿರುಮಲೈ ಎಂಬ ಪದಪ್ರಯೋಗವಾಗಿದೆಯೆಂಬುದನ್ನು ಕಾಣಬಹುದು.

ಈ ಆಳ್ವಾರರು ಹೇಳುವಂತೆ ವೇಂಗಡದ ಪಾವಿತ್ರ್ಯವು ವೈಕುಂಠ, ಕ್ಷೀರಸಾಗರಗಳಿಗಿಂತ ಹೆಚ್ಚಲ್ಲವಾದರೂ ಸಮಾನಾದದ್ದು, ವೆಂಗಡದ ದೈವವು ಸರ್ವೋತ್ತಮ ದೇವರು.

ಇರೈಯಾಯ್ ನಿಲನಾಯ್ ಎಣೆದಿಸೈಯುಂ ತಾನಾಯ್
ಮರೈಯಾಯ್ ಮರೈಪ್ಪೊರುಳಾಯ್, ವಾನಾಯ್ ಪಿರೈವಾಯ್‌ನ್ದ
ವೆಳ್ಳತ್ತರುವಿ ವಿಳಂಗೋವಿನೀರ್ ವೇಂಗಡತ್ತಾನ್
ಉಳ್ಳತ್ತಿನುಳ್ಳೇ ಉಳನ್.

- ಪೆರಿಯಾಳ್ವಾರ್ - 39

ಅಸಂಖ್ಯವಾದ ಝುರಿಗಳಲ್ಲಿ ಕಲರವನಾದದಿಂದ ಹರಿಯುವ ನೀರಿನ ಊಟೆಗಳಿರುವ ಪರ್ವತದಲ್ಲಿರುವ ವೆಂಗಡತ್ತಾನನು ಅಷ್ಟದಿಕ್ಕುಗಳೂ, ಲೋಕವೂ, ನಾಲ್ಕುವೇದಗಳೂ, ಅವುಗಳ ಸಾರವೂ ಆಗಿದ್ದು ಎಲ್ಲರ ಹೃದಯ ದಲ್ಲಿರುವವನೂ ಆಗಿದ್ದಾನೆ.

ಈ ಆಳ್ವಾರರ ಕಾಲದ ಜೊತೆಗೇ ಹೇಳಲಾಗುವ ತಿರುಮಳಿಶೈ ಆಳ್ವಾರರು ತಮ್ಮ ತಿರುಚ್ಚಂದವಿರುತ್ತಂ ನಲ್ಲಿಯೂ, ನಾನ್ಮುಗನ್ ತಿರುವಂದಾದಿಯಲ್ಲಿಯೂ ವೆಂಕಟೇಶ್ವರಸ್ವಾಮಿಯನ್ನು ಸ್ತುತಿಸಿದ್ದಾರೆ. ಆ ದಿನಗಳಲ್ಲಿ ವೆಂಗಡವನ್ನು ಎಷ್ಟು ಗೌರವದಿಂದ ನೋಡಲಾಗುತ್ತಿದ್ದಿತೆಂಬುದನ್ನು ನಾನ್ಮುಗನ್ ತಿರುವಂದಾದಿಯ 48 ನೆಯ ಪಾಶುರದಲ್ಲಿ ಕಾಣಬಹುದು.

ವೇಂಗಡಮೇ ವಿಣ್ಣೋರ್ ತೊಳುವದುಂ ಮೆಯ್ಮೆಯಾಲ್
ವೇಂಗಡಮೇ ಮೆಯ್ವಿನೈ ನೋಯ್‌ತೀರ್ಪದುವುಂ - ವೇಂಗಡಮೇ
ದಾನವರೈ ವೀಳತ್ತನ್ನಾಳಿಪ್ಪಡೈ ಕೊಂಡು
ವಾನವರೈಕ್ಕಾಪ್ಪಾನ್ ಮಲೈ

- ನಾನ್ಮುಗನ್ ತಿರುವಂದಾದಿ 48.

ವೆಂಗಡವನ್ನು ದೇವತೆಗಳು ಪೂಜಿಸುತ್ತಾರೆ. ನಿಜವೆಂದರೆ ನಮ್ಮನ್ನು ಎಲ್ಲ ಪಾಪಗಳಿಂದಲೂ ರೋಗ ರುಜಿನಗಳಿಂದಲೂ ಪಾರುಮಾಡುವುದು ವೆಂಗಡವೇ. ದಾನವರನ್ನು ತನ್ನ ಚಕ್ರದಿಂದ ಸೋಲಿಸಿ, ದೇವತೆಗಳನ್ನು ಸಂರಕ್ಷಿಸಿದ ನಮ್ಮದೇವರು ನೆಲೆಯಾದ ಸ್ಥಳ ವೆಂಗಡವಾಗಿದೆ.

ನಾಲಾಯಿರ ದಿವ್ಯಪ್ರಬಂಧಗಳಿಗೆ ಹತ್ತು ಪಾಶುರಗಳ ಕೊಡುಗೆಯನ್ನಷ್ಟೇ ನೀಡಿರುವ ತಿರುಪ್ಪಾಣಿ ಆಳ್ವಾರ್ ಅವರೂ ಸಹ (ಅಮಲನಾದಿಪ್ಪಿರಾನ್) ವೆಂಗಡದೊಡೆಯನನ್ನು ಸ್ತುತಿಸಿದ್ದಾರೆ. ಶ್ರೀರಂಗ ಹಾಗೂ ವೆಂಗಡಗ ಳೆರಡನ್ನು ಕುರಿತು ಮಾತ್ರವೇ ಇವರು ಹಾಡಿರುವುದು.

ಆಳ್ವಾರಗಳಲ್ಲಿ ಹೆಚ್ಚು ಓದಿದವರಲ್ಲಿ ಒಬ್ಬರಾದ ತಿರುಮಂಗೈ ಆಳ್ವಾರರು ನಾಲಾಯಿರಕ್ಕೆ ಅತಿ ದೊಡ್ಡ ಸಂಖ್ಯೆಯ ಪಾಶುರಗಳನ್ನು ಕಾಣಿಕೆಗೆ ನೀಡಿದವರು. ಇವರ ಪಾಶುರಗಳಲ್ಲಿ ತಿರುಮಲೆ ಹಾಗೂ ಅದರೊಡೆಯನಿಗಾಗಿ 64 ಪಾಶುರಗಳುಂಟು. ಕ್ರಿ.ಶ. 8 ನೇ ಶತಮಾನದಲ್ಲಿದ್ದ ನಂದಿವರ್ಮ ಪಲ್ಲವ ಮಲ್ಲನ ಸೈನಿಕ ವಿಜಯಗಳನ್ನು ಇವರು ತಮ್ಮ ಪ್ರಬಂಧಗಳಲ್ಲಿ ದಾಖಲಿಸಿದ್ದಾರೆ, ಆದ್ದರಿಂದಾಗಿ ತಿರುಮಂಗೈ ಆಳ್ವಾರರ ಎಂಟನೆಯ ಶತಮಾನದ ಮಧ್ಯದಲ್ಲಿ ಪ್ರಸಿದ್ಧರಾದರು ಎನ್ನಬಹುದು. 'ತಾಯೇ ತಂದೆಯೆನ್ನುಂ' ಎಂದು ಆರಂಭವಾಗುವ ಪಾಶುರದಲ್ಲಿ ಆಳ್ವಾರರು ಅತ್ಯುನ್ನತ ತಾತ್ವಿಕ ಮೌಲ್ಯವನ್ನು ವಿವರಿಸಿ, ಆಳ್ವಾರರು ತಮ್ಮನ್ನು ಭವಬಂಧನದಿಂದ ಮುಕ್ತನನ್ನಾಗಿಸ ಬೇಕೆಂದು ಭಗವಂತನಲ್ಲಿ ಮೊರೆಯಿಡುವರು. ಈ ಪಾಶುರವನ್ನು ಹೀಗೆ ಅನುವದಿಸಲಾಗಿದೆ-

'ಇದುವರೆಗೂ ತಾಯಿ ತಂದೆ ಹೆಂಡತಿ ಮಕ್ಕಳ ಬಗ್ಗೆ ಚಿಂತಿಸಿ ಸಾಕಾಗಿದೆ. ವೆಂಗಡದೊಡೆಯನೆ! ಸುಂದರವಾದ ನಂದನ ವನಗಳಲ್ಲಿ ಸುವಾಸಿತ ಪುಷ್ಪಗಳಿಂದಾವೃತನಾದವನೆ! ನಿನ್ನ ದರ್ಶನವನ್ನು ಅತ್ಯಂತವಾಗಿ ಬಯಸಿ ಬಂದಿದ್ದೇನೆ. ನನ್ನನ್ನು ಅನುಗ್ರಹಿಸುವ ನಿನ್ನ ದೈವಿಕ ದಯೆಯನ್ನು ನನ್ನ ಮೇಲೆ , ಹರಿಸು!

ರಾಜ ಋಷಿಯಾದ ಕುಲಶೇಖರ ಆಳ್ವಾರರು ನಾಲಾಯಿರಕ್ಕೆ 105 ಪಾಶುರಗಳ ವಂತಿಗೆ ನೀಡಿದ್ದು ತಿರುವೆಂಗಡದ ಬಗ್ಗೆ ಹನ್ನೊಂದು ಪಾಶುರಗಳಿವೆ. ಈ ಆಳ್ವಾರರೂ ಕ್ರಿ.ಶ. 9 ನೇ ಶತಮಾನದ ಆಸುಪಾಸಿನಲ್ಲಿ ದ್ದವರು. ಅವರು ವೆಂಗಡದಬಗ್ಗೆ ಹಾಡಿದ 'ಊನೇರು' ಪಾಶುರ ಸಾಹಿತ್ಯಕ ಗುಣದಿಂದಲೂ ಕೂಡಿದ್ದು ಆರ್ದ್ರವಾಗಿದೆ. ಈ ಪಾಶುರದಲ್ಲಿ ಆಳ್ವಾರರು ತಿರುಮಲೆಯ ಪರ್ವತಗಳಲ್ಲಿ ಪಶುವಾಗಿ, ಪಕ್ಷಿಯಾಗಿ, ಕಲ್ಲು, ಮರ, ಗಿಡ, ನೆಲವಾಗಿ, ಜಲವಾಗಿ, ಜಡವಾಗಿ, ಝುರಿಯಾಗಿ, ಪುಷ್ಕರಿಣಿಯ ಮೀನಾಗಿ ಇರುವುದೇ ಎಲ್ಲ ರಾಜ್ಯ ಸಂಪದಗಳಿಗಿಂತ ಉತ್ತಮ ದೆಸೆಯೆಂದು ಹೇಳುತ್ತಾರೆ. ವೆಂಕಟೇಶ್ವರಸ್ವಾಮಿಯನ್ನು ಸಕಲ ಪಾಪಹರನೆಂದು ಸ್ತುತಿಸಲಾಗಿದೆ.

ತಿರುಮಲೆಯ ಬೆಟ್ಟದಲ್ಲಿ ಒಂದು ಮೆಟ್ಟಿಲಾಗಿರುವುದೇ ಸಕಲಾರ್ಥಸಾಧಕ ವೆಂದು ಬೇಡಲಾಗಿದೆ. 'ವಿಶ್ವಕಾರಣನೇ! ವೆಂಗಡದೊಡೆಯನೆ ನನ್ನೆಲ್ಲ ಪಾಪಗಳಿಂದ ಮುಕ್ತಗೊಳಿಸುವವನೆ, ದೇವತೆಗಳೂ, ಅಪ್ಸರೆಯರೂ, ಜ್ಞಾನಿಗಳೂ ಪೂಜೆಗೆಂದು ಬರುವ ನಿನ್ನ ದೇವಾಲಯದ ಹೊಸ್ತಿಲಿನ ಮೆಟ್ಟಿಲಾಗಿ ಯಾದರೂ ಸರಿಯೇ, ದಿಂಡುರುಳಿ ಬಿದ್ದು ನಿನ್ನ ಹವಳದ ತುಟಿಯ ಬಾಯನ್ನು ಕಾಣಲಿಷ್ಟ ಪಡುವೆ

ದಕ್ಷಿಣ ಭಾರತದ ಶ್ರೀವಿಲ್ಲಿಪುತ್ತೂರಿನವರಾದಂತಹ ಪೆರಿಯಾಳ್ವಾರರು ನಾಲಾಯಿರಕ್ಕೆ 473 ಪಾಶುರಗಳ ಕೊಡುಗೆ ನೀಡ್ಡಿದು ಹದಿನಾರು ಶ್ರೀವೈಷ್ಣವ ಕ್ಷೇತ್ರಗಳನ್ನು ಕೀರ್ತಿಸಿದ್ದಾರೆ. ಅವುಗಳಲ್ಲಿ ವೆಂಗಡವೂ ಒಂದು. ಈ ಆಳ್ವಾರರ ಕಾಲ ಖಚಿತವಾಗಿ ತಿಳಿದು ಬಂದಿಲ್ಲವಾದರೂ, ಇವರ ಕಾವ್ಯಶೈಲಿ ಹಾಗೂ ಅತಿ ಹೆಚ್ಚು ಸಂಸ್ಕೃತ ಪದಗಳ ಬಳಿಕೆಯಿಂದಾಗಿ, ಇವರು ತಿರುಮಂಗೈ ಆಳ್ವಾರಿಗಿಂತ ಈಚಿನವರೆಂದು ಹೇಳಬಹುದು. ಇವರ ಪ್ರಕಾರ ವೇದಗಳಲ್ಲಿ ಹೇಳಲಾಗಿರುವ ಪರಮಸತ್ಯವೇ ವೆಂಗಡದ ದೈವವಾಗಿದ್ದು, ಈ ಆಳ್ವಾರರು ಅವನ ಕರುಣೆಯಿಂದಲೇ ಪಾಪಮುಕ್ತರಾಗಿದ್ದು, ಸರ್ವೋಚ್ಛಸ್ತರದ ಆನಂದವನ್ನು ಪಡೆದಿರುವರು.

ಪೆರಿಯಾಳ್ವಾರರ ಪುತ್ರಿಯೆಂದೇ ಪ್ರಸಿದ್ಧವಾಗಿರುವ ಆಂಡಾಳ್ ಮಾತ್ರವೇ ಆಳ್ವಾರಗಳ ಸಾಲಿನಲ್ಲಿ ನಿಲ್ಲತಕ್ಕ ಏಕಮಾತ್ರ ಸ್ತ್ರೀಯಾಗಿದ್ದು ಆಕೆ, ನಾಲಾಯಿರಕ್ಕೆ ನೀಡಿದ 173 ಪಾಶುರಗಳ ಕಾಣಿಕೆಯಲ್ಲಿ ಹದಿನಾರು ವೆಂಗಡದ ಬಗ್ಗೆ ಇವೆ. ವೀಣ್ಣೀಲಲ್ವಾಯ್ಮೋ-ಪಾಶುರದಲ್ಲಿ ಮೋಡವನ್ನು ವೆಂಗಡದೊಡೆಯನಿಗೆ ತನ್ನ ಸಂದೇಶವನ್ನು ಸೇರಿಸಲು ಪ್ರಾರ್ಥಿಸುವುದಿದೆ. ಇಲ್ಲಿ ಆಕೆಯ ವೆಂಗಡ ದೊಡೆಯನ ಬಗ್ಗೆ ಹೊಂದಿರುವ ಅತ್ಯಂತ ಉತ್ಕಟಾವಸ್ಥೆಯ ಪ್ರೇಮವನ್ನು ವಿವರಿಸಿ, ಅವನು ತನ್ನನ್ನು ವಿವಾಹವಾಗಲು ಕೇಳಬೇಕೆಂದು ಹೇಳಿದ್ದಾಳೆ. ಕಾಳಿದಾಸನ ಮೇಘದೂತವನ್ನು ಹೋಲುವ ಕೃತಿಯಿದು.

ಪಾಶುರ ಸಂಖ್ಯೆಯ ಗಾತ್ರದಲ್ಲಿ ತಿರುಮಂಗೈ ಆಳ್ವಾರರಿಗೆ ಮಾತ್ರವೇ ಎರಡನೆಯವರಾಗುವ ನಮ್ಮಾಳ್ವಾರರು ವೆಂಗಡದೊಡೆಯನನ್ನು 54 ಪಾಶುರಗಳಲ್ಲಿ ಹಾಡಿದ್ದಾರೆ. ಪರಂಪರೆಯ ನಂಬಿಕೆಯಂತೆ ಈ ಆಳ್ವಾರರ ಕಾಲ ಕಲಿಯುಗದಾದಿಯಾದರೂ, ಇವರು ಕ್ರಿ.ಶ 10 ನೇ ಶತಮಾನದವರೆಂದೂ ಭಾವಿಸಲಾಗಿದೆ. ಇವರು ಹೇಳುವಂತೆ ವೆಂಗಡದ ದೇವರು ಆದಿಮೂರ್ತಿಯಾಗಿದ್ದು, ಈ ಸ್ಥಳವೂ ಮೋಕ್ಷವನ್ನು ನೀಡತಕ್ಕಾಗಿದೆ. ಈ ಆಳ್ವಾರರು ಮಾತ್ರವೇ ವೆಂಗಡದೊಡೆಯನನ್ನು ಅಲರ್‌ಮೇಲ್ ಮಂಗೈಯ ಪ್ರಭುವೆಂದು ವರ್ಣಿಸಿದ್ದಾರೆ. (ಅಲರ್‌ಮೇಲ್ ಮಂಗೈಯುರೈಮಾರ್ಪಾ) ತಿರುಪತಿಯ ಬಳಿಯಿರುವ ತಿರುಚಾನೂರಿನ ಪ್ರಾಮುಖ್ಯ ಈ ಕಾಲ ದಲ್ಲಿ ಪ್ರಾಯಶಃ ಹೆಚ್ಚಾಗಿರಬಹುದು

## 5. ಪುರಾಣಕಾಲ:

ತಮಿಳು ಸಾಹಿತ್ಯದಲ್ಲಿ ಪ್ರಬಂಧ ಕಾಲದ ನಂತರ ಪುರಾಣಕಾಲಕ್ಕೆ ಬರುತ್ತೇವೆ. ಈ ಕಾಲದ ಅತ್ಯಂತ ಪ್ರಮುಖವಾದ ಕೃತಿಯೆಂದರೆ ಕಂಬರಾಮಾಯಣ. ಸಂಪ್ರದಾಯಕ ಪ್ರತೀತಿಯಂತೆ ಕಂಬರಾಮಾಯಣವನ್ನು ಶಾಲಿವಾಹನ ಶಕದ 807 ನೇ ವರ್ಷದಲ್ಲಿ (ಕ್ರಿ.ಶ. 885) ಪೂರ್ಣಗೊಳಿಸಲಾಯಿತು. ಆದರೆ ವರಂಗಲ್ಲಿನ ಒಂದನೇ ಪ್ರತಾಪರುದ್ರ ಹಾಗೂ ಚೋಳರ ಎರಡನೇ ಕುಲೋತ್ತುಂಗರುಗಳಿಗೆ ಕಂಬನಾಟ್ಟಾಳ್ವಾರ್ ಸಮಕಾಲೀನನೆಂದು ಹೇಳಲು ಹಲವಾರು ಸಾಹಿತ್ಯಕ ಆಧಾರಗಳುಂಟು. ಹೀಗಾಗಿ ಇಂದಿನ ವಿದ್ವಾಂಸರುಗಳ ಕಂಬ ರಾಮಾಯಣವನ್ನೂ ಸಹ ಕ್ರಿ.ಶ.12 ನೇ ಶತಮಾನದಲ್ಲಿಯೇ ರಚನೆಗೊಳಿಸಿರಬೇಕೆಂದು ಭಾವಿಸುವರು. ಕಂಬರಾಮಾಯಣದಲ್ಲಿ ವೆಂಗಡವೂ ಅದರ ಪಾವಿತ್ರ್ಯವೂ ಕೀರ್ತಿತವಾಗಿವೆ. ಕಂಬರಾಮಾಯಣದ ಕಿಷ್ಕಿಂಧಾ ಕಾಂಡ ನಡಾವಿಟ್ಟ ಪದಲಂ ನ 26, 27, 28, ನೇ ಪದ್ಯಗಳ ಸಾರಾಂಶ ಹೀಗಿದೆ-

'ಸೀತೆಯ ಅನ್ವೇಷಣೆಯಲ್ಲಿ ತನ್ನ ಸೈನ್ಯದ ವಿವಿಧ ನಾಯಕರುಗಳನ್ನು ಆರಿಸಿ, ಅವರನ್ನು ವಿವಿಧ ದಿಕ್ಕುಗಳಲ್ಲಿ ಹೊರಡುವಂತೆ ಆದೇಶಿಸಿದ ನಂತರ ಸುಗ್ರೀವನು ಹನುಮಂತನಿಗೆ ಹೀಗೆ ಹೇಳಿದ - ನೀನು ಜೇನುಗೂಡುಗಳಿಂದ ತುಂಬಿದ ದಟ್ಟವಾದ ಅರಣ್ಯದ ವೆಂಗಡ ಪರ್ವತವನ್ನು ಸೇರುವೆ. ಇದು ಶಾಶ್ವತವಾದ ಸತ್ಯಕ್ಕೂ, ಎಲ್ಲ ಒಳಿತಿಗೂ ನಿವಾಸಸ್ಥಳ ಆಗಿದ್ದು, ನಾಲ್ಕು ವೇದಗಳು ಹಾಗೂ ಶಾಸ್ತ್ರಗಳ ಸಾರವನ್ನು ಒಳಗೊಂಡ ದಕ್ಷಿಣದ ಭಾಷೆಯ ಹಾಗೂ ಉತ್ತರದ ಭಾಷೆಯಾಡುವ ಜನರ ನಡುವಿನ ಗಡಿಯಾಗಿದೆ. ಮೋಡದ

ಬೆಟ್ಟದ ಮೇಲಿರುವ ದಿವ್ಯಸೂರಿಗಳನ್ನು, ಸಿರಿದರಿದ್ರಗಳನ್ನು ಸಮನಾಗಿ ನೋಡುವವರನ್ನು, ಒಳಿತು ಕೆಡುಕು ಎಂಬೆಲ್ಲ ಕರ್ಮಬಂಧನಗಳಿಂದ ಮುಕ್ತರಾಗಿ ಯಾವುದೇ ಪ್ರತಿಫಲದ ಬಯಕೆಯೂ ಇಲ್ಲದೆ ಸರ್ವಕಾಲದಲ್ಲೂ ಒಳಿತನ್ನೇ ಚಿಂತಿಸುವ ಆ ಉತ್ತಮರನ್ನಾವು ಇಲ್ಲಿಂದಲೇ ನೆನೆದು ನಮಿಸಬೇಕು. ಪವಿತ್ರವಾದ ವೆಂಗಡ ಬೆಟ್ಟದ ಮೇಲೆ ಅಸಂಖ್ಯರಾದ ಬ್ರಹ್ಮಜ್ಞಾನಿಗಳು ನಿತ್ಯನಿವಾಸಿಗಳಾಗಿದ್ದು, ಉತ್ತಮ ತಪೋಧನರು ಅಲ್ಲಿನ ತೀರ್ಥಗಳಲ್ಲಿ ಸ್ನಾನ ಮಾಡುತ್ತಿರುವರು. ಮೇಘಗಳು ಮುತ್ತಿಡುವ ಈ ಪರ್ವತ ಶಿಖರಗಳಲ್ಲಿ ಅಮೂಲ್ಯವಾದ ವಜ್ರಗಳೂ ಇದ್ದು, ಈ ಕಾಡುಗಳಲ್ಲಿ ಅಸಂಖ್ಯ ಪ್ರಾಣಿಗಳೂ, ತಮ್ಮಲ್ಲಿನ ಸಹಜವೈರವನ್ನು ಮರೆತು ಶಾಂತವಾಗಿ ಲೀಲಾ ವಿನೋದಗಳಿಂದ ತಿರುಗಾಡುತ್ತ ಕಿನ್ನರ ಕಿಂಪುರುಷ ವಿದ್ಯಾಧರರ ಮಧುರ ಸಂಗೀತವನ್ನು ಆಲಿಸುತ್ತ ನಿದ್ದೆ ಮಾಡುತ್ತವೆ'.

ವಾಲ್ಮೀಕಿ ರಾಮಾಯಣದಲ್ಲಿ ಇದೇ ಸ್ಥಳದಲ್ಲಿ ವೆಂಕಟಾಚಲದ ಹೆಸರು ಕಂಡುಬರುವುದಿಲ್ಲವೆಂಬುದು ಗಮನಾರ್ಹ.

ಹಿಂದೆ ಕಾಣಿಸಿರುವ ತಮಿಳು ಸಾಹಿತ್ಯದಲ್ಲಿನ ಉಲ್ಲೇಖಗಳಿಂದ ಇತಿಹಾಸಪೂರ್ವಕಾಲದಿಂದಲೂ ವೆಂಗಡದೊಡೆಯನ ವಿವಿಧ ವರ್ಣನೆಯನ್ನೂ ಬೆಟ್ಟಕ್ಕೆ ಪರಂಪರೆಯಿಂದ ನೀಡಲಾಗಿರುವ ಗೌರವವನ್ನೂ ತಿಳಿಯಬಹುದು.

## ಭಾಗ -2 : ಸಂಸ್ಕೃತ ಸಾಹಿತ್ಯ

### ವಿಶ್ವಗುಣಾದರ್ಶ ಚಂಪೂ:

ರಘುನಾಥ ದೀಕ್ಷಿತ ಹಾಗೂ ಸೀತಮ್ಮನವರ ಪುತ್ರ ವೆಂಕಟಾಧ್ವರಿಯಿಂದ ರಚಿತವಾದ ಚಂಪೂಕಾವ್ಯ ವಿಶ್ವಗುಣಾದರ್ಶ. ಈತ ಕಂಚಿಯ ನಿವಾಸಿ. ಕೃಶಾನು ಹಾಗೂ ವಿಶ್ವಾವಸು ಎಂಬಿಬ್ಬರ ನಡುವಣ ಮಾತುಕಥೆಯ ವಿವರದ, ಚಂಪೂ ರೂಪದ ಕೃತಿಯಿದು. ವಿಶ್ವಗುಣಾದರ್ಶದ ವಸ್ತುವೆಂದರೆ ಬದರಿಯಿಂದ ಸೇತುವಿನವರೆಗೆ ಕಂಡುಬರುವ ವಿವಿಧ ಪವಿತ್ರ ದೇವಾಲಯಗಳು ಹಾಗೂ ತೀರ್ಥಕ್ಷೇತ್ರಗಳು. ಕೃಶಾನುವು ಎಲ್ಲ ಕ್ಷೇತ್ರಗಳನ್ನೂ ಟೀಕಿಸುತ್ತ ಮಾತನಾಡಿದರೆ ವಿಶ್ವಾವಸುವು ಎಲ್ಲವನ್ನೂ ಸಮರ್ಥಿಸುವಂತೆ ಸಕಲ ಕ್ಷೇತ್ರಗಳ ವಿವರಿಸುವ ರೀತಿಯಲ್ಲಿ ವರ್ಣಿತವಾಗಿದೆ.

ಬದರಿಯಿಂದ ಸೇತುವಿನವರೆಗೆ ಅವರ ತೀರ್ಥಯಾತ್ರೆಯ ಕಾಲದಲ್ಲಿ ಅವರಿಬ್ಬರೂ ಶೇಷಾಚಲ - ತಿರುಮಲೆ ಆಲಯಕ್ಕೂ ಬಂದಿದ್ದಂತೆ ಚಿತ್ರಣವಿದ್ದು ಈ ಬಗ್ಗೆ ಆಲಯ ಹಾಗೂ ಅದರ ಪರಿಸರವನ್ನು ವಿವರಿಸುವ ಒಂದು ಭಾಗವಿದೆ.

ವಿಶ್ವಾವಸುವು ತನ್ನ ಸ್ನೇಹಿತನಾದ ಕೃಶಾನುವಿಗೆ ವೆಂಕಟಾಚಲದ ಹಿರಿಮೆಯನ್ನು ವಿವರಿಸುತ್ತ, ಇಲ್ಲಿನ ದೇವರು ಲಕ್ಷ್ಮೀಪತಿಯೆಂದೂ, ತನ್ನ ಭಕ್ತರನ್ನು ಉದ್ಧರಿಸಲು ನಿಂತಿರುವನೆಂದು ಹೇಳುತ್ತಾನೆ. ತಿರುಮಲೆಯ ಆಲಯದ ವಿವರವನ್ನು ನೀಡುತ್ತ ವಿಶ್ವಾವಸುವು ವೈಕುಂಠಕ್ಕಿಂತ ಇಲ್ಲಿ ಹೆಚ್ಚು ಚೆನ್ನಾಗಿಯೆಂದು ಭಾವಿಸಿದ ಮಹಾವಿಷ್ಣುವು ವೈಕುಂಠವನ್ನು ತೊರೆದು ಇಲ್ಲಿ ಲಕ್ಷ್ಮಿಯ ಜೊತೆಗೂಡಿ ಶಾಶ್ವತವಾಗಿ ನೆಲಸಿದನೆಂದು ಹೇಳುತ್ತಾನೆ. ಎಲ್ಲ ವೇದಗಳ ಸಾರವೇ ಇಲ್ಲಿನ ದೇವರು ಎಂದೂ, ಯಾದವ ಕುಲದ ಶ್ರೀಕೃಷ್ಣನೇ ಇವನೆಂದೂ, ಭಕ್ತರ ಹೃದಯ ವಿಹಾರಿಯೆಂದೂ ವರ್ಣಿಸಿದ್ದಾನೆ.

ಕೃಶಾನು, ದೇವರ ಬಗ್ಗೆ ವ್ಯಂಗ್ಯವಾಡುತ್ತ, ಭಕ್ತರು ಹರಕೆಯನ್ನು ಹೊತ್ತು ಬಂದಲ್ಲಿ ಅವರ ಸಂಕಷ್ಟಗಳನ್ನು ನಿವಾರಿಸಲು ಅವರ ಹರಕೆಯನ್ನು ಬಡ್ಡಿಯ ಸಹಿತ ಕೇಳುವ ವ್ಯಾಪಾರಿಯೆಂದೂ, ಒಮ್ಮೆ ಬಾಯಾರಿದಾಗ ನೀರು - ಕೇಳಿದನೆಂದೂ ಕಾಡಿನಲ್ಲಿ ಅವರು ಬಾವಿತೋಡುವ ಪ್ರಯತ್ನದಲ್ಲಿರಲು, ಭೂಮಿಯನ್ನು ಎತ್ತಿಕೊಂಡು ಈತ ಓಡಿಹೋದನೆಂದೂ ಹಾಸ್ಯಮಾಡುವನು. ವೇದಗಳನ್ನು ತಿಳಿದವರು ಇಂತಹವರನ್ನು ಹೊಗಳಬಾರದು ಎಂಬುದು ಕೃಶಾನುವಿನ ಹೇಳಿಕೆ.

ಇಂತಹ ಒಂದು ವಿಮರ್ಶೆಗೆ ಉತ್ತರವಾಗಿ ವಿಶ್ವಾವಸುವು ದೇವರ ಉತ್ತಮಗುಣಗಳ ಚಿತ್ರೀಕರಣಗೈಯ್ಯುತ್ತಾನೆ. ಮತ್ತೊಮ್ಮೆ ಮಿಯನ್ನು ಹೊಗಳುತ್ತ ಕುಚೇಲನಿಗೆ ಮೂರು ಹಿಡಿ ಅವಲಕ್ಕಿಯ ಬದಲಿಗೆ ಅಮೇಯವಾದ ಸಂಪತ್ತನ್ನು ಕರುಣಿಸಿದ ಕೃಷ್ಣನೇ ಈತ

ಎಂದು ಹೇಳುತ್ತಾನೆ. ಈ ಪರ್ವತವೇ ಶ್ರೀರಾಮನ ಪ್ರತಿರೂಪವೆಂದೂ, ಶ್ರೀರಾಮನು ತನ್ನ ಹಿಂಬಾಲಕರಲ್ಲಿ ಗುಹನನ್ನು ಹೊಂದಿದ್ದಂತೆಯೇ, ಈ ಪರ್ವತವೂ ಅನೇಕ ಗುಹೆಗಳನ್ನು ಹೊಂದಿದೆ ಎಂದು ಹೇಳುವನು. ಆತ ಸೂರ್ಯವಂಶದವನಾದಂತೆಯೇ ಈ ಪರ್ವತವೂ ವಂಶಭರಿತ (ಬಿದಿರು ಮೆಳೆಗಳಿಂದ ಕೂಡಿದ್ದು) ಶ್ರೀರಾಮನು ಸಹೋದರರೊಂದಿಗೆ ಆವೃತವಾಗಿದ್ದಂತೆಯೇ ಈ ಪರ್ವತವೂ ಹಲವಾರು ಶಿಖರಗಳಿಂದ ಸುತ್ತವರೆಯಲ್ಪಟ್ಟಿದೆ. ಶೇಷಾಚಲದಲ್ಲಿ ಹಲವಾರು ಗುಡ್ಡಗಳನ್ನು ಕಾಣಬಹುದಾಗಿದೆಇಲ್ಲಿ ಪದವೆಂಬ ಪದವನ್ನು ಪಾದ, ಗುಡ್ಡ ಎಂಬ ಅರ್ಥ ಬರುವಂತೆ ಬಳಸಲಾಗಿದೆ.

ಹೀಗೆ ವಿಶ್ವಗುಣಾದರ್ಶಚಂಪು 16 ನೇ ಶತಮಾನದಲ್ಲಿನ ಗುಡಿ, ಹಾಗೂ ಬೆಟ್ಟದ ಬಗ್ಗೆ ವಿವರವನ್ನೊದಗಿಸುತ್ತದೆ.

### ಅ ತೆಲುಗು ಸಾಹಿತ್ಯ:

1. ***ಕೃಷ್ಣದೇವರಾಯ:*** ವಿಜಯನಗರದ ಪ್ರಸಿದ್ಧ ಚಕ್ರವರ್ತಿಯಾದ ಶ್ರೀಕೃಷ್ಣದೇವರಾಯ ಶ್ರೇಷ್ಠಕವಿಯೂ ಆಗಿದ್ದು, ತನ್ನ 'ಅಮುಕ್ತ ಮಾಲ್ಯದ' ಕೃತಿಯಲ್ಲಿ ವೆಂಕಟೇಶ್ವರಸ್ವಾಮಿಯ ಬಗ್ಗೆ ಹೇಳಿದ್ದಾನೆ. ಆತ ವೆಂಕಟೇಶ್ವರ ಸ್ವಾಮಿಯ ಹಿರಿಯ ಭಕ್ತನಾಗಿದ್ದು, ತಿರುಮಲೆಗೆ ಕಡಮೆಯೆಂದರೆ ಏಳು ಬಾರಿ ಬಂದಿದ್ದು, ಸ್ವಾಮಿಗೆ ಹಲವಾರು ಅಮೂಲ್ಯ ಆಭರಣಗಳನ್ನು ಸಮರ್ಪಿಸಿದ್ದಾಸ್ವಾಮಿಯ ಆಲಯದ ಗರ್ಭಗುಡಿಯ ಮೇಲಿನ ಆನಂದನಿಲಯ ವಿಮಾನದ ಚಿನ್ನದ ಮುಲಾಮೀಕರಣಕ್ಕೆ ಮೂವತ್ತು ಸಾವಿರ ವರಹಗಳನ್ನು ನೀಡಿದವನೂ ಆಗಿದ್ದ ಶ್ರೀಕೃಷ್ಣದೇವರಾಯನು, "ಶ್ರೀವೆಂಕಟ ಗಿರಿವಲ್ಲಭ ಸೇವಾಪರತಂತ್ರರಾಯ" ಎಂದೇ ಹೆಸರಾಗಿದ್ದಕೃಷ್ಣದೇವ ರಾಯನು ಶ್ರೀಕಾಕುಳಕ್ಕೆ ಹೋಗುತ್ತ ವಿಜಯವಾಡದ ಬಳಿಯಲ್ಲಿ ಪಾಳಯ ಹೂಡಿರಲು ಒಂದುದಿನ ರಾತ್ರಿ ಕನಸಿನಲ್ಲಿ ಕಾಣಿಸಿದ ಆಂಧ್ರಮಹಾವಿಷ್ಣುವು ಜಲಜಾಕ್ಷನಾದ ಶ್ರೀ ವೆಂಕಟೇಶ್ವರನಿಗೆ ಅರ್ಪಿಸಲೆಂದು ಒಂದು ಕಾವ್ಯವನ್ನು ಬರೆಯಲು ಆದೇಶನೀಡಿದ. ಅಮುಕ್ತಮಾಲ್ಯವೆಂದರೆ ತಾನು ಮುಡಿದುಕೊಂಡ ಹಾರವನ್ನು ದೇವರಿ ಗೆಂದು ನೀಡುವಿಕೆ. ಇದು ವಿಷ್ಣುಚಿತ್ತರ ಮಗಳು ಗೋದಾದೇವಿ - ಆಕೆಯ ಇನ್ನೊಂದು ಹೆಸರು ಶೂಡಿ ಕೊಡುತ್ತ ನಾಚ್ಚಿಯಾರ್ - ಮಾಡಿದ್ದು.

ಕೃತಿಯು ಗೋದಾದೇವಿ ಹಾಗೂ ಆಕೆಯ ಸಾಕು ತಂದೆ ವಿಷ್ಣುಚಿತ್ತರ ಕಥೆಯನ್ನು ಬಿತ್ತರಿಸುತ್ತದೆ. ಪುರಾಣಗಳಲ್ಲಿ ಕಂಡುಬರುವ ದಿವ್ಯಸೂರಿಗಳ ಚರಿತ್ರೆಯನ್ನು ವಿವರಿಸುವ ಶ್ರೀವೈಷ್ಣವತೆಯನ್ನು ಸಾರುವ ಕೃತಿಯಿದು. ಈ ಕೃತಿಯು ತಿರುಮಲೆಯ ಶ್ರೀವೆಂಕಟೇಶ್ವರ ಸ್ವಾಮಿಗೆ ಅರ್ಪಿತವಾಗಿ ಸಮಕಾಲೀನ ಶ್ರೀವೈಷ್ಣವ ಸಮಾಜದ ಆಚಾರ ನಂಬಿಕೆ ಸಂಪ್ರದಾಯ ಪರಂಪರೆಗಳನ್ನು ವಿವರಿಸುತ್ತದೆ.

2. ***ಛಾಯಾಪತಿ :*** ಶ್ರೀವೆಂಕಟೇಶ್ವರಸ್ವಾಮಿಗೆ ತನ್ನ ಕಾವ್ಯ 'ರಾಘಾವಾಭ್ಯುದಯ' ವನ್ನು ಅರ್ಪಿಸಿದವನು ಚಿಂತಲ ಪಲ್ಲಿಯ ಛಾಯಾಪತಿ.

ದೇವರಕೊಂಡದ ವೇಲಮ ಆಸ್ಥಾನದ ವಿದ್ವಾಂಸ ಕವಿಗಳ ವಂಶದವನಾದ ಕವಿಯು ಬೋರವೆಲ್ಲಿಯ ವೆಂಕಟರೆಡ್ಡಿಯ ಆಹ್ವಾನದಂತೆ ಕಾವ್ಯವನ್ನು ಬರೆದು ಶ್ರೀವೆಂಕಟೇಶ್ವರಸ್ವಾಮಿಗೆ ಅಂಕಿತ ಮಾಡಿಟ್ಟ, ಪ್ರಾಚೀನ ನಿಜಾಮನ ರಾಜ್ಯಕ್ಕೆ ಸೇರಿಹೋದ ಗದ್ವಾಲ ಸಂಸ್ಥಾನದಲ್ಲಿ ಮಿಳಿತವಾದ ಬೋರಿವೆಲ್ಲಿಯ ರಾಜರ ಅಭಿಪ್ರಾಯಕ್ಕೆ ಮನ್ನಣೆಕೊಟ್ಟ ಕವಿ 18 ನೇ ಶತಮಾನದವ ತೆಲಂಗಾಣ ಪ್ರಾಂತದವನು.

3. ***ಶ್ರೀವೆಂಕಟೇಶ್ವರ ಲಘುಕೃತುಲು:*** ತಿರುಮಲೆ ತಿರುಪತಿ ದೇವಸ್ಥಾನಗಳ ಪ್ರಾಚ್ಯ ಸಂಶೋಧನೆ ಸಂಸ್ಥೆ ತಮ್ಮಬಳಿಯಿದ್ದ 19 ಶತಕಗಳನ್ನು ಸಂಪಾದಿಸಿ ಪ್ರಕಟಿಸಿದ್ದು ಇದರ ಸಂಪಾದಕರು ಡಾ|| ವೇಟೂರಿ ಪ್ರಭಾಕರ ಶಾಸ್ತ್ರಿಗಳು (ಈ ಪುಸ್ತಕ ಪುನರ್ಮುದ್ರಣಗಳನ್ನು ಕಂಡಿದೆ- 2014) ಈ ಶತಕಗಳಲ್ಲಿ ಕೆಲವನ್ನಿಲ್ಲಿ ಪಟ್ಟಿಮಾಡಲಾಗಿದೆ.

***ವೆಂಕಟಾಚಲ ವಿಹಾರ ಶತಕಮು:*** 17 ನೇ ಶತಮಾನದ ಮೂರನೆಯ ಕಾಲುಭಾಗದಲ್ಲಿ ವಿಧರ್ಮೀಯರ ಗೋಲ್ಕೊಂಡ ನವಾಬನ ಸೈನ್ಯದ ಧಾಳಿಗಳಿಂದಾಗಿ ಅವರ ಕಗ್ಗೊಲೆಗೆ, ಲೂಟಿಗೆ ಬಲಿಯಾದ ತಿರುಪತಿ ತಿರುಮಲೆ ಪ್ರಾಂತ್ಯಗಳ ಜನರ ಬವಣೆಗಳನ್ನು ವಿವರಿಸುವ ಕೃತಿಯಿದು.

***ವೆಂಕಟಾಚಲ ಧಾಮ ತಾರಾವಳಿ:*** ಇದೊಂದು ನಿಂದಾಸ್ತುತಿಯಾಗಿದ್ದು, ಸಕಲ ಲೋಕವಲ್ಲಭನಾದ ವೆಂಕಟೇಶ್ವರ ಸ್ವಾಮಿಯು ಕುಸುಬಲಕ್ಕಿಯ ಅನ್ನವನ್ನುಂಡು, ತನ್ನ ಎದೆಯಲ್ಲಿ ಲಕ್ಷ್ಮಿಯನ್ನು ಹೊಂದಿದ್ದರೂ ಕಿಲುಬು ಕಾಸಿಗೆ ಕೈಯೊಡ್ಡಬೇಕಾಗಿ ಬಂದದ್ದು ವಿಪರ್ಯಾಸವೆನ್ನುತ್ತ ಕವಿ ತಿರುಮಲೆಯಲ್ಲಿ ಆಚರಣೆಯಲ್ಲಿದ್ದ ಪದ್ಧತಿಗಳನ್ನು ವಿವರಿಸುತ್ತಾನೆ.

***ಪಂಕಜಭವಾಂಡೇಶ ಶತಕಂ:*** ಈ ಕೃತಿಯು ಶ್ರೀ ವೆಂಕಟೇಶ್ವರಸ್ವಾಮಿಯ ಹತ್ತು ಅವತಾರಗಳನ್ನು ವಿವರಿಸಿ ಆತ ಕಲಿಯುಗಾಂತ್ಯದಲ್ಲಿ ಮತ್ತೆ ಕಲ್ಕಿಯಾಗಿ ಕಂಡುಬರುವನೆಂದು ಹೇಳುತ್ತದೆ. ಸ್ವಾಮಿಯ ಕಿರೀಟ, ಕುಂಡಲ, ಕೌಸ್ತುಭ, ರ್‍ತ್ನಹಾರ ಮತ್ತು ಸ್ವಾಮಿಯ ವಕ್ಷಃಸ್ಥಲದ ಲಕ್ಷ್ಮಿಯ ನಿತ್ಯನಿವಾಸವನ್ನು ಕೃತಿ ವರ್ಣಿಸುತ್ತದೆ.

***ಶ್ರೀ ವೆಂಕಟೇಶ್ವರ ಪಂಚಕ:*** ಈ ಪುಸ್ತಕದಲ್ಲಿ ಸ್ವಾಮಿಯ ತಿರುನಾಮದ ವರ್ಣನೆಯಿದೆ. ಸ್ವಾಮಿಯ ಕಪ್ಪು ಕೂದಲನ್ನು ಕುರಿತ ವಿಶಿಷ್ಟವಾದ ಉಲ್ಲೇಖವಿದೆ.

***ವೆಂಕಟಾಚಲಪತಿ ಶತಕಂ:*** ಈ ಕೃತಿಯಲ್ಲಿ ಕವಿಯು ತಾನು ಸ್ವಾಮಿಯ ಶಂಖ, ಚಕ್ರಗಳ ದರ್ಶನ ಪಡೆದುದಾಗಿಯೂ, ಸ್ವಾಮಿಯ ಪುಳಿಕಾಪ್ಪು ತೀರ್ಥ ಹಾಗೂ ಪ್ರಸಾದಗಳನ್ನು ಪಡೆದೆನೆಂದೂ ಹೇಳುತ್ತಾನೆ. ಸ್ವಾಮಿಯ ಕರುಣೆಯನ್ನು ವರ್ಣಿಸುತ್ತ ಪರಿಪೂರ್ಣ ಶರಣಾಗತಿಯನ್ನು ವಿವರಿಸುತ್ತಾನೆ.

***ವೆಂಕಟನಗಾಧ್ಯಕ್ಷ ಶತಕಂ:*** ಇದೂ ಸಹ ಒಂದು ಕವನ ಸಂಗ್ರಹವಾಗಿದ್ದು, ಇಲ್ಲಿ ಕವಿಯು ಸ್ವಾಮಿಗೆ ದಯೆಯೆಂಬುದೇ ಇಲ್ಲವೆಂದೂ, ಗ್ರಾಮೀಣಜನತೆಯಿಂದ ಕಾಸು ಕಸಿಯುವುದರಲ್ಲಿ ಮಗ್ನನಾಗಿರುವುದರಿಂದ, ಭಕ್ತರ ಬವಣೆಗಳನ್ನು ಕೇಳಲು ಬಿಡುವೇ ಇಲ್ಲವೆಂದೂ ದೂರುತ್ತಾನೆ. ಕವಿಯು ತನ್ನ ಅಂತರಾಳದ ಅನುಭಾವಗಳನ್ನು ಅಭಿವ್ಯಕ್ತಗೊಳಿಸಿ, ಶಂಖಚಕ್ರಗಳನ್ನು ವಿವರಿಸಿ, ದೇವರ ಪಾದಗಳು ಅಣಿಮಾದಿ ಅಷ್ಟ ಸಿದ್ಧಿಗಳನ್ನು ನೀಡುವ ಪರಮ ಪವಿತ್ರ ಪಾದಗಳೆಂದು ವರ್ಣಿಸಿದ್ದಾನೆ.

***ಶ್ರೀ ವೆಂಕಟೇಶ್ವರ ಕಲ್ಯಾಣ:*** ಇದೊಂದು ಪೌರಾಣಿಕ ಕಥೆಯಾಗಿದ್ದು ತ್ರಿಮೂರ್ತಿಗಳಲ್ಲಿ ಸರ್ವೋತ್ತಮನಾರೆಂಬುದನ್ನು ಪರೀಕ್ಷೆ ಮಾಡಲು ಭೃಗುಮಹರ್ಷಿ ಅವರುಗಳನ್ನು ಸಂದರ್ಶಿಸಿ ವಿಷ್ಣುವನ್ನು ಕಾಲಿನಿಂದ ಒದೆಯುವ ವಿವರವನ್ನು ಒಳಗೊಂಡಿದೆ. ಸ್ವಾಮಿಯ ವಕ್ಷಃಸ್ಥಲದಲ್ಲಿ ತನ್ನ ನಿವಾಸ ಹೊಂದಿದ ಲಕ್ಷ್ಮಿಯು ಮುನಿಯ ಉದ್ಧಟತನ, ಸ್ವಾಮಿಯ ವಿನಯಗಳಿಂದ ಬೇಸರಿಸಿ ಕೊಲ್ಹಾಪುರಕ್ಕೆ ಹೊರಟು, ಸ್ವಾಮಿಯ ಅಪೇಕ್ಷೆಯಂತೆ ತಿರುಚಾನೂರಿನ ಪದ್ಮಸರೋವರದಲ್ಲಿ ಕಾಣಿಸಿಕೊಂಡು ತಿರುಮಲೆಯಲ್ಲಿ ಸ್ವಾಮಿಯನ್ನು ಸೇರುವ ಕತೆಯು ಇಲ್ಲಿದೆ.

**ವೆಂಗಮಾಂಬ :** ವೆಂಗಮಾಂಬ ಶ್ರೀ ವೆಂಕಟೇಶ್ವರಸ್ವಾಮಿಯಲ್ಲಿ ಅತ್ಯಂತ ಉತ್ಕಟವಾದ ಭಕ್ತಿಯನ್ನು ಹೊಂದಿದ್ದಳು. ಆಕೆಗೆ ಮದುವೆ ಮಾಡಬೇಕೆಂದು ತಂದೆ ಪ್ರಯತ್ನಿಸಿ ಮದುವೆ ಮಾಡಲು, ಇಡೀ ಸಂಸಾರದ ಜಂಜಾಟವನ್ನು ತ್ಯಜಿಸಿ, ಸ್ವಾಮಿಯ ಸೇವೆಗೆ ತನ್ನನ್ನು ಅಂಕಿತ ಮಾಡಿಕೊಂಡಳು. ಈಕೆ ತಾನು ನಂದವರೀಕ ವಂಶದ ವಸಿಷ್ಟ ಗೋತ್ರದ ಕಾನಾಲ ಕೃಷ್ಣಯ್ಯ ಹಾಗೂ ಮಂಗಾಂಬೆಯರ ಮಗಳೆಂದು ತಿಳಿಸಿದ್ದಾಳೆ. ಈಕೆಯ ಪತಿಯ ಹೆಸರು ಇಂಜೇಟಿ ವೆಂಕಟಾಚಲಪತಿಯಾದದ್ದರಿಂದ ಈಕೆಗೆ ಇಂಜೇಟಿಯೆಂಬ ಮನೆಯ ಹೆಸರು ಖ್ಯಾತವಾಯಿತು.

ಈಕೆ 18 ನೇ ಶತಮಾನದ ಉತ್ತರಾರ್ಧ ಹಾಗೂ 19ನೇ ಶತಮಾನದ ಪೂರ್ವಾರ್ಧದಲ್ಲಿ ಇದ್ದಿರಬೇಕು. ತಿರುಮಲೆಯ ಆಲಯದ ಉತ್ತರಕ್ಕೆ ಸುಮಾರು ಹತ್ತು ಮೈಲುದೂರದಲ್ಲಿರುವ ತುಂಬುರುಕೋನದಲ್ಲಿ ದಟ್ಟವಾದ ಕಾಡಿನ ಅಂತರ್ಭಾಗದಲ್ಲಿ ಕಠಿಣ ವಾದ ತಪಸ್ಸು ಮಾಡಿದಳು. ಯೋಗ ಧ್ಯಾನಗಳಲ್ಲಿ ನಿರತಳಾಗಿದ್ದಳು. ಆಕೆಗೆ ದೇವರು ಕಾಣಿಸುತ್ತಿದ್ದನೆಂದು ಪ್ರಚಲಿತವಾಗಿದೆ. ಈಕೆಯ

ಬೃಂದಾವನ ತಿರುಮಲೆಯ ಆಲಯದ ಉತ್ತರ ಮಾಡವೀಧಿಯ ಉತ್ತರದ ಶಾಲಾ ಆವರಣದಲ್ಲಿ ಇಂದಿಗೂ ಕಾಣಬರುತ್ತದೆ. ಆಕೆ ಭೋಗ ಶ್ರೀನಿವಾಸಮೂರ್ತಿಗೆ ಮುತ್ತಿನ ಹಾರವನ್ನು ಬೆಳ್ಳಿಯ ತಟ್ಟೆಯಲ್ಲಿಟ್ಟು ಅರ್ಪಿಸಿದಳೆಂಬುದರ ಉಲ್ಲೇಖವು ಈಸ್ಟ್ ಇಂಡಿಯಾ ಕಂಪನಿಯವರು ಕ್ರಿ.ಶ. 1820 ರಲ್ಲಿ - ಫಸಲಿ ಸಂವತ್ಸರ 1230 ರಲ್ಲಿ - ತಯಾರಿಸಿದ ಕೈಂಕರ್ಯ ಪಟ್ಟಿಯಲ್ಲಿದೆ.

***ತರಿಗೊಂಡ ವೆಂಗಮಾಂಬ ಕೃತಿಗಳು:*** 1) ಶತಕಗಳು - ತರಿಗೊಂಡ ನರಸಿಂಹ ಶತಕಮು, ಶ್ರೀಕೃಷ್ಣಮಂಜರಿ. 2) ಯಕ್ಷ ಗಾನಗಳು - ನರಸಿಂಹ ವಿಲಾಸಮು, ಶಿವನಾಟಕಮು, ಬಾಲಕೃಷ್ಣ ನಾಟಕಮು, ವಿಷ್ಣು ಪಾರಿಜಾತಮು, ರುಕ್ಮಿಣೀ ನಾಟಕಮು, ಗೋಪೀ ನಾಟಕಮು, ಚೆಂಚು ನಾಟಕಮು, ಮುಕ್ತಿಕಾಂತ ವಿಲಾಸಮು, ಜಲಕ್ರೀಡಾ ವಿಲಾಸಮು. 3) ದ್ವಿಪದ ಕಾವ್ಯಗಳು -ರಮಾ ಪರಿಣಯಮು, ದ್ವಿಪದ ಭಾಗವತಮು, ರಾಜಯೋಗಾಮೃತ ಸಾರಮು, ವಾಸಿಷ್ಟ ರಾಮಾಯಣಮು. 4) ಪದ್ಯಕಾವ್ಯಗಳು ವೆಂಕಟಾ ಚಲ ಮಹಾತ್ಮ್ಯಮು, ಅಷ್ಟಾಂಗಯೋಗ ಸಾರಮು. 5) ಇತರೆ - ತತ್ವಕೀರ್ತನಲು, ಹಲವು ಬಿಡಿ ಕವನಗಳು, ಕೀರ್ತನೆಗಳು ಇತ್ಯಾದಿ.

ಇವುಗಳಲ್ಲಿ ಕೆಲವನ್ನು ಪರಿಚಯ ಮಾಡಿಕೊಳ್ಳಬಹುದು.

***ಶ್ರೀ ರಮಾಪರಿಣಯಮು:*** ವೆಂಗಮಾಂಬ ಬರೆದಿರುವ ಶ್ರೀನಿವಾಸ ಲಕ್ಷ್ಮಿಯರ ಕಲ್ಯಾಣವಿದು. ಸ್ಥಳೀಯ ಕಥೆಗಳಿಗೆ ಐತಿಹ್ಯಗಳಿಗೆ ಇಲ್ಲಿ ಪ್ರಾಧಾನ್ಯ ದೊರೆತಿದೆ.

***ಶ್ರೀಕೃಷ್ಣ ಮಂಜರಿ:*** ವೆಂಗಮಾಂಬ ಬರೆದಿರುವ 137 ಪದ್ಯಗಳ ಸಂಗ್ರಹ ಇದಾಗಿದ್ದು, ಪ್ರತಿಯೊಂದರಲ್ಲಿಯೂ ಆಕೆ ಶ್ರೀಕೃಷ್ಣನ ಪ್ರತಿಮೂರ್ತಿಯೆಂದು ತಿಳಿದಿರುವ ವೆಂಕಟೇಶ್ವರಸ್ವಾಮಿಯನ್ನು ಎಚ್ಚರಿಸುವಿಕೆಯಿದೆ. ಈ ಕಾವ್ಯದ ಓದಿನಿಂದ ಶ್ರೀಕೃಷ್ಣ ನಾಮ ಜಪದ ಫಲಸಾಧನೆ ಆಗುವುದೆಂದು ಕವಯಿತ್ರಿ ಹೇಳುತ್ತಾಳೆ. ಇದೊಂದು ಸರಳ ಸುಂದರ ಕೃತಿಯಾಗಿದ್ದು ಕವಯಿತ್ರಿ ಶ್ರೀಕೃಷ್ಣನೇ ತನಗೆ ಪರಿಪೂರ್ಣ ಶರಣಾಗತಿಯ ಪರಮತತ್ತ್ವವನ್ನು ತಿಳಿಸಿ ಕೊಟ್ಟನೆಂದೂ, ಇತರ ಧರ್ಮಗಳ ಬಗ್ಗೆ ಯೋಚಿಸದೆ ಅವನಲ್ಲಿ ಶರಣುಹೋಗುವುದು ಸರ್ವೋತ್ತಮವೆಂದು ಹೇಳುತ್ತಾಳೆ.

***ಯರ್ರಾಪ್ರಗಡ ಕವಿ:*** ಕ್ರಿ.ಶ. ಹದಿನಾಲ್ಕನೆಯ ಶತಮಾನದಲ್ಲಿ ಈ ಕವಿಯು ಶಂಭುದಾಸ ಎಂದೂ, ಪ್ರಬಂಧ ಪರಮೇಶ್ವರನೆಂದೂ ಪ್ರಸಿದ್ಧನಾದವನು.

ತೆಲುಗುನಲ್ಲಿ ನನ್ನಯ ತಿಕ್ಕನರಿಬ್ಬರೂ ಮಹಾಭಾರತದ ಅನುವಾದವನ್ನು ಪೂರ್ಣಗೊಳಿಸಿದ್ದರಾದರೂ ನನ್ನಯ ಅರಣ್ಯಪರ್ವ ಸ್ವಲ್ಪ ಭಾಗವನ್ನು ಮಾತ್ರ ಬರೆದು ತೀರಿಕೊಂಡಿದ್ದ. ತಿಕ್ಕನ ವಿರಾಟಪರ್ವದಿಂದ ಕಥೆ ಮುಂದುವರಿಸಿದ. ಹೀಗಾಗಿ ಮಧ್ಯೆ ನನ್ನಯ ಬರೆಯದೆ ಉಳಿದ, ತಿಕ್ಕನ ಪ್ರಯತ್ನಿಸದೆ ಉಳಿದ ಅರಣ್ಯಪರ್ವದ ಶೇಷಭಾಗವನ್ನು ಈ ಕವಿ ಪೂರ್ಣಗೊಳಿಸಿದ. ಈತ ನರಸಿಂಹ ಪುರಾಣವನ್ನು ಬರೆದು ಅಹೋಬಿಲ ನರಸಿಂಹ ಸ್ವಾಮಿಗೆ ಅಂಕಿತಗೊಳಿಸಿದ. ಈ ಕೃತಿಯ ಕೊನೆಯಲ್ಲಿ ಕವಿಯು ನರಸಿಂಹಸ್ವಾಮಿಯನ್ನು ಸಾಂಖ್ಯರು, ಯೋಗಿಗಳು, ಶೈವರು, ಪಾಂಚರಾತ್ರರು- ವಿಭಿನ್ನರೂಪಗಳಲ್ಲಿ ಆರಾಧಿಸುವರೆಂದು ಹೇಳುತ್ತಾನೆ. ತನ್ನ ಇದು ಪದ್ಯದಲ್ಲಿ ತಿರುಮಲೆಯ ಶ್ರೀ ವೆಂಕಟೇಶ್ವರಸ್ವಾಮಿಯನ್ನು ಹೆಸರಿಸಿ ಈ ದೇವರಲ್ಲಿ ಪೂರ್ಣ ಪ್ರಪತ್ತಿಯನ್ನು ಪ್ರಕಟಿಸಿದ್ದಾನೆ.

***ಚದಲವಾಡ ಮಲ್ಲಕವಿ:*** ಕವಿಯು ತನ್ನ ವಿಪ್ರನಾರಾಯಣ ಚರಿತೆಯ ಮೂರನೇ ಅಧ್ಯಾಯದ ಐವತ್ತನೆಯ ಪದ್ಯದಲ್ಲಿ ಉದಯಸೂರ್ಯನನ್ನು ಪರಬ್ರಹ್ಮನೆಂದು ವಿವರಿಸುತ್ತ ಬೇರೆ ಬೇರೆಯವರು ಇವನನ್ನೇ ವಿವಿಧ ರೂಪದಲ್ಲಿ ಆರಾಧಿಸುವರೆಂದು ಹೇಳುತ್ತಾನೆ. ಇಲ್ಲಿಯೂ ವೆಂಕಟಾಚಲಪತಿಯ ಬಗ್ಗೆ ಉಲ್ಲೇಖವಡಗಿದೆ.

***ತಾಳ್ಳಪಾಕ ಅನ್ನಮಾಚಾರ್ಯ:*** ಶ್ರೀ ವೆಂಕಟೇಶ್ವರಸ್ವಾಮಿಯ ಸೇವೆಯಲ್ಲಿ 32000 ಸಂಕೀರ್ತನೆಗಳನ್ನು ಬರೆದಿರುವನೆಂದು ಹೇಳಲಾಗಿರುವ ಅನ್ನಮಾಚಾರ್ಯನು ಒಂದು ವೆಂಕಟೇಶ್ವರ ಶತಕವನ್ನೂ ಬರೆದಿದ್ದಾನೆ. ಸ್ವಾಮಿಯ ದೇವಿಯಾದ ಅಲಮೇಲು ಮಂಗೆಯನ್ನು ಅಭಿವರ್ಣಿಸುವ ವಿಶಿಷ್ಟವಾದ ಕೃತಿಯಿದು.

ಈ ಕೃತಿಯ ಕೊನೆಯಲ್ಲಿ ಕವಿಯು 'ತಾನು ಭವಸಾಗರದಲ್ಲಿ ಬಹು ಬಳಲಿಕೆ ಹೊಂದಿ ಬಂದಿರುವುದಾಗಿಯೂ, ಅಲಮೇಲು ಮಂಗಾದೇವಿಯು ತನ್ನ ಕರುಣೆಯ ದೃಷ್ಟಿಯನ್ನು ಇವನತ್ತ ಹರಿಸಿ, ಉದ್ಧಾರ ಮಾಡಬೇಕೆಂದು' ಮಾತಿನ ಮಲರುಗಳನ್ನು ಅರ್ಪಿಸಿ ಪ್ರಾರ್ಥಿಸುತ್ತಾನೆ.

***ಪೆದ ತಿರುಮಾಲಾಚಾರ್ಯ:*** ತಾಳ್ಳಪಾಕ ಅನ್ನಮಾಚಾರ್ಯನ ಮಗನಾದ ಈ ಕವಿಯ ವೆಂಕಟೇಶ್ವರ ಸುಪ್ರಭಾತವನ್ನು ಸರಳ ತೆಲುಗಿನ ದ್ವಿಪದ ಕಾವ್ಯಕ್ಕೆ ಅನುವಾದಿಸಿ ಅದನ್ನು ಶ್ರೀ ವೆಂಕಟೇಶ್ವರ ಪ್ರಭಾತ ಸ್ತವ ಎಂದು ಕರೆದನು. ಇದು ದಿನವೂ ಬೆಳಗ್ಗೆ ಸ್ವಾಮಿಯನ್ನು ಎಬ್ಬಿಸಿ ಅವನ ಅನುಗ್ರಹ ಪಡೆಯುವ ಉದ್ದೇಶ ಹೊಂದಿದೆ. ಈ ಕೃತಿಯಲ್ಲಿ ತಿಳಿದುಬರುವ ಮತ್ತೊಂದು ವಿಶೇಷ ಸಂಗತಿಯೆಂದರೆ, ಕೃಷ್ಣದೇವರಾಯನು ಸ್ವಾಮಿಯ ಬಗ್ಗೆ ಹೆಚ್ಚಿನ ಭಕ್ತಿ ಪ್ರಪತ್ತಿಗಳನ್ನು ತೋರಿಸಿದವನಲ್ಲವೆಂದೂ, ಅಚ್ಯುತರಾಯರು, ಸದಾಶಿವರಾಯ ಹೆಚ್ಚು ಆದರ ಭಕ್ತಿಗಳನ್ನು ತೋರಿಸಿ ಮತ ಮಾನ್ಯ ಉಂಬಳಿಗಳನ್ನು ಹಾಕಿಕೊಟ್ಟರೆಂಬುದು.

***ರೇವಣೂರಿ ವೆಂಕಟಾರ್ಯ:*** ಅನ್ನಮಾಚಾರ್ಯನ ಎರಡನೆ ಕಳತ್ರ ಲಕ್ಕಮಾಂಬಳ ಮಗಳು ತಿರುಮಲಾಂಬ. ಈಕೆಯನ್ನು ರೇವಣೂರಿ ತಿರುಮಲ ಕೊಂಡರಾಯನಿಗೆ ವಿವಾಹ ಮಾಡಿಕೊಟ್ಟರು. ಇವರ ಮಗ ರೇವಣೂರಿ ವೆಂಕಟಾರ್ಯನು 16 ನೇ ಶತಮಾನದಲ್ಲಿ ಪ್ರಸಿದ್ಧನಾಗಿ, ತೆಲುಗಿನಲ್ಲಿ ಶ್ರೀಪಾದರೇಣು ಮಹಾತ್ಮೆಯನ್ನು ಬರೆದು, ಸ್ವಾಮಿಯ ಪಾದಧೂಳಿನ ಮಹಾತ್ಮೆಯನ್ನು ವಿವರಿಸಿದ್ದು, ತನ್ನ ಕವನರಚನೆಗೆ ಸ್ಫೂರ್ತಿಯಾಗಿ ನಿರಂತರವಾಗಿ ಸ್ವಾಮಿಯ ಸಿರಿಪದದ ಧೂಳು ತನ್ನ ಮೇಲಿರಲಿ ಎಂದು ಸ್ವಾಮಿಯಲ್ಲಿ ಬೇಡುವನು. ಸ್ವಾಮಿಯು ಧನ್ವಂತ್ರಿ ರೂಪದಲ್ಲಿ ರೋಗಗಳನ್ನು ಕಳೆಯುವನೆಂದು ಹೇಳುತ್ತ, ಸ್ವಾಮಿಯ ಶ್ರೀಪಾದರೇಣುವು ಮೂಗ, ಬಧಿರತೆಗಳನ್ನು ಕಳೆದು, ತೊದಲು ತಡವರಿಸುವಿಕೆ, ಅಜ್ಞಾನಗಳನ್ನು ಹರಿಸುವುದೆಂದು ಹೇಳಿದ್ದಾನೆ. ಸ್ವಾಮಿಯ ಈ ಗುಣದಿಂದಲೇ ವಿಷ್ಣುವಿನ ಅವತಾರಗಳು ಸಾರ್ಥಕವಾದವೆಂದೂ, ಸಂಕೀರ್ತನಾಚಾರ್ಯ ಅನ್ನಮಯ್ಯನು ಸಾಧನೆ ಮಾಡಲು ಶಕ್ಯನಾದದ್ದು ಶ್ರೀಪಾದರೇಣುವಿನ ಮಹಾತ್ಮೆಯಿಂದಲೇನೆ ಎಂಬುದೂ ಕವಿಯ ನಂಬಿಕೆ.

***ಕಾಕಮಾನಿ ಮೂರ್ತಿ ಕವಿ:*** 16 ನೇ ಶತಮಾನದಲ್ಲಿದ್ದ ಈ ಕವಿ 'ರಾಜವಾಹನ ವಿಜಯ' ಕೃತಿಯನ್ನು ವೆಂಕಟೇಶ್ವರಸ್ವಾಮಿಗೆ ಅರ್ಪಿಸಿದ್ದಾನೆ. ತನ್ನ ಅಂಕಿತ ಪದ್ಯದಲ್ಲಿ ಕವಿಯು ಉತ್ಪ್ರೇಕ್ಷೆಯಿಂದ ತನ್ನ ಕಾವ್ಯಕನ್ಯೆಯನ್ನು ವೆಂಕಟೇಶ್ವರಸ್ವಾಮಿಗೆ ಮದುವೆ ಮಾಡಿಕೊಡುತ್ತಿರುವುದಾಗಿ, ಸುಂದರವಾದ ಪದ್ಯದಲ್ಲಿ ತಿರುಮಲೆಯಪ್ಪ- ತಿಮ್ಮಪ್ಪನನ್ನು ಸ್ತುತಿಸುತ್ತಾನೆ. ಈ ಕೃತಿಯಲ್ಲಿ ಕಂಡುಬರುವ ವಿಶೇಷವೆಂದರೆ ಕಟಕ, ಕಲ್ಯಾಣ, ದೆಹಲಿಗಳಿಂದ ಭಕ್ತರು ಸ್ವಾಮಿಯ ಬ್ರಹ್ಮೋತ್ಸವಕ್ಕೆ ಆಗಮಿಸುವರೆಂಬುದು. ತನ್ನ ಭಕ್ತರ ಮೇಲೆ ವರಗಳ ವರ್ಷ ಸುರಿಸುವ ವೆಂಕಟಾಚಲದ ವೆಂಕಟೇಶ್ವರ ಸ್ವಾಮಿಯಂತಹ ಇತರ ದೇವರುಗಳೇ ಇಲ್ಲವೆಂದು ಹೇಳುತ್ತ ಪದ್ಯವನ್ನು ಮುಗಿಸುತ್ತಾನೆ.

***ಸಿದ್ಧರಾಜು ತಿಮ್ಮರಾಜು:*** ಕೊಂಡವೀಡುವಿನ ರಾಜ್ಯಪಾಲ ಸಿದ್ಧರಾಜು ತಿಮ್ಮರಾಜು. ಈತ ಅರವೀಡು ವಂಶದ ಅಳಿಯ ರಾಮರಾಯನ ಸೋದರ ಸಂಬಂಧಿ. ಈತ ಬರೆದಿದ್ದು ಪರಮಯೋಗಿವಿಲಾಸ. ಇದನ್ನು ಈತ ಮಂಗಳಗಿರಿಯೊಡೆಯನಿಗೆ ಅಂಕಿತ ಮಾಡಿದ. ಇದರ ಸೀಸಪದ್ಯವೊಂದರಲ್ಲಿ ವೆಂಕಟೇಶ್ವರಸ್ವಾಮಿಯ ಪ್ರಶಾಂತ ಭಂಗಿಯನ್ನು ವಿವರಿಸಿದ್ದಾನೆ. ಆತನ ಎಡಗೈಸೊಂಟದ ಮೇಲಿದ್ದು, ಆತನ ಚಿನ್ನದ ಹಾರ ತೊಟ್ಟ ಬಲಗೈ ವರದಹಸ್ತವಾಗಿ ಭವಬಂಧಿತರ ಏಕಮೇವ ಶರಣ್ಯಸ್ಥಾನವಾದ ಶ್ರೀಪಾದಗಳನ್ನು ತೋರಿಸುತ್ತ ಇದ್ದು, ಆತನ ಕೃಪೆ ತುಂಬಿದ ನೋಟ, ಕಿರೀಟ, ಶಂಖ, ಚಕ್ರಗಳು ಮನಮೋಹಕವಾಗಿವೆ ಎನ್ನುವನು.

***ತರಿಗೊಪ್ಪುಲ ಮಲ್ಲನ:*** ಚಂದ್ರಗಿರಿಯವನಾದ ಈ ಕವಿಯ 'ಚಂದ್ರಭಾನು ಚರಿತಂ' ಕೃತಿಯನ್ನು ರಚಿಸಿದ್ದಾನೆ. ಇಲ್ಲಿ ತಿರುಮಲೆಗೆ ಹರಕೆಹೊತ್ತು ಬಾಯಿ ಚುಚ್ಚಿಸಿಕೊಂಡು, ದಿಂಡುರುಳಿ ಹೊರಳುತ್ತ ಬರುವ ಲಕ್ಷಾಂತರ ಮಂದಿಯನ್ನು ವಿವರಿಸಿದ್ದಾನೆ. ಗೋವಿಂದರಾಜಸ್ವಾಮಿ ದೇವಾಲಯದ ವಿವರಗಳನ್ನು ನೀಡುವ ಕವಿ ಬೆಟ್ಟವನ್ನು ಹತ್ತುವ ಜನರ ಕಷ್ಟಗಳನ್ನೂ ವಿವರಿಸಿದ್ದಾನೆ.

***ಪಿಂಗಳಿ ಸೂರನಾರ್ಯ:*** ನಂದ್ಯಾಲದ ರಾಜ ಕೃಷ್ಣರಾಜನ ಆಶ್ರಿತನಾಗಿದ್ದ ಈ ಕವಿ ತನ್ನ 'ಮಣಿಕಂಧರ' ಕೃತಿಯಲ್ಲಿ ನಾರದನ ಶಿಷ್ಯನಾದ ಮಣಿಕಂಧರನು ತಿರುಮಲೆಗೆ ಯಾತ್ರೆಗಾಗಿ ಬಂದದ್ದು ಕುರಿತು ವಿವರಿಸಿ ಅವನು ವೆಂಕಟೇಶ್ವರಸ್ವಾಮಿ ಆಲಯಕ್ಕೆ ಬಂದದ್ದನ್ನು ತಿಳಿಸಿದ್ದಾನೆ. ಕವಿಯ ತನ್ನ ಕಾಲದಲ್ಲಿ - 16 ನೇ ಶತಮಾನ- ಇದ್ದಿರುವಂತಹ ಆಲಯದ ವಿವರ ನೀಡಿದ್ದಾನೆ. ಮೂರು ದಿನಗಳ ಕಾಲ ಬೆಟ್ಟದ್ದಲ್ಲಿದ್ದು ಸ್ವಾಮಿಯನ್ನು ಸೇವಿಸಿದ ನಂತರ ಯಾತ್ರಿಕನು ಬೆಟ್ಟವನ್ನು ಇಳಿದು ಕಂಚಿಯತ್ತ ಹೊರಟನೆಂಬುದು ಕಥೆ.

***ಶ್ರೇಷ್ಠಲೂರಿ ವೆಂಕಟರಾಯ:*** ಶ್ರೀನಿವಾಸವಿಲಾಸ ಸೇವಧಿ ಎಂಬ ತೆಲುಗು ದ್ವಿಪದಕಾವ್ಯವನ್ನು ಬರೆದವನು ಈತ. ಇದನ್ನು 1954 ರಲ್ಲಿ ತಿ.ತಿ.ದೇ ಸಂಗ್ರಹರೂಪದಲ್ಲಿ ಪ್ರಕಟಿಸಿದೆ. ಈ ಪುಸ್ತಕದಲ್ಲಿ ಸ್ವಾಮಿ ಪುಷ್ಕರಿಣಿಯಲ್ಲಿರುವ ಒಂಬತ್ತು ತೀರ್ಥಗಳ ವಿವರವಿದೆ.

1) ವಾಯವ್ಯ ಮೂಲೆಯಲ್ಲಿ ವರಾಹತೀರ್ಥ. 2) ಉತ್ತರದಲ್ಲಿ ದಂಡ (ಕುಬೇರ) ತೀರ್ಥ. 3) ಈಶಾನ್ಯ ದಿಕ್ಕಿನಲ್ಲಿ ಗಾಲವತೀರ್ಥ 4) ಪೂರ್ವದಲ್ಲಿ ಮಾರ್ಕಂಡೇಯ ತೀರ್ಥ. 5) ಆಗ್ನೇಯದಲ್ಲಿ ಅಗ್ನಿ ತೀರ್ಥ. 6)ದಕ್ಷಿಣದಲ್ಲಿ ಯಮತೀರ್ಥ. 7) ನೈಋತ್ಯದಲ್ಲಿ ವಸಿಷ್ಟ ತೀರ್ಥ. 8) ಪಶ್ಚಿಮದಲ್ಲಿ (ಅಶ್ವತ್ಥ ವೃಕ್ಷದ ನೆರಳಿನಲ್ಲಿ) ವಾಯು ತೀರ್ಥ. 9) ಸ್ವಾಮಿಪುಷ್ಕರಿಣಿಯ ನಡುವಿನಲ್ಲಿ ಸರಸ್ವತೀ ತೀರ್ಥ.

ಈ ಕೃತಿಯು ಸ್ವಾಮಿಯ ಆಲಯವನ್ನು ನಿರ್ಮಿಸಿದವನೆಂದು ಹೆಸರಾದ ತೊಂಡಮಾನನ ಸಾಹಸ ಕಾರ್ಯಗಳನ್ನು ವರ್ಣಿಸುತ್ತದೆ. ಈ ಕೃತಿಯಲ್ಲಿ ಹೇಳಲಾಗಿರುವ ಹಲವು ಹನ್ನೊಂದು ವಾಹನಗಳು, ಹಬ್ಬಹರಿದಿನಗಳು ಹೀಗಿವೆ -

1) ಭಕ್ತರಿಗಾಗಿ ಶೇಷವಾಹನ. 2) ಬ್ರಹ್ಮನಿಂದ ಆಜ್ಞಪ್ತವಾದ ಬ್ರಹ್ಮನದಾದ ಹಂಸವಾಹನ. 3) ಸ್ವಾಮಿಯು ಹಿರಣ್ಯಕಶ್ಯಪನನ್ನು ಕೊಂದದ್ದರ ಸಂಕೇತವಾಗಿ ಸಿಂಹವಾಹನ. 4) ಸ್ವಾಮಿಯೂ ಮಹೀಸುತೆಯಾದ ಸೀತೆಯೂ ಈ ಸ್ಥಳಕ್ಕೆ ಆಗಮಿಸಿದರೆಂದು ಹೇಳಲಾದ ಪುಷ್ಪಕವಾಹನ. 5) ಗಜೇಂದ್ರ ಮೋಕ್ಷವನ್ನು ಸೂಚಿಸುವ ಗರುಡವಾಹನ. 6) ರಾಮನು ಗಜವನ್ನೇರಿ - ಅದರ ಮೇಲೆ ಶತ್ರುಂಜಯ-ರಾಜ್ಯಭಾರಮಾಡಿದ್ದರ ಕುರುಹಾಗಿ ಗಜವಾಹನ. 7) ಸೂರ್ಯನ ಪ್ರಾಮುಖ್ಯವನ್ನು ಸೂಚಿಸುವ ಸೂರ್ಯವಾಹನ. 8) ಪಾರ್ಥನ ಸಾರಥಿಯಾಗಿ ಲೀಲೆ ಮಾಡಿದ್ದರ ನೆನಪಿನಲ್ಲಿ ರಥವಾಹನ. 9) ಅವನು ದಾನವ ವಿಜಯಿಯೆಂಬುದನ್ನು ಸೂಚಿಸುವ ತುರಗವಾಹನ. 10) ಶಿಬಿಕಾವಾಹನ - ನವಮಿಯ ದಿನದಂದು ಆದಿ ವರಾಹ ಸ್ವಾಮಿಯ ಗುಡಿಗೆ ಸ್ವಾಮಿಪುಷ್ಕರಿಣಿ ತೀರ್ಥದಿಂದ ಪವಿತ್ರ ತೀರ್ಥವನ್ನು ಪಡೆದು ಭಕ್ತರನ್ನು ಉದ್ಧರಿಸಲು ಹೊರಟಾಗ ಒಂಬತ್ತು ರತ್ನಗಳನ್ನು ಅಲಂಕರಿಸಿದ ಪಲ್ಲಕ್ಕಿ.

17 ನೇ ಶತಮಾನದಲ್ಲಿ ಇದ್ದಂತಹ ಸ್ಥಳೀಯ ಐತಿಹ್ಯಗಳನ್ನು ತಿಳಿಸುವಲ್ಲಿ ಈ ಕೃತಿಯ ಉಪಯುಕ್ತವಾಗಿದೆ.

***ಗಣಪುವರಪು ವೆಂಕಟ ಕವಿ:*** ವೆಂಕಟೇಶ್ವರ ವಿಲಾಸವೆಂಬ ಕೃತಿಯನ್ನು ಬರೆದು ಸ್ವಾಮಿಗೆ ಅಂಕಿತಮಾಡಿದ.

***ಚಲ್ಲಪಲ್ಲಿ ನರಸಕವಿ:*** 18 ನೇ ಶತಮಾನದ ಮೊದಲಭಾಗದಲ್ಲಿ ವೆಂಕಟೇಶ್ವರಸ್ವಾಮಿ ಹಾಗೂ ಚೆಂಚುಕನ್ಯೆಯ ವಿವಾಹವನ್ನು ತಿಳಿಸುವ 'ವೆಂಕಟೇಶ್ವರ ವಿಲಾಸ' ವೆಂಬ ಕೃತಿಯನ್ನು ರಚಿಸಿದ.

***ಕೃಷ್ಣಕವಿ:*** 19ನೇ ಶತಮಾನದಲ್ಲಿದ್ದ ಈ ಕವಿ ಕಾಳಿದಾಸನ 'ಶಕುಂತಲ' ಕೃತಿಯನ್ನು ಅನುವಾದ ಮಾಡಿ ಸ್ವಾಮಿಗೆ ಸಮರ್ಪಿಸಿದ.

ದಿವಾಕರ ತಿರುಪತಿಶಾಸ್ತ್ರಿ ಹಾಗೂ ಚರ್ಲಪಲ್ಲಿ ವೆಂಕಟಕವಿ. ತಿರುಪತಿ ವೆಂಕಟಕವಿಗಳೆಂದು ಹೆಸರಾದ ಕವಿದ್ವಯರು ನೂರಕ್ಕೂ ಹೆಚ್ಚು ಕೃತಿಗಳನ್ನು ಬರೆದಿರುವ ನೂತನ ಕವಿಗಳಾದ ಅವರು ಅನೇಕ ಕೃತಿಗಳನ್ನು ವೆಂಕಟೇಶ್ವರಸ್ವಾಮಿಗೆ ಸಮರ್ಪಿಸಿದ್ದಾರೆ.

## ಸಂಗೀತ ಕೃತಿಗಳು:

***ಅನ್ನಮಾಚಾರ್ಯ:*** ವೆಂಕಟೇಶ್ವರಸ್ವಾಮಿಯ ಬಗ್ಗೆ ಮೊದ ಮೊದಲಿಗೆ ಸಂಕೀರ್ತನೆಗಳನ್ನು ಬರೆದವನೆಂದರೆ ನಮಗೆ ಈಗ ತಿಳಿದಿರು ವಂತೆ ಅನ್ನಮಾಚಾರ್ಯ. ಈತನ ಮೊಮ್ಮಗನಾದ ಚಿನ್ನನ್ನ ತನ್ನ ತಾತನು 32,000 ಕೀರ್ತನೆಗಳನ್ನು ಬರೆದಿರುವನೆಂದು ತಿಳಿಸಿದ್ದಾನೆ. 1920 ರಲ್ಲಿ ಶ್ರೀ ವೆಂಕಟೇಶ್ವರಸ್ವಾಮಿಯ ಆಲಯದಲ್ಲಿನ ವಿಮಾನ ಪ್ರದಕ್ಷಿಣಾ ಪಥದಲ್ಲಿದ್ದ ಸಣ್ಣ ಕಲ್ಲುಗಳಿಂದ ಮುಚ್ಚಿದ

ಕೋಣೆಯಲ್ಲಿ 2950 ತಾಮ್ರ ಫಲಕಗಳನ್ನು ಕಂಡುಕೊಳ್ಳಲಾಯಿತು. ಇವುಗಳಲ್ಲಿ ಹಿಂದೆ, ಮುಂದೆ ಒಂದು ಕಡೆಗೆ ಮೂರು ಕೀರ್ತನೆಯಂತೆ ಕೆತ್ತಿದ ಕೆತ್ತನೆಗಳನ್ನು ಕಾಣಬಹುದು. ಮಿಕ್ಕಂತೆ ಸಂಕೀರ್ತನೆಗಳು ಉಪಲಬ್ಧವಿಲ್ಲವಾಗಿದೆ. ಹಲವು ಅಹೋಬಿಲದ ಮಠ ದಲ್ಲಿಯೂ ಹಲವು ಶ್ರೀರಂಗದ ಆಲಯದಲ್ಲಿಯೂ ಇರುವುದೆಂದು ಹೇಳಲಾಗಿದೆಯಾದರೂ, ಅವಾವುವೂ ದೊರಕಿಲ್ಲ.(ಎಲ್ಲವನ್ನೂ ತಿರುಮಲೆ ಆಲಯಕ್ಕೆ ತಂದು ಪ್ರಕಟಿಸಲಾಗಿದೆ- ಅನುವಾದಕ)

ಕ್ರಿ.ಶ.1408 ರಲ್ಲಿ ಹುಟ್ಟಿದ ತೆಲುಗು ನಂದವರೀಕ ವಂಶದವನಾದ ಈತ ಕ್ರಿ.ಶ.1503 ರ ವರೆಗೆ ಇದ್ದನೆಂದು ಹೇಳಲಾಗಿದೆ. ಈತನ ಕೀರ್ತನೆಗಳು ಪರಿಚಯ ನೀಡಬೇಕಾದ ಅಗತ್ಯವಿಲ್ಲದಷ್ಟು ಪ್ರಸಿದ್ಧವಾಗಿವೆ.

***ಪೆದ ತಿರುಮಲಾಚಾರ್ಯ:*** ಅನ್ನಮಾಚಾರ್ಯರ ಮಗನಾದ ಪೆದತಿರುಮಲಾಚಾರ್ಯನು ಹಿರಿಯ ಕವಿ ವಿದ್ವಾಂಸ ವಾಗ್ಗೇಯಕಾರನಾಗಿದ್ದನು. ಅನ್ನಮಾಚಾರ್ಯ ತನ್ನ ಮರಣ ಶಯ್ಯೆಯಲ್ಲಿದ್ದಾಗ ಮಗನನ್ನು ಕರೆದು ಪ್ರತಿದಿನವೂ ಕನಿಷ್ಠ ಒಂದಾದರು ಸಂಕೀರ್ತನೆ ಯನ್ನು ಬರೆದು ಸ್ವಾಮಿ ಸನ್ನಿಧಿಯಲ್ಲಿ ಅದನ್ನು ಹಾಡಬೇಕೆಂದು ಆದೇಶವನ್ನಿತ್ತನು. ಹೀಗಾಗಿ ಪೆದತಿರುಮಲಾಚಾರ್ಯನೂ ಸ್ವಾಮಿಯ ಬಗ್ಗೆ ಅಸಂಖ್ಯವಾದ ಶೃಂಗಾರ, ಆಧ್ಯಾತ್ಮ ಸಂಕೀರ್ತಗಳನ್ನು ರಚಿಸಿದನು.

***ಚಿನ್ನ ತಿರುಮಲಾಚಾರ್ಯ:*** ಪೆದ ತಿರುಮಲಾಚಾರ್ಯನ ಮಗನಾದ ಚಿನತಿರುಮಲಾಚಾರ್ಯನು ತನ್ನ ತಂದೆ ತಾತಂದಿರಂತೆಯೇ ಆಲಯದಲ್ಲಿ ಸಂಕೀರ್ತನಾಚಾರ್ಯನಾಗಿ ಮುಂದುವರೆದು ಸ್ವಾಮಿಯ ಬಗ್ಗೆ ಶೃಂಗಾರ ಆಧ್ಯಾತ್ಮ ಸಂಕೀರ್ತನೆಗಳನ್ನು ಬರೆದ. ಈತ ಎಂಟು ಭಾಷೆಗಳಲ್ಲಿ ವಿದ್ವಾಂಸ ಕವಿಯಾಗಿದ್ದರಿಂದ ''ಚಾರುತರ ಅಷ್ಟ ಭಾಷಾಚಕ್ರವರ್ತಿ'' ಎಂಬ ಬಿರುದು ಗಳಿಸಿದನೆಂದು ಇವನ ತಮ್ಮನ ಕೃತಿಯಿಂದ ತಿಳಿದುಬರುತ್ತದೆ.

***ಪುರಂದರದಾಸ:*** ಕನ್ನಡ ಶ್ರೇಷ್ಠಹರಿದಾಸರೂ, ವಾಗ್ಗೇಯಕಾರರೂ ಆದ ಪುರಂದರದಾಸರು ಕರ್ನಾಟಕ ಸಂಗೀತದ ಪಿತಾಮಹರೆಂದೇ ಹೆಸರಾಗಿದ್ದಾರೆ. ಪಂಡರಪುರದ ಪಾಂಡುರಂಗವಿಠಲನು ಇವರ ಆರಾಧ್ಯದೇವತೆ.

ಈತ 16ನೇ ಶತಮಾನದ ಆದಿ ಭಾಗದಲ್ಲಿದ್ದರು. ಪರಂಪರೆಯ ಪ್ರಕಾರ ಪುರಂದರದಾಸರು ಅನ್ನಮಾಚಾ ರ್ಯರ ಪ್ರಸಿದ್ಧಿಯನ್ನು ಕೇಳಿ ಅವರನ್ನು ನೋಡಲು ತಿರುಮಲೆಗೆ ಆಗಮಿಸಿದರು. ಪರಂಪರೆಯು ಹೇಳುವಂತೆ ಅವರಿಬ್ಬರೂ ಮೊದಲಬಾರಿಗೆ ಭೇಟಿಯಾದಾಗ ಇಬ್ಬರೂ ಸೇರಿ ಒಂದು ಸಂಕೀರ್ತನೆಯನ್ನು ರಚಿಸಿದರು. ಇದರ ವೈಶಿಷ್ಟವೆಂದರೆ ಇಡೀ ಕೀರ್ತನೆಯ ನಡಿಗೆ ಒಂದೇ ಆದರೂ ಅದರ ಮಕುಟ ಎರಡು ಆಗಿ ದಾಸರು ಪುರಂದರ ವಿಠಲನೆಂದೂ ಅನ್ನಮಯ್ಯ ತಿರುವೆಂಕಟನಾಯಕ ಎಂದೂ ಸಮಾಪ್ತಿ ಮಾಡಿದ್ದಾರೆ. ಈ ಭೇಟಿಯ ಸಮಯದಲ್ಲಿಯೇ ಪುರಂದರದಾಸರು ಸ್ವಾಮಿಯ ಸ್ತುತಿಯಲ್ಲಿ ಮತ್ತೂ ಹಲವು ಕೃತಿಗಳನ್ನು ರಚಿಸಿದರೆಂದು ಹೇಳಲಾಗಿದೆ.

1) 'ಕಂಡೆ ಕಂಡೆ ಸ್ವಾಮಿಯ ನಾ ಕಂಡೆ' ಎಂದು ಆರಂಭವಾಗುವ ಮುಖಾರಿ ರಾಗದ ಮಧ್ಯಮ ತಾಳದ ಕೃತಿಯಲ್ಲಿ ವೆಂಕಟೇಶ್ವರ ಸ್ವಾಮಿಯು ಕೋಟಿ ಸೂರ್ಯಪ್ರಭೆಯುಳ್ಳವನು ಎನ್ನಲಾಗಿದೆ.

2) ಧಣಿಯ ನೋಡಿದೆನೊ ವೆಂಕಟನ ಮನದಣಿಯೆ ನೋಡಿದೆನೊ, ಎಂಬ ಕಾಪಿ ರಾಗದ ಅಟ್ಟ ತಾಳದ ಕೀರ್ತನೆಯಲ್ಲಿ ತಾನು ತಿರುಮಲೆಗೆ ಬಂದು ನೋಡಿದ ಪೀತಾಂಬರಧಾರಿ, ವಜ್ರ, ಮುತ್ತುಗಳ ಆಭರಣಧಾರಿ, ವೈಜಯಂತಿ, ಭುಜಕೀರ್ತಿಗಳನ್ನು ಹೊಂದಿದ್ದು ಹಣೆಯಮೇಲೆ ತಿರುನಾಮವನ್ನಿಟ್ಟುಕೊಂಡ ಸ್ವಾಮಿಯನ್ನು ವರ್ಣಿಸಿದ್ದಾರೆ.

3) ನವರೋಜ್ ರಾಗದ ಆದಿತಾಳದ ಕೃತಿ - ನಂಬಿದೆ ನಿನ್ನ ಪಾದವ ವೆಂಕಟರಮಣ - ಎಂಬ ಕೀರ್ತನೆಯಲ್ಲಿ ಮಂದರ ಪರ್ವತವನ್ನೆತ್ತಿದ ಸ್ವಾಮಿಯ ಕಮಲ ಪಾದಗಳನ್ನು ಮಾತ್ರವೇ ನಂಬಿದಂತಹ ಭಕ್ತನಿಗೆ ಸೂಕ್ತ ದಾರಿಯನ್ನು ತೋರಿಸಬೇಕೆಂದು ಬೇಡುತ್ತಾರೆ.

4) ಬಾರಯ್ಯ ವೆಂಕಟರಮಣ ಭಕುತರ ಮನೆಗೆ - ಎಂಬ ಸಾವೇರಿ ರಾಗದ ಕೀರ್ತನೆಯಲ್ಲಿ ದಾಸರು ಸ್ವಾಮಿಯನ್ನು ಆದಿಕೂರ್ಮ ಮುದದ ಸೂಕರ, ಶತನರಸಿಂಹ ಎಂಬಿತ್ಯಾದಿಯಾಗಿ ಹೊಗಳಿ ದಶಾವತಾರ ಸ್ತುತಿಮಾಡಿದ್ದಾರೆ.

5) ಬಿಲಹರಿ ರಾಗದ ಆಟ ತಾಳದ ಒಂದು ಕೃತಿಯಲ್ಲಿ ಸ್ವಾಮಿಯ ದಶಾವತಾರ ವರ್ಣನೆಯನ್ನು ಮಾಡುವ ದಾಸರು ಭಕುತರ ಪಾಪವನ್ನು ನಾಶಮಾಡಿ ಕಾಪಾಡಲು ಸ್ವಾಮಿಯಲ್ಲಿ ಮೊರೆಯಿಡುವರು.

***ವ್ಯಾಸರಾಯರು:*** ಪುರಂದರದಾಸರ ಗುರುಗಳಾದ ವ್ಯಾಸರಾಜರು ಅಥವಾ ವ್ಯಾಸತೀರ್ಥರು ವಿಜಯನಗರದ ಕೃಷ್ಣದೇವ ರಾಯನ ಗುರುಗಳೂ ಆಗಿದ್ದರು. ಇವರು ಸ್ವಾಮಿಯ ಬಗ್ಗೆ ಪ್ರಾತಃಸ್ಮರಣೆಯ ಒಂದು ಸಂಸ್ಕೃತ ಕೃತಿಯನ್ನು ಬರೆದಿದ್ದಾರೆ

***ಇತರ ಕೃತಿಗಳು:*** ಇತರ ಕನ್ನಡ ಹರಿದಾಸರೂ ಶ್ರೀನಿವಾಸನ ಬಗ್ಗೆ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಹಲವೆಂದರೆ - 1) ಶ್ರೀವೆಂಕಟೇಶ ಪಾಲಿಸೋ - (ನಾದನಾಮಕ್ರಿಯ), 2) ಭೂಷಣಕೆ ಭೂಷಣ - (ಕಾಂಭೋಜಿ), 3) ವೆಂಕಟೇಶ ಭವ ಸಂಕಟ ಪರಿಹರಿಸೋ (ಕಾಂಭೋಜಿ).

ಕರ್ತೃವು ತಿಳಿಯಲಾಗದ ಒಂದು ವಿಶಿಷ್ಟವಾದ ನಿಂದಾಸ್ತುತಿಯೊಂದು, ಸ್ವಾಮಿಯನ್ನು ಕಡುಲೋಭಿ ಶೆಟ್ಟಿಯೆಂದು, ಪ್ರಸಾದ ಗಳನ್ನು ಮಾರುವ ಶೆಟ್ಟಿಯೆಂದು ಕರೆಯುವುದು. ಇದರ ಆರಂಭ 'ಬಂದೆವಯ್ಯ ಗೋವಿಂದ ಶೆಟ್ಟಿ' ಎಂಬುದಾಗಿ, ಕೇಶವನಾರಾಯಣ ತಿಮ್ಮಶೆಟ್ಟಿ ಎಂದು ಮುಗಿಯುವುದು. (ಈ ಕೃತಿ ಕನಕದಾಸರದೆಂಬುದು ಅಂಕಿತದಿಂದಲೂ ಸಿದ್ಧವಿದೆ - ಅನುವಾದಕ.)(ಕನ್ನಡದ ಹರಿದಾಸರು ಮಧ್ವಾಚಾರ್ಯರಿಂದ ಇಂದಿನವರೆಗೆ ಸರಿಸುಮಾರು ಮೂನ್ನೂರು ಮಂದಿ ಹರಿದಾಸರು ತಿರುವೆಂಗಡರಾಯನನ್ನು ಸ್ತುತಿಸಿದ್ದಾರೆ. ಹಾಗಾಗಿಯೇ ಅವರ ಸಾಹಿತ್ಯ ಪ್ರಸಾರಕ್ಕಾಗಿ ತಿ.ತಿ.ದೇ. ದಾಸಸಾಹಿತ್ಯ ಪ್ರಾಜೆಕ್ಟ್ ಕೆಲಸಮಾಡುತಿದೆ. ಈ ಹರಿದಾಸ ಸಾಹಿತ್ಯದ ಬಗ್ಗೆ ಪ್ರತ್ಯೇಕವಾಗಿ ಒಂದು ಲೇಖನವನ್ನು ಅನುಬಂಧ-1 ಆಗಿ ಸೇರಿಸಲಾಗಿದೆ- ಅನುವಾದಕ.)

***ತ್ಯಾಗರಾಜ:*** ಕರ್ನಾಟಕ ಸಂಗೀತದ ಪ್ರಮುಖ ವಾಗ್ಗೇಯಕಾರ ತ್ಯಾಗರಾಜರು 1769 ರಲ್ಲಿ ಕಾಕರಾಲ ವಂಶದ ಭಾರದ್ವಾಜ ಗೋತ್ರದಲ್ಲಿ ಜನಿಸಿದರು. ರಾಮ ನಾಮ ಜಪವನ್ನೇ ಮಾಡಿಕೊಂಡು ಜೀವಿಸಿದರು. ಭಾಗವತದಲ್ಲಿ ಮುಳುಗಿದ ಪೋತನ ಕವಿಯಂತೆಯೇ ಈತ ಸಹ ರಾಮನಾಮ ಸಾಗರದಲ್ಲಿ ಮುಳುಗಿ ಎಲ್ಲ ರೀತಿಯ ಐಹಿಕ ಸಿರಿಯನ್ನೂ ಅಲಕ್ಷಿಸಿ ಬದುಕಿದವರು.

ಈತ ನಾಲ್ಕು ಸಾವಿರ ಕೃತಿಗಳನ್ನು ಹಾಡಿದರೆಂದು ಹೇಳಲಾಗಿದೆ. ದೊರೆತಿರುವ ಸುಮಾರು 700. ಆದರೆ ಪ್ರಚಲಿತವಿರುವುದು ಸುಮಾರು 200 ಮಾತ್ರವೇ. ಮೇಳಕರ್ತರಾಗಗಳ ಬಳಸಿ 211 ರಾಗಗಳಲ್ಲಿ ಹಾಡಿರುವ ಸಹಜ ವಾಗ್ಗೇಯಕಾರರಾದ ತ್ಯಾಗರಾಜರು ವೆಂಕಟೇಶ್ವರಸ್ವಾಮಿ ಬಗ್ಗೆ ಎರಡು ಕೀರ್ತನೆಗಳನ್ನು ರಚಿಸಿರುವರು.

ವೆಂಕಟೇಶ ನಿನು ಸೇವಿಂಪನು ಪದಿವೇಲ ಕನ್ನುಲು ಕಾವಲೆನಯ್ಯ - ಎಂಬ ಅವರ ಮಧ್ಯಮಾವತಿ ರಾಗದ ಆದಿ ತಾಳದ ಕೀರ್ತನೆಯಲ್ಲಿ ಕೀರ್ತನಕಾರರು ಸ್ವಾಮಿಯನ್ನು ನೋಡಲು - ಗ್ರಹಿಸಲು - ಹತ್ತು ಸಾವಿರ ಕಣ್ಣುಗಳಾದರೂ ಸಾಲವು ಎಂದು ತಾವು ಪೂರ್ವಜನ್ಮದಲ್ಲಿ ಮಾಡಿದ ಪುಣ್ಯದಿಂದಲೇ ಸ್ವಾಮಿಯನ್ನು ಸೇರಿದುದಾಗಿಯೂ ತಿಳಿಸಿದ್ದಾರೆ.

ಗೌಳಿಪಂತು ರಾಗದ ಆದಿ ತಾಳದ 'ತೆರ ತೀಯಗ ರಾದ - ನಾಲೋನಿ - ತೆರ.... ತಿರುಪತಿ ವೆಂಕಟರಮಣ ಮತ್ಸರಮನು ತೆರ' ಎಂಬ ಕೃತಿಯಲ್ಲಿ ಸ್ವಾಮಿಯನ್ನು ಮನುಷ್ಯನೊಳಗಿನ ತೆರೆ-ಧರ್ಮ ಅರ್ಥ ಕಾಮ ಮೋಕ್ಷಗಳಿಂದ ದೂರಮಾಡುತ್ತಿರುವ ಮಾತ್ಸರ್ಯವೆಂಬ ತೆರೆ-ಯನ್ನು ಸರಿಸಲು ಬೇಡುತ್ತಾರೆ.

ತ್ಯಾಗರಾಜರ ಆರಭಿಯಲ್ಲಿನ ಸಾಧಿಂಚೆನೇ ಓ ಮನಸಾದಿಂದ ಆರಂಭವಾಗುವ ಘನರಾಗ ಪಂಚಕದಲ್ಲೂ ವೆಂಕಟೇಶ್ವರ ಸ್ವಾಮಿಯ ಬಗ್ಗೆ ಉಲ್ಲೇಖವಿದೆ.

***ಮುತ್ತುಸ್ವಾಮಿ ದೀಕ್ಷಿತ:*** ತ್ಯಾಗರಾಜಸ್ವಾಮಿಗಳ ಮತ್ತೊಬ್ಬ ಸಮಕಾಲೀನರೆಂದರೆ 18,19ನೇ ಶತಮಾನದಲ್ಲಿದ್ದ ಮುತ್ತುಸ್ವಾಮಿ ದೀಕ್ಷಿತರು. ಅವರು ಬಹುಭಾಷಾ ಪಂಡಿತರು, ಸಂಸ್ಕೃತದ ಬಹು ದೊಡ್ಡ ವಿದ್ವಾಂಸರಾಗಿದ್ದರಿಂದ ದೀಕ್ಷಿತರ ಬಹು ಪಾಲು ಕೃತಿಗಳು ಸಂಸ್ಕೃತದಲ್ಲಿವೆ. ತಮ್ಮ ಸುಮಾರು ಮುನ್ನೂರು ಕೃತಿಗಳಲ್ಲಿ ಅವರು ವಿವಿಧ ದೇವತೆಗಳನ್ನುಸ್ತುತಿಸಿದ್ದಾರೆ. ವೆಂಕಟೇಶ್ವರ ಸ್ವಾಮಿಯ ಬಗ್ಗೆ ಐದು ಸಂಕೀರ್ತನೆಗಳು ಈ ರೀತಿಯಲ್ಲಿವೆ-

1. 'ಪ್ರಸನ್ನ ವೆಂಕಟೇಶ್ವರಂ ಭಜರೇ' - ವಕುಳಾಭರಣ ರಾಗದಲ್ಲಿದ್ದು ತ್ರಿಪುಟ ತಾಳದಲ್ಲಿದೆ. ಕೀರ್ತನೆಯಲ್ಲಿ ಸ್ವಾಮಿಯು ದಯಾಸಾಗರನೆಂದೂ ಆನಂದದಾಯಕನೆಂದೂ ಅಲಮೇಲುಮಂಗಾ ಸಂಕೀರ್ತನನೆಂದೂ ಹೇಳಲಾಗಿದೆ.

2. ಸುರುಟಿ ರಾಗದ ಆದಿ ತಾಳದ ಕೃತಿ 'ಶ್ರೀ ವೆಂಕಟಗಿರೀಶಂ ಆಲೋಕಯ' ಈ ಕೀರ್ತನೆಯಲ್ಲಿ ಸ್ವಾಮಿ ಸದಾ ಅಲಮೇಲುಮಂಗಾ ಸಹಿತನಾಗಿರುವನೆನ್ನಲಾಗಿದೆ.

3. ಪೂರ್ಣಚಂದ್ರಿಕಾ ರಾಗದ ರೂಪಕ ತಾಳದ ಕೃತಿಯಲ್ಲಿ ಸ್ವಾಮಿಯನ್ನು ದೀಕ್ಷಿತರು ವಂದಿಸುತ್ತ 'ಶಂಖಚಕ್ರಗದಾಪಾಣಿ ಮಹಂ ವಂದೇ ಶ್ರೀ ಶಾರ್ಙ್ಗನಂದಕ ಕೌಸ್ತುಭ ಧಾರಿಣಂ ವಂದೇ' ಎನ್ನುತ್ತಾರೆ.

4. ವರಾಳಿ ರಾಗದ ರೂಪಕ ತಾಳದ ಕೃತಿ ''ಶೇಷಾಚಲ ನಾಯಕಂ ಭಜಾಮಿ, ವಿಶೇಷ ಫಲ ದಾಯಕಂ'' ಇಲ್ಲಿ ಭಕ್ತರಿಗೆ ವಿಶೇಷ ವರಗಳನ್ನು ನೀಡುವ ಶೇಷಾಚಲ ನಾಯಕನನ್ನು ವರ್ಣಿಸಲಾಗಿದೆ.

5. ಕಾಪಿ ರಾಗದ ಆದಿ ತಾಳದ ಕೃತಿ - ''ವೆಂಕಟಾಚಲಪತೇ ನಿನ್ನು ನಮ್ಮಿತಿ ವೇಗಮೆ ನನ್ನು ರಕ್ಷಿಂಪುಮಯ್ಯ'' ಈ ಕೃತಿಯ ತೆಲುಗು ತಮಿಳು ಸಂಸ್ಕೃತಗಳಲ್ಲಿ ರಚಿತವಾಗಿರುವ ಮಣಿಪ್ರವಾಳ ಕೀರ್ತನೆಯಾಗಿದೆ.

***ಶ್ಯಾಮಶಾಸ್ತ್ರಿ:*** 18-19ನೇ ಶತಮಾನದಲ್ಲಿ ತ್ಯಾಗರಾಜಸ್ವಾಮಿ, ಮುತ್ತುಸ್ವಾಮಿ ದೀಕ್ಷಿತರ ಸಮಕಾಲೀನರಾದ ಶ್ಯಾಮಾಶಾಸ್ತ್ರಿಗಳು ಕರ್ನಾಟಕ ಸಂಗೀತದ ತ್ರಿಮೂರ್ತಿಗಳಲ್ಲಿ ಮೂರನೆಯವರು. ಇವರ ಜನ್ಮನಾಮ ವೆಂಕಟ ಸುಬ್ರಹ್ಮಣ್ಯ. ಆದರೂ ತಾಯ್ತಂದೆಯರು ನೀಡಿದ ಹೆಸರು ಶ್ಯಾಮಕೃಷ್ಣ. ಈತ ಮೂರು ನೂರಕ್ಕೂ ಮಿಕ್ಕಿ ಕೀರ್ತನೆ ಗಳನ್ನು ರಚಿಸಿದ್ದು ಒಂದು ಕೀರ್ತನೆ ವೆಂಕಟೇಶ್ವರಸ್ವಾಮಿಯ ಬಗ್ಗೆಯೂ ಇದೆ ಎಂದರೂ ಅದು ಉಪಲಬ್ಧವಿಲ್ಲವಾಗಿದೆ.

***ಸುಬ್ಬರಾಯಶಾಸ್ತ್ರಿ:*** ಶ್ಯಾಮಶಾಸ್ತ್ರಿಗಳ ಎರಡನೆಯ ಮಗ ಸುಬ್ಬರಾಯಶಾಸ್ತ್ರಿ. ಈತ ಖ್ಯಾತ ವಾಗ್ಗೇಯಕಾರನಾಗಿದ್ದು, ಹಮೀರಕಲ್ಯಾಣಿ ರಾಗದ ಆದಿ ತಾಳದಲ್ಲಿ 'ವೆಂಕಟಶೈಲ ವಿಹಾರ ನೀವೇಗತಿ ಬ್ರೋವರಾದ' ಎಂಬ ಒಂದು ಕೀರ್ತನೆಯಲ್ಲಿ ದೇವರ ಗುಡಿಯ ಗೋಪುರವನ್ನೂ ಮಂಟಪವನ್ನೂ ಕಂಡಾಗಲೇ ತಮ್ಮದೆಲ್ಲವನ್ನೂ ಸ್ವಾಮಿಗೆ ಸಮರ್ಪಿಸಿದ್ದು ತಮ್ಮನ್ನು ಆ ದೇವರೇ ರಕ್ಷಿಸಬೇಕು ಎಂದು ಬೇಡಿದ್ದಾರೆ.

***ವೀಣಾ ಕುಪ್ಪಯ್ಯರ್:*** ತ್ಯಾಗರಾಜಸ್ವಾಮಿಗಳ ನೇರ ಶಿಷ್ಯರಲ್ಲಿ ವೀಣಾಕುಪ್ಪಯ್ಯರ್ ಒಬ್ಬರು. ವೆಂಕಟೇಶ್ವರ ಸ್ವಾಮಿಯ ಬಗ್ಗೆ ಪಂಚರತ್ನ ಕೃತಿಗಳನ್ನು ರಚಿಸಿದ್ದಾರೆ. 1) ಮಮ್ಮು ಬ್ರೋಚು - ಸಿಂಹೇಂದ್ರಮಧ್ಯಮ ರಾಗ - ಆದಿ ತಾಳ. 2) ನನ್ನು ಬ್ರೋವುಮಿಕ - ಮುಖಾರಿ ರಾಗ - ಆದಿ ತಾಳ. 3) ಸರೋಜಾಕ್ಷುನಿ - ಸಾವೇರಿ ರಾಗ - ಆದಿ ತಾಳ. 4) ನೀವೇ ದಿಕ್ಕು - ದರ್ಬಾರ್ ರಾಗ - ಆದಿ ತಾಳ. 5) ಬಾಗು ನಿನಗನು ನಾತೋ ಪಲುಕಗರಾದ- ಶಂಕರಾಭರಣ ರಾಗ - ರೂಪಕ ತಾಳ.

***ಪಟ್ಣಂ ಸುಬ್ರಹ್ಮಣ್ಯ ಅಯ್ಯರ್:*** ಈತ ಬಹುಖ್ಯಾತ ಸಂಗೀತ ವಿದ್ವಾಂಸರು (1845-1902) ಹಲವಾರು ಕೃತಿಗಳನ್ನು ರಚಿಸಿದ್ದು ಅವುಗಳಲ್ಲಿ ಕೆಲವು ಸ್ವಾಮಿಯನ್ನು ಕುರಿತಾದವು - 1) ಸಮಯಮಿದೇ ನನ್ನು ಬ್ರೋವ- ಕೇದಾರ ರಾಗ - ರೂಪಕ ತಾಳ. 2)ರಘುವಂಶ ಸುಧಾಂಬುಧಿ ಚಂದ್ರ - ಕದನಕುತೂಹಲ ರಾಗ - ಆದಿ ತಾಳ. 3) ಸರಸೀರುಹಾಸ ಶ್ರೀರಾಮು - ಬೃಂದಾವನಸಾರಂಗ ರಾಗ - ಆದಿ ತಾಳ. 4) ಪರಿಧಾನಮಿಚ್ಚಿತೇ - ಬಿಲಹರಿ ರಾಗ - ಮಿಶ್ರಜಾತಿ ಝಂಪೆ ತಾಳ.

***ಶ್ರೀನಿವಾಸ ಅಯ್ಯಂಗಾರ್:*** ಶ್ರೀರಾಮನಾಥಪುರಂ ಶ್ರೀನಿವಾಸ ಅಯ್ಯಂಗಾರ್ ಅವರು ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ಅವರ ಶಿಷ್ಯ. ವೆಂಕಟೇಶ್ವರ ಸ್ವಾಮಿಯ ಬಗ್ಗೆ ಹಲವು ಕೃತಿಗಳನ್ನು ರಚಿಸಿದ್ದಾರೆ. ಒಂದು ಪ್ರಸಿದ್ಧವಾದ ಕೃತಿಯೆಂದರೆ ಕೇದಾರಗೌಳ ರಾಗ ಆದಿ ತಾಳದಲ್ಲಿ ಹಾಡಿರುವ 'ಸಾರಗುಣ ಪಾಲಿಂಪ ಸಮಯಮುರ ನೀಕು'.

***ನಾರಾಯಣಸ್ವಾಮಿ ನಾಯುಡು:*** 20ನೇ ಶತಾಬ್ದದ ಮೊದಲ ಭಾಗದಲ್ಲಿ ಪ್ರಸಿದ್ಧರಾಗಿದ್ದ ಈತ ಸ್ವಾಮಿಯ ಬಗ್ಗೆ ಹಲವಾರು ಸುಂದರ ಕೀರ್ತನೆಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕೆಲವು - 1) ನೀ ದಾಸುಡನನಿ ವೇಡಿತೆ ನಿರ್ದಯುಡವೈ ನನು ಬ್ರೋವವೇಮಿ - ಬೇಗಡೆ ರಾಗ - ಆದಿ ತಾಳ. 2) ಎಂದು ಪೋದುರ ರಾಮ ನೀವಸ ಎಂತ ವೇಡುಕೊನ್ನ ನಿಂತ ದಯರಾದು - ಸಾವೇರಿ ರಾಗ - ಆದಿತಾಳ. 3) ಇಕನ್ನೆನ ನಾ ಮೊರ ವಿನರಾದ ಇನಕುಲಚಂದ್ರಮ - ಪುಷ್ಪತಿಲಕ ರಾಗ - ಆದಿ ತಾಳ. 4) ಇಕನೆವರಿತೊ ವಿನ್ನವಿಂಚುದುರ- ಕಲಹಂಸ ರಾಗ - ಆದಿ ತಾಳ.

**ವೆಂಕಟೇಶ್ವರಸ್ವಾಮಿಯ ಬಗ್ಗೆ ಅನೇಕಾ ಯೇ ಭಕ್ತಾಃ ಹರಿಚರಣ ಸಂಸಕ್ತ ಹೃದಯಾಃ** - ಆಗಿ ಹಾಡಿ ಬರೆದವರೆಷ್ಟೋ ಮಂದಿ ಕವಿಗಳಾಗಿದ್ದಾರೆ.

ಮೇಲಿನ ಕಿರು ವಿವರಣೆಯಿಂದ ವೇಂಕಟೇಶ್ವರ ಸ್ವಾಮಿಯು ಹೆಸರು ಇತಿಹಾಸದುದ್ದಕ್ಕೂ ವಾಗ್ಗೇಯಕಾರ ಸಾಹಿತಿ ಕವಿಗಳ ವಿಷಯವಾಗಿದ್ದಾನೆ ಎಂಬುದು ಸ್ಪಷ್ಟವಾಗುತ್ತದೆ.

❁❁❁

## ಅಧ್ಯಾಯ - 10

# ಆಲಯ ನಿರ್ಮಾಣದ ಏಳುಹಂತ

### 1. ಪ್ರವೇಶಿಕೆ:

ತಿರುಮಲೆ ಎಂಬ ಪದಕ್ಕೆ ಅರ್ಥ ಪವಿತ್ರವಾದ ಬೆಟ್ಟ ಎಂಬುದಾಗಿ. ಹೀಗಾಗಿ ಯಾವುದೇ ಬೆಟ್ಟವೂ ತಿರುಮಲೆಯಾಗಿ ಅದರ ಮೇಲೆ ನಿರ್ಮಾಣವಾದ ಗುಡಿ ತಿರುಮಲೆಯ ಆಲಯವಾಗಬಹುದು. ಆದರೂ ಸಾಧಾರಣವಾಗಿ ತಿರುಮಲೆ ಆಲಯವೆಂದರೆ ಎಲ್ಲ ಪರ್ವತಗಳಲ್ಲಿ ಪವಿತ್ರವಾದ ಆಲಯವನ್ನು ಹೊಂದಿದ ವೆಂಗಡಬೆಟ್ಟದಲ್ಲಿನ ಶ್ರೀ ವೆಂಕಟೇಶ್ವರಸ್ವಾಮಿ ಆಲಯವೆಂದೇ ಅರ್ಥ ಪ್ರಸಿದ್ಧವಾಗಿದೆ.

ಈ ಆಲಯದ ನಿರ್ಮಾಣದ ಕಾಲವನ್ನು ಖಚಿತವಾಗಿ ಗುರುತಿಸುವುದು ಸಾಧ್ಯವಿಲ್ಲ. ಈ ವಿಷಯದಲ್ಲಿ ನಮಗೆ ಬೆಳಕು ತೋರಿಸುವ ಯಾವುದೇ ಸಾಕ್ಷಿಗಳು, ದಾಖಲೆಗಳು ಇಲ್ಲದಿರುವುದರಿಂದ ನಾವು ಪರಿಸರದ ಆಧಾರಗಳ ಮೂಲಕ ತಿಳಿಯತಕ್ಕದ್ದೇ ಏಕಮಾತ್ರ ಮಾರ್ಗವಾಗಿದೆ.

ಆಲಯದಲ್ಲಿ ಕಂಡುಬರುವ ವಿವಿಧ ನಿರ್ಮಾಣಗಳು, ಶಾಸನಗಳ ಅಧ್ಯಯನದಿಂದ ಈ ಆಲಯದ ವಾಸ್ತುಶಿಲ್ಪದ ಅಭಿವೃದ್ಧಿಯನ್ನು ಸ್ಥೂಲವಾಗಿ ಗುರುತಿಸಬಹುದು. ಇಲ್ಲಿನ ವಿವಿಧ ನಿರ್ಮಾಣಗಳ ಶೈಲಿಯ ತುಲನಾತ್ಮಕ ಅಧ್ಯಯನದಿಂದ ಕಾಲಗತಿಯಲ್ಲಿ ಬೆಳೆದು ಬಂದ ಬೇರೆ ಬೇರೆ ನಿರ್ಮಾಣ ಘಟ್ಟಗಳನ್ನು ತಿಳಿಯಬಹುದು. ಹಲವಾರು ಧಾರ್ಮಿಕ ವ್ಯಕ್ತಿಗಳು, ರಾಜರುಗಳು ಆಲಯದ ಪಾವಿತ್ರ್ಯವನ್ನು, ಅದರ ಸುವ್ಯವಸ್ಥಿತ ಸ್ಥಿತಿಯನ್ನು ಬಯಸಿ ತಮ್ಮ ದತ್ತಿ, ದಾನ, ವಂತಿಗೆಗಳನ್ನು ಧಾರಾಳವಾಗಿ ನೀಡಿರುತ್ತಾರು. ಉಂಟಾಗಿ ಈ ಸಾಕ್ಷಿಗಳನ್ನು ಅನೇಕ ಬಾರಿ ಶಾಸನಗಳ ಆಧಾರಗಳಿಂದ ಮತ್ತಷ್ಟು ಬಲಗೊಳಿಸಲೂ ಸಾಧ್ಯವಿದೆ. ಹಲವುಬಾರಿ ಜೀರ್ಣೋದ್ಧಾರ ಕಾರ್ಯ, ವ್ಯಾಪಕವಾಗಿದ್ದ ಸೇರ್ಪಡೆಗಳು, ಬದಲಾವಣೆಗಳು, ಹಿರಿಯ ಪ್ರಮಾಣದ್ದಾಗಿದ್ದು ಅಂದಂದಿನ ಕಾಲಗತಿಯ ಪ್ರಚಲಿತ ಆಚರಣೆಗಳಿಗೆ ತಕ್ಕಂತಹವಾಗಿದ್ದುವು. ಹೀಗಾಗಿ ನಾವು ಇಂದು ಕಾಣುವ ಆಲಯ ಇಂತಹ ಎಲ್ಲ ಪ್ರಯತ್ನಗಳ ಒಟ್ಟು ಫಲವಾಗಿದೆಯೆನ್ನಲು ಅಡ್ಡಿಯಿಲ್ಲ.

ಈಗ ಕಂಡುಬರುವ ಆಲಯದಲ್ಲಿ ಪ್ರಾಚೀನ ವಾಸ್ತುಶಿಲ್ಪಕಲಾವೈಭವವನ್ನೇನೂ ಹೆಚ್ಚಿಗೆ ಕಾಣಲಾಗುವು ದಿಲ್ಲ. ಆಲಯದ ಮೇಲು ನೋಟದ ಅಧ್ಯಯನದಿಂದ ತಿಳಿಯತಕ್ಕ ಅಂಶವೆಂದರೆ ಅಲ್ಲಲ್ಲಿ ತೋರುವ ಅರ್ವಾಚೀನ ಚೋಳ ಶೈಲಿಯ ಕ್ವಚಿತ್ ನಿರ್ಮಿತಿಗಳ ಹೊರತು ಮಿಕ್ಕ ಎಲ್ಲ ನಿರ್ಮಿತಿಯೂ ವಿಜಯನಗರ ಶೈಲಿಯ ವಾಸ್ತುಶಿಲ್ಪ ವಾಗಿ ಹಲವಾರು ಆಧುನಿಕ ಶೈಲಿಯ ನಿರ್ಮಿತಿಯೂ ಉಂಟು. ತಿರುಮಲೆಯ ಆಲಯದ ವಾಸ್ತುಶಿಲ್ಪದ ಬೆಳವಣಿಗೆ ಯನ್ನು-ಸಾಹಿತ್ಯಾಧಾರದಲ್ಲಿ, ಶೈಲಿಯ ತೌಲನಿಕ ಅಧ್ಯಯನದ ಆಧಾರದಲ್ಲಿ, ಶಾಸನಗಳ ಆಧಾರದಲ್ಲಿ ಇದುವರೆಗೆ - ಶಾಸ್ತ್ರೀಯವಾಗಿ ಗುರುತಿಸುವ ಪ್ರಯತ್ನ ನಡೆದಿಲ್ಲ. ಇಲ್ಲಿ ಅಂತಹದೊಂದು ಪ್ರಯತ್ನವನ್ನು ಕೈಗೊಳ್ಳಲಾಗಿದೆ.

### ಆಗಮ ಶಾಸ್ತ್ರದಂತೆ ಆಲಯ ವಾಸ್ತು

### ಅ. ವ್ಯೂಹ ಸಿದ್ಧಾಂತ ಹಾಗೂ ಆಗಮಗಳು:

ತಿರುಮಲೆಯ ಆಲಯ ನಿರ್ಮಾಣದ ಅಧ್ಯಯನಕ್ಕೆ ಇಂಬಾಗಿ ಮೊದಲಿಗೆ ಆಲಯ ನಿರ್ಮಾಣದಲ್ಲಿ ಆಗಮಗಳ ನಿಯಮಗಳನ್ನು ತಿಳಿಯುವುದು ಸೂಕ್ತ. ಪ್ರಾಚೀನರು ತಾವು ತಿಳಿದ ಬಗೆಯಲ್ಲಿ ದೇವರನ್ನು ಬಹಿರಂಗವಾಗಿ ಪೂಜಿಸಲು ಸಾರ್ವಜನಿಕವಾಗಿ ಏರ್ಪಡಿಸಿಕೊಂಡ ಸ್ಥಳಗಳೇ ಆಲಯಗಳು. ಸಂಹಿತೆಗಳಲ್ಲಿ ಹೇಳಿರುವ ನಿಯಮಗಳಿಗೆ ತಕ್ಕಂತೆ ಈ ಪೂಜಾ ಮಂದಿರಗಳ ನಿರ್ಮಾಣವಾಗುತ್ತಿತ್ತು. ಇವುಗಳಲ್ಲಿ ಹಲವು ವೈಖಾನಸ ಆಗಮ ತತ್ವಗಳಿಗೆ ಬದ್ಧವಾದರೆ ಇನ್ನು ಹಲವು ಪಾಂಚರಾತ್ರ ಆಗಮವನ್ನು ಅನುಸರಿಸಿದ್ದು.

ಆಗಮ ಶಾಸ್ತ್ರಗಳ ಮರ್ಮವನ್ನರಿತ ಸೂಕ್ಷ್ಮಜ್ಞರಾದ ಶಿಲ್ಪಿಗಳು ಧ್ರುವ ಮೂರ್ತಿಗಳನ್ನು ಮಾಡುತ್ತಾರೆ. ಹಲವು ಆಲಯಗಳಲ್ಲಿ ಮೂರ್ತಿಯ ಮೂಲವು ತಿಳಿದುಬರದು. ಇವುಗಳಲ್ಲಿ ಹಲವು ಸಿದ್ಧರು, ಋಷಿಗಳು, ಅಥವಾ ದೇವರುಗಳಿಂದ ಸ್ಥಾಪಿಸಲ್ಪಟ್ಟಿದ್ದರೆ ಕೆಲವು ದೈವ ತನ್ನ ಪೂರ್ಣ ಪ್ರಭೆಯಿಂದ ಕಂಡುಬರುವ ಸ್ವಯಂ ವ್ಯಕ್ತವಾದವುಗಳು.

ಮನುಷ್ಯ ತಾನು ಪೂಜಿಸುವುದಕ್ಕಾಗಿ ದೇವರನ್ನು ಸ್ಥಾಪಿಸುವ ಆಲಯದ ನಿರ್ಮಾಣದ ನಿಯಮ ನಿಬಂಧನೆಗಳನ್ನು ಆಗಮ ಶಾಸ್ತ್ರಗ್ರಂಥಗಳು ವಿಸ್ತಾರವಾಗಿ ತಿಳಿಸುತ್ತವೆ. ವೈಷ್ಣವ ಆಲಯ ನಿರ್ಮಾಣಕ್ಕಿರುವ ಆಗಮಗಳು ಎರಡು - ವೈಖಾನಸ, ಪಾಂಚರಾತ್ರ. ಇವೆರಡೂ ತಾವೇ ಪವಿತ್ರತರವೆಂದೂ, ಶ್ರೇಷ್ಠತರವೆಂದೂ, ಪೂರ್ಣವೆಂದೂ ಹೇಳಿಕೊಳ್ಳುತ್ತವೆಯಾದರೂ, ಹಿರಿಯ ಆಚಾರ್ಯ ಪುರುಷರು ಎರಡಕ್ಕೂ ಸಮಾನತೆಯನ್ನು ಕಲ್ಪಿಸಿರುವುದರಿಂದಲೂ, ಸಾಮಾನ್ಯರು ಎರಡರಲ್ಲೂ ಭೇದಕ್ಕಿಂತ ಹೆಚ್ಚಾಗಿ ಸಮಾನತೆಯನ್ನು ಕಾಣುವಂತಿರುವು ದರಿಂದಲೂ, ಎರಡಕ್ಕೂ ಒಂದೇ ರೀತಿಯ ಮನ್ನಣೆಯುಂಟು.

ಹಿಂದೂ ಧರ್ಮದಲ್ಲಿ ಆಲಯ ನಿರ್ಮಾಣದಲ್ಲಿ ಇರಲೇಬೇಕಾದ ಮೂಲ ಸಿದ್ಧಾಂತವೆಂದರೆ - ಆಲಯವು ಅತ್ಯುನ್ನತವಾದ ದೈವದ ಐಹಿಕ ರೂಪವನ್ನು ಬಿಂಬಿಸಿ, ಮನುಷ್ಯ ತಾನು ಆರೋಹಣಮಾರ್ಗದಲ್ಲಿ ನಡೆದು ಭವಬಂಧನ ಮುಕ್ತನಾಗಿ ಅಜ್ಞಾನದಿಂದ ನಿವೃತ್ತನಾಗಿ ತನ್ನದೇ ಆದ ದೈವತ್ವದ ಪರಿಕಲ್ಪನೆಯ ಮಟ್ಟಕ್ಕೆ ಏರಲು ಅನುವು ಮಾಡಿಕೊಡುವಂತಿರಬೇಕು. ಈ ಒಂದುಮಾರ್ಗದಲ್ಲಿ ನಿಷ್ಕಳ ಬ್ರಹ್ಮ, ಸಕಳ ಬ್ರಹ್ಮ, ಸಗುಣ ಬ್ರಹ್ಮ ಮೊದಲಾದವೆಲ್ಲವೂ ಸೂತ್ರೀಕರಿಸಿ ವ್ಯಾವೃತ ಗೊಳಿಸಲ್ಪಟ್ಟಿವೆ. ಮನುಷ್ಯನ ಅಂತಿಮ ಗುರಿಯೆಂದರೆ ಜನನ ಮರಣ ಚಕ್ರದ ನಿರಂತರತೆಯಿಂದ ಬಿಡುಗಡೆಯಾಗಿ, ಪರಮಾತ್ಮನೊಡನೆ ಶಾಶ್ವತವಾಗಿ ಬೆರೆಯುವುದೇ ಆಗಿದೆ. ಈ ಗಮ್ಯವನ್ನು ಸೇರಲು ನಾಲ್ಕು ಮಾರ್ಗಗಳೆಂದರೆ ಜಪ, ಹೋಮ, ಧ್ಯಾನ, ಅರ್ಚನೆ. ಈ ವಿಧವಾದ ಸ್ಥೂಲಪರಿಕಲ್ಪನೆಯೇ ಆಲಯ ನಿರ್ಮಾಣದ ಮೂಲತತ್ತ್ವ.

ವಿಷ್ಣುವಿನ ವ್ಯೂಹಾವತಾರ, ವಿಭಾವಾವತಾರಗಳೆಂಬ ಎರಡು ಇತರ ಪರಿಕಲ್ಪನೆಗಳನ್ನೂ ಇಲ್ಲಿ ಗಮನಿಸಬೇಕು. ಮೊದಲನೆ ದಾದ ವ್ಯೂಹಾವತಾರದಲ್ಲಿ ಚಿನ್ನದ ಮೊಟ್ಟೆಯೆಂದು ಕರೆಯಲಾಗುವ ಬ್ರಹ್ಮಾಂಡವನ್ನು ಏಕಮೇವನಾದ ಪರಮಾತ್ಮನು ಸೃಷ್ಟಿ ಮಾಡುವನು. ಇದು ಆಮೋದ, ಪ್ರಮೋದ ಸಾಮೋದ ವೈಕುಂಠ ಲೋಕಗಳೆಂದು ನಾಲ್ಕು ಬಗೆಯಲ್ಲಿ ವಿಂಗಡಣೆಯಾಗಿ, ಜೀವಿಗಳು ಆಮೋದಲೋಕದಿಂದ ವೈಕುಂಠಲೋಕಕ್ಕೆ ಬರುವರೆಂದೂ, ಪರಮಾತ್ಮನಾದ ವಿಷ್ಣುವು ಪ್ರತಿಲೋಕದಲ್ಲಿಯೂ ಜೀವರಿಗೆ ವಿವಿಧ ಘಟ್ಟಗಳಲ್ಲಿ ವಿಷ್ಣು, ಮಹಾವಿಷ್ಣು, ಸದಾವಿಷ್ಣು, ಸರ್ವವ್ಯಾಪಿ ನಾರಾಯಣ ಆಗಿ ಕಂಡುಬರುವನೆಂದು ಹೇಳಲಾಗಿದೆ. ಈ ಅಂಶಗಳ ಪರಿಕಲ್ಪನೆಯ ರೂಪಗಳೆಂದರೆ ಪೂಜೆಗೆ ಒದಗಿ ಬರುವ ಪುರುಷ, ಸತ್ಯ, ಅಚ್ಯುತ, ಅನಿರುದ್ಧ ರೂಪಗಳು. ಈ ನಾಲ್ಕೂ ವಿಷ್ಣುವಿನ ವ್ಯೂಹ ರೂಪಗಳೆಂದು, ಆರಾಧನೆ ಹೊಂದುವ ಎಲ್ಲ ಆಲಯಗಳಲ್ಲೂ ಖಚಿತ ವಿವರದ ಸ್ಥಳವನ್ನು ಪಡೆಯುತ್ತವೆ. ಆಗಮಗಳಲ್ಲಿ ಈ ನಾಲ್ಕು ವ್ಯೂಹರೂಪಗಳೇ ಅಲ್ಲದೇ ಮತ್ತೂ ಇಪ್ಪತ್ನಾಲ್ಕು ಉಪವ್ಯೂಹಗಳನ್ನು ವಿವರಿಸಲಾಗಿದೆ. ಆಲಯಗಳಲ್ಲಿ ಈ ಒಂದೊಂದು ರೂಪಕ್ಕೂ ಒಂದೊಂದು ಪ್ರತ್ಯೇಕ ಸ್ಥಳವಿದ್ದು, ಒಂದೊಂದು ಮೂರ್ತಿರೂಪ ಇರುವುದು.

ಭಕ್ತರಿಗೆ ಮುಕ್ತಿಯ ಸರಿಯಾದ ಸಾಧನಾ ಮಾರ್ಗವನ್ನು ಸೂಚಿಸಲು ಭಗವಂತನು ತಂತಾನೆ ವಿವಿಧ ಅವತಾರಗಳಲ್ಲಿ ತೋರಿ ಕೊಳ್ಳುವುದನ್ನು ವಿಭವಾವತಾರವೆನ್ನುವರು. ವಿಭವಾವತಾರಗಳು ಜನಪ್ರಿಯವಾದ ದಶಾವತಾರಗಳು ಎಂದು ಹೆಸರಿಸಲ್ಪಟ್ಟಿವೆ. ಮತ್ಸ್ಯ, ಕೂರ್ಮ, ವರಾಹ, ವಾಮನ, ರಾಮ, ಬಲರಾಮ,ಕೃಷ್ಣ- ಮುಂತಾದವು. ಈ ವಿಭವಾವತಾರಗಳನ್ನೂ ಆಲಯಗಳಲ್ಲಿ ಅರ್ಚಿಸುವು ದುಂಟು.

ವ್ಯೂಹ ಮೂರ್ತಿಗಳು, ಪರಿವಾರದೇವತೆಗಳೂ - ಬ್ರಹ್ಮ ಶಿವ, ಇಂದ್ರ ಮೊದಲಾದವರೂ, - ಆಲಯದ ವಾಸ್ತು ಶಿಲ್ಪ ವಿನ್ಯಾಸದಲ್ಲಿ ತಮತಮಗೆ ತಕ್ಕ ಸ್ಥಾನವನ್ನು ಪಡೆಯುವಂತೆ ಆಗಮ ಶಾಸ್ತ್ರ ನಿರ್ದೇಶಗಳಿವೆ.

ಪಾಂಚರಾತ್ರಾಗಮದಲ್ಲಿ ಈ ವ್ಯೂಹಗಳನ್ನು ಒಪ್ಪಿದರೂ, ವೈಖಾನಸದಲ್ಲಿಯಂತೆ ನಾಲ್ಕು ಬ್ರಹ್ಮಗುಣಗಳಿಂದಾದ ರೂಪಗಳನ್ನು ಒಪ್ಪದೇ, ಇತರ ಆರು ಗುಣಗಳಿಂದಾದ ರೂಪಗಳನ್ನು ಸ್ವೀಕರಿಸಲಾಗುವುದು. ಇದರ ಹೊರತು ವ್ಯೂಹದ ಎಲ್ಲ ಹಂತಗಳನ್ನೂ ಎರಡೂ ಆಗಮಗಳು ಒಪ್ಪಿ ನಡೆಯುವುವು. ವ್ಯತ್ಯಾಸವೆಂದರೆ ಇವುಗಳಲ್ಲಿನ ಪ್ರತಿಯೊಂದಕ್ಕೂ ನೀಡುವ ಪ್ರಾಮುಖ್ಯತೆಯದು ಮಾತ್ರ.

ವೈಖಾನಸಾಗಮದ ಪ್ರಕಾರ ಪೂರ್ವಕ್ಕೆ ಮುಖ ಮಾಡಿದ ಗರ್ಭಗುಡಿಯ ಪೂರ್ವದ ಮುಖದಲ್ಲಿ ದಕ್ಷಿಣದ ಕಡೆಗೆ ಪುರುಷ ಸ್ಥಾನವಿದ್ದರೆ, ಸತ್ಯಸ್ಥಾನವು ದಕ್ಷಿಣದ ಗೋಡೆಯಲ್ಲಿಯೂ, ಅಚ್ಯುತಸ್ಥಾನವು ಪಶ್ಚಿಮದ ಗೋಡೆಯಲ್ಲಿ ಹಾಗೂ ಅನಿರುದ್ಧ ಸ್ಥಾನವು ಉತ್ತರದ ಗೋಡೆಯಲ್ಲಿರುವುದು. ಪಾಂಚರಾತ್ರಾಗಮವು ವ್ಯೂಹ ವಾಸುದೇವನನ್ನು ಪೂರ್ವಕ್ಕೆ ನಿಲ್ಲಿಸಿದರೆ, ವೈಖಾನಸವು ಪುರುಷನನ್ನು ನಿಲ್ಲಿಸಿ, ಸಂಕರ್ಷಣನನ್ನು ದಕ್ಷಿಣದಲ್ಲಿ ನಿಲ್ಲಿಸಿ, ವಿಲೋಮಕ್ರಮದಲ್ಲಿ ಮುಂದುವರಿಯುತ್ತದೆ. ಹೀಗೆ ವೈಖಾನಸಾಗಮದಲ್ಲಿ ವ್ಯೂಹಗಳನ್ನು ಪೂರ್ವದಿಂದ ಗಡಿಯಾರದಂತೆ ಸುತ್ತಿಸಿದರೆ ಪಾಂಚರಾತ್ರವು ಗಡಿಯಾರದ ವಿರುದ್ಧ ದಿಕ್ಕಿನಲ್ಲಿ ನಡೆಸುವುದು.

### ಆ. ಆಗಮಿಕ ಆಲಯಗಳ ಬಗೆಗಳು

ಆಲಯ ನಿರ್ಮಾಣದಲ್ಲಿ ಪುರಾಣಗಳು ಹೇಳುವ ವಿವರಗಳ ಹತ್ತಿರದಲ್ಲೇ ಆಗಮಗಳು ನಡೆಯುತ್ತವೆ. ಆಲಯ ನಿರ್ಮಾಣದಲ್ಲಿ ಏಕಮೂರ್ತಿ, ತ್ರಿಮೂರ್ತಿ, ದ್ವಿಮೂರ್ತಿ (ಕೂಟ) ಮೊದಲಾದ ಹಲವು ಬಗೆಗಳುಂಟು. ಆಗಮಗಳು ಹಲವಾರು ವಿಶಿಷ್ಟವಾದ ನಿರ್ಮಾಣ ಸ್ವರೂಪಗಳನ್ನು ವಿವರಿಸುವುವು. ಇವುಗಳಲ್ಲಿ ಆದರ್ಶವೆಂದರೆ 12 ಅಂತಸ್ತುಗಳದ್ದು ಆಗಿದ್ದು ಇಂತಹ ಆಲಯಗಳು ತುಂಬ ಅಪರೂಪವಾಗಿದ್ದು ಪುಸ್ತಕಗಳಲ್ಲಿ ಮಾತ್ರವೇ ನಿಕ್ಷಿಪ್ತವಿರುವುದು ಸ್ಪಷ್ಟವಿದೆ.

### ಇ. ಏಕಮೂರ್ತಿ ಆಲಯಗಳು

ಕಾಲಗತಿಯಲ್ಲಿ ನಿಂತು ಬಂದಿರುವ ಆಲಯದ ಒಂದು ಬಗೆಯೆಂದರೆ ಏಕಮೂರ್ತಿ ಆಲಯವಾಗಿದ್ದು ಇದು ಅತ್ಯಂತ ಸಾಧಾರಣವಾಗಿ ಎಲ್ಲೆಡೆ ಕಂಡುಬರುತ್ತದೆ. ಈ ಬಗೆಯ ಆಲಯದಲ್ಲಿ ವ್ಯೂಹಮೂರ್ತಿಯ ಹಾಗೂ ಹಲವು ಬಗೆಯ ವಿಭವರೂಪಗಳ ಪ್ರತೀಕಗಳುಂಟು. ಗರ್ಭಗೃಹಗಳಲ್ಲಿ ಪರಿವಾರ ದೇವತೆಗಳಾಗಿ ಬ್ರಹ್ಮ ರುದ್ರ, ಮಾರ್ಕಂಡೇಯ, ಭೃಗು ಮೊದಲಾದವರನ್ನು ಪ್ರತಿಷ್ಠಾಪಿಸಲಾಗುತ್ತದೆ. ಕಾಲಾನುಕ್ರಮದಲ್ಲಿ ಬ್ರಹ್ಮರುದ್ರರ ವಿಗ್ರಹಗಳ ಸ್ಥಾಪನೆಯನ್ನು ಕೈಬಿಡಲಾಯಿತು.

### ಈ. ನವ ಷಟ್ ಪಂಚಮೂರ್ತಿ ಆಲಯ

ಈ ಬಗೆಯ ಆಲಯಗಳನ್ನು ಮೂರು ಜಗಲಿಯಲ್ಲಿ ಅಥವಾ ನೆಲದ ಮೇಲಿನ ಒಂದೇ ಜಗಲಿಯಲ್ಲಿ ನಿರ್ಮಾಣ ಮಾಡ ಬಹುದು. ಕಟ್ಟಡದ ಇಡೀ ವಿನ್ಯಾಸವು ಒಂಭತ್ತು ಕೈಯಳತೆಯ ಚೌಕದಿಂದ 61 ಕೈಯಳತೆಯ ಚೌಕದವರೆಗೆ, ಪ್ರತಿ ಪಾರ್ಶ್ವವೂ ಎರಡು ಕೈಯಳತೆಯ ವೃದ್ಧಿಹೊಂದುವಂತೆ ಆಗಬಹುದು. ಎಂದರೆ ಚೌಕದ ಪ್ರತಿ ಪಾರ್ಶ್ವವೂ 9, 11, 13, 15, ರಿಂದ 61 ಕೈಯಳತೆ ಆಗಬಹುದು. ಹೀಗಾಗಿ ಆಲಯಗಳು 27 ಅಳತೆಗಳಲ್ಲಿ ಉಂಟಾಗಬಹುದು. ಪ್ರತಿ ಪಾರ್ಶ್ವದಲ್ಲಿ ಒಂಭತ್ತು ಕೈಯಳತೆಗಿಂತ ಕಡಿಮೆ ಅಳತೆಯ ಆಲಯವನ್ನೂ ಒಪ್ಪಲಾಗಿದೆ. ಆದರೆ ಈ ಅಳತೆಯ ಆಲಯಗಳು ಅತಿ ಕಿರಿದಾಗಿ 9, 6 ಅಥವಾ 5 ಮೂರ್ತಿಗಳನ್ನೂ ಸಮರ್ಪಕವಾಗಿ ಸ್ಥಾಪಿಸಲಾಗದು. ಹೀಗಾಗಿ ಗರ್ಭಗುಡಿಯ ಗೋಡೆಗಳಲ್ಲಿ ಇವುಗಳನ್ನು ಸ್ಥಾಪಿಸ ಬೇಕಾಗುವುದು.

ಗರ್ಭಗೃಹದ ಒಳ ಗೋಡೆಗಳನ್ನು ಅಭ್ಯಂತರ ಭಿತ್ತಿಗಳೆಂದು ಕರೆಯಲಾಗುತ್ತದೆ. ಗೋಡೆಯ ಹೊರಭಾಗ ವನ್ನು ಬಾಹ್ಯಭಿತ್ತಿ ಯೆನ್ನುವರು (ಎರಡೂ ಸಂಸ್ಕೃತ ಪದಗಳು) ಪೂರ್ವದ ಕಡೆಯ ಒಳ ಗೋಡೆಯ ಮಧ್ಯದಲ್ಲಿ ಒಂದು ದ್ವಾರವಿದ್ದು ನಾಲ್ಕು ಹೊರ ಗೋಡೆಗಳ ಮಧ್ಯದಲ್ಲಿಯೂ ನಾಲ್ಕು ದ್ವಾರಗಳಿರುತ್ತವೆ. ಗರ್ಭಗುಡಿಯ ಪ್ರತಿ ಪಾರ್ಶ್ವವೂ ಮೂರು ಕೈಯಳತೆಯದು. ಗೋಡೆಯ ಗಾತ್ರ ಒಂದು ಹಸ್ತವಾಗಿದ್ದು ಅದರ ಸುತ್ತಣ ಸ್ಥಳದ ಅಗಲವೂ ಒಂದು ಹಸ್ತವಾಗಿರುವುದು. ಈ ಅಳತೆಗಳು ಆಲಯ ಮೂರು

ಜಗಲಿಯದಾದಾಗಲೂ ಹಾಗೂ ಒಂದೇ ಜಗಲಿಯದಾದಾಗಲೂ ಸರಿಯಾಗಿರುತ್ತದೆ. ಆವರಣ ಗೋಡೆಯನ್ನು ಬಾಹ್ಯಕುಡ್ಯವೆನ್ನುವರು. ಅಭ್ಯಂತರ ಹಾಗೂ ಬಾಹ್ಯಭಿತ್ತಿಗಳ ನಡುವಣ ಸ್ಥಳವನ್ನು ಅಲೀಂದ್ರಂ ಎನ್ನುವರು.

ಆಲಯವು ಮೂರು ಹಂತಗಳದ್ದಾದರೆ ತ್ರಿತಾಳ ಆಲಯವೆಂದು ಎರಡು ಹಂತಗಳದ್ದಾದ್ದರೆ ದ್ವಿತಾಳ ಆಲಯವೆಂದೂ ಒಂದೇ ಹಂತದ ಆಲಯವಾದರೆ ಏಕತಾಳ ಆಲಯವೆಂದೂ ಕರೆಯುವರು.

### ಉ. ತ್ರಿತಾಳ ನವಮೂರ್ತಿ ಆಲಯ

ಈ ಬಗೆಯ ಆಲಯದಲ್ಲಿ ಮಧ್ಯದಲ್ಲಿನ ಇಪ್ಪತ್ತೈದು ಚದರದ ಸ್ಥಳವನ್ನು (ಗರ್ಭಗುಡಿಯ ಹಾಗೂ ಅಭ್ಯಂತರದ ಗೋಡೆಗಳ ನಡುವೆ ಬಿಟ್ಟ ಸ್ಥಳಕ್ಕೆ ಸಮನಾದ ಸ್ಥಳವೆನ್ನಬಹುದು) ಯಾವುದೇ ಮೂರ್ತಿಯನ್ನಿಡದೆ ಖಾಲಿಯಾಗಿ ಬಿಡುವರು. ಮತ್ತೊಂದೆಡೆ ನೆಲ ಜಗಲಿಯನ್ನು ಎರಡು ಮೂರು ಜಗಲಿಗಳಿಗೆ ಗಟ್ಟಿ ತಳಹದಿಯಾಗು ವಂತೆ ದೃಢವಾಗಿ ನಿರ್ಮಿಸಲಾಗುವುದು. ಆಲೀಂದ್ರದ ನಾಲ್ಕು ಕಡೆಯಲ್ಲಿ ವ್ಯೂಹ ಮೂರ್ತಿಗಳನ್ನು - ಪೂರ್ವದಲ್ಲಿ ಪುರುಷ, ದಕ್ಷಿಣದಲ್ಲಿ ಸತ್ಯ, ಪಶ್ಚಿಮದಲ್ಲಿ ಅಚ್ಯುತ ಹಾಗೂ ಉತ್ತರದಲ್ಲಿ ಅನಿರುದ್ಧ ಮೂರ್ತಿಗಳನ್ನು ಸ್ಥಾಪಿಸಲಾಗುವುದು. ಎರಡನೇ ಹಂತಕ್ಕೇರಲು ಮೆಟ್ಟಿಲುಗಳಿರುವುವು. ಬಾಹ್ಯ ಭಿತ್ತಿಯ ಗೋಡೆಗಳಲ್ಲಿ ದೊಡ್ಡ ದೊಡ್ಡ ಜಾಲಂದ್ರಗಳಿದ್ದು ಒಳಗೆ ಆಲೀಂದ್ರದಲ್ಲಿ ಸ್ಥಾಪಿಸಲಾಗಿರುವ ಮೂರ್ತಿಗಳನ್ನು ನೋಡಲು ಮುಖಮಂಟಪದಿಂದ ಅವಕಾಶವಿರು ವಂತಿರುತ್ತದೆ.

### ಊ. ದ್ವಿತಾಳ ಆಲಯ

ಈ ರೀತಿಯ ಆಲಯಗಳಲ್ಲಿ ಮಧ್ಯಭಾಗದಲ್ಲಿ ಭೋಗಾಸನ ಭಂಗಿಯಲ್ಲಿ ನೆಲದ ಮಟ್ಟದಲ್ಲಿ ಆದಿಮೂರ್ತಿ ವಿಷ್ಣುವನ್ನು ಸ್ಥಾಪಿಸ ಲಾಗುವುದು. ಈಗಾಗಲೆ ವಿವರಿಸಿರುವಂತೆ ಆಲೀಂದ್ರದಲ್ಲಿ ವ್ಯೂಹ ಮೂರ್ತಿಗಳನ್ನು - ಗರ್ಭಗೃಹದ ಪೂರ್ವದ ಬಾಗಿಲಿನಿಂದ ದಕ್ಷಿಣಕ್ಕೆ ಪುರುಷಮೂರ್ತಿ ಇರುವಂತೆ ಎಲ್ಲ ಮೂರ್ತಿಗಳು ಹೊರಮುಖ ಮಾಡಿದಂತಿರುವುವು. ಎರಡನೇ ಹಂತದ ಮಧ್ಯದಲ್ಲಿ ಯೋಗ ಶಯನ ಭಂಗಿಯಲ್ಲಿ ಮೂರ್ತಿಯನ್ನು ಸ್ಥಾಪಿಸಲಾಗುವುದು.

### ಋ. ಪಂಚಮೂರ್ತಿ ಆಲಯ ದ್ವಿತಾಳ

ಆದಿ ಮೂರ್ತಿ ವಿಷ್ಣುವನ್ನು ಎರಡನೇ ಹಂತದಲ್ಲಿ ಸ್ಥಾಪಿಸಲಾಗುವುದು. ನೆಲಮಟ್ಟದಲ್ಲಿ ಮೊದಲಿನಂತೆಯೇ ಪುರುಷ, ಸತ್ಯ, ಅಚ್ಯುತ, ಅನಿರುದ್ಧ ಮೂರ್ತಿಗಳನ್ನು ಕೇಂದ್ರದ ಒಂಬತ್ತು ಅಥವಾ ಇಪ್ಪತ್ತೈದು ಚದರಗಳ ಹೊರಮುಖ ಮಾಡಿದಂತೆ ಹೊಂದಿಸುವುದು.

ಪ್ರತಿಯೊಂದು ಧ್ರುವಮೂರ್ತಿಯ ಮೇಲೂ ವಿಮಾನ ನಿರ್ಮಾಣ ಕಷ್ಟಸಾಧ್ಯವೆಂದಾದರೆ ಮೂರ್ತಿಗಳು ನಿಂತ ಒಟ್ಟು ಜಾಗದ ಮೇಲೆ ಏಕತಾಳ ಆಲಯದಂತೆ ಒಂದೇ ವಿಮಾನವನ್ನು ನಿರ್ಮಿಸಬಹುದು.

### ೠ. ಏಕತಾಳ ಏಕವಿಮಾನ ನವಷಟ್ ಪಂಚಮೂರ್ತಿ ಆಲಯ.

ಇದು ಅತ್ಯಂತ ಕಡಮೆ ವೆಚ್ಚದ ಆಲಯವಾಗಿದ್ದು ಅಪೇಕ್ಷಿಸಿದಲ್ಲಿ ಕಡಮೆ ಸ್ಥಳದಲ್ಲಿ ನಿರ್ಮಾಣ ಮಾಡ ಬಹುದು. ಇದರ ಪಾರ್ಶ್ವಗಳು ಒಟ್ಟು 81 ಸಮಾನ ಚತುರಸ್ರಾಕಾರಗಳುಂಟಾಗುವಂತೆ, 9 ಸಮಾನ ಚದುರಗಳನ್ನಾಗಿ ವಿಭಾಗಿಸಲಾಗುವುದು. ಅಥವಾ ಪ್ರತಿ ಪಾರ್ಶ್ವವನ್ನೂ 11 ಸಮ ಭಾಗಗಳಾಗಿಸಿ ಒಟ್ಟು 121 ಸಮಭಾಗಗಳನ್ನಾಗಿಸಬಹುದು. ಎರಡು ವಿಧಾನದಲ್ಲೂ ಮಧ್ಯದಲ್ಲಿ 25 ಚದರಗಳ ಗರ್ಭಗೃಹ ಹಾಗೂ ಅಭ್ಯಂತರದ ಗೋಡೆಗಳಿಗೆಂದು ಬಿಡಲಾಗುವುದು. ಎರಡನೇ ವಿಧಾನದಲ್ಲಿ ಆಲೀಂದ್ರವು 56 ಚದರಗಳನ್ನು ಬಹಿರ್ ಭಿತ್ತಿಯು 40 ಚದರಗಳನ್ನು ಪಡೆಯುತ್ತವೆ. ಎಂದರೆ ಗರ್ಭಗೃಹವು 3 ಚದರ ಘಟಕಗಳನ್ನೂ ಅಭ್ಯಂತರ ಹಾಗೂ ಬಾಹ್ಯಭಿತ್ತಿಗಳು 1 ಚದುರ ಗಾತ್ರವೂ, ಆಲೀಂದ್ರವು ಸ್ವಲ್ಪ ಹೆಚ್ಚಿನ ಸ್ಥಳವನ್ನೂ ಪಡೆಯುವುವು. ಆದಿಮೂರ್ತಿ ಯನ್ನೂ ಮೊದಲಿನಂತೆಯೇ ಸ್ಥಾಪಿಸಲಾಗುವುದು. ಆಲೀಂದ್ರದ ದಕ್ಷಿಣಮುಖದಲ್ಲಿ ನೈಋತ್ಯಕ್ಕೆ ನಾರಾಯಣ ವಿಗ್ರಹವೂ, ಪಶ್ಚಿಮ ಮುಖದ ವಾಯವ್ಯ ಬಳಿಯಲ್ಲಿ ನೃಸಿಂಹ ವಿಗ್ರಹವು, ವರಾಹವಿಗ್ರಹವು ಉತ್ತರದ ಮುಖದ ವಾಯವ್ಯ ಬಳಿಯಲ್ಲಿಯೂ ಸ್ಥಾಪನೆಯಾಗುವುವು.

## ಎ. ಏಕತಾಳ ಏಕಮೂರ್ತಿ ಆಲಯ

ಏಕತಾಳ ಏಕಮೂರ್ತಿ ಆಲಯಗಳು ಒಂದೇ ಅಂತಸ್ತಿನ ಆಲಯವಾಗಿರುವುದೇ ಅಲ್ಲದೆ ಏಕಬೇರ ಆರಾಧನೆಗೆ, ಅದರ ಕೌತುಕಬೇರಕ್ಕೆ ಮಾತ್ರವೇ ಸೀಮಿತವಾಗಿರುತ್ತದೆ. ಇದರ ವಿಮಾನವು ಗರ್ಭಗೃಹವನ್ನು ಮಾತ್ರವೇ ಸುತ್ತುವರೆದಿರುತ್ತದೆ. ಏಕತಾಳ ಏಕಮೂರ್ತಿಯ ಆಲಯದ ಉದಾಹರಣೆಯೆಂದರೆ ಅದು ಗರ್ಭಗೃಹವನ್ನೂ ಅದರ ಮುಂದಿನ ಕೋಣೆಯಾದ ಮುಖ ಮಂಟಪ ವನ್ನೂ ಹೊಂದಿರುವುದು. ವಿಮಾನವು ಗರ್ಭಗೃಹ, ಅದರ ಗೋಡೆಗಳು ಮತ್ತು ಛಾವಣಿಯನ್ನು ಆವರಿಸುವುದು. ಮುಖಮಂಟಪವು ಛಾವಣಿಯನ್ನು ಮಾತ್ರ ಹೊಂದಿರುತ್ತದೆ. ಮುಖಮಂಟಪವು ಗರ್ಭಗೃಹದಷ್ಟೇ ಅಗಲವಾಗಿರುತ್ತದೆ. ಆದರೆ ಅದರ ಉದ್ದ ಮಾತ್ರ ವಿಮಾನದ ತಳದಲ್ಲಿನ ವಿಸ್ತಾರವನ್ನೂ ಒಳಗೊಳ್ಳುವಷ್ಟು ಸ್ಥಳಾವಕಾಶ ಹೊಂದಿರುವುದು. ಪ್ರತಿಷ್ಠಾಪನೆ ಯಾಗುವ ಮೂರ್ತಿಯು ನಿಂತ ನಿಲುವಿನ ಅಥವಾ ಕುಳಿತ ಭಂಗಿಯಲ್ಲಿದ್ದಾಗ ಗರ್ಭಗೃಹವು ಚತುರಸ್ರಾಕಾರ ದಲ್ಲಿರುತ್ತದೆ. ಇದರ ವಿಸ್ತಾರವನ್ನು ಗರ್ಭಗೃಹದ ವಿಮಾನದ ತಳದ ವಿಸ್ತಾರ ವನ್ನು ತಿರ್ಮಾನಿಸಿದ ನಂತರ ನಿರ್ಣಯಿಸಲಾಗುವುದು. ಗರ್ಭಗೃಹದ ವಿಸ್ತಾರವನ್ನು ಪ್ರತಿಬಿಂಬಿಕೆಯಂತೆ ಸಾಮಾನ್ಯವಾಗಿ ಗುರುತಿಸುವು ದುಂಟು. ನವ ಷಟ್ ಪಂಚ ಮೂರ್ತಿ ಆಲಯದಲ್ಲಿ (ಏಕತಾಳ ಏಕವಿಮಾನ) ಈ ನಿಯಮವು ಮತ್ತೂ ಸ್ಥೂಲವಾಗಿದೆ.

ಛಾವಣಿಯ ಹಂತದಲ್ಲಿ ಎಲ್ಲ ಕಡೆಯಲ್ಲೂ ಸ್ವಲ್ಪ ಸ್ಥಳವನ್ನು ಬಿಟ್ಟು (ಮುಂದಿನ ಭಾಗದ ಹೊರತು) ಈ ಭಾಗವನ್ನು ಅಂತರಾಳ ವೆಂದು ಕರೆಯುವರು. ಈ ಸ್ಥಳವು ಎರಡೂ ಕಟ್ಟಡಗಳನ್ನು ಅವುಗಳನ್ನು ಸುತ್ತುವರಿದ ಹೊರ ಆವರಣದಿಂದ ಬೇರ್ಪಡಿಸುತ್ತದೆ. ಈ ಆವರಣವು ಅಂತರ ಮಂಡಳವೆಂದು ಕರೆಯಲ್ಪಡುತ್ತದೆ. ನವಷಟ್ ಪಂಚಮೂರ್ತಿ ಆಲಯದಲ್ಲಿ ಅಂತರ ಮಂಡಳವು ಈಂದ್ರಕ್ಕೆ ಹೊಂದಿಕೊಳ್ಳುತ್ತದೆ. ಮುಂಭಾಗದ ಹೊರತು ಮಿಕ್ಕ ಮೂರುಕಡೆಗಳಲ್ಲಿಯೂ ಅಂತರ ಮಂಡಲದ ಛಾವಣಿಯು ಮೇಲೆ ಹಾಗೂ ಗೋಡೆಗಳ ಕಂಬಗಳ ಸಾಲಿನ ಮೇಲೆ ನಿಂತಿರುವುದು. ಚಾವಣಿಯ ಇಳಿಜಾರು ಹೊರಭಾಗಕ್ಕೆ ಚಾಚಿಕೊಂಡಿರುತ್ತದೆ. ಮುಂಭಾಗದಲ್ಲಿ ಅಂತರಮಂಡಲವು ಅರ್ಧಮಂಟಪ ಅಥವಾ ಸ್ನಪನ ಮಂಟಪಕ್ಕೆ ತೆರೆದುಕೊಳ್ಳುತ್ತದೆ. ಇದನ್ನು ವೇಸರ ಎಂದೂ ಕರೆಯುವರು. ಅಂತರಾಳದ ತಳದಲ್ಲಿ ನೆಲಕ್ಕೆ ಹೊಂದಿಕೊಂಡಂತೆ ಮೂರು ಕಡೆಗಳಲ್ಲಿಯೂ ಹರಿಯುವ ಕಲ್ಲಿನ ಕಾಲುವೆ ಯಿರುವುದು. ಗರ್ಭಗೃಹದಲ್ಲಿ ನೀರು ಹರಿದು ಹೋಗುವ ಈ ಕಾಲುವೆಯ ಉತ್ತರದಿಕ್ಕಿಗೆ ಗೋವಿನ ಮುಖದ ರೂಪದ ಗೋಮುಖವನ್ನು ಹೊಂದಿರುತ್ತದೆ. ವಿಮಾನದ ಮೇಲೆ ಸುರಿಯುವ ಮಳೆಯ ನೀರೂ ಸಹ ಈ ಕಾಲುವೆಗೇ ಸುರಿದು ಸರಿಯುತ್ತದೆ. ಎಲ್ಲ ಬಗೆಯ ನೀರೂ ಆಲಯದ ಹೊರಕ್ಕೆ ಹರಿದು ಸಾಮಾನ್ಯವಾಗಿ ಉತ್ತರದಿಕ್ಕಿಗೆ ಆಲಯದ ಹೊರ ಆವರಣದ ಹೊರಗೆ ಇರುವ ಪುಷ್ಕರಿಣಿಯನ್ನು ಸೇರುವುದು. ಅಂತರಾಳದ ಛಾವಣಿಯ ಯಾವುದೇ ಭಾಗವೂ ಗರ್ಭಗೃಹದ ಗೋಡೆಗಳೊಡನೆ ಸೇರಿರದು. ಮುಂಭಾಗದಲ್ಲಿನ ಛಾವಣಿಯು ಮಾತ್ರ ಮುಖಮಂಟಪದ ಪೂರ್ವದ ಗೋಡೆಯೊಡನೆ ಸೇರಿರುತ್ತದೆ.

ಗರ್ಭಗೃಹ, ಅಂತರಾಳ, ಮುಖಮಂಟಪಗಳಿಗೆ ಪೂರ್ವ ದಿಕ್ಕಿನಲ್ಲಿ ಮಧ್ಯದಲ್ಲಿರುವಂತೆ ಬಾಗಿಲುಗಳನ್ನಿಡಲಾಗುತ್ತದೆ ಎಂಬುದನ್ನು ಗಮನಿಸಬಹುದು. ಅಂತರಾಳದ ಪೂರ್ವಮುಖಕ್ಕೆ ಹೊಂದಿಕೊಂಡಂತೆ ಆಲಯದ ಉತ್ಸವ ಹಬ್ಬಗಳನ್ನು ನಡೆಸುವ ಆಸ್ಥಾನಮಂಟಪವೂ ಇರುತ್ತದೆ. ಇದು 16, 32, 64 ಕಂಭಗಳಿಂದಾಗಬಹುದು.

ಈ ಮಂಟಪದ ಪೂರ್ವದ ಕೊನೆಯಲ್ಲಿ ಮಧ್ಯಭಾಗದಲ್ಲಿರುವಂತೆ ಗರುಡಮಂಟಪವನ್ನು ನಿರ್ಮಿಸುವುದು. ಸಾಧಾರಣವಾಗಿ. ಈ ಮಂಟಪದಿಂದ ಈಚೆಗೆ - ಪೂರ್ವಕ್ಕೆ ಬಲಿಪೀಠ ಹಾಗೂ ಧ್ವಜಸ್ತಂಭ ಗಳಿರುವುದುಂಟು. ಆದರೆ ಇವುಗಳಿಗಾಗಿ ಪರ್ಯಾಯ ಸ್ಥಳಗಳೂ ಇರಬಹುದೆಂಬುದನ್ನು ಮುಂದೆ ವಿವರಿಸಲಾಗುವುದು.

ಅಂತರಮಂಡಳದ ಗೋಡೆಗಳನ್ನು ಮೊದಲ ಆವರಣದ ಅಥವಾ ಪ್ರಾಕಾರದ ಗೋಡೆಗಳೆಂದೂ ಕರೆಯುವುದುಂಟು. ಈ ಗೋಡೆಗಳ ಹಾಗೂ ಆಸ್ಥಾನಮಂಡಪದ ಸುತ್ತಲೂ ಆಯತಾಕಾರದ ಸಾಕಷ್ಟು ಸ್ಥಳ ವಿರುವುದು. ಈ ಸ್ಥಳವನ್ನು ಮತ್ತೊಂದು ಗುಂಪಿನ ಗೋಡೆಗಳು ಸುತ್ತುವರೆದಿರುವುವು. ಇದು ಎರಡನೆಯ ಆವರಣ ಅಥವಾ ಪ್ರಾಕಾರವೆಂದು ಕರೆಯಲ್ಪಡುತ್ತದೆ. ಪೂರ್ವ ಗೋಡೆಯಲ್ಲಿ ಗರ್ಭಗೃಹ, ಮುಖಮಂಟಪ, ಮೊದಲ ಪ್ರಾಕಾರದ ಬಾಗಿಲುಗಳಿಗೆ ಎದುರಾದಂತೆ, ಆದರೆ ಅತಿದೊಡ್ಡದಾಗಿ ಗಮನ ಸೆಳೆಯುವಂತೆ ಇರುವ ಬಾಗಿಲು ಇರುವುದು. ಇಲ್ಲಿನ ಛಾವಣಿಯ ಮೇಲೆ ಗೋಪುರವಿರುತ್ತದೆ. ಬಹುತೇಕ ಆಲಯಗಳು ಈ ಎರಡನೇ ಆವರಣ, ಮುಖದ್ವಾರ, ಗೋಪುರಗಳನ್ನು ಹೊಂದಿ ತುಂಬಿದಂತೆ ಇರುವುವು. ಕೆಲವು ಆಲಯಗಳನ್ನು ಇನ್ನೂ ಒಂದು ಆವರಣವನ್ನೂ, ಮುಖದ್ವಾರವನ್ನೂ, ಮಹಾದ್ವಾರಗೋಪುರವನ್ನೂ ಹೊಂದಿರುತ್ತವೆ.

ಆಲಯದ ದೈನಂದಿನ ಪೂಜಾ ವಿಧಾನದಲ್ಲಿ ಇಲ್ಲಿನ ಮೂರು ಆವರಣಗಳೂ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತವೆ. ಇಲ್ಲಿನ ವಿವಿಧ ಭಾಗಗಳಲ್ಲಿ ವಿವಿಧ ದೇವತೆಗಳ ಸನ್ನಿಧಿಯಿರುವುದೆಂದು ಪ್ರಸ್ತುತಿಸಲಾಗಿದೆ. ಒಂದು ಕಾಲದಲ್ಲಿ ಇವು ಪ್ರತಿಮೆಗಳಿಂದ ಪ್ರತಿನಿಧಿಸಲ್ಪಟ್ಟಿರುವಂತಿದ್ದರೂ ಈಗ ಪ್ರಚಲಿತ ಆಚಾರದಲ್ಲಿಲ್ಲ.

## ಏ. ಗರ್ಭಗೃಹ ಪದವಿನ್ಯಾಸ

ಆಗಮಗಳ ಭಾಷೆಯಲ್ಲಿ ಗರ್ಭಗೃಹ ಪದ ವಿನ್ಯಾಸವೆಂದರೆ ಗರ್ಭಗೃಹದ ನೆಲೆಗಟ್ಟು ನಾಲ್ಕು ಭಾಗಗಳಾಗಿ ಪ್ರತಿ ಹೊರ ಆವರಣವೂ ಒಳ ಆವರಣವನ್ನು ಸುತ್ತಿರುವಂತಿರುವುದು. ಆಗಮಗಳು ಹೇಳುವ ರೀತಿಯಲ್ಲಿ ಗರ್ಭಗೃಹದಲ್ಲಿ ವಿಗ್ರಹಗಳನ್ನು ಸ್ಥಾಪಿಸುವುದೇ ಈ ವಿಭಾಗದ ಉದ್ದೇಶ. ಆಲಯವನ್ನು ಒಂದು ಧ್ರುವಬೇರ ಒಂದು ಕೌತುಕ ಬೇರದ ಪ್ರತಿಷ್ಠಾಪನೆಗಾಗಿ ನಿರ್ಮಿಸಿದಲ್ಲಿಒಂದು ರೀತಿಯಾಗಿರಬೇಕು. ಕೌತುಕಬೇರವಿಲ್ಲದೆ ಧ್ರುವಬೇರ ಮಾತ್ರವೇ ಇದ್ದು ಪೂಜೆಗೊಳ್ಳುವಂತಿದ್ದರೆ ಮತ್ತೊಂದು ವಿಧವಾಗಿರಬೇಕು. ಇಲ್ಲಿನ ನಾಲ್ಕು ವಿಭಾಗಗಳಿಗೆ ಹೆಸರುಗಳು ಹೀಗೆ-ಕೇಂದ್ರದ ವಿಭಾಗ -ಬ್ರಾಹ್ಮ.ಅದನ್ನು ಸುತ್ತುವರೆದದ್ದು ದೈವಿಕ್ಕೈವಿಕವನ್ನು ಸುತ್ತಿರುವುದು ಮಾನುಷ. ಅದಕ್ಕೂ ಹೊರಗಿನಿದು ಪೈಶಾಚ. ಈ ಪದಗಳು ಸ್ವಯಂಸ್ಪಷ್ಟವಿದ್ದು ವಿವರಣೆ ಅನಗತ್ಯ. ಆಲಯಗರ್ಭಗುಡಿಯಲ್ಲಿ ಧ್ರುವಬೇರ, ಅದರ ಕೌತುಕ ಬೇರಗಳೆರಡೂ ಇದ್ದಲ್ಲಿ ಕೌತುಕಬೇರವನ್ನು ಬ್ರಾಹ್ಮವಿಭಾಗದಲ್ಲಿ ನೆಲೆಗೊಳಿಸಬೇಕುದೈನಂದಿನವಾದ ಬಹುತೇಕ ಅರ್ಚನೆಗಳು ಕೌತುಕ ಬೇರಕ್ಕೇ ಆಗಿದ್ದು ಅದರ ಮೂಲಕ ಧ್ರುವಬೇರವನ್ನು ಸೇರುತ್ತವೆ. ಕೌತುಕಬೇರ ಇಲ್ಲದ ಗರ್ಭಗೃಹವಾದರೆ ಧ್ರುವಮೂರ್ತಿಯನ್ನು ಬ್ರಾಹ್ಮಸ್ಥಳದಲ್ಲಿ ಸ್ಥಾಪಿಸಬೇಕು. ಅರ್ಚನೆಗಳನ್ನೂ ನೇರವಾಗಿ ಧ್ರುವಮೂರ್ತಿಗೇ ಮಾಡಲಾಗುವುದು.

ಮೂರ್ತಿಯು ನಾಲ್ಕು ಹಂತಗಳ ಪೀಠದಲ್ಲಿ ಸ್ಥಾಪನೆಯಾಗಬೇಕು. (ಧರ್ಮ, ಜ್ಞಾನ, ಐಶ್ವರ್ಯ, ವೈರಾಗ್ಯ) ಈ ನಾಲ್ಕು ಹಂತಗಳನ್ನೂ ತ್ರಿಮೇಖಲೆಯೆಂಬ ಹೊಳೆಯುವ ಸೂತ್ರದಿಂದ ನಾಲ್ಕು ಪಾರ್ಶ್ವಗಳಲ್ಲಿ ಸಮಾನಾಂತರ ವಾಗಿರುವಂತೆ ಬಂಧಿಸಬೇಕು. ಪೀಠದ ಮೇಲೆ ಮೂರ್ತಿಯು ಹದಿನಾರುದಳದ ಪದ್ಮದಲ್ಲಿರುವುದು.

## ಐ. ಇತರ ದೇವತೆಗಳು

ಪ್ರಾಚೀನ ಆಲಯಗಳಲ್ಲಿ ಇಂದಿಗೂ ಪ್ರತಿಮೆಗಳನ್ನು ಕಾಣಬಹುದು. ಈಚಿನ ನಿರ್ಮಾಣಗಳಲ್ಲಿ ಇವುಗಳನ್ನು ಬಿಡಲಾಗುತ್ತದೆ. ಆದರೆ ಪೂಜೆಯ ಕಾಲದಲ್ಲಿ ಅವರನ್ನೂ ಸ್ಮರಿಸಿಕೊಂಡು ನ್ಯಾಸ ಪುಷ್ಪಗಳನ್ನು ಧ್ರುವ ಮೂರ್ತಿಯು ಪಾದಗಳ ನಡುವೆಇಡಬೇಕು. ಈ ದೇವತೆಗಳು ಎರಡು ವಿಧ. ಒಂದು ಬಗೆಯ ದೇವತೆಗಳು ಎಲ್ಲ ಕಾಲದಲ್ಲಿ ಸರ್ವಾವಸ್ಥೆಗಳಲ್ಲಿ ಸನ್ನಿಧಿಯಲ್ಲಿರುವವರು. ಧ್ರುವಮೂರ್ತಿಯು ಹಲವು ಸ್ಥಿತಿಗಳಲ್ಲಿ - ವೀರ, ಭೋಗ, ಯೋಗ - ಸ್ಥಿತಿಯಲ್ಲಿದ್ದಾಗ ಮಾತ್ರ ಇರಲು ಅನುಮತಿ ಪಡೆದವರು ಮತ್ತೆ ಕೆಲವರು.

ದ್ವಾರ ದೇವತೆಗಳು, ದ್ವಾರ ಪಾಲಕರು, ವಿಮಾನ ಪಾಲಕರು ವಿಶ್ವಕ್ಸೇನರು, ಶ್ರೀ, ಭೂ, ಗರುಡರುಗಳು, ಯಾವಾಗಲೂ ತಮ್ಮತಮ್ಮ ನಿಗದಿತ ಸ್ಥಳಗಳಲ್ಲಿರುವರು. ಇವರೆಲ್ಲ ಅನಪಾಯಿನಿಗಳು. ಬ್ರಹ್ಮ ಶಿವ, ಮಾರ್ಕಂಡೇಯ, ಭೃಗು ಮೊದಲಾದವರು

ಹಲವು ಸ್ಥಿತಿಗಳಲ್ಲಿ ಉಪಸ್ಥಿತರಾಗುವುದಿಲ್ಲ. ಆದರೆ ದೈನಂದಿನ ಪೂಜೆಯಲ್ಲಿ ಅವರುಗಳು ಇರುವರೆಂದೇ ಭಾವಿಸಿ, ಅರ್ಚನೆಯನ್ನು ನಡೆಸಿ, ನ್ಯಾಸಪುಷ್ಪವನ್ನು ಧ್ರುವಮೂರ್ತಿಯ ಚರಣಗಳ ನಡುವೆ ಇಡಲಾಗುವುದು. ಅವರುಗಳ ಹೆಸರು ಸ್ಥಳಗಳನ್ನು ಇಲ್ಲಿ ಕೊಡಲಾಗಿದೆ.

**ವಿಶ್ವಕ್ಸೇನ :** ವಿಷ್ಣುಗಣಗಳ ಗಣಾಧಿಪತಿ, ಸೇನಾಧಿಪತಿಯಾಗಿರುವ ಈತ ಮೊದಲ ಆವರಣದಲ್ಲಿ ವಿಮಾನಕ್ಕೆ ಹತ್ತಿರವಾಗಿ ಈಶಾನ್ಯ ಮೂಲೆಯಲ್ಲಿರುವನು. ಅಗ್ನಿವರ್ಣದವನಾಗಿ, ಪೀತಾಂಬರ ಧಾರಿಯಾಗಿ, ವಿಷ್ಣುವಿನ ಯಜ್ಞೋಪವೀತ, ಶ್ರೀವತ್ಸಗಳನ್ನು ಬಿಟ್ಟು ಮಿಕ್ಕೆಲ್ಲ ಆಭರಣಗಳನ್ನು ಹೊಂದಿರುವನು. ಎರಡು ಕೈಗಳು, ಹೂವಿನ ಹಾರ ಹಾಕಿದ್ದಾರೆ. ಶಕ್ತಿ ದಂಡವನ್ನು ಹಿಡಿದ ಜಯಾಪತಿ, ಶೃಂಗ ಕೇತನ.

ವಿಮಾನಗಳಲ್ಲಿ ಹಲವು ಬಗೆಗಳುಂಟು. ಮೂರನ್ನು ಹೇಳುವುದಾದರೆ ಸಂಚಿಕ, ಪೌಷ್ಟಿಕ ಹಾಗೂ ಜಯದ ವಿಮಾನಗಳೆಂದು ಹೇಳಬಹುದು. ಹಲವು ಬಗೆಯ ವಿಮಾನಗಳ ಉಲ್ಲೇಖವು ಆಲಯಗಳ ವಾಸ್ತುಶಿಲ್ಪವನ್ನು ಅಧ್ಯಯನ ಮಾಡುವವರಿಗೆ ಮಾತ್ರವೇ ಆಸಕ್ತಿದಾಯಕವಾಗುತ್ತದೆಯಾಗಿ ಇಲ್ಲಿ ಆ ವಿವರವನ್ನು ಕೈಬಿಡಬಹುದು. ಬಹುಪಾಲಿನ ವಿಮಾನಗಳು ಚತುರಸ್ರಾಕಾರವಾಗಿದ್ದು ತಳದ ಪಾರ್ಶ್ವವೊಂದರ ಒಂದೂವರೆ ಅಥವಾ ಎರಡರಷ್ಟು ಎತ್ತರವಿರಬಹುದು. ಇದು ಎರಡು ಅಥವಾ ಮೂರು ಅಥವಾಹೆಚ್ಚು ತಳಗಟ್ಟುಗಳದ್ದಾಗಿರಬಹುದು. ತಳಗಟ್ಟಿನ ನಾಲ್ಕು ಬದಿಗಳಲ್ಲಿನ ಉಬ್ಬುಶಿಲ್ಪಗಳಲ್ಲಿ ಈ ಪ್ರತಿಮೆಗಳನ್ನಿಡಬಹುದು. ತಳಟ್ಟಿನ ಕಂಠಸ್ಥಾನ ದಲ್ಲಿಯೂ ಪ್ರತಿಮೆಗಳಿನ್ನಿಡಬಹುದು.

ಆಗಮ ಶಾಸ್ತ್ರಗಳು ದ್ವಿತೀಯ, ತೃತೀಯ ಆವರಣಗಳಲ್ಲಿಯೂ ಇತರ ಹೊರ ಆವರಣಗಳಲ್ಲಿಯೂ ದೇವತಾ ವಿಗ್ರಹಗಳನ್ನಿಡ ವಿಸ್ತಾರವಾದ ನಿಯಮ ನಿಬಂಧನೆಗಳನ್ನು ವಿಧಿಸಿ ಸ್ಥಾನ ನಿರ್ದೇಶ ಮಾಡುತ್ತವೆ.

ಆವರಣಗಳಿಗೆ ತಕ್ಕಂತೆ ದೇವತೆಗಳ ಸ್ಥಳ ನಿರ್ದೇಶನ. ದ್ವಾರಪಾಲಕರು, ಇತರ ದೇವತೆಗಳ ಸ್ಥಳಗಳನ್ನು ತುರೇಖಾನಕ್ಷೆಯನ್ನು ಮಾಡಲು ಸಾಧ್ಯವಿದ್ದು ಆಗಮಶಾಸ್ತ್ರ ವಿದ್ಯಾರ್ಥಿಗಳಿಗೆ ಇದರಿಂದ ಪ್ರಯೇಜನವಾಗ ಬಹುದು. ತಿರುಮಲೆಯ ಆಲಯದಲ್ಲಿ ಮೇಲೆ ವಿವರಿತವಾದ ಆಗಮ ನಿಬಂಧನಗಳನ್ನೇ ಅನುಸರಿಸುವುದು.

### 3. ಆಲಯದ ನಿರ್ಮಾಣದ ಮೊದಲ ಹಂತ :

ಒಂದು ತೆರದ ಮಂಟಪ: ಪುರಾಣ ಕಥೆಯ ಪ್ರಕಾರ ತಿರುಮಲೆಯ ಆಲಯವನ್ನು ಮೊದಲಬಾರಿಗೆ ನಿರ್ಮಿಸಿದವನೆಂದರೆ ಚಂದ್ರವಂಶದ ರಾಜನಾದ ಆಕಾಶರಾಜನ ತಮ್ಮ ತೊಂಡಮಾನ. ದೇವಿಪದ್ಮಾವತಿಯನ್ನು ಕಮಲದ ಹೂವಿನಲ್ಲಿ ಕಂಡ ಆಕಾಶರಾಜನು ಆಕೆಯನ್ನು ಮಗಳನ್ನಾಗಿ ಸ್ವೀಕರಿಸಿ ಸಲಹಿ ನಂತರ ಶ್ರೀ ವೆಂಕಟೇಶ್ವರಸ್ವಾಮಿಗೆ ವಿವಾಹ ಮಾಡಿಕೊಟ್ಟನು. ಮದುವೆಯಾದನಂತರ ಸ್ವಲ್ಪ ಕಾಲಕ್ಕೆ ಆಕಾಶರಾಜನು ಮರಣವಡೆಯಲು, ಅವನ ತಮ್ಮನಾದ ತೊಂಡಮಾನನೂ, ಮಗನಾದ ವಸುದಾನನೂ ರಾಜ್ಯಕ್ಕಾಗಿ ಹೊಡೆದಾಡಿದರು. ಮನೆತನದ ಅಳಿಯನಾದ ಶ್ರೀನಿವಾಸನು ವಿವಾದದಲ್ಲಿ ತಲೆಹಾಕಿ ಇಬ್ಬರಿಗೂ ರಾಜಿ ಮಾಡಿ ರಾಜ್ಯವನ್ನು ಎರಡಾಗಿ ವಿಂಗಡಿಸಿ ಹಂಚಿಕೊಟ್ಟನು. ಹೀಗಾಗಿ ತೊಂಡಮಾನನು ತೊಂಡಮಂಡಲವನ್ನೂ ವಸುದಾನನು ನಾರಾಯಣವನವನ್ನೂ ಪಡೆಯುವಂತಾಯಿತು. ಈ ತೊಂಡಮಾನನು ತನ್ನ ಹಿಂದಿನ ಜನ್ಮದಲ್ಲಿ ರಂಗದಾಸನೆಂಬ ಹೆಸರಿನ ಸ್ವಾಮಿಯ ಭಕ್ತನಾಗಿದ್ದನೆಂದು ಬ್ರಹ್ಮಾಂಡ ಪುರಾಣವು ಹೇಳುತ್ತದೆ. ಹೀಗಾಗಿ ಸ್ವಾಮಿಯು ತನಗಾಗಿ ಉತ್ತಮವಾದ ಆಲಯ ಒಂದನ್ನು ತಿರುಮಲೆಯಲ್ಲಿ ನಿರ್ಮಿಸಲು ತೊಂಡಮಾನನಿಗೆ ತಿಳಿಸಲು, ತೊಂಡಮಾನನು ನಿರ್ಮಿಸಿದ ಆಲಯವೇ ತಿರುಮಲೆಯ ಆಲಯವಾಯಿತು. ಆಲಯ ನಿರ್ಮಾಣ ದೊಡನೆ ಸಂಬಂಧಿಸಿದ ಪುರಾಣದ ಕಥೆಯಿದು.

ವೆಂಗಡವೂ, ವೆಂಕಟೇಶ್ವರಸ್ವಾಮಿಯೂ ಅತಿ ಪ್ರಾಚೀನ ಕಾಲದಿಂದಲೂ ಇರುವುದೆಂಬ ವಿಷಯ ಜಗಜ್ಜಾಹೀರಾದ ನಂಬಿಕೆ ಯಾಗಿದ್ದು, ಇಲ್ಲಿನ ದೇವರು ಸ್ವಯಂವ್ಯಕ್ತ ಸ್ವಯಂಭು ಎನ್ನುವುದು ಪ್ರಸಿದ್ಧವಾಗಿದೆ.

ಪ್ರಾಚೀನ ತಮಿಳು ವ್ಯಾಕರಣ ಗ್ರಂಥ ತೊಲ್ಕಾಪ್ಪಿಯಂ ಕ್ರಿ.ಶ.1 ನೇ ಶತಮಾನದ ಸಂಗ ಕಾಲದ ಕವಿ ಮೂಮುಲನಾರನು ಇದೇ ಹೆಸರಿನಿಂದ ಬೆಟ್ಟವನ್ನು ಕರೆದು ಇಲ್ಲಿ ನಡೆಯುವ ಉತ್ಸವ ಸಂತೆಗಳ ವಿವರ ನೀಡುವನು. ಇವೆರಡೂ ಇಲ್ಲಿನ ಆಲಯವನ್ನು ಕುರಿತು ಸ್ಪಷ್ಟವಾಗಿ ಹೇಳುವುದಿಲ್ಲ. ಒಂದನೇ ಶತಮಾನದ ತಮಿಳಿನ ಪ್ರಸಿದ್ಧ ಕೃತಿ ಶಿಲಪ್ಪದಿಕಾರವು ಬೆಟ್ಟವನ್ನು, ಇಲ್ಲಿನ ದೇವರನ್ನೂ ಸ್ಪಷ್ಟವಾಗಿ ಉಲ್ಲೇಖಿಸುತ್ತದೆ.

ದಕ್ಷಿಣ ಭಾರತದ ಪ್ರಮುಖ ವಿಷ್ಣು ಆಲಯಗಳನ್ನು ಕುರಿತು ಅರ್ವಾಚೀನ ಪಲ್ಲವರ ಕ್ರಿ.ಶ.ಎಂಟನೆಯ ಶತಮಾನದ ಕಾಲ್ಕಕೆ ಸೇರಿದ್ದಿರಬಹುದಾದ ತಮಿಳಿನ ಆಳ್ವಾರುಗಳು ಹಾಡಿದ್ದಾರೆ. ವೆಂಗಡದಲ್ಲಿ ನೆಲೆಗೊಂಡಿರುವ ದೇವರನ್ನು ಕುರಿತು ಇಲ್ಲಿಹಾಡಿರುವರಾದರೂ ಆಲಯದ ಬಗ್ಗೆ ಏನೂ ಹೇಳಿಲ್ಲ. ಇತರ ಕಡೆಗಳಲ್ಲಿನ ಶ್ರೀರಂಗ, ಕಂಚಿ ಮೊದಲಾದ ಕಡೆಗಳ ವಿಷ್ಣು ದೇವಾಲಯಗಳ, ಅವುಗಳ ಪ್ರಾಕಾರಗಳ ವರ್ಣನೆಯು ನಾಲಾಯಿರ ದಿವ್ಯ ಪ್ರಬಂಧಗಳಲ್ಲಿ ಕಂಡುಬರುವುದಾದರೂ ತಿರುಮಲೆಯ ಆಲಯದ ವರ್ಣನೆಯಿಲ್ಲ ಕುಲಶೇಖರ ಆಳ್ವಾರ್ ಹಾಗೂ ತಿರುಮಂಗೈ ಆಳ್ವಾರರು ಶ್ರೀರಂಗದ ಆಲಯವನ್ನು ಕುರಿತು ಹಾಡುವಾಗ ಆಲಯ ಹಾಗೂ ಪ್ರಾರಗಳ ವಿಸ್ತಾರವನ್ನು ಕುರಿತು ಹಾಡುವರಾದರೂ ತಿರುಮಲೆಯನ್ನು ಕುರಿತು ಇಲ್ಲಿನ ಮನಮೋಹಕ ವಿಗ್ರಹದ ಬಗ್ಗೆಯೇ ಹೆಚ್ಚಾಗಿಯೂ, ಇಲ್ಲಿನ ಪ್ರಕೃತಿಯ ಬಗ್ಗೆಯೂ ಹಾಡುತ್ತ ಎಲ್ಲೋ ಸ್ವಲ್ಪ ಮಾತ್ರವೇ ಆಲಯದ ಬಗ್ಗೆ ಹೇಳುವರು. ಹೀಗಾಗಿ ಎಂಟನೆಯ ಶತಮಾನದವರೆಗೆ ಆಲಯ ವಿದ್ದಿತೆಂಬುದಾಗಲೀ, ಅದರ ತಾಂತ್ರಿಕ ವಿವರವಾಗಲಿ ದಾಖಲೆಯಾಗಿಲ್ಲ.

ನಮಗೆ ದೊರೆಯುವ ಅತಿಪ್ರಾಚೀನ ಶಾಸನಾಧಾರವೆಂದರೆ ತಿರುಮಲೆಯ ಆಲಯದ ವಾಹನ ಮಂಟಪದ ಗೋಡೆಯ ಮೇಲಿನ ಶಾಸನವೇ ಆಗಿದ್ದು ಇದನ್ನು ಆಲಯದಲ್ಲಿನ ಒಂದು ಜಗಲಿಯ ಮೇಲೆ ಸೇರಿಸಿ ರಕ್ಷಿಸಲಾಗಿದೆ. ಛಿದ್ರಗೊಂಡಿರುವ ಈ ಶಾಸನವು ಭೂಭಾರವನ್ನು ಹೊತ್ತ ಸಾರಿಕೆಗಳಂತಹ (ಹೆಣ್ಣು ಗಿಳಿ) ವಿಜಯಾದಿತ್ಯನಿಗೆ ಭೂಪಾಲನೆಂಬ ಪುತ್ರ ಹುಟ್ಟಿದನೆಂದು ಹೇಳುತ್ತದೆ. ಇಲ್ಲಿ ಹೋಲಿಕೆ ಅಸಂಗತವೂ, ಹೊಂದದಿರುವುದೂ ಆಗಿರುವುದು. ಇತರ ಆಧಾರಗಳ ಹಿನ್ನೆಲೆಯಲ್ಲಿ ಹೇಳುವುದಾದರೆ ಈ ಶಾಸನವು ಕ್ರಿ.ಶ. 790 ರಲ್ಲಿ ಬಾಣ ದೊರೆ ಮನಾಲಿ ಬಾಣರಾಯನಿಗೆ ವಿಜಯಾದಿತ್ಯನೆಂಬ ಮಗ ಹುಟ್ಟಿದ್ದನ್ನು ವಿವರಿಸುವುದಾಗಿದೆ.

ಈ ಶಾಸನವನ್ನು ಕೆತ್ತಲಾಗಿರುವ ಶಿಲಾಫಲಕ ಬಿಡಿಯಾಗಿ ಬೇರೆಯಾಗಿದ್ದು ಆಲಯದ ಒಂದು ಭಾಗವಾಗಿರುವುದಿಲ್ಲವಾಗಿ ಕ್ರಿ.ಶ.ಎಂಟನೆಯ ಶತಮಾನದಲ್ಲಿದ್ದಿರಬಹುದಾದ ದೇವಾಲಯದ ಒಂದು ಭಾಗವಾಗಿದ್ದಿತೇ ಈ ಶಾಸನ ಎಂಬುದನ್ನು ಖಚಿತವಾಗಿ ಹೇಳಬರುವುದಿಲ್ಲ.

## 4. ಎರಡನೇ ಹಂತ:

**ಒರಟು ಆವರಣ**: ಖಚಿತವಾಗುವ ಒಂದು ಅಂಶವೆಂದರೆ ಬಹುಕಾಲದಿಂದಲೂ ಇಲ್ಲಿ ಒಂದು ವಿಗ್ರಹವಿದ್ದು ಎಲ್ಲರಿಂದಲೂ ಪೂಜೆಗಳನ್ನು ಪಡೆಯುತ್ತ ಒಂದು ತೆರೆದ ಮಂಟಪದಂತೆ ಇರುವ ಕಟ್ಟಡವಿದ್ದರೂ ಎಂಟನೆಯ ಶತಮಾನದವರೆಗೆ ಇಲ್ಲಿ ಒಂದು ಆಲಯವಿದ್ದಿತೆನ್ನಲು ಯಾವ ಆಧಾರಗಳೂ ಇಲ್ಲವೆಂಬುದು.

ಆಳ್ವಾರುಗಳ ಪ್ರಬಂಧಗಳ ಆಧಾರದಿಂದ ಕಟ್ಟಿಕೊಡಬಹುದಾದ ಕೆಳಗಣ ಚಿತ್ರಣದಿಂದ ಮೇಲಿನ ವಾದಕ್ಕೆ ಇಂಬು ದೊರೆಯುತ್ತದೆ. ಆಳ್ವಾರರಲ್ಲಿ ಒಬ್ಬರಾದ ತಿರುಮಳಿಶೈ ಆಳ್ವಾರರು ಸ್ವಾಮಿಯನ್ನು ದೂರದಿಂದಲೇ ನಾಲ್ಕೂ ದಿಕ್ಕಿನಲ್ಲಿ ಎಲ್ಲಿಂದಲಾದರೂನೋಡಬಹುದು ಎನ್ನುವರು. ಈ ಮಾತುಗಳನ್ನು ಸ್ವಭಾವೋಕ್ತಿಯೆಂದು ಸ್ವಿಕರಿಸುವುದಾದರೆ ತಿರುವೆಂಗಡಮುಡೈಯಾನ್‌ನು - ಶ್ರೀ ವೆಂಕಟೇಶ್ವರಸ್ವಾಮಿ - ನಾಲ್ಕೂ ಕಡೆಯಿಂದ ಎಲ್ಲಿಂದ ನೋಡಿದರೂ ಕಾಣಿಸುವನೆಂಬಲ್ಲಿ ಅದು ನಾಲ್ಕು ಕಡೆ ತೆರೆದು ಕೊಂಡಿದ್ದ ಮಂಟಪದಲ್ಲಿದ್ದಿತೆಂದೇ ಸ್ಪಷ್ಟವಾಗುತ್ತದೆ. ಕುಲಶೇಖರ ಆಳ್ವಾರರ ಅತ್ಯಂತ ಹೆಚ್ಚಿನ ಕೋರಿಕೆಯೆಂದರೆ ಸ್ವಾಮಿಯ ಹವಳದ ಬಾಯನ್ನು ಯಾವಾಗಲೂ ನೋಡಲನುವಾಗುವಂತೆ ಮೆಟ್ಟಿಲ ರೂಪದಲ್ಲಿ ಸ್ವಾಮಿಯ ಮುಂದೆ ದಿಂಡುರುಳಿ ಬೀಳಬೇಕೆಂಬುದು. ಈ ಹೇಳಿಕೆಯ

ತಾತ್ಪರ್ಯವೆಂದರೆ ಕುಲಶೇಖರರು ಹಾಡಿದ ಕಾಲಕ್ಕೆ ವಿಗ್ರಹದ ಸುತ್ತ ಒಂದು ಕಟ್ಟಡವಿರ ಬೇಕು. ಕಾರಣ ಮೆಟ್ಟಿಲು - ಹೊಸ್ತಿಲು ಎಂಬುದು ಯಾವುದಾದರೂ ಕಟ್ಟಡವಿರದೆ ಇರಲಾಗದು.

ಮೇಲಿನ ಆಧಾರಗಳಿಂದಾಗಿ ನಾವು 'ಮೊದಲಿಗೆ ಸ್ವಾಮಿಯು ತೆರೆದ ಮಂಟಪದ ಪೀಠದ ಮೇಲೆ ನಿಂತಿದ್ದಂತಿದ್ದಿತು' ಎಂದು ತೀರ್ಮಾನಿಸಬಹುದು. ಜೊತೆಗೇ ಸುತ್ತುವರಿದ ಕಟ್ಟಡ ಅಥವಾ ಗರ್ಭಗೃಹವು ತಿರುಮಳಿಶೈ ಆಳ್ವಾರ್ ಹಾಗೂ ಕುಲಶೇಖರಆಳ್ವಾರರ ಕಾಲಗಳ ನಡುವೆ ನಿರ್ಮಾಣ ವಾಯಿತೆಂದು ತೀರ್ಮಾ ನಿಸಬಹುದು. ಆಳ್ವಾರರುಗಳ ಕಾಲವನ್ನು ಸಾಮಾನ್ಯವಾಗಿ ಕ್ರಿ.ಶ.ಎಂಟನೆಯ ಶತಮಾನವೆಂದು ಒಪ್ಪಲಾಗಿದೆ. ಇದರಿಂದಾಗಿ ಎಂಟನೆಯ ಶತಮಾನದ ಹೊತ್ತಿಗೆ ಒಂದು ಸಣ್ಣ ಆಲಯವು ಇಟ್ಟಿಗೆಯಿಂದ ನಿರ್ಮಾಣವಾದದ್ದು ಇರಬೇಕು. ದಕ್ಷಿಣ ಭಾರತದ ಚರಿತ್ರೆಯಲ್ಲಿ ಆಲಯ ವಾಸ್ತು ಚರಿತ್ರೆಯ ಬಗೆಗಿನ ಅಭಿವೃದ್ಧಿಯ ಸಾಮಾನ್ಯ ಜ್ಞಾನ ಸಿದ್ಧಾಂತಗಳಿಗೂ ಇದು ಹೊಂದಿಕೆಯಾಗುತ್ತದೆ. ಕಾರಣ ಕ್ರಿ.ಶ. ಎಂಟನೆಯ ಶತಮಾನದ ಉತ್ತರಾರ್ಧದಲ್ಲಿ ವಿಷ್ಣುಕುಂಡಿನರ ಕಾಲದಲ್ಲಿಯೇ ಆಲಯ ನಿರ್ಮಾಣಕಾರ್ಯ ದಕ್ಷಿಣ ಭಾರತದಲ್ಲಿ ಪ್ರಚಲಿತವಾಗತೊಡಗಿತು.

ಹೀಗಾಗಿ ಕ್ರಿ.ಶ.ಎಂಟನೆಯಶತಮಾನಕ್ಕಿಂತ ಮೊದಲು ತಿರುಮಲೆಯ ಆಲಯವು, ಮೊದಲಿಗೆ ತೆರೆದ ಮಂಟಪ ದಲ್ಲಿ ನಿಂತ ಭಂಗಿಯ ವಿಗ್ರಹದೊಡನೆಯೂ ನಂತರ ತಿರುಮಳಿಶೈ ಕುಲಶೇಖರರ ಕಾಲದ ನಡುವೆ ಕಿರಿಯ ಆವರಣದ ಆಲಯವೂ ಆಗಿ ಎರಡು ಹಂತಗಳನ್ನು ಕಂಡಿತೆಂಬುದರ ಹೊರತು ಬೇರೆಯಾದ ನಿರ್ಧಾರಗಳಿಗೆ ಬರುವುದು ಸಾಧ್ಯವಿಲ್ಲ.

## 5. ಮೂರನೆಯ ಹಂತ :

ಗರ್ಭಗುಡಿಯಿಂದ ಕೂಡಿದ ಅಂತರಾಳ: ಕ್ರಿ.ಶ.೮ ನೆಯ ಶತಮಾನದಿಂದ ಕ್ರಿ.ಶ.೧೦ ನೇ ಶತಮಾನದ ನಡುವೆ ಯಾವುದೋ ಒಂದು ಅಜ್ಞಾತ ಕಾಲಾವಧಿಯಲ್ಲಿ ಒಂದು ಗರ್ಭಗೃಹ - ಪ್ರಾಯಶಃ ಒಂದು ಅಂತರಾಳದಿಂದ ಕೂಡಿದ ಆಲಯ ನಿರ್ಮಾಣ ವಾಗಿರಬೇಕು. ಈ ಮಾತಿಗೆ ಸಾಕ್ಷಿ ನುಡಿಯುವ ಶಾಸನಾಧಾರಗಳಿವೆ. ತಿರುಮಲೆಯ ಆಲಯದ ಉತ್ತರದ ಪ್ರಾಕಾರ ಗೋಡೆಯಲ್ಲಿ ಶಕ್ತಿ ವಿಟಂಕನ ರಾಣಿ ಕಾಡವನ್ ಪೆರುಂದೇವಿ ಅಥವಾ ಸಾಮವೈ ರಾಣಿಯ ಶಾಸನವಿದ್ದು ಕೊಪ್ಪಟ್ರ ಮಹೇಂದ್ರ ಪನ್ಮಾರನು ಆಳಿತದ 14ನೆಯ ವರ್ಷದಲ್ಲಿ ಆಕೆ ನೀಡಿದ ದಾನಗಳನ್ನು ಇದು ಗುರುತಿಸುವುದು. ಎರಡು ವಿಷುಸಂಕ್ರಾಂತಿ ಹಾಗೂ ಎರಡು ಅಯನ ಸಂಕ್ರಾಂತಿಗಳಂದು ತಿರುಮಂಜನದಲ್ಲಿ ನಂದಾದೀಪಕ್ಕಾಗಿಯೂ, ನಿವೇದನೆಗಾಗಿ ನಾಲ್ಕು ನಾಳಿ ತಿರುವಮುದು (ಓಗರೆ) ಗಾಗಿಯೂ ಏರ್ಪಾಡು ಮಾಡಲಾಗಿದೆ. ಪುರಟ್ಟಾಸಿ ಉತ್ಸವ ನಡೆಸಲು ಮುಖ್ಯ ಉತ್ಸವದ ಮೊದಲೆರಡು ದಿನಗಳ ಪೂಜೆ, ನಿವೇದನೆಗಳು ಹಾಗೂ ತಿರುಮೊಳೆಯಾಟ್ಟು (ಅಂಕುರಾರ್ಪಣ) ವಿನಿಂದ ಚಿತ್ತಾ ನಕ್ಷತ್ರದ ವರೆಗೆ ಒಂಬತ್ತು ದಿನ ನಡೆಯುವ ಉತ್ಸವವನ್ನು - ವೆಂಕಟನಗದ ದೇವರಿಗೆ ವಿಶೇಷ ಪೂಜೆಯಾದಮೇಲೆ, - ತಿರುವಿಳಂಕೋಯಿಲಿನಲ್ಲಿ ಸ್ಥಾಪಿಸಲ್ಪಟ್ಟ ಬೆಳ್ಳಿಯ ಮಣವಾಳಪ್ಪೆರುಮಾಳರಿಗೆ ನೆರವೇರಿಸಬೇಕೆಂದು ವಿವರಿಸುತ್ತದೆ. ಇದಕ್ಕಾಗಿ ಕೊಡಮಾಡಿದ ದಾನದ ವಿವರ ಹೀಗೆ -

೧. ೨೩ ವಜ್ರಗಳು, ೧೬ ದೊಡ್ಡಗಾತ್ರದ ಮುತ್ತುಗಳು, ೨ ದೊಡ್ಡ ಮಾಣಿಕ್ಯ ೩ ಕಿರಿಯವು - ಒಟ್ಟು ೫ ಮಾಣಿಕ್ಯಗಳುಳ್ಳೊಂದು ಕಿರೀಟ - ತಿರುಮುಡಿ.

೨. ಮಕರ ಕುಂಡಲಗಳೆರಡು, ಕರ್ಣಪೂರಗಳ ಒಂದು ಜೊತೆ.

೩. ಸ್ವಾಮಿಯ ಕಂಠವನ್ನು ಅಲಂಕರಿಸಲು ೧೪ ವಜ್ರಗಳು, ಮಾಣಿಕ್ಯಗಳು, ೧೧ ದೊಡ್ಡ ಮುತ್ತು ಮತ್ತೂ ಹಲವು ಸಣ್ಣಮುತ್ತು ಹಲವು ಕೆಂಪುಗಳ ನಾಲ್ಕು ಎಳೆಯ ಸರಮಾಲೆ.

೪, ಒಂದು ಚಿನ್ನದ ಉದರಬಂಧ.

೫. ನಾಲ್ಕು ಮಾಣಿಕ್ಯದ ಒಂದು ಸರಪಳಿ - ತಿರುವರೈ ಪಟ್ಟಿಕೈ.

೬. ಎರಡು ಮಾಣಿಕ್ಯಗಳಿಂದ ಕೂಡಿದ ನಾಲ್ಕು ತೋಳಬಂದಿ.

೭. ಎರಡು ಬಾಹುವಲಯಗಳು.

೮. ಕಂಠಕ್ಕಾಗಿ ನಾಲ್ಕು ವಳೆಯಲ್ - ಸರಗಳು.

೯. ಪವಿತ್ರ ಪಾದಗಳಿಗಾಗಿ ೨ ವಲಯಗಳು (ಕರೈಗಳು) ಚಿನ್ನದಿಂದ ಮಾಡಿ ಅನರ್ಘ್ಯ ರತ್ನಗಳನ್ನು ನವರತ್ನಗಳಿಂದ - ಒಟ್ಟು ಐವತ್ತೆರಡು ವಸ್ತುಗಳು - ಅಲಂಕೃತವಾದವು.

೧೦. ಸರಪಳಿಯೊಡನೆ ಕೂಡಿದ ಎರಡು ಗೆಜ್ಜೆಗಳು (ಪಾದಚಯಲಂ) ಒಂದು ಪ್ರಕಾಶಮಾನವಾದ ಪ್ರಭಾವಳಿ, ಮಧ್ಯೆ ದೊಡ್ಡ ಮಾಣಿಕ್ಯದಿಂದ ಕೂಡಿದ ವಲಯಾಕಾರದ ರಜತ ಪ್ರಭೆ - ಈ ವಸ್ತುಗಳನ್ನು ಮಾಡಲು ಚಿನ್ನದ ತೂಕ 47 ಕಳಂಜುಗಳು.

ಈ ಎಲ್ಲ ಆಭರಣಗಳನ್ನೂ ಪಡೆದು ಸ್ಥಾಪಿತವಾದ ಮಣವಾಳಪ್ಪೆರುಮಾಳರಿಗೆ ಪೂಜೆ ನೈವೇದ್ಯಕ್ಕೆಂದು ನೀಡಿದ ಭೂಮಿ ಕಾಣಿಯು, ತಿರುವೆಂಕಟಕೋಟ್ಟಂನ ತಿರುಕ್ಕುಡವೂರ್ ನಾಡುಗೆ ಸೇರಿದ ತಿರುಚ್ಚೋಕನೂರು ಪಂಚಾಯಿತಿಯಿಂದ, ಕೊಂಡು ಕೊಂಡದ್ದು ಹಾಗೂ ಮಠದಲ್ಲಿದ್ದ ಲಕ್ಷ್ಮಣ ನಂಬಿಗೆ ಸೇರಿದ್ದು, ಇದಕ್ಕಾಗಿಯೂ ತಿರುವಿಳಂಕೋಯಿಲ್ ಪೆರುಮಾಳ್‌ಗೆ ಧನವನ್ನು ನೀಡಿ ಕೊಂಡು ಕೊಳ್ಳಲಾಯಿತು. ಈ ಭೂಮಿಯನ್ನು ಕರಮುಕ್ತಗೊಳಿಸಲಾಯಿತು. ಸಭೆಯಿಂದ ಕೊಂಡ ನೆಲ, ನಂದಿಎರಪ್ಪಟ್ಟಿ, ನಡುಪ್ಪಟ್ಟಿ, ಲಕ್ಷ್ಮಣನಂಬಿ ಅಡೈಕೊಂಡ ನಿಲಂ, (ಲಕ್ಷ್ಮಣನಂಬಿಯ ವಶದ ಭೂಮಿ) ಮದುಸೂದನ ಅವಿಯರೈ, ಪುರುಷೋತ್ತಮನ್ ಪಟ್ಟಿ, ಈ ಎಲ್ಲ ನೆಲವೂ ಸೇರಿ ಮೂರು ಪುಟ್ಟಿಗಳಷ್ಟು ಆಗಿದ್ದು 16 ಕೈಗಳ ಅಳೆತಗೋಲಿನಲ್ಲಿ 3000 ಕುಳಿ (ಗುಂಟೆ?) ಎಂದು ನಿರ್ಧಾರವಾಗಿದ್ದಿತು. ಈ ನೆಲವನ್ನು ಪಂಚಾಯಿತಿ ಸಭೆಗೆ, ಹಾಗೂ ದೇವರಿಗೆ ಹಣ ಕೊಟ್ಟುಕೊಂಡು ಕೊಂಡು, ಕರವಿಮುಕ್ತಗೊಳಿಸಿ ಮಣವಾಳಪ್ಪೆರುಮಾಳರ ಸೇವೆಗೈಯಲೆಂದು ಒಪ್ಪಿಸಲಾಯಿತು.

ಮೇಲಿನ ವಿವರ ಪೂರ್ಣವಾದ ಶಾಸನವು, ಒಂದು ಖಚಿತವಾದ ಆಲಯದ ಉಪಸ್ಥಿತಿಯನ್ನೂ ಆ ಕಾಲಕ್ಕೆ ಉತ್ಸವಮೂರ್ತಿ ಇದ್ದಿತೆಂಬುದನ್ನೂ, ಅದನ್ನು ತಿರುವಿಳಂಕೋಯಿಲ್ ಎಂದು ಕರೆಯುತ್ತಿದ್ದು ದಾಗಿಯೂ ತಿಳಿಸುತ್ತದೆ. ಉತ್ಸವಮೂರ್ತಿಯ ಸ್ಥಾಪನೆಯಿಂದಾಗಿ ಅಂತರಾಳವೊಂದು ಇದ್ದಿರಬೇಕೆಂದು ಸೂಚಿತವಾಗುತ್ತದೆ.

ಇತರ ಶಾಸನಾಧಾರಗಳೂ ಈ ದೃಷ್ಟಿಯನ್ನು ಸಮರ್ಥಿಸುತ್ತವೆ. ತಿರುಚಾನೂರು ಆಲಯದಲ್ಲಿ ಬೆಟ್ಟದ ಆಲಯದ ವಿವರ ನೀಡುವ ಎಂಟು ಶಾಸನಗಳುಂಟು,(218, 219, 220, 223, 229, 232, 233, 234) ಇವುಗಳಲ್ಲಿ ಪ್ರಾಚೀನತಮವಾದದ್ದು ಕ್ರಿ.ಶ. 826 ರದ್ದು. ಇದು ನಮಗೆ ತಿರುವೆಂಗಡತ್ತು ಪೆರುಮಾನಡಿ ಗಳೆಂದು ಹೆಸರಾದ ತಿರುಚಾನೂರಿನ ತಿರುವಿಳಂಕೋಯಿಲಿನ ಎರಡನೆಯ ಪ್ರಾತಿನಿಧಿಕ ವಿಗ್ರಹದ ಬಗ್ಗೆ ಹೇಳುತ್ತದೆ. ಕ್ರಿ.ಶ. 870 ಕ್ಕೆ ಸೇರಿದ ವಿಜಯಾದಿತ್ಯನ ಕಾಲದ ಶಾಸನವೊಂದುಮೂಲಬೇರ ಹಾಗೂ ಅದರ ಪ್ರತಿನಿಧಿ ಮೂರ್ತಿಯ ಹೊರತಾದ ಮೂರನೆಯ ಮೂರ್ತಿಯೊಂದನ್ನು - ತಿರುಮಂತ್ರಸಾಲೈ ಪೆರುಮಾನಡಿಗಳನ್ನು - ವಿವರಿಸುವುದು. ತಿರುಮಂತ್ರಸಾಲೈ ಎಂಬುದು ಶ್ರೀವೈಷ್ಣವರಾಗಿ ದೀಕ್ಷೆ ಪಡೆದವರಿಗೆ ತಿರುಮಂತ್ರವನ್ನು ಉಪದೇಶಿಸುತ್ತಿದ್ದ ಆಲಯ. ಕ್ರಿ.ಶ. 945ರಲ್ಲಿನ ಒಂದನೇ ಪರಾಂತಕ ಚೋಳನ ಕಾಲದ ಮೂರನೆಯ ಶಾಸನವು ಆಸಕ್ತಿದಾಯಕವಾಗಿದ್ದು, ತಿರುವೆಂಗಡದ ಆಲಯದಲ್ಲಿ ನಂದಾದೀಪವೊಂದನ್ನು ಬೆಳಗಿಸುವ ವಿವರವನ್ನೊದಗಿ ಸುತ್ತದೆ. ಕ್ರಿ.ಶ. 1000 ನಂತರ ಈ ತಿರುವಿಳಂಕೋಯಿಲ್ ಆಗಲೀ ತಿರುಮಂತ್ರ ಸಾಲೈ ಆಗಲೀ ಪುನಃ ಉಲ್ಲೇಖಗೊಳ್ಳುವುದಿಲ್ಲ.

ಸ್ನಪನ ಮಂಟಪದ ನಿರ್ಮಾಣವಾದ ನಂತರ ಬಹುಕಾಲದ ವರೆಗೆ ಚೋಳರ ಪ್ರಾಬಲ್ಯ ಕುಂದಿ ಸ್ಥಳೀಯರಾದ ಯಾದವರು ಮತ್ತಿತರರು ಸ್ವತಂತ್ರರಾಗಿ ಹೊರಬರುವವರೆಗೆ ಆಲಯ ನಿರ್ಮಾಣದಲ್ಲಿ ಯಾವುದೇ ಚಟುವಟಿಕೆಯನ್ನೂ ಕಾಣಲಾಗದು. ರಾಮಾನುಜಾಚಾರ್ಯರು ಕಾಲವಾದನಂತರ 12ನೇ ಶತಮಾನದ ಉತ್ತರಾರ್ಧದಲ್ಲಿ ಆರಂಭವಾದ ಆಲಯ ನಿರ್ಮಾಣದ ಬೆಳವಣಿಗೆ 15 ಹಾಗೂ 16ನೇ ಶತಮಾನಗಳವರೆಗೂ ನಿರಂತರವಾಗಿ ಮುಂದುವರೆಯಿತೆನ್ನಬಹುದು. ಅರ್ವಾಚೀನ ಯಾದವರು ಆಲಯವನ್ನು ವಿಸ್ತರಿಸಿ ಭದ್ರವಾದ ಆರ್ಥಿಕ ಹಿನ್ನೆಲೆಯನ್ನೂ ಕಲ್ಪಿಸಿದರು. ಬೆಟ್ಟದ ಮೇಲೆ ಕಂಡುಬರುವ ಶಾಸನಗಳನ್ನು ಪರಿಶೀಲಿಸಿದ್ದಲ್ಲಿ ಆಲಯದಲ್ಲಿನ ಬೇರೆ ಬೇರೆ ಮಂಟಪಗಳ, ಗೋಪುರಗಳ ನಿರ್ಮಾಣದ ವಿಷಯದಲ್ಲಿ ಹಲವಾರು ಆಸಕ್ತಿದಾಯಕ ವಿಷಯಗಳು ಕಂಡುಬರುತ್ತವೆ.

ಈವರೆಗಿನ ಆಲಯೇತಿಹಾಸವನ್ನು ಸ್ಥೂಲವಾಗಿ ಈ ಕೆಳಕಾಣುವಂತೆ ವಿವರಿಸಬಹುದು.

ಬೆಟ್ಟವನ್ನು ಭಕ್ತರು ಹತ್ತಿಹೋಗುವ ಕಷ್ಟವನ್ನು ತಪ್ಪಿಸಲು ಕ್ರಿ.ಶ.826 ರಲ್ಲಿ ತಿರುಚಾನೂರು ಆಲಯದಲ್ಲಿ, ಈ ಬೆಟ್ಟದ ದೇವರ ಪ್ರತಿ ಮೂರ್ತಿಯನ್ನು ಹೊಂದಿದ ಒಂದು ತಿರುವಿಳಂಕೋಯಿಲ್ ಅನ್ನು ನಿರ್ಮಿಸಲಾಯಿತು. ಇವರಲ್ಲಿ ಆಳ್ವಾರರು ಆನಂದದಿಂದ ಹಾಡಿ ಹೊಗಳಿದ ಬೆಟ್ಟದ ದೇವರನ್ನು ಹೋಲುವ ಒಂದು ಮೂರ್ತಿಯನ್ನು - ವೆಂಗಡದೊಡೆಯನ ತದ್ರೂಪು ದೇವರನ್ನು - ಪ್ರತಿಷ್ಠಾಪಿಸಲಾಯಿತು. ಕ್ರಿ.ಶ. 870 ರಲ್ಲಿ ತಿರುಚಾನೂರುನಲ್ಲಿಯೇ ಇನ್ನೊಂದು ಮೂರ್ತಿಯನ್ನೂ ಸ್ಥಾಪಿಸಲಾಯಿತು. ಇದರಿಂದ ನಂತರದ ಸ್ವಲ್ಪ ಕಾಲದಲ್ಲಿಯೇ ಈಗ ತಿರುತ್ತಣಿ ದೇವಾಲಯಗಳಿಗೆ ಸೇರಿದ್ದು ಶಿಥಿಲಾವಸ್ಥೆಯಲ್ಲಿರುವ ಶ್ರೀಪರಾಶರೇಶ್ವರ ಆಲಯವು ಪ್ರಧಾನ್ಯಪಡೆದು ಚೋಳರಾಜರ ಅಭಿಮಾನ ಆದರಗಳಿಗೆ ಪಾತ್ರವಾಯಿತು. ಹೀಗಾಗಿ ಅಂದಿನ ಶ್ರೀವೈಷ್ಣವ ಮುಖಂಡರು ಇಲ್ಲಿ ಮತೀಯ ಸೌಹಾರ್ದವನ್ನು ಕಾಪಾಡಿಕೊಂಡು ಬರಲು ತಿರುಮಲೆಯ ದೇವರ ಪೂಜೆಯನ್ನು ಅದರ ಮೂಲಸ್ಥಾನವಾದ ತಿರುಮಲೆಯ ಆಲಯಕ್ಕೇ ವರ್ಗಾಯಿಸಲು ತೀರ್ಮಾನಿಸಿದರು. ಇದು ಕ್ರಿ.ಶ. 960 ರ ಹೊತ್ತಿಗೆ ಆಳವಂದಾರ್ ಹಾಗೂ ಅವರ ಮೊಮ್ಮಗ ತಿರುಮಲೈ ನಂಬಿಯವರುಗಳ ಜೀವಿತ ಕಾಲದಲ್ಲಿಯೇ ನಡೆಯಿತು. ಕ್ರಿ.ಶ. 1017 ರಲ್ಲಿ ಹುಟ್ಟಿದ ರಾಮಾನುಜರು ದಟ್ಟವಾದ ಅರಣ್ಯದ ನಡುವಿದ್ದ ಬೆಟ್ಟದಲ್ಲಿ ಇದ್ದಂತಹ ಸಣ್ಣ ದೇವಾಲಯವನ್ನು ನೋಡಿದವರೇ ಅದನ್ನು ದೊಡ್ಡದನ್ನಾಗಿ ಮಾಡಲು ಬಯಸಿದರು. ಇದೇ ವೇಳೆಗೆ ಚೋಳರಾಜನು ಚಿದಂಬರದಲ್ಲಿದ್ದ ಗೋವಿಂದರಾಜಸ್ವಾಮಿ ವಿಗ್ರಹವನ್ನು ಸಮುದ್ರಕ್ಕೆ ಎಸೆಯಲು ಆಜ್ಞಾಪಿಸಿದ. ಈ ವಿಗ್ರಹವನ್ನು ರಾಮಾನುಜರು ಕೆಳಗಿನ ತಿರುಪತಿಗೆ ತಂದರು. ಇಲ್ಲಿದ್ದ ಶ್ರೀ ಪಾರ್ಥಸಾರಥಿ ಆಲಯದಲ್ಲಿ ಬೇರೆಯೇ ಆದ ಆಲಯವನ್ನು ನಿರ್ಮಿಸಿ ಇದನ್ನು ಪ್ರತಿಷ್ಠಾಪಿಸಲಾಯಿತು. ಇದನ್ನೇ ಈಗ ಶ್ರೀ ಗೋವಿಂದರಾಜ ಸ್ವಾಮಿ ಆಲಯವೆನ್ನುವರು. ಕೆಳಗಣ ತಿರುಪತಿಯನ್ನು ಬೆಟ್ಟವನ್ನೇರಲು, ಯಾತ್ರೆಯ ಮೊದಲ ಪಾಳಯವೆಂಬಂತೆ ಬಳಸಲಾಯಿತು. (ಇದನ್ನೇ ಈಗಲೂ ಕನ್ನಡಿಗರು ಗೋವಿಂದರಾಜ ಪಟ್ಟಣವೆಂದೂ ಕರೆಯುವರು - ಅನುವಾದಕ) ಹೀಗೆ ಬೆಟ್ಟದ ಆಲಯ ಚರಿತ್ರೆ ತಿರುಚಾನೂರಿನಿಂದ ನಡೆದು ತಿರುಪತಿಯ ಮೂಲಕವಾಗಿ ಬೆಟ್ಟವನ್ನೇರಿತೆನ್ನಬೇಕು.

### 6. ಗರ್ಭಗೃಹದ ವಾಸ್ತುವಿವರ :

ಆಲಯದ ವಾಸ್ತುಶಿಲ್ಪದ ಬೆಳವಣಿಗೆಯನ್ನು ಅಧ್ಯಯನ ಮಾಡುವವರು ಮೊದಲಿಗೆ ಗರ್ಭಗೃಹದಿಂದ ಆರಂಭಿಸಿ ಮುಕ್ಕೋಟೀ ಪ್ರದಕ್ಷಿಣೆಯನ್ನು ಸುತ್ತಿ ಎರಡನೆಯ ಪ್ರದಕ್ಷಿಣಾಪಥಕ್ಕೆ ಅಥವಾ ಎರಡನೆಯ ಹೊರಗಿನ ಪ್ರಾಕಾರಕ್ಕೆ ಬರುತ್ತೇವೆ. ಇಲ್ಲಿ ಕಂಡುಬರುವ ವಾಸ್ತು ವಿನ್ಯಾಸವನ್ನು ಅಧ್ಯಯನ ಮಾಡುವುದರಿಂದ ಆಲಯದ ಬೆಳವಣಿಗೆಯನ್ನು ಗುರುತಿಸಬಹುದು.

ಈಗ ಸಾಯಣಮಂಟಪವೆಂದು ಕರೆಯಲಾಗುವ ಅರ್ಧಮಂಟಪವನ್ನು ಗರ್ಭಗೃಹವು ಹೊಂದಿದೆ. ಜೊತೆಗೆ ಒಳಗಿನ ಪ್ರಾಕಾರದ ಹೊರಭಾಗದಲ್ಲಿ ರಾಮರ್ ಮೇಡೈ ಭಾಗವನ್ನು ಹೊಂದಿದೆ.

ಗರ್ಭಗೃಹ ಹಾಗೂ ಅರ್ಧಮಂಟಪಗಳು ಆಯತಾಕಾರವಾಗಿದ್ದು ಗರ್ಭಗೃಹದ ಅಳತೆ 12 ಅಡಿ × 9 ಅಡಿಗಳು. ಅರ್ಧ ಮಂಟಪವು 13 ಅಡಿ × 9 ಅಡಿಗಳು. ಅಂತರಾಳವು 10.5 ಅಡಿ × 12.75 ಅಡಿಗಳಾಗಿವೆ.

ಮೇಲಿನ ಕಟ್ಟದ ವಾಸ್ತು ವೈವಿಧ್ಯ ಹೀಗಿದೆ.

ಅ) ಇವುಗಳ ಅಳತೆಯನ್ನು ತೆಗೆದುಕೊಂಡಾಗ ಕಂಡುಬಂದ ಅಂಶವೆಂದರೆ ಇಲ್ಲಿನ ಗೋಡೆಗಳ ಗಾತ್ರ 7.5 ಅಡಿಗಳು. ಆದರೆ ಸ್ನಪನ ಮಂಟಪ (ಅಂತರಾಳದ ಎದುರಿಗಿರುವುದು) ಹಾಗೂ ಮುಕ್ಕೋಟಿ ಪ್ರದಕ್ಷಿಣೆಯ ಹೊರಗೋಡೆಗಳ ಗಾತ್ರ 4.5 ಅಡಿಗಳು (ಇದು ತುಸು ಹೆಚ್ಚು ಎಂದೇ ಹೇಳಬೇಕು. ಇಂತಹ ದೇವಾಲಯಗಳಲ್ಲಿನ ಗೋಡೆಗಳು 3.25 ಅಡಿಗಳ ದಪ್ಪವಿರುವುದು ಸಾಮಾನ್ಯ.)

ಆ) ಅಂತರಾಳದ ಉತ್ತರ ದಕ್ಷಿಣಗಳ ಮಧ್ಯದಲ್ಲಿ ಎರಡು ದ್ವಾರಬಂಧಗಳುಂಟು. ಪ್ರಾಯಶಃ ಇಲ್ಲಿನ ದ್ವಾರಗಳನ್ನು ಮುಚ್ಚಿ ಗೋಡೆಗಳನ್ನು ಎಬ್ಬಿಸಿರಬೇಕು.

ಇ) ಗರ್ಭಗೃಹದಲ್ಲಿ ನೀರು ಹೊರ ಹರಿಯಲು ಗೋಮುಖವಿಲ್ಲ.

ಈ) 12 ನೇ ಶತಮಾನಕ್ಕೆ ಮೊದಲಿನ ಹಲವು ಶಾಸನಗಳು ಹೊರ ಗೋಡೆಗಳ ಮೇಲೆ ಕಾಣುತ್ತವೆ.

ಉ) ಹೊರಗೋಡೆಗಳಲ್ಲಿ, ಕೋಷ್ಠಗಳಲ್ಲಿ ಕಾರ್ನಿಸುಗಳಲ್ಲಿ ಸ್ತಂಭಗಳಲ್ಲಿ ಕಂಡುಬರುವ ವೈಶಿಷ್ಟ್ಯಗಳು ಈ ಭಾಗದ ವಸ್ತುಶಿಲ್ಪದ ಬೆಳವಣಿಗೆಯನ್ನು ಗುರುತಿಸಲು ಸಹಾಯಕ.

ಮೇಲಿನ ವೈಶಿಷ್ಟ್ಯಗಳಿಗೆ ಹಲವು ಕಾರಣಗಳಿರಬೇಕು. ವಿಶೇಷವಾಗಿ ಗರ್ಭಗೃಹದ ಗೋಡೆಯ ಎಂಟು ಅಡಿಗಾತ್ರಕ್ಕೆ ಕಾರಣವೇನಿರಬಹುದು ಎಂಬ ಪ್ರಶ್ನೆಗೆ ಉತ್ತರಿಸಲು ಪ್ರಯತ್ನಿಸಬಹುದು.

## 7. ನಾಲ್ಕನೆಯ ಹಂತ :

(ಇಂದಿನ ಗರ್ಭಗೃಹರೂಪ ಹಾಗೂ ವಿಮಾನ ನಿರ್ಮಾಣ)

ಪ್ರಾಚೀನ ಶಿಲ್ಪಿಗಳು ಬಂಧ, ಹಸ್ತ, ಮಾನಾಂಗುಲಗಳೆಂಬ ಪರಂಪರೆಯ ಅಳತೆಗಳನ್ನು ಬಳಸಿದರು. ಗೋಡೆಯ ಗಾತ್ರವು ಸಾಧಾರಣವಾಗಿ ಒಂದು ಹಸ್ತ ಅಥವಾ ಅರ್ಧಹಸ್ತ, ಅಥವಾ ಕಾಲು ಹಸ್ತವಿದ್ದು ಹಲವು ಬಾರಿ ಎಂಟನೇ ಒಂದು ಭಾಗದ ಹಸ್ತವೂ ಆಗುವುದಿತ್ತು. ಪರಂಪರೆಯಂತೆ 24 ಮಾನಾಂಗುಲಗಳು ಒಂದು ಹಸ್ತವಾಗುತ್ತಿದ್ದವು. ಹಲವಾರು ಆಲಯಗಳಲ್ಲಿ ಕಾಂಚೀಪುರದ ಆಲಯದಲ್ಲಿಯಂತೆ, ಆಲಯದ ಗೋಡೆಗಳ ಮೇಲೆ ಹಸ್ತಗಳ ಉದ್ದವನ್ನು ಕೊರೆಯಲಾಗುತ್ತಿದ್ದಿತು.

ಪ್ರಾಚೀನ ವಾಸ್ತುಶಿಲ್ಪದ ಪಠ್ಯಗಳ ಪ್ರಾಕಾರ ಗರ್ಭಗೃಹದ ಉದ್ದಗಲಗಳು ಅಲ್ಲಿ ಪ್ರತಿಷ್ಠಾಪಿಸಲ್ಪಡುವ ಧ್ರುವಬೇರದ ಭಂಗಿ, ಅಳತೆಗಳಿಗೆ ಅನುಗುಣವಾಗಿರಬೇಕಿತ್ತು. ನಿಲುವು ಭಂಗಿಯಲ್ಲಿರುವ ಧ್ರುವಮೂರ್ತಿಯಾಗಿ ದ್ದಲ್ಲಿ ಆಗಮಶಾಸ್ತ್ರಗಳು ಗರ್ಭಗೃಹವು ಏಕತಾಳದಲ್ಲಿ ಚೌಕಾಕಾರವಾಗಿರಬೇಕೆಂದು ವಿಧಿಸಿದವು. ಈ ಚೌಕದ ಪಾರ್ಶ್ವಗಳ ಅಳತೆಯು ಧ್ರುವಬೇರದ ಎತ್ತರವನ್ನು ಅನುಸರಿಸಿದ್ದಿತು. ಹಸ್ತವೆಂಬುದು ಸಾಮಾನ್ಯವಾಗಿ ಶಿಲ್ಪಿಯ ಕೈಯ ಅಳತೆಯಾಗಿದ್ದು ಶಿಲ್ಪಿಯಿಂದ ಶಿಲ್ಪಿಗೆ ಇದು ಬೇರೆಯಾಗುತ್ತಿತ್ತು. ವೆಂಕಟೇಶ್ವರಸ್ವಾಮಿಯ ಗರ್ಭಗೃಹದ ಅಳತೆಗಳನ್ನು ನೋಡಿದರೆ ಇಲ್ಲಿನ ಶಿಲ್ಪಿಯ ಹಸ್ತದ ಉದ್ದ 17 ಅಂಗುಲಗಳಾಗಿರಬೇಕು.

ಹೀಗೆ ಗರ್ಭಗೃಹದ ಒಳಗಡೆಯ ಅಳತೆ 12.5 ಅಡಿಯಾಗಿ ಇದು 9 ಹಸ್ತದ ಚೌಕವಾಗುತ್ತದೆ. ವಸ್ತುಸ್ಥಿತಿ ಯೆಂದರೆ ಆಗಮದಲ್ಲಿ ಹೇಳಲಾಗಿರುವ ಚೌಕಗಳಲ್ಲಿ ಇದು ಅತ್ಯಂತ ದೊಡ್ಡದಾಗಿದೆ. ಕಾರಣ ಇಲ್ಲಿನ ಮೂಲ ಮೂರ್ತಿ ಅತಿ ಎತ್ತರವಾಗಿದ್ದು, ಇದೊಂದು ಏಕಮೂರ್ತಿ ಆಲಯವಾಗಿದೆ.

ಗರ್ಭಗೃಹದ ಗೋಡೆಗಳ ಗಾತ್ರದ ಬಗ್ಗೆಯೂ ಆಗಮಶಾಸ್ತ್ರಗಳು ಹಲವಾರು ನಿಯಮಗಳನ್ನು ಹಾಕಿಕೊಟ್ಟಿವೆ. ಗರ್ಭಗೃಹದ ಒಳ ವೈಶಾಲ್ಯದೊಡನೆ ಸಂಬಂಧ ಹೊಂದಿದ ವಿಮಾನವನ್ನು ಧರಿಸಲು ತಕ್ಕ ಗಾತ್ರದ ಗೋಡೆಗಳಾಗಿರಬೇಕು ಎಂಬುದು ಮೂಲ ಸೂತ್ರ. ಸಾಧಾರಣವಾಗಿ ಈ ಅನುಪಾತ ಅರ್ಧದಿಂದ ಮೂರನೇ ಒಂದು ಭಾಗದವರೆಗಿರುವುದು.

ಗರ್ಭಗೃಹದ ಒಳ ವಿಸ್ತಾರ (12.75) ಆಗಿದ್ದು ಗರ್ಭಗೃಹದ ವಿಸ್ತಾರ ಹಾಗೂ ವಿಮಾನದ ತಳಗಳ ಅನುಪಾತ ಅರ್ಧವಿದ್ದು ವಿಮಾನದವಿಸ್ತೀರ್ಣ 324 ಚದರ ಅಡಿ ಆಗಬಹುದು. ವಿಮಾನ ಚೌಕದ ಪಾರ್ಶ್ವವು ಗರ್ಭಗೃಹದ ಗೋಡೆಯ ಉದ್ದದಷ್ಟೇ ಆಗಿದ್ದು, ಸುತ್ತು ಗೋಡೆಯ ಎರಡರಷ್ಟು ಗಾತ್ರವಿರುವುದಾಗಿ, ಇದು 324ರ ವರ್ಗಮೂಲ 18 ಅಡಿಗಳಾಗಿರುವುದು. ಗರ್ಭಗೃಹದ ಒಳಗಡೆಯ ಉದ್ದವಾದ (12.75) ಅಡಿಗಳನ್ನು ಕಳೆದರೆ ಎರಡೂ ಗೋಡೆಗಳ ಗಾತ್ರ - ಐದು ಅಡಿ ಮೂರು ಅಂಗುಲವಾಗಿ ಪ್ರತಿ ಗೋಡೆಯ ಗಾತ್ರ ಮೂವತ್ತೊಂದೂವರೆ ಅಂಗುಲಗಳಾಗುತ್ತವೆ. ಇದು ಎರಡೂವರೆ ಅಡಿಗಿಂತ ತುಸು ಹೆಚ್ಚು. ಹೀಗಾಗಿ ಶಿಲ್ಪಶಾಸ್ತ್ರ ಗಳಲ್ಲಿ ಹೇಳಿರುವಂತೆ ಗೋಡೆಯ ಗಾತ್ರವು ಸಾಧಾರಣ ಎರಡು ಹಸ್ತಕ್ಕಿಂತ ತುಸು ಕಡಿಮೆಯಾಗಿರುತ್ತದೆ.

ಈಗ ಈ ಗೋಡೆಯ ಒಟ್ಟುಗಾತ್ರ ಏಳು ಅಡಿ ಒಂಬತ್ತು ಅಂಗುಲವಿದ್ದು ಐದು ಹಸ್ತಗಳಿಗೆ ತುಸು ಜಾಸ್ತಿಯಾಗಿರುತ್ತದೆ.

ಮೇಲಿನ ಲೆಕ್ಕಾಚಾರದಂತೆ ಗರ್ಭಗೃಹವು ಮೊದಲಿಗೆ ಎರಡು ಹಸ್ತಗಳ ಗಾತ್ರವಾಗಿಯೂ, ಅದರ ಹೊರಗೆ ಮೂರುಹಸ್ತಗಳ ಗಾತ್ರವಾಗಿಯೂ ಒಟ್ಟು ಐದು ಹಸ್ತಗಳ ಎರಡು ಗೋಡೆಗಳಿಂದಾಗಿರುವುದೆಂದು ಖಚಿತವಾಗುತ್ತದೆ.

ಈಗಿರುವ ಗೋಡೆಯ ಐದು ಹಸ್ತಗಳ ಗಾತ್ರವು ಮಧ್ಯದಲ್ಲಿ ಒಂದಕ್ಕೊಂದು ಆತುಕೊಂಡಿರುವ ಎರಡು ಗೋಡೆಗಳಿಂದಾಗಿ ಬಹುದು ಅಥವಾ ಮಧ್ಯದಲ್ಲಿ ಗಾಳಿಯಾಡಲು ಆರು ಅಂಗುಲಗಳ ಖಾಲಿ ಜಾಗದಿಂದಲೂ ಆಗಿರಬಹುದು. ಮುಕ್ಕೋಟಿ ಪ್ರದಕ್ಷಿಣಾ ಪಥದ ಕಡೆಯಿಂದ ಗೋಡೆಯಲ್ಲುಂಟಾಗುವ ಧ್ವನಿಗಳು ಮಧ್ಯದಲ್ಲಿ ಗಾಳಿಯ ಅವಕಾಶವಿದೆ ಯೆಂಬುದನ್ನು ಸೂಚಿಸುತ್ತವೆ. ಆಗಮಶಾಸ್ತ್ರ ಗ್ರಂಥಗಳಲ್ಲಿ ಇಂತಹ ಸ್ಥಳವನ್ನು ಅಂತರ್ಮಂಡಳ ಅಥವಾ ಅಂತರಾಳವೆಂದು ಕರೆಯುವುದುಂಟು.

ಇದರಿಂದಾಗಿ ಸಾಮವೈ ಕಾಲದ ನಂತರ ಎಂದರೆ ಹತ್ತನೇ ಶತಮಾನದ ನಂತರ ಆಲಯದ ನಾಲ್ಕನೇ ಹಂತದ ನಿರ್ಮಾಣ ವಾಗಿದ್ದು, ಗರ್ಭಗುಡಿಯ ಗೋಡೆಗಳ ಗಾತ್ರ ಎರಡು ಪಟ್ಟಾಗಿರಬೇಕು. ಇದರ ಕಾಲವನ್ನು ಅಂದಾಜು ಮಾಡಲು ಸಾಧ್ಯವಿದೆ

ತಿರುಮಲೆಯ ಆಲಯದ ಉತ್ತರದ ಕಡೆಯ ಪ್ರಾಕಾರದಲ್ಲಿ ಕಂಡುಬರುವ ಪ್ರಸಿದ್ಧವಾದ ಶಾಸನವೊಂದರಲ್ಲಿ (17 - ತಿ.ತಿ.) ಕೋವಿಲ್ ಆಳ್ವಾರುಕ್ಕು ಕೋವಿಲ್ ಸೆಯ್ಯ - ಕೋಯಿಲ್ ಆಳ್ವಾರರ ಆಲಯವನ್ನು ನಿರ್ಮಿಸಲು - ವ್ಯಾಪಕವಾದ ಜೀರ್ಣೋದ್ಧಾರದ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಯಿತೆಂಬ ವರ್ಣನೆಯಿದೆ. ಇದರ ಪೂರ್ಣಪಾಠ ಹೀಗಿದೆ.

" ಸ್ವಸ್ತಿ! ಶ್ರೀ ವೀರನರಸಿಂಹ ಯಾದವರಾಯ ನಾಯನಾರರ ಅಡಳಿತದ ನಲವತ್ತನೆಯ ವರ್ಷದ ಅಲ್ಪಸಿ ತಿಂಗಳ ಇಪ್ಪತ್ತನೆಯ ದಿನದಲ್ಲಿ - ದೇಶಾಂತರಿಗಳಲ್ಲಿ ಒಬ್ಬರಾದ ತಿರುಪುಲ್ಲಾಣಿ ದಾಸರು ಆಲಯದ ಜೀರ್ಣೋದ್ಧಾರ ಕಾರ್ಯದಲ್ಲಿ ತೊಡಗಿದಾಗ, ಆಲಯದ ಕೇಂದ್ರಭಾಗದಲ್ಲಿ ಕೆತ್ತಲಾದ ಪ್ರಾಚೀನ ಶಾಸನಗಳನ್ನು ಅವುಗಳಿದ್ದಂತೆಯೇ ಮೊದಲ ಪ್ರಾಕಾರದ ಹೊರಭಾಗದಲ್ಲಿ ಉತ್ತರದಿಕ್ಕಿನ ಗೋಡೆಯ ಕಲ್ಲುಗಳಲ್ಲಿ ಕೆತ್ತಬೇಕೆಂದು - ನಾಯನಾರರಿಂದ (ರಾಜನಿಂದ) ಆಜ್ಞೆಪಡೆದ ಸ್ಥಾನತ್ತಾರರು ಈ ಆಜ್ಞೆಯನ್ನಾಗಿಗೆ ತಂದರು. ಈ ಶಾಸನವನ್ನು ಅದೇ ವರ್ಷದ ಚಿತ್ತಿರೈ ತಿಂಗಳಿನ 22 ನೇ ದಿನ ಶುಕ್ರವಾರ ಉತ್ತರಾಷಾಢ ನಕ್ಷತ್ರದಲ್ಲಿ ಕೆತ್ತಲಾಯಿತ.

" ಕೋ ವೀರ ರಾಜರಾಜೇಂದ್ರ ಪೆನ್ಮಾರನು ತನ್ನ ಆಳ್ವಿಕೆಯ 16 ನೇ ವರ್ಷದಲ್ಲಿ,'' ಸೆಳಿಯರನ್ನು ತೇಜೋ ಹೀನರನ್ನಾಗಿಸಿ, ಕಳಿಂಗ, ಕುಡುಮಲೈನಾಡು, ಕೊಲ್ಲಪುರಂ (ಕೊಲ್ಲಂ) ತಡಗೈವಿಳಿ, ಗಂಗನಪಾಡಿ, ತುಳಪಾಡಿ, (ನುಳಂಬಪಾಡಿ) ವೆಂಗಿನಾಡುಗಳನ್ನು ಘನಘೋರ ಯುದ್ಧದಲ್ಲಿ ಗೆದ್ದು ಕಡಲೂರ್ ಸಾಲೈಯ ಹಡುಗಗಳನ್ನು ನಾಶಪಡಿಸಿ ಎಲ್ಲ ಕಡೆಯ ಜನರೂ ಆರಾಧಿಸುವಂತಹ ಶೋಭಾಕರವಾದ ವಿಜಯವನ್ನು ಪಡೆದು ಐಶ್ವರ್ಯಲಕ್ಷ್ಮಿಯೊಡನೆ ಹರ್ಷೋಲ್ಲಾಸದಿಂದ ಭೂವನಿತೆಯ ಪ್ರಭುವಾದನು.

" ಸ್ವರ್ಣಮಹಲಿನಲ್ಲಿ ಮಲಗಿದವನ ಪಟ್ಟದ ರಾಣಿಯೂ, ಚೇರಮನಾರನ (ಚೇರರಾಜನ) ಮಗಳೂ ಆದ ಪರಾಂತಕ ದೇವಿ ಅಮ್ಮನು ತಿರುವೆಂಕಟ ದೇವರಿಗೆ ನೀಡಿದ ಲಲಾಟ ಪಟ್ಟಿಕೆಯು ಐವತ್ತೆರಡು ಕಳಂಜು ಚಿನ್ನದಿಂದಲೂ, ಆರು ಮಾಣಿಕ್ಯಗಳು ನಾಲ್ಕು ವಜ್ರಗಳು, ಇಪ್ಪತ್ತೆಂಟು ಮುತ್ತುಗಳಿಂದಾಗಿದ್ದಿತು.''

ಶ್ರೀ ವೈಷ್ಣವರಲ್ಲಿ ಕೋಯಿಲ್ ಆಳ್ವಾರ್ ಎಂಬ ಪದ ಸುಪರಿಚಿತವಾದದ್ದು. ಒಂದೇ ಎತ್ತರದ ಒಂದು ಕಿರಿಯ ಕೋಣೆ, ಅದರ ಮುಂದೆ ಇರತಕ್ಕ ಅಷ್ಟೇ ವೈಶಾಲ್ಯದ ಒಂದು ಮಂಟಪವಿರುವ ಸಾಧಾರಣವಾದ ಮರದ ಕಟ್ಟಡವಿದು. (ಕೋಯಿಲ್ - ಆಲಯ - ಇದನ್ನು ಆಳ್ವಾರ್ ಎಂದು ವ್ಯಕ್ತೀಕರಿಸುವುದು ಭಾಷೆಯ ಗೌರವದ ಒಂದು ವಿಧಾನ. ಅಮೃತಸರಸಾಹೇಬ, ಆನಂದಪುರಸಾಹೇಬ, ದೇವರನ್ನು ಒಳಗೊಂಡದ್ದು ದೇವರಲ್ಲಿ ಲೀನವಾದದ್ದು ಎಂಬರ್ಥವಷ್ಟೆ. ಮರ, ಕಲ್ಲು, ಮಣ್ಣು ಯಾವುದರಲ್ಲಿಯೂ ಆಗಬಹುದು- ಅನುವಾದಕ.)

ಹೀಗಾಗಿ 12 ಹಾಗೂ 13 ನೇ ಶತಮಾನಗಳ ಮಧ್ಯಭಾಗದಲ್ಲಿ ಯಾವಾಗಲೋ ಮೇಲೆ ನಿರ್ಮಾಣವಾದ ಗೋಪುರದ ಭಾರವನ್ನು ತಡೆಯಲು ಒಳ ಗೋಡೆಯ ಸುತ್ತ ಹೊರಗೋಡೆಯೊಂದನ್ನು ಕಟ್ಟುವುದಾಗಿರಬೇಕು. ಆ ನಂತರವೇ ನಾಲ್ಕಡೆಯಲ್ಲೂ ಮುಕ್ಕೋಟಿ ಪ್ರದಕ್ಷಿಣೆಯನ್ನು ಮೊದಲ ಆವರಣವಾಗಿ ನಿರ್ಮಿಸಿರಬೇಕು.

ಆಲಯದ ಇತರ ಶಾಸನಗಳಿಂದ ತಿಳಿದುಬರುವ ಅಂಶಗಳೆಂದರೆ ವಿಮಾನದ ಮೇಲಿನ ಕಳಸವನ್ನು ಸುಂದರ ಪಾಂಡ್ಯನು ಚಿನ್ನದಿಂದ ಲೇಪನಗೊಳಿಸಿದ. ಕೆಲಕಾಲ ಪಾಂಡ್ಯರಾಜರ ಸಾಮಂತರಾಜನಾಗಿದ್ದು ನಂತರ ಸ್ವತಂತ್ರರಾಜನಾದ ವೀರನರಸಿಂಗರಾಯನು ತುಲಾಭಾರ ನಡೆಸಿ ತನ್ನ ತೂಕದಷ್ಟು ಚಿನ್ನವನ್ನು ಆಲಯವನ್ನು ದೇವತೆಗಳು ಮೆಚ್ಚಿ ಹೊಗಳುವಂತೆ ಹೊಳಪುಗೊಳಿಸಲು ನೀಡಿದನು. ಹೀಗೆ 13 ನೇ ಶತಮಾನದ ಈ ಅವಧಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಪುನರ್ನಿರ್ಮಾಣದ ಕೆಲಸ ನಡೆದು ಆಲಯದ ವಿಮಾನವು ಚಿನ್ನದ ಗಿಲೀಟು ಗೋಪುರವಾಗಿ ಪರಿವರ್ತಿತವಾಯಿತು. ವಿಮಾನದ ಭಾರವನ್ನು ಹೊರಲನುಕೂಲ ವಂತೆ ಗುಡಿಯ ಹೊರಗೋಡೆಗಳನ್ನೆಬ್ಬಿಸಿ ಆಲಯದ ಮೊದಲ ಆವರಣವಾಗಿ ಮುಕ್ಕೋಟಿ ಪ್ರದಕ್ಷಿಣೆಯನ್ನು ನಿರ್ಮಿಸಲಾಯಿತು.

**ಐದನೆಯ ಹಂತ;**

ರಾಮರ್ ಮೇಡೈಯ ಕವಾಟನಬಂಧನ : ಉದ್ದೇಶ ಪೂರ್ವಕವಾಗಿ ನಿರ್ಮಾಣವಾದ ಈ ಮೊದಲನೆಯ ಆವರಣವನ್ನು ಅನತಿಕಾಲದಲ್ಲಿಯೇ ಮುಚ್ಚಿದ್ದನ್ನು ಕಾಣಬಹುದು, ರಾಮರ್ ಮೇಡೈಯಲ್ಲಿನ ದಕ್ಷಿಣದ ಗೋಡೆಯ ದಕ್ಷಿಣ ಮುಖದಲ್ಲಿನ ಶಾಸನಗಳು ಕ್ರಿ.ಶ.1262 ರ ಹೊತ್ತಿಗೆ ಈ ಭಾಗವನ್ನು ಮುಚ್ಚಿರಬಹು ದೆಂದು ಸೂಚಿಸುತ್ತದೆ. ಸುಂದರ ಪಾಂಡ್ಯನು ವಿಮಾನದ ಕಳಸವನ್ನು ಚಿನ್ನದಿಂದ ಮುಲಾಮೀಕರಿಸಿದಾಗ, ವೀರನರಸಿಂಗಯಾದವ ರಾಯನು ವಿಮಾನಕ್ಕೆ ಚಿನ್ನದ ಲೇಪನ ಹೊಂದಿದ ತಾಮ್ರದ ಹೊದಿಕೆಯನ್ನು ಮಾಡಿಸಿದಾಗ ಇದು ನಡೆದಿರಬೇಕು. ಮೇಲೆ ಹೇಳಿದ ಶಾಸನಗಳು ವೀರನರಸಿಂಗಯಾದವರಾಯ ನಂತೆಯೇ ಪಾಂಡ್ಯರ ಸಾಮಂತರಾಜನಾಗಿದ್ದ ವಿಜಯಗಂಡ ಗೋಪಾಲನ ಬಗ್ಗೆ ಹೇಳುತ್ತವೆ. ಇವನ ಆಳ್ವಿಕೆಯ ಕಾಲ ಸರಿಸುಮಾರು ಕ್ರಿ.ಶ. 1250 ರಿಂದ 1285. ಆದರೀತನ ರಾಜಕೀಯ ಜೀವನವು ಇದಕ್ಕಿಂತ ಮೊದಲೇ ಆರಂಭವಾಗಿರಬೇಕು. ಮುಕ್ಕೋಟಿ ಪ್ರದಕ್ಷಿಣೆಯ ಒಳಗೋಡೆ ಗಳಲ್ಲಿ ಕಂಡು ಬರುವ ತ್ರುಟಿತ ಶಾಸನಗಳಿಂದಾಗಿ ಇವನ ದಾನದತ್ತಿಗಳಲ್ಲಿ ಹಲವು - ಹೊಸ ಆಲಯ, ನೂತನ ಆಲಯ ಪ್ರಾಕಾರಗಳ ನಿರ್ಮಾಣಕ್ಕೂ ಮುನ್ನ ಘಟಿಸಿದವೆಂದು ತಿಳಿದು ಬರುತ್ತದೆ. ರಾಮರ್ ಮೇಡೈಯ ದಕ್ಷಿಣಭಾಗದ ಗೋಡೆಯ ಮೇಲಿನ ಶಾಸನಗಳೆರಡ ರಲ್ಲಿ ಒಂದು ಸಂಪೂರ್ಣವಾಗಿದ್ದು ಈ ಗೋಡೆಯ ನಿರ್ಮಾಣವಾದ ಬಳಿಕ ಕೆತ್ತಲ್ಪಟ್ಟಿರಬೇಕು. ಇದರಲ್ಲಿ ವಿಜಯಗಂಡ ಗೋಪಾಲನ ಗುಣಗಾನವಿದ್ದು ಪ್ರತಿಯೊಂದು ಪ್ರಾಣಿಯೂ ಇವನಿಂದ ಉಪಕೃತ ವಾಗಿರುವುದುಂಟೆಂದೂ, ಪ್ರತಿಯೊಬ್ಬರೂ ಇವನ ಬಗ್ಗೆ ಕೃತಜ್ಞತೆ ಹೊಂದಿರುವರೆಂದೂ ತಿಳಿಸಲಾಗಿದೆ. ಮತ್ತೊಂದು ಶಾಸನವು ಅಸಂಪೂರ್ಣವಾಗಿದ್ದು ತ್ರುಟಿತವೂ ಆಗಿದೆ. ಶ್ರೀವೆಂಕಟೇಶ್ವರಸ್ವಾಮಿ ಆಲಯಕ್ಕೆ ವಿಜಯಗಂಡಗೋಪಾಲನ ಸತೀಮಣಿ ದೇವರಸಿಯರ್ ಮೂರು ನಂದಾದೀಪಗಳನ್ನು ಬೆಳಗಿಸಲು ಹಾಲು ಕರೆವ ಹಸು ಗಳನ್ನು ದಾನ ಮಾಡಿದಳು. ಈಚಿನ ನಿರ್ಮಾಣವಾದ ಒಂದು ಗೋಡೆಯ ಮೇಲೆ ಇಂತಹ ಒಂದು ತ್ರುಟಿತ ಶಾಸನ ಕಂಡು ಬಂದರೆ ಸಾಧಾರಣವಾಗಿ ಈ ಶಾಸನವು ಬೇರೆಲ್ಲೋ ಮೊದಲಿಗೆ ಇದ್ದಿತೆಂದೂ ಹೊಸಗೋಡೆಯ ನಿರ್ಮಾಣವಾಗುವಾಗ ಅದನ್ನು ಅಲ್ಲಿಂದ

ಹೊರತಂದು ಇಲ್ಲಿ ಬಳಸಲಾಗಿದೆಯೆಂದೂ ತೀರ್ಮಾನಿಸಲಾಗುತ್ತದೆ. ಇದು ಮೊದಲಿಗೆ ಹೊಸ ಪ್ರಾಕಾರದ ದಕ್ಷಿಣಭಾಗದ ಗೋಡೆಯು ಪೂರ್ವದ ಗೋಡೆಯೊಡನೆ ಸೇರುವಲ್ಲಿ ಇದ್ದಿರಬೇಕು. ರಾಮರ್ ಮೇಡ್ಯೆ ನಿರ್ಮಾಣಕ್ಕಾಗಿ ಕಲ್ಲನ್ನು ಚೂರುಮಾಡಿರಬೇಕು. ಇದರಿಂದಾಗಿ ಶಾಸನ ತ್ರುಟಿತವಾಗಿರಲು ಸಾಧ್ಯ. ಹೀಗಾಗಿ ತೀರ್ಮಾನವೆಂದರೆ ರಾಮರ್ ಮೇಡ್ಯೆಯು ಕ್ರಿ.ಶ.1262 ರಿಂದ 1285ರ ಒಳಗೆ ನಿರ್ಮಾಣವಾಗಿರಬೇಕು. ದಕ್ಷಿಣದ ಪೂರ್ವದ ಕೊನೆ ಹಾಗೂ ಉತ್ತರ ಪ್ರಾಕಾರದ ಗೋಡೆಗಳನ್ನು ಹೊರಕ್ಕೆತೆರೆದು ರಾಮರ್ ಮೇಡ್ಯೆಯ ಗೋಡೆಯನ್ನು ಎಬ್ಬಿಸಿರಬೇಕು. ಹೀಗಾಗಿ ಪೂರ್ವದ ಕಡೆಗೆ ರಾಮರ್ ಮೇಡ್ಯೆ ಮುಚ್ಚಿಹೋದರೂ ಪ್ರದಕ್ಷಿಣೆಯ ಇತರ ಮೂರು ಭಾಗಗಳು ಹಲವು ಕಾಲ ಪ್ರಾಯಶಃ ತೆರದೇ ಇದ್ದಿರಬೇಕು. ಈಗ ಈ ಪ್ರದಕ್ಷಿಣಾಪಥವನ್ನು ಮುಚ್ಚುವ ಬಾಗಿಲು, ದ್ವಾರಬಂಧಗಳು ತೀರ ಈಚಿನವಾಗಿದ್ದು ವಾಸ್ತುವಿನ ಇತರ ಭಾಗಗಳೊಡನೆ ಸಂಬಂಧಪಟ್ಟಿದ್ದಲ್ಲ.

ರಾಮರ ಮೇಡ್ಯೆಯನ್ನು ಬಂದು ಮಾಡಿದ್ದೇಕೆ ಎಂಬುದನ್ನು ಖಚಿತವಾಗಿ ವಿವರಿಸಲು ಸಾಧ್ಯವಿಲ್ಲ. ಒಂದು ಕಾರಣ ರಕ್ಷಣೆಯದಾಗಿರಬಹುದು. ಮುಕ್ಕೋಟಿ ಪ್ರದಕ್ಷಣೆಯ ಇತರ ಸ್ಥಳಗಳಲ್ಲಿ ಮೂರ್ತಿಗಳನ್ನು ಸ್ಥಾಪಿಸುವ ಪ್ರಯತ್ನ ಆಲಯವನ್ನು ಚತುರ್ಮೂರ್ತಿ ಆಲಯವನ್ನಾಗಿಸುವ ಪ್ರಯತ್ನವನ್ನು ತಡೆಗಟ್ಟುವುದು, ರಾಮಾನುಜರ ಸುಧಾರಣೆಗಳ ನಂತರ ಪ್ರಮುಖ ತುರ್ತು ಇದ್ದಿರಬಹುದು.

ಶಾಸನದಲ್ಲಿ ( 17 ತಿ.ತಿ ) ಪ್ರಾಚೀನ ಆಲಯವನ್ನು ಕೋಯಿಲ್ ಆಳ್ವಾರ್ ಎಂಬುದಾಗಿಯೂ ಜೀರ್ಣೋದ್ಧಾರವನ್ನು ಆಲಯವೆಂದೂ ಹೆಸರಿಸಲಾಗಿದೆ. ಕೋಯಿಲ್ ಅಥವಾ ಆಲಯವು ದೇವರ ನಿವಾಸವಾಗಿ ಈಗಲೂ ಕೋಯಿಲ್ ಆಳ್ವಾರ್ ಎಂದು ಕರೆಯಲ್ಪಡುತ್ತದೆ.

ಪ್ರಾಚೀನ ಆಲಯವು ತನ್ನ ಸುತ್ತ ಒಂದು ಆಚ್ಛಾದಿತ ಆವರಣ - ಅಂಗಳನ್ನು - ಅಂತರಾಳವನ್ನು ಹೊಂದಿದ್ದು, ವಿಮಾನದ ಮೇಲೆ ಬಿದ್ದು ಬಂದ ಮಳೆಯ ನೀರು ಹರಿದು ಹೋಗಲು ಗೋಡೆಯ ಬದಿಯಲ್ಲಿ ತಳದಲ್ಲಿ ಕಾಲುವೆಯಿದ್ದಿತು. ಇವುಗಳನ್ನುಕಿತ್ತು ಹೊಸ ಆಲಯದ ಗೋಡೆಯ ಪಾಯಕ್ಕಾಗಿ ಸ್ಥಳ ಮಾಡಬೇಕಾಯಿತು. ಹೊಸ ಆಲಯದ ತಳಪಾಯದ ನಿರ್ಮಾಣಕ್ಕಾಗಿ ಹಳೆಯ ಆಲಯದ ಗೋಡೆಗಳನ್ನು ಬೀಳಿಸಬೇಕಾಗಿದ್ದಿತು. ಆದರೆ ಶಾಸನ ಹಳೆಯ ಆಲಯದ ಗೋಡೆಗಳನ್ನಾಗಲೀ, ಹೊಸ ಗೋಡೆಗಳ ನಿರ್ಮಾಣವನ್ನಾಗಲೀ ಸ್ಪಷ್ಟವಾಗಿ ಹೆಸರಿಸುವುದಿಲ್ಲ. ಹಳೆಯ ಗೋಡೆಯ ಮೇಲಿದ್ದ ಶಾಸನಗಳ ಪಾಠವನ್ನು ತೆಗೆದುಕೊಂಡು ಹೊರ ಪ್ರಾಕಾರದ ಉತ್ತರದ ಗೋಡೆಯ ಮೇಲೆ ಮತ್ತೆ ಕೆತ್ತಬೇಕೆಂಬ ಆಜ್ಞೆಯನ್ನಷ್ಟೆ ಸೂಚಿಸುತ್ತದೆ. (ಹೊಸ ಗೋಡೆಯ ನಿರ್ಮಾಣಕ್ಕೆ ಮೊದಲು) ಹಳೆಯ ಪ್ರಾಕಾರದ ಗೋಡೆಗಳ ಪ್ರದಕ್ಷಿಣಾಪಥ ಇದ್ದವೆಂಬುದು, ತ್ರುಟಿತ ವಾದ ಹಾಗೂ ಭಿನ್ನವಾದ ಹಲವಾರು ಶಾಸನಗಳಿರುವ ದೊಡ್ಡ ದೊಡ್ಡ ಶಿಲಾಫಲಕಗಳಿಂದ ಕೂಡಿದ ಹಾಗೂ ದೊಡ್ಡ ದೊಡ್ಡ ಕಲ್ಲುಗಳಿಂದ ಕೂಡಿದ ಹೊಸ ಪ್ರದಕ್ಷಿಣಾಪಥದಿಂದ ಖಚಿತವಾಗುತ್ತದೆ. ಈ ದೊಡ್ಡಕಲ್ಲುಗಳ ರಚನೆ ಇಡೀ ಆಲಯದ ವಾಸ್ತು ಸೌಂದರ್ಯಕ್ಕೆ ಹೊಂದಿಕೊಳ್ಳದೆ ಹೋಗುವುದು. ಹೊಸ ನಿರ್ಮಾಣದ ಆಲಯದ ಗೋಡೆಗಳೊಂದಿಗೆ ಹೋಲಿಸಿದಲ್ಲಿ ಈ ಹಳೆಯ ಒರಟು ಕೈಯಾಟದ ಶಿಲಾಖಂಡಗಳು ಭಿನ್ನ ಶಾಸನಗಳನ್ನು ಒಳಗೊಂಡು ಅತೃಪ್ತಿಕರ ರುಚಿಯನ್ನುಂಟುಮಾಡುತ್ತದೆ. ಹೊಸ ಪ್ರದಕ್ಷಣೆಯಿಂದ ಕೂಡಿದ ಪ್ರಾಕಾರದ ಗೋಡೆಗಳನ್ನು ಕೋಯಿಲ್ ಎಂದು ಕರೆಯುತ್ತದೆ. ಒಂದು ಶಾಸನ (17 ತಿ.ತಿ.) "ಕೋವಿಲಾಳ್ವಾರುಕ್ಕು ಕೋಯಿಲ್" (ಆಲಯ ಸ್ವಾಮಿಯ ಆಲಯ) (ಆಲಯ ವನ್ನು ಆಳ್ವಾರ್ ಎಂದು ಗೌರವಿಸುವ ಸಂಪ್ರದಾಯ- ಅನುವಾದಕ) ಮೊದಲನೆಯ ಪ್ರದಕ್ಷಿಣೆಯನ್ನು ಆಲಯವೆಂದು ಕರೆಯುವುದು ಅಸಾಧಾರಣವಾದದ್ದು. ಸಾಮಾನ್ಯವಾಗಿ ಆಲಯವು ಒಂದು ಮೂರ್ತಿಯನ್ನು ಪೂಜೆಗಾಗಿ ಹೊಂದಿರುವುದು. ಹೀಗಾಗಿ ಈ ಹೊಸ ಪ್ರದಕ್ಷಿಣಾಪಥದಲ್ಲಿ ಪೂಜೆಗಾಗಿ ಒಂದು ಅಥವಾ ಹೆಚ್ಚಿನ ಮೂರ್ತಿಗಳಿದ್ದಿರಬಹುದು. ಹೊಸ ಗರ್ಭಗೃಹದ ಹೊರಗೋಡೆಗಳ ವಿನ್ಯಾಸ, ಪ್ರದಕ್ಷಣೆಯಲ್ಲಿನ ಅಂತರಾಳದ ಸ್ಥಳದ ಮುಚ್ಚುವಿಕೆಗಳೂ ಈ ಅಂಶವನ್ನೇ ಸಮರ್ಥಿಸುವುವು. ದಕ್ಷಿಣದ ಗೋಡೆಯನ್ನು ಒಮ್ಮೆ ಗಮನಿಸಿ ದಲ್ಲಿ ಅದರ ಮಧ್ಯದಲ್ಲಿ ಒಂದು ಜಾಲಂಧ್ರವನ್ನು ಕೆತ್ತಿರುವುದು

ಕಂಡುಬರುತ್ತದೆ. ಇಂತಹವೇ ಜಾಲಂಧ್ರಗಳು ಉತ್ತರದ ಹಾಗೂ ಪಶ್ಚಿಮದ ಗೋಡೆಗಳಲ್ಲಿಯೂ ಇವೆ. ಹೀಗಾಗಿ ಪೂರ್ವದ ಗೋಡೆಯಲ್ಲೂ ಒಂದು ಜಾಲಂಧ್ರವಿದ್ದಿರಬೇಕು (ಈಗಲೂ ಇರಬಹು ದೇನೋ). ಇದನ್ನು ನಂತರ ರಾಮರ್ ಮೇಡೈಯೆಂದು ಕರೆಯುವ ಭಾಗದ ದಪ್ಪಗೋಡೆಯಿಂದ ಮುಚ್ಚಿರಬೇಕು. ದಕ್ಷಿಣೋತ್ತರಗಳಲ್ಲಿ ಗೋಡೆಗಳಿಂದ ಆವೃತವಾದ ಕಿರುಹಾದಿಯೇ ಪೂರ್ವದ ಪ್ರದಕ್ಷಿಣೆಯಾಯಿತು. ಇದನ್ನು ನಂತರದಲ್ಲಿ ಗೋಡೆಯಾಗಿಸಲಾಯಿತು. ವೈಖಾನಸ ಪಾಂಚರಾತ್ರ ಆಗಮಗಳ ಪ್ರಕಾರ ಈ ಜಾಲಂಧ್ರಗಳು ಗರ್ಭಗೃಹದ ವಿನ್ಯಾಸದ ಅಂಗವಾಗುತ್ತವೆ. ವೈಖಾನಸರು ಇವುಗಳಿಗೆ ಹೆಚ್ಚಿನ ಪ್ರಾಧಾನ್ಯ ನೀಡುವರು. ಉತ್ತರ ಪಶ್ಚಿಮ ದಕ್ಷಿಣಗಳಲ್ಲಿ ಇನ್ನೂ ಮೂರು ಜಾಲಂಧ್ರಗಳನ್ನು ಏರ್ಪಡಿಸಿ ಅವುಗಳಲ್ಲಿಯೂ ಮೂರ್ತಿಗಳನ್ನು ಇಡಲು ಅಪೇಕ್ಷಿಸುವರು.ಹೀಗಾಗಿ ಮಳೆಯ ನೀರು ಸೋರಿ ಮೂರ್ತಿಗಳ ಮೇಲೆ ತೊಟ್ಟಿಕ್ಕದಂತೆ ಮಾಡಲೆಂದೇ ಅಂತರಾಳವನ್ನೂ ಭಾವಣಿಯ ಸಂಧಿಯನ್ನೂ ಮುಚ್ಚಿ ಬೆಳಕು ಬರಲು ಸಣ್ಣ ಪ್ರಮಾಣದ ಕಿಂಡಿಗಳನ್ನು ತೆರೆಯಲಾಯಿತು.

## 9. ಆಲಯ ನಿರ್ಮಾಣದ ಆರನೆಯ ಹಂತ- ತಿರುಮಾಮಣಿ ಮಂಟಪ:

ಗರ್ಭಗೃಹದ ಎದುರಿಗೆ ಪೂರ್ವ ದಿಗ್ಭಾಗದಲ್ಲಿನ ಅತಿಹೊರಗಿನ ಮಂಟಪ. ಸ್ನಪನ ಮಂಟಪದ ಮುಂದೆ 16 ಕಂಭಗಳ ಮುಖ ಮಂಟಪ ಇದು - ತಿರುಮಾಮಣಿ ಮಂಟಪ. ಕ್ರಿ.ಶ. 1417 ಕ್ಕೆ ಸರಿ ಹೋಗುವ ಶಾಲಿವಾಹನ ಶಕ 1339 ರಲ್ಲಿ ಚಂದ್ರಗಿರಿಯ ನಿವಾಸಿಯಾದ ಮಲ್ಲನ್ನ ಅಥವಾ ಮಾಧವದಾಸನು ಇದನ್ನು ಕಟ್ಟಿಸಿದರು. ಯಾಗಶಾಲೆಯ ಬಳಿಯಿರುವ ಶಾಸನವೊಂದು ಈ ವಿಷಯವನ್ನು ಖಚಿತಪಡಿಸುತ್ತದೆ.

ಪ್ರಾಚೀನ ವಿಜಯನಗರ ಶೈಲಿಯಲ್ಲಿ ನಿರ್ಮಿತವಾದ ಮಂಟಪವಿದು. ಈಗ ಇದನ್ನು ಮುಖಮಂಟಪ ವೆಂದು ಕರೆಯುವರು ಹಾಗೂ ಆಸ್ಥಾನ ಮಂಟಪವಾಗಿ ಬಳಸುವರು. ಇಲ್ಲಿನ ಕಂಭಗಳು ಹೂವಿನಾಕಾರದ ಬೋದಿಗೆಗಳನ್ನು ಹೊಂದಿವೆ. ಈ ಮಂಟಪವು ತನ್ನ ಕಂಭಗಳು, ಬೋದಿಗೆಗಳು, ಉಬ್ಬು ಶಿಲ್ಪಗಳು ಮೊದಲಾದವು ಗಳಿಂದಾಗಿ ಪ್ರಾಚೀನ ವಿಜಯನಗರ ಶೈಲಿಯ ಶಿಲ್ಪಕಲೆಯ ಪ್ರಶಸ್ತವಾದ ಪ್ರತೀಕವಾಗಿವೆ.

(ಅತ್ಯಂತ ಸುಂದರವಾದ ಕಂಬ ಕೆತ್ತನೆಗಳ ಈ ಮಣಿ ಮಂಟಪವನ್ನು 21ನೆಯ ಶತಮಾನದಲ್ಲಿ ಚಿನ್ನದ ಮುಲಾಮಿನ ಲೇಕು ಹೊದಿಕೆಯಲ್ಲಿ ಅಲಂಕರಿಸಿ ಭವ್ಯವಾಗಿರುವಂತೆ ಮಾಡಲಾಗಿದೆ.- ಅನುವಾದಕ)

## 10. ಆಲಯ ನಿರ್ಮಾಣದ ಏಳನೆಯ ಹಂತ - ಗರುಡ ಮಂಟಪ:

ತಿರುಮಾಮಣಿ ಮಂಟಪದ ಪೂರ್ವದ ಕೊನೆಯಲ್ಲಿ ಕಿರಿದಾದ ಗರುಡಮಂಟಪವಿದೆ. ಸೂಕ್ಷ್ಮವಾಗಿ ಈ ಮಂಟಪವನ್ನು ಗಮನಿಸಿದರೆ, ಇದು ನಂತರದ ಸೇರ್ಪಡೆಯ ನಿರ್ಮಾಣ ಎಂಬುದು ತಿಳಿಯುತ್ತದೆ. ಪೂರ್ವದಲ್ಲಿನ ಕೊನೆಯಸಾಲಿನ ಮಧ್ಯದಲ್ಲಿ ನಿಂತ ಈ ಕಟ್ಟಡ ಮುಖಮಂಟಪದ ತಳಗಟ್ಟಿನಿಂದ ಹೊರಕ್ಕೆ ಚಾಚಿಕೊಂಡಿರುವುದನ್ನು ನೋಡಬಹುದು. ಈ ಗರುಡ ಮಂಟಪವು ಅತಿ ಒರಟಾದ ಕಟ್ಟಡವಾಗಿದ್ದು, ತಿರುಮಾಮಣಿ ಮಂಟಪದ ನಿರ್ಮಾಣವಾದಮೇಲೆ ಬಹುಕಾಲದ ನಂತರ ಉತ್ಸವ ದಿನಗಳು ಹೆಚ್ಚಾದ ನಂತರ ನಿರ್ಮಾಣವಾಗಿರಬೇಕು.

## 11. ಆಲಯ ಇತರ ಕಟ್ಟಡಗಳು:

**ಅ) ಮಡಿಲ್‌ಪ್ಪಟ್ಟಿ ಮಂಟಪ:** ಹಿಂದೆ ಹೇಳಿದ ನಾಲ್ಕೂ ಕಡೆ ಕಟ್ಟಡಗಳಿಂದ ಕೂಡಿದ ವಿಮಾನ ಪ್ರದಕ್ಷಿಣೆಯು ದೊಡ್ಡ ಮಡಿಲ್ (ಆವರಣ) ಗೋಡೆಗಳನ್ನೊಳಗೊಂಡಿದೆ. ಪೂರ್ವದ ಗೋಡೆಯನ್ನು ಕೊರೆದು ಒಳಗಿನ ದ್ವಾರ ಗೋಪುರವನ್ನುನಿರ್ಮಿಸ ಲಾಗಿದೆ. ದಕ್ಷಿಣ, ಪಶ್ಚಿಮ, ಉತ್ತರದ ಆವರಣದ ಗೋಡೆಗಳು ಗೋಡೆಗಳಿಗೆ ಹೊಂದಿಸಿದ ಮಡಿಲ್‌ಪ್ಪಟ್ಟಿ ಮಂಟಪಗಳನ್ನು ಒಳ ಗೊಂಡಿದೆ. ಇವುಗಳಲ್ಲಿಯೇ ಕಲ್ಯಾಣಮಂಟಪ, ರಾಮಾನುಜರ ಗುಡಿ ಮೊದಲಾದವು ಇವೆ. ಇವೆಲ್ಲ ಈಚಿನ ವಿಜಯನಗರ ಅಥವಾ

ಇನ್ನೂ ಇತ್ತೀಚಿನ ಶೈಲಿಯ ನಿರ್ಮಾಣಗಳಾಗಿವೆ. ವಾಸ್ತುಶಿಲ್ಪದ ದೃಷ್ಟಿಯಿಂದ ಕಲ್ಯಾಣಮಂಟಪದ ಹೊರತಾಗಿ ಮಿಕ್ಕವು ಗಮನ ಸೆಳೆಯತಕ್ಕವುಗಳಲ್ಲ. ಇವುಗಳಲ್ಲಿನ ನೂತನತೆಯನ್ನು ಇಲ್ಲಿನ ಹಲವಾರು ಕಂಭಗಳ ಶೈಲಿ, ಅವುಗಳ ಬೋದಿಗೆಗಳು, ಅವುಗಳ ಮೇಲಿನ ಆಗಮಾತೀತ ವಾದ ಕೆತ್ತನೆಗಳಿಂದಲೇ ತಿಳಿಯಬಹುದು. ಕಲ್ಯಾಣಮಂಟಪವನ್ನು ಮಾತ್ರ ವಿಜಯನಗರದ ಕಾಲಕ್ಕೆ ಕ್ರಿ.ಶ.1300 ರಿಂದ ಕ್ರಿ.ಶ.1600 ವರೆಗಣ ಕಾಲದ್ದು ಎಂಬುದಾಗಿ ಅಲ್ಲಿನ ಕಂಭಗಳು ತಳದಲ್ಲಿ ಹೊಂದಿರುವ ಯಾಳಿಗಳನ್ನೇರಿದ ಯೋಧಶಿಲ್ಪಗಳು, ಪುಷ್ಪ ಬೋದಿಗೆಗಳು, ಕುಂಭ ಪಂಜರಗಳನ್ನು ಗಮನಿಸಿ ಹೇಳಬೇಕಾಗುತ್ತದೆ.

ಈ ಪ್ರಾಕಾರದಲ್ಲಿ ಮೂರು ಮುಖ್ಯ ಗುಡಿಗಳಿವೆ. ವರದರಾಜ, ರಾಮಾನುಜ, ನೃಸಿಂಹಸ್ವಾಮಿ ಗುಡಿಗಳು. ಇವುಗಳಲ್ಲಿ ಮೊದಲನೆಯ ವರದರಾಜಸ್ವಾಮಿಯ ಗುಡಿಯ ಹೊರಗೋಡೆಗಳು ಅರ್ವಾಚೀನ ಚೋಳಶೈಲಿ ಯಲ್ಲಿವೆ. ಇವುಗಳ ಮೇಲಿನ ಶಾಸನಗಳಲ್ಲಿ ಅತಿಹಳೆಯದು ಹದಿನಾಲ್ಕನೆಯ ಶತಮಾನದಲ್ಲಿನ ಶ್ರೀರಂಗನಾಥ ಯಾದವರಾಯನ ಆಡಳಿತದ ಹದಿನಾರನೇ ವರ್ಷಕ್ಕೆ ಸಂಬಂಧಿಸಿದ್ದು. ಮಲ್ಲಿಕ್ ಕಾಫರನು ದಕ್ಷಿಣಭಾರತದ ಮೇಲೆ ಧಾಳಿಮಾಡಿದ ಸಮಯದಲ್ಲಿ ಕಂಚಿಯ ವರದರಾಜಸ್ವಾಮಿ ಉತ್ಸವ ಮೂರ್ತಿಯನ್ನು ಕಾಪಾಡಲು ಈ ಗುಡಿಯ ನಿರ್ಮಾಣವಾಯಿತೆಂದು ಪರಂಪರೆಯ ಐತಿಹ್ಯವಿದೆ. ರಾಮಾನುಜರ ಗುಡಿಯ ಬಗ್ಗೆ ಹೇಳುವುದೆಂದರೆ ಅದು ಇರುವ ಸ್ಥಳದ ವಿನ್ಯಾಸದಿಂದಲೇ ಅದು ಈಚಿನ ಸೇರ್ಪಡೆಯೆಂದು ತೀರ್ಮಾನಿಸಬಹುದು. ಉತ್ತರದಿಕ್ಕಿನ ಕಡೆಯ ಪ್ರಾಕಾರದಲ್ಲಿ ಇದೊಂದು ಹೊರಚಾಚಿದ ಕಟ್ಟಡವಾಗಿದೆ. ಇಲ್ಲಿನ ವಾಸ್ತುಶಿಲ್ಪದ ವಿವರಗಳು - ಸಿಂಹ ಮುಖ ತಳದ ಕಂಭಗಳು, ಹೆಚ್ಚು ಅಲಂಕಾರಿಕವಾದ ಪರಿಸರಗಳು ವಿಜಯನಗರ ವಾಸ್ತುವನ್ನು ನೆನಪಿಗೆ ತರುವುವು. ಈ ಗುಡಿಯ ಮೇಲಿನ ಅತಿ ಪ್ರಾಚೀನ ಶಾಸನವೆಂದರೆ ಕ್ರಿ.ಶ. 1476 ರದು. ರಾಮಾನುಜಾಚಾರ್ಯರು ಬೆಟ್ಟ ದೇವಾಲಯದೊಡನೆ ಹೆಚ್ಚು ಹತ್ತಿರದ ಸಂಬಂಧ ಹೊಂದಿ, ಅದರ ಘನತೆ ಹೆಚ್ಚುವಂತಹ ಅನೇಕ ಕಾರ್ಯಗಳಲ್ಲಿ ಪ್ರಮುಖ ಪಾತ್ರ ವಹಿಸಿದವರಾಗಿದ್ದರು ಎಂಬುದು ತಿಳಿದ ವಿಷಯವೇ ಆಗಿದೆ. ತಿರುಮಲೆಯಲ್ಲಿ ಶ್ರೀವೆಂಕಟೇಶ್ವರಸ್ವಾಮಿಗೆ ಎರಡನೆಯವರಾಗಿ ಪ್ರಾಧಾನ್ಯ ಪಡೆದವರೆಂದರೆ ರಾಮಾನುಜರು. ಹೀಗಾಗಿ ಕ್ರಿ.ಶ 1200 ರಲ್ಲಿ ಕೆಳಗಣ ತಿರುಪತಿಯಲ್ಲಿ ರಾಮಾನುಜರಿಗಾಗಿ ಗುಡಿಯೊಂದು ನಿರ್ಮಾಣವಾದಾಗಲೇ ತಿರುಮಲೆಯ ಲ್ಲಿಯೂ ಅವರ ವಿಗ್ರಹವಾಗಲೀ ಗುಡಿಯಾಗಲೀ ಉಂಟಾಗಿರಬೇಕು. ಪರಂಪರೆಯ ಪ್ರಕಾರ ತಿರುಮಲೆ - ತಿರು ಪತಿಗಳಲ್ಲಿನ ರಾಮಾನುಜರ ಆಲಯಗಳು ಹೆಚ್ಚು ಕಡಿಮೆ ಏಕಕಾಲದಲ್ಲಿ ನಿರ್ಮಾಣವಾದವು. ರಾಮಾನುಜಾಚಾರ್ಯರು 45 ನೇ ವಯಸ್ಸಿನಲ್ಲಿ ಅವರ ಸನ್ನಿಧಿಯಲ್ಲಿಯೇ ಅವರ ಒಂದು ಪ್ರತಿಮೆಯ ಕೆತ್ತನೆಯಾಗಿ ಅವರು ವೈಕುಂಠವಾಸಿಗಳಾದ ನಂತರ ಬೆಟ್ಟದಲ್ಲಿ ಅದನ್ನು ಸ್ಥಾಪಿಸಲಾಯಿತೆಂದು ಪರಂಪರೆ ಹೇಳುತ್ತದೆ. ಇಷ್ಟೂ ನಡೆದದ್ದು ಶ್ರೀ ವೆಂಕಟೇಶ್ವರಸ್ವಾಮಿಯ ಆಜ್ಞಾನುಸಾರವಾಗಿ ಎಂದು ಹೇಳುವರು. ಗುರು ಪರಂಪರೆಯು ತಿಳಿಸುವಂತೆ ರಾಮಾನುಜಾಚಾರ್ಯರ ಮರಣಾನಂತರದಲ್ಲಿ ಪಿಳ್ಳೈತಿರುಮಲನಂಬಿಯವರಿಂದ ತಿರುವೆಂಗಡ ಮುಡೈಯಾನನ ದೇವಳದಲ್ಲಿ ಆಚಾರ್ಯರ ವಿಗ್ರಹವನ್ನು ಪ್ರತಿಷ್ಠಾಪಿಸಲಾಯಿತು. ಹೀಗಾಗಿ ಈ ಆಲಯ ನಿರ್ಮಾಣವಾಗುವವರೆಗೆ ವಿಗ್ರಹವನ್ನು ಇತರ ಮೂರ್ತಿಗಳೊಂದಿಗೆ ಗರ್ಭಗುಡಿಯಲ್ಲಿಯೇ ಇಡಲಾಗಿದ್ದಿರಬೇಕು. ನರಸಿಂಹಾಲಯವೂ ಸಹ ಷೋಲಿಂಗರದ ಅಥವಾ ಅಹೋಬಿಲದ ಉತ್ಸವಮೂರ್ತಿಗಳನ್ನಿಡಲು ನಿರ್ಮಾಣವಾಯಿತೆಂದು ಹೇಳಲಾಗಿದೆ. ಆದರೆ ಈ ಮಾತು ನಿಜವೆಂಬಂತಿಲ್ಲ. ಈ ಆಲಯವು ಒಂದು ತತ್ಕಾಲಿಕ ಏರ್ಪಾಡಿದ್ದಂತೆ ಕಂಡುಬಂದು ಮಡಿಲ್ - ಪ್ಪಟ್ಟ ಮಂಟಪದ ಒಂದು ಅಂಗವಾಗಿದೆ.

**ಆ. ಒಳಗೋಪುರ:**

ಇದರ ತಳದಲ್ಲಿ ಹಲವಾರು ತ್ರುಟಿತ ಶಾಸನಗಳಿವೆ. ಇವುಗಳಲ್ಲಿ ಅತಿ ಪ್ರಾಚೀನವಾದದ್ದು ಕ್ರಿ.ಶ.1150 ಕ್ಕೆ ಸೇರಿದ್ದು ಅಮುದುಪಡಿ, ಸಾತ್ತುಪ್ಪಡಿಗಳಿಗಾಗಿ ನಂದನವನವನ್ನು ಧಾರಾದತ್ತವಾಗಿಸಿದ್ದನ್ನು ಹೇಳುತ್ತದೆ. ಪೂರ್ಣವಾಗಿ ರುವ ಶಾಸನಗಳಲ್ಲಿ ಅತಿ ಪ್ರಾಚೀನವಾದದ್ದು ಕ್ರಿ.ಶ.1220 ಕ್ಕೆ ಸೇರಿದ್ದು. ನಮಗೆ ತಿಳಿದಿರುವಂತೆ ಕ್ರಿ.ಶ.1250 ರ ಸುಮಾರಿಗೆ ಆಲಯವನ್ನು ಬಹುತೇಕ ಪುನರ್ನವೀಕರಿಸಲಾಯಿತು. ಹೀಗಾಗಿ ಈ ಗೋಪುರವನ್ನು ಸರಿಸುಮಾರು 1250 ರ ಹೊತ್ತಿಗೆ ಪೂರ್ಣಗೊಳಿಸಿರಬೇಕು ಎನ್ನಬಹುದು. ಇದರ ಮೇಲಿನ ವಾಸ್ತುಶಿಲ್ಪ ವಿವರವೂ ಈ ಕಾಲ ನಿರ್ಣಯದೊಡನೆ ಹೊಂದಿಕೊಳ್ಳುತ್ತದೆ.

**ಇ. ಧ್ವಜಸ್ತಂಭ ಮಂಟಪ:**

ಪವಿತ್ರವಾದ ಧ್ವಜಸ್ತಂಭ ಹಾಗೂ ಬಲಿಪೀಠಗಳನ್ನು ಸ್ಥಾಪಿಸಲು ಅನುವುಮಾಡಿಕೊಡುವ ಸರಳವಾದ ಕಂಭಗಳಿಂದಾದ ಮಂಟಪವಿದು. ಹಲವು ದೊಡ್ಡ ದೇವಾಲಯಗಳಲ್ಲಿಯಂತೆ ಎರಡೂ ಆಲಯದ ಹೊರ ಪ್ರಾಕಾರದಲ್ಲಿವೆ. ಮೊದಲಿಗೆ ಇವೆರಡೂ ಒಳಪ್ರಾಕಾರದಲ್ಲಿಯೇ ಇದ್ದವೆಂದೂ, ಕ್ರಿ.ಶ.1417ರಲ್ಲಿ ತಿರುಮಾಮಣಿ ಮಂಟಪವನ್ನು ನಿರ್ಮಾಣ ಮಾಡಿದಾಗ ಇವೆರಡನ್ನೂ ಹೊರಪ್ರಾಕಾರಕ್ಕೆ ಸ್ಥಳಾಂತರಿಸಲಾಯಿತೆಂದೂ ಹೇಳುವುದು ಸೂಕ್ತ. ಇದು ವಿಜಯನಗರ ರೀತಿಯಲ್ಲಿದೆ. ಶಾಸನಾಧಾರಗಳೂ ಈ ಅಂಶವನ್ನು ಬಲ ಪಡಿಸುತ್ತವೆ. ತಿ.ತಿ.8 ನೇ ಶಾಸನದ ಪ್ರಕಾರ ಶ್ರೀವೆಂಕಟೇಶ್ವರಸ್ವಾಮಿಯನ್ನು ಉತ್ಸವಕಾರ್ಯಗಳಲ್ಲಿ ಪ್ರತಿನಿಧಿಸುವ ತದ್ರೂಪಿನ ಒಂದು ಬೆಳ್ಳಿಯ ವಿಗ್ರಹದ ಪ್ರತಿಷ್ಠೆಯ ಬಗ್ಗೆ ತಿಳಿದುಬರುತ್ತದೆ. ಈ ವಿಗ್ರಹವನ್ನು ಪ್ರತಿಷ್ಠಿಸಿದ ಪಲ್ಲವ ರಾಣಿಯು ಪುರಟ್ಟಾಸಿ, ಮಾರ್ಗಳಿ ತಿಂಗಳುಗಳಲ್ಲಿ ಉತ್ಸವವನ್ನು ನಡೆಸಲು ಭೂಮಿಯನ್ನು ಕೊಂಡು ಕೊಂಡು ದತ್ತಿಯಾಗಿ ನೀಡಿದಳು. ಹೀಗಾಗಿ ಹತ್ತನೆಯ ಶತಮಾನದಷ್ಟು ಹಿಂದೆಯೇ ವಾರ್ಷಿಕೋತ್ಸವವು ಪುರಟ್ಟಾಸಿ ತಿಂಗಳಿನಲ್ಲಿ ನಡೆಯುತ್ತಿದಿತೆಂದು ತಿಳಿದುಬರುವುದು. ವೆಂಕಟಾಚಲ ಮಹಾತ್ಮೆಯ ಪ್ರಕಾರ ಈ ವಾರ್ಷಿಕ ಉತ್ಸವವನ್ನು ಮೊದಲಿಗೆ ಬ್ರಹ್ಮನೇ ಆರಂಭಿಸಿದುದರಿಂದ ಇದನ್ನು ಬ್ರಹ್ಮೋತ್ಸವವೆಂದೂ ಕರೆಯುವರು. ತಿ. ತಿ. 189 ನೇ ಶಾಸನದಂತೆ ಹತ್ತನೆಯ ಶತಮಾನದಲ್ಲಿ ನಡೆಯುತ್ತಿದ್ದ ಈ ಎರಡು ಬಹ್ಮೋತ್ಸವಗಳ ಜೊತೆ ಕ್ರಿ.ಶ. 1300ರ ಹೊತ್ತಿಗೆ ಆಡಿ ತಿಂಗಳಿನಲ್ಲಿ ಮತ್ತೊಂದು ಬ್ರಹ್ಮೋತ್ಸವವನ್ನು ಹುಟ್ಟು ಹಾಕಲಾಯಿತೆಂದು ತಿಳಿದುಬರುವುದು. ವಿಜಯನಗರದ ಕಾಲಕ್ಕೆ ಬಂದರೆ 2 ನೇ ಹರಿಹರ ಮಾಸಿ ತಿಂಗಳಿನಲ್ಲಿ ಇಂತಹ ಮತ್ತೊಂದು ಉತ್ಸವವನ್ನೇರ್ಪಡಿಸಿದನೆಂದು ತಿಳಿದುಬರುತ್ತದೆ. ಕಾಲ ಸರಿದಂತೆ ಹದಿನಾರನೇ ಶತಮಾನದ ಹೊತ್ತಿಗೆ ವೈಗಾಸಿ, ಆಣಿಮಾಸಗಳ ಹೊರತು ಮಿಕ್ಕ ಹತ್ತೂ ತಿಂಗಳಿನಲ್ಲಿ ಹಂಚಿ ಹೋದ ಹತ್ತು ಉತ್ಸವಗಳಾಯಿತೆಂಬುದನ್ನು ಗಮನಿಸಬಹುದು. ಬ್ರಹ್ಮೋತ್ಸವ ಆಚರಣೆಗೆ ಧ್ವಜಸ್ತಂಭ, ಬಲಿಪೀಠಗಳು ಅತ್ಯಗತ್ಯವಾಗಿ ಇವೆರಡೂ ಅತಿ ಪ್ರಾಚೀನ ಕಾಲದಿಂದಲ್ಲವಾದರೂ ಹತ್ತನೆಯ ಶತಮಾನದಿಂದಲೇ ಇದ್ದಿರಬೇಕು. ಆಲಯವು ಸಣ್ಣದಾಗಿದ್ದು ಒಳಗಿನ ಪ್ರಾಕಾರದಲ್ಲಿಯೇ ಇದ್ದಿರಬೇಕು. ನಂತರ ತಿರುಮಾಮಣಿ ಮಂಟಪ ನಿರ್ಮಾಣವಾದಮೇಲೆ ಹೆಚ್ಚುಗೊಂಡ ಉತ್ಸವಗಳ ಹೆಚ್ಚುವರಿ ಏರ್ಪಾಡುಗಳ ಅಗತ್ಯಗಳಿಂದಾಗಿ ಇವೆರಡೂ ಈಗಿರುವ ಸ್ಥಳಕ್ಕೆ ಬರುವಂತಾಗಿರಬೇಕು.

**ಈ. ತಿರುಮಲರಾಯ ಮಂಟಪ:**

ಮಧುರೈ, ಶ್ರೀರಂಗಂ, ಶ್ರೀಪೆರಂಬುದೂರುಗಳಲ್ಲಿನ ಉದ್ದ ಕಂಭಗಳಲ್ಲಿ ಕುದುರೆಯೇರಿದ ರಾವುತರ ಶಿಲ್ಪಗಳನ್ನು ಹೊಂದಿದಂತೆ ರಚಿತವಾಗಿರುವ ಸುಂದರ ನಿರ್ಮಾಣ. ಇವೆಲ್ಲವೂ ಅರ್ವಾಚೀನ ವಿಜಯನಗರದ ಕಾಲದವುಗಳು. ಕ್ರಿ.ಶ.1473ರಲ್ಲಿ ತನ್ನ ಆರಂಭವಾದ ಅಣ್ಣಾ ಊಂಜಲ್ ತಿರುನಾಳ್ ಉತ್ಸವವನ್ನು ನಡೆಸಲು ಸಾಳುವ ನರಸಿಂಗರಾಯನು 15ನೇ ಶತಮಾನದ ಮಧ್ಯಭಾಗದಲ್ಲಿ ಇದನ್ನು ನಿರ್ಮಿಸಿರಬೇಕು. ನಂತರ ಇದನ್ನು 16 ನೇ ಶತಮಾನದಲ್ಲಿ ಶ್ರೀರಂಗರಾಜ ತಿರುಮಲರಾಜನು ವಿಸ್ತರಿಸಬೇಕೆಂಬುದು. ಅರ್ವಾಚೀನ ವಿಜಯನಗರ ವಾಸ್ತುಶಿಲ್ಪದ ಮಾದರಿಗಳಾದ ಎತ್ತರವಾದ ತಳಗಟ್ಟಿನ ಮೇಲೆ, ವ್ಯಾಪಕವಾದ ಬಳ್ಳಿಗಳ ಕೆತ್ತಿಯಿರುವ ಬೃಹದ್ಗಾತ್ರದ ಸಂಕೀರ್ಣ ಕಂಭಗಳ ಮೂಲಕ ಈ ಅಂಶವನ್ನು ಖಚಿತಪಡಿಸಿಕೊಳ್ಳಬಹುದು.

**ಉ. ನಾಲ್ಕು ಮೂಲೆಗಳ ನಾಲ್ಕು ಕಿರು ಮಂಟಪಗಳು:**

ಸಾಳುವ ಮರಸಿಂಹನ ತನ್ನ ಹಾಗೂ ತನ್ನ ಮಡದಿ, ತನ್ನ ಇಬ್ಬರು ಪುತ್ರರ ಹೆಸರಿನಲ್ಲಿ ಹೊರಪ್ರಾಕಾರದ ಉತ್ಸವಗಳಿಗಾಗಿ ನಾಲ್ಕೂ ಮೂಲೆಗಳಲ್ಲಿ ನಾಲ್ಕೂ ಕಂಭಗಳಿಂದ ಮಾಡಿದ ನಾಲ್ಕು ವಿಶ್ರಾಂತಿ ಮಂಟಪಗಳನ್ನು ( 1470 ರಲ್ಲಿ ) ನಿರ್ಮಿಸಿದನು.

**ಊ. ಪ್ರತಿಮಾ ಮಂಟಪ:**

ಈ ಮಂಟಪದಲ್ಲಿ ಅನೇಕ ಪ್ರತಿಮೆಗಳುಂಟು. ಅವುಗಳಲ್ಲಿ ಇಬ್ಬರು ಹೆಂಡತಿಯರೊಡನಿರುವ ಕೃಷ್ಣದೇವರಾಯನ ಪ್ರತಿಮೆಯೂ ಉಂಟು. ಇದು ಹದಿನಾರು ಕಂಭಗಳ ಸಾಧಾರಣ ಮಂಟಪ. ಇದು ನೂತನ ವಾದದ್ದು. ಬೇರೆಡೆಗಳಲ್ಲಿ ಉತ್ಸವಗಳು ಹೆಚ್ಚಾಗಿ, ಜನಸಂದಣಿ ಹೆಚ್ಚಾದ ಹಾಗೆ ಹದಿನಾರನೇ ಶತಮಾನದಿಂದೀಚೆಗೆ ಇಂತಹ ಮಂಟಪಗಳು ನಿರ್ಮಾಣವಾದದ್ದು ನೋಡುತ್ತೇವೆ.

**ಋ. ರಂಗ ಮಂಟಪ:**

ಈ ಪ್ರಾಕಾರದಲ್ಲಿನ ಅತಿ ಪ್ರಾಚೀನ ಮಂಟಪ ಇದೇ ಆಗಿರಬೇಕು. ದಕ್ಷಿಣಭಾರತದಲ್ಲಿ ಮುಸಲ್ಮಾನರ ಧಾಳಿಯಾದಾಗ ಕ್ರಿ.ಶ.1310 - 1360 ರ ನಡುವೆ ಶ್ರೀರಂಗದ ಉತ್ಸವಮೂರ್ತಿಯನ್ನು ತಂದು ಇಲ್ಲಿ ತಾತ್ಕಾಲಿಕವಾಗಿಡಲಾಯಿತು. ಸ್ಥಳೀಯಅರಸನಾದ ಶ್ರೀರಂಗನಾಥಯಾದವರಾಯನು ಶ್ರೀರಂಗನಾಥಸ್ವಾಮಿಗಾಗಿ ಇಲ್ಲಿನ ಚಿಕ್ಕ ಗುಡಿಯನ್ನೂ ಸ್ವಾಮಿಯೊಡನೆ ವಲಸೆ ಬಂದವರು ತಂಗಲು ದೊಡ್ಡ ಮಂಟಪವನ್ನೂ ಕಟ್ಟಿಸಿದನೆಂದು ಹೇಳಲಾಗಿದೆ. ಇದರ ಎತ್ತರವಾದ ತಳಹದಿ, ದೊಡ್ಡ ದೊಡ್ಡ ಕಂಭಗಳು ಈ ಮಂಟಪವನ್ನು ಪ್ರಾಚೀನ ವಿಜಯನಗರದ ಕಾಲಕ್ಕೆ ಸೇರಿಸುತ್ತದೆ.

**ಎ. ಹೊರ ಗೋಪುರ:**

ಹೊರಗೋಪುರದ ವ್ಯಾಳಾವಾರಿಯಲ್ಲಿ ಮೂರುಕಡೆ ಪ್ರಮುಖವಾಗಿ ಪಾಂಡ್ಯರಾಜ ಚಿಹ್ನೆಯನ್ನು ಕಾಣುತ್ತೇವೆ. ಯಾಳಿಮುಖಗಳಿಂದಲೂ, ಪುಷ್ಪಬೋದಿಗೆಗಳಿಂದಲೂ, ಕುಡ್ಯಗಳಿಂದಲೂ ಸೇರಿದ ಕಂಬಗಳು ಅರ್ವಾಚೀನ ಚೋಳ ಶೈಲಿಯಲ್ಲಿವೆ. ಇದರಹುಟ್ಟಿನ ಕಾಲವನ್ನು ತಿಳಿಸುವ ಶಾಸನ ಯಾವುದೂ ಇಲ್ಲ. ಇದರ ಮೇಲಿರುವ ಅತಿ ಪ್ರಾಚೀನ ಶಾಸನವೆಂದರೆ ಕ್ರಿ.ಶ. 1217 ರಲ್ಲಿನಯಾದವ ರಾಯ ವೀರನರಸಿಂಗನದು. ನಂತರದ ಶಾಸನ ಕ್ರಿ.ಶ. 1260 ರ ಕಾಲದ್ದು. ಆಸಕ್ತಿದಾಯಕವಾದ ಶಾಸನವೆಂದರೆ 1251 ರಿಂದ 1275 ರ ವರೆಗಿದ್ದು ಸುಂದರ ಪಾಂಡ್ಯನ ಹೆಸರು ಹೇಳುವ ಮೊದಲ ಪಟ್ಟಿಕೆಯ ತ್ರುಟಿತ ಶಾಸನ. ಹೀಗಾಗಿ ಸುಂದರಪಾಂಡ್ಯನ ಕಾಲದಲ್ಲಿ ಈ ಗೋಪುರ ಜೀರ್ಣೋದ್ಧಾರವಾಗಿರಬೇಕೆಂದು ಊಹಿಸಬಹುದು. ರಂಗಮಂಟಪವು ತನ್ನ ಎರಡು ಪಕ್ಕದ ಗೋಡೆಗಳು ಹೊರಗೆ ಪ್ರಾಕಾರಗೋಡೆಗಳನ್ನು ಹೊಂದಿರುವುದರಿಂದ ಹೊರ ಪ್ರಾಕಾರದಗೋಡೆ ಕ್ರಿ.ಶ. 1320 ರಲ್ಲಿ ಇದ್ದಿರಬೇಕೆಂದು ಊಹಿಸಬಹುದು. ನಂತರದ ಕಾಲದಲ್ಲಿ 1472 - 1482 ರಲ್ಲಿ ಆಲಯದ ಗೋಡೆಗಳನ್ನೂ, ಗೋಪುರಗಳನ್ನೂ ಜೀರ್ಣೋದ್ಧಾರಗೊಳಿಸಲು ಸಾಳುವ ನರಸಿಂಹನು ದುರ್ಗಸಮುದ್ರವೆಂಬ ಗ್ರಾಮವನ್ನು ನೀಡಿದ ಎಂದು ತಿಳಿದುಬರುವುದಾದ್ದರಿಂದ ನಾವು ಇಂದು ಕಾಣುವ ಗೋಪುರ ಪೂರ್ಣಪ್ರಮಾಣದಲ್ಲಿ ಮೇಲೆದ್ದಿರಬೇಕು.

**12. ಏಳು ಹಂತಗಳು:**

ತಿರುಮಲೆಯ ಆಲಯವನ್ನು ಹಲವು ಚೋಳರಾಜರು ನಿರ್ಮಿಸಿ, ಜೀರ್ಣೋದ್ಧಾರಗೊಳಿಸಿದರೆಂದು ಶಾಸನಗಳ ಅಧ್ಯಯನದಿಂದ ತಿಳಿಯಬಹುದು. ಪಾಂಡ್ಯರಾಜರೂ, ಬಲ್ಲಾಳರೂ, ತಮ್ಮ ಇಡೀ ರಾಜಕೋಶವನ್ನು ಸ್ವಾಮಿಯ ಪಾದದಲ್ಲಿಟ್ಟರು. ಪರಮ ಭಕ್ತರಾಗಿದ್ದ ವಿಜಯನಗರದರಸರು ಶ್ರೀವೆಂಕಟೇಶ್ವರಸ್ವಾಮಿಗೆ ವ್ಯಾಪಕವಾದ ಬಹುಮೂಲ್ಯವಾದ ಕಾಣಿಕೆಗಳನ್ನು ಅರ್ಪಿಸಿದರು. ಈ ಪ್ರಾಂತ್ಯವನ್ನು 18 ನೇ ಶತಮಾನದಲ್ಲಿ ಆಳಿದ ಮಟ್ಲವಂಶದ ರಾಜರೂ ಸಹ ಆಲಯದ ಪ್ರಸಿದ್ಧಿಯಲ್ಲಿ ಕೈಂಕರ್ಯವನ್ನು ಸಲ್ಲಿಸಿದರು.

ವಾಸ್ತುಶಿಲ್ಪರೀತ್ಯ ನೋಡಿದಾಗ ತಿರುಮಲೆಯ ಆಲಯ ಕೆಳಕಾಣುವಂತೆ ಏಳು ಹಂತಕಗಳಲ್ಲಿ ಬೆಳೆದಿರಬೇಕು,

1. ಒಂದು ಬಯಲು ಮಂಟಪದಲ್ಲಿ ಪ್ರಾಚೀನ ಕಾಲದಲ್ಲಿ - ಕ್ರಿ.ಶ. 1, 2, ಶತಮಾನಗಳಲ್ಲಿ - ನಿಂತ ಮೂರ್ತಿ.

2. ತಿರುಮಳಿಶೈ ಆಳ್ವಾರರು ಸ್ವಾಮಿ ನಾಲ್ಕುಕಡೆಗಳಲ್ಲಿಯೂ ದೂರಕ್ಕೆ ಕಾಣುವನೆಂದು ಹೇಳುವುದ ರಿಂದಲೂ, ಕುಲಶೇಖರ ಆಳ್ವಾರರು ಇಲ್ಲಿನ ಹೊಸ್ತಿಲ ಕಲ್ಲಾಗಿ ಪದೇ ಪದೇ ಹುಟ್ಟಬೇಕೆಂದು ಹಾಡಿರುವುದ ರಿಂದಲೂ, ಇವರ ಕಾಲದಲ್ಲಿ ಒಂದು ಸಣ್ಣಗರ್ಭಗೃಹ ಹಾಗೂ ಅರ್ಧಮಂಟಪಗಳು ನಿರ್ಮಾಣವಾದವು ಎಂದು ಹೇಳಬೇಕು.

3. ಅ) ಸಾಮಾವೈ ರಾಣಿ ಇಲ್ಲಿ ಒಂದು ಉತ್ಸವ ಮೂರ್ತಿಯನ್ನು ಸ್ಥಾಪಿಸಿದ ಕಾರಣದಿಂದಾಗಿ ಅಂದಿಗೇ ಒಂದು ಆಲಯ - ಸಾಧಾರಣ ಗರ್ಭಗೃಹ, ಅರ್ಧಮಂಟಪಗಳಿಂದ ಕೂಡಿದ್ದ ಆಲಯ - ಇರಬೇಕು.

ಆ) ಶ್ರೀವೆಂಕಟೇಶ್ವರಸ್ವಾಮಿಯ ಗುಡಿಯನ್ನು ಕೋಯಿಲ್ ಆಳ್ವಾರ್ ಎಂದು ಕರೆಯಲಾದ 9 - 10 ನೇ ಶತಮಾನದ ಹೊತ್ತಿಗಿ

ಗರ್ಭಗೃಹ, ಸಾಯಣಮಂಟಪ, ರಾಮರ್ ಮೇಡೈ ತೆರೆದಿರುವಂತೆ ಮುಕ್ಕೋಟಿ ಮುಕ್ಕೋಟಿ ಪ್ರದಕ್ಷಿಣೆಯನ್ನು ಹೊಂದಿದ ಗುಡಿಯು ಇದ್ದದ್ದು ನಿಜ.

ಇ) ಗುಡಿಯನ್ನು ತಿರುವಿಳಂ ಕೋಯಿಲ್ ಎಂದು ಕರೆಯಲಾದ 10 ನೇ ಶತಮಾನದ ಹೊತ್ತಿಗೆ ಸ್ನಪನ ಮಂಟಪ ಉಂಟಾಗಿರುವುದು.

4. 13 ನೇ ಶತಮಾನದಲ್ಲಿ ಯಾದವರಾಯ ಹಾಗೂ ಪಾಂಡ್ಯರಾಜರುಗಳು ಆಲಯದ ವಿಮಾನವನ್ನು ಚಿನ್ನದ ಮುಲಾಮು ಲೇಪನ ಮಾಡಿಸುವ ಹೊತ್ತಿಗೆ ವ್ಯಾಪಕವಾದ ನವೀಕರಣದ ಕೆಲಸ ನಡೆದಿರಬೇಕು. ಈ ಹೊತ್ತಿಗೆ ಅಥವಾ ಇದಕ್ಕೂ ಮೊದಲಿಗೇ ಗರ್ಭಗೃಹದ ಗೋಡೆಗಳ ಗಾತ್ರ ಹೆಚ್ಚಿಗೂಳಿಸಿ, ವಿಮಾನವನ್ನು ನಿರ್ಮಿಸಿ ಅದನ್ನು ಚಿನ್ನದ ಗಿಲೀಟು ಮಾಡಿಸಿರಬೇಕು.

5. ರಾಮರ್ ಮೇಡೆಯನ್ನು ರಕ್ಷಣೆಯ ಕಾರಣಗಳಿಂದಾಗಿ ಮುಚ್ಚಿದ್ದು ಅಥವಾ ಆಲಯದಲ್ಲಿ ಪಂಚರಾತ್ರ ಪದ್ಧತಿಯ ಪೂಜೆ ಎಂದಾದರೂ ನಡೆಯದಿರಲೆಂದು ಮುಚ್ಚಿದ್ದು.

6. ಕ್ರಿ.ಶ. 1417 ರಲ್ಲಿ ಮಾಧವದಾಸನಿಂದ ತಿರುಮಾಮಣಿ ಮಂಟಪ ನಿರ್ಮಾಣ.

7. ಆಧುನಿಕ ಗರುಡ ಮಂಟಪ ಮತ್ತಿತರ ಅರ್ವಾಚೀನ ವಿಜಯನಗರ ವಾಸ್ತು ಮಂಟಪಗಳು.

- ಹೀಗೆ ತೆರೆದ ಮಂಟಪದಲ್ಲಿ ನಿಂತ ದೇವರ ಹಂತದಿಂದ ಸಾಧಾರಣ ಕಟ್ಟಡದ ಗುಡಿಯಾಗಿ ಯಾದವ ರಾಯನ ಕಾಲದಲ್ಲಿ ಹೆಚ್ಚಿನ ನವೀಕರಣ ಪಡೆದು ಆತನಿಂದಲೂ, ಇತರ ಪಾಂಡ್ಯರಾಜರಿಂದಲೂ ಚಿನ್ನದ ಗೋಪುರ ( ಮುಲಾಮು ಹಾಕಿದ್ದು ) ಪಡೆದು, ವಿಜಯನಗರದರಸರ ಕಾಲದಲ್ಲಿ ದೊಡ್ಡದಾಗಿ ಬೆಳೆದು ಆಲಯವು ಜನಪ್ರಿಯತೆಯಲ್ಲಿಯೂ, ಪಾವಿತ್ರ್ಯದಲ್ಲಿಯೂ ಹಿರಿಮೆ ಔನ್ನತ್ಯಗಳನ್ನು ಸಾಧಿಸಿದೆ.

ಆದರೆ ಈ ಕಾಲದ ವಾಸ್ತು ಶಿಲ್ಪ ವಿನ್ಯಾಸ ಯಾವುದೇ ಯೋಜನಾಬದ್ಧ ಪೂರ್ವಯೋಜಿತರೀತಿಯಲ್ಲಿ ಕ್ರಮೇಣ ಬೆಳೆಯದೆ ಆಯಾ ಶತಮಾನದ ದಾನಿಗಳ ಅಪೇಕ್ಷೆ ಹಾಗೂ ಅಂದಿನ ಸಂದರ್ಭಗಳು ಅಗತ್ಯಗಳಿಗೆ ತಕ್ಕಂತೆ ಬೆಳದಿದೆಯೆಂದೇ ಹೇಳಬೇಕು.

**ಮುಕುರ ಮಂಟಪ:**

ಇಂದಿನ ತಿರುಮಲೆಯ ಆಲಯದಲ್ಲಿ ಒಂದು ವಿಶಿಷ್ಟವಾದ ಲಕ್ಷಣವನ್ನು ಗಮನಿಸಬಹುದು. ಇಂದಿನ ಊಂಜಲ್ ಸೇವೆ ನಡೆಯುವ ಅಯಿನಾಮಹಲ್ ಎನ್ನುವ ಮುಕುರ ಮಂಟಪದಲ್ಲಿ ಮಂಟಪದ ಹೆಸರನ್ನು ಸೂಚಿಸುವ, ಇದನ್ನು ನಿರ್ಮಿಸಿದವರ ವಿವರ ತಿಳಿಸುವ ಅಥವಾ ಇದರ ನಿರ್ಮಾಣಕಾರಣ ತಿಳಿಸುವ ಯಾವ ಶಾಸನವೂ ಇಲ್ಲ. ಆಲಯದಲ್ಲಿರುವ ಇತರ ಎಲ್ಲ ಮಂಟಪಗಳ ಕಾಲವನ್ನೂ - ಅವುಗಳ ನಿರ್ಮಾಣದ ದಾನಿಗಳ ಹೆಸರಿನಿಂದ ಅವುಗಳ ನಿರ್ಮಾಣದ ಕಾರಣದ ಆಧಾರದಿಂದ - ನಿರ್ಧರಿಸಬಹುದು ಈ ಮುಕುರ ಮಂಟಪದ ಆಕಾರ ವಿವರದಿಂದ ಮೊದಲಿಗೆ ಇದು ಯಾಗಶಾಲೆಯಾಗಿದ್ದಿತೆನ್ನ ಬಹುದಾದರೂ ಅದನ್ನು ಕನ್ನಡಿಗಳ ಮಂಟಪವನ್ನಾಗಿಸಿ ಊಂಜಲ್‌ಸೇವೆಗಾಗಿರುವ ಮಂಟಪವನ್ನಾಗಿಸಿ ಪರಿವರ್ತಿಸಲಾಗಿದೆ.

## 13. ಸಂಗ್ರಹ ನಿರ್ಣಯ :

ಶ್ರೀವೆಂಕಟೇಶ್ವರಸ್ವಾಮಿ ಆಲಯವು ಪ್ರಾಚೀನ ಇತಿಹಾಸವನ್ನು ಹೊಂದಿದ್ದು, ಕ್ರಿ.ಶಕದಾರಂಭದ ಶಿಲಪ್ಪದಿಕಾರವು ವೆಂಗಡ ಪರ್ವತಾವಳಿಯಲ್ಲಿ ನಿಂತ ಭಂಗಿಯ ವಿಷ್ಣುಮೂರ್ತಿಯನ್ನು ಹೆಸರಿಸುತ್ತದೆ. ಈ ವಿಗ್ರಹವಿರುವ ಆಲಯದ ಬಗೆಯನ್ನು ಮಾತ್ರ ಹೆಸರಿಸ ಲಾಗಿಲ್ಲ. ಪ್ರಾಯಶಃ ರಾಜಸ್ಥಾನದ ನಗರಿಯಲ್ಲಿರುವ ಸಂಕರ್ಷಣ ವಾಸುದೇವನ ವಿಗ್ರಹದಂತೆ ಶಿಲಾಪ್ರಾಕಾರದಲ್ಲಿನ ಒಂದತಳಹದಿ ಯಲ್ಲಿ ನಿಂತಿರಬೇಕು. ನಂತರದಲ್ಲಿ ತಿರುವೆಂಗಡದ ಶ್ರೀವೆಂಕಟೇಶ್ವರಸ್ವಾಮಿಯನ್ನು ಕುರಿತು ಹಾಡಿದ ತಿರುಮಂಗೈ ಆಳ್ವಾರರ ಪಾಶುರ

ದಂತೆ ದ್ವಾರಬಂಧವನ್ನು ಹೊಂದಿದ ಒಂದು ಗರ್ಭಗೃಹದಲ್ಲಿ ಪ್ರತಿಷ್ಠಾಪಿತವಾಗಿರಬೇಕು. ಈ ಗುಡಿಯು ಒಂದು ಆಯತಾಕಾರದ 7 ಅಡಿಗಳ ಅಗಲದಲ್ಲಿ ಸಾಲಕಾರ ಶಿಖರ ಅಥವಾ ಏಕತಾಳ ವಿಮಾನವನ್ನು ಹೊಂದಿರಬೇಕು.

ಇಂದಿನ ಆಲಯದ ಕೇಂದ್ರ ನಕ್ಷೆ, ಮುಖಮಂಟಪ, ರಾಮರ್‌ಮೇಡೈ, ಸಾಯಣಮಂಟಪ, ಅಂತರಾಳ, ಗರ್ಭಗೃಹಗಳನ್ನು ಹೊಂದಿದೆ. ಅಧಿಷ್ಠಾನದಲ್ಲಿ ಉಪಾನ, ಕಂಠ, ಪದ್ಮ ಜಗತಿ, ಕಂಠ, ಅರಳಿದ ಕುಮುದ, ಗಳ, ಪಾದ ಸಹಿತ ಕಂಠ, ಕಪೋತ, ವೇದಿಕೆಗಳನ್ನು ಹೊಂದಿದೆ. ಕಪೋತಗಳ ಹಾಗೂ ಅಧಿಷ್ಠಾನದ ನಾಸಿಕ ಭಾಗಗಳು ಸುಂದರವಾದ ಕೆತ್ತನೆಗಳಾಗಿವೆ.

ಇಲ್ಲಿನ ಭಿತ್ತಿಗಳು ಸಮೀಪಸ್ಥಿತವಾದ ಒಳ ಕಂಬಗಳಿಂದಾಗಿವೆ. ದೇವಕೋಷ್ಠಗಳು ಕುಮುದ ಪಂಜರಗಳಿವೆ. ಕಂಬಗಳು ಚತುರಸ್ರ ತಳದವಾಗಿದ್ದು ಅಷ್ಟಮುಖದಲ್ಲಿ ಅಥವಾ ವೃತ್ತಾಕಾರವಾಗಿ ಮೇಲೆದ್ದಿವೆ. ಕಂಬಗಳ ಕಿರೀಟ ಭಾಗವು ಪ್ರತ್ಯೇಕವಾಗಿ ಕೆತ್ತಲ್ಪಟ್ಟಿದ್ದು ಇವುಗಳಲ್ಲಿನ ಪುಷ್ಪಬೋದಿಗೆಗಳು ಗಮನಾರ್ಹವಾದವು. ಕುಂಭ ಪಂಜರಗಳು ಪೂರ್ಣವಾಗಿ ಬೆಳೆದಿವೆ. ಸುಂದರ ತಳಗಟ್ಟು, ಮುಗಿಬೀಳುವ ಬಳ್ಳಿಮಾಡಗಳು, ಸುಂದರ ಕುಸುರಿ ಗೆಲಸಗಳಾಗಿವೆ. ವಲ್ಲಭಿ ಶೈಲಿಯ ಪ್ರಸ್ತಾರದಲ್ಲಿ ಹಂಸಮಾಲೆಯಿದೆ ಕಪೋತವು ಜೋತು ಇಳಿಬಿದ್ದಿರುವಂತೆ ಹೊರ ಚಾಚಿದೆ. ಇದರ ಒಳಭಾಗಗಳು ಮರದ ಕೆತ್ತನೆಯನ್ನು ನೆನಪಿಸುವ ಸುಂದರವಾದ ಕೆತ್ತನೆಗಳಾಗಿವೆ.

ಆಲಯವು ಇಲ್ಲಿಗೆ ಬರುವ ಯಾತ್ರಿಕ ಸಂದರ್ಶಕರು ನೋಡಿ ಆನಂದಿಸುವ ರೀತಿಯಲ್ಲಿ ಪುರ್ಣವಾಗಿ ಬೆಳೆದಿರುವ ವಾಸ್ತು ಶಿಲ್ಪ ಲಕ್ಷಣಗಳಿಂದ ಕೂಡಿದೆ. ಯಾತ್ರಿಕರ ಕಣ್ಣಿಗೆ ಬೀಳದಂತೆ ಮುಚ್ಚಿಡಬೇಕೆಂದಲ್ಲ. ಇದರ ಸುತ್ತ ಒಂದು ಕಂಬಗಳ ಮಂಟಪವಿರುವ ಸಾಧಾರಣ ಗೋಡೆಗಳನ್ನೆಬ್ಬಿಸಿ ನಂತರದ ಯಾವುದೋ ಕಾಲದಲ್ಲಿ ಯಾರೋ ಮುಚ್ಚಿದರು. ಈ ಕಂಬಗಳು ಗರ್ಭಗೃಹಕ್ಕೆ ಸಮಾಂತರವಾಗಿ ಗರ್ಭಗೃಹ, ಸಾಯಣಮಂಟಪ, ರಾಮರ್‌ಮೇಡೈಗಳನ್ನು ಆವರಿಸುತ್ತವೆ. ನಾವು ಆಲಯದ ಒಳಕ್ಕೆ ಹೋದಂತೆ ಎಡಗಡೆ ಕಂಬಗಳ ಒಂದು ಸಾಲು ಮಾತ್ರವೇ ಕಂಡರೆ ಬಲಗಡೆಗೆ ಎರಡು ಸಾಲು ಕಂಡುಬರುತ್ತದೆ. ಆಲಯದ ಕಟ್ಟಡದ ಸುತ್ತಲೂ ಇರುವ ಎತ್ತರವಾದ ಜಗಲಿಯ ಮೇಲೆ ಈ ಕಂಬಗಳಿವೆ. ಮೊದಲಿಗೆ ಮಳೆಯ ನೀರನ್ನು ಒಯ್ಯುವ ಗರ್ಭಗೃಹದ ಸುತ್ತಣ ಕಾಲುವೆಯನ್ನೂ, ಅಭಿಷೇಕಜಲ ಸಂಗ್ರಾಹಕವಾದ ತೊಟ್ಟಿಯನ್ನೂ ಹಾಗೆಯೇ ಬಿಡಲಾಗಿದೆ. ಇಲ್ಲಿನ ಕಂಬಗಳು ವೃತ್ತಾಕಾರವಾಗಿದ್ದು ಚೋಳ ಶೈಲಿಯವಾಗಿವೆ. ಮೇಲುಛಾವಣಿ ಕಲ್ಲು ಚಪ್ಪಡಿಗಳಿಂದಾಗಿದೆ.

ತಿರುಪತಿಯಲ್ಲಿಯೂ ಮತ್ತಿತರ ಕಡೆಗಳಲ್ಲಿಯೂ ದೊರೆಯುವ ಶಾಸನಗಳು ಈ ಆಲಯ ಸಮುದಾಯ ವನ್ನು ಅಧ್ಯಯನ ಮಾಡಲು ಆಸಕ್ತಿದಾಯಕವಾದ ಆಧಾರಗಳನ್ನು ಒದಗಿಸುತ್ತವೆ. ಕ್ರಿ.ಶ. 600 ರಿಂದ 1200 ರ ವರೆಗೆ ಆಲಯದ ಚರಿತ್ರೆ ಸ್ಪಷ್ಟವಾಗಿಲ್ಲ. ಪಲ್ಲವ ದಂತಿವರ್ಮನ ಆಳ್ವಿಕೆಯ 51 ನೇ ವರ್ಷದ ತಿರುಚಾನೂರು ಶಾಸನ ( 219 ಜಿ.ಟಿ. ) ತಿರುಚಾನೂರು ಆಲಯಕ್ಕೆ ನೀಡಿದ ದಾನಶಾಸನವಾಗಿದ್ದು, ವೆಂಗಡದ ಬೆಟ್ಟದ ಆಲಯವನ್ನೂ ಹೆಸರಿಸುವುದು. ಕೊಪ್ಪಟ್ರ ಮಹೇಂದ್ರವರ್ಮ ಪೆನ್ಮಾರನ ಆಳ್ವಿಕೆಯ 14 ನೇ ವರ್ಷದ ಶಾಸನವು ಪಲ್ಲವಪ್ಪೆರ್ಕಡೈಯಾರ್‌ನ ಪುತ್ರಿಯೂ ಸತ್ತಿ ವಿಟಂಕ ಅಥವಾ ಶ್ರೀ ಕಾಡುಪಟ್ಟಿಗಳ ರಾಣಿಯೂ ಆದ ಸಮವೈ ಅಥವಾ ಕಾಡವನ್ ಪೆರುಂದೇವಿಯು ಶ್ರೀವೆಂಕಟನಗರ ಪೆರುಮಾನಡಿಗಳಿಗೆ ನೀಡಿದ ದಾನವನ್ನು ವಿವರಿಸುವುದು. ಈ ರಾಜಕುವರನು ಕ್ರಿ.ಶ. ಸುಮಾರು 956 ರಿಂದ 970 ರವರೆಗೆ ಇದ್ದಿರಬಹುದಾದ ಪರಾಂತಕ 11 ಸುಂದರ ಚೋಳನ ಸಮಕಾಲೀನನಾದ ಕೋಪಾರ್ಥಿವೇಂದ್ರ ವರ್ಮನೆಂದು ಗುರುತಿಸಲ್ಪಟ್ಟಿದ್ದಾನೆ. ಮೇಲೆ ಹೇಳಿದ ಕೊಪ್ಪಟ್ರ ಮಹೇಂದ್ರವರ್ಮನ್ ಬಗ್ಗೆ ವಿದ್ವಾಂಸರಲ್ಲಿ ವಿಭಿನ್ನ ಅಭಿಪ್ರಾಯಗಳಿವೆ. ಹಲವರು ಇವನು ಕೋಪಾರ್ಥಿವೇಂದ್ರವರ್ಮನೇ ಆಗಿದ್ದಾನೆ ಎಂದರೆ, ಪ್ರಸ್ತುತ ಲೇಖಕನು ಇವನಿಗೆ ದೊರೆತಿದ್ದ ಸಾಮ್ರಾಜ್ಯ ಸೂಚಕ ಬಿರುದುಗಳ ಆಧಾರದಿಂದ ಇವನು ಸಿಂಹವಿಷ್ಣುವಿನ ಮಗ ಮಹೇಂದ್ರವರ್ಮ ಪಲ್ಲವ (ಕ್ರಿ.ಶ.600 - 630)ನೇ ಆಗಿರಬೇಕು ಎಂಬ ಅಭಿಪ್ರಾಯಕ್ಕೆ ಬರುವಲ್ಲಿ ಒಲವು ಹೊಂದಿದ್ದಾನೆ. ಈ ಅಭಿಪ್ರಾಯವನ್ನು ಒಪ್ಪುವುದಾದಲ್ಲಿ, ಇದ

ರಿಂದಾಗಿ ಪಲ್ಲವ ಸಾಮ್ರಾಟರ ಕಾಲದಲ್ಲಿ ಆಲಯವು ಪ್ರಸಿದ್ಧವಾಗಿದ್ದಿತೆಂದು ತಿಳಿದು ಬರುವುದು. ಆಲಯದ ಚರಿತ್ರೆಯ ಅತಿ ಮುಖ್ಯ ಶಾಸನಗಳಲ್ಲಿ ಒಂದು ವೀರನರಸಿಂಗ ಯಾದವರಾಯನ ಕಾಲಕ್ಕೆ ಸೇರಿದುದಾಗಿದೆ. ಕ್ರಿ.ಶ. 1245ರಲ್ಲಿ ವೀರನರಸಿಂಗ ಯಾದವರಾಯನ ಆಳ್ವಿಕೆಯ 40ನೇ ವರ್ಷದಲ್ಲಿ ಆಲಯವನ್ನು ಜೀರ್ಣೋದ್ಧಾರಗೊಳಿಸಿ, ಆಲಯದಲ್ಲಿದ್ದ ಎಲ್ಲ ಪೂರ್ವ ಶಾಸನಗಳನ್ನೂ ನವೀಕರಿಸಿ ಆಲಯದ ಉತ್ತರದ ಗೋಡೆಯಮೇಲೆ ಕೆತ್ತಲಾಯಿತು.

ಈ ಕಾಲದಲ್ಲಿಯೇ ಗರ್ಭಗೃಹ, ಅಂತರಾಳ. ಸಾಯಣ ಮಂಟಪಗಳ ನಿರ್ಮಾಣವಾಗಿರಬೇಕು. ಈಗ ಹೊರಗಡೆಯಿಂದ ಇಪ್ಪತ್ತನಾಲ್ಕು ಅಡಿಗಳ ಅಳತೆಯಿರುವಂತೆ ಗರ್ಭಗೃಹವನ್ನು ವಿಸ್ತರಿಸಲಾಯಿತು. ಗರ್ಭಗೃಹದ ಮೇಲಿರುವ ಆನಂದನಿಲಯ ವಿಮಾನವನ್ನು ನಿರ್ಮಿಸಲು ಈ ವಿಸ್ತಾರವಾದ ಹಾಸು ಅಗತ್ಯವಾಗಿದ್ದಿತು. ನಂತರದ ಕಾಲದಲ್ಲಿ, ದಕ್ಷಿಣಭಾರತದ ಚರಿತ್ರೆಯಲ್ಲಿ ವಿಜಯ ನಗರದ ಪ್ರಾಧಾನ್ಯ ಬೆಳದಂತೆ ಆಲಯಕ್ಕೆ ನಿಯತಕಾಲಿಕವೂ, ವ್ಯಾಪಕವೂ ಆದ ದಾನದತ್ತಿಗಳು ಸೇರಿ ಬಂದವು. ಕಾಲಾನುಗುಣವಾದ ಅಗತ್ಯಗಳಿಗೆ ತಕ್ಕಂತೆ ಅನೇಕ ಹೊಸ ಸೇರ್ಪಡೆಗಳೂ ಆದವು. ಎರಡು ಪ್ರದಕ್ಷಿಣಾಪಥಗಳೂ ಆದವು.

## ಅಧ್ಯಾಯ - 11

# ಆಲಯದ ವಾಸ್ತು - ಶಿಲ್ಪ

### 1. ಪೀಠಿಕೆ :

ತಿರುಮಲೆಯ ಆಲಯದ ವಾಸ್ತು - ಶಿಲ್ಪದ ಅಧ್ಯಯನ ಆಸಕ್ತಿಕರವಾಗಿದ್ದು ವಿಜಯನಗರದರಸರ ಕಾಲದ ಹೆಚ್ಚು ಕಡಿಮೆ ಎರಡು ಮೂರು ಶತಮಾನಗಳ ಕಾಲದಲ್ಲಿ ಪ್ರಚಲಿತ ಆಗಿದ್ದ ವಾಸ್ತು ಶಿಲ್ಪದ ಮೇಲೆ ಗಮನಾರ್ಹವಾದ ಬೆಳಕನ್ನುಚೆಲ್ಲುತ್ತದೆ. ವಾಸ್ತು-ಶಿಲ್ಪದ ಕ್ಷೇತ್ರದಲ್ಲಿಯೇ ನಿಂತು ಮಾತನಾಡುವುದಾದರೆ, ದಕ್ಷಿಣಭಾರತದ ಇತರ ಹಲವು ಆಲಯಗಳು ಕಂಡುಬರುವಂತೆಪ್ರತ್ಯೇಕ ವಾಸ್ತುಶಿಲ್ಪ ಲಕ್ಷಣಗಳಿಂದಲೋ, ಹಲವು ಸಂಪ್ರದಾಯಗಳ ಮಿಶ್ರಣವಾಗಿಯೋ ತಿರುಮಲೆಯ ಆಲಯವು ಕಂಡು ಬರದೆ ಹೋಗುವುದು. ಹದಿಮೂರನೆಯ ಶತಮಾನದಲ್ಲಿ ಯಾದವರಾಯರ ಕಾಲದಲ್ಲಿ ವಿಮಾನದ ಬಂಗಾರದ ಮುಲಾಮೀಕರಣವಾಗಿ, ಪ್ರಾಯಶಃ ಗರ್ಭಗುಡಿಯ ಸಮುದಾಯದ ನಿರ್ಮಿತಿಯಲ್ಲಿ ಹೊರಗೋಡೆಯ ದಪ್ಪ ಹೆಚ್ಚಾದದ್ದನ್ನು ಹಲವು ಕಿರುಗುಡಿಗಳನಿರ್ಮಿತಿ ಯನ್ನು ಹೊರತುಪಡಿಸಿದರೆ, ಮಿಕ್ಕ ಆಲಯದ ಬಹುಭಾಗ ಪೂರ್ಣವಾಗಿ ವಿಜಯನಗರದ ಕಾಲದಲ್ಲಿ ಶೈಲಿಯಲ್ಲಿ ನಿರ್ಮಾಣವಾಗಿದೆ ಎನ್ನಲಡ್ಡಿಯಿಲ್ಲ.

ಹದಿಮೂರನೆಯ ಶತಮಾನದಲ್ಲಿ ನಿರ್ಮಾಣವಾದ ಹಲವಾರು ಗೋಪುರಗಳೂ ಸಹ- ಮಹಾದ್ವಾರ ಗೋಪುರದಂತೆ - ಹಳೆಯ ಮೂಲ ತಳಹದಿಯನ್ನೇ ಹೊಂದಿದ್ದರೂ ಮೇಲಿನ ಶಿಖರ ಭಾಗವು ಕಾಲಾನು ಕ್ರಮದಲ್ಲಿ ನಿರಂತರವಾಗಿ ನವೀಕರಣಕ್ಕೆ ಒಳಗಾಗಿದ್ದುದನ್ನು ನೋಡಬಹುದು. ಆನಂದನಿಲಯ ವಿಮಾನವೂ ಸಹ ನಿರಂತರವಾಗಿ ಕಾಲಾನುಕಾಲದಲ್ಲಿ ನವೀಕರಣ, ಜೀರ್ಣೋದ್ಧಾರ, ನವ ಮುಲಾಮೀಕರಣಗಳಿಗೆ ಒಳಗಾಗಿ ಆಲಯದಲ್ಲಿನ ಕಟ್ಟಡಗಳಲ್ಲಿನ ವಾಸ್ತುವಿನ ಅಭಿವೃದ್ಧಿಯನ್ನು ಗುರುತಿಸು ವುದು ಕಷ್ಟವಾಗಿದೆ.

ಆಲಯವು ವಿಜಯನಗರದರಸರಲ್ಲಿ ಅಪೂರ್ವವಾದ ಬೆಂಬಲವನ್ನು ಪಡೆದಿದ್ದು ತಿರುಮಲೆಯ ಆಲಯ ದಲ್ಲಿನ ವಾಸ್ತು - ಶಿಲ್ಪ ಪೂರ್ಣವಾಗಿ ವಿಕಾಸವಾಗಲು ಕಾರಣವಾಯಿತು. ಹೀಗಾಗಿ ತಿರುಮಲೆಯ ಆಲಯದಲ್ಲಿ ಆ ಕಾಲದ ವಾಸ್ತು - ಶಿಲ್ಪಕಲೆಯ ಬೆಳವಣಿಗೆಯನ್ನು ಒಂದೇ ಕಡೆಯಲ್ಲಿ ತಿಳಿಯಬಹುದಾಗಿದೆ.

### 2. ಹಿನ್ನೆಲೆ:

ಯಾವುದೇ ಆಲಯದ ವಾಸ್ತುಶಿಲ್ಪ ವಿವರಗಳ ಅಧ್ಯಯನ ಮಾಡಲು, ವಿವಿಧ ಕಾಲಗಳಲ್ಲಿ ವಾಸ್ತುಶಾಸ್ತ್ರದ ಅಂತರ್ಭಾವ ಹೇಗೆ ಪರಿವರ್ತನಶೀಲವಾಗಿ ಬೆಳೆಯಿತೆಂಬುದನ್ನು ಎಚ್ಚರಿಕೆಯಿಂದ ಗಮನಿಸಬೇಕಾಗುತ್ತದೆ. ಪ್ರತಿಯೊಂದು ಕಾಲವಿಭಾಗದಲ್ಲಿನ ಶಿಲ್ಪಗಳ, ವಾಸ್ತುಕಾರರ ಪ್ರತ್ಯೇಕ ಗುಣಲಕ್ಷಣಗಳಿಂದ ಕೂಡಿದ ರಚನಾ ವೈವಿಧ್ಯ ಹಾಗೂ ಅಲಂಕರಣಗಳಿಂದಾಗಿ ಯಾವ ಒಂದು ಶಿಲ್ಪವೇ ಆಗಲಿ ಅದು ಸೇರಿದ ಕಾಲವನ್ನು ಆಧಾರಭೂತವಾಗಿ ಅಂದಾಜಿಸಬಹುದಾಗಿದೆ. ಹೀಗಾಗಿ ದಕ್ಷಿಣ ಭಾರತದ ಆಲಯ ಶೈಲಿ ಯನ್ನು ಸ್ಥೂಲವಾಗಿ ಐದು ಭಾಗಗಳಲ್ಲಿ- ಪಲ್ಲವ, ಪ್ರಾಚೀನಚೋಳ, ಅರ್ವಾಚೀನ ಚೋಳ, ವಿಜಯನಗರ ಹಾಗೂ ಆಧುನಿಕ ಕಾಲ ವಿಭಾಗಗಳಲ್ಲಿ - ಗುರುತಿಸಬಹುದಾಗಿದೆ.

ಈ ವಾಸ್ತುಶಿಲ್ಪ ವಿಶ್ಲೇಷಣೆಯ ಸೊಬಗು ಸವಿಯಲು, ಆಲಯಗಳಲ್ಲಿನ ಈ ರೀತಿಯ ಲಕ್ಷಣಗಳನ್ನು ನೋಡುವುದೇ ಅಲ್ಲದೇ, ಅವುಗಳ ಹಿಂದಿರುವ ಮೂಲಸೂತ್ರಗಳನ್ನು ಸಾಮಾನ್ಯ ಉದ್ದೇಶಗಳನ್ನು ಕೆಲಮಟ್ಟಿಗಾದರೂ ಅರಿತುಕೊಂಡು ಅವುಗಳ ಪೂರ್ಣಾರ್ಥವನ್ನು ಗ್ರಹಿಸಬೇಕಾದ್ದು ಅಗತ್ಯವಾಗುತ್ತದೆ. ಎಂದರೆ ಆಲಯದ ರಚನಾಶಾಸ್ತ್ರ ಪ್ರಾಕ್‍ಜೀವ ಶಾಸ್ತ್ರಗಳನ್ನು ಆಳವಾಗಿ ಅಧ್ಯಯನ ಮಾಡಬೇಕು.

ಮೇಲೆ ಹೇಳಿದ ಆಲಯ ರಚನೆಯ ಬೆಳವಣಿಗೆಯ ಅಧ್ಯಯನದಲ್ಲಿ ತೊಡಗಿದ ನಂತರ ತಿಳಿದುಬರುವ ಅಂಶವೆಂದರೆ ಇವುಗಳ ನಿರ್ಮಾಣ ಹಲವು ಖಚಿತ ಸಿದ್ಧಾಂತಗಳಿಗನುಗುಣವಾಗಿ ನಡೆದಿದೆಯೇ ಹೊರತು ಮನಬಂದಂತೆ ಸ್ಫೂರ್ತಿಯ ಆಧಾರದಲ್ಲಿ ನಡೆದಿಲ್ಲ. ಒಂದು ಕಲೆಗಾರಿಕೆಯ ಹಿನ್ನೆಲೆಯಲ್ಲಿ ಯಾವುದೇ ಪ್ರತಿಭೆ ಪಾಂಡಿತ್ಯವಿದ್ದರೂ, ಅದು ಕಾಲದಿಂದ ಪ್ರತ್ಯೇಕವಾಗಿ ಉಳಿಯುವುದು ಸಾಧ್ಯವಿಲ್ಲ. ಅದು ಸಮಕಾಲೀನತೆ ಯೊಡನೆ ಸಂಬಂಧ ಪಡೆದಿದ್ದು, ಹಿಂದಿನ ಕಾಲದವುಗಳೊಡನೆ ಹೋಲಿಕೆಗೊಳಗಾಗಿ ವಿವರಣೆ ಪಡೆಯುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಶಿಲ್ಪ ಅಥವಾ ನಿರ್ಮಿತಿ ಒಂದು ಶೈಲಿಗೆ ಸಂಬಂಧಿಸಿದ್ದಾಗಿರುತ್ತದೆ. ಇದರಲ್ಲಿ ಪೂರ್ಣವಾದ ಸ್ವಂತಿಕೆ ಎಂಬುದೇನೂ ಇರುವುದಿಲ್ಲ. ಹೀಗಾಗಿ ಒಂದು ರೀತಿ, ಶೈಲಿ, ಪದ್ಧತಿಯನ್ನು ಮತ್ತೊಂದರಿಂದ ಬೇರೆಯಾಗಿ ಗುರುತಿಸಿ ಪ್ರತಿಯೊಂದರ ಲಕ್ಷಣವನ್ನೂ ಪ್ರತ್ಯೇಕವಾಗಿ ಗುರುತಿಸಬಹುದು. ಸಾಧ್ಯವಾದ ಕಡೆಗಳಲ್ಲಿ ಇವುಗಳನ್ನು ಸ್ಥಾನಗಳ ಹಿನ್ನೆಲೆಯಲ್ಲಿ ತಾಳೆ ಹಾಕಿಯೂ ನೋಡಬಹುದು.

ಮಂದಿರ ನಿರ್ಮಾಣವನ್ನು ಸ್ಥೂಲವಾಗಿ ಐದು ಭಾಗಗಳಲ್ಲಿ ಕಾಣಬಹುದು. ತಳಗಟ್ಟು ಅಥವಾ ಉಪಪೀಠ, ಅದರ ಮೇಲಿನ ಅಧಿಷ್ಠಾನ, ಅಧಿಷ್ಠಾನದಲ್ಲಿ ಮೇಲಿರುವ ಕಂಭಗಳು, ಕಂಭಗಳ ಮೇಲಿನ ಪ್ರಸ್ತಾರ, ಪ್ರಸ್ತಾರದ ಮೇಲೆ ಕುಳಿತ ಛಾವಣಿ - ಶಿಖರ.

ಈ ಐದೂ ವಿಭಾಗಗಳೂ ತಮ್ಮವೇ ಆದ ಉಪವಿಭಾಗಗಳನ್ನು ಹೊಂದಿ, ಆಗಮ ಶಾಸ್ತ್ರಗಳಲ್ಲಿ ವಿಶಿಷ್ಟವಾದ ಹೆಸರುಗಳಿಂದ ವಿವರಣೆಗೆ ಒಳಗಾಗಿವೆ. ಚಿತ್ರದಲ್ಲಿ ಆಧುನಿಕ ಆಲಯವನ್ನು ತೋರಿಸಿ ಅದರ ಬಿಡಿಭಾಗಗಳನ್ನು ಹೆಸರಿಸಲಾಗಿದೆ. ಕೆಳಗೆ ಸೂಚಿಸಿರುವ ಸ್ಥೂಲಾಂಶಗಳನ್ನು ಮನಸಿನಲ್ಲಿಟ್ಟುಕೊಳ್ಳಬೇಕು.

ಅ) ಉಪಪೀಠವು ಚಿತ್ರದಲ್ಲಿ ನೀಡಲಾಗಿರುವುದಕ್ಕಿಂತಲೂ ಹೆಚ್ಚು ಅಲಂಕಾರಿಕವೂ ಅಥವಾ ಹೆಚ್ಚು ಸರಳವೂ ಆಗಿರಬಹುದು.

ಆ) ಅಧಿಷ್ಠಾನದಲ್ಲಿರುವ ಪದ್ಮವು ಇರಲೇಬೇಕು ಎಂದೇನಿಲ್ಲ. ಹಾಗೆಯೇ ಕುಮುದವು ಹಲವೆಡೆಗಳಲ್ಲಿ ಮೊಂಡು ಮೂಲೆಯದಾಗಿದ್ದು ಹಲವಡೆಗಳಲ್ಲಿ ಚಾಚಿದಂತಿರಬಹುದು.

ಇ) ಕಂಭಗಳು ಹಲವಡೆಗಳಲ್ಲಿ ಚತುರಸ್ರಾಕಾರವಾದರೆ ಹಲವಡೆಗಳಲ್ಲಿ ಅಷ್ಟಕೋನಾಕೃತಿ.

ವಾಸ್ತು ಶಿಲ್ಪದ ಶೈಲಿಯನ್ನು ಗುರುತಿಸುವಲ್ಲಿ ಪ್ರಧಾನವಾದ ಅಂಶಗಳೆಂದರೆ ಆಲಯದ ಕಂಭಗಳು ಹಾಗೂ ಅವುಗಳ ಮೇಲಿನ ಪ್ರಸ್ತಾರಗಳು. ಎರಡನೇ ಚಿತ್ರದಲ್ಲಿ ಮಂಟಪದ ವಿವರಗಳಿವೆ.

ಕಂಭವನ್ನು ಅಶ್ವಪಾದವೆಂಬ ಪೀಠದಲ್ಲಿ ನಿಲ್ಲಿಸಲಾಗುವುದು. ಇದರ ಮೂರು ವರ್ತುಲಾಕಾರದ ಭಾಗಗಳನ್ನು ಸದೂರಂ ಎಂದೂ, ಎರಡು ಚಪ್ಪಟೆ ಭಾಗಗಳನ್ನು ರಟ್ಟೈ ಎಂದೂ ಕರೆಯಲಾಗುವುದು. ಆಧುನಿಕ ಕಂಭಗಳಲ್ಲಿ ಸಾಧಾರಣವಾಗಿ ನಾಗಬಂಧವೆಂಬ ಹಾವಿನ ಹೆಡೆಯಾಕಾರದ ಅಲಂಕಾರವನ್ನೂ ಕಾಣಬಹುದು.





ಚಿತ್ರ - 2



ಕಂಭದ ವಿಭಾಗಗಳು - ಚಿತ್ರ - 3




ಕಾರ್ನೀಸು, ಕಪೋತ - ಚಿತ್ರ - 4



ಕೂಡು ನೆರಳಿನೊಡನೆ - ಚಿತ್ರ - 4a.

ಚಿತ್ರ - 5






ಕೋಷ್ಠ ಪಂಜರ - ಚಿತ್ರ - 6



ಕುಂಭ ಪಂಜರ - ಚಿತ್ರ - 7

ಮೂರನೇ ಚಿತ್ರವು ಮಂಟಪದ ವಾಸ್ತು ವಿವರವನ್ನೊದಗಿಸುವುದು. ಅಧಿಷ್ಠಾನವು ಆಲಯದ ಅನುರೂಪ ವಾಗಿದ್ದು, ಘಟಗಳು ಮೇಲೆ ಹೇಳಿದ ವಿವರಗಳನ್ನು ಹೊಂದಿದೆ.

ನಾಲ್ಕನೇ ಚಿತ್ರವು ಮಂಟಪದಲ್ಲಿನ ಕೂಡುಗಳನ್ನು (4, 4 ಎ - ಒಂದು ಅಲಂಕೃತ, ಒಂದು ಸಾಧಾರಣ-) ಸೂಚಿಸುತ್ತದೆ 4ಎ ಯ ಮಧ್ಯಭಾಗದ ಒಂದು ಕಡೆಗೆ ಸಾರ್ಥಕ ನಾಮವನ್ನು ಪಡೆದ ಗಂಧರ್ವ ಮುಖವಿದೆ. ಕೇಂದ್ರ ಭಾಗದಲ್ಲಿ ಕಲಶ ಲತೆಯಿದ್ದು- ಕೊಡಿಯೆನ್ನುವರು. ಮೇಲ್ಭಾಗವು ಸಿಂಹದ ಮುಖ ಹೊಂದಿರುವ ಸಿಂಹಮುಖವಾಗಿದೆ.

ಐದನೇ ಚಿತ್ರವು ಆಲಯಗಳ ವಿವಿಧ ಮೂಲೆಗಳನ್ನು ಸೂಚಿಸುತ್ತದೆ. ಇವುಗಳನ್ನು ಕರ್ಣಕೂಡು ಎನ್ನುವರು. ಇವುಗಳ ಮೇಲೆ ಒಂದು ಛಾವಣಿಯಿದ್ದು ಅದು ಚತುರಸ್ರ ಅಥವಾ ವರ್ತುಲವಾಗಿದ್ದು ಒಂದು ಸ್ತೂಪಿಯಿಂದ ಆವೃತವಾಗಿರುತ್ತವೆ. ಮಧ್ಯದಲ್ಲಿರುವುದು ಸಾಲೈ. ಇಲ್ಲಿ ಮೂರು ಸ್ತೂಪಿಗಳುಂಟು. ಕರ್ಣಕೂಡು, ಸಾಲೈಗಳ ನಡುವೆ ಪಂಜರಗಳೆಂಬ ಸಣ್ಣ ಕಿಟಿಕಿಗಳುಂಟು.

ಆಲಯಗಳಲ್ಲಿ ಎರಡುಬಗೆಯ ಅಲಂಕರಣಗಳುಂಟು. ೧) ಕೋಷ್ಟ ಪಂಜರ - ಉಪದೇವತೆಗಳ ಪರಿವಾರ ದೇವತೆಗಳಿಗಾಗಿ ಉಂಟಾದದ್ದು. ೨) ಕುಂಭ ಪಂಜರವೆಂಬ ಪೂರ್ತಿ ಅಲಂಕಾರಿಕ ಉದ್ದೇಶದಿಂದಾದದ್ದು. ಚಿತ್ರ - 6,7ರಲ್ಲಿ ಕಾಣಬಹುದು.

## 3. ವಿಗ್ರಹ- ಶಿಲ್ಪ ಶಾಸ್ತ್ರ - ಸಾಮಾನ್ಯ ಪರಿಚಯ:

ದಕ್ಷಿಣ ಭಾರತದ ಹಲವು ದೇವಾಲಯಗಳಂತೆಯೇ ತಿರುಮಲೆಯ ಆಲಯವೂ ವಿವಿಧ ರೀತಿಯ ಶಿಲ್ಪಗಳಿಂದ ಕೂಡಿದ ವೈವಿಧ್ಯಮಯ ಭಂಡಾರವಾಗಿದೆ. ಆಲಯದ ವಿವಿಧ ಭಾಗಗಳಲ್ಲಿ ವೈವಿಧ್ಯದ ಕೆತ್ತನೆಗಳನ್ನು ಕಾಣಬಹುದು. ದಕ್ಷಿಣ ಭಾರತದ ಆಲಯಗಳಲ್ಲಿನ ಶಿಲ್ಪವೆಲ್ಲ ಪ್ರಧಾನವಾಗಿ ದೇವ ದೇವಿಯರ ವಿಗ್ರಹಗಳಿಂದ ಕೂಡಿದ್ದು, ಶಿಲ್ಪಶಾಸ್ತ್ರ ವಿಗ್ರಹವಿಜ್ಞಾನಗಳ ನಡುವಣ ಗಡಿ ರೇಖೆ ಗುರುತಿಸುವಷ್ಟು ಸ್ಪಷ್ಟವಾಗಿಲ್ಲ. ಏನೇ ಆದರೂ ಪ್ರತಿಷ್ಠಾಪಿತವಾಗಿ ಪೂಜೆಗೊಳ್ಳುವ ಪ್ರತಿಮೆಗಳನ್ನು ಸ್ಥೂಲವಾಗಿ ವಿಗ್ರಹಗಳೆಂದು ವಿಂಗಡಿಸಬಹುದು. ಇವುಗಳಲ್ಲಿಯೂ ಪ್ರತಿಷ್ಠಾಪಿತವಾದವುಗಳನ್ನು, ಸ್ಥಾಯಿಯಾದವುಗಳನ್ನು ಧ್ರುವಮೂರ್ತಿಗಳೆಂದೂ,ಉತ್ಸವ ಹಬ್ಬ ಹರಿದಿನಗಳಲ್ಲಿ ಹೊರಬರುವ ಮೂರ್ತಿಗಳನ್ನು ಭೋಗಮೂರ್ತಿ ಅಥವಾ ಉತ್ಸವ ವಿಗ್ರಹಗಳೆಂದು ಎರಡು ಬಗೆಯಾಗಬಹುದು. ಸಾಮಾನ್ಯವಾಗಿ ಹೇಳುವುದಾದರೆ ಎಲ್ಲ ಧ್ರುವಮೂರ್ತಿಗಳೂ ಕಲ್ಲಿನಿಂದ ಮಾಡಲ್ಪಟ್ಟವು ಗಳಾಗಿದ್ದು, ಉತ್ಸವಮೂರ್ತಿಗಳು ಲೋಹದವು ಗಳಾಗಿರುತ್ತವೆ. ಈ ಸಾಮಾನ್ಯ ನಿಯಮಕ್ಕೆ ಬಹಳಷ್ಟು ವಿನಾಯತಿಗಳೂ ಉಂಟು.

ಶಿಲ್ಪಗಳ ವಿಷಯಕ್ಕೆ ಬಂದಾಗ, ಇವೆಲ್ಲ ಮಂಟಪಗಳ ಗೋಡೆಗಳಲ್ಲಿ ಅಥವಾ ಕಂಭಗಳಲ್ಲಿ ಕೆತ್ತಲಾಗಿರು ವಂತಹವು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಮಂಟಪ, ಗೋಪುರದ್ವಾರ, ವಿಮಾನಗಳಲ್ಲಿ ಗುಡಿಕಟ್ಟಿದ ವಿಗ್ರಹಗಳನ್ನು ಶಿಲ್ಪವೆನ್ನಬಹುದು. ತಿರುಮಲೆಯ ಆಲಯದ ವಾಸ್ತು ಲಕ್ಷಣಗಳು, ಭಾರತದ ಕಲೆಯ ಬೆಳವಣಿಗೆಯಲ್ಲಿ ವಿಜಯನಗರದ ವಂತಿಗೆಯನ್ನು ತಿಳಿಸಿ ಕೊಡುವಂತೆಯೇ, ಇಲ್ಲಿನ ಶಿಲ್ಪವೂ ಸಹ ಪ್ರಾತಿನಿಧಿಕವಾದ ಸೀಳು ನೋಟವನ್ನು ಒದಗಿಸುತ್ತದೆ. ವಿಜಯನಗರದ ಕಾಲದಲ್ಲಿ ತಿರುಮಲೆಯಲ್ಲಿಯೇ ಅಲ್ಲದೇ ಕಂಚಿ ಮೊದಲಾದ ಕಡೆಗಳಲ್ಲಿಯೂ ಜನ ಸಮುದಾಯದ ಅರ್ಚನೆ ಪೂಜೆಗಳ ಅನುಕೂಲಗಳಿಗೆ ಹೆಚ್ಚು ಹೆಚ್ಚು ಗಮನ ನೀಡುವಂತಾಗಿ ಕಲ್ಯಾಣ ಮಂಟಪ, ವಸಂತಮಂಟಪ, ನೀರಾಳಿಮಂಟಪ ಮುಂತಾದ ನಿರ್ಮಿತಿಗಳನ್ನೊಂಟು

ಮಾಡಿ ಉತ್ಸವ ದಿನಗಳಲ್ಲಿ ಜನ ಸೇರುವುದಕ್ಕೆ ಅವಕಾಶ ಮಾಡಿಕೊಡಲಾಯಿತು. ಉಲ್ಲೇಖನೀಯವೆಂದರೆ ಬೇರೆ ಬೇರೆ ಕಾರಣಗಳಿಂದಾಗಿ ವಿಜಯನಗರದ ಅರಸರು ಕಲ್ಯಾಣ ಮಂಟಪಗಳಿಗೆ ನೀಡಿದ ಪ್ರಾಧಾನ್ಯ. ಬಹುತೇಕ ಆಲಯಗಳಲ್ಲಿನ ಹೊರ ಆವರಣದ ದಕ್ಷಿಣ ದಿಕ್ಕಿನಲ್ಲಿ ಸಾಮಾನ್ಯವಾಗಿ ಈ ಕಲ್ಯಾಣ ಮಂಟಪಗಳು ನಿರ್ಮಾಣವಾದವು. ಈ ಕಲ್ಯಾಣ ಮಂಟಪಗಳು ಬಹುಗಾತ್ರದುಹುಗಳ ವಾಸ್ತು ವೈವಿಧ್ಯ ಹೆಚ್ಚು ಕಡಮೆ ಒಂದೇ ಆಗಿದ್ದರೂ ಶಿಲ್ಪಿಗೆ ತನ್ನ ಪ್ರತಿಭೆ ಪಾಂಡಿತ್ಯ ನೈಪುಣ್ಯಗಳನ್ನು ತೋರಿಸಲು ತಕ್ಕ ಅವಕಾಶ ವುಂಟಾಯಿತು. ಅಧಿಷ್ಠಾನದ, ಕಂಭಗಳಲ್ಲಿನ ಅಲಂಕಾರಗಳು ವಿಜಯನಗರದರಸರ ಕಾಲದಲ್ಲಿ ಗಣನೀಯವಾದ ಸಂಪದ ಹೆದು ಸುಶೋಭಿತವಾಯಿತು. ಸೂಕ್ಷ್ಮಕುಸುರಿಗೆಲಸದ ಕಂಭಗಳು ತಮ್ಮ ಕಲಾತ್ಮಕತೆಯ ಅತ್ಯುನ್ನತಿಯನ್ನು ಪಡೆದವು. ಎಲ್ಲ ಕಂಭಗಳೂ ಎತ್ತರವಾಗಿ, ಬಹುಗಾತ್ರದವಾಗಿ, ಎಲ್ಲಕಡೆಯಲ್ಲೂ, ಬೇಟೆಗಾರರ, ಯಾಳಿಗಳ ಕೆತ್ತನೆಗಳನ್ನು ಹೊಂದಿವೆ. ಚೌಕ ವರ್ತುಲಗಳಿಂದ ಕೂಡಿದ ಕಂಬಸಾಲುಗಳೇ ಕಣ್ಣಿಗೆ ಕಟ್ಟುವಂತಹ ಸಂತಸವನ್ನು ನೀಡುವುವು. ವೈವಿಧ್ಯದ ಮೆಟ್ಟಿಲುಗಳು ಮತ್ತಿತರಭಿತ್ತಿಚಿತ್ರಗಳು ಈ ಸೌಂದರ್ಯಕ್ಕೆ ಮೆರುಗು ನೀಡಿದೆ.

ಆಲಯದಲ್ಲಿ ಕಂಡುಬರುವ ಶಿಲ್ಪಗಳನ್ನು ೧) ನಿಸರ್ಗದೃಶ್ಯ ೨) ಲತಾವೈವಿಧ್ಯ ೩) ಪಶುಪಕ್ಷಿಗಳು ೪) ಮನುಷ್ಯ ಪ್ರತಿಪಿಗಳು ೫) ರಾಜ ಮತ್ತಿತರ ಆಶ್ರಯದಾತರ ಪ್ರತಿಮೆಗಳು ೬) ದೇವಿ ದೇವತೆಗಳು ಎಂದು ವಿಂಗಡಿಸಿ ಅಧ್ಯಯನ ಮಾಡಲು ಬರುತ್ತದೆ. ಇವೆಲ್ಲವನ್ನೂ ತಿರುಮಲೆಯ ಆಲಯದ ಕಲ್ಯಾಣ ಮಂಟಪದಲ್ಲಿಯೂ ಮತ್ತಿತರ ಭಾಗಗಳಲ್ಲಿಯೂ ಬಹುತೇಕ ಕಾಣಬಹುದು.

## 4. ಆಲಯದ ದ್ವಾರಗೋಪುರ ಹಾಗೂ ಮಂಟಪ

***ವಾಸ್ತುಶಿಲ್ಪ:*** ಇದೊಂದು ಘನವಾದ ಶಿಲಾ ನಿರ್ಮಿತಿಯಾಗಿದ್ದು ಹೊರಗೋಡೆಗಳಲ್ಲಿನ ಗೋಡೆಗಂಬಗಳಿಂದಾಗಿ ಈಚಿನ ಚೋಳ ಶೈಲಿಯಲ್ಲಿದೆ. ಒಂದು ಶಾಸನವಿದೆ. ಇದು ಕ್ರಿ.ಶ. 1217 ಯಾದವರಾಯನ ಕಾಲಕ್ಕೆ ಸೇರಿದ್ದು. ಇದರ ವಿವರವೆರಡೂಣೆಯು ಸ್ವಾಮಿಯ ಸೇವೆಯಲ್ಲಿ ಅರವತ್ನಾಲ್ಕು ಹಸುಗಳನ್ನೂ ಮತ್ತಿತರ ವಸ್ತುಗಳನ್ನೂ ಸಮರ್ಪಿಸಿದ್ದು. ದ್ವಾರಗೋಪುರದ ಭಾಗದಲ್ಲಿ ಕ್ರಿ.ಶ.13 ನೇ ಶತಮಾನಕ್ಕೆ ಸೇರಿದ ಮತ್ತೂ ಹಲವು ಶಾಸನಗಳಿರುವುದರಿಂದ ಈ ಗೋಪುರವು ಆ ಹೊತ್ತಿಗೆ ನಿರ್ಮಾಣವಾಗಿರಬೇಕು. ಇಲ್ಲಿ ಹನುಮಂತ, ನರಸಿಂಹ ಮೊದಲಾದ ವೈಷ್ಣವ ದೇವತೆಗಳ ಉಬ್ಬು ಚಿತ್ರಗಳಿವೆ. ಈ ದ್ವಾರಗೋಪುರವನ್ನು ಇತ್ತೀಚಿನವರೆಗೆ ಜೀರ್ಣೋದ್ಧಾರ, ನವೀಕರಣ ಮಾಡಿಸುತ್ತಲೇ ಬಂದಿರುವುದರಿಂದ ತರಬೇತಿ ಹೊಂದಿದ ದೃಷ್ಟಿಯಿಲ್ಲದೆ ಇಲ್ಲಿನ ವಾಸ್ತುವಿವರದ ಅಂದಾಜು ಮಾಡುವುದು ಕಷ್ಟ.

***<u>ಆ. ಶಿಲ್ಪ ವಿವರ :-</u>***

***1) ಪೂತನಾವಧೆ:*** ಬಾಲಕೃಷ್ಣನು ಪೂತನಿ ರಾಕ್ಷಸಿಯನ್ನು ಕೊಲ್ಲುವ ಶಿಲ್ಪವು ಇಲ್ಲಿನ ಮಂಟಪದಲ್ಲಿ ದ್ವಾರಗೋಪುರದ ಬಳಿಯಿದೆ. ಈ ರಾಕ್ಷಸಿಯು ಮುಗುಳುನಗುತ್ತ ಬಾಲಕೃಷ್ಣನನ್ನು ಎತ್ತಿಕೊಂಡು ತನ್ನ ವಿಷ ಪೂರಿತ ಸ್ತನ್ಯನೀಡಲು ಪ್ರಯತ್ನಿಸಿದಳು. ಬಾಲಕೃಷ್ಣ ನಗುನಗುತ್ತಲೇ ಅವಳ ಎದೆಯ ಹಾಲಿನೊಡನೆ ಪ್ರಾಣವನ್ನು ಹೀರಿದ. ಶಿಲ್ಪದಲ್ಲಿ ರಾಕ್ಷಸಿಯು ತನ್ನ ಜಡೆಗಳನ್ನು ಗಂಟುಗಂಟಾಗಿ ಹೆಣೆದುಕೊಂಡಿರುವಂತೆ ಬಿಡಿಸಲಾಗಿದೆ. ಮುಖದಲ್ಲಿ ಕಂಡು ಬರಬೇಕಾದ ಕಪಟದ ಮುಗುಳುನಗೆ ಒರಟುದಿಂದ

ಕೂಡಿದೆ. ರಾಕ್ಷಸಿಯ ಅಸ್ಥಿಪಂಜರದ ದೇಹವನ್ನೂ ರೂಪಿಸಲು ಪ್ರಯತ್ನಿಸಲಾಗಿದೆ. ಆದರೂ ಇದು ಇಲ್ಲಿ ಕಂಡುಬರುವ ಕಲೆಯ ಅತಿ ಕೆಳಮಟ್ಟದ ನಮೂನೆಯಾಗಿದೆ.

***2) ಗೋಪಿಕಾ ವಸ್ತ್ರಾಪಹರಣ:*** ದ್ವಾರಗೋಪುರದ ಮಂಟಪದಲ್ಲಿರುವ ಗೋಪಿಕಾ ವಸ್ತ್ರಾಪಹರಣ ಶಿಲ್ಪ, ಭಾಗವತ ಪುರಾಣದ ಪ್ರಸಿದ್ಧ ಐತಿಹ್ಯದ ಶಿಲಾಭಿವ್ಯಕ್ತಿಯಾಗಿದೆ. ಗೋಪಿಯರು ಸ್ನಾನಕ್ಕೆಂದು ನೀರಿಗಿಳಿದಾಗ ಸ್ವಾಮಿಯು ಅವರ ಸೀರೆಗಳನ್ನೆತ್ತಿಕೊಂಡು ಮರವನ್ನೇರಿ ತುಸು ಹೊತ್ತು ಅವರನ್ನು ಸತಾಯಿಸಿದನೆಂದು ಹೇಳಲಾಗಿದೆ.ಶಿಲ್ಪ ದಲ್ಲಿ ಇಬ್ಬರು ಗೋಪಿಯರು ಕೃಷ್ಣನಿಗೆ ಕೈ ಜೋಡಿಸಿ ತಮ್ಮ ಸೀರೆಯನ್ನು ಕೊಡುವಂತೆ ಕೇಳುವ ವಿವರವಿದೆ. ಒಂದು ಕೃತಕವಾದರೂ ಆಡಂಬರದಿಂದ ಕೂಡಿದ ಅಲಂಕಾರದ ಮರದ ಮೇಲೆ ಕೃಷ್ಣನಿರುವಂತಿದೆ. ಮರ ಅಸಹಜವಾಗಿರುವಂತಿದೆ. ಒಬ್ಬ ಗೋಪಿ ಮರದ ಹಿಂದೆ ತನ್ನ ನಗ್ನತೆಯನ್ನು ಅರ್ಧ ಮುಚ್ಚಿಕೊಂಡಿರುವಂತಿದೆ. ಕೃಷ್ಣಜೀವನದ ಒಂದು ಪ್ರಮುಖ ಘಟ್ಟದ ಚಿತ್ರವಿದು.

***3) ಆದಿಮೂರ್ತಿ ವಿಷ್ಣು:*** ಈ ಮಂಟಪದಲ್ಲಿಯೇ ವಿಷ್ಣುವನ್ನು ಆದಿ ಮೂರ್ತಿಯಂತೆ ಚಿತ್ರಿಸಲಾಗಿದೆ. ಈತ ಆದಿಶೇಷನ ಮೇಲೆ ನಿಂತಿದ್ದಾನೆ. ಶೇಷನ ದೇಹ ಮೂರು ವರ್ತುಲಗಳಲ್ಲಿದ್ದು, ಆತನ ಐದು ಹೆಡೆಗಳೂ ಸ್ವಾಮಿಯ ಪ್ರಭಾವಳಿಯಂತೆ ಚಿತ್ರಿತವಾಗಿವೆ. ಸ್ವಾಮಿಯ ಎಡಗೈ ಕಟಿಹಸ್ತವಾಗಿಯೂ ಬಲಹಸ್ತ ಅಭಯ ಹಸ್ತವಾಗಿಯೂ ಇದ್ದು ಮೇಲಿನ ಕೈಗಳಲ್ಲಿ ಶಂಖ ಚಕ್ರಗಳಿವೆ.

ಆದಿಮೂರ್ತಿಯ ವಿಗ್ರಹಗಳಲ್ಲಿ ಸಾಮಾನ್ಯವಾಗಿ ಬಲಗಾಲು ಇಳಿಬಿದ್ದು ಎಡಗಾಲು ಮಡಚಿ ಆಸೀನವಾಗಿ ರುವಂತಿರುತ್ತದೆ. ಒಂದು ಕೈ ಆಸನದ ಮೇಲಿದ್ದು ಇನ್ನೊಂದು ಎಡ ಮೊಣಕಾಲ ಮೇಲಿರುವಂತಿರುತ್ತದೆ. ಹಲವು ಪ್ರಾಚೀನ ಮೂರ್ತಿಗಳಲ್ಲಿ ಶ್ರೀವರೂ ಜೊತೆಗೆ ಇರುವರು. ಈ ಚಿತ್ರದಲ್ಲಿರುವ ಮೂರ್ತಿ ವೆಂಕಟೇಶ್ವರ ಸ್ವಾಮಿಯ ಪ್ರತೀಕವಾಗಿದ್ದು ಅಭಯ ಕಟಿಹಸ್ತಗಳನ್ನು ಸೂಚಿಸಲಾಗಿದೆ.

## 5. ಪ್ರತಿಮಾಮಂಟಪ

***ಅ. ವಾಸ್ತು:*** ಪ್ರತಿಮಾಮಂಟಪಕ್ಕೆ ಈ ಹೆಸರು ಬರಲು ಕಾರಣ ಇಲ್ಲಿ ಕೃಷ್ಣದೇವರಾಯ ಹಾಗೂ ಆತನ ಇಬ್ಬರು ರಾಣಿಯರ ಕಂಚಿನ ಪ್ರತಿಮೆಗಳಿರುವಿಕೆ. ಈ ಮಂಟಪ ಸಮಕಾಲೀನ ಕಲೆಯ ಉತ್ತಮ ಮಾದರಿಗಳನ್ನು ಒಳಗೊಂಡಿದೆ.

***ಆ.ಶಿಲ್ಪ:***

**4) *ಒಂದು ಕಂಬ :*** ಇಲ್ಲಿನ ಕಂಭಗಳು ಯೋಧನನ್ನು ಮೇಲೇರಿಸಿಕೊಂಡ ಯಾಳಿಗಳನ್ನು ಹೊಂದಿದ್ದು ವಿಜಯನಗರದ ಕಾಲದ ಮಾದರಿಯ ಹೊರ ಚಾಚಿದ ಕಾರ್ನಿಸುಗಳನ್ನು ಹೊಂದಿದೆ.

### 5) *ಕೃಷ್ಣದೇವರಾಯರ ಹಾಗೂ ರಾಣಿಯರ ಕಂಚಿನ ಪ್ರತಿಮೆಗಳು:*

ಸ್ವಾಮಿಯ ಮುಂದೆ ಕೈಜೋಡಿಸಿ ನಿಂತು ನಮಸ್ಕಾರ ಮಾಡುವಂತೆ ತೋರುವ ವಿಜಯನಗರದ ಸಾಮ್ರಾಟ್ ಶ್ರೀಕೃಷ್ಣ ದೇವರಾಯ ಹಾಗೂ ಅವನ ರಾಣಿಯರಾದ ಚಿನ್ನಾದೇವಿ ಹಾಗೂ ತಿರುಮಲೆ ದೇವಿಯರ ಕಂಚಿನ ವಿಗ್ರಹಗಳಿವೆ. (ಈ ವಿಗ್ರಹಗಳ ಮೇಲೆ ಬಲಭುಜಗಳಲ್ಲಿ - ಕೃಷ್ಣದೇವರಾಯ ಮಹಾರಾಯರು, ತಿರುಮಲದೇವಿಯವರು, ಚಿನ್ನಾಜೀ ದೇವಿಯವರು- ಎಂಬ ಕೆತ್ತನೆಗಳಿವೆ. ಇವು ಕನ್ನಡ ಭಾಷೆಯವು)

ಈ ಕಂಚಿನ ಪ್ರತಿಮೆಗಳು ಉದ್ದವಾದ ವರ್ತುಲಾಕಾರದ ಕಿರೀಟವನ್ನೂ, ಎರಡು ಸುಂದರವಾದ ವಜ್ರಗಳನ್ನು ಹುದುಗಿಸಿದ ಹಾರಗಳನ್ನೂ, ರತ್ನಖಚಿತ ಕೇಯೂರ, ರತ್ನದ ಬಳೆಗಳನ್ನೂ ರಾಜನ ಕೈ ಬೆರಳಲ್ಲಿ ಉಂಗುರಗಳನ್ನೂ ಹೊಂದಿವೆ. ಕಟಿಸೂತ್ರ ಹಾಗೂ ಬಂಗಾರದ ಉದರ ಬಂಧಗಳು ಸುಂದರವಾದ ಕುಸುರಿಗೆಲಸ ದಿಂದಾಗಿವೆ. ರಾಣಿಯರು ಕಸೂತಿಹಾಕಿದ ರೇಷ್ಮೆ ವಸ್ತ್ರಗಳನ್ನುಟ್ಟಿದ್ದಾರೆ. ಸೀರೆಗಳ ಕೆಳಭಾಗಗಳು ನಿರಿಗೆಗಳಿಂದ ಕೂಡಿ ಬೀಸಣಿಗೆಯಾಕಾರದಲ್ಲಿವೆ. (ಆಧುನಿಕರಿಗೆ ಈ ಮಾದರಿ ಸ್ವಲ್ಪ ಕೃತಕವಾಗಿ ತೋರ ಬಹುದು.) ವಿಜಯನಗರದ ಸಾಮ್ರಾಜ್ಯಕಾಲದ ಸ್ತ್ರೀಯರು ಧರಿಸುತ್ತಿದ್ದ ಆಭರಣಗಳ ಮಾದರಿಗಳನ್ನು ಗಮನಿಸುವುದು ಆಸಕ್ತಿಕರ ವಾಗುತ್ತದೆ. ಈ ಮಹಿಳೆಯರು ಹಲವು ಹಾರಗಳನ್ನು ಧರಿಸಿದ್ದು, ಕಂಠ ಹಾರಗಳಲ್ಲಿ ಪದಕಗಳೂ ಇವೆ. ಜೊತೆಗೇ ಯಜ್ಞೋಪವಿತಗಳಿವೆ. ಇವರ ತಲೆಗೂದಲು ಬಾಚಲ್ಪಟ್ಟು ತಲೆಯ ಹಿಂಭಾಗದಲ್ಲಿ ಗಂಟು ಹಾಕಲಾಗಿದೆ. ಸೀಮಂತ ಅಥವಾ ಬೈತಲೆಯಲ್ಲಿ ಒಂದು ಪಚ್ಚೆದ ಆಭರಣವಿದೆ. ರತ್ನ ಕುಂಡಲಗಳು ಕಿವಿಗಳಲ್ಲಿಯೂ ಸುಂದರವಾದ ಕೇಯೂರಗಳೂ, ಬೆಲೆಬಾಳುವ ಉಂಗುರಗಳನ್ನೂ ಧರಿಸಿದ್ದಾರೆ.

ಈ ಕಂಚಿನ ಪ್ರತಿಮೆಗಳು ಪ್ರಸಿದ್ಧವಾಗಿದ್ದು, ಚಕ್ರವರ್ತಿ ಹಾಗೂ ಆತನ ರಾಣಿಯರು ಸ್ವಾಮಿಯ ಬಗ್ಗೆ ಹೊಂದಿದ್ದ ಭಕ್ತಿಯನ್ನು ಕಲೆಗಾರ ಪೂರ್ಣವಾಗಿ ಅಭಿವ್ಯಕ್ತಿಗೊಳಿಸಿದ್ದಾನೆ.

### 6) *ತಿರುಮಲರಾಯ ಮತ್ತವನ ರಾಣಿಯ ಕಂಚಿನ ಪ್ರತಿಮೆಗಳು:*

ವಿಜಯನಗರದ ಆರವೀಡುವಂಶದ ತಿರುಮಲರಾಯ ಮತ್ತವನ ಪತ್ನಿಯ ಸುಂದರ ಕಂಚಿನ ವಿಗ್ರಹಗಳು ಇವು. ತಾಳಿಕೋಟೆಯುದ್ಧದ ನಂತರ ವಿಜಯಗರ ಧ್ವಂಸವಾದ ಮೇಲೆ ಬಂದವನೀತ. (1570 ಕ್ರಿ.ಶ.) ಅರವೀಡು ವಂಶ ಪಾಲನೆಯನ್ನು ಆರಂಭಿಸಿದ.

(ಇವೆರಡೂ ಕಲ್ಲಿನ ವಿಗ್ರಹಗಳು. ಕಂಚಿನ ವಿಗ್ರಹಗಳಲ್ಲ. ಅಚ್ಯುತರಾಯ ಹಾಗೂ ವರದಾಜೀ ಅಮ್ಮ. ಕೃಷ್ಣದೇವರಾಯನ ನಂತರ ಆತನ ಮಲತಮ್ಮ ಅಚ್ಯುತರಾಯನು ವಿಜಯನಗರ ಸಿಂಹಾಸನವನ್ನು ಆರೋಹಿಸಿದ. ತಿರುಮಲೆಯ ಪ್ರಭುವಿನಭಿಷೇಕೋದಕ ಸ್ನಾತನಾಗಿ ಪಟ್ಟಾಭಿಷಿಕ್ತನಾದ ದೊರೆಯೀತ.

(ಈತನ ಮತ್ತಿವನ ಪತ್ನಿಯ ಭುಜಗಳಲ್ಲಿ ಹೆಸರನ್ನು ಕೆತ್ತಿಲ್ಲವಾಗಿ ಈ ಹೆಸರುಗಳ ಬಗ್ಗೆ ವಿವಾದವಿದ್ದರೂ ಸಾಧು ಸುಬ್ರಹ್ಮಣ್ಯಶಾಸ್ತ್ರಿಗಳು ನಿತ್ಯನೈವೇದ್ಯದ ಪಟ್ಟಿಯ ಆಧಾರದಿಂದ ಇವುಗಳನ್ನು ಅಚ್ಯುತರಾಯ ಹಾಗೂ ವರದಾಜೀ ಅಮ್ಮನವರ ವಿಗ್ರಹಗಳೆಂದು ತೀರ್ಮಾನಿಸಿದ್ದಾರೆ. ಕೃಷ್ಣದೇವರಾಯನ ವಿಗ್ರಹದ ಹಣೆಯಲ್ಲಿ ಇಲ್ಲದ ಮೂರುನಾಮ ಈ ಅರಸನ ಹಣೆಯಲ್ಲಿದೆ - ಗಮನಿಸಬಹುದು- ಅನುವಾದಕ.)

ಈತನಿಗೂ ಕೃಷ್ಣದೇವರಾಯನಿಗಿರುವಂತೆಯೇ ಅತ್ಯುತ್ತಮ ದರ್ಜೆಯ ಕಿರೀಟ ಹಾಗೂ ಆಭರಣಗಳಿವೆ. ಹಿಂದಿನ ರಾಜನಂತಲ್ಲದೆ ಈತ ತೆಳುವಾದ ಉತ್ತರೀಯವನ್ನು ಹೊದ್ದುಕೊಂಡಂತಿದೆ. ರಾಣಿಯು ತೆಳುವಾದ ರೇಷ್ಮೆ ವಸ್ತ್ರವನ್ನುಟ್ಟು ಮುಡಿಯನ್ನು ಬಾಚಿ ಮೇಲೆತ್ತಿ ಗಂಟುಹಾಕಿದಂತಿದ್ದು ಬೈತಲೆಯಲ್ಲಿ ಬೊಟ್ಟಿದೆ.

**7. ವೆಂಕಟನ ಪ್ರತಿಮೆ:**

ಚಂದ್ರಗಿರಿಯಲ್ಲಿ ಆಳುತ್ತಿದ್ದ ವಿಜಯನಗರದರಸ ಈತ. ಉದ್ದ ನಮೂನೆಯ ಟೋಪಿಯಂತಹ ಶೀರ್ಷಿಕೆಯನ್ನು ಹೊಂದಿ, ಕಿರಿಯ ಉತ್ತರೀಯ ಹೊಂದಿರುವ. ತುಲಸೀ ಮಾಲೆಯನ್ನು ಹಾಕಿಕೊಂಡು ಎರಡೂ ಕಾಲಿನಲ್ಲಿಯೂ ಪೆಂಡೆಯನ್ನು ಹೊಂದಿದ್ದಂತಿದೆ. (ಇದು ಕಂಚಿನ ವಿಗ್ರಹವೇ)

**8) ರಾಜಾ ತೋದರಮಲ್, ತಾಯಿ ಹಾಗೂ ಪತ್ನಿಯರೊಡನೆ:**

ಪ್ರತಿಮಾ ಮಂಟಪದಲ್ಲಿರುವ ಹಿತ್ತಾಳೆಯ ಕವಚದ ಪ್ರತಿಮೆಗಳ ಮತ್ತೊಂದು ಗುಂಪಿದು. ರಾಜ ತೋದರಮಲ್ಲನು18ನೇ ಶತಮಾನದ ಆದಿಭಾಗದಲ್ಲಿ ಕರ್ನಾಟಿಕ - (ಇಂದಿನ ಆರ್ಕಾಟು ಪ್ರಾಂತ.)ಪ್ರಾಂತ್ಯವನ್ನಾಳಿದ ನವಾಬ ಸಾದತುಲ್ಲಾಖಾನನ ಸಚಿವ-ಸೇನಾನಿ ಯಾಗಿದ್ದ. ಈತನ ತಾಯಿ ಮೋಹನದೇವಿ (ಮಾತಾ ಮೋಹನ ಡೇ) ಪತ್ನಿ ಪಿತಾಬೀಬಿ. (ಈ ಸ್ತ್ರೀಯರ ಹೆಸರುಗಳನ್ನು ಅವರ ಭುಜಗಳ ಮೇಲೆ ಕೆತ್ತಲಾಗಿದೆ) (ಈತನ ಹೆಸರು ಲಾಲಾಖೇಮರಾಮ. ಈ ಹೆಸರನ್ನೂ ಪ್ರತಿಮೆಯ ಬಲಭುಜದ ಮೇಲೆ ಕೆತ್ತಲಾಗಿದೆ. ಕೊಂಡವೀಡು ಪ್ರಾಂತ್ಯದವನು. ಈ ವಿಗ್ರಹಗಳು ತಿರುಮಲರಾಯ ಮಂಟಪದಲ್ಲಿ ಪಶ್ಚಿಮಾಭಿಮುಖವಾಗಿವೆ.ಉದಿಯ ಸಾಲಿನಲ್ಲಿ ಬರುವಾಗ ಕಿರುಗಾತ್ರದ ಪ್ರತ್ಯೇಕ ಜಗಲಿಯ ಮೇಲೆ ಕಂಡು ಬರುತ್ತವೆ - ಅನುವಾದಕ)

ಪ್ರತಿಮೆಗಳನ್ನು ಹೆಚ್ಚಿಗೆ ಉಬ್ಬಿಸಲಾಗಿದೆ. ರಾಜಾ ತೋದರಮಲ್ಲನ ಉಡುಪು ಅಡ್ಡ ಪಂಚೆ ಅಥವಾ ಲಂಗದಂತಿದ್ದು ನಡುವಿನ ಉದರ ಬಂಧದಲ್ಲಿ ಅನೇಕ ಮುತ್ತುಗಳಿವೆ. ನವಾಬನ ಆಸ್ಥಾನದ ಮನ್ನೆಯರ ಪೋಷಾಕನ್ನು ಜನರೆಲ್ಲ ಅನುಸರಿಸುತ್ತಿದ್ದರೆಂಬುದು ಈತನ ಅಚ್ಚುಕಟ್ಟಾದ ಗಡ್ಡ, ಗುಂಗುರು ಮೀಸೆಗಳಿಂದಾಗಿ ತಿಳಿಯಬಹುದಾಗಿದೆ. ತಾಯಿಯನ್ನು ದೊಡ್ಡ ಹೊಟ್ಟೆಯೊಡನೆಯೂ ಪತ್ನಿಯನ್ನು ವರ್ತುಲಾಕಾರದ ಉದರ ದಿಂದಲೂ, ಮೇಲೆದ್ದು ಕಾಣುವ ಸ್ತನಚೂಚುಕಗಳಿಂದಲೂ (ಹಿತ್ತಾಳೆಯ ಪ್ರತಿಮೆ) ಚಿತ್ರಿಸಲಾಗಿದೆ.

ಈ ಮೂರು ಪ್ರತಿಮೆಗಳೂ ಪೂರ್ಣವಾದ ಕೃತಕತೆಯನ್ನು ಬಿಂಬಿಸುವಂತಿದ್ದು ಯಾವುದೇ ಕಲೆಗಾರಿಕೆಯಿಂದಲೂ ದೂರವಾಗಿವೆ.

**9) ಅಶೋಕವನದಲ್ಲಿ ಸೀತೆ:**

ಅಶೋಕವನದಲ್ಲಿನ ಒಂದು ಮರದ ಮೇಲೆ ಹನುಮಂತನಿರುವಂತೆಯೂ ಮರದ ಕೆಳಗೆ ಸೀತೆ ಕುಳಿತಿರುವಂತೆಯೂ ತೋರಿಸುವ ಶಿಲ್ಪವಿದು. ಸೀತೆ ತನ್ನ ಎಡಗೈಯನ್ನು ಚಿಂತಾಗ್ರಸ್ತವಾದ ವಾಲಿದ ತಲೆಗೆ ಆಸರೆಯಾಗಿರಿಸಿರುವಂತಿದೆ.

**10) ಬೆಣ್ಣೆ ಕಳ್ಳ:**

ಬೆಣ್ಣೆಯನ್ನು ಕಳುವುಮಾಡಲು ಏಣಿಯನ್ನು ಹತ್ತಿರುವ ಕೃಷ್ಣನ ಶಿಲ್ಪ. ಈ ಪ್ರಸಂಗವೂ ಭಾಗವತ ಪುರಾಣದಲ್ಲಿ ಪ್ರಸಿದ್ಧವಾಗಿದ್ದರೂ ಇಲ್ಲಿ ಕಲಾತ್ಮಕತೆಯನ್ನು ಪಡೆದಿಲ್ಲ.

**11) ಹನುಮನ ಮೇಲಿನ ವಿಷ್ಣು:**

ಹನುಮಂತನು ತೋಳುಗಳ ಮೇಲೆ ವಿಷ್ಣುವನ್ನು ಒಯ್ಯುತ್ತಿರುವ ಆಸಕ್ತಿ ದಾಯಕವಾದ ಶಿಲ್ಪವಿದು. ಇದು ಬಹುಶಃ ನಾಲ್ಕು ಕೈಗಳ ರಾಮನಂತೆ ಚಿತ್ರಿತವಾಗಿರಬೇಕು. ಶಂಖ, ಚಕ್ರಗಳನ್ನೂ ವರದ ಅಭಯ ಹಸ್ತಗಳನ್ನೂ ಹೊಂದಿದ ಇಲ್ಲಿನ ಚಿತ್ರ ವೆಂಕಟೇಶ್ವರಸ್ವಾಮಿ ರಾಮನೇ ಎಂಬುದನ್ನು ಹೇಳಲಾಗಿರ ಬೇಕು.

## 12) ಕಾಮಶಾಸ್ತ್ರ ಶಿಲ್ಪ:

ಪ್ರತಿಮಾಮಂಟಪದಲ್ಲಿ ಹಲವಾರು ಕಾಮಶಾಸ್ತ್ರ ಶಿಲ್ಪಗಳೂ ಉಂಟು. ಇಂತಹ ಪ್ರತಿಮೆಗಳು ದೇವಾಲಯಗಳಿಗೆ ಅಪರಿಚಿತ ವೇನಲ್ಲ. ನಾಲ್ಕು ಪುರುಷಾರ್ಥಗಳಲ್ಲಿ ಕಾಮವೂ ಒಂದಾಗಿದ್ದು, ಆಗಮ ಶಾಸ್ತ್ರದ ಉನ್ನತ ಕೃತಿಯಾದ ವಿಷ್ಣುಧರ್ಮೋತ್ತರವು ಇಂತಹ ಚಿತ್ರಗಳು ಮನೆಗಳಲ್ಲಿರಬಾರದೆಂದೂ ಗುಡಿಗಳಲ್ಲಿ ಹಾಗೂ ರಾಜಸ್ಥಾನ ಮೊದಲಾದ ಸಾರ್ವಜನಿಕ ಸ್ಥಳಗಳಲ್ಲಿಯೇ ಇರತಕ್ಕದ್ದೆಂದೂ ಹೇಳುತ್ತದೆ.

ಇಂತಹ ಪ್ರತಿಮೆಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸಲು ಕಾರಣ ಪ್ರಾಯಶಃ ಹೀಗಿರಬೇಕು. ಮನುಷ್ಯ ಸೀಮಿತ ಶಕ್ತಿಹೊಂದಿದವನಾದ್ದರಿಂದ ಅವನ ಎಲ್ಲ ಪ್ರಯತ್ನಗಳಿಂದಲೂ ಕಾಮವನ್ನು ಹದ್ದು ಬಸ್ತಿನಲ್ಲಿಡಲು ಸಾಧ್ಯವಾಗದ್ದರಿಂದ, ದೇವರ ಸಾನ್ನಿಧ್ಯ ಸೇರುವ ಪ್ರಯತ್ನದಲ್ಲಿ ಈ ರೀತಿಯ ಪ್ರಚೋದನೆಗಳನ್ನು ನೇರವಾಗಿ ಎದುರಿಸಿ, ಅವುಗಳನ್ನು ಮೀರಿ ಮೇಲೇರುವ ಸಾಧನೆ ಮೂಡಬೇಕಾಗಿರುತಾಗಬೇಕು. ಬೌದ್ಧ ಸಾಹಿತ್ಯದಲ್ಲಿ ಬುದ್ಧನಿಗೆ ಇಂತಹದೇ ಕಾಮವನ್ನು ಅಧಿಗಮಿಸುವ ದಾರಿಯನ್ನು ತಿಳಿಸಲಾಗಿತ್ತು. ಕಾಳಿದಾಸ ಸರಿಯಾಗಿಯೇ ಹೇಳುವಂತೆ - "ವಿಕಾರ ಹೇತಾನ್ ಸತಿ ವಿಕ್ರಿಯಂತೇ ಯೇಷಾಂ ನ ಚೇತಾಂಸಿ ಥ ಯೇವ ಧೀರಃ".

ಧೀರ ಅಥವಾ ಮಾನಸಿಕ ದೃಢತೆಯನ್ನು ಹೊಂದಿದವನೆಂದರೆ ಯಾರು ಮಾನಸಿಕ ಪ್ರಕ್ಷುಬ್ಧತೆಗೆ ಕಾರಣ ವಿದ್ದಾಗ್ಯೂ ವಿಚಲಿತನಾಗದೆ ಇರುವನೋ ಅಂತಹವನು-ಎನ್ನಬಹುದು.

ಹಿಂದೂ ಪರಂಪರಾಗತ ನಂಬಿಕೆಯಂತೆ ಮಾನವನ ಯೋಚನಾಲಹರಿಯ ಮೇಲೆ ಹತೋಟಿಯನ್ನು ಮನುಷ್ಯ ಜೀವನದಲ್ಲಿ ಅತಿ ಸ್ಪಷ್ಟವಿರುವ ಲಕ್ಷಣಗಳನ್ನು ಅಲಕ್ಷಿಸುವುದರಿಂದಾಗಲೀ ಅದನ್ನು ನೋಡದೆಯೇ ಕಣ್ಣು ಮುಚ್ಚುವುದರಿಂದಾಗಲೀ ಸಾಧಿಸಲು ಆಗದು.

ಇದೇ ಕಾರಣದಿಂದಾಗಿಯೇ ಇಂತಹ ಕಾಮಕ್ರಿಯಾ ವಿವರಗಳನ್ನು - ಸಾಮಾನ್ಯ ಸಾಧಾರಣ ಲೈಂಗಿಕ ಪ್ರಕ್ರಿಯಗಳನ್ನೇ ಅಲ್ಲದೆ, ಮಾನವ ಮನ ಊಹಿಸಿಕೊಳ್ಳಬಹುದಾದ ಎಲ್ಲರೀತಿಯ ಅಮಾನನೀಯ ಲೈಂಗಿಕತೆ ಯನ್ನೂ - ಚಿತ್ರಿಸಲಾಗಿದೆಯೆನ್ನಬೇಕು.

ಇಂತಹ ಲೈಂಗಿಕ ಜೈವಿಕ ಕ್ರಿಯೆಗಳನ್ನು ಎಲ್ಲ ದೇವಾಲಯಗಳಲ್ಲೂ ಕೆತ್ತಿರುವುದರಿಂದಾಗಿ ಆಲಯಕ್ಕೆ ಹೊರಟ ಭಕ್ತ ದೇವರನ್ನು ಕಾಣುವ ಮೊದಲು, ಈ ನೋಟಗಳನ್ನು ಗಮನಿಸಿ, ತನ್ನದೇ ಆದ ಲೈಂಗಿಕ ದೈಹಿಕ ದೌರ್ಬಲ್ಯಗಳ ಬಗ್ಗೆ ಒಳಚಿಂತನೆ ನಡೆಸುವುದರಿಂದ ಮೇಲೇರಿ ನಿಂತು ಶುದ್ಧ ಹೃದಯದವನಾಗಿ ದರ್ಶನಕ್ಕೆ ಅರ್ಹತೆ ಪಡೆಯುವಂತಹವನಾಗುತ್ತಾನೆ. ಆಲಯಗಳಲ್ಲಿನ ಲೈಂಗಿಕ ಪ್ರತಿಮೆಗಳಿರುವುದರ ಉದ್ದೇಶ ಇಷ್ಟೇ ಆದರೂ ಇದನ್ನು ವಿವರಿಸಿ ಹೇಳುವ ಹಲವು ರೀತಿಯ ಪ್ರಯತ್ನಗಳಲ್ಲಿ ಮೂಲಾರ್ಥವನ್ನುಮರೆಯಲಾಗಿದೆ.

ಮೇಲಿನ ಹೇಳಿಕೆಗನುಗುಣವಾಗಿ ಎಲ್ಲ ದೇವಾಲಯಗಳಲ್ಲಿಯೂ ಕಂಡುಬರುವಂತೆಯೇ ಲೈಂಗಿಕ ಪ್ರಕ್ರಿಯಾವಿವರ ಶಿಲ್ಪಗಳು ತಿರುಮಲೆಯ ಆಲಯದ ಪ್ರತಿಮಾಮಂಟಪದಲ್ಲಿಯೂ ಕಂಡುಬರುತ್ತವೆ. ಒಂದು ವಿಶಿಷ್ಟವಾದ ಉಲ್ಲೇಖನೀಯ ಅಂಶವೆಂದರೆ ಇಲ್ಲಿನ ಒಂದು ಕಂಭದ ಒಂದು ಕಡೆ ಲೈಂಗಿಕ ಕಲಾಪಚಿತ್ರಣದಲ್ಲಿನ ಮನುಷ್ಯರನ್ನು ಕೆತ್ತಲಾಗಿರುವಂತೆಯೇ ಬದಿಯಲ್ಲಿಯೇ ಕೈಮೇಲೆತ್ತಿ ಒಂಟಿಕಾಲಿನಲ್ಲಿ ನಿಂತು ತಪಸ್ಸು ಮಾಡುತ್ತಿರುವ ಮುನಿಯ ಶಿಲ್ಪವೂ ಇದ್ದು 12 (ಎಫ್) ಬದುಕು ಕಾಮ ಮೋಕ್ಷಗಳೆರಡರ ಸಾಧನಾಭೂಮಿ ಎಂಬುದನ್ನೇ ವಿವರಿಸುವಂತಿದೆ.

## 6. ಧ್ವಜಸ್ತಂಭ ಮಂಟಪ

ವಾಸ್ತು: ಆಲಯದಲ್ಲಿ ಒಳ ಹೋದಂತೆ ಸಿಗುವು ಧ್ವಜಸ್ತಂಭ ಮಂಟಪ. ಕಿರಿದಾದ ಈ ಮಂಟಪದಲ್ಲಿ ಉತ್ತರ ದಕ್ಷಿಣಗಳಲ್ಲಿ ಸಾಲಾದ ಐದ್ಯೆದು ಕಂಭಗಳಿವೆ. ಇದರ ಪೀಠವನ್ನು ಹೊಳೆಯುವ ಬಂಗಾರದ ಫಲಕಗಳಿಂದ ಅಲಂಕರಿಸಲಾಗಿದೆ. ಈ ಮಂಟಪದ ಕಂಭಗಳಲ್ಲಿರುವ ಗಮನಾರ್ಹ ಶಿಲ್ಪಗಳೊಡನೆ, ಧ್ವಜಸ್ತಂಭದಲ್ಲಿಯೂ ಕಾಳೀಯಮರ್ಧನ ಮೊದಲಾದ ಪ್ರತಿಮೆಗಳುಂಟು. ಸರಿಸುಮಾರು ಹದಿನೈದನೆಯ ಶತಮಾನದಲ್ಲಿ ಈ ಮಂಟಪ ನಿರ್ಮಾಣವಾಗಿದ್ದಿರಬಹುದು.

### 13) ಶಿಲ್ಪ : ಮತ್ಸ್ಯಾವತಾರ:

ಒಂದು ಕಂಭದಲ್ಲಿರುವ ಈ ಪ್ರತಿಮೆ ಮಹಾವಿಷ್ಣುವಿನ ಮತ್ಸ್ಯಾವತಾರವಾಗಿದೆ. ಕಂಭದ ಎರಡನೆಯ ಚೌಕದಲ್ಲಿರುವ ಈ ಚಿತ್ರದಲ್ಲಿ ಪ್ರತಿಮೆಯ ಕೆಳಭಾಗದಲ್ಲಿ ಎಡಕ್ಕೆ ತಿರುಗಿದ ಬಾಲವುಳ್ಳ ಮೀನಿನಾಕಾರವಿದ್ದು ಮೇಲೆ ಮುಂಡದ ಮೇಲೆ ದೇಹರ ಶಿರವಿದ್ದು ಮೇಲಿನೆರಡು ಕೈಗಳು ವರದ ಅಭಯ ಮುದ್ರೆಗಳಲ್ಲಿವೆ.

### 14) ಕಾಳೀಯಮರ್ದನ:

ಧ್ವಜಸ್ತಂಭದ ಕಂಭಗಳಲ್ಲಿ ಒಂದರ ಮೇಲಿದೆ. ಎಡಕ್ಕೆ ವಾಲಿದ ಹೆಡೆಯನ್ನು ಹೊಂದಿದ ಕಾಳೀಯನ ತಲೆಯ ಮೇಲೆ ಬಾಲಕೃಷ್ಣ ನಾಟ್ಯವಾಡುವಂತಿದೆ. ಕೃಷ್ಣನ ಎಡಗೈ ಸರ್ಪದ ಬಾಲವನ್ನು ಹಿಡಿದಿದೆ. ದೇವರನ್ನು ಮಗುವಿನಂತೆ ಚಿತ್ರಿಸಿ ಕಾಲಿಗೆ ಗೆಜ್ಜೆ,ನಡುವಿನಲ್ಲಿ ಕಟಿಸೂತ್ರ, ಉದರದಲ್ಲಿ ಯಜ್ಞೋಪವೀತ, ಕಂಠದಲ್ಲಿ ರತ್ನದ ಹಾರ ಪದಕಸಮೇತವಿರುವಂತಿದ್ದು, ಬಲಗೈಯಲ್ಲಿ ನವನೀತವನ್ನು ಹಿಡಿದಿರುವಂತಿದೆ. ಮಗುವಿನ ತಲೆಗೂದಲನ್ನು ಸುಂದರವಾಗಿ ಬಾಚಿ ಬೈತಲೆಯಲ್ಲಿ ಪದಕಾಭರಣ ಹಾಕಲಾಗಿದೆ.

### 15) ಚತುರ್ಭುಜ ವೇಣುಗೋಪಾಲ:

ಸ್ವಾಮಿಯ ಮುಂದಿನೆರಡು ಕೈಗಳೂ ಕೊಳಲನೂದುವಂತೆಯೂ ಹಿಂದಿನೆರಡು ಕೈಗಳಲ್ಲಿ ಶಂಖಚಕ್ರಗಳನ್ನು ಹಿಡಿದಿರುವಂತೆಯೂ ತೋರಿಸುವ ಅಪರೂಪದ ಶಿಲ್ಪವಿದು. ಬಲಗಾಲನ್ನು ಇಳಿಬಿಟ್ಟು ಕುಳಿತು ಎಡಗಾಲನ್ನು ಅಡ್ಡಕ್ಕೆ ಮಡಚಿದಂತಿದೆ. ಮಣಿಕಟ್ಟಿನಲ್ಲಿ ತುಲಸೀ ಮಾಲೆಯಿದ್ದಂತಿದೆ. ಒಂದು ವಿಧದ ಕಿರೀಟವನ್ನೂ ಸೂಚಿಸಲಾಗಿದೆ. ಸಾಧಾರಣವಾಗಿ ಅಡ್ಡಗಾಲಿನಲ್ಲಿ ನಿಂತು ವೇಣುಗಾನ ಮಾಡುವ ವೇಣುಗೋಪಾಲನಿಗಿಂತ ಬೇರೆಯಾದ ಪ್ರತಿಮೆಯಿದು.

### 16) ಗಜೇಂದ್ರ ಮೋಕ್ಷ:

ಆನೆಯನ್ನು ಕಲಾತ್ಮಕವಾಗಿ ಬಿಡಿಸಲಾಗಿರುವ ಸುಂದರವಾದ ಗಜೇಂದ್ರಮೋಕ್ಷ ದೃಶ್ಯವಿದು. ಸಾಮಾನ್ಯವಾಗಿ ಎಲ್ಲಕಡೆಯೂ ಗಜೇಂದ್ರಮೋಕ್ಷದಲ್ಲಿ, ಸೊಂಡಿಲನ್ನು ಮೇಲೆತ್ತಿ ಸ್ವಾಮಿಗೆ ಸಂಪೂರ್ಣ ಶರಣಾದ ಗಜರಾಜನ ಕಾಲನ್ನು ಮೊಸಳೆ ಹಿಡಿದಂತೆಯೂ, ಸ್ವಾಮಿ ಚಕ್ರದೊಡನೆ ಧಾವಿಸುವಂತೆಯೂ ಇದ್ದರೆ, ಇಲ್ಲಿ ಮೊಸಳೆಯಿಂದ ಬಿಡುಗಡೆ ಪಡೆದಮೇಲೆ ಗಜೇಂದ್ರನು ಸ್ವಾಮಿಯಮುಂದೆ ನಿಂತು ಕೃತಜ್ಞತೆಯಿಂದ ವಂದಿಸುವಂತಿದೆ. ಸ್ವಾಮಿಯು ಎರಡು ಕೈಗಳನ್ನೂ ಆನೆಯ ಮಸ್ತಕದ ಮೇಲಿಟ್ಟು ಆಶೀರ್ವದಿಸುತ್ತಿದ್ದಾನೆ. ಸ್ವಾಮಿಯ ಹಿಂದಿನ ಎರಡು ಕೈಗಳಲ್ಲಿ ಶಂಖಚಕ್ರಗಳನ್ನು ಹಿಡಿದಿದ್ದಾನೆ. ಈ ಶಿಲ್ಪಗಳಲ್ಲಿ ವಿಷ್ಣುವಿಗೆ ಕಿರೀಟವೂ ಉಂಟು. (ಅಲಿಪಿರಿಯ ಮೆಟ್ಟಿಲನ್ನೇರಿ ಗಾಳಿಗೋಪುರವನ್ನು ಸೇರುವ ಮೊದಲು ಮಧ್ಯದ ಗೋಪುರದ ನಂತರ ಒಂದು ಹುಟ್ಟು ಬಂಡೆಯ ಮೇಲೆ ಇಂತಹದೇ ಆಳೆತ್ತರದ ಗಜೇಂದ್ರಲಾಲನೆಯ ವಿಷ್ಣು ವಿಗ್ರಹ ಕೆತ್ತನೆಯುಂಟು. ಇಡೀ ಬಂಡೆಗೇ ಸುತ್ತ ಗೋಡೆಕಟ್ಟಿ ಒಂದು ಕಿರಿಯ

ಆಲಯವನ್ನಾಗಿಸಲಾಗಿದೆ. "ತಿರುಪತಿಪುರ ಮಾರ್ಗಕುರುವ ಪ್ರತಿಷ್ಠಿತ ವೆಂಕಟಾದ್ರೀಶ್ವರ ವಿಗ್ರಹುಂಡು" - ಎಂದು ಕ್ರಿ.ಶ.1628ರಲ್ಲಿ ಮಟ್ಲ ಕುಮಾರ ಅನಂತರಾಯನ ಶಾಸನವುಂಟು. ಹೋಲಿಸುವ, ಗಮನಿಸುವ ಅಂಶ - ಅನುವಾದಕ)

**17) ಶ್ರೀನಿವಾಸನ ಕಲ್ಯಾಣ:**

ಶ್ರೀನಿವಾಸ ಪದ್ಮಾವತಿಯರ ಕಲ್ಯಾಣವನ್ನು ಚಿತ್ರಿಸುವ ಶಿಲ್ಪವಿದು. ಶಿಲ್ಪದ ಮೇಲ್ಭಾಗದಲ್ಲಿ ಕಿನ್ನರ ಯಕ್ಷ ಗಂಧರ್ವರನ್ನು ಚಿತ್ರಿಸಲಾಗಿದೆ. ವಧುವನ್ನು ವರನಿಗೆ ನೀಡುವ ಕನ್ಯಾದಾನದ ನೋಟವಿದೆ.

**18) ಮೋಹಿನಿ:**

ವಿಷ್ಣುವಿನ ಮೋಹಿನೀ ಅವತಾರದ ಚಿತ್ರಣವಿದು. ವಿಗ್ರಹವು ಮೋಹಕವಾಗಿರುವಂತೆ ಚಿತ್ರಿಸಲು ಶಿಲ್ಪಿ ಕಷ್ಟಪಟ್ಟಿದ್ದಾನೆ. ಈ ಹೆಂಗಸಿನ ದೇಹ ಸೌಂದರ್ಯವನ್ನು ಪಡಿಮೂಡಿಸಲು ಹೆಚ್ಚಿನ ಪ್ರಯತ್ನದ ಗುರುತುಗಳಿವೆ. ಪಕ್ಕದಲ್ಲಿ ನಿಂತ ಯೋಗಿಗಳ ವಿಚಿತ್ರ ಭಂಗಿಗಳನ್ನು 'ಮುನಿಗಳ ಮನವೂ ಮಂಗನ ಮನವಾಯಿತು ಮೋಹಿನಿಯ ಮಹಾ ಸೌಂದರ್ಯದ ಮುಂದೆ' ಎಂಬುದನ್ನುಸೂಚಿಸ ಲೆಂದೇ ಚಿತ್ರಿಸಲಾಗಿದೆ. ಇಲ್ಲಿ ಗಮನಿಸತಕ್ಕ ಮತ್ತೊಂದು ಅಂಶವೆಂದರೆ ಆಕೆ ಹಾಕಿಕೊಂಡಿರುವ ಪಾದರಕ್ಷೆಗಳು ಮತ್ತುಪಾದರಕ್ಷೆಯ ಹೈಹೀಲ್ಸ್ ಎನ್ನತಕ್ಕಂತಹ ಎತ್ತರಿಸಿದ ಹಿಮ್ಮಡಿಗಳು; ಜೊತೆಗೇ ಆಕೆ ಹಾಕಿಕೊಂಡಿರುವ ಈಜಾರದಂತಹ ಉಡುಪು.

**19) ಗರುಡವಾಹನ:**

ಗರುಡನ ಮೇಲೇರಿದ ವಿಷ್ಣುವಿನ ಶಿಲ್ಪವಿದು. ಗರುಡನ ಎರಡೂ ಕೈಗಳ ಮೇಲೆ ಕಾಲನ್ನಿಟ್ಟು ಅವನ ಹೆಗಲ ಮೇಲೆಕುಳಿತಂತಿದೆ. ಬಲಗೈ ವರದ ಮುದ್ರೆಯನ್ನೂ ಎಡಗೈ ಅಭಯ ಮುದ್ರೆಯನ್ನೂ ಹೊಂದಿದ್ದರೆ ಮೇಲಿನ ಎರಡು ಕೈಗಳಲ್ಲಿ ಶಂಖ ಚಕ್ರಗಳನ್ನು ಹೊಂದಿರುವಂತಿದೆ. ಸ್ವಾಮಿಯ ತಲೆ ಹಾಗೂ ಶಂಖ ಚಕ್ರಗಳ ಮೇಲೆ ಆಕಾಶದಲ್ಲಿ ಮೂರು ಶ್ವೇತಛತ್ರಗಳಿರುವಂತಿದೆ.

**20) ಗಂಡಭೇರುಂಡ:**

ವಿಜಯನಗರದರಸರ ಪ್ರಸಿದ್ಧವಾದ ರಾಜಮುದ್ರೆಯಾದ ಎರಡು ತಲೆಯ ಹಕ್ಕಿ ಗಂಡಭೇರುಂಡದ ಶಿಲ್ಪ. ಮೀನನ್ನು ಹೋಲುವ ದೇಹ, ಗೃಧ್ರವನ್ನು ಹೋಲುವ ಮುಖಗಳು, ಕೊಕ್ಕಿನಲ್ಲಿ ಹಿಡಿದಿರುವ ತೂಗಿಬಿದ್ದಿರುವ ಎರಡೆರಡು ಆನೆಗಳು ಗಂಡಭೇರುಂಡದ ಪ್ರಾತಿನಿಧಿಕ ಮಾದರಿಯಾಗಿದೆ.

21) ಸೂರ್ಯ:

ಎರಡು ಕೈಗಳಲ್ಲಿ ಹಿಡಿದಿರುವ ಎರಡು ತಾವರೆ ಹೂವುಗಳಿಂದಾಗಿ ಸೂರ್ಯನೆಂಬುದುನ್ನು ಸುಲಭವಾಗಿ ಗುರುತಿಸಬಹುದು. ಸ್ವಾಮಿಯ ಹಿಂದೆ ಪ್ರಭಾವಳಿಯಿದೆ. ಸಾಮಾನ್ಯವಾಗಿರುವ ಏಳು ಕುದುರೆಗಳ ಬದಲಿಗೆ ಎರಡೇ ಕುದುರೆಗಳನ್ನು ಕಾಣಿಸಲಾಗಿದೆ.

**22) ನರಸಿಂಹ:**

ಧ್ವಜಸ್ತಂಭ ಮಂಟಪದಲ್ಲಿ ಕಂಡು ಬರುವ ಊರ್ಧ್ವ ಮೇಧಸ್ಕಭಂಗಿಯ ಅಪರೂಪದ ಶಿಲ್ಪವಿದು. ಆದರೆ ಹಿರಣ್ಯಕಶ್ಯಪನೊಡನೆ ಸಂಬಂಧವನ್ನು ಸ್ಥಾಪಿಸಲಾಗಿಲ್ಲವಾಗಿ ಪ್ರಾಣಿಯ ಪ್ರತಿಮಿಸಿದ ಶಿಲ್ಪಿಯ ಕಲ್ಪನೆಯಾಗಿರಬೇಕಷ್ಟೆ. ಹಲವು ಸಾಮಾನ್ಯಚಿತ್ರಗಳೂ ಆಗಿನ ಸಾಮಾಜಿಕ ಸಾಂಸ್ಕೃತಿಕ ಪರಿಸರ ವನ್ನು ಬಿಂಬಿಸುವ ಶಿಲ್ಪಗಳಾಗಿ ಕಂಡುಬರುತ್ತವೆ.

23) 23ಎ. ಧ್ವಜಸ್ತಂಭ ಮಂಟಪದ ಎರಡು ಶ್ರೀಸಾಮಾನ್ಯ ಚಿತ್ರಗಳು. ಇವು ವಿಜಯನಗರ ಕಾಲದ ಸಾಮಾನ್ಯರ ಚಿತ್ರಗಳು

**24.ಎ) ಸಂಜೀವಿನಿ ಪರ್ವತಧಾರಿ:**

ಆಂಜನೇಯ ಸಂಜೀವಿನಿ ಪರ್ವತವನ್ನು ಎತ್ತಿರುವ ಶಿಲ್ಪವಿದು. ಇಂತಹ ಶಿಲ್ಪಗಳಲ್ಲಿ ಸಾಮಾನ್ಯವಾಗಿ ಆಂಜನೇಯನು ಪರ್ವತವನ್ನು ಎತ್ತಿಕೊಂಡು ಹಾರುವಂತೆ ಚಿತ್ರಿಸಲಾಗುತ್ತದೆಯಾದರೆ ಇಲ್ಲಿ ಪರ್ವತವನ್ನೆತ್ತಿಕೊಂಡು ನೆಲದಮೇಲೆ ನಿಂತಿರುವಂತಿದೆ. ಮಾರುತಿಯ ಗದೆಯೂ ಕಂಡುಬರದು.

**24ಬಿ)** ಯುದ್ಧ ರಂಗದಲ್ಲಿರುವ ಹನುಮಂತನನ್ನೂ ಇಲ್ಲಿ ಕಾಣಬಹುದು. ಈತನ ಬದಿಯಲ್ಲಿ ನೆಲದಲ್ಲಿ ಅಡ್ಡ ಬಿದ್ದಿರುವ ಪ್ರತಿಮೆಗಳುಂಟು. ಪ್ರಾಯಶಃ ರಾಮ ಲಕ್ಷ್ಮಣರೇ ಮೂರ್ಛಾಪನ್ನರಾಗಿರಬಹುದು.

**25) ಹತ್ತೀರಾಂಜೀಯೊಡನೆ ಸ್ವಾಮಿ:**

ಧ್ವಜಸ್ತಂಭ ಮಂಟಪದ ಬಳಿಯ ಬಾಗಿಲವಾಡದಲ್ಲಿ ಕಂಡು ಬರುವ ಈ ಉಬ್ಬು ಶಿಲ್ಪದಲ್ಲಿ ಹತ್ತೀರಾಂಜೀಯೊಡನೆ ಸ್ವಾಮಿ ಪಗಡೆಯಾಡುವುದನ್ನು ಕಾಣಬಹುದು. 19ನೇ ಶತಮಾನದಲ್ಲಿ ಆಂಗ್ಲರು ಆಲಯದ ಆಡಳಿತವನ್ನು ಹತ್ತೀರಾಂಜಿ ಮಠಕ್ಕೊಪ್ಪಿಸಿದರು. ಈ ಮಠದ ಮೂಲಪುರುಷ ಹತ್ತೀರಾಂಜೀಯು ದೇವರೊಡನೆ ಪಗಡೆಯಾಟವಾಡುತ್ತಿದ್ದನೆಂಬ ಕಥೆಯಿದೆ. ಈ ಶಿಲ್ಪ ಈಚಿನದೆನ್ನಲಾಗಿದೆ.

**26) ಶ್ರೀರಾಮ ಪಟ್ಟಾಭಿಷೇಕ :**

ಇದೂ ಸಹ ಧ್ವಜಸ್ತಂಭ ಮಂಟಪದ ದ್ವಾರಬಂಧದಲ್ಲಿರುವ ಚಿತ್ರ. ನೋಡಿ ದೊಡನೆಯೇ ತಿಳಿಯುವಂತೆ ಇದು ರಾಮ ಪಟ್ಟಾಭಿಷೇಕದ ಕಥೆ. ಹನುಮಂತ ನೆಲದಮೇಲೆ ಕೆಳಗೆ ಮೊಣಕಾಲ ಮೇಲೆ ಕುಳಿತಿದ್ದಾನೆ. ಸ್ವಾಮಿಯ ಎಡದಲ್ಲಿ ಸೀತಾದೇವಿ ಕುಳಿತಿದ್ದಾಳೆ. ಬಲಬದಿಯಲ್ಲಿ ಇಬ್ಬರು ತಮ್ಮಂದಿರನ್ನು ಬಿಲ್ಲು ಹಿಡಿದವರಂತೆ ತೋರಿಸಲಾಗಿದೆ. ಎಡಬದಿಗೆ ಲಕ್ಷ್ಮಣ ಶ್ವೇತ ಛತ್ರವನ್ನು ಹಿಡಿದಂತಿದೆ.

**7. ತಿರುಮಲರಾಯ ಮಂಟಪ**

**ಅ.ವಾಸ್ತು :** ಈ ಮಂಟಪವನ್ನು ಮೊದಲಿಗೆ ಸಾಳುವ ನರಸಿಂಹನು ಕಟ್ಟಿಸಿದ್ದು, 16 ನೇ ಶತಮಾನದಲ್ಲಿ ಅರವೀಡುವಂಶದ ತಿರುಮಲರಾಯನಿಂದ ವಿಸ್ತರಣ ಹೊಂದಿರಬೇಕು. 1565 ರ ತಾಳಿಕೋಟೆ ಯುದ್ಧದಲ್ಲಿ ಶಿರಚ್ಛೇದಕ್ಕೆ ಒಳಗಾದ ಅಳಿಯರಾಮರಾಯನ ಸೋದರ ಈತ. ಈ ಮಂಟಪವು ಕಂಭಗಳಿಂದ ಕೂಡಿದ್ದು, ವಿಜಯನಗರ ಶೈಲಿಯಲ್ಲಿಯೇ ಇದೆ. ಒಂದು ಕೇಂದ್ರ ಕಂಭದ ಸುತ್ತನಿಂತ ಸಣ್ಣ ಕಂಬಗಳಿಂದಾಗಿರುವುದು. ಮುಖ್ಯ ಕಂಭಗಳಲ್ಲಿ ಕುದುರೆಯೇರಿದ ರಾವುತರಿದ್ದಾರೆ. ಮಂಟಪದ ಮಧ್ಯದಲ್ಲಿ ಕಪ್ಪು ಶಿಲೆಯ ಕಿರುಮಂಟಪ ಹೊಂದಿದೆ. ತಿರುಮಲೆಯ ಆಲಯದಲ್ಲಿ ವಿಜಯನಗರ ಶೈಲಿಯ ಅತ್ಯುತ್ತಮ ಶಿಲ್ಪ ಸೌಂದರ್ಯ ಈ ಮಂಟಪದಲ್ಲಿ ಕಾಣಬರುವುದು.

**ಆ. ಶಿಲ್ಪ : 27) ವಿಷ್ಣು - ವರಾಹ :**

ಭೂವರಾಹರೂಪದಲ್ಲಿರುವ ವಿಷ್ಣುವಿನ ಭವ್ಯಶಿಲ್ಪವಿದು. ಸ್ವಾಮಿಯ ಪಾದದ ಬಳಿಯ ಕರ್ಣಕೂಡು ಹಾಗೂ ಸಾಲೈಗಳು ಮಾದರಿಯವಾಗಿವೆ. ವರಾಹ ಮುಖದ ಸ್ವಾಮಿಯ ಎಡ ತೊಡೆಯ ಮೇಲೆ ಭೂದೇವಿಯು ಕುಳಿತಿರುವಂತೆ ಚಿತ್ರಿಸಲಾಗಿದೆ.

ಹಿಂದಿನೆರಡು ಕೈಗಳಲ್ಲಿ ಶಂಖಚಕ್ರಗಳನ್ನು ಹಿಡಿದ ಸ್ವಾಮಿಯ ಬಲಗೈ ಅಭಯ ಮುದ್ರೆಯಲ್ಲಿದ್ದು ಮತ್ತೊಂದು ಕೈ ಭೂದೇವಿಯ ಭುಜದ ಮೇಲಿರಬೇಕು. ವೈಖಾನಸಾಗಮದಲ್ಲಿ ಹೇಳಿರುವಂತೆ ಸ್ವಾಮಿಯ ಮುಖ ದೇವಿಯ ಕಡೆ ತಿರುಗಿದೆ. ಭೂದೇವಿಯನ್ನು ನಾಗಲೋಕದಿಂದ ರಕ್ಷಿಸಿದನೆಂಬುದನ್ನು ಸೂಚಿಸಲು ಸ್ವಾಮಿಯ ಪಾದದಡಿಯಲ್ಲಿ ಹಲವು ಹಾವುಗಳಿವೆ. ಇಲ್ಲಿ ಸ್ವಾಮಿ ಕಿರೀಟ ಹೊಂದಿದ್ದಾನೆ. ಭೂವರಾಹ ಪ್ರತಿಮೆಗಳಲ್ಲಿ ಇದೊಂದು ಉತ್ತಮ ನಮೂನೆಯಾಗಿದೆ.

**28) ಕೋದಂಡರಾಮ:**

ಎಡಗೈಯಲ್ಲಿ ಕೋದಂಡವನ್ನೂ ಬಲತೋಳ ಹಿಂಬದಿಯಲ್ಲಿ ಬಾಣಗಳನ್ನು ಹೊಂದಿದ ಬತ್ತಳಿಕೆಯನ್ನೂ ಹೊಂದಿರುವ ಕೋದಂಡರಾಮನು ತುಸುಬಾಗಿದಂತೆ ತ್ರಿಭಂಗ ಮುದ್ರೆಯಲ್ಲಿ ನಿಂತು ಬಲ ಗೈಯಲ್ಲಿ ಶರವನ್ನು ಹಿಡಿದಿದ್ದಾನೆ.

**29) ಅಷ್ಟಭುಜ ವೇಣುಗೋಪಾಲ :**

ಎರಡು ಕೈಗಳಲ್ಲಿ ವೇಣುವನ್ನು ಹಿಡಿದಿರುವ ಅಷ್ಟಬಾಹುವಾದ ಈ ವೇಣುಗೋಪಾಲ ಮೂರ್ತಿ ಅಪುರೂಪದ ಶಿಲ್ಪವಾಗಿದೆ. ಧೇನುವು ಸ್ವಾಮಿಯು ಹಿಂದೆ ನಿಂತು ಸ್ವಾಮಿಯತ್ತ ತಲೆಯತ್ತಿ, ಕಿವಿನಿಮಿರಿಸಿ ವೇಣುಗಾನವನ್ನು ಕೇಳುವಂತಿದೆ. ಸ್ವಾಮಿಯು ಇತರ ಆಯುಧಗಳಾದ ಶಂಖ, ಚಕ್ರ, ಬಿಲ್ಲು, ಇತರ ಕೈಗಳಲ್ಲಿವೆ. ಸಾಮಾನ್ಯವಾಗಿ ವೇಣುಗೋಪಾಲನು ಎರಡು ಕೈಹೊಂದಿ ವೇಣುವನ್ನು ನುಡಿಸುವಂತಿ ರುವುದು. ಇಲ್ಲಿನ ವಿಗ್ರಹ ಪಾದದ ಕೆಳಗೆ ಕರ್ಣಕೂಡು, ಸಾಲೈಗಳ ಚಿತ್ರಣ ಗಮನಾರ್ಹ.

**30) ಶ್ರೀನಿವಾಸ :**

ಕಂಭಗಳಲ್ಲಿ ಕಂಡುಬರುವ ಶ್ರೀನಿವಾಸರಲ್ಲಿ ಉತ್ತಮವಾಗಿ ಕೆತ್ತಲ್ಪಟ್ಟಿರುವ ಶಿಲ್ಪವಿದು. ಬಲಗೈ ವರದ ಮುದ್ರೆಯಲ್ಲೂ ಎಡಗೈ ಕಟ್ಯವಲಂಬಿತ ಹಸ್ತವಾಗಿಯೂ ಇವೆ. ಪ್ರಭಾವಳಿಯ ಮೇಲೆ ಮಕರತೋರಣ ವಿದೆ. ವನಮಾಲೆಯು ದೀರ್ಘವಾಗಿದ್ದು ಕಿರೀಟವೂ ಎತ್ತರವಾಗಿದೆ. ಈ ಮಂಟಪದಲ್ಲಿರುವ ಶಿಲ್ಪಗಳಲ್ಲಿ ಕಲೆಯ ದೃಷ್ಟಿಯಿಂದ ಇದು ಉತ್ತಮವಾಗಿದೆ.

**31) ಅಂಜಲೀಬದ್ಧ ಹನುಮ :**

ವೈಷ್ಣವ ಆಲಯಗಳಲ್ಲಿ ಕಂಡುಬರುವಂತಹ ಪ್ರಭಾವಳಿಯಲ್ಲಿ ನಿಂತ ಅಂಜಲೀಬದ್ಧವಾದ ಹನುಮಂತನ ಶಿಲ್ಪವೂ ಇಲ್ಲಿದೆ ಸ್ವಾಮಿಯ ಹಣೆಯಲ್ಲಿ ಊರ್ಧ್ವಪುಂಡ್ರಗಳೂ ಇವೆ.

**32) *ಗಾನ ಗೋಪಾಲ:***

ಎರಡು ಕೈಗಳಲ್ಲಿ ವೇಣುವನ್ನು ಹಿಡಿದ ಎಡಕ್ಕೆ ತಿರುಗಿದಂತಿರುವ ಶಿಲ್ಪವಿದು. ಬಲಗಾಲಮೇಲೆ ನಿಂತು ಎಡಗಾಲನ್ನು ಅಡ್ಡಗೊಳಿಸಲಾಗಿದೆ. ಪಶುವು ತಲೆಯೆತ್ತಿ ಕಿವಿ ನಿಮಿರಿಸಿಕೊಂಡು ಗಾಯನವನ್ನು ಕೇಳುತ್ತಿದೆ.

**33) ಅ, ಆ, ಇ.** ತಿರುಮಲರಾಯ ಮಂಟಪದಲ್ಲಿ ಕಿರಿಯ ಶಿಖರ ಹಾಗೂ ಒಳಮಂಟಪಗಳೂ ಇದ್ದು, ವಿಜಯನಗರ ಶೈಲಿಯಲ್ಲಿಯೇ ಇರುವ ಕುಸುರಿಗೆಲಸದ ಕಂಭಗಳು, ಅಧಿಷ್ಠಾನ, ಪ್ರಸ್ತಾರಗಳನ್ನು ಹೊಂದಿದೆ, ಸುಂದರವಾಗಿವೆ. (ಇಚಿತ್ರದ ಎರಡೂ ಕೊನೆಗಳಲ್ಲಿ ಈ ಮಂಟಪದ ಆಚೀಚೆ ಎರಡು ಎತ್ತರದ ಕಂಬಗಳುಂಟು. ಈ ಕಂಬಗಳು ಒಳಮಂಟಪದ ವಿಮಾನದ ಮೇಲಿನ ಚಾವಣಿಯವರೆಗೆ ಹೋಗಿವೆ. ಸಾಳುವ ನರಸಿಂಹರಾಯನ ಡೋಲೋತ್ಸವ ಮಂಟಪದ ಗುರುತು ಇದು - ಅನುವಾದಕ)

**8. ಕಲ್ಯಾಣಮಂಟಪ**

***ಅ. ವಾಸ್ತು:*** ವಿಮಾನ ಪ್ರದಕ್ಷಿಣೆಯ ದಕ್ಷಿಣಕ್ಕೆ ಹಿಂಭಾಗದ ಮೂಲೆಯಲ್ಲಿರುವ ಕಲ್ಯಾಣಮಂಟಪವು ತನ್ನಲ್ಲಿನ ಅದ್ಭುತವಾದ ಶಿಲ್ಪಕಲೆಯ ಕುಸುರಿಕೆಲಸದಿಂದ ಪ್ರಸಿದ್ಧವಾಗಿದೆ. ಇಲ್ಲಿನ ವಾಸ್ತುವಿನ ಹಾಗೂ ಶಿಲ್ಪದ ಅಧ್ಯಯನದಿಂದ ಇದು ಕ್ರಿ.ಶ. ಹದಿನೈನೆಯ

ಶತಮಾನದಲ್ಲಿ ನಿರ್ಮಾಣವಾಗಿರಬೇಕು. 1970ಕ್ಕೆ ಮುಂಚೆ ಹಲವು ವರ್ಷಗಳವರೆಗೂ ಇಲ್ಲಿಯೇ ಸ್ವಾಮಿಗೆ ಕಲ್ಯಾಣೋತ್ಸವ ನಡೆಯುತ್ತಿತ್ತು.

ಈ ಕಲ್ಯಾಣಮಂಟಪದ ಒಳಗಿರುವ ನಾಲ್ಕು ಕಂಭಗಳ ಒಳಮಂಟಪ ಕಲಾಕೌಶಲದ ಅತ್ಯುತ್ತಮವಾದ ಮಾದರಿಯಾಗಿದೆ. ಕರಿಯ ಗ್ರಾನೈಟ್ ಶಿಲೆಯಿಂದ ಕೂಡಿದ ಈ ಒಳ ಮಂಟಪದ ಅತಿ ಸೂಕ್ಷ್ಮ ವಿವರಗಳ ಸಂಪತ್ತು ಹಾಗೂ ಕಸುರಿಗೆಲಸದ ಕೌಶಲ್ಯಗಳಿಂದಾಗಿ ಇದು ವಿಜಯನಗರದ ಕಾಲದ ಕಲೆಯ ಪ್ರಾತಿನಿಧಿಕ ಉತ್ಕೃಷ್ಟತೆಯಾಗಿದೆ. ಇಲ್ಲಿನ ಆಡುವ ಕೊಡಂಗು, ಪುಷ್ಪಬೋದಿಗಳ ವಿವರ ಕೆತ್ತನೆ, ಸುಂದರವಾದ ಸೂಕ್ಷ್ಮ ಚಿತ್ರಗಳನ್ನು ಬಿಡಿಸುವಿಕೆಗಳಿಂದಾಗಿ ವಿಜಯನಗರದ ಕಾಲದ ಕಲೆಯ ಅತ್ಯುನ್ನತ ಉದಾಹರಣೆಯಾಗಿದೆ. ಜೊತೆಗೇ ಹಲವು ಹನ್ನೊಂದು ಉಬ್ಬು ಶಿಲ್ಪಗಳೂ ಇವೆ.

**ಆ. ಶಿಲ್ಪ ಸಂಪತ್ತು : 34) ಯೋಗ ನರಸಿಂಹ :**

ಯೋಗ ನರಸಿಂಹಸ್ವಾಮಿ ತನ್ನ ಎರಡೂ ಕಾಲುಗಳನ್ನೂ ಅಡ್ಡ ತೊಡಗಿಸಿ ಉತ್ಕುಟಿಕಾಸನದಲ್ಲಿರುವ ಈ ಶಿಲ್ಪದಲ್ಲಿ ಎರಡೂ ಕಾಲುಗಳನ್ನೂ ಒಂದು ಬಟ್ಟೆಯ ಪಟ್ಟಿ ಸೇರಿಸಿ ಹಿಡಿದಿದೆ. ಸ್ವಾಮಿಯ ಮುಂದಿನ ಎರಡೂ ಕೈಗಳೂ ಮೊಣಕಾಲುಗಳ ಮೇಲೆ ಇಳಿಬಿದ್ದಂತಿವೆ. ಮೇಲಿನ ಎರಡೂ ಕೈಗಳಲ್ಲಿ ಶಂಖ ಚಕ್ರಗಳಿವೆ. ತಲೆಗೆ ಕಿರೀಟವಿದ್ದು ವಿಶಾಲವಾದ ಭುಜಸ್ಕಂಧಗಳಿವೆ. ಹಲವಾರು ಆಭರಣಗಳನ್ನು ಧರಿಸಿದಂತೆ ಕೆತ್ತಲಾಗಿದೆ.

**35) ಲಕ್ಷ್ಮೀನರಸಿಂಹ :**

ಕಲ್ಯಾಣ ಮಂಟಪದ ನಡುವಿನಲ್ಲಿರುವ ಕಂಭಗಳಲ್ಲಿ ಒಂದರ ಮೇಲೆ ಇರುವ ಈ ಪ್ರತಿಮೆಯಲ್ಲಿ ಲಕ್ಷ್ಮಿಯು ಸ್ವಾಮಿಯ ಎಡ ತೊಡೆಯ ಮೇಲೆ ಕುಳಿತಿರುವಂತೆ ಕೆತ್ತಲಾಗಿದೆ. ಸ್ವಾಮಿಯ ಬಲಗೈ ಅಭಯ ಹಸ್ತವಾಗಿದ್ದು ಎಡಗೈ ದೇವಿಯನ್ನು ಸುತ್ತುವರೆದಿದೆ. ಮೇಲಿನ ಎರಡು ಕೈಗಳಲ್ಲಿ ಶಂಖಚಕ್ರಗಳಿವೆ. ಸ್ವಾಮಿಯು ಪದ್ಮಪೀಠದಲ್ಲಿ ಕುಳಿತು ಅರ್ಧ ಪರ್ಯಂಕಾಸನದಲ್ಲಿ ಬಲಗಾಲನ್ನು ಕೆಳಗೆ ಇಳಿ ಬಿಟ್ಟಂತೆಯೂ ಕಂಡುಬರುತ್ತದೆ.

**36) ಹಿರಣ್ಯವಧೆ :**

ನರಸಿಂಹಸ್ವಾಮಿ ಬಲಗಾಲನ್ನಿಳಿಬಿಟ್ಟ ಅರ್ಧಪರ್ಯಂಕಾಸನದಲ್ಲಿರುವಂತೆ ಸ್ವಾಮಿಯ ಮಡಿಲಲ್ಲಿ ಹಿರಣ್ಯಕಶ್ಯಪನು ಮಲಗಿರುವಂತೆಯೂ, ಸ್ವಾಮಿಯ ಎರಡೂ ಕೈಗಳೂ ರಾಕ್ಷಸನ ಉದರವನ್ನು ಬಗೆಯುತ್ತಿರುವಂತೆಯೂ ಕಂಡು ಬರುತ್ತದೆ.ಮೇಲಿನ ಎರಡೂ ಕೈಗಳಲ್ಲಿ ಶಂಖ ಚಕ್ರಗಳಿವೆ. ವಿಶಾಲವಾದ ಭುಜಸ್ಕಂಧಗಳು, ಸ್ವಾಮಿಯ ಉಗ್ರಕೋಪವನ್ನು ಬಾಯಿ ಹಾಗೂ ಕಣ್ಣುಗಳಲ್ಲಿ ತೋರಿಸಲಾಗಿದೆ. ಇಲ್ಲಿ ಸ್ವಾಮಿಗೆ ಎಂಟು ಕೈಗಳಿರುವಂತೆ ತೋರಿಸಲಾಗಿದೆ.

**37) ಹಿರಣ್ಯವಧೆ :**

ಇದೂ ಹಿರಣ್ಯಕಶ್ಯಪ ವಧೆಯ ವಸ್ತುವೇ ಇದ್ದರೂ ಇಲ್ಲಿನ ನೃಸಿಂಹನಿಗೆ ಹದಿನಾರು ಕೈಗಳು. ಇಲ್ಲಿ ಸ್ವಾಮಿಯ ಎಡಗಾಲು ಕೆಳಗೆ ಇಳಿಬಿದ್ದು ಅರ್ಧಪರ್ಯಂಕಾಸನದಲ್ಲಿ ಇರುವಂತೆಯೂ, ರಾಕ್ಷಸನು ಬಲಗಡೆಗೆ ತಲೆಮಾಡಿ ಸ್ವಾಮಿಯ ಮಡಿಲಲ್ಲಿರುವಂತೆಯೂ ತೋರಿಸಲಾಗಿದೆ. ಒಂದು ಕೈ ರಾಕ್ಷಸನ ತಲೆಯನ್ನೂ ಇನ್ನೊಂದು ಕೈ ಅವನ ಕಾಲುಗಳನ್ನೂ ಒತ್ತಿಹಿಡಿದಿವೆ.

ಎರಡು ಕೈಗಳು ಹಿರಣ್ಯಕಶ್ಯಪನ ಹೊಟ್ಟೆಯನ್ನು ಬಗೆಯುತ್ತಿರುವಂತೆ ಹಾಗೂ ಮತ್ತೆರಡು ಕೈಗಳು ರಾಕ್ಷಸನ ಕರುಳನ್ನು ಹಾರವಾಗಿ ಹಾಕಿಕೊಳ್ಳುತ್ತಿರುವಂತೆಯೂ ಇವೆ. ಇತರ ಕೈಗಳಲ್ಲಿ ಹಲವಾರು ಆಯುಧಗಳಿವೆ.

**38) ಸಿಂಹವಾಹನ ನರಸಿಂಹ :**

ಸಿಂಹವನ್ನು ಏರಿ ಕುಳಿತ ನರಸಿಂಹನನ್ನು ಇಲ್ಲಿ ಅಪರೂಪವಾಗಿ ಕೆತ್ತಲಾಗಿದೆ. ಎಂಟು ಕೈಗಳು, ಮುಂದಿನ ಎರಡು ಕೈಗಳು ವರದ ಅಭಯ ಹಸ್ತಗಳು. ಮಿಕ್ಕ ನಾಲ್ಕು ವಿವಿಧ ಆಯುಧಗಳನ್ನು ಹಾಗೂ ಹಿಂದಿನ ಎರಡು ಶಂಖ ಚಕ್ರಗಳನ್ನು ಹಿಡಿದಿವೆ. ಸ್ವಾಮಿಯ ಬಲಗಾಲು ಕೆಳಗೆ ಇಳಿಬಿದ್ದು ಅರ್ಧಪರ್ಯಂಕಾಸನದಲ್ಲಿದೆ. ಸ್ವಾಮಿಯ ಮುಖ ಹಾಗೂ ಆತ ಕುಳಿತಿರುವ ಸಿಂಹದ ಮುಖಗಳ ನಡುವಣ ಹೋಲಿಕೆಗಳು ಗಮನಾರ್ಹವಾದವು. ಸಾಧಾರಣವಾಗಿ ಬೇರೆಲ್ಲೂ ಕಂಡು ಬರದಂತಹ ಶಿಲ್ಪ ಇದು.

**39) ತ್ರಿವಿಕ್ರಮ:**

ವಿಷ್ಣು ತ್ರಿವಿಕ್ರಮ ರೂಪದಲ್ಲಿರುವ ಅಪರೂಪದ ಶಿಲ್ಪವಿದು. ಸ್ವಾಮಿಯು ತನ್ನ ಎಡಗಾಲಿನ ಮೇಲೆ ನಿಂತಿದ್ದು ಬಲಗಾಲು ಲಂಬಕೋನದಲ್ಲಿ ಚಾಚಿದ್ದು ಆಗಸವನ್ನಳೆಯುವಂತಿದೆ.

ಸ್ವಾಮಿಯ ಉಡುಪು ಅಗಲವಾಗಿ ಹರಡಿ ಉದ್ದ ಅಗಲಗಳಲ್ಲಿ ಹಾಸು ಹೊಕ್ಕಾಗಿರುವಂತೆ ಕಲಾತ್ಮಕವಾಗಿ ರೂಪಿಸಲಾಗಿದೆ. ಮುಂದಿನ ಎಡಗೈ ಕಟ್ಯವಲಂಬಿತವಾಗಿ ಬಲಗೈ ಮೇಲೇರಿ ಅಂಗೈಯನ್ನು ಆಕಾಶಕ್ಕೆ ತೋರಿಸುತ್ತ ತರ್ಜನಿ ಭಂಗಿಯಲ್ಲಿದೆ. ಹಿಂದಿನೆರಡೂ ಕೈಗಳಲ್ಲಿ ಶಂಖ ಚಕ್ರಗಳಿವೆ. ಸಾಧಾರಣವಾಗಿ ತ್ರಿವಿಕ್ರಮ ವಿಗ್ರಹದ ಬಲಗಾಲು ಮೇಲಿದ್ದು ಆಗಸವನ್ನು ಅಳೆಯುವಂತಿರುತ್ತಾದರೂ ಇಲ್ಲಿ ಲಂಬವಾಗಿ ಮಧ್ಯಲೋಕಗಳನ್ನು ಅಳೆಯುವಂತಿದೆ. ಇಂಥ ತ್ರಿವಿಕ್ರಮಮೂರ್ತಿ ಎಲ್ಲೋರದಲ್ಲೂ ಕಂಡುಬರುವಂತಿದ್ದು ಆಗಮಾನುಸಾರಿಯಾಗಿದೆ.

**40) ಗರುಡಾರೂಢ :**

ಸಾಮಾನ್ಯವಾಗಿ ಚಲನೆಯನ್ನು ಸೂಚಿಸುವ ಆಲೀಢಾಸನದ ಗರುಡನ ಎರಡು ಕೈಗಳ ಮೇಲೆ ಆಸೀನನಾಗಿರುವ ವಿಷ್ಣುವನ್ನು ಕುರಿತು ಕೆತ್ತನೆಯಾಗಿದೆ. ಸ್ವಾಮಿಯು ಆರು ಕೈಗಳನ್ನು ಹೊಂದಿ ಹಲವಾರು ಆಯುಧಗಳನ್ನು ಹಿಡಿದಿದ್ದಾನೆ. ಸಂದರ್ಭವನ್ನನುಸರಿಸಿ ಗಜೇಂದ್ರನನ್ನು ರಕ್ಷಿಸಲು ಗರುಡನನ್ನೇರಿ ಧಾವಿಸುವ ವಿಷ್ಣುವೆಂದು ಹೇಳಬರುತ್ತದೆ.

**41) ಶೇಷಶಾಯಿ :**

ತನ್ನ ತಲೆಯ ಮೇಲೆ ನೆರಳಿನಂತೆ ಹರಡಿದ ಐದು ಹೆಡೆಯ ಆದಿಶೇಷನ ಮೇಲೆ ಪವಡಿಸಿರುವ ವಿಷ್ಣುವಿನ ಪ್ರತಿಮೆ. ಸ್ವಾಮಿಯ ಪಾದಗಳ ಬಳಿ ಶ್ರೀದೇವಿ ಭೂದೇವಿಯರು ಸೇವೆ ಮಾಡುತ್ತಿದ್ದಾರೆ. ಸ್ವಾಮಿಯ ನಾಭಿಕಮಲದಲ್ಲಿ ಬ್ರಹ್ಮನು ಇರುವುದನ್ನು ನೋಡಬಹುದು. ಸ್ವಾಮಿಯ ಪಾದಗಳು ನೀಳವಾಗಿ ಚಾಚಿರದೆ ಒಂದರ ಮೇಲೊಂದು ಇರುವಂತಿದೆ. ಸ್ವಾಮಿಯ ತನ್ನ ಕೈಯನ್ನು ದಿಂಬಿನಂತೆ ಬಳಸಿರುವುದನ್ನು ಕಾಣಬಹುದು.

**42) ಸುದರ್ಶನ :**

ಸುದರ್ಶನ ಪ್ರತಿಮೆಯ ಅಪರೂಪ ಮಾದರಿಯಿದು. ವಿಷ್ಣುವಿನ ಆಯುಧಗಳಲ್ಲಿ ಪ್ರಧಾನವಾದ ಸುದರ್ಶನನು ಅಗ್ನಿಜ್ವಾಲೆಗಳ ವರ್ತುಲದ ನಡುವೆ ನಿಂತಿರುವಂತೆ ಇದೆ. ಹಲವು ಕಡೆ ಗರುಡ ಆದಿಶೇಷರೊಡನೆ ಇರುವಂತೆ ಕಂಡು ಬರುವುದುಂಟು. ಸಾಮಾನ್ಯವಾಗಿ

ಐದು ಮುಖ ಹದಿನಾರು ಕೈಗಳಿರುವುವು. ಈ ಶಿಲ್ಪದಲ್ಲಿ ಸುದರ್ಶನನು ಆಲೀಢಾಸನದಲ್ಲಿ ನಿಂತು ಹದಿನಾರು ಕೈಗಳನ್ನುಹೊಂದಿದ್ದಾನೆ. ಜ್ವಾಲಾಕೇಶನಂತೆ ಅಗ್ನಿಜ್ವಾಲೆಗಳಿದ್ದು, ಕರಂಡ ಮಕುಟ ಹೊಂದಿದ್ದಾನೆ. ಸುದರ್ಶನನ ಭಯಂಕರ ರೂಪಗಳಲ್ಲಿ ಒಂದ ಇದು.

**43) ಮಿಥುನ :**

ಇದೊಂದು ಹೆಚ್ಚು ಆಸಕ್ತಿದಾಯಕವಾದ ಮಿಥುನ ಶಿಲ್ಪ. ಇಲ್ಲಿನ ಸ್ತ್ರೀ ಪುರುಷರೀರ್ವರೂ ನಾಟ್ಯಭಂಗಿಯಲ್ಲಿದ್ದಂತಿದೆ. ತನ್ನನ್ನು ಬಿಟ್ಟುಬಿಡುವಂತೆ ಕೇಳುವ ರೀತಿಯಲ್ಲಿ ಸ್ತ್ರೀಯೂ, ಆಕೆಯನ್ನು ಹಾಸ್ಯ ಮಾಡುತ್ತಿರುವಂತೆ ಪುರುಷನು, ಇರುವಂತೆ ಇದೆ. ಇಲ್ಲಿನ ಇಬ್ಬರೂ ತಲೆಯ ಕೂದಲನ್ನೂ ಒಂದೇ ರೀತಿಯಲ್ಲಿ ಬಾಚಿಕೊಂಡಿರುವುದನ್ನು ಗಮನಿಸಬಹುದು.

**44) 45.ಅ)** ಒಂದು ಭಿಲ್ಲವ ಜೋಡಿಯನ್ನೂ ಇಲ್ಲಿ ಕಾಣಬಹುದು. ಸ್ತ್ರೀಯು ಬಿಲ್ಲು ಹಿಡಿದಂತೆಯೂ ಪುರುಷನು ಕೊಳಲನ್ನೂ ಹಿಡಿದಿರುವಂತಿದೆ. ಸ್ತ್ರೀಯು ತನ್ನ ಬಲಗೈಯನ್ನು ಪುರುಷನ ಭುಜದ ಮೇಲಿಟ್ಟು ಮುಖವನ್ನು ಬದಿಗೆ ತಿರುಗಿಸಿಕೊಂಡಂತಿದೆ.

**45, 45.ಎ) ಜಾನಪದರ ಶಿಲ್ಪ :**

ಮೊದಲನೆಯದು ನೃತ್ಯ ಭಂಗಿಯಲ್ಲಿದ್ದರೆ ಎರಡನೆಯದು ತನ್ನ ಎಡಗೈಯಲ್ಲಿ ಬಟ್ಟಲನ್ನು ಹಿಡಿದಂತಿದೆ. ಎರಡನೆಯ ಶಿಲ್ಪದಲ್ಲಿ ಕಣ್ಣುಗಳು ದೊಡ್ಡದಾಗಿದ್ದು ಮುಡಿಯಿದ್ದರೆ ಮೊದಲನೆಯದರ ಶಿರದಲ್ಲಿ ತ್ರಿಕೋನಾಕಾರದ ಟೋಪಿಯಿದೆ. ವಿಜಯನಗರದಆಸ್ಥಾನಕ್ಕೆ ಹೊಸದಾಗಿ ಬಂದ ವಿದೇಶೀ ಸೇವಕರಿರಬೇಕು.

ಗ್ರಾಮೀಣ ಚಿತ್ರಗಳೆರಡಿವೆ. ಎರಡಲ್ಲೂ ಇರುವ ಪುರುಷರಿಗೆ ಚೂಪಾದ ಗಡ್ಡದ ಕೂದಲೂ, ವೈವಿಧ್ಯಮಯ ಪಂಚೆಗಳೂ ಉಂಟು.

**46) ಯಾಳಿಗುಂಭ :**

ಕಲ್ಯಾಣ ಮಂಟಪದಲ್ಲಿರುವ ಒಂದು ನಮೂನೆಯು ಯಾಳಿಯನ್ನು ಹೊಂದಿದ ಕಂಭವಾಗಿದೆ. ಕಾಲಕೆಳಗೆ ಆನೆಯೊಂದನ್ನು ಅದುಮಿ ಹಿಡಿದಿರುವ ಯಾಳಿ ಬಲವಾಗಿದೆ. ಇದರ ಎಲ್ಲ ಅಂಗ ಪ್ರತ್ಯಂಗಗಳೂ ವಿಜಯನಗದರ ಶೈಲಿಯ ಉನ್ನತ ಮಟ್ಟದ ಕಲೆಯ ಪ್ರತೀಕವಾಗಿವೆ.

**47) ಯಾಳಿ ಕಟಾಂಜನ :**

ಮಂಟಪದ ಆರಂಭವೇ ಇದರ ಮುಖದಿಂದ ಹೊರ ಹೊಮ್ಮಿದಂತೆ ಮೆಟ್ಟಲುಗಳ ಬದಿಯ ನಿರ್ಮಾಣವಾಗಿದೆ.

**48) *ಕಾಮಧೇನು :*** ಇಲ್ಲೊಂದು ಕಾಮಧೇನುವಿನ ಚಿತ್ರ ಮೋಹಕವಾಗಿದೆ. ಮೈಯೆಲ್ಲ ಧೇನುವಿನದಾದರೂ ಮುಖ ಮಾತ್ರ ಮಾನವ ಮುಖವಾಗಿದ್ದು ತಲೆಯ ಮೇಲೆ ಕಿರೀಟವೂ ಇದೆ. ಒಂದು ಕಾಲನ್ನು ಎತ್ತಿದಂತೆ ತೋರುತ್ತದೆ.

**49) *ಲತಾವಿತಾನ :*** ಇಲ್ಲಿನ ಒಂದು ಕಂಭದಲ್ಲಿ ಲತೆಯ ಒಂದು ಮಾದರಿಯೂ ಇದೆ.

**50) *ಆಭೂಷಣ ವಿನ್ಯಾಸ :*** ಹಲವು ಕಡೆ ಸ್ಥಳವನ್ನು ತುಂಬಲೆಂದೇ ಅಲಂಕಾರಗಳನ್ನು ಕೆತ್ತಿದಂತಿದೆ.

51) *ಹನುಮಂತ ಜಾಂಬವಂತರು*ಕೈಜೋಡಿಸಿ ಪ್ರಾರ್ಥನೆ ಮಾಡುವಂತಿದೆ.

**52) ರಾಮಾಯಣ ಚಿತ್ರಗಳು :**

ವಿಷ್ಣುವಿನ ರಾಮಾವತಾರದ ಕಥೆಗಳನ್ನು ಚಿತ್ರಿಸುವ ಅನೇಕ ಶಿಲ್ಪಗಳು ಇಲ್ಲಿವೆ. ಮೇಲಿನ ಚೌಕದಲ್ಲಿ ವಾಲಿಸುಗ್ರೀವ ಯುದ್ಧ, ಮಧ್ಯದಲ್ಲಿ ರಾಮಲಕ್ಷ್ಮಣರನ್ನು ಪ್ರಾರ್ಥಿಸುತ್ತಿರುವ ಒಬ್ಬಾನೊಬ್ಬನ ಶಿಲ್ಪ, ವಿಷ್ಣುವು ಭೂದೇವಿ ಶ್ರೀದೇವಿಯರೊಡನಿರುವ ದೃಶ್ಯ. ಜೊತೆಗೇ ಗರುಡನನ್ನೇರಿ ಹೊರಟಿರುವ ವಿಷ್ಣು ಶಿಲ್ಪವಿದೆ.

**53) ಸೀತಾ ಹನುಮಂತ :**

*ಸೀತೆಗೆ* ಸ್ವಲ್ಪ ಸಂತಸವನ್ನೂ ತಂದಂತಿದೆ. ವಾಲ್ಮೀಕಿಯಲ್ಲಿನ ಈ ಸಂದರ್ಭದ ಸೀತೆ ಜಡೆ ಕೆದರಿಕೊಂಡ ಹೆಂಗಸಾಗಿದ್ದರೆ ಇಲ್ಲಿ ವಿಜಯನಗರದ ಕಾಲದಲ್ಲಿಯಂತೆ ಸುಂದರವಾಗಿ ಬಾಚಿ ಗಂಟುಹಾಕಲಾಗಿದೆ.

54) ವಿಷ್ಣುವಿನ ಬಲಗೈ ವರದ ಹಸ್ತವಾಗಿಯೂ ಎಡಗೈ ಕಟಿಯ ಮೇಲಿಟ್ಟಂತೆಯೂ ಮೇಲಿನೆರಡು ಕೈಗಳಲ್ಲಿ ಶಂಖ ಚಕ್ರಗಳಿರುವಂತೆಯೂ ಕತ್ತಲಾಗಿರುವ ಶಿಲ್ಪದಲ್ಲಿ ಪ್ರಭಾವಳಿಯೂ ಮಕರ ತೋರಣವೂ ಇವೆ.

55) *ರಂಗನಾಥ* ಸ್ವಾಮಿಯು ಆದಿಶೇಷನ ಮೇಲೆ ಮಲಗಿರಲು ಶ್ರೀದೇವಿ ಭೂದೇವಿಯರು ಕಾಲ ಬಳಿಯಲ್ಲಿರುವಂತೆ, ನಾಭಿಕಮಲದಲ್ಲಿ ಬ್ರಹ್ಮನೂ ಇರುವಂತೆ ಕೆತ್ತಲಾಗಿದೆ.

56) 56ಎ) 57) *ಕೋದಂಡ*ರಾಮ ಪ್ರತಿಮೆಯೂ ವರದರಾಜ ಪ್ರತಿಮೆಯೂ ಇಲ್ಲಿ ಕೆತ್ತಲ್ಪಟ್ಟಿವೆ. ಇಲ್ಲಿರುವ ಮತ್ತೊಂದು ಶಿಲ್ಪ ಕುಬೇರನದು.

58) 55ಎ) *ವಾಲಿಸುಗ್ರೀವ*ಯುದ್ಧದನಂತರ ಸುಗ್ರೀವನನ್ನು ಹರಸುತ್ತಿರುವ ರಾಮಚಂದ್ರನ ಶಿಲ್ಪವೂ ಇಲ್ಲಿದೆ.

**59)** *ಹಸುಕರು :* ಪಶುವಿನ ಚಿತ್ರವೂ ಇಲ್ಲಿದೆ.

ಹಲವಾರು ಬಗೆಯ ವಾಹನಗಳೂ ಇಲ್ಲಿವೆ. ಇವುಗಳಲ್ಲಿ ಕೆಲವು ಬಹಳ ಹಳೆಯವುಗಳಾದರೂ ಕೆಲವು ಹೊಸವಾದವು. ಅವುಗಳೆಂದರೆ - (60, ಎ.ಬಿ.ಸಿ.ಡಿ. ಇ. ಎಫ್. ಜಿ.ಎಚ್. ಐ. ಜೆ. ಕೆ. ಎಲ್.)

೧. ಕಲ್ಪವೃಕ್ಷವಾಹನ.

೨. ಹಂಸವಾಹನ.

೩. ಗರುಡವಾಹನ.

೪. ಗಜವಾಹನ.

೫. ಉಚ್ಚೈಶ್ರವವಾಹನ. (ಅಶ್ವವಾಹನ)

೬. ಇನ್ನೊಂದು ಗರುಡವಾಹನ

೭. ಆದಿಶೇಷವಾಹನ.

೮. ಸಿಂಹವಾಹನ.

೯. ವಿಮಾನವಾಹನ.

೧೦. ಸಿಂಹಾಸನ.

೧೧. ಹನುಮಂತವಾಹನ.

೧೨. ಸೂರ್ಯಪ್ರಭವಾಹನ.

**9. ಪವಿತ್ರೋತ್ಸವ ಮಂಟಪ**

ಇಲ್ಲಿ ವಾಸ್ತುವು ಕಲ್ಯಾಣಮಂಟಪದಂತೆಯೇ ಇದ್ದು ವಿಶೇಷವೇನಿಲ್ಲ.

**61) *ನರಸಿಂಹ:*** ರಾಜಲೀಲಾಸನದಲ್ಲಿರುವ ನೃಸಿಂಹಸ್ವಾಮಿಯ ಶಿಲ್ಪವಿದು. ಹಿಂದಿನ ಎರಡೂ ಕೈಗಳಲ್ಲಿ ಶಂಖ ಚಕ್ರಗಳಿವೆ. ಸ್ವಾಮಿಯೂ ಪೂರ್ಣವಾಗಿ ಉಡುಪು ತೊಟ್ಟು ಯುದ್ಧಕ್ಕೆ ಹೊರಟಿರುವಂತಿದೆ.

**62) *ಲಕ್ಷ್ಮೀನಾರಾಯಣ :*** ಲಕ್ಷ್ಮೀನಾರಾಯಣ ಪ್ರತಿಮೆಯಲ್ಲಿ ಸ್ವಾಮಿ ಬಲಗಾಲನ್ನು ಇಳಿಬಿಟ್ಟು ಎಡತೊಡೆಯ ಮೇಲೆ ಲಕ್ಷ್ಮಿಯನ್ನು ಕೂರಿಸಿ ಕೊಂಡಿದ್ದಾನೆ. ಮೇಲಿನ ಕೈಗಳು ಶಂಖಚಕ್ರಗಳನ್ನು ಹಿಡಿದಿವೆ.

**63) *ವಿಷ್ಣು :*** ಇನ್ನೊಂದು ಅಪರೂಪದ ಶಿಲ್ಪವೆಂದರೆ ಕುಳಿತ ಭಂಗಿಯ ವಿಷ್ಣುವು ಮೇಲಿನೆರಡು ಕೈಗಳಲ್ಲಿ ಶಂಖಚಕ್ರವನ್ನು ಹಿಡಿದು ಕೆಳಗಿನ ಎಡದ ಕೈಯಲ್ಲಿ ಗದೆಯನ್ನು ಹಿಡಿದಿರುವುದು. ಬಲಗಾಲನ್ನು ಇಳಿಬಿಟ್ಟು ಕುಳಿತಿರುವ ಈ ಶಿಲ್ಪದಲ್ಲಿ ಕಮಲವನ್ನೂ ಹಿಡಿದಂತಿದೆ. ಇದೊಂದು ಅಪರೂಪದ ಶಿಲ್ಪ.

**64) *ಬಾಲಕೃಷ್ಣ*** ನನಾಲ್ಕು ವಿಗ್ರಹಗಳಿವೆ. ಮೊದಲೆರಡು ಚಿತ್ರಗಳಲ್ಲಿ ಕೃಷ್ಣನು ಒರಳುಗುಂಡನ್ನು ಕಟ್ಟಿಕೊಂಡು ಇರುವಿಕೆಯನ್ನು ತೋರಿಸಲಾಗಿದೆ. ನಳಕೂಬರರು ಶಾಪಗ್ರಸ್ತರಾಗಿ ಮರಗಳಾಗಿರುವಾಗ ಅವುಗಳ ಮಧ್ಯೆ ನುಗ್ಗಿ ಅವುಗಳನ್ನು ಬೀಳಿಸಿ ನಳಕೂಬರ ಶಾಪವಿಮೋಚನೆ ಮಾಡಿದ ಈ ಸಂಗತಿ ಭಾಗವತದಲ್ಲಿ ಪ್ರಸಿದ್ಧವಾಗಿದೆ. ಕೃಷ್ಣನು ಕೊಳಲನ್ನು ಹಿಡಿದಿರುವ ಚಿತ್ರಗಳೆರಡು

**65) *ಎ.ಬಿ.ಸಿ., ನೃತ್ಯ :*** ಮುಂದೆ ಮೂರು ನೃತ್ಯದ ಶಿಲ್ಪಗಳಿವೆ. ಮೊದಲಿನದು ಒಂದು ಮಹಿಳೆಯದಾದರೆ ಎರಡನೆಯದರಲ್ಲಿ ಸ್ತ್ರೀಪುರುಷರಿದ್ದಾರೆ, ಮೂರನೆಯದು ಕುಳಿತಿರುವ ಭಂಗಿಯಲ್ಲಿದೆ.

**10.ವಿಮಾನಪ್ರದಕ್ಷಿಣಾಮಂಟಪ**

***ವರದರಾಜಸ್ವಾಮಿಗುಡಿ: ವಾಸ್ತು ವಿವರ:*** ವಿಮಾನ ಪ್ರದಕ್ಷಿಣೆಯಲ್ಲಿ ಪ್ರವೇಶಿಸಿದೊಡನೆಯೇ ಎಡಗಡೆಗೆ ಈ ಗುಡಿ ಸಿಗುತ್ತದೆ. ವೇಸರ ಶೈಲಿಗೆ ಸೇರಿದ ಅಧಿಷ್ಠಾನ, ಅಂತರಾಳ, ಗರ್ಭಗೃಹ ಶಿಖರಗಳ ಗುಡಿಯಾಗಿದೆ ಇದು. ಬಾಗಿಲವಾಡಗೋಡೆಗಂಬ ಗಳಿಂದ ಕೂಡಿದ್ದು ಕಪೋತವನ್ನು ಹೊಂದಿ ಮೇಲೆ ಗೋಡೆಯ ಮೇಲೆ ಮತ್ತೊಂದು ಕಪೋತವಿದ್ದು, ನಾಸಿಕ ಸಿಂಹಲಲಾಟಗಳುಂಟು. ಅಲಂಕಾರಗಳಿಂದ ಕೂಡಿದೆ. ಯಾಳಿಯ ಮುಖದಿಂದ ಹೊರಬಂದಿರುವ ಸುರುಳಿಯೊಡನೆ ಕೂಡಿದ ನಾಲ್ಕು ಮೆಟ್ಟಿಲುಗಳಿವೆ. ಇಲ್ಲಿನ ಎಲ್ಲ ವಿವರಗಳೂ ಇದು ವಿಜಯನಗರಕಾಲದ ನಿರ್ಮಾಣವೆಂಬುದನ್ನು ಖಚಿತ ಪಡಿಸುತ್ತವೆ.

66) ಒಟ್ಟು *ಗುಡಿಯ* ದೃಶ್ಯವಿದು.

**67) ಎ, ಬಿ :** ಇಲ್ಲೊಂದು *ರಾಮಾನುಜರ ಗುಡಿಯ ವಿಮಾನ,* ಗರುಡ ಮಂಟಪವೂ ಇದೆ. ಎರಡೂ ಐತಿಹಾಸಿಕವಾಗಿ ಈಚಿನವು,

**68) *ಪಲ್ಲಕ್ಕಿ :*** ವಿಮಾನ ಪ್ರದಕ್ಷಿಣ ಮಂಟಪದಲ್ಲಿ ಮೈಸೂರು ಮಹಾರಾಜರು ನೀಡಿದರೆನ್ನಲಾದ ಪಲ್ಲಕ್ಕಿಯನ್ನು ಇಟ್ಟಿದ್ದರು. (ಈಚಿನವರಿಗೆ) (ಇದನ್ನೀಗ ತಿರುಮಲೆಯ ಪುರಾವಸ್ತು ಪ್ರದರ್ಶನ ಶಾಲೆಯಲ್ಲಿ ನೋಡಬಹುದು - 2014 - ಅನುವಾದಕ)

69) ಇಲ್ಲಿ ಒಂದು ಗರುಡವಾಹನವೂ ಉಂಟು.

70) ಆನೆ ಯಾಳಿಗಳಿಂದ ಕೂಡಿದ ಮೆಟ್ಟಿಲುಗಳುಂಟು.

## 11. ರಂಗಮಂಟಪ

**ಅ. ವಾಸ್ತು :** ಒಳ ಅಂಗಳದ ಆಗ್ನೇಯದಲ್ಲಿ ಕಂಭಗಳಿಂದ ಕೂಡಿದ ರಂಗಮಂಟಪವಿದೆ. ಮುಂಭಾಗದಲ್ಲಿ ಸಾಲಕೋಷ್ಠದಿಂದ ಕೂಡಿದ ಪ್ರವೇಶವಿದೆ. ಮುಂಭಾಗದಲ್ಲೆಲ್ಲ ನಾಸಿಕ ಸಿಂಹ ಲಲಾಟಗಳಿಂದ ಕಪೋತದಿಂದ ಅಲಂಕೃತವಾಗಿದೆ. ವಾಸ್ತುಶಾಸ್ತ್ರರೀತ್ಯ ಇದು ಸ್ವಲ್ಪ ಈಚಿನ ಕಾಲದ್ದಿದ್ದು 14 ನೇ ಶತಮಾನದ್ದಾಗಿರಬಹುದು.

71) ರಂಗಮಂಟಪದಲ್ಲಿನ ಒಂದು ವೈಶಿಷ್ಟ್ಯದ ಶಿಲ್ಪವೆಂದರೆ ಬಲಿಯಿಂದ ದಾನ ಸ್ವೀಕರಿಸಲು ಬಲಗೈ ಚಾಚಿರುವ ವಾಮನಮೂರ್ತಿಯದು.

72) *ರಾಮಲಕ್ಷ್ಮಣ ದಶರಥರ* ಪ್ರತಿಮೆಗಳೂ ಇವೆ. ದಶರಥನ ಕೈಯಲ್ಲಿ ಬಿಲ್ಲು ಇಲ್ಲ. ಇಲ್ಲಿ ಆಸಕ್ತಿಕರ ಅಂಶವೆಂದರೆ ಇಲ್ಲಿನ ಮೂವರೂ ಯಾರೋ ಹಿರಿಯರಿಗೆ ಗೌರವ ಸೂಚಿಸುವಂತೆ ಕೈಜೋಡಿಸಿ ನಮಸ್ಕರಿಸುತ್ತಿರುವಂತೆ ಚಿತ್ರಿತವಾಗಿರುವುದು. ಬಹಶಃ ಅಯೋಧ್ಯಾಕಾಂಡದ ಆರಂಭದ ದೃಶ್ಯವಿರಬೇಕು. ಕಾರಣ ಮೂವರಿಗೂ ಕಿರೀಟಗಳುಂಟು.

73) ಇಲ್ಲಿ ಒಂದು ಕಮಲ ಪ್ರತಿಮೆಯೂ ಉಂಟು.

74) *ಅನ್ನಮಾಚಾರ್ಯರ ಭಂಡಾರ :* ತಾಳ್ಳಪಾಕ ಕವಿಗಳಿಬ್ಬರನ್ನು ದ್ವಾರದ ಎರಡೂ ಕಡೆಗಳಲ್ಲಿ ಹೊಂದಿರುವ ತಾಳ್ಳಪಾಕ ಅರ ಎಂದು ಕರೆಯಲ್ಪಡುವ ಅನ್ನಮಾಚಾರ್ಯ ಕೃತಿಗಳ ತಾಮ್ರಪತ್ರಗಳನ್ನು ಹೊಂದಿದ್ದ ಗುಡಿಯಿದು.

75) ಇಲ್ಲಿಯೇ ಬಳಿಯಲ್ಲಿ *ಬಾಲಕೃಷ್ಣನ* ಸುಂದರ ವಿಗ್ರಹವನ್ನು ಕೆತ್ತಲಾಗಿದೆ. ಸ್ವಾಮಿಯ ಗುಂಗುರು ಕೂದಲನ್ನು ಸೊಗಸಾಗಿ ಹೆಣೆಯಲಾಗಿದೆ. ಗೊಲುಸು, ಬಳೆ, ನೂಪುರ, ದಂಡೆ - ಮೊದಲಾದ ಆಭರಣಗಳನ್ನು ಬಿಡಿಸಲಾಗಿದೆ.

76) ಇಲ್ಲಿನ *ತಾಳ್ಳಪಾಕ ವಂಶಜರ* ವಿಗ್ರಹಗಳು ಆಸಕ್ತಿಕರ. ವಿಜಯನಗರ ಕಲೆಯ ಅತ್ಯುತ್ತಮ ನಿದರ್ಶನಗಳಾದ ಈ ಎರಡು ಪ್ರತಿಮೆಗಳಲ್ಲೂ ಸೂಕ್ಷ್ಮಕೆತ್ತನೆ ಪ್ರಧಾನವಾಗುತ್ತದೆ. ಉತ್ತರೀಯ, ಕಟಿಸೂತ್ರ, ದೀರ್ಘಶಿರೋಭೂಷಣ, ಕುಸುರಿಗೆಲಸದ ಹಾರ ಕೇಯೂರಗಳು. ಇಬ್ಬರೂ ತಮ್ಮ ಕೈಯಲ್ಲಿ ಶ್ರುತಿಗಾಗಿ ಹಿಡಿದಿರುವ ತಂಬೂರಿಗಳ ಆಕಾರ ಗಮನಾರ್ಹವಾದದ್ದು. ನಾವು ಇಂದು ಇಪ್ಪತ್ತನೆಯ ಶತಕದಲ್ಲಿ ಬಳಸುವ ತಂಬೂರಿಗಳ ಆಕಾರವಿಲ್ಲ. ಸಾಮಾನ್ಯವಾಗಿ ತಂಬೂರಿಯ ಕುಂಭ ಕೆಳಗಡೆಯಿದ್ದು ಅಲ್ಲಿಂದ ಮೇಲಕ್ಕೆ ತಂತಿಗಳು ಏರಿನಡೆದು ಮೇಲಿನ ಕೊನೆಯಲ್ಲಿ ಅವನ್ನು ಬಿಗಿಸುವ ತಿರುಪುಗಳಿರುವುದು. ಕುಂಭವನ್ನು ಮಡಿಲಲ್ಲಿಟ್ಟುಕೊಂಡು ಅಲ್ಲಿಯೇ ತಂತಿಗಳನ್ನು ಮೀಟಬೇಕು, ಇಲ್ಲಿ ಹಾಗಿಲ್ಲದೇ ತಂಬೂರಿಯ ಕುಂಭ ಮೇಲಿದ್ದು ಜೋಳಿಗೆಯನ್ನು ಕಟ್ಟಿ ಜೋತು ಬಿಟ್ಟಂತಿದೆ. ತಂಬೂರಿಯನ್ನು ಮೀಟುವುದೂ ಮುಂದಿನ ಕೊನೆಯಲ್ಲಿ ಕೈಯಲ್ಲಿ ಹಿಡಿದಂತೆಯೇ. ಭುಜದ ಮೇಲಿಟ್ಟುಕೊಂಡು ಓಡಿಯಾಡಲು ಅನುಕೂಲವಾಗಿದೆ. ಕಾಲುಗಳಲ್ಲಿ ಕಿರುಗೆಜ್ಜೆಗಳು ಉಂಟು.

*77) ತಾಳ್ಲಪಾಕಕವಿಗಳು:* ಸ್ವಾಮಿ ಪುಷ್ಕರಿಣಿಯ ಮೆಟ್ಟಲುಗಳ ಬಳಿಯ ಒಂದು ಗೂಡಿನಲ್ಲಿಯೂ ಈ ರೀತಿಯ ಪ್ರತಿಮೆಗಳುಂಟು. ಇಲ್ಲಿನ ಮಕರ ತೋರಣ ಸಿಂಹಲಲಾಟದೊಡನೆ ಬಹುಸುಂದರವಾಗಿದೆ. ಸ್ವಾಮಿಯ ಎರಡೂ ಬದಿಯಲ್ಲಿ ನಿಂತ ಸ್ವಾಮಿಗೆ ಸಂಗೀತ ಸೇವೆಯನ್ನು ಮಾಡುವಂತಿದೆ.

78) *ಲಕ್ಷ್ಮೀನರಸಿಂಹರ* ಒಂದು ಶಿಲ್ಪವಿದೆ. (ಇದು ನರಸಿಂಹ ಹಿರಣ್ಯ ಕಶ್ಯಪ ಯುದ್ಧ ಚಿತ್ರಣ. ಗಮನಿಸಿ, ಹಿರಣ್ಯಕನ ಬಲಗೈ ಕಠಾರಿ. - ಅನುವಾದಕ)

79) ಅನ್ನಮಾಚಾರ್ಯ ಮಂಟಪದ ಬಳಿಯೇ ರಾಮಲಕ್ಷ್ಮಣ ಸೀತೆಯರ ಪ್ರತಿಮೆಗಳಿವೆ.

80) ವಿಮಾನ ಪ್ರದಕ್ಷಿಣೆಯ ಅಂಗಳದಲ್ಲಿ ಕಂಬದಲ್ಲಿ ಕುಳಿತ ಭಂಗಿಯ ರಾಮನ ಪ್ರತಿಮೆಯಿದೆ. ಇಲ್ಲಿನ ಚಿತ್ರದಲ್ಲಿ ರಾಮವ ಗಾನ ಮುದ್ರೆಯಲ್ಲಿದ್ದಾನೆ. ಲಕ್ಷ್ಮಣನೊಡನೆ ನಿಂತಿರುವಂತೆಯೂ ಸೀತೆ ಕಮಲದ ಹೂವನ್ನು ಹಿಡಿದಿರುವಂತೆಯೂ ಇದೆ. (ಫೋಹೀ

ಸಹಿತಂ ಸುರದ್ರುಮ ತಲೇ.... ಎಂಬ ಪ್ರಖ್ಯಾತ ಶ್ಲೋಕ ಭಾವವನ್ನಿಲ್ಲಿ ನೆನೆಯಬೇಕು. ಆಂಜನೇಯ ಧರ್ಮಗ್ರಂಥವನ್ನುಪಠಿಸಿದಾಗ ರಾಮ ವ್ಯಾಖ್ಯಾನ ನೀಡುವ ದೃಶ್ಯವಿದು. ಇನ್ನೊಂದು ಕಡೆ ಧರ್ಮಗ್ರಂಥವನ್ನು ಓದುತ್ತಿರುವ ಹನುಮಂತನ ಉಬ್ಬುಶಿಲ್ಪವೂ ಉಂಟು.- ಅನುವಾದಕ) ರಾಮಲಕ್ಷ್ಮಣರಿಗೆ ಬಿಲ್ಲುಗಳುಂಟು.

81) ಎ, ಇದು ಅಪರೂಪದ, ಇತರೆಡೆಯಲ್ಲಿ ಕಂಡು ಬರದ ದೃಶ್ಯ. ರಾಮನು ಆಂಜನೇಯನನ್ನು ಹರಸುವ ಶಿಲ್ಪವೂ,'ಶಖ ಚಕ್ರಧಾರಿಯಾದ ವಿಷ್ಣುವೇ ರಾಮನಂತೆ ಹನುಮನನ್ನು ಹರಸುವುದು ಇಲ್ಲಿನ ವಿಶೇಷ. ರಾಮಪಟ್ಟಾಭಿಷೇಕ ಶಿಲ್ಪವೂಇಲ್ಲಿವೆ.

## 12. ನರಸಿಂಹಸ್ವಾಮಿ ಗುಡಿ

ಇಲ್ಲಿನ ಒಂದು ಮಹಿಳೆಯ ಶಿಲ್ಪ ನೃತ್ಯದ ಭಂಗಿಯಲ್ಲಿದೆ. ವಿಜಯನಗರದ ಕಾಲದಲ್ಲಿ ಪರಿಪಕ್ವವಾದ ನಾಟ್ಯ ಕಲೆಯ ಉತ್ತಮ ವಾದ ಮುದ್ರೆಯನ್ನು ತೋರಿಸುವ ಈ ಶಿಲ್ಪ ಸುಂದರವಾಗಿದೆ. ಸೊಂಟದೊಡನೆ ಈಕೆಯ ಎದೆ ಹೆಚ್ಚು ಕಡಿಮೆ ಲಂಬಕೋನದಲ್ಲಿದ್ದು ಆ ಬಾಗು ಗಮನ ಸೆಳೆಯುತ್ತದೆ. ಈ ಚಲನೆಯಲ್ಲಿ ಆಕೆಯ ಸೀರೆಯ ನಿರಿಗೆಯನ್ನು ಹಿಡಿದಿರುವ ಸೊಂಟದ ಉದರಬಂಧ ಆಸಕ್ತಿಕರ. ತಲೆಯ ಹಿಂಭಾಗದಲ್ಲಿ ಎಡಗಾಲು ಬಲಗೈ ಸೇರಿದೆಯೋ ಎಂಬಂತಿರುವ ಈ ನೃತ್ಯವೈವಿಧ್ಯ ಮೋಹಕವಾದದ್ದು. ಇಲ್ಲಿ ಒಂದು ನೃತ್ಯದ ಕನ್ಯೆಯೂ, ತಬಲವಾದಕನ್ನೂ, ಮೃದಂಗವಾದಕಿಯೂ, (ಎಲ್ಲ ನಿಲುವು ಭಂಗಿಯ ನೃತ್ಯಗಾರರು)

*83) ಎ.ಬಿ.ಸಿ.* ಕುಳಿತ ವೀಣಾಪಾಣಿಯೂ, ವಾಹನವನ್ನೇರಿದ ಎರಡು ಸರಸ್ವತಿ ಶಿಲ್ಪಗಳೂ, ಉಂಟು.

*84) ಬಾಲಕೃಷ್ಣ* ನಿಂತುಕೊಂಡು ತನ್ನ ಎಡಗಾಲಿನ್ನೆತ್ತಿ ಬಾಯಲಿಟ್ಟುಕೊಳ್ಳಲು ಪ್ರಯತ್ನಿಸುವಂತಿದೆ.

85) ಕುಳಿತಿರುವ ನಮ್ಮಾಳ್ವಾರರ ಶಿಲ್ಪವೂ ಇದೆ.

86) ಹಂಸದ ಒಂದು ಶಿಲ್ಪ ಸುಂದರವಾಗಿದೆ.

87) ಇಲ್ಲಿನ ವೈಕುಂಠದ್ವಾರಗಂಬ ಸುಂದರ ವಿಜಯನಗರದ ಶೈಲಿಯಲ್ಲಿದೆ. ಇಲ್ಲಿನ ಕೇಂದ್ರ ಕಂಭ ಹಾಗೂ ಇಳಿಬಿದ್ದ ವಸೂ ಊತೆಗಂಭಗಳು ಸೂಕ್ಷ್ಮವಾದ ಕುಸುರಿಗೆಲಸದಿಂದ ಕೂಡಿದೆ.

**88) ವೈಕುಂಠದ್ವಾರದ** ದಾಲಮಂದ್ರದಲ್ಲಿ ದಶಾವತಾರ ಶಿಲ್ಪಗಳಿವೆ.

**89)** ಇಲ್ಲಿಯೇ ಹುಂಡಿಯೂ ಇದೆ. ತಿರುಮಾಮಣಿ ಮಂಟಪದ ಒಂದು ಭಾಗವನ್ನೇ ಪ್ರತ್ಯೇಕಗೊಳಿಸಿ ಹುಂಡಿಯ ಸ್ಥಾನವನ್ನಾಗಿಸಿದೆ.

**90) ಎ.ಬಿ. ತಿರುಮಾಮಣಿ** ಮಂಟಪದಲ್ಲಿ ದೊಡ್ಡದಾದ ಎರಡು ಕಂಚಿನ ಗಂಟೆಗಳಿವೆ. 18 ನೇ ಶತಮಾನದಲ್ಲಿ ಇವುಗಳನ್ನು ದಾನಮಾಡಿದ ದಿನವನ್ನು ಗುರುತಿಸುವ ದಿನಾಂಕವೂ ಇದೆ.

**91) ಸಂಪಂಗಿ ಪ್ರದಕ್ಷಿಣೆ**ಯಲ್ಲಿ ಸಾಳುವ ನರಸಿಂಹನಿಂದ ನಿರ್ಮಿತವಾದ ನಾಲ್ಕು ವಿಶ್ರಾಂತಿ ಮಂಟಪಗಳೂ ಉಂಟು.

**92) ಮೊಗಲರ** ಕಾಲದ ನಾಣ್ಯಗಳ ಹಾರ.

**93) ಆನಂದನಿಲಯ** ವಿಮಾನದ ಕಡೆಯಿಂದ ಆಲಯ ಬಲಗಡೆ ಕೊನೆಯದು ಮಹಾದ್ವಾರಗೋಪುರ.

## ಅಧ್ಯಾಯ - 12
# ತಿರುಮಲೆ ಆಲಯದ ಶಾಸನಗಳು

**1. ಪೀಠಿಕೆ :**

ಭಾರತದ ಇತರ ಅಸಂಖ್ಯ ಆಲಯಗಳಲ್ಲಿನಂತೆಯೇ ತಿರುಮಲೆಯ ಆಲಯವೂ ಸಹ ತನ್ನ ಗೋಡೆಯ ಕಲ್ಲುಗಳ ಮೇಲೆ ಬೇರೆ ಬೇರೆ ಕಾಲದ ರಾಜ, ರಾಣಿ, ಮಂತ್ರಿ, ಮನ್ನೆಯ, ಸಾಮಂತ, ಶ್ರೀಮಂತ, ಶ್ರೀಸಾಮಾನ್ಯ, ಬಹುಗಣ್ಯ ವಕ್ತಿಗಳು ಆಲಯಕ್ಕೆ ಅರ್ಪಿಸಿದ ಕಾಣಿಕೆ, ಹರಕೆಯ ಸಲ್ಲಿಕೆಗಳ ಬಗ್ಗೆ ಹಲವಾರು ಶಾಸನಗಳನ್ನು ಹೊಂದಿದೆ. ಈ ಪ್ರಾಂತ್ಯದ ಸಾಮಾಜಿಕ, ರಾಜಕೀಯ, ಧಾರ್ಮಿಕ ಇತಿಹಾಸದ ದಾಖಲಾತಿಗಳ ಬಗ್ಗೆ ಯೋಚಿಸುವ ಪಂಡಿತರ ಆಸಕ್ತಿಗೆ ಪಾತ್ರವಾಗುವುದೇ ಅಲ್ಲದೆ ನಮ್ಮ ನಾಡಿನ ಆಲಯಗಳ ಆಡಳಿತ ವ್ಯವಸ್ಥೆ, ದಾನದತ್ತಿಗಳು, ಪ್ರಾಚೀನ ಕಾಲದಿಂದ ನಡೆದುಬಂದ ಪರಂಪರಾಗತವಾದ ಸಂಘಸಂಸ್ಥೆಗಳು- ಮೊದಲಾದವುಗಳ ಬಗ್ಗೆ ತಿಳಿಯಲು ಆಸಕ್ತಿ ಹೊಂದಿದವರಿಗೂ ಸಹ ಈ ಶಾಸನಗಳು ಬಹಳ ಪ್ರಯೋಜನಕರವಾದ ಮಾಹಿತಿಯನ್ನು ಒದಗಿಸುತ್ತವೆ. ಈ ಹಿಂದಿನ ಏಳೆಂಟು ಶತಮಾನಗಳಲ್ಲಿ ತಿರುಮಲೆಯ ಆಲಯ ಹಾಗೂ ಸುತ್ತಮುತ್ತಲ ಪ್ರಾಂತ್ಯದ ಎಲ್ಲ ವ್ಯವಹಾರಗಳ ನಿರಂತರವಾದ ಪ್ರಾಮಾಣಿಕವಾದ ದಾಖಲಾತಿಯನ್ನು ತಿರುಮಲೆಯ ಆಲಯದ ಹಾಗೂ ಸುತ್ತಮುತ್ತಲ ಆಲಯಗಳ - ತಿರುಚಾನೂರು, ತಿರುಪತಿಯ ಆಲಯಗಳ - ಶಾಸನಗಳು ಒದಗಿಸಿಕೊಡುತ್ತವೆ.

ಆಲಯದ ಶಾಸನಗಳ ಸಂಗ್ರಹಣ, ಸಂಶೋಧನ, ವಿಶ್ಲೇಷಣ, ಪ್ರಕಾಶನಗಳಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿದವರೆಂದರೆ 1920 ರಲ್ಲಿ ದೇವಾಲಯದ ವಿಚಾರಣಕರ್ತರಾಗಿದ್ದ ಮಹಂತ ಪ್ರಯಾಗದಾಸಜೀ ಅವರು ಮತ್ತು ಅಂದು ದಿವಾನ್ ಪೇಷ್ಕಾರ್ ಆಗಿದ್ದ ದೊರೆಸ್ವಾಮಿಯವರು. ಇವರು ಹಳೆಯ ಮದ್ರಾಸು ರಾಜ್ಯದ ಡೆಪ್ಯೂಟಿ ಕಲೆಕ್ಟರ್ ಆಗಿ ನಿವೃತ್ತರಾದರು. ಇಂಡಿಯಾ ಆಫೀಸ್ ಲೈಬ್ರೆರಿಯ ಡಾ॥ ಎಫ್. ಡಬ್ಲ್ಯೂ. ಥಾಮಸ್ ಹಾಗೂ ರಾವ್ ಬಹದೂರ್ ಎಚ್. ಕೃಷ್ಣಶಾಸ್ತ್ರಿಗಳು ಆರಿಸಿದ ಸಾಧುಸುಬ್ರಮಣ್ಯ ಶಾಸ್ತ್ರಿಗಳು. ಶಾಸ್ತ್ರಿಗಳು 1922 ರಲ್ಲಿ ಶಾಸನಾಧ್ಯಾಯನದಲ್ಲಿ ಪರಿಣಿತಿಯ ತರಬೇತಿಯನ್ನು ಪಡೆದು, ನಂತರದ ಹತ್ತು ವರ್ಷಗಳಲ್ಲಿ ತಿರುಮಲೆ, ತಿರುಪತಿ, ತಿರುಚಾನೂರುಗಳ ಆಲಯಗಳ ಗೋಡೆಗಳ ಮೇಲಿದ್ದ ಶಾಸನಗಳನ್ನೆಲ್ಲ ಪ್ರತಿಮಾಡಿದ್ದೇ ಅಲ್ಲದೆ ಈ ಶಾಸನಗಳ ಬಗ್ಗೆ ಎರಡು ಸಂಪುಟಗಳ ಅಮೂಲ್ಯವಾದ ವರದಿಗಳನ್ನೂ ಸಿದ್ಧಗೊಳಿಸಿದರು. ಮೊದಲನೆಯ ಸಂಪುಟವು ಆಲಯದ ದೈನಂದಿನ ಪೂಜಾದಿಗಳ ವಿವರವಾದರೆ ಎರಡನೆಯದು ಸ್ಥಳೀಯ ಇತಿಹಾಸ ವನ್ನು ಕುರಿತದ್ದು. ತಿರುಮಲೆ ತಿರುಪತಿ ದೇವಸ್ಥಾನಗಳ ವತಿಯಿಂದ ಈ ಶಾಸನಗಳೆಲ್ಲವನ್ನೂ ಆರು ಸಂಪುಟಗಳಲ್ಲಿ ಮೂಲ ಹಾಗೂ ಆಂಗ್ಲ ಅನುವಾದಗಳೊಡನೆ ಪ್ರಕಟಗೊಳಿಸಲಾಗಿದೆ. (ಈ ಸಂಪುಟಗಳು ಬಹುಹಿಂದೆಯೇ ಮುಗಿದು ಹೋಗಿದ್ದು 1998ರಲ್ಲಿ ಡಾ॥ ಎನ್.ಎಸ್. ರಾಮಮೂರ್ತಿ ಅವರು ತಿ.ತಿ.ದೇ. ಸಂಪಾದಕರಾಗಿದ್ದಾಗ ಪುನರ್ಮುದ್ರಣವಾಗಿದ್ದು ಇದೀಗ 2013ರಲ್ಲಿ ಮೂಲದ ಕನ್ನಡ ತೆಲುಗು ಅನುವಾದ ಪ್ರಕಟಿಸಲು ಯೋಚಿಸಲಾಗುತ್ತಿದೆ.- ಅನುವಾದಕ.) ಹೀಗಾಗಿ ತಿ.ತಿ.ದೇವಸ್ಥಾನಗಳು ಆಲಯದ ಶಾಸನ ಸಂಗ್ರಹಗಳ ಬಗ್ಗೆ ಬಹುಮೂಲ್ಯವಾದ ಪ್ರಾಥಮಿಕವಾದ ಸೇವೆಯನ್ನು ಸಲ್ಲಿಸಿದೆಯೆನ್ನಬೇಕು.

## 2. ಶಾಸನ ಸಂಖ್ಯೆ

ಸಾಧು ಸುಬ್ರಹ್ಮಣ್ಯಶಾಸ್ತ್ರಿಗಳು ಸಂಗ್ರಹಿಸಿದ ಶಾಸನಗಳ ಸಂಖ್ಯೆ 1180. ಇವುಗಳಲ್ಲಿ 236 ಶಾಸನಗಳು ಪಲ್ಲವ ಚೋಳ ಪಾಂಡ್ಯ ವಿಜಯನಗರದ ಮೊದಲ ಹಂತದ ಅರಸರ ಕಾಲಕ್ಕೆ ಸೇರಿದವು. ಸಾಳುವ ನರಸಿಂಹರಾಯನ ಕಾಲದವುಗಳ 169, ಕೃಷ್ಣದೇವರಾಯನ ಕಾಲದವು 229, ಅಚ್ಯುತರಾಯನ ಕಾಲದವು 251, ಸದಾಶಿವರಾಯನ ಕಾಲದವು 147, ಅರವೀಡು ವಂಶದ ರಾಜರ ಕಾಲದವು 135, ಮಿಕ್ಕ 13 ಆ ನಂತರದ ಕಾಲದವುಗಳು.

ಕ್ರಿ.ಶ. 1920 ರಿಂದ 1930 ರ ಮಧ್ಯಭಾಗದಲ್ಲಿ ತಿರುಮಲೆಯ ಆಲಯದ ಉತ್ತರ ಪ್ರಾಕಾರದಲ್ಲಿರುವ ಮುಚ್ಚಿಹೋಗಿದ್ದ ತಾಳ್ಳಪಾಕ ಅರೆಯನ್ನು ತೆರೆದು ಅದರಲ್ಲಿದ್ದ ತಾಳ್ಳಪಾಕ ಕವಿಗಳ ಸಂಕೀರ್ತನೆಗಳ ಹಾಗೂ ಮತ್ತಿತರ ತಾಮ್ರ ಪತ್ರಗಳನ್ನು ಕಂಡು ಕೊಳ್ಳಲಾಯಿತು. ಇವೆಲ್ಲ ದೊಡ್ಡ ದೊಡ್ಡ ತಾಮ್ರ ಫಲಕಗಳಲ್ಲಿ ಕೆತ್ತಲಾಗಿದ್ದು, ಇವುಗಳಲ್ಲಿ ಪ್ರಧಾನವಾಗಿ ಎರಡು ವಿಧ. ತಾಳ್ಳಪಾಕ ಕವಿಗಳ ಲಘುಕೃತಿಗಳು - ಛಂದಸ್ಸು, ವ್ಯಾಕರಣ, ನೀತಿ ಮೊದಲಾದವುಗಳನ್ನು ವಿಷಯವಾಗಿ ಹೊಂದಿದ ಕೃತಿಗಳು - ಹಾಗೂ ಸಂಕೀರ್ತನೆಗಳು. ಸಂಕೀರ್ತನೆಗಳು ಮೂರು ವಿಧವಾದವು. ಆಧ್ಯಾತ್ಮ ಸಂಕೀರ್ತನಗಳು, ವೈರಾಗ್ಯ ಸಂಕೀರ್ತನೆಗಳು, ಶೃಂಗಾರ ಸಂಕೀರ್ತನೆಗಳು. ಹಲವು ಲಘುಕೃತಿಗಳು ಹಾಗೂ ಹಲವು ಸಂಕೀರ್ತನೆಗಳನ್ನು ಪರಿಶೋಧಿಸಿ ಪ್ರಕಾಶನಗೊಳಿಸಲಾಗಿವೆಆದರೂ ಐವತ್ತು ವರ್ಷಗಳ ನಂತರವೂ ಈ ಸಂಕೀರ್ತನೆಗಳ ಪರಿಪೂರ್ಣವಾದ ವ್ಯವಸ್ಥಿತವಾದ ಸಂಪಾದನಾಕಾರ್ಯ ನಡೆದಿಲ್ಲ ಎಂಬುದು ಶೋಚನೀಯ ಅಂಶ. (1998 ರ ಹೊತ್ತಿಗೆ ಇರುವ ಎಲ್ಲ ತಾಮ್ರಪತ್ರಗಳ ಸಂಕೀರ್ತನೆಗಳನ್ನೂ ವಿವಿಧ ವಿದ್ವಾಂಸರಿಂದ ಸಂಪಾದನಗೊಳಿಸಲಾಯಿತು. ಉದಯಗಿರಿ ಶ್ರೀನಿವಾಸಾಚಾರ್ಯ, ವೇಟೂರಿ ಪ್ರಭಾಕರಶಾಸ್ತ್ರಿ, ರಾಳ್ಳಪಲ್ಲಿ ಅನಂತಕೃಷ್ಣಶರ್ಮ, ಗೌರಿಪೆದ್ದಿ ರಾಮಸುಬ್ಬಶರ್ಮ ಮೊದಲಾದವರು ಈ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿಕೊಟ್ಟಿದ್ದೇ ಅಲ್ಲದೆ ಸಂಕೀರ್ತನೆಗಳಪ್ರಥಮ ಮುದ್ರಣದ ಪ್ರತಿಗಳು ಮುಗಿದು ಹೋದ ಬಹುಕಾಲದನಂತರ ದ್ವಿತೀಯ ಮುದ್ರಣವೂ ಡಾ|| ಮೇಡಸಾನಿ ಮೋಹನ್ ಅವರ ನೇತೃತ್ವದಲ್ಲಿ ಹೊರಬಂದಿವೆ - ಅನುವಾದಕ) ಈ ತಾಮ್ರಪತ್ರಗಳ ಇರುವಿಕೆಯ ಬಗ್ಗೆ ಬಹಳ ಹಿಂದಿನಿಂದಲೇ ತಿಳಿದಿದ್ದಿತು. ಮರೆಯಲಾಗದ ಸಾಮ್ರಾಜ್ಯದ ಕಥೆಯನ್ನು ಬರೆದ ರಾಬರ್ಟ್‌ಸಿವೆಲ್ ದಕ್ಷಿಣ ಭಾರತದ ಶಾಸನಗಳ ಬಗ್ಗೆ ವಿಚಾರಿಸುತ್ತಿದ್ದಾಆವರಿಗೆ "ಇಲ್ಲಿ ಎರಡು ಎತ್ತಿನ ಗಾಡಿಯ ತುಂಬ ಇರಬಹುದಾದ ತಾಮ್ರಶಾಸನಗಳ ಬಗ್ಗೆ" ತಿಳಿಸಲಾಯಿತಂತೆ.

1920 ರಿಂದ 1930ರ ಮಧ್ಯದಲ್ಲಿ ಪ್ರತಿಮಾಡಲಾದ 1180 ಶಾಸನಗಳ ಪೈಕಿ ತಿರುಮಲೆಯ ಶ್ರೀ ವೆಂಕಟೇಶ್ವರಸ್ವಾಮಿಯ ಆಲಯದಲ್ಲಿನವು 640 ಶಾಸನಗಳು ಹಾಗೂ ತಿರುಪತಿಯ ಶ್ರೀ ಗೋವಿಂದರಾಜ ಸ್ವಾಮಿ ಆಲಯದಲ್ಲಿನವು 340 ಆಗಿದ್ದು, ಮಿಕ್ಕ ಶಾಸನಗಳು ಮತ್ತಿತರ ಕಿರು ದೇವಾಲಯಗಳಲ್ಲಿ ಕಂಡು ಬಂದಿದ್ದಾಗಿವೆ.

ತಿರುಮಲೆಯ ಆಲಯದಲ್ಲಿ ಮತ್ತೂ ಒಂದುನೂರು ಶಾಸನಗಳಾದರೂ ಪ್ರತಿಯಾಗದೆ ಉಳಿದಿರುವಂತಿವೆ.. ಇವೆಲ್ಲ ತಮ್ಮನ್ನು ಅರ್ಥಮಾಡಿಕೊಳ್ಳಬಲ್ಲ ಭವಿಷ್ಯದ ಇತಿಹಾಸಕಾರ ಶಾಸನ ತಜ್ಞರಿಗಾಗಿ ಕಾಯುತ್ತಿವೆ. ಆಧುನಿಕ ಸಂಶೋಧನೆಯ ಸಾಧನಗಳುಂಟಾಗಿರುವ ಈವರೆಗೂ ತಿ.ತಿ. ದೇವಸ್ಥಾನಗಳು ಈ ಕೆಲಸವನ್ನು ಪೂರ್ಣಗೊಳಿಸಿಲ್ಲ.

## 3. ಶಾಸನಗಳ ಸಂರಕ್ಷಣಾಸ್ಥಿತಿ

ತಾಳ್ಳಪಾಕ ಕವಿಗಳ ತಾಮ್ರಪತ್ರ ಶಾಸನಗಳು ಬಹಳ ಸುರಕ್ಷಿತವಾದ ಸ್ಥಿತಿಯಲ್ಲಿವೆ. ಚರಿತ್ರಕಾರರು ಸಾಮಾನ್ಯವಾಗಿಕಂಡಿರು ವಂತಹ ತಾಮ್ರಪತ್ರಗಳಂತೆ ಇಲ್ಲದೆ ಇವು ಬೇರೆ ರೀತಿಯಲ್ಲಿವೆ. ಅಳತೆಯಲ್ಲಿ 30×20 ಅಂ ಅಥವಾ 40×30ಅಂ ಇದ್ದು ಇಲ್ಲಿನ ಅಕ್ಷರಗಳು 14, 15 ನೇ ಶತಮಾನದ ತೆಲುಗಿನಲ್ಲಿವೆ.

ವಿಜಯನಗರದ ಕಾಲಕ್ಕಿಂತ ಹಿಂದಿನವಾದ ಕಲ್ಲಿನ ಶಾಸನಗಳು ಬಹುತೇಕ ಭಿನ್ನವಾಗಿರುವಂತಹವಾಗಿ ಭಾಗಗಳಲ್ಲಿ ದೊರೆಯು ವುವು. ಹಲವಾದರೋ ಕೆಲವು ಅಕ್ಷರ, ಪದಗಳ ಹೊರತು ಬೇರೆ ಎಂತಹುದೇ ವಿಷಯವನ್ನೂ ತಿಳಿಸಲಾರವು. ಹೀಗಾಗಲು ಮುಖ್ಯ ಕಾರಣವೆಂದರೆ ಆಗಾಗ ನವೀಕರಣಕ್ಕೆ ಒಳಗಾದ ಪ್ರಾಕಾರದ ಗೋಡೆಗಳು ಮತ್ತು ಹಿಂದೆಯೇ ಉಲ್ಲೇಖಿತವಾದಂತೆ 13 ನೇ ಶತಮಾನದಲ್ಲಿ ನಡೆದ ಬಹುದೊಡ್ಡ ಪ್ರಮಾಣದ ಜೀರ್ಣೋದ್ಧಾರದ ಕೆಲಸ. ಈ ಕೆಲಸ ನಡೆಯುವಾಗ ಗಮನಾರ್ಹವಾದ ಒಂದು ಅಂಶವನ್ನು ನೆನೆಯಬಹುದು. ತಿರುಪುಲ್ಲಾಣಿದಾಸರ್ ಎಂಬುವ ವ್ಯಕ್ತಿಯ ಪ್ರಾರ್ಥನೆಯಂತೆ 13 ನೇ ಶತಮಾನದ ಸಾಮಂತರಾಜ ಶ್ರೀ ವೀರನರಸಿಂಗ ಯಾದವರಾಯನು ತನ್ನ ಆಳ್ವಿಕೆಯ 40 ನೇ ವರ್ಷದಲ್ಲಿ ತಿರುಮಲೆಯ ಆಲಯದ ಸ್ಥಾನತ್ತಾರರಿಗೆ ಆಲಯದ

ಗರ್ಭಗುಡಿಯಲ್ಲಿ ನವೀಕರಣಗೊಳಿಸುವ ಭಾಗದ ಹಳೆಯ ಶಾಸನಗಳನ್ನು ಮೊದಲು ಪ್ರತಿ ಮಾಡಿಕೊಂಡು ನವೀಕರಣವಾದಮೇಲೆ ಶಾಸನವನ್ನು ಮೊದಲಿದ್ದ ಸ್ಥಳದಲ್ಲಿಯೇ ಪುನಃ ಕೆತ್ತಿಸಬೇಕೆಂದು ಆದೇಶ ನೀಡಿದನಂತೆ. ಈ ಉದಾಹರಣೆಯಿಂದಾಗಿ ಪ್ರಾಚೀನ ಕಾಲದ ರಾಜರುಗಳು ಶಾಸನಗಳ ಪ್ರಾಮುಖ್ಯತೆಯನ್ನು ತಿಳಿದವರಾಗಿದ್ದರು ಎಂದು ಹೇಳಬಹುದು. ಶಾಸನಗಳನ್ನು ಕಾಪಾಡಿಕೊಂಡು ಹೋಗ ಬೇಕೆಂಬ ಶ್ರದ್ಧೆ ಆಸಕ್ತಿಗಳಿಗೆ ಇತಿಹಾಸದ ಕಾರಣಗಳಿಗಿಂತ ಧಾರ್ಮಿಕ ಕಾರಣಗಳು - ದಾನದ ವಸ್ತುವಿನ ಪವಿತ್ರತೆ ಮೊದಲಾದ ಭಾವ ಗಳು- ಮುಖ್ಯವಾಗಿರಬಹುದು. ವೀರನರಸಿಂಗದೇವ ಯಾದವರಾಯನ ಮೇಲಿನ ಆದೇಶದಿಂದಾಗಿಯೇ ತಿರುಮಲೆಯ ಆಲಯದ್ದಲಿ ರುವ ಚೋಳರ ಕಾಲದ ನಾಲ್ಕು ಶಾಸನಗಳು ಈಗ ನಮಗೆ ತಿಳಿದು ಬರುವುವು. ಹೀಗಾಗಿ ಅಂದಿನಕಾಲದಲ್ಲಿ ಐತಿಹಾಸಿಕ ಶಾಸನಗಳನ್ನು ಪುನಃ ಕೆತ್ತಿಸುವ ಕೆಲಸದ ಬಗ್ಗೆ ರಾಜಾಜ್ಞೆಯಿಂದಾಗಿ ದಾಖಲೆಗಳನ್ನು ಉಳಿಸಿಕೊಳ್ಳುವ ಪದ್ಧತಿಯಿತ್ತೆಂದು ತಿಳಿಯಬಹುದು. ಆದರೆ ಇದೊಂದು ಅಪವಾದವಷ್ಟೆ. ಇದಕ್ಕೂ ಮೊದಲಿನ ನವೀಕರಣ, ಜೀರ್ಣೋದ್ಧಾರ ಕಾಲಗಳ ಯರ‍್ರಾಬಿರ‍್ರಿ ತೋಡುತ್ತ, ಕಸಮಾಡಿಸುವುದ ರಿಂದಾಗಿ ಹಳೆಯ ಶಾಸನಗಳಿಗೆ ಬಹುಪಾಲು ಧಕ್ಕೆ ಉಂಟಾಗಿ ಅವು ಸಂಪೂರ್ಣ ನಷ್ಟವಾಗೋ ಇಲ್ಲ ತುಂಡಾಗಿಯೋ ಕಂಡುಬರುತ್ತೆ.

## 4. ತಾಳ್ಳಪಾಕ ತಾಮ್ರಪತ್ರಗಳು

ಶಿಲಾಶಾಸನಗಳಲ್ಲದೆ ಸುಮಾರು 3000 ತಾಮ್ರಪತ್ರಗಳು - ಸಂಕೀರ್ತನ ಪದ್ಧತಿಯ ಸುಮಾರು 16000 ಭಕ್ತಿಗೀತೆಗಳು ಮತ್ತಿತರ ತೆಲುಗು ಸಾಹಿತ್ಯವನ್ನೊಳಗೊಂಡವು - ತಾಳ್ಳಪಾಕ ವಂಶದಲ್ಲಿ 16 ನೇ ಶತಕದಲ್ಲಿದ್ದ ಮೂವರು ಕವಿಗಳರಚನೆಯಾದವುಗಳು ದೊರೆತಿವೆ. ಇವುಗಳನ್ನು ಸಾಧುಸುಬ್ರಹ್ಮಣ್ಯಶಾಸ್ತ್ರಿಗಳು ಅರ್ಥೈಸಿಕೊಂಡು ವಿಜಯನಗರ ಸಾಮ್ರಾಜ್ಯದ ಎರಡನೇ ವಂಶಕ್ಕೆ ಸೇರಿದ ರಾಜರ ಆಶ್ರಯದಲ್ಲಿ ಈ ಕವಿಗಳು ಇದ್ದರೆಂದೂ ತಿರುಮಲೆಯ ಆಲಯದ ಪಾರಂಪರಿಕ ಸಂಗೀತ ವಿದ್ವಾಂಸರಿವರೆಂದೂ ಪತ್ತೆಹಚ್ಚಿ ತಿಳಿಸಿದರು. ತಾಳ್ಳಪಾಕ ಅನ್ನಮಾಚಾರ್ಯನ ಮೊಮ್ಮಗ ಚಿನ್ನ ತಿರುಮಲಾರ್ಯ (ಚಿನ್ನನ್ನ) ನು ತನ್ನ ತಾತನ ಜೀವನವನ್ನು "ಅನ್ನಮಾಚಾರ್ಯ ಚರಿತ್ರಮು" ಕೃತಿಯಲ್ಲಿ ಚಿತ್ರಿಸುತ್ತ ಅನ್ನಮಾಚಾರ್ಯನು ವೆಂಕಟೇಶ್ವರಸ್ವಾಮಿಯ ಬಗ್ಗೆ 32000 ಕೀರ್ತನೆಗಳನ್ನು ರಚಿಸಿದನೆಂದು ಹೇಳುತ್ತಾನೆ. 1920 ರಲ್ಲಿ ಆಲಯದಲ್ಲಿ ಕಂಡುಕೊಳ್ಳಲಾದ ತಾಮ್ರಪತ್ರಗಳಲ್ಲಿ ಪ್ರತಿ ಪುಟದಲ್ಲೂ ಮೂರು ಕೀರ್ತನೆಗಳ ಕೆತ್ತನೆಯಾಗಿದ್ದು ತಾಮ್ರ ಪತ್ರದ ಎರಡೂಕಡೆ ಕೆತ್ತನೆಯಾಗಿದ್ದು ಕಂಡು ಬಂದಿದೆ. ದೊರೆತ ತಾಮ್ರಪತ್ರಗಳ ಖಚಿತವಾದ ಸಂಖ್ಯೆಯೆಂದರೆ 2590, ಇದರಿಂದಾಗಿ ಒಂದು ಪತ್ರಕ್ಕೆ ಆರು ಕೀರ್ತನೆಯಂತೆ 15540 ಕೀರ್ತನೆಗಳನ್ನು ಕುರಿತು ಗಣಿತ ಹೇಳುತ್ತದೆ. ಸರಿಯಾದ ಒಟ್ಟು ಮೊತ್ತವೆಂದರೆ 16582, ಇವುಗಳಲ್ಲಿ ಅನ್ನಮಾಚಾರ್ಯನ ಕೀರ್ತನೆಗಳು ಸುಮಾರು 14400, ಆತನ ಮಗ ಪೆದತಿರುಮಲಾಚಾರ್ಯನವು 1062, ಆತನ ಮೊಮ್ಮಗ ಚಿನತಿರುಮಲಾಚಾರ್ಯನವು 1120.

ವಿಚಾರಿಸಿದಾಗ ತಿಳಿದು ಬಂದ ಅಂಶವೆಂದರೆ ಈ ತಾಮ್ರಪತ್ರಗಳನ್ನು ತಿರುಪತಿಗೆ ಸಾಗಿಸಿದ ಮೇಲೆ ಸಾಧುಸುಬ್ರಹ್ಮಣ್ಯಶಾಸ್ತ್ರಿಗಳು ಇವುಗಳನ್ನು ಓದಿ ಕಾಗದದ ಮೇಲೆ ಪ್ರತಿಮಾಡಿದರು. ಈ ಕಾಗದದ ಪ್ರತಿಗಳನ್ನು ಅಂದು ಮದರಾಸಿನಲ್ಲಿದ್ದ ದೇವಸ್ಥಾನದ ಮುದ್ರಣಾ ಲಯಕ್ಕೆ ತೆರಳಿಸಿದರು. ಶಾಸ್ತ್ರಿಗಳ ನಂತರ ಪಂಡಿತ ವೀರರಾಘವಾಚಾರ್ಯರು ಈ ಕಾರ್ಯವನ್ನು ಮುಂದುವರಿಸಿದರು. ಕೆಲ ಕಾಲಾನಂತರ ಮದರಾಸಿನಿಂದ ತಿರುಪತಿಗೆ ಮುದ್ರಣಾಲಯವನ್ನು ಸ್ಥಳಾಂತರಿಸಿದಾಗ ಈ ಕಾಗದ ಪತ್ರಗಳ ಪ್ರಾಮುಖ್ಯತೆಯನ್ನು ತಿಳಿಯದೆ ಕಸವೆಂದು ನಾಶಪಡಿಸಲಾಯಿತು. ನಂತರ ತಿ.ತಿ.ದೇವಸ್ಥಾನಗಳ ಪ್ರಾಚ್ಯ ಸಂಶೋಧನೆ ಸಂಸ್ಥೆಗೆ ವೇಟೂರಿ ಪ್ರಭಾಕರ ಶಾಸ್ತ್ರಿಗಳು ಬಂದಮೇಲೆ ಅವರು ಪುನಃ ಈ ತಾಮ್ರಪತ್ರಗಳನ್ನು ಓದಿ ಹಸ್ತಪ್ರತಿಗಳನ್ನು ತಯಾರಿಸುವ ಕೆಲಸದಲ್ಲಿ ತೊಡಗಿದರು( ಅವರ ನಂತರ ರಾಳ್ಳಪಲ್ಲಿ ಅನಂತಕೃಷ್ಣಶರ್ಮ, ಗೌರಿಪೆದ್ದಿ ರಾಮಸುಬ್ಬಶರ್ಮ ಮುಂತಾದವರ ಕಾಲದಲ್ಲಿ ಈ ಕೆಲಸ ಮುಂದುವರಿದು ಸುಮಾರು 32 ಸಂಪುಟಗಳಲ್ಲಿ ಎಲ್ಲ ಸಂಕೀರ್ತನೆಗಳೂ 1984 ರ ವೇಳೆಗೆ ಜನರಿಗೆ ದಕ್ಕುವಂತಾದವು - ಅನುವಾದಕ.)

### 5. ಶಾಸನಗಳ ಕಾಲವ್ಯಾಪ್ತಿ

ಮೇಲಿನ ಶಿಲಾಶಾಸನಗಳ ಕಾಲವ್ಯಾಪ್ತಿಯು ಪಲ್ಲವ ವಂಶದ ಕೋವಿಜಯದಂತಿ ವಿಕ್ರಮನ ಆಳ್ವಿಕೆಯ 51 ನೇ ವರ್ಷದಲ್ಲಿ (ಜಿ.ಟಿ 219) (ಸು. 830 ಕ್ರಿ.ಶ.) ಚೋಳನಾಡಿನ ಉಲಗ ಪ್ಪೆರುಮಾನಾರ್ ಎಂಬುವವನು ನಂದಾದೀಪವನ್ನು ಬೆಳಗಿಸಲು ನೀಡಿದ ದಾನದಿಂದ ಹಿಡಿದು, ಕಲಿಯುಗದ 5010 ನೇ ವರ್ಷದ ಕೀಲಕ ನಾಮ ಸಂವತ್ಸರದ ವರೆಗೆ (ಕ್ರಿ.ಶ. 1909) (ತಿ.ತಿ. 242) ಎಂದರೆ ತಿರುಮಲೆಯ ಆಲಯದ ವಿಚಾರಣ ಕರ್ತರಾದ ಹತ್ತಿರಾಮಜೀ ಮಠದ ಶ್ರೀ ಮಹಂತ ಪ್ರಯಾಗದಾಸಜೀ ಕಾಲದಲ್ಲಿ ಆಲಯದ ಗರ್ಭಗುಡಿಯ ವಿಮಾನದ ಮೇಲೆ ಚಿನ್ನದ ಮುಲಾಮಿನ ಕಳಶವು ಅವರ ಗುರುಭಾಯಿಗಳಾದ ತಿರುಮಲೆಯ ಅಧಿಕಾರಿ ರಾಮಲಕ್ಷ್ಮಣ ದಾಸಜೀ ಬಾವಾಜಿ ಅವರಿಂದ ಪ್ರತಿಷ್ಠಾಪಿತವಾಗುವವರೆಗೆ ಹರಡಿದೆ. ಈ ದಾಖಲೆಗಳು ಸುಮಾರು 11 ಶತಮಾನಗಳಷ್ಟು ಹಿರಿಯ ಕಾಲದ ವಲಯವನ್ನು ಹೊಂದಿದ್ದರೂ ದಕ್ಷಿಣ ಭಾರತದ ಎಲ್ಲ ಅರಸುಮನೆತನಗಳೂ ಏಕರೂಪವಾಗಿ ಇಲ್ಲಿ ಪ್ರಾತಿನಿಧ್ಯ ಪಡೆದಿಲ್ಲ. ಕಾರಣ ವಿಜಯನಗರದ ಅರಸರ ಕಾಲದ ಶಾಸನಗಳು ಬಹುವಾಗಿದ್ದು ಅದಕ್ಕೂ ಮುಂಚಿನ ರಾಜರ ಕಾಲದ ಶಾಸನಗಳು ಬಹು ಕಡಮೆಯಾಗಿವೆ. ವಿಜಯನಗರದ ಕಾಲದನಂತರವಾದರೂ ಬಹುಕಡಮೆಯೆನ್ನಬೇಕು.

### 6. ಶಾಸನಗಳ ಭಾಷೆ

ಕೆಲವೇ ಕೆಲವನ್ನು ಬಿಟ್ಟರೆ ಮಿಕ್ಕ ಎಲ್ಲ ಶಾಸನಗಳೂ ತಮಿಳು ಭಾಷೆಯಲ್ಲಿದ್ದು ಅಲ್ಲಲ್ಲಿ ಗ್ರಂಥಾಕ್ಷರ ಗಳಲ್ಲಿವೆ. ಸರಿಸುಮಾರು ಐವತ್ತು ಮಾತ್ರವೇ ಕನ್ನಡ ತೆಲುಗು ಭಾಷೆಗಳಲ್ಲಿವೆ. ಕೃಷ್ಣರಾಯನ ಕಾಲಕ್ಕೆ ಹಿಂದೆ ಎನ್ನುವುದಾದ ಒಂದೇ ಒಂದು ತೆಲುಗು ಶಾಸನ (ತಿ.ತಿ.237) ಸಾಳುವ ಮಂಗಿದೇವ ಮಹಾರಾಯನ ಕಾಲದ್ದು (- ಶಕ 1281) ಹಾಗೂ ಎರಡು ಕನ್ನಡ ಶಾಸನಗಳು ಇವೆ.ಒಂದು ವೀರಪ್ರತಾಪದೇವರಾಯನ ಮಹಾರಾಯನ ಶಕ 1351 ರ ಶಾಸನವಾದರೆ (188 ತಿ.ತಿ.) ಇನ್ನೊಂದು 1389 ನೇ ಶಕದ ಸಾಳುವ ನರಸಿಂಹರಾಯನದು (ಜಿ.ಟಿ.- 8) ಕೃಷ್ಣದೇವರಾಯನ ಮತ್ತೆ ಅವನ ರಾಣಿಯರ ಎಲ್ಲ ಶಾಸನಗಳೂ, ಅಚ್ಯುತರಾಯನ ಒಂದು ಶಾಸನವೂ ತಮಿಳು, ತೆಲುಗು ಕನ್ನಡ ಅಕ್ಷರಗಳಲ್ಲಿ ಅವೇ ಭಾಷೆಗಳಲ್ಲಿ ಮೂರು ಮೂರು ಪ್ರತಿಗಳಾಗಿವೆ ಯಾದಕೃಷ್ಣದೇವ ರಾಯನ ಶಾಸನಗಳಲ್ಲಿ ಒಂದು ಮಾತ್ರ ಕನ್ನಡ ಭಾಷೆ ನಂದಿನಾಗರಿಲಿಪಿಯಲ್ಲಿಯೂ ಇದೆ. ಅಚ್ಯುತರಾಯನ ಆಳ್ವಿಕೆಯನಂತರ ಕನ್ನಡತೆಲುಗು ಶಾಸನಗಳು ಕಂಡುಬರದಿರುವುದು ನಿಗೂಢವಾಗಿದೆ. ಒಂದೆರಡು ಅಪವಾದವೆಂದರೆ ಮಟ್ಲಕುಮಾರ ಅನಂತರಾಯನ (ಜಿ.ಟಿ.269) ಶಕವರ್ಷ 1550 ರಲ್ಲಿನ ತೆಲುಗು ಶಾಸನ ಹಾಗೂ ಶಕವರ್ಷ 1606 ರ (ತಿ.ತಿ. 263) ಕನ್ನಡ ಶಾಸನ.

### 7. ಶಾಸನಗಳು ಸ್ಥೂಲ ವಿಷಯ

ಪ್ರಾಕ್ ವಿಜಯನಗರ ಕಾಲದ ಶಾಸನಗಳು ಸಾಧಾರಣವಾಗಿ ಮೂಲವರರ ಅಥವಾ ಇನ್ನಿತರ ದೇವತೆಗಳ ವಿಗ್ರಹಗಳ ಮುಂದೆ ತುಪ್ಪದ ನಂದಾದೀಪಗಳ ಬೆಳುಗುವಿಕೆಯನ್ನು ಕುರಿತು ಹೇಳುತ್ತವೆ. ಇದಕ್ಕಾಗಿ ದಾನಿಗಳು ಆಲಯ ಕೋಶಾಗಾರಕ್ಕೆ ಈ ಸೇವೆಯನ್ನು ನಡೆಸಿಕೊಂಡು ಹೋಗಲು ನಿರ್ದಿಷ್ಟವಾದ ಧನವನ್ನು ನೀಡುತ್ತಿದ್ದರು. ಹಲವಾರು ಬಾರಿ ಅವರುಗಳು ಹಸುಗಳನ್ನು ಕೊಂಡು ಕೊಂಡು ಆಲಯದ ಗೋಶಾಲೆಗೆ ನೀಡುತ್ತಿದ್ದರು. ನಂತರದ ಕಾಲದ ದಾನಿಗಳು ಹಾಲು ಮೊಸರುಗಳನ್ನೂ, ಕ್ಷೀರಾನ್ನ ದಧ್ಯೋದನಗಳನ್ನು ನಿವೇದಿಸುವ ಹೊತ್ತಿನಲ್ಲಿ ಇದೇ ಪದ್ಧತಿಯನ್ನು ಅನುಸರಿಸಿದರು. ಇದರಿಂದಾಗಿ ಆಲಯದ ಎಲ್ಲ ದೀಪಗಳಿಗೂ ತುಪ್ಪವನ್ನೇ ಉಪಯೋಗಿಸುವಂತಾಗಿ ಇಂದಿಗೂ ಬೆಟ್ಟದ ಆಲಯದಲ್ಲಿನ ಎಲ್ಲವೂ ತುಪ್ಪದ ದೀಪಗಳೇ ಆಗಿವೆ.

ದೀಪಗಳ, ದೀಪದ ತುಪ್ಪದ ಕಾಣಿಕೆಗಳೇ ಅಲ್ಲದೆ, ಭೂಮಿ, ಒಡವೆ, ಧನಗಳ ನಿವೇದನೆಯನ್ನೂ ಕಾಣಬಹುದಾಗಿದೆ. ರಾಜರು ಮಂತ್ರಿ, ಸಾಮಂತರು, ಶ್ರೀಮಂತ, ಸ್ಥಿತಿವಂತರು, ತಮ್ಮ ಮತಿಯಿಂದ ಕೈಲಾದಷ್ಟು ಕಾಣಿಕೆಗಳನ್ನು ನೀಡುತ್ತ ಬಂದಿದ್ದಾರೆ. ನಂತರದ

ಶಾಸನಗಳು ನಿತ್ಯ ನೈವೇದ್ಯವನ್ನು, ಹಲವಾರು ಹಬ್ಬ ಹರಿದಿನ ಗಳಿಗೆ ಉತ್ಸವ ಮೆರವಣಿಗೆಗಳಿಗೆ ಸಾಹಿತ್ಯ ಸಾಮಾಗ್ರಿಗಳನ್ನು ಒದಗಿಸಿವೆ. ಈ ಕಾರಣಗಳಿಗಾಗಿ ಭೂಮಿಕಾಣಿ, ಧನ, ದವಸ, ಧಾನ್ಯಗಳ ಏರ್ಪಾಡು ಮಾಡಿದರು. ಹಲವು ಸಂದರ್ಭಗಳಲ್ಲಿ ಮಾತ್ರವೇ ಆವಣಿಯಾದ ಧನ, ಸುವರ್ಣಗಳನ್ನು ಬಡ್ಡಿಗೆ ಕೊಡಲಾಯಿತಾದರೂ ಸಾಧಾರಣವಾಗಿ, ದೇವದಾನದ ಗ್ರಾಮಗಳ ವೆಚ್ಚಗಳಿಗಾಗಿಯೇ ಬಳಸಲಾಗುತ್ತಿತ್ತು. ಹೊಸ ಹೊಸ ಕಾಲುವೆಗಳ ಜಾಲವನ್ನು ಹರಡುವುದು, ಹಳೆಯ ಕಾಲುವೆಗಳ ಜೀರ್ಣೋದ್ಧಾರ ಮೊದಲಾದವುಗಳಿಗಾಗಿ ವೆಚ್ಚ ಮಾಡಲಾಗುತ್ತಿತ್ತು. ಹಲವು ವೇಳೆ ದೇವದಾನದ ಗ್ರಾಮಗಳ ಬಂಜರು ಭೂಮಿಯನ್ನು ಸಾಗುವಳಿ ಮಾಡಿಸಿ, ಹೊಸ ನೀರಾವರೀ ವ್ಯವಸ್ಥೆಗಳನ್ನೂ ದಾನಿಗಳು ತಮ್ಮ ಖರ್ಚಿನಿಂದ ಮಾಡಿಸುತ್ತಿದ್ದರು. ಇದಕ್ಕೆ ಪ್ರತಿಯಾಗಿ ಆಲಯವು ಅವರುಗಳ ಹೆಸರಿನಲ್ಲಿ ದೇವತೆಗಳ ನಿವೇದನೆಗೆ ಏರ್ಪಾಡು ಮಾಡಬೇಕಾಗಿ ಬರುತ್ತಿತ್ತು. ಹೀಗೆಯೇ ಅಪೇಕ್ಷಿಸಿದ ಆದಾಯದ ಉತ್ಪತ್ತಿ ಇಲ್ಲದ ದೇವದಾನದ ಗ್ರಾಮಗಳಲ್ಲಿ ದಾನಿಗಳು ಕೆರೆ, ಕೊಳ, ನೀರಾವರೀ ಭಾವಿಗಳನ್ನು ತೋಡಿಸಿ, ಕಾಲುವೆಗಳನ್ನು ಕಟ್ಟಿಸಿ, ಹೆಚ್ಚಿನ ಸಾಗುವಳಿ ಆಗುವಂತೆ ಮಾಡುತ್ತಿದ್ದರು. ಅಂತಹ ಸಂದರ್ಭಗಳಲ್ಲಿ ದಾನಿಗಳ ಹೆಸರು ಚಿರಂತನ ಆಗುವಂತೆ ಆಲಯವು ಅವರ ಹೆಸರಿನಲ್ಲಿ ಹಲವು ರೀತಿಯ ಪೂಜೆ, ನಿವೇದನೆಗಳನ್ನು ಶಾಶ್ವತವಾಗಿ ನಡೆಸಲು ಮುಂದೆ ಬರುತ್ತಿದ್ದಿತು. ಇದರ ಪ್ರಸಾದವನ್ನು ನೆರೆದ ಭಕ್ತರಲ್ಲಿ ಹಂಚಿಕೆ ಏರ್ಪಾಡು ಇದ್ದಿತು.

ಹಬ್ಬ ಹರಿದಿನಗಳಲ್ಲಿಯೂ, ದೈನಂದಿನ ಪೂಜೆ ಉತ್ಸವಗಳಲ್ಲಿಯೂ ದೇವರಿಗೆ ಅಲಂಕಾರ ಮಾಡಲು ತಕ್ಕ ಪ್ರಮಾಣದ ಹೂದೋಟ ತುಳಸೀತೋಟಗಳನ್ನು ದಾನಿಗಳು ತಮ್ಮ ಶ್ರಮದಿಂದ ಬೆಳೆಸಿ ನಂತರ ದೇವಾಲಯಕ್ಕೆ ಒಪ್ಪಿಸುದ ಉದಾಹರಣೆಗಳುಂಟು. ತಿರುಮಲೆಯಲ್ಲಿಯೂ ತಿರುಪತಿಯಲ್ಲಿಯೂ ಹಲವಾರು ರಾಮಾನುಜ ಕೂಟಗಳುಂಟಾಗಿ - ಹೆಚ್ಚಿಗೆ ತಿರುಮಲೆಯಲ್ಲಿ ಉಂಟಾಗಿ - ಯಾತ್ರಿಕರಿಗೆ ಭಕ್ತರಿಗೆ ಉಚಿತ ಅಶನವನ್ನು ನೀಡುವ ವ್ಯವಸ್ಥೆಯಾದದ್ದನ್ನು ಕಾಣಬಹುದಾಗಿದೆ. ಭಕ್ತಯಾತ್ರಿಕರು ವರ್ಷದುದ್ದಕ್ಕೂ ಇದ್ದೇ ಇರುತ್ತಿದ್ದು ಉತ್ಸವ ಮೆರವಣಿಗೆಯ ದಿನಗಳಲ್ಲಿ ಹೆಚ್ಚು ನೆರೆಯುತ್ತಿದ್ದರು.

ಹಲವು ಶಾಸನಗಳು ಆಲಯಕ್ಕೆ ನೀಡಿದ ಮನೆಗಳನ್ನೂ, ಮನೆಯ ಸ್ಥಳಗಳನ್ನೂ ಗುರುತಿಸುತ್ತವೆ. ಆಲಯವು ಯಾವ ಕಾರಣದಿಂದ ಈ ಮನೆಗಳನ್ನೂ, ಸ್ಥಳಗಳನ್ನೂ ಕೊಂಡುಕೊಂಡಿತೆಂದು ಊಹಿಸುವುದು ಸಾಧ್ಯವಿಲ್ಲ. ಒಂದು ಶಾಸನವು ದೇವದಾನ ಗ್ರಾಮಗಳಾದ ತಿರುಪತಿ ಹಾಗೂ ಅವಿಲಾಲಗಳ ನಡುವಣ ವಿಭಾಗ ರೇಖೆಯನ್ನು ತಿರುಪತಿಯಿಂದ ಒಂದು ಮೈಲು ದಕ್ಷಿಣಕ್ಕೆ ಇರುವಂತೆ ಗುರುತಿಸಿದೆ.

## 8. ರಾಜಾಶ್ರಯ

ತಿರುಮಲೆಯ ಶ್ರೀ ವೆಂಕಟೇಶ್ವರಸ್ವಾಮಿ ಆಲಯ ಹಾಗೂ ತಿರುಪತಿಯ ಶ್ರೀ ಗೋವಿಂದರಾಜಸ್ವಾಮಿ ದೇವಾಲಯಗಳು ಸಾಮ್ರಾಟರ, ಶ್ರೀಮಂತರ ಆಶ್ರಯದಲ್ಲಿ ಐಶ್ವರ್ಯದಿಂದ ಕೂಡಿದ್ದವೆಂದು ಶಾಸನಗಳು ಖಚಿತವಾಗಿ ತಿಳಿಸುತ್ತವೆ. ಇವುಗಳ ಪಡೆದು ಕೊಂಡವರಲ್ಲಿ ಪ್ರಮುಖರೆಂದರೆ -

೧. ಪರಾಂತಕ 11 - ಸುಂದರ ಚೋಳ - "ಸುವರ್ಣ ಮಂದಿರದಲ್ಲಿ ಪವಡಿಸಿದ ರಾಜನ" ಪತ್ನಿಯಾದ (ಚೇರಮಾನನ ಪುತ್ರಿ) ರಾಣಿಯು ಶ್ರೀ ವೆಂಕಟೇಶ್ವರಸ್ವಾಮಿಗೆ ರಾಜರಾಜ 1 - ನ ಆಳ್ವಿಕೆಯ 16 ನೇ ವರ್ಷದಲ್ಲಿ (ಕ್ರಿ.ಶ. 1001) (ತಿ.ತಿ.17), ಅಮೂಲ್ಯ ಹರಳುಗಳಿಂದಾದ ಹಣೆ ಪಟ್ಟಿಯನ್ನು ಸಮರ್ಪಿಸಿದಳು.

೨. ಪಲ್ಲವ ರಾಣಿ ಸಾಮವೈ ಒಂದು ಕಿರೀಟವನ್ನು ನಾಲ್ಕೆಳೆ ಬಂಗಾರದ ಸರವನ್ನು ಕಡಗ, ಉದರ ಬಂಧ, ಮಣಿಬಂಧನಗಳನ್ನು ವೆಂಕಟೇಶ್ವರ ಸ್ವಾಮಿಯ ಪ್ರತಿಮೂರ್ತಿ ಯಾದ ಚಿಕ್ಕ ಮಣವಾಳಪ್ಪೆರುಮಾಳ್ ಬೆಳ್ಳಿಯ ವಿಗ್ರಹಕ್ಕೆ ಸಮರ್ಪಿಸಿ, ಈ ವಿಗ್ರಹದ ಉತ್ಸವ ಮೆರವಣಿಗೆಗೆ ಸಾಮಾಗ್ರಿಯನ್ನೊದಗಿಸಿ, ತಿರುಸುಖನೂರಿನ (ತಿರುಚಾನೂರು) ಹಲವು ಜಮೀನುಗಳನ್ನು ಆಲಯಕ್ಕೆ ಸುಮಾರು ಹತ್ತನೆಯ ಶತಮಾನದ ಉತ್ತರಾರ್ಧದಲ್ಲಿ ನೀಡಿದಳು. (ತಿ.ತಿ. 8,9)

೩. ಜಟಾವರ್ಮಸುಂದರ ಪಾಂಡ್ಯ 1 ನು (1250 ರಿಂದ 1275) ಶ್ರೀ ವೆಂಕಟೇಶ್ವರಸ್ವಾಮಿ ಆಲಯದ ವಿಮಾನದ ಮೇಲೆ ಚಿನ್ನದ ಮುಲಾಮಿನ ಕಳಸವನ್ನಿಟ್ಟನು.

೪. ಚೋಳ ಸಾಮಂತನಾದ ವೀರನರಸಿಂಹ ಯಾದವರಾಯನ ರಾಣಿಯು 13 ನೇ ಶತಮಾನದಲ್ಲಿ ತಮಿಳು ಆಣಿಮಾಸದಲ್ಲಿ ತಿರುಪತಿಯ ಗೋವಿಂದರಾಜಸ್ವಾಮಿಗೆ ವೈಗಾಸಿ ಮಾಸದಲ್ಲಿನ ಸಾಮಾನ್ಯ ಬ್ರಹ್ಮೋತ್ಸವದ ಜೊತೆಗೆ ಒಂದು ನೂತನ ಬ್ರಹ್ಮೋತ್ಸವ ಕ್ರಮವನ್ನುಂಟುಮಾಡಿದ್ದೇ ಅಲ್ಲದೇ ನಾಲ್ಕು ಮುಖದ ರಥವನ್ನೂ ನಿರ್ಮಿಸಿ, ಹೊಸ ಉತ್ಸವದ ವೆಚ್ಚಗಳಿಗಾಗಿ ಪೈಂಡಿಪಲ್ಲಿ ಗ್ರಾಮದ ಅರ್ಧಭಾಗದ ಆದಾಯವನ್ನು ಕೊಡಮಾಡಿಸಿ, ಉತ್ಸವದ ವೆಚ್ಚಗಳ ನಂತರ ಹಣಮಿಕ್ಕಲ್ಲಿ ಅದನ್ನು ಆಲಯದಲ್ಲಿನ ಜೀರ್ಣೋದ್ಧಾರಕ್ಕೆ ಬಳಸ ಬೇಕೆಂದು ಶಾಸನ ಮಾಡಿದ್ದಾಳೆ.

೫. ಕಡೆಯ ಹೊಯ್ಸಳ ರಾಜನಾದ ಮೂರನೇ ವೀರಬಲ್ಲಾಳನ ಸಾಮಂತನಾದ ತಿರುವೆಂಕಟನಾಥ ಯಾದವರಾಯನು ಆಲಯಕ್ಕೆ ಎರಡು ಗ್ರಾಮಗಳನ್ನು ಸರ್ವಮಾನ್ಯವಾಗಿ (ಕರಮುಕ್ತವಾಗಿ) ನೀಡಿ ದೇವರಿಗೆ ನಿತ್ಯ ನೈವೇದ್ಯ ಮಾಡಲು ತಿಳಿಸಿದ್ದಾನೆ.

೬. ಸಾಳುವ ಮಂಗಿದೇವ ಮಹಾರಾಯನು ಆಲಯದ ಆಸ್ತಿಪಾಸ್ತಿಗಳನ್ನು, ಖಜಾನೆಯನ್ನು ಹೆಚ್ಚಿಸುವುದರಲ್ಲಿ ಆಸಕ್ತನಾದರೀತಿ ಕಂಡುಬರುವುದಿಲ್ಲ. ಆತನ ಆಸಕ್ತಿಯೆಲ್ಲ ಆಲಯದ ವೈಭವವನ್ನು ಹೆಚ್ಚಿಸುವತ್ತ ಹರಿದಿತ್ತು ಎಂಬುದು ಆತ ಮಾಡಿಸಿದ ಆಲಯ ವಿಮಾನ ಶಿಖರದ ಹಾಗೂ ಗರ್ಭಗುಡಿಯ ತಾಮ್ರದ ಹೊದಿಕೆಯ ಚಿನ್ನದ ಲೇಪನ ಕೆಲಸದಲ್ಲಿ ತಿಳಿಯಬಹುದು. ಶಕವರ್ಷ 812 ರಲ್ಲಿ ವಿಮಾನದ ಮೇಲೆ ಚಿನ್ನದ ಮುಲಾಮಿನ ಕಳಸವನ್ನೂ ಪ್ರತಿಷ್ಠೆಮಾಡಿದ್ದಾನೆ. ಇದು ಬಹು ವೆಚ್ಚದ ಕೆಲಸವೆಂಬುದು ಖಚಿತ. ಆದರೂ ಆತ ಅಪೇಕ್ಷಿಸಿ ದಂತೆಯೇ ಆಲಯ ನೋಡುವವರ ಕಣ್ಣುಗಳಲ್ಲಿ ಹೊಳೆಯುತ್ತ ಕೋರೈಸಿರಬೇಕು.

೭. ಶಕವರ್ಷ 1355 ರಲ್ಲಿ ಶ್ರೀ ವೆಂಕಟೇಶ್ವರಸ್ವಾಮಿ ಆಲಯದಲ್ಲಿ ವೇದಪಾರಾಯಣದ ಪದ್ಧತಿ ಪುನರು ತ್ಥಾನಗೊಳಿಸುವಂತೆ ಮಾಡಿದ ಎರಡನೇ ದೇವರಾಯ ದೇವರ ಕೃಪೆಗೆ ಪಾತ್ರನಾದ. ಈತ 1351 ರಲ್ಲಿಯೇ ಆಲಯಕ್ಕೆ ಮೂರು ಗ್ರಾಮಗಳನ್ನು ದಾನ ಮಾಡಿದ್ದ.

೮. ಶಕ 1378 ರಿಂದ 1410 ರ ವರೆಗೆ ಸಾಮ್ರಾಜ್ಯದ ಹಲವು ಭಾಗಗಳ ಭೂಮಿಯನ್ನು ಆಲಯಕ್ಕೆ ದಾನಮಾಡಿದ್ದು ಸಾಳುವ ನರಸಿಂಹರಾಯನ ಭಕ್ತಿಯ ದ್ಯೋತಕ.

೯. ಮೂಲಮೂರ್ತಿಗೂ, ಉತ್ಸವಮೂರ್ತಿಗೂ ಬೆಲೆಬಾಳುವ ಆಭರಣಗಳನ್ನು ನೀಡಿದ್ದೇ ಅಲ್ಲದೆ ಕೃಷ್ಣ ದೇವರಾಯನು ಪೂಜೆಗಾಗಿ ಚಿನ್ನ ಬೆಳ್ಳಿಯ ಪಾತ್ರೆಗಳನ್ನೂ ನೀಡಿದ್ದು, ಚಂದ್ರಗಿರಿ, ಉದಯಗಿರಿ, ಪೆನುಗೊಂಡಗಳ ಹಲವಾರು ಗ್ರಾಮಗಳನ್ನು ಉಂಬಳಿ ಯಾಗಿ ನೀಡಿದ. ಆತನ ಇಬ್ಬರು ರಾಣಿಯರು ತಿರುಮಲದೇವಿ ಚೆನ್ನಾಜಿ ದೇವಿಯವರುಗಳು- ಆತ ತಿರುಮಲೆಗೆ ಬಂದಾಗಲೆಲ್ಲ ಜೊತೆಗೇ ಬಂದು ಹಲವಾರು ದತ್ತಿ ದಾನಗಳನ್ನು ನೀಡಿದ್ದಾರೆ. ಇವೆಲ್ಲ ನಡೆದದ್ದು ಶಕವರ್ಷ 1434 ರಿಂದ 1442 ವರೆಗೆ

೧೦. ಅಚ್ಯುತರಾಯನ ಪತ್ನಿ ಮಹಾರಾಣಿ ವರದಾಜಿದೇವಿ ಅಮ್ಮನವರು ಆಲಯಕ್ಕೆ ಆರುಗ್ರಾಮಗಳನ್ನು ದಾನವಾಗಿ ನೀಡಿದ್ದಾರೆ.

೧೧. ರಾಜಪುರುಷರಲ್ಲಿ ತಿರುಮಲೆಯ ಸೇವೆಮಾಡಿದ ಮತ್ತೊಬ್ಬರೆಂದರೆ ಮಟ್ಲಕುಮಾರ ಅನಂತರಾಯ. ಅವನ ಒಂದು ಶಾಸನವು ಬೇರೆ ಬೇರೆ ಕಡೆಗಳಿಗೆ ಅವನು ನೀಡಿದ ದಾನಗಳನ್ನು ಗುರುತಿಸಿದ್ದು, ತಿರುಪತಿಯು ಅಶ್ವ, ಗಜ, ಸಮಭೂಪಾಲವಾಹನ ಗಳನ್ನು ಪಡೆದಂತೆ ಸೂಚಿತವಾಗಿದೆ. ಒಂದು ಪದ್ಮಪೀಠ, ಒಂದು ರತ್ನ ಕಿರೀಟ, ಒಂದು ನೈವೇದ್ಯ ಭಾಜನ (ತಟ್ಟೆ), ಒಂದು ಎತ್ತರವಾದ ಕೇಳೀ ಮಂಟಪ (ಉಯ್ಯಾಲೆ ಮಂಟಪ), ಒಂದು ಸೋಪಾನಮಾರ್ಗ (ಅಲಿಪಿರಿಯಿಂದ ಬೆಟ್ಟವನ್ನೇರುವ ಮಾರ್ಗ), ಅದರ

ಮುಂಭಾಗದ ಗೋಪುರದ್ವಾರ ಎಲ್ಲವೂ ಮಟ್ಲಕುಮಾರನಿಂದ ತಿರುಮಲೆಗೆ ಸೇವೆಯಾಗಿ ಸೇರಿದವು. ಶ್ರೀ ಗೋವಿಂದರಾಜಸ್ವಾಮಿಗೆ ಚಿನ್ನದಿಂದ ಮಾಡಿದ ಎರಡು ಗಜ, ಒಂದು ಅಶ್ವವಾಹನಗಳು ನಿವೇದಿಸಲ್ಪಟ್ಟು ಒಂದು ಅನ್ನದಾನ ಸತ್ರವು ಆಳ್ವಾರ್ ತೀರ್ಥದ ಬಳಿಯೂ ಇನ್ನೊಂದು ಬೆಟ್ಟದ ಮೇಲೆಯೂ ಆರಂಭವಾದವು.

## 9. ನಿತ್ಯದೀಪ ಹಾಗೂ ನಿತ್ಯನೈವೇದ್ಯ

ಬಹುತೇಕ ಶಾಸನಗಳು ದೇವರ ಮುಂದೆ ನಿತ್ಯದೀಪ ಅಥವಾ ನಂದಾದೀಪವನ್ನಿಡುವ ಏರ್ಪಾಡುಗಳಾಗಿವೆ. ದೇವರಿಗೆ ನೈವೇದ್ಯವನ್ನು ನೀಡಲು ದತ್ತಿಗಳನ್ನು ಹಲವು ಶಾಸನಗಳು ಗುರುತಿಸುತ್ತವೆ. ಉತ್ಸವ ಮೂರ್ತಿಯ ಮುಂದೆ ನಂದಾದೀಪವನ್ನು ಬೆಳಗಿಸಲೆಂದು ನೀಡಿದ ದಾನವನ್ನು ಗುರುತಿಸುವ ಕ್ರಿ.ಶ. ಸುಮಾರು 830 ನೇ ವರ್ಷದ, ಪಲ್ಲವರಾಜ ದಂತಿವರ್ಮನ ಆಡಳಿತದ ಐವತ್ತೊಂದನೆಯ ವರ್ಷದ ಶಾಸನವೇ ಅತಿ ಪ್ರಾಚೀನವಾದದ್ದು. (ಜಿ.ಟಿ 219) ಚೋಳರ ದಾಖಲೆಗಳೂ ಕೂಡ ಇದೇ ರೀತಿಯ ನಂದಾದೀಪ ಅಥವಾ ಆರಾಧನೆಗಳಿಗಾಗಿ ಮಾಡಿದ ದಾನಗಳನ್ನು ಗುರುತಿಸುತ್ತವೆ. ವಿಜಯನಗರ ಕಾಲದಲ್ಲಿ ನಿವೇದನೆಗಳು ನಂದಾದೀಪಗಳ ದಾನಗಳನ್ನು ಹಿಂದಿಕ್ಕಿದ್ದವು. ಹಲವುವೇಳೆಯಲ್ಲಿ ಸುವರ್ಣದಾನಕ್ಕಿಂತ ಗೋದಾನವು ಪ್ರಮುಖವಾಯಿತು - ಕಾರಣ ಗೋವುಗಳಿಂದ ದೇವರ ನಿವೇದನೆಗೆ ಹಾಲು, ಬೆಣ್ಣೆ, ಮೊಸರುಗಳೇ ಅಲ್ಲದೆ ನಂದಾದೀಪದ ಬಳಕೆಗೆ ಬೇಕಾದ ತುಪ್ಪವೂ ಸಿಗುತ್ತಿದ್ದುದೇ ಆಗಿದ್ದಿತು. ತಿ.ತಿ.92 ರ ಶಾಸನವು ಹಿರಿಯ ಹಾಗೂ ಕಿರಿಯ ದೇವರಾಯರಿಬ್ಬರಿಗೂ ಸಚಿವನಾಗಿದ್ದ ಅಮಾತ್ಯಶೇಖರ ಮಲ್ಲನನು ಶ್ರೀ ವೆಂಕಟೇಶ್ವರಸ್ವಾಮಿಯ ನೈವೇದ್ಯ ಹಾಗೂ ನಂದಾದೀಪಗಳಿಗಾಗಿ ಮಾಡಿದ ದಾನವನ್ನು ಗುರುತಿಸಿದೆ.

ಇಂತಹ ಗೋದಾನದ ಪ್ರಮುಖವಾದ ಉದಾಹರಣೆಯು ಕೃಷ್ಣರಾಯನ ಬಳಿಯಲ್ಲಿ ಹಾಗೂ ಅವರಣ್ಣನ ಬಳಿಯಲ್ಲಿ ಮಹಾ ದಂಡನಾಯಕನಾಗಿದ್ದ ಪೆರಿಯ ಓಬಳನಾಯಕ ರಾಮನಾಯಕನಿಂದ ನಡೆದಂತೆ ಕಂಡು ಬರುತ್ತದೆ. ಶಕ 1426 ರಲ್ಲಿ (ಕ್ರಿ.ಶ. 1504) ರಲ್ಲಿ ಮೊದಲಬಾರಿಗೆ ನೂರು ಹಸುಗಳನ್ನು ನಂದಾದೀಪವನ್ನು ಬೆಳಗಿಸಲೆಂದು (ತಿ.ತಿ. 305) ಕೊಟ್ಟಮೇಲೆ ಎರಡನೆಯಬಾರಿಗೆ (ತಿ.ತಿ. 312) ಶಕ 1434 ರಲ್ಲಿ (ಕ್ರಿ.ಶ. 1512) ಒಂದು ನಂದಾದೀಪವನ್ನು ಬೆಳಗಿಸಲು 50 ಹಸುಗಳನ್ನೂ, ಶಕ 1435 ರಲ್ಲಿ (ಕ್ರಿ.ಶ. 1513) ದೇವರಿಗೆ ನಿವೇದನೆ ಮಾಡಲು ಒಂದು ನಾಳಿ ಪಾಲೇಡು ಕುಳಂಬುಗಾಗಿ (ಚೆನ್ನಾಗಿ ಕುದಿದು ಪಕ್ವವಾಗಿ ಮೇಲೆ ಘನವಾದ ಕೆನೆಗಟ್ಟಿದ ಹಾಲು) 200 ಹಸುಗಳನ್ನು ದಾನ ಮಾಡಿದನೆಂದೂ (ತಿ.ತಿ. 306) ಹೇಳಲಾಗಿದೆ.

ತಿ.ತಿ. 59ನೇ ಶಾಸನ ಸ್ವಲ್ಪ ವೈಶಿಷ್ಟ್ಯದಿಂದ ಕೂಡಿದ್ದಾಗಿದೆ. ಇತರ ಶಾಸನಗಳಲ್ಲಿ ಕಾಣುವಂತೆ ನಂದಾದೀಪಗಳನ್ನು, ಅಥವಾ ಎಣ್ಣೆ ಬತ್ತಿಗಳ ವೆಚ್ಚವನ್ನು ಭರಿಸುವಂತಲ್ಲದೆ, ಇಲ್ಲಿ ಒಂದೂರಿನ ಒಂದಷ್ಟು ಮಂದಿಯನ್ನು ದೀಪ ಬೆಳಗಿಸುವ ಕಾರ್ಯದಲ್ಲಿ ತೊಡಗಿಸಲಾಗಿದೆ. ಶಕ 1384 ರಲ್ಲಿ (ಕ್ರಿ.ಶ. 1462) ಸಾಳುವ ನರಸಿಂಹರಾಯನ ಘನತೆ ಉಳಿಯುವಂತೆ ಚಂದ್ರಗಿರಿ ರಾಜ್ಯದ ನಾರಾಯಣ ಪುರಪ್ಪರ್ರು ಉಪವಿಭಾಗದ ಶಾತ್ತುಕ್ಕುಡಿ ಮರುದೂರು ಗ್ರಾಮದ ಕರ್ತನಾದ ಉಲಗಳಂದವೇಲನ್ ಹಾಗೂ ಕೋನೇರಿಗಳು ಈ ಗ್ರಾಮವಾಸಿಗಳಾದ ಕೆಲವರನ್ನು ಅವರಲ್ಲಿ ನಾಲ್ಕು ಮಂದಿಯ ಹೆಸರನ್ನೂ ಹೇಳುತ್ತ ತಿರುವೆಂಕಟ ಮುಡೈಯಾನನ ಆಲಯದಲ್ಲಿ ತಿರುವಿಳಕ್ಕುಕುಡಿ ಕಾರ್ಯಕ್ಕೆ-ದೀಪ ಬೆಳಗಿಸಲಿಕ್ಕೆ - ಕಳುಹಿಸುತ್ತ ಇವರುಗಳೆಲ್ಲ ವಂಶಪಾರಂಪರ್ಯವಾಗಿ ಶಾಶ್ವತವಾದ ಸೇವೆಯನ್ನು ಸಲ್ಲಿಸಬೇಕೆಂದು ನಿರ್ದೇಶಿಸಿದರು. ಅಂದಿನ ಅಳತೆಯ ಪದ್ಧತಿಯಂತೆ- ಚಾಲುಕ್ಯ ನಾರಾಯಣನ್ ಕಲ್ ಅಳತೆಯಂತೆ- ಪ್ರತಿವರ್ಷವೂ ಎರಡು ಮರಕ್ಕಲ್ ತುಪ್ಪ ಅಳೆದು ಅದಕ್ಕೆ ಜೀಯರಿಂದ ರಸೀದಿಯನ್ನು ಪಡೆಯಬೇಕೆಂದೂ ಸೂಚಿಸಲಾಯಿತು. ಇವರು ಪಡೆದ ಯಾವುದೋ ಉಪಕಾರಕ್ಕೆ ಪ್ರತಿಯಾಗಿ - ಬಹುಶಃ ಇವರು ಸೇವೆಯನ್ನು ಮಾಡಲು ಪಡೆದ ಆಲಯದ ಹಸುಗಳಿಗೆ ಬದಲಾಗಿ -

ತಿರುಪತಿಯ ಆಲಯಕ್ಕೆ ಎರಡು ಮರಕ್ಕಲ್ ತುಪ್ಪವನ್ನು ನೀಡಬೇಕೆಂಬುದು ಕಟ್ಟುಪಾಡಾಗಿದ್ದಿರಬೇಕು. ತಿರುಮಲೆಯಲ್ಲಿಅವರು ಸಲ್ಲಿಸತಕ್ಕ ಯಾವುದೇ ಸೇವೆಗೂ ಈ ಎರಡು ಮರಕ್ಕಲ್ ತುಪ್ಪದ ಒಪ್ಪಂದ ಹೊರತಾಗಿದ್ದಿರಬೇಕು. ತಿರುಮಲೆಯ ಆಲಯದಲ್ಲಿ ದೀಪ ಬೆಳಗಿಸಲು ಇವರನ್ನೇಕೆ ಆರಿಸಲಾಯಿತು ಎಂಬ ವಿವರವೇನೂ ಕಂಡುಬರುವುದಿಲ್ಲ. ಪ್ರಾಯಶಃ 14 ನೇ ಶತಮಾನದಹೊತ್ತಿಗೆ ಭಕ್ತರು ಉದಾರವಾಗಿ ಕೊಟ್ಟಂತಹ ಅಸಂಖ್ಯ ದೀಪಗಳನ್ನು ದಿನನಿತ್ಯ ಬೆಳಗುವ ಕೆಲಸ ಆಲಯದ ಸಿಬ್ಬಂದಿಗೆ ಹೆಚ್ಚಿನ ತ್ರಾಸದಾಯಕವಾದ ಕೆಲಸವಾಗಿದ್ದಿರಬೇಕು. ಹೀಗಾಗಿ ಹೆಚ್ಚಿನ ಸಿಬ್ಬಂದಿಯ ಅಗತ್ಯ ಕಂಡುಬಂದಿರಬೇಕು ಎಂತಲೇ ಈ ಅಧಿಕ ಕೈಗಳ ವಿತರಣೆಯಾಗಿರಬೇಕು.

## 10. ಸಂಧಿ ಸಮರ್ಪಣೆಗಳು, ನೈವೇದ್ಯಗಳು

ವಿಜಯನಗರದರಸರ ಕಾಲಕ್ಕೆ ಆಹಾರ ನಿವೇದನೆಯ ಪ್ರಾಚುರ್ಯ ಹೆಚ್ಚಿ, ಬೆಳಗಿನಿಂದ ರಾತ್ರಿಯವರಿಗೆ ಪ್ರತಿ ಪೂಜೆಯ ಮುಗಿತಾಯದಲ್ಲಿಯೂ ನೈವೇದ್ಯ ನೀಡುವ ಕ್ರಮ ಉಂಟಾಯಿತು. ಇದನ್ನೇ ಸಂಧಿ ಸಮರ್ಪಣೆ ಯೆಂದು ಕರೆದರು. ಈ ಸಂಧಿಗಳಲ್ಲಿ ಕೆಲವು ವೈಶಿಷ್ಟ್ಯಪೂರ್ಣವಾಗಿ ದಾನಿಗಳ ಹೆಸರಿನಿಂದಲೇ ಗುರುತಿಸ ಲ್ಪಡುವಂತಾಯಿತು. ಉದಾ - ಬುಕ್ಕರಾಯ ಸಂಧಿ, ನರಸಿಂಹ ರಾಯ ಸಂಧಿ - ಇತ್ಯಾದಿ.

ತಿರುವೆಂಕಟನಾಥ ಯಾದವರಾಯನ ಸೇನಾಧಿಪತಿಯಾಗಿದ್ದ ಇಮ್ಮಡಿ ರಾಹುತ್ತರಾಯ ಸಿಂಗಯದಣ್ಣಾಯಕನು, ತನಗೆ ರಾಯನು ನೀಡಿದ್ದ ಸರ್ವಮಾನ್ಯ ಗ್ರಾಮವನ್ನು ತಿರುವಿಡೈಯಾಟ್ಟಕ್ಕಾಗಿ ನಿವೇದನೆಗೆಂದು ಸಿತಕರಗಂಡನ್ ಸಂಧಿಯೆಂಬ ಹೆಸರಿನಲ್ಲಿ ನೀಡಿದ ದಾನಶಾಸನವೇ (ತಿ.ತಿ. 195) ಅತ್ಯಂತ ಪ್ರಾಚೀನವಾದ ವಿಜಯನಗರ ಪೂರ್ವಕಾಲದ ಸಂಧಿ ಸಮರ್ಪಣೆಯ ಶಾಸನವಾಗಿದೆ.

ಶ್ರೀ ವೆಂಕಟೇಶ್ವರಸ್ವಾಮಿಗೆ ಅಂದು ದಿನವೂ ನಿವೇದಿಸಲಾಗುತ್ತಿದ್ದ ಎರಡು ತಿರುಪ್ಪೋನಕ ನಿವೇದನೆಗಳಲ್ಲಿ (ಅಕ್ಕಿ, ಹೆಸರು ಬೇಳೆ, ತುಪ್ಪಗಳ ಬೇಯಿಸಿದ ಅನ್ನ- ಪೊಂಗಲು) ಮೊದಲನೆಯದೇ ಬುಕ್ಕರಾಯನ್ ಸಂಧಿ. ಇದನ್ನು ಏರ್ಪಡಿಸಿದ್ದು ಶಕ 1367ರಲ್ಲಿ. ತಿರುಮಲೆ - ತಿರುಪತಿಗಳಲ್ಲಿ ಮಠಾಚಾರ್ಯರಾದವರೂ, ತಿರುಮಲೆಯ ಪಂಕಯಚ್ಚೆಲ್ಲಿ ತಿರುನಂದನವನದ ವಿಚಾರಣಕರ್ತರೂ ಆಗಿದ್ದ ಕೋಯಿಲ್‌ಕೆಲ್ವಿ ಎಂಬೆರುಮಾನಾರ್ ಜೀಯರ್. - (ತಿ.ತಿ. 106) ಶಕವರ್ಷ 1380 ರಲ್ಲಿ ಪೆರಿಯ ಪೆರುಮಾಳಜೀಯರ್ ಅವರೂ ಹೀಗೆಯೇ ಎರಡು ತಿರುಪ್ಪೋನಕ ಗಳನ್ನು ನಿವೇದಿಸಲು ಏರ್ಪಡಿಸಿದರು. (ತಿ.ತಿ. 47). ಶಕವರ್ಷ 1372 ರಲ್ಲಿನಡೆದ ತಿ.ತಿ. 23ನೇ ಶಾಸನವು ರಾಯರ ಸಂಧಿಯನ್ನು ಕುರಿತು ಹೇಳುತ್ತದೆ. ತಿ.ತಿ. 3 ನೇ ಶಾಸನವು ಸಾಳುವ ನರಸಿಂಹನು ಶಕ 1378 ರಲ್ಲಿ ಉದಯಕಾಲಸಂಧಿಯಲ್ಲಿ ರಾಜಾನ್ನ ತಿರುಪ್ಪೋನಕವೊಂದನ್ನು ಏರ್ಪಡಿಸಿದನೆಂದು ತಿಳಿಸುವುದು. ಇದಕ್ಕಾಗಿ ಆಲಿಪುರ ಗ್ರಾಮವನ್ನು ಸರ್ವಮಾನ್ಯವಾಗಿ ದತ್ತಿ ನೀಡಿದನು. ಪುನಃ ಶಕವರ್ಷ 1389 ರಲ್ಲಿ ಆತ ಮತ್ತೆ ಐದು ಗ್ರಾಮಗಳನ್ನು ನೀಡಿದನು. ಇವುಗಳಲ್ಲಿ ನಾಲ್ಕು ಹಳ್ಳಿಗಳು ಚಂದ್ರಗಿರಿ ರಾಜ್ಯದಲ್ಲಿದ್ದವು ಮತ್ತು ಐದನೆಯದು ಪಡೈವೀಡು ಸೀಮೆಯಲ್ಲಿದ್ದಿತು. ಇದರಿಂದಾಗಿ ಮೂವತ್ತು ಘಟಕದ ಅನ್ನವನ್ನು - ಸಂಧಿ ಮುಪ್ಪದು - ವನ್ನು ನಿವೇದಿಸಬೇಕಾಗಿದ್ದಿತು. (ತಿ.ತಿ. 66) ಶಕವರ್ಷ 1395 ರಲ್ಲಿ ಸಾಳುವ ನರಸಿಂಹನು ಐದು ದಿನಗಳ ಡೋಲೋತ್ಸವವನ್ನು ಏರ್ಪಡಿಸಿ ನಿವೇದನೆಗೆ ಅನುಕೂಲ ಮಾಡಿಕೊಟ್ಟ. ತಿ.ತಿ. 46 ಶಕವರ್ಷ 1397 ರಂದು ಮತ್ತು ಜಿ.ಟಿ. 188 ಶಕವರ್ಷ 1397, ಎರಡೂ ನರಸಿಂಹರಾಯ ಸಂಧಿಯನ್ನು ಹೆಸರಿಸುತ್ತವೆ. ಪ್ರಾಯಶಃ ಇದು ಮೇಲೆ ಹೇಳಿದ ಮೂವತ್ತು ಘಟಕದ ಪ್ರಸಾದದ್ದೇ ಇರಬೇಕು.

## 11. ವೇದಪಾರಾಯಣ

ಆಲಯದ ಸೇವೆಗಳಲ್ಲಿ ವೇದಪಾರಾಯಣ ಮಾಡುವುದು ಒಂದು ಅತ್ಯಗತ್ಯ ಅಂಗವೆಂದು ಭಾವಿಸ ಲಾಗಿದೆ. ವಿಜಯನಗರದ ಅರಸರ ಮೊದಲ ವಂಶದ ಎರಡನೇ ದೇವರಾಯನು ತಿರುಮಲೆಯ ಆಲಯದಲ್ಲಿ ವೇದಪಾರಾಯಣವನ್ನು ವ್ಯವಸ್ಥಿತವಾಗುವಂತೆ

ಯೋಜಿಸಿದ. ಶಾಸನಗಳು ಹೇಳುವಂತೆ ತಿರುಮಲೆಯ ಆಲಯದಲ್ಲಿ ವೇದಪಾರಾಯಣ ಪದ್ಧತಿ ನಿಂತು ಹೋಗಿದ್ದು, ಈ ವಿಷಯದಲ್ಲಿ ತಿರುಕ್ಕಲಿಕನ್ರಿದಾಸ ರೆಂದೂ, ಅಳಗಪ್ಪಿರನಾರ್ ಎಂದೂ ಹೆಸರಾದವರು, ದೇವರಾಯ ಮಹಾರಾಯನಿಗೆ ಒಳ್ಳೆಯದಾಗಬೇಕೆಂದು ನಿಂತು ಹೋಗಿದ್ದ ಈ ಪದ್ಧತಿಯನ್ನು ಪುನಃ ವ್ಯವಸ್ಥಿತಗೊಳಿಸಬೇಕೆಂದು ರಾಜಪ್ರತಿನಿಧಿ ದೇವಣ್ಣ ಒಡೆಯಾರ್‌ಗೆ ಮನವಿ ಸಲ್ಲಿಸಲಾಗಿ, ಸಿದ್ಧಕುಟ್ಟೆ ಅಥವಾ ಶ್ರೀನಿವಾಸಪುರವೆಂದು ಹೆಸರಾದ ಊರಿನಿಂದ ಇಪ್ಪತ್ನಾಲ್ಕು ಮಹಾಜನರನ್ನು - ವೇದ ಪಾರಾಯಣ ಪರಿಣತರನ್ನು - ಕರೆತಂದು ದೇವರ ಮುಂದೆ ವೇದಪಾರಾಯಣ ಪದ್ಧತಿಯನ್ನು ಪುನಃ ಕ್ರಮಗೊಳಿಸಲಾಯಿತು.

ರಾಜನು ಈ ಯೋಜನೆಯನ್ನು ಆಮೋದಿಸಿದ್ದೇ ಅಲ್ಲದೆ, ವೈಕುಂಠವಲನಾಡು ಪ್ರಾಂತ್ಯದ ಕೊತ್ತಲಸ್ಥಳವಾಳಾದ ಸಿದ್ಧಕುಟ್ಟೆ ಅಥವಾ ಶ್ರೀನಿವಾಸಪುರದ ರಾಜಾದಾಯದ ಅರ್ಧಭಾಗವನ್ನು ಶ್ರೋತ್ರೀಯ ಸಂಭಾವನೆಯಾಗಿ ನೀಡಿದನು. ಅಳಗಪ್ಪಿರನಾರ್ ತಿರುಕಲ್ಕಿಕನ್ರಿದಾಸರು ಪಡೆದ ಈ ಅರ್ಧ ಗ್ರಾಮಾದಾಯವನ್ನು ಇಪ್ಪತ್ನಾಲ್ಕು ವೇದಪಾರಾಯಣದಾರ ಬ್ರಾಹ್ಮಣರಿಗೆ ವರ್ಗಾಯಿಸಲಾಯಿತು. ಇಪ್ಪತ್ನಾಲ್ಕು ಮಂದಿ ಬ್ರಾಹ್ಮಣರು ತಮ್ಮ ಜೀವನ ನಿರ್ವಹಣೆಗೆ ಈ ಅರ್ಧಗ್ರಾಮಾದಾಯ ಸಾಲದೆ ಬರುತ್ತದೆಯೆಂದು ಮಿಕ್ಕ ಅರ್ಧಗ್ರಾಮದ ಆದಾಯ ಆಲಯದ ಶ್ರೀ ಭಂಡಾರಕ್ಕೆ ಸೇರಿದ್ದರಿಂದ ಆಲಯದ ಸ್ಥಾನತ್ತಾರರಲ್ಲಿ ಅದನ್ನೂ ತಮಗೇ ಬಿಟ್ಟು ಕೊಡಬೇಕೆಂದು ಪ್ರಾರ್ಥನೆ ಸಲ್ಲಿಸಿದರು. ಆಲಯದ ಅಧಿಕಾರಿಗಳು ತಮಗೆ ಯಾವುದೋ ಒಂದು ಪ್ರತ್ಯೇಕ ಸೇವೆಯನ್ನುಸಲ್ಲಿಸಲು ದತ್ತಿಯಾಗಿ ಸಂದಾಯವಾದ ಈ ಅರ್ಧಗ್ರಾಮಾದಾಯವನ್ನು ಪರಭಾರೆ ಮಾಡಲು ಹಕ್ಕು ಹೊಂದಿರಲಿಲ್ಲವಾದದ್ದರಿಂದ, ಇಪ್ಪತ್ನಾಲ್ಕು ಮಂದಿ ಬ್ರಾಹ್ಮಣರಿಗೆ ಪೂರ್ತಿ ಜೀವನಾಂಶ ಸಿಗುವಂತೆಯೂ, ಅರ್ಧಗ್ರಾಮಾದಾಯದ ಶ್ರೀ ಭಂಡಾರದ ಧರ್ಮದರ್ಶಿತ್ವವನ್ನು ಕಾಪಾಡಿಕೊಳ್ಳುವಂತೆಯೂ ಒಂದು ಪ್ರತ್ಯೇಕಯೋಜನೆಯನ್ನು ತಿರುಕ್ಕಲಿಕನ್ರಿದಾಸರಿಂದ ಕೈಗೂಡುವಂತೆ ಮಾಡಿ ಆಲಯದ ಅಧಿಕಾರಿಗಳು ವೇದಪಾರಾಯಣವನ್ನು ಮಧ್ಯದಲ್ಲಿ ನಿಂತು ಹೋಗದಂತೆ ಮಾಡಿದರು. ಆ ಯೋಜನೆಯ ವಿವರ ಹೀಗೆ -

ಶ್ರೀನಿವಾಸಪುರ ಗ್ರಾಮದ ವಾರ್ಷಿಕ ಆದಾಯದಲ್ಲಿ ದೇವಾಲಯದ ಪಾಲಿಗೆ 200 ಪಣಗಳು ಬರುತ್ತಿದ್ದವು. ಅಷ್ಟೇ ಆದಾಯ ಬೇರೆ ಯಾವುದಾದರೊಂದು ಹೊಸ ಮೂಲದಿಂದ ಆದಾಯವಾಗುವಂತಿರಬೇಕು. ತಿರುಕ್ಕುಡವೂರು ನಾಡು ಹಾಗೂ ವೈಕುಂಠವಲ ನಾಡುಗಳಲ್ಲಿ ದೇವದಾನದ ಗ್ರಾಮದ ಜನರಿಗೆ ಈ 200 ಪಣಗಳು ತುಂಬಿಬರುವಂತೆ ವಂತಿಗೆ ನೀಡಬೇಕೆಂದು ಕರೆನೀಡಲಾಯಿತು. ಶಕವರ್ಷ 1355 ರ ಪ್ರಮಾದೀಚನಾಮ ಸಂವತ್ಸರದ ಉತ್ಥಾನ ದ್ವಾದಶಿಯಂದು ಜನರೆಲ್ಲ ಸೇರಿ ವರ್ಷಕ್ಕೆ 200 ಪಣಗಳನ್ನು ಕೂಡಿಸಿ ಕೊಡಲು - ಆ ಮೂಲಕ ವೇದಪಾರಾಯಣವನ್ನು ಮುಂದುವರೆಸಿಕೊಂಡು ಹೋಗುವಲ್ಲಿ ನೆರವು ನೀಡಲು ಪ್ರಮಾಣ ಮಾಡಿದರು. ಪೆರಿಯನಾಟ್ಟು ವೇಲನ್ (ಗಾವುಂಡ) ಹಾಗೂ ಊರ್‌ಕಣಕ್ಕು (ಗ್ರಾಮ ಲೆಕ್ಕಿಗ) ಗಳಿಂದ ಕೂಡಿದ ದೇವದಾನದ ಗ್ರಾಮಸ್ಥರ ಈ ಒಂದು ಪ್ರಮಾಣದಿಂದ ಸ್ಥಾನತ್ತಾರರು ತಮ್ಮ ಅನುಮಾನ, ಸಂಶಯಗಳನ್ನು ದೂರಮಾಡಿಕೊಂಡವರಾಗಿ ತಮ್ಮಲ್ಲಿ ಉಳಿದಿದ್ದ ಶ್ರೀನಿವಾಸ ಪುರದ ಅರ್ಧಗ್ರಾಮಾದಾಯವನ್ನು ಇಪ್ಪತ್ನಾಲ್ಕು ಮಂದಿ ಬ್ರಾಹ್ಮಣರಿಗೆ ಒಪ್ಪಿಸಿ, ವೇದಪಾರಾಯಣವನ್ನು ಜಾರಿಯಲ್ಲಿರುವಂತೆ ನೋಡಿಕೊಂಡು ಎರಡು ವಿಧವಾದ ಸಾಧನೆ ನಡೆಸಿದರು. ದತ್ತಿಯ ಮೂಲ ಉದ್ದೇಶವು ಈ ರೀತಿಯ ಆದಾಯ ವರ್ಗಾವಣೆಯಿಂದ ಉಲ್ಲಂಘಿತವಾದದ್ದು ನಿಶ್ಚಯವೇ ಆಗಿದ್ದರೂ, ಅಗತ್ಯದ ಒತ್ತಡಗಳು ಹಾಗೂ ವೇದಪಾರಾಯಣದ ಪದ್ಧತಿಯ ಪುನರುದ್ಧಾರದ ತುರ್ತು ಈ ಒಂದು ಯೋಜನೆಗೆ ಸಂಭಾವಿತತೆಯನ್ನು ಕೊಟ್ಟಿರಬೇಕು.

ಮೇಲಿನ ಈ ಪದ್ಧತಿಯು ಗ್ರಾಮದ ಜನತೆಯಿಂದ ಆಚರಣೆಗೆ ಬರಲಿಕ್ಕೆ ಮೊದಲು ಮತ್ತೊಂದು ತಾತ್ಕಾಲಿಕ ಮಾರ್ಪಾಡನ್ನೂ ಅಳವಡಿಸಿಕೊಳ್ಳಲಾಗಿದ್ದಿತ್ತು. ಶ್ರೋತ್ರೀಯವಾದ ಗ್ರಾಮಾದಾಯದ ಅರ್ಧಭಾಗವನ್ನು ತಿರುಕಲಿ ಕನ್ರಿದಾಸರಿಗೆ ಗುತ್ತಿಗೆಗೆ ನೀಡಲಾಯಿತು. ಆತ ವಾರ್ಷಿಕ ಆದಾಯದ ಹಣವನ್ನು ಆಲಯದ ಶ್ರೀ ಭಂಡಾರಕ್ಕೆ ತಲುಪಿಸುತ್ತ, ಈ ಇಪ್ಪತ್ನಾಲ್ಕು ಮಂದಿ ಬ್ರಾಹ್ಮಣರು ಗ್ರಾಮದ ಆದಾಯವನ್ನು ಪೂರ್ಣವಾಗಿ ವಿನಿಯೋಗಿಸಿ ಕೊಳ್ಳಲು ಅವಕಾಶ ಮಾಡಿಕೊಟ್ಟ. ಈ ಒಂದು ಪದ್ಧತಿ ತಾತ್ಕಾಲಿಕ ಮಾತ್ರವಾಗಿದ್ದು, ಗ್ರಾಮಸ್ಥರು ವಂತಿಗೆ ನೀಡಲು ಒಪ್ಪಿಗೆ ನೀಡುವುದಕ್ಕೂ ಮೊದಲು ಮಾಡಿದ್ದ ಏರ್ಪಾಡಾಗಿದ್ದಿತು.

ರಾಜ ಭಂಡಾರ ಹಾಗೂ ಆಲಯದ ಶ್ರೀಭಂಡಾರಗಳಿಗೆ ಅರ್ಧರ್ಧ ಆದಾಯ ಬರುವಂತೆ ಇಡೀ ಗ್ರಾಮವನ್ನು ಅದೇ ಗ್ರಾಮದ ಇಪ್ಪತ್ನಾಲ್ಕು ಮಂದಿ ಬ್ರಾಹ್ಮಣರಿಗೆ ದಾನವಾಗಿ ನೀಡಿದರೂ ಸಹ, ಈ ಮಂದಿ ಏಕ ಕಾಲದಲ್ಲಿ ಆಲಯದಲ್ಲಿ ಸೇವೆ ಮಾಡ ಬೇಕೆಂದಿಲ್ಲ. ಪ್ರತಿದಿನವೂ ಸ್ವಾಮಿಯ ಸನ್ನಿಧಿಯಲ್ಲಿ ಇಬ್ಬರು ಕಡ್ಡಾಯ ವಾಗಿ ವೇದಪಾರಾಯಣ ಮಾಡಬೇಕಾಗಿದ್ದಿತು. ಹೀಗಿರುವ ವ್ಯವಸ್ಥೆಯಲ್ಲಿ ಕಾರ್ಯಭಾರವನ್ನು ತಿಂಗಳಿಗಿಬ್ಬರಂತೆ ಹನ್ನೆರಡು ತಿಂಗಳು ಇಪ್ಪತ್ನಾಲ್ಕು ಮಂದಿ ಹಂಚಿಕೊಳ್ಳುವಂತೆ ಆಯಿತು.

ನಂತರದ ಕಾಲದಲ್ಲಿಯೂ ಎಂದರೆ ವಿಜಯನಗರದರಸರ ಎರಡನೇ ವಂಶಕಾಲದಲ್ಲಿ ವೇದಪಾರಾಯಣದ ಉಲ್ಲೇಖಗಳಿವೆ. ಹೀಗಾಗಿ ಶಕವರ್ಷ 1355 ರ ನಂತರ ವೇದಪಾರಾಯಣವು ನಿರಂತರವಾಗಿ ಇಂದಿನ ವರೆಗೆ ನಡೆದು ಬಂದಿದೆಯೆಂದೂ, ಇದರಿಂದ ಆಲಯದ ಪಾವಿತ್ರ್ಯ ಪ್ರಸಿದ್ಧಿ ಹೆಚ್ಚಿದೆಯೆಂದೂ, ಎಲ್ಲ ವೈಭೋಗ ಗಳೂ ಸಂದುಬಂದಿವೆಯೆಂದೂ ತಿಳಿಯಬಹುದು.

ವೇದಪಾರಾಯಣದೊಡನೆಯೇ ಕೆಲ ನಿರ್ದಿಷ್ಟ ದಿನಗಳಲ್ಲಿ ಪುರಾಣವಾಚನವಿದ್ದ ಉಲ್ಲೇಖಗಳೂ ಇವೆ. 16 ನೇ ಶತಮಾನದ ಒಂದು ದಾಖಲೆಯಲ್ಲಿ (ಜಿ.ಟಿ. - 3) ಕೈಶಿಕ ದ್ವಾದಶಿಯಂದು (ಚಾಂದ್ರಮಾನದ ಕಾರ್ತೀಕ ಮಾಸದ ಶುದ್ಧ ದ್ವಾದಶಿ) ಅನಂತವ್ರತ ಪುರಾಣವನ್ನು ಓದುತ್ತಿದ್ದಂತೆ ಕಾಣುತ್ತೇವೆ. ಇದರಂತೆಯೇ ಮತ್ತೊಂದು ಶಾಸನವು (ತಿ.ತಿ. 253) ಶಕವರ್ಷ 1413 ರ ದಾಗಿದ್ದು, ಮಾರ್ಗಳಿ ಮಾಸದಲ್ಲಿ ಒಂದುದಿನ ಸನ್ನಿಧಿಯಲ್ಲಿ ಪಸಿಂಡಿ ವೆಂಕಟತ್ತುರೈವರ್ ಜೀಯರ್ ತಿರುವೆಂಕಟ ಮಹಾತ್ಮೆಯನ್ನು ಓದುತ್ತಿದ್ದರೆಂದು ತಿಳಿಸುತ್ತದೆ.

## 12. ಅಭಿಷೇಕ

ತಿರುಮಲೆಯ ದೇವರಿಗೆ ತಿರುಮಂಜನ ಅಥವಾ ಅಭಿಷೇಕ ನಡೆಸುವ ಬಗ್ಗೆಯೂ ಶಾಸನಗಳು ವ್ಯಾಪಕ ವಾಗಿ ವಿವರಗಳನ್ನು ದಾಖಲಿಸಿವೆ.

ಶಕವರ್ಷ 1386 ರಲ್ಲಿ ಕಂದಾಡೈ ರಾಮಾನುಜಯ್ಯಂಗಾರ್ಯರು ತಮ್ಮ ಕೈಂಕರ್ಯವಾಗಿ ಶ್ರೀವೆಂಕ ಟೇಶ್ವರಸ್ವಾಮಿಗೆ ದಿನವೂ ಅಳಗಪಿರನಾರ್ ತಿರುಮಂಜನ ಆಗಬೇಕೆಂದೂ ಇದಕ್ಕೆ ತಕ್ಕ ಸುಗಂಧ ದ್ರವ್ಯಗಳನ್ನು ಶಾತ್ತಾದ ಶ್ರೀವೈಷ್ಣವ ಪಂಥದ ತಮ್ಮ ಶಿಷ್ಯರಲ್ಲಿನ ಬ್ರಹ್ಮಚಾರಿ (ಏಕಾಂಗಿಯು) ಆಲಯಕ್ಕೆ ತಲುಪಿಸತಕ್ಕದ್ದೆಂದೂ ಏರ್ಪಾಡು ಮಾಡಿದರು ಎಂಬುದೇ ಅಭಿಷೇಕದ ಬಗ್ಗೆ ದೊರೆಯುವ ಮೊದಲನೆಯ ದಾಖಲೆ (ತಿ.ತಿ. 4). ಸುಗಂಧ ದ್ರವ್ಯಗಳಲ್ಲಿ ಚಂದನ, ಹರಿಷಿಣ, ನೆಲ್ಲಿಕಾಪ್ಪು, ಕಸ್ತೂರಿ, ಕರ್ಪೂರ, ಪಚ್ಚಕರ್ಪೂರಗಳನ್ನು ಸೇರಿಸ ಲಾಗಿದ್ದಿತು. ಇವುಗಳ ಜೊತೆಗೇ ಸಣ್ಣವಸ್ತ್ರ, ಎಲೆ ಅಡಿಕೆಗಳನ್ನೂ ನೀಡಲಾಗುತ್ತಿದ್ದಿತು.

ತಿರುಮಂಜನದಲ್ಲಿ ಶಾತ್ತಾದ ಶ್ರೀವೈಷ್ಣವ ಏಕಾಂಗಿಗಳು ದಿನವೂ ತಮ್ಮ ಗುರುವಿನೊಡನೆ ಭಾಗವಹಿಸಿ ಅದರ ಯಶಸ್ವಿ ಕಾರ್ಯಾಚರಣೆಯಲ್ಲಿ ಕೆಲಸ ಮಾಡಬೇಕಾಗಿದ್ದಿತು. ತಿರುಮಂಜನವಾದ ನಂತರ ಗುರುವಿನ ನಾಮಘೋಷವಾದ ಮೇಲೆ ಏಕಾಂಗಿಯು ನಾಲ್ಕು ಎಲೆ ನಾಲ್ಕು ಅಡಿಕೆಗಳನ್ನೂ ಗುರುವಿಗೆ ತಂದು ನೀಡಬೇಕಿದ್ದಿತು.

ಮತ್ತೊಂದು ಶಾಸನದ ಮೂಲಕ (ತಿ.ತಿ. 187) ತಿರುಕ್ಕಲಿಕನ್ರಿದಾಸರ್ ಅಳಗಪ್ಪಿರನಾರನು ದಿನವೂ ತಿರುಮುಖ ಮಂಡಲ ಕ್ಕೆಂದು ಮೆಡಿತ್ತ ಪುಲುಗು ಕಾಪ್ಪುವಿಗಾಗಿ (ಸ್ವಾಮಿಯ ಮುಖಮಾರ್ಜನಕ್ಕಾಗಿ) ಆರು ತಿಂಗಳಿ ಗಾಗುವಷ್ಟು ಗಂಧವನ್ನೂ, ಆರತಿಗಾಗಿ ಕರ್ಪೂರವನ್ನೂ ನೀಡಿದ್ದಾನೆ.

ಪುಲುಗು ಕಾಪ್ಪುವಿನ ಉಲ್ಲೇಖ ಮೊದಲಬಾರಿಗೆ ಇಲ್ಲಿಯೇ ದೊರೆಯುವುದು. ಇಲ್ಲಿ ಹೇಳಿರುವಂತೆ ಇದನ್ನು ಪ್ರತಿನಿತ್ಯ ಆರು ತಿಂಗಳಕಾಲ ಮಾಡಿದಂತೆ ತಿಳಿಯುತ್ತದೆ. ಶಕವರ್ಷ 1418 ರಲ್ಲಿ (ತಿ.ತಿ. 336) ಕಂದಾಡೈ ಅಪ್ಪಚ್ಚಿಯಾರ್ ಅಣ್ಣನು ಹದಿನೈದು ದಿನಕ್ಕೆ ಒಮ್ಮೆ ಶುಕ್ರವಾರದಂದು ಶ್ರೀ ವೆಂಕಟೇಶ್ವರಸ್ವಾಮಿಗೆ ಪುಲುಗು ಕಾಪ್ಪು ಸೇವೆ ಮಾಡುವಾಗ ಕಂದಾಡೈ ರಾಮಾನುಜ

ಅಯ್ಯಂಗಾರ್ಯನ ಉಳಾ (ಉಳಾವಿ) (ಸ್ತುತಿ ಪಾಠ) ಯನ್ನು ಹಾಡಿ ಪುಲುಗು ಕಾಪ್ಪು (ಪುನುಗು ಕಾಪ್ಪು) ಸ್ವಾಮಿಗೆ ಹಚ್ಚುವಾಗ ಎರಡು ಅತಿರಸಪ್ಪಡಿಯನ್ನು ನಿವೇದಿಸಲು ಏರ್ಪಾಡು ಮಾಡಿದ್ದನ್ನು ಕಾಣಬಹುದು. ಇಲ್ಲಿನ ದಾಖಲಾತಿಯ ಧೋರಣೆಯನ್ನು ನೋಡಿದರೆ ಪುನುಗು ಕಾಪ್ಪು ಈ ವೇಳೆಗಾಗಲೇ ಪ್ರಚಲಿತವಾಗಿದ್ದಿತೆಂದೂ ಹೇಳಬಹುದಾಗಿದೆ. ಮತ್ತೆ ಶಕವರ್ಷ 1472ರಲ್ಲಿ (ತಿ.ತಿ. 276) ಈ ರೀತಿಯ ಪಕ್ಷ ಪೂಜೆಯಲ್ಲಿ ಪ್ರತಿ ಎರಡನೆಯ ಶುಕ್ರವಾರವೂ ಮಾಡುವ ಸೇವೆಯ ಕೊನೆಯಲ್ಲಿ ಒಂದು ನಾಯಕ ತಳಿಗೆ ಯನ್ನೂ ಒಂದು ಅಪ್ಪಪಡಿಯನ್ನೂ ಸ್ವಾಮಿಯ ಸೇವೆಯಲ್ಲಿ, ತಿರುಪತಿಯ ಹೊರವಲಯದ ನರಸಿಂಗರಾಯಪುರದ ನಿವಾಸಿಯಾದ ಧರ್ಮಪುರಂ ಸಿತ್ತಮುಶೆಟ್ಟಿಯು ನೀಡಿದಂತೆ ದಾಖಲಾಗಿದೆ. ಆದರೆ ಈ ನಿವೇದನೆಯನ್ನು ಶ್ರೀ ವೆಂಕಟೇಶ್ವರಸ್ವಾಮಿಯ ವಕ್ಷಸ್ಥಳದಲ್ಲಿ ಸ್ಥಿತವಾದ ಲಕ್ಷ್ಮಿಯು - ಅಲರ್‌ಮೇಲ್ ಮಂಗೈಯು - ತಿರುಮಂಜನ ಸ್ವೀಕರಿಸಿದ ಕೊಡಲೇ ನೀಡಬೇಕಾಗಿದ್ದಿತು.

ಹೀಗಾಗಿ ಶಕವರ್ಷ 1386 ರಲ್ಲಿ ದೈನಂದಿನ ಸೇವೆಯಾಗಿ ಪುನುಗು ಕಾಪ್ಪು ಸೇವೆ ಆರಂಭವಾಗಿ ಶಕವರ್ಷ 1418 ರಲ್ಲಿ ಪಕ್ಷಕ್ಕೊಮ್ಮೆ ನಡೆಯುವ ವಿಶೇಷ ಸೇವೆಯಾಗಿ ಅಭಿಷೇಕದೊಡನೆ ಸೇರಿಕೊಂಡು ಪ್ರತಿಷ್ಠಿತವಾದದ್ದನ್ನು ನಾವು ನೋಡಬಹುದಾಗಿದೆ. ಇದರಿಂದಾಗಿ ಇದರ ದೈನಂದಿನ ಆಚರಣೆ ನಿಂತು ಹೋಯಿತೆಂದೇನೂ ಭಾಸವಾಗುವುದಿಲ್ಲ. ಕಾರಣ ಇಂದಿಗೂ ತೋಮಾಲೆ ಸೇವೆಯ ಭಾಗವಾಗಿ ದಿನವೂ ಪ್ರಾತಃಕಾಲದಲ್ಲಿ ಮೂಲಮೂರ್ತಿಯನ್ನು ಪ್ರತಿನಿಧಿಸುವ ಬೆಳ್ಳಿಯ ಭೋಗಮೂರ್ತಿಯು ಅಭಿಷಿಕ್ತವಾಗುತ್ತದೆ. ಮೂಲದಲ್ಲಿ ಶ್ರೀ ವೆಂಕಟೇಶ್ವರ ಸ್ವಾಮಿಯ ಮೂಲ ಮೂರ್ತಿಗೇ ಉಂಟಾಗಿದ್ದಿರಬಹುದಾದ ದೈನಂದಿನ ಅಭಿಷೇಕ ಪೂಜೆ ಬರುಬರುತ್ತ ಭೋಗಮೂರ್ತಿಯ ಪಾಲಾಯಿತು.

ಶಕವರ್ಷ 1427 ರಿಂದ ಮೂರು ದಶಕಗಳಲ್ಲಿ ಎರಡನೇ ದಾಖಲೆಯಲ್ಲಿ (ತಿ.ತಿ. 276) ಪಕ್ಷಕ್ಕೊಮ್ಮೆ ಶುಕ್ರವಾರ ನಡೆಯುತ್ತಿದ್ದ ಪುನುಗು ಕಾಪ್ಪು ಸೇವೆ, ತಿರುಮಲೆಯ ಆಲಯದಲ್ಲಿ ಪ್ರತಿ ಶುಕ್ರವಾರವೂ ನಡೆಯುವಂತೆ ಪರಿವರ್ತಿತವಾದದ್ದನ್ನು ಶಕವರ್ಷ 1456ರ ತಿ.ತಿ.331 ರ ಶಾಸನದಿಂದ ತಿಳಿಯಬಹುದಾಗಿದೆ. ಇಲ್ಲಿ ಹೇಳಿರುವಂತೆ ವರ್ಷದ ಐವತ್ತಮೂರು ಶುಕ್ರವಾರಗಳಲ್ಲಿ ಮಾತ್ರವಲ್ಲದೇ ಅಚ್ಯುತರಾಯ ಮಹಾರಾಯ ರಾಜನು ಹುಟ್ಟಿದ ನಕ್ಷತ್ರವಾದ ಮಾರ್ಗಶೀರ್ಷ ನಕ್ಷತ್ರದ ದಿನದಂದು ತಿಂಗಳಿಗೆ ಒಮ್ಮೆಯಂತೆ ವರ್ಷದಲ್ಲಿ ಹದಿಮೂರುಬಾರಿ ನಡೆಯುತ್ತಿದ್ದಿತೆಂದು ತಿಳಿಯಬಹುದು. ಈ ಏರ್ಪಾಡನ್ನು ಮಾಡಿದವರು ಭಂಡಾರದ ಅಪ್ಪರಸರ ಮಗ ಕಿರು ತಿಮ್ಮಯ್ಯ. ಹೀಗಾಗಿ ಮೊದಲಿಗೆ ಇದ್ದ 26 - 27 ಪುಲುಗು ಕಾಪ್ಪು ಸೇವೆಗಳು, ಕಿರುತಿಮ್ಮಯ್ಯನಿಂದಾಗಿ 66 ಕ್ಕೆ ಏರಿದ್ದನ್ನು ಕಾಣಬಹುದಾಗಿದೆ. (ಐವತ್ತಮೂರು ಶುಕ್ರವಾರ ಮತ್ತು ಹದಿಮೂರು ಮಾರ್ಗಶಿರ ನಕ್ಷತ್ರಗಳು)

## 13. ಉತ್ಸವಗಳು

ಆಲಯವು ರಾಜರುಗಳ ಆಶ್ರಯದಲ್ಲಿ ದಿನನಿತ್ಯದ ಪೂಜೆಯ ಪ್ರಾಥಮಿಕ ಅಗತ್ಯಗಳಾದ ದ್ರವ್ಯದಾನಗಳನ್ನು ಪಡೆದದ್ದಲ್ಲದೇ, ಆಲಯದ ಮಹತ್ವ, ವೈಭವಗಳನ್ನು ಹೆಚ್ಚುಗೊಳಿಸುವಂತಹ ಉತ್ಸವ ಮೆರವಣಿಗೆಗಳತ್ತ ದಾನಿಗಳ ಭಕ್ತರ ಗಮನ ಹರಿದಾಗ ಬೃಹತ್ ಉತ್ಸವಗಳ, ಬಹು ನಿವೇದನೆಗಳ ವೈಭವಕಾರಕ ದಾನಗಳ ಬಗ್ಗೆಯೂ ಪ್ರಬಂಧಗಳಾಗತೊಡಗಿದವು. ಇದರಿಂದಾಗಿ ವಿಶಾಲವಾದ ಕಲಾತ್ಮಕವಾದ ಮಂಟಪಗಳೂ, ಗಮನಾರ್ಹವಾದ ಪ್ರಾಕಾರಗಳೂ, ಸುಂದರವಾದ ಗೋಪುರಗಳೂ ನಿರ್ಮಾಣವಾಗಲು ಮೊದಲಾಯಿತು.

ಆಲಯದ ಹಬ್ಬಗಳನ್ನು ಅವುಗಳ ಲಕ್ಷಣಗಳಿಗನುಸಾರವಾಗಿ ಪ್ರಾಥಮಿಕ - ಅತ್ಯಗತ್ಯ ಉತ್ಸವಗಳೆಂದೂ, ಪೂರಕ - ದ್ವಿತೀಯ ಉತ್ಸವಗಳೆಂದೂ ವಿಂಗಡಿಸಬಹುದಾಗಿದೆ. ಪ್ರಾಥಮಿಕ ಉತ್ಸವಗಳು ಶಾಸ್ತ್ರನಿರ್ದೇಶಿತವಾಗಿ ಶಾಸ್ತ್ರಸಮ್ಮತಿಯನ್ನು ಪಡೆದ ಅನಿವಾರ್ಯ ಉತ್ಸವಗಳಾಗಿದ್ದು ಇವುಗಳನ್ನು ನಿಲ್ಲಿಸುವುದು ಅಶುಭಕಾರಕವೆಂದೂ, ಪುನಃ ಸ್ಥಾಪಿಸಬೇಕಾಗಿ ಬಂದಾಗ ಶುದ್ಧೀಕರಣ ಪ್ರಕ್ರಿಯೆಗಳು ನಡೆಯಬೇಕೆಂದೂ ಇವುಗಳ ಪುನರುದ್ಧಾರದಿಂದ ಪುಣ್ಯ ಸಂಘಟಿಸುವುದೆಂದೂ ತಿಳಿಯಲಾಗಿದೆ. ಇಂತಹವುಗಳಲ್ಲಿ ಬ್ರಹ್ಮೋತ್ಸವವೂ

ಒಂದು. ಪೂರಕ ಉತ್ಸವಗ ಳೆಂದರೆ ಪರಂಪರೆಯಿಂದ ಆಲಯದ ಅನುಬಂಧ ಪಡೆದ ಪುರಾಣಗಳೊಡನೆ ಹಾಗೂ ವಿಷ್ಣುವಿನ ಅವತಾರ ಕಥೆಗಳೊಡನೆ ಹಾಗೂ ಸಂಬಂಧ ಪಡೆದ ಉತ್ಸವಗಳು, ಇವುಗಳಿಗೆ ಉದಾಹರಣೆಯಂದರೆ ತಿರುಪ್ಪಳ್ಳಿಯೆಳುಚ್ಚಿ - ಮಾರ್ಗಳಿ - ಧನುರ್ಮಾಸ - ಉತ್ಸವ ಮತ್ತು ಸದರಿ ದೇವತೆಗಳ ಜನ್ಮನಕ್ಷತ್ರ ಉತ್ಸವಗಳು. ಈ ವಿಧವಾದ ಹಬ್ಬ ಹರಿದಿನಗಳನ್ನು ದಾನಿಭಕ್ತರು ದೈವದ ಅನುಗ್ರಹವನ್ನು ಪಡೆಯಲು ತಮ್ಮ ಅನುಕೂಲಗಳಿಗೆ ತಕ್ಕಂತೆ ವ್ಯವಸ್ಥೆ ಮಾಡಿದರು. ಇವುಗಳಲ್ಲಿ ಬಹುತೇಕ ದಾನಿಯ, ಅವನ ಗುರುವಿನ, ಇಷ್ಟದೈವದ ಜನ್ಮನಕ್ಷತ್ರದ ಆಚರಣೆಯ ಉತ್ಸವಗಳಾದವು.

ಉತ್ಸವಗಳ ಮೊಟ್ಟಮೊದಲ ಶಾಸನವೆಂದರೆ ತಿರುಚಾನೂರುನಲ್ಲಿ ಕಂಡುಬರುವ ಕೋ ವಿಜಯದಂತಿ ವಿಕ್ರಮ ವರ್ಮನ ಆಳ್ವಿಕೆಯ ಐವತ್ತೊಂದನೆ ವರ್ಷದ (ಕ್ರಿ.ಶ. 830) ಜಿ. ಟಿ. 219 ರ ಶಾಸನವೇ ಆಗಿದೆ. ಹೊಸದಾಗಿ ಸ್ಥಾಪಿತವಾದ ತಿರುವೆಂಕಟತ್ತು ಎಂಬೆರುಮಾನ್ ಅಡಿಗಳ ಮೆರವಣಿಗೆಯ ಮೂರ್ತಿಯ ಮುಂದೆ ಒಂದು ದೀಪವನ್ನು ಬೆಳಗಿಸಿ ನಡೆಸಲು ತಿರುಚಾನೂರಿನ ಸಭೆಯವರೆಗೆ ಚೋಳನಾಡಿನ ಚೋಳನೂರಿನ ಉಲಗಪ್ಪೆರುಮಾನಾರನು ಬಂಗಾರದ 40 ಕಳಂಜುಗಳನ್ನು ಠೇವಣೆಯಾಗಿ ನೀಡಿದ ಎಂಬುದು ಇಲ್ಲಿನ ವಿಷಯ. ಮೆರವಣಿಗೆಯ ಜಂಗಮಮೂರ್ತಿಯ ಉಲ್ಲೇಖ ಇಲ್ಲಿಯೇ ಮೊದಲಬಾರಿಗೆ ಆಗಿದೆ.

ಇದುವರೆಗೆ ದೊರಕಿರುವ ಚೋಳರ ದಾಖಲೆಗಳು ಹಬ್ಬ ಉತ್ಸವಗಳನ್ನು ಹೆಸರಿಸುವುದಿಲ್ಲವಾದರೂ, ನಂತರದವು ಆದಿನ ಉತ್ಸವಗಳ ಸಂಖ್ಯೆ ಸಾಂದ್ರತೆಗಳ ಬಗ್ಗೆ ಅವುಗಳು ನೀಡುವ ನಿವೇದನೆಗಳ ಪ್ರಮಾಣ ಹಾಗೂ ವೈವಿಧ್ಯಗಳ ವಿವರದ ಮೂಲಕ ತಿಳಿಸಿ ಕೊಡುತ್ತವೆ. ದಕ್ಷಿಣದ ಮಧ್ಯಪ್ರಾಂತದಲ್ಲಿ ಪ್ರಾಚೀನ ಅರಸು ಮನೆತನಗಳು ಖಿಲವಾಗುತ್ತಿದ್ದಂತೆ, ಸ್ವತಂತ್ರರಾಜ್ಯಗಳನ್ನು ಸ್ಥಾಪಿಸಿಕೊಂಡು ಇತಿಹಾಸದಲ್ಲಿನ ಸ್ಥಳಕ್ಕಾಗಿ ಪರದಾ ಡಿದ ಪ್ರಾಂತೀಯ ಪಾಳಯಗಾರರಾದ ಗಂಡಗೋಪಾಲರುಗಳು, ಯಾದವರಾಯರುಗಳು, ಸಂಬುವರಾಯರುಗಳು, ಕಾಡವರಾಯರುಗಳು ಪ್ರಾಮುಖ್ಯ ಪಡೆದ ದಿನಗಳು ಅವು. ಈ ಸ್ಥಳೀಯ ರಾಜರುಗಳು ತಮ್ಮಸರ್ವಾಧಿ ಕಾರದ ಕೈ ನಡೆಯುವ ಹೊತ್ತಿನಲ್ಲಿ ತಿರುಪತಿ ತಿರುಮಲೆಯ ಆಲಯಗಳಿಗೆ ತಮ್ಮ ಶಕ್ತ್ಯಾನುಸಾರವಾಗಿ ಸೇವೆ ಕಾಣಿಕೆಗಳನ್ನು ನೀಡಿ ದೀಪ ಧೂಪ ನೈವೇದ್ಯ ಉತ್ಸವಗಳನ್ನು ನೆರವೇರಿಸಿದರು. ಕ್ರಿ. ಶ. 1300ರ ಹೊತ್ತಿಗೆ ಹತ್ತನೇ ಶತಮಾನದಲ್ಲಿ ಪುರಟ್ಟಾಶಿ, ಮಾರ್ಗಳಿ ಮಾಸಗಳಲ್ಲಿ ನಡೆಯುತ್ತಿದ್ದ ಎರಡು ಬ್ರಹ್ಮೋತ್ಸವಗಳೊಡನೆ ಮತ್ತೆರಡು ಬ್ರಹ್ಮೋತ್ಸವಗಳು ಆಡಿ ಮಾಸದಲ್ಲಿ ಶ್ರೀವೇಂಕಟೇಶ್ವರಸ್ವಾಮಿಗೆ ನಡೆಯುವಂತೆ ಏರ್ಪಾಡು ಮಾಡಿದು ದನ್ನು ಕಾಣಬಹುದು (ತಿ. ತಿ. 189).

ವಿಜಯನಗರದರಸರ ಕಾಲಕ್ಕೆ ಬಂದಾಗ ನಾವು ಕಾಣಬಹುದಾದದ್ದೆಂದರೆ ಪೊಂಗೋಡು ಗ್ರಾಮವನ್ನು ದತ್ತಿಯಾಗಿ ನೀಡಿದ ಎರಡನೇ ಹರಿಹರನು ಮುಲ್ಲೈತಿರುವೆಂಕಟ ಜೀಯರ್ ಮೂಲಕವಾಗಿ ಮಾಸಿ ತಿರುನಾಳನ್ನು ತಿರುಮಲೆಯಲ್ಲಿ ಆಚರಿಸಲು ಆದೇಶನ ನೀಡಿದನು. (ತಿ. ತಿ. 61 ಮತ್ತು 103) ಇತರ ಶಾಸನಗಳು ತಾವು ಹೇಳುವ ಉತ್ಸವಗಳ ಬಗ್ಗೆಯಾಗಲೀ ತಾವು ಹೇಳುವ ಸಂಖ್ಯೆಯ ಬಗ್ಗೆಯಾಗಲೀ ಖಚಿತವಾಗಿ ತಿಳಿಸಿಲ್ಲ. (ತಿ. ತಿ. 61, 340) ಆದರೆ ಕಾಲಕಳೆದಂತೆ 16 ನೇ ಶತಮಾನದ ಮಧ್ಯದಲ್ಲಿ ಇವುಗಳ ಹತ್ತರ ಸಂಖ್ಯೆಗೇರಿ ವರ್ಷದ ಹತ್ತೂ ತಿಂಗಳಿಗೆ ಹರಡಿದ್ದನ್ನು ಕಾಣಬಹುದಾಗಿದೆ. ಆಣಿಮಾಸ ಹಾಗೂ ವೈಶಾಖಮಾಸವನ್ನು ಬಿಡಲು ಕಾರಣ ಆ ತಿಂಗಳುಗಳಲ್ಲಿ ತಿರುಪತಿಯಲ್ಲಿ ಶ್ರೀ ಗೋವಿಂದರಾಜಸ್ವಾಮಿಗೆ ಪ್ರತ್ಯೇಕವಾದ ಎರಡು ಉತ್ಸವಗಳನ್ನು ನಡೆಸುತ್ತಿದ್ದುದೇ ಆಗಿತ್ತು.

ಅಧ್ಯಯನೋತ್ಸವದ ಅತಿ ಪ್ರಾಚೀನ ದಾಖಲೆಯೆಂದರೆ ಕ್ರಿ. ಶ. 1400 ರ ದಾಗಿದ್ದು. ಅತಿ ಆರ್ವಾಚೀನ ದಾಖಲೆಯೆಂದರೆ ಕ್ರಿ. ಶ. 1635ರಲ್ಲಿನದಾಗಿದೆ. ಇಂದಿಗೂ ಕೂಡ ಎಲ್ಲ ದೇವಾಲಯಗಳಲ್ಲಿ ನಡೆಯುತ್ತ ಬಂದಿದೆ.

ಸಾಳುವ ನಗಸಿಂಗರಾಯನ ಕಾಲದಲ್ಲಿ (ತಿ. ತಿ. 157) ಸಾಳುವ ಮಲ್ಲಯ್ಯದೇವ ಮಹಾರಾಯನಿಂದ ಶಕವರ್ಷ 1365 (ಕ್ರಿ. ಶ. 1463) ರಲ್ಲಿ ಪವಿತ್ರೋತ್ಸವವು ಮೊದಲಬಾರಿಗೆ ಆರಂಭವಾಯಿತು. ಇದೊಂದು ಅಂದಿಗೆ ಹೊಸ ಉತ್ಸವವಾದ್ದರಿಂದ ಐದು ದಿನಗಳ ಕಾಲ ನಡೆಯುವ ಉತ್ಸವದ ಎಲ್ಲ ವಿವರಗಳನ್ನೂ ಶಾಸನ ದಲ್ಲಿ ದಾಖಲಿಸಲಾಗಿದೆಂಬುದು ಸಂತಸಕರ ಸಂಗತಿ. ಉತ್ಸವದ

ಹಿಂದಿನದಿನ ರಾತ್ರಿ ಅಂಕುರಾರ್ಪಣೆಯನ್ನೂ ಸೇರಿಸಿದರೆ ಆರುದಿನದ ಉತ್ಸವ. ಉತ್ಸವ ಕಾರ್ಯಕ್ರಮದಲ್ಲಿ ಐದು ದಿನವೂ ವೇದ ಪಾರಾಯಣ ಪುರಾಣವಾಚನ ವನ್ನು ಏರ್ಪಡಿಸಿ ಈ ಕೆಲಸ ನಿರ್ವಹಿಸುವ ಬ್ರಾಹ್ಮಣರಿಗೆ ಸೂಕ್ತ ಸಂಭಾವನೆ ಏರ್ಪಡಿಸಲಾಗಿದ್ದಿತು.

ಹದಿಮೂರನೇ ಶತಮಾನದಲ್ಲಿ ಚೋಳಸಾಮಂತನಾದ ವೀರನರಸಿಂಹ ಯಾದವರಾಜನ ರಾಣಿಯು ಆಣಿಮಾಸದಲ್ಲಿ ಶ್ರೀ ಗೋವಿಂದರಾಜಸ್ವಾಮಿಗೆ ಮತ್ತೊಂದು ಬ್ರಹ್ಮೋತ್ಸವವನ್ನು ಆರಂಭಿಸಿದಾಗ ವಸಂತೋತ್ಸವದ ದಿನ ಎರಡಾಯಿತು(ಜಿ. ಟಿ111). ಹದಿನಾರನೇ ಶತಮಾನದ ಮಧ್ಯದಲ್ಲಿ ಮತ್ತೆರಡು ಬ್ರಹ್ಮೋತ್ಸವಗಳನ್ನು ಆರಂಭಿಸುವವರೆಗೆ ಈ ದಿನಗಳ ಸಂಖ್ಯೆಗೆ ಹೆಚ್ಚಾಗಿದ್ದಿತೆಂದು ತಿಳಿದುಬರುತ್ತದೆ. ಶಕವರ್ಷದ 1437ರಲ್ಲಿ (ಯುವಸಂವತ್ಸರ) ಕೃಷ್ಣರಾಯನ ಆಳ್ವಿಕೆಯ ಕಾಲದಲ್ಲಿ (ತಿ. ತಿ. 311) ಕರಣೀಕ ಬಸವರಸನಿಂದ ಕೊಡ್ಯೆ ಉತ್ಸವದ ಅಂತ್ಯದಲ್ಲಿ ಎರಡು ದಿನಗಳ ವಸಂತೋತ್ಸವ ಏರ್ಪಾಡಾಯಿತು.

ವಸಂತೋತ್ಸವ ವಸಂತ ಋತುವಿನ ಉತ್ಸವವಾಗಿದ್ದಂತೆಯೇ ಕೊಡ್ಯೆ ತಿರುನಾಳ್ ಎಂಬುದು ಬೇಸಿಗೆಯ ಉತ್ಸವವಾಗಿದ್ದಿತು. ಇದನ್ನು ಎರಡು ಭಾಗದಲ್ಲಿ ವಿಭಾಗಿಸಿ 20 ದಿನಗಳ ಕಾಲ ಆಚರಿಸಲಾಗಿದ್ದಿತು. ತಿರುಮಲೆ ಯಲ್ಲಿ ಶ್ರೀ ಮಲೆಯಪ್ಪನ್ (ಶ್ರೀ ವೆಂಕಟೇಶ್ವರಸ್ವಾಮಿಯ ಉತ್ಸವಮೂರ್ತಿ) ಹಾಗೂ ಶ್ರೀದೇವಿ ಭೂದೇವಿಯರು ಮತ್ತು ಸೇನೈಮೊದಲಿ (ವಿಶ್ವಕ್ಸೇನರು) ಗಳಿಗೂ (ತಿ. ತಿ. 311) ತಿರುಪತಿ ಯಲ್ಲಿ ಶ್ರೀ ಗೋವಿಂದರಾಜ ಸ್ವಾಮಿಗೂ (ಜಿ.ಟಿ.105 ಹಾಗೂ 277, 281 ತಿ. ತಿ.) ಶಕ 1454ರ ಖರ ವರ್ಷದ ಜಿ.ಟಿ.251 ಶಾಸನವು ಕೊಡ್ಯೆ ತಿರುನಾಳನ್ನು ಶ್ರೀ ಪೆರಿಯ ರಘುನಾಥನಿಗೆ (ಶ್ರೀ ಕೋದಂಡರಾಮನಿಗೆ) ಆಣಿಮಾಸದಲ್ಲಿ ನಡೆಯುತ್ತಿದ್ದಿ ದ್ದನ್ನು ಹೇಳುತ್ತದೆ.

ಮೇಲೆ ಹೇಳಿದ ವಸಂತ ಹಾಗೂ ಕೊಡ್ಯೆ ಉತ್ಸವಗಳ ಹೊರತು, ಅಣ್ಣಾ ಊಂಜಲ್ ತಿರುನಾಳ್ (ಹಂಸ ರೂಪದ ಉಯ್ಯಾಲೆ ಉತ್ಸವ) ತಿರುಪ್ಪಳ್ಳಿ ಓಡಂ ತಿರುನಾಳ್ (ತೆಪ್ಪೋತ್ಸವ) ಗಳನ್ನು ಶಾಸನಗಳಲ್ಲಿ ಕಾಣಬಹುದು. ಇವೆರಡೂ ಸ್ವಾಮಿಯ ಉತ್ಸವ ವಿಗ್ರಹ ಗಳಿಗೆ ಮಾಡುವಂತಹ ಉತ್ಸವಗಳು. ಶಕ 1395 ವಿಜಯ ಸಂವತ್ಸರದಲ್ಲಿ ತಿರುಮಲೆಯಲ್ಲಿ ಸಾಳುವ ನರಸಿಂಹನಿಂದ ಅಣ್ಣಾಊಂಜಲ್ ತಿರುನಾಳ್ ಆರಂಭವಾಯಿತು. ಐದು ದಿನಗಳ ಈ ಉತ್ಸವವನ್ನು ವಸ್ತು ಸ್ಥಿತಿಯಲ್ಲಿ 7 ದಿನಗಳಾಗಿ ಆಚರಿಸುತ್ತಿದ್ದರು. (ತಿ.ತಿ197).

ತಿರುಮಲೆಯಲ್ಲಿ ಸಾಳುವ ನರಸಿಂಹನಿಂದಾರಂಭವಾದ ಊಂಜಲ್ ಉತ್ಸವವನ್ನು ಹೆಸರಿಸುವ 197 ನೇ ತಿ.ತಿ. ಶಾಸನವು ಸಾಳುವ ನರಸಿಂಹನ ಧರ್ಮದಿಂದಲೇ ತಿರುಪಳ್ಳಿ ಓಡಂ ತಿರುನಾಳ್ ಸಹ ನಡೆಯುತ್ತಿದ್ದಿತೆಂದೂ ಇದಕ್ಕಾಗಿ ನಾಲ್ಕು ಅಪ್ಪಪಡೈನೈವೇದ್ಯದ ಅವಕಾಶ ಮಾಡಿಕೊಡಲಾಗಿದ್ದಿತೆಂದೂ ಹೇಳುತ್ತದೆ.

ಉಯ್ಯಾಲೆ ಹಾಗೂ ತೆಪ್ಪ ಉತ್ಸವಗಳ ದಾಖಲೆಗಳು ನಂತರದ ಶಾಸನಗಳಲ್ಲಿಯೂ ಕಂಡು ಬರುತ್ತದೆ. ಶಕವರ್ಷ 1426ರ ತಿ.ತಿ. 271 ರ ಶಾಸನ ಹಾಗೂ ಶಕ 1445 ರ ಜಿ.ಟಿ 97 ರ ಶಾಸನಗಳು ಇವೆರಡೂ ಆಲಯಗಳಲ್ಲಿ ಊಂಜಲ್‌ಉತ್ಸವವನ್ನು ಐದು ದಿನಗಳ ಕಾಲ ನಡೆಸಲಾಗುತ್ತಿದ್ದಿತೆಂದೂ ಹೇಳುತ್ತವೆ. ಆದರೆ ತಿರುಪ್ಪಳ್ಳಿ ಓಡಂ ಉತ್ಸವವು ಒಂದು ದಿನದ ಉತ್ಸವವೆಂದೂ 281 ತಿ.ತಿ. ಹಾಗೂ 256 ಜಿ.ಟಿ. ಶಾಸನಗಳು ತಿಳಿಸಿದರೆ 97 ಜಿ.ಟಿ. ಶಾಸನವು ಇದು ಕೊಡ್ಯೆ ತಿರುನಾಳಿನ ಹತ್ತನೆಯ ದಿನ ಮಾಡುತ್ತಿದ್ದ ಒಂದುದಿನದ ಉತ್ಸವ ಎನ್ನುವುದು. ತಿ.ತಿ. 83ರಲ್ಲಿ (ಶಕ 1455 ರ ವಿಜಯ ವತ್ಸರ) ಅಚ್ಯುತರಾಯ ಕೋನೇರಿಯಲ್ಲಿ ಜಲಕ್ರೀಡಾ ತಿರುಪ್ಪಳ್ಳಿ ಓಡುತ್ತಿರುನಾಳನ್ನು ಒಂಭತ್ತು ದಿನಗಳ ಉತ್ಸವವಾಗಿ ಆಚರಿಸಬೇಕೆಂದು ಹೇಳಲಾಗಿದೆ.

ಆಲಯಗಳಲ್ಲಿ ಈ ಮೇಲಿನ ಉತ್ಸವಗಳಂತೆಯೇ ಭಕ್ತರು ಸೂಚಿಸಿದ ಹಲವು ಆಚಾರ್ಯಪುರುಷರ, ಹಿರಿಯರ, ರಾಜರ, ರಾಜಪುರುಷರ, ಮಹೋನ್ನತ ವ್ಯಕ್ತಿಗಳ ಜನ್ಮನಕ್ಷತ್ರ ದಿನಗಳಲ್ಲಿ ದೇವರಿಗೆ ಪೂಜೆ ಮಾಡುವ ವಿಶೇಷ ಉತ್ಸವಗಳುಂಟು. ತಮಗೆ ಸ್ವಾಮಿಯ ಅನುಗ್ರಹವಾಗಲೆಂದು, ಜೀವನ ಸುಗಮ ಸಫಲವಾಗಲೆಂದು ಈ ರೀತಿಯ ವಿಶೇಷ ಪೂಜಾ ಉತ್ಸವ, ನೈವೇದ್ಯ, ಮೆರವಣಿಗೆಗಳನ್ನು ಏರ್ಪಡಿಸುತ್ತಿದ್ದರು,

ಇವುಗಳ ಜೊತೆಗೇ ಹಿಂದೂ ಸಮಾಜವು ಪವಿತ್ರವೆಂದು ಭಾವಿಸುವ ತೈ ಅಮಾವಾಸ್ಯೆ, ಆಣಿ ಅಮಾವಾಸ್ಯೆ, ದೀಪಾವಳಿ, ಕಾರ್ತೀಕ, ಯುಗಾದಿ, ಮಹಾನವಮಿ, ರಥ ಸಪ್ತಮಿ ಮೊದಲಾದ ದಿನಗಳಲ್ಲಿಯೂ ದೇವರಿಗೆ ವಿಶೇಷ ಪೂಜೆ ಅಲಂಕಾರಗಳನ್ನು ಏರ್ಪಡಿಸಿ ಮೆರವಣಿಗೆ ಉತ್ಸವ ಮಾಡಲಾಗುತ್ತಿದ್ದಿತು.

## 14. ವಾಹನಗಳು

ಆಲಯದ ಹಲವಾರು ಉತ್ಸವಗಳ ಬಗ್ಗೆ ಶಾಸನಗಳು ವಿವರಗಳನ್ನು ನೀಡುತ್ತವೆಯಾದರೂ ಹದಿನಾರನೇ ಶತಮಾನದ ಹಿಂದಿನ ಯಾವ ಶಾಸನದಲ್ಲಿಯೂ ಬ್ರಹ್ಮೋತ್ಸವದ ದಿನಗಳಲ್ಲಿ ಪ್ರತಿನಿತ್ಯ ಉತ್ಸವ ವಿಗ್ರಹಗಳು ಮೆರವಣಿಗೆ ಹೊರಡುತ್ತಿದ್ದಾಗ ಯಾವ ವಾಹನ ಗಳನ್ನು ಬಳಸುತ್ತಿದ್ದರೆಂಬ ವಿವರಗಳಿಲ್ಲ. ಅಚ್ಯುತರಾಯ ಹಾಗೂ ಸದಾಶಿವರಾಯನ ಆಳ್ವಿಕೆಯ ಕಾಲದ ಶಾಸನಗಳು ಒಂದರ್ಧ ಡಜನ್ ವಾಹನಗಳ ಹೆಸರನ್ನು ಹೇಳುತ್ತವೆ ಯಾದರೂ, ವಿವಿಧ ದಿನಗಳಲ್ಲಿ ಒಂದೇ ವಾಹನವನ್ನು ಮೆರವಣಿಗೆಗೆ ಬಳಸಲಾಗುತ್ತಿದ್ದಿ ತೆಂದು ಹೇಳುತ್ತವೆ. ಮಟ್ಲ ಕುಮಾರ ಅನಂತರಾಯನು ತಿರುಮಲೆಗೆ ಒಂದು ಹಾಗೂ ತಿರುಪತಿಗೆ ಒಂದು - ಹೀಗೆ ಎರಡು ಜೊತೆ ಬಂಗಾರದ ಆನೆ, ಕುದುರೆಗಳನ್ನು (ವಾಹನಗಳನ್ನು) ನೀಡಿದನೆಂದು ಜಿ.ಟಿ. 269, 270 ಶಾಸನಗಳು ದಾಖಲೆ ನೀಡುತ್ತವೆ. ತಿರುಚ್ಚಿ (ಪಲ್ಲಕ್ಕಿ), ಹಂಸವಾಹನ, ಚಾತಕ ಪಕ್ಷಿವಾಹನ, (ಜಿ.ಟಿ. 66) ಮೊದಲಾದವುಗಳ ಹೆಸರು ಗಳನ್ನೂ ಶಾಸನಗಳಲ್ಲಿ ನೋಡಬಹುದು.

ಇತರ ವಿವರಗಳ ಕೊರತೆಯಿರುವಂತೆಯೇ ಈ ವಿಷಯದಲ್ಲಿಯೂ ಯಾವ ದಿನಗಳಲ್ಲಿ ಹೇಗೆ ಇವುಗಳ ಬಳಕೆಯಾಗುತ್ತಿದ್ದಿತೆಂದ ತಿಳಿದುಬಂದಿಲ್ಲ. ಈ ವಾಹನಗಳನ್ನು ಬ್ರಹ್ಮೋತ್ಸವಗಳಲ್ಲಿಯೇ ಅಲ್ಲದೆ ಇತರ ಉತ್ಸವಗಳಲ್ಲಿಯೂ - ಎಲ್ಲೆಲ್ಲಿ ಮೆರವಣಿಗೆ ಅಗತ್ಯವೋ ಅಲ್ಲೆಲ್ಲ ಬಳಸಲಾಗುತ್ತಿದ್ದಿತು.

ಉದಾ - ರಥಸಪ್ತಮಿಯಂದು ಸೂರ್ಯಪ್ರಭವಾಹನ (ಜಿ.ಟಿ. 321).

## 15. ನಂದನ ವನಗಳು

ಶ್ರೀ ವೆಂಕಟೇಶ್ವರಸ್ವಾಮಿಯ ಆಲಯದಲ್ಲಿ ನಡೆಯುವ ನಿತ್ಯಪೂಜೆ, ಉತ್ಸವಾದಿಗಳಲ್ಲಿ ಸ್ವಾಮಿಯ ಅಲಂಕಾರಕ್ಕೆ ಅತಿಮುಖ್ಯ ವಾಗಿ ಬಳಸಬೇಕಾಗಿ ಬರುವ ಪುಷ್ಪಗಳ ಒಟ್ಟು ಉತ್ಪಾದನೆಯ ಕೊರತೆಯನ್ನು ಬಹುಮಂದಿ ಭಕ್ತರು ಕಂಡುಕೊಂಡರು. ನಿರಂತರವಾಗಿ ಹೂವುಗಳ ಸರಬರಾಜು ಮಾಡುವಲ್ಲಿರುವ ತೊಂದರೆಗಳನ್ನು ಮನಗಂಡ ಭಕ್ತರು, ತಾವೇ ಪುಷ್ಪವಾಟಿಕೆಗಳನ್ನು ನಂದನವನಗಳನ್ನು ಬೆಳೆಸಿ, ಬೆಳೆದ ಹೂವುಗಳನ್ನು ಆಲಯಕ್ಕೆ ನೀಡುವಂತಹ ಏರ್ಪಾಡು ಮಾಡಿದರು. ಪ್ರತಿಯೊಂದು ನಂದನವನಕ್ಕೂ ಒಬ್ಬ ಮೇಲ್ವಿಚಾರಕನಿದ್ದು ಆತ ಮಾಲಿಗಳಿಂದ ಕೆಲಸವನ್ನು ತೆಗೆದುಕೊಳ್ಳುತ್ತಿದ್ದ. ಕೆಲಸಗಾರರಿಗೆ ಅವರ ಕೆಲಸಕ್ಕಾಗಿ ಸಾಧಾರಣವಾಗಿ ತಿಂಗಳಿಗೆ ಮೂರರಿಂದ ಆರು ಪಣಂಗಳ ವರೆಗೆ ಸಂಭಾವನೆ ನೀಡಲಾಗುತ್ತಿದ್ದಿತು. ಮೇಲು ವಿಚಾರಕರ್ತರ ಕೆಲಸವು ವಿನಾಸಂಭಾವನೆಯ ಗೌರವಕೈಂಕರ್ಯವಾಗಿದ್ದಂತೆ ತೋರುವುದು.

ಹಲವಾರು ಬಾರಿ ಭಕ್ತರು ತಮ್ಮ ನಂದನವನಗಳಲ್ಲಿ ಮಂಟಪಗಳನ್ನೂ ನಿರ್ಮಿಸಿ, ದೇವಸ್ಥಾನದ ಶ್ರೀಭಂಡಾರಕ್ಕೆ ಧನಸಹಿತ ವಾಗಿಯೋ ಅಥವಾ ತಮ್ಮ ನಂದನವನದ ಉತ್ಪಾದನೆಯನ್ನೂ ಮಂಟಪದೊಡನೆಯೇ ಒಪ್ಪಿಸಿಬಿಡುತ್ತಿದ್ದರು. ಆಗ ದೇವಸ್ಥಾನದವರೇ ಈ ನಂದನವನಗಳನ್ನು ನೋಡಿಕೊಂಡು, ಅಲ್ಲಿ ಕೆಲಸಮಾಡುವ ವರಿಗೆ ಜೀವಿಕೆಯನ್ನು ನೀಡುತ್ತ ಅಥವಾ ಸಂಬಳಗಳನ್ನು ಏರ್ಪಾಡು ಮಾಡಿ, ಆಲಯದ ಅನ್ನಪ್ರಸಾದಗಳಲ್ಲಿ ಒಂದು ಪಾಲು ದಿನವೂ ಅವರಿಗೆ ಸಿಗುವಂತೆ ಏರ್ಪಡಿಸಿ, ಆಲಯಕ್ಕೆ ನಿರಂತರವಾಗಿ ಹೂವುಗಳು ಸರಬರಾಜು ಆಗುವಂತೆ ನೋಡಿಕೊಳ್ಳಬೇಕಾಗಿದ್ದಿತು.ಇವುಗಳಲ್ಲಿ ಅತಿಹೆಚ್ಚು ನಂದನವನಗಳು ಶಾತ್ತಾದ ಶ್ರೀವೈಷ್ಣವರಿಂದ ನೋಡಿ

ಕೊಳ್ಳಲ್ಪಟ್ಟವೆಂದು ತೋರುತ್ತದೆ. ಇಂದಿಗೂ ಅವರೇ ದಾಸನಂಬಿಗಳೆಂಬುದಾಗಿ, ತಿರುಮಲೆಯ ಆಲಯದ ಹೂವಾಡಿಗರಾಗಿ ಸ್ವಾಮಿ ಪುಷ್ಪಕೈಂಕರ್ಯ ಸಲ್ಲಿಸುತ್ತಿರುವರು. (197, 200 ತಿ,ತಿ) ಕ್ರಿ.ಶ.1300 ರಿಂದಲೇ (125 ಜಿ.ಟಿ) ನಂದನವನಗಳನ್ನು ಬೆಳೆಸುವ ಸಂಪ್ರದಾಯ ಆರಂಭವಾಗಿದ್ದರೂ, 14 ನೇ ಶತಮಾನದ ದ್ವಿತೀಯಾರ್ಧದಲ್ಲಿಯೂ 15 ನೇ ಶತಮಾನದಲ್ಲಿಯೂ ಕಂಡುಬರುವ ಬಹುತೇಕ ಶಾಸನಗಳ ಹೇಳಿಕೆಯಂತೆ ಅನೇಕವಾದ ಈ ನಂದನವನಗಳನ್ನು ಹೆಚ್ಚು ವ್ಯವಸ್ಥಿತವಾಗಿ ನೋಡಿಕೊಂಡಿದ್ದರೂ ಅಹ ಪೂಜಾದಿ ಉತ್ಸವ ಕಾರ್ಯಗಳಿಗೆ ಹೂವುಗಳ ಕೊರತೆಯನ್ನು ನಿವಾರಿಸುವಷ್ಟು ಹೆಚ್ಚಾಗಿರಲಿಲ್ಲ. ಸಾಳುವ ನರಸಿಂಹರಾಯ ಮಹಾರಾಯರ ಒಡೆಯರ ಹೆಸರಿನಲ್ಲಿ, ಅವನ ದಂಡನಾಯಕನಾದ ಮುಖಪ್ಪಾಳಂ ನಾಗಮ ನಾಯಕನು ಒಂದು ಪೂಜೆಯನ್ನು ಏರ್ಪಡಿಸಿ, ತನ್ನ ಜಹಗೀರು ಗ್ರಾಮವಾದ ತಿರಡಂಪಾಡಿಯನ್ನು ತಿರುವಿಡೈಯಾಟ್ಟಂ ತಿರುಪ್ಪಣಿಪೂರಂ ಆಗಿ ಆಲಯಕ್ಕೆ ಒಪ್ಪಿಸಿದಾಗ, ಇದರ ಪ್ರತಿಯಾಗಿ ಆಲಯದ ಲೋಕೋಪಯೋಗಿ ಇಲಾಖೆಯ ಮೇಲ್ವಿಚಾರಕನಾದ ತಿರುಪ್ಪಣಿ ಪಿಳ್ಳೈ (ಶ್ರೀ ಕಾರ್ಯನಿರ್ವಾಹಕ) ಸ್ವಾಮಿಗೆ ನೀಡಬೇಕಾದ ಹೂವಿನ ಹಾರಗಳನ್ನು ಸರಬರಾಜು ಮಾಡುವ ಜವಾಬ್ದಾರಿಯನ್ನು ಹೊತ್ತುಕೊಂಡನು. (243 ತಿ.ತಿ.). ಈ ದಾನದ ವೈಶಿಷ್ಟ್ಯವೆಂದರೆ ಒಬ್ಬ ದಾನಿಯ ಪರವಾಗಿ ಆಲಯದ ಅಧಿಕಾರಿಗಳು ಪುಷ್ಪಗಳನ್ನು ಸರಬರಾಜು ಮಾಡುವ ಹೊಣೆ ಹೊರವುದು ಹಾಗೂ ಆ ಕೆಲಸಕ್ಕಾಗಿ ದಾನಿಯು ಒಂದು ಗ್ರಾಮವನ್ನು ದಾನ ಮಾಡುವಿಕೆಯೂ ಆಗಿದೆ.

ಆಲಯದ ನಂದನವನಗಳಲ್ಲಿಯೂ, ಕೊಳಗಳಲ್ಲಿಯೂ ಬೆಳೆಯುತ್ತಿದ್ದ ಹೂವುಗಳಲ್ಲಿ ಸೆಂಗೊಳನೀರಿನಲ್ಲಿ (ಕೆಂಪುನೀರಿನಲ್ಲಿ) ಬೆಳೆಯುವ ಕೆಂದಾವರೆಗಳ ವಿಶೇಷ ಉಲ್ಲೇಖವಿದ್ದು ಇದರ ಬೆಳೆ ತೆಗೆಯಲು ಪ್ರತ್ಯೇಕ ಏರ್ಪಾಡುಮಾಡಿದಂತೆ ಕಂಡುಬರುತ್ತದೆ. (125 ಜಿ.ಟಿ.) (53, 153 ತಿ.ತಿ.) ನಂದನವನಗಳಲ್ಲಿ ಸುಗಂಧ ಬೀರುವ ಮೂಲಿಕೆಗಳನ್ನು ಲತಾಕುಸುಮಗಳನ್ನು - ಮರುಗ, ದವನ, ತುಲಸಿ- ಮೊದಲಾದವುಗಳನ್ನೂ - (56 - ಎ. ತಿ.ತಿ.) ದೇವರ ಪೂಜೆಯಲ್ಲಿ ಬಳಸಲು ಬೆಳೆಯಲಾಗುತ್ತಿತ್ತು.

## 16. ದೇವದಾನದ ಗ್ರಾಮಗಳು ಹಾಗೂ ಭೂಮಿಕಾಣಿ

ಹಿಂದೂ ರಾಜರೂ ಹಾಗೂ ಅವರುಗಳ ಮನ್ನೆಯ ಮಾಂಡಲಿಕರೂ ಆಲಯಗಳನ್ನು ಯಾವರೀತಿಯಲ್ಲಿ ಅತಿ ಹೆಚ್ಚು ಗೌರವಾದರಗಳಿಂದ ಕಂಡರೆಂಬುದನ್ನು ಆಲಯಗಳ ನಿತ್ಯ ಪೂಜಾದಿ ಉತ್ಸವಗಳಿಗೂ, ಜೀರ್ಣೋದ್ಧಾರಕ್ಕೂ ಅವರುಗಳು ನೀಡಿದ ದಾನ ದತ್ತಿಗಳೂ, ಸೇವೆ ಕೈಂಕರ್ಯಗಳೂ ಸಾಕಷ್ಟು ವಿವರವಾಗಿ ತಿಳಿಸುತ್ತವೆ. ಬಹುತೇಕ ಕಾಣಿಕೆಗಳು ಭೂಮಿಕಾಣಿ, ಗ್ರಾಮಗಳಾಗಿದ್ದು, ಸಾಧಾರಣವಾಗಿ ಸರ್ವಮಾನ್ಯವಾಗುತ್ತಿದ್ದವು. (ಎಲ್ಲ ರೀತಿಯ ಆದಾಯದೊಡನೆ ಸೇರಿದ ದಾನ) ತಿರುವೆಂಕಟಕೊಟ್ಟಂ ಪ್ರಾಂತ್ಯದಲ್ಲಿನ ಎರಡು ಉಪವಿಭಾಗಗಳಾದ ವೈಕುಂಠ ವಲನಾಡು ಹಾಗೂ ಚಂದ್ರಗಿರಿ ರಾಜ್ಯದ ತಿರುಕ್ಕುಡವುರನಾಡುಗಳಲ್ಲಿ ಈ ದೇವಮಾನ್ಯದ ಗ್ರಾಮಗಳಲ್ಲಿ ಹೆಚ್ಚಿನವು (ಸುಮಾರು 150 ಹೆಚ್ಚಿನವು ಇದ್ದವು). ವಿಜಯನಗರ ರಾಜ್ಯದ ಕಾಲಕ್ಕಿಂತ ಪೂರ್ವದಲ್ಲಿ ಕೆಲವು ಗ್ರಾಮಗಳು ಆಲಯದ ಒಡೆತನಕ್ಕೆ ಬಂದವುಗಳಾಗಿದ್ದರೆ; ವಿಜಯನಗರ ಕಾಲದಲ್ಲಿ ಅತ್ಯಂತ ಹೆಚ್ಚಿನ ಗ್ರಾಮಗಳನ್ನು ಆಲಯಕ್ಕೆ ಒಪ್ಪಿಸಲಾಯಿತು. ವಿಜಯನಗರದ ಆಡಳಿತ ಕಾಲದಲ್ಲಿ ಆರಂಭಿಸಲಾದ ನಿತ್ಯನೈವೇದ್ಯ, ನಿತ್ಯಪೂಜೆ, ಉತ್ಸವ, ಮೆರವಣಿಗೆ, ನಂದನವನಗಳು, ರಾಮಾನುಜ ಕೂಟಗಳು- ಹೆಚ್ಚಿಗೆ ಆದಾಯ ಮೂಲವನ್ನು ಅಪೇಕ್ಷಿಸು ವಂತಹವೇ ಅಲ್ಲದೆ, ಅವುಗಳ ನಿತ್ಯನಿರಂತರತೆಗಾಗಿ ವರ್ಷ ವರ್ಷವೂ ಆದಾಯ ಬರುವಂತಹ ಭೂಮಿಕಾಣಿಯಾಗಲೀ, ಹಳ್ಳಿಗಳ ಆದಾಯವನ್ನಾಗಲೀ ಮೀಸಲಿಡಬೇಕಾಗಿ ಬಂದು ದಾನಿಗಳ ಅಪೇಕ್ಷಿತ ಪೂಜೆ, ನಿವೇದನೆ, ಉತ್ಸವಗಳನ್ನು ಶಾಶ್ವತವಾಗಿ ನಡೆಸಲು ಸಾಧ್ಯವಾಗುವಂತಾದದ್ದು - ಹೀಗೆ ಗ್ರಾಮಗಳ ದಾನಕ್ಕೆ ಕಾರಣವಾಯಿತು.

ತಿ.ತಿ. 8, 9 ಶಾಸನಗಳು ಹೇಳುವಂತೆ ಮಣವಾಳಪ್ಪೆರುಮಾಳರನ್ನು ಉತ್ಸವ ಮೂರ್ತಿಯಾಗಿ ಸ್ಥಾಪಿಸಿದ ಪಲ್ಲವ ರಾಣಿ ಸಾಮವೈ ಅದರ ಪೂಜೆ ನಿವೇದನೆಗಳಿಗಾಗಿ ತಿರುಸುಖನೂರು (ತಿರುಚಾನೂರು) ಪಂಚಾಯಿತಿಗೆ ಸೇರಿದ 7000 ಕುಳಿ (ಗುಂಟೆ)

ಭೂಮಿಯನ್ನು ಕೊಂಡುಕೊಂಡು ಇಡೀ ಭೂಮಿಯನ್ನು ಆಲಯದ ವಶಕ್ಕೆ ಒಪ್ಪಿಸಿದುದೇ ಇಂತಹ ದಾನಗಳ ಬಗ್ಗೆ ದೊರಕಿರುವ ಪ್ರಥಮ ದಾಖಲೆಯಾಗಿದೆ.

ಹದಿಮೂರು ಹದಿನಾಲ್ಕನೇ ಶತಮಾನದಲ್ಲಿದ್ದ ಸ್ಥಳೀಯ ಪ್ರಭಾವಶಾಲಿ ಆಡಳಿತಗಾರರಾದ ಗಂಡಗೋಪಾಲರುಗಳು, ಯಾದವರಾಯರುಗಳಿಂದ ಕಾಲದಿಂದ ಕಾಲಕ್ಕೆ ಹಲವು ಜಮೀನು, ಹಳ್ಳಿಗಳು ದಾನವಾಗಿ ಸೇರಿದವು. ವಿಜಯಗಂಡ ಗೋಪಾಲನ ಕಾಲದಲ್ಲಿ ಕನಿಷ್ಠವಾಗಿ ಇಂತಹ ಒಂದಾದರೂ ದಾನ ನಡೆದದ್ದನ್ನು ಕಾಣಬಹುದು. (127 - ಜಿ.ಟಿ.). ಯಾದವರಾಯರುಗಳು ಆಲಯದ ಉತ್ಸವಗಳಲ್ಲಿ ತೀವ್ರವಾದ ಆಸಕ್ತಿ ತೋರಿಸುತ್ತ ಭೂಮಿ ಕಾಣಿಯನ್ನು ನೀಡಿದರು. ಪ್ರಭೂತ ರಾಜಾಶ್ರಯ, ಚತುರ್ಕುಲತಿಲಕ, ಚಾಲುಕ್ಯ ನಾರಾಯಣ, ಶ್ರೀಮದ್ ಭುಜಬಲ - ಮೊದಲಾದ ಬಿರುದಾಂಕಿತನಾದ ತಿರುಕ್ಕಾಳತ್ತಿದೇವ ಯಾದವರಾಯನ ಆಳ್ವಿಕೆಯ ಕಾಲದಲ್ಲಿ, ಕೆಲವು ಭೂಮಿಗಳು ಮಾತ್ರವೇ ದೇವಸ್ಥಾನಕ್ಕೆ ಸೇರಿದ್ದ ಕುಡವೂರುಗ್ರಾಮವು, ಅವಿಲಾಲ ಗ್ರಾಮದ ಪಂಚಾಯತಿಯ ಸ್ಥಾನತ್ತಾರರ ಶಿಫಾರಸಿನ ಮೇಲೆ ಪೂರ್ತಿಯಾಗಿ ದೇವಸ್ಥಾನಕ್ಕೆ ದೇವದಾನದ ಗ್ರಾಮವಾಗಿ ಸೇರಿಹೋಯಿತು. (170 ತಿ.ತಿ.) ಶ್ರೀ ವೆಂಕಟೇಶ್ವರಸ್ವಾಮಿಗೆ ನೈವೇದ್ಯಕ್ಕಾಗಿ ತಿರುಕ್ಕುಡವೂರು ಗ್ರಾಮದ ಹಲವು ಭಾಗದ ಭೂಮಿಯನ್ನು ವೀರರಾಕ್ಷಸ ಯಾದವರಾಯನು ದಾನವಾಗಿ ನೀಡಿದನು. (293 ತಿ.ತಿ.) ವೀರನರಸಿಂಗ ಯಾದವರಾಯನ ಆಳ್ವಿಕೆಯ 30 ನೇ ವರ್ಷದಲ್ಲಿ ಆತನ ರಾಣಿಯು, ತಾನು ಆಣಿ ಮಾಸದಲ್ಲಿ ಶ್ರೀ ಗೋವಿಂದರಾಜಸ್ವಾಮಿಯ ಸೇವೆಯಲ್ಲಿ ಆರಂಭಿಸಿದ ಉತ್ಸವವನ್ನು ಶಾಶ್ವತವಾಗಿ ನಡೆಸಲು ವೆಚ್ಚಗಳನ್ನು ಭರಿಸಲೆಂದು, ಆ ಮೊದಲೇ ಅರ್ಧ ಆದಾಯವನ್ನು ದೇವಾದಾಯವಾಗಿ ಪಡೆದಿದ್ದ ಪೈಂಡಿಪಲ್ಲಿ ಗ್ರಾಮದ ಮಿಕ್ಕ ಅರ್ಧವನ್ನೂ ಸರ್ವ ರೀತಿಯ ತೆರಿಗೆಗಳಿಂದ ಮುಕ್ತಗೊಳಿಸಿ, ಆಲಯಕ್ಕೆ ನೀಡಿದಳು (111 ಜಿ.ಟಿ.).

ವಿಜಯನಗರ ಆಳ್ವಿಕೆಯ ಕಾಲಕ್ಕೆ ಬಂದರೆ ಪ್ರಭವ ವರ್ಷದ ಮಾಸಿ ತಿಂಗಳಿನಲ್ಲಿ ಆರಂಭಿಸಲಾದ ತಿರುಮಲೆಯ ಆಲಯದ ಉತ್ಸವವನ್ನು ನಡೆಸಲು ಮೂರನೇ ಹರಿಹರನು ಶಕವರ್ಷ 1310 ರಲ್ಲಿ ಪುಂಗೋಡು ಗ್ರಾಮಾದಾಯವನ್ನು ನೀಡಿದನೆಂಬುದನ್ನು ನೋಡಬಹುದು. ಈ ಗ್ರಾಮವನ್ನು ದೇವಸ್ಥಾನಕ್ಕೆ ಒಪ್ಪಿಸದೆ ಮುಲ್ಲೈ ತಿರುವೆಂಕಟ ಜೀಯರ್ ಅವರಿಗೆ ಒಪ್ಪಿಸಿ, ಅವರು ವರ್ಷಕ್ಕೆ ಗ್ರಾಮಾದಾಯವಾಗಿ 100 ಪಣಂಗಳನ್ನು ಆಲ ಯಕ್ಕೆ ನೀಡಬೇಕೆಂದು ನಿರ್ದೇಶಿಸಲಾಗಿದೆ (101, 61, ತಿ.ತಿ.). ಎರಡನೇ ದೇವ ರಾಯನ ಕಾಲಕ್ಕೆ ಸೇರಿದಂತಹ ಶಕವರ್ಷ 1355 ರಲ್ಲಿ ಆಲಯವು ಸಿದ್ಧಕುಟ್ಟೈ ಅಥವಾ ಶ್ರೀನಿವಾಸಪುರವನ್ನು (ತಿರುಪತಿಯ ಪಶ್ಚಿಮಕ್ಕೆ ಇದ್ದ ಹಳ್ಳಿ) ಅದೇ ವರ್ಷ ವೇದಪಾರಾಯಣ ಮಾಡುವ ಅದೇ ಗ್ರಾಮದ 24 ಮಂದಿ ಮಹಾಜನದ - ಪಂಡಿತರ ಜೀವನಾ ಧಾರವಾಗಿ ಒಪ್ಪಿಸಿದ್ದನ್ನು ಹಿಂದೆಯೇ ಹೇಳಲಾಗಿದೆ. (89, 149, 161, 162 - ತಿ.ತಿ.). ಇದಕ್ಕೆ ಹಿಂದೆ ಶಕವರ್ಷ 1351 ರಲ್ಲಿಯೇ ಎರಡನೇ ದೇವರಾಯನು ತನ್ನ ಹೆಸರಿನಲ್ಲಿ ಶ್ರೀ ವೆಂಕಟೇಶ್ವರಸ್ವಾಮಿಗೆ ನೈವೇದ್ಯ ಸಮರ್ಪಣೆ ವೆಚ್ಚವನ್ನು ಭರಿಸಲು ಮೂರು ಗ್ರಾಮಗಳನ್ನು ನೀಡಿದ್ದನು. ಆತನ ಸಚಿವನಾದ ಮಲ್ಲನನು ದೇವ ದಾನದ ಎರಡು ಹಳ್ಳಿಗಳಲ್ಲಿನ ಬೇಸಾಯದ ನೀರಾವರಿ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವುದರ ಮೂಲಕ ಆಲಯದ ಆದಾಯವನ್ನು ಹೆಚ್ಚಿಸಿದನು (187 - ತಿ.ತಿ.).

ವಿಜಯನಗರದ ರಾಜರಲ್ಲಿ ಸಾಳುವ ನರಸಿಂಹನು ಆಲಯಕ್ಕೆ ಅತಿ ಹೆಚ್ಚಿನ ಹಳ್ಳಿಗಳ ದಾನ ನೀಡಿದ. ಈ ದಾನದ ಪಟ್ಟಿಯನ್ನು ಹೀಗೆ ಸಿದ್ಧಪಡಿಸಬಹುದು.

| | | |
|---|---|---|
| 1. ಸರ್ವಮಾನ್ಯವಾಗಿ ಆಲಿಪುರಂ ಗ್ರಾಮ | ಶಕ 1378 | 3 - ತಿ,ತಿ, |
| 2. ಅಗರ ಅಥವಾ ಬ್ರಾಹ್ಮಣ ಅಗ್ರಹಾರ ಮುರುಕ್ಕಂಭಟ್ಟು | ಶಕ 1389 | 54 - ತಿ.ತಿ. |
| 3. ವಂಜಿಪಾಕಂ, ಮುಲ್ಲಿಮಲ್ಯೆ, ಸೆರುಲಕ್ಕೂರ್, ಭೀಮಾಪುರಂ, (ಚಂದ್ರಗಿರಿ ರಾಜ್ಯದ ಕೀಳ್‌ಪಡೈನಾಡುವಿನಲ್ಲಿದ್ದ ನಾಲ್ಕು ಹಳ್ಳಿಗಳು) ಪಡೈವೀಟ್ಟುಸೀಮೆಯ ವಿಳೈಮಂ ಕೊಂಡನ್ | ಶಕ 1389 | 66 - ತಿ.ತಿ. |

| | | |
|---|---|---|
| 4. ಮಂಗೋಡು - ವೇಳಡ ಹಾಗೂ ಮಣವೂರು | ಶಕ 1389 | 8 - ಜಿ.ಟಿ |
| 5. ದೊಮ್ಮರ ಪಟ್ಟಿ (ಪಡೈವೀಡುರಾಜ್ಯ) | ಶಕ 1395 | 187 - ತಿ.ತಿ. |
| 6. ದುರ್ಗ ಸಮುದ್ರ | ಶಕ 1404 | 248 - ತಿ.ತಿ. |

- ದುರ್ಗ ಸಮುದ್ರವನ್ನು ನಂತರದ ಕಾಲದಲ್ಲಿ ದೇವದಾನಗ್ರಾಮದಿಂದ ತಿರುಪ್ಪಣಿಪುರವಾಗಿ ಎಂದರೆ ಆಲಯದ ಗೋಪು ಇತ್ಯಾದಿಗಳ ಮರಮತ್ತಿನ ಲೋಕೋಪಯೋಗಿ ಕೆಲಸಗಳ ಗ್ರಾಮವಾಗಿರಿಸಲಾಯಿತು.

ಪರಿಗಣಿಸಲೇಬೇಕಾದ ನಂತರದ ದೊರೆಯೆಂದರೆ ಶ್ರೀಕೃಷ್ಣದೇವರಾಯ. ಸಾಳುವನರಸಿಂಹನಂತೆಯೇ ಈತನೂ ಶ್ರೀ ವೆಂಕಟೇಶ್ವರಸ್ವಾಮಿಯನ್ನು ತನ್ನ ಅಂತರಂಗದ ದೈವವನ್ನಾಗಿ ನಂಬಿಕೊಂಡಿದ್ದ. ಈತ ಆಗಾಗ ತಿರುಮಲೆಗೆ ಆಗಮಿಸುವುದರಮೂಲಕವೂ, ಗ್ರಾಮಗಳನ್ನು ದಾನ ನೀಡುವುದರಿಂದಲೂ, ಹಲವಾರು ತೆರನಾದ ಬಹುಮೂಲ್ಯ ಆಭರಣಗಳನ್ನು ಸಮರ್ಪಿಸುವುದರಮೂಲಕವೂ, ಚಿನ್ನದ ಬೆಳ್ಳಿಯ ಪಾತ್ರೆಗಳನ್ನು ನೀಡುವುದರಿಂದಲೂ, ಧನವನ್ನು ನೀಡುವುದರಿಂದಲೂ ತನ್ನ ಭಕ್ತಿಯನ್ನು ದಾಖಲೆಗೊಳಿಸಿದ್ದಾನೆ. ತನ್ನ ಪತ್ನಿಯ ರಾದ ಚಿನ್ನಾಜಿದೇವಿ ತಿರುಮಲದೇವಿಯರೊಡನೆ ಆತ ನೀಡಿದ ಗ್ರಾಮಗಳಲ್ಲಿ ಒಳಮಂಡಲದ ಕಡ್ಯೆಕುಟ್ಟನ್ ಪಾಡಿ, ತಾಳ್ಳಪಾಕ, ಮುಡಿಯೂರು, ಪಿರಾಟ್ಟಿ ಕುಳತ್ತೂರು, ದಾರತ್ತೂರು, ಪುರಮಂಡಲದ ತರ್ರೈಯೂರುಗಳೂ ಸೇರಿದ್ದವು.

ಅಚ್ಯುತರಾಯನ ಆಳ್ವಿಕೆಯ ಕಾಲದಲ್ಲಿ ಆತನ ರಾಣಿಯಾದ ವರದಾಜೀದೇವಿಯಮ್ಮ ಶಕವರ್ಷ 1436 ರಲ್ಲಿ ಆರು ಹಳ್ಳಿಗಳನ್ನು ಆಲಯಕ್ಕೆ ದಾನ ಮಾಡಿದ್ದಾಳೆ. ಅವುಗಳೆಂದರೆ ಗಂಡಿಕೋಟೆ ಸೀಮೆಯ ಚಿನ್ನ ಮಾದಪ್ಪಲೂರು, ಮುತ್ತುಕೂರು, ಕೊಂಡವೀಡು ಸೀಮೆಯ ಪೊಲಿವ, ವಲ್ಲಿ, ಮಂಗಮೂರು ಹಾಗೂ ಪೈಂಡಿಪಲ್ಲಿ, ನಾರಾಯಣಪುರಪ್ಪರು. ಅಚ್ಯುತರಾಯನ ಸೇನಾಧಿಪತಿಯಾದ ವೀರಣ್ಣನು ಹಲವಾರು ಸಂದರ್ಭಗಳಲ್ಲಿ ಭೂಮಿ, ಗ್ರಾಮ, ನಗದು ಸಮರ್ಪಣೆಗಳನ್ನು ರಾಜನ ಪರವಾಗಿ ಮಾಡಿದ್ದಾನೆ.ಉದಾ - ಶಕ 1458 ರಲ್ಲಿ ನೀಡಿದ ಗಂಡಿಕೋಟೆ ಸೀಮೆಯ ಪಚ್ಚಿಕಲಪಾಡು ಗ್ರಾಮದಾನ. ಗೊಲ್ಲಪಲ್ಲಿಯು, ಇದೇ ಕಾಲದಲ್ಲಿ ತಿರುಮಲ ಜ್ಯೋಸ್ಯರ ಮಗನಾದ ಯಂದಲೂರು ವೆಂಕಟಾದ್ರಿಯಯ್ಯನ್ ನೀಡಿದ ದಾನವಾಗಿದ್ದಿತು.

ಸದಾಶಿವರಾಯನ ಆಳ್ವಿಕೆಯ ಕಾಲದಲ್ಲಿ ಆತ ನೇರವಾಗಿ ದಾನ ನೀಡಿದ ಉಲ್ಲೇಖಗಳಿಲ್ಲವಾದರೂ ಆತನ ಸೇನಾಧಿಪತಿಗಳು ಆರಕ್ಕಿಂತಲೂ ಹೆಚ್ಚು ಹಳ್ಳಿಗಳನ್ನು ದಾನಮಾಡಿದ್ದಾರೆ. ಈ ಕಾಲದಲ್ಲಿ ಅಳಿಯ ರಾಮರಾಯನ ಪದುಪ್ಪಟ್ಟು ಗ್ರಾಮದ ದಾನವು ಸದಾಶಿವನ ಸೇನಾನಿಗಳನ್ನು ಉತ್ತೇಜಿಸಿದ್ದಿರಬೇಕು. ಶಕವರ್ಷ 1479 ರಲ್ಲಿ ತಿರುವಾಂಕೂರಿನ ರಾಜನು ವಿಠಲರಾಜಯ್ಯನ ಕೀರ್ತಿ ಬೆಳಗಲೆಂದು ತಾಮ್ರಪರ್ಣಿ ನದಿಯ ದಡ ದಲ್ಲಿದ್ದಂತಹ ಕುಲಯಾಪಟ್ಟಂ ಗ್ರಾಮವನ್ನು ದಾನ ನೀಡಿದನು. (ಜಿ.ಟಿ. 147) ವೆಂಕಟಪತಿ ರಾಯನ ಆಳ್ವಿಕೆಯ ಕಾಲದಲ್ಲಿ ಶಕ 1528 ರಲ್ಲಿ ಆತನ ಸೇನಾಪತಿ ಹನುಮಯ್ಯ ಅಲಿಯಾಸ್ ಅಣ್ಣಂಗರು, ವೆಂಕಟಪತಿರಾಯ ಹಾಗೂ ಮಹಾರಾಣಿ ಕೃಷ್ಣಾಜಿ ಅಮ್ಮನವರ ಕೀರ್ತಿ ಶಾಶ್ವತವಾಗಿರುವಂತೆ 'ಅಣ್ಣಂಗರ್ ಪಾಳಯಂ' ಗ್ರಾಮದಲ್ಲಿ ಮೂರು ನೀರಾವರೀ ಕಾಲುವೆಗಳನ್ನು ತೋಡಿಸಿ ಗ್ರಾಮವನ್ನು ಆಲಯಕ್ಕೆ ದಾನ ಮಾಡಿದನು.

ಆಲಯದಲ್ಲಿ ಆರಂಭವಾದ ಉತ್ಸವ ಸೇವೆ ನಿವೇದನಗಳು ನಿರಂತರವಾಗಿ ನಡೆಯುವಿಕೆಯು, ಅದರ ಉದ್ದೇಶಕ್ಕಾಗಿ ನೀಡಲಾದ ಗ್ರಾಮಗಳಲ್ಲಿನ ನೀರಾವರೀ ವ್ಯವಸ್ಥೆಯನ್ನು ಅವಲಂಬಿಸಿರುತ್ತಿದ್ದವು. ಹಾಗಾಗಿ ಈ ನೀರಾವರೀ ವ್ಯವಸ್ಥೆಯತ್ತ ಹೆಚ್ಚು ಗಮನವೀಯುವುದರಿಂದ ಆಲಯದ ಆದಾಯ ನಿರಂತರವಾಗಿ, ಉತ್ಸವ ಸೇವೆಗಳು ಹೆಚ್ಚು ಕಾಲ ನಡೆಯುವಂತಾಗುತ್ತಿದ್ದವು. ಇದರಿಂದಾಗಿ ದಾನವಾಗಿ ಬಂದ ಹಳ್ಳಿಗಳಲ್ಲಿನ ನೀರಾವರೀ ಪದ್ಧತಿಯನ್ನು ಎಚ್ಚರಿಕೆಯಿಂದ ನೋಡಿಕೊಂಡು, ಸಾಕು ಬೇಕಾದ ದುರಸ್ತಿ ಕೆಲಸಗಳನ್ನು ಆಲಯದ ಅಧಿಕಾರಿ ಗಳು, ದಾನ ನೀಡಿದವರು ನೋಡಿಕೊಳ್ಳುತ್ತಿದ್ದರು. ಇದರಿಂದಾಗಿ ಭೂಮಿಯ ಸಾಗುವಳಿ ಮಾಡುವ ಬೇಸಾಯ ಗಾರನಿಗೆ - ತಾನು ನೇರವಾಗಿ ಸ್ವತಂತ್ರವಾಗಿ ಹೆಗಲು ನೀಡಲಾಗದ, ಆದರೆ ಇತರರೊಡನೆ ಕೆಲಸದಲ್ಲಿ ಕೈ ಹಾಕಿ ತನ್ನ

ವಂತಿಗೆಯನ್ನು ಸಲ್ಲಿಸಬಹುದಾದ ಹಿರಿಯ ಹೊರೆಯ ಭಾರ ಕಡಮೆಯಾಗಿ - ವ್ಯವಸಾಯ ಸುಲಭತರವಾಗುವಂತೆ ಆಯಿತು. ಇಂತಹ ಸರ್ವತೋಮುಖ ಅಭಿವೃದ್ಧಿಯ ಆಧಾರ ಶಿಲೆಗಳಾದ ಪೂಜಾ ಪುರಸ್ಕಾರಗಳಿಗೆ ಎಡೆಮಾಡಿಕೊಟ್ಟ ಆಗಮಗಳ ಶಾಸ್ತ್ರಗಳ ದೂರದೃಷ್ಟಿಯನ್ನು ಅವುಗಳನ್ನು ಅನುಸರಿಸಿ ಶಾಶ್ವತ ಸೇವೆಯ ವ್ಯಾಪಕ ವ್ಯವಸ್ಥೆಯನ್ನುಂಟುಮಾಡಿದ ಭಕ್ತರ ಸಾಮಾಜಿಕ ಕಾಳಜಿಗಳ ಬಗ್ಗೆಯೂ ಮೆಚ್ಚುಗೆ ವ್ಯಕ್ತಪಡಿಸ ಬೇಕಾಗುತ್ತದೆ.

## 17. ಸೋಪಾನಮಾರ್ಗ ಅಥವಾ ಮೆಟ್ಟಿಲ ಹಾದಿ

ತಿರುಮಲೆಯ ಬೆಟ್ಟದ ಬುಡದಲ್ಲಿನ ಅಲಿಪಿರಿಯಲ್ಲಿರುವ ವೆಂಕಟೇಶ್ವರಸ್ವಾಮಿ ಪಾದಗಳ ಕಿರಿಯ ಗುಡಿಯಲ್ಲಿರುವ ಗೋಡೆಯ ಮೇಲೆ 41 ಸಾಲುಗಳ ತೆಲುಗು ಭಾಷೆಯ ಸೀಸಪದ್ಯವು ತೆಲುಗು, ತಮಿಳು - ಗ್ರಂಥ ಲಿಪಿಗಳಲ್ಲಿದ್ದು, ಮಟ್ಲ ತಿರುವೆಂಗಡನಾಥ ಹಾಗೂ ಚೆನ್ನಮಾಂಬರ ಮಗನಾದ ಮಟ್ಲಕುಮಾರ ಅನಂತರಾಜನ ಧರ್ಮಶ್ರದ್ಧೆ, ಶೌರ್ಯಗಳ ವಿವರವಾದ ಕೀರ್ತನೆ ಮಾಡುತ್ತದೆ. ಶ್ರೀ ವೆಂಕಟಾಚಲಪತಿಯನ್ನು ಮೆಚ್ಚಿಸುವಂತಹ ಆತನ ತಿರುಪತಿಯ ಕೈಂಕರ್ಯಗಳಲ್ಲಿ ಬೆಟ್ಟವನ್ನೇರಲು ನಿರ್ಮಿಸಿದ ಸೋಪಾನಮಾರ್ಗವೂ, ಅಗ್ರಗೋಪುರವೂ ಸೇರಿವೆ. ಈ ಸೋಪಾನ ಮಾರ್ಗವು ಬೆಟ್ಟದ ಬುಡದಿಂದ - ಅಲಿಪಿರಿ - ಅಡಿಪ್ಪಡಿಯಿಂದ ಆರಂಭವಾಗುವ ಕಲ್ಲಿನ ಮೆಟ್ಟಿಲ ಹಾದಿಯೇ ಆಗಿರಬೇಕು. ಇದು ಬೆಟ್ಟದ ನೆತ್ತಿಯ ಗಾಳಿಗೋಪುರದವರೆಗೆ ವಿಸ್ತರಿಸುತ್ತದೆ. ಇದನ್ನು ದೂರದವರೆಗೆ ಕಾಣಬಹುದು. ಮೇಲೆ ಕಂಡುಬರುವ ಗಾಳಿ ಗೋಪುರವೇ ಅಗ್ರಗೋಪುರವಾಗಿರಬೇಕು, ಈಗ ತಿರುಪತಿಯಿಂದ ತಿರುಮಲೆಗೆ ಹೋಗುವ ಮೆಟ್ಟಿಲ ಹಾದಿ ಇದೊಂದೇ ಆಗಿದೆ. ಹೀಗಾಗಿ ಸೋಪಾನ ಮಾರ್ಗವೆಂದರೆ ಮಟ್ಲಕುಮಾರ ಅನಂತರಾಜನು ಅಲಿಪಿರಿಯಿಂದ ಗಾಳಿ ಗೋಪುರದವರೆಗೆ ನಿರ್ಮಿಸಿದ ಮೆಟ್ಟಿಲ ಹಾದಿಯೆಂದೇ ಬಗೆಯಬಹುದು. ಇದಕ್ಕೂ ಮೊದಲು ಕಪಿಲತೀರ್ಥದಿಂದ ಗಾಳಿಗೋಪುರದವರೆಗೆ ಒಂದು ಸುದೀರ್ಘವಾದ ರಸ್ತೆಯಿದ್ದಿತೆಂದು ಹೇಳಲಾಗಿದೆ. ಮಟ್ಲಕುಮಾರ ಅನಂತರಾಜನ ನಿರ್ಮಾಣವು ಸ್ವಲ್ಪ ಕಡಿದಾದರೂ ಕಪಿಲತೀರ್ಥದ ಹಾದಿಯಷ್ಟು ಬಳಸಾಗದೆ ಅಲಿಪಿರಿಯಿಂದಾಗಿದ್ದರಿಂದ ನೇರವಾಯಿತು. ಹಲಕಾಲ ಎರಡೂ ರಸ್ತೆಗಳನ್ನೂ ಜನ ಬಳಸುತ್ತಿದ್ದು ಕ್ರಮೇಣ ಅಲಿಪಿರಿಯ ಮೆಟ್ಟಿಲ ಹಾದಿಯೇ ಹೆಚ್ಚು ಪ್ರಸಿದ್ಧವಾಗಿ ಬಳಕೆಗೆ ಬಂದಿತೆಂದು ತೋರುತ್ತದೆ. ಮೆಟ್ಟಿಲುಮಾರ್ಗವು ಈ ಶಾಸನವನ್ನು ಹಾಕಿಸಿದ ಶಕವರ್ಷ 1550 ರ ಸ್ವಲ್ಪ ಹಿಂದೆ ನಿರ್ಮಾಣವಾಗಿರಬೇಕು. ಮೇಲಿನ ಆಲಯದವರೆಗಿನ ರಸ್ತೆಯನ್ನು ಹೊಸದಾಗಿ ನಿರ್ಮಿಸಲಾಯಿತು ಎಂದು ಹೇಳಲು ಆಗದು.ಕಾರಣವೆಂದರೆ ಅದಕ್ಕೂ ಮೊದಲು ಸ್ವಾಮಿಯನ್ನು ಆರಾಧಿಸಲು ತಿರುಮಲೆಗೆ ಜನರು ಹೋಗಿ ಬರುತ್ತಿದ್ದ ಒಂದು ಹಾದಿ ಇದ್ದಿತೆಂಬುದು ಖಚಿತವಾದ ವಿಷಯವಾಗಿ, ಸಾಕಷ್ಟು ಯಾತ್ರಿಕರು ಈ ಹಳೆಯ ಹಾದಿಯಲ್ಲಿ ಓಡಿಯಾಡುತ್ತಿದ್ದರೆಂಬುದು ಸ್ಪಷ್ಟವೇ ಇದೆ. ಜೊತೆಗೇ ಶಕವರ್ಷ 1387 ಕ್ಕೆ ಸೇರಿದ ಒಂದು ಶಾಸನವೆಂದರೆ ಈ ಮೇಲಿನ ಶಾಸನಕ್ಕಿಂತ ಒಂದು ಶತಮಾನ ಹಿಂದಿನದಾದ ಶಾಸನವು ತಿರುಮಲೆಯನ್ನು ತಲುಪುವ ಹಾದಿಯಲ್ಲಿದ್ದ ಮೊಣಕಾಲು ಮುರಿ ಎಂಬಲ್ಲಿನ ಮೆಟ್ಟಿಲುಗಳ ಉಲ್ಲೇಖವನ್ನು ನೀಡುವುದನ್ನು ನೋಡ ಬಹುದು. ಮೊಣಕಾಲು ಮುರಿಯುವಷ್ಟು ಕಡಿದಾದ ಮೆಟ್ಟಿಲು ಎಂದೂ, ಮೊಣಕಾಲಿನವರೆಗೆ ಬರುವಷ್ಟು ಎತ್ತರವಾದ ಮೆಟ್ಟಿಲು ಎಂದೂ ಇಲ್ಲಿ ಅರ್ಥೈಸಲಾಗಿದೆ. ಹೀಗಾಗಿ ಮೊದಲಿನಲ್ಲಿಯೂ ಪವಿತ್ರವಾದ ಬೆಟ್ಟಕ್ಕೆ ಹೋಗಿ ಬರಲು ಅಲ್ಲಲ್ಲಿ ಕಲ್ಲಿನ ಮೆಟ್ಟಿಲುಗಳಿದ್ದ ಘಟ್ಟಗಳನ್ನು ಶಾಸನಗಳು ಗುರುತಿಸ್ತವೆ.

## 18. ತಣ್ಣೀರ ಚಪ್ಪರ - ನೀರು, ನೆರಳು

ತಿರುಮಲೆಯನ್ನು ದರ್ಶಿಸುವ ಯಾತ್ರಿಕರು ತಿರುಪತಿಯಲ್ಲಿಯೂ ತಿರುಮಲೆಯ ಹಾದಿಯಲ್ಲಿಯೂ ನೀರಿನ ತಂಗುದಾಣಗಳ ಅಗತ್ಯವನ್ನು ಅನುಭವಿಸುವುದು ಅಲ್ಲಿನ ನೀರಿನ ಕೊರತೆಯಿಂದಾಗಿ ಸ್ವಾಭಾವಿಕವಾಗಿದೆ. 195 ತಿ.ತಿ. ಶಾಸನದಲ್ಲಿ 14 ನೆಯ ಸ್ಥಾನದಲ್ಲಿ ಸಿಂಗಯ್ಯ ದಂಡನಾಯಕನು ತಿರುಮಲೆಯಲ್ಲಿ ಮಾಡುವ ಸೇವೆಗಳಿಗಾಗಿ ನೀಡಿದ ದಾನದಮೊತ್ತದಲ್ಲಿ, ಆಯಾ ಸೇವೆಯನ್ನು ನಡೆಸಿದ ನಂತರ ಉಳಿದ ಹಣವನ್ನು ನೀರಿನ, ನೆರಳನ್ನುಂಟು ಮಾಡಲು, ನಂದನವನವನ್ನು ಬೆಳೆಸಲು ದೇವಸ್ಥಾನದ ಅಧಿಕಾರಿಗಳಿಗೆ ಸ್ವಾತಂತ್ರ್ಯ

ವಿತ್ತಿದ್ದ ವಿಷಯವನ್ನು ಹೇಳಲಾಗಿದೆ. 53 ತಿ.ತಿ. ಶಾಸನದಲ್ಲಿ ತಿರುಮಲೆಯ ಹಾದಿಯ ಮೊಣಕಾಲುಮುರಿ ಸಮೀಪದಲ್ಲಿ ಸಮೀಪದಲ್ಲಿ ತಾನು ನಿರ್ಮಿಸಿದ ಮಂಟಪದಲ್ಲಿ ನೀರಿನ ಸರಬರಾಜು ಮಾಡಲು - ಅದನ್ನು ನೋಡಿಕೊಳ್ಳಲು ಸಾಳುವರಾಜನ ಮಗ ಸಾಳುವ ಪರ್ವತರಾಜನು ಏರ್ಪಾಡು ಮಾಡಿದ ಉಲ್ಲೇಖವಿದೆ. ಈ ಮಂಟಪದ ದುರಸ್ತಿ ಕಾರ್ಯಗಳನ್ನು ನೋಡಬೇಕೆಂದೂ, ಎರಡೂ ಹೊಣೆಗಳನ್ನೂ ಗೋಪಯ್ಯನಿಗೆ ಒಪ್ಪಿಸಿದಂತೆಯೂ ವಕ್ಕಾಣಿಸಲಾಗಿದೆ. ಉತ್ಸವ ಸಂದರ್ಭಗಳಲ್ಲಿ ಸೇರುತ್ತಿದ್ದ ಹೆಚ್ಚುವರಿಯ ಪ್ರಯಾಣಿಕರಿಗೆ ಅತಿ ಹೆಚ್ಚಿನ ಪ್ರಮಾಣದಲ್ಲಿ ನೀರಿನ ಸರಬರಾಜು ಮಾಡಬೇಕಾಗುತ್ತಿತ್ತು. ಈ ಮಾದರಿಯ ಒಂದು ಶಾಸನ (142ಜಿ.ಟಿ) ಗಮನ ಸೆಳೆಯುತ್ತದೆ. ಇದರಂತೆ - ಆಲಯದ ಲೆಕ್ಕಿಗರಲ್ಲಿ ಒಬ್ಬರಾದ ವಿಘ್ನೇಶ್ವರ ಶ್ರೀರಾಮನ್ ಆಲಯದ ಶ್ರೀಭಂಡಾರದಿಂದ ನೀರೊಪ್ಪರಕ್ಕೆ ನೀರು ತರುವವನಿಗೆ ತಿಂಗಳಿಗೆ ಮೂರು ಪಣಂ ಸಂಬಳ ನೀಡಬೇಕೆಂದೂ, ಪುರಟ್ಟಾಸಿ ತಿರುನಾಳ್‌ನ ಹತ್ತು ದಿನಗಳಲ್ಲಿ ನೀರು ತರುವ ತತ್ಕಾಲದ ಆಳಿಗೆ ನಲವತ್ತು ಪಣ ಸಂಭಾವನೆ ನೀಡಬೇಕೆಂದೂ ಏರ್ಪಡಿಸಿದರೆ, ಇನ್ನೊಬ್ಬ ಆಲಯ ಲೆಕ್ಕಿಗರಾದ ತಿರುವೆಂಕಟ ಮುಡೈಯಾನ್‌ರ ಮಗ ಶ್ರೀನಿವಾಸನು ಶಕ 1446 ರಲ್ಲಿ ಆಲಯದ ಶ್ರೀ ಭಂಡಾರಕ್ಕೆ 700 ಪಣಗಳನ್ನು ದಾನ ನೀಡಿ ಇದರಿಂದ ದೇವಾನದ ಗ್ರಾಮಗಳಲ್ಲಿ ನೀರಾವರೀ ಕಾಲುವೆಗಳನ್ನು ಹೆಚ್ಚಿಸುವುದರ ಮೂಲಕ, ಇದರಿಂದ ಬರತಕ್ಕ ಆದಾಯದ ಹೆಚ್ಚುವರಿಯಿಂದಾಗಿ, ಶ್ರೀ ಗೋವಿಂದ ರಾಜಸ್ವಾಮಿ ಆಲಯದ ಬಳಿಯ ಉದ್ಯಾನವನದಲ್ಲಿ ಕುಡಿಯುವ ನೀರಿನ ಸರಬರಾಜು ಮಾಡಲು - ನೀರಿಗೆ ಬೆರೆಸುವ ಶುಂಠಿಯೇ ಮೊದಲಾದ ಶೀತಕರ ಸಾಮಾಗ್ರಿಗಳನ್ನೂ, ಮಂಟಪದಲ್ಲಿ ಬೆಳಗಿಸುವ ದೀಪಕ್ಕೆ ಎಣ್ಣೆ, ನೀರುಹಂಚಲು ಬಳಸುವ ಕುಡಿಕೆಗಳನ್ನೂ ನೀಡುವ ವ್ಯಕ್ತಿಗೆ ಆರು ಪಣಗಳ ಸಂಬಳ ನೀಡಲು ಬಳಸಬೇಕೆಂದೂ ಕಟ್ಟುಪಾಡು ಮಾಡಿದ್ದನ್ನು ಕಾಣಬಹುದು (109ಜಿ.ಟಿ.)

ಸಿರೆಟ್ಟು (ಚಿಟ್ಟಿಯೆಕ್ಕುಡು - ಕಿರಿಯ ಏರುವಿಕೆ) ಯ ಬಳಿಯಲ್ಲಿ ಶ್ರೀಮಾನ್ ಮಹಾಮಂಡಲೇಶ್ವರ ತಿಮ್ಮರಾಜ ಸಕಲರಾಜನು ಶಕವರ್ಷ 1455 ರಲ್ಲಿ ಒಂದು ನೀರ - ನೆರಳನ್ನುಂಟುಮಾಡಿ ಅದರ ನಿರ್ವಹಣೆಗಾಗಿ 600 ಪಣಂಗಳನ್ನು ಆಲಯದ ಭಂಡಾರಕ್ಕೆ ಒಪ್ಪಿಸಿ ಆಲಯದ ಅಧಿಕಾರಿಗಳಿಗೆ ಈ ಹೊಣೆಯನ್ನು ಒಪ್ಪಿಸಿದನು.

## 19. ರಾಮಾನುಜ ಕೂಟ - ಅನ್ನ ಸತ್ರಗಳು

ಈ ಆಲಯದಲ್ಲಿ ದೇವರಿಗೆ ನಿವೇದಿತವಾದ ಆಹಾರದ ಒಂದು ಭಾಗವನ್ನು ಭಕ್ತರಲ್ಲಿ ಸ್ವಾಮಿಯ ಪ್ರಸಾದವೆಂದು ಹಂಚುವುದ ಪರಂಪರೆಯಾಗಿ ಬಂದಿದ್ದು, ಬೇರೆ ಬೇರೆ ಕಾಲದಲ್ಲಿ ಸ್ವಾಮಿಗೆ ನೈವೇದ್ಯದ ಏರ್ಪಾಡು ಮಾಡುವಾಗ ಈ ಬಗ್ಗೆಯೂ ದಾನಿಗಳು ಸೌಲಭ್ಯವನ್ನುಂಟು ಮಾಡಿದರು. ಇಂತಹ ಹಲವಾರು ಶಾಸನಗಳು ಇದ್ದು ಈ ಪ್ರಸಾದ ವಿತರಣೆಯ ಜವಾಬ್ದಾರಿ ಆಲಯದ ಅಧಿಕಾರಿಗಳಿಗೆ (ಸ್ಥಾನತ್ತಾರರಿಗೆ) ಸೇರಿದ್ದುದಾಗಿದ್ದಿತು.

ಅತ್ಯಂತ ಪ್ರಾಚೀನ ಉಲ್ಲೇಖವೆಂದರೆ ಜಿ.ಟಿ. 220 ರಲ್ಲಿ ಇರುಂಗೋಲಕ್ಕನ್ ಅಥವಾ ಗುಣವಾನ್ ಅಪರಾಜಿತನ್ ಹತ್ತನೆಯ ಶತಮಾನದಲ್ಲಿ ಇಬ್ಬರು ಬ್ರಾಹ್ಮಣರಿಗೆ ಎರಡು ಬಟ್ಟಲು ಪ್ರಸಾದ ನೀಡುವ ಏರ್ಪಾಡು ಮಾಡಿದ್ದೇ ಆಗಿದೆ. ನಂತರದ ಉಲ್ಲೇಖ (195 - ತಿ.ತಿ.) ಇಳದೂರು ನಾಡಿನಲ್ಲಿದ್ದ ಸರ್ವಮಾನ್ಯ ಗ್ರಾಮವಾದ ಸಿಂಗಾನಲ್ಲೂರು ಅಥವಾ ಪೊಂಗಲೂರು ಗ್ರಾಮಾದಾಯದ ಒಂದು ಭಾಗವನ್ನು ಸಿತಕರಗಂಡ ಮಠದಲ್ಲಿ ಮೂವತ್ತೆರಡು ಮಂದಿ ಶ್ರೀವೈಷ್ಣವರ ಭೋಜನಕ್ಕೆ ಬಳಸಬೇಕೆಂದು ಆಲಯದ ಅಧಿಕಾರಿಗಳಿಗೆ ಹೊಣೆ ಒಪ್ಪಿಸಿದ್ದು ಸಿಂಗಯ್ಯ ದಂಡನಾಯಕನ - ಕ್ರಿ. ಶ. 14 ನೇ - ಶತಮಾನದ ದಾನಶಾಸನದಲ್ಲಿ ಕಂಡುಬರುತ್ತದೆ.

ಆಲಯದ ಅಧಿಕಾರಿಗಳ ಸಂಬಂಧವೇ ಇಲ್ಲದಂತೆ ಯಾತ್ರಿಕರಿಗೆ ಉಚಿತವಾಗಿ ಭೋಜನ ನೀಡುವ ಕೀರ್ತಿಯು ರಾಮಾನುಜರ ಕೂಟಗಳನ್ನು ತಿರುಪತಿ ಹಾಗೂ ತಿರುಮಲೆಗಳಲ್ಲಿ ನಿರ್ಮಿಸಿ ಅವುಗಳನ್ನು ಕಂದಾಡೈ ರಾಮಾನುಜಯ್ಯಂಗಾರ್ಯರ ಮೇಲ್ವಿಚಾರಣೆಗೆ ಒಪ್ಪಿಸಿದ ಸಾಳುವ ಗುಂಡದೇವ ಮಹಾರಾಜನ ಮಗ ಸಾಳುವ ನರಸಿಂಹದೇವ ಮಹಾರಾಜನಿಗೆ ಸಲ್ಲಬೇಕು. ಇವುಗಳ ಸ್ಥಾಪನೆಯ

ಸ್ಪಷ್ಟವಾದ ದಿನವನ್ನು ಖಚಿತವಾಗಿ ತಿಳಿಸಿಲ್ಲವಾದರೂ, ಇವುಗಳ ಬಗೆಗಿನ ಉಲ್ಲೇಖಗಳು ಅನೇಕ ವಾಗಿದ್ದು, ಇವು ಶಕವರ್ಷ 1378ರ ಧಾತು ಸಂವತ್ಸರದಿಂದ ಆರಂಭಿಸಿ ಶಕವರ್ಷ 1444 ರ ಚಿತ್ರಭಾನು ಸಂವತ್ಸರದ ವರೆಗಿವೆ. ತಿರುಮಲೆಯ ರಾಮಾನುಜಕೂಟ ಸನ್ನಿಧಿಬೀದಿಯಲ್ಲಿದ್ದು, ತಿರುಪತಿಯದು ಪ್ರಾಯಶಃ ಆಲಯ ಪ್ರಾಂಗಣದಲ್ಲಿಯೇ ಇದ್ದಿರಬಹುದು.

ರಾಮಾನುಜ ಕೂಟದ ಆನಂತರದ ಉಲ್ಲೇಖವೆಂದರೆ ಶಕವರ್ಷ 1435 ರಲ್ಲಿ (386 ತಿ.ತಿ.) ಶ್ರೀ ವೆಂಕಟೇಶ್ವರಸ್ವಾಮಿಯ ನಿತ್ಯದ ಅರ್ಧಯಾಮ ಪೂಜೆಯ (ಸಂಜೆ ಪೂಜೆಯ) ನಂತರದಲ್ಲಿ ಸ್ವಾಮಿಗೆ ನಿವೇದಿತ ವಾದ ಪಾಲೇಡು ಕುಳಂಬುವಿನಲ್ಲಿ ತನ್ನ ದಾನದ ಹಕ್ಕಿನಲ್ಲಿ ಬರುವ ಒಂದು ನಾಳಿ ಭಾಗವನ್ನು ದಾನಿಯಾದ ಪೆರಿಯ ಓಬುಳ ನಾಯಕನು ತಾನು ಆರಂಭಿಸಿದ ರಾಮಾನುಜ ಕೂಟಕ್ಕೆ ಒಪ್ಪಿಸಿದನೆಂಬುದೇ ಆಗಿದೆ.

201, 202, 203 ತಿ.ತಿ. ಶಾಸನಗಳಲ್ಲಿ ಕಂಡು ಬರುವಂತೆ ಶ್ರೀಕೃಷ್ಣದೇವರಾಯನೂ ಸಹ ತನ್ನ ಒರಿಸ್ಸಾ ದಂಡಯಾತ್ರೆಯಲ್ಲಿ, ಪ್ರತಾಪರುದ್ರಗಜಪತಿಯನ್ನು ಸೋಲಿಸಿ, ಕೊಂಡವೀಡುವರೆಗೆ ಬೆನ್ನು ಹತ್ತಿ, ಉದಯಗಿರಿಯನ್ನು ಹಿಡಿದು, ತನ್ನ ರಾಜಧಾನಿಗೆ ಹಿಂದಿರುಗುವಾಗ ತನ್ನ ಇಬ್ಬರು ರಾಣಿಯರೊಡನೆ ತಿರುಮಲೆಗೆ ಆಗಮಿಸಿ ಸ್ವಾಮಿಯ ಪೂಜೆಯಲ್ಲಿ ತಮ್ಮ ನಿವೇದನೆಯ ಪಾಲಿಗೆ ಬರುವ ಅನ್ನಪ್ರಸಾದಗಳನ್ನು, ತಿರುಮಲೆಯಲ್ಲಿ ವ್ಯಾಸರಾಯರು ಆರಂಭಿಸಿದ ಸತ್ರದಲ್ಲಿ ಬ್ರಾಹ್ಮಣ ಭೋಜನಕ್ಕೆ ಒಪ್ಪಿಸಬೇಕೆಂದು ಏರ್ಪಾಡು ಮಾಡಿದನು. ಇದು ನಡೆದದ್ದು ಶಕವರ್ಷ 1445 ರಲ್ಲಿ. ಶಕವರ್ಷ 1438 ರಲ್ಲಿ (180 ತಿ.ತಿ) ಎಲ್ಲಪ್ಪ ನಾಯಕನು, ಶ್ರೀಕೃಷ್ಣರಾಯನ ಕೀರ್ತಿಯ ಬೆಳವಿಗೆಗಾಗಿ ಶ್ರೀ ವೆಂಕಟೇಶ್ವರಸ್ವಾಮಿಗೆ ಪ್ರತಿದಿನವೂ ಎಂಟು ತಿರುಪ್ಪೋನಕ ನಿವೇದನೆಗಾಗಿ ಮೂರು ಹಳ್ಳಿಗಳನ್ನು ದಾನ ಮಾಡಿದ. ಈ ನಿವೇದನೆಯ ಪ್ರಸಾದ ವಿತರಣೆಯಲ್ಲಿ ಅದನ್ನು ಆಲಯದ ಅಧಿಕಾರಿಗಳು ಅಂದಿನ ರಾಮಾನುಜ ಕೂಟದಲ್ಲಿ ಬಳಸಲು ಅನುಮತಿಸಿದ. ಈ ರಾಮಾನುಜ ಕೂಟ ಪ್ರಾಯಶಃ ಸಾಳುವ ನರಸಿಂಹನದಾಗಿದ್ದಿರಬೇಕು.

ಶಕವರ್ಷ 1441 ರಲ್ಲಿ ತಿಮ್ಮರಸಯ್ಯಂಗಾರ್ಯನ ಮಗನಾದ ರಾಯಸಂಕೊಡಮರಸಯ್ಯನು ಸ್ವಾಮಿಯ ನಿತ್ಯ ನೈವೇದ್ಯದ 16 ತಿರುಪ್ಪೋನಕಗಳಲ್ಲಿನ ದಾನಿಯ ದಾಯಭಾಗವನ್ನು ತಿರುಮಲೆಯ ಸತ್ರದಲ್ಲಿ ಯಾತ್ರಿಕರಿಗೆ ವಿತರಿಸಬೇಕೆಂದು ಏರ್ಪಡಿಸಿದ್ದಾನೆ. (ತಿ.ತಿ. -77)

ತಿ. ತಿ. 317 ರ ಶಾಸನ ತ್ರುಟಿತವಾಗಿದ್ದು, ಅಚ್ಯುತರಾಯ ಮಹಾರಾಯರ ಸತ್ರವನ್ನೂ, ಅಚ್ಯುತರಾಯಪುರ ಹಾಗೂ ಅಚ್ಯುತ ಪೆರುಮಾಳರನ್ನು ಕುರಿತೂ ಹೇಳುತ್ತದೆ. ಇತರ ಉಲ್ಲೇಖಗಳಲ್ಲಿಯಂತೆ - ಅಚ್ಯುತರಾಯ ಪುರ ತಿರುಪತಿಯ ಉತ್ತರಭಾಗದಲ್ಲಿದ್ದಿತೆಂದು ತಿಳಿದುಬರುವುದರಿಂದ ಈ ಅನ್ನ ಸತ್ರವೂ ತಿರುಪತಿಯ ಉತ್ತರದಲ್ಲಿ ಎಂದರೆ ಕಪಿಲತೀರ್ಥದ ಬಳಿಯಲ್ಲಿ ಇದ್ದಿರಬೇಕು.

ಮಟ್ಲಕುಮಾರ ಅನಂತರಾಯನು ಅತಿ ಶ್ರೇಷ್ಠ ದಾನಿಯಾಗಿದ್ದನೆನ್ನಬೇಕು. ಕಾರಣ ಅವನ ದಾನಗಳು ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ಬೇರೆ ಬೇರೆ ಮೌಲ್ಯಗಳದ್ದಾಗಿದ್ದವು. (269, 270 ಜಿ.ಟಿ.) ಅವುಗಳಲ್ಲಿ ರಾಮೇಶ್ವರದಿಂದ ಹಿಮಾಲಯದ ವರೆಗೆ ಬೇರೆ ಬೇರೆ ಕಡೆಗಳಲ್ಲಿ ಸ್ಥಾಪಿಸಲಾದ ಅನ್ನಸತ್ರಗಳೂ ಇದ್ದು, ಕಾಲ್ನಡಿಗೆಯ ಯಾತ್ರಿಕರಿಗೆ ವರದಾನವೆನಿಸಿದ್ದು, ಅವನ ದಾನದ ಹಿರಿಮೆಯನ್ನು ಸಾರುವಂತಹ ಸತ್ರಗಳಾಗಿದ್ದವು.

ಹೀಗೆ ಹೆಚ್ಚುಗೊಳ್ಳುತ್ತಿದ್ದ ಉತ್ಸವಗಳಿಂದಾಗಿ ಯಾತ್ರಿಕರ ಸಂಖ್ಯೆ ಹೆಚ್ಚುತ್ತ ಬಂದು ಹೆಚ್ಚು ಹೆಚ್ಚಿನ ಸೌಲಭ್ಯ ಗಳನ್ನೊದಗಿಸುತ್ತ ಬಂದು, ಯಾತ್ರಿಕರ ಅಶನ ವಸತಿಗಳಿಗಾಗಿ ರಾಜರ, ಸಾಮಂತರ, ಶ್ರೀಮಂತರ ದಾನಗಳೂ - ವೈಷ್ಣವ ಆಚಾರ್ಯರ ಪ್ರೋತ್ಸಾಹ ದಿಂದಾಗಿ ಉಂಟಾದವೆಂದು ಹೇಳಬೇಕು. ಇದರಿಂದಾಗಿ ತಿರುಮಲೆಯ ಪ್ರಸಿದ್ಧಿ ಹೆಚ್ಚಾಗುತ್ತ ನಡೆದು ಆಲಯಗಳ ಬೆಳವಣಿಗೆಗೆ ಕಾರಣವಾಯಿತು.

## 20. ಆಲಯಗಳು - ವಿಸ್ತರಣಗಳು, ದುರಸ್ತಿಗಳು

ಮುಖ್ಯ ದೇವಾಲಯದ ವಿಸ್ತರಣಗಳಿಗೆ, ದುರಸ್ತಿಗಳಿಗೆ ಇರುವ ಚಾರಿತ್ರಿಕ ಆಧಾರಗಳೆಂದರೆ ಶಾಸನಗಳು.

ಕೊಪ್ಪಟ್ರ ಮಹೇಂದ್ರ ಪೆನ್ಮಾರನ ಆಡಳಿತದ ಹದಿನಾಲ್ಕನೆಯ ವರ್ಷದಲ್ಲಿ ಹಾಕಿಸಲಾದ ತಿ.ತಿ. 8 ಹಾಗೂ 9ರ ಶಾಸನಗಳಿಂದಾಗಿ, ತಿರುವಿಳಂಕೋಯಿಲ್ (ಬಾಲಾಲಯ) ಕರ್ಮಾರ್ಚನೆ (ವಿಶೇಷ ಪೂಜೆ) ಗಳು ಮಣವಾಳ ಪೆರುಮಾಳ್(ಸುಂದರ ದೈವ-ವೆಂಕಟ ಸುಂದರ) ರಜತಮೂರ್ತಿ ಸ್ಥಾಪನೆಯಿಂದಾಯಿತೆಂದು ತಿಳಿದುಬರುತ್ತದೆ.

ಶಕ 1339 ರಲ್ಲಿ ತಿರುಮಲೆಯ ದೇವಾಲಯ ಕೇಂದ್ರಕ್ಕೆ ಮುಖಮಂಟಪವನ್ನು ಸೇರಿಸಲಾಯಿತು. ಇದೇ ಈಗ ತಿರುಮಲೆಯ ಆಲಯಕೇಂದ್ರದಲ್ಲಿ ತಿರುಮಾಮಣಿ ಮಂಟಪವೆಂದು ಕರೆಯಲಾಗುವ ಈ ಮುಖ ಮಂಟಪ. ತಳಗಟ್ಟಿನಿಂದ ಹಿಡಿದು ಸ್ಥೂಪಿಕೆಯವರೆಗೆ - ಮೇಲ್ಛಾವಣಿಯವರೆಗೆ- ಚಂದ್ರಗಿರಿಯ ಮಾಧವರಸ ಅಥವಾ ಮಲ್ಲನ ಮಾಡಿದ ದಾನದಿಂದ ನಿರ್ಮಾಣವಾಯಿತು.

ಸಾಳುವ ನರಸಿಂಹನ ಕೀರ್ತಿಯನ್ನು ಎತ್ತಿ ಹಿಡಿಯಲು ಶಕ 1404 ರಲ್ಲಿ ಸ್ಥಾನತ್ತಾರರು ತಿರುಮಲೆಯಲ್ಲಿ ಒಂದು ಮಂಟಪವನ್ನೂ, ಗೋಪುರವನ್ನೂ ನಿರ್ಮಿಸಲು ಆರಂಭಿಸಿದರು. ಇದರ ಖಚಿತವಾದ ಸ್ಥಳವನ್ನು ಸೂಚಿಸಲಾಗಿಲ್ಲ. ತಿರುಕ್ಕೋನೇರಿ(ಸ್ವಾಮಿ ಪುಷ್ಕರಿಣಿ)ಯ ದಡದಲ್ಲಿ ಸಾಳುವ ನರಸಿಂಹರಾಯನು ಮಂಟಪ ಗಳನ್ನೂ ನಿರ್ಮಿಸಿದನೆಂದು ಹೇಳಲಾಗಿದೆ. ಪುಷ್ಕರಿಣಿಯ ಮಧ್ಯದಲ್ಲಿಯೂ ಒಂದು ಮಂಟಪವನ್ನು ನೀರಾಳಿ ಮಂಟಪ ಅಥವಾ ವಸಂತೋತ್ಸವ ಮಂಟಪ - ನಿರ್ಮಿಸಿದನೆಂದೂ, ಇದು ತೆಪ್ಪೋತ್ಸವದಲ್ಲಿ ಬಳಕೆಯಲ್ಲಿದ್ದಿ ತೆಂದೂ ಹೇಳಲಾಗಿದೆ. (54 ತಿ.ತಿ) ತಿ.ತಿ. 266 ಶಾಸನದಂತೆ ಮತ್ತೆರಡು ಮಂಟಪಗಳ ಉಲ್ಲೇಖವಿದೆ. ಇವುಗಳನ್ನು ಪೆರಿಯ ತಿರುಮಂಟಪವೆಂದೂ, ತಿರುವೆಂಕಟನಾಥನ್ ಮಂಟಪವೆಂದೂ ಕರೆಯಲಾಗಿದೆ.

ತಿ.ತಿ. 248 ರ ಶಾಸನದಂತೆ ಆಲಯದ ಸ್ಥಾನತ್ತಾರರು 1404 ಶಕವರ್ಷಕ್ಕೆ ಸ್ವಲ್ಪ ಮೊದಲೇ ಸಾಳುವ ನರಸಿಂಹನ ಹೆಸರಲ್ಲಿ ಒಂದು ಗೋಪುರ ನಿರ್ಮಾಣದ ಕೆಲಸವನ್ನು ಆರಂಭಿಸಿದ್ದರು. ಸಾಳುವ ನರಸಿಂಹನು ಹಿಂದೆ ಎಂದರೆ ಶಕ 1394 ರಲ್ಲಿನ ನಂದನ ವರ್ಷದ ಉತ್ಥಾನದ್ವಾದಶಿಯಂದು (13-10-1472) ಕುಡವೂರು ನಾಡಿನ ದುರ್ಗಸಮುದ್ರವನ್ನು ದಾನ ಮಾಡಿದ್ದು ಅದನ್ನೀಗ ಶಾಶ್ವತಗೊಳಿಸಿದ. ಈ ಗ್ರಾಮವನ್ನು ತಿರುಪ್ಪಣಿಪುರವೆಂದು ಕರೆದು ಪಿಳ್ಳೈ ತಿರುಪ್ಪಣಿ - ಭಂಡಾರತ್ತಾರನ ಹೆಸರಿನಲ್ಲಿ ಒಂದಾವಣೆಯಾಗಿ ಆತ ಈ ಹಳ್ಳಿಯ ಆದಾಯವನ್ನು ತಿರುಮಲೆ ತಿರುಪತಿಗಳಲ್ಲಿ ಗೋಪುರಗಳ ನಿರ್ಮಾಣದಲ್ಲಿ ಹಾಗೂ ಆಲಯದವರು ಆರಂಭಿಸಿದ್ದ ನರಸಿಂಹರಾಯ ಮಂಟಪ ನಿರ್ಮ್ರಾಣದಲ್ಲಿಯೂ ಬಳಸುವ ಅಧಿಕಾರ ಹೊಂದಿದ್ದ. 269, 270 ಜಿ.ಟಿ ಶಾಸನಗಳು ಮಟ್ಲಕುಮಾರ ಅನಂತರಾಯನು ಮೊದಲ ಬೆಟ್ಟದ ಶಿಖರದಲ್ಲಿ ನಿರ್ಮಿಸಿದ್ದು, ಇದನ್ನೇ ಅಗ್ರ ಗೋಪುರವೆಂದು (ಈಗ ಗಾಳಿಗೋಪುರ ಎಂಬ ಮೂರು ನಾಮದ ಶಂಖ ಚಕ್ರಗಳಿರುವ ಗೋಪುರ) ಕರೆಯಲಾಗಿದೆ.

ತಿ.ತಿ. 237, 238 ಶಾಸನಗಳು ಶಕವರ್ಷ 1281 ರಲ್ಲಿ (ಕ್ರಿ.ಶ. 1352 ಜುಲೈ 6) ಸಾಳುವ ಮಂಗಿದೇವ ಮಹಾರಾಜನು ಗರ್ಭಗುಡಿಯ ಮೇಲಿನ ಗೋಪುರವನ್ನು - ವಿಮಾನಗೋಪುರವನ್ನು - ಚಿನ್ನದ ಗಿಲೀಟು ಮಾಡಿದ ರೇಕುಗಳಿಂದ ಅಲಂಕರಿಸಿದನೆಂದು ಹೇಳುತ್ತವೆ. ವಿಮಾನಗೋಪುರದ ಮೇಲೆ ಆತ ಚಿನ್ನದ ಕಳಶವನ್ನು ಸ್ಥಾಪಿಸಿದನು. ಇದರಿಂದಾಗಿ ಆಲಯದ ವೈಭವ ಹೆಚ್ಚಾಯಿತು. ಕಾಲಾಂತರದಲ್ಲಿ ಈ ಕಳಶ ಜೀರ್ಣವಾಗಲು ಕಲಿಯುಗದ 5010 ನೇ ವರ್ಷದಲ್ಲಿ (ಕ್ರಿ.ಶ. 1909) (ತಿ.ತಿ. 242) ಬಾವಾಜಿ ರಾಮಲಕ್ಷ್ಮಣ ದಾಸಜೀ ಅವರಿಂದ ಹೊಸದೊಂದು ಕಳಶವನ್ನು ಸ್ಥಾಪಿಸಲಾಯಿತು.

ತಿರುಪತಿಯಲ್ಲಿನ ಪ್ರಮುಖ ಗೋಪುರಗಳು ಮಟ್ಲಕುಮಾರ ಅನಂತರಾಯನ ಕೈಂಕರ್ಯ. ಜಿ.ಟಿ 22 ರಲ್ಲಿ ತಿಳಿಸಿರುವ ಹೊಸ ತಿರುಗೋಪುರವು ಚಕ್ರತ್ತಾಳ್ವಾರರ ನಿಂತ ಪ್ರತಿಮೆಯನ್ನು ಹೊಂದಿರುವುದು ಇಂದು ಆಲಯದಿಂದ 200 ಗಜ ಪೂರ್ವದಲ್ಲಿರುವ

ದೊಡ್ಡಗೋಪುರವಲ್ಲ. ಈ ದೊಡ್ಡ ಗೋಪುರವನ್ನು ಮಟ್ಲಕುಮಾರ ಅನಂತರಾಯನು ತನ್ನ ತಂದೆ ತಾಯಿಗಳ ನೆನಪಿಗೆ ನಿರ್ಮಿಸಿ ಅವರ ವಿಗ್ರಹಗಳನ್ನೂ ಅವುಗಳ ಕೆಳಗೆ ಹೆಸರುಗಳನ್ನು ಎಡಗಡಗೆ ಕೆತ್ತಿಸಿರುವಂತೆ ತೆಲುಗು ಶಾಸನವು ಹೇಳುತ್ತದೆ. (ಜಿ.ಟಿ. 281,282) ಇನ್ನೊಂದು ಗೋಪುರ ಈಗ ಹೊಸಗೋಪುರ(ಕೊತ್ತಗೋಪುರಂ)ವೆಂದು ಗುರುತಿಸುವ ಗೋಪುರ-ಮಟ್ಲಕುಮಾರ ಅನಂತರಾಯನಿಂದ ನಿರ್ಮಿತವಾದುದೆಂದು ತೆಲುಗು ಶಾಸನವು ಗುರುತಿಸುತ್ತದೆ. ಇದು ಈಗ ಜೀರ್ಣೋದ್ಧಾರ ವಾಗಿದೆ. (ಅಲಿಪಿರಿಯಿಂದ ಎರಡನೆಯು)

## 21. ಜೀಯರ್ ಮಠ

ತಿರುಪತಿ - ತಿರುಮಲೆಗಳಲ್ಲಿ ಸ್ಥಾಪಿತವಾಗಿ ಜೀಯರ್ ಮಠ ಅಥವಾ ಜೀಯಂಗಾರ್ ಮಠವೆಂದು ಕರೆಯಲ್ಪಡುವ ಮಠ ಬಹುಕಾಲದಿಂದ ಆಲಯದ ಕೈಂಕರ್ಯ ನಡೆಸುತ್ತ ಬಂದಿದೆ. ಶಕ 1309 ರಲ್ಲಿ (ಕ್ರಿ.ಶ. 1397) ಮಾಸಿ ತಿರುನಾಳ್ ಉತ್ಸವವನ್ನು ಏರ್ಪಡಿಸಿದ ವಿಜಯನಗರದ ಮೊದಲ ರಾಜವಂಶದ ಎರಡನೇ ಹರಿಹರನ ಕಾರ್ಯನಿರ್ವಹಕನಾಗಿದ್ದ ಮುಲ್ಲೈ ತಿರುವೆಂಕಟ ಜೀಯರೇ ನಮಗೆ ತಿಳಿದುಬರುವ ಮೊದಲ ಜೀಯರ ಹೆಸರು (103 ತಿ.ತಿ.) ಹರಿಹರನು ದಾನ ನೀಡಿದ ಪೂಂಗೋಡು ಹಳ್ಳಿಯ ಆದಾಯವಾದ ನೂರು ಪಣಗಳನ್ನು ಒಪ್ಪಿಸಿ ಆತನ ಹೆಸರಿನಲ್ಲಿ ಮುಲ್ಲೈ ತಿರುವೆಂಕಟ ಜೀಯರು ಈ ಉತ್ಸವವನ್ನು ಏರ್ಪಡಿಸಿದರು. ಇವರ ಕಾಲ ಶಕ 1309 ರಿಂದ 1314 ಎನ್ನಲಾಗಿದ್ದು ಇವರು ಅರಸನಾಲಯ ನಂದನವನದ (ಪುಷ್ಪೋದ್ಯಾನ) ಮೇಲು ವಿಚಾರಕ ರಾಗಿದ್ದರೆಂದು ಹೇಳಲಾಗಿದೆ. (57 ಹಾಗೂ 43 ತಿ.ತಿ.) ಅವರ ವಾರಸುದಾರರಲ್ಲಿ ಒಬ್ಬರ ಹೆಸರು ಎಂಬೆರುಮಾನಾರ್ ಜೀಯರ್ ಎಂಬುದಾಗಿದ್ದು ಶಕ 1367 ರಿಂದ 1415 ರ ವರೆಗೆ ಇದ್ದಂತೆಯೂ ಇವರು ಆಲಯದಲ್ಲಿನ ಎಲ್ಲ ಕಾರ್ಯಗಳನ್ನೂ ನಡೆಸುವ ಅಧಿಕಾರವನ್ನು ಹೊಂದಿದ ಕೋಯಿಲ್‌ಕೇಳ್ವಿ ಯಾಗಿದ್ದರೆಂದೂ ತಿಳಿದುಬರುತ್ತದೆ. ಇವರು ಪಂಕಯಚ್ಚೆಲ್ಲಿ ನಂದನವನದ ಮೇಲ್ವಿಚಾರಕರಾಗಿದ್ದರೆಂದೂ ತಿಳಿದುಬರುತ್ತದೆ. (106, 48, 15, ಹಾಗೂ 369 ತಿ.ತಿ. ಹಾಗೂ 190, 411 ಜಿ.ಟಿ.) ಆಲಯದಲ್ಲಿ ಇವರ ಸೇವೆಯು ಸುಮಾರು ಐವತ್ತು ವರ್ಷಗಳಕಾಲ ಕ್ರಿ.ಶ. 1445 ರಿಂದ 1493 ರ ವರೆಗೆ ಹರಡಿದ್ದಿತು. ಇವರಾದಮೇಲೆ ಒಡನೆಯೇ ಈ ನಂದನವನದ ಮೇಲು ವಿಚಾರಕರಾಗಿ ರಾಮಾನುಜ ಜೀಯರ್ ಕಂಡುಬರುತ್ತಾರೆ. ಶಕವರ್ಷ 1414 ರ ಆನಂದನಾಮಸಂವತ್ಸರದ 333 ತಿ.ತಿ. (ಕ್ರಿ.ಶ.1494-ಏಪ್ರಿಲ್-2) ತಿರುವೆಂಕಟನಾಥನ್ ನಂದನವನದ ಅನುಸಂಧಾನಂ ತಿರುವೆಂಕಟ ಜೀಯರ್ ಇವರನ್ನು ಅನುಸರಿಸಿದರು. ಶಕ 1426 ರಿಂದ 1442 (ಕ್ರಿ.ಶ. 1504 ರಿಂದ 1520) ಇದು ಶ್ರೀಕೃಷ್ಣದೇವರಾಯನ ಕಾಲ. ಹಲವು ಶಾಸನಗಳಲ್ಲಿ ಇವರು ಪೇರರುಳಾಳನ್ ನಂದನವನದ ಕಾರ್ಯನಿರ್ವಹಣಾಧಿಕಾರಿಯೆಂದೂ ಗುರುತಿಸಲ್ಪಟ್ಟಿದ್ದಾರೆ.

ಜಿ.ಟಿ. 292ರಲ್ಲಿ ಇವರನ್ನು ಪೆರಿಯ ಕೋಯಿಲ್‌ಕೇಳ್ವಿ ಎಂದು ಹೆಸರಿಸಲಾಗಿದೆ. ಇದರಿಂದಾಗಿ ಒಬ್ಬ ಕಿರಿಯ ಕೋಯಿಲ್ ಕೇಳ್ವಿ ಇದ್ದಿರಬೇಕೆಂದು ತೋರುತ್ತದೆ. ಶಕವರ್ಷ 1442 ರಲ್ಲಿ ವಿಕ್ರಮ ಸಂವತ್ಸರದಲ್ಲಿ ಇವರನ್ನು ಅನುಸರಿಸಿ ಬಂದವರು ಕೋಯಿಲ್ ಕೇಳ್ವಿ ರಾಮಾನುಜ ಜೀಯರ್. ಇವರು ಪಂಕಯಚ್ಚೆಲ್ಲಿ ನಂದನವನದ ನಿರ್ವಹಣಾಧಿಕಾರಿಯಾಗಿದ್ದು ಇವರಿಗೆ ವೇದಾಂತಮಾರ್ಗ ಪ್ರತಿಷ್ಠಾಪನಾಚಾರ್ಯ ಎಂದೂ ಪರಮಹಂಸ ಪರಿವ್ರಾಜಕಾಚಾರ್ಯರೆಂದೂ ಬಿರುದುಗಳಿದ್ದವು. ಇವರ ಎರಡು ದಾಖಲೆಗಳು ಜಿ.ಟಿ. 15 ಹಾಗೂ 598 ತಿ.ತಿ. ಶಾಸನಗಳು ಶಕವರ್ಷ 1442 ಹಾಗೂ 1449 ರಲ್ಲಿನವಾಗಿದ್ದು ಕೃಷ್ಣರಾಯನ ಕಾಲಕ್ಕೆ ಸೇರಿವೆ. ಈ ರಾಮಾನುಜ ಜೀಯರರ ನಂತರ ಬಂದವರು ಪಂಕಯಚ್ಚೆಲ್ಲಿ ನಂದನವನದ ವಡತಿರುವೆಂಕಟ ಜೀಯರ್ ಶಕವರ್ಷ 1457 ರ ಮನ್ಮಥ ವರ್ಷದ 472 ತಿ.ತಿ. (7-7-1535) ಇದೇ ವರ್ಷದಲ್ಲಿ ಇವರ ವಾರಸುದಾರರಾಗಿ ಬಂದ ಕೋಯಿಲ್‌ಕೇಳ್ವಿ ಯತಿರಾಜ ಜೀಯರು ಪೇರರುಳಾಳನ್ ನಂದನವನವನ್ನೂ ಪೇರರುಳಾಳನ್ ಮಠವನ್ನೂ ನೋಡಿಕೊಳ್ಳುತ್ತಿದ್ದರು. (324 ಜಿ.ಟಿ.ಹಾಗೂ 410

ತಿ.ತಿ.) ಈ ಯತಿರಾಜ ಜೀಯರು ಮಠದ ಅಧಿಪತಿಗಳಾಗಿ ಆರೇಳು ವರ್ಷ - ಶಕವರ್ಷ 1463 ಪ್ಲವ ಸಂವತ್ಸರದವರೆಗೆ (ಕ್ರಿ.ಶ.1541) ಇದ್ದರು. ಇವರು ಅಳಗಿಯ ಮಣವಾಳ ಜೀಯರ ಶಿಷ್ಯರೆಂದು ಹೇಳಲಾಗಿದೆ. ನಂತರ ವಾನಮಾಮಲೈ ಜೀಯರು-ಅಳಗಿಯ ಮಣವಾಳ ಮಠಾಧಿಪತಿಗಳು - ಈ ಮಠಾಧಿಪತಿಗಳಾಗಿ ಶಕ 1463 ರಿಂದ ಶಕ 1468 ರ ವರೆಗೆ ಆರು ವರ್ಷಗಳ ವರೆಗೆಆಡಳಿತ ನಡೆಸಿದರು. (ಕ್ರಿ.ಶ. 1541 ರಿಂದ 1546) (402,509 ತಿ.ತಿ.) ಈ ವನಮಾಮಲೈ ಜೀಯರು ಪ್ರಾಯಶಃ ಮೇಲೆ ಹೇಳಿದ ಪಂಕಯಚ್ಚೆಲ್ಲಿ ನಂದನವನದ ಕೋಯಿಲ್‌ಕೇಳ್ವಿ ರಾಮಾನುಜ ಜೀಯರ ಶಿಷ್ಯರಾಗಿರಬೇಕು. ತಿ.ತಿ. 402 ಶಾಸನದಂತೆ (ಶಕ - 1468) ಈ ಮಠದ ಅಧಿಪತಿಗಳ ಸಂಪ್ರದಾಯದಂತೆ "ರಾಮಾನುಜ" ಹೆಸರು ಸೇರಿದಂತಹ ವಾನಮಾಮಲೈ ರಾಮಾನುಜ ಜೀಯರ್ ಎಂದಾಗಿದ್ದಿತು. ಶಕವರ್ಷ 1515 ರ ವಿಜಯನಾಮ ಸಂವತ್ಸರದಲ್ಲಿ (17-1-1594) ಕೊಂಡವೀಡು ನಾಡುವಿನ ತಿಮ್ಮನಾಯಕ ಪುರವನ್ನು ದೇವಾಲಯಕ್ಕೆ ನೀಡಿದ ಅಣ್ಣನ್ - ರಾಮಾನುಜ ಜೀಯರು ತೊಟ್ಟಾಲಂ ಸೀಮೆಯ ಗ್ರಾಮದಲ್ಲಿ ನೀರ್ವರಿ ಕಾಲುವೆಯನ್ನು ತೋಡಿಸಿದರು. (ಜಿ.ಟಿ. 413).

ಶ್ರೀರಂಗನಾಥ ಯಾದವರಾಯನು ಆಡಳಿತದ ಮೂರನೆಯ ವರ್ಷದಲ್ಲಿ ಹೊರಟಿದ್ದ ತಿ.ತಿ.354 ನೇ ಶಾಸನವು ಈ ಮಠದ ಆರಂಭದ ಬಗ್ಗೆ ಬೆಳಕು ಚೆಲ್ಲುತ್ತದೆ. ದೇಶಾಂತರಿಗಳಾದ ಜೀಯರೆಂಬ ಧಾರ್ಮಿಕ ಪಂಥದವರು, ಈ ನಂದನವನಗಳ, ಮಠಗಳ ಸಂಬಂಧ ಹೊಂದಿದ್ದು, ಅವರಲ್ಲಿ ಒಬ್ಬರು ಜೀಯರ್ ಆಗಿ ಮಠಾಧಿಪತಿಗಳಾಗಿ ಇರುತ್ತಿದ್ದರೆಂದು ಕಾಣುತ್ತದೆ. ದಾಖಲೆಯಾಗುವ ಕಾಲದಲ್ಲಿ ಒಬ್ಬ ಜೀಯರು ಈ ಮಠಗಳ ಆಡಳಿತಾಧಿಕಾರಿಯಾಗಿದ್ದು ಅದೇ ಸಂಪ್ರದಾಯ ಮುಂದುವರೆಯಿತು. ಜೀಯರ್ ಮಠದಲ್ಲಿ ಈ ಜೀಯರ್ ತಮ್ಮ ದೇಹಾಂತ್ಯದವರೆಗೆ ಇರಬಹುದೆಂದೂ ಇವರ ಮರಣಾನಂತರ ಮಠದ ಎಲ್ಲ ಆಸ್ತಿಯೂ ಸಿಂಗಯ ದಂಡ ನಾಯಕನ ವಶಕ್ಕೆ ಸೇರಬೇಕೆಂದೂ, ತಿರುವೆಂಕಟ ಮುಡೈಯಾನನ ಸೇವಾಕೈಂಕರ್ಯಕ್ಕೆ ಸ್ಥಾನತ್ತಾರರು ಮತ್ತೊಬ್ಬ ದೇಶಾಂತರಿಯನ್ನು ನೇಮಕ ಮಾಡಬೇಕಾಗಿದ್ದಿತು. ದೇಶಾಂತರಿ ಪದ್ಧತಿಯಂತೆ, ಹೊಸದಾಗಿ ನೇಮಕವಾದ ಜೀಯರು ಆಲಯದ ಶ್ರೀ ಭಂಡಾರಕ್ಕೆ 400 ಪಣಂಗಳನ್ನು ತನ್ನ ಜೀವಿಕೆಗಾಗಿ ನಿರ್ಣಯವಾದ ನಿವೇದನೆಯ ಬಂಡವಾಳವಾಗಿ ನೀಡಬೇಕೆಂಬ ನಿಯಮವಿದ್ದದನ್ನು ದಾಖಲೆಯಲ್ಲಿ ಕಾಣಬಹುದಾಗಿದೆ.

ದೇಶಾಂತರಿಗಳು ವಾಸಮಾಡಲು ಅವಕಾಶವಿದ್ದಂತೆ ತಿರುಮಲೆಯಲ್ಲಿ ಸ್ಥಾಪನೆಯಾಗಿದ್ದ ಈ ಮಠದ ಅಧೀನದಲ್ಲಿ ಅರಸ ನಾಲಯ ನಂದನವನ ಹಾಗೂ ವಸಂತ ಗೋಪನ್ ನಂದನವನಗಳು - ತಿ.ತಿ. 354 ನೇ ಶಾಸನದಲ್ಲಿ ಹೇಳುವಂತೆ - ಮಠಕ್ಕೆ ಸೇರಿದ್ದು, ಇದು ಪ್ರಾಯಶಃ ತಿ.ತಿ. 434 ಹಾಗೂ 676 ಶಾಸನಗಳಲ್ಲಿ ಹೇಳಲ್ಪಟ್ಟಿರುವ ಶ್ರೀಮಾನ್ ಮಹಾಪ್ರಧಾನಿ ಇಮ್ಮಡಿ ರಾಹುತರಾಯನ್ ಸಿಂಗಯ ದಣ್ಣಾಯಕ ಸಿತಕರಗಂಡ ನಿಂದ ನಿರ್ಮಾಣವಾದದ್ದಿರಬೇಕು. 354 ತಿ.ತಿ. ಶಾಸನದ ಕಾಲವು ಶಕವರ್ಷ 1260 ರ ಬಹುಧಾನ್ಯ ಸಂವತ್ಸ ರಕ್ಕೆ ಎಂದರೆ (ಕ್ರಿ.ಶ. 1338 - 39) ಶ್ರೀರಂಗನಾಥ ಯಾದವರಾಯನ ಆಡಳಿತದ ಮೂರನೆಯ ವರ್ಷಕ್ಕೆ ಸಮನಾಗಿರಬೇಕು. ಈತನ ಆಡಳಿತದ ಮೊದಲನೆಯ ವರ್ಷ ಶಕ - 1258 ರ ಧಾತು ಸಂವತ್ಸರಕ್ಕೆ (ಕ್ರಿ.ಶ. 1336 -37) ಸಮ.

ಭೂಮಿಕಾಣಿಗಳ ದಾನಗಳ ಮೂಲಕ ಆಲಯದಲ್ಲಿನ ಉತ್ಸವಗಳನ್ನು ಸೇವೆಗಳನ್ನು ಅಭಿವೃದ್ಧಿ ಗೊಳಿಸುವುದರಲ್ಲಿ ಈ ಜೀಯರು ಗಳು ತಮ್ಮ ಧಾರ್ಮಿಕ ಆಸಕ್ತಿಯನ್ನು ಆಧ್ಯಾತ್ಮಿಕ ಪ್ರೀತಿಯನ್ನು ಅಭಿವ್ಯಕ್ತ ಗೊಳಿಸುತ್ತಿದ್ದರು. ಶ್ರೀ ವೈಷ್ಣವ ಆಚಾರ್ಯರಾದ ಶ್ರೀ ರಾಮಾನುಜಾ ಚಾರ್ಯರಿಂದ ಮೊದಲಾದದ್ದೆಂದು ಹೇಳಲ್ಪ ಡುವ ಇವರ ಪರಂಪರೆ ಈಗಲೂ ತಿರುಮಲೆಯ ಆಲಯದ ಸೇವೆಯಲ್ಲಿ ನಿರತವಾಗಿ ವುದನ್ನು ಕಾಣಬಹುದು. ಈ ಸ್ಥಳೀಯ ಮಠವನ್ನು ಹೇವಿಳಂಬಿ ವತ್ಸರದಲ್ಲಿ ಶಕವರ್ಷ 980 ರಲ್ಲಿ (ಕ್ರಿ.ಶ. 1057 -58) ತಿರುಮಲೆಯ ಆಂಜನೇಯಸ್ವಾಮಿ ಆಲಯದ ಎದುರು ಭಾಗದಲ್ಲಿ ರಾಮಾನುಜಾಚಾರ್ಯರು ಆರಂಭಿಸಿದ್ದು ಇದೇ ಅತ್ಯಂತ ಪ್ರಾಚೀನ ಮಠವೆನ್ನ

ಲಾಗಿದೆ. ಇಲ್ಲಿ ಸ್ಥಾಪಿತವಾದ ಪರಂಪರೆಯಂತೆ ತಿರುವೆಂಕಟ ಜೀಯರ್, ಶಠಗೋಪಜೀ ಯರ್, ಶ್ರೀರಂಗರಾಜ ರಾಮಾನುಜ ಜೀಯರ್ ಎಂಬ ಹೆಸರುಗಳು ಪುನರಾವೃತ್ತವಾಗುವುದು.

ಮುಲ್ಲೈ ತಿರುವೆಂಕಟಜೀಯರ್ ಅವರ ವಾರಸುದಾರ ಎಂಬೆರುಮಾನಾರ್ ಜೀಯರ್‌ಗಳನ್ನು ಶ್ರೀರಾಮಾ ನುಜರ ನಂತರ ಬಂದ ಮೂರು ನಾಲ್ಕನೆಯ ಮಠಾಧಿಪತಿಗಳಾಗಿ ಗುರುತಿಸಬಹುದು. ನಮ್ಮ ಸಂಗ್ರಹದಲ್ಲಿರುವ ಪರಂಪರಾ ಇತಿಹಾಸದಾಖಲೆಗಳ ಪ್ರಕಾರ ತಿನ್ನವೆಲ್ಲಿ ಜಿಲ್ಲೆಯ ತೋತಾದ್ರಿಮಠ ಅಥವಾ ವಾನಮಾಮಲೈ ಮಠದ ಸ್ಥಾಪಕರಾದ ವಾನಮಾಮಲೈ ಜೀಯರ್ ಅವರ ಹೆಸರನ್ನು ಕಾಣಬಹುದು. ಶ್ರೀಕೃಷ್ಣದೇವರಾಯನ ಕಾಲದಲ್ಲಿ ಇವರು ತಿರುಪತಿಯ ಮಠದಲ್ಲಿ ಸನ್ಯಾಸವನ್ನು ಮಠಾಧಿಪ ರಾಮಾನುಜ ಜೀಯರಿಂದ ಸ್ವೀಕರಿಸಿ, ದಕ್ಷಿಣಕ್ಕೆ ಸಂಚಾರ ಹೊರಟು ಆಧುನಿಕ ನಂಗುನೇರಿನಲ್ಲಿ - ಶ್ರೀ ವರಮಂಗೈಯಲ್ಲಿ - ತಮ್ಮ ಹೆಸರಿನಲ್ಲಿ ಒಂದು ಮಠವನ್ನು ಸ್ಥಾಪಿಸಿ ಪುನಃ ತಿರುಪತಿಗೆ ಆಗಮಿಸಿ ತಮ್ಮ ಜೀವನ ಶೇಷಕಾಲವನ್ನು ಕಳೆದರು ಎನ್ನಲಾಗಿದೆ. ಗುರು ರಾಮಾನುಜ ಜೀಯರಿಗೂ (ಶಕ 1442 ರಿಂದ 1449) (ಕ್ರಿ.ಶ. 1520 ರಿಂದ 1527) ಶಿಷ್ಯ ವಾನಮಾಮಲೈ ಜೀಯರಿಗೂ (ಶಕ 1463 ರಿಂದ 1468) (ಕ್ರಿ.ಶ. 1514 ರಿಂದ 1546) ನಡುವೆ ಎರಡು ದಶಕಗಳೇ ಕಳೆದುಹೋದವು, ಅದೂ ಸದಾಶಿವರಾಯನ ಆಳ್ವಿಕೆಯ ಕಾಲದಲ್ಲಿ. ವಾನಮಾಮಲೈ ಮಠವು ಮೂಲದಲ್ಲಿ ಈ ಸ್ಥಳೀಯ ಮಠಕ್ಕೆ ಸಂಬಂಧಿಸಿದ್ದರೂ ಈಗ ಎರಡೂ ಮಠಗಳ ನಡುವೆ ಯಾವುದೇ ಸಂಬಂಧವೂ ಇಲ್ಲದೇ ಎರಡೂ ಸ್ವತಂತ್ರ ಘಟಕಗಳಾಗಿವೆ.

## 22. ಶಾಸನಗಳಲ್ಲಿ ಬಳಸಲಾದ ಕೆಲವು ಅಪರೂಪದ ಪದಗಳು

ತಿರುಮಲೆಯ ಆಲಯದಲ್ಲಿನ ಶಾಸನಗಳಲ್ಲಿ ಬಳಸಲಾದ ಶಬ್ದಗಳು ಬಹುತೇಕ ನಡುಗಾಲದ ತಮಿಳುಶಬ್ದಗಳು. ಅವುಗಳನ್ನು ವರ್ಗೀಕರಣ ಮಾಡಿ ಅವುಗಳ ಈಗಿನ ಅರ್ಥಗಳನ್ನು ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

| | |
|---|---|
| ಶ್ರೀನಿವಾಸ, ತಿರುವೆಂಕಟ ಮುಡೈಯಾನ್, ಪೆರಿಯಪೆರುಮಾಳ್, ಮೂಲಮೂರ್ತಿ. | ತಿರುಮಲೆಯ ಆಲಯದಲ್ಲಿ ನೆಲೆಸಿರುವ ಶ್ರೀ ವೆಂಕಟೇಶ್ವರಸ್ವಾಮಿ. |
| ಮಲೈಕ್ಕುನಿಯ ನಿನ್ರ ಪೆರುಮಾಳ್, ಮಲೈ ಪೆರುಮಾಳ್ ಮಲೆಯಪ್ಪಸ್ವಾಮಿ, ಉತ್ಸವಮೂರ್ತಿ. | ಶ್ರೀ ವೆಂಕಟೇಶ್ವರಸ್ವಾಮಿಯ ಉತ್ಸವ ಮೂರ್ತಿ. |
| ವೆಂಕಟತ್ತುರೈವರ್. | ತಿರುಮಲೆಯ ಆಲಯದಲ್ಲಿರುವ ಉಗ್ರ ಶ್ರೀನಿವಾಸಮೂರ್ತಿ. |
| ಅಲ್ಮೇಲ್ಮಂಗೈ ನಾಚ್ಚಿಯಾರ್, ಶ್ರೀ ಪದ್ಮಾವತೀದೇವಿ, ಲಕ್ಷ್ಮೀದೇವಿ. | ಶ್ರೀ ವೆಂಕಟೇಶ್ವರಸ್ವಾಮಿಯ ಸತಿ. |
| ಗೋವಿಂದ ಪ್ಪೆರುಮಾಳ್, ಗೋವಿಂದರಾಜನ್, ಪಳ್ಳಿಕ್ಕೊಂಡ ಪ್ಪೆರುಮಾಳ್. | ತಿರುಪತಿಯ ಆಲಯದಲ್ಲಿರುವ ಶ್ರೀ ಗೋವಿಂದರಾಜಸ್ವಾಮಿ. |
| ಕೃಷ್ಣನ್ | ಶ್ರೀಕೃಷ್ಣ. |
| ರಘುನಾಥನ್, ಪೆರಿಯ ರಘುನಾಥನ್. | ಶ್ರೀರಾಮ. |
| ಕಯ್ಯರ್ ಚಕ್ರಂ, ತಿರುವಾಳಿ ಆಳ್ವಾನ್. | ಶ್ರೀ ಸುದರ್ಶನ - ಚಕ್ರತ್ತಾಳ್ವಾನ್. |

| | |
|---|---|
| ನರಸಿಂಗ ಪೆರುಮಾಳ್. ಅಳಗಿಯ ಸಿಂಗರ್. | ಶ್ರೀ ನರಸಿಂಹಸ್ವಾಮಿ. |
| ನಾಚ್ಚಿಮಾರ್. | ಉತ್ಸವ ಮೂರ್ತಿಯ ದೈವಸತಿಯರು. |
| ವರಾಹಸ್ವಾಮಿ. | ತಿರುಮಲೆಯ ಶ್ರೀ ವರಾಹಸ್ವಾಮಿ. |
| ಅಚ್ಯುತ ಪೆರುಮಾಳ್. | ತಿರುಪತಿಯ ಶ್ರೀ ಅಚ್ಯುತಸ್ವಾಮಿ. |
| ಅಳಗಿಯ ಪೆರುಮಾಳ್ | ತಿರುಚಾನೂರಿನ ಶ್ರೀ ಸುಂದರರಾಜಸ್ವಾಮಿ. |
| ವರದರಾಜ ಪೆರುಮಾಳ್ | ತಿರುಚಾನೂರಿನ ಶ್ರೀ ವರದರಾಜಸ್ವಾಮಿ. |
| ಸೇನೈ ಮೊದಲಿಯಾರ್ | ಶ್ರೀ ವಿಶ್ವಕ್ಸೇನ. |
| ತಿರುಕ್ಕೊಡಿ ಆಳ್ವಾನ್ | ಗರುಡಧ್ವಜ - ಗರುಡಾಳ್ವಾರ್. |
| ಶೂಡಿಕುಡುತ್ತ ನಾಚ್ಚಿಯಾರ್, ಶ್ರೀ ಗೋದಾದೇವಿ, ಆಂಡಾಳ್. | ಮಹಾವಿಷ್ಣು ಪತ್ನಿ. |
| ಆಳ್ವಾರ್. | ಶ್ರೀ ವೈಷ್ಣವ ಸಂತರು, ಪರಮಯೋಗಿಗಳು. |
| ಉಡೈಯವರ್, ಎಂಬೆರುಮಾನರ್. ರಾಮಾನುಜರ್ | ಶ್ರೀ ಮದ್ರಾಮಾನುಜರು. |
| ಆಚಾರ್ಯ, ಪೂರ್ವಾಚಾರ್ಯ. | ಆಧ್ಯಾತ್ಮಿಕ ಗುರುಗಳು. |
| ತಿರುವಡಿಗಳ್ | ಹನುಮಂತ, ಆಂಜನೇಯ |
| ಗೋವಿಂದ ಕೃಷ್ಣನ್, ತಿರುವೆಂಕಟ ಗೋಪಾಲಕೃಷ್ಣ, ವಿಠಲೇಶ್ವರ ಪೆರುಮಾಳ್, ಮದನಗೋಪಾಲ ಪೆರುಮಾಳ್. | ತಿರುಪತಿಯ ಶ್ರೀಕೃಷ್ಣಸ್ವಾಮಿ. |
| ವರದರಾಜರ್. | ತಿರುಪತಿಯ ಶ್ರೀ ವರದರಾಜಸ್ವಾಮಿ. |
| ತಿರುಕಚ್ಚಿನಂಬಿ. | ಶ್ರೀ ರಾಮಾನುಜರ ಪೂರ್ವೀಕ. |
| ತಿರುಮವೆಂಕಟಗೋಪಾಲಕೃಷ್ಣನ್ ಮದನಗೋಪಾಲ ಪೆರುಮಾಳ್ | ತಿರುಪತಿಯ ಶ್ರೀಕೃಷ್ಣಸ್ವಾಮಿ |
| ಲಕ್ಷ್ಮೀನಾರಾಯಣ ಪೆರುಮಾಳ್. | ತಿರುಪತಿಯ ಶ್ರೀ ಲಕ್ಷ್ಮೀನರಸಿಂಹಸ್ವಾಮಿ.(?) |
| ಜನಾರ್ದನ ಪೆರುಮಾಳ್ | ತಿರುಪತಿಯ ಜನಾರ್ದನಸ್ವಾಮಿ. |
| ಅಳಗಪ್ಪಿರನಾರ್. | ತಿರುಮಲೆಯ ಆಲಯದ ಕೊಲುವು ಶ್ರೀನಿವಾಸ. |
| ತಿರುಮಲನಂಬಿ | ರಾಮಾನುಜರ ಗುರು |
| ಪ್ರಸನ್ನತಿರುವೆಂಕಟ ಮುಡಿಯಾನ್. | ತಿರುಮಲೆಯ ಆಲಯದ ಪ್ರಸನ್ನಶ್ರೀನಿವಾಸ. |
| ತಿರುವೆಂಕಟ ಮುಡೈಯಾನ್. | ತಿರುಪತಿಯ ಶ್ರೀನಿವಾಸಸ್ವಾಮಿ. |

**ಆಲಯ ಜನರು, ಕಾರ್ಯಕ್ರಮಗಳು**

| | |
|---|---|
| ಸ್ಥಾನತ್ತಾರ್. | ತಿರುಮಲೆಯ ಆಲಯದ ಧರ್ಮದರ್ಶಿಗಳು ಅಥವಾ ಕಾರ್ಯನಿರ್ವಾಹಕರು. |
| ಸಭೈಯರು. | ಆಲಯ ಸಭೆಯ ಸದಸ್ಯರು, ತಿರುಮಲೆಯ ಶಾಸಕರು. |
| ತಿರುಮಲೈ. | ತಿರುಮಲೆ ಬೆಟ್ಟಗಳು, ತಿರುಮಲೆ ಗ್ರಾಮ, ಶ್ರೀ ವೆಂಕಟೇಶ್ವರ ಸ್ವಾಮಿ ಆಲಯವಿರುವ ಮೇಲಿನ ತಿರುಪತಿ. |
| ಶ್ರೀ ಭಂಡಾರಂ. | ಆಲಯದ ಕೋಶಾಗಾರ. |
| ಸಾಲೈ. | ಆಲಯದ ಉಗ್ರಾಣ. |
| ಸಂಕೀರ್ತನ ಭಂಡಾರ. | ತಿರುಮಲೆಯ ಆಲಯದ ಒಳಗೆ ಮೊದಲನೆಯ ಪ್ರಾಕಾರದಲ್ಲಿ ತಾಳ್ಳಪಾಕ ಕವಿಗಳ ಸಂಕೀರ್ತನೆಗಳ ತಾಮ್ರ ಪತ್ರಗಳನ್ನು ಇಟ್ಟಿದ್ದ ಕೋಣೆ. |
| ಪೊನ್ ಭಂಡಾರಂ. | ತಿರುಮಲೆಯ ಆಲಯದಲ್ಲಿನ ಸುವರ್ಣಕೋಶ, ಆಭರಣಾಗಾರ. |
| ತಿರುಪ್ಪಣಿ ಭಂಡಾರ. | ಆಲಯದ ಕಾಮಗಾರಿ ಭಂಡಾರ. |
| ಆಸ್ಥಾನಂ/ತಿರುವೋಲಗಂ | ಆಲಯದ ದರ್ಬಾರು- ಓಲಗ. |
| ತಿರುಮಲ ಸೇವೆ. | ಆಧುನಿಕ ತೋಮಾಲ ಸೇವೆ/ಅರ್ಚನೆ. |
| ಅವಸರಂ. | ಪೂಜೆ. |
| ರಾಯಸಂ. | ರಾಜಾಜ್ಞೆ ಅಥವಾ ರಾಜ ಕಾರ್ಯದರ್ಶಿ. |
| ನಾಮಾರ್ಚನೆ. | ಸಹಸ್ರ ನಾಮಾರ್ಚನೆ. |
| ಪುಲುಗು ಕಾಪ್ಪು. | ಶುಕ್ರವಾರಾಭಿಷೇಕ/ಪುನುಗು ಲೇಪನ. |
| ಮಲೈಕ್ಕುನಿಯ ನಿನ್ರಾನ್ ಕಲ್. | ತಿರುಮಲೆಯ ಆಲಯದ ಅಳತೆಯ ಮಾನ. |
| ಚಾಲುಕ್ಯನಾರಾಯರ್ಣ ಕಲ್. | ತಿರುಪತಿಯ ಆಲಯದ ಅಳತೆಯ ಮಾನ. |
| ತಿರುಪ್ಪಣಿ ಪಿಳ್ಳೈ. | ಆಲಯದ ಕಾಮಗಾರಿ ಅಧಿಕಾರಿ. |
| ಜೀಯರ್. | ಆಲಯದ ಧಾರ್ಮಿಕ ಕ್ರಿಯೆಗಳನ್ನು ನಡೆಸುವವರು. |
| ಏಕಾಂಗಿ ಶ್ರೀವೈಷ್ಣವ. | ಅವರ ಸಹಾಯಕರು. |
| ಆಚಾರ್ಯ ಪುರುಷ. | ಧಾರ್ಮಿಕ ಗುರು. |
| ನಂಬಿಮಾರ್. | ವೈಖಾನಸ ಅರ್ಚಕರು. |
| ದಾಸನಂಬಿ. | ಶಾತ್ತಾದ ಶ್ರೀವೈಷ್ಣವರು. |

| | |
|---|---|
| ತಿರುನಿನ್ರ ಊರ್ ಒಡೆಯನ್. | ಆಲಯದ ಲೆಕ್ಕಾಧಿಕಾರಿ. |
| ಕೈಕೋಲರ್. | ಆಲಯದ ಪರಿಚಾರಕರು. |
| ಕೋಯಿಲ್ ಕೇಳ್ವಿ, ಪೆರಿಯ ಕೋಯಿಲ್ ಕೇಳ್ವಿ. | ಧಾರ್ಮಿಕ ಕಾರ್ಯದ ಪುರೋಹಿತರು. |
| ತೇವೈ. | ಆಲಯದ ಬಾಣಸಿಗರು. |
| ತೇವೈಯಾಳ್. | ಅಡಿಗೆಯವರು. |
| ಸಿಪ್ಪಿಯರ್. | ಕಲೆಗಾರ (ಶಿಲ್ಪಿ). |
| ಉವಚ್ಚರ್. | ಆಲಯ ಸೇವಕರು. |
| ಕಣ್‌ಗಾಣಿಪ್ಪನ್. | ಉಸ್ತುವಾರಿಯವರು (ಇನ್‌ಸ್ಪೆಕ್ಟರ್). |
| ಸಿಂಗಮುರೈ. | ಇಂಧನ ಸರಬರಾಜುಗಾರ. |
| ಮೇಲ್‌ನಾಯಗಮ್, ನಾಯಗಮ್. | ಮೇಲುಸ್ತುವಾರಿಯವರು. |
| ಅನುಸಂಧಾನಂ. | ಧಾರ್ಮಿಕ ಕ್ರಿಯೆಗಳನ್ನು ನಡೆಸುವವ (ಗಮಕಿ?). |
| ಮಕ್ಕರೈ ಸ್ವರೂಪಂ. | ತಾಮ್ರದ ಪಾತ್ರೆಗಳ ಸರಬರಾಜುಗಾರ. |
| ಕುಮ್ಮರ ಸ್ವರೂಪಂ. | ಕುಂಬಾರ. |
| ದೇಶಾಂತರಿ. | ಹೊರಗಿನವ - ಯಾತ್ರಿಕ. |
| ಪರದೇಶಿ ನಿರ್ವಾಹಂ. | ನಿರ್ವಾಹಕ - ಮ್ಯಾನೇಜರ್. |
| ವಗೈ. | ಆಲಯಾಧಿಕಾರಿಗಳು. |
| ನಂದವನಂ, ತಿರುನಂದವನಂ. | ಆಲಯದ ಹೂದೋಟಗಳು. |
| ಇಯಲ್ | ಆಳ್ವಾರರ ಕೀರ್ತನೆಗಳು. |
| ಮಠಶೇಷಂ. | ಮಠಕ್ಕೆ ಸೇರಬೇಕಾದ ನಿವೇದಿತ ಪ್ರಸಾದ ಭಾಗ. |
| ಅಡೈಪ್ಪು. | ನಿವೇದಿತ ಪ್ರಸಾದದ ವಿತರಣೆಯ ಸಮಯ. |
| ತಿರುಮಂಜನ. ಸ್ನಪನ ತಿರುಮಂಜನ. | ಅಭಿಷೇಕ. |
| ಜೀವಿತಂ. | ಸಂಬಳ |
| ಸೀರ್ಮೈ. | ಜಿಲ್ಲೆ ಅಥವಾ ಸೀಮೆ. |
| ನಾಡು. | ಜಿಲ್ಲೆ. |
| ರಾಜ್ಯಂ. | ಪ್ರಾಂತ್ಯ. |
| ತೊನ್ಮೆ | ಉಚಿತ ಕಾಣಿಕೆ. |
| ತಿರುಪ್ಪಳಿ ದಾನಂ. | ಪುಷ್ಪಗಳು. |
| ಪರಿವಟ್ಟಂ. | ಪವಿತ್ರ ವಸ್ತ್ರದ ಸೆರಗು - ಪರಿವಸ್ತ್ರ (ಹಣೆಗೆ ಕಟ್ಟುವುದು) |

| | |
|---|---|
| ತಿರುಮುನ್ ಕಾಣಿಕ್ಕೆ. | ನಗದು ಕಾಣಿಕೆ. |
| ತಿರುಕ್ಕೈ ವಳಕ್ಕಂ. | ಚಿಲ್ಲರೆ ವೆಚ್ಚಗಳು. |
| ಪಂಚಧಾರಿ. | ಶುದ್ಧ ಸಕ್ಕರೆ. |
| ಕಳಭಂ. | ಸುಗಂಧ ಚಂದನ. |
| ಪಣಿಮುರೈ. | ಆಲಯ ಪರಿಚಾರಕರು. |
| ಪಚ್ಚಕ್ಕಾರರ್ | ಪ್ರಸಾದಗಳ ವಿತರಕರು |
| ತುಕ್ಕನ್. | ವಾಹನಗಳನ್ನು ಹೊರುವವರು. |
| ವೈಷ್ಣವಕಾರಿ. | ಶ್ರೀವೈಷ್ಣವ ಅಧಿಕಾರಿ. |
| ವಿವಿಧ ದಾಖಲೆ ಪತ್ರಗಳು | |
| ಶಿಲಾಶಾಸನ, ಧರ್ಮಶಾಸನ. | ಕಲ್ಲಿನಲ್ಲಿ ಕೊರೆದ ದಾಖಲೆಗಳು. |
| ಪೊಲಿಯೂಟ್ಟು. | ಹಣದ/ಭೂಮಿಯ ಮೇಲಿನ ಬಡ್ಡಿ (ಪುದುವಟ್ಟು). |
| ಕೈಂಕರ್ಯಂ. | ಆಲಯದಲ್ಲಿ ಅರ್ಚನೆ/ಸೇವೆ. |
| ಉಭಯ. | ದಾನ, ಸೇವೆ. |
| ತಿರುವಿಡೈಯಾಟ್ಟಂ. | ಆಲಯಕ್ಕೆ ನೀಡಿದ ಗ್ರಾಮಗಳು/ಭೂಮಿ. |
| ಸರ್ವಮಾನ್ಯಂ. | ಸುಂಕವಿಲ್ಲದ ಗ್ರಾಮ/ಭೂಮಿ. |
| ಪಣಂ - ನರ್ಪಣಂ.ರೇಖೈ ಪೊನ್, ರೇಖೈ ವರಹಂ ಗದ್ಯಾಣಂ. | ನಾಣ್ಯಗಳು/ಸುವರ್ಣನಾಣ್ಯಗಳು. |
| ವಿಟ್ಟವರ್ ವಿಳುಕ್ಕಾಡು. | ದಾನಿಗಳ ದಾಯಭಾಗದ ಪ್ರಸಾದ. |

## ವಿವಿಧ ಪ್ರಸಾದಗಳು

ಸಂಧಿ, ಸಂಧಿ ತಿರುಪ್ಪೊನಕಂ, ವೆಳ್ಳೈ ತಿರುಪ್ಪೊನಕಂ, ಅರ್ಧನಾಯಕ ತಳಿಗೈ, ನಾಯಕ ತಳಿಗೈ, ದಧ್ಯೋದನಂ, ಮಾತ್ತಿರೈ, ತಳಿಗೈ, ತಿರುಪ್ಪಾವಾಡೈ, ತಿರುವೋಲಕ್ಕಂ, ತಿಲಾನ್ನಂ, ಅಕ್ಕಾಳಿಯುಂಡೈ, ಅಪ್ಪಪಡಿ, ಅತಿರಸಪ್ಪಡಿ, ಗೋಧಿಪಡಿ, ವಡೈಪಡಿ, ಸುಖಿಯನ್‌ಪಡಿ, ಇಡ್ಡಲಿಪಡಿ, ಸಿಡೈಪಡಿ, ಪೂವಿಲಂಗಾಯಪಡಿ ಪೊರಿಪಡಿ - ಇವೆಲ್ಲ ನಿವೇದನೆಯ ವಿವಿಧ ರೀತಿಯ ಪಕ್ವಾನ್ನಗಳು ಎನ್ನಬಹುದು.

| | |
|---|---|
| ಪರುಪ್ಪವಿಯಲ್, | ಸುಂಡಲ್ - ಕಡಲೆ ಸುಂಡಲ್. |
| ತಿರುಪ್ಪಯರಂ. | ಬೇಳೆಯ ವಡೆ. |
| ಅವಲ್‌ಪಡಿ. | ಅವಲಕ್ಕಿ. |
| ತೇನ್ ಕುಳಲ್. | ತೇಂಗೊಳಲ್. |
| ಪಂಚಾಹವಿ. | ಪವಿತ್ರ ಪ್ರಸಾದ. |

## ವಿವಿಧ ಹಬ್ಬ ಹರಿದಿನಗಳು

| | |
|---|---|
| ತಿರುನಾಳ್- ಬ್ರಹ್ಮೋತ್ಸವಂ. | ವಾರ್ಷಿಕ ಉತ್ಸವ. |
| ತಿರುಕ್ಕೊಡಿ ತಿರುನಾಳ್. | ಬ್ರಹ್ಮೋತ್ಸವ. |
| ತಿಂಗಳ ದಿವಸಂ. | ಮಾಸಿಕ ಉತ್ಸವ. |
| ವಿಶೇಷ ದಿವಸಂ. | ವಿಶೇಷ ಉತ್ಸವ. |
| ತಿರುವನಂತಾಳ್. | ಶೇಷವಾಹನೋತ್ಸವ. |
| ತಿರುನಕ್ಷತ್ರಂ. | ಮಾಸಿಕ ಜನ್ಮನಕ್ಷತ್ರ ಉತ್ಸವಗಳು. |
| ಅಟ್ಟೈ ತಿರುನಕ್ಷತ್ರಂ. | ವಾರ್ಷಿಕ ಜನ್ಮನಕ್ಷತ್ರ ಉತ್ಸವಗಳು. |
| ಅಂಕುರಾರ್ಪಣಂ. | ಉತ್ಸವ ಆರಂಭದಲ್ಲಿ ಮಾಡುವ ಬೀಜಾವಾಪನ. |
| ಅಧಿವಾಸಂ. | ಪವಿತ್ರ ಕ್ರಿಯೆಗಳು. |
| ಆಡಿ ಆಯನಂ, ಅನಿವರೈ ಆಸ್ಥಾನಂ. | ದಕ್ಷಿಣಾಯನ, ಅನಿವರ ಆಸ್ಥಾನ. |
| ಅಣ್ಣಾಊಂಜಲ್ ತಿರುನಾಳ್. | ಉಯ್ಯಾಲೆ ಉತ್ಸವ. |
| ತಿರುಪ್ಪಳ್ಳಿಯೋಡಂ. | ತೆಪ್ಪೋತ್ಸವ. |
| ತೋಟ್ಟತ್ತಿರುನಾಳ್. | ತೋಟೋತ್ಸವ (ಉದ್ಯಾನೋತ್ಸವ). |
| ವನಭೋಜನಂ. | ಉಲ್ಲಾಸ ವಿಹಾರ ಭೋಜನ. |
| ನವಲೂಟ್ರು ತಿರುನಾಳ್. | ಹೊಸನೀರಹೊಳೆ ಉತ್ಸವ. |
| ಪಡಿಯ ವೇಟ್ಟೈ. | ಬೇಟೆಯ ಉತ್ಸವ. |
| ಪುಷ್ಪಯಾಗಂ. | ದ್ವಾದಶಾರಾಧನೆ ಉತ್ಸವ |
| ಕೊಡೈ ತಿರುನಾಳ್. | ಬೇಸಿಗೆ ಕಾಲದ ಉತ್ಸವ, |
| ತಿರುಪ್ಪಳ್ಳಿಯೆಳುಚ್ಚಿ. | ಧನುರ್ಮಾಸ ಪೂಜೆ.(ಸುಪ್ರಭಾತ) |
| ಸಂಕ್ರಮಣಂ. | ಮಕರ ಸಂಕ್ರಾಂತಿ. |
| ತಿರುಪ್ಪುಡೆಯಾಡು. | ಸುಗ್ಗಿ ಉತ್ಸವ. |
| ತಿರುಕಲ್ಯಾಣಂ. | ವಿವಾಹೋತ್ಸವ. |
| ತಿರುದ್ವಾದಶಿ. | ಮುಕ್ಕೋಟಿದ್ವಾದಶಿ |
| ಯುಗಾದಿ. | ಚಾಂದ್ರಮಾನ ಯುಗಾದಿ. |
| ವಿಷು. | ಸೌರಮಾನ ಯುಗಾದಿ. |
| ವಸಂತ ಪೂರ್ಣಿಮಾ. | ನರಸಿಂಹ ಜಯಂತಿ ಉತ್ಸವ. |
| ವಸಂತೋತ್ಸವಂ. | ವಸಂತಋತುವಿನ ಉತ್ಸವ. |

## ಆಲಯದ ವಿವಿಧ ಭಾಗಗಳು

| | |
|---|---|
| ತಿರುಮಾಮಣಿ ಮಂಟಪಂ. | ತಿರುಮಲೆಯ ಆಲಯದಲ್ಲಿ ದ್ವಾರಪಾಲಕರಿರುವ ಮಂಟಪ. |
| ಚಿತ್ರಕೂಟ ಮಂಟಪಂ, ತಿಲ್ಲೈಕ್ಕುವಯುಟ್ಟನ್ ಮಂಟಪ. | ತಿರುಪತಿಯ ಆಲಯದ ದ್ವಾರಪಾಲಕರಿರುವ ಮಂಟಪ |
| ಚಕ್ರತೀರ್ಥಂ, ಆಳ್ವಾರ್ ತೀರ್ಥಂ. | ತಿರುಪತಿಯ ಪವಿತ್ರ ಪುಷ್ಕರಿಣಿ, (ಕಪಿಲತೀರ್ಥ). |
| ಯಾನ್ಯೆನಂಬಿರಾನ್. | ಗಜವಾಹನ. |
| ಗರುಡವಾಹನಂ. | ಗರುಡವಾಹನ. |
| ವೈಕುಂಠ ವಿಮಾನಂ. | ವಿಮಾನ ವಾಹನ. |
| ಪೂಂಕೋಯಿಲ್. | ಪುಷ್ಪ ಪಲ್ಲಕ್ಕಿ. |
| ಶಿವಿಕೈ. | ಪಲ್ಲಕ್ಕಿ. |
| ಕೋನೇರಿ | ತಿರುಪತಿಯ ಕೃಷ್ಣರಾಯ ಪುಷ್ಕರಿಣಿ, ತಿರುಮಲೆಯ ಆಚ್ಯುತರಾಯಪುಷ್ಕರಿಣಿ. |
| ತಿರುಕ್ಕೋನೇರಿ. | ತಿರುಮಲೆಯ ಸ್ವಾಮಿಪುಷ್ಕರಿಣಿ. |
| ರಾಮಾನುಜ ಕೂಟಂ. | ಭೋಜನ ಸತ್ರ. |
| ಸತ್ರಂ. | ಛತ್ರ. |
| ಲಕ್ಷ್ಮೀದೇವಿ ಮಂಟಪಂ. | ತಿರುಪತಿಯಲ್ಲಿನ ಆಲಯದ ಪಡಿಕಾವಲಿಯ ಮುಂದಿನ ಮಂಟಪ. |
| ನಂಜಿ ವಾಹನಂ, ಹಂಸವಾಹನಂ. | ಹಂಸವಾಹನ. |
| ತಿರುಚ್ಚಿ, ಶಿವಿಕೈ, ತಿರುಚ್ಚಿವಿಕೈ, ತಿರುಚ್ಚಿ. | ತಿರುಚ್ಚಿ ವಾಹನ. |

## ಅಧ್ಯಾಯ - 13
# ಆಲಯದ ಆಡಳಿತ

### 1. ಪೀಠಿಕೆ :

ಪಲ್ಲವರ ಕಾಲದಿಂದ ಹಿಂದಿನ ಶತಮಾನಗಳಲ್ಲಿ ದೇವಾಲಯದ ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳು ಎಂತಹವು, ಹೇಗಿದ್ದವು, ಅಲ್ಲಿನ ದೈನಂದಿನಪೂಜೆ, ಪುರಸ್ಕಾರಗಳು, ಹಬ್ಬಹರಿದಿನಗಳು, ಉತ್ಸವ ಕಾರ್ಯಕ್ರಮಗಳು ಹೇಗೆ ನಡೆಯುತ್ತಿದ್ದವು ಎಂಬುದನ್ನು ತಿಳಿಯಲು ನಮಗೆ ಯಾವುದೇ ಖಚಿತವಾದ ದಾಖಲೆಗಳೂ ದೊರೆಯುತ್ತಿಲ್ಲ. ಪಲ್ಲವರ ಕಾಲದಿಂದ ವಿಜಯನಗರದ ಕಾಲದವರೆಗೆ ಆಲಯದ ಆಡಳಿತದ ಬಗ್ಗೆ ಒಂದು ಸಾಮಾನ್ಯ ಚಿತ್ರವನ್ನು ನೀಡುವ ಶಾಸನಾಧಾರಗಳು ಇದ್ದರೂ, ಅವುಗಳನ್ನು ಸಮರ್ಥಿಸುವ ಇತರ ಸಾಹಿತ್ಯ ಸಾಹಿತ್ಯೇತರ ಆಧಾರಗಳ ಉಪಲಬ್ಧವಿಲ್ಲದಾಗಿವೆ. ವಿಜಯನಗರದ ಕಾಲದಲ್ಲಿ ಮಾತ್ರವೇ, ತತ್ಕಾಲೀನ ರಾಜಕೀಯ, ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳ ಪೂರ್ತಿಯಾದ ಖಚಿತವಾದ ಚಿತ್ರಗಳ ಬಗ್ಗೆ ಆಧಾರಗಳಿದ್ದು, ಆಲಯದ ಆದಾಯ, ವ್ಯಯ, ಆಲಯ ಸೇವಾದಾರರ ಕೆಲಸಗಳ ವಿವರ, ಪರಿಚಾರಕರ ಕರ್ತವ್ಯಗಳು, ಆಚಾರ್ಯಪುರುಷರು, ಮಠಾಧಿಪತಿಗಳು ಇವರ ವಿವರಗಳೂ, ಆಲಯವನ್ನು ಮಧ್ಯಕಾಲೀನ ಯುಗದಲ್ಲಿ ಪ್ರಸಿದ್ಧವಾಗುವಂತೆ ಮಾಡಿದ ರಾಜರ, ಮನ್ನೆಯರ, ಸಾಮಂತ, ಶ್ರೀಮಂತರ ದಾನ ದತ್ತಿಗಳ ಬಗ್ಗೆ ಪೂರ್ತಿ ವಿವರಗಳೂ ದೊರೆಯುತ್ತವೆ. ಈ ಕಾಲದಲ್ಲಿನ ಆಲಯ ಚರಿತ್ರೆಯನ್ನು ಸ್ಪಷ್ಟವಾಗಿ ರೂಪಿಸಲು ತಕ್ಕ ಆಧಾರಗಳು ಈ ಆಲಯದ ಗೋಡೆಗಳ ಮೇಲೆ ಲಿಖಿತವಾಗಿರುವ ಶಾಸನಗಳ ಮೂಲಕವೇ ದೊರೆಯುತ್ತವೆ. ಈ ಆಧಾರಗಳು ಬಹುತೇಕವಾಗಿ ಇತರ ಸಾಹಿತ್ಯಕ, ಪುರಾವಸ್ತು, ಆಧಾರದಲ್ಲಿ ಸಮರ್ಥನೆ ಹೊಂದುತ್ತವೆ.

ವಿಜಯನಗರ ಸಾಮ್ರಾಜ್ಯದ ಪತನಾನಂತರ ಈ ಭಾಗದಲ್ಲಿ ಅದರ ಸ್ಥಾನವನ್ನು ಪಡೆದುಕೊಂಡ ಈಸ್ಟ್ ಇಂಡಿಯಾ ಕಂಪನಿಯು ಕೆಲಕಾಲ ಆಲಯವನ್ನು ತನ್ನ ಅಧಿಕಾರದಲ್ಲಿ ಪಡೆದಿದ್ದಿತು. ಕ್ರಿ.ಶ.1843 ರ ಹೊತ್ತಿಗೆ ಆಲಯವನ್ನು ಮಹಂತರ ವಶಕ್ಕೊಪ್ಪಿಸಲಾಯಿತು. ಇವರನ್ನು ಆಲಯದ ವಿಚಾರಣಕರ್ತರೆಂದು ಗುರುತಿಸಿ, ವರ್ಷದುದ್ದಕ್ಕೆ ಆಲಯದಲ್ಲಿ ನಡೆಯಬೇಕಾದ ದೈನಂದಿನ, ವಾರ, ಪಕ್ಷ, ಮಾಸ, ಮಂಡಲ, ಅರೆವರ್ಷ, ವಾರ್ಷಿಕ ಉತ್ಸವಗಳ ನಿರ್ವಹಣೆಯ ಜವಾಬ್ದಾರಿಯನ್ನು ಒಪ್ಪಿಸಲಾಯಿತು. ಮಹಂತರ ನಂತರ ಬೇರೆ ಬೇರೆ ಕಾನೂನುಗಳ ಮೂಲಕವಾದ ಧರ್ಮದರ್ಶಿಗಳ ಮಂಡಳಿಯು ಆಲಯದ ಆಡಳಿತವನ್ನು ನಡೆಸುವಂತಾಗಿ ಇಂದಿಗೂ ಈ ಧರ್ಮದರ್ಶಿಗಳ ಮಂಡಳಿಯು ಜವಾಬ್ದಾರಿಯಲ್ಲೇ ಆಲಯವಿದೆ. ಈಸ್ಟ್ ಇಂಡಿಯಾ ಕಂಪನಿಯವರ ಆಡಳಿತ ಆರಂಭವಾದಾಗಿನಿಂದ ಆಲಯದ ಆಡಳಿತದ ಬಗ್ಗೆ ಬೇರೆ ಬೇರೆ ಸರ್ಕಾರಗಳ ಪ್ರಾಚ್ಯವಸ್ತು ಭಂಡಾರದ ಸಾಕ್ಷ್ಯಗಳು ಸಾಕಷ್ಟು ಪರಿಪೂರ್ಣವೆನ್ನಿಸುವಷ್ಟು-ಉಂಟು. ಇದರಿಂದಾಗಿ ಈ ಹಿಂದಿನ ಎರಡು ಶತಮಾನಗಳಲ್ಲಿ ದೇವಾಲಯದ ದಿಕ್ಕು ದೆಸೆಗಳನ್ನು ಕುರಿತು ತಿಳಿಯಬಹುದಾಗಿದೆ.

### 2. ಪಲ್ಲವರ ಹಿಂದಿನ ಕಾಲದಲ್ಲಿ ಆಲಯ

ವೆಂಗಡವನ್ನು ತೊಂಡಮಂಡಲದ ತಿರುವೆಂಗಡಕೋಟ್ಟಂಗೆ ಸೇರಿದ್ದುದೆಂದು ಸಾಧಾರಣವಾಗಿ ವಿವರಿಸಲಾಗುತ್ತದೆ. ತೊಂಡಮಂಡಲವೆಂದರೆ ತೊಂಡೆಯರಿಗೆ ಸೇರಿದ ನಾಡು ಅಥವಾ ತೊಂಡಮಾನನ ಆಡಳಿತಕ್ಕೆ ಸೇರಿದ ನಾಡು ಎಂದು ಅರ್ಥ ಮಾಡಿಕೊಳ್ಳಬೇಕು. (ತೊಂಡ ಎಂದರೆ ಶಿಷ್ಯ ಎಂದರ್ಥ. ತೊಂಡಮಂಡಲದ ಹೆಸರಿನ ಹಿಂದೆ ಒಂದು ದಿವ್ಯವಾದ ಐತಿಹ್ಯ ಇರುವ ಸಾಧ್ಯತೆಯಿದೆ - ಅನುವಾದಕ)

ನಮಗೆ ಈಗ ತಿಳಿದುಬಂದಿರುವ ಆಧಾರಗಳಿಂದಾಗಿ ಪ್ರಾಚೀನ ಕಾಲದಿಂದಲೂ ಈ ಪ್ರಾಂತ್ಯವನ್ನು 24 ವಿಭಾಗಗಳನ್ನಾಗಿ ಮಾಡಿದ್ದು ಒಂದೊಂದನ್ನೂ ಕೋಟ್ಟಂ ಎಂದು ಕರೆಯುತ್ತಿದ್ದರು. ಈ ಕೋಟ್ಟಂಗಳು ಸಾಧಾರಣವಾಗಿ ಒಬ್ಬೊಬ್ಬ ದಳಪತಿಯಿಂದ ಲಷ್ಕರಿ ಆಡಳಿತಕ್ಕೆ ಒಳಪಟ್ಟು ಯುದ್ಧ ಮೊದಲಾದ ತುರ್ತು ಸಮಯದಲ್ಲಿ ಜನ ಇಲ್ಲಿನ ಆಡಳಿತ ಕೇಂದ್ರವಾದ ಕೋಟ್ಟಂಗೆಬಂದು ಸೇರುತ್ತಿದ್ದರು. ಈ ಭಾಗದಲ್ಲಿ ಇಂತಹ ಇಪ್ಪತ್ನಾಲ್ಕು ಕೋಟೆಗಳ ಉಲ್ಲೇಖವಿದ್ದು ಪ್ರತಿಯೊಂದೂ ಪ್ರತ್ಯೇಕ ಬುಡಕಟ್ಟಿನ ನಾಯಕನ ಅಧೀನವಾಗಿದ್ದಿತು. ತಿರುವೆಂಗಡ ಕೋಟ್ಟಂ ಇಂತಹ ಒಂದು ಪ್ರತ್ಯೇಕ ಸ್ಥಳ. ಸಾಮಾನ್ಯವಾಗಿ ಈ ಚಿಕ್ಕ ಚಿಕ್ಕ ಪಾಳಯಗಳು ಒಂದು ಕೇಂದ್ರದ ಅಧೀನಕ್ಕೆ ಬರುತ್ತಿದ್ದುದುಂಟು. ಐತಿಹಾಸಿಕವಾಗಿ ಇಂತಹ ಒಂದು ಕೇಂದ್ರ ಕಂಚಿಯಾಗಿದ್ದಿರಬೇಕು. ಹೀಗಾಗಿ ತೊಂಡ ಮಂಡಲದ ಕೇಂದ್ರವೆಂದು ಕಂಚಿಯನ್ನು ಪರಿಗಣಿಸಲಾಗಿದೆ.

ತಿರುವೆಂಗಡ ಬೆಟ್ಟದಿಂದ ಕೂಡಿ ಅದೇ ಹೆಸರನ್ನು ಪಡೆದ ತಿರುವೆಂಗಡಕೋಟ್ಟಂ - ಚಿತ್ತೂರು, ಚಂದ್ರಗಿರಿ, ತಿರುಚಾನೂರ, ಶ್ರೀಕಾಳಹಸ್ತಿ ಭಾಗಗಳನ್ನು ಒಳಗೊಂಡಿತ್ತೆಂದರೆ ಈ ವಿಭಾಗದ ವಿಸ್ತಾರದ ಅರಿವು ಮೂಡು ವಂತಾಗುತ್ತದೆ. ಇದು ತೊಂಡಮಂಡಲದ ಅತಿ ಪುರಾತನ ವಿಭಾಗಗಳಲ್ಲಿ ಒಂದಾಗಿದ್ದಿತು. ಭೂ ವಿಭಾಗದ ಅನುಸಾರವಾಗಿ ಈ ಕೋಟ್ಟಂಗಳಲ್ಲಿ ಒಂದೊಂದು ಕೋಟೆ ಪ್ರಧಾನವಾಗಿದ್ದಿರಬೇಕು.

ಪ್ರಾಚೀನಕಾಲದಲ್ಲಿ ಪ್ರಥಮವಾಗಿ ವೆಂಕಟೇಶ್ವರಸ್ವಾಮಿಗೆ ಆಲಯವನ್ನು ನಿರ್ಮಿಸಿ ಇಲ್ಲಿನ ಉತ್ಸವಗಳಿಗೆ ಏರ್ಪಾಡು ಮಾಡಿದ ತೊಂಡಮಾನನು ತಿರುವೆಂಗಡ ಕೋಟ್ಟಂನ ಹಾಗೂ ಸುತ್ತಮುತ್ತಲಿನ ರಾಜ್ಯವನ್ನು ಆಳಿದ ತೊಂಡಮಾನ್ ಜನಾಂಗದ ಅರಸರಾಗಿದ್ದಿರ ಬೇಕು. ತಿರುಪತಿಯಲ್ಲಿ ನಡೆಯುತ್ತಿದ್ದ ಉತ್ಸವಗಳ ಬಗ್ಗೆ ಮಾಮುಲನಾರನು ವಿವರಿಸುವುದರಲ್ಲಿ ಈ ಮಾತು ಸಮರ್ಥಿತವಾಗುತ್ತದೆ. ಇದು ತೊಂಡಮಂಡಲವನ್ನೆಲ್ಲ ಒಂದು ಕೇಂದ್ರದ- ಕಂಚಿಯ- ಆಡಳಿತದ ಆಧೀನಕ್ಕೆ ತರುವುದಕ್ಕಿಂತ ಮೊದಲಿಗೆ ಆಗಿರಬೇಕು. ಹೀಗಾಗಿ ತೊಂಡಮಂಡಲವು ಮೊದಲಿಗೆ ಒಂದು ಬುಡಕಟ್ಟಿಗೆ ಸೇರಿದ ಹಲವು ಪಾಳಯಗಾರರಿದ್ದ - ಇಪ್ಪತ್ನಾಲ್ಕು ಆಗಿರಲಿಕ್ಕುಂಟು- ವಿಭಾಗಗಳಾಗಿದ್ದ ಒಂದು ಘಟಕ. ನಿಧಾನವಾಗಿ ಕಂಚಿಯ ರಾಜ್ಯದ ಆಳ್ವಿಕೆಯಲ್ಲಿ ಒಂದು ರಾಜ್ಯವಾಯಿತೆಂದೂ ನಾವು ತಿಳಿಯಬಹುದಾಗಿದೆ. ಆಂಧ್ರವಂಶಗಳ ಅಧಿಕಾರ ಇನ್ನೂ ಪ್ರಸ್ತುತವಾಗಿದ್ದ, ಶಾಸನಗಳ ಅರಂಭಕಾಲವಾಗಿದ್ದ ಈ ಅವಧಿಯಲ್ಲಿ ತೊಂಡಮಾನ್ ತರೈಯನ ರಾಜ್ಯದ ಉಲ್ಲೇಖವನ್ನು ನೋಡಬಹುದು. ಈ ಏಕೀಕರಣಗೊಂಡ ಮೇಲೆಯೂ ಒಬ್ಬಿಬ್ಬರು ಆಂಧ್ರ ಅಧಿಪತಿಗಳನ್ನು ನೋಡಬಹುದು. ಈ ಏಕೀಕರಣದಿಂದಾಗಿ ಈ ಪ್ರಾಂತ್ಯದಲ್ಲಿ ಒಂದು ಕೃಷಿಕ ಸಮಾಜ ಬೆಳೆಯುವಂತಾಗಿ, ಕೃಷಿಕ ಸಂಸ್ಕೃತಿಯೂ ಬೆಳೆಯುವಂತಾಯಿತು.

ಈ ಕಾಲದ ಆಡಳಿತಗಾರರು ಈ ಪ್ರಾಂತ್ಯದಲ್ಲಿ ಹಲವಾರು ಕಡೆ ತಮ್ಮ ಶಾಸನಗಳನ್ನು ಬಿಟ್ಟು ಹೋಗಿರುವ ವರಾದರೂ ತಿರುಪತಿಯ ಆಲಯದಲ್ಲಿ (ತಿರುಮಲೆಯ ಆಲಯದಲ್ಲಿ) ಯಾವ ಶಾಸನವನ್ನೂ ಹಾಕಿಸಿದಂತೆ ಕಂಡುಬರುವುದಿಲ್ಲ. ಹೀಗೇಕೆ ಎಂಬುದನ್ನು ಹೇಳಬರುವಂತಿಲ್ಲ. ಪ್ರಾಚೀನಕಾಲದಲ್ಲಿದ್ದಂತೆಯೇ ಈ ಕಾಲ ದಲ್ಲಿಯೂ ತಿರುಮಲೆಯು ದುರ್ಗಮವಾಗಿದ್ದಿರಬೇಕು. ಆಲಯ ಅಂದಿನ ಕಾಲದಲ್ಲಿ ಅಷ್ಟೊಂದು ಪ್ರಧಾನವಾಗಿ ಇದ್ದಿರದೆ ಹೋಗಿರಬಹುದು. ಉಲ್ಲೇಖನೀಯವಾಗಬಹುದಾದಷ್ಟು ಪ್ರಸಿದ್ಧವಾಗದೆ ಇದ್ದಿರಬೇಕು. ಪಲ್ಲವರ ಕಾಲಕ್ಕೆ ಬಂದಾಗ, ಆಲಯ ಪೂಜಾ ವಿಧಾನವೂ, ಪದ್ಧತಿಯೂ ಪಸಿದ್ಧವಾದದ್ದನ್ನು ಕಾಣುತ್ತೇವೆ.

ಸಂಗಂ ಸಾಹಿತ್ಯದಲ್ಲಿ, ಆಳ್ವಾರುಗಳ ಪಾಶುರಗಳಲ್ಲಿ, ಶಿಲಪ್ಪದಿಗಾರಂ - ಕೃತಿಯಲ್ಲಿ ವೆಂಗಡದ ಹಾಗೂ ಶ್ರೀ ವೆಂಕಟೇಶ್ವರ ಸ್ವಾಮಿಯ ಉಲ್ಲೇಖಗಳ ಬಗ್ಗೆ ಈಗಾಗಲೇ ಹೇಳಿಯಾಗಿದೆ. ಈ ಸಾಹಿತ್ಯಕ ಆಧಾರಗಳಿಂದಾಗಿ ಆಲಯದ ಆಡಳಿತ ಹೇಗೆ ಇದ್ದಿತೆಂಬುದು ಅಷ್ಟಾಗಿ ತಿಳಿದುಬರುವುದಿಲ್ಲ. ವೈದಿಕ ದೈವವಾದ ವಿಷ್ಣುವಿನ ಆರಾಧನೆ ಈ ಕಾಲಕ್ಕೆ ಅಪರಿಚಿತವಾಗಿರಲಿಲ್ಲ. ವೈಷ್ಣವರ ಒಂದು ಪ್ರಮುಖ ದಿವ್ಯದೇಶ (ಒಟ್ಟು 108 ವೈಷ್ಣವ ದಿವ್ಯ ದೇಶಗಳುಂಟು) ಸರಿಯಾದ ಆರಾಧನೆಯಿಲ್ಲದೆ ಅಸಡ್ಡೆಗೊಳಗಾಗಿತ್ತು ಎಂದು ನಂಬುವ

ಆಧಾರಗಳಾವುವು ಇಲ್ಲ. ಹೀಗಾಗಿ ಮೇಲೆ ಹೇಳಿದ ಪಲ್ಲವ ಪೂರ್ವಕಾಲದಲ್ಲಿಯೂ ತಿರುಮಲೆಯ ದೈವ ದಿನವೂ ಪೂಜೆಗೈಯಲ್ಪಡುತ್ತಿತ್ತು ಎಂದು ಹೇಳುವುದರಲ್ಲಿ ತಪ್ಪೇನಿಲ್ಲ.

### 3. ಪಲ್ಲವ ಕಾಲದ ಆಲಯ

**ಅ. ಪ್ರಾಂತೀಯ ವಿಭಾಗಗಳು -** ತಿ. ತಿ. ದೇವಸ್ಥಾನಗಳ 219 ನೇ ನಂಬರಿನ ಶಾಸನವು ತಿರುಸಖಿನೂರು (ತಿರುಚಾನೂರು) ನಲ್ಲಿ ದೊರೆತಿದ್ದು ಈ ಊರು ಇದ್ದ ಕುಡುವುರನಾಡು, ತಿರುವೆಂಕಟಕೋಟ್ಟಂನೊಡನೆ ಪಲ್ಲವ ರಾಜ್ಯಕ್ಕೆ ಸೇರಿತ್ತೆಂದು ತಿಳಿಸುತ್ತದೆ. ಪಲ್ಲವರನ್ನು ಅನುಸರಿಸಿದ ಚೋಳರ ಕಾಲದಲ್ಲಿ ಅವರ ಆಡಳಿತ ತೊಂಡಮಂಡಲವನ್ನೂ ಒಳಗೊಂಡರೂ, ನಂತರಬಂದ ವಿಜಯ ನಗರದರಸರಲ್ಲಿಯೂ, ಪ್ರಾಚೀನ ಪಲ್ಲವರ ಕಾಲದ ಪ್ರಾಂತೀಯ ವಿಭಾಗ, ಉಪವಿಭಾಗಗಳು ಹಾಗೇ ಮುಂದುವರೆದವು. ತೊಂಡ ಮಂಡಲವು ಹಲವು ಕಾಲ ರಾಜೇಂದ್ರಚೋಳಮಂಡಲವೆಂದೂ, ಹಾಗೂ ಜಯಂಗೊಂಡಚೋಳ ಮಂಡಲವೆಂದೂ ಹೆಸರಿನಲ್ಲಿ ಮಾತ್ರ ಪರಿವರ್ತನೆ ಪಡೆಯಿತು.

ತಿರುವೆಂಕಟಕೋಟ್ಟಂ ಎಂಬುದು ತೊಂಡಮಂಡಲ ಅಥವಾ ಜಯಂಗೊಂಡ ಚೋಳ ಮಂಡಲದ ಒಂದು ವಿಭಾಗವಾದರೂ ಸಹ ಶ್ರೀ ವೆಂಕಟೇಶ್ವರಸ್ವಾಮಿ ನೆಲೆಯಿರುವ ಪವಿತ್ರ ಪರ್ವತದಿಂದಲೇ ತನ್ನ ಹೆಸರು ಪಡೆಯಿತೆಂಬುದು ಸ್ಪಷ್ಟವಾಗಿ ಅತಿ ಪ್ರಾಚೀನ ಕಾಲದಲ್ಲಿಯೂ ಇಲ್ಲಿನ ಸ್ವಾಮಿಯ ಪ್ರಸಿದ್ಧಿಯನ್ನು ಕುರಿತೇ ಹೇಳುತ್ತದೆ. ನಮಗೆ ದೊರಕಿರುವ ಹಲವಾರು ಶಾಸನಗಳಿಂದ ಈ ಕೋಟೆಯು (ಕೋಟ್ಟಂ) ನಾಲ್ಕು ಉಪ ವಿಭಾಗಗಳನ್ನು ಹೊಂದಿದ್ದುವು ಎಂದು ತಿಳಿದು ಬರುತ್ತದೆ. ಅವುಗಳೆಂದರೆ - ಕುಡುವೂರು ಅಥವಾ ಕುಡುವೂರು ನಾಡು- ತಿರುಪತಿಯ ಸುತ್ತಮುತ್ತಲ ಗ್ರಾಮಗಳಿಂದ ಕೂಡಿದ್ದಿತು. ವೈಕುಂದ ವಲನಾಡು ಎಂಬ ಚಂದ್ರಗಿರಿಯ ಸುತ್ತಲ ಹಳ್ಳಿಗಳಿಂದ ಕೂಡಿದ ಪ್ರಾಂತ್ಯ. ಚಿತ್ತೂರು ಬಳಿಯ ಗ್ರಾಮಗಳು ಸೇರಿದ ತುಯ್ಯನಾಡು ಹಾಗೂ ಕಾಳಹಸ್ತಿಯ ಸುತ್ತಲಿನ ಹಳ್ಳಿಗಳಿಂದ ಕೂಡಿದ ಆರೂರು ಅಥವಾ ತೊಂಡಮಾನ್ ಆರೂರುನಾಡು. ಇವುಗಳಲ್ಲಿ ಕುಡುವೂರು ಎಂಬ ಸಮುದಾಯಕ್ಕೆ ಹೆಸರು ನೀಡಿದ ಗ್ರಾಮ ಈಗಿಲ್ಲವಾಗಿ, ಶಾಸನಗಳಲ್ಲಿ ತೊಂಡಮಾನ್ ಆರೂರು ಅಥವಾ ಪೆರಿ ಆರೂರು ಎಂದು ಕರೆಯಲ್ಪಟ್ಟಿರುವ ಆರೂರು ಈಗಿನ ಕಾಳಹಸ್ತಿಯ ಬಳಿಯ ತೊಂಡಮನಾಡು ಆಗಿದೆ. (1921 ರ ಮದ್ರಾಸು ಶಾಸನ ವರದಿ ಪ್ಯಾರ - 26).

**ಆ. ಶಾಸನೋಕ್ತ ಪಲ್ಲವರಾಜರು -** ತಿ.ತಿ.ದೇ., ಸಂಗ್ರಹದಲ್ಲಿ ಪಲ್ಲವ ಶಾಸನಗಳು ಅಪರೂಪವಾಗಿದ್ದು ಕೋ ವಿಜಯದಂತಿ ವಿಕ್ರಮದೇವರ್ ಹೆಸರು ಹೇಳುವ ತಿರುಚಾನೂರಿನ ಎರಡು ಶಾಸನಗಳು ಬಹುಕಡಿಮೆ ವಿಷಯವನ್ನು ಬಿಟ್ಟುಕೊಡುತ್ತವೆ. (ಅತಿ ಸ್ವಲ್ಪ ವಿಷಯವನ್ನು ವಿವರಿಸುತ್ತವೆ) ಇವುಗಳಲ್ಲಿ ಒಂದು (ಜಿ.ಟಿ 219) ರಾಜನ ಆಳ್ವಿಕೆಯ 51 ನೇ ವರ್ಷವನ್ನು ಸೂಚಿಸುತ್ತ ತಿರುವೆಂಕಟ ಕೋಟ್ಟಂನಲ್ಲಿದ್ದ ಕುಡುವೂರು ನಾಡುವಿನಲ್ಲಿದ್ದ ತಿರುಚಾನೂರಿನ ಬಗ್ಗೆ ಹೇಳುತ್ತ ದಾನಿಯಾದ ಉಲಗಪ್ಪೆರುಮಾನಾರ್ ವಾಸ್ತವ್ಯವಾದ ಚೋಳನಾಡಿನ ಸೋಲನೂರು ಪ್ರಾಂತ್ಯವನ್ನು ಗುರುತಿಸುತ್ತದೆ.

ಜಿ.ಟಿ 219 ಹಾಗೂ ಜಿ.ಟಿ. 273 ಶಾಸನಗಳು ಸೋಲನೂರಿನ ಉಲಗಪ್ಪೆರುಮಾನಾರ್ ಹಾಗೂ ಸಿಯನನ್ (ಗನ್) ಎಂಬ ಇಬ್ಬರು ಪಲ್ಲವ ಮನ್ನೆಯರನ್ನು ನಮ್ಮ ಗಮನಕ್ಕೆ ತರುತ್ತವೆ. ಪಲ್ಲವ ರಾಜರು ನೆಲೆಗೊಳಿಸಿದ ಪಶ್ಚಿಮ ಗಂಗರವಂಶದ ಅಯ್ಯವರ್ಮನ್ ಹಾಗೂ ಸಿಂಹವರ್ಮ ಅಲಿಯಾಸ್ ಮಾಧವ -2 ಗಳ ಬಗ್ಗೆಯೂ, ತನ್ನ ಸಾಮ್ರಾಟನಾದ ಪಲ್ಲವ ರಾಜನಿಗಾಗಿ ಶ್ರೀಪುರಂಬಿಯದ ಯುದ್ಧದಲ್ಲಿ ಅಪರಾಜಿತನ ಪರವಾಗಿ ವರಗುಣ ಪಾಂಡ್ಯನ ಮೇಲೆ ಯುದ್ಧಮಾಡಿ ಅಸುವನ್ನು ತೆತ್ತ ಒಂದನೇ ಪೃಥ್ವೀಪತಿ ಬಗ್ಗೆಯೂ ತಿಳಿಯುತ್ತೇವೆ. ಗುಡಿಮಲ್ಲಂ ಶಾಸನದಲ್ಲಿ (1903 ರ 226) ಹೇಳುವಂತೆ ಬಾಣರಾಜ ಮಹಾಬಲಿ ಬಾಣರಾಯ ನಂತೆಯೇ ಪಶ್ಚಿಮ ಗಂಗರ ಸಿಯಗಂಗನೂ ದಂತಿವಿಕ್ರಮವರ್ಮನ ಸಾಮಂತರಾಜನಾಗಿದ್ದಿರಬೇಕು. ನಮ್ಮ ಸಂಗ್ರಹದ ತಿ.ತಿ.429, ಜಿ.ಟಿ 229 ರ ಪ್ರಕಾರ ಈತ ಇದೇ ಪಲ್ಲವರಾಜನ ಸಾಮಂತನಾಗಿದ್ದ. ಬಾಣ ಹಾಗೂ ಗಂಗರ ಮೇಲಣ ಪಲ್ಲವರ ಈ ಹಿಡಿತ, ಹತೋಟಿಗಳು - ದಕ್ಷಿಣದ ವರಗುಣ ಪಾಂಡ್ಯನ ಧಾಳಿಗಳು, ಪಶ್ಚಿಮದಲ್ಲಿ ರಾಷ್ಟ್ರಕೂಟ ಮೂರನೇ ಗೋವಿಂದನ ಆಕ್ರಮಣಗಳ

ವಿರುದ್ಧವೂ- ವಿಜಯದಂತಿ ವಿಕ್ರಮವರ್ಮನು ಪಲ್ಲವ ರಾಜ್ಯದ ಉತ್ತರಾರ್ಧದಲ್ಲಿಯಾದರೂ ತನ್ನ ಅಧಿಕಾರವನ್ನು ಯಶಸ್ವಿಯಾಗಿ ಸ್ಥಾಪಿಸಿದ್ದನೆಂದು ವಿವರಿಸುತ್ತವೆ. ಈತನಿಗೆ ರಾಷ್ಟ್ರಕೂಟರೊಡನೆ ಎರಡು ಕಡೆಯ ನಂಟು ಇದ್ದಿತು.

ಮೊದಲನೆಯದು ಈತನ ತಾಯಿ 'ರೇವಾ' ಳ ಕಡೆಯಿಂದ, ಮತ್ತೊಂದು ಸೊಸೆಯಾದ (ಮಗ ನಂದಿವರ್ಮ ತೆಲ್ಲಾರುವಿನ ಹೆಂಡತಿ) ಸಂಖಳ ಕಡೆಯಿಂದ. ಕದಂಬರ ಅಗ್ಗಳನಿಮ್ಮಡಿಯನ್ನು ತಾನೇ ವಿವಾಹವಾಗಿ ಅವರ ಬಂಧುವಾಗಿದ್ದ. ಈ ನಂಟುತನಗಳು ಅವನ ರಕ್ಷಣೆಗೆ ಬಂದು, ರಾಷ್ಟ್ರಕೂಟ ಮೂರನೇ ಗೋವಿಂದನಿಗೆ ಕಪ್ಪಗಾಣಿಕೆ ನೀಡಿ ತನ್ನ ವಿಧೇಯತೆಯನ್ನು ತಿಳಿಸಿದ ನಂತರ ಶಾಂತಿಯನ್ನು ಪಡೆದು ತೊಂಡಮಂಡಲದ ಮೇಲಣ ಪಾಂಡ್ಯ ಆಕ್ರಮಣದ ಅಲೆಯನ್ನೂ ಹಿಮ್ಮೆಟ್ಟಿಸಿದಂತಾಯಿತು.

ಮೇಲೆ ಹೇಳಿದ ಎರಡೂ ಶಾಸನಗಳೂ ತ್ರುಟಿತವಾಗಿದ್ದು, ತಿ.ತಿ. 429 ನೇ ಶಾಸನವು ಬಾಣದೊರೆ ವಿಜಯಾದಿತ್ಯನ ವಂಶವೃಕ್ಷ ವನ್ನು ಸಂಸ್ಕೃತ ಶ್ಲೋಕದಲ್ಲಿ ವಿವರಿಸಿದರೆ, ಜಿ.ಟಿ. 229 ರ ಶಾಸನವು ಶ್ರೀ ವೆಂಕ ಟೇಶ್ವರಸ್ವಾಮಿಗೆ ಅವನ ನಿವೇದನಾ ಏರ್ಪಾಡುಗಳಿ ಗಾಗಿ ಮಾಡಿದ ಭೂಮಿಯ ದಾನದ ಬಗ್ಗೆ ತಿಳಿಸುವುದು.

ಜಿ.ಟಿ. 233 ಶಾಸನವೂ ತ್ರುಟಿತವಾಗಿದ್ದು ಪ್ರಾಯಶಃ ಪಲ್ಲವರ ಅಧೀನನಾದ ಗಂಗರಾಜ ರಣಸಿಂಹ ನನ್ನು ಕುರಿತು ಹೇಳುತ್ತದೆ. ಗಂಗರೇ ಅಲ್ಲದೆ ಇತರ ಹಲವು ವಂಶಗಳ ಸಾಮಂತರೂ ಪಲ್ಲವಾಧಿಕ್ಯವನ್ನು ಒಪ್ಪಿ ನಡೆದಂತೆ ಕಾಣುತ್ತದೆ. ಇಂತಹವರಲ್ಲಿ (220 ಜಿ.ಟಿ.) ಇರಂಗೋಲನೂ - ಇರಂಗೋಲಕನ್ ಯಾನೆ ಗುಣವಾನ್ ಅಪರಾಜಿತನ್ - ಹೆಸರೇ ಸೂಚಿಸುವಂತೆ ಅಪರಾಜಿತನ ಸಾಮಂತರಲ್ಲಿ ಒಬ್ಬನಾಗಿದ್ದ. ಜಿ.ಟಿ. 218 ರಲ್ಲಿ ಹೇಳುವಂತೆ ಶಕವರ್ಷ 820 (ಕ್ರಿ.ಶ. 898) ನಮ್ಮನ್ನು ಅಪರಾಜಿತನ ಆಡಳಿತದ ಕಡೆಯ ವರ್ಷಕ್ಕೆ ಕರೆದೊಯ್ಯುತ್ತದೆ. ಇದು 9 ನೇ ಶತಮಾನದಲ್ಲಿ ಪಲ್ಲವ ಆಳ್ವಿಕೆಯ ಅಂತ್ಯಕಾಲವೂ ಹೌದು.

**ಇ. ಪಲ್ಲವ ಶಾಸನಗಳ ವಿವರ -** ಇದುವರೆಗೆ ತಿ.ತಿ.ದೇ.,ಗಳ ವತಿಯಿಂದ ಪ್ರಕಟವಾಗಿರುವ ಶಾಸನಗಳಲ್ಲಿ ಒಂಬತ್ತು ಮಾತ್ರ ಪಲ್ಲವರ ಕಾಲದ ಶಾಸನಗಳು. ಇವುಗಳಲ್ಲಿ ಮೊದಲ ಎರಡು ದಂತಿ ವಿಕ್ರಮದೇವನ ಕಾಲದವು ಗಳು. ಅವುಗಳಲ್ಲಿ ಮೊದಲನೆ ಯದು ಆತನ ಆಳ್ವಿಕೆಯ ಐವತ್ತೊಂದನೆಯ ವರ್ಷಕ್ಕೆ ಸೇರಿದ್ದು. ಇದು ಕೊನೆಯ ಆಳ್ವಾರರಾದ ತಿರುಮಂಗೈ ಆಳ್ವಾರರ ನಂತರದ ತಲೆಮಾರಿನ ಹೊತ್ತಿಗೆ ಎಂದರೆ ಸರಿ ಸುಮಾರು ಕ್ರಿ. 833 - 834 ರ ಹೊತ್ತಿಗೆ ನಮ್ಮನ್ನು ಕರೆದೊಯ್ಯುತ್ತದೆ. ಎರಡೂ ಶಾಸನಗಳೂ ತಿರುವಿಳಂಕೋಯಿಲಿನ ತಿರುವೆಂಗಡದ ವಿಗ್ರಹದ ಎದುರಿಗೆ ನಂದಾದೀಪವನ್ನು ನಿರಂತರ ಬೆಳಗಲೆಂದು ವೆಚ್ಚಗಳಿಗಾಗಿ ನೀಡಿದ ಧನದ ಕಾಣಿಕೆ ಗಳನ್ನು ಗುರುತಿಸುತ್ತವೆ.

ತಿ.ತಿ.ದೇ. ಶಾಸನ ಸಂಗ್ರಹದಲ್ಲಿ ಅತಿ ಪ್ರಾಚೀನವಾದವು ಎಂದರೆ ತಿ.ತಿ.ದೇ. 8,9 ಆಗಿದ್ದು ಇವು ಮಹೇಂದ್ರ ಪನ್‌ಮಾರನ ಆಡಳಿತದ 14 ನೇ ವರ್ಷಕ್ಕೆ ಸಂಬಂಧಿಸಿದ್ದು. ಈ ಎರಡೂ ಶಾಸನಗಳಲ್ಲಿನ ವಿಷಯವೆಂದರೆ ಪಲ್ಲವರಾಣಿ ಸಾಮವೈ ತಾನು ತಿರುಮಲೆಯ ಆಲಯದಲ್ಲಿ ಸ್ಥಾಪಿಸಿದ ಬೆಳ್ಳಿಯ ಮಲೆಯಪ್ಪ ಸ್ವಾಮಿಯ ತದ್ರೂಪದ ಸಾಲಂಕೃತ ವಿಗ್ರಹದ ಪೂಜೆಗೆಂದು, ನಂದಾದೀಪದ ವೆಚ್ಚಕ್ಕೆಂದು ನೀಡಿದ ದಾನದ ವಿವರವಾಗಿದೆ. ಜೊತೆಗೇ ತಮಿಳು ಪುರಟ್ಟಾಸಿ ಹಾಗೂ ಮಾರ್ಗಳಿ ಮಾಸಗಳಲ್ಲಿ ಎರಡು ಉತ್ಸವಗಳಿಗೂ ಏರ್ಪಾಡು ಮಾಡಲಾಯಿತು.

ಕ್ರಿ.ಶ. 830ರಲ್ಲಿ ಪಲ್ಲವರಾಜ ವಿಜಯದಂತಿ ವಿಕ್ರಮವರ್ಮನ ಆಡಳಿತದ ಐವತ್ತೊಂದನೆಯ ವರ್ಷದಲ್ಲಿ ಅವನ ಆಧೀನ ದಳಪತಿಯಾಗಿದ್ದ ಸೋಳನಾಡಿನ ಸೋಲನೂರಿನ ಉಲಗಪ್ಪೆರುಮಾನಾರನು ತಿರುವಿಳಂ ಕೋಯಿಲ್ ಪೆರುಮಾನಡಿಗಳ ಮುಂದೆ (ಪ್ರಾಯಶಃ ಶ್ರೀ ವೆಂಕಟೇಶ್ವರಸ್ವಾಮಿ ಆಲಯದಲ್ಲಿ ಸ್ಥಾಪನೆಯಾದ ನೂತನ ಮೂರ್ತಿ) ಒಂದು ನಂದಾದೀಪವನ್ನು ಬೆಳಗಿಸಲು ಮಾಡಿದ ಪ್ರಾವಧಾನವನ್ನು ಮೊದಲಸಂಪುಟದ ಮೊದಲ ಶಾಸನದಲ್ಲಿ ಕಾಣುತ್ತೇವೆ.

ಎರಡನೆಯ ಶಾಸನವು ವಿಜಯದಂತಿ ವಿಕ್ರಮವರ್ಮನ ಪಶ್ಚಿಮ ಗಂಗರ ಇನ್ನೊಬ್ಬ ಸಾಮಂತನಾಗಿದ್ದಿರ ಬಹುದಾದ ಸಿಯಗಂಗನು ಏರ್ಪಡಿಸಿದ ನಂದಾದೀಪದ ಏರ್ಪಾಡುಗಳನ್ನು ವಿವರಿಸುವುದು.

ಮೂರನೆಯ ಶಾಸನವು ವಿಜಯದಂತಿ ವಿಕ್ರಮವರ್ಮನ ಸಾಮಂತನಾದ ಬಾಣ ವಂಶದ ಮಹಾಬಲಿ ಬಾಣರಾಯನ ಜನನವನ್ನು ಸೂಚಿಸುತ್ತದೆ. ನಾಲ್ಕನೆಯ ಶಾಸನವು ಪ್ರತಿನಿತ್ಯವೂ ಮೂರು ದೈವಗಳಿಗೆ - ತಿರು ವಿಳಂಕೋಯಿಲ್ ಪೆರುಮಾನಡಿಗಳ್, ತಿರುಮಂತ್ರಸಾಲೈ ಪೆರುಮಾನಡಿಗಳ್, ತಿರುವೆಂಕಟತ್ತು ಪೆರುಮಾನಡಿಗಳ್

(1) ಮೊದಲನೆಯ ಶಾಸನದಲ್ಲಿ ಗಮನಿಸಲಾದ ಆಲಯದಲ್ಲಿ ಸ್ಥಾಪಿತವಾದ ನೂತನ ಮೂರ್ತಿ,

2) ಉತ್ಸವ, ಹಬ್ಬಗಳ ಆರಂಭದ ಧರ್ಮಕಲಾಪಗಳಲ್ಲಿ ಆರಂಭದಲ್ಲಿ ಪೂಜೆ ಪಡೆಯುವ ಮೂರ್ತಿ

3) ಮೂಲಮೂರ್ತಿಯಾದ ವೆಂಕಟೇಶ್ವರಸ್ವಾಮಿಗಳ) ನಿವೇದನೆಗಾಗಿ ಈತ ಮಾಡಿದ ವ್ಯವಸ್ಥೆಯನ್ನು ತಿಳಿಸುತ್ತದೆ. ಈತ ಹಲವು ಕಳಂಜು ಹೊನ್ನು ದಾನ ನೀಡಿ, ಆ ಮೂಲಕ ನೈವೇದ್ಯದ ಏರ್ಪಾಡು ಮಾಡಿದನು. ಎರಡು ನಿವೇದನಗಳಲ್ಲಿ ಒಂದು ನಂದಿಯೇರಿ - ತಿರುವಮುದು ಎನ್ನಲಾಗಿದ್ದು ನಂದಿಯೇರಿ ಎನ್ನುವ ಕೆರೆಯ ನೀರಿನಿಂದ ಉತ್ಪನ್ನವಾದ ಬೆಳೆಯಿಂದ ನೀಡಿದ ನೈವೇದ್ಯ ಆಗಿದ್ದಿತು.

ಐದನೆಯ ಶಾಸನವು ಪ್ರಾಯಶಃ ಪಶ್ಚಿಮ ಗಂಗರ ವಂಶಜನಾದ ಗಂಗೈಗಂಗ ರಣಸಿಂಗನು ಠೇವಣಿ ಯಾಗಿಟ್ಟ ಹಣದ ಬಡ್ಡಿಯ ಮೂಲಕ ದೇವರಿಗೆ ನಿತ್ಯ ನೈವೇದ್ಯದ ಏರ್ಪಾಡು ಮಾಡಿದ್ದನ್ನು ವಿವರಿಸುತ್ತದೆ.

ಆರನೆಯ ಶಾಸನವು ಇರುಂಗೋಲಕನು (ಗುಣವಾನ್ ಅಪರಾಜತನು) ಸ್ವಲ್ಪ ಚಿನ್ನವನ್ನು ಠೇವಣಿಯಾಗಿ ಸಲ್ಲಿಸಿ ಪ್ರತಿದಿನವೂ ಇಬ್ಬರು ಬ್ರಾಹ್ಮಣರ ಭೋಜನಕ್ಕೆ ಶಾಶ್ವತವಾದ ಏರ್ಪಾಡು ಮಾಡಿದ್ದು ತಿಳಿಸುತ್ತದೆ. ಇವನ ಹೆಸರಿನಿಂದಾಗಿ ಇವನು, ಕ್ರಿ.ಶ.898ರಲ್ಲಿ ಚೋಳರಾಜ ಒಂದನೇ ಆದಿತ್ಯನಿಂದ ಪದಚ್ಯುತನಾದ ಕೊನೆಯ ಪಲ್ಲವ ಸಾಮ್ರಾಟನಾದ ಅಪರಾಜಿತನ ಸಾಮಂತನಾಗಿದ್ದಿರಬೇಕು ತಿಳಿಯುತ್ತದೆ.

ಏಳನೆಯ ಶಾಸನವು ತ್ರುಟಿತವಾಗಿದ್ದು ಕ್ರಿ.ಶ. 898 ಶಕವರ್ಷ 820 ಕ್ಕೆ ಸೇರಿ ತಿರುವಿಳಂಕೋಯಿಲಿನ ಸೇವೆಯಲ್ಲಿ ಒಂದು ಹಳ್ಳಿಯ ಆಡಳಿತ ಆದಾಯವನ್ನು ಬಳಸುವ ಬಗ್ಗೆ ತಿಳಿಸುತ್ತದೆ. ಚೋಳರಾಜನಾಗಲೀ ಪಲ್ಲವರಾಜನಾಗಲೀ ಈ ಶಾಸನದಲ್ಲಿ ಹೆಸರಿಸಲ್ಪಟ್ಟಿಲ್ಲ. ಕಾರಣ ಇದೊಂದು ಸ್ಥಿತ್ಯಂತರ ಕಾಲವಾಗಿ ಚೋಳರಾಜ್ಯ ಇನ್ನೂ ಬಲವಾಗಿ ಸ್ಥಾಪಿತವಾಗಿರಲಿಲ್ಲ. ಸ್ಥಳೀಯ ಅಧಿಕಾರಿ ಒಬ್ಬರಿಂದ ಈ ಶಾಸನ ಉಂಟಾಗಿದ್ದಿರಬೇಕು.

ಹೀಗಾಗಿ 7ನೇ ಶತಮಾನದಿಂದ ಆರಂಭಕಾಲದಿಂದ ಪಲ್ಲವರ ಅಧೀನದಲ್ಲಿದ್ದ ಸ್ಥಳೀಯ ರಾಜ ಪ್ರಮುಖರು, ಪಲ್ಲವ ಸಾಮ್ರಾಟರ ಸಾಮಂತರು ಶ್ರೀ ವೆಂಕಟೇಶ್ವರಸ್ವಾಮಿಯ ಆಲಯದ ಅಭಿವೃದ್ಧಿಯಲ್ಲಿ ಹೊಸ ಹೊಸ ಉತ್ಸವಗಳಿಗಾಗಿ ಮೂಲ ಮೂರ್ತಿಯ ಪ್ರತಿರೂಪವಾದ ಹೊಸ ಉತ್ಸವಮೂರ್ತಿಗಳ ಸ್ಥಾಪನೆ ಯಿಂದ ಹಿಡಿದು ನಿತ್ಯನೈವೇದ್ಯದ ಅರ್ಚನೆ, ದೀಪ ಸ್ಥಾಪನೆಗಳಿಗಾಗಿ ಸುವರ್ಣದಾನ, ಗ್ರಾಮದಾನಗಳನ್ನು ಮಾಡಿದ್ದಲ್ಲದೆ ಗ್ರಾಮಾದಾಯಗಳನ್ನು ನಿತ್ಯಸೇವೆ ನಿವೇದನೆಗಳ ಶಾಶ್ವತ ವ್ಯವಸ್ಥೆಯಲ್ಲಿ ಬಳಸುವಂತೆ ಮಾಡಿದ್ದಾರೆ ಎಂಬುದನ್ನು ತಿಳಿಯಬಹುದಾಗಿದೆ. ಈ ಪಲ್ಲವ ಯುಗದಲ್ಲಿಯೇ ತಿರುಮಲೆಯ ಆಲಯದಲ್ಲಿ ಮೂಲಮೂರ್ತಿಯ ಮೂರು ಪ್ರತಿರೂಪಗಳನ್ನು ಸ್ಥಾಪಿಸಲಾಯಿತು.

ಪಲ್ಲವರ ಕಾಲದ ಅತ್ಯಂತ ಪ್ರಸಿದ್ಧವಾದ ಸಾಮವೈ ರಾಣಿಯ ಶಾಸನವನ್ನು ಈಗಾಗಲೇ ಹಲವು ಸಾರಿ ಪ್ರಸ್ತಾಪಿಸಲಾಗಿದೆ.'ಶಕ್ತಿ ವಿಟಂಕನೆಂಬ ಕಾಡವರಾಯನು (ಪಲ್ಲವ ರಾಯ) ಕೊಪ್ಪಟ್ಟ ಮಹೇಂದ್ರ ಪೆನ್ಮಾರನ ಆಳ್ವಿಕೆಯ ಹದಿನಾಲ್ಕನೆಯ ವರ್ಷದಲ್ಲಿ ಹಾಕಿಸಿದ ಶಾಸನವಿದು. ಶಕ್ತಿವಿಟಂಕನ ಪತ್ನಿ ಸಾಮವೈರಾಣಿ ಈ ಎರಡು ಶಾಸನಗಳಲ್ಲಿನ ದಾನಿ. ಈಕೆ ಪಲ್ಲವ ಪೆರ್ಗಡೆಯವರ (ಪಲ್ಲವ ಹೆಗಡೆಯ)

ಮಗಳು. ಈ ಎರಡು ಶಾಸನಗಳಲ್ಲಿನ ಉತ್ಸವ ಮೂರ್ತಿಯ - ಈ ಸಂದರ್ಭದಲ್ಲಿ ಶ್ರೀ ವೆಂಕಟೇಶ್ವರಸ್ವಾಮಿಯ ಮೂಲ ಮೂರ್ತಿಯನ್ನು ಹೋಲುವ ಬೆಳ್ಳಿಯ ಮೂರ್ತಿಯ - ಸ್ಥಾಪನೆಯನ್ನೂ, ಅವುಗಳಿಗಾಗಿ ಉತ್ಸವಗಳನ್ನು ಆರಂಭಿಸಿ ಏರ್ಪಾಡುಗಳನ್ನೂ, ಈ ಮೂರ್ತಿಗಳ ಏಳುದಿನಗಳ ಮೆರವಣಿಗೆಯ ವ್ಯವಸ್ಥೆಯನ್ನೂ ಕಾಣುತ್ತೇವೆ.

ಈ ಶಾಸನಗಳಲ್ಲಿ ಉಲ್ಲೇಖಿತನಾಗಿರುವ ಕೊಪ್ಪಟ್ರ ಮಹೇಂದ್ರ ಪನ್ಮಾರನೇ ತೊಂಡಮಂಡಲದ ಈ ಭಾಗದ ಸಾಮ್ರಾಟನಾಗ್ದಿದ ಪರಾಂತಕ -II- ಸುಂದರಚೋಳನ ಸಾಮಂತ ನಾಗಿದ್ದು, ಉತ್ತರ ಆರ್ಕಾಟ್, ಚೆಂಗಲ್ಪಟ್ಟು ಜಿಲ್ಲೆಗಳ ಶಾಸನಗಳಲ್ಲಿ ಹೆಸರಿಸಲ್ಪಟ್ಟಿರುವ ಕೋ ಪಾರ್ಥಿವೇಂದ್ರವರ್ಮನೆಂದು ಸಾಮಾನ್ಯವಾಗಿ ಬಗೆಯಲಾಗಿದೆ. ಈ ಶಾಸನವು ಕೇವಲ ನಕಲು ಪ್ರತಿಯಾಗಿರುವುದರಿಂದಾಗಿ, ಮೂಲಶಾಸನದ ಲಕ್ಷಣಗಳಿಂದಾಗಿ ತಿಳಿದು ಬರತಕ್ಕ ಕಾಲಗಣನೆಯ ಬಗ್ಗೆ ಏನೂ ಹೇಳಲಾಗಿದು. ಏನೇ ಆದರೂ ಈ ಶಾಸನ ಪಲ್ಲವ ಸಾಮ್ರಾಟ ಮಹೇಂದ್ರವರ್ಮನನ್ನೇ - ಮಹೇಂದ್ರ ಪೆನ್ಮಾರನೆಂಬ ಹೆಸರನ್ನು ಹೇಳುವುದರಿಂದ, ಉಲ್ಲೇಖಿಸುತ್ತಿರಬಹುದು. ಶಕ್ತಿ ವಿಟಂಕ ನೆಂಬ ಸಾಮಂತನ ಹೆಸರನ್ನು ಹೇಳಿ ಆತನ ಸಾಮ್ರಾಟನನ್ನು ಸೂಚಿಸುವಿಕೆಯೂ ಇದನ್ನು ಪುಷ್ಟಿಗೊಳಿಸುತ್ತದೆ. ಜೊತೆಗೆ ಈ ಶಕ್ತಿ ವಿಟಂಕನ ರಾಣಿ ಸಾಮವ್ವೈ ಸಹ ಪಲ್ಲವ ರಾಜಕುಮಾರಿಯೇ ಆಗಿದ್ದಾಳೆ. ಹಾಗಾಗಿ ಮಹೇಂದ್ರವರ್ಮನ ಆಡಳಿತದ 14ನೆಯ ವರ್ಷ ವೆಂದರೆ ಅದು ಮಾಮಲ್ಲ ನರಸಿಂಹ ವರ್ಮನ ತಂದೆಯಾದ ಒಂದನೇ ಮಹೇಂದ್ರವರ್ಮನೇ ಆಗಿರಬೇಕು. ಕಾರಣ 2ನೇ ಮಹೇಂದ್ರ ವರ್ಮನ ಆಳ್ವಿಕೆ ಅತಿ ಕಿರಿಯ ಕಾಲಾವಧಿಯದಾಗಿದ್ದಿತು. ಈ ಗುರುತಿಸುವಿಕೆ ಸರಿಯೆಂದರೆ ಶಾಸನವು ನಮ್ಮನ್ನು ಕ್ರಿ.ಶ.ದ 7ನೇ ಶತಮಾನಕ್ಕೆ ಸರಿಸುಮಾರು ಕ್ರಿ.ಶ. 614ರ ಹೊತ್ತಿಗೆ ಪಲ್ಲವ ರಾಜ್ಯವನ್ನು ಆಳುತ್ತಿದ್ದ ಒಂದನೇ ಮಹೇಂದ್ರ ವರ್ಮನ ಕಾಲಕ್ಕೆ ಒಯ್ಯುತ್ತದೆ.

## ಈ. ಪಲ್ಲವರ ಕಾಲದ ಆಲಯ ಆಡಳಿತ

ಹಲವಾರು ಪ್ರಾಚೀನ ಹಾಗೂ ನಂತರದ ಶಾಸನಗಳು ಆಲಯಗಳ ಆಡಳಿತದಲ್ಲಿ ರಾಜಕೀಯ ನಿಯಂತ್ರಣ ಹೊಂದಿದ ತಿರುಚಾನೂರು ಸಭೆಯ ಪಾತ್ರವನ್ನು ನಮ್ಮ ಗಮನಕ್ಕೆ ತರುತ್ತವೆ. ಇದರಲ್ಲಿ ಮುಖ್ಯವಾಗಿ ಸ್ಥಳೀಯ ಶ್ರೀ ವೈಷ್ಣವ ಸಮಾಜದಿಂದ ಆಯ್ದು ಬಂದ 108 ಮಂದಿ ಬ್ರಾಹ್ಮಣರಿದ್ದರು. ಹಲವು ಸಂದರ್ಭಗಳಲ್ಲಿ ಆಲಯಗಳ ಪರವಾಗಿ ಹೊನ್ನು ಹಣಗಳ ದಾನ ದತ್ತಿಗಳನ್ನು ಭೂಮಿಕಾಣಿಗಳನ್ನು ದಾನಿಗಳಿಂದ ಸ್ವೀಕರಿಸುವ ಕೆಲಸವನ್ನೂ, ಈ ದಾನ ದತ್ತಿಗಳ ಉದ್ದೇಶವಾದ ಆಲಯಾರ್ಚನೆ, ಉತ್ಸವ, ವೇದನೆ ಗಳನ್ನೂ, ನಡೆಸುವ ಜವಾಬ್ದಾರಿ ಹೊತ್ತ ಸಂಸ್ಥೆಯಂತೆಯೂ ಇದು ಕೆಲಸ ಮಾಡುತ್ತಿದ್ದಿತು. ತಿ.ತಿ. 8ರಲ್ಲಿ ಹೇಳುವಂತೆ ಐದು ದಾನದ ಗ್ರಾಮದಲ್ಲಿನ ಭೂಮಿಯನ್ನು ಕರಮುಕ್ತಗೊಳಿಸಿ ದಾನ ನೀಡಲಾಗಿದ್ದು ಈ ಕರಮುಕ್ತಿಯ ರಕ್ಷಣೆಯನ್ನು ಸಭೆಗೆ ಒಪ್ಪಿಸಲಾಗಿದ್ದಿತು. ಸಭೆಯ ಈ ರೀತಿಯ ಅಧಿಕಾರಿಗಳು 11 ನೇ ಶತಮಾನದವರೆಗೆ ನಡೆದು ಬಂದು ಆಗ ಯೋಗಿಮಲ್ಲಾವರದಿಂದ ತಿರುಚಾನೂರು ಆಡಳಿತ ಬೇರೆಯಾಗಿ ತಿರುಚಾನೂರಿನ ಗ್ರಾಮಾಡಳಿತಕ್ಕೆ ಮಾತ್ರವೇ ಸೀಮಿತವಾಯಿತು. ನಂತರದ ಕಾಲದ - ರಾಜರಾಜ - 3 ನ ಕಾಲದ ಒಂದು ಶಾಸನದ ಪ್ರಕಾರ ಯೋಗಿಮಲ್ಲಾ ವರದ ಶಿವಾಲಯದ ಆಡಳಿತದ ಅಧಿಕಾರ ಸಭೆಯಿಂದ ದೂರವಾಯಿತು ಎಂಬುದು ಸಿದ್ಧವಾಗುತ್ತದೆ.

ಸಾರ್ವಜನಿಕ ಆಡಳಿತರಂಗದಲ್ಲಿ ಹಲವು ರೀತಿಯ ಅಧಿಕಾರಿಗಳನ್ನು ಕಾಣಬಹುದಾಗಿದೆ. ಉದಾಹರ ಣೆಗೆ ದುರವ, ಊರಾಚ್ಚಿ, ಬಯ್ಯನ್, ಊರ್ ನಿಯೋಗಂ, ಕೋಯಿಲ್‌ಕೋನ್, ವಳವಕ್ಕೊನ್ -ಮೊದಲಾಗಿ. ಕಡೆಯ ಇಬ್ಬರು ಆಲಯಗಳ ವಿಷಯಗಳನ್ನು ನೋಡಿಕೊಳ್ಳುವಂತಹವರಾಗಿದ್ದಿರಬೇಕು,

ಜಿ.ಟಿ. 229 ರಲ್ಲಿ ಹೇಳುವ ಮೂವರು ದೇವರುಗಳಲ್ಲಿ ತಿರುವೆಂಕಟತ್ತು ಪೆರುಮಾನಡಿಗಳು ತಿರುಮಲೆಯ ಆಲಯದಲ್ಲಿನ ಮೂಲಮೂರ್ತಿ ಶ್ರೀ ವೆಂಕಟೇಶ್ವರಸ್ವಾಮಿಯಾದರೆ - ಮಿಕ್ಕವರು - ತಿರುವಿಳಂಕೋಯಿಲ್ ಪೆರುಮಾನಡಿಗಳು, ತಿರುಮಣ್ರಸಾಲೈ ಪೆರುಮಾನಡಿಗಳು ತಿರುಮಲೆಯ ಆಲಯದಲ್ಲಿರುವ ಉತ್ಸವ ಮೂರ್ತಿ ಹಾಗೂ ಮತ್ತೊಂದು ಮೂರ್ತಿ ಆಗಿರಬೇಕು.

ದಾನದತ್ತಿಗಳನ್ನು ನೀಡಿ ಅವುಗಳ ಪುದುವಟ್ಟಿನಿಂದಾಗಿ ಉತ್ಪನ್ನವಾದ ಬಡ್ಡಿಯ ಹಣದಿಂದಲೂ, ದಾನದ ಭೂಮಿಯ ಆದಾಯ, ಗ್ರಾಮಾದಾಯದಿಂದಲೂ ಶಾಶ್ವತವಾದ ಉತ್ಸವ, ಸೇವೆ, ನಿವೇದನೆಗಳನ್ನು ರಾಜಮನೆ ತನದವರು, ಅಧಿಕಾರಗಣದವರು ನಡೆಸುವ ಅವಕಾಶ ಮಾಡಿಕೊಟ್ಟರು. ಸ್ವಾಮಿಯ ಮುಂದೆ ದಾನಿಗಳ ಹೆಸ ರಿನಲ್ಲಿ ನಂದಾದೀಪವನ್ನು ಶಾಶ್ವತವಾಗಿ ಬೆಳಗಿಸುವಿಕೆಯಿಂದ ಹಿಡಿದು ಪ್ರತಿದಿನವೂ ವಿಗ್ರಹಕ್ಕೆ ಪೂಜೆಮಾಡಿ, ನೈವೇದ್ಯ ನೀಡಿ, ವಿಶೇಷ ಸಂದರ್ಭಗಳಲ್ಲಿ ಉತ್ಸವಾದಿಗಳನ್ನು ನಡೆಸುವುದರ ವರೆಗೆ ಈ ಸೇವೆಗಳು ಹರವನ್ನು ಪಡೆದಿದ್ದವು. ಈ ಸೇವೆಗಳ ಜೊತೆಗೇ ತಿರುಮಲೆಗೆ ದೇವರನ್ನು ಪೂಜಿಸಲು ನಿತ್ಯವೂ ಬರುತ್ತಿದ್ದ ಬ್ರಾಹ್ಮಣರ ಭೋಜನವವನ್ನೂ ನಂತರದಲ್ಲಿ ಸೇರಿಸಲಾಯಿತು.

ಈ ಒಂದು ವ್ಯವಸ್ಥೆಯು ನಂತರದ ಕಾಲದಲ್ಲಿ ಎಷ್ಟು ವ್ಯಾಪಕವಾಯಿತೆಂದರೆ ಪ್ರತಿಯೊಂದು ದಿನವೂ ಉತ್ಸವದಿನವಾಗಿ ದಾನಿಗಳಿಂದಾಗಿ ಪರಿವರ್ತಿತವಾಗಿ ಅವುಗಳ ಶಾಶ್ವತ ಆಚರಣೆಗೆ ಅಗತ್ಯವಾದ ಇಡುಗಂಟಿನ ವ್ಯವಸ್ಥೆಯಾಯಿತು.

ಆಲಯವು ಒಂದು ಸಂಸ್ಥೆಯ ಆಡಳಿತಕ್ಕೆ ಒಳಪಟ್ಟದ್ದರಿಂದ ದೂರ - ಬಾರದ - ಜನ ತಮ್ಮ ದಾನ ದತ್ತಿಗಳನ್ನು ಈ ಸಂಸ್ಥೆಗೆ ನಂಬಿಕೆಯಿಂದ ಒಪ್ಪಿಸಿ ತಾವು ಅಪೇಕ್ಷಿಸಿದ ಸೇವೆ ಶಾಶ್ವತವಾಗಿ ಯಾವುದೇ ಅಡೆ ತಡೆಗಳಿಲ್ಲದಂತೆ ನಡೆಯುವ ಬಗ್ಗೆ ನಿರಾಂತಕರಾಗಿರಲು ಸಾಧ್ಯವಾಯಿತು. ಇಡೀ ಗ್ರಾಮವೇ ಒಂದು ಸಂಸ್ಥೆಯ ಅಧೀನವಾಗಿ ಒಬ್ಬ ಕಾರ್ಯದರ್ಶಿಯಂತಹವರು (ಶ್ರೀಕಾರ್ಯಂ) ಇದ್ದರು. ತಿರುಚಾನೂರು ಆಲಯದ ನಾಲ್ಕನೇ ಶಾಸನವು 'ಶ್ರೀಕಾರ್ಯಂ' ನಲ್ಲಿ ಠೇವಣಿಯಾಗಿಟ್ಟ ಚಿನ್ನದ ಮೊತ್ತವನ್ನು ತಿಳಿಸುತ್ತ, ಈ ಕಾಣಿಕೆ ಯನ್ನು ಸಾರ್ವಜ ನಿಕವಾಗಿ ಉದ್ಘೋಷಿತ ಗೊಳಿಸಬೇಕೆಂದೂ, ಪಟ್ಟಣ ಜನರ ಆಜ್ಞೆಯೆಂಬಂತೆ - ಊರ್ ನಿಯೋಗಂ - ಎಂಬಂತೆ ಪ್ರತ್ಯೇಕವಾದ ದಾಖಲಾತಿ ಕಡತದಲ್ಲಿ ಬರೆದು ರಕ್ಷಿಸಬೇಕೆಂದೂ ತಿಳಿಸುತ್ತದೆ. ಇದು ಮಂತ್ರಸಾಲೆಯ - ಇಳಂ ಕೋವಿಲ್‌ನ ದೇವರ ಹಾಗೂ ತಿರುವೆಂಗಡದ ದೇವರ ಪ್ರಯೋಜನಕ್ಕಾಗಿ ಬಳಕೆಯಾಗುವಂತಹದು. ಆರನೆ ಶಾಸನ ಆಲಯದಲ್ಲಿ ಇಬ್ಬರು ಬ್ರಾಹ್ಮಣರಿಗೆ ಪ್ರತಿದಿನ ಭೋಜನ ನೀಡುವ ವ್ಯವಸ್ಥೆಗೆ ಸಂಬಂಧಿಸಿದ್ದು. ಏಳನೆಯದು ಶಕವರ್ಷ 820 ರ (ಕ್ರಿ.ಶ. 898) ಶಾಸನವಾಗಿದ್ದ ಒಂದು ಸಾವಿರ ಕಡಿಯ ಹಳ್ಳಿಯ ಆದಾಯ-ಪುರವು-ವನ್ನು ತಿಳಿಸುವುದು. ಸರಕಾರಕ್ಕೆ ಗ್ರಾಮ ನೀಡಬೇಕಿದ್ದ ಕರವನ್ನು ಸೂಚಿಸುವ ಈ ಶಾಸನ ತ್ರುಟಿತವಾಗಿದ್ದರೂ ನಂತರದ ಕಾಲದಲ್ಲಿನ ದಾಖಲೆಗಳು ವಿವರಿಸುವಂತೆಯೇ ಇಲ್ಲಿನ ಗ್ರಾಮವ್ಯವಸ್ಥೆಯೂ ಇದ್ದಿತೆಂಬುದು ತಿಳಿದು ಬರುತ್ತದೆ. ಎಂಟು ಹಾಗೂ ಒಂಬತ್ತನೆಯ ದಾಖಲೆಗಳು ಕೋ - ಪಾರ್ಥಿವೇಂದ್ರವರ್ಮನ ಆಡಳಿತದ 14 ನೆಯ ವರ್ಷಕ್ಕೆ ಸಂಬಂಧಿ ಸಿದ್ದು, ಪಾರ್ಥಿವೇಂದ್ರ ವರ್ಮನ ಅಧೀನನಾಗಿದ್ದ ಪಲ್ಲವ ರಾಜ ಕಾಡವರಾಯನ ಪತ್ನಿ ಸಾಮವೈ ರಾಣಿಯು ನೀಡಿದ ಕಾಣಿಕೆಗಳ ಬಗ್ಗೆ ಹೇಳುತ್ತದೆ. ಈ ಹೆಂಗಸಿನ ಬಿರುದು 'ಕಾಡವನ್ ಪೆರುಂದೇವಿ' ಈಕೆಯನ್ನು ಪಲ್ಲವ ಪೆರ್ಗಡೆಯ ಮಗಳೆಂದು ಕರೆಯಲಾಗಿದೆ. ಪೆರ್ಗಡೆ-ಹೆಗ್ಗಡೆ- ಪಲ್ಲವ ಪ್ರಮುಖನೋರ್ವನ ಪುತ್ರಿಯೆಂದು ತಿಳಿಯಬಹುದು. ಈಕೆ ನೀಡಿದ ದಾನ 'ವೆಂಗಡದ ಮೇಲೆ ನಿಂತಿರುವ ದೇವರಿಗೆ'. ಈಕೆ ಮೂಲದೇವರ ಪ್ರತಿಮೂರ್ತಿಯಾದ ಬೆಳ್ಳಿಯ ವಿಗ್ರಹವನ್ನು ಮಾಡಿಸಿ ಅದಕ್ಕೆ ಹಲವಾರು ಆಭರಣಗಳನ್ನು ತೊಡಿಸಿದಳು. ಈ ಆಭರಣಗಳಲ್ಲಿನ ಚಿನ್ನ 47 ಕಳಂಜು ಎಂದು ಹೇಳಲಾಗಿದೆ. ಈ ಕಾಣಿಕೆ ಯನ್ನು ಆಲಯಕ್ಕೆ ನೀಡಿದ ನಂತರ 3000 ಕುಳಿಯ (ಕುಟೆ?) ಭೂಮಿಯನ್ನು ಘಟಕದ (ಬ್ರಾಹ್ಮಣ ಅಗ್ರಹಾರದ) ಮಾನದಲ್ಲಿ 16 ಕೋಲಿನ ಅಳತೆಯ ಮೂರು ಪಟ್ಟಿ ಭೂಮಿಯನ್ನು ನೀಡಿದಳು.

ಈ ಭೂಮಿಯನ್ನು ಆಕೆ ಬೇರೆ ಬೇರೆ ಕಡೆಗಳಿಂದ ಕೊಂಡುಕೊಂಡಳೆಂದು ದಾಖಲಾಗಿದೆ. ತಿರುಚಾ ನೂರಿನ ಸಭೆಯೂ ಇವು ಗಳಲ್ಲಿ ಒಂದು. ಒಬ್ಬಾನೊಬ್ಬ ಲಕ್ಷ್ಮಣನಂಬಿ (ಮಠದ ಕಾರ್ಯದರ್ಶಿ)ಯೂ ಒಬ್ಬನಾಗಿ ದ್ದನು. ಇಳಂಕೋವಿಲ್‌ನ ದೇವರು ಮತ್ತೊಂದು. ಇವರೆಲ್ಲರಿಗೆ ಅವರವರ ಭೂಮಿಗೆ ತಕ್ಕ ಬೆಲೆಯನ್ನು ಕೊಟ್ಟು ಕೊಳ್ಳಲಾಯಿತು. ಈ ಜಮೀನನ್ನು ಕರಮುಕ್ತಗೊಳಿಸಲು ಅನುವಾಗುವಂತೆ ಸಭೆಗೂ, ಸಂಬಂಧದ ದೈವಕ್ಕೂ ತಕ್ಕ ಹಣವನ್ನು ನೀಡಲಾಯಿತು. ಇವೆಲ್ಲವನ್ನೂ ಸಾಧಿಸಿದ ನಂತರ ಒಟ್ಟು ಜಮೀ ನನ್ನು ವರ್ಷದ ಒಂದು ನಿರ್ದಿಷ್ಟ ದಿನದ ಉತ್ಸವದ ವೆಚ್ಚಗಳನ್ನು ತೂಗಿಸಲು ಆಲಯಕ್ಕೆ ಒಪ್ಪಿಸಲಾಯಿತು. ತಿರುವೆಂಗಡದಮಠದ

ಕಾರ್ಯಕರ್ತರಿಗೆ ಈ ಉತ್ಸವದ ಸಂಬಂಧದ ಎಲ್ಲ ಹೊಣೆಯನ್ನು ಒಪ್ಪಿಸಲಾಯಿತು. ಸಭೆಯವರು ಜಮೀನನ್ನು ಒಪ್ಪಿಕೊಂಡು ಅದರ ಕೃಷಿಗೆ ವ್ಯವಸ್ಥೆ ಮಾಡಬೇಕಾಗಿದ್ದಿತು. ಈ ದಾನವು ಸೂರ್ಯಚಂದ್ರರಿರುವ ವರೆಗೆ ನಡೆಯ ತಕ್ಕದ್ದು. ಇಡೀ ವ್ಯವಸ್ಥೆಯನ್ನು ಶ್ರೀ ವೈಷ್ಣವರು ಆಗ ಮಾಡಿಸಬೇಕು.

ನಂತರದ ದಾನವು ಇದೇ ರೀತಿಯದಾಗಿದ್ದು, 4176 ಕುಳಿ (ಗುಂಟೆ?) ಭೂಮಿಯನ್ನು ಮಠದ ಕಾರ್ಯ ನಿರ್ವಾಹಕರಿಗೆ ಒಪ್ಪಿಸಿ, ಮಾರ್ಗಳಿ ತಿಂಗಳ (ಡಿಸೆಂಬರು - ಜನವರಿ) ಶುದ್ಧ ದ್ವಾದಶಿಯ ದಿನ ಉತ್ಸವವನ್ನು ನಿರ್ವಹಿಸಲು ನೀಡಲಾಯಿತು. ಹೀಗೆ ಶಾಸನಗಳಲ್ಲಿ ಕಂಡುಬರುವಂತೆ ಪಲ್ಲವರ ಕಾಲಕ್ಕೇನೆ ಆಲಯದ ಆಡಳಿತ ಸುಸೂತ್ರವಾಗಿ, ಸುವ್ಯವಸ್ಥಿತವಾಗಿ ನಡೆಯುವ ಪದ್ಧತಿಯನ್ನು ಪ್ರವೇಶಗೊಳಿಸಲಾಗಿದ್ದಿತು.

ಆಲಯಕ್ಕೆ ಕಾರ್ಯಕ್ರಮ ನಿರ್ವಹಣೆಗೆ ತಕ್ಕ ವ್ಯವಸ್ಥೆ ಯಂತ್ರಾಂಗ ಉಂಟಾಗಿದ್ದದ್ದೇ ಅಲ್ಲದೆ, ಗ್ರಾಮ ಸಭೆಗಳ ಕಾರ್ಯನಿರ್ವಹಣೆಯು ಸಶಕ್ತವಾಗಿ, ಸದೃಢವಾಗಿ ನಡೆಯುತ್ತಿದ್ದುದನ್ನು ಕಾಣಬಹುದಾಗಿದೆ. ಗ್ರಾಮಸಭೆ ಗಳಲ್ಲಿ ಹಲವಾರು ವಿಭಾಗಗಳಿದ್ದು ಲೆಕ್ಕಪರಿಶೋಧನ ಸಮಿತಿ, ಭೂಮಿಯ ನಿರ್ವಹಣೆ, ಮಾರಾಟ, ವಿತರಣೆ, ಜಮಾಬಂದಿ, ದಾನಿಗಳ ಅಪೇಕ್ಷೆಯಂತೆ ಅವುಗಳ ಮೇಲು ವಿಚಾರಣೆ, ಅವುಗಳನ್ನು ಕರ ಮುಕ್ತಗೊಳಿಸುವಿಕೆ- ಇತ್ಯಾದಿಗಳೆಲ್ಲ ಸುಸೂತ್ರವಾಗಿ ನಡೆಯುತ್ತಿದ್ದವು. ಆಲಯಗಳ ಆಡಳಿತದಲ್ಲಿ ಇದು ಸುಲಭತೆ ಯನ್ನು ಇದ್ದಕ್ಕಿದ್ದಂತೆ ಒಮ್ಮೆಲೇ ತರಲಾಗಲಿಲ್ಲವೆಂಬುದು ಸ್ಪಷ್ಟವೇ ಇದೆ. ಹಾಗಾಗಿ ಆಧಾರಗಳ ಕೊರತೆ ಇದ್ದರೂ ಸಹ ಆಲಯಗಳ ಆಡಳಿತ, ಪೂಜೆ ಬಹುಕಾಲದಿಂದ ನಡೆದು ಬಂದು ಬಲವಾಗಿ ನೆಲೆಯೂರಿದ್ದವೆಂಬುದರಲ್ಲಿ ಯಾವ ಅನೌಚಿತ್ಯವೂ ಇರದು.

### ಉ. ಆಲಯ ದಾಖಲೆಗಳಲ್ಲಿ ಕಂಡು ಬರುವ ಆರ್ಥಿಕ ಪರಿಸ್ಥಿತಿ

ಆಲಯದ ಭೂಮಿಯನ್ನು ಕೃಷಿಮಾಡಲು ಸಾಧಾರಣವಾಗಿ ಗುತ್ತಿಗೆ ನೀಡಲಾಗುತ್ತಿದ್ದಿತು. ಜಿ.ಟಿ. 229 ಪ್ರಕಾರ ಆಲಯ ಭೂಮಿಯನ್ನು ಸಾಗುವಳಿ ಮಾಡುವವನು ಸಾಮಾನ್ಯವಾಗಿ ಅದೇ ನಾಡುವಿನಲ್ಲಿ ವಾಸ ಮಾಡುವವನಾಗಿರಬೇಕು. ಇದರಿಂದಾಗಿ ಜಮೀನಿನ ಸಾಗುವಳಿಯೂ, ಉತ್ಪನ್ನದ ಸಂಗ್ರಹವೂ ಸುಲಭತರವಾಯಿತು. ದೇವರಿಗೆ ನಿವೇದಿಸುವ ಅಕ್ಕಿಯನ್ನು ಪರಿಶುದ್ಧಗೊಳಿಸಿರ ಬೇಕು. 80 ಬಾರಿಯಾದರೂ ಕುಟ್ಟಿರುವಂತಹ ಅತಿ ಶುಭ್ರವಾದ ಅಕ್ಕಿಯಿಂದ ಮಾಡಿದ ಅನ್ನವೇ ಭಗವಂತನಿಗೆ ನಿವೇದನೆಯಾಗಬೇಕು. ದಾನ ನೀಡಿದ ಚಿನ್ನವು ಶುದ್ಧ ಆಗಿದ್ದು, ಆಲಯದಲ್ಲಿ ಒಪ್ಪಿಸುವ ಮೊದಲು ಸರಿಯಾಗಿ ಖಚಿತವಾಗಿ ತೂಕ ಹಾಕಿ ನೀಡಬೇಕು. ಚಿನ್ನದ ತೂಕದ ಮಾನ ಕಳಂಜು ಆಗಿದ್ದಿತು. ಜಮೀನಿನ ಮಾಪನದ ಅಳತೆಗೋಲು 'ಕಡಿಕ್ಕೈ - ಕೋಲ್' ಆಗಿದ್ದಿತು. ಇದು 16 ಕೈಯಳತೆಯ ಸರಪಳಿಯಾಗಿರುತ್ತಿದ್ದು. ಕುಳಿ (ಗುಂಟೆ?)ಯ ಮಾನದಲ್ಲಿ ಅಳೆಯುತ್ತಿದ್ದರು. ಇವು ಒಂದು ಸಾವಿರವಿದ್ದಾಗ ಒಂದು ಪಟ್ಟಿಯಾಗುತ್ತಿದ್ದಿತು.

ತಿ.ತಿ. 8ರಲ್ಲಿ ಹಲವು ರೀತಿಯ ಆಭರಣಗಳನ್ನು ಹೆಸರಿಸಲಾಗಿದೆ. ದೇವರಿಗೆ ಅಲಂಕಾರಕ್ಕೆಂದು ಈ ಆಭರಣಗಳನ್ನು ಬಳಸ ಲಾಗುತ್ತಿದ್ದಿತು. ಇವುಗಳನ್ನು ಚಿನ್ನದಿಂದ ಮಾಡಿಸಿ, ವಜ್ರ, ವೈಡೂರ್ಯ, ಗೋಮೇಧಿಕ, ಇಂದ್ರನೀಲ- ಮೊದಲಾದವುಗಳನ್ನು ಅವುಗಳಲ್ಲಿ ಹುದುಗಿಸುತ್ತಿದ್ದರು. ಅಮೂಲ್ಯ ಅನರ್ಘ್ಯ ಹರಳುಗಳು ಬಳಕೆಯಲ್ಲಿದ್ದು ಇದರಿಂದಾಗಿ ಕಲೆಗಾರಿಕೆ ಉಚ್ಛ್ರಾಯ ಸ್ಥಿತಿಯಲ್ಲಿದ್ದಿತೆಂದೂ, ದೇಶದಲ್ಲಿ ಉನ್ನತವಾದ ನಾಗರಿಕತೆ ಯಿದ್ದಿತೆಂದೂ ತಿಳಿಯಬಹುದು. ಆಂತರಿಕ ಸಂಪರ್ಕವನ್ನು ಸುಮಾರ್ಗ ನಿರ್ಮಾಣದಿಂದ ಸಾಧಿಸ ಲಾಗಿದ್ದು ರಸ್ತೆಗಳ ಜಾಲದಿಂದಾಗಿ ವ್ಯಾಪಾರ ವಹಿವಾಟು ಸುಲಭವಾಗಿದ್ದಿತೆಂದು ಭಾವಿಸಬಹುದು. ಉತ್ತರದ ಮಾರ್ಗವು (ವಡಗುವಳಿ) ರಾಜಮಾರ್ಗವಾಗಿದ್ದು ತಮಿಳು ದೇಶದಿಂದ ಮೇಲಿನ ವೆಂಗಿಯವರೆಗೂ ಅಲ್ಲಿಂದ ಮುಂದಕ್ಕೂ ಹರಡಿದ್ದಿತು. ಇದು ತಿರುಚಾನೂರಿನ ಮೂಲಕ ಹಾದು ಹೋಗುತ್ತಿದ್ದಿತು. ಬೇಸಾಯಕ್ಕೆ ಪ್ರಾಧಾನ್ಯ ನೀಡಿ, ಕೆರೆ ಕಟ್ಟೆಗಳನ್ನು, ಕಾಲುವೆಗಳನ್ನು ಸುವ್ಯವಸ್ಥಿತಗೊಳಿಸಿ ನೀರಾವರಿಯನ್ನು ನೋಡಿಕೊಳ್ಳಲಾಗುತ್ತಿದ್ದಿತು. ಚೋಳರ ಕಾಲದಲ್ಲಿ ಕಂಡು ಬರುವಂತಹ ವೈವಿಧ್ಯಮಯವಾದ

ಸುಂಕಗಳು ಪಲ್ಲವರ ಕಾಲದಲ್ಲಿ ಕಂಡುಬರುವುದಿಲ್ಲ. ಕೇವಲ ಸಾಂಪ್ರದಾಯಕವಾದ ಕರ್ತವ್ಯಕಾಣಿಕೆ (ಕರ) ಮಾತ್ರವೇ ನೀಡಬೇಕಾಗಿದ್ದಿತು. (ಕಡಮೈ ಕುಡುಮೈ)

## 4. ಚೋಳರ ಕಾಲದಲ್ಲಿ ಆಲಯ

### ಅ. ರಾಜ್ಯ ವಿಭಾಗಗಳು :

ತೊಂಡಮಂಡಲವೂ ಸೇರಿದಂತೆ ಇಪ್ಪತ್ತನಾಲ್ಕು ಕೋಟ್ಟಂಗಳಿಂದ ಕೂಡಿದ್ದ ಪೆರುಂಬಾಣಪ್ಪಾಡಿಯು ಜಯಂಗೊಂಡ ಚೋಳ ಮಂಡಲದ ಒಂದು ಪ್ರಮುಖ ವಿಭಾಗವಾಗಿದ್ದರ ಹೊರತು, ದೇಶದಲ್ಲಿನ ಎಲ್ಲ ವಿಭಾಗ, ಉಪವಿಭಾಗಗಳೂ ಪಲ್ಲವರ ಕೊವಿಜಯ ದಂತಿ ವಿಕ್ರಮವರ್ಮನ ಕಾಲದಲ್ಲಿದ್ದಂತೆಯೇ ಚೋಳರ ಕಾಲ ದಲ್ಲಿಯೂ ಮುಂದುವರೆದಿವು. ತಿರುಚಾನೂರು ಹಾಗೂ ತಿರು ಮಂಡಯಂ ಗ್ರಾಮ ಸಭೆಗಳ ಉಲ್ಲೇಖಗಳನ್ನು ನೋಡಬಹುದಾಗಿದ್ದು, ಇವುಗಳಲ್ಲಿ ತಿರುಚಾನೂರು ಗ್ರಾಮಸಭೆ ಹೆಚ್ಚು ಪ್ರಾಧಾನ್ಯ ಹೊಂದಿತ್ತೆಂಬುದನ್ನು ಮೂರನೇ ರಾಜರಾಜನ ಕಾಲದ ಒಂದು ಶಾಸನದಿಂದ (ಜಿ.ಟಿ. 126) ರಿಂದ ತಿಳಿಯಬಹುದಾಗಿದೆ. ತಿರುಚಾನೂರು ಪಡೆದಿದ್ದ ಧಾರ್ಮಿಕ ಹಾಗೂ ರಾಜಕೀಯ ಪ್ರಾಧಾನ್ಯದಿಂದಾಗಿಯೂ, ಇಲ್ಲಿಗೆ ರಾಜಪ್ರಮುಖರು ಪದೇ ಪದೇ ಭೇಟಿ ನೀಡುತ್ತಿದ್ದ ಕಾರಣದಿಂದಾಗಿಯೂ, ಸ್ಥಳೀಯ ಗ್ರಾಮಸಭೆಯು ತನ್ನ ಸಮಾವೇಶಗಳನ್ನು ನಡೆಸಲು ಅನುಕೂಲವಾಗುವಂತೆಯೂ, ಇಲ್ಲಿ ಸರ್ಕಾರಿ ವೆಚ್ಚದಲ್ಲಿ ಒಂದು ಓಲಗಶಾಲೆ - ದರ್ಬಾರ್ ಹಾಲ್ - ನಿರ್ಮಾಣ ವಾಗಿದ್ದಿರ ಬೇಕು.

ತಿರುಮಲೆಯ ಹಲವು ಬಿಡಿ ಶಾಸನಗಳು ತ್ರುಟಿತವಾಗಿದ್ದು ಅವುಗಳಲ್ಲಿ ಕಂಡುಬರುವ ಕುಲೋತ್ತುಂಗ ಚೋಳನ ವಂಶವೃಕ್ಷ ವರ್ಣನೆಯಲ್ಲಿ 'ವಿರ್ರಿರುಂದರುಳಿಯ ಕೋವಿ ರಾಜಕೇಸರಿ ಪನ್ಮಾರ್', ರಾಜೇಂದ್ರಚೋಳ, ಕುಲೋತ್ತುಂಗಚೋಳ ಎಂದುಮುಂತಾದ ಹೆಸರುಗಳು ಕಂಡು ಬರುತ್ತವೆ. ಈತನ ಆಡಳಿತದ ಮೊದಲ ದಿನಗಳಲ್ಲಿ (ಮೊದಲ ಮೂರುವರ್ಷ) ಈತ ಎರಡನೇ ರಾಜೇಂದ್ರನೆಂಬ ಹೆಸರು ಹೊಂದಿದ್ದು, ಆಡಳಿತದ ನಾಲ್ಕನೆಯ ವರ್ಷದಲ್ಲಿ ಕುಲೋತ್ತುಂಗ ಚೋಳನೆಂಬ ಹೆಸರು ಹೊಂದಿದನೆಂದು ತಿಳಿಯಲಾಗಿದೆ. ''ಪುಗಳ್ ಸುಳ್ಂದ - ಪುನರಿ ಅಗಳ್ ಸುಳ್ಂದ ಪುವಿಯಿಲ್'' ಎಂಬ ಪೂರ್ಣಪಾಠ ಜಿ.ಟಿ. 381 ರಲ್ಲಿ ಯೋಗಿಮಲ್ಲಾವರ ದಲ್ಲಿನ (265-ಮದ್ರಾಸು ಶಾಸನ ಸಂಪುಟ-1904) ಕೋರಾಜಕೇಸರಿವರ್ಮ ಅಲಿಯಾಸ್ ಚಕ್ರವರ್ತಿಗಳ್ ಶ್ರೀಕುಲೋತ್ತುಂಗ ಚೋಳ ದೇವನ ಆಳ್ವಿಕೆಯ ಇಪ್ಪತ್ನಾಲ್ಕನೆಯ ವರ್ಷದ ಶಾಸನದಲ್ಲಿ ದೊರೆಯುತ್ತದೆ. ಒಂದನೇ ರಾಜೇಂದ್ರ ಚೋಳ ಹಾಗೂ ಒಂದನೇ ಕುಲೋತ್ತುಂಗ ಚೋಳರ ಆಡಳಿತದ ನಡುವಿನ ಅವಧಿಯಲ್ಲಿ, ಈ ಮೊದಲಿಗೆ ಜಯಂಗೊಂಡ ಚೋಳಮಂಡಲವೆಂದು ಹೆಸರಾಗಿದ್ದ ತೊಂಡಮಂಡಲ ಪ್ರದೇಶವನ್ನು ರಾಜೇಂದ್ರ ಚೋಳನು (ತಿ.ತಿ. 20) ವಶಪಡಿಸಿಕೊಂಡ ಮೇಲೆ ರಾಜೇಂದ್ರ ಚೋಳ ಮಂಡಲವೆಂದು ಪುನರ್ನಾಮಕರಣ ಹೊಂದಿದಂತೆ ಕಂಡುಬರುತ್ತದೆ. ಈ ಹೆಸರು ಜಿ.ಟಿ. 381ರಲ್ಲಿಯೂ ವೀರರಾಜೇಂದ್ರದೇವನ ಆಡಳಿತದ 6ನೇ ವರ್ಷದ ಜಿ.ಟಿ. 386 ನೇ ಶಾಸನದಲ್ಲಿಯೂ ಕಂಡುಬರುತ್ತದೆ. ರಾಜೇಂದ್ರ ಚೋಳನ ಆಡಳಿತದಲ್ಲಿ ಈ ರೀತಿ ಹೊಸ ಹೆಸರು ಹೊಂದಿದ್ದು, ವೀರರಾಜೇಂದ್ರದೇವ ಹಾಗೂ ಒಂದನೇ ಕುಲೋತ್ತುಂಗರ ಕಾಲದಲ್ಲಿ ಮುಂದುವರೆದಿರಬೇಕು. ಆದರೆ ಮೂರನೇ ರಾಜೇಂದ್ರನ ಆಡಳಿತ ಕಾಲಕ್ಕೆ (ಜಿ.ಟಿ. 380, 384 ಹಾಗೂ 389) ಜಯಂಗೊಂಡ ಚೋಳ ಮಂಡಲವೆಂಬ ಹೆಸರು ಪುನಃ ಪ್ರವೇಶವಾಯಿತು

### ಆ. ಚೋಳ ಶಾಸನಗಳ ವಿವರ :

ಬಲವಂತರೂ, ಪ್ರಜಾನುರಾಗಿಗಳೂ ಆಗಿದ್ದ ಈ ಚೋಳ ಸಾಮ್ರಾಟರಲ್ಲಿನ ಹಲವು ಪ್ರಮುಖರನ್ನು ಶಾಸನಗಳು ನಮಗೆ ಪರಿಚಯ ಮಾಡಿಕೊಡುತ್ತವೆ. ಅವರಲ್ಲಿ ಮೊದಲಿಗೆ ಕಂಡುಬರುವವನೆಂದರೆ ಕ್ರಿ.ಶ. 905 ರಿಂದ 953 ರವರೆಗೆ (ಜಿ.ಟಿ. 232 ಹಾಗೂ 234) ಆಳಿದ ಕೋ ಪರಕೇಸರಿವರ್ಮನ್ ಅಥವಾ ಒಂದನೇ ಪರಾಂತಕ. ಇಲ್ಲಿನ ಎರಡೂ ಮುರುಕು ಶಾಸನಗಳು ಈ ಸಾಮ್ರಾಟನ 20 ಹಾಗೂ 29 ನೆಯ ಆಡಳಿತ ವರ್ಷಗಳಲ್ಲಿ ನೀಡಲಾದ ನಂದಾದೀಪದ ದಾನದ ಬಗ್ಗೆ ತಿಳಿಸುತ್ತವೆ. ಜಿ.ಟಿ. 232ನೇ

ಶಾಸನವು ಅಂದಿನ ರಾಜ್ಯದ ಪ್ರಾಂತೀಯ ವಿಭಾಗಗಳನ್ನು ಕುರಿತು ಹೇಳುತ್ತ ತಿರುಚೋಕನೂರು (ತಿರುಚಾನೂರು) ಗ್ರಾಮಸಭೆಯನ್ನು ಕುರಿತು ಹೇಳುತ್ತದೆ. (ಈ ಶಾಸನ ದೊರೆತ ಸ್ಥಳ) ಒಂದನೇ ರಾಜರಾಜನ ತಂದೆಯಾದ ಎರಡನೇ ಪರಾಂತಕ ಸುಂದರ ಚೋಳನ ನೇರ ಪ್ರಸ್ತಾಪ ಕಂಡುಬರುವುದಿಲ್ಲವಾದರೂ, ತಿರುಮಲೆಯ ಆಲಯದ ಗರ್ಭಗುಡಿಯನ್ನು ಜೀರ್ಣೋದ್ಧಾರಗೊಳಿಸಿದಾಗ ವೀರ ಸಿಂಹ ಯಾದವರಾಯನ ಆಜ್ಞೆಯಂತೆ ಪುನಃ ಲಿಖಿಸಲ್ಪಟ್ಟ ಶಾಸನಗಳಲ್ಲಿ ಒಂದು - (ತಿ.ತಿ.17) ಒಂದನೇ ರಾಜರಾಜನ ಆಡಳಿತದ 16ನೇ ವರ್ಷದಲ್ಲಿ ಚೇರಮಾನನ ಮಗಳೂ, 'ಪೊನ್ ಮಾಳಿಗೈಯಿಲ್ ತೂಂಜಿನಾನ್‌ನ ರಾಣಿ'ಯೂ ಆದ ಪರಾಂತಕ ದೇವಿಯಮ್ಮನು ಸ್ವಾಮಿಗೆ ಅನರ್ಘ್ಯ ರತ್ನಗಳನ್ನು ಹುದುಗಿಸಿದ ಒಂದು ಪಟ್ಟವನ್ನು ಸಮರ್ಪಿಸಿದಂತೆ ತಿಳಿಸುತ್ತದೆ. ಇಲ್ಲಿ ಹೇಳಲಾಗಿ ರುವ ಚಿನ್ನದ ಮನೆ ಯಲ್ಲಿ ಮಲಗುವ ರಾಜನೇ ಎರಡನೇ ಪರಾಂತಕ ಸುಂದರ ಚೋಳ ನೆಂಬುದು ಶ್ರುತವಾಗಿದೆ. ಇಲ್ಲಿ ಹೇಳಲಾಗಿರುವ 'ದೇವಿಯಮ್ಮಾರ್' ಪದದಿಂದಾಗಿ ಈಕೆ ಎರಡನೇ ಪರಾಂತಕನ ಹಿರಿಯ ಪಟ್ಟದ ರಾಣಿಯಾ ಗಿದ್ದು, ಎರಡನೇ ಪರಾಂತಕನು ತೀರಿಕೊಂಡಾಗ ಅವನೊಡನೆ ಸತಿ ಹೋದ ವಾನವನ್ ಮಹಾದೇವಿಗಿಂತ ಬೇರೆಯಾಗಿರಬೇಕು. ಈ ವಾನವನ್ ಮಹಾದೇವಿಗೆ ಇಬ್ಬರು ಮಕ್ಕಳು - ಕುಂದವೈಯರ್ ಹಾಗೂ ಒಂದನೇ ರಾಜರಾಜ. ಕುಂದವೈಯರ್ ಧಾರ್ಮಿಕ ಸ್ತ್ರೀಯಾಗಿದ್ದು ತನ್ನ ತಂದೆ ತಾಯಿಯರ ನೆನಪಿನಲ್ಲಿ ಅವರ ವಿಗ್ರಹಗಳನ್ನು ತಂಜಾವೂರು ಆಲಯದಲ್ಲಿ ಸ್ಥಾಪಿಸಿದಳು.ಪರಾಂತಕ ದೇವಿಯಮ್ಮನು ತನ್ನ ಪತಿಯ ಮರಣಾನಂತರವೂ ಕನಿಷ್ಠ 31 ವರ್ಷ ಜೀವಿಸಿದ್ದು ಒಂದನೇ ರಾಜರಾಜನ ಆಡಳಿತದ 16 ನೇ ವರ್ಷದವರೆಗೆ (ಕ್ರಿ.ಶ. 1001) - ದಾನ ಧರ್ಮಗಳನ್ನು ಮಾಡುತ್ತ ಜೀವಿಸಿದ್ದಳು.

ಒಂದನೇ ರಾಜರಾಜನು ಮೂರು ಶಾಸನಗಳಲ್ಲಿ ಹೆಸರಿಸಲ್ಪಟ್ಟಿದ್ದಾನೆ. (17 ತಿ.ತಿ. 214 ಜಿ.ಟಿ ಹಾಗೂ 215 ಜಿ.ಟಿ) ಮೇಲೆ ಹೇಳಲಾಗಿರುವಂತೆ ವಂಶವೃಕ್ಷ ದೊಡನೆ ವಿವರವಾಗಿರುವ ತಿ.ತಿ. 17 ಪರಾಂತಕ ದೇವಿ ಯಮ್ಮನು ರತ್ನಗಳನ್ನು ಹೊಂದಿದ ಚಿನ್ನದ ಪಟ್ಟವನ್ನು ಸಮರ್ಪಿಸಿದುದನ್ನು ವಿವರಿಸುತ್ತದೆ. ಮಿಕ್ಕ ಎರಡು ಶಾಸನಗಳೂ ಮುರುಕು ಶಾಸನಗಳಾಗಿದ್ದು ಮೊದಲನೆಯದು ರಾಜರಾಜನ ಪ್ರಶಸ್ತಿಯನ್ನು ವಿವರಿಸಿದರೆ, ಇನ್ನೊಂದು ಅರುಳಕ್ಕಿ ಅಲಿಯಾಸ್ ರಾಜರಾಜ ಮುವೇಂದವೇಲನ್ ಆಲಯದ ಭಂಡಾರಕ್ಕೆ 40 ಕಳಂಜು ಚಿನ್ನವನ್ನು ದೀಪಕ್ಕಾಗಿ ದಾನ ನೀಡಿದಂತೆ ತಿಳಿಸುತ್ತದೆ.

ಯೋಗಿ ಮಲ್ಲಾವರದ ಒಂದು ಶಾಸನ (ಜಿ.ಟಿ 384) ಮೂರನೇ ರಾಜರಾಜನ ಆಡಳಿತದ 9 ನೇ ವರ್ಷದಾಗಿದ್ದು 'ಶ್ರೀಮತ್ ಕೀರ್ತಿ ಮುನ್ನಡೈತ್ತಾಗ ಶ್ರೀ ಕೋ ರಾಜಕೇಸರಿಯಾನ ಶ್ರೀ ರಾಜರಾಜ ದೇವರ'ನ್ನು ಉಲ್ಲೇಖಿಸುತ್ತದೆ. ಈ ರಾಜಕೇಸರಿ ಒಂದನೇ ರಾಜರಾಜನೇ ಆಗಿರಬೇಕು - ಕಾರಣ ಎರಡನೇ ರಾಜರಾಜನು ಪರಕೇಸರಿ ಮಾತ್ರ ವಾಗಿದ್ದು, ಅವನ ಆಡಳಿತ 23 ವರ್ಷದ್ದಾಗಿರಲಿಲ್ಲ. (ಮೇಲೆ ಹೇಳಿದ ಶಾಸನ ರಾಜನ ಆಳ್ವಿಕೆಯ 23 ನೇ ವರ್ಷದ್ದು.)

ತಿ.ತಿ. 20 ರ ಶಾಸನದಲ್ಲಿ ಶ್ರೀ ಕೊಪ್ಪರಕೇಸರಿ ಪನ್ಮಾರ್ ಶ್ರೀ ರಾಜೇಂದ್ರ ಚೋಳದೇವನು ನಮಗೆ ಕಂಡು ಬರುತ್ತಾನೆ. ಇದು ಪ್ರಾಯಶಃ ಅವನ ಆಡಳಿತದ ಮೊದಲನೆಯ ವರ್ಷದ ಏಳನೆಯ ದಿನದ್ದಾಗಿರಬೇಕು.

### ಇ. ಚೋಳರ ಕಾಲದಲ್ಲಿ ಆಲಯಾಡಳಿತ :

ಜಿ.ಟಿ. 214 ಹಾಗೂ 215 ನೇ ಶಾಸನಗಳು ಹರಿದು ಹಂಚಾಗಿದ್ದು, ಆಲಯದ ಭಂಡಾರಕ್ಕೆ 40 ಕಳಂಜು ಚಿನ್ನವನ್ನು ಹಣತೆಗಳಿಗಾಗಿ ಠೇವಣಿಯಾಗಿ ನೀಡಿದಂತೆ ತಿಳಿಸುತ್ತ ರಾಜರಾಜನ ಹೆಸರನ್ನು ಹೇಳುತ್ತವೆ. ಇಲ್ಲಿ ಬರುವ ಅರುಳಕ್ಕಿ ಪದವು ಈತ ಒಬ್ಬ ರಾಜ ಪ್ರತಿನಿಧಿಯೆಂದೂ ಆಲಯಗಳ ಸಾಮಾನ್ಯ ಆಡಳಿತದ ಅಧಿಕಾರ ಹೊಂದಿದ್ದವನೆಂದೂ ಸೂಚಿಸುತ್ತದೆ. ದಾನಿಯ ಸ್ಥಳದ ವಿವರದಿಂದಾಗಿ ಸೋನಾಡು ಪ್ರಾಂತ್ಯವು ಕಾವೇರಿ ನದಿಯ ಹರಿಯುವಿಕೆಯಿಂದಾಗಿ ಈ ಭಾಗ ಎರಡಾಗಿ ವಿಭಜಿತವಾಗಿದ್ದ, ನದಿಯ ದಕ್ಷಿಣ ದಡದಲ್ಲಿ ಆವೂರ್ ಕುರ್‍ರಂ ನಾಡುನಲ್ಲಿ ಇದ್ದಿತೆಂದೂ ತಿಳಿದುಬರುವುದು. ವೀರ ನರಸಿಂಗಯಾದವರಾನು ಆಲಯದ ಜೀರ್ಣೋದ್ಧಾರ ಸಮಯದಲ್ಲಿ ಶಾಸನಗಳನ್ನು ಪುನರ್ಲಿಖಿಸಲು ಸ್ಥಾನತ್ತಾರರಿಗೆ ನೀಡಿದ ಆದೇಶವು ಎರಡು ಬಗೆಯಲ್ಲಿ ಮಹತ್ವ

ದ್ದಾಗುತ್ತದೆ. ಅಂದಿನ ಕಾಲದ ಜನಗಳಲ್ಲಿ ಆಲಯ ದಾನಧರ್ಮಗಳು ಶಾಶ್ವತವಾಗಿ ನಡೆಯ ಬೇಕೆಂಬ ಭಾವನೆಯಿದ್ದದ್ದನ್ನು ಇದು ಸೂಚಿಸುವುದರೊಡನೆ ಮುಂದಿನ ಜನಾಂಗವು ಇದೇ ರೀತಿಯಾದ ದಾನ ಧರ್ಮಗಳನ್ನು ಮಾಡುತ್ತ ಪ್ರಾಚೀನ ದಾನ ಧರ್ಮಗಳ ದತ್ತಿಗಳ ರಕ್ಷಣೆ ಮಾಡುವಂತಹ ವಾತಾವರಣ ನಿರ್ಮಾಣವಾಗಲು ಸಹಾಯವಾಯಿತು. ಜೊತೆಗೇ ಇಲ್ಲಿ ಯಾದವರಾಯರು ಚೋಳರೊಡನೆ ಹೊಂದಿದ್ದ ಸಂಬಂಧವನ್ನೂ ಕಾಣಬಹುದು. ಯಾದವರಾಯರು ಚೋಳರನ್ನು ಹಲವು ರೀತಿಯಲ್ಲಿ ಸೇವಿಸಿದ್ದರು. ರಾಜ ಪ್ರತಿನಿಧಿಗಳಾಗಿ, ದಳಪತಿಗಳಾಗಿ, ತಲೆತಲಾಂತರದಿಂದ ಸೇವೆ ಸಲ್ಲಿಸಿದ್ದ ಯಾದವರಾಯರು ಚೋಳರ ಹಿರಿಮೆಗೆ ಈ ಮೂಲಕವಾಗಿ ಕೃತಜ್ಞತೆಯನ್ನೂ ಸೂಚಿಸಿದಂತಾಯಿತು.

ತಿ.ತಿ. 20 ನೇ ಶಾಸನವು ಒಂದನೇ ರಾಜೇಂದ್ರ ಚೋಳನ ಕಾಲದಲ್ಲಿ ಆಲಯದ ಆಚಾರಕ್ಕೆ ಸಂಬಂಧಿ ಸಿದ ವಿಚಾರಣೆಯೊಂದರ ವಿವರ ನೀಡುತ್ತ ಆಸಕ್ತಿದಾಯಕವಾಗಿದೆ. ಈ ಶಾಸನದ ಪ್ರಕಾರ ರಾಜಾಸ್ಥಾನದ ಅಧಿಕಾರಿಗಳು ತಮ್ಮ ಪ್ರಾಂತೀಯ ಉಸ್ತುವಾರಿ ಪ್ರವಾಸ ಗಳಲ್ಲಿ ಬೇರೆ ಬೇರೆ ಸ್ಥಳಗಳಲ್ಲಿನ ಆಡಳಿತ ಉಸ್ತುವಾರಿ ಯನ್ನೇ ಅಲ್ಲದೇ ಅಲ್ಲಲ್ಲಿನ ಆಲಯಗಳ ಬೇಕು ಬೇಡಗಳನ್ನೂ ವಿಚಾರಿಸಿ, ಅವುಗಳ ನಿತ್ಯಪೂಜಾ ವ್ಯವಸ್ಥೆಯ ಕುಂದು ಕೊರತೆಗಳನ್ನೂ ಗಮನಿಸುತ್ತ ಸೂಕ್ತ ತಿದ್ದುಪಡಿಗಳನ್ನುಂಟುಮಾಡುವ ಹೊಣೆ ಹೊತ್ತಿದ್ದರೆಂದು ತಿಳಿದು ಬರುತ್ತದೆ. ಪ್ರಾಂತೀಯ ಆಡಳಿತಕ್ಕೆ ಸಂಬಂಧಿಸಿದ್ದ ಅಂಶಗಳಾದದ್ದರಿಂದ ಇಂತಹ ಪದ್ಧತಿ ಸ್ಥಳೀಯ ವಿಕಾಸ ವೆಂದೇ ಊಹಿಸಬಹುದು. ಅಧಿಕಾರಿ ಕೊರ್ರ ಮಂಗಲ ಮುಡೈಯಾನ್ - ಪ್ರಾಯಶಃ ಪ್ರಾಂತ್ಯದ ರಾಜ್ಯಪಾಲನು - ಶ್ರೀ ವೆಂಕಟೇಶ್ವರಸ್ವಾಮಿಯ ದೇವದಾನ ಗ್ರಾಮವಾದ ತಿರುಚ್ಚುಕನೂರು (ತಿರುಚಾನೂರು) ವಿನಲ್ಲಿ ಬಿಡಾರಮಾಡಿ ಅದೇ ಗ್ರಾಮಚಾವಡಿಯಲ್ಲಿ ಓಲಗವನ್ನು ಸೇರಿಸಿ ಹೊಪ್ಪನ್ ಕುಡಿಯಾನ್ - ಕುಡವುರ ನಾಡುವಿನ ಆಡಳಿತಾಧಿ ಕಾರಿಯಾಗಿದ್ದವನು - ಸಿರಿತನತ್ತುಪ್ಪನಿಮಗನ್ ಅನ್ನೂ, ತಿರುವೆಂಕಟ ದೇವರ ಸೇವಕರನ್ನೂ ಕರೆದು ದೇವರ ನಿತ್ಯಪೂಜೆಯಲ್ಲಿ ಯಾವುದೇ ರೀತಿಯ ಕುಂದು ಕೊರತೆಯಿದ್ದರೂ ತನ್ನ ಮುಂದೆ ಹೇಳಲು ತಿಳಿಸಿದನು. ತಿರುಮಂಡೆಯಮ್ ದೇವದಾನ ಗ್ರಾಮವಾಗಿದ್ದು ಇಲ್ಲಿನ ಪಂಚಾಯತಿಯವರು ಈ ಹಿಂದೆ 23 ಹೊನ್ನುಗಳ ಕಾಣಿಕೆಯನ್ನು ಪಡೆದು, ಶ್ರೀ ವೆಂಕಟೇಶ್ವರಸ್ವಾಮಿಯ ದೇವಾಲಯದಲ್ಲಿ ದಿನವೂ 24 ನಂದಾ ದೀಪಗಳನ್ನು (ಒಂದು ಕರ್ಪೂರ ದೀಪದೊಡನೆ) ಹಚ್ಚಲು ಶಿಲಾಲೇಖನದ ಒಪ್ಪಂದವಾಗಿದ್ದರೂ ಅದರಂತೆ ನಡೆಯದೆ, ಗ್ರಾಮಸ್ಥರ ಅಸೌಕರ್ಯದಿಂದಾಗಿ ಎರಡೇ ದೀಪಗಳನ್ನು ಹಚ್ಚುತ್ತ ಮಿಕ್ಕ ಇಪ್ಪತ್ತೆರಡು ದೀಪಗಳನ್ನು ಹಚ್ಚದೆ ವಚನ ಭಂಗ ಮಾಡಿದ್ದಾರೆ ಎಂದು ಮೇಲಿನವರು ದೂರು ಸಲ್ಲಿಸಿದರು. ದೂರಿನ ವಿವರಗಳನ್ನು ತಿಳಿದವನಾದ ಅಧಿಕಾರಿಯು ತಿರುಮಂಡೆಯಂ ಗ್ರಾಮದವರ ಅಲಕ್ಷ್ಯವನ್ನು ಮನಗಂಡವನಾಗಿ, ತಿರುಮಂಡೆಯಂ ಗ್ರಾಮದವರ ಸ್ವತ್ತಾಗಿ ತಿರುಚಾನೂರು ಗ್ರಾಮ ಸಭೆಯಲ್ಲಿ ಠೇವಣಿ ಆಗಿದ್ದ ಇಪ್ಪತ್ತು ಪೊನ್‌ಗಳನ್ನೂ ತಿರುಮಂಡೆಯಂ ನವರಿಗೆ ಅವರು ಕೊಡಬೇಕಾಗಿದ್ದ ಮೂರು ಪೊನ್‌ಗಳೊಡನೆ ಸೇರಿಸಿ ಒಟ್ಟು ಹಣವನ್ನು ಆಲಯದ ಶ್ರೀ ಭಂಡಾರಕ್ಕೆ ಸೇರಿಸಬೇಕೆಂದೂ, ಆಲಯದ ಅಧಿಕಾರಿಗಳು ಇಪ್ಪತ್ನಾಲ್ಕು ದೀಪಗಳಿಗೆ (ಒಂದು ಕರ್ಪೂರ ದೀಪದೊಡನೆ) ಬೇಕಾದ ತುಪ್ಪವನ್ನು ಹಾಗೂ ಇತರ ಪದಾರ್ಥಗಳನ್ನು ತಿರುಪತಿಯ ದಾಸ್ತಾನಿನಿಂದ ನೀಡಬೇಕೆಂದೂ ತೀರ್ಮಾನ ಮಾಡಿದನು.

ಹೀಗೆ ಮೂಲ ದತ್ತಿಯ ನಿರಂತರತೆಯನ್ನು ಅಧಿಕಾರಿಯು ಕಾಪಾಡಿದ್ದನ್ನು ನೋಡಬಹುದು. ಇದರಿಂದಾಗಿ ಚೋಳರ ಕಾಲದಲ್ಲಿ ಪ್ರಚಲಿತವಿದ್ದ ಅತ್ಯುತ್ತಮ ಆಡಳಿತ ವಿಭಾಗ ಹಾಗೂ ನ್ಯಾಯಾಂಗಗಳ ನಡುವೆ ಪ್ರತ್ಯೇಕತೆಯಿರಲಿಲ್ಲ. ರಾಜ್ಯಾಡಳಿತದ ಅಧಿಕಾರಗಳಲ್ಲಿ ಮೇಲಿನಿಂದ ಕೆಳಗಿಳಿಯುವ ಒಂದು ಅಧಿಕಾರ ಗಣವಿದ್ದಿತು. ನಮಗೆ ಕಂಡು ಬರುವಂತೆ ಅಧಿಕಾರಿ ಅಥವಾ ಪ್ರಾಂತೀಯ ರಾಜ್ಯಪಾಲ ಇದ್ದು ಒಬ್ಬ ಉಪ ವಿಭಾಗಾಧಿಕಾರಿ - ಸಿರಿತನತ್ತುಪ್ಪನಿ ಮಗನ್ - ಕುಡವುರ ನಾಡುವಿನ ಅಧಿಕಾರಿಯಾಗಿದ್ದ. ಇವರಿಬ್ಬರ ಮಧ್ಯದ ಕೊಂಡಿಯಂತೆ ಪ್ರಾಯಶಃ ತಿರುವೆಂಕಟ ಕೋಟ್ಟಂನ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದ ಪೆರಿತನತ್ತುಪ್ಪನಿ ಮಗನ್ ಎಂಬ ಅಧಿಕಾರಿ ಯಿದ್ದು ಕುಡವುರನಾಡಿನ ಅಧಿಕಾರಿಯ ಕೈಕೆಳಗೆ ಒಂದಿಬ್ಬರು ಕಿರಿಯ ಅಧಿಕಾರಿಗಳಿದ್ದು ಕುರ್ರಂ ಎಂಬ ಗ್ರಾಮಸಮೂಹಗಳನ್ನು ನೋಡಿ

ಕೊಳ್ಳುವವರಿದ್ದಂತೆ ಕಾಣುತ್ತದೆ. ಕೊತ್ತೂರ್-ಒಡೆಯನ್ ಇಂತಹ ಒಬ್ಬ ಕಿರಿಯಧಿಕಾರಿಯಾಗಿದ್ದ. ಬೆಟ್ಟದ ತಪ್ಪಲಿನಲ್ಲಿ ತಿರುಪತಿಗೆ ಹೊಂದಿಕೊಂಡಂತೆ ಒಂದು ಮೈಲಿ ದೂರದಲ್ಲಿ ತಿರುಚಾನೂರಿನ ಉತ್ತರದಲ್ಲಿ ಈ ಕೊತ್ತೂರು ಇದ್ದಿರಬೇಕು. ಇದು ಅಚ್ಯುತ ಪೆರುಮಾಳ್ ದೇವಾಲಯ ವನ್ನು ನಿರ್ಮಿಸಿದ ಅಚ್ಯುತರಾಯನ ಕಾಲದವರೆಗೆ ಅಸ್ತಿತ್ವದಲ್ಲಿದ್ದು ಇಂದು ಇಲ್ಲದ ಗ್ರಾಮವೆನ್ನಬಹುದು. (ಟಿ.355) ಈ ಪ್ರಾಚೀನ ಗ್ರಾಮದಲ್ಲಿಯೇ ಶ್ರೀ ಕಪಿಲೇಶ್ವರಸ್ವಾಮಿ ದೇವಾಲಯವೂ ಇದ್ದಿತು. ರಾಯನ್ ರಾಜೇಂದ್ರ ಚೋಳನ್ ಅಲಿಯಾಸ್ ಬ್ರಹ್ಮಮರಾಯನ್ ಆದ ಮುನಯದರೈಯನ್ ಈ ಕಪಿಲೇಶ್ವರಸ್ವಾಮಿ ಆಲಯದ ನಿರ್ಮಾಣ ಮಾಡಿರಬೇಕು (ಜಿ.ಟಿ. 210).

'ಕೋಯಿಲ್‌ಕಾರ್ಯಂ ಆರಾಯಿಂದ ಇಡತ್ತು' ಎಂಬ ಉಲ್ಲೇಖದಿಂದ ಆಡಳಿತದ ಕಾರ್ಯದ ಅವಧಿಯಲ್ಲಿ ಆಲಯದ ಸಂಬಂಧ ಹೊಂದಿದ ವಿಷಯಗಳ ಪರಿಗಣನೆಗೆ ಸ್ವಲ್ಪ ಕಾಲವನ್ನು ಮೀಸಲಿಟ್ಟಂತೆ ಕಂಡುಬರುತ್ತದೆ. ಸಿರಿತನತ್ತುಪ್ಪನಿ ಮನ ಹೊರತು ಇತರ ಯಾವುದೇ ತೆರನಾದ ಅಧಿಕಾರಿಯನ್ನೂ ಹೇಳಿಕೆ ಪಡೆಯಲು ಕರೆಯದೆ ಇರುವುದನ್ನು ಗಮನಿಸಿದರೆ ಈತನಿಗೆ ಮಾತ್ರೇ ತನ್ನ ಅಧಿಕಾರ ವರ್ತುಲದ ಆಡಳಿತದಲ್ಲಿ ಬರುವ ಆಲಯಗಳ ದಾನ, ದತ್ತಿಗಳ, ಪೂಜೆ, ನೈವೇದ್ಯಗಳ ಸಂಬಳ ಸಾರಿಗೆಗಳ ಕೈಫಿಯತ್ ದಾಖಲೆಗಳು ತಿಳಿದಿದ್ದಿತು ಎಂದೂ, ಅಧಿಕಾರಿಯಿಂದ ನಡೆದ ವಿಚಾರಣೆಯಿಂದಾಗಿ ನ್ಯಾಯ ವಿಚಾರಣೆಯ ಅಧಿಕಾರ ಕೆಳಗಿನವರಿಗೆ ಇರಲಿಲ್ಲ ವೆಂತಲೂ, ನ್ಯಾಯನಿರ್ಣಯ ನೀಡಲು ತಕ್ಕವನಾಗಿದ್ದ ಅಧಿಕಾರಿ ಎಂತಲೂ ತಿಳಿದುಬರುತ್ತದೆ.

'ಶ್ರೀಮತ್ ಕೀರ್ತಿಮುನ್ನುಡೈತ್ತ ಶ್ರೀ ಕೋ ರಾಜಕೇಸರಿಯಾದ ಶ್ರೀ ರಾಜರಾಜ ದೇವರ' ಆಳ್ವಿಕೆಯ 23 ನೇ ವರ್ಷದ 80 ನೆ ದಿನದಂದು ತಿರುಚಾನೂರಿನ ತಿಪ್ಪಲಾದೀಸ್ವರಂ ಉಡೆಯನಾಯನಾರ್ ದೇವರಿಗೆ ಅಭಿಷೇಕ ಮಾಡಿ ನಿವೇದನ ಸಲ್ಲಿಸಲೆಂದು ತಿರುಚ್ಚುಕನೂರು ಸಭೆಯರ ಧರ್ಮ ಕಟ್ಟಿಲೈಕೋಲ್ ಅಳತೆಯಲ್ಲಿ 26.25 ಕಳಂಜು ಶುದ್ಧ ಹೊನ್ನನ್ನು ಸ್ವೀಕರಿಸಿದ ಜಯಂಗೊಂಡ ಚೋಳ ಬ್ರಹ್ಮಮರಾಯನ ಬಗ್ಗೆ - ಚಾಳುಕ್ಯ ವೀರ ನರಸಿಂಗದೇವರ್ ಯಾನೆ ಯಾದವರಾಯರಿಗೆ ದೂರು ಸಲ್ಲಿಸಲಾಯಿತು (ಜಿ.ಟಿ. 384). ತಿರುಕ್ಕಣ್ಣಪ್ಪದೇವನ್ ತಿರುಕ್ಕವನಂದಲ್ಲಿ ನಡೆದ ವಿಚಾರಣೆಯಲ್ಲಿ ತಿಪ್ಪಲಾದೀಶ್ವರ ಆಲಯದ ಸ್ಥಾನತ್ತಾರರು, ಮಹೇಶ್ವರರು ಹಾಗೂ ಸ್ಥಾನತ್ತಾರರು (ತಿರುಚಾನೂರಿನ ಅಳಗಿಯ ಪೆರುಮಾಳ್ ಕೋಯಿಲಿನವರು) ಸೇರಿದ ಸಭೆಯಲ್ಲಿ, ಹಿಂದೆ ನಡೆದ ಶಿಲಾಶಾಸನಗೊಳಿಸಿದ್ದ ಒಪ್ಪಂದದಂತೆ ಚಿನ್ನವನ್ನು ಸ್ವೀಕರಿಸಿದ ಪಂಚಾಯಿತರು ಉಭಯವನ್ನು ನಡೆಸಬೇಕಾಗಿದ್ದಿತೆಂದು ತಿಳಿಸಲು, ಸ್ಥಳದ ಪಂಚಾಯಿತಿಯವರು ತಮಗೆ ಈ ಬಗ್ಗೆ ತಿಳಿದಿಲ್ಲವೆಂದು ಹೇಳಿದರು. ಆದರೆ ಅಧಿಕಾರಿಯು ಹಳೆಯ ಶಿಲಾಶಾಸನದ ಆಧಾರದಿಂದ ಆಲಯದ ಪರವಾಗಿ ತೀರ್ಪು ನೀಡುತ್ತ ಸಭೆಯರ್ (ಪಂಚಾಯಿತಿ) 26.25 ಕಳಂಜು ಹೊನ್ನನ್ನು ಆಲಯದ ಶ್ರೀ ಭಂಡಾರಕ್ಕೆ ಸಲ್ಲಿಸಬೇಕೆಂದು ತಿಳಿಸಲು, ಈ ಸಂದಾಯವನ್ನು ಆಲಯದ ಪಾರಂಪರಿಕ ಅರ್ಚಕರಾಗಿದ್ದ ಶಿವ ಬ್ರಾಹ್ಮಣರು ಒಪ್ಪಿ ಕೊಂಡರು. ಈ ಹೊಸ ಸಂದಾಯಕ್ಕೆ 'ಊರವರು', 'ಪಡಿಕಾವಲರು', 'ಪೆರಿಕಯೂರವರ್' ಗಳು ಸಾಕ್ಷಿಗಳಾದರು. ಹೀಗೆ ರಾಜ ಪ್ರಮುಖರು ದೂರು ಸಲ್ಲಿಸಿದವರ ಹಾಗೂ ಆರೋಪಿಗಳ ಎದುರಿನಲ್ಲಿ, ದೂರಿನಲ್ಲಿ ಆಸಕ್ತಿಯಿದ್ದವರ ಸಮಕ್ಷಮ ದಲ್ಲಿ ಸಂಬಂಧಪಟ್ಟ ದಾಖಲಾತಿಗಳ ಬಗ್ಗೆ ತಕ್ಕ ಪ್ರಾಧಾನ್ಯವನ್ನು ನೀಡಿ ನ್ಯಾಯವಿಚಾರಣೆ ನಡೆಸಿ, ತೀರ್ಪು ನೀಡಿದ್ದನ್ನು ಕಾಣಬಹುದು. ಹಿಂದೆ ಕಂಡು ಬಂದಂತೆಯೇ ಇಲ್ಲಿಯೂ ಕಾರ್ಯಾಂಗ ನ್ಯಾಯಾಂಗಗಳು ಬೇರೆ ಬೇರೆಯಾಗದೆ ಎರಡೂ ಅಧಿಕಾರವೂ ಪ್ರಾಂತೀಯ ರಾಜ್ಯಪಾಲನಲ್ಲಿ ಕೇಂದ್ರೀಕೃತವಾಗಿದ್ದುದನ್ನು ನೋಡುತ್ತೇವೆ.

ತಿರುಪತಿಯ ಶ್ರೀ ಗೋವಿಂದರಾಜಸ್ವಾಮಿ ದೇವಾಲಯದ (ಜಿ.ಟಿ.126) ಶಾಸನ ಮೂರನೇ ರಾಜರಾಜನ ಆಡಳಿತದ 19ನೇ ವರ್ಷದ್ದಾಗಿದ್ದು, ಸ್ಥಳೀಯ ಆಡಳಿತ ಸಭೆಗಳ ಅಧಿಕಾರ ಹಾಗೂ ಆಲಯಕ್ಕಾಗಿ ಭೂಮಿಯ ಬೇಡಿಕೆಯನ್ನು ರಾಜನಿಗೆ ಸಲ್ಲಿಸು ವಲ್ಲಿನ ಪ್ರಾತಿನಿಧಿತ್ವವನ್ನು ಬೆಳಕಿಗೆ ಒಡ್ಡುತ್ತದೆ. ತಿರುಕ್ಕುಡವೂರು ನಾಡಿನ ಪೆರಿಯ ನಾಟ್ಟಾರ್ ಶ್ರೀ ಗೋವಿಂದರಾಜಸ್ವಾಮಿ ಆಲಯದಲ್ಲಿ ತಿರುಮಂಗೈ ಆಳ್ವಾರ್ ಪ್ರತಿಮೆಯನ್ನು ಸ್ಥಾಪಿಸಿದ್ದರೂ, ಪೂಜೆಗಾಗಿ ಏರ್ಪಾಡು ಮಾಡಲಿಲ್ಲ. ಶ್ರೀಶಠಗೋಪದಾಸರ್ ಪಿಳ್ಳೈಮತ್ತಿತರ

ಮೂವರು ಒಟ್ಟಿಗೆ ಯೋಚಿಸಿ ತಿರುಚಾನೂರು ಪಂಚಾಯತಿಯ ಮುಂದೆ ವಿಷಯವನ್ನು ಚರ್ಚೆಗೆ ತಂದರು. ಪಂಚಾಯತಿಯವರು ಪೂರ್ಣ ಸದಸ್ಯ ಬಲದಿಂದ ಸಮಾವೇಶವಾಗಿ ಚರ್ಚೆ ನಡೆಸಿ ತೀರ್ಮಾನವನ್ನು ಕೈಗೊಂಡರು. ಪಂಚಾಯತಿಯ ಈ ನಿರ್ಣಯ - ಅದು ಶಿಫಾರಸು ಮಾತ್ರವೇ ಆಗಿದ್ದರೂ - ರಾಜನಿಂದ ಪೂರ್ಣರೂಪದಲ್ಲಿ ಅಂಗೀಕಾರ ಹೊಂದಿ ಆಚರಣೆಗೆ ತರಲ್ಪಟ್ಟಿತು.

ಈ ರಾಜಾಜ್ಞೆಯನ್ನು ತಿರುಕ್ಕುಡವೂರು ನಾಟ್ಟಾರರು ತಮ್ಮ ಗ್ರಾಮದಲ್ಲಿ ಚಳುಕ್ಕಿ (ಚಾಲುಕ್ಯ) ಮಾನದಂತೆ ಪಟ್ಟಿಯಗುಳದ ಭೂಮಿಗೆ ಐದು ತುಂಬು ಧಾನ್ಯವನ್ನು ಬೆಳೆಯುವಂತಹ ಭೂಮಿಯನ್ನು ನೀಡಿ ಜಾರಿಗೆ ತಂದರು. ಹೀಗಾಗಿ ಈ ಹಿಂದೆ ಆಳ್ವಾರರ ವಿಗ್ರಹವನ್ನು ಪ್ರತಿಷ್ಠಾಪಿಸಿದ ಪೆರಿಯ ನಾಟ್ಟಾರರೇ ಪೂಜೆಯ ಪ್ರಾವಧಾನವನ್ನೂ ಮಾಡಿದಂತೆ ಆಯಿತು. ಪೆರಿಯ ನಾಟ್ಟಾರರು ತಿರುಕ್ಕುಡವೂರು ನಾಡಿನ ಜನಗಳ ಅನುಮೋದನೆಯೊಂದಿಗೆ ಅಂಗೀ ಕಾರವನ್ನು ತಿಳಿಸುತ್ತ ದಾಖಲೆಯನ್ನು ರುಜುಗೊಳಿಸಿದರು.

ಆಲಯದ ಪ್ರತಿನಿಧಿಗಳು ತಮ್ಮ ಬಿನ್ನಹವನ್ನು ಸ್ಥಳೀಯ ನೆಲದ ಒಡೆತನವನ್ನು ಹೊಂದಿದ ಗ್ರಾಮಸಭೆಗೆ ನೀಡುವ ಹಾಗಿದ್ದು ಈ ಗ್ರಾಮಸಭೆಯು ತಮ್ಮ ಮೇಲಿನ ಅಧಿಕಾರಿಗೆ ಶಿಫಾರಸು ಮಾಡಿದ ನಂತರ ಆ ಮೂಲಕವಾಗಿ ರಾಜನ ಅಂಗೀಕಾರಕ್ಕೆ ತಲುಪುತ್ತಿತ್ತು. ಸ್ಥಳೀಯ ಸಂಸ್ಥೆಗಳಿಗೆ ಯಾವುದೇ ಭೂಮಿಯನ್ನು ನೀಡುವ ಹಕ್ಕು ಇರಲಿಲ್ಲವಾದರೂ, ತಮ್ಮ ವಿಚಾರಕ್ಕೆಂದು ನೀಡಲಾದ ಯಾವುದೇ ವಿಷಯದಲ್ಲಿಯೂ ರಾಜನಿಗೆ ಶಿಫಾರಸುಮಾಡುವ ಅಧಿಕಾರವನ್ನು ಹೊಂದಿದ್ದವು. ಇವು ಸಾರ್ವಜನಿಕ ಸಂಸ್ಥೆಗಳಾಗಿದ್ದುದರಿಂದ ಅವುಗಳು ರಾಜ್ಯದ ಹಿತವನ್ನು ಕಾಪಾಡಬೇಕಾಗಿದ್ದು, ನಿರಂಕುಶವಾಗಿ ವರ್ತಿಸಲು ಆಗದಂತೆ ಮಾಡಿದ ಅಧಿಕಾರದ ಮಿತಿಗಳಿದ್ದವು.

## 5. ಪಾಂಡ್ಯರು ಮತ್ತಿತರ ಸ್ಥಳೀಯರ ಆಳ್ವಿಕೆ:

**ಅ.ಪ್ರವೇಶ :** ಚೋಳರ ಪತನಾನಂತರ ಸಾಮ್ರಾಜ್ಯವು ಹರಿದು ಹಂಚಿಹೋಗಿ ಹಲವಾರು ಶತಮಾನ ಗಳವರೆಗೆ ಒಂದು ಕೇಂದ್ರಶಕ್ತಿ ಎಂಬುದಿಲ್ಲವಾಯಿತು. ಚೋಳ ಸಾಮ್ರಾಟರಲ್ಲಿ ಕಡೆಯ ಪ್ರಸಿದ್ಧನಾದ ಮೂರನೇ ಕುಲೋತ್ತುಂಗನ ಕಾಲದಲ್ಲೇ ತೆಲುಗು ಚೋಳರು ಪ್ರಬಲರಾಗಿ ಕಂಚಿಯಿಂದ ಬಂದು ಆಕ್ರಮಣ ಮಾಡಿದರು. ಈತನ ಉತ್ತರಾಧಿಕಾರಿಯಾದ ಮೂರನೇ ರಾಜೇಂದ್ರನು ಈ ಪತನದ ವೇಗವನ್ನು ಕಡಮೆ ಮಾಡದೆ ಹೋದನು ಹಾಗೂ ಇವನ ಕಾಲದಲ್ಲಿ ಸಾಮಂತ ರಾಜರೆಲ್ಲ ಬಹುಪಾಲು ಸ್ವತಂತ್ರರಾದರು. ಕ್ರಿ.ಶ. 13 ನೇ ಶತಮಾನದ ಆದಿಯಲ್ಲಿ ಒಂದನೇ ಮಾರವರ್ಮ ಸುಂದರ ಪಾಂಡ್ಯನು ಚೋಳ ಸಾಮ್ರಾಜ್ಯವನ್ನು ಆಕ್ರಮಿಸಿ ಅದರ ದಕ್ಷಿಣ ಭಾಗಗಳನ್ನು ವಶಪಡಿಸಿಕೊಂಡನು.

ಈ ರಾಜಕೀಯ ಪ್ರಕ್ಷುಬ್ಧಕಾಲದಲ್ಲಿ ಹೆಚ್ಚುಮಂದಿ ಸ್ಥಳೀಯ ಪಾಳಯಗಾರರು ತಮ್ಮ ಸ್ವಾತಂತ್ರ್ಯವನ್ನು ಘೋಷಿಸಿದ್ದು, ಅವರ ದಾಖಲಾತಿಗಳು ತಿರುಮಲೆಯ ಆಲಯದಲ್ಲಿ ಕಂಡುಬರುತ್ತವೆ. ಇವರಲ್ಲಿ ಕಾಡವರಾಯರು, ಯಾದವರಾಯರು, ತೆಲುಗು ಚೋಳರು, ತೆಲುಗು ಪಲ್ಲವರು ಆಲಯಕ್ಕೆ ದಾನದತ್ತಿ ನೀಡಿದ ದಾಖಲೆಗಳನ್ನು ಬಿಟ್ಟು ಹೋಗಿದ್ದಾರೆ.

**ಆ. ಪಾಂಡ್ಯರು:** ಒಂದನೇ ಜಟಾವರ್ಮ ಸುಂದರಪಾಂಡ್ಯನ ಪ್ರಶಸ್ತಿಯನ್ನು ಸಂಸ್ಕೃತದಲ್ಲಿ ತಿಳಿಸುವ ಹಲವಾರು ಶಾಸನಗಳಿವೆಯಾದರೂ ಪಾಂಡ್ಯರ ಅರಸರಲ್ಲಿ ದಾಖಲಾತಿ ಪಡೆದವನು ಇವನೊಬ್ಬನೇ.

ತಿ.ತಿ. 239 ನೇ ಶಾಸನವು ಮೂರು ಸಂಸ್ಕೃತ ವೃತ್ತಗಳಿಂದಾಗಿದ್ದು ಇವುಗಳಲ್ಲಿನ ಮೊದಲನೆಯದು ಶಾರ್ದೂಲ ವಿಕ್ರೀಡಿತ ವೃತ್ತದಲ್ಲಿದ್ದು, ಸುಂದರಪಾಂಡ್ಯನು ಸೀಮಾರಹಿತ ಕೀರ್ತಿವಂತನೆಂದೂ, ಧರ್ಮಮಾರ್ಗ ತಪ್ಪಿದವರನ್ನು ತೀವ್ರವಾಗಿ ಶಿಕ್ಷಿಸುವನೆಂದೂ ಗಂಡಗೋಪಾಲನ ಕ್ಷುಲ್ಲಕ ವರ್ತನೆಯಿಂದಾಗಿ, ಅವನನ್ನು ಮೇಲಿನ ಲೋಕಕ್ಕೆ ಓಡುವಂತೆ ಮಾಡಿದನೆಂದೂ ತಿಳಿಸುತ್ತದೆ. ಎರಡನೆಯದು ಆರ್ಯಾವೃತ್ತದಲ್ಲಿದ್ದು ಊರ್ಧ್ವ ಲೋಕಕ್ಕೆ ಸಂದ ವೀರ ಗಂಡಗೋಪಾಲನು ಅಸಿಧಾರಾವ್ರತವನ್ನು ಮಾಡುವ ಶಿಕ್ಷೆಗೆ ಒಳಗಾಗಿರುವನೆಂದೂ ತಿಳಿಸಿದರೆ, ಮೂರನೆಯ ಪದ್ಯ ಸಾಕಷ್ಟು ಜೀರ್ಣವಾಗಿದ್ದು ರಾಜನ ಕೇರಳ ವಿಜಯವನ್ನು ಸೂಚಿಸುತ್ತದೆ.

ತಿ.ತಿ.241ನೇ ಶಾಸನವು ಸಂಸ್ಕೃತ ಉಪಜಾತಿ ವೃತ್ತದಲ್ಲಿದ್ದು, ಸುಂದರಪಾಂಡ್ಯನು ವೈರಿಗಳ ರಕ್ತದಲ್ಲಿ ತನ್ನ ಖಡ್ಗವನ್ನ ತೊಳೆಯುತ್ತಿದ್ದ ನೆಂದೂ, ಆಂಧ್ರೇಶ್ವರರನ್ನು ಸೋಲಿಸಿದನೆಂದೂ, ವೀರಗಂಡಗೋಪಾಲನಿಗೆ ಅಸಿಧಾರ ವ್ರತವನ್ನು ಹೇಳಿಕೊಟ್ಟನೆಂತಲೂ ಹೇಳುತ್ತದೆ.

ಎರಡು ಶಾಸನಗಳು (ತಿ.ತಿ. 164 ಹಾಗೂ 165) ಸುಂದರಪಾಂಡ್ಯನನ್ನೂ ಅವನ ಸಾಮಂತ ವೀರ ನರಸಿಂಗದೇವನನ್ನೂ ಒಟ್ಟಿಗೆ ಹೆಸರಿಸುತ್ತವೆ. ಮೊದಲನೆಯದು ಸುಂದರಪಾಂಡ್ಯನ ಆಳ್ವಿಕೆಯ 12 ನೇ ವರ್ಷದಿಂದ ಜಾರಿಗೆ ಬಂದಂತಹ ಗ್ರಾಮವೊಂದರ ಸರ್ವಮಾನ್ಯವನ್ನೂ, ಮತ್ತೊಂದು ನಾಯನಾರ್‌ನ ಆಡಳಿತದ ಮೂರನೇ ವರ್ಷದಿಂದ ಜಾರಿಗೆ ಬಂದ ಭೂಮಿಯ ದಾನವನ್ನೂ ಸುಚಿಸುತ್ತದೆ.

ಪದಿರಿವೇಡು ಗ್ರಾಮವನ್ನು ಸರ್ವಮಾನ್ಯವಾಗಿ ನೀಡಿದಾಗ, ಅಲ್ಲಿಯವರಿಗೆ ರಾಜ್ಯದ ವಸೂಲಾತಿ ಯಾಗಿದ್ದ ಹಲವಾರು ತೆರಿಗೆಗಳು - ಪಟ್ಟಿಪ್ಪೊನ್, ಪೊನ್‌ವರಿ, ಕುದಿರೈವರಿ, ಕಾಣಿಕ್ಕೈ, ನಾಟ್ಟುವರಿ, ನಲ್ಲೇರುಡಿ, ನರ್ಪಸು, ಮಾವಾಡೈ, ಮುವಡೈ, ಕಡಮೈ- ಮುಂತಾದವುಗಳನ್ನು ಕೊಡಬೇಕಾಗಿ ಬಂದಿತು. ಇವುಗಳಲ್ಲಿ ಹಲವನ್ನು ಹಣದ ರೂಪದಲ್ಲಿ ನೀಡುತ್ತಿದ್ದು ಅವುಗಳನ್ನು ಪೊನ್ನಾಯಂ ಎಂದೂ, ಹಲವನ್ನು ಧಾನ್ಯರೂಪದಲ್ಲಿ ನೀಡುತ್ತಿದ್ದು ಇವುಗಳನ್ನು ನೆಲ್ ಅಯಂ ಎಂದೂ, ಕರೆಯುತ್ತಿದ್ದರು. ಸರ್ವಮಾನ್ಯ ವಾಗಿ ನೀಡಿದ ಗ್ರಾಮವು ತಿರುಕ್ಕುಡವೂರು - ನಾಡುವಿನ ಒಂದು ಭಾಗವಾದ ಅಸುವ ಮುಕ್ಕಿಳಿನಾಡುವಿನಲ್ಲಿದ್ದಿತು. ಅಸುವ ಮಕ್ಕಿಳಿನಾಡು ಹಲವು ಗ್ರಾಮಗಳ ಸಮುದಾಯವಾಗಿದ್ದು ಇಂತಹ ಹಲವು ಸಮುದಾಯಗಳಿಂದ ಒಂದು ಮುಖ್ಯ ನಾಡು ಉಂಟಾಗುತ್ತಿದ್ದಿತು

ತಿ.ತಿ. 165 ನೇ ಶಾಸನವು ರಾಜನು ಭೂಮಿಯ ಅಥವಾ ಗ್ರಾಮದ ದಾನ ನೀಡುವ ರೀತಿಯನ್ನು ವಿವರಿಸುತ್ತದೆ. ಅಗರ ಪತ್ರ (ಪಂಚಾಯತಿ) ವಿನಲ್ಲಿ ಸ್ಥಳೀಯ ಆಲಯದ ಸ್ಥಾನತ್ತಾರರು ಅಗತ್ಯವಿದ್ದ ಭೂಮಿಯ ಬಗ್ಗೆ ಬಿನ್ನವತ್ತಳಿಕೆಯನ್ನು ನೀಡುತ್ತಿದ್ದು ಇದನ್ನು ನಾಡವರು - ಕುಡವೂರನಾಡು ಹಾಗೂ ತೊಂಡಪಡೈಪರುವಿನಲ್ಲಿ ಚರ್ಚಿಸಿ, ಪೆರಿಯ ವಿಮಾನಾಟ್ಟಾನ್ ಇದನ್ನು ಹಾಗೆಯೇ ರಾಜನಿಗೆ ತಲುಪಿಸುತ್ತಿದ್ದ. ರಾಜನು ಬಿನ್ನವತ್ತಳಿಕೆಯಲ್ಲಿನ ಬೇಡಿಕೆಯನ್ನು ಅದು ಇರುವ ಹಾಗೆಯೇ ಒಪ್ಪಿಕೊಂಡು ದಾನವನ್ನು ಬಾಯಿಮಾತಿನ ಮೂಲಕ ಯಾದವರಾಯ ನಿಗೆ ತಿಳಿಸುತ್ತಿದ್ದನು. ಇದು ಚೋಳರ ಆಡಳಿತದಲ್ಲಿ - ಪ್ರಮುಖವಾಗಿ ಮೂರನೇ ರಾಜೇಂದ್ರನ ಕಾಲ ದಲ್ಲಿದ್ದಂತೆಯೇ ಇದೆ ಎನ್ನಬೇಕು. (ಜಿ.ಟಿ 126).

**ಕಾಡವರಾಯರು :** ತಿ.ತಿ. 226 ಹಾಗೂ 227 ರ ಶಾಸನಗಳು ಕಾಡವ ಕೊಪ್ಪೆರುಂಜಿಂಗನನ್ನು ಸರ್ವಜ್ಞ ಖಡ್ಗ ಮಲ್ಲ ಎಂದು ಚಿತ್ರಿಸುತ್ತದೆ.

**ಯಾದವರಾಯರು :** ತಿ.ತಿ. 170 ಶಾಸನದಲ್ಲಿ ತಿರುಕಾಳತ್ತಿ ದೇವ ಯಾದವರಾಯನ ಉಲ್ಲೇಖವಿದೆ. ಇದು ಅವನ ಅನೇಕ ಬಿರುದುಗಳನ್ನು ವಿವರಿಸುತ್ತ ಅವನ ಆಡಳಿತದ 19 ನೇ ವರ್ಷದಲ್ಲಿ ಹೊರಬಿದ್ದಿತು.

ತಿರುಕಾಳತ್ತಿದೇವನ ಮಗನಾದ ಸಿಂಗಪಿಳ್ಳೈ ಅಲಿಯಾಸ್ ವೀರರಾಕ್ಷಸ ಯಾದವರಾಯನು ತಿರುಕ್ಕುಡ ವೂರುನಾಡಿನಲ್ಲಿ ಜಮೀ ನನ್ನು ದಾನಮಾಡಿ ಅದರಲ್ಲಿ ಬೆಳೆದ ಧ್ಯಾನದಿಂದ ಬಂದ ಆದಾಯದಲ್ಲಿ ತಿರುವೆಂಕಟ ಮುಡೈಯಾನನ ತಿರುಮಂತಿರ ತಿರುಪ್ಪೋನಕಕ್ಕೆ ಏರ್ಪಾಡು ಮಾಡಿದನು. (ತಿ.ತಿ. 293 ಹಾಗೂ 362)

ನಂತರ ಬರುವವನೇ ವೀರನರಸಿಂಹದೇವಯಾದವರಾಯ. ಈತನ ಶಾಸನಗಳೆಲ್ಲ ಬಹುತೇಕ ಇವನ ಆಡಳಿತದ 12ನೆಯ ಮತ್ತು 51 ನೆಯ ವರ್ಷಗಳ ಮಧ್ಯದಲ್ಲಿ ಲಿಖಿಸಲ್ಪಟ್ಟವು. ಈತನ ಮೊತ್ತ ಮೊದಲ ಉಲ್ಲೇಖವು ತಿ.ತಿ. 120 ರಲ್ಲಿ ಕ್ರಿ.ಶ.1209 ರಲ್ಲಿ ಎಂದರೆ ಮೂರನೇ ಕುಲೋತ್ತುಂಗನ ಕಾಲದಲ್ಲಿ ಕಂಡುಬಂದರೆ ಕೊನೆಯ ಉಲ್ಲೇಖವು ತಿ.ತಿ. 164 ರಲ್ಲಿ ಜಟಾವರ್ಮ

ಸುಂದರಪಾಂಡ್ಯನ ಆಡಳಿತದ 12ನೇ ವರ್ಷದಲ್ಲಿ ಕ್ರಿ.ಶ. 1262 ರಲ್ಲಿ ಕಂಡುಬರುತ್ತದೆ. ಹೀಗಾಗಿ ಈತನ ಆಡಳಿತ ಕನಿಷ್ಟ 54 ವರ್ಷಗಳಾಗಿದ್ದು, 125 ಜಿ.ಟಿ ಯಲ್ಲಿ ಹೇಳುವ ಈತನ ಆಳ್ವಿಕೆಯ 51 ನೇ ವರ್ಷವೆಂಬುದು ಖಚಿತವಾದ ಕಾಲಗಣನೆಯಾಗುತ್ತದೆ

ಈತನು ತುಲಾರೋಹಣ ಕಾರ್ಯಕ್ರಮವನ್ನೂ - ಎಂದರೆ ತನ್ನ ತೂಕದ ಚಿನ್ನವನ್ನು ಆಲಯಕ್ಕೆ ದಾನಮಾಡಿ ಅದನ್ನು ಆಲಯ ವಿಮಾನದ ಚಿನ್ನದ ಗಿಲೀಟು ಮಾಡಲು ಬಳಸುವುದನ್ನು ನಡೆಸಿರಬೇಕು. ಇದರಿಂದಾಗಿ ಮೇರುಪರ್ವತಕ್ಕೆ ಸಮಾನವಾದಹೊಳಪು ವೆಂಕಟನಗಕ್ಕೆ ಬಂದಿತೆಂದು ಹೇಳಲಾಗಿದೆ. ಒಂದನೇ ಜಟಾವರ್ಮ ಸುಂದರಪಾಂಡ್ಯನು (ತಿ.ತಿ. 172) ವಿಮಾನದ ಮೇಲೆ ಕನಕ ಕಳಸವನ್ನು ಪ್ರತಿಷ್ಠಾಪಿಸುವ ಹೊತ್ತಿನಲ್ಲಿಯೇ ಈ ಮುಲಾಮೀಕರಣ ಪ್ರಕ್ರಿಯೆಯೂ ನಡೆದಿರಬೇಕು. ತಿ.ತಿ. 195 ರಲ್ಲಿ ಹೇಳಿರುವಂತೆ ತಿರುಪತಿಯ ಯಾವುದೋ ಒಂದು ಕಡೆಯಲ್ಲಿ ವೀರನರಸಿಂಗ ಪೆರುಮಾಳ್ ವಿಗ್ರಹ ಪ್ರತಿಷ್ಠೆಯಲ್ಲಿ ಪ್ರತ್ಯೇಕ ಆಸಕ್ತಿ ವಹಿಸಿದ್ದನೆಂದು ತಿಳಿದುಬರುತ್ತದೆ. ಒಬ್ಬ ದೇಶಾಂತರಿಯಾದ ತಿರುಪುಲ್ಲಾಣಿ ದಾಸರಿಂದ ವೀರನರಸಿಂಗಯಾದವರಾಯನ ಆಡಳಿತದ 40 ನೆಯ ವರ್ಷದಲ್ಲಿ ಅವನ ಆಜ್ಞೆಯಂತೆ ತಿರುಮಲೆಯ ಶ್ರೀ ವೆಂಕಟೇಶ್ವರಸ್ವಾಮಿಯ ಆಲಯದ ಒಳಗುಡಿಯ ಜೀರ್ಣೋದ್ಧಾರ ಕಾರ್ಯ ನಡೆಯಿತು. ಜೀರ್ಣೋದ್ಧಾರ ಕಾರ್ಯ ಮುಗಿದ ಮೇಲೆ ಹಳೆಯ ಗೋಡೆಗಳ ಮೇಲಿದ್ದ ಶಾಸನಗಳೆಲ್ಲವನ್ನೂ ಪುನಃ ಹಾಗೆಯೇ ಅವುಗಳ ಮೂಲಸ್ಥಳಗಳಲ್ಲಿ ಪ್ರತಿ ಮಾಡಬೇಕಾಗಿದ್ದಿತು. ಹೀಗೆ ವೀರನರಸಿಂಗ ಯಾದವರಾಯನ ಆಜ್ಞೆಯಿಂದಾಗಿ ಆಲಯದ ಉತ್ತರ ಗೋಡೆಯ ಪಶ್ಚಿಮದ ಮೂಲೆಯಲ್ಲಿ ನಾಲ್ಕು ಚೋಳ ಶಾಸನಗಳನ್ನು (ತಿ.ತಿ. 7,8,9,20) ಪುನಃ ಲಿಖಿಸಿರುವುದನ್ನು ನೋಡ ಬಹುದಾಗಿದೆ. ಈ ದೇಶಾಂತರಿಯು ಚೇರವನ್ ಮಹಾದೇವಿ ಚತುರ್ವೇದಿ ಮಂಗಲದ ಅಥವಾ ಚೇರಮದೇವಿ ತಿರುಪುಲ್ಲಾಣಿದಾಸ ಆಗಿರಬಹುದು. ಶ್ರೀ ವೆಂಕಟೇಶ್ವರಸ್ವಾಮಿ ಆಲಯದ ಒಳಗುಡಿಯ ಜೀರ್ಣೋದ್ಧಾರ ಕಾರ್ಯ ನಡೆದದ್ದು ಕ್ರಿ.ಶ.1245 ರಲ್ಲಿ.

ಯಾದವರಾಯ ಕುಂಟುಬದಲ್ಲಿ ನಂತರ ಬಂದವನು ತಿರುವೆಂಕಟನಾಥ. ತಿ.ತಿ. ದೇವಸ್ಥಾನಗಳ ನಾಲ್ಕು ಶಾಸನಗಳು - (ತಿ.ತಿ. 189, 195 ಹಾಗೂ ಜಿ.ಟಿ 11, 40) ಈತನ ಹೆಸರಿನಲ್ಲಿದ್ದು ಈತನ ಆಡಳಿತದ 8 - 12 ನೇ ವರ್ಷಗಳದ್ದಾಗಿವೆ. ತನ್ನ ಸೇನಾಧಿಪತಿ ಸಿಂಗಯ್ಯ ದಂಡನಾಯಕನ ಪ್ರಾರ್ಥನೆ ಯಂತೆ ಇಳತ್ತೂರು ನಾಡಿನ ಪೊಂಗಲೂರು ಗ್ರಾಮದ ಅರ್ಧ ಆದಾಯವನ್ನು ಸರ್ವಮಾನ್ಯವಾಗಿ ತಿರುವೆಂಕಟ ಮುಡಿಯಾನನಿಗೆ ಆಡಿಮಾಸದ ಉತ್ಸವವನ್ನು ನಡೆಸಲೂ, ಮಹಾ ಪ್ರಧಾನಿ ರಾಚಯ್ಯ ದಂಡನಾಯಕನ ಹೆಸರಿನಲ್ಲಿ ಸಿತಕರಗಂಡನ್ ಸಂಧಿಯಲ್ಲಿ ನಿವಂದನಕ್ಕಾಗಿಯೂ ಆಗುವ ವೆಚ್ಚಗಳನ್ನು ತೂಗಿಸಲು ದಾನವಾಗಿ ನೀಡಿದನು. ಆತನ ಆಡಳಿತದ 8 ನೇ ವರ್ಷದ ಆಡಿಮಾಸದಲ್ಲಿ ಈ ದತ್ತಿಯನ್ನು ನೀಡಿದ್ದು ಇದು ಒಂದನೇ ವರ್ಷವಾಗಿ 9 ನೇ ವರ್ಷದ ಆಡಿಮಾಸದಲ್ಲಿ ಇದು ಜಾರಿಗೆ ಬರತಕ್ಕದ್ದಾಗಿದ್ದಿತು. ಗ್ರಾಮವನ್ನು ದಾನ ನೀಡಲು ಕಾರಣವಾದವನು ಸಿಂಗಯ ದಂಡನಾಯಕ. ಪೊಂಗಲೂರನ್ನು ಸಿಂಗಾನಲ್ಲೂರು ಗ್ರಾಮವೆಂದು ಪುನರ್ನಾಮ ಕರಣಗೊಳಿಸಲಾಯಿತು.(ತಿ.ತಿ.195)

ತಿರುವೆಂಕಟನಾಥ ಯಾದವರಾಯನು ತನ್ನ ಹಿರಿಯರಲ್ಲಿ ಒಬ್ಬರಾದ ಯಾದವ ನಾರಾಯಣನ ಹೆಸರಿ ನಲ್ಲಿ ತಿರುವೆಂಕಟ ಮುಡೈಯಾನನಿಗೆ ನಾರಾಯಣನ್ ಸಂಧಿಯ ನಿಬಂಧನೆಗಾಗಿ ತಿರುಪತಿಯ ಒಂದು ಗ್ರಾಮವನ್ನು (ತಿರುಮಂತ್ರಕ್ಕಾಣಿ) ದಾನ ನೀಡಿದ ಮೂರನೇ ಕುಲೋತ್ತುಂಗನ ಆಡಳಿತದ ಕೊನೆಗಾಲದಲ್ಲಿ ನಾಗಪುಡೋಲಿ ಗ್ರಾಮದಲ್ಲಿ ಈ ಹಿರಿಯರ ನೆನಪಿನಲ್ಲಿಯೇ ಒಂದು ವಿಗ್ರಹವನ್ನೂ, ರಾಜಮಲ್ಲದೇವ ಭುಜಬಲ ಸಿದ್ಧರಸನ್ ಅಲಿಯಾಸ್ ಯಾದವರಾಯನು ಪ್ರತಿಷ್ಠಾಪಿಸಿದನು. ತಿರುಮಂತ್ರಕ್ಕಾಣಿ ಯನ್ನು ಸರ್ವಮಾನ್ಯವನ್ನಾಗಿಸಿದಾಗ ತಿರುವೆಂಕಟನಾಥನ ಆಡಳಿತದ 12 ನೇ ವರ್ಷದಲ್ಲಿ ಹಲವಾರು ತೆರಿಗೆಗಳನ್ನು ಉತ್ಸವೆಯನ್ನೂ ಸಂದಾಯ ಮಾಡುವಂತಾಯಿತು. ಇವುಗಳಲ್ಲಿ ವಲ್ಲಾಳದೇವರ್ ವರಿಯೂ ಒಂದಾಗಿದ್ದಿತು. (ಜಿ.ಟಿ. 11)

ಈ ಶಾಸನಗಳಲ್ಲಿ ತೀರ ಈಚೆಗೆ ಕಂಡುಬರುವ ಯಾದವರಾಯನೆಂದರೆ ಓಬಳಯಾದವ. ಈತ ಶ್ರೀ ವೆಂಕಟೇಶ್ವರಸ್ವಾಮಿಯ ವೈಕುಂಠ ಹಸ್ತಕ್ಕೆ ವರದ ಹಸ್ತಕ್ಕೆ ನೀಡಿದ ಚಿನ್ನದ ಕವಚದ ಕಾಣಿಕೆಯನ್ನು ಸಂಸ್ಕೃತ ತಮಿಳುಗಳೆರಡರಲ್ಲೂ (ತಿ.ತಿ.56) ತಿಳಿಸಲಾಗಿದೆ. ಈ ಓಬಳನಾಥನು ತಂಜೈಯ ರಾಜನೆಂದೂ, ಬಹುಶ್ರೇಷ್ಠ ವಿದ್ವಾಂಸನೂ ಆಗಿದ್ದನೆಂದು ತಮಿಳಿನ ಪದ್ಯಭಾಗ ತಿಳಿಸುತ್ತದೆ. ತಮಿಳಿನ ಪದ್ಯದಲ್ಲಿ ತಿರುಮಲೆಯನ್ನು ವಡವೆಂ ಗಡಂ ಎಂದು ಕರೆಯಲಾಗಿದೆ. ಎಂದರೆ ಉತ್ತರಕ್ಕೆ ಇರುವ ವೆಂಕಟಪರ್ವತ ವೆಂಬರ್ಥ. ಇದು ಮಧುರವಾದ ಸವಾಸನೆಯ ಮೂಲಿಕೆಗಳಿಂದಲೂ, ಸಸ್ಯಗಳಿಂದಲೂ ಕೂಡಿದ್ದಿತಂತೆ.

**ತೆಲುಗು ಪಲ್ಲವರು :**

ತಿ.ತಿ. ದೇವಸ್ಥಾನಗಳ ಶಾಸನಗಳಲ್ಲಿ ಸುಮಾರು ಒಂದು ಡಜನ್ ಶಾಸನಗಳಲ್ಲಿ ತೆಲುಗು ಪಲ್ಲವ ಮುಖ್ಯನಾದ ವಿಜಯಗಂಡಗೋಪಾಲನು ಪ್ರತಿನಿಧಿಸಲ್ಪಟ್ಟಿದ್ದಾನೆ. ಇವುಗಳಲ್ಲಿ ಬಹುಪಾಲು ತ್ರುಟಿತವಾಗಿದ್ದು ಮೂರು ಮಾತ್ರವೇ ಅವನ ಆಳಿತದ 4,5 ಹಾಗೂ 9 ನೆಯ ವರ್ಷಗಳನ್ನು ಸೂಚಿಸುತ್ತವೆ.

ಈತನ ಆಡಳಿತವು ಜಟಾವರ್ಮ ಸುಂದರಪಾಂಡ್ಯ, ಕಪ್ಪೆರುಂಜಿಂಗ, ಮಧುರಾಂತಕ ಪೊತ್ತಪಿಚೋಳ, ಅಲ್ಲುಂತಿಕ್ಕ ಹಾಗೂ ಮನುಮಸಿದ್ಧ, ಕಾಕತೀಯ ಗಣಪತಿಗಳ ಸಮಕಾಲೀನವಾಗಿದ್ದಿತು. ಇವರಲ್ಲಿ ಜಟಾವರ್ಮ ಸುಂದರ ಪಾಂಡ್ಯನು ಗಂಡಗೋಪಾಲನನ್ನು ಸೋಲಿಸಿ ಕೊಂದನೆಂದು ಹೇಳಿಕೊಂಡರೆ ನಮ್ಮಲ್ಲಿನ ಶಾಸನಗಳು (ತಿ.ತಿ. 239, 241) ಈತ ವೀರ ಗಂಡಗೋಪಾಲನೆಂದು ಗುರುತಿಸುತ್ತವೆ (ವಿಜಯಗಂಡಗೋಪಾಲನಲ್ಲ) ಕೊಪ್ಪೆರುಂಜಿಂಗನು ತಾನು ವೀರಗಂಡಗೋಪಾಲ ಹಾಗೂ ವಿಜಯಗಂಡಗೋಪಾಲರುಗಳನ್ನು ಗೆದ್ದೆನೆಂದು ಗರ್ವದಿಂದ ಹೇಳಿಕೊಂಡದ್ದಕ್ಕೆ ಕಾರಣ ಸುಂದರ ಪಾಂಡ್ಯನು ವೀರಗಂಡಗೋಪಾಲನನ್ನು ಗೆದ್ದ ಸಮಯದಲ್ಲಿ ತನ್ನ ಒಲುಮೆಯೂ ಸೇರಿದೆ ಎಂಬ ತಮಿಳು ಪಲ್ಲವನ ಭಾವನೆಯೇ ಆಗಿರಬೇಕು. (ತನ್ನಿಂದಲೇ ಪಾಂಡ್ಯನು ಗೆದ್ದನೆಂಬ ಜಂಬವೇ ಆಗಿದೆಯಷ್ಟೆ)

ತಿ.ತಿ.ದೇವಸ್ಥಾನಗಳ ಶಾಸನಗಳಿಂದಾಗಿ ತಿಳಿದು ಬರುವ ವಿಷಯವೆಂದರೆ ರಾಜಕುಮಾರಿ ದೇವರಸಿ ಯರ್ ವಿಜಯ ಗಂಡಗೋಪಾಲನ ರಾಣಿಯಾಗಿದ್ದು ಶ್ರೀ ವೆಂಕಟೇಶ್ವರಸ್ವಾಮಿಯ ಆಲಯದಲ್ಲಿ ಮೂರು ನಂದಾ ದೀಪಗಳನ್ನು ಬೆಳಗಿಸಲು ಹಸುಗಳನ್ನು ದಾನ ನೀಡಿದಳು. (ತಿ. ತಿ. 73, 431) ತಿ.ತಿ - 173 ರಲ್ಲಿ ವಿಜಯಗಂಡಗೋಪಾಲನ ಆಸ್ಥಾನದಲ್ಲಿ ಅಧಿಕಾರಿಯಾಗಿದ್ದ ಕಾಶ್ಯಪಗೋತ್ರದ ಅಮ್ಮಯ್ಯಪ್ಪ ಅಥವಾ ಅಣ್ಣನ್ ಪರಿಮಳಪ್ರಿಯನ್ ಎಂಬಾತ ಸ್ವಾಮಿಯ ಸನ್ನಿಧಿಯಲ್ಲಿ ಒಂದು ದೀಪವನ್ನು ಸ್ಥಾಪಿಸಿ, ಅದನ್ನು ಬೆಳಗಿಸಲು ತುಪ್ಪಕ್ಕಾಗಿ 32 ಹಸುಗಳನ್ನೂ, ಒಂದು ಗೂಳಿಯನ್ನೂ ದಾನ ಮಾಡಿದನೆಂದು ಹೇಳಿಕೆಯಿದೆ. ತಿ.ತಿ. 111 ರ ಪ್ರಕಾರ ನಾರಾಯಣಪುರದ ವಣಿಕ ಕಟ್ಟಾರಿಯ ಮಗನಾದ ಅಮರಕೋನ್‌ನು ಒಂದು ದೀಪವನ್ನು ದಾನಮಾಡಿ, ಅದರ ಕಂಬಕ್ಕಾಗಿ ಮೂರು ಮಾಡೈಯನ್ನೂ, ಕರ್ಪೂರಕ್ಕಾಗಿ 12 ಮಾಡೈಯನ್ನು ದಾನ ನೀಡಿದ್ದು ಉಂಟು. ವಿಜಯಗಂಡಗೋಪಾಲನ ಆಡಳಿತದ 7 ನೇ ವರ್ಷದಲ್ಲಿ ಕಾಂಜೀಪುರದ ಅರುಳಾಳಪೆರುಮಾಳ್ ಆಲಯಕ್ಕೆ ಹಸುಗಳನ್ನೂ, ಗೂಳಿಗಳನ್ನೂ ನೀಡಿದ ಅಲಪ್ಪುರದ ದೇವಿಸೆಟ್ಟಿಯ ಮಗನಾದ, ಕಾಕತೀಯ ಗಣಪತಿಯ ಮಂತ್ರಿಗಳಲ್ಲಿ ಒಬ್ಬನಾದ ಬ್ರಹ್ಮಸೆಟ್ಟಿಯು (ಮದರಾಸು ಶಾಸನ ಸಂಪುಟದಲ್ಲಿ 47 ನೆಯದು - 1893) ತಿ.ತಿ. 20 ರಲ್ಲಿ ಕಂಡು ಬಂದು ಬ್ರಹ್ಮನಾರಾಯಣ ಮತ್ತಿತರ ಸ್ಥಳೀಯ ಶ್ರೀವೈಷ್ಣವರ ಮೂಲಕ ದಾನವನ್ನು ನೀಡಿದಂತೆ ತಿಳಿದು ಬರುತ್ತದೆ. ಈತ ಪೊಕ್ಕನ್ - ಖಜಾಂಚಿ - ಎಂದು ಹೆಸರಿಸಲ್ಪಟ್ಟು ಬಹುಶಃ ಗಣಪತಿಯ ಅಧೀನದಲ್ಲಿ ಈ ಅಧಿಕಾರವನ್ನು ಪಡೆದಿದ್ದ.

ತಿ.ತಿ. 128 ರಲ್ಲಿ ಕಂಡುಬರುವ ತ್ರಿಪುರಾಂತಕನು ತೆಲುಗು ಪಲ್ಲವ ಮಧುಸೂದನ ದೇವನ ತಂದೆಯಾದ ಮಹಾಮಂಡಲೇಶ್ವರ ತ್ರಿಪುರಾಂತಕ ದೇವನಾಗಿದ್ದಾನೆ.

ತಿ.ತಿ. 72 ತಮಿಳಿನಲ್ಲಿದ್ದು ರಾಜಗಂಡಗೋಪಾಲನು ಜಗವೆಲ್ಲ ಹೊಗಳುವ ಶ್ರೇಷ್ಠ ಜನಾನುರಾಗಿ ಯಾಗಿದ್ದನೆಂದು ತಿಳಿಸಿದರೂ ಈತ ಯಾವ ವಂಶದವನೆಂದಾಗಲೀ ಯಾವ ರಾಜನೆಂದಾಗಲೀ ತಿಳಿಸುವುದಿಲ್ಲ. ಪ್ರಾಯಶಃ ಈತ ತೆಲುಗು ಪಲ್ಲವನಾದ ವಿಜಯಗಂಡಗೋಪಾಲನ ಬಂಧುವಾಗಿರಬೇಕು.

## 6. ಆರ್ಥಿಕ ಪರಿಸ್ಥಿತಿ

**ಅ. ತೆರಿಗೆ ಪದ್ಧತಿ:** ತಿರುಪತಿಯ ಕಡೆಯಿಂದ ಶ್ರೀ ವೆಂಕಟೇಶ್ವರಸ್ವಾಮಿ ಆಲಯಕ್ಕೆ ಸಂದಾಯವಾಗುತ್ತಿದ್ದ 40 ಕ್ಕೂ ಹೆಚ್ಚಿನ ಬಗೆಯ ತೆರಿಗೆಗಳು ವರ್ಗೀಕೃತವಾಗಿ ಜಿ.ಟಿ 11 ರಲ್ಲಿ ವಿವರಣೆಗೆ ಒಳಗಾಗಿವೆ. ಇವುಗಳಲ್ಲಿ ಪೊನ್‌ವರಿಯು ಚಿನ್ನದ ರೂಪದ್ದಾಗಿದ್ದಿತು. ಧಾನ್ಯದ ತೆರಿಗೆಗಳು ಕಂಡಮಯ್ಯಂ ಆಗಿದ್ದಿತು. ಉಚಿತ ಸೇವೆಯ ಬಗ್ಗೆಯಿದ್ದ ತೆರಿಗೆಯನ್ನು ಅಮಂಜಿ ವಗೈಯೆಂದೂ ಕರೆದರು. ನಾಟ್ಟಾರರ ಸಭೆಯಿಂದ ವಸೂಲಿ ಮಾಡುತ್ತಿದ್ದವು ಗಳೂ ರಾಜನಿಂದ ವಿಧಿಸಲ್ಪಟ್ಟ ಹೊಸ ಹಳೆಯ ತೆರಿಗೆಗಳೂ ವರ್ಗೀಕೃತವಾಗಿವೆ. ತಿ.ತಿ. 189 ಹಾಗೂ ಜಿ.ಟಿ. 11 ರಲ್ಲಿ ಹೇಳಲಾಗಿರುವ ಹಲವು ತೆರಿಗೆಗಳು ಪ್ರಾಣಿಗಳ ಮೇಲೆ ವಿಧಿಸಿದವು, ಹಲವು ರಸ್ತೆಸುಂಕ ಅಥವಾ ಉಕ್ಕಡ ತೆರಿಗೆಗಳು. ವ್ಯಾಪಾರಿಗಳು, ನೇಕಾರರು, ಗಾಣಿಗರ ಮೇಲೆ ವಿಧಿಸಿದ ವೃತ್ತಿ ತೆರಿಗೆಗಳು, ಉಪವನ ನಿರ್ಮಾಣ ತೆರಿಗೆ, ಮೀನು ಹಿಡಿಯುವ ತೆರಿಗೆ, ಅಲೆಮಾರಿ ರಾಸುಗಳ ದಂಡ, ಮೊದಲಾದವೂ ಇದ್ದವು. ಇವುಗಳು ಮಧ್ಯಕಾಲೀನ ಚರಿತ್ರೆಯಲ್ಲಿನ ಪಶ್ಚಿಮ ರಾಷ್ಟ್ರಗಳಲ್ಲಿ ಜಾರಿಯಲ್ಲಿದ್ದ ಸಾಮಂತ ಕಾಣಿಕೆಗಳಂತೆಯೇ ಇದ್ದವು. ಪ್ರಾಚೀನ ಸಂಪ್ರದಾಯದ ಮೂರರಲ್ಲಿ ಎರಡು ನೆರವುಗಳನ್ನು - ತಿರುಮಗನಾರ್ ಕಾಣಿಕ್ಕೈ, ತಿರುತ್ತಾ ಯಾರ್ ಕಾಣಿಕ್ಕೈ - ಗಳನ್ನು ಈ ಪಟ್ಟಿಯಲ್ಲಿ ಪ್ರಸ್ತಾಪಿಸಲಾಗಿದೆ. ರಾಜ್ಯದ ಉತ್ತರಾಧಿಕಾರಿ ಹಾಗೂ ರಾಜಮಾತೆಯ - ರಾಣಿಯ ಬಳಕೆಗಾಗಿ ಮಸೂಲಾಗುತ್ತಿದ್ದ ತೆರಿಗೆಗಳು. ಮೂರನೆಯ ನೆರವು - ರಾಜನು ಶತ್ರುಗಳ ಸೆರೆಸಿಕ್ಕಾಗ ಬಿಡಿಸಲು ಕೊಡಲಾಗುತ್ತಿದ್ದ ಧನದ ಇಡುಗಂಟು - ಈ ಸಂದರ್ಭದಲ್ಲಿ ವಲ್ಲಾಲದೇವರ್ ವರಿ - ವಸೂಲಿ ಮಾಡಲ್ಪಟ್ಟು, ಆಹ್ವಾನಿಸಲ್ಪಟ್ಟ ಯಾದವರಾಯನಿಂದ ಆಕ್ರಮಣ ಮಾಡಿದ ಹೊಯ್ಸಳರಿಗೆ ನೀಡುವಂತಿದ್ದಿತು.

ಸಂದಾಯವಾಗುತ್ತಿದ್ದ ತೆರಿಗೆಗಳು ಈ ರೀತಿಯಿದ್ದವು.

ಪಂಡವರಿ, ಪಳವರಿ, ಕಾಣಿಕ್ಕೈ, ವೇಂಡುಕೊಳ್‌ವರಿ, ಮಲೈಯಮಂಜಿ, ಕುದಿರೈವರಿ ಕಣಕ್ಕ ಮೋವೈ, ನಾಟ್ಟುವರಿ, ನಿಲೈಕಾಣಿಕ್ಕೈ, ನಾಟ್ಟಾರ್ ವೈತ್ತ ಕಾಣಿಕ್ಕೈ, ವಲಿನಡೈ ಕಾಣಿಕ್ಕೈ, ಅಕ್ಕನ್ ಕಾಣಿಕ್ಕೈ, ಕಾರ್ತಿಕೈ ಕಾಣಿಕ್ಕೈ, ಪಟ್ಟಿವರಿ, ವಿರುತ್ತವಗೈ ಪಳತಲೈಕ್ಕು - ಮಾಡೈಯಿಲ್ ಕೊಳ್ಳುಂ (ವರಿ), ನಾಟ್ಟಾರ್ ಮಾಡೈಯಿಲ್ ವಗಕ್ಕುಂವರಿ, ವಲ್ಲಾಳ ದೇವರ್ ವರಿ, ವಾಸಲ್ ಪಣಂ, ತಲೈ ಪಣಂ, ನಿಶ್ಚಯಿಪ್ಪು, ಮುಖಂ ಪಾರ್ವೈ ಚಮ್ಮದಂ, ಸಂಬಂಧ ಚಮ್ಮದಂ, ಸೆಟ್ಟಿಕಲ್, ವಾಣಿಕಲ್, ಸೇನೈಯಂಗಾಡಿಯರ್, ಸೆಕ್ಕುಕಡಿಮಕ್ಕಲ್ ಕೈಕೋಲರ್‌ಪೆರ್, ಸುಂಕವರಿ, ಕೊಲ್ಲಂ ವಗೈ, ಸುಂಕ ಎಣ್ಣೈ ಪಿಳ್ಳೈಕಲ್ ಕಾಣಿಕ್ಕೈ.

ಮೇಲಿನ ಶಾಸನವು ತೊಂಡಮಂಡಲದ ಸ್ಥಳೀಯ ರಾಜನಾದ ತಿರುವೆಂಕಟನಾಥ ಯಾದವರಾಯನು ತಿರುಪತಿ ಗ್ರಾಮವನ್ನು ಸರ್ವಮಾನ್ಯ ಗ್ರಾಮವಾಗಿ ನಾರಾಯಣನ್ ಸಂಧಿಯಲ್ಲಿ ದೇವರಿಗೆ ನಿವೇದನೆ ನೀಡಲೆಂದು ಹಾಕಿಸಿದ್ದು. ತಿರುಮಲೆಯ ಆಲಯದ ಸ್ಥಾನತ್ತಾರರಿಗೆ ಈ ವಿಷಯವನ್ನು ತಿಳಿಸಿ ನಡೆಸಬೇಕಾದ ಕ್ರಮಗಳೆಲ್ಲ ದಕ್ಕೂ ನಿರ್ದೇಶನ ನೀಡಲಾಗಿದೆ. ತಿರುಪತಿ ಗ್ರಾಮದಲ್ಲಿ ಹಲವಾರು ಸ್ಥಳೀಯ ತೆರಿಗೆಗಳು ಸಂದಾಯವಾಗುತ್ತಿದ್ದಿ ತೆಂಬುದನ್ನು ಗಮನಿಸಬಹುದು.

**ಆ. ನೀರಿನ ಸರಬರಾಜು:** ತಿರುವೆಂಕಟನಾಥ ಯಾದವರಾಯನು ಶ್ರೀವೆಂಕಟೇಶ್ವರಸ್ವಾಮಿಗೆ ನೀಡಿದ ಸರ್ವಮಾನ್ಯ ಗ್ರಾಮ ತಿರುಪತಿ. ಆದರೆ ಗ್ರಾಮದ ಪೆರಿಯೇರಿಯ (ದೊಡ್ಡ ಕೆರೆ) ಉತ್ತರ ಕಾಲುವೆ ಬಳಿಯಿದ್ದ ಸ್ವಲ್ಪ ಸ್ಥಳ ಎಂಬೆರುಮಾನರಿಗೆ - ಭಗವದ್ರಾಮಾನುಜರಿಗೆ - ಅವರ ನಿತ್ಯ ಪೂಜೆಗಾಗಿ ಮೀಸಲಾಗಿ ದಾನವಾಗಿದ್ದಿತು. ಈ ಸ್ಥಳ ಅವಜ್ಞೆಗೆ ಗುರಿಯಾಗಿ ಪೊದೆ ಪೊದೆಗಳು,

ಮುಳ್ಳುಗಿಡಗಳೂ ಬೆಳೆದಿದ್ದವು. ಶ್ರೀ ರಂಗನಾಥನ ಆಡಳಿತದ ಮೂರನೆಯ ವರ್ಷದಲ್ಲಿ ಈ ಜಮೀನಿನ ಕಳೆ ಕಸವನ್ನೆತ್ತಿಸಿ ಭೂಮಿಯನ್ನು ಹಸನು ಮಾಡಿ ಸಾಗುವಳಿಯೋಗ್ಯ ಭೂಮಿಯನ್ನಾಗಿಸಿ ನೀರಾವರಿ ಸೌಲಭ್ಯವನ್ನೊದಗಿಸ ಲಾಯಿತು. ದೇವಮಾನ್ಯವಾದ ಗ್ರಾಮದೊಡನೆಯೇ ಪೆರಿಯೇರಿಯೂ ತಿರುವೆಂಕಟಮುಡೈಯಾನನಿಗೇ ಸೇರಿದ್ದುದರಿಂದ ಅದರ ನೀರನ್ನು ಯಾವುದೇ ಪರಿಹಾರವಿಲ್ಲದೆ ನೀಡದೇ ಎಂಬೆರುಮಾನರಿಗೆ ಸೇರಿದ ಭೂಮಿಯ ಸಾಗುವಳಿಯಲ್ಲಿ ಬಳಸುವಂತಿರಲಿಲ್ಲ. ಹೀಗಾಗಿ ಪರಿಹಾರ ರೂಪದಲ್ಲಿ ತಿರುವೆಂಕಟ ಮುಡೈಯಾನನಿಗೆ 200 ಪಣಗಳ ತಿರುಮುನ್ ಕಾಣಿಕೆಯಾಗಿ ಸಲ್ಲಿಸಲಾಯಿತು. ಆನಂತರವೇ ತಿರುಪತಿಯ ಇತರ ಜಮೀನುಗಳ ವಿಷಯದಲ್ಲಿದ್ದ ಪದ್ಧತಿಯಂತೆ ಪೆರಿಯೇರಿಯ ನೀರನ್ನು ಈ ರಾಮಾನುಜರ ಭೂಮಿಯ ಕೃಷಿಗೆ ಬಳಸಲಾಯಿತು. (ಜಿ. ಟಿ. 1115).

**ಇ. ಧಾರ್ಮಿಕ ದತ್ತಿಗಳು:** ಈ ಕಾಲದಲ್ಲಿ ಬಹುತೇಕ ಧಾರ್ಮಿಕ ದತ್ತಿಗಳು ನಂದಾದೀಪದ ಬೆಳಗಿಸುವಿಕೆಗೆ ಸಂಬಂಧಿಸಿದ್ದದ್ದನ್ನು ಕಾಣಬಹುದು. ವಿಜಯನಗರದರಸರ ಕಾಲದಲ್ಲಿ ಪದ್ಧತಿಯಾಗಿ ಬೆಳೆದ ಉತ್ಸವ, ನಿವೇದನೆ ಗಳಿಗಾಗಿ ದತ್ತಿ ನೀಡುವಿಕೆಯ ಆರಂಭ ಕಾಲವನ್ನು ಮಾತ್ರ ಇಲ್ಲಿಯೇ ನೋಡಬಹುದು. ಈ ಮಾತಿಗೆ ತಿ.ತಿ. 111, 121, 134, 139, 141, 285, 433 ಹಾಗೂ ಜಿ.ಟಿ. 127 ಶಾಸನಗಳು ಉದಾಹರಣೆಗಳಾಗುತ್ತವೆ. ಧಾನ್ಯವನ್ನು ಅಳೆಯುವ ಅಳತೆಗೋಲು ತೂಂಬು ಆಗಿದ್ದು ವಟ್ಟಿ, (ಪುಟ್ಟಿ - ಬುಟ್ಟಿ) ಎಂಬುದು ತೂಂಬುವಿನ ಗಣಕ ವಾಗಿದ್ದಿತು. ಶ್ರೀ ಗೋವಿಂದರಾಜಸ್ವಾಮಿ ಆಲಯದಲ್ಲಿ ಚಲುಕ್ಕಿ ಅಥವಾ ಚಾಲುಕ್ಯ ನಾರಾಯಣನ್‌ಕಲ್ (ಜಿ.ಟಿ 127) ಎಂಬ ಅಳತೆ ಪ್ರಧಾನವಾಗಿದ್ದಿತು. ತಿರುಮಲೆಯಲ್ಲಿ ಮಲೈಕುನಿಯ ನಿನ್ರಾನ್‌ಕಲ್ ಅಥವಾ ಉಚ್ಚಿಯಲ್ ನಿನ್ರಾನ್‌ಕಲ್ (ಮರಕ್ಕಲ್) ಎಂಬ ಅಳತೆ ಪ್ರಚಲಿತವಿದ್ದಿತು. (ತಿ. ತಿ. 137) ಎರಡು ಚಾಲುಕ್ಯ ನಾರಾಯಣಕಲ್ ಗಳು ಒಂದು ಮರಕ್ಕಲ್ ಆಗಿರುತ್ತಿತ್ತು. ಆ ಕಾಲದ ನಾಣ್ಯಗಳು ವರಾಹ ಪಣಂ ಹಾಗೂ ಮಾಡೈಗಳಾಗಿದ್ದವು. ಮಾಡೈಯೆಂಬುದು ತೆಲುಗು ಪಲ್ಲವರಾಜ ವಿಜಯಗಂಡಗೋಪಾಲನು ಜಾರಿಗೆ ತಂದ ಚಿನ್ನದ ನಾಣ್ಯವಾಗಿದ್ದಿತು. ಹೀಗಾಗಿ ಇದನ್ನು ಗಂಡಗೋಪಾಲನ್ ಮಾಡೈ (ತಿ.ತಿ. 143) ಎಂದೇ ಕರೆಯಲಾಯಿತು. ಇದರ ಹೊಸರೂಪವನ್ನು ಗಂಡಗೋಪಾಲನ್ ಪುದು ಮಾಡೈ ಎಂದು ಕರೆಯಲಾಯಿತು. ಎರಡೂ ನಾಣ್ಯಗಳಲ್ಲಿ ಹಳೆಯದಾದ ಪಳಂ ಪುಲಿ ಮಾಡೈಯು ಏಳುವರೆ ವರಾಹ ಪಣಂಗೆ ಸಮಾನಾಗಿದ್ದಿತು. (ತಿ.ತಿ. 126) ಈ ಜಯಗೊಂಡಚೋಳ ಮಂಡಲದಲ್ಲಿ ಚಿನ್ನದ ನಾಣ್ಯ ಪ್ರಚಲಿತವಾಗಿದ್ದು ಇದು ಪೂರ್ಣ ಶುದ್ಧ ಚಿನ್ನದಾಗಿದ್ದಿತು. (ತಿ.ತಿ. 129).

**ಈ. ಸಾಲೀಯ ಶ್ರೀವೈಷ್ಣವರು:** ಶ್ರೀವೈಷ್ಣವರಲ್ಲಿ ಒಂದು ಪಂಗಡದವರು ನೇಕಾರರಿದ್ದು ತಮ್ಮನ್ನು ತಾವು ಸೌರಾಷ್ಟ್ರ ಬ್ರಾಹ್ಮಣರೆಂದು ಕರೆದುಕೊಳ್ಳುವ ಸಾಲೀಯ ಶ್ರೀವೈಷ್ಣವರಲ್ಲಿ ಹಲವರು ವಿಷ್ಣುಗೋತ್ರ (ತಿ.ತಿ. 125) ಹಲವರು ಕಶ್ಯಪಗೋತ್ರ (ತಿ.ತಿ. 129) ಮತ್ತೂ ಹಲವರು ಆತ್ರೇಯ ಗೋತ್ರದವರು. ಆತ್ರೇಯ ಗೋತ್ರದವರು ವಿಕ್ರಮದೇವಿಪುರದವರೂ, ಮಿಕ್ಕವರು ಅಲ್ಲಿನವರೇ ಆಗಿದ್ದಿರಬೇಕು.

## 7. ಸ್ಥಾನತ್ತಾರರು

**ಅ. ಕಾರ್ಯನಿರ್ವಾಹಕರು; ಧರ್ಮದರ್ಶಿಗಳಲ್ಲ.** ಪ್ರಾಚೀನ ಹಾಗೂ ವಿಜಯನಗರದರಸರ ಕಾಲದ ಶಾಸನಗಳಲ್ಲಿ ಪದೇ ಪದೇ ಕಂಡುಬರುವ 'ಸ್ಥಾನತ್ತಾರ್' ಎಂಬ ಸಮಿತಿಯು ಆಲಯದ ದೈನಂದಿನ ಆಡಳಿತವನ್ನು ವ್ಯವಸ್ಥಿತವಾಗಿ ನಡೆಸಿಕೊಂಡುಹೋಗುವ ಒಂದು ಸ್ಥಳೀಯ ಸಮಿತಿ ಆಗಿದ್ದಿತು. ಇದೊಂದು ಜಾತ್ಯಾತೀತ ಸಂಸ್ಥೆಯಾಗಿದ್ದರೂ ಈ ಸಮಿತಿಯಲ್ಲಿನ ಹಲವರು ಆಲಯದ ಕೆಲವು ಧಾರ್ಮಿಕ ಕ್ರಿಯಾಕಲಾಪಗಳನ್ನು ನಡೆಸುತ್ತಿದ್ದರು. ಒಟ್ಟಿನಲ್ಲಿ ಆಲಯದ ವಿಚಾರದಲ್ಲಿ ಸ್ಥಳೀಯ ರಾಜರ ಪರವಾಗಿ ಶ್ರೀಕಾರ್ಯವನ್ನು ನಿರ್ವಹಿಸುವ ಸಾರ್ವಜನಿಕ ಸೇವಾರಂಗದ ಉನ್ನತವಾದ ಸಮಿತಿಯೆಂಬ ಗೌರವಕ್ಕೆ ಪಾತ್ರವಾಗಿದ್ದಿತು. ಮೊದಲಿಗೆ ಆಲಯದ

ವಿಚಾರದಲ್ಲಿ ಸೀಮಿತವಾದ ಕೆಲಸಗಳನ್ನು ಮಾತ್ರವೇ ಮಾಡುವಂತಿದ್ದರೂ, ನಂತರದ ಕಾಲದಲ್ಲಿ ಮುಖ್ಯವಾಗಿ ವಿಜಯನಗರದರಸರ ಕಾಲದಲ್ಲಿ ಈ ಸಮಿತಿಯ ಸ್ವರೂಪ ಹಾಗೂ ಕಾರ್ಯಕ್ಷೇತ್ರಗಳು ವಿಸ್ತಾರವಾಗಿ ಧರ್ಮದರ್ಶಿಗಳ ಸ್ಥಾನದಲ್ಲಿಯೂ ಕೆಲಸ ಮಾಡುವಂತೆ ಆಯಿತು. ಆಲಯದ ಆಸ್ತಿ ಪಾಸ್ತಿಗಳ ಹಾಗೂ ಆಲಯದ ಜವಾಬ್ದಾರಿ ಯನ್ನೂ ಹೊರುವಂತೆ ದಾನದತ್ತಿಗಳನ್ನು ಸ್ವೀಕರಿಸುವ, ಇವುಗಳು ಸಕ್ರಮವಾಗಿ ಬಳಕೆಗೆ ಬಂದು ಹೆಚ್ಚಿನ ಉತ್ಪನ್ನ ಆಲಯಕ್ಕೆ ಸಿಗುವಂತೆ ಮಾಡುವ ಹಾಗೂ ಈ ದಾನಗಳನ್ನು ಸರಿಯಾಗಿ ನಿರ್ವಹಿಸುವ ಜವಾಬ್ದಾರಿಯನ್ನೂ ಪಡೆಯುವಂತೆ ಆಯಿತು.

ಶಾಸನಗಳಲ್ಲಿ ನಮಗೆ ದೊರೆಯುವ ಮೊದಲನೆಯ ಆಡಳಿತ ಯಂತ್ರಾಂಗವೆಂದರೆ ಆಲಯದಲ್ಲಿ ಉತ್ಸವವನ್ನು ನಿರ್ವಹಿಸಲು ವ್ಯಾಪಕವಾದ ಆಸ್ತಿಯನ್ನು ದಾನವಾಗಿ ನೀಡಿದ ಪಲ್ಲವರಾಣಿ ಸಾಮವ್ವೆ ಹಾಕಿಸಿದ ಶಾಸನದಲ್ಲಿ ಕಂಡುಬರುವಂತಹದ್ದೇ ಆಗಿದೆ. ಈ ಯಂತ್ರಾಂಗವನ್ನು - 'ಮಟಾಪತ್ಯಂ ಸೆಯ್ಯುವಾರ್' ಎನ್ನಲಾಗಿದೆ ಎಂದರೆ ತಿರುವೆಂಗಡನಾಥನ ಆಲಯದಲ್ಲಿ ಮಠಾಧಿಪತ್ಯವನ್ನು ಮಾಡುತ್ತಿದ್ದವರೆನ್ನಬಹುದು. ಇವರ ಅಧಿಕಾರದ ಬಗ್ಗೆ ಖಚಿತವಾದ ವಿವರಣೆ ಇಲ್ಲವಾದರೂ ಆಲಯದ ಆಡಳಿತಾಧಿಕಾರಿಗಳು ಎಂದು ತಿಳಿಯಬಹುದಾಗಿದೆ.

ಚೋಳರ ಆಡಳಿತಕಾಲದಲ್ಲಿಯೂ ಇದೇರೀತಿಯ ಮಟಾಪತ್ಯಂ ಸೆಯ್ಯುವಾರ್ - ಮಠಾಧಿಪತ್ಯ ಮಾಡುವ ವರು - ಆಲಯದ ಸೇವೆ, ಆಡಳಿತವನ್ನು ನಡೆಸುವ ಹೊಣೆಯವರಾಗಿದ್ದು, ಆಲಯದ ದಾನ ದತ್ತಿಗಳ ಆಸ್ತಿಗಳ ಧರ್ಮದರ್ಶಿಗಳಾಗಿದ್ದರು. ರಾಜನ ಪ್ರತಿನಿಧಿಗಳು ಇವರ ಮೇಲೆ ಪೂರ್ಣ ಅಧಿಕಾರವನ್ನು ಹೊಂದಿದ್ದವರಾಗಿದ್ದರು. ಇದು ಜಿ.ಟಿ. 126 ನೇ ಶಾಸನದಂತೆ ಸಿದ್ಧವಾಗುತ್ತದೆ. ಈ ಶಾಸನವನ್ನು ರಾಜರಾಜ ಚೋಳನ ಆಜ್ಞೆಯಂತೆ ಲಿಖಿಸಲಾಗಿದ್ದು ಇದರ ವಿವರ ಹೀಗಿದೆ -

ರಾಜನು ಈ ಹಿಂದೆಯೇ ಬಾಯಿಮಾತಿನ ಮೂಲಕ ನೀಡಿದ ಆದೇಶದ ಪ್ರಕಾರ ತ್ರಿಭುವನ ಚಕ್ರವರ್ತಿ ಗಳಾದ ಶ್ರೀ ರಾಜರಾಜ ದೇವರ ಆಡಳಿತದ 19 ನೇ ವರ್ಷದ ಕಾರ್ತೀಕ ಮಾಸದಲ್ಲಿ ಪೆರಿಯನಾಟ್ಟವರಾದ ನಾವು ತಿರುಸುಖನೂರಿನ (ತಿರುಚಾನೂರು) ಆಲಯಕ್ಕೆ ಸೇರಿದ ಸಭಾಮಂದಿರದಲ್ಲಿ ಎಲ್ಲ ಸದಸ್ಯರೂ - ಯಾವೊಬ್ಬ ಸಹಾಯಕರನ್ನೂ ಬಿಡದೆ - ಸಮಾವೇಶವಾಗಿ, ಶ್ರೀ ಗೋಪ ದಾಸರ್ ಪಿಳ್ಳೈ ಹಾಗೂ ಕಲಿಕನ್ರಿ ದಾಸರ್ ಪಿಳ್ಳೈಗಳು ನೀಡಿದ ಬಿನ್ನವತ್ತಳೆಯ ಬಗ್ಗೆ ವಿಚಾರಿಸಿ ಏಕಕಂಠರಾಗಿ ನಿರ್ಣಯಿಸಿರುವೆವು. ಅದೆಂದರೆ ವಿಷ್ಣುವಿನ ಸುಧಾವಿಗ್ರಹವನ್ನು ಒಳಗೊಂಡ ಶ್ರೀ ಗೋವಿಂದರಾಜಸ್ವಾಮಿ ಆಲಯದಲ್ಲಿ ಪೆರಿಯ ನಾಟ್ವಾರರು ಸ್ಥಾಪಿಸಿದ ತಿರುಮಂಗೈ ಆಳ್ವಾರರ ವಿಗ್ರಹದ ನಿವೇದನೆಯಲ್ಲಿ ದಿನವೂ ಅಮುದಪ್ಪಡಿ ಹಾಗೂ ಸಾತ್ತುಪ್ಪಡಿಗಳನ್ನು ಏರ್ಪಡಿಸಲು, 'ತಿರುಕ್ಕುಡುವೂರು ನಾಡುವಿನ ಪಶ್ಚಿಮದಲ್ಲಿ ದೊಡ್ಡ ರಸ್ತೆಗಳು ಕೂಡುವೆಡೆಯಲ್ಲಿರುವ ಮಂಡಲ ಕೋಟೆಯ ಉತ್ತರಕ್ಕೆ... ದ ಪೂರ್ವಕ್ಕೆ ಕೆರಂದಯೇರಿಯ ದಕ್ಷಿಣಕ್ಕೆ ಇರುವ ಪಟ್ಟಿಗೆ ಐದು ತೂಂಬು ಭತ್ತ ಬೆಳೆಯುವ ಕೊತ್ತಕಾಲುವೆ ಭೂಮಿಯನ್ನು ನೀರಿನಿಂದ ಧಾರೆಯೆರೆದು ಕೊಟ್ಟಿದ್ದನ್ನು ಗಮನಿಸಿದ್ದೇವೆ. ಹಾಗೂ ಈ ಆದಾಯವನ್ನು ತಿರುವೆಂಕಟ ಮುಡಿಯಾನನ ಆಲಯದ ಭಂಡಾರಿಗಳು ಶ್ರೀ ಗೋವಿಂದರಾಜ ಪೆರುಮಾಳರ ಆದಾಯದೊಡನೆಯೇ ವಸೂಲಿ ಮಾಡಿ, ಸೂರ್ಯಚಂದ್ರರಿರುವರೆಗೆ ಈ ದಾನವನ್ನು ರಕ್ಷಿಸತಕ್ಕದು.

"ಈ ದಾನದ ಏರ್ಪಾಡಿಗೆ ವಿಘ್ನ ತಂದವನು ಗಂಗಾನದಿಯ ದಡದಲ್ಲಿ ಕಪಿಲ ಹಸುವನ್ನು ಕೊಂದ ಪಾಪಕ್ಕೆ ಒಳಗಾಗುತ್ತಾನೆ.

"ಪೆರಿಯ ನಾಟ್ಟವರಾದ ನಾವು ಈ ವ್ಯವಹಾರಕ್ಕೆ ಸಾಕ್ಷಿಯಾಗಿದ್ದೇವೆ ಹಾಗೂ ಇದು ಪೆರಿಯ ನಾಟ್ಟು ವೇಲನ ಮೊಹರಿನಸಹಿ."

ಅತಿ ಪ್ರಾಚೀನ ಕಾಲದಿಂದಲೂ ಸ್ಥಾನಿಕರು, ಸ್ಥಳೀಯ ಸೇವಾದಾರರು ಇದ್ದಂತೆ ಕಾಣಬರುತ್ತದೆ. ಇದನ್ನು ತಿರುಕಾಳತ್ತಿ ದೇವನ 170 ತಿ.ತಿ. ಶಾಸನವು ಖಚಿತಪಡಿಸುತ್ತದೆ. ಸದರಿ ಶಾಸನದ ಪಾಠ ಹೀಗೆ ನಡೆಯುತ್ತದೆ.

"ತಿರುಮಲೆಯ" ಸ್ಥಾನತ್ತಾರರ ಬೇಡಿಕೆಯಿಂದಾಗಿ ತಿರುವೆಂಕಟ ಮುಡಿಯಾನನ ಆಲಯದಲ್ಲಿ ಈ ಏರ್ಪಾಡುಗಳನ್ನು ಮಾಡಲಾಗಿದೆ.

"ಸಕಲ ಭುವನಾಶ್ರಯನೂ, ವಿದ್ಯಾರಣ್ಯದ ಕೋಗಿಲೆಯೂ, ಶ್ರೀಕಾಳಹಸ್ತೀಶ್ವರ ಚರಣ ಸರೋಜ ಭೃಂಗನೂ, ವೆಂಗಿ ಪ್ರಭುವೂ, ಪಿಡಾರದೇವಿಯ ಅನುಗ್ರಹ ಪಡೆದವನೂ, ಗೋದಾವರಿಯರಸನೂ, ಉತ್ತಮ ನಗರವಾದ ಕಾನುಪಾಕದ ಪ್ರಭುವೂ, ವಿದ್ವಾಂಸರಲ್ಲಿ ಅತಿ ಶ್ರೇಷ್ಠನೂ, ಯುದ್ಧದಲ್ಲಿ ಸೋತ ರಾಜನ ನಗರವಾದ ಗೋಪಕಾ ಪುರದ ಕ್ರೀಡಾಕಾರನೂ, ಚಂದ್ರವಂಶದ ಆಭರಣವೂ, ಚಾಲುಕ್ಯ ನಾರಾಯಣನೂ, ಸಕಲ ಗುಣ ಗಣಿಯೂ, ಮಹಾರಾಜಾಧಿರಾಜನೂ, ಯಾದವರಾಜನೂ, ಶ್ರೀಮದ್ಭುಜಬಲನೂ ಆದ ತಿರುಕಾಳತ್ತಿ ದೇವಯಾದವರಾಯನಾದ ನಾನು ಸ್ಥಾನತ್ತಾರರ ಬೇಡಿಕೆಯಂತೆ ತಿರುವೆಂಕಟ ಮುಡಿಯಾನನ ಆಲಯಕ್ಕಾಗಿ ನೀಡುವ ಆಜ್ಞೆಯೇನೆಂದರೆ

"ಅವಿಲಾಲ ನಾಡಿನ ಪಂಚಾಯಿತಿ ಸಭೆಯಲ್ಲಿ ನನ್ನ ಆಡಳಿತದ 19 ನೇ ವರ್ಷದಲ್ಲಿ ತಿರುವೆಂಕಟ ಮುಡೈಯಾನನ ಆಲಯದಲ್ಲಿ ನಿಬಂಧನೆಗಾಗಿ ದೇವದಾನವು ನಿರಂತರವಾಗಿ ನಡೆಯಲೆಂದು ಭೂಮಿಯನ್ನು ಧಾರೆಯೆರೆದು ನೀಡುವಾಗ ಕುಡವೂರು ನಾಡಿನ ನಾಲ್ಕು ಗಡಿಗಳ ಒಳಗೆ ಇರುವ ಖುಷ್ಕಿ, ತರಿ ಎಲ್ಲ ಭೂಮಿಯನ್ನೂ ಅದರ ಮೇಲೆ ಸಂದಾಯ ವಾಗುವ ಎಲ್ಲ ತೆರಿಗೆ ಸುಂಕಗಳೊಡನೆ - ಕಡಮೈಆಯ, ಪಡಿಕಾವಲ್, ವೆಟ್ಟಿಚರಿಗೆ, ಕೋಲ್‌ವರಿ, ಪಟ್ಟಂಪೋನ್, ಪೋನ್‌ವರಿ, ಕಾಣಿಕ್ಕೈ, ಪೊರ್‌ಕಲಂಗಳ - ಮೊದಲಾದ ಎಲ್ಲ ತೆರಿಗೆಗಳೊಡನೆ ನೀಡುತ್ತ ಈ ಭೂಮಿಯ ಗಡಿಗಳಲ್ಲಿ ಸುದರ್ಶನ ಕಲ್‌ಗಳನ್ನು (ವಿಷ್ಣುಚಕ್ರ ಕೆತ್ತಿದ ಗಡಿಯ ಕಲ್ಲುಗಳು) ನೆಡಿಸ ಬೇಕೆಂದು ಆಜ್ಞೆ ಮಾಡುತ್ತೇನೆ. ಈ ಆಜ್ಞೆ ಜಾರಿಗೆ ಬರಲಿ".

ಎಲ್ಲ ಶಾಸನಗಳಲ್ಲಿಯೂ ಕಂಡುಬರುವ ಭಾಷೆಯ ಪ್ರಕಾರ ಈ ಜಮೀನುಗಳನ್ನು ಸ್ಥಾನತ್ತಾರರಿಗೆ ಒಪ್ಪಿಸಲಿಲ್ಲವೆಂಬುದನ್ನು ನೋಡಬಹುದು. ಮತ್ತೊಂದು ದಿಕ್ಕಿನಲ್ಲಿ ಇಂತಹ ಎಲ್ಲ ಭೂಮಿಯೂ ಆಲಯದ ಶ್ರೀ ಭಂಡಾರಕ್ಕೆ ಸೇರಿದುವೆಂಬುದು ಸ್ಪಷ್ಟವಾಗು ತ್ತದೆ. ಈ ಭೂಮಿಗಳಲ್ಲಿನ ಆದಾಯವನ್ನು ಮಾತ್ರವೇ ಸ್ಥಾನತ್ತಾರರು ಅಂದಂದಿನ ವೆಚ್ಚಗಳಿಗಾಗಿ ಸ್ವೀಕರಿಸುವಂತಿದ್ದಿತು. ಹೀಗಾಗಿ ಸಾರ್ವಜನಿಕ ಕೆಲಸಗಳಿಗೆಂದು ನೀಡಲಾದ ದಾನಗಳೆಲ್ಲವೂ 'ತಿರುಪ್ಪಣಿ ಭಂಡಾರ' ಕ್ಕೆ ಸೇರುತ್ತಿದ್ದವು. ಇದರಿಂದಾಗಿ ಈ ಕಾಲದಲ್ಲಿ ಸ್ಥಾನತ್ತಾರರು ಆಲಯದ ಆಸ್ತಿಪಾಸ್ತಿಗಳಿಗೆ ಧರ್ಮದರ್ಶಿಗಳಂತಲ್ಲದೆ ನಿರ್ವಾಹಕರಾಗಿ ಮಾತ್ರವೇ ಅಧಿಕಾರ ಪಡೆದಿದ್ದರೆಂದು ಕಂಡುಬರುತ್ತದೆ.

**ಆ) ದತ್ತಿಗಳ ಮೇಲಿನ ಪ್ರಭುತ್ವ:** ದಾನ ದತ್ತಿಗಳೆಲ್ಲವುಗಳ ಮೇಲೆ ಸ್ಥಳೀಯ ರಾಜರ ಸಂಪೂರ್ಣ ಪ್ರಭುತ್ವ ವಿದ್ದಿತೆಂಬುದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಜಿ.ಟಿ. 11 ನೇ ಶಾಸನ ಹೀಗಿದೆ.

"ತ್ರಿಭುವನ ಚಕ್ರವರ್ತಿ ಶ್ರೀ ತಿರುವೆಂಕಟನಾಥ ಯಾದವರಾಯರ ಆಡಳಿತದ 12 ನೇ ವರ್ಷದ ಪಂಗುನಿ ಮಾಸದ ಒಂದು ದಿನ ಈ ಮೊದಲು ತಿರುವೆಂಕಟಮುಡೈಯಾನನಿಗೆ ನೀಡಿದ ತಿರುಪತಿಯನ್ನು ರಾಜಶಾಸನದಿಂ ದಾಗಿ ತಿರುವಿಡೈಯಾಟ್ಟಂ ತಿರುನಾಮತ್ತುಕ್ಕಾಣಿಯೆಂದು ತಿರುಮಲೆಯ ಸ್ಥಾನತ್ತಾರರಿಗೆ ಈ ಮೂಲಕ ತಿಳಿಸಲಾಗಿದೆ.

"ನಾವು ಇದುವರೆಗೆ ಈ ಗ್ರಾಮದಲ್ಲಿ ವಸೂಲು ಮಾಡುತ್ತಿದ್ದ ಕೆಳಕಂಡ ತೆರಿಗೆಗಳನ್ನು ರಾಜನ ಆಡಳಿತದ ಹನ್ನೆರಡನೆಯ ವರ್ಷದ ಚಿತ್ತರೈ ಮಾಸದಿಂದ ನಾರಾಯಣಸಂಧಿಯ ಅಮುದಪ್ಪಡಿ ಸಾತ್ತುಪ್ಪಡಿಗಳ ಸಾಮಾಗ್ರಿಗಳಿಗಾಗಿ ಬಳಸಬೇಕೆಂದು ಅಜ್ಞಾಪಿಸ ಲಾಗಿದೆ. ಇದಕ್ಕಾಗಿ ಈ ಸೂರ್ಯಚಂದ್ರರಿರುವ ತನಕ ನಡೆಯಬೇಕೆಂದು ಸದರಿ ಗ್ರಾಮವನ್ನು - ತಿರುಪತಿಯನ್ನು - ಸರ್ವ ಸಾಮಾನ್ಯ ಗ್ರಾಮವೆಂದು ಘೋಷಿಸಲಾಗಿದೆ. ಈ ತಿರುವಾರಾಧನೆಯು ಇಂದಿನಿಂದ ನಿರಂತರವಾಗಿ ನಿಲ್ಲದಂತೆಯೂ, ಕೊರೆಯಾಗದಂತೆಯೂ ನಡೆಯಬೇಕೆಂದು ಆಜ್ಞಾಪಿಸ ಲಾಗಿದೆ. ಈ ಶಾಸನವನ್ನು ತಾಮ್ರ ಪತ್ರದಲ್ಲಿಯೂ, ಕಲ್ಲಿನಲ್ಲಿಯೂ ಕೆತ್ತಬೇಕು."

**ಇ) ವಸೂಲಾಗುತ್ತಿದ್ದ ತೆರಿಗೆಗಳು:** ಪಂಡವರಿ, ಪಳವರಿ, ಕಾಣಿಕ್ಕೈ, ವೇಂಡುಕೊಳ್‌ವರಿ, ಮಲ್ಲೈಅಮಂಜಿ, ಕುದಿರೈವರಿ, ಕನಕ್ಕಮೋವಿ, ನಾಟ್ಟುವರಿ, ನಿಲಕ್ಕಾಣಿಕ್ಕೈ, ನಾಟ್ಟಾರ್ ವೈತ್ತ ಕಾಣಿಕ್ಕೈ, ವಲಿನಡೈ ಕಾಣಿಕ್ಕೈ, ಅಕ್ಕನ್ ಕಾಣಿಕ್ಕೈ, ಕಾರ್ತಿಕ್ಕೈ ಕಾಣಿಕ್ಕೈ, ಪಟ್ಟಿವರಿ

ವಿರುತ್ತುವಗೈ, ಪಳತಳಿಕ್ಕು ಮಾಡೈಯಲ್ ಕೊಳ್ಳುಂವರಿ, ನಾಟ್ಟಾರ್ ಮಾಡೈಯಿಲ್ ವಗುಕ್ಕುಂವರಿ, ವಲ್ಲಾಳ ದೇವರ್ ವರಿ, ವಾಸಲ್‌ಪಣಂ, ತಲೈಪಣಂ, ನಿಶ್ಚಯಿಪ್ಪು, ಮುಗಪಾರ್ವೈ, ಪಾದೈಯರಿ ಮೋವಿ, ಮುಗಂಪಾರ್ವೈ ಚಮ್ಮದಂ, ಸಂಬಳಚಮ್ಮದಂ, ಸೆಟ್ಟಿಕಲ್, ವಾಣಿಕರ್, ಸೇನ್ಯೆ ಅಂಗಡಿ ಯಾರ್, ಸಕ್ಕುಡಿ ಮಕ್ಕಳ್, ನೈವಗೈ, ಸುಂಕವಾರಿ ಕೊಳ್ಳುಂವಗೈ, ಕೈಕೋಲರ ಪೇರ್, ಸುಂಗ ಆಣೈ, ಪಿಳ್ಳೈಕಲ್ ಕಾಣಿಕ್ಕೈ.

ಮೇಲಿನ ಶಾಸನವು ಪ್ರಮುಖವಾಗಲು ಕಾರಣ ಈ ಶಾಸನವು ತಿರುಪತಿಯನ್ನು ಸರ್ವಮಾನ್ಯ ಗ್ರಾಮವನ್ನಾಗಿ ಪರಿವರ್ತಿಸಿ, ನಾರಾಯಣ ಸಂಧಿಯೆಂದು ಕರೆಯಲಾಗುವ ಸ್ವಾಮಿಯ ಒಂದು ನಿವೇದನೆಯ ವಿಷಯವನ್ನು ತಿಳಿಸುವುದಾಗಿದೆ. ರಾಜನ ಆಜ್ಞೆಯನ್ನು ಜಾರಿಗೆ ತರಲು ಮಾಡಿದ ಏರ್ಪಾಡುಗಳ ವಿವರಗಳನ್ನು ಸ್ಥಾನತ್ತಾರರ ಗಮನಕ್ಕೆ ತರಲಾಗಿದೆ. ತಿರುಪತಿ ಗ್ರಾಮದಲ್ಲಿ ವಸೂಲಾಯವಾಗುತ್ತಿದ್ದ ಹಲವು ಹನ್ನೊಂದು ತೆರಿಗೆಗಳ ಬಗ್ಗೆ ತಿಳಿದುಬರುವುದು ಆಸಕ್ತಿದಾಯಕವಾಗುತ್ತದೆ. ಇಲ್ಲಿ ಹೇಳಲಾಗಿರುವ ಹಲವಾರು ತೆರಿಗೆಗಳಲ್ಲಿ ಸ್ವರ್ಣಸುಂಕ, ಧಾನ್ಯತೆರಿಗೆ, ಉಚಿತ ಸೇವೆಯ ತೆರಿಗೆ, ವರ್ತಕ, ನೇಕಾರ, ಗಾಣಿಗರೇ ಮೊದಲಾದವರು ನೀಡುತ್ತಿದ್ದ ಉದ್ಯೋಗ ತೆರಿಗೆ, ಉದ್ಯಾನ ವನಗಳ ಪರವಾಗಿ ಶುಲ್ಕ, ಮೀನುಗಾರಿಕೆಯ ಕೆರೆಗಳ ಸುಂಕ, ಜಾನುವಾರು ದೊಡ್ಡಿಯ ಸುಂಕ - ಮೊದಲಾದವನ್ನು ಕುರಿತು ಹೇಳಲಾಗಿದೆ. ಈ ತೆರಿಗೆಗಳಲ್ಲಿನ ವೈವಿಧ್ಯತೆ ಹಾಗೂ ಸಂಕೀರ್ಣತೆಗಳಿಂದಾಗಿ ಅಂದಿನ ಆಡಳಿತ ವ್ಯವಸ್ಥೆಯ ಸಂಕೀರ್ಣವೂ ಸುವ್ಯವಸ್ಥಿತವೂ ಆಗಿದ್ದಿತೆಂದೂ, ಈ ಬಗ್ಗೆ ಸ್ಥಾನತ್ತಾರರಿಗೆ ವಿಷಯ ತಿಳಿಸಲಾಯಿತು ಎಂಬುವುದರಿಂದಾಗಿ ಅವರುಗಳ ಕರ್ತವ್ಯ ಆಲಯದ ಕಾರ್ಯಗಳ ನಿರ್ವಹಣೆಯ ಹೊಣೆಮಾತ್ರವಾಗಿದ್ದು, ಅದಕ್ಕಾಗಿ ಧನವನ್ನು ಸ್ವೀಕರಿಸಿ ವೆಚ್ಚ ಮಾಡುತ್ತಿದ್ದರೆಂದೂ ತಿಳಿಯಬಹುದು. ಇದರೊಂದಿಗೆ ಧರ್ಮದರ್ಶಿತ್ವವೇನೂ ಸೇರಿರಲಿಲ್ಲ.

**ಈ. ಸ್ಥಾನತ್ತಾರರ ಔನ್ನತ್ಯ.** ಆದರೂ ಹಲವಾರು ಸಂದರ್ಭಗಳಲ್ಲಿ ಸ್ಥಾನತ್ತಾರರ ಅಭಿಪ್ರಾಯವನ್ನು ಕೇಳಿ ತಿಳಿಯ ಲಾಗುತ್ತಿದ್ದಿತು ಎಂದೂ, ಅವರ ಅಭಿಮತವನ್ನು ಗೌರವದಿಂದ ಆದರಿಸಲಾಗುತ್ತಿದ್ದಿತೆಂದೂ ಶಾಸನಗಳಿಂದ ತಿಳಿಯಬಹುದು. ತಿ,ತಿ, 195 ನೇ ಶಾಸನ ಹೀಗೆ ಇದೆ.

"ಶುಭಮಕ್ಕೆ ಶ್ರೀಮನ್ ಮಹಾಪ್ರಧಾನಿಗಳು ತಿರುಮಲೆಯ ಸ್ಥಾನತ್ತಾರರಲ್ಲಿ ಸಲ್ಲಿಸುವ ಬೇಡಿಕೆಯೆಂದರೆ-

"ನಮಗೆ (ನಮ್ಮ) ಅಳಿಯ ಶುಭಮಕ್ಕೆ, ಶ್ರೀಮನ್ ಮಹಾ ಪ್ರಧಾನಿಗಳು ತಿರುಮಲೆಯ ಸ್ಥಾನತ್ತಾರರಲ್ಲಿ ಸಲ್ಲಿಸುವ ತಿರುವೆಂಕಟನಾಥ ಯಾದವರಾಯನು (ಎಲ್ಲ ತೆರಿಗೆಗಳನ್ನೊಳಗೊಂಡ) ಸರ್ವಸಾಮಾನ್ಯವಾಗಿ ನೀಡಿರುವ ಇಳತ್ತೂರುನಾಡಿನ ಸಿಂಗಲ್ಲೂರು ಅಥವಾ ಪೊಂಗಲೂರನ್ನು ಸಿಂಗಯ ದಣ್ಣಾಯಕ ಇಮ್ಮಡಿ ರಾಹುತ್ತರಾಯರ ಅಪೇಕ್ಷೆಯಂತೆ ತಿರುವೆಂಕಟ ಮುಡೈಯಾನನಿಗೆ ಆಡಿ ತಿರುನಾಳ್ ಉತ್ಸವಕ್ಕಾಗಿಯೂ ತಿರುವಿಡೈ ಆಟ್ಟಂ ಕಾಣಿಕೆಯಾಗಿ ಸಮರ್ಪಿಸಿದ್ದು, ಈ ಗ್ರಾಮದ ಗಡಿಗಳಲ್ಲಿ ವಿಷ್ಣುಚಕ್ರದ ಗಡಿಗಲ್ಲುಗಳನ್ನು ನೆಟ್ಟು, ಈ ಗ್ರಾಮದ ಇಡೀ ಆದಾಯವನ್ನು ಪಡೆದು ಉತ್ಸವವನ್ನು ನಡೆಸುವಂತಾಗಿ ತಿರುಮಲೆಯಲ್ಲಿ ಸಿತಕರಗಂಡನ್ ಸಂಧಿಯ ಪ್ರಸಾದ ನಿವೇದನೆಯನ್ನು ಸಮರ್ಪಿಸುತ್ತ, ತಿರುಪತಿಯ ವೀರನರ ಸಿಂಗಪ್ಪೆರುಮಾಳ್ ಹಾಗೂ ತಿರುಮಂಗೈ ಆಳ್ವಾರರಿಗೆ ಪ್ರತಿನಿತ್ಯವೂ ಒಂದು ತಿರುಪ್ಪೋನಕ ನಿವೇದನೆ ಮಾಡುತ್ತ, ಸಿತಕರಗಂಡ ಮಠದಲ್ಲಿ ದಿನವೂ ಮೂವತ್ತೆಂಟು ಮಂದಿ ಶ್ರೀ ವೈಷ್ಣವರಿಗೆ ಭೋಜನವನ್ನು ಕಲ್ಪಿಸಬೇಕೆಂದೂ, ಈ ಆದಾಯದಲ್ಲಿ ಮಿಕ್ಕ ಹಣದಿಂದ ನಮ್ಮ ಹೆಸರಿನಲ್ಲಿ ತಿರುಮಲೆಯಲ್ಲಿ ಒಂದು ಪುಷ್ಪವಾಟಿಕೆಯನ್ನು, ಕುಡಿಯುವ ನೀರಿನ ಕೇಂದ್ರವನ್ನೂ, ಮಿಕ್ಕ ಇತರ ಧರ್ಮಕಾರ್ಯಗಳನ್ನೂ ನಡೆಸಬೇಕೆಂದು ಬೇಡುತ್ತೇವೆ. ಜೊತೆಗೇ ಈ ಒಂದು ಏರ್ಪಾಡಿನ ವಿವರಗಳನ್ನು ಸೂರ್ಯಚಂದ್ರರು ಇರುವ ತನಕ ನಡೆಯಲು ಅನುಕೂಲವಾಗುವಂತೆ ಕಲ್ಲಿನಲ್ಲಿ ತಾಮ್ರದಲ್ಲಿ ಶಾಸನರೂಪದಲ್ಲಿ ಕೆತ್ತಿಸಬೇಕೆಂದು ಕೋರುತ್ತೇವೆ.

"ಈ ಒಂದು ಧರ್ಮಕಾರ್ಯಕ್ಕೆ ಶ್ರೀ ವೈಷ್ಣವರ ರಕ್ಷೆಯಿರಲಿ."

ಮೇಲಿನ ಶಾಸನದಿಂದ ರಾಜನು ಸ್ಥಾನತ್ತಾರರನ್ನು ಗೌರವಾದರಗಳಿಂದ ತನ್ನ ಅಪೇಕ್ಷೆಯ ಏರ್ಪಾಡುಗಳನ್ನು ಒಪ್ಪಲುಬೇಡಿದ್ದು ತಿಳಿದು ಬರುತ್ತದೆ. ಜೊತೆಗೇ ಹೆಚ್ಚಿನ ಆದಾಯವನ್ನು ಇತರ ಧರ್ಮಕಾರ್ಯಗಳಲ್ಲಿ - ಮೂವತ್ತೆರಡು ಮಂದಿ ಶ್ರೀ ವೈಷ್ಣವ ಭೋಜನ-ಪುಷ್ಪವಾಟಿಕಾ ನಿರ್ವಹಣೆ, ಕುಡಿಯುವ ನೀರಿನ ಕೇಂದ್ರದ ನಿರ್ವಹಣೆ - ಮೊದಲಾದವುಗಳಲ್ಲಿ ತೊಡಗಿಸಬೇಕೆಂಬ ಸ್ಥಾನತ್ತಾರರ ಅಪೇಕ್ಷೆಯನ್ನು ಒಪ್ಪಿದಂತೆಯೂ ಕಂಡು ಬರುತ್ತದೆ.

'ಸ್ಥಾನತ್ತಾರ್ ಶ್ರೀಪಾದತ್ತೇರಿ' ಎಂಬ ಪದಸಮುಚ್ಚಯದಿಂದ ಸ್ಥಾನತ್ತಾರರ ಶ್ರೀಪಾದ ಸನ್ನಿಧಿಯಲ್ಲಿ ಬಿನ್ನಹ ವೆಂದರ್ಥವಾಗಿ, ಸಿಂಗಯ ನಂತಹ ಪ್ರಬಲ ಪಾಳಯಗಾರನೂ ಸ್ಥಾನತ್ತಾರರ ಬಗ್ಗೆ ಇಟ್ಟಿದ್ದ ಗೌರವ ಸೂಚಿತ ಆಗುತ್ತದೆ.

ಇಷ್ಟೊಂದು ಪದೋನ್ನತಿಯನ್ನು ಸ್ಥಾನತ್ತಾರರು ಪಡೆದಿದ್ದರೂ ಅವರು ಧರ್ಮದರ್ಶಿಗಳಾಗಿರಲಿಲ್ಲ ವೆಂಬುದು ತಿ.ತಿ. 237, 273 ಹಾಗೂ ತಿ.ತಿ. 485, 487 ಶಾಸನಗಳಿಂದ ತಿಳಿದುಬರುತ್ತದೆ. ತಮ್ಮ ದಾನಗಳಲ್ಲಿ ಮಂಗಿದೇವನಾಗಲೀ, ವೀರಕುಮಾರ ಕಂಪಣನಾಗಲೀ, ಬುಕ್ಕರಾಯನಾಗಲೀ ಸ್ಥಾನತ್ತಾರರ ಹೆಸರನ್ನೇ ಪರಿಗಣನೆಗೆ ತೆಗೆದುಕೊಳ್ಳಲಿಲ್ಲ ಎಂಬುದನ್ನು ಈ ಶಾಸನಗಳು ಹೇಳುತ್ತವೆ. ಹೀಗೆಯೇ ತಿ.ತಿ. 61 ನೇ ಶಾಸನದಲ್ಲಿ ಅಳಗಪ್ಪಿರಂದಕ್ಕಲಿಕನ್ರಿದಾಸರ್ ಹಲವು ಸಮಯಗಳಲ್ಲಿ ನಿವೇದವೊಡಲೆಂದು 450 ಪಣಂ ಹೊನ್ನನ್ನು ಶ್ರೀ ಭಂಡಾರಕ್ಕೆ ಒಪ್ಪಿಸಿದ್ದಾನೆಯೇ ಹೊರತು ಸ್ಥಾನತ್ತಾರರಿಗೆ ಅಲ್ಲ. ಹೀಗೆಯೇ ತಿ.ತಿ. 103 ರ ಪ್ರಕಾರ ಹಲವಾರು ಸೇವೆಗಳಿಗಾಗಿ ಮುಲ್ಲೈ ತಿರುವೆಂಕಟಜೀಯರು ನೂರು ಪಣಂಗಳನ್ನು ಶ್ರೀ ಭಂಡಾರಕ್ಕೆ ನೀಡಿದ್ದಾರೆ.

ಈ ಶಾಸನಗಳೆಲ್ಲ ಅಂದಿನ ಕಾಲದಲ್ಲಿ ಆಲಯ ಕೋಶಾಗಾರ ಆಗಿದ್ದ ಶ್ರೀಭಂಡಾರಕ್ಕೆ ನೇರವಾಗಿ ದಾನಗಳನ್ನು ಸೇರಿಸುತ್ತಿದ್ದ ರೀತಿಯನ್ನು ವಿವರಿಸಿದ್ದು ಅಂದಿನ ದಿನಗಳಲ್ಲಿ ಸ್ಥಾನತ್ತಾರರು ದಾನದ ಸೊತ್ತನ್ನು ಸ್ವೀಕರಿಸಲು ಅರ್ಹತೆಯಾಗಲೀ, ಅಧಿಕಾರವಾಗಲೀ ಹೊಂದಿರಲಿಲ್ಲವೆಂಬುದನ್ನು ಸೂಚಿಸುತ್ತವೆ. ಹೀಗಾಗಿ ಈ ಕಾಲದವರೆಗೆ ಸ್ಥಾನತ್ತಾರರು ಸಾಮಾಜಿಕವಾಗಿ ಗೌರವಿಸಲ್ಪಟ್ಟರೂ ಆಲಯದ ಕಾರ್ಯಗಳ ನಿರ್ವಾಹಕರು ಮಾತ್ರವೇ ಆಗಿದ್ದರು.

**ಉ) ಧರ್ಮದರ್ಶಿಗಳಾಗಿ ಸ್ಥಾನತ್ತಾರರು:** ಮೊದಲಬಾರಿಗೆ ಕ್ರಿ.ಶ. 1387 ರಲ್ಲಿನ ಜಿ.ಟಿ. 153 ಶಾಸನದಲ್ಲಿ ಕೊಲ್ಲಿ ಕಾವಲಿದಾಸರಿಂದ ಸ್ಥಾನತ್ತಾರರು ಧರ್ಮದರ್ಶಿಗಳಂತೆ ಒಂದು ದತ್ತಿಯನ್ನು ಸ್ವೀಕರಿಸಿ ಅದನ್ನು ಒಂದು ಶಾಸನದಲ್ಲಿ ಗುರುತಿಸಿದ್ದಾರೆ. ಅದರ ದಾಖಲೆ ಹೀಗೆ -

(1-3) "ಶಕ 1308 ರ ಕ್ಷಯ ಸಂವತ್ಸರದಲ್ಲಿನ ಮೀನ ಮಾಸದ ಶುಕ್ಲಪಕ್ಷದ ಪಂಚಮಿಯ ಕೃತ್ತಿಕಾ ನಕ್ಷತ್ರದಂದು ತಿರುಮಲೆಯ ಸ್ಥಾನತ್ತಾರರಿಂದ ತಿರುಪತಿಯ ಶ್ರೀ ವೈಷ್ಣವರಲ್ಲಿ ಒಬ್ಬರಾದ ಪೆರುಮಾಳ್ ಕೊಲ್ಲಿಕಾವಲ್ ದಾಸರ ಪರವಾಗಿ ಈ ಶಾಸನವನ್ನು ಕೆತ್ತಿಸಲಾಗಿದೆ.

(4-10) "ತಿರುಪತಿಯ ಶ್ರೀ ಗೋವಿಂದರಾಜಸ್ವಾಮಿಯವರಿಗೆ ಇಂದಿನಿಂದ ಪ್ರತಿ ನಿತ್ಯವೂ ಇವರ ಹೆಸರಿನಲ್ಲಿ ಒಂದು ತಿರುಪ್ಪೋನಕ ಸಮರ್ಪಣೆಯಾಗಬೇಕು. ಇದಕ್ಕಾಗಿ ಶ್ರೀಯುತರು ಶ್ರೀ ಭಂಡಾರಕ್ಕೆ ನೀಡಿರುವ 1000 ಪಣಂನ ಮೇಲಿನುಡ್ಡಿಯನ್ನು ಬಳಸಬೇಕು. ಈ ಪಂಗುಣಿ ತಿಂಗಳ ಮೊದಲದಿನದಿಂದ ಆರಂಭವಾಗುವ ತಿರುಪ್ಪೋನಕ ನಿವೇದನೆ ಸೂರ್ಯಚಂದ್ರರಿರುವರೆಗೆ ನಡೆಯತಕ್ಕದ್ದು."

"ಚಾಲುಕ್ಯ ನಾರಾಯಣ ಕಲ್‌ನಿಂದ ಅಳೆದ 1 ಮರಕ್ಕಲ್ ಅಕ್ಕಿ, 1 ಅಳಕ್ಕು ತುಪ್ಪ ಹಾಗೂ ತರಕಾರಿಗಳು, ಉಪ್ಪು ಹಾಗೂ ಮೆಣಸುಗಳು ಸೇರಿ ಆದ ಪ್ರಸಾದದಲ್ಲಿ ಕಾಲುಭಾಗ - ಒಂದು ನಾಳಿ ಪ್ರಸಾದವನ್ನು ದಾನಿಯು ಸ್ವೀಕರಿಸತಕ್ಕದ್ದು. ಈ ಏರ್ಪಾಡು ದಾನಿಯ ವಾರಸುದಾರರಿಗೂ ಮುಂದುವರೆದು ಸೂರ್ಯಚಂದ್ರರಿರುವರೆಗೆ ಮುಂದುವರೆತಕ್ಕದ್ದು. (10-12)

(12-13) "ಈ ಶಾಸನ ಶ್ರೀವೈಷ್ಣವರ ಅಪ್ಪಣೆಯಿಂದ ತಿರುಮಲೆಯ ಆಲಯದ ಲೆಕ್ಕಾಧಿಕಾರಿಯಾದ ತಿರುನಿನ್ರ ಊರ್ ಉಡೈಯನಿಂದ ಹಾಕಿಸಲಾಗಿದೆ, ಇದನ್ನು ಶ್ರೀವೈಷ್ಣವರು ರಕ್ಷಿಸಲಿ."

ತಿ.ತಿ. 57 ಹಾಗೂ 52 ಜಿ.ಟಿ. ಶಾಸನಗಳಲ್ಲಿ ಸ್ಥಾನತ್ತಾರರು ಧರ್ಮದರ್ಶಿಗಳಂತೆ ಮುಲ್ಲೈ ತಿರುವೆಂಕಟ ದಾಸರಿಂದ ಮಾರ್ಗಳಿ ತಿಂಗಳಿನಲ್ಲಿ ಹತ್ತು ದಿನಗಳ ಕಾಲ ತಿರುಪ್ಪಾವೈ ಹಾಡುವಾಗ ನಿವೇದನೆ ಮಾಡಲೆಂದು ದತ್ತಿಯಾದ 1200 ಪಣಂಗಳನ್ನು ಪಡೆದಿರುವುದನ್ನು ಕಾಣಬಹುದಾಗಿದೆ.

"ಸ್ವಸ್ತಿ ಶ್ರೀ ಶಕ 1312 ಪ್ರಮೋದೂತನಾಮ ಸಂವತ್ಸರದ ಮಾರ್ಗಳಿ ಮಾಸದ ಹನ್ನೊಂದನೆಯ ದಿನ ತಿರುಮಲೆಯ ಅರಸಿನಾಲಯಂ ತಿರುನಂದನ ವನದ ನಿರ್ವಾಹಕ ಮುಲ್ಲೈ ತಿರುವೆಂಕಟಜೀಯರ ಪರವಾಗಿ ತಿರುಮಲೆಯ ಸ್ಥಾನತ್ತಾರರು ಹಾಕಿಸಿದ ಶಿಲಾಶಾಸನ.

"ತಿರುಮಲೆಯ ಮಲೈಕುನಿಯ ನಿನ್ರ ಪೆರುಮಾಳ್ ಹಾಗೂ ನಾಚ್ಚಿಯಾರರ ಸನ್ನಿಧಿಯಲ್ಲಿ ತಿರುಪ್ಪಾವೈ ಪಾಶುರಗಳನ್ನು ಮಾರ್ಗಳಿ ತಿಂಗಳ ಮಧ್ಯದ ಹತ್ತು ದಿನಗಳಲ್ಲಿ ಹಾಡುವಾಗ ಒಂದು ತಿರುವೊಲಕ್ಕಂ ಸಮರ್ಪಣೆಗೆ ಬೇಕಾದ ಸಾಮಾಗ್ರಿಗಳನ್ನು ನೀಡುವುದು ನಡೆಯಲಿ.

"ತಾವು ಇಂದು ನೀಡಿರುವ ಅಸಲು 1200 ಪಣಂಗಳ ಮೇಲಿನ ಬಡ್ಡಿಯು ಈ ಸಾಮಾಗ್ರಿಗಳಿಗಾಗಿ ವೆಚ್ಚವಾಗಲಿ.

"ಮೇಲಿನ 1200 ಪಣಂಗಳ ಮೇಲಿನ ಬಡ್ಡಿಯ ಹಣವಾಗಿ ಶ್ರೀ ಭಂಡಾರದಿಂದ ಪ್ರತಿವರ್ಷವೂ ಈ ಸಾಮಾಗ್ರಿಗಳ ವೆಚ್ಚವಾಗಿ ಬರಲಿ ಹಾಗೂ ಈ ದತ್ತಿ ಸೂರ್ಯಚಂದ್ರರಿರುವವರೆಗೆ ನಡೆಯಲಿ.

"ಆಲಯ ಲೆಕ್ಕಾಧಿಕಾರಿ ತಿರುನಿನ್ರ ಊರ್ ಉಡೈಯನು ಶ್ರೀ ವೈಷ್ಣವರ ಅಪ್ಪಣೆಯಿಂದ ಮಾಡಿದ ಒಕ್ಕಣಿಕೆ ಯಿದು. ಇದಕ್ಕೆ ಶ್ರೀವೈಷ್ಣವರ ರಕ್ಷೆಯಿರಲಿ."

- ಇದರ ನಂತರದ ಎಲ್ಲ ಶಾಸನಗಳಲ್ಲಿಯೂ ಸ್ಥಾನತ್ತಾರರು ಧರ್ಮದರ್ಶಿಗಳೆಂದೇ ಕಂಡುಬರುತ್ತಾರೆ ಎಂಬುದು ಆಲಯದ ಲೆಕ್ಕಾಧಿಕಾರಿಗಳ ಒಕ್ಕಣಿಕೆಗಳಿಂದ ತಿಳಿಯಬಹುದಾಗಿದೆ.

**ಊ)ಆಲಯ ಕರಣಿಕರು (ಲೆಕ್ಕಿಗರು):** ಆಲಯದಲ್ಲಿ ಈ ರೀತಿಯ ಲೆಕ್ಕಿಗರು- ಕರಣಿಕರು - ತಿರುನಿನ್ರ ಊರ್ ಉಡೈಯಾನ್ ಪದವಿ ಶಕ 1301 ರಲ್ಲಿ ಪ್ರವೇಶ ಪಡೆಯಿತು. ತಿ.ತಿ. 67 ರಲ್ಲಿ ಈ ರೀತಿ ಹೇಳಲಾಗಿದೆ-

"ಈ ಮೇಲಿನ ವೆಚ್ಚಗಳಿಗೆ ತಕ್ಕ ಬಡ್ಡಿಯ ಸಂಪಾದನೆಯಾಗುವ 400 ಪಣಂಗಳ ಅಸಲನ್ನು ಶ್ರೀ ಭಂಡಾರಕ್ಕೆ ತಿರುಪತಿಯ ಶ್ರೀ ವೈಷ್ಣವರಲ್ಲಿ ಒಬ್ಬರಾದ ತಿರುಕ್ಕಲಿ ಕನ್ರಿದಾಸರ್ ಅವರು ನೀಡಿದ್ದು ಅಪ್ಪಪ್ಪಡಿ ತಿರುಕ್ಕಣ್ಣಮಡೈಗಳಿಗೆ ತಗಲುವೆಚ್ಚ 50 ಪಣವಾಗಿ ಒಟ್ಟು 450 ಪಣವಾಗುತ್ತದೆ.

"ಈ 450 ಪಣಂಗಳನ್ನು ಸ್ವೀಕರಿಸಿದ ನಂತರ ಮೇಲೆ ಹೇಳಿದಂತೆ ಸಾಮಗ್ರಿಗಳನ್ನು ಶ್ರೀಭಂಡಾರದಿಂದ ತೆಗೆದುಕೊಡುವ ಪದ್ಧತಿ ಸೂರ್ಯಚಂದ್ರರಿರುವ ತನಕ ನಡೆಯಲಿ.

"ಹೀಗೆ ಶ್ರೀ ವೈಷ್ಣವರ ಅಪ್ಪಣೆಯ ಮೇರೆಗೆ ತಿರುನಿನ್ರ ಊರ್ ಉಡೈಯಾನ್ ಈ ಒಕ್ಕಣಿಕೆಯನ್ನು ಬರೆದಿದ್ದಾನೆ. ಶ್ರೀವೈಷ್ಣವರ ರಕ್ಷೆ ಇರಲಿ."

ಶಾಸನದ ನಂತರ ಎಲ್ಲ ಶಾಸನಗಳಲ್ಲಿಯೂ ಈ ಲೆಕ್ಕಿಗರು ಕಂಡುಬರುತ್ತಾರೆ.

**ಸ್ಥಾನತ್ತಾರರ ಸ್ಥಾನಪಲ್ಲಟದ ಕಾರಣಗಳು**

ಸ್ಥಾನತ್ತಾರರು ಆಲಯ ಕೆಲಸಗಳ ನಿರ್ವಾಹಕರ ಸ್ಥಾನದಿಂದ ಧರ್ಮದರ್ಶಿಗಳ ಸ್ಥಾಯಿಗೆ ಹೇಗೆ ಪರಿವರ್ತನೆ ಹೊಂದಿದರೆಂಬುದನ್ನು ಶಾಸನಗಳೇನೂ ವಿವರಿಸುವುದಿಲ್ಲ.

ಶಾಸನಗಳಲ್ಲಿ ಉಕ್ತವಾದ ಕಾಲವನ್ನು ಪರಿಗಣಿಸಿದಾಗ, ಯಾದವರಾಯರ ಪತನಾನಂತರ ಶ್ರೀರಂಗ ನಾಥನ ವಿಗ್ರಹ ತಿರುಮಲೆಯ ಆಲಯದಲ್ಲಿ ಕೆಲಕಾಲವಿರುವ ಹೊತ್ತಿನಲ್ಲಿ ಶಾಸನಗಳು ಮೊದಲಬಾರಿಗೆ ಆಲಯ ಲೆಕ್ಕಿಗರನ್ನು ಹೆಸರಿಸುತ್ತ ಸ್ಥಾನತ್ತಾರರು ಧರ್ಮದರ್ಶಿಗಳಾಗಿದ್ದಿರಬಹುದಾದ ಬಗ್ಗೆ ಸುಳಿವು ನೀಡುತ್ತವೆ. ಯಾದವ ರಾಯರ ಪತನ ಕಾಲದಲ್ಲಿ ಉಂಟಾದ ಅಯೋಮಯ ಸ್ಥಿತಿಯಲ್ಲಿ, ರಾಜರ ಹಿಡಿತ ಕೈತಪ್ಪುತ್ತಿರುವ ಹೊತ್ತಿನಲ್ಲಿ ಆಲಯದ ಲೆಕ್ಕಪತ್ರಗಳನ್ನು ನೋಡಿಕೊಳ್ಳಲು ಒಬ್ಬ ಲೆಕ್ಕಿಗನನ್ನು ನಿಯಮಿಸಿ, ಸ್ಥಾನತ್ತಾರರನ್ನೇ ಧರ್ಮದರ್ಶಿ ಗಳೆಂದು ತಿಳಿಯುವಂತಹ ಅಗತ್ಯವುಂಟಾಗಿರಬೇಕು. ನಂತರ ನಿಧಾನವಾಗಿ ಈ ಹುದ್ದೆ ಬೇರು ಬಿಟ್ಟಿರಬೇಕು.

ಕ್ರಿ.ಶ. 1380 ರ ಜನವರಿಯ ಪೂರ್ವದಲ್ಲಿ ಸ್ಥಾನತ್ತಾರರು ಪ್ರಾಯಶಃ ಒಬ್ಬ ತಿರುನಿನ್ರ ಊರ್ ಉಡೈಯ ನನ್ನು ಆಮದು ಮಾಡಿಕೊಂಡಿರಬೇಕು. ಕ್ರಿ.ಶ. 1384 ರಲ್ಲಿ (53 ಜಿ.ಟಿ.) ಸ್ಥಾನತ್ತಾರರು ಯಾದವರಾಯರ ಕೈಕೆಳಗೆ ಆಲಯದ ಕೆಲಸಗಳ ನಿರ್ವಾಹಕ ರಾಗಿರುವ ಬದಲಿಗೆ ಪೂರ್ಣರೂಪದ ಧರ್ಮದರ್ಶಿಗಳಾಗಿ ಸ್ಥಾಪಿತ ರಾದರು. ಅವರು ತೆಗೆದುಕೊಳ್ಳಲೇಬೇಕಾಗಿದ್ದ ಹಾಗೂ ಉಕ್ತವಾದ ನಿರ್ಣಯ ಇದಾಗಿದ್ದಿತ್ತು. ಅಂದಿನ ರಾಜಕೀ ಯದ ಉಲ್ಲೋಲಕಲ್ಲೋಲದ ದಿನಗಳಲ್ಲಿ ರಾಜ್ಯದ ರಾಜನು ಆಲಯದ ವ್ಯವಹಾರಗಳಲ್ಲಿ ಯಾವುದೇ ರೀತಿಯ ಆಸಕ್ತಿಯನ್ನೂ ತೋರಿಸುವಂತೆಯೇ ಇರಲಿಲ್ಲ. ಯಾದವರಾಯರ ಪ್ರಾಧಾನ್ಯ ಘಟ್ಟಿ ಯಾದವರಾಯನಿಂದ ಕ್ರಿ.ಶ. 1100 ರಲ್ಲಿ ಆರಂಭವಾಗಿ ಕ್ರಿ.ಶ. 1360 ವರೆಗೆ ಎರಡೂವರೆ ಶತಮಾನದ ಕಾಲ ನಡೆದಿತು. ನಂತರದ ಹೊಸರಾಜನಿಗೆ ಆಲಯದ ಬಗ್ಗೆ ಆದರ ಗೌರವಗಳು ಇನ್ನೂ ಮೂಡಿ ಬರಬೇಕಾಗಿದ್ದಿತು. ಅಂದಿನ ಸ್ಥಾನತ್ತಾರರು ಶುದ್ಧ ಗೌರವಾನ್ವಿತ ವ್ಯಕ್ತಿತ್ತ್ವ ಪಡೆದಿದ್ದರೆನ್ನಬೇಕು. ಸಿಂಗಯ ದಂಡನಾಯಕನಂತಹ ಹಿರಿಯ ಅವರ ಪಾದ ಸನ್ನಿಧಿಯಲ್ಲಿ ಪ್ರಾರ್ಥಿಸಿದ್ದನ್ನು ನಾವು ನೋಡಿದ್ದೇವೆ. ತಿರುವೆಂಕಟನಾಥನೇ ತನ್ನ ಶಾಸನವನ್ನು ಅವರಲ್ಲಿ ತನ್ನ ಬಿನ್ನಹವೆಂದು ಕರೆದುಕೊಂಡ. ಸ್ಥಾನತ್ತಾರರು ಪೂರ್ಣಪ್ರಮಾಣದ ಧರ್ಮದರ್ಶಿಗಳಾದದ್ದರ ಬಗ್ಗೆ ಬೆಳಕು ಚೆಲ್ಲುವಲ್ಲಿ ತಿರುಮಲೆಯ ಆಲಯದ ಪಡಿಕಾವಲಿ ಗೋಪುರದ ಒಳಭಾಗದಲ್ಲಿನ ತಗಡಿಗೆ ಉತ್ತರದಲ್ಲಿ ಕಂಡು ಬರುವ ಒಂದು ಸಂಸ್ಕೃತ ಭಾಷೆಯ ಗ್ರಂಥ ಲಿಪಿಯ ತ್ರುಟಿತ ಶಾಸನ ಪ್ರಮುಖವೆನ್ನಬೇಕು. ಇದರ ಒಕ್ಕಣಿಕೆ ಹೀಗೆ- (48 ತಿ.ತಿ.)....ಶ್ರೇಷ್ಠ ಕ್ಷಿತಿಪಾಲನು ಪರಮಪದವನ್ನೈದಲು........ಸೂಕ್ತ ಕ್ರಮವನ್ನು ಅನುಸರಿಸಲಾಗಿದಿ

ಈ ಶಾಸನವು ಪ್ರಾಯಶಃ ಕಡೆಯ ಯಾದವರಾಯನ ಮರಣವನ್ನೂ ನಂತರ ಅನುಸರಿಸಲಾದ ಪದ್ಧತಿಯ ವಿವರವನ್ನೂ ನೀಡುತ್ತದೆ ಎನ್ನಬೇಕು.

ಸ್ಥಾನತ್ತಾರರು ಧರ್ಮದರ್ಶಿಗಳೆಂದು ತೀರ್ಮಾನವಾದರೂ ರಾಜನ ಧರ್ಮಶಾಸನಗಳು ಈ ಸ್ಥಾನತ್ತಾ ರರ ಉಲ್ಲೇಖವೇ ಇಲ್ಲದಂತೆಯೂ ಪ್ರಕಟವಾಗತೊಡಗಿದವು. ಹೀಗಾಗಿ ವೀರಪ್ರತಾಪ ದೇವರಾಯ ಮಹಾರಾ ಯನ ಕನ್ನಡ ಭಾಷೆಯ ಧರ್ಮಶಾಸನವು ಬಂಗಾರದ ಬಾಗಿಲ ಮೇಲಿದೆ. (ಚಿನ್ನದ ಮುಲಾಮಿನ ತಾಮ್ರದ ತಗಡಿನ ಹಿಂದೆ ಮರೆಯಾಗಿದೆ)ಇದು ಶಕ 1351 ರ ಸೌಮ್ಯನಾಮ ಸಂವತ್ಸರ ಮಾರ್ಗಶಿರ ಮಾಸದ ಶುಕ್ಲ ದಶಮಿಯಂದು ಸೋಮವಾರ (15-12-1429) (ತಿ.ತಿ. 188) ಚಕ್ರವರ್ತಿಯು ಆಲಯ ಸಂದರ್ಶನ ಮಾಡಿದಾಗ ಹಾಕಿಸಿದ್ದು, ರಾಜಭಂಡಾರದಿಂದ 2200 ಸುವರ್ಣದ ಹೊನ್ನುಗಳನ್ನು ಚಂದ್ರಗಿರಿ ಭಂಡಾರಕ್ಕೆ ವರ್ಗಾಯಿಸಿ, ಮೂರು ಗ್ರಾಮಗಳನ್ನು ಸರ್ವಮಾನ್ಯ ಗ್ರಾಮಗಳೆಂದು ಗುರುತಿಸಿ ದಾನ ಮಾಡಿದ್ದು ಪ್ರತಿವರ್ಷವೂ ಒಂಭತ್ತು ದಿನಗಳ ಉತ್ಸವವನ್ನು

ನಡೆಸಿ ಮತ್ತಿತರ ಸೇವೆಗಳನ್ನು ಮಾಡಬೇಕೆಂದು ತಿಳಿಸುತ್ತದೆ. ಈ ಆಸ್ತಿಗಳನ್ನು ಒಪ್ಪಿಕೊಳ್ಳಲು ಧರ್ಮದರ್ಶಿಗಳ ಹೆಸರನ್ನು ಹೇಳಿಲ್ಲ. ಇದರಂತೆಯೇ 1-7-1430 ರಲ್ಲಿ (99 ತಿ.ತಿ.) ವಿಸ್ಸನ್ನ ದೇವರಾಯನ ಪುತ್ರ ಸಿರಿಗಿರೀಶ್ವರನು ಶ್ರೀ ವೆಂಕಟ ಪರ್ವತದ ದೇವರಿಗೆ ವಜ್ರಖಚಿತವಾದ ಚಿನ್ನದ ಪಟ್ಟವನ್ನು ಸಮರ್ಪಿಸಿದಾಗಲೂ ಸ್ಥಾನತ್ತಾರರ ಹೆಸರು ಇಲ್ಲ. ಈ ಶಾಸನವು ಸಂಸ್ಕೃತದಲ್ಲಿದೆ (ಗ್ರಂಥಲಿಪಿ).

ತಿ.ತಿ. 100 ನೇ ಶಾಸನದಲ್ಲಿ ಮುದ್ದಯ್ಯ ನಾಯಕನ ಮಗ ತೆಪ್ಪದ ನಾಗಯ್ಯ ನಾಯಕರು 3000 ಹೊನ್ನು ನೀಡಿ ತನ್ನೆಸರಿನಲ್ಲಿ ಚಿನ್ನದ ಕವಚವನ್ನು ಮಾಡಿಸಬೇಕೆಂದೂ, 100 ಹೊನ್ನು ನೀಡಿ ದಿನವೂ ಎರಡು ಹೂವಿನ ಹಾರಗಳನ್ನು, ಎರಡು ಹರಿವಾಣ, ಎಂಟು ಉಪ್ಪೋರಗಳನ್ನು ಅರ್ಪಿಸಬೇಕೆಂದು ಕನ್ನಡದ ಧರ್ಮಶಾಸನ ಹಾಕಿಸಿದ. ಇಲ್ಲಿಯೂ ಸ್ಥಾನತ್ತಾರರು ಪ್ರಾಮಾಣಿಕವಾಗಿ ಈ ಸೇವೆಗಳನ್ನು ಆಚರಣೆಗೆ ತರಬೇಕೆಂದಿದೆ. (12-1-1443) (ಇದು ಈಗಣ ಹುಂಡಿಯ ಭಾಗದ ಗೋಡೆಯಲ್ಲಿದೆ - 2015- ಅನುವಾದಕ)

**ಸ್ಥಾನತ್ತಾರರ ಸಮಿತಿ:**

ಈ ಸಮಿತಿಯ ಅಥವಾ ಸಂಘದ ಸ್ವರೂಪದ ಬಗ್ಗೆ ಸ್ಪಷ್ಟವಾದ ಉಲ್ಲೇಖಗಳಾವುವೂ ಇಲ್ಲ. ಕ್ರಿ.ಶ. 1360 ರ ನಂತರ ಈ ಸಮಿತಿಯು ಖಚಿತ ರೂಪವನ್ನು ಪಡೆಯಲು ಒಂದು ಮೂವತ್ತು ವರ್ಷವಾಗಿರಬೇಕೆಂಬುದರಲ್ಲಿ ಅನುಮಾನವಿಲ್ಲ. ಯಾದವರಾಯರ ಆಲಯ ಪ್ರಭುತ್ವ ಕೊನೆಗೊಂಡ ಮೇಲೆ, ಶ್ರೀರಂಗನಾಥಸ್ವಾಮಿಯನ್ನು ಶ್ರೀರಂಗಕ್ಕೆ ಒಯ್ದ ಮೇಲೆ, ಆಲಯದ ಆಸ್ತಿಗಳ ಪರಿಶೀಲನೆ ಹಾಗೂ ಖರ್ಚು ವೆಚ್ಚಗಳ ಮೇಲು ವಿಚಾರಣೆಯ ತೀವ್ರ ಅಗತ್ಯ ಉಂಟಾಗಿರಬೇಕು. ಆಲಯದಲ್ಲಿ ಸಮರ್ಥರಾದ ಲೆಕ್ಕಿಗರನ್ನು ನೇಮಿಸಿ ಕ್ರಿ.ಶ. 1379 - 80 ರ ಹೊತ್ತಿಗೆ ತಿರುನಿನ್ರ ಊರ್ ಉಡೈಯ ಪದವಿಯನ್ನು ಪ್ರವೇಶಗೊಳಿಸ ಲಾಯಿತು. ಹತ್ತು ವರ್ಷಗಳನಂತರ 1390 ರಲ್ಲಿ ಸ್ವಯಂ ಪೂರ್ಣವಾದ ಸ್ಥಾನತ್ತಾರ ಸಂಸ್ಥೆ - ಸಮಿತಿ - ಸ್ಥಾಪಿತವಾಯಿತು - ಎಂದು ನೋಡಿದ್ದಾಗಿದೆ (ತಿ.ತಿ. 67). ಇದರಲ್ಲಿಯೇ ದಾನಿಗಳಿಗೆ ಕಾಲುಭಾಗ ಪ್ರಸಾದ ವಿತರಣೆಯ ಯೋಜನೆಯೂ ಬೆಳಕಿಗೆ ಬಂದಿದ್ದು, ಸ್ಥಾನತ್ತಾರರಿಗೆ ಕೆಳಕಂಡ ಪ್ರಮಾಣದಲ್ಲಿ ಭಾಗವನ್ನು ನೀಡುತ್ತ ಒಟ್ಟು 12 ಭಾಗಗಳನ್ನು ನಿರ್ವಹಿಸಲಾಗಿದ್ದಿತು.

| | |
|---|---|
| ತಿರುಪತಿಯ ಶ್ರೀವೈಷ್ಣವರು | 4 |
| ತಿರುಚಾನೂರು ಸಭೈಯರ್ | 3 |
| ನಂಬಿಮಾರ್ | 1 |
| ಕೋಯಿಲ್ ಕೇಳ್ವಿ ಜಿಯರ್ | 2 |
| ಕೋಯಿಲ್ ಕಣಕ್ಕು ತಿರುನಿನ್ರ ಊರ್ಒಡೆಯರ್ | 2 |
| | ಒಟ್ಟು 12 |

ಈ ವಿತರಣೆಯ ಪದ್ಧತಿಯೇ ತಿರುಪತಿಯ ಆಲಯದಲ್ಲಿಯೂ ಜಾರಿಯಲ್ಲಿದ್ದಿತು.

ಹೀಗಾಗಿ ಸ್ಥಾನತ್ತಾರರು ಹನ್ನೆರಡು ಮಂದಿಯಿದ್ದಿರಬೇಕೆಂದು ನಾವು ಊಹಿಸಬಹುದು.

**8. ರಾಮಾನುಜರು - ಆಲಯ**

ತಿರುಮಲೆಯ ಆಲಯದ ಆಚಾರ ಸಂಪ್ರದಾಯಗಳಲ್ಲಿ ಶ್ರೇಷ್ಠ ಶ್ರೀವೈಷ್ಣವ ಸಂತರಾದ ಭಗವದ್ರಾ ಮಾನುಜರು ಬಹು ಪ್ರಭಾವಶಾಲಿಯಾದ ಪಾತ್ರ ನಿರ್ವಹಿಸಿದರೆಂದು ಪರಂಪರೆಯಿಂದ ನಂಬಲಾಗಿದೆ.

ಕ್ರಿಸ್ತಶಕದ ಹನ್ನೊಂದನೆಯ ಶತಮಾನದ ಉತ್ತರಾರ್ಧ ಹಾಗೂ ಹನ್ನೆರಡನೆಯ ಶತಮಾನದ ಮೊದಲ ಭಾಗದಲ್ಲಿ ಶ್ರೀವೈಷ್ಣವ ಪಂಥವನ್ನೂ ಶ್ರೀವೈಷ್ಣವ ತತ್ವವನ್ನೂ ಪ್ರಸಾರಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ ಸಂತ ಶ್ರೇಷ್ಠರು ಭಗವದ್ರಾಮಾನುಜರು.

ಭಗವಂತನಲ್ಲಿ ಭಕ್ತಿ ಹಾಗೂ ಸಮಾಜದವರಲ್ಲಿ ಸಹಾನುಭೂತಿ ಅವರ ಪಂಥದ ಪ್ರಮುಖ ಲಕ್ಷಣಗಳು. ಹಿಂದೂ ಧರ್ಮದ ಸರ್ವದೇವತೆಗಳಲ್ಲಿ ಹರಿಸರ್ವೋತ್ತಮತ್ವ ಅವರ ತಾತ್ವಿಕತೆಯ ತಳಹದಿಯಾಗಿದೆ. ವಿಷ್ಣುವಿನಲ್ಲಿ ಎಡೆಬಿಡದ ಭಕ್ತಿ ಪ್ರತಿಗಳಿಂದಾಗಿ ಮುಕ್ತಿ ಪಡೆಯಲು ಸಾಧ್ಯವೆಂದು ಅವರು ಆಚರಣೆಯಲ್ಲಿ ತಂದು ತೋರಿಸಿ ಪ್ರಸಾರ ಮಾಡಿದರು. ಅವರ ವಿದ್ವತ್ಪೂರ್ಣ ವ್ಯಾಖ್ಯಾನ ಗಳಿಂದಾಗಿ ಭಕ್ತಿಪೂರ್ವಕ ವಿವರಣೆಗಳಿಂದಾಗಿ ಅಸಂಖ್ಯಾತ ಮಂದಿ ಶ್ರೀವೈಷ್ಣವರಾಗುವಂತೆ ಆಯಿತು. ''ಈ ಹೊಸದಾಗಿ ಮೂಡಿ ಬಂದ ಶ್ರೀವೈಷ್ಣವ ಸಮುದಾಯ ಬ್ರಾಹ್ಮಣರಿಂದ ಮಾತ್ರವೇ ಕೂಡಿರದೆ ಪರಮ ಸಹಿಷ್ಣುವಾಗಿ ಎಲ್ಲ ಜಾತಿ, ಪಂಥ, ವರ್ಗ, ವರ್ಣ, ಲಿಂಗಗಳವರನ್ನೂ ಒಳಗೊಂಡಿದ್ದಿತು''.

ಅನಂತಾರ್ಯನು ಸಂಗ್ರಹಿಸಿದ 'ಶ್ರೀವೇಂಕಟಾಚಲ ಇತಿಹಾಸಮಾಲೆ' ಕೃತಿಯು ತಿರುಪತಿಯಲ್ಲಿ ರಾಮಾನುಜರ ಜೀವನ ಕೈಂಕರ್ಯವನ್ನು ವಿವರವಾಗಿ ಬಣ್ಣಿಸಿದೆ. ರಾಮಾನುಜರ ತಿರುಪತಿ ಸಂಬಂಧವು ಅವರ ತಾಯಿಯ ಸೋದರರಾದ ತಿರುಮಲೆನಂಬಿ ಯಿಂದ ಆರಂಭವಾಯಿತೆನ್ನಬಹುದು. ತಿರುಮಲೆ ನಂಬಿಯು ತಮ್ಮ ತಾತಂದಿ ರಾದ ಆಳವಂದಾರರ (ಯಾಮುನಾಚಾರ್ಯ) ಅಪೇಕ್ಷೆ ಯಂತೆ ತಿರುಮಲೆಯ ದೇವರ ಕೈಂಕರ್ಯ ಸಲ್ಲಿಸಲು ತಿರುಪತಿಗೆ ಬಂದು ನೆಲೆಸಿದರು. ಅವರೊಡನೆ ಅವರ ಇಬ್ಬರು ಅವಿವಾಹಿತ ಸಹೋದರಿಯರೂ ತಿರುಪತಿಗೆ ಬಂದರು. ಆನಂತರ ರಾಮಾನುಜರ ತಂದೆಯವರು ಈ ಸೋದರಿಯರಲ್ಲಿ ಒಬ್ಬರನ್ನು ವಿವಾಹವಾಗಿ ರಾಮಾನುಜರನ್ನು ಪಡೆದರು. ರಾಮಾನುಜರ ತಂದೆಯವರು ತಿರುಪತಿಯಿಂದ ಬಹುದೂರ ಎಂದೇನೂ ಹೇಳಲಾಗದ ಶ್ರೀಪೆರಂಬು ದೂರಿನವರು. ತಾಯಿಯ ತವರಿನಲ್ಲಿ ನಡೆಯಬಹುದಾಗಿದ್ದು ಮನೆಗೆ ಸಂಬಂಧಿಸಿದ ಕೆಲಸಗಳಲ್ಲಿ ರಾಮಾನುಜರು ತಿರುಪತಿಗೆ ಬಂದಿರ ಬಹುದಾದ ಸಂದರ್ಭಗಳ ಹೊರತಾಗಿ, ವೈಷ್ಣವಪಂಥದ ಗುರುವಾಗಿ ರಾಮಾನುಜರು ಪ್ರಥಮ ಬಾರಿ ತಿರುಪತಿಗೆ ಬಂದದ್ದುಎಂದರೆ ತಮ್ಮ ಸೋದರ ಮಾವನವರಿಂದ ರಾಮಾಯಣ ರಹಸ್ಯಾರ್ಥವನ್ನು ಕಲಿಯಲು ಬಂದದ್ದೇ ಆಗಿದ್ದಿತು. ಈ ಬಾರಿ ಅವರು ಒಂದು ವರ್ಷಕಾಲ ತಿರುಮಲೆ ನಂಬಿ ಯವರಿಂದ ಪಾಠ ಪಡೆದು ನಂತರ ಶ್ರೀರಂಗಕ್ಕೆ ಹಿಂದಿರುಗಿದರೆನ್ನಲಾಗಿದೆ.

ಆನಂತರ ರಾಮಾನುಜರು ತಿರುಪತಿಗೆ ಎರಡನೆಯ ಸಾರಿ ಬಂದರು. ತಿರುಪತಿಯಲ್ಲಿ ಅಂದಿಗೆ ವೈಖಾನಸ ಆಗಮ ಪದ್ಧತಿಯಲ್ಲಿ ಪೂಜೆ ನಡೆಯುತ್ತಿದ್ದಿತು. ಶತಮಾನಗಳ ಈ ಪರಂಪರೆಯಲ್ಲಿ ಹಲವಾರು ನ್ಯೂನತೆಗಳು ಒಳಸೇರಿ ಕೊಂಡಿದ್ದವು ಎಂದು ತೋರುತ್ತದೆ. ವೆಂಕಟಾಚಲ ಇತಿಹಾಸಮಾಲೆ ಹೇಳುವಂತೆ ರಾಮಾನುಜರು ತಿರುಪತಿಯ ಪೂಜಾವಿಧಾನದಲ್ಲಿ, ಉತ್ಸವಗಳನ್ನು ನಡೆಸುವಲ್ಲಿ ಹಲ ವಾರು ನೂತನ ಸುಧಾರಣೆ ಗಳನ್ನು ಜಾರಿಗೆ ತರುವಲ್ಲಿ ಸಫಲರಾದರು. ಈ ಹೊತ್ತಿಗೆ ತಿರುಪತಿಯಲ್ಲಿ ತಿರುಮಲೆನಂಬಿಯವರು ಬದುಕಿದ್ದು ಭಗವಂತನ ನಿತ್ಯ ಕೈಂಕರ್ಯದಲ್ಲಿಯೇ ಇದ್ದರು. ಜೊತೆಗೇ ರಾಮಾನುಜರ ಶಿಷ್ಯ ಅನಂತಾರ್ಯರೂ ರಾಮಾನುಜರಿಂದ ಆಜ್ಞಪ್ತರಾಗಿ ಸ್ವಾಮಿಯ ಸೇವೆಯನ್ನು ನಡೆಸುವಂತಾಗಿದ್ದರು. ಈ ಹೊತ್ತಿಗೆ ಬಹಳ ವೃದ್ಧರಾಗಿದ್ದ ತಿರುಮಲನಂಬಿಯವರ ನಿರ್ದೇಶನದಲ್ಲಿ ಅನಂತಾರ್ಯರು ಕೈಂಕರ್ಯವನ್ನು ಮುಂದುವರಿಸಿದ್ದರು.

ಮೂರನೆಯ ಬಾರಿಗೆ ರಾಮಾನುಜರು ತಿರುಪತಿಯನ್ನು ಸಂದರ್ಶಿಸಿದಾಗ ಅವರಿಗೆ ವೃದ್ಧಾಪ್ಯವಾಗಿದ್ದಿತು. ಅವರ ವಯಸ್ಸು ಅತಿ ಹೆಚ್ಚಾಗಿದ್ದ ಕಾರಣ ಇದೇ ಅವರ ಕೊನೆಯ ಸಂದರ್ಶನವೂ ಆಗಿದ್ದಿರಬೇಕು. ತಾವು ಇಲ್ಲಿಗೆ ಬಂದ ಈ ಸಂದರ್ಭದಲ್ಲಿ ಅವರು ಈ ಹಿಂದೆ ಮಾಡಿದ್ದ ಪೂಜಾಪದ್ಧತಿಯ ಸುಧಾರಣೆಗಳ ಮೇಲುವಿಚಾರ ಣೆಯನ್ನು ನಿಷ್ಪಕ್ಷಪಾತದಿಂದ ನೋಡಿಕೊಳ್ಳಲು ಒಬ್ಬ ಸನ್ಯಾಸಿ ಯನ್ನೂ ಅವರ ನೆರವಿಗೆ ಇಬ್ಬರು ಬ್ರಹ್ಮಚಾರಿಗಳನ್ನೂ ನಿಯಮಿಸಿದರು.ಪ್ರಬಂಧ ಪಠಣ ಮಾಡಲು ಸಮರ್ಪಕವಾಗಿ ನಿರ್ವಹಿಸಲು ಒಬ್ಬ ಅಯ್ಯೆಯರನ್ನು ನಿಯಮನಗೊಳಿ ಸಿದರು. ಇವರು ನಂತರದಲ್ಲಿ ಮುಖ್ಯ ಸೇವಾದಾರರಾಗಿ ಇವರಿಗೆ ಶಠಗೋಪಯತಿ ಎಂಬ ಹೆಸರಾಯಿತು. ಇವರಿಗೆ ನಾಲ್ವರು ಬ್ರಹ್ಮಚಾರಿಗಳು ಆಲಯ ನಿರ್ವಹಣೆಯಲ್ಲಿ ನೆರವು ನೀಡುವಂತೆ ಆಯಿತು. ಆಲಯದ ಈ ಎಲ್ಲ

ಏರ್ಪಾಡುಗಳನ್ನು ಸ್ಥಳದ ರಾಜ ಯಾದವರಾಯನು ಈ ಹೊತ್ತಿಗೆ ಅರವತ್ತಾರು ವರ್ಷದ ಹಿರಿಯರಾಗಿದ್ದ ಅನಂತಾರ್ಯರ ಸಲಹೆ ಸೂಚನೆಗಳನ್ನು ಜಾರಿಗೆತರುವ ಹೊಣೆಗಾರನಾಗಿದ್ದನೆಂದು ಇತಿಹಾಸಮಾಲೆ ತಿಳಿಸುತ್ತದೆ.

ಶ್ರೀ ವೆಂಕಟೇಶ್ವರ ಇತಿಹಾಸ ಮಾಲೆಯು ತಿರುಮಲೆಯ ಆಲಯಕ್ಕೆ ಭಗವದ್ರಾಮಾನುಜರೂ ಅವರ ತರುವಾಯ ಅವರ ಶಿಷ್ಯ ಅನಂತಾರ್ಯರೂ ಮಾಡಿದ ಏಳು ಬಗೆಯ ಕೈಂಕರ್ಯಗಳನ್ನು ವಿವರಿಸುತ್ತದೆ. ಅವರ ಕಾಲದ ನಂತರದ ಶತಮಾನ ಶಾಸನಗಳಲ್ಲಿ ರಾಮಾನುಜರ ಹಾಗೂ ಅನಂತಾರ್ಯರ ಹೆಸರಿನ ತುಲಸೀ ವನಗಳು, ಮತ್ತಿತರ ಹಬ್ಬ ಉತ್ಸವಗಳಲ್ಲಿ ಅವರ ಹೆಸರುಗಳು ಪುನಃ ಪುನಃ ಕಂಡುಬರುವುದರಿಂದ ರಾಮಾನುಜರು ಮತ್ತು ಅನಂತಾರ್ಯರು ನಡೆಸಿದ ಸೇವಾ ಕೈಂಕರ್ಯಗಳು ಐತಿಹಾಸಿಕವಾಗಿ ಸಂಶಯಾತೀತವೆಂದು ತಿಳಿಯಬಹುದು. ತಿರುಪತಿಯ ಆಲಯದ 171, 173 ನೇ ಶಾಸನಗಳು ಆನಂದಾಳ್ವಾನ್ ಹೆಸರನ್ನು ಸಂಶಯಕ್ಕೆಡೆನೀಡದಂತೆ ಸ್ಪಷ್ಟವಾಗಿ ಹೇಳುತ್ತದೆ. ಜೊತೆಗೇ 175 ನೇ ಶಾಸನವೂ ಇಷ್ಟೇ ಖಚಿತವಾಗಿ ರಾಮಾನುಜರ ಹೆಸರನ್ನು ತಿರುನಂದವನದೊಡನೆ ಸೇರಿಸಿ ಹೇಳುತ್ತದೆ. ಹೀಗಾಗಿ ರಾಮಾನುಜರ ಪ್ರಥಮ ಯತ್ನವೆಂದರೆ ಯಾದವರಾಯನು ಈ ಆಲಯವು ವಿಷ್ಣುವಿನ ಆಲಯವೆಂದು ಉದ್ಘೋಷಿಸುವಲ್ಲಿ ಹಾಗೂ ಪ್ರಾಚೀನ ಕಾಲದಿಂದಲೂ ಪ್ರಚಲಿತವಾಗಿದ್ದ ವೈಖಾನಸಾಗಮ ರೀತಿಯ ಪೂಜಾ ಪದ್ಧತಿಯನ್ನು, ದೋಷ ಪರಿಹಾರದ ಪವಿತ್ರೋತ್ಸವದ ಆಚರಣೆಯ ನಂತರ ಪುನಃ ಸ್ಥಾಪಿಸುವುದೇ ಆಗಿದ್ದಿತು. ಆನಂದನಿಲಯ ವಿಮಾನದ ಜೀರ್ಣೋದ್ಧಾರ ಕಾರ್ಯವನ್ನು ಆಗಮಾನುಸಾರವಾಗಿ ಅವರು ಕೈಗೊಂಡರೆಂದು ಹೇಳಲಾಗಿದೆ. ಪದ್ಮಾವತಿದೇವಿಯ ಚಿತ್ರವಿರುವ ಚಿನ್ನದ ಕಂಠ ಹಾರವನ್ನು ಮಾಡಿಸಿ ಸ್ವಾಮಿಯ ವಕ್ಷಃ ಸ್ಥಳದಲ್ಲಿ ಸ್ಥಾಪಿಸಿದರೆಂದೂ ಹೇಳಲಾಗಿದೆ. ಇದು ಮೊದಲನೆಯ ಭಾಗವಷ್ಟೆ. ನಂತರ ಅವರ ಗಮನಮವನ್ನು ಸೆಳೆದ ಅಂಶ ವೆಂದರೆ ವಾರಾಭಿಷೇಕ. ಗುರುವಾರದಂದು ಸ್ವಾಮಿಗೆ ಅಲಂಕರಿಸುವಾಗ ಎಲ್ಲ ಆಭರಣಗಳನ್ನೂ ತೆಗೆದು ಸ್ವಾಮಿಯನ್ನು ಬರಿ ಹೂಗಳಿಂದ ಮಾತ್ರವೇ ಅಲಂಕರಿಸಲಾಗುವುದು. ಈ ಕೈಂಕರ್ಯ (ಪುಷ್ಪ ಕೈಂಕರ್ಯ) ನಡೆಯುವಾಗ ನಾಚ್ಚಿಯಾರ್ ತಿರುಮೊಳಿಯನ್ನು ಹಾಡುವ ಪದ್ಧತಿಯನ್ನು (ನಾಚ್ಚಿಯಾರ್ ತಿರುಮೊಳಿ ನಾಲಾಯಿರ ದಿವ್ಯಪ್ರಬಂಧದ ಒಂದು ಭಾಗ) ಅವರು ಜಾರಿಗೆ ತಂದರು. ವೈಖಾನಸ ಆಗಮ ಶಾಸ್ತ್ರದ ಅನುಸಾರವಾಗಿ, ಸುವ್ಯವಸ್ಥಿತವಾಗಿ ಪೂಜೆಯು ನಿರಂತರವಾಗಿ ನಡೆಯುವುದನ್ನು ನೋಡಿಕೊಳ್ಳಲು, ಈ ಮುಂಚಿನ ವೈಖಾನಸ ಪುರೋಹಿತರ ವಾರಸುದಾರರಿಗೆ ತಾವೇ ದೀಕ್ಷೆಯನ್ನಿತ್ತು ನಿಯಮಿಸಿದರು. ಆಳ್ವಾರರುಗಳ ವಿಗ್ರಹಗಳನ್ನು ಪ್ರತಿಷ್ಠಾಪಿಸಲೂ ಏರ್ಪಾಡು ಮಾಡಿದರು. ಆದರೆ ಹಲವು ಆಳ್ವಾರರು ಈ ಪರ್ವತವನ್ನು ಕಾಲಿನಿಂದ ತುಳಿದಿರುವುದು ಅಪವಿತ್ರ ಎಂದೇ ಭಾವಿಸಿದ್ದವರಾದುದರಿಂದ ಅವರೆಲ್ಲರ ವಿಗ್ರಹಗಳನ್ನೂ ತಿರುಪತಿಯಲ್ಲಿ ನೂತನವಾಗಿ ನಿರ್ಮಿತವಾಗಿದ್ದ ಶ್ರೀ ಗೋವಿಂದರಾಜಸ್ವಾಮಿ ಆಲಯದ ಆವರಣದಲ್ಲಿ ಪ್ರತಿಷ್ಠಾಪಿಸಿದರು.

ಶ್ರೀ ರಾಮಾನುಜರಿಗಿದ್ದಂತಹ ಭಕ್ತಿ ಪ್ರಪತ್ತಿಗಳೇ ಅವರ ಶಿಷ್ಯರಿಗೂ ಇದ್ದು, ಅನಂತ ಸೂರಿಯು (ಆನಂದಾಳ್ವಾನ್) ತಮ್ಮ ಗುರುಗಳ ಆಜ್ಞೆಯಂತೆ ತಿರುಮಲೆಯಲ್ಲಿ ವಾಸ ಹೂಡಿದರು. ಭಗವದ್ರಾಮಾನುಜರ ಹೆಸರಿನಲ್ಲಿ ಹೂದೋಟವನ್ನು ಬೆಳೆಸಿ ಶ್ರೀ ವೆಂಕಟೇಶ್ವರ ಸ್ವಾಮಿಯ ಸೇವೆಗೆ ಪ್ರತಿನಿತ್ಯ ಹೂವುಗಳನ್ನು ಹೊಂದಿಸಿ ಕೊಡುವ ಕೈಂಕರ್ಯವನ್ನು ಕೈಗೆತ್ತಿ ಕೊಂಡರು. ಅನಂತ ಸೂರಿಗಳ ಆದರ್ಶ ಪಥದಲ್ಲಿಯೇ ಮುಂದಿನ ತಲೆ ಮಾರುಗಳ ಹಲವಾರು ಏಕಾಂಗಿಗಳೂ, ಜೀಯರುಗಳೂ ನಡೆದು ಹೂದೋಟಗಳನ್ನು ಬೆಳೆಸಿ ಸ್ವಾಮಿಯ ಸೇವೆಯಲ್ಲಿ ಜೀವ ಸವೆಸಿದರು. ಶ್ರೀವೈಷ್ಣವರಲ್ಲಿ ಒಂದಿಬ್ಬರು ಪ್ರಮುಖರು ಉದಾಹರಣೆಗೆ - ಉಡೆಯವರ್ ಕೋಯಿಲ್ ಅಣ್ಣನ್ ಅಥವಾ ಅನುಸಂಧಾನಂ ತಿರುವೆಂಕಟದಾಸರ್ (274 ತಿ.ತಿ.) ಹಸ್ತಿಗಿರಿ ದಾಸರ್ (341 ತಿ.ತಿ.) ತಮ್ಮ ಗುರುಗಳು ನಡೆದ ಹಾದಿಯಲ್ಲಿ ತಾವೂ ನಡೆದು ಇಂತಹವೇ ಸ್ವಾಮಿ ಕೈಂಕರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.

ಭಗವದ್ರಾಮಾನುಜರ ಪ್ರಭಾವದ ಮತ್ತೊಂದು ಪ್ರಧಾನಾಂಗವೆಂದರೆ ಆಳ್ವಾರರುಗಳ ವಿಗ್ರಹ ಪ್ರತಿಷ್ಠಾಪನೆ, ನಂತರದ ಕಾಲದಲ್ಲಿ ಸ್ವವಿಗ್ರಹದ ಅನುಮೋದನೆ ಹಾಗೂ ದೈವತ್ವಕ್ಕೇರಿದ ಆಳ್ವಾರರ ನಿತ್ಯಪೂಜಾ ಕೈಂಕರ್ಯಕ್ಕೆ ಜೀಯರುಗಳ ಏರ್ಪಾಡು

ಮಾಡಿದ್ದು. ದೃಷ್ಟಾಂತವೆಂದರೆ ಶಕವರ್ಷ 1397 ರಲ್ಲಿ (145 ಜಿ.ಟಿ.) ತಿರುಪತಿಯ ಶ್ರೀರಾಮಾನುಜ ಆಲಯವನ್ನು ಯತಿರಾಜ ಜೀಯರು ನಿರ್ವಹಿಸುತ್ತಿದ್ದರು ಹಾಗೂ ಶಕವರ್ಷ 1436 ರಲ್ಲಿ (ಜಿ.ಟಿ. 203) ತಿರುಪತಿಯ ನಮ್ಮಾಳ್ವಾರ್ ಆಲಯವನ್ನು ಮತ್ತೊಬ್ಬ ಯತಿರಾಜ ಜೀಯರ್ ನೋಡಿಕೊಳ್ಳುತ್ತಿದರು. ಇದರಂತೆಯೇ ತಿರುಮಂಗೈ ಆಳ್ವಾರ್ ಆಲಯವು ಹಲವು ಏಕಾಕಿ ಶ್ರೀವೈಷ್ಣವರ ನಿರ್ವಹಣೆಯಲ್ಲಿದ್ದಿತು (333-ತಿ.ತಿ.) ಜೊತೆಗೆ ಇಂದೂ ಕಂಗೊಳಿಸುತ್ತಿರುವ ಶ್ರೀವೆಂಕಟೇಶ್ವರಸ್ವಾಮಿ ಆಲಯದಲ್ಲಿನ, ಶ್ರೀರಾಮಾಲಯದಲ್ಲಿನ ಉಡೆಯವರ (ಭಗವದ್ರಾಮಾನುಜರ) ಆಲಯಗಳು, ಅಲಿಪಿರಿಯಲ್ಲಿ ಜೀರ್ಣವಾಗಿರುವ ಪೆರಿಯಾಳ್ವಾರ್ ಆಲಯ, ಗೋವಿಂದರಾಜಸ್ವಾಮಿ ಆಲಯದ ಇತರ ಆಳ್ವಾರರ ಆಲಯಗಳು ಈ ದಿಸೆಯಲ್ಲಿ ರಾಮಾನುಜರ ಪ್ರಭಾವವನ್ನು ಗುರುತಿಸುತ್ತವೆ

ಹೀಗಾಗಿ ತಿರುಮಲೆಯ ಆಲಯದಲ್ಲಿ ಶ್ರೀರಾಮಾನುಜರ ಪ್ರಭಾವವನ್ನು ಈ ರೀತಿ ಸಂಗ್ರಹಿಸಬಹುದು.

ಮೊದಲನೆಯದಾಗಿ ತಿರುಮಲೆಯಲ್ಲಿ ನಂದನ ವನಗಳನ್ನುಂಟಾಗಿಸಿ ಸ್ವಾಮಿಯ ಸೇವೆಯಲ್ಲಿ ನಿರಂತರ ವಾಗಿ ಹೂವುಗಳು ದೊರೆಯುವಂತೆ ಈ ಉದ್ಯಾನವನಗಳನ್ನು ನೋಡಿಕೊಳ್ಳಲು ಏಕಾಂಗಿಗಳನ್ನು ನೇಮಕ ಮಾಡಿದ್ದು. ತಿರುಮಳಿಶೈ ಆಳ್ವಾರ್ ಮೊದಲಾದ ಆಳ್ವಾರರ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ್ದು. ಮೂರನೆಯದಾಗಿ ರಾಮಾನುಜರ ಪಂಥ ನೆಲೆಯೂರಿದ್ದರ ಗುರುತಾಗಿ ಹಲವು ಶ್ರೀವೈಷ್ಣವ ಮಠಗಳು ಸ್ಥಾಪಿತವಾದವು. ತಿರುಮಳಿಶೈ ಪ್ಪಿರಾನ್ ಮಠಂ - ಈ ಒಂದು ರೀತಿಗೆ ಸೇರಿದೆ. (ತಿ.ತಿ. 335) ವಣ್ ಶಠಗೋಪ ಮಠಂ (276 ತಿ.ತಿ.) ಪೇರರುಳಾಳನ್ ಮಠಂ ಮೊದಲಾದವುಗಳು. ಪ್ರಾಯಶಃ ಶ್ರೀವೈಷ್ಣವ ಪಂಥದ ಶಿಕ್ಷಣದ ಉದ್ದೇಶಗಳಿಂದಾಗಿ ಈ ಮಠಗಳು ಸ್ಥಾಪಿತವಾಗಿ ಧರ್ಮಪ್ರಸಾರದಲ್ಲಿ ತೊಡಗಿರಬೇಕು.

ನಾಲ್ಕನೆಯದಾಗಿ ರಾಮಾನುಜರ ವಿಗ್ರಹ ಪ್ರತಿಷ್ಠಾಪನೆಯಿಂದಾಗಿ, ಅವರ ಶಿಷ್ಯ ಪ್ರಶಿಷ್ಯ ಅನುಯಾಯಿ ಗಳಲ್ಲಿ ತಮ್ಮ ದಾನ, ದತ್ತಿ, ಸೇವೆಗಳಿಗೆ ಭಗವದ್ರಾಮಾನುಜರ ಹೆಸರನ್ನು ಸೇರಿಸಿ ಧನ್ಯರಾಗುವ ಉತ್ಸಾಹ ಭಕ್ತಿ ಗಳುಂಟಾಗುವಂತಾಯಿತು. ಸಾಳುವ ನರಸಿಂಹ (8 ಜಿ.ಟಿ) ಹಾಗೂ ರಾಮನಾಯಕರ್‌ಗಳಿಂದ (306 ತಿ.ತಿ.) ಉಚಿತ ಭೋಜನ ಸೌಕರ್ಯದ ಏರ್ಪಾಡುಗಳಾಗಿ, ಇವು ರಾಮಾನುಜ ಕೂಟಗಳೆಂದು ಹೆಸರಾದವು. ಹೂದೋಟಗಳಲ್ಲಿ ಮೊದಲನೆಯದು ಅನಂತಸೂರಿ ಯಿಂದ (ಆನಂದಾಳ್ವಾರ್) ಆರಂಭವಾಗಿ ರಾಮಾನುಜ ಪುಟ್ಟೇರಿ (311, 340, ತಿ.ತಿ.) ರಾಮಾನುಜ ತಿರುವೀಧಿ (ತಿ.ತಿ. 314) ಮೊದಲಾದವುಗಳೆಲ್ಲ ತಲೆಮಾರಿನಿಂದ ತಲೆಮಾರಿಗೆ ಹರಿದು ಬರುತ್ತಿರುವ ರಾಮಾನುಜರ ಪ್ರಭಾವವನ್ನು ಸೂಚಿಸುತ್ತವೆ.

ಐದನೆಯದಾಗಿ ಶಾತ್ತಾದವರೂ, ಶಾತ್ತಿನವರೂ (200 ತಿ.ತಿ.) ಸೇರಿದಂತೆ ಏಕಾಂಗಿಗಳು, ಶ್ರೀವೈಷ್ಣವ ಪುರೋಹಿತರೂ ತಿರುವಾಯ್ಮೊಳಿ, (333 ತಿ.ತಿ.) ಇಯಲ್ಪಾ. (211 ತಿ.ತಿ.) ನೂಟ್ರಂದಾದಿಗಳನ್ನು (58 ಜಿ.ಟಿ.) ಇತರ ಆಳ್ವಾರರ ಪ್ರಬಂಧಗಳನ್ನು ಉತ್ಸವ, ಮೆರವಣಿಗೆಗಳಲ್ಲಿ ದೇವರ ಮುಂದೆ ಹಾಡುವುದು ನಂತರದ ದಿನಗಳಲ್ಲಿ, ರಾಮಾನುಜರು ಆಳ್ವಾರರ ಬಗ್ಗೆ ಹೊಂದಿದ್ದ ಅತ್ಯಂತ ಆದರ ಭಕ್ತಿಗಳಿಂದಾಗಿ ನಿತ್ಯ ಪದ್ಧತಿಯಾಯಿತು.

ಆರನೆಯದಾಗಿ, ಆಲಯಗಳಲ್ಲಿ ನಡೆಯಲಾಗುತ್ತಿರುವ ಅಧ್ಯಯನೋತ್ಸವಗಳು ರಾಮಾನುಜರಿಂದ ಆರಂಭಿಸಲ್ಪಟ್ಟ ನೂತನ ಸಂಪ್ರದಾಯ ಆಗದಿದ್ದರೂ ಅವರು ದೈನಂದಿನ ಪೂಜಾಪದ್ಧತಿಯಲ್ಲಿ ಬಲವಾಗಿ ಅವಧಾರಣೆ ನೀಡಿದ ಪ್ರಕ್ರಿಯೆಯಾಗಿ, ತಮಿಳಿನಲ್ಲಿ ದ್ರಾವಿಡ ವೇದವೆಂದು ಕರೆಯಲ್ಪಟ್ಟು ಭಕ್ತರ ಅತ್ಯಂತ ಆದರ ಗೌರವಗಳಿಗೆ ಪಾತ್ರವಾದ ನಾಲಾಯಿರ ದಿವ್ಯಪ್ರಬಂಧಗಳನ್ನು ಹಾಡಿದ ಆಳ್ವಾರರ ಜೀವನ ಸಾಹಿತ್ಯಗಳ ನೆನಪನ್ನು ಚಿರಗೊಳಿಸುವಂತಾಯಿತು.

ಕಡೆಯದಾಗಿ ವಿಷ್ಣು ಆಲಯಗಳಲ್ಲಿ ದಿನವೂ ನಾಲಾಯಿರ ಪ್ರಬಂಧಗಳನ್ನು ಹಾಡುವುದು 20 ರಿಂದ 25 ದಿನಗಳ ಅಧ್ಯಯನೋತ್ಸವ ನಡೆಸುವುದು ರಾಮಾನುಜರು ಒತ್ತು ನೀಡಿ ಪ್ರಸಿದ್ಧ ಪಡಿಸಿದ ಪದ್ಧತಿಯಾಗಿದೆ. ವೇದಗಳು ಮೂಲದಲ್ಲಿ ಸಂಸ್ಕೃತ ಭಾಷೆಯಲ್ಲಿದ್ದು, ಸಾಮಾನ್ಯ ಜನತೆಯ ಬಗ್ಗೆ ಅಪಾರವಾದ ಸಹಾನುಭೂತಿ ಹೊಂದಿದ್ದ ರಾಮಾನುಜರು ಆಲಯಗಳಲ್ಲಿ ಪ್ರಬಂಧಗಳನ್ನು

ಹಾಡುವ ಪದ್ಧತಿಯ ಪ್ರಸಾರದಿಂದಾಗಿ ಸಾಮಾನ್ಯ ಜನರಿಗೂ ಜಾತಿ ಮತ ಪಂಥಗಳ ವ್ಯತ್ಯಾಸವಿಲ್ಲದಂತೆ ಅತ್ಯಂತ ಹಿರಿಯ ವಟ್ಟದ ಜ್ಞಾನ ಸುಲಭವಾಗಿ ಕೈಗೆ ಎಟುಕುವಂತೆ ಆಯಿತು.

ಸಂಕ್ಷಿಪ್ತವಾಗಿ ಹೇಳುವುದಾದರೆ ಭಗವದ್ರಾಮಾನುಜರ ಜೀವನ ಪರ್ಯಂತವಾದ ಧಾರ್ಮಿಕ ಕ್ರಿಯಾ ಕಲಾಪಗಳು ಅವರ ನಂತರವೂ ಮುಂದುವರಿದು ಆಲಯ ಪೂಜೆಯಲ್ಲಿ ನಿಯಮಿತವಾದ ವ್ಯವಸ್ಥಿತವಾದ ಪದ್ಧತಿಯುಂಟಾಗುವಂತಾಗಿ, ದೇವರ ನಿತ್ಯಪೂಜೆ ನೈವೇದ್ಯಗಳಿಗೆ ಗಟ್ಟಿಯಾದ ಪ್ರಾವಧಾನ ಉಂಟಾಗುವಂತಾ ಯಿತು. ಆಲಯಗಳಿಗೆ ಶಾಶ್ವತವಾದ ದಾನ ದತ್ತಿಗಳು ಸೇರುವಂತಾಯಿತು. ರಾಮಾನುಜರ ಶಿಷ್ಯರು ಪ್ರಶಿಷ್ಯರು ಬೇರೆ ಬೇರೆ ವೈಷ್ಣವ ಕೇಂದ್ರಗಳಲ್ಲಿ ಆಚಾರ್ಯಪುರುಷರಾಗಿ, ಶ್ರೀವೈಷ್ಣವ ಪಂಥವನ್ನು ಪ್ರಸಾರ ಮಾಡುವಂತೆ ಆಯಿತು. ತಿರುಪತಿಯಲ್ಲಿನ ಆಚಾರ್ಯಪುರುಷರೆಂದು ಆನಂದಾಂಪಿಳ್ಳೈ (ತಿ.ತಿ. 224, 233) ಕಂದಾಡೈ (3 ತಿ.ತಿ.) (61 ಜಿ.ಟಿ.) ತೋಳಪ್ಪರ್ (98 ಜಿ.ಟಿ.) ಪ್ರತಿವಾದಿ ಭಯಂಕರ (63 ಜಿ.ಟಿ.) ಪರವಸ್ತು (203 ಜಿ.ಟಿ.) ಮನೆತನಗಳವರು ಪ್ರಸಿದ್ಧರಾದರು. ಕೊನೆಯದಾಗಿ ಮುಖ್ಯ ಆಲಯಗಳಲ್ಲಿನ ಕೈಂಕರ್ಯ ನಡೆಸಲು ಏಕಾಂಗಿಗಳನ್ನು ತಯಾರು ಮಾಡಲಾಯಿತು

## 9. ಪಲ್ಲವರ ಕಾಲದಿಂದ ವಿಜಯನಗರದರಸರ ವರೆಗೆ ಆಲಯ ಚಿತ್ರ

ಒಂದು ದೈವ ವಿಗ್ರಹ ಪ್ರತಿಷ್ಠೆಯಾದಮೇಲೆ ಅತ್ಯಗತ್ಯ ಸಾಹಿತ್ಯವೆಂದರೆ ಭಕ್ತರು ದೇವರನ್ನು ನೋಡಲು ಅನುಕೂಲವಾಗುವಂತೆ ಬೆಳಕು ನೀಡುವ ದೀಪದ ಹಾಗೂ ದೇವರ ಪೂಜೆಗೆ ತಕ್ಕ ಹೂವು ಹಣ್ಣು ನಿವೇದನೆಗಳು. (ಈ ಪುಟದ ಶಾಸನಸಂಖ್ಯೆಗಳು ಸಂಪುಟ 1 ರಲ್ಲಿನವು)

1ನೆಯ ಶಾಸನದಂತೆ ಉಲಗಪ್ಪೆರುಮಾನಾರನು ಮೂವತ್ತು ಕಳಂಜು ಹೊನ್ನನ್ನು ನೀಡಿ ತಿರುವಿಳಂ ಕೋಯಿಲ್ - ಪೆರುಮಾಳ ನಡಿಗಳ ಸನ್ನಿಧಿಯಲ್ಲಿ ಒಂದು ನಂದಾದೀಪವನ್ನು ಏರ್ಪಡಿಸುವಂತಾಗಿಸಿದನು. 2ನೇ ಶಾಸನದಲ್ಲಿ ಪಲ್ಲವರಾಜ ವಿಜಯದಂತಿ ವಿಕ್ರಮ ವರ್ಮನ ಆಳ್ವಿಕೆಯ ಕಾಲದಲ್ಲಿ ಸಿಯಗನ್ ಅಥವಾ ಸಿಯಗಂಗನ್ ಆಲಯದಲ್ಲಿ ದೇವರ ಮುಂದೆ ನಂದಾದೀಪದ ಏರ್ಪಾಡು ಮಾಡಿದ. ಪಲ್ಲವ ರಾಣಿ ಸಾಮವೈ ತಾನು ಪ್ರತಿಷ್ಠಿಸಿದ ಮಣವಾಳಪ್ಪೆರುಮಾಳರ ಸನ್ನಿಧಿಯಲ್ಲಿ ನಂದಾದೀಪದ ಏರ್ಪಾಡು ಮಾಡಿದಳು. 12ನೇ ಶಾಸನದ ಕೊಡುಂಗೋಲೂರನ ಹಾಗೂ 13ನೇ ಶಾಸನದಲ್ಲಿನ ನಂದಾದೀಪಗಳಂತೂ ಶ್ರೀ ವೆಂಕಟೇಶ್ವರ ಸ್ವಾಮಿ ಸನ್ನಿಧಿಯಲ್ಲಿಯೇ ಏರ್ಪಾಡಾಗಿದ್ದವು. ಅಲ್ಲಿಂದ 14ನೇ ಶತಮಾನದವರೆಗೆ ಸುಮಾರು ನಲವತ್ತು ನಂದಾದೀಪಗಳ ಏರ್ಪಾಡುಗಳನ್ನು ನಾವು ಕಾಣಬಹುದಾಗಿದೆ. 19ನೇ ಶಾಸನದಲ್ಲಿ ತಿರುಮಂಡಯಂ ಸಭೆಯವರು ತಮಗೆ ನಿಗಧಿಯಾಗಿದ್ದ 23 ನಂದಾದೀಪಗಳ ಹಾಗೂ ಒಂದು ಕರ್ಪೂರದ ದೀಪಗಳನ್ನು ಬೆಳಗದೆ ಶ್ರೀ ವೆಂಕಟೇಶ್ವರಸ್ವಾಮಿಯ ಸನ್ನಿಧಿಯಲ್ಲಿ ಕರ್ಪೂರ ದೀಪದ ಜೊತೆಗೆ ಹೊಸ ದೀಪಗಳನ್ನು ಹತ್ತಿಸುತ್ತಿದ್ದುದನ್ನು ಕಾಣಬಹುದು.

ಪ್ರಾಂತೀಯ ಅಧಿಕಾರಿಯು ತಿರುಚಾನೂರಿನ ಸರ್ಕಾರೀ ಕಟ್ಟಡದಲ್ಲಿ ಓಲಗವನ್ನೇರ್ಪಡಿಸಿ ವಿಷಯವನ್ನು ಸವಿವರವಾಗಿ ತಿಳಿದುಕೊಂಡು 24 ದೀಪಗಳ ಬೆಳಗಿಸಲು ಏರ್ಪಾಡು ಮಾಡಿದನು.

123 ನೇ ಶಾಸನವು ಆಲಯಕ್ಕೆ ನೀಡಿದ ಆರು ದೀಪದ ಕಂಭಗಳನ್ನು ಕುರಿತು ಹೇಳಿದರೆ,

132 ನೇ ಶಾಸನವು ಆಲಯದಲ್ಲಿ ಬೆಳಗಿದ ನಾಲ್ಕು ನಂದಾದೀಪಗಳ ಬಗ್ಗೆ ಹೇಳುತ್ತದೆ. ಇದುವರೆಗೆ ನಂದಾದೀಪಗಳನ್ನು ತಿರುಮಲೆಯ ಆಲಯದಲ್ಲಿ ಏರ್ಪಾಡು ಮಾಡುವಲ್ಲಿ ಧಾರಾಳತೆಯನ್ನು ಕಾಣಬಹುದಾಗಿದೆ.

ಅನ್ನಪ್ರಸಾದಗಳ ನಿವೇದನೆಯ ವಿಷಯದಲ್ಲಿ ಬಹು ಪೂರ್ವದಲ್ಲಿ ಬಾಣರಾಜ ವಿಜಯಾದಿತ್ಯನು ತನ್ನ ಕಾಲದಲ್ಲಿಯೇ ನೈವೇದ್ಯದ ಏರ್ಪಾಡಾದುದನ್ನು 4 ನೇ ಶಾಸನದಲ್ಲಿಯೂ ಗಂಗೈ ಗಂಗನ್ ರಣಸಿಂಗನ 5 ನೇ ಶಾಸನದಲ್ಲಿ, ಹಾಲು ಮೊಸರುಗಳ

ನಿಮುಂದನವನ್ನು 27ರಲ್ಲಿ ಕಾಣುತ್ತೇವೆ. ನಂತರದ ಕಾಲದಲ್ಲಿ ಮೊದಲಸಂಧಿ (ಮೊದಲ ನಿವೇದನೆ) ಯು ಧನಿಷ್ಠ ದಿನದಂದು ನಡೆಯುವಂತೆ 155 ರಲ್ಲಿಯೂ, ಸಿತಕರಗಂಡನ್ ಸಂಧಿಯಲ್ಲಿನ ನೈವೇದ್ಯ 102 ರಲ್ಲಿಯೂ, ತಿರುಮಂತ್ರ ತಿರುಪ್ಪೋನಕವನ್ನು 82 ರಲ್ಲಿಯೂ ಕಾಣಬಹುದು. ಆದರೆ ಹದಿಮೂರನೆ ಶತಮಾನದಲ್ಲಿ ಒಂದೊಮ್ಮೆ ನಿವೇದನೆಗಳ ಪ್ರಮಾಣ ಕಡಮೆಯಾಗಿ ಕಂಡುಬಂದಾಗ ಸ್ಥಾನತ್ತಾರರು ಹೆಚ್ಚಿನ ಸಾಗುವಳಿ ಭೂಮಿಯ ಕಾಣಿಕೆಗಳನ್ನು ಬಯಸಿದಾಗ, ಅವರ ಬಯಕೆಯಂತೆ ತಿರುಕಾಳತ್ತಿದೇವ ರಾಯಯಾದವ ರಾಯನು ಕುಡವೂರು ನಾಡನ್ನು ದೇವದಾನ ಗ್ರಾಮವಾಗಿ ಶಾಶ್ವತ ದಾನವಾಗಿ ತನ್ನ ಆಡಳಿತದ ಹತ್ತೊಂಬತ್ತನೆಯ ವರ್ಷದಲ್ಲಿ ನೀಡಿದನು (ತಿ.ತಿ. 81 - ಕ್ರಿ.ಶ.1209 - 10) ಕ್ರಿ.ಶ.1254 ರಲ್ಲಿ 43 ನೇ ಶಾಸನದಲ್ಲಿ ಸ್ಥಾನತ್ತಾರರ ಅಪೇಕ್ಷೆಯಂತೆ ಜಮೀನಿನ ದಾನ ನೀಡಲಾಗಿದೆ. ಶಾಸನಗಳಲ್ಲಿ ಭೂಮಿಯ, ಧನದ ದಾನಗಳನ್ನು ನೀಡಿರುವುದು ನಮ್ಮ ಗಮನಕ್ಕೆ ಬಂದಿದೆ. ಕಾವೇರಿಯ ದಕ್ಷಿಣಕ್ಕಿದ್ದ ಭೂಮಿ, ಗ್ರಾಮಗಳ ದಾನವನ್ನು 13 ನೇ ಶತಮಾನದಲ್ಲಿ ಜಟಾವರ್ಮ ಸುಂದರ ಪಾಂಡ್ಯನು ಪುನಃ ನವೀಕರಿಸಿದನು.ತಿರುಪತಿಯ ಬಳಿಯ ಆರು ಹಳ್ಳಿಗಳನ್ನು ಇವುಗಳೊಂದಿಗೆ ಯಾದವರಾಯ ಪ್ರಭುಗಳು ಆಲಯಕ್ಕೆ ನೀಡಿದ್ದರು.

ಅರಣ್ಯಪ್ರದೇಶದಿಂದ ಆವೃತವಾಗಿರುವ ವೆಂಕಟಾಚಲದಲ್ಲಿ ವನಸುಮಗಳು ಬೆಳೆಯುತ್ತಿದ್ದಿರಬಹುದಾ ದರೂ ಅವುಗಳನ್ನ ಸ್ವಾಮಿಯ ಪೂಜೆಯಲ್ಲಿ ಬಳಸುವಂತೆ ಇರಲಿಲ್ಲವೆಂದು ಕಾಣುತ್ತದೆ. ಹೀಗಾಗಿ ಹಲವಾರು ಭಕ್ತರು ತಿರುಮಲೆಯಲ್ಲಿ ಪುಷ್ಪೋದ್ಯಾನಗಳನ್ನು ನಿರ್ಮಿಸಿ, ಸ್ವಾಮಿಯ ಪೂಜೆಗೆ ನಿತ್ಯವೂ ಹೂಗಳನ್ನು ಹೊಂದಿಸುವ ಹಾಗೂ ಹಬ್ಬ ಹರಿದಿನಗಳಲ್ಲಿ ಹೆಚ್ಚಿನ ಪುಷ್ಪಕೈಂಕರ್ಯ ಮಾಡುವ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಈ ಉದ್ಯಾನವನಗಳಲ್ಲಿ ನೆರಳಿಗಾಗಿ ಹಲವು ಭಕ್ತರು ಮಂಟಪಗಳನ್ನು ನಿರ್ಮಿಸಿದರು. ಈ ಉತ್ಸವಗಳಲ್ಲಿ ಮೆರವಣಿಗೆಯಲ್ಲಿ ದೇವರು ಆಗಮಿಸುತ್ತಿರುವಾಗ ಈ ಮಂಟಪಗಳಿಗೂ ಬರುವಂತೆ ಅಪೇಕ್ಷಿಸಿದರು. ಇಲ್ಲಿ ಉತ್ಸವ ಮೂರ್ತಿಗಳಿಗೆ ತಿರುಪ್ಪೋನಕ (ಅಕ್ಕಿ, ಹೆಸರು ಬೇಳೆ, ಮೆಣಸುಗಳಿಂದ ಮಾಡಿದ ಪೊಂಗಲು) ಅಪ್ಪ, ನಿವೇದನೆಯ ಏರ್ಪಾಡಿಗೂ ಸಾಹಿತ್ಯವನ್ನೊದಗಿಸಿದರು. ಇವುಗಳನ್ನು ನೆರೆದ ಭಕ್ತರಲ್ಲಿ ಹಂಚುವ ವಾಡಿಕೆಯಿದ್ದಿತು. ಒಂದು ಹಿರಿಯ ಭಾಗ ಆಲಯದ ಅಧಿಕಾರಿಗಳಿಗೂ ಸೇರುತ್ತಿದ್ದಿತು. ಇಂತಹ ಭಕ್ತರ ನೆರವಿಯನ್ನೂ, ಪ್ರಸಾದ ವಿತರಣೆಯನ್ನೂ, ತಿರುವೋಲಕಂ ಎಂದು ಕರೆಯುತ್ತಿದ್ದರು.

ಸಾಮವೈ ರಾಣಿಯು ಪ್ರವೇಶಗೊಳಿಸಿದ ಎರಡು ಉತ್ಸವಗಳಲ್ಲಿ ಒಂದು ಪುರಟ್ಟಾಸಿಯದು ಇಂದಿಗೂ ಮುಂದುವರೆದಿದೆ. ಮಾರ್ಗಳಿ ತಿಂಗಳಿನ ಇನ್ನೊಂದು ಉತ್ಸವ ನಿಂತು ಹೋಗಿರುವಂತೆ ತೋರುವುದು. ಹದಿ ಮೂರನೆಯ ಶತಮಾನದ ಮೂರನೆಯ ಭಾಗದ (ಕಾಲುಭಾಗದ) 111 ನೆಯ ತಿ.ತಿ. ಶಾಸನವು ಶ್ರೀ ವೆಂಕಟೇಶ್ವರಸ್ವಾಮಿಯ ಪುರಟ್ಟಾಸಿ ಉತ್ಸವವನ್ನು ಉಲ್ಲೇಖಿಸಿದೆ 652 ತಿ.ತಿ. ಹಾಗೂ 119 ತಿ.ತಿ.ಗಳು ಪುರಟ್ಟಾಸಿ ಚಿತ್ತಿರೈ ಉತ್ಸವಗಳನ್ನು ಕುರಿತು ಹೇಳುತ್ತವೆ. ಕ್ರಿ.ಶ. 1330 ರಲ್ಲಿ ತನ್ನ ಆಳಿತದ ಒಂಬತ್ತನೆಯ ವರ್ಷದಲ್ಲಿ ತಿರುವೆಂಕಟನಾಥ ಯಾದವರಾಯನು ಆಡಿ ಮಾಸದಲ್ಲಿ ಒಂದು ಹೊಸ ಉತ್ಸವವನ್ನು ಏರ್ಪಡಿಸಿ ಅದರ ವೆಚ್ಚಗಳಿಗಾಗಿ ನಲವತ್ತು ವಿವಿಧ ರೀತಿಯ ಸುಂಕಗಳನ್ನು ಒಳಗೊಂಡು ಪೊಂಗನಲ್ಲೂರು ಗ್ರಾಮದ ಅರ್ಧಭಾಗವನ್ನು ಸರ್ವಮಾನ್ಯವಾಗಿ ನೀಡಿದನು.(ಜಿ.ಟಿ.125) ಹದಿನಾಲ್ಕನೇ ಶತಮಾನದ ಪೂರ್ವದಲ್ಲಿ ಮೂರು ಉತ್ಸವಗಳು ಶ್ರೀ ವೆಂಕಟೇಶ್ವರಸ್ವಾಮಿಗಾಗಿ ನಡೆಯುತ್ತಿದ್ದಿತೆಂದು ಇದುವರೆಗೆ ಕಂಡು ಬಂದಿದೆ.

ಈ ಮೂರು ಉತ್ಸವಗಳ ಜೊತೆಗೇ ಧ್ವಜಸ್ತಂಭದ ಮೇಲೆ ಗರುಡಧ್ವಜವನ್ನು ಏರಿಸಿ ಹಾರಿಸುವುದರಿಂದ ಆರಂಭವಾಗುವ ತಿರುಕ್ಕೊಡಿ ತಿರುನಾಳ್ ಮೊದಲಾಗಿ ಇತರ ಉತ್ಸವಗಳೂ ಆಲಯದಲ್ಲಿ ನಡೆಯುತ್ತಿದ್ದವು. ಮಾರ್ಚ್ - ಏಪ್ರಿಲ್ ತಿಂಗಳುಗಳ ವಸಂತ ಋತುವಿನಲ್ಲಿ ನಡೆಯುತ್ತಿದ್ದರಬಹುದಾದ ವಂಸತೋತ್ಸವದ ಬಗ್ಗೆ ಕ್ರಿ.ಶ. 1360 ರಲ್ಲಿನ 337 ತಿ.ತಿ. ಶಾಸನದಲ್ಲಿ ಉಲ್ಲೇಖವಿದೆ. ತಿ.ತಿ. 116 ಶಾಸನವು ಮೇ - ಜೂನ್ ತಿಂಗಳ ಬೇಸಿಗೆಯಲ್ಲಿ ನಡೆಯುತ್ತಿದ್ದ ಕೊಡೈ ತಿರುನಾಳನ್ನು ಗುರುತಿಸುತ್ತದೆ.

ಹಲವಾರು ಆಳ್ವಾರರುಗಳ ವಿಗ್ರಹ ಪ್ರತಿಷ್ಠಾಪನೆಯೂ ಈ ಕಾಲದಲ್ಲಿ ನಡೆಯಿತೆಂಬುದನ್ನು ಗಮನಿಸ ಬೇಕು. ಮೂರನೇ ರಾಜರಾಜ ಚೋಳನ ಕಾಲದಲ್ಲಿ (ಜಿ.ಟಿ 26 - ಕ್ರಿ.ಶ. 1255) ಸ್ಥಾಪಿತವಾದ ತಿರುಮಂಗೈ ಆಳ್ವಾರರ ವಿಗ್ರಹ ಮೊದಲನೆಯದು ಈ

ಶಾಸನದಲ್ಲಿ ಕುಡವೂರು ನಾಡಿನ ಸಾರ್ವಜನಿಕರು ಶ್ರೀ ಗೋವಿಂದ ರಾಜಸ್ವಾಮಿ ಆಲಯದಲ್ಲಿ ವಿಗ್ರಹವನ್ನು ಪ್ರತಿಷ್ಠಾಪಿಸಿದರೆಂದೂ ಅದರ ಪೂಜೆಗೆ ಹಲವು ದಾನಗಳನ್ನು ನೀಡಿದ ರೆಂದೂ ಹೇಳಲಾಗಿದೆ. ತಿರುವೆಂಕಟನಾಥ ಯಾದವರಾಯನು ಶ್ರೀ ವೆಂಕಟೇಶ್ವರಸ್ವಾಮಿಗೆ 1330 - 31 ರಲ್ಲಿ ಪೊಂಗಲೂರು ಗ್ರಾಮವನ್ನು ದಾನಮಾಡಿದಾಗ ಸಿಂಗರಾಯ ದಂಡನಾಯಕನು ಶ್ರೀ ವೆಂಕಟೇಶ್ವರಸ್ವಾಮಿ ಆಲಯದ ಸ್ಥಾನತ್ತಾರರಿಗೆ ಸಲ್ಲಿಸಿದ ಬೇಡಿಕೆಯಲ್ಲಿ, ತಾನು ಆಡಿಮಾಸದಲ್ಲಿ ನಡೆಸಬೇಕೆಂದು ತಿಳಿಸಿದ ಉತ್ಸವದ ವೆಚ್ಚಗಳಿಗಾಗಿ ಹಾಗೂ ಸಿತಕರಗಂಡನ್ ಸಂಧಿಯಲ್ಲಿ ನಿವೇದನೆಗಾಗಿ, ಮಾತ್ರವೇ ಈ ಗ್ರಾಮಾದಾಯವನ್ನು ಬಳಸದೆ ಮಿಕ್ಕ ಹೆಚ್ಚಿನ ಹಣದಿಂದ ವೀರನರಸಿಂಗ ಪೆರುಮಾಳ್ ಹಾಗೂ ತಿರುಮಂಗೈ ಆಳ್ವಾರರಿಗೆ ಒಬ್ಬರಿಗೊಂದು ತಿರುಪ್ಪೋನಕ ನಿವೇದನೆ ನೀಡಬೇಕೆಂದೂ ಹೇಳಿದ್ದಾನೆ. ಸ್ಥಾನತ್ತಾರರು ಅವನ ಬೇಡಿಕೆಯನ್ನು ಒಪ್ಪಿದರು.(ತಿ.ತಿ. - 195. ಪುಟ 105 - 108, 109 ಸಂಪುಟ - 1).

ಮುಂದಕ್ಕೆ ಬಂದರೆ ನಮಗೆ ಕಂಡುಬರುವುದು ಸುಮಾರು ಕ್ರಿ.ಶ. 1285-1290ರಲ್ಲಿ ತಿರುಪತಿಯ ಉತ್ತರದಲ್ಲಿ ಬೆಟ್ಟದ ತಪ್ಪಲಿನಲ್ಲಿನ ಕಪಿಲತೀರ್ಥದಲ್ಲಿ ಗುಡಿಕಟ್ಟಲಾದ ನಮ್ಮಾಳ್ವಾರ್ ಆಲಯ. ಇದರ ನಿರ್ಮಾಣ ಆದದ್ದು ವಾನೆಡುತ್ತಕೈಯಳಗಿಯರ್ ಅಥವಾ ಪಲ್ಲವರಾಯರ್ ಕಾಲದಲ್ಲಿ. (ಜಿ.ಟಿ. 201,202, ತಿ.ತಿ.- 130).

ಕಪಿಲತೀರ್ಥದ ಪಶ್ಚಿಮಕ್ಕೆ ಬೆಟ್ಟದ ಬುಡದಲ್ಲಿ ಅಲಿಪಿರಿಯಲ್ಲಿ ಮೆಟ್ಟಿಲ ಹಾದಿ ಆರಂಭವಾಗುವ ಸ್ಥಳದಲ್ಲಿ ಗೋದಾದೇವಿಯ ಸಾಕುತಂದೆ ಪೆರಿಯಾಳ್ವಾರರ ಸನ್ನಿಧಿಯಿದೆ. ಈ ಮಂದಿರವನ್ನು ಎಂದು ನಿರ್ಮಿಸಲಾಯಿತು, ಆಳ್ವಾರರ ವಿಗ್ರಹವನ್ನೆಂದು ಪ್ರತಿಷ್ಠಾಪಿಸಲಾಯಿತು ಎಂಬುದು ತಿಳಿದು ಬಂದಿಲ್ಲ. ಆಲಯದ ಗೋಡೆಗಳಮೇಲೆ ಯಾತ್ರಿಕರ ದಾಹಾರ್ತಿಯನ್ನು ತೀರಿಸಲೆಂದು ತೋಡಿಸಿದ ಎರಡು ಬಾವಿಗಳ ಬಗ್ಗೆ ಶಾಸನಗಳಿವೆ. ಒಂದು ಕಾಮವಿಲ್ಲಿ (ಜಿ.ಟಿ. 274) ಯಿಂದ ಆದದ್ದು. ಮತ್ತೊಂದು ನೀರಿಗಿಳಿಯಲು ಮೆಟ್ಟಿಲುಗಳನ್ನು ಹೊಂದಿದ ಬಾವಿಯಾಗಿದ್ದು ಕ್ರಿ.ಶ. 1490 ರ ಜನವರಿ 25 ಕ್ಕೆ ಸಮನಾಗುವ ಶಕವರ್ಷ 1411 ರ ಸೌಮ್ಯವರ್ಷದಲ್ಲಿ ಉತ್ತರ ಮೇರೂರಿನ ಕರವೆಟ್ಟಿ ಪುಲಿ ಆಳ್ವಾರ್‌ಮನ್ನಾರ್ ಪಿಳ್ಳೈ ಕಟ್ಟಿಸಿದ್ದು. ಇದು ಸಾಳುವ ನರಸಿಂಹನ ಆಳ್ವಿಕೆಯ ಕೊನೆಗಾಲದಮುಂಚಿನ ವರ್ಷ ಆಗಿದ್ದು, ಆತ ಲಕ್ಷ್ಮೀ ನರಸಿಂಹಸ್ವಾಮಿಯ ಆಲಯದ ಮೇಲಿನ ಗೋಪುರವನ್ನು ನಿರ್ಮಿಸಿರಬೇಕು (271 ಜಿ.ಟಿ). ಈ ದೊಡ್ಡ ಗೋಪುರ 1930 ರ ಡಿಸೆಂಬರಿನಲ್ಲಿ ಮಳೆಗಾಳಿಗಳಲ್ಲಿ ಸಿಡಿಲು ಬಿದ್ದು ಶಿಥಿಲವಾಯಿತು. ಮೊದಲನೆಯ ಬಾವಿಯು 14 ನೇ ಶತಮಾನದಲ್ಲಿ ಕಾಮವಿಲ್ಲಿಯಿಂದ ಕಟ್ಟಿಸಿದ್ದಾಗಿ ಇದು ಒಂದು ಶತಮಾನಕಾಲ ಜೀರ್ಣವಾದ ನಂತರ ಎರಡನೆಯ ಮೆಟ್ಟಿಲ ಬಾವಿಯ ನಿರ್ಮಾಣ ಕ್ರಿ.ಶ. 1490 ರಲ್ಲಿ ಆಗಿದ್ದಿರ ಬೇಕು. ಹೀಗಾಗಿ ಈ ಎರಡೂ ಶಾಸನಗಳಿರುವ ಗೋಡೆಗಳನ್ನು ಹೊಂದಿದ ಪೆರಿಯಾಳ್ವಾರ್ ಮಂದಿರವು ಹದಿನಾಲ್ಕನೆಯ ಶತಮಾನದ ಮಧ್ಯಭಾಗದಲ್ಲಿದ್ದಿರಬಹುದು. (ಇದು ಲಕ್ಷ್ಮೀನರಸಿಂಹಸ್ವಾಮಿ ಆಲಯ. ಆಪಪ್ರಥೆಯಿಂದಾಗಿ ಪೆರಿಯಾಳ್ವಾರ ಆಲಯವೆಂದು ಗುರುತಿಸಲಾಗಿದೆ. ಈ ಲಕ್ಷ್ಮೀನರಸಿಂಹ ಆಲಯದ ನಿರ್ಮಾಣ ಸಾಳುವನರಸಿಂಹ ರಾಯನಿಂದ ಆಯಿತು. - 273 ಜಿ.ಟಿ. - ಅನುವಾದಕ)

ವಿಗ್ರಹ ಪ್ರತಿಷ್ಠಾಪನೆಯಾದ ನಂತರ ಪ್ರಥಮ ಪರಿಕರಗಳಾದ ದೀಪ, ಧೂಪ, ಪುಷ್ಪ ನೈವೇದ್ಯಗಳ ಪ್ರಬಂಧವಾದ ನಂತರ, ಅಲಂಕರಣ, ವೈಭವಗಳ ಪಾತ್ರ ಮೊದಲಾಗಿರಬೇಕು. ಆಭರಣ ಅಲಂಕಾರಗಳು ಲಾವಣ್ಯ ಸೌಂದರ್ಯಗಳನ್ನು ನೀಡುತ್ತವೆ. ಆಲಯದ ವಿಸ್ತರಣ, ಮಂಟಪಗಳ, ಅಂತರಾಳಗಳ, ಪ್ರಾಕಾರಗಳ ಸೇರ್ಪಡೆಯಿಂದಾಗಿ, ಉತ್ಸವಗಳ ಆಚರಣೆಯಿಂದಾಗಿ ವಿವಿಧ ವಾಹನಗಳ ಮೇಲೇರಿದ ಅಲಂಕರಣಗೊಂಡ ಉತ್ಸವಮೂರ್ತಿಗಳ ಮೆರವಣಿಗೆಯಿಂದಾಗಿ, ಆಲಯದ ಮೂಲ ಮೂರ್ತಿಯ ಪ್ರಸಿದ್ಧಿಗೆ ತಕ್ಕಂತೆ ವೈಭವವನ್ನೂ ಹೆಚ್ಚುಗೊಳಿಸುತ್ತವೆ. ಶ್ರೀ ವೆಂಕಟೇಶ್ವರಸ್ವಾಮಿಯ ಉತ್ಸವಗಳು ಆರಂಭದಲ್ಲಿಯೇ ಹೆಚ್ಚಾಗಿದ್ದು ಹದಿಮೂರನೆಯ ಶತಮಾನದ ಹೊತ್ತಿಗೆ ಭರ್ಜರಿಯಾದವು. ಆದರೆ ಆಲಯದ ವಿಸ್ತರಣ ಕಾರ್ಯಕ್ರಮ ವಿಜಯನಗರದರಸರ ಕಾಲದಿಂದ ಹದಿನೈದನೆಯ ಶತಮಾನದಲ್ಲಿ ತೊಡಗಿತು.

ದೈವದ ವೈಯಕ್ತಿಕ ಅಲಂಕರಣದ ಬೆಳವಣಿಗೆಯೆಂದರೆ ಸಾಮವೈ ರಾಣಿಯು ಮಣವಾಳ ಪ್ಪೆರುಮಾಳ್ ವಿಗ್ರಹದ ಅಲಂಕಾರಕ್ಕಾಗಿ ಮಾತ್ರವೇ ಆಭರಣಗಳನ್ನು ನೀಡಿದಳು. ಮೂಲವಿಗ್ರಹ ಶ್ರೀ ವೆಂಕಟೇಶ್ವರಸ್ವಾಮಿಗೆ ಸಂದ ಪ್ರಥಮ ಆಭರಣ ಸಮರ್ಪಣೆ ಎಂದರೆ ಎರಡನೇ ಪರಾಂತಕ ಸುಂದರ ಚೋಳನ ರಾಣಿ ಪರಾಂತಕ ದೇವಿ ಅಮ್ಮನು ಆರು ಮಾಣಿಕ್ಯ, ನ್ಯಾಪುಜ್ರಗಳು, ಇಪ್ಪತ್ತೆಂಟು ಮುತ್ತುಗಳನ್ನು ಹೊಂದಿದ ಚಿನ್ನದ ಪಟ್ಟವನ್ನು ತನ್ನ ಮಲಮಗ ಒಂದನೇ ರಾಜರಾಜನ ಆಡಳಿತದ 16ನೇ ವರ್ಷದಲ್ಲಿ (ಕ್ರಿ.ಶ. 1001 ರಲ್ಲಿ) ನೀಡಿರುವುದೇ ಆಗಿದೆ. ನಂತರದ ಆಭರಣ ಸಮರ್ಪಣೆಯೆಂದರೆ 13 ಅಥವಾ 14 ನೇ ಶತಮಾನದಲ್ಲಿ ಸಂಜೈಯ ರಾಜನಾದ ಅಹೋಬಲಯಾದವನು ಶ್ರೀ ವೆಂಕಟೇಶ್ವರಸ್ವಾಮಿಯ ಬಲಗೈ ವರದಹಸ್ತ - ಕಾಲುಗಳನ್ನು ತೋರಿಸುವ - ಹಸ್ತಕ್ಕೆ- ನೀಡಿದ ಚಿನ್ನದ ಕವಚವಾಗಿದ್ದಿತು. 1 ನೇ ಜಟಾವರ್ಮ ಸುಂದರಪಾಂಡ್ಯನು ಗರ್ಭಗುಡಿಯಮೇಲಿನ ಗೋಪುರವನ್ನು ಚಿನ್ನದ ಕಳಸದಿಂದ ಅಲಂಕರಿಸಿದಾಗ ''ಹೇಮಕಲಶೋಸ್ಥಾಪಿ''- ಶ್ರೀ ವೆಂಕಟೇಶ್ವರಸ್ವಾಮಿ ಆಲಯದ ಅಲಂಕಾರವೂ ಆಯಿತು. ಅವನು ತನ್ನ ಆಳ್ವಿಕೆಯ 5 - 10ನೇ ವರ್ಷಗಳ ನಡುವೆ ಉತ್ತರದ ಕಡೆ ಕೃಷ್ಣಾನದಿಯವರೆಗೆ ದಂಡೆತ್ತಿ ಬಂದಾಗ ಸರಿಸುಮಾರು ಕ್ರಿ.ಶ. 1256ರ ಹೊತ್ತಿಗೆ ಈ ಕಾರ್ಯ ನಡೆದಿರಬೇಕು. (172 ತಿ.ತಿ.) ಇದೇ ಸಮಯದಲ್ಲಿ (ತಿ.ತಿ. 371) ವೀರನರಸಿಂಹ ಯಾದವರಾಯನು ತನ್ನ ತೂಕದ ಚಿನ್ನದಿಂದ ಗರ್ಭಗುಡಿಯ ವಿಮಾನ ಗೋಪುರಕ್ಕೆ ಚಿನ್ನದ ಗಿಲೀಟು ಮಾಡಿದ ಕವಚವನ್ನು ಪ್ರಾಯಶಃ ತೊಡಿಸಿರಬೇಕು.

14ನೇ ಶತಮಾನದ ಶಾಸನಗಳಲ್ಲಿ ಕೆಲವು ಮಠಗಳೂ ಕಂಡುಬರುತ್ತವೆ. ಕ್ರಿ.ಶ. 1330 - 31ರಲ್ಲಿ ತಿರುವೆಂಕಟನಾಥ ಯಾದವ ರಾಯನ ಆಳ್ವಿಕೆಯ ಒಂಬತ್ತನೆಯ ವರ್ಷದಲ್ಲಿ ಆಡಿಮಾಸದಲ್ಲಿ ನಡೆಸಬೇಕಾದ ಉತ್ಸವಗಳಿಗೂ, ಸಿಂಗಯ ದಂಡನಾಯಕನ ಮಗನು ದಂಡನಾಯಕನ ಹೆಸರಿನಲ್ಲಿ ಆರಂಭಿಸಿದ ಸಿತಕರ ಗಂಡನ್ ಸಂಧಿಯ ನೈವೇದ್ಯಕ್ಕಾಗಿಯೂ ಪೊಂಗಲೂರು ಗ್ರಾಮದ ಅರ್ಧ ಆದಾಯವನ್ನು ಸರ್ವಮಾನ್ಯವಾಗಿ ನೀಡಿದ! ಆತನು ಸ್ಥಾನತ್ತಾರರನ್ನು ಕೇಳಿಕೊಂಡದ್ದೆಂದರೆ ಈ ಗ್ರಾಮಾದಾಯವನ್ನು ಮೇಲೆ ಹೇಳಿದ ಕೆಲಸಗಳಿಗೂ, ತಿರುಪತಿಯ ವೀರನರಸಿಂಗ ಪೆರುಮಾಳ್ ಹಾಗೂ ತಿರುಮಂಗೈ ಆಳ್ವಾರರಿಗೆ ತಿರುಪ್ಪೋನಕ ನೀಡಲೂ, ಹವತ್ತೆರಡು ಮಂದಿ ಶ್ರೀವೈಷ್ಣವರಿಗೆ ದಿನವೂ ಸಿತಕರ ಗಂಡ ಮಠದಲ್ಲಿ ಭೋಜನ ನೀಡಲೂ ಮಿಕ್ಕ ಧನವನ್ನು ಹೂದೋಟ, ಅರವಟ್ಟಿ ಮೊದಲಾದ ಧರ್ಮಕಾರ್ಯಗಳಲ್ಲಿ ಬಳಸಬೇಕು ಎಂಬುದು (195 ತಿ.ತಿ.) ಕ್ರಿ.ಶ. 1339 ರಲ್ಲಿನ ಶ್ರೀರಂಗನಾಥ ಯಾದವರಾಯನ ಆಡಳಿತದ ಮೂರನೆಯ ವರ್ಷದಲ್ಲಿ ಹೊರಬಂದ ಶಾಸನ ದಂತೆ (354 ತಿ.ತಿ.) ನಮಗೆ ಸಿತಕರಗಂಡ ಮಠಗಳು ಎರಡು ಇದ್ದಂತೆಯೂ, ಒಂದು ತಿರುಮಲೆಯಲ್ಲಿ ಒಂದು ತಿರುಪತಿಯಲ್ಲಿ ಇದ್ದಂತೆಯೂ, ತಿರುಮಲೆಯ ಮಠಕ್ಕೆ ಎರಡು ನಂದನವನಗಳು ಸೇರಿದ್ದುವೆಂದೂ, ಅವುಗಳ ಹೆಸರುಗಳು ಅರಸಿನಾಲಯ ನಂದನವನ ಹಾಗೂ ವಣ್‌ಶಠಗೋಪನ್ ನಂದನವನವೆಂದೂ ತಿಳಿದು ಬರುತ್ತದೆ. ಈ ಮಠ ಗಳನ್ನು ಸಿಂಗಯನು ಹಲವು ಸನ್ಯಾಸಿಗಳ ವಶಕ್ಕೆ ಒಪ್ಪಿಸಿ, ಅವರು ಮತ್ತೊಬ್ಬ ಏಕಾಂಗಿಗೆ ಆತ ಆಲಯದ ಭಂಡಾರಕ್ಕೆ 100 ಪಣವನ್ನು ಒಪ್ಪಿಸಿದ ನಂತರ ವನಗಳನ್ನು ಆತನ ವಶಗೊಳಿಸಬೇಕೆಂದೂ ಆತನ ಮರಣಾನಂತರ ಮಠಗಳೆರಡೂ ಮತ್ತೆ ಸಿಂಗಯನಿಗೇ ಸೇರು ವಂತಾಗಿ ಪುನಃ ನಾಲ್ಕು ನೂರು ಪಣವನ್ನು ಆಲಯ ಭಂಡಾರಕ್ಕೆ ಒಪ್ಪಿಸುವ ಏಕಾಂಗಿಗೆ ಈ ಸನ್ಯಾಸಿಗಳು ವನಗಳನ್ನು ಒಪ್ಪಿಸಬೇಕೆಂದು ನಿಯಮವಾಗಿದ್ದಿತು. ಈ ಆಸ್ತಿಗಳನ್ನು ಪಡೆದ ನಂತರ ಏಕಾಂಗಿಯು - ಸೀಯರ್ ಅಥವಾ ಜೀಯರ್ ಉತ್ಸವಗಳ ನಾಲ್ಕನೆಯದಿನ ಹಾಗೂ ಪಾರುವೇಟೆಯ ಉತ್ಸವಗಳಲ್ಲಿ ಉತ್ಸವ ಮೂರ್ತಿಯು ನಂದನವನಗಳಲ್ಲಿ ವಿಶ್ರಾಂತಿ ಪಡೆಯುವಾಗ ನಿವೇದನೆಗಳನ್ನು ಮಾಡು ಮಾಡಬೇಕಾಗಿದ್ದಿತು. ಈ ಮಠಗಳ ಆದಾಯದಿಂದಾಗಿ ಶ್ರೀ ವೆಂಕಟೇಶ್ವರಸ್ವಾಮಿಗೆ ಹಲವಾರು ಆಭರಣಗಳನ್ನು ಮಾಡಿಸಿ ಅಲಂಕರಿಸಿರಬೇಕು (672 ತಿ.ತಿ.) ಇಲ್ಲಿನ ಸನ್ಯಾಸಿ - ಜೀಯರು - ಆಲಯದಲ್ಲಿ ಹಲವು ಸೇವೆಗಳನ್ನು ಸಲ್ಲಿಸಿದ್ದಿರಬೇಕು. ಹೀಗಾಗಿ ಸಿಂಗಯ ದಂಡನಾಯಕನು ಸ್ಥಾಪಿಸಿದ ಸಿತಕರ ಗಂಡನ್ ಮಠವು ಶ್ರೀ ವೆಂಕಟೇಶ್ವರಸ್ವಾಮಿ ಹಾಗೂ ಶ್ರೀ ಗೋವಿಂದರಾಜಸ್ವಾಮಿಯವರ ಸೇವೆಯಲ್ಲಿ ಇಂದಿಗೂ ತೊಡಗಿರುವ ಜೀಯರು ಅಥವಾ ಜೀಯಂಗಾರರ ಮೂಲವನ್ನು ಗುರುತಿಸುವಲ್ಲಿ ನೆರವು ನೀಡುವುದು.

## ಅಧ್ಯಾಯ - 14

# ವಿಜಯನಗರದ ಕಾಲದಲ್ಲಿ ಆಲಯ

### 1. ಪೀಠಿಕೆ :

ವಿಜಯನಗರದರಸರ ಪೂರ್ಣ ಆಶ್ರಯದಿಂದಾಗಿ ತಿರುಮಲೆಯ ಆಲಯವು ಪ್ರಸಿದ್ಧಿಯ ಪರಕಾಷ್ಠತೆಯನ್ನು ತಲುಪಿತು. ಶ್ರೀಕೃಷ್ಣದೇವರಾಯ ಹಾಗೂ ಅಚ್ಯುತರಾಯರು ಆಲಯಕ್ಕೆ ಹಲವಾರು ಬಾರಿ ತೀರ್ಥಯಾತ್ರೆಯನ್ನು ನಡೆಸಿ ಸ್ವಾಮಿಗೆ ಅನರ್ಘ್ಯವಾದ ಅಮೂಲ್ಯವಾದ ಮುತ್ತು ರತ್ನಗಳ ಆಭರಣಗಳನ್ನು ಸಮರ್ಪಿಸಿ, ಇಲ್ಲಿನ ಉತ್ಸವ ಪೂಜೆಗಳನ್ನು ವೈಭವೋಪೇತವಾಗಿ ಆಚರಿಸಲು ಬೇಕಾದ ಸಾಹಿತ್ಯವನ್ನು ಒದಗಿಸಿದರು. ಅಚ್ಯುತರಾಯನಂತೂ ತಿರುಮಲೆಯ ಸ್ವಾಮಿ ಸನ್ನಿಧಿಯಲ್ಲಿಯೇ ಪಟ್ಟಾಭಿಷಿಕ್ತನಾದ. ಹೀಗಾಗಿ ವಿಜಯನಗರ ಸಾಮ್ರಾಜ್ಯದ ಉಗಮ ವಿಕಾಸ ಪತನಗಳೂ, ಇಲ್ಲಿನ ನಾಲ್ಕು ರಾಜವಂಶಗಳ ಉನ್ನತಿ ಅವನತಿ ಗಳೂ, ಆಲಯ ಅಭಿವೃದ್ಧಿ, ಅದೃಷ್ಟ, ಅಲಂಕಾರಗಳ ಮೇಲೆ ತಮ್ಮ ಪ್ರಭಾವವನ್ನು ಬೀರಿದವು.

ಹದಿಮೂರನೆಯ ಶತಮಾನದ ತನಕ, ತಿರುಮಲೆಯ ಆಲಯದ ಬಹುತೇಕ ದಾನದತ್ತಿಗಳು - (ಹಲ ಕೆಲವು ಪೂರ್ವ ಸಮುದ್ರತೀರದವುಗಳ ಹೊರತು) ಆಲಯದ ದಕ್ಷಿಣಾದಿ ರಾಜ್ಯಗಳಿಂದ, ಅಲ್ಲಿನ ರಾಜಪುರುಷರ, ಶ್ರೀ ಸಾಮಾನ್ಯರ, ದೇಣಿಗೆಗಳಾಗಿ ದ್ದವು. ಪೂರ್ವತೀರದವರಲ್ಲಿ ಮೊತ್ತ ಮೊದಲಿಗೆ ಆಲಯಕ್ಕೆ ದೇಣಿಗೆಯನ್ನು ನೀಡಿದವರೆಂದರೆ ಹದಿನಾಲ್ಕನೆಯ ಶತಮಾನದಲ್ಲಿ ವೀರ ಕಂಪಣನ (ಇದು ವೀರ ಬಲ್ಲಾಳ ಆಗಿರಬೇಕು - ಅನುವಾದಕ) ಸೈನ್ಯಾಧಿಪತಿಯಾಗಿದ್ದ ಸಿಂಗಯ ದಂಡನಾಯಕ. ಆತ ಅವರೆಗೆ ತಿರುಮಲೆಯ ಆಲಯದ ಜೀಯರುಗಳು ಉಸ್ತುವಾರಿಗೆ ಅರಸಿನಾಲಯಂ, ನಂದನವನಗಳನ್ನೂ, ಇತರ ದಾನಗಳನ್ನೂ ಒಪ್ಪಿಸಿದ ಎಂದು ಶಾಸನಗಳಿಂದ ತಿಳಿದುಬರುತ್ತದೆ. ತಾನು ದಕ್ಷಿಣದ ಮುಸಲ್ಮಾನ ಧಾಳಿಗಳ ವಿರುದ್ಧ ಕಾರ್ಯಾಚರಣೆಯಲ್ಲಿ ತೊಡಗಿದ್ದರಿಂದ ಪ್ರಾಯಶಃ ಈ ರೀತಿ ಮಾಡಬೇಕಾಗಿ ಬಂದಿರಬಹುದು. ವೀರಕಂಪಣನೂ, ಸಾಳುವ ಮಂಗಿದೇವನೂ ಈ ಮುಸಲ್ಮಾನ ಆಕ್ರಮಣ ಗಳನ್ನು ತಡೆಯುವಲ್ಲಿ ನಿರತರಾಗಿದ್ದರು.

ಹೀಗೆ ಸಿಂಗಯ ದಂಡನಾಯಕನು ಈ ಭಾಗದಲ್ಲಿ ಒಬ್ಬ ಸೇನಾಧಿಪತಿಯಂತೆ ಕಂಡುಬಂದು ತಿರುಮಲೆಯಲ್ಲಿ ಎರಡು ಮಠ ಗಳನ್ನು ಸ್ಥಾಪಿಸಿ ಅಲ್ಲಿನ ಜೀಯರುಗಳಿಗೆ ಆಲಯದ ಉತ್ಸವ ಪೂಜಾದಿಗಳ ನಿರ್ವಹಣೆಗೆ ತಕ್ಕ ಆಸ್ತಿಗಳನ್ನು ನಂದನವನಗಳನ್ನು ಒಪ್ಪಿಸಿದ.

ಇದೇ ಕಾಲದಲ್ಲಿ - ಎಂದರೆ ಬುಕ್ಕರಾಯನ ಕಾಲದಲ್ಲಿ ಆಲಯದಲ್ಲಿ ಪ್ರತಿದಿನವೂ ಬುಕ್ಕರಾಯನ ಸಂಧಿಯನ್ನು ಏರ್ಪಡಿಸಿ ಒಂದು ತಿರುಪ್ಪೋನಕ ನೈವೇದ್ಯದ ಏರ್ಪಾಡು ಮಾಡಲೂ, ಬ್ರಹ್ಮೋತ್ಸವ ನಡೆಸಲೂ ಬುಕ್ಕರಾಯನು ದಾನ ನೀಡಿದನೆಂದು ಶಾಸನ ಗಳು ತಿಳಿಸುತ್ತವೆ. ಮಹಾಮಂಡಲೇಶ್ವರ ಮಂಗಿದೇವನು ಆಲಯದ ಗರ್ಭಗುಡಿಯ ಮೇಲಿನ ವಿಮಾನಶಿಖರಕ್ಕೆ ಬಂಗಾರದ ಮುಲಾಮು ಹಚ್ಚಿದ ತಾಮ್ರದ ತಗಡನ್ನು ಹೊದಿಸಿ ಮಹತ್ಕಾರ್ಯ ಮಾಡಿದ. 'ತಿರುಮಲದೇವನ ವಿಮಾನದಲ್ಲಿ ಬಂಗಾರದ ಶಿಖರ ವನ್ನು ಕೀರ್ತಿಶಾಲಿಯಾದ ಮಂಗಿದೇವ ಮಹಾರಾಜನು (ಕ್ರಿ.ಶ. 1359) ಶಕ 1281 ರ ವಿಕಾರಿ ಸಂವತ್ಸರ ಆಷಾಡಮಾಸ ಶುಕ್ಲಪಕ್ಷದ ಶನಿವಾರ ದಶಮಿಯಂದು ಪ್ರತಿಷ್ಠಾಪಿಸಿದ'ನೆಂದು ತಿ.ತಿ. 237 ನೇ ಶಾಸನವು ತಿಳಿಸುತ್ತದೆ. ಯಾವುದೇ ರಾಜನ ರಾಜಕೀಯ ಆಳ್ವಿಕೆಯ ವರ್ಷವನ್ನಿಲ್ಲಿ ಸೂಚಿಸಲಾಗಿಲ್ಲವೆಂಬುದು ಗಮನಾರ್ಹ. ಹೀಗಾಗಿ ಅಂದಿನ ದೇಶದ ರಾಜಕೀಯ ರಂಗ ಪರಿವರ್ತನೆಯ ಸಂಧಿಕಾಲದಲ್ಲಿ ಇದ್ದಿತೆಂದು ಹೇಳಬಹುದಾಗಿದೆ.

ಈ ದಾನಗಳ ಹಿನ್ನೆಲೆಯಲ್ಲಿ ಕ್ರಿ.ಶ. 1387ರಲ್ಲಿ ಹರಿಹರರಾಯನ ಶ್ರೀಕಾರ್ಯನಿರ್ವಾಹಕನಾಗಿ ಮುಲ್ಲೈ ತಿರುವೆಂಕಟ ಜೀಯರು ಮಾಸಿ ತಿಂಗಳಿನ ಮಾಸಿ ಉತ್ಸವವನ್ನು ಪ್ರವೇಶಗೊಳಿಸಿದುದನ್ನು ಕಾಣಬಹುದು. ತಿರುಮಲೆಯ ಆಲಯದಲ್ಲಿನ ವರದರಾಜಸ್ವಾಮಿ ಗುಡಿಯಲ್ಲಿನ ತಿ.ತಿ. 103 ನೇ ಶಾಸನದಂತೆ ಪೊಂಗೋಡು ಗ್ರಾಮದ ಆದಾಯದಲ್ಲಿ 100 ಪಣವನ್ನು ಹರಿಹರರಾಯನ ಹೆಸರಿನಲ್ಲಿ ಮುಲ್ಲೈ ತಿರುವೆಂಕಟ ಜೀಯರು ಆಲಯದ ಶ್ರೀ ಭಂಡಾರಕ್ಕೆ ಪ್ರಭವ ನಾಮ ಸಂವತ್ಸರದಲ್ಲಿ ಒಪ್ಪಿಸಿ ಉತ್ಸವವನ್ನು ಆರಂಭಿಸಿದನೆಂದು ಹೇಳಲಾಗಿದೆ. ಆಲಯ ಲೆಕ್ಕಾಧಿಕಾರಿಯಾದ ತಿರುನಿನ್ರ ಊರ್ ಉಡೆಯನ್ ಅನ್ನು ಈ ಶಾಸನದಲ್ಲಿ ನೋಡ ಬಹುದು. ದಾನ ದತ್ತಿಗಳನ್ನ ನೀಡುವುದಾಗಿದ್ದರೂ ಆಲಯದ ಪರವಾಗಿ ಈ ದಾನಗಳನ್ನು ಯಾರು ಸ್ವೀಕರಿಸಿದ ರೆಂಬುದನ್ನು ಉಲ್ಲೇಖಿಸಲಾಗಿಲ್ಲ. ಜೊತೆಗೆ ಇವುಗಳ ಉತ್ಸವಾಚರಣೆಯ ಹೊಣೆಯು ಯಾರಿಗೆ ಸೇರಿದ್ದಿತೆಂಬುದರ ಬಗ್ಗೆ ತಿಳಿಸಲಾಗಿಲ್ಲ.

ಹೀಗೆ ಸರಿ ಸುಮಾರು ಕ್ರಿ.ಶ. 1390 ರ ಹೊತ್ತಿಗೆ ತಿರುಮಲೆಯ ಆಲಯದ ಶಾಸನಗಳಲ್ಲಿಯಂತೆ ಪ್ರಾಕ್ ವಿಜಯನಗರ ಕಾಲದ ಆಲಯ ಮೊಕ್ತೇಸರರು - ಆ ವರೆಗೆ ಆಲಯದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿ ದ್ದವರು - ಆಡಳಿತದಲ್ಲಿ ತಮ್ಮ ಹಿಡಿತವನ್ನು ಕಳೆದುಕೊಳ್ಳುವಂತಾಗಿ, ಮೇಲೆ ಹೇಳಿದ ಶಾಸನದಂತೆ ಉಲ್ಲೇಖವನ್ನೇ ಪಡೆಯದೆ ಹಿಂದೆ ಬಿದ್ದರು. ಮೇಲೆ ಹೇಳಿದ ಶಾಸನದಲ್ಲಿ - ತಿರುನಿನ್ರ ಊರ ಉಡೈಯನ್ - ಆಲಯ ಲೆಖ್ಖಾಧಿಕಾರಿ ಮಾತ್ರವೇ ಎರಡೂ ದಾನಗಳ ದಾಖಲೆಗಳನ್ನು ಸ್ಪಷ್ಟಿಸಿದವನೆಂದು ಖಚಿತವಾಗಿ ತಿಳಿಸಲಾಗಿದೆ, ಹೊರತು ಸ್ಥಾನತ್ತಾರರ ನಾಮಮಾತ್ರವೂ ಇಲ್ಲ. ಇದರಿಂದಾಗಿ ಒಂದು ಆಸಕ್ತಿಕರ ಅಂಶವನ್ನು ಗುರುತಿಸಬಹುದು. ಈ ಕಾಲಕ್ಕೆ ಆಗಲೇ ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಆಗಿದ್ದರೂ, ತಿರುಮಲೆಯ ಆಲಯದ ಬಗ್ಗೆಯಾಗಲೀ, ಅಲ್ಲಿನ ಭಕ್ತರಲ್ಲಿ, ಆಡಳಿತಗಾರರಲ್ಲಿಯಾಗಲೀ ಸಾಮ್ರಾಜ್ಯದ ಅಧಿಕಾರ ಇನ್ನೂ ವ್ಯಾಪಕವಾಗಿ ತಳವೂರಿರಲಿಲ್ಲ. ಇದರಿಂದಾಗಿಯೇ ಕ್ರಿ.ಶ. 1380ರ ನಂತರದ ಶಾಸನಗಳಲ್ಲಿಯೂ ವಿಜಯನಗರದ ಸಾಮ್ರಾಟರ ಆಡಳಿತಾರೂಢ ರಾಜರ ಉಲ್ಲೇಖ ಕಂಡುಬರುವುದಿಲ್ಲ.

ತಿ.ತಿ. 57ನೇ ಮುಲ್ಲೈ ತಿರುವೆಂಕಟಜೀಯರ ಶಾಸನದಂತೆ ಶಕವರ್ಷ 1312 ಎಂದರೆ ಕ್ರಿ.ಶ. 1390 ರ ವೇಳೆಗೆ ಆಲಯದ ಪ್ರಸಾದವನ್ನು ತಿರುಪತಿ ಶ್ರೀವೈಷ್ಣವರು, ತಿರುಚಾನೂರು ಸಭೆಯವರು, ನಂಬಿಮಾರ್ (ಆಲಯ ಅರ್ಚಕರು) ಕೋಯಿಲ್ ಕೇಳ್ವಿ ಜೀಯರ್, ಇಬ್ಬರು ಆಲಯ ಲೆಕ್ಕಿಗರು - ಇವರಲ್ಲಿ ವಿತರಣೆಯಾಗುತ್ತಿತ್ತು. ಪ್ರಸಾದವನ್ನು ಹನ್ನೆರಡು ಭಾಗವನ್ನಾಗಿ ಮಾಡಿ ಉಚಿತವಾದ ಪ್ರಮಾಣದಲ್ಲಿ ವಿತರಣೆಯಾಗುತ್ತಿತ್ತು. ಹೀಗಾಗಿ ಹತ್ತು ಮಂದಿ ಸ್ಥಾನತ್ತಾರರೂ, ಇಬ್ಬರು ಆಲಯ ಲೆಕ್ಕಿಗರೂ - ಸೇರಿ ಒಟ್ಟು ಹನ್ನೆರಡು ಮಂದಿ ಆಲಯದ ಪಾರು ಪತ್ಯವನ್ನು ಮಾಡುತ್ತಿದ್ದರೆಂದು ತೋರುತ್ತದೆ. ಇಲ್ಲಿ ಹೇಳಲಾದ ಏಕಾಂಗಿ ಶ್ರೀವೈಷ್ಣವರು ಮೊದಲಿಗೆ ರಾಮಾನುಜ ರಿಂದ ಸ್ವಾಮಿ ಸೇವೆಯಲ್ಲಿ ನಿಯುಕ್ತರಾಗಿದ್ದಿರಬೇಕು. ಇವರ ಸಂಖ್ಯೆ ರಾಮಾನುಜರ ಕಾಲದಲ್ಲಿ ಒಂದೇ ಆಗಿದ್ದು, ಮೂರು ಶತ ಮಾನಗಳ ಒಳಗೆ ನಾಲ್ಕು ಆಯಿತು. ಕ್ರಿ.ಶ. 1398ರ ವೇಳೆಗೆ ಹತ್ತು ಆಯಿತು. ಈ ವೈಷ್ಣವರು ಆಲಯದ ಧಾರ್ಮಿಕ ವಿಧಿಗಳಾದ ಅರ್ಚನೆ, ನಿವೇದನೆ, ಪೂಜೆ ಪುರಸ್ಕಾರಗಳನ್ನು ನೋಡಿಕೊಳ್ಳುತ್ತ ಜೊತೆಗೆ ಆಲಯದ ದಾನದತ್ತಿಗಳ ಆಡಳಿತ ನಿರ್ವಹಣೆಯನ್ನೂ ನೋಡು ವವರಾಗಿದ್ದರು. ರಾಮಾನುಜರ ಮೂಲಕ ತಮ್ಮ ಪರಂಪರೆಯನ್ನು ಗುರುತಿಸಿಕೊಂಡ ಶ್ರೀವೈಷ್ಣವ ಸಂತಾನರೇ ಇಂದಿಗೂ ಶ್ರೀ ವೆಂಕಟೇಶ್ವರ ಸ್ವಾಮಿಯ ಆರಾಧನೆಯಲ್ಲಿ ತೊಡಗಿದ್ದು ಸಾವಿರ ವರ್ಷದಿಂದ ಸತತವಾಗಿ ಭಕ್ತಿಯ ಸೇವೆ ಸಲ್ಲಿಸುತ್ತಿರುವವರು ಗಿದ್ದಾರೆ.

## 2. ವಿಜಯನಗರ ಸ್ಥಾಪನೆಯ ಕಾಲದ ಪರಿಸ್ಥಿತಿ

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಮೊದಲಿಗೆ ಹಾಗೂ ಸ್ಥಾಪನೆಯ ಹೊತ್ತಿಗೆ ತಿರುಮಲೆಯ ಆಲಯದ ಆಡಳಿತದಲ್ಲಿ ಒಂದು ವಿಶೇಷ ಸಂಧಿಕಾಲವುಂಟಾಯಿತು. ಶ್ರೀರಂಗದ ಶ್ರೀರಂಗನಾಥಸ್ವಾಮಿಯನ್ನು ಶ್ರೀರಂಗದಲ್ಲಿ ಉಂಟಾದ ಬುಡಮೇಲು ಕೃತ್ಯಗಳಿಂದಾಗಿ ಇಲ್ಲಿಗೆ ತರುವಂತೆ ಆಯಿತು.

ಶ್ರೀರಂಗದ ಆಲಯದ ಬಹುತೇಕ ಪ್ರಮುಖ ಘಟ್ಟಗಳನ್ನು ಚಿತ್ರಿಸಿ ಇತಿಹಾಸವನ್ನು ವಿವರಿಸುವ ಕೋಯಿಲ್ ಒಳಗು ಕೃತಿಯು ಕ್ರಿ.ಶ.14 ನೇ ಶತಮಾನದಲ್ಲಿ ದಕ್ಷಿಣ ಇಂಡಿಯಾ ದೇಶದಲ್ಲಿ ನಡೆದ ಮುಸಲ್ಮಾನ ಆಕ್ರಮಣದಲ್ಲಿ ಯಾವ ಪರಿಸ್ಥಿತಿ ಉಂಟಾಗಿದ್ದಿತು ಎಂಬುದರ ವಿವರಣೆ ನೀಡುತ್ತದೆ. ಶ್ರೀರಂಗದಲ್ಲಿ ಸ್ವಾಮಿಯ ಮೆರವಣಿಗೆ ಹೊರಟಿದ್ದಿತು. ನದಿಯ ಮಧ್ಯಭಾಗದಲ್ಲಿ ಸ್ವಾಮಿಯನ್ನು ಇಳಿಸಿ, ಸಂಜೆಯವರೆಗೆ ಪರಿಪರಿಯ ಪೂಜಾದಿಗಳನ್ನು ನಿರ್ವಹಿಸಿ ಪುನಃ ಮೆರವಣಿಗೆಯಲ್ಲಿ ಸ್ವಾಮಿಯನ್ನು ಆಲಯಕ್ಕೆ ಕರೆದುತರುವ ಕಾರ್ಯಕ್ರಮ. ಉತ್ಸಾಹದಿಂದ ಈ ಕಾರ್ಯಕ್ರಮ ನಡೆದಿದ್ದಿತು. ಕಣ್ಣಾನೂರಿನ ಕಡೆಯಿಂದ ಇದ್ದಕ್ಕಿದ್ದಂತೆ ನದಿಯತ್ತ ಮಹಮದ್ ತುಗ್ಲಖ್‌ನ ರಾವುತದಳ ಆಕ್ರಮಣ ನಡೆಸಿತು. ಮೆರವಣಿಗೆಯಲ್ಲಿ ನೆರೆದಿದ್ದ ಭಕ್ತಮಂದಿ ತತ್‌ಕ್ಷಣವೇ ಉತ್ಸವ ಮೂರ್ತಿಯನ್ನು ಊರಿನಿಂದ ಹೊರಗೊಯ್ದು ಆಕ್ರಮಣದಿಂದ ರಕ್ಷಿಸಲು ತೀರ್ಮಾನಿಸಿದರು. ಮಧ್ಯವಯಸ್ಕರಾದ ಪಿಳ್ಳೈ ಲೋಕಾಚಾರ್ಯರು ಸಾಕಷ್ಟು ಬಲಶಾಲಿಗಳಾಗಿದ್ದು, ಹೆಚ್ಚು ಓಡಾಟವಿಲ್ಲದ ಒಳದಾರಿಗಳಲ್ಲಿ ಸ್ವಾಮಿಯ ಪಲ್ಲಕ್ಕಿಯನ್ನು ತೆಗೆದುಕೊಂಡು ಪುದುಕೋಟೆಯತ್ತ ತೆರಳಿದರು. ಕಡೆಗೆ ರಾಜಕೀಯದ ಏಳುಬೀಳುಗಳಲ್ಲಿ ಅತಿ ಸುರಕ್ಷಿತ ಪ್ರದೇಶವೆಂದರೆ ತಿರುಪತಿ ಎಂಬುದಾಗಿ ನಿರ್ಧರಿಸಿ, ತೆರಕಣಾಂಬಿಯ ಮೂಲಕ ಮೈಸೂರು ದಾರಿಯಲ್ಲಿ ತಿರುಪತಿಯನ್ನು ಸೇರಿದ್ದನ್ನು ನೆನೆದರೆ ಈ ನಡುವಣ ಪ್ರದೇಶ ಧಾಳಿಗೆ ಸಿಕ್ಕಿದ್ದರೂ ಹೆಚ್ಚು ಕಡಮೆ ಗಲಭೆ ಗದ್ದಲಗಳಿಗೊಳಗಾಗದೆ ರಾಜಮಾರ್ಗಗಳೆಲ್ಲ ಮುಕ್ತವಾಗಿದ್ದಿತೆಂದೇ ತಿಳಿದು ಬರುತ್ತದೆ. ಕ್ರಿ.ಶ. 1328 ರ ಮುಸ್ಲಿಂ ಧಾಳಿಯ ನಂತರ ಈ ಸಂಗತಿ ನಡೆದಿದ್ದು, ರಂಗನಾಥಸ್ವಾಮಿಯು ತಿರುಪತಿ ಯಾತ್ರೆಯನ್ನು ಆರಂಭಿಸಿರಬೇಕು. ಸಿಂಗಯನಾಯಕ ಅಥವಾ ಅವನ ವಾರಸರು ಪಶ್ಚಿಮದಲ್ಲಿ ತೆರಕಣಾಂಬಿಯ ಆಚೆಯಿಂದ ತಿರುಪತಿಯ ವರೆಗಿನ ಪ್ರಾಂತದ ಪ್ರಭುತ್ವವನ್ನು ಪಡೆದಿದ್ದಾಗ ಈ ಘಟನೆ ಸಂಭವಿಸಿರಬೇಕು. ಈ ಮಾತು ಇಬನ್ - ಬಟೂಟನಿಂದಲೂ ಸಮರ್ಥನೆ ಪಡೆಯುತ್ತದೆ. ಹೀಗೆ ಮಹಮದೀಯರ ಆಕ್ರಮಣ ಕಾಲದಲ್ಲಿಯೂ ಶ್ರೀರಂಗದ ರಂಗನಾಥಸ್ವಾಮಿಗೇ ರಕ್ಷಣೆ ಕೊಡುವಷ್ಟು ಪ್ರಶಾಂತ ಪರಿಸ್ಥಿತಿ ಇಲ್ಲಿದ್ದಿತೆನ್ನಬಹುದು. ಈ ರೀತಿ ಸುರಕ್ಷತಾ ಸಮೃದ್ಧವಾದ ಸ್ಥಳವಾದದ್ದರಿಂದಲೇ ವೀರ ಬಲ್ಲಾಳನು ದಕ್ಷಿಣ ರಾಜಮಾರ್ಗಗಳಲ್ಲಿ ಹಾಯುವ ಈ ಪ್ರಾಂತ್ಯದ ತಿರುವಣ್ಣಾಮಲೆಯಲ್ಲಿ ನೆಲೆಗೊಂಡು ಅಲ್ಲಿ ಬಲವಾದ ದುರ್ಗವನ್ನೇ ನಿರ್ಮಿಸಿದನು. ಇದರಿಂದಾಗಿ ರಾಜಮಾರ್ಗದಲ್ಲಿ ಒಂದು ಸುರಕ್ಷಿತವಾದ ಸ್ಥಳ ದೊರೆತದ್ದೇ ಅಲ್ಲದೆ, ಕಷ್ಟಕಾಲದಲ್ಲಿ ಹಿಂದೆ ತಿರುಗಲು ಒಂದು ದಾರಿಯೂ ದೊರೆತಂತಾಯಿತು. ಜೊತೆಗೇ ಮಧುರೆಯ ಸುಲ್ತಾನರ ವಿರುದ್ಧ ತನ್ನ ಕಾರ್ಯಾಚರಣೆಯನ್ನು ವಿಸ್ತರಿಸಲು ಆತನಿಗೆ ಒಂದು ಅನುಕೂಲವಾದ ಕೇಂದ್ರವೂ ದೊರೆತಂತೆ ಆಯಿತು.

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಹಾಗೂ ಮುಂಚಿನ ಹೊತ್ತಿನಲ್ಲಿ ತಿರುಮಲೆಯ ಆಲಯದ ಪರಿಸ್ಥಿತಿಗಳು ಹೇಗಿದ್ದವು ಎನ್ನಲು ಆಲಯದ ಶಾಸನಗಳೇ ಪ್ರಮುಖ ಆಧಾರಗಳು. ಈ ಬಗ್ಗೆ ಮೂರು ಅಂಶಗಳನ್ನು ಪ್ರತ್ಯೇಕವಾಗಿ ಗಮನದಲ್ಲಿಟ್ಟುಕೊಂಡು ಮುಂದುವರೆಯಬೇಕು.

ಮೊದಲನೆಯದಾಗಿ ಈ ಶಾಸನಗಳಲ್ಲಿ ರಾಜನ ಆಳ್ವಿಕೆಯ ವರ್ಷವನ್ನು ಗುರುತಿಸದೆ, ಎಲ್ಲ ಶಾಸನಗಳಲ್ಲೂ ಶಕವರ್ಷದಲ್ಲಿ ತಿಥಿವಾರನಕ್ಷತ್ರಗಳೊಂದಿಗೆ ದಿನವನ್ನು ಗುರುತಿಸಲಾಗಿದೆ. ಇದರಿಂದಾಗಿ ಕಾಲವನ್ನು ಖಚಿತವಾಗಿ ಗುರುತಿಸುವುದು ಸಾಧ್ಯವಾಗಿದೆ. ಎರಡನೆಯದಾಗಿ, ಇತರ ಶಾಸನಗಳಲ್ಲಿಯಂತೆ ರಾಜನ ಪ್ರಶಸ್ತಿಯನ್ನು - ಶಾಸನದ ವಿಷಯದಲ್ಲಿ ನೇರ ಸಂಬಂಧ ಹೊಂದಿಲ್ಲದಿದ್ದಲ್ಲಿ ನೀಡಿಲ್ಲ. ಮೂರನೆಯದಾಗಿ ಈ ಶಾಸನಗಳಲ್ಲಿ ಖಾಸಗೀವ್ಯಕ್ತಿಗಳ ದಾನಗಳನ್ನು ದಾಖಲಿಸುವಾಗ ರಾಜನ ಹೆಸರನ್ನು ಸಾಮಾನ್ಯವಾಗಿ ಉಲ್ಲೇಖಿಸುವುದಿಲ್ಲ.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಪ್ರಥಮ ಶತಮಾನಕ್ಕೆ ಸಂಬಂಧಿಸಿದ ಆಲಯ ಶಾಸನಗಳು ಬಹುಸಂಖ್ಯೆಯಲ್ಲಿವೆ. ಮೊದಲನೆಯದು ತಿ.ತಿ. 487. ಇದರಲ್ಲಿ ಕಾಲಸೂಚನೆಯಿಲ್ಲದಿದ್ದರೂ ತಿರುಮಲೆಯ ಪರ್ವತದ ಆಲಯದಲ್ಲಿ ಬುಕ್ಕರಾಯಸಂಧಿ ಎಂಬ ಹೆಸರಿನಲ್ಲಿ ನೈವೇದ್ಯವನ್ನು ಸಮರ್ಪಿಸಬೇಕೆಂದು ಬುಕ್ಕ-1 ಸಾಮ್ರಾಟನು ಏರ್ಪಾಡು ಮಾಡಿದ ವಿಷಯವಿದೆ. ಹಿಂದೆಯೇ

ಹೇಳಿರುವಂತೆ ಕ್ರಿ.ಶ. 1390 ರ ವರೆಗೆ ವಿಜಯನಗರ ಸಾಮ್ರಾಜ್ಯದ ದಕ್ಷಿಣ ಇಂಡಿಯಾದಲ್ಲಿನ ಅಧಿಕಾರ, ಪ್ರಭುತ್ವಗಳು ಆಲಯದ ಹಂತದವರೆಗೆ ಹರಿದು ಬಂದಿರಲಿಲ್ಲವೆಂದು ಕಾಣುತ್ತದೆ. ಹೀಗಾಗಿ ಕ್ರಿ.ಶ. 1336 ರಲ್ಲಿಯೇ ಸ್ಥಾಪನೆಯಾಗಿದ್ದರೂ 1374ರವರೆಗೆ ವಿಜಯನಗರ ಸಾಮ್ರಾಜ್ಯದ ನೇರ ಆಡಳಿತದ ಪ್ರಭಾವಲಯದಲ್ಲಿ ಆಲಯವು ಬರಲಿಲ್ಲವೆಂದು ಊಹಿಸುವುದು ಸೂಕ್ತವಾಗುತ್ತದೆ ಇವೆಲ್ಲದರೊಂದಿಗೆ 1371 ರಲ್ಲಿಯೇ ಶ್ರೀರಂಗನಾಥನನ್ನು ಆಲಯದಿಂದ ಹೊರ ಸಾಗಿಸಿ ಪುನಃ ಶ್ರೀರಂಗಕ್ಕೆ ಸೇರಿಸಿದ್ದು. ಇದರಿಂದಾಗಿ ಸಾಮ್ರಾಜ್ಯದ ಪ್ರಭುತ್ವದ ಬಗ್ಗೆ ಪ್ರಜೆಗಳಲ್ಲಿ ನಂಬಿಕೆ ಭರವಸೆಗಳು ಈ ಹೊತ್ತಿಗೆ ಮೂಡಿಬಂದವೆಂದೂ ವಿಜಯನಗರದ ರಾಜರು ತಮ್ಮ ಒಡೆತನವನ್ನು ಸ್ಥಾಪಿಸಿ, ಅಧಿಕಾರವನ್ನು ಚಲಾಯಿಸುವ ಸಾಮಾರ್ಥ್ಯವನ್ನು ಶ್ರುತಪಡಿಸಿದ್ದರು ಎಂದೂ ತಿಳಿದುಬರುತ್ತದೆ.

ತಿ.ತಿ. 237 ರ ಶಾಸನವು ಹೇಳುವ ಮಂಗಿದೇವ ಮಹಾರಾಯನು ಈಗಾಗಲೇ ಪ್ರಸ್ತಾಪಿಸಿರುವಂತೆ ಮಧುರೆಯನ್ನು ಸುಲ್ತಾನರಿಂದ ಮುಕ್ತಗೊಳಿಸುವಲ್ಲಿ ವೀರ ಕಂಪಣನಿಗೆ ಪ್ರಧಾನವಾದ ನೆರವು ನೀಡಿದ ಸಾಳುವ ಸಾಮಂತ ಮಂಗಿದೇವನಾಗಿರಬೇಕು. ತಿ,ತಿ, 496 ಶಾಸನವು ಪಡಿಕಾವಲಿಗೋಪುರದ ಮೇಲಿರುವ ಎರಡು ಸಾಲಿನ ಮುಕ್ಕಾಗಿರುವ ಶಾಸನ. ಶಂಭುಕುಲ ಚಕ್ರವರ್ತಿ ಮಲ್ಲಿನಾಥ ಶಂಭುವರಾಯ ಪೆರುಮಾಳರ ಬಗ್ಗೆ ಹೇಳುತ್ತದೆ. ಇದು ಕುತೂಹಲಕಾರಿಯಾಗಲು ಕಾರಣ ಶಂಬುವರಾಯರು ಪಾಲಾರ್ ನದೀ ಬಯಲಿನ ತಿರುನಲ್ಲಾರು, ವಿಂಜಿಪುರಗಳ ರಾಜಧಾನಿಗಳಾಗಿದ್ದ ಚೋಳರೊಂದಿಗೆ ಸಂಬಂಧ ಹೊಂದಿದ್ದರು. ಕುಮಾರ ಕಂಪಣನಿಂದ ಸೋಲಿಸಲ್ಪಟ್ಟ ಇವರು ವಿಜಯನಗರದ ಅಂಕೆಗೆ ಬರುವಂತೆ ಆಯಿತು.

103 ತಿ.ತಿ. ಶಾಸನವು ವರದರಾಜಸ್ವಾಮಿ ಆಲಯದಲ್ಲಿನದಾಗಿದ್ದು ಈ ಹಿಂದೆಯೇ ಹೇಳಿರುವಂತೆ ವಿಜಯನಗರದರಸ ಹರಿಹರರಾಯನ ಹೆಸರಿನಲ್ಲಿ ಮುಲ್ಲೈ ತಿರುವೆಂಕಟ ಜೀಯರ್ ಹಾಕಿಸಿದುದಾಗಿದೆ.

ಬಂಗಾರದ ಬಾಗಿಲ ಬಳಿಯ ತಿ.ತಿ. 108 ನೇ ಶಾಸನವು ಪ್ರಥಮ ಬಾರಿಗೆ ಶ್ರೀಮನ್ ಮಹಾರಾಜ ರಾಜಪ್ರತಾಪ ಶ್ರೀ ವೀರ ಪ್ರತಾಪ ದೇವರಾಯ ಮಹಾರಾಯನ ಹೆಸರನ್ನು ಹೇಳುತ್ತ ಶಕವರ್ಷ 1351 (ಕ್ರಿ.ಶ.1429) ರಲ್ಲಿ ಆತ ಆಲಯಕ್ಕೆ ಕೊಟ್ಟ ದಾನವನ್ನು ತಿಳಿಸುತ್ತದೆ. ಈ ಮೊದಲೇ ಆಲಯಕ್ಕೆ ನೀಡಲಾಗಿದ್ದ ಹಲವು ಸ್ಥಳಗಳೊಂದಿಗೆ ಹಲವು ಗ್ರಾಮಗಳ ಜಮೀನುಗಳನ್ನು ಆಲಯಕ್ಕೆ ನೀಡಿದಂತೆ ತಿಳಿಸುತ್ತದೆ. ಇದರಿಂದಾಗಿ ಉಂಟಾದ ಉತ್ಪನ್ನದಲ್ಲಿ ರಾಜನ ಹೆಸರಿನಲ್ಲಿ ಕೆಲವು ಉತ್ಸವಗಳನ್ನೂ, ನೈವೇದ್ಯಗಳನ್ನ ನಡೆಸಲು ಹೇಳಿದಂತೆ ತೋರುತ್ತದೆ. ಈ ದಾಖಲೆಯ ಒಡೆದು ಹೋಗಿರುವುದರಿಂದ ಯಾವುದೇ ರೀತಿಯ ತಾತ್ಪರ್ಯವನ್ನೂ ಹೊರಪಡೆಯಲಾಗದು. ಚಂದ್ರಗಿರಿಯ ಕೋಶಾಗಾರಕ್ಕೆ ತೆರಿಗೆಗಳನ್ನು ಒಪ್ಪಿಸುತ್ತಿದ್ದ ಹಲವಾರು ಹಳ್ಳಿಗಳ ಹೆಸರನ್ನು ಹೇಳಿದ್ದು ಈ ಆದಾಯವನ್ನೇ ಆಲಯಕ್ಕೆ ನೀಡಲಾಗಿದೆ.

ಸ್ಥೂಲವಾಗಿ ಹೇಳಬೇಕೆಂದರೆ ವಿಜಯನಗರ ಸಾಮ್ರಾಜ್ಯದ ಮೊದಲ ಶತಮಾನದ ಕಾಲದಲ್ಲಿನ ಮೊದಲ ಶಾಸನವು ಬುಕ್ಕರಾಯನದಾಗಿದ್ದು ಅದರಿಂದ ಯಾವುದೇ ಪೂರ್ಣಾರ್ಥವನ್ನೂ ಪಡೆಯಲಾಗದಂತೆ ತ್ರುಟಿತವಾಗಿದೆ ಹಾಗೂ ಅಕ್ಷರಗಳು ಕರಗಿವೆ ಆದರೆ ಬುಕ್ಕರಾಯನ ಹೆಸರಿನಲ್ಲಿ ಯಾವುದೋ ಧಾರ್ಮಿಕ ಕಾರ್ಯವನ್ನು ನಡೆಸಿರುವುದಂತೂ ಸ್ಪಷ್ಟವಾಗಿದೆ. ಕಡೆಯ ಶಾಸನವು ನಮ್ಮನ್ನು ಮಲ್ಲಿಕಾರ್ಜುನನ ಆಡಳಿತಕ್ಕೆ ಎಂದರೆ ಕ್ರಿ.ಶ. 1457 ಕ್ಕೆ ಕರೆದೊಯ್ಯುತ್ತದೆ. ಈತ ಕ್ರಿ.ಶ. 1465 ರಲ್ಲಿ ತೀರಿಕೊಂಡು, ಈತನ ಸೋದರನಾದ ವಿರೂಪಾಕ್ಷನು - ವಿಜಯನಗರದ ರಾಜನಾದನು. ಈ ಪರಿವರ್ತನೆಯಿಂದಾಗಿ ವಿಜಯನಗರದ ಇತಿಹಾಸವು ಮುಖ್ಯವಾಗಿ ತಿರುಪತಿಯ ಇತಿಹಾಸವು ಹೊಸ ತಿರುವನ್ನು ಪಡೆಯುವಂತೆ ಆಯಿತು.

ಮಾನ್ಯ ಮನ್ನಣೆ ಮಾಗಾಣಿ ನೀಡಿದ ರಾಜರುಗಳ ಸಾಲಿನಲ್ಲಿ ಅಸ್ಪಷ್ಟವಾಗಿಯೇ ಆದರೂ - ಬುಕ್ಕರಾಯ, ಕುಮಾರ ಕಂಪಣ, ಎರಡನೇ ದೇವರಾಯ, ಮಲ್ಲಿಕಾರ್ಜುನರು ಉಲ್ಲೇಖಿತರಾಗಿರುವುದನ್ನು ಕಂಡಿದ್ದೇವೆ. ಇವುಗಳಲ್ಲಿನ ಕಾಲಸೂಚನೆಯು ಮೇಲೆ ತಿಳಿಸಿದಂತೆ ಅಸ್ಪಷ್ಟವಾಗಿದೆ. ಇಲ್ಲಿನ ಶಾಸನಗಳಲ್ಲಿ ಈ ಹೆಸರುಗಳು ಕಂಡುಬರಲು ಕಾರಣವೆಂದರೆ ಆಲಯಕ್ಕೆ ನೀಡಿದ ಸಮರ್ಪಣೆಗಳು

ಈ ರಾಜರುಗಳ ಹೆಸರಿನಲ್ಲಿಯೇ ನೀಡಿದವುಗಳಾಗಿದ್ದವು. ಈ ಹಿಂದಿನ ಕಾಲದಲ್ಲಿದ್ದಂತೆಯೇ ಆಲಯದ ಆಡಳಿತವು ಸ್ವಯಂ ಪ್ರತಿಪತ್ತಿಯದಾಗಿ ಸ್ಥಳೀಯ ಶ್ರೀವೈಷ್ಣವರ ಕೈಯಲ್ಲಿದ್ದಿತು. ಆಲಯದ ಆಡಳಿತ ಸಂಸ್ಥೆಯ ವಿವರಣೆಗಳಿಂದ ಇದು ಸ್ಪಷ್ಟವಾಗಿ, ಈ ಹಿಂದೆ ಭಗವದ್ರಾಮಾನುಜರು ಪ್ರವೇಶಗೊಳಿಸಿದ ಸುಧಾರಣೆಗಳಿಗೆ ಅನುಗುಣವಾಗಿಯೇ ಇದ್ದಿತು. ಅವರು ಪ್ರವೇಶಗೊಳಿ ಸಿದ ಹಲವಾರು ಉತ್ಸವಗಳ ಹೆಸರುಗಳನ್ನು ಹೇಳುವ ದಾಖಲೆಗಳಿವೆ. ಮೇಲೆದ್ದು ಕಾಣುವ ಒಂದು ಸುಧಾರಣೆ ಯೆಂದರೆ ರಾಮಾನುಜರು ಪ್ರವೇಶಗೊಳಿಸಿದ ನಾಲಾಯಿರ ದಿವ್ಯಪ್ರಬಂಧ ಪಠನೆ ಉತ್ಸವಕಾರ್ಯಗಳಲ್ಲಿ ಮುಂದುವರೆದು ಪ್ರತ್ಯೇಕ ದಿನಗಳಲ್ಲಿ ತಿರುಪ್ಪಾವೈ ಯಂತಹವುಗಳನ್ನು ಹಾಡಲು ಅನುಕೂಲ ಕಲ್ಪಿಸಲಾಯಿತು. ಇಲ್ಲಿಯವರೆಗೆ ದೇವರ ಸನ್ನಿಧಿಯಲ್ಲಿ ಅಥವಾ ಹೊರಗೆ ಮೆರವಣಿಗೆಯಲ್ಲಿ ಉತ್ಸವರನ್ನು ಕರೆದೊಯ್ದಾಗ ವೇದ ಪ್ರವಚನ ಪದ್ಧತಿ - ಶಾಸನ ಹೇಳುವಂತೆ- "ತಿರುವೆಂಗಡ ಮುಡೈಯಾನ ಮುತ್ತೆಲ್ಲ ವೈಭವಗಳನ್ನು ಹೊಂದಿದ್ದರೂ, ವೇದ ಪಠನದ ಒಂದು ಅಂಶ ಮಾತ್ರ ಕೊರೆಯಾಗಿದ್ದಿತು". ಈ ಹೊತ್ತಿನಲ್ಲಿ ವೇದಪಾರಾಯಣ ಮಾಡಲು ಏರ್ಪಾಡು ಮಾಡಿರುವುದನ್ನು ನೋಡಬಹುದು. ಸ್ಥಳೀಯ ಶ್ರೀವೈಷ್ಣವ ಪ್ರಮುಖರು ಈ ಕೊರತೆಯನ್ನು ದೇವಣ್ಣ ಉಡೆಯರ ಗಮನಕ್ಕೆ ತಂದಾಗ, ಆತ ದೇವರಾಯ ಮಹಾರಾಯ - ಎರಡನೇ ದೇವರಾಯನ - ಹೆಸರಿನಲ್ಲಿ ಕಲಿಕನ್ರಿದಾಸರ ಸೂಚನೆಯಂತೆ ಸಿದ್ಧಕುಟ್ಟೆಯ ವಾರ್ಷಿಕ ಆದಾಯದ ಅರ್ಧಭಾಗವನ್ನು ಈ ಕಾರ್ಯದಲ್ಲಿ ವಿನಿಯೋಗಿಸುವಂತೆ ಏರ್ಪಾಡು ಮಾಡಿದ್ದು ದಾಖಲಾಗಿದೆ. ಆಲಯಕ್ಕೆ ಹಲವಾರು ದಾನ ದತ್ತಿಗಳು ನೀಡಲ್ಪಟ್ಟವು. ಅವುಗಳಲ್ಲಿ ಹಲವು ರಾಜಪುರುಷರು ಸಮರ್ಪಿಸಿದವುಗಳಾದರೆ ಮತ್ತೆ ಹಲವು ಆಲಯದ ಸುತ್ತ ಮುತ್ತಲಿನ ಮಠಗಳ ಅಧಿಪತಿಗಳು, ನಂದನ ವನಗಳ ಮತ್ತಿತರ ಆಲಯ ಸಂಸ್ಥೆಗಳ ಆಡಳಿತದ ಯಾಜಮಾನ್ಯದ್ಯೈಸಿಗಳು, ಬ್ರಹ್ಮಚಾರಿ ಗಳು ನೀಡಿದ ಕಾಣಿಕೆಗಳಾಗಿದ್ದುವು. ಇವುಗಳಲ್ಲಿನ ಲಕ್ಷಣಗಳೆಂದರೆ ದಾನಗಳಲ್ಲಿ ಕಿರಿಯ ಪ್ರಮಾಣದವುಗಳು ಸಾಧಾರಣ ವಾದವುಗಳಾದರೆ ದೊಡ್ಡವುಗಳು ಈಗಾಗಲೇ ಕೃಷಿ ನಡೆಯುತ್ತಿದ್ದ ಭೂಮಿಯ ವ್ಯವಸಾಯಕ್ಕೆ ಯೋಗ್ಯವಾದ ರೀತಿಯ ನೀರಾವರೀ ವ್ಯವಸ್ಥೆಯಲ್ಲಿ ತೊಡಗಿಸುವ ಬಂಡವಲವನ್ನು ಒದಗಿಸುತ್ತಿದ್ದು ಆದಾಯವನ್ನು ಹೆಚ್ಚಿಸಿ, ಪೂಜಾ ಉತ್ಸವಗಳಲ್ಲಿ ಬಳಕೆಗೆ ಬರುವಂತೆ ಮಾಡುತ್ತಿದ್ದವು. ಇದರಿಂದ ಎರಡು ರೀತಿಯ ಉದ್ದೇಶ ಸ್ಪಷ್ಟವಾಗುತ್ತದೆ. ಧಾರ್ಮಿಕವಾಗಿ ಪುಣ್ಯಕಾರ್ಯ ಮಾಡುವುದು ಒಂದಾದರೆ ಭೂಮಿಯಲ್ಲಿನ ವ್ಯವಸಾಯವನ್ನು ಹೆಚ್ಚಿಸಿ ಹೆಚ್ಚಿನ ಭೂಮಿಯನ್ನು ಕೃಷಿಯೋಗ್ಯವನ್ನಾಗಿ ಮಾಡಿ ಸಸ್ಯ ಸಮೃದ್ಧಿಯನ್ನುಂಟಾಗಿಸುವುದು. ಹೀಗಾಗಿ ದಾನಿಯ ಆಧ್ಯಾತ್ಮಿಕ ಅಭಿವೃದ್ಧಿಗೆಂದು ನೀಡಿದ ದಾನವು ಆಲಯಕ್ಕೆ, ಆದನ್ನಾಧರಿಸಿ ಜೀವಿಸುತ್ತಿದ್ದವರಿಗೆ ಮಾತ್ರವೇ ಅಲ್ಲದೆ ಸಮಾಜದ ಅಭಿವೃದ್ಧಿಯಲ್ಲಿಯೂ ಕೆಲಸಕ್ಕೆ ಬಂದಿತೆನ್ನಬೇಕು. ನೇರ ಸರಕಾರದ ನಿಯಂತ್ರಣ ಅಥವಾ ದಾನಗಳನ್ನು ಕಾಣುವುದಿಲ್ಲವಾಗಿ, ರಾಜ, ರಾಜಪುರುಷ, ಸ್ತ್ರೀಯರು ದಾನ ಮಾಡಿದಾಗಲೂ ತಮ್ಮ ಮೇಲ್ಮೆಯ ಕೋರಿಕೆಯಿಂದ ಮಾಡಿದ್ದರಿಂದ ಸ್ವಂತ ಸಂಪತ್ತಿನಿಂದಲೇ ದಾನ ಮಾಡುತ್ತಿದ್ದುದನ್ನು ಕಾಣುತ್ತೇವೆ. ಹೀಗಾಗಿ ಸರ್ಕಾರಕ್ಕೆ ಸಂಬಂಧಿಸಿದ್ದು ಯಾವುದೂ ಇಲ್ಲವೆಂದೇ ಆಗಿ, ಆಲಯದ ಎಲ್ಲ ಆಸ್ತಿಗಳೂ, ಕೊನೆಪಕ್ಷ ಈ ಆಲಯಕ್ಕೆ ಸಂಬಂಧಿಸಿದ ಆಸ್ತಿಗಳೆಲ್ಲ ಖಾಸಗಿಯವರಿಂದ ಆಲಯದ ಅಭಿವೃದ್ಧಿಗೆಂದು ನೀಡಿದ್ದರಿಂದ ಬಂದದ್ದೇ ಆದಾಯ

## 3. ಸಂಗಮ ವಂಶ

ಸಾಳುವ ನರಸಿಂಹದೇವ ಮಹಾರಾಯನ ಕಾಲದಿಂದ ಆಲಯದ ಇತಿಹಾಸದಲ್ಲಿ ಹೊಸದೊಂದು ಅಧ್ಯಾಯ ಆರಂಭ ವಾಯಿತು. ಕ್ರಿ.ಶ. 1359 ರಲ್ಲಿ ಶ್ರೀ ವೆಂಕಟೇಶ್ವರಸ್ವಾಮಿಯ ಆಲಯದ ವಿಮಾನಕ್ಕೆ ಚಿನ್ನದ ಮುಲಾಮು ಮಾಡಿಸಿದ ಸಾಳುವ ಮಂಗಿದೇವ ಮಹಾರಾಯನ ಮರಿಮಗನೀತ. ಸಾಳುವ ಎಂದರೆ ಗಿಡುಗ ಎಂದರ್ಥ. (ಬೇಟೆಯ ಪಕ್ಷಿ) ವಿಜಯನಗರ ಸಾಮ್ರಾಜ್ಯಕ್ಕೆ ಸಾಳುವ ನರಸಿಂಹನು ಪೂರ್ಣವಾದ ಬೆಂಬಲವನ್ನು, ವಿಶ್ವಾಸವನ್ನು ನೀಡಿದ. ತನ್ನ ರಾಜಕೀಯ ದೂರದರ್ಶಿತ್ವ ಹಾಗೂ ಮುತ್ಸದ್ದಿತನದಿಂದ ಅಸಂಖ್ಯ ಸಾಮಂತರ ಒಳಜಗಳ, ಕಿರಿಕಿರಿಗಳಿಂದ ಮೇಲೇರಿನಿಂತ. ಆಲಯದ ವಿಷಯದಲ್ಲಿ ಸಹಕಾರವನ್ನು ನೀಡಲೂ, ಸಹಾಯವನ್ನು ಮಾಡಲೂ ತಕ್ಕ ಹಿರಿಮೆಗರಿಮೆಗಳನ್ನು ಈತ ಕಂದಾಡೈ ರಾಮಾನುಜ ಅಯ್ಯಂಗಾರ್ಯನ ಸಹವಾಸ ಪಡೆದಿದ್ದ ಆಲ

ಯದ ಶಾಸನಗಳು ಈ ಕಂದಾಡೈ ರಾಮಾನುಜ ಅಯ್ಯಂಗಾರ್, ರಾಜನಾದ ಸಾಳುವ ನರಸಿಂಹನ ಆಶ್ರಯದಲ್ಲಿ ಅನೇಕ ದೂರದೃಷ್ಟಿಯ ಸುಧಾರಣೆಗಳನ್ನೂ, ಆಡಳಿತ ಪರಿವರ್ತನೆಗಳನ್ನೂ ಆಲಯದ ಪೂಜೆ ಉತ್ಸವಾದಿಗಳಲ್ಲಿ ಆಚರಣೆಗೆ ತಂದಂತೆ ವಿವರಿಸುತ್ತವೆ.

ಸಂಗಮ ವಂಶ ವಿಜಯನಗರ ಸಾಮ್ರಾಜ್ಯದ ಪ್ರಥಮ ಆಡಳಿತ ವಂಶವಾಗಿದ್ದು, ಅದರ ಮೊದಲನೆಯ ರಾಜ ಬುಕ್ಕರಾಯನು ಯಾವುದೇ ಶಾಸನದಲ್ಲಿಯೂ ನೇರವಾಗಿ ಪ್ರಸ್ತಾಪಕ್ಕೆ ಬರದಿದ್ದರೂ, ಆತನ ಆಡಳಿತಕಾಲಕ್ಕೆ ಸೇರಿದ ಮೂರು ಶಾಸನಗಳು - 487, 237, 238, ತಿ.ತಿ. - ಇವೆ. ಮೊದಲೇ ಹೇಳಿದಂತೆ ಬುಕ್ಕರಾಯ ಸಂಧಿ ಎಂದು ಹೆಸರಾದ ಸಂಧಿಕಾಲ ನೈವೇದ್ಯವನ್ನು ಪ್ರತಿದಿನ ಎರಡು ಬಾರಿ ಸಮರ್ಪಿಸಲು ಆಲಯಕ್ಕೆ ಒಂದು ಗ್ರಾಮದಾನ ಮಾಡಿದ ಬಗ್ಗೆ - 487 ನೇ ಶಾಸನ ಹೇಳುತ್ತದೆ. ಇತರ ಎರಡೂ ಶಾಸನಗಳೂ ಇಂತಹವೇ.

ಬೇರೆ ಬೇರೆ ಕಡೆಗಳಲ್ಲಿ ದೊರೆತಿರುವ ಶಾಸನಗಳಲ್ಲಿ ಎರಡನೇ ಹರಿಹರರಾಯನು ಚಿದಂಬರ, (ಕನಕಸಭ), ಶ್ರೀಕಾಳಹಸ್ತಿ, ವೆಂಕಟಾದ್ರಿ (ತಿರುಮಲೆ), ಕಂಚಿ, ಶ್ರೀಶೈಲ. ಸೋಮಶಿಲ, ಅಹೋಬಿಲ, ಶ್ರೀರಂಗ, ಕುಂಭಕೋಣಗಳ ಆಲಯಗಳಿಗೆ ದಾನಗಳನ್ನು ನೀಡಿದ ಉಲ್ಲೇಖವಿದೆಯಾದರೂ ತಿರುಮಲೆಯ ಶಾಸನಗಳಲ್ಲಿ ಒಂದರಲ್ಲಿ ಮಾತ್ರವೇ (103 ತಿ.ತಿ.) ಈತನ ಉಲ್ಲೇಖ ಕಂಡುಬರುತ್ತದೆ. ಮಾಸಿ ತಿಂಗಳಿನಲ್ಲಿ ಶ್ರೀ ವೆಂಕಟೇಶ್ವರ ಸ್ವಾಮಿಗೆ ತನ್ನ ಹೆಸರಿನಲ್ಲಿ ಒಂದು ಉತ್ಸವವನ್ನು ಏರ್ಪಡಿಸಬೇಕೆಂದೂ, ಇದಕ್ಕೆ ವೆಚ್ಚಿಸಲು ತಕ್ಕ 100 ಪಣಂಗಳನ್ನು ಪ್ರತಿ ವರ್ಷವೂ ಪೂಂಗೋಡು ಗ್ರಾಮದ ಆದಾಯದಲ್ಲಿ ಇಲ್ಲಿನ ಶ್ರೀವೈಷ್ಣವ ಮಠದ ಮುಖ್ಯನು ನೀಡಬೇಕೆಂದೂ ಶಾಸನ ಹೇಳಿದೆ. ಪ್ರಾಯಶಃ ಮಠಕ್ಕೆ ಗ್ರಾಮವನ್ನು ಒಪ್ಪಿಸಿರಬೇಕು. ಧಾರ್ಮಿಕ ಪೀಠದ ಮುಖ್ಯರ ಈ ಮಧ್ಯವರ್ತಿತ್ವವು ತಿರುಕ್ಕಲಿಕನ್ರಿದಾಸರು ಎರಡನೇ ದೇವರಾಯನ ಕಾಲದಲ್ಲಿ ಪ್ರವೇಶಗೊಳಿಸಿದ ವೇದಪಾರಾಯಣ ಪದ್ಧತಿಯ ಪ್ರಭಾವ, ವಿಜಯನಗರದರಸರ ಪ್ರಥಮ ವಂಶದವರಲ್ಲಿ ಹರಡುತ್ತ ಗೋಪುರಗಳ ನಿರ್ಮಾಣ, ಅನ್ನಸತ್ರ ಗಳ ಸ್ಥಾಪನೆ, ನಂದನವನಗಳ ನಿರ್ಮಾಣ, ಉತ್ಸವ ನಿವೇದನ, ಪೂಜೆಗಳಲ್ಲಿ ಅರಸರು ಭಾಗವಹಿಸುತ್ತ ಕಂದಾಡೈ ರಾಮಾನುಜ ಅಯ್ಯಂಗಾರ್ಯನ ಮೂಲಕ ಸಾಳುವ ನರಸಿಂಹನು ಗ್ರಾಮದಾನಗಳನ್ನು ಕೈಗೊಳ್ಳುವ ವರೆಗೆ ವಿಸ್ತರಿಸಿದ್ದನ್ನು ಸೂಚಿಸುವುದು.

ಮತ್ತೊಂದು ಶಾಸನದಲ್ಲಿ ಈ ರಾಜನ ಇಬ್ಬರು ರಾಜ ಪ್ರತಿನಿಧಿಗಳ ಉಲ್ಲೇಖವಿದೆ.

ಎರಡನೇ ದೇವರಾಯನು ಅರೆಡಜನ್ ಶಾಸನಗಳಲ್ಲಿ ಪ್ರತಿನಿಧಿತನಾಗಿದ್ದಾನೆ. ಇವುಗಳ ಉಲ್ಲೇಖವನ್ನು ಈ ಹಿಂದೆಯೇ ಮಾಡಲಾಗಿದೆ. ಶಕವರ್ಷ 1351 ರ ಸೌಮ್ಯನಾಮ ಸಂವತ್ಸರದಲ್ಲಿ (ಕ್ರಿ.ಶ. 1429 - 12 - 5) ಹಲವು ನಿತ್ಯ ನೈವೇದ್ಯಗಳಿಗಾಗಿ 1200 ಪೊನ್ ಧನವನ್ನೂ ಮೂರು ಗ್ರಾಮಗಳನ್ನೂ ದಾನ ಮಾಡಿದರೆ, ಶಕ 1355 ರ ಪ್ರಮಾದೀಚನಾಮ ಸಂವತ್ಸರದಲ್ಲಿ (ಕ್ರಿ.ಶ. 1433 -11- 22) ಉಡೈಯಾರ್ ದೇವಣ್ಣ ಉಡೆಯರ ಶಿಫಾರಸಿನಂತೆ ರಾಜಭಂಡಾರಕ್ಕೆ ಸೇರಿದ ಸಿದ್ಧಕುಟ್ಟೆ ಅಥವಾ ಶ್ರೀನಿವಾಸಪುರ ಅರ್ಧ ಗ್ರಾಮಾದಾಯವನ್ನು - ಪ್ರಾಯಶಃ ವಾರ್ಷಿಕ 200 ಪಣಗಳ ಆದಾಯವನ್ನು- ಆಲಯದ ಶ್ರೀ ಭಂಡಾರಕ್ಕೆ - ಒಂದು ವರ್ಷದಿಂದ ನಿಂತುಹೋಗಿದ್ದ - ವೇದಪಾರಾಯಣ ಕೈಂಕರ್ಯವನ್ನು ಮುಂದುವರಿಸಲು ಬಂದ 24 ಮಂದಿ ಬ್ರಾಹ್ಮಣರ ವೆಚ್ಚಕ್ಕಾಗಿ ನೀಡಿದನು. ಈ ಗ್ರಾಮದ ವಾರ್ಷಿಕ ಆದಾಯದ ಮಿಕ್ಕ ಅರ್ಧಭಾಗ ಈ ಮೊದಲೇ ಆಲಯಭಂಡಾರಕ್ಕೆ ಸೇರಿದ್ದಿತು. (ತಿ.ತಿ. 89 ಹಾಗೂ 149) ಈ ಗ್ರಾಮವು ವೈಕುಂಠ ವಲನಾಡುವಿನ ಉಪವಿಭಾಗವನಾದ ಕೊತ್ತಳಸ್ಥಳಕ್ಕೆ ಸೇರಿದುದಾಗಿದ್ದಿತು ಎನ್ನಲಾಗಿದೆ. ಕೋಟ್ಟಂ ಹೆಸರು ಹೇಳದಿದ್ದರೂ ಸಹ, ವೈಕುಂಠವಲನಾಡು ಮತ್ತು ತಿರುಕ್ಕುಡವೂರು ನಾಡುಗಳೆರಡೂ ತಿರುವೆಂಕಟಕೋಟ್ಟಂಗೆ ಸೇರಿದ್ದು ಇದು ಚಂದ್ರಗಿರಿ ರಾಜ್ಯದ ಒಂದು ಜಿಲ್ಲೆಯಾಗಿದ್ದಿತು.

ಈ ಶಾಸನಗಳಿಂದಾಗಿ ಈತನ ಆಡಳಿತ ಪ್ರತಿನಿಧಿಗಳಿಬ್ಬರೂ ದೇವಣ್ಣ ಒಡೆಯಾರ್ ಹಾಗೂ ಮಲ್ಲಣ್ಣ ನಮಗೆ ಪರಿಚಿತ ರಾಗಿದ್ದಾರೆ. ಇನ್ನೂ ಮೂವರು ಪ್ರಮುಖ ವ್ಯಕ್ತಿಗಳು - ಮಹಾಮಂಡಲೇಶ್ವರ ಸಾಳ್ವಪೆರಿಯ ಮಲ್ಲಯ್ಯದೇವ ಮಹಾರಾಜ, ಆಳುತ್ತಿದ್ದ

ರಾಜನ ಬಂಧುವಾದ ಸೇನಾಧಿಪತಿ ತೆಪ್ಪದ ನಾಗಯ್ಯ ನಾಯಕ ಹಾಗೂ ಪ್ರಾಯಶಃ ದೇವರಾಯನ ತಮ್ಮನಾದ ಶ್ರೀಗಿರೀಶ್ವರರುಈ ಶಾಸನಗಳಿಂದ ತಿಳಿದುಬರುತ್ತಾರೆ.

ಮಲ್ಲಿಕಾರ್ಜುನನ ಬಗ್ಗೆ ಹೇಳುವ ಒಂದೇ ಒಂದು ದಾಖಲೆ ಶಕವರ್ಷ 1371 ಅಥವಾ ಕ್ರಿ.ಶ. 1450 ರಲ್ಲಿನದು ದೊರೆಯುತ್ತದೆ. ಚಂದ್ರಗಿರಿಯಲ್ಲಿ ವಾಸವಾಗಿದ್ದ ನಿಯೋಗಿ ಬ್ರಾಹ್ಮಣರ ಪಂಗಡಕ್ಕೆ ಸೇರಿದ ರಾಜ ಮಾಲಿಕಂ ಚೆನ್ನಪ್ಪ ಒಡೆಯರ್‌ಗೆ ತಿರುಪತಿಯ ಇಬ್ಬರು ಶ್ರೀವೈಷ್ಣವರು ಒಂದು ಮನೆಯನ್ನೂ ಮತ್ತೊಂದು ಮನೆಯ ಸ್ಥಳವನ್ನೂ ಮಾರಿದ ಬಗ್ಗೆ ಈ ಶಾಸನ ತಿಳಿಸುತ್ತದೆ. ಪ್ರಾಯಶಃ ಈ ಚೆನ್ನಪ್ಪ ಒಡೆಯರು ರಾಜರಿಗೆ ಹಾಗೂ ರಾಜಪ್ರತಿನಿಧಿಗಳಿಗೆ ಉತ್ಸವ ಸಮಯಗಳಲ್ಲಿ ಹೂವಿನ ಹಾರಗಳನ್ನು ಒದಗಿಸುವ ರಾಜಸ್ಥಾನದ ಉದ್ಯೋಗಿ (ರಾಜ ಮಾಲಿಕಂ)ಯಾಗಿದ್ದಿರಬೇಕು.

ತಿರುಪತಿ ಹಾಗೂ ಚಂದ್ರಗಿರಿಗಳು ಏಳು ಮೈಲಿಯ ಅಂತರದಲ್ಲಿದ್ದರೂ (ತಿರುಪತಿಯ ನೈರುತ್ಯಕ್ಕೆ ಚಂದ್ರಗಿರಿ) ಈ ಶಾಸನ ಹೇಳುವಂತೆ ಎರಡು ಗ್ರಾಮಗಳೂ, ತಿರುವೆಂಕಟಕೋಟ್ಟಂನ ಎರಡು ಬೇರೆ ಬೇರೆ ಉಪವಿಭಾಗಗಳಲ್ಲಿ - ತಿರುಪತಿಯು ತಿರುಕ್ಕುಡುವೂರು ನಾಡಿನಲ್ಲಿಯೂ, ಚಂದ್ರಗಿರಿಯು ವೈಕುಂಠ ವಲನಾಡುವಿನಲ್ಲಿಯೂ ಇದ್ದವು.

ಮಲ್ಲಿಕಾರ್ಜುನನ ಕಾಲದಿಂದ ವಿಜಯನಗರದ ಆರಸರ ಪ್ರಥಮ ವಂಶ ಬಲಹೀನವಾಗುತ್ತ ಬಂದು ಬೇರೆ ಬೇರೆ ಸಾಳುವ ಪ್ರಮುಖರು ಪ್ರಭುತ್ವವನ್ನು ವಶಪಡಿಸಿಕೊಂಡರು.

ಸಾಳುವ ನರಸಿಂಹನನ್ನೂ ಸೇರಿಸಿಕೊಂಡು - ಈ ಕಾಲದಲ್ಲಿ ಮೂವರು ಪ್ರಮುಖ ಸಾಳುವರು ಕಂಡುಬರುತ್ತಾರೆ. ಗಂಗಯ ದೇವ ಮಹಾರಾಜನ ಮಗನಾದ ಸಾಳುವ ಸಿರು - ಮಲ್ಲಯ್ಯದೇವನು ಶಕ 1372 ರಲ್ಲಿ ಆಲಯದ ಹಲವು ಪೂಜೆಗಳಿಗಾಗಿ ಹಣವನ್ನು ನೀಡಿದನು (ತಿ.ತಿ. 23). ಎರ್ರಕಂಪಯದೇವ ಮಹಾರಾಜನ ಮಗನೂ ಪೆರಿಯ ಮಲ್ಲಯ್ಯದೇವನ ಸಹೋದರನಾದವನೂಆದ ಸಾಳುವ ಮಲ್ಲಯ್ಯದೇವ ಮಹಾರಾಜನು (ಈತ ಎರಡನೇ ದೇವರಾಯನ ಕಾಲದಿಂದ ಶಾಸನಗಳಲ್ಲಿ ಕಂಡುಬಂದಿರುವನು) ಶಕ ವರ್ಷ 1375 ರಲ್ಲಿ ಚಂದ್ರಗಿರಿ ರಾಜ್ಯದ ಎಳಂಬಕ್ಕಂ ಗ್ರಾಮವನ್ನು ಅದರ ಸಮಸ್ತ ಉತ್ಪನ್ನ, ತೆರಿಗೆಗಳ ಸಮೇತ ದಾನ ನೀಡಿದ್ದೇ ಅಲ್ಲದೆ, ದೇವದಾನದ ಗ್ರಾಮದಲ್ಲಿನ ಎರಡು ನೀರಾವರೀ ಕಾಲುವೆಗಳನ್ನೂ ತೋಡಿಸಿದನು. (ತಿ.ತಿ. 157) (ಸಾಳುವ ಮಲ್ಲಯ್ಯ ದೇವನ ಈ ದಾನವು ಆ ಕಾಲಕ್ಕೆ ಆತನು ಚಂದ್ರಗಿರಿ ರಾಜ್ಯದ ರಾಜ್ಯಪಾಲನಾಗಿ ಹೆಸರಿಗೆ ಸಾಮ್ರಾಟನ ಕೈಕೆಳಗಿದ್ದರೂ, ಹೆಚ್ಚು ಕಡಿಮೆ ಸ್ವತಂತ್ರನಾಗಿದ್ದನೆಂದು ತಿಳಿಸುವುದು.) ಇನ್ನೊಬ್ಬ ಸಾಳುವ ಪ್ರಮುಖನೆಂದರೆ ಈ ಮಲ್ಲಯ್ಯದೇವ ಮಹಾರಾಯನ ಮಗನಾದ ಸಾಳುವ ರಾಮಚಂದ್ರ ರಾಜ. ಈತನು ಶಕ 1385 ರಲ್ಲಿ (ತಿ.ತಿ. 154) ಹಲವು ದಾನಗಳನ್ನು ನೀಡಿದ್ದಾನೆ. ನಂತರದ ಆಡಳಿತದಲ್ಲಿ ಈ ಮಲ್ಲಯ್ಯದೇವನ ಮತ್ತಿಬ್ಬರು ಮಕ್ಕಳು ಕಂಡುಬರುತ್ತಾರೆ. ಒಬ್ಬ ಸಾಳುವ ಗೋಪಯ್ಯನು ಶಕ 1391 ರಲ್ಲಿ (ತಿ.ತಿ. 155) ಕಂಡುಬಂದರೆ ಸಾಳುವ ತಿಮ್ಮರಾಯನು ಶಕ 1403 ರಲ್ಲಿ (ತಿ.ತಿ. 196) ಕಂಡುಬರುತ್ತಾನೆ. ಇವರಲ್ಲಿನ ಕಿರಿಯನು ಶ್ರೀ ವೆಂಕಟೇಶ್ವರಸ್ವಾಮಿ ಹಾಗೂ ಶ್ರೀವರಾಹಸ್ವಾಮಿಯವರಿಗೆ ನಿತ್ಯ ನಿವೇದನೆಗಾಗಿ 7800 ಪಣಗಳನ್ನು ನೀಡಿ ತನ್ನ ಔದಾರ್ಯವನ್ನು ಪ್ರಕಟಿಸಿದ್ದಾನೆ. ಈ ಆರುಮಂದಿ ಸಾಳುವರು ಒಂದೇ ಕುಟುಂಬದವರಾಗಿದ್ದು ಒಬ್ಬ ತಂದೆ - ಇಬ್ಬರು ಮಕ್ಕಳು, ಮೂವರು ಮೊಮ್ಮಕ್ಕಳ ಗುಂಪಾಗಿದ್ದಿತು. ಎಲ್ಲರೂ ಮಹಾಮಂಡಲೇಶ್ವರ ಮಹಾರಾಜರೇ ಆಗಿದ್ದರು. ಈ ಕುಟುಂಬ ಸಂಬಂಧ, ಅವರಲ್ಲಿ - ಹಿರಿಯ ಶಕ್ತಿಯಾಗಿ ವ್ಯಕ್ತಿಗತವಾಗಿ ಕೆಲಸ ಮಾಡಿದರೂ, ಸಾಮ್ರಾಜ್ಯಕ್ಕೆ ಗಂಡಾಂತರಕಾರಿಯಾಗಿದ್ದಿತು.

ತಿರುಮಲೆಯ ಶಾಸನಗಳಲ್ಲಿ ಕಂಡುಬರುವ ಸಾಳುವ ವಂಶದ ಮತ್ತೊಂದು ಶಾಖೆಯೆಂದರೆ ಗುಂಡಯ ದೇವಮಹಾರಾಜ ಅಥವಾ ಸಾಳುವ ಗುಂಡರಾಜ ಒಡೆಯರ ಹಿರಿತನದಲ್ಲಿನ ಅವನ ಇಬ್ಬರು ಮಕ್ಕಳು ಸಾಳುವ ನರಸಿಂಹ ಹಾಗೂ ಸಾಳುವ ತಿಮ್ಮರಾಜ ಒಡೆಯರದು.(ಶಕ 1385 ರ ತಿ.ತಿ. 69 ಶಾಸನ) ಸಾಳುವ ನರಸಿಂಹನ ಮೊದಲ ದಾಯಾದಿ ಸಾಳುವ ಪರ್ವತರಾಜ(ತಿ.ತಿ.55)

ಈತ 3ನೇ ಗುಂಡರಾಜನ ಸೋದರನಾದ ಎರಡನೇ ಗೌತನ ನಾಲ್ಕು ಮಂದಿ ಮಕ್ಕಳಲ್ಲಿ ಒಬ್ಬನಾದ ಸಾಳುವರಾಜನ ಮಗ. ಕೊನೆಯದಾಗಿ ಮೂರನೇ ಗುಂಡರಾಜನ ಮೂವರು ಸೋದರರಲ್ಲಿ ಒಬ್ಬನೂ, ಎರಡನೇ ದೇವರಾಯನ ಭಾವನೂ ಆದ ತಿಪ್ಪನ ವಂಶದವನಾದ ನರಸಿಂಹನ ಎರಡನೇ ದಾಯಾದಿ ತ್ರಿಪುರಾಂತಕ ರಾಜನು ದಕ್ಷಿಣದಲ್ಲಿ ರಾಜ್ಯ ಭಾರ ಮಾಡುತ್ತಿದ್ದಿರಬೇಕು.

## 4. ಸಾಳುವರ ಕಾಲದಲ್ಲಿ ಆಲಯ

ಶಕವರ್ಷದ 14 ನೇ ಶತಮಾನದ ಕೊನೆಯಲ್ಲಿ ವಿಜಯನಗರ ಸಾಮ್ರಾಜ್ಯವು ಸೇನಾನಿಗಳು, ರಾಜ ಪ್ರಮುಖರು, ರಾಜ್ಯಪಾಲರುಗಳು, ರಾಜಪ್ರತಿನಿಧಿಗಳಿಂದ ಕೂಡಿದ್ದು ಕುಲ, ಗೋತ್ರಗಳ ಸಮರಾಂಗಣವಾಗಿ, ಜೀರ್ಣವಾಗುವ, ಕ್ಷೀಣವಾಗುವ ದೆಸೆಗೆ ಮುಟ್ಟಿದ್ದಿತು. ಬಲಶಾಲಿಗಳಾಗಿದ್ದವರು ಬಲಹೀನರನ್ನು ಮೂಲೆಗೊತ್ತಿ, ಐಶ್ವರ್ಯ, ಅಧಿಕಾರ, ಮರ್ಯಾದೆ, ಗೌರವಗಳನ್ನು ಸಂಪಾದಿಸಲು ಸಾಕಷ್ಟು ಅವಕಾಶವಾಯಿತು. ವಿಜಯ ನಗರದ ಮೊದಲವಂಶದ ಕಡೆಯರಾಜ ವಿರೂಪಾಕ್ಷನ ಕಾಲಕ್ಕೆ ಈ ಸ್ಥಿತಿಯನ್ನು ಸಾಮ್ರಾಜ್ಯ ಮುಟ್ಟಿರಬೇಕು.

ಈ ಕಾಲದ ರಾಜಕೀಯ ಚಿತ್ರವನ್ನು ಕಟ್ಟಿಕೊಡಲು ಸಾಧ್ಯವಿದೆ. ಆದರೂ ಘಟನಾವಳಿಗಳ ಕಾಲಕ್ರಮ ದಲ್ಲಿ ಯಾವುದೇ ಒಂದು ಖಚಿತವಾದ ನಿರ್ಧಾರಕ್ಕೂ ಬರುವಂತಿಲ್ಲ. ಶಕ ವರ್ಷದ 15 ನೇ ಶತಮಾನದ ಮಧ್ಯದ ಹೊತ್ತಿಗೆ ವಿರೋಧಿಗಳನ್ನು ಬದಿಗೊತ್ತಿ ಸಾಮ್ರಾಜ್ಯದ ಆಡಳಿತ ಚುಕ್ಕಾಣಿಯನ್ನು ಹಿಡಿದು ಸಾಳುವ ನರಸಿಂಹನು ರಾಜ್ಯದ ಹಡಗನ್ನು ಉಲ್ಲೋಲ ಕಲ್ಲೋಲಗಳಿಂದ ಹೊರಕ್ಕೆ ತರುವಲ್ಲಿ ಸಫಲನಾದನೆಂಬುದು ಸ್ಪಷ್ಟ. ತನ್ನ ಸೇನಾಧಿಪತಿ, ಮಂತ್ರಿಗಳ ವಿಶ್ವಾಸಾರ್ಹವಾದ ನೆರವಿನಿಂದಾಗಿ ರಾಜ್ಯದಲ್ಲಿ ಅತ್ಯಂತ ಪ್ರಮುಖ ಸ್ಥಾನವನ್ನು - ಪ್ರಧಾನಮಂತ್ರಿ ಪದವಿಯನ್ನು ಅಲಂಕರಿಸಿ - ಆ ಕಾಲದ ವಿಜಯನಗರ ಸಾಮ್ರಾಜ್ಯದ ಅಧಿಕಾರಿಗಳಲ್ಲೆಲ್ಲ ಅತಿ ಪ್ರಧಾನನಾದನು. ಆತ ತನ್ನ ಜೊತೆಯವರೊಡನೆ ಕಲಹ ಮಾಡಿರಲಿಲ್ಲವೆಂಬುದೂ, ಅವರನ್ನು ಯುದ್ಧದಲ್ಲಿ ಗೆದ್ದಿರಲಿಲ್ಲವೆಂಬುದೂ ಸ್ಪಷ್ಟ. ನಿಧಾನವಾಗಿ ರಾಜ್ಯದ ಸೀಮೆಗಳನ್ನು ವಿಸ್ತರಿಸುತ್ತ ಎಲ್ಲವನ್ನೂ ಸುಸ್ಥಿರಗೊಳಿಸಿಕೊಳ್ಳುತ್ತ ಹೊರಟ. ಅತ್ಯುನ್ನತವಾದ ಪ್ರಧಾನಿಯ ಪದವಿಯ ಮೂಲಕ ಆಡಳಿತದ ಎಲ್ಲ ಸೂತ್ರಗಳನ್ನು ಕೈಯಲ್ಲಿ ಹಿಡಿದು ಬಿಗಿಮಾಡುತ್ತ ಹೊರಟ. ಆತನ ಶೌರ್ಯಪರಾಕ್ರಮಗಳಿಗಿಂತ ಆತನ ಸಮಯಪ್ರಜ್ಞೆಯೇ ಆತನನ್ನು ನಾಶದಂಚಿಗೆ ಹೋಗದಂತೆ ಕಾಪಾಡಿರಬೇಕು. ಭೇದಬುದ್ಧಿಯಿಂದ ತನ್ನ ಸೇನಾನಿಯಾದ ತುಳುವ ನರಸ ಹಾಗೂ ಅವನ ಮಗ ವೀರನರಸಿಂಹರುಗಳನ್ನು ಪೆನುಗೊಂಡೆಯ ಕೋಟೆಯಲ್ಲಿ ಬಂಧಿಸಿದ. ಅವರು ಈತನ ಮಗ ಇಮ್ಮಡಿ ನರಸಿಂಹನಮೇಲೆ ಇದೇ ಪದ್ಧತಿಯನ್ನು ಪ್ರಯೋಗಿಸಿದರು. ಈತನ ಹಿರಿಮೆಯೆಂದರೆ ಸಾಮ್ರಾಜ್ಯವನ್ನು ವಿಸ್ತರಿಸಿ ಅದನ್ನು ವಿಜಯ ನಗರದ ಅರಸರಲ್ಲಿ ಅತಿ ಪ್ರಸಿದ್ಧನಾದ ಕೃಷ್ಣರಾಯನಿಗೆ ಸುರಕ್ಷಿತವಾಗಿ ತಲುಪಿಸಿದ್ದು. ಆತ ಆದನ್ನು ಇನ್ನೂ ವಿಸ್ತರಿಸಿ, ಏಕೀಕರಿಸಿ, ಪ್ರಬಲಗೊಳಿಸಿ, ತನ್ನ ನಂತರವೂ ಎರಡು ತಲೆಮಾರುಗಳ ಕಾಲ ಪ್ರಬಲ ಸಾಮ್ರಾಜ್ಯವಾಗಿರುವಂತೆ ಕಟ್ಟಿ ಬೆಳೆಸಿದ. ಮಲ್ಲಿಕಾರ್ಜುನನ ಕಾಲದಲ್ಲಿ ಅರ್ಧಸ್ವತಂತ್ರನಾಗಿದ್ದು, ದಕ್ಷಿಣದಲ್ಲಿ ತನ್ನ ಅಧಿಕಾರವನ್ನು ಕ್ರಮೇಣ ಉತ್ತರ ದಕ್ಷಿಣ ಆರ್ಕಾಡುಗಳ, ಚಿತ್ತೂರು, ವೆಲ್ಲೂರು, ಚೆಂಗಲ್‌ಪೇಟೆಗಳಿಗೆ ವಿಸ್ತರಿಸಿ, ವಿಜಯನಗರದ ಮೊದಲ ವಂಶದ ಕಡೆಯ ಅರಸನಿಗೆ ಹೆಸರಿನಲ್ಲಿ ಪ್ರಧಾನಮಂತ್ರಿಯಾಗಿದ್ದ ಸಾಳುವ ನರಸಿಂಹನು ನಿಜವಾಗಿ ತಾನೇ ರಾಜನಾದ. ಶಕವರ್ಷ 1378 ರಿಂದ 1411 ರ ವರೆಗಿನ ಆಲಯ ಶಾಸನಗಳಲ್ಲಿನ ಹದಿನಾಲ್ಕು ಶಾಸನಗಳು ಇವನ ಕಾಲದ ವಾಗಿದ್ದು, ಈತ ಸಾಮ್ರಾಟನ ಕೈಕೆಳಗಿನವ ಮಾತ್ರವೇ ಎಂಬುದನ್ನು ಸೂಚಿಸುವ ಮಹಾಮಂಡಳೇಶ್ವರ ಎಂಬ ಸ್ಥಾನ ಮರ್ಯಾದೆಯನ್ನು ಮಾತ್ರವೇ ಸೂಚಿಸಲಾಗಿದೆ. ಇತರ ಬಿರುದುಗಳಾದ ಮೇದಿನೀ ಮೀಸರಗಂಡ, ಕಠಾರಿಸಾಳವ - ಮೊದಲಾದವು ಸಾಳುವರಿಗೆಲ್ಲ ಸಾಮಾನ್ಯವಾಗಿ ಸಲ್ಲತಕ್ಕವು. ಈತ ಸಾಳುವ ಗುಂಡಯ್ಯದೇವ ಮಹಾರಾಜ ಹಾಗೂ ಮಲ್ಲಾಂಬಿಕೆಯರ ಮಗ ಆಗಿದ್ದು (197 ತಿ.ತಿ.) ಈತನಿಗೆ ಸಾಳುವ ತಿಮ್ಮರಾಜದೇವ ಮಹಾರಾಜ ಒಡೆಯರ್ ಎಂಬ (ತಿ.ತಿ. 69) ಹೆಸರಿನ ಅಣ್ಣನೊಬ್ಬನಿದ್ದ. ಈತನ ರಾಣಿ ಶ್ರೀರಂಗದೇವಿ ಅಮ್ಮನ್ (ತಿ.ತಿ. 341) ಮೂವರು ಪುತ್ರರಿದ್ದರು. ಕುಮಾರ ನರಸಯ್ಯ, ಚಿಕ್ಕ ಸಂಗಮ ಹಾಗೂ ದೊಡ್ಡ ಸಂಗಮ.

ಸಾಳುವರ ಕಾಲದಲ್ಲಿ ಆಲಯದಲ್ಲಿ ಹಲವು ಉತ್ಸವಗಳು - ಅಧ್ಯಯನೋತ್ಸವ, ಪವಿತ್ರೋತ್ಸವ, ಕೊಡೈ ತಿರುನಾಳ್ - ಮೊದಲಾದವು ಪುನಃ ಪ್ರವೇಶಗೊಳಿಸಲ್ಪಟ್ಟವು.

ಈ ಕಾಲದ ಅತಿ ಮಹತ್ವದ ಸಂಘಟನೆಯೆಂದರೆ ಪಸಿಂಡಿ ವೆಂಕಟತ್ತುರೈವರ್ ಯಾನೆ ಜಿಯರ್ ರಾಮಾನುಜಯ್ಯನ್ ಸಂಗ್ರಹಿಸಿದ "ತಿರುವೆಂಕಟ ಮಹಾತ್ಮೆ". ವಿವಿಧ ಪುರಾಣ ಸಂಗ್ರಹವಾದ, ಈ ಕೃತಿಯನ್ನು ಕೃತಿಕಾರನು ಮಲೈಕುನಿಯವ್ರಪೆರುಮಾಳ್ ಹಾಗೂ ನಾಚ್ಚಿಮಾರರ ಸನ್ನಿಧಿಯಲ್ಲಿ 27-6-1491 ರಂದು ಪ್ರಥಮ ಬಾರಿಗೆ ಪ್ರವಾಚಿಸಿದನು. (2- 95) ಇದರ ವಿಷಯದ ಬಗ್ಗೆ ನಮಗೆ ಯಾವ ವಿವರವೂ ಇಲ್ಲ. ತಿರುಮಲೆಯ ಪರ್ವತದ ತಿರುವೆಂಗಡ ಮುಡೈಯಾನನ ಅರ್ಚಾವತಾರಕ್ಕೆ ಒಂದು ಪೌರಾಣಿಕ ಹಿನ್ನೆಲೆಯನ್ನು ವಿವರಿಸಿ, ಹಿಂದೂ ಸಮುದಾಯದ ಧಾರ್ಮಿಕ ಭಾವನೆಗಳಿಗೆ ಇಂಬುಕೊಡುವುದೇ ಕೃತಿಕಾರನ ಉದ್ದೇಶವಾಗಿದ್ದಿತು.

ಮುಂದಿನ ತಲೆಮಾರುಗಳಿಗೆ ಅತಿ ಹತ್ತಿರವಾದ ಈ ಕಾಲದ ಮತ್ತೊಂದು ಸಂಘಟನೆಯೆಂದರೆ ಮೂಲ ವರರ ಪುನುಗುಕ್ಕಾಪ ಅಭಿಷೇಕ. ಆಲಯದಲ್ಲಿ ತಯಾರಿಸಿದ ಸುಗಂಧಿತವಾದ ಪುನುಗು ಎಣ್ಣೆಯಿಂದ ಸ್ವಾಮಿಯನ್ನು ಅಭಿಷೇಕಿಸುವುದು ಇಲ್ಲಿನ ವಿಶೇಷ

ಕ್ರಿ.ಶ. 1434 ರಲ್ಲಿ ತಿರುಕ್ಕಲಿ ಕನ್ರಿದಾಸರು (ತಿರುಪತಿಯವರು) ಆಡಿಮಾಸದಿಂದ ಮಾರ್ಗಳಿ ಮಾಸದ ವರೆಗೆ ಆರು ತಿಂಗಳ ಕಾಲ ದಿನವೂ ಪ್ರಾತಃಕಾಲ ತಿರುವಾರಾಧನೆ (ನಿತ್ಯಾರ್ಚನೆ) ಮಾಡುವಾಗ ಪೆರಿಯ ಪೆರುಮಾಳ ಸ್ವಾಮಿಯ ಮುಖಕ್ಕೆ ಪುನುಗುಎಣ್ಣೆ ಯನ್ನು ಪೂಸುವ ಪದ್ಧತಿಯನ್ನು ಆರಂಭಿಸಿದರು. ಪ್ರತಿದಿನವೂ ಬೆಳ್ಳಿಯ ಮಣವಾಳ ಪೆರುಮಾಳರಿಗೆ ತಿರುಮಂಜನ ಮಾಡುವ ಸಮಯದಲ್ಲಿ ಪ್ರಾಯಶಃ ಈ ಪ್ರಕ್ರಿಯೆಯನ್ನು ಉಂಟಾಗಿಸಿರಬೇಕು. ತಿರುವಾರಾಧನೆಗೆ ಬಳಸುವ ನೀರಿಗೆ ಸುಗಂಧ ದ್ರವ್ಯಗಳನ್ನು ಬಳಸುವ ಮೂಲಕ ಪ್ರಾಚೀನ ಕಾಲದಿಂದ ನಡೆಯುತ್ತಿದ್ದ ಬೆಳ್ಳಿಯ ಮೂರ್ತಿಯ ತಿರುಮಂಜನವನ್ನು ಭಕ್ತರಲ್ಲಿ ಆಕರ್ಷಕಗೊಳಿಸಿದ್ದಾಗಿರಬೇಕು. ಕ್ರಿ.ಶ 1465ರಲ್ಲಿ ಕಂದಾಡೈ ರಾಮಾನುಜಅಯ್ಯಂಗಾರ್ಯನಿಂದ ಈ ಪದ್ಧತಿ ಆರಂಭವಾಗಿದ್ದು, ಸಾಳುವ ನರಸಿಂಹದೇವಮಹಾರಾಯನು ತಕ್ಕ ಧನಮೂಲವನ್ನು ಒದಗಿಸಿದನು. ಈ ತಿರುಮಂಜನವನ್ನು ಅಳಗಪ್ಪಿರನಾರ್ ತಿರುಮಂಜನವೆಂದು ಕರೆಯಲಾಯಿತು.

ಸಾಳುವ ನರಸಿಂಹನು ಕ್ರಿ.ಶ. 1482 ರಲ್ಲಿ ತೀರಿಕೊಂಡನಂತರ ಅವನ ಮಗ ಇಮ್ಮಡಿ ನರಸಿಂಹನು ಕ್ರಿ.ಶ.1505 ರವರೆಗೆ ಆಡಳಿತ ನಡೆಸಿದ. ಇವನೊಡನೆ ಸಾಳುವ ವಂಶ ಕೊನೆಗೊಂಡಿತು. ಇಮ್ಮಡಿ ನರಸಿಂಹನು ಸಿಂಹಾಸನಚ್ಯುತನಾಗಿದ್ದಾಗ ಸಾಳುವನರಸಿಂಹನ ದಂಡನಾಯಕನಾದ ನರಸನಾಯಕನೇ ನಿಜವಾದ ಸಾಮ್ರಾಟನಾಗಿದ್ದ.ತನ್ನ ಮರಣದವರೆಗೆ ಎಂದರೆ1509ರ ವರೆಗೆ ಈತನ ಮಗ ವೀರನರಸಿಂಹನು ಸಾಮ್ರಾಟನೆಂದು ಆಳ್ವಿಕೆ ನಡೆಸಿದನು.

ತಿರುಮಲೆಯ ಆಲಯದ ಹಲವು ಶಾಸನಗಳು ಈ ಕಾಲದ ರಾಜನ ಅಧಿಕಾರಿಗಳನ್ನು ಗುರುತಿಸುತ್ತದೆ.

## 5. ತುಳುವರ ಕಾಲದಲ್ಲಿ ಆಲಯ

ವಿಜಯನಗರದ ಮೂರನೆಯ ಆರಸುವಂಶದ ಆಡಳಿತಕಾಲದಲ್ಲಿ - ವಿಶೇಷವಾಗಿ ಕೃಷ್ಣದೇವರಾಯನ ಹಾಗೂ ಅಚ್ಯುತ ರಾಯರ ಆಡಳಿತದ ಕಾಲದಲ್ಲಿ ಆಲಯವು ತನ್ನ ಕೀರ್ತಿ ಪ್ರತಿಷ್ಠೆಗಳ ಶಿಖರವನ್ನು ಮುಟ್ಟಿತು: ಸ್ವಾಮಿಗೆ ಕಾಣಿಕೆಯಾಗಿ, ಸಮರ್ಪಣೆಯಾಗಿ ಅಗಣಿತವಾದ ಸಂಪತ್ತು ಶೇಖರವಾಯಿತು. ಈ ಕಾಲದಲ್ಲಿ ಸಾಮ್ರಾಟರು ಮಾತ್ರವೇ ಅಲ್ಲದೆ ಅವರ ರಾಣಿವಾಸದವರು, ಸೇನಾನಿಗಳು, ಆಡಳಿತ ಪ್ರತಿನಿಧಿಗಳು, ಅಧಿಕಾರಿ ಗಳು, ಮತ್ತಿತರ ಆಲಯ ಸೇವಾಕರ್ತರೂ ಸಹ ಆಲಯಕ್ಕೆ ದಾನ ದತ್ತಿಗಳನ್ನು ನೀಡಿದರು

### ಶ್ರೀಕೃಷ್ಣದೇವರಾಯ

ತಿರುಮಲೆಯ ಆಲಯದ ಶಾಸನಗಳಲ್ಲಿ ಕೃಷ್ಣದೇವರಾಯನು ಮತ್ತು ಆತನ ಈರ್ವರು ಸತೀಮಣಿಯರು - ಚಿನ್ನಾದೇವಿ, ತಿರುಮಲ ದೇವಿಯರು ಸುಮಾರು ಐವತ್ತು ಶಾಸನಗಳಲ್ಲಿ ಪ್ರತಿನಿಧಿಸಲ್ಪಟ್ಟಿದ್ದಾರೆ. ಇವುಗಳು ಶಕವರ್ಷ 1434 (ಕ್ರಿ.ಶ. 1513)

ರಿಂದ ಶಕವರ್ಷ 1445 (ಕ್ರಿ.ಶ. 1524) ರ ವರೆಗೆ ಹರಡಿವೆ. ಇವುಗಳಲ್ಲಿ ರಾಯನು ತನ್ನ ಕುಲದೈವವೆಂದು ಬಗೆದು ಭಕ್ತಿಯಿಂದ ನಡೆದುಕೊಂಡ ತಿರುಮಲೆಯ ಸ್ವಾಮಿಯನ್ನು ತಾನು ದರ್ಶಿಸಿದಾಗ ನೀಡಿದ ಕಾಣಿಕೆಗಳೂ, ರಾಜಧಾನಿಯಲ್ಲಿದ್ದುಕೊಂಡು ನೀಡಿದ ಕಾಣಿಕೆಗಳೂ, ವಿವರವಾಗಿ ಚಿತ್ರೀಕರಿಸಲ್ಪಟ್ಟಿವೆ. ಇತರ ಕಡೆಗಳಲ್ಲಿ ಚಿತ್ರಿತವಾಗಿರುವಂತೆಯೇ, ಕೃಷ್ಣರಾಯನ ಅಧಿಕಾರ ಇಡಿದಕ್ಷಿಣ ಭಾರತದಲ್ಲಿ ಹರಡಿದ್ದಿತೆಂಬುದರ ಪ್ರತೀಕವಾಗಿಯೆನ್ನವಂತೆ, ಆತನ ಶಾಸನಗಳು ಮೂರು ಭಾಷೆಗಳಲ್ಲಿ - ತೆಲುಗು,ಕನ್ನಡ, ತಮಿಳುಗಳಲ್ಲಿ - ಲಿಖಿತವಾಗಿವೆ.

ಶ್ರೀಕೃಷ್ಣದೇವರಾಯನು ತಿರುಮಲೆಯ ಆಲಯವನ್ನು ಏಳುಬಾರಿಗೆ ಕಡಿಮೆಯಿಲ್ಲದಂತೆ ಸಂದರ್ಶಿಸಿರ ಬೇಕು. ಈ ಯಾತ್ರೆಗಳ ವಿವರಗಳನ್ನು ಇನ್ನೊಂದು ಅಧ್ಯಾಯದಲ್ಲಿ ವಿವರಿಸಲಾಗಿದೆ.

ಕೃಷ್ಣದೇವರಾಯನು ತಿರುಮಲೆಯಲ್ಲಿ ಸಮರ್ಪಿಸಿದ ಎಲ್ಲ ದಾನಗಳನ್ನೂ ಆತನ ಸ್ವಂತ ಶಿಲ್ಪಿಯಾದ ಪೆದ್ದಯಾಚಾರಿಯ ಮಗ ಶ್ರೀಪತಿಯಿಂದ ಕಲ್ಲಿನಲ್ಲಿ ಮೇಲೆ ಕೊರೆಯಲ್ಪಟ್ಟು, ಅವುಗಳ ವಿಷಯವನ್ನು ಆತನ ರಾಯಸದ ಗಿಂಡಿಬಸವರಾಯ ಅಥವಾ ಬಾಗೂರಿ ಮಲ್ಲರಸರು ಸಿದ್ಧಪಡಿಸಿರಬೇಕು. ತಿ.ತಿ. 578ರಲ್ಲಿ ಹೇಳುವಂತೆ ಹಲವು ತೆರಿಗೆಗಳನ್ನು ವಸೂಲಿ ಮಾಡುವುದರ ಹೊರತು ಬೇರೆಲ್ಲೂ ಆಲಯದ ಸ್ಥಾನತ್ತಾರರ ಹೆಸರು ಬರುವುದೇ ಇಲ್ಲ. ದಾನಕರ್ತರ ದಾಯಭಾಗದ ಪ್ರಸಾದದಲ್ಲಿ ಐದನೇ ಒಂದುಭಾಗವನ್ನು ತಿರುಪ್ಪಣಿಪಿಳ್ಳೈ ಪಡೆಯಬೇಕೆಂದೂ ಮಿಕ್ಕ ಪ್ರಸಾದ ವನ್ನು ರಾಜ ಹಾಗೂ ಆತನ ಇಬ್ಬರು ರಾಣಿಯರು ನೆಲೆಗೊಳಿಸಿದ ಸತ್ರಗಳಲ್ಲಿನ ಯಾತ್ರಿಕರಲ್ಲಿ ವಿತರಣೆ ಮಾಡಬೇಕೆಂದೂ ಕಟ್ಟು ಮಾಡಲಾಗಿದೆ. ಈ ಮೂವರೂ ಸಮರ್ಪಿಸಿದ ಒಟ್ಟು ನೈವೇದ್ಯವೆಂದರೆ 20 ತಿರುಪ್ಪೋನಕ, 4 ತಿರುಕಣ್ಣಮಡೈ, 4 ಅಪ್ಪಪಡಿ. ಸಾಮ್ರಾಟನನ್ನು ಅನುಸರಿಸಿ ಬಂದಂತಹ ರಂಗದೀಕ್ಷಿತರ್ ಹಾಗೂ ಶಿವದೀಕ್ಷಿತರೂ ಪ್ರಸಾದಗಳ ಒಂದು ಹಿರಿಯ ಪಾಲು ಪಡೆಯುವಂತಾಯಿತು.

ಕೃಷ್ಣದೇವರಾಯ ಮತ್ತು ಅವನ ರಾಣಿಯರು ಆಲಯಕ್ಕೆ ನೀಡಿದ ಕಾಣಿಕೆಗಳನ್ನು ಶಾಸನಾಧಾರದಲ್ಲಿ ಈ ಕೆಳಕಂಡಂತೆ ಪಟ್ಟಿ ಮಾಡಬಹುದು.

**ಅ) ಕ್ರಿ.ಶ. 1513 - ಫೆಬ್ರವರಿ - 10ರಂದು ನೀಡಿದ ಕಾಣಿಕೆ**

1. ಒಂದು ನವರತ್ನ ಕಿರೀಟ ಇದರ ಒಟ್ಟುತೂಕ 3308 ಕ್ಯಾರೆಟ್. ಒಮ್ಮೆಚ್ಚು1555, ಕುಂದಣದ ಬಂಗಾರ 1076.

2. ಒಂದು ಮೂರಳೆ ಸರ - ಮುತ್ತು ಮಾಣಿಕ್ಯ ಹವಳಗಳಿಂದ ಕೂಡಿದ್ದು, ಅಡ್ಡಿಗೆಯೊಂದಿಗೆ 225 ಕ್ಯಾರೆಟ್ ತೂಕ. ಇದರಲ್ಲಿನ ಪದಕದ ತೂಕ ಬೇರೆ - 61 ಕ್ಯಾರೆಟ್.

3. ಕರ್ಪೂರ ಆರತಿಯನ್ನು ನೀಡಲು 25 ಬೆಳ್ಳಿಯ ತಟ್ಟೆಗಳು.

4. ಚಿನ್ನಾಜಿ ಅಮ್ಮನವರಿಂದ : 374 ಕ್ಯಾರೆಟ್‌ಗಳ ತೂಕದ ಬಂಗಾರದ ಬಟ್ಟಲು ಒಂದು - ರಾತ್ರಿಯ ಏಕಾಂತ ಸೇವೆಯಲ್ಲಿ ಹಾಲಿನ ನಿವೇದನೆಗೆ.

5. ತಿರುಮಲದೇವಿಯವರಿಂದ - ಮೇಲಿನಂತೆಯೇ ಹಾಲಿನ ನಿವೇದನೆಗೆಂದು 374 ತೂಕದ ಒಂದು ಬಂಗಾರದ ಬಟ್ಟಲು.

**ಆ) ಕ್ರಿ.ಶ. 1513 - ಮೇ - 2ರಂದು ನೀಡಿದ ಕಾಣಿಕೆಗಳು**

6. ಒಟ್ಟು 68 ತೂಕದ ಒಂದು ಉಡಿದಾರ. (5 ವಜ್ರಗಳು ಕೂಡಿಸಿದ್ದು,) 17 ಅಡ್ಡಿಕೆ, ವಜ್ರ, ಕೆಂಪು, ನೀಲಿ, ಹವಳ, ಬಂಗಾರದ ದಾರದಿಂದ ಆಗಿದ್ದಿತು.

7. ಒಂದು ಕಠಾರಿ. ಇದರ ಒರೆಯನ್ನು ವಜ್ರ, ಕೆಂಪು, ಹವಳ, ಮುತ್ತುಗಳಿಂದ ಅಲಂಕರಿಸಲಾಗಿತ್ತು. ಒಟ್ಟು 326 ತೂಕ. ಇವುಗಳಲ್ಲಿ ರತ್ನಗಳು ಮಾತ್ರವೇ 165 ತೂಕ.

8. ಒಂದು ನಿಶ್ಚಲ ಕಠಾರಿ ಒರೆ. ದಿನವೂ ಬಳಸುವಂತಹದ್ದು. 132 ತೂಕದ ಇದರ ಮೇಲೆ ಹವಳಗಳನ್ನು ಸೇರಿಸಲಾಗಿದ್ದಿತು.

9. ಒಂದು ಚಿಕ್ಕ ಕಠಾರಿ (ಬಿಚ್ಚಾ).

10. ಮೇಲಿನ ಕಿರುಕಠಾರಿಗೆ ತಕ್ಕ ಮುತ್ತು, ಹವಳ, ವಜ್ರಗಳನ್ನು ಹುದುಗಿಸಿದ ಒರೆ.

11. 87 ತೂಕದ ಒಂದು ಪದಕ - ಇದರಲ್ಲಿ ವಜ್ರಗಳು, ಹವಳ, ಗೋಮೇಧಿಕಗಳಿದ್ದವು.

12. ಒಂದು ಜೊತೆ ಭುಜಕೀರ್ತಿಗಳು - ಒಟ್ಟು ತೂಕ 573. ರತ್ನಗಳನ್ನು ಹುದುಗಿಸಲಾಗಿದ್ದಿತು. ಹಳೆಯ ವಜ್ರಗಳನ್ನು ಹೊಂದಿಸಲಾಗಿದ್ದಿತು.

13. ದಿನವೂ ಬಳಸಲು 198 ತೂಕದ ಭುಜಕೀರ್ತಿ.

14. ದಿನವೂ ಬಳಸಲು ಎರಡು ಜೊತೆ ಭುಜಕೀರ್ತಿ.

15. ಹದಿನೇಳು ಅಡ್ಡಿಕೆಗಳ ಒಂದು ಬಂಗಾರದ ಜನಿವಾರ. ಎಲೆಯಾಕಾರ, ಮುತ್ತಿನ ಆಕಾರದ, ಮೂವತ್ತು ಇತರ ಅಡ್ಡಿಕೆಗ ಒಟ್ಟು ತೂಕ 205.

16. 276 ತೂಕದ ಯಜ್ಞೋಪವೀತ ಒಂದು.

17. ಉತ್ಸವ ಮೂರ್ತಿ ಹಾಗೂ ಉಭಯ ನಾಯಕಿಯರಿಗಾಗಿ ಒಟ್ಟು 380 ತೂಕದ ಮೂರು ಕಿರೀಟ ಗಳು. ಇವುಗಳಲ್ಲಿ ವಜ್ರಗಳು, ಹವಳಗಳು, ಕೆಂಪುಗಳನ್ನು ಹುದುಗಿಸಲಾಗಿದ್ದಿತು. ( III - 60, 61, 62, 63)

**ಇ) ಕ್ರಿ.ಶ. 1514 - ಜುಲೈ - 6 ಕಾಣಿಕೆ**

ಪ್ರತಾಪರುದ್ರ ಗಜಪತಿಯನ್ನು ಸೋಲಿಸಿ, ಉದಯಗಿರಿಯನ್ನು ಆಕ್ರಮಿಸಿದ ನಂತರ ರಾಜಧಾನಿಗೆ ಹಿಂದಿರುವಾಗ ನೀಡಿದ ಕಾಣಿಕೆಗಳಿವು. (III - 66, 67, 68)

18. ಶ್ರೀ ವೆಂಕಟೇಶ್ವರಸ್ವಾಮಿಗೆ 30,000 ಬಂಗಾರದ ವರಹಗಳಿಂದ (ಚಕ್ರಪೊನ್) ಕನಕಾಭಿಷೇಕ.

19. ಮೂರೆಳೆಯ ಆಭರಣ ಒಂದು- 250 ತೂಕದ್ದು. ಬಂಗಾರದ ದಾರದಿಂದಲೂ, ಬಂಗಾರದ ಕೊಂಡಿಗಳಿಂದಲೂ, ಮುತ್ತು ರತ್ನಗಳಿಂದ ಕೂಡಿದ ಹಾರವಿದು.

20. ಒಂದು ಜೊತೆ ಕಡಿಯಗಳು-ಕಡಗ - ಬಾಹುವಲಯ. (ತಾಳ್ಳಪಾಕ ಗ್ರಾಮವನ್ನು ನಿತ್ಯ ನಿವೇದನೆಗಾಗಿ ನೀಡಲಾಯಿತು

21. **ಚಿನ್ನಾಜಿದೇವಿ ಅಮ್ಮನವರಿಂದ** 200 ತೂಕದ ವಜ್ರ, ಮುತ್ತುಗಳಿಂದ ಕೂಡಿದ ಒಂದು ಕಂಠಮಾಲೆ.

(III - 70, 71, 72) (ನಿತ್ಯ ನಿವೇದನೆಗಾಗಿ ಮುಡಿಯೂರು ಗ್ರಾಮವನ್ನೂ ನೀಡಲಾಯಿತು.)

22. **ತಿರುಮಲದೇವಿ ಅವರಿಂದ** ಒಂದು ಚಕ್ರಪದಕ - 225.5 ತೂಕದ್ದು, ವಜ್ರ, ಮುತ್ತು, ಹವಳಗಳಿಂದ ಕೂಡಿದ್ದುದು. (III - 73, 74, 75) (ಶೋಲಿಂಗವರಪಟ್ಟುವಿನ ಪಿರಾಟ್ಟಿ ಕೊಳತೂರು ಗ್ರಾಮ ದಾನ ಮಾಡಲಾಯಿತು)

**ಈ) ಕ್ರಿ.ಶ. 1515 - ಅಕ್ಟೋಬರ್ - 25- ಯುವ ಕಾರ್ತೀಕ ಬಹುಳ ತೃತೀಯ**

ಪೂರ್ವದ ಕಳಿಂಗ ರಾಜ್ಯದ ಮೇಲೆ ದಂಡಯಾತ್ರೆ ಗೈದು ವಿಜಯವನ್ನು ಪಡೆದು ರಾಜಧಾನಿಗೆ ಹಿಂದಿರುಗಿದ ಮೇಲೆ ನೀಡಿದ ಕಾಣಿಕೆಗಳಿವು.

23. ಒಂದು ನವರತ್ನ ಪ್ರಭಾವಳಿ ಅಥವಾ ಮಕರತೋರಣ ಒಟ್ಟು ತೂಕ 27,287. ಇದರಲ್ಲಿ 25 ಕೀರ್ತಿ ಮುಖ ಪಲ್ಲವಗಳು, 13835 ಒಮ್ಮಟ್ಟು ಬೀಜಗಳು, ಬಂಗಾರದ ದಾರದ ತೂಕ 16. ಅಪರಂಜಿ ಚಿನ್ನ 7978. ಮಕರತೋರಣದಮೇಲೆ ಓಲಾಡುವ ರೇಷ್ಮೆ ಹಾಗೂ ಚಿನ್ನದ ಕುಸುರಿ 20 - ತೂಕ 5474. ಇದರಲ್ಲಿ 10994 ಕೆಂಪುಗಳೂ, 754 ಮರಕತಗಳು (ಪಚ್ಚೆ), 530 ಇಂದ್ರನೀಲಗಳು (ನೀಲಮಣಿ), 40 ವೈಢೂರ್ಯ, 45, ಗೋಮೇಧಿಕ, 74 ಪುಷ್ಯರಾಗ940 ಹಳೆಯ ವಜ್ರಗಳು, 3933 ಮುತ್ತುಗಳು, ನಾಲ್ಕು ದೊಡ್ಡ ಇಂದ್ರನೀಲಗಳು ಕಣ್ಣುಗಳಂತೆ ಸೇರಿಸಿದ್ದು, 6 ಹವಳಗಳು, 30 ಶಂಖಗಳೂ ಇದ್ದಮಕರ ತೋರಣದ ಒಟ್ಟು ತೂಕ 14711, ಆಗಿದ್ದು ಪ್ರಭಾವಳಿಯು ಇಡಿಯಾಗಿ 31124 ತೂಕವಿದ್ದಿತು.

ಕೃಷ್ಣರಾಯನಿಗೆ ಕಟಕಪುರಿ (ಒರಿಸ್ಸ) ಯನ್ನು ನೀಡಿದ ದೇವರಿಗೆ ಮೇಲಿನ ಸಮರ್ಪಣೆ ಮಾಡಲಾಗಿದೆ.

**ಉ) ಕ್ರಿ.ಶ. 1517 - ಜುಲೈ - 2ರ ಕಾಣಿಕೆಗಳು**

ಕಳಿಂಗದೇಶದ ವಿಜಯದ ನಂತರ ಸಿಂಹಾದ್ರಿ ಪೊತ್ನೂರುವಿನಲ್ಲಿ ತನ್ನ ವಿಜಯಸ್ತಂಭವನ್ನು ಸ್ಥಾಪಿಸಿದ ನಂತರ ಹಿಂದಿರುವಾಗ ನೀಡಿದ ಕಾಣಿಕೆಗಳಿವು (ತಿ.ತಿ. 576 ಹಾಗೂ 578).

24. ಒಂದು ಕಂಠ ಮಾಲೆ.

25. ಒಂದು ಪದಕ.

26. ವಿಮಾನದ ಚಿನ್ನದ ಲೇಪನಕ್ಕಾಗಿ 30,000 ವರಹಗಳು. (ಗೊಡುಗೂರು ನಾಡುವಿನಿಂದ ಒಂದು ಸಾವಿರ ವರಹಗಳ್ಳನು ತಿರುವೆಂಗಡ ಮುಡೈಯಾನನ ಪುಲುಗುಕಾಪ್ಪು ಸೇವೆಯ ವೆಚ್ಚಗಳಿಗಾಗಿ ಹಾಗೂ ನಿತ್ಯವೂ ಪ್ರಾತಃಕಾಲ ನಿವೇದನೆಗಳ ವೆಚ್ಚಕ್ಕಾಗಿ ಗೊಡಗೂರು ನಾಡುವಿನಿಂದ 500 ವರಹಗಳನ್ನು ವಸೂಲಿ ಮಾಡಬೇ ಕೆಂದೂ ಅಪ್ಪಣೆ ಮಾಡಿದನು.) (ವಿಮಾನದ ಚಿನ್ನದ ಮುಲಾಮೀಕರಣ 1518 - 9 - 9 ರಂದು ಮುಗಿಯಿತು.)

**ಊ) ಕ್ರಿ.ಶ. 1518 - ಅಕ್ಟೋಬರ್ - 16**

ಕಮಲಾಪುರದ ಒಂದು ಶಾಸನವು ಆತನು ತನ್ನ ರಾಣಿ ತಿರುಮಲೆ ದೇವಿಯೊಂದಿಗೆ 16 - 10 - 1518 ರಲ್ಲಿ ತಿರುಮಲೆಗೆ ಆಗಮಿಸಿದನೆಂದು ಹೇಳುತ್ತದೆ. ಆದರೆ ತಿರುಪತಿಯಲ್ಲಿ ಆಗಲೀ ತಿರುಮಲೆಯಲ್ಲಿ ಆಗಲೀ ಇದನ್ನು ಸಮರ್ಥಿಸುವ ಶಾಸನವಿಲ್ಲ.

**ಋ) ಕ್ರಿ.ಶ. 1521 - 2 - 17 ರ ಕಾಣಿಕೆಗಳು**

ಈ ಬಾರಿ ತಿರುಮಲೆ ದೇವಿ ಮಾತ್ರವೇ ಕೃಷ್ಣರಾಯನೊಡನೆ ಬಂದಿದ್ದು ಎಂದು ತೋರುತ್ತದೆ. (ತಿ.ತಿ. 301, 302, 586, 594)

27. ನವರತ್ನ ಸಹಿತವಾದ ಪೀತಾಂಬರ ಜೊತೆ.

28. ಕೆಂಪು, ನೀಲಿ, ಪಚ್ಚೆಗಳಿಂದ ಕೂಡಿದ ಕುಲಾವಿ (ತಲೆಗೆ)

29. ನವರತ್ನ ಖಚಿತವಾದ ಎರಡು ಚಾಮರಗಳು ಜೊತೆಗೆ 10,000 ವರಹಗಳು.

30. ಒಂದು ಪದಕ.

31. ತಿರುಮಲೆ ದೇವಿಯಿಂದ ಒಂದು ನವರತ್ನ ಪದಕ.(ತಿ.ತಿ. 301, 302, 586, 594)

**ಋ) 15 ಡಿಸೆಂಬರ್ - ಕಾಣಿಕೆಗಳು**

ಮೇಲಿನ ಕಾಣಿಕೆಗಳಷ್ಟೇ ಅಲ್ಲದೆ, ತನ್ನ ಮೂರನೆಯ ಸಂದರ್ಶನದಲ್ಲಿ ಎಂದರೆ 13-6-1514 ರಲ್ಲಿ, ತನ್ನ ಆಡಳಿತದ ಶುಭ ಕಾಲದಲ್ಲಿ ತನ್ನ ತಂದೆ ನರಸನಾಯಕ ಒಡೆಯರ್ ಹಾಗೂ ತಾಯಿ ನಾಗುಲಾಂಬಿಕೆ ಯವರ ಮೇಲ್ಮೆಗಾಗಿ ಹಲವು ಹನ್ನೊಂದು ರೀತಿಯ ದೇಣಿಗೆಗಳನ್ನು ಆತ ನೀಡಿದ್ದನು. ಇವುಗಳಲ್ಲಿ ಒಂದು ಆಭರಣವು ನವರತ್ನ ಖಚಿತವಾಗಿದ್ದಿತು. (ಶಾಸನವು ಮುಕ್ಕಾಗಿದ್ದು ಖಚಿತ ವಾಗಿಲ್ಲ) ತಮಿಳು ತೈಮಾಸದಲ್ಲಿ ಒಂದು ಬ್ರಹ್ಮೋತ್ಸವವನ್ನು ನಡೆಸಲು, ಗೊಡಗೂರು ನಾಡಿನಲ್ಲಿದ್ದ ಸತ್ರವಾಡಿ, ತುರೂರು, ಕರಕಂಬಾಡಿಗಳನ್ನು ದಾನ ನೀಡಿದನು.

ಕೃಷ್ಣದೇವರಾಯನ ಕೆಲವು ಅಧಿಕಾರಿಗಳೂ ಸಹ ತಿರುಮಲೆಯ ಸ್ವಾಮಿಗೆ, ಆಲಯಕ್ಕೆ ತಮ್ಮ ಕಾಣಿಕೆ ಗಳನ್ನು ಸಮರ್ಪಿಸಿದಂತೆ ಈ ಶಾಸನಗಳಲ್ಲಿ ಕಂಡುಬರುತ್ತದೆ. ಶಾಸನಗಳಲ್ಲಿ ಕಂಡುಬರುವ ಕೆಲವು ಹೆಸರು ಗಳನ್ನು ಈ ರೀತಿ ಪಟ್ಟಿ ಮಾಡಬಹುದು.

1. ಪ್ರಧಾನಿ ಸಾಳುವ ತಿಮ್ಮರಸ.

2. ಸಾಳುವ ಗೋವಿಂದರಾಜ.

3. ಪೆರಿಯ ಓಬಳನಾಯಕರ್ ರಾಮನಾಯಕರ್ - ಸೇನಾಧಿಪತಿ.

4. ರಾಯಸಂ ಕೊಂಡಮರಸಯ್ಯ.

5. ತ್ರಯಂಬಕ ದೇವ.

6. ಕರಣಿಕ ಬಸವರಸ.

7. ಕರಣಿಕ ಅಟ್ಟವಣೆ ಬಸವರಸ.

8. ಗಿಂಡಿ ಬಸವರಾಯುಲು.

9. ಅವಸರದ ನರಸಯ್ಯ ಆತನ ಸೋದರ ತಿಮ್ಮಯ್ಯ.

10. ಊಡಿಯಂ ಎಲ್ಲಪ್ಪ ನಾಯಕರ್.

11. ಅಡೈಪ್ಪಂ ಎಲ್ಲಪ್ಪ ನಾಯಕರ್.

12. ಮನ್ನಾರ್ ಪಿಳ್ಳೈ ಹಾಗೂ ಅಪ್ಪಪ್ಪಿಳ್ಳೈ.

ಆತನ ಕಾಲದಲ್ಲಿ ಆಲಯಕ್ಕೆ ದೇಣಿಗೆ ದಾನಗಳನ್ನು ನೀಡಿದ ಇತರ ಕೆಲ ಅಧಿಕಾರಿಗಳೆಂದರೆ -

1. ಬಾಹೂರು ಮಲ್ಲರಸ.

2. ನಾಗರಾಜು.

3. ತಮ್ಮು ನಾಯಕರ್.

4. ತಿರುವೆಂಕಟಯ್ಯನ್.
5. ಓಬಳಯ್ಯನ್.
6. ಲಕ್ಕು ನಾಯಕರ್.
7. ತಿರುಮಲೈ ನಾಯಕರ್.
8. ಚೆನ್ನಪ್ಪ ರೆಡ್ಡಿ.
9. ರಂಜಕಂ ಶ್ರೀರಂಗರಾಜ.

ಈ ಕಾಲದ ಹಲವು ಧಾರ್ಮಿಕ ಗುರುಗಳು ಹಾಗೂ ಹಲವರು ಸಮಾಜದ ಪ್ರತಿಷ್ಠಿತರೂ ಸಹ ಶಾಸನ ಗಳಲ್ಲಿ ಹೆಸರಿಸಲ್ಪಟ್ಟಿದ್ದಾರೆ. ಕೃಷ್ಣರಾಯನು ಶ್ರೀವೈಷ್ಣವ ಪಂಥದ ಬಗ್ಗೆ ಆದರ ಅಭಿಮಾನಗಳನ್ನು ಹೊಂದಿ ಆಚರಣೆಯಲ್ಲಿ ತಂದಿದ್ದನೆಂಬುದು ಆತನ ವಿಷ್ಣುಚಿತ್ತೀಯಂ ಅಥವಾ ಆಮುಕ್ತಮಾಲ್ಯದ ಕೃತಿಯಲ್ಲಿ ಪ್ರಸ್ಫುಟವಾಗಿ ದ್ದರೂ ಸಹ ಮಾಧ್ವ ಸಾಂಪ್ರದಾಯದ ಶ್ರೀಪಾದರಾಜರ ಶಿಷ್ಯರಾದ ಗುರು ಶ್ರೀ ವ್ಯಾಸರಾಯರನ್ನು ಆದರದಿಂದ ಕಂಡು ಭಕ್ತಿಯಿಂದ ನಡೆದುಕೊಳ್ಳುತ್ತಿದ್ದ. ವ್ಯಾಸರಾಜರು ವ್ಯಾಸರಾಜ ಮಠದ ಸ್ಥಾಪಕರು. ವ್ಯಾಸಕೂಟ ದಾಸಕೂಟಗಳನ್ನು ಕಟ್ಟಿ ಮಾಧ್ವ ಸಿದ್ಧಾಂತವನ್ನು, ಹರಿಸರ್ವೋತ್ತಮತೆಯನ್ನು ಹರಡಿದರು. ಅವರ ಹೆಸರಿನ ಮುಂದೆ ಶ್ರೀಮತ್ ಪರಮ ಹಂಸ ಪರಿವ್ರಾಜಕಾಚಾರ್ಯ, ಪದವಾಕ್ಯ ಪ್ರಮಾಣಜ್ಞ, ದುರ್ವಾದಿ ಗರ್ವಸರ್ವಸ್ವಾಪಹರ, ಶ್ರೀಮತ್ ವೈಷ್ಣವಸಿದ್ಧಾಂತ ಪ್ರತಿಷ್ಠಾಪಕಾ ಚಾರ್ಯ, ಸಕಲವಿದ್ವಜ್ಜನಮನಃಪದ್ಮವನ ಸೌಪಸ್ತಿಕ - ಎಂದೂ ಗೌರವದಿಂದ ಸೇರಿಸಿ ಕರೆಯಲಾಗುತ್ತಿದ್ದಿತು.

ಶ್ರೀವೈಷ್ಣವರ ವಡಗಲೆ ಪಂಗಡದ ಅಹೋಬಿಲ ಮಠವನ್ನು ಸ್ಥಾಪಿಸಿದ ಶ್ರೀವಣ್ ಶಠಗೋಪ ಜೀಯರ ಶಿಷ್ಯರೂ ವಾರಸುದಾರರೂ ಆದ ಶ್ರೀಮನ್ನಾರಾಯಣಜೀಯರು ಶ್ರೀಮತ್ ವ್ಯಾಸತೀರ್ಥರ ಹಿರಿಯ ಸಮಕಾಲಿನರು. ನಾರಾಯಣ ಜೀಯರು ತಮ್ಮ ಧರ್ಮ ಪ್ರಸಾರದ ದೇಶ ಸಂಚಾರ ಕಾಲದಲ್ಲಿ ಕೆಲವು ಕಾಲ ತಿರುಪತಿಯಲ್ಲಿ ತಂಗಿರಬೇಕು. ತಾವು ಇದ್ದ ಮೂರು ತಿಂಗಳಲ್ಲಿ ಎರಡು ಬಾರಿ ಇವರು ಆಲಯಕ್ಕೆ ದಾನ ನೀಡಿದರು. ಒಮ್ಮೆ 1860 ನರ್ಪಣವಾದರೆ ಇನ್ನೊಮ್ಮೆ 3800 ನರ್ಪಣಗಳು. 1438 ರ ಶಕದ ಧಾತುನಾಮ ಸಂವತ್ಸರದಲ್ಲಿ ಈ ದಾನಗಳು ನಡೆದವು. ಕ್ರಿ.ಶ. 1516 ರ ಆಗಸ್ಟ್ 26 ರಂದು ಮೊದಲನೆಯ ದಾನವು ನಡೆದರೆ ಅದೇ ಸಂವತ್ಸರದ ನವಂಬರ್ 7ರಂದು ಎರಡನೆಯ ದಾನವು ನಡೆಯಿತು. ಈ ಮೂಲಧನದ ಮೇಲೆ ಉಂಟಾಗುವ ಬಡ್ಡಿಯ ಹಣದಿಂದ ಶ್ರೀವೆಂಕಟೇಶ್ವರಸ್ವಾಮಿ, ಶ್ರೀ ಗೋವಿಂದರಾಜಸ್ವಾಮಿ, ಆಳ್ವಾರರು ಹಾಗೂ ಉಡೆಯವರ್‌ಗಳಿಗೆ ಗೊತ್ತಾದ ದಿನಗಳಂದು (ಜಿಟಿ. 60 ಹಾಗೂ 106) ನಿವೇದನೆಯನ್ನು ಅರ್ಪಿಸಲು ಏರ್ಪಾಡು ಮಾಡಿದೆ. ಈ ನಾರಾಯಣ ಜೀಯರ ಗುರುವಾದ ವಣ್‌ಶಠಗೋಪ ಜೀಯರೇ ಕೃಷ್ಣದೇವರಾಯನ ಆಸ್ಥಾನ ಕವಿಯಾದ ಅಲ್ಲಸಾನಿ ಪೆದ್ದನನು ತನ್ನ ಗುರುವೆಂದು ಗೌರವ ಸೂಚಿಸುತ್ತ ತನ್ನ ಮನುಚರಿತ್ರಮು (ಅಧ್ಯಾಯ 1 - ಪೀಠಿಕಾ ಸಂಧಿ ಪದ್ಯ - 6) ಕೃತಿಯಲ್ಲಿ ಎಲ್ಲ ವಿದ್ಯೆಯ ಮೂಲಸ್ಥಾನವೆಂದೂ, ತನ್ನ ಕರುಣಾಪೂರ್ಣ ದೃಷ್ಟಿಯ ಬೆಳುದಿಂಗಳಿ ನಿಂದ ಶಿಷ್ಯರ ಅಜ್ಞಾನ, ಪಾಪಗಳ ತಮವನ್ನು ಕಳೆಯುವವನೆಂದೂ ಕೀರ್ತಿಸಿರುವ ಶಠಗೋಪಯತಿ ಆಗಿರಬೇಕು.

ಇಲ್ಲಿನ ಹಲವು ಶಾಸನಗಳಲ್ಲಿ ಕೆಲವರು ಶ್ರೋತ್ರೀಯ ಬ್ರಾಹ್ಮಣರೂ ಕಂಡು ಬರುತ್ತಾರೆ. ಪಡೆವೀಡು ರಾಜ್ಯದ ಅಗರಂ ಕಂಪಸಮುದ್ರದ ನಿವಾಸಿ ಆಪಸ್ತಂಭ ಸೂತ್ರದ ಗೌತಮ ಗೋತ್ರದವನಾದ ತತ್ವಾದಿ ತಿರುಮಲ ಯ್ಯನ ಮಗ ನಾರಾಯಣಯ್ಯ ಅಥವಾ ನಾರಾಯಣದೇವ ಇಂತಹ ಒಬ್ಬ ಶ್ರೋತ್ರೀಯ ಬ್ರಾಹ್ಮಣ. ಈತ ಶಕ 1436 ಭಾವ ಸಂವತ್ಸರದಲ್ಲಿ ತನ್ನ ಶ್ರೋತ್ರೀಯ ಗ್ರಾಮಗಳಲ್ಲಿ ಒಂದಾದ - ಕೊಂಡವಲಿ ಸೀಮೆಯ ತಿವಲೈ ಪ್ಪೊಂಡಿ ಗ್ರಾಮದ ದಾನ ನೀಡಿದ್ದು ಎರಡು ಶಾಸನಗಳಲ್ಲಿ ದಾಖಲಾಗಿದೆ. (ತಿ.ತಿ. 27, 284) (26-7-1514) ತಂದೆಯಾದ ತತ್ವಾದಿ ತಿಮ್ಮಣ್ಣನ್‌ನ ಅವಿಚ್ಛಿನ್ನ ಭಕ್ತಿ ಪ್ರಪತ್ತಿಗಳು ತಿ.ತಿ. 344 ನೇ ಶಾಸನದಲ್ಲಿ ವ್ಯಕ್ತವಾಗಿದೆ. 1452 ಶಕ, ವಿಕೃತಿ ಸಂವತ್ಸರದಲ್ಲಿ ಗಂಡಿಕೋಟೆ ಸೀಮೆಯ ಮುತ್ತೂರಿ ಗ್ರಾಮವನ್ನು ನೀಡಿದ (29-12-1529) (ತಿ.ತಿ. 927)

ಸಾಲೈಪ್ಪಾಕ್ಕಂ ನರಸಯ್ಯರ್ ಮತ್ತೊಬ್ಬ ಶ್ರೋತ್ರೀಯ ಬ್ರಾಹ್ಮಣ. ಈತ ಕಶ್ಯಪಗೋತ್ರದ ಅಶ್ವಲಾಯನ ಸೂತ್ರ - ಋಕ್ ಶಾಖೆಯ ಮಂತ್ರವಾದಿ ಮಾದರಸರ ಪುತ್ರ. ಕೃಷ್ಣದೇವರಾಯನ ಕಾಲದಲ್ಲಿ, ಶ್ರೀ ವೆಂಕಟೇಶ್ವರಸ್ವಾಮಿಯ ಆಸ್ಥಾನದ ವಂಶಪಾರಂಪರ್ಯದ ಗಾಯಕರಾದ ತಾಳ್ಳಪಾಕ ಕವಿಗಳ ಒಂದೇ ಒಂದು ಶಾಸನ ತಿ.ತಿ. 76 ಕಂಡು ಬರುತ್ತದೆ. ಶಕ 1439 ರ ಈಶ್ವರ ಸಂವತ್ಸರದಲ್ಲಿ (30-11-1517) ಋಕ್ ಶಾಖೆಯ ಅಶ್ವಲಾಯನ ಸೂತ್ರದ ಭಾರದ್ವಾಜ ಗೋತ್ರದ ಅನ್ನಮಯ್ಯಂಗಾರ್ಯರ ಮಗ ತಾಳ್ಳಪಾಕ ತಿರುಮಲಯ್ಯಂಗಾರ್ಯನು ಸ್ವಾಮಿಯ ನಿತ್ಯ ಸೇವೆಗೆಂದು ಆಲಯ ಭಂಡಾರಕ್ಕೆ 1500 ನರ್ಪಣಗಳನ್ನು ನೀಡಿದ್ದನ್ನು ಇದು ಗುರುತಿಸುತ್ತದೆ.

ನಗರತ್ತಾರರಲ್ಲಿ ಹಲವರು ಕಂಡುಬರುತ್ತಾರೆ. ತಿರುಪತಿಯ ಒಂದು ಉಪವಿಭಾಗವಾದ ನರಸಿಂಗರಾಯ ಪುರದಲ್ಲಿ ವಾಸಿಸುತ್ತಿದ್ದ ಕುಂಡಿನ ಗೋತ್ರದ ವಂದ್ಯೆಯರಂ ಚಿನ್ನಮುಸೆಟ್ಟಿಯ ಮಗನಾದ ಪಪ್ಪುಸೆಟ್ಟಿ ಇಂತಹ ನಗರ ವಾಸಿಗಳಲ್ಲಿ ಒಬ್ಬ. ಶಕ 1434 ರಲ್ಲಿ ಆಂಗಿರಸ ವರ್ಷದಲ್ಲಿ ಈತ ತನ್ನ ಹೆಸರಿನಲ್ಲಿ ಶ್ರೀ ವೆಂಕಟೇಶ್ವರ ಸ್ವಾಮಿ, ಶ್ರೀ ಗೋವಿಂದರಾಜಸ್ವಾಮಿ ಹಾಗೂ ಮತ್ತಿತರ ದೇವರುಗಳ ಸೇವೆಗೆಂದು 2500 ನರ್ಪಣಗಳನ್ನು ನೀಡಿದ (1512 - ತಿ.ತಿ.267) ಇದೇ ತಿರುಪತಿಯ ನರಸಿಂಗಾಪುರದಲ್ಲಿ ವಾಸಿಸುತ್ತಿದ್ದ ಧರ್ಮಾಪುರಂ ತಿಮ್ಮುಸೆಟ್ಟಿಯ ಮಗ ಕೊಂಡುಸೆಟ್ಟಿ ಮತ್ತೊಬ್ಬ ನಾಗರಿಕ. ಯಾವುದೋ ಕಾರಣಕ್ಕಾಗಿ ಶ್ರೀಕೃಷ್ಣರಾಯನು ಈತನಿಗೆ ವೇಲಮಪಾಳ್ಯದ ಹತ್ತಿರದ ಚಿಂತಯಪಲ್ಲಿಯನ್ನು ಉಂಬಳಿಯಾಗಿ ನೀಡಿದ್ದನು. ಕೃಷ್ಣದೇವರಾಯನು ತನ್ನ ಆಡಳಿತದ ಆರಂಭದಲ್ಲಿ ಎಂದರೆ ಶಕವರ್ಷ 1433 ರ ಪ್ರಜೋತ್ಪತ್ತಿನಾಮ ಸಂವತ್ಸರ ಕರ್ಕಾಟಕ ಬಹುಳ ಚತುರ್ದಶಿಯ ಮೊದಲು (23-11-1511) ದಕ್ಷಿಣ ದಂಡಯಾತ್ರೆಯನ್ನು ಆರಂಭಿಸಿದಾಗ ಸೈನ್ಯಕ್ಕೆ ಸಾಮಾನುಗಳ ಸರಬರಾಜು ಮಾಡಿ ಸೇವೆ ಸಲ್ಲಿಸಿದ್ದಕ್ಕೆ ಪ್ರತಿಯಾಗಿ ಈ ಗ್ರಾಮವನ್ನು ಇನಾಂ ಆಗಿ ನೀಡಿರಬೇಕು. 1512 ರ ಸೆಪ್ಟಂಬರು 22 ರಂದು ಶಿವನ ಸಮುದ್ರದಲ್ಲಿ ರಾಜಕಾರ್ಯದಲ್ಲಿ ಪಾಳಯ ಹೂಡಿದಾಗ ರಾಜನಿಗೂ ತನಗೂ ವಿಜಯ ದೊರೆಯಲೆಂದು ವೀರಯ್ಯ ದಂಡನಾಯಕನು ತಂಜಾವೂರಿನ ಸೆಂಡಲೈ ಗ್ರಾಮವನ್ನು ಆಲಯಕ್ಕೆ ಸರ್ವಮಾನ್ಯ ನೀಡಿದಾಗ ಹೇಳುವಂತೆ (1926ರ 213) ಶಾಸನದಲ್ಲಿ ದಾಖಲೆಯಾಗಿದೆ. ಈ ಹೊತ್ತಿಗಾಗಲೇ ಕೊಂಡು ಸೆಟ್ಟಿಯು ಶ್ರೀಕಾಳಹಸ್ತಿ ಗಿರೀಶ್ವರಸ್ವಾಮಿಗೆ - ಶ್ರೀಕಾಳಹಸ್ತಿಯ ಶ್ರೀಕಾಳಹಸ್ತೀಶ್ವರಸ್ವಾಮಿಗೆ - ಗ್ರಾಮದ ಅರ್ಧಭಾಗವನ್ನು ದಾನನೀಡಿದ್ದು ಮಿಕ್ಕ ಅರ್ಧಭಾಗವನ್ನು ಶ್ರೀ ವೆಂಕಟೇಶ್ವರಸ್ವಾಮಿ, ಶ್ರೀ ಗೋವಿಂದ ರಾಜಸ್ವಾಮಿಗಳಿಗೆ ನಿತ್ಯ ಸೇವೆಮಾಡಲು ಶಕ 1439 ರ ಈಶ್ವರ ಸಂವತ್ಸರದಲ್ಲಿ (27-11-1517) ಆಲಯಕ್ಕೆ ನೀಡಿದನು. ಎದುರಿಗೆ ಬರುವ ಮೂರನೆಯ ವರ್ತಕ ಪ್ರಮುಖನೆಂದರೆ ತಿರುಪತಿಯ ನಿವಾಸಿಯಾದ ವೆಣ್ಣಕ್ಕ ಗೋತ್ರದ ಪೆರಿಯ ಪೆಂಗಂಡ್ಯೆಯ ಮಗನಾದ ಶರಣು ಶೆಟ್ಟಿ, ಶಕ 1449 ರ ಸರ್ವಜಿತ್ ನಾಮ ಸಂವತ್ಸರದಲ್ಲಿ (16-8-1527) ಈತನು 3700 ಪಣಂಗಳನ್ನು ಠೇವಣಿಯಾಗಿಟ್ಟು, ಶ್ರೀ ಗೋವಿಂದರಾಜಸ್ವಾಮಿಗೆ ಹಲವು ಸೇವೆ ಏರ್ಪಡಿಸಿದನು. ನಗರತ್ತಾರ್ ಎಂಬ ಪದಕ್ಕೆ ಹಲವು ಸಲ ಗ್ರಾಮಪಂಚಾಯತಿಯ ಸದಸ್ಯ ಎಂಬ ಅರ್ಥವನ್ನೂ ನೀಡಲಾಗಿದೆ. ಆದರೆ ಈ ದಾಖಲೆಗಳಲ್ಲಿ ಬಳಸಲಾಗಿರುವ ಅತಿ ಸೀಮಿತ ಅರ್ಥದಲ್ಲಿ ಈ ಪದವನ್ನು ವೈಶ್ಯ ಅಥವಾ ಕೋಮಟಿ ಜನಾಂಗವನ್ನು ಮಾತ್ರ ಉದ್ದೇಶಿಸಿ ಬಳಸಲಾಗಿದ್ದು, ಭಾರತದಲ್ಲಿ ಅತಿ ಪ್ರಾಚೀನ ಕಾಲದಿಂದಲೂ ವ್ಯಾಪಾರ ವಹಿವಾಟು ನಡೆಸುತ್ತ ಬಂದಿರುವ ವರ್ತಕ ಜನಾಂಗವನ್ನೆ ಕುರಿತದ್ದಾಗಿರಬೇಕು.

## ಅಚ್ಯುತರಾಯ

ಅಚ್ಯುತರಾಯನು ಪಟ್ಟಾಭಿಷಿಕ್ತನಾದ ಮೇಲೆ ತಿರುಮಲೆಯ ಆಲಯವು ತನ್ನ ಅಭಿವೃದ್ಧಿಯ ಅತ್ಯುನ್ನತ ನೀರಿನ ಗೆರೆಯನ್ನು ತಲುಪಿತು ಎನ್ನಬೇಕು. ಆತನು ಆಲಯಕ್ಕೆ ಅಸಂಖ್ಯವಾದ ಸೇವೆಗಳನ್ನು ಸಮರ್ಪಣೆಗಳನ್ನು ಮಾಡಿದ್ದಾನೆ. ಆತನ ರಾಣಿವರದಾಜಿ ಅಮ್ಮಣ್ಣಿಯು ತಿರುವೆಂಕಟಮುಡಿಯಾನನ ಆಲಯದಲ್ಲಿ ಅವಸರ ಕಾರ್ಯಕ್ರಮವನ್ನು ಏರ್ಪಡಿಸಿದಳು.

ಶಾಸನಗಳಲ್ಲಿ ಕಂಡುಬರುವ ಅಚ್ಯುತರಾಯನ ಅಧಿಕಾರಿಗಳಲ್ಲಿ ಹಲವರೆಂದರೆ,

1. ಪ್ರಧಾನಿ ಸಾಳುವ ತಿಮ್ಮಣ್ಣ.
2, ಸಾಳುವ ಗೋವಿಂದರಾಜ.
3. ರಾಯಸಂ ಕೊಂಡಮರಸಯ್ಯ.
4. ಕರಣಿಕ ಬಸವರಸ.
5. ಉಡಿಯಂ ಎಲ್ಲಪ್ಪನಾಯಕರ್.
6. ಬೈಯಪ್ಪ ನಾಯಕರ್.
7. ಸಕಲರಾಜ ಪೆರಿಯ ತಿರುಮಲರಾಜ.
8. ಸಕಲರಾಜ ಸಿರು ತಿರುಮಲರಾಜ.
9. ಭೂತನಾಥ ರಾಮ ಭಟ್ಲಯ್ಯ.
10. ಭೂತನಾಥ ಎಲ್ಲಪ್ಪಯ್ಯ.
11. ಇಮ್ಮಡಿ ಎಲ್ಲಪ್ಪಯ್ಯ.
12. ಬಯಕಾರ ರಾಮಪ್ಪಯ್ಯ.
13. ದಳವಾಯಿ ತಿಮ್ಮರಸಯ್ಯ
14. ಪೆರುಂಕೊಂಡೈ ವೀರಪ್ಪಣ್ಣ.
15. ಅಂಗರಾಜ ನಾಗಪ್ಪಯ್ಯ.
16. ಅಡೈಪ್ಪಂ ವಿಶ್ವನಾಥನಾಯಕ.
17. ಅಡೈಪ್ಪಂ ಮಲ್ಲಪ್ಪನಾಯಕ.
18. ರಾಯಸಂ ರಾಮಚಂದ್ರ ದೀಕ್ಷಿತ.
19. ಭಂಡಾರಂ ತಿಮ್ಮಪ್ಪ ಹಾಗೂ ಸಿರುತಿಮ್ಮಪ್ಪ.
20. ನೋಟ್ಟಕಾರ ನಾಗಪ್ಪ.
21. ದಳವಾಯಿ ಕೃಷ್ಣಪ್ಪನಾಯಕ.
22. ಪೆರಿಯ ತಿಮ್ಮಪ್ಪ ಹಾಗೂ ಚಿನ್ನರಾಮಪ್ಪ.
23. ಶ್ರೀರಂಗನಾಯಕ.
24. ಸಜ್ಜರವುತು ಚಿಕ್ಕಯ್ಯ ಸಾವಯನ್.
25. ಮಟ್ಲ ರಾಮಯ್ಯ.
26. ಅಸ್ತಿಗಿರಿನಾಥರ್.
27. ಗಂಗುರೆಡ್ಡಿ.
28. ಅಡೈಪ್ಪಂ ಪರ್ಮಾದಮ್ಮನ್ ಹಾಗೂ ರುಕ್ಮಿಣಿಯಮ್ಮ.
29. ವೆಂಗಳಯ್ಯರ್.
30. ಮಲೆಯಪ್ಪ ರಾಜನ್.

31. ವೆಂಕಟಾದ್ರಿ ಅಯ್ಯನ್.
32. ಕಾಳಹಸ್ತಿ ದೀಕ್ಷಿತ.
33. ಮಲ್ಲರಸರ್ ನಗರಗಳ್.
34. ಗೋವಿಂದ ಪಂಡಿತ.
35. ಪಂಡಿತ ಪುರುಷೋತ್ತಮಯ್ಯ.
36. ನಾರಾಯಣ ಶೆಟ್ಟಿ.
37. ಪೆರಿಯ ಸಾಮು ಶೆಟ್ಟಿ.
38. ನಾಮಿ ಶೆಟ್ಟಿ.
39. ಚರಣು ಶೆಟ್ಟಿ.
40. ಕೃಷ್ಣಪ್ಪ ಶೆಟ್ಟಿ.
41. ತಿರುಮಲೈನಾಥರ್ ಪಿಳ್ಳೈ.
42. ಪಿಳಾಯ್ ಪೊರುತ್ತರ್.
43. ಅಲ್ಲಪ್ಪ ಪಿಳ್ಳೈ.

**ಸದಾಶಿವರಾಯ**

ತಿರುಮಲೆಯಆಲಯದ ಶಾಸನಗಳಲ್ಲಿ ನೂರ ಐವತ್ತಕ್ಕಿಂತಲೂ ಹೆಚ್ಚು ಶಾಸನಗಳಲ್ಲಿ ಸದಾಶಿವ ರಾಯನು ಪ್ರತಿನಿಧಿಸಲ್ಪಟ್ಟಿದ್ದು ಎಲ್ಲವೂ ಅವನ ಪ್ರಶಸ್ತಿಯೊಡನೆ ಆರಂಭವಾಗುತ್ತವೆ. ಈ ಪ್ರಶಸ್ತಿಯ ಒಂದು ವೈಶಿಷ್ಟ್ಯವೆಂದರೆ ದಕ್ಷಿಣ ಭಾರತದ ಭೂಭಾಗ ಮೂರು ದಿಕ್ಕಿನ ಸಮುದ್ರಪರ್ಯಂತ ಭೂಮಿಯ ಅರಸನೆಂದು ಘೋಷಿಸುವುದೇ ಅಲ್ಲದೆ ಭಾರತದ ಮೇಲ್ಮೆಲಕ್ಷಣದಲ್ಲಿ ಇಲ್ಲದ ಉತ್ತರ ಸಮುದ್ರದ ವರೆಗಿನ ಒಡೆತನವನ್ನೂ ಇವನಿಗೇ ಆರೋಪಿಸಲಾಗಿರುವುದು. ಈ ಶಾಸನಗಳಲ್ಲಿ ಸದಾಶಿವರಾಯನ ಅತಿ ಪ್ರಾಚೀನ ಉಲ್ಲೇಖವೆಂದರೆ ಶಕವರ್ಷ 1463 ರ ಪ್ಲವನಾಮ ಸಂವತ್ಸರದ ಕರ್ಕಾಟಕ ಮಾಸದ ಬಹುಳ ದ್ವಾದಶಿಯ ಪುನರ್ವಸು ನಕ್ಷತ್ರದ ಗುರುವಾರ ದೊರೆಯುವುದು. (21-7-1541) (ತಿ.ತಿ. 659) ಇದರಂತೆ ಯಂದಲೂರು ತಿರುಮಲೆ ಜೋಯಿಸರ ಮಗನಾದ ಶ್ರೀರಾಮಭಟ್ಟರ್ ಆಲಯಕ್ಕೆ ಮುತ್ತೂರು ಹಾಗೂ ಇನ್ನೊಂದು ಹಳ್ಳಿಯನ್ನು ದಾನವಾಗಿ ನೀಡಿದನು. ಈ ದಾನವು ತಿ.ತಿ. 504 ರಲ್ಲಿ ಇವನ ಹಿಂದಿನವನಾದ ಅಚ್ಯುತರಾಯನ ಆಳ್ವಿಕೆಗೆ ಹೇಳಲಾದ ಶಕವರ್ಷ 1463 ರ ಪ್ಲವನಾಮ ಸಂವತ್ಸರ ಮೀನ ಮಾಸದ ಶುಕ್ಲ ಸಪ್ತಮಿ ಆರುದ್ರಾ ನಕ್ಷತ್ರದ ಗುರುವಾರಕ್ಕಿಂತ ಎಂಟು ತಿಂಗಳು ಹಿಂದಿನದಾಗುತ್ತದೆ. (23-3-1542). ಶಕವರ್ಷ 1459 ರ ಹೇವಿಳಂಬಿ ನಾಮಸಂವತ್ಸರದಲ್ಲಿಯೇ ಎಂದರೆ (1537) ಐದು ವರ್ಷಗಳ ಮೊದಲೇ ಸದಾಶಿವರಾಯನನ್ನು ಯುವರಾಜನನ್ನಾಗಿ ನಿಯಮಿಸ ಲಾಗಿದ್ದಿತೆಂದು ಹೇಳಲಾಗಿದೆ. ಈ ಹೇಳಿಕೆಯು ಶಕ 1460 ರಲ್ಲಿನ ವಿಳಂಬಿ ನಾಮ ಸಂವತ್ಸರದ ಲೇಪಾಕ್ಷಿಯ ಶಾಸನದ (89-1912)ಲ್ಲಿ ಹೇಳುವಂತೆ ದೇವರಾಯಪುರಕ್ಕೆ ಸದಾಶಿವಪುರ ಎಂಬ ಹೆಸರು ನೀಡಲಾಯಿತೆಂಬುದ ರಿಂದ ಸಮರ್ಥಿತವಾಗುತ್ತದೆ.

ಸದಾಶಿವರಾಯನ ಇತ್ತೀಚಿನ ಕಾಲದ ದಾಖಲೆಯೆಂದರೆ ಶಕವರ್ಷ 1495ರ ಶ್ರೀಮುಖನಾಮ ಸಂವತ್ಸರದ ಕುಂಭಮಾಸದ್ದು (29-1-1574) (ಜಿ.ಟಿ 133) ಇಲ್ಲಿ ಒಬ್ಬಾನೊಬ್ಬ ಅರವೀಡು ವಂಶೀಕನು ಆಲಯಕ್ಕೆ ದೇಣಿಗೆಯನ್ನು ನೀಡಿದ್ದಾನೆ. ಬೇರೆಡೆಯಲ್ಲಿ ಈತನಿಗೆ ಇನ್ನೂ ಈಚಿನ ಉಲ್ಲೇಖ ದೊರೆಯುತ್ತದೆ. ಅದೆಂದರೆ ಶಕವರ್ಷ 1497 ರ ಯುವ ಸಂವತ್ಸರದ ಋಷಭ ಮಾಸದ್ದ(9-5-1575) ಈ ನಂತರದ ದಾಖಲೆಯಿಂದಾಗಿ ಒಂದನೇ ತಿರುಮಲನು ರಾಜ್ಯದ ಆಡಳಿತವನ್ನು ಶಕ 1493 ರಲ್ಲಿ ವಾಸ್ತವವಾಗಿ ತನ್ನ

ಕೈವಶ ಮಾಡಿಕೊಂಡ ಮೇಲೆಯೂ, ಸದಾಶಿವರಾಯನ ನಾಮಮಾತ್ರ ಅರಸುತನ ಮುಂದುವರೆದಿದ್ದಿತು ಎಂಬುದು ಸೂಚಿತ ವಾಗುತ್ತದೆ. ಶಕವರ್ಷ 1492 ರ ವರೆಗೆ ಒಂದನೇ ತಿರುಮಲನಿಗೆ ಮಹಾಮಂಡಲೇಶ್ವರ ಬಿರುದು ಮಾತ್ರವಿದ್ದು ಹೊರದಲ್ಲಿ ಸಾಮ್ರಾಟ ಪ್ರಶಸ್ತಿ ಪಡೆದಿದ್ದು ಅವನ ನಿಜಸ್ಥಿತಿಯನ್ನು ಬಯಲಿಗಿಡುತ್ತದೆ. ಹೀಗಾಗಿ ಅಚ್ಯುತರಾಯನ ಆಡಳಿತದ ಕೊನೆಗಾಲದ ಸಹಿತವಾಗಿ ಸದಾಶಿವರಾಯನ ಆಡಳಿತವು ಶಕವರ್ಷ 1459 ರಿಂದ 1497 ರ ವರೆಗೆ ಸುಮಾರು ನಲವತ್ತು ವರ್ಷಗಳ ಕಾಲ ಹರಡಿದ್ದು ಎಂದು ಹೇಳಬೇಕು.

ಸದಾಶಿವರಾಯನು ತಿರುಮಲೆಗೆ ಎರಡು ಸಾರಿ ಬಂದು ಸ್ವಾಮಿಯನ್ನು ಸಂದರ್ಶಿಸಿದ ಎಂದು ಶಾಸನ ಗಳಲ್ಲಿ ಸೂಚಿಸಲಾಗಿದೆ. ಮೊದಲನೆಯದು ಕ್ರಿ.ಶ. 1554 ಹಾಗೂ ಎರಡನೆಯದು ಕ್ರಿ.ಶ. 1563 ರಲ್ಲಿ. ರಾಜನು ಖಾಸಗೀ ವ್ಯಕ್ತಿಗಳಿಗೆ ನೀಡಿದ ಬಹುಮಾನ ಗಳೂ ಕೆಲವು ಕಂಡುಬರುತ್ತವೆ.

ಅಳಿಯ ರಾಮರಾಜನು ವಿಜಯನಗರದ ಸಿಂಹಾಸನದಮೇಲೆ ಸದಾಶಿವರಾಯನನ್ನು ಪ್ರತಿಷ್ಠಾಪಿಸಿದುದ ರಿಂದಾಗಿ ಅರವೀಡು ಮತ್ತಿತರ ರಾಜಮನೆತನಗಳ ಪ್ರಮುಖರೆಲ್ಲ ಒಟ್ಟಿಗೆ ಈತನನ್ನು ಬೆಂಬಲಿಸುವಂತಾಗಿದ್ದಿತು. ತಿರುಮಲೆಯ ಶಾಸನಗಳಲ್ಲಿ ಅರವೀಡು ಮನೆತನದ ಹತ್ತು ಮಂದಿ ಸೋದರರು - ಸೋದರ ಸಂಬಂಧಿ ಗಳು ಆಗಿದ್ದವರು ಕಂಡುಬರುತ್ತಾರೆ. ಈ ಕಾಲದಲ್ಲಿ ತಿರುಮಲೆಯ ಆಲಯ ವ್ಯವಹಾರಗಳಲ್ಲಿ ಪ್ರಮುಖ ಪಾತ್ರವನ್ನು ಇವರು ವಹಿಸಿದರು. ಅವರುಗಳೆಂದರೆ ಪೊಟ್ಲಪಾಟಿ ತಿಮ್ಮರಾಜ - ಅವನ ನಾಲ್ಕು ಮಕ್ಕಳು - ತಿಮ್ಮರಾಜ, ವಿಠಲರಾಜ, ಚಿನ್ನ ತಿಮ್ಮರಾಜ, ಪಾಪ ತಿಮ್ಮರಾಜ; ಅಳಿಯ ರಾಮರಾಜ, ತಿರುಮಲರಾಯ ಕೊಂಡರಾಜ, ಪೊಟ್ಲಪಾಟಿ ರಂಗರಾಜ ಹಾಗೂ ಶ್ರೀಪತಿ ಓಬಳೇಶ್ವರ. ಅರವೀಟಿ ಬುಕ್ಕರಾಜನ ಮೊಮ್ಮಗನೂ, ರಾಮರಾಜನ ಮಗನೂ ಆಗಿದ್ದ ಪೊಟ್ಲಪಾಟಿ ತಿಮ್ಮರಾಜನು ಇವರಲ್ಲಿ ಹಿರಿಯ. ತಿಮ್ಮರಾಜನ ತಮ್ಮಂದಿರು ಪೆದ್ದಕೊಂಡರಾಜ ಹಾಗೂ ಶ್ರೀರಂಗರಾಜ. ತಿಮ್ಮರಾಜನಿಗೆ ಪತ್ನಿ ಗೋಪಮಾಂಬೆಯಿಂದ ನಾಲ್ಕು ಜನ ಮಕ್ಕಳು - ತಿಮ್ಮರಾಜ ಅಥವಾ ತಿರುಮಲರಾಜ, ವಿಠಲರಾಜ, ಚಿನ್ನತಿಮ್ಮರಾಜ, ಪಾಪತಿಮ್ಮರಾಜ. ಪೆದ್ದಕೊಂಡರಾಜನ ಮಗ ಕೋನೇಟಿರಾಜ. ಇವನಿಗೆ ನಾಲ್ವರು ಮಕ್ಕಳು. ಔಬಳರಾಜ, ಕೊಂಡ ರಾಜ, ತಿಮ್ಮರಾಜ, ರಂಗರಾಜ. ಶ್ರೀರಂಗರಾಜನಿಗೆ ಐದು ಮಂದಿ ಮಕ್ಕಳು - ಕೋನರಾಜ, ತಿಮ್ಮರಾಜ, ಅಳಿಯ ರಾಮರಾಜ, ತಿರುಮಲರಾಜ ಹಾಗೂ ವೆಂಕಟಾದ್ರಿರಾಜ. ಜೊತೆಗೇ ಗೊಬ್ಬೂರಿ ಮತ್ತಿತರ ಮನೆತನಗಳಿಗೆ ಮದುವೆ ಮಾಡಿಕೊಟ್ಟು ನಾಲ್ಕು ಮಂದಿ ಹೆಣ್ಣುಮಕ್ಕಳು. ಅರವೀಡು ವಂಶದ ಹಿರಿಯ ಬುಕ್ಕರಾಜನು ಪತ್ನಿ ಬಲ್ಲಾಂಬಿಕೆಯಲ್ಲಿ ರಾಮರಾಜನನ್ನು ಪಡೆದು, ರಾಮರಾಜನಿಂದ ನಡೆದ ಒಂದು ಕವಲು ಮೇಲಿನದಾದರೆ ಬುಕ್ಕರಾಜನ ಇನ್ನೊಬ್ಬ ಹೆಂಡತಿ ಅಬ್ಬಲದೇವಿಯಿಂದ ಮೂವರು ಮಕ್ಕಳನ್ನು ಪಡೆದಿದ್ದ. ಸಿಂಗಾರಯ್ಯ ಅಥವಾ ಸಿಂಗರಾಜ, ರಾಮರಾಜ, ಅಹೋಬಿಲರಾಜ. ಇವರಿಗೆ ನಂದ್ಯಾಲದ ಒಡೆತನವನ್ನು ನೀಡಿದನಂತರ ಇವರ ವಾರಸರು ನಂದ್ಯಾಲ ವಂಶದವರೆಂದೇ ಗುರುತಿಸಲ್ಪಟ್ಟವರಾದರು. ಶ್ರೀರಂಗರಾಜನ ಮಗ ನಂದ್ಯಾಲ ನರಸಿಂಗರಾಜ. ಈತನ ಇಬ್ಬರು ಮಕ್ಕಳು ಔಬಳರಾಜ ಮತ್ತು ನರಸರಾಜ. ಹೀಗೆ ಅರವೀಡು ನಂದ್ಯಾಲ ಮನೆತನಗಳು ತಮ್ಮ ಮುಖ್ಯರೊಡನೆ ಒಂದಾಗಿ ಒಂದು ಸುಸಜ್ಜಿತ ಹಾಗೂ ಸದೃಢಶಕ್ತಿಯಾಗಿ, ವಿಜಯನಗರದ ಆಡಳಿತದಲ್ಲಿ ಒಂದು ಶತಮಾನದ ಹಿಂದೆ ಸಾಳುವ ಮನೆತನ ಬಲವಾಗಿ ಮೆರೆದಂತೆಯೇ ಇಡೀ ಸೀಮೆಯಲ್ಲಿ ಅಜೇಯವಾದ ಬಲವಾಗಿದ್ದಿರಬೇಕು.

ತಿ.ತಿ. 633ರಲ್ಲಿ ಪ್ರತಿನಿಧಿಸಲ್ಪಟ್ಟಿರುವ ತಿರುಮಲರಾಯನು ಅರವೀಟಿ ಬುಕ್ಕರಾಯನ ಮಗನಾಗಿ ಅಳಿಯ ರಾಮರಾಜನ ತಮ್ಮನಾಗಿದ್ದ. ತಿರುಮಲೆಯ ಆಲಯದ ಸಂಪಂಗಿ ಪ್ರದಕ್ಷಿಣೆಯಲ್ಲಿ ಈತನು ಒಂದು ಊಂಜಲ್ ಮಂಟಪವನ್ನು ಕಟ್ಟಿಸಿದ. ಆಲಯದ ಧ್ವಜಸ್ತಂಭದ ಪ್ರಾಕಾರದಲ್ಲಿ ಉತ್ಸವ ಸಂದರ್ಭಗಳಲ್ಲಿ ದೇವರ ಮೆರವಣಿಗೆ ಬಂದಾಗ ಬಳಸಲು ಯೋಜಿಸಲಾದ ಉಯ್ಯಾಲೆ ಮಂಟಪ. ಈಗ ತಿರುಮಲರಾಯ ಮಂಟಪವೆಂದು ಕರೆಯಲಾಗುವ ಸಂಪಂಗಿ ಪ್ರದಕ್ಷಿಣೆಯಲ್ಲಿ ಧ್ವಜಸ್ತಂಭದ ದಕ್ಷಿಣಕ್ಕೆ ಇರುವ ಮಂಟಪವೇ

ಇದಾಗಿರಬೇಕು. ಶಕ 1483ರ ದುರ್ಮತಿ ಸಂವತ್ಸರದ ಧನುಸ್ಸಿನಲ್ಲಿ (15-12-1561) ಈತನು ಸ್ವಾಮಿಯ ಉತ್ಸವ ಮೂರ್ತಿಗಳ ಮೆರವಣಿಗೆಯಲ್ಲಿ ನಿವೇದನಕ್ಕೆಂದು ದಾನ ನೀಡಿದ. ಈ ಮೆರವಣಿಗೆಯ ದಿನಗಳೆಂದರೆ ವಸಂತೋತ್ಸವದ ಐದು ದಿನಗಳು ಸಾಳುವ ನರಸಿಂಹನಿಂದ ಆರಂಭಿಸಲ್ಪಟ್ಟ ಊಂಜಲ್ ತಿರುನಾಳ್ (ಉಯ್ಯಾಲೆ ಉತ್ಸವ) ತಿರುಕ್ಕೊಡಿ ತಿರುನಾಳ್ (ಬ್ರಹ್ಮೋತ್ಸವ) ನ ಹತ್ತು ದಿನಗಳು, ಹದಿನಾಲ್ಕು ಇತರ ಹಬ್ಬದ ದಿನಗಳು ಹಾಗೂ ಅಂದು ಸ್ವಾಮಿಯ ಆಲಯದಲ್ಲಿ ಆಚರಣೆಯಲ್ಲಿದ್ದ ಇತರ ಹಬ್ಬದ ದಿನಗಳು. ವಸಂತ ತಿರುನಾಳ್ ಉತ್ಸವದ ಐದುದಿನಗಳಲ್ಲಿ ಉತ್ಸವರನ್ನು ಮೆರವಣಿಗೆ ಮಾಡಲು ಮೊದಲ ದಿನ ಶೇಷವಾಹನ, ಎರಡನೆಯದಿನ ಹಂಸವಾಹನ, ಮೂರನೆಯದಿನ ಗರುಡವಾಹನ, ನಾಲ್ಕನೆಯದಿನ ವೈಕುಂಠವಾಹನ (ರಥ) ಹಾಗೂ ಐದನೆಯ ದಿನ ಆನೈಸುಬಿರಾನ್ (ಗಜವಾಹನ). ವಸಂತ ತಿರುನಾಳಿನ ಈ ದಿನಗಳಲ್ಲಿ ಉತ್ಸವ ಮೂರ್ತಿಗಳ ಊಂಜಲ್ ಸೇವೆಗೆ ಹಾಗೂ ನಿವೇದನಕ್ಕೆ ಊಂಜಲ್ ಮಂಟಪವನ್ನು ಬಳಸಲು ಏರ್ಪಾಡು ಮಾಡಿದ್ದನ್ನು ತಿ.ತಿ. 649, 659 ಎ. ಶಾಸನಗಳಲ್ಲಿ ಕಾಣಬಹುದಾಗಿದೆ. ತಿರುಮಲರಾಜನ ಡೋಲಮಹೋತ್ಸವದ ಈ ಏರ್ಪಾಡುಗಳು ತಿ.ತಿ.190 ಶಾಸನದಲ್ಲಿಯೂ (ಇದು ಮುರಿದು ಹೋಗಿರುವ ಶಾಸನ) ಕಂಡು ಬರುವುದು. ಇಲ್ಲಿ ಅರವೀಡುವಂಶದ ಆರಂಭದಿಂದ - ಬುಕ್ಕರಾಜನಿಂದ - ತಿರುಮಲೇಂದ್ರ ಹಾಗೂ ಅವನ ನಾಲ್ಕು ಮಂದಿ ಮಕ್ಕಳವರೆಗಿನ ಪಟ್ಟಿಯನ್ನು ನೋಡಬಹುದು. ಬುಕ್ಕರಾಯನಿಗೆ ಬಿರುದೆಂತೆಂಬರ ಗಂಡ ಎಂಬ ಬಿರುದೂ ವರಾಹ ಲಾಂಛನವೂ ಇದ್ದಿತು. ಇವನಿಗೆ ವಲ್ಲಮ್ಮಾಜಿಯಿಂದ (ಬಲ್ಲಾಂಬಿಕೆ) ಒಬ್ಬ ಮಗ - ರಾಮರಾಜ - ಇದ್ದನು.

ರಾಮರಾಜನ ಮಗ ಶ್ರೀರಂಗರಾಜನು ಜಗತ್ಪ್ರಸಿದ್ಧನಾಗಿ ಜಯಂತನನ್ನು ಹೋಲುತ್ತಿದ್ದನು. ಕಲ್ಯಾಣ ಪುರದ ರಾಜನಾದ ಶ್ರೀರಂಗರಾಜನು ಭೂಪಾರಿಜಾತನಾಗಿ ಬ್ರಾಹ್ಮಣರಿಗೆ ತನ್ನ ದಾನಗಳಿಂದ ಹೆಸರಾದನು. ತನ್ನ ದಾನಗಳಿಂದಲೂ, ಪ್ರಾರ್ಥನೆಯಿಂದಲೂ ಆತ ಒಬ್ಬ ಅತ್ಯುತ್ತಮ ಪುತ್ರನನ್ನು ಪಡೆದನು. ಅರವತ್ನಾಲ್ಕು ಕಲೆಗಳಲ್ಲಿ ಪರಿಣತನಾದ ರಾಮರಾಜ ನಾಮಕ ಈ ಪುತ್ರನನ್ನು ಶೌರ್ಯ, ವಿದ್ಯ, ಸೌಂದರ್ಯ, ಸಾಮ್ರಾಜ್ಯಲಕ್ಷ್ಮಿಯರು ವರಿಸಿದ್ದರು. ರಾಮರಾಜನಿಗೆ ಚಾಲುಕ್ಯ ನಾರಾಯಣ, ನಾನಾವರ್ಣ ಶ್ರೀ ಮಾಂಡಲಿಕ ಗಂಡ, ರಾಯರಾವುತ ಮಿಂಡ - ಎಂಬಿತ್ಯಾದಿ ಬಿರುದುಗಳಿದ್ದವು. ದಶರಥನ ರಾಣಿ ಕೌಸಲ್ಯೆಯಿದ್ದಂತೆಯೇ ರಾಮರಾಜನ ರಾಣಿ ತಿರುಮಲಾಂಬಿಕೆಯಾಗಿದ್ದಳು. ರಾಮರಾಜನ ತಮ್ಮನಾದ ತಿರುಮಲೇಂದ್ರನು ರಾಮನ ತಮ್ಮನಾದ ಲಕ್ಷ್ಮಣನಂತಿದ್ದನು. ಈ ರಾಜ ತಿರುಮಲೇಂದ್ರನು ಡೋಲಮಹೋತ್ಸವವನ್ನು ಶಾಸ್ತ್ರಗಳ ಪ್ರಕಾರ ನಡೆಯುವಂತೆ ಏರ್ಪಡಿಸಿದನು. ಈತನು ತನ್ನ ರಾಣಿಯಾದ ವೆಂಗಲಾಂಬಳಿಂದ ನಾಲ್ವರು ಪುತ್ರರನ್ನು ಪಡೆದನು. - ರಘುನಾಥ (ಇಮ್ಮಡಿ ರಘುನಾಥ) ಈತನ ಸಹೋದರ ಶ್ರೀರಂಗ ರಾಜ. ಇವನ ಸೋದರ ರಾಮರಾಜನು ಮನ್ಮಥನಂತೆ ಸುಂದರನಾಗಿ, ವಿಮರ್ಶಕ ಮನದ ವಿದ್ವಾಂಸನಾಗಿದ್ದ. ಇವನ ಸೋದರ ವೆಂಕಟಾದ್ರಿ.

ತಿರುಮಲೇಂದ್ರನು ಸಕಲ ಸಾಮಂತರನ್ನೂ ತನ್ನ ಅಧೀನಕ್ಕೆ ತೆಗೆದುಕೊಂಡನು. ಶ್ರೀ ವೆಂಕಟೇಶ್ವರ ಸ್ವಾಮಿಗೆ ಡೋಲೋತ್ಸವವನ್ನು ನಡೆಸಲು 17-12-1561 ರಲ್ಲಿ ಎಂದರೆ ಶಕ 1483 ರ ದುರ್ಮತಿ ನಾಮ ಸಂವತ್ಸರದ ಧನುರ್ಮಾಸದ ಶುಕ್ಲ ಏಕಾದಶಿಯಂದು ಏರ್ಪಾಡು ಮಾಡಿದನು. ಈ ದಿನವು 633 ತಿ.ತಿ. ಯ ತಮಿಳು ಶಾಸನದಲ್ಲಿ ನೀಡಿರುವುದಕ್ಕಿಂತ ಎರಡು ದಿನ ನಂತರದ್ದು. ಶಾಸನದ ಕೊನೆಯ ತೆಲುಗು ಭಾಷೆಯ ಉಲ್ಲೇಖವು ತಿರುಮಲರಾಜಯ್ಯನ ವಂಶಾವಳಿಯನ್ನೂ, ಅವನ ಸೈನಿಕ ವಿಜಯಗಳನ್ನೂ ತುಲುಕನಾಂ ಆಲಿಯ ಎಂದರೆ ತುರ್ಕಿಯ ಸೇನಾಪತಿಯ ಮೇಲೆ ಯುದ್ಧಮಾಡಿ ಜಯಿಸಿ ಪಡೆದ ಬಿರುದಾವಳಿಯ ವಿವರ ನೀಡುವುದು. ಶಾಸನದಲ್ಲಿ ಅರವೀಡು ವಂಶದ ತಿರುಮಲ ಹಾಗೂ ಅವನ ಎರಡನೆಯ ಮಗ ಶ್ರೀರಂಗರಿಗೆ ಮಾತ್ರವೇ ರಾಜ ಗೌರವವನ್ನು ನೀಡಲಾಗಿರುವುದು ಗಮನಾರ್ಹ. ಸದಾಶಿವರಾಯನ ಮರಣಾನಂತರ ಇವರು ಈ ಗೌರವಕ್ಕೆ ಪಾತ್ರರಾಗಿದ್ದರೂ ಸಹ, ರಾಮರಾಜನು ಬದುಕಿರುವಾಗ ಶಕ 1483ರಲ್ಲಿ (1561) ರಕ್ಕಸತಂಗಡಿ ಯುದ್ಧಕ್ಕೆ ನಾಲ್ಕು ವರ್ಷ ಮೊದಲು ಸದಾಶಿವರಾಯನ ಜೀವಿತ ಕಾಲದಲ್ಲಿ ಇವರು ರಾಜರಾಗಿದ್ದರೇ ಎಂಬುದು ಸಂದೇಹಾಸ್ಪದ. ಈ ಯುದ್ಧದಲ್ಲಿ ಅಳಿಯ ರಾಮರಾಯನ ಮರಣಾನಂತರವೇ ಅವನ ತಮ್ಮನಾದ

ತಿರುಮಲನು ಸದಾಶಿವರಾಯನ ಪ್ರದಾನಮಂತ್ರಿಯ ಪದವಿಗೇರಿ ಶಕ ವರ್ಷ 1497 (1575)ರ ಸುಮಾರಿಗೆ ವಿಜಯನಗರ ಸಿಂಹಾಸನವನ್ನೇರಿದ. ಸದಾಶಿವರಾಯನ ಬಗ್ಗೆ ಅತಿ ಈಚಿನ ಕಾಲ ಸೂಚನೆಯೂ ಇದೇ ಆಗಿದೆ. (ಸಂಖ್ಯೆ - 5 - 1919) ತಿರುಮಲನ ಆಡಳಿತಕಾಲವು ಬಹು ಕಿರಿದಾಗಿದ್ದು ಈ ಸಮಯದಲ್ಲಿ ಆತ ತನ್ನ ಮಗ ಶ್ರೀರಂಗನನ್ನು ತನ್ನೊಡನೆ ಕೂಡಿಸಿಕೊಂಡು ಆಳ್ವಿಕೆ ನಡೆಸಿದ್ದು, ಕಡೆಗೆ ಸಿಂಹಾಸನವನ್ನು ಅವನಿಗೇ ಬಿಟ್ಟುಕೊಟ್ಟದ್ದು ಕಂಡು ಬರುತ್ತದೆ. ಶ್ರೀರಂಗನು ಶಕವರ್ಷ 1507 ರ ಪಾರ್ಥಿವದವರೆಗೆ (ಕ್ರಿ.ಶ. 1585-86) ಆಳಿ ತನ್ನ ಕಿರಿಯ ತಮ್ಮ ವೆಂಕಟಾದ್ರಿಯಿಂದ ಅನುಸರಿಸಲ್ಪಟ್ಟನು.

### 6. ಅರವೀಡು ರಾಜರ ಕಾಲದ ತಿರುಮಲೆ

ಸದಾಶಿವರಾಯನ ಪ್ರಧಾನಮಂತ್ರಿಯಾಗಿ ಕ್ರಿ.ಶ.1565 ರಲ್ಲಿ ಸಿಂಹಾಸನದ ಬಳಿ ಸೇರಿದ ತಿರುಮಲ ರಾಯನಿಂದ ಅರವೀಡು ವಂಶದ ಆಡಳಿತ ಆರಂಭವಾಯಿತು. ಈ ಹೊತ್ತಿಗೆ ಇವನ ಅಣ್ಣ ಅಳಿಯ ರಾಮಯನು ತಾಳಿಕೋಟೆ ಅಥವಾ ರಕ್ಕಸತಂಗಡಿಯುದ್ಧದಲ್ಲಿ ಮರಣ ಹೊಂದಿದ್ದನು. ಈ ನಡುವೆ ಪೆನುಗೊಂಡೆಗೆ ರಾಜಧಾನಿ ಯನ್ನು ವರ್ಗಾಯಿಸಿದ ನಂತರ ತಿರುಮಲರಾಯನು 1575 ಹೊತ್ತಿಗೆ ವಿಜಯನಗರ ಸಿಂಹಾಸನವನ್ನು ಆರೋಹಣ ಮಾಡಿದನು. ಈತನ ರಾಜ್ಯಾಡಳಿತದ ಅವಧಿ ಅತಿ ಕಿರಿದಾಗಿದ್ದು ಎರಡು ಮೂರು ವರ್ಷ ಮಾತ್ರವೇ ಆಗಿದ್ದು ಇವನ ಎರಡನೆಯ ಮಗ ಶ್ರೀರಂಗರಾಯನು ಅಥವಾ ಇಮ್ಮಡಿರಂಗನು ಇವನೊಡನೆಆಡಳಿತ ವನ್ನು ಹಂಚಿಕೊಂಡಿದ್ದ. ಇವನ ಕಾಲದಲ್ಲಿ ನಿರ್ಮಿತವಾದ ತಿರುಮಲರಾಯ ಮಂಟಪ ವೆಂದು ಪ್ರಸಿದ್ಧವಾಗಿರುವ ಎತ್ತರದ ಸ್ತಂಭಗಳಲ್ಲಿ ಆನೆಯನ್ನೇರಿದ ಯೋಧರ ಶಿಲ್ಪಗಳನ್ನು ಹೊಂದಿದ್ದು ಇಂದಿಗೂ ಪ್ರಶಸ್ತವಾಗಿದ್ದು ಸ್ವಾಮಿಯ ಬ್ರಹ್ಮೋತ್ಸವದ ದಿನಗಳಲ್ಲಿ ಉತ್ಸವ ವಿಗ್ರಹಗಳನ್ನು ಇಲ್ಲಿಗೆ ತಂದು ಆಸ್ಥಾನವನ್ನು ನಿರ್ವಹಿಸಲಾಗುತ್ತದೆ.

ನಂತರದ ಆಡಳಿತವೆಂದರೆ ಶ್ರೀರಂಗದೇವ ಮಹಾರಾಯನದು. ಇದು ಶಕ 1501 ರಿಂದ (1579) ಶಕ 1508 ರ ವರೆಗೆ (1586) ಸುಮಾರು ಆರು ಶಾಸನಗಳಲ್ಲಿ ದಾಖಲೆಯಾಗಿದೆ.

ವೆಂಕಟಪತಿರಾಯನು ಸಾಮಾನ್ಯವಾಗಿ ಒಂದನೇ ವೆಂಕಟ ಎಂದು ಗುರುತಿಸಲ್ಪಟ್ಟು ಶಕ 1514 ರಿಂದ (1592) ಶಕ 1538ರ ವರೆಗೆ (1616) ಸುಮಾರು ಹನ್ನೆರಡು ಶಾಸನಗಳಲ್ಲಿ ದಾಖಲೆಯಾಗಿದ್ದಾನೆ. ಈತ ತಿರುಮಲನ ನಾಲ್ಕನೆಯ ಮಗ ಹಾಗೂ ಇಮ್ಮಡಿ ಶ್ರೀರಂಗನ ಕಿರಿಯ ತಮ್ಮ. ಪ್ರಕಾಶಂ ಜಿಲ್ಲೆಯ ಮಾರ್ಕಾಪುರದ ಒಂದು ಶಾಸನದಂತೆ ಈತ ಶಕವರ್ಷ 1489 ರಲ್ಲಿ (1567) ಸದಾಶಿವರಾಯನ ಕೈಕೆಳಗೆ ಕೆಲಸ ಮಾಡಿದಂತೆ ತೋರುತ್ತದೆ. ಸೇಲಂ ಹಾಗೂ ಉತ್ತರ ಆರ್ಕಾಟುಗಳಲ್ಲಿ ಕಂಡುಬರುವ ಎರಡು ಶಾಸನಗಳ ಪ್ರಕಾರ ಇವನನ್ನು ಅವನ ಬಿರುದು - ವೀರವಸಂತರಾಯ - ಎಂಬುದಾಗಿ ಮಾತ್ರವೇ ಸಂಬೋಧಿಸಲಾಗಿದೆ. ತನ್ನ ತಂದೆ ತಿರುಮಲ ಹಾಗೂ ಅಣ್ಣ ಶ್ರೀರಂಗದೇವರುಗಳ ಕಾಲದಲ್ಲಿ ಈತ ಚಂದ್ರಗಿರಿ ರಾಜ್ಯದ ರಾಜ್ಯಪಾಲನಾಗಿದ್ದನೆಂದು 'ವಸುಚರಿತ್ರಮು' - ತೆಲುಗು ಕಾವ್ಯ ಗುರುತಿಸುತ್ತದೆ. (ಒಂದನೇ ಅಧ್ಯಾಯ ಪೀಠಿಕಾ ಸಂಧಿ ಪದ್ಯ 81) ಶಕ ವರ್ಷ 1494 ರ ಅಂಗೀರಸ ಸಂವತ್ಸರದ ಆಷಾಢಮಾಸದ 9-7-1572 ಶಾಸನವೂ (182 - 1922) ಇದನ್ನು ಗುರುತಿಸಿದೆ. ನಂತರ ಶ್ರೀರಂಗರಾಯನ ಕಾಲದಲ್ಲಿ ಉದಯ ಗಿರಿ, ಕೊಂಡವೀಡು ಮೊದಲಾದ ಪರ್ವತಗಡಿ ಪ್ರದೇಶಗಳನ್ನು ಆಳಿದನೆಂದು ತೋರುತ್ತದೆ. ಈತ ಐವರನ್ನು ವಿವಾಹವಾಗಿದ್ದ. ಅವರಲ್ಲಿ ತಿ.ತಿ. 97ರಲ್ಲಿ ಉಲ್ಲೇಖವಾಗಿರುವ ಒಬ್ಬಾಕೆ ಕೃಷ್ಣಮಾಂಬ ಅಥವಾ ಕೃಷ್ಣಾಜಿಯಮ್ಮ. ಈತನ ಆಡಳಿತ ಸಮಯದಲ್ಲಿ ಇವನ ಅಣ್ಣ ಮುಮ್ಮಡಿ ರಾಮನ ಮಗ ಮುಮ್ಮಡಿ ರಂಗನೂ, ಮುಮ್ಮಡಿ ರಂಗನ ಮಗ ನಾಲ್ಕನೆಯ ರಾಮನೂ ಈತನೊಡನೆ ಆಡಳಿತ ನಡೆಸಿದರು.

ಒಂದನೇ ವೆಂಕಟನ ಅಣ್ಣನಾದ ಮೂರನೇ ರಾಮನ ಮಗ ಮುಮ್ಮಡಿ ರಂಗನ ಮಗನೇ ರಾಮರಾಯ ನೆಂದು ಹೆಸರಾದ ನಾಲ್ಮಡಿರಾಮ. ಒಂದನೇ ವೆಂಕಟನ ಆಳ್ವಿಕೆಯಲ್ಲಿ ಆಡಳಿತವನ್ನು ಹಂಚಿಕೊಂಡ ನಾಲ್ಮಡಿ ರಾಮ ಶಕವರ್ಷ 1536 - 37 ರ ಆನಂದ

ಸಂವತ್ಸರದಲ್ಲಿ (ಕ್ರಿ.ಶ. 1614) ಸಿಂಹಾಸನವನ್ನೇರಿದ. ಒಂದೇ ಒಂದು ಶಾಸನವು - ಶಕ 1549 ರ ಪ್ರಭವ ವರ್ಷದ ವೃಷಭ ಮಾಸದ್ದು- ಇವನ ಆಳ್ವಿಕೆಯನ್ನು ಗುರುತಿಸಿದೆ (25 - 5 - 1627).

ಈ ಕಾಲಕ್ಕೆ ಭಾನುವಂಶಕ್ಕೆ ಸೇರಿದ ದೇವಚೋಡ ಕುಲದ ಮಟ್ಲ ತಿರುವೆಂಗಳನಾಥ ರಾಜ ಹಾಗೂ ಚಿನ್ನಮಾಂಬರ ಮಗ ಮಟ್ಲ ಕುಮಾರ ಅನಂತರಾಜನು ಕಂಡುಬರುತ್ತಾನೆ. ದೇವಚೋಡ ಕುಲದ ಈ ರಾಜ ವಂಶಕ್ಕೆ ಅವರು ಇದ್ದ ಮಟ್ಲ ಗ್ರಾಮವು - ಕಡಪ ಜಿಲ್ಲೆ - ರಾಯಚೋಟಿಯ ಸಮೀಪದಲ್ಲಿದ್ದದ್ದು - ತನ್ನ ಹೆಸರನ್ನು ನೀಡಿತು. ಇವರ ರಾಜ್ಯವು ಕಡಪ ಜಿಲ್ಲೆಯ ಪೂರ್ವಭಾಗದಲ್ಲಿ ಬದ್ವೇಲು, ಸಿದ್ಧವಟ, ಕಡಪ, ಪುಲ್ಲಂಪೇಟೆ ಅಥವಾ ರಾಜಂಪೇಟೆ ತಾಲ್ಲೂಕುಗಳಲ್ಲಿ ಹರಡಿದ್ದಿತು. ರಾಜಂಪೇಟೆಯ ಅನಂತರಾಜ ಪೇಟೆಯು ರಾಜಧಾನಿಯಾಗಿದ್ದು ಇಡೀ ಪ್ರಾಂತ್ಯ ಮಟ್ಲವಾರಿ ಸೀಮೆ ಎಂದು ಹೆಸರು ಪಡೆದಿದ್ದಿತು. ಮಟ್ಲಕುಮಾರ ಅನಂತರಾಜನು ತಿರುವೆಂಗಳನಾಥ ರಾಜನ ಮಗನಾಗಿದ್ದು, 'ಕಾಕುಸ್ಥ್ಸ ವಿಜಯಮು' ಕಾವ್ಯವನ್ನು ಬರೆದ ಕವಿ, ರಾಜ, ಅನಂತರಾಜನು ತಿರುವೆಂಗಳನಾಥನ ತಂದೆಯಾಗಿದ್ದನು.

ಕುಮಾರ ಅನಂತರಾಜನು ಶ್ರೀ ಗೋವಿಂದರಾಜಸ್ವಾಮಿಯ ಹೊರಗೋಪುರ. (ಜಿ.ಟಿ. 281) ಅಲಿಪಿರಿಯಲ್ಲಿನ ಎರಡನೆಯ ಗೋಪುರ - ಈಗ ಕೊತ್ತಗೋಪುರಂ ಎಂದು ಕರೆಯಲಾಗುವ ಈ ಗೋಪುರದ ಮೂಲಕ ಮೆಟ್ಟಿಲ ಹಾದಿಯು ನಡೆಯುತ್ತಿದೆ (ಜಿ.ಟಿ. 279. 280) ಮೊದಲೆರಡು ಗೋಪುರಗಳೂ ಒಳಭಾಗದಲ್ಲಿ ಶಾಸನಗಳನ್ನು ಹೊಂದಿದ್ದು ಇವುಗಳನ್ನು ತಿರುವೆಂಗಳನಾಥ ರಾಜಯ್ಯ ದೇವಚೋಡ ಮಹಾರಾಜುಲಯ್ಯನ ಮಗ ಮಟ್ಲ ಕುಮಾರ ಅನಂತರಾಜಯ್ಯನು ಕಟ್ಟಿಸಿದನೆಂದು ದಾಖಲೆ ಮಾಡುತ್ತಿವೆ.

ಕುಮಾರ ವೆಂಕಟಪತಿರಾಯದೇವ ಮಹಾರಾಯನು ಎರಡು ಶಾಸನಗಳಲ್ಲಿ (ಜಿ.ಟಿ. 63 ಹಾಗೂ 328) ಪ್ರತಿನಿಧಿಸಲ್ಪಟ್ಟಿದ್ದು ಇವು ಶಕವರ್ಷ 1553 ಹಾಗೂ 1557 ಕ್ಕೆ ಸೇರಿದವುಗಳಾಗಿವೆ. ಅಳಿಯರಾಮರಾಜನ ಮಗನಾದ ನಾಲ್ಕನೇ ರಂಗನ ಮಗನೇ ಪೆದ್ದ ವೆಂಕಟ ಎಂದೂ ಕರೆಯಲ್ಪಡುವ ಈ ಕುಮಾರ ವೆಂಕಟ. (ಪೆದ್ದ ಎಂದರೆ ತೆಲುಗಿನಲ್ಲಿ ದೊಡ್ಡ ಎಂದರ್ಥ) ಈತನನ್ನು ಶಕ 1552 ರಲ್ಲಿ ತಿರುಮಲ ತಾತಾಚಾರ್ಯರು ಪಟ್ಟಾಭಿಷಿಕ್ತನನ್ನಾಗಿಸಿದರು. ಶಕ 1553 ರ ಪ್ರಜೋತ್ಪತ್ತಿ ವರ್ಷದ ಕನ್ಯಾಮಾಸದಲ್ಲಿ (29-9-1631) ಶ್ರೀ ವೆಂಕಟೇಶ್ವರಸ್ವಾಮಿಗೂ ಶ್ರೀ ಗೋವಿಂದರಾಜಸ್ವಾಮಿಗೂ ನಿವೇದನೆ ಮಾಡಲೆಂದು ಒಬ್ಬಾನೊಬ್ಬ ರಾಮಚಂದ್ರಯ್ಯನು ದಾನ ಮಾಡಿದನೆಂದು ಜಿ.ಟಿ. 328 ದಾಖಲೆ ಮಾಡಿದೆ. ಜೊತೆಗೇ ಸನ್ನಿಧಿ ಬೀದಿಯಲ್ಲಿ ಒಂದು ಮಂಟಪ ನಿರ್ಮಾಣಕ್ಕೂ ದಾನ ಮಾಡಲ್ಪಟ್ಟಿದೆ. ಆ ಕಾಲಕ್ಕೆ ಜೀರ್ಣಶೀರ್ಣವಾಗಿದ್ದ ವರದರಾಜಪುರದ ನೀರಾವರೀ ವ್ಯವಸ್ಥೆಯನ್ನು ಪುನಃ ಕಾಲುವೆ ತೋಡಿಸುವುದರಿಂದ ಅಭಿವೃದ್ಧಿಗೊಳಿಸಿದ. ಜಿ.ಟಿ. 63 ನೇ ಶಾಸನವು ಪ್ರತಿವಾದಿ ಭಯಂಕರ ವೆಂಕಣ್ಣಾಚಾರ್ಯರ ಮಗ (ಶ್ರೀವತ್ಸಗೋತ್ರ ಆಪಸ್ಥಂಭ ಸೂತ್ರ ಯಜುಃ ಶಾಖೆ) ಅಳಗರಯ್ಯಂಗಾರ್ ಅಣ್ಣಂಗರಾಚಾರ್ಯರು ತಿರುವಿಡ್ಯೆಯಾಟ್ಟದ ಗ್ರಾಮ ಅವಿಲಾಲಿಯಲ್ಲಿನ ನೀರಿನ ಕಾಲವೆಗಳನ್ನು ದುರಸ್ತಿ ಗೊಳಿಸಿದ್ದನ್ನೂ, ಹಲವು ಗ್ರಾಮಗಳ ದಾನವನ್ನೂ ಸೂಚಿಸುತ್ತದೆ. ಈ ಶಾಸನದಲ್ಲಿಯೇ ಅಳತೆ ಮಾನವಾದ 32 ಅಡಿಗಳ ಅಳತೆ ಕೋಲಿನ ಉಲ್ಲೇಖವಿದೆ.

ರಾಜ ಇಮ್ಮಡಿ ವೆಂಕಟನ ಚಿಕ್ಕ ತಮ್ಮನಾದ ಮುಮ್ಮಡಿ ಪಿನ್ನ ವೆಂಕಟನ ಮಗನೇ ಶ್ರೀರಂಗದೇವ ಮಹಾರಾಯ ಎಂದು ಕರೆಯಲ್ಪಡುವ ಆರನೇ ರಂಗ. ಈತನು ನಾಲ್ಮಡಿರಾಮ ಹಾಗೂ ಇಮ್ಮಡಿ ವೆಂಕಟರ ಕಾಲದಲ್ಲಿ ಯುವರಾಜನಾಗಿದ್ದು ಕರ್ನಾಟದ ಸಿಂಹಾಸನವನ್ನು ಕ್ರಿ.ಶ. 1642 ರ ಅಕ್ಟೋಬರ್ 29 ರಂದು ಏರಿದನು. ಈತನ ಆಳ್ವಿಕೆ 23 ವರ್ಷ ನಿಡಿದಾಗಿದ್ದು, ಶಕವರ್ಷ 1587 ರ ವರೆಗೆ (ಕ್ರಿ.ಶ. 1665) ಮುಂದು ವರೆಯಿತು. ಇವನ ಕಾಲದಲ್ಲಿ ಗೋಲ್ಕೊಂಡ ಬಿಜಾಪುರದ ಸುಲ್ತಾನರು ಕರ್ನಾಟಿಕವನ್ನು ಆಕ್ರಮಿಸಿದರು. ಸೈನ್ಯಾಧಿಪತಿ ಮೀರ್ ಜುಮ್ಲಾ ಇದರ ನವಾಬನಾದನು. ರಾಜಾ ರಂಗನು ಸಾಮ್ರಾಜ್ಯವನ್ನು ಬಿಟ್ಟು ಓಡಿ ಹೋಗಿ ಕೆಳದಿಯ ತನ್ನ ಸಾಮಂತರಾಜರಲ್ಲಿ ಆಶ್ರಯ ಪಡೆದನು.

ಶ್ರೀರಂಗರಾಯನು ಎರಡು ಶಾಸನಗಳಲ್ಲಿ ಹೆಸರಿಸಲ್ಪಟ್ಟಿದ್ದರೂ ಒಂದರಲ್ಲಿ ಮಾತ್ರವೇ ಕಾಲಸೂಚನೆ ಯಿದೆ. ಅದೆಂದರೆ - ಶಕ 1560ರ ಬಹುಧಾನ್ಯ ವತ್ಸರದ ಮಿಥುನ ಮಾಸ (15-16-1638) ದಲ್ಲಿ ಆಪಸ್ತಂಭ ಸೂತ್ರದ ಕಾಶ್ಯಪ ಗೋತ್ರದ ಮೂಲಾನಕ್ಷತ್ರ ದಲ್ಲಿ ಜನಿಸಿದ ಬ್ರಾಹ್ಮಣನೊಬ್ಬನು ತೊಂಬತ್ತೈದು ರೇಖೈ ಬೆಲೆಬಾಳುವ ಸೇವೆಗಳಿಗಾಗಿ, ಎರಡು ನೀರಿನ ಕಾಲುವೆಗಳನ್ನು ಆಲಯಕ್ಕೆ ಒಪ್ಪಿಸಿದನು. ಒಂದರಿಂದ ಕಡಮೈಕಲ್ ಅಳತೆ ಯಲ್ಲಿ 160 ಪುಟ್ಟಿ ಭತ್ತ ಬರುತ್ತಿದ್ದಿತು. ಇನ್ನೊಂದು ಕಾಲುವೆಯು ತಿರುವಿಳ್ಳಿಕೊಟ್ಟಂ ಉಳ್ ಮಂಡಳದ ಗ್ರಾಮಗಳಲ್ಲಿ ಒಂದಾದ ಮಣಿಯಕ್ಕೋನ್ ಪಟ್ಟುವಿನಲ್ಲಿದ್ದಿತು. ಎರಡನೆಯ ಶಾಸನವು (ತಿ.ತಿ. 436) ರಘುನಾಥನ ಪಾದದಲ್ಲಿ ಶ್ರೀರಂಗರಾಜನ ಸೇವಕನಾದ ತಿರುಪತಿಯ ರಾಮುಡುವಿನ ಅವಿಚ್ಛಿನ್ನ ಭಕ್ತಿಯನ್ನು ಮಾತ್ರವೇ ದಾಖಲಿಸಿದೆ.

ನಂತರದ ಕಾಲದ ಎರಡು ಶಾಸನಗಳಲ್ಲಿ ಒಂದು ರುಧಿರೋದ್ಗಾರಿ ವತ್ಸರದ್ದು (ಕ್ರಿ.ಶ. 1683) ಮತ್ತೊಂದು ಶಕ 1606 ರಕ್ತಾಕ್ಷಿ (ಕ್ರಿ.ಶ. 1684) ಯದು. ಇವೆರಡೂ ಆಡಳಿತ ನಡೆಸುತ್ತಿದ್ದ ರಾಜನ ಹೆಸರನ್ನು ಹೇಳದಿದ್ದರೂ ಆರನೇ ರಂಗನ ಪುತ್ರ ನಾಲ್ಕನೇ ವೆಂಕಟನ ಆಳ್ವಿಕೆಯನ್ನು ಗುರುತಿಸಬಹುದು. ವಿಶೇಷವೆಂದರೆ ಇವೆರಡೂ ಶಾಸನಗಳೂ, ಮೂರನೆಯ ಮತ್ತೊಂದು ಶಾಸನ - ಜಿ.ಟಿ. 290 - ಒಟ್ಟು ಮೂರು ಶಾಸನಗಳೂ, ತೆಲುಗಿನಲ್ಲಿವೆ. ಇದರಿಂದಾಗಿ ಈ ವೇಳೆಗಾಗಲೇ ತೆಲುಗು ಭಾಷೆಯು ಆಡಳಿತದ ಭಾಷೆಯಾಗಿ ಸ್ಥಾಪಿತ ವಾಗಿರಬೇಕು. ಜಿ.ಟಿ. 291 ನೇ ಶಾಸನವು ರುದಿರೋದ್ಗಾರಿ ವರ್ಷದ ವೈಶಾಖಮಾಸದಾಗಿದ್ದು (ಶಕ 1605-16-5-1683) ತುವರಾಣಿ ಕೊಂಡ ಪಂಡಿತನ ಮಗ ತಿಮ್ಮ ಹಾಗೂ ಅವನ ತಮ್ಮನ (ಅನಂತಪ್ಪ) ಸೇವೆಯನ್ನು ದಾಖಲಿಸಿದೆಯಾದರೆ, ಜಿ.ಟಿ. 290 - ಶಾಸನವು ರಾಜಶ್ರೀ ಸಿದ್ಧಲೂರಿ ರಾಮಾಜಿಮಾದರಸು ಪಂತುಲುಗಾರು ಮಾಡಿದ ಸೇವೆಯನ್ನು ಉಲ್ಲೇಖಿಸುತ್ತದೆ. ತಿ.ತಿ. 263ನೇ ಶಾಸನವು ಶಕವರ್ಷ 1606ರ ರಕ್ತಾಕ್ಷಿ ವತ್ಸರದ ಚೈತ್ರಮಾಸದ್ದಾಗಿದ್ದು (20-3-1684) ಮಹಾರಾಜಶ್ರೀ ಶೂಡಭಾನುಜೀ ಪಂತುಲುಗಾರು ಏರ್ಪಡಿಸಿದ ಅವಸರದ ನಂತರ ತಿರುವೆಂಗಳನಾಥಸ್ವಾಮಿ ಹಾಗೂ ವರಾಹಸ್ವಾಮಿಗಳಿಗೆ ನಿವೇದನೆಗೆಂದು ಶ್ರೀರಂಗರಾಜ ಗದ್ಯಾಣಗಳ 525 ಮೌಲ್ಯದ ಒಂದು ಪರಿಶುದ್ಧ ಚಿನ್ನದ ಹಾರದ ಅರ್ಪಣೆಯನ್ನು ಕುರಿತು ಹೇಳುತ್ತದೆ.

ಹೀಗಾಗಿ ಕ್ರಿ.ಶ. 1359 ರಲ್ಲಿ ಶ್ರೀವೆಂಕಟೇ ಶ್ವರಸ್ವಾಮಿ ಆಲಯದ ವಿಮಾನ ಗೋಪುರದ ಚಿನ್ನದ ಗಿಲೀಟು ಮಾಡಿಸಿದ ಸಾಳುವ ಮಂಗಿದೇವ ಮಹಾರಾಯನಿಂದ ಆರಂಭವಾದ ವಿಜಯನಗರ ಸಾಮ್ರಾಜ್ಯದ ತಿರುಮಲೆಯ ಸಂಬಂಧವು ಶ್ರೀರಂಗರಾಯ ಮಹಾರಾಯನಾದ ಕ್ರಿ.ಶ. 1665ರಲ್ಲಿ ಆಲಯದಲ್ಲಿ ನೆನಪಿನ ಶಿಲೆಯ ಹಾಸುವಿಕೆಯಿಂದ ಕೊನೆಗೊಂಡಿತು. ಮೂರು ಶತಮಾನ ಗಳಿಗೂ ಹೆಚ್ಚಿಗೆ ಜೀವಂತವಾಗಿದ್ದ ಈ ಸಂಬಂಧದನಂತರ ರಾಜಕೀಯವಾಗಿ ಉಂಟಾದ ಉಲ್ಲೋಲ ಕಲ್ಲೋಲಗಳಲ್ಲಿ, ಮುಸಲ್ಮಾನರ ಪಾರುಪತ್ಯದ ಪಾರಮ್ಯದಲ್ಲಿ ತಿರುಮಲೆಯ ಆಲಯದ ಸ್ಥಿತಿಗತಿಗಳು ಗಮನಾರ್ಹವಾದ ಪರಿವರ್ತನೆಯನ್ನು ಕಂಡಿತು.

ಅಧ್ಯಾಯ - 15

# ವಿಜಯನಗರದ ಕಾಲದ ಆರ್ಥಿಕ ಪರಿಸ್ಥಿತಿ, ನೀರಾವರಿ - ನೈವೇದ್ಯ - ಇತ್ಯಾದಿ

**1. ಪೀಠಿಕೆ :**

ಗ್ರಾಮೀಣ ಅರ್ಥವ್ಯವಸ್ಥೆ ಪ್ರಮುಖವಾಗಿ ಕೃಷಿಯನ್ನು ಅವಲಂಬಿಸಿರುವುದರಿಂದಾಗಿ ದಕ್ಷಿಣ ಭಾರತದಲ್ಲಿ ದೇವಾಲಯಗಳು ಸಮಾಜದ ಅರ್ಥವ್ಯವಸ್ಥೆಯಲ್ಲಿ ಎಲ್ಲ ಕಾಲದಲ್ಲಿಯೂ ಪ್ರಧಾನಪಾತ್ರ ನಿರ್ವಹಿಸುತ್ತ ಬಂದಿವೆ. ಆಂಗ್ಲರ ಆಗಮನಕ್ಕೆ ಮುನ್ನ ಇದ್ದ ಅರ್ಥವ್ಯವಸ್ಥೆಯ ಬಗ್ಗೆ ವಿವರವಾದ ಅಧ್ಯಯನ ವ್ಯಾಪಕವಾಗಿ ನಡೆಯಲಿಲ್ಲ. ತಿರುಮಲೆಯ ಆಲಯದ ಶಾಸನಗಳು ಈ ಭೂಭಾಗದ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಅದರಲ್ಲಿಯೂ ವಿಜಯನಗರದ ಕಾಲದಲ್ಲಿದ್ದ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಮಹತ್ವದ ಮಾಹಿತಿಯನ್ನು ನೀಡುತ್ತವೆ.

ಒಂದು ಸಂಸ್ಥೆಯ ಇತಿಹಾಸದ ಬಗ್ಗೆ ಇರಬಹುದಾದ ಆಧಾರಗಳಲ್ಲಿ ತಿರುಮಲೆಯ ಶಾಸನಗಳು ಬಹು ಮುಖ್ಯವಾದ ಮಾಹಿತಿ ಸಂಗ್ರಹವಾಗಿವೆ. ಈ ಶಾಸನಗಳು ಮುಖ್ಯವಾಗಿ ಇಲ್ಲಿನ ಆಲಯಗಳಿಗೆ ರಾಜರು, ಶ್ರೀಮಂತರು, ಸಾಮಂತರು, ಸಾಮಾನ್ಯರ ನೀಡಿದ ದಾನ ದತ್ತಿಗಳ ವಿವರಣೆಗಳನ್ನು ಒದಗಿಸುತ್ತವೆ. ಜೊತೆಗೇ ಭಕ್ತರು ಆಲಯದ ಬಳಕೆಗೆಂದು ನೀಡಿದ ದಾನಗಳ ವೆಚ್ಚದ ಬಗ್ಗೆಯೂ ಸಾಕಷ್ಟು ಮಾಹಿತಿಯನ್ನೊದಗಿಸುತ್ತವೆ. ಅಂದಿನ ಪ್ರಚಲಿತವಿದ್ದ ಆಲಯದ ಆಗಮಿಕ ಪದ್ಧತಿಗಳ ಬಗ್ಗೆಯೂ ಈ ಶಾಸನಗಳು ಮಹತ್ವದ ಸುದ್ದಿಯನ್ನು ಒದಗಿಸುತ್ತವೆ.

ಈ ಆಲಯದ ಶಾಸನಗಳು ಪ್ರಥಮತಃ ಒಂಬತ್ತನೆಯ ಶತಮಾನದಿಂದ ಹದಿನಾರನೆಯ ಶತಮಾನದ ಕಾಲವನ್ನು ಪ್ರತಿನಿಧಿಸಿ ಮಧ್ಯಕಾಲೀನ ಭಾರತದ ಆಲಯ ಶಾಸನಗಳ ಪರಂಪರೆಯಲ್ಲಿ ಅತ್ಯುತ್ತಮವಾದ ಆಧಾರ ಸಾಮಾಗ್ರಿಯನ್ನು ಒದಗಿಸುತ್ತಿವೆ. ತಿರುಮಲೆಯ ಆಲಯ ಶಾಸನಗಳು ಮೂಲತಃ ಆಲಯಕ್ಕೆ ದಾನ ನೀಡಿದ ಭೂಮಿ ಹಾಗೂ ಧನಗಳ ಬಗ್ಗೆ ಆದವುಗಳಾಗಿದ್ದು ಆಲಯಕ್ಕೆ ಧಾರ್ಮಿಕ ಕಾರಣಗಳಿಗಾಗಿ ನೀಡಿದ ಭೂಮಿಯ ಹಾಗೂ ಧನದ ಬಳಕೆಯ ವಿಧಾನಗಳನ್ನು ತಿಳಿಸುತ್ತವೆ. ತಿರುಮಲೆಯ ಶಾಸನಗಳು ಅಂದಿನ ಆಲಯದ ಆರ್ಥಿಕ ವಿಶ್ಲೇಷಣೆಯ ಬಗ್ಗೆ ಮೂಲಾಧಾರಗಳನ್ನು ಒದಗಿಸುವುದೇ ಅಲ್ಲದೇ, ಮಧ್ಯಕಾಲೀನ ಭಾರತದ ಆಲಯ ಕೇಂದ್ರದಲ್ಲಿ ಕಾಲದಿಂದ ಕಾಲಕ್ಕೆ ಉಂಟಾದ ಹೊಸಹೊಸ ಪರಿಷ್ಕರಣಗಳಿಂದಾಗಿ ಆಲಯ ಪದ್ಧತಿ ಗಳಲ್ಲಿ ಉಂಟಾದ ಪರಿವರ್ತನಶೀಲತೆಯನ್ನು ಸೂಚಿಸುತ್ತವೆ.

ನಮ್ಮ ಅಧ್ಯಯನಕ್ಕೆ ಮೂಲ ಸಾಮಾಗ್ರಿಯನ್ನು ಒದಗಿಸುವುದೆಂದರೆ ಆಲಯದ ಶಾಸನಗಳು. ಸಾಮಾನ್ಯ ವಾಗಿ ಇಂತಹ ಸಾಮಾಗ್ರಿ ಪುರಾತತ್ವಗಳಲ್ಲಿನವಾಗಿದ್ದು ಸಾಧಾರಣವಾಗಿ ಆಧಾರಭೂತವಾಗಿರುತ್ತದೆ.

ಈ ಒಂದು ಸಂದರ್ಭದಲ್ಲಿ ಮರಾಠರ ಮೊಗಲರ ಕಾಲದ ಪುರಾತತ್ವ ಆಧಾರಗಳ ರೀತಿಯಲ್ಲಿ ವಿಜಯ ನಗರ ಸಾಮ್ರಾಜ್ಯ ಕಾಲದ ಇತಿಹಾಸಕ್ಕೆ ಪುರಾತತ್ವ ದಾಖಲೆಗಳು - ಆಲಯ ಶಾಸನಗಳ ಹೊರತಾದವು - ಹೆಚ್ಚಿಗೆ ದೊರೆಯುವುದಿಲ್ಲ. ಜೊತೆಗೆ ನೂರು

ಮುನ್ನೂರು ವರ್ಷಗಳಷ್ಟು ಹಳೆಯದಾದ ದಾಖಲೆಗಳನ್ನು ಅತಿ ಎಚ್ಚರಿಕೆಯಿಂದ ಗಮನವಿಟ್ಟು ಪರಿಶೀಲಿಸಿದ ನಂತರವೇ ಪ್ರಮಾಣ ವೆಂದು ಅಂಗೀಕರಿಸಬೇಕಾಗುತ್ತದೆ. ಗ್ರಾಮೀಣ ಅಧಿಕಾರಿಗಳ ಸ್ವಹಿತಾಸಕ್ತಿಗಳ ಕಾರಣದಿಂದಾಗಿ ಹಲವಾರು ಸಂದರ್ಭಗಳಲ್ಲಿ ಇಂತಹ ದಾಖಲೆಗಳು ನಕಲಿ ಯಾಗಿ ಹುಟ್ಟುವುದುಂಟು. ಹೀಗಾಗಿ ಗ್ರಾಮೀಣ ಆಧಾರಗಳಿಂದಾಗಿ ಸಿದ್ಧಗೊಳ್ಳುವ ಆರ್ಥಿಕ ಅಧ್ಯಯನದಲ್ಲಿನ ನಿರ್ಣಯಗಳನ್ನು ಪಡೆಯುವಾಗ - ಅತಿಜಾಗರೂಕತೆಯಿಂದ ನೋಡುತ್ತ, ಇತರತ್ರ ಆಧಾರಗಳ ಸಾಕ್ಷಿ ಸಂಕಲಿಕೆ ಯಾಗದೆ ಹೊರತು- ಅವುಗಳು ಪ್ರಶ್ನಾರ್ಥಕ ಚಿಹ್ನೆಗಳನ್ನು ಹೊಂದಿಯೇ ಇರುವಂತಹವುಗಳಾಗುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಪುರಾತತ್ವಪತ್ರದ ದಾಖಲೆ ಹಳೆಯದಾದಷ್ಟೂ ಅದರ ಪ್ರಾಮಾಣಿಕತೆ ಹೆಚ್ಚುತ್ತದೆ ಎಂಬುದೇನೂ ಖಚಿತವಿಲ್ಲ.

ಆಲಯ ಶಾಸನಗಳ ವಿಷಯದಲ್ಲಿ ಈ ಒಂದು ಸಾಮಾನ್ಯ ಸೂತ್ರ ಅನ್ವಯವಾಗದು. ಲೆಕ್ಕಪತ್ರಗಳ ಕಡತಗಳನ್ನು ಕೃತಕ ದಾಖಲೆ ಗಳನ್ನಾಗಿ ಮಾಡುವ ಹಣದ ಪ್ರಲೋಭನೆಯಂತಹ ಐಹಿಕ ಆಸೆ ಆಕಾಂಕ್ಷೆಗಳಿಗೆ ಇಲ್ಲಿ ಸ್ಥಳವಿಲ್ಲ. ಇವೆಲ್ಲ ದೇವರಿಗೆ ನೀಡಿದ ದಾನ ದತ್ತಿಗಳಾಗಿದ್ದು, ಇಂತಹ ದಾನ ದತ್ತಿಗಳಿಗೆ ಮೂಲಭೂತವಾಗಿ ಒಂದು ಪಾವಿತ್ರ್ಯದ ಭಾವನೆಯಿರುತ್ತದೆ. ಸಮಾಚಾರದಲ್ಲಿನ ಸಂಪೂರ್ಣ ಖಚಿತತೆಯತ್ತ ಹೆಚ್ಚಿನ ಗಮನ ನೀಡಲಾ ಗಿದ್ದು, ಅಲ್ಲಿನ ಹಣದ ವಿತರಣೆಯ ಬಗ್ಗೆ ಜಾಗರೂಕತೆಯಿಂದ ನಡೆಯುವುದನ್ನು ಕಾಣ ಬಹುದು. ಒಬ್ಬ ಮನುಷ್ಯ ಸರ್ಕಾರವನ್ನಾಗಲೀ ಕಡೆಗೆ ತನ್ನನ್ನೇ ಆಗಲೀ ವಂಚಿಸಿಕೊಳ್ಳಬಹುದಾದರೂ ದೇವರನ್ನು ವಂಚಿಸಲು ಪ್ರಯತ್ನಿಸ ಲಾರ. ವಸೂಲಿ ಯಾಗದ ಸಾಲವೆಂದು ತಿಳಿದ ಹಲವಾರು ಸಾಲಗಳು ಹುಂಡಿಯ ಪರವಾದ ಮೇಲೆ ಆಲಯಾಧಿಕಾರಿಗಳಿಂದ ಸಾಮಾನ್ಯ ಸೂಚನೆ ಹೊರಟ ಕೂಡಲೇ ದೇವರ ಪರವಾಗಿ ವಸೂಲಾಗಿರುವುದು ಸುಪರಿಚಿತ ಪ್ರಸಂಗಗಳೇ ಆಗಿವೆ. ಕಾರಣ ದೇವರ ದುಡ್ಡನ್ನು ಎತ್ತಿಹಾಕಲು ಯಾರೂ ಬಯಸುವುದಿಲ್ಲ ಹಾಗೂ ಸಾಲವೇನಾದರೂ ಇದ್ದರೆ ಲೆಕ್ಕಸರಿನೋಡಿಕೊಂಡು ಬೇಬಾಕಿಯಾಗುವುದು ಎಲ್ಲರಿಗೂ ಇಷ್ಟವಾದ ಕೆಲಸವೇ. ಹೀಗಾಗಿ ಆಲಯ ಶಾಸನಗಳು ಪೂರ್ಣವಾಗಿ ನಂಬಿಕೆಗೆ ಅರ್ಹವಾದವು ಹಾಗೂ ತಕ್ಕ ನಿರ್ಣಯ ಗಳನ್ನು ಕೈಗೊಳ್ಳುವಲ್ಲಿ ಸಹಾಯ ಮಾಡುತ್ತವೆ ಎಂಬುದರಿಂದ ಅವುಗಳಿಗೆ ಪ್ರಾಧಾನ್ಯ ಬರುವುದು.

## 2. ಹದಿನಾರನೆಯ ಶತಕದ ಭೂಕಂದಾಯ, ಆಲಯ ಭೂಮಿಗಳು :

ಆಲಯ ಶಾಸನಗಳೆಂದರೆ ಮುಖ್ಯವಾಗಿ ಗ್ರಾಮಗಳ ಅಥವಾ ಗ್ರಾಮಭಾಗಗಳ ಅಥವಾ ಒಂದಷ್ಟು ಭೂಮಿಯ ಸಾಗುವಳಿ ಆಗುತ್ತಿರುವ ಅಥವಾ ಆಗದಿರುವ ಭೂಮಿಗಳ ದಾನದ ದಾಖಲೆಗಳು. ಹಲವಾರು ಸಂದರ್ಭಗಳಲ್ಲಿ ಈ ಭೂಮಿಯ ಬಂಡವಾಳದಿಂದ ಆದ ಉತ್ಪನ್ನವನ್ನು ಆಲಯದ ಯಾವುದೋ ಒಂದು ಅಥವಾ ಹಲವು ಸೇವೆಗಳಲ್ಲಿ ದಾನಿಯ ಹೆಸರಿನಲ್ಲಿ ಬಳಸಬೇಕೆಂದು ಕಟ್ಟು ಮಾಡಲಾಗುತ್ತದೆ. ಹಲವು ಸಂದರ್ಭಗಳಲ್ಲಿನ ದಾನಗಳು ಒಂದು ಬಾರಿಯ ಪತ್ಯೇಕವಾದ ಉತ್ಸವ, ಉಭಯಕ್ಕೆ ಮಾತ್ರ ಸೀಮಿತ ವಾಗುತ್ತವೆ. ಮೊದಲ ವರ್ಗದ ದಾನಗಳ ದಾಖಲೆಗಳಲ್ಲಿ ಎಂದರೆ ಯಾವುದೋ ಉತ್ಪನ್ನ ಬರುವ ಬಾಬತ್ತಿನಲ್ಲಿ ಬಂಡವಾಳವಾಗಿ ಹೂಡಿ ಬರುವ ಆದಾಯದಿಂದ ನಿರ್ದೇಶಿತ ಸೇವೆ ಉತ್ಸವಗಳನ್ನು ನಡೆಸಬೇಕೆಂದು ನೀಡಿದ ದಾನ ಶಾಸನಗಳಲ್ಲಿ, ಸ್ಥಳೀಯ ಸಾಮಾಜಿಕ ಆರ್ಥಿಕ ವಿವರಗಳ ಬಗ್ಗೆ ಆಸಕ್ತಿದಾಯಕವಾದ ಮಾಹಿತಿಗಳನ್ನು ಕಾಣಬಹುದು.

ಈ ಬಗ್ಗೆ ಅಧ್ಯಯನ ಮುಂದುವರೆಸುವಾಗ ಆ ಕಾಲದಲ್ಲಿ ಪ್ರಚಲಿತವಿದ್ದ ಭೂಮಿ ಕಾಣಿಗಳ ಬಗೆಗಿನ ಸಾಮಾನ್ಯ ಲಕ್ಷಣಗಳಷ್ಟು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ವಿಜಯನಗರದ ಆಡಳಿತಕಾಲದಲ್ಲಿ ಭೂಕಂದಾಯದ ಬಗ್ಗೆ ವಿವಿಧ ಪ್ರಾಥಮಿಕ ವಿಭಾಗಗಳಿದ್ದವು ಎಂಬುದು ಸರ್ವಶ್ರುತ. ಅವುಗಳೆಂದರೆ-

ಅ) ಭಂಡಾರವಾಡೆ ಅಥವಾ ರಾಜನ ವ್ಯವಸಾಯದ ಭೂಮಿಗಳು. ಇದರಿಂದ ಪ್ರತಿವರ್ಷವೂ ಬರುವ ಆದಾಯವನ್ನು ರಾಜ್ಯಕೋಶಾಗಾರಕ್ಕೆಸೇರಿಸಿ ರಾಜ್ಯದ ವೆಚ್ಚಗಳನ್ನು ಸರಿದೂಗಿಸಲಾಗುತ್ತಿದ್ದಿತು.

ಆ) ಅಮರಂ ಜಮೀನುಗಳು- ನಾಯಕರಿಗೆ ಸೇನಾಧಿಪತಿಗಳಿಗೆ ಸೇರಿದ್ದು, ಅವರುಗಳು ಒಂದು ಗೊತ್ತಾದ ಸಂಖ್ಯೆಯ್ಯಸೈನ್ಯವನ್ನು ಹೊಂದಿರಲು ತಕ್ಕ ವೆಚ್ಚಗಳಿಗಾಗಿ ಈ ಭೂಮಿಯ ಉತ್ಪನ್ನಗಳ ಆದಾಯವನ್ನು ಪಡೆಯ ತಕ್ಕದ್ದು. ಈ ಸೈನಿಕರ ಸೇವೆಯನ್ನುರಾಜನು ಸೂಕ್ತ ಕಂಡಾಗ, ಅಗತ್ಯವಿದ್ದಾಗ ಬಳಸಬಹುದಾಗಿದ್ದಿತು. ಈ ವಿಧಾನದಲ್ಲಿ ಅನೇಕ ಒಳ ಕಟ್ಟುಪಾಡುಗಳಿರುತ್ತಿದ್ದವು. ಕೆಲವು ಬಾರಿ ಆದಾಯದ ಒಂದು ಭಾಗವನ್ನು ನೇರವಾಗಿ ರಾಜ ಕೋಶಕ್ಕೆ ಸಲ್ಲಿಸಿ, ಮಿಕ್ಕದ್ದನ್ನು ಸೈನ್ಯದ ವೆಚ್ಚಗಳಿಗಾಗಿ ಬಳಸಲಾಗುತ್ತಿತ್ತು.

ಇ) ದೇವ ಭೂಮಿಗಳು ಎಂಬ ಬ್ರಾಹ್ಮಣ, ಆಲಯ, ಮಠ, ಶಿಕ್ಷಣ ಸಂಸ್ಥೆಗಳ ವಶಕ್ಕೆ ಕ ದಾನದರ್ಮಗಳಿ ಗಾಗಿ ನೀಡಿದ ಸಾಗುವಳಿಯ ಭೂಮಿ. ಇವುಗಳ ಕಟ್ಟುಪಾಡು ಕಾಲಾವಧಿಗಳು ಪ್ರತಿಯೊಂದು ಸಂದರ್ಭದಲ್ಲಿ ಬೇರೆ ಬೇರೆ ಆಗಿರುತ್ತಿದ್ದವು. ಹಲವುಬಾರಿ ಮಠಾಧಿಪತಿಗಳೇ ಒಡೆಯರಾಗಿ ಇರುತ್ತಿದ್ದರು. ಹಲವು ಬಾರಿ ಆಲಯಗಳವರು ಧರ್ಮದರ್ಶಿಗಳಾಗಿ ನೋಡಿಕೊಳ್ಳುತ್ತಿದ್ದರು.

ವಿಜಯನಗರದ ಚರಿತ್ರೆಯ ಕಾಲದ ಭೂಮಿಒಡೆತನ ವಿವರಗಳ ಬಗ್ಗೆ ಹೆಚ್ಚಿನ ವಿಚಾರ ವಿಮರ್ಶೆಗಳು ಪ್ರೊ॥ ಟಿ.ವಿ. ಮಹಾಲಿಂಗಂ, ಡಾ॥ ಎನ್. ವೆಂಕಟರಮಣಯ್ಯ ಮುಂತಾದ ವಿದ್ವಾಂಸರಿಂದ ನಡೆದಿದೆ.

## 3. ಆಲಯದ ಆದಾಯ ಭಾಗ

ಗ್ರಾಮಗಳ ಅಥವಾ ಗ್ರಾಮ ಭಾಗಗಳ ಹಿಡುವಳಿಯ ಷರತ್ತುಗಳು ಹೇಗೇ ಇದ್ದರೂ ಆಲಯದ ಭೂಮಿಯ ಆದಾಯವನ್ನು ಸ್ಥೂಲವಾಗಿ ಎರಡು ರೀತಿಯಾಗಿ ಭಾಗಿಸಿ - ಮೇಲ್‌ವರಂ ಹಾಗೂ ಕುಡಿವರಂ ಎಂದು ವರ್ಗೀಕರಿಸಿ ಮೊದಲನೆಯದನ್ನು ಭೂಮಿಯ ಒಡೆಯರಿಗೂ ಎರಡನೆಯದನ್ನು ಭೂಮಿಯಲ್ಲಿ ಸಾಗುವಳಿ ಮಾಡುವವನಿಗೂ ನೀಡಲಾಗುತ್ತಿದ್ದಿತು. ಈ ವ್ಯವಸ್ಥೆ ಹೆಚ್ಚು ಕಡಿಮೆ ಆಂಗ್ಲರು ಅಧಿಕಾರವನ್ನು ಸ್ಥಾಪಿಸುವವರೆಗೆ ನಡೆದು ಬಂದಿತು.'ಮೇಲ್ ವರಂ' ಆದಾಯವು ಗ್ರಾಮವು ದಾನವಾದ ವ್ಯಕ್ತಿಗೆ ಅಥವಾ ಮಠಕ್ಕೆ ಅಥವಾ ಆಲಯಕ್ಕೆ ಅಥವಾ ಧರ್ಮದರ್ಶಿಗಳಿಗೆ ಸೇರುತ್ತಿದ್ದಿತು. ಕುಡಿವರವು ಭೂಮಿಯಲ್ಲಿ ಬೆಳೆ ತೆಗೆಯುವ ಕೃಷಿಕನು ಇಟ್ಟು ಕೊಳ್ಳುತ್ತಿದ್ದ ಆದಾಯವಾಗಿದ್ದಿತು. ಕೃಷಿ ಭೂಮಿಯ ಬೆಳೆಯ ಆದಾಯವನ್ನು ಈ ರೀತಿಯಾಗಿ ಒಡೆಯ ರೈತರು ಹಂಚಿಕೊಳ್ಳುವ ಪದ್ಧತಿಯು ಪಲ್ಲವ ಹಾಗೂ ಚೋಳರ ಕಾಲದಲ್ಲಿಯೂ ಪ್ರಚಲಿತವಾಗಿದ್ದಿತು. (ಆಗ ಇವುಗಳನ್ನು ಕ್ರಮವಾಗಿ ಮಿಯಾಚ್ಚಿ, ಕುಡಿಯಾಚ್ಚಿ ಎನ್ನುತ್ತಿದ್ದರು.) ಹೀಗಾಗಿ ಒಬ್ಬ ದೊರೆಯು ಆಲಯವೊಂದಕ್ಕೆ ಒಂದು ಗ್ರಾಮದ ದಾನ ನೀಡಿದರೆ ವಾಸ್ತವವಾಗಿ ಆಲಯ ಪಡೆಯುತ್ತಿದ್ದದ್ದು ಮೇಲ್‌ವರಂ ಅನ್ನು ಎಂದರೆ ಆದಾಯದ ಒಂದು ಭಾಗವನ್ನು ಮಾತ್ರ. ಇದು ರಾಜ ಅಥವಾ ರಾಜಭಂಡಾರವು ಸಾಮಾನ್ಯ ಸ್ಥಿತಿಯಲ್ಲಿ ಪಡೆಯುತ್ತಿದ್ದ ಭಾಗವಾಗಿದ್ದಿತು. ಕುಡಿವರಂ ಮಾತ್ರ ಎಲ್ಲ ಸ್ಥಿತಿಯಲ್ಲಿಯೂ, ಎಲ್ಲ ಕಾಲದಲ್ಲಿಯೂ ರೈತನ ಪಾಲಿಗೆ ಮಿಗುತ್ತಿದ್ದ ಭಾಗವಾಗಿದ್ದಿತು.

ಹೀಗಾಗಿ ಆಲಯ ಶಾಸನಗಳ ಆಧಾರದಿಂದ ನಡೆಸುವ ಸಾಮಾಜಿಕ ಆರ್ಥಿಕ ಅಧ್ಯಯನದಲ್ಲಿ ಮೊದಲನೆಯದಾಗಿ ಗಮನಿಸಬೇಕಾದ ಅಂಶವೆಂದರೆ ಭೂಮಿಯ ಸಾಗುವಳಿ ಮಾಡುವ ರೈತನ ಭಾಗದ ಆದಾಯವನ್ನು ಯಾವ ಕಾಲದಲ್ಲಿಯೂ ಯಾರೂ ಮುಟ್ಟಲಿಲ್ಲ. ಭೂಮಿಯ ಒಡೆತನ ವ್ಯಕ್ತಿ, ರಾಜ್ಯ, ಮಠ, ಶಿಕ್ಷಣಸಂಸ್ಥೆ, ಆಲಯ - ಯಾರದ್ದೇ ಆಗಿದ್ದರೂ ರೈತನ ಮೂಲಭೂತ ಆದಾಯ ಹಾಗೇ ಇದ್ದಿತು.

## 4. ಆಲಯ ಸಂಪನ್ಮೂಲಗಳ ನೀರಾವರೀ ಸಾಮರ್ಥ್ಯ

ದಾನದ ಮೂಲಕ ಬಂದ ಧನ ಸಂಪತ್ತಿಯನ್ನು ಬಂಡವಾಳವಾಗಿ ತೊಡಗಿಸಲು ನೀರಾವರೀ ಅಭಿವೃದ್ಧಿ ಒಂದು ಮುಖ್ಯವಾದ ಮಾಧ್ಯಮವನ್ನು ತಿರುಪತಿಯಲ್ಲಿ ಒದಗಿಸಿತು. ಕಾರಣ ಇದೊಂದು ನಂಬಲರ್ಹವಾದ ಸ್ಥಿರ ಮಾಧ್ಯಮವಾಗಿದ್ದಿತು. ತಿರುಮಲೆಯ ಆಲಯದ ವೈವಿಧ್ಯಮಯವಾದ ಹಾಗೂ ಅನೇಕವಾದ ಪೂಜಾ ಉತ್ಸವಾದಿಗಳು ಚಿರಂತನವಾದ ಧಾರಾವಾಹಿಯಾಗಿ ಉಂಟಾಗುವ ಆದಾಯದ ಸೆಲೆಯನ್ನು ತನ್ನ ದಾನ ದತ್ತಿಗಳಿಂದ ಅಪೇಕ್ಷಿಸಿದ್ದು ಸಹಜವೇ. ನೀರಾವರೀ ಯೋಜನೆಗಳ ಈ ವ್ಯಾಪಕವಾದ ವ್ಯವಸ್ಥೆಯಿಲ್ಲದೇ ಹೋಗಿದ್ದಲ್ಲಿ ದಾನಿಗಳು ನೀಡಿದ ದಾನಗಳ ಆದಾಯ ಉದ್ದೇಶಿತ ಪೂಜೆ ಪುನಸ್ಕಾರಗಳ ಆಚರಣೆಯಲ್ಲಿ ಕೆಲಸಕ್ಕೆ ಬರುವಂತಹ ಸಂಭಾವ್ಯತೆಗಳಿದ್ದವೇ ಎಂಬುದು ಅನುಮಾನ. ಹೀಗಾಗಿ ಆಲಯದ ಸಾಂಸ್ಥಿಕ ಅಭಿವೃದ್ಧಿಯು ಆಲಯದ ಕಡೆಯಿಂದ ನಡೆದು ಬಂದ ಬೇಸಾಯಾಭಿವೃದ್ಧಿ ಕಾರ್ಯಕ್ರಮಗಳೊಡನೆ ನೇರವಾಗಿ ಸಂಬಂಧ ಹೊಂದಿ ಬೆಳೆಯುವಂತಾಯಿತು.

ಆಲಯದ ಆಡಳಿತದ ಸಮರ್ಥ ಹಾಗೂ ಸರ್ವಧರ್ಮ ಸಮಭಾವದ ಬೆಳವಣಿಗೆಯೂ ಕೂಡ ನೀರಾವರೀ ವ್ಯವಸ್ಥೆಯ ಸಾಫಲ್ಯವನ್ನು ಅವಲಂಬಿಸಿದ್ದಿತು. ಎರಡು ಶತಮಾನಗಳ ಕಾಲ ಒಂದು ಪ್ರಧಾನ ಆಲಯವಾಗಿ ಬೆಳೆಯುತ್ತ ಬಂದ ತಿರುಪತಿಯ ಆಲಯವು 1380ರಲ್ಲಿ ಹನ್ನೆರಡು ಮಂದಿ ಸ್ಥಾನತ್ತಾರರ ಆಡಳಿತ ಪರಿಧಿಯಲ್ಲಿ ಬಂದಿತು. ಒಂದು ಶತಮಾನದ ಬೆಳವಣಿಗೆಯ ನಂತರ 1450ರಲ್ಲಿ ಮತ್ತೆ ಆಲಯದ ಆಡಳಿತ ವರ್ಗದ ಕೆಲಸಗಳ ವ್ಯಾಪ್ತಿ ಪರಿವರ್ತಿತವಾಯಿತು. ಆಲಯಕ್ಕೆ ಕೊಡಮಾಡಿದ ಸಂಪನ್ಮೂಲಗಳ ಹಾಗೂ ಆಲಯದ ಸರ್ವಧರ್ಮ ಸಮಭಾವದ ಆಡಳಿತಗಳು ಒಂದರೊಡನೊಂದು ಹಾಸುಹೊಕ್ಕಾಗಿ ಪರ್ವತದಂತಹ ಲಂಬಿಗಳಾಗಿ ಬೆಳೆದವು. ಹದಿನೈದು ಹದಿನಾರನೇ ಶತಮಾನದಲ್ಲಿ ಆಲಯ ಗಳಿಸಿದ ಸಂಪನ್ಮೂಲಗಳ ಹೆಚ್ಚಳಕ್ಕೆ ಕಾರಣ ಅವುಗಳ ಆಡಳಿತದಲ್ಲಿ ಆಲಯದ ಆಡಳಿತಾಂಗ ತೋರಿಸಿದ ಸಾಮರ್ಥ್ಯ ಹಾಗೂ ಸರ್ವಧರ್ಮ ಸಮಭಾವಗಳು, ವಿಜಯನಗರದರಸರು ತೋರಿದ, ನೀಡಿದ ಆಶ್ರಯಗಳಷ್ಟೇ ಮುಖ್ಯ. ಹದಿನಾರನೇ ಶತಮಾನದಲ್ಲಿ ಆಲಯದ ಆಡಳಿತದ ಜಾತ್ಯತೀತ ಸಂಸ್ಥೆ ಹೆಚ್ಚಿನ ಸಂಪತ್ತಿನ ಆಡಳಿತಕ್ಕೆ ಹೆಚ್ಚು ಒತ್ತು ನೀಡುತ್ತ ಹೋಯಿತು.

## 5. ದಾನಿಗಳ ವರ್ಗೀಕೃತ ತಖ್ತೆ:

ತಿರುಮಲೆಯ ಆಲಯ ಶಾಸನಗಳು ದಾನಿಗಳ ಪೂರ್ಣ ವಿವರಗಳನ್ನು ನೀಡುತ್ತವೆ. ದಾನವು ಗ್ರಾಮ ದಾನವಾಗಬಹುದು ಅಥವಾ ಧನದಾನವಾಗಬಹುದು. ಈ ದಾನಿಗಳನ್ನು 28 ವಿಭಾಗಗಳಲ್ಲಿ ವಿಂಗಡಿಸ ಬಹುದು.

1. ವಿಜಯನಗರು ಸಾಮ್ರಾಟರು.
2. ರಾಣಿ (ಕಿರಿಯ ರಾಣಿ).
3. ರಾಣಿ (ಪಟ್ಟದ ರಾಣಿ).
4. ಪ್ರಾಂತ್ಯ ಪಾಲ (ರಾಜ್ಯಪಾಲ).
5. ಪ್ರಧಾನಿ.
6. ಪ್ರಧಾನಿಯ ಕುಟುಂಬ.
7. ಸಕಲ ಸೈನ್ಯಾಧಿಪತಿ.
8. ದಳಪತಿಗಳು.
9. ಅರಮನೆ ಅಧಿಕಾರಿ.

10. ರಾಜ್ಯಾಧಿಕಾರಿ.

11. ರಾಜ ಪುರೋಹಿತ.

12. ಸಾಮಂತ ರಾಜರು ಮತ್ತಿತರ ಅಧೀನ ಅಧಿಕಾರಿಗಳು.

13. ಕಂದಾಯಾಧಿಕಾರಿ.

14. ಭೂಹಿಡುವಳಿ ಅಧಿಕಾರಿ.

15. ಮತ್ತೊಬ್ಬ ಅಧಿಕಾರಿ (ಕಾರ್ಯಪರಿಚಯವಿಲ್ಲ).

16. ಜೀಯರು.

17. ಏಕಾಂಗಿ ಶ್ರೀವೈಷ್ಣವರು.

18. ಆಚಾರ್ಯ ಪುರುಷರು ಹಾಗೂ ಧರ್ಮಗುರುಗಳು.

19. ಸಭೆಯರ್ (ಪಂಚಾಯತಿ ಸದಸ್ಯರು).

20. ವೈದಿಕ ಬ್ರಾಹ್ಮಣರು.

21. ಕವಿ ಕುಟುಂಬ.

22. ವಾಗ್ಗೇಯಕಾರರು.

23. ವಿದ್ವಾಂಸರು.

24. ನಂಬಿಮಾರ್ (ಆಲಯ ಅರ್ಚಕರು).

25. ಮಾಧ್ವ ಆಚಾರ್ಯರು.

26. ಆಲಯ ಲೆಕ್ಕಿಗರು

27. ನಾಗರಿಕರು ಹಾಗೂ ವರ್ತಕರು.

28. ಖಾಸಗಿ ಭಕ್ತರು.

29. ಇತರ ಯಾತ್ರಿಕರು (?).

ಕ್ರಿ.ಶ. 1510 ರಿಂದ ಕ್ರಿ.ಶ. 1570ರವರೆಗಿನ 60 ವರ್ಷದ ದಾನಗಳ ದೃಷ್ಟಾಂತಗಳ ವಿಶ್ಲೇಷಣೆ ಮಾಡಲಾಗಿದ್ದು, ಇದು ಸ್ಥೂಲವಾಗಿ ಕೃಷ್ಣರಾಯನ ಕಾಲ (1508 ರಿಂದ 1530) ಅಚ್ಯುತರಾಯನ ಕಾಲ (1530-1542), ಸದಾಶಿವರಾಯನ ಕಾಲ (1542-1568)ರವರೆಗೆ ತಿ.ತಿ.ದೇ. ಶಾಸನಗಳ ಪರಿಶೀಲನೆಯಿಂದ ಮಾಡಿದ್ದಾಗಿದೆ. ಈ ಕಾಲದಲ್ಲಿ ಮೇಲ್ಕಾಣಿಸಿದ ವರ್ಗೀಕರಣದ ದಾನಿಗಳು ಮಾಡಿದ ದಾನಗಳ ಪಟ್ಟಿ ಹೀಗೆ :-

ಎರಡು ಪಟ್ಟಿಗಳಲ್ಲಿನ ದಾನಿಗಳ ಹಾಗೂ ದಾನದ ಜಮೀನು ಹಾಗೂ ಧನದ ಮೊತ್ತಗಳನ್ನು ಪರಿಶೀಲಿಸಿದಾಗ ಕೆಳಕಂಡ ಅಂಶಗಳು ಗಮನಕ್ಕೆ ಬರುತ್ತವೆ.

| ಭೂಮಿದಾನ ವಿವರ | | | | | | |
|---|---|---|---|---|---|---|
| ಸಂ. | ದಾನಿಗಳು | ದಾನದ ರೀತಿ | ಕೃಷ್ಣರಾಯನ ಕಾಲ | ಅಚ್ಯುತರಾಯನ ಕಾಲ | ಸದಾಶಿವರಾಯನ ಕಾಲ | ಒಟ್ಟು |
| 1 | ರಾಜ, ರಾಣಿ, ರಾಜ್ಯಪಾಲ ಮುತ್ತಿತರರು | ರಾಜಭೋಗದ ಭೂಮಿ | 12 | 10 | 40 | 62 |
| 2 | ಆಚಾರ್ಯ ಪುರುಷರು ವಾಗ್ಗೇಯಕಾರರು, ಮತ್ತಿತರರು | ದತ್ತಿ ನೀಡಿದ ಭೂಮಿ | 5 | 19 | 18 | 42 |
| 3 | ಇತರರು | ರೈತಭೋಗದ ಭೂಮಿ | 1 | 6 | 3 | 10 |
| | ಒಟ್ಟು | | 18 | 35 | 61 | 114 |

| | ಹಣಕಾಸಿನ ದಾನಗಳು | | | | | | |
|---|---|---|---|---|---|---|---|
| ಸಂ. | ದಾನಿಗಳು | ಕೃಷ್ಣದೇವರಾಯನ ಕಾಲ | | ಅಚ್ಯುತರಾಯನ ಕಾಲ | | ಸದಾಶಿವರಾಯನಕಾಲ | |
| | | ಧನದ ಮೊತ್ತ | ಶೇಕಡ | ಮೊತ್ತ | ಶತಾಂಶ | ಮೊತ್ತ | ಶತಾಂಶ |
| 1 | ರಾಜ, ರಾಣಿ, ರಾಜಪ್ರತಿನಿಧಿ ರಾಜ್ಯ ನೌಕರರು | 51,400 | 35 | 308705 | 65 | 38680 | 20.5 |
| 2 | ಜೀಯರ್, ಆಚಾರ್ಯ ಮೊದಲಾದ ಆಲಯ ಸಿಬ್ಬಂದಿ | 40681 | 28 | 109898 | 24 | 42371 | 23.5 |
| 3 | ವರ್ತಕರು ಭಕ್ತರು ಮತ್ತಿತರರು, ರಾಜ್ಯ ನೌಕರರು | 53185 | 37 | 51988 | 11 | 108555 | 56 |
| | ಒಟ್ಟು | 145266 | 100 | 470591 | 100 | 189606 | 100 |

ಎ) ಆಲಯಕ್ಕೆ ನೀಡಲಾಗಿದ್ದ ಭೂಮಿಯ ಒಟ್ಟು ಆದಾಯವೆಷ್ಟು ಹಾಗೂ ಈ ಆದಾಯವು ಅಂದಿಗೆ ಪ್ರಚಲಿತವಿದ್ದಂತಹ ಆಚಾರಗಳನ್ನು ಉತ್ಸವಗಳನ್ನು ನಡೆಸಲು ಸಾಕಾಗುತ್ತಿದ್ದಿತೇ?

ಬಿ) ಆಲಯವು ಆದಾಯವನ್ನು ಹೆಚ್ಚಿಸಿಕೊಳ್ಳಲು ಇದ್ದಂತಹ ಇತರ ಧನಮೂಲಗಳು ಯಾವುವು? ಇದರಿಂದ ಆಲಯವನ್ನು ಒಂದು ಜೀವಂತ ಸಂಸ್ಥೆಯಾಗಿಡಲು ಸಾಧ್ಯವಿದ್ದಿತೇ?

ಸಿ) ಆಲಯದ ಪಾರುಪತ್ಯದಾರರು - ಕೆಲಸಗಾರ ಧರ್ಮದರ್ಶಿಗಳು ಆಲಯದ ಪರವಾಗಿ ದಾನ ದತ್ತಿಗಳ ಸೌಲಭ್ಯವನ್ನು ಸ್ವೀಕರಿಸುವಷ್ಟಕ್ಕೇ ಸೀಮಿತರಾಗಿದ್ದರೆಂದು ಸಾಮಾನ್ಯವಾಗಿ ಭಾವಿಸುವುದರ ಹಿನ್ನಲೆಯಲ್ಲಿ ಇವರುಗಳು ತಾವೇ ಸ್ವತಃದಾನ ದತ್ತಿಗಳನ್ನು ಆಲಯಕ್ಕೆ ನೀಡಿದಾಗ ಉಂಟಾಗುತ್ತಿದ್ದ ಆರ್ಥಿಕ ಷರತ್ತುಗಳು, ನಿಯಮಗಳು ಯಾವುವು?

ಡಿ) ಕೃಷ್ಣರಾಯನ ಕಾಲ ಹಾಗೂ ಸದಾಶಿವರಾಯರ ಕಾಲಕ್ಕಿಂತಲೂ ಮಧ್ಯದಲ್ಲಿ ಬಂದ ಅಚ್ಯುತರಾಯನ ಕಾಲದಲ್ಲಿ ಆಲಯಕ್ಕೆ ಧನಾದಾಯ ಹೆಚ್ಚಾಗಲು ಕಾರಣಗಳೇನು?

ಇ) ಧನದ ದಾನಗಳು ಬಂದಾಗ ಅವುಗಳ ಬದಲಿಗೆ ಪೂಜೆ ಉತ್ಸವಗಳ ಏರ್ಪಾಡು ಮಾಡುವಲ್ಲಿ ಈ ಧನದಾನ ಒಂದೇ ಬಾರಿಗೆ ವೆಚ್ಚವಾಗುವಂತೆ ಬಳಕೆ ಆಗುತ್ತಿದ್ದಿತೋ ಅಥವಾ ಅನೇಕ ದಾನಗಳಲ್ಲಿ ವಿಶೇಷವಾಗಿ ಉಲ್ಲೇಖವಾಗಿರುವಂತೆ ಯಾವುದಾದರೂ ಒಂದು ರೀತಿಯ ಆದಾಯ ನಿರಂತರವಾಗಿ ಬರುವಂತೆ ಮೂಲಧನ ವಾಗಿ ಈ ದಾನದ ಧನ ಬಳಕೆ ಆಗುತ್ತಿದ್ದಿತೋ? ಜೊತೆಗೇ ಈ ಬಂಡವಾಳದ ಮೇಲೆ ಉಂಟಾಗುತ್ತಿದ್ದ ಉತ್ಪನ್ನದ ಆದಾಯದ ಲಕ್ಷಣವೇನಾಗಿದ್ದಿತು?

ಎಫ್) ಮೇಲಿನ ಆರ್ಥಿಕ ವಿಶ್ಲೇಷಣೆಯಿಂದ 16 ನೇ ಶತಮಾನದ ಸಾಮಾನ್ಯ ಜನತೆಯ ಸಾಮಾಜಿಕ ಜೀವನದಲ್ಲಿ ಎಂತಹ ಪ್ರಭಾವ - ಹಾಗೊಮ್ಮೆ ಇದ್ದರೆ - ಉಂಟಾಗಿದ್ದಿರಬಹುದು.

ಮೇಲಿನ ಪ್ರಶ್ನೆಗಳಲ್ಲಿ ಕೆಲವಕ್ಕೆ ಶಾಸನಗಳ ಎಚ್ಚರಿಕೆಯಿಂದ ಕೂಡಿದ ಅಧ್ಯಯನದಿಂದ ಉತ್ತರಗಳು ದೊರೆಯುತ್ತವೆ.

ಕ್ರಿ.ಶ. 1510 ರಿಂದ 1570 ರ ವರೆಗೆ ಆಲಯಕ್ಕೆ ದಾನವಾಗಿ ಬಂದ ಗ್ರಾಮಗಳು 115 ಆದರೆ ಅವುಗಳಲ್ಲಿನ 54 ಶತಾಂಶ ಎಂದರೆ 62 ಗ್ರಾಮಗಳು ರಾಜಭಂಡಾರ ದಾನಗಳಾಗಿದ್ದು ಹೆಚ್ಚಿನ ಭಾಗ ರಾಜಪುರುಷರ, ರಾಣಿಯರ, ರಾಜರ ದಾನಗಳಾಗಿಆಲಯಕ್ಕೆ ನೀಡಲ್ಪಟ್ಟವು. ಎರಡನೆಯ ವರ್ಗದವರಿಂದ (ಪಟ್ಟಿ 1ರಲ್ಲಿನ ಎರಡನೇ ವರ್ಗದ ದಾನಿಗಳು) ಈ 115ರಲ್ಲಿ 43 ಗ್ರಾಮಗಳುದಾನವಾಗಿ ಬಂದವು ಎಂದರೆ 37 ಶತಾಂಶ. ಒಟ್ಟಿಗೆ ತೆಗೆದುಕೊಂಡರೆ ರಾಜಪುರುಷರ ಆಚಾರ್ಯರ ದಾನಗಳಲ್ಲಿ 105 ಗ್ರಾಮಗಳು ಬಂದಿದ್ದು ಆಲಯಕ್ಕೆ ದಾನವಾಗಿ ಬಂದ ಗ್ರಾಮಗಳು 91 ಶತಾಂಶ ಭಾಗವಾಗುತ್ತದೆ. (1509 ರಿಂದ 1568 ವರೆಗೆ).

ಆಲಯಕ್ಕೆ ಸೇರಿದ ಸಾಮ್ರಾಜ್ಯದ ರಾಜಕೋಶದ ನೇರ ಜಮೀನುಗಳು ಹಾಗೂ ಸೇವೆಯ ಹಿಡುವಳಿ ಗ್ರಾಮಗಳ ಆದಾಯವನ್ನು ಎರಡು ಭಾಗವಾಗಿ ಮಾಡಲಾಗಿದ್ದಿತು. ಮೇಲ್ ವರಂ (ಮುಖ್ಯ ಭಾಗ) ಹಾಗೂ ಕುಡಿವರಂ ಅಥವಾ ಕೀಳ್‌ವರಂ (ಚಿಕ್ಕ ಭಾಗ). ಗ್ರಾಮಗಳ ಮುಖ್ಯ ಆದಾಯವನ್ನು - ಮೇಲ್‌ವರಂ ಅನ್ನು ರಾಜ್ಯದ ಅಥವಾ ಸೈನ್ಯದ ಬಳಕೆಗಾಗಿಯೂ, ಕೀಳ್‌ವರಂ ಅನ್ನುಜಮೀನಿನ ಬೇಸಾಯಗಾರರು ಸ್ವಂತಕ್ಕೆ ಬಳಸುವಂತೆ ಪದ್ಧತಿಯಿತ್ತು. ಗ್ರಾಮಗಳ ವಾರ್ಷಿಕ ಆದಾಯದಲ್ಲಿ ಈ ಎರಡು ರೀತಿಯ ಪರಂಪರೆಯಿಂದ ಬಂದ ವಿಭಜನೆಯನ್ನು ಈಗಾಗಲೇ ಗುರುತಿಸಲಾಗಿದೆ. ಇಂತಹ ಗ್ರಾಮಗಳನ್ನು ಆಲಯಕ್ಕೆ ದಾನ ನೀಡಿದಾಗ ಮುಖ್ಯ ಹಾಗೂ ಚಿಕ್ಕ ಭಾಗಗಳನ್ನು ಹಾಗೆಯೇ ಉಳಿಸಿಕೊಂಡು ದೇವಾದಾಯದ ಭೂಮಿಯ ಈ ಮುಖ್ಯಭಾಗದ ಆದಾಯವನ್ನು ಆಲಯಕ್ಕೆ ನೀಡಲಾಗುತ್ತಿದ್ದಿತು. ಚಿಕ್ಕ ಭಾಗ ಮಾತ್ರ ಮೊದಲಿನಂತೆಯೇ ಬೇಸಾಯಗಾರನ ಪಾಲಿಗೆ ನಿಂತಿತು.

ಜಮೀನು ದಾನ ನೀಡುವ ಒಂದು ಉದ್ದೇಶವೆಂದರೆ ಆಲಯಕ್ಕೆ ಒಂದು ಉತ್ಸವ- ಸೇವೆಯನ್ನು ನಡೆಸಲು ನಿರಂತರವಾದ ನಿತ್ಯವಾದ ಆದಾಯವನ್ನು ಒದಗಿಸುವುದಾಗಿದ್ದಿತು. ಹೀಗೆ ಆದಾಯದ ಪ್ರಾವಧಾನ ಮಾಡುವುದ ರೊಡನೆಯೇ ಇಂತಹ ಗ್ರಾಮಗಳು, ದಾನದಲ್ಲಿ ಬಂದಂತಹ ಹಣವನ್ನು ತೊಡಗಿಸಲು ಅವಕಾಶವನ್ನೂ ಒದಗಿಸಿದವು. ತಿರುಮಲೆಯ ಆಲಯದ ಶಾಸನಗಳು ಹಾಗೂ ಇದೇ ಕಾಲದ ದಕ್ಷಿಣ ಇಂಡಿಯಾದ ಇತರ ಆಲಯಗಳ ಶಾಸನಗಳ ಪರಿಶೀಲನೆಯಿಂದಾಗಿ ತಿಳಿಯುವ ಅಂಶವೆಂದರೆ ತಿರುಮಲೆಯ

ದಾನದ ಗ್ರಾಮಗಳು ತಮ್ಮಲ್ಲಿ ಬಂಡವಾಳ ತೊಡಗಿಸುವ ಹಾಗೂ ಅಭಿವೃದ್ಧಿಯಲ್ಲಿ ಕೆಲಸ ಮಾಡುವ ರೀತಿಯಲ್ಲಿ ಇತರ ಆಲಯ ಭೂಮಿಗಳಿಗಿಂತ ಬೇರೆಯಾದ ಲಕ್ಷಣವನ್ನು ಹೊಂದಿದ್ದವು. ಅಭಿವೃದ್ಧಿಯ ಕಾರ್ಯಕ್ರಮದಲ್ಲಿ ಆಲಯ ಗ್ರಾಮಗಳ ಒಂದು ಸೀಮಿತ ರೂಪವೆಂದರೆ ದಾನಿಯು ತಾನು ದಾನ ಮಾಡಿದ ಗ್ರಾಮದ ಒಡೆತನವನ್ನು ಹೊಂದಿರುವಂತೆಯೇ (ಕಾಣಿಯಾಚ್ಚಿ) ಅದರ ಆದಾಯದ ಒಂದು ಭಾಗವನ್ನು ಆಲಯಕ್ಕೆ ಕಡ್ಡಾಯವಾಗಿ ನೀಡಬೇಕಿದ್ದಿತು. ತಿರುಮಲೆಯ ಆಲಯ ಶಾಸನಗಳಲ್ಲಿ ಮೂರು ಶಾಸನಗಳು ಮಾತ್ರವೇ ಈ ರೀತಿಯವು[5], ಮತ್ತೊಂದು ರೀತಿಯ ಗ್ರಾಮದಾನದಲ್ಲಿ ಗ್ರಾಮದ ಅಭಿವೃದ್ಧಿಯಲ್ಲಿನ ಪಾತ್ರ ನಗಣ್ಯವಾಗಿ, ಒಂದು ಖಚಿತವಾದ ಪೂರ್ವನಿರ್ಧಾರಿತ ಮೊತ್ತವನ್ನು ವಾರ್ಷಿಕವಾಗಿ ಆಲಯಕ್ಕೆ ನೀಡವಷ್ಟಕ್ಕೇ ಸೀಮಿತವಾಗಿ, ಅದರ ಫಲಾನುಭವಿಗಳ ಇತರ ಯಾವುದೇ ಗೋಜಿಗೂ ಹೋಗದಿರುವುದಾಗಿದ್ದಿತು. ಇದನ್ನು ಶ್ರೋತ್ರೀಯ ದಾನವೆನ್ನುತ್ತಿದ್ದರು. ಶ್ರೋತ್ರೀಯ ದಾನದ ಗ್ರಾಮದವರು ರಾಜ್ಯಸರ್ಕಾರದಿಂದ ತಮ್ಮ ಯಾವುದೋ ಸೇವೆಯ ಪ್ರತಿಯಾಗಿ ಈ ಸವಲತ್ತು ಪಡೆಯುತ್ತಿದ್ದರು. ತಿರುಮಲೆಯ ಆಲಯದ ಶಾಸನಗಳ ಪ್ರಕಾರ ಇಂತಹ ಎರಡು ದಾನಗಳು 1514ರಲ್ಲಿ ದಾಖಲೆಯಾದವು[6]. ಕನಿಯಾಚಿ ಹಾಗೂ ಶ್ರೋತ್ರೀಯ ದಾನಗಳಿಂದಾಗಿ ಗ್ರಾಮದ ವಾರ್ಷಿಕ ಆದಾಯದ ಪ್ರಮಾಣ ಎಷ್ಟೇ ಇದ್ದಿರಬಹುದಾದರು ಆಲಯಕ್ಕೆ ಮಾತ್ರ ಒಂದು ನಿರ್ದಿಷ್ಟ ಮೊತ್ತ ಸೇರುವಂತೆ ಆಗಿದ್ದಿತು. ಬೇಸಾಯಗಾರನ ಭಾಗ ಮಾತ್ರ ಬದಲಾವಣೆ ಆಗದೆ ಹಾಗೆಯೇ ಉಳಿಯಿತು.

ಮೇಲೆ ಹೇಳಿರುವ ಸಂಘಟನೆಗಳ ಹೊರತಾಗಿ ಆಲಯವು ತನ್ನ ದಾನದ ಗ್ರಾಮಗಳ ಭೂ ಅಭಿವೃದ್ಧಿ ಯಿಂದಾದ ಹೆಚ್ಚಿನ ಆದಾಯವನ್ನು ಪಡೆಯಬಹುದಾಗಿದ್ದಿತು. ಆಲಯ ಗ್ರಾಮದ ಧರ್ಮದರ್ಶಿಗಳಾಗಿದ್ದ ಆಲಯದ ಯಜಮಾನಿಕೆಯ ಮಂದಿ ಜಮೀನಿನ ಬೇಸಾಯಗಾರನ ಪಾಲಿನ ಚಿಕ್ಕ ಭಾಗದ (ಕುಡಿವರಂ) ಆದಾಯವನ್ನು ಬಿಟ್ಟು ದೊಡ್ಡ ಭಾಗದ (ಮೇಲ್‌ವರಂ) ಹೆಚ್ಚುವರಿ ಹಣವನ್ನು ಭೂ ಅಭಿವೃದ್ಧಿಯಲ್ಲಿ ತೊಡಗಿಸುವ- ಆ ಮೂಲಕ ಹೆಚ್ಚು ಆದಾಯವನ್ನು ಪಡೆಯುವ ಒಂದು ಭಾಗ ಕುಡಿವರಂಗೆ ಸೇರುವಂತೆ ಮಾಡುವ ಸ್ವಾತಂತ್ರ್ಯ ಹೊಂದಿದ್ದರು.

### 6. ಹಿರಿದಾನಗಳನ್ನು ಬಂಡವಾಳವಾಗಿಸುವಿಕೆ

ದಾನಿಗಳು ನೀಡಿದ ಹಿರಿಯ ದಾನಗಳನ್ನು ಹೇಗೆ ಬಂಡವಾಳವನ್ನಾಗಿಸಬೇಕೆಂಬುದರ ಬಗ್ಗೆ ತಿರುಮಲೆ ಯಲ್ಲಿನ ಹಲವಾರು ಶಾಸನಗಳು ಖಚಿತವಾದ ನಿರ್ದೇಶನಗಳನ್ನು ನೀಡುತ್ತ ಅವುಗಳ ಮೇಲಿನ ಆದಾಯದ ಬಳಕೆಯ ಬಗ್ಗೆಯೂ ನಿರ್ದಿಷ್ಟವಾಗಿ ಹೇಳುತ್ತವೆ.

ಶಕವರ್ಷ 1462 ಅಥವಾ ಕ್ರಿ.ಶ. 1540 ರ ಕಾಲದ ಅಚ್ಯುತರಾಯನ ಆಡಳಿತ ಸಮಯದಲ್ಲಿನ ಆಲಯದ ಧರ್ಮದರ್ಶಿಗಳು ಅಂಗರಾಜ ನಾಗಪ್ಪಯ್ಯನ ಹೆಸರಿನಲ್ಲಿ (ಅಂಗರಾಜ ಎಂಬ ಹೆಸರಿನಿಂದಾಗಿ ಈತ ಅಚ್ಯುತರಾಯ ಅಂಗರಕ್ಷಕರಲ್ಲಿ ಒಬ್ಬನಾಗಿದ್ದ ನೆಂದು ಊಹಿಸಬಹುದು) ತಿರುಮಲೆಯ ಆಲಯದ ಮೂರನೆಯ ಪ್ರಾಕಾರದಲ್ಲಿ ಒಂದು ಶಾಸನವನ್ನು ಕೆತ್ತಿಸಿದರು. ಇದರ ವಸ್ತುವೆಂದರೆ ಅಂಗರಾಜನು ಆಲಯದ ಶ್ರೀಭಂಡಾರಕ್ಕೆ 15000 ನರ್ಪಣಗಳನ್ನು[7] (ನರ್ಪಣ ಎಂದರೆ ಬಹುಶಃ ಚಿನ್ನದ ನಾಣ್ಯ ಆಗಿರಬೇಕು.) ಸ್ವಾಮಿಯ ನೈವೇದ್ಯಕ್ಕಾಗಿ ಸಮರ್ಪಿಸಿದನೆಂದೂ, ಆಲಯದ ಧರ್ಮದರ್ಶಿಗಳು ಈ ಧನವನ್ನು ಆಲಯದ ಗ್ರಾಮದಲ್ಲಿನ ಕೆರೆಗಳನ್ನೂ ಕಾಲುವೆಗಳನ್ನೂ ಅಭಿವೃದ್ಧಿಗೊಳಿಸಲು ಬಳಸಿ ಬಂದ ಹೆಚ್ಚುವರಿ ಆದಾಯದಿಂದಾಗಿ ದಾನಿಯ ಹೆಸರಿನಲ್ಲಿ 300 ಅಪ್ಪಪಡಿಯನ್ನು ತಯಾರಿಸಿ ತಿರುಮಲೆಯ ಸ್ವಾಮಿಗೆ ಅರ್ಪಿಸುವುದಾಗಿಯೂ ಕರಾರು ಆಯಿತು. ಈ ಅಪ್ಪಪಡಿಯ ನಿವೇದನೆಯನ್ನು ಪವಿತ್ರೋತ್ಸವದ ದಿನದಲ್ಲಿ, ರಥೋತ್ಸವದ ದಿನದಲ್ಲಿ, ಪ್ಲವೋತ್ಸವದಂದು ಹಾಗೂ 25 ಏಕಾದಶಿಗಳಂದು, ಊಂಜಲ್ ತಿರುನಾಳ್ ದಿನದಲ್ಲಿ ಸಮರ್ಪಿಸಬೇಕೆಂದು ಶಾಸನದಲ್ಲಿ ವಿವರವಾಗಿ ಬರೆಯಲಾಗಿದೆ. ಹೀಗಾಗಿ ಈ ಹದಿನೈದು ಸಾವಿರ ನರ್ಪಣಗಳನ್ನು ಕೆರೆ ಕಾಲುವೆಗಳ ಜೀರ್ಣೋದ್ಧಾರದಲ್ಲಿ ಬಳಸಿದರೆ ಬರುವ ಹೆಚ್ಚಿನ ಉತ್ಪನ್ನವು 300 ಅಪ್ಪಪಡಿಗಳಿಗೆ ಸರಿಹೋಗುವಂತೆ ಇದ್ದಿತು ಎನ್ನಬೇಕು. ಈ ಶಾಸನವು ದಾನದ ಹಣವನ್ನು ನೀರಾವರಿಯಲ್ಲಿ ಬಂಡವಾಳ ವಾಗಿಸುತ್ತ ಬಂದ ಉತ್ಪನ್ನದಲ್ಲಿ ಆಲಯದ ಒಂದು ಖಚಿತ ಸೇವೆಯಲ್ಲಿ ವೆಚ್ಚಿಸಬೇಕೆಂಬುದನ್ನು ಬಿಂಬಿಸುತ್ತದೆ.

ಇಂತಹವೇ ವಿವರಗಳನ್ನು ನೀಡುವ ಇನ್ನೂ ಅನೇಕ ಶಾಸನಗಳಿವೆ. ಉದಾಹರಣೆಗೆ ತಿರುಮಲೆಯ ಆಲಯದ ಪಡಿಕಾವಲಿಯ ಗೋಪುರದ ಮೇಲಿನ (639ಟಿ.ಟಿ.) ಶಾಸನವು ಉಲಗಪ್ಪನ್ ನೀಡಿದ 800 ನರ್‌ಪಣಗಳನ್ನು ಆಲಯ ಗ್ರಾಮಗಳ ಕೆರೆಕಟ್ಟೆಗಳ ದುರಸ್ತಿಯಲ್ಲಿ ಬಳಸಿ ಹೆಚ್ಚಿದ ಆದಾಯವನ್ನು ಶಾಸನದಲ್ಲಿ ಹೇಳಿರುವಂತೆ ಸ್ವಾಮಿಸೇವೆಯಲ್ಲಿ ಉಪಯೋಗಿಸಬೇಕೆಂದು ಹೇಳುತ್ತದೆ.

ಇನ್ನು ಕೆಲವು ಶಾಸನಗಳಲ್ಲಿ ಉದಾಹರಣೆಗೆ ತಿ.ತಿ. 411 ನೇ ಶಾಸನದಲ್ಲಿ ಹೂಡಿಕೆಯ ಹಣ ನರ್ಪಣದಲ್ಲಿ ಯಾದರೆ ಉತ್ಪತ್ತಿಯನ್ನು ದೇವರ ಸೇವೆಯಲ್ಲಿ ಇನ್ನೊಂದು ನಿವೇದನೆಯಾದ ತಿರುಪ್ಪೋನಕದ ವೆಚ್ಚಗಳಿಗಾಗಿ ಬಳಸಲು ಹೇಳಲಾಗಿದೆ

ಹೀಗಾಗಿ ಆಲಯಗ್ರಾಮಗಳ (ಆಲಯಕ್ಕೆ ರಾಜ ಅಥವಾ ಇನ್ನಿತರರು ನೀಡಿದ ಗ್ರಾಮಗಳ) ನೀರಾವರೀ ಅಭಿವೃದ್ಧಿಯ ಕಾರ್ಯಗಳು ಹಣ ಹೂಡಿಕೆಯ ಭದ್ರವೂ ಶಾಶ್ವತವೂ ಆದ ಮಾರ್ಗವನ್ನು ತೋರಿಸಿ ಸ್ವಾಮಿಯ ಸೇವೆಯಲ್ಲಿ ವೆಚ್ಚಕ್ಕೆ ಹೆಚ್ಚಿದ ಉತ್ಪತ್ತಿಯನ್ನು ನೀಡುವಲ್ಲಿ ಸಫಲವಾದವು. ಈ ಅಂಶವನ್ನು ಗಮನಿಸುವಾಗ ಈ ರೀತಿಯ ವ್ಯವಸ್ಥೆಯು ಸಮರ್ಥವಾದ ಆಡಳಿತವನ್ನು ಅಪೇಕ್ಷಿಸುತ್ತದೆ ಎಂಬುದನ್ನು ಮೊದಲಿಗೇ ತಿಳಿಯಬೇಕಾದ್ದು ಅಗತ್ಯ. 14 ನೇ ಶತಮಾನದ ನಂತರ ಆಲಯದ ಆಡಳಿತವು 12 ಮಂದಿ ಸ್ಥಾನತ್ತಾರರ (ಸ್ಥಳವಂದಿಗರ) ಕೈಗೆ ಬಂದಿದ್ದು, ಆಲಯದ ಸಮರ್ಥ ಆರ್ಥಿಕ ಆಡಳಿತದಿಂದಾಗಿ ಅದಕ್ಕೆ ತಕ್ಕಂತೆ ಆಲಯದ ಆದಾಯ ಮೂಲಗಳೂ ಹೆಚ್ಚುತ್ತ ಹೋದವು ಎಂಬುದನ್ನು ಭರವಸೆಯಿಂದ ನಿರ್ಣಯಿಸಬಹುದಾಗಿದೆ.

## 7. ನೀರಾವರಿಯಿಂದಾದ ಉತ್ಪನ್ನ

ಬಹುತೇಕ ಶಾಸನಗಳಲ್ಲಿ ಬಂಡವಾಳದ - ದಾನದ - ಮೊತ್ತವನ್ನು ಪಣ - ಹಣ - ದ ಮೂಲದಲ್ಲಿಯೂ, ಉತ್ಪನ್ನವನ್ನು ಸ್ವಾಮಿಸೇವೆಯಲ್ಲಿ ಬಳಸುವ ನಿವೇದನೆಗಳಾದ ಅಪ್ಪಪಡಿ, ತಿರುಪ್ಪೋನಕಗಳ ರೂಪದಲ್ಲಿಯೂ ಗುರುತಿಸಲಾಗಿದೆ.

ಹೀಗಾಗಿ ಬಂಡವಾಳ ಹೂಡಿಕೆ ಹಾಗೂ ಉತ್ಪನ್ನದ ಮೊತ್ತದ ನಡುವೆ ಒಂದು ಧನ ಸಾಮಾನ್ಯತೆಯನ್ನು ಕಂಡುಕೊಳ್ಳದಿದ್ದಲ್ಲಿ ಆಲಯದ ಹೂಡಿಕೆಯ ಪ್ರತಿಫಲದ ಪ್ರಮಾಣವನ್ನುಗುರುತಿಸಲಾಗುವುದಿಲ್ಲ. ಅದೃಷ್ಟವಶಾತ್ ಒಂದೆರಡು ಶಾಸನಗಳು ಈ ರೀತಿಯ ಲೆಕ್ಕಾಚಾರಕ್ಕೆ ತಕ್ಕ ಸಾಮಾಗ್ರಿಯನ್ನು ಒದಗಿಸುತ್ತವೆ.

ತಿ.ತಿ. 421 ಹಾಗೂ ಜಿ.ಟಿ. 2 ಶಾಸನಗಳು ಮೇಲಿನ ವಿಷಯದಲ್ಲಿ ಪೂರ್ಣ ವಿವರಗಳನ್ನು ಬಿಟ್ಟುಕೊಡು ತ್ತವೆ. ತಿ.ತಿ. 421ನೇ ಶಾಸನವು ತಿರುಮಲೆಯ ಆಲಯದ ಮೂರನೆಯ ಪ್ರಾಕಾರದ ದಕ್ಷಿಣದ ಗೋಡೆಯ ಮೇಲಿದೆ. ಇದು ಶಕವರ್ಷ 1463 ರ (10-2-1542) ಪ್ಲವ ಸಂವತ್ಸರದ ಕುಂಭಮಾಸದಲ್ಲಿ ಸಲಕಯ್ಯದೇವ ಮಹಾರಾಜನ ಮಗ ಸಿಂಗರಾಜನ ಪರವಾಗಿ ಹಾಕಿಸಿದ ಶಿಲಾಶಾಸನ. ಮಲೈಕುನಿಯ ನಿನ್ರಪೆರುಮಾಳರ ನಿವೇದನೆಯಲ್ಲಿ ಮುನ್ನೂರು ಅಪ್ಪಪಡಿಗಳನ್ನು ನಿವೇದಿಸಬೇಕೆಂದು ಈತನು ಹದಿನೈದು ಸಾವಿರ ನರ್ಪಣಗಳನ್ನು ಆಲಯದ ಶ್ರೀಭಂಡಾರಕ್ಕೆ ಒಪ್ಪಿಸಿದನು. ಇದನ್ನು ಆಲಯದ ಧರ್ಮದರ್ಶಿಗಳು ಆಲಯ ಗ್ರಾಮಗಳ ಕೆರೆ ಕಟ್ಟೆಗಳ ದುರಸ್ತಿಯಲ್ಲಿ ಬಳಸಿ ಬಂದ ಉತ್ಪನ್ನದಿಂದ ಸ್ವಾಮಿಗೆ ಮುನ್ನೂರು ಅಪ್ಪಪಡಿಗಳನ್ನು ಒಪ್ಪಿಸಬೇಕಾಗಿದ್ದಿತು. ತಿ.ತಿ. 559 ನೇ ಶಾಸನದೊಡನೆ ಈ ಶಾಸನವನ್ನಿಟ್ಟು ನೋಡಿದಲ್ಲಿ ವರ್ಷಕ್ಕೆ ಮುನ್ನೂರು ಅಪ್ಪಪಡಿಗಳ ತಯಾರಿಕೆಗೆ ಬೇಕಾದ ಉತ್ಪನ್ನಕ್ಕೆ 15000 ನರ್ಪಣಗಳ ಹೂಡಿಕೆ ಅಗತ್ಯವಿದ್ದಿತೆಂದು ತಿಳಿದುಬರುತ್ತದೆ.

ಶಕವರ್ಷ 1463ರ ಪ್ಲವ ಸಂವತ್ಸರ ಮಕರ ಮಾಸದಲ್ಲಿನ ಪಂಚಮಿಯಂದು (20-1-1542) ತಿರುಪತಿಯ ಗೋವಿಂದ ರಾಜಸ್ವಾಮಿ ಆಲಯದಲ್ಲಿ ಪಾರ್ಥಸಾರಥಿ ದೇವಳದ ಒಳ ಪ್ರದಕ್ಷಿಣೆಯ ದಕ್ಷಿಣದ ಗೋಡೆಯಲ್ಲಿ (ಜಿ.ಟಿ.2) ಆಲಯದ ಧರ್ಮದರ್ಶಿಗಳು ಒಬ್ಬಾನೊಬ್ಬ ಶ್ರೀ ರಾಮಯ್ಯಂಗಾರ್ಯನ ಹೆಸರಿನಲ್ಲಿ ಒಂದು ಶಾಸನವನ್ನು ಕೆತ್ತಿಸಿದರು. ಅದರ ಪ್ರಕಾರ ದಾನಿಯು ಆಲಯದ ಅಧಿಕಾರಿಗಳಿಗೆ 56 ಪೊನ್ (ಚಿನ್ನದ ನಾಣ್ಯಗಳು) ಗಳನ್ನು ನೀಡಿ ಅದನ್ನು ಆಲಯ ಗ್ರಾಮಗಳಲ್ಲಿ ಬಂಡವಾಳವಾಗಿ ಹೂಡಿ ಬರುವ ಹೆಚ್ಚಿನ ಉತ್ಪನ್ನವನ್ನು ಶಾಸನದಲ್ಲಿ ಹೇಳಲಾದ ರೀತಿಯಲ್ಲಿ ದಾನಿಯ ಸೇವೆಯಾಗಿ ಸ್ವಾಮಿಯಲ್ಲಿ ನಿವೇದನೆ ಮಾಡ ಬೇಕೆಂದು

ಸೂಚಿಸಲಾಗಿದೆ. ದಾನ ನೀಡಿದ ಬಗ್ಗೆ ವಿವರಗಳನ್ನು ತಿಳಿಸುತ್ತ ಒಂದು ಮನೋಹರಪ್ಪಡಿಯ ವೆಚ್ಚ ಐದು ಪಣಗಳೆಂದೂ, ದೋಸೆ ಪಡಿಗೆ ಮೂರು ಪಣಗಳೆಂದೂ, ಅಪ್ಪಪಡಿಗೆ ಆರುಪಣಗಳೆಂದು ನಿರ್ಧರಿಸಲಾಗಿದೆ. ಇವೆಲ್ಲ ನೈವೇದ್ಯವನ್ನು ಪೆನುಕೊಂಡಸೀಮೆಯ ಕುಂದನ್ನಲು ಗ್ರಾಮವಾಸಿಯಾದ ಕಾಶ್ಯಪ ಗೋತ್ರದ ಆಪಸ್ತಂಭಸೂತ್ರ ಯಜುಃಶಾಖೆಯ ದಾನಿಯ ಹೆಸರಿನಲ್ಲಿ (ಶಾಸನ ತ್ರುಟಿತವಾಗಿದೆ) ದೇವರಿಗೆ ಸಮರ್ಪಿಸಬೇಕು. ಇದರಿಂದಾಗಿ ಒಂದು ಅಪ್ಪಪಡಿಗೆ ಆರು ಪಣಂಗಳು ಬೇಕಾಗುತ್ತವೆ ಎಂದಾಯಿತು.

ಮೇಲೆ ಹೇಳಿದ ಎರಡು ಶಾಸನಗಳಿಂದಾಗಿ ತಿರುಮಲೆಯ ಆಲಯದಲ್ಲಿ ಹೂಡಿದ ಬಂಡವಾಳದ ಮೂಲದಿಂದ ಎಷ್ಟು ಆದಾಯವಾಗುತ್ತಿದ್ದಿತು ಎಂಬುದು ತಿಳಿದುಬರುತ್ತದೆ. ಎರಡೂ ಶಾಸನಗಳೂ 1542 ರಲ್ಲಿನ ಜನವರಿ - ಫೆಬ್ರವರಿ ತಿಂಗಳಿನಲ್ಲಿ ಕೆತ್ತಲಾಗಿರುವುದರಿಂದ ಸಮಕಾಲಿಕವಾಗಿ, ಆ ಕಾಲದ ಬೆಲೆಗಳನ್ನು ಸರಿಯಾಗಿ ಸೂಚಿಸಿವೆ ಎಂದು ಹೇಳಬರುವುದು. ಒಂದು ಅಪ್ಪಪಡಿಯ ಬೆಲೆ ಆರು ಪಣವಾದ್ದರಿಂದ ಮುನ್ನೂರು ಅಪ್ಪಪಡಿಗಳಿಗೆ 1800 ಪಣದ ಉತ್ಪತ್ತಿ ಬೇಕೆಂದಾಯಿತು. ಹೀಗಾಗಿ 1500 ನರ್ಪಣಗಳ ಹೂಡಿಕೆಯಿಂದಾಗಿ 1800 ಪಣದ ಉತ್ಪತ್ತಿ ಹೆಚ್ಚುವರಿ ಆದಾಯವೆಂದಾಯಿತು. ಇದರಿಂದಾಗಿ ಉತ್ಪಾದನೆಯು ಹೂಡಿಕೆಯ ಹನ್ನೆರಡು ಶತಾಂಶವಾಗಿರುತ್ತದೆ ಎಂಬುದು ತಿಳಿಯುತ್ತದೆ.

ನೀರಾವರೀ ಕಾಲುವೆಗಳ ಜೀರ್ಣೋದ್ಧಾರದಿಂದ ಬಂದ ಹೆಚ್ಚುವರಿ ಆದಾಯ ಇಡಿಯಾಗಿ ಆಲಯಕ್ಕೆ ಬರುತ್ತಿದ್ದಿತು ಎಂದು ಹೇಳಬರುವುದಿಲ್ಲ. ಆಲಯದ ಭಾಗದ ಆದಾಯ ಯಾವಾಗಲೂ ಮೇಲ್‌ವರಂ ಆಗಿದ್ದಿತು. ಹೀಗಾಗಿ ಆಲಯ ಗ್ರಾಮಗಳಲ್ಲಿನ ನೀರಾವರೀ ಅಭಿವೃದ್ಧಿಯಿಂದಾಗಿ ಭೂಮಿಯ ಬೇಸಾಯಗಾರನಿಗೆ ದೊರೆಯುತ್ತಿದ್ದ ಆ ಜಮೀನಿನ ಬೆಳೆದ ಬೆಳೆಗಳನ್ನು ಅನುಸರಿಸಿ ಆದಾಯ ಕುಡಿವರಂ ನಲ್ಲಿಯೂ ಹೆಚ್ಚಾಗುತ್ತಿದ್ದಿತು.

ಈ ಹಿಂದೆ ತಿಳಿಸಿದಂತೆ ಆಲಯದ ಅಧಿಕಾರಿಗಳು ದಾನದ ಧನವನ್ನು ಆಲಯಗ್ರಾಮಗಳ ನೀರಾವರೀ ಕಾರ್ಯಗಳ ಅಭಿವೃದ್ಧಿ ಯಲ್ಲಿ ತೊಡಗಿಸುವುದರಿಂದ ಆಯಾ ಗ್ರಾಮಭೂಮಿಗಳ ಬೇಸಾಯಗಾರರ ಭಾಗವಾದ 'ಕುಡಿವರಂ' ನಲ್ಲಿಯೂ ಆದಾಯ ಹೆಚ್ಚುತ್ತಿದ್ದಿತು. ಜೊತೆಗೇ ಇಂತಹ ಹೂಡಿಕೆಯಿಂದಾಗಿ ನೀರಾವರೀ ಕಾಮಗಾರಿ ಯಲ್ಲಿ ಹೊಸ ಉದ್ಯೋಗಾವಕಾಶವೂ ಉಂಟಾಗಿ ಈ ರೀತಿಯ ಹಣ ಹೂಡಿಕೆಯಿಂದಾಗಿ ಉಂಟಾಗುವ ಪರಿಕರ ಸಲಕರಣೆಗಳ ಬಗೆಗಿನ ಬೇಡಿಕೆಯ ಹೆಚ್ಚಳದಿಂದಾಗಿ ಗ್ರಾಮ ನಿವಾಸಿಗಳೂ ಹೆಚ್ಚಿನ ಪ್ರಯೋಜನವಾಗುತ್ತಿತ್ತು.

ಈ ರೀತಿಯ ಹೂಡಿಕೆಯಿಂದ ದಾನಿಗಳ ಹಣದ ಮೇಲಿನ ಉತ್ಪಾದನೆ - ಶಾಸನಗಳಲ್ಲಿ ತಿಳಿಸುವಂತೆ ಲೆಕ್ಕ ಹಿಡಿದಾಗ ಅದು - 6-15 ಭಾಗವಾಗಿದೆಯೆಂದು ಹೇಳಬರುವುದು. ಇಲ್ಲಿನ ವ್ಯತ್ಯಾಸಕ್ಕೆ ಕಾರಣ ಎಂದರೆ ಹೂಡಿಕೆಗಾಗಿ ಆಯ್ಕೆಯಾದ ಗ್ರಾಮದ ವಿಶೇಷ ಲಕ್ಷಣಗಳಿಂದ ಉತ್ಪತ್ತಿಯ ನಿರ್ಧಾರ ಆಗುವಿಕೆ. ವಾಸ್ತವ ಪ್ರತಿಫಲದ ಗಾತ್ರವನ್ನು ತೀರ್ಮಾನಿಸುವ ಎರಡು ಅಂಶಗಳುಂಟು.

ಅ) ಜಮೀನಿನ ಸಾರವನ್ನು ಅನುಸರಿಸುವ ಅದರ ಉತ್ಪಾದನೆಯ ಸಾಮರ್ಥ್ಯ.

ಆ) ಮೇಲ್ ವರಂ ಹಾಗೂ ಕುಡಿವರಂಗಳಲ್ಲಿನ ಭಾಗಗಳ ಹೆಚ್ಚು ಕಡಿಮೆಗಳು. ಇದು ಗ್ರಾಮದಿಂದ ಗ್ರಾಮಕ್ಕೆ ಬೇರೆಯಾಗಬಹು ದಾಗಿದ್ದಿತು. ಶಾಸನಗಳು ಹೇಳುವಂತೆ ಉತ್ಪಾದನೆಯ 40 ರಿಂದ 75 ಶತಾಂಶದ ವರೆಗೆ ಮೇಲ್‌ವರಂ ವ್ಯತ್ಯಯ ಹೊಂದವಂತಹ ದ್ದಾಗಿದ್ದಿತು.

ಮೇಲುತ್ಪಾದನೆ ಸರಾಸರಿ 8ಶತಾಂಶವಾಗಿರಬಹುದೆಂಬ ಸಾಧಾರಣವಾದ ಲೆಕ್ಕವನ್ನು ಹಿಡಿಯ ಬಹುದು. ಮೇಲೆ ಹೇಳಿದಂತೆ ಇದು 'ಮೇಲ್‌ವರಂ' ಭಾಗವನ್ನು ಮಾತ್ರವೇ ಹೇಳುತ್ತದೆ. ಇಡೀ ಉತ್ಪಾದನೆಯ ಐವತ್ತು ಶತಾಂಶವನ್ನು ಮೇಲ್‌ವರಂ ಎಂದು ಹೇಳುವುದಾದರೆ, ಎಂದರೆ ಕುಡಿವರಂ ಹಾಗೂ ಮೇಲ್‌ವರಂ ಎರಡೂ ಸಮನಾಗಿದ್ದಾಗ ಹೂಡಿಕೆಯ ಮೇಲಿನ ಹೆಚ್ಚಿನ ಉತ್ಪಾದನಾ

ವರಮಾನ 16 ಶತಾಂಶವೆಂದು ಹೇಳಬಹುದು.

ಇಲ್ಲಿ ಒಂದು ಮುಖ್ಯವಾದ ಅಂಶವನ್ನು ಗಮನಿಸಬೇಕು. ಮೇಲೆ ಹೇಳಲಾದ ಮೇಲ್ ವರಂ ಎಂಬುದು ಆಲಯದ ಭಾಗಕ್ಕೆ ಬರುವಂತಹ ಆದಾಯ. ಈ ಹಿಂದೆಯೇ ಹೇಳಿದಂತೆ ಆಲಯಕ್ಕೆ ಬರಬೇಕಾದ ಆದಾಯ ವನ್ನು ಆಧುನಿಕ ಕಾಲದಲ್ಲಿಯೂ ಪೂರ್ತಿಯಾಗಿ ಸಲ್ಲಿಸುವುದೇ ಸಂಪ್ರದಾಯವಾಗಿದ್ದು ಇಲ್ಲಿ ಸಾಲವಾಗಲೀ, ಸೋರುವಿಕೆಯಾಗಲೀ ಇಲ್ಲ. ಹೀಗಾಗಿ ಎಂಟು ಶತಾಂಶದ ಹೆಚ್ಚಿನ ಉತ್ಪಾದನಾ ಆದಾಯವನ್ನು ಪೂರ್ಣಾಂಕ ವೆಂದು ಗುರುತಿಸಬರುತ್ತದೆ.

ಮೇಲ್‌ವರಂ ಎಂಬುದು ಸಾಧಾರಣವಾಗಿ ರಾಜಕೋಶಾಗಾರಕ್ಕೆ ಸೇರುವ ಆದಾಯವಾಗಿದ್ದು, ಈ ಸಂದರ್ಭದಲ್ಲಿ ರಾಜ ಪರಿವಾರದಿಂದ ಆಲಯಗಳಿಗೆ ದಾನವಾಗಿ ಬಂದಿರುವುದಾಗಿದೆ. ಹೀಗಾಗಿ ರಾಜಭಂಡಾ ರದ ಆದಾಯವನ್ನು ಪೂರ್ತಿಯಾಗಿ ವಸೂಲಿ ಮಾಡುವಂತಹ ಪರಿಸ್ಥಿತಿಯಲ್ಲಿ ಹೆಚ್ಚಿನ ಆದಾಯ ಎಂಟು ಶತಾಂಶವೆನ್ನ ಬಹುದು. ರಾಜಭಂಡಾರದ ಆದಾಯ ಕಂದಾಯ ವಸೂಲಿ ಸಾಧಾರಣ ಆಗಿ ಎಂದೂ 40 ಶತಾಂಶವನ್ನು ಮೀರುವುದಿಲ್ಲ (ಇದು 1950-60 ವರೆಗೂ ನಿಜ) ಮಿಕ್ಕದ್ದು ಹಲವಾರು ಕಡತಗಳ - ಲೆಕ್ಕಗಳ ನಡುವೆ ಸೋರಿಹೋಗುವುದು ಸಹಜ. ಇದರಿಂದಾಗಿ 16 ನೇ ಶತಮಾನದಲ್ಲಿ ಸರ್ಕಾರ ನೀರಾವರೀ ವ್ಯವಸ್ಥೆಯಲ್ಲಿ ತೊಡಗಿಸಿದ ಬಂಡವಾಳದಿಂದ ಹೆಚ್ಚಾದ ಉತ್ಪಾದನೆ ಹೂಡಿಕೆಯ ಎಂಟು ಶತಾಂಶದ ನಲವತ್ತು ಶತಾಂಶ ಅಥವಾ ಹೂಡಿಕೆಯ 3.2. ಶತಾಂಶ ಮಾತ್ರವಾಗಿದ್ದಿತು ಎನ್ನಬಹುದು.

ಈ ಸಂದರ್ಭದಲ್ಲಿ ಆಸಕ್ತಿಕರವಾದ ಒಂದು ವಿಷಯವೆಂದರೆ ಆಧುನಿಕ ವರ್ಗೀಕರಣದಂತೆ 1.5 ಶತಾಂಶ ಉತ್ಪಾದನೆ ಆಗುವಂತಹ ನೀರಾವರಿ ಹೂಡಿಕೆಯನ್ನು ಲಾಭದಾಯಕ ಉತ್ಪಾದನೆ ಎನ್ನುವಂತಿದ್ದು, ಬಂಡವಾಳದ 3 ಶತಾಂಶ ಪ್ರತಿಫಲ ನಿಡುಪೇರಾವರಿ ಬಂಡವಾಳ ಇಲ್ಲವೆನ್ನಲಾಗಿದೆ. ಹಾಗಾಗಿ ನೀರಾವರೀ ವ್ಯವಸ್ಥೆಯೂ, ಕಂದಾಯ ವಸೂಲಾತಿಯೂ ಆಂಧ್ರದೇಶದಲ್ಲಿ ಆಗ್ಗೆ ಸರ್ಮಥವಾಗಿ ಕೆಲಸ ಮಾಡುತ್ತಿದ್ದವು ಎಂದು ತೋರಿಬರುವುದು.

ಆಲಯಕ್ಕೆ ಒಂದು ದಾನದ ಹೂಡಿಕೆಯಿಂದಾಗಿ ಆಗುತ್ತಿದ್ದ ಆದಾಯ ಹಾಗೂ ಕೃಷಿ ಅಭಿವೃದ್ಧಿಯಲ್ಲಿ ಹಣವನ್ನು ತೊಡಗಿಸಿದ ಒಟ್ಟು ಆದಾಯ ಎರಡರ ನಡುವಣ ಅಂತರ ಮುಖ್ಯವಾದದ್ದು. ಆಲಯವು ಕೈಗೆತ್ತಿಕೊಂಡ ನೀರಾವರೀ ಯೋಜನೆಯಿಂದ ಸಾಧಿತವ ಸಮಾಜಾಭಿವೃದ್ಧಿಗೆ ಈ ಅಂತರ ಸಮಾನವಾದದ್ದು. ಕಾರಣ ದೇವದಾನದ ಗ್ರಾಮದಲ್ಲಿ ಹೂಡಲಾದ ಬಂಡವಾಳದ ಫಲವಾದ ಹೆಚ್ಚಿನ ಎಲ್ಲ ಉತ್ಪಾದನೆಯಲ್ಲಿಯೂ ಒಂದು ಭಾಗ ಬೇಸಾಯಗಾರನ ಬಳಿಯಲ್ಲಿಯೇ ಉಳಿಯುತ್ತಿತ್ತು. ನೂರಕ್ಕಿಂತ ಹೆಚ್ಚಿನ ಗ್ರಾಮಗಳಲ್ಲಿ ಹರಡಿದ ಈ ದೇವಾಲಯ ಭೂಮಿಗಳಲ್ಲಿ ಉಂಟಾದ ವಿವಿಧರೀತಿಯ ಭಾಗಾಂಶದ ಆದಾಯಗಳಿಂದಾಗಿ ಆಲಯ ಭೂಮಿಗಳ ಬೇಸಾಯಗಾರರ ಜೀವನಮಟ್ಟ ಉನ್ನತವೇ ಆಗಿದ್ದಿರಬೇಕು.

## 8. ಪ್ರಸಾದಗಳ ಉತ್ಪಾದನಾವೆಚ್ಚ

ಒಂದು ಅಪ್ಪ ಪಡಿಯಲ್ಲಿನ ಖಚಿತವಾದ ಸಿಹಿ ತಿಂಡಿಯ - ಅಪ್ಪದ - ಸಂಖ್ಯೆಯನ್ನೂ ಶಾಸನಾಧಾರದಿಂದ ತಿಳಿಯಬಹುದು.

ತಿರುಮಲೆಯ ಆಲಯದ ಪಶ್ಚಿಮದ ಆವರಣದ ಗೋಡೆಯಲ್ಲಿನ 513 ತಿ.ತಿ. ಶಾಸನವು ವೇಮಂಪಟ್ಟು ಪಾಳಯದ (ವಿಜಯ ನಗರದ ಸಾಮ್ರಾಜ್ಯದ ಒಂದಾನೊಂದು ಸೈನಿಕ ನೆಲೆ) ಅತ್ತಿಲಂಗು ನಾಯಕನ ಹೆಸರಿನಲ್ಲಿ ಕ್ರಿ.ಶ. 1544 ರ ಜೂನ್ 5 ನೇ ತಾರೀಖಿನಿಂದು ಆಲಯ ಧರ್ಮದರ್ಶಿಗಳಿಂದ ಹಾಕಿಸಲಾಯಿತು. ಇದರಲ್ಲಿ ದಾನಿಯು ನೀಡಿದ 550 ನರ್ಪಣಗಳ ಪ್ರತಿಯಾಗಿ ನಡೆಸಬೇಕಾದ ಉಭಯದ (ನೈವೇದ್ಯದ) ವಿವರಗಳಿವೆ. ಅದರಂತೆ ತಿಳಿದು ಬರುವ ಸಂಗತಿಯೆಂದರೆ - ವಿಟ್ಟವನ್ ವಿಳಕ್ಕಾಡು ಅಪ್ಪಂ ಪದಿಮೂನ್ರುಮ್ - ದಾನಿಯ ದಾಯಭಾಗದ ಪ್ರಸಾದ - 13 ಅಪ್ಪಗಳನ್ನು ದಾನಿಯ ತಿರುಮಲೆಯ ಪುಷ್ಪವಾಟಿಕೆಯ ಕೃಷಿಕ ಸಿಂಗಯ್ಯನಿಗೆ ನೀಡಬೇಕು. ಇಲ್ಲಿ ಕಾಲುಭಾಗದ ಅಪ್ಪಪಡಿ ಎಂದರೆ 13 ಅಪ್ಪಗಳೆಂಬ ಆಸಕ್ತಿಕರ ಅಂಶ ಪ್ರಕಟವಾಗಿದೆ, ಎಂದರೆ ಒಂದು ಅಪ್ಪಪಡಿ

ಎಂಬುದು 52 ಅಪ್ಪಗಳಿಂದಾಗಿದ್ದಿತು. ಕುತೂಹಲಕಾರಿ ಅಂಶವೆಂದರೆ ಕೆಲ ವರ್ಷಗಳ ಹಿಂದಿನವರೆಗೂ ಪ್ರಸಾದ ಪಡಿ ಎಂಬುದು 52 ಅಪ್ಪಗಳನ್ನೇ ಹೊಂದಿದ್ದಿತು ಎಂಬುದು.

ಇನ್ನೊಂದು ಶಾಸನದ ಮೂಲಕ ಒಂದು ಅಪ್ಪಪಡಿಯನ್ನು ಮಾಡಲು ಬೇಕಾದ ಕಚ್ಚಾವಸ್ತುಗಳು - ಸಾಹಿತ್ಯದ ವಿವರಗಳು ತಿಳಿದುಬರುತ್ತದೆ.

ತಿರುಪತಿಯ ಹೊರ ವಲಯಗಳಲ್ಲಿ ಒಂದಾದ ನರಸಿಂಗರಾಯಪುರದ ವರ್ತಕರಲ್ಲಿ ಒಬ್ಬನಾದ ಪಪ್ಪುಸೆಟ್ಟಿ ಅಯ್ಯ ಹಾಗೂ ತಿರುಮಲೆಯ ಆಲಯದ ಧರ್ಮದರ್ಶಿಗಳ ನಡುವೆ ಕ್ರಿ.ಶ. 1512 ರ ಸೆಪ್ಟಂಬರ್ 15 ರಂದು ಉಂಟಾದ ಒಪ್ಪಂದವನ್ನು ತಿರುಮಲೆಯ ಆಲಯದ ಎರಡನೇ ಪ್ರಾಕಾರದ ಹಿಟ್ಟಿನ ಕೋಣೆ ಹಾಗೂ ತಿರುಮಲೆ ರಾಯ ಮಂಡಪದ ಒಳ ಬದಿಯ ದಕ್ಷಿಣದ ಗೋಡೆಯ ಮೇಲಿರುವ ತಿ.ತಿ. 267 ನೇ ಶಾಸನವು ಗುರುತಿಸುತ್ತದೆ. ಇದರಲ್ಲಿ ಹೇಳಿರುವಂತೆ ದಾನಿಯು ನೀಡಿದ 2500 ನರ್ಪಣಗಳಿಂದ ಪ್ರಸಾದಗಳ ತಯಾರಿಗೆ ಬೇಕಾದ ಸಾಮಾಗ್ರಿಗಳನ್ನು ಕೆಳಗೆ ಸೂಚಿಸಿರುವಂತೆ ಹೊಂದಿಸಿಕೊಳ್ಳಬೇಕು. ಬೇರೆ ಬೇರೆ ವಿಧ ಪ್ರಸಾದವನ್ನು ತಯಾರಿಸಲು ಬೇಕಾಗುವ ವಸ್ತುಗಳನ್ನು ಹೀಗೆ ಪಟ್ಟಿ ಮಾಡಲಾಗಿದೆ.

"ಗೋವಿಂದರಾಜ ಸ್ವಾಮಿಗೆ ಎರಡು ಅಪ್ಪಪಡಿಗಳೂ, ರಘುನಾಥನ ಸ್ವಾಮಿಗೆ ಒಂದು ಅಪ್ಪಪಡಿಯೂ - ಒಟ್ಟು ಮೂರು - ನಿವೇದನೆಯಾಗಬೇಕು. ಅವಕ್ಕೆ ಬೇಕಾಗುವ ವಸ್ತುಗಳು - ಅಕ್ಕಿ ಆರು ಮರಕ್ಕಲ್, ತುಪ್ಪ ಆರು ನಾಳಿ, ಬೆಲ್ಲ 600 ಪಲಗಳು ಹಾಗೂ ಮೆಣಸು 1 ಉಳಕ್ಕು ಮತ್ತು 1 ಅಳಕ್ಕು"

ಹೀಗಾಗಿ ಒಂದು ಅಪ್ಪಪಡಿ ತಯಾರಿಕೆಗೆ ಎರಡು ಮರಕ್ಕಲ್ ಅಕ್ಕಿ, ಎರಡು ನಾಳಿ ತುಪ್ಪ, ಬೆಲ್ಲ ಇನ್ನೂರು ಪಲ, ಮೂರಸೆ ಒಂದು ಉಳಕ್ಕು ಮತ್ತು ಮೂರನೇ ಒಂದು ಅಳಕ್ಕು ಮೆಣಸು ಬೇಕಾಗಿದ್ದಿತು. ಈ ತೂಕ ಅಳತೆಯ ಮಾನಗಳು ಪ್ರಸಿದ್ಧವಾಗಿರುವ ತಮಿಳು ಮಾಪನಗಳೇ ಆಗಿದ್ದು ಅವುಗಳ ಆಧುನಿಕ ಸಮಾನ ತೂಕ ಅಳತೆಗಳನ್ನು ಲೆಕ್ಕ ಹಾಕಬಹುದಾಗಿದೆ.

ಒಂದು ಅಪ್ಪಪಡಿ ತಯಾರಿಕೆಗೆ ಆರು ಪಣಗಳು ಬೇಕಾಗಿದ್ದು ಅದರ ಸಾಹಿತ್ಯದ ವಿವರಗಳು ತಿಳಿದಿರುವುದರಿಂದಾಗಿ, ಅಗತ್ಯ ಮೂಲವಸ್ತುಗಳ ಬೆಲೆಯನ್ನು ಪಣಗಳಲ್ಲಿ ಲೆಕ್ಕಹಾಕುವುದು ಸುಲಭ.

ಪಣವನ್ನು ಆಧುನಿಕ ರೂಪಾಯಿ ಮೌಲ್ಯದಲ್ಲಿ ಲೆಕ್ಕ ಹಿಡಿಯಬಹುದಾದ್ದರಿಂದ ತಿರುಮಲ - ತಿರುಪತಿ ದೇವಸ್ಥಾನಗಳ ಪ್ರಸಾದಗಳ ತಯಾರಿಕೆಗೆ 16 ನೇ ಶತಮಾನದಲ್ಲಿ ಬೇಕಾದ ಹಣವನ್ನು ಖಚಿತವಾಗಿ ಹೇಳಬಹು ದಾಗಿದೆ.

ಹದಿನೈದು ಸಾವಿರ ಪಣಂಗಳು ವರ್ಷಕ್ಕೆ ಸಾವಿರದೆಂಟುನೂರು ಪಣಂಗಳ ಪ್ರತಿಫಲ ನೀಡುವುದೆಂದು ಅಥವಾ 8 ಶತಾಂಶ (ಸರಾಸರಿ ಉತ್ಪನ್ನ) ಸಾಧಾರಣ ವರ್ಷಕ್ಕೆ 1200 ಪಣಂಗಳು ಎಂಬುದರಿಂದಾಗಿ ಇತರ ಎಲ್ಲ ಪ್ರಸಾದಗಳ ಉತ್ಪಾದನಾ ವೆಚ್ಚವನ್ನೂ ಲೆಕ್ಕ ಹಾಕಬಹುದಾಗಿದೆ.

ಉದಾಹರಣೆಗೆ ತಿ.ತಿ. 192 (ಕ್ರಿ.ಶ. 1514 - ಜುಲೈ 10) ಶಾಸನವು ಸ್ವಾಮಿಗೆ ನೈವೇದ್ಯಕ್ಕೆಂದು ಎಂಟು ತಿರುಪ್ಪೋನಕ (ಈಗಿನ ವೆಣ್ ಪೊಂಗಲ್) ಗಳಿಗಾಗಿ ಹತ್ತು ಸಾವಿರ ನರ್ಪಣಗಳನ್ನು ನೀಡಿದ ದಾನವನ್ನು ದಾಖಲುಗೊಳಿಸುತ್ತದೆ. ಎಂಟು ಶತಾಂಶ ಉತ್ಪನ್ನದಿಂದಾಗಿ ದಿನವೂ 8 ತಿರುಪ್ಪೋನಕಗಳಿಗಾಗಿ 800 ಪಣಗಳು ಬೇಕಾಗಿಬರುತ್ತವೆ. ಅಥವಾ ವರ್ಷದಲ್ಲಿ 350 ತಿರುಪ್ಪೋನಕಗಳೆಂದೂಹಿಸಬಹುದು. ಇದರಿಂದಾಗಿ ಒಂದು ತಿರುಪ್ಪೋನಕದ ಬೆಲೆ ಮೂರನೇ ಒಂದು ಪಣವಾಗುವುದು.

ಇದರಂತೆಯೇ ತಿ.ತಿ, 247ನೇ ಶಾಸನವು (ಕ್ರಿ.ಶ.1506 ಮಾರ್ಚ್ 5) 27 ಅತಿರಸ ಪಡಿಗಳಿಗೆ 840 ನರ್ಪಣಗಳನ್ನು ಠೇವಣಿಗೊಳಿಸಿದೆ. 8 ಶತಾಂಶ ಲೆಕ್ಕದಲ್ಲಿ 27 ಅತಿರಸಪ್ಪಡಿಗೆ 51.3 ಪಣಗಳು ಅಥವಾ ಸ್ಥೂಲವಾಗಿ ಒಂದು ಅತಿರಸಪ್ಪಡಿಗೆ 2ಪಣಂಗಳು. ಜಿ.ಟಿ. 186ನೇ ಶಾಸನವು ಹತ್ತು ದೋಸೆ ಪಡಿಗಳಿಗೆ 600 ಪಣಗಳನ್ನು ಠೇವಣಿಗೊಳಿಸುತ್ತದೆ. 8 ಶತಾಂಶ ಪ್ರತಿಫಲದ

ಲೆಕ್ಕದಲ್ಲಿ 10 ದೋಸೆಪಡಿಗೆ 48 ಪಣಂ ಬೇಕು ಅಥವಾ ಸ್ಥೂಲವಾಗಿ ಒಂದು ದೋಸೆ ಪಡಿಗೆ 5 ಪಣಂಗಳು.

ಹೀಗೆಯೇ ಇತರ ಪ್ರಸಾದಗಳನ್ನು ಶಾಸನಗಳ ಆಧಾರದಿಂದ ಲೆಕ್ಕ ಹಾಕ ಬಹುದು. ಮೇಲೆಯೇ ಹೇಳಿದ ಕೃಷ್ಣದೇವರಾಯನ ಕಾಲದ ತಿ. ತಿ. 267 ನೇ ಶಾಸನವು ಆಲಯದ ಪ್ರತಿಯೊಂದು ಪ್ರಚಲಿತ ಪ್ರಸಾದಗಳ ಮೂಲವಸ್ತುಗಳನ್ನು ಸವಿವರವಾಗಿ ಚಿತ್ರಿಸಿದೆ. ಹೀಗಾಗಿ ಆಲಯದ ಪ್ರಸಾದಗಳೆಲ್ಲದರ ವಿವರಪೂರ್ಣ ವಾದ ಬೆಲೆ ಪಟ್ಟಿಯನ್ನು ತಯಾರಿಸಬಹುದಾಗಿದೆ.

### 9. ಆಲಯ ಸೇವಾದಾರರ ಆರ್ಥಿಕ ದಾನಗಳು

### 10. ಆಲಯ ಸೇವಾದಾರರಿಂದ ದಾನಗಳು

ಆಲಯದ 60ವರ್ಷದ ಶಾಸನಗಳ ವಿಶ್ಲೇಷಣೆಯಿಂದಾಗಿ ತಿಳಿದುಬರುವ ಒಂದು ಆಸಕ್ತಿ ಕೆರಳಿಸುವ ಅಂಶವೆಂದರೆ ಆಲಯ ದಲ್ಲಿ ಸೇವೆ ಸಲ್ಲಿಸುವ ಜನರೇ ಇಲ್ಲಿನ 114 ದೇವದಾನ ಗ್ರಾಮಗಳಲ್ಲಿ 42 ಗ್ರಾಮಗಳನ್ನು ದಾನ ನೀಡಿರುವಿಕೆ. ಇದರಂತೆಯೇ ಇದೇ

**ಕ್ರಿ.ಶ. 1510 ರಿಂದ 1570 ರವರೆಗಿನ ಬೇರೆ ಬೇರೆಯವರು ನೀಡಿದ ಧನರಾಶಿಯವಿವರವನ್ನು ವಿಭಾಗೀಕರಿಸಿ ಪಟ್ಟಿ ಮಾಡಲಾಗಿದೆ.**

| ಸಂಖ್ಯೆ | ದಾನಿಗಳು | 1509 -1530 | | 1530 -1542 | | 1542-1568 | |
|---|---|---|---|---|---|---|---|
| | | ಧನರಾಶಿ | ಶೇಕಡ | ಧನರಾಶಿ | ಶೇಕಡ | ಧನರಾಶಿ | ಶೇಕಡ |
| 1 | ಸರ್ಕಾರದವರು | ....... | 33.00 | ...... | 65.00 | ..... | 20.5 |
| | ರಾಜ್ಯಪಾಲ | ....... | ......... | 30675 | 6.50 | ..... | ...... |
| | ಪ್ರಧಾನಿ | 1200 | 1.00 | ...... | ....... | ....... | ........ |
| | ಸೇನಾಧಿಪತಿ | ....... | ....... | 15000 | 3.00 | ........ | .......... |
| | ದಳಪತಿಗಳು | 18980 | 12.00 | 145200 | 30.50 | 4260 | 2.50 |
| | ರಾಜಪ್ರಮುಖರು | 19990 | 13.00 | 11010 | 2.00 | 1580 | 0.10 |
| | ಕೆಳಹಂತದ ಅಧಿಕಾರಿಗಳು | 11320 | 7.00 | 106.82 | 23.00 | 328.40 | 17.00 |
| 2 | ಆಲಯ ಸಿಬ್ಬಂದಿ | ......... | 26.00 | ............ | 24.00 | ........ | 23.50 |
| | ಆಲಯ ಅರ್ಚಕರು | 28215 | 18.00 | 66963 | 15.00 | 22482 | 12.00 |
| | ಸಂಗೀತಗಾರ ಕವಿ ನರ್ತಕರು | 2500 | 1.50 | 30480 | 6.00 | 6340 | 4.00 |
| | ವಿದ್ವಾಂಸರು | 2520 | 1.50 | 4185 | 1.00 | 5747 | 3.00 |
| | ಲೆಕ್ಕಿಗರು | 7446 | 5.00 | 8270 | 2.00 | 7802 | 4.50 |
| 3 | ಸ್ಥಳೀಯರು. ವರ್ತಕ ನಿವಾಸಿಗಳು | ....... | 41.00 | ....... | 11.00 | ......... | 56.00 |
| | ತಿರುಪತಿಯ ಸ್ಥಳೀಯರು | 25625 | 23.00 | 41695 | 9.00 | 54405 | 28.00 |
| | ಖಾಸಗೀ ವ್ಯಕ್ತಿಗಳು | 27560 | 18.00 | 10293 | 2.00 | 541405 | 28.00 |
| | ಒಟ್ಟು | 145356 | 100.00 | 471591 | 100.00 | 186606 | 100.00 |

ಕಾಲದಲ್ಲಿ ಧನದ ದಾನದ ಒಟ್ಟು 25 ಶತಾಂಶ ಇವರಿಂದಲೇ ಸಂದಿರುವುದಾಗಿದೆ. ಸಾಮಾನ್ಯವಾಗಿ ಆಲಯದ ಭಕ್ತರು, ರಾಜರು, ರಾಜಪರಿವಾರದವರು ಆಲಯಕ್ಕೆ ದಾನ ಮಾಡುವವರಾಗಿದ್ದು ಆಲಯದ ಆಡಳಿತಗಾರರು - ಸೇವಕರು - ಈ ದಾನಗಳನ್ನು ಆಲಯದ ಪರವಾಗಿ ಸ್ವೀಕರಿಸುವುದುಂಟೇ ಹೊರತು ಹೀಗೆ 114 ಗ್ರಾಮಗಳಲ್ಲಿ 42 ಗ್ರಾಮಗಳನ್ನು ಆಲಯದ ಸೇವಕರೇ ಕೊಟ್ಟದ್ದು ಅಪರೂಪ ವಾಗಿದೆ. ಹೀಗಾಗಲು ಆರ್ಥಿಕವಾದ ಒಂದು ಕಾರಣವಿದ್ದಿರಬೇಕು. ಶಾಸನಗಳೇ ಈ ಬಗ್ಗೆ ವಿವರಗಳನ್ನು ಬಿಟ್ಟು ಕೊಡುತ್ತವೆ.

ಆರ್ಥಿಕವಾಗಿ ನೋಡುವುದಾದರೆ ಆಲಯದ ಪರಿಚಾರಕರು ಸಂಸ್ಕೃತ, ತಮಿಳು, ಭಾಷೆಗಳಲ್ಲಿನ ವೇದ, ಪಾಶುರ ಪಾಠಕರು ಅಥವಾ ಸಂಗೀತಗಾರರು, ಕವಿಗಳು, ನೃತ್ಯಗಾರರು ತಮ್ಮ ದೈನಂದಿನ ಜೀವನ ನಿರ್ವಹಣೆಗೆ ಆಲಯದಲ್ಲಿನ ಪ್ರಸಾದವನ್ನೇ ಅವಲಂಬಿ ಸಿದ್ದವರು. ತಿರುಪತಿಯ ಗೋವಿಂದರಾಜಸ್ವಾಮಿ ಆಲಯದ 81 ನೇ ಜಿ.ಟಿ. ಶಾಸನವು ಕ್ರಿ.ಶ. 1467 ರ ದಾಗಿದ್ದು - ಆಲಯದ ಸೇವಕರು 'ತಿರುಮಲೆಯಲ್ಲಿನ ಗುಡಿಯಲ್ಲಿದ್ದ ಪದ್ಧತಿಯಂತೆಯೇ ಇಲ್ಲಿಯೂ ದೇವರಿಗೆ ನೈವೇದ್ಯವಾದ ಪ್ರಸಾದವನ್ನು ತಮ್ಮ ಉದರಂಭರಣಕ್ಕಾಗಿ ತಮ್ಮಲ್ಲಿಯೇ ವಿತರಿಸಿಕೊಳ್ಳಲು ಅನುಮತಿ ಕೋರಿ ಮಾಡಿದ ಬಿನ್ನಹ' ವನ್ನು - ವಿವರಿಸುತ್ತದೆ. ಇದರಿಂದಾಗಿ ಆಲಯ ಸೇವಕರ ಮುಖ್ಯ ಆದಾಯ - ಪ್ರಸಾದಗಳೇ ಆಗಿದ್ದವು ಎಂದು ತಿಳಿದು ಬರುತ್ತದೆ. ಇಂದೂ ಸಹ ಅವರ ಮುಖ್ಯ ಆದಾಯ ಪ್ರಸಾದವೇ ಎಂಬುದನ್ನು ಕಾಣಬಹುದು. (ಮಿರಾಸಿ ಪದ್ಧತಿಯನ್ನು ತೆಗೆದು ಹಾಕುವವರೆಗೆ ಈ ಮಾತು ನಿಜವೇ - ಅನುವಾದಕ) ಹೀಗಾಗಿ ಸ್ವಾಮಿಗೆ ಹೆಚ್ಚು ನೈವೇದ್ಯವಾಗುವುದರಿಂದ ಸೇವಕರಿಗೆ ಹೆಚ್ಚಿನ ಪ್ರಸಾದ ಸಿಗುವಂತಾಗಿದ್ದಿತು. ಅದರಿಂದಾಗಿ ಅವರ ಆದಾಯವೂ ಹೆಚ್ಚಾಗುತ್ತಿದ್ದಿತು.

ಈಗ ಉಂಟಾಗುವ ಪ್ರಶ್ನೆಯೆಂದರೆ ಆಲಯದ ಸೇವಕರು ದೇವದಾನದ ಗ್ರಾಮ ಹಾಗೂ ಧನವನ್ನು ಕೊಡುವಷ್ಟು ಮಟ್ಟದಲ್ಲಿ ಹೇಗೆ ಸಂಪತ್ತನ್ನು ಹೊಂದಿಸಿದರು ಎಂಬುದು. ಈ ಪ್ರಶ್ನೆಯ ವೈರುಧ್ಯಪರಿಹಾರದಲ್ಲಿ ಒಂದು ಎಳೆಯೆಂದರೆ ಈ ಪ್ರಸಾದಗಳು ವಿತರಣೆಯಾಗುತ್ತಿದ್ದ ಪದ್ಧತಿ.

ಆಲಯದಲ್ಲಿ ದಾನ ನೀಡಿದವರ ಪಾಲಿನ ಹಾಗೂ ಆಲಯದ ಪರಿಚಾರಕರ ಪಾಲಿನ ಪ್ರಸಾದ ವಿತರಣೆಯಲ್ಲಿ ಒಂದು ವ್ಯತ್ಯಾಸವಿರುವುದನ್ನು ಗಮನಿಸಬೇಕು. ಆಲಯದ ಪರಿಚಾರಕರು ತಮ್ಮ ಹಾಗೂ ತಮ್ಮ ಕುಟುಂಬ ನಿರ್ವಹಣೆಗಾಗಿ ಪ್ರಸಾದವನ್ನು ಸ್ವೀಕರಿಸುತ್ತಿದ್ದರು. ದಾನಿಯಾದರೋ ಪ್ರಸಾದದ ಕಾಲುಭಾಗದ ಹಕ್ಕುದಾರನಾಗಿರುತ್ತಿದ್ದ. ಇದನ್ನು 'ವಿಟ್ಟವನ್ ವಿಳುಕ್ಕಾಡ' ಎಂದು ಕರೆಯುತ್ತಿದ್ದರು. ಎಂದರೆ ದೇವರ ಪ್ರಸಾದಗಳಲ್ಲಿ ದಾನಿಗೆ ನೀಡಬೇಕಾದ ಭಾಗ ಎಂದರ್ಥ. ತಿರುಮಲೆಯಲ್ಲಿ ಈ ಪದ್ಧತಿಯನ್ನು ಪ್ರಥಮತಃ ಕ್ರಿ.ಶ. 1354ರಲ್ಲಿ ಕಾಣಬಹುದು. ತಿ.ತಿ. 102ನೇ ಶಾಸನವು ತಿರುಮಲೆಯ ಆಲಯದ ಒಳಗಡೆಯ ವರದರಾಜಸ್ವಾಮಿ ಗುಡಿಯ ಉತ್ತರದ ಗೋಡೆಯ ಮೇಲೆ ತ್ರಿಭುವನ ಚಕ್ರವರ್ತಿ ನಾಯಕನ್ ಶ್ರೀರಂಗನಾಥ ಯಾದವರಾಯರ ಆಳ್ವಿಕೆಯ 19ನೇ ವರ್ಷದಲ್ಲಿ ಹಾಕಿಸಿದ್ದಾಗಿ ದೇವರಿಗೆ ನಿವೇದನೆ ಸಮರ್ಪಿತವಾದ ಬಳಿಕ ಆ ಪ್ರಸಾದದ ಕಾಲುಭಾಗವನ್ನು (ಕಾಲ ಸೋಲ) ದಾನಿಗೆ ನೀಡಬೇಕೆಂದು ಹೇಳಲಾಗಿದೆ.

ವಿಟ್ಟವನ್ ವಿಳುಕ್ಕಾಡು ಎಂಬುದು ಆಲಯದ ಪರಿಚಾರಕರಿಗೆ ನೀಡುವ ಪ್ರಸಾದದ ಪದ್ಧತಿಯ ಅವಲಂಬನವಿಲ್ಲದಂತಹುದು. ಆದರೆ ಒಟ್ಟು ಸಾಧಾರಣ ಕಾಲು ಭಾಗವಾದದ್ದು. ಹೀಗೆ ನೂರು ಅಪ್ಪಪಡಿಗಳ ಪ್ರಸಾದಕ್ಕೆ ಏರ್ಪಾಡು ಮಾಡಿದ ದಾನಿಗೆ 25 ಅಪ್ಪಪಡಿ ಪ್ರಸಾದ ದಾಯಭಾಗವಾಗಿ ಸೇರುತ್ತಿದ್ದಿತು,

ಆಲಯಕ್ಕೆ ಆಗಮಿಸುವ ಯಾತ್ರಿಕ ಭಕ್ತರು ಸ್ವಾಮಿಗೆ ನೈವೇದ್ಯವಾದ ಪ್ರಸಾದಗಳ ಬಗ್ಗೆ ಭಕ್ತಿ ಗೌರವ ಸೂಚಿಸಿ ಬೇಡುತ್ತಿದ್ದರಿಂದ ದಾನಿಯು ತನ್ನ ಭಾಗಕ್ಕೆ ಬಂದ 25 ಶತಾಂಶ ಪ್ರಸಾದದ ಬಿಕರಿಯಿಂದಾಗಿ ಸಾಕಷ್ಟು ಕಮಾಯಿಸುತ್ತಿದ್ದ. ಆಲಯಕ್ಕೆ ಮಿಕ್ಕ 75 ಶತಾಂಶದ ಪ್ರಸಾದದಿಂದ ಒಳ್ಳೆಯ ಆದಾಯವೇ ಇದ್ದಿತು.

ಆಲಯದ ಶಾಸನಗಳು ಈ ಪ್ರಸಾದಗಳ ಉತ್ತಮವಾದ ಮಾರಾಟ ವ್ಯವಸ್ಥೆ ಇದ್ದಿತೆಂಬುದನ್ನು ವಿವರಿಸು ತ್ತವೆ. ದಾನಿಗಳಿಂದ, ಆಲಯದ ನೌಕರವರ್ಗದಿಂದಲೂ ಅವರವರ ಭಾಗಕ್ಕೆ ಬಂದ ಪ್ರಸಾದಗಳನ್ನು ತಾವು ಪಡೆದು ಮಾರುತ್ತಿದ್ದ ಹನ್ನೊಂದು ಮಂದಿ ಗುತ್ತಿಗೆದಾರರ ಏಕಾಧಿಕಾರವನ್ನು ಒಂದು ಶಾಸನ ತಿಳಿಸುತ್ತದೆ. ಇವರನ್ನು ಪ್ರಸಾದಕ್ಕಾರರ್ ಎಂದು ಕರೆಯುತ್ತಿದ್ದರು. ಉದಾಹಾರಣೆಗೆ ತಿರುಮಲೆ ಆಲಯದ ಎರಡನೆ ಪ್ರಾಕಾರದ ಪಶ್ಚಿಮದ ಗೋಡೆಯಲ್ಲಿನ ತಿ.ತಿ. 278 ನೇ ಶಾಸನವು ಶಕ 1457 ರಲ್ಲಿ (ಕ್ರಿಶ. 1535) ದಾನಿಯ ಕಾಲುಭಾಗ ಪ್ರಸಾದದ ವಿವರವನ್ನು ನೀಡುತ್ತ ಇದನ್ನು ಕೊಂಡುಕೊಳ್ಳುವ ಕ್ರಯ ವಿವರವನ್ನು ಒಬ್ಬಾನೊಬ್ಬ ತಿರುಮಲಯ್ಯಂಗಾರ್‌ನ ಪರವಾಗಿ ದಾಖಲಿಸಿದೆ. ಸಾಳುವ ಗೋವಿಂದರಾಜನು ತನ್ನ ದಾನದ ಕಾಲುಭಾಗ ಪ್ರಸಾದವನ್ನು ತಿರುಮಲಯ್ಯಂಗಾರನಿಗೆ ವಿಕ್ರಯ ಮಾಡಿದ ಪ್ರಕ್ರಿಯೆ ಇಲ್ಲಿ ವಸ್ತು. ಇದರಿಂದಾಗಿ ಪ್ರಸಾದಗಳ ವ್ಯವಸ್ಥಿತ ಮಾರಾಟ ಪದ್ಧತಿಯಿದ್ದು, ಆಲಯದ ಅಧಿಕಾರಿಗಳು ಈ ಮಾರಾಟ ಕ್ರಿಯೆಯ ನೊಂದಣಿ ಸಹ ಮಾಡುತ್ತಿದ್ದರು ಎಂಬುದು ತಿಳಿದು ಬರುತ್ತದೆ. ಇಂತಹ ಹಲವಾರು ವಿಕ್ರಯ ಕ್ರಮಗಳು ದಾಖಲೆಗೊಂಡಿವೆ.

ಈ ಪ್ರಸಾದಕ್ಕಾರರು ಪ್ರಸಾದಗಳನ್ನು ಪಡೆದವರಿಗೆ ವಾರ್ಷಿಕವಾಗಿ ಒಂದು ಮೊತ್ತವನ್ನು ಸಲ್ಲಿಸಿ ಅವರ ಪರವಾಗಿ ಅವರು ಪ್ರಸಾದಗಳನ್ನು ಪಡೆದು ಪ್ರಾಯಶಃ ಅಧಿಕ ಬೆಲೆಗೆ ಭಕ್ತರಿಗೆ ವಿಕ್ರಯಿಸುತ್ತಿದ್ದರೆನ್ನ ಬಹುದು. ದಾನಿಯು ತನ್ನ ಭಾಗಕ್ಕೆ ಬರುವ ಪ್ರಸಾದವನ್ನು ಮಾರುವ ಅಥವಾ ವಿಟ್ಟವನ್ ವಿಳುಕ್ಕಾಡುವನ್ನು ಗುತ್ತಿಗೆ ನೀಡುವ ಅಧಿಕಾರವನ್ನು ಹಲವಾರು ಶಾಸನಗಳು ಎತ್ತಿ ಹಿಡಿಯುತ್ತವೆ. ಹಲವಾರು ಮಂದಿ ಶ್ರೀಮಂತ ಗುತ್ತಿಗೆದಾರರು ಇದೇ ಉದ್ಯೋಗ ಮಾಡುತ್ತಿದ್ದರು. ಬಹುಮಂದಿ ಈಗಲೂ ಮಾಡುತ್ತಿದ್ದಾರೆ (ಈಗಲೂ ಎಂಬುದು 1982ರ ಮಾತಷ್ಟೆ. ಮಿರಾಸಿ ಪದ್ಧತಿ ಈಗಿಲ್ಲ. ಈ ಪದ್ಧತಿಗೆ ವಿದಾಯ ಹೇಳಲಾಗಿದೆ - ಅನುವಾದಕ).

ಈ ಹಿಂದೆ ಹೇಳಲಾದಂತೆ ಆಲಯಕ್ಕೆ ಶ್ರೀಮಂತವಾದ ಗ್ರಾಮಗಳನ್ನೂ, ಹೆಚ್ಚಿನ ಸಂಪತ್ತನ್ನೂ ದಾನ ನೀಡಿದ ಆಲಯದ ಆಧಿಕಾರಿಗಳ ಪಾತ್ರ ಈಗ ಹೊಸ ಬಣ್ಣವನ್ನು ಪಡೆಯುತ್ತದೆ. ಆಲಯ ಪದ್ಧತಿಯಂತೆ ದಾನಿಯು ದಾನದಿಂದಾದ ಪ್ರಸಾದಗಳ ಕಾಲು ಭಾಗಕ್ಕೆ ಅಧಿಕಾರವನ್ನು ಪಡೆಯುವುದರಿಂದ ಹಾಗೂ ಈ ಕಾಲುಭಾಗವನ್ನು ವಿಕ್ರಯ ಮಾಡುವ ಅಥವಾ ಗುತ್ತಿಗೆ ನೀಡುವ ಹಕ್ಕು ಹೊಂದಿರುವುದರಿಂದ, ಆಲಯದ ಸೇವಕರು ತಮ್ಮ ಆದಾಯದಲ್ಲಿನ ಹೆಚ್ಚಿನ ಸಂಪತ್ತನ್ನು ಆಲಯ ದಾನಗಳಲ್ಲಿ ತೊಡಗಿಸಿ ತಮ್ಮ ಪಾಲಿಗೆ ಬಂದ ಕಾಲುಭಾಗದ ಪ್ರಸಾದ - ಮಾರಾಟ ಗುತ್ತಿಗೆಗಳಿಂದ ತಕ್ಕ ಲಾಭದಾಯಕವಾದ ಪ್ರತಿಫಲವನ್ನು ಪಡೆಯುತ್ತಿದ್ದರಿಂದ ಅಂದಿನ ಕಾಲದಲ್ಲಿ ಹೆಚ್ಚಿನ ಹಣ ಹೂಡಿಕೆಯ ಒಂದು ಸುರಕ್ಷಿತ ವಿಧಾನ ಆಲಯಕ್ಕೆ ದಾನ ನೀಡುವು ದಾಗಿದ್ದಿತು - ಅದೂ ಹಣವನ್ನು ಹೂಡುವ - ನೀಡುವ ಸಂಪ್ರದಾವಿಲ್ಲದವರಿಗೆ - ಸುರಕ್ಷಿತ ಬ್ಯಾಂಕಿಗ್ ವ್ಯವಸ್ಥೆ ಇಲ್ಲದಿದ್ದಾಗ, ಈ ದಾರಿ ಬಹೂಪಯೋಗಿಯಾಗಿ ಕಂಡುಬಂದಿದ್ದರೆ ಆಶ್ಚರ್ಯವಿಲ್ಲ. ಹೀಗಾಗಿ ದಾನದ ರಾಶಿಯನ್ನು ಅಸಲು ಹಣ ಹೂಡಿಕೆಯೆಂದೂ ಪ್ರತಿಯಾಗಿ ಬಂದ ಪ್ರಸಾದ ಮಾರಾಟದಿಂದ ಉಂಟಾದ ಧನದ ಮೊತ್ತ ಹೂಡಿಕೆಯ ಮೇಲಿನ ಉತ್ಪನ್ನವೆಂದೂ ಪರಿಗಣಿತವಾಗಿ ಹೆಚ್ಚು ಹೆಚ್ಚಿನ ಹಣವನ್ನು ಹೂಡಲು ಪ್ರೇರಣೆ ಪ್ರೋತ್ಸಾಹ ದೊರೆಯುವಂತಾಯಿತು.

ದಾನ ಮಾಡಿದ ಮೊತ್ತದ ಬಂಡವಾಳದಿಂದ ಸಿಕ್ಕ ಕಾಲುಭಾಗ ಪ್ರಸಾದಗಳ ಮಾರಾಟದಿಂದ ಬಂದಂತಹ ಪ್ರತಿಫಲಗಳ ಸೂಕ್ಷ್ಮ ಅಧ್ಯಯನ ಶಾಸನಗಳ ಆಧಾರದಲ್ಲಿ ಇನ್ನೂ ನಡೆಯಬೇಕು. ಸ್ವಾಮಿಗೆ ದಾನ ನೀಡುವ ರೂಪದಲ್ಲಿ ಹಣವನ್ನು ಹೂಡಿ ಅದರಿಂದ ಬರುವ ಕಾಲುಭಾಗ ಮಾರಾಟದ ಮೂಲಕ ಉಂಟಾದ ಲಾಭದ ಪ್ರಸಾದದ ಪ್ರಮಾಣ ಆಲಯದ ಕೆಲಸಗಾರರಿಗೆ ಇಂತಹ ಒಂದು ಹಾದಿಯಲ್ಲಿ ಕ್ರಮಿಸಲು ಪ್ರೇರೇಪಿಸಿರಬೇಕು. ಇನ್ನೂ ಹೆಚ್ಚಿನ ಅಧ್ಯಯನದಿಂದ ಈ ಹಣದ ಹೊಳೆಯ ಧಾರೆಯ ಪೂರ್ಣ ಚಿತ್ರವನ್ನು ಬಿಡಿಸಲು ಸಾಧ್ಯವಿದೆ.

ಆಲಯದ ಅಧಿಕಾರಿಗಳು ಗ್ರಾಮದಾನಗಳನ್ನು ನೀಡಿದ್ದಕ್ಕೂ ಇದೇ ಕಾರಣ ಮೂಲವನ್ನು ಹೇಳಬೇಕು. ಗ್ರಾಮದ ಹೆಚ್ಚಿದ ಉತ್ಪನ್ನವು ಯಾವುದೋ ಒಂದು ಉಭಯಕ್ಕೆ ವೆಚ್ಚವಾಗಿ ಅದರಲ್ಲಿನ ಕಾಲುಭಾಗದ ಪ್ರಸಾದ ದಾನಿಯ ವಿಳುಕ್ಕಾಡು ದಾಯಭಾಗವಾಗಿ ಬರುತ್ತಿದ್ದಿತು.

## 11. ತಿರುಮಲೆ ಆಲಯದ ಮೂಲಕ ನೀರಾವರೀ ಬೆಳವಣಿಗೆ

ತಿರುಮಲೆಯ ಆಲಯದ ಮೂಲಕ ನೀರಾವರಿಯ ಬೆಳವಣಿಗೆ ಆದದ್ದು ವೈಶಿಷ್ಟ್ಯವೆನ್ನುವಂತಿಲ್ಲ. ಮತ್ತೂ ಹಲವಾರು ದಕ್ಷಿಣಭಾರತದ ಆಲಯಗಳಿಂದ ಈ ಕೆಲಸ ನಡೆದಿದೆ. ತಿರುಮಲೆಯ ಆಲಯದ ಕೆಲಸದ ವಿಶೇಷವೆಂದರೆ ಇಲ್ಲಿ ಮಾತ್ರವೇ ಅದಕ್ಕೆ ಒಂದು ಪೂರ್ಣ ಚಿತ್ರ ಸಿಗುವಷ್ಟು ಗಾತ್ರದ ಹಾಗೂ ಗುಣದ ಶಾಸನಗಳು ದೊರೆಯುತ್ತವೆ. ಇತರ ಆಲಯಗಳಲ್ಲಿಯೂ ಇಂತಹ ಅಧ್ಯಯನ ನಡೆಯಬೇಕಿದೆ.

ತಿರುಮಲೆಯ ಆಲಯದ ಶಾಸನಗಳ ಅಧ್ಯಯನದಿಂದ ಅಲ್ಲಿನ ಅಂದಿನ ಜನರ ಸಾಮಾಜಿಕ ಆರ್ಥಿಕ ಪರಿಸರದ ಸ್ಥೂಲವಾದ ಸಾಧಾರಣ ಚಿತ್ರವನ್ನು ಪಡೆಯಬಹುದಾಗಿದೆ.

ತಿರುಮಲೆಯ ಆಲಯದಲ್ಲಿ ದೊರೆಯುವ ಶಾಸನಗಳ ಆಳವಾದ ಅಧ್ಯಯನದಿಂದ ಆಲಯದ ಆರ್ಥಿಕ ಪರಿಸ್ಥಿತಿಯ ಪರಿಪೂರ್ಣಚಿತ್ರವನ್ನೂ ಪಡೆಯಬಹುದಾಗಿದೆ.

ಆಲಯದ ಆದಾಯ ಹೆಚ್ಚಿದಂತೆಲ್ಲ ಆಲಯದ ಆಡಳಿತದಲ್ಲಿ ಉಂಟಾದ ಬದಲಾವಣೆಗಳನ್ನೂ ಈ ಅಧ್ಯಯನ ಒಳಗೊಳ್ಳಲು ಅವಕಾಶವಿದೆ.

ಆಲಯದ ಸೇವಾದಾರರಿಗೆ ಅವರ ಸೇವೆಗೆ ತಕ್ಕಂತೆ ದೊರೆಯುತ್ತಿದ್ದ ಪ್ರಸಾದಗಳ ಆಧಾರದಲ್ಲಿ ಅವರ ಸಂಭಾವನೆಗಳನ್ನೂ ಗುರುತಿಸಬಹುದು. ದಾನಿಯ ಕಾಲುಭಾಗ ಪ್ರಸಾದಗಳಲ್ಲಿನ ಧನರೂಪದ ಆದಾಯವನ್ನು ಲೆಕ್ಕ ಹಾಕುವುದರಿಂದ ಈ ಸಂಚಯಗಳ ಹಣದ ಮೊತ್ತವನ್ನೂ ತಿಳಿಯಬಹುದಾಗಿದೆ. ಮೇಲೆ ತಿಳಿಸಿದ ಉದಾಹರಣೆ ಯಂತೆ 300 ಅಪ್ಪ ಪಡಿಗಳ ನಿವೇದನೆಗೆ 15000 ನರ್ಪಣಗಳು ಬಂಡವಾಳ ಆಗಬೇಕಿದ್ದು. ದಾನಿ ಭಕ್ತರ ಭಾಗಕ್ಕೆ- ವಿಟ್ಟವನ್ ವಿಳುಕ್ಕಾಡು - ಕಾಲುಭಾಗ ಎಂದರೆ 75 ಅಪ್ಪಪಡಿಗಳು ಬರುತ್ತವೆ. ಒಂದು ಅಪ್ಪಪಡಿಯ ಬೆಲೆ ಆರು ಪಣ. ಎಂದಾಗ ಅದು ಅಪ್ಪಪಡಿಯ ಉತ್ಪಾದನಾ ವೆಚ್ಚ ಆರು ಪಣಂ ಎಂದಾಗುವುಷ್ಟೆ. ಪ್ರಸಾದಕ್ಕಾರರಿಗೆ ಎಂದರೆ ಪ್ರಸಾದಗಳನ್ನು ಮಾರುವ ಗುತ್ತಿಗೆ ಹಿಡಿದವರಿಗೆ ಒಂದು ಅಪ್ಪಪಡಿಯ ಬೆಲೆ ಹತ್ತು ಪಣಗಳಾಗಬಹುದು.

ಇದರಿಂದಾಗಿ 15000 ನರ್ ಪಣಗಳ ಹೂಡಿಕೆಯಿಂದ 750 ಪಣಗಳ ಲಾಭವಿದ್ದು, ಕೆಲಕಾಲದ ಹಿಂದಿನವರೆಗೆ ಬ್ಯಾಂಕ್‌ನ ಸುರಕ್ಷಿತ ಠೇವಣಿಯ ಬಡ್ಡಿದರವೂ ಇದೇ ರೀತಿಯಲ್ಲಿ 5 ಶತಾಂಶವಾಗಿದ್ದಿತು ಎಂಬುದನ್ನು ನೆನೆಯಬಹುದು.

ಹೀಗಾಗಿ ಆಲಯದ ಸೇವಾದಾರರಿಗೆ ಅವರ ಹಣದ ಹೂಡಿಕೆಯ ಮೇಲೆ ಐದು ಶತಾಂಶ ಆದಾಯ ವಿದ್ದಿತು. ಆಲಯದಿಂದ ನೀರಾವರಿಯಲ್ಲಿ ಹೂಡಿಕೆಯಾದ ಈ ಹಣದಿಂದಾಗಿ ಬೇಸಾಯಗಾರರಿಗೆ ಕುಡಿವರಂ ನಷ್ಟು ಭಾಗದ ಲಾಭವುಂಟಾಗುತ್ತಿದ್ದಿತು. ಇದರಿಂದಾಗಿ ಆಲಯದ ಆದಾಯ ಹೆಚ್ಚಾಗಿ ಉತ್ಸವಗಳೂ ವೃದ್ಧಿಯಾಗಿ, ಆರ್ಥಿಕ ಪರಿಸ್ಥಿತಿಯೂ ಸುಧಾರಿಸಿ ಆಲಯದ ಸೇವಾದಾರರಿಗೆ ಐದು ಶತಾಂಶ ಅಧಿಕ ಆದಾಯವಾಗುತ್ತಿದ್ದಿತು. ಈ ಅರ್ಥಚಕ್ರ ಸ್ವಯಂಪೂರ್ಣವಾಗಿ ಸ್ವಯಮಾಭಿವೃದ್ಧಿಯನ್ನು ಹೊಂದುತ್ತ ಹೆಚ್ಚಿನ ಆದಾಯದಿಂದ ಹೆಚ್ಚಿನ ಹೂಡಿಕೆಯಾಗಿ ಮತ್ತೂ ಹೆಚ್ಚಿನ ಲಾಭದತ್ತ ನಡೆಯುತ್ತಿದ್ದಿತು.

ಈ ಒಂದು ವಿಶಿಷ್ಟವಾದ ಆರ್ಥಿಕ ಬೆಳವಣಿಗೆಯ ಆಡಳಿತವನ್ನು ಬೇರೆಲ್ಲಿಯೂ ನೋಡಲಾಗುವುದಿಲ್ಲ, ಹಾಗೆಯೇ ಬೇರೆಲ್ಲಿಯೂ ಆಧುನಿಕ ಕಾಲದಲ್ಲಿಯೂ ಅನುಸರಿಸಲೂ ಇಲ್ಲ.

ತಿರುಮಲೆಯ ಆಲಯದ ಶಾಸನಗಳನ್ನು ಸರಿಯಾದ ಅಧ್ಯಯನದ ಬೆಳಕಿಗೆ ಹಿಡಿದು, ತತ್ಪರತೆಯಿಂದ ಓದಿದಲ್ಲಿ ನಾಲ್ಕೈದು ಶತಮಾನಗಳಕಾಲದ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳ ಸ್ಪಷ್ಟ ಖಚಿತ ಚಿತ್ರ ದೊರೆಯುವುದ ರಲ್ಲಿ ಸಂಶಯವಿಲ್ಲ.

## 12. ಇತರ ಸಾಮಾಜಿಕ ಆರ್ಥಿಕ ಅಂಶಗಳು

ಯಥಾಯೋಗ್ಯ ವಿಶ್ಲೇಷಣೆಯಿಂದ ಶಾಸನಗಳನ್ನು ಗಮನಿಸಿದ್ದೇ ಆದಲ್ಲಿ ಕ್ರಿ.ಶ. 16 ನೇ ಶತಮಾನದ ಆರ್ಥಿಕ ಪದ್ಧತಿಯ ಹಾಗೂ ಸಾಮಾಜಿಕ ಪರಿಸರದ ವಿವರಗಳು ದೊರೆಯುತ್ತವೆ. ಹಲವು ರೀತಿಯಲ್ಲಿ ದೊರೆಯುವ ವಿವರಗಳು ಹೀಗಿವೆ -

1. ತಿ.ತಿ. 417 ನೇ ಶಾಸನವು - ತಿರುಮಲೆಯ ಆಲಯದ ಮೂರನೇ ಪ್ರಾಕಾರದ ದಕ್ಷಿಣದ ಗೋಡೆಯಲ್ಲಿ ರುವುದು - ಕುಮಾರ ತಾತ ಅಯ್ಯಂಗಾರ್ಯರ ಶಿಷ್ಯ ಹನುಮಯ್ಯ ಹಾಗೂ ಆಲಯ ಧರ್ಮದರ್ಶಿಗಳ ನಡುವೆ ಆದ ಒಪ್ಪಂದವನ್ನು ಗುರಿಸುತ್ತದೆ. ಇದರ ಕಾಲ 20 ಅಕ್ಟೋಬರ್ 1545. ಅದರಲ್ಲಿ ತಿಳಿಸಲಾಗಿರುವ ಎರಡು ಉಭಯ (ಸೇವೆ) ಗಳಿಗೆ 200 ರೇಖೈ ಹೊನ್ನು ಹಾಗೂ 175 ರೇಖೈ ಹೊನ್ನು ಬೇಕಾಗಿದ್ದಿತ್ತೆಂದು ತಿಳಿದುಬರುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಎರಡೂ ಉಭಯಗಳಿಗೂ ಸೇರಿಸಿ 375 ರೇಖೈ ಹೊನ್ನು ಬೇಕಿದ್ದಿತು. ನೀಡಿದ ದತ್ತಿಯು 3750 ನರ್ಪಣಗಳಾಗಿದ್ದವು. ಇದರಿಂದಾಗಿ ಒಂದು ರೇಖೈ ಹೊನ್ನು-ಹತ್ತು ಪಣಗಳಿಗೆ ಸಮವೆಂದು ತಿಳಿದುಬರುತ್ತದೆ. ಶಾಸನದಲ್ಲಿ ನೀಡಲಾಗಿರುವ ಇತರ ರೇಖೈ ಹೊನ್ನು ವಿವರದಿಂದ ಘೋಷಿತವಾಗತಕ್ಕ ನಿವೇದನೆಗಳ ಎಲ್ಲ ವೆಚ್ಚಗಳನ್ನೂ ಪಣಗಳಲ್ಲಿ ಪರಿವರ್ತಿಸಿಕೊಳ್ಳಬಹುದಾಗಿದೆ.

2. ತಿರುಮಲೆಯ ಆಚಾರ್ಯಪುರುಷರಲ್ಲಿ ಒಬ್ಬರಾದ ಶ್ರೀನಿವಾಸ ಅಯ್ಯಂಗಾರ್ಯ ಹಾಗೂ ಆಲಯದ ಧರ್ಮದರ್ಶಿಗಳ ನಡುವಣ ಒಂದು ಒಪ್ಪಂದವನ್ನು ಗೋವಿಂದರಾಜಸ್ವಾಮಿ ದೇವಾಲಯದ ಎರಡನೇ ಪ್ರಾಕಾರ ದಲ್ಲಿನ ಜಿ.ಟಿ. 415 ನೇ ಶಾಸನವು ವಿವರಿಸುತ್ತದೆ. ಇದರ ಕಾಲ 3 - ಜೂನ್ - 1547. ಸದಾಶಿವರಾಯನು ತನಗೆ ಕೊಟ್ಟಂತಹ ಪೆರಿಯ ಎಕ್ಕಲೂರು ಗ್ರಾಮವನ್ನು ದಾನಿಯು ದೇವರಿಗೆ ನೀಡುತ್ತ ಅದರ ವಾರ್ಷಿಕ ಆದಾಯ 2000 ಚಕ್ರ ಹೊನ್ನುಗಳನ್ನು ವೆಚ್ಚಿಸಲು (ಸುವರ್ಣ ನಾಣ್ಯ) ಅಲಂಕಾರ, ದಧ್ಯೋದನ ಮೊದಲಾದ ಅತಿ ದೀರ್ಘವಾದ ಉಭಯದ ಪಟ್ಟಿಯನ್ನೇ ನೀಡುತ್ತಾನೆ. ಆಲಯದ ದೊಡ್ಡ ಶಾಸನಗಳಲ್ಲಿ ಇದು ಒಂದಾಗಿದ್ದು, ವಿವರವಾದ ವಿಷಯಗಳನ್ನು ತಿಳಿಸುತ್ತದೆ. ಉದಾಹರಣೆಗೆ 3000 ಮಾವಿನ ಹಣ್ಣುಗಳ ಬೆಲೆ ಮೂರು ರೇಖೈ(300 ಪಣಂ) ಅಡಿಕೆಯ ಒಂದು ಗೊಲೆ - 1 ರೇಖೈ, 300 ತೆಂಗಿನಕಾಯಿ 5 ಪಣಂ, 3500 ಅಡಿಕೆಯ ಬೆಲೆ 7 ಪಣಂ ಇತ್ಯಾದಿ. ದೊರೆಯುತ್ತಿದ್ದ ಎಲ್ಲ ಹಣ್ಣುಕಾಯಿಗಳ, ಪೂಜಾವಸ್ತುಗಳ ಪಟ್ಟಿಯನ್ನು ನೀಡಲಾಗಿದೆ. ಇವೆಲ್ಲವೂ 2000 ಚಕ್ರ ಹೊನ್ನುಗಳಿಗೆ ಸಮಾನಾಗಬೇಕಾದ್ದರಿಂದ ಚಕ್ರ - ಪೊನ್ನು, ಪಣಂ, ರೇಖೈ ಪೊನ್‌ಗಳ ಸಂಬಂಧ ತಿಳಿಯಬಹುದಾಗಿದೆ. ವಿಜಯನಗರದ ವಿತ್ತೀಯ ಪದ್ಧತಿಯನ್ನೂ ಈ ಮೂಲಕವಾಗಿ ಕಂಡು ಹಿಡಿಯಬಹುದು.

3. ಒಂದು ಹಳ್ಳಿಯ ಆದಾಯದ ವಿವಗಳನ್ನು ನೀಡುವ ಅಪರೂಪದ ಶಾಸನ ತಿರುಮಲೆಯ ಆಲಯದಲ್ಲಿ ಕಂಡುಬರುತ್ತದೆ. ಮೇಲೆ ಹೇಳಿದಂತೆ ಪ್ರಸಾದಗಳ ಸಾಹಿತ್ಯದಲ್ಲಿ ಅಕ್ಕಿ ಒಂದು ಮುಖ್ಯ ಸಾಧನವಾಗಿದ್ದು ಗ್ರಾಮದ ಭತ್ತದ ಉತ್ಪನ್ನವನ್ನು ಆಧರಿಸಿ ಅದರಿಂದಾಗುವ ಅಕ್ಕಿಯ, ಆ ಮೂಲಕವಾದ ಪೊನ್‌ಗಳ - ಚಕ್ರ ಪೊನ್‌ಗಳ ಸಮಾನ ಹಣವನ್ನು ಲೆಕ್ಕ ಹಾಕುವುದು ಸುಲಭ. ಈ ಗ್ರಾಮವು ಜಗದಭಿಗುತ್ತಿ ಸೀಮ್ಮೆಯಲ್ಲಿರುವುದೆಂದು ಹೇಳ ಲಾಗಿದ್ದು ಈ ಊರನ್ನು ಈಗ ಕಂಡು ಹಿಡಿಯುವುದು ಸುಲಭ.ಹೀಗಾಗಿ ಸದಾಶಿವರಾಯನ ಕಾಲದಲ್ಲಿನ ಒಂದು ಹಳ್ಳಿಯ ವಾರ್ಷಿಕ ಆದಾಯವನ್ನೇ ಇಂದಿನ ಕಾಲದ ಒಂದು ಹಳ್ಳಿಯ ವಾರ್ಷಿಕ ಆದಾಯದೊಡನೆ ಹೋಲಿಸಿ ನೋಡುವುದು ಸೂಕ್ಷ್ಮವಾದ ಅಧ್ಯಯನದಿಂದ ಸಾಧ್ಯ. ಹೀಗಾದಲ್ಲಿ ವಿಜಯನಗರ ಕಾಲದ ಸಾಮಾಜಿಕ ಆರ್ಥಿಕ ಪರಿಸರದ ವಿವರಣೆಯಲ್ಲಿ ಒಂದು ಹೊಸ ಬೆಳಕು ಹರಿಸಿದಂತೆ ಆಗುತ್ತದೆ. ಇದರೊಂದಿಗೇ ಬೇಸಾಯಗಾರರ ಪಾಲಿನವರಂ ಅನ್ನೂ ಹೆಚ್ಚು ಕಡಮೆ ಅಂದಾಜಿಸಬಹುದಾಗಿದ್ದು, ವಿಜಯನಗರದ ಅರಸರ ಕಾಲದಲ್ಲಿ ಗ್ರಾಮಜೀವನ ಯಾವ ರೀತಿಯಲ್ಲಿದ್ದಿತು ಮತ್ತು ಅಲ್ಲಿನ ಸಂಪತ್ತಿನ ವಿವರಗಳೇನು ಎಂಬುದರ ಬಗ್ಗೆ ನಿಖರವಾದ ಮಾಹಿತಿಯನ್ನು ಪಡೆಯಬಹುದಾಗಿದೆ.

## 13. ಆಲಯದ ಪ್ರಸಾದ ವಿತರಣೆ

ಮೇಲೆ ತಿಳಿಸಲಾಗಿರುವಂತೆ ಆಲಯದ ಸೇವಾದಾರರು ಹದಿನಾರನೆಯ ಶತಮಾನದಲ್ಲಿ ದಾನ ಶಾಸನಗಳಲ್ಲಿ ತಿಳಿಸಿರುವಂತೆ ಹೆಚ್ಚಿನ ಮೊತ್ತದ ಹಣದ ಪ್ರಬಂಧವನ್ನು ಮಾಡಿರುವುದನ್ನು ಕಂಡರೆ ಅವರುಗಳ ಆರ್ಥಿಕ ಸಾಮರ್ಥ್ಯಗಳ ಬಗ್ಗೆತ್ಪ್ರಳುಂಟಾಗುವುದು ಸಹಜವೇ. ಆಲಯದಲ್ಲಿ ದೇವರಿಗೆ ನಿವೇದನೆಯಾದ ಬಳಿಕ ಪ್ರಸಾದಗಳು ಹೇಗೆ ವಿತರಣೆಯಾಗುತ್ತಿದ್ದವು ಮತ್ತು ಈ ರೀತಿಯ ದೇವರ ಪ್ರಸಾದಗಳಿಗೆ ಭಕ್ತಯಾತ್ರಿಕರು ಯಾವ ಬೆಲೆ ತೆರುತ್ತಿದ್ದರು - ಎಂಬ ಅಂಶದ ಆಧಾರದಲ್ಲಿ ಈ ಪ್ರಶ್ನೆಗೆ ಉತ್ತರ ದೊರೆಯುವುದು. ದೇವರಿಗೆ ನಿವೇದನೆ ಸಮರ್ಪಿಸಿದ ಬಳಿಕ ಪ್ರಸಾದಗಳನ್ನು ಎರಡು ಬಗೆಯಲ್ಲಿ ವಿತರಿಸಲಾಗುತ್ತಿದ್ದಿತು. ಅ) ಆಲಯ ಸೇವದಾರರು - ಎಲ್ಲ ನಿವೇದಿತ ಪ್ರಸಾದಗಳಲ್ಲಿಯೂ ನಾಲ್ಕನೇ ಮೂರುಪಾಲನ್ನು ತಮ್ಮ ಉಪಜೀವನಕ್ಕಾಗಿ ಸ್ವೀಕರಿಸುತ್ತಿದ್ದರು. ಆ) ನಿವೇದನೆಗಾಗಿ ದಾನ ನೀಡಿದ ದಾನಿಗಳು ಮಿಕ್ಕ ಒಂದು ಪಾಲಿನ ಪ್ರಸಾದವನ್ನು ಪಡೆದು ತಮಗೆ ಇಷ್ಟಬಂದ ರೀತಿಯಲ್ಲಿ ಬಳಸಬಹುದಾಗಿದ್ದಿತು[8]. ಯಾತ್ರಿಕ ಭಕ್ತರು ದೇವರಿಗೆ ನಿವೇದಿತವಾದ ಪ್ರಸಾದವನ್ನು ಪವಿತ್ರವಾಗಿ ತಿಳಿದು ಸ್ವೀಕರಿಸುವುದರಿಂದ ಅದಕ್ಕೆ ಬೇಡಿಕೆ ಹೆಚ್ಚುತ್ತದೆ. ಹದಿನೈದು ಹದಿನಾರನೆಯ ಶತಮಾನಗಳಲ್ಲಿ ವಿಜಯನಗರದರಸರ ಕಾಲದಲ್ಲಿ ಆಲಯಕ್ಕೆ ಬರುವ ದಾನಗಳು ಹೆಚ್ಚಾಗಿ, ತತ್ಸಂಬಂಧಿ ಉತ್ಸವಗಳೂ ನಿವೇದನೆಗಳೂ ಹೆಚ್ಚಾಗಿ ವೈವಿಧ್ಯಮಯವಾಗಿ ಹೆಚ್ಚಿನ ಭಕ್ತರನ್ನು ಆಕರ್ಷಿಸತೊಡಗಿದವು. ತಿರುಮಲೆಯಲ್ಲಿ ದೊರೆತ ದೇವರ ಪ್ರಸಾದವನ್ನು ಅಲ್ಲಿಯೇ ಭುಜಿಸಿದರೂ, ತಮ್ಮ ಸ್ವಸ್ಥಾನಗಳಿಗೆ ತೆಗೆದುಕೊಂಡು ಹೋಗಿ ಹಂಚಿದರೂ, ಹೆಚ್ಚಿನ ಶುಭವುಂಟಾಗುವುದೆಂಬ ಪರಂಪರಾಗತ ನಂಬಿಕೆಯಿಂದಾಗಿ ಯಾತ್ರಿಕರು ಈ ಪ್ರಸಾದವನ್ನು ಬಹುಬಯಕೆಯಿಂದ ಗೌರವಾದರಗಳಿಂದ ಕೊಳ್ಳತೊಡಗಿದರು. ಹೀಗಾಗಿ ಯಾತ್ರಿಕರ ಸಂಖ್ಯೆಯೂ ಸಂದಣಿಯೂ ಹೆಚ್ಚಾಗುತ್ತೆ ಪ್ರಸಾದಗಳ ಬಗೆಗಿನ ಬೇಡಿಕೆಯು ಬಹುವಾಗತೊಡಗಿತು.

ತಿರುಮಲೆಯ ಶಾಸನಗಳಲ್ಲಿ ಖಚಿತವಾಗಿ ತಿಳಿದು ಬರುವ ಅಂಶವೆಂದರೆ ಹಿಂದಿನ ಕಾಲದಲ್ಲಿ ಈ ಪ್ರಸಾದಗಳು ಮಾರಾಟವಾಗುತ್ತಿದ್ದವು. 1547 ರ ಒಂದು ಶಾಸನವು ಆಲಯದ ಸೇವಾದಾರರಿಂದಲೂ, ದಾನಿಗಳಿಂದಲೂ ನಿವೇದಿತ ಪ್ರಸಾದಗಳನ್ನು ಶೇಖರಿಸಿ ವಿಕ್ರಯಿಸಲು ಹಕ್ಕುಗಳನ್ನು ಹೊಂದಿದ ಹನ್ನೊಂದು ಮಂದಿಯ ಬಗ್ಗೆ ತಿಳಿಸುತ್ತದೆ. ಆಲಯದ ಸೇವಾದಾರರು ಹಾಗೂ ದಾನಿಗಳಿಂದ ಗುತ್ತಿಗೆಯ ಆಧಾರದಲ್ಲಿ ಪಡೆದ ಹಕ್ಕುಗಳನ್ನು ಹೊಂದಿದ ಈ ಪ್ರಸಾದ ವಿಕ್ರಯದಾರರನ್ನು ಪ್ರಸಾದಕ್ಕಾರರೆಂದು ಕರೆಯುತ್ತಿದ್ದರು. ಆಲಯದ ಅಧಿಕಾರಿಗಳಿಂದ ಪ್ರಸಾದಗಳನ್ನು ಪಡೆದ ಸೇವಾದಾರರ ಅಥವಾ ದಾನಿಗೆ ಒಂದು ಗೊತ್ತಾದ ಧನದ ಮೊತ್ತವನ್ನು ಈ ಪ್ರಸಾದಕ್ಕಾರರು ನೀಡಿ ಅವರಿಂದ ಪ್ರಸಾದಗಳನ್ನು ಪಡೆಯುತ್ತಿದ್ದರೆಂಬುದು ಸ್ಪಷ್ಟ. ಹೀಗೆ ಪಡೆದ ಪ್ರಸಾದಗಳನ್ನು ಅವರು ಯಾತ್ರಿಕರಿಗೆ ಮಾರುತ್ತಿದ್ದರು. ಇದು ಕಾನೂನು ವಿರುದ್ಧ ಕ್ರಿಯೆಯಾಗಿರಲಿಲ್ಲ. ದಾನಿಯು ತನ್ನ ಪಾಲಿಗೆ ಬರುವ ಪ್ರಸಾದಗಳನ್ನು ಮಾರಲು ಹೊಂದಿದ್ದ ಹಕ್ಕನ್ನು ಅಥವಾ ತನ್ನ ಪಾಲಿನ ಕಾಲುಭಾಗದ ಪ್ರಸಾದವನ್ನು ಇತರರಿಗೆ ತಾನು ಅಪೇಕ್ಷಿಸಿದ ರೀತಿಯಲ್ಲಿ ನೀಡುವ ಹಕ್ಕನ್ನು ಹೊಂದಿದ್ದನ್ನೂ, ತಿರುಮಲೆಯಲ್ಲಿನ ಹಲವಾರು ಹಣವಂತ ಪ್ರಸಾದಕ್ಕಾರರನ್ನು ತಿರುಮಲೆಯ ಹಲವು ಶಾಸನಗಳು ಹೆಸರಿಸಿರುವುದರಿಂದ ಅಂದಿನ ಕಾಲದಲ್ಲಿ ಇದೊಂದು ಪ್ರತಿಷ್ಠಿತವಾದ ಉದ್ಯೋಗ ವಿಧಾನವಾಗಿದ್ದಿತೆಂದು ಹೇಳಬಹುದು[10].

ನಿವೇದಿತ ಪ್ರಸಾದಗಳ ಆರ್ಥಿಕ ಮೌಲ್ಯವು ಆಲಯಕ್ಕೆ ಬರುತ್ತಿದ್ದ ದಾನಗಳ ಒಂದು ಮುಖ್ಯ ಲಕ್ಷಣ ವಾಗಿದ್ದಿತು. 1508 - 1568 ರ ನಡುವೆ ಈ ಪ್ರಸಾದಗಳನ್ನು ಧನವನ್ನಾಗಿ ಬದಲಾಯಿಸಿಕೊಳ್ಳುವ ಒಂದು ಸೌಲಭ್ಯವಿದ್ದುದರಿಂದಲೇ ಆಲಯ ಪಡೆದ ದಾನಗಳಲ್ಲಿನ ಕಾಲುಭಾಗದ ಮೊತ್ತ ಆಲಯದ ಸೇವಾದಾರರಿಂದಲೇ ಸಂದಾಯವಾಯಿತು.

## 14. ಆಡಳಿತದಲ್ಲಿ ಪರಿವರ್ತನೆಗಳು

ಹದಿನೈದು ಹದಿನಾರನೆಯ ಶತಮಾನಗಳಲ್ಲಿ ಆಲಯಕ್ಕೆ ಅನುದಾನವಾಗಿ ಬಂದ ಹಣ, ಭೂಮಿಕಾಣಿಕೆ ಗಳ ಹೆಚ್ಚಳದಿಂದಾಗಿ, ಆಲಯದ ಆಡಳಿತ ವಿಧಾನದಲ್ಲಿಯೂ ಪರಿವರ್ತನೆಗಳಾದವು. ಹದಿನೈದನೆಯ ಶತಮಾನದ ಮಧ್ಯ ಭಾಗದಿಂದ ಹದಿನಾರನೆಯ

ಶತಮಾನದ ಮಧ್ಯಭಾಗದವರೆಗೆ ಆಲಯಕ್ಕೆ ಬಂದ ಗ್ರಾಮದಾನಗಳು ಹದಿನೈದರಿಂದ ಒಂದು ನೂರರ ಸಂಖ್ಯೆಯನ್ನು ತಲುಪಿತು. ಅಪಾರವಾದ ಧನರಾಶಿಗಳ ದೇಣಿಗೆಗಳೂ, ಅದರೊಡನೆಯೇ, ಈ ಧನರಾಶಿಯನ್ನು ಯೋಜನಾಬದ್ಧ ಉತ್ಪಾದನೆಯಲ್ಲಿ ತೊಡಗಿಸುವ ಜವಾಬ್ದಾರಿಗಳೂ ಹೆಚ್ಚಾದವು. ಶೀಘ್ರ ಬೆಳವಣಿಗೆಯ ಈ ಶತಮಾನದ ಅವಧಿಯಲ್ಲಿ ಆಲಯದ ಆಡಳಿತ ಮಾತ್ರ ತನ್ನ ಮೂಲಭೂತ ಲಕ್ಷಣವಾದ ಜಾತ್ಯಾತೀತತೆಯನ್ನು ಉಳಿಸಿಕೊಂಡು ಬಂದಿತು. ಆಡಳಿತವು ಹನ್ನೆರಡು ಮಂದಿ ಸ್ಥಾನತ್ತಾರರಿಂದ (ಸ್ಥಳವಂದಿಗರು) ಕೂಡಿದ್ದು, ಇವರಲ್ಲಿ ಏಳುಮಂದಿ ತಿರುಮಲೆಯ ಗೌರವನೀಯ ಶ್ರೀಸಾಮಾನ್ಯರೂ, ಐದುಮಂದಿ ಆಲಯದ ಕೆಲಸಗಾರರೂ ಆಗಿರುತ್ತಿದ್ದರು. ಆಲಯದ ಆಡಳಿತ ಧರ್ಮದರ್ಶಿಗಳ ಮೇಲುಸ್ತುವಾರಿಯಲ್ಲಿ ಆಲಯದ ಮುಖ್ಯ ಅಧಿಕಾರಿಯೂ ಆಲಯ ಕಾಮಗಾರಿ ಕಚೇರಿಯೂ, ಆಲಯ ಲೆಕ್ಕಾಧಿಕಾರವೂ ಕೆಲಸ ಮಾಡುತ್ತಿದ್ದವು.

ಸ್ಥಾನತ್ತಾರರ ಜಾತ್ಯತೀತ ಆಡಳಿತ ಪದ್ಧತಿಯನ್ನು ಹದಿನಾಲ್ಕನೆಯ ಶತಮಾನದ ಕಡೆಯ ಭಾಗದಲ್ಲಿ ಆಲಯ ಉತ್ಸವಗಳೂ ನಿವೇದನೆಗಳೂ ಕಡಮೆಯಿದ್ದಾಗ ಹುಟ್ಟು ಹಾಕಲಾಗಿದ್ದಿತು. ವಿಜಯನಗರದ ಅರಸರ ಕಾಲದಲ್ಲಿ ಭೂಮಿ, ಧನಗಳ ಕಾಣಿಕೆಗಳು ಹೆಚ್ಚಾದಂತೆ ಉತ್ಸವಗಳೂ, ನಿವೇದನೆಗಳೂ, ಶೀಘ್ರಗತಿಯಲ್ಲಿ ವಿಸ್ತಾರ ವಾದವು. ಹಲವಾರು ಕಿರಿಯ ಆಲಯಗಳೂ, ಅನ್ನಸ್ತ್ರಗಳೂ, ವಿಶ್ರಾಂತಿ ಗೃಹಗಳೂ ಉಂಟಾಗಿ, ಹೆಚ್ಚಿದ ಯಾತ್ರಿಕರ ಆಗತ್ಯಗಳನ್ನು ಪೂರೈಸುವಂತೆ ಆಯಿತು. ಈ ಕಿರಿಯ ಉಪವಿಭಾಗಗಳುಆಲಯ ಗಳ, ನಿರ್ಮಾಣ ಆಗಮಾನುಸಾರವಾಗಿಯೇ ಆಗಿದ್ದು, ದಕ್ಷಿಣ ಭಾರತದ ಇತರ ಆಲಯಗಳಲ್ಲಿನ ಬೆಳವಣಿಗೆಯಂತೆಯೇ ಇದ್ದಿತೆಂಬುದು.

1456 ರಿಂದ 1570 ರ ವರೆಗಿನ ಬೆಳವಣಿಯ ಕಾಲದಲ್ಲಿ ತಿರುಪತಿಯಲ್ಲಿ ಉಂಟಾದ ಹಲವಾರು ಉಪ, ಬಿಡಿ ಆಲಯಗಳ ಆಡಳಿತವು 1456 ರ ಮೊದಲಿನ ಆಲಯಾಡಳಿತಕ್ಕಿಂತ ಬೇರೆಯೇ ಆಗಿ ಬೆಳೆಯಿತು. ಈ ಹೊಸ ಸಂಸ್ಥೆಗಳು ತಮ್ಮವೇ ಆದ'ರ್ಕರು (ಆಡಳಿತಗಾರರು) ಭಂಡಾರ ಹಾಗೂ ಉಗ್ರಾಣಗಳನ್ನು ಹೊಂದಿ ಕೆಲಮಟ್ಟಿಗೆ ಸ್ವಾವಲಂಬಿಗಳಾಗಿದ್ದವು. ಈ ಆಲಯಗಳಿಗೆ ಶಾಶ್ವತವಾದ ದಾನಗಳು ಪ್ರತ್ಯೇಕವಾಗಿ ದೊರೆಯುವಂತಾಗಿ, ಈ ದಾನಗಳಿಂದ ಬಂದ ಆದಾಯವನ್ನೂ ಸಹ ಬೇರೆಯಾಗಿಯೇ ಇಟ್ಟುಕೊಳ್ಳಲಾಯಿತು. ಹೀಗಾಗಿ ಹೊಸ ಹೊಸ ಆಲಯ ಸಂಸ್ಥೆಗಳು ಏರ್ಪಟ್ಟರೂ ತಿರುಮಲೆಯ ಆಲಯದ ಮೂಲಭೂತ ವ್ಯವಸ್ಥೆ ಯಲ್ಲಿ ಬದಲಾವಣೆಯಾಗಲಿಲ್ಲ. ಆಲಯದ ಆಡಳಿತ ಹಲವು ಪ್ರಮುಖ ಪರಿವರ್ತನೆಗಳನ್ನು ಒಳಗೊಳ್ಳುತ್ತ ಹೋಯಿತು. ಸ್ಥಾತ್ತಾರರ ಮೇಲುಸ್ತುವಾರಿಗೆ ಕೊರತೆ ಏರ್ಪಡದಿದ್ದರೂ ಅವರ ಬಿಗಿಹಿಡಿತ, ನಿರ್ಣಾಯಕ ಅಧಿಕಾರಿಗಳು ಕಡಮೆಯಾಗತೊಡಗಿದವು.

ಆಡಳಿತ ವಿಕೇಂದ್ರೀಕರಣದಿಂದಾಗಿ ಆಲಯದ ಜಾತ್ಯಾತೀತ ವ್ಯವಹಾರಗಳಲ್ಲಿ ಎರಡು ಬದಲಾವಣೆ ಗಳನ್ನು ಕಾಣಬಹು ದಾಗಿದೆ. ಮೊದಲನೆಯದಾಗಿ ಆಲಯದ ಆಡಳಿತಗಾರರು ಆಲಯ ಗ್ರಾಮಗಳಲ್ಲಿ ಧನ ಹೂಡಿಕೆಯ ವಿಶೇಷಕಾರ್ಯ ಯೋಜನೆ ಯನ್ನು ಕೈಗೆತ್ತಿಕೊಂಡು ನಿವೇದನೆಗಳನ್ನು ಹೆಚ್ಚು ಮಂದಿಗೆ ವಿತರಿಸುವಂ ತಾಯಿತು. ಎರಡನೆಯದಾಗಿ ಸ್ಥಳೀಯವಾದ ಇತರ ದೇವಾಲಯಗಳ ಆಡಳಿತವನ್ನು ಅಲ್ಲಲ್ಲಿನ ಕಾರ್ಯಕರ್ತರಿಗೆ ಗುಡಿಗಳ ಸೇವಕರಿಗೆ ಒಪ್ಪಿಸಲಾಯಿತು. ಆಲಯದ ಧರ್ಮದರ್ಶಿ ಸ್ಥಾನತ್ತಾರರು ಶ್ರೀ ವೆಂಕಟೇಶ್ವರಸ್ವಾಮಿ, ಶ್ರೀ ಗೋವಿಂದರಾಜಸ್ವಾಮಿ - ಇತ್ಯಾದಿ ಪ್ರಧಾನ ಆಲಯಗಳ ಆಡಳಿತವನ್ನು ನೋಡಿಕೊಂಡು, ಇತರ ಗುಡಿಗಳ ಲ್ಲಿನ ಆಡಳಿತದ ಮೇಲುಸ್ತುವಾರಿಯನ್ನು ಮಾತ್ರವೇ ನೋಡಿಕೊಳ್ಳುವಂತೆ ಆಯಿತು. ಮೇಲುಸ್ತುವಾರಿಯಕೇಂದ್ರಿತ ಆಧಿಕಾರದಿಂದಾಗಿ ಆಲಯದ ಆಡಳಿತಗಾರರಿಗೆ ಸಮಯದ ಉಳಿತಾಯ ಆದದ್ದೇ ಅಲ್ಲದೆ, ಪ್ರಧಾನ ಆಲಯಗಳ ಆಡಳಿತದಲ್ಲಿ ಹಾಗೂ ಆರ್ಥಿಕದಾನಗಳನ್ನು ಸಮರ್ಥವಾಗಿ ಹೂಡುವ ಕಾರ್ಯದಲ್ಲಿ ತೊಡಗಲು ಅವಕಾಶ ಮಾಡಿಕೊಟ್ಟಂತೆಯೇ ಇತರ ಆಲಯಗಳಿಗೆ ತಮ್ಮದೇ ಆದ ಆದಾಯ ಮೂಲಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸಲು ಅವಕಾಶ ಮಾಡಿಕೊಟ್ಟಾಂತಾಯಿತು.

ಹದಿನೈದನೆಯ ಶತಮಾನದ ಉತ್ತರಾರ್ಧ ಹಾಗೂ ಹದಿನಾರನೆಯ ಶತಮಾನದಲ್ಲಿ ಆಲಯದ ಜಾತ್ಯತೀತ ಆಡಳಿತದ ಒಂದು ಮುಖ್ಯ ಸಾಧನೆಯೆಂದರೆ ಆಲಯದ ಭೂಮಿಕಾಣಿಗಳ ಹಾಗೂ ಹಣಕಾಸಿನ ಯಶಸ್ವಿ, ಸಂಯೋಜನೆಗೊಳಿಸಿದುದಾಗಿದ್ದಿತು. ದೀರ್ಘ ಕಾಲಾವಧಿಯಲ್ಲಿ ಒಂದೇ ಸಮನೆ ಆದಾಯ ಬರುವಂತೆ ಸುರಕ್ಷಿತವಾದ ರೀತಿಯಲ್ಲಿ ಆಲಯದ ಧನವನ್ನು ಬಂಡವಾಳವಾಗಿ

ಹೂಡುವುದು ಒಂದು ಗುರುತರವಾದ ಜವಾಬ್ದಾರಿಯೇ ಆಗಿದ್ದಿತು. ಆಲಯದ ಆಡಳಿತಗಾರರು ದಾನಿಗೆ ಆತನ ಹಣದ ಹೂಡಿಕೆಯಿಂದಾಗಿ ದೊರೆಯ ಬಲ್ಲ ವಾರ್ಷಿಕ ಆದಾಯದ ಲೆಕ್ಕಹಾಕಿ, ವರ್ಷಾವಧಿ ನಿವೇದನೆಗಳ ಅಂದಾಜು ವಿವರವನ್ನು ತಿಳಿಸಬೇಕಾಗಿದ್ದಿತು. ಹಣದ ಹೊಡಿಕೆಯಿಂದ ಭೂಮಿಯ ಇಳುವರಿಯ ಕುಡಿವರಂ (ಅಮುಖ್ಯಭಾಗ - ಬೇಸಾಯಗಾರನ ಹಕ್ಕಿನ ಭಾಗ) ಅನ್ನು ಪಡೆಯುವ ರೈತನ ಬಳಿಯೂ ಮಾತನಾಡಿ ಆದಾಯದ ಅಂದಾಜುಕಟ್ಟ ಬೇಕಾಗಿದ್ದಿತು. ಭೂಮಿಯ ಇಳುವರಿ ಹೆಚ್ಚಾಗುವಂತೆ ಮಾಡುವ ನೀರಾವರೀ ಕಾಲುವೆಗಳ, ಕೆರೆಗಳ ನಿರ್ಮಾಣ, ಜೀರ್ಣೋದ್ಧಾರದ ಕೆಲಸ ಗಳಿಗೂ ಅವರೇ ಹೊಣೆಗಾರರಾಗಿದ್ದು ಆಲಯದ ಕಾಮಗಾರಿ ವಿಭಾಗದ ನೆರವಿನಿಂದ ಈ ಕೆಲಸಗಳನ್ನು ಪೂರ್ತಿಗೊಳಿಸುತ್ತಿದ್ದರು. ಕಡೆಯದಾಗಿ ದಾನಿಗಳ ಹಣದ ಮೂಲಕ ದೇವರಿಗೆ ಪೂಜೆನಡೆಸಿ, ನಿವೇದನೆ ಆದಮೇಲೆ, ದಾನಿಯ ಪಾಲಿನ ಪ್ರಸಾದಗಳನ್ನು ಅವರ ಇಷ್ಟದ ಪ್ರಕಾರ ವಿತರಣೆ ಮಾಡಬೇಕಾದ ಹೊಣೆಯೂ ಅವರಿಗಿದ್ದಿತು. ದಾನಗಳ ಅಗಾಧತೆಯನ್ನು ಗಮನಿಸಿದಾಗ ಈ ಕಾರ್ಯಭಾರಗಳು ಎಷ್ಟು ಗುರುತರವಾಗಿದ್ದವು ಎಂಬುದನ್ನು ಊಹಿಸಬಹುದು. ಈ ಕಾಲಾವಧಿಯಲ್ಲಿ ದಿನದಿನವೂ ದಾನಗಳ ಮೊತ್ತ ಹೆಚ್ಚುತ್ತಲೇ ಹೋಯಿತು ಎಂಬುದು ಈ ಹೊಣೆಗಾರಿಕೆಯನ್ನು ಯಶಸ್ವಿಯಾಗಿ ನಿಭಾಯಿಸಲಾಯಿತು ಎಂಬುದರ ದ್ಯೋತಕವಾಗಿದೆ.

## 15. ಪ್ರಸಾದ ವಿತರಣೆ

ಕ್ರಿ.ಶ. 1209 ರಲ್ಲಿ ತಿರುಕಾಳತ್ತಿದೇವನೂ, ಕ್ರಿ.ಶ. 1332 ರಲ್ಲಿ ತಿರುವೆಂಗಡನಾಥನೂ ಮಾಡಿದ ದಾನಗಳು ಆಲಯದಲ್ಲಿ ಸ್ವಾಮಿಗೆ ನಿವೇದಿತವಾದ ಪ್ರಸಾದಗಳು ಆಲಯದ ಸೇವಾದಾರರ ಜೀವನ ನಿರ್ವಹಣೆಯಲ್ಲಿ ಮಾತ್ರವೇ ಬಳಕೆಯಾಗುತ್ತಿದ್ದವು. ಯಾತ್ರಿಕ ಭಕ್ತರಿಗೆ ಈ ಪ್ರಸಾದಗಳು ವಿತರಣೆಯಾಗುತ್ತಿದ್ದ ಯಾವುದೇ ರೀತಿಯ ಉಲ್ಲೇಖವಿಲ್ಲದಿದ್ದರೂ, ಅವರಿಗೂ ಯಾವುದೋ ರೀತಿಯಲ್ಲಿ ಪ್ರಸಾದ ಸಿಗುತ್ತಿದ್ದಿತೆಂದೇ ಹೇಳಬೇಕು. ಈ ಅವಧಿ ಯಲ್ಲಿನ ದಾನಗಳು ಸಾಪೇಕ್ಷವಾಗಿ ಸಣ್ಣ ಪ್ರಮಾಣದವುಗಳು ಈ ಕಾಲ ದಲ್ಲಿನ ಸ್ಥಾನತ್ತಾರರೂ ಸಹ ತಮ್ಮ ಭಾಗವಾಗಿ ಯಾವ ಪ್ರಸಾದವನ್ನೂ ಪಡೆಯುತ್ತಿದಂತೆ ಕಂಡುಬರುವುದಿಲ್ಲ. ಆದರೆ ಕ್ರಿ.ಶ. 1390ರಿಂದ ಸ್ಥಾನತ್ತಾ ರರೂ, ಆಲಯದ ಸೇವಾದಾರರೂ ನಿವೇದನೆಯಾದ ಪ್ರತಿ ತಳಿಗೆಯಲ್ಲಿಯೂ ಒಂದು ನಿರ್ಧಿಷ್ಟವಾದ ಪಾಲನ್ನು ತಮ್ಮಲ್ಲೇ ಹಂಚಿಕೊಂಡು, ಮಿಕ್ಕ ಭಾಗವನ್ನು - ಕಾಲುಭಾಗವನ್ನು - ವಿಟ್ಟವನ್ ವಿಳಕ್ಕಾಡು - ದಾಯಭಾಗವೆಂದು ದಾನಿಗೆ ನೀಡುವುದು ಒಂದು ಪದ್ಧತಿಯಾಯಿತು. ಹಲವು ಸಲ ದಾನಿಯು ತನ್ನ ಭಾಗದ ಪ್ರಸಾದವನ್ನು ಯಾತ್ರಿಕರಲ್ಲಿ ಹಂಚಲು ನೀಡುತ್ತಿದ್ದನು. ಪ್ರಸಾದ ಗಳಲ್ಲಿನ ಮುಪ್ಪಾಗದ ವಿತರಣೆ ಯಾವ ಪ್ರಮಾಣದಲ್ಲಿ ಆಗುತ್ತಿದ್ದಿ ತೆಂಬ ವಿವರ ಯಾವುದೇ ಶಾಸನದಲ್ಲಿಯೂ ದೊರೆತಿಲ್ಲ. ಕ್ರಿ.ಶ. 1390ರಲ್ಲಿ ಅರಸಿನಾಲಯ ನಂದನವನದ ಹಾಗೂ ಮಠದ ಶ್ರೀಕಾರ್ಯನಿರ್ವಹಣಾಧಿಕಾರಿಯಾಗಿ ಕೋಯಿಲ್ ಕೇಳ್ವಿಜೀಯರ್ ಆಗಿದ್ದ ಮುಲ್ಲೈತಿರುವೆಂಕಟ ಜೀಯರ್ ಒಂದು ದಾನ ಮಾಡಿದರು. ತನ್ನ ಪಾಲಿಗೆ ಬಂದ ಪ್ರಸಾದದಲ್ಲಿ ತನ್ನನ್ನೂ, ಸೇರಿಸಿಕೊಂಡಂತೆ ಹನ್ನೆರಡು ಮಂದಿ ಸ್ಥಾನತ್ತಾರರಿಗೆ ಸಮಪಾಲು ಬರುವಂತೆ ವಿತರಣೆಯಾಗಬೇಕೆಂದು ಕಟ್ಟು ಮಾಡಿದನು. ಈ ಒಂದು ಹೊಸನಿಯಮದ ಪ್ರಕಾರ ಸ್ಥಾನತ್ತಾರರು ಸಂಭಾವನೆಯನ್ನು ಪಡೆಯುವ ಪದ್ಧತಿ ಆರಂಭವಾಗಿರ ಬೇಕು. ನಂತರದ ವರ್ಷಗಳಲ್ಲಿ ಸ್ಥಾನತ್ತಾರರು ಎಲ್ಲ ಉತ್ಸವಗಳಲ್ಲಿಯೂ ಹಿರಿದಾದ ಧನರೂಪ ಸಂಭಾವನೆ ಯನ್ನೂ, ದಾನಿಯು ತನ್ನ ಪಾಲಿನ ಕಾಲುಭಾಗದ ಪ್ರಸಾದದಲ್ಲಿ ನೀಡುವ ಒಂದು ಭಾಗ ಪ್ರಸಾದವನ್ನೂ ನಿತ್ಯವೂ ಪಡೆಯಲು ಸಾಧ್ಯವಾಯಿತು.

ಆಲಯಕ್ಕೆ ಬರುವ ಯಾತ್ರಿಕರು ತಮಗೆ ಬೇಕಾದ ಆಹಾರ ಪದಾರ್ಥಗಳನ್ನು ಪ್ರಸಾದ ರೂಪದಲ್ಲಿ ತಮಗೆ ಅಗತ್ಯವಾದ್ದಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಅದನ್ನು ಪಡೆಯುತ್ತಿದ್ದ ಆಲಯ ಕಾರ್ಯಕರ್ತರಿಂದ ಕೊಂಡುಕೊಳ್ಳಬೇಕಾಗಿದ್ದಿತು. ಅಪರೂಪಕ್ಕೆ ಒಮ್ಮೊಮ್ಮೆ ದಾನಿಯು ತನ್ನ ಪಾಲಿನ ಎಲ್ಲ ಪ್ರಸಾದಗಳನ್ನು ಯಾತ್ರಿಕ ರಿಗೇ ಹಂಚಬೇಕೆಂದು ಹೇಳುವುದೂ ಇದ್ದಿತು. ಇಂತಹ ಸಂದರ್ಭಗಳಲ್ಲಿ ದಾನಿಯು ಅಪೇಕ್ಷೆಯಂತೆಯೇ ನಡೆಯುವಂತೆ ಇದ್ದರೂ, ಬಹುಮಂದಿಗೆ ಅದರಿಂದ ಲಾಭವಾಗುತ್ತಿರಲಿಲ್ಲ. ಆಲಯದ ಸೇವೆಯಲ್ಲಿ ಪಕ್ವಾನ್ನ ಪ್ರಸಾದದ ಸಂಭಾವನೆಯು ಸೂಕ್ತ ಸಂಭಾವನಾ ಪದ್ಧತಿಯಾಗಿದ್ದಿತು.

## 16. ಆಲಯದ ಅಳತೆಯ ಮಾನಗಳು

ಆಲಯದ ಪ್ರಸಾದಗಳನ್ನು ಮಾಡಲಿಕ್ಕೆಂದು ಭತ್ತ, ಅಕ್ಕಿ, ದ್ವಿದಳ ಧಾನ್ಯಗಳು, ಮೆಣಸು, ತುಪ್ಪ, ಎಣ್ಣೆ, ಉಪ್ಪು, ಗೋಡಂಬಿ, ಇಂಗು, ಹಾಲು, ಮೊಸರು- ಮೊದಲಾದವನ್ನು ಕೊಂಡುಕೊಳ್ಳಬೇಕಾಗಿದ್ದಿತು. ಸಕ್ಕರೆ, ಬೆಲ್ಲ, ಹರಿಷಿಣ, ಹುಣಿಸೇಹಣ್ಣು, ಶ್ರೀಗಂಧ ಮೊದಲಾದವನ್ನು ಪಲಂ ಹಾಗೂ ವೀಸೆಯ ತೂಕದಲ್ಲಿ ಕೊಂಡುಕೊಳ್ಳ ಲಾಗುತ್ತಿತ್ತು. ಆದರೆ ಈ ಅಳತೆಗಳು ಕರ್ಪೂರಃಪಚ್ಚಕರ್ಪೂರ, ಕೇಸರಿ, ಕುಂಕುಮ, ಪುನುಗು, ಜವ್ವಾದಿಗಳಿಗೆ ಬೇರೆಯಾಗುತ್ತಿದ್ದವು. ಇವುಗಳು ಸ್ವರ್ಣಕಾರದ ಚಿನ್ನದ ಅಳತೆಯವುಗಳೇ ಆಗಿದ್ದವು. ಅಡಿಕೆಯನ್ನು ಸಂಖ್ಯಾ ಪ್ರಮಾಣದಲ್ಲಿ ಕೊಳ್ಳಲಾಗುತ್ತಿತ್ತು.

ತಿರುಮಲೆಯ ಆಲಯದ ತೂಕದ ಅಳತೆಗಳು ತಿರುಪತಿಯ ಆಲಯದ ಅಳತೆಯ ಮಾನಗಳಿಗಿಂತ ಹೆಚ್ಚಾಗಿದ್ದವು. ತಿರುಮಲೆಯ ತೂಕದ ಅಳತೆಯ ಮಾನ ಉಚ್ಚಿಯಿಲ್ ನಿನ್ರಾನ್ ಕಲ್ - ಎಂದು ಹೆಸರು ಹೊಂದಿದ್ದರೆ ತಿರುಪತಿಯ ಆಲಯದ ಅಳತೆಯ ಮಾನ 'ಚಾಲುಕ್ಯ ನಾರಾಯಣನ್ ಕಲ್' ಅಥವಾ 'ಚಳುಕ್ಕಿ' ಎಂದಾಗಿದ್ದಿತು. ವ್ಯತ್ಯಾಸವು ಇಡೀ ಶಾಸನ ಯುಗದಲ್ಲೊಂದು ವರೆಯಿತು. ಮೊದಲನೆಯದು ಎರಡನೆಯದ ಕ್ಕಿಂತ ಎಷ್ಟು ಹೆಚ್ಚಾಗಿದ್ದಿತು ಎಂಬುದನ್ನು ಯಾವ ಶಾಸನವು ಗುರುತಿಸುವುದಿಲ್ಲ. ಇಂದಿನ ಆಳತೆಯ ಮಾನಗಳು ಮೇಲೆ ಹೇಳಿದ ಎರಡು ಅಳತೆಯ ಮಾನಗಳೊಡನೆ ಯಾವ ರೀತಿ ಹೋಲಿಕೆ ಪಡೆಯುತ್ತವೆಂಬುದು ತೀರ್ಮಾನಕ್ಕೆ ಕಷ್ಟ ಸಾಧ್ಯವಾದ ಅಂಶ. (ಇವು ಅಸ್ಪಷ್ಟವಾದರೂ ಅಂದಾಜಿಗೆ ಸಿಗುವ ಅಂಶಗಳು. ಹೆಚ್ಚಿನ ಅಧ್ಯಯನದಿಂದ ವಿಸ್ತಾರವಾದ ಖಚಿತವಾದ ಅಳತೆಯ ಮಾನಗಳನ್ನು ನಿರ್ಧರಿಸಬಹುದಾಗಿದೆ ಎಂಬುದು ಮೊದಲನೋಟಕ್ಕೇ ಸಿದ್ಧವಾಗುತ್ತದೆ - ಅನುವಾದಕ)

ಕನಿಷ್ಠವಾದ ಅಳತೆ ಸೊಲಿಗೆ ಅಥವಾ ಪಿಡಿ (ಹಿಡಿ) ಎಂದರೆ ಒಬ್ಬ ಮನುಷ್ಯ ಒಂದು ಕೈಯಲ್ಲಿ ತೆಗೆದುಕೊಳ್ಳ ಬಹುದಾದ ದ್ರವ್ಯರಾಶಿ. ಇದನ್ನು ಅರ್ಧ ಅಳಕ್ಕು ಎಂದು ಗಣಿಸಲಾಗುತ್ತಿದ್ದಿತು. (ಅರೆಪಾವು?).

ಎರಡು ಹಿಡಿ - ಎರಡು ಸೊಲಿಗೆ : ಒಂದು ಅಲ್ಲು ಅಥವಾ ಅಳಕ್ಕು (ಪಾವು?).

ಎರಡು ಅಳಕ್ಕು - ಒಂದು ಉಳಕ್ಕು (ಪಡಿ?).

ಎರಡು ಉಳಕ್ಕು - ಒಂದು ಉರಿ (ಸೇರು?).

ಎರಡು ಉರಿ - ಒಂದು ನಾಳಿ (ಬಳ್ಳ?).

ಒಂದು ನಾಳಿ ಎಂಬುದು (ಬಳ್ಳ ಎಂಬುದು) ನಾಲ್ಕು ಉಳಕ್ಕು (ಪಡಿ?) ಅಥವಾ ಎಂಟು ಅಳಕ್ಕು (ಪಾವು?) ಅಥವಾ ಹದಿನಾರು ಸೊಲಿಗೆಗಳಿಗೆ ಸಮನಾಗಿದ್ದಿತು. (ಒಂದು ಸೇರಿಗೆ 16 ಚಟಾಕು - 4 ಪಾವು - ಅಥವಾ ಎರಡು ಪಡಿ ಎಂಬ ಲೆಕ್ಕ ಹಿಂದಿನ ತಲೆಮಾರಿನಲ್ಲಿದ್ದಿತು. ಹದಿನಾರು ತೊಲ - 1 ಚಟಾಕು, ಚಳುಕ - ಚಟಾಕು ಇರಬಹುದೇ? - ಅನುವಾದಕ)

ಎರಡು ಮರಕ್ಕಲ್ ಅಥವಾ ತೂಂಬುಗಳು = ಒಂದು ಕುರುಣಿ, ಎರಡು ಕುರುಣಿ = ಒಂದು ಪದಕ್ಕು, ಇಪ್ಪತ್ತು ಮರಕಲ್ (80 ನಾಳಿ) = ಒಂದು ವಟ್ಟಿ, 24 ಮರಕ್ಕಲ್ (96 ನಾಳಿ) = ಒಂದು ಕಲಮ್.

ತುಪ್ಪ ಮತ್ತು ಎಣ್ಣೆಗಳನ್ನು ಕೊಳಗಗಳಲ್ಲಿ ಅಳೆದುಕೊಳ್ಳಲಾಗುತ್ತಿದ್ದಿತು. ಒಂದು ಕೊಳಗವು 20 ನಾಳಿಗಳಿಗೆ ಸಮನಾಗಿದ್ದಿತು.

ಸಕ್ಕರೆ, ಹುಣಿಸೇಹಣ್ಣು (ಹುಳಿ) ಗಳನ್ನು ಪಲ ಹಾಗೂ ವೀಸೈಗಳಲ್ಲಿ ತೊಗಲಾಗುತ್ತಿತ್ತು. ಪಲಂಗಿಂತಲೂ ಕಡಮೆಯಾದ ತೂಕದ ಹೆಸರು ತಿಳಿದುಬರುವುದಿಲ್ಲ. ಸೇರು, ಮಣ, ಬಳ್ಳಗಳ ಬಳಕೆಯ ಬಗ್ಗೆಯೂ ಯಾವುದೇ ಸಾಕ್ಷ್ಯಾಧಾರವಿಲ್ಲ. ಹುಣಿಸೇಹಣ್ಣು 3650 ವೀಸೆಗಳಷ್ಟು ಕೊಂಡುಕೊಂಡಾಗಲೂ ವೀಸೆಯ ಮಾನದಲ್ಲಿಯೇ ದಾಖಲೆಯಾಗಿದೆ.

### ಚಿನ್ನ, ಕಸ್ತೂರಿ ಮೊದಲಾದವುಗಳ ತೂಕ

ಚಿನ್ನದ ತೂಕದ ಬಗ್ಗೆ ಹೇಳುತ್ತ ಕ್ರಿ.ಶ. 9 ನೇ ಶತಮಾನದ ಶಾಸನಗಳಲ್ಲಿ ಕಳಂಜು, ಕಡಿ, ಮಂಜಡಿ- ಪದಗಳನ್ನು ಬಳಸಲಾಗಿದೆ. ಅತಿ ಕಡಿಮೆ ಮೌಲ್ಯದ ಹಳೆಯ ಕಾಸು ಎಂಬ ಪದವೂ ಬಳಕೆಯಾಗಿದೆ. ಇದರ ತೂಕದ ಚಿನ್ನದ ಮೌಲ್ಯದ ಬಗ್ಗೆ ತಿಳಿದು ಬಂದಿಲ್ಲ.

ನಾಣ್ಯದ ಅಥವಾ ಕಡಿಯ ಬಗ್ಗೆ ಹೇಳುವುದಾದರೆ ಇವುಗಳ ಹದಿನೈದು ಸೇರಿ ಒಂದು ಕಳಂಜು ಆಗುತ್ತಿದ್ದಿತು. ಪಣಂ ಅಥವಾ ವರಾಹಪಣಂ, ಮಂಜಡಿ ಮತ್ತು ಕುದಿರಂ ಹಲವು ಶತಮಾನಗಳವರೆಗೆ ಚಾಲ್ತಿಯಲ್ಲಿದ್ದವು. ಇತರ ಮೂಲಗಳಿಂದ ಸ್ವರ್ಣಕಾರರು ಬಳಸುತ್ತಿದ್ದ ತೂಕದ ಅಳತೆಗಳನ್ನು ಕೆಳಗಿನಂತೆ ಪಟ್ಟಿ ಮಾಡಬಹುದು.

ಭತ್ತದ ನಾಲ್ಕು ಕಾಳು (ಗ್ರೈನ್) ಸೇರಿ ಒಂದು ಪಣ ಅಥವಾ ಒಂದು ಕುನ್ರಿ ಮಣಿ ಆಗಿತ್ತು.

2 ಪಣದ ತೂಕ (ರಾಟಿ ಅಥವಾ ಗುಂಜ) ದಿಂದ ಒಂದು ಮಂಜಡಿ ಅಥವಾ ತುಕ್ಕಂ,

3 ಪಣದ ತೂಕ = ಒಂದು ವಳ್ಳ,

9 ಪಣದ ತೂಕ = ಒಂದು ವರಹ,

10 ವರಹ ತೂಕ = ಒಂದು ಪಲ.

ಒಂದು ವರಹ ಅಥವಾ ನಕ್ಷತ್ರ ನಾಣ್ಯ = 52.75 ಕಾಳು.

8 ಪಣ ಅಥವಾ ರಾಟಿಗಳು = ಒಂದು ಮಶ = 15 ಕಾಳು,

4 ಮಶಗಳು = ಒಂದು ಟಂಕ,

12 ಮಶ ಅಥವಾ 3 ಟಂಕ = 1 ತೊಲ = 180 ಕಾಳು.

12 ಪಣ ತೂಕ = 1 ಕಳಂಜು,

35 ಕಳಂಜು = 1 ಕುದಿರಂ (420 ಪಣ).

ಕ್ರಿ.ಶ. 1684 ರ ಶಾಸನದಲ್ಲಿ ಕಂಡುಬರುವ "ಗದ್ಯಾಣ" ಗುಜರಾತಿ ಮೂಲದ ತೂಕ. ಇದು ಅರ್ಧ ತೊಲ ತೂಕಕ್ಕೆ ಸಮನಾದದ್ದು. ಒಂದು ಗದ್ಯಾಣವು 52 ಕಾಳಿನ ತೂಕದ ಸಮ ಎಂದೂ ಹೇಳಿರುವುದುಂಟು.

80 ತೊಲಗಳು - ಒಂದು ಸೇರು (2.5 ಪೌಂಡ್ ಟ್ರಾಯ್).

40 ಸೇರು - ಒಂದು ಮಣ (100 ಪೌಂಡ್ ಟ್ರಾಯ್ - 82.2/7 ಅವಾಯ್ರ್ಡ್).

ಬಹುತೇಕ ಆಭರಣಗಳಲ್ಲಿ ಮೌಲಿಕವಾದ ರತ್ನಗಳನ್ನು ಬಳಸಿದ್ದರೂ ಅವುಗಳ ತೂಕವನ್ನು ಯಾವುದೇ ಪ್ರಾಚೀನ ಶಾಸನದಲ್ಲಿಯೂ ಸೂಚಿಸಿಲ್ಲ. ಪ್ರತಿಯೊಂದು ರೀತಿಯಲ್ಲಿಯೂ ಬಳಸಲಾದ ಕಲ್ಲುಗಳ ಸಂಖ್ಯೆಗಳನ್ನು ಮಾತ್ರವೇ ತಿಳಿಸಲಾಗಿದೆ. ಕೃಷ್ಣದೇವರಾಯನ ಒಂದು ಶಾಸನದಲ್ಲಿ ಮಾತ್ರವೇ ತೂಕವನ್ನು ರಾಟಿಗಳು, ಮಂಜಲು ಎಂದು ಹೇಳಲಾಗಿದೆ. ಬಹಳಷ್ಟು ಮಟ್ಟಿಗೆ ತೂಕ ಎಂಬ ಸ್ಥೂಲ ಪ್ರಮಾಣದ ಶಬ್ದವನ್ನು ಬಳಸಲಾಗಿದೆ.

**ಪ್ರಸಾದಗಳ ಸಾಹಿತ್ಯ ವಸ್ತುಗಳ ಪ್ರಮಾಣ**

ಪಕ್ವಗೊಳಿಸಿದ - ಬೇಯಿಸಿದ - ಮೊದಲನೆಯ ಪ್ರಸಾದದ ಪ್ರಮಾಣವೆಂದರೆ ಮಾತ್ರೆ -

**1. ಮಾತ್ರೆಯೆಂದರೆ** ಮೂಲದೇವರಿಗೆ ಬೆಳಗಿನ ಹೊತ್ತು ತಿರುಮಂಜನದ ನಂತರ ನಿವೇದಿಸಲಾದ ಮೊಸರನ್ನದ ಕನಿಷ್ಠ ಪ್ರಮಾಣ. ಸಾಧಾರಣವಾಗಿ ನಾಲ್ಕು ನಾಳಿ ಅಕ್ಕಿಯನ್ನು ಬೇಯಿಸಿ ಅನ್ನಮಾಡಿ ಹಸುವಿನ ಹಾಲಿನಿಂದಾದ ಮೊಸರಿನೊಂದಿಗೆ ಬೆರೆಸಿದ ಅನ್ನ ಇದು. ನಂತರದ ದಿನಗಳಲ್ಲಿ ಜಜ್ಜಿದ ಶುಂಠಿಯನ್ನೂ ಸ್ವಲ್ಪ ಸೇರಿಸಲಾಗುತ್ತಿದ್ದಿತು.

**2. ಸಂಧಿ ತಿರುಪ್ಪೋನಕ**:ಆಲಯದಲ್ಲಿ 60 ಘಳಿಗೆಗಳ ದಿನವನ್ನು ಐದು ಸಂಧಿಗಳೆಂದು ವಿಭಾಗಮಾಡಿ ಕೊಂಡು ಪ್ರತಿಯೊಂದು ಸಂಧಿಯ ಸಮಯದಲ್ಲಿಯೂ ಒಂದಲ್ಲ ಒಂದು ರೀತಿಯ ಪ್ರಸಾದವನ್ನು ನಿವೇದಿಸ ಲಾಗುತ್ತದೆ. ಸಂಧಿ ತಿರುಪ್ಪೋನಕವೆಂಬುದು ಅಕ್ಕಿಯಿಂದ ಮಾಡಿದ ಅನ್ನ. ಅದರ ಪ್ರಮಾಣ, ಅದರಲ್ಲಿನ ಸಾಮಾಗ್ರಿಗಳ ತೂಕ ಹೀಗೆ - ರಾಜನ್ನ ಅಥವಾ ಸಾಂಬ ಅಕ್ಕಿಯ ಅನ್ನ,

ಅಕ್ಕಿ - 1 ಮರಕ್ಕಲ್, ಮೆಣಸು - 1 ಸೊಲಿಗೆ, ಹೆಸರುಬೇಳೆ - 1 ಅಳಕ್ಕು, ಉಪ್ಪು - 1 ಸೊಲಿಗೆ, ತುಪ್ಪ 1 ಅಳಕ್ಕು, ಮೊಸರು - 2 ಅಳಕ್ಕು, ತರಕಾರಿ ತಕ್ಕಷ್ಟು.

**3. ತಿರುಕ್ಕಣ್ಣ ಮಡ್ಕೈ** : ಮೇಲಿನ ಪ್ರಸಾದದ ರುಚಿಯ ಏಕತಾನತೆಯನ್ನು ತಪ್ಪಿಸಲು ಇನ್ನೊಂದು ರೀತಿಯ - ಒಂದು ಸ್ವಲ್ಪ ಸಿಹಿಯಾದ ಪ್ರಸಾದವನ್ನು ಸಣ್ಣ ಪ್ರಮಾಣದಲ್ಲಿ ಮಾಡಲಾಗುತ್ತಿದ್ದಿತು. ಇದನ್ನು ತಿರುಕ್ಕಣಮಡ್ಕೈ ಅಥವಾ ಅಕ್ಕಲಿ ಪ್ರಸಾದುನ್ನುತ್ತಿದ್ದರು. ಇದರ ಸಾಹಿತ್ಯವೆಂದರೆ - ರಾಜಾನ್ನ ಅಥವಾ ಸಾಂಬ ಅಕ್ಕಿ - 1 ಮರಕ್ಕಲ್, ತುಪ್ಪ - 11 ಅಳಕ್ಕು, ಸಕ್ಕರೆ ಅಥವಾ ಬೆಲ್ಲ 50 ಅಚ್ಚು (ಪಲಗಳು) ಸ್ವಲ್ಪ ಶುಂಠಿ, ನಾಲ್ಕು ಬಗೆಯ ಹಣ್ಣುಗಳು.

ಕ್ರಿ.ಶ, 1457 ರ ಒಂದು ಶಾಸನದಲ್ಲಿ ಸಕ್ಕರೆಯನ್ನು 60 ಅಚ್ಚುಗಳಿಗೆ ಏರಿಸಿ, ಶುಂಠಿ ಹಾಗೂ ಹಣ್ಣುಗಳನ್ನು ಕೈಬಿಡಲಾಗಿದೆ.

**4. ಪರುಪ್ಪವಿಯಲ್ ತಿರುಪ್ಪೋನಕ** : ಹೆಚ್ಚಿನ ಹೆಸರು ಬೇಳೆ, ತುಪ್ಪ, ಸಕ್ಕರೆಗಳನ್ನು ಸೇರಿಸಿದಾಗ ಅದನ್ನು ಪರುಪ್ಪವಿಯಲ್ ತಿರುಪ್ಪೋನಕವೆಂದು ಕರೆಯುತ್ತಿದ್ದರು. ಇದರ ಸಾಹಿತ್ಯವಿವರ ಹೀಗೆ -

ರಾಜಾನ್ನ ಅಥವಾ ಸಾಂಬ ಅಕ್ಕಿ 1 ಮರಕ್ಕಲ್, ಮೆಣಸು - 1 ಸೊಲಿಗೆ, ಉಪ್ಪು - 1 ಸೊಲಿಗೆ, ಹೆಸರು (ಮಣಿಪರುಪ್ಪು) - 1 ನಾಳಿ (8 ಅಳಕ್ಕು) ಸಕ್ಕರೆ 5 ಅಚ್ಚು. ಕೊಬ್ಬರಿ ಹಾಗೂ ತರಕಾರಿಗಳು. ತುರಿದ ಕೊಬ್ಬರಿಯನ್ನು ತುಪ್ಪದಲ್ಲಿ ಹುರಿದುಹಾಕಲಾಗುತ್ತಿದ್ದಿತು.

**5. ದಧ್ಯೋದನ** : ಕಾಲದಿಂದ ಕಾಲಕ್ಕೆ ದಧ್ಯೋದನ ಸಾಹಿತ್ಯ ಸ್ವಲ್ಪ ಮಟ್ಟಿಗೆ ಪರಿವರ್ತನೆ ಹೊಂದುತ್ತ ನಡೆಯಿತು. ತಿರುಮಂಜನವಾದ ಕೂಡಲೇ ಈ ನೈವೇದ್ಯ ವಿನಿಯೋಗವಾಗುತ್ತಿದ್ದಿತು.

**ಸಾಹಿತ್ಯ ವಿವರ** : ರಾಜಾನ್ನ ಅಥವಾ ಸಾಂಬ ಅಕ್ಕಿ - 1 ಮರಕ್ಕಲ್, ಮೆಣಸು - ಕಾಲುಭಾಗ ಅಳಕ್ಕು, ನೆನೆಸಲು ತುಪ್ಪ - ಕಾಲುಭಾಗದ ಅಳಕ್ಕು, ಗಟ್ಟಿ ಮೊಸರು - 5 ನಾಳಿ, ಬೆಲ್ಲ (ಮೇಲೆ ಚಿಮುಕಿಸಲು) - ಕಾಲುಭಾಗ ನಾಳಿ, ಒಣಶುಂಠಿ - 5 ಪಲ ಅಥವಾ ಕಾಲುಭಾಗದ ಅಳಕ್ಕು (ಪುಡಿ), ಗೋಡಂಬಿ ಪುಡಿ - ಕಾಲುಭಾಗ ಅಳಕ್ಕು, ತೆಂಗಿನ ತುರಿ, ನೆನೆದ (ಹುರಿದ) ತರಕಾರಿ.

ಕ್ರಿ.ಶ. 1517 ರ ಒಂದು ಶಾಸನದಲ್ಲಿ ನೀಡಲಾದ ಬೇರೆಯಾದ ಸಾಹಿತ್ಯವಿವರ ಹೀಗಿದೆ - ರಾಜಾನ್ನ ಅಥವಾ ಸಾಂಬ ಅಕ್ಕಿ - 1 ಮರಕ್ಕಲ್, ಸಾಸಿವೆ - 1 ಸೊಲಿಗೆ, ತುಪ್ಪ - 5 ಅಳಕ್ಕು, ಗಟ್ಟಿಮೊಸರು - 4 ನಾಳಿ, ಹರಿಷಿಣ - 1 ಪಲ, ಒಣಶುಂಠಿ - 1 ಪಲ, ಮೆಣಸು ಅರ್ಧ ಸೊಲಿಗೆ, ಉಪ್ಪು - 2 ಅಳಕ್ಕು, ಗೋಡಂಬಿ - ಅರ್ಧ ಸೊಲಿಗೆ, ನಿಂಬೆಹಣ್ಣು, ತರಕಾರಿ, ಹಣ್ಣಿನ ಹೋಳು.

**6. ಪೊಂಗಲ್ ಹಾಗೂ ಪಂಚದಾರೈ (ಸಕ್ಕರೆ) ಪೊಂಗಲ್** : ಹದಿನೇಳನೆಯ ಶತಮಾನದ ಶಾಸನದಲ್ಲಿ ಈ ನೈವೇದ್ಯದ ಹೆಸರುಗಳಿದ್ದರೂ ಇವುಗಳನ್ನು ತಯಾರಿಸುವ ವಿಧಾನ ಸಾಹಿತ್ಯ ವಿವರಗಳಿಲ್ಲ.

**7. ಪಾಯಸ** : ಅಕ್ಕಿ - 1 ಮರಕ್ಕಲ್, ತುಪ್ಪ - 4 ಅಳಕ್ಕು, ಹಾಲು - 6 ನಾಳಿ, ಸಕ್ಕರೆ - 200 ಪಲ (ಅಚ್ಚು).

ಅಕ್ಕಿಯನ್ನು ಹಾಲಿನಲ್ಲಿ ಬೇಯಿಸುವುದು. ಸಾಧಾರಣವಾಗಿ ರಾತ್ರಿಯ ಹೊತ್ತು ಅರ್ಧಯಾಮ ಸಂಧಿಯಲ್ಲಿ ನಿವೇದಿಸಲಾಗುತ್ತಿದ್ದಿತು. ಈಗ ಇದನ್ನು ಕ್ಷೀರಾನ್ನವೆನ್ನುವರು.

**8. ಓಗರೆ ಅಥವಾ ಚಿತ್ರಾನ್ನ** : ಇವುಗಳ ಐದು ಬಗೆಗಳನ್ನು ಹೆಸರಿಸಲಾಗಿದೆ. ದಧ್ಯೋದನ, ಪುಳಿಯೋ ಗರೆ, ಕಡುಗೋಗರೆ, (ಸಾಸಿವೆ ಅನ್ನ) ಉಳಂದೋಗರೈ (ಉದ್ದಿನ ಅನ್ನ) ಎಳ್ಳೋಗರೈ (ತಿಲಾನ್ನ). ದಧ್ಯೋದನದ ಹೊರತು ಇತರ ಯಾವುದರ ಸಾಮಾಗ್ರಿಗಳನ್ನೂ ಹೇಳಲಾಗಿಲ್ಲ. ತಿಲಾನ್ನದ ಸಾಮಾಗ್ರಿ ವಿವರ ಹೀಗೆ - ಅಕ್ಕಿ - 1 ಮರಕ್ಕಲ್, ಸಕ್ಕರೆ - 10 ಪಲ (ಅಚ್ಚು) ತುಪ್ಪ - 1 ಉಳಕ್ಕು, ಎಳ್ಳು ಕಾಳು - ಮೂರನೇ ಒಂದು ನಾಳಿ.

9 ಪರುಪ್ಪವಿಯಲ್ : ಅಕ್ಕಿ - 1 ಮರಕ್ಕಲ್, ಹೆಸರು (ಮಣಿಪರುಪ್ಪು) 1 ನಾಳಿ, ತುಪ್ಪ - 1 ಉರಿ, ಸಕ್ಕರೆ - 10 ಪಲ (ಅಚ್ಚು).

10. ದೋಸೆಪ್ಪಡಿ - ಎ) ಅಕ್ಕಿ - 1 ಮರಕ್ಕಲ್, ಉದ್ದಿನ ಬೇಳೆ - 1 ಮರಕ್ಕಲ್, ಮೊಸರು ಐದನೇ ಒಂದು ನಾಳಿ, ತುಪ್ಪ - ಒಂದೂ ಮುಕ್ಕಾಲು ನಾಳಿ, ಅಥವಾ ಬಿ) ಅಕ್ಕಿ - ಒಂದು ಮರಕ್ಕಲ್, ಉದ್ದಿನ ಬೇಳೆ - ಒಂದು ಮರಕ್ಕಲ್, ತುಪ್ಪ - ಮೂರು ಉಳಕ್ಕು, ಸಕ್ಕರೆ - 10 ಪಲ (ಅಚ್ಚು).

ಮೇಲಿನ ಅಳತೆಯನ್ನು 25 ಪಡಿಗಳ ಸರಾಸರಿಯನ್ನಾಗಿ ಪಡೆಯಲಾಗಿದೆ. ಇದನ್ನು ಇರಾಪ್ಪಡಿ ಎಂದು ರಾತ್ರಿಯ ನಿವೇದನೆಯಾಗಿ ಈಗ ನೀಡುವರು. ಏಕಾದಶಿಯಂದೂ ನೀಡುವರು.

11. ಗೋಧಿ : ಗೋಧಿ ನುಚ್ಚು - 2 ಮರಕ್ಕಲ್, ಹೆಸರುಬೇಳೆ - 1 ಮರಕ್ಕಲ್, ಗೋಡಂಬಿ - 1 ಅಳಕ್ಕು, ಸಕ್ಕರೆ - 100 ಪಲಂ ತುಪ್ಪ - 2 ನಾಳಿ, 2 ಉಳಕ್ಕು.

ಆಧುನಿಕ 'ಸೀರಾ' ನಿವೇದನೆಗೆ ಸಮನಾದ ತಯಾರಿಕೆಯಿದು.

12. ಪಾಲೇಡು ಕ್ಕುಳಂಬು : ಪಾಯಸದೊಡನೆ ಅಧಿಕಯಾಮ ಪೂಜೆಯಲ್ಲಿ ನಿವೇದಿಸುವ ಕ್ಷೀರ ಪ್ರಸಾದವಿದು. ಕ್ರಿ.ಶ. 1469 ರಲ್ಲಿ ಕಂದಾಡೈ ರಾಮಾನುಜ ಅಯ್ಯಂಗಾರ್ ಮೊದಲ ಬಾರಿಗೆ ಅರ್ಧನಾಳಿ ಗಟ್ಟಿ ಯಾದ ಕಾಯಿಸಿದ ಹಾಲಿನ ಆರೋಗಣೆಗೆ ತಕ್ಕ ಏರ್ಪಾಡುಗಳನ್ನು ಮಾಡಿದಾಗ ಮೊದಲಬಾರಿಗೆ ಈ ನೈವೇದ್ಯ ಪ್ರವೇಶಿತವಾಯಿತು. ಶ್ರೀಕೃಷ್ಣದೇವರಾಯನ ಇಬ್ಬರು ರಾಣಿಯರು 374 ತೂಕದ ಎರಡು ಚಿನ್ನದ ಬಟ್ಟಲುಗಳನ್ನು ಈ ಸೆಲ್‌ಪಾಲ್ (ತಮಿಳು) - ಅನಾವಳ - ಜಿಲಪಾಲು (ತೆಲುಗು) ಕೆನೆಹಾಲು (ಕನ್ನಡ) ಅರ್ಪಿಸಲು ದಾನ ಮಾಡಿದರು. ಕೃಷ್ಣದೇವ ರಾಯನ ಸೇನಾಧಿಪತಿಯಾದ ಪೆರಿಯ ಓಬುಲ ನಾಯಕ ರಾಮನಾಯಕರ್ ಇನ್ನೂರು ಕರೆಯುವ ಹಸುಗಳನ್ನು ಗಟ್ಟಿಯಾಗಿ ಮಂದವಾದ ದ್ರವವಾಗುವವರೆಗೆ ಕಾಯಿಸುವ ಹಾಲಿನ ಏರ್ಪಾಡು ಮಾಡಲು, ದಾನ ಮಾಡಿದ. ಕುದಿಯುತ್ತ ಕುದಿಯುತ್ತ ಗಟ್ಟಿಯಾಗುತ್ತಿದ್ದ ಹಾಲಿಗೆ ಒಂದು ಅಳಕ್ಕು ತುಪ್ಪ, ಒಂದು ಅಳಕ್ಕು ಶುದ್ಧಕ್ಕರೆ, ಗೋಡಂಬಿ ಗಳನ್ನು ಬೆರಸುತ್ತಿದ್ದರು. ಇದೇ ಪಾಲೇಡುಕ್ಕುಳಂಬು ಅಥವಾ ಈಗ ತಿರಟ್ಟುಪಾಲ್ ಎಂದು ಕರೆಯಲ್ಪ ಡುವ ಕ್ಷೀರ ನಿಷೇದನೆ.

ಇನ್ನು ಮುಂದೆ 13 ನೇ ಸಂಖ್ಯೆಯಿಂದ 21ನೇ ಸಂಖ್ಯೆಯವರೆಗೆ ವಗೈಪ್ಪಡಿ (ವಗಪಡಿ) ಎಂದು ಕರೆಯಲಾಗುವ ನಿವೇದನೆಗಳ ತಯಾರಿಕೆಯ ಸಾಹಿತ್ಯವನ್ನು ವಿವರಿಸಲಾಗಿದೆ. ಶಾಸನಗಳಲ್ಲಿ ಈ ನಿವೇದನೆ ಮೊದಲಬಾರಿಗೆ ಕಂಡು ಬರುವ ವರ್ಷ ಹಾಗೂ ಸಂಖ್ಯೆಯನ್ನೂ ನೀಡಲಾಗಿದೆ.

13. ಅಪ್ಪಂ (ಕ್ರಿ.ಶ. 1456 - ತಿ.ತಿ. 3) : ಅಕ್ಕಿ - 2 ಮರಕ್ಕಲ್, ಬೆಲ್ಲ - 100 ಪಲಂ (ಅಚ್ಚು), ತುಪ್ಪ - 2 ನಾಳಿ, ಮೆಣಸು - 3 ಅಳಕ್ಕು, ಜೀರಿಗೆ, ಕೊಬ್ಬರಿ.

14. ಅತಿರಸ (ಕ್ರಿ.ಶ. 1468 - ತಿ.ತಿ. 54) : ಅಕ್ಕಿ - 1 ಮರಕ್ಕಲ್, ಬೆಲ್ಲ - 100 ಪಲಂ (ಅಚ್ಚು), ತುಪ್ಪ - 2 ನಾಳಿ, ಮೆಣಸು - 1 ಅಳಕ್ಕು.

15. ವಡೆ (ಕ್ರಿ.ಶ. 1468 - ತಿ.ತಿ. 54) : ಉದ್ದಿನ ಬೇಳೆ - 2 ಮರಕ್ಕಲ್, ಮೆಣಸು - ಒಂದುವರೆ ಅಳಕ್ಕು, ತುಪ್ಪ - 3 ನಾಳಿ, ಜೀರಿಗೆ - 1 ಅಳಕ್ಕು, ಹಸಿ ಶೊಂಠಿ - 3 ನಾಳಿ. (ಹಲವು ಸಲ ಮೆಣಸು ಜೀರಿಗೆಗಳನ್ನು ಕೈ ಬಿಡಲಾಗುತ್ತಿತ್ತು).

16. ಸುಖಿಯ (ಕ್ರಿ.ಶ. 1445 ತಿ.ತಿ. 45) : ಅಕ್ಕಿ - 1 ಮರಕ್ಕಲ್, ತುಪ್ಪ - 1 ನಾಳಿ, ಹೆಸರಬೇಳೆ - 1 ಮರಕ್ಕಲ್, ತೆಂಗಿನಕಾಯಿ -1, ಬೆಲ್ಲ 50 ಪಲ (ಅಚ್ಚು). (ಮುಂದೆ ತುಪ್ಪವನ್ನು 2 ನಾಳಿಗೆ ಏರಿಸಿ, ಬೆಲ್ಲವನ್ನು 200 ಪಲವಾಗಿಸಲಾಯಿತು (ಕ್ರಿ.ಶ. 1507 ತಿ.ತಿ. 599).

17. ಸಿದ್ಧೈ (ಕ್ರಿ.ಶ. 1490 ತಿ.ತ. 564) : ಅಕ್ಕಿ - 1 ಮರಕ್ಕಲ್, ತುಪ್ಪ - 1 ನಾಳಿ, ಬಿಳಿ ಎಳ್ಳು - 1 ಮರಕ್ಕಲ್, ಬೆಲ್ಲ - 50 ಪಲ, ಜೀರಿಗೆ - ಅರ್ಧ ಅಳಕ್ಕು.

18. ಇಡ್ಡಲಿ (ಕ್ರಿ.ಶ. 1506) : ಶಾಸನಗಳಲ್ಲಿ ಎರಡು ಬಗೆಯ ಇಡ್ಡಲಿಯ ಉಲ್ಲೇಖವಿದೆ. ಅ) ಅಕ್ಕಿ - 2 ಮರಕ್ಕಲ್, ತುಪ್ಪ - 2 ನಾಳಿ, ಉದ್ದಿನ ಬೇಳೆ - 1 ಮರಕ್ಕಲ್. ಆ) ಅಕ್ಕಿ - 2 ಮರಕ್ಕಲ್, ತುಪ್ಪ - ಮೂರೂಕಾಲು ನಾಳಿ, ಉದ್ದಿನ ಬೇಳೆ - ಮೂರನೇ ಒಂದು ಮರಕ್ಕಲ್, ಸಕ್ಕರೆ - 20 ಪಲ.

19. ಮನೋಹರಪ್ಪಡಿ (ಕ್ರಿ.ಶ. 1547 ತಿ.ತಿ. 509) : ಹೆಸರುಬೇಳೆ - 1 ಮರಕ್ಕಲ್, ಕಡಲೆ ಬೇಳೆ - 1 ಮರಕ್ಕಲ್, ಸಕ್ಕರೆ. ಬೇಳೆಗಳನ್ನು ತುಪ್ಪದಲ್ಲಿ ಹರಿದು ಸಕ್ಕರೆಯನ್ನು ಹದವಾದ ಪಾಕ ಮಾಡಿಕೊಂಡು ಎರಡನ್ನೂ ಬೆರೆಸ ಲಾಗುತ್ತಿದ್ದಿತ. ನಂತರ ಉಂಡೆ ಕಟ್ಟಲಾಗುತ್ತಿದ್ದಿತು. ಆದರೆ ಇಂದು ಮನೋಹರ ಪಡಿಯನ್ನು ಮಾಡುವ ಬಗೆ ಹೀಗೆ -

ಅಕ್ಕಿ - 16.5 ಸೇರು, ತುಪ್ಪ - 25 ಸೇರು, ಹೆಸರುಬೇಳೆ - 2.5. ಸೇರು, ಸಕ್ಕರೆ - 60 ಸೇರು.

20. ಕುನುಕುಪ್ಪಡಿ (ಕ್ರಿ.ಶ. 1544 - ತಿ.ತಿ. 571, 404 ತಿ.ತಿ. - 1548) : ಉದ್ದಿನ ಹಿಟ್ಟು ಹಾಗೂ ಅಕ್ಕಿ ಹಿಟ್ಟುಗಳನ್ನು 1:2 ಪ್ರಮಾಣದಲ್ಲಿ ಬೆರೆಸಿ, ತುಪ್ಪದಲ್ಲಿ ಹುರಿದು ಬೆಲ್ಲದ ಪಾಕದಲ್ಲಿ ಬೆರೆಸಿ ಉಂಡೆ ಕಟ್ಟುತ್ತಾರೆ. ಆದರೆ ಇಂದು ದೇವರಿಗೆ ನಿವೇದನೆಯಾಗುವ ಪ್ರಸಾದಗಳಲ್ಲಿ ಇದು ಸೇರಿಲ್ಲ.

21. ಬೇತನಿಕಾಯಿ : ಅಟ್ಟವಣ್ಣೆ ಬಸವರಸರ್ ಈ ಹೊಸ ಪ್ರಸಾದವನ್ನು ಪಣ್ಯಾರದಂತಲ್ಲದೆ ಬೇಯಿಸಿದ ನಿವೇದನೆಯಂತೆ ಪ್ರವೇಶಗೊಳಿಸಿದರು. ಇದರ ಸಾಹಿತ್ಯವೆಂದರೆ -

ಅ) ಉದ್ದಿನ ಬೇಳೆ - 6 ನಾಳಿ, ಗೋಧಿ - 2 ನಾಳಿ, ತುಪ್ಪ - 8 ನಾಳಿ, ಜೀರಿಗೆ - 1 ಅಳಕ್ಕು.

ಆ) ಅಕ್ಕಿ - 1 ಮರಕ್ಕಲ್, ಉದ್ದಿನಬೇಳೆ - 2 ನಾಳಿ, ಗೋಧಿ - 2 ನಾಳಿ, ತುಪ್ಪ - 8 ನಾಳಿ, ಜೀರಿಗೆ - 1 ಅಳಕ್ಕು.

ಉಪ್ಪಾಗಲೀ, ಸಕ್ಕರೆಯಾಗಲೀ ಹಾಕದ ಒಂದು ವಿಶೇಷ ನಿವೇದನೆಯಿದು. ಬೇಳೆ ಹಾಗೂ ಗೋಧಿಗಳನ್ನು ಒಟ್ಟುಮಾಡಿ, ತುಪ್ಪದಲ್ಲಿ ಹುರಿದು ಜೀರಿಗೆಯನ್ನು ಬೆರೆಸುತ್ತಿದ್ದಿರಬೇಕು. ಆದರೆ ನಂತರದ ಯಾವುದೇ ಶಾಸನ ದಲ್ಲಿಯೂ ಮತ್ತೊಮ್ಮೆ ಕಂಡು ಬರದು.

22. ಜುನ್ನುಪಡಿ (ಕ್ರಿ.ಶ. 1546 - ತಿ,ತಿ, 653) : ಕ್ರಿ.ಶ. 1546 ರಲ್ಲಿ ಮಹಾರಾಜ ರಾಮರಾಜ ಶ್ರೀಪತಿ ಓಬಲೇಶ್ವರ ಮಹಾರಾಜರು ಮಾಡಿದ ದಾನದಲ್ಲಿ ಕಂಡುಬರುತ್ತದೆ. ಇದರ ಸಾಹಿತ್ಯವೆಂದರೆ ಹಾಲು - 2 ಮರಕ್ಕಲ್, ಶುದ್ಧ ಕರ್ಪೂರ-ಅರ್ಧಪಣ ತೂಕ. ಶುದ್ಧ ಸಕ್ಕರೆ - 1 ವೀಸೆ.

23. ಖಂಡ ಸಕ್ಕರೆ : (653 ತಿ.ತಿ. - 1546) ಜುನ್ನು ವಿನಂತಹದೇ ನಿವೇದನೆ ಖಂಡಸಕ್ಕರೆ. ತಾಳ್ಳಪಾಕಂ ತಿರುಮಲೈ ಅಯ್ಯಂಗಾ ರ್ಯರು ಈ ನಿವೇದನೆಯನ್ನು ಮೊದಲಬಾರಿಗೆ ಪ್ರವೇಶಗೊಳಿಸಿದರು.

ಶುದ್ಧ ಸಕ್ಕರೆ - 1 ವೀಸೆ, ಹಾಲು - ಅರ್ಧನಾಳಿ. ಎರಡನ್ನು ಒಟ್ಟಿಗೆ ಕಾಯಿಸಿದರೆ ಮಂದವಾದ ಅರೆ ದ್ರವಾವಸ್ಥೆಯ ಸಿಹಿ ನಿವೇದನೆಯಾಗುತ್ತದೆ.

24. ಕಸಿಕ್ಕಾಯಿ (ಕ್ರಿ.ಶ. 1512 - ತಿ.ತಿ. 277) : ಗೋಧಿಯ ನುಚ್ಚು - 1 ಮರಕ್ಕಲ್, ಸಕ್ಕರೆ - 100 ಪಲಂ, ಶುದ್ಧ ಎಳ್ಳು- 1 ಮರಕ್ಕಲ್, ತುಪ್ಪ - 2 ನಾಳಿ.

ಎಳ್ಳು ಗೋದಿಗಳನ್ನು ಬೇರೆಬೇರೆಯಾಗಿ ತುಪ್ಪದಲ್ಲಿ ಹುರಿದು ಗೋಧಿಯನ್ನು ಕುಟ್ಟಿ ಪುಡಿಮಾಡಿ, ಒಟ್ಟಿಗೆ ಸಕ್ಕರೆ ತುಪ್ಪದ ಪಾಕದಲ್ಲಿ ಬೆರೆಸಿ, ಉಂಡೆ ಮಾಡುತ್ತಿದ್ದರು.

25. ತೆನೆ ತೊಳೆ (ತೇನ್ ಕುಳಲ್) : 16ನೇ ಶತಮಾನದಲ್ಲಿ ಪ್ರವೇಶಿತವಾದ ಪ್ರಸಿದ್ಧ ನಿವೇದನೆ. ಕೆಲ ಕಾಲದನಂತರ ಇದರ ತಯಾರಿಕೆಯನ್ನು ನಿಲ್ಲಿಸಲಾಯಿತು. ಅಕ್ಕಿ, ಉದ್ದು, ತುಪ್ಪಗಳ ಸಾಹಿತ್ಯಕ್ಕೆ ಮೆಣಸು, ಉಪ್ಪುಗಳನ್ನು ಸೇರಿಸಲಾಗುತ್ತಿದ್ದಿತು. ಯಾವ ಶಾಸನದಲ್ಲಿಯೂ ವಿವರಗಳಿಲ್ಲ. (ಕನ್ನಡದಲ್ಲಿ ತೇಂಗೊಳಲು)

26. ಸಾಂಬರ ಎಳ್‌ಪೊಡಿ (ಕ್ರಿ.ಶ. 1537 ತಿ.ತಿ. 683) ಹಾಲಿನ ಒಂದು ಉರಿ ಅಳತೆಯನ್ನು ಮೆಣಸು, ಎಳ್ಳು ಕಾಳುಗಳೊಡನೆ ಬೆರೆಸಿ, ಚೆನ್ನಾಗಿ ಹುರಿದು ಪ

ುಡಿ ಮಾಡುವುದು.

27. ಎಳ್ಳುಂಡೆ : ಎಳ್ಳು - 1 ಮರಕ್ಕಲ್, ಮೆಣಸು - 1 ಅಳಕ್ಕು, ಒಣ ಶುಂಠಿ - 5 ಪಲಂ, ಬೆಲ್ಲ - 60 ಪಲಂ.

**ಟಿಪ್ಪಣಿಗಳು**

1. ಇದನ್ನು ಸಂಪೂರ್ಣ ಖಚಿತವಾದ ರೀತಿಯಲ್ಲಿ ವಿವರಿಸಲಾಗುವುದಿಲ್ಲ. ಆಲಯದ ಉದ್ಯೋಗಿಗಳು ತಮ್ಮ ಗ್ರಾಮಗಳನ್ನು ಯಾವ ನಿಯಮಗಳಂತೆ ಪಡೆದರು ಎಂಬುದನ್ನು ಶಾಸನಗಳು ಸಾಧಾರಣವಾಗಿ ವಿವರಿಸುವುದಿಲ್ಲ. ಆಲಯದ ಉದ್ಯೋಗಿಗಳು ಗ್ರಾಮಗಳನ್ನು ಪಡೆದ ಮೂಲವನ್ನು ತಿಳಿಸುವ ಎಂಟು ಶಾಸನಗಳಲ್ಲಿ ಆರು ರಾಜ ಪುರುಷರ ದಾನದಿಂದಾದವು. ಒಂದು ಇನ್ನೊಬ್ಬ ಉದ್ಯೋಗಿಯಿಂದ ಪಡೆದದ್ದು. ಮತ್ತೊಂದು ಉದ್ಯೋಗಿಯು ಸ್ಥಳೀಯ ನಾಯಕನಿಂದ ಕೊಂಡುಕೊಂಡದ್ದು. ನೋಡಿ ಸಂಖ್ಯೆ 284, 601, 588, 587, 681, 651, ತಿ.ಇ. ಹಾಗೂ 12, 429, 347 ಜಿ.ಟಿ. ಸಾಮಾನ್ಯವಾಗಿ ರಾಜರಾಗಲೀ, ರಾಜ ಪ್ರಮುಖರಾಗಲೀ ಮಾತ್ರವೇ ಉದ್ಯೋಗಿಗಳಿಗೆ ಬ್ರಹ್ಮಾದೇಯವಾಗಿ ಗ್ರಾಮಗಳನ್ನು ನೀಡುವ ಅಧಿಕಾರ ಹೊಂದಿದ್ದರು.
2. ಉತ್ಪಾದನೆಯ (ಬೆಳೆಯ) ಪ್ರಧಾನ ಭಾಗ ಹಾಗೂ ಸಾಮಾನ್ಯ ಭಾಗಗಳನ್ನು ಆವುಗಳ ಅನುಭೋಗದ ಹಕ್ಕುದಾರಿಯನ್ನು ತಿಳಿಸುವ ಮೇಲ್ ವರಂ, ಕುಡಿವರಂ, ಎಂಬ ಪದಗಳೂ ಮಿಯಾಚ್ಚಿ, ಕಾಣಿಯಾಚ್ಚಿಗಳೂ ಚೋಳರ ಕಾಲದಲ್ಲಿ (ಸುಮಾರು - 10 ರಿಂದ 13ನೇ ಶತಮಾನಗಳು) ಆದಕ್ಕೂ ಮುಂಚೆ 8, 9ನೇ ಶತಮಾನಗಳಲ್ಲಿ ಪಲ್ಲವರ ಉಚ್ಛ್ರಾಯ ಸ್ಥಿತಿಯಲ್ಲಿಯೂ ಬಳಕೆಯಲ್ಲಿದ್ದವು. ಕೆ.ಎ. ನೀಲಕಂಠಶಾಸ್ತ್ರಿ - ದಿ ಚೋಳಾಸ್ ಸಂ-2 ಭಾಗ-1 ಪುಟ-395 (ಮದ್ರಾಸು ವಿ.ವಿ. ಪ್ರಕಟಣೆ- 1937) ಹಾಗೂ ಕಿಶೋರಿ ಮೋಹನ ಗುಪ್ತ - ದಿ ಲ್ಯಾಂಡ್ ಸಿಸ್ಟಂ ಆಫ್ ಸೌತ್ ಇಂಡಿಯ ಸು- 800 ರಿಂದ - ಕ್ರಿ.ಶ. 1200- ಪಂಜಾಬ ಓರಿಯಂಟಲ್ ಸೀರೀಸ್ ನಂ-20 (ಎಂ. ಬನಾರಸೀದಾಸ್ - 1933)
3. ದಕ್ಷಿಣ ಭಾರತದ ಇತಿಹಾಸಕಾರ ಎಸ್. ಕೃಷ್ಣಸ್ವಾಮಿ ಆಯ್ಯಂಗಾರ್ ತಮ್ಮ ತಿರುಪತಿಯ ಚರಿತ್ರೆ-2 ರಲ್ಲಿ ಈ ಸಂಗತಿಯನ್ನು ಗುರುತಿಸಿದ್ದಾರೆ - ಎ ಹಿಸ್ಟರಿ ಆಫ್ ದಿ ಹೋಲಿಶ್ರೈನ್ ಆಫ್ ಶ್ರೀ ವೆಂಕಟೇಶ್ವರ ಇನ್ ತಿರುಪತಿ ಪುಟ 403 (ತಿರುಮಲೆ ತಿರುಪತಿ ದೇವಸ್ಥಾನ ಕಮಿಟಿ 1941) ಗುಪ್ತರು ಹೇಳುವಂತೆ ಇದು ದಕ್ಷಿಣ ಭಾರತದಲ್ಲೆಲ್ಲ ಸಾಮಾನ್ಯ ಲಕ್ಷಣವಾಗಿದ್ದಿತು
4. 'ಕಾಣಿಯಾಚ್ಚಿ' ಬಗ್ಗೆ ಹೊರೇಸ್.ಎಚ್. ವಿಲ್‌ಸನ್ ಆವರ 'ಎ ಗ್ಲಾಸೊರಿ ಆಫ್ ಜ್ಯುಡಿಷಿಯಲ್ ಅಂಡ ರೆವಿನ್ಯೂ ಟರ್ಮ್ಸ್ (ಕಲ್ಕತ್ತ - ಈಸ್ಟರ್ನ್ ಲಾಹೌಸ್ - 1940) ಪುಟ-402, ಗಮನಿಸಿ.
5. ಜಿ.ಟಿ. 347, ತಿ.ತಿ. 648, 53ಎ.
6. 27, 284 ತಿ.ತಿ.
7. ಆಲಯ ಭೂಮಿಗಳ ಬೇಸಾಯಗಾರರು ತಮ್ಮ ಜಮೀನುಗಳ ವ್ಯವಸಾಯದ ಅಭಿವೃದ್ಧಿ ಕೆಲಸಗಳಿಂದಾಗಿ ತಮಗೂ ಹೆಚ್ಚಿನ ಲಾಭ ಉಂಟಾಗುವು ದೆಂದು ಮನಗಾಣುವುದೇ ಅಲ್ಲದೆ, ಪ್ರಾಯಶಃ ಇಂಥ ಪ್ರಾಥಮಿಕ ಸೌಲಭ್ಯಗಳ ಅಭಿವೃದ್ಧಿಯಿಂದಾಗಿ ತಕ್ಷಣದ ಆರ್ಥಿಕ ಪ್ರಯೋಜನವನ್ನೂ ಎಂದರೆ ನೀರಾವರೀ ಕೆಲಸದಲ್ಲಿನ ನಿರ್ಮಾಣ ಪ್ರಕ್ರಿಯೆಗಳಲ್ಲಿ ಭಾಗವಹಿಸುವುದರಿಂದ ಉಂಟಾಗುವ ಪ್ರತಿಫಲವನ್ನೂ ಪಡೆಯುತ್ತಿದ್ದರು.
8. ವಿಟ್ಟವನ ವಿಳುಕ್ಕಾಡು - ಪದ್ಧತಿಯಲ್ಲಿ ದಾನಿಗೆ ಸೇವೆಯ ನಿವೇದನೆಗಳಲ್ಲಿನ ಕಾಲುಭಾಗವನ್ನು ಪ್ರಸಾದವಾಗಿ ನೀಡುವುದು ಇಡೀ ದಕ್ಷಿಣ ಭಾರತದಲ್ಲಿ ಪ್ರಚಲಿತವಾಗಿದ್ದಿತು. ಆದರಿದು ಈಚಿನ ಪ್ರಾವಧಾನ ಪ್ರಬಂಧವಷ್ಟೇ. ತಿರುಮಲೆಯಲ್ಲಿ ಇದರ ಮೊದಲನೆಯ ಪ್ರಸ್ತಾಪ ಕ್ರಿ.ಶ. 1354ರಲ್ಲಿ (ತಿ.ತಿ. 102) ಕಂಡು ಬರುತ್ತದೆ.
9. ಆಲಯದಲ್ಲಿನ ಸೇವಾದಾರರಲ್ಲಿ, ದಕ್ಷಿಣ ಭಾರತದ ವಿವಿಧ ಸ್ಥಳಗಳಲ್ಲಿ ಸಂಚರಿಸುತ್ತ ಆಲಯದ ಬಗ್ಗೆಯೂ, ಅಲ್ಲಿನ ಉತ್ಸವಗ ಬಗ್ಗೆಯೂ ಜನರಲ್ಲಿ ಪ್ರಚಾರವನ್ನು ಕೈಗೊಳ್ಳುವ ಪರಿಣತ ಪ್ರಚಾರಕರೂ ಇದ್ದರು.
10. 409 ಜಿ.ಟಿ.
11. 270, 278 ತಿ.ತಿ. ಹಾಗೂ 102 ಜಿ.ಟಿ.

❋❋

## ಅಧ್ಯಾಯ - 16

# ವಿಜಯನಗರದ ಪತನದ ತರುವಾಯ ತಿರುಮಲೆ

**ತಾಳಿಕೋಟೆ :**

ದಕ್ಷಿಣ ಭಾರತದ ಇತಿಹಾಸದಲ್ಲಿ ಕ್ರಿ.ಶ. 1565 ಒಂದು ಮರೆಯಲಾಗದ ವರ್ಷ. ವಿಜಯನಗರ ರಾಜ್ಯದ ಸೈನ್ಯವನ್ನೂ, ರಾಜಧಾನಿ ನಗರವನ್ನೂ ಸಂಪೂರ್ಣವಾಗಿ ನಾಮಾವಶೇಷಗೊಳಿಸಿದ ತಾಳಿಕೋಟೆ ಅಥವಾ ರಕ್ಕಸತಂಗಡಿ ಯುದ್ಧ ನಡೆದ ಹಾದುದು. ಆಗ ವಿಜಯನಗರವನ್ನು ಆಳುತ್ತಿದ್ದ ಕೊನೆಯ ರಾಜ ಸದಾಶಿವ. ಈತನ ಆಳ್ವಿಕೆಯ ಕಾಲದಲ್ಲಿ ಈತನ ಬಾವನಾದ ಅಳಿಯ ರಾಮರಾಯ ಪ್ರಧಾನಿಯಾಗಿದ್ದ. ತನ್ನ ಇಬ್ಬರು ಸೋದರರ ನೆರವಿನಿಂದ ರಾಮರಾಯನು ಸಲಕಂ ಸೋದರರಾದ ಪೆದತಿಮ್ಮರಾಜ ಹಾಗೂ ಚಿನ್ನತಿಮ್ಮರಾಜನನ್ನು ಸೋಲಿಸಿ, ಅಚ್ಯುತರಾಯನ ತಮ್ಮನ ಮಗನಾದ ಸದಾಶಿವನನ್ನು ಸಿಂಹಾಸನವೇರಿಸಿದ್ದ.

ಸಾಮ್ರಾಜ್ಯದಲ್ಲಿ ರಾಜಕೀಯವಾಗಿ ಅತ್ಯಂತ ಪ್ರಭಾವಶಾಲಿಯಾಗಿ, ಅಳಿಯ ರಾಮರಾಯನು ಎಲ್ಲ ಸಾಮಂತರಾಜರನ್ನು, ಪ್ರಾಂತೀಯ ರಾಜ್ಯಪಾಲರನ್ನು ಕಠಿಣವಾದ ಹದ್ದು ಬಸ್ತಿನಲ್ಲಿಟ್ಟುಕೊಂಡು ಸದಾಶಿವರಾಯ ನನ್ನು ಹಿಂದಿಕ್ಕಿ ಅವನ ಹೆಸರಿನಲ್ಲಿಯೇ ರಾಜ್ಯಭಾರ ನಡೆಸುತ್ತಿದ್ದ. ಇವನು ಧೀರನೂ, ಶೂರನೂ, ಮುನ್ನುಗ್ಗು ವಂತಹವನೂ ಆಗಿದ್ದ. ಸೈನ್ಯವನ್ನು ಬಲಪಡಿಸಿ, ವಿಸ್ತರಿಸಿದ. ಇವನ ಶಕ್ತಿ ಸಾಮರ್ಥ್ಯಗಳಿಂದಾಗಿ, ಐದು ಭಾಗವಾಗಿ ಹಂಚಿಹೋಗಿದ್ದ ಬಹುಮನಿ ಸುಲ್ತಾನರುಗಳು ತಮ್ಮಲ್ಲಿನ ಒಳ ಜಗಳಗಳ ತೀರ್ಮಾನಕ್ಕೆ ಇವನ ಸಹಾಯವನ್ನು ಬಯಸುತ್ತಿದ್ದರು. ಇವನೂ ನೆರವು ನೀಡುತ್ತಿದ್ದ. ಆದರೆ ಇವನ ಒರಟುತನ ಹಾಗೂ ಅಲಕ್ಷ್ಯಗಳಿಂದಾಗಿ ಸುಲ್ತಾನರೂ ಅವರ ರಾಯಭಾರಿಗಳೂ ವೈಯಕ್ತಿಕವಾಗಿ ಅಪಮಾನಿತರಾದಂತೆ ಭಾವನೆಯನ್ನು ಹೊಂದಿ, ಅವರಲ್ಲಿನ ನಾಲ್ವರು ಒಟ್ಟಿಗೆ ಸೇರಿ ಸಂಚು ಹೂಡಿ ಇವನ ಮೇಲೆ ದಂಡೆತ್ತಿ ಬಂದು ಇವನನ್ನು ಸೋಲಿಸುವುದರೊಡನೆ ಸಾಮ್ರಾಜ್ಯವನ್ನೂ ಸಮೂಲ ನಾಶ ಮಾಡಲು ತೀರ್ಮಾನಿಸಿ ಧಾಳಿ ಮಾಡಿದರು. ದೊಡ್ಡ ಸೈನ್ಯಗಳನ್ನು ಸಂಗ್ರಹಿಸಿ ಬಿಜಾಪುರದಲ್ಲಿ ಒಂದಾಗಿ ಕೃಷ್ಣಾನದಿಯ ಗುಂಟಸಾಗಿ ತಾಳಿಕೋಟೆ ಯಲ್ಲಿ ಪಾಳಯ ಹೂಡಿದರು.

ಶತ್ರುಸೈನ್ಯದ ಧಾಳಿಯ ಸುದ್ದಿ ತಿಳಿದ ರಾಮರಾಯನು ತನ್ನ ತಮ್ಮ ತಿರುಮಲರಾಜನಿಗೆ ಒಂದು ದೊಡ್ಡ ಸೈನ್ಯದ ಪಟ್ಟಿಗಟ್ಟಿ, ಶತ್ರುವು ನದಿಯನ್ನು ದಾಟದಂತೆ ಕಟ್ಟು ಮಾಡಲು ಕಳುಹಿಸಿದ. ತನ್ನ ಇನ್ನೊಬ್ಬ ತಮ್ಮ ವೆಂಕಟಾದ್ರಿರಾಯನಿಗೆ ಮತ್ತೊಂದು ಸೈನ್ಯವನ್ನು ನೀಡಿ ಒಂದು ಬದಿಯಿಂದ ಆಕ್ರಮಿಸಲು ನಿಯಮಿಸಿ, ತಾನೇ ಮಗದೊಂದು ಮಹಾಸೈನ್ಯದ ಮುಂದಾಳಾಗಿ ಯುದ್ಧರಂಗಕ್ಕೆ ಇಳಿದ ತನ್ನೊಡನೆ ತನ್ನ ಸಾಮಂತ, ಶ್ರೀಮಂತರ ಎಲ್ಲ ಮೂಲ ಬಲವನ್ನೂ ಸೇರಿಸಿಕೊಂಡಿದ್ದ ರಾಮರಾಯ ತನ್ನ ರಾಜಧಾನಿಯ ರಕ್ಷಣೆಗಾಗಿ ಒಂದು ಸಣ್ಣ ತುಕಡಿಯನ್ನೂ ಇಟ್ಟಿರಲಿಲ್ಲ. ಆತನಿಗೆ ತನ್ನ ವಿಜಯದ ಬಗ್ಗೆ ಅಷ್ಟೊಂದು ನಂಬಿಕೆ. ರಾಬರ್ಟ್ ಸಿವಿಲ್ ಬರೆದ "ಮರೆತು ಹೋದ ಸಾಮ್ರಾಜ್ಯ"ದಲ್ಲಿ ವಿಜಯನಗರದ ಪತನದ ಬಗ್ಗೆ ನೆನಪಿನಲ್ಲಿಡಬೇಕಾದ ಮಾತುಗಳನ್ನಾಡಿದ್ದಾರೆ. ಅದರ ಕೆಲಭಾಗಗಳನ್ನಿಲ್ಲಿ ಉದ್ಧರಿಸಲಾಗಿದೆ. "ಆತ ತೊಂಬತ್ತಾರು ವರ್ಷದ ವೃದ್ಧನಾಗಿದ್ದನು. ಆದರೆ ಮೂವತ್ತುವರ್ಷದ ಯುವಕನಂತೆ ಧೈರ್ಯಶಾಲಿ ಯಾಗಿದ್ದ.... ಧೃತಿಗೆಡದೆ ಯುದ್ಧ ಮಾಡುವಂತಹ ಶತ್ರುಗಳೇ ಆದರೂ ಅವರೆಲ್ಲ ಮಕ್ಕಳಂತೆ ಇದ್ದು, ಅವರನ್ನೆಲ್ಲಾ ಬಲಿಹಾಕುವಂತಿದ್ದ. ಜೊತೆಗೇ ಅಂಬಾರಿಯ ಮೇಲೆ ಸವಾರಿ ಮಾಡುತ್ತ ಯುದ್ಧದಲ್ಲಿ ತೊಡಗುವ ಬದಲಿಗೆ ಪಲ್ಲಕ್ಕಿಯಲ್ಲಿ ಕುಳಿತು ಯುದ್ಧವನ್ನು ನಿರ್ದೇಶಿಸುವುದರಲ್ಲಿ ಆಸಕ್ತನಾಗಿದ್ದ. ತನ್ನ ವಿಜಯದಲ್ಲಿ ಎಷ್ಟು ನಂಬಿಕೆಯಿತ್ತು ಎಂದರೆ ಆತ ತನ್ನ ಸೈನಿಕರನ್ನು ಕುರಿತು - ತನ್ನ ಬಳಿಗೆ

ಹುಸೇನ್ ನಿಜಾಮನ ತಲೆಯನ್ನು ತರಬೇಕೆಂದೂ, ಅದಿಲ್‌ಷಹ ಹಾಗೂ ಗೋಲ್ಕೊಂಡದ ಇಬ್ರಾಹಿಮರನ್ನು ಜೀವಂತವಾಗಿ ಹಿಡಿದು ತರಬೇಕೆಂದೂ ಹೇಳಿದ್ದನಂತೆ ; ಅವರನ್ನು ಆಜೀವಪರ್ಯಂತ ಕಬ್ಬಿಣದ ಪಂಜರದಲ್ಲಿಡುವ ಉದ್ದೇಶದಿಂದ.''

ಘನಘೋರ ಯುದ್ಧದ ನಡುವೆ ರಾಮರಾಯನು ''ತನ್ನ ಸೈನಿಕರನ್ನು ಹುರಿದುಂಬಿಸುವ ಸಲುವಾಗಿ ಪಲ್ಲಕ್ಕಿಯಿಂದಿಳಿದು ಹೊಳೆವ ರಂಗಿನ ಗುಡಾರದಲ್ಲಿ ಅನರ್ಘ್ಯ ರತ್ನಗಳ ಸಿಂಹಾಸನದಲ್ಲಿ ಕುಳಿತುಕೊಂಡು ತನ್ನ ಕೋಶಾಧ್ಯಕ್ಷನಿಗೆ ತನ್ನ ಸುತ್ತಲು ಆಭರಣಗಳು ಹಾಗೂ ಹಣದ ರಾಶಿಗಳನ್ನಿಡಲು ಆಜ್ಞೆಮಾಡಿದ. ತನಗೆ ಇಷ್ಟವಾದ ಸೈನಿಕರಿಗೆ ಬಹುಮಾನಗಳನ್ನು ನೀಡುವ ಅಪೇಕ್ಷೆ... ಯುದ್ಧದ ಭೀಷಣತೆಯೆಷ್ಟಿತ್ತೆಂದರೆ ನೋಡ ನೋಡುತ್ತಿದ್ದಂತೆ 5000 ಮಂದಿ ವಿಜಯನಗರ ಸೈನಿಕರು ರಣದಲ್ಲಿ ಮಡಿದರು... ಐದು ಸಾವಿರ ಮಂದಿ ಶತ್ರುರಾವುತರು.... ತಮ್ಮ ಅಶ್ವಗಳನ್ನು ರಾಮರಾಯ ಕುಳಿತಿದ್ದ ಕಡೆ ತಿರುಗಿಸಿದರು. ಆತ ತನ್ನ ಸ್ಥಳವನ್ನು ಬದಲಿಸಿ ಪಲ್ಲಕ್ಕಿ ಯನ್ನೇರಿದ್ದ. ಒಂದು ಆನೆ ಆತನ ಪಲ್ಲಕ್ಕಿಯತ್ತ ನುಗ್ಗಿ ಬಂದಿತು. ಭಯ ಭೀತರಾದ ಪಲ್ಲಕ್ಕಿ ಕಾಲಾಳುಗಳು ತಮ್ಮ ಭಾರವನ್ನು - ಹೊಣೆ ಯನ್ನು - ಕೆಳಕ್ಕೆ ಹಾಕಿದರು. ಆತ ಕುದುರೆಯನ್ನೇರುವ ಮೊದಲೇ ಶತ್ರುಸೈನ್ಯ ಆತನನ್ನು ಕೈದು ಮಾಡಿತು. ಸೈನ್ಯಾಧಿಪತಿಯು ಆತನ ತಲೆಯನ್ನು ತರಿದು, ದೊಡ್ಡ ಬರ್ಜಿಯ ಮೊನೆಗೆ ಸಿಕ್ಕಿಸಿ ಅದನ್ನು ಮೇಲೆತ್ತಿ ಹಿಡಿದ. ತಮ್ಮ ನಾಯಕನ ಬರಿ ತಲೆಯನ್ನು ಕಂಡ ವಿಜಯನಗರ ಸೈನ್ಯ ಚೆಲ್ಲಾಪಿಲ್ಲಿಯಾಯಿತು. ಪ್ರಾಯಶಃ ವೆಂಕಟಾದ್ರಿಯೂ ಯುದ್ಧದಲ್ಲಿ ಅಸು ನೀಗಿರಬೇಕು''.

ತಿರುಮಲರಾಯ ಮಾತ್ರ ಬದುಕಿ ಉಳಿದ. ವಿಜಯನಗರಕ್ಕೆ ಹಿಂದಿರುಗಿ ಅವಸರವಸರವಾಗಿ ರಾಜ ಭಂಡಾರದ ಬಂಗಾರ, ವಜ್ರಗಳನ್ನು ಮೂಟೆಗಟ್ಟಿಕೊಂಡು, ರತ್ನಸಿಂಹಾಸನದೊಡನೆ 550 ಆನೆಗಳ ಮೇಲೆ ಹೇರು ಹೊರಿಸಿ, ಸಾಮ್ರಾಟ ಸದಾಶಿವರಾಯನನ್ನು ರಕ್ಷಿಸಿಕೊಂಡು ಪೆನುಗೊಂಡೆಗೆ ಬಂದು ಸೇರಿದ.

ತಾಳೀಕೋಟೆಯ ಯುದ್ಧ ವಾಸ್ತವವಾಗಿ ಅಲ್ಲಿಂದ ಮೂವತ್ತು ಮೈಲಿ ದೂರದ ರಕ್ಕಸತಂಗಡಿಯಲ್ಲಿ ಕೃಷ್ಣಾನದೀ ದಂಡೆಯಲ್ಲಿ 23 - ಜನವರಿ - 1565ರಲ್ಲಿ ನಡೆಯಿತು. ಇದರಲ್ಲಿ ಉಂಟಾದ ಸೋಲಿನಿಂದ ವಿಜಯನಗರ ರಾಜಧಾನಿಯಾಗಲೀ, ಸಾಮ್ರಾಜ್ಯ ವಾಗಲೀ ಪುನರುತ್ಥಾನವಾಗಲೇ ಇಲ್ಲ, ಯುದ್ಧದ ನಂತರ ಸುಲ್ತಾನರೂ, ಅವರ ಸೈನಿಕರೂ ಎರಡು ದಿನಗಳ ಕಾಲ ಯುದ್ಧರಂಗದಲ್ಲಿಯೇ ವಿಶ್ರಾಂತಿ ಪಡೆದರು. ಸೈನ್ಯ ಮೂರನೆಯ ದಿನ ರಕ್ಷಣಾರಹಿತವಾದ ರಾಜಧಾನಿಯನ್ನು ಮುತ್ತಿಗೆ ಹಾಕಿತು. ಮುಂದಿನ ಐದು ತಿಂಗಳಕಾಲ ಅವ್ಯಾಹತವಾಗಿ ರಾಜಧಾನಿಯನ್ನು ಲೂಟಿ ಮಾಡಲಾಯಿತು. ಅಲ್ಲಿನ ಅರಕ್ಷಿತ ಜನರನ್ನು ಬಿಚ್ಚುಗತ್ತಿಗಳಿಗೆ ಆಹುತಿಗೊಳಿಸಿ, ಆಲಯ ಗಳನ್ನು ವಿಧ್ವಂಸಗೊಳಿಸಿ, ಅನರ್ಘ್ಯ ವಿಗ್ರಹ, ಮೂರ್ತಿಗಳನ್ನು ಒಡೆದು ಚೆಲ್ಲಾಡಿ, ಬುಡಮೇಲು ಕೃತ್ಯದಲ್ಲಿ ತೊಡಗಲಾಯಿತು. ''ಈ ಲೂಟಿಯಿಂದಾಗಿ ಸುಲ್ತಾನರ ಸಮೂಹದ ಪ್ರತಿಯೊಬ್ಬ ಸೈನಿಕನೂ ಅಪಾರವಾದ ಧನರಾಶಿ, ಚಿನ್ನ, ವಜ್ರ, ಆಯುಧ, ಕುದುರೆ, ಪಶುಸಂಪತ್ತು, ದಾಸರುಗಳನ್ನು ಹೊಂದಿ ಶ್ರೀಮಂತ ಆಗಿದ್ದ. : ಕಾರಣ ಸುಲ್ತಾನರು ಇಲ್ಲಿನ ಲೂಟಿಯಲ್ಲಿ ದೊರೆತ ಆನೆಗಳನ್ನು ಮಾತ್ರವೇ ತಮ್ಮದಾಗಿಸಿಕೊಂಡು ಸೈನಿಕರ ಲೂಟಿಯನ್ನು ಅವರ ಪಾಲಿಗೇ ಬಿಟ್ಟು ಬಿಟ್ಟರು.'' ''ಈ ಸುಲಿಗೆ ಸಾಕಷ್ಟು ದೊಡ್ಡ ಪ್ರಮಾಣದ್ದೇ ಆಗಿರಬೇಕು.'' ಒಬ್ಬ ಇತಿಹಾಸಕಾರ (ಕಾಂಟೆ) ಹೇಳುವಂತೆ ಒಂದು ವಜ್ರವಾದರೋ ಕೋಳಿಯ ಮೊಟ್ಟೆಯಷ್ಟು ದೊಡ್ಡದಾಗಿದ್ದು ಅದಿಲ್‌ಷಹನು ಅದನ್ನು ತನ್ನದಾಗಿಸಿಕೊಂಡ. ಬೆಂಕಿ ಹಾಗೂ ಕತ್ತಿಗಳಿಂದ, ಸನಿಕೆ ಹಾಗೂ ಗುದ್ದಲಿಗಳಿಂದ ಹಗಲು ರಾತ್ರಿ, ದಿನ ದಿನವೂ ತಮ್ಮ ಸರ್ವನಾಶದ ಕೃತ್ಯವನ್ನವರು ಮುಂದುವರಿಸಿದರು. ''ಇಂತಹ ಒಂದು ಭವ್ಯವಾದ ಸಿರಿ ಸಂಪತ್ತಿನಿಂದಲೂ, ಕ್ರಿಯಾಶೀಲ ನಾಗರಿಕರಿಂದಲೂ ಕೂಡಿದ್ದ ಒಂದು ಅತ್ಯುತ್ತಮ ನಗರ - ಮೊದಲನೆಯ ದಿನ ಸಂಪದ್ಭರಿತವಾಗಿದ್ದು ಮಾರನೆಯ ದಿನ ವಿಲುಟವಾಗಿ, ಧೂಳೀಪಟ ವಾಗಿ ನಾಮಾವಶೇಷವಾದದ್ದು ಇತಿಹಾಸ ಇದಕ್ಕೆ ಮೊದಲು ಕಂಡರಿಯದ ಸಂಗತಿಯಾಗಿದೆ''. ವಿವರಿಸಲಾಗ ದಷ್ಟು ದಯಾರಾಹಿತ್ಯದ ಬುಡಮೇಲು ಕೃತ್ಯದಿಂದಾಗಿ ಜೀರ್ಣತೆಯ, ನಾಶದ ಪ್ರತೀಕವಾಗಿ ನಿಲ್ಲುವಂತಾಯಿತು.

## 2. ವಿಜಯನಗರ ಪತನಾನಂತರದ ಸ್ಥಿತಿ ಹಾಗೂ ಅರವೀಡು ರಾಜರು

ವಿಜಯನಗರದ ಪತನಾನಂತರ ಇಡೀ ಪ್ರಾಂತವೇ ಬಿಜಾಪುರ ಗೋಲ್ಕೊಂಡ ಸುಲ್ತಾನರಿಗೆ ಶರಣಾಯಿತು. ಕ್ರಿ.ಶ. 1566ರಲ್ಲಿ ವಿಜಯನಗರದ ಪತನಕಾರಣವಾದ ತಾಳೀಕೋಟೆಯ ಯುದ್ಧದ ಒಂದು ವರ್ಷದ ನಂತರ ಗೋಲ್ಕೊಂಡದ ಸೈನ್ಯವು ರಾಜ ಮಹೇಂದ್ರವರವನ್ನು ಆಕ್ರಮಿಸಿ ಅದನ್ನು ಕ್ರಿ.ಶ. 1571 - 72ರಲ್ಲಿ ವಶಪಡಿಸಿಕೊಂಡಿತು. ಈ ಮಧ್ಯೆ ಬಿಜಾಪುರದವರು ಅದೋನಿಯನ್ನು ಆಕ್ರಮಿಸಿ ವಶಪಡಿಸಿಕೊಂಡರು. ಸುಮಾರು ಒಂದೂವರೆ ವರ್ಷಗಳ ನಂತರ ಕ್ರಿ.ಶ.1573 ರಲ್ಲಿ ಬಿಜಾಪುರದ ಅದಿಲ್‌ಷಹನು ಧಾರವಾಡ ಬಂಕಾಪುರಗಳತ್ತ ದಂಡೆತ್ತಿ ಬಂದು ಅವುಗಳನ್ನು ವಶಪಡಿಸಿಕೊಂಡನು. ನಂತರ ಆತ ಕೊಂಕಣದತ್ತ ತಿರುಗಿ ಅದನ್ನು ವಶಕ್ಕೆ ಪಡೆದ. ಮೂರು ವರ್ಷಗಳ ನಂತರ ಬೆಲ್ಲಂಕೊಂಡವನ್ನು ಆಕ್ರಮಿಸಿದ. "ರಾಯನು ಭೀತನಾಗಿ ಪೆನುಗೊಂಡೆಯಿಂದ ಚಂದ್ರಗಿರಿಯನ್ನು ಸೇರಿದ." ತಿರುಮಲರಾಯನ ನಂತರ ಶ್ರೀರಂಗರಾಯನು ರಾಜನಾದಾಗ ಕ್ರಿ.ಶ. 1578 ರಲ್ಲಿ ಗೋಲ್ಕೊಂಡದ ಸುಲ್ತಾನನು ಪೆನುಗೊಂಡೆಯನ್ನು ಆಕ್ರಮಿಸಿ ವಶಪಡಿಸಿ ಕೊಳ್ಳುವುದರೊಡನೆ ಶ್ರೀರಂಗರಾಯನನ್ನೂ ಸೆರೆ ಹಿಡಿದನು. ನಂತರದಲ್ಲಿ ಅವನನ್ನು ಬಂಧ ವಿಮುಕ್ತನನ್ನಾಗಿ ಸಿದರೂ ರಾಜ್ಯದ ಪೂರ್ವ ಭಾಗಗಳನ್ನು (ಅಹೋಬಿಲವೂ ಸೇರಿದಂತೆ) ಕೈವಶ ಮಾಡಿಕೊಂಡು ಒಂದಾರು ವರ್ಷ ಕಾಲ ಹಿಡಿದಿಟ್ಟುಕೊಂಡಿದ್ದ. ಕ್ರಿ.ಶ. 1584 - 85 ರ ಶ್ರೀರಂಗರಾಯನ ಅಹೋಬಿಲದ ಒಂದು ಶಾಸನವು ಈ ಬಗ್ಗೆ ತಿಳಿಸುತ್ತ ಅಹೋಬಿಲಕ್ಕೆ ಒದಗಿದ ಈ ದುರ್ದೆಶೆಗೆ, ಈ ಭಾಗದಲ್ಲಿ ಅಧಿಕಾರ ಪಡೆದಿದ್ದ ಮಟ್ಲ ವಂಶದವರು ಶತ್ರುಗಳ ಪರವಾದದ್ದೇ ಕಾರಣವೆಂದು ತಿಳಿಸುತ್ತದೆ. ಕ್ರಿ.ಶ. 1579ರಲ್ಲಿ ಗೋಲ್ಕೊಂಡದ ಸುಲ್ತಾನನು ವಿನುಕೊಂಡ ಹಾಗೂ ಕೊಂಡವೀಡು ಕೋಟೆಗಳನ್ನು ವಶಪಡಿಸಿಕೊಂಡನು. ಕೊಚ್ಚೆರ್ಲಕೋಟ, ಖಮ್ಮಂಗಳನ್ನು ಆಕ್ರಮಿಸಿ ಕೃಷ್ಣಾನದಿಯ ದಕ್ಷಿಣದ ಬಹುಭಾಗವನ್ನು ವಶಪಡಿಸಿಕೊಂಡ. ಕ್ರಿ.ಶ. 1589 ರಲ್ಲಿ ಗೋಲ್ಕೊಂಡದ ಮಹಮದ್ ಕುಲಿಯು ಕರ್ನೂಲು ಕಡಪಗಳನ್ನು ಆಕ್ರಮಿಸಿ ಕರ್ನೂಲು, ನಂದ್ಯಾಲ, ಗಂಡಿಕೋಟ, ಮತ್ತಿತರ ಸ್ಥಳಗಳನ್ನು ವಶಪಡಿಸಿಕೊಂಡು ನೆಲ್ಲೂರು ಜಿಲ್ಲೆಗೂ ಧಾಳಿಯಿಟ್ಟ. ಬಿಜಾಪುರದ ಸುಲ್ತಾನನು ಕ್ರಿ.ಶ. 1593 ರಲ್ಲಿ ಮೈಸೂರು ಸೀಮೆಯನ್ನು ಮುತ್ತಿ ಆಕ್ರಮಿಸಿದ. ವಿಜಯನಗರದ ಒಬ್ಬ ಸಾಮಂತನು ಕ್ರಿ.ಶ. 1610 ರ ವರೆಗೆ ಮೈಸೂರನ್ನು ಆಳುತ್ತಿದ್ದು, ನಂತ ಅದು ಒಡೆಯರ ಅಧೀನದಲ್ಲಿ ಸ್ವತಂತ್ರವಾಯಿತು. ಕ್ರಿ.ಶ. 1602 ರಲ್ಲಿ ಮಧುರೆ, ತಂಜಾವೂರುಗಳ ನಾಯಕರು ಸ್ವತಂತ್ರರಾದರು.

ವಿಜಯನಗರದ ಸೋಲಿನ ನಂತರ ಕ್ರಿ.ಶ. 1565 ರ ಜನವರಿ ಕೊನೆಯ ಭಾಗದಲ್ಲಿ ಸಾಮ್ರಾಟ ಸದಾಶಿವರಾಯನೊಡನೆ ಪೆನುಗೊಂಡೆಗೆ ಪರಾರಿಯಾದ ತಿರುಮಲರಾಯನು ತನ್ನ ಸಾಮ್ರಾಟನು 1568 ರಲ್ಲಿ ಮರಣ ಹೊಂದುವವರೆಗೆ ಅವನ ಹೆಸರಿನಲ್ಲಿ ಸಾಮ್ರಾಜ್ಯದ ದಕ್ಷಿಣ ಭಾಗಗಳ ರಾಜ್ಯಭಾರ ಮಾಡುತ್ತ, ನಂತರ ತಾನೇ ಸಿಂಹಾಸನವನ್ನೇರಿ 1575 ರ ವರೆಗೆ ತನ್ನ ಮರಣಪರ್ಯಂತ ರಾಜ್ಯವಾಳಿದನು. ನಂತರ ಆತನ ಎರಡನೆಯ ಮಗನಾದ ಎರಡನೆ ಶ್ರೀರಂಗರಾಯನು ಸಿಂಹಾಸನವನ್ನೇರಿ 1586 ರ ವರೆಗೆ ರಾಜ್ಯಭಾರ ಮಾಡಿದನು. 1578ರ ಸುಮಾರಿನಲ್ಲಿ ಈತ ತನ್ನ ರಾಜಧಾನಿಯನ್ನು ಪೆನುಗೊಂಡೆಯಿಂದ ಚಂದ್ರಗಿರಿಗೆ ಬದಲಾಯಿಸಿಕೊಂಡ. ಈತನ ನಂತರ ಇವನ ತಮ್ಮನಾದ ಮೊದಲನೆ ವೆಂಕಟನು ಪಟ್ಟಕ್ಕೆ ಬಂದು 1614ರ ವರೆಗೆ ರಾಜ್ಯವಾಳಿದ. ಈತ ನಿಸ್ಸಂತಾನವಾಗಿ ನಿರ್ಯಾಣ ಹೊಂದಿದಾಗ ಪದವಿಗಾಗಿ ಪರಸ್ಪರ ಕಚ್ಚಾಟ ವಾಯಿತು. ವೆಂಕಟನ ರಾಣಿ ಬಾಯಮ್ಮನ ಸೋದರ ಗೊಬ್ಬೂರಿ ಜಗದೇವರಾಯನ ತನ್ನ ತಂಗಿಯ ಮಗುವಿನ ರಾಜ್ಯದ ಹಕ್ಕನ್ನು ಎತ್ತಿಹಿಡಿದ. ಇದನ್ನು ತಿಮ್ಮನಾಯಕ ಹಾಗೂ ಮಾಕರಾಜರು (ಚಿತ್ತೂರು ಜಿಲ್ಲೆಯ ಕಾರ್ವೇಟಿ ನಗರದ ಸಾಮಂತನಿರಬಹುದು) ಬೆಂಬಲಿಸಿದರು. ವೆಂಕಟನ ಸೋದರಳಿಯನೂ, ವೆಂಕಟನಿಂದ ಆಯ್ಕೆಯಾದವನೂ ಆದ ಮೂರನೆಯ ಶ್ರೀರಂಗನು ಸಿಂಹಾಸನವನ್ನೇರಿದರೂ ಜಗದೇವರಾಯನು ಅವನನ್ನು ಪದಚ್ಯುತಗೊಳಿಸಿ ಗೃಹಸೆರೆಯಲ್ಲಿಟ್ಟ. ವೆಲುಗೋಟಿ ಯಚ್ಚಮ ನಾಯಕನ ಪ್ರೋದ್ಬಲದಿಂದ ಶ್ರೀರಂಗನು ಮುಕ್ತನಾಗಲು ಪ್ರಯತ್ನಿಸಿದಾಗ ಕಾವಲನ್ನು ಕಟ್ಟೆಚ್ಚರಗೊಳಿಸಿದನು. ಶ್ರೀರಂಗನು ತನ್ನ ಇಬ್ಬರು ಗಂಡುಮಕ್ಕಳು, ಹೆಣ್ಣುಮಗು ಹಾಗೂ ತನ್ನ ರಾಣಿಯನ್ನು ಕೊಂದು ತಾನು ಆತ್ಮಹತ್ಯೆ ಮಾಡಿಕೊಂಡ.

ಇದಕ್ಕೆ ಮುಂಚೆಯೇ ಸೆರೆಯಿಂದ ತಪ್ಪಿಸಿಕೊಂಡು ಯಚ್ಚಮನಾಯಕನ ಬಳಿಗೆ ಬಂದ ಶ್ರೀರಂಗನ ಎರಡನೆಯ ಮಗನೂ ವಾರಸು ದಾರನೂ ಆದ ರಾಮನ ಹಕ್ಕನ್ನು ಮನ್ನಿಸಿ ತಂಜಾವೂರಿನ ರಘುನಾಥನಾಯಕನ ನೆರವನ್ನು ಪಡೆದು ಕುಂಭಕೋಣದಲ್ಲಿ ಅವನಿಗೆ ದೇಶಾಂತರವಾಸಿ ಯುವರಾಜನಿಗೆ -ಎಂಬಂತೆ ಪಟ್ಟಗಟ್ಟಲಾಯಿತು. ರಾಮನು 1616 ರಿಂದ 1632 ವರೆಗೆ ರಾಜ್ಯಭಾರ ಮಾಡಿದನ ಇವನೂ ಸಹ ನಿಸ್ಸಂತಾನನಾಗಿಯೇ ಮಡಿದ. ಆದರೆ 1622 ರಲ್ಲಿಯೇ ತನ್ನ ಉತ್ತರಾಧಿಕಾರಿಗಳೆಂದು ಎರಡನೇ ವೆಂಕಟ ಹಾಗೂ ನಾಲ್ಕನೇ ಶ್ರೀರಂಗರನ್ನು ಗುರುತಿಸಿದ್ದ. ಎರಡನೇ ವೆಂಕಟನು ರಾಮನ ಮರಣಾನಂತರ 1642 ರ ವರೆಗೆ ರಾಜ್ಯಭಾರಮಾಡಿದ. ನಂತರ ನಾಲ್ಕನೇ ಶ್ರೀರಂಗನು ಅಕ್ಟೋಬರ್ 1642 ರಲ್ಲಿ ಪಟ್ಟಕ್ಕೆ ಬಂದು 1672 ರ ವರೆಗೆ ರಾಜ್ಯವಾಳಿದ. ಇವರ ನಂತರವೆಂಕಟ ಹಾಗೂ ರಂಗರ ಹೆಸರುಗಳೊಡನೆ 1678 ರಿಂದ 1793 ರ ವರೆಗಿನ ಶಾಸನಗಳಲ್ಲಿ ಕಂಡು ಬಂದರೂ ಆ ವೇಳೆಗಾಗಲೇ ಹಿಂದೂ ಸಾಮ್ರಾಜ್ಯ ನಾಮಮಾತ್ರವಾಗಿದ್ದಿತು.

ತಿರುಮಲರಾಯನು ಪೆನುಗೊಂಡೆಯಿಂದ ದಕ್ಷಿಣಕ್ಕೆ ಮುಸ್ಲಿಂ ಧಾಳಿಗಳನ್ನು ತಡೆದು ಹಿಂದಕ್ಕಟ್ಟಿದರೂ, ಅವನ ಮಗ ಶ್ರೀರಂಗನು ಪೆನುಗೊಂಡೆಯನ್ನು ತೊರೆದು ಚಂದ್ರಗಿರಿಗೆ ಇಳಿದು ಈ ಮಧ್ಯದ ಸ್ಥಳವನ್ನು ಅವರಿಗೆ ಬಿಟ್ಟುಕೊಡಬೇಕಾಯಿತು. ಇವನ ನಂತರ ಇವನ ಸಹೋದರ ವೆಂಕಟನು ಗೋಲ್ಕೊಂಡದ ಸುಲ್ತಾನನ ಸೈನ್ಯವನ್ನು ಘನವಾಗಿ ಎದುರಿಸಿ ಅವನನ್ನು ಕೃಷ್ಣಾನದಿಯಿಂದ ಆಚೆಗೆ ಇರುವಂತೆ ಮಾಡಿದ. ಹದಿನೇಳನೇ ಶತಮಾನದ ಮಧ್ಯಭಾಗದವರೆಗೆ ವಿಜಯನಗರದರಸರ ನಾಮನಿರ್ದೇಶದಲ್ಲಿ ಚಿತ್ತೂರು, ವೆಲ್ಲೂರು, ಚೆಂಗಲ್ಪಟ್ಟು ಜಿಲ್ಲೆಗಳೂ, ಪ್ರಾಯಶಃ ದಕ್ಷಿಣ ಆರ್ಕಾಟಿನ ಕೆಲಭಾಗವೂ ಇದ್ದಿತೆಂದು ಹೇಳಬಹುದು. ಎರಡನೇ ವೆಂಕಟ ಹಾಗೂ ನಾಲ್ಕನೇ ಶ್ರೀರಂಗರುಗಳು ತಿರುಪತಿ, ಚಂದ್ರಗಿರಿ ಮತ್ತಿತರ ಪ್ರಾಂತ್ಯಗಳನ್ನು ಉಳಿಸಿಕೊಳ್ಳಲು ಬಿಜಾಪುರ ಗೋಲ್ಕೊಂಡಗಳ ಸುಲ್ತಾನರ ಸೈನ್ಯಗಳನ್ನು ಪದೇ ಪದೇ ಎದುರಿಸಬೇಕಾಗಿ ಬರುತ್ತಿತ್ತು. ವಿಜಯನಗರದ ಪ್ರಾಂತೀಯ ಪ್ರತಿನಿಧಿಗಳು ಸಾಮಂತ ರಾಜರು ವಿಶ್ವಾಸರಹಿತರಾಗಿ ಸ್ವಾತಂತ್ರ್ಯದ ಘೋಷಣೆ ಮಾಡುತ್ತಿದ್ದರು. ಕ್ರಿ.ಶ. 1656 ರಲ್ಲಿ ದಕ್ಖನಿನಲ್ಲಿದ್ದ ಔರಂಗಜೇಬನ ಮೂಲಕ ಮೊಗಲ ಸುಲ್ತಾನ ಷಹಜಹಾನಿಗೆ ನಾಲ್ಕನೇ ಶ್ರೀರಂಗನು ಅಗತ್ಯವಿದ್ದಲ್ಲಿ ತಾನು ಮುಸಲ್ಮಾನ ಆಗಲು ಸಿದ್ಧ ಎಂದು ಬಿನ್ನಹವನ್ನುಮಾಡುವಷ್ಟು ಪರಿಸ್ಥಿತಿ ವಿಷಮಿಸಿದ್ದಿತು. ಆದರೆ ಈತನ ಬಿನ್ನಹದ ಪತ್ರ ಷಹಜಹಾನನನ್ನು ತಲುಪಲೇ ಇಲ್ಲವಾಗಿ ಈತನ ಮೊರೆಗೆ ಬೆಲೆಯಿಲ್ಲದಾಯಿತು.

## 3. ಗೊಂದಲದ ದಿನಗಳಲ್ಲಿ ತಿರುಮಲೆ ಆಲಯದ ದತ್ತಿಗಳು

ಸದಾಶಿವರಾಯನ ಮಂತ್ರಿಗಳಾಗಿ ಅರವೀಡು ಅಳಿಯ ರಾಮರಾಯನೂ, ತಿರುಮಲರಾಯನೂ, ತಿರುಮಲೆ ಆಲಯಕ್ಕೆ ಶಾಶ್ವತವಾದ ದಾನ ದತ್ತಿಗಳನ್ನು ನೀಡಿದರು. ಆದರೆ ಕ್ಷೀಣವಾಗುತ್ತಿದ್ದ ಸಾಮ್ರಾಜ್ಯದ ಸಿಂಹಾಸನವನ್ನೇರಿದ ಬಳಿಕ ಅರವೀಡು ವಂಶದಿಂದ ಯಾವುದೇ ಒಂದು ದಾನವೂ ತಿರುಮಲೆಯ ಆಲಯಕ್ಕೆ ಕೊಡಲಾಗಿಲ್ಲ. ಕ್ರಿ.ಶ. 1574 ನಂತರ ನಡೆದ ದಾನಗಳೆಲ್ಲ ಅವರ ಕೈಕೆಳಗೆ ಕೆಲಸ ಮಾಡುತ್ತಿದ್ದ ಅಧಿಕಾರಿಗಳಿಂದಲೋ ಅಥವಾ ಆಚಾರ್ಯಪುರುಷರಿಂದಲೋ, ಶ್ರೀಮಂತ ಭಕ್ತರಿಂದಲೋ ಉಂಟಾದವು. ಅರವೀಡು ಮನೆತನ ಕ್ರಿ.ಶ. 1575 ರಿಂದ 1665 ರ ವರೆಗೆ ಹತ್ತಿರ ಹತ್ತಿರ ಒಂದು ಶತಮಾನಕಾಲ ರಾಜ್ಯಭಾರ ನಿರ್ವಹಣೆ ಮಾಡಿತು. ವೆಂಕಟಪತಿರಾಯನು ತಿರುಮಲೆಯಲ್ಲಿ ಪಟ್ಟಾಭಿಷಿಕ್ತನಾದನೆಂದೂ, ಚಂದ್ರಗಿರಿಯಲ್ಲಿ ವಾಸವಾಗಿದ್ದ ನೆಂದೂ, ಆಗಾಗ ತಿರುಮಲೆಗೆ ಹೋಗಿ ಬರುತ್ತಿದ್ದನೆಂದೂ ಹೇಳಲಾಗಿದೆ. ಶ್ರೀ ವೆಂಕಟೇಶ್ವರಾಯ ನಮಃ ಎಂಬ ನಮನಾಕ್ಷರಗಳ ವಿಜಯನಗರ ನಾಣ್ಯಗಳು ತಿರುಮಲೆಯ ಆಲಯದೊಡನೆ ಆತ ಹೊಂದಿದ್ದ ಹತ್ತಿರದ ಸಂಬಂಧವನ್ನು ಸೂಚಿಸುತ್ತವೆ. ಆದರೆ ಅರವೀಡು ಮನೆತನದ ಯಾವನೇ ರಾಜನೂ ಯಾವ ದಾನವನ್ನು ನೀಡಿದಂತೆ ಶಾಸನಾಧಾರವಿಲ್ಲ.

ಗಮನಾರ್ಹವಾದ ಮತ್ತೊಂದು ಅಂಶವೆಂದರೆ ಈ ಅವಧಿಯಲ್ಲಿನ 192 ಶಾಸನಗಳ ಪೈಕಿ 32 ಶಾಸನಗಳಿಗೆ ಮಾತ್ರವೇ ಖಚಿತವಾದ ಕಾಲವನ್ನು ನಿರ್ಣಯಿಸಲು ಸಾಧ್ಯವಿರುವಂತಹದ್ದು. ಇವುಗಳಲ್ಲಿಯೂ ಕೇವಲ ಎಂಟು ಮಾತ್ರವೇ ತಿರುಮಲೆಯ

ಆಲಯದ ಗೋಡೆಗಳ ಮೇಲಿನ ಕಲ್ಲಿನಲ್ಲಿ ಕೆತ್ತಲ್ಪಟ್ಟವುಗಳು. ತೀರ ಈಚಿನದು ಎಂದರೆ ಕ್ರಿ.ಶ. 1616. ಮಿಕ್ಕ ಎಲ್ಲ ಶಾಸನಗಳೂ ಒಂದೋ ತಿರುಪತಿಯ ಗೋವಿಂದರಾಜಸ್ವಾಮಿ ಆಲಯದ ಗೋಡೆಗಳಲ್ಲಿ ಪಡಿಮೂಡಿವೆ, ಇಲ್ಲವೆ ತಿರುಮಲೆಯ ಬೆಟ್ಟದ ಬುಡದ ಅಲಿಪಿರಿಯಲ್ಲಿರತಕ್ಕವು. ಹೀಗಾಗಿ ಕ್ರಿ.ಶ. 1616 ರ ನಂತರ ಆಸಕ್ತಿ ಕೇಂದ್ರವು ತಿರುಪತಿಗೆ ಪರಿವರ್ತಿತವಾಯಿತೆಂದು ಹೇಳಬೇಕು. ಆಲಯಕ್ಕೆ ನೀಡಿದ ಭೂಮಿಯ ಬೇಸಾಯಕ್ಕೆ ತಕ್ಕಂತೆ ನೀರಾವರೀ ಕಾಲುವೆಗಳ ಆಡಳಿತದಲ್ಲಿ ಕಂಡುಬಂದ ಅಲಕ್ಷ್ಯ ಅಥವಾ ಜೀರ್ಣ ಶೀರ್ಣತೆಗಳಿಂದಾಗಿ ವಾರ್ಷಿಕ ಆದಾಯದಲ್ಲಿ ಕೊರತೆ ಯುಂಟಾಗಿ ತಿರುಮಲೆಯಲ್ಲಿ ಸಾಕಷ್ಟು ಅನ್ನಸತ್ರಗಳ ವ್ಯವಸ್ಥೆ ಲುಪ್ತವಾದುದರಿಂದ ಹೀಗಾಗಿರಬಹುದು. ಏನೇ ಆದರೂ ಕ್ರಿ.ಶ. 1616 ರಲ್ಲಿ ರಾಮರಾಜಯ್ಯನ ಅವಸರದಲ್ಲಿ (ಅವನ ದಾನದ ನಿವೇದನೆಯ ಸಂಧಿಯಲ್ಲಿ) 200 ತಳಿಗೆ ನಿವೇದನೆಯು ಆಗುತ್ತಿದ್ದಿತೆಂಬುದನ್ನು ತಿ.ತಿ. 687 ರಲ್ಲಿ ಕಾಣಬಹುದು. ಈ ನಿವೇದನೆಯಲ್ಲಿನ ಸ್ಥಾನತ್ತಾರರ ಪಾಲಿನಲ್ಲಿ ಹನ್ನೆರಡು ತಳಿಗೆಗಳನ್ನು ಅಲ್ಲಿನ ಶ್ರೀವೈಷ್ಣವ ರಾಮಾನುಜ ಕೂಟದಲ್ಲಿ ಅಂದಿನಿಂದ ವಿತರಿಸಲಾಗುತ್ತಿದ್ದಿತು. ಜಿ.ಟಿ. 427 ಕ್ರಿ.ಶ. 1606ರಲ್ಲಿ ನಾರಾಯಣ ದಾಸರಿಯ ದಾನವಾಗಿ ತಿರುಪತಿಯ ರಾಮಾನುಜ ಕೂಟದಲ್ಲಿ 50 ರೇಖೈ ಹೊನ್ನಿನಿಂದ ಅನ್ನಪ್ರಸಾದಗಳ ವಿತರಣೆ ನಡೆಯುತ್ತಿದ್ದಿತೆಂಬುದನ್ನೂ ತಿಳಿಯಬಹುದಾಗಿದೆ. ತಿರುಪತಿ ಯಲ್ಲಿ ನಡೆಯುತ್ತಿದ್ದ ಒಂದೇ ಒಂದು ರಾಮಾನುಜ ಕೂಟವೆಂದರೆ ಕ್ರಿ.ಶ. 1547ರಲ್ಲಿ ಅರವೀಟಿ ಕೊಂಡರಾಜನು ಆರಂಭಿಸಿದುದೇ ಆಗಿದ್ದಿತು. ಇಲ್ಲಿ ಪ್ರತಿನಿತ್ಯವೂ 2000 ಮಂದಿ ಯಾತ್ರಿಕರಿಗೆ ಭೋಜನ ದೊರೆಯುತ್ತಿದ್ದಿತು. 1616ರ ವೇಳೆಗೆ ಈ ಯಾತ್ರಿಕರು ಯಾವ ರೀತಿಯ ಸೌಲಭ್ಯಗಳನ್ನು ಪಡೆಯುತ್ತಿದ್ದರೆಂಬುದನ್ನು ಹೇಳಲು ಸಾಧ್ಯವಿಲ್ಲ. ತಾಳಿಕೋಟೆಯ ಯುದ್ಧಾನಂತರದ ಎರಡು ನೂರು ವರ್ಷಗಳಲ್ಲಿ ಮಾಡಿದ ಎಲ್ಲ ನಿವೇದನೆಗಳೂ ಯಾವುದಾದರೂ ಉತ್ಸವ ಅಥವಾ ಉಭಯಗಳಿಗೆ ಎಂದಾಗಿ ಈ ಎಲ್ಲ ದಾನಗಳೂ ತಿರುಪತಿಯಲ್ಲಿ ಆದವು. ಹೀಗಾಗಿ ಇಲ್ಲಿನ ನಿವೇದನೆಗಳೆಲ್ಲ ತಿರುಮಲೆಯ ಆಲಯದ ಯಾತ್ರಿಕರ ಬಳಕೆಯ ಬದಲಿಗೆ ತಿರುಪತಿಯ ನಿವಾಸಿಗಳಲ್ಲಿ ಬಳಕೆಗೆ ಬಂದಿರಬೇಕು.

ಈ ಒಂದು ಅವ್ಯವಸ್ಥೆಯ ಅವಧಿಯಲ್ಲಿಯೂ ಮೂರು ಇಡೀ ಗ್ರಾಮಗಳ ದಾನಗಳ ಸಂದರ್ಭಗಳಿದ್ದವು. ಕ್ರಿ.ಶ. 1592 ರಲ್ಲಿ ವಿಜಯನಗರದ ನಿವಾಸಿಯಾದ ಪೆರಿಯ ತಿಮ್ಮಪ್ಪನಾಯಕರು ಇವುಗಳಲ್ಲಿನ ಮೊದಲನೆಯ ಗ್ರಾಮದಾನ (ಜಿ.ಟಿ. 412) ಮಾಡಿದನು. 320 ರೇಖೈ ಪೊನ್‌ಗಳ ವಾರ್ಷಿಕಾದಾಯವಿರುವಂತಹ ಅಗರಂ ಪುಂದಮಲ್ಲಿ ಗ್ರಾಮವನ್ನೀತ ದಾನ ಮಾಡಿದ್ದಾದು ತೆರ್ಕು ಮಾಗಾಮಿಯ ಪಳಯಂ ಸೀಮೆಯಲ್ಲಿದ್ದಿತು. ಈ ಗ್ರಾಮದಾನದ ಎಲ್ಲ ಉಭಯ (ಸೇವೆ) ಗಳೂ ತಿರುಪತಿಯ ಗೋವಿಂದರಾಜಸ್ವಾಮಿ ಆಲಯ ಹಾಗೂ ರಾಮಾನುಜರ ಗುಡಿಗಳಿಗೇ ಸೇರುವಂತಿದ್ದಿತು. ಎರಡನೆಯ ಗ್ರಾಮದಾನವು (ಜಿ.ಟಿ. 413) 1594 ರಲ್ಲಿ ಕೋಯಿಲ್ ಕೇಳ್ವಿ ಅಣ್ಣನ್ ರಾಮಾನುಜ ಜೀಯರ್ ನೀಡಿದ್ದು - 200 ರೇಖೈ ಪೊನ್ ವಾರ್ಷಿಕ ಆದಾಯದ ತಿಮ್ಮನಾಯಕಪುರಂ ಗ್ರಾಮ - ಇದು ವಡಗು ಮಾಗಾಮಿಯ ಕೊಂಡವೀಡು ಸೀಮೆಯಲ್ಲಿದ್ದಿತು. ಈ ದಾನದ ಹಲವು ಸೇವಾದಾರರು ತಿರುಮಲೆಯಲ್ಲಿಯೂ ಮಿಕ್ಕವರು ತಿರುಪತಿಯಲ್ಲಿಯೂ ಇದ್ದರು. ಮೂರನೆಯ ಗ್ರಾಮ ದಾನ (ಜಿ.ಟಿ. 427) ವು ಚಂದ್ರಗಿರಿ ರಾಜ್ಯದ (ಉಳ್ ಮಂಡಲಂ) ಲ್ಲಿದ್ದ ತಿಮ್ಮಾಪುರ ಗ್ರಾಮ. ಇದರ ವಾರ್ಷಿಕ ಆದಾಯ 600 ರೇಖೈ ಪೊನ್. ದಾನ ನೀಡಿದವರು ನಾರಾಯಣ ದಾಸರಿ ನಾಯಕರ್. ಇದರ ಎಲ್ಲ ಸೇವೆಗಳೂ ತಿರುಪತಿಯ ಗೋವಿಂದರಾಜಸ್ವಾಮಿ ಗುಡಿಯಲ್ಲಿಯೂ, ತಿರುಪತಿ ಗೋವಿಂದರಾಜಸ್ವಾಮಿ ಪುಷ್ಕರಿಣಿಯ ದಡದಲ್ಲಿ ದಾನಿಯು ಸ್ಥಾಪಿಸಿದ ರಘುನಾಥಸ್ವಾಮಿಗೂ ನಡೆಯಬೇಕಾಗಿದ್ದಿತು.

ಇಡೀ ಗ್ರಾಮಗಳ ರೂಪದಲ್ಲಿನ ದಾನಗಳು ಶಕವರ್ಷ 1528 ರ ಪರಾಭವ ವರ್ಷಕ್ಕೆ (1606 - 1607) ಕೊನೆಗೊಳ್ಳುತ್ತವೆ. ಇದರ ನಂತರದ ಎಲ್ಲ ದಾನಗಳೂ ಉಳ್‌ಮಂಡಳದ (ಚಂದ್ರಗಿರಿ ರಾಜ್ಯದ) ತಿರುಮಲೆ ತಿರುಪತಿಗಳ ಬಳಿಯ ತಿರುವಿಡೈಯಾಟ್ಟಗ್ರಾಮಗಳ (ದೇವರಿಗೆ ಬಿಟ್ಟು ಗ್ರಾಮಗಳ) ಹಳೆಯ ನೀರಾವರೀ ಕಾಲುವೆಗಳ ಹೂಳೆತ್ತಲೆಂದೋ, ಹೊಸ ಕಾಲುವೆಗಳನ್ನು ತೋಡಿಸಲೆಂದೋ ನೀಡಿದವುಗಳು. ಶಕವರ್ಷ 1596 ದುರ್ಮುಖಿ ಹಾಗೂ 1616 ರ ನಳ ಸಂವತ್ಸರದನಡುವೆ

ಆರು ಮಂದಿ ದಾನಿಗಳಿಂದ ಇಂತಹ ಹತ್ತು ಹಳೆಯ ಕಾಲುವೆಗಳ ಹೂಳೆತ್ತಿ ಆಳ ಹೆಚ್ಚಿಸಲಾಯಿತು. ರಾಮಾಪುರದ ರಾಯನೇರಿ ಕಾಲ್‌ವಾಯಿ (ರಾಯನ ಕೆರೆಯ ಕಾಲುವೆ) ಯನ್ನು (ಜಿ.ಟಿ. 350) ಅದರ ಬಳಿಕ ನಿಂತು ಹೋಗಿರಲು, ಅದೇ ಊರಿನ ಶಿಲಂಬಿಡಿ ಯರ್ ಶೆಟ್ಟಿಯು ವಾರ್ಷಿಕ 140 ರೇಖೈ ಆದಾಯ ಬರುವಂತೆ ಆ ಕಾಲುವೆಯ ಜೀರ್ಣೋದ್ಧಾರ ಮಾಡಿಸಿದನು. ವಿಜಯನರಗದ ಬೊಕ್ಕಸಂ ನರಸಯ್ಯನು (ಜಿ.ಟಿ. 366) ಒಂದು ನೀರಾವರೀ ಕಾಲುವೆಯನ್ನು, ಅದರ ನೀರಿನಿಂದ ಬೇಸಾಯವಾಗಿ ಬರುವ ಸಾಮಾನ್ಯ ಆದಾಯಕ್ಕಿಂತ 27 ರೇಖೈ ಪೊನ್ ಹೆಚ್ಚಿಗೆ ಬರುವಂತೆ ರಿಪೇರಿ ಮಾಡಿಸಿದ. ವಿಜಯನಗರದ ಮಾಲ್ಯವಂತ ಪರ್ವತದಲ್ಲಿ ಕೇಂದ್ರವಾಗಿದ್ದ ವಿಜಯನಗರ ಸೇನಾಧಿಪತಿ ಹನುಮಯ್ಯರ್ ಅಣ್ಣಂಗರ್ (ಜಿ.ಟಿ 97) ಅವರು ಕಲ್ಲಾರು, ನರಿಯಾರು ನದಿಗಳ ಮೂರು ಕಾಲುವೆಗಳನ್ನು ಹೂಳೆತ್ತಿಸಿ, ಆಳ ಮಾಡಿಸಿ, ತಾನು ಕಟ್ಟಿಸಿದ ಅಣ್ಣಂಗರ ಪಾಳಯಂ ಗ್ರಾಮದ ವಾರ್ಷಿಕಾದಾಯದ ಮುಕ್ಕಾಲು ಭಾಗವನ್ನು ಎಂದರೆ 365 ರೇಖೈ ಪೊನ್ ಗಳನ್ನು ದಾನವಾಗಿ ನೀಡಿದ.

ಸಿಂಗಯ ನಾಯಕನು (ತಿ.ತಿ. 324) ಪೂಂಡಿ ಗ್ರಾಮದ ನಾಟ್ಟುಕಾಲ್‌ವಾಯ್ ಅನ್ನು ಜೀರ್ಣೋದ್ಧಾರ ಗೊಳಿಸಿ ಘಟ್ಟದ ಕೆಳಗಿನ (ಪಳ್ಳಂ ಭೂಮಿ) ಭೂಮಿಯ ಆದಾಯದಲ್ಲಿ ಎರಡು ಭಾಗವನ್ನು ನೀಡುತ್ತ ಪ್ರತಿಯಾಗಿ ಶ್ರೀ ವೆಂಕಟೇಶನಿಗೆ ಪ್ರತಿನಿತ್ಯವೂ ಒಂದು ತಿರುಪ್ಪೊನಕವನ್ನು ನಿವೇದಿಸುವ ಹಕ್ಕು ಪಡೆದನು. ವೆಂಕಟಪತಿ ದೇವರಾಯರು ನಿರ್ಮಿಸಿದ ದಂಡನಾಯಕ ಅಚ್ಯುತಾಪುರ ಗ್ರಾಮದ ನಾಟ್ಟುಕ್ಕಾರ ವೆಂಕಟಯ್ಯನು (ತಿ.ತಿ. 686) ಎರಡು ನೀರಾವರಿ ಕಾಲುವೆಗಳನ್ನು 1614 ರಲ್ಲಿ ಜೀರ್ಣೋದ್ಧಾರಗೊಳಿಸಿದ. ಇವುಗಳಲ್ಲಿ ಒಂದು ಕುಡವೂರು ನಾಡಿನ ನಾಯಕನ್ ಕಾಲ್‌ವಾಯ್ ಗ್ರಾಮದ್ದು ಆಗಿದ್ದಿತು. ಈ ರಿಪೇರಿಯಿಂದಾಗಿ 400 ಪುಟ್ಟಿ ಭತ್ತದ ಹೆಚ್ಚಿನ ಆದಾಯವಾಗುವಂತಿದ್ದಿತು. ಅಂದಿನ ಒಂದು ಪುಟ್ಟಿ ಭತ್ತದ ಬೆಲೆ ನಾಲ್ಕು ಪಣಂಗಳಾಗಿದ್ದವು. ಕಡೆಯದಾಗಿ ಶ್ರೀಮನ್ಮಹಾಮಂಡಳೇಶ್ವರ ಚಿನ್ನತಿಮ್ಮರಾಜಯ್ಯನ ಪ್ರತಿನಿಧಿ ತಿರುನಾರಾಯಣಪುರದ ಘಟ್ಟುತಿರು ವೆಂಕಟ ಅಯ್ಯಂಗಾರ್ಯನು ಎರಡು ನೀರಾವರೀ ಕಾಲುವೆಗಳನ್ನು ತೋಡಿಸಿದ. ಇವುಗಳಲ್ಲಿ ಒಂದು ದೇವದಾನ ಗ್ರಾಮವಾದ ಇಳಮಂಡಿಯಂ ನಲ್ಲಿ ತೋಡಿಸ ಲಾಯಿತು. ಮತ್ತೊಂದು ಕಾಲುವೆಯ ಹಳ್ಳಿಯ ಹೆಸರು ಶಾಸನದಲ್ಲಿ ತ್ರುಟಿತವಾಗಿದೆ. ಈ ಎರಡೂ ಕಾಲುವೆಗಳಿಂದಾಗಿ ಈ ಹಿಂದೆ ಉತ್ಪಾದನೆ ಆಗುತ್ತಿದ್ದ ಭತ್ತಕ್ಕಿಂತ, 281 ರೇಖೈ ಪೊನ್ ಹಾಗೂ 6 ಪಣಂ ಗಳಷ್ಟು ಬೆಲೆಯ ಹೆಚ್ಚಿನ ಭತ್ತ ಉತ್ಪಾದನೆಯಾಗುತ್ತಿದ್ದಿತು.

ಮೇಲಿನ ಎಲ್ಲ ಸಂದರ್ಭಗಳಲ್ಲಿಯೂ ಉಳ್ ಮಂಡಲದಲ್ಲಿನ ನೀರಾವರೀ ಕಾಲುವೆಗಳ ತೋಡುವಿಕೆ ಹೂಳೆತ್ತುವಿಕೆ, ಮರಮ್ಮತ್ತುಗಳು, ಸ್ಥಾನತ್ತಾರರ ಸಲಹೆ, ಪ್ರಾರ್ಥನೆಗಳ ಮೂಲಕವೇ ಸಾಧ್ಯವಾಗಿರುವುವು. ದಾನಿಗಳು ಶ್ರೀಮಂತರೂ ಪ್ರಭಾವ ಶಾಲಿಗಳೂ ಆಗಿದ್ದು, ಸ್ಥಳೀಯ ಕೆಲಸಗಾರರನ್ನೂ ಹೊಂದಿಸಿಕೊಂಡು ಕೆಲಸ ಕೈಗೂಡಿಸುವ ಸಾಮರ್ಥ್ಯ ಪಡೆದವರಾಗಿದ್ದರು. ಈ ರೀತಿಯ ಆರ್ಥಿಕ ಪರಿಸ್ಥಿತಿಗಳು ಕ್ರಿ.ಶ. 1606ರ ಹೊತ್ತಿಗೆ ದಯನೀಯವಾಗಿ ಕೆಳಮುಖವಾಗಿ ಪಯಣಮಾಡುತ್ತಿದ್ದ ದೇಶದ ಪರಿಸ್ಥಿತಿಯನ್ನೂ ಸ್ವಲ್ಪಮಟ್ಟಿಗೆ ತೋರಿಸುತ್ತವೆ.

ಇಂತಹ ರೀತಿಯ ದಾನಗಳಿಗೆ ಇರಬಹುದಾದ ಮತ್ತೊಂದು ಕಾರಣವೆಂದರೆ ಅಂದಿನ ಉಲ್ಲೋಲ ಕಲ್ಲೋಲ ಪರಿಸ್ಥಿತಿಯಲ್ಲಿ ತಿರುಪತಿಯಿಂದ ಬಹುದೂರವಾಗಿ ಹೊರಗುಳಿಯುವ ಜಮೀನುಗಳಿಂದ ವಾರ್ಷಿಕ ಆದಾಯವನ್ನು ನಿರೀಕ್ಷಿಸುವುದು, ಪಡೆಯುವುದು ಕಷ್ಟಸಾಧ್ಯವಾಗಿರಬೇಕು. ಸ್ಥಾನತ್ತಾರರೂ, ಆಲಯದ ತಿರುಪ್ಪಣಿ ಭಂಡಾರತ್ತಾರರೂ ವಿಜಯನಗರದ ವಿಶಾಲ ರಾಜ್ಯದಲ್ಲಿ ಹರಡಿ, ಹಲವು ಮಾಗಾಮಿ, ಸೀಮೆ, ನಾಡುಗಳಲ್ಲಿ ಹಂಚಿ ಹೋಗಿದ್ದ ಸುಮಾರು 200 ಕ್ಕೂ ಹೆಚ್ಚಿನ ಹಳ್ಳಿಗಳ ಮೇಲುಸ್ತುವಾರಿಯನ್ನೂ ನೋಡಿ ಕೊಳ್ಳಬೇಕಿತ್ತು. ಏನೇ ಆದರೂ ಕ್ರಿ.ಶ. 1616 ರ ವರೆಗೆ ಆಲಯ ಭೂಮಿಗಳ ಆಡಳಿತದಲ್ಲಿ ಉಲ್ಲೇಖನೀಯವಾದ ಕಠಿಣ ಪರಿಸ್ಥಿತಿ ಗಳುಂಟಾದಂತೆ ಕಂಡುಬರುವುದಿಲ್ಲ. ಉದಾ : ಮಹಾಮಂಡಲೇಶ್ವರ ಚಿನ್ನತಿಮ್ಮಯ್ಯನ ದಾನಶಾಸನವು ಕ್ರಿ.ಶ. 1616 ರ ವರೆಗೆ ಪ್ರತಿನಿತ್ಯವೂ ರಾಮರಾಜಯ್ಯನ ಅವಸರದಲ್ಲಿ 200 ತಳಿಗೆ ನಿವೇದನೆ ಕ್ರಮತಪ್ಪದೆ ನಡೆಯುತ್ತಿದ್ದಿತೆಂದು ತಿಳಿಸುತ್ತದೊಲ್ಲಿ ಹೇಳುವ

ನಾಲ್ಕರಲ್ಲಿನ ಎರಡು ಗ್ರಾಮಗಳು ಸಿಂಗಳಬಾವಿ ಹಾಗೂ ವಳಕೋವಿಲ್‌ಗಳು - ಯುದ್ಧದಿಂದಾಗಿ ಅಸ್ತವ್ಯಸ್ತವಾಗಿದ್ದ ರಾಯಚೂರು ಮುದ್ಗಲ್ ಸೀಮೆಗಳಲ್ಲಿದ್ದವೆಂಬುದನ್ನೂ ಮತ್ತೆರಡು ಗ್ರಾಮಗಳ - ಯರಲಚ್ಚೇರಿ, ಮಾಕಾಲಿಪಟ್ಟಿಗಳು ಪೆರಿಯಪಾಕ್ಕಡೀಮೆಯಲ್ಲಿ (ಪ್ರಾಯಶಃ ತೆಂಕು - ದಕ್ಷಿಣ - ಪ್ರಾಂತ್ಯ) ದಲ್ಲಿದ್ದವೆಂಬುದನ್ನು ನೆನೆಯಬೇಕಾಗುತ್ತದೆ.

412 ಜಿ.ಟಿ. ಶಾಸನದ ಪ್ರಾಕಾರ ಕ್ರಿ.ಶ. 1616 ರ ವೇಳಗೆ ಶ್ರೀ ಗೋವಿಂದರಾಜಸ್ವಾಮಿಯ ಬ್ರಹ್ಮೋತ್ಸವ ಗಳು ವರ್ಷದಲ್ಲಿ ಮೂರುಬಾರಿಯಿಂದ ನಾಲ್ಕುಬಾರಿ ನಡೆಯುವಂತೆ ಏರ್ಪಾಡುಗಳಾಗಿದ್ದವೆಂದೂ ಇತರ ಉತ್ಸವಗಳೂ ಎಂದಿನಂತೆಯೇ ನಡೆಯುತ್ತಿದ್ದ ವೆಂದೂ ತಿಳಿದುಬರುತ್ತದೆ. ಇದರಂತೆಯೇ ತಿರುಮಲೆಯಲ್ಲಿ ವರ್ಷಕ್ಕೆ ಹನ್ನೊಂದು ಬ್ರಹ್ಮೋತ್ಸವಗಳು ನಡೆಯುತ್ತಿದ್ದವು. ಸೇವೆ ನಿವೇದನೆ ಗಳು ಯಥೇಚ್ಛವಾಗಿದ್ದು ಎಲ್ಲವೂ ಕ್ರಿ.ಶ. 1580 ರ ನಂತರ ಸ್ಥಾಪಿತವಾಗಿದ್ದವು. ರಾಮಾನುಜ ಕೂಟಗಳು ತಿರುಮಲೆ ತಿರುಪತಿಗಳಲ್ಲಿ ನಡೆಯುತ್ತಿದ್ದವು. ನೀರಾವರೀ ಸಂಪನ್ಮೂಲಗಳೂ ಕಾಲುವೆ ಕೆರೆಗಳೂ ನಿರ್ಲಕ್ಷ್ಯಗೊಂಡು ಬೀಳಾಗಲು ಕಾರಣ ಪ್ರಾಯಶಃ ರಾಜಕೀಯ ಏಳುಬೀಳುಗಳು ಅಥವಾ ವರಸೆಯಾಗಿ ಅನಾವೃಷ್ಟಿ ಆಗಿದ್ದಿರಬೇಕು.

## 4. ಅರವೀಡು ವಂಶದ ಕೊನೆಯ ದಿನಗಳಲ್ಲಿ ತಿರುಮಲೆ

ಕ್ರಿ.ಶ. 1665 ರ ಬೇಸಿಗೆಯಲ್ಲಿ ತಿರುಮಲೆಯನ್ನು ಸಂದರ್ಶಿಸಿ ಶ್ರೀರಂಗರಾಯನು ತಿರುವೆಂಗಳನಾಥನನ್ನು ಆರಾಧಿಸಿ, ತನ್ನ ಅರಸೊತ್ತಿಗೆ ಯನ್ನು ಮರಳಿ ಪಡೆಯುವುದಲ್ಲಿ ದೇವರ ಅನುಗ್ರಹಾಶೀರ್ವಾದವನ್ನು ಬಯಸಿದಾಗ ಒಂದು ಶಾಸನವನ್ನು ಹಾಕಿಸಿದ. (ಇದು ತೆಲುಗು ಭಾಷೆಯಲ್ಲು, ತೆಲುಗು ಲಿಪಿಯಲ್ಲೂ ಇದೆ)

1. ವಿಶ್ವಾವಸು ಸಂವತ್ಸರ ಜೇಷ್ಠ ಬ. 10 ಲೋ.

2. ಶ್ರೀ ತಿರುವೆಂಗಳನಾಥ ದೇವುನಿ... ಶ್ರೀಮ.

3. ದ್ರಾಜಾದಿರಾಜರಾಜಪರಮೇಶ್ವರ ಶ್ರೀವೀರ

4. .................. ಶ್ರೀರಂಗರಾಜ ಸದಾಸೇವ.

- ಶಾಸನದಲ್ಲಿ ವರ್ಷಚಕ್ರದ 'ವಿಶ್ವಾವಸು' ಸಂವತ್ಸರದ ಹೆಸರಿದ್ದರೂ ಶಕವರ್ಷದ ಸೂಚನೆಯಿಲ್ಲ. ಆದರೆ ಈ ಶಾಸನವು ವಿಜಯನಗರ ಸಾಮ್ರಾಟ ಶ್ರೀರಂಗರಾಯನನ್ನು ಹೆಸರಿಸುವುದು.

ತನ್ನ ರಾಜ್ಯವನ್ನು, ಗೋಲ್ಕೊಂಡ ಬಿಜಾಪುರ ಸುಲ್ತಾನರುಗಳಿಗೆ ಆತ ಸೋತಿದ್ದ. ಈತನ ರಾಜ್ಯ ಭಾಗವು ಗೋಲ್ಕೊಂಡದ ಸೇನಾಧಿಪತಿ ಮೀರ್ ಜುಮ್ಲಾನ ಭಾಗಕ್ಕೆ 1656 ರಲ್ಲಿ ಸೇರಿ, ದೆಹಲಿಯ ಮೊಗಲ್ ಬಾದಷಹ ಷಹಜಹಾನನ ನೇರ ಪ್ರತಿನಿಧಿಯಾಗಿ ಆತ ಈ ಭಾಗವನ್ನು ತನ್ನ ತೆಕ್ಕೆಗೆ ಒಗ್ಗಿಸಿಕೊಂಡ. ತುಪಾಕಿ ಕೃಷ್ಣಯ್ಯ ಶೆಟ್ಟಿ ಮೀರ್ ಜುಮ್ಲಾನ ಸೇನಾಧಿಪತಿಯಾಗಿಯೂ, ಮೀರ್ ಜುಮ್ಲಾ ದೆಹಲಿ, ಬಂಗಾಳಗಳತ್ತ ಹೋಗುವಾಗೆಲ್ಲ ಮದರಾಸಿನಲ್ಲಿ ಸೈಯದ್ ಆಲಿ ಮೀರ್ ಜುಮ್ಲಾನ ಪ್ರತಿನಿಧಿಯಾಗಿಯೂ 1656 ರಿಂದ 1663 ವರೆಗೆ (ಜುಮ್ಲಾನ ಮರಣದವರೆಗೆ) ನಡೆದುಕೊಂಡರು. ಇವನ ಉತ್ತರಾಧಿಕಾರಿಯಾಗಿ ನೇಕ್‌ನಮ್ ಖಾನನು ನೇಮಕ ವಾದ. ಎಲ್ಲ ಬಂಡುಕೋರ ದಳಪತಿಗಳನ್ನೂ ಈತ ಹದ್ದಿನಲ್ಲಿಡಬೇಕಾಗಿದ್ದಿತು. ತಿರುಪತಿಯ ಆಲಯವು ಬಂಡಾಯದ ನೆಲೆಯಾಗಿದ್ದಿರ ಲಾರದು. ಶ್ರೀರಂಗರಾಯನು 1657 ರಲ್ಲಿಯೇ ಈ ಪ್ರಾಂತ್ಯವನ್ನು ಪುನಃ ವಶಪಡಿಸಿಕೊಂಡಿದ್ದ. ಆದರೆ 1663 ರಲ್ಲಿ ಮೀರ್ ಜುಮ್ಲಾನನ್ನು ಅನುಸರಿಸಿ ಬಂದ ನೇಕ್‌ನಮ್ ಖಾನನ ಹೊತ್ತಿಗೆ ಶ್ರೀರಂಗರಾಯ ಈ ಪ್ರಾಂತ್ಯದ ನಿಜವಾದ ರಾಜನಾಗಿದ್ದನೇ ಎಂಬುದು ತಿಳಿದು ಬಂದಿಲ್ಲ. ಏನೇ ಆದರೂ ನೇಕ್‌ನಮ್ ಖಾನನು 40,000 ಸೈನಿಕರ ದಂಡಿನೊಡನೆ ಧಾಳಿ ಮಾಡಿದ. ಆಂಗ್ಲ, ಡಚ್, ನೆಲೆಗಳೂ ಸಹ ಇವನಿಗೆ ಕಪ್ಪ ಕಾಣಿಕೆಗಳನ್ನು ಕೊಡಬೇಕಾಯಿತು. ಮದರಾಸಿನ ವಿಷಯದಲ್ಲಿ ಈ ತೆರಿಗೆಯನ್ನು ಅವನು ವಾರ್ಷಿಕ 380 ಪಗೋಡಗಳಿಂದ 1200 ಪಗೋಡಗಳಿಗೆ ಏರಿಸಿದ. ನೇಕ್‌ನಮ್ ಖಾನನ ಪ್ರತಿನಿಧಿ ಯಾಗಿ 1668 ರಲ್ಲಿ ಚಿನ್ನಂಪಲ್ಲಿ ಮಿರ್ಜಾ

ತಿರುಪತಿಯಲ್ಲಿ ಪಾಳಯ ಹೂಡಿದ್ದನೆಂಬುದು ತಿಳಿದ ವಿಷಯವೇ ಆಗಿದೆ. 1665ರ ಶ್ರೀರಂಗರಾಯನ ತಿರುಮಲೆಯ ಸಂದರ್ಶನವು 1663 - 1668 ರ ನಡುವೆ ನಡೆದಿರಬೇಕು. 1665 ರಲ್ಲಿ ಆತ ಕನಿಷ್ಠಪಕ್ಷ ಚಂದ್ರಗಿರಿಯಲ್ಲಿ ಯಾದರೂ ಸಾಮ್ರಾಟನಾಗಿದ್ದಲ್ಲಿ ಈತನ ಸಂದರ್ಶನವು ಮತ್ತೂ ಅಲಂಕಾರಿರವಾದ ಭಾಷೆಯಲ್ಲಿ ಲಲಿತವಾಗಿ, ಆಲಯದ ಗೋಡೆಯ ಮೇಲೆಯೇ ಕಂಡುಬರುತ್ತಿದ್ದಿತು. ಈಗಿ ವಂತೆ ಬೇರೆಯೇ ಆದ ಶಿಲಾಫಲಕದಲ್ಲಿ ಅಲ್ಲ.

ಕ್ರಿ.ಶ. 1664 ರಲ್ಲಿ ಶ್ರೀರಂಗರಾಯನು ಕಳೆದು ಹೋದ ಸಾಮ್ರಾಜ್ಯವನ್ನು ಮರಳಿಪಡೆಯಲು ಕಡೆಯ ಮಹತ್ಸಾಹಸವಾಡಿದ ನೆಂದು ತಿಳಿದುಬಂದಿದೆ. ಆದರೆ ಸಾಕಷ್ಟು ಬೆಂಬಲವನ್ನು ಕೂಡಿಸಿಕೊಳ್ಳುವಲ್ಲಿ ವಿಫಲ ನಾದ. ಮೈಸೂರು ಅವನ ಕೈ ಹಿಡಿಯಲಿಲ್ಲ. ಹೀಗಾಗಿ 1665ರ ಶಾಸನವು ತಿರುವೆಂಗಳನಾಥನಲ್ಲಿ "ದೇವರ ತನಕ ದಯಗೆ ಪ್ರಾರ್ಥನೆ" ಎಂದೇ ಭಾವಿಸಬೇಕಾಗುತ್ತದೆ. ಪ್ರಾರ್ಥನೆಯ ಸಂಪೂರ್ಣ ಶರಣಾಗತಿಯ ವಿನಃ ಬೇರೆ ದಾರಿಯೇ ಇರಲಿಲ್ಲ. ಹಾಗಾಗಿ ಈ ವಿಷಯವನ್ನು ಕ್ರಿ.ಶ. 1665 ನ್ನು ತಿರುಮಲೆಯ ಪ್ರಾಂತ್ಯದಲ್ಲಿ ವಿಜಯ ನಗರ ಸಾಮ್ರಾಜ್ಯದ ಕೊನೆಯ ವರ್ಷವೆಂದು ಪರಿಗಣಿಸಬೇಕು.

ಆಲಯದ ಚರಿತ್ರೆಯಲ್ಲಿ ಕ್ರಿ.ಶ. 1359ರಲ್ಲಿ ಮಂಗಿದೇವ ಮಹಾರಾಜನು ಆಲಯ ವಿಮಾನಕ್ಕೆ ಚಿನ್ನದ ಮುಲಾಮೀಕರಣ ಮಾಡಿಸಿದಾಗ ಆರಂಭವಾದ ವಿಜಯನಗರದ ಹಿಂದೂರಾಜರ ಸಂಬಂಧವು ಆಲಯದಲ್ಲಿ ಕ್ರಿ.ಶ. 1665 ರಲ್ಲಿ ಶ್ರೀರಂಗರಾಯನು ಬಿಟ್ಟುಹೋದ ನೆನಪಿನ ಶಿಲಾಫಲಕದೊಡನೆ ಕೊನೆಯಾಯಿತು ಎಂದು ಹೇಳಬೇಕು. ಈ ಸಂಬಂಧ ಬರೇ ಮೂರು ಶತಮಾನ ದ್ದಾಯಿತು.

ಗೋಲ್ಕೊಂಡ ಬಿಜಾಪುರಗಳ ಷಿಯಾ ಮುಸಲ್ಮಾನರ ಅರಸರ ಪ್ರಾಬಲ್ಯ ಕರ್ನಾಟಿಕ ಪ್ರಾಂತ್ಯದಲ್ಲಿ ಶಾಶ್ವತವಾದ ಘಟ್ಟವೇನೂ ಆಗಲಿಲ್ಲ. ದೆಹಲಿಯ ಔರಂಗಜೇಬನು ಸಾಮ್ರಾಟನಾದ ನಂತರ ಆತ ಇವರೆಲ್ಲರನ್ನು ಸದೆಬಡಿದು ದಖ್ಖನ್ ಹಾಗೂ ಕರ್ನಾಟಿಕ ಪ್ರಾಂತ್ಯಗಳ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳುವ ನಿರಂತರವಾದ ಕನಸುಕಂಡ. ಕರ್ನಾಟಿಕ ಪ್ರದೇಶವನ್ನು ಆಕ್ರಮಿಸಿದರೂ ತನ್ನ ಸಾಮ್ರಾಜ್ಯದಲ್ಲಿ ಅದನ್ನು ಸೇರಿಸಿಕೊಳ್ಳಲಾಗಲಿಲ್ಲ. ಬಿಜಾಪುರದ ಮುಸಲ್ಮಾನ ದೊರೆಯ ಆಶ್ರಯದಲ್ಲಿ ಷಹಜಿಯ ಪ್ರಾಬಲ್ಯದಿಂದಾಗಿ, ದಕ್ಷಿಣದಲ್ಲಿ ತಂಜಾವೂರಿನಲ್ಲಿ ಶೀಘ್ರಾಭಿವೃದ್ಧಿ ಹೊಂದಿದ ಮರಾಠರು ಸಾಮಂತರಾಜ್ಯಸ್ಥಾಪನೆ ಮಾಡಿದ್ದರಿಂದ ಬಾದಷಹನ ಆಕಾಂಕ್ಷೆಗಳು ಮುರಿದುಬಿದ್ದವು. ನಂತರದ ಕಾಲದಲ್ಲಿ ಷಹಜಿಯ ಮಗ ಶಿವಾಜಿ ಪ್ರಬಲವಾಗಿ ಬಾದಷಹನಿಗೆ ಎದುರಾದ.ತನ್ನ ತಂದೆಯ ರಾಜ್ಯದಲ್ಲಿನ ಪಾಲು ವಿಷಯದಲ್ಲಿ ಸೋದರ ವೆಂಕಾಜಿಯೊಡನೆ ಜಗಳವಾಡಿದ ಶಿವಾಜಿ ಕಡೆಗೆ ಇಡೀ ಕರ್ನಾಟಿಕ ಪ್ರಾಂತ್ಯದಲ್ಲಿ ಪ್ರಭಾವ ಬೀರಬೇಕೆಂಬ ಮಹತ್ವಾಕಾಂಕ್ಷೆ ಹೊಂದಿ, ಔರಂಗಜೇಬನ ಆಕಾಂಕ್ಷೆಗಳಿಗೆ ತಡೆಯೊಡ್ಡಿದ್ದ. ವಿಜಯನಗರದರಸರ ಕಾಲದಲ್ಲಿ ಕುಮಾರ ಕಂಪಣನು ಮಧುರೆಯ ಸುಲ್ತಾನರೊಡನೆ ಸೆಣಸಾಟ ನಡೆಸಿದಂತೆಯೇ, ಶಿವಾಜಿಯೂ ಅವನ ಸಂತತಿಯವರೂ ಜಿಂಜಿಯ ಕೋಟೆಯಲ್ಲಿದ್ದ ಮೊಗಲರ ಔರಂಗಜೇಬನ ಮುಸಲ್ಮಾನ ಸೈನ್ಯದೊಡನೆ ನಿರಂತರವಾಗಿ ಹೋರಾಡಿದರು. ಈ ತಿಕ್ಕಾಟದಲ್ಲಿ ಜಿಂಜಿಯ ಕೋಟೆ ಪ್ರಧಾನಪಾತ್ರ ವಹಿಸಿದ್ದಿತು. ಮರಾಠರು ಹಾಗೂ ಮುಸಲ್ಮಾನರ ಪ್ರಭಾವ ಹಾಗೂ ಪ್ರಾಬಲ್ಯಗಳ ಪರಸ್ಪರ ವಿಘಾತತ್ಫಲವಾದ ಬ್ರಿಟಿಷರ ಬಲವರ್ಧನೆಗಳು ಆಲಯದ ಅದೃಷ್ಟದೊಡನೆ ಅವಿನಾಭಾವ ಸಂಬಂಧ ಪಡೆಯುವಂತಾಯಿತು.

### 5. ಶ್ರೀವೆಂಕಟೇಶ್ವರ ವಿಹಾರ ಶತಕ ವಿವರಿಸಿರುವ ತಿರುಪತಿ

ಶ್ರೀ ವೆಂಕಟೇಶ್ವರ ವಿಹಾರ ಶತಕಮು ಎಂಬುದು ಒಂದು ಶತಕ ಕಾವ್ಯ. ಕವಿಯ ಹೆಸರು ತಿಳಿದುಬಂದಿಲ್ಲ. ನಿಂದಾಸ್ತುತಿಯ ರೂಪದಲ್ಲಿ ಏಳುಮಲೆಯ ಸ್ವಾಮಿಯನ್ನು ಸಂಬೋಧಿಸಿ ನುಡಿದಿರುವ ಪದ್ಯಗುಚ್ಛವಿದು.

ಗೋಲ್ಕೊಂಡದ ಸುಲ್ತಾನ ಅಬ್ದುಲ್ಲಕುತುಬ್‌ಷಹನ ರಾವುತ ಸೈನ್ಯ ಹಾಗೂ ವಜೀರರ ಸೈನ್ಯದ ಕಪಿ ಮುಷ್ಟಿಯಲ್ಲಿ ಸಿಕ್ಕುಬಿದ್ದ ಜನತೆಯು ಅನುಭವಿಸಿದ ಕಷ್ಟಕೋಟಲೆಗಳು, ಕೀಟಲೆ, ನಿಂದೆಗಳು, ನೋವು, ಅಪಮಾನ, ಲೂಟಿ, ಪ್ರಾಣಹಿಂಸೆ, ಧನಹಾನಿ, ಮಾನಹಾನಿಗಳು, ಬಲತ್ಕಾರ, ಬೆಂಕಿಗಳು - ಎಲ್ಲವನ್ನು ಕಣ್ಣಾರೆ ಕಂಡ ಅಜ್ಞಾತ ತೆಲುಗು ಕವಿ ಆ ಭೀಭತ್ಸ - ಮಾನವ ನಿರ್ಮಿತ ನರಕ ವನ್ನು - ಭವಿಷ್ಯದ ಕಣ್ಣಿಗೆ ರಾಚುವಂತೆ ಬರೆದಿಟ್ಟಿದ್ದಾನೆ. ಆ ಸೈನ್ಯದಿಂದಾದ ಹೈಂದವ ಆಲಯಗಳ ಧ್ವಂಸ, ಲೂಟಿ, ವಿಗ್ರಹಭಂಜನಗಳ ವಿವರಗಳನ್ನಿಲ್ಲಿ ಕಾಣಬಹುದು. ವೇಂಕಟಾಚಲವಿಹಾರ ಶತಕಮು ತೆಲುಗಿನ ಶತಕ ಕಾವ್ಯವಾದರೂ ಈಗ ತೊಂಬತ್ತೆಂಟು ಸೀಸ ಪದ್ಯಗಳು ಮಾತ್ರವೇ ಉಪಲಬ್ಧವಿದ್ದು ಕವಿಯ ಹೆಸರು ತಿಳಿದುಬಂದಿಲ್ಲ. ಸೀಸಗಳ ಕೊನೆಯ ತೇಟಗೀತೆಗಳ ನಾಲ್ಕನೆಯ ಸಾಲಿನಲ್ಲಿ 'ಶತ್ರು ಸಂಹಾರ ವೆಂಕಟಾಚಲ ವಿಹಾರ' ಎಂಬ ಮಕುಟವಿದೆ.

ಇಲ್ಲಿನ ಲೇಖಕ ವೈಷ್ಣವನಿರಬೇಕು ಕಾರಣ 66 ನೇ ಪದ್ಯದಲ್ಲಿ 'ನಾನು ಗಾಯತ್ರಿ ಮಂತ್ರ ಹೇಳುವುದನ್ನು ಬಿಟ್ಟು ವಶಲ್ಮಾನರ ಕಲ್ಮಾಮಂತ್ರವನ್ನು ಹೇಗೆ ಹೇಳಲಿ' ಎಂದು ಕೇಳುತ್ತ, 'ತಿರುನಾಮವಿಲ್ಲದೆ ಬರಿಹಣೆಯಲ್ಲಿರುವ ಪಾಪವನ್ನು ಹೇಗೆ ನೀಗಲಿ' ಎಂದು ಕೇಳುತ್ತಾನೆ. 'ಜಗತ್ಪಿತನಾದ ನಿನ್ನ ಸ್ತುತಿ ಸೇವೆಗಳನ್ನು ಬಿಟ್ಟು ಪೆನುಗೊಂಡೆಯ ಪ್ರಭು (ನವಾಬ) ವಿನ ಸ್ತುತಿಯನ್ನುಹೇಗೆ ಮಾಡಲಿ' ಎಂದು ದೇವರನ್ನು ಕೇಳುತ್ತಾನೆ.

7ನೇ ಪದ್ಯದಲ್ಲಿ 'ತನ್ನ ಬಳಿ ಸ್ವಾಮಿಯ ಸುದರ್ಶನ ಚಕ್ರದಂತಹ ಆಯುಧವಿದ್ದ ಪಕ್ಷದಲ್ಲಿ ಅದನ್ನು ಭಯಂಕರ ರೀತಿಯಲ್ಲಿ ಬಳಸಿ ಶತ್ರುಸೈನ್ಯವನ್ನು ಇರಿದುಕೊಂದು ತುರ್ಕೀಯರನ್ನುಗೋಲ್ಕೊಂಡದವರೆಗೆ ಓಡಿಸುತ್ತಿದ್ದೆ' ಎಂದು ಹೇಳುತ್ತ ಮುಂದುವರೆದು 9ನೇ ಪದ್ಯದಲ್ಲಿ 'ಬಹುಕಾಲದಿಂದ ನಿನ್ನ ಕಿವಿಗಳು ತಮಿಳು ಪಾಶುರಗಳನ್ನು ಕೇಳಿವೆ. ಈಗ ಅವುಗಳನ್ನು ಕೇಳುವುದು ದೂರವಾಗಬಾರದು ಎಂಬುದೇ ನಮ್ಮ ಕಾತರ' ಎಂದು ಬಿನ್ನಯಿಸುತ್ತಾನೆ. ಎಂದರೆ ಆಳ್ವಾರರ ತಮಿಳು ಪಾಶುರಗಳನ್ನು ಕೇಳುವುದನ್ನು ಬಿಟ್ಟು ಅಪರಿಚಿತ ಭಾಷೆಯನ್ನು ಕೇಳುವಂತೆ ಆಗಬಾರದು ಎಂಬ ಆಕಾಂಕ್ಷೆ. 91 ನೇ ಪದ್ಯದಲ್ಲಿ ಕವಿಯ ಪ್ರಶ್ನೆ ಗಮನಾರ್ಹ - ''ಇದುವರೆಗೆ ವೇದಮಂತ್ರ ಪೂತವಾದ ಪರಮಪುರುಷನಾದ ನಿನ್ನ ಕೀರ್ತಿಯನ್ನು ಹಾಡುತ್ತಿದ್ದೆನಲ್ಲದೆ ಯಾವನೇ ಮನುಷ್ಯ ಮಾತ್ರನನ್ನು ಕುರಿತು ಹಾಡಲಿಲ್ಲ. ಇನ್ನು ಮುಂದೆ ಏನು ಮಾಡಲಿ?''

ನಾಲ್ಕನೆಯ ಪದ್ಯದಲ್ಲಿ ಕವಿ ಹೇಳುವ ಮಾತು - ಮಾದಗುಂಟ, ಕಾವಲಿ, ಜಲದಂಕಿ, ಕೊಡವಲೂರು ಹಾಗೂ ಗಂಧವರಂ ಮೊದಲಾದ ಗ್ರಾಮನಗರಗಳೆಲ್ಲ ಸುರತಾನಿ ಅಬ್ದುಲ್ಲನ (ಗೋಲ್ಕೊಂಡದ ಸುಲ್ತಾನ ಅಬ್ದುಲ್ಲ) ರಾವುತ ಸೈನ್ಯ, ಭಯಂಕರ ಆಯುಧಗಳನ್ನು ಹೊಂದಿದ ಪದಾತಿ ಸೈನ್ಯದ ಆಕ್ರಮಣದಲ್ಲಿ ತತ್ತರಿಸಿದವು. ಇನ್ನೊಂದು (ಪದ್ಯ 77) ಪದ್ಯದಲ್ಲಿ ನೆಲ್ಲೂರು ನಗರ ಹೇಗೆ ಹಾಳಾಯಿತು ಎಂಬುದನ್ನು ವಿವರಿಸುತ್ತಾನೆ. ಪವಿತ್ರವಾದ ದೇವಾಲಯಗಳು ಕಲುಷಿತ ಗೊಂಡವು. ಭಕ್ತ ಬ್ರಾಹ್ಮಣರ ಪೂಜೆ ಆರಾಧನೆಗಳನ್ನು ಪಡೆಯುತ್ತಿದ್ದ ಸ್ಥಳಗಳು ಸುಲ್ತಾನನ ಸರದಾರರ ವಿಶ್ರಾಮ ಮಂದಿರಗಳಾದವು. ಉಪವನಗಳು, ತರುಗಿಡಮರಗಳು ಆನೆಗಳ ಆಟದ ವಸ್ತುಗಳಾದವು, ಪದ್ಮಾಕರಗಳು - ಸರೋವರಗಳು ಕಲುಷಿತವಾದವು. ಮುಂದುವರೆಯುತ್ತ ಕವಿ ಆಕ್ರಂದಿಸುತ್ತಾನೆ - ''ಕಾವಲಿ, ಕೊವ್ವೂರು, ದುವ್ವೂರು, ನೆಲ್ಲೂರು, ಪೆಳ್ಳಕೂರು, ಪೋಲೂರು, ರಾವೂರು - ಮೊದಲಾದ ಪ್ರಾಂತ್ಯಗಳೆಲ್ಲ ದಾಪುಗಾಲು ಹಾಕಿ ಮುತ್ತುತ್ತಿದ್ದ ಯವನ ಸೈನ್ಯದಿಂದಾಗಿ ಧೂಳಿನ ಮೋಡಗಳಲ್ಲಿ ಮುಚ್ಚಿ ಹೋದವು''.

ನೆಲಟೂರು, ತಾಳ್ಳಪಾಕ, ಮಣ್ಣೂರು, ಊಟುಕೂರು, ಓರಮುಪಾಡು, ಪೆನುಬಾಲಪೇಟ, ಕೋಡೂರು, ಮನ್ನೇರು, ಕುರುಹು, ಮಾಮಂಡೂರು (ಪದ್ಯ - 55) ಹಾಗೂ ಕಾಳಹಸ್ತಿ (54) ಆಕ್ರಮಿಸಿದ ಶತ್ರುಸೈನ್ಯವು ರಾಳ್ಳ ಕಾಲುವೆಯನ್ನು ಹಾಯುವಾಗ ಪರ್ವತದ ಗುಹೆಗಳು ಪ್ರತಿಧ್ವನಿಸಿ ನಡುಗುವಷ್ಟು ಗಟ್ಟಿಯಾದ ಗರ್ಜನೆ ಮಾಡುತ್ತ ಮುಂದುವರೆಯಿತೆಂದು ಹೇಳುತ್ತಾನೆ.

ಇನ್ನೊಂದು ಪದ್ಯದಲ್ಲಿ - ಅವರು ಆಲಯಗಳನ್ನು ಪ್ರವೇಶಿಸಿ ವಿಗ್ರಹ ಭಂಜನೆಮಾಡಿ, ಆಚಾರ್ಯ ಪುರುಷರಿಗೆ ಅವಮಾನ ಮಾಡುತ್ತಿರುವಾಗ, ಆವರ ತಿರುನಾಮಗಳನ್ನು ಅಳಿಸಿ, ಜುಟ್ಟು ಎಳೆದಾಡಿ ಗೋಳು ಹುಯ್ದುಕೊಂಡಾಗ ಅವರನ್ನು ಕತ್ತರಿಸಲು ನಿನ್ನಿಂದಾಗದೇ. ದುರ್ಬಲನಾದ ನಾನು ನಿನ್ನನ್ನು ಬೇಡಿಕೊಳ್ಳುತ್ತೇನೆ, ನಿನ್ನ ದಯೆಯೇ ನನ್ನ ಸಂಪತ್ತು - ಎನ್ನುತ್ತಾನೆ.

ಇದೇ ರೀತಿಯಲ್ಲಿ ಮುಂದುವರೆದು ಕವಿ ಶ್ರೀ ವೆಂಕಟೇಶ್ವರಸ್ವಾಮಿಯನ್ನು ಮತ್ತೂ ಪ್ರಾರ್ಥಿಸುತ್ತಾನೆ. "ನಿನ್ನ ಸುದರ್ಶನಧಾರಿ ಯೆಂಬ ಕೀರ್ತಿ ಹಳೆಯದಾಯಿತೇನು? ತುರ್ಕೀಯರನ್ನು ತರಿದು ಹಾಕಲು ಕೈಲಾಗುವು ದಿಲ್ಲವೇ? ಲಕ್ಷ್ಮಿಯ ಸಿರಿಯಿದ್ದರೂ ನಿನಗೆ ಬರಬೇಕಾದ ಬಡ್ಡಿಯ ಹಣದ ಭಾಗಾಂಶವನ್ನೂ ಬಿಟ್ಟುಕೊಡಲಾರದವ ನಾಗಿರುವೆ. ಪರಮ ಪುರುಷನೆಂಬುದು ಜನಗಳ ಭಾವನೆ ಮಾತ್ರವಾಗಿ ಹೋಯಿತಲ್ಲದೆ ಸಾವಿರದ ನೂರ ಹದಿನಾರು (ಇದೊಂದು ಉತ್ತಮ ಕೊಡುಗೆ ಎಂಬ ಭಾವನೆ) ಪ್ರಸಾದ ನೀಡಲು ನಿನ್ನಿಂದಾಗದು. ಚಿನ್ನದ ಝರಿಯ ಪೀತಾಂಬರಧಾರಿ ಎಂಬ ಹೆಸರಷ್ಟೆ ಉಳಿಯಿತು. ಕುಸುಬಲಕ್ಕಿಯ ನೈವೇದ್ಯ ಪಡೆಯುವುದಾಯಿತು. ತಳಿಗೆಯನ್ನು ತೊಳೆಯಲೂ ಸಹ ಅವಕಾಶ ನೀಡದೆ (ಮಣ್ಣಿನ ಪಾತ್ರೆಯಲ್ಲಿ ನೈವೇದ್ಯವಾಗಿ ಅದನ್ನು ಬಿಸಾಡುವರು). ಬಿಡದೆ ಜಿಪುಣನಾಗಿ ಕಾಸಿಗೆ ಕಾಸು ಗಂಟುಹಾಕುತ್ತಿರುವೆ. ಈ ಎಲ್ಲ ಹಣವನ್ನೂ ನೀನು ತುರ್ಕೀಯರಿಗೆ ಬಂಧ ಮುಕ್ತಿಯ ಧನವಾಗಿ ನೀಡುವ ಪಕ್ಷದಲ್ಲಿ ನಂತರ ನಿನ್ನ ಭಕ್ತರು ನಿನ್ನನ್ನು ನಂಬುವರೇನು? "ನಿನ್ನ ಹಿತೈಷಿಯಾಗಿ ಸಲಹೆ ನೀಡಿ ಬಿನ್ನವಿಸುತ್ತೇನೆ - ಈ ಕುಬುದ್ದಿಯ ದುಷ್ಟ ಜನಗಳಿಗೆ ಧನವನ್ನು ನೀಡದಿರು". (90)

"ಮನುಷ್ಯ ನಡವಳಿಕೆಯ ಎಲ್ಲ ಮಿತಿಗಳೂ ನಾಶವಾಗಿವೆ. ತುರ್ಕೀಯರು ತಿರುಪತಿಯನ್ನು ಮುತ್ತಿ ಲೂಟಿ ಮಾಡುತ್ತಿದ್ದಾರೆ.(94) ನಿನ್ನ ನೈವೇದ್ಯಗಳನ್ನು ಕೆಡಿಸಿದ, ಸಾವಿರಕಂಬದ ಮಂಟಪವನ್ನು ಕುದುರೆಲಾಯವನ್ನಾಗಿಸಿದ, ಆಲಯಗಳ ಬಾಬಯ್ಯಗಳ ಸಮಾಧಿಗಳನ್ನಾಗಿಸಿದ, ಗರ್ಭಗೃಹಗಳನ್ನು ಹೊಲಸೆಬ್ಬಿಸಿದ, ವಿಗ್ರಹಭಂಜನೆ ಮಾಡಿ, ಆಭರಣಗಳನ್ನು ಅಪಹರಿಸಿ, ಪಾಕಶಾಲೆಯ ಪಾತ್ರೆಗಳನ್ನು ಪುಡಿಗುಟ್ಟಿ ನಂಬಿಗಳನ್ನು ಹೊಡೆದು ಜೀಯಂಗಾರರನ್ನು ಘಾತಿಸಿ, ಪರಿಸರದ ತಿರುಮಾಳಿಗೆಗಳನ್ನು ಅಪವಿತ್ರಗೊಳಿಸಿದ ಟರ್ಕರನ್ನು ಬಲಿಹಾಕಲಾರೆಯೇನು" ಎನ್ನುವನು.

ನಿಂದಾಸ್ತುತಿಯಲ್ಲಿ ಬಗ್ಗೆ ಕವಿ ಹೇಳುತ್ತಾನೆ " ನೀನು ಶತ್ರುನಾಶ ಮಾಡದಿದ್ದರೆ ನಾನು ಸುಮ್ಮನೆ ಕುಳಿತು ನೋಡಲಾರೆ. ನಿನ್ನ ಪೂರ್ವ ಚರಿತ್ರೆಯ ರಹಸ್ಯಗಳನ್ನೆಲ್ಲ ಬಯಲು ಮಾಡುವೆ. ನಾನು ಅವುಗಳನ್ನು ಮರೆತಿಲ್ಲ. ನೀನು ಬೆಣ್ಣೆಯನ್ನು ಕದ್ದು ತಿಂದದ್ದು, ರೇಪಲ್ಲೆಯಲ್ಲಿ (ಬೃಂದಾವನದಲ್ಲಿ) ಗೋಪೀಜನಪ್ರಿಯನಾಗಿದ್ದದ್ದು, ಮೊಲೆ ನೀಡಲು ಬಂದ ಪೂತನಿಯ ಪ್ರಾಣಹೀರಿದ್ದು, ಯಮುನೆಯ ವೃದ್ಧಾಪ್ಯವನ್ನೂ ನೆನೆಯದೆ ಅವಳನ್ನು ನೇಗಿಲಿನಿಂದ ಹೊಡೆಯಲು ನೀನು ನಿಮ್ಮಣ್ಣ ಬಲರಾಮನನ್ನು ಉತ್ತೇಜನಗೊಳಿಸಿದ್ದು - ಎಲ್ಲವನ್ನೂ ಬಯಲಿಗಿಡುವೆ. (80)

"ಕೋಪ ಹೆಚ್ಚಾದಾಗ ದೇವರನ್ನು ತೀಕ್ಷ್ಣವಾಗಿ ನಿಂದಿಸುತ್ತಾನೆ - ನಿನ್ನ ಹೆಸರನ್ನು ಶ್ರೀಹರಿ ಎಂಬುದರ ಬದಲಿಗೆ ಮುಶಜಹಲಿ ಎಂದು ಬದಲಾಯಿಸಿಕೊ, ದೇವರು ಎನ್ನದೆ ಖುದಾ ಎಂದೂ, ಕರ್ತನಿಂದ ಕರ್ತರನೆಂದೂ ಕೃಷ್ಣನಿಂದ ಬಾಬಯ್ಯ ಎಂದೂ ಬದಲಾಯಿಸಿಕೊ. ಕಾರಣ ದಖ್ಖನೀಯ ತರ್ಕೀಯರು ಪಾರಸಿಗಳು ನಿನ್ನನ್ನು ಅವಮಾನಗೊಳಿಸಿ, ಹೊಡೆದು ಬಡಿದು ಮಾಡುತ್ತಾರೆ. ನಿನ್ನುಪ್ಪು ತಿಂದಿದ್ದೇನೆ ಹಾಗೂ ನಿನ್ನಿಂದ ಇತರತ್ರ ಪ್ರಯೋಜನ ಪಡೆದಿದ್ದೇನೆ. ಹಾಗಾಗಿಯೇ ನಾನು ನಿನಗೆ ಮೊದಲೇ ಎಚ್ಚರಿಕೆ ನೀಡುತ್ತಿದ್ದೇನೆ. ಈ ಎಲ್ಲದರಿಂದ ಭಯಗ್ರಸ್ತನಾಗದೆ, ಅತಿ ಮೊದಲೇ, ಕಾಲವಿರುವಾಗಲೇ ತಪ್ಪಿಸಿಕೊಳ್ಳಲು ಯತ್ನಿಸು".

ಕಡೆಗೆ ದುಃಖಃ ಭರಿತನಾದ ಕವಿಯು ಶ್ರೀ ವೆಂಕಟೇಶ್ವರಸ್ವಾಮಿಯಲ್ಲಿ ತನ್ನ ಮನವಿಯನ್ನಿಡುತ್ತಾನೆ. "ಅಹಂಕಾರದಿಂದ ನಿನ್ನನ್ನು ಹೇಡಿ ಎಂದು ಕರೆದಿದ್ದೇನೆ. ನೀನು ಅತ್ಯುನ್ನತ ಯೋಧನಾಗಿರುವೆ. ಯುದ್ಧದಲ್ಲಿ ದಯಾರಹಿತನಾದರೂ ಭಕ್ತರ ರಕ್ಷಣೆಯಲ್ಲಿ ಅತಿ ಮೊದಲಿಗನಾಗಿರುವೆ. ಬಲಹೀನನಂತೆ ಕಂಡುಬಂದರೂ ಎಲ್ಲವನ್ನೂ ಹತ್ತಿಕ್ಕುವ ಬಳಸುವ ಬಲಹೊಂದಿ ಅಣುರೇಣು ತೃಣಕಾಷ್ಠ

ಗಳಲ್ಲಿಯೂ ಪ್ರಬಲಶಕ್ತಿಯಾಗಿರುವೆ. ತೋರಿಕೆಗೆ ಜಡನಂತೆ ಕಂಡುಬಂದರೂ ಸರ್ವಚೇತನಾತ್ಮಕನಾಗಿ ಸ್ವಯಂಭೂವಾಗಿ, ಪರಂಜ್ಯೋತಿ ಯಾಗಿರುವೆ. ನನ್ನ ಉದ್ವಿಗ್ನತೆಯಲ್ಲಿ ನಿನ್ನನ್ನು ಶತ್ರುಸಂಹಾರ ಮಾಡುವ ಮೂಲಕ ಒಳ್ಳೆಯವರ ರಕ್ಷಣೆ ಮಾಡ ಬೇಕೆಂದು ಉತ್ತೇಜಿಸಲು ನಿನ್ನನ್ನು ಅಶಕ್ತ. ಹೇಡಿ - ಎಂದು ಬಯ್ದದ್ದು ಉಂಟು. ನನ್ನ, ಈ ಶತ ಸಹಸ್ರಾಪರಾಧ ಗಳನ್ನು ಸಹಿಸಬೇಕೆಂದು ಪುನಃ ಪುನಃ ಮನವಿ ಮಾಡಿಕೊಳ್ಳುತ್ತೇನೆ.''(ಪದ್ಯ - 98)

ಈ ಒಬ್ಬ ಅನಾಮಿಕ ಕವಿಯ ನಿರೂಪಣೆಯಿಂದಾಗಿ ಗೋಲ್ಕೊಂಡದ ಅಬ್ದುಲ್ಲಾ ಕುತುಬ್‌ಷಹನ ಸೈನ್ಯವು, ಕೆಳಗಣ ಮೇಲಣ ತಿರುಪತಿಗಳನ್ನು ಒಳಗೊಂಡ ಪೂರ್ವ ವಿಜಯನಗರದ ಮಧ್ಯಪ್ರಾಂತ್ಯದಲ್ಲಿ ಉಂಟುಮಾಡಿದ ದುರ್ಭರವಾದ ಧಾಳಿ ಹಿಂಸೆಗಳನ್ನು ಹಾಗೂ ಬಿಜಾಪುರದ ಸುಲ್ತಾನರ ಸೈನ್ಯವು ದಕ್ಷಿಣ ಭಾಗದಲ್ಲಿ ಉಂಟುಮಾಡಿದ ಉಲ್ಲೋಲ ಕಲ್ಲೋಲವನ್ನು ತಿಳಿಯಬಹುದಾಗಿದೆ ಹೈಂದವ ಜನತೆಯು ಅತ್ಯಂತ ಹೆಚ್ಚಿನ ಅಘಾತಕ್ಕೆ ಒಳ ಗಾಯಿತು. ತಮ್ಮಮನೆ, ಮಾರು, ಆಸ್ತಿ, ಕುಟುಂಬ ಎಲ್ಲವನ್ನೂ ಕಳೆದುಕೊಂಡರು. ಕಳೆದು ಹೋದ ಮಾನ ಪ್ರಾಣಗಳಿಗೆ ಲೆಕ್ಕವಿಲ್ಲ. ತಮ್ಮ ತನು ಧನ ಮನಗಳನ್ನು ಕಾಪಾಡಿಕೊಳ್ಳಲು ಜನ ಇದ್ದೆಡೆಯನ್ನು ಬಿಟ್ಟು ಇತರೆಡೆಗಳಿಗೆ ವಲಸೆ ಹೋಗತೊಡಗಿದರು.

ಸುಲ್ತಾನ ಅಬ್ದುಲ್ಲನ ಸೈನ್ಯದ ವಜೀರರು ಮತ್ತು ಸರದಾರರಿಂದ ಈ ತೆರನಾದ ಒಂದು ಉತ್ಪಾತ ವುಂಟಾಗಿ, ಜನ ಭೀತಿಗ್ರಸ್ತರಾಗಿ, ತಮ್ಮ ಪೂರ್ಣ ನಿಯಂತ್ರಣಕ್ಕೆ ಬರುವವರೆಗೆ ಈ ಪ್ರಕ್ರಿಯೆ ಮುಂದುವರೆದಿರ ಬೇಕು. ನಂತರದ ಕಾಲದಲ್ಲಿ ಎಲ್ಲ ಧಾಳಿ, ಆಕ್ರಮಣಗಳಲ್ಲಿ ಆಗುವಂತೆಯೇ ಧಾಳಿಯ ಕ್ರೌರ್ಯ ಕಡಿಮೆಯಾಗಿ ಹೊಸ ವ್ಯವಸ್ಥೆಗೆ ಜನವೂ ಹೊಂದಿಕೊಂಡಿರಬೇಕು.

ತಿರುಪತಿಯಲ್ಲಿ ಈ ಉಲ್ಲೋಲಕಲ್ಲೋಲ ಎಂದು ಆರಂಭವಾಯಿತು ಎಂಬುದನ್ನು ಖಚಿತ ಪಡಿಸಿ ಕೊಳ್ಳುವ ಪ್ರಯತ್ನವೇ ಆಸಕ್ತಿಕಾರಕವಾಗುತ್ತದೆ. ಈ ಪ್ರಾಂತ್ಯವನ್ನು ಮೊತ್ತಮೊದಲು ಆಕ್ರಮಿಸಿದವನು ಗೋಲ್ಕೊಂ ಡದ ಮಂತ್ರಿಯಾಗಿದ್ದ ಮೀರ್ ಜುಮ್ಲಾ ಎಂಬುದು ನಮಗೆ ತಿಳಿದಿದ್ದೇ. ಷಹಜಹಾನನ ಆಳ್ವಿಕೆಯಲ್ಲಿ ಔರಂಗ ಜೇಬನು ದಕ್ಷಿಣದ ರಾಜ್ಯಪಾಲನಾಗಿದ್ದ ಕ್ರಿ.ಶ. 1656 ರಲ್ಲಿ ಮೀರ್‌ಜುಮ್ಲಾನು ಪಕ್ಷಾಂತರ ಮಾಡಿ ಔರಂಗಜೇಬ ನನ್ನು ಸೇರಿದಾಗ ಈ ಪ್ರಾಂತ್ಯವು ಮೊಗಲರ ಸಾಮ್ರಾಜ್ಯದ ಪ್ರಾಂತ್ಯವೆಂದು ಘೋಷಿತ ವಾಯಿತು. ನಂತರ ಸುಲ್ತಾನ ಅಬ್ದುಲ್ಲನು ಈ ಸ್ಥಳವನ್ನು ಮತ್ತೆ ಆಕ್ರಮಿಸಿಕೊಂಡು ಕ್ರಿ.ಶ. 1672 ರಲ್ಲಿ ತಾನು ಸಾಯುವವರೆಗೆ ತನ್ನ ವಶದಲ್ಲಿಯೇ ಇಟ್ಟುಕೊಂಡಿದ್ದನು. ಹೀಗಾಗಿ ಇಲ್ಲಿ ಕವಿಯು ವರ್ಣಿಸಿರುವ ಗೋಲ್ಕೊಂಡದ ಸುಲ್ತಾನನ ತಿರುಪತಿ ಆಕ್ರಮಣವು ಕ್ರಿ.ಶ. 1656ರ ನಂತರದಲ್ಲಿ, ಅಂದರೆ ಈಸ್ಟ್ ಇಂಡಿಯಾ ಕಂಪನಿಯವರು ತಮ್ಮ ಒಪ್ಪಂದದ ಕರಾರುಗಳ ಪರಿಶೀಲನೆಗಾಗಿ ತಿರುಪತಿ ಯಲ್ಲಿದ್ದ ಗೋಲ್ಕೊಂಡ ರಾಜನ ಪ್ರತಿನಿಧಿಯ ಬಳಿಗೆ ತಮ್ಮ ನಿಯೋಗವನ್ನು ಕಳುಹಿಸಿದ ಕ್ರಿ.ಶ. 1660-1662ರ ಮೊದಲಿಗೆ ಆಗಿದ್ದಿರ ಬೇಕು. ಶತಕದಲ್ಲಿ ಮೀರ್ ಜುಮ್ಲಾನ ಹೆಸರೇ ಉಲ್ಲೇಖವಾಗಿಲ್ಲ. ಸುಲ್ತಾನ ಅಬ್ದುಲ್ಲನ ಹೆಸರು ಮಾತ್ರ ಎರಡು ಬಾರಿ ಹೇಳಲ್ಪಟ್ಟಿದೆ.

ಔರಂಗಜೇಬನು 1688 ರಲ್ಲಿ ಗೋಲ್ಕೊಂಡದ ಸುಲ್ತಾನ ರಾಜ್ಯವನ್ನು ತನ್ನ ಸಾಮ್ರಾಜ್ಯದಲ್ಲಿ ವಿಲೀನ ಗೊಳಿಸಿಕೊಳ್ಳುವ ತನಕ ತಿರುಪತಿ ಪ್ರಾಂತ್ಯವನ್ನು ರಾಜಪ್ರತಿನಿಧಿಗಳು ತಿರುಪತಿಯನ್ನು ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡು ಆಳುತ್ತಿದ್ದರು.

## 6. ಕುಬೇರನಬಳಿ ಸಾಲಮಾಡಿದ ಐತಿಹ್ಯ

ಕವಿ ಭಯಪಟ್ಟಂತೆ ಆಲಯದ ಆಕ್ರಮಣ ನಡೆಯಲಿಲ್ಲ. ಆದರೆ ಈ ದಿಸೆಯಲ್ಲಿ - ವಿಗ್ರಹಭಂಜಕ ತುರ್ಕೀಯರ ಧಾಳಿಯಾಗುವುದನ್ನು ತಡೆಯಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ - ಸ್ಥಳೀಯರು ಯೋಚಿಸುವಂತೆ ಆಯಿತು.

ತಾನು ಪದ್ಮಾವತಿಯನ್ನು ವಿವಾಹವಾಗುವ ಸಂದರ್ಭದಲ್ಲಿ ಉಂಟಾಗಬಹುದಾದ ವೆಚ್ಚಗಳಿಗಾಗಿ ಶ್ರೀನಿವಾಸನು ಕುಬೇರನ ಬಳಿ ಸಾಲಮಾಡಿದನೆಂಬುದನ್ನೂ, ಸ್ಥಳೀಯ ರಾಜನ ಮೂಲಕ ಈ ಮೂಲಧನಕ್ಕೆ ಬಡ್ಡಿಯನ್ನು ಕುಬೇರನಿಗೆ ತಲುಪಿಸುವ ವ್ಯವಸ್ಥೆಯನ್ನೂ, ಆ ಮೂಲಕವಾಗಿ ಸದರಿ ಹಣ ಸಂಗ್ರಹಕ್ಕಾಗಿ ವಿವಿಧ ದರ್ಶನಗಳಿಗಾಗಿ ಶುಲ್ಕವನ್ನು ವಿಧಿಸುವಿಕೆ, ದೇವರಿಗೆ ಸಮರ್ಪಿಸಿದ

ಕಾಣಿಕೆಗಳ ಜೊತೆಗೆ ಅವುಗಳ ಬೆಲೆಯಷ್ಟರ ನಗದು ಶುಲ್ಕ ಸಂಗ್ರಹಣೆಗಳು - ಈ ಕಾಲದಿಂದ ಆರಂಭವಾಗಿರಬೇಕುಣದರಿಂದಾಗಿ ಅಂದಿನ ಕಾಲಕ್ಕೆ ವರ್ಷಕ್ಕೆ ಎರಡು ಲಕ್ಷ ರೂಪಾಯಿಗಳು ಆಲಯಕ್ಕೆ ಆದಾಯವಾಗಿರಬೇಕು. ವಿಧರ್ಮೀಯರ ಧಾಳಿ, ದಾಂಧಲೆ ಗಳಿಂದ ಆಲಯವನ್ನು ಕಾಪಾಡಿಕೊಳ್ಳುವ ಆಸಕ್ತಿ ಆತುರಗಳಿದ್ದ ಭಕ್ತರು ಸಂತಸದಿಂದಲೇ ಆಲಯಕ್ಕೆ ಉದಾರ ವಾಗಿ ದೇಣಿಗೆಗಳನ್ನು ನೀಡುತ್ತ ಬಂದರು. ಗೋಲ್ಕೊಂಡದ ಸುಲ್ತಾನರೂ, ನಂತರ ಕರ್ನಾಟಿಕದ ನವಾಬರೂ ಈ ಆದಾಯವನ್ನು ಹಿಂದೂಗಳಿಗೆಗುತ್ತಿಗೆಗೆ ನೀಡಿ ತಾವು ನಿಖರವಾದ ಹಾಗೂ ಖಚಿತವಾದ ವಾರ್ಷಿಕ ಆದಾಯವನ್ನು ಪಡೆಯುವಂತಾಯಿತು. ಆಲಯದ ದೈನಂದಿನ ಪೂಜಾಕ್ರಮಗಳಿಗೆ ವ್ಯತ್ಯಯ ಉಂಟಾಗುವಂತೆ ಆಲಯ ವ್ಯವಹಾರದಲ್ಲಿ ಕೈಹಾಕಿ ಇಂತಹ ಒಂದು ನಿರಂತರ ಆದಾಯದ ನಷ್ಟಕ್ಕೆ ಕಾರಣ ವಾಗುವಂತಹ ಪರಿಸ್ಥಿತಿಯಲ್ಲಿ ಅವರಿರಲಿಲ್ಲ. ಹೀಗೆ ಧಾಳಿಕಾರರ ಧನಾಕಾಂಕ್ಷೆಗೆ ನೀರೆರೆದು ಆಲಯವನ್ನು ರಕ್ಷಿಸುತಿಇದುದೇ ಅಲ್ಲದೇ ಆಲಯದ ನಿರಂತರ ಆದಾಯಕ್ಕೆ ಸುಭದ್ರ ಬುನಾದಿಯನ್ನೂ ಹಾಕಲಾಯಿತು.

ಕುಬೇರನಿಗೆ ಸಾಲ ಪತ್ರವನ್ನು ಬರೆದುಕೊಟ್ಟಂತೆ ಒಂದು ಕ್ರಮಬದ್ಧವಾದ ದಾಖಲಾತಿಯನ್ನೇ ಉಂಟು ಮಾಡಲಾಯಿತು. ಈ ದಾಖಲಾತಿ ಇಂದಿಗೂ ಇದೆಯೆಂದು ಅರ್ಚಕರು ಹೇಳುತ್ತಾರೆ. ನಿಜವಾದ ಸಂಗತಿ ಏನೇ ಇದ್ದರೂ ವಿಧರ್ಮೀಯರ ಧಾಳಿಯ ದಿಕ್ಕುತಪ್ಪಿಸಿ, ದೇವಾಲಯವನ್ನು ಉಳಿಸಿಕೊಂಡ ಎದೆಗಾರಿಕೆಯನ್ನು ತೋರಿದ ಅಂದಿನ ಅರ್ಚಕರು ಭವಿಷ್ಯದ ಕೃತಜ್ಞತೆಗೆ, ಮನ್ನಣೆಗೆ ಪಾತ್ರರು.

ಈ ಸಾಲದ ವ್ಯವಹಾರವು ವೆಂಕಟಾಚಲ ಮಹಾತ್ಮೆಯಲ್ಲಿ ವಿವರವಾಗಿ ವರ್ಣಿತವಾಗಿದೆ. ಕುಬೇರನಿಗೆ ಸ್ವಾಮಿಯು ಬರೆದು ಕೊಟ್ಟ ಸಾಲಪತ್ರವನ್ನು ಕೆಳಗೆ ಅನುವಾದಿಸಿ ಕೊಡಲಾಗಿದೆ. (ಭವಿಷ್ಯೋತ್ತರ ಪುರಾಣದಲ್ಲಿ ಈ ವಿವರಗಳು ಸಂಸ್ಕೃತದಲ್ಲಿ). ಪಾಲಾರ್ ಹಾಗೂ ಸುವರ್ಣಮುಖಿ ನದಿಗಳ ನಡುವಣ ಪ್ರಾಂತ್ಯದ ರಾಜರುಗಳ ಮೂಲಕ ಈ ಸಾಲವನ್ನು ತೀರಿಸುತ್ತೇನೆ ಎಂಬುದಾಗಿ ಸ್ವಾಮಿ ಯಾವರೀತಿಯ ಪ್ರಮಾಣವನ್ನೂ ಮಾಡಿಲ್ಲ ವೆಂಬುದು ಗಮನಾರ್ಹವಾದದ್ದು -

ಶ್ರೀನಿವಾಸ ಕೇಳುತ್ತಾನೆ - 'ಸಾಲಪತ್ರವನ್ನು ಹೇಗೆ ಬರೆಯಬೇಕೆಂದು ನನಗೆ ತಿಳಿಸುವವನಾಗು'.

ಬ್ರಹ್ಮ ಹೇಳಿದ - ಶ್ರೀನಿವಾಸನು ಸಾಲಪಡೆಯುವವನು. ಕುಬೇರನು ಸಾಲವನ್ನು ಕೊಡುವವನು. ಕಾರಣ ಶ್ರೀನಿವಾಸ ಸ್ವಂತ ವೆಚ್ಚಗಳು - ಎಂದರೆ ಕಲಿಯುಗದಲ್ಲಿ ವಿಳಂಬಿ ಸಂವತ್ಸರದ ವೈಶಾಖಮಾಸದ ಶುಕ್ಲ ಪಕ್ಷದ ಸಪ್ತಮಿಯಂದು ಮಾಡಿಕೊಳ್ಳುವ ಮದುವೆ.

ಧನಪತಿಯಾದ ಕುಬೇರನು ಹದಿನಾಲ್ಕು ಲಕ್ಷ ನಿಷ್ಕಗಳನ್ನು - ರಾಮಟಂಕಿ ವರಹಗಳನ್ನು ಬಡ್ಡಿಗಳಿಸಲು ಕೊಟ್ಟಿರಲು, ಚಕ್ರಪಾಣಿಯು ಬಡ್ಡಿ ಸಹಿತ ಅಸಲು ಹಣವನ್ನು ಹಿಂದಿರುಗಿಸಲು ಒಪ್ಪಿದ್ದಾನೆ. ಹೀಗಾಗಿ ಮದುವೆ ಯಾದ ಸಾವಿರ ವರ್ಷಗಳು ಕಳೆದನಂತರ ಸಾಲವನ್ನು ಯಕ್ಷರಾಜನಿಗೆ ಹಿಂದಿರುಗಿಸಲು ಶಾರ್ಙ್ಗಿಯು ಒಪ್ಪಿದ್ದಾನೆ.

ಈ ವ್ಯವಹಾರದಲ್ಲಿ ಮೊದಲನೆಯ ಸಾಕ್ಷಿ ಚತುರ್ಮುಖ ಬ್ರಹ್ಮ, ಎರಡನೆಯ ಸಾಕ್ಷಿ ತ್ರಿನೇತ್ರನಾದ ಶಿವ, ಮೂರನೆಯ ಸಾಕ್ಷಿ ಅಶ್ವತ್ಥವೃಕ್ಷ (ವೃಕ್ಷರಾಜ) ಇವರೆಲ್ಲ ಕಲ್ಪಾಂತದ ವರೆಗೆ ಇರುವವರು. ಹೀಗೆ ಸಾಲಪತ್ರವು ಶ್ರೀನಿವಾಸನ ಸ್ವಹಸ್ತದಿಂದ ಲಿಖಿಸಲ್ಪಟ್ಟಿತ್ತು.

(ಭವಿಷ್ಯೋತ್ತರ ಪುರಾಣ - ಶ್ರೀ ವೆಂಕಟಾಚಲ ಮಹಾತ್ಮ್ಯಂ - ಅಧ್ಯಾಯ 11 ಶ್ಲೋಕಗಳು 120 - 125)

## 7. ಗೋಲ್ಕೊಂಡದ ರಾಜರ ಅಧೀನದಲ್ಲಿ ತಿರುಪತಿ

ಕ್ರಿ.ಶ. 1636ರಲ್ಲಿ ದೆಹಲಿಯ ಸಾಮ್ರಾಟ ಷಹಜಹಾನನು ದಕ್ಖನ್ ಅನ್ನು ಆಕ್ರಮಿಸಿ, ಅಹಮದ್ ನಗರವನ್ನು ಧೂಳೀಪಟಗೊಳಿಸಿ, ನಷ್ಟವಾಗಿದ್ದ ವಿಜಯನಗರದ ಆದಷ್ಟು ಭಾಗಗಳನ್ನು ಆಕ್ರಮಿಸುವ ಹಕ್ಕನ್ನು ಬಿಜಾಪುರದ ಸುಲ್ತಾನರಿಗೆ ನೀಡುತ್ತ ಅವರೊಡನೆ ಒಪ್ಪಂದ ಮಾಡಿಕೊಂಡನು. ಇದರಂತೆಯೇ ಗೋಲ್ಕೊಂಡ ರಾಜ್ಯವೂ ಸ್ವತಂತ್ರವಾದದ್ದು ಎಂದು ಪರಿಗಣಿತವಾಯಿತು.

ಬಿಜಾಪುರವು ವೆಲ್ಲೂರನ್ನು ಹಿಡಿದರೆ ಗೋಲ್ಕೊಂಡವು ಚಂದ್ರಗಿರಿಯನ್ನು ವಶಪಡಿಸಿಕೊಂಡಿತು. ಜಿಂಜಿಯ ಕೋಟೆ 1649 ರಲ್ಲಿ ಬಿಜಾಪುರದವರ ಕೈಗೆ ಬಿದ್ದಿತು. ಕ್ರಿ.ಶ. 1638 ರಲ್ಲಿ ಗೋಲ್ಕೊಂಡವು ಅಳಿದುಳಿದ ವಿಜಯನಗರದ ಆಕ್ರಮಣವನ್ನು ಆರಂಭಿಸಿತು. ಗೋಲ್ಕೊಂಡದ ಪ್ರಬಲ ಸೈನ್ಯಾಧಿಕಾರಿ ಮೀರ್ ಜುಮ್ಲಾನು ವಿಜಯನಗರದ ಉಳಿಕೆಯ ಭಾಗವನ್ನು ಹಿಡಿದರೂ 1656 ರಲ್ಲಿ ದಕ್ಷಿಣ ಮೊಗಲ್ ರಾಜಪ್ರತಿನಿಧಿ ಔರಂಗಜೇಬನ ಆಶ್ರಯಕ್ಕೆ ಸೇರಿದ್ದರಿಂದ ಈ ಭಾಗವು ಷಹಜಹಾನನ ಮೊಗಲ್ ಸಾಮ್ರಾಜ್ಯದ ಭಾಗವೆಂದು ಘೋಷಿತವಾಯಿತು. ಆದರೆ ಗೋಲ್ಕೊಂಡದ ಸೈನ್ಯವು ಈ ಪ್ರಾಂತ್ಯವನ್ನು ಪುನಃ ಆಕ್ರಮಿಸಿ 1672 ರವರೆಗೆ ತನ್ನ ನೇರ ಅಧೀನದಲ್ಲಿಟ್ಟುಕೊಂಡಿದ್ದಿತು. 1686 - 88 ರಲ್ಲಿ ಔರಂಗಜೇಬನು ಗೋಲ್ಕೊಂಡ ರಾಜ್ಯಕ್ಕೆ ಇತಿಶ್ರೀ ಹಾಡುವವರೆಗೆ ಪರೋಕ್ಷ ಹಿಡಿತವಿದ್ದರೂ 1686 ರಲ್ಲಿ ಮೊಗಲ್ ಸಾಮ್ರಾಟನು ಬಿಜಾಪುರಕ್ಕೆ ಮಂಗಳ ಹಾಡಿದನು. ಇಡೀ ದಕ್ಖನ್ ಹಾಗೂ ಕರ್ನಾಟಿಕಗಳು ಮೊಗಲ್ ಸಾಮ್ರಾಜ್ಯದಲ್ಲಿ ವಿಲೀನಗೊಂಡವು.

ಈ ಮಧ್ಯೆ 1668 ರಲ್ಲಿ ಮಧ್ಯಪ್ರಾಂತ್ಯವನ್ನು ಗೋಲ್ಕೊಂಡದವರು ಆಳುತ್ತಿದ್ದಾಗ, ಮದರಾಸಿನಲ್ಲಿದ್ದ ಈಸ್ಟ್ ಇಂಡಿಯಾ ಕಂಪನಿಯವರು ತಮ್ಮ ಒಬ್ಬ ಪ್ರತಿನಿಧಿಯನ್ನು, ತಿರುಪತಿಯಲ್ಲಿದ್ದ ಗೋಲ್ಕೊಂಡದ ರಾಜ್ಯಪ್ರತಿನಿಧಿಯ ಬಳಿಗೆ ತಮ್ಮ ವ್ಯಾಪಾರ ಸಂಧಾನದ ವಿಷಯ ಮಾತನಾಡಲು ಕಳುಹಿಸಿದ್ದರು. ಆತನು ಈ ಆಂಗ್ಲಪ್ರತಿನಿಧಿಯನ್ನು ಗೋಲ್ಕೊಂಡಕ್ಕೆ ಹೋಗಿ ನೇಕ್ನಂ ಖಾನನನ್ನು ಕಂಡು ಅವನ ಅಂಗೀಕಾರವನ್ನು ಪಡೆದು ನಂತರ ಮೀರ್ ಜುಮ್ಲಾನನ್ನು ಕಾಣಲು ತಿಳಿಸಿದನು. ಪುನಃ 1680 ರಲ್ಲಿ ಕಂಪನಿಯವರು ತಮ್ಮ ಪ್ರತಿನಿಧಿಯನ್ನು ಗೋಲ್ಕೊಂಡದ ಮಂತ್ರಿ ಅಕ್ಕನ್ನನನ್ನು ಕಾಣಲು ಕಳುಹಿಸಿದರು. ಆತ ಅಕ್ಕನ್ನನ ಸಹೋದರ ಮಾದನ್ನನನ್ನು ಕಂಡ. ಆತನು ತಿರುಪತಿಗೆ ಹೋಗಿ ಅಕ್ಕನ್ನನನ್ನು ಕಾಣಲು ಸೂಚಿಸಿದನು. ಹೀಗಾಗಿ ಆ ಕಾಲಕ್ಕೆ ಯಾತ್ರಾಸ್ಥಳ ವೆಂದು ಪ್ರಸಿದ್ಧವಾದ ತಿರುಪತಿಯು ಆಡಳಿತ ಕೇಂದ್ರವೂ ಸೈನಿಕ ಕೇಂದ್ರವೂ ಆಗಿ ಪ್ರಸಿದ್ಧವಾಗಿದ್ದಿತು.

ತಿರುಪತಿಯ ಸುತ್ತಣ ಪ್ರದೇಶವನ್ನು ನಿಧಾನವಾಗಿ ಕೈವಶಮಾಡಿಕೊಂಡು ಗೋಲ್ಕೊಂಡದ ಆಡಳಿತ ಪರಿಧಿಯಲ್ಲಿ ತರಲಾಯಿತು. ಈ ದೀರ್ಘಾವಧಿಯು 1636 ರಲ್ಲಿ ಷಹಜಹಾನನಿಂದ ಹಿಡಿದು 1656 ರಲ್ಲಿ ಮೀರ್ ಜುಮ್ಲಾ ಮೊಗಲರ ಆಶ್ರಯ ಪಡೆಯುವವರೆಗೆ ಮುಂದುವರಿದು 1673 ರಲ್ಲಿ ಗೋಲ್ಕೊಂಡದ ಸುಲ್ತಾನನು ಶಾಂತಿಯುತವಾಗಿ ತನ್ನ ವಶಕ್ಕೆ ತೆಗೆದುಕೊಳ್ಳುವವರೆಗೆ ಮುಂದುವರೆಯಿತು ಎನ್ನಬೇಕು. ಗೋಲ್ಕೊಂಡದ ಮೀರ್ ಜುಮ್ಲಾನೇ ಇದರ ಆಡಳಿತಗಾರನಾಗಿದ್ದರೂ ಅತನು ಆಶ್ರಯದಾತರ ಹೆಸರನ್ನು ಪಡೆದು ಮೊದಲಿಗೆ ಗೋಲ್ಕೊಂಡ, ನಂತರ ಮೊಗಲ್ ಸಾಮ್ರಾಜ್ಯ ಗಳ ಭಾಗವೆಂದಾಯಿತು.

ಈ ನಡುವೆ ಗೋಲ್ಕೊಂಡದ ಅಧಿಕಾರಿ ಸೈನ್ಯಗಳವರು ಈ ಭೂಭಾಗವನ್ನು ಮೀರ್ ಜುಮ್ಲಾನ ಅಧಿಕಾರಿ ಗಳಿಂದ ಕಿತ್ತುಕೊಂಡರು. ಆದರೂ ಶ್ರೀರಂಗನು ಬಲವನ್ನು ಬೆಳಸಿಕೊಂಡಂತೆಲ್ಲ ಗೋಲ್ಕೊಂಡದ ಬಲ ಕುಗ್ಗಿತು. ಮೊದಲಿಗೆ ಕುಲೀ ಬೇಗನೂ (ರಾಜಾಕುಲಿ ಎಂದು ಪ್ರಸಿದ್ಧನಾದವನು) ನಂತರ ಮೂಸಾಖಾನನೂ ನಂತರ ನೇಕ್‌ನಮ್ ಖಾನನೂ ಈ ಭಾಗದ ರಾಜ್ಯಪಾಲರಾಗಿ ನಿಯಮನ ಹೊಂದಿದರು. ನೇಕ್‌ನಮ್ ಖಾನನ ಆಡಳಿತದ ಕಾಲದಲ್ಲಿ ಕಂಪನಿಯವರು ತಿರುಪತಿಯ ಪ್ರದೇಶದಲ್ಲಿನ ಗೋಲ್ಕೊಂಡದ ಆಡಳಿತ ಸ್ಥಿರವೆಂದು ಭಾವಿಸಿದ್ದರಿಂದ, ತಮ್ಮ ಒಪ್ಪಂದವನ್ನು ಅವನೊಂದಿಗೆ ಮಾಡಿಕೊಂಡರು. ಔರಂಗಜೇಬನು ಗೋಲ್ಕೊಂಡವನ್ನು ಆಕ್ರಮಿಸುವವರೆಗೆ ಇದು ಗೋಲ್ಕೊಂಡದ ಭಾಗವಾಗಿಯೇ ಇದ್ದಿತು,

ಗೋಲ್ಕೊಂಡದ ವಿವಿಧ ಪ್ರಾಂತ್ಯಗಳ ಆಡಳಿತವು ಆನಂತರದಲ್ಲಿ ಅಕ್ಕನ್ನ ಮಾದನ್ನರಿಗೆ ವರ್ಗಾವಣೆ ಆದಾಗ ಈ ಭಾಗವು ಅಕ್ಕನ್ನನ ನೇರ ಆಡಳಿತ ಪರಿಧಿಯಲ್ಲಿ ಬಂದಿತು. ಈ ಎಲ್ಲ ಅಧಿಕಾರಿಗಳೂ ತಮ್ಮ ಕೈಕೆಳಗಿನ ಅಧಿಕಾರಿ ಗಳ ಮೂಲಕ ಸ್ಥಳೀಯ ಕೇಂದ್ರಗಳಿಂದ ಆಡಳಿತ ನಡೆಸುವಂತೆ ಆಯಿತು. ತಿರುಪತಿಯು ಇಂತಹ ಒಂದು ಸ್ಥಳೀಯ ಅಧೀನ ಕೇಂದ್ರವಾಗಿ ಕಂಪನಿ ಆಡಳಿತದ ಪ್ರತಿನಿಧಿಯು ಸ್ಥಳೀಯ ಅಧಿಕಾರಿ ಚಿನ್ನಪ್ಪಲ್ಲಿ ಮಿರ್ಜಾನನ್ನು ನೋಡುವಂತಾಯಿತು. ಈ ಪ್ರತಿನಿಧಿಯನ್ನು ನೇರವಾಗಿ ನೇಕ್‌ನಮ್

ಖಾನ ನವಾಬನನ್ನೇ ನೋಡಲು ಕಳುಹಿಸಿಕೊಡಲಾಯಿತು. ಈ ಪ್ರಾಂತ್ಯದಲ್ಲಿ ನೇಕ್‌ನಮಖಾನನ ಅಧಿಕಾರ ಪ್ರತಿನಿಧಿಯಾಗಿ ಅಕ್ಕನ ನಿಯಮಿತನಾದ ಮೇಲೆ ಇಲ್ಲಿಯೇ ಒಂದು ಅಧೀನ ಆಡಳಿತ ಕೇಂದ್ರವನ್ನು ಈತ ಪ್ರಾಯಶಃ ಹೊಂದಿದ್ದ. ತಿರುಪತಿಯು ಆಡಳಿತ ಕೇಂದ್ರವಾಗಿ ಪ್ರಮುಖವಾಗಿದ್ದರೂ. ಅಕ್ಕನ್ನನ ದಾಯಾದಿ ಪೊದಿಲಿ ಲಿಂಗನ್ನನು ಪೂನಮಲ್ಲಿಯಲ್ಲಿ ಈತನ ತರಫ್‌ದಾರ (ಪ್ರತಿನಿಧಿ) ನಾಗಿದ್ದಿರಬೇಕು. ಕ್ರಿ.ಶ. 1681 ರಲ್ಲಿ ತನ್ನ ಕೇಂದ್ರ ಸ್ಥಳಕ್ಕೆ ಹಿಂದಿರುಗುವ ಮೊದಲು ಅಕ್ಕನ್ನನು ತಿರುಪತಿಗೆ ಭೇಟಿನೀಡಿ ಒಂದುವಾರ ಕಾಲ ಇಲ್ಲಿ ಉಳಿದಿದ್ದನೆಂದು ಕಂಡುಬರುತ್ತದೆ.

ಗೋಲ್ಕೊಂಡದ ಪತನಾನಂತರ ಗೋಲ್ಕೊಂಡ, ಕರ್ನಾಟಿಕಗಳು ಸಹಜವಾಗಿ ಮೊಗಲ್ ಸಾಮ್ರಾಜ್ಯದಲ್ಲಿ ಸೇರಿಹೋದವು. ಎರಡು ದಕ್ಷಿಣ ಪ್ರಾಂತ್ಯಗಳನ್ನು ಆಕ್ರಮಿಸಿ, ಮರಾಠರನ್ನು ದುರ್ಬಲಗೊಳಿಸಿದ ಮೇಲೆ ಔರಂಗ ಜೇಬನು ದಕ್ಷಿಣಕ್ಕೆ ತನ್ನ ರಾಯಭಾರಿಗಳನ್ನು ಕಳುಹಿಸಿ, ಇಡೀ ಭಾರತದ ಎಲ್ಲ ರಾಜರುಗಳ ವಿಧೇಯತೆಯನ್ನು ಕಪ್ಪಕಾಣಿಕೆಗಳನ್ನು ಕೇಳಿರಬೇಕು.

ಜಿಂಜಿಯ ಕೋಟೆ ಬಿದ್ದನಂತರ ಮೊಗಲರ ದಕ್ಷಿಣದ ನೆಲೆ ಏರ್ಪಟ್ಟು ಬಂದರೂ ಅದು ಪೂರ್ಣವಾಗಿ ಸ್ಥಾಪಿತವಾಗದೆ, ಹೆಚ್ಚುಕಡಿಮೆ ಜುಲ್‌ಫಿಕರ್ ಖಾನನ ಪಾಳಾಯಪಟ್ಟು ಎಂದೇ ಗುರುತಿಸಲ್ಪಟ್ಟು, ಮೊಗಲ್ ಕರ್ನಾಟಿಕದಲ್ಲಿ ಯಾವುದೇ ರಾಜಧಾನಿಯ ಬಗ್ಗೆಯೂ ಹೇಳ ಬರುವುದಿಲ್ಲ. ಜುಲ್ ಫಿಕರ್ ಖಾನನ ಸೇವೆಗಳೂ ಅನ್ಯತ್ರ ಅಗತ್ಯವಾಗಿದ್ದಿತು. ಹೀಗಾಗಿ ಆತ ತನ್ನ ಸರದಾರ ದಾವೂದ್ ಖಾನನಿಗೆ ಆಡಳಿತವನ್ನು ಒಪ್ಪಿಸಿ ಹೊರಡ ಬೇಕಾಯಿತು. ದಾವೂದ್ ಖಾನನು ಸ್ವಲ್ಪಕಾಲ ಜಿಂಜಿಯಲ್ಲಿಯೂ, ಸ್ವಲ್ಪಕಾಲ ಆರ್ಕಾಟಿನಲ್ಲಿಯೂ ಮತ್ತು ಸ್ವಲ್ಪಕಾಲ ಮದರಾಸಿನಲ್ಲಿಯೂ ತಳವೂರಿದ. ವೇಲೂರಿಗೆ ಹೋಗುವ ಹಾದಿಯಲ್ಲಿ ಪಾಲಾರ್ ನದಿಯ ಆಚೆಯ ದಡದಲ್ಲಿ ಆತ ತನಗಾಗಿ ಏರ್ಪಡಿಸಿಕೊಂಡ ಪಾಳಯವೇ ನಂತರದ ಇತಿಹಾಸದಲ್ಲಿ ಆರ್ಕಾಟ್ ನಗರವಾಯಿತು. ಕ್ರಿ.ಶ. 1710 ರಲ್ಲಿ ಸಾದತ್ ಉಲ್ಲಾಖಾನ ಎಂಬುದಾಗಿ ಈತನ ಅಧಿಕಾರಿ ಸಯ್ಯದ್ ಮುಜಫರನು ಆರ್ಕಾಟ್ ನವಾಬನೆಂದು ನೇಮಕವಾದಾಗ ಇದನ್ನೇ ಕರ್ನಾಟಿಕದ ರಾಜಧಾನಿಯೆಂದು ಅಧಿಕೃತವಾಗಿ ಗುರುತಿಸಲಾಯಿತು.

ಔರಂಗಜೇಬನ ಕೈಕೆಳಗೆ ತರಬೇತಿ ಹೊಂದಿದ ಈ ಮನುಷ್ಯ ದಕ್ಷ ಆಡಳಿತಗಾರನಾಗಿದ್ದನು. ಆರ್ಕಾಟು ಪ್ರಾಂತ್ಯದ ಬುನಾದಿಯನ್ನು ಈ ಸಯ್ಯದ್ ಮುಜಫರನ ಕಾಲದಿಂದ ಪರಿಗಣಿಸಬಹುದು.ತನ್ನ ಪ್ರಜೆಗಳ ಏಳಿಗೆ ಯಲ್ಲಿ - ಅವರ ಜಾತಿ ಮತಗಳ ಪರಿಗಣನೆಯಿಲ್ಲದಂತೆ - ನಿಜವಾದ ಆಸಕ್ತಿಯಿದ್ದವನಾಗಿದ್ದನು. ಹೈದರಾಲಿಯೂ ಸೇರಿದಂತಹ ಪ್ರಸಿದ್ಧ ನೇವೈತ್ ಪಂಗಡಕ್ಕೇರಿದವ ನಾಗಿದ್ದನು. ಈ ಪಂಗಡದ ಮುಸಲ್ಮಾನರಲ್ಲಿ ಹೆಚ್ಚುಮಂದಿ ಆಡಳಿತಗಾರರು ತಮ್ಮ ಸಾನುಭೂತಿಪರವಾದ ಜಾತ್ಯಾತೀತಆಡಳಿತದಕ್ಷತೆ, ಅಭಿವೃದ್ಧಿ ಪರತೆಗಳಿಗೆ ಹೆಸರಾದ ವರು ಎಂದು ನಾವು ಹೇಳಬಹುದು. ಆರ್ಕಾಟು ರಾಜಧಾನಿಯಾದ ಮೇಲೆ ವೇಲೂರು ಇಡೀ ಪ್ರಾಂತ್ಯದ ಮಕುಟಮಣಿಯಾಯಿತು. ಚಂದ್ರಗಿರಿ ಹಾಗೂ ತಿರುಪತಿಗಳೂ ಸಹ ಪ್ರಮುಖ ಕೇಂದ್ರಗಳಾಗಿ ದೊಡ್ಡ ಪ್ರಾಂತ್ಯದವಿಭಾಗ ಕೇಂದ್ರಗಳಾದವು. ಆರ್ಕಾಟಿನ ಈ ಪ್ರಾಂತ್ಯವು ಎಂದರೆ ಗೋಲ್ಕೊಂಡದ ಕರ್ನಾಟಿಕ ಪ್ರಾಂತ್ಯವು ನಂತರದಲ್ಲಿ ಮೂವತ್ತುವರ್ಷಗಳಿಗೂ ಹೆಚ್ಚುಕಾಲ ಸಾದತ್ ಉಲ್ಲಾಖಾನ್ ಹಾಗೂ ಆತನ ವಾರಸುದಾರ ದೋಸ್ತ್ ಆಲಿ ಅವರ ಕಾಲದಲ್ಲಿ ಒಂದು ರೀತಿಯ ಅಭಿವೃದ್ಧಿ ಹಾಗೂ ಒಳ್ಳೆಯ ಆಡಳಿತವನ್ನು ನೋಡುವಂತೆ ಆಯಿತು.

ಕ್ರಿ.ಶ. 1732ರವರೆಗೆ ಸಾದತ್ ಉಲ್ಲಾ ಖಾನನು ಕರ್ನಾಟಿಕದ ನವಾಬನಾಗಿ ಆಡಳಿತ ನಡೆಸಿದ. ನಂತರ ಈತನ ಸೋದರಳಿಯ ದೋಸ್ತ್ ಆಲಿಯು ಇವನ ವಾರಾಸುದಾರನಾದ. ಈತನ ಮರಣ 1740 ರಲ್ಲಿ ಉಂಟಾಗಿ ಕರ್ನಾಟಿಕ ಪ್ರಾಂತ್ಯವು ಯುದ್ಧಗಳ ಸುಳಿಗೆ ಸಿಕ್ಕಿಬಿದ್ದಿತು. ಸಾದತ್ ಉಲ್ಲಾಖಾನ್ ದೋಸ್ತ್ ಆಲಿಗಳ ಕಾಲದಲ್ಲಿ ಶಾಂತಿ ಸೌಹಾರ್ದಗಳು ನೆಲೆಸಿದ್ದು, ಆಡಳಿತ ಸುಗಮವಾಗಿ, ಒಟ್ಟಾರೆ ಸುಖ ಸಂಪತ್ತುಗಳ ಅಭಿವೃದ್ಧಿಯತ್ತ ಇಡೀ ಪ್ರಾಂತ್ಯ ನಿಧಾನವಾಗಿ ಹೆಜ್ಜೆ ಹಾಕುತ್ತಿದ್ದಿತು. 1732 ರಲ್ಲಿ ಸಾದತ್ ಉಲ್ಲಾಖಾನನು ನಿಧನ ಹೊಂದಿದಾಗ ದೋಸ್ತ್ ಆಲಿಯು ನಿಜಾಮನ ಅನುಮತಿಗೆ ಕಾಯದೆ ಗದ್ದುಗೆಯೇರಿದ್ದು ನಿಜಾಮನ ಕಣ್ಣು

ಕೆಂಪಗಾಗುವಂತೆ ಮಾಡಿತ್ತು. ಮರಾಠರೊಡನೆ ನಡೆದಿದ್ದ ಮತಭೇದಗಳು ಹಾಗೂ ಮೊಗಲರೊಡನೆ ತನಗಿದ್ದ ಭಿನ್ನಾಭಿಪ್ರಾಯಗಳ ನಡುವೆ ನಿಜಾಮನಿಗೆ ಮನೆಯೊಳಗಿನ ಆರ್ಕಾಟು ಕದನದಲ್ಲಿ ಸಿಕ್ಕಿಕೊಳ್ಳುವುದರಲ್ಲಿ ಆಸಕ್ತಿಯಿರಲಿಲ್ಲವಾಗಿ ಆತ ದೋಸ್ತ್ ಆಲಿಯ ಮೇಲೆ ಮರಾಠರು ಧಾಳಿಮಾಡುವಂತೆ ಪುಸಲಾಯಿಸಿ ಅವರಿಂದ ತನಗೆ ಬರಬಹುದಾದಂತಹ ಚೌತಾಯವನ್ನು ನಿರೀಕ್ಷಿಸಿದ.

ಮರಾಠರು ಕರ್ನಾಟಿಕವನ್ನು ಆಕ್ರಮಿಸ ಹೊರಟರು. ದೋಸ್ತ್ ಆಲಿಗೆ ಈ ಸುಳಿವು ಸಿಗುವ ವೇಳೆಗೆ ಅವರು ಚಿತ್ತೂರಿನಲ್ಲಿರುವ ಕಣಿವೆಯಲ್ಲಿ ಪಾಳಯ ಹೂಡಿದ್ದರು. ತಾನಿದ್ದ ಹೀನಾಯ ಪರಿಸ್ಥಿತಿಯಲ್ಲಿ ಅತ್ಯುತ್ತಮ ವಾದ ದಾರಿಯನ್ನು ಆಯ್ದುಕೊಂಡ ದೋಸ್ತ್ ಆಲಿ ಮರಾಠರು ಬಯಲು ಸೀಮೆಗೆ ಬರಲು ತಲುಪಬೇಕಾದ ಕಲ್ಲೂರು ಕಣಿವೆಯ ಹಾದಿಯನ್ನು ಅಡ್ಡಗಟ್ಟಲು ದಾಮಲ್ ಚೆರುವು ಕಣಿವೆಯಲ್ಲಿ ಪಾಳಯ ಹೂಡಿದ. ಪ್ರಬಲವಾದ ಪ್ರತಿಭಟನೆಯನ್ನೊಡ್ಡಿದರೂ ದೋಸ್ತ್ ಆಲಿಯು ಸೋಲಬೇಕಾಯಿತು. 1740 ರ ಈ ಯುದ್ಧದಲ್ಲಿ ಆತ ತನ್ನ ಮಗ ಹುಸೇನ್ ಆಲಿಯೊಡನೆ ರಣರಂಗದಲ್ಲಿ ಮಡಿದುಬಿದ್ದ.

ದೋಸ್ತ್ ಆಲಿಯ ಇನ್ನೊಬ್ಬ ಮಗ ಸಫ್ದರ್ ಆಲಿ ತಂದೆಯ ಮಾತಿನಂತೆ ಒಂದು ಸೈನ್ಯದೊಡನೆ ಯುದ್ಧ ಭೂಮಿಗೆ ಬಂದ. ಅಷ್ಟುಹೊತ್ತಿಗೆ ಯುದ್ಧ ಮುಗಿದು ಹೋಗಿದ್ದಿತು. ಮರಾಠರಿಗೆ ಸೆರೆಸಿಕ್ಕಿ ಬಿದ್ದ ತನ್ನ ತಂದೆಯ ಮಂತ್ರಿಯಾದ ಮೀರ್ ಅಸದ್‌ನ ಮೂಲಕ ಸಂಧಿಯ ಷರತ್ತುಗಳ ಬಗ್ಗೆ ಮಾತನಾಡಬೇಕಾಯಿತು. ಇಡೀ ಪ್ರಾಂತ್ಯವನ್ನು ಕೊಳ್ಳೆಹೊಡೆದ ನಂತರ ಮರಾಠರು ರಘೋಜಿ ಭೋನ್‌ಸ್ಲೆಯ ನೇತೃತ್ವದಲ್ಲಿ ಹಿಂದಿರುಗಲು ಒಪ್ಪಿದರು. ಒಂದು ಕೋಟಿ ರೂಪಾಯಿಗಳ ದಂಡವನ್ನು ಸಫ್ದರ್ ಆಲಿ ನೀಡಬೇಕಾಯಿತು. ಸಫ್ದರ್ ಆಲಿ ಈಗ ನವಾಬನಾದ. ಹೆಚ್ಚಿನ ಸುರಕ್ಷಿತ ಸ್ಥಳವೆಂಬ ಕಾರಣದಿಂದ ತನ್ನ ರಾಜಧಾನಿಯನ್ನು ವೇಲೂರಿಗೆ ವರ್ಗಾವಣೆ ಮಾಡಿದ. ಸಫ್ದರ್ ಆಲಿಯ ಸೋದರಿಯನ್ನು ವಿವಾಹವಾಗಿ, ಸಾಕಷ್ಟು ಹಣವನ್ನು ಕೂಡಿಟ್ಟ ಮುರ್ತುಜ ಆಲಿ ಆಗ ಇಲ್ಲಿ ರಾಜ್ಯಪಾಲನಾಗಿದ್ದ.

ನಂತರ ಈ ಇಬ್ಬರ ನಡುವೆ ಭಿನ್ನಾಭಿಪ್ರಾಯಗಳು ಬಲವಾದಾಗ, ಕರ್ನಾಟಿಕ ಪ್ರದೇಶವನ್ನು ಒಂದು ದೊಡ್ಡ ಸೈನ್ಯದೊಂದಿಗೆ ನಿಜಾಮನು ಆಕ್ರಮಿಸಿದನು. ಆರ್ಕಾಟಿನ ಸರ್ಕಾರವು ಉರುಳಿತು. ನವಾಬಗಿರಿಯನ್ನು ಬಾಲಕನಾದ ಮಹಮದಾಲಿಗೆ ನೀಡಿ, ಅವನ ರಕ್ಷಣೆಗಾಗಿ ನಂಬಿಕಸ್ತನಾದ ಅನ್ವರುದ್ದೀನನನ್ನು ನಿಯಮಿಸಿದ. ಅನ್ವರುದ್ದೀನನು ರಾಜಕುಮಾರನನ್ನು ಆರ್ಕಾಟಿಗೆ ಕರೆದು ಕೊಂಡು ಹೋಗಿ ಅಲ್ಲಿಂದಲೇ ಆಡಳಿತ ನಡೆಸಲು ಆರಂಭಿಸಿದ. ಜೂನ್ 1744 ರಲ್ಲಿ ರಾಜಕುಮಾರನ ಹತ್ಯೆ ನಡೆಸಲಾಯಿತು. ತನ್ನ ನಿರಪರಾಧಿತ್ವವನ್ನು ನಿಜಾಮನಿಗೆ ನಂಬಿಗೆಗೊಳಿಸಿದ ಅನ್ವರುದ್ದೀನನು ತಾನೇ ನವಾಬಗಿರಿಯನ್ನು 1744 ರಲ್ಲಿ ಒಂದು ಮದುವೆಯ ಸಂದರ್ಭದಲ್ಲಿ ಪಡೆದನು. ಸಫ್ದರ್ ಆಲಿಯು ಎರಡು ವರ್ಷ ಮೊದಲೇ ಹತ್ಯೆಮಾಡಲ್ಪಟ್ಟಿದ್ದನು.

## 8. ಮರಾಠರ ಕಾಲದಲ್ಲಿ ತಿರುಪತಿ

1740ರಲ್ಲಿ ರಘೋಜಿ ಭೋನ್‌ಸ್ಲೆಯ ಸೈನ್ಯಾಧಿಪತ್ಯದಲ್ಲಿ ಮರಾಠರು ಚಿತ್ತೂರು ಜಿಲ್ಲೆಗೆ ಕಲ್ಲೂರು ಕಣಿವೆಯ ಮುಖಾಂತರ ಇಳಿದು, ನವಾಬ ದೋಸ್ತ್ ಆಲಿಯನ್ನು ಅವನ ಮಗನನ್ನೂ ದಾಮಲಚೆರುವು ಯುದ್ಧದಲ್ಲಿ ಕೊಂದರು. ದೋಸ್ತ್ ಆಲಿಯ ಇನ್ನೊಬ್ಬ ಮಗ ಸಫ್ದರ್ ಆಲಿಯು ವೇಲೂರು ಕೋಟೆಯಿಂದ ಶಾಂತಿಯಾಗಿ ಮೊರೆಯಿಟ್ಟ. ಒಂದು ಕೋಟಿರೂಪಾಯಿಗಳ ದಂಡ ನೀಡಿದಲ್ಲಿ ಹಿಂದಿರುಗುವುದಾಗಿ ರಘೋಜಿ ಭೋನ್‌ಸ್ಲೇ ಒಪ್ಪಿಕೊಂಡ.

1740 ರ ಧಾಳಿಯ ಈ ಕಾಲದಲ್ಲಿಯೇ ಚಿತ್ತೂರು ಜಿಲ್ಲೆಯಲ್ಲಿ ತಿರುಪತಿಗೆ ಅತಿಹತ್ತಿರವಾಗಿದ್ದಾಗ ರಘೋಜಿ ಭೋನ್‌ಸ್ಲೆಯು ಅವಕಾಶ ಸಿಕ್ಕಿದೆಯೆಂದು ಶ್ರೀ ವೆಂಕಟೇಶ್ವರಸ್ವಾಮಿಯನ್ನು ಸಂದರ್ಶಿಸಿ, ತನ್ನ ಕಾಣಿಕೆಗಳನ್ನು ಒಪ್ಪಿಸಿದ.

ಅವುಗಳ ಪಟ್ಟಿ ಹೀಗೆ -

1) ಮಾಣಿಕ್ಯ ಹುದುಗಿಸಿದ ಪಚ್ಚೆಯ ಪದಕವಿದ್ದ 33000 ರೂಪಾಯಿಗಳ ಒಂದು ಮುತ್ತಿನ ಹಾರ., 2) ಮರಕತದ ಪದಕವಿದ್ದ 28000 ರೂಪಾಯಿಗಳ ಒಂದು ಮುತ್ತಿನ ಹಾರ., 3) ಇಪ್ಪತ್ತು ಭಾಗದ ಐದೆಳೆಯ ವಜ್ರಗಳ ಪದಕವಿದ್ದ ಮುತ್ತಿನ ಹಾರಗಳ ಇಪ್ಪತ್ತು

ಜೊತೆ - ಬೆಲೆ ಸುಮಾರು 45000 ರೂಪಾಯಿ., 4) ಒಂದೆಳೆಗೆ ಇಪ್ಪತ್ತು ಮುತ್ತುಗ ಳಂತೆ 17 ಎಳೆಗಳ ಒಂದು ಹಾರ - ಬೆಲೆ 28000 ರೂಪಾಯಿ., 5) 8500 ರೂಪಾಯಿ ಬೆಲೆಯ ಕಿರೀಟದ ಕೊನೆಯಲ್ಲಿ ಸಿಕ್ಕಿಸುವ ವಜ್ರಗಳ ಕಲಿಕಿ ತುರಾಯಿ.

ಆಲಯದಲ್ಲಿರುವ 'ರಘೋಜಿವಾರಿ ಪೆಟ್ಟೆ'ಯಲ್ಲಿ ಇದನ್ನು ರಕ್ಷಿಸಿಡಲಾಗಿದೆ.

ಈ ಕಾಲದ ಒಂದು ಶಾಸನವೂ ಇದೆ. ಶಕವರ್ಷ 1606 ರ ರಕ್ತಾಕ್ಷಿ ಸಂವತ್ಸರದ ಚೈತ್ರಶುದ್ಧ ಚತುರ್ದಶಿ ಅಂಗಾರ(ಕಹುಂಗಳ) ಹಸ್ತ ನಕ್ಷತ್ರದ ದಿನ (19-3-1684). ತಿರುಮಲೆಯ ಆಲಯದ ಎರಡನೆಯ ಪ್ರಾಕಾರದ ದಕ್ಷಿಣದ ಗೋಡೆಯ ಮೇಲಿದೆ. ಇದು ವಿಶೇಷ ಆಸಕ್ತಿದಾಯಕವಾದದ್ದು. ಇದರ ಲಿಪಿ ಹಾಗೂ ಭಾಷೆಗಳು. ಗ್ರಾಮೀಣ ತೆಲುಗು. ಸಂಪ್ರದಾಯದಂತೆ ರಾಜನ ಪ್ರಶಸ್ತಿಯು ಅಲಂಕಾರದ ಮುನ್ನುಡಿಯಿಲ್ಲ. ಗೋಲ್ಕೊಂಡದ ಸುಲ್ತಾನನು ವಸ್ತುಸ್ಥಿತಿಯಲ್ಲಿ ಆಂದಿನ ರಾಜನಾಗಿದ್ದರೂ ಯುದ್ಧದ ನಡುವೆ ಕುದಿಯುತ್ತಿದ್ದ ಈ ಪ್ರಾಂತ್ಯದ ರಾಜರು ಯಾರೆಂಬುದರ ಬಗ್ಗೆ ಅನುಮಾನಗಳಿದ್ದ ಕಾರಣದಿಂದ ಈ ರೀತಿಯ ಲೋಪವುಂಟಾಗಿರ ಬೇಕು. ಮಾದನ್ನ ಅಕ್ಕನ್ನರು 1681 ರಲ್ಲಿ ತಿರುಪತಿಗೆ ಭೇಟಿ ನೀಡಿ ಸುಮಾರು ದಿನಗಳ ಕಾಲ ಇಲ್ಲಿಯೇ ಇದ್ದರು. ಈ ಶಾಸನದ ದೇಣಿಗೆಯು ಶುದ್ಧಾನ್ನ ಅಲಂಕಾರದ ನೈವೇದ್ಯಕ್ಕೆ - ಹೆಸರುಬೇಳೆ, ಮೊಸರುಗಳ, ಅನ್ನಪಾಯಸ, ಪಚ್ಚಡಿ, ದೋಸೆಪ್ಪಡಿಗಳನ್ನು ಶ್ರೀ ವೆಂಕಟೇಶ್ವರಸ್ವಾಮಿ ಹಾಗೂ ಶ್ರೀ ವರಾಹ ಸ್ವಾಮಿಗಳಿಗೆ ನೈವೇದ್ಯಕ್ಕೆ ನೀಡಲು ಏರ್ಪಡಿಸಲಾಗಿದ್ದಿತು. ಇಲ್ಲಿನ ಪ್ರಸಾದಗಳನ್ನು ಸಿಂಗಮುರ್ಯೆ (ಕಟ್ಟಿಗೆ ತರುವವನು) ಪಣಿಮುರ್ಯೆ (ಮರಮತ್ತು ಕೆಲಸದವನು) ಇಬ್ಬರು ಜೀಯರುಗಳು, ಸ್ಥಾನಿಕರು, ಕಂಗಾಣಿಯಪ್ಪನ್ ಹಾಗೂ ದೇಸಾಯಿ (ಅಪರಿಚಿತರು) ಪಡಿಕ್ಕಾವಲಿ ಉತ್ತರ ಪಾರುಪತ್ಯಂ, ಅಧ್ಯಾಪಕಂ- ಮೊದಲಾದ ಸೇವಾದಾರರಲ್ಲಿ ವಿನಿಯೋಗ ಮಾಡಬೇಕಾ ಗಿದ್ದಿತು. ಸ್ಥಳೀಯ ಶ್ರೀ ವೈಷ್ಣವರಿಗೆ (ಗೋಷ್ಠಿಯಲ್ಲಿದ್ದ ಯಾತ್ರಿಕರಿಗೆ) ಉಚಿತವಾಗಿ ನೀಡಬೇಕು.

ಹೀಗೆ 1681 ರ ಹೊತ್ತಿಗೆ ಪ್ರಾಚೀನ ಪರಂಪರೆಯಿಂದ ಬಂದ ಪ್ರಸಾದ ವಿತರಣಾಪದ್ದತಿ ಮುರಿದು ಬಿದ್ದಿತು. ಅಕ್ಕಿಯ ಅಳತೆಯ ಮಾನ ಮಾತ್ರ ಪ್ರಾಚೀನವಾದ ಸೋಲ, ಅರ್ಧಸೋಲ (ಆಲಯದ ಸೋಲ, ಮಾರುಕಟ್ಟೆಯದಲ್ಲ) ವಾಗಿ ಮುಂದುವರೆಯಿತು. ದೇಣಿಗೆಯು ಧನದ ರೂಪದಲ್ಲಿ ಅಲ್ಲದೆ ಅಪರಂಜಿಯ ಕಂಠಿಹಾರವಾಗಿದ್ದಿತು. ಈ ಕಂಠಿಹಾರವನ್ನೂ ಸಹ ಕುನ್ರಪಾಕ್ಕಂ ಅಯ್ಯಾರಿ ತಿಮ್ಮಣ್ಣಯ್ಯವಾರು ಅವರ ವಶಕ್ಕೆ ಒಪ್ಪಿಸಿ, ಅವರು ಆಲಯದ ನಿವೇದನೆಗೆ ಬೇಕಾದ ಸರಂಜಾಮುಗಳನ್ನು ಒದಗಿಸಬೇಕಾಗಿದ್ದಿತು. 'ಸ್ಥಾನಾಲವಾರು' ಈ ನಿವೇದನೆಗಳನ್ನು ದಿನವೂ ನೈವೇದ್ಯ ಮಾಡುವುದಕ್ಕೆ ಕರ್ತವ್ಯವಾಗಿ ಹೊಂದಿದ್ದರು.

"ವೆಚ್ಚಗಳಿಗಾಗಿ 200 ಹಣವನ್ನು ಕುನ್ರಪಾಕ್ಕಂ ಅಯ್ಯನವರಿಗೆ ನೀಡವಾಗಿದೆ. ಈ ದಾನವನ್ನು ಅನುಭವಿಸ ತಕ್ಕದ್ದು. ಇದು ಶಾಶ್ವತವಾಗಿ ನಡೆಯತಕ್ಕದ್ದು". ಕಂಠಿಹಾರವು ಅಪರಂಜಿ ಚಿನ್ನದಿಂದ ಮಾಡಿದ್ದು 25 ವರಹಗಳ ತೂಕವಿದ್ದು 525 'ಶ್ರೀರಂಗರಾಜ ಗಗ' ಬೆಲೆಯದಾಗಿದ್ದಿತು. ದಾನ ನೀಡಿದಾತ 'ರಾಜಾ ಶ್ರೀ ಶಿವರಾಜ ರಾಮಚಂದ್ರ ಯಾದಮಲೇರ ದಬೀರಸ. ಈತ ಋಕ್ ಶಾಖೆಯ ಅಶ್ವಲಾಯನ ಸೂತ್ರದ ಶ್ರೀವತ್ಸಗೋತ್ರದವ'.

ಶ್ರೀ ಶೂಡ ಭಾನೂಜೀ ಪಂತುಲುಗಾರು ನೀಡಿದಂತಹ ದಾನದಿಂದ ಸಮರ್ಪಿಸುವ ನಿವೇದನೆಯಾದ ಕೂಡಲೇ ಈ ನಿವೇದನೆಯನ್ನು ಮಾಡಬೇಕಾಗಿದ್ದಿತು. ಪ್ರಸಾದ ವಿತರಣೆಯರೀತಿಯ ವಿವರಣೆಯಿಂದಾಗಿ ಇಲ್ಲಿನ ಸ್ಥಾನಾಲವಾರು (ಸ್ಥಾನತ್ತಾರರು) 1638 ರಲ್ಲಿ ಇದ್ದಂತೆ ಆರುಮಂದಿಯಲ್ಲದೆ ನಾಲ್ವರೇ ಆಗಿದ್ದು ಇವರೆಲ್ಲ ತೆಲುಗರಾಗಿದ್ದರು ಎಂದು ನಿರ್ಧರಿಸಬಹುದು.

ಈ ಹಿಂದೆ ಶಾಸನಗಳು ಶುಭಮಸ್ತು ಸ್ವಸ್ತಿಶ್ರೀ....... ಎಂದು ಮೊದಲಾಗಿ ಆರಂಭಿಸಲ್ಪಡುತ್ತಿದ್ದವು. ಈ ಶಾಸನವು 'ಶ್ರೀ ವೆಂಕಟೇಶ ಶುಭಮಸ್ತು' ಎಂದು ಮೊದಲಾಗುತ್ತದೆ. ಸ್ಥಾನತ್ತಾರರ ಪಾಲನ್ನು ಸೂಚಿಸುವ 'ನಿರ್ವಾಹಂ' ಪದ ಮಾಯವಾಗಿದ್ದು, ಅದಿಗೆ ಪ್ರಸಾದ ವಿತರಣೆಯನ್ನು ಸೂಚಿಸಲಾಗಿಲ್ಲ. ಪ್ರಸಾದ ವಿತರಣೆಯ ಪದ್ಧತಿ ಹೇಗಿರಬೇಕೆಂಬುದನ್ನು ದಾನಿಯೇ ಸೂಚಿಸಿದ್ದಾನೆ. ಹಳೆಯ ಸಂಪ್ರದಾಯದಲ್ಲಿದ್ದ ರೀತಿಯಲ್ಲಿರಲು ಬಿಟ್ಟಿಲ್ಲ. ದೈಹಿಕ ಶ್ರಮವನ್ನು ಹಾಕುತಿದ್ದ ವರಿಗೆ ಸಿಂಹಪಾಲನ್ನು ನೀಡಲಾಗಿದ್ದು

'ಸ್ಥಾನಾಲವಾರು'ಗೆ ನಾಮಮಾತ್ರಭಾಗದ ಪ್ರಸಾದ ನೀಡಲಾಗಿದೆ. ದೇಶಾಂತರಿಗಳು ಒಂದು ಭಾಗವನ್ನು ಪಡೆದಿದ್ದಾರೆ. ಪೆರಿಯ ಕೋಯಿಲ್ ಕೇಳ್ವಿ ಹಾಗೂ ಇಳಂ ಕೋಯಿಲ್ ಕೇಳ್ವಿ ಪದಗಳು ಪೆದ್ದಜಿಯಂಗಾರ್ ಹಾಗೂ ಚಿನ್ನ ಜಿಯಂಗಾರ್ ಎಂದಾದವು. ಇದರಿಂದಾಗಿ ಕೋಯಿಲ್ ಕೇಳ್ವಿ ಎಂಬ ಪದವಿಯನ್ನು ರದ್ದುಗೊಳಿಸಲಾಯಿತೆಂದು ತಿಳಿಯಬಹುದಾಗಿದೆ. 'ಉತ್ತರ ಪಾರುಪತ್ಯಂ' ಎಂಬ ಹೊಸ ಪದವಿ ಜಾರಿಗೆ ಬಂದಿದ್ದಿತು ಎಂದು ಕಾಣುತ್ತದೆ. ದಾನಿಯ ಭಾಗವಾದ ವಿಟ್ಟವನ್ ವಿಳಕ್ಕಾಡು ನಾಮಮಾತ್ರ ವಾಯಿತು ಅಧ್ಯಾಪಕಂ ಹಾಗೂ ಸ್ಥಲಶ್ರೀವೈಷ್ಣವರಿಗೆ ಪಾಲು ದೊರೆಯುವಂತಾಯಿತು. ಶಾಸನದ ಸಂಪ್ರದಾಯ ವಾಕ್ಯಗಳು ಮಾಯವಾದವು. ಹಳೆಯ ಸ್ಥಾನತ್ತಾರರು ಹಾಗೂ ತಿರುನಿನ್ರಊರ್ ಉಡೈಯರ್‌ಗಳು ಈ ವೇಳೆಗೆ ಆಲಯದಿಂದ ಹೊರನಡೆದಿದ್ದರು.

ದೇವರಿಗೆ ನೈವೇದ್ಯವನ್ನು ಅರ್ಪಿಸಲು ಇದ್ದಂತಹ ಹೆಸರು ಸಹ ಪರಿವರ್ತಿತವಾಯಿತು. ಮೊದಲಿಗೆ ಪ್ರಾಚೀನ ಕಾಲದಿಂದಲೂ ದೇವರಿಗೆ ನಿವೇದಿಸುವ ಶುದ್ಧಾನ್ನ ಅಥವಾ ಮತ್ತಾವುದೇ ಅಡುಗೆಯನ್ನೂ ತಿರುಪ್ಪೋನಕಂ ಸಂಧಿ, ತಿರುಪ್ಪೋನಕಂ ಎಂದಾಗಲೀ ಕರೆಯಲಾಗುತ್ತಿದ್ದಿತು. ಈ ಶಾಸನದಲ್ಲಿ ನೀಡಲಾಗಿರುವ ಹೆಸರು 'ಅವಸರಂ' ಸಂಸ್ಕೃತದ 'ಅವಸ್' ಪದಕ್ಕೆ ನೀಡಲಾಗಿರುವ ಅರ್ಥಗಳಲ್ಲಿ ಒಂದು ಆಹಾರ. 1554, 1579, 1616 ರಲ್ಲಿನ ಮೂರು ಶಾಸನಗಳಲ್ಲಿಯೂ ಈ ಪದವನ್ನು ಗಮನಿಸಬಹುದು. ಈ ಶಾಸನದಿಂದಲೇ ನಮಗೆ ಇದಕ್ಕೂ ಮುನ್ನ ಮಹಾರಾಜ ಶ್ರೀ ಶೂಡಜೀ ಭಾನೂಜೀ ಪಂತಲು ಏರ್ಪಡಿಸಿದ ಒಂದು 'ಅವಸರ' ಇದ್ದಿತೆಂದು ತಿಳಿದು ಬರುತ್ತದೆ. ಪ್ರಾಂತ್ಯವನ್ನು ಗೋಲ್ಕೊಂಡದವರು ವಶಪಡಿಸಿಕೊಂಡ ಮೇಲೆ ಅಳಿಯ ರಾಮರಾಜನು ಏರ್ಪಡಿಸಿದ್ದ ನಿವೇದನೆಗಳು ನಿಂತು ಹೋದವೆಂದು ಈ ಶಾಸನದ ಆಧಾರದಲ್ಲಿ ತೀರ್ಮಾನಿಸುವುದರಲ್ಲಿಯೂ, ಆಲಯದ ಸೇವೆಯಲ್ಲಿ ನಿರತರಾಗಿದ್ದ ಅಳಿದುಳಿದ ಹಲವು ಸೇವಾದಾರರಿಗೆ ಶುದ್ಧಾನ್ನದಂತಹ ಸಂತುಲಿತ ಆಹಾರದ ಅಗತ್ಯವಿದ್ದಿತೆಂದೂ ಹೇಳುವುದರಲ್ಲಿ ನ್ಯಾಯವುಂಟು.

1713 ರಲ್ಲಿ ಸಾದತ್ ಉಲ್ಲಾಖಾನನು ದಕ್ಷನ್ ಪ್ರಾಂತ್ಯದ ನವಾಬನೆಂದೂ, ಗೋಲ್ಕೊಂಡದ ಕರ್ನಾಟಿಕ ಪ್ರಾಂತ್ಯದ ಫೌಜ್‌ದಾರನೆಂದೂ ನೇಮಕವಾದ. ಜುಲ್ ಫಿಕರ್‌ಖಾನನ ಜಾಗೀರು ಪ್ರಾಂತ್ಯವನ್ನು ಇವನ ವಶಗೊಳಿಸಲಾಯಿತು. ಈತ ಶಾಂತಿ ಪ್ರಿಯ ಮನುಷ್ಯನಾಗಿದ್ದ. ಒಬ್ಬಾನೊಬ್ಬ ತೋದರಮಲ್ಲಜೀ ಈತನ ಮೇಲೆ ಬಹಳಷ್ಟು ಪ್ರಭಾವ ಬೀರುತ್ತಿದ್ದನೆಂದು ಹೇಳಲಾಗುತ್ತದೆ. ಈ ತೋದರಮಲ್ಲಜೀ ಹಾಗೂ ಅವನ ತಾಯಿ ಮತ್ತು ಹೆಂಡತಿ - ಇವರುಗಳ ಪ್ರತಿಮೆಗಳು ತಿರುಮಲೆಯ ಆಲಯದಲ್ಲಿವೆಯಾಗಿ, ಈತ ತನ್ನ ಜೀವಿತಕಾಲದಲ್ಲಿ ಆಲಯಕ್ಕೆ ಗುರುತರವಾದ ಸೇವೆಗಳನ್ನೇ ಮಾಡಿರಬೇಕು. ಫೋರ್ಟ್‌ಸೈಂಟ್ ಜಾರ್ಜ್ (ಮದರಾಸು) ನಲ್ಲಿದ್ದ ಇಂಗ್ಲೀಷರು ಇವನಿಗೆ ಹಲವು ಕಾಣಿಕೆಗಳನ್ನು ಕಳುಹಿಸುತ್ತ 4 - ಜನವರಿ 1714 ರಲ್ಲಿ 'ಈತನಿಗೆ ನವಾಬನಲ್ಲಿ ಅತ್ಯಂತ ಪ್ರಭಾವವಿದೆಯೆಂದೂ ನವಾಬನು ಚೆನ್ನಪಟ್ಟಣದತ್ತ (ಮದರಾಸು) ಧಾಳಿ ನಡೆಸುವುದನ್ನು ತಡೆಯಬಲ್ಲನು' ಎಂದೂ ಹೇಳಿದ್ದಾರೆ.

ಆರ್ಕಾಟಿನ ಬಳಿಯ ಕೊಡಕಂಟಿಯಲ್ಲಿದ್ದ ಇಂಗ್ಲೀಷರ ಸ್ಥಳೀಯ ಅಧಿಕಾರಿ ರಾವಂತುಲ(ರಾಯಸದ) ಔದಿಯಪ್ಪನು 1740ನೇ ಮೇ 18ರಂದು ಬರೆದ ಕಾಗದದಲ್ಲಿ ಒಂದು ಸಂಗತಿಯು ದಾಖಲಾಗಿದೆ. ಅಂದು ಮರಾಠರ ಪೇಶ್ವೆ ಬಾಜೀರಾಯನ ತಾಯಿ ಹಾಗೂ ಪತ್ನಿ ತಿರುಪತಿಗೆ ಬಂದರು (ಶ್ರೀ ವೆಂಕಟೇಶ್ವರಸ್ವಾಮಿಯ ಸಂದರ್ಶನಕ್ಕೆ) ಅವರನ್ನು ಸ್ವಾಗತಿಸಲು ಆರ್ಕಾಟಿನಿಂದ ಕೃಷ್ಣಾಜಿ ಪಂತುಲು ಹೋಗಿದ್ದನು. ಇದೇ ರಾವಂತಲ ಔದಿಯಪ್ಪನು 1740ನೇ ಸೆಪ್ಟಂಬರ್ 27 ರಂದು ಬರೆದ ಕಾಗದದಲ್ಲಿ (1740 ಅಕ್ಟೋಬರ್ 1 ರಂದು ತಲುಪಿದ ದೇಶಾಂತರಿ ಅಂಚೆ) ತಿರುಪತಿಯ ಆಲಯದ ಆದಾಯವನ್ನು ಆರ್ಕಾಟಿನ ನವಾಬನು ವ್ಯವಸ್ಥಿತವಾಗಿ ಕಬಳಿಸುತ್ತಿರುವುದಾಗಿಯೂ, ಅಂದಿಗೆ ಈ ಆದಾಯದಲ್ಲಿ ಐವತ್ತು ಸಾವಿರ ರೂಪಾಯಿಗಳನ್ನು ಕೂಡಲೇ ಮರಾಠರ ವಕೀಲರಿಗೆ ಸಂದಾಯ ಮಾಡಬೇಕೆಂದು ಆಜ್ಞೆ ನೀಡಿದ್ದಾಗಿಯೂ ತಿಳಿಸಿದ್ದಾನೆ. ಮರಾಠರ ಬೇಡಿಕೆ ಗಳಿಗೆ ಅನುಗುಣವಾಗಿತ್ತು ಈ ಆಜ್ಞೆ, ತಿರುಮಲೆಯ ಆಲಯಕ್ಕೆ ಈ ಹಣದಲ್ಲಿ ಇಪ್ಪತ್ತು ಸಾವಿರ ರೂಪಾಯಿಗಳ ದಾನ ನೀಡಲು ತನ್ನ ವಕೀಲರಿಗೆ ಬಾಜೀರಾಯನು ಅಮತಿ ನೀಡಿದ್ದನು. ಈ ದಾನಗಳ ಮೊತ್ತ ಬಾಜೀ ರಾಯನ ತಾಯಿ ಪತ್ನಿಯರು ಕಳೆದ ಮೇ ತಿಂಗಳಿನಲ್ಲಿ ಸ್ವಾಮಿಯ ಆರಾಧನೆ ಮಾಡಿದಾಗ

ಹೊತ್ತಿದ್ದ ಹರಕೆಯ ಭಾಗವಾಗಿರಬೇಕು. ಆ ದಿನಗಳಲ್ಲಿ ಸಫ್ದರ್ ಆಲಿಯ ಇಕ್ಕಟ್ಟು ಪರಿಸ್ಥಿತಿಯನ್ನು ವಿವರಿಸುವ ಕಾರಣದಿಂದಾಗಿ ರಾವಂತುಲ ಔದಿಯಪ್ಪನ ಈ ಕಾಗದ ಮುಖ್ಯವಾಗುತ್ತದೆ. "ಮರಾಠರ ವಕೀಲರು ತಮಗೆ ಬರಬೇಕಾದ ಹಣದ ಬಗ್ಗೆ ತೀವ್ರವಾದ ಒತ್ತಾಯ ಹಾಕಿದ್ದರು. ಅವರ ಒರಟು ವರ್ತನೆಯಿಂದ ಸಾಕಷ್ಟು ಅಸಂತುಷ್ಟನಾಗಿದ್ದರೂ ಅವರನ್ನು ಗೌರವದಿಂದಲೇ ಸ್ವಾಗತಿಸಿದ. ಅವರ ವೆಚ್ಚಗಳಿಗೆ ಸ್ವಲ್ಪ ಹಣವನ್ನು ನೀಡಿ ಅವರ ಪ್ರಭುಗಳಿಗೆ (ಪೇಶ್ವೆಗೆ) ಒಂದು ನೂರುಸಾವಿರ ರೂ.ಗಳನ್ನು ನೀಡಲು ಒಪ್ಪಿದ. ಇದರಲ್ಲಿನ ಐವತ್ತು ಸಾವಿರ ರೂಪಾಯಿ ಗಳನ್ನು ತಿರುಪತಿಯಲ್ಲಿ ಆಲಯದಿಂದ ಸರ್ಕಾರಕ್ಕೆ ಬರುವ ಹಣದಲ್ಲಿ ಪಡೆಯಲು ಸೂಚಿಸಿದ.

ವಕೀಲರು ತಮ್ಮ ಜನರನ್ನು ತಿರುಪತಿಗೆ ಕಳುಹಿಸಿ ಈ ಹಣವನ್ನು ಪಡೆದು ಪೇಶ್ವೆಯ ಆಜ್ಞೆಯಂತೆ ಇಪ್ಪತ್ತು ಸಾವಿರ ರೂಪಾಯಿಗಳನ್ನು ಅಲ್ಲಿನ ದಾನಗಳಿಗೆ ಬಳಸಿ ಮಿಕ್ಕದ್ದನ್ನು ತೆಗೆದುಕೊಂಡು ಬರಲು ಹೇಳಿದ್ದಾರೆ ಎಂದು ನನಗೆ ತಿಳಿದು ಬಂದಿದೆ. ಮಿಕ್ಕ ಐವತ್ತು ಸಾವಿರ ರೂಪಾಯಿಗಳನ್ನು ಯಾವರೂಪದಲ್ಲಿ ಯಾವ ಸ್ಥಳದಲ್ಲಿ ನೀಡ ಲಾಗುತ್ತದೆ ಎಂಬುದು ತಿಳಿದು ಬಂದಿಲ್ಲ'.

ಈ ಪ್ರಾಂತ್ಯದಲ್ಲಿದ್ದ ಪರಿಸ್ಥಿತಿಗಳ ಬಗ್ಗೆ 1740 ಜುಲೈ 9 ರಂದು ಬೊಂಬಾಯಿಗೆ ಬರೆದ ಒಂದು ಪತ್ರವಿದೆ. "ಮರಾಠರಿಗೆ ಬರಬೇಕಾದ ಸಾಕಷ್ಟು ಹಣ ಬಾಕಿಯಿದ್ದು ಮರಾಠರ ವಕೀಲರು ಈ ಬಗ್ಗೆ ಎತ್ತರದ ಧ್ವನಿಯಲ್ಲಿ ಮಾತನಾಡುತ್ತಾರೆ. ಮರಾಠಾ ಸೈನ್ಯದಲ್ಲಿ 40,000 ಕ್ಕಿಂತ ಹೆಚ್ಚು ಕುದುರೆ ಪಡೆಯಿದ್ದು ಪುತ್ತೇಸಿಂಗ್ ಹಾಗೂ ರಘೋಜಿಗಳು ಸೇನಾಪತಿಗಳಾಗಿದ್ದಾರೆ. ಮತ್ತೂ 20,000 ಮಂದಿ ಸೇನಾಪತಿ ಸಿದ್ದೋಜಿಯ ನೇತೃತ್ವ ದಲ್ಲಿ ಬಂದು ಸೇರಿದ್ದಾರೆ. ಇವರೆಲ್ಲ ಈಗ ಮೈಸೂರು ಪ್ರಾಂತ್ಯದಲ್ಲಿದ್ದು ಬಹುಧನವನ್ನು ಸಂಗ್ರಹಿಸಿದ್ದಾರೆ. ಮತ್ತೂ ದಕ್ಷಿಣಕ್ಕೆ ಹೊರಟು ಪುನಃ ಉತ್ತರಕ್ಕೆ ಮರಳುವವರಿದ್ದಾರೆ. ಈ ಪ್ರಾಂತ್ಯದಲ್ಲಿ ಇನ್ನೂ ಯಾವುದೇ ರೀತಿಯ ಸರ್ಕಾರವೂ ಇಲ್ಲದೆ ರಕ್ಷಣೆಯ ವ್ಯವಸ್ಥೆಯಿಲ್ಲದಾಗಿದೆ. ಹಿಂದಿನ ನವಾಬನೂ ಈಗ ನವಾಬನಾಗಿರುವ ಅವನ ಮಗನೂ ಸೈನಿಕರಿಗೆ ಋಣಿಗಳಾಗಿದ್ದಾರೆ. ಹಾಗೂ ಸೈನ್ಯ ತನ್ನ ಹಳೆಯ ಬಾಕಿ ಸಂಬಳವನ್ನು ಪಡೆಯದೆ ಯುದ್ಧಕ್ಕೆ ಮುಂದೆ ಬರುವುದಿಲ್ಲವೆನ್ನುತ್ತದೆ''.

# ಅಧ್ಯಾಯ - 17
# ಕರ್ನಾಟಿಕ ಯುದ್ಧಗಳ ನಡುವೆ ತಿರುಮಲೆ

## 1. ಹಿನ್ನೆಲೆ :

ಆರ್ಕಾಟು ಯುದ್ಧಗಳ ಪರಿಣಾಮವಾಗಿ ಆರ್ಕಾಟಿನ ನವಾಬರಿಂದ ಸಾಕಷ್ಟು ಪ್ರಾಂತ್ಯವನ್ನು ಈಸ್ಟ್ ಇಂಡಿಯಾ ಕಂಪನಿಯವರು ಪಡೆಯುವಂತಾಯಿತು. ಕ್ರಿ.ಶ. 1748 ರಲ್ಲಿ ತಿರುಮಲೆಯ ಆಲಯದ ಆದಾಯವನ್ನು ಕಂಪನಿಯ ವಶಕ್ಕೆ ನವಾಬನು ನೀಡಿದನು. ನಾಲ್ಕನೇ ಮೈಸೂರು ಯುದ್ಧ 1799 ರಲ್ಲಿ ಮುಗಿದ ನಂತರ, ಆರ್ಕಾಟಿನ ನವಾಬ ಮಹಮದಾಲಿಯ ಮರಣದ (1795) ನಂತರ 1801 ರಲ್ಲಿ ಅವನ ವಾರಸುದಾರ ಮಗನೂ ತೀರಿಕೊಂಡ ಮೇಲೆ ಮಹಮದಾಲಿಯ ಎರಡನೆಯ ಮಗ ಅಜೀಮ್ ಉಲ್ ಉಮ್ರನಿಗೆ ಇಂಗ್ಲೀಷರು ಜುಲೈ 1801 ರಲ್ಲಿ ಒಂದು ನಿಗದಿತವಾದ ವಾರ್ಷಿಕ ಮೊತ್ತವನ್ನು ನೀಡುವುದರ ಮೂಲಕ ಇಡೀ ಆರ್ಕಾಟು ಪ್ರಾಂತ್ಯದ ರಾಜಕೀಯ ಅಧಿಕಾರವನ್ನು ಕಂಪನಿಯ ಕೈಪಡೆದರು.

## 2. ಆನಂದ ರಂಗ ಪಿಳ್ಳೈ ದಿನಚರಿ

1743 ರಲ್ಲಿ ನಿಜಾಮನ ಧಾಳಿಗಳು ನಡೆದಾಗ ತಿರುಪತಿಯ ಉಲ್ಲೇಖವಾಗಿರುವುದರ ಬಗ್ಗೆ ಮೊದಲೇ ಹೇಳಲಾಗಿದೆ. ಪರಿಚಿತನೂ ಪ್ರಸಿದ್ಧನೂ, ಆದ ದಿನಚರಿಗಾರ ಆನಂದರಂಗಪಿಳ್ಳೈ ತನ್ನ ದಿನಚರಿಯಲ್ಲಿ ಮರಾಠರು 20,000 ಸೈನಿಕರೊಡನೆ ರಾಜಾ ಚಂದ್ರಸೇನ ಹಾಗೂ ರಾಜಾ ನಿಂಬಾಳಿ ಸಿಯುದೋಸಿಯವರ ನೇತೃತ್ವದಲ್ಲಿ ತಿರುಪತಿಗೆ ಸ್ವಾಮಿಯ ಸೇವೆಗೆ ಬಂದಿದ್ದನ್ನು ಗುರುತಿಸಿದ್ದಾನೆ. ಇದರಿಂದಾಗಿ ತಿರುಪತಿಯಲ್ಲಿ ಒಂದು ರೀತಿಯ ಆಡಳಿತ ಯಂತ್ರ ಕೆಲಸ ಮಾಡುತ್ತಿದ್ದಿತೆಂದೂ, ಆಲಯದಲ್ಲಿನ ದೈನಂದಿನ ಪೂಜೆ ಉತ್ಸವಗಳು ಯಥಾವಿಧಿ ಯಾಗಿ ಶಾಂತಿಯಿಂದ ಮುಂದುವರಿದಿದ್ದಿತೆಂದೂ ತಿಳಿಯಬಹುದು.

ದಿನಚರಿಗಾರ ಆನಂದರಂಗಪಿಳ್ಳೈಯು ದಾಖಲಿಸಿರುವ ನಂತರದ ಉಲ್ಲೇಖವೆಂದರೆ 1746 ರಲ್ಲಿ ಕಾರ್ವೇಟಿನಗರದ ಜಮೀಂದಾರನಾದ ಬೊಮ್ಮರಾಜಪುರಂನ ರಾಜ ನರಸಿಂಗನಿಂದ ಆದ ಕಪ್ಪಕಾಣಿಕೆಗಳ ವಿವರ. ಇದರಲ್ಲಿ ತಿರುಪತಿಯ ಸ್ವಾಮಿ ಪ್ರಸಾದವೂ ಇದ್ದಿತು. ಜೊತೆಗೇ ತಿರುಪತಿಯನ್ನು ಸಂದರ್ಶಿಸಬೇಕೆಂಬ ಆಹ್ವಾನವೂ ಇದ್ದಿತು. ನಂತರ ಅಕ್ಟೋಬರ್ ತಿಂಗಳಲ್ಲಿ ರಾಜನ ಚಿಕಿತ್ಸೆಗಾಗಿ ಒಬ್ಬಾನೊಬ್ಬ ಆರ್ಮುಗ ಪಂಡಾರನು ಬಂದಿದ್ದಂತೆಯೂ, ಆತ ಚಿಕಿತ್ಸೆ ನೀಡಿದ ನಂತರ ತಿರುಪತಿ ಕಾಳಹಸ್ತಿಗಳನ್ನು ನೋಡಿಕೊಂಡು ಹಿಂದಿರುಗಿದ ನೆಂದೂ ಲಿಖಿತವಾಗಿದೆ. ಇದೇ ಹೊತ್ತಿನಲ್ಲಿ ಪಾಂಡಿಚೇರಿಯ ಸಾವ್ಕಾರನು (ಬ್ಯಾಂಕರ್) ತಿರುಪತಿಗೆ ಬಂದಿದ್ದನೆಂದು ದಾಖಲು ಮಾಡಿದ್ದಾನೆ.

ಕ್ರಿ.ಶ. 1747 ರಲ್ಲಿ ಇಂಗ್ಲೀಷರ ದುಬಾಷಿಯಾದ ಮುತ್ಯಾಲ ನಾಯಕ ಎಂಬಾತನು ನಾಸಿರ್‌ಜಂಗನನ್ನು ಭೇಟಿಯಾಗಿ ಹೈದರಾಬಾದಿನಿಂದ ಹಿಂದಿರುಗುತ್ತ ತಿರುಪತಿಯ ಮೂಲಕ ಹಾದು ಹೋದಂತೆ ತಿಳಿದುಬರುವ ಆಸಕ್ತಿದಾಯಕ ದಾಖಲೆಯೂ ಇದೆ. ಅಂದಿನ ಕಾಲದಲ್ಲಿ ದಕ್ಷಿಣದಿಂದ ಹೈದರಾಬಾದಿಗೆ ಹೋಗುವ ರಾಜಮಾರ್ಗ ತಿರುಪತಿಯ ಮೂಲಕ ಹಾಯುತ್ತಿದ್ದಿತೆಂದು ಹೇಳಬರುತ್ತದೆ. ದಿನಚರಿಕಾರನು ಈ ದುಬಾಷಿಯ ಪ್ರಯಾಣದ ಬಗ್ಗೆ ಹೇಳುತ್ತ ಇವನನ್ನು ದಾರಿಯಲ್ಲಿ ಅಡ್ಡಗಟ್ಟಿ ನಿಜಾಮನಿಂದ ಪಡೆದಿದ್ದ ಕಾಣಿಕೆ ಬಹುಮಾನಗಳನ್ನು ದೋಚಿ ಕೊಳ್ಳಲು ಪ್ರಯತ್ನ ನಡೆಯಿತೆಂದು ತಿಳಿಸುತ್ತಾನೆ.

ಕಡ್ಡಲೂರಿನ ಬಳಿಯ ತಿರುವೆಂಡಿಪುರದಲ್ಲಿ ವೈಕಾಸಿ ತಿಂಗಳಿನ ಉತ್ಸವವನ್ನು ನಡೆಸಲು 1748 ರ ಏಪ್ರಿಲ್ ತಿಂಗಳಿನಲ್ಲಿ ತಿರುಪತಿಯಿಂದ ಒಬ್ಬ ಸನ್ಯಾಸಿಯು 300 ಪಗೋಡಗಳನ್ನು ತೆಗೆದುಕೊಂಡು ಹೋಗಿದ್ದ ಎಂದು ವರದಿಯಾಗಿದೆ.

ನಂತರದ ಉದಂತವು 1749 ರ ಅಕ್ಟೋಬರ್ 3 ರಂದು ವರದಿಯಾಗಿ ವಿಶೇಷ ಆಸಕ್ತಿಯನ್ನುಂಟು ಮಾಡುವಂತಹದ್ದಾಗಿದೆ. ತಿರುಪತಿಯ ಅಮಲ್ದಾರನಾಗಿ ನಿಯುಕ್ತನಾಗಿದ್ದ ಶ್ರೀನಿವಾಸಾಚಾರ್ ತನ್ನ ವಾರ್ಷಿಕ ಗುತ್ತಿಗೆ ಹಣವನ್ನು ನೀಡದೆ ಬಾಕಿಯಾಗಿ ಬಿಟ್ಟ. ಇದರಿಂದಾಗಿ ಆತ ಸ್ಥಳವನ್ನು ಬಿಟ್ಟು ಓಡಿಹೋದನು. ಮತ್ತೊಬ್ಬ ನನ್ನು - ಅವನ ಹೆಸರು ವಾಸುದೇವಾಚಾರ್ಯ - ಈ ಸ್ಥಳದಲ್ಲಿ ಅಮಲ್ದಾರನನ್ನಾಗಿ ಮುಂದಿನ ಮೂರು ವರ್ಷಕ್ಕೆ ನೇಮಕ ಮಾಡಲಾಯಿತು. ಆತ 1749 ರ ವರೆಗೆ ಹಿಂದಿನ ಬಾಕಿಗಾಗಿ ಒಂದು ಲಕ್ಷ ಪಗೋಡಗಳನ್ನು ನಂತರ ವರ್ಷಕ್ಕೆ 47000 ಪಗೋಡಗಳಂತೆಯೂ ಹಣವನ್ನು ನೀಡಬೇಕೆಂದು ತೀರ್ಮಾನವಾಯಿತು. ಮೂಲದಲ್ಲಿ ಇದು ಆರ್ಕಾಟಿನ ನವಾಬರು ಮಾಡಿದ ವ್ಯವಸ್ಥೆಯೇ ಆಗಿದ್ದಿತು. ನಂತರದ ದಾಖಲೆ ಅಂಶವೆಂದರೆ, ದಿನಚರಿಗಾರನು ಒಬ್ಬಾನೊಬ್ಬ ದೂಮಲ್ಲಿಕೃಷ್ಣಾಜಿ ಪಂಡಿತನ ಮರಣವನ್ನು ಬರೆದಿರುವಿಕೆ. ಈತ ನವಾಬ್ ಸಾದತ್ - ಉಲ್ಲಾ - ಖಾನನ ದಿವಾನನಾಗಿದ್ದು 1749 ರ ನವಂಬರ್ 22 ರಂದು ಮರಣವನ್ನಪ್ಪಿದ. ನಿಜಾಮರ ನಂಬಿಕೆಗೆ - ಮೊದಲಿಗೆ ಸಾದತ್ ಉಲ್ಲಾಖಾನ್ ಹಾಗೂ ನಂತರ ನಜೀರ್ ಜಂಗ್, ಮುಜಫರ್ ಜಂಗರ ನಂಬಿಕೆಗೆ - ಪಾತ್ರರಾದ ತೆಲುಗು ಬ್ರಾಹ್ಮಣ ಅಧಿಕಾರಿಗಳಾದ ಗೋಲ್ಕೊಂಡ ವ್ಯಾಪಾರಿ ಬಣಕ್ಕೆ ಸೇರಿದವ ಈ ಕೃಷ್ಣಾಜಿ ಪಂಡಿತ. ಅನ್ವರ್ ಉದ್ - ದೀನ್ ಖಾನನ ಮರಣಾನಂತರ ಈತ ತಿರುಪತಿಗೆ ಬಂದು ಬ್ರಹ್ಮೋತ್ಸವ ದಲ್ಲಿ ಪಾಲುಗೊಂಡಿದ್ದ. ಆಗಲೇ ಶ್ರೀನಿವಾಸಾಚಾರ್‌ಗೆ ಅಮಲ್ದಾರಿಯ ಗುತ್ತಿಗೆಯನ್ನು ನೀಡಿದ್ದು. ನಂತರ ಉಡೈಯರ್ ಪಾಳಯಂ ನಲ್ಲಿದ್ದ ಪಾಳಯವನ್ನು ಸೇರಿ ಅಲ್ಲಿ ಮರಣ ಹೊಂದಿದ. ತಿರುಪತಿಯ ಆಲಯದಲ್ಲಿ ಬಳಕೆಗಾಗಿ ಆರ್ಕಾಟಿನಿಂದ ಈತನು ಪಚ್ಚಕರ್ಪೂರ, ಕಸ್ತೂರಿ, ಶ್ರೀಗಂಧಗಳು ಅಗತ್ಯವೆಂದು ಆರ್ಕಾಟಿನಿಂದ ಕೇಳಿ ತರಿಸಿದ್ದನೆಂದು ದಿನಚರಿಗಾರ ಬರೆಯುತ್ತಾನೆ.

ಇದರಿಂದಾಗಿ ಆರ್ಕಾಟಿನ ನವಾಬರು ತಿರುಪತಿಯನ್ನು ವಾರ್ಷಿಕ ಆದಾಯಕ್ಕಾಗಿ ಬೇರೆ ಬೇರೆಯವರಿಗೆ ಗುತ್ತಿಗೆಗೆ ನೀಡುತ್ತಿದ್ದ ರೆಂದು ಖಚಿತವಾಗಿ ತಿಳಿದು ಬರುತ್ತದೆ. ಅನ್ವರ್ ಉದ್ ದೀನ್‌ನ ಮರಣಾನಂತರ ಶ್ರೀನಿವಾಸಾಚಾರ್ ಗೆ ಹೊಸದಾಗಿ, ಗುತ್ತಿಗೆಗೆ ನೀಡಲಾಯಿತೆಂದು ದಿನಚರಿಯಿಂದ ಖಚಿತವಾಗುತ್ತದೆ. ಈತನು ತನ್ನ ಗುತ್ತಿಗೆ ಹಣವನ್ನು ನುಂಗಿಹಾಕಿದ್ದರಿಂದ ಇನ್ನೊಬ್ಬ ವಾಸುದೇವಾ ಚಾರ್‌ಗೆ ಗುತ್ತಿಗೆ ನೀಡಬೇಕಾಗಿಬಂದಿತು. ಈ ಪ್ರಸಂಗದಲ್ಲಿ ನಿರ್ಧಾರವಾದ ವಾರ್ಷಿಕ ಗುತ್ತಿಗೆಯ ಮೊತ್ತ 47000 ಪಗೋಡಗಳು ಹಾಗೂ ಹಿಂದಿನ ಬಾಕಿಯ ಮೊತ್ತ ಲಕ್ಷ ಪಗೋಡಗಳು. ಆಂಬೂರು ಯುದ್ಧದಲ್ಲಿ ಗೆದ್ದು ಆ ಪ್ರದೇಶದ ಹಿಡಿತ ಪಡೆದವರು ಈ ಗುತ್ತಿಗೆಯ ಹಕ್ಕುದಾರರಾಗಿ ಇದನ್ನು ಬೇರೆಯವರಿಗೆ ನೀಡುತ್ತಿದ್ದರೆಂದು ಸ್ಪಷ್ಟವಾಗುತ್ತದೆ. ಇಲ್ಲಿ ಗುರುತಿಸಲಾಗಿರುವ ಕೃಷ್ಣಾಜಿ ಪಂಡಿತನು ವಾಸ್ತವವಾಗಿ ಆರ್ಕಾಟು ನವಾಬನ ಅಧಿಕಾರಿಯೇ ಆಗಿದ್ದರೂ, ನಿಜಾಮನ ನಂಬಿಕೆಗೂ ಪಾತ್ರನಾಗಿದ್ದ ವ್ಯಕ್ತಿಯಾಗಿದ್ದ ನೆಂದು ತಿಳಿದುಬರುತ್ತದೆ. ಹೀಗಾಗಿ ಈ ಏರ್ಪಾಡುಗಳು ಗೆದ್ದವರ ಪರವಾಗಿ ನಡೆದ ಏರ್ಪಾಡುಗಳೆಂದು ತಿಳಿಯುತ್ತದೆ. ಇಲ್ಲಿ ದಿನಚರಿಯ ಸಂಪಾದಕರಾದ ದಾದ್ ವೆಲ್ಲರು ತಮ್ಮ ಟಿಪ್ಪಣಿಯನ್ನೂ ಸೇರಿಸಿದ್ದಾರೆ. - "ತಿರುಪತಿಯ ಆದಾಯವು ವರ್ಷದಲ್ಲೊಮ್ಮೆ ಬಾರಿಯ ಉತ್ಸವ ಯಾತ್ರೆಗಳಲ್ಲಿ ಬರುವ ಯಾತ್ರಿಕರಿಂದ ಸಂಗ್ರಹವಾಗುವ ಧನವಾಗಿದ್ದು ಇದು 45000 ಪಗೋಡ ಹಾಗೂ 52000 ರುಪಾಯಿಗಳ ದ್ದಾಗಿದ್ದವು. ಹಣವನ್ನು ನುಂಗಿಹಾಕಿ ಓಡಿಹೋದ ಅಮಲ್ದಾರನೇ ಮುಂದೆ ಆಂಗ್ಲರಿಗಾಗಿ ತಿರುಪತಿಯ ಆದಾಯ ಸಂಗ್ರಹಕನಾಗಿ ಕೆಲಸ ಮಾಡಿದವನೆಂದು ನನಗೆ ಅನ್ನಿಸುತ್ತದೆ."

ಆಲಯದ ಭೂಮಿ ಕಾಣಿಗಳಿಂದ ಉಂಟಾಗುತ್ತಿದ್ದ ವಾರ್ಷಿಕ ಆದಾಯವು 45000 ಪಗೋಡಗಳೆಂದೂ ಯಾತ್ರಿಕರು ನೀಡುವ ಕಾಣಿಕೆಗಳಿಂದ 52000 ರೂಪಾಯಿಗಳು ಬರುತ್ತಿದ್ದಿತೆಂದೂ ತೋರುತ್ತದೆ. ಆರ್ಕಾಟಿನ ನವಾಬರು ತಿರುಪತಿಯ ಆದಾಯವನ್ನು ಸ್ಥಳೀಯ ವೈಷ್ಣವರಿಗೆ ಗುತ್ತಿಗೆಗೆ ನೀಡುತ್ತಿದ್ದರೆಂದೂ, ಈ ಗುತ್ತಿಗೆದಾರರು ಪ್ರತಿವರ್ಷವೂ ತಮ್ಮ ಗುತ್ತಿಗೆ ಹಣವನ್ನ ಎರಡು ವಿಧದಲ್ಲಿ ಅನುಕೂಲಕ್ಕಾಗಿ ಲೆಕ್ಕಹಾಕಿ ನೀಡುತ್ತಿದ್ದರೆಂದು ತಿಳಿದುಬರುತ್ತದೆ. ಭೂಮಿಯಿಂದ ಬರುವ ಆದಾಯವನ್ನು ಪಗೋಡಗಳಲ್ಲಿಯೂ, ಯಾತ್ರಿಕರಿಂದ ಬರುವ ಆದಾಯವನ್ನು ರೂಪಾಯಿಗಳಲ್ಲಿಯೂ ಲೆಕ್ಕ ಹಾಕುತ್ತಿದ್ದರೆಂದು ಕಂಡುಬರುತ್ತದೆ. ಇದರಿಂದಾಗಿ ವಾರ್ಷಿಕ

ವಾಗಿ ಆ ಮೊತ್ತ 2.5 ಲಕ್ಷ ರೂಪಾಯಿಗಳಷ್ಟಿತ್ತು. ಶ್ರೀನಿವಾಸಾಚಾರ್ ಓಡಿಹೋಗಲು ಈ ಹೆಚ್ಚಿದ ಅಂದಾಜು ಸಹ ಒಂದು ಕಾರಣವಾಗಿರಬೇಕು.

### 3. ಈಸ್ಟ್ ಇಂಡಿಯಾ ಕಂಪನಿಗೆ ತಿರುಮಲೆಯ ಆಲಯಾದಾಯ

ಯೂರೋಪಿನಲ್ಲಿ ಆಸ್ಟ್ರಿಯಾದ ವಾರಸಿಕೆಯಲ್ಲಿ ಆಂಗ್ಲರು ಫ್ರೆಂಚರು ಯುದ್ಧ ಮಾಡಿದಾಗ, ಅದರ ನೆರಳು ಇಂಡಿಯಾದಲ್ಲಿ ಬಿದ್ದು ಮೊದಲನೆಯ ಕರ್ನಾಟಿಕ್ ಯುದ್ಧ (1746 - 48) ನಡೆಯಿತು. ಫ್ರೆಂಚರು ಆಂಗ್ಲರಿಂದ ಮದರಾಸನ್ನು ವಶಪಡಿಸಿಕೊಂಡರು. ಆರ್ಕಾಟಿನ ನವಾಬ ಅನ್ವರ್ ಉದ್ ದೀನನು ಫ್ರೆಂಚರಿಂದ ಮದರಾಸನ್ನು ಬಿಡಿಸಿಕೊಳ್ಳಲು ಒಂದು ಸೈನ್ಯವನ್ನು ಕಳುಹಿಸಿದನು ಆದರೆ ಫ್ರೆಂಚರು ಸೈನ್ಯವನ್ನು ಸೋಲಿಸಿದರು. ಆರ್ಕಾಟು ನವಾಬನು ಕರ್ನಾಟಕ ಯುದ್ಧದಲ್ಲಿ ಭಾಗವಹಿಸಿದ್ದು ಒಂದು ಸಣ್ಣ ವಿಷಯವಷ್ಟೆ. 1748ರಲ್ಲಿ ಎಕ್ಸ್‌ಲ ಚಾಪೆಲ್ ಒಪ್ಪಂದದಿಂದಾಗಿ ಯೂರೋಪಿನಲ್ಲಿ ಯುದ್ಧ ನಿಂತು ಹೋದಾಗ ಇಂಡಿಯಾದಲ್ಲಿ ಸಹ ಯುದ್ಧ ನಿಂತುಹೋಯಿತು.

ಎರಡನೇ ಕರ್ನಾಟಿಕ ಯುದ್ಧ ನಿಜವಾದ ಯುದ್ಧವಾಗಿ (1748 - 65) ಆರ್ಕಾಟು ಭೂಮಿಯಲ್ಲಿ, ದಕ್ಷಿಣಕ್ಕೆ ಕೇರಳದಿಂದ ಉತ್ತರಕ್ಕೆ ಮೈಸೂರಿನ ವರೆಗೆ ರಣರಂಗವಾಗಿ 1760 ರ ವರೆಗೆ ಮುಂದು ವರೆದು ಯೂರೋಪಿನಲ್ಲಿ 1763 ರ ಪ್ಯಾರಿಸ್ ಒಪ್ಪಂದದಿಂದ ಕೊನೆಯಾದ ಏಳು ವರ್ಷದ ಯುದ್ಧದೊಡನೆ ಕೊನೆಯಾಯಿತು.

ಸಾದತ್ - ಉಲ್ಲಾ - ಖಾನನನ್ನು (1710 - 32) ಅನುಸರಿಸಿ ಅವನ ಸೋದರಳಿಯ ದೋಸ್ತ್ ಆಲಿಯು (1732 - 40) ಆರ್ಕಾಟಿನ ನವಾಬನಾದನು. ತಿರುಚನಾಪಳ್ಳಿಯ ನಾಯಕನ ವಿಧವೆಯ ವಶದಲ್ಲಿದ್ದ ತಿರುಚನಾಪಳ್ಳಿಯನ್ನು ವಶಪಡಿಸಿಕೊಳ್ಳಲು ತನ್ನ ಅಳಿಯನಾದ ಚಾಂದ್ ಸಾಹೇಬನಿಗೆ ಸೈನ್ಯವನ್ನು ನೀಡಿ 1736ರಲ್ಲಿ ಕಳುಹಿಸಿದನು. ಚತುರೋಪಾಯದಿಂದ ಚಾಂದ್ ಸಾಹೇಬನು ತಿರುಚನಾಪಳ್ಳಿಯನ್ನು ಹಿಡಿದಾಗ, ಅವನ ಸೋದರನು ಮದುರೆಯನ್ನು ವಶಪಡಿಸಿಕೊಂಡನು. ನಂತರ ಇವರು ಮಹಾರಾಷ್ಟ್ರದ ರಾಜ ಪ್ರತಾಪ ಸಿಂಗನ (1739 - 63)ವಶದಲ್ಲಿದ್ದ ತಂಜಾವೂರನ್ನು ಹಿಡಿಯಲು ಪ್ರಯತ್ನಿಸಿದರು. ಪ್ರತಾಪ ಸಿಂಹನು ಸತಾರದಲ್ಲಿದ್ದ ಛತ್ರಪತಿ ಸಾಹುವಿನ ಮೊರೆ ಹೋದ. ರಘೋಜಿ ಭೋನ್‌ಸ್ಲೆಯ ನೇತೃತ್ವದಲ್ಲಿ ಪ್ರತಾಪಸಿಂಗನ ನೆರವಿಗೆ ಒಂದು ದೊಡ್ಡ ಸೈನ್ಯ ದಕ್ಷಿಣಕ್ಕೆ ಬಂದಾಗ ಅದನ್ನು ದೋಸ್ತ್ ಆಲಿಯು ತಿರುಪತಿಯ ಪಶ್ಚಿಮದ ದಾಮಲ್‌ಚೆರವು ಕಣಿವೆಯಲ್ಲಿ ಎದುರಿಸಿ (1740) ಘನ ಘೋರ ಯುದ್ಧ ಮಾಡುತ್ತ ಸಮರದಲ್ಲಿ ಸತ್ತನು. ರಘೋಜಿ ಭೋನ್‌ಸ್ಲೆಯು ತಿರುಚನಾಪಳ್ಳಿಯತ್ತ ಸೈನ್ಯವನ್ನು ತಿರುಗಿಸಿ, ನಗರವನ್ನು ಹಿಡಿದು ಚಾಂದಸಾಹೇಬನನ್ನು ಬಂಧಿಸಿ ಸತಾರಕ್ಕೆ ಕರೆದೊಯ್ದ. ದಕ್ಖನದ ಸುಬೇದಾರ ನಾದ ನಿಜಾಮ ಅಸಫ್ ಝಾ 1743 ರಲ್ಲಿ ಕರ್ನಾಟಕ ಪ್ರದೇಶದ ಆಡಳಿತಗಾರನನ್ನಾಗಿ, ಆರ್ಕಾಟಿನ ನವಾಬನನ್ನಾಗಿ ಅನ್ವರುದ್ದೀನನನ್ನು ನಿಯಮಿಸಿದನು.

ಚಾಂದ್ ಸಾಹೇಬನ ಮಗ ರಾಜಾ ಸಾಹೇಬನು ಫ್ರೆಂಚರೊಂದಿಗೆ (ಪಾಂಡಿಚೆರಿಯಲ್ಲಿದ್ದವರು) ತನ್ನ ತಂದೆಯ ಬಿಡುಗಡೆಗೆ ಒಪ್ಪಂದಮಾಡಿಕೊಂಡ. ಅದರಂತೆ ಫ್ರೆಂಚರು 1748 ರಲ್ಲಿ 7 ಲಕ್ಷ ರೂಪಾಯಿಗಳ ಬಿಡುಗಡೆ ಧನವನ್ನು ಮರಾಠರ ಛತ್ರಪತಿಗೆ ಕೊಟ್ಟು ಚಾಂದಾಸಾಹೇಬನನ್ನು ಬಿಡಿಸಿದರು. ಫ್ರೆಂಚರ ನೆರವಿನಿಂದ ಚಾಂದ್ ಸಾಹೇಬನು 1749 ರಲ್ಲಿ ಆಂಬೂರಿನ ಯುದ್ಧದಲ್ಲಿ (ಉತ್ತರ ಆರ್ಕಾಟ್ ಜಿಲ್ಲೆ) ಅನ್ವರುದ್ದೀನನ್ನು ಸೋಲಿಸಿದನು. ಈ ಯುದ್ಧದಲ್ಲಿ ಅನ್ವರುದ್ದೀನ್ ಮರಣ ಹೊಂದಿದ.

1749 ರಲ್ಲಿ ಅನ್ವರುದ್ದೀನನ ಮಗ ಮಹಮದಾಲಿಯು ತಿರುಚನಾಪಳ್ಳಿಗೆ ಹಿಮ್ಮರಳಿ ಆಂಗ್ಲರ ನೆರವಿನಿಂದ ತಾನೇ ನವಾಬ ನೆಂದು ಘೋಷಿಸಿಕೊಂಡ. ದಕ್ಷಿಣದ ಸುಬೇದಾರ ನಾಸಿರ್ ಜಂಗನು ಈತನ ನವಾಬ ಪಟ್ಟವನ್ನು ಅನುಮೋದಿಸಿದನು. ಚಾಂದ್ ಸಾಹೇಬನು ಫ್ರೆಂಚರ ನೆರವಿನೊಡನೆ ಇದನ್ನು ವಿರೋಧಿಸಿ ಮಹಮದಾಲಿಯ ಮೇಲೆ ಅನೇಕ ಸ್ಥಳಗಳಲ್ಲಿ ಯುದ್ಧಮಾಡಿದ ಮಹಮ

ದಾಲಿಗೆ ಆಂಗ್ಲರ ಬಲವಾದ ಬೆಂಬಲವಿತ್ತು. ಕಡೆಗೆ 1752 ರಲ್ಲಿ ಚಾಂದ್ ಸಾಹೇಬನನ್ನು ಸೆರೆಹಿಡಿದು ಶ್ರೀರಂಗಕ್ಕೆ ತರಲಾಯಿತು. ಅಲ್ಲಿ ಅವನು ಮೃತನಾದಾಗ ಮಹಮದಾಲಿಯು ಕರ್ನಾಟಿಕಕ್ಕೆ ಸವಾಲಿಲ್ಲದ ಸರದಾರನಾದ. ಅವನ ನವಾಬಿಕೆಗೆ ಸ್ಪರ್ಧೆಯಿಲ್ಲವಾಯಿತು.

ಆದರೆ ಯೂರೋಪಿನಲ್ಲಿ ಆಂಗ್ಲ ಫ್ರೆಂಚರ ನಡುವೆ ಏಳುವರ್ಷದ ಯುದ್ಧ ಮುಂದುವರಿದೇ ಇದ್ದದ್ದರಿಂದ ಭಾರತದಲ್ಲಿಯೂ ಯುದ್ಧ ಮುಂದುವರಿದು ಆಂಗ್ಲರಿಂದ ಫ್ರೆಂಚರ ಆಡಳಿತ ಕೇಂದ್ರವಾದ ಪಾಂಡಿಚೇರಿ ಧಾಳಿ ಗೊಳಗಾಗಿ ಧೂಳೀಪಟವಾಯಿತು. ಫ್ರೆಂಚ್ ರಾಜ್ಯಪಾಲನೂ, ನವಾಬನೂ, ಸೇನಾಪತಿ - ಕೌಂಟ್ - ಡಿ - ಲಾಲಿಯೂ ಸೆರೆ ಸಿಕ್ಕವರಾಗಿ ಶಾಂತಿ ಘೋಷಿತವಾಯಿತು. 1763 ರಲ್ಲಿ ಯೂರೋಪಿನಲ್ಲಿ ಯುದ್ಧ ಮುಗಿದು ಶಾಂತಿಯುಂಟಾದಾದ ಫ್ರೆಂಚರು ಪಾಂಡಿಚೇರಿ ಮತ್ತಿತರ ಆಕ್ರಮಿತ ಪ್ರದೇಶಗಳನ್ನು ವಾಪಸ್ಸು ಪಡೆಯುವಂತಾಯಿತು.

ಈ ಎರಡನೆಯ ಆರ್ಕಾಟು ಯುದ್ಧದ ಮುಖ್ಯ ಉದ್ದೇಶವೆಂದರೆ ಮಹಮದಾಲಿಯ ನವಾಬಿಕೆಯನ್ನು ಪ್ರತಿಷ್ಠಾಪಿಸಿ ಅದಕ್ಕೆ ಇದ್ದ ಸ್ಪರ್ಧೆಯನ್ನು ನಿವಾರಿಸುವುದೇ ಆಗಿದ್ದಿತು. ಅತಿಘೋರ ಯುದ್ಧಗಳಿಂದಲೂ, ಹೆಚ್ಚಿನ ಸೈನ್ಯನಾಶದಿಂದಲೂ, ದುಬಾರಿ ಖರ್ಚಿನಿಂದಲೂ ಈ ಉದ್ದೇಶವು ಈಡೇರಿಸಲ್ಪಟ್ಟಿತು. ಯುದ್ಧವೆಚ್ಚಗಳಿಗಾಗಿ ಮಹಮದಾಲಿಯು ಆಂಗ್ಲರಿಗೆ ಬಹಳಷ್ಟು ಹಣ ನೀಡಬೇಕಾಯಿತು, ಯಾವುದೇ ಹೆಚ್ಚಿನ ಆದಾಯವೂ ಇಲ್ಲದ ಆತನು ಶ್ರೀ ವೆಂಕಟೇಶ್ವರಸ್ವಾಮಿ ಆಲಯದ ಆದಾಯವನ್ನು ಈಸ್ಟ್ ಇಂಡಿಯಾ ಕಂಪನಿಗೆ ನೀಡಿದನು. ತನ್ನ ವೆಚ್ಚಗಳಿಗಾಗಿ ತಾನು ಮಾಡಿದ ಕಂಪನಿ ಸಿಬ್ಬಂದಿ ಹಾಗೂ ಸಾರ್ವಜನಿಕರ ಬಳಿಯ ಮುವ್ವತ್ತು - ಮುವ್ವತ್ತಾರು ಶತಾಂಶದ ಬಡ್ಡಿಯ ಸಾಲಗಳನ್ನು ತೀರಿಸಲು ತನ್ನ ರಾಜ್ಯದ ವಿವಿಧ ಜಿಲ್ಲೆಗಳ ಆದಾಯವನ್ನು ಸಂಗ್ರಹಿಸುವ ಗುತ್ತಿಗೆಯನ್ನು ಆಂಗ್ಲರಿಗೆ ಬಿಟ್ಟುಕೊಟ್ಟನು. ಇಡೀ ಪ್ರಾಂತವನ್ನೇ ಆಂಗ್ಲರು ಕಬಳಿಸಬೇಕೆಂದು ಹಂಚಿಕೆ ಹೂಡಿದ್ದರು. 1801 ರಲ್ಲಿ ಮಹಮದಾಲಿಯ ಮಗ ನವಾಬ್ ಉಂದತ್ - ಉಲ್ - ಉಮ್ರಾನ ಮರಣದಿಂದ ಅವರಿಗೆ ಈ ಅವಕಾಶವೂ ದೊರೆಯಿತು. ಉಂದತ್ - ಉಲ್ - ಉಮ್ರಾನ ಮಗ ತಾಜುಲ್ - ಉಮ್ರನು ಆಂಗ್ಲರಿಂದ ವಾರ್ಷಿಕ ಪಿಂಚಣಿಯನ್ನು ಪಡೆದು ಕರ್ನಾಟಿಕ ರಾಜ್ಯವನ್ನು ಬಿಟ್ಟುಕೊಡಲು ಒಪ್ಪದಿದ್ದಾಗ ಅವನ ಸೋದರಳಿಯ ಅಜೀಮುದ್ - ದೌಲನು ನಾಮಮಾತ್ರ ನವಾಬನಾಗಿದ್ದು ಆಂಗ್ಲರಿಂದ ಪಿಂಚಣಿ ಪಡೆಯಲು ಒಪ್ಪಿದನು. ಹಾಗಾಗಿ ಇಡೀ ಪ್ರಾಂತ್ಯವು ಆಂಗ್ಲರ ವಶವಾಗಿ ಶ್ರೀ ವೆಂಕಟೇಶ್ವರ ಆಲಯವೂ ಅವರ ಆಸ್ತಿಯಾಯಿತು.

## 4. ಸಮರದ ನೆರಳಿನಲ್ಲಿ ಆಲಯ

ಕರ್ನಾಟಿಕದಲ್ಲಿ ತನ್ನ ಅಧಿಕಾರವನ್ನು ಉಳಿಸಿಕೊಂಡದ್ದರ ಬೆಲೆಯಾಗಿ ಮಹಮದಾಲಿಯು ಆಂಗ್ಲರಿಗೆ ಶ್ರೀ ವೆಂಕಟೇಶ್ವರಸ್ವಾಮಿ ಆಲಯದ ಆದಾಯವನ್ನು ಒಪ್ಪಿಸಿದ. ಇದು ನಡೆದದ್ದು ಸುಮಾರು 1750 ರಲ್ಲಿ. ಈಸ್ಟ್ ಇಂಡಿಯಾ ಕಂಪನಿಯವರೂ ಸಹ ಈ ಆಲಯದ ಆದಾಯನ್ನು ವಾರ್ಷಿಕ ಗುತ್ತಿಗೆಗೆ ನೀಡಿ, ಮೊಗಲ್ ಸಾಮ್ರಾಜ್ಯದ ಪತನಾನಂತರ ವಿವಿಧ ಸ್ಥಳಗಳಲ್ಲಿ ಧನದಾಸೆಯ ಸಾಹಸಿಗಳು ನಡೆಸುತ್ತಿದ್ದ ಧಾಳಿಗಳಿಂದ ಆಲಯವನ್ನು ಕಾಪಾಡುವುದರಲ್ಲಿ ಆಸಕ್ತಿ ತೋರಿದರು. ಇಂತಹ ಒಂದು ಸಾಹಸಯಾತ್ರೆ 1753 ರಲ್ಲಿ ನಡೆಯಿತು. ಮಹಮದ್ ಕಮಾಲನು ತಿರುಪತಿಯತ್ತ ಧಾಳಿಯನ್ನು ಆರಂಭಿಸಿದ. ಕಂಪನಿಯವರು ತಮ್ಮ ಗುತ್ತಿಗೆದಾರನ ರಕ್ಷಣೆಗೆ ಒಂದು ಸಣ್ಣ ತುಕಡಿಯನ್ನು ಕಳುಹಿಸಿದರೂ, ಮಹಮದ್ ಕಮಾಲನ ಸೈನ್ಯವು ಈ ತುಕಡಿಯನ್ನು ತಿರುಪತಿಯಲ್ಲಿಯೇ ತಡೆಗಟ್ಟಿ ಹೆಚ್ಚಿನ ನಷ್ಟವನ್ನುಂಟುಮಾಡಿ ಓಡಿ ಹೋಗುವಂತೆ ಮಾಡಿತು. ಮಾರನೆಯ ದಿನ ಹೆಚ್ಚಿನ ನೆರವಿಗೆ ಹೊಸ ಸೈನ್ಯ ಬಂದು ತಲುಪಿ ಯುದ್ಧ ಮತ್ತೆ ಆರಂಭವಾಯಿತು. ಮೊದಲಿಗೆ ಆಂಗ್ಲರಿಗೆ ಹಿನ್ನಡೆಯುಂಟಾದಂತೆ ಕಂಡುಬಂದಿತು. ಆಂಗ್ಲ ಸೈನ್ಯದ ಅಧಿಕಾರಿ ಕ್ಯಾಪ್ಟನ್ ಪೋಲ್ಪನು ಯುದ್ಧದಲ್ಲಿ ಉರುಳಿದ ನಂತರ ಅವನ ಸ್ಥಾನಕ್ಕೆ ಬಂದ ಓಗಿಲ್ವೀ ಆಂಗ್ಲರ ಆಕ್ರಮಣವನ್ನು ಮುಂದುವರೆಸಿದ. ಮಹಮದ್ ಕಮಾಲನು ಕುಳಿತಿದ್ದ ಯುದ್ಧದ ಆನೆಯು ಮಡಿದುರುಳಿತು. ಕಮಾಲನನ್ನು ಸೆರೆಹಿಡಿದು ಸ್ಥಳದಲ್ಲಿಯೇ ಶಿರಚ್ಛೇದಗೊಳಿಸಲಾಯಿತು.

ಮತ್ತೆ 1757ರಲ್ಲಿ ನಜೀಬುಲ್ಲನು ತನ್ನ ಸೋದರನಾದ ಮಹಮದಾಲಿಯ ವಿರುದ್ಧ ದಂಗೆಯೆದ್ದು ಪಶ್ಚಿಮದ ಪಾಳಯಗಾರರ (ಕಾಳಹಸ್ತಿ. ಕಾರ್ವೇಟಿನಗರ) ಪ್ರಾಂತ್ಯವನ್ನು ಕೊಳ್ಳೆ ಹೊಡೆಯ ತೊಡಗಿದ. 1757 ರ ಆಗಸ್ಟ್ ತಿಂಗಳಿನಲ್ಲಿ, ತಿರುಮಲೆಯ ಆಲಯದ ಬ್ರಹ್ಮೋತ್ಸವಗಳ ಸಮಯದಲ್ಲಿ, ಆಲಯದ ಆದಾಯ ಅತಿ ಹೆಚ್ಚುವ ಸಮಯದಲ್ಲಿ, ನಜೀಬುಲ್ಲನು ಆಲಯವನ್ನು ವಶಪಡಿಸಿ ಕೊಳ್ಳಲು ಪ್ರಯತ್ನಿಸಿದ. ಪವಿತ್ರವಾದ ಪರ್ವತದ ತಪ್ಪಲಿನಲ್ಲಿರುವ ತಿರುಪತಿಯಲ್ಲಿ ಪಾಳಯ ಹೂಡುವಂತೆ ಒಂದು ಸೈನ್ಯವನ್ನು ಮದರಾಸಿನಿಂದ ಕಳುಹಿಸಲಾಯಿತು. ನಜೀಬುಲ್ಲನ ಉದ್ದೇಶ ಸಫಲವಾಗದೆ ಹೋಯಿತು. ಅವನು ನಿರಾಶನಾಗಿ ಮನೆಯ ದಾರಿ ಹಿಡಿದರೂ ಸಹ ತನ್ನ ಸಿಟ್ಟಿನ ಕೋಪದಲ್ಲಿ ತಿರುಪತಿಯತ್ತ ಬರುತ್ತಿದ್ದ ಯಾತ್ರಿಕರನ್ನು ಹಿಂದಕ್ಕೆ ಓಡಿಸುವ ಪ್ರಯತ್ನದಲ್ಲಿ ಸಫಲನಾದ. ಇದರಿಂದಾಗಿ ಅವನು ಹಿಂದಿರುಗಿದ ದಾರಿಯಲ್ಲಿ ಯಾವ ಯಾತ್ರಿಕರೂ ಬ್ರಹ್ಮೋತ್ಸವಕ್ಕೆ ಬರದೆ ಆಲಯದ ಆದಾಯ ಗಣನೀಯವಾಗಿ ಕಡಿಮೆಯಾಯಿತು.

ತನ್ನ "ಹಿಸ್ಟರಿ ಆಫ್ ಮಿಲಿಟರಿ ಟ್ರಾನ್ಸಾಕ್ಷನ್ಸ್ ಆಫ್ ದಿ ಬ್ರಿಟಿಷ್" ಪುಸ್ತಕದಲ್ಲಿ ರಾಬರ್ಟ್ ಓರ್ಮೆಯು ಆಲಯದ ಮೇಲಾದ ಸಮಕಾಲೀನ ಧಾಳಿಗಳ ದಿನಚರಿಯನ್ನೇ ನೀಡುತ್ತಾನೆ. ಆತ ಬರೆದಿರುವುದು ಹೀಗೆ "ಈ ದೇವಾಲಯವು ದಕ್ಷಿಣದಲ್ಲಿಯೇ ಅತ್ಯುತ ಪ್ರಸಿದ್ಧವಾಗಿದ್ದು ಒಂದು ಬೆಟ್ಟದ ಮೇಲೆ ಇದೆ. ಇದರಲ್ಲಿರುವ ದೇವರಿಗೆ ಪ್ರತಿವರ್ಷ ಸೆಪ್ಟಂಬರಿನಲ್ಲಿ ಉತ್ಸವವನ್ನು ಮಾಡುತ್ತಾರೆ. (ಬ್ರಹ್ಮೋತ್ಸವವನ್ನು ಉಲ್ಲೇಖಿಸುತ್ತಿದ್ದಾನೆ.) ಇಲ್ಲಿಗೆ ಬೇರೆ ಬೇರೆ ಕಡೆಗಳಿಂದ ಬರುವ ಯಾತ್ರಿಕರು ಸಮರ್ಪಿಸುವ ಕಾಣಿಕೆಗಳ ಮೊತ್ತ ಎಷ್ಟು ಹೆಚ್ಚು ಎಂದರೆ ಇಲ್ಲಿನ ಸೇವೆ ಮಾಡುವ ಬ್ರಾಹ್ಮಣರು ತಮಗೆಂದು ಸ್ವೀಕರಿಸುವ ಧನದ ಹೊರತಾಗಿ ಸರ್ಕಾರಕ್ಕೆ ವಾರ್ಷಿಕವಾಗಿ 60,000 ಪಗೋಡ ಅಥವಾ 24000 ಪೌಂಡ್‌ಗಳಷ್ಟು ಧನವನ್ನು ನೀಡುತ್ತಾರೆ. ಈ ಆದಾಯವನ್ನು ನವಾಬನ ಪರವಾಗಿ ಆಂಗ್ಲರಿಗೆ ಯುದ್ಧ ವೆಚ್ಚಗಳಿಗಾಗಿ ಒಪ್ಪಿಸಲಾಗಿದೆ. ಇಲ್ಲಿನ ಬ್ರಾಹ್ಮಣರಾಗಲೀ ಇಲ್ಲಿಗೆ ಬರುವ ಯಾತ್ರಿಕರಾಗಲೀ ಹಣ ಯಾರಿಗೆ ಹೋಗುತ್ತದೆ ಎಂಬ ಬಗ್ಗೆ ಚಿಂತೆ ಮಾಡುವುದಿಲ್ಲ. ಅವರಿಗೆಲ್ಲ ಉತ್ಸವಗಳು ಯಾವ ಅಡೆತಡೆಗಳಿಲ್ಲದೆ ನಡೆಯುವುದೇ ಮುಖ್ಯ."

ರಾಬರ್ಟ್ ಓರ್ಮೆಯು ತನ್ನ ಪುಸ್ತಕದಲ್ಲಿ ಅಂದು ನಡೆದಿದ್ದ ಸೈನಿಕ ಚಟುವಟಿಕೆಗಳ ವಿವರಗಳನ್ನು ನೀಡಿದ್ದಾನೆ. ಆ ಪುಸ್ತಕದಿಂದ ಹಲವು ವಾಕ್ಯಗಳನ್ನಿಲ್ಲಿ ಉದ್ಧರಿಸಲಾಗಿದೆ. "1758 ರ ಸೆಪ್ಟಂಬರ್ ಕೊನೆಯ ಭಾಗದಲ್ಲಿ ಫ್ರೆಂಚ್ ಸೇನಾಧಿಪತಿಯೊಬ್ಬ ನೆಲ್ಲೂರಿನ ಕಡೆಯಿಂದ ಒಂದು ಸೈನ್ಯವನ್ನು ತೆಗೆದುಕೊಂಡು, ಕಾಡುಗಳ ಬೆಟ್ಟಗಳ ಹಾದಿಯಲ್ಲಿನ ವೆಂಕಟಗಿರಿಯ ಮೂಲಕ ಬ್ರಹ್ಮೋತ್ಸವದ ಹೊತ್ತಿಗೆ ತಿರುಮಲೆಯಲ್ಲಿರಲು ಬಯಸಿ ಆಕ್ರಮಣವನ್ನು ಆರಂಭಿಸಿದ. ಫ್ರೆಂಚ್ ಅಧಿಕಾರಿಗೆ ನೆಲ್ಲೂರಿನಿಂದ ನಜೀಬುಲ್ಲನು ತನ್ನ ಸೈನ್ಯದ ನೆರವನ್ನು ನೀಡಿದರೆ, ಚಂದ್ರಗಿರಿಯಿಂದ ಅಬ್ದುಲ್ ವಹಾಬನು ಸೈನ್ಯದ ಬೆಂಬಲ ನೀಡಿದನು. ಅಕ್ಟೋಬರ್ 5 ರಂದು ದೊಡ್ಡ ಉತ್ಸವ (ಬ್ರಹ್ಮೋತ್ಸವ) ಆರಂಭವಾಗುವ ಹೊತ್ತಿಗೆ ದೇವಾಲಯಕ್ಕೆ ಬಂದರು. (ಈ ಉತ್ಸವ ಇಪ್ಪತ್ತೈದು ದಿನ ನಡೆಯುವುದಿತ್ತು.) ಯಾತ್ರಿಕರಿಗೆ ಯಾವುದೇ ತೊಂದರೆಯನ್ನೂ ನೀಡದೆ, ಆಲಯದ ಗುತ್ತಿಗೆದಾರನನ್ನು ಕರೆದು ಅವನ ರಕ್ಷಕಭಟರನ್ನು ತೆಗೆದುಹಾಕಿ ಆದಾಯವನ್ನು ತಮ್ಮ ವಶಕ್ಕೆ ಒಪ್ಪಿಸಲು ಆದೇಶಿಸಿದರು. ತನ್ನನ್ನಾಗಲಿ ತನ್ನ ಆದಾಯವನ್ನಾಗಲೀ ಕಾಪಾಡಿಕೊಳ್ಳಲು ತಕ್ಕ ಸೈನ್ಯದ ನೆರವಿಲ್ಲದ ಗುತ್ತಿಗೆದಾರನು ಈ ಉತ್ಸವದ ಹಾಗೂ ಮುಂದಿನ ಉತ್ಸವಗಳ ಆದಾಯವನ್ನು ಫ್ರೆಂಚರಿಗೇ, ತಾನು ಆಂಗ್ಲರಿಗೆ ಹೇಗೆ ನೀಡುತ್ತಿದ್ದನೋ ಹಾಗೆಯೇ ನೀಡುವುದಾಗಿ ಪ್ರಸ್ತಾಪವನ್ನು ಮುಂದಿಟ್ಟು, ಕೈಲಿದ್ದ ಹಣವನ್ನು ಫ್ರೆಂಚರಿಗೆ ನೀಡಿದ. ಫ್ರೆಂಚ್ ಅಧಿಕಾರಿ ಈ ಹಣವನ್ನು ಒಪ್ಪಿಕೊಂಡು ಕರಾರನ್ನೂ ಒಪ್ಪಿ ಗುತ್ತಿಗೆಯನ್ನು ಅನುಮೋದಿಸಿದನು. ನಂತರ ಈ ಮೌಲಿಕವಾದ ಆಸ್ತಿಯನ್ನು ಕಾಪಾಡಲು ತನ್ನ ಸೈನ್ಯದ ಒಂದು ಭಾಗವನ್ನು ಇಲ್ಲಿಯೇ ಬಿಟ್ಟು ಆತ ಉಳಿದ ಸೈನ್ಯದೊಡನೆ ನಜೀಬುಲ್ಲನೊಡನೆ ಆರ್ಕಾಟಿಗೆ ನಡೆದನು. ಈ ಏರ್ಪಾಡುಗಳು ಆಲಯದ ಆದಾಯದ ಮೇಲೆ ಕಣ್ಣು ಇಟ್ಟಿದ್ದ ಅಬ್ದುಲ್ ವಹಾಬನಿಗೆ ಸೂಕ್ತವೆನಿಸಲಿಲ್ಲ. ಅವನು ನಿರ್ಲಕ್ಷಿತನಾದವನಂತೆ ಚಂದ್ರಗಿರಿಗೆ ಹಿಂದಿರುಗಿದನು."

1759 (ಮಾರ್ಚ್)ರಲ್ಲಿ ಮದರಾಸನ್ನು ಫ್ರೆಂಚರು ಆಕ್ರಮಿಸಿಕೊಂಡಿದ್ದಾಗ ಮರಾಠರು ಗೋಪಾಲರಾಯನ ನೇತೃತ್ವದಲ್ಲಿ ಚಂದ್ರಗಿರಿ ತಾಲೂಕಿನ ದಾಮಲ್ ಚೆರುವು ಬಳಿ ಬೀಡು ಬಿಟ್ಟಿದ್ದರು. ಇವರು ಮೊದಲು ಫ್ರೆಂಚರಿಗೂ ನಂತರ ಆಂಗ್ಲರಿಗೂ ನೆರವು ನೀಡಲು ಮುಂದೆ ಹೋದರು. ಆದರೆ ಅವರಿಬ್ಬರೂ ಇವರ ನೆರವನ್ನು ತಿರಸ್ಕರಿಸಿದರು. ''ನಿರ್ಲಕ್ಷಿತನಾದ ಗೋಪಾಲರಾಯನು ಸೇಡು ತೀರಿಸಿಕೊಳ್ಳಲು ಒಂದು ಸೈನ್ಯವನ್ನು ಕಳುಹಿಸಿ ಬೆಟ್ಟದ ಸುತ್ತಲೂ ನಿಲ್ಲಿಸಿ ತಿರುಪತಿಯನ್ನೂ ಆಲಯವನ್ನೂ ವಶ ಪಡಿಸಿಕೊಂಡನು. ಬರುವ ಏಪ್ರಿಲ್ ತಿಂಗಳಿನಲ್ಲಿ ಉತ್ಸವ ಸಮಯದ ಸರ್ಕಾರದ ಆದಾಯವನ್ನು ಕೈಗೆ ಪಡೆಯುವ ಉದ್ದೇಶದಿಂದ ಅಲ್ಲಿಯೇ ನಿಂತ. ಆದರೆ ಪೂನಾದಿಂದ ಬಾಜೀರಾಯನು ಕರೆಕಳುಹಿಸಿದ್ದರಿಂದ ಗೋಪಾಲರಾಯನು ಸ್ಥಳವನ್ನು ಬಿಡಬೇಕಾಯಿತು. ಆತ ತಿರುಪತಿಯನ್ನು ಬಿಟ್ಟು ಹಿಂದಿರುಗುತ್ತ, ತನ್ನ ಪ್ರತಿನಿಧಿಯಾಗಿ ನಾರಾಯಣಶಾಸ್ತ್ರಿ ಎಂಬಾತನನ್ನು ಒಂದು ಸೈನ್ಯದೊಡನೆ ತಿರುಪತಿಯಲ್ಲಿ ನಿಲ್ಲಿಸಿದ. ಜೊತೆಗೇ ಅಬ್ದುಲ್‌ವಹಾಬನಿಗೆ ತನ್ನ ಸೈನ್ಯದೊಡನೆ ಚಂದ್ರಗಿರಿಗೆ ಹಿಂದಿರುಗಲೂ ಹೇಳಿ ಒಪ್ಪಿಗೆ ನೀಡಿದನು. ಆದರೆ ಅಬ್ದುಲ್ ವಹಾಬನು ಈ ಅವಕಾಶವನ್ನು ಮರಾಠರ ಸೈನ್ಯದ ಮೇಲೆ ಧಾಳಿಮಾಡಿ ಅದನ್ನು ಓಡಿಸಲು ಬಳಸಿಕೊಂಡನು. ತನ್ನ ಅಧೀನಕ್ಕೆ ಆಲಯ ಬಂದಿದೆಯೆಂಬ ಸಾಧನೆಯ ಬಲದಿಂದ ಆಂಗ್ಲರನ್ನು ತನಗೆ ಆಲಯದ ಆದಾಯದ ಗುತ್ತಿಗೆಯ ಅಧಿಕಾರವನ್ನು ಕೊಡಬೇಕೆಂದು ಕೇಳಿದ. ಆದರೆ ಇವನ ಸ್ಥಾನ ಇವನನ್ನು ಗುತ್ತಿಗೆಯಿಂದ ದೂರಮಾಡುವಂತಿದ್ದುದರಿಂದ ಈ ಹಿಂದೆ ಯಾರು ಗುತ್ತಿಗೆ ಪಡೆದಿದ್ದರೋ ಅವರಿಗೇ ಪುನಃ ಅಧಿಕಾರವನ್ನು ಒಪ್ಪಿಸಲಾಯಿತು.''

ನಾರಾಯಣಶಾಸ್ತ್ರಿಯು ಹದಿನೈದು ಮೈಲಿ ದೂರದ ''ಕರಕಂಬಾಡಿ'' ಪಟ್ಟಣದಲ್ಲಿ ತಳವೂರಿದ. ಇಲ್ಲಿನ ಪ್ರಬಲವಾದ ಮಟ್ಲ ವಂಶದ ಪಾಳಯಗಾರನ ನೆರವಿನಿಂದ ಒಂದು ಸೈನ್ಯವನ್ನು- ಬಹುತೇಕ ಗುಡ್ಡಗಳಲ್ಲಿ ವಾಸಿಸುವರ ಒಂದು ಸೈನ್ಯವನ್ನು- ಸೇರಿಸಿ ಕಾಡು ಹಾದಿಯಲ್ಲಿ ಬೆಟ್ಟವನ್ನೇರಿ ಮೇಲಿದ್ದ ಆಲಯವನ್ನು ಜೂನ್ 30 ರ ರಾತ್ರಿ ಅಧೀನಪಡಿಸಿಕೊಂಡ. ಗುತ್ತಿಗೆದಾರನ ಸೈನ್ಯವೂ ಯಾತ್ರಿಕರ ಹಾದಿಯಾದ ಕೆಳಗಿನ ತಿರುಪತಿಯಲ್ಲಿದ್ದಿತು. ಮಟ್ಲ ವಂಶದವರ ಸೇನೆಯು ನೆಲದ ಮೈದಾನದ ಹಾದಿಯಲ್ಲಿ ಬಂದು ತಿರುಪತಿಯನ್ನು ಮುತ್ತುವ ಹೊತ್ತಿಗೆ ಸರಿಯಾಗಿ ಬೆಟ್ಟದಿಂದ ತನ್ನ ಸೈನ್ಯವನ್ನು ಕೆಳಗಿಳಿಸಿ ಆಂಗ್ಲ ಸೈನ್ಯವನ್ನು ಅಡಕತ್ತರಿಯಲ್ಲಿ ಸಿಕ್ಕಿಸಿ ನಾಶಮಾಡುವ ಹಂಚಿಕೆಯಲ್ಲಿ ನಾರಾಯಣಶಾಸ್ತ್ರಿಯಿದ್ದ. ಅದರಂತೆಯೇ ಜುಲೈ 9 ರಂದು ಬೆಳಗ್ಗೆ ನಾಲ್ಕು ಗಂಟೆಯ ಹೊತ್ತಿನಲ್ಲಿ ಧಾಳಿ ಆರಂಭವಾಗಿ ಹಲವೇ ಗಂಟೆಗಳಲ್ಲಿ ಚೆಲ್ಲಾಪಿಲ್ಲಿಯಾಗಿ ಓಡ ಬೇಕಾಯಿತು. ಆಗಲೂ ಮರಾಠರು ಆಲಯವನ್ನು ತಮ್ಮ ವಶದಲ್ಲಿಯೇ ಇಟ್ಟುಕೊಂಡಿದ್ದರು. ಕೆಲದಿನಗಳ ನಂತರ ತಿರುಪತಿ ಪಟ್ಟಣಕ್ಕೆ ಮೂರು ಕಂಪನಿ ಸೈನ್ಯವೂ ಹದಿನೈದು ಆಂಗ್ಲ ಅಧಿಕಾರಿಗಳೂ, ಒಂದು ಸಣ್ಣ ಫಿರಂಗಿಯೂ ತಲುಪಿ ಸೈನ್ಯದ ಬಲ ಹೆಚ್ಚಿತು. ಅಂದಿನ ದಿನಗಳಲ್ಲಿ ಭಾರತೀಯರಿಗೆ ಅದರಲ್ಲಿಯೂ ಉಚ್ಚ ಕುಲದವರಿಗೆ ಮಾತ್ರವೇ ಆಲಯವಿದ್ದ ಬೆಟ್ಟವನ್ನೇರುವ ಅವಕಾಶ ಎಂಬ ನಂಬಿಕೆಯಿದ್ದಿತು. ಕಾರಣ ಇತರ ನಿಷಿದ್ಧ ಜನರ ಪಾದ ತಾಕಿದರೆ ಬೆಟ್ಟದ ಹಾಗೂ ಆಲಯದ ಪಾವಿತ್ರ್ಯಕ್ಕೆ ಕುಂದು ಉಂಟಾಗಿ ಹಲವಾರು ರೀತಿಯ ಕಷ್ಟಸಾಧ್ಯವಾದ ಪವಿತ್ರೀಕರಣ ಕಾರ್ಯಗಳನ್ನು ನಡೆಸಬೇಕಾಗಿ ಬರುತ್ತದೆ ಎಂಬ ನಂಬಿಕೆ. ಈ ಅಂಶವನ್ನು ಮನಗಾಣದೆ ಮದರಾಸು ಪ್ರಭುತ್ವ ಕಳುಹಿಸಿದ ಸೈನ್ಯವು ಮಹಮ್ಮದೀಯರು ಹಾಗೂ ಹಿಂದೂಗಳಲ್ಲಿಯೇ ಹಲವು ಜಾತಿಗಳ ಮಿಶ್ರಣವಾಗಿದ್ದಿತು. ಹೀಗಾಗಿ ಬಂದ ಆರುನೂರು ಮಂದಿ ಸೈನಿಕರಲ್ಲಿ ಕೇವಲ ಎಂಬತ್ತು ಮಂದಿ ಮಾತ್ರವೇ (ಯೂರೋಪಿಯನ್ನರೆಲ್ಲ ಹೊರತಾದವರಾದರು) ಬೆಟ್ಟವನ್ನು ಏರುವ ಅರ್ಹತೆ ಹೊಂದಿದ್ದರು. ಗುತ್ತಿಗೆದಾರನು ಈ ಎಂಬತ್ತು ಮಂದಿಯನ್ನೂ, ಕತ್ತಿಹಿಡಿದ ತನ್ನ ಆಳುಗಳನ್ನೂ ಸೇರಿಸಿ ಕೊಂಡು ಒಟ್ಟು ಐದುನೂರು ಮಂದಿಯೊಡನೆ ಬೆಟ್ಟವನ್ನು ಹತ್ತಿದನು. ಅವನ ಧಾಳಿಯನ್ನು ಹಿಮ್ಮೆಟ್ಟಿಸಲಾಯಿತು. ಆದರೆ ಈ ಯುದ್ಧದಲ್ಲಿ ಹರಿದ ರಕ್ತದಿಂದಾಗಿ ಬೆಟ್ಟ ಅಪವಿತ್ರವೆಂದು ಪರಿಗಣಿತವಾಗಲಿಲ್ಲ. ಹೀಗಾಗಿ ಬೆಟ್ಟವು ನಾರಾಯಣಶಾಸ್ತ್ರಿಯ ಅಧೀನದಲ್ಲಿಯೂ ತಪ್ಪಲಿನ ನಗರ ತಿರುಪತಿ ಆಂಗ್ಲರ ವಶದಲ್ಲಿಯೂ ಇರುವಂತಾಯಿತು. 1759 ರ ಜುಲೈ ತಿಂಗಳನಲ್ಲಿಯೇ 200 ಯೂರೋಪಿಯನ್ನರೂ 300 ಸಿಪಾಯಿಗಳೂ ಇದ್ದ ಮತ್ತೊಂದು

ಸೈನ್ಯವು ಮೇಜರ್ ಕಲ್ಲಿಯಾಡ್‌ನ ಅಧಿಪತ್ಯದಲ್ಲಿ ತಿರುಪತಿಗೆ ಬಂದಿತು. ಹಿಂದಿನ ಬಾರಿಯಂತೆಯೇ ಬೆಟ್ಟದ ಮೇಲೆ ಧಾಳಿ ಮಾಡಲ್ಲ ಸೈನ್ಯಕರು ಕೆಲವರೇ ಇದ್ದರು. ಇದರಿಂದಾಗಿ ಮೇಚರ್ ಕಲ್ಲಿಯಾಡನು ತನ್ನ ಯೂರೋಪಿಯನ್ ಸೈನ್ಯದೊಡನೆ ಕರಕಂಬಾಡಿಯತ್ತ ತಿರುಗಿ ಧಾಳಿಯ ದಿಕ್ಕನ್ನು ಬದಲಾಯಿಸಿದ. ಅವನಲ್ಲಿನ ಸಿಪಾಯಿಗಳು ನಾಲ್ಕು ಕಂಪನಿಯಷ್ಟಿದ್ದರು. ಎರಡು ಫಿರಂಗಿಗಳೂ ಇದ್ದುವು. ದಾರಿಯು ಅರಣ್ಯ ಬೆಟ್ಟಗಳ ಮೂಲಕ ವಾಗಿದ್ದು, ಆಲಯದ ಬೆಟ್ಟವನ್ನು ಹತ್ತಲು ಅರ್ಹತೆಯಿದ್ದರೂ ದೊಡ್ಡ ಜಾತಿಯ ಜನ ತಮ್ಮ ಮೇಲಿನ ಆಕ್ರಮಣವನ್ನು ಎದುರಿಸುವಷ್ಟು ಮಾತ್ರ ಸಿದ್ಧವಿದ್ದ ಜನರಿಂದ ಕೂಡಿದ್ದುದಾಗಿದ್ದಿತು. ಕಲ್ಲಿಯಾಡನ ಎಲ್ಲ ಅರ್ಹ ಸಿಪಾಯಿಗಳನ್ನು ಗುತ್ತಿಗೆ ದಾರನ ನೆರವಿಗೆ ಕಳುಹಿಸಲಾಯಿತು. ಕರಕಂಬಾಡಿ ಗ್ರಾಮವನ್ನು ಸುಟ್ಟು ಕರಕುಮಾಡಿ ಪಾಳಯಗಾರನನ್ನು ಯುದ್ಧದಲ್ಲಿ ಕೊಲ್ಲಲಾಯಿತು. ಬೆಟ್ಟದ ಮೇಲಿನ ಧಾಳಿಯೂ ಸಫಲವಾಯಿತು. ನಾರಾಯಣಶಾಸ್ತ್ರಿಯು ಮಟ್ಲದವರ ಪ್ರಾಂತ್ಯಗಳಿಗೆ ಓಡಿಹೋದ. ಗುತ್ತಿಗೆದಾರನ ಅಧಿಕಾರವನ್ನು ಮತ್ತೆ ಸ್ಥಾಪಿಸಲಾಯಿತು. "ಅವನನ್ನು ರಕ್ಷಿಸಲು ಒಂದು ಸಣ್ಣ ಗಾತ್ರದ ಆಂಗ್ಲ ಸೈನ್ಯವನ್ನು ಇಲ್ಲಿ ನೆಲೆಗೊಳಿಸಿದರು. ಇವರನ್ನು ಪಾಳಯಗಾರನ ಸೈನಿಕರು ಸ್ವಲ್ಪ ಮಟ್ಟಿಗೆ ಮಿಂಚಿನ ಧಾಳಿಗಳಲ್ಲಿ ಘಾಸಿಗೊಳಿಸಿದ್ದು, ಎರಡನೆಯ ಬಾರಿ ಕರಕಂಬಾಡಿಯ ಮೇಲೆ ಧಾಳಿಮಾಡಿದಾಗ ಎನ್‌ಸೀನ್ ವಿಲ್‌ಕಾಕ್ಸ್‌ನು ಮರಣಾಂತಿಕವಾದ ಪೆಟ್ಟು ತಿನ್ನುವಂತಾಗಿ ಸೈನ್ಯವು ತಿರುಪತಿಗೆ ಹಿಂದಿರುಗಿತು."

1782ರಲ್ಲಿ ಜನವರಿಯಲ್ಲಿ ಹೈದರಾಲಿಯು ಚಂದ್ರಗಿರಿ ಕೋಟೆಯನ್ನು ಹಿಡಿದನು. ಅಂದಿನ ದಿನಗಳಲ್ಲಿ ಆರ್ಕಾಟ್ ನವಾಬನ ಸೋದರನಾದ ಅಬ್ದುಲ್ ವಹಾಬನೇನೋ ಯುದ್ಧ ಮಾಡದೆಯೇ ಹೈದರಾಲಿಗೆ ಕೋಟೆಯನ್ನು ಒಪ್ಪಿಸಿದ. ಆದರೆ ವಂಚಕನೆಂದು ಹೆಸರಾಗಿದ್ದ ಈತನ ಬಗ್ಗೆ ಹೈದರಾಲಿಗೆ ಯಾವುದೇ ಬಗೆಯಾದ ಸಹಾನುಭೂತಿಯೂ ಇರಲಿಲ್ಲ. ಈತನನ್ನೂ ಈತನ ಇಡೀ ಕುಟುಂಬವನ್ನೂ ಬಂಧಿಸಿ ಶ್ರೀರಂಗಪಟ್ಟಣಕ್ಕೆ ಕಳುಹಿಸಲಾಯಿತು. ಆನಂತರದಲ್ಲಿ ಅಬ್ದುಲ್ ವಹಾಬನ ಇತಿಗತಿಗಳು ಚರಿತ್ರೆಗೆ ಕಳಿಯ ದಾದವು. ಈತ ತಿರುಪತಿ ಆಲಯದ ಆದಾಯದ ಬಗ್ಗೆ ದುರಾಸೆ ಹೊಂದಿ ಚಂದ್ರಗಿರಿಯ ಬಳಿಯೇ ಸುತ್ತಾಡುತ್ತಿದ್ದನು. ಈತನ ಉಪಟಳ ದೂರವಾದ ಮೇಲೆ ಆಲಯದ ಕೊನೆಯ ಅವಘಡ ನಿವಾರಣೆಯಾದಂತಾಯಿತು. ಹೈದರಾಲಿಯ ಬಗ್ಗೆ ಹೇಳುವುದಾದರೆ, ಆತ ಆಲಯದ ವಿಷಯದಲ್ಲಾಗಲೀ, ಅದರ ಆದಾಯದ ವಿಷಯದಲ್ಲಾಗಲೀ ತಲೆ ಹಾಕದೆ ಮೊದಲು ಹೇಗೆ ನಡೆಯುತ್ತಿದ್ದಿತೋ ಹಾಗೆಯೇ ಮುಂದುವರೆಯಲು ಅನುವು ಮಾಡಿಕೊಟ್ಟನು. ಬೇರೊಂದೆಡೆ ನೀಡಲಾಗಿರುವ ಅಮಲ್ದಾರರ ಪಟ್ಟಿಯಲ್ಲಿ 1782 ರಿಂದ 84 ರ ವರೆಗೆ ಹೈದರಾಲಿಯ ಪರವಾಗಿ ಔನಿಕಲ ನರಸಯ್ಯನು ಆಲಯದ ಉಸ್ತುವಾರಿಯನ್ನು ನೋಡಿಕೊಂಡಂತೆ ತಿಳಿದುಬರುತ್ತದೆ. "ಮತ್ತೆ 1804 ರಲ್ಲಿ ಆಂಗ್ಲ ಅಧಿಕಾರಿ ಸ್ಟ್ರಾಟನ್ ಏರ್ಪಡಿಸಿದ್ದ ಶಾಶ್ವತ ವ್ಯವಸ್ಥೆಯ ಬಗ್ಗೆ ಅಸಮಧಾನ ಹೊಂದಿದ ಹಲವು ಪಾಳಾಯಗಾರರು ಒಟ್ಟಿಗೆ ಸೇರಿ ತಿರುಪತಿಗೆ ಹೋಗುವ ಎಲ್ಲ ಮಾರ್ಗಗಳನ್ನೂ ಯಾತ್ರಿಕರನ್ನು ದೋಚಿಕೊಳ್ಳುವ ಉದ್ದೇಶದಿಂದ ಆಕ್ರಮಿಸಿದರು. ಆದರೆ ತಿರುಪತಿಯಲ್ಲಿ ಒಂದು ಸೇನೆಯ ಪಾಳಯವನ್ನು ಸ್ಥಾಪಿಸಿ ಕೆಳಗಣ ಹಾಗೂ ಮೇಲಣ ತಿರುಪತಿಗಳ ರಕ್ಷಣೆಗೆ ತೊಡಗಿದಾಗ ಈ ಅಪಾಯವು ತಪ್ಪಿಹೋಯಿತು."

ಆಲಯದ ಮೇಲಾದ ಈ ಧಾಳಿಗಳಿಂದಾಗಿ ಆಲಯಕ್ಕೆ ಯಾವುದೇ ರೀತಿಯಲ್ಲಿಯೂ ತೀವ್ರವಾಗಿ ಧಕ್ಕೆಯುಂಟಾಗಲಿಲ್ಲ. ಸಮಕಾಲೀನ ಲೇಖಕನಾದ ಓರ್ಮೆಯ ಮಾತುಗಳನ್ನು ಉದ್ಧರಿಸಿ ನೀಡಲು ಕಾರಣವೆಂದರೆ ಇದರಿಂದಾಗಿ ಆ ಕಾಲದ ರಾಜರು ಅವರೆಲ್ಲ ಬೇರೆ ಬೇರೆ ಧರ್ಮಗಳಿಗೆ ಸೇರಿದವರೇ ಆಗಿದ್ದರೂ, ಆಲಯದ ಬಗ್ಗೆ ಎಲ್ಲರೂ ಗೌರವಭಾವದಿಂದಲೇ ನಡೆದುಕೊಂಡರು ಎಂಬುದನ್ನು ತಿಳಿಯಬಹುದಾಗಿದೆ. ಆಂಗ್ಲ ಪಡೆಗಳ ತರುಣ ಸೈನ್ಯಾಧಿಕಾರಿಗಳು ಆಲಯದ ರಕ್ಷಣೆಯಲ್ಲಿ ತಮ್ಮ ಹಾಗೂ ತಮ್ಮ ಸೈನಿಕರ ರಕ್ತಪ್ರಾಣಗಳನ್ನು ಎರವಾಗಿಟ್ಟು ಹೆಚ್ಚಿನ ಹಣದ ನಷ್ಟವಾಗುತ್ತಿದ್ದರೂ, ಇತರ ಯೂರೋಪಿಯನ್ನರಿಗೆ, ಮಹಮ್ಮದೀಯರಿಗೆ ಅಥವಾ ಹಿಂದೂಗಳ ಲ್ಲಿಯೇ ಅನರ್ಹರಾದವರಿಗೆ ಬೆಟ್ಟವನ್ನೇರಲು ಬಿಡದೆ ಹೋರಾಡಿದರು. ಈ ಹಿಂದೂಗಳಲ್ಲಿನ ಅನರ್ಹತೆಗೆ ಕಾರಣಬಲ್ಲಿ

ಎನ್ನಿಸಿದಾಗಲೂ ಆಲಯ ಸಂಪ್ರದಾಯಕ್ಕೆ ಬೆಲೆ ನೀಡಿದರು- ಎನ್ನುವಲ್ಲಿ ಓರ್ಮೆಯ ಆಕ್ಷೇಪ ಹೀಗೆ - ''ಆದರೆ ಧಾಳಿಯಲ್ಲಿ ಸುರಿದ ರಕ್ತದಿಂದ ಆಲಯದ ಪಾವಿತ್ರ್ಯಕ್ಕೆ ಭಂಗ ಬರಲಿಲ್ಲ!''. ಸ್ಥಳೀಯ ಪಾಳಯಗಾರರ ನೆರವಿನಿಂದ ಮರಾಠರು ಆಲಯದ ಆಡಳಿತವನ್ನು ವಶಪಡಿಸಿಕೊಳ್ಳಲು ನಡೆಸಿದ ಪ್ರಯತ್ನವನ್ನು ಅಸಹಿಷ್ಣು ಸಹೋದರರಾದ ನಜೀಬುಲ್ಲಾ ಹಾಗೂ ಅಬ್ದುಲ್‌ವಹಾಬ್ - ನವಾಬರ ಅಧೀನವಾದ ತಮ್ಮ ಆಲಯವನ್ನು ಮರಳಿಪಡೆಯಲು ಹಿಂದೂ ಶಕ್ತಿಗಳು ನಡೆಸಿದ ಪ್ರಯತ್ನ ಎಂದು ಕರೆಯಬಹುದು.

ಹೈದರಾಲಿಯ ಅಭಿವೃದ್ಧಿ ಆಗುತ್ತಿದ್ದಂತೆಯೇ, ಆಂಗ್ಲರು ತಮ್ಮವ ಎಂದುಕೊಂಡಿದ್ದ ಮಹಮದಾಲಿಯು ಅವನೊಡನೆ ಶಾಮೀಲು ಆಗಿದ್ದಾನೆ ಎಂಬ ಅನುಮಾನ ಹೊಂದಿದರು. 1792 ರ ಜುಲೈ 12 ರಂದು ಸಹಾಯಕ ಸೈನ್ಯ ಪದ್ಧತಿಯ ಕೌಲು ಮಾಡಿಕೊಂಡರು. ಅದರಂತೆ ಆಂಗ್ಲರು ಮಹಮದಾಲಿಯ ರಕ್ಷಣೆಗೆ ಒಂದು ಸೈನ್ಯವನ್ನು ಅವನ ರಾಜ್ಯದಲ್ಲಿಡಬೇಕೆಂದೂ, ಇದರ ವೆಚ್ಚಗಳಿಗಾಗಿ ನವಾಬನು ವರ್ಷಕ್ಕೆ ಒಂಬತ್ತು ಲಕ್ಷ ರೂಪಾಯಿಗಳನ್ನು ನೀಡಬೇಕೆಂದೂ, ಯುದ್ಧವಾಗುವ ಪರಿಸ್ಥಿತಿಯಲ್ಲಿ ಇಡೀ ರಾಜ್ಯದ ಜೊತೆಗೇ ಪಾಳೆಯಗಾರ ರಿಂದ ನವಾಬನಿಗೆ ಬರಬೇಕಾದ ಪೇಶ್‌ಕಶ್ ಅನ್ನು (ಕಪ್ಪ ಕಾಣಿಕೆಗಳನ್ನು) ಆಂಗ್ಲರು ವಸೂಲಿ ಮಾಡಿ ನವಾಬನಿಗೆ ಸಲ್ಲಿಸಬೇಕೆಂದು ನಿರ್ಣಯವಾಯಿತು. ಹೀಗೆ ಕಾರ್ವೇಟಿನಗರ, ಕಾಳಹಸ್ತಿ, ವೆಂಕಟಗಿರಿ ಪಾಳಯಪಟ್ಟುಗಳು ಕಂಪನಿಯ ಆಡಳಿತದ ಅಧೀನಕ್ಕೆ ಬಂದವು. ಮೂರನೆಯ ಹಾಗೂ ನಾಲ್ಕನೆಯ ಮೈಸೂರು ಯುದ್ಧಗಳು ಕಂಗುಂದಿ, ಪುಂಗನೂರು ಜಮೀಂದಾರಿಗಳನ್ನೂ, ಪಲಮನೇರು (ವೆಂಕಟಗಿರಿ ಕೋಟೆ) ತಾಲೂಕಾವನ್ನೂ ಸೇರಿಸಿಕೊಟ್ಟವು.

1795ರಲ್ಲಿ ಮಹಮದಾಲಿಯು ತೀರಿಕೊಂಡು ಅವನ ಮಗ ಉಮದತ್ ಉಲ್ ಉಮ್ರನು ನವಾಬನಾದ. 1792ರ ಒಪ್ಪಂದವನ್ನು ನವೀಕರಿಸಬೇಕೆಂದು ಕಂಪನಿ ಕೇಳಿತು. ಉಮ್ರಾ ಈ ಪ್ರಸ್ತಾಪವನ್ನು ನಿರಾಕರಿಸಿದನು.

1799ರಲ್ಲಿ ನಾಲ್ಕನೇ ಮೈಸೂರು ಯುದ್ಧವಾದಾಗ ನವಾಬನಿಂದ ಹೆಚ್ಚಿನವಂತಿಗೆಗಾಗಿ ಒತ್ತಾಯ ಹಾಕಲಾಯಿತು. ನವಾಬನು ಇದನ್ನು ಒಪ್ಪಲಿಲ್ಲ. ಇದರಿಂದಾಗಿ ಇಡೀ ಕರ್ನಾಟಿಕ ಪ್ರಾಂತ್ಯವನ್ನು ಆಂಗ್ಲರೇ ಆಳಬೇಕೆಂಬ ನಿರ್ಣಯವಾಯಿತು. ಜೊತೆಗೇ ನವಾಬು ಹಾಗೂ ಮೈಸೂರು ಸರ್ಕಾರಗಳ ನಡುವಣ ಪತ್ರವ್ಯವಹಾರದಿಂದಾಗಿ ಹಿಂದಿನ ಒಪ್ಪಂದಗಳಲ್ಲಿನ ಎಲ್ಲ ಷರತುಗಳಿಂದಲೂ ಸರ್ಕಾರ ಮುಕ್ತವಾಗಿದೆಯೆಂಬುದು ತಿಳಿದುಬರುತ್ತದೆ. ಉಮದತ್ ಉಲ್ ಉಮ್ರನು ಮರಣಶಯ್ಯೆಯಲ್ಲಿದ್ದುದ್ದರಿಂದ ಈ ನಿರ್ಣಯವನ್ನು ಆಚರಣೆಯಲ್ಲಿ ತರಲಾಗಲಿಲ್ಲ. ಅವನ ಮರಣದ ನಂತರ ಅವನ ಮಗ ಆಲಿ ಹುಸೇನನಿಗೆ ಹೊಸ ಷರತ್ತುಗಳನ್ನು ತಿಳಿಸಲು ಆತ ಅವುಗಳನ್ನು ತಿರಸ್ಕರಿಸಿದ. ಕಂಪನಿಯು ಅವನನ್ನು ತಪ್ಪಿಸಿ ಸತ್ತ ನವಾಬನ ತಮ್ಮ ಅಜೀಮ್ ಉಲ್ ಉಮ್ರನಿಗೆ ನವಾಬಗಿರಿಯನ್ನು ಒಪ್ಪಿಸಿತು.

1801ರ ಜುಲೈ 31 ರಂದು ಅಜೀಮ ಉಲ್ ಉಮ್ರನು ಕಂಪನಿಯೊಡನೆ ಒಂದು ಕರಾರು ಮಾಡಿಕೊಂಡ. ಅದರಂತೆ ''ಇಡೀ ಕರ್ನಾಟಿಕದ ಮೇಲಿನ ತನ್ನ ಪ್ರಭುತ್ವವನ್ನು ಆತ ಕಂಪನಿಯವಶಕ್ಕೆ ಕೊಟ್ಟು, ಪ್ರತಿಫಲವಾಗಿ ರಾಜ್ಯದ ವಾರ್ಷಿಕ ಆದಾಯದ ಐದನೇ ಒಂದು ಭಾಗವನ್ನು ತನ್ನ ಸಂಸಾರ ನಿರ್ವಹಣೆಗಾಗಿ ಅವರಿಂದ ಪಡೆಯಲು'' ಒಪ್ಪಿದನು. ಹೀಗೆ ಈಸ್ಟ್ ಇಂಡಿಯಾ ಕಂಪನಿಯು ಕರ್ನಾಟಿಕ ಸಿಂಹಾಸನದ ರಾಜಕೀಯ ವಾರಸಿಕೆಯನ್ನು ಪಡೆಯಿತು.

ಆಲಯದ ಆದಾಯದ ಗುತ್ತಿಗೆದಾರನಾಗಿ ಆರಂಭಿಸಿದ ಕಂಪನಿ ಈಗ ಅದರ ಯಜಮಾನವಾಯಿತು. ಚಂದ್ರಗಿರಿಯಲ್ಲಿನ ರಾಜ ಎರಡನೇ ವೆಂಕಟನು ಕಂಪನಿಗೆ ಪ್ರಪ್ರಥಮವಾಗಿ ಮದರಾಸಿನಲ್ಲಿ ಅದರ ವ್ಯವಹಾರ ಗಳನ್ನು ನಡೆಸಿಕೊಳ್ಳಲು ಐದು ತುಂಡು ಸ್ಥಳವನ್ನು ನೀಡಿದ. ಒಂದು ಶತಮಾನದನಂತರ ಶ್ರೀ ವೆಂಕಟೇಶ್ವರ ಸ್ವಾಮಿಯು ಆಂಗ್ಲರಿಗೆ ಭಾರತದಲ್ಲಿ ತಮ್ಮ ರಾಜಕೀಯ ಪ್ರಭುತ್ವವನ್ನು ಸ್ಥಾಪಿಸಲು ಬೇಕಾದ ಮೂಲಧನವನ್ನು ನೀಡಿದ ಎಂಬುದು ಅಶ್ಚರ್ಯಕರವಾದ ಕಾಕತಾಳೀಯ. ಏನೇ ಆದರೂ ಕಂಪನಿಯ ಕೆಲಸ ಗಾರರು ಹಾಗೂ ಅಧಿಕಾರಿಗಳು ತಾವು ದೇವರಿಗೆ ಯಾವ ರೀತಿಯಲ್ಲಿ ಋಣಿಗಳು ಎಂಬುದನ್ನು ಪೂರ್ಣವಾಗಿ ತಿಳಿದಿದ್ದು ಆಲಯದ

ಬಗ್ಗೆಯೂ ದೇವರ ಬಗ್ಗೆಯೂ - ಅತಿ ಸಣ್ಣ ವಿಷಯದಲ್ಲಿಯೂ ಅತ್ಯಂತ ಗೌರವ ಜವಾಬ್ದಾರಿಗಳಿಂದ ನಡೆದು ಕೊಂಡರು ಎಂಬುದ ಉಲ್ಲೇಖನೀಯವಾದದ್ದು. ಆಲಯದಲ್ಲಿನ ಹಲವಾರು ದತ್ತಿಗಳನ್ನು ಅವರೇ ಆರಂಭಿಸಿ ಕೊಟ್ಟರು. ಈ ವರ್ಗಕ್ಕೆ ಸೇರಿದ್ದೇ -ಮನ್ರೋ ತಳಿಗೆ- ಇಂದಿಗೂ ಪ್ರಚಲಿತವಾಗಿರುವುದು.

## 5. ಹೈದರಾಲಿಯ ಕಾಲದಲ್ಲಿ ತಿರುಮಲೆ

ಮೈಸೂರು ಮಹಾರಾಜರ ಆಶ್ರಯದಲ್ಲಿ ಸಣ್ಣ ತುಕಡಿಯ ಸರದಾರನಾಗಿ ಸೇರಿದ ಹೈದರಾಲಿಯು ಕ್ರಮೇಣ ತನ್ನ ಪ್ರಾಮುಖ್ಯತೆಯನ್ನು ಹೆಚ್ಚಿಸಿಕೊಳ್ಳುತ್ತ ದಿಂಡಿಗಲ್ ನ ಫೌಜುದಾರನಾಗಿ ಸಾಕಷ್ಟು ಅಧಿಕಾರ ಹಾಗೂ ಹೆಚ್ಚಿನ ವರಮಾನದ ಒಡೆಯನಾದ ಮೇಲೆ ನಿಧಾನವಾಗಿ ಬೆಳೆಯುತ್ತ ಬೆಳೆಯುತ್ತ ಕ್ರಿ.ಶ. 1761 ರ ಹೊತ್ತಿಗೆ ತಾನೇ ಸರ್ವಾಧಿಕಾರಿಯಾದನು. ಮೈಸೂರಿನ ಸಾಮ್ರಾಜ್ಯಾಧಿಕಾರ ಅವನ ಕೈಗೆ ಬಂದದ್ದರಿಂದಾಗಿ ಕ್ರಿ.ಶ.1765 ರಲ್ಲಿ ಮರಾಠರು ಇವನ ಮೇಲೇರಿ ಬರುವಂತಾಯಿತು. ಇದರಿಂದಾಗಿ ನಿಜಾಮನೂ, ಆಂಗ್ಲರೂ ಪಕ್ಷಗಳ ಆಯ್ಕೆ ಮಾಡಿಕೊಳ್ಳುವಂತಾಗಿ ಮೈಸೂರು ಯುದ್ಧಗಳಲ್ಲಿ ಬ್ರಿಟಿಷರು ಭಾಗವಹಿಸುವಂತಾಯಿತು.

ತಿರುಪತಿಯ ಆಸುಪಾಸಿನ ಜಮೀನುದಾರರು ವಿಶೇಷವಾಗಿ ಚಿತ್ತೂರು, ಕಾಳಹಸ್ತಿ, ಕಾರ್ವೇಟಿನಗರ, ವೆಂಕಟಗಿರಿಗಳ ಪಾಳಯಗಾರರ ಪರಿಸ್ಥಿತಿ ಇಕ್ಕಟ್ಟಿನದಾಯಿತು. ಇವರಲ್ಲಿ ವೆಂಕಟಗಿರಿಯವರ ಹೊರತು ಬಹುಮಂದಿ ಹೈದರನಕಡೆ ಸೇರಿದರೂ ಆಂಗ್ಲರ ಸ್ನೇಹ ಸಹವಾಸಗಳನ್ನು ಬಯಸಿದರು. ಆಂಗ್ಲರು ಷೋಲಿಂಗರ್ ಯುದ್ಧದಲ್ಲಿ ಗೆಲುವು ಪಡೆದರು. ಅದರಿಂದಾಗಿ ಕಾಳಹಸ್ತಿ, ಕಾರ್ವೇಟಿನಗರದ ಪಾಳಯಗಾರರು ಆಂಗ್ಲರ ಪರವಾದರು. ಇದರಿಂದಾಗಿ ಆಂಗ್ಲರು ವೆಲ್ಲೂರನ್ನು ಆಕ್ರಮಿಸುವಂತಾಗಿ ಸೈನ್ಯಾಧಿಪತಿ ಕೂಟನು ಚಿತ್ತೂರಿನ ವರೆಗೂ ದಂಡೆತ್ತಿ ಬಂದು ಅದನ್ನು ಹಿಡಿದ. ಮಳೆಗಾಲವಾಗಿ ಅತಿವೃಷ್ಟಿಯ ಸಾಧ್ಯತೆಗಳಿದ್ದದ್ದರಿಂದ ಶತ್ರುತ್ವ ಅಳಿದು ಶಾಂತಿಸಬೇಕಾದ ಅಗತ್ಯವುಂಟಾಗಿದ್ದಿತು. ಆಂಗ್ಲರ ಸೈನ್ಯವು ಮದರಾಸಿಗೆ ಹಿಂದಿರುಗಿತು. ಧಾಳಿಗಳ ಈ ಎರಡು ವರ್ಷಗಳಲ್ಲಿ ಮಹಮದಾಲಿಯು ಯಾವುದೇ ಸಹಾಯವನ್ನೂ ಒದಗಿಸದೆ ಹೋದ. ಅವನ ಅಧಿಕಾರಿಗಳು ತಮ್ಮ ಸ್ನೇಹಿತರೇ ಆಗಿದ್ದ ಆಂಗ್ಲರನ್ನು ಮೋಸಮಾಡುವುದರಲ್ಲಿಯೇ ಕಾಲ ಕಳೆದಿದ್ದರು. ಇವರಲ್ಲಿ ಚಿತ್ತೂರಿನ ಸರ್ಕಾರದ ಅಧಿಕಾರವನ್ನು ಪಡೆದ ನವಾಬನ ಸಹೋದರನಾದ ಅಬ್ದುಲ್ ವಹಾಬನೂ ಒಬ್ಬನಾಗಿದ್ದನು. ಈತ ಚಂದ್ರಗಿರಿಯನ್ನು ಆಕ್ರಮಿಸಿ ಅದನ್ನು ವಶದಲ್ಲಿಟ್ಟುಕೊಂಡಿದ್ದ. ನಂತರದಲ್ಲಿ ಚಂದ್ರಗಿರಿ ಕೋಟೆಯನ್ನು ಈತ ಹೈದರನಿಗೆ ನೀಡಿದನು. ಈ ಹಿನ್ನೆಲೆಯಲ್ಲಿ ಐದು ವರ್ಷಗಳಕಾಲ ಕರ್ನಾಟಕದ ನವಾಬನಿಗೆ ಐದನೇ ಒಂದು ಭಾಗದ ಕಂದಾಯವನ್ನು ನೀಡುವ ಷರತ್ತಿನ ಮೇಲೆ ಆಂಗ್ಲರು ಆಡಳಿತವನ್ನು ಹಸ್ತಗತ ಮಾಡಿಕೊಳ್ಳುವುದು ಅನಿವಾರ್ಯವಾಯಿತು. ಈ ವ್ಯವಸ್ಥೆ ಹೊಸದರಲ್ಲಿಯೇನೋ ಅನುಕೂಲವಾಗಿದ್ದಿತು. ಈ ಎಲ್ಲ ಸೈನಿಕ ಚಟುವಟಿಕೆಯ ನಡುವೆಯೂ ಚಂದ್ರಗಿರಿಯ ಬಳಿಯೇ ಆಂಗ್ಲ ಸೈನ್ಯ ಪಾಳು ಹೂಡಿದ್ದರೂ, ಚಂದ್ರಗಿರಿಗೆ ಒಮ್ಮೆಯೂ ಧಾಳಿ ಮಾಡಲಿಲ್ಲ. ಹೈದರನೊಡನೆ ಒಪ್ಪಂದ ಮಾಡಿಕೊಂಡಿದ್ದ ಅಬ್ದುಲ್ ವಹಾಬನೇ ಚಂದ್ರಗಿರಿಯ ಒಡೆಯನಾಗಿರಲು ಬಿಟ್ಟಿದ್ದರು. ಆದರೆ ಚಿತ್ತೂರನ್ನು ಹೈದರನು ವಶಪಡಿಸಿಕೊಂಡು ಚಂದ್ರಗಿರಿಯತ್ತ ಬಂದಾಗ ವಹಾಬನು ಗದ್ದಲವಿಲ್ಲದೆ ಕೋಟೆಯನ್ನು ಒಪ್ಪಿಸಿದ. ಅಬ್ದುಲ್ ವಹಾಬನ ಕುಟುಂಬವನ್ನೆಲ್ಲ ಶ್ರೀರಂಗ ಪಟ್ಟಣಕ್ಕೆ ರವಾನೆ ಮಾಡಿದ ಹೈದರಾಲಿಯ ಆತನ ಇಬ್ಬರು ಹೆಣ್ಣುಮಕ್ಕಳನ್ನು ಮಾತ್ರ ಅಬ್ದುಲ್ ವಹಾಬನು ಮದರಾಸಿಗೆ ಹೊರಟಾಗ ಕರೆದೊಯ್ಯಬಹುದೆಂದು ಮಾತುಕೊಟ್ಟಂತೆ ನಡೆಯದೆ ತನ್ನ ಪಾಳಯದಲ್ಲಿಯೇ ಉಳಿಸಿಕೊಂಡ.

ಹೀಗೆ ಚಂದ್ರಗಿರಿಯು ಹೈದರನ ವಶಕ್ಕೆ ಸೇರಿದಾಗ ಅದರೊಡನೆ ತಿರುಪತಿಯೂ ಅವನಿಗೇ ಸೇರಿತು. ಈ ಪವಿತ್ರ ಕ್ಷೇತ್ರದ ಬಗೆಗಿನ ಹೈದರನ ನಡವಳಿಕೆ ಅತ್ಯಂತ ಉದಾರವಾಗಿದ್ದು ಆತನ ಹಿಂದಿನವರೊಡನೆ ಎದ್ದು ಕಾಣುವಂತಹ ವ್ಯತ್ಯಾಸವನ್ನು ತೋರಿಸುತ್ತದೆ. ಸರ್ ಐರ್‌ಕೂಟನಿಗೆ, ಮದರಾಸು ಸರ್ಕಾರಕ್ಕೆ - ಈ ಪ್ರಾಂತ್ಯದ ಸಂಪನ್ಮೂಲಗಳ ಬಗ್ಗೆಯೂ, ಇಲ್ಲಿನ ಕೋಟೆಯ ಬಗೆಗಿನ ತನ್ನ ತಿಳುವಳಿಕೆಯ ಕೊರತೆಯನ್ನೂ ಕುರಿತು ಬರೆಯುತ್ತ ವಿಲ್ಕ್ಸ್ ಗುರುತಿಸುವಂತೆ "ಹೈದರನಲ್ಲಿದ್ದ ಹಿಂದೂ ಒಲವು ಚಂದ್ರಗಿರಿಯಿಂದ 9

ಮೈಲಿ ದೂರದಲ್ಲಿದ್ದ ತಿರುಪತಿಯ ಆಲಯಕ್ಕೆ ಅನಿರ್ಭಂಧಿತ ರಕ್ಷಣೆಯನ್ನು ನೀಡುವಂತೆ ಪ್ರೋತ್ಸಾಹಿಸಿದ್ದಿತು. ಎಂತಹದೇ ಹಸ್ತಕ್ಷೇಪ ರಾಹಿತ್ಯವನ್ನು ನೀಡಿದ್ದೇ ಅಲ್ಲದೆ ಮಹಮದಾಲಿಯು ಆಲಯದಿಂದ ಪಡೆಯುತ್ತಿದ್ದ ಕಾಣಿಕೆಗಳ ವಿಷಯದಲ್ಲಿಯೂ ಹಸ್ತಕ್ಷೇಪ ಮಾಡದಷ್ಟು ಮುಕ್ತವಾಗಿದ್ದಿತು - ಈ ಒಂದು ರಕ್ಷಣೆಯ ತಿರುಳು.''

## 6. ಗೋಲ್ಕೊಂಡದ ಅಧೀನದಲ್ಲಿ ಆಡಳಿತ ಕೇಂದ್ರವಾಗಿ ತಿರುಪತಿ

ತಿರುಪತಿಯ ಮೂಲಕ ಗೋಲ್ಕೊಂಡಕ್ಕೂ ಅಥವಾ ಅಲ್ಲಿಂದ ಕೆಳಕ್ಕೆ ಈಸ್ಟ್ ಇಂಡಿಯಾ ಕಂಪನಿಯ ಕೇಂದ್ರ ಸ್ಥಳವಾಗಿದ್ದ ಸೇಂಟ್‌ಜಾರ್ಜಗೂ ಯಾತ್ರಿಕರು ಅಧಿಕೃತವಾಗಿ ಹೋಗಿ ಬಂದು ಮಾಡುತ್ತಿದ್ದರೆಂದು ತೋರುತ್ತದೆ. ಈ ಪ್ರದೇಶವು ಮೀರ್‌ಜುಮ್ಲಾನ ಅಧೀನದಲ್ಲಿ, ಜಿಂಜಿಯ ಕೋಟೆಯು ಬಿದ್ದನಂತರವೋ, ಅದೇ ಸಮಯದಲ್ಲಿಯೋ ಬಂದಿರಬೇಕು. ಹೀಗಾಗಿ ಅವನು ತನ್ನ ಆಡಳಿತ ಪರಿಧಿಯಲ್ಲಿ ಇದನ್ನು ಪಡೆದಿರಬೇಕು. ಆದರೆ ಈ ಪ್ರದೇಶದ ಆಡಳಿತಕ್ಕಾಗಿ ಆತ ಯಾವ ರೀತಿಯ ಏರ್ಪಾಡುಗಳನ್ನು ಮಾಡಿದ ಎಂಬುದೂ, ಆ ಪರಿಣಾಮವಾಗಿ ತಿರುಪತಿಯಲ್ಲಿ ಉಂಟಾದ ಬದಲಾವಣೆಗಳೇನು ಎಂಬುವು ತಿಳಿದುಬಂದಿಲ್ಲ. ಈ ಪ್ರದೇಶದ ಆಡಳಿತದಲ್ಲಿ - ತಿರುಪತಿಯೂ ಸೇರಿದಂತೆ - ಆತ ಕೆಲವು ಕ್ರಮಗಳನ್ನು ಕೈಗೊಂಡನೆಂದು ಮಾತ್ರ ಖಚಿತವಾಗಿ ಹೇಳಬಹುದು.

ಇದಾದ ಸ್ವಲ್ಪಕಾಲಕ್ಕೆ ಗೋಲ್ಕೊಂಡದ ರಾಜ ಅಬ್ದುಲ್ಲಾ ಕುತುಬ್‌ಷಹನು ಈ ಪ್ರಾಂತ್ಯದಲ್ಲಿ ತನ್ನ ರಾಜ್ಯಪಾಲರ ಮೂಲಕ ಒಂದು ಸರ್ಕಾರವನ್ನು ಯೋಜಿಸಿದ್ದುದನ್ನು ಕಾಣುತ್ತೇವೆ. ಈ ಪ್ರಾಂತೀಯ ರಾಜ್ಯ ಪಾಲರುಗಳಲ್ಲಿ ನೇಕ್‌ನಂಖಾನನು ಪ್ರಸಿದ್ಧನಾದವನಿಂದ ಸೆಂಟ್ ಜಾರ್ಜ್ ಅನ್ನೂ ಅದರಲ್ಲಿ ವ್ಯಾಪಾರ ಮಾಡುವ ಹಕ್ಕನ್ನೂ ಈಸ್ಟ್ ಇಂಡಿಯಾ ಕಂಪನಿ ಪುನರ್ನವೀಕರಣ ಗೊಳಿಸಿಕೊಂಡಿತು ನೇಕ್‌ನಂಖಾನನ ಮೇಲ್ವಿಚಾರ ಣೆಯಲ್ಲಿ ತಿರುಪತಿಯಲ್ಲಿ ಒಂದು ಸರ್ಕಾರವಿದ್ದಿತೆಂಬುದನ್ನೂ ತಿಳಿಯಬಹುದು. ನೇಕ್‌ನಂಖಾನನ ಮೂಲಕ ಈ ವ್ಯಾಪಾರ ಒಪ್ಪಂದದ ಪುನರ್ನವೀಕರಣ ಪಡೆಯಲು ಆಂಗ್ಲವಕೀಲನು ಮೊದಲು ತಿರುಪತಿಗೆ ಬಂದಂ ತೆಯೂ, ಅಲ್ಲಿ ಉಪ ಆಡಳಿತಗಾರ ಚಿನ್ನಪಲ್ಲಿ ಮಿರ್ಜಾನನ್ನು ಭೇಟಿಯಾಗಿ, ನೇಕ್‌ನಂಖಾನನನ್ನೇ ಭೇಟಿ ಯಾಗಲು ಗೋಲ್ಕೊಂಡಕ್ಕೆ ಮುಂದೆ ಹೊರಟ ನೆಂದೂ ತಿಳಿದುಬರುತ್ತದೆ. ಇದರಿಂದಾಗಿ ತಿರುಪತಿಯು ಅಂದಿಗೆ ಆಡಳಿತದ ಒಂದು ಉಪವಿಭಾಗಕೇಂದ್ರ ಆಗಿದ್ದಿತೆಂದೂ, ಇಲ್ಲಿಂದ ದೂರವಿದ್ದ ಪ್ರಾಂತ್ಯಗಳ ಆಡಳಿತದ ವ್ಯವಹಾರ ಗಳನ್ನು ನೋಡಿಕೊಳ್ಳಲೂ ಇದನ್ನು ಆಧರಿಸಿದ್ದ ತಿರುಪತಿ ಮತ್ತಿತರ ಪ್ರಾಂತ್ಯಗಳ ಉಸ್ತುವಾರಿಗೆ ತಕ್ಕ ಏರ್ಪಾಡು ಗಳೂ ಆಗಿದ್ದಿರಬೇಕು. ಆದರೆ ಈ ಏರ್ಪಾಡುಗಳ ವಿವರಗಳು ತಿಳಿದುಬರುವುದಿಲ್ಲ. ಏನೇ ಆದರೂ ತಿರುಪತಿಯ ಆಲಯದ ಆದಾಯ ಮೀರ್‌ಜುಮ್ಲಾ ಆಗಲೀ ಅವನ ವಾರಸುದಾರರಾಗಲೀ ಮರೆತು ಹೋಗುವಷ್ಟು ಕಿರಿಯ ಮೊತ್ತವಾಗಿರಲಿಲ್ಲ. ವಿಶೇಷವಾಗಿ ಮೀರ್‌ಜುಮ್ಲಾ ಆಗಲೀ ಅವನ ಹಿಂದೆ ಬಂದವರಾಗಲೀ ಹೆಚ್ಚಿನ ರಾಜ್ಯ ವಿಸ್ತರಣೆಯಲ್ಲಿ ಸ್ವಂತ ಅಹಂಕಾರದ ಉದ್ದೇಶಗಳಿಂದ ಕದನಗಳಲ್ಲಿ ತೊಡಗಿದವರಾಗಿರಲಿಲ್ಲ. ಬದಲಿಗೆ ಹೆಚ್ಚು ಹೆಚ್ಚಿನ ಸಂಪತ್ತನ್ನು ಕೂಡಿಹಾಕುವುದೇ - ಸಂಪಾದಿಸುವುದೇ ಎಲ್ಲ ಸಂಗ್ರಾಮಗಳ ಮೂಲ ಉದ್ದೇಶಗಳಾಗಿದ್ದವು. ಹೀಗಾಗಿ ಕಾಲದಿಂದ ಕಾಲಕ್ಕೆ ತಿರುಪತಿಯ ಆಲಯದಿಂದ ತಮಗೆ ಅತಿ ಹೆಚ್ಚು ಆರ್ಥಿಕ ಪ್ರಯೋಜನವಾಗುವಂತಹ ವ್ಯವಸ್ಥೆಯೊಂದನ್ನು ಅವರೆಲ್ಲ ಅನುಸರಿಸಬೇಕು. ಇದಕ್ಕೆ ತಕ್ಕಂತೆ ಆಲಯದ ಆಡಳಿತವನ್ನೂ ಏರ್ಪಡಿಸಿರಬೇಕು.

ನಮಗೆ ತಿಳಿದಿರುವ ಆಧಾರಗಳ ಪ್ರಕಾರ ತಿರುಪತಿಯ ಆಲಯದ ಆದಾಯವು ಹಿರಿದಾಗಿದ್ದು ಎರಡು ಬಗೆಯದಾಗಿದ್ದಿತು. ಮೊದಲನೆಯ ಬಗೆಯ ಆದಾಯವು ಎರಡು ರೀತಿಯ ಭೂಮಿಯ ಕಂದಾಯದ ರೂಪದಲ್ಲಿದ್ದಿತು. ಆಲಯಕ್ಕೆ ಇಡಿಯಾಗಿ ದಾನವಾಗಿ ಬಂದ ಗ್ರಾಮಗಳ ವಾರ್ಷಿಕ ಆದಾಯ - ಈ ಗ್ರಾಮಗಳಲ್ಲಿ ಹಲವು ಜಿಲ್ಲಾ ಕೇಂದ್ರದಿಂದ ಬಹಳ ದೂರದಲ್ಲಿಯೂ ಇದ್ದವು. ಆದರೆ ಬಹುತೇಕ ಭೂಮಿಕಾಣಿಗಳು ಆಲಯದ ಹತ್ತಿರದವಾಗಿದ್ದು ಆಲಯ ಹಾಗೂ ಸ್ವರ್ಣಮುಖಿ ನದಿಗಳ ಮಧ್ಯದಲ್ಲಿದ್ದವು. ಇವುಗಳ ಬೇಸಾಯದಲ್ಲಿ ಬೇಕಾಗುವ ಬಂಡವಾಳವನ್ನು, ಧರ್ಮಭೀರುಗಳಾದ ದಾನಿಗಳು ಉದಾರವಾಗಿ ಆಲಯದ ಭಂಡಾರಕ್ಕೆ

ನೀಡಿದ ದಾನಗಳ ಮೂಲಕ ಹೂಡಲಾಗುತ್ತಿದ್ದಿತು. ಹೀಗಾಗಿ ಆಲಯದ ಅಧೀನದಲ್ಲಿ ನೇರವಾಗಿ ಸೇರುವಂತಹ ಸಾಕಷ್ಟು ಜಮೀನು ಇದ್ದಿರಬೇಕು. ಇದರಿಂದ ಆಲಯವೇ ಜಮೀನುದಾರ ಪಾತ್ರವನ್ನು ನಿರ್ವಹಿಸಿ, ಬೇಸಾಯಗಾರರ ಮೂಲಕ ಹೆಚ್ಚು ಕಡಿಮೆ ಶಾಶ್ವತ ಗುತ್ತಿಗೆಯ ಆಧಾರದಲ್ಲಿ ಬೇಸಾಯ ನಡೆಸುತ್ತಿದ್ದಿತು.

ಆಲಯವು ನೀರಾವರೀ ಯೋಜನೆಗಳಿಗಾಗಿ ಹಣವನ್ನು ಒದಗಿಸುತ್ತಿದ್ದು ಆ ವೇಳೆಗಾಗಲೇ ಇದ್ದ ಸವಲತ್ತು ಗಳನ್ನು ಅಭಿವೃದ್ಧಿ ಗೊಳಿಸುವುದು, ಹೊಸ ಹೊಸ ಜಮೀನುಗಳನ್ನು ಸಾಗುವಳಿ ಮಾಡಲು ಬೇಕಾದ ಪರಿಕರ ಗಳಿಗೆ ನೆರವು ನೀಡುವುದು, ಮೊದಲಾದ ಸಾಮಾನ್ಯ ಜಮೀಂದಾರನು ಮಾಡುವ ಎಲ್ಲ ಕೆಲಸಗಳನ್ನು ಆಲಯವು ಮಾಡುತ್ತಿದ್ದಿತು. ಹಾಗಾಗಿ ಎಲ್ಲರೀತಿಯಲ್ಲಿಯೂ ಆಲಯವು ಸಾಮಾನ್ಯ ಜಮೀಂದಾರರಂತೆಯೇ ಇದ್ದಿತು. ಕಂದಾಯದ ಸಂಗ್ರಹಣೆಗಾಗಿ ಆಲಯವು ತನ್ನದೇ ಆದ ಯಂತ್ರಾಂಗವನ್ನು ವ್ಯವಸ್ಥೆಯನ್ನು ಹೊಂದಿದ್ದು ಇಡೀ ಗ್ರಾಮಗಳಿಗೆ ಒಡೆಯನಾಗಿದ್ದಿತು. ಬೇರೆ ಬೇರೆ ಗ್ರಾಮಗಳ ಹಲಕೆಲವು ಭಾಗಗಳು ಜಮೀನುಗಳು ಮಾತ್ರವೇ ಆಲಯಕ್ಕೆ ಸೇರಿದ್ದಾಗ - ತಿರುಚಾನೂರು ಸುತ್ತಮುತ್ತಲ ಗ್ರಾಮಗಳಲ್ಲಿದ್ದಂತೆ - ಇಡೀ ಗ್ರಾಮದ ಜಮೀನುಗಳಲ್ಲಿ ಸಭೆಯು - ಗ್ರಾಮ ಪಂಚಾಯತಿಯ- ಅಧೀನದಲ್ಲಿದ್ದು ತನ್ನ ಭಾಗದ ಭೂಮಿಗಳಲ್ಲಿನ ಕಂದಾಯ, ಬೆಳೆ, ಮಸೂಲಾತಿಗೆ ಈ ಗ್ರಾಮ ಸಭೆಗಳೊಡನೆ ಬೇರೆಯೇ ಆದ ವ್ಯವಸ್ಥಿತವಾದ ಏರ್ಪಾಡುಗಳನ್ನುಂಟು ಮಾಡಿದ್ದಿತು. ಗ್ರಾಮಸಭೆಗಳು ಇಲ್ಲಿನ ಆದಾಯವನ್ನು ಸಂಗ್ರಹಿಸಿ ಆಲಯಕ್ಕೆ ನೀಡುವ ಮಧ್ಯವರ್ತಿಯಾಗಿ ಕೆಲಸ ಮಾಡುತ್ತಿದ್ದವು ಎನ್ನಲು ಅಡ್ಡಿಯಿಲ್ಲ. ಹೀಗಾಗಿ ಆಲಯದ ಭೂಮಿಗಳವರೆಗೆ ಹೇಳುವುದಾದರೆ ಆಲಯವು ಜಮೀಂದಾರನ  ಸ್ಥಾನದಲ್ಲಿಯೂ ಬೇಸಾಯಗಾರನು ಹೆಚ್ಚು ಕಡಿಮೆ ಗೇಣಿದಾರನ ಸ್ಥಾನದಲ್ಲಿಯೂ ಇರುವಂತಹ ದಾಗಿದ್ದಿತು. ಈ ಗೇಣಿದಾರಿಕೆಯು ಜಮಾಬಂದಿಯು ಸರಿಯಾಗಿರುವ ತನಕವೂ ನಡೆಯುವಂತಹ ಶಾಶ್ವತಪದ್ಧತಿ ಯಾಗಿದ್ದಿತು.

ಈ ಒಂದು ವ್ಯವಸ್ಥೆಯಲ್ಲಿ ಹೊಸ ಸರ್ಕಾರದ ಪ್ರವೇಶವಾದಾಗ ಒಂದು ರೀತಿಯಲ್ಲಿ ಹೊಸ ಪದ್ಧತಿಯುಂ ಟಾಗಿ, ಕ್ರಾಂತಿಕಾರಕ ವಾದ ಬದಲಾವಣೆಗಳಾಗುತ್ತಿದ್ದವು. ಈ ಒಂದು ನಿಶ್ಚಿತ ಸಮಯದಲ್ಲಿ ಹೊಸ ಸರ್ಕಾರವು ಕರ್ನಾಟಿಕ ಸಮರಗಳ ನಂತರದ ಅನಾಯ ಕತ್ವದ ಪರಿಸ್ಥಿತಿಗಳಲ್ಲಿ ಉಂಟಾಗದೆ, ಹೊಸ ಆಕ್ರಮಣಗಳನಂತರ ಹಳೆಯ ವ್ಯವಸ್ಥೆ ಉರುಳಿಯೋ, ಕ್ರಮೇಣ ಕೊನೆಯಾಗಿಯೋ ಉಂಟಾಯಿತು. ಏನೇ ಆದರೂ ಮೊದಲಿಗೆ ಒಂದು ಕೇಂದ್ರ ಆಡಳಿತದ ಹದ್ದುಬಸ್ತಿನಲ್ಲಿ ಕಂದಾಯ ವಸೂಲಾತಿ ಕೆಲಸಗಳು ನಡೆಯು ತ್ತಿದ್ದು ಅಂತಹ ಒಂದು ಆಡಳಿತ ಕೇಂದ್ರ ಕುಸಿದುಬಿದ್ದ ಕಾರಣದಿಂದಾಗಿ ಸ್ಥಳೀಯ ಆಡಳಿತ ವಿಭಾಗಗಳು ಅದೇ ಕೆಲಸವನ್ನು ಹೆಚ್ಚುಕಡಿಮೆ ಸ್ವತಂತ್ರವಾಗಿ ನಿರ್ವಹಿಸಬೇಕಾಗಿ ಬಂದಾಗ, ಸ್ಥಳೀಯ ಆಡಳಿತವು ಈ ಹಿಂದೆ ನಡೆದು ಬಂದಿದ್ದ ಸಾಂಪ್ರದಾಯಿಕ ವಿಧಿ ವಿಧಾನಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ತಿರುಚಿ, ತಿದ್ದಿ, ಹೊಸರೀತಿ ಗಳನ್ನು ಪ್ರವೇಶಗೊಳಿಸಲು ಅವಕಾಶವಾಯಿತು. ಈ ಪರಿವರ್ತನೆಯು ಸ್ವಲ್ಪಕಾಲದ ನಂತರ ಉಂಟಾಯಿ ತಾದರೆ, ತತ್ಕಾಲದಲ್ಲಿ ಎಂದರೆ ಮುಂಚೆ ಆದ ಬದಲಾವಣೆಯೆಂದರೆ, ಸರ್ಕಾರವು ಶ್ರೀ ಸಾಮಾನ್ಯರಿಗೆ ರಕ್ಷಣೆ ನೀಡುವ ಸಲುವಾಗಿ ಹಾಗೂ ಕಂದಾಯ ವಸೂಲಾತಿಗಾಗಿ ಸರ್ಕಾರೀ ಅಧಿಕಾರಿಗಳ ಬದಲಿಗೆ ನೇಮಿಸಿದ ಮಧ್ಯವರ್ತಿಗಳು ತಮಗೆ ನೀಡಲ್ಪಟ್ಟ ಅಧಿಕಾರವನ್ನು ನಿರಂಕುಶವಾಗಿ ಹೊಂದಿ ಪ್ರಾಂತ್ಯದಲ್ಲಿ ಕಂದಾಯ ವಸೂಲಾತಿ ಹಾಗೂ ಆರಕ್ಷಣೆಯ ಭಾರಗಳನ್ನು ಸ್ವತಂತ್ರವಾಗಿ ನಿರ್ವಹಿಸ ತೊಡಗಿದರು. ಈ ಕೆಲಸಗಳೆಲ್ಲ ಕೇಂದ್ರ ಸರ್ಕಾರವಿದ್ದಾಗ ಅದರ ಅಧೀನದಲ್ಲಿ ನಡೆಯುತ್ತಿದ್ದವು ಯಾವುದೋ ಕಾರಣದಿಂದ ಕೇಂದ್ರ ಆಡಳಿತ ಕಳಚಿಬಿದ್ದಾಗ ಇವರುಗಳು ತಮ್ಮದೇ ಆದ ನೀತಿ ನಿಯಮಾವಳಿಯ ಅನುಸಾರ ಕೆಲಸಮಾಡಲು ತೊಡುಗುತ್ತಿದ್ದು, ಶ್ರೀಸಾಮಾನ್ಯರಿಗೆ ಬೇರೆ ದಾರಿಯೇ ಇಲ್ಲದೆ ಈ ವಿಧಾನಗಳನ್ನು ಒಪ್ಪಬೇಕಾದ ಅನಿವಾರ್ಯತೆ ಯುಂಟಾಯಿತು

ಈ ರೀತಿಯಲ್ಲಿಯೇ ಪಾಳಯಪಟ್ಟುಗಳು ಉಂಟಾದವು. ವಿಜಯನಗರ ಸ್ಥಾಪನೆಗೆ ಸ್ವಲ್ಪಮುಂಚಿನ ಅರಾಜಕತ್ವದ ಕಾಲದಲ್ಲಿ ಈ ಪದ್ಧತಿ - ಪಡಿಕ್ಕಾವಲ್ ಪದ್ಧತಿ ಜಾರಿಗೆ ಬಂದಿತು. ರಕ್ಷಣೆಯನ್ನು ನೀಡಬಲ್ಲಂತಹ ಸಾಧನ ಸಂಪತ್ತಿನಿಂದ ಕೂಡಿದ ಒಬ್ಬ ಸಮರ್ಥ

ಸೇನಾಪತಿಯೊಡನೆ ಸುತ್ತ ಮುತ್ತಣ ಹಲವಾರು ಹಳ್ಳಿ, ಗ್ರಾಮ, ನಗರಗಳು, ಇಂತಹ ಒಂದು ಒಪ್ಪಂದಕ್ಕೆ ಬಂದದ್ದರ ಕುರಿತು ವಿವರಿಸುವ ಹಲವಾರು ದಾಖಲೆಗಳಿವೆ. ಕೇಂದ್ರ ಆಡಳಿತವು ಕೆಟ್ಟು ನಿಂತಾಗ ಈ ಪಾಳಯಗಾರರು ತಮ್ಮದೇ ಆದ ಷರತ್ತುಗಳಿಗೆ ತಕ್ಕಂತೆ ತಮ್ಮ ಸೇವೆಗಳನ್ನು ನಿರ್ವಹಿಸುತ್ತಿದ್ದರು. ಇವರನ್ನು ಪಾಳಯಗಾರರೆಂದು (ಪಾಳಯಕ್ಕಾರನ್) ಕರೆಯಲಾಯಿತು. ಇವರ ಅಧೀನದ ಪ್ರಾಂತ್ಯ ವನ್ನು ಪಾಳ್ಯ - ಪಾಳಯಂ ಎಂದು ಕರೆದರು. ತಿರುಪತಿಯ ಸುತ್ತ ಮುತ್ತ ಇಂತಹ ಹನ್ನೆರಡರಿಂದ ಇಪ್ಪತ್ತು ಪಾಳಯಪಟ್ಟುಗಳ ಹೆಸರುಗಳನ್ನು ಕೇಳಬಹುದಾಗಿದೆ.

ಇನ್ನೊಂದು ಕಡೆ ತಮ್ಮ ಸೇವೆಯ ಬದಲಿಗೆ ಅಥವಾ ಇನ್ನಾವುದೇ ಮಾರ್ಗದಲ್ಲಿ ದೊಡ್ಡ ಜಮೀನುದಾರಿಗಳನ್ನು ಪಡೆದಿದ್ದ ಜಮೀಂದಾರರು ತಮ್ಮ ಸುತ್ತಮುತ್ತಣ ಗ್ರಾಮಗಳನ್ನು ತಮ್ಮ ಆಶ್ರಯದ ರಕ್ಷಣೆಯಲ್ಲಿ ಪಡೆದರು. ಇವರು ಪಾಳಯಗಾರರಿಂದ ಬೇರೆಯೇ ಆದ ಜಮೀಂದಾರರು. ಆದರೆ ಈ ಎರಡು ರೀತಿಯ ನಡುವಣ ವ್ಯತ್ಯಾಸ ಕ್ರಮೇಣ ನಾಶವಾಗಿ, ಎಲ್ಲವನ್ನೂ ಜಮೀಂದಾರಿ ಗ್ರಾಮಗಳೆಂದೇ ಗುರುತಿಸುವಂತಾಯಿತು.

## 7. ಅಮಲ್ದಾರರ ಅಧೀನದಲ್ಲಿ ತಿರುಪತಿ

ಗೋಲ್ಕೊಂಡದ ಹೆಸರಿನಲ್ಲಿ ಆಕ್ರಮಣ ಮಾಡಿದ ಮೀರ್ ಜುಮ್ಲಾ ಸ್ಥಳೀಯ ಆಲಯಗಳು ಸಂಪತ್ತಿನಿಂದಾಗಿ ಈ ಪ್ರಾಂತ್ಯದಲ್ಲಿ ಅಗಾಧವಾದ ಐಶ್ವರ್ಯವನ್ನು ಸಂಗ್ರಹಿಸಿದನೆಂದು ದಾಖಲೆಯಾಗಿದೆ. ಮೀರ್ ಜುಮ್ಲಾ ಆಕ್ರಮಿಸಿದ ಪ್ರದೇಶದ ನಟ್ಟನಡುವೆ ಇದ್ದದ್ದು ತಿರುಪತಿ - ಹಾಗೂ ತಿರುಪತಿಯ ಆಲಯದ ಸಂಪತ್ತು ಸಾರ್ವಜನಿಕ ವಲಯದಲ್ಲಿ ಪ್ರಸಿದ್ಧವಾಗಿದ್ದ ವಿಷಯ. ಈ ಅಂಶ ಮೀರ್ ಜುಮ್ಲಾನ ಗಮನಕ್ಕೆ ಬಂದಿರಲೇಬೇಕು. ಆದರೆ ಮೀರ್ ಜುಮ್ಲಾ ಆಲಯದ ವಿಷಯದಲ್ಲಿ ಯಾವ ಕಾರ್ಯಗಳನ್ನು ಕೈಗೊಂಡ ಎಂಬುದು ತಿಳಿದುಬಂದಿಲ್ಲ.

ಆರ್ಕಾಟಿನ ನವಾಬಿತನದ ಚರಿತ್ರೆಯಲ್ಲಿ ಈ ಮೊದಲೇ ತಿರುಪತಿಯ ಆಲಯದ ಆದಾಯ ಅತಿ ಹೆಚ್ಚಾಗಿದ್ದಿತೆಂದೂ, ತನ್ನ ವಾರ್ಷಿಕ ಆದಾಯದ ಒಂದು ಭಾಗವನ್ನು ಅದು ರಾಜ್ಯದ ಬೊಕ್ಕಸಕ್ಕೆ ನೀಡಬೇಕೆಂಬ ರಾಜಾಜ್ಞೆಯಾಯಿತು. ಊರ್ಮೆಯ ಹೇಳಿಕೆ ಯಂತೆ ಈ ವಾರ್ಷಿಕ ಕಾಣಿಕೆ 60,000 ಪಗೋಡಗಳೆಂದೂ, ಆಂಗ್ಲರ ಕಾಲದಲ್ಲಿ ಇದು 45,000 ಪಗೋಡ ಹಾಗೂ 52,000 ರೂಪಾಯಿಗಳೆಂದು ನಿಗದಿಯಾಯಿತು ಎಂಬುದನ್ನು ಮೊದಲೇ ಹೇಳಲಾಗಿದೆ. ಈ ಹಣರಾಶಿಯನ್ನು ಇತರ ದಾಖಲೆಗಳಲ್ಲಿ ಕಾಣು ವಂತೆ ಒಬ್ಬ ಗುತ್ತಿಗೆದಾರನಿಗೆ ಒಪ್ಪಿಸಿ, ಮಿಕ್ಕದ್ದರಲ್ಲಿ ಆಲಯದ ಕಾರ್ಯಗಳನ್ನು ನಿರ್ವಹಿಸಿ ತನ್ನ ಲಾಭವನ್ನೂ ಕಾಣುವಂತೆ ಏರ್ಪಾಡು ಗಳನ್ನು ಮಾಡಿದ್ದನ್ನು ಕಾಣಬಹುದು.

ಈ ಪದ್ಧತಿಯು ಮೊದಲಿಗೆ ಸಾದತ್ - ಉಲ್ಲಾಖಾನ್ ಹಾಗೂ ಅವನ ವಾರಸುದಾರ ದೋಸ್ತ್ ಆಲಿಯ ಕಾಲದಲ್ಲಿ ಪ್ರವೇಶ ಗೊಳ್ಳುವಂತಾಯಿತು. ಮಹಮದಾಲಿಯ ಕಾಲದ ಕರ್ನಾಟಕ ಯುದ್ಧಗಳ ಉಲ್ಲೋಲ ಕಲ್ಲೋಲಗಳಲ್ಲಿ ತಿರುಪತಿಯ ಖಚಿತವಾದ ಆದಾಯ ನೀಡುವ ಒಂದು ಗಟ್ಟಿಯಾದ ಮೂಲವಾಗಿದ್ದು ಪ್ರಭಾವಿಗಳಾದ ಹಲವಾರು ಗುಂಪುಗಳ ಆಕರ್ಷಣ ಕೇಂದ್ರವಾಗಿದ್ದಿತು.

ಆಂಗ್ಲರ ಈಸ್ಟ್ ಇಂಡಿಯಾ ಕಂಪನಿ ದುರಾಸೆಯಿಂದ ಈ ಆದಾಯವನ್ನು ಬಯಸಿದ್ದಿತು. ಫ್ರೆಂಚರು ಈ ಬಗ್ಗೆ ಕಣ್ಣು ಹಾಕಿದ್ದರು. ನವಾಬರಿಗೆ ಇದು ಸಿಕ್ಕಿದಲ್ಲಿ ಆನಂದದಿಂದ ಅನುಭವಿಸುವ ಆಸೆಯಿದ್ದಿತು. ಆನಂದ ರಂಗಪಿಳ್ಳೆಯ ದಿನಚರಿಯಲ್ಲಿ ದಾಖಲೆಯಾಗಿರುವಂತೆ ಶ್ರೀಮತಿ ಡೂಪ್ಲೆ ಹಾಗೂ ಶ್ರೀಮತಿ ಗೋದೇಹುಗಳು ಈ ಆದಾಯವನ್ನು ಯಾರಿಗಾದರೂ ಗುತ್ತಿಗೆಗೆ ನೀಡುವುದರ ಮೂಲಕ ಹೆಚ್ಚು ಲಾಭ ಪಡೆಯ ಬಯಸಿ ಪ್ರಯತ್ನಪಟ್ಟಿದ್ದರು. ಆಲಯದ ಆದಾಯಮೂಲದ ಬಗ್ಗೆ ಈಸ್ಟ್ ಇಂಡಿಯಾ ಕಂಪನಿಯು ಹೊಂದಿದ್ದ ತೀವ್ರವಾದ ಕಾಳಜಿಯ ಬಗ್ಗೆಯೂ, ಆಲಯವನ್ನು ಆಕ್ರಮಣಗಳ ವಿರುದ್ಧ ರಕ್ಷಿಸುವುದರಲ್ಲಿ ಹೊಂದಿದ್ದ ಆಸಕ್ತಿಯನ್ನೂ ತಿಳಿಸುವ ಹಲವು ಸಂಗತಿಗಳನ್ನು ನೋಡಬಹುದಾಗಿದೆ. ನವಾಬನ ಅಧಿಕಾರಿಗಳಾದ ನಜೀಬುಲ್ಲಾ ಹಾಗೂ ಅಬ್ದುಲ್

ವಹಾಬರುಗಳೂ ಈ ಆದಾಯದ ಬಗ್ಗೆ ಆಕರ್ಷಿತರಾಗಿ ಆಲಯವನ್ನು ವಶಪಡಿಸಿಕೊಂಡು ಆದಾಯ ವನ್ನು ಹಸ್ತಗತಗೊಳಿಸುವ ವಿಫಲ ಪ್ರಯತ್ನಗಳನ್ನು ಮಾಡಿದರು.

ಆಲಯವನ್ನು ಅದರ ಪಾಡಿಗೆ ಅದನ್ನು ಬಿಟ್ಟು, ಅದರ ಆದಾಯ ಹಾಗೂ ಆರಾಧನಾ ಪದ್ಧತಿಗಳನ್ನು ಇದ್ದ ಸ್ಥಿತಿಯಲ್ಲಿಯೇ ಬಿಟ್ಟು ಬಿಟ್ಟಂತಹ ಒಂದೇ ಒಂದು ಉಲ್ಲೇಖನೀಯ ಉದಾಹರಣೆಯೆಂದರೆ ಹೈದರಾಲಿಯದು ಎಂದು ವಿಲ್ಕ್ಸ್ ಹೇಳುತ್ತಾನೆ. ಇದೇ ರೂಪದಲ್ಲಿಯೇ ಆಲಯವು ಆಂಗ್ಲರ ಕೈಗೆ ಬಂದಿತು. ಅವರೂ ಸಹ ಹಳೆಯ ಪದ್ಧತಿಯಾದ ಅಮಲ್ದಾರನನ್ನು ನೇಮಕಮಾಡುವುದನ್ನು ಅನುಸರಿಸಿದರು. ಬ್ರಾಹ್ಮಣ ಅಮಲ್ದಾರರನ್ನು ಅದರಲ್ಲಿಯೂ ವೈಷ್ಣವ ಬ್ರಾಹ್ಮಣರನ್ನೇ ನೇಮಕ ಮಾಡುತ್ತಿದ್ದರು ಎಂಬುದನ್ನು ಶ್ರೀನಿವಾಸಾಚಾರ್ಯ ನಂತರ ವಾಸುದೇವಾಚಾರ್ಯರನ್ನು ಆರ್ಕಾಟು ನವಾಬನ ದಿವಾನನಾದ ದೂಮಲ್ಲಿ ಕೃಷ್ಣಾಜಿ ಪಂತನು ನೇಮಕ ಮಾಡಿದ್ದರಿಂದ ತಿಳಿಯಬಹುದು. ಬ್ರಿಟಿಷರು ಈ ಪದ್ಧತಿಯನ್ನು ಮುಂದುವರೆಸಿ ವರ್ಷಕ್ಕೆ 2 ರಿಂದ 2.5 ಲಕ್ಷ ರೂಪಾಯಿಗಳ ನಿಯತವಾದ ನಿರಂತರವಾದ ಆದಾಯವನ್ನು ಪಡೆದರು. ಅಂದಿನ ದಿನಗಳಲ್ಲಿ ಪ್ರತಿದಿನವೂ ಆಲಯಕ್ಕೆ ಸರಾಸರಿ ಒಂದು ಸಾವಿರ ರೂಪಾಯಿಗಳ ಆದಾಯವಿದ್ದದ್ದು ಈ ವ್ಯವಸ್ಥೆ ಸಾಮಾನ್ಯ ವಾಗಿದ್ದಿತೆಂಬು ದನ್ನು ತಿಳಿಯ ಬಹುದಾಗಿದೆ.

## 8. ಮೈಸೂರು ರಾಜ್ಯ ಹಾಗೂ ತಿರುಪತಿ

ಇಂದಿನ ಕರ್ನಾಟಕ ರಾಜ್ಯದ ಭಾಗವಾಗಿದ್ದ ಹಳೆಯ ಮೈಸೂರು ರಾಜ್ಯದ ಬಹುತೇಕ ಭಾಗಗಳನ್ನು ಒಟ್ಟಿಗೆ ಸೇರಿಸಿ ಆಳಿದ ಮೊದಲ ರಾಜವಂಶ ಹೊಯ್ಸಳರದೆಂದು ಹೇಳಬೇಕು. ಇತಿಹಾಸ ಕಾಲದಲ್ಲಿ ಪಾಂಡ್ಯರ ಆಕ್ರಮಣ ಹಾಗೂ ಒಳಕಿರುಕುಳದಿಂದಾಗಿ ಚೋಳರ ನೆರವಿನಿಂದ ದಕ್ಷಿಣಭಾರತದಲ್ಲಿ ತನ್ನ ಪ್ರಭಾವವನ್ನೂ ಪ್ರಾಬಲ್ಯವನ್ನೂ ಹೆಚ್ಚಿಸಿಕೊಂಡಿತು. ಚೋಳರ ವ್ಯವಹಾರಗಳಲ್ಲಿನ ಆಸಕ್ತಿ ಹಾಗೂ ಅವರುಗಳ ನಡುವೆ ಅನಿವಾರ್ಯವಾಗಿ ಏರ್ಪಡುತ್ತಿದ್ದ ಮಧ್ಯ ಪ್ರವೇಶಗಳಿಂದಾಗಿ, ಹೊಯ್ಸಳ ಎರಡನೇ ನರಸಿಂಹನ ಕಾಲದಿಂದ ಚೋಳರ ವ್ಯವಹಾರಗಳಲ್ಲಿ ನಿರಂತರ ತೊಡಗುವಂತೆ ಆಯಿತು. ಈತನ ಮಗನಾದ ವೀರ ಸೋಮೇಶ್ವರನು ಚೋಳ ರಾಜಧಾನಿ ಉರೈಯೂರಿನ ಬಳಿಯಲ್ಲಿಯೇ ತನ್ನ ಪರ್ಯಾಯ ರಾಜಧಾನಿಯನ್ನು ಹೊಂದಿರುವುದು ಸೂಕ್ತವೆಂದು ಭಾವಿಸಿ ಶ್ರೀರಂಗದ ಉತ್ತರಕ್ಕೆ ಇದ್ದಂತಹ ಕಾಲೆರೂನ್ (ಕಣ್ಣಾನೂರ್) ಅನ್ನು ಕೋಟೆಯಾಗಿಸಿದ. ಉರೈಯೂರ್ ಶ್ರೀರಂಗದ ದಕ್ಷಿಣಕ್ಕೆ ತಿರುಚಿನಾಪಳ್ಳಿಯ ಬಳಿಯಿದ್ದಿತು. ಈ ಹೊಸ ಕೋಟೆಯೇ ತಿರುವಿಕ್ರಮಪುರ ಎಂದಾಗಿ ಹೊಯ್ಸಳರ ದಕ್ಷಿಣದ ರಾಜಧಾನಿಯಾಯಿತು. ಪಾಂಡ್ಯರಾಜ ಜಟಾವರ್ಮ ಸುಂದರ ಪಾಂಡ್ಯನಿಂದ ಸೋಲಿಸಲ್ಪಡುವವರೆಗೆ ವೀರಸೋಮೇಶ್ವರನು ಇಲ್ಲಿಯೇ ರಾಜ್ಯಭಾರ ಮಾಡುತ್ತಿದ್ದನು.

ಅತಿ ದಕ್ಷಿಣದಲ್ಲಿ ಮುಸಲ್ಮಾನರ ಆಕ್ರಮಣಗಳು ಆರಂಭವಾದ ಮೇಲಿನ ಮೊದಲ ಇಪ್ಪತ್ತು ವರ್ಷಗಳಲ್ಲಿ ಕಾಲಕ್ರಮೇಣ ತಿರುಪತಿಯ ಸುತ್ತ ಮುತ್ತ ಹೊಯ್ಸಳರ ಪ್ರಭಾವ ಹೆಚ್ಚಾಗಿ ಸೋಮೇಶ್ವರನು ಕಣ್ಣಾನೂರಿನ ಕೋಟೆಯನ್ನು ಬಲಪಡಿಸಿದಂತೆಯೇ ತಿರುವಣ್ಣಾಮಲೆಯಲ್ಲಿ ನೆಲೆಯೂರುವಂತೆ ಆಯಿತು.

ತಿರುಮಲೆಯ ಆಲಯದ ದಾಖಲೆಗಳಲ್ಲಿ ಮೂರನೇ ನರಸಿಂಹನ ಪ್ರಧಾನಮಂತ್ರಿ ಆಗಿದ್ದ, ನಂತರ ಮೂರನೆಯ ವೀಲಬಲ್ಲಾಳನ ಆಡಳಿತದ ಆರಂಭಕಾಲದಲ್ಲಿಯೂ ಇದ್ದಂತಹ ಪೆರುಮಾಳ ದಂಡನಾಯಕನ ಬಗ್ಗೆ ಕೆಲವು ದಾಖಲೆಗಳನ್ನು ನೋಡಬಹುದು. ಪೆರುಮಾಳ್ ದಂಡನಾಯಕನ ವಾರಸುದಾರರು ದಣ್ಣಾಯಕ ಕೋಟ್ಟೈಯ ನಾಯಕರು. ಇವನಿಗೆ ಇಬ್ಬರುಮಕ್ಕಳು- ಒಬ್ಬರನ್ನು ಅನುಸರಿಸಿ ಒಬ್ಬರು ಇಂತಹದೇ ಪದವಿಯನ್ನು ಪಡೆದರು. ಇವರಲ್ಲಿ ಕೇತಯ ದಂಡನಾಯಕನು ಹಿರಿಯನಾದರೆ ಸಿಂಗಯ ದಂಡನಾಯಕನು ಕಿರಿಯ. ಇವರಿಬ್ಬರೂ ತಿರುಪತಿಯ ಆಲಯದಲ್ಲಿ ನೈವೇದ್ಯ ಸಮರ್ಪಣೆಗೆ ಏರ್ಪಾಡುಗಳನ್ನು ಮಾಡಿದರೆಂಬುದು ದಾಖಲೆಯಾಗಿದೆ. ಒಂದು ನಿವೇದನೆಯಂತೂ ಮೈಸೂರಿನ ವಿಶಿಷ್ಟ ಮಾದರಿಯಲ್ಲಿ "ಸಿತಗರ ಗಂಡ" ಎಂಬ ಹೆಸರನ್ನು - ಮೈಸೂರು ಪ್ರಾಂತ್ಯದ ಉತ್ತರಭಾಗದಲ್ಲಿ ಯಾದವರಾಯರ ಮೇಲಿನ ಯುದ್ಧದಲ್ಲಿ ಸಫಲತೆಯನ್ನು ಪಡೆದ ಪೆರುಮಾಳ ದಂಡನಾಯಕನ ಬಿರುದುಗಳಲ್ಲಿ ಒಂದು - ಹೊಂದಿದೆ. ಈ ಕುಟುಂಬವು ಅಂದಿನ ದಿನಗಳಲ್ಲಿ ತಿರುಪತಿಯನ್ನು ತಮ್ಮ ಅಧೀನದಲ್ಲಿಟ್ಟುಕೊಂಡಿದ್ದ

ಯಾದವರಾಯರ ವಂಶದೊಡನೆ ನಂತರ ಸ್ನೇಹ ಬಂಧುತ್ವಗಳನ್ನು ಹೊಂದಿರ ಬೇಕು. ಇದರಿಂದಾಗಿ ಇವರಿಗೆ ತಿರುಪತಿಯೊಡನೆ ಉಂಟಾದ ಸಂಬಂಧವು ಯಾವುದೋ ದೂರದ ರಾಜನ ಪ್ರತಿನಿಧಿಯಾದ ರಾಜ್ಯಪಾಲನ ಸಂಬಂಧಕ್ಕಿಂತ ಘನವಾದದ್ದಾಯಿತು. ಇವರುಗಳ ಶಾಸನಗಳು ನಮ್ಮನ್ನು ಹದಿಮೂರನೆಯ ಶತಮಾನದ ಮೊದಲ ಮೂವತ್ತು ವರ್ಷಗಳಿಗೆ ಕರೆದೊಯ್ಯುತ್ತಾಗಿ ಹೊಯ್ಸಳ ವೀರಬಲ್ಲಾಳನು ತಿರುವಣ್ಣಾಮಲೆಯ ಸುತ್ತಣ ಪ್ರದೇಶವನ್ನು ತನ್ನ ಅಧೀನದಲ್ಲಿಟ್ಟುಕೊಂಡಿದ್ದನೆಂಬುದು ಸ್ಪಷ್ಟವಾಗುತ್ತದೆ. ಈ ಹೊಯ್ಸಳ ರಾಜನಕಾಲದಿಂದ ಮೈಸೂರರಸರ ತಿರುಮಲೆ ಆಲಯಸೇವೆ ಆರಂಭವಾಗಿದ್ದು "ಸಿತಕರಗಂಡನ್ ಸಂಧಿ'' ಯು ಆಲಯದ ಹಾಗೂ ಮೈಸೂರಿನ ಪ್ರಾಚೀನ ಸಂಬಂಧವನ್ನು ಖಚಿತವಾಗಿ ದಾಖಲಿಸುತ್ತದೆ.

ವಿಜಯನಗರ ಪತನಾನಂತರ ವೆಂಕಟಪತಿರಾಯನ ಆಡಳಿತದ ಕೊನೆಗಾಲದಲ್ಲಿ ಸ್ವತಂತ್ರ ಮೈಸೂರು ಸಾಮ್ರಾಜ್ಯದ ಬುನಾದಿಯನ್ನು ರಾಜ ಒಡೆಯರ ಕಾಲದಲ್ಲಿ ಹಾಕಲಾಯಿತು. ಈ ಒಡೆಯರ ವಂಶವು ಆಲಯಕ್ಕೆ ಬಹುಮುಖ್ಯ ಸೇವೆಯನ್ನು ಸಲ್ಲಿಸಿತು.

ಮೈಸೂರು ರಾಜ ವಂಶದ ದಾಖಲಾತಿಗಳು ತಿರುಮಲೆಯ ದೇವರಿಗೆ ರಾಜ ಒಡೆಯರು ಶ್ವೇತ ಛತ್ರಿಯನ್ನು - ಮುತ್ತುಗಳ ಲೋಲಾಕುಗಳಿಂದ ಕೂಡಿದ ಛತ್ರಿಯನ್ನೂ ಪೂಜಾ ಪರಿಕರಗಳನ್ನು ಸ್ವಾಮಿಯ ನಿಲುವಂಗಿ ಯನ್ನೂ ಸಮರ್ಪಿಸಿದರೆಂದು ತಿಳಿಸುತ್ತವೆ. ಪ್ರತಿನಿತ್ಯವೂ ಗರ್ಭಗುಡಿಯಲ್ಲಿ ನಂದಾದೀಪ ಬೆಳಗಿಸಲು ಬೇಕಾದ ಸಾಹಿತ್ಯವನ್ನೂ, ಪ್ರತಿನಿತ್ಯವೂ ಸಹಸ್ರನಾಮಾರ್ಚನೆ ಹಾಗೂ ಅನ್ನಪ್ರಸಾದ ನಿವೇದನೆಗಳ ಏರ್ಪಾಡುಗಳನ್ನೂ ಮಾಡಿದರೆಂದು ತಿಳಿದು ಬರುತ್ತದೆ. ಕಂಠೀರವ ನರಸರಾಜ ಒಡೆಯರು (1639 - 1659) ನಂಜನಗೂಡು ನಂಜುಂಡೇಶ್ವರಸ್ವಾಮಿ ಆಲಯ, ಮೇಲುಕೋಟೆಯ ಚೆಲುವ ನಾರಾಯಣಸ್ವಾಮಿ ಆಲಯಗಳಿಗೆ ಸೇವೆ ಸಲ್ಲಿಸಿ ದಂತೆಯೇ ತಿರುಮಲೆಯ ಆಲಯಕ್ಕೂ ಕೈಂಕರ್ಯ ಸಲ್ಲಿಸಿದರೆಂದು ಇದೇ ದಾಖಲೆ ತಿಳಿಸುತ್ತದೆ. ಕಂಠೀರವ ನರಸರಾಜ ಒಡೆಯರ ನಂತರ ಬಂದಂತಹ ದೊಡ್ಡ ದೇವರಾಜ ಒಡೆಯರೂ ಸಹ ತಿರುಮಲೆಯ ಆಲಯದ ಬಗ್ಗೆ ಭಕ್ತಿ ಪ್ರಪತ್ತಿಗಳಿಂದ ನಡೆದುಕೊಂಡರು. ತಿರುಮಲೆಯ ಒಂದು ತುಲಸೀ ತೋಟವನ್ನು ಸ್ವಾಮಿಯ ಸೇವೆಗೆ ಏರ್ಪಾಡು ಮಾಡಿದ್ದೇ ಅಲ್ಲದೆ ದೇವರನ್ನು (ಉತ್ಸವ ಮೂರ್ತಿಗಳನ್ನು) ಆಸೀನಗೊಳಿಸಲು ಒಂದು ವಜ್ರಖಚಿತ ಮಂದಾಸನವನ್ನೂ, ದಿನವೂ ಅನ್ನಪ್ರಸಾದಗಳನ್ನು ಸಮರ್ಪಿಸಲು ತಕ್ಕಂತಹ ಎರಡು ದೊಡ್ಡ ಚಿನ್ನದ ಹರಿವಾಣಗಳನ್ನು ತಲುಪಿಸಿದರು. ಇವರ ವಾರಸುದಾರ - ಅನೇಕ ವಿಧದಲ್ಲಿ ಮೈಸೂರಿನ ಅತಿ ಶ್ರೇಷ್ಠ ಆಡಳಿತಗಾರ - ರೆಂದರೆ ಚಿಕ್ಕದೇವರಾಜ ಒಡೆಯರ್ (1672 - 1704) ಇತರ ಹಲವಾರು ಪವಿತ್ರ ಕ್ಷೇತ್ರಗಳಿಗೆ ದಾನ ದತ್ತಿಗಳನ್ನು ನೀಡಿದ್ದೇ ಅಲ್ಲದೆ ತಿರುಮಲೆಯ ಆಲಯಕ್ಕೂ ದಾನ ದತ್ತಿಗಳನ್ನು ನೀಡಿದರು. ಮೈಸೂರು ಅರಮನೆಯ ಕೋಟೆಯ ನಡುವೆ ವರಾಹಸ್ವಾಮಿ ಆಲಯವನ್ನು ಕಟ್ಟಿಸಿದ್ದೇ ಅಲ್ಲದೆ ಮಹಮದೀಯರ ಧಾಳಿಯಲ್ಲಿ ಸ್ಥಳಾಂತರಗೊಂಡಿದ್ದ ಶ್ರೀಮುಷ್ಣದ ವರಾಹ ವಿಗ್ರಹವನ್ನು ಅಲ್ಲಿ ಪ್ರತಿಷ್ಠೆ ಮಾಡಿದರು. ತಿರುಮಲೆಯ ಆಲಯದಲ್ಲಿ ಒಂದು ತುಪ್ಪದ ನಂದಾದೀಪಕ್ಕೆಂದು ಏರ್ಪಾಡು ಮಾಡಿದ್ದೇ ಅಲ್ಲದೆ, ಸಹಸ್ರ ನಾಮಾರ್ಚನೆಗೂ ಇತರ ಬಂಗಾರದ ತಳಿಗೆಯಲ್ಲಿ ಪ್ರಸಾದ ನಿವೇದನೆಗೂ ಏರ್ಪಾಡು ಮಾಡಿದರು. ನಂತರದಲ್ಲಿ ಉಲ್ಲೇಖನೀಯರೆಂದರೆ ದೊಡ್ಡ ಕೃಷ್ಣರಾಜ ಒಡೆಯರ್. ಇವರು ಚಿಕ್ಕದೇವರಾಜ ಒಡೆಯರ ಮಗನ ನಂತರ ಪಟ್ಟಕ್ಕೆ ಬಂದರು. ಇವರು ತಿರುಮಲೆಯ ಆಲಯದಲ್ಲಿ ಹಲವಾರು ದೈನಂದಿನ ಸೇವೆಗಳನ್ನು ವಾರ್ಷಿಕ ಉತ್ಸವಗಳನ್ನೂ ಏರ್ಪಡಿಸಿದರು. ಇವುಗಳ ನಿರ್ವಹಣೆಗಾಗಿ ಗೊತ್ತಾದ ಸಂಖ್ಯೆಯ ಗ್ರಾಮಾದಾಯದಿಂದ 600 ಕಂಠೀರವ ವರಹಗಳನ್ನು ಕೊಡ ಮಾಡುವಂತೆ ಏರ್ಪಾಡು ಮಾಡಿದರು. 1730 ರಲ್ಲಿ ಈ ಉದ್ದೇಶವನ್ನು ಜಾಹೀರು ಮಾಡಲು ಹಾಗೂ ಆಚರಣೆಗೆ ತರಲು ಒಂದು ತಾಮ್ರಶಾಸನವನ್ನು ಹೊರಡಿಸಿದರು. ದೇವಾದಾಯ ಗ್ರಾಮಗಳೆಂದು ಗುರುತಿಸಿದ ಗ್ರಾಮಗಳ ಸರಹದ್ದುಗಳಲ್ಲಿ ವಿಷ್ಣುಮುದ್ರೆಯಾದ ಶಂಖಚಕ್ರಗಳನ್ನು ಕೆತ್ತನೆಯ ಕಲ್ಲುಗಳಲ್ಲಿ ನೆಡಿಸಿದರು. ಇವರ ಶಾಸನಗಳಲ್ಲಿ ಹಲವು - ತುಮಕೂರು ಜಿಲ್ಲೆಯ ಕುಣಿಗಲ್ ನ 37 ನೇ ಸಂಖ್ಯೆಯ ಶಾಸನ, ಯಡತೊರೆಯ 54 ನೇ ನಂಬರಿನ ಶಾಸನಗಳು ಇವರ ದಾನಕಾರ್ಯಗಳ ಸಾಮಾನ್ಯ ವಿವರಗಳನ್ನು ನೀಡುತ್ತ ಕಾಶಿ, ಜಗನ್ನಾಥ, ತಿರುಪತಿ ಮೊದಲಾದ ಪವಿತ್ರ ಕ್ಷೇತ್ರಗಳಲ್ಲಿ ಮಾಡಿದ ದಾನ

ದತ್ತಿಗಳನ್ನು ತಿಳಿಸುತ್ತವೆ. ಸಾಮಾನ್ಯವಾಗಿ ಧರ್ಮಭೀರು ಗಳೂ, ಮಾನವೀಯ ಮೌಲ್ಯ ಪ್ರಚಾರಕರೂ ಆದ ಒಡೆಯರ ವಂಶದಲ್ಲಿಯೇ ಇವರು ಹೆಚ್ಚು ಧರ್ಮಾತ್ಮರಾಗಿದ್ದ ರೆಂದು ಹೇಳಲಾಗಿದೆ. ನಂತರದ ದೊರೆಗಳೆಂದರೆ ಚಿಕ್ಕ ಕೃಷ್ಣರಾಜ ಒಡೆಯರು. ಈರು ಆಡಳಿತದ ಕೊನೆಯಲ್ಲಿ ಮೈಸೂರಿನ ಆಡಳಿತವನ್ನು ಹೈದರಾಲಿಯು ವಹಿಸಿಕೊಂಡನು. ರಾಜ ಒಡೆಯರ ಕಾಲದಲ್ಲಿ ಅವರು ತಿರುಮಲೆಯ ಆಲಯಕ್ಕೆ ಸಮರ್ಪಿಸಿದ್ದ ಚಿನ್ನದ ಪಾತ್ರೆಗಳೂ, ಮುತ್ತಿನ ಛತ್ರಿಯೂ ಜೀರ್ಣವಾಗಿ ಕೆಲಸಕ್ಕೆ ಬಾರದ ಸ್ಥಿತಿಯಲ್ಲಿವೆ ಯೆಂದು ಕೇಳಿ ತಿಳಿದ ಈತ ತಾನೇ ಸ್ವತಃ ಪರೀಕ್ಷೆ ನಡೆಸಿ ಅವು ನಿಜವಾಗಿಯೂ ಕೆಲಸಕ್ಕೆ ಬಾರದಷ್ಟು ಒಡೆದಿವೆ ಯೆಂದು ತೀರ್ಮಾನಿಸಿ ಬಹು ವ್ಯಯದಿಂದ ಅವುಗಳ ಮೂಲರೂಪದ ವಸ್ತುಗಳನ್ನು ತಯಾರಿಸಿ ಆಲಯಕ್ಕೆ ನೀಡಿ ತನ್ನ ಹಿಂದಿನ ರಾಜನು ನೀಡಿದ್ದ ದಾನಗಳನ್ನು ಪುನರ್ನವೀಕರಿಸಿದ. ಇಷ್ಟರಿಂದಲೇ ತೃಪ್ತನಾಗದೇ ತನ್ನದೇ ಆದ ಹಲವು ಸೇವೆಗಳನ್ನೂ ಪ್ರವೇಶಗೊಳಿಸಿ, ಹಲವು ಕಾಣಿಕೆಗಳ ಸಮರ್ಪಣೆ ಮಾಡಿದನು. ಆತ ಪುನರ್ನವೀಕರಿಸಿದ ವಸ್ತುಗಳಲ್ಲಿ ಎರಡು ಚಿಕ್ಕ ಬಂಗಾರದ ಕೊಡೆಗಳು ಚಿಕ್ಕದೇವರಾಜ ಒಡೆಯರಿಂದನೀಡಲ್ಪಟ್ಟವುಗಳೆಂದು ಹೇಳಿದರೂ, ಒಡೆಯರು ನೀಡುವ ಪಟ್ಟಿಯಲ್ಲಿ ಈ ಉಲ್ಲೇಖ ಇಲ್ಲ. ತನ್ನದೇ ಆದ ಸಮರ್ಪಣೆಯಲ್ಲಿ ಹಲವು ಬಂಗಾರದ ಬೆಳ್ಳಿಯ ಪೂಜಾ ಪಾತ್ರೆಗಳೇ ಅಲ್ಲದೇ, ಅತ್ಯಮೂಲ್ಯವಾದ ಉಡುಪು ತೊಡವುಗಳನ್ನೂ ನೀಡುವುದರೊಂದಿಗೆ ದಿನವೂ ಪೂಜೆಯಾದ ಮೇಲೆ ಭಕ್ತರಲ್ಲಿ ಹಂಚುವ ಪ್ರಸಾದಗಳನ್ನು ತುಂಬಿಸಲು ಎರಡು ದೊಡ್ಡ ಬಂಗಾರದ ಕೊಳಗದಂತಹ ಪಾತ್ರೆಗಳನ್ನೂ ನೀಡಿದನು.

ಇತರ ಕ್ಷೇತ್ರಗಳಲ್ಲಿರುವಂತೆ ತಿರುಮಲೆಯಲ್ಲಿಯೂ ಕರ್ನಾಟಕದ ಮುಜರಾಯಿ ಇಲಾಖೆಯ ವಿಭಾಗ ಕೆಲಸಮಾಡುತ್ತಿದ್ದು ಇವರಲ್ಲಿ ಹಲವಾರು ಅಮೂಲ್ಯದ ದಾಖಲೆಗಳಿವೆ. ಇಲ್ಲಿನ ದಾಖಲಾತಿಗಳು 1730 ರ ಹಿಂದೆ ಹೋಗುವುದಿಲ್ಲ. ಎಂದರೆ ದೊಡ್ಡ ಕೃಷ್ಣರಾಜ ಒಡೆಯರ ಆರುನೂರು ಕಂಠೀರವ ವರಹಗಳ ಕೊಡುಗೆಗೇ ನಿಲ್ಲುತ್ತವೆ. ಇಲ್ಲಿರುವ ದಾಖಲೆಗಳ ಪ್ರಕಾರ ಪ್ರಸಿದ್ಧರಾದ ನಾಲ್ವಡಿ ಕೃಷ್ಣರಾಜ ಒಡೆಯರ ತಾತಂದಿರಾದ ಮುಮ್ಮಡಿ ಕೃಷ್ಣರಾಜ ಒಡೆಯರು, ತಮ್ಮ ಹಿಂದಿನ ದೊರೆಗಳು ಮಾಡಿದ ದಾನಗಳು ಮುಂದುವರೆಯುವಂತೆ ಮಾಡಿದ್ದೇ ಅಲ್ಲದೆ ತಮ್ಮದೇ ಆದ ಹಲವಾರು ಹೊಸದಾನಗಳನ್ನು ನೀಡಿ, ಅಖಂಡ ದೀಪದ ಏರ್ಪಾಡಿಗೆ ಶಾಶ್ವತವಾದ ವ್ಯವಸ್ಥೆಯನ್ನು ಮಾಡಿದರು.

ಮೈಸೂರು ಸರ್ಕಾರ 1738 ರಲ್ಲಿ ಹೊರಡಿಸಿದ ಒಂದು ನಿರೂಪದ ಪ್ರಕಾರ 1732 ರಲ್ಲಿ ವಾರ್ಷಿಕ 600 ವರಹಗಳ ಸಾಮಾನ್ಯ ವೆಚ್ಚಗಳ ಜೊತೆಗೆ, ಅಧಿಕವಾಗಿ ವಾರ್ಷಿಕ ಗಜವಾಹನ ಉತ್ಸವದ ಪ್ರಯುಕ್ತ 156 ಕಂಠೀರವ ವರಹಗಳ ಅನುದಾನವನ್ನು ನೀಡಲಾಗಿದೆ. ನಂತರದ ನಿರೂಪದ ಕಾಲ 1804. ಇದು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಹೊರಬಂದಿರಬೇಕು. ಇದರಲ್ಲಿ ತಿರುಮಲೆಯಲ್ಲಿ ನೀಡಿದ 117 ವರಹಗಳ ಹೆಚ್ಚಿನ ದಾನದ ಉಲ್ಲೇಖವಾಗಿದೆ. ಭೂಮಿಯ ಸಾಗುವಳಿಯನ್ನು ವಾರ್ಷಿಕ ಆದಾಯಕ್ಕೆ ಕೊರತೆ ಬಾರದಂತೆ ನೋಡಿಕೊಳ್ಳಬೇಕು ಎಂಬ ಎಚ್ಚರಿಕೆಯ ಮಾತುಗಳೂ ಇವೆ. 1815 ರಲ್ಲಿ ತಿರುಮಲೆಯ ದಾನದ ವ್ಯವಹಾರಗಳನ್ನು ನೋಡಿಕೊಳ್ಳಲು ಒಬ್ಬ ಶಿರಸ್ತೇದಾರನ ನೇಮಕಾತಿಯ ಆಜ್ಞೆಯಿದ್ದು, ತಿರುಮಲೆಯ ಆಲಯದಲ್ಲಿ ಪೂಜಾದಿಗಳು ಉತ್ಸವಗಳು ಸರಿಯಾಗಿ ನಡೆಯುತ್ತಿವೆಯೋ ಇಲ್ಲವೋ ಎಂಬುದನ್ನು ನೋಡಿ ವರದಿಯನ್ನು ಕಳುಹಿಸಬೇಕೆಂಬ ಆದೇಶವಿದೆ. 1819 ರಲ್ಲಿನ ಒಂದು ನಿರೂಪವು ಇಲ್ಲಿನ ಆಡಳಿತಗಾರನು ಬ್ರಹ್ಮೋತ್ಸವಗಳಿಗೆಂದು ಪರಕಾಲಮಠದ ಸ್ವಾಮಿಗಳು ಕಳುಹಿಸಿದ ವಸ್ತುಗಳನ್ನು ಸತ್ರದಶಿರಸ್ತೇದಾರನಿಗೆ ವರ್ಗಾಯಿಸಿದ್ದನ್ನು ಅನುಮೋದಿಸಿದ ವಿಷಯವಾಗಿದೆ. ಆಡಳಿತಗಾರನು ತನ್ನದೇ ಆದ ಮೊಹರವನ್ನು ಹೊಂದಿರಬೇಕೆಂದೂ ಈ ಆಜ್ಞೆ ತಿಳಿಸುತ್ತದೆ. 1820 ರ ಒಂದು ಸಂದೇಶವು ಬೆಂಗಳೂರಿನ ಫೌಜು ಕಚೇರಿಯು ಯಾತ್ರಿಕರ ಭೋಜನಕ್ಕೆಂದು ಸಲ್ಲಿಸಿದ ನಾಲ್ಕು ಸಾವಿರ ರೂಪಾಯಿಗಳ ಕುರಿತು ಹೇಳುತ್ತದೆ. ಫೌಜುಕಚೇರಿ ಯೆಂದರೆ ಬೆಂಗಳೂರಿನಲ್ಲಿದ್ದ ಸೈನ್ಯದ ವಿಭಾಗೀಯ ಅಧಿಕಾರದ ಕಚೇರಿ. ತಿರುಮಲೆಯ ಶಿರಸ್ತೇದಾರನು ಲೆಕ್ಕ ಪತ್ರಗಳನ್ನು ತೆಗೆದುಕೊಂಡು ಮೈಸೂರಿಗೆ ಬರುವಾಗ ಹಾಗೂ ಹಿಂದಿರುವಾಗ ದಾರಿಯಲ್ಲಿನ ಅಧಿಕಾರಿಗಳು ಅವನಿಗೆ ಎಲ್ಲರೀತಿಯ ಅಶನವಸತಿ ಗೌರವಗಳನ್ನೂ ಗಮನಿಸಬೇಕೆಂದು ರಾಜಾಜ್ಞೆ ನಿರೂಪವು ಹೊರಟಿದ್ದನ್ನು

ಮತ್ತೊಂದು ದಾಖಲೆ ತಿಳಿಸುತ್ತದೆ. 1823 ರ ಒಂದು ಆಜ್ಞೆಯು ತಿರುಮಲೆಯ ಹಲವು ಕಟ್ಟಡಗಳ ಜೀರ್ಣೋದ್ಧಾರಕ್ಕಾಗಿ ಆಡಳಿತಗಾರನು ತನ್ನ ಒಬ್ಬ ಮನುಷ್ಯನನ್ನು ತಿರುಮಲೆಯ ಸತ್ರದ ಪಾರುಪತ್ಯದಾರನಾಗಿ ನೇಮಕಾತಿ ಹೊಂದುವಹಕ್ಕು ಹಿಸಬೇಕೆಂದು ತಿಳಿಸುತ್ತದೆ. ಹೀಗಾಗಿ 18 ನೇ ಶತಮಾನದ ಕೊನೆಯಿಂದ 19 ನೇ ಶತಮಾನದ ಮೊದಲ ಭಾಗದವರೆಗೆ ಮೈಸೂರು ಅರಸರ ಆಡಳಿತ ಕಾಲದಲ್ಲಿ ತಿರುಮಲೆಯ ದಾನ ದೇಣಿಗೆಗಳ ವ್ಯವಹಾರ ಸುವ್ಯವಸ್ಥಿತವಾಗಿ ನಡೆದಿದ್ದಿತು.

ಈಸ್ಟ್ ಇಂಡಿಯಾ ಕಂಪನಿ, ಆರ್ಕಾಟು ನವಾಬರು, ನಿಜಾಮ, ಮರಾಠರ ಗೊಜಲು ಗೊಜಲಾದ ವ್ಯವಹಾರದಲ್ಲಿ ಹಲವುಕಡೆ ಮೈಸೂರಿನ ಸಂಬಂಧ ಮುಡಿ ಹಾಕಿಕೊಂಡಂತೆ ಕಂಡುಬರುತ್ತದೆ. ಯುದ್ಧಗಳ ನಡುವೆಯೂ ಮೈಸೂರು ತಿರುಮಲೆ ವ್ಯವಹಾರಗಳಲ್ಲಿ ತೀವ್ರವಾದ ಆಸಕ್ತಿಯನ್ನು ತೋರಿಸಿದ್ದಿತು. ಹೀಗಾಗಿಯೇ ಮೈಸೂರಿನ ಆಡಳಿತವನ್ನು ಜನಮಾನಸ ಪದೇಪದೇ ಗುರುತಿಸಿಕೊಳ್ಳುವಷ್ಟು ಹಿರಿದಾದ ಸೇವೆಯನ್ನು ಅವರು ಮಾಡಿರಬೇಕು. ಇಂತಹದೊಂದು ದೊಡ್ಡ ಉದಾಹರಣೆಯೆಂದರೆ ಅಲಿಪಿರಿಯ ದಾರಿಯಲ್ಲಿ ಕಂಡು ಬರುವ ಗೋಪುರಗಳಲ್ಲಿ ಎರಡು ಮಧ್ಯದಲ್ಲಿ ಹಾಗೂ ಮೇಲಿನದು ಮಟ್ಲಕುಮಾರ ಅನಂತರಾಯ ನಿರ್ಮಿತವಾದವು ಉಳಿದವು ನರಸಿಂಹ ನಿರ್ಮಿತವಾದ ಗೋಪುರವನ್ನು ಮೈಸೂರು ಗೋಪುರವೆಂದೇ ಜನ ಕರೆಯುತ್ತಿದ್ದರು. ಗೋಪುರಗಳ ಮೇಲಿನ ಶಾಸಗಳು ಅವುಗಳ ನಿರ್ಮಾಪಕರ ಹೆಸರುಗಳನ್ನು ಹೇಳುತ್ತಿದ್ದರೂ ಜನ ಹೀಗೆಂದೇ ಗುರುತಿಸಲು ಕಾರಣ ಮೈಸೂರರಸರು ಮೆಟ್ಟಲಿನ ಮಾರ್ಗದ ಜೀರ್ಣೋದ್ಧಾರದಲ್ಲಿಯೂ ಕೆಲಸ ಮಾಡಿದ್ದಿರ ಬಹುದು. ಏನೇ ಆದರೂ ಈಚಿನ ಚರಿತ್ರೆ ಕಾಲದಲ್ಲಿ ಮೈಸೂರರಸರು ತಿರುಪತಿಗೆ ಎಲ್ಲರೀತಿಯ ಸೇವೆಗಳನ್ನು ಮಾಡಲು ಎಂದೂ ಸಿದ್ಧರಿದ್ದರೆಂಬುದು ಸತ್ಯವಾದ ಮಾತು.

## ಅಧ್ಯಾಯ - 18

# ಈಸ್ಟ್ ಇಂಡಿಯಾ ಕಂಪನಿ ಆಡಳಿತದಲ್ಲಿ ಆಲಯ

**(ಮೆಕೆಂಜಿ ಹಸ್ತಪ್ರತಿಗಳಿಂದ ಪಡೆದ ಮಾಹಿತಿ)**

### 1. ಪೀಠಿಕೆ :

ಆರ್ಕಾಟು ನವಾಬನ ಮೂಲಕ 1748 ರಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಕರ್ನಾಟಕದ ಹಲವು ಭಾಗಗಳನ್ನು ಶ್ರೀ ವೆಂಕಟೇಶ್ವರಸ್ವಾಮಿ ಆಲಯದ ಆದಾಯ ಮಸೂಲಾತಿಯ ಹಕ್ಕಿನೊಡನೆ ಪಡೆಯಿತು. 1799 ರಲ್ಲಿನ ನಾಲ್ಕನೆ ಮೈಸೂರು ಯುದ್ಧದ ನಂತರ ಹಾಗೂ 1795ರಲ್ಲಿ ಮಹಮದಾಲಿಯ ಮರಣ ಮತ್ತು 1801 ರಲ್ಲಿ ಅವನ ಮೊದಲ ಮಗನ ಮರಣದ ನಂತರ ಮಹಮದಾಲಿಯ ಎರಡನೆಯ ಮಗ ಆಜೀಮ್‌ಉಲ್ ಉಮ್ರನು ನಿಗದಿಯಾದ ವಾರ್ಷಿಕ ಪಿಂಛಣಿಯ ಪ್ರತಿಯಾಗಿ ಇಡೀ ಕರ್ನಾಟಕದ ಆಡಳಿತವನ್ನು ಕಂಪನಿಯ ವಶಕ್ಕೆ ಒಪ್ಪಿಸಿದಾಗ ಆಲಯದ ಆಡಳಿತವನ್ನೂ ಪಡೆಯುವಂತಾಯಿತು.

ಮೆಕೆಂಜಿ ಬರೆದಿರುವ ಹಸ್ತಪ್ರತಿಯಿಂದ ಹಲವಾರು ಮಾಹಿತಿಗಳನ್ನು ಹೆಕ್ಕಿ ಈ ಕೆಳಗೆ ನೀಡಿರುವಂತೆ ಕೊಡಲಾಗಿದೆ. ಹಸ್ತಪ್ರತಿಯು ಮೂಲ ಆಂಗ್ಲಭಾಷೆಯ ವ್ಯಾಕರಣ ಕಾಗುಣಿತಗಳನ್ನು ತಿದ್ದದೆ ಹಾಗೆಯೇ ದಾಖಲು ಮಾಡಲಾಗಿದೆ.

### 2. ಕಂಪನಿಯ ಅಧೀನದಲ್ಲಿ ತಿರುಮಲೆಯ ಆಲಯ

1751ರ ನಂತರ ಪ್ರತಿವರ್ಷವೂ ಹಣವನ್ನು ವಸೂಲಿ ಮಾಡಲಾಯಿತು ಎಂದು ತೋರಿಸಲು ದಾಖಲೆ ಗಳಿವೆ. ಈ ವಸೂಲಾತಿಗಾಗಿ ಏರ್ಪಡಿಸಿದ್ದ ಪದ್ಧತಿಗಳ ಬಗ್ಗೆಯೂ, ಕಡೆಗೆ ಆರ್ಕಾಟು ನವಾಬನು, ಆಲಯವನ್ನೂ ಅದರ ಭೂಮಿ ಕಾಣಿ ಆಸ್ತಿ ಐಶ್ವರ್ಯಗಳನ್ನೂ ಆಡಳಿತ ವ್ಯವಹಾರಗಳನ್ನೂ ಹೇಗೆ ಆಂಗ್ಲರಿಗೆ ಒಪ್ಪಿಸಿಕೊಟ್ಟ ಎಂಬ ಬಗ್ಗೆಯೂ ದಾಖಲೆಗಳಿವೆ. ವಾರ್ಷಿಕವಾಗಿ ಸಂಗ್ರಹವಾಗುತ್ತಿದ್ದ ಅಪಾರವಾದ ಧನರಾಶಿಯಿಂದಾಗಿ ಫ್ರೆಂಚರೂ ಈ ಆಲಯದ ಪ್ರಭುಗಳಾಗಲು ಆಸೆಪಡುವಂತೆ ಆಗಿದ್ದಿತು.

ಈ ಸಂಬಂಧದಲ್ಲಿ ಆನಂದರಂಗ ಪಿಳ್ಳೆಯು ತನ್ನ ದಿನಚರಿಯಲ್ಲಿ ಬರೆದಿರುವಂತೆ ಧನವಸೂಲಾತಿಯ ಗುತ್ತಿಗೆದಾರನಾಗಿ ನೆಹು ವಾದ ಶ್ರೀನಿವಾಸಾಚಾರಿ ವಾರ್ಷಿಕ ಕಂತುಗಳನ್ನು ತುಂಬದೆ ತಲೆಮರೆಸಿಕೊಂಡು ಓಡಿಹೋದನೆಂಬುದೂ, ಅವನ ಸ್ಥಳದಲ್ಲಿ ವಾಸುದೇವಾಚಾರಿಯನ್ನು ಮೂರು ವರ್ಷಗಳಿಗಾಗಿ 1750-51 ರಿಂದ ಪ್ರತಿವರ್ಷವೂ 47000 ಪಗೋಡಗಳನ್ನೂ ಬಾಕಿ ಬಿದ್ದ ಹಣಕ್ಕಾಗಿ ವರ್ಷಕ್ಕೆ ಒಂದು ಲಕ್ಷ ಪಗೋಡ ಗಳನ್ನೂ ನೀಡುವಂತಹ ಕರಾರಿನಡಿಯಲ್ಲಿ ನಿಯಮಿಸಲಾಯಿತು ಎಂಬುದೂ ಪೂರ್ಣವಾದ ಸತ್ಯವಲ್ಲ.

ವಾಸುದೇವಾಚಾರಿ ಯಾವ ಒಪ್ಪಂದಕ್ಕೂ ಸಹಿ ಹಾಕಲಿಲ್ಲ. ಅಂದಿನ ರಾಜಕೀಯ ಪರಿಸ್ಥಿತಿ ಎಷ್ಟು ಅನಿಶ್ಚಿತತೆಯಿಂದ ಕೂಡಿದ್ದಿತೆಂದರೆ ಆರ್ಕಾಟು ನವಾಬನಾಗಿ ಚಾಂದ್ ಸಾಹೇಬ ಬರುವನೋ ಅಥವಾ ಮಹಮ್ಮದಾಲಿಯೇ ಮುಂದುವರೆಯುವನೊ ಎಂಬ ಬಗ್ಗೆ ಶ್ರೀನಿವಾಸಾಚಾರಿಗೆ ನಿಶ್ಚಯವಿರಲಿಲ್ಲ. ಹೀಗಾಗಿ ಅವನಿಗೆ ತೋಚಿದ ಅತ್ಯುತ್ತಮವಾದ ದಾರಿಯೆಂದರೆ ಆದಾಯವನ್ನು ಜಮಮಾಡದೆ ತಡೆ ಹಿಡಿಯುವುದೇ ಆಗಿದ್ದಿತು. ವಾಸುದೇವಾಚಾರಿಯು ಒಂದು ರೀತಿಯ ತೆರೆಯಂತೆ ಇದ್ದು ತೆರೆಯ ಮರೆಯಲ್ಲಿ ಶ್ರೀನಿವಾಸಾಚಾರಿಯೇ ನಿಜವಾದ ಗುತ್ತಿಗೆದಾರನಾಗಿದ್ದನೆಂದು ತೋರುತ್ತದೆ. ಸೇಂಟ್ ಚಾರ್ಜ್ ಕೋಟೆಯಲ್ಲಿರುವ 1752 ರ ಜನವರಿ 2ನೇ ತಾರೀಖಿನ ಒಂದು ದಾಖಲಾತಿಯ ಪ್ರಕಾರ 'ಶನವಾಸ ಅರ್ಚಲೊ' ಯು ತಿರುಪಟ್ಟಿಯ ಮಿಕ್ಕ ಹಣವನ್ನು ''ಬೋಕಂಚ್ರೆ ಕಸಿದಾಸನಿಗೆ'' ನೀಡುವುದಾಗಿ ಮಾತು ಕೊಟ್ಟಿದ್ದಾನೆ. ದೇಶದ ಒಳಗಿನ ಏಳು ಬೀಳುಗಳಿಂದಾಗಿ ''ಬುಕ್ಕಂಜಿ''ಯು ಜನರು

"ವೆಂಕಟಗಿರಿ"ಗೆ ಹೊರಟು ಬಿಟ್ಟದ್ದರಿಂದಾಗಿ ಸಂದಾಯ ತಡವಾಯಿತೆಂದು ಕ್ಷಮೆ ಕೇಳುತ್ತಾನೆ. 1752ರ ನವಂಬರ್ 6ನೇತಾರೀಖಿನ ಹೊತ್ತಿಗೆ ನಿರ್ದೇಶಕ ಮಂಡಳಿಗೆ ಮಾಹಿತಿ ನೀಡಿದ ಅಧ್ಯಕ್ಷನು ತಿರುಪತಿಯಿಂದ ರೂ. 41250/-, 10000 ಪಗೋಡಗಳ ಜಮಾವಣೆ ಯಾಗಿದೆಯೆಂದೂ ಆರ್ಕಾಟು ನವಾಬ ಮಹಮದಾಲಿಖಾನನ ಖಾತೆಗೆ ಸಂದಾಯ ಮಾಡಲಾಗಿದೆಯೆಂದೂ, ತಿಳಿಸಿದ್ದಾನೆ. ಕಾಲಾಂತರದಲ್ಲಿ ಇಡೀ ಆದಾಯ ಆಂಗ್ಲರ ವಶಕ್ಕೇ ಸೇರಿದುದಾಗಿ ಆಲಯದಲ್ಲಿ ಬಂದ ಪ್ರತಿಯೊಂದು ರೂಪಾಯಿಯನ್ನೂ ಜಾಗರೂಕತೆಯಿಂದ ಲೆಕ್ಕಹಾಕಿ ವಸೂಲು ಮಾಡಲಾಗುತ್ತಿದ್ದಿತು. ಇವುಗಳನ್ನು ವರ್ಷಕ್ಕೆ ಮೂರು ಮುಖ್ಯ ಕಿಸ್ತೆಗಳಲ್ಲಿ ಪಡೆಯಲಾಗುತ್ತಿದ್ದಿತು. ಇವುಗಳನ್ನು ಸೆಪ್ಟಂಬರ್, ಡಿಶೆಂಬರ್, ಜೂನ್ ಕಂತುಗಳೆಂದು ಕರೆಯಲಾಗುತ್ತಿದ್ದಿತು. (ಬ್ರಹ್ಮೋತ್ಸವ, ಮುಕ್ಕೋಟಿ ಹಾಗೂ ಅನಿವರ ಆಸ್ಥಾನಗಳ ಲೆಕ್ಕಾಚಾರವೆನ್ನಬೇಕು.) ವಸೂಲಾತಿಯ ಪಟ್ಟಿ ಹೀಗಿದೆ.

**ವಸೂಲಾತಿ:**

| ವರ್ಷ | ಪಗೋಡ | ರೂಪಾಯಿ |
|---|---|---|
| 1753 - 54 | 56432 | 92000 |
| 1754 - 55 | 59124 | 58841 |
| 1755 - 56 | 52665 | 53235 |
| 1756 - 57 | 45296 | 51240 |
| 1757 - 58 | 45245 | 50866 |

ಕ್ಯಾಪ್ಟನ್ ಪೋಲಿಯರನು ಆರ್ಕಾಟು ನವಾಬನನ್ನು ತನ್ನ ಸೈನ್ಯದೊಡನೆ ಕರೆದೊಯ್ದು ಆರ್ಕಾಟಿಗೆ ವೈಭವದಿಂದ ಬಿಟ್ಟು ಬಂದನೆಂದು ಪಿಗೋಟ್‌ನು 1755 ರ ಅಕ್ಟೋಬರ್ 27 ರಂದು ಕಂಪನಿಯ ಗಣ್ಯ ಸಮಿತಿಗೆ ವರದಿ ಮಾಡಿದ್ದಾನೆ. ಕಿರ್ಕ್ ಪ್ಯಾಟ್ರಿಕನು ಆರ್ಕಾಟು ಪಾಳೆಯಗಾರರನ್ನು ಅಡಗಿಸಿದ. ಬಂಗಾರು ಯಾಚಮನಾಯಕನು ವಾರ್ಷಿಕ ಕಂದಾಯ 1,40,000 ರೂಪಾಯಿಗಳಿಗೂ, ಬೊಮ್ಮರಾಜನು ವರ್ಷಕ್ಕೆ 2,37,000 ರೂಪಾಯಿಗಳನ್ನೂ ಒಪ್ಪಿದರು.

ಮದರಾಸಿನ ಗಣ್ಯ ಸಮಿತಿಯು ಎಫ್.ಎಸ್.ಜಿ. ಯ ಗೂಢಾಚಾರ ಮಂಡಲಿಗೆ ಮಾಡಿದ ವರದಿ ಹೀಗಿದೆ-

"30 ನವಂಬರ್ 1756 - ನವಾಬನು ಪ್ರಸಕ್ತ ವರ್ಷದಲ್ಲಿ ಕಂಪನಿಗಾಗಿ ಆರ್ಕಾಟು ರಾಜ್ಯದಿಂದ 8 ಲಕ್ಷ ರೂಪಾಯಿಗಳನ್ನು ನಿಗದಿಗೊಳಿಸಿದ್ದಾನೆ. ಬೊಮ್ಮರಾಜಪುರದ ಪಾಳಯಗಾರನು 7994 ಪಳ್ಳಿಪಟ್ಟು ಪಗೋಡಗಳನ್ನು ನೀಡಿದ್ದು, ಮುಂದಿನ ನಾಲ್ಕು ತಿಂಗಳಿನಲ್ಲಿ 70,000 ರೂಪಾಯಿಗಳನ್ನು ನೀಡುವವನಿದ್ದಾನೆ. ತಿರುಪತಿಯ ಗುತ್ತಿಗೆದಾರನು ನಿಯತವಾಗಿ ಮೂರು ಕಂತುಗಳಲ್ಲಿ ವಾರ್ಷಿಕ ಗುತ್ತಿಗೆಯ ಮೊತ್ತವಾದ 45000 ಸಾದತ್ ಉಲ್ಲಾಖಾನ್ ಪಗೋಡಗಳನ್ನು (ಇಂದಿನ ಪಗೋಡಕ್ಕಿಂತ 4 ಅಥವಾ 5 ಶತಾಂಶ ಉತ್ತಮ) ಮತ್ತು 5,20,000 ಉತ್ತರ ಆರ್ಕಾಟು ರೂಪಾಯಿಗಳನ್ನು ಸಲ್ಲಿಸಿದ್ದಾನೆ".

ತಿರುಪತಿಯ ಮೇಲೆ ದಂಡೆತ್ತಿದ ನಜೀಬುಲ್ಲಾಖಾನನ ಸೈನ್ಯವನ್ನು ತಡೆಯಲು ಕಾಂಜೀವರದಿಂದ ಉತ್ತರಕ್ಕೆ ಹೊರಟಿದ್ದ ಪೋಲಿಯರನನ್ನು - ಸೈನ್ಯಸಮೇತ ಮದರಾಸಿನ ಮೇಲೆರಗಿದ ಬಲವಾದ ಫ್ರೆಂಚರನ್ನು ಎದುರಿಸಬೇಕೆಂದು ಹಿಂದಕ್ಕೆ ಕರೆಯಲು ಆಂಗ್ಲರು ಒತ್ತಡದಲ್ಲಿ ಸಿಕ್ಕಿಬಿದ್ದರು ಎಂಬುದನ್ನು ಸೂಚಿಸುವ 1757 ರ ಅಕ್ಟೋಬರ್ 13 ರ ದಾಖಲೆ ಇದೆ. ನಂತರದ ನವಾಬನ ದಾಖಲೆಗಳಿಂದ ಪಡೆದ ಮಾಹಿತಿಗಳನ್ನು ಕೆಳಗೆ ನೀಡಲಾಗಿದೆ. "10 ನವಂಬರ್ 1757 - ನವಾಬನ ಬಾಕಿಯು 1756ರ ಏಪ್ರಿಲ್‌ನಲ್ಲಿ 13,71,906 ಇದ್ದದ್ದು ಜೂನ್ 30ರ ಹೊತ್ತಿಗೆ ಈ ಮೊತ್ತ 11,91,324 ಪಗೋಡಗಳಿಗೆ ಇಳಿದಿದ್ದಿತು. ಅವನು ತಿರುಪತಿಯ

ಕಂದಾಯವನ್ನೂ, ತಾನು ಗುತ್ತಿಗೆಗೆ ನೀಡಿದ್ದ ಭೂಮಿಗಳೆಲ್ಲದರ ಗುತ್ತಿಗೆಯನ್ನೂ ಒಟ್ಟಿಗೆ ಕಟ್ಟಿದ್ದೇ ಹೀಗಾಗಲು ಕಾರಣ. 2 - 15 ಅಕ್ಟೋಬರ್ 1758 - ತಿರುಪತಿಯ ಗುತ್ತಿಗೆ ಹಣ ನಿಖರವಾಗಿ ಜಮೆಯಾಗುತ್ತಿದೆ. ಫ್ರೆಂಚರು ಇದನ್ನು ತಡೆಯಲಾರರು ಎಂದು ಭಾವಿಸಲಾಗಿದೆ.'' ಮೇಲಿನ ದಾಖಲೆಗೆ ಕೊನೆಯ ಒಂದು ಮಾತು ಸೇರಿಸಲಾಗಿದೆ. ''ಫ್ರೆಂಚರು - ಆರ್ಕಾಟು, ತಿರುಪತಿ, ಕಾಂಚೀಪುರಂ ಗಳನ್ನು ವಶಪಡಿಸಿಕೊಂಡಿದ್ದಾರೆ''.

ವಿವಿಧ ಪ್ರಾಂತ್ಯಗಳ ಕಂದಾಯವನ್ನು ಅಂದಾಜಿಸುವ 1759 ರ ಜುಲೈ 28 ರಲ್ಲಿ ಪಿಗೋಟನು ಬರೆದ ಕಾಗದದಲ್ಲಿ ಹೀಗಿದೆ - ''ಇತರ ಆದಾಯದ ಬಾಬ್ತುಗಳನ್ನು ಹೀಗೆ ಹೇಳಬಹುದು. ತಿರುಪತಿ - 2,50,000, ತ್ರಿಪಸೂರು - 2,00,000, ಕಾಂಜೀವರಂ - 1,50,000''.

ಇದರಿಂದಾಗಿ ಆಂಗ್ಲರ ಕಂಪನಿಯು ವಾರ್ಷಿಕ 2.5 ಲಕ್ಷ ರೂಪಾಯಿಗಳನ್ನು ತಿರುಪತಿಯ ಆಲಯ ಹಾಗೂ ಅದಕ್ಕೆ ಸೇರಿದ ಭೂಮಿಗಳಿಂದ ಪಡೆಯುತ್ತಿದ್ದಿತೆಂದು ಎಣಿಸುವುದು ಸೂಕ್ತವಾಗಿದೆ.

3 ಜನವರಿ, 11 ಮತ್ತು 24 ಫೆಬ್ರವರಿ, ಮಾರ್ಚ್ 23 ರಂದು ಬರೆದಿರುವ ಬರಹಗಳ ಪ್ರಕಾರ 1751 - 52 ರಲ್ಲಿ ಶ್ರೀನಿವಾಸಾಚಾರಿಯೇ ಆಲಯಾದಾಯದ ಗುತ್ತಿಗೆದಾರನಾಗಿದ್ದಂತೆಯೂ 1753 ರಲ್ಲಿಯೂ ಸಹ ಈತನೇ ಗುತ್ತಿಗೆದಾರನಾಗಿ ಮುಂದುವರೆದಂತೆಯೂ ತಿಳಿದುಬರುತ್ತದೆ. ಗುತ್ತಿಗೆಯನ್ನು ಪ್ರತಿವರ್ಷ ನವೀಕರಿಸುತ್ತಿದ್ದರು. 1751 ರಲ್ಲಿ ದಿವಾನ್ ಸಂಪತ್‌ರಾವ್ ತಿರುಪತಿಯ ಹಣದ ಜಮಾಬಂದಿಯಲ್ಲಿ ಲಕ್ಷ್ಯವಹಿಸಿ ಕೆಲಸಮಾಡದೆ ಗವರ್ನರಿಗೆ ಸರ್ಕಾರಿ ಹುಂಡಿಗಳ ಮೂಲಕ ಈ ಹಣವನ್ನು ತಲುಪಿಸುವಲ್ಲಿ ತಡಮಾಡಿದನೆಂದು ಆಂಗ್ಲರು ಆಕ್ಷೇಪಿಸಿದರು. ಆಗ ನವಾಬನು ಈ ಒಂದು ವಿಚಾರ ತನ್ನ ದೇಶದ ರಕ್ಷಣೆಯ ವಿಷಯದಲ್ಲಿ ಪ್ರಭಾವ ಬೀರುವುದರಿಂದಾಗಿ ಪ್ರತ್ಯೇಕ ಶ್ರದ್ಧೆವಹಿಸಿ ಕಾಲಕಾಲಕ್ಕೆ ಹಣ ಸಂಗ್ರಹವಾಗಿ ಜಮಾ ಆಗುವಂತೆ ನೋಡಿಕೊಳ್ಳಬೇಕೆಂದು ದಿವಾನ ಸಂಪತ್ ರಾವ್‌ಗೆ ಪ್ರತ್ಯೇಕವಾದ ಆಜ್ಞೆಯನ್ನು ಕಳುಹಿಸಿದನು. ಚಂದ್ರಗಿರಿಯಲ್ಲಿ ಆಡಳಿತ ನಡೆಸಿದ್ದ ಬಾಬ್‌ಖಾನನು - ಈತ ನವಾಬನ ಬಂಧುವಾಗಿದ್ದು - ಧನವನ್ನು ಸಂಗ್ರಹಿಸ ಬೇಕಾಗಿದ್ದಿತು. 1753 ರ ಆಗಸ್ಟ್ 13 ರಂದು ಆಂಗ್ಲ ಗವರ್ನರನು ಇವನಿಗೆ ನಿರೂಪ ಕಳುಹಿಸಿದ. ''ತಿರುಪತಿಯ ಹಣವನ್ನು ಕಳುಹಿಸಲು ನಮ್ಮ ಜನರಿಗೆ ಆಜ್ಞೆ ಮಾಡುತ್ತೇನೆ ಎಂದು ನೀವು ಹೇಳಿದ್ದೀರಿ. ಅವರು ಹಣವನ್ನು ಪಡೆಯುವ ಹಕ್ಕು ಹೊಂದಿರುವರೆ ಎಂದು ತಿಳಿದಿಲ್ಲ. ಎಷ್ಟು ಬಾರಿ ನೀವು ನನ್ನನ್ನು ನಿಮ್ಮ ಸಹೋದರನೆಂದು ಕರೆದು ನಿಮ್ಮಿಂದಾಗಿಯೇ ನಮ್ಮ ನವಾಬನು ಕ್ಷೇಮವಾಗಿದ್ದಾನೆ' ಎಂದು ಹೇಳಿಲ್ಲ''. ಅಬ್ದುಲ್ ಬಾಬ್‌ಖಾನನು ಈ ಕಾಗದಕ್ಕೆ 1753 ರ ಸೆಪ್ಟಂಬರ್ 7 ರಂದು ಉತ್ತರ ಬರೆದ - 'ತಿರುಪತಿಯ ಧನವನ್ನು ಕಳುಹಿಸಿಕೊಡಿ ಎಂದು ತಾವು ಅಪ್ಪಣೆ ಕೊಡಿಸಿದ ಕಾಗದವನ್ನು ನಾನು ಸಂತೋಷದಿಂದ ಸ್ವೀಕರಿಸಿದ್ದೇನೆ.' 1753 ರ ಜುಲೈ ತಿಂಗಳಲ್ಲಿ ಖಾನನು ಐವತ್ತು ಸಾವಿರ ರೂಪಾಯಿಗಳನ್ನು ಪಡೆದು ನುಂಗಿದ್ದ. ಇದರಿಂದಾಗಿ ನವಾಬನು 1753 ರ ಜುಲೈ 31ರಂದು ಒಂದು ಸಿಟ್ಟಿನ ಕಾಗದ ಬರೆದು ಗುತ್ತಿಗೆದಾರನಿಂದ ಯಾವುದೇ ರೀತಿಯ ಹಣವನ್ನೂ ಪಡೆಯಬಾರದೆಂದೂ ಈಗ ಪಡೆದಿರುವುದನ್ನು ದಿವಾನ ಸಂಪತ್‌ರಾವ್‌ಗೆ ಒಪ್ಪಿಸಿ ಲೆಕ್ಕ ಚುಕ್ತಾ ಮಾಡಿಸಬೇಕೆಂದೂ ನಿರೂಪಿಸಿದ. ಬಾಬ್‌ಖಾನನು ಒಬ್ಬಾನೊಬ್ಬ ಯೆಕ್ಲಾಸ್ ಖಾನನ ಮೇಲೆ ತಪ್ಪುಹೊರಿಸಿದ. 1753 - 54ರ ಗುತ್ತಿಗೆ ಹಣವನ್ನು 1753 ಸೆಪ್ಟಂಬರ್ ಮಧ್ಯದಲ್ಲಿ ಖುದ್ದು ಶ್ರೀನಿವಾಸಾಚಾರಿಗೇ ನೀಡಲಾಯಿತು. ಇದರ ರಕ್ಷಣೆಗಾಗಿ ಯೂರೋಪಿಯನ್‌ಗಳ ಹಾಗೂ ಸಿಪಾಯಿಗಳ ಒಂದು ತುಕಡಿಯನ್ನು ಆಂಗ್ಲರು ದಿವಾನ ಸಂಪತ್‌ರಾವ್‌ನ ಕೋರಿಕೆಯಂತೆ ಕಳುಹಿಸಿಕೊಟ್ಟರು. ಕುಮಾರ ಯಚ್ಚಮನಾಯಕ, ದಾಮರ್ಲ ವೆಂಕಟಪ್ಪ ಹಾಗೂ ಗುರುವರಾಜು ಇವರುಗಳಿಗೆ ಪತ್ರ ಬರೆದು ಬರುವ ಬ್ರಹ್ಮೋತ್ಸವಗಳ ಹೊತ್ತಿನಲ್ಲಿ ಗುತ್ತಿಗೆದಾರನಿಗೆ ಗುತ್ತಿಗೆ ಸಂಗ್ರಹದಲ್ಲಿ ಸಹಾಯ ಮಾಡಬೇಕೆಂದು ಕೇಳಿದರು. ಇಡೀ ಗುತ್ತಿಗೆ ಸಂಗ್ರಹವನ್ನು ಇಂಗ್ಲೀಷರಿಗೆ ಕೊಡಬೇಕೆಂದು ಶ್ರೀನಿವಾಸಾಚಾರಿಗೆ ಹೇಳಲಾಯಿತು. ಉತ್ಸವದ ಆರನೆಯ ದಿನ ಶ್ರೀನಿವಾಸಾಚಾರಿಯು ತಿರುಪತಿಯನ್ನು ಸೇರಿದನು. ಈ ಮಧ್ಯದಲ್ಲಿ ನೆಲ್ಲೂರಿನಿಂದ

ಮಹಮದ್ ಕಮಾಲನೆಂಬ ಸಾಹಸೋಪಜೀವಿಯು ಉತ್ಸವದಲ್ಲಿನ ಹಣ ಸಂಗ್ರಹವನ್ನು ಲಪಟಾಯಿಸಲು ಒಂದು ಸೈನ್ಯದೊಡನೆ ಆಲಯವನ್ನು ಆಕ್ರಮಿಸಲು ಆಗಮಿಸಿದ್ದನು. ನಜೀಬ್ ಉಲ್ಲಾ, ಕ್ಯಾಪ್ಟನ್ ಹಾಟ್ ಹಾಗೂ ದಾಮರ್ಲ ವೆಂಕಟಪ್ಪ - ಈ ಮೂವರೂ ತಮ್ಮ ಸೈನ್ಯಗಳೊಡನೆ ತಿರುಪತಿಯ ಮೈದಾನದಲ್ಲಿ ಅವನ ಮೇಲೆ ಬಿದ್ದು 1753 ರ ಅಕ್ಟೋಬರ್ 2 ರಂದು ಯುದ್ಧರಂಗದಲ್ಲಿಯೇ ಅವನ ತಲೆ ತೆಗೆದರು. ಈ ವೇಳೆಗಾಗಲೇ ಮಹಮದ್ ಕಮಾಲನು 13,649 ಪಗೋಡಗಳನ್ನು ಎತ್ತಿಹಾಕಿದ್ದನೆಂದೂ, ಮತ್ತೊಬ್ಬ ಯಸ್ರಾರ್ ಖಾನನು 60,000 ರೂಪಾಯಿಗಳನ್ನು ಪಡೆದಿದ್ದ ನೆಂದೂ, ಶ್ರೀನಿವಾಸಾಚಾರಿ ದೂರು ನೀಡುತ್ತ, ತನಗೆ ದಾನ ಕಾಣಿಕೆಗಳ ರೂಪದಲ್ಲಿ ಬಂದ 50000 ರೂಪಾಯಿ ಮೊತ್ತದ ಧನರಾಶಿಯನ್ನು ನವಾಬನಿಗೆ ನೀಡುವ ಹಣದಲ್ಲಿ ಮಾಫಿ ಮಾಡಬೇಕೆಂದು - ಕೇಳಿ ಕೊಂಡನು. ಈ ಕಾಗದ ಆಸಕ್ತಿದಾಯಕವಾದದ್ದಾಗಿದೆ. ಈ ದಾನಕಾಣಿಕೆಗಳು ತಿರುಕೈವಳಕ್ಕಂ ಹಾಗೂ ತಿರುಮುನ್ ಕಾಣಿಕ್ಕೆ ಎಂಬ ಹೆಸರಿನಲ್ಲಿ ಯಾತ್ರಿಕರು ಯಾವುದೇ ಉತ್ಸವ ಸಮಯದಲ್ಲಿಯೂ ಮೊದಲಿಗೆ ಸ್ಥಾನತ್ತಾರರಿಗೆ ನೀಡುತ್ತಿದ್ದರು. ಈ ಹಣವು ನಂತರ ನವಾಬನಿಗೆ ಗುತ್ತಿಗೆದಾರರಿಗೆ ಸಲ್ಲಿವಳಿಯಾಯಿತು.

ನಜೀಬುಲ್ಲಾಖಾನ್ ಹಾಗೂ ಬಾಬ್‌ಖಾನರು ಗುತ್ತಿಗೆದಾರನು ಇಂಗ್ಲೀಷರಿಗೆ ವಂಚನೆ ಮಾಡುತ್ತಿರುವ ನೆಂದೂ, ಆ ವರ್ಷದ ಉತ್ಪನ್ನ ಅತಿ ಹೆಚ್ಚಿನ ಮೊತ್ತವಾಗಿದ್ದಿತೆಂದೂ ದೂರು ನೀಡಿದರು. ಇದರಿಂದಾಗಿ 1753 ರ ಡಿಸೆಂಬರ್ 18 ರಂದು ಆಂಗ್ಲ ಸೈನಿಕರು ಗುತ್ತಿಗೆದಾರನನ್ನು ಬಂಧಿಸಿ ಮದರಾಸಿಗೆ ಕರೆದೊಯ್ದರು. ಇಂಗ್ಲೀಷು ಗವರ್ನರನು ಎಲ್ಲ ಲೆಕ್ಕಗಳನ್ನೂ ಕಾಂಜೀವರಂನಲ್ಲಿ ದಿವಾನ ಸಂಪತ್‌ರಾವ್‌ನಿಂದ ಪರೀಕ್ಷೆ ಮಾಡಿಸಿದನು. ನಂತರ ಗುತ್ತಿಗೆದಾರನನ್ನು ತಿರುಪತಿಗೆ ವಾಪಸಾಗಲು ಬಿಡುಗಡೆಮಾಡಿ ಲೆಕ್ಕ ಚುಕ್ತಾ ಮಾಡಲು ತಿಳಿಸಲಾಯಿತು. ಹಿಂದಿರುಗಿ ಬಂದ ಶ್ರೀನಿವಾಸಾಚಾರಿಯು 1754 ರ ಮೇ 9 ರಂದು 35383 ನಕ್ಷತ್ರ ಪಗೋಡ ಚಿಲ್ಲರೆಯನ್ನು ನೀಡಿ 1753 ರ ಡಿಶೆಂಬರ್ ಕೊನೆಯವರೆಗಿನ ಎಲ್ಲ ಬಾಕಿಯನ್ನು ಚುಕ್ತಾ ಮಾಡಿದನು. 1754 ರ ಸೆಪ್ಟಂಬರ್ ನಲ್ಲಿ ನವಾಬನು ತಿರುಪತಿ ಫರಗಣದ (ಜಿಲ್ಲೆಯ) ಎಲ್ಲ ಕಂದಾಯವನ್ನೂ ಇಂಗ್ಲೀಷರಿಗೇ ದತ್ತ ಮಾಡಿದನು. 1754ರ ಸೆಪ್ಟಂಬರ್‌ನಲ್ಲಿ ಶ್ರೀನಿವಾಸಾಚಾರಿಯನ್ನೇ ಆಲಯದ ಗುತ್ತಿಗೆದಾರನಾಗಿ ಪುನರ್ನೇಮಕ ಮಾಡಲಾಯಿತು. ಇವನಿಗೆ ನೆರವು ನೀಡಲು 23-8-1754 ರಲ್ಲಿ ಕೃಷ್ಣಾಜಿ ಪಂತವನ್ನು ತಹಸೀಲ್ದಾರನನ್ನಾಗಿ ನಿಯಮನ ಮಾಡಲಾಯಿತು. 1755 ರ ಜುಲೈ ತಿಂಗಳ 28 ನೇ ದಿನದಂದು ಶ್ರೀನಿವಾಸಾಚಾರಿಯು ಆಂಗ್ಲರಿಗೆ ಒಂದು ಕಾಗದ ಬರೆದು, ಕಡಪದ ನವಾಬನು ಮರಾಠರ ಸೇನಾನಿ ನರಸಿಂಗರಾಯನೊಡನೆ ಸೇರಿ ಒಂದು ಸೈನ್ಯದೊಡನೆ ಸೆಪ್ಟಂಬರ್ ಬ್ರಹ್ಮೋತ್ಸವದ ಹೊತ್ತಿಗೆ ತಿರುಪತಿಯನ್ನು ಹಿಡಿಯುವ ಉದ್ದೇಶದಿಂದ 'ಅವೇದುಲ ಸ್ನಕನುಮ' ದಲ್ಲಿ ಪಾಳಯ ಹೂಡಿದ್ದಾನೆಂದು ತಿಳಿಸಿದನು. ಆದರೆ ಯಾವ ಅವಘಡವೂ ನಿಜವಾಗಿ ನಡೆಯಲಿಲ್ಲ. 1757 ರ ಜುಲೈ ತಿಂಗಳಿನಲ್ಲಿ ಗುತ್ತಿಗೆದಾರ, ತಹಸೀಲ್ದಾರರು, ದಾಮರ್ಲ ವೆಂಕಟಪತಿಯೊಡನೆ ಸೇರಿ ಮದರಾಸಿನ ಆಂಗ್ಲ ಗವರ್ನರನಿಗೆ ಕಾಗದ ಬರೆದು ಅದರಂತೆ ನಜೀಬುಲ್ಲಾಖಾನನು ತಾನು ಮೊಗಲ ರನ್ನು ಸೇರಿರುವುದಾಗಿಯೂ, ಅವರ ಪ್ರತಿನಿಧಿಯಾಗಿ ತಿರುಪತಿಯನ್ನು ವಶಪಡಿಸಿಕೊಂಡು ಕಾಳಹಸ್ತಿ, ವೆಂಕಟ ಗಿರಿಗಳ ಕಪ್ಪವನ್ನು ಪಡೆಯುವುದಾಗಿಯೂ ವೆಂಕಟಪತಿಗೆ ಕಾಗದ ಬರೆದನಂತೆ. ಆರ್ಕಾಟು ನವಾಬನೂ ಸಹ 1757ರ ಜುಲೈ 22 ರಂದು ಕಾಗದ ಬರೆದು ನಜೀಬುಲ್ಲಾಖಾನನು ವಾಂಡೀವಾಷ್‌ನಲ್ಲಿದ್ದ ಫ್ರೆಂಚರಿಂದ ಪ್ರೇರಿತನಾಗಿ ತಿರುಪತಿಯನ್ನು ಆಕ್ರಮಿಸಲಿದ್ದಾನೆ - ಎಂದು ಆಂಗ್ಲರಿಗೆ ತಿಳಿಸಿದನು. ಹಲವು ಯೂರೋಪಿಯನ್ನರನ್ನೂ ಆಂಗ್ಲರನ್ನೂ ಸೇರಿಸಿದ ಒಂದು ಸೈನ್ಯವನ್ನು ತಿರುಪತಿಗೆ ಕಳುಹಿಸಬೇಕೆಂದು ಅವನು ಸಲಹೆ ನೀಡಿದ್ದನು. ಈ ಮಧ್ಯದಲ್ಲಿ ಮರಾಠರ ಸೇನಾಪತಿ ಬಲವಂತರಾಯನು ಆಲಯದ ಗುತ್ತಿಗೆದಾರನಿಗೆ ತಾನು ತಿರುಪತಿ ಬೆಟ್ಟಕ್ಕೆ 2000 ಕುದುರೆ ಸವಾರರೊಂದಿಗೆ 1757 ಆಗಸ್ಟ್ 13ರಂದು ಸ್ವಾಮಿಯನ್ನು ಪೂಜೆ ಮಾಡಲು ಹೊರಡುವುದಾಗಿ ತಿಳಿಸಿದನು. ಮದರಾಸಿನ ಗವರ್ನರನು ಅವನಿಗೆ ಕಾಗದ ಬರೆದು ಈ ಸ್ಥಳವು ಹಲವಾರುವರ್ಷಗಳಿಂದ ಆಂಗ್ಲರ ಆಡಳಿತ, ರಕ್ಷಣೆಯಲ್ಲಿರುವುದಾಗಿಯೂ ಆವನ, ಆಂಗ್ಲರ ನಡುವಣ ಸ್ನೇಹದ ದೃಷ್ಟ್ಯಾ ಯಾವುದೇ ರೀತಿಯ ಗೊಂದಲವಷ್ಟಾ

ಉಂಟು ಮಾಡಬಾರದು ಎಂದೂ ತಿಳಿಸಿದನು. ಆದರೆ ಕಿರ್ದಿ ಖಾನನು ನವಾಬನಿಗೆ ಕಾಗದ ಬರೆದು - 'ಬಲವಂತರಾಯನ ತಿರುಪತಿ ಯಾತ್ರೆಯ ಉದ್ದೇಶವೇ ಆಲಯವನ್ನು ವಶಪಡಿಸಿಕೊಳ್ಳುವುದು' ಎಂದು ರಹಸ್ಯವನ್ನು ಬಯಲು ಮಾಡಿದನು. ಕಂಪನಿಯು ಕಳುಹಿಸಿದ ಸಿಪಾಯಿಗಳು 30-7-57ರಂದು ತಿರುಪತಿಗೆ ಆಗಮಿಸಿದರು. ಬಲವಂತರಾಯನು ಆಗಸ್ಟ್ ಎಂಟರಂದು ಮೂರುಸಾವಿರ ರಾವುತರೊಡನೆ ತಿರುಪತಿಯತ್ತ ಬಂದಾಗ ತಿರುಪತಿಯಿಂದ ಎಂಟು ಮೈಲಿ ದೂರಕ್ಕೆ ಇರುವಂತೆಯೇ ಅವನನ್ನು ಗುತ್ತಿಗೆದಾರನು ಗೌರವದಿಂದ ಸ್ವಾಗತಿಸಿದ. ರಾವುತ ಸೈನ್ಯವನ್ನು ಅಲ್ಲಿಯೇ ಬಿಟ್ಟು ಬಲವಂತರಾಯನು ತಾನು ಮಾತ್ರವೇ ಬೆಟ್ಟವನ್ನೇರಿ ಸ್ವಾಮಿಯನ್ನು ಸೇವಿಸಿ ಪೂಜೆ ಸಲ್ಲಿಸಿ, ಹಿಂದಿರುಗಿ ಬಂದು ಸೈನ್ಯವನ್ನು ಕಣಿವೆಯ ಹೊರಕ್ಕೆ ಕರೆದುಕೊಂಡು ಹೋದ. ಮದರಾಸಿನ ಗವರ್ನರನಿಗೆ ಶ್ರೀನಿವಾಸಾಚಾರಿಯ ತಲುಪಿಸಿದ ವರದಿಯಂತೆ ವಾಸ್ತವವಾಗಿ 1757 ರ ಆಗಸ್ಟ್ 26 ರಂದು ಕೋಡೂರು ಕೋಟೆಯನ್ನು ಹಿಡಿದು ಅಲ್ಲಿಯೇ ಪಾಳಯ ಹೂಡಿದ್ದ ನಜೀಬುಲ್ಲಾಖಾನನಿಂದ ತಿರುಪತಿಯ ಆಕ್ರಮಣ ಪ್ರಯತ್ನ ನಡೆಯಿತು. 29-8-57 ರಂದು ಯೂರೋಪಿಯನ್ ಸೈನಿಕರ ಒಂದು ತುಕಡಿಯನ್ನು ದಾಮರ್ಲ ವೆಂಕಟಪತಿ ಹಾಗೂ ಬಂಗಾರು ಯಚ್ಚಮನಾಯಕರ ಜೊತೆಯಲ್ಲಿ ನಾಯುಡುಪೇಟೆಗೆ ಕಳುಹಿಸಿ ಈ ಧಾಳಿಯನ್ನು ಎದುರಿಸಲಾಯಿತು. ನಜೀಬುಲ್ಲಾಖಾನನು ಗುತ್ತಿಗೆದಾರನಿಗೆ ಆಸೆ ಆಮಿಷೆಗಳನ್ನು ತೋರಿಸಿ ತನ್ನೊಡನೆ ಸೇರಲು ಪುಸಲಾಯಿಸಿದನಾದರೂ ಫಲ ಸಿಗಲಿಲ್ಲ. ಪ್ರಾಯಶಃ ತಿರುಪತಿಯ ಮೇಲೆ ಯಾವ ಆಕ್ರಮಣವೂ ಆಗಲಿಲ್ಲ. ನಿಜವಾದ ಅವಘಡವು 1758 ರ ಆರಂಭದಲ್ಲಿ ಉಂಟಾಯಿತು. ಅಬ್ದುಲ್‌ಬಾಬ್‌ಖಾನನು 1000 ಕುದುರೆಗಳು, 1000 ಪದಾತಿ ಹಾಗೂ 5000 ಸೇವಕರೊಡನೆ ಜನವರಿ 28ರಂದು ಚಂದ್ರಗಿರಿಯನ್ನು ಪ್ರವೇಶಿಸಿದ. ಗುತ್ತಿಗೆದಾರನಿಂದ ವಿಷಯ ತಿಳಿದ ಕಂಪನಿ ಸರ್ಕಾರ ಬಾಬ್‌ಖಾನನಿಗೆ ಯಾವುದೇ ರೀತಿಯ ಉಪಟಳವನ್ನೂ ಉಂಟುಮಾಡಬಾರದೆಂದು ತಾಕೀತು ಮಾಡಿತು. ಬಲವಂತರಾಯನೂ, ಆಮೃತರಾಯನೂ ಸೇರಿ ದಾಮರ್ಲ ವೆಂಕಟಪತಿ ಮತ್ತಿತರ ಜಮೀಂದಾರರಿಗೆ, ಪಾಳಯಗಾರರಿಗೆ ಹೆಚ್ಚಿನ ಕಪ್ಪ ಕಾಣಿಕೆಗಳಿಗೆ - ಚೌಥಾಯಕ್ಕಿಂತ ಹೆಚ್ಚು ಕೊಡಬೇಕೆಂದು ಒತ್ತಡ ಹಾಕುತ್ತಿದ್ದರು. ಬಲವಂತರಾಯನು ಸಿದ್ಧವಟ ಕೋಟೆಯನ್ನು ಆಕ್ರಮಿಸಿರುವನೆಂದೂ, ಅಬ್ದುಲ್ ಹಮೀದ್‌ಖಾನನು ತನ್ನ ದಿವಾನ ವಾಸಾಜಿ ಪಂತನಿಗೆ ಗುರ್ರಂಕೊಂಡ ಕೋಟೆಯನ್ನೂ ಅಧಿಕ್ಕಿಂತ ಹೆಚ್ಚಾದ ಪ್ರಾಂತ್ಯವನ್ನೂ ಒಪ್ಪಿಸಿರುವನೆಂಬುದಾಗಿಯೂ ಗುತ್ತಿಗೆದಾರನು ವರದಿಮಾಡಿದನು. ಐದಾರು ದಿನಗಳಲ್ಲಿ 4000 ರಾವುತರೊಡನೆ ತಾನು ತಿರುಪತಿಗೆ ಸ್ವಾಮಿಯ ಪೂಜೆಗಾಗಿ ಬರುವುದಾಗಿ ದಿವಾನನು ಗುತ್ತಿಗೆದಾರನಿಗೆ ತಿಳಿಸಿದನು.

1758 ರ ಅಕ್ಟೋಬರ್ 7 ರಂದು ತಹಸೀಲ್ದಾರನು ಆಂಗ್ಲ ಗವರ್ನರನಿಗೆ ಕಾಗದ ಬರೆದು ಮಚಲೀ ಪಟ್ಟಣದ ಪಾಳಾಯಗಾರ ನೆಲ್ಲೂರಿನ ನಜೀಬುಲ್ಲಾಖಾನ್, ಚಂದ್ರಗಿರಿಯ ಅಬ್ದುಲ್ ವಹಾಬ್‌ಖಾನ ರೊಡನೆ ಫ್ರೆಂಚರು ಒಕ್ಕೂಟ ಮಾಡಿಕೊಂಡು ತಿರುಪತಿ ಫರಗಣವನ್ನು ಹಿಡಿದಿದ್ದಾರೆ - ಎಂಬ ಸುದ್ದಿಯನ್ನು ತಿಳಿಸಿದನು. ಅಬ್ದುಲ್ ವಹಾಬನು ತನ್ನ ಕಂದಾಯದ ಕರಾರುಗಳನ್ನು ವಿಧಿಸುತ್ತ ತನ್ನವರನ್ನು ರಕ್ಷಣೆಯ ಕಾರ್ಯದಲ್ಲಿ ತೊಡಗಿಸಿದ. ಆದರೆ ಫ್ರೆಂಚರು ಅಬ್ದುಲ್ ವಹಾಬನು ಮೊದಲು ರಕ್ಷಣೆಯನ್ನು ಒದಗಿಸಿ, ಸುರಕ್ಷಿತ ಎಂದು ಅನ್ನಿಸಿಕೊಂಡ ನಂತರ ಗುತ್ತಿಗೆಯನ್ನು ನಿರ್ಧರಿಸಬಹುದು ಎಂದರು. ಇದು ಸಾಧ್ಯವಾಗದೆ ಹಳೆಯ ಗುತ್ತಿಗೆದಾರ ಶ್ರೀನಿವಾಸಾಚಾರಿ ಯನ್ನು ಕರೆಯಲಾಯಿತು. ಆಲಯ ಉತ್ಸವದ ರಕ್ಷಣೆಯ ಭರವಸೆಯ ನಂತರ ಅವನಿಗೆ ಸನ್ನದು ನೀಡಲಾಯಿತು. 1758ರ ಅಕ್ಟೋಬರ್ 7 ನೇ ತಾರೀಖಿನ ಈ ಸಂಘಟನೆ ನಡೆದ ದಿನ ಬ್ರಹ್ಮೋತ್ಸವದ ಐದನೇ ದಿನವಾಗಿದ್ದಿತು. ತಹಸೀಲ್ದಾರನು ಮದರಾಸು ಗವರ್ನರಿಗೆ ಕಾಗದ ಬರೆದು ಸೈನ್ಯವನ್ನು ಕಳುಹಿಸಿ ಆಲಯವನ್ನೂ, ಪ್ರಾಂತ್ಯವನ್ನೂ ಪುನಃ ಕೈವಶಮಾಡಿಕೊಳ್ಳುವಂತೆ ಕೇಳಿದನು. ಶ್ರೀನಿವಾಸಾಚಾರಿಯು ತನ್ನ ಪ್ರಭುಗಳಿಗೆ ದ್ರೋಹ ಬಗೆದು ಶತ್ರುವಿನ ಪರ ಸೇರಿದನೆಂದು ಗವರ್ನರನುಭಾವಿಸಿದನು. ಆದರೆ ದಾಮರ್ಲ ವೆಂಕಟಪತಿಯು, ಶ್ರೀನಿವಾಸಾಚಾರಿ ಚಾತುರ್ಯದಿಂದ ವರ್ತಿಸಿ ಸ್ವಂತ ನಿರ್ಧಾರ ಮಾಡಿದನೆಂದೂ ಇದರಿಂದಾಗಿ ಇಡೀ ಪ್ರಾಂತ್ಯ ಅಬ್ದುಲ್ ವಹಾಬನ ಕೈಸೇರುವುದು ತಪ್ಪಿತೆಂದೂ ವಾದಿಸಿದನು. ಇಲ್ಲಿ ಉಲ್ಲೇಖಿಸಬಹುದಾದ ಮಾತೆಂದರೆ ಫ್ರೆಂಚರು

ಆಕ್ರಮಿಸಿದಾಗ ಅಕ್ಟೋಬರ್ 6 ನೇ ತಾರೀಖಿನಂದು ಕಂಪನಿಯ ಸೈನ್ಯ ಚೆಲ್ಲಾಪಿಲ್ಲಿಯಾಗಿ ರಾಯಲಚೆರುವು ಮಾರ್ಗವಾಗಿ ಮದರಾಸನ್ನು ಸೇರಿತು. ಅಕ್ಟೋಬರು 16 ರಂದು ನಜೀಬುಲ್ಲಾ ಹಾಗೂ ಫ್ರೆಂಚರು ಚಂದ್ರಗಿರಿಗೆ ಬಂದರು. ಮದರಾಸಿನ ಗವರ್ನರನು, ದಾಮರ್ಲ ವೆಂಕಟಪತಿ ಹಾಗೂ ಬಂಗಾರು ಯಚ್ಚಮನಾಯಕರು ಈ ಸಣ್ಣ ಸೈನ್ಯದ ಫ್ರೆಂಚರನ್ನು ತಡೆಯಲು ಯಾವುದೇ ಪ್ರಯತ್ನವನ್ನೂ ಮಾಡದೆ ತಮ್ಮ ಪ್ರಾಂತ್ಯಗಳ ಮೂಲಕ ಚಂದ್ರಗಿರಿಯನ್ನು ಸೇರಲು ಅವಕಾಶ ಕೊಟ್ಟಿದ್ದನ್ನು ಆಕ್ಷೇಪಿಸಿದನು. ಅವರಿಬ್ಬರೂ ಆಂಗ್ಲರಿಗೂ ನವಾಬನಿಗೂ ಹೆಚ್ಚಿನ ವಿಶ್ವಾಸವನ್ನು ತೋರಿಸಬೇಕಾಗಿದ್ದಿತು ಎಂಬುದು ಅವನ ವಾದವಾಗಿದ್ದಿತು. ಮಳೆಗಾಲ ಕಳೆದ ನಂತರ ಮುಂದಿನ ಕ್ರಮ ಕೈಗೊಳ್ಳಬೇಕೆಂದು ಆತ ಅಪ್ಪಣೆ ಹೊರಡಿಸಿದ. ಇತ್ತ ಶ್ರೀನಿವಾಸಾಚಾರಿಗೆ ಗುತ್ತಿಗೆಯ ಸನ್ನದು ನೀಡಿದವನು ಮಚಲೀಪಟ್ಟಣದ ಪಾಳಾಯಗಾರ. ಅಬ್ದುಲ್ ವಹಾಬನು ತನ್ನ ಮಗನ ಹೆಸರಿಗೆ ತಿರುಪತಿಯ ತಹಸೀಲ್ದಾರ್ ಪದವಿಯನ್ನು ಪಡೆದುಕೊಂಡ. ಶ್ರೀನಿವಾಸಾ ಚಾರಿಗೆ ಇದು ಒಪ್ಪಿಗೆಯಾಗಲಿಲ್ಲ. ಅಷ್ಟೇ ಅಲ್ಲದೇ ತನ್ನ ವ್ಯವಹಾರಗಳೂ ಗೊಂದಲ ಹೊಂದುತ್ತಿರುವುದೆಂಬುದನ್ನು ಕಂಡಕೊಂಡ. ತಿರುಪತಿಯನ್ನು ಫ್ರೆಂಚರು ಹಿಡಿದದ್ದು ಅನೀರೀಕ್ಷಿತ ಘಟನೆಯಾಗಿರಲಿಲ್ಲ. ಈ ಹಿಂದೆಯೇ ಹೇಳಿದಂತೆ ಗಣ್ಯಸಮಿತಿಯು ಗೂಡಚಾರ ಮಂಡಳಿಗೆ ಕಳುಹಿಸಿದ 1758 ರ ಅಕ್ಟೋಬರ್ 2 ಹಾಗೂ 5ರ ವರದಿ ಹೀಗೆ- "ತಿರುಪತಿಯ ಕಂದಾಯ ನಿಯತವಾಗಿ ಜಮ ಆಗುತ್ತಿದೆ. ಇಲ್ಲಿನ ಮುಖ್ಯ ಕಂತಿನ ಸಂಗ್ರಹವಾಗುತ್ತದೆ ಹಾಗೂ ಇದನ್ನು ಫ್ರೆಂಚರು ತಡೆಯುವುದಿಲ್ಲ ಎಂದು ಭಾವಿಸಲಾಗಿದೆ". ಕಾಗದ ಕೊನೆಗೆ ಸೇರಿಸಿದ ಮಾತು ಹೀಗೆ - ಫ್ರೆಂಚರು ಆರ್ಕಾಟು, ತಿರುಪತಿ, ಕಾಂಚೀವರಗಳನ್ನು ಆಕ್ರಮಿಸಿದ್ದಾರೆ.

### 3. ಈಸ್ಟ್ ಇಂಡಿಯಾ ಕಂಪನಿಯ ನೇರ ಆಡಳಿತದಲ್ಲಿ ತಿರುಮಲೆಯ ಆಲಯ

(ಮೆಕೆಂಜಿ ಕೈ ಬರಹದ ಟಿಪ್ಪಣಿಗಳಲ್ಲಿ)

ರಾಜಾ ರಘೋತ್ತಮರಾಯನ ತಿರುಪತಿ ಯಾತ್ರೆಯ ಬಗ್ಗೆ ಏರ್ಪಾಡು ಮಾಡಿದ ಸಿದ್ಧತೆಗಳ ಬಗ್ಗೆ ಆರ್ಕಾಟು ನವಾಬನಿಗೆ ಕಾಗದ ಬರೆಯುತ್ತ ರಾಬರ್ಟ್ ಕ್ಲೈವನು ತಿಳಿಸಿರುವಂತೆ 1800 ರ ಸೆಪ್ಟಂಬರ್ ವರೆಗೆ ತಿರುಮಲೆಯ ಆಲಯವು ನಿಯತವಾದ, ವಿಫಲವಾಗದ ವಾರ್ಷಿಕ ಆದಾಯ ಮೂಲವಾಗಿದ್ದಿತು ಎಂದು ನಿರ್ಧರಿಸಬಹುದು. ತಿರುಪತಿ ಪ್ರಾಂತ್ಯದೊಡನೆ ಆಲಯವೂ ಆರ್ಕಾಟು ನವಾಬನ ಅಧೀನದಲ್ಲಿಯೇ ಬಂದಿದ್ದರೂ ಸಹ ಆಲಯ ದಿಂದ ಉಂಟಾಗುವ ಉತ್ಪತ್ತಿಯನ್ನು ಆತ ಈಸ್ಟ್ ಇಂಡಿಯಾ ಕಂಪನಿಗೆ ದತ್ತವಾಗಿ ನೀಡಿದ್ದ. 1801 ರಲ್ಲಿ ಆರ್ಕಾಟು ನವಾಬನನ್ನು ಹಿಂದೆ ಸರಿಸಿ ಆಡಳಿತವನ್ನು ನೇರವಾಗಿ ತಾನೇ ಕೈಹಿಡಿದಾಗ ತಿರುಮಲೆಯ ಆಲಯದ ಆಡಳಿತವೂ ಆಂಗ್ಲರ ಕಂಪನಿಯ ಹಸ್ತಗತವಾಯಿತು.

### ತಿರುಪತಿ ಗಡಿಗಳ ಕೈಫಿಯತ್ತು

(ಮೆಕೆಂಜಿ ಮ್ಯಾನುಸ್ಕ್ರಿಪ್ಟ್ಸ್, ಟ್ರಾನ್ಸ್ಲೇಷನ್ಸ್ ರಿಪೋರ್ಟ್ಸ್ ಸಂ-16 ಪುಟ-476 -ಸಿ.)

150 ವರ್ಷಗಳ ಹಿಂದೆ ರಾಯರುಗಳ ಕಾಲದಲ್ಲಿ ಈ ಪ್ರಾಂತ್ಯವನ್ನು ಮ್ಲೇಚ್ಛ ಮುಸಲ್ಮಾನರು ವಶಪಡಿಸಿ ಕೊಂಡು, ಕರ್ನಾಟಿಕವನ್ನು ವಿಭಾಗಮಾಡಿ ಇದರ ಗಡಿಗಳನ್ನು ಗುರುತಿಸಿದರು. ಈ ಗಡಿಗಳ ಮಧ್ಯದ ಭೂಮಿಗಳ ಕಂದಾಯವನ್ನು ರಾಜನಿಗೆ ನೀಡಬೇಕೆಂದು ತೀರ್ಮಾನಿಸಲಾಯಿತು. ಈ ಗಡಿಗಳಲ್ಲಿ ಆಯಾಯಾ ಸೇನಾನಿಗಳ ಸೈನ್ಯಗಳು ಆಯಾಯಾ ಸ್ಥಳಗಳಲ್ಲಿ ಪ್ರತ್ಯೇಕವಾಗಿರಬೇಕೆಂದಾಯಿತು.

ನಂತರದ ಕಾಲದಲ್ಲಿ ಮೊಘಲರು ಪ್ರಬಲರಾಗುತ್ತ ಬಂದು ನಾಡನ್ನು ಆಕ್ರಮಿಸಿತೊಡಗಿದರು. ತಿರುಪತಿಯ ಸುತ್ತ ಮುತ್ತಲಿನಲ್ಲಿದ್ದ ಪಾಳಯಗಾರರು ಪ್ರಬಲರಾಗುತ್ತ ಪ್ರಾಂತ್ಯಗಳ ಗಾತ್ರವನ್ನು ಕಡಮೆ ಮಾಡತೊಡಗಿದರು.

**ತಿರುಪತಿಯ ಪ್ರಾಚೀನ ಪ್ರಾಂತ್ಯ ಸರಹದ್ದುಗಳ ಈ ರೀತಿ ಇವೆ -**

1. ಪೂರ್ವದಲ್ಲಿ ಸುವರ್ಣಮುಖೀ ನದಿಯ ದಡದ ಆಚೆಗೆ ಈಶ್ವರ ದೇವಾಲಯದ ಬಳಿ ಕಲ್ಲಹಶ್ರೀಯ ಬಳಿ ಸ್ವಾಮಿಯ ಚಕ್ರದ ಗುರುತಿರುವ ಗಡಿಕಲ್ಲನ್ನು ನೆಡಲಾಗಿದೆ.

2. ದಕ್ಷಿಣದಲ್ಲಿ ನಾರಾಯಿಣವರಂದಿಂದ ಪಶ್ಚಿಮಕ್ಕೆ ಪಿಳ್ಳಾರಿ ಕನುಮದವರೆಗೆ ಶಂಖ ಚಕ್ರ ಮುದ್ರೆಯ ಗಡಿಗಲ್ಲನ್ನು ಹೂಗಿದೆ.

3. ಈ ಕಲ್ಲಿನಿಂದ ಪಶ್ಚಿಮಕ್ಕೆ ನಾಗಪಟ್ಲ ತಾಲೂಕಿನ ದೇವರಕೊಂಡ ಕೋನದಲ್ಲಿರುವ ಚಾಮಲ ಅರಣ್ಯದಲ್ಲಿ (ದಟ್ಟವಾದ ಕಾಡು) ಚಕ್ರ ಮುದ್ರೆಯನ್ನು ಹೊಂದಿರುವ ಗಡಿಗಲ್ಲನ್ನು ನೆಡಲಾಗಿದೆ.

4. ತಿರುಪತಿಯ ಉತ್ತರಕ್ಕೆ ಯರ್ರಗುಂಟ, ಹನುಮಂತರಾಯ ಗುಟ್ಟ, ಕಲ್ಲಹಶ್ರೀ ವರೆಗೆ ಗಡಿಗಳಿವೆ. ಮಟ್ಲವಾರಿ ವಂಶದ ಜನರು ಇಲ್ಲಿನ ಸಣ್ಣಸಣ್ಣ ಪಾಳಯಗಾರರನ್ನು ಸೋಲಿಸಿ ಚಕ್ರಮುದ್ರೆಯನ್ನು ಸ್ಥಾಪಿಸಿದ್ದಾರೆ.

ನಾಲ್ಕು ದಿಕ್ಕಿನಲ್ಲಿಯೂ ಈ ಗಡಿಗಳು ಮೂರು ಕಣಿವೆಗಳ ತನಕ ಹರಡಿವೆ.



19 ನೇ ಶತಮಾನದ ಆದಿಭಾಗದಲ್ಲಿ ಆಲಯದ ಆಸ್ತಿ - ವಿವರಗಳು ಪೂರ್ವದಲ್ಲಿ ಕಾಳಹಸ್ತಿಯವರೆಗೆ ಹಾಗೂ ಉತ್ತರದಲ್ಲಿ ವೆಂಕಟಗಿರಿಯವರೆಗೆ ಹರಡಿದ್ದಿರಬೇಕು. ದಕ್ಷಿಣದಲ್ಲಿ ನಾರಾಯಣವನಂ ಹಾಗೂ ಕಾರ್ವೇಟಿ ನಗರಗಳವರೆಗೆ ಈ ಗಡಿಗಳು ವಿಸ್ತರಿಸಿರಬೇಕು. ಪಶ್ಚಿಮದಲ್ಲಿ ಚಂದ್ರಗಿರಿ ತಾಲ್ಲೂಕಿನ ಗಡಿಗಳನ್ನು ತನ್ನ ಎಲ್ಲೆಯಾಗಿ ಹೊಂದಿ ನಾಗಪಟ್ಲ (ಇಂದಿನ ವಾಯಲ್ಪಾಡು) ದೇವರಕೊಂಡದ ವರೆಗೆ ಯರ್ರಗುಂಟಲತೋಟ (ರಾಯಚೋಟಿ) ವರೆಗೆ ಹರಡಿರಬೇಕು.

ಮೆಕೆಂಜಿ ಬರಹ ಸಂಗ್ರಹದಲ್ಲಿ ಮತ್ತೊಂದು ದಾಖಲೆಯಿದೆ. ಅದರಂತೆ 1787 ರಲ್ಲಿ ಮಹಮದಾಲಿಯ ಒಂದು ನಿಯೋಗವನ್ನು ಕಳುಹಿಸಿದ. ಅದರ ನೇತೃತ್ವ ಸಯ್ಯದ್ ಮಹಮದ್ ಖಾನ್ ಹಾಗೂ ಬ್ರಿಟಿಷ್ ಅಧಿಕಾರಿ ಸರ್ ಬ್ಯಾರಿ ಕ್ಲೋಸ್‌ರು ವಹಿಸಿದ್ದರು. ಈ ನಿಯೋಗಕ್ಕೆ ರಾಜ್ಯದ ಗಡಿಗಳ ಅನಧಿಕೃತ ಆಕ್ರಮಣಗಳನ್ನು ಗುರುತಿಸಿ ತೆರವು ಮಾಡಿಸುವುದುದ್ದೇಶ್ಯವಾಗಿದ್ದಿತು. ಒಂದೂವರೆ ವರ್ಷದ ಕಠಿಣ ಪರಿಶ್ರಮದಿಂದ ನಿಯೋಗವು ಹಲವು ಹತ್ತು ಗ್ರಾಮಗಳನ್ನು ಗುರುತಿಸಿ ವಶಪಡಿಸಿಕೊಂಡಿತು. ನವಾಬನ ಸರ್ಕಾರ ಈ ಹಳ್ಳಿಗಳ ಹತೋಟಿ ಪಡೆಯುವಲ್ಲಿ ಬಹಳ ದುರ್ಬಲವಾಗಿದ್ದಿತು. ಪಾಳಯಗಾರರು ಕೆಲಕಾಲದಲ್ಲಿಯೇ ಈ ಹಳ್ಳಿಗಳನ್ನು ಪುನಃ ಹಿಡಿಯುವಂತಾಗಿ ನವಾಬನು ಹೆಚ್ಚಿನ ಪೇಷ್‌ಕಷ್ ಕೊಡುವ ಅವರ ವಾಗ್ದಾನದಿಂದಾಗಿ ಅವರುಗಳಿಗೇ ಈ ಎಲ್ಲ ಪ್ರಾಂತ್ಯಗಳನ್ನೂ ಬಿಟ್ಟು ಕೊಡಬೇಕಾಯಿತು. ಈ ದಾಖಲೆಯನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ.

**ಆಲಯ ಆಸ್ತಿಗಳ ದುರಾಕ್ರಮಣಗಳು**

**ಯಾದ್‌ದಾಶ್ತ್ ಅಥವಾ ನೆನಪಿನೋಲೆ**

ಮೆಕೆಂಜಿ ಕೈ ಬರಹಗಳು ಅನುವಾದಗಳು - ವರದಿಗಳು - ಸಂ. - 16, ಪುಟ - 476.

ತೀರಿವಲೆಯಾಟ್ಟು (ತಿರುವಳೆಯಾಟ್ಟು) ವಡಮಂಡಲ ಹಾಗೂ ಗೊಡುಗುಲ ನಾಡುಗಳು ತಿರುಪತಿಯ ಪ್ರಾಚೀನ ಗಡಿಗಳಾಗಿದ್ದವು. ಸುಬೇದಾರ ಹಾಗೂ ನವಾಬರುಗಳಿಗೆ ಬಲವಂತವಾಗಿ ಅಥವಾ ವಿಶ್ವಾಸದಿಂದ ನಜರುಗಳನ್ನು ಕಪ್ಪ ಕಾಣಿಕೆಗಳನ್ನರ್ಪಿಸಿದ ಪಾಳೆಯುಗಾರರು ಈ ಭೂಮಿಗಳನ್ನು ತಮ್ಮದಾಗಿಸಿಕೊಂಡರು. ಹೀಗಾಗಿ ತಿರುಪತಿ ತಾಲ್ಲೂಕಿನ ಗಡಿಗಳು ಈ ಪಾಳಯಗಾರರಿಂದ ಕಡಿತಗೊಂಡವು.

ಕೆಲಕಾಲಾನಂತರ ಸನ್ 1196 ಫಸಲಿ (ಕ್ರಿ.ಶ.1786) ವರ್ಷದಲ್ಲಿ ನವಾಬ ಅಮೀರ್ ಅಲ್ ಉಮ್ರನು ತನ್ನ ಪ್ರಧಾನ ಸೇನಾನಿಗಳಲ್ಲಿ ಒಬ್ಬನಾದ ಮಹಮ್ಮದ್ ಮುರಾದ್‌ನನ್ನು ಒಂದು ಬಲವಾದ ಸೈನ್ಯದೊಡನೆ ಈ ಬಗ್ಗೆ ವಿಚಾರಿಸಲು ಕಳುಹಿಸಿದನು. ಆತನು ತಿರುಪತಿಗೆ ಬಂದು ಈ ವ್ಯವಹಾರದ ಬಗ್ಗೆ ವಿಚಾರಣೆ ನಡೆಸಿ ನ್ಯಾಯವಾಗಿ ಕಂಡುಬರುವ ಒಂದು ಭಾಗದ ಪ್ರಾಂತ್ಯವನ್ನು ಕೈವಶಮಾಡಿಕೊಂಡ. ಇನ್ನೊಂದು ಭಾಗವನ್ನು ವಶಪಡಿಸಿಕೊಳ್ಳಲಾಗಲಿಲ್ಲ.ಕಾರಣ ಈ ಭಾಗದ ಆಕ್ರಮಣಗಾರರು ತಮ್ಮ ವಶದ ಭೂಮಿಯನ್ನು ಬಿಟ್ಟುಕೊಡದೆ ಯುದ್ಧಕ್ಕೆ ಸಿದ್ಧರಾದರು. ನವಾಬನ ಪರವಾಗಿ ವಶಪಡಿಸಿಕೊಂಡ ಭೂಮಿಯ ಕಂದಾಯವನ್ನು ಸರ್ಕಾರದ ಪರವಾಗಿ ವಸೂಲು ಮಾಡಲಾಯಿತು. ಮಿಕ್ಕ ಭೂಭಾಗವು ಹಾಗೇ ಅನ್ಯಾಕ್ರಾಂತವಾಗಿದ್ದುದರಿಂದ 1197 ಫಸಲಿ ವರ್ಷದಲ್ಲಿ (1787) ಮುಖ್ಯಾಧಿಕಾರಿ ಸಯ್ಯದ್ ಮಹಮ್ಮದ್ ಖಾನ್ ಹಾಗೂ ಆಂಗ್ಲ ಅಧಿಕಾರಿ ಕ್ಲೋಸ್ (ಸರ್ ಬ್ಯಾರಿಕ್ಲೋಸ್) ಅವರುಗಳನ್ನು ಹುಜೂರು ಅಮೀರ್ ಅಲ್ ಉಮ್ರ ಅವರಿಂದ ಕಾರಣಗಳನ್ನು ತಿಳಿದು ಬರಲು ಕಳುಹಿಸಲಾಯಿತು. ಅವರುಗಳು ಇಲ್ಲಿಗೆ ಬಂದು ವಿಚಾರಣೆ ನಡೆಸಿ ಹಲವು ಗ್ರಾಮಗಳನ್ನು ವಶಪಡಿಸಿ ಕೊಂಡರು. ಮಿಕ್ಕವುಗಳನ್ನು ಒಂದೂವರೆ ವರ್ಷದ ವಿಚಾರಣೆಯ ನಂತರವೂ ವಶಪಡಿಸಿಕೊಳ್ಳಲಾಗಲಿಲ್ಲ. ಅಮೀರ್ ಅಲ್ ಉಮ್ರನ ಮರಣಾನಂತರ ಪಾಳಯಗಾರರು ಶ್ರೇಷ್ಠ ನವಾಬ ವಾಲಾಜಾ ಅವರಲ್ಲಿ ಮೊರೆಯಿಟ್ಟು ಕೊಂಡರು. "ನಮ್ಮ ನಾಡುಗಳನ್ನು - ರಾಜ್ಯಗಳನ್ನು - ನೀವು ವಶಪಡಿಸಿಕೊಂಡಿರುವಿರಿ. ನೀವು ಈ ಪ್ರಾಂತ್ಯಗಳನ್ನು ಹಿಂದಿರುಗಿಸಿದ್ದೇ ಆದರೆ, ನಿಮಗೆ ಕಪ್ಪಕಾಣಿಕೆಗಳನ್ನು ಕೊಡಲು ನಾವು ಸಿದ್ಧ" ನವಾಬರು ಒಪ್ಪಿದರು. ಪ್ರತಿಯೊಬ್ಬ ಪಾಳಯಗಾರನೂ ತನ್ನ ಯೋಗ್ಯತೆಗೆ ತಕ್ಕಂತೆ ತಾನು ಪಡೆದ ಭೂಮಿಗೆ ತಕ್ಕಂತೆ ನಜರು ನೀಡಿದನು. ಹೀಗೆ ಅವರುಗಳು ಹಿಂದಕ್ಕೆ ಪಡೆದ ಹಳ್ಳಿಗಳಿಗೆ ಈಗಲೂ ಪೇಷ್‌ಕಪ್ ನೀಡುತ್ತಿದ್ದಾರೆ.

'ಯಾದ್ ದಾಶ್ತ್ ದಹಜಾದಾ ತಿರುಪತಿ ಫರಗಣ' ಎಂಬ ಹೆಸರಿನ ಕಂಪನಿ ಸರ್ಕಾರದ ಸನ್ 1211 ಫಸಲಿ ದುರ್ಮುಖಿ ವರ್ಷದ (ಕ್ರಿ.ಶ.1801) ಒಂದು ಹಸ್ತಪ್ರತಿಯು (ಸಂ 16, ಪು - 496) 1801 ರಲ್ಲಿ ಆಲಯವು 187 ಗ್ರಾಮಗಳನ್ನು ಹೊಂದಿದ್ದಿತೆಂದು ಹೇಳುತ್ತದೆ. ಈ ಹಳ್ಳಿಗಳ ಹೆಸರುಗಳು, ಅವುಗಳ ವರ್ಗೀಕರಣ, ಅವುಗಳನ್ನು ಅನುಭವಿಸುತ್ತಿರುವವರ ವಿವರಗಳನ್ನು ಪಟ್ಟಿ ಮಾಡಲಾಗಿದೆ. ಆ ಯಾದಿ ಹೀಗಿದೆ.

| | | |
|---|---|---|
| 1. ದೇವಸ್ಥಾನ ಆರ್ಜಿತ | 1 | |
| 2. ಮೌಂಜ ಅಥವಾ ಪ್ರಮುಖ ಗ್ರಾಮಗಳು | 156 | |
| ಮಜರ ಅಥವಾ ಅಧೀನಗ್ರಾಮಗಳು | 3 | |
| | | 160 |
| 3. 1) ಪಟ್ಟದ ಗ್ರಾಮ, ಸಂತೆಯ ಹಳ್ಳಿ | 1 | |
| 2) ಚೌಕೀ ಗ್ರಾಮಗಳು | 16 | |
| 3) ಪಶುಬಂಧ ಗ್ರಾಮ (ಗೋಮಾಳಗ್ರಾಮ) | 2 | |
| 4) ಮಕಾನ್ (ನಗರದ ಸಂಸ್ಥೆಗಳು) | 1 | |
| 5) ಮೊಹಲ್ ರಾಜ್ (ಗೃಹ ತೆರಿಗೆ) | 1 | |
| 6) ಕಾವಲಿ (ಗಡಿಗ್ರಾಮಗಳು) | 5 | |
| 7) ಕಟ್ಟುಬಡಿ (ಸೇವಕರ ಗ್ರಾಮ) | 1 | |
| | | 27 |
| **ಒಟ್ಟು** | **187 ಗ್ರಾಮಗಳು.** | |

**ವಿತರಣೆ:**

| | | |
|---|---|---|
| ಹಿರಿಯರ ಜಿಯಂಗಾರ್ಯರ ಹಳ್ಳಿ | 2 | |
| ಜೀಪಾಳಯಂ ಕಿರಿಯ ಜಿಯಂಗಾರ್ | | |
| ಅಡುಸು ಪಾಳಯಂ, ಕೃಷ್ಣಪಾಳಯಂ | 2 | |
| ನಂಬಿಗಳ ಗ್ರಾಮಗಳು | 16 | |
| ಆಚಾರ್ಯ ಪುರುಷ, ಗೊಲ್ಲ ಗ್ರಾಮಗಳು | | |
| ಅಗ್ರಹಾರ, ಶ್ರೋತ್ರೀಯ ಗ್ರಾಮಗಳು | 13 | |
| ತಿರುಚಾನೂರು ಹಾಗೂ ಮಾಲೂರು | | |
| ಬೈರಾಗಿಗಳದು 1) ಹರೇರಾಮ ಮಹಂತ | 2 | |
| 2) ದಯಾರಾಮಮಹಂತ | 2 | |
| ಇತರ ಇನಾಂದಾರರು | 3 | |
| | | 40 |

**ಪಾಳಾಯಗಾರರ ಅಧೀನದಲ್ಲಿನ ಗ್ರಾಮಗಳು:**

| | |
|---|---|
| 1. ಕರಕಂಬಾಡಿ ವೆಂಕಟಪ್ಪನಾಯುಡು ತಿರುಪತಿ ಪಾಳಯಗಾರ | 5 |
| 2. ಕೃಷ್ಣಾಪುರ ವೀರರಾಘವನಾಯುಡು ತಿರುಪತಿ ಪಾಳಯಗಾರ | 5 |
| 3. ಮಾಮಂಡೂರು ವೆಂಕಟಪ್ಪನಾಯುಡು | 9 |
| 4. ದಾಮರ್ಲ ತಿಮ್ಮನಾಯುಡು, ಜಮೀಂದಾರ, ಕಾಳಹಸ್ತಿ | 16 |
| 5. ಬೊಮ್ಮರಾಜು ಪಾಳಯಗಾರ, ಕಾರ್ವೇಟಿನಗರ | 36 |
| 6. ಪಾಮಲ ಶೇಷನಾಯುಡು (ನಾಗಪಟ್ಲ) | 34 |
| 7. ಮೊಗರಾಲ್ ಪಾಳಯಗಾರ | 18 |
| 8. ಮಟ್ಲವಾರು | 1 |
| ಇತರ ಮುಖ್ಯ ಹಳ್ಳಿಗಳು (ದೇವಸ್ಥಾನದ್ದು) | 18 |
| ಮಕಾನ್ - ಸಂಘಟನೆ | 1 |
| ಸುಂಕದ ಕಟ್ಟೆ | 4 |
| | 147 |
| **ಒಟ್ಟು ಗ್ರಾಮಗಳು 187** | |

ಮೇಲಿನ ಪಟ್ಟಿಯು ಒಂದು ಸಮಸ್ಯೆಯನ್ನು ಬಿಚ್ಚಿಡುತ್ತದೆ. ಪ್ರಾಯಶಃ ಅಂದಿಗೆ ಆಲಯದ ಎಲ್ಲ ಹಳ್ಳಿಗಳೂ ಭೂಮಿಕಾಣಿಗಳೂ ಆಲಯದ ಅಂಕೆಗೆ ಒಳಪಡದೆ ಅನುಭವದಾರರ ಅಧೀನಕ್ಕೆ ಒಳಗಾಗಿದ್ದವು.

ನವಾಬರ ಕಾಲದಲ್ಲಿ ಈ ಗ್ರಾಮಗಳು ಹಲವು ಹನ್ನೊಂದು ಕಾವಲುಗಾರರ ಕೈಗೆ ಸೇರಿದ್ದು ಅವರುಗಳು ಆಲಯದ ಹೆಸರಿನಲ್ಲಿ ಇವುಗಳ ಮೇಲೆ ಅಧಿಕಾರ ನಡೆಸಿದ್ದರು. ಇವರು ಅಲ್ಲಲ್ಲಿ ಸ್ಥಾಪಿಸಿದ್ದ ಸುಂಕದ ಕಟ್ಟೆಗಳ ಮೂಲಕ ಹೋಗಿ ಬರುವ ಸಾಮಾನಿನ ಸುಂಕವನ್ನು ವಸೂಲಿ ಮಾಡುತ್ತಿದ್ದರು. ಜೊತೆಗೇ ರಕ್ಷಕ ಭಟರ ಹೊಣೆಯನ್ನೂ, ಕೊತ್ವಾಲಿಕೆಯ ಹೊಣೆಯನ್ನೂ ಹೊತ್ತಿದ್ದರು. ಇದಕ್ಕಾಗಿ ಹಲವು ಹಳ್ಳಿಗಳನ್ನು ಅನುಕೂಲವಾದ ನಿಯಮಗಳಲ್ಲಿ ಮೀಸಲಿಟ್ಟು ಕಾವಲಿ ಗ್ರಾಮ ಎಂದೇ ಕರೆಯುತ್ತಿದ್ದರು. ವಿಜಯನಗರ ಪತನಾನಂತರ ಈ ಎಲ್ಲ ಗ್ರಾಮಗಳಲ್ಲಿ ಹೊಸದಾದ ಕಾವಲು ಶುಲ್ಕವನ್ನು ವಸೂಲಿ ಮಾಡುತ್ತಿದ್ದರು. ಕರ್ನಾಟಿಕ್ ಯುದ್ಧಗಳ ಅನಿಶ್ಚಿತ ಪರಿಸ್ಥಿತಿಗಳಲ್ಲಿ ಇವರು ಸ್ವಾತಂತ್ರ್ಯವನ್ನು ಘೋಷಿಸಿಕೊಂಡು ತಾವೇ ಪಾಳಯಗಾರರಾಗಿ ವರ್ತಿಸ ತೊಡಗಿದರು. ಇವರಲ್ಲಿ ಹೆಚ್ಚು ಪ್ರಬಲರಾದವರು ಇತರ ಕಿರಿಯ ಪಾಳಯಪಟ್ಟುಗಳನ್ನು ತಮ್ಮಲ್ಲಿ ಸೇರಿಸಿಕೊಂಡರು.

ತಿರುಪತಿಯ ಆಲಯದ 187 ಗ್ರಾಮಗಳನ್ನು ಆಲಯದ ಶಾಶ್ವತ ಉದ್ಯೋಗಿಗಳ ಹಾಗೂ ಅದರ ರಕ್ಷಕ ಪಡೆಯ ನಡುವೆ ಎಂದು ಹಂಚಲಾಯಿತು - ಎಂಬುದು ತಿಳಿದು ಬಂದಿಲ್ಲ. ಈ ಬಗ್ಗೆ ಶಾಸನಗಳಲ್ಲಿ ಯಾವ ಇಲ್ಲೇಖವೂ ಇಲ್ಲ.

ಪ್ರಾಯಶಃ ತಿರುಮಲರಾಯನ ತನ್ನ ಆಡಳಿತ ಕಾಲದಲ್ಲಿ ಈ ದಾನದ ಗ್ರಾಮಗಳನ್ನು ಆಲಯದ ವಂಶ ಪಾರಂಪರ್ಯದ ಸೇವಾಕರ್ತರಲ್ಲಿ (ಉದ್ಯೋಗಿಗಳಲ್ಲಿ) ವಿತರಣೆಮಾಡಿ ಆಲಯದ ಉತ್ಸವಗಳು ಹಬ್ಬಗಳು ನಿತ್ಯನಿರಂತರವಾಗಿ ನಡೆಯುವಂತೆಯೂ ಹಾಗೆಯೇ ಪಾಳಯಗಾರ, ಜಮೀಂದಾರರು ಆಲಯವನ್ನೂ, ಆಲಯದ ಆಭರಣ, ಆಸ್ತಿಗಳನ್ನೂ, ರಕ್ಷಿಸುವರೆಂದೂ ಅವರಲ್ಲಿ ಈ

ಗ್ರಾಮಗಳ ವಿತರಣೆ ಮಾಡಿರಬೇಕು. ವಿಜಯನಗರ ಪತನಾನಂತರವೂ ಆಲಯಕ್ಕೆ ಆಗಮಿಸುವ ಯಾತ್ರಿಕರನ್ನೂ ಅವರ ಪ್ರಾಣ, ಹರಕೆಯ ಸೇವೆಯ ಸಾಮಾಗ್ರಿಗಳನ್ನು ಸುರಕ್ಷಿತರಾಗಿರುವಂತೆ ನೋಡಿಕೊಂಡು ಅವರ ಯಾತ್ರೆ ಕ್ಷೇಮಕರವಾಗಿ ನಡೆಯುವುದೆಂದು ಭಾವಿಸಿ ಈ ರೀತಿಯ ಏರ್ಪಾಡು ಮಾಡಿರಬೇಕು. ಅಥವಾ ಅವನ ಮಕ್ಕಳು ವಾರಸುದಾರರು ಶ್ರೀರಂಗ, ವೆಂಕಟರು ಈ ಮಾರ್ಗವನ್ನೂ ಅನುಸರಿಸಬೇಕು.

ದಕ್ಷಿಣಭಾಗವನ್ನು ಬಿಜಾಪುರ, ಗೋಲ್ಕೊಂಡಗಳ ಸುಲ್ತಾನರು ಆಕ್ರಮಿಸಿದ ಬಳಿಕ ಜಮೀಂದಾರರು ಅವರನ್ನು ಎದುರಿಸಲು, ಓಡಿಸಲೂ ಬಲವಿಲ್ಲದವರಾಗಿಬಿಟ್ಟರು. ಗ್ರಾಮಗಳೆಲ್ಲ ಇಬ್ಬರು ಸುಲ್ತಾನರಲ್ಲಿ ಹಂಚಿ ಹೋಗಿರಬೇಕು. ನಂತರದ ಕಾಲದಲ್ಲಿ ಆರ್ಕಟು ನವಾಬುದಾರಿಯ ಸ್ಥಾಪನೆ ಆದನಂತರ ಹಳ್ಳಿಗಳೂ ಶ್ರೀ ವೆಂಕಟೇಶ್ವರಸ್ವಾಮಿ ಆಲಯವೂ ನವಾಬನ ಆಡಳಿತದ ಪರಿಧಿಗೆ ಸೇರಿರಬಹುದು.

ಈ ಅವಧಿಯಲ್ಲಿ ಎಂದರೆ ಮುಸಲ್ಮಾನ ಆಡಳಿತದ 17 ಹಾಗೂ 18 ನೇ ಶತಮಾನದ ಮಧ್ಯಭಾಗದಲ್ಲಿ ಶ್ರೀ ವೆಂಕಟೇಶ್ವರಸ್ವಾಮಿಯ ಹಲವಾರು ಅನ್ನ ಪ್ರಸಾದ ನಿವೇದನೆಗಳನ್ನು ರದ್ದುಗೊಳಿಸಲಾಯಿತು. ಗಣವರಪು ವೆಂಕಟಕವಿ ಪ್ರಶ್ನಿಸುವಂತೆ - ದೇವರ ಪ್ರಸಾದಗಳನ್ನು ಕಡಿಮೆಮಾಡಿ ದೇವರ ಆಭರಣಗಳನ್ನು ಎತ್ತಿಹಾಕಿದ ಬಾದಶಹನು ದೇವರ ಭಾಗಸ್ವಾಮಿಯೋ ಹೇಗೆ - ಎಂಬಂತಾಗಿ ದೇವರಿಗೆ ನಿತ್ಯವೂ, ಇತರ ಉತ್ಸವ ದಿನಗಳಲ್ಲಿಯೂ ಪ್ರಸಾದ ನಿವೇದನೆ ಕಡಿಮೆಯಾಗತೊಡಗಿತು.

1801ರಲ್ಲಿ ಆಂಗ್ಲರು ಕರ್ನಾಟಿಕ್ ರಾಜ್ಯದೊಡನೆಯೇ ಆಲಯದ ಆಡಳಿತವನ್ನೂ ಕೈವಶ ಮಾಡಿಕೊಂಡಾಗ, ಆಲಯದ ವ್ಯವಹಾರಗಳ ಬಗ್ಗೆ ವಿಚಾರಿಸಿದಾಗ ದೇವರಿಗೆ ದಾನವಾಗಿ ಬಂದಿದ್ದ ಹಳ್ಳಿಗಳ ಬಗ್ಗೆಯೂ ಅವುಗಳನ್ನು ಹಿಂದೆ ಆಚಾರ್ಯ ಪುರುಷರು, ಆಲಯ ಸೇವಾ ಸಿಬ್ಬಂದಿ, ರಕ್ಷಕ ಪಡೆಯ ಮಂದಿ ಅನುಭವಿಸುತ್ತಿದ್ದುದನ್ನೂ ತಿಳಿದುಕೊಂಡಿರಬೇಕು. ಈ ಹಕ್ಕುಗಳನ್ನು ಆಯಾ ವಂಶದವರಿಗೆ ಪುನಃ ಒಪ್ಪಿಸಿ ಆಲಯದಲ್ಲಿ ಪೂಜಾಪರಂಪರೆಯನ್ನು ಅವಿಚ್ಛಿನ್ನವಾಗಿ ನಡೆಯುವಂತೆಯೂ, ಆಲಯದ ಭದ್ರತೆ ಹಾಗೂ ಯಾತ್ರಿಕರ ಸುರಕ್ಷಿತ ಪ್ರಯಾಣವನ್ನು ಸುವ್ಯವಸ್ಥೆಗೊಳಿಸಿರಬೇಕು.

ಹೀಗಾಗಿ ಆಲಯವೂ ತನ್ನ ಭೂಸಂಪತ್ತನ್ನು ಕಳೆದುಕೊಂಡಿತು. ಆದರ ನಿರ್ವಾಹಕ ಸಿಬ್ಬಂದಿ ಹಳ್ಳಿಗಳ ಪೂರ್ಣ ವಿತರಣೆಯಿಂದ ಲಾಭ ಪಡೆದವರಾದರು.

ಆಲಯದ ವ್ಯವಹಾರ ನಿರ್ವಹಣೆ ಕಂಪನಿಯ ಕೈಗೆ ಬರುವ ಮೊದಲು ಆಲಯ ಗ್ರಾಮಗಳ ಬಗೆಗಿನ ಪರಿಸ್ಥಿತಿಗಳ ಬಗ್ಗೆ ಮೇಲೆ ಹೇಳಿದ ವಿವರಗಳು ಸ್ಥೂಲ ಮಾರ್ಗದರ್ಶಿಗಳಾಗಬಹುದು. ಈ ವಿವರದಿಂದಾಗಿ ಕರಕಂಬಾಡಿ ಹಾಗೂ ಕೃಷ್ಣಾಪುರದ ಪಾಳಯಗಾರರು ತಿರುಪತಿಯ ಪಾಳಯಗಾರರೆಂದೇ ಗುರುತಿಸಲ್ಪಟ್ಟ ರೆಂಬುದನ್ನು ತಿಳಿಯ ಬಹುದು. ನಗರವನ್ನು ಕಾಪಾಡುವ ವಿಶೇಷ ಹೊಣೆಯು ಇವರದ್ದಾಗಿದ್ದಿರಬೇಕು.

ಮಾಮಂಡೂರು ಪಾಳಯಗಾರನು ಕಣಿವೆಯ ಹೊರಬಾಗಿಲಿನಲ್ಲಿದ್ದುದರಿಂದ ತಿರುಮಲೆಯ ಬೆಟ್ಟವನ್ನೂ ಆಲಯವನ್ನೂ ಕಾಪಾಡುವ ಕರ್ತವ್ಯ ಹೊಂದಿದ್ದನು. ದಕ್ಷಿಣದತ್ತ ಹೊರಡುವ ಪ್ರಾಚೀನ ಮಾರ್ಗ ಈ ಮೂಲಕ ವಾಗಿಯೇ ಹಾದು ಹೋಗುತ್ತಿದ್ದಿತು. ಆಧುನಿಕ ಕಾಲದಲ್ಲಿ ಮೈಸೂರು ಪ್ರಸ್ಥಭೂಮಿಯಿಂದ ವೆಂಕಟಗಿರಿ ಕೋಟೆ, ದಾಮಲ್‌ಚೆರುವು, ಪುಂಗನೂರು, ಪಲಮನೆರುಗಳನ್ನು ತಲುಪಲು ಈ ಮಾರ್ಗವನ್ನು ಮೊದಲಿಗೆ ಮರಾಠರು ಬಳಸಿದಂತೆ ಕಂಡುಬರುತ್ತದೆ. ಇದೇ ಮಾರ್ಗದ ಮೂಲಕ ವೆಂಕಟಗಿರಿಕೋಟೆ, ನಾಯಕನನೇರಿ ಗುಡಿಯಾತ್ತಂಗಳನ್ನೂ ಸೇರಬಹುದಾಗಿದ್ದಿತು. ಚಿತ್ತೂರುನಿಂದ ಕೋಲಾರದವರೆಗೆ ಮೊಗಿಲಿಯ ಘಟ್ಟಗಳು ಹಾಗೂ

ಪಲಮನೇರುಗಳ ಮೂಲಕದ ರಸ್ತೆಯನ್ನು ಈಸ್ಟ್ ಇಂಡಿಯಾ ಕಂಪನಿಯ ಕಾಲದಲ್ಲಿ ಮೈಸೂರು ಯುದ್ಧಗಳ ಸಮಯದಲ್ಲಿ ಚಲಾವಣೆಗೆ ತಂದಿರಬೇಕು.

'ಇನಾಂದಾರರ ವಶದಲ್ಲಿನ ಹಳ್ಳಿಗಳ ವಿವರ' ಎನ್ನುವ ಫಸಲಿ 1217 ನೇ ವರ್ಷದ (ಕ್ರಿ.ಶ.1807) (ಸಂಪುಟ 16 ಪು.474-476) ದಾಖಲೆಯನ್ನು ನೋಡಿದರೆ ನೇರ ಆಡಳಿತವನ್ನು ವಹಿಸಿಕೊಂಡ ಅನತಿ ಕಾಲದಲ್ಲಿಯೇ ಸರ್ಕಾರವು ವಿವಿಧ ವ್ಯಕ್ತಿ, ಪಕ್ಷಗಳ ಹಕ್ಕುಗಳ ಬಗ್ಗೆ ಆಳವಾದ ತೀವ್ರವಾದ ವಿಚಾರಣೆ ನಡೆಸಿ ಇನಾಂದಾರರಲ್ಲಿದ್ದ ದಾಖಲೆಗಳ ಪರಿಶೀಲನೆ ನಡೆಸಿತೆಂದು ಹೇಳಬಹುದು. ಈ ಒಂದು ವಿವರ ಪಟ್ಟಿಯು ದಾನ ನೀಡಿದ ಪರಿಸ್ಥಿತಿ, ದಾನ ನೀಡಿದವರ ಹೆಸರು, ಪಡೆದವರ ಹೆಸರು, ಕೆಲ ಸಂದರ್ಭಗಳಲ್ಲಿ ದಾನದ ದಿನಾಂಕವನ್ನು ನೀಡಿ, ಈ ಬಗ್ಗೆ ಇರಬಹುದಾದ ಶಾಸನ (ತಾಮ್ರಪತ್ರ) ದ ಬಗ್ಗೆ ಹೇಳುತ್ತದೆ. ಹಲವು ದಾನಗಳನ್ನು ಧಾರಾತೀರ್ಥದ ಮೂಲಕ ಮಾಡಲಾಯಿತೆಂದು ಹೇಳಲಾಗಿದೆ. ಆಲಯದ ಬೀಗದ ಕೈಗಳು ವಂಶ ಪಾರಪರ್ಯವಾಗಿ ಇನಾಂದಾರರ ಬಳಿಯೇ ಇರುವುದು ಎಂದು ಹೇಳಲಾಗಿದೆ. (ಲಿಖಿತ ದಾಖಲೆಯಿಲ್ಲದಿದ್ದರೂ ಸಹ)

ಈ ವಿವರಪಟ್ಟಿಯು ಆಲಯ ಗ್ರಾಮಗಳ ಸಾಮಾನ್ಯ ವಿವರಣೆಯನ್ನೂ ಒಳಗೊಂಡಿದೆ. ಇದರ ಸಂಖ್ಯೆ 174 ಎಂದು ತಿಳಿಸಲಾಗಿದ್ದು, ವಿವರ ಹೀಗಿದೆ-

| | |
|---|---|
| 1. ಜಿಯಂಗಾರರು ಏಕಾಂಗಿಗಳು ಮತ್ತಿತರ ಆಲಯ ಸಿಬ್ಬಂದಿ | 36 |
| 2 ಪಾಳಯಗಾರರ ವಶದ ಹಳ್ಳಿಗಳು: | |
| ಕರಕಂಬಾಡಿ | 5 |
| ಕೃಷ್ಣಾಪುರ | 5 |
| ಮಾಮಂಡೂರು | 7 |
| ಕಾಳಹಸ್ತಿ | 15 |
| ಕಾರ್ವೇಟಿನಗರ | 36 |
| ನಾಗಪಟ್ಲ | 34 |
| ಮೊಗರಾಲ | 1 |
| ಮಟ್ಲವಾರು | 17 |
| 3. ಸರ್ಕಾರದ ಅಧೀನ ಗ್ರಾಮಗಳು | |
| ತಿರುಪತಿ ಕಸಬಾ | 6 |
| ಚಂದ್ರಗಿರಿ | 5 |
| ಗಾಜುಲ ಮಂಡಯಂ | 7 |
| ಒಟ್ಟು | 174 |

ಕಂಪನಿಯ ಅಧೀನದಲ್ಲಿದ್ದ ಆಲಯದ 18 ಗ್ರಾಮಗಳನ್ನು ತಾಲೂಕುಗಳಲ್ಲಿ ಹಂಚಲಾಗಿದ್ದು, ತಿರುಪತಿ, ಚಂದ್ರಗಿರಿ, ಗಾಜುಲಮಂಡ್ಯಂಗಳಲ್ಲಿ ಈ ರೀತಿ ವಿತರಣೆ ಆಗಿದ್ದವು.

ತಿರುಪತಿ - 1) ಕಸಬಾ ತಿರುಪತಿ, 2) ಪೇರೂರು, 3) ಚಾಕಪಲ್ಲಿ 4) ಅವಿಲಾಲ, 5) ಕೂಡೀವಂ 6) ತುಂಡುಗುಂ.

ಚಂದ್ರಗಿರಿ - 1) ಕಸಬಾ ಚಂದ್ರಗಿರಿ, 2) ತೊಂಡವಾಡ, 3) ಶನಂಬಟ್ಲ, 4) ಆಗರಾಲ, 5) ಮಾಮಂಡೂರು.

ಗಾಜುಲ ಮಂಡ್ಯಂ - 1) ದೋರ್ನಕಂಬಲ, 2) ಗಾಜುಲಮಂಡ್ಯಂ, 3) ದೀಮೀವಂ, 4) ಪಾಡಿ, 5) ಮೋಟಮಂಗಲಂ, 6) ಮೋಟೂರು, 7) ಸುನ್ನಪುಪಲ್ಲಿ.

ಶ್ರೋತ್ರೀಯವಾದಂತಹ ಚಿರುತಾನೂರು (ತಿರುಚಾನೂರು) ಹೊಸಹಳೆಯ ಆಗ್ರಹಾರವೆಲ್ಲ ಸೇರಿ 52 ವೃತ್ತಿಗಳಾಗಿದ್ದು, ಮಹಮದಾಲಿಯ ಕಂದಾಯ ಮಂತ್ರಿಯೂ ಆರ್ಕಾಟು ಸೂಬಾದ ರಾಜ್ಯಪಾಲನೂ ಆಗಿದ್ದ ರಾಯೋಜಿಯು ಅದನ್ನು ಬ್ರಾಹ್ಮಣರಲ್ಲಿ ಪುನರ್ವಿಗಂಡಣೆ ಮಾಡಿ ವಿತರಿಸಿದ ಆಸಕ್ತಿಕಾರಕ ವಿವರವನ್ನು ಕಾಣುತ್ತೇವೆ.

ಭಾವನಾಮ ಸಂವತ್ಸರದಲ್ಲಿ ಶ್ರೀನಿವಾಸಾಚಾರಿಯು 60 ಕಾವೇರಿಪಾಕ್ ಪಗೋಡಗಳ ಒಂದು ಶ್ರೋತ್ರೀಯವನ್ನು ಏರ್ಪಡಿಸಿ 26 ವೃತ್ತಿಗಳ ಅಗ್ರಹಾರವಾಗಿಸಿ ಅದನ್ನು ಬ್ರಾಹ್ಮಣರಿಗೆ ಧಾರದತ್ತವಾಗಿ ಬರೆದು ಕೊಟ್ಟನು. ಇದಾದ ನಂತರ ಹೇವಿಳಂಬಿಸಂವತ್ಸರದಲ್ಲಿ ರಾಜಾ ಬೀರಬಲ್ ರಾಯೋಜಿಯು ಈ ಹಳ್ಳಿಗಳಿಂದ ಕಂದಾಯವನ್ನು ವಸೂಲಿಮಾಡಿ ಪದ್ಮಸರೋವರದ ಸುತ್ತಲೂ, 26 ಮನೆಗಳ ಅಗ್ರಹಾರವನ್ನು ನಿರ್ಮಿಸಿ 26 ವೃತ್ತಿಗಳನ್ನಾಗಿಸಿ ಬ್ರಾಹ್ಮಣರಿಗೆ ಅವುಗಳನ್ನು ಧಾರಾದತ್ತವಾಗಿ ನೀಡಿದನು.

ಪದ್ಮಪುರಾಣದ ವೆಂಕಟಾಚಲ ಮಹಾತ್ಮ್ಯದಲ್ಲಿಯೂ, ಕೆಲವು ಶಾಸನಗಳಲ್ಲಿಯೂ ಶುಕಮಹರ್ಷಿ ಯಿಂದುಂಟಾದ 108 ಬ್ರಾಹ್ಮಣ ಕುಟುಂಬಗಳ ಉಲ್ಲೇಖವಿದ್ದು ಇವುಗಳಲ್ಲಿನ ಮೂರು ಕುಟುಂಬಗಳ ಯಜಮಾನರು ಶ್ರೀ ವೆಂಕಟೇಶ್ವರಸ್ವಾಮಿಆಲಯದ ಆಡಳಿತ ಸಮಿತಿಯ ಸ್ಥಾನತ್ತಾರರನ್ನು ಪ್ರತಿನಿಧಿಸುವರು. ಹೊಸ ಅಗ್ರಹಾರದ 26 ಬ್ರಾಹ್ಮಣ ಕುಟುಂಬಗಳ ಸ್ಥಾಪನೆಗೆ ಕಾರಣವಾಗಲೀ, ಸಂದರ್ಭವಾಗಲೀ ವಿವರಣೆ ಹೊಂದಿಲ್ಲ. ಪ್ರಾಯಶಃ ಮಹಮದೀಯರ ಧಾಳಿಗಳ ನಂತರ ಖಿಲವಾಗುತ್ತಿದ್ದ 108 ಕುಟುಂಬಗಳ ಪುನರುದ್ಧರಣ ಆಗಿರಬಹುದು ಅಥವಾ ಹಿಂದಿನ 108 ಕುಟುಂಬಗಳಿಗೆ 26 ಹೊಸ ಕುಟುಂಬಗಳನ್ನು ಸೇರಿಸುವ ಪ್ರಯತ್ನ ಆಗಿರಬಹುದು.

ದೇಶದಲ್ಲಿನ ಪರಿಸ್ಥಿತಿಗಳು ಹೆಚ್ಚು ಕಡಿಮೆ ಆಗುತ್ತಿದ್ದಾಗಲೂ ಆಲಯದ ನಿತ್ಯನೈಮಿತ್ತಿಕ ಕಾರ್ಯಗಳಿಗೆ ಉತ್ಸವ ಹಬ್ಬಗಳಿಗೆ ಯಾವ ಅಡಚಣೆಯೂ ಉಂಟಾಗಲಿಲ್ಲ. ಭಾರತದ ಎಲ್ಲ ಭಾಗದಿಂದಲೂ ಯಾತ್ರಿಕರು ಬರುತ್ತಿದ್ದು ಅವರೆಲ್ಲರಿಗೂ ತಮ್ಮ ಭಕ್ತಿಯ ಸೇವೆಯನ್ನು ಸಲ್ಲಿಸಲು ಅವಕಾಶ ನೀಡಲಾಗಿದ್ದಿತು. 1804 ರಲ್ಲಿ ಸುಬ್ಬರಾವ್ ಪಡೆದು ಅನುವಾದಿಸಿದ ಒಂದು ವರದಿಯು ಅಂದಿನ ಕಾಲದಲ್ಲಿನ ಆಲಯದ ಪರಿಸ್ಥಿತಿಯನ್ನೂ, ಅಲಯ ನಿರ್ವಾಹಕರಲ್ಲಿ ಕಡಮೆ ಆಗುತ್ತಿದ್ದ ಪ್ರಾಮಾಣಿಕತೆಯನ್ನೂ ವಿವರಿಸುತ್ತದೆ. ಇವರು ಆಲಯ ನಿರ್ವಹಣೆಗೆ ಸರ್ಕಾರ ನೀಡಿದ ಹಣದ ಒಂದು ಭಾಗವನ್ನು ದುರುಪಯೋಗ ಗೊಳಿಸಿದ್ದರು. ಈ ದಾಖಲೆ ಹೀಗಿದೆ.

**ಪುರಜಾತೀ:** ವಿವಿಧ ದೇಶಗಳ ಜನರು ಭಕ್ತಿ ಶ್ರದ್ಧೆಗಳಿಂದ ವರ್ಷವರ್ಷವೂ ತಿರುಪತಿಗೆ ಬರುತ್ತಾರೆ.

(ಮೆಕೆಂಜಿ ಮ್ಯಾನುಸ್ಕ್ರಿಪ್ಟ್ಸ್ : ಟ್ರಾನ್ಸ್‌ಲೇಷನ್ಸ್ ಆಂಡ ರಿಪೋರ್ಟ್ಸ್ ಸಂ-16, ಪುಟ-491 ರಿಂದ 493)

1. ಮಹಾಕ್ಷೇತ್ರವೆಂದು ತಿರುಪತಿಯನ್ನು ಗುರುತಿಸಲಾಗಿದ್ದು ಬೇರೆ ಬೇರೆ ದೇಶಗಳಿಂದ ಜನರು ಇಲ್ಲಿಗೆ ಬರುತ್ತಾರೆ.

1. ಕುನುಡ್, 2. ಕನ್ನಡ, 3. ಗುಜರ, 4. ಮಹುರವಾಡ, 5. ಮಹಾರಾಷ್ಟ್ರ, 6. ಕೊಂಕಣ, 7. ಸೌರಾಷ್ಟ್ರ, 8. ಮಲೆಯಾಳ

ಇವುಗಳೇ ಅಲ್ಲದೇ ಬೇರೆ ಕಡೆಯ ಹಿಂದೂ ಜನರೂ ಸ್ವಾಮಿಯನ್ನು ನೋಡಲು ತಿರುಪತಿಗೆ ಬರುತ್ತಾರೆ.

2. ಬೇರೆ ಬೇರೆ ಸ್ಥಳಗಳಿಂದ ಜನರು ತಿರುಪತಿಗೆ ಬರುವುದನ್ನಿಲ್ಲಿ ಪಟ್ಟಿ ಮಾಡಲಾಗಿದೆ. ಉತ್ತರಕ್ಕೆ ಕಾಶೀ, ಗಯ, ಪ್ರಯಾಗ, ಹರಿದ್ವಾರ, ಕಾಶ್ಮೀರ, ಉಜ್ಜೈನ, ಬಬಿಯೋಲ? ಅಯೋಧ್ಯ, ಜಗನ್ನಾಥ- ಮೊದಲಾದ ಹಲವಾರು ದೇಶಗಳು.

ದಕ್ಷಿಣಕ್ಕೆ ಆರ್ಕಾಟು, ತಿರುನಲ್ವೇಲಿ, ಮಧುರಾ, ರಾಮೇಶ್ವರ, ಮಲೆಯಾಳ, ಅನಂತಶಯನ, ಪೂರ್ವಕ್ಕೆ ಚೆನ್ನಪಟ್ನ ಅಥವಾ ಮದರಾಸು, ಕಾಳಹಸ್ತಿ, ನೆಲ್ಲೂರು, ಬಂದರು, ಮಚಲೀಪಟ್ನ, ರಾಜಮಹೇಂದ್ರ, ಶ್ರೀಕಾಕುಳ ಮುಂತಾದ ದೇಶಗಳು. ಪಶ್ಚಿಮಕ್ಕೆ ಶ್ರೀರಂಗಪಟ್ನ, ಬಿದನೂರು, ಉಡುಪಿ, ಸುಬ್ರಹ್ಮಣ್ಯ, ಗೋವಾ, ಗೋಕರ್ಣ, ಇಕ್ಕೇರಿ, ಗುತ್ತಿ, ಆದವಾನಿ, ಹರಿಹರ, ಬಳ್ಳಾರಿ ಮೊದಲಾದ ಪ್ರಾಂತ್ಯಗಳು.

6. ಹೀಗೆ ಹಿಂದೂಗಳಿರುವ ಎಲ್ಲಕಡೆಗಳಿಂದಲೂ ಬ್ರಾಹ್ಮಣರು, ಗೋಸಾಯಿಗಳು, ಬೈರಾಗಿಗಳು, ವುದಾಸಿ ಗಳು, ತಿರುಮಲೆಗೆ ಬಂದು ಕಾಣಿಕೆಗಳನ್ನು ಸಮರ್ಪಿಸಿ, ಸ್ವಾಮಿಗೆ ತಮ್ಮ ಯೋಗ್ಯತೆಗೆ ತಕ್ಕಂತಹ ಸೇವೆಯನ್ನು ಮಾಡುತ್ತಿದ್ದರು. ಮ್ಲೇಚ್ಛರು (ಮುಸಲ್ಮಾನರು) ಆಂಗ್ಲರೂ ಸಹ ವಿವಿಧ ರೀತಿಯ ಹರಕೆ ಹೊತ್ತು ತಮ್ಮ ಕಾಣಿಕೆಯಾಗಿ ಹಲವಾರು ಸಾವಿರ ರೂಪಾಯಿಗಳನ್ನು ಕಳುಹಿಸುತ್ತಿದ್ದರು. ಇವರೆಲ್ಲರಿಗೂ ಇಲ್ಲಿನ ಆಲಯದ ಬಹುಶ್ರುತರಾದ ಸಿಬ್ಬಂದಿವರ್ಗದವರು ಅವರವರ ಯೋಗ್ಯತೆ, ಹಿರಿತನದ ಅನುಸಾರವಾಗಿ ಗೌರವ ನೀಡುತ್ತಿದ್ದರು. ಆ ಮೂಲಕ ವಾಗಿ ಧನವನ್ನೂ ಸಂಗ್ರಹಿಸುತ್ತಿದ್ದರು. ಯಾವುದೇ ರಾಜಕೀಯ ಏಳುಬೀಳುಗಳೂ ಇಲ್ಲದೇಸುತ್ತಲೂ ಶಾಂತಿ ಸೌಹಾರ್ದಗಳು ಸಮೃದ್ಧಿಯಾಗಿರಲು, ಜನರು ನಿಶ್ಚಿಂತೆಯಿಂದ ಪ್ರಯಾಣ ಮಾಡುವ ಅವಕಾಶವಿರುವಾಗ, ಯಾತ್ರಿಕರ ಅಂತಸ್ತಿಗೆ ತಕ್ಕಂತೆ ಗೌರವ ಮರ್ಯಾದೆಗಳನ್ನು ತೋರಿಸುತ್ತ ಆಲಯ ಕಾರ್ಯಕ್ರಮಗಳು ನಡೆದಿರುವಾಗ ಸಾಕಷ್ಟು ಲಕ್ಷ - ಲಕ್ಷಾಂತರ ಪಗೋಡಗಳು ಸಂಗ್ರಹವಾಗುತ್ತಿದಿತು. ಯುದ್ಧದ ದಿನಗಳಲ್ಲಿ ಶಾಂತಿ ಕದಡಿದಾಗ, ಆಲಯ ನಿರ್ವಾಹಕರು ಯಾತ್ರಿಕರನ್ನು ಅಲಕ್ಷ್ಯ ಮಾಡಿದಾಗ, ಯಾತ್ರಿಕರಿಗೆ ತಕ್ಕ ಮರ್ಯಾದೆ ಗೌರವ ಸಲ್ಲದಿದ್ದಾಗ - ಈ ಧನದ ಮೊತ್ತ ಇಳಿತಹೊಂದಿ 60 - 70 ಸಾವಿರ ಪಗೋಡ ಗಳಾಗುತ್ತಿದ್ದವು. ಹಲವು ಬಾರಿ ಬಂದವರನ್ನು ಆದರಿಸಿ ಗೌರವದಿಂದ ಬರಮಾಡಿಕೊಂಡಾಗ 40 - 50 ಸಾವಿರ ಪಗೋಡಗಳು ಹೆಚ್ಚಿಗೆ ಆದಾಯವಾಗಿ ಸ್ವಾಮಿಗೆ 20 - 30 ಸಾವಿರ ಪಗೋಡಗಳ ಆದಾಯ ಹೆಚ್ಚುತ್ತಿದ್ದಿತು.

7. ಎಲ್ಲ ಕಾಲದಲ್ಲಿಯೂ ನೈವೇದ್ಯ, ಅರ್ಚನೆ, ಅಭಿಷೇಕಗಳು ಯಾವ ಅಡ್ಡಿ ಅತಂಕಗಳಿಲ್ಲದೆ ನಡೆಯು ತ್ತಿದ್ದವು. ತಿರುಮಲೆಯಲ್ಲಿ ವಾಸವಾಗಿದ್ದು ಆಲಯದ ಕೆಲಸ ಕಾರ್ಯಗಳನ್ನೂ ನಡೆಸುವವರಲ್ಲಿ, ತಪಸ್ವಿಗಳಲ್ಲಿ, ಬೇರೆ ಬೇರೆ ಕಡೆಗಳಿಂದ ಸ್ವಾಮಿಯನ್ನು ಸಂದರ್ಶಿಸಲು ಬಂದವರಲ್ಲಿ ನೈವೇದ್ಯವನ್ನು ಹಂಚಲಾಗುತ್ತಿದ್ದಿತು. ದೇವರ ಪೂಜೆ ಪುರಸ್ಕಾರಗಳಿಗೆ ಕೊರತೆಯಾಗದಂತೆ ಆಯುದ ಕೆಲಸಗಳನ್ನು ನಿರ್ವಹಿಸುವ ಸಿಬ್ಬಂದಿಗೆ ವೇತನವನ್ನು ನೀಡಲಾಗುತ್ತಿದ್ದಿತು. ಸ್ಥಳೀಯ ಅಧಿಕಾರಿಗಳಿಗೆ ಯಾತ್ರಿಕರಿಗೆ ಅನಾನುಕೂಲವಾಗದ ಹಕ್ಕನ್ನು ಅಥವಾ ಸುಂಕವನ್ನು ನೀಡಲಾಗುತ್ತಿದ್ದಿತು.

8. ಕಲಿಯುಗದ ಆರಂಭದಿಂದಲೂ ಈ ಪದ್ಧತಿಯು ಎಲ್ಲಿಯೂ ನಿಲ್ಲದಂತೆ ನಡೆದುಬಂದಿದೆ. ಮೊಗಲರ ಕಾಲದವರೆಗೆ ಕರ್ನಾಟಿಕ್ ಸರ್ಕಾರದ ಕೊನೆಯವರೆಗೆ ಈ ಪದ್ಧತಿ ನಡೆದುಬಂದಿತು. ಆದರೆ ಕರ್ನಾಟಿಕ್ ಸರ್ಕಾರದ ಕಾಲದಲ್ಲಿದ್ದ ಸಂಭಾವನೆಗಳು ಮೊದಲಿಗೆ ಇದ್ದದ್ದಕ್ಕಿಂತ ಅರವತ್ನಾಲ್ಕನೆ ಒಂದು ಭಾಗಕ್ಕೆ ತಗ್ಗಿದ್ದು, ಸ್ವಾಮಿಯ ಉತ್ಸವ ಪೂಜೆಗಳು ಕಡಿಮೆಯಾಗಿ, ಯಾತ್ರಿಕರು ಹೆಚ್ಚಿನ ತಾಪತ್ರಯಕ್ಕೆ ಗುರಿಯಾಗಿ, ಇಲ್ಲಿನ ಸ್ಥಳವಂದಿಗರ ಏಳ್ಗೆ ಕುಂಠಿತವಾಗಿದೆ.

ನಂತರದ ರಾಜರುಗಳು ಸ್ವಾಮಿಯ ಉತ್ಸವ ಆರಾಧನೆಗಳಿಗಾಗಿ ಧನವನ್ನು ಕೊಡಮಾಡಿದರೂ ಸ್ಥಳವಂದಿಗರು ದೇವದ್ರೋಹ ಚಿಂತಕರಾಗಿ, ದೇವರ ದುಡ್ಡನ್ನು ದುರುಪಯೋಗ ಪಡಿಸುತ್ತಿದ್ದಾರೆ ಎಂದು ಈ ವರದಿಯು ತಿಳಿಸುತ್ತದೆ. ಹೀಗಾಗಿ ಸ್ವಾಮಿಯ ಪ್ರಾಚೀನ ಕಾಲದಂತೆಯೇ ಸಾವಿರಾರು ರೂಪಾಯಿಗಳ ಆದಾಯ ಪಡೆದರೂ ಅದರಲ್ಲಿನ ಸ್ವಲ್ಪ ಮೊತ್ತ ಸೋರಿ ಹೋಗುತ್ತಿತ್ತು. ಆದರೆ ಈ ದೇವದ್ರೋಹಿಗಳು ಉದ್ಧಾರವಾಗುವುದಿಲ್ಲವೆಂದೂ ಇವರುಗಳ ವಂಶ ಬೆಳೆಯದೆ ಕ್ಷಯವಾಗುವುದೆಂದೂ ಹೇಳಲಾಗಿದೆ. ಇತಹ ದೈವದ್ರೋಹ ಚಿಂತಕರಲ್ಲಿ ಒಬ್ಬಿಬ್ಬ ಅಧಿಕಾರಸ್ಥರು ವರ್ಷಕ್ಕೆ ಒಮ್ಮೆ ಮರಣ ಹೊಂದಿದ್ದಾರೆ.

ಹೀಗಾಗಿ ಜನರು ಇಲ್ಲಿ ಅಧಿಕಾರಿಗಳಾಗಲು ಹಿಂದೆಗೆಯುತ್ತಾರೆ. ಯಾರೇ ಆಗಲೀ ಅಧಿಕಾರಿಗಳಾದಾಗ ಅವರು ದೇವರ ಧನದ ಧರ್ಮದರ್ಶಿಗಳಾದರೂ ಚಿತ್ತಚಾಂಚಲ್ಯದಿಂದ ಭ್ರಷ್ಟರಾಗುವವರು. ಅವರು ಖಂಡಿತವಾಗಿ ಮರಣಿಸುವರು ಹಾಗೂ ಅವರು ಲಪಟಾಯಿಸಿದ ಹಣ ಬಳಕೆಗೆ ಬಾರದ ಹಣವಾಗುತ್ತದೆ. ಆದರೆ ದೇವರಿಗೆ ದ್ರೋಹ ಬಗೆಯದ ಜನರು ಬದುಕಿ, ಬೆಳೆಯುತ್ತಾರೆ. ಹೀಗಾಗಿ ಭಯ ಭಕ್ತಿಗಳಿಂದ ಈ ಕರ್ತವ್ಯವನ್ನು ನಿಭಾಯಿಸಬೇಕು.

ನಂತರ ಈ ವರದಿಯ ಆಲಯದ ಗೋಡೆಗಳ ಮೇಲಿನ ಶಾಸನ ಪಾಠಗಳ ಬಗ್ಗೆ ತಿಳಿಸುತ್ತ ಅವುಗಳ ಪಾಠದ ಪ್ರತಿ ಮಾಡುವ ವಿಧಾನವನ್ನು ತಿಳಿಸುತ್ತ ಹಲವಾರು ತಾಮ್ರ ಪತ್ರಗಳೂ ಇರುವುದಾಗಿಯೂ, ಅವುಗಳನ್ನು ಓದಿ ನೋಡಿದಾಗ ಅವೆಲ್ಲ ಸ್ವಾಮಿಯ ಬಗೆಗಿನ ಹಾಡುಗಳನ್ನು (ತಾಳ್ಲಪಾಕಂ ಕೀರ್ತನೆಗಳು) ಹೊಂದಿರುವುದಾಗಿ ತಿಳಿದು ಬಂದಿರುವುದಾಗಿಯೂ ವಕ್ಕಾಣಿಸುತ್ತದೆ.

"1795 ರಲ್ಲಿ ಈ ತಾಲ್ಲೂಕುಗಳನ್ನು ನವಾಬನಿಂದ ಒಪ್ಪಂದದಲ್ಲಿ ಪಡದ ಕಲೋಸಂ ಸಟಿ ಒಬ್ಬ ಯೂರೋಪಿಯನ್ನನ ಸೇವಕನಾಗಿದ್ದು ಧರ್ಮಭೀರುವಾದ ಮನುಷ್ಯನಾಗಿದ್ದ. ಸರ್ಕಾರ ಸ್ವಾಮಿ ಸೇವೆಯಲ್ಲಿ ನೀಡಿದ ಎಲ್ಲ ಧನವನ್ನೂ ಸ್ವಾಮಿಯ ಪೂಜೆಯಲ್ಲಿಯೇ ತೊಡಗಿಸಿದ" ಎಂದು ವರದಿಯು ತಿಳಿಸುತ್ತದೆ.

ಈ ವರದಿಯ ಮುಕ್ತಾಯ ಹೀಗೆ-

"ತಾಮ್ರದ ಪತ್ರಗಳನ್ನು ಹೊಂದಿದ್ದು ಅದರಲ್ಲಿರುವ ವಿಷಯಗಳನ್ನು ತಿಳಿದಿರುವ ಸ್ಥಳವಂದಿಗರು ಅವುಗಳನ್ನು ದಾನನೀಡಿದ ಪ್ರಾಚೀನ ರಾಜರ ಬಗ್ಗೆ ತಿಳಿದಿದ್ದರೂ, ಎಲ್ಲಿ ತಮ್ಮ ಆದಾಯ ಮಿರಾಸಿಗಳಿಗೆ ಧಕ್ಕೆ ಉಂಟಾಗುವುದೋ ಎಂಬ ಭಯದಿಂದ ಈ ಬಗ್ಗೆ ಪರಿಶೋಧನೆ ಮಾಡುತ್ತಿಲ್ಲ."

1209 ಫಸಲಿ ವರ್ಷದ (1799 ಕ್ರಿ.ಶ.) ಮತ್ತೊಂದು ವರದಿಯು 'ತಿರುಪತಿ ಶ್ರಿ ವೆಂಕಟೇಶ್ವರಸ್ವಾಮಿಯ ವಿವರ' ಎಂದು ಹೆಸರು ಪಡೆದಿದ್ದು ಚಂದ್ರಗಿರಿ ಸರ್ಕಾರದ ತಿರುಪತಿ ಫರಗಣದ ಐತಿಹಾಸಿಕ ವಿವರವಾಗಿದ್ದು - 1209 ಫಸಲಿವರ್ಷದ ವೇದಶಾಸ್ತ್ರ ಪುರಾಣಗಳಲ್ಲಿ ಹೇಳಿದ ಸಿದ್ಧಾರ್ಥಿ ಸಂವತ್ಸರದ್ದು - ಯಾದವರಾಯರು ಈ ಆಲಯವನ್ನು ಸ್ಥಾಪನೆ ಮಾಡಿದರೆಂದೂ ಆಲಯಕ್ಕೆಲ್ಲ ರೀತಿಯ ಆದಾಯದ ಏರ್ಪಾಡುಗಳನ್ನು ಮಾಡಿದರೆಂದೂ ವಿವರಿಸುತ್ತದೆ. ಆ ವಿವರ ಹೀಗೆ - ಹಲವು ಆಡಳಿತಗಾರರ ಕಾಲದಲ್ಲಿ ಉಂಟಾದ ಹಲವಾರು ಅಭಿವೃದ್ಧಿ ಕಾರ್ಯಗಳಲ್ಲಿ ಕೆಳಗಣ ಉಲ್ಲೇಖಗಳು ಆಸಕ್ತಿಕರವಾದವುಗಳಾಗಿವೆ.

### ದೈನಿಕ ನಿವೇದನೆ ಶುಕ್ರವಾರ ಅಭಿಷೇಕದ ದಿತ್ತ

ಯಾದವರಾಯರ ಕಾಲದಲ್ಲಿ ಆಲಯದ ಸ್ವಾಮಿಯ ನಿವೇದನಕ್ಕೆ ಪೂರ್ತಿಯಾಗಿ ಸಾಮಗ್ರಿಯ ಪ್ರಬಂಧ ಮಾಡಿದ್ದರು. ಅದರ ಪಟ್ಟಿ ಹೀಗಿದೆ-

### ಶುಕ್ರವಾರಾಭಿಷೇಕದ ಸುಗಂಧಗಳು

1. ಪುನುಗು - 32 ಮೀಸೆ,ಕಸ್ತೂರಿ 1 ಸೇರು, ಸುಗಂಧಜಲ - 12 ತಂಬಿಗೆ, ಗಂಧದ ಚಕ್ಕೆ ಹತ್ತು ಸೇರು.

### ದೈನಿಕ ಸಮರ್ಪಣೆಗಳು

| | | | | |
|---|---|---|---|---|
| 1. | ದೀಪಕ್ಕೆ ತುಪ್ಪ | - | 50 | ಕುಡಿಕೆ. |
| 2. | ಇತರ ತುಪ್ಪ ವೆಚ್ಚಗಳಿಗೆ | - | 400 | ಕುಡಿಕೆ. |
| 3. | ಎಣ್ಣೆ | - | 200 | ಕುಡಿಕೆ. |

| | | | | |
|---|---|---|---|---|
| 4. | ಅಕ್ಕಿ ಒಂದು ಸೋಲಕ್ಕೆ 16ಸೇರು<br>(1000 ಸೋಲಕ್ಕೆ ನೂರು ಕುಡಿಕೆ) | - | 100 | ಕುಡಿಕೆ. |
| 5. | ಉಪ್ಪು | - | 30 | ಕುಡಿಕೆ. |
| 6. | ಇಂಗು | - | 1 | ವೀಸೆ. |
| 7. | ಬೆಂಜಾಮಿನ್?ಬೆನ್‌ಜೈನ್? | - | 4 | ವೀಸೆ. |
| 8. | ಕರ್ಪೂರ | - | 2 | ವೀಸೆ. |
| 9. | ಹಾಲು | - | 20 | ಕುಡಿಕೆ |
| 10. | ಹೆಸರು | - | 60 | ಕುಡಿಕೆ. |
| 11. | ಉದ್ದಿನಬೇಳೆ | - | 50 | ಕುಡಿಕೆ. |
| 12. | ಬೆಲ್ಲ | - | 20 | ಮಣ. |
| 13. | ಸಕ್ಕರೆ | - | 2 | ಮಣ. |
| 14. | ಕಲ್ಲುಸಕ್ಕರೆ | - | 1 | ಮಣ |
| 15. | ಮೆಣಸು | - | 1 | ಮಣ. |
| 16. | ಏಲಕ್ಕಿ | - | 1 1/2 | ಮಣ. |
| 17. | ಜೀರಿಗೆ | - | 1/2 | ಮಣ. |
| 18. | ಅರಿಷಿಣ | - | 1 | ಮಣ. |
| 19. | ಹುಣಿಸೆಹಣ್ಣು | - | 20 | ಮಣ. |
| 20. | ಎಳ್ಳು | - | 4 | ಮಣ. |
| 21. | ಕರಿಬೇವಿನೆಲೆ | - | 10 | ಕಟ್ಟು. |
| 22 | ಕಬ್ಬು | - | 20 | |
| 23. | ನಿಂಬೆಹಣ್ಣು | - | 1000 | |
| 24. | ಮೊಸರು | - | 60 | ಕುಡಿಕೆ. |
| 25. | ತೆಂಗಿನಕಾಯಿ | - | 200 | |
| 26. | ಚಂದನ | - | 2 | ಮಣ. |
| 27. | ಸಿಂಗಮಾಕು ಚಕ್ರಾಲು | - | 20 | ಹಣ. |
| 28. | ಹೊದಿಕೆಯ ಬಟ್ಟೆಯ ಕಣ | - | 10 | |

ತಿರುಪತಿಯ ಗುತ್ತಿಗೆದಾರ ವರದಪ್ಪ ಶೆಟ್ಟಿಯ ಅಧೀನದಲ್ಲಿ ಬೂರುಗೋಜಿ ಪಂತುಲು ಒಂದು ವರ್ಷ ಕೆಲಸ ನಿರ್ವಹಿಸಿದ. ಅವನ ಹಿರಿತನದಲ್ಲಿನ ದಿತ್ತದ ವಿವರ.

**ಸುಗಂಧಗಳು**

1) ಪುನುಗು 1.25 ವೀಸೆ, ಕಸ್ತೂರಿ , 2 ಪಗೋಡತೂಕ, ಗಂಧದ ಚಕ್ಕೆ -2 ಸೇರು, 4 ಜಾಫ್ರಾ - 0.2 ಸೇರು.

**ದೈನಂದಿನ ವೆಚ್ಚಗಳು**

| | | | |
|---|---|---|---|
| 1. | ಅಕ್ಕಿ (ಕುಡಿಕೆಗೆ (6.5 ಸೇರಿನಂತೆ) | 50.25 | ಕುಡಿಕೆ. |
| 2. | ಹೆಸರು (ಕುಡಿಕೆಗೆ 18 ಸೇರಿನಂತೆ) | 0,25 | ಕುಡಿಕೆ. |
| 3. | ಗೋಧಿ | 0.125 | ಕುಡಿಕೆ. |
| 4. | ವಡಿಯಾಲು(ಸಂಡಿಗೆ?) | 0.25 | ಕುಡಿಕೆ. |
| 5. | ಉಪ್ಪು | 0.20 | ಕುಡಿಕೆ. |
| 6. | ತುಪ್ಪ | 38 | ಸೇರು. |
| 7. | ಹುಣಿಸೆಹಣ್ಣು | 1.5 | ಸೇರು. |
| 8. | ಎಣ್ಣೆ | 15.1/6 | ಸೇರು. |
| 9. | ಬೆಲ್ಲ | 10.5 | ಸೇರು. |
| 10 | ಮಡಕೆಗಳು | 4 | |
| 11. | ಒಣಶುಂಠಿ | 0.5 | ಸೇರು. |
| 12. | ಮೆಣಸು | 0.75 | ಸೇರು. |
| 13. | ಹರಿಷಿಣ | 1/16 | ಸೇರು. |
| 14. | ದುಡ್ಡು - ಚಿಲ್ಲರೆ | 219 | ಪಣಂ. |
| 15. | ಯಾಲಕ್ಕಿ | 0.125 | ಸೇರು. |
| 16. | ಇಂಗು | 1/16 | ಸೇರು. |
| 17. | ಕರ್ಪೂರ | 0.25 | ಸೇರು. |

ನಂತರದ ನಿರ್ವಾಕದಲ್ಲಿ ಎಂದರೆ ಕಲುವಸ್ವಾಮಿ ಶೆಟ್ಟಿಯ ಆಡಳಿತದಲ್ಲಿ ಶುಕ್ರವಾರದ ಅಭಿಷೇಕ ಸಾಹಿತ್ಯವನ್ನು ಹೆಚ್ಚಿಸಲಾಯಿತು.

ಪುನುಗು - 1.5 ವೀಸೆ, ಸುಗಂಧ ಚಕ್ಕೆ- 3ಸೇರು, ಜಾಫ್ರಾ - 1 ಸೇರು, ಕಸ್ತೂರಿ - 3 ಪಗೋಡ ತೂಕ.

ಈ ರೀತಿಯ ತೂಕದ ಪ್ರಾವಧಾನ ಆಗಿದ್ದರೂ ಹಲವು ದಿನಗಳಲ್ಲಿ ಇವುಗಳ ತೂಕ ಹೆಚ್ಚಾಗುತ್ತಿದ್ದಿತು.

(ಸೂಚನೆ: ಹಸ್ತಪ್ರತಿಯು ಪ್ರತಿ ವಂಶದವರ ಆಳ್ವಿಕೆಯಿದ್ದಾಗಲೂ ಆಗುತ್ತಿದ್ದಂತಹ ಸಾಮಗ್ರಿಗಳ ವೆಚ್ಚದ ಪಟ್ಟಿಯನ್ನು ನೀಡಿದ್ದರೂ, ಬರಹದ ಕಾಲದಲ್ಲಿ ಜಾರಿಯಲ್ಲಿದ್ದ ತೂಕಗಳ ಹಾಗೂ ಪೂರ್ಣ ಪ್ರಮಾಣದ ದಿತ್ತಗಳನ್ನು ಮಾತ್ರವೇ ಮೇಲೆ ನಮೂದಿಸಲಾಗಿದೆ.)

ವಿಜಯನಗರದ ರಾಯರು ಈ ದಿತ್ತಗಳನ್ನು ಮುಕ್ಕಾಲು ಭಾಗಕ್ಕೆ ಇಳಿಸಿದರಾದರೆ ಶ್ರೀರಂಗರಾಯನಿಂದ ಕೊನೆಯಾಗುವ ಕಡೆಯ ಆರು ಮಂದಿ ರಾಯರುಗಳ ಕಾಲದಲ್ಲಿ ಈ ದಿತ್ತಗಳನ್ನು ಅರ್ಧಕ್ಕೆ ಇಳಿಸಲಾಗಿ, ಮಹಮದೀಯರ ಕಾಲದಲ್ಲಿ ಆರನೇಒಂದು ಭಾಗ, ಏಳನೇ ಒಂದು ಭಾಗಕ್ಕೆ ಇಳಿಸಲಾಯಿತು. 1700 ರಿಂದ 1800 ರವರೆಗೆ ಆಲಯದ ಆಡಳಿತ ನಡೆಸಿದ ಅಮಲ್ದಾರರಪಟ್ಟಿಯನ್ನು ಅವರು ಮಾಡಿದ ಅಭಿವೃದ್ಧಿ ಕಾರ್ಯದೊಡನೆ ನಿರೂಪಿಸಲಾಗಿದೆ.

**ಅಮಲ್ದಾರರ ಪಟ್ಟಿ:** (ಮೆಕೆಂಜಿ ಸಂ. - 25, ಪುಟ-76)

ಅಮಲ್ದಾರರ ಹೆಸರು ಮತ್ತು ಆಡಳಿತ ಕಾಲವನ್ನು ಶಕವರ್ಷದ ವರ್ಷಚಕ್ರದಲ್ಲಿ ಗುರುತಿಸಲಾಗಿದ್ದು ಅವುಗಳ ಕ್ರಿ.ಶ. ಕಾಲಗಣನೆಯನ್ನು ಗುರುತಿಸಲಾಗಿದೆ.

**ದಾವೂದ್‌ಖಾನ್, ಸಾದುಲ್ಲಾಖಾನ್, ಸುಬೇದಾರ್ ಆಲಿ**

| | | | |
|---|---|---|---|
| | ಶಕ ವರ್ಷ 1622 ರಿಂದ (ವಿಕ್ರಮದಿಂದ ರುಧಿರೋದ್ಗಾರಿ) | 44 | 1700 - 1744 |
| 1. | ಅವಸರಾಲು ಸೀತಾರಾಮಯ್ಯ-ತಿರುಪತಿಯ ಆಡಳಿತಗಾರ | 5 | 1700 - 1705 |
| 2. | ಕಾನಾರು ದಾಸರಿ (ಕೋನೇರಿ ದಾಸರಿ) | 7 | 1705 - 1712 |
| 3. | ಔಕುಲೂರು ನರಸಪ್ಪ | 3 | 1712 - 1715 |
| 4. | ಮುನಸೌರಂ (ಮುನೀಶ್ವರಂ) | 2 | 1715 - 1717 |
| 5. | ಕುಮಾರ ವೆಂಕನ್ನಪಂತುಲು | 8 | 1717 - 1725 |
| 6. | ತಡಕಮಲ ಮಾಧವಪಂತಲು | | |
| | (ತೊಂಡ ಮಲ್ಲ ಸರ್ಕಾರದಲ್ಲಿನ ಆಡಳಿತ) | 7 | 1725 - 1732 |
| 7. | ತಡಲಾಪುಕೊಂಡಪ್ಪ ಹಾಗೂ ರಾಜಗೋಪಾಲ ಪಂತಲು | 3 | 1732 -1735 |
| 8. | ರಘುನಾಥ ಆಚಾರ್ಯಲು | 9 | 1735 - 1744 |
| | | | **ಒಟ್ಟು 44 ವರ್ಷ** |

**ಅನ್ವರುದ್ದೀನ್ ಹಾಗೂ ಮಹಮದ್ ಆಲಿಯ ಅಧೀನದಲ್ಲಿ**

| | | | |
|---|---|---|---|
| 9. | ಶ್ರೀನಿವಾಸಾಚಾರ್ಲು | 18 | 1744 - 1762 |
| 10. | ಹೂಗಹಳ್ಳಿ ವೆಂಕಾಜಿ | 1 | 1762 - 1763 |
| 11. | ಶ್ರೀನಿವಾಸಾಚಾರ್ಲು | 1 | 1763 - 1764 |
| 12. | ವೆಲುಗೋಟಿ ವಾರಿ ಪೂರಲ ತಿರುಮಲ ಯೋಗುಲು | 4 | 1764 - 1768 |
| 13. | ರಾಮಲಿಂಗಮೊದಲಿ | 1 | 1768 - 1769 |
| 14. | ಶ್ರೀನಿವಾಸಾಚಾರ್ಲು | 12 | 1769 - 1781 |
| 15. | ಹೈದರನ ಉಪಟಳದ ನಡುವೆ ಔನಿಕುಲ ನರಸಯ್ಯನು | | |
| | ಪ್ಲವ ಸಂವತ್ಸರದಿಂದ ಶೋಭಕೃತ್‌ವರೆಗೆ | 2 | 1781 - 1783 |

| | | | |
|---|---|---|---|
| 16. | ಶ್ರೀನಿವಾಸಾಚಾರ್ಲು | 2.75 | 1783 - 1785 ಸೆಪ್ಟಂಬರ್ |
| 17. | ಪಾತಾಳ ಭೇದಿ ಸೋಮಯಾಜುಲು | 0.25 | 1785 - 1786 |
| 18. | ತರಫು ತಿರುವೆಂಗಳ ಆಚಾರ್ಲು (ತಾಳ್ಳಪಾಕಂ ತಿರುವೆಂಗಳಾಚಾರ್ಲು) (ಇವನ ಆಳ್ವಿಕೆಯ ಕಾಲದಲ್ಲಿ ದೇವರ 32 ಆಭರಣಗಳ ಕಳುವಾಯಿತು.) | 1 | 1786 -1787 |
| 19. | ರಘುನಾಥ ಆಚಾರ್ಲು | 1 | 1787 - 1788 |
| 20. | ಅಪ್ಪಲಾಚಾರ್ಲು | 1 | 1788 -1789 |
| 21. | ರಘುನಾಥ ಆಚಾರ್ಲು | 1 | 1789 - 1790 |
| 22. | ಅಪ್ಪಲಾಚಾರ್ಲು - ಗೌರವನೀಯ ಕಂಪನಿವರೆಗೆ | 1/3 | 17901/3 |
| 23. | ಶ್ರೀನಿವಾಸಾಚಾರ್ಲು,ಕಂಪನಿಯ ಅಧೀನದಲ್ಲಿ | 8 ತಿಂಗಳು | 1790 1/3-1791 |
| 24. | ರಘುನಾಥ ಆಚಾರ್ಲು | 1 ವರ್ಷ | 1791 - 1792 |
| 25. | ಕನರೇಗು ಲಾಲ | 4.75ವರ್ಷ | 1792-1796 ಸೆಪ್ಟಂಬರ್ |
| 26. | ಔಲತೂರ ವೇದಾಂತಾಚಾರ್ಯುಲು | 3 ತಿಂಗಳು | 1797ವರೆಗೆ |
| 27. | ತಿರುಪತಿಯ ಗುತ್ತಿಗೆಯ ವರದಪ್ಪಸೆಟ್ಟಿಯ ಅಧೀನದಲ್ಲಿ ಬೂರಗೋಜಿಪಂತುಲು | 1 ವರ್ಷ | 1797-1798 |
| 28. | ಕಲುವಸ್ವಾಮಿ ಶೆಟ್ಟಿ | 2 ವರ್ಷ | 1798 - 1800 |

ಹಲವು ಕಾರ್ಯನಿರ್ವಾಹಕರ ಕಾಲದಲ್ಲಿ ಉಂಟಾದ ಕೆಲವು ಅಭಿವೃದ್ಧಿ ಕಾರ್ಯಗಳಲ್ಲಿ ಕೆಳಕಂಡ ಅಂಶಗಳು ಆಸಕ್ತಿದಾಯಕವಾಗಿವೆ.

ದೇವರ ಸನ್ನಿಧಿಯಲ್ಲಿ ವೆಂಕಟರಾಮ ದೀಕ್ಷಿತರು 400 ಪಗೋಡ ತೂಕದ ಒಂದು ಚಿನ್ನದ ಶಂಖವನ್ನು ಅರ್ಪಿಸಿದ್ದರು. ಇದ ಹಳೆಯದಾಗಿದ್ದುದರಿಂದ ಒಂದು ನೂರು ಪಗೋಡಗಳ ಹೆಚ್ಚಿನ ಚಿನ್ನವನ್ನು ಶ್ರೀನಿವಾಸ ದೀಕ್ಷಿತರು ಸೇರಿಸಿದರು. ಹೀಗೊಟ್ಟು 500 ಪಗೋಡ ತೂಕದ ಶಂಖವನ್ನು ದೇವರಿಗೆ ಸಮರ್ಪಿಸಲಾಯಿತು.(1722 ಶಾಲಿವಾಹನ ಶಕ - 1800 ಕ್ರಿ.ಶ.)

(ಸೂಚನೆ: ಅರ್ಚಕರಾದ ಶ್ರೀನಿವಾಸ ದೀಕ್ಷಿತರ ಪ್ರಯತ್ನದಿಂದ ಕ್ರಿ.ಶ. 1800 ರಲ್ಲಿ ಸ್ವಾಮಿಯ ಮೇಲಿನ ಹಸ್ತಗಳಲ್ಲಿದ್ದಚಿನ್ನದ ಮುದ್ರೆಯ ಬಗ್ಗೆ ಪ್ರಾಯಶಃ ಹೇಳುತ್ತಿರಬೇಕು.)

ನವಿಲುಗರಿಯ ಹತ್ತು ಕಟ್ಟುಗಳನ್ನು ಚಿನ್ನದ ಮುಲಾಮು ಹಚ್ಚಿದ ಕೈಪಿಡಿಗಳಲ್ಲಿ ಸೇರಿಸಿ ಸಮರ್ಪಣೆ ಮಾಡಲಾಯಿತು.

ಬೆಟ್ಟದ ಮೇಲೆ ಹೊಸ ರಥವನ್ನು ಮಾಡಿಸಲು ಆತ್ಮಾರಾಮ ಪಂತುಲು ಹಾಗೂ ನರಹರಿ ಪಂತುಲು ಅವರುಗಳು 400 ರೂಪಾಯಿಗಳನ್ನು ವೆಚ್ಚ ಮಾಡಿದರು. ಈ ರಥದಲ್ಲಿ ವೆಂಕಟಾಚಲಪತಿಯ ಹಾಗೂ ಶ್ರೀಭೂದೇವಿಯರನ್ನು ಆಸೀನಗೊಳಿಸಿ, ಮೆರವಣಿಗೆ ಮಾಡಲಾಯಿತು.

ಎಲ್ಲ ಅಮಲ್ದಾರರೂ ಕ್ರಮೇಣ ದೇವರ ದಿತ್ತದಲ್ಲಿ ಕಡಿಮೆ ಮಾಡುತ್ತ ಬಂದು ತಮ್ಮ ಜೇಬು ತುಂಬಿಸಿಕೊಳ್ಳುವ ಕೆಲಸ ಮಾಡಿದ್ದರಿಂದ ಈ ದಿತ್ತಗಳ ವಿವರಗಳನ್ನು ಸನ್ನಿಧಾನಕ್ಕೆ ಕಳುಹಿಸುವ ವರದಿಗಳಲ್ಲಿ ಸೂಚಿಸಿಲ್ಲ.

ಕ್ರಿ.ಶ. 1800 ರಲ್ಲಿ ತಿರುಮಲೆಯಲ್ಲಿ ಆಲಯದ ಸುತ್ತ ನಾಲ್ಕು ತೇರು ಬೀದಿಗಳು ಮಾತ್ರವಿದ್ದು ಈ ಬೀದಿಗಳಲ್ಲಿಯೂ ಜನಸಾಂದ್ರತೆ ಅತಿಕಡಿಮೆಯಾಗಿ ಕಾಡು ಕಪ್ಪೆಗಳು, ಹಾವು, ಚೇಳುಗಳೂ ತಿರುಮಲೆಯ ತುಂಬ ಆವರಿಸಿದ್ದು, ಯಾನಾದಿಗಳೂ (ಬೆಟ್ಟದ ಜೀವಿಗಳು ) ಕಾಡಿನ ಸಹಜ ವಾಸಿಗಳಾಗಿದ್ದರು, ಎಂಬುದನ್ನು ಎರಡನೆ ಭಾಗದಲ್ಲಿ ನಾವು ಕಾಣುತ್ತೇವೆ. ಬೆಟ್ಟದ ಮೂಲೆ ಮೊಡಕುಗಳನ್ನು ತಡಕಬಾರದು ಎಂದೂ, ತಿಳಿಯಲು ಯತ್ನಿಸಬಾರದೆಂದೂ ಯಾತ್ರಿಕರಿಗೆ ಎಚ್ಚರಿಗೆ ನೀಡಿದ್ದೂ ಇದೆ.

ಈ ಪರ್ವತದ ಅರಣ್ಯಗಳಲ್ಲಿ ಒಂದು ಲಕ್ಷ ಮಂದಿ ಯಾನಾದಿಗಳು ಜೇನುತುಪ್ಪ, ಮೇಣ, ಚಂದನಗಳನ್ನೂ ಹಣ್ಣು ಗೆಡ್ಡೆ ಗೆಣಸುಗಳನ್ನೂ ಸಂಗ್ರಹಿಸುವರೆಂದೂ, ಇವುಗಳನ್ನು ಮಾರುತ್ತ ಅವರು ಅರಣ್ಯದಲ್ಲಿ ಜೀವನ ನಡೆಸುವರು. ಬೆಟ್ಟಮೇಲಿನ ಕಾಡುಗಳಲ್ಲಿ ಅನೇಕ ಗುಹೆಗಳಿದ್ದು ಅಲ್ಲಿಗೆಲ್ಲ ಯಾರೂ ಎಂದೂ ಹೋಗುವುದಿಲ್ಲ. ಇಂತಹ ಒಂದು ಗುಹೆಯಲ್ಲಿ ಅಹೋಬಿಲಕ್ಕೆ ಹಾಗೂ ಶ್ರೀಶೈಲಕ್ಕೆ ಹೋಗುವ ಸುರಂಗ ಮಾರ್ಗಗಳಿವೆ ಎಂದು ಹೇಳಲಾಗಿದೆ. ಆದರೆ ಇಂದಿನ ಜನ ಈ ಬಗ್ಗೆ ಖಚಿತವಾಗಿ ಏನೂ ಹೇಳುವುದಿಲ್ಲ. ಕಾರಣ ಇಲ್ಲಿನ ಗುಹೆಗಳ ಸುರಂಗ ಬಹು ದೀರ್ಘವಾಗಿದೆ.

ನಾಗಪಟ್ಲದ ನಾಯಕನು ಬ್ರಾಹ್ಮಣರು ಹಾಗೂ ಸೈನಿಕರ ಜೊತೆಗೆ ತಿರುಮಲೆಯ ಎಲ್ಲ ತೀರ್ಥಗಳನ್ನೂ ನೋಡಿಬರಲು ಹೊರಟಾಗ ದೈವೀಸೈನ್ಯವು ಬಂದು ಅವನ ಸೈನ್ಯವನ್ನು ಸಂಹರಿಸಿ ಅವನ ಶೋಧನೆಯನ್ನು ನಿಲ್ಲಿಸಿತು. ಅವನೊಡನೆ ಬಂದವರೆಲ್ಲ ಮರಣವಡೆದರು. ಯಾತ್ರಿಕರು ಹೀಗೆ ಪರಿಶೋಧನೆ ಮಾಡುವುದನ್ನು ತಪ್ಪಿಸಲು ಹಲವು ಹನ್ನೊಂದು ಕಾರಣಗಳ್ಳನೀಡಲಾಗುತ್ತದೆ. ಅವುಗಳಲ್ಲಿ ಒಂದು ಇಲ್ಲಿನ ಅರಣ್ಯದ ಗಹನತೆಯಾದರೆ ಇನ್ನೊಂದು ಕಷ್ಟಸಾಧ್ಯವಾದ ಪ್ರವೇಶ ಎನ್ನಬಹುದು.

ಬೆಟ್ಟದ ಮೇಲಿನ ಆಲಯವನ್ನು ಸುತ್ತಿರುವ ತೇರುಬೀದಿಯಲ್ಲಿ ಕಾಡು ಪ್ರಾಣಿಗಳು ಬಂದು (ಸ್ಥಳೀಯ ಜನರಿಗೆ) ರಸ್ತೆಗಳ್ಲಲ್ಲಿ ಸೇರುತ್ತವೆ. ಅವುಗಳನ್ನು ತೊಂದರೆಗೊಳಿಸದವರೆಗೆ ಅವುಗಳು ಯಾರನ್ನೂ ಬೆದರಿಸುವುದಿಲ್ಲ. ತೊಂದರೆ ಕೊಟ್ಟವನ್ನು ಛಿದ್ರಛಿದ್ರ ಮಾಡುತ್ತವೆ. ಒಬ್ಬರೇ ತಮ್ಮ ಪಾಡಿಗೆ ತಾವು ಹೋಗುವ ಯಾರನ್ನೂ ಅವು ಮೂಸಿ ನೋಡುವುದಿಲ್ಲ. ಹಾವುಗಳೂ ಅಸಂಖ್ಯಾಗಿದ್ದು ಆಗಾಗ ಬರಿಗಣ್ಣಿಗೆ ಕಂಡುಬಂದರೂ ಹಾವು ಕಚ್ಚಿದ ಉದಂತಗಳಾವುವೂ ಇಲ್ಲ. ಹಾಗೊಮ್ಮೆ ಹಾವು ಕಚ್ಚಿದರೂ ಇಲ್ಲಿನ ಗುಡಿಯ ತೀರ್ಥವನ್ನು ಒಂದು ಉದ್ಧರಣೆ ಕುಡಿದು ಸ್ವಲ್ಪ ತೀರ್ಥವನ್ನು ಹಾವು ಕಚ್ಚಿದ ಸ್ಥಳಕ್ಕೆ ಹಚ್ಚಿದರೆ ಉಪದ್ರವ ಹೋಗುತ್ತದೆ. ಹೀಗೆ ಇಲ್ಲಿ ಹಾವು ಚೇಳುಗಳು ನಿರುಪದ್ರವಿ ಜೀವಿಗಳು. ಇಂತಹ ಪರಿಸ್ಥಿತಿ ಬೇರಾವುದೇ ಬೆಟ್ಟದಲ್ಲಿಯೂ ಕಂಡುಬರದು. ಎಲ್ಲವನ್ನೂ ಬಿಡಿಸಿ ಹೇಳಲು ಕಾಲ, ಹಾಗೂ ಶ್ರಮ ಅಗತ್ಯ ಆಗುವುದರಿಂದಾಗಿ ಇಷ್ಟನ್ನು ಮಾತ್ರವೇ ಹೇಳಲಾಗಿದೆ.

1749ರ ಅಕ್ಟೋಬರ್ ತಿಂಗಳಿನ 3 ನೇ ತಾರೀಖಿನಲ್ಲಿ ಆನಂದ ರಂಗಪಿಳ್ಳೈಯು ಬರೆದ ದಿನಚರಿಯಲ್ಲಿ ತಿಳಿದು ಬರುವಂತೆ ತಿರುಪತಿಯ ಅಮಲ್ದಾರನಾಗಿ ನೇಮಕನಾದ ಶ್ರೀನಿವಾಸಾಚಾರಿಯು ಗುತ್ತಿಗೆ ಹಣವನ್ನು ನೀಡಲಾಗದೆ ತಲೆ ಮರೆಸಿಕೊಂಡ ಹಾಗೂ, ಅವನ ಸ್ಥಳದಲ್ಲಿ ವಾಸುದೇವಾಚಾರಿಯನ್ನು ನಿಯಮನ ಮಾಡ ಲಾಯಿತೆಂದೂ, ಹೇಳುತ್ತದೆ. ಅನ್ವರುದ್ದೀನನ ಮರಣಾನಂತರ ದಾಮಲ್ಲಿ

ಕೃಷ್ಣಾಜಿ ಪಂತನು ಪುನಃ ಈ ಶ್ರೀನಿವಾಸಾಚಾರಿಯನ್ನು ಅಮಲ್ದಾರನನ್ನಾಗಿ ನೇಮಕ ಮಾಡಿದ. ಈ ಬಗ್ಗೆ ದಿನಚರಿಯನ್ನು ಸಂಪಾದಿಸಿದ ಡಾವೆಲ್ಲರು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ. ''ಓಡಿ ಹೋದ ಶ್ರೀನಿವಾಸಾಚಾರಿಯೇ ನಂತರದ ಕಾಲದಲ್ಲಿ ಆಂಗ್ಲರ ಅಮಲ್ದಾರನಾಗಿ ಕೆಲಸ ಮಾಡಿದ ಎಂದು ನಾನು ಭಾವಿಸುತ್ತೇನೆ.'' ಇದರಿಂದಾಗಿ ಡಾ|| ಕೃಷ್ಣಸ್ವಾಮಿ ಅಯ್ಯಂಗಾರ್ಯರು ಈ ರೀತಿ ತೀರ್ಮಾನಕ್ಕೆ ಬರುತ್ತಾರೆ. ಮೊದಲಿಗೆ ಆರ್ಕಾಟಿನ ನವಾಬರು ತಿರುಪತಿಯ ಕಂದಾಯವನ್ನು ಪ್ರಾಯಶಃ ವೈಷ್ಣವರಿಗೆ ಗುತ್ತಿಗೆ ಬಿಡುತ್ತಿದ್ದರೆಂದು ಕಂಡುಬರುತ್ತದೆ. ಆಂಗ್ಲರು ಇದೇ ಪದ್ಧತಿಯನ್ನು ಮುಂದುವರಿಸಿ ವೈಷ್ಣವ ಬ್ರಾಹ್ಮಣರನ್ನೇ ಅಮಲ್ದಾರನನ್ನಾಗಿ ನೇಮಕ ಮಾಡಿದರು ಇದನ್ನು ಆರ್ಕಾಟು ನವಾಬನು ಶ್ರೀನಿವಾಸಾಚಾರಿ ವಾಸುದೇವಾಚಾರಿ ಎಂಬಿಬ್ಬರನ್ನು ನಿಯಮಿಸಿದ್ದನ್ನು ನೋಡಿ ತಿಳಿಯಬಹು ದಾಗಿದೆ. ಮೇಲಿನ ಪಟ್ಟಿಯಲ್ಲಿ 1700 ರಿಂದ 1800 ವರೆಗೆ ಬಂದಂತಹ ಅಮಲ್ದಾರರ ಹೆಸರುಗಳನ್ನು ನೋಡಿದ್ದಾಗಿದೆ. ಅಮಲ್ದಾರರೆಂದರೆ ನವಾಬರಿಂದ ನಿಯಮನ ಹೊಂದಿದವರೇನಲ್ಲ. ನವಾಬರಿಂದ ನಂತರ ಆಂಗ್ಲರಿಂದ ಆಲಯದ ಆದಾಯದ ಕಂದಾಯ ಗುತ್ತಿಗೆಯನ್ನು ಪಡೆದವರು ಈ ಅಮಲ್ದಾರರನ್ನು ನಿಯಮಿಸಿದರು. ಇವರು ಬ್ರಾಹ್ಮಣರೇ ಆಗಿದ್ದರು ಎಂಬುದೂ, ವೈಷ್ಣವರೇ ಎಂಬುದೂ ಕಡ್ಡಾಯ ಆಗಿರಲಿಲ್ಲ ಎಂಬುದನ್ನು ಪಟ್ಟಿಯನ್ನು ಪರಿಶೀಲಿಸುವುದರಿಂದ ತಿಳಿಯಬಹುದು. ಪಟ್ಟಿಯಲ್ಲಿ ಶ್ರೀನಿವಾಸಾಚಾರಿಯ ನಂತರ ಬಂದ ವಾಸುದೇವಾ ಚಾರಿಯ ಹೆಸರು ಉಲ್ಲೇಖವಾಗಿಲ್ಲ. ಪ್ರಾಯಶಃ ಈತ ಅಧಿಕಾರವನ್ನು ವಹಿಸಿಕೊಳ್ಳಲಿಲ್ಲವೇನೋ. ಒಂದೊಮ್ಮೆ ಇದು ನಿಜವೇ ಎಂದು ಭಾವಿಸಿದರೂ ಆಚಾರಿ ಎಂಬುದನ್ನು ಆಚಾರ್ ಎಂದು ಮಾಡಿದರೂ ಸಹ ವಾಸುದೇವರ್ ಎಂಬುದು ಮಾಧ್ವರ ಹೆಸರೇ ಹೊರತು ಶ್ರೀವೈಷ್ಣವರ ಹೆಸರಾಗದು.

ಇಲ್ಲಿಯೇ ಗಮನಿಸಬಹುದಾದ ಇನ್ನೊಂದು ಸಂಗತಿಯೆಂದರೆ ಆನಂದ ರಂಗ ಪಿಳ್ಳೆಯ ದಿನಚರಿಯ ಶ್ರೀನಿವಾಸಾಚಾರಿ ಅಮಲ್ದಾರ ನಾಗಿದ್ದದ್ದು 1744 ರಿಂದ 1762 ರ ವರೆಗೆ. ಆತನ ಎರಡನೆಯ ಆಧಿಕಾರದವಧಿ 1763 ರಿಂದ 1764 ಕಂಪನಿಯ ಅಧೀನದಲ್ಲಿ ಅಮಲ್ದಾರನಾಗಿದ್ದವನು ಶ್ರೀನಿವಾಸಾಚಾರಿ ಬೇರೆಯೇ ಆಗಿರ ಬೇಕು. ಈತನ ಅಧಿಕಾರದ ಅವಧಿ 1790 ರಿಂದ 1791. ಈತ ಪಟ್ಟಿಯಲ್ಲಿ 23 ನೆಯವನು.

ಅಮಲ್ದಾರನ ಕಾರ್ಯ ಪದ್ಧತಿಯು ಬಹುತೇಕ ಇಂದಿನ ಪೇಷ್ಕಾರ, ಕಾರ್ಯನಿರ್ವಹಣಾಧಿಕಾರಿಯ ಕಾರ್ಯ ವಿಧಾನವನ್ನು ಹೋಲುತ್ತಿದ್ದಿತು. ಆತನಿಗೆ ಇಂದಿನ ಪಾರುಪತ್ಯದಾರನಿಗೆ ಇದ್ದ ಕರ್ತವ್ಯಭಾರಗಳು ಇರಲಿಲ್ಲ. ಹಾಗಾಗಿ ಆತ ಹಿಂದೂ ಆಗಿದ್ದರೆ ಸಾಕಾಗುತ್ತಿತ್ತು. ಆತನ ಜಾತಿಗೆ ಪ್ರಾಧಾನ್ಯವಿರಲಿಲ್ಲ. ಪಾರುಪತ್ಯ ದಾರನ ಅಧಿಕಾರ ಬೇರೆಯ ಸ್ತರದ್ದು. ಪಾರುಪತ್ಯ ಎಂಬ ಪದವೇ ಒಂದು ರೀತಿಯ ಉಸ್ತುವಾರಿ ಪ್ರಕೃತಿಯ ಕೆಲಸವನ್ನು ನಿರ್ದೇಶಿಸುತ್ತದೆ. ಆಲಯದ ಒಳಗಡೆ ಧಾರ್ಮಿಕ ಕೆಲಸಗಳನ್ನು, ಹೊರಗಡೆ ಆಲಯಕ್ಕೆ ಸಂಬಂಧಿ ಸಿದ ಸರ್ವಧರ್ಮದ ಕೆಲಸಗಳನ್ನು ನೋಡಿಕೊಳ್ಳುವುದಾಗಿರುತ್ತದೆ. ಅರ್ಚಕರು ಆಲಯದ ಕ್ರಿಯಾಕಲಾಪದ ಕಾಲಪರಿಮಿತಿಗಳನ್ನು ಅನುಸರಿಸುತ್ತಿರುವರೇ ಎಂಬುದನ್ನೂ, ವೇದಪಠಣದವರು ಸರಿಯಾದ ಪಠಣ ಮಾಡುತ್ತಿರುವರೋ ಎಂಬೆಲ್ಲ ಅಂಶಗಳನ್ನು ಪರಿಶೀಲಿಸಬೇಕಾಗುತ್ತದೆ. ಇಲ್ಲೆಲ್ಲ ಅನವಧಾನದಿಂದ ವ್ಯತ್ಯಾಸ ವಾದರೂ ಸಹ ತೀವ್ರವಾದ ಭಿನ್ನಾಭಿಪ್ರಾಯಗಳನ್ನು ಎದುರಿಸಬೇಕಾಗುತ್ತದೆ. ಇದು ಧಾರ್ಮಿಕ ಭಾಗ. ಆತನು ಯಾತ್ರಿಕರ ಗುಂಪುಗಳನ್ನು ನಿಯಂತ್ರಿಸಬೇಕು. ದರ್ಶನದ ಅವಕಾಶಗಳನ್ನು ಕಲ್ಪಿಸಬೇಕು. ಉತ್ಸವಗಳನ್ನು, ಮೆರವಣಿಗೆಗಳನ್ನು ಏರ್ಪಡಿಸಬೇಕು. ಯಾತ್ರಿಕರಿಗೆ ನೋವಾಗದಂತೆ ಸಂಬಂಧಿತ ಶುಲ್ಕವನ್ನು ವಸೂಲಿ ಮಾಡಬೇಕು. ಇಲ್ಲೆಲ್ಲ ಚಾತುರ್ಯ ಮುತ್ಸದ್ದಿತನಗಳು ಅತ್ಯಗತ್ಯವಾಗುತ್ತದೆ. ದೇಶದ ಹಿರಿಯರೆಲ್ಲ- ರಾಜಮಹಾ ರಾಜರು, ಜಗದ್ಗುರುಗಳು- ಎಲ್ಲರೂ ಆಲಯಕ್ಕೆ ಬರುತ್ತಿರುತ್ತಾರೆ. ಅವರನ್ನೆಲ್ಲ ತಕ್ಕ ಗೌರವ ಮರ್ಯಾದಗಳೊಂದಿಗೆ ಸ್ವಾಗತಿಸಬೇಕು. ಹೀಗಾಗಿ ಆತನು ಚೆನ್ನಾಗಿ ಶಿಕ್ಷಣ ಪಡೆದವನೂ, ಉತ್ತಮ ಗುಣವುಳ್ಳವನೂ, ಪ್ರಾಮಾಣಿಕನೂ, ಸಾಮಜಿಕ ಸ್ಥಾನಮಾನ ಹೊಂದಿದವನೂ ಆಗಿರಬೇಕು. ಇದು ಸರ್ವಧರ್ಮ ಸಮನ್ವಿತವಾದದ್ದು. ಈ ಅಧಿಕಾರವು ಎಲ್ಲ ಜನರ ತೃಪ್ತಿಗೆಂದು ನಡೆಸುವುದು. ಬಹುಪಾಲು

ಕಷ್ಟಸಾಧ್ಯವಾಗಿ, ಹೆಚ್ಚಿನ ಮಟ್ಟಿಗೆ ಬ್ರಾಹ್ಮಣರಿಂದ ನಿರ್ವಹಿಸಲ್ಪಡುತ್ತಿದೆ. ಕಾರಣ ಈ ಪದವಿಯೇ ಭಕ್ತಿಯನ್ನು ಅಪೇಕ್ಷಿಸುವುದು. ಮೇಲೆ ನೀಡಿದ ವಿವರಣೆಯಿಂದ ಕ್ರಿ.ಶ. 1800 ರ ಹೊತ್ತಿಗೇ ಆಲಯದ ಆದಾಯ, ಸಂಪತ್ತುಗಳು ಯಾತ್ರಿಕರಿಗೆ ದೊರೆಯುವ ಸೌಜನ್ಯ, ಸೌಹಾರ್ದ, ಸೌಲಭ್ಯ, ಸೌಕರ್ಯಗಳನ್ನು ಅವಲಂಬಿಸಿರುತ್ತವೆ ಎಂಬ ಪರಿಕಲ್ಪನೆ ಇದ್ದಿತು ಎಂದು ತಿಳಿದುಬರುತ್ತದೆ.

### ಅಧ್ಯಾಯ - 19

# ಆಂಗ್ಲರ ಅಧೀನದಲ್ಲಿ ಆಲಯ

### (1831 ರ ಮೇ - ಆಗಸ್ಟ್ - 'ಏಸಿಯಾಟಿಕ್ ಜರ್ನಲ್'ನಲ್ಲಿ ಆಂಗ್ಲ ಜಿಲ್ಲಾಧಿಕಾರಿ ಬರೆದಂತೆ)

ಕರ್ನಾಟಿಕದ ಯುದ್ಧಗಳ ನಡುವಣ ಕಷ್ಟ ಕಾಲದಲ್ಲಿ ತಿರುಮಲೆಯ ಆಲಯದ ಆದಾಯ ಮೊದಲಿನಂತೆ ಪೊಗದಸ್ತಾಗಿರಲಿಲ್ಲ. ಈಸ್ಟ್ ಇಂಡಿಯಾ ಕಂಪನಿಯ ಮುಖ್ಯವಾದ ಆಸಕ್ತಿ ಆಲಯದ ಆದಾಯ ಮಾತ್ರವೇ ಆಗಿದ್ದಿತು. ಆರ್ಕಾಟಿನ ನವಾಬರ ಕಾಲದಿಂದಲೂ ಆಲಯದ ಇಡೀ ನಿವ್ವಳ ಆದಾಯವನ್ನು ಅಲ್ಲಿನ ಜಾತ್ಯತೀತ ಆಡಳಿತವು ತನ್ನ ಸ್ವಂತ ಕೆಲಸಗಳಿಗಾಗಿಯೇ ಬಳಸುತ್ತಿದ್ದಿತು. ಈ ಮುಂದೆ ನೀಡಲಾಗಿರುವ ಆಂಗ್ಲ ಜಿಲ್ಲಾಧಿಕಾರಿಯ ವಿವರಣೆಯಿಂದ ಈ ವಿಷಯವು ಸ್ಪಷ್ಟವಾಗುವುದು. ಇಲ್ಲಿನ ಆಂಗ್ಲರ ಕಾಳಜಿಯ ಕಾರಣಗಳು ಗಮನಾರ್ಹವಾಗುತ್ತವೆ. ಕ್ರಿ.ಶ. 1831ರ ಮೇ - ಆಗಸ್ಟ್‌ನ 'ಏಸಿಯಾಟಿಕ್ ಜರ್ನಲ್'ನ ಲೇಖನವನ್ನು ಅನಾಮತ್ತಾಗಿ ಇಲ್ಲಿ ಉದ್ಧರಿಸಿ ನೀಡಲಾಗಿದೆ. ಇಲ್ಲಿ ಹಾಗೂ ಈ ಅಧ್ಯಾಯದ ಇತರೆಡೆಗಳಲ್ಲಿ ನೀಡಲಾಗಿರುವ ವ್ಯಾಕರಣ ವಾಕ್ಯರಚನೆ ಕಾಗುಣಿತಗಳೆಲ್ಲ ಲೇಖನದಲ್ಲಿ ಹೇಗೆ ಕಂಡು ಬರುವವೋ ಹಾಗೆಯೇ ಉಳಿಸಿಕೊಳ್ಳಲಾಗಿದೆ.

“ಈ ಆಲಯವು ಇಂಡಿಯಾದ ಎಲ್ಲ ಭಾಗಗಳ ವಿಷ್ಣುಭಕ್ತರ ಆರಾಧನೆ ಅರ್ಪಣೆಗಳಿಂದಾಗಿ ಕೀರ್ತಿಪಡೆದಿದೆ. ರಾಜಪುತ್ರರು ತಮ್ಮ ಕಾಣಿಕೆಗಳನ್ನು ಸ್ವಾಮಿಗೆ ಸಮರ್ಪಿಸಲು ತಮ್ಮ ವಕೀಲರು, ರಾಯಭಾರಿಗಳನ್ನು ಕಳುಹಿಸುತ್ತಾರೆ. ಏನೂ ಗತಿಯಿಲ್ಲದ ಬಡ ಜನತೆಯು ಅಕ್ಕಿಯಿಂದ ಮಾಡಿದ ಹಳದಿಬಣ್ಣದ (ಅಕ್ಷತೆ) ಬೆರೆಸಕ್ಕಿಯನ್ನು ಮಣಕು ಹಿಡಿದ ಬಟ್ಟೆಯಲ್ಲಿ ಕಟ್ಟಿ ಅರ್ಪಿಸುವರು. ಈ ಸಮರ್ಪಣೆಗೆ ಕಾರಣ ಹೀಗೆ - ಇಲ್ಲಿನ ವಿಗ್ರಹವು ಅರಳುವ ತಾವರೆಯವಳನ್ನು (ಪದ್ಮಾವತಿಯ ಬಗ್ಗೆ ಹೇಳುತ್ತಿದ್ದಾನೆ) - ಈಕೆ ಬೊಮ್ಮರಾಜು ಜಮೀಂದಾರಿಯ ನಾರಾಯಣ ವನಂನ ಆಕಾಶರಾಜನ ಮಗಳು - ಮದುವೆಯಾದ ವೆಚ್ಚಗಳಿಗೆ ದುಡ್ಡು ಬೇಕಾಗಿ ಬಂದದ್ದರಿಂದ ವಾಯುವಿನ ಮೂಲಕ ಧನಾಧಿಪತಿಯಾದ ಕುಬೇರನಲ್ಲಿ (ಈ ದೇವರು) ಹಣವನ್ನೆತ್ತಿದ. ಈ ದೇವರು ತಾನು ಪಡೆದ ಹಣವನ್ನು ವಾರ್ಷಿಕ ಕಂತುಗಳಲ್ಲಿ ಪಾಲಾರ್ ಹಾಗೂ ಸೂನಮೂಕ್ಕೈ (ಸ್ವರ್ಣಮುಖಿ) ನದಿಗಳ ನಡುವಣ ನಾಡಿನ ದೊರೆಗೆ ಒಪ್ಪಿಸಿ ತೀರಿಸಬೇಕೆಂದು ವಿಧಿಸಿದ. ವರ್ಷಕ್ಕೆ ಒಮ್ಮೆ ನಡೆಯುವ ಒಂಭತ್ತು ದಿನಗಳ ಬ್ರಹ್ಮೋತ್ಸವದ ಅಥವಾ ಕಲ್ಯಾಣದ ಹೊತ್ತಿನಲ್ಲಿ ಹರಿಭಕ್ತರೂ ಇಲ್ಲಿಗೆ ಹೆಚ್ಚಾಗಿ ಬಂದು ತಮ್ಮ ಕಾಣಿಕೆಗಳನ್ನು ಅರ್ಪಿಸುವರು. ವರ್ಷದ ಆದಾಯದ ಮೂರನೇ ಎರಡು ಭಾಗದ ಸಂಪತ್ತು ಈ ದಿನಗಳಲ್ಲಿ ಸಂಗ್ರಹ ಆಗುತ್ತದೆ.

“ಇಲ್ಲಿನ ಬ್ರಾಹ್ಮಣರು ಹೇಳುವಂತೆ ಹಿಂದೂ ರಾಜ ಮನೆತನಗಳ ರಾಜರು ಈ ಒಂದು ಆದಾಯದ ಎಲ್ಲ ಧನವನ್ನೂ ಸ್ಥಳದಲ್ಲಿಯೇ ಧಾರ್ಮಿಕ ಕೆಲಸಗಳಲ್ಲಿ ವೆಚ್ಚ ಮಾಡಲು ಬಿಡುತ್ತಿದ್ದರು. ಮುಸಲ್ಮಾನ ದೊರೆಗಳು ಮೊದಲ ಬಾರಿಗೆ ಈ ಆದಾಯವನ್ನು ಮೇಲಿನ ನಿಯಮದಂತೆ ತಮ್ಮ ಸ್ವಂತಕ್ಕೆ ಪಡೆದುಕೊಂಡರು. ಫ್ರೆಂಚರೊಡನೆ ಪ್ರಪಂಚದ ಈ ಭಾಗದಲ್ಲಿ ನಾವು ನಡೆಸಿದ ಮೊದಲ ಯುದ್ಧಗಳ ಫಲಗಳಲ್ಲಿ ಇದೂ ಒಂದಾಯಿತು. ಇದರ ಸಿಂಧುತ್ವದ ಬಗ್ಗೆ ಸಂಶಯವಿದ್ದೇ ಇರುತ್ತದೆ.

“ಇಲ್ಲಿನ ಕಾಣಿಕೆಗಳನ್ನು ಹಲವಾರು ಹರಕೆಗಳ ಪೂರೈಕೆಗಳಿಗಾಗಿ ನೀಡಲಾಗುತ್ತದೆ. ಜೊತೆಗೇ ಕಲ್ಪನೆಗೆ ತಕ್ಕಂತೆ ವೈವಿಧ್ಯಮಯವಾದವುಗಳಾಗಿರುತ್ತವೆ. ಚಿನ್ನ ಹಾಗೂ ಬೆಳ್ಳಿಯ ಗಟ್ಟಿಗಳು, ವಿವಿಧ ಬಗೆಯ ನಾಣ್ಯಗಳು, ದುಡ್ಡಿನ ಚೀಲಗಳು, ತಾಮ್ರದ ಕಾಸುಗಳು, ದ್ವಿದಳ ಧಾನ್ಯಗಳು, ಇಂಗು, ತಂದೆ ತಾಯಿಯರ ಬಹುಕಾಲದ ಹರಕೆಯಿಂದಾಗಿ ಬೆಳೆದ ಹೆಣ್ಣು ಗಂಡು ಮಕ್ಕಳ ಮುಡಿ-

ಮೊದಲಾದವುಗಳನ್ನು ಹೆಸರಿಸಬಹುದು. ಕುಂಟನು ಬೆಳ್ಳಿಯ ಕಾಲನ್ನು ಅರ್ಪಿಸಿದರೆ ಕುರುಡನು ಬೆಳ್ಳಿಯ ಇಲ್ಲವೇ ಬಂಗಾರದ ಕಣ್ಣನ್ನು ಅರ್ಪಿಸುತ್ತಾನೆ. ಹಿಂದೂಗಳಲ್ಲಿ ಇಂತಹ ಸಂದರ್ಭದಲ್ಲಿನ ಮೂಢನಂಬಿಕೆಗಳನ್ನು ನಾನು ಪಟ್ಟಿ ಮಾಡುತ್ತ ಹೋದರೆ ಅದಕ್ಕೆ ಕೊನೆಯೇ ಇಲ್ಲವಾಗುತ್ತದೆ. ಹೆಂಗಸರು ತಮ್ಮ ಬಾಲ್ಯದಿಂದಲೂ ಹೆಮ್ಮೆಯಿಂದ ಹಾಕಿಕೊಂಡಿರುವಂತಹ ಆಭರಣಗಳೆಲ್ಲವನ್ನು ವಿಗ್ರಹದ ಮುಂದೆ ಸ್ವ-ಇಚ್ಛೆಯಿಂದ ಸಮರ್ಪಿಸುತ್ತಾರೆ. ತಾನು ಜೀರ್ಣಶೀರ್ಣ ವಸ್ತ್ರಗಳನ್ನು ಧರಿಸಿದ್ದರೂ ದೇವರಿಗೆ ಮನುಷ್ಯರು ಒಮ್ಮೆಯೂ ಉಡದ ಬೆಲೆ ಬಾಳುವ ವಸ್ತ್ರಗಳನ್ನು ಆಕೆಯ ಸಮರ್ಪಿಸುತ್ತಾಳೆ. ತನ್ನ ಪುಟ್ಟ ಮಗುವಿನ ಕಾಲುಗಳ ಗೆಜ್ಜೆಯನ್ನು ಸೆಳೆದು ದೇವರಿಗೆ ಅರ್ಪಿಸುತ್ತ ತಾನು ಆಕಾಶದಲ್ಲಿ ನೋಡುವ, ಗಾಳಿಯಲ್ಲಿ ಕೇಳುವ ದೇವರು ತನ್ನ ಮತ್ತು ತನ್ನವರ ಮೇಲೆ ಆಶೀರ್ವಚನದ ಮಳೆ ಸುರಿಸುವನೆಂದು ಭಾವಿಸುತ್ತಾಳೆ. ಆಕೆ ಈ ವೇಳೆಗೆ ನೂರಾರು ಮೈಲು ನಡೆದು ತನ್ನ ಜೀವನದ ಉದ್ದೇಶವನ್ನುಸಾಧಿಸಿದ ಭಾವನೆ ಹೊಂದಿದ್ದಾಳೆ. ಪ್ರಾಯಶಃ ಈ ಪ್ರಯಾಣದ ಮೊದಲು ತನ್ನ ಮನೆಯನ್ನೇ ಬಿಟ್ಟು ಆಚೆ ಹೊರಡದ ಆಕೆಗೆ ಯಾತ್ರೆಯೆಂಬುದು ಭಯಂಕರವಾಗಿ ಕಂಡಿರಬಹುದು. ಮಗನು ಹುಟ್ಟುವುದು, ಶತ್ರುಗಳೊಡನೆ ಸಂಧಾನವಾಗುವುದು, ಶತ್ರುವಿನ ಮೇಲೆ ವಿಜಯ ಸಾಧಿಸುವುದು, ಯಾತ್ರೆಯ ಶುಭಪ್ರದವಾದ ಮುಕ್ತಾಯ , ಮಗನ ಅಥವಾ ಮಗಳ ಮದುವೆ, ವ್ಯಾಪಾರದಲ್ಲಿ ಅಭಿವೃದ್ಧಿ,ಆರೋಗ್ಯದ ಭಾಗ್ಯ, ಅಥವಾ ಇವುಗಳ ವಿರುದ್ಧವಾದ ಘಟನೆಗಳು - ಇವುಗಳಲ್ಲಿ ಯಾವುದಾದರೂ ಒಂದು - ಯಾತ್ರಿಕರನ್ನು ತಿರುಪೆಟ್ಟಿಯ ಕಡೆ ನಡೆಯಲು ಪ್ರೇರಣೆ ನೀಡುವುದಾಗಬಹುದು. ಈ ಮಾತು ಅಜ್ಞರಿಗೂ ವಿಜ್ಞರಿಗೂ ಸಮಾನವಾಗಿಯೇ ಅನ್ವಯಿಸುತ್ತದೆ.

"ಹರಕೆ ಹೊತ್ತ ಮಂದಿಯೇ ಸಮರ್ಪಣೆಗಳನ್ನು ಎಲ್ಲ ಕಾಲದಲ್ಲಿಯೂ ಮಾಡಬೇಕೆಂದಿಲ್ಲ. ಕಾಣಿಕೆಗಳನ್ನು ಬಂಧುಗಳು, ಮಿತ್ರರು, ವಕೀಲರು ತಂದು ಸೇರಿಸಬಹುದು. ಆದರೆ ಬಹುತೇಕ ಗೋಸಾಯಿಗಳ ಮೂಲಕ ಕಳುಹಿಸಲಾಗುತ್ತದೆ. ಗೋಸಾಯಿಗಳು ಆಲಯದ ಸಿಬ್ಬಂದಿ. ಇಂತಹ ಕೆಲಸಗಾರರು ಬಹುಮಂದಿ ಇದ್ದಾರೆ. ಬ್ರಹ್ಮೋತ್ಸವ ಇನ್ನೂ ಹಲವು ತಿಂಗಳಿದೆ ಎನ್ನುವಾಗಲೇ ಇವರು ನಾನಾ ದಿಕ್ಕಿನಲ್ಲಿ ಹೊರಟು ನಾಡಿನ ಬೇರೆ ಬೇರೆ ಸ್ಥಳಗಳನ್ನು ತಲುಪುವರು. ತಮ್ಮ ಸಂಗ್ರಹ ಕಾರ್ಯವನ್ನು ಆರಂಭಿಸಬೇಕು ಎಂಬಂತಹ ಸ್ಥಳದಲ್ಲಿ ತಮಗೆ ದೇವಾಲಯದಲ್ಲಿ ನೀಡಲಾಗಿರುವ ಆಲಯದ ಧ್ವಜವನ್ನು ಹಾರಿಸುವರು. ಇದರ ಸುತ್ತ ವಿಗ್ರಹಾರಾಧಕ ಭಕ್ತರು ನೆರೆದು ತಮ್ಮ ಕಾಣಿಕೆಗಳನ್ನು ಇವರ ವಶಕ್ಕೆ ಒಪ್ಪಿಸುವರು ಅಥವಾ ತಾವೇ ತಮ್ಮ ಕಾಣಿಕೆಗಳನ್ನು ಹೊತ್ತುಕೊಂಡು ಈ ಗೋಸಾವಿ ಗಳೊಂದಿಗೆ ತಿರುಮಲೆಗೆ ಆಗಮಿಸುವರು. ಸಾಕಷ್ಟು ಮಂದಿ ಜಮಾವಣೆಯಾದಾಗ ಈ ನಂಬಿಗಸ್ಥರ ನಂಬಿಕೆಯ ನಾಯಕನು ವಾರ್ಷಿಕ ಉತ್ಸವದ ಸಮಯಕ್ಕೆ ಸರಿಯಾಗಿ ಆಲಯದತ್ತ ತಿರುಗಿ ಬರುವನು. ಸುಂಕದ ಕಟ್ಟೆಯ ಅಧಿಕಾರಿಗಳು ಸಾಮಾನ್ಯವಾಗಿ ಆಲಯಕ್ಕೆ ಬರುವ ಎಲ್ಲ ಯಾತ್ರಿಕರೂ ಉಚಿತವಾಗಿ ಆಲಯಕ್ಕೆ ಹೋಗಲು ಅನುಮತಿ ನೀಡುತ್ತಾರೆ. ಗೋಸಾಯಿಗಳು ತಮಗೆ ಒಪ್ಪಿಸಿದ ಕಾಣಿಕೆ ಗಳಲ್ಲಿ ಕೈಯಿಡುವ ಸಂಭವವೇ ಇಲ್ಲ. ಆದರೆ ಗೋಸಾಯಿಯ ಜೊತೆಯಲ್ಲಿ ಇರುವುದರಿಂದಲೇ ಯಾತ್ರಿಕರು ಸುರಕ್ಷಿತರಾಗಿಯೂ ಸುಂಕವಿದೂರರಾಗಿ ಸುಲಭದಲ್ಲಿ ಪಾರಾಗುವುದರಿಂದ ಗೋಸಾಯಿಗಳಿಗೆ ಯಾತ್ರಿಕರಿಂದ ಸ್ವಲ್ಪ ಬೇರೆಯೇ ಆದ ಸಂಭಾವನೆ ಸೇರಿ ಬರುತ್ತಿದ್ದಿರುವುದು ನಿಸ್ಸಂದೇಹ. ಯಾತ್ರಿಕರು ಪ್ರಯಾಣ ಮಾಡುವಾಗ ಗೋಸಾಯಿಗಳು ಐದಾರು ಹೆಜ್ಜೆಗೆ ಒಮ್ಮೆಯಂತೆ ಗೋವಿಂದ - ಗೋವಿಂದ - ಆಲಮೇಲ್ ಮಂಗೂ ಎಂದು ಘೋಷಿಸುವರು. ಇಡೀ ಯಾತ್ರಿಕ ತಂಡವು ಸ್ತ್ರೀಪುರುಷ ಬಾಲಕರಾದಿಯಾಗಿ ಇದನ್ನು ತಕ್ಷಣವೇ ಎತ್ತಿಕೊಂಡು ತಾವೂ ಸಾಮೂಹಿಕವಾಗಿ ಕೂಗುವರು. ನಾನು ತಿರುಪಟ್ಟಿಗೆ ಹೋಗುವಾಗ ಹಾದಿಯಲ್ಲಿ ಇಂತಹ ಹಲವಾರು ಗುಂಪುಗಳನ್ನು ನೋಡಿದೆ. ಅವರುಗಳ ಘೋಷಣೆಗಳಿಂದ ನಮ್ಮ ಪ್ರಯಾಣವು ಲವಲವಿಕೆಯಿಂದ ಕೂಡಿತ್ತು. ಯೋಚನೆ ಮಾಡಿದಾಗ ಸ್ವಲ್ಪ ವಿಷಾದವೇನೋ ಆಯಿತು.

"ಕಾಣಿಕೆಗಳು ಮಾತ್ರ ವೈವಿಧ್ಯಮಯವಾಗಿದ್ದು ಅಪರೂಪವಾಗಿ ಸಾವಿರ ರೂಪಾಯಿಗಳಿಗಿಂತ ಹೆಚ್ಚಾಗುತ್ತದೆ. ದೇವರು ತನ್ನ ಮುಂದೆ ನಿಂತು ಕಾಣಿಕೆ ನೀಡುವವರಿಗೆ ಅವರವರ ಕಾಣಿಕೆಗೆ ತಕ್ಕಂತೆ ಅನುಗ್ರಹಿಸುತ್ತಾನೆ. ಭಕ್ತನು ನೂರು ರೂಪಾಯಿಗಳನ್ನು ನೀಡಿದರೆ

ಹಣೆಪಟ್ಟಿಯನ್ನು ನೀಡಲಾಗುತ್ತದೆ. ನೂರರಿಂದ ಐದು ನೂರರವರೆಗೆ ಒಂದು ರೇಷ್ಮೆ ವಸ್ತ್ರ ದೊರೆಯುವುದು. ಐದು ನೂರರಿಂದ ಒಂದು ಸಾವಿರದವರೆಗೆ ಒಂದು ಶಾಲು ಬಹುಮಾನ - ಹೀಗೆ. ಆದಾಯದ ಎರಡನೆಯ ರೀತಿಯೆಂದರೆ ವರ್ತನೆ. ವಿಗ್ರಹಕ್ಕೆ ಉಡುಪು ತೊಡುಗೆಗಳನ್ನು ಸಮರ್ಪಿಸುವಾಗ ಭಕ್ತರು ತಮ್ಮ ಕಾಣಿಕೆಯ ಬೆಲೆಯಷ್ಟೇ ನಗದು ಹಣವನ್ನು ಈ ಕಾಣಿಕೆಯ ನಿರ್ವಹಣೆಗಾಗಿ ಆಲಯಕ್ಕೆ ನೀಡಬೇಕಾಗುತ್ತದೆ. ಈ ಕಾಣಿಕೆಯನ್ನು ಆಲಯದಲ್ಲಿಯೇ ಉಳಿಸಿಕೊಳ್ಳಲಾಗುವುದು. ಆದಾಯದ ಮೂರನೆಯ ವಿಧಾನವನ್ನು ಅರ್ಜಿತಂ ಎಂದು ಕರೆಯುತ್ತಾರೆ. ಇದು ಮೂರು ವಿಧವಾದದ್ದು ಅಭಿಷೇಕಂ ಅಥವಾ ಶುದ್ಧೀಕರಣ, ನೈವೇದ್ಯಂ ಹಾಗೂ ಮೆರವಣಿಗೆ.

**ಅಭಿಷೇಕಮ್ :**

"ಪ್ರತಿ ಶುಕ್ರವಾರವೂ ವರ್ಷ ಪೂರ್ತಿಯಾಗಿ ವಿಗ್ರಹವನ್ನು ಪುನುಗು, ಕಸ್ತೂರಿ, ಕರ್ಪೂರಗಳಿಂದ ಲೇಪನಗೊಳಿಸಿ, ಹಾಲಿನಿಂದ ತೊಳೆಯುತ್ತಾರೆ. ಇಂತಹ ಮುಖ್ಯ ನೋಟವನ್ನು ಉಚಿತವಾಗಿ ನೋಡಲಾಗದು. ಹಾಗಾಗಿ ಇಂತಹ ದೃಶ್ಯವನ್ನು ನೋಡಲು ಅಪೇಕ್ಷಿಸುವ ಭಕ್ತನು ವರ್ಷವಿಡೀ ತನ್ನ ಕೈಲಾದಷ್ಟು ಹಣ ನೀಡುತ್ತಾನೆ. ಬ್ರಹ್ಮೋತ್ಸವದಲ್ಲಿ ಮಾತ್ರ ಕೈಕಚ್ಚುವಷ್ಟು ನೀಡಬೇಕು. ಮೊದಲಿಗೆ ಇದು ಹೆಚ್ಚಾಗಿದ್ದರೂ ಈಗ ಐವತ್ತು ರೂಪಾಯಿಗಳಾಗಿವೆ. ಹೀಗೆ ದೇವರನ್ನು ಉಜ್ಜಿ ತೊಳೆದು ಸುಗಂಧಭರಿತನನ್ನಾಗಿ ಮಾಡುವುದನ್ನು ಪೂಲಕುಬ್ ಎನ್ನುವರು. ಪೂಲಂಗಿ ಸೇವ ಎನ್ನುವುದು ದೇವರನ್ನು ಹೂವಿನಲ್ಲಿ ಅಲಂಕರಿಸುವುದು. ಇದು ಪ್ರತಿ ಗುರುವಾರ ನಡೆಯುತ್ತದೆ. ಹಬ್ಬದ ದಿನಗಳಲ್ಲಿ ಈ ದೃಶ್ಯವನ್ನು ನೋಡಲು ಆರವತ್ತು ರೂಪಾಯಿಗಳನ್ನು ನೀಡಬೇಕು. ಮೂರನೆಯದು ಸುಖ ಅಲಂಕಾರ ಸೇವೆ. ಹನ್ನೆರಡು ರೂಪಾಯಿಗಳನ್ನು ನೀಡುವುದರಿಂದ ಸ್ವಾಮಿಯನ್ನು ಹೂವಿನ ಹಾರಗಳಿಂದ ಅಲಂಕರಿಸುವುದನ್ನು ನೋಡಬಹುದು. ನಾಲ್ಕನೆಯದು ಸಹಸ್ರನಾಮಾರ್ಚನೆ. ಈ ಸೇವೆಯು ಸ್ವಾಮಿಯನ್ನು ಆತನ ಸಾವಿರ ಹೆಸರುಗಳಿಂದ ದಿನವೂ ಪೂಜಿಸುವುದನ್ನು ಸೂಚಿಸುತ್ತದೆ. ಈ ಸೇವೆಯ ಶುಲ್ಕ ಐದು ರೂಪಾಯಿ. ಐದನೆಯದು ಮುನ್‌ಸೂನ್ ಸೇವೆ. ಭಕ್ತರು ತಾವು ಪೂಜಿಸುವ ಸರ್ವಶಕ್ತ ದೇವರನ್ನು ಮಲಗಿಸುವ ಉಯ್ಯಾಲೆಯ ಶಯನ ಸೇವೆಯನ್ನು ನೋಡಲು ಹನ್ನೆರಡು ರೂಪಾಯಿ ನೀಡುತ್ತಾರೆ.

**ನೈವೇದ್ಯ :**

"ನಾವು ಇನ್ನು ನೈವೇದ್ಯಕ್ಕೆ ಹೋಗಬಹುದು. ಮೊದಲನೆಯದು ಅನ್ನದಾನ. ಇದರಲ್ಲಿ ಮೊದಲನೆಯದು ಪರಮಾನ್ನಂ, ಎರಡನೆಯದು ಪೂಳಿಕೇಯರಂ, ಮೂರನೆಯದು ಮದ್‌ಗುರಂ ನಾಲ್ಕನೆಯದು ದದುದವಂ.

"ಮೊದಲನೆಯದು ಅಕ್ಕಿ, ಸಕ್ಕರೆ ಹಾಲುಗಳಿಂದ ಮಾಡಿದ ನೈವೇದ್ಯ. ಎರಡನೆಯದು ಹುಣಿಸೆಹಣ್ಣು ಸಿಹಿ ಹಾಗೂ ಅಕ್ಕಿಯಿಂದ ಮಾಡಿದ್ದು. ಮೂರನೆಯದು ಬೆಣ್ಣೆ ಅಕ್ಕಿಗಳಿಂದಾಗಿದ್ದು. ನಾಲ್ಕನೆಯದು ಮೊಸರು ಅಕ್ಕಿಗಳದ್ದು. ಈ ಆಹಾರ ನಿವೇದನೆಗಳನ್ನು ಭಕ್ತರು ತಾನೇ ಮಾಡಿ ನಿವೇದಿಸಿದರೆ ಆರು ರೂಪಾಯಿ ನಗದು ನೀಡಬೇಕು. ದೇವಾಲಯವೇ ಮಾಡಿ ನಿವೇದಿಸಿದರೆ ಭಕ್ತರು ಹದಿನಾರು ರೂಪಾಯಿ ನೀಡಬೇಕು. ಎರಡನೆಯದು ಬಕ್ಕ ನೈವೇದ್ಯ. ಅಥವಾ ಸಿಹಿ ತಿಂಡಿಗಳ ನಿವೇದನೆ. ಆಲಯದವರು ಈ ಸಿಹಿ ಭಕ್ಷ್ಯಗಳನ್ನು ತಯಾರಿಸುವರು. ಭಕ್ತರು ಇದನ್ನು ದೇವರಿಗೆ ಅರ್ಪಿಸಲು ಇಪ್ಪತ್ತರಿಂದ ಇಪ್ಪತ್ತೆಂಟು ರೂಪಾಯಿಗಳನ್ನು ಕೊಡಬೇಕು. ಮೂರನೆಯದು ಮಲಮವೈದೂಂ (ಮಹಾನೈವೇದ್ಯ) ಸಾಧಾರಣವಾಗಿ ಇದನ್ನು ತೀರೂಪಾವ್ದ (ತಿರುಪ್ಪಾವಡೈ) ಎನ್ನುವರು. ಒಂದು ಸಾವಿರದಿಂದ ಎರಡು ಸಾವಿರ ಸೇರಿನಷ್ಟು ಅಕ್ಕಿಯಿಂದ ಆಲಯದವರು ನಿವೇದನೆಯನ್ನು ತಯಾರಿಸುವರು. ಇದಕ್ಕಾಗಿ ನೂರು ಅಥವಾ ಇನ್ನೂರು ಪಗೋಡಗಳನ್ನು ನೀಡಬೇಕು. ನಾಲ್ಕನೆಯದು ಆಮುಂತನರಮೂಚ (ಆಮಂತ್ರಣೋತ್ಸವ) ದಲ್ಲಿ ದಿನದ ಎಲ್ಲ ನಿವೇದನೆಗಳನ್ನು ಒಟ್ಟಿಗೆ - ಒಮ್ಮಲೇ - ಆದರೆ ಕಡಿಮೆ ಪ್ರಮಾಣದಲ್ಲಿ - ನಿವೇದಿಸುವುದಾಗಿದೆ. ಇದರ ಬೆಲೆ ಆರವತ್ತೈದು ರೂಪಾಯಿ. ಐದನೆಯದು ಊಕೈಪಚ್ಚಡಿ. ತಿರುಪತಿ ಬೆಟ್ಟಗಳಲ್ಲಿ ಪ್ರತ್ಯೇಕವಾಗಿ ಬೆಳೆಯುವ ಊಕೈಗಿಡದಿಂದ ಮಾಡಿದ ನಿವೇದನೆ. ಇದು ನಾಲ್ಕು ರೂಪಾಯಿ.

**ವಾಹನ ಸೇವೆ :**

"ಈಗ ವಿಗ್ರಹದ ಮೆರವಣಿಗೆಯ ವಾಹನಗಳು ಮಾತ್ರವೇ ಉಳಿಯುತು. ಇವು ಹನ್ನೆರಡು ವಾಹನಗಳಾಗಿದ್ದು ವಿಷ್ಣುನೊಂದಿಗೆ ಹಿಂದೂ ಪುರಾಣಗಳು ಹೇಳುವ ಕಥೆಗಳೊಡನೆ ಸಂಬಂಧ ಹೊಂದಿವೆ. ಈ ಸಂದರ್ಭಗಳಲ್ಲಿ ಮೆರವಣಿಗೆ ಹೊರಡುವ ಮೂರ್ತಿಯು ಹೊರಗೆ ಹೋಗಲಾಗದ ಮೂಲ ಮೂರ್ತಿಯ ಪ್ರತಿರೂಪ, ಲೋಹದಿಂದ ಮಾಡಿದ್ದು.

"ಕಲ್ಪವರುಚ ವಾಹನವು (ಕಲ್ಪವೃಕ್ಷವಾಹ) ಚಿನ್ನದ ಮುಲಾಮು ಬಳಿದ ರೇಕು ಮುಚ್ಚಿದ ಮರದ ವಾಹನದಲ್ಲಿ ಸ್ವಾಮಿಯ ಮೆರವಣಿಗೆ. ಆಂದೋಲೀಕ ವಾಹನವೆಂಬುದು ಸ್ವಾಮಿ ಹೊರಡುವ ಪಲ್ಲಕ್ಕಿ. ಶೇಷವಾಹನವೆಂಬುದು ಸ್ವಾಮಿಯು ಮೆರವಣಿಗೆ ಹೊರಡುವ ಚಿನ್ನದ ಮುಲಾಮಿನ (ಮರದ) ಹಾವು - ಶೇಷ ,ಸರೋಹ ಭೂಪಾಲವಾಹನವು (ಸರ್ವಭೂಪಾಲವಾಹನ) ಸ್ವಾಮಿಯನ್ನು ಗಿಲೀಟು ಸಿಂಹಾಸನದ ಮೇಲೆ ಕರೆದೊಯ್ಯುತ್ತದೆ. ಸೂರ್ಯಪ್ರಭವಾಹನವು (ಸೂರ್ಯಪ್ರಭ) ದೇವರ ಗಿಲೀಟು ಸೂರ್ಯ ಪ್ರತಿಮೆಯ ವಾಹನ, ಅದ್ದಹ ಅರ ವೆಂಬುದು ಪಕ್ಕ ಪಕ್ಕದಲ್ಲಿ ನಿಲ್ಲಿಸಿ ಅಸಂಖ್ಯ ಪ್ರತಿರೂಪಗಳನ್ನುಂಟು ಮಾಡುವ ಕನ್ನಡಿಗಳ ಕೋಣೆಗೆ ಸ್ವಾಮಿ ಹೋಗಿ ಬರುವಿಕೆ. ಆಂದೋಲ ವಾಹನ ಮತ್ತೊಂದು ರೀತಿಯ ಪಲ್ಲಕ್ಕಿ. ಇವುಗಳಲ್ಲಿ ಯಾವುದರ ಮೇಲಾದೂ ಸ್ವಾಮಿ ಹೊರಗಡೆ ಬರುವ ತೊಂದರೆ ತೆಗೆದುಕೊಳ್ಳಬೇಕೆಂದರೆ ಭಕ್ತರು ನಲವತ್ತು ರೂಪಾಯಿ ಶುಲ್ಕ ನೀಡಬೇಕು. ಗುಡುವಾಹನ (ಗರುಡವಾಹನ) ವೆಂಬುದು ಸ್ವಾಮಿಯು ಗಿಣಿಯ ಮೇಲೆ ಹೊರಬರುವ ವಾಹನ (ಗರುಡನ ಮೇಲೆ) ಚಂದ್ರಪ್ರಭವೆನ್ನುವುದು ಗಿಲೀಟು ಚಂದ್ರವಾಹನದ ಮೇಲೆ ಸ್ವಾಮಿ ಬರುವಿಕೆ. ಹನುಮಂತ ವಾಹನ ವೆಂಬುದು ಕೆಲಬಾರಿ ಆನೆಯನ್ನು ಹೋಲುವ ಗಿಲೀಟು ಮೂರ್ತಿಯ ಮೇಲೆ ಮೆರವಣಿಗೆ ಬರುವಿಕೆ. ಹಲವು ಬಾರಿ ಇದು ಹನುಮಂತನ ರೂಪದ ಮೂರ್ತಿಯೂ ಆಗುತ್ತದೆ. ಸಿಂಹವಾಹನ ವೆಂದರೆ ಸಿಂಹದ ಗಿಲೀಟು ಮೂರ್ತಿಯ ಮೇಲೆ ಹೊರಬರುವಿಕೆ. ಬಾಲಶೇಷ ವಾಹನವೆಂಬುದು ದೇವರು ಹೊರಬರುವ ಕಡೆಯ ವಾಹನ. ಇದರಲ್ಲಿ ಸ್ವಾಮಿಯು ಗಿಲೀಟು ಹಾವಿನ ಮೇಲೆ ಕುಳಿತಿರುತ್ತಾನೆ.

"ಆಲಯದ ಎಲ್ಲ ಆದಾಯವನ್ನೂ - ಅದು ಯಾವುದೇ ರೀತಿಯಲ್ಲಿ ಬರುವಂತಹದ್ದಾಗಿದ್ದರೂ ಅದರ ಇಡೀ ಮೊತ್ತವನ್ನು ಸರ್ಕಾರ ಅಥವಾ ಸ್ಥಳೀಯ ಆಡಳಿತವು ತೆಗೆದುಕೊಳ್ಳುತ್ತದೆ. ನಿಯಮಿತವಾದ ಸಿಬ್ಬಂದಿಯನ್ನು ಸಂಬಳದ ಮೇಲೆ ಕೆಲಸಕ್ಕೆ ತೆಗದು ಕೊಳ್ಳಲಾಗಿದೆ. ಬ್ರಾಹ್ಮಣರಿಗೆ ಭೂಮಿಯನ್ನು ನೀಡಲಾಗಿದೆ. ಇದಕ್ಕಾಗಿ ಸುತ್ತಮುತ್ತಲ ನಾಡಿನ ಜಮೀನುಗಳನ್ನು ಬಳಸಲಾಗಿದೆ. ಇವುಗಳನ್ನು ಮಾನ್ಯಗಳೆಂದು ಗುರುತಿಸಿ, ಅತಿಕಡಿಮೆ ತೆರಿಗೆಯನ್ನು ನೀಡುವಂತೆಯೂ, ಅತಿ ಅನುಕೂಲಕರವಾದ ನಿಬಂಧನೆಗಳೊಡನೆ ನೀಡಲಾಗಿದೆ. ಆಲಯವನ್ನು ಅತಿ ಗೌರವದಿಂದ ಕಾಪಾಡಲಾಗಿದೆ. ಹಿಂದಿನ ಹತ್ತು ವರ್ಷದಲ್ಲಿ ಫಸಲಿಯ ಸರ್ಕಾರದ ಪರವಾದ ಸರಾಸರಿ ರಸೀದಿಗಳನ್ನು ಕಂಡಾಗ ಅದನ್ನು ಎಷ್ಟು ಚೆನ್ನಾಗಿ ನೋಡಿಕೊಳ್ಳುತ್ತಿದ್ದೇವೆ ಎಂಬುದು ಸ್ಪಷ್ಟವಾಗುತ್ತದೆ. ಇಲ್ಲಿನ ಮುಖ್ಯಾಧಿ ಕಾರಿಯನ್ನು ತಹಸೀಲ್ದಾರನೆಂದು ಕರೆಯಲಾಗಿದ್ದು ಈತ ಇನ್ನಿತರ ಸಿಬ್ಬಂದಿಯ ಮೇಲೆ ಉಸ್ತುವಾರಿಯ ಹೊಣೆಯವನಾಗಿದ್ದಾನೆ. ಯಾತ್ರಿಕರನ್ನು ಗೌರವದಿಂದ ನೋಡಿಕೊಂಡು ಅವರಿಗೆ ತಕ್ಕ ಬಿಡದಿಗಳಲ್ಲಿ ವಸತಿ ನೀಡುವಂತೆ ನೋಡುವನು. ಯಾವುದೇ ರೀತಿಯ ಲಂಚ, ರುಷವತ್ತು, ದಬ್ಬಾಳಿಕೆ, ಶೋಷಣೆ ಆಗದಂತೆ ನೋಡಿಕೊಳ್ಳುವ ಹೊಣೆ ಹೊತ್ತವನು. ಈತನು ಕಲೆಕ್ಟರನಿಗೆ ಅಥವಾ ಅವನ ಕೆಳ ಅಧಿಕಾರಿಗೆ ತನಗೆ ಉಂಟಾಗುವ ಯಾವುದೇ ಸಂದೇಹ, ಅಥವಾ ಪ್ರಮುಖ ಸುದ್ದಿಯನ್ನು ತಲುಪಿಸುವನು. ಈತನ ಕೆಳಗೆ ಶಿರಸ್ತೇದಾರ ಅಥವಾ ಸ್ಥಳೀಯ ಲೆಕ್ಕಾಧಿಕಾರಿಯಿದ್ದು ತಹಸೀಲ್ದಾರನ ಸಹಾಯಕನಾಗಿ ಎಲ್ಲ ಜವಾಬ್ದಾರಿ ಕರ್ತವ್ಯಗಳಲ್ಲಿಯೂ ನೆರವು ನೀಡಿ ಆಲಯದ ಆದಾಯ ವೆಚ್ಚಗಳ ಲೆಕ್ಕವೆಲ್ಲವನ್ನೂ ಇಟ್ಟುಕೊಂಡು ಆಲಯದ ಆಡಳಿತ ನೋಡುವನು. ಇವನ ಕೆಳಗೆ ನಾಲ್ವರು ಸ್ಥಳೀಯ ಗುಮಾಸ್ತ ಅಥವಾ ಲೆಕ್ಕಿಗರು ಇರುವರು. ರಾಯಿಸಗು ಎಂಬುವವನು ಕೊತ್ವಾಲನ ಪೋಲಿಸು ಕೆಲಸಗಳ ನಿರ್ವಹಿಸುತ್ತಾನೆ. ಗೊಲ್ಲ ಇವನ ಸಹಾಯಕ. ಎಲ್ಲರೀತಿಯ ನ್ಯಾಯ ವಿಚಾರಗಳಲ್ಲಿಯೂ ತಹಸೀಲ್ದಾರನಿಗೆ ಮನ್ನಣೆ ನೀಡುತ್ತಾನೆ. ದಫ್ತರ ದಾಖಲೆಗಳನ್ನು

ನೋಡಿಕೊಂಡು,ದೀಪಗಳನ್ನು ಹಚ್ಚುವುದು, ಕಸ ಗುಡಿಸುವುದೇ ಮೊದಲಾದ ಕಚೇರಿ ಕೆಲಸಗಳನ್ನು ಸಾಮಾನ್ಯ ಸೇವಕರು ಮಾಡುವರು. ಇಪ್ಪತ್ತು ಜವಾನರು ತಹಸೀಲ್ದಾರನ ಕಚೇರಿಯಲ್ಲಿದ್ದಾರೆ. ಇವರಿಗೆ ತಿಂಗಳಿಗೆ ಒಬ್ಬರಿಗೆ ಒಂದು ಪಗೋಡ (8 ಷಿಲ್ಲಿಂಗ್) ಸಂಬಳವಿರುತ್ತದೆ. ಇವರಲ್ಲಿ ದಫೇದಾರರು ಹಾಗೂ ಮುಖ್ಯ ಜವಾನರಿಗೆ ಹೆಚ್ಚಿನ ಸಂಬಳವುಂಟು. ಬ್ರಹ್ಮೋತ್ಸವದ ಅಥವಾ ಒಂಭತ್ತು ದಿನಗಳ ಉತ್ಸವ ಕಾಲದಲ್ಲಿ ಹೆಚ್ಚಿನ ಸಿಬ್ಬಂದಿಯ ನೇಮಕವಾಗಿ, 25 ಮಂದಿ ಜವಾನರು, 20 ಮಂದಿ ಪಟವಾರಿಗಳು, (ಅತಿ ಕಡಿಮೆ ಸಂಬಳದ ಸೇವಕರು) ಮತ್ತು ಐವರು ಹರಿಕಾರರನ್ನು ಹೊಂದಲಾಗುವುದು. ಈ ಹರಿಕಾರರು ಗಣ್ಯರಾದ ಯಾತ್ರಿಕರ ಆಗಮನ ವಾರ್ತೆಯನ್ನು ಮೊದಲೇ ತರುವರಲ್ಲದೆ ನಾಡಿನ ಈ ಭಾಗದಲ್ಲಿ ಇಂತಹ ವಿಶೇಷ ಸಂದರ್ಭದಲ್ಲಿ ಸೇರುವ ಸಂದಣಿಯಲ್ಲಿ ಬೆರೆತು ಆಗಿಂದಾಗ್ಗೆ ಸುದ್ದಿ ಸಮಾಚಾರಗಳನ್ನು ತರುವರು. ಬೆಟ್ಟದ ಮೇಲೆ ಇಂತಹ ಸಂದಣಿಯ ಸಂದರ್ಭದಲ್ಲಿ ಯಾತ್ರಿಕರ ಮೇಲೆ ಬಿದ್ದು ದೋಚಿಕೊಳ್ಳುವ ಕಳ್ಳಕಾಕರನ್ನು ಹಿಡಿಯಲು ನಲವತ್ತು ಐವತ್ತು ಮಂದಿ ಆಳುಗಳೊಂದಿಗೆ ಇವರು ತಹಸೀಲ್ದಾರನಿಗೆ ನೆರವು ನೀಡುತಾರೆ. ಇನ್ನೊಂದು ಗುಂಪು ನಾಡಿನ ಒಳಗಡೆ ಹರಡಿ ಗ್ರಾಮಾಂತರದ ಕೊತ್ವಾಲರಿಗೆ ಸಂಶಯಾಸ್ಪದ ವ್ಯಕ್ತಿಗಳನ್ನು ಬಂಧಿಸುವುದರಲ್ಲಿ ಸಹಾಯವಾಗುವುದು. ಸ್ಥಳೀಯ ಅಧಿಕಾರಿಯ ಕೈಕೆಳಗೆ ಸಿಪಾಯಿಗಳ ಒಂದು ತಂಡವನ್ನು ಶಾಶ್ವತರಕ್ಷಕ ಪಡೆಯಾಗಿ ತಹಸೀಲ್ದಾರನು ಇಟ್ಟುಕೊಳ್ಳಬಹುದು. ಆಲಯದಲ್ಲಿ ಒಂದು ಉಗ್ರಾಣವೂ, ಭಂಡಾರವೂ, ಜೀಯಂಗಾರರು ಹಾಗೂ ಏಕಾಂಗಿಗಳ ಅಥಾವಾ ಸಹಾಯುಕರ ಜವಾಬ್ದಾರಿಯಲ್ಲಿ ರುವುದು. ಇವರು ತಮ್ಮ ಕೈಕೆಳಗೆ - ಒಬ್ಬ ಗುಮಾಸ್ತ, ಒಬ್ಬ ಅಲ್ಲವಗಾರ ಅಥವಾ ಧಾನ್ಯವನ್ನು ಅಳೆಯುವವನು ಮೂವರು ಜವಾನರು, ಒಬ್ಬ ಚಂದನ ತರುವವನು, ಒಬ್ಬ ಹೂವಾಡಿಗ, ಒಬ್ಬ ಕಸ್ತೂರಿ ತರುವವನು, ಅಡಿಗೆಯವನಿಗೆ ಕಟ್ಟಿಗೆ ತಂದು ಕೊಡುವವನು, ಒಬ್ಬ ಗೊಲ್ಲ, ಒಬ್ಬ ಕಸ ಹೊಡೆಯುವವನು, ಒಬ್ಬ ಮೊಸಲಿ ಅಥವಾ ದೀಪ ಬೆಳಗುವವನು - ಇವರನ್ನು ಹೊಂದಿರುವರು. ತಹಸೀಲ್ದಾರನು ಉಗ್ರಾಣದಲ್ಲಿ ಯಾವುದೇ ಸಮಯದಲ್ಲಿಯೂ ಸಾಕಷ್ಟು ದಾಸ್ತಾನು ಇರುವಂತೆ ನೋಡಿಕೊಳ್ಳುವನು. ಉಗ್ರಾಣಕ್ಕೆ ಬಂದ ಎಲ್ಲ ವಸ್ತುಗಳ ಲೆಕ್ಕವನ್ನೂ ಆತ ಇಟ್ಟುಕೊಂಡಿರುವನು. ಆಲಯದ ಪಾರುಪತ್ಯಗಾರ ಅಥವಾ ಉಸ್ತುವಾರಿಯವನು ನಿರ್ದೇಶಿಸು ವಂತೆ ಆಲಯಕ್ಕೆ ನೀಡುವ ಎಲ್ಲ ವಸ್ತುಗಳ ಲೆಕ್ಕವನ್ನೂ ಜಿಯಂಗಾರರು ಇಟ್ಟಿರುವನು. ಆಲಯದ ವಿವಿಧ ಸೇವಕರಿಗೆ ಪಾರುಪತ್ಯಗಾರನು ಪ್ರತಿನಿತ್ಯದ ದವಸಧಾನ್ಯಗಳನ್ನು ನೀಡುವನು. ಇವರೆಲ್ಲ ತಮ್ಮ ನಿಯೋಜಿತ ಕರ್ತವ್ಯಗಳನ್ನು ಸಕ್ರಮವಾಗಿ ನಿರ್ವಹಿಸುವಂತೆ ನೋಡಿಕೊಳ್ಳುವ ಈತನು ತಹಸೀಲ್ದಾರನಿಗೇ ನೇರವಾಗಿ ಜವಾಬ್ದಾರಿ. ಈತನು ಕಾಣಿಕೆಗಳ ಯಥಾವಿಧಿ ವಿಲೇವಾರಿ ಆಗುವಂತೆ ನೋಡಿಕೊಂಡು, ಇಲ್ಲಿನ ರಕ್ಷಕರು, ಮತ್ತಿತರರನ್ನು ಕರ್ತವ್ಯಾನಂತರ ತಪಾಸಣೆ ಮಾಡಿ, ದೈನಂದಿನ ಸಂಗ್ರಹಿತ ಧನದೊಡನೆ, ಅವರೊಡನೆ, ತಹಸೀಲ್ದಾರನ ಬಳಿಗೆ ತಂದ ನಂತರ, ತಹಸೀಲ್ದಾರನು ಧನವನ್ನು ಆಭರಣಗಳನ್ನು, ತಾಮ್ರದ ಕಾಸುಗಳನ್ನು ಗೋಣಿಯು ಚೀಲದಲ್ಲಿ ಹಾಕಿ, ಅವುಗಳನ್ನು ಹೊಲಿದು ತನ್ನ ಅಧಿಕೃತ ಮುದ್ರೆಯನ್ನು ಒತ್ತುವನು. ಈ ಪಾರಪತ್ಯಗಾರನು ಒಬ್ಬ ಗುಮಾಸ್ತ, ಒಬ್ಬ ಅಳತೆಯುವ ಹಾಗೂ ನಾಲ್ಕು ಜವಾನರನ್ನು ಹೊಂದಿರುವನು. ಉಗ್ರಾಣದಿಂದ ತಾನು ತೆಗೆದುಕೊಳ್ಳುವ ಎಲ್ಲ ವಸ್ತುಗಳ, ಲೆಕ್ಕವನ್ನೀತ ಇಟ್ಟುಕೊಳ್ಳುವನು. ಯಾತ್ರಿಕರು ನೀಡುವ ಪ್ರಸಾದಗಳು, ಭಕ್ಷ್ಯಗಳು, ಆಲಯದಿಂದ ತಯಾರಾಗುವ ಈತನ ಆಜ್ಞೆಯ ನಿವೇದನೆಗಳು ಎಲ್ಲವೂ ಲೆಕ್ಕವಾಗಿದ್ದ ತಹಸೀಲ್ದಾರನು ಇವುಗಳ ತಾಳೆಯನ್ನು ನೋಡುವನು. ಉಗ್ರಾಣದಿಂದ ಹೆಚ್ಚಿನ ಪ್ರಮಾಣದಲ್ಲಿ ಯಾವುದನ್ನಾದರೂ ತೆಗೆದುಕೊಳ್ಳಬೇಕಾದರೆ ಮೊದಲು ತಹಸೀಲ್ದಾರನಿಗೆ ಅದರ ಅಂದಾಜು ಪತ್ರವನ್ನು ಕಳುಹಿಸುವನು, ತಹಸೀಲ್ದಾರನು ಅದಕ್ಕೆ ಸಹಿ ಮಾಡುವನು.

ಬಂಗಾರು ವಾಕಿಲಿ ಅಥವಾ ಚಿನ್ನದ ಬಾಗಿಲ ಮೂಲಕ ಒಳಹೊಕ್ಕರೆ ಯಾತ್ರಿಕರು ಒಂದು ಇಕ್ಕಟ್ಟಾದ ಕೊಠಡಿಗೆ ಬಂದು ಸೇರುವನು. ಇಲ್ಲಿ ಅವರನ್ನು ದೇವರಿಗೆ ಪರಿಚಯ ಮಾಡಿಕೊಡಲಾಗುತ್ತದೆ. ಇಲ್ಲಿ ಎರಡು ಪಾತ್ರೆಗಳನ್ನು ಇಟ್ಟಿರುವರು ಒಂದು ಗಂಗಾಳ ಅಥವಾ ಅಗಲ ಬಾಯಿನ ಪಾತ್ರೆ, ಇನ್ನೊಂದು ಕೊಪ್ಪ ಅಥವಾ ದೊಡ್ಡ ಕೊಳಗ. ಇವುಗಳಲ್ಲಿ ಯಾತ್ರಿಕರು ತಮ್ಮ ಕಾಣಿಕೆಯನ್ನು ಸಮರ್ಪಿಸಿ, ತಮ್ಮ ವಂದನೆ ಸಲ್ಲಿಸಿ ಬೇರೊಂದು ಬಾಗಿಲನಿಂದ ಹೊರಕ್ಕೆ ಬರುತ್ತಾರೆ. ದಿನದ ಕೊನೆಯಲ್ಲಿ ರಕ್ಷಕರು - ಈ ಪಾತ್ರೆಗಳ ಕಾವಲಿನ

ಸಿಪಾಯಿಗಳು - ಹಾಗೂ ಆಳುಗಳು - ಇಬ್ಬರನ್ನೂ - ಶೋಧಿಸಲಾಗುವುದು. ಯಾವುದೇ ರೀತಿಯ ಎಣಿಕೆಯನ್ನೂ ಮಾಡದೆ ಚೀಲ ಗಳಲ್ಲಿ ಈ ಎಲ್ಲ ಸಮರ್ಪಣೆಗಳನ್ನೂ ಕಟ್ಟಿ ಪಗೋಡದ ಟಸ್ಸೆ ಹಾಕಲಾಗುವುದು. ನಂತರ ಜಿಯಂಗಾರ್ಯರು ತಹಸೀಲ್ದಾರರು ತಮ್ಮ ಮುದ್ರೆಗಳನ್ನು ಹಾಕಿದ ಮೇಲೆ ಈ ಚೀಲಗಳನ್ನು ಬೆಟ್ಟದ ಕೆಳಗಿನ ಆಲಯ ಕಚೇರಿಯಿರುವ ಗೋವಿಂದರಾಜ ಪೇಟ್ಟೈಗೆ ಕಳುಹಿಸ ಲಾಗುವುದು. ತಿಂಗಳ ಕೊನೆಯಲ್ಲಿ ಈ ಚೀಲಗಳನ್ನು ಇಲ್ಲಿಗೆ ಎಂದರೆ ಹುಜೂರು ಕಚೇರಿಗೆ (ನಮ್ಮಲ್ಲಿಗೆ) ಕಳುಹಿಸಲಾಗುವುದು. ಇಲ್ಲಿ ಚೀಲಗಳನ್ನು ತೆರೆದು, ವಿಭಾಗೀಕರಣ ಮಾಡಿ, ಲೆಕ್ಕವನ್ನು ಕಟ್ಟಿ ಹರಾಜಿನಲ್ಲಿ ಮಾರಾಟ ಮಾಡಲಾಗುವುದು. ಹೇಗಾದರೂ ಬ್ರಹ್ಮೋತ್ಸವದ ಸಮಯದಲ್ಲಿ ಕಲೆಕ್ಟರು ಅಥವಾ ಅವರ ಸಹಾಯಕ ಅಧಿಕಾರಿಯು ಸ್ಥಳದಲ್ಲಿಯೇ ಇರಬೇಕು. ಇಲ್ಲಿನ ಅಪಾರವಾದ ಸಮರ್ಪಣೆಗಳು, ಅಪಾರವಾದ ಜನಸಾಗರಗಳಲ್ಲಿ ತತ್ಕ್ಷಣದ ಅಧಿಕಾರ ಚಲಾವಣೆಯ ಅವಕಾಶವಿಲ್ಲದೆ ಮೋಸವಾಗಬಾರದು ಎಂಬ ಎಚ್ಚರಿಕೆ ಇರುವುದು. ಚಂದ್ರಗಿರಿಯಿಂದ ಇದನ್ನು ಬರೆಯುತ್ತಿರುವಾಗ ನಾನು ಇದೇ ಕರ್ತವ್ಯ ನಿರ್ವಹಣೆಯಲ್ಲಿದ್ದೇನೆ ಕಳೆದ ಹತ್ತುವರ್ಷಗಳ ಆದಾಯದ ಸರಾಸರಿಯನ್ನು ದಾಖಲು ಮಾಡುವುದರ ಹೊರತು ಹೆಚ್ಚಿಗೆ ಹೇಳಲು ಮತ್ತೇನಿಲ್ಲ. ಈ ಬಾಬ್ತಿನಿಂದ ಉಂಟಾಗುವ ವಾರ್ಷಿಕ ಸರಾಸರಿ ಉಳಿಕೆಯ ಆದಾಯ ಸುಮಾರು ಎಂಬತ್ತೇಳು ಸಾವಿರ ರೂಪಾಯಿಗಳು. 1822 ರಲ್ಲಿ ಸಂಗ್ರವಾದ ಧನ ಒಂದು ಲಕ್ಷ ನಲವತ್ತೆರಡು ಸಾವಿರ ರೂಪಾಯಿಗಳು. ಇದು ಆಶ್ಚರ್ಯವೇ ಆದರೂ ವೆಚ್ಚಗಳ ಹೊರತಾಗಿದ್ದು, ಇಪ್ಪತ್ತು ಸಾವಿರ ರೂಪಾಯಿಗಳನ್ನು ಕಳೆಯಬೇಕಾಗುತ್ತದೆ. 1820 ರಲ್ಲಿ ಅಥವಾ 1230 ನೇ ಫಸಲಿಯಲ್ಲಿನ ಆದಾಯ 1,02,000.

“ಇಂತಹ ಒಂದು ವ್ಯವಸ್ಥಿತ ಧಾರ್ಮಿಕತೆಯನ್ನು ನೀವು ದುರುಗುಟ್ಟಿಕೊಂಡು ನೋಡಬಹುದು. ಅಥವಾ ಸರ್ಕಾರದ ಆಧಾರ್ಮಿಕವಾದ ಸುಲಿಗೆ ಎಂದು ಕರೆಯಬಹುದು. ಆದರೆ ಆದೆಲ್ಲ ಸತ್ಯ ದೂರವಾಗುತ್ತವೆ. ಸರಿಯಾದ ಅವಗಾಹನೆಯ ಕೊರತೆಯಿರುವ ಮಂದಿ, ನಮ್ಮ ಮೇಲೆ ದೇವರು ಕೋಪವನ್ನು ಸೆಳೆಯಬಹುದಾದ ಈ ಉದಾಹರಣೆಯಂತಹ ಪ್ರಸಂಗದಿಂದಾಗಿ ನಮ್ಮನ್ನು ಕಂಡು ಕೇಕೆ ಹಾಕಿ ನಗಬಹುದು. ವಸ್ತು ಸ್ಥಿತಿ ಹೀಗಿದೆ. - ಮುಸಲ್ಮಾನ ದೊರೆಗಳು ಈ ಪಗೋಡದ (ಆಲಯದ) ಸಂಪನ್ಮೂಲವನ್ನು ಸ್ವಂತಕ್ಕೆ ಬಳಸುವುದು ಸಲ್ಲುವಳಿ - ಸಿಂಧು ಆಗಿದ್ದಿತೆಂಬುದನ್ನು ಕಂಡಿದ್ದೇವೆ. ಕೋರಮಂಡಲದ ಸಮುದ್ರತೀರದ ವ್ಯಾಪಾರವನ್ನು ಕಳೆದುಕೊಳ್ಳುವಂತಹ ಸವಾಲನ್ನು ಎದುರಿಸಿ ನಮ್ಮ ರಕ್ತ (ಬಲ) ಹಾಗೂ ಉಪಸ್ಥಿತಿಗಳ ಪರಿಣಾಮದ ಫಲವಾಗಿ - ಈ ಮೊದಮೊದಲ ಒಂದು ಆದಾಯವನ್ನು - ಅದೂ ಅತಿ ಕಡಿಮೆಯೆನ್ನಬೇಕು - ಪಡೆದಿರುವೆವು. ಅಂದಿನಿಂದಲೂ ನಿರಂತರವಾಗಿ ಸಂದಾಯವಾಗುತ್ತ ಬಂದಿದೆ. ಆಲಯವು ತನ್ನ ಆದಾಯದಿಂದಲೇ ನಡೆಯುವುದಕ್ಕೆ ಬಿಡುವುದರಿಂದಾಗಿ, ಕಿಸ್ತೆಗಳು ಚುಕ್ತಾ ಆಗುವಲ್ಲಿ ಒರಟಾದ ಹುತ್ತಾಯ ಹಾಕಿದಂತಾಗುವುದೆಂದು ನೋಡಿದ್ದೇವೆ.ಜೊತೆಗೆ ದೇಶದ ಈ ಭಾಗದಲ್ಲಿ ನಡೆಯುವಂತಹ ಬೇಸಾಯವೆಲ್ಲವೂ ಬ್ರಾಹ್ಮಣರ ಕೈಯಲ್ಲಿದ್ದು ಅವರು ನೇಗಿಲನ್ನು ಮುಟ್ಟಿ ತಿಳಿದವರಲ್ಲವಾಗಿ ಇತರೆಲ್ಲ ರೀತಿಯ ರೈತರೂ ಇವರ ಅಧೀನದಲ್ಲಿಯೇ ಬದುಕನ್ನು ನಡೆಸುತ್ತ ಸ್ವಂತ ಭೂಮಿ ಹೊಂದುವ ಕನಸು ಕಾಣುವುದೂ ಇಲ್ಲಿ ಸಾಧ್ಯವಿರಲಿಲ್ಲ. ಪ್ರತಿ ಗ್ರಾಮದ ಕಥೆಯೂ ಇದೇ ಆಗಿದ್ದಿತು. ಹೀಗಾಗಿ ಇಡೀ ದೇಶದಲ್ಲಿ ಆಲಯ ಭೂಮಿಗಳನ್ನು ಕಂಪನಿಯು ವಶಪಡಿಸಿಕೊಂಡು ತಸದೀಕು ಭತ್ಯವನ್ನು ನೀಡುವ ಗಟ್ಟಿಯಾದ ನೀತಿಯಿಂದಾಗಿ ಭೂಮಿಯ ಮೇಲಿನ ಒಡೆತನ ವಿಕೇಂದ್ರಿತವಾಗಿ ಹೊಸ ವಿಧಾನದಿಂದಾಗಿ ಹೆಚ್ಚಿನ ಆದಾಯವುಂಟಾಗುವಂತೆ ಆಯಿತೆನ್ನಬೇಕು. ಈ ಹೊತ್ತಿಗೆ ನಾಡಿನಲ್ಲಿ ನಮ್ಮ ಹಿಡಿತ ಬಹಳ ಸಂದಿಗ್ಧವಾದುದಾಗಿದ್ದಿತು. ನಾವು ಅಂದುಕೊಂಡದ್ದಕ್ಕಿಂತ ಮುಂಚೆಯೇ ಧಾರ್ಮಿಕ ಅಭಿಮಾನಿಯಾದ ಹಿಂದುವು ಹೋರಾಟಕ್ಕೆ ಇಳಿಯಬಹುದು. ನಾವು ಏನು ಮಾಡಿದೆವು - ಅವರಿಗೆ ತಮ್ಮ ಧರ್ಮದ ಆಚರಣೆಯಲ್ಲಿ ರಕ್ಷಣೆ ನೀಡಿದೆವು - ಅದನ್ನು ಸಹಿಸಿದೆವು - ಎಂದೂ ಪ್ರೋತ್ಸಾಹಿಸಲಿಲ್ಲ. ಅದು ನಮ್ಮಿಂದ ಆಗುವಂತಹದೂ ಆಗಿರಲಿಲ್ಲ. ಈಗೇನಾಯಿತು. ತಿರುಪ್ಪತಿಯ ಆದಾಯವು ನಿಧಾನವಾಗಿ ಕಡಿಮೆಯಾಗುತ್ತಿದೆ.

"ಮೇಲೆ ಹೇಳಿದ ವಿವರಗಳ ಖಚಿತತೆಯ ಬಗ್ಗೆ ನಾನು ಏನೂ ಹೇಳಲಾಗದು, ಕಾರಣ ಆಲಯವಾಗಲೀ ಅದರ ಆಡಳಿತ ವಾಗಲೀ ನನ್ನ ಕರ್ತವ್ಯದ ಪರಿಧಿಯಲ್ಲಿ ಬರುವುದಿಲ್ಲ. ತಿರುಪಟ್ಟಿಯಿರುವ ಇಡೀ ತಾಲ್ಲೂಕಿನ ಕಂದಾಯದ ಆಡಳಿತ ನನ್ನದೇಗಿದ್ದರೂ ಈ ವಿವರ ಪೂರ್ತಿ ತಿಳಿದಿಲ್ಲ. ಆದರೂ ನನಗೆ ತಿಳಿದ ಮಟ್ಟಿಗೆ ಮೇಲೆ ಹೇಳಿರುವುದೆಲ್ಲ ನಿಜವೇ. ಈ ಮಾಹಿತಿಯನ್ನೆಲ್ಲ ನಾನು ನನ್ನ ಕಚೇರಿಯಿಂದ ಪಡೆದಿದ್ದೇನೆ. ಆದರೆ ಇಂತಹ ವಿಷಯದಲ್ಲಿ ಸ್ಥಳೀಯರನ್ನು ಒತ್ತಾಯಿಸಿದರೆ ಅವರು ಅಜ್ಞಾನವನ್ನು ಪ್ರದರ್ಶನ ಮಾಡುವರು ಅಥವಾ ಹಾಗೆ ನಟಿಸಿ ತೋರಿಸುವರು ಎಂಬುದೂ ಖಂಡಿತವೇ."

- ಮೇಲಿನ ಲೇಖನವನ್ನು ಬರೆದ ಅಧಿಕಾರಿಯು 1822ನೇ ವರ್ಷದ ತಿರುಮಲೆ ಆಲಯದ ಒಟ್ಟು ಆದಾಯವು 147000 ರೂಪಾಯಿಗಳೆಂದೂ, 1820 ರಲ್ಲಿ ಇದು 1,02,000 ರೂಪಾಯಿಗಳು ಎಂದೂ ತಿಳಿಸಿದ್ದಾನೆ. ಆಲಯದ ವೆಚ್ಚಗಳು . ಭೂಮಿ ಕಾಣಿಯನ್ನು ಜಪ್ತು ಮಾಡಿಕೊಂಡ ಬಳಿಕ ನೀಡಲಾದ ತಸ್ತೀಕು ಧನರೂಪದಲ್ಲಿದ್ದಿತೋ ಅಥವಾ ವಸ್ತು ರೂಪದಲ್ಲಿ ಇದ್ದಿತೋ ಎಂಬುದನ್ನೂ ತಿಳಿಸಿಲ್ಲ. 1819ರಲ್ಲಿ ಜಾರಿಗೆ ಬಂದಂತೆ ಫಸಲಿ 1227ರಲ್ಲಿಯ 'ಮೊಯ್ನ ಜಪ್ತಪಡಿತರಂ' ರೂಪದಲ್ಲಿದ್ದಿತೋ ಎಂದು ತಿಳಿದಿಲ್ಲ. ಫಸಲಿ 1233 -34 ವರ್ಷದಿಂದ ಹತ್ತು ವರ್ಷಕ್ಕೆ ಎಂದರೆ ಫಸಲಿ ವರ್ಷ 1242 - 43 ರವರೆಗೆ ದೇವಾಲಯದ ತಸ್ತೀಕು ಪುಸ್ತಕ ದೊರೆತಿದ್ದು ಇದರಲ್ಲಿ ಆದಾಯದ ಒಟ್ಟು ಮೊತ್ತದ ವಿವರಗಳನ್ನು ನೀಡಲಾಗಿದೆ. ಇದರ ಒಳ ಸ್ಥೂಲವಿವರಗಳೊಡನೆ ಪಟ್ಟಿ ಮಾಡಲಾಗಿದೆ.

**ರಸೀದಿಗಳು ಹಾಗೂ ವಿತರಣೆಗಳು**

| ವರ್ಷ | ಪ್ರಭುತ್ವ ವಂತಿಗೆ | ಕಾಣಿಕೆ ಮುಂತಾದವು | ಧರ್ಮ ಕರ್ತರು | ಒಟ್ಟು ಮೊತ್ತ | ಪ್ರಭುತ್ವ ಆದಾಯ |
|---|---|---|---|---|---|
| 1823-24 | 31763 | 95557 | 17999 | 177024 | 95548 |
| 1824-25 | 34972 | 146356 | 14933 | 227976 | 146357 |
| 1825-26 | 31427 | 107785 | 13007 | 183933 | 107785 |
| 1826-27 | 24511 | 124138 | 11907 | 192258 | 124114 |
| 1827-28 | 25184 | 125827 | 11089 | 193888 | 125828 |
| 1828-29 | 25403 | 118246 | 11124 | 187504 | 118247 |
| 1829-30 | 25360 | 117447 | 13029 | 190567 | 117448 |
| 1830-31 | 28262 | 118361 | 13050 | 191371 | 118361 |
| 1831-32 | 27140 | 72614 | 10330 | 141863 | 72515 |
| 1832-33 | 31210 | 59468 | 14672 | 137021 | 55468 |

| ವರ್ಷ | ಆಲಯ ವೆಚ್ಚಗಳು | ಒಟ್ಟು ವೆಚ್ಚಗಳು |
|---|---|---|
| 1823 - 24 | 37848 | 81476 |
| 1824 - 25 | 39872 | 81619 |
| 1825 - 26 | 34358 | 76148 |
| 1826 - 27 | 25749 | 68144 |
| 1827 - 28 | 25781 | 68060 |
| 1828 - 29 | 26884 | 69257 |
| 1829 - 30 | 30178 | 73119 |
| 1830 - 31 | 30119 | 73010 |
| 1831 - 32 | 27027 | 69249 |
| 1832 - 33 | 34662 | 71553 |

ವೆಚ್ಚಗಳ ಬಾಬತ್ತಿನಲ್ಲಿ ಆಲಯದ ಉತ್ಸವಾರಾಧನೆಗಳಿಗೆ ಮಾಡಿದ ಖರ್ಚು ಮಾತ್ರವೇ ಗಣನೆಯಾಗುವುದ ಲ್ಲದೆ ಇಡೀ ವೆಚ್ಚಗಳಲ್ಲ. ಹೀಗೆ ನೋಡಿದರೆ ಆಲಯದಲ್ಲಿ ಆರಾಧನೆಗಳಿಗಾಗಿ ಆಗುತ್ತಿದ್ದ ವೆಚ್ಚಕ್ಕಿಂತಲೂ ಕಡಿಮೆ ತಸ್ತೀಕು ಹಣವನ್ನು ಸರ್ಕಾರವು ನೀಡುತ್ತಿದ್ದಿತೆಂದು ಹೇಳಬರುವುದು.

ಈಸ್ಟ್ ಇಂಡಿಯಾ ಕಂಪನಿಯ ನಂತರ ಆಲಯದ ಆಡಳಿತದ ವಿಚಾರಣಕರ್ತರಾಗಿ ಜವಾಬ್ದಾರಿಯನ್ನು ಹೊಂದಿದ ಮಹಂತರು ತಸ್ದೀಕ್ ಹಣವನ್ನು ಸರ್ಕಾರದಿಂದ ಕೇಳಿ ಪ್ರತಿ ಆಲಯದ ಲೆಕ್ಕಕ್ಕೆ ಜಮೆ ಮಾಡಲಿಲ್ಲ. ಹಾಗಾಗಿ ಆಲಯಗಳ ಒಂದು ಬಹುಮುಖ್ಯವಾದ ಆದಾಯ ಮೂಲವಿವರಣೆ ಶಾಶ್ವತವಾಗಿ ನಷ್ಟವಾಯಿತು.

ಈಸ್ಟ್ ಇಂಡಿಯಾ ಕಂಪನಿಯ ತನ್ನ ಆಡಳಿತ ಪರಿಧಿಯಲ್ಲಿ ಹತ್ತೊಂಬತ್ತು ಪ್ರಮುಖ ಆಲಯಗಳನ್ನಲ್ಲದೆ ಮತ್ತೂ ಹದಿನೆಂಟು ಉಪದೇವಾಲಯಗಳನ್ನು ಆಡಳಿತಕ್ಕೆ ಎತ್ತಿಕೊಂಡಿತು. ತಿರುಮಲೆಯ ಆಲಯವಾಗಲೀ ತಿರುಪತಿಯ ಆಲಯವಾಗಲೀ ಇವುಗಳಲ್ಲಿನ ಯಾವ ಆಲಯವನ್ನೂ ನಡೆಸುತ್ತಿರಲಿಲ್ಲ. ಪ್ರತಿ ಆಲಯಕ್ಕೂ ತನ್ನದೇ ಆದ ಆದಾಯ ಮೂಲವಿದ್ದಿತು.6.39 0625 ಪಗೋಡಗಳ (ರೂ. 22 -6-0) ಆದಾಯವಿದ್ದ ಸಂಜೀವರಾಯ ಮಠಕ್ಕೂ ಸಹ ಈಸ್ಟ್ ಇಂಡಿಯಾ ಕಂಪನಿ, ಆಲಯ ನಿರ್ವಹಣೆಗೆ ಇತರತ್ರ ಏನನ್ನೂ ನೀಡಲಿಲ್ಲ. ಅಂಗಡಿ ಬಾಡಿಗೆಗಳು, ನೇಯ್ಗೆ ಸುಂಕಗಳು, ಕಾಣಿಕೆಗಳನ್ನು ಪಡೆಯುತ್ತಿದ್ದ ಆಲಯಗಳೆಂದರೆ ಶ್ರೀವರಾಹಸ್ವಾಮಿ ದೇವಾಲಯ. ಭಾಶಿಂಗ ನರಸಿಂಹಸ್ವಾಮಿ ಆಲಯ.ಅಲಿಪಿರಿ ನರಸಿಂಹಸ್ವಾಮಿ ಆಲಯ, ಆಳ್ವಾರ್ ತೀರ್ಥದ ಲಕ್ಷ್ಮೀನಾರಯಣಸ್ವಾಮಿ ಆಲಯ , ಹಾಗೂ ಬೇಡಿ ಹನುಮಂತರಾಯಸ್ವಾಮಿ ಆಲಯ, ವರಾಹಸ್ವಾಮಿ ಆಲಯವು ತನಗಿದ್ದ ಧರ್ಮಕರ್ತರಿಂದಲೂ ಆದಾಯವನ್ನು ಪಡೆಯುತ್ತಿದ್ದಿತು. ನಾಥುಮುನಿ ಆಲಯವೂ ಇದರಂತೆಯೇ. ತಿರುಪತಿಯ ದಕ್ಷಿಣ ಮಾಡವೀಧಿಯಲ್ಲಿದ್ದ ಲಕ್ಷ್ಮೀನಾರಾಯಣಸ್ವಾಮಿ ಆಲಯವು 402 ರೂಪಾಯಿಗಳ ಆದಾಯವನ್ನೂ, ಇನಾಂ ಜಮೀನನ್ನೂ ಹೊಂದಿದ್ದಿತು.1843 ರಲ್ಲಿ

ಮಹಂತರಿಗೆ ನೋಡಿಕೊಳ್ಳಲು ಒಪ್ಪಿಸಿದಾಗ ಕೆಳಕಂಡ ಐದು ಆಲಯಗಳನ್ನು ಈಸ್ಟ್ ಇಂಡಿಯಾ ಕಂಪನಿಯು ಒಪ್ಪಿಸಲಿಲ್ಲ. 1)ಬುಗ್ಗ ಮಠದ ಶ್ರೀ ಕೃಷ್ಣ ಸ್ವಾಮಿ ಆಲಯ, 2) ರಾಘವೇಂದ್ರಾಚಾರ್ ಮನೆಯ ಬಳಿಯ ಸಂಜೀವರಾಯಸ್ವಾಮಿ ಆಲಯ, 3) ರಾಮಚಂದ್ರ ಗುಂಟದ ದಡದಲ್ಲಿದ್ದ ಅಗಸ್ತೇಶ್ವರಸ್ವಾಮಿ ದೇವಾಲಯ, 4) ತಿರುಕಚ್ಚಿನಂಚಿ ಆಲಯ , 5) ತಾತಾಯ ಗುಂಟ ಗಂಗಮ್ಮ ಆಲಯಗಳು

**ಸಾಧಾರಣ ದೇವಾಲಯಗಳ ಪಟ್ಟಿ**

| ಕ್ರ.,ಸಂ. | ಆಲಯದ ಹೆಸರು | ಆದಾಯ/ವೆಚ್ಚ |
|---|---|---|
| 1. | ತಿರುಮಲೈ ಶ್ರೀ ವರಾಹಸ್ವಾಮಿ ಆಲಯ | 229 ಕಾಣಿಕೆ ಹಾಗೂ ಧರ್ಮಕರ್ತರು |
| 2. | ಭಾಸಿಂಗ ನರಸಿಂಹಸ್ವಾಮಿ | 105 ಕಾಣಿಕೆ |
| 3, | ಅರಿಪಿರಿ ನರಸಿಂಹ ಆಲಯ | 105 ಕಾಣಿಕೆ |
| 4, | ಆಳ್ವಾರ್ ತೀರ್ಥ ಲಕ್ಷೀನಾರಾಯಣಸ್ವಾಮಿ | 2 ಕಾಣಿಕೆ |
| 5. | ಆಳ್ವಾರ್ ತೀರ್ಥದ ಬಳಿಯ ವೇಣುಗೋಪಾಲಸ್ವಾಮಿ ಆಲಯ | 2 ಕಾಣಿಕೆ |
| 6. | ತಿರುಪತಿಯ ಗೋವಿಂದರಾಜ ಮಾಡವೀಧಿಯ ಲಕ್ಷೀನಾರಾಯಣಸ್ವಾಮಿ ಆಲಯ | 402(ಇನಾಂಜಮಿನು) |
| 7. | ಬೇಡಿ ಹನುಮಂತರಾಯಸ್ವಾಮಿ ಆಲಯ | 52 ಕಾಣಿಕೆ |
| 8. | ಆಳ್ವಾರ್ ತೀರ್ಥದ ಸಂಜೀವರಾಯಸ್ವಾಮಿ ಆಲಯ | 2 ಕಾಣಿಕೆ |
| 9. | ಗೋವಿಂದರಾಜಸ್ವಾಮಿ ಎದುರಿನ ಸಂಜೀವರಾಯಸ್ವಾಮಿ ಆಲಯ | - ಕಾಣಿಕೆ |
| 10. | ರಾಮಸ್ವಾಮಿ ಗುಡಿಯ ಎದುರಿನ ಸಂಜೀವರಾಯಸ್ವಾಮಿ ಗುಡಿ | - ಕಾಣಿಕೆ |
| 11. | ನಾಥಮುನಿ ಆಲಯ | 74- (ಧರ್ಮಕರ್ತರು) |
| 12. | ಆಳ್ವಾರ್ ತೀರ್ಥದ ನಮ್ಮಾಳ್ವಾರ್ ಆಲಯ | 7 ಕಾಣಿಕೆಗಳು |
| 13. | ಉತ್ತರಾದಿ ಮಠದ ಸಂಜೀವರಾಯಸ್ವಾಮಿ ಆಲಯ | 23 ಸರ್ಕಾರದ ತಸ್ತೀಕು |
| 14. | ಬುಗ್ಗಮಠದ (ಸೀತಾಲದಾಸ ಮಠ) ಶ್ರೀ ಕೃಷ್ಣಸ್ವಾಮಿ ಆಲಯ | |
| 15. | ರಾಘವೇಂದ್ರಾಚಾರ್ಯರ ಮನೆಯ ಬಳಿಯ ಸಂಜೀವರಾಯಸ್ವಾಮಿ ಆಲಯ | |
| 16. | ರಾಮಚಂದ್ರ ಗುಂಟದ ಬಳಿಯಲ್ಲಿನ ಅಗಸ್ತೇಶ್ವರಸ್ವಾಮಿ | |
| 17. | ಬೇರಿ ವೀಧಿಯ ತಿರುಕಚ್ಚಿನಂಬಿ ಆಲಯ | |
| 18. | ತಾತಾಯಗುಂಟ, ತಾಳ್ಲಪಾಕಂ ಗುಂಟ ಗಂಗಮ್ಮ ಆಲಯ | |

ಪ್ರಮುಖವೆಂದಾಗಲೇ ಉಪ ದೇವಾಲಯವೆಂದಾಗಲೀ ಯವುದೇ ರೀತಿಯ ವರ್ಗೀಕರಣದಲ್ಲಿ ಸೇರಿದ್ದರೂ ಯಾವುದೇ ದೇವಾಲಯವೂ ತಿರುಮಲೆಯ ಆಲಯದ ಧನದ ಮೇಲೆ ಯಾವ ರೀತಿಯ ಅಧಿಕಾರವನ್ನೂ ಹೊಂದಿರಲಿಲ್ಲ.

**2. ಈಸ್ಟ್ ಇಂಡಿಯಾ ಕಂಪನಿಯ ಐದು ವಿಚಾರಣೆಗಳು :**

ಉಪಖಂಡದಲ್ಲಿ ಶಾಂತಿಯು ನೆಲೆ ಗೊಂಡಾಗ ಈಸ್ಟ್ ಇಂಡಿಯಾ ಕಂಪನಿಯು ದೇವಾಲಯದ ಬಗೆಗಿನ ಎಲ್ಲ ವಿಷಯ ಗಳಲ್ಲಿಯೂ ವಿಚಾರಣೆ ನಡೆಸಿತು. ಆಲಯದ ಆಡಳಿತ, ಅದರ ಆದಾಯ ಹಾಗೂ ಮೂಲಗಳು, ದೇವರ ಆರಾಧನೆ, ಆರಾಧನೆಯ ರೀತಿಗಳು ಮತ್ತು ಅವುಗಳ ಪರಂಪರೆ, ಸಿಬ್ಬಂದಿ, -ವಂಶಪಾರಂಪರ್ಯದ್ದು, ತತ್ಕಾಲಿಕ ಸಿಬ್ಬಂದಿ, ಹಾಗೂ ಐಚ್ಛಿಕ ಸಿಬ್ಬಂದಿ-ಅವರುಗಳ ಕರ್ತವ್ಯಗಳು, ಸಂಭಾವನೆಗಳು,ದೈನಂದಿನ ಅನ್ನಪ್ರಸಾದ ನಿವೇದನೆಗಳು,ವಿಶೇಷದಿನಗಳ ಹೆಚ್ಚುಗಟ್ಟಲೆ ನಿವೇದನೆಗಳು, ಮಾಸೋತ್ಸವ ಪಕ್ಷೋತ್ಸವ, ವಾರೋತ್ಸವ, ವರ್ಷೋತ್ಸವಗಳಲ್ಲಿನ ಪ್ರತ್ಯೇಕ ನಿವೇದನೆಗಳು, ವಿವಿಧ ಆಲಯಗಳು, ಅಲ್ಲಿನ ದೇವತೆಗಳು, ವಿವಿಧ ಮೆರವಣಿಗೆಯ ವಾಹನಗಳು, ಸಂದರ್ಭಗಳು, ದೇವರನ್ನು ಸಂದರ್ಶಿಸುವ ಭಕ್ತರು, ಅವರ ಕಾಣಿಕೆ ಸಮರ್ಪಣೆಗಳು - ಇವುಗಳ ರಸೀದಿಗಳು, ಲೆಕ್ಕಗಳು ಮತ್ತಿತರ ಸಂಬಂಧಿತ ವಿಷಯಗಳನ್ನು ಕೂಲಂಕಷವಾಗಿ ವಿಚಾರಿಸಿ ಐದು ದಾಖಲೆಗಳನ್ನು ನಿರ್ಮಿಸಲಾಯಿತು.

**ಅ. ದಿತ್ತಂ :** ಎಲ್ಲ ದೇವರುಗಳಿಗೆ, ವೈಷ್ಣವ ಆಳ್ವಾರ್, ಆಚಾರ್ಯ, ವಿಗ್ರಹಗಳಿಗೆ ಸಮರ್ಪಿಸುವ ಅನ್ನಪ್ರಸಾದ ನಿವೇದನೆಯ ವಿವರಗಳಿರುವಂತಹ ದಾಖಲೆಯಿದು. ಅತಿ ಮೊದಲನೆಯ ದಾಖಲೆಯಾದ ಇದನ್ನು ತಯಾರಿಸಿ ಫಸಲಿ 1200 ರಿಂದ ಫಸಲಿ 1250 ವರೆಗೆ ಚಲಾವಣೆಗೆ ತರಲಾಯಿತು.

**ಆ. ಕೈಂಕರ್ಯಪಟ್ಟಿ :** ವಿವಿಧ ಹಂತದಲ್ಲಿ ಕೆಲಸಮಾಡುವ ಸಿಬ್ಬಂದಿಯ ಕರ್ತವ್ಯಗಳು, ಸಂಭಾವನೆಗಳನ್ನು ಗುರುತಿಸುವ ದಾಖಲೆ. ಇದನ್ನು ಮೊದಲಿಗೆ ಕ್ರಿ.ಶ. 1801 ರಲ್ಲಿ ತಯಾರಿಸಲಾಯಿತು. ನಂತರ ಕ್ರಿ.ಶ. 1820 ರಲ್ಲಿ ಪರಿಷ್ಕರಿಸಲಾಯಿತು.

**ಇ.ಬ್ರೂಸ್ ಕೋಡ್ :** ಕ್ರಿ.ಶ. 1821 ರ ಜುಲೈ 25 ರಂದು ಅಂದಿನ ಜಿಲ್ಲಾ ಕಲೆಕ್ಟರ್ ತಯಾರಿಸಿದ ಆಲಯಾಡಳಿತ ವಿಧಾನದ ವಿವರಪತ್ರ.

**ಈ. ಸವಾಲ್ ಜವಾಬ್ ಪಟ್ಟಿ :** ಕ್ರಿ.ಶ. 1819ರಲ್ಲಿ ತಯಾರಾದದ್ದು. ಇಲ್ಲಿನ ಕೆಲಸಗಾರರ ಕರ್ತವ್ಯಗಳು, ಇವರ ಆದಾಯ ಮೂಲಗಳು, ಧಾರ್ಮಿಕ ವಿಧಿಗಳು, ದಾನಗಳು ಮತ್ತಿತರ ವಿಷಯಗಳಲ್ಲಿನ ಪ್ರಶ್ನೋತ್ತರ ರೂಪದ ದಾಖಲಾತಿ ಇದು.

**ಉ. ಪೈಮಾಯಿಶಿ ದಾಖಲಾತಿ :** ಕ್ರಿ.ಶ. 1819 ರಲ್ಲಿ ತಯಾರಾದ ದಾಖಲೆ ಇದು. ಇದರಲ್ಲಿ ವಿವಿಧ ಆಲಯಗಳ ಉದ್ದಗಲಗಳ ಅಳತೆಯ ವಿವರಗಳು, ಅದರೊಳಗಿನ ದೇವತೆಗಳ ವಿಗ್ರಹಗಳ ಲೆಕ್ಕಗಳನ್ನು ಗುರುತಿಸಲಾಗಿದೆ.

ಸ್ಥೂಲವಾಗಿ ಹೇಳಬೇಕೆಂದರೆ ಈಸ್ಟ್ ಇಂಡಿಯಾ ಕಂಪನಿಯ ಕೆಳಗೆ ಆಲಯದ ಆಡಳಿತವು ಕ್ರಿ.ಶ. 1817ರ ಮದ್ರಾಸು ಕಾಯದೆ 7 ರ ಪ್ರಕಾರವಿದ್ದಿತು. ಈ ಕಾಯದೆಯು ಆಲಯಗಳು, ಮಸೀದಿಗಳು - ಮುಂತಾದವು ಹೊಂದಿದ ಜಮೀನುಗಳ ಗುತ್ತಿಗೆ, ಬೆಳೆಯ ಪಾಲು ಹಾಗೂ ಜಮೀನುಗಳ ಉಸ್ತುವಾರಿಯ ಬಗ್ಗೆ ಉಂಟಾಗಿದ್ದಿತು. ಈ ಕಾಯದೆಯ ಪ್ರಕಾರ ದಾನದ ಜಮೀನುಗಳ ಮೇಲು ವಿಚಾರಣೆಯಲ್ಲಿ ಕಂದಾಯ ಇಲಾಖೆಗೆ ಅಧಿಕಾರವಿದ್ದು ಅದರಿಂದುಂಟಾದ ಆದಾಯವು ಸರಿಯಾದ ಬಳಕೆಗೆ ಬರುವಂತೆ ನೋಡಿಕೊಳ್ಳುವುದಾಗಿದ್ದಿತು. ಈ ಕಾಯದೆಯ ಅಂತರ್ಗತವಾದ ಎಂಟನೆಯ ಕಲಮಿನನ್ವಯ ರಾಜ್ಯ ಸರ್ಕಾರದ ಅಧಿಕಾರಿಕ ಪ್ರತಿನಿಧಿಯಾಗಿ ಜಿಲ್ಲೆಯ ಕಲೆಕ್ಟರನು ವ್ಯವಹರಿಸುವಂತಾಯಿತು.

ಕಂಪನಿಯ ಕಾಲದಲ್ಲಿ ಆಲಯದ ಆಡಳಿತ ಬ್ರೂಸ್‌ಕೋಡ್ ಎಂಬ ದಾಖಾಲಾತಿ ಕಾಯದೆಯಿಂದ ನಡೆದ್ದಿತು.

**3. ಬ್ರೂಸ್‌ಕೋಡ್ ವಿವರಗಳು :**

ಆರ್ಕಾಟು ನವಾಬನಿಗೆ ಸಹಾಯ ಮಾಡುವಲ್ಲಿ ತಮಗೆ ಉಂಟಾದ ವೆಚ್ಚಗಳನ್ನು ನವಾಬನಿಂದ ಬರಬೇಕಾದ ಸಾಲವೆಂದು ಬಗೆದು ಅದನ್ನು ತುಂಬಿಕೊಳ್ಳಲು ಸಾಧನವೆಂದು ಬಗೆದು ತಿರುಪತಿಯ ದೇವಾಲಯವನ್ನು ಈಸ್ಟ್ ಇಂಡಿಯಾ ಕಂಪನಿ ಪಡೆದಿದ್ದಿತು ಎಂಬುದು ಮೂಲಭೂತವಾದ ಅಂಶ. ಆರ್ಕಾಟು ನವಾಬನು ಈ ಉದ್ದೇಶದಿಂದ ಆಲಯವನ್ನು ಮೊದಲು 1748 ರಲ್ಲಿ ಆಂಗ್ಲರಿಗೆ ಒಪ್ಪಿಸಿದ್ದನು. 1786 ರಲ್ಲಿ ಪುನಃ ಒಪ್ಪಿಸಲಾಯಿತು. ನಂತರದ ಕಾಲದಲ್ಲಿ ಕಂಪನಿಯು ತನ್ನ ಅಧಿಕಾರಿಗಳ ಮೂಲಕ ತಾನೇ ಇಲ್ಲಿನ ಆದಾಯವನ್ನು ಸಂಗ್ರಹಿಸುವ ಕಾರ್ಯದ ಏರ್ಪಾಡು ಮಾಡಿಕೊಂಡಿತು.

ಆಲಯವನ್ನು ತನ್ನ ಜವಾಬ್ದಾರಿಗೆ ತೆಗೆದುಕೊಂಡ ಬಳಿಕ ಕಂಪನಿಯು ಬ್ರೂಸ್‌ಕೋಡ್ ಮುಖಾಂತರ ಆಲಯದ ಆಡಳಿತವನ್ನು, ಆದಾಯ ಮೂಲಗಳನ್ನು ವ್ಯವಸ್ಥೆಗೊಳಿಸಿತು. ಈ ಬ್ರೂಸ್ ಯಾರು ಎಂಬುದು ಸ್ಪಷ್ಟವಾಗಿ ತಿಳಿದುಬಂದಿಲ್ಲ. ಪ್ರಾಯಶಃ ಮದರಾಸು ಪ್ರಸಿಡೆನ್ಸಿಯ ಒಬ್ಬ ಕಮೀಷನರನೊ, ಒಬ್ಬ ಸೆಕ್ರೆಟರಿಯೋ ಆಗಿರಬೇಕು.

ಈ ಕೋಡ್‌ನಲ್ಲಿ 42 ಅಧಿಕರಣಗಳಿದ್ದು ಇವುಗಳ ಪ್ರಕಾರವೇ - 1843 ರಲ್ಲಿ ತಿರುಮಲೆ ತಿರುಪತಿಯ ಹತೀರಾಮಜೀ ಮಠದ ಮಹಂತ ಸೇವಾದಾಸನಿಗೆ ಆಲಯವನ್ನು ಒಪ್ಪಿಸುವವರೆಗೆ ಆಲಯದ ಆಡಳಿತವನ್ನು ನಡೆಸಲಾಯಿತು.

ಆಲಯದ ವಂಶಪಾರಂಪರ್ಯದ ಹಾಗೂ ಮತ್ತಿತರ ಸಿಬ್ಬಂದಿಯ ನಿಯಂತ್ರಣ ಹಾಗೂ ಉಸ್ತುವಾರಿಯ ಅಧಿಕಾರವು ಚಿತ್ತೂರು ಕೇಂದ್ರವಾಗಿದ್ದ ಉತ್ತರ ಆರ್ಕಾಟು ಜಿಲ್ಲಾ ಕಲೆಕ್ಟರನದಾಗಿದ್ದಿತು. ಈತ ಆಲಯದ ಎಲ್ಲ ಕೆಲಸಗಾರರ ಪದವಿ ಪಟ್ಟಿಯನ್ನು ಸಿದ್ಧಪಡಿಸಿ ಅದರ ಒಂದು ಪ್ರತಿಯನ್ನು ತಿರುಪತಿಯ ತಹಸೀಲ್ದಾರನಿಗೂ ಮತ್ತೊಂದು ಪ್ರತಿಯನ್ನು ಆಲಯದ ಪಾರುಪತ್ಯಗಾರನಿಗೂ ಕೊಡಬೇಕಾಗಿದ್ದಿತು.

ಯಾತ್ರಿಕರು ಕಾಣಿಕೆಯಾಗಿ ನೀಡುವ ಧನ ಸಂಗ್ರಹಕ್ಕೂ , ಅವರು ಸಮರ್ಪಿಸುವ ದಾನಗಳಿಗೂ ಅತಿ ಹೆಚ್ಚಿನ ಗಮನ ನೀಡಲಾಗುತ್ತಿತ್ತು. ಯಾತ್ರಿಕರು ತಮ್ಮ ಬಳಿ ಹೊಂದಿರಬಹುದಾದ ಹಣದ ಬಗ್ಗೆ ಸ್ಪಷ್ಟ ವಿವರಗಳನ್ನು ತಿಳಿದುಕೊಂಡು ಅವರಿಂದ ಅದನ್ನು ಸಂಗ್ರಹಿಸುವಲ್ಲಿ ನೆರವಾಗಿ, ಅದನ್ನು ಪಾರುಪತ್ಯಗಾರ, ಜಿಯಂಗಾರರ ದಫ್ತರಗಳಲ್ಲಿ ದಾಖಲುಗೊಳಿಸಬೇಕಾಗಿದ್ದಿತು. ಯಾರಾದರೂ ವಂಚಿಸುವುದು ನಡೆದರೆ ಅದನ್ನು ಸೂಕ್ತ ಅಧಿಕಾರಿಗಳಿಗೆ ತಿಳಿಸುವಲ್ಲಿ ನೆರವಾಗುವ ಸಿಬ್ಬಂದಿಗೆ ಪ್ರೋತ್ಸಾಹಕವಾದ ಬಹುಮಾನ ಧನವನ್ನು ನೀಡಲಾಗುತ್ತಿತ್ತು.

ತಹಸೀಲ್ದಾರನು ಬ್ರಹ್ಮೋತ್ಸವಕ್ಕೆ ಮುಂಚೆ ಒಂದು ತಿಂಗಳಿನಿಂದಲೂ ತಿರುಮಲೆಯಲ್ಲಿ ತನ್ನ ಕಚೇರಿಯನ್ನು ತೆರೆದು, ವಿವಿಧ ಸೇವೆಗಳನ್ನು ಮಾಡಿಸುವ ಯಾತ್ರಿಕರಿಂದ ತಕ್ಕ ಶುಲ್ಕಗಳ ವಸೂಲಾತಿಯಾಗುವಂತೆ ನೋಡಿಕೊಂಡು, ಅವರಿಗೆಲ್ಲ ದರ್ಶನಕ್ಕೆ ತಕ್ಕ ಅನುಮತಿ ಪತ್ರಗಳು ನೀಡಿ, ಬ್ರಹ್ಮೋತ್ಸವಗಳ ನಂತರ ಆಲಯದ ವತಿಯಿಂದ ಸೂಕ್ತ ಬಹುಮತಿಗಳನ್ನು ನೀಡಲು ಏರ್ಪಾಡು ಮಾಡಬೇಕಾಗಿದ್ದಿತು.

ತಹಸೀಲ್ದಾರನು ವಾರಕ್ಕೆ ಒಮ್ಮೆಯಾದರೂ ಆಲಯಕ್ಕೆ ಬಂದು ಕೆಲಸಗಾರರು ಉಸ್ತುವಾರಿಯನ್ನು ಮಾಡಬೇಕಾಗಿದ್ದಿತು. ವರ್ಷದಲ್ಲಿ ಕನಿಷ್ಠ ಮೂರು ಬಾರಿಯಾದರೂ ಆಲಯದ ಆಭರಣಗಳ ತಪಶೀಲು ತೆಗೆದುಕೊಳ್ಳಬೇಕಾಗಿದ್ದಿತು. ಜಿಲ್ಲಾ ಕಲೆಕ್ಟರನು ವರ್ಷಕ್ಕೆ ಒಮ್ಮೆ ಈ ಆಭರಣಗಳ ಖುದ್ದು ಪರೀಕ್ಷೆ ನಡೆಸಬೇಕಿತ್ತು.

ಕಾಣಿಕೆ ಹಾಗು ಆರ್ಜಿತ ( ಬೇರೆ ಬೇರೆ ವಾಹನಗಳ ಮೆರವಣಿಗೆ, ನಿವೇದನೆ ಉತ್ಸವಗಳಿಗೆ ತಕ್ಕ ಶುಲ್ಕವನ್ನು ನೀಡುವಿಕೆ) ಗಳನ್ನು ಮಾಡಿಸುವ ಸೌಕರ್ಯವಿದ್ದ ಸಿರಿವಂತ ಯಾತ್ರಿಕರಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿ ಅವರಿಗೆ ಮೊದಲು ದರ್ಶನಾವಕಾಶ ನೀಡಲಾಗುತ್ತಿತ್ತು. ಇವರು ದರ್ಶನ ಪಡೆದ ಮೇಲೆ ಮಿಕ್ಕ ಎಲ್ಲರೂ ಸರ್ವರೂ - ದರ್ಶನ ಪಡೆಯಬಹುದಾಗಿದ್ದಿತು. ಅಥವಾ ಇವರೆಲ್ಲರನ್ನು ಐವತ್ತು ಮಂದಿಯ ಗುಂಪುಗಳಲ್ಲಿ ದರ್ಶನಕ್ಕೆ ಅನುಮತಿಸುತ್ತಿದ್ದರು.

ಅಂದಿನ ದಿನಗಳಲ್ಲಿ ಪೂಲಂಗಿಸೇವೆ (ಪ್ರತಿ ಗುರುವಾರ ಸಂಜೆ ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ಹೂವಿನ ಹಾರಗಳಿಂದ ಅಲಂಕರಿಸುವುದು) ಹಾಗೂ ಪ್ರತಿ ಶುಕ್ರವಾರದಲ್ಲಿ ಪುಳಿಕಾಪ್ಪುಸೇವೆಗಳ (ದಕ್ಷಿಣ ಇಂಡಿಯಾದಲ್ಲಿನ ಪ್ರತಿ ಮನೆಯಲ್ಲಿಯೂ ಸಾಧಾರಣವಾಗಿರುವಂತೆ ಇಡೀ ವಿಗ್ರಹವನ್ನು ಹುಣಿಸೆ ಹಣ್ಣಿನ ನೀರಿನಿಂದ ತೊಳೆದು ನಂತರ ನೀರಿನಿಂದ ಶುದ್ಧಗೊಳಿಸುವಿಕೆ. ಪ್ರಾಯಶಃ ಇದೇ ವಿಧಾನವನ್ನು ವಿಗ್ರಹದ ವಾರಕ್ಕೊಮ್ಮೆಯ ಅಭಿಷೇಕಕ್ಕೂ ಅನ್ವಯಿಸಿದ್ದರಿಂದ ಈ ರೀತಿಯನ್ನು ಪುಳಿಕಾಪ್ಪು ಸೇವೆ ಎಂದುಹೆಂದು ತೋರುತ್ತದೆ.) (ಪುಳಿಕಾಪ್ಪು - ಹುಣಿಸೆಹಣ್ಣಿನಿಂದ ಉಜ್ಜಿ ತೊಳೆಯುವುದು.ತಾಮ್ರ, ಹಿತ್ತಾಳೆ ವಿಗ್ರಹಗಳನ್ನು ಮಾತ್ರ. ಇಲ್ಲಿ ಪ್ರಸ್ತುತವಾದದ್ದು ಪುನುಗುಕಾಪ್ಪು - ಪುಲುಗುಕಾಪ್ಪು - ಪುಳಿಕಾಪ್ಪು ಅಲ್ಲ - ಅನುವಾದಕ) ಜೊತೆಗೆ ಅದ್ದಾಲ ಡಹು ಅಥವಾ ಸೇವೆಯೂ ಪ್ರಚಲಿತ ಆಗಿದ್ದಿತು. ಇಲ್ಲಿ ಗೋಡೆಗಳಲ್ಲಿ ಹಾಕಿದ ಕನ್ನಡಿಗಳಲ್ಲಿ ಉತ್ಸವ ಮೂರ್ತಿಯ ಸಾವಿರಾರು ಪ್ರತಿಬಿಂಬಗಳು ಕಂಡುಬರುತ್ತಿದ್ದವು. ಈ ಕನ್ನಡಿಯ ಕೋಣೆಯು ಅದ್ದಾಲ ಮಹಲ್‌ನಲ್ಲಿದ್ದು ಅದರ ಅಂಗಳದ ಭಾಗವು ಆಲಯದ ಉತ್ತರಕ್ಕೆ ತೆರೆದುಕೊಂಡ್ಕೃಷ್ಣದೇವರಾಯ ಮತ್ತವನ ರಾಣಿಯರ ವಿಗ್ರಗಳಿರುವ ಮಂಟಪಕ್ಕೆ ಹೊಂದಿಕೊಂಡಂತೆ ಇದ್ದಿತು. ಸ್ವಾಮಿ ಪುಷ್ಕರಿಣಿಯ ಪಶ್ಚಿಮದಲ್ಲಿದ್ದ ಶ್ರೀ ವರಾಹಸ್ವಾಮಿಯ ದೇವಾಲಯವನ್ನು ಜೀರ್ಣೋದ್ದಾರ ಮಾಡುವಾಗ ಶ್ರೀ ವರಾಹಸ್ವಾಮಿ ಮತ್ತಿತರ ಪರಿವಾರ ದೇವತೆಗಳ ವಿಗ್ರಹಗಳನ್ನು ಹನ್ನೆರಡು ವರ್ಷಗಳ ಕಾಲ - ಎಂದರೆ ಗುಡಿಯ ಕೆಲಸ ಕಾರ್ಯಗಳು ಪೂರ್ಣವಾಗಿ, ಸ್ವಾಮಿಯ ಪುನಃ ಪ್ರತಿಷ್ಠಾಪನೆ ಆಗುವ ತನಕ - ಇಲ್ಲಿಯೇ ಇಡಲಾಗಿದ್ದಿತು.ಈ ಅದ್ದಾಲ ಸೇವೆ ಈಗ ಪ್ರಚಲಿತವಾಗಿಲ್ಲ. (ಕ್ರಿ.ಶ. 1821) (ಈಗ ಕ್ರಿ.ಶ. 2014ರಲ್ಲಿ ಪ್ರತಿದಿನ ಮಧ್ಯಾಹ್ನ ಡೊಲೋತ್ಸವ ಆರ್ಜಿತ ಸೇವೆಯಾಗಿ ನಡೆಯುತ್ತದೆ - ಅನುವಾದಕ)

ಈ ಎಲ್ಲ ಸೇವೆಗಳಿಗೆ ಶುಲ್ಕವನ್ನು ವಿಧಿಸಲಾಗುತ್ತಿದ್ದಿತು. ಬ್ರಹ್ಮೋತ್ಸವ ಸಮಯದಲ್ಲಿ ಪೂಲಂಗಿ ಸೇವೆಗೆ 1 ರೂಪಾಯಿ, ಊಡು ಸೇವೆಗೆ ಐವತ್ತು ಪೈಸೆ. ( ಅರ್ಧ ರೂಪಾಯಿ ) ಪುಲಿಕಾಪ್ಪುಸೇವೆಗೆ 2 ರೂಪಾಯಿ . ಸಾಧಾರಣ ದಿನಗಳಲ್ಲಿ ಈ ಮೂರೂ ಸೇವೆಗಳು - ಪ್ರತಿಯೊಂದೂ ಒಂದು ರೂಪಾಯಿ, ಮೂಲದೇವರು ಅಥವಾ ಉತ್ಸವ ಮೂರ್ತಿಗಳ ಮೆರವಣಿಗೆಯಲ್ಲಿ ಆರತಿಗೆ ಒಂದು ರೂಪಾಯಿ ಆಭರಣಗಳು ಮತ್ತಿತರ ಬೆಲೆಬಾಳುವ ವಸ್ತುಗಳ ರಕ್ಷಣೆಗೆ ಹಾಗೂ ನಿರ್ವಹಣೆಗೆಂದು ಆಯಾ ವಸ್ತುಗಳ ಬೆಲೆಯಷ್ಟೇ ಹಣವನ್ನು ಆಲಯಕ್ಕೆ ವರ್ತನೆಯೆಂದು ನೀಡಬೇಕಾಗಿದ್ದಿತು.

ದೇವರಿಗೆ ಒಂದು ವರ್ಷ ಪರ್ಯಂತ ಯಾವ ಸೇವೆಯನ್ನಾದರೂ ಮಾಡಿಸಬೇಕೆಂದು ಅಪೇಕ್ಷಿಸಿದವರು ಅದಕ್ಕೆ ತಕ್ಕ ಹಣವನ್ನು ನೀಡುವುದರಿಂದ ಸೇವೆಯನ್ನು ಮಾಡಿಸಬಹುದಾಗಿದ್ದಿತು.

ಚಕ್ರಾಂಕಿತಗೊಳಿಸುವಿಕೆಯು (ವಿಷ್ಣುವಿನ ಆಯುಧಗಳಾದ ಶಂಖ ಚಕ್ರಗಳ ಮುದ್ರೆಯನ್ನು ತೋಳಿನ ಮೇಲೆ ಮುದ್ರಿಸಿಕೊಡು ವಿಷ್ಣುವಿಗೆ ಅರ್ಪಿತವಾದ ಪುಷ್ಪಗಳೆಂದು ಭಾವಿಸುವ ವೈಷ್ಣವರು ಮಾಡಿಸಿಕೊಳ್ಳುತ್ತಿದ್ದ ಮುದ್ರಾಂಕನ) ತಕ್ಕ ಶುಲ್ಕ ನೀಡುವುದರಿಂದ ನಡೆಯುತ್ತಿದ್ದಿತು.

ಯಾತ್ರಿಕರು ಆಲಯಕ್ಕೆ ನೀಡುವ ಕಾಣಿಕೆಗಳನ್ನು ರಕ್ಷಿಸಿಕೊಂಡು ಹೋಗಲು ಹಲವಾರು ಏರ್ಪಾಡುಗಳನ್ನು ಮಾಡಲಾಯಿತು.

ನಿಯಮ 7 ಹಾಗೂ ಅದರ ಒಳ ಕಲಮುಗಳು ಆಲಯದ ಆದಾಯ ವೆಚ್ಚಗಳ ದೈನಂದಿನ ಪಟ್ಟಿಯನ್ನು ಪಾರುಪತ್ಯಗಾರನು ಸಿದ್ಧಪಡಿಸಿದ ಮೇಲೆ ಜಿಯಂಗಾರರ ಗುಮಾಸ್ತನು ಇದಕ್ಕೆ ತನ್ನ ಸಹಿಯನ್ನು ಹಾಕಿ ದಿನವೂ ಒಂದು ಪ್ರತಿಯನ್ನು ತಹಸೀಲ್ದಾರನಿಗೆ ಕಳುಹಿಸಬೇಕೆಂದೂ, ಆತನು ಇದರೊಡನೆ ಹಿಂದಿನ ಆರು ದಿನಗಳ ಇಂತಹ ಪತ್ರಗಳ ಮೊತ್ತದ ಒಂದು ಪ್ರತಿಯನ್ನು ವಾರಕ್ಕೆ ಒಮ್ಮೆ ಜಿಲ್ಲಾ ಕಲೆಕ್ಟರನಿಗೆ ಕಳುಹಿಸಬೇಕೆಂದೂ ವಿಧಿಸಿದ್ದವು. ಬ್ರಹ್ಮೋತ್ಸವದ ದಿನಗಳಲ್ಲಿಯೂ ಇದೇ ಪದ್ಧತಿಯನ್ನು ಪಾಲಿಸಲಾಗಿದ್ದಿತು.

23ನೇ ಕುಲಮು ಪಾರುಪತ್ಯಗಾರನು ಪ್ರತಿದಿನ ಸಂಗ್ರಹವಾದ ಹಣವನ್ನು ಅದರ ಲೆಕ್ಕದೊಂದಿಗೆ ಮಾರನೇ ದಿನವೇ ತಹಸೀಲ್ದಾರನಿಗೆ ಒಪ್ಪಿಸಬೇಕೆಂದು ವಿಧಿಸಿತು. ತಹಸೀಲ್ದಾರನು ಈ ಹಣಕ್ಕೆ ಪಾರುಪತ್ಯದಾರನಿಗೆ ರಸೀದಿಯನ್ನು ಕೊಡಬೇಕಾಗಿತ್ತು. ಪಾರುಪತ್ಯದಾರನು ನಂತರದ ತಿಂಗಳ ಹದಿನೈದನೆ ದಿನದಂದು ಈ ಎಲ್ಲ ರಸೀದಿಗಳನ್ನು ಜಿಲ್ಲಾಕಲೆಕ್ಟರಿಗೆ ಕಳುಹಿಸಬೇಕಾಗಿದ್ದಿತು.

24ನೇ ಕಲಮು ಹೇಳುವಂತೆ ತಹಸೀಲ್ದಾರನು ಬ್ರಹ್ಮೋತ್ಸವ ಪ್ರತಿ ದಿನಗಳಲ್ಲಿ ಆದ ಒಟ್ಟು ಸಂಗ್ರಹವನ್ನು ಮಾಡುವ ದಿನವೇ ಕಲೆಕ್ಟರನಿಗೆ ಒಪ್ಪಿಸಬೇಕಾಗಿದ್ದಿತು. ಕಲೆಕ್ಟರನಾಗಲೀ ಆತನ ಸಹಾಯಕನಾಗಲೀ ಅವುಗಳಲ್ಲಿನ ನಾಣ್ಯಗಳು, ಬೆಳ್ಳಿ, ಬಂಗಾರ, ಆಭರಣಗಳು ಮತ್ತಿತರ ವಸ್ತುಗಳನ್ನು ವರ್ಗೀಕರಿಸಿ ಲೆಕ್ಕ ಕಟ್ಟಬೇಕಾಗಿದ್ದಿತು. (ಈ ಕೆಲಸವನ್ನು ಈಗ ಪರಕಾಮಣಿಯೆಂದು ಕರೆಯುತ್ತಾರೆ.) ಈ ವಿಭಾಗೀಕರಣ ಸಂದರ್ಭದಲ್ಲಿ ತಹಸೀಲ್ದಾರನ ಹಾಗೂ ಜಿಯಂಗಾರನ ಸಹಾಯಕರು ಹಾಜರಿದ್ದು ವರ್ಗೀಕೃತ ವಸ್ತುಗಳ ವಿವರ ಪತ್ರವನ್ನು ಪಡೆಯಬೇಕು. ಈಗಣ ಪದ್ಧತಿಯೆಂದರೆ ಹುಂಡಿಯನ್ನು (ಯಾತ್ರಿಕರು ಕಾಣಿಕೆಗಳನ್ನು ಅರ್ಪಿಸುವ ಕೊಳಗಪಾತ್ರೆ) ಕಟ್ಟಿ ದೇವಾಲಯದಲ್ಲಿಯೇ ಇಟ್ಟು ಉತ್ಸವ ಪೂರ್ಣವಾದ ಮೇಲೆ ಒಟ್ಟು ಚೀಲಗಳನ್ನು ತಿರುಪತಿಯ ಕಚೇರಿಗೆ ಕಳುಹಿಸಲಾಗುವುದು ಅಲ್ಲಿ ಚೀಲಗಳನ್ನು ಬಿಚ್ಚಿ ವರ್ಗೀಕರಿಸಲಾಗುತ್ತದೆ)-1980).

26ನೇ ಕಲಮು ಹೇಳುವಂತೆ ಬ್ರಹ್ಮೋತ್ಸವದ ನಂತರ ಕಲೆಕ್ಟರನು ಕಂದಾಯ ನಿಗಮಕ್ಕೆ ಎಲ್ಲ ಕಾಣಿಕೆಗಳನ್ನೂ ಹುಟ್ಟಿಮಾಡಿ ಕೊಟ್ಟು ಅವುಗಳನ್ನು ನಿಗಮವು ಮಾರಾಟ ಮಾಡವುದಕ್ಕೆ ಅನುಮತಿಸಲಾಗುವುದು.

32ನೇ ಕಲಮು ಯಾತ್ರಿಕರ ಹಾಗೂ ಅವರ ವಸ್ತುಗಳ ಕಾಪಾಡುವಿಕೆಯನ್ನು, ನಿಷಿದ್ಧರಾದ ಜನರು ಬೆಟ್ಟಕ್ಕೆ ಹೋಗುವುದನ್ನು ತಡೆಯಲೂ, ಕದನ, ಕಳವುಗಳನ್ನು ತಡೆಯಲೂ ಪೋಲೀಸರಿಗೆ ಅಧಿಕಾರ ನೀಡಿ, ವಿಚಾರಣೆ ನಡೆಸಿ ನ್ಯಾಯ ಮಾಡಿಸಬೇಕೆಂದು ಹೇಳುತ್ತದೆ.

35ನೇ ಕಲಮಿನಂತೆ ಆಲಯದಲ್ಲಿ ದೇವರಿಗೆ ನಿವೇದನೆಯಾಗುವ ಅನ್ನಪ್ರಸಾದಗಳ ತಯಾರಿಕೆಯ ಜವಾಬ್ದಾರಿ ತಹಸೀಲ್ದಾರ ಹಾಗೂ ಪಾರುಪತ್ಯಗಾರರದ್ದು. ಇದರಂತೆಯೇ 38ನೇ ಕಲಮು ತೀರ್ಥದ ವಿತರಣೆಯನ್ನು ಕುರಿತು ಹೇಳುವುದು.

ಮೇಲೆ ಹೇಳಿರುವ ಹಲವು ಕಲಮುಗಳ ಪ್ರಕಾರ ತಿಳಿದುಬರುವುದು ಎಂದರೆ ಲೆಕ್ಕ ಪತ್ರಗಳ ನಾಲ್ಕು ಪ್ರತಿಗಳು ತಯಾರಾಗುತ್ತಿದ್ದವು. ಒಂದು ಪಾರುಪತ್ಯಗಾರ, ಒಂದು ಜಿಯಂಗಾರ, ಒಂದು ತಹಸೀಲ್ದಾರ, ಒಂದು ಕಲೆಕ್ಟರನದು.

ಕಾಣಿಕೆಗಳ, (ಯಾತ್ರಿಕರು ತಂದು ದೇವರಿಗೆ ಅರ್ಪಿಸುವ ಧನ, ಆಭರಣ ಮತ್ತಿತರ ವಸ್ತುಗಳು)ಅರ್ಜಿತದ (ಯಾತ್ರಿಕರು ಆಲಯದಲ್ಲಿ ಮಾಡಿಸುವ ವಿವಿಧ ವಾಹನ ಸೇವೆಗಳು, ಅನ್ನಪ್ರಸಾದ ನಿವೇದನೆಯ ಸೇವೆಗಳು ಮೊದಲಾದವು) ಸಂಗ್ರಹಕಾರ್ಯದಲ್ಲಿ ಕಂಪನಿಯು ಅತ್ಯಂತ ಎಚ್ಚರಿಕೆಯಿಂದ ನಡೆಯುತ್ತಿತ್ತು. ಆದ್ದರಿಂದ ಬಂಗಾರು ವಾಕಿಲಿಯಲ್ಲಿ ( ಬಂಗಾರದ ಗಿಲೀಟು ಮಾಡಿದ ತಾಮ್ರದ ತಗಡನ್ನು ಹೊದಿಸಿದ ಬಾಗಿಲು) ಪಾರುಪತ್ಯದಾರನು ಯಾತ್ರಿಕನ ಪರಿಚಯವನ್ನು ಘೋಷಿಸಿ, ಆತನು ಮಾಡಬಹುದಾದ ಅರ್ಜಿತಸೇವೆಯ ಬಗ್ಗೆಯೂ ಕಾಣಿಕೆಯ ಬಗ್ಗೆಯೂ ವಿಚಾರಿಸುವಂತೆ ಹೇಳಲಾಗಿತ್ತು. ಅವರನ್ನು ತಮ್ಮ ಕಾಣಿಕೆಯನ್ನು ತೋರಿಸಲು ಕೇಳಿ ಅದನ್ನು ನೋಡಿ ಹಣವನ್ನು ಎಣಿಸಿ, ಮೊತ್ತವನ್ನು ದಫ್ತರದಲ್ಲಿ ಬರೆದು, ಇತರ ವಸ್ತುಗಳನ್ನು ತೂಕ ಹಾಕಿ ಅವುಗಳನ್ನು ಬೆಲೆಯನ್ನು ಬರೆದು ಪೊಟ್ಟಣಗಟ್ಟಿ ಮುದ್ರೆಯೊತ್ತಿ ಯಾತ್ರಿಕನಿಗೆ ಹಿಂದಿರುಗಿಸುವನು. ಇದೇ ಸಮಯದಲ್ಲಿ ಜಿಯಂಗಾರರ ಗುಮಾಸ್ತನೂ ತನ್ನ ಪುಸ್ತಕದಲ್ಲಿ ಬರೆದುಕೊಳ್ಳುವನು. ನಂತರ ಯಾತ್ರಿಕರಿಗೆ ದರ್ಶನಾವಕಾಶ ನೀಡಿ ಅವರು ತಮ್ಮ ಕಾಣಿಕೆಯನ್ನು ಸಮರ್ಪಿಸಲು ಅವಕಾಶ ಮಾಡಿಕೊಡಲಾಗುವುದು. ಆಲಯದಲ್ಲಿ ಇದು ದೈನಂದಿನ ನಡಾವಳಿಯಾಗಿದ್ದಿತು.

ಬ್ರಹ್ಮೋತ್ಸವದ ದಿನಗಳಲ್ಲಿ ಮಹಾರಾಷ್ಟ್ರ, ಗುಜರಾತು ಮತ್ತಿತರ ಉತ್ತರ ಭಾರತದ ಭಾಗಗಳ ಯಾತ್ರಿಕರು ತಿರುಮಲೆಗೆ ಹೆಚ್ಚಾಗಿ ವಿವಿಧ ಗೋಸಾಯಿಗಳ ನಿರ್ದೇಶನದಲ್ಲಿ ಹಾಗೂ ಮಾರ್ಗದರ್ಶನದಲ್ಲಿ ಆಗಮಿಸುತ್ತಿದ್ದುದರಿಂದ ಪಾರುಪತ್ಯಗಾರರೂ ತಹಸೀಲ್ದಾರರೂ ಈ ಸಮಯದಲ್ಲಿ ಬಹು ಎಚ್ಚರಿಕೆಯಿಂದ ಇದ್ದು, ಅವರಿಂದ ಅತಿ ಹೆಚ್ಚಿನ ಕಾಣಿಕೆಗಳನ್ನು ವಸೂಲಿ ಮಾಡುತ್ತಿದ್ದರು.

ವರ್ಷದುದ್ದಕ್ಕೂ ನಾಡಿನ ಎಲ್ಲ ಭಾಗಗಳಿಂದ ಬರುವ ಯಾತ್ರಿಕರ ಸಂರಕ್ಷಣೆಯನ್ನು ಮಾಡಲು ಹಲವು ಗ್ರಾಮಗಳನ್ನು ಪಡೆದ ಪಾಳಯಗಾರರು ಜಮೀಂದಾರರುಗಳಿಗೆ (ಹೆಚ್ಚಿನ ಜಮೀನಿನ ಒಡೆತನ ಪಡೆದವರು) ಯಾತ್ರಿಕರನ್ನು ಧಾಳಿಕಾರರಿಂದಲೂ, ವಂಚಕರಿಂದಲೂ, ದಾರಿ ದರೋಡೆಕಾರರಿಂದಲೂ ರಕ್ಷಿಸಿ, ಅವರಿಗೆ ತಕ್ಕ ದಾರಿಯನ್ನು ತೋರಿಸಿ, ಆಲಯದತ್ತ ಬರುವಂತೆ ಮಾಡಲು ಹೇಳಲಾಗಿದ್ದಿತು.

## 4. ಆಲಯಕ್ಕೆ ಮನ್ರೋದೊರೆಯ ಭೇಟಿ

1780 ರಲ್ಲಿ ಥಾಮಸ್ ಮನ್ರೋ ಮದರಾಸಿಗೆ ಬಂದು, ಮದರಾಸಿನ ಸೈನ್ಯದಲ್ಲಿ ಸಾಮಾನ್ಯ ಸೈನಿಕನಾಗಿ ಸೇರಿದ. ಹೈದರಲಿಯ ವಿರುದ್ಧ ಯುದ್ಧಗಳಲ್ಲಿ ಭಾಗವಹಿಸಿ, ಸೇಲಂ ಜಿಲ್ಲೆ ಹಾಗೂ ಕೆನರಾಗಳಲ್ಲಿ ಕೆಲಸ ಮಾಡಿದ ನಂತರ ಹೈದರಾಬಾದಿನ ನಿಜಾಮನು ಆಂಗ್ಲರಿಗೆ ಬಿಟ್ಟುಕೊಟ್ಟ (ವಿಜಯನಗರ, ವಿಶಾಖಪಟ್ನ ಮೊದಲಾದ ಪ್ರಾಂತ್ಯಗಳು) ಜಿಲ್ಲೆಗಳಲ್ಲಿ 1800 ರಿಂದ 1807 ರವರೆಗೆ ಕಲೆಕ್ಟರ್ ಆಗಿ ಕೆಲಸ ಮಾಡಿದ. ಮೂರನೆಯ ಮರಾಠಾ ಯುದ್ಧದಲ್ಲಿ 1817 - 8 ರಲ್ಲಿ ಆಂಗ್ಲರ ಸೈನ್ಯದ ವಿಭಾಗಾಧಿಕಾರಿಯಾಗಿ ಕೆಲಸ ಮಾಡಿದ. 1820 ರಿಂದ 27 ರ ವರೆಗೆ ಆತನು ಮದರಾಸಿನ ಗವರ್ನರ್ ಆಗಿದ್ದನು. ಆಗಲೇ ಆತ ಸರ್ ಥಾಮಸ್ ಮನ್ರೋ ಆಗಿದ್ದು ಆತನಿಗೆ ಇಂಡಿಯಾದ ಜನರಲ್ಲಿ ಅತ್ಯಂತ ಹೆಚ್ಚಿನ ಸಹಾನುಭೂತಿ.

ಆತ ಮದರಾಸು ಪ್ರಾಂತದ ಗವರ್ನರ್ ಆಗಿದ್ದಾಗ ಆತನಿಗೆ ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ಕಾಣುವ ಬಯಕೆಯುಂಟಾಗಿ ಒಂದು ರಾತ್ರಿ ತಿರುಪತಿಗೆ ಆಗಮಿಸಿದ. ದೇವರು ಆತನಿಗೆ ಮುನುಷ್ಯ ರೂಪದಲ್ಲಿ ದರ್ಶನವಿತ್ತು ಆತ ಹಿಂದೂ ಅಲ್ಲದ್ದರಿಂದ ಬೆಟ್ಟವನ್ನು ಹತ್ತಬಾರದೆಂದು ಹೇಳಿದ. ಆತ ಬೆಟ್ಟವನ್ನೇರದೆ ಹಿಂದಿರುಗಿದನಾದರೂ, ಪ್ರತಿದಿನವೂ ಒಂದು ತಳಿಗೆ ನೈವೇದ್ಯವನ್ನು ದೇವರಿಗೆ ತನ್ನ ಹೆಸರಿನಲ್ಲಿ ನೀಡಬೇಕೆಂದು ಅಲ್ಲಿನ ಪ್ರಧಾನ ಅರ್ಚಕರಿಗೆ ಒಂದು ಸ್ವಲ್ಪ ಜಮೀನನ್ನು ನೀಡಿ ಅದರಿಂದ ಉಂಟಾಗುವ ಉತ್ಪತ್ತಿಯನ್ನು ಈ ನಿತ್ಯಪ್ರಸಾದ ನಿವೇದನಗೆ ಬಳಸಬೇಕೆಂದು ಕಟ್ಟು ಮಾಡಿದನು. ಈ ಪ್ರಸಾದವನ್ನು ಮೊದಲನೇ ಗಂಟೆಯ ಸಮಯದಲ್ಲಿ (ಗಂಟೆಯು ಮೊದಲಬಾರಿ ಶಬ್ದ ಮಾಡಿದಾಗ ಈ ಪ್ರಸಾದ ನಿವೇದನೆ ಆಗುವುದು) ಇತರ ಅರ್ಜಿತ ದಾನಗಳಲ್ಲಿನ ಪ್ರಸಾದಗಳನ್ನು ದೇವರಿಗೆ ಎರಡನೇ ಬಾರಿಯ ಗಂಟೆಯ ಹೊತ್ತಿನಲ್ಲಿ ಸಮರ್ಪಿಸಲಾಗುವುದು.

ಈತ ಕ್ರಿ.ಶ. 1827ರಲ್ಲಿ ಕಾಲರಾ ರೋಗದಿಂದ ಮರಣ ಹೊಂದಿದ. ಈತನು ಭಾರತೀಯರ ಬಗ್ಗೆ ಹೊಂದಿದ್ದ ಪ್ರೀತಿ ಸಹಾನುಭೂತಿಗಳಿಂದ ಸ್ಫೂರ್ತರಾದ ಮದರಾಸಿನ ಜನರು ಮೌಂಟ್‌ರೋಡ್‌ನಲ್ಲಿ ಕ್ರಿ.ಶ. 1829ರಲ್ಲಿ ಈತನ ಪ್ರತಿಮೆ ಸ್ಥಾಪಿಸಿದರು.

## 5. ಆಲಯಾಡಳಿತದ ಬಗ್ಗೆ ಸ್ಟ್ರಾಟನ್ ಮತ್ತಿತರರ ಪರಿಶೀಲನೆ

ಆತ 1801ರಲ್ಲಿ ಪಾಲಾರ್ ನದಿಯ ಉತ್ತರಕ್ಕೆ ನೆಲ್ಲೂರಿನ ಗಡಿಯ ವರೆಗೆ ಇರುವ ಪ್ರಾಂತ್ಯವನ್ನೆಲ್ಲ ಒಂದು ಆಡಳಿತ ವಿಭಾಗವನ್ನಾಗಿ ಮಾಡಿ ಇದನ್ನು 'ಪಶ್ಚಿಮ ಪಾಳಯಂ' ಎಂದು ಕರೆದು ಸ್ಟ್ರಾಟನ್ ಅನ್ನು ಆದರ ಮೊದಲ ಕಲೆಕ್ಟರನನ್ನಾಗಿ ನೇಮಕ ಮಾಡಲಾಯಿತು. ಆ ಹೊತ್ತಿಗೆ ಹತ್ತಿರಬರುತ್ತಿದ್ದ ತಿರುಮಲೆಯ ವಾರ್ಷಿಕ ಬ್ರಹ್ಮೋತ್ಸವವನ್ನು ಸಮರ್ಪಕವಾಗಿ ನಿರ್ವಹಿಸುವುದು ಆತನು ಮೊದಲಿಗೆ ಎದುರಿಸಬೇಕಾದ ಕಾಳಜಿಯಾಯಿತು. ಜಿಲ್ಲಾಧಿಕಾರಿಯಿಂದ ಗುತ್ತಿಗೆದಾರರಿಗೆ ಟೆಂಡರುಗಳನ್ನು ಕಳುಹಿಸಲು ಕರೆಹೋಯಿತು. ಆದರೆ ಕಂದಾಯದ ನಿಗಮವು ಅದನ್ನು ನೇರ ಸುಪರ್ದಿನಲ್ಲಿಯೇ ಅಮಾನಿಯಾಗಿ (ಇತರರಿಗೆ ಒಪ್ಪಿಸದೆ) ನಡೆಸ

ಬೇಕೆಂದು ತೀರ್ಮಾನಿಸಿ ಸರ್ಕಾರದ ಅನುಮತಿಯೊಡನೆ ವೆಚ್ಚಗಳಿಗಾಗಿ 183- 3 - 6/8 ನಕ್ಷತ್ರ ಪಗೋಡಗಳ ಮಂಜೂರಾತಿ ಮಾಡಲಾಯಿತು. ಅಮಲ್ದಾರನಿಗೆ ಪ್ರೋತ್ಸಾಹ ನೀಡಲೆಂದು ಅವನ ತಿಂಗಳ ಸಂಬಳವಾದ ನೂರು ರೂಪಾಯಿಗಳ ಮೇಲಾದಾಯದ ಒಂದು ಶತಾಂಶ ಪಗೋಡಗಳನ್ನು ಆತ ತೆಗೆದುಕೊಳ್ಳಬಹುದೆಂದು ಸೂಚಿಸಲಾಯಿತು. ಆ ಕಾಲಕ್ಕೆ ಇದು 45000 ನಕ್ಷತ್ರಪಗೋಡಗಳಾಗಿದ್ದವು. ತಿರುಪತಿಯ ಆಲಯವನ್ನೂ ಸೇರಿಸಿ ಇಡೀ ಜಿಲ್ಲೆಯ ಒಟ್ಟು ಆದಾಯವು 62881 ನಕ್ಷತ್ರ ಪಗೋಡ ಮಾತ್ರವಾಗಿತ್ತು. ಇದರಿಂದಾಗಿ ಕಂಪನಿಗೆ ಆಲಯ ಎಷ್ಟು ಮುಖ್ಯ ಆಯಿತು ಎಂಬುದನ್ನು ತಿಳಿಯಬಹುದಾಗಿದೆ. ಕಂಪನಿಯು ಈ ಮೊದಲು ಸ್ವಂತ ಏರ್ಪಾಡುಗಳಿಗೆ ಹೋಗದೆ ಗುತ್ತಿಗೆ ನೀಡುತ್ತಿದ್ದ ವಿಧಾನವನ್ನು 'ಅದರಿಂದ ಗುತ್ತಿಗೇದಾರನಿಗೆ ಅವನ ಕಷ್ಟ ಹಾಗೂ ಕೂಲಿಗಳಿಗೆ ತಕ್ಕ ಪ್ರತಿಫಲವನ್ನು ಅವನು ಪಡೆದಂತಾಗಿ ಸರ್ಕಾರಕ್ಕೆ ಯಾವ ತೊಂದರೆಯೂ ಇಲ್ಲದಂತೆಯೂ, ಲೆಕ್ಕದಲ್ಲಿ ಗೊಜಲಾಗದಂತೆಯೂ ಆದಾಯವುಂಟಾಗುವ ಸಂಭವಗಳು ಹೆಚ್ಚೆಂದು' ಸಮರ್ಥಿಸಲಾಗಿದ್ದಿತು. ವ್ಯಕ್ತಿಗತವಾಗಿ ಲಾಭಗಳು ಹೆಚ್ಚಾಗಿದ್ದು, ಕಂಪನಿ ಸರ್ಕಾರಕ್ಕೆ ಸ್ವಂತ ಏರ್ಪಾಡಿನಿಂದ ಬರಬಹುದಾಗಿದ್ದ ಹೆಚ್ಚಿನ ಆದಾಯವನ್ನು ಖಾಸಗಿಯವರು ಲೂಟಿ ಮಾಡುವ ವ್ಯವಸ್ಥೆ ಇದಾಗಿದ್ದಿತು. ಆದ್ದರಿಂದ ಸ್ವಕೀಯ ಏರ್ಪಾಡು ಪದ್ಧತಿಗೆ ಹಿಂದಿರುಗಲಾಯಿತು. ತಿರುಪತಿ ಪ್ರಾಂತ್ಯದ ಅತಿ ಹೆಚ್ಚಿನ ಆದಾಯವು ಆಲಯದಲ್ಲಿ ಭಕ್ತರು ಸಮರ್ಪಿಸುವಂತಹ ಹಣದಿಂದ ಉಂಟಾಗುತ್ತಿದ್ದು, ಇದರಲ್ಲಿ ಕಾಲಕಾಲಕ್ಕೆ ಭಾರೀ ಅಂತರವೂ ಇದ್ದು, ದೀರ್ಘಕಾಲದ ವ್ಯವಧಿಯಲ್ಲಿ ಅಲ್ಲದೆ ಬಹು ಕಡಿಮೆ ಅವಧಿಯಲ್ಲಿ ಸಂಗ್ರಹವಾಗುತ್ತಿದ್ದದ್ದರಿಂದ ಸ್ವಂತ ಏರ್ಪಾಡುಗಳಿಂದಲೇ ಹೆಚ್ಚಿನ ಪ್ರತಿಫಲವನ್ನು - ವ್ಯವಸ್ಥೆ ಮಾಡಿದ ಸಂರಕ್ಷಣೆಯ ದೃಷ್ಟಿಯಿಂದ - ಪಡೆಯಬಹುದೆಂದು ಯೋಚಿಸಿ ಈ ರೀತಿಯ ಅಧಿಕ ಫಲಗಳನ್ನು ಗುತ್ತಿಗೇದಾರನಿಂದ ನಿರೀಕ್ಷಿಸಲಾಗುವುದಿಲ್ಲ ಎಂಬ ಕಾರಣದಿಂದಾಗಿ ಸ್ವೀಯ ಏರ್ಪಾಡುಗಳಿಗೆ ಹಿಂದಿರುಗಲಾಯಿತು.

ಈ ರೀತಿಯಲ್ಲಿ ನೇರ ಆಡಳಿತ ಪರಿಧಿಯಲ್ಲಿ ಆಲಯವನ್ನು ತರುವ ಪ್ರಯತ್ನದಲ್ಲಿ ಸ್ಟ್ರಾಟನ್ನನು ತಿರುಮಲೆ ತಿರುಪತಿಗಳ ಆಲಯಗಳ ಆರಂಭ, ಸಂಪನ್ಮೂಲಗಳು, ಆದಾಯಗಳನ್ನೆಲ್ಲ ಸರಿಯಾಗಿ ತಿಳಿಯಲು ಒಂದು ಪ್ರಶ್ನಾವಳಿಯನ್ನು ತಯಾರಿಸಿ ಸ್ಥಳೀಯ ಆಲಯಗಳ ಸಿಬ್ಬಂದಿ, ಧರ್ಮ ಕರ್ತರಿಗೆ ಭಕ್ತರಿಗೆ ಅದನ್ನು ತೋರಿಸಿ ಅವರಿಂದ ಪಡೆದ ಉತ್ತರಗಳನ್ನು ಕ್ರೋಢೀಕರಿಸಿ ಆಧಾರದಿಂದ ಆಲಯದ ಆಡಳಿತ ಕ್ರಮವನ್ನು ರೂಪಿಸಿದನು. ಈ ಪ್ರಶ್ನೋತ್ತರಗಳನ್ನು ಸ್ಥಳೀಯವಾಗಿ ಆಲಯದ 'ಸವಾಲ್ ಜವಾಬ್‌ಪಟ್ಟಿ'ಯೆಂದು ಕರೆಯುವರು. ಇಲ್ಲಿನ ಉತ್ತರಗಳು, ವಿವರಗಳನ್ನು ನ್ಯಾಯಾಲಯಗಳು ಪರಂಪರೆಯ ಸಂಪ್ರದಾಯಗಳ ಸಾಕ್ಷ್ಯವೆಂದು ಒಪ್ಪುತ್ತವೆ. ಇದರಿಂದಾಗಿ ಹಿಂದಿನ ಸರ್ಕಾರವು ಈ ದಾಖಲೆಗಳನ್ನು ಸಾರ್ವಜನಿಕರ ಅವಗಾಹನೆಯ ಪರಿಧಿಗೆ ಸೇರಿದ್ದಲ್ಲವೆಂದು ತಡೆಹಿಡಿದ್ದಿತು.

ಈ ದಾಖಲೆಯು ಬಹುಮೂಲ್ಯವಾದದ್ದು. ಕಾರಣ ಇದು ಯಾವುದೇ ಒಳಪಂಗಡವನ್ನೂ ಸಮರ್ಥಿಸಲು ಉಂಟಾದದ್ದಲ್ಲ. ನೇರವಾಗಿ ದೇವಾಲಯದ ಆಡಳಿತವನ್ನು ವಹಿಸಿಕೊಳ್ಳುವ ಮೊದಲು ಐವತ್ತು ವರ್ಷಗಳಿಂದ ಆಲಯದ ಪ್ರಭುವಾಗಿದ್ದ ಪರಾಯಿ ಸರ್ಕಾರಕ್ಕೆ ಆಲಯದ ಪರಂಪರಾಗತ ಪದ್ಧತಿಗಳ ಪರಿಚಯ ಮಾಡಿಕೊಡುವಂತಹ ಪ್ರಾಮಾಣಿಕ ಪ್ರಯತ್ನದ ದಾಖಲೆಯಾಗಿತ್ತು. ಈ ದಾಖಲೆಗಳೊಂದಿಗೆ ಸೇರಿಸಲಾಗಿರುವ ಸ್ಟ್ರಾಟನ್ನನ ವರದಿಯಿಂದಾಗಿ ಆತ ಈ ಉತ್ತರಗಳ ವಿವರಗಳನ್ನು ಕೂಲಂಕಷವಾಗಿ ಪರಿಶೀಲನೆ ನಡೆಸಿರುವುದಾಗಿ ತಿಳಿದುಬರುತ್ತದೆ. ಈ ವರದಿಯ ಬಲದಿಂದಾಗಿಯೇ 'ಸವಾಲ್ ಜವಾಬ್ ಪಟ್ಟಿ'ಯು ಸತ್ಯವಾದ ವಿಚಾರ - ಸಂಪ್ರದಾಯ - ಪರಂಪರೆಗಳ ಅಧಿಕೃತ ವಿವರಣೆ ಎಂದು ನ್ಯಾಯಾಲಯಗಳು ಒಪ್ಪುವುವು. ಈ ಆಲಯದ ವೈಶಿಷ್ಟ್ಯವಾದ ಉದಾರತೆಯನ್ನು, ಪರಂಪರೆಯಲ್ಲಿನ ಗರಿಮೆಯನ್ನು - ಈ ದಾಖಲೆಯು ಸಹಜವಾಗಿಯೇ ಪ್ರತಿನಿಧಿಸುವಂತಾಗಿದೆ.

ಪಾರ್ಲಿಮೆಂಟರಿ ಕಾಗದ ಪತ್ರಗಳಲ್ಲಿ ಸೇರಿರುವಂತಹದ್ದೂ, ಉತ್ತರ ಆರ್ಕಾಟು ಜಿಲ್ಲೆಯ ದಾಖಲು ಪತ್ರ ಸಂಗ್ರಹದಲ್ಲಿ ಸೇರಿರುವಂತಹದ್ದೂ, ಆದಂತಹ 1803 ಜನವರಿ 31 ರ ಸ್ಟ್ರಾಟನ್ ವರದಿಯು ಬೆಟ್ಟದ ಆಲಯದ ಪೌರಾಣಿಕ ಪ್ರಾರಂಭದೆಶೆಯನ್ನು ಒಳಗೊಂಡಿದೆ. ಅಂದಿನ ದೈನಂದಿನ ಕಾರ್ಯ ಕ್ರಮಗಳನ್ನೂ, ಉತ್ಸವ, ಪೂಜಾದಿಗಳನ್ನೂ, ವಿವಿಧ ಸೇವೆಗಳಿಗಾಗಿ, ದರ್ಶನಗಳಿಗಾಗಿ ನಿಗಧಿಯಾಗಿದ್ದ ಅರ್ಜಿತ ಸೇವಾ ಶುಲ್ಕವನ್ನೂ, ಸೇವಾ ವಿವರವನ್ನೂ ಬಣ್ಣಿಸುತ್ತದೆ. ಸ್ಟ್ರಾಟನ್ ಪ್ರಸಿದ್ಧನಾಗಲು ಪ್ರಥಮ ಕಾರಣವೆಂದರೆ,

'ಶುಲ್ಕಗಳಲ್ಲಿ ಹಲವನ್ನು ತೆಗೆದು ಹಾಕಬೇಕು ಎಂದೂ, ಯಾತ್ರಿಕರಿಗೆ ಹೊರೆಯಾಗಿದ್ದ ಯಾತ್ರಿಕ ತೆರಿಗೆಯನ್ನೂ ತೆಗೆದು ಹಾಕಬೇಕು' ಎಂದೂ, ಅವನು ತೀರ್ಮಾನಿಸಿದ್ದದ್ದಾಗಿದ್ದಿತು. ಇಂದಿಗೂ ಜಾರಿಯಲ್ಲಿರುವ ಹಲವಾರು ಆರ್ಜಿತ ಸೇವಾ ಶುಲ್ಕಗಳೂ, ಉತ್ಸವಗಳೂ ಈ ವರದಿಯಲ್ಲಿದ್ದು ಆಸಕ್ತಿದಾಯಕವಾದದ್ದಾಗಿವೆ.

ಕಂಪನಿಯ ಮೊದಮೊದಲಿನ ಅಧಿಕಾರಿಗಳಲ್ಲಿ ಬುದ್ಧಿಕೌಶಲ, ಉದಾರವಾದೀಸಹಿಷ್ಣುತೆ, ಇತರರು ಸ್ಥಾಪಿಸಿದ ಗುಡಿ ಗುಂಡಾರಗಳ ಬಗ್ಗೆ ನಿಜವಾದ ಗೌರವಭಾವ, ಮಾನವೀಯ ದೃಷ್ಟಿಕೋನಗಳು ಇದ್ದವೆಂಬುದನ್ನು ಈ ದಾಖಲೆಗಳು ತಿಳಿಸಿಕೊಡುತ್ತದೆ. ನಂತರದ ಕಾಲದಲ್ಲಿನ ಇಂಗ್ಲೆಂಡಿನ ಸಾಮ್ರಾಟನ - ಸಿಂಹಾಸನದ - ಅಧಿಕಾರಿಗಳಲ್ಲಿ ಭಾರತೀಯವಾದ ಎಲ್ಲದರ ಬಗ್ಗೆಯೂ ಇದ್ದ ಹ ಸಾಮಾನ್ಯ ಹೀನಾಯಭಾವಕ್ಕೆ ಇದು ಪೂರ್ಣವಿರುದ್ಧವಾಗಿ ಕಂಡುಬರುತ್ತದೆ. ಆಲಯವನ್ನು ವಿವರಿಸುತ್ತ ಸ್ಟ್ರಾಟನ್ ಹೇಳುತ್ತಾನೆ. ''ಬಹುತೇಕ ಉತ್ತರ ದಕ್ಷಿಣ ದಿಕ್ಕಿನಲ್ಲಿ ನಡೆದ ಪರ್ವತಗಳ ಪೂರ್ವಕ್ಕೆ ತಿರುಪತಿ ಗ್ರಾಮವು ಇದೆ. ಪರ್ವತ ಶಿಖರದಲ್ಲಿ ತಿರುಪತಿ ಗ್ರಾಮದಿಂದ ಸುಮಾರು ಏಳು ಮೈಲಿ ದೂರದಲ್ಲಿ ಪ್ರಸಿದ್ಧವಾದ ತಿರುಪತಿ ದೇವಸ್ಥಾನವಿದೆ. ತಿರುಪತಿಯಿಂದ ಈ ಗುಡಿಗೆ ಹೋಗುವ ಇಳಿಜಾರಾದ ದಾರಿಯಲ್ಲಿ ಮೂರು ಗೋಪುರಗಳಿದ್ದು ಈ ದಾರಿಯಲ್ಲಿ ಹಿಂದೂಗಳು ಮಾತ್ರವೇ ಹೋಗಬಹುದಾಗಿದೆ. ತಿರುಪತಿಯಿಂದ ಅರ್ಧ ಮೈಲಿ ದೂರದಲ್ಲಿ ಬೆಟ್ಟದ ಬುಡದಲ್ಲಿ ನಿರ್ಮಿತವಾಗಿರುವ ಗೋಪುರದವರೆಗೆ ಮಾತ್ರವೇ ಬೇರೆಯವರು ಹೋಗಬಹುದು. ಆಲಯವಿರುವ ಬೆಟ್ಟವನ್ನು ಮೊದಲಬಾರಿಗೆ ಕಂಡ ಕೂಡಲೇ ನೆಲದ ಮೇಲೆ ಮಲಗಿ ನಮಸ್ಕಾರ ಮಾಡುವಷ್ಟು ಪವಿತ್ರವಾದ ಭಾವನೆಯನ್ನು ಈ ಆಲಯವು ಯಾತ್ರಿಕರಲ್ಲಿ ಉಂಟುಮಾಡುವುದು.'' ಸ್ಟ್ರಾಟನ್ ನಂತರದಲ್ಲಿ ಸ್ವಾಮಿಯು ಮದುವೆ ಆದದ್ದನ್ನೂ ಕುಬೇರನ ಬಳಿ ಸಾಲ ಮಾಡಿದ್ದನ್ನೂ ವಿವರಿಸುತ್ತಾನೆ.

ಗೋಸಾಯಿಗಳ ಮೂಲಕ ''ಕಾನುಕಲು'' ವಸೂಲಾತಿ ಆಗುವ ರೀತಿಯನ್ನು ವಿವರಿಸುತ್ತಾನೆ.

ಆದಾಯದ ಇತರ ಮೂಲಗಳನ್ನು ವಿವರಿಸುತ್ತ ಆತ ಹೇಳುವ ಮಾತು - ಆದಾಯದ ಎರಡನೆಯ ಮೂಲವು ''ವರ್ತನೆ''ಯ ಮೂಲಕ ಬರುವಂತಹದ್ದು - ಎಂದರೆ ಸ್ವಾಮಿಯ ವಿಗ್ರಹದ ಸ್ವಂತ ಬಳಕೆಗೆಂದು ಅರ್ಪಿಸುವ ಒಡವೆ, ವಸ್ತ್ರ, ಕುದುರೆ-ಮೊದಲಾದ ವಸ್ತುಗಳನ್ನು ಅರ್ಪಿಸಿದಾಗ ದಾನಿಯು ಆಯಾ ವಸ್ತುವಿನ ಬೆಲೆಯಷ್ಟು ಹಣವನ್ನು ಆಲಯಕ್ಕೆ ಆಯಾ ವಸ್ತುವಿನ ನಿರ್ವಹಣೆಗೆಂದು ಕೊಡಬೇಕಾಗುತ್ತದೆ.

ಸೇವಾಶುಲ್ಕ, ಪರವಾನಗಿ ಶುಲ್ಕ, ಮೊದಲಾದ ವಿವರಗಳನ್ನು ನೀಡಿದ ನಂತರ ಸ್ಟ್ರಾಟನ್ ಹೇಳುವುದು - ''ನಾನು ಪಡೆಯಲು ಸಾಧ್ಯವಾದ ಅತ್ಯಂತ ಶ್ರೇಷ್ಠವಾದ ಮಾಹಿತಿಯ ಪ್ರಕಾರ ಈ ಎಲ್ಲ ಹೆಚ್ಚಿನ ತೆರಿಗೆ, ಪರವಾನಗಿ ಶುಲ್ಕಗಳೇ ಮೊದಲಾದವೆಲ್ಲ ಮುಸಲ್ಮಾನ ಸರ್ಕಾರಗಳು ಸ್ಥಾಪನೆಯಾದ ನಂತರ ಆಲಯದ ವ್ಯವಸ್ಥೆಯನ್ನು ಅತಿಹೆಚ್ಚು ಗೇಣಿಯನ್ನು ಕೊಡುವ ಗುತ್ತಿಗೆದಾರನಿಗೆ ಒಪ್ಪಿಸುವಾಗಿನಿಂದ ಉಂಟಾದವು. ಈ ಗುತ್ತಿಗೆದಾರರು ವಸೂಲಿ ಮಾಡುತ್ತಿದ್ದ ತೆರಿಗೆಗಳಿಗೆ ಯಾವುದೇ ಅಡ್ಡಿಯೂ ಇಲ್ಲದಂತಿರುವಾಗ ಗುತ್ತಿಗೆದಾರರು ತಮ್ಮ ಬುದ್ಧಿಶಕ್ತಿಗೆ ತೋಚಿದಂತೆಲ್ಲ ಹೊಸ ಹೊಸ ದಾರಿಗಳಲ್ಲಿ ಆದಾಯವನ್ನು ಕಂಡುಕೊಂಡರು. ಮತ್ತು ಮುಂದೆ ಬಂದವರು ಹಳೆಯವುಗಳನ್ನು ಮುಂದುವರಿಸಿಕೊಂಡು ಹೋಗುತ್ತಲೇ ಯಾತ್ರಿಕರನ್ನು ಹೊಸ ತೆರಿಗೆಯ ಬಂಧನದಲ್ಲಿ ತೊಡಗಿಸುವ ಮಾರ್ಗಗಳನ್ನು ಹುಡುಕುತ್ತ ಬಂದರು.

''ಬೆಟ್ಟವನ್ನು ಹತ್ತುವ ಯಾತ್ರಿಕರು ತೆರಬೇಕಾಗಿದ್ದ 3 ಪಣಂಗಳ ತೆರಿಗೆಯು ಇದೇ ರೀತಿಯಲ್ಲಿ ದುರುಪಯೋಗಗೊಳ್ಳು ವಂತಹದ್ದೂ, ಅಸಿಂಧು ಮೂಲದ್ದೂ ಆಗಿದ್ದದ್ದರಿಂದ ಇದನ್ನು ತೊಲಗಿಸಬೇಕೆಂದು ಶಿಫಾರಸು ಮಾಡಲು ಪ್ರೇರಿತನಾದೆ. ಈ ತೆರಿಗೆಯ ಬಗ್ಗೆ ಯಾತ್ರಿಕರು ಹೊಂದಿರಬಹುದಾದ ದುರಭಿಪ್ರಾಯವನ್ನು ತಿಳಿದುಕೊಂಡ ಮೇಲೆ ನನ್ನ ಈ ಮೊದಲ ಶಿಫಾರಸಿನ ಬಗ್ಗೆ ತಮ್ಮ ಅನುಕೂಲವಾದ ಆಜ್ಞೆ ಹೊರಡಲೆಂದು ಮತ್ತೆ ವಿನಂತಿಸಿಕೊಳ್ಳಲು ವಿವಶನಾಗಿದ್ದೇನೆ.''

ವರದಿಯಲ್ಲಿ ಐದರಿಂದ ಒಂಬತ್ತು ಅಂಶಗಳೆಂದು ದಾಖಲೆ ಆಗಿರುವ ಪರವಾನಗಿ ಶುಲ್ಕ, ತೆರಿಗೆಗಳನ್ನೂ ಕಿತ್ತುಹಾಕಲು ಶಿಫಾರಸು ಮಾಡಿದ್ದನ್ನು ಕಾಣಬಹುದಾಗಿದೆ. ಇದರಿಂದಾಗಿ ನಷ್ಟವಾಗಬಹುದಾದ ಒಟ್ಟು ಧನರಾಶಿ ಎಂದರೆ 3674 +341 . 25 ಪಗೋಡಗಳು ಎಂದು ಲೆಕ್ಕಹಾಕಿ ತೋರಿಸಲಾಗಿದೆ.

ಇತರ ಆಲಯಗಳ ಬಗ್ಗೆ ಹೇಳುವುದಾದರೆ ಗೋವಿಂದರಾಜಸ್ವಾಮಿ ಆಲಯದಲ್ಲಿನ ಸಂಗ್ರಹಣೆ ಮಾತ್ರವೇ ಸರ್ಕಾರದ ನ್ಯಾಯಯುತವಾದ ಹಕ್ಕು ಎಂದು ಪರಿಗಣಿತವಾಗಿದ್ದು, ಫಸಲಿ 1211 ರಲ್ಲಿ ಇದು 877 - 13 /7/8 ನಕ್ಷತ್ರ ಪಗೋಡಗಳಾಗಿದ್ದವು. ಈ ವರದಿಯಲ್ಲಿ ನಮಗೆ ಆಸಕ್ತಿಯನ್ನು ಹುಟ್ಟಿಸುವ ಮತ್ತೊಂದು ಅಂಶವೆಂದರೆ ಕ್ರಿ.ಶ. 1790 - 91 ರಿಂದ ಕ್ರಿ.ಶ. 1801 - 02 ರ ವರೆಗಿನ ಆಲಯದ ವಾರ್ಷಿಕ ಆದಾಯಪಟ್ಟಿ.

ತನ್ನ ವರದಿಯನ್ನು ಕಳುಹಿಸಿದ ಕೆಲವು ದಿನಗಳ ನಂತರ ಸ್ಟ್ರಾಟನ್, ಈ ಜಿಲ್ಲೆಯಿಂದ ಹೊರಬಿದ್ದ. ಹಾಗಾಗಿ ಆತನ ವರದಿಯಲ್ಲಿ ಸೂಚಿಸಿದಂತೆ ಹಲವು ಸುಂಕ ತೆರಿಗೆಗಳನ್ನು ರದ್ದು ಮಾಡಲು ಯಾವ ಕ್ರಮವನ್ನೂ ತೆಗೆದುಕೊಳ್ಳಲಾಗಲಿಲ್ಲ. ನಂತರ ಹಾಕ್ ಬರ್ನನು ಅಧಿಕಾರವನ್ನು ವಹಿಸಿಕೊಂಡನಾದರೂ, ಈತನ ಆಡಳಿತ ಕಂಪನಿ ಸರ್ಕಾರಕ್ಕೆ ಹಿಡಿಸಲಿಲ್ಲವಾಗಿ ಈತನನ್ನು ನ್ಯಾಯಾಂಗ ವಿಭಾಗಕ್ಕೆ ವರ್ಗ ಮಾಡಲಾಯಿತು. ನಂತರದ ಕಲೆಕ್ಟರನಾದ ಗ್ರೀಮ್ ಸಾಹೇಬನು 15-12-1804 ರಿಂದ 14-4-1818 ರವರೆಗೆ ಅಧಿಕಾರದಲ್ಲಿದ್ದನು. ಈತ ದಕ್ಷ ಆಡಳಿತಗಾರನಾಗಿ ಜನಪ್ರಿಯ ಕಲೆಕ್ಟರನಾಗಿದ್ದಂತೆ ಕಂಡುಬರುತ್ತದೆ. ಕಂಪನಿಯ ನಿರ್ದೇಶಕ ಮಂಡಳಿ ಈತನ ಆಡಳಿತ ಕಾಲದಲ್ಲಿ ಆಮೋದ ಮಾಡದಿದ್ದರೂ ಸಹ ರೈತವಾರಿ ಪದ್ಧತಿಯನ್ನು ಜಾರಿಗೆ ತಂದವನೀತನೇ. ಇಂದು ಜಿಲ್ಲಾ ಕಚೇರಿಗಳು ಇರುವ ಚಿತ್ತೂರಿನ ಗ್ರೀಮ್ಸ್‌ಪೇಟೆ (ಗಿರಿಂಪೇಟ)ಇವನ ಹೆಸರಿನಿಂದಾಗಿಯೇ ಪ್ರಸಿದ್ಧವಾದದ್ದು. 1818ರಲ್ಲಿ ಈತನು ಸ್ಟ್ರಾಟನ್ ಶಿಫಾರಸು ಮಾಡಿದ ಸುಂಕ ತೆರಿಗೆಗಳ ರದ್ದತಿಯನ್ನೇ ಅಲ್ಲದೆ, ತಾನು ಮತ್ತೂ ವಿವರವಾಗಿ ಮಿಕ್ಕ ಹಲವು ಸುಂಕಗಳ ಬಗ್ಗೆ ಚರ್ಚೆ ಮಾಡಿ ಅವುಗಳನ್ನೂ ರದ್ದುಗೊಳಿಸಬೇಕೆಂದು ಶಿಫಾರಸು ಮಾಡಿದನು. ಮಂಗಿಲಿ ಕಟ್ಟೆಯ ಬಗ್ಗೆ (ಸ್ಟ್ರಾಟನ್ ವರದಿಯ 8ನೇ ಅಂಶ) ಈತನ ಶಿಫಾರಸುಗಳು ಮನೋಜ್ಞ- "ಗಂಡನಿಲ್ಲದ ಅಥವಾ ತಂದೆಯಿಲ್ಲದ (ಬದುಕಿಲ್ಲದ) ಪ್ರತಿಯೊಬ್ಬ ಯಾತ್ರಿಕಳೂ/ನೂ ಕಪಿಲತೀರ್ಥದ ಬಳಿಯ (ವಿಶೇಷ ಹರಕೆಯಿಲ್ಲದ ಪಕ್ಷದಲ್ಲಿ) ಕ್ಷುರಗಟ್ಟೆಯಲ್ಲಿ (ಕ್ಷೌರದ ಕಟ್ಟೆ) ತಲೆಯನ್ನು ಬೋಳಿಸಿಕೊಳ್ಳಬೇಕಾದಲ್ಲಿ ಓರ್ವ ವ್ಯಕ್ತಿಗೆ ಮೊದಲಿಗೆ ಒಂದೂವರೆ ಪಣಂ ದರವಿದ್ದದ್ದು ಈಗ ಸ್ಪರ್ಧೆಯಿಂದಾಗಿ 3 ಪಣಂ ಆಗಿದೆ. ಕ್ಷೌರಿಕರ ಒಂದು ಸಂಘದಿಂದ ಈ ಗುತ್ತಿಗೆ ಹಿಡಿಯಲ್ಪಟ್ಟಿದೆ. ಸರಕಾರದ ಗೇಣಿಯಿಂದಾಗಿ ಇವರು ಯಾತ್ರಿಕರಿಗೆ ಒಂದು ಅನುಪಾತದಲ್ಲಿ ಶುಲ್ಕ ವಿಧಿಸಲು ಅವಕಾಶವಿದೆಯಾಗಿ ಇದನ್ನು ಕೊಡಲೇ ರದ್ದುಗೊಳಿಸಬೇಕು. ಯಾತ್ರಿಕರು ಅತಿ ತ್ವರೆಯಾಗಿ ಹಾಗೂ ಅತಿ ಕಡಿಮೆ ದರದಲ್ಲಿ ಮುಡಿಕೊಡುವಂತಾಗಬೇಕು." ಈತನ ವರದಿಯಿಂದಾಗಿಯೇ ನಮಗೆ ಅಂದಿನವರೆಗೆ ಕೇವಲ ಬೆಟ್ಟದ ಮೇಲಿನ ಆಲಯ ಮಾತ್ರವೇ ಆಂಗ್ಲರ ನೇರ ಆಡಳಿತದಲ್ಲಿದ್ದಿತೆಂದು ತಿಳಿದುಬರುವುದು. ಗೋವಿಂದರಾಜಸ್ವಾಮಿ ಆಲಯದ ಆಡಳಿತವನ್ನು ಗುತ್ತಿಗೆಗೆ ನೀಡಲಾಗಿದ್ದಿತು. ಈ ದೇವಾಲಯದ ಬಗ್ಗೆ ಆತನ ಅಭಿಪ್ರಾಯವಿದು. "ಗುತ್ತಿಗೆದಾರನ ಅಪೇಕ್ಷೆಗಳೆಲ್ಲ ಪೂರ್ಣವಾಗುವವರೆಗೂ ಭಕ್ತರು ತಮ್ಮ ಭಕ್ತಿಯನ್ನು ತೋರಿಸುತ್ತಿಲ್ಲ. ಹೀಗಾಗಿ ತಿರುಪತಿಯ ದೊಡ್ಡ ದೇವಾಲಯದಲ್ಲಿ ತಮ್ಮ ಸ್ವ-ಇಷ್ಟದಿಂದ ತಮ್ಮ ಭಕ್ತಿಯ ಸಮರ್ಪಣೆಗಳನ್ನು ಮಾಡಲು ಅವಕಾಶವಿರಬೇಕು". "ದೂರದ ಕಡೆಗಳಿಂದ ಬೇರೆ ಬೇರೆ ವೃತ್ತಿಗಳನ್ನು ಮಾಡುವ ಜನರು ತಿರುಪತಿಗೆ ಬಂದು ಸ್ವೇಚ್ಛೆಯಿಂದ ತಮ್ಮ ವಂತಿಗೆಗಳನ್ನು ಸಲ್ಲಿಸುತ್ತಿದ್ದಾರೆ ಎಂಬುದು ಘನವಾದ ಆದಾಯ ಮೂಲವೇನಲ್ಲ. ಇಂತಹದರಲ್ಲಿ ಅವರನ್ನು ಕೊಡಲೇಬೇಕೆಂದು ಒತ್ತಾಯಿಸುವುದಂತೂ ಅತ್ಯಂತ ಆಕ್ಷೇಪಣೀಯ. ರದ್ದಾಗಬೇಕೆಂದು ತಾನು ಸೂಚಿಸಿದ ತೆರಿಗೆ ಸುಂಕ ಗೇಣಿಗಳ ಬಗ್ಗೆ ಆತನು ಹೇಳುವುದಿದು - "ಈ ಶುಲ್ಕ ಸುಂಕಗಳು ಆದರಣೀಯ ಪರಂಪರೆಯಿಂದ ಬಂದವುಗಳಲ್ಲವಾದರೂ ದೊಡ್ಡ ಸಂಪ್ರದಾಯವೆಂಬಂತೆ ಎಲ್ಲ ರೀತಿಯ ಯಾತ್ರಿಕ ಭಕ್ತರು ತೆರಲೇಬೇಕಾದ ತೆರಿಗೆಗಳಾಗಿವೆ. ನಾನು ನನ್ನ ಪರೀಕ್ಷೆ, ಪರಿಶೀಲನೆಗಳಿಂದಾಗಿ ಈ ಸುಂಕಗಳೆಲ್ಲ ನಿರಂಕುಶರಾದ ಅರಸರ ಆಳ್ವಿಕೆಯಲ್ಲಿ ಆರಂಭವಾದ ಅತಿಗಳೆಂದೂ, ಯಾತ್ರಿಕರಲ್ಲಿ ಈ ತೆರಿಗೆಗಳ ಬಗ್ಗೆ ಯಾವುದೇ ರೀತಿಯ ಗೌರವಾದರಗಳೂ

ಇಲ್ಲವೆಂದೂ ಕಂಡುಕೊಂಡಿದ್ದೇನೆ. ಹಿಂದೂಗಳಲ್ಲಿ ಈ ಬಗ್ಗೆ ಒಮ್ಮತದ ಒಪ್ಪಿಗೆಯೂ ಇಲ್ಲ'', ಇಂಡಿಯಾದ ಕಂಪನಿ ಸರ್ಕಾರದ ಅನುಮೋದನೆಯನ್ನು ಪಡೆದು ರಾಜಮಾರ್ಗಗಳ ಬದಿಯಲ್ಲಿ ಯಾತ್ರಿಕರಿಗಾಗಿ ಸತ್ರಗಳನ್ನು ನಿರ್ಮಿಸಲು, ಕುಡಿಯುವ ನೀರಿನ ಬಾವಿಗಳನ್ನು, ವಿಶ್ರಾಂತಿಗಾಗಿ ಉಪವನಗಳನ್ನು ನಿರ್ಮಿಸಲು, 2 ಗುಂಟೆ ತರಿ ಅಥವಾ 5 ಗುಂಟೆ ಖುಷ್ಕಿ ಜಮೀನನ್ನು ಇನಾಂ ಆಗಿ ನೀಡುವ ಪದ್ಧತಿಯನ್ನು ಪ್ರೋತ್ಸಾಹಿಸಿ ಜಾರಿಗೆ ತಂದವರಲ್ಲಿ ಗ್ರಿಂಸಾಹೇಬನು ಮೊದಲಿಗ. ತಾನು ಸ್ಥಳವನ್ನು ಬಿಟ್ಟು ಹೊರಡುವ ಮುಂಚೆ ಈ ದಾನಗಳನ್ನು 5 ಗುಂಟೆ ತರಿ ಹಾಗೂ 12 ಗುಂಟೆ ಖುಷ್ಕಿಗಳಿಗೆ ಹೆಚ್ಚಿಸಬೇಕೆಂಬ ಬಗ್ಗೆ ಪ್ರಯತ್ನಪಟ್ಟ. ''ಜನರ ಒಳಿತನ್ನು ಸಾಧಿಸುವುದಾದಲ್ಲಿ ಆದಾಯದ ಬಾಬತ್ತುಗಳ ತ್ಯಾಗವನ್ನು ಅತಿ ಹೆಚ್ಚು ಎಂಬ ಪರಿಗಣನೆಗೆ ಅಥವಾ ಆ ಬಗ್ಗೆ ಮಾಡತಕ್ಕ ನಿಧಾನವಾಗಿ ನಡೆಯುವ ಧೋರಣೆಗೆ ಆಸ್ಪದವೇ ಇಲ್ಲ'' ಎಂಬ ಆತನ ವಕ್ಕಾಣಿಕೆಯಿಂದ ಆತನ ಮಾನವೀಯ ದೃಷ್ಟಿ ಎಷ್ಟು ಉದಾತ್ತವಾಗಿದ್ದಿತು ಎಂಬುದರ ಅರಿವುಂಟಾಗುವುದು. ಮೊದಲ ಇಬ್ಬರು ಕಲೆಕ್ಟರುಗಳು ಯಾವ ರೀತಿಯ ಪರಿಶ್ರಮದಿಂದಲೂ ಪ್ರೀತಿಯಿಂದಲೂ ತಮ್ಮ ಕೆಲಸಗಳನ್ನು ನಿಭಾಯಿಸಿದರು ಎಂಬುದಷ್ಟೇ ಅಲ್ಲದೆ, ಗುತ್ತಿಗೆದಾರರ ವಶಕ್ಕೆ ಆಲಯಗಳನ್ನು ಒಪ್ಪಿಸಿ ಆರಾಮವಾಗಿ ಆದಾಯವನ್ನು ಪಡೆಯುತ್ತಿದ್ದ ಕರ್ನಾಟಿಕ್ ನವಾಬರ ಕಾಲದಲ್ಲಿ ಆಲಯಾಡಳಿತ ಯಾವ ಪಾತಾಳದ ಪಾತಳಿಯನ್ನು ಮುಟ್ಟಿದ್ದಿತು ಎಂಬುದೂ, ಗುತ್ತಿಗೆದಾರರ ಶೋಷಣೆಯ ಪರ್ಯವೇಕ್ಷಣೆಗೆ ದುರ್ಬಲ ಜನತೆ ತಮಗೆ ತೋಚಿದ ರೀತಿಯಲ್ಲಿ ತಮ್ಮ ದೇವರ ಸೇವೆ ಮಾಡುವ ಅವಕಾಶಕ್ಕಾಗಿ ಯಾವ ರೀತಿ ತನ್ನನ್ನು ತಾನು ಒಪ್ಪಿಸಿಕೊಂಡಿದ್ದಿತು ಎಂಬುದೂ ತಿಳಿದುಬರುತ್ತದೆ. ಸ್ವಾಮಿಯು ಮದುವೆಗಾಗಿ ಕುಬೇರನ ಬಳಿ ಪಡೆದ ಸಾಲದ ಕಂತುಗಳನ್ನು ಸ್ಥಳೀಯರಾಜನಿಗೆ ಒಪ್ಪಿಸಬೇಕೆಂಬ ಸ್ಥಳೀಯರ ಕಟ್ಟುಕಥೆಯ ಹಿನ್ನೆಲೆಯನ್ನು ಆಲಯವನ್ನು ಮುಸಲ್ಮಾನರ ಧಾಳಿಯಿಂದ ರಕ್ಷಿಸಲು ಉಪಯೋಗಿಸಿದ್ದಾರೆ ಎಂದು ತಿಳಿಯಲು ಹೆಚ್ಚಿನ ಕಲ್ಪನೆಯ ಸಹಾಯವೇನೂ ಬೇಕಾಗಿಲ್ಲ.

ಹತ್ತೊಂಬತ್ತನೆಯ ಶತಮಾನದ ಆರಂಭದಲ್ಲಿ ಎಂದರೆ 1803 ರಲ್ಲಿ ಸ್ಟ್ರಾಟನ್ ವರದಿಯು ಆಲಯವಿದ್ದ ಪರಿಸ್ಥಿತಿಯ ವಸ್ತುಸ್ಥಿತಿಯನ್ನು ಯಾವುದೇ ಪೂರ್ವಗ್ರಹವೂ ಇಲ್ಲದಂತೆ ಚಿತ್ರಿಸುವುದು, ಇಂದಿಗೂ ಆಸಕ್ತಿದಾಯಕವಾದ ವಿವರಗಳನ್ನು ಒದಗಿಸುವ ಈ ವರದಿಯನ್ನು ಪುನರುದ್ಧರಣಗೊಳಿಸಲಾಗಿದೆ. ಮೂಲದಲ್ಲಿದ್ದಂತೆಯೇ ವ್ಯಾಕರಣ ಕಾಗುಣಿತಗಳನ್ನು ಉಳಿಸಿಕೊಳ್ಳಲಾಗಿದೆ.

## 6. ಸ್ಟ್ರಾಟನ್‌ನ ಸಂಪೂರ್ಣ ವರದಿ

1. ತಿರುಪತಿಯ ದೇವಾಲಯದ ಆದಾಯ ಮೂಲದ ವಿವರಗಳನ್ನು ತಿಳಿಯುವುದು ಆಸಕ್ತಿಕಾರಕವಾದ ಪರಿಶೋಧನೆಯಾದದ್ದು ಮಾತ್ರವೇ ಆಗದೆ ನನ್ನ ಕರ್ತವ್ಯ ಭಾಗವೂ ಆಗಿರುವುದರಿಂದ ಈ ಬಗ್ಗೆ ನಾನು ನಡೆಸಿದ ವಿಚಾರಣೆಯ ಫಲವಾಗಿ ತಿಳಿದುಬಂದ ಮಾಹಿತಿಯನ್ನು ತಮ್ಮ ಅವಗಾಹನೆಗೆ ತರುವ ಗೌರವ ನನ್ನದಾಗಿದೆ.

2. ಉತ್ತರ ದಕ್ಷಿಣವಾಗಿ ಸಾಧಾರಣವಾಗಿ ನಡೆಯುವ ಪೂರ್ವಘಟ್ಟದ ಪರ್ವತದ ಸಾಲಿನಲ್ಲಿ ಪ್ರಸಿದ್ಧವಾದ ತಿರುಪತಿಯ ದೇವಾಲಯವು ಬೆಟ್ಟದ ಮೇಲೆ ತಿರುಪತಿಯಿಂದ ಸುಮಾರು ಏಳು ಮೈಲಿ ದೂರದಲ್ಲಿದೆ. ಬೆಟ್ಟಕ್ಕೆ ಹೋಗುವ ಇಳಿಜಾರಿನಹಾದಿಯಲ್ಲಿ ಮೂರುಗೋಪುರಗಳಿದ್ದು, ಈ ಬೆಟ್ಟವನ್ನು ಹಿಂದೂಗಳಲ್ಲದವರು ಹತ್ತುವಂತಿಲ್ಲ. ಬೆಟ್ಟದ ಬುಡದಲ್ಲಿರುವ ಗೋಪುರನ್ನು ದಾಟಿ ಇತರ ಮತಗಳವರು ಹೋಗುವಂತಿಲ್ಲ. ಈ ಬೆಟ್ಟವನ್ನೂ ಕೂಡ ಯಾತ್ರಿಕರು ಪರಮಗೌರವದಿಂದ ಕಾಣುತ್ತಾರೆ. ಈ ಬೆಟ್ಟಕಾಣುಬಂದ ಕೂಡಲೇ ನೆಲದ ಮೇಲೆ ಬಿದು ಸಾಷ್ಟಾಂಗ ನಮಸ್ಕಾರ ಮಾಡುತ್ತಾರೆ.

3. ಈ ಆಲಯದ ದೇವರನ್ನು ಒಂದು ಸಾವಿರ ಹೆಸರುಗಳಿಂದ ಪೂಜೆ ಮಾಡುತ್ತಾರೆ.ಅವುಗಳಲ್ಲಿ ಮೂರು ಬಹು ಮುಖ್ಯವಾದವು.

ಅ) ವೆಂಕಟರಮಣ ಸ್ವಾಮಿ - ಪಾಪಗಳನ್ನು ಪರಿಹರಿಸಿ ಒಳಿತನ್ನು ತರುವವನು.

ಆ) ಶ್ರೀನಿವಾಸಸ್ವಾಮಿ - ಶ್ರೀ ಎಂದರೆ ಲಕ್ಷ್ಮೀ ಇರುವಂತಹ ಸ್ಥಳ.

ಇ) ಶೇಷಾಚಲವಾಸ - ಶೇಷನು ಇರುವಂತಹ ಸ್ಥಳ. ತಿರುಪತಿ ಬೆಟ್ಟದ ಹೆಸರು ಶೇಷಾಚಲ. ಈ ಪದದ ಹುಟ್ಟು ಹೇಗೆ ಎಂದರೆ ಶೇಷ ಎಂಬುದು ಸರ್ಪಗಳ ರಾಜನ ಹೆಸರು. ಅಚಲವೆಂದರೆ ಬೆಟ್ಟ. ವಿಷ್ಣುವಿನ ಅವತಾರಗಳಲ್ಲಿ ಶೇಷಾವತಾರವೂ ಒಂದಾಗಿ, ಶೇಷನೇ ತಿರುಪತಿಯ ಬೆಟ್ಟವಾಯಿತು.

4. ಇಲ್ಲಿ ಪೂಜಿಸಲ್ಪಡುವ ದೇವರು ಸುಮಾರು 7 ಅಡಿ ಎತ್ತರದ ವಿಗ್ರಹವಾಗಿದೆ. ನಾಲ್ಕು ಕೈಗಳು ಮೂರ್ತಿಯು ವಿಷ್ಣುವಿನ ರೂಪವಾಗಿದ್ದು ಎರಡು ಕೈಗಳಲ್ಲಿ ವಿಷ್ಣುವಿನ ಆಯುಧಗಳನ್ನು ಹಿಡಿದಿದೆ. ಬಲಗಡೆಯ ಮೇಲಿನ ಕೈ ಚಕ್ರವನ್ನು ಹಿಡಿದಿದ್ದು ಎಡಗಡೆಯ ಮೇಲುಗೈ ಶಂಖವನ್ನು ಹಿಡಿದಿದೆ. ಬಲಗಡೆಯ ಇನ್ನೊಂದು ಕೈ ಕೆಳಮುಖವಾಗಿ ವಿಗ್ರಹ ನಿಂತಿರುವ ನೆಲದ ಪಾವಿತ್ರ್ಯವನ್ನು ಹೇಳುವಂತೆ ಇದ್ದರೆ ಎಡಗಡೆಯ ಕೈ ಕಮಲವನ್ನು ಹಿಡಿದಿದೆ.

5. ವಿಗ್ರಹವನ್ನು ಇಡಲಾಗಿರುವ ಆಲಯವು ಅತಿ ಪ್ರಾಚೀನವಾದದ್ದೇ ಆಗಿರಬೇಕು. ನಾನು ಈ ಆಲಯವನ್ನು ನೋಡಲು ಆಗುವುದಿಲ್ಲವಾದ್ದರಿಂದ ನಾನು ಕೇಳಿರುವ ವಿಷಯಗಳು ಅದ್ಭುತವಾಗಿವೆ ಎಂದು ಹೇಳಬೇಕು. ಆಲಯದ ಬ್ರಾಹ್ಮಣರು ಹೇಳುವಂತೆ ಈ ಗುಡಿಯು ಕಲಿಯುಗದ ಆದಿಯಿಂದಲೇ ಇದ್ದು ಇಂದಿಗೆ ಸುಮಾರು 4903 ವರ್ಷಗಳು ಕಳೆದು ಹೋಗಿವೆ. ಭವಿಷ್ಯೋತ್ತರ ಪುರಾಣದಲ್ಲಿ ಹೇಳುವುದೆಂದು ತಿಳಿಯಲಾಗಿರುವ ವಿಷಯವೆಂದರೆ ಕಲಿಯುಗದಲ್ಲಿ ಐದುಸಾವಿರ ವರ್ಷಗಳ ನಂತರ ವಿಷ್ಣುವಿನ ಪೂಜೆ ನಿಲ್ಲುವುದಂತೆ. ಈ ಭವಿಷ್ಯವಾಣಿ ನಿಜವಾದದ್ದೇ ಆದರೆ ಇಂದಿನಿಂದ ನೂರು ವರ್ಷಗಳ ತರುವಾಯ ತಿರುಪತಿಯ ಆಲಯದ ಆಲಯದ ಆದಾಯ ಕಡಿಮೆಯಾಗುವುದೆಂದು ನಾವು ನಿರೀಕ್ಷಿಸಬಹುದು.

6. ಆಲಯವನ್ನು ಸ್ಥಾಪಿಸಿದವನು ತೊಂಡಮಾನ್ ಚಕ್ರವರ್ತಿ ಎಂದು ಹೇಳುವರು. ಚಕ್ರವರ್ತಿ ಎಂದರೆ ರಾಜ ಎಂದರ್ಥ. ಅಂದಿನ ತೊಂಡಮನಾಡಿನ ರಾಜ ಇವನು. ಇಂದು ಕಾಳಹಸ್ತಿ ಜಮೀಂದಾರಿಯಲ್ಲಿರುವ ತೊಂಡಮನಾಡು ಎಂಬ ಹೆಸರಿನ ಹಳ್ಳಿ ತಿರುಪತಿಯಿಂದ ಹನ್ನೆರಡು ಮೈಲಿ ದೂರದಲ್ಲಿದೆ. ಇಲ್ಲಿ ನಾನು ಬೀಡು ಬಿಟ್ಟಿದ್ದಾಗ ಈ ಪ್ರದೇಶವು ಎಂದಾದರೂ ಒಮ್ಮೆ ಸಾಧಾರಣ ಗಣ್ಯತೆಯನ್ನು ಪಡೆದ ರಾಜನ ಊರಾಗಿದ್ದಿತೆಂದು ಹೇಳುವ ಯಾವುದೇ ಗುರುತುಗಳನ್ನೂ ಕಾಣಲಿಲ್ಲ.

7. ಈ ಆಲಯದಲ್ಲಿ ಪೂಜೆ ಪುನಸ್ಕಾರಗಳ ಕಾರಣಗಳನ್ನು ವಿಚಾರಿಸಿದೆ. ಇಲ್ಲಿನ ಬ್ರಾಹ್ಮಣರು ತಿಳಿಸಿದಂತೆ ಈ ವಿಗ್ರಹ ರೂಪಿಯು ಬೊಮ್ಮರಾಜು ಜಮೀಂದಾರಿಯ ನಾರಾಯಣವನದ ರಾಜನಾಗಿದ್ದ ಆಕಾಶರಾಜನ ಮಗಳಾದ ಪದ್ಮಾವತಿಯಲ್ಲಿ ಅನುರಕ್ತನಾದನು. ಆಕೆಯನ್ನು ಮದುವೆಯಾಗಲು ಬಯಸಿದ. ಆತನು ತಕ್ಕ ಹಣವನ್ನು ಕುಬೇರನೆಂಬ ದೇವತೆಗಳ ಧನಾಧ್ಯಕ್ಷನ .ಬಳಿಯಲ್ಲಿ ಸಾಲವನ್ನು ಪಡೆದುಕೊಂಡ. ಪಾಲಾರ್ ಹಾಗೂ ಸೊರ್ಣಮುಖೀ ನದಿಗಳ ನಡುವಣ ಭೂಮಿಯ ರಾಜನಿಗೆ ಹಣವನ್ನು ಹಿಂದಿರುಗಿಸಬೇಕೆಂದು ಆತ ನಿಬಂಧನೆಯನ್ನು ಒಡ್ಡಿದ. ಈಗ ತನ್ನನ್ನು ಆರಾಧಿಸುವವರು ನೀಡುವ ಹಣದಿಂದಲೂ, ವಾರ್ಷಿಕ ಆದಾಯದ ಮೂರನೇ ಒಂದು ಭಾಗ ಸಂಗ್ರಹವಾಗುವ ಒಂಬತ್ತು ದಿನಗಳು ನಡೆಯುವ ವಾರ್ಷಿಕ ಉತ್ಸವದ ಹಣದಿಂದಲೂ ಈಗ ಈ ಸಾಲವನ್ನೇ ವಿಗ್ರಹವು ತೀರಿಸುತ್ತಿದೆ ಎಂದು ಹೇಳಲಾಗಿದೆ.

8. ಈ ವಿವರ ಎಷ್ಟೇ ಅದ್ಭುತವಾಗಿದ್ದರೂ ಕೂಡ, ಆಲಯದ ಆದಾಯವು ಬ್ರಾಹ್ಮಣರ ಮೂಲಕವಾಗಿ ಸರಕಾರಕ್ಕೆ ಸೇರತಕ್ಕದ್ದು ಎಂದು ತಿಳಿಯಬಹುದಷ್ಟೆ. ಜೊತೆಗೇ ಹಿಂದೂ ರಾಜರ ಆಡಳಿತ ಕಾಲದಲ್ಲಿ ಈ ಆದಾಯವೆಲ್ಲವನ್ನೂ ಇಲ್ಲಿನ ಧಾರ್ಮಿಕ ಕಾರ್ಯಗಳಲ್ಲಿಯೇ ವೆಚ್ಚ ಮಾಡುತ್ತಿದ್ದುದಾಗಿಯೂ ಕರ್ನಾಟಕದಲ್ಲಿ ಮಹಮದೀಯ ರಾಜರ ಆಡಳಿತ ಕಾಲದಲ್ಲಿ ಮಾತ್ರವೇ ಈ ವೆಚ್ಚಗಳಿಗೆ ಒಂದು ಮಿತಿ ಏರ್ಪಟ್ಟು ಹೆಚ್ಚುವರಿ ಹಣವು ಸರ್ಕಾರದ ಪಾಲಾಗತೊಡಗಿತು.

9. ತಿರುಪತಿ ಆಲಯದ ಮೊದಲ ಹಾಗೂ ಮುಖ್ಯವಾದ ಆದಾಯ ಮೂಲ ಇಲ್ಲಿನ ''ಕಾನುಕಲು'' ಮೂಲಕ ಬಂದದ್ದು. ಮಗನ ಜನನ, ರೋಗದ ಗುಣಮುಖವಾಗುವಿಕೆ, ಯಾತ್ರೆಯ ಸುರಕ್ಷಿತ ಪೂರೈಕೆ, ಒಂದು ಗೆಲುವಿನ ಲಾಭ - ಮೊದಲಾದ ಅಪೇಕ್ಷೆಗಳ

ಕೈಗೂಡುವಿಕೆಗಾಗಿ ಹರಕೆ ಹೊತ್ತು ಅವು ಪೂರ್ಣಗೊಂಡಾಗ ಭಕ್ತರು ಸಮರ್ಪಿಸುವ ಮೊತ್ತ ಇದು. ತೊಂಬುದ್ರ (ತುಂಗಭದ್ರ?) ನದಿಯ ಉತ್ತರಕ್ಕೆ ಇರುವ ಜನರು ಸಾಮಾನ್ಯವಾಗಿ ಈ ಕಾಣಿಕೆಗಳನ್ನು ಗೋಸಾವಿಗಳ ಮೂಲಕ ಕಳುಹಿಸುವರು. ಆದರೆ ಮಿಕ್ಕ ಹತ್ತಿದಲ್ಲಿರುವ ಸುತ್ತಮುತ್ತಲ ಜನರು ಸ್ವತಃ ತಾವೇ ಬಂದು ಸಮರ್ಪಿಸುವುದೋ, ಬಂಧು ಮಿತ್ರರು ಮೂಲಕ ಕಳುಹಿಸುವುದೋ ಮಾಡುತ್ತಾರೆ. ಆಲಯದಲ್ಲಿ 21 ಮಂದಿ ಗೋಸಾಯಿಗಳು ನೊಂದಾವಣೆ ಹೊಂದಿದ್ದು ವಾರ್ಷಿಕ ಉತ್ಸವಕ್ಕೆ ಮೊದಲು ವಿಗ್ರಹದ ಕಡೆಯ ಬಾವುಟಗಳನ್ನು ಪಡೆದು ದೂರ ದೂರದ ಒಳನಾಡುಗಳಿಗೆ ಹೋಗಿ ಒಂದು ಮೂರು ತಿಂಗಳು ಪಾಳಯ ಹೊಡುವರು. ಸ್ವತಃ ತಿರುಪತಿಗೆ ಬರುವಂತಹ ಯಾತ್ರಿಕರು ಇವರ ಸುತ್ತಲೂ ಸೇರುವರು. ಬರಲಾಗದವರು ತಮ್ಮ ಕಾಣಿಕೆಗಳನ್ನು ಇವರಿಗೇ ನೀಡುವರು. ಇವರಿಗೆ ನೀಡುವ ಕಾಣಿಕೆಗಳೆಲ್ಲ ವಿಗ್ರಹಕ್ಕೆ ಸೇರಿದವುಗಳೆಂದೇ ಪರಿಗಣಿತವಾಗಿ, ಜನರೂ ಇವರ ಬಳಿ ನೀಡಿದ ತಮ್ಮ ಕಾಣಿಕೆ ವಿಗ್ರಹವನ್ನು ಸೇರುವುದೆಂಬ ಭರವಸೆ ಹೊಂದಿರುತ್ತಾರೆ. ಗೋಸಾಯಿಗಳು ನಂಬಿಕೆದ್ರೋಹ ಮಾಡುವುದೂ ಉಂಟಾದರೂ ಅವನ್ನು ಅಪರೂಪವಾಗಿ ಮಾತ್ರವೇ ಕಂಡುಹಿಡಿಯಲಾಗುವುದು.

10. ಬೇರೆ ಬೇರೆ ಯಾತ್ರಾ ತಂಡಗಳ - ಕಾರವಾನುಗಳ - ನಾಯಕತ್ವ ವಹಿಸುವ ಈ ಗೋಸಾಯಿಗಳು ತಾವು ಹಾಯ್ದು ಬರುವ ನಾಡುಗಳ ಸುಂಕ ತೆರಿಗೆಗಳನ್ನೂ ನೀಡುತ್ತ - ಬೇರೆ ಬೇರೆ ಪ್ರಾಂತ್ಯದ ಸುಂಕದ ಕಟ್ಟೆಗಳ ಅಧಿಕಾರಿಗಳೊಡನೆ ಕರಾರುಗಳನ್ನು ಹೊಂದಿದ್ದು ಇವರುಗಳ ಕಾರವಾನುಗಳಿಗೆ ಯಾತ್ರೆಯ ಪರವಾನಗಿ ಸುಲಭವಾಗಿ ಸಿಕ್ಕಿ ತಾಪತ್ರಯವಿಲ್ಲದೆ ನಡೆಯುವುದು. ಯಾತ್ರಿಕರಿಗೆ ದಾರಿಯನ್ನು ಸುಗಮಗೊಳಿಸುತ್ತಾರೆ. ಉತ್ಸವಗಳು ಮುಗಿಯುವಾಗ ಯಾತ್ರಿಕರಿಂದ ಬಳುವಳಿ ಭಕ್ಷೀಸುಗಳನ್ನು ಪಡೆಯುವರು. ಆಲಯದ ಕಡೆಯಿಂದಲೂ ಗೋಸಾಯಿಗಳಿಗೆ ಅವರವರ ಯೋಗ್ಯತೆಗೆ ತಕ್ಕಂತೆ ಪ್ರತಿಫಲ ಸಿಗುವುದೆಂಬುದನ್ನು ಒಂದನೇ ಪಟ್ಟಿಯಲ್ಲಿ ಕಾಣಬಹುದು.

11. ಯಾತ್ರಿಕರಿಗೂ ಅವರವರ ಸಮರ್ಪಣೆಗೆ ತಕ್ಕಂತೆ ದೇವರ ಕಡೆಯಿಂದ ಬಹುಮಾನ ಪಡೆಯುವರು. ಅದರ ರೀತಿ ಹೀಗೆ- ನೂರು ರೂಪಾಯಿ ನೀಡುವವರು ಒಂದು ತಲೆಯ ಪಾಗು - ರುಮಾಲು - ಪಡೆಯುವರು. ನೂರರಿಂದ ಐದು ನೂರು ರೂಪಾಯಿನವರೆಗೆ ನೀಡುವವರು ಒಂದು ಹೂವಿನ ಚಿತ್ರದ ರೇಷ್ಮೆ ವಸ್ತ್ರ ಪಡೆಯುವರು. ಐದು ನೂರರಿಂದ ಸಾವಿರ ರೂಪಾಯಿ ನೀಡುವವರು ಒಂದು ಶಾಲುವನ್ನು ಪಡೆಯುವರು. 2 ರಿಂದ 4 ರ ವರೆಗಿನ ಪಟ್ಟಿಯಲ್ಲಿ ವಿವಿಧ ಜಮೀಂದಾರರಿಗೆ, ಆಲಯದ ಬ್ರಾಹ್ಮಣರಿಗೆ ನೀಡಲಾದ ಬಹುಮಾನಗಳ ವಿವರಗಳಿವೆ.

12. ಆದಾಯದ ಎರಡನೆಯ ಮೂಲವೆಂದರೆ "ವರ್ತನೆ." ವಿಗ್ರಹದ ಸ್ವಂತ ಬಳಕೆಗಾಗಿ ನೀಡಲಾಗುವ ವಸ್ತುಗಳಿಗೆ, ಅವುಗಳ ನಿರ್ವಹಣೆಗಾಗಿ ಆಯಾ ವಸ್ತುಗಳ ಬೆಲೆಯ ನಗದು ಹಣವನ್ನು ನೀಡಿದ ಮೇಲೆ ಈ ವಸ್ತುಗಳನ್ನು ವಿಗ್ರಹದ ಆಸ್ತಿಯೆಂದು ಬಗೆದು ವಾಹನ ಮಂಟಪದಲ್ಲಿ ಆಭರಣಾಗಾರದಲ್ಲಿ ಅವುಗಳನ್ನು ಸುರಕ್ಷಿತವಾಗಿಟ್ಟು ಬಳಸಲಾಗುವುದು.

13. ಮೂರನೆಯ ರೀತಿಯ ಆದಾಯವು ಅರ್ಜಿತಂ ಎಂಬುದರಿಂದ ಬರುತ್ತದೆ. ಇವುಗಳನ್ನು ಅಭಿಷೇಕವೆಂದೂ, ನಿವೇದನೆಗಳೆಂದೂ ಕರೆಯಲಾಗಿದೆ. ಮೂರನೆಯದು ವಾಹನಸೇವೆಗಳು. ಇವುಗಳ ವಿವರವನ್ನು ಇಲ್ಲಿ ನೀಡುತ್ತಿದ್ದೇವೆ

**ಅ) ಅಭಿಷೇಕ ಅಥವಾ ಶುದ್ಧೀಕರಣ :**

ಪ್ರತಿ ಶುಕ್ರವಾರ ವಿಗ್ರಹವನ್ನು ಸುಗಂಧ ದ್ರವ್ಯಗಳಿಂದ - ಹಾಲು, ಪುನುಗು,ಕಸ್ತೂರಿ, ಕೇಸರಿ , ಶ್ರೀಗಂಧ - ಮೊದಲಾದ ವಸ್ತುಗಳಿಂದ ಪೂಸುವುದು ಅಥವಾ ತೊಳೆಯುವುದು. ಇಲ್ಲಿನ ವಸ್ತುಗಳನ್ನೆಲ್ಲ ಆಲಯದ ಭಂಡಾರದಿಂದಲೇ ನೀಡಲಾಗುವುದಾದರೂ ಈ ಸ್ನಾನದ ಸಮಯದಲ್ಲಿ ಹಾಜರಿರಬೇಕೆಂದು ಬೇಡುವ ಯಾತ್ರಿಕರು ಮೊದಲಿಗೆ ನೂರು - ನೂರಿಪ್ಪತ್ತು ರೂಪಾಯಿಗಳನ್ನು ನೀಡುತ್ತಿದ್ದರು, ಈಚೆಗೆ ಬ್ರಹ್ಮೋತ್ಸವದ ದಿನಗಳಲ್ಲಿ ಯಾತ್ರಿಕರು ತಮಗೆ ಅನುಕೂಲವಿದ್ದಂತೆ ನೀಡಬಹುದಾಗಿದೆ.

**ಆ) ಪೂಲಂಗಿಸೇವೆ:** ಪ್ರತಿ ಗುರುವಾರವೂ ಸಂಜೆ ಹೊತ್ತಿನಲ್ಲಿ ವಿಗ್ರಹವನ್ನು ಹೂವಿನಿಂದ ಅಲಂಕಾರ ಮಾಡುವುದು ವಾಡಿಕೆ. ಈ ಅಲಂಕಾರವಾಗುವಾಗ ಅಲ್ಲಿರಲು ಭಕ್ತರು ಮೊದಲಿಗೆ ಅರವತ್ತು ರೂಪಾಯಿಗಳನ್ನು ನೀಡುತ್ತಿದ್ದರು. ಈಗ ಅವರಿಗೆ ಅನುಕೂಲವಿದ್ದಂತೆ ನೀಡಬಹುದಾಗಿದೆ.

**ಇ) ತೋಮಾಲಸೇವೆ:** ಪ್ರತಿನಿತ್ಯವೂ ಹೂವಿನ ಹಾರವನ್ನು ವಿಗ್ರಹಕ್ಕೆ ತೊಡಿಸುವ ಕಾರ್ಯಕ್ರಮ. ಇದರಲ್ಲಿ ಭಾಗವಹಿಸಲು ಹನ್ನೆರಡು ರೂಪಾಯಿ ಶುಲ್ಕ.

**ಈ) ಸಹಸ್ರನಾಮಾರ್ಚನೆ:** ವಿಗ್ರಹವನ್ನು ಅದರ ಸಾವಿರ ಹೆಸರುಗಳಲ್ಲಿ ಅರ್ಚನೆ ಮಾಡುವುದು, ಈ ಆಲಯದಲ್ಲಿ ದಿನವೂ ನಡೆಯುತ್ತದೆ. ಇದಕ್ಕೆ ನೀಡಬೇಕಾದ ಶುಲ್ಕ ನಾಲ್ಕು ರೂಪಾಯಿಗಲು.

**ಉ) ಮುನ್‌ಸುಂ ಸೇವೆ:** ಪ್ರತಿದಿನವೂ ವಿಗ್ರಹಕ್ಕೆ ವಿಶ್ರಾಂತಿ ನೀಡುವ ಸೇವೆ. ಇದಕ್ಕೆ ಶುಲ್ಕ ನಾಲ್ಕು ರೂಪಾಯಿ.

**2. ನೈವೇದ್ಯ ಅಥವಾ ವಿಗ್ರಹಕ್ಕೆ ನೀಡುವುದು :**

ಅ. ಅನ್ನ ನೈವೇದ್ಯ ಅಥವಾ ಹಾಲುಸಕ್ಕರೆ ಅಕ್ಕಿಗಳ ಪಕ್ವವಾದ ಪರಮಾನ್ನ , ಹುಣಿಸೆಹಣ್ಣು, ಕಡಲೆ ಎಣ್ಣೆ, ಅಕ್ಕಿಗಳಿಂದ ಮಾಡಿದ ಪೂಳಿಯೂಗರಂ, ಬೇಳೆ, ತುಪ್ಪ, ಅಕ್ಕಿಗಳಿಂದ ಮಾಡಿದ ಮೂದ್ಯನ್ನಂ , ಮೊಸರು ಅಕ್ಕಿಗಳಿಂದ ಮಾಡಿದ ದಧ್ಯೋದನಂ- ಇವುಗಳಲ್ಲಿ ಯಾವುದನ್ನಾದರೂ ಒಂದನ್ನು ವಿಗ್ರಹಕ್ಕೆ ನೀಡಬೇಕೆಂದು ಕೊಂಡರೆ ಭಕ್ತರು ಬಯಸಿದರೆ ಈ ವಸ್ತುಗಳನ್ನು ನೀಡಿ ಆರು ರೂಪಾಯಿಗಳನ್ನು ನೀಡಬೇಕು. ಈ ವಸ್ತುಗಳನ್ನು ಆಲಯವೇ ನೀಡಿದರೆ ಹತ್ತು ರೂಪಾಯಿ ಅಧಿಕ.

ಆ. ಭಕ್ಷನ್ನನೈವೇದ್ಯ (ಭಕ್ಷ್ಯ) ವಿಗ್ರಹಕ್ಕೆ ಸಿಹಿ ತಿಂಡಿಗಳನ್ನು ನೀಡಲು ಕೊಡಬೇಕಾದ ಹಣ 20 ರಿಂದ 28 ರೂಪಾಯಿಗಳು. ಇಲ್ಲಿ ಆಲಯವೇ ಸಾಹಿತ್ಯವನ್ನೂ ಒದಗಿಸಿ ಭಕ್ಷ್ಯಗಳನ್ನು ತಯಾರಿಸುವುದು.

ಇ) ಮಹಾ ನೈವೇದಿಯಂ ಅಥವಾ ಸಾಮಾನ್ಯವಾಗಿ ತೀರುಪೂವಡಾ ಎಂದು ಕರೆಯಲಾಗುವ ಈ ಸೇವೆಯಲ್ಲಿ 1000 ದಿಂದ 2000 ಸೇರು ಅಕ್ಕಿಯ ಪಕ್ವಾನ್ನವನ್ನು ವಿಗ್ರಹಕ್ಕೆ ನಿವೇದಿಸಲು ಬಯಸುವವರು 100 ರಿಂದ 120 ಪಗೋಡಗಳನ್ನು ಸರ್ಕಾರ್‌ಗೆ ನೀಡಬೇಕು.

ಈ) ಆಮಂತ್ರಣ ಉಚ್ಚವಂ ಸಾಮಾನ್ಯವಾಗಿ ನಿತ್ಯ ಪಡೀತರಂ ಎಂದು ಕರೆಯಲಾಗುವ ಈ ಸೇವೆಯಲ್ಲಿ ನಿತ್ಯದ ಹಲವು ನಿವೇದನೆಗಳಿದ್ದು ಇವುಗಳಲ್ಲಿ ಇವನ್ನೆಲ್ಲ ಒಟ್ಟಿಗೆ ನೀಡಲು ಯಾತ್ರಿಕರು 60 ರೂಪಾಯಿ ನೀಡಬೇಕು. ಆದರ ವಿವರ ಹೀಗೆ -

| | |
|---|---|
| ಇಂದಿನ ದಿನಗಳಲ್ಲಿ ಸರ್ಕಾರ್‌ಗೆ | 15 |
| ತೋಮಾಲ ಸೇವೆಗೆ | 12 |
| ಸಹಸ್ರನಾಮಾರ್ಚನೆಗೆ | 5 |
| ಮನ್ ಸುಂ ಸೇವೆಗೆ | 12 |
| ಅನ್ನನೈವೇದ್ಯಕ್ಕೆ | 16 |
| ಒಟ್ಟು | 60 |

ಉ) ಊಕ್ಕೈಪಚಡಿ: ತಿರುಪತಿ ಬೆಟ್ಟಗಳಲ್ಲಿ ಮಾತ್ರವೇ ಬೆಳೆಯುವ ಊಕ್ಕೈ ಸಸಿಯಿಂದ ಮಾಡಿದ ಪಚಡಿಯ ನಿವೇದನೆ. ಇದನ್ನು ದೇವರಿಗೆ ನೀಡಬಯಸುವರು ನಾಲ್ಕು ರೂಪಾಯಿ ಶುಲ್ಕ ನೀಡಬೇಕು.

**೩. ವಾಹನ ಸೇವೆಗಳು :**

ವಿಗ್ರಹದ ಮೆರವಣಿಗೆಗೆಂದು ಹನ್ನೆರಡು ವಿಧವಾದ ವಾಹನಗಳಿವೆ. ಇವುಗಳಲ್ಲಿನ ಪ್ರತಿಯೊಂದರ ಬಗ್ಗೆಯೂ ಹಿಂದೂ ಪುರಾಣಗಳಲ್ಲಿ ಹೇಳಲಾಗಿದೆ. ಈ ವಾಹನಗಳ ಮೇಲೆ ಪ್ರದರ್ಶನಕ್ಕೆ ಬರುವ ವಿಗ್ರಹವು ಆಲಯದಲ್ಲಿ ತನ್ನ ಸ್ಥಳದಿಂದ ಕದಲಲಾರದ, ನಿಂತಿರುವ ಕಲ್ಲಿನ ಪ್ರತಿಮೆಯ ಲೋಹದ ಪ್ರತಿರೂಪವಾಗಿರುತ್ತದೆ. ಕೆಳಗೆ ನೀಡಿರುವ 1 ರಿಂದ 3 ರವರೆಗಿನ ವಾಹನಗಳಿಗೆಂದು ಭಕ್ತರು 40ರೂಪಾಯಿ ನೀಡಬೇಕು. ಮಿಕ್ಕವುಗಳಿಗೆ 20 ರೂಪಾಯಿ.

**1. ಕಲ್ಪವರೂಚ ವಾಹನ (ಕಲ್ಪವೃಕ್ಷ) -**

ಉತ್ಸವ ವಿಗ್ರಹವನ್ನು ಮರದಿಂದ ಮಾಡಿದ, ಗಿಲೀಟು ಮಾಡಿದ ತಗಡು ಹೊದಿಸಿದ ಮರದ ವಾಹನದಲ್ಲಿ ಕೂರಿಸಿ ತರುವಿಕೆ

**2.ಆಂದೋಲುಕ ವಾಹನ** (ಆಂದೋಲಿಕೆ) ಪಲ್ಲಕ್ಕಿಯಲ್ಲಿ ಮೆರವಣಿಗೆ.

**3. ಶೇಷವಾಹನಂ** - ಆದಿಶೇಷನ ಗಿಲೀಟು ವಾಹನದಲ್ಲಿ ಮೆರವಣಿಗೆ.

**4.ಸರ್ವಭೂಪಾಲ ವಾಹನ** - ಉತ್ಸವ ಮೂರ್ತಿಯನ್ನು ಗಿಲೀಟು ಸಿಂಹಾಸನದಲ್ಲಿ ಕೂರಿಸಿ ಮೆರವಣಿಗೆ.

**5. ಸೂರಿಯ ಪ್ರಭವಾಹನ** : ಗಿಲೀಟು ಸೂರ್ಯ ಪ್ರತಿಮೆಯ ವಾಹನದಲ್ಲಿ ಮೆರವಣಿಗೆ.

**6.ಅದ್ದಾಲ ಅರ** - ಉತ್ಸವ ವಿಗ್ರಹವನ್ನು ಕನ್ನಡಿಗಳಿರುವ ಕೊಠಡಿಗೆ ಒಯ್ದು ಕೂರಿಸುವುದು.

**7. ಅಂದುಲ್ಲಂ ವಾಹನಂ** - ಡೋಲಿಯಂತಹ ಪಲ್ಲಕ್ಕಿಯಲ್ಲಿ ಕರೆದೊಯ್ಯುವಿಕೆ.

**8. ಗರುಡವಾಹನಂ** - ಗಿಲೀಟು ಪಕ್ಷಿಯ ವಾಹನದಲ್ಲಿ ಮೆರವಣಿಗೆ.

**10. ಹನುಮಂತವಾಹನ** - ಗಿಲೀಟು ಮಾಡಿದ ಹನುಮಂತ ವಿಗ್ರಹದ ಮೇಲೆ ಮೆರವಣಿಗೆ.

**11. ಸಿಂಹವಾಹನ** - ಗಿಲೀಟು ಮಾಡಿದ ಸಿಂಹದ ವಿಗ್ರಹದ ಮೇಲೆ ಮೆರವಣಿಗೆ.

**12. ಬಾಲಶೇಷವಾಹನಂ** - ಚಿಕ್ಕದಾದ ಗಿಲೀಟಿನ ಶೇಷವಾಹನದ ಮೇಲೆ ಮೆರವಣಿಗೆ.

ತಿರುಪತಿಯ ಆಲಯದ ಆದಾಯ ವಿವರಗಳನ್ನು ಕಾನುಕಲು, ವರ್ತನ, ಅರ್ಜಿತಂಗಳ ಮೂಲಕ ವಿವರಿಸಿದ ಮೇಲೆ, ಆದಾಯದ ಮತ್ತೊಂದು ಮಾಧ್ಯಮವಾದಂತಹ ಗುತ್ತಿಗೆ ನೀಡುವುದು ಹಾಗೂ ಅನುಮತಿ ನೀಡುವುದು ಎರಡನ್ನೂ ತಪ್ಮಗಮನಕ್ಕೆ ತರಬೇಕು.

1. ದಿನವೂ ದೇವರಿಗೆ ನಿವೇದಿಸುವ ಪ್ರಸಾದಗಳಲ್ಲಿ ತವತೋರ ಪಡಿಮೇರ ಮೊದಲಾದ ಸರ್ಕಾರ್‌ನ ಭಾಗಕ್ಕೆ ಬರುವ ಭಾಗವನ್ನು ಗುತ್ತಿಗೆದಾರನು ನಿವೇದನೆಯ ವಸ್ತುಗಳನ್ನು ಆಲಯ ನೀಡಿದ್ದಲ್ಲಿ ಯಾತ್ರಿಕರಿಗೆ - ಅದರ ಬಗ್ಗೆ ಅತಿ ಆದರವಿದ್ದವರಿಗೆ ವಿತರಣೆ ಮಾಡಿ ಮಿಕ್ಕದ್ದನ್ನು ಆಲಯದ ಹಲವಾರು ಸಿಬ್ಬಂದಿ ವರ್ಗಕ್ಕೆ ರುಸುಂ ಎಂದು ನೀಡಲಾಗುವುದು. ಆದರೆ ಯಾತ್ರಿಕರೇ ಪ್ರಸಾದಗಳನ್ನು ನೀಡಿದಾಗ ಸರ್ಕಾರ್ ಭಾಗಕ್ಕೆ ಸ್ವಲ್ಪವೇ ಬರುವುದು.ಯಾತ್ರಿಕನು ತನ್ನ ಭಾಗದ ಪ್ರಸಾದವನ್ನು ತನ್ನ ಇಷ್ಟ ಬಂದಂತೆ ವಿತರಿಸಬಹುದು.

2. ವಗಪಡಿ - ಸಿಹಿತಿಂಡಿಗಳು - ಗುತ್ತಿಗೆದಾರನು ಮಾಡಿ ದೇವರಿಗೆ ಭಕ್ತರ ಪರವಾಗಿ ಅರ್ಪಿಸಿದ್ದು ಇದರ ಮಾರಾಟದಿಂದ ಬಂದ ಹಣ,

3. ಮೂಂಟುರ್ ಬುಗುಡೀ : ಇದು ಬೆಟ್ಟದ ಮೇಲೆ ಹಾಗೂ ತಿರುಪತಿಯಲ್ಲಿ ಬೆಳೆಯುವ ಹೊಗೆಸೊಪ್ಪು ಗಾಂಜಾಗಳ ಗುತ್ತಿಗೆಯಿಂದಲೂ, ತಿರುಪತಿಯ ಕಾಡುಬೆಟ್ಟಗಳಲ್ಲಿ ಬೆಳೆಯುವ ರಕ್ತ ಚಂದನದ ಮರದಿಂದ ಮಾಡಿದ ಮೂರ್ತಿಗಳ ಮಾರಾಟದಿಂದಲೂ ಬರುವಂತಹ ಹಣ.

4. ಸ್ವಾಮಿ ಪುಷ್ಕರಿಣಿ ಆಲಯದ ಪಕ್ಕದಲ್ಲಿದ್ದು ಇಲ್ಲಿ ಸ್ನಾನಮಾಡಿದ ಯಾತ್ರಿಕರು ಹಲವು ರೀತಿಯ ಧಾರ್ಮಿಕ ಕ್ರಿಯೆಗಳನ್ನು ಆಚರಿಸುವವರು. ಇಲ್ಲಿನ ಪೌರೋಹಿತ್ಯವನ್ನು ಗುತ್ತಿಗೆ ಹಿಡಿದ ಬ್ರಾಹ್ಮಣರು ಮಾತ್ರವೇ ಮಾಡುವರು.

5. ತಂಕ ಪಡಿ ಎಂಬುದು ಬೆಟ್ಟದ ಮೇಲಿನ ಅಂಗಡಿಗಳಲ್ಲಿ ಅರಾಣೆಗಿಂತಲೂ ಹೆಚ್ಚು ಬೆಲೆಯ ಆಲಯ ವಸ್ತುಗಳ ಮಾರಾಟದ ಮೇಲೆ ವಿಧಿಸಿದ ಸುಂಕ. ಇದರಿಂದಾಗಿ ಅಂಗಡಿಗಳಲ್ಲಿ ಮಾರಾಟವಾಗುವ ಎಲ್ಲ ವಸ್ತುಗಳ ಬೆಲೆಯೂ ಹೆಚ್ಚಾಗಿ ಸಾಧಾರಣ ದಿನ ಗಳಲ್ಲಿಯೇ ಯಾತ್ರಿಕರು ತೊಂದರೆಗೆ ಒಳಗಾಗುವರೆಂದರೆ ಉತ್ಸವದಿನಗಳ ಹೆಚ್ಚಿನ ಸಂದಣಿಯಲ್ಲಿ ಅತಿ ಶೋಷಣೆ ಆಗುವುದುಸಹಜ.

6.ನಾಮಾಲೋ ಅಂಗಾಡಿ - ಇಲ್ಲಿ ತಿರುಪತಿಯ ಯಾತ್ರಿಕರು ಹಣೆಗೆ ಹಚ್ಚಿಕೊಳ್ಳುವ ಬಿಳಿಯ ಸುಣ್ಣವು ದೊರೆಯುತ್ತದೆ. ಇದನ್ನು ಇಲ್ಲಿ ಮಾತ್ರವೇ ಮಾರುವರು. ಇದು ಬೇರೆ ಕಡೆಗಳಲ್ಲಿ ದೊರೆಯುವಂತಿದ್ದರೂ ಸಹ ಜನ ಇಲ್ಲಿನ ಪವಿತ್ರಮಣ್ಣು (ತಿರುಮಣ್) ಎಂಬ ಕಾರಣದಿಂದ ಇದನ್ನು ಮನೆಗೂ ಕೊಂಡೊಯ್ಯುತ್ತಾರೆ.

7.ಹಜಾಮ ಗೂತ್ತ - ಸಾಮಾನ್ಯವಾಗಿ ಕ್ಷೌರಿಕರಿಂದ ಗುತ್ತಿಗೆ ಪಡೆದಂತಹ ವಿಷಯ. ಈ ಹಕ್ಕನ್ನು ಪಡೆದವರು ತಿರುಪತಿಯಲ್ಲಿ ಅವರ ಬಳಿ ಕ್ಷೌರಮಾಡಿಕೊಂಡವರೆಲ್ಲ ತಕ್ಕ ಹಣವನ್ನು ಕೊಡಬೇಕೆನ್ನುವರು. ಈ ಶುಲ್ಕವನ್ನು ಸರ್ಕಾರ್‌ದವರು 1.5ಪಣಂ ಎಂದು ನಿರ್ಧರಿಸಿದ್ದಾರೆ.

8. ಚೌಲಗುತ್ತ - ಬೆಟ್ಟದ ಕೆಳಗೆ ಯಾತ್ರಿಕರಿಗೆ ಕ್ಷೌರ ಮಾಡುವ ಕ್ಷೌರಿಕರು ನೀಡುವ ಗುತ್ತಿಗೆ. ಮೊದಲೇ ತಿಳಿಸಿರುವರೀತಿ ಇದಕ್ಕೆ ಮಿತಿಗಳುಂಟು.

9. ಕುಲಾಗೂತ್ತಂ - ಇಲ್ಲಿ (ಬೆಟ್ಟದ ಕೆಳಗಿನ ಕಪಿಲತೀರ್ಥ) ಯಾತ್ರಿಕರು ಸ್ನಾನ ಮಾಡಿ ಬೆಟ್ಟ ಹತ್ತುವರು. ಇಲ್ಲಿ ಅವರು ನಡೆಸುವ ಧಾರ್ಮಿಕ ಕ್ರಿಯೆಗಳಲ್ಲಿ ಪರವಾನಗಿ ಪಡೆದ ಬ್ರಾಹ್ಮಣರು ಮಾತ್ರ ಪೌರೋಹಿತ್ಯ ನಡೆಸಲು ಸಾಧ್ಯ. ಇವುಗಳಿಗೆ ತಕ್ಕ ಶುಲ್ಕವುಂಟು.

ನನಗೆ ಎಲ್ಲ ಮೂಲಗಳಿಂದ ತಿಳಿದು ಬಂದ ಮಾಹಿತಿಯಂತೆ ಮೇಲಿನ ಎಲ್ಲ ಗುತ್ತಿಗೆ ಗೇಣಿ ವಿಷಯಗಳೂ ಮಹಮದೀಯ ರಾಜರುಗಳ ಕಾಲದಿಂದ ಅವರುಗಳ ಆಲಯದ ಆದಾಯವನ್ನು ಅತಿಹೆಚ್ಚು ಸಂಗ್ರಹಿಸಿಕೊಡುವ ಗುತ್ತಿಗೆ ದಾರರಿಗೆ ಆಡಳಿತವನ್ನು ಒಪ್ಪಿಸಿದ ಬಳಿಕ ಉಂಟಾದವುಗಳು ಎಂದು ಹೇಳಬೇಕು. ಇಲ್ಲಿ ಗೇಣಿ ಪಡೆದವರಿಗೆ ಶುಲ್ಕ ಸಂಗ್ರಹದಲ್ಲಿ ಅಂಕೆಯೇ ಇರದುದರಿಂದ ಇವರು ತಮ್ಮ ಕಲ್ಪನೆ ಓಡಿದಷ್ಟೂ ರೀತಿಯಲ್ಲಿ ಯಾತ್ರಿಕರನ್ನು ಸುಲಿಯುತ್ತಿದ್ದರು. ಮುಂದೆ ಬಂದ ಗುತ್ತಿಗೆದಾರರು ಹಿಂದಿನವರ ಸುಂಕ ವಿಧಾನ ಗಳನ್ನು ಉಳಿಸಿಕೊಂಡು ತಾವು ಯಾವರೀತಿಯಲ್ಲಿ ಹೊಸ ಸುಂಕವನ್ನು ಹೊರಿಸಬಹುದು ಎಂದು ಯೋಚಿಸುತ್ತಿದ್ದರು.

ತಿರುಪತಿ ಬೆಟ್ಟವನ್ನೇರುವ ಯಾತ್ರಿಕರಿಗೆ ಮೂರು ಪಣಗಳ ಯಾತ್ರಾಸುಂಕವನ್ನು ವಿಧಿಸುವುದು ಇದೆ ಎಂಬುದನ್ನು ಹಿಂದಿನ ಆಗಸ್ಟ್ ಎಂಟನೆಯ ದಿನ ತಮ್ಮ ಗಮನಕ್ಕೆ ತಂದಿದ್ದೇನೆ. ಅದರ ಆರಂಭವೂ ಇದೇ ರೀತಿಯಲ್ಲಿ ಆದದ್ದು. ಇದರಿಂದಾಗಿ ಇದರ ವಸೂಲಾತಿಯಲ್ಲಿ ಅತ್ಯಂತ ಹೆಚ್ಚಿನ ಅನ್ಯಾಯಗಳು ನಡೆಯುವ ಸಂಭವವುಂಟು. ಹಾಗಾಗಿ ಈ ಸುಂಕವನ್ನು ರದ್ದುಗೊಳಿಸಬೇಕೆಂದು ನಾನು ಶಿಫಾರಸು ಮಾಡುತ್ತೇನೆ. ಈ ಸುಂಕ ಅತ್ಯಂತ ಶೋಷಣೆಯ ಮಾಧ್ಯಮ ಎಂದು ಯಾತ್ರಿಕರು ಬಗೆಯುತ್ತಾರೆ- ಎಂಬುದನ್ನು ತಿಳಿದಮೇಲೆ ನನ್ನ ಮೊದಲಿನ ಶಿಫಾರಸನ್ನೇ ಪುನಃ ತಮ್ಮ ಅವಗಾಹನೆಗೆ ತರಲು ಅಪೇಕ್ಷೆ ಪಡುತ್ತೇನೆ. ತಿರುಪತಿಯ ಸುತ್ತ ಮುತ್ತಲಿನ

ನಾಲ್ಕು ಕೋಸು ದೂರದೊಳಗಿನ ಜನಕ್ಕೆ ಈ ಸುಂಕದ ವಿನಾಯಿತಿಯಿರುವುದರಿಂದಾಗಿ ಈಗ ಸುಂಕವನ್ನು ರದ್ದುಗೊಳಿಸುವುದರಿಂದ ಹೆಚ್ಚಿನ ನಷ್ಟವೇನೂ ಅನುಭವಕ್ಕೆ ಬರುವುದಿಲ್ಲ. ಸಾಮಾನ್ಯವಾಗಿ ವಿನಾಯಿತಿಯಿರುವ ಬ್ರಾಹ್ಮಣರಿಗೆ ಮಾತ್ರವೇ ಸ್ವಲ್ಪ ಆಕ್ಷೇಪವುಂಟಾಗಬಹುದು, ಆದರೆ ಈ ಬಗ್ಗೆ ಹಲವರೊಡನೆ ಮಾತನಾಡಿದ ನಂತರ ಆಲಯ ಬ್ರಾಹ್ಮಣ ಸಿಬ್ಬಂದಿ ಹಾಗೂ ಅಪರಿಚಿತರ ಅಭಿಪ್ರಾಯ ಪಡೆದ ನಂತರ ಈ ವಿನಾಯಿತಿಯ ಸಂಕೇತವು ಯಾವುದೇ ಹೆಚ್ಚಿನ ಪಾರಂಪರಿಕ ಪ್ರಾಧಾನ್ಯದ್ದಲ್ಲವೆಂದು ತಿಳಿದುಬರುತ್ತದೆ.

ಈ ಕಾರಣಗಳಿಂದಾಗಿ ಇಲ್ಲಿನ ಯಾತ್ರೆಯ ತೆರಿಗೆಯನ್ನು ರದ್ದುಗೊಳಿಸಿ, ಸ್ಥಳೀಯ ಜನರ ಧಾರ್ಮಿಕ ಭಾವನೆಗಳನ್ನು ತೃಪ್ತಿಗೊಳಿಸುವುದು ಒಳ್ಳೆಯದೆಂದು ನಾನು ಶಿಫಾರಸು ಮಾಡುತ್ತೇನೆ. ಜೊತೆಗೇ ಫಸಲಿ 1213 ವರ್ಷದಿಂದ ಕೆಳಗೆ ಪಟ್ಟಿ ಮಾಡಿರುವ ತಿರುಪತಿಯ ಶುಲ್ಕಗಳ ಸುಂಕಗಳ ಗೇಣಿ ಗುತ್ತಿಗೆ ನೀಡುವುದನ್ನೂ ರದ್ದು ಮಾಡಬೇಕೆಂದು ಶಿಫಾರಸು ಮಾಡುತ್ತೇನೆ. ಮೊದಲೇ ವಿವರಿಸಿದ ಕಾರಣಗಳ ನಂತರ ಇವೆಲ್ಲ ಎಷ್ಟು ಕೆಳತರದ್ದು ಎಂಬುದನ್ನು ಪ್ರತ್ಯೇಕವಾಗಿ ವಿವರಿಸಬೇಕಾಗಿಲ್ಲ. ಈ ರದ್ದತಿಯಿಂದಾಗಿ ತತ್ಕಾಲಿಕವಾಗಿ ಆದಾಯಕ್ಕೆ ಸ್ವಲ್ಪ ನಷ್ಟ ಉಂಟಾಗಬಹುದು. ಆದರೆ ಮುಂದೆ ಮುಂದೆ ಈ ಪದ್ಧತಿಯಿಂದಾಗಿ ಹೆಚ್ಚಿನ ಆದಾಯವುಂಟಾಗುವುದೆಂಬ ಭರವಸೆ ನನಗಿದೆ.

| **ಗೇಣಿ / ಪರವಾನಗಿ ವಿಷಯ** | | **ಹತ್ತು ವರ್ಷದ ಸರಾಸರಿ ಸಂಗ್ರಹ** |
|---|---|---|
| ಸ್ವಾಮಿ ಪುಷ್ಕರಿಣಿ | | 82. 8.0 |
| ತಂಕಬಡಿ | | 1261 .8.6/16 |
| ನಾಮಲೋ ಅಂಗಾಡಿ | | 364.0.0 |
| ಹಜಾಮ ಗೂತ್ತ | | 395.2.0 |
| ಗಲೀನ್ ಗೂತ್ತ | | 104.12.13 / 16 |
| ಕುಪ್ಲ ತೀರ್ಥಂ | | 108.11.5 / 16 |
| ಯಾತ್ರಾ ಸುಂಕ | | 1257.9.6 / 16 |
| ಮೊತ್ತ | ನಕ್ಷತ್ರ ಪಗೋಡಗಳು | 3674.3.14 / 16 |

ತಿರುಪತಿಯಲ್ಲಿ ಮತ್ತೂ ಹಲವಾರು ಆಲಯಗಳಿದ್ದು, ಯಾತ್ರಿಕರು ಇಲ್ಲಿಯೂ ತಮ್ಮ ಕೈಲಾದಷ್ಟು ಕಾಣಿಕೆ ನಿವೇದನೆಗಳನ್ನು ಅರ್ಪಿಸುವರು. ಈ ಆದಾಯವನ್ನು ಅಲ್ಲಿನ ಬ್ರಾಹ್ಮಣರು ಅನುಭವಿಸುತ್ತಾರೆ. ಆದರೆ ಕೆಳಗಿನ ತಿರುಪತಿಯ ಗೋವಿಂದರಾಜ ಆಲಯದಲ್ಲಿ ಸ್ವಲ್ಪ ಹೆಚ್ಚಿನ ಆದಾಯವಿದ್ದು ಇದನ್ನು ಸರ್ಕಾರದ ಪಾಲು ಎಂದು ಪರಿಗಣಿಸಲಾಗಿದೆ. ಹಿಂದಿನ ಹತ್ತು ವರ್ಷಗಳ ಸರಾಸರಿ ಆದಾಯ 877-13 7/8 ನಕ್ಷತ್ರ ಪಗೋಡಗಳಾಗಿರುವುದು.

ತಿರುಪತಿ ಆಲಯದ ಸಂಬಂಧಪಟ್ಟ ಬ್ರಾಹ್ಮಣರ ಅನುಭವದಲ್ಲಿರತಕ್ಕ ಇನಾಂ ಭೂಮಿಗಳ ಪಟ್ಟಿ 4 ಅನ್ನೂ, ತಿರುಪತಿ ಫರಗಣದಲ್ಲಿನ ಕಳೆದ ಹತ್ತು ವರ್ಷದ ಆದಾಯ ವಿವರದ ಪಟ್ಟಿ - 6 ಅನ್ನೂ ತಮಗೆ ಅವಗಾಹನೆಗಾಗಿ ಸಲ್ಲಿಸುವ ಗೌರವವನ್ನದಾಗಿದೆ. ಇಲ್ಲಿನ ಕೊನೆಯ ಕಾಲಮಿನಲ್ಲಿ ಜಿಲ್ಲೆಗೆ ಸಂಬಂಧಿಸಿದ ಸಿಬ್ಬಂದಿಯ ಖರ್ಚು ಕಳೆದು ಪ್ರತಿವರ್ಷದ ಮಿಕ್ಕ ಧನರಾಶಿಯನ್ನು ಸೂಚಿಸಲಾಗಿದೆ.

ಸಹಿ/-

31, ಜನವರಿ 1803

**ಜಿ.ಇ.ಓ. ಸ್ಟ್ರಾಟನ್**

ಚಿತ್ತೂರು

ಜಿಲ್ಲಾಧಿಕಾರಿ.

## ಅಧ್ಯಾಯ - 20

# 19ನೇ ಶತಮಾನದ ಆರಂಭದಲ್ಲಿ ಆಲಯ

### 1. ನಾಲ್ಕು ದಾಖಲೆಗಳು :

ತಿರುಮಲೆಯ ಆಲಯವನ್ನೂ ಅದರ ಪರಿಧಿಯಲ್ಲಿನ ಇತರ ಸಂಬಂಧಿಸಿದ ಆಲಯಗಳನ್ನೂ ತಮ್ಮ ಆಡಳಿತದಲ್ಲಿ ನೇರವಾಗಿ ತಂದುಕೊಂಡು ಈಸ್ಟ್ ಇಂಡಿಯಾ ಕಂಪನಿಯು ಆಲಯದ ಆದಾಯಮೂಲಗಳನ್ನು ವ್ಯವಸ್ಥಿತಗೊಳಿಸಿ ನಿಯತವಾದ ವಾರ್ಷಿಕ ವರಮಾನವನ್ನು ಬಯಸಿದ್ದು ಸಹಜವೇ, ಇದನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆಗೊಳಿಸಲು ಕಂಪನಿಯು ಆಲಯಾಡಳಿತದ ಹಲವಾರು ಅಂಶಗಳನ್ನು, ಆಲಯದ ಆಸ್ತಿ - ಪಾಸ್ತಿಗಳು, ಸಾಲ - ಹೊಣೆಗಳು, ಸಂಪತ್ತು - ಸಾಲಗಳು, ಆದಾಯ - ವೆಚ್ಚಗಳು, ಪ್ರಸಾದಗಳ ಪ್ರಮಾಣ - ಪ್ರಭೇದಗಳು, ಸಾಧಾರಣ - ಉತ್ಸವ ದಿನಗಳ ನಿವೇದನೆಗಳು, ಅರ್ಜಿತಸೇವೆಗಳು - ಅವುಗಳ ಹಿನ್ನೆಲೆ ಕಾರಣಗಳು- ಮೊದಲಾದವುಗಳನ್ನು - ಕ್ಷುಣ್ಣವಾಗಿ, ಕೂಲಂಕಷವಾಗಿ ಪರಿಶೀಲಿಸಿ ವಿಚಾರಣೆ ನಡೆಸಿತು. ವಂಶಾನುಗತ ಸೇವಾ ಸಿಬ್ಬಂದಿಯ ಹೊಣೆಗಳನ್ನೂ ಅವರು ಪಡೆಯುವ ಸಂಭಾವನೆಯ ವೈವಿಧ್ಯತೆ ಹಾಗೂ ಪ್ರಮಾಣಗಳನ್ನೂ ಪಟ್ಟಿ ಮಾಡಲಾಯಿತು. ಇವುಗಳ ಜೊತೆಗೇ ಕಂಪನಿಯು ಹಲವು ವಿಚಾರಗಳಲ್ಲಿ ಕೂಲಂಕಷ ವಿಚಾರಣೆ ಹೇಗಿದ್ದರೂ ನಡೆಯುತ್ತಿರುವ ಹೊತ್ತಿನಲ್ಲಿಯೇ ಇಲ್ಲಿನ ಹಲವಾರು ಧಾರ್ಮಿಕ ಕ್ರಿಯೆಗಳು, ಉತ್ಸವಗಳ ದೇವತೆಗಳ ಪೂಜಾವಿಧಾನಗಳ ಪರಂಪರೆ, ಇತಿಹಾಸ, ಪ್ರಾರಂಭ - ಇತ್ಯಾದಿ ವಿಷಯಗಳನ್ನೂ ತಿಳಿಯಲು ಪ್ರಯತ್ನಿಸಿದರು. ಜೊತೆಗೇ ತಿರುಮಲೆ - ತಿರುಪತಿ - ತಿರುಚಾನೂರುಗಳ ಎಲ್ಲ ಪ್ರಧಾನ ಆಲಯಗಳ ಹಾಗೂ ಉಪದೇವಾಲಯಗಳ ಬಗ್ಗೆಯೂ ವಿಚಾರಣೆ ನಡೆಸಿ ದಾಖಲಾತಿಗಳನ್ನು ನಿರ್ಮಿಸಿದರು. ಖಚಿತ ಹಾಗೂ ಅಧಿಕೃತವಾದ ದಾಖಲೆಗಳ ನಿರ್ಮಾಣಕ್ಕಾಗಿ ಕಂಪನಿಯು ಇಂದು ಪ್ರಶ್ನಾವಳಿ ಎಂದು ಕರೆಯಲಾಗುವಂತಹ ಪ್ರಶ್ನಪತ್ರಿಕೆಯುನ್ನುಂಟುಮಾಡಿ ಅದನ್ನು ಉತ್ತರಿಸಲು ಸುತ್ತ ಮುತ್ತಲ ಎಲ್ಲ ವಿದ್ವಾಂಸರಿಗೆ, ಆಲಯ ಸಿಬ್ಬಂದಿಗೆ, ಸಾರ್ವಜನಿಕರಿಗೆ ನೀಡಿತು. ಒಂದೇ ಬಗೆಯ ಪ್ರಶ್ನೆಗಳಿಗೆ ಬೇರೆ ಬೇರೆ ಮೂಲಗಳಿಂದ ದೊರೆತ ಉತ್ತರಗಳನ್ನು ಕಲೆಹಾಕಿ, ಪರಸ್ಪರ ತಾಳೆನೋಡಿ, ಅವುಗಳನ್ನು ಪಟ್ಟಿಮಾಡಿ, ಪ್ರಶ್ನೆಯ ಉತ್ತರವೂ ಸೂಕ್ತವೂ ಆದ ಉತ್ತರವನ್ನು ಕಂಡು ಹಿಡಿಯಲಾಯಿತು. ಈ ವಿಧಾನದಿಂದ ಉಂಟಾದದ್ದೇ '' ಸವಾಲ್ -ಜವಾಬ್ ಪಟ್ಟಿ ''. ಆಲಯದಲ್ಲಿ 19ನೇ ಶತಮಾನದ ಆದಿಭಾಗದಲ್ಲಿ ಬ್ರಿಟಿಷರಿಗೆ ತಿಳಿದುಬಂದಂತೆ ಆಲಯದ ಆಚಾರಗಳು, ಆದಾಯಗಳು, ವೆಚ್ಚಗಳು, ವಿಧಾನಗಳು, ಆಸ್ತಿಗಳು - ಐಶ್ವರ್ಯ- ಸಾಲಗಳು- ಹೊಣೆಗಳು, ವಂಶಪಾರಂಪರ್ಯ ಹಕ್ಕುಗಳು, ಹೊಣೆಗಳು - ಮೊದಲಾದ ವಿವರಗಳನ್ನು ನೀಡುವುದರಿಂದಾಗಿ ಈ ಸವಾಲ್ ಜವಾಬ್ ಪಟ್ಟಿಯು ಅತಿ ಮುಖ್ಯವಾದದ್ದಾಗುತ್ತದೆ.

ಈ ಪ್ರಶ್ನಾವಳಿಯನ್ನು 1227 ನೇ ಫಸಲೀ ವರ್ಷದಲ್ಲಿ ಎಂದರೆ ಕ್ರಿ.ಶ. 1818ರಲ್ಲಿ ಸಿದ್ಧ ಪಡಿಸಲಾಯಿತು. ಕಂಪನಿಯ ನಿರ್ವಾಹಕ್ಕೆ ಸೇರಿದ 19 ಧಾರ್ಮಿಕ ಸಂಸ್ಥೆ (ಆಲಯ) ಗಳಿಗೆ ಸಂಬಂಧಿಸಿದಂತೆ ನಂತರದ ಕಾಲದಲ್ಲಿ ಕೇಳಲಾದ ಉಪಪ್ರಶ್ನೆಗಳೊಡನೆ ಎಲ್ಲದರ ಮುಖ್ಯ ಉತ್ತರಗಳನ್ನು ಕ್ರೋಢೀಕರಿಸಿ 1228 ನೇ ಫಸಲಿ ವರ್ಷದಲ್ಲಿ ಎಂದರೆ ಕ್ರಿ.ಶ. 1819 ರ ಆಗಸ್ಟ್ 14 ರಂದು ಈ ತಾಲ್ಲೂಕಿನ ಶಿರಸ್ತೇದಾರನಾದ ಅಲ್ಲಬ್ಬು ಗೋವಿಂದರಾಯನಿಂದ ಬಿಡುಗಡೆ ಮಾಡಲ್ಪಟ್ಟಿತು. ಆ ದಿನಗಳಲ್ಲಿಯೂ ತಿರುಪತಿಯು ತಾಲ್ಲೂಕು ಕೇಂದ್ರವಾಗಿಯೂ, ಚಿತ್ತೂರು ಜಿಲ್ಲಾ ಕೇಂದ್ರವಾಗಿಯೂ ಇದ್ದಿತೆಂದು ಈ ವಿವರದಿಂದ ತಿಳಿದು ಬರುತ್ತದೆ.

ಸವಾಲ್ ಜವಾಬ್ ಪಟ್ಟಿಯೊಡನೆ ಕೈಂಕರ್ಯಪಟ್ಟಿಯನ್ನೂ ತಯಾರಿಸಲಾಯಿತು. ಈ ಪಟ್ಟಿಯಲ್ಲಿ ಆಲಯದಲ್ಲಿ ವಂಶ ಪಾರಂಪರ್ಯವಾಗಿ ಶಾಶ್ವತಸೇವೆ ಮಾಡುವ ಉದ್ಯೋಗಿಗಳ ಹಾಗೂ ತತ್ಕಾಲಿಕ ಉದ್ಯೋಗಿಗಳ ಎಂದರೆ ಈಗಿನ ಕಾಲದಲ್ಲಿ ನಾವು

ಹೇಳುವ ನಾಮಮಾತ್ರ ಹಾಜರಿ ಪಟ್ಟಿಯ ಉದ್ಯೋಗಿಗಳು, ಅವರ ಅಧಿಕಾರ, ಉದ್ಯೋಗವಿವರ, ಸಂಭಾವನಾ ವಿಚಾರಗಳನ್ನು ದಾಖಲಿಸಲಾಯಿತು. ಇಂತಹ ಒಂದು ಪಟ್ಟಿಯನ್ನು ಈ ಹಿಂದೆಯೇ ಕಂಪನಿ ಸರ್ಕಾರದಿಂದ ಆಲಯದ ಆಡಳಿತವನ್ನು ಪಡೆದ ಒಡನೆಯೇ ಎಂದರೆ 1801 ರಲ್ಲಿಯೇ ತಯಾರಿಸಲಾಗಿದ್ದಿತು. ಆಗ ಕಂಪನಿಯ ಆಡಳಿತಕ್ಕೆ ಆಲಯವನ್ನು ನೋಡಿಕೊಳ್ಳಲು ಇಂತಹ ಒಂದು ಮೂಲಭೂತ ದಾಖಲೆಯ ಅಗತ್ಯ ಸಹಜವಾಗಿಯೇ ಇದ್ದಿತು. ಈಗ ಎಂದರೆ ಫಸಲಿ 1230 ರಲ್ಲಿ - ಕ್ರಿ.ಶ.1820 ರಲ್ಲಿ ಈ ದಾಖಲೆಯನ್ನು ಪುನಃ ಪರಿಶೀಲಿಸಿ, - ಆಮೂಲಾಗ್ರವಾಗಿ ಹೊಸದಾಗಿ ತಯಾರಿಸಲಾಯಿತು. ಇದನ್ನು ತಯಾರಿಸಿದವರೆಂದರೆ - ಶಿರಸ್ತೇದಾರ ಎ. ರಂಗರಾವ್, ತಹಸೀಲ್ದಾರ ಆರ್.ಸುಬ್ಬರಾವ್. ಮತ್ತೊಂದು ಸಹಿ ಅಸ್ಪಷ್ಟವಿದ್ದು ಓದಲಾಗುವುದಿಲ್ಲ. ಇದರ ಕಾಲ ಕ್ರಿ.ಶ. 1820ರ ಅಕ್ಟೋಬರ್ 2. ಈ ಕೈಂಕರ್ಯ ಪಟ್ಟಿಯು ಅಂದಿನ ದಿನಗಳಲ್ಲಿ ಪ್ರಚಲಿತವಾಗಿದ್ದ ವಂಶಪಾರಂಪರ್ಯ ಸೇವಾಸಿಬ್ಬಂದಿ, ತತ್ಕಾಲಿಕ ಉದ್ಯೋಗಿಗಳು, ಅವರುಗಳ ಕೆಲಸಗಳ ಹೊಣೆಗಳ ವಿವರಗಳನ್ನು ನೀಡುವುದರಿಂದಾಗಿ ಮಹತ್ವಪೂರ್ಣವಾಗುತ್ತದೆ. ಅವರು ಪಡೆಯುತ್ತಿದ್ದ ನಗದು ರೂಪದ ಹಾಗೂ ವಸ್ತುರೂಪದ ಸಂಭಾವನೆಗಳನ್ನು ತಿಳಿಸುತ್ತದೆ.

ಮೇಲಿನ ಎರಡು ದಾಖಲೆಗಳಿಗಿಂತಲೂ ಮುಖ್ಯವಾದ ಮತ್ತೊಂದು ದಾಖಲೆಯೆಂದರೆ ಕ್ರಿ.ಶ. 1819 ರ ಆಗಸ್ಟ್ 14 ರಂದು ಕಂಪನಿಯು ತಯಾರಿಸಿದಂತಹ ಪೈಮಾಯಿಶಿ ಪಟ್ಟಿ. ತಿರುಮಲೆ ತಿರುಪತಿ ತಿರುಚಾನೂರುಗಳಲ್ಲಿ ಇರುವ ಎಲ್ಲ ದೇವಾಲಯಗಳ ಮಂಟಪಗಳ ಪ್ರಾಕಾರಗಳಲ್ಲಿನ ಎಲ್ಲ ದೇವಿದೇವತೆಗಳ ವಿಗ್ರಹ ವಿವರಗಳನ್ನು ಇದು ಒಳಗೊಂಡಿದೆ. ಅವುಗಳ ಅಳತೆ ವಿನ್ಯಾಸಗಳನ್ನು ವಿವರವಾಗಿ ನಮೂದಿಸಿ ಸ್ಥಳೀಯ ಕರಣಿಕರು ಸಹಿ ಹಾಕಿದ್ದಾರೆ.

ಈ ಮೂರು ದಾಖಲೆಗಳೊಂದಿಗೆ 'ದಿತ್ತಂ ಪುಸ್ತಕ'ವನ್ನೂ ತಯಾರಿಸಲಾಯಿತು. ಪ್ರತಿದಿನವೂ ದೇವರಿಗೆ ಮತ್ತಿತ್ತರ ಆಳ್ವಾರಾಚಾರ್ಯರಿಗೆ ನೀಡುವ ನೈವೇದ್ಯಗಳಿಗಾಗಿ ಆಲಯ ಭಂಡಾರದಿಂದ ಕೊಡಮಾಡಿಸಲಾಗುವ ದವಸ ಧಾನ್ಯಗಳ ಅಳತೆಯ ವಿವರಗಳನ್ನು ನೀಡುವ ಪಟ್ಟಿ. ದಿತ್ತಂ ಪುಸ್ತಕವು ಪ್ರತಿದೇವರಿಗೂ ಬೇರೆ ಬೇರೆ ಸಂಧಿಕಾಲದಲ್ಲಿ ನಿವೇದಿಸುವ ಪ್ರಸಾದ ವಿವರವನ್ನೂ ವಿಶೇಷ ಉತ್ಸವಗಳಲ್ಲಿ, ಹಬ್ಬ ಹರಿದಿನಗಳಲ್ಲಿ ವಾರೋತ್ಸವ, ಪಕ್ಷೋತ್ಸವ, ಮಾಸೋತ್ಸವಗಳೇ - ಮೊದಲಾದವುಗಳಲ್ಲಿ ತಯಾರಿಸ ಲಾಗುವ ಪ್ರಸಾದಗಳ ವಿಷಯವನ್ನು ತಿಳಿಸುವುದೇ ಅಲ್ಲದೆ, ಅವುಗಳ ಪೂಜಾನಂತರದ ವಿತರಣೆ ಹೇಗೆ ಆಗಬೇಕೆಂದೂ ತಿಳಿಸು ವುದು. 19 ನೇ ಶತಮಾನದ ಮೊದಲಿನಲ್ಲಿ ಆಂಗ್ಲರಿಂದ ತಯಾರಾದ ಈ ದಿತ್ತಂ ಪುಸ್ತಕವು ಆಲಯಗಳಲ್ಲಿ ಯಾವ ಯಾವ ಪ್ರಸಾದಗಳ ತಯಾರಿ ಹೇಗೆ ಹೇಗೆ ಆಗುತ್ತಿದ್ದಿತೆಂಬ ವಿವರ ನೀಡುವುದರಿಂದಲೂ, ಅವುಗಳ ವಿತರಣೆಯ ವಿಧಾನ ವಿವರಣೆ ನೀಡುವುದರಿಂದಲೂ ಕಾಲದಿಂದ ಕಾಲಕ್ಕೆ ವಿವಾದಕ್ಕೆ ಆಸ್ಪದ ನೀಡುವ ಒಂದು ಮೂಲ ದಾಖಲೆಯೂ ಆಯಿತು.

ಹೀಗೆ ಸವಾಲ್ ಜವಾಬ್ ಪಟ್ಟಿ, ಕೈಂಕರ್ಯ ಪಟ್ಟಿ, ಪೈಮಾಯಿಷಿ ಪಟ್ಟಿ, ದಿತ್ತಂ ಪುಸ್ತಕಗಳು ಈಸ್ಟ್ ಇಂಡಿಯಾ ಕಂಪನಿಯವರು ವ್ಯಾಪಕವಾದ ವಿಚಾರಣೆ ನಡೆಸಿ, ತಿಳಿದುಬಂದ ವಿವರಣೆಗಳನ್ನೆಲ್ಲ ಒಂದು ಕಡೆ ಜೋಡಿಸಿ ಮಾಡಿದ ಮೂಲಭೂತ ದಾಖಲೆಗಳಾದವು. ಆಲಯದ ಬಗ್ಗೆ ವಸ್ತು ನಿಷ್ಠವಾದ ಹಾಗೂ ಸುಸಂಗತವಾದ ವಿಚಾರಗಳನ್ನು ತಿಳಿಸುವುದರಿಂದಾಗಿ ಇವುಗಳು ಈಗ ಪ್ರಾಧಾನ್ಯ ಪಡೆದು ಕಂಡುಬರುತ್ತವೆ. ಆಲಯದ ಆರ್ಥಿಕ ಪರಿಸ್ಥಿತಿ, ಅದರ ಆಸ್ತಿ ಪಾಸ್ತಿಗಳು, ಸಾಲ ಸೋಲಗಳು, ಧಾರ್ಮಿಕ ಹಾಗೂ ಇತ್ಯತೀತ ಕಾರ್ಯಗಳು, ವಂಶಪಾರಂಪರ್ಯದ ಸೇವಕ ಗಣ - ಅವರ ವಿಧಿ ನಿರ್ವಹಣೆಗಳು, ಅವರ ಸಂಭಾವನೆಗಳು - ಮೊದಲಾದ ಅಂಶಗಳೆಲ್ಲದರ ಬಗ್ಗೆ 19ನೇ ಶತಮಾನದ ಆರಂಭದಲ್ಲಿ ಕಂಡುಬಂದ ನಿಖರವಾದ ಖಚಿತವಾದ ವಿವರಗಳನ್ನು ತಿಳಿಸುತ್ತವೆ.

## 2. ಸವಾಲ್ ಜವಾಬ್ ಪಟ್ಟಿಯ ಪ್ರಶ್ನೆಗಳು

ಆಲಯದ ಪೌರಾಣಿಕ ಜಾನಪದೀಯ ಚರಿತ್ರೆಯನ್ನು ಗುರುತಿಸುವುದೇ ಅಲ್ಲದೆ ಸವಾಲ್ ಜವಾಬ್ ಪಟ್ಟಿಯು ಆಲಯದ ಆಡಳಿತ ನಿರ್ವಹಣೆಯ ಬಗ್ಗೆ ಹದಿನಾಲ್ಕು ಮೂಲಭೂತವಾದ ಪ್ರಶ್ನೆಗಳಿಗೆ ಉತ್ತರ ಪಡೆಯಲು ಪ್ರಯತ್ನಿಸಿತು. ಈ ಪ್ರಶ್ನೆಗಳನ್ನು ಅನುಷಂಗಿಕ ಪ್ರಶ್ನೆಗಳೆಂದು ಕರೆದರೂ ಈಗ ಅತ್ಯಂತ ಪ್ರಮುಖವೆಂದು ಗುರುತಿಸಲಾಗಿದೆ.ಅವುಗಳೆಂದರೆ -

ಎ) ಇಲ್ಲಿನ ಪ್ರತಿ ಆಲಯದಲ್ಲಿ ನಡೆಯತಕ್ಕ ಯಾವುದೇ ಒಂದು ಕಾರ್ಯಕ್ರಮ ಸರ್ಕಾರದ (ಕಂಪನಿ ಸರ್ಕಾರದ) ಯಾವುದಾದರೂ ಧರ್ಮದ (ದಾನ, ಸೇವೆ) ಪ್ರಕಾರ ನಡೆಯುವುದೋ?

ಬಿ) ಪಾಳಯಗಾರರು / ದಾನಿಗಳು / ಜಮೀಂದಾರರು / ಆಲಯ ಸಿಬ್ಬಂದಿ / ಮಾಡಿದ ಧರ್ಮದಿಂದ ನಡೆಯುವುದೋ.

ಸಿ) ಈ ಆದಾಯ ಅಥವಾ ದೇಣಿಗೆಯನ್ನು ಹೇಗೆ ವಸೂಲಿ ಮಾಡಲಾಗುತ್ತದೆ?

ಡಿ) ಇದರ ಸಂಗ್ರಹಕ್ಕಾಗಿ ಯಾವುದಾದರೂ ಸಿಬ್ಬಂದಿಯ ನೇಮಕ ಆಗಿದ್ದಿತೋ ? ಈ ವಸೂಲಿಗೆಂದು ಮಾಡಿದ ವೆಚ್ಚವೆಷ್ಟು?

ಇ) ಇಂತಹ ವಸೂಲಿಯ ಮೊತ್ತವನ್ನು ಹೆಚ್ಚುಗೊಳಿಸುವಂತಹ ಅವಕಾಶಗಳಿವೆಯೋ?

ಎಫ್) ಆಲಯ ಅಥವಾ ಗುಡಿಯನ್ನು ಕಲ್ಲಿನಿಂದ ಕಟ್ಟಲಾಗಿಯೋ ಅಥವಾ ಗಾರೆಯಿಂದಲೋ ಅಥವಾ ಎರಡನ್ನೂ ಸೇರಿಸಿ ನಿರ್ಮಿಸಲಾಗಿಯೋ? ಪ್ರಾಕಾರದ ಗೋಡೆಗಳು, ಅಂತರಾಳ, ಮುಖಮಂಟಪ, ಗರ್ಭಗೃಹ, ವಿಮಾನ, ಕಲ್ಯಾಣಮಂಟಪ ಮೊದಲಾದವುಗಳಲ್ಲಿ ಇವುಗಳ ಪ್ರಮಾಣವೆಷ್ಟು?

ಜಿ) ಆಲಯಸಿಬ್ಬಂದಿಯಲ್ಲಿ ಎಷ್ಟು ವಿಧ? ಅವರ ಕಾರ್ಯಭಾರ ಹೊಣೆಗಾರಿಕೆಗಳೇನು? ದೇವರ ಪೂಜೆ ದಿನಕ್ಕೆ ಎಷ್ಟು ಬಾರಿ ನಡೆಯುತ್ತದೆ. ಎಷ್ಟು ಹೊತ್ತು ನಡೆಯುತ್ತದೆ?

ಎಚ್) ಸಿಬ್ಬಂದಿ ಕರ್ತವ್ಯಚ್ಯುತರಾದಾಗ ನೀಡಲಾಗುವ ಶಿಕ್ಷೆ ಏನು?

ಐ) ಆಲಯದ ಆದಾಯ ವೆಚ್ಚಗಳ ವಿವರಗಳೇನು?

ಜೆ) ಆಲಯದ ಸಿಬ್ಬಂದಿಯಲ್ಲಿ ಹಲವರು ಸರ್ಕಾರದ ನೌಕರರಾಗಿದ್ದುದರಿಂದಾಗಿ, ಪ್ರಶ್ನಾವಳಿಯನ್ನು ಉತ್ತರಿಸಬೇಕಾದ ಆಲಯ ನಿರ್ವಾಹಕನ ಶಿಸ್ತಿಗೆ ಇವರು ಬದ್ಧರಾಗಿದ್ದರೋ ಇಲ್ಲವೋ ? ಧರ್ಮಕರ್ತನು (ದಾನಗಳ ನಿರ್ವಾಹಕ) ನೀಡುವ ಎಲ್ಲ ವಸ್ತುಗಳ ಸಕ್ರಮ ಬಳಕೆ ಆಗುವಂತೆ ನೋಡಿಕೊಳ್ಳಲಾಗುತ್ತಿದ್ದಿತೇ? ಅದರಿಂದಾಗಿ ಸೇವೆ ನಿವೇದನೆಯಲ್ಲಿ ಕೊರತೆಯುಂಟಾಗುತ್ತಿತ್ತೆ?

ಕೆ) ಧರ್ಮಕರ್ತನಿಂದ ಉಂಟಾದ ಆದಾಯವನ್ನು ಯಾವುದಾದರೂ ಸಿಬ್ಬಂದಿಗೆ ಒಪ್ಪಿಸಲಾಗುತ್ತಿದ್ದಿತೇ? ಹಾಗೆ ಆಗುತ್ತಿದ್ದಲ್ಲಿ ಯಾವ ಆಧಾರ ಅಥವಾ ಅಧಿಕಾರದ ಮೂಲಕ ಸಿಬ್ಬಂದಿಗೆ ಸೇರುತ್ತಿದ್ದಿತು? ಕಾರಣ ಒಂದು ದಾನವನ್ನು ಪರಿರಕ್ಷಿಸಿ ಪರಿಪೋಷಿಸಿಕೊಂಡು ಬರಬೇಕೇ ಹೊರತು ದುರುಪಯೋಗ ಪಡಿಸಿ ನಾಶಪಡಿಸತಕ್ಕದ್ದಲ್ಲ. ಹಾಗಾಗಿ ಪ್ರತಿಯೊಂದು ಆದಾಯವನ್ನೂ ಅದರ ಉದ್ದೇಶ ಕ್ಕಾಗಿಯೇ ಬಳಸಬೇಕು.

ಎಲ್) ಅಂದು ಆಲಯದ ನಿರ್ವಾಹಕರು ಯಾರಾಗಿದ್ದರು? ಯಾರು ಅದನ್ನು ನಿರ್ಮಿಸಿದರು? ಧರ್ಮಕರ್ತರು ಯಾವ ಅಧಿಕಾರದಿಂದ ಅದರ ನಿರ್ವಹಣೆ ನಡೆಸುತ್ತಿದ್ದರು. ಯಾರ ಅಧಿಕಾರದಿಂದ ಇದರ ಆದಾಯವೆಚ್ಚಗಳು ನಿಯಂತ್ರಿತವಾಗುತ್ತಿದ್ದುವು? ವಾಸ್ತವವಾದ ಆದಾಯ ವ್ಯಯಗಳೇನು? ದಾನಗಳನ್ನು ಅವುಗಳ ಮೂಲ ಉದ್ದೇಶಗಳಲ್ಲಿ ಬಳಸಲಾಗುತ್ತಿದೆಯೋ?

ಎಂ) ಧರ್ಮವನ್ನು ಮಾಡಿದವರ ವಂಶಸ್ಥರ ಕೈಯಲ್ಲಿಯೇ ಆ ಧರ್ಮಗಳಿವೆಯೋ ಅಥವಾ ಸಿಬ್ಬಂದಿಯ ಕೈಯಲ್ಲಿದೆಯೋ? ಹೊರಗಿನವರಾಗಲೀ, ವಾರಸುದಾರರಾಗಲೀ ಪಡಿತರದ (ಪ್ರಸಾದದ) ಪಡಿ (ವಡೆ, ಮೊದಲಾದ ತುಪ್ಪದಲ್ಲಿ ಕರಿದ ತಿನಿಸುಗಳು) ಗಳ ಪಾಲು ಪಡೆಯುತ್ತಿದ್ದ ಪಕ್ಷದಲ್ಲಿ ಅಂತಹ ಸೌಲಭ್ಯ ಪಡೆಯಲು ಅವರಿಗೆ ಯಾವ ರೀತಿಯ ಅಧಿಕಾರ ವಿರುವುದು? ಮತ್ತು

ಎನ್) ತಿರುಪತಿ ತಾಲ್ಲೂಕಿನಲ್ಲಿ ಯಾರಿಂದಲೂ ನಿರ್ವಾಹ ಹೊಂದದಂತಹ ಆಲಯವಾಗಲೀ, ಅನ್ನಸತ್ರವಾಗಲೀ ಇದ್ದರೆ ಅಂತಹ ಆಲಯ, ಸತ್ರಗಳು ಯಾವುವು?

### 3. ಸವಾಲ್ ಜವಾಬ್ ಪಟ್ಟಿಯ ವಿವರ

**1. ಶ್ರೀವೆಂಕಟೇಶ್ವರಸ್ವಾಮಿ ಆಲಯ :** ಮೇಲೆ ಕಾಣಿಸಿದ ಹದಿನಾಲ್ಕು ಪ್ರಶ್ನೆಗಳಿಗೆ ಪ್ರತಿಯೊಂದು ಆಲಯದಲ್ಲಿಯೂ ದೊರೆತ ಉತ್ತರಗಳಿಂದ ಸವಾಲ್ ಜವಾಬ್ ಪಟ್ಟಿಯನ್ನು ತಯಾರಿಸಲಾಯಿತು. ಈ ಬಗೆಯಲ್ಲಿ ಮೊದಲು ವಿವರಿತವಾದ ಆಲಯ ವೆಂದರೆ ತಿರಮಲೆಯ ಶ್ರೀವೆಂಕಟೇಶ್ವರಸ್ವಾಮಿ ಆಲಯ. ಹತ್ತೊಂಬತ್ತನೆಯ ಶತಮಾನದ ಆದಿಯಲ್ಲಿ ಇದ್ದಂತಹ ಆಲಯ ಪಧ್ಧತಿ ಯನ್ನೂ ಆದಾಯ ವೆಚ್ಚಗಳನ್ನೂ ಮುಂದೆ ನೀಡಲಾಗಿದೆ. ಈ ಸಂಬಂಧದಲ್ಲಿ ಗಮನಿಸಬೇಕಾದ ಅಂಶವೆಂದರೆ ಇಲ್ಲಿ ಬಳಕೆಯಾದ ನಾಣ್ಯ ಪದ್ಧತಿ ಪುಲಿವರಹ, ಮೈಲಿ, ಕಾಸುಗಳು ಅವರೋಹ ಪದ್ಧತಿಯಲ್ಲಿದೆ. ಸವಾಲ್ ಜವಾಬ್ ಪಟ್ಟಿಯಲ್ಲಿ ದೊರೆತಿರುವ ವಿವರಗಳಿಂದ ಹೇಳುವುದಾದರೆ ಎಂಬತ್ತು ಕಾಸುಗಳು ಒಂದು ಮೈಲಿ ಮತ್ತು ನಲವತ್ತೈದು ಮೈಲಿಗೆ ಒಂದು ಪುಲಿವರಹ. ಹತ್ತೊಂಬತ್ತ ನೆಯ ಶತಮಾನದ ನಾಣ್ಯ ಪದ್ಧತಿಯಲ್ಲಿ ನಾಲ್ಕು ರೂಪಾಯಿಗೆ 1 ಪುಲಿವರಹವೆಂದು ತಿಳಿದುಬಂದದ್ದೇ ಆಗಿದೆ. ಶ್ರೀ ವೆಂಕಟೇಶ್ವರಸ್ವಾಮಿ ಆಲಯದ ಆದಾಯ ಹೀಗಿದೆ.

| ಆದಾಯ ಸ್ವಭಾವ | ಪುಲಿವರಹ | ಮೈಲಿ | ಕಾಸು |
|---|---|---|---|
| ಸಾಮಾನ್ಯ ಆದಾಯ | 7997 | 3 | 6 |
| ಸೇವೆಗಳಿಂದ ಆದಾಯ | 6074 | 9 | 49 |
| ಜಮೀಂದಾರರು, ಆಲಯ ಸಿಬ್ಬಂದಿ, ಮತ್ತಿತರರು ಹೊಂದಿದ್ದ ಆಲಯ ಭೂಮಿಗಳಿಂದ ಉಂಟಾದ ಆದಾಯ | 2935 | 41 | 12 |
| **ಒಟ್ಟು** | **17,007** | **8** | **67** |
| **(ಸರಿ ಸುಮಾರು)** | **ಅಥವಾ** | **68,000 ರೂಪಾಯಿ.** | |

ಇಲ್ಲಿ ಕಂಡು ಬರುವ ಆಸಕ್ತಿದಾಯಕವಾದ ಒಂದು ಮಾತೆಂದರೆ ಕಾಣಿಕೆಗಳು ಎಂದರೆ ಸಮರ್ಪಣಗಳು ಅರ್ಜಿತಗಳು (ಉತ್ಸವ ಸೇವೆ, ವಾಹನೋತ್ಸವಗಳನ್ನು ನಡೆಸುವ ಶುಲ್ಕಗಳು ) ಮೊದಲಾದವೆಲ್ಲವನ್ನೂ ಸರ್ಕಾರ (ಇಂದಿನ ಕಾಲದ ಬಳಕೆಯಲ್ಲಿ ದೇವಾಲಯ ಆಡಳಿತ ) ನೇರವಾಗಿ ವಸೂಲಿ ಮಾಡದೆ ಮಧ್ಯವರ್ತಿಗಳಿಂದ ಅಥವಾ ಗುತ್ತಿಗೆದಾರದಿಂದ ವಸೂಲಿ ಮಾಡುತ್ತಿದ್ದಿತು ಎಂಬುದು. ಇಂತಹ ಆದಾಯ ವಿವರ ಹೀಗಿದೆ -

| ಆದಾಯ ಸ್ವಭಾವ | ಪುಲಿವರಹ | ಮೈಲಿ | ಕಾಸು |
|---|---|---|---|
| ಕಾಣಿಕೆಗಳು ಮತ್ತು ಅರ್ಜಿತಸೇವೆಗಳು | 34,458 | 16 | 77 |
| ಆಲಯ ಸಿಬ್ಬಂದಿಗೆ ನೀಡಿದ ಇನಾಂ ಜಮೀನುಗಳ ಆದಾಯ | 6074 | 9 | 49 |
| **ಒಟ್ಟು** | **40,532** | **26** | **46** |

| | | | |
|---|---|---|---|
| **ಧರ್ಮಗಳ ಮಧ್ಯವರ್ತಿಗಳ ಮೂಲದ** | | | |
| ಆದಾಯ | 2935 | 45 | 12 |
| **ಇಡಿಯಾದ ಮೊತ್ತ** | **434168** | **22** | **58** |
| **ಅಥವಾ** | **1,74.000 ರೂಪಾಯಿ** | **(ಸ್ಥೂಲವಾಗಿ)** | |

ಮರಾಠರ ರಘೋಜಿ ಭೋನ್ಸ್ಲೆಯು ಈ ಮೊದಲು ನೀಡಿದ ಧರ್ಮವು ಈಗಲೂ ಮುಂದುವರೆಯಿತು.14000 ನಾರಾಯಣ ಪೇಟೆ ರೂಪಾಯಿಗಳಿಗೆ ಸಮನಾದ (3500 ಪುಲಿವರಹಗಳಿಗೆ ಸಮ) ಈ ಹಣದಲ್ಲಿ ಸ್ವಾಮಿಯ ಆಭರಣಗಳಿಗಾಗಿ 1146 ಪುಲಿವರಹ 11 ಮೈಲಿ 20 ಕಾಸುಗಳನ್ನೂ ಉದ್ಯಾನವನದ ಮಾಲಿಗಳಿಗೆ ಹಾಗೂ ದೇವರಿಗೆ ಚಾಮರ ಬೀಸುವ ಇಬ್ಬರಿಗೆ, ಸಂಬಳಕ್ಕಾಗಿ, ಯಾತ್ರಿಕರಿಗೆ ಉಚಿತ ಪ್ರಸಾದಕ್ಕಾಗಿ, ಉಪದೇವತೆಗಳ ನೈವೇದ್ಯಕ್ಕಾಗಿ, ಸಹಸ್ರನಾಮಾರ್ಚನೆಯಲ್ಲಿ ಬಳಸುವ ಕರ್ಪೂರದ ವೆಚ್ಚಕ್ಕೆ 511 ಪುಲಿವರಹ 11 ಮೈಲಿ 20 ಕಾಸುಗಳನ್ನು ಪ್ರಮುಖ ಗೃಹಸ್ಥರಿಗೆ ಬಹುಮಾನಕ್ಕೆ ಬಳಸಲಾಯಿತು. ಈ ದಾನದಲ್ಲಿ ಉಳಿಕೆ ಹಣ 1507 ಪುಲಿವರಹ ಹಾಗೂ ಹತ್ತು ಕಾಸು ಎಂದು ಹೇಳಲಾಗಿದೆ.

ಸವಾಲ್ ಜವಾಬ್ ಪಟ್ಟಿಯಿಂದ ತಿಳಿದು ಬರುವ ಅಂಶವೆಂದರೆ ಸರ್ಕಾರವು ಎಲ್ಲ ಧರ್ಮಗಳು (ದೇಣಿಗೆಗಳ) ಏಕಕೇಂದ್ರಿತ ನಿರ್ವಹಣೆ ಹೊಂದಿರಲಿಲ್ಲ. ಖಾಸಗೀ ದೇಣಿಗೆ ನಿರ್ವಹಣೆಯೂ ಅಲ್ಲಿ ನಡೆಯುತ್ತಿದ್ದಿತು. ಆಲಯದಲ್ಲಿ ಈ ನಿರ್ವಾಹಕ್ಕೆ ಪ್ರತ್ಯೇಕವಾದ ಸಿಬ್ಬಂದಿಯೂ ಇರಲಿಲ್ಲ. ಒಬ್ಬಾನೊಬ್ಬ ಮತಬೋರು ಶೇಕ್‌ಸಾಹೇಬನ ಮಧ್ಯವರ್ತಿಗಳು ಭಕ್ತರಿಂದ ಕಾಣಿಕೆಗಳನ್ನು ಪಡೆಯಲು ಅಧಿಕಾರ ಹೊಂದಿದ್ದರು ಎಂಬುದನ್ನು ಉದಾಹರಿಸಬಹುದು. ಭಕ್ತರು ತಮ್ಮ ದಾನ, ಕಾಣಿಕೆಗಳನ್ನು, ಅವುಗಳ ಬಳಕೆಯ ಬಗ್ಗೆ ವಿವರಗಳನ್ನು ನೀಡಿ ಇವರಿಗೆ ನೀಡುತ್ತಿದ್ದರು. ಇವರು ಈ ಸಂಗ್ರಹದ ಬಗ್ಗೆ ತಮ್ಮ ವೆಚ್ಚಗಳನ್ನು ಮುರಿದುಕೊಂಡು ಮಿಕ್ಕ ಧನರಾಶಿಯನ್ನು ಆಲಯದ ಲೆಕ್ಕಕ್ಕೆ ಜಮೆ ಮಾಡುತ್ತಿದ್ದರು. ಆಧುನಿಕ ಕಾಲದಲ್ಲಿನಂತೆ ದೇವಾಲಯವು ಇಡಿಯಾಗಿ ಕಾಣಿಕೆಯನ್ನು ಸ್ವೀಕರಿಸಿ, ತಕ್ಕ ವೆಚ್ಚಗಳನ್ನು ನಿಭಾಯಿಸುವ ಪರಿಪಾಠ ಅಂದಿಗೆ ಪ್ರಾಚುರ್ಯದಲ್ಲಿ ಇರಲ್ಲಿಲ್ಲ.

ಐದನೇ ಪ್ರಶ್ನೆಗೆ ಉತ್ತರವಾಗಿ ವೆಲಗರಾಲ- ಒಂದು ಇಡೀ ತಾಲ್ಲೂಕು ಆಲಯದ ಇನಾಂ ಕ್ಷೇತ್ರವಾಗಿದ್ದರೂ ಅದರಿಂದ ಯಾವುದೇ ಆದಾಯವೂ ಆಲಯಕ್ಕೆ ಬರುತ್ತಿಲ್ಲವೆಂದೂ, ಇತರ ತಾಲ್ಲೂಕುಗಳಲ್ಲಿದ್ದ ಇನಾಂ ಭೂಮಿಗಳ ಬಗ್ಗೆ ಯಾವುದೇ ಮಾಹಿತಿಯೂ ಇಲ್ಲವೆಂದೂ, ಬೇರೆ ಬೇರೆ ತಾಲ್ಲೂಕುಗಳ ತಹಸೀಲ್ದಾರರಿಗೆ ಇಂತಹ ಇನಾಂ ಭೂಮಿಗಳ ಆದಾಯವನ್ನು ಸಂಗ್ರಹಿಸಿ ಆಲಯದ ಪಾರುಪತ್ಯದಾರನ ಹೆಸರಿಗೆ ಜಮ ಮಾಡಿ ಪೂಜಾ ಉತ್ಸವಗಳನ್ನು ನಿರ್ವಹಿಸಲು ಸಾಧ್ಯವಾಗುವಂತೆ ಪಾರುಪತ್ಯದಾರನಿಗೆ ವಿವರಗಳನ್ನು ಒದಗಿಸಬೇಕೆಂದು ಸೂಚಿಸಲು ಹೇಳಲಾಗಿದೆ.

ಇಲ್ಲಿಯೇ ನೀಡಲಾದ ಇನ್ನೊಂದು ಸಲಹೆಯೆಂದರೆ ತಿರುಮಲೆಯ ಆಲಯದಲ್ಲಿ ಪಾರುಪತ್ಯದಾರನೇ ನಿರ್ವಾಹಕನಾಗಿರುವುದರಿಂದ ಅವನು ಅನಾರೋಗ್ಯದಿಂದ ಅನುಪಸ್ಥಿತನಾದಾಗ ಅವನ ಸ್ಥಳದಲ್ಲಿ ಅವನ ಕೆಲಸಗಳನ್ನು ನಡೆಸಲು ಒಬ್ಬ ಸಹಾಯಕ ಪಾರುಪತ್ಯದಾರ ಇರಬೇಕು. ಹೀಗಾಗಿ ಇಂತಹ ಒಬ್ಬ ಸಹಾಯಕ ಅಧಿಕಾರಿಯ ನೇಮಕಾತಿಯ ಅನುಮತಿ ಬೇಕು.

ಮಹಿಷೂರಕರ್ತರಾದ ಪೂರ್ಣಯ್ಯನವರು ಫಸಲಿ ವರ್ಷ 1227ರಲ್ಲಿ ತಿರುಮಲೆಗೆ ಬಂದಾಗ ಆಲಯಾಧಿಕಾರಿಗಳು ಸ್ವಾಮಿಯ ಪೂಜೆಗೆ ಹೂವುಗಳು ಬೇಕೆಂದಾಗ ಅವರು ಒಂದು ಪುಷ್ಪವಾಟಿಕೆಯನ್ನು ಏರ್ಪಡಿಸಿ ಅದರ ಉಸ್ತುವಾರಿಗೆ ಇಬ್ಬರು ಮಾಲಿಗಳನ್ನೂ ನೀಡಿದರು. ಈ ಸಿಬ್ಬಂದಿಯ ಸಂಬಳಕ್ಕಾಗಿ ಅನುಮತಿಯನ್ನೂ ಜೊತೆಗೇ ಮತ್ತೊಂದು ಪುಷ್ಪೋದ್ಯಾನವನ್ನು ಸ್ಥಾಪಿಸುವುದರಿಂದ ಸ್ವಾಮಿ ಪೂಜೆಗೆ ಸಾಕಷ್ಟು ಹೂಗಳ ಬೆಳೆ ತೆಗೆದುಬಹುದೆಂಬ ಸಲಹೆಯನ್ನೂ ಇಲ್ಲಿ ನೀಡಲಾಗಿದೆ. (ಪ್ರಾಯಶಃ ಈ ಹೊತ್ತಿಗೆ ಹಲವಾರು ಹಳೆಯ ಪುಷ್ಪವಾಟಿಕೆಗಳು ನಾಮಾವಶೇಷವಾಗಿರಬೇಕು.)

ಆರನೆಯ ಪ್ರಶ್ನೆಗೆ ಉತ್ತರವಾಗಿ ಆಲಯವು ಕಲ್ಲಿನಿಂದ ನಿರ್ಮಿತವಾಗಿರುವುದಾಗಿಯೂ, ಇದರ ಗರ್ಭಗುಡಿಯ, ನೆಲದ, ಮಂಟಪಗಳ, ಪ್ರಾಕಾರದ ಅಳತೆಗಳನ್ನು ಪೈಮಾಯಿಷಿ ಪುಸ್ತಕದಲ್ಲಿ ಬರೆದು ದಾಖಲಿಸಿರುವುದಾಗಿಯೂ ತಿಳಿಸಲಾಗಿದೆ.

ಏಳನೆಯ ಪ್ರಶ್ನೆಯ ಉತ್ತರವಾಗಿ ಆಲಯದ ಸಿಬ್ಬಂದಿಯ ಹೆಸರು, ವಿಳಾಸ, ಕರ್ತವ್ಯ, ಅಧಿಕಾರ, ಅವರ ವಿವರಗಳನ್ನು ದಾಖಲಿಸಲಾಗಿದೆ. ಆಲಯದ ಇಡೀ ಸಿಬ್ಬಂದಿ - ಪ್ರಧಾನ - ಉಪ - ಶಾಶ್ವತ - ತತ್ಕಾಲಿಕ - ಎಲ್ಲ ರೀತಿಯ ಸಿಬ್ಬಂದಿಯನ್ನು ಸೇರಿಸಿ 92 ಮಂದಿಯಿದ್ದರು.

ಬಂಗಾರದ ಬಾಗಿಲಿನ - ದ್ವಾರಪಾಲಕರೀರ್ವರ ನಡುವಣ ಬಂಗಾರದ ಗಿಲೀಟು ತಗಡು ಹೊದಿಸಿದ ಬಾಗಿಲಿನ ಬೀಗದ ಕೈಗಳ ಒಂದು ಸುತ್ತು, ಮತ್ತು ಆಭರಣಗಳ ಪೆಟ್ಟಿಗೆಯ ಒಂದು ಬೀಗದಕ್ಕೈ ಜಿಯಂಗಾರರ ಬಳಿಯಲ್ಲಿದ್ದಿತು. ಇಂದಿಗೂ ಹಾಗೆಯೇ ಇದೆ.(1980) ಅಂತರಾಳದ ಬಾಗಿಲಿನ ಬೀಗದಕ್ಕೈ ಹಾಗೂ ದಿನನಿತ್ಯದ ಆಭರಣಗಳ ಪೆಟ್ಟಿಗೆಯ ಬೀಗದಕ್ಕೈ ಅರ್ಚಕರ ವಶದಲ್ಲಿರುವುದು, ಆಲಯದ ಬಾಗಿಲನ್ನು ಬೆಳಗ್ಗೆ 8 ಗಂಟೆಗೆ ತೆಗೆಯುತ್ತಿದ್ದರು. ಈ ಹೊತ್ತಿಗೆ ಸ್ವಲ್ಪ ಮೊದಲು ಆಲಯದ ಒಬ್ಬ ಸೇವಕನು ಜಿಯಂಗಾರರನ್ನು ಬೀಗದ ಕೈಗಳೊಂದಿಗೆ ಕರೆತರಲೂ, ಇನ್ನೊಬ್ಬ ಸೇವಕನು ಅರ್ಚಕರನ್ನು ಕರೆತರಲೂ ಹೋಗುತ್ತಿದ್ದರು. ಪಾರುಪತ್ಯಗಾರರೂ ಮತ್ತಿತರ ಆಲಯ ಸಿಬ್ಬಂದಿಯೂ ಆಲಯದ ಬಳಿಯಿರುತ್ತಿದ್ದರು. ಬಂಗಾರದ ಬಾಗಿಲಿನ ಉದ್ಘಾಟನೆಯಾದ ನಂತರ ಅರ್ಚಕ, ಏಕಾಂಗಿ ಹಾಗೂ ಗೊಲ್ಲರು ಒಳಹೋಗಿ ಬಾಗಿಲು ಮುಚ್ಚಿಕೊಳ್ಳುತ್ತಿದ್ದರು. ಒಳಕ್ಕೆ ಹೋಗಿ ಅಖಂಡ ದೀಪವನ್ನು ಸರಿಮಾಡಿ, ಅಂತರಾಳದ ಬಾಗಿಲನ್ನು ತೆರೆದು, ನಂತರ ಮುಂಬಾಗಿಲನ್ನು ತೆರೆದು ಜಿಯಂಗಾರರನ್ನು ಒಳಕ್ಕೆ ಕರೆಯುವರು. ಜಿಯಂಗಾರರು ಕಣ್ಣ ಆರತಿಯನ್ನು ಬೆಳಗಿಸಿ ಅರ್ಚಕರಿಗೆ ನೀಡಿದರೆ, ಅರ್ಚಕರು ಅದರಿಂದ ಸ್ವಾಮಿಗೆ ಆರತಿ ತೆಗೆಯುವರು. ಈ ನಡುವೆ ತಾಳ್ಳಪಾಕ ಅನ್ನಮಾಚಾರ್ಯರ ವಂಶದವರಿಂದ ಸುಪ್ರಭಾತ ಪಠಣವಾಗುವುದು. 9 ಗಂಟೆಯ ಹೊತ್ತಿಗೆ ತೋಮಾಲೆಸೇವೆ ಮತ್ತಿತರ ಸೇವೆಗಳು ಮುಗಿದು ನೈವೇದ್ಯದ ಸಮಯ ಆಸನ್ನವಾಗುವುದು. ಮೊದಲನೆಯ ನೈವೇದ್ಯವು ದೊಡ್ಡ ಗಂಟೆಯ ಧ್ವನಿಯ ಜೊತೆಗೆ ಅರ್ಪಿತವಾಗುವುದು.'ಇತರ ವಿವಿಧ ಪೂಜೆಗಳಾಗಿ, ದೇಣಿಗೆಗಳಿಂದಾದ ನಿವೇದನೆಗಳನ್ನು ಸಮರ್ಪಿಸಲಾಗುವುದು. ನಂತರ ಮಹಾ ಮಂಗಳಾರತಿ ನಡೆದು ಯಾತ್ರಿಕರನ್ನು ಸ್ವಾಮಿಯ ದರ್ಶನಕ್ಕೆ ಅನುಮತಿಸಲಾಗುತ್ತಿದ್ದಿತು.

7ನೇ ಪ್ರಶ್ನೆಗೆ ಉತ್ತರವಾಗಿ ಆಲಯ ಸಿಬ್ಬಂದಿಯ ಕರ್ತವ್ಯ ವಿವರಗಳನ್ನು ಪಟ್ಟಿಮಾಡಿದ ನಂತರ ಬೆಳಗ್ಗೆ 9 ಗಂಟೆಯ ಒಳಗೆ ತೋಮಾಲಸೇವೆ ಮುಗಿದು ಬೆಳಗಿನ ಇತರ ಪೂಜೆಗಳು ಆರಂಭ ಆಗಬೇಕೆಂದು ಹೇಳಲಾಗಿದ್ದು, ಹತ್ತು ಗಂಟೆಯ ಹೊತ್ತಿಗೆ ಮಾತ್ರ, ದಧ್ಯೋದನ, ಬಾಕಳಬಾತ್, ಚಪ್ಪಿಡಿ (ಶುದ್ಧಾನ್ನ) ಪ್ರಸಾದಗಳ ನಿವೇದನೆ ಆಗಬೇಕೆಂದೂ, ಅನಂತರ ಹನ್ನೆರಡು ಗಂಟೆಯವರೆಗೆ ಯಾತ್ರಿಕರನ್ನು ದೇವರ ದರ್ಶನಕ್ಕೆ ಬಿಡಬೇಕೆಂದೂ ಹೇಳಲಾಗಿದೆ. ಎರಡನೆಯ ಪೂಜೆಯು ಮಧ್ಯಾಹ್ನ 1 ಗಂಟೆಯ ಒಳಗೆ ನಡೆಯಬೇಕು. ಎರಡನೆಯ ನಿವೇದನೆ ಆಗಬೇಕು. (ಎರಡನೇ ಗಂಟೆ) ಅಲಂಕಾರಾನ್ನ ಸೂಪ, ರಸಗಳು, ಪಾಯಸಗಳು ಇಲ್ಲಿ ನೈವೇದ್ಯವಾಗುತ್ತದೆ. ಮತ್ತೆ ರಾತ್ರಿ 8-30ಕ್ಕೆ, ರಾತ್ರಿ 9 ಗಂಟೆಗೆ ತೋಮಾಲೆಸೇವೆ ಆಗಿ, ಅನ್ನ, ಮಿಳಗೋಗರ (ಮೆಣಸಿನ ಅನ್ನ) ಪರಮಾನ್ನ (ಅಕ್ಕಿ ಪಾಯಸ) (ತಿರುವೀಸ) ಶುದ್ಧಾನ್ನಗಳನ್ನು ದೇವರಿಗೆ ನೀಡಬೇಕು. ನಂತರ ಯಾತ್ರಿಕರಿಗೆ ದರ್ಶನಾವಕಾಶ. ಮತ್ತು ರಾತ್ರಿ ಹತ್ತು ಗಂಟೆಗೆ ಮಂಚಪು ಸೇವೆ. (ಸ್ವಾಮಿಯ ಶಯನೋತ್ಸವ) ಈ ಎಲ್ಲ ಸೇವೆಗಳಲ್ಲಿಯೂ ತತ್ಸಂಬಂಧಿ ಆಲಯ ಸಿಬ್ಬಂದಿ ಹಾಜರಿದ್ದು ತಮ್ಮ ತಮ್ಮ ಸೇವೆಗಳನ್ನು ಸಲ್ಲಿಸಬೇಕು. ಇದರಿಂದಾಗಿ ತಿಳಿದು ಬರತಕ್ಕ ಅಂಶವೆಂದರೆ ಸರ್ವದರ್ಶನವು ಬೆಳಗ್ಗೆ 10 ರಿಂದ 12 ರ ವರೆಗೆ ಮಾತ್ರವೇ ಇದ್ದು ಆ ಮೇಲೆ ರಾತ್ರಿಯ ಹೊತ್ತಿನಲ್ಲಿದ್ದಿತು ಎಂಬುದು.

ಗರ್ಭಗುಡಿಯ ಮುಂದೆ ಒಂದು ದೊಡ್ಡ ತಟ್ಟೆಯನ್ನಿಟ್ಟು, ಪಾರುಪತ್ಯಗಾರನು ಬಂಗಾರದ ಬಾಗಿಲಿನಲ್ಲಿ ನಿಂತು ಹೆಚ್ಚಿನ ಕಾಣಿಕೆಯನ್ನು ತಂದ ಯಾತ್ರಿಕರನ್ನು ಮಾತನಾಡಿಸಿ, ಅವರನ್ನು ಕೂರಿಸಿ, ಅವರು ತಂದ ಹಣವನ್ನು ಎಣಿಸಿ ಒಂದು ಬಟ್ಟೆಯಲ್ಲಿ ಕಟ್ಟಿ ತನ್ನ

ಮುದ್ರೆಯನ್ನೊತ್ತಿ, ಅವರಿಗೇ ಹಿಂದಿರುಗಿಸಿ ಅವರನ್ನು ಒಳಗೆ ಬಿಡುವನು. ಅವರು ಸ್ವಾಮಿಯನ್ನು ದರ್ಶಿಸಿ ಕಾಣಿಕೆಯನ್ನು ಗರ್ಭಗುಡಿಯ ಮುಂದಿಟ್ಟಿರುವ ದೊಡ್ಡ ಹರಿವಾಣದಲ್ಲಿ ಹಾಕುವರು. ದರ್ಶನಾನಂತರ ಯಾತ್ರಿಕರಿಗೆ ಸ್ವಾಮಿಯ ಪ್ರಸಾದಗಳನ್ನು (ವಡೆ, ಮೊದಲಾದುವು) ನೀಡಲಾಗುವುದು. ದರ್ಶನದ ವೇಳೆ ಮುಗಿದ ಮೇಲೆ ಯಾತ್ರಿಕರು ದೇವರ ಮುಂದಿಟ್ಟಿರುವ ಗಂಗಾಳದಲ್ಲಿ ಹಾಕಿದ ಕಾಣಿಕೆಗಳೆಲ್ಲವನ್ನೂ ಬಂಗಾರದ ಬಾಗಿಲ ಹೊರಗಿರುವ ರಂಗ ಮಂಟಪಕ್ಕೆ ತಂದು ಜಿಯಂಗಾರ್, ಪಾರುಪತ್ಯದಾರರ ಸಮ್ಮುಖದಲ್ಲಿ ದಾಖಲುಗೊಳಿಸಿ ಚೀಲಗಳಲ್ಲಿ ಹಾಕಿ ಕಟ್ಟಿ ಆಲಯ ಮುದ್ರೆಯನ್ನು ಒತ್ತಲಾಗುತ್ತದೆ. ಅರ್ಜಿತದ ಪಟ್ಟಿಯನ್ನು ತಯಾರಿಸಿ, ಜಿಯಂಗಾರು ಕರಣಿಕ,ಪಾರುಪತ್ಯಗಾರರು ಸಹಿಮಾಡುತ್ತಾರೆ. ಕೊಪ್ಪರವನ್ನು ಬಿಗಿಸಿದ ನಂತರ ಅದನ್ನು ಎಚ್ಚರಿಕೆಯಿಂದ ಕಾಪಾಡಬೇಕೆಂದು ರಕ್ಷಕ ಭಟರಿಗೆ ತಿಳಿಸಿ ಪಾರುಪತ್ಯಗಾರನು ಮನೆಗೆಹೊರಡುವನು. ಅಂತರಾಳದ ಬಾಗಿಲನ್ನು ಬಂದುಮಾಡಿ ಅರ್ಚಕ ಮನೆಗೆ ಮರಳುವನು.

ರಾತ್ರಿ ಎಂಟು ಗಂಟೆಯ ಹೊತ್ತಿಗೆ ಅರ್ಚಕರು ಜಿಯಂಗಾರರೊಡನೆಯೂ, ಆಲಯ ಸೇವಕರೊಡನೆಯೂ ಆಲಯಕ್ಕೆ ಬಂದು, ರಾತ್ರಿ ಒಂಬತ್ತು ಗಂಟೆಯ ಹೊತ್ತಿಗೆ ರಾತ್ರಿ ಪೂಜೆಯನ್ನು ಮಾಡಿ ಮುಗಿಸುವರು. ನೈವೇದ್ಯವಾದ ಮೇಲೆ ಯಾತ್ರಿಕರು ಸ್ವಾಮಿಯನ್ನು ದರ್ಶಿಸಬಹುದು. ದರ್ಶನವಾದ ನಂತರ ಮಂಚಪು ಸೇವೆಯು ರಾತ್ರಿ 10 ಗಂಟೆಯ ಹೊತ್ತಿಗೆ ನಡೆಯುವುದು. ಒಳಗಿನ ಅಂತರಾಳದ ಬಾಗಿಲಿಗೆ ಅರ್ಚಕರು ಬೀಗ ಹಾಕುವರು. ಅವರು ಹೋದಮೇಲೆ ಬಂಗಾರದ ಬಾಗಿಲಿಗೂ ಬೀಗ ಹಾಕಿ ವಿವಿಧ ರೀತಿಯ ಬೀಗಗಳನ್ನು ಹಾಕಲಾಗುವುದು.

ಆಲಯದಲ್ಲಿ ಜಿಯಂಗಾರ್ ಅಥವಾ ಆತನ ಸಹಾಯಕ ಏಕಾಂಗಿಯ ಆರತಿಯನ್ನು ಬೆಳಗಿಸಿ ಅರ್ಚಕನಿಗೆ ನೀಡುವುದು ವಾಡಿಕೆ. ದೇವರ ಅಲಂಕಾರಕ್ಕಾಗಿಯೂ ಹೀಗೆಯೇ ಹೂವಿನ ಹಾರ, ಆಭರಣಗಳು, ವಿವಿಧ ರೀತಿಯ ವಸ್ತ್ರಗಳು ಜೀಯಂಗಾರ್ಯರ ಕೈಗಳ ಮೇಲೆ ಮುಂದೆ ನಡೆಯಬೇಕು.

ರಾತ್ರಿಯ ದರ್ಶನದ ವೇಳೆಯಲ್ಲಿಯೂ ಪಾರುಪತ್ಯದಾರನು ಯಾತ್ರಿಕರ ಕಾಣಿಕೆಗಳನ್ನು ಸ್ವೀಕರಿಸಿ ಮಧ್ಯಾಹ್ನದ ಪದ್ಧತಿಯಲ್ಲಿಯೇ ಚೀಲದಲ್ಲಿ ಸೇರಿಸಿ ತನ್ನ ಅಧಿಕೃತ ಮುದ್ರೆಯನ್ನು ಒತ್ತುವನು.

ಅಲ್ಲಿ ಏಳು ಮಂದಿ ಆಚಾರ್ಯ ಪುರುಷರಿದ್ದರು. ಅವರಲ್ಲಿ ಒಬ್ಬರಾದ ತೋಳಪ್ಪಾಚಾಯರ ಕುಟುಂಬ ದವರು ದೇವರ ಪೂಜೆ ಸಮಯದಲ್ಲಿ ವೇದಪಾರಾಯಣ ಮಾಡುತ್ತಿದ್ದರು. ಸ್ವಾಮಿಯ ಅಭಿಷೇಕಕ್ಕೆ ಆಕಾಶಗಂಗೆ ಯಿಂದ ನೀರನ್ನು ತಮ್ಮವರೇ ಆದ ಒಬ್ಬರಿಂದ ತರಿಸುತ್ತಿದ್ದರು. ಏಳುಮಂದಿ ಆಚಾರ್ಯಪುರುಷರಲ್ಲಿ ಇವರಿಗೆ ಮೊದಲ ತೀರ್ಥ ಮರ್ಯಾದೆ ಸಲ್ಲುತ್ತಿದ್ದಿತು. ಇವರೇ ಅರ್ಚನೆಯ ಸಮಯದಲ್ಲಿ ಮಂತ್ರಪುಷ್ಪವನ್ನೂ, ಸಹಸ್ರ ನಾಮ ಪಾರಾಯಣವನ್ನೂ ಮಾಡುತ್ತಿದ್ದರು. ಮಿಕ್ಕ 6ಮಂದಿ ಆಚಾರ್ಯಪುರುಷರೂ ಪ್ರಬಂಧಗಳನ್ನು ಹೇಳುತ್ತಿದ್ದರು.

ಸಾಮವೇದ ಗಾಯಕನು ಪ್ರತಿದಿನವೂ ಸಾಮವೇದ ಗಾಯನ ಮಾಡುವುದೇ ಅಲ್ಲದೆ, ಹಲವು ಯಾತ್ರಿಕರು ಉಂಟುಮಾಡಿದ ಕಟ್ಟಳೆಯಂತೆ ಪ್ರತಿಶುಕ್ರವಾರ ಸ್ವಾಮಿಯ ಅಭಿಷೇಕದ ನಂತರ ಸ್ವಾಮಿಗೆ ಹೊಸ ಯಜ್ಞೋಪವೀತವನ್ನು ತಂದು ಕೊಡುತ್ತಿದ್ದನು. ಯಜ್ಞೋಪವೀತಧಾರಣೆಗಳು ತಾಳ್ಳಪಾಕ ಪೆದ ತಿರುಮಲಾಚಾರ್ಯನಿಂದ ಕ್ರಿ.ಶ.1532ರ ಮಾರ್ಚ್ ತಿಂಗಳಿನಲ್ಲಿ ಆರಂಭವಾಯಿತು (ತಿ.ತಿ. 588).

ಗ್ರಾಮ ತೋಟಿಯು ಪಾರುಪತ್ಯಗಾರನು ಹೇಳಿದ ಕೆಲಸಗಳನ್ನು ಮಾಡಲು ಹೊರಡುತ್ತಿದ್ದನು. ಉಗ್ರಾಣದಲ್ಲಿ ಕೆಲಸ ಮಾಡುತ್ತಿದ್ದ ಮತ್ತೊಬ್ಬ ಸೇವಕನು ಯಾತ್ರಿಕರು ಸಮರ್ಪಿಸಿದ ಎಲೆ ಅಡಿಕೆ (ತಾಂಬೂಲ ಸಾಮಗ್ರಿ) ಗಳನ್ನು ಸಂಗ್ರಹಿಸಿ ಮಾರುಕಟ್ಟೆಯದರಗಳಲ್ಲಿ ಮಾರಿ ಬಂದ ಹಣವನ್ನು ಸರ್ಕಾರಕ್ಕೆ (ಆಲಯ ಭಂಡಾರದ ಲೆಕ್ಕಕ್ಕೆ) ಜಮಾ ಮಾಡುವನು. ಉತ್ಸವಮೂರ್ತಿಗಳ ಮೆರವಣಿಗೆ ಹೊರಟಾಗ ಇವರು ಆಯುಧ ಹಿಡಿದು ರಕ್ಷಣೆಯ ಕೆಲಸ ಮಾಡುತ್ತಿದ್ದರು.

ಇಪ್ಪತ್ತು ಮಂದಿಯೊಡನೆ ಗೊಲ್ಲಚಾರನು ತಹಸೀಲ್ದಾರನ ಬಳಿ ಕೆಲಸ ಮಾಡುತ್ತ ಅಧಿಕಾರಿಯ ಆಳುಗಳೊಡನೆ ಸೇರಿ ತಿರುಮಲೆಯ ಆಲಯದ ಕಾಣಿಕೆಗಳನ್ನೂ, ವಸ್ತುಗಳನ್ನೂ ಸಂಚಿಗಳಲ್ಲಿ ಹಾಕಿ ಹೊಲಿದು ಮುದ್ರೆಯೊತ್ತಿ ರಕ್ಷಿತಗೊಳಿಸುತ್ತಿದ್ದ. ಜೊತೆಗೇ ಗೋವಿಂದರಾಜಸ್ವಾಮಿ, ರಾಮಸ್ವಾಮಿ, ಉತ್ಸವ ವಿಗ್ರಹಗಳು ಪಾರುವೇಟೆಗೆ, ತೀರ್ಥವಾರಿಗೆ ಹೊರಟಾಗ, ಕುದುರೆಯನ್ನೇರಿ ಆಯುಧದೊಡನೆ ಕಾವಲು ಹೊರಡುತ್ತಿದ್ದನು.

ಆನೆಯ ಲಾಯ 14 ಮಂದಿಯನ್ನು ಹೊಂದಿದ್ದಿತು. ಮೇಲೆ ಒಬ್ಬ ದರೋಗ. ಜೊತೆಗೆ ನಾಲ್ಕುಮಂದಿ ಗದೆ ಹಿಡಿದವರು. ಐದುಮಂದಿ ಹುಲ್ಲು ಹಾಕುವವರು. ಕುದುರೆ ಲಾಯದಲ್ಲಿ 3 ಮಂದಿ ಮಾತ್ರ ವಿದ್ದರು. ಹಸುಗಳ ದೊಡ್ಡಿಯಲ್ಲಿ ಮೂರು ಮಂದಿ ಸೇವಕರಿದ್ದರು. ಇಲ್ಲಿದ್ದಂತಹ ಪ್ರಾಣಿಗಳ ಸಂಖ್ಯೆಯನ್ನು ಹೇಳಿಲ್ಲ. ಆದರೆ ಕೆಲಸ ಮಾಡುತ್ತಿದ್ದ ಮನುಷ್ಯರ ಲೆಕ್ಕದಲ್ಲಿ ನಾಲ್ಕು ಆನೆಗಳು, ಮೂರು ಕುದುರೆಗಳು, ಇದ್ದಿರಬೇಕು ಎನ್ನಬಹುದು. ಇವುಗಳನ್ನು ತಿರುಪತಿಯಲ್ಲಿಯೇ ಇಟ್ಟು ಉತ್ಸವ ಮೂರ್ತಿಗಳ ಮೆರವಣಿಗೆ ಸಮಯದಲ್ಲಿ ಸ್ವಾಮಿಯ ವೈಭವವನ್ನು ತೋರಿಸಲು ತಿರುಮಲೆಗೆ ಕರೆದುಕೊಂಡು ಹೋಗುತ್ತಿದ್ದರು.

ಎಂಟನೇ ಪ್ರಶ್ನೆಗೆ ಉತ್ತರವಾಗಿ ದಾಖಲೆಯಾಗಿರುವಂತೆ ಅನಾರೋಗ್ಯದಿಂದ ಕೆಲಸಕ್ಕೆ ಹಾಜರಾಗದವರ ವಿರುದ್ಧ ಯಾವ ಕ್ರಮವನ್ನೂ ಜರುಗಿಸಲಾಗುತ್ತಿರಲಿಲ್ಲ. ಸಣ್ಣಪುಟ್ಟ ಅಪರಾಧಗಳಿಗೆ ಕಿರಿಯದಂಡ ಜುಲ್ಮಾನೆಗಳನ್ನು ವಿಧಿಸಲಾಗುತ್ತಿದ್ದಿತುದೊಡ್ಡ ತಪ್ಪು ಸಂಭವಿಸಿದಾಗ ಅದನ್ನು ಹುಜೂರು ಖಾವಂದರಿಗೆ ವರದಿ ಮಾಡಿ ಅವರ ಆಜ್ಞೆಯಂತೆ ಕ್ರಮ ಜರುಗಿಸಲಾಗುತ್ತಿದ್ದಿತು.

ಹನ್ನೆಡನೆಯ ಪ್ರಶ್ನೆಯ ಬದಲಿಗೆಂದು ನೋಡಿದರೆ ಶ್ರೀ ವೆಂಕಟೇಶ್ವರಸ್ವಾಮಿಯ ಆಲಯ ಅನಾದಿಯಾದ ಕೋಯಿಲು ಎಂದು ಹೇಳಲಾಗಿದೆ. ಈತ ಮೊದಲಿಗೆ ಬ್ರಹ್ಮನಿಗೆ ಕಾಣಿಸಿಕೊಂಡ. ಬ್ರಹ್ಮ ಈತನನ್ನು ಅರ್ಚಿಸಿದ. ಅನಂತರ ಈತನು ತೊಂಡಮಾನ್ ಚಕ್ರವರ್ತಿಗೆ ಪ್ರತ್ಯಕ್ಷನಾದಾಗ, ತೊಂಡಮಾನನು ಈತನಿಗೆಂದು ಆಲಯವನ್ನು ನಿರ್ಮಿಸಿದನು. ಆದ್ದರಿಂದಾಗಿ ಆ ದಿನಗಳಲ್ಲಿನ ಆದಾಯ ವೆಚ್ಚಗಳ ವಿವರಗಳು ತಿಳಿದು ಬರುವುದಿಲ್ಲ. ನಂತರದ ಕಾಲದಲ್ಲಿ ಶಾಲಿವಾಹನ ಶಕ 939 ನೇ ಪೈಂಗಳ ನಾಮ ಸಂವತ್ಸರದಲ್ಲಿ ಹುಟ್ಟಿದ ರಾಮಾನುಜರು ತಮ್ಮ ಕಾಲದಲ್ಲಿ ಎಲ್ಲ ದಿವ್ಯ ದೇಶಗಳಲ್ಲಿ ( ವಿಷ್ಣುಕ್ಷೇತ್ರಗಳಲ್ಲಿ ) ಯಂತೆ ಇಲ್ಲಿಯೂ ಪೂಜಾ ವಿಧಿಯ ಕಟ್ಟಳೆಯನ್ನು ವ್ಯವಸ್ಥಿತಗೊಳಿಸಿದರು. ಆತ ಇಲ್ಲಿಗೆ ಆಗಮಿಸಿ, ಧರ್ಮಕರ್ತರ ಜವಾಬ್ದಾರಿಯನ್ನು ಸ್ವೀಕರಿಸಿ, ಗೋಪುರ, ಪ್ರಾಕಾರ ಮತ್ತಿತರ ಮಂಟಪಗಳನ್ನು ನಿರ್ಮಿಸಿ ಧರ್ಮಕಾರ್ಯವನ್ನು ನಿರ್ವಹಿಸಿದರು ಎಂದು ಹೇಳಲಾಗಿದೆ. ಪ್ರಸ್ತುತವಾದ (ಹತ್ತೊಂಬತ್ತನೆಯ ಶತಮಾನದ) ಜೀಯರು ಅವರ ಶಿಷ್ಯ ವಾರಸುದಾರರೆಂದೂ ತಿಳಿಸಲಾಗಿದೆ. ಇವರ ಆದಾಯವನ್ನು ಪ್ರತ್ಯೇಕವಾಗಿ ಪರಿಗಣಿಸಲಾಗಿದೆ. ನವಾಬರ ಕಾಲದಿಂದಲೂ ಬೇರೆ ಬೇರೆ ಕಾರ್ಯಗಳಲ್ಲಿ ಉಂಟಾಗುತ್ತಿದ್ದ ವೆಚ್ಚಗಳನ್ನು ಪಟ್ಟಿಮಾಡಿ, ಅವುಗಳ ತಪಾಸಣೆ ನಡೆಸಿ ತಸದೀಕು (ಸಾಧಾರಣ ವೆಚ್ಚಕ್ಕೆ ನೀಡಲಾಗುವ ಹಣದ ಮೊತ್ತ) ನಿರ್ಣಯಿಸಿ ಅದರಂತೆ ನಡೆಯಲಾಗುತ್ತಿದೆಯೆಂದು ದಾಖಲೆಯಾಗಿದೆ.

**2. ಶ್ರೀಗೋವಿಂದರಾಜ ಆಲಯ:**

ಸವಾಲ್ ಜವಾಬ್ ಪಟ್ಟಿಯಲ್ಲಿ ದಾಖಲೆಯಾಗಿರುವಂತೆ ಈ ಆಲಯದ ಆರ್ಥಿಕ ಪರಿಸ್ಥಿತಿ ಹೀಗಿದೆ -

ಸಾಧಾರಣ ಆದಾಯ : 563 ಪುಲಿವರಹ, 28 ಮೈಲಿ, 40 ಕಾಸು.

ಕಾಣಿಕೆ - ಜಮೀನುಗಳ ಆದಾಯ : 26 ಪುಲಿವರಹ, 2 ಮೈಲಿ , 66 ಕಾಸು.

ಒಟ್ಟು 589 ಪುಲಿವರಹ, 31 ಮೈಲಿ ಹಾಗೂ 26 ಕಾಸು.

ಆಲಯ ಸೇವಕರಿಂದಾದ ಆದಾಯ, ಧರ್ಮಗಳು - 131 ಪುಲಿವರಹ, 35 ಮೈಲಿ, 14 ಕಾಸು.

ಕಾಣಿಕೆ ಮತ್ತು ಅರ್ಜಿತಗಳು - 900 ಪುಲಿವರಹಗಳು.

ಒಟ್ಟು 1031 ಪುಲಿವರಹ 15 ಮೈಲಿ, 14 ಕಾಸು, ಅಥವಾ 4120 ರೂಪಾಯಿ ( ಸ್ಥೂಲವಾಗಿ )

ಇಲ್ಲಿಯೂ ಕೂಡ ಶ್ರೀ ವೆಂಕಟೇಶ್ವರ ಸ್ವಾಮಿಯ ಆಲಯದಲ್ಲಿಯಂತೆಯೇ ಈಸ್ಟ್ ಇಂಡಿಯಾ ಕಂಪನಿಯು ಅರ್ಜಿತ ಹಾಗೂ

ಕಾಣಿಕೆ ವಸೂಲಿಗಳನ್ನು ಗುತ್ತಿಗೆಗೆ ಬಿಟ್ಟು, ಗುತ್ತಿಗೆದಾರರಿಂದ ಗೊತ್ತಾದ ಕಾಲಕ್ಕೆ ತಕ್ಕಂತೆ ವಸೂಲಿ ಮಾಡುತ್ತಿದ್ದರು. ಅಲಿನ ಆದಾಯ ಆಲಯದಲ್ಲಿ ಅನ್ನಪ್ರಸಾದಗಳಿಗಾಗಿ ವಸ್ತುರೂಪದಲ್ಲಿ ನೀಡಿದ್ದು.

ಆಲಯದ ಅಂದಾಜು ಪತ್ರದಲ್ಲಿ ಮೇಳದವರು ಹಾಗೂ ಗೊಲ್ಲರಿಗೆ ಯಾವುದೇ ರೀತಿಯ ಸಂಭಾವನೆಯ್ನೂ ಸೂಚಿಸಲಾಗಿಲ್ಲ. ಕಂಪನಿಯಿಂದ ಕಾಣಿಕೆಯ ಗುತ್ತಿಗೆಪಡೆದವರು ಈ ಒಂದು ಬಾಬತ್ತಿನಲ್ಲಿ ತಮ್ಮ ಹಣವನ್ನು ವ್ಯಯ ಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಸವಾಲ್‌ಜವಾಬ್‌ಪಟ್ಟಿಯ ಮೂಲಕ ತಿಳಿದು ಬರುವ ವಿಚಾರವೆಂದರೆ ಶ್ರೀ ಗೋವಿಂದರಾಜಸ್ವಾಮಿ ಆಲಯದಲ್ಲಿ ತಿರುಮಲೆಯ ಪೂಜಾವಿಧಿ ನಿರ್ವಹಿಸುವ ನಾಲ್ಕು ಅರ್ಚಕರಲ್ಲಿ ಇಬ್ಬರು ಮಾತ್ರವೇ ಇಲ್ಲಿ ಪೂಜೆಯ ಕೆಲಸ ಮಾಡಲು ಹಕ್ಕು ಹೊಂದಿದ್ದರು. ಇನ್ನೂ ಹೇಳಲಾಗಿರುವ ವಿಷಯವೆಂದರೆ ತಿರುಮಲೆಯ ಆಲಯದಲ್ಲಿ ಕೆಲಸ ನಿರ್ವಹಿಸುತ್ತಿದ್ದ 7 ಮಂದಿ ಆಚಾರ್ಯ ಪುರುಷರು, ಏಕಾಂಗಿಗಳು, ಪೆರಿಯ ಹಾಗೂ ಚಿನ್ನ ಜಿಯಂಗಾರ್ಯರು ಈ ಆಲಯದಲ್ಲೂ ಕೆಲಸ ಮಾಡಬೇಕಾಗಿದ್ದಿತು. ಅರ್ಚಕರು ಸಹಸ್ರನಾಮಾರ್ಚನೆಯನ್ನೂ, ಅಧ್ಯಾಪಕರು ಪ್ರಬಂಧವನ್ನೂ, ಪಠಿಸಬೇಕಾಗಿದ್ದಿತು. ಪುರೋಹಿತ, ಗೊಲ್ಲಚಾರ, ಕೈಕಲಿ (ನೇಕಾರ) ಕಾಮಾಟಿ (ಬಡಗಿ) ದರ್ಜಿ (ಸಿಂಪಿಗ) ಗೀಣಿಗಿರಿ (ಸುಣ್ಣ ಬಣ್ಣ ಬಳಿಯುವವ) ಬೊಕ್ಕಸದವ (ಸಾಧಾರಣ ಎದುರುನೋಡುವ ಆಳು) ವಸ್ತ್ರದವನು, ಅಡಿಗೆಯವರು - ಒಟ್ಟು 27 ಮಂದಿಯಿದ್ದರು. ಎಂಟು ಮಂದಿ ಮುದ್ರ ಮನಿಷಿಗಳೆಂಬ ಮೇಲುಸ್ತುವಾರಿಯ ಅಧಿಕಾರಿಗಳು - ಕೊಡೆ ಹಿಡಿಯುವವರು ಇದ್ದರು. ಇವರಲ್ಲಿ ಬಹುಮಂದಿ ತಿರುಮಲೆಯ ಆಲಯದಲ್ಲಿ ಕೆಲಸ ಮಾಡುತ್ತಿದ್ದವರೇ ಇಲ್ಲೂ ಕಾರ್ಯ ನಿರ್ವಹಿಸುತ್ತಿದ್ದರು. 19ನೇ ಶತಮಾನದ ಆರಂಭದಲ್ಲಿ ಆಲಯದ ಆನೆ ಕುದುರೆಗಳ ಸಾಕಾಣಿಕೆಗೆ ಸಂಬಂಧಿಸಿದ ವೆಚ್ಚಗಳು ಮಾವುತರ ಸಂಬಳಗಳನ್ನು ತಿರುಮಲೆಯ ಆಲಯದಿಂದಲೇ ಕೊಡಲಾಗುತ್ತಿದ್ದಿತು.

ಗೋವಿಂದರಾಜಸ್ವಾಮಿಯ ಆಲಯದ ಪೂಜಾದಿಗಳ ಸಮಯ ಸೂಚಿಯು ತಿರುಮಲೆಯ ಆಲಯದಲ್ಲಿನಂತೆಯೇ ಇದ್ದರೂ ಸ್ವಲ್ಪ ಮುಂದಾಗಿದ್ದಿತು. ಆಳುಗಳು ಬಂದು ಕರೆದಾಗ ಬೆಳಗ್ಗೆ 7 ಗಂಟೆಯ ಹೊತ್ತಿನಲ್ಲಿ ಅರ್ಚಕರು, ಜಿಯಂಗಾರರು, ಏಕಾಂಗಿಗಳು ಆಲಯಕ್ಕೆ ಬರುತ್ತಿದ್ದರು. ಮುದ್ರಾಮನುಷ್ಯರ ಮತ್ತಿತರ ಸಮಕ್ಷಮದಲ್ಲಿ ಮಹಾದ್ವಾರದ ಬೀಗಗಳನ್ನು ಜಿಯಂಗಾರರು ತೆರೆದರೆ, ಒಳಗಿನ ಬಾಗಿಲನ್ನು ಅರ್ಚಕರು ತೆರೆಯುತ್ತಿದ್ದರು. ಏಕಾಂಗಿ ಹಾಗೂ ಕೈಕಾಲ ಆಳುಗಳು ಅರ್ಚಕರ ಜೊತೆಗೆ ಆಲಯವನ್ನು ಪ್ರವೇಶಿಸಿ, ನಂದಾದೀಪವನ್ನು ಸರಿಪಡಿಸಿ, ಆಲಯದ ಎಲ್ಲ ವಸ್ತುಗಳೂ ಯಥಾಪೂರ್ವಸ್ಥಿತಿಯಲ್ಲಿವೆ ಯೆಂಬುದನ್ನು ಖಚಿತ ಪಡಿಸಿಕೊಳ್ಳುತ್ತಿದ್ದರು. ನಂತರ ಜಿಯಂಗಾರ್ಯರು ಪ್ರವೇಶಿಸುತ್ತಿದ್ದರು. ಪೂಜೆಯು ಎಂದರೆ ತೋಮಾಲೆಸೇವೆ ಅರ್ಚನೆಗಳೂ ನಂತರದ ನೈವೇದ್ಯ ಸಮರ್ಪಣವೂ ಬೆಳಗ್ಗೆ 9 ಗಂಟೆಯ ಮೊದಲೇ ಮುಗಿಯುತ್ತಿದ್ದವು. ನಂತರ ಯಾತ್ರಿಕರನ್ನು ದರ್ಶನದ ಹೊತ್ತಿನಲ್ಲಿಯೇ ಗುತ್ತಿಗೆದಾರನು ಯಾತ್ರಿಕರಿಂದ ಕಾಣಿಕೆಗಳನ್ನು ವಸೂಲಿ ಮಾಡಿ ಅದಕ್ಕಾಗಿಯೇ ಇದ್ದಂತಹ ಸಣ್ಣ ಪೆಟಾರಿಯಲ್ಲಿ ಹಾಕುತ್ತಿದ್ದನು. ಈ ದರ್ಶನ ಸಮಯವು ಮಧ್ಯಾಹ್ನ 12 ಗಂಟೆಯವರೆಗೂ ಮುಂದುವರೆಯುತ್ತಿದ್ದಿತು. ಮಧ್ಯಾಹ್ನದ ಪೂಜೆಯಾಗುವಾಗ ಗುತ್ತಿಗೆದಾರನು ನೀಡಿದ ನಿವೇದನೆಯನ್ನು ದೇವರಿಗೆ ಅರ್ಪಿಸಿದ ನಂತರ ಅದನ್ನು ಸಂಬಂಧಿಸಿದ ಯಾತ್ರಿಕರಲ್ಲಿ ವಿತರಿಸಲು ಅವನಿಗೇ ಹಿಂದಿರುಗಿಸಲಾಗುತ್ತಿದ್ದಿತು. ನಂತರ ಅರ್ಚಕರು ಒಳಬಾಗಿಲನ್ನು ಬಂದು ಮಾಡಿ ಮನೆಗೆ ಹೋಗುತ್ತಿದ್ದರು. ಜಿಯಂಗಾರ್ಯರೂ ಮತ್ತಿತರರೂ ತಮ್ಮ ಬೀಡುಗಳಿಗೆ ಹೋಗುತ್ತಿದ್ದರು. ಸಂಜೆ 7 ಗಂಟೆಯ ಹೊತ್ತಿಗೆ ರಾತ್ರಿಯ ಪೂಜೆ ಎಲ್ಲ ಸಿಬ್ಬಂದಿಯೂ ಮತ್ತೆ ಹಾಜರಾಗುತ್ತಿದ್ದರು. ಪೂಜೆ ನೈವೇದ್ಯಗಳಾದ ಬಳಿಕ ರಾತ್ರಿ ಹತ್ತರವರೆಗೆ ಯಾತ್ರಿಕರ ದರ್ಶನ ಕಾರ್ಯಕ್ರಮ ನಡೆಯುತ್ತಿದ್ದಿತು. ಆ ನಂತರ ದೇವಾಲಯದ ಹೊರಬಾಗಿಲಿಗೆ ಬೀಗ ಹಾಕಿ ಜಿಯಂಗಾರರು ಬೀಗದ ಕೈಯನ್ನು ಮಠಕ್ಕೆ ತೆಗೆದುಕೊಂಡು ಹೋಗುತ್ತಿದ್ದರು.

ಈ ದೇವಾಲಯದಲ್ಲಿಯೇ ಯಾದವ ಪೆರುಮಾಳ್ ಅಥವಾ ಪಾರ್ಥಸಾರಥಿ (ಮಹಾಭಾರತದ ಅರ್ಜುನನ ರಥ ಸಾರಥಿಯಾದ ಶ್ರೀಕೃಷ್ಣ) ಆಲಯವನ್ನು ರಾಯರ (ವಿಜಯನಗರದ ರಾಜರ) ಕಾಲದಲ್ಲಿ ನಿರ್ಮಿಸಲಾಗಿದ್ದು, ನಂತರ ರಾಮಾನುಜರು (ವೈಷ್ಣವ ಗುರುಗಳು ) ಚಿದಂಬರ ಅಥವಾ ಚಿತ್ರಕೂಟದಿಂದ ತರಲಾದಂತಹ ಗೋವಿಂದ ರಾಜನ ವಿಗ್ರಹವನ್ನು ಪಾರ್ಥಸಾರಥಿ ಆಲಯದ ಪಕ್ಕದಲ್ಲಿ ನಿರ್ಮಿಸಲಾದ ಗುಡಿಯಲ್ಲಿ ಸ್ಥಾಪಿಸಿದರು. ಗೋವಿಂದ ರಾಜನಲ್ಲಿ ಜನಕ್ಕೆ ಭಕ್ತಿ ಹೆಚ್ಚಾಗಿ ಪೂಜಾದಿಗಳು ಸಾಗುತ್ತ ಬಂದವು. ಪಾರ್ಥಸಾರಥಿಯ ವಿಗ್ರಹವನ್ನು ಗಾರೆಯಿಂದ ಮಾಡಿದುದಾಗಿ ಅದು ಸ್ವಲ್ಪ ಮುರಿದು ಹೋಗಿದ್ದರಿಂದ ಇದಕ್ಕೆ ಪೂಜೆ ನಿಂತು ಹೋಯಿತು.(ಇಲ್ಲಿ ಇತಿಹಾಸ ಸ್ವಲ್ಪ ತಿರುಗಾಮರುಗ ನಮೂದು ಆಗಿರಬೇಕು. ಪಾರ್ಥಸಾರಥಿ ಆಲಯ ವಿಜಯನಗರದ ಅರಸರ ಕಾಲದಲ್ಲಿ ಅಲ್ಲದೆ ರಾಮಾನುಜರಿಗಿಂತಲೂ ಪೂರ್ವದಲ್ಲಿಯೇ ಇದ್ದಿರಬೇಕು. ಈ ಆಲಯದ ಆವರಣದಲ್ಲಿ, ಚಿದಂಬರದಿಂದ ತಂದಿದ್ದ ಗೋವಿಂದರಾಜಸ್ವಾಮಿಯ ಉತ್ಸವ ವಿಗ್ರಹವನ್ನು ಸುಧಾವರಣದಲ್ಲಿಟ್ಟು ರಾಮಾನುಜರು ಪ್ರತಿಷ್ಠೆ ಮಾಡಿರಬೇಕುಕಾಲಾ ನಂತರ ಪಾರ್ಥಸಾರಥಿ ಆಲಯದಲ್ಲಿ ಪೂಜಾದಿಗಳು ನಿಂತುಹೋದುವು. ಅದರ ಬಾಗಿಲನ್ನು ಮುಚ್ಚಲಾಯಿತು. 20 ನೇ ಶತಮಾನದಲ್ಲಿ ಆಲಯ ವ್ಯವಸ್ಥೆಗೆ ಧರ್ಮಕರ್ತರ ಮಂಡಳಿಯುಂಟಾದಾಗ ಇದರ ಪೂಜಾದಿಗಳು ಪುನಃ ಪ್ರಾರಂಭವಾಯಿತು - ಅನುವಾದಕ)

**3. ಶಾಲನಾಚ್ಚಿಯಾರ್ ಕೋಯಿಲ್:**

ಈ ಆಲಯದ ಆರ್ಥಿಕ ಪರಿಸ್ಥಿತಿಯ ವಿವರ ಹೀಗಿದ್ದಿತು. ಸಾಮಾನ್ಯ ಆದಾಯ 18 ಪುಲಿವರಹ 2 ಮೈಲಿ 54 ಕಾಸು. ಕಂಪನಿ ಯಿಂದ ನೀಡಲಾದ ನಗದು (ಪ್ರಾಯಶಃ ಕಂಪನಿ ಪಡೆದ ಯಾವುದಾದರೂ ಭೂಮಿಯ ಪ್ರತಿಯಾಗಿ ನೀಡಲಾದ ಹಣ ) ಆರು ಪುಲಿವರಹಗಳು. ಧರ್ಮ ಅಥವಾ ದಾನದಿಂದ ಬಂದ ಹಣ 8 ಪುಲಿವರಹ, 26 ಮೈಲಿ, 41 ಕಾಸು ಅಥವಾ ಸ್ಥೂಲವಾಗಿ ಒಟ್ಟು 120 ರೂಪಾಯಿಗಳು.

ಈ ಆಲಯವು ಸುಸಂಪನ್ನವಾಗಿರಲಿಲ್ಲವೆಂಬುದು ಸ್ಪಷ್ಟವಾಗಿದೆ. ಸವಾಲ್ ಜವಾಬ್ ಪಟ್ಟಿಯಲ್ಲಿ ಯಾತ್ರಿಕರು ಸಮರ್ಪಿಸಿದ ಕಾಣಿಕೆಗಳ ಬಗ್ಗೆ ಒಂದು ಗಮನಾರ್ಹ ಅಂಶವಿದೆ. ಇಲ್ಲಿ ಸಮರ್ಪಣೆಯ ಕಾಣಿಕೆ ಒಂದು ರೂಪಾಯಿಗಿಂತ ಹೆಚ್ಚಾಗಿದ್ದಲ್ಲಿ ಅದು ಶ್ರೀ ಗೋವಿಂದರಾಜಸ್ವಾಮಿ ಆಲಯಕ್ಕೆ ಸೇರುವಂತೆ ಆಗಿ, ಒಂದು ರೂಪಾಯಿಗಿಂತ ಕಡಿಮೆ ಕಾಣಿಕೆಯಾಗಿದ್ದಲ್ಲಿ ಅದನ್ನು ಶಾಲನಾಚ್ಚಿ ಯಾರ್ ದೇವಾಲಯದ ಅರ್ಚಕನು ತನಗಾಗಿ ಉಳಿಸಿಕೊಳ್ಳುವಂತೆ ಕಟ್ಟುಪಾಡು ಆಗಿದ್ದಿತು. ಇದರಿಂದಾಗಿ ಆಲಯದ ಅಮ್ಮನವರನ್ನು ಬಿಡಿಗಾಸಿಲ್ಲದವಳನ್ನಾಗಿ ಮಾಡಲಾಗಿದ್ದಿತು!

ಗೋವಿಂದರಾಜಸ್ವಾಮಿ ಆಲಯದ ಅರ್ಚಕರ ಗುಮಾಸ್ತನು ಈ ಗುಡಿಯಲ್ಲಿ ಬೆಳಗ್ಗೆ 7 ಗಂಟೆಯಿಂದ 10 ಗಂಟೆಯ ಒಳಗೆ ಪೂಜೆ ಮಾಡುತ್ತಿದ್ದನು. ಅರ್ಧಸೇರು ಅಕ್ಕಿಯ ಪ್ರಸಾದ ನೈವೇದ್ಯವನ್ನು ದಿನಕ್ಕೆ ಎರಡು ಬಾರಿ ಮಾಡಲಾಗುತ್ತಿದ್ದಿತುಇಲ್ಲಿನ ಉತ್ಸವದ ದಿನಗಳಲ್ಲಿ - ಏಳು ದಿನಗಳಲ್ಲಿ- ಗೋವಿಂದರಾಜಸ್ವಾಮಿಯ ಇಡೀ ಸಿಬ್ಬಂದಿ ಸಹಕರಿಸುತ್ತಿದ್ದರು. ನಾಲ್ಕು ಕೈಗಳ ಮಹಾಲಕ್ಷ್ಮಿಯ ಈ ಮೂರ್ತಿಯನ್ನು ಮೊದಲಿಗೆ ಯಾದವ ಪೆರುಮಾಳ್ ಆಲಯದ ಉತ್ತರಕ್ಕೆ ದಕ್ಷಿಣಾಭಿಮುಖವಾಗಿರುವಂತೆ ಇಡಲಾಗಿದ್ದದ್ದು ರಾಮಾನುಜರು ಗೋವಿಂದರಾಜಸ್ವಾಮಿಯ ಸ್ಥಾಪನೆ ಮಾಡಿದ ಮೇಲೆ ಇದನ್ನು ಅಲ್ಲಿಂದ ತೆಗೆದು ಮುಖಮಂಟಪದ ದಕ್ಷಿಣಕ್ಕೆ ಪಶ್ಚಿಮದಲ್ಲಿ ಇದ್ದ ಶಾಲೆಯಲ್ಲಿ ಅಂಗಳದಲ್ಲಿಡಲಾಯಿತು. ಹಾಗಾಗಿ ಈಕೆಯನ್ನು ಶಾಲನಾಚ್ಚಿಯಾರ್ ಎಂದು ಕರೆಯಲಾಯಿತು.

**4. ಶೂಡಿಕೊಡುತ್ತ ನಾಚ್ಚಿಯಾರ್:**

ಈ ಆಲಯದ ಆರ್ಥಿಕ ಪರಿಸ್ಥಿತಿ ಹೀಗಿದ್ದಿತು - ಸಾಮಾನ್ಯ ಆದಾಯ - 39 ಪುಲಿವರಹ 16 ಮೈಲಿ 19 ಕಾಸುಗಳಾಗಿದ್ದರೆ ಕಾಣಿಕೆಗಳಿಂದ 32 ಪುಲಿವರಹಗಳೂ, ಧರ್ಮದಿಂದ (ದಾನಗಳು) 18 ಪುಲಿವರಹ 5 ಮೈಲಿ , 62 ಕಾಸುಗಳಾಗಿ ಒಟ್ಟು ಸ್ಥೂಲವಾಗಿ 200 ರೂ.ಗಳಾಗಿದ್ದವು.

ಈ ಆಲಯದಲ್ಲಿಯೂ ಸಹ ಒಂದು ರೂಪಾಯಿಗಿಂತ ಹೆಚ್ಚಿನ ಕಾಣಿಕೆಯು ಗೋವಿಂದರಾಜಸ್ವಾಮಿಯ ಗುತ್ತಿಗೆದಾರರ ಲೆಕ್ಕಕ್ಕೆ ಜಮಾ ಆಗಿ ಒಂದು ರೂಪಾಯಿಗಿಂತ ಕಡಿಮೆ ಕಾಣಿಕೆಯು ಅರ್ಚಕನ ಪಾಲಿಗೆ ಸೇರುತ್ತಿತ್ತು. ಗೋವಿಂದರಾಜಸ್ವಾಮಿ ಆಲಯದಿಂದ ಕೊಡಲಾದಂತಹ ಹೊತ್ತಿಗೆ ಅರ್ಧಸೇರು ಅಕ್ಕಿಯ ನೈವೇದ್ಯ ಎರಡು ಹೊತ್ತು ಸಮರ್ಪಣೆಯಾಗುತ್ತಿದ್ದಿತುಪ್ರಾತಃಕಾಲ 10 ರಿಂದ 12 ರವರೆಗೂ ರಾತ್ರಿ 7 ರಿಂದ 10ರವರೆಗೆ ಪೂಜೆ ನಡೆಯುತ್ತಿದ್ದಿತು. ಈ ಆಲಯವನ್ನು ಭಾಷ್ಯಕಾರರ (ರಾಮಾನುಜರ) ಕಾಲದಲ್ಲಿ ನಿರ್ಮಾಣ ಮಾಡಲಾಯಿತು ಎಂದು ಹೇಳಲಾಗಿದೆ.

**5. ಕೋದಂಡರಾಮ ಆಲಯ :**

ಆಲಯದ ಆರ್ಥಿಕ ಪರಿಸ್ಥಿತಿ ಹೀಗಿದ್ದಿತು - ಸಾಮಾನ್ಯ ಆದಾಯ 145 ಪುಲಿವರಹ, 38 ಮೈಲಿ, 10 ಕಾಸುಗಳು, ಉಭಯ ಹಾಗೂ ದಾನಗಳು - 17 ಪುಲಿವರಹ, 8 ಮೈಲಿ, 42ಕಾಸು, ಭೂಮಿ ಗುತ್ತಿಗೆ ಹಾಗೂ ಕಾಣಿಕೆಗಳು - 80 ಪುಲಿವರಹ, 4ಮೈಲಿ 2 ಕಾಸು - ಹೀಗೆ ಒಟ್ಟು ಸ್ಥೂಲವಾಗಿ 600 ರೂಪಾಯಿಗಳು.

ಇಲ್ಲಿ ಸಮರ್ಪಿತವಾದ ಕಾಣಿಕೆಗಳಲ್ಲಿ ಒಂದು ಭಾಗವನ್ನು ಆಲಯದ ಊಳಿಗದವರು ತಮ್ಮ ಸ್ವಂತಕ್ಕೆ ಪಡೆದು ಮಿಕ್ಕದ್ದನ್ನು ಉರವಲಿಗಾಗಿ (ಕಟ್ಟಿಗೆ) ಬಳಸಲಾಗುತ್ತಿದ್ದಿತು. ತಿರುಮಲೆ ತಿರುಪತಿ ಗೋವಿಂದರಾಜಸ್ವಾಮಿ ಆಲಯಗಳಲ್ಲಿ ಪ್ರಚಲಿತವಿದ್ದಂತೆ ಆಲಯದ ಅಡಿಗೆಯವರಿಗೆ (ತೇವಕುಲವಾರು) ಫಸ್ಕಿ (ಪಸಿಕ - ನೈವೇದ್ಯದ ಪಡಿ) ಯನ್ನು ಪಡೆದು ಅವರು ಈ ಆಲಯದ ಧರ್ಮಕರ್ತರಾದ ಗುಂಡಪ್ಪ ವೆಂಕಟರಾಯರಿಗೆ ದೇಣಿಗೆ ಹಣವನ್ನು ನೀಡುತ್ತಿದ್ದರು. ಮುಂದೆ ಕ್ರಿ.ಶ. 1790 - 91 ರಲ್ಲಿ ಎಂದರೆ 1199 ಫಸಲಿ ವರ್ಷದಲ್ಲಿ ಫಸ್ಕಿ ಪದ್ಧತಿಯು ಸಾಹೇಬರಿಂದ ಅನುಮೋದಿತವಾಗಿ ಮುಸ್ತಜರು (ಆಡಳಿತಾಧಿಕಾರಿ) ರಘುನಾಥಾಚಾರಿ ಜಾರಿಗೆ ತಂದಂತೆ ಮುಂದುವರಿಸಲಾಯಿತು. ಇಲ್ಲಿ ಸ್ಥಳೀಯರೂ, ಹೊರಗಿನವರೂ ಸೇರಿ ಪದಾರ್ಥಗಳನ್ನು ತರಬೇಕಾಗಿದ್ದಿತು. ಧರ್ಮಕರ್ತರಾದ ಗುಂಡಪ್ಪ ಹಾಗೂ ವೆಂಕಟರಾಯರ ಪರವಾಗಿ ಕಾಣಿಕೆ ಹಣವನ್ನು ಪಡೆದು ಅದರ ಒಂದು ಭಾಗವನ್ನುಆಲಯ ಸಿಬ್ಬಂದಿಯ ಸಂಭಾವನೆಯಲ್ಲಿ ಬಳಸಿ ಮಿಕ್ಕದನ್ನು ಆಲಯಕ್ಕಾಗಿ ಬಳಸಲಾಗುತ್ತಿದ್ದಿತು. ಇದಕ್ಕಾಗಿ ಒಂದು ಬೇರೆಯೇ ಆದ ಲೆಕ್ಕವನ್ನಿಡಲಾಗಿದ್ದಿತು. ಮತ್ತು ಈ ಹಣವು ಸರ್ಕಾರ್ ನ ಆದಾಯ ವೆಚ್ಚಗಳಲ್ಲಿ ಲೆಕ್ಕವಾಗುತ್ತಿರಲಿಲ್ಲ.

ಇದೊಂದು (ಕೋದಂಡರಾಮಾಲಯ) ಪ್ರಾಚೀನ ಆಲಯ ಕಲ್ಲಿನಿಂದ ಕಟ್ಟಲಾಗಿದ್ದು ಇದರ ವಿಮಾನ ಗಾರೆಯದು.

ಇದರ ಸಿಬ್ಬಂದಿಯೆಂದರೆ ಒಬ್ಬ ಅರ್ಚಕ, ಬೊಕ್ಕಸದ ಒಬ್ಬ ಗುಮಾಸ್ತ, ಒಬ್ಬ ಅಡಿಗೆಯವ, ಇಬ್ಬರು ಗೊಲ್ಲರು ಹಾಗೂ ಒಬ್ಬ ತೋಟಗಾರ. ಅರ್ಚಕನು ಬೆಳಗ್ಗೆ 7 ರಿಂದ 9 ರ ವರೆಗೆ ಪೂಜೆ ಮಾಡಿ ಮಾತ್ರ ಹಾಗೂ ದಧ್ಯೋದನಗಳ ನಿವೇದನೆಯನ್ನುಸಮರ್ಪಿಸುತ್ತಿದ್ದ. ನಂತರ ಮಧ್ಯಾಹ್ನದ ಪೂಜೆ ನೈವೇದ್ಯಗಳನ್ನು ಬೆಳಗ್ಗೆ 10 ರಿಂದ 12 ರ ವರೆಗೆ ಹಾಗೂ ರಾತ್ರಿ ಪೂಜೆ ನೈವೇದ್ಯಗಳನ್ನು ಸಂಜೆ 7 ರಿಂದ 9ರ ವರೆಗೆ ನಡೆಸುತ್ತಿದ್ದನು. ಆ ನಂತರ ದೇವರ ಮಂಚಪುಸೇವೆ (ಶಯನಸೇವೆ) ಯನ್ನು ಮಾಡುತ್ತಿದ್ದನು. ಇಲ್ಲಿಗೆದಿನದ ಆರಾಧನೆಯು ಅಂತ್ಯವಾಗುತ್ತಿದ್ದಿತು. ಬೊಕ್ಕಸದ ಗುಮಾಸ್ತನು ಅಭಿಷೇಕಕ್ಕೆ ನೀರನ್ನು ತಂದುಕೊಡುತ್ತಿದ್ದನು. ಅವನೇ ಪೂಜೆಗಾಗಿ ಚಂದನವನ್ನು ಸಿದ್ಧಗೊಳಿಸಿ ಪೂಜಾ ಪಾತ್ರೆಗಳನ್ನು ಪರಿಶುದ್ಧಗೊಳಿಸಿ ಕೊಡುತ್ತಿದ್ದನು. ಅಡಿಗೆಯವನು ನಿವೇದನೆಗೆಂದು ಪ್ರಸಾದಗಳನ್ನುಸಿದ್ಧಮಾಡುತ್ತಿದ್ದನು. ಗೊಲ್ಲನು ಆಲಯಕ್ಕೆ ಬೇಕಾದ ಪದಾರ್ಥಗಳೆಲ್ಲವನ್ನು ತಂದು ಕೊಡುತ್ತಿದ್ದನು. ಜೊತೆಗೇ ಆಲಯದ ರಕ್ಷಣಾ ಕಾರ್ಯ ಮಾಡುತ್ತಿದ್ದನು. ತೋಟಗಾರನು ಪೂಜೆಗೆ ಬೇಕಾಗುವ ಹೂವುಗಳನ್ನು ಸರಬರಾಜು ಮಾಡುತ್ತಿದ್ದನು.

ಚಂದ್ರ ವಂಶದ ಜನಮೇಜಯನು ಆಲಯವನ್ನು ನಿರ್ಮಿಸಿ ವಿಗ್ರಹವನ್ನು ಪ್ರತಿಷ್ಠೆ ಮಾಡಿದನು. ಅಯೋಧ್ಯಾ ರಾಮಾನುಜಯ್ಯಂಗಾರ್ಯನು ವಿಜಯ ನಗರದ ಕಾಲದಲ್ಲಿ ಪ್ರಾಕಾರವನ್ನೂ, ಗೋಪುರವನ್ನೂ, ನಿರ್ಮಾಣಮಾಡಿದರು. 1226ರ

ಫಸಲಿ ವರ್ಷ (ಕ್ರಿ.ಶ. 1817 -18) ದಲ್ಲಿ ಗರ್ಭಗುಡಿಯ ಮೇಲೆ ಹೊಸದಾದ ವಿಮಾನದ ನಿರ್ಮಾಣವಾಗಿ ಇದರ ಮಹಾ ಸಂಪ್ರೋಕ್ಷಣೆಯ ಕುಂಭಾಭಿಷೇಕ ನಡೆಸಲಾಯಿತು.

**6. ತಿರುಚಾನೂರು ಶ್ರೀಕೃಷ್ಣಸ್ವಾಮಿ ಆಲಯ:**

ಈ ಆಲಯದ ಆರ್ಥಿಕ ಪರಿಸ್ಥಿತಿ ಹೀಗಿದ್ದಿತು - ಸಾಮಾನ್ಯ ಆದಾಯ 32 ಪುಲಿವರಹ, 25 ಮೈಲಿ, 57 ಕಾಸುಗಳಾಗಿದ್ದರೆ ಉಭಯದಿಂದ ಬಂದದ್ದು 3 ಪುಲಿವರಹ 15 ಮೈಲಿ 55 ಕಾಸು - ಒಟ್ಟು ಸ್ಥೂಲವಾಗಿ 140 ರೂಪಾಯಿ.

ಇದು ಪದ್ಮಾವತೀ ಆಲಯದ ಪಕ್ಕದಲ್ಲಿದೆ. ಪದ್ಮಾವತೀ ಅಮ್ಮನವರ ಆಲಯದ ಅರ್ಚಕರು, ಅಡಿಗೆಯವರು, ಆಳುಗಳು ಇಲ್ಲಿಯೂ ಕೆಲಸ ಮಾಡುತ್ತಿದ್ದರು. ಅರ್ಚಕರು ಮೊದಲು ಈ ಗುಡಿಯಲ್ಲಿ ಪ್ರಾತಃಕಾಲ, ಮಧ್ಯಾಹ್ನ, ರಾತ್ರಿ ಪೂಜೆಗಳನ್ನು ಮಾಡಿ ಮುಗಿಸಿದ ನಂತರ ಪದ್ಮಾವತೀ ಅಮ್ಮನವರ ಗುಡಿಯಲ್ಲಿ ಪೂಜಾದಿಗಳನ್ನು ನೆರವೇರಿಸುತ್ತಿದ್ದರು. ಅಡಿಗೆಯವರು ಪದ್ಮಾವತೀ ಅಮ್ಮನವರ ನಿವೇದನೆಗಾಗಿ ಪ್ರಸಾದಗಳ ಅಡುಗೆ ಮಾಡುವಾಗಲೇ ಈ ದೇವರಿಗೂ ಸಿದ್ಧಮಾಡುತ್ತಿದ್ದರು. ನೈವೇದ್ಯ ಮಾತ್ರ ಕೃಷ್ಣಸ್ವಾಮಿಗೆ ಮೊದಲು ನಂತರ ಪದ್ಮಾವತೀ ಅಮ್ಮನವರಿಗೆ ನಡೆಯುತ್ತಿದ್ದಿತು.

**7. ತಿರುಚಾನೂರು ಪದ್ಮಾವತೀ ಅಮ್ಮನವರ ದೇವಾಲಯ:**

ಆಲಯದ ಆರ್ಥಿಕ ಸ್ಥಿತಿ ಸಂಪನ್ನವಾಗಿಯೇ ಇದ್ದಿತು. ಸಾಮಾನ್ಯ ಆದಾಯ 80 ಪುಲಿವರಹ, 17 ಮೈಲಿ, 19 ಕಾಸುಗಳು, ಭೂಮಿ ಕಾಣಿಯ ಗುತ್ತಿಗೆಯಿಂದ ಬಂದ ಹಣ 66 ಪುಲಿವರಹ, 23 ಮೈಲಿ, 26ಕಾಸು, ಕಾಣಿಕೆಯ ಹಣ 57 ಪುಲಿವರಹ, 8 ಮೈಲಿ 60 ಕಾಸುಗಳಾದರೆ ದಾನಗಳಿಂದ ಬಂದದ್ದು 368 ಪುಲಿವರಹ, 35 ಮೈಲಿ, 9 ಕಾಸುಗಳಾಗಿದ್ದವು - ಎಂದರೆ ಒಟ್ಟು ಸ್ಥೂಲವಾಗಿ 2280 ರೂಪಾಯಿಗಳಾಗಿದ್ದವು.

ಈ ಆಲಯದಲ್ಲಿ ಪ್ರಚಲಿತವಾಗಿದ್ದ ಒಂದು ವಿಶಿಷ್ಟವಾದ ವಿತರಣ ವಿಧಾನವೆಂದರೆ ಎರಡನೇ ಶುಕ್ರವಾರಗಳ ದೀಪಾರಾಧನೆ, ಪೂಜೆಗಳಿಗಾಗಿ ಮಾತ್ರವೇ ಕಾಣಿಕೆಯನ್ನು ಬಳಸಲಾಗುತ್ತಿದ್ದಿತು. ಇಲ್ಲಿನ ಮೇಳದವರಿಗೆ ಇನಾಂ ಆಗಲೀ, ಸಂಬಳವಾಗಲೀ ಇರಲಿಲ್ಲ. ಸ್ವಲ್ಪ ಮಾತ್ರದ ಪ್ರಸಾದವನ್ನು ನೀಡಲಾಗುತ್ತಿದ್ದಿತು. ಇದರಿಂದಾಗಿ ಅವರು ಮೂರೂ ಹೊತ್ತಿನ ಪೂಜೆಗಳಲ್ಲಿ ತಮ್ಮ ಮೇಳದ ಸೇವೆಯನ್ನು ಸಲ್ಲಿಸುತ್ತಿರಲಿಲ್ಲ.

ಈ ಆಲಯದಲ್ಲಿ ಇಬ್ಬರು ಧರ್ಮಕರ್ತರು ಇದ್ದರು. ವಸ್ತು ಸಾಮಗ್ರಿಗಳನ್ನು ತೆಗೆದುಕೊಂಡು ಅಡಿಗೆಯವರಿಗೆ ಪ್ರಸಾದಕ್ಕೆ ಬೇಕಾಗುವಷ್ಟು ವಸ್ತುಗಳನ್ನು ಕೊಡುತ್ತಿದ್ದರು. ಇಲ್ಲಿ ಒಬ್ಬ ಅರ್ಚಕ, ಒಬ್ಬ ಬೊಕ್ಕಸದ ಗುಮಾಸ್ತ, ಒಬ್ಬ ಅಡಿಗೆಯವನು - ಇದ್ದರು. ಇವರೊಂದಿಗೆ ಕೃಷ್ಣಾಪುರದ ಪಾಳಯಗಾರರ ಆಳುಗಳು ಕೂಡ ಇದ್ದು. ಅವರು ತಿರುಪತಿಯಿಂದ ವಸ್ತುಗಳನ್ನು ತಂದುಕೊಡುತ್ತಿದ್ದರು.

ಅರ್ಚಕರು ಬೆಳಗ್ಗೆ 8 ರಿಂದ 10 ಗಂಟೆಯವರೆಗೆ , 11 ರಿಂದ 12 ಗಂಟೆಯವರೆಗೆ, ಸಂಜೆ 8ರಿಂದ 10 ರ ವರೆಗೆ ಪೂಜೆ ಮಾಡಿ ಶಯನ ಸೇವೆಯ ಏರ್ಪಾಡು ಮಾಡುತ್ತಿದ್ದರು. ಶುಕ್ರವಾರಗಳಲ್ಲಿ ಪ್ರತ್ಯೇಕವಾದ ಪೂಜೆ ಗಳಿರುತ್ತಿದ್ದವು - ಇವು ಉತ್ಸವ ಮೆರವಣಿಗೆಗಳು ನಡೆಯುವ ದಿನಗಳು.

**8. ತಿರುಚಾನೂರು ಶ್ರೀ ಸೂರ್ಯನಾರಾಯಣಸ್ವಾಮಿ ಆಲಯ:**

ಸಾಪೇಕ್ಷವಾಗಿ ಅಷ್ಟೊಂದು ಸಂಪನ್ನವಾಗಿರದಿದ್ದ ಆಲಯವಾಗಿದ್ದು, 6 ಪುಲಿವರಹ, 33 ಮೈಲಿ, 10 ಕಾಸುಗಳ ಸಾಮಾನ್ಯ ಆದಾಯ, ಕಾಣಿಕೆಗಳ ಆದಾಯ 3 ಪುಲಿವರಹ, 28 ಮೈಲಿ, 10 ಕಾಸುಗಳಾಗಿ ಒಟ್ಟು ಸ್ಥೂಲವಾಗಿ 80 ರೂಪಾಯಿ ಮಾತ್ರವಾಗಿದ್ದಿತು ತಿರುಪತಿಯ ಕೋದಂಡರಾಮಸ್ವಾಮಿ ಆಲಯದ ಅರ್ಚಕ ಪಟ್ಟು ತಾತಾಚಾರಿಯು ಆಲಯದ ಇನಾಂ ಭೂಮಿಯನ್ನು ಅನುಭವಿಸುತ್ತಿದ್ದು ಅವರ ಗುಮಾಸ್ತನು ಆಲಯದಲ್ಲಿ ದೇವರಿಗೆ ದಿನಕ್ಕೆ ಒಂದು ಹೊತ್ತು ಮಾತ್ರವೇ ಪೂಜೆ ಮಾಡುತ್ತಿದ್ದನು.

**9. ಕಪಿಲೇಶ್ವರಸ್ವಾಮಿ ಆಲಯ - ತಿರುಪತಿ:**

ಈ ಆಲಯಕ್ಕೆ ಸಾಮಾನ್ಯ ಆದಾಯದ ಬಾಬತ್ತು 50 ಪುಲಿವರಹ, 11 ಮೈಲಿ, 20 ಕಾಸು ಮಾತ್ರವೇ. ಇದು ಸ್ಥೂಲವಾಗಿ 200 ರೂಪಾಯಿಗೆ ಸಮನಾಗುತ್ತದೆ. ಇಲ್ಲಿ ಧರ್ಮಕರ್ತರು ಇರಲಿಲ್ಲ, ಕಾರಣ ಯಾವುದೇ ಧರ್ಮ ದಾನಗಳೂ ಇರಲಿಲ್ಲ.

ಅರ್ಚಕ ಮತ್ತು ಅವನ ಗುಮಾಸ್ತರು ಕೆಲಸ ಮಾಡುತ್ತಿದ್ದರು. ಕರಕಂಬಾಡಿಯ ಪಾಳಯಗಾರನು ಆಲಯದ ರಕ್ಷಣಾರ್ಥವನ್ನು ಹೊತ್ತಿದ್ದನು. ಪೂಜೆ ಒಂದು ಹೊತ್ತು ಮಾತ್ರ ನಡೆಯುತ್ತಿದ್ದಿತು.

**10. ತಿರುಪತಿಯ ಹನುಮಂತರಾಯಸ್ವಾಮಿ:**

ಇದರ ಬಗೆಗಿನ ಮಾಹಿತಿ ಆಸಕ್ತಿಯನ್ನುಂಟು ಮಾಡುವಂತಹದ್ದು, ಅದು ಹೀಗೆ -

ವೇದಾಂತಪುರ ಅಗ್ರಹಾರದಲ್ಲಿ ಸ್ಥಾಪಿಸಲು ಈ ವಿಗ್ರಹವನ್ನು ಮುಸ್ತಜರು ಶ್ರೀನಿವಾಸಾಚಾರಿಯು ಕೆತ್ತಿಸಿದ. ಆದರೆ ಅಲ್ಲಿ ಈ ವಿಗ್ರಹಕ್ಕೆ ಪೂಜಾ ಸೌಲಭ್ಯವಿಲ್ಲವಾಯಿತು. ಜೊತೆಗೇ ಗ್ರಾಮವು ಒಂದು ಬೆಂಕಿಯ ಆಕಸ್ಮಿಕದಲ್ಲಿ ನಷ್ಟವಾಯಿತು. ಹೀಗಾಗಿ ಅಲ್ಲಿನ ಗ್ರಾಮಸ್ಥರು ಈ ವಿಗ್ರಹವನ್ನು ತೆಗೆದುಕೊಂಡು ಬಂದು ಕಪಿಲತೀರ್ಥದ ರಸ್ತೆಯಲ್ಲಿ ನಿಲ್ಲಿಸಿದರು. ಮೊದಲಿಗೆ ಉತ್ತರ ಭಾರತದಿಂದ ಬಂದ ಒಬ್ಬ ಬೈರಾಗಿಯು ಇದಕ್ಕೆ ಪೂಜೆ ಮಾಡುತ್ತಿದ್ದ. ಮದರಾಸಿನಿಂದ ಒಬ್ಬ ಗುಜರಾತಿಯು ವೆಂಕಟೇಶ್ವರಸ್ವಾಮಿಯ ದರ್ಶನಕ್ಕೊಂದು ನಲವತ್ತು ವರ್ಷಗಳ ಮೊದಲು ಇಲ್ಲಿಗೆ ಬಂದಾಗ (ಸುಮಾರು ಕ್ರಿ.ಶ. 1780 ರಲ್ಲಿ) ಮರದ ಕಂಭಗಳಿಂದ ಮಾಡಿದ ಗುಡಿಯೊಂದನ್ನು ಈ ವಿಗ್ರಹಕ್ಕೆಂದು ಕಟ್ಟಿಸಿದ. ಫಸಲಿ 1209 ರಲ್ಲಿ (ಕ್ರಿ.ಶ.1801) ಮುಸ್ತಜರು ಗುಮಾಸ್ತೆಯಾಗಿದ್ದ ಸಾಮಿಸೆಟ್ಟಿಯು ವಿಗ್ರಹದ ಪೂಜೆಗಳಿಗಾಗಿ ಪದಾರ್ಥಗಳ ಪ್ರಾವಧಾನ ಮಾಡಿದನು. ಕಂಪನಿಯವರು ಆಡಳಿತವನ್ನು ವಹಿಸಿಕೊಂಡಾಗ ಈ ಕೊಡುಗೆಯನ್ನು ಅಂಗೀಕರಿಸಿದರು. ಇದೇ ಜಾರಿಗೆ ಬಂದಿತು ಎಂದರೆ 20-4--13 ಪುಲಿವರಹಗಳು.

**11. ತಿರುಪತಿಯ ಸಂಜೀವರಾಯಸ್ವಾಮಿ ಆಲಯ**

ತಿರುಪತಿಯ ಗಾಂಧಿ ರಸ್ತೆಯ ಹತಿರಾಮಜೀ ಮಠದ ಎದುರಿಗೆ ಇರುವ ಆಂಜನೇಯ ಸ್ವಾಮಿಯ ಆಲಯವೇ ಸಂಜೀವರಾಯಸ್ವಾಮಿ ಆಲಯ. ಈ ವಿಗ್ರಹವನ್ನು ಇದೇ ಮಂಟಪದಲ್ಲಿ ಪೂಜೆಯಿಲ್ಲದಂತೆ ಇಡಲಾಗಿದ್ದಿತು. ಫಸಲಿ 1204 ವರ್ಷದಲ್ಲಿ (ಕ್ರಿ.ಶ. 1795) ಕೇಸರಿಸಿಂಗನು ಇದನ್ನು ಪ್ರತಿಷ್ಠಾಪಿಸಿ, ಇದರ ನೈವೇದ್ಯಕ್ಕೆ ವಸ್ತುಗಳ ಪರವಾನಗಿಯನ್ನು ಪಡೆದ. ಇದನ್ನೇ ಕಂಪನಿ ಸರ್ಕಾರವು ಒಪ್ಪಿ ನಡೆಯಿತು.

**12. ತಿರುಪತಿಯ ಮಣವಾಳ ಮಹಾಮುನಿ ಆಲಯ:**

ಇದೊಂದು ಕಿರಿಯ ಆಲಯವೇ ಆದರೂ ಖಚಿತವಾದ ಆದಾಯದ ಆಲಯವಾಗಿದ್ದಿತು. ಸಾಮಾನ್ಯ ಆದಾಯದ ಬಾಬತ್ತಿನಲ್ಲಿ 2 ಪುಲಿವರಹ 22 ಮೈಲಿ 8 ಕಾಸುಗಳೂ, ಕಾಣಿಕೆಗಳಿಂದ 3 ಪುಲಿವರಹ 3 ಮೈಲಿ, 41 ಕಾಸು, ಮತ್ತಿತರ ಆದಾಯದ ಶೀರ್ಷಿಕೆಯಡಿಯಲ್ಲಿ 34 ಪುಲಿವರಹ, 1 ಮೈಲಿ, 29 ಕಾಸು - ಹೀಗೆ ಒಟ್ಟು ಸ್ಥೂಲವಾಗಿ 120 ರೂಪಾಯಿಗಳ ಆದಾಯ ಹೊಂದಿದ್ದಿತು.

ಆಚಾರ್ಯ ಪುರುಷ ವೀರವಳ್ಳಿ ಅಪ್ಪಲಾಚಾರ್ಯರು ಇದರ ಧರ್ಮಕರ್ತರಾಗಿದ್ದು ನಂತರ ವೀರವಳ್ಳಿ ಅರಂಗಂ ವರದಯ್ಯನ ಧರ್ಮಕರ್ತನಾದ. 400 ವರ್ಷದ ಹಿಂದೆ ಈತನು ತನ್ನ ಇನಾಂ ಭೂಮಿಯಲ್ಲಿ ಒಂದು ಆಲಯ ನಿರ್ಮಿಸಿ (ಕಪಿಲತೀರ್ಥದ ರಸ್ತೆಯಲ್ಲಿದ್ದ ಸಿಂಧೂರ ಹನುಮಂತರಾಯಸ್ವಾಮಿ ಗುಡಿಯ ಪಕ್ಕದಲ್ಲಿ) ವಿಗ್ರಹವನ್ನು (ಮಾಮುನಿ ವಿಗ್ರಹವನ್ನು) ಪ್ರತಿಷ್ಠಾಪಿಸಿದ. ಆ ಸ್ಥಳದ ಊರಿನ ವಿಸ್ತರಣವು ನಾಶವಾಗಲು ಇನ್ನೂರು ವರ್ಷಗಳ ಕೆಳಗೆ ಆತನ ವಾರಸನಾದ ಕೋನಪ್ಪಾಚಾರ್ಯನು ವಿಗ್ರಹವನ್ನು ತಂದು ಗೋವಿಂದರಾಜಸ್ವಾಮಿ ಆಲಯದ ಎರಡನೆಯ ಪ್ರಾಕಾರದ ಹೊರಗೆ ಸನ್ನಿಧಿಯಲ್ಲಿದ್ದ (ಎದುರು ಬೀದಿಯಲ್ಲಿದ್ದ) ಒಂದು ಮಂಟಪದಲ್ಲಿ ಸ್ಥಾಪಿಸಿದನು.

**13. ತಿರುಪತಿಯ ನಮ್ಮಾಳ್ವಾರ್ ಆಲಯ:**

ಈ ಆಲಯದ ಆದಾಯ 13 ಪುಲಿವರಹ, 2 ಮೈಲಿ, ಅಥವಾ ಸ್ಥೂಲವಾಗಿ ಐವತ್ತು ರೂಪಾಯಿ. ಇಲ್ಲಿ ಧರ್ಮಕರ್ತರು ಯಾರೂ ಇರಲಿಲ್ಲ. ಪ್ರತಿದಿನವೂ ಒಂದೇ ಬಾರಿ ಪೂಜೆ ಆಗುತ್ತಿತ್ತು. ರಾತ್ರಿಯ ಹೊತ್ತು ದೀಪವಿರುತ್ತಿದ್ದಿತು. ಈ ಆಲಯವನ್ನೊಹನೇರಿ ಮಹಾರಾಯನು ನಿರ್ಮಿಸಿದನೆಂದು ಹೇಳಲಾಗಿದೆ.

**14. ತಿರುಪತಿಯ ಶ್ರೀ ವೇದಾಂತ ದೇಶಿಕ ಆಲಯ:**

ಸಾಧಾರಣ ಆದಾಯವು 9 ಪುಲಿವರಹ 28 ಮೈಲಿ 8 ಕಾಸು ಆಗಿದ್ದಿತು. ಭೂಮಿಕಾಣಿಯಿಂದ 8 ಪುಲಿವರಹ 33 ಮೈಲಿ, 16 ಕಾಸು ಆದಾಯವಿದ್ದಿತು. ಉಭಯದ ಆದಾಯ 4 ಪುಲಿವರಹ 13 ಮೈಲಿ 8 ಕಾಸು ಒಟ್ಟು ಸ್ಥೂಲವಾಗಿ 85 ರೂಪಾಯಿ.

60 ವರ್ಷಗಳ ಹಿಂದೆ ಮುಸ್ತಜರು ಶ್ರೀನಿವಾಸಾಚಾರ್ಯ ಈ ಆಲಯದ ಗರ್ಭಗುಡಿಯನ್ನು ಜೀರ್ಣೋದ್ಧಾರ ಮಾಡಿ, ನೆಲವನ್ನು ಸಪಾಟು ಮಾಡಿ, ಸರ್ಕಾರದಿಂದ ತಸ್ತೀಕು ಹಣವನ್ನು ಮಂಜೂರು ಮಾಡಿದನು. ಈ ದಾಖಲೆಯ ಸಮಯದಲ್ಲಿ ಮೂಢೂಷಿ ತಾಮರಪು ತಾತಾಚಾರ್ಯರ ಪರವಾಗಿ ಅರ್ಚಕತ್ವದ ಕೆಲಸಗಳನ್ನು ಶೇಷಾದ್ರಿ ಅಯ್ಯಂಗಾರ್ಯನು ಮಾಡುತ್ತಿದ್ದು ಗರ್ಭಗುಡಿಯ ಸುತ್ತ ಕಂಭಗಳ ಆವರಣ ನಿರ್ಮಿಸಿದ. ಈ ಆಲಯಕ್ಕೆ ಉಭಯಕ್ಕಾಗಿ ಇನಾಂ ಜಮೀನು ಇದ್ದಿತು.

**15. ಉಳ್ ಆಳ್ವಾರ್ ಆಲಯ :**

ಆಲಯದಲ್ಲಿ ಹಚ್ಚಬೇಕಾಗಿದ್ದ ದೀಪಕ್ಕೂ ಸಾಲದಷ್ಟು ಆದಾಯ ಇದ್ದಿತು. ನಲವತ್ತು ಮೈಲಿ ಇಪ್ಪತ್ತ ನಾಲ್ಕು ಕಾಸು. ಗೋವಿಂದರಾಜಸ್ವಾಮಿ ಆಲಯದ ಅರ್ಚಕನ ಗುಮಾಸ್ತೆಯು ದಿನವೂ ಬೆಳಗ್ಗೆ ರಾತ್ರಿಗಳಲ್ಲಿ ಪೂಜೆ ಮಾಡುತ್ತಿದ್ದನು. ಒಬ್ಬರಾದ ಮೇಟೆಬ್ಬರಂತೆ ಕಂದಾಳ ಅಪ್ಪಲಾಚಾರಿ ಹಾಗೂ ಗೋವಿಂದಾಚಾರಿಗಳು ಪರಿಚಾರಕರಾಗಿ ಕೆಲಸ ಮಾಡುತ್ತಿದ್ದರು. ಗೋವಿಂದರಾಜಸ್ವಾಮಿ ಆಲಯದಿಂದ ಕೊಡಮಾಡಲಾದ ನಾಲ್ಕು ಪಡಿ ಅನ್ನದ ನೈವೇದ್ಯವಾಗುತ್ತಿದ್ದಿತು. ಗೋವಿಂದರಾಜಸ್ವಾಮಿಯ ಆಲಯದ ಪ್ರದಕ್ಷಿಣಾಪಥದ ದಕ್ಷಿಣದಲ್ಲಿ ಆಲಯದ ಉತ್ಸವ ಮೂರ್ತಿಯನ್ನು ಇಡಲಾಗಿದ್ದಿತು.

**16. ಮೂವರು ಮೊದಲಾಳ್ವಾರರ ಆಲಯ :**

ಪೆರಿ ಆಳ್ವಾರ್, ತೊಂಡರಡಿಪ್ಪೊಡಿ ಆಳ್ವಾರ್, ತಿರುಪ್ಪಾಣಿ ಆಳ್ವಾರರುಗಳಿದ್ದ ಈ ಆಲಯವನ್ನು ಉಪ ಆಲಯವೆಂದು ಭಾವಿಸಲಾಗಿದ್ದಿತು. ಈ ಆಲಯದ ಪೂಜಾ ವಿಧಾನವು (ಅಲಿಪಿರಿಯಲ್ಲಿ ಇದ್ದ ಪೆರಿಯಾಳ್ವಾರರ ಆಲಯದ ಪೂಜಾದಿಗಳ ನಿರ್ವಹಣೆಯ ಜೊತೆಗೆ ) ಕಂದಾಳ ಅಪ್ಪಲಾಚಾರಿ ಮತ್ತಿತರರಿಗೆ ಸೇರಿದ್ದಿತು. ಇವೆಲ್ಲ ಪ್ರಾಚೀನ ದೇವಾಲಯಗಳು. ಮುನ್ನೂರು ವರ್ಷಗಳ ಹಿಂದೆ ರಾಮಸ್ವಾಮಿ ಮಹಾರಾಯನು ಈ ಗುಡಿಯನ್ನು ನಿರ್ಮಿಸಿ, ಗೋಪುರವನ್ನೂ ಪ್ರಾಕಾರವನ್ನೂ ಕಟ್ಟಿದನು. 150 ವರ್ಷಗಳ ಹಿಂದೆ ಒಬ್ಬ ದೊಡ್ಡ ಲಾಲಾ ಉತ್ತರದೇಶದಿಂದ ಬಂದಾಗ ಈಗಿನ ಪರಿಚಾರಕ ಅಪ್ಪಲಾಚಾರಿಯ ಮುತ್ತಾತ ಅಪ್ಪಲಾಚಾರಿಯು ಪೆರಿಯಾಳ್ವಾರ್, ತೊಂಡರಡಿ ಪೊಡಿಯಾಳ್ವಾರ್ ವಿಗ್ರಹಗಳನ್ನು ಗೋವಿಂದರಾಜ ಪಟ್ಟಣಕ್ಕೆ (ತಿರುಪತಿಗೆ) ತಂದರು. ತಿರುಪ್ಪಾಣಿ ಆಳ್ವಾರರ ವಿಗ್ರಹವನ್ನು ಪಂಚಮರು ಒಯ್ದರು. ಮುಖ್ಯ ವಿಗ್ರಹಗಳು ತುಸು ಮುಕ್ಕಾಗಿದ್ದು ಅವುಗಳ ಪೂಜೆ ಬಹುಕಾಲ ನಿಂತು ಹೋಯಿತು. ಸರ್ಕಾರದ ಅನುಮತಿಯೊಡನೆ ಗೋವಿಂದಾಚಾರಿಯು ಇವುಗಳನ್ನು ಗೋವಿಂದರಾಜಸ್ವಾಮಿ ಆಲಯದ ದಕ್ಷಿಣ ಮಂಟಪದಲ್ಲಿ ಪ್ರತಿಸ್ಥಾಪನೆಗೊಳಿಸಿ, ಮರದ ಬಾಗಿಲುಗಳನ್ನು ಇಡಿಸಿ, ಇವುಗಳ ಪೂಜೆಗೆ, ನಂದಾದೀಪಕ್ಕೆ ಏರ್ಪಡಿಸಿದನು.

**17. ತಿರುಮಂಗೈ ಆಳ್ವಾರ್ ಆಲಯ:**

ಕಪಿಲತೀರ್ಥದ ರಸ್ತೆಯಲ್ಲಿ ಪೂರ್ವಕ್ಕೆ ಇರುವಂತಹ ತಿರುಮಂಗೈ ಆಳ್ವಾರ್ ಆಲಯವು ನಂತರದ ಪರಿಗಣನೆಗೆ ಬರುವ ಆಲಯ. ಇದು ಜೀರ್ಣಶೀರ್ಣವಾಗಿದ್ದು, ಚಿನ್ನ ಜಿಯಂಗಾರ್ಯರ ನಿರ್ವಹಣೆಯಲ್ಲಿದ್ದಿತು. ಇದನ್ನು ಕೃಷ್ಣರಾಯರು ನಿರ್ಮಿಸಿದರು ಎನ್ನಲಾಗಿದೆ. ಇದರ ಹತ್ತಿರದಲ್ಲಿ ವಾಸದ ಮನೆಗಳು ಯಾವುವೂ ಇಲ್ಲ. ಹಾಗಾಗಿ ಐವತ್ತು ವರ್ಷಗಳ ಹಿಂದೆ ಇಲ್ಲಿನ ಉತ್ಸವ ಮೂರ್ತಿಯನ್ನು ತಂದು ಪೆರಿಯಾಳ್ವಾರ್ ಮತ್ತಿತರ ವಿಗ್ರಹಗಳ ಜೊತೆಯಲ್ಲಿಡಲಾಯಿತು. ಆ ವಿಗ್ರಹಗಳ ಜೊತೆಗೇ ಇದಕ್ಕೂ ಪೂಜೆ ನೈವೇದ್ಯ ನಂದಾದೀಪಗಳ ಸೇವೆ ನಡೆಯುತ್ತಿದೆ. ಮೂಲವಿಗ್ರಹ ಮುಕ್ಕಾಗಿದೆ.

**18. ಕುಲಶೇಖರಾಳ್ವಾರ್ ಆಲಯ:**

ಕುಲಶೇಖರ ಆಳ್ವಾರ್ ಆಲಯವನ್ನೂ ಸಹ ಉಪ ಆಲಯವೆಂದೇ ಗಣಿಸಲಾಗಿದೆ. ಕಪಿಲತೀರ್ಥದ ರಸ್ತೆಯ ಪಶ್ಚಿಮಕ್ಕೆ ಈ ಆಲಯವಿದ್ದಿತು ಎನ್ನಲಾಗಿದೆ. ಅಯೋಧ್ಯೆಯ ರಾಮಾನುಜ ಅಯ್ಯಂಗಾರ್ ಇದರ ನಿರ್ಮಾಣ ಮಾಡಿದರೆನ್ನಲಾಗಿದೆ. ಹಿರಿಯರಿಂದ ನೋಡಿ ಕೊಳ್ಳಲ್ಪಡುತ್ತಿದ್ದ ಆಲಯ ನಗರದಿಂದ ದೂರವಾಗಿದ್ದು, ಜೀರ್ಣವಾಗಿದ್ದು, ಇದರ ಉತ್ಸವವಿಗ್ರಹವನ್ನು ಪೆರಿಆಳ್ವಾರುಗುಡಿಗೆ ತಂದು ಇಡಲಾಗಿದ್ದಿತು. ಬೋಯಿಗಳು (ಅಟವಿಕರು) ಈ ಆಲಯದ ಸೇವೆ ಮಾಡುತಿತ್ತದ್ದರು. ಇತರ ವಿಗ್ರಹಗಳ ಜೊತೆಯಲ್ಲೇ ಈ ವಿಗ್ರಹಕ್ಕೂ ಪೂಜೆ ನಡೆಯುತ್ತಿದ್ದಿತು.

**19. ತಿರುಮಲನಂಬಿ ಆಲಯ :**

ಗೋವಿಂದರಾಜಸ್ವಾಮಿ ಆಲಯದಲ್ಲಿದ್ದ ಈ ಉಪ ಆಲಯಕ್ಕೆ ಪುಲಿ 1 - 38 - 67 ರಷ್ಟು ಸಾಧಾರಣ ಆದಾಯವೂ, ತೋಳಪ್ಪಾಚಾರಿಯ ಉಭಯದಿಂದ ಪುಲಿ 25 - 12 - 49 ಆದಾಯವೂ (ಒಟ್ಟು 110 ರೂಪಾಯಿ) ಇದ್ದಿತು. ಗೋವಿಂದರಾಜ ಸ್ವಾಮಿ ಆಲಯದ ಅರ್ಚಕರ ಗುಮಾಸ್ತೆಯು ಪೂಜೆಗಳನ್ನು ನಡೆಸುತ್ತಿದ್ದು, ಗೋವಿಂದರಾಜಸ್ವಾಮಿ ಆಲಯದಿಂದಲೇ ನೈವೇದ್ಯದ ಪಡಿ ಸಂದಾಯವಾಗುತ್ತಿದ್ದಿತು.

**20. ಕೂರತ್ತಾಳ್ವಾರ್ ಆಲಯ :**

ನಂತರದ್ದು ಎಂದರೆ ಕೂರತ್ತಾಳ್ವಾರ್ ಆಲಯ. ಸಾಧಾರಣ ಆದಾಯ ಪುಲಿ 3-39- 0 ಹಾಗೂ ಗುತ್ತಿಗೆ ಆದಾಯವು ಪುಲಿ 23 - 12 - 53 ಆಗಿ ಒಟು ಸ್ಥೂಲವಾಗಿ 120 ರೂಪಾಯಿ ಆಗಿದ್ದಿತು. ಅರ್ಚಕನು ಬೆಳಗ್ಗೆ ರಾತ್ರಿ ಪೂಜೆ ನಿರ್ವಹಿಸುತ್ತಿದ್ದನಾದರೆ, ಇತರ ಪರಿಚರ್ಯೆಯನ್ನು ಕೂರತ್ತಾಳ್ವಾನ್ ಅನಂತಾಚಾರಿಯು ನಡೆಸುತ್ತಿದ್ದ. ಎರಡೂ ಕಾಲ ಪೂಜೆಗಳಲ್ಲಿ ಒಟ್ಟು ನಾಲ್ಕು ಪಡಿನೈವೇದ್ಯ ಸಮರ್ಪಿಸಲಾಗುತ್ತಿದ್ದಿತು. ವೆಂಕಟಪತಿ ರಾಯನ ಆಡಳಿತದ ಕಾಲದಲ್ಲಿ ಆತನ ಗುರುವಾದ ದೊಡ್ಡಯ್ಯಾಚಾರ್ಯ ಭಟ್ಟರು. (ಕೂರತ್ತಾಳ್ವಾನ್ ವಂಶೀಕರು ) ತನ್ನ ಆಗ್ರಹಾರದಲ್ಲಿಯೇ ಬಂಧುಗಳ ನೆರವಿನಿಂದ ಅನಂತಾಳ್ವಾನನ ಗುಡಿ ಕಟ್ಟಿಸಿ ವಿಗ್ರಹವನ್ನು ಪ್ರತಿಷ್ಠಿಸಿದರು. ಜೊತೆಗೇ ತಿರುಮಳಿಶೈ ಆಳ್ವಾರರ ವಿಗ್ರಹವನ್ನೂ ಸ್ಥಾಪಿಸಿದರು. ಭಕ್ತಿಸಾರ ಪುರವೆಂಬ ಈ ಗ್ರಾಮ ಮುಂದಕ್ಕೆ ಹೇಳ ಹೆಸರಿಲ್ಲದಂತಾಯಿತು. ಮುಸ್ತಜರು ರಘುನಾಥಚಾರ್ಯನ ಕಾಲದಲ್ಲಿ ಸೈಯದ್ ಮಹಮದನು ಈ ಗ್ರಾಮಕ್ಕೆ ಬಂದಾಗ, ಭಟ್ಟರ ವಂಶದ ಕೃಷ್ಣಮಾಚಾರಿಯು ಅವನ ಅಳಿಯ ಮಾಡಭೂಷಿ ಗೋವಿಂದಾಚಾರಿಗೆ ಈ ಆಲಯದ ತಾಮ್ರಶಾಸನವನ್ನು ಒಪ್ಪಿಸಿದನು. ಪ್ರತಿಯಾಗಿ ಗೋವಿಂದಾಚಾರಿಯು ಕೀಲಕ ನಾಮ ಸಂವತ್ಸರದಲ್ಲಿ ಎರಡು ವಿಗ್ರಹಗಳನ್ನು ಗೋವಿಂದರಾಜಸ್ವಾಮಿ ಆಲಯದ ಒಂದು ಮಂಟಪಕ್ಕೆ ತಂದು ಪ್ರತಿಷ್ಠಾಪನೆ ಮಾಡಿದನು.

**21. ಭಾಷ್ಯಕಾರರ ಆಲಯ:**

ನಂತರದ ಆಲಯವೆಂದರೆ ಭಾಷ್ಯಕಾರರದ್ದು ( ರಾಮಾನುಜರದ್ದು) ಇದರ ಸಾಧಾರಣ ಆದಾಯ ಪುಲಿ 38 - 40-32 ಅಥವಾ 160 ರೂಪಾಯಿ. ಅದರಲ್ಲಿ ಬೆಳಗಿನ ಪೂಜೆಯು ಅರ್ಚಕನಿಂದ ನಡೆದರೆ ರಾತ್ರಿ ಪೂಜೆಯನ್ನು ಗೌರವ ಧರ್ಮಕರ್ತರಾದ ಪೆದ್ದ ಜಿಯಂಗಾರ್ಯರ ಪರವಾಗಿ ವೆಂಗಪುರದ ರಾಘವಾಚಾರಿಯು ನಾಲ್ಕು ಪಡಿ ಅನ್ನಪ್ರಸಾದ ನಿವೇದನೆಯೊಡನೆ ನಡೆಸುತ್ತಿದ್ದನು. ನಿವೇದಿತವಾದ ಪ್ರಸಾದವನ್ನು ಪರಿಚಾರಕನು ಪಡೆಯುತ್ತಿದ್ದನು. ಆಲಯವನ್ನು ಕಟ್ಟಿದ್ದು ಕಾಡವ ಯಾದವರಾಯನಾದರೆ ಭಾಷ್ಯಕಾರರ ವಿಗ್ರಹವನ್ನು ಅವರ ಬಂಧುವಾದ ಎಂಬಾರ್ ಅವರು ಪ್ರತಿಷ್ಠಿಸಿದರೆಂದು ಹೇಳಲಾಗಿದೆ.

**22. ತಿರುಮಂಗೈ ಆಳ್ವಾರ್ ಆಲಯ:**

ನಂತರದ್ದೇ ತಿರುಮಂಗೈ ಆಳ್ವಾರ್ ಆಲಯ. ಇದರ ಸಾಧಾರಣ ಆದಾಯ ಪುಲಿ 4-14-61 ಉಭಯಗಳಿಂದಾದ ಆದಾಯ ಪುಲಿ 5-31-13 ಅಥವಾ ಅಂದಾಜು 40 ರೂಪಾಯಿಗಳು. ಅರ್ಚಕ ಗುಮಾಸ್ತನು ಬೆಳಗ್ಗೆ ಪೂಜೆ ಮಾಡಿ ರಾತ್ರಿ ಪೂಜೆಯಲ್ಲಿ 4ಪಡಿ

ಅನ್ನವನ್ನು ನಿವೇದಿಸುತ್ತಿದ್ದನು. ಧರ್ಮಕರ್ತರಾದ ಚಿನ್ನಜಿಯರ ಪರವಾಗಿ ಕಂದಾಳ ರಾಮಾನುಜಾಚಾರಿಯು ಪೂಜೆ ನೈವೇದ್ಯ ಸಮರ್ಪಣೆ ಮಾಡುತ್ತಿದ್ದರು. ನಿವೇದನೆಯ ನಂತರ ತನ್ನ ಭಾಗವಾಗಿ ಪ್ರಸಾದಗಳನ್ನು ಪಡೆಯುತ್ತಿದ್ದನು. ಈ ಆಲಯವು ಕಪಿಲತೀರ್ಥಕ್ಕೆ ಹೋಗುವ ಹಾದಿಯ ಪೂರ್ವದಲ್ಲಿದ್ದಿತು. ಇದನ್ನು ಕೃಷ್ಣದೇವರಾಯನು ಕಟ್ಟಿಸಿದನೆಂದು ಹೇಳಲಾಗಿದೆ. ಸುತ್ತಮುತ್ತ ಯಾರೂ ಕಂಡು ಬರುವಂತಿರಲಿಲ್ಲ. ವಾಸದ ಮನೆಗಳೂ ಇರಲಿಲ್ಲ. ಜನ ಸಂಚಾರ ಹೇಳಿಕೊಳ್ಳುವಂತಹದಲ್ಲ. ಹೀಗಾಗಿ ಉತ್ಸವ ವಿಗ್ರಹವನ್ನು ತಂದು ಪೆರಿ ಆಳ್ವಾರರ ಆಲಯದಲ್ಲಿಡಲಾಯಿತು. ಇತರ ವಿಗ್ರಹಗಳೊಡನೆಯೇ ಇಲ್ಲಿ ಈ ವಿಗ್ರಹಕ್ಕೂ ಪೂಜೆ ನಡೆಯತೊಡಗಿತು. ಮೂಲ ಮೂರ್ತಿ ಮುಕ್ಕಾಗಿದ್ದಿತು.

ದಾಖಲೆಯ ಕೊನೆಯಲ್ಲಿ ಸೇರಿಸಲಾಗಿರುವ ಗಮನಿಕೆಯ ಅಂಶವೆಂದರೆ ಇಲ್ಲಿರುವ ಆಲಯಗಳ ಸಂಖ್ಯೆ 19 ಎಂದು ಹೇಳಲಾಗಿದ್ದರೂ , ಉಳ್ ಆಳ್ವಾರರ ಗುಡಿಯನ್ನು 15 ನೇ ಗುಡಿಯೆಂದು ಪೆರಿಯಾಳ್ವಾರ್, ತಿರುಮಂಗೈ ಆಳ್ವಾರ್, ಕುಲಶೇಖರ ಆಳ್ವಾರರ ವಿಗ್ರಹಗಳು ಇಲ್ಲಿರುವುದರಿಂದಾಗಿ ಗುರುತಿಸಿದ್ದರೂ ಈ ಆಲಯಗಳು ಜೀರ್ಣಾವಸ್ಥೆಯನ್ನು ಸೇರಿ, ವಿಗ್ರಹಗಳು ಮುಕ್ಕಾಗಿ, ಉತ್ಸವ ವಿಗ್ರಹಗಳನ್ನು ತಂದು ಪೆರಿ ಆಳ್ವಾರರ ಗುಡಿಯಲ್ಲಿಟ್ಟಿರುವುದರಿಂದ ಗೋವಿಂದರಾಜಸ್ವಾಮಿಯ ಗುಡಿಯ ಉತ್ತರದ ಕಡೆಗೆ ಎರಡನೆ ಪ್ರಾಕಾರಕ್ಕೆ ಹೊಂದಿಕೊಂಡಂತೆ ಇರುವುದು . (ಗಮನಿಕೆ - ತಿರುಮಂಗೈ ಆಳ್ವಾರರ ಗುಡಿಯ ಉಲ್ಲೇಖ 17 ಹಾಗೂ 22 ಆಗಿ ಎರಡು ಬಾರಿ ಬಂದಿರುವುದು. ಇದು ಕಪಿಲತೀರ್ಥದ ಹಾದಿಯಲ್ಲಿನ ಆಲಯ, ಚಿನ್ನಜೀಯರ್ ಆವರಿಂದ ಜೀರ್ಣೋದ್ಧಾರ ಹೊಂದಿ ನಿತ್ಯಪೂಜೆ ಉತ್ಸವಗಳು 20ನೇ ಶತಮಾನದ ಕೊನೆಯ ಹೊತ್ತಿಗೆ ಆರಂಭ ಆಗಿವೆ. - ಅನುವಾದಕ)

**4. ಕೈಂಕರ್ಯ ಪಟ್ಟಿ :** ಎರಡು ಬಾರಿ ಕೈಂಕರ್ಯಪಟ್ಟಿಯನ್ನು ತಯಾರಿಸಲಾಯಿತು. ಮೊದಲನೆಯದು ಫಸಲಿ 1211 ರಲ್ಲಿ (ಕ್ರಿ.ಶ. 1801), ಎರಡನೆಯದು ಫಸಲಿ 1230 ರಲ್ಲಿ (ಕ್ರಿ.ಶ.1820ರಲ್ಲಿ) ಫಸಲಿ 1211 ರಲ್ಲಿ ತಯಾರಿಸಿದ ಕೈಂಕರ್ಯ ಪಟ್ಟಿಯಲ್ಲಿ ಪ್ರತಿಯೊಬ್ಬ ಕೆಲಸಗಾರನೂ ತಾನು ಮಾಡುತ್ತಿದ್ದ ಕೆಲಸ ಅದಕ್ಕೆ ಪ್ರತಿಯಾಗಿ ಆತ ಪಡೆಯುತ್ತಿದ್ದ ಧನರೂಪದ, ವಸ್ತುರೂಪದ ಪ್ರತಿಫಲದ ವಿವರ, ತನ್ನ ಅಧೀನದಲ್ಲಿದ್ದ ಜಮೀನು, ಗ್ರಾಮಗಳ ವಿವರ, ಮತ್ತಿತರ ಸಂಬಂಧಪಟ್ಟ ವಿವರಗಳನ್ನು ಅವರವರು ಹೇಳಿದಂತೆಯೇ ದಾಖಲು ಮಾಡಲಾಯಿತು. ಮುಖ್ಯವಾಗಿ ನಾಲ್ಕು ಮಂದಿ ಅರ್ಚಕರ ಕುಟುಂಬಗಳು. ಇಬ್ಬರು ಜಿಯಂಗಾರ್ಯರು, ನಾಲ್ವರು ಏಕಾಂಗಿಗಳು, ಸರ್ಕಾರ್ ಅರ್ಚಕ, ಶ್ರೀರಾಮಾಲಯದ ಅರ್ಚಕ, ಆಚಾರ್ಯ ಪುರುಷರ ಏಳು ಕುಟುಂಬಗಳು, ಬೊಕ್ಕಸದ ಸಭೆಯವರು. ತಾಳ್ಲಪಾಕಂ ಕುಟುಂಬದವರು, ಗೊಲ್ಲಚಾರರು, ಪಲ್ಲೆಚಾರರು, ಮಹಂತ ಜಾನಕೀದಾಸ್ ದಯಾರಾಮ ಮಹಂತ (ಬಲಾಕಿರಾಮ ಮಠ) ತಿರುಪತಿ, ಮಂಗಾಪುರದ ಕರಣೀಕರು, ಕರಕಂಬಾಡಿ ಪಾಳಯಗಾರರು, ಕೃಷ್ಣಪುರಂ ಪಾಳಯಗಾರರು ಹಾಗೂ ಮಾಮಂಡೂರು ಪಾಳಯಗಾರರು ಅಧೀನದಲ್ಲಿರಿಸಿಕೊಂಡು ಅನುಭವಿಸುತ್ತಿದ್ದ ಗ್ರಾಮಗಳ ತಪಶೀಲು ನಡೆಸಿ ಪಟ್ಟಿ ಮಾಡಲಾಯಿತು. ಜಮೀನುಗಳು ಗ್ರಾಮಗಳಿಂದ ಬರತಕ್ಕ ಆದಾಯವೇ ಅಲ್ಲದೇ ಆಲಯ ಸೇವಾಕರ್ತರಲ್ಲಿ ವಂಶಪರಂಪರೆಯ ಸೇವೆ ಸಲ್ಲಿಸುತ್ತಿದ್ದ ಅರ್ಚಕರು ಹಾಗೂ ತಾಳ್ಲಪಾಕ ಕುಟುಂಬಗಳವರು ಗೌರವ ಸಂಭಾವನೆಯನ್ನೂ ಪ್ರಸಾದಗಳನ್ನೂ ಪಡೆಯುತ್ತಿದ್ದರು. ಜಿಯಂಗಾರರು ಹಾಗೂ ಆಚಾರ್ಯಪುರುಷರು ಉತ್ಸವಕಾಲದಲ್ಲಿ ಬರುವಂತಹ ವೈಷ್ಣವ ಅತಿಥಿಗಳ ಅಶನ ವಸತಿಗಳನ್ನು ನೋಡಬೇಕಾಗಿದ್ದಿತು. ಅಲ್ಲದೆ ಆಲಯ ಹಾಗೂ ಆಳ್ವಾರರ ಗುಡಿಗಳಲ್ಲಿ ವಿಶೇಷ ಉತ್ಸವ ದಿನಗಳಲ್ಲಿ ಉಭಯವನ್ನು ನೆರವೇರಿಸುತ್ತ, ಆಚಾರ್ಯಪುರುಷರು ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡಿ, ವೆಂಕಟೇಶ್ವರ ಹಾಗೂ ಗೋವಿಂದರಾಜಸ್ವಾಮಿ ಆಲಯಗಳಲ್ಲಿ ಪ್ರಬಂಧಗಳ ಪಾರಾಯಣವನ್ನು ಮಾಡಬೇಕಾಗಿದ್ದಿತು ಬೊಕ್ಕಸಂ ಸಭೆಯ ಮಂದಿಯು ಯಾವುದೇ ಗ್ರಾಮವನ್ನೂ ಹೊಂದಿದ್ದರೆಂಬ ವಿವರ ಇಲ್ಲಿ ಬಂದಿಲ್ಲ.

ಆಲಯದ ಸಂಬಳ ಪಡೆಯುತ್ತಿದ್ದವರಲ್ಲಿ ಉತ್ತರ ಪಾರುಪತ್ಯದಾರ ಮತ್ತಿತರ 17 ಮಂದಿ ಸಿಬ್ಬಂದಿಯನ್ನು ಹೇಳಲಾಗಿದ್ದರೂ ಎರಡೂ ಪಟ್ಟಿಯಲ್ಲಿಯೂ ಪಾರುಪತ್ಯದಾರರನ್ನು ಕುರಿತು ಹೇಳಿಯೇ ಇಲ್ಲ.

ಪಸಲಿ 1230 ರಂದು ಸಿದ್ಧಪಡಿಸಿದ ಎರಡನೆಯ ಕೈಂಕರ್ಯ ಪಟ್ಟಿಯು ಈ ವಿವರಗಳನ್ನು ತಿಳಿಸುತ್ತದೆಯೇ ಹೊರತು ಅವರ ಅನುಭವದಲ್ಲಿದ್ದ, ಸುಫರ್ದಿನಲ್ಲಿದ್ದ ಜಮೀನು ಗ್ರಾಮಗಳ ಬಗ್ಗೆ ಏನೂ ಹೇಳುವುದಿಲ್ಲ.

ಮೂವರು ಪಾಳಯಗಾರರೂ ಮಾಡಬೇಕಾಗಿದ್ದ ಕೆಲಸವೆಂದರೆ ತಿರುಪತಿಯಲ್ಲಿ ಕಪಿಲೇಶ್ವರಸ್ವಾಮಿ ಆಲಯದವರೆಗೆ ಠಳಾಯಿಸುತ್ತ ರಕ್ಷಣೆಯನ್ನು ಒದಗಿಸಿ ತಿರುಪತಿಯನ್ನು ತಲುಪುವ ಹಲವು ದಾರಿಗಳಲ್ಲಿ ಭದ್ರತಾ ಪಡೆಗಳನ್ನು, ಪಹರೆಗಳನ್ನು ಏರ್ಪಡಿಸಿ ಆಲಯಕ್ಕೆ ಆಗಮಿಸತಕ್ಕ ಯಾತ್ರಿಕರಿಗೆ, ಹಾಗೂ ಅವರು ತಕ್ಕ ಕಾಣಿಕೆಗಳಿಗೆ ರಕ್ಷಣೆಯನ್ನು ಒದಗಿಸುವುದಾಗಿದ್ದಿತು.

**5. ಪೈಮಾಯಿಶಿಪಟ್ಟಿ :** ಈಸ್ಟ್ ಇಂಡಿಯಾ ಕಂಪನಿಯವರು ಫಸಲಿ 1227 ರಲ್ಲಿ ತಯಾರಿಸಿದ ಪೈಮಾಯಿಶಿ ಪಟ್ಟಿಯು ಅಂದು ಇದ್ದಂತಹ ಹಲವಾರು ಆಲಯಗಳ ಕಟ್ಟಡಗಳ ಬಗ್ಗೆ ವಿವರಗಳನ್ನೊದಗಿಸುವ ಗಮನ ಸೆಳೆಯತಕ್ಕ ಆಕರವಾಗಿದೆ. ಸ್ಥಳೀಯ ಕರಣೀಕರು ಸಿದ್ಧಪಡಿಸಿ ಸಹಿ ಮಾಡಿದ ಮೋಡಿ ಅಕ್ಷರಗಳಲ್ಲಿ ಬರೆದು ದಾಖಲು ಮಾಡಿದ ದಾಖಲೆಗೆ ಶಿರಸ್ತೇದಾರ ಅಲ್ಲಬ್ಬು ಗೋವಿಂದರಾಯನು ಕ್ರಿ.ಶ. 1819 ರ ಆಗಸ್ಟ್ 14 ರಂದು ಸಹಿ ಮಾಡಿದ್ದಾನೆ. ಆಲಯಗಳ ವಿವಿಧ ಭಾಗಗಳ ಅಳತೆಗಳನ್ನೂ ಅಗತ್ಯಗಳನ್ನೂ, ಅನುಕೂಲಗಳನ್ನೂ ಇದು ವಿವರಿಸುತ್ತದೆ. ಸ್ಥೂಲವಾಗಿ ಇದರ ವಿವರಣೆ ಹೀಗೆ-

**ಎ. ಶ್ರೀವೆಂಕಟೇಶ್ವರಸ್ವಾಮಿ ಆಲಯ:**

1. ಗರ್ಭಗೃಹ
2. ವಿಮಾನ
3. ಅಂತರಾಳ
4. ಮುಖ ಮಂಟಪ
5. ಮಂಚಪು ಸೇವಾಗೃಹ
6. ಶ್ರೀರಾಮಚಂದ್ರಸ್ವಾಮಿ ಸನ್ನಿಧಿ
7. ಮುಖ ಅಂತರಾಳ ಮಂಟಪ
8. ರಂಗ ಮಂಟಪ
9. ಮಹಾ ಮಣಿ ಮಂಟಪ
10. ಡೋಲು ಮಂಟಪ
11. ಸೇನೈ ಮೊದಲಿಯಾರ್

ಇದು ಆಲಯದ ಕೇಂದ್ರ ಸ್ಥಳವಾಯಿತು. ಇದರ ದಕ್ಷಿಣದಲ್ಲಿ ಪೂರ್ವಕ್ಕೆ (ಆಗ್ನೇಯಕ್ಕೆ) ಇರುವ ನಿರ್ಮಾಣಗಳು.

1. ಸ್ವಯಂ - ಪಾಕಶಾಲ (ಮೇಲ್ ಪೊಟ್ಟು) (ಅಡುಗೆಮನೆ)
2. ಕಲ್ಯಾಣ ಮಂಟಪ (ಸ್ವಾಮಿಯ ಮದುವೆಯ ಮಂಟಪ)
3. ಇವೆರಡರ ನಡುವೆ ಹತ್ತು ಕಂಭಗಳ ಒಂದು ಜಗುಲಿಯದಾರಿ (ಇದರ ದಕ್ಷಿಣಕ್ಕೆ ಮೂರು ಕೋಣೆಗಳು) (ಇದರಲ್ಲಿ ಒಂದು ದೀಪಾಲಿಯವನಿಗೆ ) (ದೀಪ ಹಚ್ಚಿಸುವವನು)
4. ಯಾಗ ಶಾಲೆ.

ಕಲ್ಯಾಣ ಮಂಟಪದಲ್ಲಿ ಕೆತ್ತಿದ ಸ್ತಂಭದ್ವಯದ ಸಿಂಹಾಸನ ಮಂಟಪವೂ ಬ್ರಹ್ಮೋತ್ಸವ ಕಾಲದಲ್ಲಿ ಮಲೆಯಪ್ಪಸ್ವಾಮಿ ಇರುವ ಒಂದು ಕಿರಿಯ ಆಲಯವೂ ಒಳಗೊಂದು ಗರ್ಭಗೃಹವೂ ಇದೆ. ಇವೆಲ್ಲ ವಿಮಾನ ಪ್ರದಕ್ಷಿಣೆಯ ದಕ್ಷಿಣದಲ್ಲಿ ಎತ್ತರವಾದ ಜಗಲಿಯ ಮೇಲಿದೆ.

**ಪಶ್ಚಿಮದಲ್ಲಿದ್ದ ಮಂಟಪಗಳಲ್ಲಿ ಸಾಲಿನ ವಿವರ ಹೀಗೆ -**

1. ರಘೋಜಿ ಭೋನ್ಸ್ಲೆಯು ನೀಡಿದ ಪಲ್ಲಕ್ಕಿ
2. ವಾಹನಗಳು
3. ನಡಿಗಡ್ಡ ಕುಟುಂಬದವರು ನೀಡಿದ ವಾಹನಗಳು.
4. ಸುರಪುರ ಸಂಸ್ಥಾನದವರು ನೀಡಿದ ವಾಹನಗಳು.
5. ವೆಂಕಟಗಿರಿ ರಾಜಾ ಅವರ ಪ್ರಸಾದ ವಿತರಣೆ ಮಂಟಪ.
6. ಪಡಗಲ ಕುಟುಂಬದವರ ಮಂಟಪ.
7. ಪುನುಗು ತೆಗೆಯುವ ಕೋಣೆ.

**ವಿಮಾನ ಪ್ರದಕ್ಷಿಣದ ಉತ್ತರದಲ್ಲಿನ ಮಂಟಪಗಳ ವಿವಿರ ಹೀಗಿದೆ -**

1. ಅಡಿಗೆಯವರು.
2. ಮೈಸೂರು ರಾಜರ ವಸ್ತುಗಳ ಕೋಣೆ.
3. ಮಟ್ಲರಾಜರ ಕೊಟಡಿ.
4. ಕೈಕಾಲು ಆಳು ಕೋಣೆ.
5. ವಗಪಡಿ (ಪಣ್ಯಾರಗಳ ಕೋಣೆ.)
6. ತಾಳ್ಲಪಾಕ ಕವಿಗಳ ತಾಮ್ರಪತ್ರಗಳ ಕೋಣೆ.
7. ಸಭ ಅರ (ದೇವರ ವಸ್ತ್ರ ಭಂಡಾರ)
8, ಮಂಚಪು ಅರ (ದೇವರ ಮಂಚ ಭಂಡಾರ)
9. ಕಾನುಕ ಅರ (ಯಾತ್ರಿಕರ ಕಾಣಿಕೆಗಳನ್ನು ಸಂಗ್ರಹಿಸಿಡುವ ಭಂಡಾರ)
10. ಬೊಕ್ಕಸಂ.
11. ಗಂಧ ತೇಯುವ ಕೋಣೆ.
12. ಆಲಯ ಪ್ರಸಾದಗಳನ್ನಿಡುವ ಕೋಣೆ.

ಇಲ್ಲಿ ಆಸಕ್ತಿದಾಯಕವಾದ ಒಂದು ಅಂಶವನ್ನು ಗಮನಿಸಬೇಕು. ತಾಳ್ಲಪಾಕ ವಂಶದವರ ಕೀರ್ತನೆಗಳ ತಾಮ್ರ ಪತ್ರಗಳನ್ನು ಮೊದಲಬಾರಿಗೆ 1922 ರಲ್ಲಿ ಕಂಡು ಕೊಳ್ಳಲಾಯಿತು ಎನ್ನಲಾಗಿದೆ. ಆದರೆ ಇಲ್ಲಿ ತಾಮ್ರ ಪತ್ರಗಳಿರುವುದೆಂಬ ವಿಷಯ ಈಸ್ಟ್

ಇಂಡಿಯಾ ಕಂಪನಿಯವರಿಗೆ ತಿಳಿದ ವಿಷಯವೇ ಆಗಿದ್ದಿತು. ಆ ನಂತರದ ಕಾಲದಲ್ಲಿ ಆಲಯದವರು ಈ ವಿಷಯವನ್ನು ಹೇಗೆ ಮರೆತು ಹೋದರು ಎಂಬುದು ಕುತೂಹಲಕಾರಿ ಅಂಶವಾಗಿದೆ.

ಸಂಪಗಿ ಪ್ರದಕ್ಷಿಣೆಯಲ್ಲಿ ಪ್ರವೇಶದ್ವಾರದ ರಕ್ಷಕ ಬಾಗಿಲಿನಿಂದ ಆರಂಭವಾದ ನಿರ್ಮಾಣ ವಿವರಗಳು.

1. ಪೂರ್ವದ ಪ್ರಾಕಾರದ ಗೋಡೆಯ ಬದಿಯಲ್ಲಿ ಅಚ್ಯುತರಾಯ ಹಾಗೂ ಕೃಷ್ಣರಾಯರುಗಳ ವಿಗ್ರಹಗಳು.

2.ದೀವಿಟಿಗೆಗಳ ಕೋಣೆ.

3. ಮೈಸೂರು ರಾಜರು ನೀಡಿದ ದೇವರ ವಾಹನಗಳ ಶಾಲೆ.

4. ರಂಗನಾಯಕರ ಅಡಿಗೆ ಮನೆ.

5. ಒಂದು ವಿಮಾನಸಹಿತವಾದ ಗುಡಿ.

6. ಸಿಂಹಾಸನ ಮಂಟಪ.

7. ಪಿಂಡಿ ಶಾಲ (ಹಿಟ್ಟುಮಾಡುವ ಕಲ್ಲಿನ ಗಿರಣಿ)

8. ಆವರಣವಿಲ್ಲದ ಮಂಟಪ.

9. ಒಂದು ಉಗ್ರಾಣ. ಇದರ ಬಾಗಿಲಿನಲ್ಲಿ ನೀರಿನ ಬುಗ್ಗೆ (ವಿರಾಜಾನದಿ) ಯೊಂದಿದೆ.

10. ಪಣ್ಯಾರಗಳನ್ನು ಮಾಡುವ ಅಡುಗೆ ಮನೆ.

11. ಯಾಮುನತ್ತುರೈ -ಹಾರಗಳನ್ನು ಮಾಡುವ ಕೋಣೆ.

12. ನಾಲ್ಕು ಅಂತಸ್ತಿನ ಸುವರ್ಣ ಮಂಟಪ.

13. ಇದರ ಉತ್ತರಕ್ಕೆ ರಜತ ಮಂಟಪ.

13. ಇದರ ದ್ವಾರವು ಪೂರ್ವ ಪಶ್ಚಿಮ 33 ಆಡಿಯೂ ದಕ್ಷಿಣೋತ್ತರ 21 ಆಡಿಯೂ, 15 ಅಡಿ ಎತ್ತರವಿದ್ದು ಮೇಲೆ ಮೂರು ಅಂತಸ್ತಿನ ಕಳಶದೊಡನೆ ಕೂಡಿದ ಗೋಪುರವಿದೆ. ಈ ಗೋಪುರ ತಳದ ಅಳತೆ ಪೂರ್ವಪಶ್ಚಿಮ - 33 ಅಡಿಉತ್ತರ ದಕ್ಷಿಣ 21 ಅಡಿ, ಎತ್ತ 51 ಅಡಿಗಳು.

ಇದಾದ ನಂತರ ತಿರುಮಲರಾಯ ಮಂಟಪವನ್ನು ಕುರಿತು ಹೇಳಲಾಗಿದೆ. ಇದು ಮೂರು ಹಂತಗಳಲ್ಲಿ 54 ಕಂಬಗಳಿಂದಾಗಿದೆ. ಎತ್ತರದ ಮಂಟಪ ಸಿಂಹಾಸನ ಮಂಟಪ (ಇಲ್ಲಿ ಉತ್ಸವ ವಿಗ್ರಹಗಳನ್ನು ಆಸೀನ ಗೊಳಿಸಲಾಗುವುದು. ) ಇದು 6 ಚದರ ಅಡಿಯ ಕರಿಕಲ್ಲಿನ ಮಂಟಪ. ಇದರ ಮೇಲೆ ನಾಲ್ಕು ಕಂಬಗಳ ಆಧಾರದಲ್ಲಿ ನಿಂತ ಗಾರೆಯ ಗೋಪುರವಿದೆ. ಎರಡನೆಯ ಹತದ ಮಂಟಪವು 30 ಕಂಬಗಳಿಂದಾಗಿದ್ದು ಪೂರ್ವಪಶ್ಚಿಮದ ಅಗಲ 33 ಅಡಿಗಳು. ಮೂರನೆಯ ಅತಿ ಕೆಳಗಿನ ಹಂತದ ಮಂಟಪವು 16 ಕಂಬಗಳಿಂದಾಗಿದ್ದು 24 ಅಡಿ ಎತ್ತರ ಹಾಗೂ ಪೂರ್ವಪಶ್ಚಿಮ 30 ಅಡಿ ಉತ್ತರ ದಕ್ಷಿಣ 33 ಅಡಿಗಳಿವೆ. ಇಲ್ಲಿ ಕಂಬಗಳು ಸುಂದರವಾಗಿ ಕೆತ್ತಲ್ಪಟ್ಟಿವೆ.

ತಿರುಮಲ ರಾಯ ಮಂಟಪದ ಎದುರಿಗಿರುವ ಧ್ವಜಸ್ತಂಭ ಮಂಟಪದಲ್ಲಿ ಗಿಲೀಟು ಮಾಡಿಸಿದ ತಾಮ್ರದ ಹೊದಿಕೆಯ ಮರದ ಧ್ವಜಸ್ತಂಭ ಹಾಗೂ ಬಲಿಪೀಠಗಳಿವೆ.

ಇದರ ಉತ್ತರಕ್ಕೆ ಇರುವ ಇಟ್ಟಿಗೆಯ ಮಂಟಪದಲ್ಲಿ ಎರಕ ಹೊಯ್ದಿರುವ ತೋದರ ಮಲ್ಲ ಮತ್ತಿತರರ ವಿಗ್ರಹಗಳಿವೆಯೆದು ಹೇಳಲಾಗಿದೆ.

ಈ ತೋದರ ಮಲ್ಲು ಮಂಟಪ ಹಾಗೂ ಪೂಲಬಾವಿ ( ದೇವರ ಅಲಂಕಾರವಾದ ಹೂವುಗಳನ್ನು ತೆಗೆದ ಮೇಲೆ ಅದನ್ನು ಯಾರೂ ತುಳಿಯದಂತೆ ಹಾಕುತ್ತಿದ್ದ ತೊಟ್ಟಿ) ಗೂ ಮಧ್ಯದಲ್ಲಿ ಪೂರ್ವಕ್ಕೆ ಸುವರ್ಣ ಮಂಟಪದ ಬದಿಗೆ ರಜತ ಮಂಟಪ ಎಂದು ತಿಳಿಸುವುದು. ತೋದರ ಮಲ್ಲು ಮಂಟಪದ ಹಿಂದಿನ ನಾಲ್ಕು ಕಂಬಗಳ ಮಂಟಪದಲ್ಲಿ ವೆಂಕಟಪತಿರಾಯನ ಪ್ರತಿಮೆಯಿದೆ. ಈ ಮಂಟಪದ ವಿಸ್ತೀರ್ಣ 81 ಚದರ ಅಡಿಗಳು.

### ಬಿ. ಗೋವಿಂದರಾಜಸ್ವಾಮಿ ಆಲಯ :

ಪೈಮಾಯಿಶಿ ದಾಖಲೆಯಲ್ಲಿ ಈ ಆಲಯವು ಪೂರ್ವಕ್ಕೆ ಮುಖ ಮಾಡಿರುವುದಾಗಿಯೂ, ಇದರ ಗರ್ಭಗೃಹ ಪೂರ್ವ ಪಶ್ಚಿಮ 15 ಅಡಿಗಳೂ ಉತ್ತರ ದಕ್ಷಿಣ 21 ಅಡಿಗಳೂ ಇರುವುದಾಗಿ ದಾಖಲೆಯಾಗಿದೆ. ಇಲ್ಲಿನ ವಿಗ್ರಹವು ಮಲಗಿರುವ ಭಂಗಿಯಲ್ಲಿದ್ದು ಗಿಲೀಟು ಮಾಡಿದ ತಾಮ್ರದ ಕವಚ ತೊಟ್ಟ 7 ಹೆಡೆಗಳ ಶೇಷ ತಲ್ಪದ ಮೇಲೆ ಮಲಗಿದಂತೆ ಇದೆ ಎನ್ನಲಾಗಿದೆ. ಇಲ್ಲಿನ ಗುನಾರ್ಹ ಅಂಶವೆಂದರೆ ಚಿತ್ರಕೂಟ (ಚಿದಂಬರ) ದಿಂದ ತಂದಂತಹ ಒಂದು ಕಲ್ಲಿನ ಮೂರ್ತಿಯನ್ನು - ಸಾಲಿಗ್ರಾಮ ಶಿಲೆಯನ್ನು - ತಲೆಯಿಂದ ಪಾದದವರೆಗೆ ಗಾರೆಯ ಲೇಪನ ಮಾಡುವುದರಿಂದ ಈ ವಿಗ್ರಹವನ್ನು ತಯಾರಿಸಲಾಗಿದೆಯೆಂಬುದು. ತನ್ನ ನಾಭಿಯಲ್ಲಿನ ಕಮಲ ದಿಂದ ಬ್ರಹ್ಮ ಚತುರ್ಮುಖನಾಗಿರುವಂತೆ ಕೆತ್ತಲಾಗಿದೆ. ಇಲ್ಲಿ ಪೂರ್ವಕ್ಕೆ ಮುಖಮಾಡಿದ ಶ್ರೀ ದೇವಿಯ ಕಲ್ಲಿನ ಮೂರ್ತಿ ಸ್ವಾಮಿಯ ಪಾದಗಳ ಬಳಿ ಉತ್ತರದಲ್ಲಿದ್ದು, ಉತ್ತರದ ಭಾಗದಲ್ಲಿ ಸ್ವಾಮಿಯನ್ನು ನೋಡುತ್ತ ದಕ್ಷಿಣಾಭಿಮುಖವಾದ ಭೂದೇವಿಯ ಕಲ್ಲಿನ ವಿಗ್ರಹವಿದೆ. ಸ್ವಾಮಿಯ ಪಾದದ ಬಳಿ ಮೂಲೆಯಲ್ಲಿ ಮಧುಕೈಟಭರು ನಿಂತಭಂಗಿಯಲ್ಲಿರುವಂತಹ ಎರಡು ಕಲ್ಲಿನ ವಿಗ್ರಹಗಳಿವೆ. ಸೇನೈ ಮೊದಲಿಯಾರ್ (ವಿಷ್ವಕ್ಸೇನ) ದಕ್ಷಿಣಕ್ಕೆ ಪೂರ್ವದಲ್ಲಿ ಕಾಣಿಕೆಯ ಕೊಠಡಿಯೂ ಇದ್ದಿತು.

ಮುಖ್ಯ ಆಲಯಕ್ಕೆ ಹೊಂದಿಕೊಂಡಂತೆ ದಕ್ಷಿಣ ದಿಕ್ಕಿನಲ್ಲಿ ತಿರುವಂಡಿ ಯಾದವ ಪೆರುಮಾಳರ ಆಲಯವಿದೆ. ಇಲ್ಲಿ ಪೂಜೆ ಇಲ್ಲ. ಇದರಲ್ಲಿ ಕೃಷ್ಣ ಮತ್ತವನ ಪತ್ನಿಯ ವಿಗ್ರಹಗಳಿವೆಯೆಂದು ಹೇಳಲಾಗಿದೆ.

ಪಟ್ಟಾಭಿರಾಮಸ್ವಾಮಿಯ ಆಲಯದ ಎದುರು ಬೀದಿಯಲ್ಲಿ ಸಂಜೀವರಾಯ ಸ್ವಾಮಿಯ ಉತ್ಸವ ವಿಗ್ರಹಗಳಿವೆ ಎಂದು ಹೇಳಲಾಗಿದೆ. ಕಪಿಲ ತೀರ್ಥದ ಹಾದಿಯಲ್ಲಿನ ತಿರುಮಂಗೈ ಆಳ್ವಾರರ ವಿಗ್ರಹವನ್ನು ಲಕ್ಷ್ಮಣನ ವಿಗ್ರಹದೊಡನೆ ತಂದರೆಡು ಹೇಳ ಲಾಗಿದೆ. ದಾಖಲೆಯಲ್ಲಿ ಪೂರ್ವಪಶ್ಚಿಮದ ಪ್ರದಕ್ಷಿಣೆಯು 66 ಅಡಿಗಳೆಂದೂ ಉತ್ತರ ದಕ್ಷಿಣಕ್ಕೆ 34.5 ಅಡಿಗಳೂ ಅಗಲ 12 ಅಡಿಗಳೆಂದೂ ಒಟ್ಟು 30 ಕಂಬಗಳೆಂದೂ ತಿಳಿಸಲಾಗಿದೆ.

ರಂಗಮಂಟದ ಆಗ್ನೇಯಕ್ಕೆ (ದಕ್ಷಿಣದಲ್ಲಿ ಪೂರ್ವಕ್ಕೆ) ಅಡಿಗೆ ಮನೆಯಿರುವುದು. ಅದರ ಪಶ್ಚಿಮಕ್ಕೆ ಹಿಟ್ಟಿನ ಕಲ್ಲಿನ ಕೋಣೆ. ಇದರ ಪಶ್ಚಿಮಕ್ಕೆ ಕಲ್ಲಿನ ವೆಂಕಟೇಶ್ವರನ ವಿಗ್ರಹದ ಕೋಣೆ. (ಮೆಂಜಾನ್ ವೆಂಕಟೇಶ್ವರಸ್ವಾಮಿ) ಇದರ ಪಶ್ಚಿಮಕ್ಕೆ ನಾಲ್ವರು ಆಳ್ವಾರರ- ಪೆರಿಯಾಳ್ವಾರ್, ತಿರುಮಂಗೈ ಆಳ್ವಾರ್ , ಕುಲಶೇಖರ ಆಳ್ವಾರ್, ತೊಂಡರಡಿಪ್ಪೊಡಿ ಆಳ್ವಾರರ ಕೋಣೆಯಿದೆ. ಇಲ್ಲಿಯೇ ಕೋದಂಡರಾಮ ಸ್ವಾಮಿ ಲಕ್ಷ್ಮಣ ಸೀತೆಯರ ವಿಗ್ರಹಗಳೂ ಉಂಟು. ನಂತರ ಯಾಗಶಾಲೆ; ಬದಿಯಲ್ಲಿ ಕಲ್ಯಾಣಮಂಟಪ. ಒಳಗೆ ಒಂದು ವಿಮಾನ. ಅದರ ಕೆಳಗೆ ಹಿಂಭಾಗದಲ್ಲಿ ಪೂರ್ವಾಭಿಮುಖ ವಾಗಿರುವ ವೆಂಕಟೇಶ್ವರಸ್ವಾಮಿ ಆಲಯ, ದಕ್ಷಿಣಕ್ಕೆ ನಮ್ಮಾಳ್ವಾರ್ ಕಿರಿ ಆಲಯ, ಇಲ್ಲಿ ಗಜೇಂದ್ರ ವರದ ಹಾಗೂ ಲಕ್ಷ್ಮಿಯರು ಗರುಡನ ಮೇಲೇರಿ ಬರುವ ವಿಗ್ರಹಗಳಿವೆ.

■ ಪೂರ್ವದಲ್ಲಿ ಪ್ರಾಕಾರದ ಗೋಡೆಗೆ ಹೊಂದಿಕೊಂಡಂತೆ ಒಂದು ಅಂಕಣದಷ್ಟು ಉದ್ದವಾದ ಐದಾರು ಅಡಿ ಅಗಲದ ಮಂಟಪ ವಿದ್ದು ಇಲ್ಲಿ ಉತ್ತರದಲ್ಲಿ ಬೊಕ್ಕಸದವರ ಕೋಣೆಯಿದೆ. ಇದರ ಬದಿಯಲ್ಲಿ ಗುತ್ತಿಗೆದಾರನ ಕಾಣಿಕೆಗಳಭಂಡಾರ. ನಂತರ ಹಳ್ಳಿಯ ಜನರು ತಮ್ಮ ವಸ್ತುಗಳನ್ನಿಡುವಂತಹ 'ಪಲ್ಲೆವಾರಿ' ಶಾಲ ಇದೆ. ಈ ಕೋಣೆಯ ದಕ್ಷಿಣಕ್ಕೆ ಬಲಿಪೀಠದ ಎದುರಿಗೆ ಸಂಜೀವರಾಯ ಸ್ವಾಮಿಯ ಗುಡಿಯಿದೆ. ಇದರ ಮುಖ ಮಂಟಪದಲ್ಲಿ ಇದ್ದಂತಹ 6×6×8 ಘನ ಅಡಿಗಳ ಕೋಣೆಯಲ್ಲಿ ಇಟ್ಟಿಗೆ ಗಾರೆಗಳಿಂದ ಮಾಡಿದ ಅಕ್ಕನ್ನನ ವಿಗ್ರಹವಿದೆ.(ಈ ವಿಗ್ರಹ ಇರುವಿಕೆಯ, ಇದ್ದ - ಬಗೆಗಿನ ಯಾವ ಗುರುತೂ ಇಲ್ಲ - ಎಂದು ತಿರುಪತಿ ಶ್ರೀ ವೆಂಕಟೇಶ್ವರ ಪುಟ - 328 ಅಡಿ ಟಿಪ್ಪಣಿಯಲ್ಲಿ ಹೇಳಲಾಗಿದೆ - ಅನುವಾದಕ)

ಮೊದಲ ಪ್ರಾಕಾರವು ಈ ಎಲ್ಲ ಕಟ್ಟಡಗಳನ್ನೂ ಹೊಂದಿದ್ದು ಪೂರ್ವದಲ್ಲಿ 234 ಅಡಿ ಉದ್ದವಿದ್ದು ಉತ್ತರದಲ್ಲಿ 183 ಅಡಿ ಉದ್ದವಿದೆ. ಗ್ರಾನೈಟ್ ಕಲ್ಲು ಗೋಡೆಯ ಎತ್ತರ 22 ಅಡಿಯಾಗಿ ಜೊತೆಗೆ 2 ಅಡಿ ಇಟ್ಟಿಗೆಯ ನಿರ್ಮಾಣವೂ ಸೇರಿ 24 ಅಡಿ ಎತ್ತರವಾಗಿದೆ. ತಿರುವಂಡಿ ಯಾದವ ಪೆರುಮಾಳ್ ಆಲಯದ ಎದುರಿನ ಪೂರ್ವದ ಮುಖದ್ವಾರವು ಪೂರ್ವಕ್ಕೆ 24 ಅಡಿ ಉತ್ತರಕ್ಕೆ 27 ಅಡಿಗಳೂ 10.5 ಅಡಿ ಎತ್ತರವೂ ಇದ್ದು, ಇದರ ಮೇಲಿನ ಗೋಪುರವು 24 ಅಡಿ ಎತ್ತರವಾಗಿದೆ.

ಹೊರಗಡೆಯ ದ್ವಾರದಿಂದ ಉತ್ತರಕ್ಕೆ ಪಾರುಪತ್ಯಗಾರರ ಮಂಟಪವು ಪೂರ್ವಕ್ಕೆ 18 ಅಡಿ ಉತ್ತರಕ್ಕೆ 22.5ಅಡಿಗಳಷ್ಟಿತ್ತು. ಪೂರ್ವದಲ್ಲಿ ಎರಡನೆಯ ಪ್ರಾಕಾರವನ್ನು ಹೊಂದಿಕೊಂಡಂತೆ ಲಕ್ಷ್ಮೀದೇವಿ ಮಂಟಪ ಇದ್ದಿತು. ಇದು 7.5ಅಡಿ ಎತ್ತರದ ಕಂಬಗಳಿದ್ದ ಜಗತಿಯ ಮೇಲೆ ಪೂರ್ವಕ್ಕೆ 19.5ಅಡಿಯೂ ಉತ್ತರಕ್ಕೆ 33 ಅಡಿಯೂ ಇದ್ದು ಎಂಟು ಕಂಬಗಳ 8 ಅಂಕಣ ಸ್ಥಳ ಹೊಂದಿದ್ದಿತು.

ನಂತರ ವಿವರಣೆ ಎಂದರೆ ದಕ್ಷಿಣದಲ್ಲಿದ್ದ ನಾಲ್ಕು ಕಂಬಗಳ ಮಂಟಪ ಹಾಗೂ ಎರಡನೆಯ ಪ್ರಾಕಾರದಲ್ಲಿ ಪೂರ್ವಕ್ಕಿದ್ದ ನಾಲ್ಕು ಕಂಬಗಳ ಎರಡು ಮಂಟಪಗಳು. ಮಟ್ಲದ ರಾಜರುಗಳ ಕೊಡುಗೆಯ ಧರ್ಮಗಳೆಲ್ಲ ಇನ್ನೂ ಪೂರ್ವಕ್ಕೆ ಮಾರ್ಗದಲ್ಲಿದ್ದಿತು.

ಮುಂದುವರೆದರೆ ಮಿಕ್ಕ ಆಲಯಗಳ ದೇವತೆಗಳ ವಿವರಗಳು ಕಂಡುಬರುತ್ತವೆ.

1. ತಿರುಮಲನಂಬಿ
2. ಭಾಷ್ಯಕಾರ (ರಾಮಾನುಜ)
3. ಕೂರತ್ತಾಳ್ವಾರ್
4. ತಿರುಮಳಿಶೈ ಆಳ್ವಾರ್

ಉತ್ತರದ ಸಾಲಿನಲ್ಲಿ ಕೆಳಕಂಡ ಕಟ್ಟಡಗಳಿದ್ದವು.

1. ಹಿಟ್ಟಿನ ಕಲ್ಲಿನ ಕೋಣೆ
2. ಮಧುರಕವಿ ಆಳ್ವಾರ್ ಆಲಯ
3. ಒಂದು ಪುಷ್ಪತೋಟದ ಮೂರು ಬದಿಯ ಮಂಟಪಗಳು.
4. ಹೊರ ಗೋಪುರಕ್ಕೆ ಹೊಂದಿಕೊಂಡ ಮಂಟಪ.
5. ಮೇಲಿನ ಅಂತಸ್ತಿನ 12 ಅಂಕಣದ ಮಂಟಪ.

ಪೂರ್ವದ ಪ್ರಾಕಾರದಲ್ಲಿ - ಎರಡನೆಯ ಆವರಣದಲ್ಲಿನ ದ್ವಾರಗೋಪುರವು ಉತ್ತರದಲ್ಲಿ 33 ಅಡಿ, ಪೂರ್ವದಲ್ಲಿ 27 ಅಡಿಗ ಇದ್ದು 17 ಅಡಿ ಎತ್ತರವಿದ್ದಿತು. ಎರಡನೆಯ ಪ್ರಾಕಾರದ ಗೋಡೆ ಉತ್ತರದಲ್ಲಿ 181 ಅಡಿಗಳೂ ಪೂರ್ವದಲ್ಲಿ 215 ಅಡಿಗಳೂಇದ್ದು ಎತ್ತರ 24 ಅಡಿ ಇದೆ.

**ಸಿ. ಕೋದಂಡರಾಮ ಆಲಯ :** ತಿರುಪತಿಯ ಉತ್ತರಭಾಗದಲ್ಲಿ ಈ ಆಲಯವಿದೆ. ಇದನ್ನು ಕಲ್ಲಿನಲ್ಲಿ ನಿರ್ಮಿಸಲಾಗಿದ್ದು ಪಶ್ಚಿಮಕ್ಕೆ ಅಭಿಮುಖವಾಗಿದೆ. ಈ ದಾಖಲೆಯ ನಿರ್ಮಾಣದ ಕಾಲದಲ್ಲಿ ಇಲ್ಲಿನ ಅರ್ಚಕ ಪಟ್ಟು ತಾತಾಚಾರ್ಯ ಎಂಬುವವರು. ಇಲ್ಲಿನ ಗರ್ಭಗೃಹವನ್ನು 2 ಅಡಿ ಎತ್ತರದ ಜಗಲಿಯ ಮೇಲೆ 24 ಚದರಡಿಯ 10 ಅಡಿ ಎತ್ತರದ ಘನವಿಸ್ತಾರದಲ್ಲಿ ನಿರ್ಮಿಸಲಾಗಿದೆ. ಇದರ ಮೇಲಿನ ವಿಮಾನವು 20 ಅಡಿ ಎತ್ತರವಿದೆ. ಇಲ್ಲಿ ಮೂರು ವಿಗ್ರಹಗಳು - ಕೋದಂಡರಾಮಸ್ವಾಮಿ, ಸೀತಾದೇವಿ, ಲಕ್ಷ್ಮಣರ ವಿಗ್ರಹಗಳಿವೆ.ಎಂಟು ಉತ್ಸವ ಮೂರ್ತಿಗಳಿವೆ. ಇದರ ಪಶ್ಚಿಮದಲ್ಲಿ ನೆಲದ ಮಟ್ಟದಲ್ಲಿ ತಾಮ್ರದ ವಿಷ್ವಕ್ಸೇನ, ಅಂಜನೇಯ, ನಮ್ಮಾಳ್ವಾರ್, ಭಾಷ್ಯಕಾರರುಗಳ ವಿಗ್ರಹಗಳಿವೆ.

ಆಲಯದಲ್ಲಿ ದಕ್ಷಿಣಕ್ಕೆ, ಉತ್ತರಕ್ಕೆ ಮುಖ ಮಾಡಿದ ಮಂಟಪದಲ್ಲಿ ಒಂದು ದೊಡ್ಡದು, ಒಂದು ಚಿಕ್ಕದು ಆದ ಎರಡು ಕಳ್ಳಿ ಭಾಷ್ಯಕಾರ ವಿಗ್ರಹಗಳಿದ್ದವು. ಇಲ್ಲಿ ಮಂಗಾಪುರದ ಆಲಯಕ್ಕೆ ಸೇರಿದ (ಪಾಕಾಲ ಪಾಳ್ಯಕ್ಕೆ ಸೇರಿದ್ದು) ಶ್ರೀ ವೆಂಕಟೇಶ್ವರ ಹಾಗೂ ಉಭಯ ನಾಚ್ಚಿಯಾರರ, ಚಕ್ರದ - ಉತ್ಸವವಿಗ್ರಹಗಳಿದ್ದವು. ಈ ಕೋಣೆಗೆ ಎದುರಿನಲ್ಲಿದ್ದ ಕೋಣೆಯಲ್ಲಿ ವಿಷ್ವಕ್ಸೇನ ವಿಗ್ರಹವಿದೆ.

ಸ್ನಪನ ಮಂಟಪದ ಪಶ್ಚಿಮದಲ್ಲಿ ಆಸ್ಥಾನ ಮಂಟಪವಿದೆ.

ದಾಖಲೆಯ ಪ್ರಾಕಾರ ಇಲ್ಲಿನ ಪ್ರಾಕಾರದ ಅಳತೆಗಳು ಈ ರೀತಿಯಿವೆ. ಪೂರ್ವಕ್ಕೆ 345 ಅಡಿ, 175 ಅಡಿ ಉತ್ತರದ ಕಡೆಗೆ ಹಾಗೂ 13. 5 ಎತ್ತರವಿದ್ದು ಮೇಲೆ 1.5 ಅಡಿ ಗಾರೆಯಕೆಲಸವಿದೆ. ಪಶ್ಚಿಮದ ಮಹಾದ್ವಾರ ಗೋಪುರದ ವಿವರವೂ ಇದೆ.

**ಡಿ. ನಮ್ಮಾಳ್ವಾರ್ ಆಲಯ :** ಗೋವಿಂದರಾಜಸ್ವಾಮಿ ಆಲಯದ ಉತ್ತರ ದಿಕ್ಕಿನಲ್ಲಿ ದಕ್ಷಿಣಕ್ಕೆ ಮುಖ ಮಾಡಿರುವ ಆಲಯವಿದು. ಇದರ ಗರ್ಭಗುಡಿಯಲ್ಲಿ ನಮ್ಮಾಳ್ವಾರರ ಮೂಲ ವಿಗ್ರಹ, ಉತ್ಸವ ವಿಗ್ರಹ ಹಾಗೂ ಶ್ರೀನಿವಾಸ ಮೂರ್ತಿ, ತಿರುಪ್ಪಾಣಾಳ್ವಾರ್, ಕೃಷ್ಣ ರುಕ್ಮಿಣಿ ಸತ್ಯಭಾಮೆಯರ ವಿಗ್ರಹಗಳಿವೆ. ಗರ್ಭಗೃಹದ ದಕ್ಷಿಣಕ್ಕೆ ಆಸ್ಥಾನಮಂಟಪವಿದ್ದು ಮಧ್ಯದಲ್ಲಿಅಂಗಮಂಟಪವಿದೆ. ಇದು ಪೂರ್ವದಲ್ಲಿ 48 ಅಡಿ ಉತ್ತರದಲ್ಲಿ 63 ಅಡಿಗಳಿದ್ದು 10 ಅಡಿ ಎತ್ತರವಿದೆ. ತಾಲ್ಲೂಕು ಕಚೇರಿಯನ್ನು ಆ ದಿನಗಳಲ್ಲಿ ಇಲ್ಲಿ ನಡೆಸುತ್ತಿದ್ದರು ಎಂದು ಹೇಳಲಾಗಿದೆ. ಇದರ ಪ್ರಾಕಾರದ ಗೋಡೆಗಳು ಪೂರ್ವದಲ್ಲಿ285 ಅಡಿಗಳೂ ಉತ್ತರದಲ್ಲಿ 114 ಅಡಿಗಳೂ ಇದ್ದು, 36 ಅಡಿ ದಪ್ಪದಲ್ಲಿ 17 ಅಡಿ ಎತ್ತರವಿದ್ದವು.

**ಇ. ಗಂಗೈ ಕೊಂಡನ್ ಮಂಟಪ :** ಶ್ರೀ ಗೋವಿಂದರಾಜಸ್ವಾಮಿಗಾಗಿ ತಿರುಪತಿಯ ರಾಮಚಂದ್ರಪುರಂ ಬೀದಿಯ ಗಂಗುಂಡ್ರ ಮಂಟಪವನ್ನು ಬಳಸುತ್ತಿದ್ದರು. ಗಂಗುಂಡ್ರ ಮಂಟಪ ಎನ್ನುವ ಹೆಸರು ರಾಜೇಂದ್ರ ಚೋಳನ ಬಿರುದುಗಳಲ್ಲಿ ಒಂದಾದ ಗಂಗೈಕೊಂಡನ್ ಎಂಬುದರ ಅಪಭ್ರಂಶರೂಪ. ಗೋವಿಂದ ರಾಜಸ್ವಾಮಿಯ ಉತ್ಸವದ ಮೆರವಣಿಗೆ ಹೊರಟಾಗ ಇದೊಂದು ತಂಗುದಾಣವಾಗಿದ್ದಿತ ಸ್ವಾಮಿ ಇಲ್ಲಿ ವಿಶ್ರಾಂತಿಗಾಗಿ ನಿಲ್ಲುತ್ತಿದ್ದರು. ಹಲವು ಶಾಸನಗಳ ಪ್ರಕಾರ ತಿರುಪತಿಯ ಕೋದಂಡರಾಮಸ್ವಾಮಿಯ ಆಲಯದಸ್ಥಲ ಪ್ರಾಂತ್ಯವನ್ನು ರಾಮಚಂದ್ರ ಪುರವೆಂದು ಕರೆಯುತ್ತಿದ್ದರು. ಈ ಸಂದರ್ಭದಲ್ಲಿ ತಿಳಿದು ಬರುವಂತೆ ವಿಸ್ತರಣವು ಇಲ್ಲಿವರೆಗೆ ಹಬ್ಬಿದ್ದಿತು. ಇದರ ರಸ್ತೆಯನ್ನು ಗಂಗುಂಡ್ರ ಮಂಟಪ ರಸ್ತೆಯೆಂದು ಗುರುತಿಸಲಾಗಿದ್ದಿತು.

**ಎಫ್. ಇತರ ಬಿಡಿ ಆಲಯಗಳು :** ಮಾಲವಾಡದ ಪಶ್ಚಿಮದಲ್ಲಿ ಆಳ್ವಾರರ ಆಲಯ ಒಂದು ಇದ್ದಿತೆಂದೂ, ಮಾದಿಗ ವಾಡದ ದಕ್ಷಿಣಕ್ಕೆ ಚೆನ್ನಕೇಶವಸ್ವಾಮಿಯ ಆಲಯವಿದ್ದಿತೆಂದೂ ವರದಿಯಾಗಿದ್ದರೂ ಆ ದೇವಾಲಯಗಳು ಇಂದು ಕಂಡುಬರುವುದಿಲ್ಲ.

**ಜಿ. ಕಪಿಲೇಶ್ವರಸ್ವಾಮಿ ಆಲಯ** : ಈ ಆಲಯದ ಗರ್ಭಗೃಹದ ಅಳತೆ 6.75×7.25× 7 ಘನ ಅಡಿಗಳೆಂದು ದಾಖಲೆಯಾಗಿದೆ. ಇಲ್ಲಿ ಒಂದು ಸ್ವಯಂಭು ಲಿಂಗವುಂಟು.

ಗರ್ಭಗುಡಿಯ ದಕ್ಷಿಣದಲ್ಲಿ ಒಂದು ರಹಸ್ಯ ಕೋಣೆಯಿದೆ. 9×5.25× 6 ಘನ ಅಡಿಗಳಷ್ಟು ಇದೆ. ಇಲ್ಲಿ ದೇವಿಯ ಉತ್ಸವ ವಿಗ್ರಹವಿದ್ದು,ಇದಕ್ಕೆ ದಾರಿ ಈ ಕೋಣೆಯ ದಕ್ಷಿಣದ ಅಮ್ಮನವರ ಗುಡಿಯಿಂದ ಇದ್ದು, ಇಂದು ಕಲ್ಲುಚಪ್ಪಡಿಯನ್ನಿಟ್ಟು ಮುಚ್ಚಿದ್ದು, ಇಟ್ಟಿಗೆ ಗಾರೆಗಳಿಂದ ಅದರ ಮೇಲೆ ಗಟ್ಟಿ ಬಂಧನವನ್ನೇರ್ಪಡಿಸಲಾಗಿದೆ. ಈ ರಹಸ್ಯ ಕೋಣೆಯ ಪಶ್ಚಿಮದಲ್ಲಿ ಒಂದು ಅಂಕಣ ಪ್ರದೇಶದಲ್ಲಿ ಕಪಿಲೇಶ್ವರಸ್ವಾಮಿಯು ಸ್ವಯಂಭುವಾಗಿ ಪ್ರತ್ಯಕ್ಷನಾದದ್ದು. ಇದರ ಕೆಳಗೆ ಮೂರು ಅಡಿಯ ಹುತ್ತವಿದ್ದುಮೇಲೆ ಮರದ ಕಾಮಧೇನು ವಿಗ್ರಹವಿದೆ. ಇದರ ಕರುವೂ ಕಪಿಲ ಮಹರ್ಷಿಯೂ ಉತ್ತರಮುಖವಾಗಿರುವರು. ಇದರ ದಕ್ಷಿಣಕ್ಕೆ ಕಾಮಾಕ್ಷಿಮ್ಮನವರ ಸನ್ನಿಧಿಯಿದೆ. ಇವೆಲ್ಲದರ ಮುಂದೆ ಮುಖ ಮಂಟಪವಿದ್ದು ಕಪಿಲೇಶ್ವರ ಸ್ವಾಮಿಯ ಎದುರಿಗೆ ನಂದಿಯ ವಿಗ್ರಹವಿದೆ. ಉತ್ತರದಲ್ಲಿ ಉಮಾಮಹೇಶ್ವರನ ವಿಗ್ರಹವೂ, ದಕ್ಷಿಣದಲ್ಲಿ ಸೂರ್ಯನಾರಾಯಣಮೂರ್ತಿ, ಸಣ್ಣ ವಿನಾಯಕ ವಿಗ್ರಹಗಳು- ಎಲ್ಲವೂ ಪಶ್ಚಿಮಾಭಿ ಮುಖವಾಗಿವೆ. ಉತ್ತರದ ಪ್ರದಕ್ಷಿಣಾಪಥದಲ್ಲಿ ಚಂಡಿಕೇಶ್ವರನಿದ್ದಾನೆ. ದ್ವಾರಪಾಲಕರು ಹೊರ ಅಂಗಳದಲ್ಲಿರುವರು. ಇದರ ಉತ್ತರದಲ್ಲಿನ ಕೋಣೆಯಲ್ಲಿ ದಕ್ಷಿಣಾಭಿಮುಖವಾಗಿ ವಿಘ್ನೇಶ್ವರನೂ ದಕ್ಷಿಣದ ಕಪಾಟಿನಲ್ಲಿ ಷಣ್ಮುಖ ಹಾಗೂ ವಳ್ಳಿ ದೇವಸೇನೆಯರ ಮೂರು ವಿಗ್ರಹಗಳೂ ಇವೆ. ಇಲ್ಲಿನ ಮಂಟಪದಲ್ಲಿ ಪಾನವಟ್ಟದಿಂದಿರುವ ಲಿಂಗವೂ ಬಸವಣ್ಣನೂ ಇದ್ದಾರೆ. ಇದರ ಪಶ್ಚಿಮಕ್ಕೆ ಎತ್ತರದ ಜಗಲಿಯಲ್ಲಿ ಧ್ವಜಸ್ತಂಭವಿದೆ.

ಮುಖ ಮಂಟಪದ ದಕ್ಷಿಣಕ್ಕೆ ರಂಗಮಂಟಪವಿದ್ದು ಇಲ್ಲಿ ದಕ್ಷಿಣಾಮೂರ್ತಿಯ ವಿಗ್ರಹವಿದೆ. ಇದರ ಉತ್ತರದ ಗೋಡೆಯ ಬಳಿ ನಾಗರ ಪ್ರತಿಮೆಯಿದೆ.

ಪೂರ್ವಕ್ಕೆ ಅಡಿಗೆಯ ಶಾಲೆಯಿದೆ. ಇದರ ದಕ್ಷಿಣಕ್ಕೆ ಇರುವ ಬಯಲಿನಲ್ಲಿ ಉತ್ತರಾಭಿಮುಖವಾದ ಬಸವಣ್ಣ ಕುಳಿತಿರುವ ಭಂಗಿಯಲ್ಲಿದೆ. ಇಲ್ಲಿಯೇ ಕಾಲಭೈರವನು ಪಶ್ಚಿಮಾಭಿಮುಖನಾಗಿರುವ ಗುಡಿಯಿದೆ. ಇಲ್ಲಿ ಇತರ ವಿಗ್ರಹಗಳೂ ಇವೆ.

**ಎಚ್. ವೇಣುಗೋಪಾಲಸ್ವಾಮಿ ಆಲಯ** : ಕಪಿಲೇಶ್ವರಸ್ವಾಮಿ ಆಲಯದ ಆವರಣದಲ್ಲಿ ಈ ವಿಗ್ರಹದ ಮೂಗು ಮುರಿದಿದೆ. ಎಂದು ಹೇಳಿದರು. ರುಕ್ಮಿಣಿ ಸತ್ಯಭಾಮೆಯರ ವಿಗ್ರಹಗಳು ವೇಣುಗೋಪಾಲಸ್ವಾಮಿಯ ವಿಗ್ರಹದೊಡನಿವೆ. ಹೊರಗೆ ದ್ವಾರಪಾಲಕರಿದ್ದಾರೆ.

**ಐ. ರಂಗ ಮಂಟಪ** : ಕಪಿಲತೀರ್ಥದ ಉತ್ತರದಲ್ಲಿ ರಂಗಮಂಟಪವಿದೆ. 49 ಕಂಬಗಳಿರುವ 50×50×16ಘನ ಅಡಿಗಳಷ್ಟು ಈ ರಂಗಮಂಟಪದ ಅಳತೆಗಳಿವೆ.

**ಜೆ. ಲಕ್ಷ್ಮೀನರಸಿಂಹಸ್ವಾಮಿ ಆಲಯ** : ಕಪಿಲತೀರ್ಥದ ಪಶ್ಚಿಮದಡದಲ್ಲಿರುವ ಗುಹೆಯಲ್ಲಿ ಲಕ್ಷ್ಮೀನರಸಿಂಹಸ್ವಾಮಿಯ ಗುಡಿಯಿದೆ. ಈ ವಿಗ್ರಹ ಸ್ವಲ್ಪ ಮುಕ್ಕಾಗಿರಬೇಕು. ಗುಹೆಯಲ್ಲಿ ಇಳಿಯಲು ಮೆಟ್ಟಿಲುಗಳುಂಟು.

**ಕೆ. ನಮ್ಮಾಳ್ವಾರ್ ಆಲಯ** : ಕಪಿಲ ತೀರ್ಥದ ಪ್ರವೇಶದಲ್ಲಿದೆ. ನಮ್ಮಾಳ್ವಾರ್, ಕೂರತ್ತಾಳ್ವಾರ್, ಭಾಷ್ಯಕಾರರು, ನಾಥಮುನಿ ಗಳ ಶಿಲಾ ವಿಗ್ರಹಗಳೊಂದಿಗೆ ಸಣ್ಣದಾದ ಶ್ರೀನಿವಾಸಮೂರ್ತಿಯ ಪ್ರತಿಮೆಯನ್ನು ಹೊಂದಿದ್ದ ವಿಶಾಲವಾದ ಗುಡಿ, ನಮ್ಮಾಳ್ವಾರ ಉತ್ಸವ ವಿಗ್ರಹವನ್ನು ಗೋವಿಂದರಾಜಸ್ವಾಮಿ ಆಲಯಕ್ಕೆ ಸ್ಥಳ ಪಲ್ಲಟ ಮಾಡಲಾಯಿತು. ಆಲಯಕ್ಕೆ ದ್ವಾರವಿಲ್ಲದ್ದರಿಂದ ಪ್ರವೇಶವನ್ನು ಕಲ್ಲಿನ ಚಪ್ಪಡಿಯಿಂದ ಮುಚ್ಚಲಾಗಿದ್ದಿತು.

**ಎಲ್. ಅಲಿಪಿರಿ ಪಾದಾಲ ಮಂಟಪ ಹಾಗೂ ಪಾರುವೇಟೆ ಮಂಟಪ** : ಪೈಮಾಯಿಶಿ ಪಟ್ಟಿಯು ಅಲಿಪಿರಿಯಲ್ಲಿನ ಮಂಟಪಗಳನ್ನು ಕುರಿತೂ ಹೇಳುತ್ತದೆ. ದೊಡ್ಡ ಗೋಪುರದ ದಕ್ಷಿಣಕ್ಕೆ (ನಂತರ ಬಿದ್ದು ಹೋಗಿ ಮತ್ತೆ ಜೀರ್ಣೋದ್ಧಾರವಾದ ಮಂಟಪ)

ಇರುವ ಮಂಟಪದಲ್ಲಿ ಕಲ್ಲಿನಲ್ಲಿ ಕೆತ್ತಿರುವ ವೆಂಕಟೇಶ್ವರಸ್ವಾಮಿಯ ಪಾದಗಳ ಗುರುತುಗಳಿವೆ. ಇದನ್ನು ಸ್ವಾಮಿಯ ಪಾದಗಳಿರುವ ಮಂಟಪವೆಂದರು. ತಿರುಪತಿಯ ಪೂರ್ವಕ್ಕೆ ರೇಣಿಗುಂಟ ರಸ್ತೆಯಲ್ಲಿ ಹಾರುಬೇಟೆ ಮಂಟಪವಿದೆ.

**ಎಂ. ತಿರುಚಾನೂರು ಪದ್ಮಾವತೀ ಅಮ್ಮನವರ ಆಲಯ :** ಈ ಪ್ರಸಿದ್ಧ ಆಲಯವು ಚಿರುತಾನೂರು ಅಥವಾ ತಿರುಚಾನೂರಿನಲ್ಲಿರಬೇಕು. ಇದು ಪೂರ್ವಾಭಿಮುಖವಾಗಿದ್ದು ಕಲ್ಲಿನ ನಿರ್ಮಾಣವಾಗಿದೆ. ಇದರ ಗರ್ಭಗುಡಿಯು ಪೂರ್ವಪಶ್ಚಿಮ 10 ಅಡಿ ಉತ್ತರ ದಕ್ಷಿಣ 7 ಅಡಿ, ಎತ್ತರ 8 ಅಡಿಗಳಿದ್ದು, ಮೇಲಿನ ವಿಮಾನಗೋಪುರವು 8 ಅಡಿ ಎತ್ತರವಿದೆ. ಇಲ್ಲಿನ ಅಮ್ಮನವರ ಮೂರ್ತಿ ಬಹುಸುಂದರ. ಉತ್ಸವ ಮೂರ್ತಿಯೂ ಅತ್ಯಾಕರ್ಷಕವಾದದ್ದು. ಇಲ್ಲಿ ಉಯ್ಯಾಲೆ ಸೇವೆಗಾಗಿ ಅಮ್ಮನವರ ವಿಗ್ರಹವಿರುವುದಾಗಿ ಹೇಳಲಾಗಿದೆ. ಶ್ರೀನಿವಾಸ ಮೂರ್ತಿಯ ವಿಗ್ರಹವಿದೆ. ಅಳಗ ತಿರುವೆಂಗಡ ಸ್ವಾಮಿಯ ಶ್ರೀ ಭೂದೇವಿಯರೊಡನಿರುವ ವಿಗ್ರಹಗಳ ಪ್ರಭಾವಳಿ ಹೊಂದಿವೆ. ತಿರುಮಂಗೈ ಆಳ್ವಾರ್ ಪ್ರತಿಮೆಯೂ, ಶ್ರೀಕೃಷ್ಣ, ರುಕ್ಮಿಣಿ ಸತ್ಯಭಾಮ ವಿಗ್ರಹಗಳೂ ಇವೆ.

ಗರ್ಭಗೃಹದ ಸುತ್ತ ಇರುವ ಪ್ರದಕ್ಷಿಣಾಪಥದ ಉತ್ತರದಲ್ಲಿನ ಒಂದು ಕೋಣೆಯಲ್ಲಿ ದಕ್ಷಿಣಕ್ಕೆ ಮುಖ ಮಾಡಿದಂತೆ ರಾಮಾನುಜರ ವಿಗ್ರಹವಿದೆ; ಅವರ ಉತ್ಸವ ಮೂರ್ತಿಯೂ ಇದೆ. ದಕ್ಷಿಣದ ಕಡೆಯ ಒಂದು ಕಿರಿಯ ಕೋಣೆಯಲ್ಲಿ ಸೇನಾಧಿಪತಿಯೂ, ನಮ್ಮಾಳ್ವಾರ್ ಹಾಗೂ ಗರುಡಾಳ್ವಾರರ ವಿಗ್ರಹಗಳೂ ಇವೆ. ಪ್ರದಕ್ಷಿಣಾಪಥದ ಪೂರ್ವಕ್ಕೆ ಆಸ್ಥಾನ ಮಟಪವಿದ್ದು ಇದು 25 ಅಡಿ ಪೂರ್ವದಲ್ಲಿಯೂ ಉತ್ತರದಲ್ಲಿ 36 ಅಡಿಯೂ ಇದ್ದು ಎತ್ತರ 11 ಅಡಿಯಾಗಿದೆ. ಇಲ್ಲಿ ಒಂದು ಜೀರ್ಣವಾದ ಅಶ್ವವಾಹನವಿದೆ. ಗಿಲೀಟು ಮಾಡಿದ ಕವಚವನ್ನು ಹೊದಿಸಲಾಗಿದೆ. ಇದರ ಪೂರ್ವಕ್ಕೆ 54 ಅಡಿ ಎತ್ತರದ ಧ್ವಜಸ್ತಂಭವಿದೆ.ಇದರ ನಂತರ ಬಲಿಪೀಠವಿದೆ. ಇವುಗಳ ಮೇಲೆ ಮರದ ಚಾವಣಿಯಿದೆ. ಇದರ ಪೂರ್ವಕ್ಕೆ ರಂಗಮಂಟಪವಿದ್ದು ಇದು ನಾಲ್ಕಡಿಎತ್ತರದ ಜಗಲಿಯ ಮೇಲೆ 16 ಕಂಬಗಳಲ್ಲಿ ಹರಡಿ, 24 × 24 × 8 ಘನ ಅಡಿಗಳಷ್ಟು ಇದೆ.

**ಎನ್. ಶ್ರೀಕೃಷ್ಣಸ್ವಾಮಿ ಆಲಯ :** ಪದ್ಮಾವತೀ ಅಮ್ಮನವರ ಆಲಯದ ದಕ್ಷಿಣಕ್ಕೆ ಒಂದು ಗಜ ಸ್ಥಳ ಬಿಟ್ಟಂತೆ ಕೃಷ್ಣಸ್ವಾಮಿ ಮಂದಿರವಿದೆ.

ಇದರ ಗರ್ಭಗೃಹವು 6× 6×9 ಘನ ಅಡಿಗಳು. ಇದರ ಆಸ್ಥಾನ ಮಂಟಪದಲ್ಲಿ ಒಂದು ದೊಡ್ಡ ಗಂಟೆಯನ್ನು ಇಳಿಬಿಡಲಾಗಿದೆ. ಗರ್ಭಗೃಹದಲ್ಲಿ ಪದ್ಮಾಸನ ಹಾಕಿ ಕುಳಿತ ಎರಡು ಕೈಗಳ ಕೃಷ್ಣಸ್ವಾಮಿ ಪೂರ್ವಾಭಿಮುಖ ವಿಗ್ರಹವೂ, ಎರಡು ಕೈಗಳ ಪದ್ಮಾಸನಸ್ಥ ಮೊಣಕಾಲು ಮೇಲೆ ಮಡಿಸಿದ ಬಲಗೈಯಲ್ಲಿ ಒರಗಿದಂತಹ ಬಲರಾಮನ ಮೂರ್ತಿಯೂ ಇದೆ. ಉತ್ತರಾಭಿಮುಖವಾಗಿದೆ. ವೇಣು ಗೋಪಾಲಸ್ವಾಮಿ, ರುಕ್ಮಿಣಿ, ಚಕ್ರಗಳ ನಿಂತ ಭಂಗಿಯ ಉತ್ಸವ ವಿಗ್ರಹಗಳುಂಟು.

**ಓ. ಅಳಗು ತಿರುವೆಂಕಟನಾಥ ಆಲಯ :**ಕೃಷ್ಣಸ್ವಾಮಿಯ ಆಲಯದ ದಕ್ಷಿಣಕ್ಕೆ ಅಳಗುತಿರುವೆಂಗಡಸ್ವಾಮಿಯ ಪೂಜಾರಹಿತ ವಿಗ್ರಹದ ಆಲಯವಿದೆ. ಆಲಯವು ಒಳ್ಳೆಯ ಸ್ಥಿತಿಯಲ್ಲಿದೆ. ಇದರ ಗರ್ಭಗೃಹವು 7× 7 × 9 ಘನ ಅಡಿಯಿದೆ. ಅಳಗು ತಿರುವೆಂಗಡ ಸ್ವಾಮಿಯ ಮೂಲಮೂರ್ತಿ ಇಲ್ಲಿದೆ. ಪ್ರದಕ್ಷಿಣಾಪಥ, ಆಸ್ಥಾನ ಮಂಟಪ, ಮತ್ತೂ ಪೂರ್ವಕ್ಕೆ ರಂಗಮಂಟಪಗಳಿವೆ. ಇಲ್ಲಿ ಗರುಡಾಳ್ವಾರ್ ಗುಡಿಯೂ ಉಂಟು.

**ಪಿ. ನೀರಾಳಿ ಮಂಟಪ :** ಪದ್ಮ ಸರೋವರದ ಮಧ್ಯದಲ್ಲಿ ನೀರಾಳಿ ಮಂಟಪವಿದೆ. ಕಾರ್ವೇಟಿ ನಗರದ ಜಮೀಂದಾರನು ಪ್ರತಿವರ್ಷದ ಮಾಘಮಾಸದಲ್ಲಿ ತೆಪ್ಪೋತ್ಸವ ನಡೆಸುತ್ತಿದ್ದನು. ಕಾರ್ತೀಕಮಾಸದ ಉತ್ಸವಗಳ 9 ನೇ ದಿನದಂದು ಅಮ್ಮವರು ಬಂದು ಆಸೀನರಾಗಿರಲು ತೀರ್ಥವಾರಿ ಮಂಟಪದ ಉಲ್ಲೇಖವೂ ಇದೆ.

**ಕ್ಯೂ. ಶ್ರೀ ಸೂರ್ಯನಾರಾಯಣ ಸ್ವಾಮಿ ಆಲಯ ಹಾಗೂ ಶ್ರೀ ವೆಂಕಟೇಶ್ವರಸ್ವಾಮಿ :** ಈ ಪದ್ಮ ಸರೋವರಕ್ಕೆ ಪೂರ್ವದಲ್ಲಿ ಪಶ್ಚಿಮಾಭಿಮುಖವಾಗಿ ನಿಂತಿರುವ 1) ನಾಲ್ಕು ಕೈಗಳ ಸೂರ್ಯನಾರಾಯಣಸ್ವಾಮಿ ಆಲಯ ಹಾಗೂ, 2) ಶ್ರೀವೆಂಕ ಟೇಶ್ವರಸ್ವಾಮಿ ಆಲಯಗಳುಂಟು.

ಪುರಾಣ ಕಥೆಯ ಪ್ರಕಾರ ತನ್ನನ್ನು ಬಿಟ್ಟುಹೋದ ಲಕ್ಷ್ಮೀಯನ್ನು ಮತ್ತೆ ಪಡೆಯಲು ಶ್ರೀನಿವಾಸನು ತಪಸ್ಸು ಮಾಡಿದ ಸ್ಥಳ ಇದು ಎಂದು ಹೇಳುವುದುಂಟು.

**ಆರ್. ಶ್ರೀವರದರಾಜಸ್ವಾಮಿ ಆಲಯ** : ಈ ಹಳ್ಳಿಯ ಪೂರ್ವಭಾಗದಲ್ಲಿ ಪಶ್ಚಿಮಾಭಿಮುಖವಾಗಿ ದೊಡ್ಡದಾದ ಇಟ್ಟಿಗೆ ಗಾರೆಗಳಿಂದ ನಿರ್ಮಿತವಾದ ಪೂಜಾರಹಿತವಾದ ವರದರಾಜಸ್ವಾಮಿ ಆಲಯವು ಇದ್ದಿತು. ಇದರಲ್ಲಿ ಪೆರುಂದೇವಮ್ಮನ ಗುಡಿಯು ಪೂರ್ವಾಭಿಮುಖವಾಗಿದ್ದಿತು. ಈ ಆಲಯದ ಅಡಿಗೆಯ ಮನೆಯ ಕಲ್ಲುಗಳನ್ನು ಪದ್ಮಾವತೀ ಅಮ್ಮನವರ ಆಲಯದ ನಿರ್ಮಾಣದಲ್ಲಿ ಬಳಸಲಾಯಿತು - ಎಂದು ದಾಖಲೆಯು ವಿವರಿಸುತ್ತದೆ. ಪೂರ್ವದಲ್ಲಿ 327 ಅಡಿಯೂ, ಉತ್ತರದಲ್ಲಿ 177 ಅಡಿಗಳ ಪ್ರಾಕಾರವಿದ್ದು, ಮಹಾದ್ವಾರಗೋಪುರ 36 ಅಡಿ ಪೂರ್ವಕ್ಕೆ, ಉತ್ತರಕ್ಕೆ 48 ಅಡಿ ಇದ್ದು, 22.5 ಅಡಿ ಎತ್ತರವಿದ್ದಿತು. ಇದರ ಮೇಲಿನ ಗೋಪುರ ಗಾರೆಯಿಂದಾಗಿ 5 ಅಂತಸ್ತುಗಳಾಗಿದ್ದಿತು.

## 6. ದಿತ್ತಂ :

ಈಸ್ಟ್ ಇಂಡಿಯಾ ಕಂಪನಿಯವರು ತಯಾರಿಸಿದ ಕಡೆಯ ದಾಖಲೆಯೆಂದರೆ ಆಲಯಗಳ ಪ್ರಸಾದ ನಿವೇದನೆಗಳ ತಯಾರಿಕೆಗೆ ಬೇಕಾದ ಸಾಮಾನು ಸರಂಜಾಮುಗಳ ಪಟ್ಟಿಯಾಗಿದ್ದಿತು. ದೇವರ ಎಲ್ಲ ಸೇವೆಗಳ ವಸ್ತು ಸಾಮಗ್ರಿಗಳು, ಅದರಲ್ಲಿ ಭಾಗವಹಿಸುವವರ ಸಮ್ಮಾನ ಸಂಭಾವನೆ ವೆಚ್ಚಗಳು ಇಲ್ಲಿವೆ. ಆಗಾಗ್ಗೆ ಕಾಲಕ್ಕೆ ತಕ್ಕಂತೆ ಉಂಟಾದ ಪರಿವರ್ತನೆಗಳ ಹೊರತಾಗಿ ಇಂದಿಗೂ ಆಲಯದಲ್ಲಿ ಈ ದಿತ್ತ ವಿಧಾನವನ್ನು ಅನುಸರಿಸಲಾಗುತ್ತಿದೆ ಮತ್ತು ಆಲಯದ ಆಡಳಿತ ನಿರ್ವಹಣೆಯಲ್ಲಿ ಮೂಲಭೂತವಾದ ದಾಖಲೆಯಾಗಿದೆ.

## 7. 1803 ರಲ್ಲಿನ ಆಲಯದ ನಿತ್ಯ ವಿಧಿಗಳು :

ಕ್ರಿ.ಶ. 1803 ರಲ್ಲಿ ಮರಾಠಿ ಭಾಷೆಯಲ್ಲಿ ಬರೆದಂತಹ ಆಲಯ ದಿನಚರಿ ಆಸಕ್ತಿಕಾರಕವಾದದ್ದು. ಕರ್ನಲ್ ಮೆಕೆಂಜಿಯ ಸಹಾಯಕನಾಗಿದ್ದ ನಾರಾಯಣರಾಯ ಇದನ್ನು ಬರೆದವನು. ಇದರಲ್ಲಿ ಆಲಯದ ದೈನಂದಿನ ವ್ಯವಹಾರಗಳನ್ನು - ಯಾತ್ರಿಕರಿಂದ ಕಾಣಿಕೆಗಳನ್ನು ಸ್ವೀಕರಿಸುವಿಕೆ ಅದನ್ನು ಪರಿಷೆ ಎರಡು ಕರೆಯುತ್ತಿದ್ದರು. ಆಲಯದ ಸಿಬ್ಬಂದಿವರ್ಗ, ಜಿಯಂಗಾರರು ಏಕಾಂಗಿಗಳು ಆಲಯದ ವ್ಯವಹಾರಗಳಲ್ಲಿ ವಹಿಸಿದ್ದ ಪಾತ್ರ- ಮೊದಲಾದವು ಈಸ್ಟ್ ಇಂಡಿಯಾ ಕಂಪನಿಯು ನೇರ ಆಡಳಿತ ವಹಿಸಿಕೊಂಡ ಸಮಯದಲ್ಲಿ ಹೇಗಿದ್ದವು ಎಂಬುದನ್ನು ಇದು ವಿವರಿಸುತ್ತದೆ. ಇಲ್ಲಿನ ವ್ಯಾಕರಣ, ಭಾಷೆಯ ಅವಧಾರಣೆ, ಯಾಸೆಗಳು ವಿವರಣೆಯಿಲ್ಲದೆಯೇ ಅರ್ಥವಾಗುವಂತಹವು.

ಇಲ್ಲಿನ ಕೊನೆಯ ಸಾಲುಗಳು ಯಾತ್ರಿಕರ ಅಗತ್ಯಗಳ ದೃಷ್ಟಿಯಿಂದ ಇಂದಿಗೂ ಪ್ರಸ್ತುತವಾಗಿವೆ.

“ಇಲ್ಲಿನ ಸ್ಥಳವಂದಿಗರು ಈ ಯಾವ ಧಾರ್ಮಿಕ ಕಾರ್ಯಗಳಿಗೂ ತಕ್ಕ ಶುಲ್ಕ ನೀಡುವುದಿಲ್ಲ. ಯಾತ್ರಿಕರಿಂದಲೇ ವಸೂಲು ಮಾಡಲಾಗುವುದು. ಆದರೆ ಪರಿಸ್ಥಿತಿಯಿಂದ ಕಡು ಬಡವರಾದವರು, ನಿರ್ಗತಿಕರನ್ನು ಏನನ್ನೂ ಕೇಳುವುದಿಲ್ಲ. ಎಲ್ಲರೂ ದೇವರ ದರ್ಶನ ಮಾಡಿ ಬರಬಹುದು. ಸ್ಥಿತಿವಂತರಿಗೆ ಮಾತ್ರವೇ ನಿಗಧಿಯಾದ ಶುಲ್ಕಗಳನ್ನು ವಸೂಲಿ ಮಾಡಿದ ನಂತರವೇ ದೈವದರ್ಶನಕ್ಕೆ ಅವಕಾಶ ನೀಡಲಾಗುವುದು.

“ತಿರುಮಲೆಯ ಬೆಟ್ಟಕ್ಕೆ ಹತ್ತಿಹೋಗಲೂ, ಅಲ್ಲಿಂದ ಇಳಿದು ಬರಲೂ ಬಡವರಿಗೆ ಯಾರೂ ಅಡ್ಡಿ ಮಾಡುವುದಿಲ್ಲ. ಆದರೆ ಸಿರಿವಂತರು ಬೆಟ್ಟವನ್ನು ಏರಲು ಅನುಮತಿ ಪಡೆಯುವುದು ಕಡ್ಡಾಯ. ಕೆಲವು ವೇಳೆ ಅವರು ಪರವಾನಗಿ ಇಲ್ಲದೆ ಹೋಗಿ ಹೋದರೂ ಇಳಿದು ಬರುವಾಗ ಸರ್ಕಾರದ ಆಳುಗಳು ದಾರಿಯಲ್ಲಿ ನಿಲ್ಲಿಸಿ, ಅವರು ಪರವಾನಗಿ ಪಡೆದ ಮೇಲೆಯೇ ಹೊರಹೋಗಲು ಬಿಡುವರು.

“ಮೊದಲಿಗೆ 24 ದುಗ್ಗಾಣಿಗಳನ್ನೂ (1 ದುಗ್ಗಾಣಿ = ಎರಡು ಕಾಸು) ( ಎರಡು ಕಾಸು ) (ಎರಡು ಆಣೆ ಎಂದಿರಬೇಕು. ಇದು ರೂಪಾಯಿನ ಎಂಟನೇ ಒಂದು ಭಾಗ. ಒಂದು ಆಣೆಗೆ ಹನ್ನೆರಡು ಕಾಸು. ಹಾಗಾಗಿ 12×16 ಆಣೆ = 192 ಕಾಸು = 1 ರೂಪಾಯಿ. ಇದು ಸ್ವಾತಂತ್ರ್ಯ ಬಂದ ನಂತರದಲ್ಲಿಯೂ ಚಾಲ್ತಿಯಲ್ಲಿದ್ದ ಪದ್ಧತಿ (ಬ್ರಿಟಿಷ್ ಪದ್ಧತಿ) - ಅನುವಾದಕ) - ಎರಡು ದುಗ್ಗಾಣಿ -

(ರೂಪಾಯಿನ ಎಂಟನೇ ಒಂದು ಭಾಗ) ಬ್ರಾಹ್ಮಣ, ಜೋಗಿ, ಜಂಗಮ, ಬೈರಾಗಿ, ದಾಸರಿಗಳ ಹೊರತಾಗಿ ಎಲ್ಲರಿಂದಲೂ ವಸೂಲಿ ಮಾಡಲಾಗುತ್ತಿದ್ದಿತು. ಆದರೆ ಗೌರವಾನ್ವಿತವಾದ ಕಂಪನಿಯ ಆಡಳಿತದಲ್ಲಿ ಈ ಪದ್ಧತಿಯನ್ನು ಪೂರ್ಣವಾಗಿ ಕೈಬಿಟ್ಟು ಯಾವುದೇ ಭೇದವಿಲ್ಲದೆ ಎಲ್ಲರಿಂದಲೂ 24 ದುಗ್ಗಾಣಿಗಳನ್ನು (ಒಂದು ರೂಪಾಯಿ) ವಸೂಲಿ ಮಾಡಲಾಗುತ್ತಿದೆ.''

## ಉಲ್ಲೇಖ - 1

ನಾರಾಯಣರಾವ್ (1803) ದಿನಚರಿಯಿಂದ ಎತ್ತಿ ನೀಡಿರುವಂತಹದ್ದು.

ಮೆಕೆಂಜಿ ಪತ್ರಗಳು - ಸಾಮಾನ್ಯ - ದ್ರಾವಿಡ ಸ್ಥಳ ಮಹಾತ್ಮೆಗಳು ಹಸ್ತಪ್ರತಿ ಅನುವಾದ ಹಾಗೂ ವರದಿಗಳು - ಸಂ16-50 ಪುಟ - 500.....(ಎ ಯಿಂದ ಡಿ ವರೆಗೆ)

ದಿನವೂ ಬೆಳಗ್ಗೆ ಹೊತ್ತು ಮೂಡುವ ಮೊದಲೇ ಗೊಲ್ಲೇಶ್ವರನು (ಗೊಲ್ಲನು) ಜಿಯಂಗಾರ್ (ದೊಡ್ಡಜಿಯಂಗಾರ್) ಮಠಕ್ಕೆ ಬರುವನು. ದೊಡ್ಡಜಿಯಂಗಾರರ ಬಳಿ ಬೀಗದ ಕೈಯನ್ನು ತೆಗೆದುಕೊಂಡು ಬಂದು ಉಗ್ರಾಣದ ಬಾಗಿಲನ್ನು ತೆಗೆದು, ಸ್ವಾಮಿಗಳ ಆಜ್ಞೆಯಂತೆ ದೇವರಿಗೆ ನಿವೇದನೆಗಳನ್ನು ಮಾಡಲು ತಕ್ಕ ಅಕ್ಕಿ, ಧಾನ್ಯ, ತುಪ್ಪ, ಎಣ್ಣೆ ಮತ್ತಿತರ ಪದಾರ್ಥಗಳನ್ನು ಅಡಿಗೆಯವನಿಗೆ ನೀಡಿ ತಳಿಗೆಗಳನ್ನು ಸಿದ್ಧಪಡಿಸಲು ಹೇಳಿ ಮತ್ತೆ ನಂಬಿ (ಪೂಜೆ ಮಾಡುವವ) ಹಾಗೂ ಸರ್ಕಾರ್ ಆಳುಗಳನ್ನು ಅಲ್ಲಿಯೇ ಬಿಟ್ಟು ಮಠಕ್ಕೆ ಹಿಂದಿರುಗಿ ಬಂದು, ಸ್ನಾನ ಸಂಧ್ಯೆಗಳನ್ನು ಮಾಡಿ ಸಿದ್ಧವಾಗಿರುವ ದೊಡ್ಡ ಜಿಯಂಗಾರರನ್ನು ಕರೆದು ಕೊಂಡು ಆಲಯಕ್ಕೆಬರುವನು. ಇವರು ಆಲಯದ ಬೀಗದ ಕೈಗಳನ್ನು ಹಿಡಿದುಕೊಂಡು ಬಂದು ಆಲಯದ ಪ್ರದಕ್ಷಿಣೆ ಮಾಡಿ, ಸಾಷ್ಟಾಂಗ ನಮಸ್ಕಾರಮಾಡಿ, ತೊಟ್ಟಿತೀರ್ಥವನ್ನು ಪಡೆದು, ಭಾಷ್ಯಕಾರರಿಗೆ ನಮಸ್ಕಾರ ಮಾಡಿ (ಬಂಗಾರದ) ಬಾಗಿಲನ್ನು ತೆಗೆಯುವರು. ಈ ಬಾಗಿಲಿಗೆ ಹಿಂದಿನ ದಿನ ರಾತ್ರಿ ಬೀಗ ಹಾಕಿರುವರು. ಈಗ ಅರ್ಚಕರು, ಚಿಕ್ಕಜಿಯರು,ಆಳುಗಳು ಜೊತೆಗೆ ಬಂದಿರುತ್ತಾರೆ. ಬಂಗಾರದ ಬಾಗಿಲಿನೊಳಗೆ ಬಂದಿರುತ್ತಾರೆ. ಬ್ರಹ್ಮದೀಪವನ್ನು ನೋಡಿ ಅದರ ಬತ್ತಿಯನ್ನು ಸರಿಮಾಡಿ, ತುಪ್ಪವನ್ನು ಎರೆದು ಶಯನ ಮಂಚದಲ್ಲಿದ್ದಶ್ರೀನಿವಾಸ ಮೂರ್ತಿಯನ್ನು ಗರ್ಭಗುಡಿಗೆ ಸೇರಿಸಿ ಮಂಚದ ಮೇಲಿನ ಹೂವುಗಳನ್ನು ಹೆಕ್ಕಿ ತೆಗೆಯುವರು. ಇಲ್ಲಿಟ್ಟಿದ್ದ ಹಾಲು, ತೀರ್ಥಗಳ ಪಾತ್ರೆಗಳನ್ನು ತೆಗೆದಿಡುವರು. ತೀರ್ಥವನ್ನು ಜಿಯರು ಪಡೆಯುವರು. ಇವರ ಹಿಂದೆಯೇ ದೀವಟಿಗೆ ಹಿಡಿದು ಬಂದು ಗೊಲ್ಲನಿಗೂ ತೀರ್ಥವನ್ನೂ ಚಂದನವನ್ನೂ ನೀಡುವರು. ಇದಾದನಂತರ ಬಂಗಾರು ವಾಕಿಲಿಯನ್ನು ತೆಗೆಯಲು ಅಪ್ಪಣೆ ನೀಡಲಾಗುತ್ತಿದೆ. ಗೊಲ್ಲನು ಬಾಗಿಲನ್ನು ತೆಗೆಯುವನು. ನಂತರ ಸಜ್ಜೆಮನೆಯ ಸೇವಕನು ಒಳಬಂದು ಮಂಚವನ್ನು ಅದರ ಮೇಲಿನ ದಿಂಬು, ದುಪಟಿಗಳನ್ನು ತೆಗೆದಿಡುವನು. ನಂತರ ಒಳಬರುವ ಆಚಾರ್ಯಪುರುಷರು ಸರ್ಕಾರ್ ಜನರೊಂದಿಗೆ ಒಳಬರುವರು. ದೇವರಿಗೆ ಆರತಿಯನ್ನು ಮಾಡುವರು. ನಂತರ ದೇವರಿಗೆ ಹಾಲನ್ನು ಅರ್ಪಿಸಲಾಗುವುದು.

ನಂತರ ದೊಡ್ಡ ಜಿಯಂಗಾರರು ಮಂಗಳಾರತಿಯನ್ನು ಸಿದ್ಧಮಾಡಿ ಒಳಗಿರುವ ಅರ್ಚಕರ ಕೈಗೆ ನೀಡುವರು. ಜಿಯಂಗಾರರು ತಿರುಮಲೆಯಲ್ಲಿ ಇಲ್ಲದಿದ್ದಲ್ಲಿ, ಕುಟುಂಬವಿಲ್ಲದ ಏಕಾಂಗಿಗಳೋ ಅವರ ಅನುಚರರೋ ಆರತಿಯನ್ನು ಸಿದ್ಧಪಡಿಸಿ ಅರ್ಚಕರಿಗೆ ಕೊಡು ತ್ತಾರೆ. ಜಿಯಂಗಾರರಿಗೆ ತೀರ್ಥವನ್ನು ಮೊದಲು ನೀಡಿ ನಂತರ ಮಿಕ್ಕವರಿಗೆ ತೀರ್ಥವನ್ನು ನೀಡಲಾಗುವುದು. ನಂತರ ಜಿಯಂಗಾರರು ಧೂಪ ಹಾಕುವರು. ಪುಷ್ಪವಾಟಿಕೆಯಿಂದ, ಹೂವುಗಳನ್ನು ತಂದು ಕೊಡುವರು.

ನಂತರ ತಿರುವಾರಾಧನೆ ಮಾಡಲಾಗುತ್ತದೆ. ಈ ಪೂಜೆಯಾದ ಮೇಲೆ ತೋಮಾಲೆಯನ್ನು ಹೂವಿನ ಹಾರವನ್ನು ಸ್ವಾಮಿಯ ಕೊರಳಿಗೆ ಅಲಂಕರಿಸುವರು. ಚಂದನವನ್ನು ಹಚ್ಚಿ ಆರತಿಯೆತ್ತುವರು. ಸ್ವಾಮಿಯ ಈ ಸೇವೆಯನ್ನು ತೋಮಾಲೆಸೇವೆ ಎಂದು ಕರೆಯುವರು.

ತದನಂತರ ಶ್ರೀನಿವಾಸ ಮೂರ್ತಿಯ (ಚರಮೂರ್ತಿ) ವಿಗ್ರಹವನ್ನು ಹೊರಕ್ಕೆ ತಂದು ರಂಗಮಂಟಪದಲ್ಲಿ ಇರುವಂತಹ ಸಿಂಹಾಸನದ ಮೇಲೆ ಕೂರಿಸಿ ಕೊಲುವು (ಓಲಗ)ವನ್ನು ನಡೆಸುವರು. ದೇವರ ಮುಂದೆ ದೀಪಗಳನ್ನು ಬೆಳಗಿಸಿ, ಹೂ ಪಠಣ ನಡೆಸುತ್ತಾರೆ. ನಂತರ ಮೆರವಣಿಗೆಯಾದಾಗ ಮಾತ್ರಾಧನ, ಬ್ರಾಹ್ಮಣಸಂಭಾವನೆ ನೀಡುವರು. ನಂತರ ದಿನದ ಪಂಚಾಂಗವನ್ನೋದುತ್ತಾರೆ. ನಂತರ ಪೆರಿಯಜಿಯಂಗಾರರ ಗುಮಾಸ್ತೆಯು ಹಿಂದಿನ ದಿನ ಆಲಯದ ಬಾಗಿಲು ತೆರೆದಾಗಿನಿಂದ ಮುಚ್ಚುವವರೆಗೆ ಬಂದ ಕಾಣಿಕೆಗಳು, ವಾಹನ ಸೇವೆಯಲ್ಲಿ ವಸೂಲಾದ ಶುಲ್ಕಗಳು, ದೇವರಿಗೆ ಸಮರ್ಪಿಸಲಾದ ವಸ್ತ್ರಗಳು, ಆಭರಣಗಳು, ಚಿನ್ನ ಮತ್ತಿತರ ವಸ್ತುಗಳು, ಮಾಡಲಾದ ವೆಚ್ಚಗಳು ಎಲ್ಲದರ ಲೆಕ್ಕವನ್ನು ಒಪ್ಪಿಸುತ್ತಾನೆ. ಭಕ್ತರ ನಡಾವಳಿಯನ್ನು ಅವರು ತೋರುವ ಭಕ್ತಿಯ ಉತ್ಸಾಹವನ್ನು ಕುರಿತಾದ ಟಿಪ್ಪಣಿಗಳನ್ನೂ ಬರೆದಿಡುತ್ತಾನೆ. ಶ್ರೀನಿವಾಸಮೂರ್ತಿಯ ಎದುರಿಗೆ ಎಲ್ಲ ಲೆಕ್ಕವನ್ನೂ, ಉಗ್ರಾಣದಲ್ಲಿ ಪಡೆದ, ಸೇರಿಸಿದ ವಸ್ತುಗಳ ವಿವರ ಸಹಿತ ಲೆಕ್ಕಗಳನ್ನು ಗುಮಾಸ್ತನು ಓದಿ ಹೇಳುವನು.

ತಾಳ್ಳಪಾಕ ವಾರಲು (ಗಾಯಕರು) ನಂತರ ಕೀರ್ತನೆಗಳನ್ನು ಹಾಡುವರು. ಮಂಗಳಾರತಿ ಮಾಡುವಾಗ ಬೇರೆ ಬೇರೆ ರೀತಿಯ ಸಂಗೀತವನ್ನು ಹಾಡುತ್ತ ದೇವರಿಗೆ ಛತ್ರವನ್ನು ಹಿಡಿದು ಚಾಮರ ಸೇವೆ ಮಾಡುವರು. ದೇವರ ಅಲಂಕರಣ ಪೂರ್ಣವಾಗಿರುವುದನ್ನು ತೋರಿಸಲು ಕನ್ನಡಿಯನ್ನು ಹಿಡಿದು ಸ್ವಾಮಿಗೆ ರಾಜೋಪಚಾರ ಮಾಡುವರು. ಸಭೆಯಲ್ಲಿರುವವರಿಗೆಲ್ಲ ಪ್ರಸಾದಗಳನ್ನು ವಿತರಿಸಿದ್ದಾದ ಮೇಲೆ ಶ್ರೀನಿವಾಸ ಮೂರ್ತಿಯನ್ನು ಒಳಕ್ಕೆ ತೆಗೆದುಕೊಂಡು ಹೋಗುವರು. ಇದಾದ ನಂತರ ಸಹಸ್ರನಾಮಾರ್ಚನೆ - ಸ್ವಾಮಿಯ ಒಂದು ಸಾವಿರ ಹೆಸರುಗಳನ್ನು ಹೇಳುತ್ತ ವೆಂಕಟಾಚಲಪತಿಗೆ ಹೂವುಗಳನ್ನು ಅರ್ಪಿಸುತ್ತ ಪೂಜೆ ಮಾಡುವರು. ನಂತರ ದೇವರಿಗೆ ನಿವೇದನೆ ನೀಡುವರು. ಈ ಹೊತ್ತಿನಲ್ಲಿ ನಂಬಿಯು ದೇವರ ಬಳಿಯೇ ಇರುವನು. ಈ ಹೊತ್ತಿನಲ್ಲಿ ಗಂಟೆಯ ಶಬ್ದ ಮಾಡುವರು. ಇದು ಮೊದಲನೆಯ ಗಂಟೆ, ನಂತರ ಜಿಯಂಗಾರರನ್ನು ಒಳಕ್ಕೆ ಆಹ್ವಾನಿಸಿ, ಪ್ರಬಂಧ ಅನುಸಂಧಾನ ಮಾಡುತ್ತ ತೀರ್ಥವನ್ನೆಲ್ಲರಿಗೂ ನೀಡಿ ಎಲ್ಲರ ತಲೆಯ ಮೇಲೂ ಶಡಗೋಪುರವನ್ನಿಡುವರು. (ದೇವರ ಪಾದಗಳ ಗುರುತಿರುವ ಕಿರೀಟದಾಕಾರದ ಬೆಳ್ಳಿಯ ಇಲ್ಲವೇ ಬಂಗಾರದ ಟೋಪಿ) ನಂತರ ಸಂಪ್ರದಾಯದಂತೆ ದೇವರ ಆಲವಟ್ಟವನ್ನು - ಚಾಮರವನ್ನು ಜನರಿಗೆ ನೀಡುವರು.

ಇದಾದನಂತರ ಪರಿಷೆಯನ್ನು (ಪರಿಷತ್ ಅನ್ನು) - ಪಾರ್ಷದರನ್ನು - ಯಾತ್ರಿಕರನ್ನು ಕರೆಯುವರು. ಬೇರೆ ಬೇರೆ ಊರುಗಳಿಂದ ಬಂದ ಯಾತ್ರಿಕರು ದೇವರ ದರ್ಶನ ಮಾಡಿ ಕಾಣಿಕೆಗಳನ್ನು ಅರ್ಪಿಸುವಾಗ ಏಕಾಂಗಿಯು ಗರ್ಭಗೃಹದಿಂದ ಒಂದು ದೊಡ್ಡ ಬೆಳ್ಳಿಯ ಬಟ್ಟಲನ್ನು ತಂದು ದೇವರ ಸನ್ನಿಧಿಯಲ್ಲಿ ಕಾಣಿಕೆಗಳನ್ನು ಪಡೆದು, ಜಿಯಂಗಾರರು, ಸರ್ಕಾರದ ಆಳುಗಳು ಬಂಗಾರದ ಬಾಗಿಲಿನ ಹೊರಗಿದ್ದು, ಯಾತ್ರಿಕರು ಅರ್ಪಿಸಬಯಸುವ ಕಾಣಿಕೆಯ ವಿವರವನ್ನು ಪಡೆದು ಅವರನ್ನು ಒಳಕ್ಕೆ ಕಳುಹಿಸುತ್ತಾರೆ. ರಂಗಮಂಟಪದಲ್ಲಿ ಒಂದು ಕೊಪ್ಪರವನ್ನು ಇಡಲಾಗಿದ್ದು ಯಾತ್ರಿಕರು ಇಲ್ಲಿಯೂ ತಮ್ಮ ಕಾಣಿಕೆಗಳನ್ನು ಸಮರ್ಪಿಸುವರು. ಸರ್ಕಾರ್ ಆಳು ಶಿರಸ್ತೇದಾರ, ಜೀಯಂಗಾರರ ಗುಮಾಸ್ತೆಗಳ ಸಮ್ಮುಖದಲ್ಲಿ ಹಣವನ್ನೆಲ್ಲ ಚೀಲಕ್ಕೆ ತುಂಬಿ ಜೀಯಂಗಾರರ ಹನೂಮತ್ ಮುದ್ರೆಯ ಠಸ್ಸೆಯನ್ನು ಒತ್ತಿ ಕಟ್ಟುವನು. ಜೊತೆಗೇ ಸರ್ಕಾರ್‌ದ ಶ್ರೀನಿವಾಸಮುದ್ರೆಯನ್ನೂ ಒತ್ತುವನು. ಇದಾದ ಮೇಲೆ ಕಟ್ಟಿದ ಚೀಲಗಳನ್ನು ಹಿಂದಿನ ದಿನ ರಾತ್ರಿಯ ಸಂಗ್ರಹದೊಡನೆ ಎರಡು ಬೇರೆ ಬೇರೆ ಚೀಲಗಳನ್ನು ಅಂಟಿಸಿ ಕಳೆದ ದಿನದಿಂದಾದ ಸಮಾಚಾರ ವಿವರದೊಡನೆ ತಿರುಪತಿಯ ಅಮಲ್ದಾರರ ಕಚೇರಿಗೆ ಕಳುಹಿಸುವರು.

ಇದಾದ ನಂತರ ಸರ್ಕಾರದ ಆಳುಗಳು ಏಕಾಂಗಿಗಳು ಹಣ ಸಂಗ್ರಹದ ಬಳಿ ಇರುವಂತಹ ಎಲ್ಲರನ್ನೂ ತನಿಖೆ ಮಾಡುವರು. ನಂಬಿಗಳು ಸ್ವಯಂಪಾಕಿಗಳನ್ನೂ ಬಂಗಾರದ ಬಾಗಿಲಿನಲ್ಲಿದ್ದವರನ್ನೂ ತಪಾಸಣೆ ಮಾಡುವರು.ಮಧ್ಯಾಹ್ನ 2 ಗಂಟೆಯ ಹೊತ್ತಿಗೆ ತಿರುವಾರಾಧನೆ ಮಾಡಿ ಗರ್ಭಗೃಹದ ಬಾಗಿಲನ್ನು ಮುಚ್ಚುವರು. ಈ ಎರಡನೆಯ ಅರ್ಚನೆಯಲ್ಲಿ ಎರಡನೆಯ ಗಂಟೆಯ ಸದ್ದು ಮಾಡುವರು. ನಿವೇದನೆಯೂ ಆಗುವುದು. ತೀರ್ಥ ಪ್ರಸಾದಗಳ ವಿತರಣೆ ಮಾಡಿದ ನಂತರ ಎಲ್ಲರೂ ಮನೆಗಳಿಗೆ ಹಿಂದಿರುಗುವರು. ಸರ್ಕಾರ್‌ನ ಆಳುಗಳು ಮಾತ್ರ ಬಹಳ ಎಚ್ಚರಿಕೆಯಿಂದ ಕಾವಲು ಕೆಲಸ ನಡೆಸುತ್ತ ಆಲಯದಲ್ಲಿಯೇ ಉಳಿಯುವರು.

ದೇವರಿಗೆ ತಮ್ಮ ಗೌರವವನ್ನು ಸಮರ್ಪಿಸಲು ಇಷ್ಟ ಪಡುವವರೆಲ್ಲರೂ ಅವರಿಗೆ ಒಳಗೆ ಹೋಗಲು ಅನುಮತಿ ದೊರೆಯುವ ವರೆಗೆ ರಂಗಮಂಟಪದಲ್ಲಿಯೇ ಕಾಯಬೇಕು. ಸಾಕಷ್ಟು ಪ್ರಮಾಣದ ಕಾಣಿಕೆಗಳನ್ನು ಅರ್ಪಿಸಲು ಬರುವ ಯಾತ್ರಿಕರನ್ನು ಸರ್ಕಾರ್ ಆಳುಗಳು ಹಾಗೂ ಜಿಯಂಗಾಯವರುಗಳ ಏಕಾಂಗಿಗಳು ಮೇಲೆ ಹೇಳಿರುವ ಪದ್ಧತಿಯಲ್ಲಿ ಒಳಗೆ ಕರೆದುಕೊಂಡು ಹೋಗಿ ತಮ್ಮ ಅರ್ಪಣೆಗಳನ್ನು ಸಲ್ಲಿಸಲು ಅವಕಾಶ ಮಾಡಿಕೊಡುವರು. ಯಾರಾದರೂ ಯಾತ್ರಿಕರು ದೇವರನ್ನು ವಾಹನವೇರಿ ಮೆರವಣಿಗೆಯಲ್ಲಿ ಬರುವಂತೆ ಕಾಣಬೇಕೆಂದು ಬಯಸಿದರೆ ತಕ್ಕ ರುಸುಮನ್ನು ನೀಡಬೇಕಾಗುತ್ತದೆ. ಗರುಡವಾಹನದಲ್ಲಿ ಸ್ವಾಮಿಯನ್ನು ನೋಡಲು ಎರಡು ಪಗೋಡಗಳಿಗೆ ಕಡಿಮೆಯಿಲ್ಲದಂತೆ ನೀಡಬೇಕಾಗುತ್ತದೆ.

ಗಣ್ಯರು, ಸ್ಥಿತಿವಂತರು, ಸ್ವಾಮಿಯನ್ನು ಎಲ್ಲ ವಾಹನಗಳಲ್ಲಿ ನೋಡಬಯಸುವವರು ವಾರ್ಷಿಕ ಉತ್ಸವಕ್ಕೆ ತೆರಬೇಕಾದಷ್ಟೂ ಹಣವನ್ನು ನೀಡುವರು. ಈ ಉತ್ಸವದಲ್ಲಿ (ಆರ್ಜಿತ ಬ್ರಹ್ಮೋತ್ಸವ) ಸ್ವಾಮಿಯನ್ನು ವಿವಿಧ ವಾಹನಗಳಲ್ಲಿ ವಿವಿಧ ದೀಪಗಳುಡುವೆ ಮೇರವಣಿಗೆಯಲ್ಲಿ ಒಯ್ಯಲಾಗುವುದು.

**ರಾತ್ರಿ ಕೈಂಕರ್ಯ :**

ಆಲಯಕ್ಕೆ ಸಾಯಂಕಾಲಗಳಲ್ಲಿ ಯಾತ್ರಿಕರು ದೇವರ ದರ್ಶನಕ್ಕೆ ಬಂದಿರುವ ಬಗ್ಗೆ ಸುದ್ದಿಯನ್ನು ಗೊಲ್ಲರವನು ಮಠಕ್ಕೆ ನೀಡುವನು. ಜಿಯಂಗಾರರು ನಂಬಿಗಳು ಸ್ನಾನ ಸಂಧ್ಯಾದಿಗಳನ್ನು ಪೂರೈಸಿ ಆಲಯಕ್ಕೆ ಬಂದು ಅಲ್ಲಿನ ಸರ್ಕಾರ್ ಸೇವಕರು, ಸಿಪಾಯಿಗಳ ಮುಂದೆ ಆಲಯದ ಬಾಗಿಲು ತೆಗೆಯುವರು. ಎಲ್ಲ ಸ್ಥಳಗಳನ್ನೂ ಪರೀಕ್ಷಿಸಿ ಸುರಕ್ಷಿತವಾಗಿದೆಯೆಂಬ ಭರವಸೆ ಹೊಂದಿ, ಪರಿಸರವನ್ನೆಲ್ಲ ಪರಿಶುಭ್ರಗೊಳಿಸಿ, ದೇವರ ಸ್ನಾನಕ್ಕೆಂದು ತಿರುಮಂಜನದ ಜಲವನ್ನು ತರುವರು. ದೊಡ್ಡ ಜಿಯಂಗಾರರು ಆ ಬಳಿಕ ಹೂವಿನ ಹಾರಗಳನ್ನು ಕಟ್ಟುತ್ತಿರುವಲ್ಲಿಗೆ ಬಂದು ಬಾಯಿ ಮೂಗಿಗೆ ಬಟ್ಟೆ ಕಟ್ಟಿಕೊಂಡು, ಕಟ್ಟಿದ ಹಾರಗಳನ್ನು ಬುಟ್ಟಿಯಲ್ಲಿಟ್ಟುಕೊಂಡು, ಅದನ್ನು ತಲೆಯ ಮೇಲೆ ಹೊತ್ತುಕೊಂಡು, ಬರುವರು. ಇವೆಲ್ಲವನ್ನೂ ಸುಗಂಧ ದ್ರವ್ಯಗಳೊಡನೆ ನಂಬಿಯ ಕೈಗೆ ಸೇರಿಸುವರು. ನಂಬಿಯು ಇವೆಲ್ಲವನ್ನೂ ದೇವರಿಗೆ ಅಲಂಕಾರ ಮಾಡುವನು. ದೇವರಿಗೆ ಯಾವುದೇ ವಿಶೇಷ ಅಲಂಕಾರ ಮಾಡುವುದಿದ್ದರೂ ಅದು ದೊಡ್ಡ ಜಿಯಂಗಾರಯವರ ಕೈಗಳ ಮೂಲಕವೇ ಹೋಗಬೇಕು. ಬೇರೆ ದಾರಿಯೇ ಇಲ್ಲ. ಜಿಯಂಗಾರರ ಹಾಜರಿ ಇಲ್ಲದಿದ್ದ ವೇಳೆಯಲ್ಲಿ ಅವರ ಪರವಾಗಿ ಚಿಕ್ಕ ಜಿಯರು ಕೈಗಳ ಮೇಲಿನಿಂದ ಸಾಗಬೇಕು. ಇಲ್ಲಿರುವ ನಾಲ್ಕೈದು ಏಕಾಂಗಿಗಳು ತಮಗೆ ಒಪ್ಪಿಸಿದ ಕೈಂಕರ್ಯವನ್ನು ಅವರಲ್ಲಿಯೇ ಒಬ್ಬರು ಮಾಡಬೇಕೇ ವಿನಃ ಇತರರು ಯಾರೂ ಮಾಡುವಂತಿಲ್ಲ. ದೇವರಿಗೆ ದಿನವೂ ತಿರುಮಂಜನವಾದ ಮೇಲೆ ಇವರಲ್ಲಿ ಒಬ್ಬರು ಸುಗಂಧವನ್ನು ತನ್ನ ಕೈಗಳ ಮೂಲಕ ಗರ್ಭಗುಡಿಯ ಮೂರ್ತಿಗೆ ನೀಡುವನು. ಹೊರಗಡೆಯಿಂದ ಏನೇ ಬರುವಂತಿದ್ದರೂ ಅದನ್ನು ಜಿಯಂಗಾರ್ಯರು ಪಡೆದು ದೇವರ ಪಕ್ಕದಲ್ಲಿ ನಿಂತಿರುವ ನಂಬಿಗೆ ಒಪ್ಪಿಸುವುದು, ನಂಬಿಯು ದೇವರಿಗೆ ಅರ್ಪಿಸುವನು. ಯಾತ್ರಿಕರು ಕಾಣಿಕೆಯನ್ನು ಅರ್ಪಿಸಿದಾಗ ಏಕಾಂಗಿಯು ಅದನ್ನು ಪಡೆದು ಬೆಳ್ಳಿಯ ಬಟ್ಟಲಿನಲ್ಲಿ ಹಾಕುವನು. ದೇವರ ತಿರುವಾಭರಣಗಳನ್ನೂ ಸಹ ಈತನೇ ತನ್ನ ಕೈಗಳ ಮೂಲಕ ನಂಬಿಗೆ ನೀಡುವನು. ನಂಬಿಯು ಸ್ವಾಮಿಗೆ ಅಲಂಕರಿಸುವನು. ಇವೆಲ್ಲ ಇಲ್ಲಿ ಆಚರಣೆಯಲ್ಲಿರುವ ಸಂಪ್ರದಾಯವಾಗಿದೆ.

ದೇವರಿಗೆ ತೋಮಾಲೆ ಸೇವೆಯೆಂದು ಕರೆಯಲಾಗುವ ಸೇವೆಯಲ್ಲಿ ಹೂವುಗಳ ಹಾರಗಳಿಂದ ಅಲಂಕರಿಸಿದ್ದಾದ ಮೇಲೆ ಕರ್ಪೂರದ ಆರತಿಯನ್ನೆತ್ತಿದ ಬಳಿಕ ಜಿಯಂಗಾರರೂ ಆಧ್ಯಾಪಕರೂ (ವೇದವನ್ನು ಹೇಳುವವರು) ಹೊರಗಡೆಗೆ ಬಂದು ಪ್ರಬಂಧಗಳನ್ನು ಹಾಡತೊಡಗಿದಾಗ ದೇವರಿಗೆ ನಿವೇದನೆ ನಡೆಯುತ್ತದೆ. ಗಂಟೆಯನ್ನು ಬಡಿದು ಸದ್ದು ಮಾಡುವರು. ಅನಂತರ ಆಲಯದ ಸುತ್ತಲೂ ಇರುವ ಉಪ ಆಲಯಗಳ ದೇವತೆಗಳಿಗೆ ನಿವೇದನೆಯಾಗುವುದು.

ಮೂಲದೇವರಿಗೆ ನಿವೇದನೆಯಾದ ಬಳಿಕ ಸಂಪ್ರದಾಯದಂತೆ ತೀರ್ಥವನ್ನು ನೀಡಲಾಗುವುದು. ಯಾತ್ರಿಕರನ್ನು ಬೆಳಗ್ಗೆಯಂತೆಯೇ ದರ್ಶನಕ್ಕೆ, ಕಾಣಿಕೆಗಳಿಗೆ ಅನುಮತಿಸಲಾಗುವುದು. ಕಾಣಿಕೆಗಳ ವಸೂಲಾತಿ ಆದನಂತರ ಅವುಗಳನ್ನು ಹಿಂದಿನಂತೆಯೇ ಚೀಲಗಳಲ್ಲಿ ಬಿಗಿದು ಭದ್ರವಾಗಿಸಿ ಅಲ್ಲಿಯೇ ರಾತ್ರಿಗಾಗಿ ಇಡಲಾಗುವುದು. ನಂತರ ದೇವರ ಮುಂದಿನ ಸ್ಥಳವನ್ನು ಶುಭ್ರಗೊಳಿಸಿ ರಂಗೋಲಿಯನ್ನಿಟ್ಟು ದೇವರನ್ನು ಮಂಟಪದಲ್ಲಿ ಶಯನಗೊಳಿಸುವರು. ಸರ್ಕಾರ್ ಆಳು ಕಾಳುಗಳೆಲ್ಲ ಇರುವಂತೆ ತಾಳ್ಳಾಕದವರು ಏಕಾಂತ ಸೇವೆಯ ಲಾಲಿ ಹಾಡುಗಳನ್ನು ಹೇಳುವರು. ದೇವರಿಗೆ ನಿವೇದಿಸಿದ ಹಾಲು, ದ್ರಾಕ್ಷಿ, ಗೋಡಂಬಿಗಳನ್ನು ಸಭಾ ಸದರಲ್ಲಿ ವಿತರಿಸಿದ ನಂತರ ಹೊರಗಡೆ ಬಂದು ಬಾಗಿಲನ್ನು ಮುಚ್ಚುವರು. ನಂಬಿ ಮತ್ತು ಜಿಯಂಗಾರರು ದೀಪವನ್ನು ತೆಗೆದುಕೊಂಡು ಒಳ ಪ್ರವೇಶಿಸಿ ಎಲ್ಲಪಾತ್ರೆ ಪರಿಕರಗಳು ಇರುವ ಸ್ಥಳಗಳನ್ನು ನೋಡಿಕೊಂಡು ಯಾವ ಯಾವ ವಸ್ತು ಎಲ್ಲೆಲ್ಲಿದೆಯೆಂಬುದರ ಮನಸ್ಸಿನ ಚಿತ್ರ ಮೂಡಿಸಿಕೊಂಡು ಹೊರಬಂದು ಬಾಗಿಲಿಗೆ ಬೀಗ ಹಾಕುವರು. ನಂತರ ಪಾರುಪತ್ಯಗಾರರು ಸರ್ಕಾರ್ ಆಳುಗಳು, ಜೀಯಂಗಾರರು - ಎಲ್ಲರೂ ಬಂಗಾರದ ಬಾಗಿಲಿನಿಂದ ಈಚೆಗೆ ಬಂದು ಈ ಬಾಗಿಲಿಗೆ ಬೀಗ ಹಾಕುವರು. ಈ ಬೀಗಕ್ಕೆ ಜಿಯಂಗಾರರ ಹನುಮಂತ ಮುದ್ರೆಯನನ್ನು ಒತ್ತುವರು. ಸರ್ಕಾರದ ಮುದ್ರೆಯನ್ನು ಒತ್ತಿದ ಬಳಿಕ ತಮ್ಮತಮ್ಮ ಮನೆಗಳಿಗೆ ತೆರಳುವರು. ದೊಡ್ಡ ಬಾಗಿಲಿನ ದ್ವಾರ - ಪಡಿಕಾವಲಿ ಗೋಪುರದ ಬಳಿ ರಕ್ಷಕ ಭಟರು. ಕಂಪನಿಯ ಸೈನಿಕರು ರಕ್ಷಣೆಗೆ ಸಿದ್ಧವಾಗಿರುವರು. ದ್ವಾರ ಬಂಧನವಾದ ಬಳಿಕ ಆಲಯದ ಒಳಗಡೆಯಾಗಲೀ ಸುತ್ತ ಮುತ್ತಲಾಗಲೀ ಯಾರೂ ಇರುವಂತಿಲ್ಲ. ಬೀಗದ ಕೈಗಳನ್ನು ಭದ್ರವಾಗಿಟ್ಟುಕೊಳ್ಳಲು ಜೀಯಂಗಾರ ಮಠದ ವಶದಲ್ಲಿಡಲಾಗುವುದು. ಈ ರೀತಿಯಲ್ಲಿ ದೈನಂದಿನ ಕೈಂಕರ್ಯ ನಡೆಯುತ್ತ ಇದೆ.

ಗುರುವಾರಗಳಂದು ಮಧ್ಯಾಹ್ನದಲ್ಲಿ ದೇವರ ಆಭರಣಗಳೆಲ್ಲವನ್ನೂ ತೆಗೆದು ದೇವರನ್ನು ಹೆಚ್ಚಿನ ಹೂಗಳಿಂದಲೂ ಹೂವಿನ ಅಂಗಿಯಿಂದಲೂ ಅಲಂಕರಿಸಲಾಗುವುದು. ಇದು ಪೂಲಂಗಿ ಸೇವೆ. ದಿನನಿತ್ಯದ ಪೂಜೆಗಳ ಜೊತೆಗೆ ಇದು ಗುರುವಾರಗಳ ಹೆಚ್ಚಿನ ಪೂಜೆ.

ಮಾರನೆಯದಿನ ಶುಕ್ರವಾರ ಬೆಳಗ್ಗೆ ದೇವರಿಗೆ ಎಂದಿನಂತೆ ನಿವೇದನೆಯಾಗುತ್ತದೆ. ಅನಂತರ ಬೇರೆ ಬೇರೆ ಕಡೆಗಳಿಂದ ಹೂವುಗಳನ್ನೂ ಸುಗಂಧ ದ್ರವ್ಯಗಳನ್ನು ತರಲಾಗುವುದು. ಪ್ರತಿದಿನವೂ, ದೇವರಿಗೆ ಹೆಚ್ಚಿನ ಗಂಧವನ್ನು ಲೇಪಿಸುವುದಾದರೆ ಶುಕ್ರವಾರಗಳಲ್ಲಿ ಅತಿ ಕಡಿಮೆ ಬಳಸುವರು. ಸ್ನಾನದ ಪರಿಕರಗಳನ್ನು ತೆಗೆದುಕೆಂಡು ಆಳುಗಳೊಂದಿಗೆ ದೊಡ್ಡ ಜಿಯಂಗಾರರರು ಗರ್ಭಗುಡಿಗೆ ಆಗಮಿಸುವರು. ದೇವರನ್ನು ಮೊದಲು ಹಾಲಿನಿಂದ ತೊಳೆಯಲಾಗುವುದು. ನಂತರ ಆಕಾಶಗಂಗೆಯ ತೀರ್ಥದಿಂದ ಅಭಿಷೇಕವಾಗುವುದು. ನಂತರ ಕೇಸರಿ, ಕಸ್ತೂರಿಗಳಿಂದ ಲೇಪನವಾಗಿ ಕಡೆಯಲ್ಲಿ ಮತ್ತೆ ನೀರಿನಿಂದ ತೊಳೆಯಲಾಗುವುದು. ಈ ಅಭಿಷೇಕ ತೀರ್ಥವನ್ನು ಜನರಲ್ಲಿ ವಿತರಿಸಲಾಗವವುದು. ಮಿಕ್ಕ ತೀರ್ಥವನ್ನು ಸರ್ಕಾರದ ಆಳುಗಳಿಗೆ ನೀಡುವರು. ಅವರು ಯಾತ್ರಿಕ ಭಕ್ತರಿಗೆ ಈ ತೀರ್ಥವನ್ನು ಹಣಪಡೆದು ನೀಡುವರು.

ದೇವರನ್ನು ನೀರಿನಿಂದ ತೊಳೆದ ಮೇಲೆ ಬಟ್ಟೆಯಿಂದ ಒರೆಸಿ, ಪುನುಗು ಲೇಪನ ಮಾಡುವರು. ಪಚ್ಚಕರ್ಪೂರದಿಂದ ಅಲಂಕರಿಸಿ ತಿರುನಾಮವನ್ನಿಡಲಾಗುವುದು. ರೇಷ್ಮೆವಸ್ತ್ರವನ್ನು ಉಡಿಸಿ, ವಿವಿಧ ಆಭರಣಗಳಿಂದ ಅಲಂಕರಿಸಲಾಗುವುದು. ನಂತರ ಆರತಿಯನ್ನು ನೀಡಲಾಗುವುದು.

ಇದಾದ ನಂತರ ಸ್ವಾಮಿಯ ಎದೆಯ ಮೇಲಿರುವ ಲಕ್ಷ್ಮೀದೇವಿಗೆ, ಸ್ವಾಮಿಗೆ ಮಾಡಿದಂತೆಯೇ ಅಭಿಷೇಕ ಮಾಡಿ ಮೊದಲಿನಂತೆಯೇ ಸ್ವಾಮಿಯ ಎದೆಯ ಮೇಲೆ ನಿಲ್ಲಿಸಲಾಗುವುದು. ಪುನಃ ಸ್ವಾಮಿಗೆ ಆರತಿ ಮಾಡಲಾಗುವುದು. ನಂತರ ಎಲ್ಲರೂ ಹೊರಬಂದು ದೇವರ ಮುಂಭಾಗವನ್ನು ಶುಭ್ರಗೊಳಿಸುತ್ತಾರೆ. ನಂತರ ಜಿಯಂಗಾರರು ಹೂವಿನ ಮಾಲೆಯ ಕೋಣೆಗೆ ಹೋಗಿ ಹೂವಿನ

ಹಾರಗಳನ್ನು ತೋಮಾಲೆಯನ್ನು - ತಂದ ನಂತರ ಅದನ್ನು ದೇವರಿಗೆ ಅಲಂಕರಿಸಿ ನಂತರ ನಿವೇದನೆ ನಡೆಸಲಾಗುವುದು. ನಂತರ ಎಲ್ಲರನ್ನೂ ಒಳಕ್ಕೆ ಕರೆದು ತೀರ್ಥವನ್ನು ನೀಡಲಾಗುವುದು. ಶಡಗೋಪುರವನ್ನು ತಲೆಯ ಮೇಲಿಟ್ಟು ಆಶೀರ್ವದಿಸಲಾಗುವುದು.

ಹಿಂದಿನ ದಿನದ ರಾತ್ರಿಯ ಹಾಗೂ ಈ ದಿನದ ಕಾಣಿಕೆಗಳನ್ನು ಚೀಲಗಳಲ್ಲಿ ಕಟ್ಟಿ ಎಂದಿನಂತೆ ಹಿಂದಿನ ರಾತ್ರಿಯಿಂದ ನಡೆದ ಸಂಗತಿಗಳ ವರದಿಯೊಡನೆ ಕಳುಹಿಸಲಾಗುವುದು. ತಿರುಪತಿಯ ಅಮಲ್ದಾರರ ಕಚೇರಿಗೆ ಈ ಮುಡಿಪುಗಳ ಚೀಲಗಳು ಬಂದು ಸೇರುವುವು.

ಬಂಗಾರು ಬಾಗಿಲ ಬಳಿಯ ರಂಗಮಂಟಪದ ಕೊಪ್ಪರದಲ್ಲಿ ಹಾಕಿದ ಹಣವನ್ನು ತಿಂಗಳಿಗೆ ಒಂದು ಬಾರಿ ಖಜಾನೆಯ ಕಚೇರಿಗೆ ಕಳುಹಿಸಲಾಗುವುದು.

ದೇವರನ್ನು ಅರ್ಚಿಸಲು ಬರುವ ಎಲ್ಲರನ್ನೂ, ಕಾಣಿಕೆಯನ್ನು ನೀಡಲು ಬರುವವರನ್ನು ಕಾಣಿಕೆ ನೀಡಿದನಂತರ ಒಳಕ್ಕೆ ಹೋಗಲು ಅನುಮತಿಸಲಾಗುವುದು. ದಿನವೂ ಸ್ವಾಮಿಯನ್ನು ನೋಡಲು ಬರುವವರ ಬಳಿ ದೇವರಿಗೆ ತೋಮಾಲೆಯನ್ನು ಹಾಕಿದ ನಂತರ ಹಣವನ್ನು ಪಡೆಯಲಾಗುವುದು. ಅಥವಾ ಅವರು ಸ್ವಾಮಿಗೆ ಪ್ರಸಾದವನ್ನು ನೈವೇದ್ಯ ಮಾಡುವಾಗ ಅದಕ್ಕೆ ಇಂತಿಷ್ಟೆಂಬ ದರಗಳಲ್ಲಿ ವಸೂಲಿ ಮಾಡುವುದು ಅಥವಾ ದೇವರ ವಾಹನ ಪೂಜೆಗಳಿಗೆ ಹಣ ವಸೂಲಿ ಮಾಡುವುದು ಸಹಜ. ಮುಕುರ ಮಂಟಪದ ಡೋಲೋತ್ಸವದಲ್ಲಿಯೂ ಶುಲ್ಕ ಪಡೆಯುವರು. ಅವರು ಎಷ್ಟೇ ಹಣ ನೀಡಿ ಪೂಜಿಸಿದರೂ ಅಷ್ಟೇ ಹಣ ಕಾಣಿಕೆ ಕೊಟ್ಟ ಫಲವುಂಟಾಗುವುದು. ಆರತಿಯನ್ನು ನೀಡಲು 1 ರೂಪಾಯಿ ನೀಡಬೇಕು. ಮಂಚದ ಮೇಲೆ ಮಲಗುವ ಮೊದಲು ದೇವರನ್ನು ನೋಡಬೇಕು ಎಂದರೂ ಶುಲ್ಕವುಂಟು.

ಇಲ್ಲಿನ ಸ್ಥಳವಂದಿಗರು ಈ ಯಾವ ಸೇವೆಗೂ ಶುಲ್ಕವನ್ನು ನೀಡುವುದಿಲ್ಲ.... (ಎಂಬ ಕಡೆಯ ಸಾಲುಗಳನ್ನು ಈ ದಾಖಲೆಯ ಮೊದಲಿನಲ್ಲಿಯೇ '1803ರಲ್ಲಿ ಆಲಯದ ನಿತ್ಯವಿಧಿಗಳು' ಶೀರ್ಷಿಕೆಯಲ್ಲಿ ವಿಸ್ತಾರವಾಗಿ ಹೇಳಲಾಗಿದೆ.)

**ಉಲ್ಲೇಖ - 2 :**

ವೆಂಕಟಾಚಲಪತಿಯ ಸ್ಥಳದಲ್ಲಿರುವ ಪಂಚಮೂರ್ತಿಯ ವಿಶೇಷವಾದ ಪಟ್ಟಿ ಹೀಗಿದೆ.

1. ಶ್ರೀವೆಂಕಟಾಚಲಪತಿ - ಭಗವಂತನ - ದೇವರ - ಮೊದಲನೆಯ ವಿಗ್ರಹ. (ಇದು ಸ್ಥಿರ ಮೂರ್ತಿ. ಮಿಕ್ಕವೆಲ್ಲ ಚರಮೂರ್ತಿಗಳು)

2. ಮಲೆಯಪ್ಪಸ್ವಾಮಿ - ವಾರ್ಷಿಕ ಉತ್ಸವಗಳಲ್ಲಿ ದೇವಾಲಯದಿಂದ ಹೊರಕ್ಕೆ ಬರುವ ಉತ್ಸವ ಮೂರ್ತಿ.

3. ಶ್ರೀನಿವಾಸಮೂರ್ತಿ - ದಿನವೂ ಸ್ನಾನಕ್ಕೆ ಒದಗಿಬರುವ ಹಾಗೂ ರಾತ್ರಿಯ ಹೊತ್ತು ಮಂಚದಲ್ಲಿ ಮಲಗುವ ಮೂರ್ತಿ. ಇದಕ್ಕೆ ಸ್ನಪನ ಬೇರ - ಶಯನ ಬೇರ ಎಂಬ ಎರಡು ಹೆಸರುಗಳುಂಟು.

4. ಕೊಲುವು ಶ್ರೀನಿವಾಸ ಮೂರ್ತಿ- ದಿನವೂ ಸ್ನಾನ ಮಾಡಿ ರಂಗಮಂಟಪದಲ್ಲಿ ಕುಳಿತು ದೈನಂದಿನ ಲೆಕ್ಕಗಳನ್ನು ಕೇಳುವ ಮೂರ್ತಿ. ಈತ ಕೊಲುವು ಬೇರ.

5. ವೆಂಗಡತ್ತುರೈವರ್ ವಿಗ್ರಹ. ವರ್ಷಕ್ಕೆ ಒಮ್ಮೆ ಕೈಶಿಕ ದ್ವಾದಶಿಯ ದಿನ ಸೂರ್ಯೋದಯಕ್ಕೆ ಮೊದಲು ಹೊರಕ್ಕೆ ಮೆರವಣಿಗೆಯಲ್ಲಿ ತಂದು ಸೂರ್ಯ ಹುಟ್ಟುವ ಮೊದಲೇ ಗುಡಿ ಸೇರುವ ಮೂರ್ತಿ.

6. ಈ ಐದು ಮೂರ್ತಿಗಳೂ ಒಂದನ್ನೊಂದು ಹೋಲುತ್ತವೆ ಹಾಗೂ ಇವುಗಳ ನಡುವೆ ಯಾವ ವ್ಯತ್ಯಾಸವೂ ಇಲ್ಲ. (ಮೆಕೆಂಜಿ ಸಂಗ್ರಹದ ಹಸ್ತಪ್ರತಿ ಅನುವಾದ ಮತ್ತು ವರದಿ ಭಾಗ - 16 - 51 ಪುಟ 501)

**ಉಲ್ಲೇಖ - 3 :**

(ಯಾದ್‌ದಾಶ್ತ್ ಅಥವಾ ನೆನಪಿನ ನೋಟ - ತಿರುಮಲೆಯ ದೇವಸ್ಥಾನದಲ್ಲಿ ವಾರ್ಷಿಕವಾಗಿ ನಡೆಯುವ ವಿಶೇಷ ಉತ್ಸವಗಳು - ತಿರುಪತಿ ತಾಲ್ಲೂಕಾ)

(ಮೆಕೆಂಜಿ ಸಂಗ್ರಹ - ಸಾಮಾನ್ಯ ದ್ರಾವಿಡ ಸ್ಥಳ ಮಹಾತ್ಮಗಳು ಭಾಗ - 1 ಪುಟ -501)

1. ಆನಿವರ ಆಸ್ಥಾನಂ.

2. ವರಲಕ್ಷ್ಮೀವ್ರತ.

3. ಶ್ರಾವಣ ಪೂರ್ಣಿಮೆ.

4. ಗೋಕುಲಾಷ್ಟಮಿ ಉತ್ಸವ. (ಕೃಷ್ಣಸ್ವಾಮಿಯ ಹುಟ್ಟಿದ ದಿನದಲ್ಲಿ ನಡೆಸುವ ಉತ್ಸವ)

5. ಉಟ್ಲ ತಿರುನಾಳ್ಳು (ಕೃಷ್ಣ ಬೆಣ್ಣೆಯನ್ನು ಕದಿಯುವ ಉತ್ಸವ )

6. ಗಣೇಶ ಚತುರ್ಥಿ.

7. ಅನಂತಚತುರ್ದಶೀ.

8. ದೀಪಾವಳೀ ಉತ್ಸವ.

9. ಕೈಶಿಕ ದ್ವಾದಶಿ.

10. ಸ್ವಾಮಿ ಪುಷ್ಕರಿಣೀ ಉತ್ಸವ.

11. ಕಾರ್ತೀಕ ಪೌರ್ಣಮಿ.

12. ಚಕ್ರತೀರ್ಥಉತ್ಸವ.

13. ಧನುರ್ಮಾಸ ಪೂಜೆ.

14. ತಿರುವಧ್ಯಯನ ಉತ್ಸವ, (25 ದಿನಗಳ ಮಾರ್ಗಳಿ ಉತ್ಸವ)

15. ಪ್ರಣಯ ಕಲಹೋತ್ಸವ.

16. ತಣ್ಣೀರಮುದು ಉತ್ಸವ (14 ರಲ್ಲಿನ ಕೊನೆಯ ದಿನದ ಉತ್ಸವ)

17. ಮುಕ್ಕೋಟಿ ಉತ್ಸವ.

18. ಸಂಕ್ರಾಂತಿ ಉತ್ಸವ.

19. ರಾಮಕೃಷ್ಣತೀರ್ಥ ಮುಕ್ಕೋಟಿ.

20. ರಥಸಪ್ತಮಿ.

21. ಶಿವರಾತ್ರಿ ಕ್ಷೇತ್ರಪಾಲಕ ಉತ್ಸವ.

22. ಕೋಯಿಲ್ ಆಳ್ವಾರ್ ತಿರುಮಂಜನ.

23. ಸಂವತ್ಸರಾದಿ ಉತ್ಸವ.

24.ಶ್ರೀರಾಮ ನವಮಿ.

25. ಭಾಷ್ಯಕಾರ ಉತ್ಸವ.

26. ಚೈತ್ರ ಮಾಸೋತ್ಸವ.

27. ವಸಂತ ಉತ್ಸವ.

28. ನರಸಿಂಹ ಜಯಂತಿ ಉತ್ಸವ.

# ಅಧ್ಯಾಯ - 21

# ಕಂಪನಿಯ ಆಡಳಿತದ ಅಂತ್ಯ - ಮಹಂತರ ಆಳ್ವಿಕೆ

## 1. ಪೀಠಿಕೆ :

ಇಂಗ್ಲೆಂಡಿನಲ್ಲಿದ್ದ ಈಸ್ಟ್ ಇಂಡಿಯಾ ಕಂಪನಿಯ ನಿರ್ದೇಶಕ ಮಂಡಳಿಯು, ಆಡಳಿತ ನಿರ್ವಹಣೆಯ ಹೆಸರಿನಲ್ಲಿ ಹಿಂದೂ ಸಮಾಜದ ವಿಗ್ರಹಾರಾಧನೆಯಲ್ಲಿ ಕಂಪನಿಯ ಅಧಿಕಾರಿಗಳೂ, ಸಿಬ್ಬಂದಿಯೂ ಭಾಗವಹಿಸುವಿಕೆಯನ್ನು ಸಹಿಸಲಿಲ್ಲ. ಸ್ಥಳೀಯ ಧಾರ್ಮಿಕ ಬಾಬತ್ತುಗಳಲ್ಲಿ ಮೂಗು ತೂರಿಸುವುದನ್ನು ತಾವು ಇಷ್ಟ ಪಡುವುದಿಲ್ಲ ಎಂಬ ಧಾರ್ಮಿಕ ಉದಾರತೆಯ ಸೋಗಿನಿಂದ ಸ್ಥಳೀಯರನ್ನು ಅನುಕೂಲ ಮಾಡಿಕೊಳ್ಳಲು ಆಲಯದ ಆಡಳಿತ ವ್ಯವಹಾರಗಳನ್ನು ಸ್ಥಳೀಯರಿಗೇ ಬಿಟ್ಟುಕೊಡಲು ಆದೇಶ ಹೊರಡಿಸಿತು. ವಿಕ್ಟೋರಿಯ ಮಹಾರಾಣಿಯ ಆಳ್ವಿಕೆಯ ಮೊದಲ ವರ್ಷಗಳಲ್ಲಿ ಎಂದರೆ 1842 -43 ರಲ್ಲಿ ಈ ಆಜ್ಞೆಯನ್ನು ಜಾರಿಗೆ ತರಲಾಯಿತು.

ಈ ವೇಳೆಗಾಗಲೇ ಆಡಳಿತದ ವಿವಿಧ ರಂಗಗಳನ್ನು ವ್ಯವಸ್ಥೆಗೊಳಿಸುವಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಅಧಿಕಾರಿಗಳು ಸಾಕಷ್ಟು ಘನವಾದ ಕೆಲಸಗಳನ್ನು ಮಾಡಿ ಗಟ್ಟಿಯಾದ ಬುನಾದಿಯನ್ನು ಹಾಕಿದ್ದರು. ಲೆಕ್ಕಪತ್ರಗಳನ್ನು ಸಕ್ರಮಗೊಳಿಸಿ ಆಲಯದ ಹಲವು ಹನ್ನೊಂದು ಜಮೀನು ಗ್ರಾಮಗಳ ಲೆಕ್ಕ ತೆಗೆದುಕೊಂಡು ಅವುಗಳನ್ನು ನೊಂದಾಯಿಸಿ, ಇನಾಮು ಜಮೀನುಗಳ ಪರಭಾರೆಯಾಗದಂತೆ ವ್ಯವಸ್ಥೆಯನ್ನುಂಟು ಮಾಡಿ ಆಲಯದ ವಸ್ತುಗಳು, ಉಪಕರಣಗಳು, ಆಸ್ತಿಪಾಸ್ತಿಗಳ ಬಗ್ಗೆ ತನಿಖೆಯನ್ನು ಜರುಗಿಸಿ ಎಲ್ಲವನ್ನು ಲೆಕ್ಕವಾಗಿಸಿ, ಆಭರಣಗಳು ಉಡುಗೊರೆಗಳ ಪಟ್ಟಿಯನ್ನು ತೆಗೆದು, ಎಲ್ಲದರ ಧನಮೌಲ್ಯವನ್ನು ನಿರ್ಧರಿಸಿಸುಸ್ಥಿರವಾಗಿ ಸುಸೂತ್ರವಾಗಿ ಆಲಯದ ಕಾರ್ಯಕಲಾಪಗಳು ನಡೆಯುವಂತೆ ಮಾಡಿದ್ದರು. ಕ್ರಿ.ಶ. 1818 ರಲ್ಲಿ ಆಲಯದ ಹಣಸಂಗ್ರಹವನ್ನು ಎತ್ತಿಹಾಕಿದ ಒಂದು ಪ್ರಸಂಗವುಂಟಾಯಿತು. ನಂತರ ಅಂತಹ ಭ್ರಷ್ಟತೆಗಳನ್ನು ತಡೆಗಟ್ಟಲು ತಕ್ಕ ಕ್ರಮಗಳನ್ನು ಕೈಗೊಳ್ಳಲಾಯಿತು. ಕೈಗೆತ್ತಿಕೊಂಡು ತನಿಖೆ ನಡೆಸಿದ ಕಮಿಷನರ್ ಬ್ರೂಸ್ ಮಹಾಶಯನು ಬ್ರೂಸ್ ಕೋಡ್ ಎಂದು ಕರೆಯಲಾದ ಒಂದು ಆಚಾರ ಸಂಹಿತೆಯನ್ನು ಸಿದ್ಧಪಡಿಸಿ ಆಡಳಿತವು ಅಲ್ಲಿನ ನಿಯಮಗಳಂತೆ ನಡೆಯಬೇಕೆಂದು ಕಟ್ಟಳೆ ಮಾಡಿದನು. "ತಿರುಮಲೆಯ ಆಲಯದ ಕಾರ್ಯಗಳ ನಿರ್ವಹಣೆಯ ನಿಯಮಗಳು ಹಾಗೂ ಈ ದೇವಾಲಯಕ್ಕೆ ಹೊಂದಿಕೊಂಡ ಸಿಬ್ಬಂದಿಯ ನಡವಳಿಕೆಯ ನಿಯಮಗಳು" ಎಂದು ಕರೆಯಲಾದ ಈ ನೀತಿ ಸಂಹಿತೆಯಲ್ಲಿನ ಅನುಬಂಧ ಮೂಲ ಉದ್ದೇಶವಾದ ಭ್ರಷ್ಟತೆಯ ನಿವಾರಣೆಯ ಮಾತು ಹೇಗೇ ಇದ್ದರೂ, ನಂತರದ ಕಾಲದ ಆಲಯದ ವ್ಯವಹಾರಗಳಲ್ಲಿನ ಗೊಜಲಿಗೆ ಇದು ಬುನಾದಿ ಯಾಯಿತು.

## 2. ಆಲಯಾಡಳಿತವನ್ನು ಆಕ್‌ಲೆಂಡ್ ಬಿಟ್ಟುಕೊಟ್ಟದ್ದು :

ಲಾರ್ಡ್‌ಆಕ್‌ಲೆಂಡರ ಸರ್ಕಾರವು ಕಂಪನಿ ಸರ್ಕಾರಿ ಅಧಿಕಾರಿಗಳು ಎಲ್ಲ ರೀತಿಯ ಧಾರ್ಮಿಕ ದತ್ತಿಗಳ ಭೂಮಿಗಳ ಆಡಳಿತದಲ್ಲಿ ಕೈಹಾಕುವುದನ್ನು ಬಿಡಬೇಕು' ಎಂಬ ನಿರ್ಧಾರ ಮಾಡಿತು. ಅದರಂತೆ ಜಿಲ್ಲಾಧಿಕಾರಿಗಳಿಗೆ ಸ್ಥಳೀಯ ಜನರಿಗೆ ಆಲಯಗಳ ಅಧಿಕಾರಗಳನ್ನು ನೀಡುವ ಬಗ್ಗೆ ತಕ್ಕ ಸಲಹೆಗಳನ್ನು ನೀಡಬೇಕೆಂದು 1841 ರಲ್ಲಿ ಕರೆ ನೀಡಲಾಯಿತು. ಆಡಳಿತದ ಅಂತರ್ಯದಲ್ಲಿನ ಈ ಅನಿರೀಕ್ಷಿತ ಪರಿವರ್ತನೆಗೆ ಕ್ರೈಸ್ತ ಮಿಷನರಿಗಳ ಒತ್ತಾಯವೇ ಕಾರಣವಾಗಿದ್ದಿರಬಹುದು. ಅವರಲ್ಲಿನ ಕಟುತ್ವ ಭಾವವು ಮಾರ್ಷ್‌ಮನ್ ಬರೆದ ಇಂಡಿಯಾದ ಚರಿತ್ರೆ ಭಾಗ - 3 ರಲ್ಲಿನ ಈ ಉಲ್ಲೇಖದಿಂದ ಸ್ಪಷ್ಟವಾಗುತ್ತದೆ. (ಮಾರ್ಷಮನ್ ಸ್ವತಃ ಒಬ್ಬ ಕ್ರೈಸ್ತ ಪಾದ್ರಿಯಾಗಿದ್ದನು.)

ಧಾರ್ಮಿಕನಾದ ಹಿಂದೂವಿನ ಭಾವನೆಗಳಿಗೆ ಪೆಟ್ಟುಕೊಡುವ, ಧರ್ಮಭೀರು ಕ್ರೈಸ್ತರ ಭಾವನೆಗಳನ್ನು ಹೀಗೆಳೆಯುವಂತಹ 'ಆಲಯಗಳ ಆಡಳಿತದಲ್ಲಿನ ಆಂಗ್ಲ ಸಂಬಂಧ'ವನ್ನು ಕಡಿದುಕೊಳ್ಳುವುದರ ಮೂಲಕ - ಆಕ್ಲೆಂಡರ ಸರ್ಕಾರ ಇಂಡಿಯಾದೇಶದ ಚರಿತ್ರೆಯಲ್ಲಿ ಉಲ್ಲೇಖನೀಯ ಕಾರ್ಯವನ್ನೆಸಗಿದೆ. ಕಂಪನಿಯ ನಿರ್ದೇಶಕರ ಮಂಡಳಿಯ ಅಧ್ಯಕ್ಷ ಚಾರ್ಲ್ಸ್ ಗ್ರಾಂಟ್ ತಮ್ಮ 1833 ರ ಪತ್ರದಲ್ಲಿ ಕುಂಪನಿ ಸರ್ಕಾರವು ಭಾರತವನ್ನು ಆಳುವಲ್ಲಿ, ಅಲ್ಲಿನ ಧರ್ಮದ ವಿಚಾರದಲ್ಲಿ ತಲೆಹಾಕುವುದರ ಬಗ್ಗೆ ನಿರ್ದೇಶಕರಿಗಿದ್ದ ದೃಷ್ಟಿಕೋನದ ಬಗ್ಗೆ ಸ್ಥಳೀಯ ಅಧಿಕಾರಿಗಳಿಗೆ ಬರೆದು ತಿಳಿಸಿದ್ದರು. ಇಂಡಿಯಾ ದೇಶದ ಸಾಮಾನ್ಯ ಜನಕ್ಕೆ ಅವರ ಧರ್ಮವು ಸಾಮಾನ್ಯ ಮಾನವಧರ್ಮಕ್ಕೆ ನೇರ ವಿರುದ್ಧವಾಗದ ಹೊರತು ಕುಂಪನಿ ಸರ್ಕಾರವು ಜನರ ಧರ್ಮದ ವಿಷಯದಲ್ಲಿ ತಲೆ ಹಾಕವುದಿಲ್ಲವೆಂಬ ಭರವಸೆ ನೀಡಲಾಗಿದ್ದಿತು. ಹೀಗಾಗಿ ಭಾರತೀಯರ ಆಲಯ ವ್ಯವಹಾರಗಳಲ್ಲಿ ಅವುಗಳ ಪರಂಪರಾಗತ ಧಾರ್ಮಿಕ ಕಾರ್ಯಕ್ರಮಗಳ ನಿರ್ವಹಣೆಯಲ್ಲಿ ಆಂಗ್ಲ ಅಧಿಕಾರಿಗಳ ಹಸ್ತಕ್ಷೇಪ ನಿಲ್ಲಬೇಕಾಯಿತು. ಎಲ್ಲ ಕಡೆಯಲ್ಲಿಯೂ ಯಾತ್ರಿಕ ತೆರಿಗೆಯನ್ನು ನಿಷೇಧಿಸಬೇಕಾಯಿತು. ಹರಕೆಗಳು ಸರ್ಕಾರದ ಆಸ್ತಿಯಲ್ಲವೆಂದು ದಿನದ ವಸೂಲಾತಿಯಲ್ಲಿ ಸಂಗ್ರಹದಲ್ಲಿ, ರಕ್ಷಣೆಯಲ್ಲಿ ಯಾವೊಬ್ಬ ಆಂಗ್ಲ ಅಧಿಕಾರಿಯೂ ಭಾಗವಹಿಸಬಾರದು ಎಂದಾಯಿತು. ಆಚರಣೆಗಳಲ್ಲಿ, ಆಲಯ ಕಾರ್ಯಗಳಲ್ಲಿ, ಧರ್ಮಕಾರ್ಯದಲ್ಲಿ ಅವರ ಪಾಡಿಗೆ ಅವರನ್ನು ಬಿಡಬೇಕು ಎಂದಾಯಿತು. ಈ ನಿರೂಪವನ್ನು ಬಂಗಾಳದಲ್ಲಿ ಅಲಕ್ಷ್ಯದಿಂದ ಅನುಸರಿಸಲಾಯಿತು.

ಮದರಾಸು ಸರ್ಕಾರವು ತನ್ನ ಬಹುಕಾಲದ ಆಡಳಿತದಿಂದಲೂ, ಇಲ್ಲಿನ ಅಧಿಕಾರಿಗಳ ನಿರಂತರ ಹಾಗೂ ಸಾರ್ವಜನಿಕ ಪರತೆಯಿಂದಾಗಿ ವೀರೋಚಿತ ಎಂದೆನಿಸಿದ್ದಿತು. ಇಲ್ಲಿ ಒಂದು ಅರ್ಧ ಶತಮಾನದವರೆಗೆ ಸ್ಥಳೀಯ ಸಂಪ್ರದಾಯಗಳಿಗೆ ಸ್ಥಾನವನ್ನು ಕಲ್ಪಿಸಲಾಗಿದ್ದಿತು. ಇಂತಹ ಒಂದು ಮೌಢ್ಯದ ಭಾಗವಾಗಿರದಂತೆ ಮಾಡಲು - ಈಸ್ ಇಂಡಿಯಾ ಕಂಪನಿಯ ಪರವಾಗಿ ವಿಗ್ರಹಕ್ಕೆ ಅಲಂಕರಿಸುವುದು, ವಿಗ್ರಹದ ಹುಟ್ಟಿದ ಹಬ್ಬದ ಮೆರವಣಿಗೆಯಲ್ಲಿ ಕುಶಾಲುತೋಪು ಹಾರಿಸುವುದು, ಮೆರವಣಿಗೆಯಲ್ಲಿ ಸೈನಿಕ ಮುಜುರೆ ಮಾಡುವುದು - ಮೊದಲಾದವುಗಳನ್ನು ನಿಲ್ಲಿಸಲು - ಕಂಪನಿಯ ನಿರ್ದೇಶಕಮಂಡಳಿಯ ಅಧ್ಯಕ್ಷರಾದ ಬಟರ್‌ವರ್ತ್ ಅವರು ಆಗ್ರಹಪೂರ್ವಕ ಪತ್ರವನ್ನೇ ಬರೆಯಬೇಕಾಯಿತು.

ಕಂಪನಿ ಸರ್ಕಾರವು ತಿರುಪತಿಯ ಆಲಯವನ್ನೇ ಅಲ್ಲದೆ ಪ್ರಸಿಡೆನ್ಸಿಯಲ್ಲಿ ಸೇರಿಸಿಕೊಂಡಂತೆ ಎಲ್ಲ ಆಲಯಗಳ ಆಡಳಿತ ನಡೆಸಿ ದ್ದಿತು. ಉತ್ತರ ಆರ್ಕಾಟು ರಾಜ್ಯದಲ್ಲಿ ಕಂಪನಿಯ ಆಡಳಿತ ನಡೆದಿದ್ದ ಆಲಯಗಳ ಸಂಖ್ಯೆ 188. ಕ್ರಿ.ಶ. 1841 ರ ಹಿಂದಿನ ಹತ್ತು ವರ್ಷ ದಲ್ಲಿ ಎಲ್ಲ ಆಲಯಗಳಿಂದುಂಟಾದ ಆದಾಯದ ಸರಾಸರಿ (ತಿರುಪತಿಯ ಆಲಯದ ಹೊರತು) 32647 ರೂಪಾಯಿಗಳಾಗಿದ್ದು ಈ ಆಲಯಗಳಿಗೆ ನೀಡಿದ ಸರಾಸರಿ ತಸದೀಕು ಮೊತ್ತ 27277 ರೂಪಾಯಿಗಳಾಗಿದ್ದವು. ಇದೇ ಸಮಯದಲ್ಲಿ ತಿರುಪತಿಯ ಆಲಯದ ಸರಾಸರಿ ಆದಾಯವು 109873 ರೂಪಾಯಿಗಳಾಗಿದ್ದು ವೆಚ್ಚದ ವಿತರಣೆಯ ಸರಾಸರಿ 32528. ಕ್ರಿ.ಶ. 1842 ರ ಮಧ್ಯಭಾಗದ ಹೊತ್ತಿಗೆ ತಿರುಪತಿಯ ಆಲಯದ ಹೊರತು ಮಿಕ್ಕ ಎಲ್ಲ ಆಲಯಗಳ ಅಧಿಕಾರ ವಿಸರ್ಜನೆಗೆ ಸಲಹೆಗಳನ್ನು ಕಳುಹಿಸಲಾಗಿದ್ದಿತು. ಇಲ್ಲೆಲ್ಲ ಸದರಿ ಗ್ರಾಮಗಳ ಮಾಮಲೇದಾರರು, ಕರಣಿಕರು, ಮಿರಾಸಿದಾರರು, ವಂಶ ಪಾರಂಪರ್ಯದ ಸೇವಕರುಗಳನ್ನೇ ಧರ್ಮಕರ್ತರ ಸ್ಥಳಗಳಿಗೆ ಸೂಚಿಸಲಾಗಿದ್ದಿತು. ಈ ವರ್ಷದ ಕೊನೆಯ ಹೊತ್ತಿಗೇ ಇಲ್ಲೆಲ್ಲ ಸ್ಥಳೀಯರ ಆಡಳಿತ ಜಾರಿಗೆ ಬರುವಂತೆ ಆಯಿತು. ತಿರುಪತಿಯ ಆಡಳಿತದ ಅಧಿಕಾರ ವರ್ಗಾವಣೆಯು ಅನೇಕ ಸಮಸ್ಯೆಗಳನ್ನು ಗಂಟು ಹಾಕಿಕೊಂಡಿದ್ದಿತಾದ್ದರಿಂದ ಇದರ ತೀರ್ಮಾನ ನಿಧಾನ ವಾಯಿತು. " ಈ ಅಧಿಕಾರ ಪರಿವರ್ತನೆಯನ್ನು ಇಲ್ಲಿನ ಪ್ರತಿಯೊಬ್ಬರೂ ವಿರೋಧಿಸಿದರು. ಈ ಬಗೆಗಿನ ತೀರ್ಮಾನವನ್ನು ಅನ್ಯಾಯ ವೆಂದು ಕರೆದು ಕಡೆಯವರೆಗೆ ಇದನ್ನು ಪ್ರತಿಭಟಿಸುವುದಾಗಿ ಹೇಳಿದರು."

### 3. ಆಲಯಾಡಳಿತಕ್ಕಾಗಿ ಜಿಲ್ಲಾಧಿಕಾರಿ ಯೋಜನೆ :

ಜಿಲ್ಲಾಧಿಕಾರಿ (ಜಿ.ಎಂ.,ಓಗಿಲ್ವೀ) ಬರೆಯುವಂತೆ "ಅವರು ತೆಗೆದುಕೊಂಡಿದ್ದ ನಿರ್ಧಾರವನ್ನು ಯಾವುದೇ ರೀತಿಯ ಸಮಜಾಯಿಷಿ, ಸಂಧಾನ, ಸಮಾಧಾನ, ತರ್ಕ, ವಾದಗಳಿಂದಲೂ ಬದಲಾಯಿಸಲಾಗುವುದಿಲ್ಲ ಎಂಬುದನ್ನು ಕಂಡುಕೊಂಡೆ. ಅವರು ಹೇಳುವಂತೆ ಆಲಯದ ಆಡಳಿತ ನಿರ್ವಹಣೆ ಪ್ರಾಚೀನ ಕಾಲದಿಂದಲೂ ಸ್ಥಳದ ಸರ್ಕಾರದ ಕೈಗಳಲ್ಲಿದ್ದಿತು - ಈಗ ಪ್ರವೇಶಗೊಳಿಸಲು ಯೋಜಿಸಲಾಗಿರುವ ಹೊಸ ಪದ್ಧತಿ ನ್ಯಾಯ ಬಾಹಿರವಾದದ್ದು. ಪರಂಪರೆಯ ವಿರುದ್ಧವಾದದ್ದೂ ಆಗಿದ್ದು ಇದನ್ನು ಜಾರಿಗೆ ತರದ್ದೇ ಆದರೆ ಆಲಯದ ಪೂಜಾ ಪದ್ಧತಿಯೇ ನಿಂತು ಹೋಗಬಹುದು.'' ಸರ್ಕಾರದ ಬದಲಾಯಿಸಿದ ನೀತಿಯ ಅಂತರ್ಯವನ್ನು ತಿಳಿಯಲಾರದೆ ಹೋದ, ಅವರಿಗೇ ಆಲಯ ವ್ಯವಹಾರಗಳನ್ನು ಒಪ್ಪಿಸುವುದನ್ನು ತಿಳಿಯಲಾರದ ಹೋದ, ಆಲಯದ ಆಡಳಿತಕ್ಕೊಂದು ಸೂಕ್ತವಾದ ವ್ಯವಸ್ಥಿತವಾದ ಪದ್ಧತಿಯನ್ನು ಏರ್ಪಡಿಸುವ ತನ್ನ ಪಯತ್ನದಲ್ಲಿ ನೆರವು ನೀಡಲು ಮುಂದೆ ಬರದಂತಹ ಜನರ ಬಗ್ಗೆ ಆತನಿಗೆ ಬೇಸರವುಂಟಾಗಿದ್ದು ಹೀಗೆ ಬರೆಯುತ್ತಾನೆ - "ಈ ಮಾತನ್ನು ನಾನು ಹೇಳುವ ಹೊತ್ತಿನಲ್ಲಿ ತಿರುಪತಿಯಲ್ಲಿನ ರಾಜಕಾರಣದ ಗಾಳಿ ಯಾವ ಕಡೆ ಬೀಸುತ್ತಿದೆ ಎಂಬುದನ್ನು ಗುರುತಿಸಿ ಇಲ್ಲಿನ ಆಲಯದೊಡನೆ ಸಂಬಂಧಿಸಿದ ಜನರಿಂದ ಯಾವುದೇ ರೀತಿಯ ಸಹಕಾರವನ್ನೂ ಪಡೆಯಲಾಗುವುದಿಲ್ಲವೆಂಬ ಬಗ್ಗೆ ಒತ್ತು ಹಾಕುತ್ತ, "ಈ ಕ್ರಮವನ್ನು ಕೈಗೆತ್ತಿಕೊಂಡದ್ದೇ ಆದರೆ - ಆಲಯ ನಿರ್ವಹಣೆಯಲ್ಲಿ ಸರ್ಕಾರದ ಪಾಲುದಾರಿಯನ್ನು ಒಮ್ಮಿಂದೊಮ್ಮೆಲೇ ವಾಪಸ್ ಪಡೆಯುವುದರ ಹೊರತು - ಮಿಕ್ಕ ಯಾವುದೇ ಕ್ರಮದಿಂದಲೂ, ಇಲ್ಲಿನ ಆಲಸಿಗಳೂ, ಧರ್ಮಾಂಧರೂ ಆಗಿ ಹೊರಪ್ರಪಂಚವನ್ನರಿಯದೆ ಆಲಯದಲ್ಲಿ ಸೇರಿರುವ ಪೂಜಾರಿಗಳಲ್ಲಿನ ಚಿಂತನಶಕ್ತಿಯನ್ನು ಎಚ್ಚರಗೊಳಿಸಿದಂತಾಗಿ ಅವರೆಲ್ಲ ಅದೃಶ್ಯರಾಗಿಬಿಡುವರು. ಹುಡುಕಿದರೂ ಸಿಗುವುದಿಲ್ಲ. ಹೀಗಾದಲ್ಲಿ ಅವರೆಲ್ಲ ತಮ್ಮ ಸುಖಾರಿತನದ ನಿರ್ಲಕ್ಷದ ನಿಷ್ಕ್ರಿಯತೆಯಲ್ಲಿ ಜೀವನ ಸಾಗಿಸುತ್ತ, ತಮ್ಮ ಒಡೆತನದ ಗ್ರಾಮ ಭೂಮಿಗಳ ಆದಾಯವನ್ನು ಹಾಯಾಗಿ ಅನುಭವಿಸುತ್ತ ಕಂಪನಿ ಸರ್ಕಾರ ಅತ್ಯಂತ ಎಚ್ಚರಿಕೆಯಿಂದ ರಕ್ಷಿಸಿದ ಅವರ ಧಾರ್ಮಿಕ ಹಕ್ಕುಗಳಿಂದುಂಟಾದ ತಮ್ಮ ಕುರುಡು ನಂಬಿಕೆ ಪೂರ್ವಗ್ರಹಿಕೆಗಳೊಂದಿಗೆ ತಮ್ಮ ಪೂಜಾದಿಗಳನ್ನು ನಡೆಸಿಕೊಳ್ಳುತ್ತ ಹೋಗುವರು. ಇಂತಹವರಿಗೆ ತಮ್ಮ ಅನುಕೂಲಗಳ, ಹೇಷುಗಳು ಸಹಜ ಪರಿಕಲ್ಪನೆಗಳಿಗೆ ತಕ್ಕದಾದ ಪರಿವರ್ತನೆ ಸಂತಸವನ್ನೇ ತಂದೀತು.

ಈತನ ಸಲಹೆಯ ಕ್ರಮವೆಂದರೆ " ಒಂದು ಆಡಳಿತ ನಿರ್ವಾಹಕ ಮಂಡಳಿಯಿರಬೇಕು. ಅದರಲ್ಲಿ ಜಿಯಂಗಾರರು, ಪೂಜಾರಿಗಳು, (ಇವರು 7 ಮಂದಿಯಿದ್ದರು) ಜೊತೆಗೆ ಊರಿನ ಪ್ರಶ್ನಾತೀತ ನಡವಳಿಕೆಯ ತಕ್ಕಷ್ಟು ಸದಸ್ಯರ ಸಾಮಾನ್ಯ ಸಮಿತಿಯಿರಬೇಕು. ಕಾಳಹಸ್ತಿ ಕಾರ್ವೇಟಿನಗರಗಳ ಜಮೀಂದಾರರನ್ನು ಮಂಡಳಿಯ ಆಶ್ರಯದಾತರೆಂದು ಅಥವಾ ಗೌರವ ಸದಸ್ಯರೆಂದು ಆಯ್ಕೆ ಮಾಡಬೇಕು.''

ಕಂದಾಯ ವಿಭಾಗವು ಈ ವ್ಯವಸ್ಥೆಯನ್ನು ಒಪ್ಪಲಿಲ್ಲ. ಕಾರಣ - '' ಇಲ್ಲಿನ ಆಲಯದಲ್ಲಿ ವಂಶ ಪರಂಪರೆಯಿಂದ ಬಂದಿರುವ ಸಿಬ್ಬಂದಿಯು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ತೊಡಗಿರುವ ಕೆಳ ಸ್ತರದಿಂದ ಮೇಲೆತ್ತಿ ಆಲಯದ ನಿರಂಕುಶ ಒಡೆಯರ ಹಂತಕ್ಕೆ ಏರಿಸುವ ಮಟ್ಟದವರಲ್ಲ.''

ಇದರಿಂದಾಗಿ ಹೊಸ ವ್ಯವಸ್ಥೆಯ ಬಗ್ಗೆ ನೂತನವಾದ ಸಲಹೆಗಳನ್ನು ನೀಡಬೇಕೆಂದು ಈ ಮಧ್ಯದಲ್ಲಿ ವರ್ಗವಾಗಿ ಬಂದಂತಹ ಹೊಸ ಜಿಲ್ಲಾಧಿಕಾರಿಯನ್ನು ಕೇಳಲಾಯಿತು. ಈತನು 1842 ರ ಡಿಸೆಂಬರ್ 17 ರಂದು ನೀಡಿದ ವರದಿಯ ಪ್ರಕಾರ " ಸರ್ಕಾರದ ಅಧಿಕಾರ ತ್ಯಾಗದ ಬಗೆಗಿನ ಮೊದಲಿನ ಅಭ್ಯಂತರಗಳೆಲ್ಲ ನಿವಾರಣೆಯಾಗಿದ್ದು, ಇಲ್ಲಿನ ಮಹಂತರೂ, ದೊಡ್ಡ ಜಿಯಂಗಾರರೂ ಆಲಯದ ಧರ್ಮಕರ್ತರಾಗಲು ಅಭ್ಯರ್ಥನೆಗಳನ್ನು ಸಲ್ಲಿಸಿದ್ದರು'' ಎಂದೂ ತಿಳಿದು ಬರುವುದು. ಜಿಯಂಗಾರರಾದರೋ ತಾವೊಬ್ಬರೇ ಅಥವಾ ಮಹಂತರೊಡನೆ ಸೇರಿ ಈ ಜವಾಬ್ದಾರಿಯನ್ನು ಹೊರಲು ಸಿದ್ಧರಾಗಿದ್ದರು. ಮಹಂತರು ಮಾತ್ರ ತಾವೊಬ್ಬರೇ ಧರ್ಮಕರ್ತರಾಗಿರಬೇಕೆಂದು ಬಯಸಿದ್ದರು. ಅವರಿಗೆ ಜಿಯಂಗಾರರ ಸಹಜೀವನ ಅಪೇಕ್ಷಿತವಾಗಿರಲಿಲ್ಲ.

ಕಾರ್ವೇಟಿನಗರದ ರಾಜನು ಮೇಲುಸ್ತುವಾರಿಯನ್ನು ವಹಿಸಲು ಸಿದ್ಧನಿದ್ದನು. ಜಿಲ್ಲಾಧಿಕಾರಿ - ಮೈಸೂರು ಹಾಗೂ ವೆಂಕಟಗಿರಿಯ ರಾಜರನ್ನು ಆಡಳಿತವನ್ನು ವಹಿಸಿಕೊಳ್ಳಲು ಕೇಳಿಕೊಂಡರು. ಅವರಿಬ್ಬರೂ ಅದಕ್ಕೆ ಸಿದ್ಧರಾಗಿರಲಿಲ್ಲ. ಆಲಯದಲ್ಲಿ ಹಲವಾರು ಪರಿವರ್ತನೆಗಳನ್ನು ತಂದು ಪೂಜೆಯ ವ್ಯವಸ್ಥೆಯನ್ನು ಸುಸ್ಥಿರಗೊಳಿಸಿದ ರಾಮಾನುಜ ಗುರು ಪರಂಪರೆಯ ಶಿಷ್ಯ ತಾವು ಆಗಿರುವುದರಿಂದಲೂ 1818 ರಲ್ಲಿ ಆಲಯದ ಧನದ ಅಪರಾತಪರಾ ನಡೆದಾಗ ಅದನ್ನು ವಿಚಾರಿಸಿ, ನಂತರ ಅಂತಹ ಭ್ರಷ್ಟತೆಗಳಿಗೆ ವಿರಾಮ ಹಾಡುವ ಆಲಯದ ಆಡಳಿತದ ನಿಯಮ ನಡಾವಳಿಗಳನ್ನು ತಯಾರಿಸುವಾಗ ಕಂಪನಿ ಸರ್ಕಾರದ ಜಿಲ್ಲಾಧಿಕಾರಿ ಬ್ರೂಸ್ ತಮ್ಮನ್ನ ಆಲಯದ ಆಡಳಿತದಲ್ಲಿ ಅತಿ ಎತ್ತರದ ಪಾತ್ರ ನಿರ್ವಹಣೆಗೆಂದು ಗುರುತಿಸಿದ್ದರಿಂದಲೂ, ತಾವೇ ಆಲಯದ ಧರ್ಮಕರ್ತರಾಗುವುದು ನ್ಯಾಯವೆಂದು ಜಿಯಂಗಾರರು ವಾದ ಮಂಡಿಸಿದ್ದರು. ಜಿಲ್ಲಾಧಿಕಾರಿಯು ಈ ವಾದವನ್ನು ಜಾಗರೂಕತೆಯಿಂದ ಪರಿಶೀಲಿಸಿ ಇದರಲ್ಲಿ ಹುರುಳಿಲ್ಲವೆಂದು ತೀರ್ಮಾನಿಸಿದ. ಆತ ನೀಡಿದ ವಿವರ ಹೀಗಿದೆ -

"ಜಿಯಂಗಾರರು ತಮ್ಮ ಗುಮಾಸ್ತನನ್ನು ಬರಖಾಸ್ತು ಮಾಡುವುದಕ್ಕಿಂತ ಹೆಚ್ಚಾದ ಯಾವುದೇ ಅಧಿಕಾರವನ್ನಾದರೂ ಹೊಂದಿದ್ದಾರೆ ಎಂಬುದು ಎಲ್ಲಿಯೂ ದಾಖಲೆಯಾಗಿಲ್ಲ. ಆತನ ಉಪಸ್ಥಿತಿಯು ಹಲವಾರು ಸಂದರ್ಭಗಳಲ್ಲಿ ಇತರರೊಡನೆ ಇವರೂ ಇರಬೇಕಗಿತ್ತು. ಇದಕ್ಕೂ ಕಾರ್ಯಕಲಾಪಗಳ ಸಕ್ರಮ ನಿರ್ವಹಣೆಯೇ ಆಧಾರ ಸೂತ್ರವಾಗಿದ್ದಿತು. ಹೀಗಾಗಿ ಅವರು ಸಲ್ಲಿಸಿರುವ, ಮುಂದು ಮಾಡಿರುವ ವಾದಕ್ಕೆ ಯಾವುದೇ ತಳಹದಿಯೂ ಇಲ್ಲವಾಗಿದೆ.

ಪ್ರಶ್ನೆಯ ವಸ್ತುಸ್ಥಿತಿಯೇ ಈ ನೆಲೆಯಲ್ಲಿ ನಿಂತಿರುವಾಗ ಪರಿಶೀಲನೆಗೆಂದು ಅವರು ಮುಂದು ಮಾಡಿರುವ ಪ್ರಥಮ ಪರಿಚಯಾಂಶಕ್ಕೆ ಎಡೆಯೇ ಇಲ್ಲವಾಗುತ್ತದೆ. ದೊಡ್ಡ ಜಿಯಂಗಾರರು ತಾವು ಧರ್ಮಕರ್ತರಾಗಲು ತಕ್ಕವರೆಂದು ನೀಡಿರುವ ಕಾರಣಗಳನ್ನು ನಿರಾಕರಿಸಬಹುದಾದರೂ - ಮಿಕ್ಕೆಲ್ಲ ರೀತಿಯ ಅರ್ಹತೆಗಳಿರುವಲ್ಲಿ - ಅವರು ಅಪೇಕ್ಷೆ ಪಟ್ಟು ಮುಂದೆ ಬಂದಿರುವುದನ್ನು ತಿರಸ್ಕರಿಸುವಂತಿಲ್ಲ. ಆದರೂ ಪ್ರಸ್ತುತ ಸಂದರ್ಭದಲ್ಲಿ ಅವರು ಧರ್ಮಕರ್ತರಾಗುವ ಅವಕಾಶವನ್ನು ನಿರಾಕರಿಸಲಾಗಿದೆ; ಕಾರಣ ಮಂಡಳಿಯು ಎಲ್ಲ ಪ್ರಾಥಮಿಕಾಂಶಗಳನ್ನೂ ಪರಿಶೀಲಿಸಿ, ಸಧ್ಯಕ್ಕೆ ಕಾರ್ಯಕರ್ತರಲ್ಲಿ ಒಬ್ಬರಾಗಿರುವ ಅವರಿಗೆ ಅಷ್ಟು ಹಿರಿಯದಾದ ಅಧಿಕಾರದ ಸ್ಥಾನ ನೀಡುವುದನ್ನು ಮಾನ್ಯ ಮಾಡದಾಗಿದೆ. ಜೊತೆಗೇ ವೇದಪಠಣ ಮಾಡುವ ಆಚಾರ್ಯ ಪುರುಷರೂ, ಜಿಯಂಗಾರರು ಧರ್ಮಕರ್ತರಾಗುವುದನ್ನು ವಿರೋಧಿಸಿರುವರು. ತಾವು ಮಹಂತರ ಜೊತೆಗೂಡಿ ಕೆಲಸ ಮಾಡಲು ಸಿದ್ದ ಎಂದು ಹೇಳಿರುವ ಜಿಯಂಗಾರರ ಮಾತು ಮಹಂತರ ವಿರೋಧಕ್ಕೆ ಪಕ್ಕಾಗಿದೆ."

ಈ ಕಾರಣಗಳಿಂದ ಮಹಂತನನ್ನೇ ಧರ್ಮಕರ್ತನನ್ನಾಗಿ ಮಾಡಲಾಯಿತು. ಆದರೆ ಮಂಡಳಿಯ ಮುಂದೆ ಈ ಮಹಂತರ ಅಧಿಕಾರವನ್ನು ವಿರೋಧಿಸಿ ಜಿಯಂಗಾರರು ಪ್ರಬಲವಾಗಿ ವಾದ ಮಾಡಿದರು. ನಂತರದ ಜಿಲ್ಲಾಧಿಕಾರಿಯು 1843 ರ ಫೆಬ್ರವರಿ 13ರಂದು ಬರೆದಿರುವ ಪತ್ರದಲ್ಲಿ ಮಹಂತರನ್ನು ಧರ್ಮಾಧಿಕಾರಿಯಾಗಿ ಆಯ್ಕೆ ಮಾಡಿದ್ದನ್ನು ಸಮರ್ಥಿಸುವುದನ್ನು ಕೆಳಗಣ ಉಲ್ಲೇಖದಲ್ಲಿ ಕಾಣಬಹುದು.

ಮಹಂತರ ಧರ್ಮಕರ್ತರಾಗುವ ಅಧಿಕಾರವನ್ನು ದೊಡ್ಡಜಿಯಂಗಾರರು ಹಲವು ಕಾರಣಗಳಿಂದ ವಿರೋಧಿಸಿದ್ದಾರೆ. ಅವರ ವಾದದಂತೆ - ಮಹಂತರು ಆಲಯದೊಡನೆ ಸಂಬಂಧ ಹೊಂದಿದವರಲ್ಲ. ಮಹಂತರ ಪರಂಪರೆಗೆ ತಕ್ಕಂತೆ ವಿರಕ್ತರಾಗಿರಬೇಕಾದವರು, ಸ್ಥಳಕ್ಕೆ ಆಗಂತುಕರು ಹಾಗೂ ಪೂಜೆ ಮಾಡುವುದಕ್ಕೆ ವಿರೋಧಿಗಳು ಆಗಿರುವರು. ಮಹಂತರ ಹಿರಿಮೆಯ ವಿರುದ್ಧ ಯಾವ ಮಾತೂ ಅವರಲ್ಲಿ ಇಲ್ಲ. ಕಾರ್ವೇಟಿ ನಗರದ ರಾಜರಾದರೂ ಜಮೀಂದಾರರು - ಹೇಳಿಕೊಳ್ಳುವಂತಹ ಸ್ಥಿತಿವಂತರಲ್ಲ. ಒಟ್ಟಿನಲ್ಲಿ ಜಿಯಂಗಾರರ ಮಾತಿನ ತಾತ್ಪರ್ಯವೆಲ್ಲ ಧರ್ಮಕರ್ತಪದವಿ ಅಧಿಕಾರವನ್ನು ತಾವು ಪಡೆಯುವುದರತ್ತಲೇ ಹರಿದಿದ್ದಿತು. ಮೊದಲಿಗೆ ಮಹಂತರ ಜೊತೆ ಸೇರಿ ಕೆಲಸ ಮಾಡಲೂ ತಯಾರಾಗಿದ್ದ ಜಿಯಂಗಾಯವರು ಈಗ ಮಹಂತರ ಯೋಗ್ಯತೆಯಲ್ಲಿಯೇ ಕೊರತೆನ್ನು

ಕಾಣಲು ಪ್ರಯತ್ನಿಸುತ್ತಿದ್ದಾರೆ. ಮಹಂತರು ತಿರುಪತಿಯಲ್ಲಿ ಮೂವತ್ತು ವರ್ಷಗಳಿಂದ ಇದ್ದಾರೆ. ಬಂಗಾಳಕ್ಕೆ ಸೇರಿದ ಗೌಡ ಬ್ರಾಹ್ಮಣ ಮತಸ್ಥರಾದ ಅವರು ತೆಂಗಲೆ ವಡಗಲೆ ಎಂಬ ಯಾವ ಪಂಗಡಕ್ಕೂ ಸೇರಿದವರಲ್ಲದೆ ವೈಷ್ಣವರಾಗಿದ್ದಾರೆ. ತಿರುಪತಿಯ ಆಲಯವು ಶೈವ ವೈಷ್ಣವರೆಲ್ಲರಿಗೂ ಆರಾಧನೀಯ ಸ್ಥಳವಾಗಿದ್ದು ವಡಗಲೆ -ತೆಂಗಲೆ ವ್ಯತ್ಯಾಸಕ್ಕೆ ಅತೀತವಾದದ್ದಾಗಿದೆ. ಮಹಂತರು ಆಲಯವನ್ನೂ ಅಲ್ಲಿನ ಪೂಜೆಯನ್ನೂ ವಿಶೇಷವಾದ ಗೌರವಾದರಗಳಿಂದ ಕಾಣುತ್ತಾರೆ.

"ತೆಂಗಲೆ ವಡಗಲೆ ಪಂಡಗಳಿಗೆ ಸೇರದವರಾಗಿರುವುದರಿಂದ ಮಹಂತರಿಗಿಂತಲೂ ಹೆಚ್ಚು ಸೂಕ್ತವಾದ ಆಯ್ಕೆಯನ್ನು ಈ ಹಿನ್ನೆಲೆಯಲ್ಲಿ ಮಾಡಲಾಗದು. ಈ ಪಂಥದವರಲ್ಲಿ ಬ್ರಹ್ಮಚರ್ಯವು ನಿಯತವಾಗಿರುವುದರಿಂದಾಗಿ ಇದು ಅನರ್ಹತೆಗಳಲ್ಲಿ ಒಂದಾಗದು. ಇತರರೊಡನೆ ಸುಲಭವಾಗಿ ಬೆರೆಯುತ್ತಾರೆ. ನನಗೆ ಖುದ್ದು ಭೇಟಿಯಾಗಿ ಪೂಜೆಯ ಬಗ್ಗೆ ಆಲಯದ ಆಡಳಿತದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವಿವರಿಸಿದ್ದಾರೆ. ಜಿಯಂಗಾರರು ನನ್ನನ್ನು ಭೇಟಿಯಾಗಿಲ್ಲ. ಕಚೇರಿಯಲ್ಲಿ ನನ್ನನ್ನು ಕಾಣುವುದು ಅವರಿಗೆ ಬೇಕಿಲ್ಲ. ಆಲಯದಿಂದ ಹೊರಕ್ಕೆ, ಅನೇಕ ಸ್ಥಳಗಳು ಅವರಿಗೆ ಕುಲುಷಿತವಾಗಿ ಕಂಡುಬರುತ್ತದೆ."

ಮಂಡಳಿಯು ಒಂದು ಪ್ರಶ್ನೆಯನ್ನೆತ್ತಿತು. ಇಂತಹ ಒಂದು ಬಹುಮುಖ್ಯವಾದ ಅಧಿಕಾರವನ್ನು ಒಬ್ಬನೇ ವ್ಯಕ್ತಿಗೆ ಒಪ್ಪಿಸುವುದು ಸಮಂಜಸವೇ ? ಅಂತಹ ವ್ಯಕ್ತಿ ಎಷ್ಟೇ ಮಾನನೀಯನೇ ಆಗಿದ್ದರೂ ಅಧಿಕಾರ ಭಾರ ಹೊರುವಲ್ಲಿ ಹೊಣೆಗಾರಿಕೆಯಿಂದ ನಡೆಯುವನೇ? ಈ ಪ್ರಶ್ನೆಗೆ ಉತ್ತರ ನೀಡುತ್ತ ಜಿಲ್ಲಾಧಿಕಾರಿ ಬರೆಯುತ್ತಾನೆ "ಆಲಯದ ಆಡಳಿತವನ್ನು ಸೂಕ್ತ ವ್ಯಕ್ತಿಗೆ ಒಪ್ಪಿಸುವುದಾದಲ್ಲಿ ಈ ಧರ್ಮಕರ್ತನ ಯೋಗ್ಯತೆ, ಮರ್ಯಾದೆಗಳ ಜೊತೆಗೆ ಆಲಯಕ್ಕು, ಸಾಮಾನ್ಯ ಜನರಿಗೂ ನ್ಯಾಯಾಲಯದ ರಕ್ಷಣೆಯೂ ದೊರೆಯುತ್ತದೆ. ಹೀಗೆ ಮನಮಾನಿಯ ಹಾಗೂ ದುರಾಡಳಿತದ ವಿರುದ್ಧ-ಸಾಕಷ್ಟು ಅಡೆತಡೆಗಳನ್ನು- ರಕ್ಷಣೆಯನ್ನು ಕಲ್ಪಿಸಬಹುದಾಗಿದೆ. ಮೈಸೂರಿನ ಮಹಾ ರಾಜರೂ, ಇತರ ಜಮೀಂದಾರರೂ ಆಲಯದ ಆಡಳಿತದ ವಿಷಯದಲ್ಲಿ ತಾವು ತಲೆಹಾಕಲು ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ. ಇಂತಹ ಸಮಯದಲ್ಲಿ ಸಮಾಜದಲ್ಲಿ ಗೌರವಾದರಗಳನ್ನು ಹೊಂದಿದ ಉನ್ನತ ನೆಲೆಯ ವ್ಯಕ್ತಿಗಳನ್ನು - ಹುಡುಕುವುದೇ ಕಷ್ಟ. ಅವರೂ ಹೊಣೆಯನ್ನು ಹೊರಲು ಸಿದ್ಧರಾಗಿ ಮುಂದೆ ಬರಬೇಕಾಗುತ್ತದೆ. ಮಹಂತರು ಜಿಯಂಗಾರರೊಂದಿಗೆ ಸೇರಿ ಕೆಲಸ ಮಾಡಲು ನಿರಾಕರಿಸಿದ್ದಾರೆ. ಮಹಂತರೂ, ಜಿಯಂಗಾರರೂ, ಸೇರಿ ಕೆಲಸ ಮಾಡುವಂತೆ ಮಾಡಲು ನಾನು ಪ್ರಯತ್ನ ಮಾಡಿದೆನಾದರೂ ಫಲಕಾರಿಯಾಗಲಿಲ್ಲ. ಇತರ ಕಾರಣಗಳೊಂದಿಗೆ ಮಹಂತರು ಮುಂದು ಮಾಡುವ ಒಂದು ಕಾರಣವೆಂದರೆ " ಸ್ವತಃ ಜಿಯಂಗಾರರು ಮಾಸಿಕ 47-4-00 ರೂಗಳ ಸಂಭಾವನೆಯಲ್ಲಿ ಕೆಲಸ ಮಾಡುತ್ತಿದ್ದು ಕಿತ್ತು ಹಾಕಬಹುದಾದ ಪದವಿ ಅದು. ವಂಶ ಪಾರಂಪರರ್ಯವಾಗಿ ಬಂದದ್ದಲ್ಲ."

ತಮ್ಮ ವಾದವನ್ನು ಕ್ರೋಢೀಕರಿಸುತ್ತ ಜಿಲ್ಲಾಧಿಕಾರಿ ಹೇಳುವುದೆಂದರೆ " ಸಾಮಾನ್ಯ ಅನುಭವದ ಪ್ರಕಾರ ಆಡಳಿತವನ್ನು ಒಬ್ಬರ ಕೈಗೇ ಕೊಡುವುದು ಉತ್ತಮ. ಆಲಯದ ಆಡಳಿತವನ್ನು ಕಂಪನಿ ಸರ್ಕಾರವು ಬಿಟ್ಟು ಕೊಡುವುದೇ ಆದಲ್ಲಿ ಸಂಯುಕ್ತ ಆಡಳಿತದಲ್ಲಿಟ್ಟು ಗೊಂದಲದ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬರುವ ಭವಿಷ್ಯದ ಬಗ್ಗೆ ಯೋಚಿಸಿ, ಅಂತಹ ಒಂದು ವಿಧಾನ ಪ್ರಯೋಗಬಾಹಿರ ವೆಂದು ಭಾವಿಸುತ್ತ ಏಕವ್ಯಕ್ತಿ ಆಡಳಿತ ರೀತಿಯೇ ಸೂಕ್ತವೆಂದು ಹೇಳಬಹುದಾಗಿದೆ. ಪರಿಸ್ಥಿತಿಗಳು ತಂತಾವೆ ದಾರಿ ತೋರುತ್ತವೆ. ಎರಡನೆಯದಾಗಿ ಮಹಂತರಿಗಿಂತ ಚೆನ್ನಾದ ಆಯ್ಕೆಯ ಅವಕಾಶವೇ ಇಲ್ಲ. ಆಲಯದ ಸೇವೆಗಳಲ್ಲಿ ಒಂದು ಭಾಗವಾಗದೆ, ಆಲಯದ ಪೂಜೆ ಪುರೋಭಿವೃದ್ಧಿಗಳಲ್ಲಿ ಅತ್ಯಂತ ಆಸಕ್ತಿ ಹೊಂದಿದವರಾಗಿ, ತೆಂಗಲೆ ವಡಗಲೆಯ ವಿವಾದಗಳಲ್ಲಿ ಬೀಳದೆ, ಸಮಾಜದ ಹತ್ತೂ ಮಂದಿಯಿಂದ ಮಾನ್ಯತೆ ಪಡೆದು, ಸ್ವತಃ ದೊಡ್ಡ ಮಂದಿಯೆಂಬ ಹೆಸರಿಗೆ ಪಾತ್ರವಾಗಿರುವ ಮಹಂತರಿಂದ ಯಾವುದೇ ವ್ಯಕ್ತಿಯ ಹಕ್ಕು ಭಾದ್ಯತೆಗಳಿಗೂ ಧಕ್ಕೆಯುಂಟಾಗದೆ, ಆಲಯದ ಆಡಳಿತ ಸುಗಮವಾಗಿ ನಡೆಯುವುದೆಂದು ಭರವಸೆ ಹೊಂದಬಹುದಾಗಿದೆ.'

ಮಂಡಳಿ ಹಾಗೂ ಪ್ರಾದೇಶಿಕ ಸರ್ಕಾರಗಳು ಈ ಯೋಜನೆಯನ್ನು ಒಪ್ಪಲು ಸಿದ್ಧವಾಗಿದ್ದವು. ಅವಕ್ಕೆ ಕೇಂದ್ರ ಸರ್ಕಾರದ ದೃಷ್ಟಿಯಲ್ಲಿ ಚೆನ್ನಾದ ವರ್ತನೆಯನ್ನು ಹೊಂದಿದಂತೆ ತೋರಿಸಿ ಕೊಳ್ಳುವ ಆಸಕ್ತಿಯಿದ್ದಿತು. ಆಲಯದ ಅತಿ ಹೆಚ್ಚಿನ ಆದಾಯವನ್ನು

ಬಿಡುವುದರಲ್ಲಿ ಸ್ಥಳೀಯ ಸರ್ಕಾರಕ್ಕೆ ಸಮ್ಮತಿಯಿಲ್ಲ ಎಂಬ ಗುಮಾನಿ ಕೇಂದ್ರಕ್ಕೆ ಉಂಟಾಗದಂತೆ ತುರ್ತಾಗಿ ಯಾರ ತಲೆಗಾದರೂ ಜವಾಬ್ದಾರಿಯನ್ನು ಕಟ್ಟಿ ಕೈ ತೊಳೆದುಕೊಳ್ಳಬೇಕಾಗಿದ್ದಿತು. 1843 ರ ಸೆಪ್ಟಂಬರ್ ತಿಂಗಳಲ್ಲಿ ಮಹಂತ ಸೇವಾದಾಸರು ತಿರುಮಲ - ತಿರುಪತಿ ದೇವಸ್ಥಾನಗಳ ಪ್ರಥಮ ವಿಚಾರಣ ಕರ್ತರಾಗಿ ಆಡಳಿತವನ್ನು ವಹಿಸಿಕೊಂಡರು. 1933 ರಲ್ಲಿ ತಿರುಮಲ ತಿರುಪತಿ ದೇವಸ್ಥಾನಗಳ ಕಾಯದೆಯನ್ನು (1939 ರಲ್ಲಿ ಪರಿಷ್ಕೃತವಾಯಿತು.) ಜಾರಿಗೆ ತರುವವರೆಗೆ ಹತ್ತಿರಾಮಜೀ ಮಠದ ಮಹಂತರ ಆಡಳಿತದಲ್ಲಿ ತಿರುಮಲೆ - ತಿರುಪತಿ ಆಲಯಗಳ ಆಡಳಿತ ಸಾಗಿಬಂದಿತು.

ಹೀಗೆ ಶ್ರೀ ವೆಂಕಟೇಶ್ವರಸ್ವಾಮಿ ದೇವಾಲಯವು ತಿರುಪತಿಯ ಶ್ರೀ ಗೋವಿಂದರಾಜಸ್ವಾಮಿ ಆಲಯ ಶ್ರೀ ಕೋದಂಡ ರಾಮಾಲಯ, ಶ್ರೀ ಕಪಿಲೇಶ್ವರಸ್ವಾಮಿ ಆಲಯ, ತಿರುಚಾನೂರಿನ ಪದ್ಮಾವತೀ ಅಮ್ಮನವರ ಆಲಯಗಳನ್ನು 1843ರ ಸೆಪ್ಟಂಬರ್‌ನಲ್ಲಿ ತಿರುಪತಿಯಲ್ಲಿದ್ದ ಹತ್ತೀರಾಮಜೀ ಮಠದ ಮಹಂತ ಸೇವಾದಾಸರಿಗೆ ಒಪ್ಪಿಸಲಾಯಿತು. ಈ ಬಗೆಗಿನ ಒಪ್ಪಂದದ ಮುಚ್ಚಳಿಕೆಯನ್ನು 1843 ರ ಏಪ್ರಿಲ್ 21 ರಂದು ಸಹಿಮಾಡಲಾಯಿತು. ಅದರ ಪ್ರಕಾರ ಮಹಂತರು ತಮ್ಮ ಶಿಷ್ಯ ಪ್ರಶಿಷ್ಯರ ಮೂಲಕ ಆಲಯಗಳ ಆಡಳಿತವನ್ನು, ದೈನಂದಿನ ಪೂಜೆಗಳನ್ನೂ ನಡೆಸಿಕೊಂಡು ಹೋಗಬೇಕೆಂದು ಕಟ್ಟಳೆಯಾಯಿತು. ಬಲವಾದ ಒತ್ತಾಯ ಹಾಕಿ ಮೇಲೆ ಆರಂಭದ ವೆಚ್ಚಗಳಿಗೆಂದು ಅವರಿಗೆ 5000 ರೂಪಾಯಿಗಳನ್ನು ಮಂಜೂರು ಮಾಡಿ ಕೊಡಲಾಯಿತು.

ಕ್ರಿ.ಶ. 1843 ರ ಹೊತ್ತಿಗೆ , ಆಲಯದ ಭೂಮಿಗಳನ್ನು ಗುತ್ತಿಗೆ ನೀಡುವುದರಿಂದ ಉಂಟಾದ 40 ಲಕ್ಷ ರೂಪಾಯಿಗಳು ಕಂಪನಿಯ ವಶದಲ್ಲಿದ್ದಿತೆಂದು ತಿಳಿದುಬರುತ್ತದೆ. ನೆಲ್ಲೂರಿನ ವಕೀಲರಾದ ಶ್ರೀ ಎ.ಎಸ್. ಕೃಷ್ಣರಾಯರು ಹಿಂದಿನ ಶತಮಾನದ ಎರಡನೇ ದಶಕದಲ್ಲಿ ಮದರಾಸಿನ ಶಾಸನ ಸಭೆಯಲ್ಲಿ ಈ ಬಗ್ಗೆ ಹಲವು ಬಾರಿ ಪ್ರಶ್ನೆಗಳನ್ನು ಎತ್ತಿ, ತಿರುಪತಿ ದೇವಸ್ಥಾನಕ್ಕೆ ಈ ಹಣವನ್ನು ಹಿಂದಿರುಗಿಸಬೇಕೆಂದು ವಾದ ಮಾಡಿದ್ದರು. ಅಸ್ಪಷ್ಟವಾದ ಉತ್ತರಗಳನ್ನು ಕೆಲಬಾರಿ ನೀಡಿ, ಆ ಬಗೆಗಿನ ಯಾವುದೇ ದಾಖಲೆಯೂ ಇಲ್ಲವೆಂದೂ ಕಡೆಗೆ ನಿರಾಕರಿಸಲಾಯಿತು.

## 4. ಮಹಂತರ ಸುಪರ್ದಿನಲ್ಲಿ ಆಲಯ :

ಸಾಧಾರಣವಾಗಿ ಹೇಳುವುದಾದರೆ ತಿರುಮಲೆಯ ಆಲಯವನ್ನು ಮಹಂತರು ತೃಪ್ತಿಕರವಾಗಿಯೇ ನಡೆಸುತ್ತ ಬಂದರು ಎನ್ನಬೇಕು. ಆಲಯದ ಜೀರ್ಣೋದ್ಧಾರ ಹಾಗೂ ದುರಸ್ತಿ ಕೆಲಸಗಳಲ್ಲಿ ಸರ್ವತ್ರ ಅಭಿವೃದ್ಧಿಯನ್ನು ಗಮನಿಸಬಹುದು ಹಾಗೂ ಯಾತ್ರಿಕರಿಗೆ ಉಂಟಾಗುತ್ತಿದ್ದ ಸೌಲಭ್ಯಗಳೂ ಗಣನೀಯವಾಗಿ ಏಳ್ಗೆಪಡೆದವು.

ಆದರೆ ಇಂತಹ ದೊಡ್ಡ ಸಂಸ್ಥೆಗಳಲ್ಲಿ ಅನಿವಾರ್ಯವಾಗಿ ಉಂಟಾಗತಕ್ಕ ಒಳಗುದಿಯು ಮಹಂತರ ಪ್ರವೇಶದಿಂದ ಆರಂಭ ವಾಯಿತು ಎನ್ನಬೇಕು. ಮಹಂತರಿಗೂ ಆಲಯದ ಒಳಗಡೆ ಈಗಾಗಲೇ ಸೇರಿ ಹೋಗಿದ್ದ ಹಿತಾಸಕ್ತಿಗಳಿಗೂ ಒಳತೋಟಿಯುಂಟಾಗಿ ನಿರಂತರವಾಗಿ ಕೋರ್ಟು ಕಚೇರಿಯ ಮುಖ ನೋಡುವಂತಾಯಿತು. ಎರಡೂ ಪಕ್ಷಗಳ ಸಂಕುಚಿತ ಧೋರಣೆಗಳಿಂದಾಗಿ ಈ ಪವಿತ್ರ ವಾದ ಆಲಯದ ಹೆಸರನ್ನು ಕೋರ್ಟಿಗೆ ಎಳೆಯುವಂತೆ ಮಾಡಿದ್ದೇ ಅಲ್ಲದೆ, ಸಾಮಾನ್ಯವಾಗಿ ಎರಡೂ ಪಕ್ಷಗಳ ವೆಚ್ಚವನ್ನು ಆಲಯದ ಕೋಶಾಗಾರದಿಂದ ಕಟ್ಟುವಂತೆ ನ್ಯಾಯಾಲಯಗಳ ತೀರ್ಪು ಬರುತ್ತಿದ್ದದ್ದರಿಂದ ಆಲಯದ ಸಂಪನ್ಮೂಲಕ್ಕೂ ಸಾಕಷ್ಟು ಧಕ್ಕೆಯುಂಟಾ ಯಿತು. ಹಣದ ದುರುಪಯೋಗ ಹಾಗೂ ಅಪವ್ಯಯಗಳೇ ಈ ಖಟ್ಲೆಗಳ ಸಾಧಾರಣ ಕಾರಣಗಳಾಗಿದ್ದವು. ಮೊದಲನೆ ಮಹಂತರಾದ ಸೇವಾದಾಸರ ಆಡಳಿತ ಕಾಲವಾದ 1843 ರಿಂದ ಫೆಬ್ರವರಿ 26, 1864 (ಅವರ ಮರಣದ ದಿನ ) ವರೆಗೆ ಮಾತ್ರವೇ ಯಾವ ತಕರಾರೂ ಕೋರ್ಟಿನ ಮೆಟ್ಟಿಲು ಹತ್ತಲಿಲ್ಲ.

ಆಲಯದ ಸಾರ್ವಜನಿಕ ಆಡಳಿತದಲ್ಲಿ ಹಲವರಿಗೆ ಅವಕಾಶವನ್ನು ನೀಡಿದ 1822ರಲ್ಲಿ ಜಾರಿಗೆ ಬಂದ ಬ್ರೂಸ್ ಕೋಡ್ ನಿಯಮಾವಳಿಯನ್ವಯವಾಗಿ ಹಾಗೂ 1843 ಫೆಬ್ರವರಿ 13ರಂದು ಗೋಲ್ಡಿಂಗ್ ಹ್ಯಾಂ ಬರೆದ ಪತ್ರದಲ್ಲಿನ "ಯಾವುದೇ ರೀತಿಯ ತಕರಾರನ್ನೂ ನ್ಯಾಯಾಲಯಗಳು ತೀರಿಸಬಲ್ಲವು" ಎಂಬ ಮಾತಿನ ಆಧಾರದಲ್ಲಿ ಭವಿಷ್ಯದ ತಕರಾರುಗಳು ನ್ಯಾಯಾಲಯಕ್ಕೆ ದಾರಿ ತೆರೆದವು. 1863 ರಲ್ಲಿ ಉಂಟಾದ ಧಾರ್ಮಿಕ ದತ್ತಿ ಕಾಯದೆಯ ಇಪ್ಪತ್ತನೇ ಕಲಮು ವಿವಾದಗ್ರಸ್ತವಾಗಿದ್ದು ಆಲಯದ ಬತ್ತಿಗೆದಾರರು ಅರ್ಜಿಗಳನ್ನು ಹಾಕಲು ಬೆಂಬಲ ನೀಡಿತು. ಮೊದಲನೆಯ ತಕರಾರು 1864 ರಲ್ಲಿಯೇ ನ್ಯಾಯಾಲಯವನ್ನೇರಿತು. ಈ ತಕರಾರು ನಿರ್ಣಯದ ವ್ಯವಹಾರದಲ್ಲಿ ದೇವಸ್ಥಾನದ ಸಂಪನ್ಮೂಲಕ್ಕೆ ಎಷ್ಟೊಂದು ದೊಡ್ಡ ರಂಧ್ರವುಂಟಾಯಿತೆಂಬುದನ್ನು ಫಸಲಿ 1283 ನೇ ವರ್ಷದ ಆಲಯ ಲೆಕ್ಕಗಳ ದಾಖಲೆಗಳನ್ನು ನೋಡಿ ತಿಳಿಯಬಹುದು.

"ಚಿತ್ತೂರು ಜಿಲ್ಲಾ ನ್ಯಾಯಾಲಯದಲ್ಲಿ ದೇವಸ್ಥಾನಗಳ ವಿಚಾರಣಕರ್ತರ ವಿರುದ್ಧ ಚಿನ್ನಜಿಯಂಗಾರು ಅಪ್ಪನ್ ಅಳಗಿಯ ಮಣವಾಳ ರಾಮಾನುಜರು ಹಾಗೂ ಅಡಿಯಪ್ಪನ್ ಚಕ್ರವರ್ತಿ ರಂಗಾಚಾರ್ಯ ಅವರುಗಳು ಮಾಡಿದ ತಕರಾರು ಖಟ್ಲೆ 14, 18- ಇಸವಿ 1867 ರ ಬಗ್ಗೆ ಹಾಗೂ 1867 ಇಸವಿಯ 17 ನೇ ನಂಬರಿನ ಖಟ್ಲೆ (ಪರಕಾಲ ರಾಮಾನುಜ ಏಕಾಂಗಿ) ಯ ಬಗ್ಗೆ ನೀಡಲಾದ ಆಜ್ಞೆಯಂತೆ ಪ್ರತ್ಯುತ್ತರಗಳನ್ನು ದಾಖಲು ಮಾಡಿ ವಾದ ಸಿದ್ಧಗೊಳಿಸಲಾಗಿದೆ.

ಖಟ್ಲೆಯಲ್ಲಿನ ಉತ್ತರಗಳನ್ನು ದಾಖಲು ಪಡಿಸಿ ಕೇಸಿನ ಪರವಾಗಿ ವಾದ ಮಾಡಲು ಮಾಡಿದ ಖರ್ಚು ರೂ.52,258-6-2.

## 5. ಮಹಂತರ ಕಾಲದ ತಕರಾರುಗಳು

ಕ್ರಿ.ಶ. 1864 ರಲ್ಲಿ ಸೇವಾದಾಸರ ಉತ್ತರಾಧಿಕಾರಿಯಾಗಿ ಧರ್ಮದಾಸರು ಬಂದರು. ಇವರು ತಮ್ಮ ಸ್ವಂತ ಹಣದಿಂದ ರೂ. 2,25,457-14-0ಗಳನ್ನು ದೇವಸ್ಥಾನಕ್ಕೆ ತುಂಬಿಕೊಡಬೇಕೆಂದು ನ್ಯಾಯಾಲಯದ ಒಂದು ತೀರ್ಪು ಬಂದಿತು. ಈತನ ಉತ್ತರಾಧಿ ಕಾರಿಯಾಗಿ ಭಗವಾನ್ ದಾಸರು 1880 ಯಲ್ಲಿ ಕಾರ್ಯಭಾರವನ್ನು ವಹಿಸಿಕೊಂಡು ಕ್ರಿ.ಶ. 1890ರವರೆಗೆ ಮುಂದುವರಿದರು. ಧ್ವಜಸ್ತಂಭದ ಅಡಿಯಲ್ಲಿ ಪ್ರಾಚೀನ ಮಹಾರಾಜರು ಹುದುಗಿಸಿದ್ದ ಅಮೂಲ್ಯವಾದ ರತ್ನಗಳನ್ನು ಈತ ಧ್ವಜಸ್ತಂಭದ ದುರಸ್ತಿಯ ನೆಪದಲ್ಲಿ ಎತ್ತಿಹಾಕಿದರೆಂದು ಆರೋಪಿಸಲಾಯಿತು. ಆಲಯದ ಧನದಲ್ಲಿ ಸುಮಾರು ಹದಿನೈದು ಲಕ್ಷ ರೂಪಾಯಿಗಳನ್ನು ದುರುಪಯೋಗಗೊಳಿಸಿದರೆಂದು ಆರೋಪ ಹೊರಿಸಿ ತಪ್ಪಿತಸ್ಥನೆಂದು ತೀರ್ಮಾನವಾಗಿ ಮೊದಲಿಗೆ ಮೂರು ವರ್ಷದ ಕಠಿಣ ಶಿಕ್ಷೆ ವಿಧಿಸಲಾದರೂ, ಮೇಲ್ಮನವಿ ಮಾಡಿಕೊಂಡಾಗ ಈ ಶಿಕ್ಷೆಯನ್ನು 18 ತಿಂಗಳಿಗೆ ಇಳಿಸಲಾಯಿತು. ಈತನ ವಾರಸುದಾರ ರಾಮಕಿಶೋರ ದಾಸನೂ ಆಲಯದ ಹಣದಲ್ಲಿ ಐವತ್ತು ಸಾವಿರ ರೂಪಾಯಿಗಳನ್ನು ತಿಂದು ಹಾಕಿದನೆಂದು ಖಟ್ಲೆಯಾಗಿ, ಈತನನ್ನು ತೊಲಗಿಸ ಬೇಕೆಂಬ ಮನವಿ ತೀರ್ಮಾನ ಮಾಡುವಷ್ಟರಲ್ಲಿ ಈತನನ್ನು ಯಾರೋ ಕೊಲೆ ಮಾಡಿದರು. ಕಾರ್ವೇಟಿನಗರ ಹಾಗೂ ಕಾಳಹಸ್ತಿಗಳ ಜಮೀನುದಾರರಿಗೆ ಭಗವಾನ್ ದಾಸನು ನೀಡಿದ ಸಾಲ ಒಳ್ಳೆಯ ಬಂಡವಾಳ ಹೂಡಿಕೆಯ ವ್ಯವಹಾರವಾಗಿತ್ತಾದರೂ, ಜಿಲ್ಲೆಯ ಭೂಪಟದಿಂದಲೇ ಈ ಇಬ್ಬರೂ ಜಮೀಂದಾರರೂ ಈ ಸಾಲಗಳಿಂದಾಗಿಯೇ ನಿರ್ನಾಮವಾದರು.

ಈ ಅಧಿಕಾರಕ್ಕೆ ಮಹಂತರ ಆಯ್ಕೆ ಮಾಡುವ ವಿಧಾನ ಹಾಗೂ ಅವರ ಆಡಳಿತ ವಿಧಾನಗಳ ಬಗ್ಗೆ 1869 ರಲ್ಲಿ ಹೊರಟಿದ್ದ ಒಂದು ತೀರ್ಪು (ಓ.ಎಸ್. - 14 - ಕ್ರಿ.ಶ. 1867) (ತೀರ್ಮಾನವಾದದ್ದು 1869ರಲ್ಲಿ) ಟಿಪ್ಪಣಿಸಹಿತವಾದ ಬೆಳಕು ಬೀರುತ್ತದೆ. "ಈ ಸಂದರ್ಭದಲ್ಲಿ ತಿರುಪತಿಯ ಪಗೋಡಗಳ (ಆಲಯಗಳ) ಜಾತ್ಯತೀತ ಆಡಳಿತದ ಹೊಣೆಯ ಪ್ರತಿವಾದಿ ಮಹಂತ ಧರ್ಮಾಸನ ನಿಲುವು ತಪ್ಪು ಎಂದು ನಾನು ಭಾವಿಸುತ್ತೇನೆ. ಶಾಸನಾನುಸಾರವಾಗಿ ನಿಯಮಿತನಾದ ಅವನ ಹಿಂದಿನ ಮಹಂತನ ಆಯ್ಕೆ ಯಿಂದಾಗಿಯೇ ಆತ ಈ ನಿಲುವನ್ನು ತಳೆಯಬೇಕಾಯಿತು. ಇದೇ ರೀತಿಯ ನಿಲುವನ್ನೇ ಸನ್ಯಾಸಿಯಾದಂತಹ ಈತನ ಉತ್ತರಾಧಿ ಕಾರಿಯೂ ತಳೆಯಬೇಕಾಗುತ್ತದೆ - ಎಂಬುದು ಸ್ಪಷ್ಟವಾಗಿದೆ. ಒಂದು ಹೊಸ ರೀತಿಯ ಶಾಸನದ ತಿದ್ದುಪಡಿ ಆಗುವವರೆಗೆ ಇದೇ

ಪರಿಸ್ಥಿತಿ ಮುಂದುವರೆಯುತ್ತದೆ. ಹಳೆಯ ಪದ್ಧತಿಯಾದ ಸರ್ಕಾರೀ ಆಡಳಿತವು ಆ ಪದ್ಧತಿಯಿರುವಷ್ಟು ಕಾಲವು ಅತ್ಯಂತದಕ್ಷತಾಪೂರ್ಣವಾಗಿ ಕೆಲಸ ಮಾಡಿದ್ದೇ ಅಲ್ಲದೆ, ಆರ್ಥಿಕವಾಗಿಯೂ ಲಾಭದಾಯಕವಾಗಿದ್ದಿತು ಅಥವಾ ವ್ಯವಹಾರದ ಬಗೆಯನ್ನೇ ತಿಳಿಯದಂತಹ ಸನ್ಯಾಸಿಗಳಿಗಿಂತ, ಹೆಚ್ಚುಲೋಕಜ್ಞಾನವುಳ್ಳ ಬೇರೆ ಯಾರಿಗಾದರೂ ಆಡಳಿತವನ್ನು ಒಪ್ಪಿಸುವುದು ಸೂಕ್ತ ಆಗಿರುತ್ತದೆ.ಕಾರಣ ಒಬ್ಬ ಸನ್ಯಾಸಿಯು ಇನ್ನೊಬ್ಬ ಸನ್ಯಾಸಿಗಿಂತ ಹೆಚ್ಚು ಜಾತ್ಯತೀತನೆಂದು ಪರಿಗಣಿಸಲಾಗುವುದಿಲ್ಲ.''

ಈ ಮಹಂತನನ್ನು ತೆಗೆದು ಹಾಕಬೇಕೆಂದು ಚಿನ್ನ ಜಿಯಂಗಾರರು ಮಾಡಿದ ಮನವಿಯನ್ನು ಮದರಾಸಿನ ಉಚ್ಚ ನ್ಯಾಯಾಲಯವು ಆಸಕ್ತಿದಾಯಕವಾದಂತಹ ಕಾರಣಗಳಿಂದ ತಿರಸ್ಕರಿಸಿತು - '' ಆತ ಭ್ರಷ್ಟ ಕೆಲಸ ಮಾಡಿದ ಎಂಬುದರಲ್ಲಿ ಸಂದೇಹವಿಲ್ಲ. ಜಮೀಂದಾರರಿಗೆ ಕೊಟ್ಟ ಸಾಲವು ಭ್ರಷ್ಟಾಚಾರದ ಪರಾಕಾಷ್ಠ ಸ್ಥಿತಿ. ಈತನ ಹಿಂದಿನವರು ಇಂತಹದೇ ದ್ರೋಹವನ್ನೆಸಗಿರುವರು. ಇವನ ವಾರಸುದಾರರೂ ಇದೇ ದಾರಿ ಹಿಡಿಯುವರೆಂಬುದರಲ್ಲಿ ಸಂದೇಹವಿಲ್ಲ. ಸಾಕಷ್ಟು ಸಂಪನ್ನನಾದ ಒಬ್ಬ ಅಪ್ರಾಮಾಣಿಕ ವ್ಯಕ್ತಿಯನ್ನು ತೆಗೆದುಹಾಕಿ ಇನ್ನೊಬ್ಬ ಅಷ್ಟೇ ಅಪ್ರಾಮಾಣಿಕನಾಗಿರುವ ವ್ಯಕ್ತಿ, ಅದೂ ಹಸಿವಿನಿಂದ ಇರುವಂತಹ ವ್ಯಕ್ತಿಯನ್ನು ನೇಮಕ ಮಾಡುವುದೇ ಇಲ್ಲಿನ ಪ್ರಶ್ನೆಯಲ್ಲ.'' ಈ ಒಂದು ಮುಂದಾಲೋಚನೆ ಎಷ್ಟು ನಿಜವಾಗಿದ್ದಿತೆಂಬುದು ನಂತರದ ಉತ್ತರಾಧಿಕಾರಿಯಾದ ಭಗವಾನ್ ದಾಸನ ಬೇಜವಾಬ್ದಾರಿಯಿಂದ ತಿಳಿದು ಬರುತ್ತದೆ. ನಂತರದ ಕಾಲದಲ್ಲಿಯೂ 1898 ರ 31ನೇ ಖಟ್ಲೆಯೂ 1899 ರ್ಲಲಿ 10ನೇ ಖಟ್ಲೆಯೂ ಉತ್ತರ ಆರ್ಕಾಟು ಜಿಲ್ಲೆಯ ಜಿಲ್ಲಾ ನ್ಯಾಯಾಧೀಶರ ಕಛೇರಿಯಲ್ಲಿ ದಾಖಲಾದವು. ಅವುಗಳ ಆರೋಪವೆಂದರೆ ರಾಮ ಕಿಶೋರದಾಸನು ಆಲಯದ ಭೂಮಿಗಳನ್ನು ಗುತ್ತಿಗೆಗೆ ನೀಡುವಾಗ ಐವತ್ತು ಸಾವಿರ ರೂಪಾಯಿಗಳ ಲಂಚ ಪಡೆದನೆಂಬುದೂ, ಗುತ್ತಿಗೆದಾರರಿಗೆ ಅನ್ಯಾಯದ ಅನುಕೂಲಗಳನ್ನು ಒದಗಿಸಿದನೆಂಬುದೂ ಆಗಿದ್ದವು. 1899ನೆಯ ವರ್ಷದ ಹತ್ತನೇ ನಂಬರಿನ ಖಟ್ಲೆಯು ಆತನನ್ನು ವಿಚಾರಣಕರ್ತನ ಸ್ಥಾನದಿಂದ ತೆಗೆದು ಹಾಕಬೇಕೆಂಬ ಬೇಡಿಕೆಯಿಂದ ಕೂಡಿದ್ದಿತು. 1898 ರ ಖಟ್ಲೆಯು ಆಲಯದ ಆಡಳಿತ ವಿಷಯದಲ್ಲಿ ಒಂದು ವ್ಯಾಜ್ಯದ ತೀರ್ಮಾನಕ್ಕೆ ಬೇಡಿಕೆಯನ್ನು ಒಳಗೊಂಡಿದ್ದಿತು. ಈ ಖಟ್ಲೆಗಳ ವಿಚಾರಣೆಯಾಗುತ್ತಿದ್ದಾಗಲೇ ರಾಮ ಕಿಶೋರದಾಸನು ಕೊಲೆಯಾದ. ಇದರಿಂದಾಗಿ ಈತನ ಪದಚ್ಯುತಿಯ ವಿಷಯ ತೀರ್ಮಾನಾತೀತವಾಯಿತಾದರೂ, ಮಿಕ್ಕ ವಿಷಯದಲ್ಲಿ ತೀರ್ಮಾನವಾಗಿ 1901 ರಲ್ಲಿ ಸಂಖ್ಯೆ 236 ಹಾಗೂ 1902ರಲ್ಲಿ ಸಂಖ್ಯೆ 38ರ ಬಗ್ಗೆ ಮೇಲಣ ನ್ಯಾಯಾಲಯಕ್ಕೆ ಅಪೀಲು ಮಾಡಲಾಯಿತು. ಇದನ್ನು ತಿರುಮಲೆ ಶ್ರೀರಂಗಾಚಾರ್ಯ ಮಹಂತ ಪ್ರಯಾಗದಾಸರ ನಡುವಣ ವ್ಯಾಜ್ಯವನ್ನು ಒಂದು ಹೊಸ ಯೋಜನೆಯ ಅನುಮತಿಯಿಂದ ತೀರ್ಮಾನ ಮಾಡಿದರೂ (ಮದ್ರಾಸು ನ್ಯಾಯಾಲಯ ಪತ್ರಗಳು - 319 , ಬಿಂದ 328) ಈ ಹೊಸ ಯೋಜನೆಯ ವಿರುದ್ಧ ಪ್ರೀವಿ ಕೌನ್ಸಿಲಿಗೆ ಹೋಗಲಾಯಿತು. ಇಲ್ಲಿ ಮತ್ತೊಂದು ಹೊಸ ಯೋಜನೆಯ ತೀರ್ಮಾನವಾಯಿತು.

## 6. ನ್ಯಾಯಾಲಯದಿಂದುಂಟಾದ ಆಡಳಿತ ಸುಧರಣಾಯೋಜನೆ :

1907ರವರೆಗಿನ ಮಹಂತರ ಆಳ್ವಿಕೆಯ ಸ್ವರೂಪವನ್ನು ಈ ತೀರ್ಮಾನದ ಸಾರಾಂಶವನ್ನು ಗ್ರಹಿಸುವುದರಿಂದ ತಿಳಿಯಬಹುದಾಗಿದೆ.

1907 ಫೆಬ್ರವರಿ 3. ಲಾರ್ಡ್‌ಮಕಾಲ್ಫಿನ್.

ಉಚ್ಚನ್ಯಾಯಾಲಯದ ತೀರ್ಪಿನ ಒಂದು ಭಾಗದ ಉದ್ಧರಣೆಯಿಂದ ಆಲಯದ ಚರಿತ್ರೆಯನ್ನು ತಿಳಿಯುವುದರೊಂದಿಗೆ, ಹೊಸ ಯೋಜನೆಯ ಅಗತ್ಯಕ್ಕೆ ದಾರಿತೆಗೆದ ಪ್ರಸಂಗವನ್ನು ತಿಳಿಯಬಹುದು.

''ಉತ್ತರ ಆರ್ಕಾಟು ಜಿಲ್ಲೆಯ ತಿರುಪತಿ ಅಥವಾ ತಿರುಮಲೆಯಲ್ಲಿರುವ ಶ್ರೀ ವೆಂಕಟೇಶ್ವರಸ್ವಾಮಿ ಆಲಯವು ಒಂದು ಅತಿ ಪ್ರಾಚೀನ ಹಿಂದೂ ದೇವಾಲಯವಾಗಿದ್ದು, ಭಾರತದ ಎಲ್ಲ ಭಾಗಗಳಿಂದಲೂ ಜನರು ಇಲ್ಲಿ ಪೂಜೆ ಮಾಡಲು ಬರುತ್ತಾರೆ ಮತ್ತು ಇಲ್ಲಿನ ವಾರ್ಷಿಕ ಆದಾಯ ಎರಡರಿಂದ ಮೂರು ಲಕ್ಷ ರೂಪಾಯಿಗಳು. ಆಂಗ್ಲ ಸರ್ಕಾರದ ಸ್ಥಾಪನೆ ಆಗುವುದಕ್ಕೆ ಮೊದಲು ಆಲಯದ ಆಡಳಿತವು ಇಲ್ಲಿನ ರಾಜನ ನೇರ ಆಳ್ವಿಕೆಗೆ ತತ್ಕಾಲಿಕವಾಗಿ ಸೇರಿದ್ದಿತು. ಆಂಗ್ಲರು ಇಲ್ಲಿಗೆ ಬಂದ ನಂತರ ಆಡಳಿತವು ಈಸ್ಟ್‌ಇಂಡಿಯಾ

ಕಂಪನಿಗೆ ಸೇರಿತು. 1817 ರಲ್ಲಿ ಮದರಾಸು ನಿಯಮಾವಳಿಯ 7 ನೇ ಕಲಮು ಉಂಟಾಗುವವರೆಗೆ ಆಡಳಿತವನ್ನು ಜಿಲ್ಲಾಧಿಕಾರಿಯು ಕಂದಾಯ ಮಂಡಲಿಯ ನಿಯಂತ್ರಣದಲ್ಲಿರುವಂತೆ ನೋಡಿ ಕೊಂಡಿದ್ದರು. 1841 ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ನಿರ್ದೇಶಕ ಮಂಡಳಿಯ ನಿರ್ದೇಶನದ ಪ್ರಕಾರ ಎಲ್ಲ ಭಾರತೀಯ ಧಾರ್ಮಿಕ ಸ್ಥಳಗಳ ಆಡಳಿತದಿಂದ ಕಂಪನಿ ಮುಕ್ತವಾಗುವಂತಾದಾಗ 1843 ರಲ್ಲಿ ಆಡಳಿತವನ್ನು ಆಲಯವಿರುವ ಬೆಟ್ಟದ ಬುಡದಲ್ಲಿರುವ ತಿರುಪತಿಯಲ್ಲಿ ನೆಲೆಗೊಂಡಿರುವ ಹತ್ತಿರಾಮಜಿ ಮಠದ ಸೇವಾದಾಸನ ವಶಕ್ಕೆ ಒಪ್ಪಿಸಲಾಯಿತು. ಸೇವಾದಾಸನಿಗೆ ಈ ಅಧಿಕಾರವನ್ನು ಒಪ್ಪಿಸಿದ ಸನ್ನದಿನಲ್ಲಿಯೇ ಆತನ ಉತ್ತರಾಧಿಕಾರಿಯು ಆಡಳಿತದ ಉತ್ತರಾಧಿಕಾರಿಯಾಗುವನೆಂದು ತಿಳಿಸಲಾಗಿದ್ದಿತು. ಈತನನ್ನು ವಿಚಾರಣ ಕರ್ತನೆಂದು ಹೆಸರಿಸಲಾಗಿದ್ದಿತು. 1864 ರಲ್ಲಿ ಸೇವಾದಾಸನು ಮರಣಹೊಂದಿದಾಗ ಧರ್ಮದಾಸನು ಅಧಿಕಾರಕ್ಕೆ ಬಂದು ಆತ 1880 ರಲ್ಲಿ ತೀರಿಕೊಳ್ಳಲು ಭಗವಾನ್ ದಾಸನ ವಿಚಾರಣಕರ್ತನಾಗಿ 1890 ವರೆಗೆ ಇದ್ದ. 1890 ರಿಂದ 1894 ರವರೆಗೆ ಮಹಾಬೀರ ದಾಸನು ವಿಚಾರಣಕರ್ತನೆಂದು ಹೆಸರಿಸಲಾಗಿದ್ದಿತು. 1895 ರಿಂದ 1900 ರವರೆಗೆ ರಾಮಕಿಶೋರದಾಸನು ವಿಚಾರಣಕರ್ತನಾಗಿದ್ದನು. ಈತನು ಉತ್ತರ ಆರ್ಕಾಟು ಜಿಲ್ಲಾ ನ್ಯಾಯಾಲಯದ 1898ರ 31ನೆಯ ಹಾಗೂ 1899ರ 10ನೆಯ ಖಟ್ಲೆಗಳಲ್ಲಿ ಪ್ರತಿವಾದಿಯಾಗಿದ್ದನು. ಆತನ ಮರಣಾನಂತರ ಈಗಿನ ಮಹಂತನು ರಾಮಕಿಶೋರದಾಸನ ಉತ್ತರಾಧಿಕಾರಿಯಾಗಿದ್ದಾನೆ.

"1843 ಆಡಳಿತವನ್ನು ಸೇವಾದಾಸನಿಗೆ ಹಸ್ತಾಂತರಗೊಳಿಸಿದಾಗ ಮಹಂತರ ಆಡಳಿತವು ತೃಪ್ತಿದಾಯಕವಾಗಿರುತ್ತದೆಯೆಂದು ನಿರೀಕ್ಷಿಸಲಾಗಿದ್ದಿತು. ಆದರೆ ಸೇವಾದಾಸನ ನಂತರದ ಚರಿತ್ರೆಯು ಸಂಕ್ಷಿಪ್ತವಾಗಿ ಹೇಳಬೇಕೆಂದರೆ ವ್ಯರ್ಥ ವೆಚ್ಚಗಳ, ಹಣವನ್ನು ನುಂಗಿಹಾಕುವ ದಾಖಲೆಯಾಗಿದೆಯಷ್ಟೆ."

'ಈ ಹಿನ್ನೆಲೆಯಲ್ಲಿ ಜಿಲ್ಲಾ ನ್ಯಾಯಾಲಯವು ಒಂದು ಯೋಜನೆಯನ್ನು ತಯಾರಿಸಿತು. ಈ ಯೋಜನೆಯು ಉಚ್ಚನ್ಯಾಯಾಲಯದಲ್ಲಿ ಅಪೀಲು ಹೋದಾಗ ತಿದ್ದುಪಡಿ ಹೊಂದಿತು. ತಿದ್ದುಪಡಿ ಹೊಂದಿದ ಮೇಲೆಯೂ ಈ ಹೊಸ ಯೋಜನೆ ಎರಡೂ ಪಕ್ಷಗಳಿಗ ಅನುಕೂಲಕರವೆಂದು ತೋಚದೆ, ಮಹಂತನು ರಾಜನ ಆಸ್ಥಾನಕ್ಕೆ ದೂರನ್ನು ತೆಗೆದುಕೊಂಡು ಹೋದ. ಈ ಮೇಲ್ಮನವಿಯಲ್ಲಿನ ಪ್ರಮುಖ ಅಂಶಗಳೆಂದರೆ 1) ಈ ಹೊಸ ಯೋಜನೆಯಿಂದಾಗಿ ಮಹಂತನ ಸ್ಥಾಯಿಯನ್ನು ಕೆಳಕ್ಕಿಳಿಸಿ, ಆತನ ಅಧಿಕಾರಕ್ಕೆ ಕುಂದುಂಟು ಮಾಡುತ್ತದೆ. 2) ನಿವ್ವಳ ಆದಾಯವಿಲ್ಲದಾಗಲೂ, ಉಂಟಾಗುವ ಸಂಭವವೇ ಇಲ್ಲದಾಗಲೂ ಹೆಚ್ಚಿನ ಹಣವನ್ನು ಬೇರೆ ಬೇರೆ ಕೆಲಸಗಳಲ್ಲಿ ತೊಡಗಿಸಲು ಈ ಯೋಜನೆಯು ಅವಕಾಶ ನೀಡುತ್ತದೆ. ಈ ಕೆಲಸಗಳು ಸ್ವತಃ ಒಳ್ಳೆಯವೇ ಆಗಿದ್ದರೂ, ಆಲಯಕ್ಕೆ ಸಂಬಂಧಿಸಿದಂತೆ ದೂರಾನ್ವಯವಾಗುವಂತಹವುಗಳಾಗಿವೆ. ಹೀಗಾಗಿ ಪ್ರಸ್ತುತದಲ್ಲಿ ಅನಗತ್ಯವೂ, ಭವಿಷ್ಯದಲ್ಲಿ ಭಂಗಕಾರಕವೂ ಆದ ಪ್ರಾವಧಾನಗಳಾಗಿವೆ' ಎಂದು ವಾದಿಸಲಾಗಿದ್ದಿತು.

ಈ ಮೇಲ್ಮನವಿಯ ವಿಚಾರಣೆಯನ್ನು ನಿರ್ದೇಶಕ ಮಂಡಳಿಯ ಅನುಪಸ್ಥಿತಿಯಲ್ಲಿ ನಡೆಸಲಾಯಿತು. ಆದರೆ ಈ ದೇಶದಲ್ಲಿನ ಇಂತಹದೇ ವಿಷಯಗಳಲ್ಲಿ ಅನುಭವ ಹೊಂದಿದ್ದಂತಹ ಸರ್ ರಾಬರ್ಟ್ ಫಿನ್ಲೆಯ ಉಪಸ್ಥಿತಿಯ ಲಾಭ ಶಾಸಕರಿಗೆ ಇದ್ದಿತು. ಪೂರ್ಣವಾದ ಚರ್ಚೆನಡೆಸಿ, ಅನುಭವೀ ಸಲಹೆಗಳನ್ನು ಪಡೆದನಂತರ ಆಸ್ಥಾನವು, ಆಲಯದ ಆಡಳಿತವನ್ನು ನೋಡಿಕೊಳ್ಳಲು ನೇಮಕವಾದ ಮಹಂತನ ಅಧಿಕಾರಕ್ಕೆ ಕುಂದುಂಟಾಗದಂತೆಯೂ, ಮನವಿಯ ಪೂರ್ವಾಪರಗಳಿಗೆ ವಿರೋಧವಿಲ್ಲದಂತೆಯೂ ಯೋಜನೆಯ ಒಳ ವಿವರಕ್ಕೆ ತಿದ್ದುಪಡಿ ತಂದು ಅಂಗೀಕರಿಸಿತು.

**ಆ ಯೋಜನೆಯ ವಿವರ ಹೀಗೆ -**

1) ಜಿಲ್ಲಾ ನ್ಯಾಯಾಲಯವು ಒಬ್ಬ ಖಜಾಂಚಿಯನ್ನು ಸಂಬಳದ ಮೇಲೆ ನೇಮಕ ಮಾಡುವುದು.

2) ಎಲ್ಲ ಧನರಾಶಿಯೂ ಖಜಾಂಚಿಯ ವಶದಲ್ಲಿರುವುದು. ಜಿಲ್ಲಾ ನ್ಯಾಯಾಲಯವು ಎಲ್ಲ ರೀತಿಯ ನೈವೇದ್ಯಗಳ, ಸಮರ್ಪಣೆಗಳ ಸೂಕ್ತ ಸಲ್ಲುವಳಿಗೆ ಹಾಗೂ ಸುಪರ್ದಿಗೆ ತಕ್ಕ ನಿಯಮಗಳನ್ನು ರೂಪಿಸುವುದು. ಆದಾಯದ, ಕೋಶದ, ನಿಯಮಗಳನ್ನು ರಚಿಸಿ, ಹೆಚ್ಚಿನ ಹಣವನ್ನು ಬಳಸುವ ಯೋಜನೆಗಳಿಗೆ ರೂಪಕಲ್ಪನಾ ಸೂತ್ರಗಳನ್ನು ತಯಾರಿಸಿ ನೀಡಿ, ಅವ್ಯವಹಾರಗಳ ನಿರೋಧಕ್ಕೆ ತಕ್ಕ ಮಾರ್ಗಸೂಚಿಸುವುದು. ಆಸ್ತಿಗಳನ್ನೂ, ಇತರತ್ರ ಆದಾಯಗಳನ್ನೂ, ಅಸಲು ಬಡ್ಡಿಗಳನ್ನೂ ನೋಡಿಕೊಳ್ಳಲು ನಿಯಮಗಳನ್ನು ಹಾಕಿ ಕೊಡುವುದು.

3. ಪ್ರತಿವರ್ಷದಲ್ಲಿಯೂ ವರ್ಷದ ಆರಂಭಕ್ಕೆ ಎರಡು ತಿಂಗಳ ಮೊದಲೇ ವರ್ಷದಲ್ಲಿ ಮಾಡತಕ್ಕಂತಹ ವೆಚ್ಚಗಳ ಅಂದಾಜು ಪಟ್ಟಿಯನ್ನು (ಮುಂಗಡ ಪತ್ರ) ವಿಚಾರಣಕರ್ತನು ತಯಾರಿಸಿ ಜಿಲ್ಲಾ ನ್ಯಾಯಾಲಯಕ್ಕೆ ಒಪ್ಪಿಸಬೇಕು.

4. ವಿಚಾರಣ ಕರ್ತನು ಮುಂಗಡ ಪತ್ರದಲ್ಲಿ ತಿಳಿಸಿರುವಂತಹ ಎಲ್ಲಧನವನ್ನೂ ವೆಚ್ಚಗಳಿಗಾಗಿ ಖಜಾಂಚಿಯು ಒದಗಿಸಿ ಕೊಡಬೇಕು. ಒಂದು ವೇಳೆ ಮುಂಗಡ ಪತ್ರದಲ್ಲಿ ಕಾಣಿಸಲಾಗದ ವೆಚ್ಚಗುಳುಂಟಾದಲ್ಲಿ ಒಂದು ವರ್ಷದಲ್ಲಿನ ಒಟ್ಟು ಅಂತಹ ವೆಚ್ಚ 5000 ರೂಪಾಯಿಗಳವರೆಗಿದ್ದಲ್ಲಿ ಮಾತ್ರವೇ ಜಿಲ್ಲಾ ನ್ಯಾಯಾಲಯದ ಅನುಮತಿ ಪಡೆಯದೆ ಒದಗಿಸಿಕೊಡಬಹುದು.

5.ಪ್ರತಿ ವರ್ಷದ ನಂತರವೂ ಮೂರು ತಿಂಗಳ ಒಳಗೆ ವಿಚಾರಣಕರ್ತನು ಆ ವರ್ಷದ ಆದಾಯ ವೆಚ್ಚಗಳ ವಿವರವಾದ ಲೆಕ್ಕ ಪತ್ರಗಳನ್ನು ಒಪ್ಪಿಸಬೇಕು. ಜಿಲ್ಲಾ ನ್ಯಾಯಾಲಯವು ನೇಮಕ ಮಾಡಿದ ಲೆಕ್ಕ ಪರಿಶೋಧಕನು ಈ ಲೆಕ್ಕಪತ್ರಗಳನ್ನು ಪರಿಶೀಲಿಸಬೇಕು. ಲೆಕ್ಕ ಪರಿಶೋಧಕರ ಪರಿಶೀಲನೆಯ ನಂತರ ಅವರ ವರದಿಯನ್ನು ನ್ಯಾಯಾಲಯವು ಹೇಳುವ ರೀತಿಯಲ್ಲಿ ಪ್ರಕಟಿಸಬೇಕು

6. ಎಲ್ಲ ರೀತಿಯ ಹೆಚ್ಚುವರಿ ಹಣವನ್ನೂ ಆಲಯದ ಪ್ರಯೋಜನಕ್ಕಾಗಿಯೇ ಬಳಸಬೇಕು.

7. ಜಿಲ್ಲಾ ನ್ಯಾಯಾಲಯದ ಅನುಮತಿಯಿಲ್ಲದೆ ವಿಚಾರಣಕರ್ತನು ದೇವಸ್ಥಾನದ ಯಾವುದೇ ಸ್ಥಿರಾಸ್ತಿಯ ಭೂಮಿಯ ಅಡವು, ಪರಭಾರೆ, ಗುತ್ತಿಗೆಗೆ ಐದು ವರ್ಷಕ್ಕಿಂತ ಹೆಚ್ಚಿನ ವ್ಯವಧಿಗೆ ನೀಡುವಂತಿಲ್ಲ, ಮಾರುವಂತಿಲ್ಲ.

8. ಜಿಲ್ಲಾ ನ್ಯಾಯಾಲಯದ ಅನುಮತಿಯಿಲ್ಲದೆ ಯಾವುದೇ ಆಭರಣ, ಆಸ್ತಿಯನ್ನೂ ಮಾರುವಂತಿಲ್ಲ.

9. ಈ ಷರತ್ತುಗಳ ಹೊರತು ವಿಚಾರಣಕರ್ತನ ಅಧಿಕಾರ ಮಿಕ್ಕಂತೆ ಮೊದಲಿನಂತೆಯೇ ಇರಬೇಕು.

10. ಈ ಯೋಜನೆಯ ಅಂಶಗಳಿಗೆ ತಕ್ಕಂತೆ ಆಡಳಿತ ನಡೆಯುವಂತೆ ಮಾಡಲು ಆಸಕ್ತಿಯಿರುವ ಯಾರಿಗಾದರೂ ವಿಚಾರಣ ಕರ್ತರನ್ನೂ ಸೇರಿಸಿದಂತೆ - ನ್ಯಾಯಾಲಯವನ್ನು ಮೊರೆಹೋಗುವ ಅವಕಾಶವಿರತಕ್ಕದ್ದು.

11. ವಿಚಾರಣ ಕರ್ತರಿಗೆ ಅಥವಾ ಆಸಕ್ತರಾದ ಮತ್ತಾರಿಗಾದರೂ ಕಾಲದಿಂದ ಕಾಲಕ್ಕೆ ಈ ಯೋಜನೆಯನ್ನು ಮತ್ತೂ ಸುಗಮಗೊಳಿಸಲು ಹೊಸ ತಿದ್ದುಪಡಿಗಳಿಗಾಗಿ ಮೇಲ್ಮನವಿ ಸಲ್ಲಿಸುವ ಅವಕಾಶವಿರತಕ್ಕದ್ದು.

ಈ ಖಟ್ಲೆಯ ಎಲ್ಲ ವೆಚ್ಚಗಳೂ ವಿಚಾರಣಕರ್ತನ ನ್ಯಾಯವಾದ ವೆಚ್ಚಗಳೊಡನೆ, ಮೇಲ್ಮನವಿಯ ವೆಚ್ಚ ಹಾಗೂ ರಾಜಾಸ್ಥಾನಕ್ಕೆ ದೂರು ಒಯ್ದ ವೆಚ್ಚಗಳೆಲ್ಲವನ್ನೂ ಜಿಲ್ಲಾ ನ್ಯಾಯಾಲಯಕ್ಕೆ ತಿಳಿಸಿ, ಜಿಲ್ಲಾ ನ್ಯಾಯಾಲಯ ಹೇಳುವಂತೆ ಆಲಯದ ಧನದಿಂದ ಪೂರೈಸಬೇಕು.

## 7. ಪ್ರಿವೀ ಕೌನ್ಸಿಲ್‌ನ ತೀರ್ಮಾನ

ಪ್ರೀವಿ ಕೌನ್ಸಿಲ್ ತೀರ್ಮಾನದ ಪ್ರಾಮುಖ್ಯತೆಯೆಂದರೆ ಅದು ಮೇಲಿನ ನ್ಯಾಯಾಲಯದಲ್ಲಿ ಆಲಯದ ಹೆಚ್ಚುವರಿ ಧನವನ್ನು ಅನ್ಯಕಾರಣಗಳಲ್ಲಿ ವೆಚ್ಚಮಾಡುವ ಅತಿ ಉದಾರಯೋಜನೆಯನ್ನೂ ಅಂಗೀಕರಿಸದೆ ಹೋಗಿದ್ದು, ಉಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಔದಾರ್ಯ ಹೀಗೆ -

ಎರಡೂ ಪಕ್ಷಗಳೂ ಒಪ್ಪಿಕೊಂಡಂತೆ ಹೆಚ್ಚುವರಿ ಹಣವನ್ನು ಕೆಳಗಣ ರೀತಿಯಲ್ಲಿ ವೆಚ್ಚಮಾಡಬಹುದು.

1. ಕೆಳಗಣ ತಿರುಪತಿಯಲ್ಲಿ ಒಂದು ಕಾಲೇಜಿನ ಸ್ಥಾಪನೆ ಆಗಬೇಕು. ಇದು ಹಿಂದೂಗಳಲ್ಲಿ ಹಿಂದೂ ಧರ್ಮದ ಬಗ್ಗೆ ಹೆಚ್ಚಿನ ಶಾಸ್ತ್ರ ಜ್ಞಾನವನ್ನು ಹರಡುವ ಉದ್ದೇಶದಿಂದಾಗಬೇಕು. ''ಶ್ರೀ ವೆಂಕಟೇಶ್ವರ ವಿದ್ಯಾಶಾಲೆ'' ಎಂದು ಹೆಸರು ಹೊಂದಿ ಈ ಕಾಲೇಜು ವ್ಯವಸ್ಥಿತವಾದ ಪುಸ್ತಕ ಭಂಡಾರವನ್ನು ಹೊಂದಿರಬೇಕು. ವಿದ್ಯಾರ್ಥಿವಸತಿನಿಲಯ ಉಪನ್ಯಾಸಕ ಗೃಹಗಳೊಂದಿಗೆ ಕಾಲೇಜು ಸುಭದ್ರವಾದ ಕಟ್ಟಡವನ್ನು ಹೊಂದಿರಬೇಕು. ಕಾಲೇಜಿನ ವಾರ್ಷಿಕ ವೆಚ್ಚಗಳು ಮುಂದಿನ ಹೊಸಆಜ್ಞೆ ಆಗುವವರೆಗೆ 2400 ರೂಪಾಯಿಗಳಿಗೆ ಸೀಮಿತವಾಗಿರಬೇಕು.

2. ಮುಂದಿನ ಹೊಸ ಆಜ್ಞೆ ಹೊರಡುವವರೆಗೆ, ಹಿಂದೂ ಧರ್ಮದ ಒಂದು ಅಥವಾ ಹೆಚ್ಚು ಶಾಸ್ತ್ರಗಳಲ್ಲಿ ಪರಿಣತಿ ಹೊಂದಿದ ಹಿರಿಯರಿಗೆ ವರ್ಷಕ್ಕೆ ಹನ್ನೆರಡು ಸಾವಿರ ರೂಪಾಯಿಗಳಿಗೆ ಮೀರದಂತೆ ಬಹುಮಾನಗಳನ್ನು ನೀಡಬೇಕು. ಕಾಲೇಜಿನ ಆಡಳಿತಕ್ಕೆ ಹಾಗೂ ಬಹುಮಾನ ವಿತರಣೆಯ ನಿಯಮ ನಿಬಂಧನೆಗಳನ್ನು ಕಾಲದಿಂದ ಕಾಲಕ್ಕೆ ಜಿಲ್ಲಾ ನ್ಯಾಯಾಲಯದ ಅನುಮೋದನೆಯ ಷರತ್ತಿಗೆ ಒಳಗಾಗಿ ಧರ್ಮಕರ್ತರ ಮಂಡಳಿಯು ರೂಪಿಸಿ ಕೊಡುತ್ತದೆ.

3. ಬೆಟ್ಟಕ್ಕೆ ಬರುವ ಅಸಂಖ್ಯಾತ ಭಕ್ತ ಯಾತ್ರಿಕರನ್ನು ನೋಡಿಕೊಳ್ಳುವ ಸಲುವಾಗಿ ಬೆಟ್ಟದ ಮೇಲೆ ಒಂದು ಆಸ್ಪತ್ರೆಯ ಏರ್ಪಾಡಾಗಬೇಕು.

4. ಆಲಯವನ್ನು ದರ್ಶಿಸಲು ಬರುವ ಎಲ್ಲ ರೀತಿಯ ಯಾತ್ರಿಕರ ಸೌಲಭ್ಯಕ್ಕಾಗಿ ಬೆಟ್ಟದ ಮೇಲೆ ಒಂದು ಸತ್ರವನ್ನು ನಿರ್ಮಾಣ ಮಾಡಿ, ಅದನ್ನು ನೋಡಿಕೊಳ್ಳಬೇಕು.

5. ಬೆಟ್ಟದ ಮೇಲೆ ಯಾತ್ರಿಕರಿಗಾಗಿ ಒಳ್ಳೆಯ ನೀರಿನ ಏರ್ಪಾಡು ಮಾಡಬೇಕು.

6. ಆಲಯಕ್ಕೆ ಬರಲು ದಾರಿಯನ್ನು ಸುಸಜ್ಜಿತಗೊಳಿಸುವುದಾಗಬೇಕು.

ವಿಚಾರಣಕರ್ತರಲ್ಲಿ ಕಡೆಯವರಾದ ಮಹಂತ ಪ್ರಯಾಗದಾಸರು ಮಹಂತರಲೆಲ್ಲ ಹೆಚ್ಚು ಜ್ಞಾನಿಗಳಾಗಿದ್ದರು. ಆಲಯಕ್ಕೆ ಅಗತ್ಯವಾದ ಹಲವಾರು ಶಾಶ್ವತವಾದ ಕೆಲಸಗಳನ್ನೀತ ನಿರ್ವಹಿಸಿದರು. ಬೆಟ್ಟಕ್ಕೆ ಬರುವ ಸೋಪಾನ ಮಾರ್ಗವನ್ನು ದುರಸ್ತಿಗೊಳಿಸಿದರು. ಗೋಪುರಗಳ ಜೀರ್ಣೋದ್ಧಾರ ಮಾಡಿಸಿದರು. ಯಾತ್ರಿಕರ ಅನುಕೂಲಕ್ಕೆ ತಕ್ಕಂತೆ ಸತ್ರಗಳನ್ನು, ಕೆರೆಗಳನ್ನು ನಿರ್ಮಿಸಿದರು. ಇಲ್ಲಿನ ಪರಿಶುಭ್ರತೆಯನ್ನು ಸಂರಕ್ಷಿಸಿ, ನೀರಿನ ಅನುಕೂಲ ಹೆಚ್ಚಿಸಿ ಆಲಯಕ್ಕೆ ಹೋಗುವ ಹಾದಿಯಲ್ಲಿನ ದೀಪಗಳ ಸೌಕರ್ಯ ಹೆಚ್ಚಿಸಿದರು. ಆಲಯದ ಮಧ್ಯ ಭಾಗದ ವಿಮಾನವನ್ನು ಚಿನ್ನದ ಮುಲಾಮಿನಿಂದ ಗಿಲೀಟು ಮಾಡಿಸಿದರು. ಆಲಯದ ಶಾಸನಗಳ ಸಂಪುಟಗಳ ಪ್ರಕಟನೆಗಾಗಿಯೂ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ವಿಚಾರಣ ಕರ್ತರ ಸ್ಥಾನಕ್ಕೆ ಮಹಂತರನ್ನು ಆಯ್ಕೆ ಮಾಡಲು ಮುಖ್ಯ ಕಾರಣವೆಂದರೆ ಅವರು ಯಾವುದೇ ಪಂಥಕ್ಕೂ ಸೇರದವರಾಗಿದ್ದರು. ಅವರ ವ್ಯಕ್ತಿಗತವಾದ ಕೊರತೆಗಳು ಏನೇ ಇದ್ದರೂ ಅವರೆಲ್ಲ ಆಲಯದ ಪರಂಪರೆಯ ಮರ್ಯಾದೆಯನ್ನು ಹಿಡಿದು, ಎಲ್ಲ ಹಿಂದೂಗಳಿಗೂ ಏಕರೀತಿಯ ಪ್ರಾಧಾನ್ಯ ನೀಡಿದರು. ಎಲ್ಲ ಸ್ತರಗಳಲ್ಲಿನ ಎಲ್ಲ ತೀರ್ಪುಗಳಲ್ಲಿಯೂ ಖಟ್ಲೆಗಳ ವೆಚ್ಚವನ್ನು ಆಲಯದ

ಲೆಕ್ಕಕ್ಕೇ ಸೇರಿಸಿರುವುದು ಕಂಡುಬರುತ್ತದೆ. ಈ ಅಂಶದಿಂದಲೇ ಸ್ಥಳೀಯ ವಿವಾದಗಳಿಂದ, ಸ್ವಂತದ ಹಿತಾಸಕ್ತಿಗಳಿಂದಾಗಿ ಆಲಯದ ಮೇಲೆ ಉಂಟಾದ ಹೊರೆಯನ್ನು ತಿಳಿಯಬಹುದು. ಆಲಯದಲ್ಲಿ ಅಪವ್ಯಯವಾದ ಸೊಮ್ಮಿಗಿಂತಲೂ, ದೂರುಗಳಲ್ಲಿನ ವೆಚ್ಚಗಳೇ ಹೆಚ್ಚು ಸಂದರ್ಭಗಳಲ್ಲಿ ಹಲವು ಪಟ್ಟು ಹೆಚ್ಚಾಗಿರುತ್ತಿದ್ದವು ಆದ್ದರಿಂದಾಗಿ ಆಲಯವು ಎರಡೂ ದಿಕ್ಕಿನಿಂದ ನಷ್ಟಕ್ಕೆ ಪಕ್ಕಾಗಿ ಸೊರಗಿತು.

## 8. ವಿಚಾರಣಕರ್ತರಾಗಿ ಆರುಮಂದಿ ಮಹಂತರು

1843ರಿಂದ 1933ರವರೆಗೆ ಮಹಂತರ ಆರು ತಲೆಮಾರು, ಶಿಷ್ಯಪ್ರಶಿಷ್ಯರ ಮೂಲಕ ತಿರುಮಲೆಯ ಆಲಯದ ವಿಚಾರಣ ಕರ್ತರಾಗಿ ಕೆಲಸನಿರ್ವಹಿಸಿದರು. ಆಲಯದ ಶಾಸನಗಳು ಇವರಲ್ಲಿನ ಮೂವರು ಸಲ್ಲಿಸಿದ ಹಲವು ಸೇವೆಗಳನ್ನು ದಾಖಲಿಸುತ್ತವೆ. ಶಕವರ್ಷ 1771ರಲ್ಲಿ (31-8-1849) ಸೌಮ್ಯಸಂವತ್ಸರದ ಒಂದು ಗುರುವಾರ ಮಾರ್ಕಂಡೇಯ, ಅಗ್ನಿ, ಯಮ, ಅಗಸ್ತ್ಯವಸಿಷ್ಠ, ವರುಣ, ವಾಯು, ಕುಬೇರ, ಗಾಲವ, ಸರಸ್ವತೀ ತೀರ್ಥಗಳನ್ನು (ಒಟ್ಟು 9) ಒಳಗೊಂಡು ಶ್ರೀನಿವಾಸತೀರ್ಥ, ವರಾಹತೀರ್ಥಗಳು ಸೇರಿದ್ದಂತಹ ಸ್ವಾಮಿ ಪುಷ್ಕರಿಣಿ ಯನ್ನು ಮೊದಲನೆಯ ಮಹಂತ ಸೇವಾದಾಸನು ಜೀರ್ಣೋದ್ಧಾರ ಗೊಳಿಸಿದನು. ನಂತರ ಈ ಪುಷ್ಕರಿಣಿಯಲ್ಲಿ ಶ್ರೀನಿವಾಸ ಪದ್ಮಾವತಿಯವರ ತೆಪ್ಪೋತ್ಸವವನ್ನು ಪುನಃ ಪ್ರಾರಂಭಿಸಿದ. ಸಂಸ್ಕೃತ ಗದ್ಯದಲ್ಲಿರುವ ಈ ಶಾಸನವು (350ತಿ.ತಿ.) ತೆಲುಗು ಲಿಪಿಯಲ್ಲಿದೆ. ಇದರದೇ ಮತ್ತೊಂದು ಪ್ರತಿಯು (351 ಜಿ.ಟಿ.) ದೇವನಾಗರಿ ಲಿಪಿಯಲ್ಲಿದೆ.

ನಂತರದ ವಿಚಾರಣ ಕರ್ತನಾದ ಸೇವಾದಾಸನ ಶಿಷ್ಯ ಮಹಂತ ಧರ್ಮದಾಸನು 10-2-1865 ರಲ್ಲಿ ಶಕವರ್ಷದ 1787 ರಕ್ತಾಕ್ಷಿ ಸಂವತ್ಸರದಲ್ಲಿ ಕಪಿಲತೀರ್ಥದ ಮೆಟ್ಟಿಲುಗಳನ್ನು ಜೀರ್ಣೋದ್ಧಾರ ಮಾಡಿಸಿ, ಅದರ ಪೂರ್ವ ಪಶ್ಚಿಮಗಳಲ್ಲಿ ಮಂಟಪಗಳನ್ನು ದುರಸ್ತಿ ಮಾಡಿಸಿದನು. ಈತನು ಬಹುಧಾನ್ಯ ಸಂವತ್ಸರದಲ್ಲಿ (11-9-1878) ಶ್ರೀ ವೆಂಕಟೇಶ್ವರಸ್ವಾಮಿಯ - ಪಡಿಕಾವಲಿಗೋಪುರ ವೆಂದು ಕರೆಯಲಾಗುವ ಮಹಾದ್ವಾರ ಗೋಪುರವನ್ನೂ ಅದರ ಪಕ್ಕದಲ್ಲಿ ಹಲವು ಮಂಡಪಗಳನ್ನು ನಿರ್ಮಾಣಮಾಡಿಸಿದನೆಂದೂ ತೆಲುಗು ಸೀಸಪದ್ಯವೊಂದು (382 ತಿ.ತಿ.) ತಿಳಿಸುತ್ತದೆ.

ಆರನೆಯ ಹಾಗೂ ಕಡೆಯ ವಿಚಾರಣಕರ್ತನಾದ ಮಹಂತ ಪ್ರಯಾಗದಾಸನ ಆಡಳಿತಕಾಲದಲ್ಲಿ ಈತನ ಸಹೋದರನಾದ ಶಿಷ್ಯ ರಾಮ ಲಕ್ಷ್ಮಣದಾಸನು ಶ್ರೀ ವೆಂಕಟೇಶ್ವರಸ್ವಾಮಿಯ ಆಲಯದ ವಿಮಾನದ ಮೇಲೆ ಚಿನ್ನದ ಕಲಶವನ್ನು ಕಲಿಯುಗದ 5010ನೇ ವರ್ಷದಲ್ಲಿ ಎಂದರೆ ಕೀಲಕ ನಾಮಸಂವತ್ಸರದಲ್ಲಿ - 30-9-1908 ರಲ್ಲಿ (242 ತಿ.ತಿ.) ಸ್ಥಾಪಿಸಿದನು.

## 9. ಗೋಪಾಲಾಚಾರ್ಲು ಅವರ ಕಥನ - ಮಹಂತ ಸೇವಾದಾಸ

ಮೊದಲನೆಯ ವಿಚಾರಣಕರ್ತ ಮಹಂತ ಸೇವಾದಾಸನು ಹಲವಾರು ಕೈಂಕರ್ಯಗಳನ್ನು ಸಲ್ಲಿಸಿದನೆಂದು ಗೋಪಾಲಾಚಾರ್ಲು ವರದಿ ಮಾಡಿದ್ದಾರೆ. ಅದರಂತೆ ಆತ ಸ್ವಾಮಿಗೆ ಚಿನ್ನದ ಪೀತಾಂಬರದ ಏರ್ಪಾಡು ಮಾಡಿದನು. ಒಂದು ಚಿನ್ನದ ಯಜ್ಞೋಪವೀತ ಮಾಡಿಸಿದ. ಚಿನ್ನದ ಪದ್ಮಪೀಠವನ್ನು ಮಾಡಿಸಿದ. ರತ್ನಗಳ ಕಿವಿಯೋಲೆಗಳನ್ನು ಮಾಡಿಸಿದ. ಸ್ವಾಮಿಯ ಕಿರೀಟದ ತಳಭಾಗಕ್ಕೆ ವಜ್ರಗಳ ಪಟ್ಟಿಯನ್ನು ಏರ್ಪಡಿಸಿದ. ಶ್ರೀ ವೆಂಕಟೇಶ್ವರ ಸ್ವಾಮಿಯ ಉತ್ಸವ ವಿಗ್ರಹಕ್ಕೆ ವೈರಮುಡಿಯೊಂದನ್ನು ಮಾಡಿಸಿದ. ಜೊತೆಗೆ ಮುತ್ತಿನ ಕಿರೀಟವನ್ನೂ ಬೆಳ್ಳಿಯ ಮುಲಾಮಿನ ಕವಚಗಳನ್ನೂ, (ಹಸ್ತಪಾದಗಳಿಗೆ) ಶ್ರೀಭೂದೇವಿಯರಿಗೆ ಎರಡು ರಾಜಮುಡಿಗಳನ್ನೂ ಮಾಡಿಸಿದನು. ಗರ್ಭಗೃಹದ ಕುಲಶೇಖರ ಪಡಿಯ ದಾಲಮಂದ್ರಕ್ಕೆ ಒಂದು ಜಾಲಂದ್ರದ ಬಾಗಿಲನ್ನು ತಯಾರಿಸಿದ. ಶಯನ ಸೆಜ್ಜೆಗೊಂದು ಬೆಳ್ಳಿಯ ಸರಪಳಿ ಮಾಡಿಸಿದ. ಉತ್ಸವ ಮೂರ್ತಿಗಳನ್ನು ವಜ್ರಕವಚಾದ್ಯಲಂಕಾರಗಳೊಂದಿಗೆ ವೈಕುಂಠ ಏಕಾದಶಿಯಂದು ವೈಕುಂಠ ಪ್ರದಕ್ಷಿಣೆಯಲ್ಲಿ ಇರಿಸಲು ಆರಂಭಿಸಿದರೂ, ನಂತರ ಸ್ವಲ್ಪ ಕಾಲದಲ್ಲಿಯೇ ಈ ಇಕ್ಕಟ್ಟಾದ ಪ್ರದೇಶದ ಯಾತ್ರಿಕರ ನೂಕು ನುಗ್ಗಲು ಉಂಟಾಗುವುದೆಂಬ ಭಯದಿಂದ ಇದನ್ನು ನಿಲ್ಲಿಸಿದನು. ಸ್ವಾಮಿ ಪುಷ್ಕರಿಣಿಯನ್ನು ಮರಮತ್ತು ಮಾಡಿಸಿ, ಪಾತ ಪುಷ್ಕರಿಣಿಯಿಂದ (ಪಶ್ಚಿಮ ದಿಕ್ಕಿನಲ್ಲಿರುವಂತಹ ಅಚ್ಯುತರಾಯ ಕೋನೇರು) (ನಂತರದ ಪಿ.ಪಿ. ಷೆಡ್ಸ್. ಈಗ ವರಾಹಸ್ವಾಮಿ ಆಲಯದ ಹಿಂಭಾಗದ

ಬಯಲು - 2015)) ಸುರಂಗ ಮಾರ್ಗದಲ್ಲಿ ನೀರು ಹರಿದು ಸ್ವಾಮಿ ಪುಷ್ಕರಿಣಿಗೆ ಬರುವಂತೆ ಕಾಲುವೆಯನ್ನು ಏರ್ಪಡಿಸಿದನು. ದೇವರ ಮೆರವಣಿಗೆಗಾಗಿ ಒಂದು ಬೆಳ್ಳಿಯ ತಿರುಚ್ಚಿಯನ್ನೂ, ದೊಡ್ಡಶೇಷವಾಹನ (ಚಿನ್ನದ ಗಿಲೀಟಿ ನಿಂದಾದದ್ದು) ವನ್ನೂ, ಹೊಸ ದೊಂದು ಬ್ರಹ್ಮರಥವನ್ನೂ, - ತಿರುಮಲೆಯ ದೊಡ್ಡ ರಥವನ್ನೂ - ನಿರ್ಮಿಸಿದ. ತಿರುಪತಿ ಗೋವಿಂದ ರಾಜಸ್ವಾಮಿ ಆಲಯದ ದೊಡ್ಡ ಗೋಪುರದ ಬಿದ್ದಂತಹ ದಕ್ಷಿಣಭಾಗವನ್ನು ರಿಪೇರಿ ಮಾಡಿಸಿದನು. ತಿರುಚಾನೂರುನಲ್ಲಿ ಅಮ್ಮನವರ ಆಲಯದಲ್ಲಿಮುಖ ಮಂಟಪವನ್ನು ನಿರ್ಮಿಸಿ, ಅಮ್ಮನವರಿಗೆ ಬೆಳ್ಳಿಯ ಕರಕವಚಗಳನ್ನು ಮಾಡಿಸಿದನು.

## 2. ಮಹಂತ ಧರ್ಮದಾಸ

1864 ರಲ್ಲಿ ಸೇವಾದಾಸನ ಶಿಷ್ಯನಾದ ಮಹಂತ ಧರ್ಮದಾಸನು ವಿಚಾರಣ ಕರ್ತನ ಅಧಿಕಾರವನ್ನು ಸ್ವೀಕರಿಸಿದ. ಸ್ವಾಮಿಗೆ ಈತನು ಹಲವು ಆಭರಣಗಳನ್ನು ಮಾಡಿಸಿದನು. ಚಿನ್ನದ ಕಿರೀಟ, ಕೈಗಳಿಗೆ ಪಾದಗಳಿಗೆ ಚಿನ್ನದ ಗಿಲೀಟಿನ ಕವಚಗಳು,ಚಿನ್ನದ ಕಾಸಿನ ಸರಗಳು ಎರಡು, ಆಲಯ ಭಂಡಾರದಲ್ಲಿ ಸಂರಕ್ಷಿಸಿಡಲ್ಪಟ್ಟ ರತ್ನಗಳನ್ನು ಹುದುಗಿಸಿದ ಚಿನ್ನದ ಮಕರಕಂಠಿ ಸರವನ್ನು ಎರಡು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮಾಡಿಸಿದ. ಕಿರೀಟದಲ್ಲಿ ಅಂಗೈ ಅಗಲದ ದೊಡ್ಡ ವಜ್ರ, ಕೆಂಪುಗಳನ್ನು ಹುದುಗಿಸಿದ ಚಿನ್ನದ ಪದಕವನ್ನು ತೊಡಿಸಿದ. ದಾಲಮಂದ್ರದ ಮರದ ಬಾಗಿಲುಗಳನ್ನು ಚಿನ್ನದ ಗಿಲೀಟು ಮಾಡಿದ ತಾಮ್ರದ ತಗಡಿನಿಂದ ಹೊದಿಸಿದ. ಇಲ್ಲಿ ದಶಾವ ತಾರದ ಚಿತ್ರಗಳನ್ನೂ ಉಂಟು ಮಾಡಿದನು. ಇದರಿಂದಾಗಿಯೇ ಇದು ಬಂಗಾರದ ಬಾಗಿಲು ಎಂದು ಹೆಸರಾಯಿತು. (ಇಲ್ಲಿ ಸ್ವಲ್ಪ ಅವ್ಯವಸ್ಥೆ ಆಗಿದೆ - ಕ್ರಿಶ 1831 ರಲ್ಲಿನ ಏಸಿಯಾಟಿಕ್ ಜರ್ನಲ್ ಲೇಖನದಲ್ಲಿ ಆಂಗ್ಲಜಿಲ್ಲಾಧಿಕಾರಿಯೇ ಬಂಗಾರದ ಬಾಗಿಲಿನ ಪ್ರಸ್ತಾವನೆ ಮಾಡಿದ್ದಾನೆ ಎಂಬುದದನ್ನು ಹಿಂದೆಯೇ ಪರಿಶೀಲಿಸಲಾಗಿದೆ. ಎಂದರೆ ಧರ್ಮದಾಸನು ಇದ್ದ ಬಂಗಾರದ ಬಾಗಿಲಿನ ಜೀರ್ಣೋದ್ಧಾರ ಮಾಡಿಸಿದ ಎಂದು ಹೇಳಬೇಕಾಗುತ್ತದೆಯೇ ಹೊರತು ಗೋಪಾಲಾಚಾರ್ಲು ಹೇಳುವಂತೆ ಇಲ್ಲಿಂದ ಮುಂದಕ್ಕೆ ಬಂಗಾರು ಬಾಗಿಲು ಎಂದು ಪ್ರಸಿದ್ಧವಾಯಿತು ಎಂದು ಹೇಳಲು ಬರುವುದಿಲ್ಲ - ಅನುವಾದಕ).

ಮಲೆಯಪ್ಪನ ಉತ್ಸವವಿಗ್ರಕ್ಕೆ ಇದ್ದಂತಹ ಕಲಿಕಿ ತುರಾಯಿಯನ್ನು ಪುನರ್ನವೀಕರಿಸಿದನು. (ಕಿರೀಟದ ಅಲಂಕರಣ) ಇದು ರಘೋಜಿ ಭೋನ್ಸ್ಲೆ ನೀಡಿದ ಆಭರಣಗಳಲ್ಲಿ ಒಂದು. ಮುಪ್ಪನಾರು ರಾಣಿಯು ನೀಡಿದ್ದಂತಹ, ಭಂಡಾರದಲ್ಲಿದ್ದ, ವಜ್ರ ಪಚ್ಚೆಗಳಿಂದ ಕೂಡಿದ ಚಿನ್ನದ ದಾರದಲ್ಲಿ ಪೋಣಿಸಿದ ಪದಕವನ್ನು ಬಿಡಿಸಿ, ಎರಡೂ ಕಡೆ ಗಂಧರ್ವರಿರುವಂತೆ ಚಿತ್ರಿಸಿ, ಹೊಸ ಮಕರತೋರಣವನ್ನು- ಮಾಡಿಸಿದನು. ಸರ್ವಭೂಪಾಲವಾಹನವನ್ನೂ, (ಚಿನ್ನದ ಗಿಲೀಟಿನದು) ಬೆಳ್ಳಿಯ ಕವಚದ ಸೂರ್ಯ ಪ್ರಭವಾಹನವನ್ನೂ, ದೊಡ್ಡ ಸಣ್ಣ ಗರುಡವಾಹನಗಳನ್ನೂ, ಹನುಮಂತವಾಹನ, ಹಯವಾಹನಗಳನ್ನೂ, ಕಲ್ಪವೃಕ್ಷವಾಹನಗಳನ್ನೂ ಮಾಡಿಸಿ ಆಧಾರಗಳಿಗೆ ಬೆಳ್ಳಿಯ ತಗಡಿನಿಂದ ಅಲಂಕಾರ ಮಾಡಿಸಿದನು.

ಆಲಯದ ಹೊರಗಿದ್ದ ಸಾವಿರ ಕಂಬದ ಮಂಟಪವನ್ನು ದುರಸ್ತಿಗೊಳಿಸಿ ಯಾತ್ರಿಕರು ಉಳಿದುಕೊಳ್ಳಲು ಕೊಠಡಿಗಳನ್ನುಂಟು ಮಾಡಿದನು. ಆಲಯದ ಒಳಗಿನ ಎರಡು ಗೋಪುರಗಳನ್ನು ಪ್ರಾಕಾರದ ಭಾಗಗಳನ್ನು ದರಸ್ತಿ ಮಾಡಿಸಿದ. ಕಲ್ಯಾಣ ಮಂಟಪದಲ್ಲಿನ ಯಾಗಶಾಲೆಯನ್ನು ದುರಸ್ತಿ ಮಾಡುವಾಗ ಐದು ಚಿನ್ನದ ಕಾಸಿನ ಕುಂಭಗಳು - ವೆಂಕಟಪತಿ, ಗಜಪತಿ, (ಒರಿಸ್ಸಾದ ರಾಜ) ಉಮಾ ಮಹೇಶ್ವರ ಮುದ್ರೆಯವು, ಗಂಡಬೇರುಂಡ ಮುದ್ರೆಯವು. ಸನರ ಕಾಸು, ಇಕ್ಕೇರಿ ವರಹಗಳು - ಇದ್ದಂತಹ ಒಟ್ಟು ಎರಡು ಲಕ್ಷ ರೂಪಾಯಿ ಮೌಲ್ಯದ ಧನರಾಶಿಯ ದೊರೆಯಿತೆಂದು ಹೇಳಲಾಗಿದೆ. ಇದನ್ನು ಜಿಲ್ಲಾ ನ್ಯಾಯಾಲಯದಲ್ಲಿ ಪ್ರಾಚೀನ ಧನಭಂಡಾರ ವೆಂದು ಕಾಪಿಡಲಾಯಿತು. ವೈಖಾನಸ ಆಗಮದ ಪ್ರಾಕಾರ ಇದರ ಪ್ರಭುತ್ವವನ್ನು ಪ್ರಮಾಣಪೂರ್ವಕವಾಗಿ ಸ್ಥಾಪಿಸಿದ ನಂತರ ಆಲಯಕ್ಕೆ ಹಿಂದಿರುಗಿಸಿ ನೀಡಲಾಯಿತು. ಇದನ್ನು ಆಲಯ ಭಂಡಾರಕ್ಕೆ ಸೇರಿಸಲಾಯಿತು.

ತಿರುಪತಿಯಲ್ಲಿ ಶ್ರೀ ಗೋವಿಂದರಾಜಸ್ವಾಮಿಯ ಗರ್ಭಗುಡಿಯನ್ನು ದುರಸ್ತಿ ಮಾಡಿಸಿ ಗೋವಿಂದರಾಜಸ್ವಾಮಿಯ ವಿಗ್ರಹ ವನ್ನು ಪುನಃ ಪ್ರತಿಷ್ಠಾಪಿಸಿದ. (ಜಟಾ ಬಂಧನಂ) ಗೋವಿಂದರಾಜನಿಗೂ ಆತನ ಉಭಯನಾಯಕಿಯರಿಗೂ ಚಿನ್ನದ ಕಿವಿಯೋಲೆ

ಗಳನ್ನೂ, ಚಿನ್ನದ ಕಿರೀಟಗಳನ್ನೂ ಮಾಡಿಸಿದನು. ಶಾಲನಾಚ್ಚಿಯಾರ್ ಗುಡಿಯಲ್ಲಿದ್ದ ಧಾನ್ಯದ ಉಗ್ರಾಣವನ್ನು ತೆಗೆಸಿದನು. ದ್ವಾರಪಾಲಕ ಮಂಟಪದಿಂದ ಭಾಷ್ಯಕಾರರ ಆಲಯದವರೆಗೆ ಮಂಟಪಗಳನ್ನು ನಿರ್ಮಿಸಿದನು. ಕೂರತ್ತಾಳ್ವಾರರಿಗೆ ಹೊಸ ಆಲಯವನ್ನು ನಿರ್ಮಿಸಿ ಅದರಲ್ಲಿ ಭೂದತ್ತಾಳ್ವಾರರನ್ನೂ ಸ್ಥಾಪಿಸಿದನು. ಉತ್ತರದ ಕಡೆಯಲ್ಲಿದ್ದ ಹೂವಿನ ತೋಟವನ್ನು ಮಂಟಪಗಳನ್ನಾಗಿ ಮಾಡಿ ಅಲ್ಲಿ ದೇವರ ವಾಹನಗಳನ್ನು ಇಡುವ ಏರ್ಪಾಡು ಮಾಡಿದನು.

ಗೋವಿಂದರಾಜಸ್ವಾಮಿ ಮತ್ತು ಆಂಡಾಳ್‌ರ ಉತ್ಸವಗಳಿಗಾಗಿ ಈತನು ದೊಡ್ಡ ಸಣ್ಣ ಶೇಷವಾಹನಗಳನ್ನೂ, ಗರುಡವಾಹನ ಹನುಮಂತ ವಾಹನ, ಹಂಸವಾಹನ, ಅಶ್ವವಾಹನ, ಭೋಗಿತೇರು (ಭೋಗಿ ಹಬ್ಬದಲ್ಲಿ ಬಳಸಲಿಕ್ಕೆ) ಗಳನ್ನೂ ಮಾಡಿಸಿದನು.

ತಿರುಪತಿಯ ಶ್ರೀರಾಮ ದೇವಸ್ಥಾನದ ಗರ್ಭಗೃಹದ ಜಟಾ ಬಂಧನವನ್ನು ಮಾಡಿಸಿ ಮೂರು ವಿಗ್ರಹಗಳನ್ನು ಪುನಃ ಸ್ಥಾಪನೆ ಮಾಡಿಸಿದನು. ಗಿಲೀಟು ಮಾಡಿದ ವರ್ತುಲಾಕಾರದ ಕವಚ ಹೊಂದಿಸಿ ಧ್ವಜಸ್ತಂಭವನ್ನು ಸ್ಥಾಪಿಸಿದನು. ಶ್ರೀರಾಮ ಲಕ್ಷ್ಮಣ ಸೀತೆಯರಿಗೆ ಹಾಗೂ ಸೇನಾಪತಿ ವಿಷ್ವಕ್ಸೇನರಿಗೆ ಬೆಳ್ಳಿಯ ಕಿರೀಟಗಳನ್ನು ಮಾಡಿಸಿದನು. ಜೊತೆಗೇ ರಾಮಲಕ್ಷ್ಮಣರಿಗೆ ಧನುರ್ಬಾಣಗಳನ್ನು ಮಾಡಿಸಿ ದನು. ಶ್ರೀರಾಮನಿಗೆ ದೊಡ್ಡ ಬೆಳ್ಳಿಯ ಬಾಣವನ್ನು ಮಾಡಿಸಿ ಅಲಂಕರಿಸಿದನು. ಮಂದಿರದ ಮಹಾದ್ವಾರದ ಒಳಗೆ ಮಂಟಪಗಳನ್ನು ಹೊರಗೆ ರಥದ ಪಕ್ಕದಲ್ಲಿ ಎರಡು ಮಂಟಪಗಳನ್ನು ನಿರ್ಮಿಸಿದನು.

ಆಳ್ವಾರ್ ತೀರ್ಥದಲ್ಲಿ (ಕಪಿಲತೀರ್ಥ) ಅದರ ಎರಡೂ ಬದಿಯ ಮಂಟಪಗಳನ್ನೂ, ವೇಣುಗೋಪಾಲಸ್ವಾಮಿ ಮಂಟಪ ವನ್ನೂ, ಲಕ್ಷ್ಮೀನಾರಾಯಣಸ್ವಾಮಿ ಮಂಟಪವನ್ನೂ, ಅಲ್ಲಿಯೇ ಪಶ್ಚಿಮದ ಗುಹೆಯಲ್ಲಿದ್ದ ಲಕ್ಷ್ಮೀನರಸಿಂಹಸ್ವಾಮಿಯ ಮಂಟಪವನ್ನೂ ದುರಸ್ತಿಗೊಳಿಸಿ ಬಿದ್ದು ಹೋಗಿದ್ದ ಕಪಿಲೇಶ್ವರ ಸ್ವಾಮಿಯ ಆಲಯಭಾಗಗಳನ್ನು ಜೀರ್ಣೋದ್ಧಾರಗೊಳಿಸಿದನು.

ತಿರುಚಾನೂರಿನಲ್ಲಿ ಈತನು ಪದ್ಮಾವತಿಅಮ್ಮನವರ ಆಲಯದ ಪ್ರಾಕಾರವನ್ನು ಎತ್ತರಿಸಿ, ಗೋಪುರ ನಿರ್ಮಿಸಿ, ಇಲ್ಲಿನ ಪುಷ್ಕ ರಿಣಿಯನ್ನು ಆಳಮಾಡಿಸಿ, ಶುಕ್ರವಾರದ ಉದ್ಯಾನವನದಲ್ಲಿ ಮಂಟಪ ನಿರ್ಮಾಣ ಮಾಡಿಸಿ, ಪದ್ಮಾವತೀ ಅಮ್ಮನವರ ಗರ್ಭಗುಡಿಯ ಜಟಾಬಂಧನವನ್ನು ಮಾಡಿಸಿದನು. ಆಕೆಯ ಹೆಣೆದ ಜಡೆಗಾಗಿ ರತ್ನಗಳನ್ನು ಹುದುಗಿಸಿದ ಒಂದು ಚಿನ್ನದ ಕಮಲವನ್ನೂ ಮತ್ತಿತರ ಆಭರಣಗಳನ್ನೂ ಮಾಡಿಸಿದನು. ಆಕೆಯ ಹಸ್ತಕ್ಕೆ ಚಿನ್ನದ ಕವಚ ತೊಡಿಸಿ ಚಿನ್ನದ ಕಮಲವನ್ನೂ ಮಾಡಿಸಿದನು. ಹೊಸ ತೇರು ಮಾಡಿಸಿದನು. ಆಲಯದಲ್ಲಿ ಪೋಟು (ಆಲಯದ ಒಳಗೆ - ಅಡಿಗೆ ಮನೆ ಇತ್ಯಾದಿ) ಮತ್ತು ಆದರ ಪಶ್ಚಿಮಕ್ಕೆ ವಾಹನ ಮಂಟಪಗಳನ್ನು ಏರ್ಪಡಿಸಿದನು. ಪದ್ಮಸರೋವರದ ಮುಂದೆ ಸೂರ್ಯನಾರಾಯಣಸ್ವಾಮಿಯ ಆಲಯವನ್ನು ನಿರ್ಮಿಸಿ ಪ್ರತಿಷ್ಠೆ ಮಾಡಿದನು. ( ಈ ಬಗ್ಗೆಯಾದ ಶಾಸನವು ಸೂರ್ಯನಾರಾಯಣ ಸ್ವಾಮಿ ದೇವಾಲಯದಲ್ಲಿ ಬಿಡಿಯಾಗಿ ಬೇರೆಯಾಗಿ 20 ನೇ ಶತಮಾನದ ಕಡೆಯವರೆಗೆ ಇಟ್ಟಿದ್ದರು - ಅನುವಾದಕ.)

### 3. ಮಹಂತ ಭಗವಾನ್ ದಾಸ

1880 ರಲ್ಲಿ ಮಹಂತ ಧರ್ಮದಾಸನ ನಂತರ ಮಹಂತ ಭಗವಾನ್‌ದಾಸನು ವಿಚಾರಣಕರ್ತನಾದ. ಈತ ತನ್ನ ಗುರುವ್ನೇ ದುರಸ್ತಿಕಾರ್ಯಕ್ರಮಗಳಲ್ಲಿ ಅನುಸರಿಸಿದನು.

ಈತನು ತಿರುಮಲೆಯಲ್ಲಿ ಧ್ವಜಸ್ತಂಭವನ್ನು ರಿಪೇರಿ ಮಾಡಿಸಿ, ಹಲವಾರು ಮಂಟಪಗಳನ್ನು ನಿರ್ಮಿಸಿದ. ತಿರುಪತಿಯ ಕಚೇರಿಯಿಂದ ತಿರುಮಲೆಯ ಆಲಯಕ್ಕೆ ದೂರವಾಣಿ (ಟೆಲಿಫೋನ್) ಸೌಕರ್ಯವನ್ನು ಏರ್ಪಡಿಸಿದ. ಕೊಳವೆನಲ್ಲಿಯಲ್ಲಿ ನೀರು ಬರುವಂತೆ ಮಾಡಿದ. ತಿರುಮಲೆಯ ಪುಷ್ಕರಿಣಿಯ ದಕ್ಷಿಣಕ್ಕೆ ಒಂದು ಭವನವನ್ನು ರಾಜ್ಯಪಾಲರೇ ಮತ್ತಿತರ ಹಿರಿಯರಿಗಾಗಿ ನಿರ್ಮಿಸಿದನು.

ತಿರುಪತಿಯಲ್ಲಿ ಈತನು ಒಂದು ಪುಷ್ಪ ತೋಟವನ್ನು ನಿರ್ಮಿಸಿದನು. ಪ್ರೌಢಶಾಲೆಯನ್ನು ಕಟ್ಟಿಸಿದನು. ಸಂಸ್ಕೃತ ಪಾಠಶಾಲೆ ಯನ್ನು ಸ್ಥಾಪಿಸಿ, ನೈವೇದ್ಯದ ಪ್ರಸಾದಗಳನ್ನು ಯಾತ್ರಿಕರಲ್ಲಿ ಹಂಚಲು ಏರ್ಪಾಡು ಮಾಡಿದನು.

ತನ್ನ ಗುರು ಧರ್ಮದಾಸನು ಈ ಮೊದಲೇ ನೀಡಿದ್ದ ಸಾಲದ ಜೊತೆಗೇ ಮತ್ತಷ್ಟು ಲಕ್ಷ ರೂಪಾಯಿಗಳ ಪ್ರಮಾಣದಲ್ಲಿ ಕಾರ್ವೇಟಿ ನಗರದ ರಾಜ (ಜಮೀಂದಾರ) ನಿಗೆ, ತಿರುತ್ತಣಿ ತಾಲ್ಲೂಕಿನ ವರಮಾನದ ಅಡಮಾನದ ಆಧಾರದಲ್ಲಿ ಸಾಲ ನೀಡಿದನು. ಇದರಂತೆಯೇ ಶ್ರೀ ಕಾಳಹಸ್ತಿಯ ರಾಜ (ಜಮೀಂದಾರ) ನಿಗೆ ಕಚ್ಚಿನಾಡು ತಾಲೂಕಿನ ಆಧಾರದಲ್ಲಿ ಸಾಲ ನೀಡಿದನು.

ತಿರುಪತಿಯಲ್ಲಿನ ಕೋದಂಡರಾಮಸ್ವಾಮಿ ಆಲಯದ ಉತ್ಸವಮೂರ್ತಿಗೆ ಚಿನ್ನದ ಮುಲಾಮು ಮಾಡಿಸಿದ ಮಕರ ತೋರಣ ವನ್ನು ಮಾಡಿಸಿದನು. ಎರಡು ಭುಜಬಂಧಗಳನ್ನು ವಜ್ರಗಳನ್ನು ಜೋಡಿಸಿದಂತೆ ಮಾಡಿಸಿದ. ಒಂದು ಕಲಿಕಿ ತುರಾಯಿ, ಒಂದು ರತ್ನಗಳ ಮಕರಕಂಠಿ, ರತ್ನಗಳನ್ನು ಹುದುಗಿಸಿದ ಎರಡು ಪದಕಗಳು, ಒಂದು ರತ್ನದ ಚೂಡಾಮಣಿ, ಚಿನ್ನದ ಎರಡು ಕಾಸಿನ ಸರಗಳನ್ನು ಮಾಡಿಸಿ ತಿರುಪತಿಯ ತಿರುಚಾನೂರಿನ ಆಲಯಗಳ ದೇವತೆಗಳ ಬಳಕೆಗೆಂದು ತಿರುಪತಿಯ ಖಜಾನೆಯಲ್ಲಿಟ್ಟನು.

ತಿರುಪತಿಯಲ್ಲಿ ದೇವರ ಮೆರವಣಿಗೆಗೆಂದು ಬೆಳ್ಳಿಯ ಕವಚದ ಸೂರ್ಯಪ್ರಭವಾಹನ ಹಾಗೂ ಸರ್ವ ಭೂಪಾಲವಾಹನ ಗಳನ್ನು ಮಾಡಿಸಿದನು.

ತಿರುಚಾನೂರಿನಲ್ಲಿ ಈತನು ಸುಂದರ ರಾಜಸ್ವಾಮಿಯ ಆಲಯದ ಧ್ವಜಸ್ತಂಭದ ಸುತ್ತಲೂ ಮಂಟಪವನ್ನು ನಿರ್ಮಿಸಿದನು. ತೆಪ್ಪಕೊಳದಲ್ಲಿ ನಿರಾಳಿ ಮಂಟಪವನ್ನು ನಿರ್ಮಿಸಿ ನಿಂತು ಹೋಗಿದ್ದ ತೆಪ್ಪೋತ್ಸವವನ್ನು ಆರಂಭಿಸಿದನು.

### 4. ಮಹಂತ ಮಹಾವೀರದಾಸ

ಮಹಂತ ಭಗವಾನ್‌ದಾಸನ ಶಿಷ್ಯನೂ ಉತ್ತರಾಧಿಕಾರಿಯೂ ಆದ ಮಹಂತ ಮಹಾವೀರದಾಸನು 1890 ರಿಂದ 1894 ರವರೆಗೆ ವಿಚಾರಣಕರ್ತನಾಗಿದ್ದರೂ ಹೇಳಿಕೊಳ್ಳು ವಂತಹ ಹೆಚ್ಚಿನದೇನನ್ನೂ ಮಾಡಲಿಲ್ಲ.

### 5. ಮಹಂತ ರಾಮಕಿಶೋರದಾಸ

ಮಹಾವೀರ ದಾಸನ ಉತ್ತರಾಧಿಕಾರಿಯಾಗಿ ಮಹಂತ ರಾಮಕಿಶೋರದಾಸನು 1895 ರಲ್ಲಿ ವಿಚಾರಣ ಕರ್ತನಾದನು. ವೆಂಕಟೇಶ್ವರಸ್ವಾಮಿ ಉತ್ಸವಮೂರ್ತಿಗೆ ರತ್ನಗಳ ಶಂಖಚಕ್ರಗಳನ್ನೂ, ಉತ್ಸವಮೂರ್ತಿಯ ಉಭಯನಾಯಕಿಯರಿಗೆ ಕರ ಕುಚ ಗಳನ್ನೂ, ಒಡ್ಯಾಣಗಳನ್ನೂ ಮಾಡಿಸಿದನು. ತಿರುಪತಿಯಲ್ಲಿನ ಗೋದಾ ದೇವಿಗೆ ಬಂಗಾರದ ಗೆಜ್ಜೆಗಳನ್ನು ಮಾಡಿಸಿದ.

ಮಹಂತ ರಾಮಕಿಶೋರದಾಸನು ಮೂವರು ಶಿಷ್ಯರನ್ನು ಹೊಂದಿದ್ದನು. ಅವರುಗಳೆಂದರೆ ಪ್ರಯಾಗದಾಸ, ರಾಮಲಕ್ಷ್ಮಣ ದಾಸ, ಮೂಲರಾಮಾನುಜದಾಸ. ಇವರಲ್ಲಿ ಪ್ರಯಾಗ ದಾಸನು 1900 ರಲ್ಲಿ ಮಹಂತನಾದನು.

### 6. ಮಹಂತ ಪ್ರಯಾಗದಾಸ

ಮಹಂತ ಪ್ರಯಾಗದಾಸನು ನಿರಾಳಿ ಮಂಟಪವನ್ನು ಪುನರುದ್ಧರಿಸಿದನು. ಅಲ್ಲಿಯೇ ಇದ್ದ ಜೀರ್ಣಶೀರ್ಣವಾದ ಶ್ರೀ ವರಾಹ ಸ್ವಾಮಿಯ ಆಲಯವನ್ನು ಜೀರ್ಣೋದ್ಧಾರಗೊಳಿಸಿದನು. ಆ ಹಿಂದೆ ತಿರುಮಲೆಯ ಆಲಯದ ಉತ್ತರದ ಕಡೆಯ ಆಯಿನಾ ಮಂಟಪ ದಲ್ಲಿ ಹನ್ನೆರಡು ವರ್ಷದಿಂದ ಇದ್ದಂತಹ ವರಾಹಸ್ವಾಮಿ ವಿಗ್ರಹವನ್ನು ಪುನರುದ್ಧಾರವಾದ ವರಾಹಸ್ವಾಮಿ ಗುಡಿಯಲ್ಲಿ ಪುನಃ ಪ್ರತಿಷ್ಠಾಪಿಸಿದನು. ಹೊಸದಾದ ಒಂದು ರಥವನ್ನು ಮಾಡಿಸಿದನು. ಹಂಸ ಗರುಡ ವಾಹನಗಳನ್ನು ಚಿನ್ನದ ಗಿಲೀಟು ಮಾಡಿಸಿ, ವೆಂಕಟೇಶ್ವರಸ್ವಾಮಿ ಆಲಯದ ಹಲವು ಮಂಟಪಗಳನ್ನು ಪುನರುದ್ಧರಣಗೊಳಿಸಿ, ಸಂಪಂಗಿ ಪ್ರದಕ್ಷಿಣದ ನೆಲಗಟ್ಟನ್ನು ಸಜ್ಜಿಪಡಿಸಿದನು. ಒಂದು ಬೆಳ್ಳಿಯ ತಿರುಚ್ಚಿಯನ್ನು ನಿರ್ಮಿಸಿದನು. ಯಾತ್ರಿಕರ ವಿಶ್ರಾಂತಿಗೆ ಸತ್ರವನ್ನು ನಿರ್ಮಿಸಿದನು. ಒಂದು ಚಿಕಿತ್ಸಾಲಯವನ್ನು ನಿರ್ಮಿಸಿದನು. ಆಲಯದ ದ್ವಾರಪಾಲಕ ವಿಗ್ರಹಗಳನ್ನು ಬೆಳ್ಳಿಯ ತೆರೆಯಿಂದ ಅಲಂಕರಿಸಿದನು. ಒಂದು ಕಿರಿಯ ಬಂಗಾರದ ಲಕ್ಷ್ಮೀ

ದೇವಿಯ ಪ್ರತಿಮೆಯನ್ನುಮಾಡಿಸಿ ಅದನ್ನು ವೆಂಕಟೇಶ್ವರಸ್ವಾಮಿಯ ಹೃದಯಕ್ಕೆ ಹತ್ತಿರವಾಗಿರುವಂತೆ ಹಾರದಲ್ಲಿ ಸೇರಿಸಿ ಅಲಂಕರಿಸಿದನು. ಬಂಗಾರದ ಶಂಖ ಚಕ್ರಗಳ ಕವಚಗಳನ್ನು ಮಾಡಿಸಿ ವೆಂಕಟೇಶ್ವರನ ಮೇಲೇರಿದ ಕೈಗಳಲ್ಲಿ ತೊಡಿಸಿದನು.ಶ್ರೀರಾಮ, ಸೀತೆ, ಲಕ್ಷ್ಮಣರ ವಿಗ್ರಹಗಳಿಗೆ ಚಿನ್ನದ ಕರಕವಚಗಳನ್ನು ಮಾಡಿಸಿದನು.

ತಿರುಪತಿಯಲ್ಲಿ ಸ್ಥಾವರವಾದ ಗೋವಿಂದರಾಜಸ್ವಾಮಿ ಹಾಗೂ ಉಭಯ ನಾಯಕಿಯರಿಗೆ ಬೆಳ್ಳಿಯ ತಗಡಿನ ಹೊದಿಕೆಯನ್ನು ಏರ್ಪಡಿಸಿದನು. ಸ್ವಾಮಿಯ ಉತ್ಸವ ವಿಗ್ರಹಕ್ಕೆ ಒಂದು ದೊಡ್ಡ ವಜ್ರದ ಪದಕವನ್ನೂ ಕಿವಿಯೋಲೆಗಳನ್ನು ಮಾಡಿಸಿದನು.

ತಿರುಪತಿಯ ರಾಮದೇವಳದಲ್ಲಿನ ರಾಮದೇವರ ಬೆಳ್ಳಿಯ ಕವಚವನ್ನು ಈತನು ಜೀರ್ಣೋದ್ಧಾರ ಮಾಡಿಸಿ, ಸೀತೆಗೂ ಲಕ್ಷ್ಮಣಸ್ವಾಮಿಗೂ ಹೊಸ ಕವಚಗಳನ್ನು ಮಾಡಿಸಿದನು. ಉತ್ಸವ ವಿಗ್ರಹಗಳಿಗೆ ಚಿನ್ನದ ಹಸ್ತಗಳನ್ನು, ಪಾದಗಳನ್ನು, ಛತ್ರ ಬಿಲ್ಲು ಬಾಣಗಳನ್ನು ಮಾಡಿಸಿದನು. ಗರ್ಭಗೃಹದ ಪ್ರದಕ್ಷಿಣಾಪಥದಿಂದ ಹೊರಬಾಗಿಲವರೆಗೆ ನೆಲಕ್ಕೆ ಕಲ್ಲಿನ ಹಾಸು ಹೊದಿಸಿದನು.

ತಿರುಚಾನೂರಿನಲ್ಲಿ ಪದ್ಮಾವತೀ ಅಮ್ಮನವರ ಗರ್ಭಗೃಹದ ಮೇಲೆ ಗೋಪುರವನ್ನು ನಿರ್ಮಿಸಿ ಅದರಮೇಲೆ ಚಿನ್ನದ ಗಿಲೀಟಿನ ಕಲಶವನ್ನು ಸ್ಥಾಪಿಸಿದನು. ಸುಂದರರಾಜಸ್ವಾಮಿ ವಿಗ್ರಹವನ್ನು ಸ್ಥಾಪಿಸಿ, ಅಮ್ಮನವರಿಗೆ ಚಿನ್ನದ ಕಿರೀಟವನ್ನು ಮಾಡಿಸಿದನು. ಇಲ್ಲಿಯೇ ಇದ್ದಂತಹ ವೆಂಕಟೇಶ್ವರಸ್ವಾಮಿಗೆ ಹೊಸದಾದ ಕರ್ಣಪತ್ರಗಳನ್ನು ಮಾಡಿಸಿದನು. ಆಲಯಗಳ ಒಳ ಹೊರ ಭಾಗಗಳಲ್ಲಿ ಕಲ್ಲಿನ ಹಾಸುಗಳನ್ನು ಹೊದಿಸಿ ನೆಲವನ್ನು ಸಪಾಟು ಮಾಡಿಸಿದನು. ಗಿಲೀಟು ಮಾಡಿದ ತಗಡು ಹೊದಿಸಿದ ಧ್ವಜಸ್ತಂಭವನ್ನು ಸ್ಥಾಪಿಸಿ, ಆಲಯದ ದಕ್ಷಿಣಕ್ಕೆ ಒಂದು ಸತ್ರವನ್ನು ಯಾತ್ರಿಕರಿಗಾಗಿ ನಿರ್ಮಿಸಿದನು. ತೆಪ್ಪೋತ್ಸವವನ್ನು ಆರಂಭಿಸಿದನು.

ಬೆಟ್ಟದ ಬುಡದಲ್ಲಿನ ಕಪಿಲ ತೀರ್ಥದಲ್ಲಿ ಕಪಿಲೇಶ್ವರಸ್ವಾಮಿಯನ್ನು ಪುನಃ ಪ್ರತಿಷ್ಠೆ ಮಾಡಿ ಕುಂಭಾಭಿಷೇಕ ಮಾಡಿಸಿದನು. ಉತ್ಸವ ಮೂರ್ತಿಗಳ ಅಲಂಕಾರಕ್ಕಾಗಿ ಚಿನ್ನದ ಕಿರಿಟ, ಹಸ್ತಕಮಲಗಳು, ಮತ್ತು ಹಲವು ಹೊಸ ಆಭರಣಗಳನ್ನು ಮಾಡಿಸಿದನು. ಶಿವನ ವಾಹನವಾದ ನಂದಿ ಪ್ರತಿಮೆಗೆ ಬೆಳ್ಳಿಯ ಕವಚ ಮಾಡಿಸಿದನು. ಕಪಿಲತೀರ್ಥದಲ್ಲಿ ತೆಪ್ಪೋತ್ಸವವನ್ನು ಆರಂಭಿಸಿದನು.

ತಿರುಪತಿಯಲ್ಲಿ ರೈಲ್ವೆ ನಿಲ್ದಾಣದ ಬಳಿ ಯಾತ್ರಿಕರಿಗಾಗಿ ದೊಡ್ಡದಾದ ಸತ್ರ ನಿರ್ಮಿಸಿದನು. ಈತನು ದೇವಸ್ಥಾನದ ಐದು ಲಕ್ಷ ರೂ.ಗಳನ್ನು ಬೊಂಬಾಯಿ ಅಭಿವೃದ್ಧಿ ಸಾಲದಲ್ಲಿ ತೊಡಗಿಸಿ ವಾರ್ಷಿಕ 54,500 ರೂಪಾಯಿ ಬಡ್ಡಿ ಬರುವಂತೆ ಮಾಡಿದನು. ಶ್ರೀ ವೆಂಕಟೇಶ್ವರಸ್ವಾಮಿಯ ಆಲಯದ ಉತ್ಸವ ಮೂರ್ತಿಗಳಲ್ಲಿ ಇಬ್ಬರು ನಾಚ್ಚಿಯಾರ್‌ಗಳಲ್ಲಿ ಒಬ್ಬರಿಗೆಂದು ಮದರಾಸಿನ ಪಿ. ಉರ್ ಮತ್ತು ಮಕ್ಕಳು ಕಂಪನಿಯು ತಯಾರಿಸಿದ ಕುಚ್ಚು ತೊಡಿಸಿದ ಜಡೆಯನ್ನು - 14000 ರೂಪಾಯಿ ವೆಚ್ಚದಲ್ಲಿ ಮಾಡಿಸಿದನು.ಇದು ಚಿನ್ನದ ಚೌಕ ಪದಕ ಹಾಗೂ ವಜ್ರಗಳು, ಮಾಣಿಕ್ಯಗಳಿಂದ ಕೂಡಿದ್ದು - ಆಲಯದ ಉಭಯ ನಾಯಕಿಯರಿಗೆ ಬಳಸಲಾಗುತ್ತಿದ್ದಿತು. ಇದನ್ನು ಗೋವಿಂದರಾಜಸ್ವಾಮಿಯ ಉತ್ಸವ ಮೂರ್ತಿಗಳಲ್ಲಿನ ನಾಯಕಿಯರಿಗೂ ಬಳಸಲಾಗುತ್ತಿದ್ದಿತು.

ಜನವರಿ - 1931 ರಲ್ಲಿ ಗದ್ವಾಲ ಸಂಸ್ಥಾನದ ರಾಣಿ ಶ್ರೀಆದಿಲಕ್ಷ್ಮಿದೇವಮ್ಮನವರು ಆಲಯಕ್ಕೆ ಆಗಮಿಸಿ ಸ್ವಾಮಿಯ ಸೇವೆ ಮಾಡಿದರು. ಆಗ ಆಕೆಯು 20,000 ರೂ. ಬೆಲೆಬಾಳುವ ತಮ್ಮಲ್ಲಿದ್ದ ಹಳೆಯ ಆಭರಣಗಳನ್ನು ಕಾಣಿಕೆಯಾಗಿ ನೀಡುತ್ತ ಶ್ರೀ ವೆಂಕಟೇಶ್ವರಸ್ವಾಮಿಯ ಉತ್ಸವ ವಿಗ್ರಹಕ್ಕೆ ಒಂದು ರತ್ನಕಿರೀಟವನ್ನು, ಅವುಗಳನ್ನು ಬಳಸಿ ಮಾಡಬೇಕೆಂದು ವಿಚಾರಣಕರ್ತನನ್ನು ಕೇಳಿದರು.

ಮದಾರಾಸಿನ ವಜ್ರ ಪಡಿ ವ್ಯಾಪಾರಿಯೋರ್ವರಿಗೆ ಕೆಲಸವನ್ನು ವಹಿಸಿಕೊಡಲಾಯಿತು. ಮದರಾಸಿನ ಗೋವಿಂದಪ್ಪನಾಯಕ ಬೀದಿಯಲ್ಲಿದ್ದಂತಹ ಚಿನಿವಾರರಾದ ಸಿ.ವಿ. ಷಣ್ಮುಖಾಚಾರಿ, ಹಾಗೂ ಮುರುಗೇಶಾ ಚಾರಿಯವರು ಕೆಲಸವನ್ನು ಮಾಡಿಕೊಟ್ಟರು.

ಅವರು ಕಿರೀಟದ ಕೆಲಸವನ್ನು 1931 ರ ಆಗಸ್ಟ್‌ನಲ್ಲಿ ಆರಂಭಿಸಿ ಸೆಪ್ಟೆಂಬರ್ 1932 ರಲ್ಲಿ ಪೂರ್ತಿ ಮಾಡಿದರು. ಪೂರ್ಣಗೊಂಡ ರತ್ನ ಕಿರೀಟವನ್ನು ಮಲೆಯಪ್ಪಸ್ವಾಮಿಗೆ (ಉತ್ಸವ ಮೂರ್ತಿ) 1932 ರ ಅಕ್ಟೋಬರ್ 1 ರಂದು ಅಲಂಕರಿಸಲಾಯಿತು. ಆ ವರ್ಷದ ಬ್ರಹ್ಮೋತ್ಸವದ ಮೊದಲನೆಯ ದಿನವು ಇದಾಗಿದ್ದಿತು. ರತ್ನಗಳಲ್ಲಿನ ನಾಲ್ಕು ಬಗೆಯವುಗಳಾದ - ಮಾಣಿಕ್ಯ, ಕೆಂಪು, ಪಚ್ಚೆ, ವಜ್ರಗಳನ್ನು ಇಲ್ಲಿ ಬಳಸಲಾಯಿತು. ಕಿರೀಟದಲ್ಲಿ ಹುದುಗಿಸಲಾದ ರತ್ನಗಳೆಂದರೆ - 681 ವಜ್ರಗಳು, 669 ಮಾಣಿಕ್ಯಗಳು, 125 ಪಚ್ಚೆ, 84 ಇಂದ್ರ ನೀಲಮಣಿಗಳು - ಒಟ್ಟು 1559 ಅಮೂಲ್ಯವಾದ ಕಲ್ಲುಗಳು. ಕಿರೀಟವು ಮೇಲಿನಿಂದ ಕೆಳನವರೆಗೆ 7.75 ಇಂಚುಗಳಿದ್ದು ಬುಡದಲ್ಲಿ 3. 25 ಇಂಚಿನ ವ್ಯಾಸವನ್ನು ಹೊಂದಿದೆ.

ಈ ಕಡೆಯ ವಿಚಾರಣಕರ್ತನು ಮೂಲಮೂರ್ತಿಗೆ ಒಂದು ನಾಲ್ಕು ರೀತಿಯ ರತ್ನಗಳ ಕಿರೀಟವನ್ನು ಮಾಡಿಸಬೇಕೆಂದು ಯೋಚಿಸಿ, ಅದಕ್ಕಾಗಿ ಒಂದು ಕರಡು ನಕ್ಷೆಯನ್ನೂ ಅಂದಾಜು ಪಟ್ಟಿಯನ್ನೂ ತಯಾರಿಸಿದನು. ಅದಕ್ಕಾಗಿ ಆಯ್ಕೆ ಮಾಡಿದ ವಜ್ರ ಗಳನ್ನೂ, ಮಾಣಿಕ್ಯ, ಮರಕತ, ನೀಲಮಣಿಗಳನ್ನು ಕೊಂಡು ಕೊಂಡ. ಇವುಗಳಲ್ಲಿ ಎರಡು ದೊಡ್ಡ ವಜ್ರಗಳು- ಒಂದು 11 ಕ್ಯಾರೆಟ್‌ನದೂ, ಇನ್ನೊಂದು 17 ಕ್ಯಾರೆಟ್ಟಿನದೂ - ಇದ್ದವು. ದೇವಸ್ಥಾನದ ಖಜಾನೆಯಲ್ಲಿದ್ದ, ಶ್ರೀಕೃಷ್ಣದೇವರಾಯನು ತನ್ನ ಇಬ್ಬರು ರಾಣಿಯರೊಡನೆ ತಿರುಮಲೆಗೆ 1503 - 2 - 10 ರಂದು ಬಂದಾಗ ವೆಂಕಟೇಶ್ವರಸ್ವಾಮಿಗೆ ನೀಡಿದ್ದು ಎನ್ನಲಾದಂತಹ ಹಳೆಯ ಚಿನ್ನದ ಕಿರೀಟದ ಚೌಕಟ್ಟನ್ನು ಹೊರತೆಗೆಸಿದ. ಚಿನಿವಾರರು ಹಳೆಯ ಕಿರೀಟವನ್ನು ಹೊಸ ಚಿನ್ನದೊಡನೆ ಕರಗಿಸಿ ಕಿರೀಟದ ಒಂದು ಆಕಾರವನ್ನು ತಯಾರಿಸಿ, ಹಲವು ರತ್ನಗಳನ್ನು ಹುದುಗಿಸಿದ ಪಟ್ಟಿಗಳನ್ನು ಅದಕ್ಕೆ ಬೆಸುಗೆ ಹಾಕುವಷ್ಟರಲ್ಲಿ ಯಾಕೋ ಏನೋ ಕೆಲಸವನ್ನು ನಿಲ್ಲಿಸಲಾಯಿತು. ಇಡೀ ಚಿನ್ನದ್ದ ಆಕಾರ, ವಜ್ರಗಳು- ಮೊದಲಾದ ಎಲ್ಲ ಮೂಲವಸ್ತುಗಳನ್ನು, ಆಗಿದ್ದ ಕೆಲಸದ ಭಾಗಗಳನ್ನೂ ಆಲಯದ ಖಜಾನೆಗೆ ಹಿಂದಿರುಗಿಸಲಾಯಿತು.

## 10. ಆಧುನಿಕ ಕಾಲದಲ್ಲಿ ತಿರುಮಲೆ (1980 ರವರೆಗಿನ ಬೆಳವಣಿಗೆ)

1932 ರಲ್ಲಿ ತಿ.ತಿ.ದೇ. ಕಾಯದೆಯನ್ನು ಆಲಯದ ಆಡಳಿತವನ್ನು ಸುಧಾರಿಸುವ ದೃಷ್ಟಿಯಿಂದ ಏರ್ಪಡಿಸಲಾಯಿತು. ಈ ಕಾಯದೆಯಿಂದಾಗಿ ತಿರುಮಲೆ ತಿರುಪತಿ ದೇವಸ್ಥಾನಗಳ ಆಡಳಿತವು ಏಳುಮಂದಿಯ ಒಂದು ಸಮಿತಿಗೆ ಹಸ್ತಾಂತರವಾಯಿತು. ಈ ಕಾಯದೆಯ ರೀತ್ಯಾ ಮದರಾಸು ಉಚ್ಚ ನ್ಯಾಯಾಲಯದ ಮೂಲಕ ಒಬ್ಬ ಕಮೀಷನರನ ನೇಮಕನಾಗಿ ಆತನು ಆಲಯದ ಕಾರ್ಯಭಾರದ ಮೇಲುಸ್ತುವಾರಿ ನೋಡುವಂತಾಯಿತು. ಈ ಕಾಯದೆಯನ್ನು ಸ್ವಾತಂತ್ರ್ಯಾನಂತರ 1951ರ ಮದರಾಸು ಹಿಂದೂ ಧಾರ್ಮಿಕ ಹಾಗೂ ದತ್ತಿ ಕಾಯದೆಯಿಂದ ಕೊನೆಗೊಳಿಸಲಾಯಿತು.

1933ನೇ ವರ್ಷದಲ್ಲಿ ಜಾರಿಗೆ ಬಂತದಂತಹ ತಿ.ತಿ.ದೇ. ಕಾಯದೆಯು ನಿಸ್ಸಂದೇಹವಾಗಿ ಆಲಯದ ಆಡಳಿತವನ್ನು ಕಮೀಷ ನರರ ಕೈಗೆ ಒಪ್ಪಿಸಿತು. ಕಾರಣ ಈ ಕಾಯದೆಯನ್ನು ರೂಪಿಸಿದವರ ದೃಷ್ಟಿಯೇ, ಆಲಯದ ನಿವ್ವಳ ಹಣವನ್ನು ಜಾತ್ಯತೀತ ಏಳ್ಗೆಯ ಕೆಲಸಗಳಿಗೆ ಬಳಸುವುದಾಗಿದ್ದು, ಈ ಮೂಲಧನದ ದಾನಗಳನ್ನು ನೀಡಿದವರ ಆಸೆಗಳು, ಈ ಹಣದ ಬಳಕೆಯ ಬಗ್ಗೆ ಅವರುಗಳ ಉದ್ದೇಶಗಳನ್ನು ತಿಳಿಯಲು ಪ್ರಯತ್ನ ಪಡದಿದ್ದುದೇ ಆಗಿದ್ದಿತು.

ಸ್ಥಳೀಯ ಮುಸಲ್ಮಾನ ಅರಸರಿಗೆ, ಯಾತ್ರಿಕರ ಬಗ್ಗೆ ಉದಾರತೆಯಿಂದ ವರ್ತಿಸಲು ನೀಡುವ ಪ್ರೋತ್ಸಾಹಕ ಧನದಂತೆ ಕೆಲಸ ಮಾಡುತ್ತಿದ್ದಿತು ಎಂಬುದೇ ಇಲ್ಲಿನ ಪೂಜೆ ಸೇವೆಗಳಲ್ಲಿನ ಶುಲ್ಕಗಳಿಗೆ ಮೂಲಕಾರಣ. ದುರದೃಷ್ಟದಿಂದಾಗಿ ಈ ಪದ್ಧತಿ ಶಾಶ್ವತವಾಗಿ ತಳವೂರಿ ಇಂದಿಗೂ ನಮ್ಮ ದೇಶದ ಆಲಯಗಳ ಆಡಳಿತದ ಕಾಯದೆಗಳಲ್ಲಿನ ಮೂಲ ಸೂತ್ರವಾಗಿ ನಡೆದಿದೆ.

ಕ್ರಿ.ಶ. 830 ರಿಂದ ಆರಂಭವಾಗಿ ಕಾಲದಿಂದ ಕಾಲಕ್ಕೆ ಶತಮಾನಗಳ ಅವಧಿಯಲ್ಲಿ ವಿವಿಧ ಧನರಾಶಿ, ಭೂಮಿಕಾಣಿಗಳ ಕಾಣಿಕೆಗಳ ವಿವರಗಳನ್ನು ತಿಳಿದು ಅವುಗಳ ಉದ್ದೇಶಗಳನ್ನು ಶಾಶ್ವತವಾಗಿ ನಡೆಸಿಕೊಂಡು ಮುಂದು ವರೆಯಬೇಕಾದದ್ದು ಒಂದು ಪವಿತ್ರವಾದ ನೈತಿಕ ಕರ್ತವ್ಯವಾಗಿದ್ದು, ನಮ್ಮ ಪೂರ್ವಿಕರಿಗೆ ನಾವು ಸಲ್ಲಿಸಬೇಕಾದ ಮರ್ಯಾದೆಯ ಋಣವಾಗಿದೆ.

ಈ ಕಾಯದೆಯ ಪ್ರಕಾರ ಆಡಳಿತವನ್ನು ಏಳು ಮಂದಿಯ ಸಮಿತಿಯ ಹಾಗೂ ಒಬ್ಬ ಸಂಬಳಗಾರನಾದ ಕಮೀಷನರನಿಗೆ ಒಪ್ಪಿಸಲಾಗಿದ್ದಿತು. ಮೊದಲಬಾರಿಗೆ ಆಲಯದ ಆಡಳಿತ ನಿರ್ವಹಣೆಗೆ ಯಾವುದೇ ಅರ್ಹತೆಯನ್ನು ನಿರ್ದೇಶಿಸದೆ, ಕಾರ್ಯಾಂಗವು ಯಾರನ್ನು ಬೇಕಾದರೂ ಸಮಿತಿಯ ಸದಸ್ಯರನ್ನಾಗಿ ನೇಮಕಮಾಡಿ, ಅಥವಾ ಕಮೀಷನರ್ ಆಗಿ ನೇಮಕ ಮಾಡಬಹುದಿತ್ತು

ಕಾಯದೆಯ 28ನೇ ವಿಭಾಗದನ್ವಯವಾಗಿ ನೇಮಕವಾದ ಸಲಹಾ ಸಮಿತಿಯು ಜಿಯಂಗಾರರ, ಅರ್ಚಕರ, ಆಚಾರ್ಯ ಪುರುಷ ಹಾಗೂ ಆಲಯದ ಇನ್ನಿತರ ಮಿರಾಸಿದಾರರ ಪ್ರತಿನಿಧಿಗಳನ್ನು ಒಳಗೊಂಡಿದ್ದಿತು. ಇದರ ಕೆಲಸ ಆಡಳಿತ ಸಮಿತಿಗೆ ಆಡಳಿತ ವಿಷಯದಲ್ಲಿ ಸಲಹೆಗಳನ್ನು ನೀಡುವುದಾಗಿದ್ದಿತು. ದೇವಸ್ಥಾನದ ಜಮೀನುಗಳ ವ್ಯವಹಾರಗಳ ಬಗ್ಗೆ ಸಲಹೆಗಳನ್ನೀಡಲು ಆಲಯ ಭೂಮಿಗಳ ರೈತರ ಪ್ರತಿನಿಧಿಗಳ ಒಂದು ಪ್ರತ್ಯೇಕ ಸಲಹಾ ಸಮಿತಿಯಿದ್ದಿತು. ಈ ಎರಡನೆಯ ಸಲಹಾ ಸಮಿತಿಯ ನಾಮ ಮಾತ್ರವೇ ಆಗಿದ್ದಿತು ಕಾರಣ ಎಲ್ಲ ವ್ಯವಸಾಯ ಭೂಮಿಗಳೂ ವ್ಯವಸಾಯ ಜಮೀನು ಶಾಸನದ ಪ್ರಕಾರ ನಿಯಂತ್ರಿತವಾಗಿ ಕಂದಾಯ ತೆರಿಗೆಗಳೆಲ್ಲ ಅದೇ ಶಾಸನದ ಪ್ರಕಾರ ಸಂದಾಯವಾಗುವಂತಿದ್ದಿತು. ಮೊದಲನೆಯ ಸಲಹಾ ಸಮಿತಿ, ಆಲಯದ ಸೇವೆ ಸಲ್ಲಿಸುತ್ತಿದ್ದ, ಜಿಯಂಗಾರರು, ಅರ್ಚಕರು, ಆಚಾರ್ಯ ಪುರುಷರು- ಮೊದಲಾದವರಿಂದ ಕೂಡಿದ್ದು ಇವರೇ ಆಡಳಿತ ಸಮಿತಿಯ ನಿಜವಾದ ಆಡಳಿತ ಮಾಡುತ್ತಿತ್ತು.

ಈ ಕಾಯದೆಯನ್ನು 1951 ರ ಮದರಾಸು ಹಿಂದೂ ದಾನದತ್ತಿ ಕಾಯದೆಯ 80ರಿಂದ 85 ನೇ ಕಲಮುಗಳು ತಿ.ತಿ. ದೇವಸ್ಥಾನ ಗಳ ಆಡಳಿತಗಳಿಗೆಂದೇ ಪ್ರತ್ಯೇಕವಾಗಿ ವಿನ್ಯಾಸವಾದವು. 80 ನೇ ಕಲಮಿನ ಪ್ರಕಾರ ರಾಜ್ಯಸರ್ಕಾರವು ಐದು ಮಂದಿಯ ಒಂದು ಧರ್ಮಕರ್ತರ ಮಂಡಳಿಯನ್ನು ನಿಯಮಿಸುವುದು. ಈ ಮಂಡಳಿಯ ಸದಸ್ಯರು ಐದು ವರ್ಷಕಾಲ ಅಧಿಕಾರದಲ್ಲಿತಕ್ಕದ್ದು ಕಾಯದೆ ಯನ್ವಯವಾಗಿ ಸರ್ಕಾರವು ಒಬ್ಬ ಆಡಳಿತಾಧಿಕಾರಿ ( ಕಾರ್ಯನಿರ್ವಹಣಾಧಿಕಾರಿ) ಯನ್ನು ನೇಮಕ ಮಾಡುವಂತೆ ಇದ್ದಿತು. ಈತನು ಆಲಯದ ವ್ಯವಹಾರಗಳನ್ನು ಆಸ್ತಿಗಳನ್ನು ನೋಡಿಕೊಳ್ಳುವ ಅಧಿಕಾರ ಹೊಂದಿರುವನು. 2) ಈತನು ಆಲಯದ ಎಲ್ಲಾ ಆಭರಣಗಳ ದಾಖಲೆಗಳನ್ನೂ ನೋಡಿಕೊಂಡು ಎಲ್ಲ ಆಸ್ತಿಯ, ಧನ, ಭೂಮಿ, ಮತ್ತಿತರ ಆಲಯದ ಎಲ್ಲ ಆದಾಯಗಳನ್ನು ನೋಡಿಕೊಳ್ಳತಕ್ಕದ್ದು.

3) ಆದಾಯದ ಸೂಕ್ತ ಸಂಗ್ರಹದ ಏರ್ಪಾಡುಗಳನ್ನು ಮಾಡಿ, ವೆಚ್ಚಗಳ ಸೂಕ್ತ ನಿರ್ವಹಣೆಯ ಜವಾಬ್ದಾರಿಯ ಈತನದು. ಮುಂಗಡ ಪತ್ರದಲ್ಲಿ, ಪ್ರಾವಧಾನ ಮಾಡಿಲ್ಲದ ಅಂಶಗಳಲ್ಲಿಯೂ ಅಂತಹ ವೆಚ್ಚ, ಕೆಲಸಗಳು ಆಲಯದ ಆಸ್ತಿಗಳ ಪರಿರಕ್ಷಣೆಗೆ ಅತ್ಯಗತ್ಯ ಎಂದು ತೋರಿದಾಗ, ಯಾತ್ರಿಕರ ದೃಷ್ಟಿಯಿಂದ ಮುಖ್ಯ ಎಂದು ತೋರಿದಾಗ ಅಂತಹ ತತ್‌ಕ್ಷಣದ ಕೆಲಸಗಳನ್ನು, ವೆಚ್ಚವನ್ನು ಮಾಡಲು ಅಧಿಕಾರ ಹೊಂದಿದ್ದನು. ಇಂತಹ ತುರ್ತು ಕ್ರಮಗಳ ವೆಚ್ಚಗಳನ್ನು ಆಲಯದ ನಿಧಿಗಳಿಂದ ನೀಡುವಂತಹ ನಿರ್ದೇಶನ ಕೊಡುವ ಅಧಿಕಾರವಿದ್ದಿತು. ಆದರೆ 4 ನೇ ಕಲಮಿನನ್ವಯ ಕಾರ್ಯನಿರ್ವಹಣಾಧಿಕಾರಿಯು ಇಂತಹ ತುರ್ತು ಕ್ರಮಗಳನ್ನು ಕೈಗೊಂಡಾಗ ಅವುಗಳ ವರದಿಯನ್ನು ಧರ್ಮಕರ್ತರ ಮಂಡಳಿಗೆ ತಿಳಿಸಬೇಕಾಗಿದ್ದಿತು.

ಹಿಂದೂ ದಾನದತ್ತಿಕಾಯದೆಯನ್ವಯವಾಗಿ ಕಮೀಷನರ್ ಹಲವು ಅಧಿಕಾರಗಳನ್ನು ಹೊಂದಿದ್ದನು. ಉದಾಹರಣೆಗೆ ವಿವಾದ ಗಳನ್ನು ಬಗೆಹರಿಸುವ ಅಧಿಕಾರ , ದಾನಗಳನ್ನು ವಿನಿಯೋಗಿಸುವ ಅಧಿಕಾರ.

85ನೇ ಕಲಮು ಆಲಯದ ನಿಧಿಗಳನ್ನು ಯಾವ ಯಾವ ಕಾರ್ಯಗಳಲ್ಲಿ ವೆಚ್ಚಮಾಡಬಹುದು ಎಂಬ ವಿವರಗಳನ್ನು ಪಟ್ಟಿಮಾಡುತ್ತದೆ. ಅದನ್ನು ಇಲ್ಲಿ ಯಥಾವತ್ ನೀಡಲಾಗಿದೆ-

1. ದೇವಸ್ಥಾನವನ್ನು ನೋಡಿಕೊಂಡು ಅದರ ವ್ಯವಹಾರಗಳನ್ನು ಆಡಳಿತವನ್ನು ನಡೆಸುವಿಕೆ.

2. ಷೆಡ್ಯೂಲು - 3 ರಲ್ಲಿ ಹೇಳಲಾದಂತೆ ಶೈಕ್ಷಣಿಕ ಸಂಸ್ಥೆಗಳನ್ನು ನಡೆಸುವಿಕೆ.

3. ತಿರುಮಲೆಗೆ ಬರತಕ್ಕಂತಹ ಯಾತ್ರಿಕರಿಗೆ ಆರೋಗ್ಯದ ಪರಿಸರವನ್ನುಂಟುಮಾಡುವ ಆಸ್ಪತ್ರೆಗಳ ನಿರ್ಮಾಣ, ಅವುಗಳ ಆಡಳಿತ.

4. ಎಲ್ಲಾ ವರ್ಗದ ಯಾತ್ರಿಕರಿಗೂ ತಕ್ಕಂತಹ ತಾತ್ಕಾಲಿಕ ವಸತಿಯನ್ನುಂಟುಮಾಡಲು ಸತ್ರಗಳ ನಿರ್ಮಾಣ, ಆಡಳಿತ.

5. ಯಾತ್ರಿಕರಿಗೆ ನೀರಿನ ಸೌಲಭ್ಯ ಹಾಗೂ ಪರಿಶುಭ್ರತೆಯನ್ನುಂಟುಮಾಡುವಿಕೆ.

6. ಆಲಯದ ಹಸು, ಕುದುರೆ, ಆನೆ, ಮೊದಲಾದವನ್ನು ನೋಡಿಕೊಳ್ಳಲು ಒಂದು ಪಶುವೈದ್ಯಶಾಲೆಯ ನಿರ್ಮಾಣ.

7. ಸರ್ಕಾರದ ಅನುಮೋದನೆಯೊಡನೆ ಆಲಯದ ಕೆಲಸಗಳಿಗಾಗಿ ಯಾವುದೇ ಭೂಮಿಯ ಕೊಂಡುಕೊಳ್ಳುವಿಕೆ.

8. ಯಾತ್ರಿಕರಿಗೆ ಅನುಕೂಲ ಮಾಡಿಕೊಡಲು ತಕ್ಕ ದೀಪಗಳ ವ್ಯವಸ್ಥೆ ಹಾಗೂ ರಸ್ತೆಗಳ ನಿರ್ಮಾಣ.

9. ಆಲಯದಲ್ಲಿ ಕೆಲಸ ಮಾಡಲು ಅರ್ಚಕರಿಗೆ ತರಬೇತಿ ನೀಡುವಿಕೆ. ಅಧ್ಯಾಪಕ ವೇದಪಾರಾಯಣದಾರರಿಗೆ ತರಬೇತಿ.

10.ಸರ್ಕಾರದ ಅನುಮೋದನೆಯಿಂದ ಆಲಯದ ಅನುಕೂಲಕ್ಕಾಗಿ ಯಾವುದೇ ಕೆಲಸವನ್ನು ಕೈಗೆತ್ತಿಕೊಂಡು ಮಾಡುವಿಕೆ.

1951ರ ಶಾಸನದಲ್ಲಿ ಉಂಟುಮಾಡಲಾದ ಪ್ರಾವಧಾನಗಳನ್ನು ಹೊಸ ಶಾಸನದಿಂದ ಬದಲಾಯಿಸಲಾಯಿತು. (1966 ರ 17 ನೇ ನಂಬರಿನ ಕಾಯದೆ) ಇಲ್ಲಿನ 14 ನೇ ಅಧ್ಯಾಯವು ಆಲಯದ ಆಡಳಿತಕ್ಕೆ ತಕ್ಕ ಅವಕಾಶವನ್ನು ಕಲ್ಪಿಸಿತು.

ಮೇಲಿನ ಶಾಸನದ 85 ರಿಂದ 91 ನೆಯ ನೆಯ ಕಲಮುಗಳು ತಿ.ತಿ. ದೇವಸ್ಥಾನಗಳ ಆಡಳಿತವನ್ನು ನಿರ್ದೇಶಿಸುವ ಸೂತ್ರಗಳನ್ನು ನಿರೂಪಿಸಿತು. 86 ನೇ ಕಲಮು ದೇವಸ್ಥಾನದ ಆಡಳಿತವನ್ನು 11 ಮಂದಿಗೆ ಕಡಿಮೆಯಾಗದಂತೆ ಸರ್ಕಾರವು ನೇಮಕ ಮಾಡಿದ ಧರ್ಮದರ್ಶಿಗಳ ಮಂಡಳಿಯು ಗಮನಿಸಬೇಕೆಂದು ವಿಧಿಸಿತು. ಇವರಲ್ಲಿ ಮೂವರು ಶಾಸನ ಸಭಾ ಸದಸ್ಯರಾಗಿರಬೇಕು ಒಬ್ಬರು ಅನುಸೂಚಿತ ಜಾತಿಯವರಾಗಿದ್ದು ಒಬ್ಬ ಮಹಿಳೆ ಇರಬೇಕು. (86 ನೇ ಕಲಮಿನ ಹಲವು ವಿನಾಯತಿಗಳನ್ನು ಒಳಗೊಂಡಂತೆ ) ಧರ್ಮದರ್ಶಿಗಳ ಮಂಡಳಿಯ ಸದಸ್ಯರು ಮೂರು ವರ್ಷಗಳ ಕಾಲವಧಿಯ ಅಧಿಕಾರ ಪಡೆಯತಕ್ಕದ್ದು. 87 ನೇ ಕಲಮುಸರ್ಕಾರಕ್ಕೆ ಆಲಯಕ್ಕೆಂದು ಒಬ್ಬ ಕಾರ್ಯನಿರ್ವಹಣಾಧಿಕಾರಿಯನ್ನೂ ನಿಯಮಿಸುವ ನಿರ್ದೇಶವನ್ನೂ, ಅಗತ್ಯಬಿದ್ದರೆ ಒಬ್ಬ ಉಪ ಕಾರ್ಯನಿರ್ವಹಣಾಧಿಕಾರಿಯನ್ನೂ ನಿಯಮಿಸುವ ಅಧಿಕಾರ ನೀಡುತ್ತದೆ 87 (2) ನೇ ಕಲಮಿನನ್ವಯ ಕಾರ್ಯ ನಿರ್ವಹಣಾಧಿ ಕಾರಿಯು ತನ್ನ ಕೆಲ ಅಧಿಕಾರವನ್ನು ಉಪಕಾರ್ಯ ನಿರ್ವಹಣಾಧಿಕಾರಿಗೆ ಒಪ್ಪಿಸಬಹುದು. ಹಂಚಬಹುದು. 88 ಹಾಗೂ 89 ನೇ ಕಲಮುಗಳು ಧರ್ಮದರ್ಶಿಗಳ ಹಾಗೂ ಕಾರ್ಯನಿರ್ವಹಣಾಧಿಕಾರಿಗಳ ಕರ್ತವ್ಯ ಭಾರಗಳ, ಅಧಿಕಾರದ ವಿಭಾಗೀಕರಣ ಮುಂತಾದವು. 91ನೇ ಕಲಮು ಆಲಯದ ನಿಧಿಯನ್ನು ಬಳಸಬಹುದಾದ ಕ್ಷೇತ್ರಗಳನ್ನು ವಿವರಿಸುತ್ತದೆ. ಅವು ಹೀಗೆ 91. ಅ) ತಿರುಮಲತಿರುಪತಿ ದೇವಸ್ಥಾನಗಳ ನಿಧಿಗಳನ್ನು ಕೆಳಕಂಡ ಎಲ್ಲ ಕ್ಷೇತ್ರಗಳಲ್ಲಿ ಅಥವಾ ಯಾವುದೇ ಒಂದು ಕ್ಷೇತ್ರದಲ್ಲಿ ಅಥವಾ ಈ ಕಾಯದೆಯ ಇತರ ಯಾವುದೇ ಕಲಮಿನಲ್ಲಿ ಅನುಮತಿಸಲ್ಪಟ್ಟ ಕೆಲಸಗಳಲ್ಲಿ ಬಳಸಬಹುದು.

1. ಹಿಂದೂ ಧಾರ್ಮಿಕತತ್ತ್ವ ಗಳ ಪ್ರಚಾರ. ತಿರುಮಲೆ - ತಿರುಪತಿ ದೇವಸ್ಥಾನಗಳ ಎಲ್ಲ ಆಲಯಗಳ ಆಡಳಿತ ಹಾಗೂ ತಿ.ತಿ.ದೇ. ಶಾಲೆಗಳು.ಮತ್ತಿತರ ಸಂಸ್ಥೆಗಳೂ ಸೇರುತ್ತದೆ.

ಆಂಧ್ರ ಪ್ರದೇಶದ ಸರ್ಕಾರಕ್ಕೆ ರಾಜ್ಯದ ಎರಡೂ ಶಾಸನ ಸಭೆಗಳಲ್ಲಿ ಅಂಗೀಕೃತವಾದ ನಿರ್ಣಯದನ್ವಯ ಆಂಧ್ರಪ್ರದೇಶದ ಗೆಜೆಟ್‌ನ ಪ್ರಕಟನೆಯ ನಂತರ ಈ ಶಾಸನದ ಯಾವುದೇ ಭಾಗವನ್ನು ಬದಲಾಯಿಸುವ, ತಿದ್ದುವ, ಬಿಡುವ ಅಧಿಕಾರವನ್ನು ನೀಡಲಾಗಿದೆ ಎಂಬುದರ ಹೊರತು ಪಡಿಸಿ ಮೇಲಿನ ಅಂಶ ಜಾರಿಗೆ ಬರುವುದು.

2. ಆಲಯಕ್ಕೆ ಬರುವ ಯಾತ್ರಿಕರ ಆರೋಗ್ಯ ಪರಿರಕ್ಷಿಸುವ ಸಲುವಾಗಿ ಆಸ್ಪತ್ರೆಗಳ ನಿರ್ಮಾಣ, ನಿರ್ವಹಣೆ.

3. ಯಾತ್ರಿಕರ ಸೌಲಭ್ಯಕ್ಕಾಗಿ ಸತ್ರಗಳ ವಿಶ್ರಾಂತಿಗೃಹಗಳ ನಿರ್ಮಾಣ.

4. ಯಾತ್ರಿಕರಿಗಾಗಿ ನೀರಿನ ಆಯೋಜನೆ ಮತ್ತಿತರ ಪೌರ ಪರಿಶುಭ್ರತೆಯ ಕಾರ್ಯಕ್ರಮಗಳು.

5. ತಿ.ತಿ.ದೇ ಗಳ ಪಶುಸಂಪತ್ತಿನ ನಿರ್ವಹಣೆಗಾಗಿ ಪಶುವೈದ್ಯಶಾಲೆ, ಡೈರಿ ಫಾರಂ ನಿರ್ಮಾಣ ನಿರ್ವಹಣೆ.

6. ಸರಕಾರದ ಆಮೋದದೊಡನೆ ತಿ.ತಿ.ದೇ. ಗಳ ಯಾವುದೇ ಉದ್ದೇಶಕಾಗಿಯಾದರೂ ಹೊಸ ಜಮೀನುಗಳ ಕೊಳ್ಳುವಿಕೆ.

7. ಯಾತ್ರಿಕ ಭಕ್ತರ ಅನುಕೂಲಕ್ಕಾಗಿ ರಸ್ತೆಗಳ ನಿರ್ಮಾಣ, ಸಂಪರ್ಕ ಸಾಧನಗಳ ಅಭಿವೃದ್ದಿ, ದೀಪಗಳ ಏರ್ಪಾಡು.

8. ತಿರುಮಲ ತಿರುಪತಿ ದೇವಸ್ಥಾನಗಳಲ್ಲಿ ಪೂಜಾದಿ ಧಾರ್ಮಿಕ ಕ್ರಿಯೆಗಳನ್ನು ನಡೆಸುವ ಅರ್ಚಕರಿಗೆ ತರಬೇತಿ ನೀಡುವಿಕೆ ಅಧ್ಯಾಪಕರಿಗೆ ವೇದಪಾರಾಯಣದಾರರಿಗೆ ತರಬೇತಿ ನೀಡುವಿಕೆ.

9. ಸಂಸ್ಕೃತವನ್ನೂ ಸೇರಿದಂತೆ ಭಾರತೀಯ ಭಾಷೆಗಳ ಶಿಕ್ಷಣ ನೀಡುವಿಕೆ.

10.ತಿರುಮಲ ತಿರುಪತಿ ದೇವಸ್ಥಾನಗಳು ಕೈಗೆತ್ತಿಕೊಳ್ಳುವ ಸರ್ಕಾರದಿಂದ ಅಂಗೀಕೃತವಾದ ಮತ್ತೆ ಯಾವುದಾದರೂ ಹೊಸ.

11. ತಿರುಮಲ ತಿರುಪತಿ ದೇವಸ್ಥಾನಗಳಿಗೆ ಸಂಬಂಧಪಟ್ಟ ಸರ್ಕಾರದಿಂದ ಅನುಮೋದನೆ ಪಡೆದ ಧಾರ್ಮಿಕ, ಸಾಮಾಜಿಕ ಶೈಕ್ಷಣಿಕ ವಿಷಯಗಳು.

12. ಶ್ರೀ ವೆಂಕಟೇಶ್ವರ ವಿಶ್ವ ವಿದ್ಯಾಲಯಕ್ಕೆಂದು ತಿರುಮಲ ತಿರುಪತಿ ದೇವಸ್ಥಾನಗಳು ವರ್ಷಕ್ಕೆ ಕನಿಷ್ಠ ಎರಡೂವರೆಲಕ್ಷ ರೂಪಾಯಿಗಳಿಗಿಂತ ಕಡಿಮೆಯಾಗದಂತೆ ಧನವನ್ನು ತೆಗೆದಿಡಬೇಕು.

ಹಿಂದೂ ಧರ್ಮ ಪ್ರತಿಷ್ಠಾನವೆಂಬ ಒಂದು ಸಂಸ್ಥೆಯನ್ನುಂಟು ಮಾಡುತ್ತ ಇದರ ಕೆಲಸಕಾರ್ಯಗಳಿಗಾಗಿ ವರ್ಷಕ್ಕೆ ಒಂದು ಲಕ್ಷ ರೂಪಾಯಿಗಳಿಗೆ ಕಡಮೆಯಾಗದಂತೆ ಧನ ನೀಡಬೇಕು. ಈ ಸಂಸ್ಥೆಯ ಧ್ಯೇಯೋದ್ದೇಶಗಳು ಕೆಳಕಂಡಂತೆ ಇರಬೇಕು.

1. ಹಿಂದೂ ಧರ್ಮದ ಏಳಿಗೆ ಪ್ರಚಾರಕ್ಕಾಗಿ ಧರ್ಮ ಪ್ರಚಾರಕರನ್ನು ಧರ್ಮಾಚಾರ್ಯರನ್ನು ನಿಯಮಿಸಿ ತರಬೇತಿ ನೀಡುವುದು.

2. ಹಿಂದೂ ಧರ್ಮಕ್ಕೆ ಸಂಬಂಧಿಸಿದ ಸಾಹಿತ್ಯದ ನಿರ್ಮಾಣ ಪ್ರಕಟನೆಗಳು.

3. ಹಿಂದೂ ಧರ್ಮದ ತತ್ವಗಳನ್ನು ಮೌಲ್ಯಗಳನ್ನು ತಿಳಿಹೇಳಲು ತಕ್ಕ ವೇದಿಕೆಯಾದ ಶಿಕ್ಷಣ ಶಿಬಿರಗಳು.

4. ಮೇಲೆ ಹೇಳಿದ ಉದ್ದೇಶಗಳಿಗೆ ಸಂಬಂಧ ಪಟ್ಟ ಇತರ ವಿಷಯಗಳು.

ಸರ್ಕಾರವು ಈ ಬಗ್ಗೆ ಉಂಟುಮಾಡುವ ನಿಯಮ ನಿಬಂಧನೆಗಳಿಗೆ ಒಳಪಟ್ಟಂತೆ ತಿರುಮಲೆ ತಿರುಪತಿ ದೇವಸ್ಥಾನಗಳ ಧರ್ಮದರ್ಶಿ ಮಂಡಳಿಯು ಈ ಪ್ರತಿಷ್ಠಾನಕ್ಕೆ ತಕ್ಕ ನಿಯಮಾವಳಿಯನ್ನು ರೂಪಿಸಿಬಹುದು.

ಈ ಕಾಯದೆಯ ಎಲ್ಲ ಪ್ರಾವಧಾನಗಳನ್ನೂ ಬಳಸಿಕೊಂಡು ದೇವಸ್ಥಾನದ ಮಂಡಳಿಯು ಆಲಯದ ಬಗ್ಗೆ ಹಲವಾರು ಅಭಿವೃದ್ಧಿಕಾರ್ಯಗಳನ್ನು ಸಾಧಿಸಿದೆ.

1966ನೇ ವರ್ಷದ ಶಾಸನವು ತಿರುಮಲ ತಿರುಪತಿ ದೇವಸ್ಥಾನಗಳನ್ನು ರಾಜ್ಯದ ಇತರ ಆಲಯಗಳಂತೆಯೇ ನೋಡುವಂತಾದರೂ, ಮುಜರಾಯಿ ಇಲಾಖೆಯ ಸುಪರ್ದಿನಲ್ಲಿ ಪೂರ್ಣವಾಗಿ ನಡೆಯುವಂತೆ ಆಯಿತು. ಕಡಿಮೆ ಯಾತ್ರಿಕರು ಸಂದರ್ಶಿಸುವ ಸಣ್ಣ ಆಲಯಗಳ ಬಗ್ಗೆ ಇಂತಹ ವ್ಯವಸ್ಥೆ ಸೂಕ್ತವೇ ಆಗಿದ್ದರೂ, ಜಗತ್ತಿನ ಹಿರಿಯ ಆಲಯಗಳಲ್ಲಿ ಒಂದಾದ ತಿ.ತಿ. ದೇವಸ್ಥಾನಗಳನ್ನು ಸಣ್ಣ ಕಿರಿಯ ಆಲಯಗಳಿಗೆ ಹೋಲಿಸಿ ಸಮಾನಗೊಳಿಸುವುದು ಒಂದು ರೀತಿಯ ಹಿನ್ನಡೆಯಾಗುತ್ತದೆ. ಇದನ್ನು ಅರಿತುಕೊಂಡ ಸರ್ಕಾರ 1979 ರಲ್ಲಿ ಹೊಸ ತಿ.ತಿ.ದೇ. ಕಾಯದೆಯನ್ನು ಉಂಟುಮಾಡಿತು. ಇದರಂತೆ ಆಲಯದ ಆಡಳಿತವು ಒಂದು ಸರ್ಕಾರದ ನೇಮಕಾತಿ ಪಡೆದ ಸಣ್ಣ ಆಡಳಿತ ನಿರ್ವಾಹಕಸಮಿತಿಯಲ್ಲಿ ಕೇಂದ್ರೀಕೃತವಾಯಿತು. ಈ ಆಡಳಿತ ನಿರ್ವಾಹಕ ಮಂಡಳಿಯಲ್ಲಿ ಸರ್ಕಾರದಿಂದ ನಾಮಕರಣ ಹೊಂದಿದ ಒಬ್ಬ ಅಧ್ಯಕ್ಷರು ಹಾಗೂ ಮತ್ತಿಬ್ಬರು ಸದಸ್ಯರನ್ನು ಹೊಂದಿರುವಂತೆ ಆಯಿತು. ದೇವಾದಾಯ ಇಲಾಖೆಯ ಕಮೀಷನರ್ ಹಾಗೂ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಗಳನ್ನು ಪದ ನಿಮಿತ್ತ ಸದಸ್ಯರನ್ನಾಗಿ ಮಾಡಲಾಯಿತು. ಜಿಲ್ಲಾಧಿಕಾರಿಯ ಸ್ಥಾಯಿಗೆ ಕಡಿಮೆಯಿಲ್ಲದಂತಹ ಅಧಿಕಾರವನ್ನು ಕಾರ್ಯನಿರ್ವಹಣಾಧಿಕಾರಿಗೆ ನೀಡಲಾಯಿತು. ಆಲಯದ ಹಣಕಾಸಿನ ವಿಷಯದಲ್ಲಿ ಸಲಹೆ ಸೂಚನೆಗಳನ್ನು ಈ ಕಾಯದೆಯ ಅನುಸಾರವಾಗಿ ಒಬ್ಬ ಆರ್ಥಿಕ ಸಲಹಾದಾರರ ಪದವಿಯ ಏರ್ಪಾಡು ಆಯಿತು. ಹಿಂದೂ ಧರ್ಮ ಪ್ರತಿಷ್ಠಾನವನ್ನು ಒಂದು ಹೊಸ ಹೆಸರಿನಿಂದ ಮುಂದುವರಿಸಬೇಕೆಂದು ಈ ಕಾಯದೆಯು ಅವಕಾಶ ನೀಡಿತು. ವೈದಿಕ ಶಿಕ್ಷಣ, ಸಂಶೋಧನೆ ಮೊದಲಾದವುಗಳನ್ನು ಮುಂದುವರೆಸಲು ಶ್ರೀವೆಂಕಟೇಶ್ವರ ಶಿಷ್ಟಾಚಾರ ಸಂಸ್ಥೆಯನ್ನು ಸ್ಥಾಪಿಸುವ ಅವಕಾಶವನ್ನು ನೀಡಿತು. ಹಿಂದೂ ಧರ್ಮ ಹಾಗೂ ಸಂಸ್ಕೃತಿಯ ಪ್ರಚಾರ, ಪರಿರಕ್ಷಣೆಗಳಲ್ಲಿ ಯಾವ ತರಹದಲ್ಲಿ ಆಲಯಧನವನ್ನು ವೆಚ್ಚಮಾಡಬೇಕೆಂಬುದನ್ನು ತಿಳಿಸಿತು. ಈ ಕಾಯದೆಯ ಫಲಸ್ವರೂಪವಾಗಿ ಉಂಟಾದ ಸಿದ್ದಿಗಳನ್ನೂ ಯಾತ್ರಿಕ ಪ್ರಯೋಜನಗಳ ದೃಷ್ಟ್ಯಾ ಲೆಕ್ಕ ಹಾಕಲು ಇನ್ನೂ ಕಾಲ ಸಾಕಷ್ಟು ಕಳೆದಿಲ್ಲವೆನ್ನಬೇಕು.

**ಅ. ಈಚಿನ ಸಾಧನೆಗಳು**

ತಿ.ತಿ.ದೇ.ಗಳ ಈಚಿನ ಸಾಧನೆಗಳು : ಹಿಂದಿನ ಎರಡು ಮೂರು ದಶಕಗಳಲ್ಲಿನ ಮುಖ್ಯ ಸಾಧನೆಗಳನ್ನು ಗುರುತಿಸಸಾಧ್ಯವಿದೆ.

(ಈ ಪುಸ್ತಕವನ್ನು ಡಾ॥ ರಮೇಶನ್ ಅವರು 1979 - 80ರಲ್ಲಿ ಬರೆದರು. - ಅನುವಾದಕ)

ಸಮಾಚಾರ ಕೇಂದ್ರಗಳು : ತಿರುಪತಿ ತಿರುಮಲೆಗಳಲ್ಲಿಯೇ ಅಲ್ಲದೆ ದೇಶದ ನಾನಾ ನಗರಗಳಲ್ಲಿಯೂ ಸತ್ರಗಳಸಮಾಚಾರ ಕೇಂದ್ರಗಳುಂಟಾಗಿದೆ. ತಿರುಮಲೆಗೆ ಆಗಮಿಸಲು ಅಪೇಕ್ಷಿಸುವ ಯಾತ್ರಿಕರಿಗೆ ಸೂಕ್ತ ಸಮಾಚಾರಗಳನ್ನು ತಿಳಿಸಿಕೊಡಲುಸಾಕಷ್ಟು ವಿಚಾರಣಾ ಕೇಂದ್ರಗಳುಂಟಾಗಿವೆ.

**ವಸತಿ :**

1934 ರ ಮೊದಲು ತಿರುಪತಿ ಹಾಗೂ ತಿರುಮಲೆಗಳಲ್ಲಿ ಯಾತ್ರಿಕರು ತಂಗಲು ಅತಿ ಕಡಿಮೆಯಾದ ವಸತಿ ಸೌಲಭ್ಯವಿದ್ದಿತು. ಈ ಸಮಸ್ಯೆಯನ್ನು ಸಮರ್ಥವಾಗಿ ಎದುರಿಸಿದ ತಿ.ತಿ.ದೇ.ಗಳ ವತಿಯಿಂದ ಅನೇಕ ಕಾಟೇಜುಗಳು, ಅತಿಥಿ ಗೃಹಗಳು, ಸತ್ರಗಳು ನಿರ್ಮಾಣವಾಗಿವೆ. ಆದರೂ ಹೆಚ್ಚಿನ ವಸತಿಯ ಅಗತ್ಯವಿದೆ.

**ನೀರಿನ ಸರಬರಾಜು ಹಾಗೂ ಪಾರಿಶುದ್ಧ್ಯ :**

ಪರಿಸರ ಪಾರಿಶುದ್ಧ್ಯವನ್ನು ಉತ್ತಮ ಪಡಿಸಿ ನೀರಿನ ಸರಬರಾಜು ವ್ಯವಸ್ಥೆ ಮಾಡ ಲಾಗಿದೆ. ತಿರುಮಲೆಗೆ ಪಾಪನಾಶದಿಂದ ನೀರನ್ನು ಪಂಪ್ ಮಾಡಲಾಗುತ್ತಿದೆ. ಮಲೇರಿಯಾ ರೋಗವನ್ನು ನಿರ್ಮೂಲಗೊಳಿಸಲಾಗಿದ್ದು, ಒಳಚರಂಡಿ ವ್ಯವಸ್ಥೆಮಾಡಲಾಗಿದೆ.

**ತಿರುಮಲೆಯ ಸಾರಿಗೆ :**

1944 ರಲ್ಲಿ ತಿರುಮಲೆಗೆ ಘಟ್ಟದ ರಸ್ತೆಯನ್ನು ನಿರ್ಮಿಸುವವರೆಗೆ ಯಾತ್ರಿಕರು ತಿರುಮಲೆಗೆ ಸೋಪಾನ ಮಾರ್ಗವನ್ನುಹಿಡಿ ನಡೆದೇ ಹೋಗಬೇಕಾಗಿದ್ದಿತು. ಘಟ್ಟದ ರಸ್ತೆಯಾದ ಮೇಲೆ ಹದಿನಾಲ್ಕು ಮೈಲಿ ದೂರದ ತಿರುಮಲೆಗೆ ವಾಹನ ಪ್ರಯಾಣದಿಂದಲೂ ಸೇರಬಹುದಾಯಿತು. ಮೊದಲಿಗೆ ಎರಡು ಬಸ್‌ಗಳ ಸಾರಿಗೆಯಿಂದ ಆರಂಭವಾದ ಯಾತ್ರಿಕ ಸಾರಿಗೆ ಯಲ್ಲೀಗ ಹಲವಾರು ಬಸ್‌ಗಳಿವೆ. ಅಗತ್ಯಕ್ಕೆ ತಕ್ಕಂತೆ ಹೆಚ್ಚಿನ ಬಸ್‌ಗಳನ್ನು ಒದಗಿಸಲಾಗುತ್ತದೆ. ಈಗ ಘಟ್ಟ ಸಾರಿಗೆಯ ವ್ಯವಸ್ಥೆಯನ್ನು ಆಂಧ್ರಪ್ರದೇಶರಸ್ತೆಸಾರಿಗೆ ಸಂಸ್ಥೆ ನೋಡಿಕೊಳ್ಳುತ್ತಿದೆ.

**ಶಿಕ್ಷಣ :**

ದೇವಸ್ಥಾನಗಳ ವತಿಯಿಂದ ಹಲವಾರು ಶಿಕ್ಷಣ ಸಂಸ್ಥೆಗಳು ನಡೆಯುತ್ತಿವೆ. ಒಂದು ಓರಿಯಂಟಲ್ ಕಾಲೇಜು, ಮೂರು ಪ್ರೌಢಶಾಲೆಗಳು, ಮೂರು ಶಾಲೆಗಳು, ಒಂದು ವೇದಪಾಠಶಾಲೆ, ನಾದಸ್ವರ ಶಾಲೆ, ಶಿಲ್ಪಕಲಾಶಾಲೆ, ದೆಹಲಿಯಲ್ಲಿ ಒಂದುಕಾಲೇಜು ಮೊದಲಾದವನ್ನು ನಡೆಸುತ್ತಿದೆ. ಜೊತೆಗೇ ತಿರುಪತಿಯಲ್ಲಿನ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯಕ್ಕೆ ವಾರ್ಷಿಕ 7 ಲಕ್ಷರೂಪಾಯಿಗಳ ಅನುದಾನ ನೀಡುತ್ತದೆ. ಒಂದು ಗೋಶಾಲೆಯನ್ನು ಸ್ಥಾಪಿಸಿದೆ. ಇಲ್ಲಿ 300 ಸಿಂಧಿ ಹಸುಗಳಿವೆ. ಡೈರಿ ಫಾರಂ ಇದೆ.

ತಿ.ತಿ.ದೇ. ಮುದ್ರಣಾಲಯ ಹಾಗೂ ಪ್ರಕಟನವಿಭಾಗ : ತಿ.ತಿ.ದೇ. ಮುದ್ರಣಾಲಯದಲ್ಲಿ ಧಾರ್ಮಿಕ ಸಾಹಿತ್ಯವನ್ನು ಮುದ್ರಿಸ ಲಾಗುತ್ತಿದೆ. ತಿರುಮಲೆಯಲ್ಲಿ ಹರಿಕಥೆ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ. ಮಾಸಪತ್ರಿಕೆ ಸಪ್ತಗಿಯನ್ನು ಕನ್ನಡ, ಹಿಂದಿ, ತಮಿಳು, ತೆಲುಗು, ಆಂಗ್ಲ- ಭಾಷೆಗಳಲ್ಲಿ ಪ್ರಕಟಿಸಲಾಗುತ್ತಿದೆ.(2014 ರಲ್ಲಿ ಸಪ್ತಗಿರಿ ಸಂಸ್ಕೃತದಲ್ಲಿಯೂ ಆರಂಭವಾಗಿದೆ - ಅನುವಾದಕ)

**ಇತರ ಸೌಲಭ್ಯಗಳು :**

ಇಡೀ ಬೆಟ್ಟದ ಹಾದಿಯನ್ನು ದುರಸ್ತಿಗೊಳಿಸಿ ವಿದ್ಯುದ್ದೀಪಗಳನ್ನು ಅಳವಡಿಸಲಾಗಿದೆ. ಯಾತ್ರಿಕರಿಗೆ ಉಚಿತ ವಸತಿ, ಉಚಿತ ವೈದ್ಯಕೀಯ ಸೌಲಭ್ಯಗಳುಂಟು.

**ಸಂಶೋಧನೆ :**

1938 ರಲ್ಲಿ ಪ್ರಾಚ್ಯ ಸಂಶೋಧನ ಶಾಲೆಯು ಸಂಶೋಧನೆಯನ್ನು ತೆಲುಗು, ತಮಿಳು ಸಂಸ್ಕೃತಗಳಲ್ಲಿ ಆರಂಭಿಸಿ ಹಲವಾರು ಅಪರೂಪದ ಹಸ್ತಪ್ರತಿಗಳನ್ನು ಶೇಖರಿಸಿತು. ಈಗ ಈ ಸಂಸ್ಥೆಯನ್ನು ವೆಂಕಟೇಶ್ವರ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲಾಗಿದೆ.

**ಮಾನವ ಸೇವಾ ಸಂಸ್ಥೆಗಳು :**

1939ರಲ್ಲಿ ಕುಷ್ಠರೋಗಿಗಳ ಪುನರಾವಾಸ ಕೇಂದ್ರವನ್ನು ಆರಂಭಿಸಲಾಯಿತು. 1943ರಲ್ಲಿ ಒಂದು ಅನಾಥ ಶರಣಾಲಯವನ್ನು ಸ್ಥಾಪಿಸಲಾಯಿತು.

**ರೂಯ ಆಸ್ಪತ್ರೆ :**

ಬೊಂಬಾಯಿನ ದಾನಿ ರಾಧಾಕೃಷ್ಣ ರೂಯಾ ಅವರು ಐದು ಲಕ್ಷ ರೂಪಾಯಿ ದಾನ ನೀಡಿದಾಗ ತಿ.ತಿ.ದೇ. ಹತ್ತು ಲಕ್ಷ ರೂಪಾಯಿ ಸೇರಿಸಿ ಇತರ ವಂತಿಗೆಗಳ ಸಹಾಯದಿಂದ ತಿರುಪತಿಯಲ್ಲಿ 300 ಹಾಸಿಗೆಗಳ ಒಂದು ಆಸ್ಪತ್ರೆಯನ್ನು ತನ್ನ ಒಡೆತನದ ಭೂಮಿಯನ್ನು ದಾನ ಮಾಡಿ ನಿರ್ಮಿಸಿದೆ. ಈ ಆಸ್ಪತ್ರೆಗೆ ಕಾಲದಿಂದ ಕಾಲಕ್ಕೆ ಹೊಸ ಹೊಸ ಯಂತ್ರೋಪಕರಣಗಳನ್ನು ತಿ.ತಿ.ದೇ. ತೆಗದುಕೊಡುತ್ತಿದೆ.

## ಆಲಯದ ಅಭಿವೃದ್ಧಿ:

1934 - 35ರಲ್ಲಿ ಶ್ರೀವೆಂಕಟೇಶ್ವರಸ್ವಾಮಿ ಆಲಯದ ಬಲಿಪೀಠ ಹಾಗೂ ತಿರುಪತಿಯ ಗೋವಿಂದರಾಜ ಸ್ವಾಮಿಯ ಆಲಯದ ಧ್ವಜ ಸ್ತಂಭವನ್ನು ಚಿನ್ನದ ಮುಲಾಮೀಕರಿಸಲಾಯಿತು. ಸ್ವಾಮಿಯ ಕಿರೀಟದಲ್ಲಿ ಅಲಂಕರಿಸಲು ರತ್ನಗಳ ಒಂದು ಪುಷ್ಪವನ್ನು ತಯಾರಿಸಲಾಯಿತು. 1941 ರಲ್ಲಿ ತಿರುಮಲೆಯ ಸ್ವಾಮಿಗೆ ಹೊಸದಾದ ಮಹಾರಥವನ್ನು ಮಾಡಿಸಲಾಯಿತು. 1945 ರಲ್ಲಿ ಕಿರೀಟವೊಂದನ್ನು ಹತ್ತು ಲಕ್ಷರೂಪಾಯಿಗಳ ವೆಚ್ಚದಲ್ಲಿ ಮಾಡಿಸಲಾಯಿತು. ಈಚೆಗೆ ಸ್ವಾಮಿಯ ಶಂಖ ಚಕ್ರಗಳಿಗೂ ಅಮೂಲ್ಯ ರತ್ನಗಳನ್ನು ಸೇರಿಸಲಾಯಿತು.

1950 ರಿಂದೀಚೆಗೆ ಜೀರ್ಣೋದ್ಧಾರದ ಕೆಲಸಗಳನ್ನು ಎತ್ತಿಕೊಳ್ಳಲಾಯಿತು. ಗೋವಿಂದರಾಜಸ್ವಾಮಿ ಆಲಯದ ಒಳಗೋಪುರ, ರಾಮಸ್ವಾಮಿ ಆಲಯದ ದ್ವಾರಗೋಪುರ, ಪದ್ಮಾವತೀ ಅಮ್ಮನವರ ಆಲಯ ವಿಮಾನದ ಕಳಶದ ಚಿನ್ನದ ಮುಲಾಮೀಕರಣ ಮುಖ ಮಂಟಪದ ಬಿಂಬಗಳನ್ನು, ಗೋವಿಂದರಾಜ ಸ್ವಾಮಿ ಆಲಯ ಹಾಗೂ ತಿರುಚಾನೂರು ಆಲಯಗಳಲ್ಲಿ ಹೊಸದಾಗಿ ಪುನಃ ಮಾಡಲಾಯಿತು. ಶ್ರೀವೆಂಕಟೇಶ್ವರಸ್ವಾಮಿ ಆಲಯದ ಪಡಿಕಾವಲಿ ಗೋಪುರ ಹಾಗೂ ಒಳಗೋಪುರಗಳು ಹೇಳತಕ್ಕಂತಹ ಜೀರ್ಣೋದ್ಧಾರದ ಕೆಲಸಗಳಾಗಿವೆ.

ತುಂಬ ಈಚಿನ ಸಾಧನೆಗಳಲ್ಲಿ ಕೆಲವು ಎಂದರೆ - ಬೆಟ್ಟಕ್ಕೆ ಇನ್ನೊಂದು ವಾಹನ ರಸ್ತೆಯನ್ನು ಹೊಸದಾಗಿ ಮಾಡಿಸಲಾಗಿದೆ. ಇದರಿಂದ ಹೊಸ ರಸ್ತೆಯಲ್ಲಿ ಬೆಟ್ಟವನ್ನು ಏರುವ ವಾಹನಗಳು ಹೋಗುತ್ತವೆ ಹಾಗೂ ಹಳೆಯ ರಸ್ತೆಯಲ್ಲಿ ತಿರುಪತಿಗೆ ಹಿಂದಿರುಗುತ್ತವೆ. ಇದರಿಂದಾಗಿ ಪ್ರಯಾಣ ಸುಖಕರವಾಗಿ, ಯಾತ್ರಿಕರಿಗೆ ಹೆಚ್ಚು ಆರಾಮವಾಗಿದೆ.

1979ರ ಕಾಯದೆಯಂತೆ 1-3-79ರಲ್ಲಿ ಉಂಟಾದ ಹೊಸ ಕಾರ್ಯನಿರ್ವಾಹಕ ಮಂಡಲಿಯು ಅರ್ಜಿತ ಸೇವೆಗಳ ಹಾಗೂ ಧರ್ಮದರ್ಶನದ ಸಮಯಗಳಲ್ಲಿ ದೂರಗಾಮಿ ಪರಿವರ್ತನೆಯನ್ನು ಪ್ರವೇಶಗೊಳಿಸಿದೆ. ಇದರಿಂದಾಗಿ ಸ್ವಾಮಿಯ ಶುಲ್ಕ ರಹಿತ ದರ್ಶನವಾದ ಸರ್ವದರ್ಶನವು ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 12ವರೆಗೆ ನಿಂತರವಾಗಿ (ಮಧ್ಯಾಹ್ನಸಂಜೆಗಳ ನೈವೇದ್ಯ ಸಮರ್ಪಣೆಯ ಹೊತ್ತು ಹೊರಪಡಿಸಿ) ನಡೆಯುವಂತಾಗಿದೆ. ವಿಶೇಷಪೂಜೆ, ತಿರುಪ್ಪಾವಡಾ ಅಭಿಷೇಕಗಳಿಗೂ ಎರಡು ಗಂಟೆಗಳು ಮಾತ್ರವೇ ಅವಕಾಶ.

ಮುದ್ರಣಾಲಯವನ್ನು ಅಭಿವೃದ್ಧಿ ಗೊಳಿಸುವ ಹೊಸ ಯೋಜನೆಯೊಂದನ್ನು ಕೈಗೆತ್ತಿಕೊಂಡು ಕೆಲಸ ಚುರುಕಾಗಿ ನಡೆಯುತ್ತಿದೆ. ಕೆಲವೇ ದಿನಗಳಲ್ಲಿ ದೇಶದಲ್ಲಿಯೇ ಉತ್ತಮವಾದ ವಿಧಾನದಲ್ಲಿ ಧಾರ್ಮಿಕ ಸಾಹಿತ್ಯ ಹೊರಬೀಳಲಿದೆ.

ಒಂದು ಆಧುನಿಕ ಸರತಿಯ ಸಾಲಿನ ಸಮುದಾಯ ನಿರ್ಮಾಣದ ಮಹತ್ತರವಾದ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. 1.5 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗುವ ಈ ವೈಕುಂಠಂ ಕ್ಯೂಕಾಂಪ್ಲೆಕ್ಸ್‌ನಲ್ಲಿ ಒಂದು ಬಾರಿಗೆ 14000 ಮಂದಿ ಕುಳಿತುಕೊಳ್ಳುವ ಅವಕಾಶವಿರುತ್ತದೆ. ಇಲ್ಲಿ ಶೌಚಗೃಹ, ಸ್ನಾನ ಗೃಹಗಳೂ ಉಂಟು. ಇದು ಎರಡು ವರ್ಷದ ಅವಧಿಯಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಇದು ಪೂರ್ಣ ಗೊಂಡಾಗ ಯಾತ್ರಿಕರು ಕಾಯುವಿಕೆಯಲ್ಲಿನ ಬೇಸರ ಹುಟ್ಟಿಸುವ ಏಕತಾನತೆಯನ್ನು ಕಳೆದುಕೊಳ್ಳುವರು. ವಿಶೇಷ ದರ್ಶನಗಳು ಸೇವೆಗಳು ಪ್ರತ್ಯೇಕವಾಗಿವೆ. ದಿನವೊಂದಕ್ಕೆ 18 ಗಂಟೆಗಳ ಉಚಿತ ದರ್ಶನದ ಅವಕಾಶವಿರುವ ಸಾಮಾನ್ಯದಿನಗಳಲ್ಲಿ ಎಲ್ಲರಿಗೂ ಎರಡು ಮೂರು ಗಂಟೆಗಳಲ್ಲಿ ದರ್ಶನವಾಗುವುದು. (ಈ ಮಾತು 1980 ರದು - ಅನುವಾದಕ) ಈ ಅವಧಿಯ ಕಾಯುವಿಕೆಯೂ ಸಾಧ್ಯವಿಲ್ಲದವರಿಗೆ ವಿಶೇಷ ಪ್ರವೇಶದ ಟಿಕೆಟ್‌ಗಳಿವೆ. ದೇಶದ ವಿವಿಧ ಸಮಾಚಾರ ಕೇಂದ್ರಗಳಲ್ಲಿಯೂ ದೊರೆಯುತ್ತವೆ. ಇವರನ್ನು ನೇರವಾಗಿ ಆಲಯದ ಸಾಲಿನಲ್ಲಿ ಸೇರಿಸಲಾಗುವುದು. ಆಲಯದ ಒಳಗೆ ಎಲ್ಲರೂ ಸಮಾನರೆಂದೇ ಪರಿಗಣಿತವಾಗುವರು.

ಬೆಟ್ಟದ ಮೇಲೆ ಉಚಿತ ವಾಹನ ಸೌಲಭ್ಯವನ್ನು ಕಾಟೇಜುಗಳಿಗೆ, ಬಸ್ ನಿಲ್ದಾಣಕ್ಕೆ ಏರ್ಪಡಿಸಲಾಗಿದೆ. ಕಾಲುಹಾದಿಯಲ್ಲಿ ನೀರಿನ ಸೌಲಭ್ಯವನ್ನು ಪ್ರಥಮ ಚಿಕಿತ್ಸಾ ಸೌಲಭ್ಯವನ್ನು ಏರ್ಪಡಿಸಿ ವಿದ್ಯುದ್ದೀಪಗಳನ್ನು ಹಾಕಿಸಲಾಗಿದೆ.

ಸರದಿಯ ಸಾಲಿನ ಕೋಣೆಗಳಲ್ಲಿ ಕಾಫಿ, ಹಾಲು, ಅಲ್ಪೋಪಹಾರ ಸೌಲಭ್ಯವಿದೆ. ಆಲಯದ ಪಾವಿತ್ರ್ಯವನ್ನು ಪರಿರಕ್ಷಿಸಲು ತಿರುಮಲೆಯ ಮೇಲೆ ಎಲ್ಲ ರೀತಿಯ ರಾಜಕೀಯ ಸಮಾವೇಶಗಳನ್ನು ಸಭೆಗಳನ್ನು ನಿಷೇಧಿಸಲಾಗಿದೆ. ಧರ್ಮಕರ್ತರ ಸಭೆಗಳು ಮಾತ್ರವೇ ನಡೆಯತಕ್ಕದ್ದು. ಇವು ಕೂಡ ಯಾತ್ರಿಕರ ಸೌಕರ್ಯದ, ಆಲಯದ ವ್ಯವಹಾರಗಳ ಬಗ್ಗೆ ಮಾತ್ರವೇ ಆಗುಪತಹವು.

ಸಾಮಾಜಿಕ ಸಮಾವೇಶಗಳನ್ನು ಬೆಟ್ಟದ ಮೇಲೆ ನಿಷೇಧಿಸಲಾಗಿದೆ. ತಿ.ತಿ.ದೇವಸ್ಥಾನಗಳು ವೇದಪಾರಾಯಣಕ್ಕೆ ಪ್ರೋತ್ಸಾಹ ನೀಡುತ್ತ ಬಂದಿದೆ. ಆಯ್ದ ಪಂಡಿತರ ಆಲಯಗಳಲ್ಲಿನ ವೇದಪಾರಾಯಣ ದಾರರಿಗೂ ಸಂಭಾವನೆ ನೀಡುತ್ತ ಪ್ರೋತ್ಸಾಹಿಸುತ್ತಿದೆ

ಲಾಭನಷ್ಟಗಳಿಲ್ಲದಂತೆ ಇತರ ಆಲಯಗಳಿಗೆ ವಿಗ್ರಹಗಳನ್ನು ನೀಡುವಿಕೆ, ಕಲ್ಯಾಣಮಂಟಪ ನಿರ್ಮಾಣ, ಆಲಯಗಳ ಪೂಜೆಗೆ ಬೇಕಾದ ವಸ್ತುಗಳನ್ನು ನೀಡುವಿಕೆಗಳಲ್ಲಿ ಸಹಾಯ ಮಾಡುತ್ತ ಬಂದಿದೆ.

1979 ರ ಹೊಸ ಕಾಯದೆಯ ಸಹಾಯದಿಂದಾಗಿ ಕೆಂಪುಟೇಪಿಗೆ ಕತ್ತರಿಬಿದ್ದು ಕೆಲಸಗಳೆಲ್ಲ ತ್ವರೆ ತ್ವರೆಯಾಗಿ ನಡೆದು ದೇವ ಸೇವೆಯಲ್ಲಿ ಯಾತ್ರಿಕ ಸೇವೆಯಲ್ಲಿ ತಿ.ತಿ. ದೇವಸ್ಥಾನಗಳು ಸಫಲವಾಗುವುದೆಂದು ನಿರೀಕ್ಷಿಸಲಾಗಿದೆ.

(ಇದೀಗ ತಿರುಮಲೆಯಲ್ಲಿ ಎರಡು ಸರದಿಯ ಸಾಲಿನ ನಿರೀಕ್ಷಣಾ ಸಮುದಾಯಗಳು - ವೈಕುಂಠ -1 ಹಾಗೂ ವೈಕುಂಠ-2 ನಿರ್ಮಾಣವಾಗಿ ಯಾತ್ರಿಕರ ಸರದಿಯ ಸಾಲಿನ ಚಲನೆಯನ್ನು ಸುಸೂತ್ರಗೊಳಿಸಲಾಗಿದೆ. ಕಾಲುಹಾದಿಯಿಂದ ನಡೆದು ಬರುವವರಿಗೆ ನೇರ ಪ್ರವೇಶದ ಅವಕಾಶ ಕಲ್ಪಿಸಲಾಗಿದೆ. ಇಲ್ಲಿಯೂ ಉಚಿತ ಉಪಹಾರ ವಿತರಣೆಯ ಪದ್ಧತಿಯನ್ನೇರ್ಪಡಿಸಲಾಗಿದೆ. ಈ ಹೆಚ್ಚಿನ ಬೆಳವಣಿಗೆಯ ಸ್ಥೂಲನೋಟವನ್ನು ಅನುಬಂಧ-2ರಲ್ಲಿ ಚಿತ್ರಿಸಲಾಗಿದೆ - 2014 - ಅನುವಾದಕ)

## ಅಧ್ಯಾಯ - 22

# ಸಮಗ್ರ ನೋಟ

**ಆಲಯದ ಪ್ರಾಮುಖ್ಯ :**

ವನೋಪಾಂತ ನದೀಶೈಲ ನಿರ್ಝರೋಪಾಂತ ಭೂಮಿಷು।

ರಮಂತೇ ದೇವತಾಃ ನಿತ್ಯಂ ಪುರೇಷೂದ್ಯಾನ ವತ್ಸು ಚ॥

ಭವಿಷ್ಯೋತ್ತರ ಪುರಾಣ - 1-130 -15

ನದಿ, ಪರ್ವತ, ನೀರಿನ ಬುಗ್ಗೆ. ತರುಗುಲ್ಮಗಳಿರುವಲ್ಲಿ, ಪಟ್ಟಣಗಳ ಉದ್ಯಾನವನಗಳಲ್ಲಿ ದೇವತೆಗಳು ನಿತ್ಯವೂ ವಿಹರಿಸುತ್ತಾರೆ.

ಆರ್ಯಾವರ್ತವು ಪವಿತ್ರ ದೇವಾಲಯಗಳ, ಗುಡಿ ಗೋಪುರಗಳ, ಪುಣ್ಯಪ್ರದವಾದ ನದಿ ಪರ್ವತಗಳ ಸ್ಥಳವಾಗಿದೆ. ಈ ಪವಿತ್ರ ಭೂಮಿಯಲ್ಲಿರುವ ಜನ ಸಹಜವಾಗಿಯೇ ಧಾರ್ಮಿಕರಾಗಿದ್ದಾರೆ. ಅವರು ತಮ್ಮ ಧಾರ್ಮಿಕ ಭಾವನೆಗಳನ್ನು ವಿವಿಧ ರೀತಿಯಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ. ಹೈಂದವ ಧರ್ಮ ಅಥವಾ ಸನಾತನ ಧರ್ಮ ಇಲ್ಲಿನ ಜನತೆಯ ಪರಂಪರಾಗತ ಶಾಸನ, ಮೌಲ್ಯವು ಆಗಿದೆ. ಈ ಜೀವನ ಧರ್ಮವನ್ನು ಪ್ರಾಚೀನ ಶ್ರುತಿ ಸ್ಮೃತಿಗಳು ಅನೃತದ ವಿರುದ್ಧವಾದ ಋತ ಎಂದು ಹೆಸರಿಸಿದವು.

ವೇದಗಳಲ್ಲಿ ಹಿಂದೂಗಳು ವಿಶ್ವಾಸವನ್ನು ಹೊಂದಿದ್ದಾರೆ. ಇವೇ ಅವರ ಪವಿತ್ರ ಧರ್ಮಗ್ರಂಥಗಳು. ಬದುಕಿನ ಹಲವಾರು ಮುಖಗಳನ್ನು ಅದರ ಎಲ್ಲ ವಿವರಗಳೊಡನೆ ವೇದಗಳು ಪ್ರಸ್ತುತಪಡಿಸುತ್ತವೆ. ವೈದಿಕ ಋಷಿಗಳು ಕಂಡುಕೊಂಡ ತಾತ್ವಿಕ ಪರಮಾರ್ಥಗಳನ್ನು ಮಾತ್ರವೇ ಅಲ್ಲದೆ ವೇದಗಳು ಸಾಮಾನ್ಯ ಮಾನವನ ಜೀವನ ವಿಧಾನದ ನಡಾವಳಿಯನ್ನೂ ವಿವರಿಸುತ್ತವೆ.

ವೇದಗಳನ್ನು ನಾಲ್ಕು ಭಾಗಗಳಲ್ಲಿ ಅಧ್ಯಯನ ಮಾಡುವರು. ಸಂಹಿತೆಗಳು. ಬ್ರಾಹ್ಮಣಗಳು ಅರಣ್ಯಕಗಳು, ಉಪನಿಷತ್ತುಗಳು. ಸಂಹಿತೆಗಳು ಅತ್ಯುತ್ಕೃಷ್ಟ ಕಾವ್ಯ ರೂಪದಲ್ಲಿ ಕಂಡುಬರುವ ಇಂದ್ರ, ವರುಣ, ಅಗ್ನಿ - ಮೊದಲಾದ ದೇವತೆಗಳ ಸ್ತುತಿಗಳಾದರೆ, ಬ್ರಾಹ್ಮಣಗಳು ಯಜ್ಞಗಳನ್ನು ವಿವರಿಸಿ ಪ್ರತಿಯೊಬ್ಬನೂ ನಡೆಸಬೇಕಾದ ವಿವಿಧ ಯಜ್ಞಗಳ ವಿವರಣೆಯಾಗಿವೆ. ಅರಣ್ಯಕಗಳು, ಜೀವನದ ಬಹುಪಾಲು ಅನುಭವಗಳನ್ನು ಹೊಂದಿದ ಕಾಡು ಸೇರಿ ಮಥಿಸಿದ ಪ್ರಜ್ಞಾವಂತ ಮಸ್ತಕಗಳಲ್ಲಿ ಮುಕ್ತಿಯ ಬಗ್ಗೆ ಉಂಟಾದ ವಿಚಾರಗಳನ್ನು ತಿಳಿಸುತ್ತವೆ. ವೇದಾಂತವೆಂದು ಕರೆಯಲಾದ ಉಪನಿಷತ್ತುಗಳು, ಪ್ರಾಚೀನ ಋಷಿ ಮುನಿಗಳು ಪಡೆದ ದರ್ಶನಸಾರವನ್ನ ಸಂಗ್ರಹ ರೂಪದಲ್ಲಿ ವಿವರಿಸುತ್ತವೆ. ಈ ನಾಲ್ಕೂ ಭಾಗಗಳಲ್ಲಿ ಕಂಡುಬರುವ ಎಲ್ಲ ವಿಚಾರಗಳನ್ನೂ ಒಟ್ಟಿಗೆ ಸೇರಿಸಿ ಸ್ಥೂಲವಾಗಿ ಇಂದಿಗೂ ಅದರಂತೆಯೇ ಹಿಂದೂಗಳು ನಡೆದುಕೊಂಡು ಬರುತ್ತಿದ್ದಾರೆ.

ಪ್ರಾಚೀನ ಆದರ್ಶಗಳ ಪ್ರಕಾರ ಮನುಷ್ಯ ಜೀವನವೆಂಬುದು ಅವನ ಹಿಂದಿನ ಎಲ್ಲ ಜನ್ಮಗಳಲ್ಲಿ ಮಾಡಿದ ಒಟ್ಟು ಕರ್ಮದ ಮೊತ್ತ ಫಲ. ಪ್ರತಿ ಕರ್ಮವೂ ತನ್ನದೇ ಆದ ವಾಸನಾಫಲವಾದ ಮತ್ತೊಂದು ಕರ್ಮಕ್ಕೆ ಮಾರ್ಗವಾಗುತ್ತದೆ. ಈ ಒಂದು ವಿಷವರ್ತುಲದಿಂದ ಹೊರಬೀಳಬೇಕಾದರೆ ಪ್ರತಿಯೊಬ್ಬನೂ ತನ್ನ ಕರ್ತವ್ಯವಾದ ಕರ್ಮವನ್ನು ನಿಸ್ಸಂಗತ್ವದಿಂದ ಆಚರಿಸಬೇಕು. ಆಗ ಕರ್ಮಫಲ ತಾಕದು. ಧರ್ಮವೆಂಬುದು ಪ್ರತಿಯೊಬ್ಬನ ಕರ್ತವ್ಯ. ಯಾವುದೇ ಪರಿಸ್ಥಿತಿಯಲ್ಲಿಯೂ ವ್ಯಕ್ತಿ ತನ್ನ ಧರ್ಮವನ್ನು ನಿರ್ವಹಿಸಲೇ ಬೇಕು.ಧರ್ಮ ಎಂದರೇನೆಂಬುದನ್ನು ವಿವಿಧ ಶಾಸ್ತ್ರಗಳು ವರ್ಣಿಸಿವೆಯಾಗಿ, ವ್ಯಕ್ತಿಯು ಕರ್ತವ್ಯ ಭಾವದಿಂದ ಭಗವದರ್ಪಣವೆಂಬ ಆದರ್ಶದಲ್ಲಿ ಅದನ್ನು ನಿರ್ವಹಿಸಬೇಕಷ್ಟೆ. ಹೀಗಾಗಿ ಕರ್ಮಸಿದ್ಧಾಂತವೂ, ಧರ್ಮ ಸಿದ್ಧಾಂತವೂ ಬೆರತು ನಮಗೆ ಒಂದು ತಾತ್ವಿಕವಾದ

ಹಾಗೂ ಪ್ರಾಯೋಗಿಕವಾದ ಜೀವನ ಮಾರ್ಗವನ್ನು ತೆರೆದುಕೊಟ್ಟು ಮನಸ್ಸಿಗೆ ಶಾಂತಿಯನ್ನು ಒದಗಿಸಿ, ಜೀವನ್ಮುಕ್ತತೆಯನ್ನು ಪಡೆಯಲು ತಕ್ಕ ಸಮಾಧಾನವನ್ನು ಒದಗಿಸುತ್ತದೆ. ಮನುಷ್ಯನ ಇಂದು, ಅವನ ಪೂರ್ವಾರ್ಜಿತ ಕರ್ಮ ಫಲಗಳಿಂದಾಗಿ ತಿದ್ದಲ್ಪಟ್ಟಿರುವುದರಿಂದಾಗಿ, ಅವನಿಗೆ ಇಷ್ಟವಿದ್ದರೂ, ಇಲ್ಲದಿದ್ದರೂ ಧರ್ಮವು ಅವನ ಮೇಲೆ ಕರ್ತವ್ಯದ ಒತ್ತಡವನ್ನು ಹೇರುವುದಾಗಿ, ಆ ಹಾಗೆಯೇ ಧರ್ಮಮಾರ್ಗದಲ್ಲಿ ನಡೆಯುವುದರಿಂದ ಮಾತ್ರವೇ - ಕರ್ಮ ಫಲಾಸಕ್ತಿಯಿಲ್ಲದ ಕರ್ತವ್ಯಾಚರಣೆ ಯಿಂದ ಮಾತ್ರವೇ - ಮುಕ್ತಿ ಮಾರ್ಗವನ್ನು ಕಾಣಬಲ್ಲ.

ಹೀಗಾಗಿ ಹಿಂದೂ ಧರ್ಮವೆಂಬುದು ಒಂದು ದೊಡ್ಡ ವಟವೃಕ್ಷವಾಗಿ ಎಲ್ಲ ರೀತಿಯ ಉಪವಿಭಾಗಗಳ ಲತೆಗಳನ್ನೂ ತನ್ನ ವಿಶಾಲ ಹಂದರದಲ್ಲಿ ಪಡೆದು ನಡೆಯುವಂತಾಗಿದೆ. ವಿವಿಧ ದೇವತೆಗಳ ಉಪಾಸನೆಯಿದ್ದರೂ ಸಾಮಾನ್ಯ ತಳಹದಿಯಾಗಿ ವೇದಗಳನ್ನು ಹೊಂದಿರುವಂತಹದು ಎನ್ನಬೇಕು.

ಈ ಒಂದು ಹಾದಿಯಲ್ಲಿಯೇ ನಡೆಯುವ ಹಿಂದೂ ದೇವಾಲಯಗಳೂ ಸಹ, ಶತಮಾನಗಳ ಕಾಲಾವಧಿಯಲ್ಲಿ ಹಲವಾರು ಪರಿವರ್ತನಶೀಲ ಪರಿಕಲ್ಪನೆಗಳಿಗೆ ಪಕ್ಕಾಗಿದ್ದರೂ ವೇದಗಳ ಮೂಲ ಭೂತವಾದ ತಾತ್ವಿಕತೆಯನ್ನೇ ಅಭಿವ್ಯಕ್ತಿಗೊಳಿಸುತ್ತವೆ ಎಂಬುದರಲ್ಲಿ ಅತಿಶಯವಿಲ್ಲ. ಆಲಯವೆಂದರೆ ಇಡೀ ವಿಶ್ವದ ಪ್ರಭುವಾದ ದೇವರು ನೆಲೆ ನಿಂತ ಸ್ಥಳವೆಂದು ಹೇಳಲಾಗುತ್ತದೆ. ಭಕ್ತನ ಕರ್ತವ್ಯವೆಂದರೆ ಭಗವಂತನನ್ನು ಯಜಮಾನ, ಒಡೆಯನೆಂದು ಗುರುತಿಸಿ ಸರ್ವಥಾ ಅವನ ಸೇವೆ ಮಾಡುವುದು. ಗೀತ ನೃತ್ಯಗಳಿಂದ ಅವನನ್ನೆಚ್ಚರಿಸುವುದು, ಆರಾಧನೆ ಅರ್ಚನೆ ಮಾಡುವುದು, ಅವನಿಗೆ ನಿವೇದನೆಯನ್ನು ಅರ್ಪಿಸುವುದು, ಆತನ ಕರುಣೆಯೆಂಬಂತೆ ಪ್ರಸಾದವನ್ನು ಸ್ವೀಕರಿಸುವುದು.

ಹಿಂದೂ ಭಾರತದಲ್ಲಿ ಜೀವನ ಹಾಗೂ ಧರ್ಮಗಳೆರಡೂ ಒಂದರೊಳಗೊಂದು ಸೇರಿಹೋಗಿ ಇವೆರಡನ್ನೂ ಪ್ರತ್ಯೇಕ ಮಾಡುವುದು ಅಸಾಧ್ಯ. ವೇದಗಳ ನಂತರ ಬರುವ ಪ್ರಮುಖ ಪುಸ್ತಕಗಳೆಂದರೆ ಪುರಾಣಗಳು. ಇವುಗಳು ಪ್ರಾಚೀನತಮದ ಇತಿಹಾಸದೊಡನೆ ಗುರುತು ತಿಳಿಯದಂತೆ ಸೇರಿದ ಧಾರ್ಮಿಕ ವಿವರಗಳಿಂದಾಗಿ ಹಿಂದೂಗಳಿಗೆ ಪ್ರಧಾನ ಗ್ರಂಥಗಳಾಗಿವೆ. ನೈಮಿಷಾರಣ್ಯದಲ್ಲಿ (ಆಧುನಿಕ ಅವಧದ ನಿಮ್ಸಾರ್) ನೆರೆದ ಮುನಿಗಳಿಗೆ ಸಂತ ಸೂತನು ಈ ಪುರಾಣಗಳನ್ನೂ ಹೇಳಿದಂತೆ ಸೂಚಿಸಲಾಗಿದೆ. ಪ್ರಾಚೀನ ಕಾಲದಲ್ಲಿ ತಿಳಿದವರು ಈ ಪುರಾಣಗಳನ್ನು ವಾಚಿಸಿ ಜನರಿಗೆ ವಿವರಿಸುತ್ತಿದ್ದರು. ಇವುಗಳ ಪ್ರಕಾರ ಎಲ್ಲ ಹಿಂದೂಗಳೂ ಸಹ ಒಂಬತ್ತುರೀತಿಯ ಧರ್ಮಗಳನ್ನು ಆಚರಿಸಬೇಕಾಗಿದ್ದಿತು.

1. ಸತ್ಸಂಗ - ಒಳ್ಳೆಯವರೊಡನೆ ಸೇರಿ ಇರುವಿಕೆ.

2. ಹರಿಕಥೆ - ಪವಿತ್ರ ಸಂಕೀರ್ತನ ಕಥಾ ಕಾಲಕ್ಷೇಪ.

3. ಈಶ್ವರ ಭಕ್ತಿ - ದೇವರಲ್ಲಿ ಪ್ರೀತಿಯಿರುವಿಕೆ.

4. ತೀರ್ಥಯಾತ್ರೆ - ಪವಿತ್ರಕ್ಷೇತ್ರಗಳಿಗೆ ಹೋಗುವಿಕೆ.

5. ಗುರುಪೂಜೆ - ತಿಳಿಸಿಕೊಡುವವರನ್ನು ಪೂಜಿಸುವಿಕೆ.

6. ಧ್ಯಾನ - ಮನದಲ್ಲಿ ದೇವರ ಚಿಂತನೆ.

7. ಭಾಗವತಸೇವೆ - ದೇವರ ಭಕ್ತರಿಗೆ ಸಲ್ಲಿಸುವ ಸೇವೆ.

8. ಜಪ - ದೇವರ ನಾಮದ ಹೇಳಿಕೊಳ್ಳುವಿಕೆ.

9. ಲೋಕಕಲ್ಯಾಣ - ಜಗತ್ತಿನ ಒಳಿತಿಗಾಗಿ ಅಪೇಕ್ಷಿಸುವಿಕೆ, ಕೆಲಸ ಮಾಡುವಿಕೆ.

ಪ್ರಾಚೀನ ಕಾಲದಿಂದಲೂ ಪ್ರತಿಹಿಂದುವೂ ಭಗವಂತನ ಆರಾಧನೆ ಅರ್ಚನೆ, ಕೀರ್ತನೆಗಳಿಗಾಗಿ ಹೊಂದಿದ್ದ ಒಂದು ಸಾಮಾನ್ಯ ಸ್ಥಾನವೆಂದರೆ ಆಲಯಗಳು, ತಮಿಳಿನ ಹಿರಿಯ ಶರಣೆ ಅವ್ವೆಯಾರ್ ಹೇಳುವಂತೆ ಆಲಯವಿಲ್ಲದ ನಗರದಲ್ಲಿ ಯಾರೂ ಇರಲೇ ಬಾರದು. ಹಿಂದೂಗಳಿಗೆ ಭಗವಂತನ ಕೃಪೆ ಹರಿದು ಬರುವ ಮೂಲಸ್ರೋತ ಸ್ಥಾನಗಳೆಂದರೆ ಆಲಯಗಳೇಯ.

ಆಗಮಗಳಲ್ಲಿ ಶಾಸ್ತ್ರಗಳಲ್ಲಿ ಆಲಯ ನಿರ್ಮಾಣದ ಬಗ್ಗೆ, ಆಲಯದ ಸ್ಥಳದ ಆಯ್ಕೆಯ ಬಗ್ಗೆ, ಅದರೊಳಗೆ ಇರುವಂತಹ ವಿಗ್ರಹದ ಬಗ್ಗೆ ಪ್ರತಿಷ್ಠಾಪನೆಯ ಬಗ್ಗೆ ವಿವರವಾದ ನೀತಿ ನಿಯಮಗಳನ್ನು ರೂಪಿಸಲಾಗಿದೆ. ಪೂಜೆ ನಡೆಸುವ ವಿಧಾನಗಳ ಬಗ್ಗೆಯೂ, ಕಾಲದ ಬಗ್ಗೆಯೂ, ಪೂಜೆ ಮಾಡುವವರ ಅರ್ಹತೆಯ ಬಗ್ಗೆಯೂ ಇಂತಹವೇ ನಿಯಮಗಳನ್ನು ವಿಧಿಸಲಾಗಿವೆ. ಆಲಯದಲ್ಲಿ ದೇವರ ಪೂಜೆಯಿಂದ ಚಿತ್ತ ಸಮತೆಯುಂಟಾಗಿ, ಅರಿಷಡ್ವರ್ಗ ನಿಯಂತ್ರಣವಾಗಿ, ಭಕ್ತರು ಭಗವಂತನನ್ನು ಸದಾ ನೆನಪಿನಲ್ಲಿಡಲು ನೆರವಾಗುತ್ತದೆ.

ಆಲಯವನ್ನು ಹೇಗೆ ನಿರ್ಮಾಣ ಮಾಡುತ್ತಾರೆ ಎಂದರೆ ಭಕ್ತರು ಆಲಯವನ್ನು ಪ್ರವೇಶಿಸಿದ ಒಡನೆಯೇ ಒಂದು ರೀತಿಯ ಪವಿತ್ರವಾತಾವರಣದ ಅನುಭವ ಹೊಂದುವರು. ಗರ್ಭಗೃಹವು ಸಾಮಾನ್ಯವಾಗಿ ಅತಿ ಕಡಿಮೆ ಬೆಳಕಿನಲ್ಲಿದ್ದು, ಪ್ರಧಾನವಿಗ್ರಹದ ಹೊರತು ಮಿಕ್ಕಂತೆ ಯಾವ ಗೋಡೆ ಅಲಂಕಾರಗಳೂ ಇರುವುದಿಲ್ಲ. ಇದರಿಂದಾಗಿ ಭಕ್ತರ ಏಕಾಗ್ರತೆ ಹೆಚ್ಚಲು ಸಹಾಯಕವಾಗುವುದು. ಒಂದು ಪರಂಪರೆಯ ಹೇಳಿಕೆಯಂತೆ ಆಲಯವು ವಿಶ್ವದ ಪ್ರತೀಕವಾಗಿದ್ದು ಒಳಗಿನ ವಿಗ್ರಹವು ಪರಮಾತ್ಮದ್ಯೋತಕವಾಗಿರುವುದು. ದೇವರ ಮುಂದೆ ಒಂದು ಪರದೆಯಿರುತ್ತದೆ. ಇದು ಮೂರು ಗುಣಗಳ - ಸತ್ವ ರಜಸ್ಸು ತಮಸ್ಸುಗಳ - ಬಿಳಿ ಕೆಂಪು ಕಪ್ಪು ಬಣ್ಣಗಳಿಂದ ಕೂಡಿರುವುದು. ತ್ರಿಗುಣಾತ್ಮಕವಾದ ಈ ತೆರೆಯು ಸರಿದಲ್ಲಿ ಪರಮಾತ್ಮನ ಚಿತ್‌ಜ್ಯೋತಿ ಕಂಡು ಬರುತ್ತದೆ. ಇನ್ನೊಂದು ಪರಂಪರೆಯಂತೆ ಆಲಯವು ಮನುಷ್ಯ ದೇಹವಿದ್ದಂತೆ. ನಡೆದಾಡುವ ದೇವಾಲಯವೇ ಈ ದೇಹ. ಇಲ್ಲಿ ಜೀವವು ಕೇಂದ್ರದಲ್ಲಿದ್ದು, ಗರ್ಭಗೃಹವು ಕಂಠವಾಗಿ ಶಿರವೇ ಗೋಪುರ ಅಥವಾ ಕಳಸವಾಗಿರುವುದು. ಹೊಟ್ಟೆಯು ಮುಖಮಂಟಪವಾದರೆ ಕಾಲೇ ಕಂಭಗಳು, ಜೀವವೇ ದೇವರು. ಹೀಗಾಗಿ ದೇಹದ ಎಲ್ಲ ಭಾಗಗಳೂ ದೇವರ ಅಂಗಾಂಗಳೆಂದು ಪರಿಕಲ್ಪಿತವಾಗಿ ಇದನ್ನು ಪವಿತ್ರದೃಷ್ಟಿಯಿಂದ ಭಾವಿಸಬೇಕು. ಮೇಲಿನ ಅಂಶವನ್ನು ಈ ಶ್ಲೋಕವು ಸುಂದರವಾಗಿ ತಿಳಿಸಿಹಿವುದು -

ಶಿಖರಂ ಶಿರ ಇತ್ಯಾಹುಃ ಗರ್ಭಗೇಹಂ ಗಳಸ್ತಥಾ
ಮಂಟಪಂ ಕುಕ್ಷಿರಿತ್ಯಾಹುಃ ಪ್ರಾಕಾರಂ ಜಾನು ಜಂಘುಕಂ
ಗೋಪುರಂ ಪಾದ ಮಿತ್ಯಾಹುಃ ಧ್ವಜೋ ಜೀವನ ಮುಚ್ಯತೇ

ಮತ್ತೊಂದು ಶ್ಲೋಕದಲ್ಲಿ ದೇವಾಲಯವನ್ನು ಒಂದು ಪುಷ್ಪ ಇರುವಂತಹ ಕಮಲಕಾಸಾರವೆಂದು ತಿಳಿಯಲಾಗಿದೆ.

ಜಲ ವಿಮಾನಂ ಧ್ರುವಬೇರ ಕಂದಂ ಕೂರ್ಚಂ ತು ನಾಲಂ ಕುಸುಮಂ ಚ ಕೌತುಕಂ
ಬಲ್ಯುತ್ಸವಂ ಚ ಸ್ನಪನಂ ಚ ಪತ್ರಕಂ ದೇವಾಲಯೋ ಯಂ ಕಮಲಾಲಯಃ ಸ್ಯಾತ್

ಸರೋವರದಲ್ಲಿನ ನೀರು ಎಂದರೆ ವಿಮಾನ. ಧ್ರುವಮೂರ್ತಿಯು ಕಮಲದ ಬೇರು - ಕಮಲದ ನಾಳವೇ ಸಂಬಂಧ ಕೂರ್ಚ. ಕೌತುಕ ಮೂರ್ತಿಯು ಕಮಲ. ಹೀಗೆ ದೇವಾಲಯವು ಕಮಲಾಲಯವೆಂಬಂತೆ ಭಾಸವಾಗುತ್ತದೆ.

ಸಾಮಾನ್ಯವಾಗಿ ಎಲ್ಲ ದೇವಾಲಯಗಳಲ್ಲಿಯೂ ಎರಡು ಮೂರ್ತಿಗಳಿರುತ್ತವೆ. ಶಾಶ್ವತವಾಗಿ ಒಂದೇ ಸ್ಥಳದಲ್ಲಿ ಅಚಲವಾಗಿರು ವುದನ್ನು ಮೂಲಬೇರವೆಂದೂ, ಹೊರಗಡೆ ಉತ್ಸವಾದಿಗಳಲ್ಲಿ ತೆಗೆದುಕೊಂಡು ಬರುವಂತಹ ಮೂಲಮೂರ್ತಿಯನ್ನು ಪ್ರತಿನಿಧಿಸು ವಂತಹ ಚರಮೂರ್ತಿಗೆ ಉತ್ಸವಮೂರ್ತಿಯೆಂದೂ ಕರೆಯುವರು. ಹಲವು ಆಲಯಗಳಲ್ಲಿ ಅಭಿಷೇಕ, ಉತ್ಸವಗಳಿಗೆ ಬೇರೆ ಬೇರೆ ವಿಗ್ರಹಗಳಿರುವುದುಂಟು. ಶೈವ ಆಗಮಗಳು ಮೂಲ ಬೇರವನ್ನು ಸೂಕ್ಷ್ಮಲಿಂಗವೆಂದೂ, ಉತ್ಸವಬೇರವನ್ನು ಬಲಿಬೇರವೆಂದೂ,

ಬಲಿ ಲಿಂಗವೆಂದೂ ಹೆಸರಿಸುತ್ತವೆ. ವೈಷ್ಣವ ಆಲಯಗಳಲ್ಲಿ ಆರಾಧನೆ ಪೂಜೆಗಳನ್ನು ನಿರ್ವಹಿಸುವ ವಿಧಾನವನ್ನು ರೂಪಿಸುವ ವೈಖಾನಸ ಆಗಮ ಕೃತಿಗಳು ಪರಮಾತ್ಮನನ್ನು ಐದು ವ್ಯೂಹ ವಿಭಾಗಗಳಲ್ಲಿ ವಿಂಗಡಿಸುತ್ತವೆ. ಇವುಗಳನ್ನು ವಿಷ್ಣು, ಪುರುಷೋತ್ತಮ, ಅಚ್ಯುತ, ಹಾಗೂ ಅನಿರುದ್ಧ ಎಂದು ತಿಳಿಯಲಾಗಿದೆ. ಈ ಐದು ವಿಭಾಗಗಳನ್ನು ಐದು ವಿಧವಾದ ವಿಗ್ರಹಗಳಿಂದ ಗುರುತಿಸಲಾಗುತ್ತದೆ. ಅವುಗಳೆಂದರೆ- ಮೂಲಬೇರ, ಕೌತುಕಬೇರ, ಉತ್ಸವಬೇರ, ಸ್ನಪನಬೇರ ಹಾಗೂ ಬಲಿಬೇರಗಳು, ಇವುಗಳಲ್ಲಿನ ಪ್ರತಿಯೊಂದಕ್ಕೂ ಬೇರೆ ಬೇರೆಯೇ ಆದ ಪೂಜಾವಿಧಿಗಳಿವೆ. ಮೂಲಬೇರವನ್ನು ಲೋಕ ಕಲ್ಯಾಣಕ್ಕಾಗಿ ಅರ್ಚಿಸಲಾಗುವುದು. ಕೌತುಕ ಬೇರವನ್ನು ವ್ಯಕ್ತಿಯ ಏಳಿಗೆಗೆಂದು ಪೂಜೆ ಮಾಡುವರು. ಉತ್ಸವ ಬೇರವನ್ನು ಮೆರವಣಿಗೆಯಲ್ಲಿ ಬಳಸುವರು. ಸ್ನಪನಬೇರವನ್ನು ಅಭಿಷೇಕದಲ್ಲಿಯೂ ಬಲಿಬೇರವನ್ನು ನೈವೇದ್ಯ ಸಮರ್ಪಣೆಯಲ್ಲಿಯೂ ಬಳಸಲಾಗುತ್ತದೆ.

> ಧ್ರುವಂ ಚ ಲೋಕ ರಕ್ಷಾರ್ಥಂ ಅರ್ಚನಾರ್ಥಂ ಚ ಕೌತುಕಂ
> ಔತ್ಸವಂ ಉತ್ಸವಾರ್ಥಂ ಚ ಬಲ್ಯರ್ಥಂ ಬಲಿಬೇರಕಂ
> ಸ್ನಪನಂ ಸ್ನಪನಾರ್ಥಂ ಚ ಪಂಚಬೇರಾಃ ಪ್ರಕೀರ್ತಿತಾಃ

-ಹೀಗಾಗಿ ಹಿಂದೂ ಧರ್ಮವು ತನ್ನ ಭಕ್ತರಿಗೆ ದೇವರು ಸಗುಣ ಹಾಗೂ ನಿರ್ಗುಣನಾಗಿರುವ ಎರಡು ರೀತಿಯಲ್ಲಿ ಇರುವನೆಂಬುದನ್ನು ತಿಳಿಸಿಕೊಡುತ್ತದೆ. ಹೈಂದವ ಆಲಯವು, ಆಲಯದ ಈ ಪ್ರಾತಿನಿಧಿಕತೆಯನ್ನು ಮನದಲ್ಲಿಟ್ಟುಕೊಂಡೇ ಮುಂದೋಗಲು ಸಹಕಾರಿಯಾಗುತ್ತದೆ.

ಎಲ್ಲ ದೇವಾಲಯಗಳೂ ಸ್ಥಳ ಪುರಾಣಗಳನ್ನು ಹೊಂದಿದ್ದು ಧಾರ್ಮಿಕ ಗ್ರಂಥಗಳ ಹೇಳಿಕೆಗಳಿಗೆ ವ್ಯಾಖ್ಯಾನಗಳೋಪಾದಿಯ್ಲಲಿ ಕೆಲಸಮಾಡುತ್ತವೆ. ಸ್ಥಳೀಯ ಚರಿತ್ರೆಯನ್ನೂ, ಆಲಯದ ನಿರ್ಮಾಣ ವಿವರವನ್ನೂ ಅವು ತಿಳಿಸುತ್ತವೆ. ಜೊತೆಗೇ ಅವುಗಳಿಗೆ ಸಂಬಂಧಿಸಿದ ಪೌರಾಣಿಕ ಹಿನ್ನೆಲೆಯನ್ನೂ ಒದಗಿಸುತ್ತವೆ. ಆಯಾ ಕ್ಷೇತ್ರವು ಪಾವನವಾಗಲು ಕಾರಣವಾದ ಮೂಲಭೂತ ಐತಿಹ್ಯಗಳನ್ನು ತಿಳಿಸು ತ್ತವೆ. ಅಲ್ಲಿನ ಆಲಯಗಳ ಬುನಾದಿ ಪ್ರತಿಷ್ಠೆಗಳು ಯಾವಾಗ ನಡೆಯಿತೆಂಬುದನ್ನು ತಿಳಿಸುತ್ತವೆ. ಆಯಾ ದೇವರ ಪೂಜೆಮಾಡಿ ಆಗಿ ಹೋದ ರಾಜ ರಾಣಿಯರ ಕಥೆಗಳನ್ನೂ, ಆಲಯವು ಪಡೆದ ಜೀರ್ಣೋದ್ಧಾರ ಮರಮ್ಮತ್ತುಗಳನ್ನೂ ತಿಳಿಸುತ್ತವೆ. ಇದರ ಜೊತೆಗೇ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ರಾಜ, ರಾಣಿ, ಮನ್ನೆಯ, ಪಾಳಯಗಾರರು ಆಲಯಗಳಿಗೆ ದಾನ ಧರ್ಮಗಳನ್ನು ನೀಡಿ ಶಾಸನಗಳನ್ನು ಹಾಕಿಸಿದ್ದಾರೆ. ಇವುಗಳಿಂದಲೂ ಬಹು ಮೂಲ್ಯವಾದ ಐತಿಹಾಸಿಕ ವಿವರಗಳು ದೊರೆಯುವುವು.

ಹೈಂದವ ದೇವಾಲಯಗಳಲ್ಲಿ ಸಾಧಾರಣವಾಗಿ ಆಲಯದ ಮಧ್ಯಭಾಗದಲ್ಲಿ ಮುಖ್ಯವಾದ ಗರ್ಭಗುಡಿ ಇರುತ್ತದೆ. ಒಂದು ಆಯತಾಕಾರದ ಅಂಗಳದಲ್ಲಿ ಇನ್ನಿತರ ಉಪಕಟ್ಟಡಗಳಿರುವುದುಂಟು. ಈ ಅಂಗಳದ ಪೂರ್ವದಿಕ್ಕಿನಲ್ಲಿ ಸಾಮಾನ್ಯವಾಗಿ ಒಂದು ದೊಡ್ಡ ಗೋಪುರವಿದ್ದು ಮೈಲಿಗಳ ದೂರದಿಂದಲೂ ಕಾಣುವಂತಿರು ತ್ತದೆ. ಗರ್ಭಗುಡಿಯ ಮೇಲಿರುವ ಗೋಪುರವನ್ನು ವಿಮಾನವೆಂದು ಕರೆಯುವರು. ಇದು ಸಾಧಾರಣವಾಗಿ ಮೇಲಿನವರೆಗೆ ಅಲಂಕಾರಮಯ ಶಿಲ್ಪಗಳಿಂದ ಕೂಡಿರುತ್ತದೆ. ಕೇಂದ್ರದ ಗರ್ಭಗುಡಿಯು ಒಂದು ವೃತ್ತಾಕಾರದ ಅಥವಾ ಚೌಕಾಕಾರದ ಕೊಠಡಿಯಾಗಿದ್ದು ಇದರ ಸುತ್ತ ಭಕ್ತರು ಸುತ್ತಿಬರಲು ಒಂದು ಪ್ರದಕ್ಷಿಣಾಪಥವಿರುತ್ತದೆ. ಇದರ ಮುಂದೆ ಅರ್ಧಮಂಟಪ ಅಥವಾ ಕಂಬಗಳ ದೊಡ್ಡ ಮಂಟಪವಿದ್ದು ಇದಕ್ಕೆ ಒಂದು ದೊಡ್ಡ ದ್ವಾರವಿರುತ್ತದೆ. ಮಿಕ್ಕ ಮೂರು ಕಡೆಗಳಲ್ಲಿ ಸ್ಥಳಾವಕಾಶವಿರುವುದು. ಕಲ್ಯಾಣ ಮಂಟಪ, ನಾಟ್ಯಮಂಟಪ, ಮೊದಲಾದವುಗಳಿರು ತ್ತವೆ. ಅರ್ಧಮಂಟಪದಿಂದೀಚೆಗೆ ಮುಖ್ಯದ್ವಾರದ ಎರಡೂಕಡೆ ದ್ವಾರಪಾಲಕ ವಿಗ್ರಹಗಳಿರುತ್ತವೆ. ಗುಡಿ ಮುಂದೆ ಅಂಗಳದಲ್ಲಿ ಮಧ್ಯದಲ್ಲಿ ಶಿವದೇವಾಲಯದಲ್ಲಿಯಾದರೆ ಕುಳಿತಿರುವ ನಂದಿಯನ್ನು, ವಿಷ್ಣುದೇವಾಲಯವಾದರೆ ಗರುಡಮಂಟಪವನ್ನು ಕಾಣುತ್ತೇವೆ. ಅದರಿಂದಾಚೆಗೆ ಎಂದರೆ ಹೊರಗಿನಿಂದ ಬಂದಾಗ ಮೊದಲಿಗೆ ಬಲಿಪೀಠ ಧ್ವಜಸ್ತಂಭಗಳು ಕಂಡುಬರುವುವು. ಹೀಗಾಗಿ ಆಲಯದ ಮುಖ್ಯಲಕ್ಷಣಗಳು ಹೀಗೆಂದು ಪಟ್ಟಿ ಮಾಡಬಹುದು-

1. ಪಾವನ ಮೂರ್ತಿಯಾದ ದೇವರ ವಿಗ್ರಹವನ್ನು ಹೊಂದಿದ ಗರ್ಭಗೃಹ. ಇದರ ಮೇಲೆ ಗೋಪುರದಂತಹ ವಿಮಾನ.

2. ಗರ್ಭಗೃಹದ ಎದುರಿಗಿರುವ ಅರ್ಧಮಂಟಪ, ಅನಂತರ ಮಹಾಮಂಟಪ.

3. ಗರ್ಭಗೃಹಕ್ಕೆ ಹೊಂದಿಕೊಂಡ ಒಳ ಪ್ರದಕ್ಷಿಣಾ ಪಥ.

4. ದ್ವಾರಗೋಪುರ ಎನ್ನುವಂತಹ ಪ್ರವೇಶದ್ವಾರದ ಮೇಲಿನ ಗೋಪುರ.

5. ತೀರ್ಥಗಳು - ಆಲಯಗಳಿಗೆ ಹೊಂದಿಕೊಂಡ ಸ್ನಾನಕ್ಕಾಗಿ ಇರತಕ್ಕ ಪವಿತ್ರ ಜಲಾಶಯಗಳು - ಪುಷ್ಕರಿಣಿಗಳು.

6. ಪ್ರತಿಯೊಂದೂ ತಮ್ಮ ತಮ್ಮ ಖಚಿತ ಕಕ್ಷೆಯಲ್ಲಿರುವಂತಹ ಇತರ ಪರಿವಾರ ದೇವತೆಗಳ ಉಪದೇವಳಗಳು.

ಮೂಲಬೇರವನ್ನು ಸಾಮಾನ್ಯವಾಗಿ ಕಲ್ಲಿನಿಂದ ಮಾಡಲಾಗುತ್ತದೆ. ಆಗಮಶಾಸ್ತ್ರದ ಶಿಲ್ಪಶಾಸ್ತ್ರದ ಲಕ್ಷಣಗಳು ಹೇಳುವಂತೆ ಶಿಲ್ಪಿಯು ಅದನ್ನು ಕೆತ್ತಬೇಕಾಗುತ್ತದೆ. ಈ ನಿಯಮಗಳು ಅನುಲ್ಲಂಘನೀಯವಾದವು. ಕೆತ್ತನೆಯ ಕೆಲಸವನ್ನು ಆರಂಭಿಸುವ ಮೊದಲು ಶಿಲ್ಪಿಯು ತಾನು ಕೆತ್ತುವ ದೇವರನ್ನು ಧ್ಯಾನಿಸಿ ಶಿಲ್ಪಶಾಸ್ತ್ರ ವಿವರಿಸಿರುವಂತಹ ಸ್ವಾಮಿಯ ಚಿತ್ರವನ್ನು ಮನದಲ್ಲಿ ಶಾಶ್ವತವಾಗಿ ನಿಲ್ಲಿಸಿ ಕೊಳ್ಳಬೇಕು. ಆತನ ಶಿಲ್ಪ ನೈಪುಣ್ಯವು ಆತನ ಧ್ಯಾನಶಕ್ತಿಯ ಜೊತೆ ಸೇರಿ ವಿಗ್ರಹದ ತಯಾರಿಯಲ್ಲಿ ನೆರವು ನೀಡುತ್ತದೆ. ಅವನಿಗೆ ಈ ಧ್ಯಾನದಲ್ಲಿ ನೆರವು ನೀಡುವ ಹಲವಾರು ಧ್ಯಾನ ಶ್ಲೋಕಗಳಿವೆ. ವಿಗ್ರಹಗಳನ್ನು ಸಮಭಂಗಿ, ತ್ರಿಭಂಗಿಗಳಲ್ಲಿ ಮೂಡಿಸಬಹುದು. ವಿಗ್ರಹಗಳ ಜೊತೆಗೇ ಆಲಯದ ಗೋಡೆಗಳಲ್ಲಿಯೂ ವಿವಿಧ ಪುರಾಣದ ಕಥಾ ಸಂದರ್ಭಗಳನ್ನು ಸುಂದರವಾಗಿ ಕೆತ್ತಬಹುದಾಗಿದೆ.

ಪ್ರಾಚೀನ ಕಾಲದಲ್ಲಿ ಗ್ರಾಮದಲ್ಲಿ ಆಲಯಗಳು ಅತ್ಯಂತ ಚಟುವಟಿಕೆಯ ಕೇಂದ್ರಗಳಾಗಿದ್ದವು. ಇಡೀ ಗ್ರಾಮ ಜೀವನವೇ ಆಲಯದ ದೈನಿಕ ಕೆಲಸಕಾರ್ಯಗಳಿಗೆ ಹೊಂದಿಕೊಂಡು ನಡೆಯುತ್ತಿದ್ದಿತು. ವರ್ಷದ ಹನ್ನೆರಡು ತಿಂಗಳೂ ಆಲಯದಲ್ಲಿ ವಿವಿಧ ರೀತಿಯ ಉತ್ಸವಗಳನ್ನು ಏರ್ಪಡಿಸಲಾಗುತ್ತಿದ್ದಿತು. ಜೀವನದಲ್ಲಿ ಶ್ರೇಷ್ಠ, ಪವಿತ್ರ ಎಂದು ಭಾವಿಸುವ ಎಲ್ಲವನ್ನೂ ಮೊದಲು ದೇವರಿಗೆ ಅರ್ಪಿಸಿ, ತದನಂತರ ಇತರರ ಅನುಭವಕ್ಕೆ ವಿತರಣೆ ಆಗುತ್ತಿದ್ದಿತು. ಈ ಆಲಯಗಳಲ್ಲಿ ನಡೆಯಬೇಕಾದ ಪೂಜೆ ಉತ್ಸವಗಳ ಬಗ್ಗೆ ವಿವರಗಳನ್ನು ನೀಡುವ ಆಗಮಗಳು ಮೂರು ಮುಖ್ಯ ಸಂಗತಿಗಳನ್ನು ತಿಳಿಸುತ್ತವೆ. ಅವುಗಳೆಂದರೆ ಸ್ಥಳ - ಆಲಯವಿರುವ ನೆಲೆ - ಕ್ಷೇತ್ರ, ತೀರ್ಥ ಪವಿತ್ರವಾದ ನೀರು, ಮೂರ್ತಿ - ಆಲಯದಲ್ಲಿ ಪೂಜೆ ಗೊಳ್ಳುವ ಮೂರ್ತಿ. ಸ್ಥಳ ವೃಕ್ಷಗಳೆಂದು ಕರೆಯಲ್ಪಡುವ ವಿವಿಧ ಆಲಯಗಳ ಪರಿಸರದಲ್ಲಿ ಬೆಳಸಬೇಕಾದ ಮರಗಳ ಬಗೆಗಿನ ವಿವರಗಳನ್ನೂ ಈ ಆಗಮಗಳು ನೀಡುತ್ತವೆ.

ಮುಖ್ಯ ಆಲಯದ ಬಗ್ಗೆ ಮಾತ್ರವೇ ಚಿಂತಿಸುವುದಾದರೆ ಇದನ್ನು ಮೂರು ವಿಧದಲ್ಲಿ- ಚೌಕಾಕಾರವಾಗಿ (ಆಯತಾಕಾರವಾಗಿ) ಅಥವಾ ವೃತ್ತಾಕಾರವಾಗಿ ಅಥವಾ ನಕ್ಷತ್ರಾಕಾರವಾಗಿ ನಿರ್ಮಿಸಬಹುದು. ಚೌಕಾಕಾರದ ಆಲಯವನ್ನು ಸ್ಥಂಡಿಲವೆಂದೂ, ವೃತ್ತಾಕಾರದ ಆಲಯವನ್ನು ಮಂಡಲವೆಂದೂ ಕರೆಯುವರು. ಇವೆರಡೂ ಆಕಾರಗಳನ್ನು ವೇದಗಳ ಆಧಾರದಿಂದಲೇ ಪಡೆಯಲಾಗಿದೆ. ವೈದಿಕ ಯಜ್ಞಗಳಲ್ಲಿನ ಅಗ್ನಿಗುಂಡಗಳು ಚೌಕಾಕಾರ ಅಥವಾ ವೃತ್ತಾಕಾರವಿದ್ದು ಆಹವನೀಯ ಹಾಗೂ ಗಾರ್ಹಸ್ಪತ್ಯ ಅಗ್ನಿಗಳ ಕುಂಡಗಳು ಹೀಗೇ ಇರುತ್ತವೆ. ಈಗಲೂ ಸಹ ನಾವು ನಡೆಸುವ ಶ್ರಾದ್ಧ ಕಾರ್ಯಗಳಲ್ಲಿ ಆಹ್ವಾನಿಸುವ ಪಿತೃದೇವತೆಗಳಿಗೆ ಹಾಗೂ ವಿಶ್ವೇದೇವರುಗಳಿಗೆ ಬೇರೆ ಬೇರೆಯಾದ ಆಸನಗಳನ್ನು ನೀಡುತ್ತೇವೆ. ಪಿತೃದೇವತೆಗಳ ಮಂಡಲ ರೀತಿಯ ಆಸನ ನೀಡಿದರೆ ವಿಶ್ವೇದೇವತೆಗೆ ಸ್ಥಂಡುಲಾಸನ ನೀಡುತ್ತೇವೆ.

ನಕ್ಷತ್ರಾಕಾರದ ಆಲಯವು ಬಹು ಅಪರೂಪವಾಗಿರುವುದು. ಆಂಧ್ರಪ್ರದೇಶದಲ್ಲಿ ಚೇಜರ್ಲದ ಕಪೋತೇಶ್ವರಾಲಯವು ಮಾತ್ರ ಈ ರೀತಿಯಲ್ಲಿ ನಿರ್ಮಿತವಾಗಿದೆ. ಇದು ದಕ್ಷಿಣಾಗ್ನಿ ವಿಧಾನದ ಮಾದರಿಯಾಗಿರಬೇಕು.

ಆಲಯ ವಾಸ್ತುವಿನ ಬಗ್ಗೆ ಹೇಳುವುದಾದರೆ ಇದರಲ್ಲಿ ಮೂರುವಿಧ. ನಾಗರಿ, ವೇಸರ ಹಾಗೂ ದ್ರಾವಿಡ. ಆಗಮಗಳ ಪ್ರಕಾರ ನಾಗರ ಪದ್ಧತಿಯಲ್ಲಿ ಕಂಠದಿಂದ ಕಡೆಯವರೆಗೆ ಚತುರಸ್ರಾಕಾರವಾಗಿರುತ್ತದೆ. ದ್ರಾವಿಡ ಶೈಲಿಯು ಕಂಠದಿಂದ ಶಿರದವರೆಗೆ ಅಷ್ಟ ಭುಜವಾಗಿದ್ದು, ವೇಸರ ಶೈಲಿಯಲ್ಲಿ ಕಂಠದಿಂದ ಶಿಖೆಯವರೆಗೆ ವರ್ತುಲಾಕಾರವುಂಟು.

## 2. ಆಲಯಗಳು ಹಾಗೂ ತೀರ್ಥಗಳು

ಜನನದಿಂದ ಮರಣದವರೆಗೆ ನಡೆಯುವ ಜೀವನ ಯಾತ್ರೆಯಲ್ಲಿ ಅನೇಕ ತಂಗುದಾಣಗಳು. ಭಾರತದಲ್ಲಿಯಾದರೋ ಮರಣ ವೆನ್ನುವುದೂ ಮತ್ತೊಂದು ವಿಶ್ರಾಮಘಟ್ಟವಾಗಿ ಯಾತ್ರೆ ಮುಗಿಯುವುದಿಲ್ಲ ಎಂದರೆ ಮರಣದಿಂದ ಮೋಕ್ಷವಾಗದು. ಎಲ್ಲ ರಿತಿಯ ಬಂಧನಗಳಿಂದ, ಕೊರತೆಗಳಿಂದ ಬಿಡುಗಡೆಯೆಂಬುದು ಬ್ರಹ್ಮವಿದ್ಯೆಯಿಂದ - ಪರಾಜ್ಞಾನದಿಂದ - ಉಂಟಾಗುತ್ತದೆ. ಈ ಪರಮಪಡಿ ಕಾಣುವ ವಿದ್ಯೆಯೇ ಸಾಧನೆಯೂ ಸಿದ್ಧಿಯೂ ಆಗಿದೆ. ಇದೇ ಮುಕ್ತಿ. ಕೆಲವರಿಗೆ ಬದುಕಿದ್ದಾಗಲೇ ದೊರತರೆ ಜೀವನ್ಮುಕ್ತಿ. ಕೆಲವರಿಗೆ ಈ ಲೋಕದಿಂದ ದೂರವಾದಾಗ ದೊರೆಯುತ್ತದೆ. ಆದರೆ ಈ ರೀತಿಯ ಪರಮ ಜ್ಞಾನವನ್ನು ಪಡೆಯಲಾರದ ಬಹುಮಂದಿಗೆ ಸಹ ಕೇಂದ್ರವನ್ನು ತಲುಪುವ ದಾರಿ ತೆರೆದೇ ಇರುವುದು. ಅದೆಂದರೆ ತೀರ್ಥಯಾತ್ರೆ. ತಮ್ಮ ಕರ್ಮಗಳ ಮೇಲೆ ಹತೋಟಿಯಿದ್ದವರಿಗೆ (ಇಂದ್ರಿಯಗಳನ್ನು ಗೆದ್ದವರಿಗೆ) ಯುಕ್ತಾಯುಕ್ತ ವಿವೇಚನೆ ಇದ್ದವರಿಗೆ, ಸನ್ಮಾರ್ಗ ಪ್ರವರ್ತಕರಿಗೆ ಇದರಿಂದಾಗಿ ಸಂತಸವೂ ಮೋಕ್ಷವೂ ದೊರೆಯುವುವು.

ಇಡೀ ದೇಶದ ತುಂಬೆಲ್ಲ ಈ ಯಾತ್ರಾ ಸ್ಥಳಗಳು ಹರಡಿದ್ದು ಇವುಗಳನ್ನು ತೀರ್ಥಗಳೆಂದೂ, ಕ್ಷೇತ್ರಗಳೆಂದೂ ಕರೆಯುವರು. ಈ ಪವಿತ್ರ ಕ್ಷೇತ್ರಗಳ ಸಂಖ್ಯೆ ತೀರ ಹೆಚ್ಚಾಗಿದೆ. ಮಹಾಭಾರತವು ನೂರಾರು ಪುಣ್ಯಕ್ಷೇತ್ರಗಳ ಬಗ್ಗೆ ಮಾತನಾಡುತ್ತೆ.

ತೀರ್ಥವೆಂಬುದು ಸಮುದ್ರ ದಡದ ನದೀದಡದ ಅಥವಾ ಸರೋವರದ ದಡದಲ್ಲಿನ ಪುಣ್ಯಸ್ಥಳ. ತೀರ್ಥವೆಂದರೆ ಕಾಲುಹೊಳೆ ಅಥವಾ ದಾರಿ. ಪರಿಶುದ್ಧಗೊಳಿಸುವ ಫಲವತ್ತು ಮಾಡುವ ನೀರು ಜೀವನದ ಅಂತರಾರ್ಥವನ್ನು ತಿಳಿದು ದಾಟುವಂತೆ ಸಹಾಯಕವಾದದ್ದ ರಿಂದ ಯಾತ್ರಿಕನು ಇನ್ನೊಂದು ದಡವನ್ನು ತಲುಪುವಲ್ಲಿ ತೀರ್ಥಗಳು ನೆರವಿಗೆ ಬರುತ್ತದೆ. ಕೇಂದ್ರದತ್ತಣ ಪಯಣಕ್ಕೆ ತೀರ್ಥಕ್ಷೇತ್ರ ಯಾತ್ರೆಯೇ ಕೊನೆಯ ಮಜಲು. ಆದರೆ ಇದೇ ಗಮ್ಯವಲ್ಲ. ಇಲ್ಲಿಂದ ಮುಂದೆ ಹಾಯ್ದು ಬಂದರೆ ಕೇಂದ್ರ ಗುರಿ ದೊರೆಯುವುದು ನಿಶ್ಚಯ. ಹೀಗಾಗಿಯೇ ತೀರ್ಥಕ್ಷೇತ್ರಗಳ ಸಂಖ್ಯೆ ಅಪಾರ.

ಭಾರತೀಯ ನೆಲದಲ್ಲಿನ ತೀರ್ಥಕ್ಷೇತ್ರಗಳಲ್ಲಿ ದೈವ ಸಾನ್ನಿಧ್ಯವಿರಲು ಅವಕಾಶವಿದೆ. ಈ ಸ್ಥಳಗಳಲ್ಲಿ ಇಂತಹ ಅನುಭವವಾಗು ವುದು ಸಹಜ. ಇಂತಹ ಕೇಂದ್ರಗಳ ಬಗ್ಗೆ ಜನರ ಅಭಿಮಾನ ಭಕ್ತಿಗಳು ಕೇಂದ್ರೀಕೃತವಾಗಿ ಇವುಗಳನ್ನು - ಈ ಪ್ರದೇಶಗಳನ್ನು ನೆನಪಿನಲ್ಲಿ ಉಳಿಯುವಂತೆ ಮಾಡುತ್ತವೆ. ಇಂತಹ ಸ್ಥಳಗಳು ದೇವತೆಗಳ ಅಡುಂಬೊಲವಾಗಿರುತ್ತವೆ.

ಬೃಹತ್ ಸಂಹಿತೆ ಹೇಳುವಂತೆ ಇಲ್ಲಿ ಕಮಲ ಪುಷ್ಪಗಳನ್ನು ತಮ್ಮ ಎದೆಯಿಂದ ಆಚೀಚೆ ತಳ್ಳುತ್ತ ನೀರಿನಲ್ಲಿ ಈಜುವ ಹಂಸಗಳು ನೀರಿನಲ್ಲಿಯೇ ಎಲ್ಲಿ ದಾರಿಯನ್ನುಂಟು ಮಾಡುವುವೋ ಅಂತಹ ಕಡೆಗಳಲ್ಲಿ ದೇವತೆಗಳು ಕ್ರೀಡಾತುರರಾಗಿ ಓಡಿಯಾಡುವರು. ಹಂಸಗಳು, ಬಾತು ಕೋಳಿಗಳು, ಭತ್ತದ ಗದ್ದೆಯ ಹಕ್ಕಿಗಳು ಹಾರಾಡುತ್ತ ಕಲರವನಾದ ಮಾಡುತ್ತ ಇರುತ್ತವೆ. ನದಿಯ ದಡದ ನಿಚುಲ ವೃಕ್ಷಗಳ ನೆರಳಿನಲ್ಲಿ ಜಾನುವಾರುಗಳು ಆರಾಮವಾಗಿ ಮಲಗಿರುತ್ತವೆ. ಇಂತಲ್ಲಿ ದೇವತೆಗಳು ಆಡುತ್ತಿರುತ್ತಾರೆ.

ಹರಿವ ನೀರಿನ ಝುಳಝುಳು ನಾದವೇ ಗೆಜ್ಜೆಯ ಶಬ್ದವಾಗಿ ಆ ನೀರಿನಲ್ಲಿ ಈಜುವ ಹಂಸಗಳ ಕಲರವವೇ ಮಾತಾಗಿ, ಹರಿಯುವ ನೀರೇ ಉಡುಪು ಎಂದೆನಿಸಿ, ನೀರಿನ ದಡದಲ್ಲಿನ ಗಿಡಗಳಲ್ಲಿ ಅರಳಿರುವ ಹೂವುಗಳೇ ಕರ್ಣಪತ್ರಗಳಾಗಿ, ವಿವಿಧ ಹೊಳೆಸಂಗಮವೇ

ಪೃಷ್ಠಗಳಾಗಿ, ನದಿಗಳ ದಡದ ಮರಳಿನ ದಿಬ್ಬಗಳೇ ಸ್ತನಗಳಾಗಿ ಹಾರುವ ಹಂಸಗಳೇ ಕಿರೀಟದ ಮುಡಿಯಾಗಿರುವ ನದಿ ದಡಗಳಲ್ಲಿ ದೇವತೆಗಳು ಕ್ರೀಡಿಸುತ್ತಾರೆ.

ನದಿಗಳೂ, ಪರ್ವತಗಳೂ, ನೀರಿನ ಚಿಲುಮೆಗಳು, ನಗರದ ಉದ್ಯಾನಗಳು, ತೋಪುಗಳಲ್ಲಿ ದೇವತೆಗಳು ಯಾವಾಗಲೂ ಆಡುತ್ತಿರುತ್ತಾರೆ. ಇಂತಹ ಸ್ಥಳಗಳ ಬಗ್ಗೆ ದೇವತೆಗಳು ಆದರ ಹೊಂದಿ ಇಲ್ಲಿ ಇರಬಯಸುವರು.

(ಬೃಹತ್ ಸಂಹಿತೆ -LV-4-8) ಭವಿಷ್ಯ ಪುರಾಣ 1-130-11-15)

ಆಲಯ ಸಂಪ್ರದಾಯಗಳ ಬಗ್ಗೆ ಮತ್ತೊಂದು ಪ್ರಾಚೀನ ಗ್ರಂಥ ನೀಡುವ ವಿವರ ಹೀಗಿದೆ -

“ನದೀ ದಂಡೆಗಳಲ್ಲಿ, ಸರೋವರದ ದಡಗಳಲ್ಲಿ ಸಮುದ್ರತಟಿಯಲ್ಲಿ, ಮಾತ್ರವೇ ದೇವರನ್ನು ಪ್ರತಿಷ್ಠಿಸಬೇಕೆಂದೇನಿಲ್ಲ. ಗಿರಿ ಶಿಖರಗಳಲ್ಲಿ, ಪರ್ವತ ಕಂಧರಗಳಲ್ಲಿ, ಅರಣ್ಯಪ್ರದೇಶಗಳಲ್ಲಿ, ಉಪವನ ಉದ್ಯಾನವನಗಳಲ್ಲಿ, ಆಶ್ರಮಗಳಲ್ಲಿ,ಗ್ರಾಮ, ನಗರಗಳಲ್ಲಿ ದೇವರ ವಿಗ್ರಹ ಪ್ರತಿಷ್ಠಾಪನೆಯಾಗಬಹುದು. (ತಂತ್ರ ಸಮುಚ್ಚಯ) ಒಟ್ಟಿನಲ್ಲಿ ಹೇಳುವುದಾದರೆ ಆಲಯವಿರುವ ಪ್ರದೇಶವುಯಾವುದಾದರೂ ಅದು ತೀರ್ಥವೇನೇ. ವಿಷ್ಣು ಧರ್ಮೋತ್ತರ ಪುರಾಣವು ಅರ್ಚಾ ವಿಗ್ರಹಗಳ ಪ್ರತಿಷ್ಠಾಪನೆಯು ಕೋಟೆಗಳಲ್ಲಿನ ನಗರಗಳಲ್ಲಿನ ಅಂಗಡಿ ಬೀದಿಗಳ ಕೊನೆಯಲ್ಲಿ ಆಗಬೇಕು. ಗ್ರಾಮಗಳಲ್ಲಿಯಾದರೋ ಅಂಗಡಿಗಳಿಲ್ಲದ ಮನೆಗಳಿಲ್ಲದ ಪ್ರತ್ಯೇಕ ಸ್ಥಳಗಳಲ್ಲಿ ಆಗಬೇಕು. ಅರಣ್ಯಗಳಲ್ಲಿ, ಉಪವನಗಳಲ್ಲಿ, ಕೊಳಗಳ ಬದಿಯಲ್ಲಿ, ಪರ್ವತ ಶಿಖರಗಳಲ್ಲಿ, ಸುಂದರವಾದ ಕಣಿವೆಗಳಲ್ಲಿ, ಗುಹೆಗಳಲ್ಲಿ ವಿಗ್ರಹ ಪ್ರತಿಷ್ಠೆ ಆಗಬಹುದು. ನೀರಿಲ್ಲದ ಎಡೆಗಳಲ್ಲಿ ದೇವತೆಗಳ ಉಪಸ್ಥಿತಿಯಿಲ್ಲ. ಹೀಗಾಗಿ ಎಲ್ಲಿ ಎಡಗಡೆಗೆ ಅಥವಾ ಎದುರಿಗೆ ಜಲದ ಅವಕಾಶವಿದೆಯೋ ಅಲ್ಲಿ ವಿಗ್ರಹ ಪ್ರತಿಷ್ಠಾಪನೆ ಆಗಬಹುದು”. ದ್ವೀಪದಲ್ಲಿ ಆಲಯವನ್ನು ನಿರ್ಮಿಸಿದಲ್ಲಿ ಸುತ್ತ ನೀರು ಇರುವುದರಿಂದ ಅತ್ಯುತ್ತಮವಾಗಿ ಪವಿತ್ರವಾಗಿರುವುದು.

ನೀರಿನ ಉಪಸ್ಥಿತಿ ಅತ್ಯಗತ್ಯ. ಆದರೆ ಅದು ನೈಸರ್ಗಿಕವಾಗಿ ಅಥವಾ ಪ್ರಯತ್ನ ಪೂರ್ವಕವಾಗಿ ದೊರೆಯದಿದ್ದಲ್ಲಿ ಆಲಯದ ಅಥವಾ ವಿಗ್ರಹದ ಕೆಳಭಾಗದಲ್ಲಿ ಸಾಂಕೇತಿಕವಾಗಿ ದೊರೆಯುವುದೆಂದು ಭಾವನೆ. ಹೀಗಾಗಿ ‘ಅಧಿವಾಸ’ ಕಾಲದಲ್ಲಿ (ವಿಗ್ರಹಕ್ಕೆ ದೇವರ ಸನ್ನಿಧಿಯನ್ನು ಗಳಿಸಿಕೊಳ್ಳುವ ಪ್ರಕ್ರಿಯೆ) ವಿಗ್ರಹವನ್ನು ಒಂದು ಕೆರೆ ಹೊಳೆ ನದಿಯ ನೀರಿನಲ್ಲಿ ಸ್ವಲ್ಪ ಮೇಲ್ಭಾಗಕ್ಕೆ ಕಟ್ಟಿದ ಮಂಚದಲ್ಲಿ ನೀರಿನೊಳಗೆ ಮುಳುಗಿಸಿ ಇಡುತ್ತಾರೆ. ಯೋಗೇಶ್ವರನಿಗೆ ನಿವೇದನೆಯನ್ನು ಅರ್ಪಿಸುವರು. ಶಬ್ದಬ್ರಹ್ಮನ ಪೂಜೆ ಯಾಗುವುದು. ಸಾಗರಗಳು, ಪರ್ವತಗಳು, ಋಷಿಗಳು, ಪಿತೃಗಳು, ಭೂತಗಣ, ವರುಣ, ರುದ್ರ, ಮರುತರಿಗೆ, ಪೂಜೆಗಳಾಗುವುವು. ನದಿ ಹೊಳೆ ಕೆರೆ ಕುಂಟೆಗಳಿಲ್ಲದಿರುವಲ್ಲಿ ಮೂರು ಕುಂಭಗಳ ನೀರನ್ನು ಬ್ರಹ್ಮಸ್ಥಾನದಲ್ಲಿಡುವರು (ಕ್ಷೇತ್ರದ ಕೇಂದ್ರ).

ತೀರ್ಥವಿರುವಲ್ಲಿ ಆಲಯಗಳ ನಿರ್ಮಾಣವಾಯಿತು. ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತೆ ಅದರ ಎಲ್ಲ ಭಾಗಗಳೂ ರೂಪುಗೊಂಡವು. ಹಂತ ಹಂತವಾಗಿ, ಮೆಟ್ಟಿಲು, ಮೆಟ್ಟಿಲಾಗಿ, ಇವುಗಳ ನೋಡುವವರ ಮನವನ್ನು ಆವರಿಸಿ ಈ ಲೋಕದಿಂದ ಮೇಲಿನ ಲೋಕಗಳ ಕಡೆಗೆ ಒಯ್ಯುವಂತೆ ರೂಪುಗೊಂಡವು. ಹಿರಿದಾದ ಅಸ್ತಿವಾರದೊಡನೆ ಇವು ಮೇಲೇಳುವಂತಾಯಿತು. ವಿವಿಧಶೈಲಿ ಪದ್ಧತಿಗಳಿಗೆ ತಕ್ಕಂತೆ ಕಾಲ ದೇಶಗಳಲ್ಲಿ ಪರಿ ವರ್ತನೆ ಹೊಂದುತ್ತ ಬೆಳೆದವು. ಇಂದು ದಕ್ಷಿಣ ಭಾರತದಲ್ಲಿ ಕಂಡುಬರುವಂತೆ ಅಗಲ ತಳದಿಂದ ಪಿರಮಿಡ್ ಆಕಾರದಲ್ಲಿ ಮೇಲೇರುವುವು. ಉತ್ತರ ಭಾರತದಲ್ಲಿಯಾದರೋ ವೃತ್ತಾಕಾರವಾಗಿ ಬೆಳೆದು ಶಿಖರದ ಕಡೆ ಏರುವಂತೆ ಚೂಪು ಮುಖವಾಯಿತು. ಹಲವು ಬಾರಿ ಆಲಯಗಳು ಅನೇಕ ದೇವತೆಗಳ ಒಂದು ಮಹಾನಗರವೇ ಆಗಿಬಿಡಬಹುದು. ಇಲ್ಲಿನ ನಿರ್ಮಾಣವು ಒಂದು ಆಲಯ ಸಮುದಾಯವಾಗಿದ್ದು ಪ್ರತ್ಯೇಕ ಆಲಯವೂ ಸಣ್ಣದಾಗಿರುತ್ತದೆ. ಯಾವುದೇ ಆಲಯವು ಎಲ್ಲಿಯೇ

ನಿಂತಿರಲಿ ಯಾವ ಕಾಲದಲ್ಲಿ ಕಟ್ಟಿರುವಂತಹದೇ ಆಗಿರಲಿ ಅದು ಒಂದೇ ಸೂತ್ರದನ್ವಯ ನಿರ್ಮಾಣವಾಗಿರುತ್ತದೆ. ಅದೆಂದರೆ ವಾಸ್ತು ಪುರುಷ ಮಂಡಲ.

## 3. ಸಾಮಾಜಿಕ ಕೇಂದ್ರವಾಗಿ ಆಲಯ

ಆಲಯದ ಸುತ್ತಲೂ ಸಮುದಾಯದ ಸಾಮಾಜಿಕ ಜೀವನವು ಹರಡಿದ್ದಿತು. ಆಲಯದ ಕೆಲಸಗಳನ್ನು ಗ್ರಾಮದ ಜನರೆಲ್ಲ ಸಮಾನವಾಗಿ ಹಂಚಿಕೊಂಡು ಮಾಡುತ್ತಿದ್ದರು. ಆಲಯದ ಹಲವು ಮಂಟಪಗಳಲ್ಲಿ ಪುರಾಣಗಳ ಇತಿಹಾಸಗಳ ವಿವರಗಳನ್ನು ನೀಡಲಾಯಿತು. ಇಲ್ಲಿ ಧರ್ಮಶಾಸ್ತ್ರಗಳನ್ನೂ ವಿವರಿಸಲಾಯಿತು. ಹಲವು ಆಲಯಗಳಲ್ಲಿನ ರಂಗಮಂಟಪಗಳಲ್ಲಿ ನೃತ್ಯ ಸಂಗೀತ ಕಾರ್ಯಕ್ರಮಗಳೂ ನಡೆಯುತ್ತಿದ್ದವು. ಆಲಯಗಳಲ್ಲಿ ತುಲಾಭಾರವನ್ನೂ ಹಿರಣ್ಯದಾನವನ್ನೂ ರಾಜರುಗಳು ನಡೆಸುತ್ತಿದ್ದರು. ಆಲಯಗಳು ಶಿಕ್ಷಣ ಕೇಂದ್ರಗಳೂ ಆಗಿ ಶ್ರುತಿಸ್ಮೃತಿಗಳ ಪಾಠವೂ ನಡೆಯುತ್ತಿದ್ದಿತು. ಜೊತೆಗೇ ವರ್ಷದ ಹನ್ನೆರಡು ತಿಂಗಳೂ ವಿವಿಧ, ಉತ್ಸವ,ಹಬ್ಬಗಳು ಆಚರಿಸಲ್ಪಟ್ಟು ದೇವರನ್ನು ಪ್ರತ್ಯಕ್ಷ ರಾಜನಂತೆಯೇ ನೋಡಿ ರಾಜನಿಗೆ ಹೊಂದುವ ಸಕಲಗೌರವಗಳನ್ನು ಅವನಿಗೆ ನೀಡಲಾಗುತ್ತಿದ್ದಿತು. ಉದಾಹರಣೆಗಾಗಿ ತಿರುಮಲೆಯ ಆಲಯದಲ್ಲಿ ಪ್ರತಿದಿನವೂ ಪಂಚಾಂಗ ಶ್ರವಣ ನಡೆದು ರಾಜಾಸ್ಥಾನದಲ್ಲಿ ಲೆಕ್ಕಪತ್ರಗಳನ್ನು ಒಪ್ಪಿಸುವಂತೆಯೇ ಸಮರ್ಪಿಸಲಾಗುತ್ತದೆ. ಹೀಗೆ ನಮ್ಮ ನಾಡಿನಲ್ಲಿ ಆಲಯಗಳು ಒಂದು ಪ್ರತ್ಯೇಕವಾದ ವಿಶಿಷ್ಟವಾದ ಸಂಸ್ಥೆಯಾಗಿದೆ. ಅಂತಹ ಸಂಸ್ಥೆಗಳು ಇತರೆಡೆಯಲ್ಲಿ ಕಂಡು ಬರುವುದಿಲ್ಲ. ಆಲಯವು ಸಾಮಾಜಿಕ ಜೀವನದ ಕೇಂದ್ರವಾಗಿ ಇಡೀ ಭಾರತೀಯ ಜೀವನವು ಧಾರ್ಮಿಕ ಆಧಾರದಲ್ಲಿ ಬೆಳೆದಿರುವುದಾಗಿದೆ. ಇಲ್ಲಿ ಎಲ್ಲ ರೀತಿಯ ಜನರನ್ನು ಕಾಣಬಹುದು. ಕುಂಡಲಿನಿಯ ಸಾಧನೆಯಲ್ಲಿ ತೊಡಗಿದ ಯೋಗಿ, ದೈವದ ಬಗ್ಗೆ ಕಾಳಜಿ ಹೊಂದಿದ ಜೀವನ್ಮುಕ್ತ, ದೇವರಿಗೆ ತಮ್ಮ ಸಾಧನಾಫಲವಾಗಿ ಸಂಗೀತ ನೃತ್ಯವನ್ನು ಸಮರ್ಪಿಸುವ ಕಲಾವಿದರು, ಆಧ್ಯಾತ್ಮಿಕ ಅನುಭಾವದಲ್ಲಿ ಪರವಶವಾಗಿರುವ ಭಕ್ತರು, ರಸಾರ್ದ್ರವಾದ ಸಂಕೀರ್ತನ ಸೃಷ್ಟಿಯಲ್ಲಿ ತೊಡಗಿರುವ ಭಕ್ತ ಕವಿಗಳು, ಸ್ವಾಮಿಗೆ ತಮ್ಮ ಅರೆಕೊರೆಗಳನ್ನು ತಿಳಿಸುತ್ತ ಸರಿಪಡಿಸಲು ಮೊರೆಯಿಡುತ್ತಿರುವ ಗೃಹಸ್ಥರು, ಆರೋಗ್ಯಕ್ಕಾಗಿ ಅಭ್ಯರ್ಥನೆ ನಡೆಸಿರುವ ಜರಾಬಂಧಿತರು, ಅರ್ಥಕ್ಕಾಗಿ ಬೇಡುವ ಆರೋಗ್ಯವಂತರು, ಮೊದಲಾಗಿ ವಿವಿಧ ರೀತಿಯ ಜನಗಳನ್ನು ಕಾಣಬಹುದು.

ಮೇಲೆ ವಿವರಿಸಿದ ಆಲಯ ಪರಿಕಲ್ಪನೆಗೆ ತಿರುಮಲೆಯ ಆಲಯವು ಸಾಧಾರಣವಾಗಿ ಉದಾಹರಣೆಯಾಗುತ್ತದೆ.

## 4. ವಿಶಿಷ್ಟ ಆಚಾರ ಪರಂಪರೆ

ಪ್ರಾಚೀನ ಕಾಲದಿಂದಲೂ ಆಚರಣೆಯಲ್ಲಿರುವ ಹಲವು ಆಚರಣೆಯಲ್ಲಿದ್ದು ಹಲವು ವಿಶಿಷ್ಟವಾದ ಆಚಾರಗಳು ತಿರುಮಲೆಯಲ್ಲಿ ಪವಿತ್ರವೆಂದು ಪರಂಪರಾಗತವಾಗಿ ನಂಬಲಾಗಿದೆ. ಹಿಂದೆಯೇ ಹೇಳಲಾಗಿರುವ ವೆಂಕಟಾಚಲ ಇತಿಹಾಸ ಮಾಲೆ ಪುಸ್ತಕವು ರಾಮಾನುಜರಿಂದ ಪ್ರವೇಶವಾದ ಹಲವು ಆರಾಧನಾ ವಿಧಿಗಳನ್ನು ಹೆಸರಿಸುತ್ತದೆ. ಇತಿಹಾಸ ಮಾಲೆಯ ನಾಲ್ಕನೆಯ ಸ್ತಬಕದಲ್ಲಿ ಈ ವಿವರಗಳು ಚಿತ್ರಿತವಾಗಿವೆ . ಅವುಗಳೆಂದರೆ-

1. ದೇವರ ಮುಖಕ್ಕೆ ಪಚ್ಚ ಕರ್ಪೂರದ ತೊಡವು ಇರಬೇಕು.

2. ದೇವರ ಹಣೆಯಲ್ಲಿ ಸೋಮವಾರ ಮಂಗಳವಾರ ಬುಧವಾರಗಳಲ್ಲಿ ತಿರುಮಣ್ ನಾಮ ವಿರಬೇಕು.

3. ದೇವರ ಕಣ್ಣುಗಳಿಗೆ ಕಾಡಿಗೆಯನ್ನು ಹಚ್ಚಬೇಕು.

4. ಗುರುವಾರಗಳಂದು ಸ್ವಾಮಿಯ ಎಲ್ಲ ಆಭರಣಗಳನ್ನೂ ತೆಗೆದು ಹೂವಿನ ಅಲಂಕಾರ ಮಾಡಬೇಕು.

5. ಶುಕ್ರವಾರಗಳಂದು ಈ ಹೂವಿನ ಅಲಂಕಾರವನ್ನು ತೆಗೆದು ದೇವರಿಗೆ ಅಭಿಷೇಕ ಮಾಡಿ ತಿರುಮಣ್ ನಾಮವನ್ನು ಹಚ್ಚಬೇಕು.

6. ಶುಕ್ರವಾರಗಳಲ್ಲಿ ಸ್ವಾಮಿ ವಕ್ಷಃಸ್ಥಲದಲ್ಲಿನ ಲಕ್ಷ್ಮಿಯನ್ನು ಅಭಿಷೇಕ ಸಮಯದಲ್ಲಿ ತೆಗೆಯುವಾಗ ನಾಚ್ಚಿಯಾರ್ ತಿರುಮೊಳಿಯನ್ನು ಹಾಡಬೇಕು.

7. ತಿರುಮಲೆಯಲ್ಲಿ ವರಾಹಸ್ವಾಮಿಯ ಪೂಜೆ ಮೊದಲಿಗೆ ಆಗಬೇಕು. ಈ ದೇವರಿಗೇ ಮೊದಲು ನೈವೇದ್ಯವಾಗಬೇಕು. ಯಾತ್ರಿಕರು ತಿರುಮಲೆಯಲ್ಲಿ ಶ್ರೀವೆಂಕಟೇಶ್ವರಸ್ವಾಮಿಯನ್ನು ಪೂಜಿಸುವ ಮೊದಲು ವರಾಹಸ್ವಾಮಿಯನ್ನು ಪೂಜಿಸಬೇಕು

8. ಈ ಪರ್ವತವು ಪವಿತ್ರವಾದುದಾಗಿ ಇಲ್ಲಿ ದೇವರನ್ನು ಸೇವಿಸುವವರು ಮಾತ್ರವೇ ವಸತಿ ಮಾಡಬೇಕು.

9. ಪರ್ವತದ ಮೇಲೆ ಜೀವಹಿಂಸೆ ಮಾಡಬಾರದು. ಬೆಟ್ಟದ ಮೇಲೆ ಇರುವವರನ್ನು ಮರಣ ಕಾಲದಲ್ಲಿ ಬಯಲಿಗೆ ತರಬೇಕು. (ಕೆಳಕ್ಕೆ ಇಳಿಸಬೇಕು.)

10. ತಿರುಮಲೆಗೆ ಹೋಗುವಾಗ ಯಾತ್ರಿಕರು ಪಾದರಕ್ಷೆಗಳನ್ನು ಧರಿಸಬಾರದು.

ಮೇಲಿನವುಗಳಲ್ಲಿ ಬಹುತೇಕ ಆಚಾರಗಳನ್ನು ರಾಮಾನುಜರು ಪ್ರವೇಶಗೊಳಿಸಿದರೆಂದು ಹೇಳಲಾಗಿದೆ. ಏನೇ ಆದರೂ ಶತಮಾನಗಳ ಕಾಲಾವಧಿಯಲ್ಲಿ ಬದಲಾದ ಪರಿಸ್ಥಿತಿಗಳಿಗೆ ಅನುಗುಣವಾದಂತೆ ಅವುಗಳಲ್ಲಿ ಹಲಕೆಲವು ಬದಲಾವಣೆಗಳಾಗಿವೆ ಉದಾಹರಣೆಗೆ ಸ್ವಾಮಿಯ ನಾಮವು ಇಂದೂ ಪಚ್ಚ ಕರ್ಪೂರದಿಂದಲೇ ಆಗುವುದಾದರೂ ಸೋಮ ಮಂಗಳ ಬುಧವಾರಗಳಲ್ಲಿ ತಿರುಮಣ್ ಹಚ್ಚುವುದಿಲ್ಲ. ಪಚ್ಚಕರ್ಪೂರವನ್ನು ಕಣ್ಣುಗಳ ಭಾಗವೂ ಸೇರಿದಂತೆ ದಪ್ಪವಾಗಿ ಶುಕ್ರವಾರಗಳಲ್ಲಿ ಹಚ್ಚಲಾಗುವುದು. ಇದನ್ನು ಗುರುವಾರಗಳಲ್ಲಿ ಅತಿ ಸಣ್ಣದಾಗಿ ಮಾಡಿ ಅಭಿಷೇಕದ ಹೊತ್ತಿನಲ್ಲಿ ಪೂರ್ತಿಯಾಗಿ ತೆಗೆಯಲಾಗುತ್ತದೆ.

ಆಲಯದಲ್ಲಿ ಮತ್ತೂ ಹಲವಾರು ವಿಶಿಷ್ಟವಾದ ಕ್ರಮಗಳು ಪರಂಪರೆಯಿಂದ ಆಚರಿಸಲ್ಪಟ್ಟು ಪಾವಿತ್ರ್ಯವನ್ನು ಹೊಂದಿವೆ. ಅವುಗಳೆಂದರೆ -

1. ಆಲಯದ ಅರ್ಚನಾ ವಿಧಾನ ಪಾಂಚರಾತ್ರಾಗಮದಂತೆ ಅಲ್ಲದೆ ವೈಖಾನಸ ಆಗಮವನ್ನನುಸರಿಸಿದೆ.

2. ಪ್ರತಿದಿನವೂ ಮೂಲವಿಗ್ರಹದ ಗಲ್ಲಕ್ಕೆ 1.5 ತೊಲ ಪಚ್ಚಕರ್ಪೂರವನ್ನು ಹಚ್ಚುವರು.

3. ತಿರುಮಲೆಯ ದೇವರಿಗೆ ಪ್ರತಿ ಶುಕ್ರವಾರ ತಿರುಮಂಜನವಾಗುತ್ತದೆ ( ಅಭಿಷೇಕ) ದೇವರ ವಕ್ಷಃಸ್ಥಲ ಭಾಗವಾದ ಲಕ್ಷ್ಮಿಯ ವಿಗ್ರಹಕ್ಕೆ ಅಭಿಷೇಕ ಮಾಡುವಾಗ ಅರಿಷಿಣವನ್ನು ಬಳಸಲಾಗುತ್ತದೆ.

4. ಪ್ರತಿ ದಿನವೂ ಇಲ್ಲಿರುವ ಭೋಗ ಶ್ರೀನಿವಾಸ ಅಥವಾ ಭೋಗಮೂರ್ತಿಗೆ ಅಭಿಷೇಕ ನಡೆಯುವುದು.

5. ಸ್ವಾಮಿಯ ವಿಗ್ರಹಕ್ಕೆ ಪುನುಗು ಎಣ್ಣೆಯನ್ನು ಸಂರಕ್ಷಕವನ್ನಾಗಿ ಹಚ್ಚಲಾಗುವುದು.

6. ವರಾಹ ಪುರಾಣದಲ್ಲಿ ಉಕ್ತವಾಗಿರುವಂತೆ ಶ್ರೀ ವೆಂಕಟೇಶ್ವರ ಅಷ್ಟೋತ್ತರ ನಾಮ, ಸಹಸ್ರನಾಮಗಳನ್ನು ಹೇಳಿಕೊಂಡು ಅರ್ಚನೆ ಮಾಡುವರು.

7. ಶುಕ್ರವಾರಾಭಿಷೇಕ ಸಮಯದಲ್ಲಿ ಹೇಳುವ ಮಂತ್ರಗಳು ಪುರುಷಸೂಕ್ತ ವಿಧಾನವನ್ನು ಅನುಸರಿಸುತ್ತವೆ. ಶ್ರೀಮನ್ನಾರಾಯಣನು ಒಬ್ಬನೇ ಎಂದೂ, ಎಲ್ಲ ದೇವರ ಪೂಜೆಯೂ ಆತನನ್ನೇ ಸೇರುತ್ತದೆ- ಎಂದೂ ಹೇಳತಕ್ಕ ಮಂತ್ರ ಪುಷ್ಪ ಶ್ಲೋಕಗಳನ್ನು ಹೇಳಿಕೊಂಡು ಅಭಿಷೇಕ ಮಾಡುವರು.

8. ಅಭಿಷೇಕದ ನಂತರ ಪ್ರಬಂಧ ಪಠಣವಾಗಿ, ತೈತ್ತಿರೀಯ ಉಪನಿಷತ್ ಮಂತ್ರಗಳನ್ನು ಹೇಳಲಾಗುವುದು.

9. ದೇವರಿಗೆ ಮುಡಿಯನ್ನು ಕೊಡುವುದು ಇಲ್ಲಿನ ಸಂಪ್ರದಾಯ.

10.ಸ್ವಾಮಿಯನ್ನು ಎಬ್ಬಿಸುವ ಸುಪ್ರಭಾತದ ಆಚರಣೆ.

11. ಸ್ವಾಮಿಯನ್ನು ಪ್ರತಿದಿನವೂ ರಾತ್ರಿ ಮಲಗಿಸುವ ಏಕಾಂತಸೇವೆ.

12. ಆಲಯದಲ್ಲಿ ಚಾಂದ್ರಮಾನ ಪಂಚಾಂಗವನ್ನು ಅನುಸರಿಸಲಾಗುವುದು.

13. ದೇವರ ಗಲ್ಲಕ್ಕೆ ಪಚ್ಚಕರ್ಪೂರದ ಆಚ್ಛಾದನೆ :

## 5. ದೇವರ ಗಲ್ಲದಲ್ಲಿ ಪಚ್ಚಕರ್ಪೂರ

ಹಚ್ಚಿರುವುದನ್ನು ಯಾವಾಗಲೂ ಕಾಣಬಹುದು.

ಈ ಒಂದು ಕುತೂಹಲಕಾರಿ ವಿಷಯವನ್ನು ವಿವರಿಸುವ ಐತಿಹ್ಯವು ಹೀಗೆ ಸಾಗುತ್ತದೆ.

ರಾಮಾನುಜರು ತಮ್ಮ ಶಿಷ್ಯನಾದ ಅನಂತಾಳ್ವಾನ್ ಅನ್ನು ತಿರುಮಲೆಯ ಸ್ವಾಮಿಯ, ಪೂಜೆಯಲ್ಲಿ ದಿನವೂ ಪುಷ್ಪಗಳನ್ನು ಒದಗಿಸಲೆಂದು ಕಳುಹಿಸಿದರು. ಒಂದು ನಂದನ ವನವನ್ನು ಬೆಳೆಸುವುದು ಅನಂತಾರ್ಯನ ಕೈಂಕರ್ಯ. ಆತ ಹೂವಿನ ತೋಟದ ಕೆಲಸದಲ್ಲಿ ಅತ್ಯಂತ ಉತ್ಸಾಹಿಯಾಗಿ ಭಾಗವಹಿಸುತ್ತಿದ್ದ. ಗರ್ಭವತಿಯಾದ ಆತನ ಪತ್ನಿಯೂ ಪತಿಯ ಕೆಲಸದಲ್ಲಿ ಸಹಾಯ ಮಾಡುತ್ತಿದ್ದಳು. ಒಮ್ಮೆ ಅನಂತಾರ್ಯನು ತೋಟದಲ್ಲಿ ನೆಲವನ್ನು ಅಗೆಯುತ್ತ ಪಾತಿಗಳನ್ನು ಮಾಡುತ್ತಿದ್ದ. ಆತನ ಗರ್ಭಿಣಿ ಪತ್ನಿ ಮಣ್ಣನ್ನು ಮಕ್ಕರಿಯಲ್ಲಿ ಎತ್ತಿ ಆಚೆಗೆ ಹಾಕುತ್ತಿದ್ದಳು. ತಲೆಯ ಮೇಲೆ ಭಾರವನ್ನು ಹೊತ್ತು ನಡೆಯುವಾಗ ಬಳಲಿದಳು. ಬ್ರಹ್ಮಚಾರಿಯ ವೇಷದಲ್ಲಿ ಬಂದ ವೆಂಕಟೇಶ್ವರಸ್ವಾಮಿ ಆಕೆಗೆ ಮಣ್ಣು ಸಾಗಿಸುವ ಕೆಲಸದಲ್ಲಿ ನೆರವಾಗ ತೊಡಗಿದ. ಇದನ್ನು ಗಮನಿಸಿದ ಅನಂತಾರ್ಯನಿಗೆ ಕೋಪ ಬಂತು - ತಾವು ಸ್ವಾಮಿಯ ಸೇವೆ ಮಾಡುತ್ತಿದ್ದರೆ ಇವ ಯಾರು ಮಧ್ಯದಲ್ಲಿ ಸಹಾಯಕ್ಕೆ ಬರಲು- ಎಂಬುದಾಗಿ ತನ್ನಕೈಲಿದ್ದ ಗಡಾರಿಯಲ್ಲಿ ಒಂದೇಟು ಹಾಕಿದ. ಪೆಟ್ಟು ತಿಂದ ಬ್ರಹ್ಮಚಾರಿ ಓಡಿಹೋಗಿ ಮಾಯವಾದ. ನಂತರ ಅನಂತಾರ್ಯನು ಪೂಜೆಗೆಂದು ದೇವಾಲಯಕ್ಕೆ ಬಂದ. ಸ್ವಾಮಿಯ ಗಲ್ಲದಿಂದ ರಕ್ತಸೋರುತ್ತಿದೆ. ಬ್ರಹ್ಮಚಾರಿಯೇ ಸ್ವಾಮಿ ಎಂಬುದನ್ನು ತಿಳಿಯಲು ಹೊತ್ತು ಬೇಕಾಗಲಿಲ್ಲ. ರಕ್ತಸ್ರಾವವನ್ನು ನಿಲ್ಲಿಸಲು ಕೂಡಲೇ ಪಚ್ಚಕರ್ಪೂರದ ಪಟ್ಟು ಹಾಕಿದ. ಕ್ಷಮಾಯಾಚನೆ ಮಾಡಿದ. ಸ್ವಾಮಿ ಅವನನ್ನು ಕ್ಷಮಿಸಿ, ಅವನ ನೆನಪಿನಲ್ಲಿ ಆ ಗಲ್ಲದ ಹುಣ್ಣು ಶಾಶ್ವತವಾದ ಗುರುತಾಗಿರುವಂತೆ, ಮಾಡಿಕೊಳ್ಳುವುದಾಗಿ ಭರವಸೆ ನೀಡಿದ.

ಅನಂತಾರ್ಯನ ಬಗ್ಗೆ ಇನ್ನೊಂದು ಐತಿಹ್ಯವೂ ಇದೆ. ಅದು ಹೂವಿನಹಾರದ ಸಮರ್ಪಣೆ. ಸ್ವಾಮಿಯೂ ಶ್ರೀಸತಿಯೂ ರಾಜಕುಮಾರ ರಾಜಕುಮಾರಿಯರಂತೆ ನವಯೌವನದವರಾಗಿ ಅನಂತಾರ್ಯನ ನಂದನ ವನದಲ್ಲಿ ಆಗಾಗ ವಿಹರಿಸುತ್ತಿದ್ದರುತನ್ನ ತೋಟದ ಹೂಗಿಡಗಳು ಹಾಳಾಗುತ್ತಿರುವುದನ್ನು ಕಂಡ ಅನಂತಾರ್ಯ ಒಂದು ರಾತ್ರಿ ಕಾವಲು ಕುಳಿತ. ಈ ದಂಪತಿಗಳನ್ನುನೋಡಿ ಹಿಡಿಯಲು ಪ್ರಯತ್ನಿಸಿದ. ಸ್ವಾಮಿ ಅವನ ಕೈಗೆ ಸಿಗದೆ ತಪ್ಪಿಸಿಕೊಂಡು ಓಡಿದ, ಓಡಲಾರದ ಲಕ್ಷ್ಮಿ ಸಿಕ್ಕಿ ಬಿದ್ದಳು. ಸಂಪಿಗೆ ಮರಕ್ಕೆ ಅವಳನ್ನು ಕಟ್ಟಿಹಾಕಿದ ಅನಂತಾರ್ಯನಿಗೆ ಮಾರನೆಯ ದಿನ ಆಲಯಕ್ಕೆ ಹೋದಾಗಲೇ ಆಕೆ ಯಾರು ಎಂಬುದು ತಿಳಿದದ್ದು. ಪಾಹಿಮಾಂ ಎಂದು, ರಕ್ಷಮಾಂ ಎಂದು ಕೇಳಿಕೊಂಡು ಆಕೆಯನ್ನು ಗೌರವದಿಂದ ಆಲಯಕ್ಕೆ ಕರೆದುಕೊಂಡು ಬಂದ. ಈ ಪ್ರಸಂಗವನ್ನು ಕೇಳಿ ತಿಳಿದ ರಾಮಾನುಜಾಚಾರ್ಯರು ಬ್ರಹ್ಮೋತ್ಸವದ 7ನೇ ದಿನಗಳಲ್ಲಿ ಸ್ವಾಮಿಯ ಮೆರವಣಿಗೆಯನ್ನು ಊರಿನಲ್ಲೆಲ್ಲ ತೆಗೆದುಕೊಂಡು ಹೋಗಬೇಕೆಂದೂ, 8ನೇ ದಿನದಂದು ಅನಂತಾರ್ಯನಿಗೆ ಆಲಯದ ವತಿಯಿಂದ ಒಂದು ಮಾಲೆಯನ್ನು ಪ್ರಸಾದ ರೂಪವಾಗಿ ನೀಡಬೇಕೆಂದೂ ವಿಧಿಸಿದರು. ಈಗಲೂ ಈ ಪದ್ಧತಿಯು ಜಾರಿಯಲ್ಲಿದೆ.

**6. ತಮಿಳು ಪ್ರಬಂಧ ಪಠಣೆ :**

ಆಲಯದಲ್ಲಿ ತಮಿಳು ಪಾಶುರಗಳನ್ನು ಹೇಳುವುದು ಮತ್ತೊಂದು ವಿಶಿಷ್ಟವಾದ ಪದ್ಧತಿಯಾಗಿದೆ. ತಮಿಳು ಪ್ರಬಂಧಗಳನ್ನೂ ವೇದಗಳನ್ನೂ ಅಧ್ಯಯನೋತ್ಸವದಲ್ಲಿಯೇ ಅಲ್ಲದೆ ಇತರ ಸಂದರ್ಭಗಳಲ್ಲಿಯೂ ಹಾಡಲಾಗುತ್ತದೆ. ಉದಾಹರಣೆಗೆ ಶುಕ್ರವಾರಗಳಲ್ಲಿ ಸ್ವಾಮಿಗೆ ತಿರುಮಂಜನವಾದಾಗ ಪದ್ಮಾವತೀ ವಿಗ್ರಹವಿರುವ ಪದಕವನ್ನು ತೆಗೆಯುವ ಸಂದರ್ಭದಲ್ಲಿ ಅಂಡಾಳ್ ಹಾಡಿದ ತಮಿಳು ಪಾಶುರಗಳನ್ನು ಹೇಳುವರು. ತಮಿಳು ಪಾಶುರಗಳನ್ನು ಹಾಡುವ ಪದ್ಧತಿಯನ್ನು ರಾಮಾನುಜರು ಪ್ರವೇಶಗೊಳಿಸಿದರೆಂದು ತಿಳಿದು ಬರುವುದು. ರಾಮಾನುಜಾಚಾರ್ಯರು ತಿರುಮಲೆಯಲ್ಲಿ ಅಧ್ಯಯನೋತ್ಸವವನ್ನು ಪ್ರವೇಶಗೊಳಿಸಿದರೆಂದು ವೆಂಕಟಾಚಲೇತಿಹಾಸ ಮಾಲೆಯು ಹೇಳುತ್ತದೆ. ಇಲ್ಲಿ ಮೊದಲಿಗೆ ಪೆರಿಯಾಳ್ವಾರ ಪಾಶುರಗಳನ್ನು ಹೇಳುತ್ತ ನಂತರದಲ್ಲಿ ಆಳ್ವಾರರ ಪಾಶುರಗಳನ್ನು ಪಠಿಸಲಾಗು ವುದು. ಈ ಅಧ್ಯಯನೋತ್ಸವವು ಇಂದಿಗೂ ಸಹ ಉತ್ಸಾಹದಿಂದ ನಡೆಯುತ್ತಿರುವುದನ್ನು ತಿರುಮಲೆಯಲ್ಲಿ ನೋಡಬಹುದಾಗಿದೆ.

**7. ದೇವಾಲಯದ ಪೂಜೆ :**

ತಿರುಮಲೆಯ ಆಲಯದಲ್ಲಿನ ಪೂಜಾದಿಗಳು ವೈಖಾನಸ ಆಗಮದ ಪ್ರಕಾರ ನಡೆಯುತ್ತಿವೆ. ಭವಿಷ್ಯೋತ್ತರ ಪುರಾಣವು ಹೇಳುವಂತೆ - ವೈಖಾನಸ ಮಹರ್ಷಿಗೆ ದ್ವಾಪರಯುಗದ ಶ್ರೀಕೃಷ್ಣನು ಪ್ರತ್ಯಕ್ಷನಾಗಿ ತನ್ನನ್ನು ಶ್ರೀನಿವಾಸನೆಂದುಬಗೆದು ಪೂಜಿಸಲು ಹೇಳಿದನು. ಶೇಷಾಚಲಕ್ಕೆ ಹೋದರೆ, ಅಲ್ಲಿ ಹುತ್ತದೊಳಗಿರುವ ಶ್ರೀನಿವಾಸರೂಪಿಯಾದ ತನ್ನನ್ನು ಗುರುತಿಸುವಲ್ಲಿ ರಂಗದಾಸನೆಂಬ ಒಬ್ಬನು ಅವರಿಗೆ ನೆರವು ನೀಡುವನೆಂಬುದಾಗಿಯೂ ತಿಳಿಸಿದನು. ವೈಖಾನಸ ಋಷಿಯು ತಿರುಮಲೆಗೆ ಬಂದು ರಂಗದಾಸನ ಸಹಾಯವನ್ನು ಪಡೆದು ಶ್ರೀನಿವಾಸನನ್ನು ಕಂಡು ಕೊಂಡರು. ಹೀಗಾಗಿ ಶ್ರೀನಿವಾಸನನ್ನು ಅರ್ಚಿಸಿದ ಮೊದಲನೆಯ ಋಷಿ ವೈಖಾನಸ ಮಹರ್ಷಿ. ಇದರಿಂದಾಗಿ ವೈಖಾನಸ ಮಹರ್ಷಿ ಪೂಜೆ ಮಾಡಿದ ರೀತಿಯಲ್ಲಿಯೇ ಇಂದಿಗೂ ಪೂಜೆಗಳು ನಡೆಯುತ್ತಿವೆ.

**8. ಕೊಲುವು (ಓಲಗ) :**

ಕೊಲುವು ಶ್ರೀನಿವಾಸನ ದರ್ಬಾರ್ ಅನ್ನು ಕೊಲುವು ಎನ್ನುವರು. ಪ್ರತಿದಿನ ನಿತ್ಯಾರ್ಚನೆ ಆರಂಭವಾಗುವ ಮೊದಲು ಸ್ನಪನ ಮಂಟಪದಲ್ಲಿ ಕೊಲುವು ನಡೆಯುವುದು. ಈ ಓಲಗದಲ್ಲಿ ದಿನದ ಪಂಚಾಂಗವನ್ನು ಓದಿ ಸ್ವಾಮಿಗೆ ತಿಳಿಸಿ ಹಿಂದಿನ ದಿನದ ಆದಾಯ ವೆಚ್ಚಗಳನ್ನು ಸ್ವಾಮಿಗೆ ತಿಳಿಸುವರು.

**9. ತಿರುಮಲೆಯಲ್ಲಿ ಮುಡಿ ನೀಡುವಿಕೆ :**

ತಿರುಮಲೆಯ ಮತ್ತೊಂದು ವೈಶಿಷ್ಟ್ಯದ ಆಚಾರವೆಂದರೆ ಮುಡಿ ನೀಡುವಿಕೆ. ತಿರುಮಲೆಗೆ ಬರುವ ಯಾತ್ರಿಕರು ತಮ್ಮ ತಲೆಯ ಕೂದಲನ್ನು ಸಾಧಾರಣವಾಗಿ ಸ್ವಾಮಿಗೆ ಸಮರ್ಪಣೆ ಮಾಡುತ್ತಾರೆ. ಅಗತ್ಯಗಳಿಗೆ ತಕ್ಕಂತೆ ದೇವರನ್ನು ವಿವಿಧ ವಸ್ತು ವಿಷಯಗಳಿಗಾಗಿ ಬೇಡುವವರು. ಸಾಮಾನ್ಯವಾಗಿ ತಮ್ಮ ಬೇಡಿಕೆ ಈಡೇರಿದ್ದರ ಗುರುತಾಗಿ, ಕೃತಜ್ಞತೆಯ ಕುರುಹಾಗಿ ಸ್ವಾಮಿಗೆ ಮುಡಿಯನ್ನು ಒಪ್ಪಿಸುವುದುಂಟು. ಇದಕ್ಕಾಗಿ ಪ್ರತ್ಯೇಕವಾಗಿರುವ ಕಲ್ಯಾಣಕಟ್ಟೆಯಲ್ಲಿ ಮುಡಿಯನ್ನು ಒಪ್ಪಿಸಿ ಪುಷ್ಕರಿಣಿಯಲ್ಲಿ ಸ್ನಾನಮಾಡುವರು. ನಂತರ ಸ್ವಾಮಿದರ್ಶನಕ್ಕೆ ಆಲಯಕ್ಕೆ ಬರುತ್ತಾರೆ.

ತಿರುಮಲೆಯ ಆಲಯದ ಶಾಸನಗಳು ಅನ್ನಪ್ರಸಾದಗಳ ನಿವೇದನೆಯೇ ಮೊದಲಾದವುಗಳ ಬಗ್ಗೆ ತಿಳಿಸಿಕೊಡುತ್ತವೆ. ಆದರೆ ಯಾವುದೇ ಶಾಸನವೂ ಮುಡಿಕೊಡುವ ಈ ಸಂಪ್ರದಾಯದ ಬಗ್ಗೆ ಹೇಳುವುದಿಲ್ಲ. ಈಗಾಗಲೇ ತಿಳಿಸಿರುವಂತೆ 1831 ರಲ್ಲಿ ಆಗಿನ ಒಬ್ಬ ಜಿಲ್ಲಾ ಕಲೆಕ್ಟರನು ಏಸಿಯಾಟಿಕ್ ಜರ್ನಲ್ ನಲ್ಲಿ ಬರೆದಿರುವ ಲೇಖನದಲ್ಲಿ ಈ ಬಗ್ಗೆ ಉಲ್ಲೇಖವುಂಟು. ''ಸಾಮಾನ್ಯವಾಗಿ ಅನುಕೂಲಗಳನ್ನು ಪಡೆವ ಆಸಕ್ತಿಯಿಂದ ಕಾಣಿಕೆಗಳನ್ನು ಸಮರ್ಪಿಸಲಾಗುತ್ತದೆ. ಇದರ ವೈವಿಧ್ಯ ಅಪಾರ, ಚಿನ್ನ, ಬೆಳ್ಳಿ ಎಲ್ಲರೀತಿಯ ನಾಣ್ಯಗಳು , ರೂಪಾಯಿಗಳ ಚೀಲಗಳು, ತಾಮ್ರದ ಕಾಸುಗಳು, ಧಾನ್ಯಗಳು, ಇಂಗು, ಬಾಲ್ಯದಿಂದ ತಲೆಯಲ್ಲಿ ಬೆಳೆದ ಕೂದಲು -

ಸುಂದರವಾದ ಹೆಣ್ಣು ಗಳ ಉದ್ದ ಬೆಳೆದ ಜಡೆಗಳನ್ನು ತಂದೆ ತಾಯಿಯರ ಬಯಕೆಗೆ ತಕ್ಕಂತೆ ಹರಕೆಗೆ ತಕ್ಕಂತೆ ಕತ್ತರಿಸಿ ನೀಡುವಿಕೆ ಉಂಟು. '' ಮೇಲಿನ ಉಲ್ಲೇಖದಿಂದ ಸ್ಪಷ್ಟವಾಗುವ ಅಂಶವೆಂದರೆ ಈ ಪದ್ಧತಿ 1831 ರಲ್ಲಿ ಜಾರಿಯಲ್ಲಿದ್ದಿತು ಎಂಬುದು. (ಜೊಷೇ ಸ್ಪಾಟನ್ 31.1.1803 ರಲ್ಲಿ ಬರೆದ ವರದಿಯಲ್ಲಿಯೂ ಮುಡಿಕತ್ತರಿಸುವ ಕ್ಷೌರಿಕ ಗುತ್ತಿಗೆಯ ಬಗ್ಗೆ ಮಾತನಾಡುವುದನ್ನು ಕಾಣಬಹುದಾಗಿದೆ. ಅನುವಾದಕ )

ಧಾರ್ಮಿಕ ವಿಧಿಯ ಒಂದಂಗವಾಗಿ ತಲೆಗೂದಲನ್ನು ತೆಗೆಯುವುದು ಪ್ರಾಚೀನ ಪದ್ಧತಿಯೆನ್ನಬೇಕು.

ಪ್ರಾಚೀನ ನಾಗರಿಕತೆಗಳಲ್ಲಿ ಕೂದಲಿಗೆ ಮಾಂತ್ರಿಕ ಶಕ್ತಿಗಳಿದ್ದವೆಂಬುದನ್ನು ಆರೋಪಿಸುವುದನ್ನು ಸಾಹಿತ್ಯದ ತೌಲನಿಕ ಅಧ್ಯಯನದಿಂದ ತಿಳಿಯಬಹುದಾಗಿದೆ. ಕೂದಲು ಮನುಷ್ಯನ ಅಧಿಕಾರದ ಮೂಲವೆಂದೂ ಅವನ ಶಕ್ತಿಯ ಸಂಕೇತವೆಂದೂ ತಿಳಿದಿದ್ದುಂಟು. ಈ ಕಾರಣದಿಂದಾಗಿಯೇ ಪ್ರಾಚೀನ ಬುಡಕಟ್ಟುಗಳಲ್ಲಿ ದುಷ್ಟ ಶಕ್ತಿಗಳಿಂದ ಕೂದಲನ್ನು ರಕ್ಷಿಸಿಕೊಳ್ಳುವ ಪ್ರಯತ್ನಗಳು ಕಂಡು ಬರುತ್ತದೆ. ಈ ಕಾರಣದಿಂದಾಗಿಯೇ ಮುಡಿ ಕೊಡುವುದನ್ನು ದೇವತೆಗಳ ಪಿತೃಗಳ ಕೈಂಕರ್ಯದಲ್ಲಿ ಒಂದು ಮುಖ್ಯವಾದ ಅಂಗವೆಂಬುದಾಗಿ ಪರಿಗಣಿಸಲ್ಪಟ್ಟಿದೆ. ಡಬ್ಲ್ಯೂ, ಆರ್. ಸ್ಮಿತ್ ಅವರು ಈ ಧಾರ್ಮಿಕ ವಿಧಿಗಳನ್ನು ಜಾಗ್ರತೆಯಿಂದ ಅಧ್ಯಯನಮಾಡಿ- ಮುಡಿ ನೀಡುವಿಕೆಯನ್ನು ರಕ್ತವನ್ನು ಅರ್ಪಿಸುವುದರ ಸಂಕೇತವೆಂದೂ, ಈ ಪ್ರಕ್ರಿಯೆಯು ಮನುಷ್ಯ ಹಾಗೂ ಅದನ್ನೀಡುವ ದೇವರ ನಡುವಣ ಸಂಬಂಧಕ್ಕೆ ಒತ್ತು ನೀಡಿ ಹೇಳುವುದೆಂದೂ - ತಿಳಿಸುತ್ತಾರೆ.

ಭಾರತದಲ್ಲಿ ಕೂದಲನ್ನರ್ಪಿಸುವುದು ವೇದಗಳಷ್ಟೇ ಪ್ರಾಚೀನವಾದದ್ದು. ಚಾತುರ್ಮಾಸ್ಯ, ಅಗ್ನಿಷ್ಟೋಮ ಮುಂತಾದ ವೈದಿಕ ಕ್ರಿಯೆಗಳಲ್ಲಿ ಈ ಕೂದಲಿನ ಕಾಣಿಕೆ ಪ್ರಚಲಿತವಿದ್ದಿತು.

ಸೂತ್ರ ಸಾಹಿತ್ಯದಲ್ಲಿ ಹೇಳಿರುವಂತೆ ರಾಜ್ಯ ಪಟ್ಟಾಭಿಷೇಕದಲ್ಲಿ ಕೇಶ ವಪನ ಒಂದು ಅಗತ್ಯ ವಿಧಿಯಾಗಿದ್ದಿತು. ಮಧ್ಯಕಾಲೀನ ಪುರಾಣಗಳು ಹಾಗೂ ನಿಬಂಧಗಳು ತೀರ್ಥಕ್ಷೇತ್ರಗಳಲ್ಲಿ ಮುಡಿ ನೀಡುವುದನ್ನು, ದೇವ ಪಿತೃಗಳನ್ನು ಸಂತಸಪಡಿಸುವ ಒಂದು ಕ್ರಮವೆಂದು ತಿಳಿಸುತ್ತವೆ. ಸಾಂಬ ಉಪಪುರಾಣವು ಭಕ್ತರು ತಮ್ಮ ತಲೆಯ ಕೂದಲನ್ನು ತೆಗೆಯಬೇಕೆಂದೇ ಹೇಳುತ್ತದೆ. ಪ್ರಮುಖ ತೀರ್ಥಗಳಲ್ಲಿ ಮುಡಿ ನೀಡುವಿಕೆಗೆ ಪ್ರಾಧಾನ್ಯವಿದ್ದುದರಿಂದಲೇ ಮುಖ್ಯ ಆಲಯಗಳಲ್ಲಿ ಕ್ಷೌರಿಕರು ಇರುತ್ತಿದ್ದರು. ಹನ್ನೊಂದನೆಯ ಶತಮಾನದಲ್ಲಿ ಸೋಮನಾಥ ಆಲಯದಲ್ಲಿ ಮುನ್ನೂರು ಮಂದಿ ಕ್ಷೌರಿಕರು ಇದ್ದರೆಂದು ದಾಖಲೆಯಾಗಿದೆ. ಆಧುನಿಕ ಕಾಲದಲ್ಲಿಯೂ ಸಹ ತೀರ್ಥಯಾತ್ರೆಯ ಒಂದು ಅಂಗವೇ ಆಗಿ ಮುಡಿನೀಡುವಿಕೆಯನ್ನು ಪರಿಗಣಿಸಲಾಗಿದೆ.

ಮಾತೃಶಕ್ತಿಯ ಆರಾಧನೆಯಲ್ಲಿ ಮುಡಿ ನೀಡುವಿಕೆಯು ಒಂದು ಪ್ರಧಾನವಾದ ವಿಧಿಯಾಗಿದೆ. ಏಳನೇ ಶತಮಾನದ ಮಹಾಬಲಿಪುರದ ಶಿಲ್ಪಗಳಲ್ಲಿ ದೇವಿಗೆ ಮುಡಿ ನೀಡುತ್ತಿರುವ ಭಕ್ತನನ್ನು ಚಿತ್ರಿಸಲಾಗಿದೆ. ಎಂಟನೆಯ ಶತಮಾನದಲ್ಲಿ ಕನೌಜ್‌ನಲ್ಲಿದ್ದ ವಾಕ್ಪತಿಯು ವಿಂಧ್ಯವಾಸಿನೀ ದೇವಿಯ ಆಲಯದಲ್ಲಿ ಮುಡಿ ನೀಡಿದ್ದನ್ನು ಹೇಳುತ್ತಾನೆ.

ನಾಥಪಂಥೀಯರಲ್ಲಿ ಇಂದಿಗೂ ಶಿಖೆಯನ್ನು ಅರ್ಪಿಸುವ ಆಚಾರ ಪ್ರಚಲಿತ. ಸಾಮಾನ್ಯರು ಮುಡಿ ನೀಡಿದ ನಂತರ ಮತ್ತೊಮ್ಮೆ ಯಾವುದಾದರೂ ಆಲಯವನ್ನು ದರ್ಶಿಸುವವರೆಗೆ ಕೂದಲನ್ನು ಬೆಳೆಯಗೊಟ್ಟರೆ, ಇಲ್ಲಿ ಅವರು ಮುಡಿಯನ್ನು ಕತ್ತರಿಸಿ ನಿವೇದನೆ ಮಾಡುತ್ತಾರೆ.

ತೀರ್ಥಯಾತ್ರೆ ಹೊರಟಾಗ ತಲೆಬೋಳಿಸಬೇಕೆಂದು ಧರ್ಮಶಾಸ್ತ್ರಗಳೂ ಹೇಳುತ್ತವೆ.

ತೀರ್ಥಯಾತ್ರೆ ಹೊರಟಾಗ ಮೊದಲಿಗೆ ತಲೆಗೂದಲನ್ನು ಕತ್ತರಿಸಿಕೊಳ್ಳಬೇಕೆ ಬೇಡವೇ ಎಂಬುದರ ಬಗ್ಗೆ ಧರ್ಮಶಾಸ್ತ್ರಗಳಲ್ಲಿ ಭಿನ್ನಾಭಿಪ್ರಾಯಗಳಿವೆ. ಪದ್ಮಪುರಾಣ ಸ್ಕಂದ ಪುರಾಣಗಳು ತಲೆಗೂದಲನ್ನು ತೆಗೆಯುವುದು ಅತ್ಯಗತ್ಯ ಎನ್ನುವಂತಿದ್ದರೆ, 'ತೀರ್ಥ ಕಲ್ಪತರು' ವು ತಲೆಗೂದಲ ಬಗ್ಗೆ ಮಾತನ್ನೇ ಆಡುವುದಿಲ್ಲ. ತೀರ್ಥಕ್ಷೇತ್ರದಲ್ಲಿ ಒಂದು ಹೊತ್ತು ಉಪವಾಸವಿರುವುದು ಇಷ್ಟ ಎಂದು

ಈ ಗ್ರಂಥವು ತಿಳಿಸುತ್ತದೆ. ನಂತರದ ಲೇಖಕರಲ್ಲಿನ ಒಂದು ಆಸಕ್ತಿ ಎಂದರೆ ಎಲ್ಲ ರೀತಿಯ ವಿಧಿ ವಿಧಾನಗಳನ್ನು ಕಠಿಣಗೊಳಿಸುವುದು. ಅಗ್ನಿಷ್ಟೋಮ ಚಾತುರ್ಮಾಸ್ಯಗಳ ಆರಂಭದಲ್ಲಿ ತಲೆಗೂದಲನ್ನು ತೆಗೆಯುವುದು ಅಗತ್ಯ. ವೈದಿಕ ವಿಧಿಯಾಗಿದ್ದರೆ ಶಿಕ್ಷಣವನ್ನು ಮುಗಿಸಿದಾಗಲೂ (ಸಮಾವರ್ತನ) ಸಹ ತಲೆಗೂದಲನ್ನು ತೆಗೆಯುವುದು ವೈದಿಕವೇ ಆಗಿದ್ದಿತು. ಪಾಪಗಳನ್ನು ಪ್ರಾಕ್ಷಾಳನ ಮಾಡಿಕೊಳ್ಳುವ ಪ್ರಾಯಶ್ಚಿತ್ತ ವಿಧಿಗಳಲ್ಲಿಯೂ ತಲೆಗೂದಲನ್ನು ತೆಗೆಯುವುದಿದೆ. ತೀರ್ಥ ಪ್ರಕಾಶ ಹಾಗೂ ತೀರ್ಥಚಿಂತಾಮಣಿ-ಎರಡೂ ಕೃತಿಗಳು ಸ್ಮೃತಿ ಸಮುಚ್ಚಯದ ಒಂದು ಮಾತನ್ನು ಉಲ್ಲೇಖಿಸುತ್ತವೆ.

ಪ್ರಯಾಗೇ ತೀರ್ಥಯಾತ್ರಾಯಾಂ ಪಿತೃಮಾತೃ ವಿಯೋಗತಃ
ಕಚಾನಾಂ ವಪನಂ ಕುರ್ಯಾತ್ ವೃಥಾ ನ ವಿಕಚೋ ಭವೇತ್

ಪ್ರಯಾಗಕ್ಕೆ ತೀರ್ಥಯಾತ್ರೆಗೆ ಹೋದಾಗ, ತಾಯಿತಂದೆಯರು ಮರಣ ಹೊಂದಿದರೆ, ಮಾತ್ರವೇ ತಲೆ ಗೂದಲನ್ನು ತೆಗೆಯಬೇಕು. ಇಲ್ಲದಿದ್ದಲ್ಲಿ ಕಾರಣವಿಲ್ಲದೆ ತೆಗೆಯಬಾರದು. ಯಾಜ್ಞವಲ್ಕ್ಯನ ಮಿತಾಕ್ಷರವು ಹೀಗೆ ಹೇಳುತ್ತದೆ - ಗಂಗಾನದಿಯ ದಡದಲ್ಲಿ, ಭಾಸ್ಕರ ಕ್ಷೇತ್ರದಲ್ಲಿ, ತಂದೆ, ತಾಯಿ, ಗುರುಗಳ ಮರಣದಲ್ಲಿ, ವೈದಿಕ ಅಗ್ನಿಯ ಪ್ರತಿಷ್ಠಾಪನೆಯಲ್ಲಿ, ಸೋಮಯಜ್ಞದಲ್ಲಿ - ಈ ಏಳು ಸಂದರ್ಭಗಳಲ್ಲಿ ತಲೆಕೂದಲನ್ನು ತೆಗೆಯಬೇಕು.

ತೀರ್ಥಚಿಂತಾಮಣಿ, ತೀರ್ಥ ಪ್ರಕಾಶಗಳೆರಡೂ ಒಂದು ಪದ್ಯದಲ್ಲಿ ಹೇಳುವಂತೆ ಎಲ್ಲ ಕ್ಷೇತ್ರಗಳಲ್ಲಿಯೂ ತಲೆಗೂದಲನ್ನು ತೆಗೆದು ಉಪವಾಸ ಮಾಡಬೇಕು. ಆದರೆ ಕುರುಕ್ಷೇತ್ರ, ವಿಶಾಲಾ (ಉಜ್ಜಯಿನಿ ಅಥವಾ ಬದರಿಕ) ವಿರಜಾ (ಒರಿಸ್ಸಾದ ನದಿ) ಗಯಾ ಕ್ಷೇತ್ರದಲ್ಲಿ ಮಾತ್ರ ಇವುಗಳು ನಿಷಿದ್ಧ. ಸ್ನಾತಕರ ವಿಷಯದಲ್ಲಿ ಅವರ ತಲೆಯ ಮುಡಿಯ ಗಂಟಿನ ಹೊರತು ಎಲ್ಲಕಡಲೂ ತೆಗೆಯಬೇಕು. ಸುಮಂಗಲೆಯಾದ ಹೆಂಗಸಿನ ವಿಷಯದಲ್ಲಿ ಎರಡು ಬೆರಳಿನಷ್ಟು ಮಾತ್ರ ತಲೆಗೂದಲನ್ನು ತೆಗೆಯಬೇಕು. ವೃದ್ಧಹಾರೀತ ಶಾಸ್ತ್ರಹೇಳುವಂತೆ ಸುಮಂಗಲಿಯರ ತಲೆಗೂದಲನ್ನು ತೆಗೆಯಬಾರದು. ತಲೆಗೂದಲಿನಲ್ಲಿ ಮೂರು ಬೆರಳಷ್ಟು ಅಗಲದ ಉದ್ದ ಕೂದಲನ್ನು ಕತ್ತರಿಸಬೇಕು. ಮಿಕ್ಕಂತೆ ಹಲವು ಸ್ಮೃತಿಗಳು ಎರಡು ಬೆರಳಿನಷ್ಟು ತೆಗೆದರೆ ಸಾಕೆನ್ನುತ್ತವೆ.

ಕ್ಷೌರ ಹಾಗೂ ಮುಂಡನಗಳಲ್ಲಿ ವ್ಯತ್ಯಾಸಗಳನ್ನು ಶಾಸ್ತ್ರಗಳು ಗುರುತಿಸುತ್ತವೆ. ಮುಂಡನವೆಂದರೆ ಮೀಸೆಗಳನ್ನು ತಲೆಗೂದಲೊಡನೆ ತೆಗೆಯುವುದು. ಕ್ಷೌರವೆಂದರೆ ತಲೆ ಬೋಳಿಸುವಿಕೆ ಮಾತ್ರ ನಿಷಿದ್ಧವೆಂದೂ ಹೇಳುತ್ತದೆ. ಪ್ರಯಾಗದ ಹೊರತಾಗಿ ಗಂಗಾನದಿಯ ದಡದಲ್ಲಿ ಬೇರೆಲ್ಲಿಯೂ ಮುಂಡನವಿಲ್ಲ. ತೀರ್ಥೇಂದು ಶೇಖರವು ಮುಡಿ ತೆಗೆಯುವುದು ಉಪವಾಸಗಳೆರಡೂ ವಿಧಿಗಳಲ್ಲ ಕಾಮ್ಯಗಳು ಎನ್ನುತ್ತದೆ. ಎಂದರೆ ಕೆಲವು ಅಭೀಷ್ಟಗಳು ನೆರವೇರಿದಾಗ ಮಾಡುವಂತಹವು. ಹೀಗಾಗಿ ಶಿಷ್ಟರು ಈ ಎರಡನ್ನೂ ಹಲವು ತೀರ್ಥಗಳಲ್ಲಿ ಕೈಗೊಳ್ಳುವುದಿಲ್ಲ ಎನ್ನುತ್ತದೆ.

ಮುಡಿ ನೀಡುವುದನ್ನು ಹಲವು ಸಂದರ್ಭಗಳಲ್ಲಿ ಮಾಡಿಸಬೇಕು. ವಿಷ್ಣುಪುರಾಣವು ಹೇಳುವಂತೆ ಪ್ರಯಾಗದಲ್ಲಿ ತೀರ್ಥಯಾತ್ರೆಯ ಸಂದರ್ಭದಲ್ಲಿ ಮುಂಡನ ಮಾಡಿಸಬೇಕು. ತಂದೆ ತಾಯಿ ತೀರಿಕೊಂಡಾಗ ಮಾಡಿಸಬೇಕು. ವ್ಯರ್ಥವಾಗಿ ಕಾರಣವಿಲ್ಲದೆ ಮಾಡಿಸಬಾರದು. ಹೀಗೆ ಮುಡಿ ಕೊಡುವುದು ಹಲವು ಬಾರಿ ಕಾಮ್ಯವಾಗಿ ಎಂದರೆ ಅಭೀಷ್ಟ ಪೂರ್ತಿ ಆದದ್ದರಿಂದ ಕೊಡುವುದೂ ಹಲವು ಬಾರಿ ತಪಶ್ಚರ್ಯೆಯ ಭಾಗವಾಗಿ ಕೊಡುವುದೂ, ತೀರ್ಥಯಾತ್ರೆಯಲ್ಲಿ - ಕೊಡುವುದೂ ಉಂಟು.

## 10. ಭಕ್ತಿ :

ಏಳುಮಲೆಗಳೊಡೆಯನು ವಿಶ್ವದ ಒಡೆಯನೂ ಆಗಿದ್ದಾನೆ. ಎಲ್ಲ ಸೃಷ್ಟಿಯ ಒಡೆಯ, ಜಗತ್ತಿನ ಬೆಳಕು. ಅವ್ಯಕ್ತನಾದರೂ ಸಗುಣನಾಗಿ ಕಟ್ಯವಲಂಬಿತ ಹಸ್ತನಾಗಿ ನಮ್ಮಗಳ ಉದ್ಧಾರಕ್ಕಾಗಿ ತಿರುಮಲೆಯಲ್ಲಿ ನೆಲೆಸಿದ್ದಾನೆ. ಆತನ ಪಾದಾರವಿಂದಗಳನ್ನು ಆಶ್ರಯಿಸಿದವರಿಗೆ ಎಲ್ಲ ಕಾಲ ದೇಶ ಅವಸ್ಥೆಗಳಲ್ಲಿಯೂ ಮುಕ್ತಿ ದೊರೆಯುವುದೆಂದು ಸಾರುವಂತೆ ಇದೆ - ಈ ಹಸ್ತಚಿಹ್ನೆ. ವೆದೇವನಾದ ಆತನ ವರದಹಸ್ತವು ಬೇಡಿದವರಿಗೂ ಬೇಡದವರಿಗೂ ಅಭಯವನ್ನು ನೀಡುತ್ತದೆ. ಸೂರ್ಯನ ಬೆಳಕು ಎಲ್ಲೆಡೆಯೂ ಸಮಾನ

ವಾಗಿ ಹರಿಯುವಂತೆಯೇ ಆತನ ಕರುಣೆಯೂ ಸಹ ಎಲ್ಲೆಡೆಗೂ ಸಮಾನವಾಗಿ ಹರಿಯುತ್ತದೆ. ನಾವು ಎಷ್ಟು ಪಡೆಯುತ್ತೇವೆಂಬುದು ನಮ್ಮ ಸಾಮರ್ಥ್ಯ ಅಥವಾ ನಮ್ಮ ನ್ಯೂನತೆಗಳಿಗೆ ತಕ್ಕಂತೆ ಇರುತ್ತದೆ ಎಂಬುದೇ ಸರಿ. ಬೇಕಾಗಿರುವುದೆಂದರೆ ಸಂಪೂರ್ಣ ಶರಣಾಗತಿ, ಭಕ್ತಿ ಪ್ರಪತ್ತಿಗಳು ಮಾತ್ರವೇ.

### 11. ಭಕ್ತಿಯ ಭಾವದ ಉಗಮ :

ಋಗ್ವೇದದಲ್ಲಿ ಭಕ್ತಿ ಭಾವದ ಗುರುತುಗಳನ್ನು ಕಾಣಬಹುದಾಗಿದೆ. ಪ್ರಾಚೀನ ಜನರು ದೇವರನ್ನು ವಾತ್ಸಲ್ಯಮಯ ತಂದೆಯಂತೆ, ಪ್ರೀತಿಯ ನಲ್ಲನಂತೆ ಕಂಡರು. ಇಂದ್ರನನ್ನು ಕುರಿತ ಒಂದು ಪ್ರಾರ್ಥನೆ ಹೀಗೆ ಸಾಗುತ್ತದೆ. 'ನಮ್ಮ ರಕ್ಷಕನಾಗಿರು. ನೀನು ನಮ್ಮ ಬಂಧು ಎಂದು ಭಾವಿಸಿ ನಿನ್ನನ್ನು ತಂದೆಯಂತೆ ಕರುಣೆ ತೋರಿಸುವವನೆಂದು, ಸ್ನೇಹಿತನಂತೆ ಭಾವಿಸುತ್ತೇವೆ.' ಮತ್ತೊಂದು ಪ್ರಾಚೀನ ಪ್ರಾರ್ಥನೆ ಹೀಗಿದೆ - 'ನನ್ನೆಲ್ಲ ಸ್ತುತಿಗಳೂ ಏಕತ್ರವಾಗಿ ಇಂದ್ರನನ್ನು ಕೀರ್ತಿಸುತ್ತದೆ. ಹೆಂಡತಿಯು ಪತಿಯನ್ನು ಅಲಂಗಿಸಿಕೊಳ್ಳುವಂತೆ ದೇವತೆಗಳ ವರದಾತನಾದ ಇಂದ್ರನನ್ನು ನನ್ನ ಎಲ್ಲ ಭಾವನೆಗಳೂ ಅಲಂಗಿಸುತ್ತವೆ'. ಧಾರಾಳಿಯಾದ ಇಂದ್ರನನ್ನು ತವಗೆ ಬೇಕಾದ ಕೊಡುಗೆಗಾಗಿ ಅವು ಪತಿಯನ್ನು ಅಂಟಿಕೊಳ್ಳುವ ಪತ್ನಿಯಂತೆ ಪ್ರಿಯನಂತೆ ಕಲ್ಪಿಸಿಕೊಳ್ಳಲಾಗಿದೆಯೆಂದು ಭಾವಿಸಬಹುದು. ಈ ಹೋಲಿಕೆಗಳು ಭಕ್ತಿಯ ಬಗ್ಗೆ ಗೀತೆಯಲ್ಲಿ ಹೇಳುವ ಮಾತುಗಳ ತಾತ್ಪರ್ಯಕ್ಕೆ ಹತ್ತಿರವಾದವುಗಳಾಗಿವೆ.

ಭಕ್ತಿಯ ಪರಿಕಲ್ಪನೆಯು ಭಗವದ್ಗೀತೆಯಲ್ಲಿ ಅತಿ ಪ್ರಾಚೀನವಾದ ಹಾಗೂ ಅತಿ ಖಚಿತವಾದ ವಿವರಣೆಯನ್ನು ಪಡೆಯಿತು. ಭಗವದ್ಗೀತೆಯು ಉಪನಿಷತ್ಸಾರವೆಂದೇ ಪರಿಗಣಿತವಾಗಿದೆ. ಇದರಿಂದಾಗಿ ಉಪನಿಷತ್ತುಗಳು ಗೀತೆಗಿಂತ ಮೊದಲಿನದ್ದೆಂದೂ ಭಕ್ತಿಯ ಪರಿಕಲ್ಪನೆಯೂ ಉಪನಿಷತ್ತುಗಳಲ್ಲಿಯೇ ಖಚಿತತೆ ಪಡೆಯಿತೆಂದೂ ತಿಳಿಯಬಹುದು. ಬ್ರಹ್ಮನ ಅಥವಾ ಪರಮಾತ್ಮನ ಆರಾಧನೆಯನ್ನು ಅಥವಾ ಧ್ಯಾನವನ್ನು ಉಪನಿಷತ್ತುಗಳು ನಿಬಂಧಿಸುತ್ತವೆ.

ಇಂತಹ ನಿರಂತರ ಧ್ಯಾನವು ವಿಷಯವನ್ನು ಹಿರಿದಾಗಿಸಿ, ಅದಕ್ಕೆ ಒಂದು ಸುಂದರ ರೂಪವನ್ನು ಕಟ್ಟಿಕೊಡುತ್ತದೆ. ಮಾಡೂಕ್ಯ ಉಪನಿಷತ್ ಹೇಳುವುದೆಂದರೆ - ಆತ್ಮಜ್ಞಾನವನ್ನು ಬುದ್ಧಿಯಿಂದ, ಉಪದೇಶದಿಂದ, ಶಿಕ್ಷಣದಿಂದ ಪಡೆಯಲು ಸಾಧ್ಯವಿಲ್ಲ.ಭಗವಂತನ ಆಯ್ಕೆಯಿಂದಲೇ ಒಬ್ಬನಿಗೆ ಅದು ದೊರೆಯುತ್ತದೆ. ಇಂತಹ ಒಂದು ಆತ್ಮಕ್ಕೆ ಸಾಕ್ಷಾತ್ಕಾರ ಉಂಟಾಗುವುದು. ಭಗವಂತನ ಅನುಗ್ರಹವನ್ನು ಪಡೆಯಲು ಇದೊಂದು ಘನವಾದ ಅವಕಾಶ. ಶ್ವೇತಾಶ್ವತರ ಉಪನಿಷತ್ತು ಭಗವಂತನನ್ನು ಕೇಂದ್ರವಾಗಿ ಹೊಂದಿರುವ ತತ್ವವಿಚಾರದ ಉಪನಿಷತ್‌ಗಳ ಕಾಲದ್ದಾಗಿದೆ. ಈ ಉಪನಿಷತ್ತು ಅವನವನ ಭಾವಕ್ಕೆ ತಕ್ಕಂತೆ ಭಗವಂತ ಕಾಣುವನೆಂದೂ, ಅವನಲ್ಲಿ ಶರಣಾಗತಿ ಮಾಡುವುದರಿಂದ ಕೊನೆಗಾಣಬಹುದೆಂದು ಹೇಳುತ್ತದೆ. ಹೀಗಾಗಿ ಶ್ವೇತಾಶ್ವತರವು ಭಕ್ತಿ ಪಂಥದ ಹೊಸಿಲಲ್ಲಿ ನಿಂತು ಭಗವಂತನ ಬಗ್ಗೆಯಾದ ಭಕ್ತಿಯನ್ನು ಬಿತ್ತರಿಸುವುದು. ದೈವ ಲೀಲೆಗಳಲ್ಲಿನ ಅಪ್ಯಾಯತೆ, ಅವನ ಔನ್ನತ್ಯ, ಭವ್ಯತೆ, ಗೂಢತೆ - ಮೊದಲಾದವುಗಳು ಮನುಷ್ಯನ ಮನವನ್ನು ತಟ್ಟಿ ಎಬ್ಬಿಸಿ ಹರಿಯ ಬಗ್ಗೆ ಭಕ್ತಿಯನ್ನು ಪ್ರಕಟವಾಗುವಂತೆ ಮಾಡುತ್ತವೆ. ಈ ಗುಣಗಳಿಂದಾಗಿಯೇ ವೈಷ್ಣವ ಪಂಥದಲ್ಲಿ, ಭಕ್ತಿ ಭಾವ ಹರಡುವಂತಾಯಿತು. ಶಿವ- ರುದ್ರ - ಭಾವನೆಯ ತಳಹದಿಯಲ್ಲಿ ಗೌರವ ಭಯಮಿಶ್ರಿತವಾದದ್ದು - ಇರುವುದೆನ್ನಬೇಕು. ಇಂಡಿಯಾದಲ್ಲಿ ಪ್ರೀತಿಗೆ ಪಾತ್ರನಾದ ದೇವರು ಹರಿ - ನಾರಾಯಣ, ವಾಸುದೇವ ಕೃಷ್ಣನಾದರೆ ಆಷ್ಕೆಪಾತ್ರನಾದ ದೇವರು ರುದ್ರ - ಶುಭಂಕರ ಶಿವ.

## 12. ಭಕ್ತಿತತ್ವ :

ಆರ್ತಿಯಾದ ಆತ್ಮದ ಅಗತ್ಯವನ್ನು ಪೂರೈಸಲು ಭಾರತದಲ್ಲಿ ಭಕ್ತಿ ತತ್ವ ಬೆಳೆಯಿತು. ಅತ್ಯಂತ ಹಿರಿದಾದ ಏಕದೇವತಾವಾದ, ಸರ್ವಶಕ್ತ, ಸರ್ವಸ್ರಷ್ಟ ಸರ್ವೋತ್ಕೃಷ್ಟ - ಮೊದಲಾದ ತಾತ್ವಿಕ ಚಿಂತನೆಗಳು ಅತಿ ಎತ್ತರಕ್ಕೆ ಏರಿದರೂ ಸಹ ಒಳಗುದಿಯಲ್ಲಿ ಬಿದ್ದ

ಸಾಮಾನ್ಯ ಮಾನವನ ದುಃಖಿದುಮ್ಮಾನಗಳನ್ನು ಪರಿಹರಿಸಲಾಗದೆ ಆತ್ಮಕ್ಷೋಭೆಗೆ ಮುಲಾಮು, ಆಗಿ ಒದಗಿ ಬರದಾಗುತ್ತವೆ. ನಿತ್ಯ ಸತ್ಯವಾದ, ಖಚಿತವಾದ, ನಿಯಮಬದ್ಧವಾದ ಅನಂತ ಶಕ್ತಿಯು ಜೀವನದ ಜಂಜಡದಲ್ಲಿ ಬಸವಳಿದ ಜೀವಗಳಿಗೆ ಕಣ್ಣೀರೊರೆಸಲು ಕೈಚಾಚದು. ಒಬ್ಬ ಶ್ರೇಷ್ಠ ಚಿಂತನಕಾರರು ಹೇಳುವಂತೆ "ನಿತ್ಯವಾದದ್ದು (ಉದಾಹರಣೆಗೆ ಹೊಗಳಿಕೆಗೆ ಪ್ರತಿಕ್ರಿಯೆ ತೋರದ ಹಿಮಾಲಯದ ಉತ್ತುಂಗತೆ.) ತನ್ನ ಆರಾಧಕರ ಭಯ ಸಂಕೋಚಗಳಿಗೆ, ಪ್ರೀತಿ ದ್ವೇಷಗಳಿಗೆ ಅತೀತವಾಗಿ ಸಹಾನುಭೂತಿ ರಹಿತವಾಗಿ ಉಳಿದು ಬಿಡುತ್ತದೆ. ಹಾಗಾಗಿ ನಿತ್ಯ ಸತ್ಯವಾದ ಅತ್ಯಂತ ಹಿರಿದಾದ ತತ್ವವೆಂಬುದು ತಪ್ಪು ತಿಳುವಳಿಕೆಯ ಸುಂದರ ಉದಾಹರಣೆಯಾಗುತ್ತದೆ."

ಜಗತ್ತು ಕೇವಲ ಹೊರಗೆ ಕಾಣುವುದು ಮಾತ್ರವೇ ಆಗಿದ್ದಲ್ಲಿ, ದೇವರು ತಂಪುರಕ್ತದ ಭಾವಾತೀತ ವಸ್ತು ವಿಷಯವಾಗಿದ್ದಲ್ಲಿ, ದುರ್ಬಲರೂ, ಆದ ಮನುಷ್ಯರು ತಮ್ಮನೋವು ದುಮ್ಮಾನಗಳಲ್ಲಿ ದೈವದ ಸಹಾಯ ಹಸ್ತಕ್ಕಾಗಿ ಅಂಗಲಾಚಿ ಬೇಡುವಾಗ ಯಾವುದೇ ರೀತಿಯ ನೆರವೂ ದೊರೆಯದೆ ಕೈಬಿಟ್ಟವರಂತೆ ಆಗುತ್ತಿದ್ದರು. ಎಲ್ಲ ರೀತಿಯ ದೌರ್ಬಲ್ಯಗಳನ್ನೂ ಹೊಂದಿದ ಸಾಧಾರಣ ಮಾನವನು ತನ್ನ ಮತ್ತು ದೇವರ ನಡುವಿನ ಸಂಬಂಧ ಅನಂತವಾಗುವುದೇ ಅಲ್ಲದೆ ಒಂದು ಭಾವನಾಸುಲಲಿತವಾಗಿರಲು, ಒಬ್ಬ ಸ್ನೇಹಿತನಂತಹ ದೇವರ ಅಗತ್ಯ ವಿದೆಯೆಂದು ಭಾವಿಸಿದರೆ ತಪ್ಪಾಗಲಾರದು. ಹಾಗಾಗಿಯೇ ಭಕ್ತಿಯ ಪರಿಕಲ್ಪನೆ, ತತ್ವ ಉಂಟಾಗಿದ್ದು, ದೇವರೊಡಗಿನ ತತ್ವ ಜ್ಞಾತವಾಗುವುದೇ ಅಲ್ಲದೆ ಒಂದು ಭಾವನಾತ್ಮಕ ಸಂಬಂಧವೂ ಉಂಟಾಗುತ್ತದೆ.

ವೈಷ್ಣವ ಪಂಥದ ಶ್ರೇಷ್ಠ ಆಚಾರ್ಯ ಪುರುಷರಲ್ಲಿ ಒಬ್ಬರಾದ ರಾಮಾನುಜಾಚಾರ್ಯರು ಹೇಳುವಂತೆ ದೇವರು ಸರ್ವತತ್ರ ಸ್ವತಂತ್ರನಾಗಿದ್ದಾನೆ. ಮತ್ತು ಜಗತ್ತಿಗೆ ಏಕಮಾತ್ರ ಆಶ್ರಯದ ಉದ್ಧಾರಕರ್ತ. ಎಲ್ಲವೂ ಆತನ ಅಧೀನಕ್ಕೆ ಒಳಗಾದ್ದದ್ದಾದಕ್ಕೆ ಕಾರಣ ವೆಂದರೆ ಜಗತ್ತು ಭ್ರಾಂತಿ ಮಾತ್ರವಲ್ಲದೆ ಅದು ದೇವರೊಡನೆ ಘನೀಭೂತವಾದ ಸಂಬಂಧ ಹೊಂದಿದೆ.

ಆಚಾರ್ಯ ರಾಮಾನುಜರ ನಂಬಿಕೆಯು ವಿಷ್ಣು, ಭಾಗವತ ಪುರಾಣಗಳನ್ನು ಆಧರಿಸಿದ್ದು. ಪುರಾಣಗಳಲ್ಲಿ ದೇವರ ಬಗ್ಗೆ ತಿಳುವಳಿಕೆಯೇ ಅಲ್ಲದೆ ಭಕ್ತಿಗೂ ಒತ್ತು ಹಾಕಲಾಗಿದೆ. ಹಾಗೂ ಮೋಕ್ಷಕ್ಕೆ ಸರ್ವೋತ್ತಮ ಮಾರ್ಗವಾಗಿ ಗುರುತಾಗಿದೆ.

ಭಕ್ತಿಯಿಂದ ಪರ್ವತಗಳನ್ನು ಜರುಗಿಸಬಹುದು. ಅದಕ್ಕೆ ಯಾವುದೂ ಅಸಾಧ್ಯವಲ್ಲ. ಎಲ್ಲ ಜೀವಿಗಳಿಗೆ ಒಳಿತನ್ನು ಮಾಡಲು ಸ್ನೇಹಿತನಂತಿರಲು, ಒಳ್ಳೆಯವನಾಗಿರಲು, ಧರ್ಮದಿಂದಿರಲು, ಧ್ರುವನಿಗೆ ಅವನ ತಾಯಿ ಉಪದೇಶ ಮಾಡುತ್ತಾಳೆ. ತನ್ನಕುಧರ್ಮದಿಂದ ಸ್ವಲ್ಪವೂ ತಪ್ಪಿ ನಡೆಯದವನು ವಿಷ್ಣುವಿನ ಭಕ್ತನೆಂದು ತಿಳಿ. ಆತನು ಮಿತ್ರರು ಶತ್ರುಗಳಲ್ಲಿ ಏಕಭಾವ ಹೊಂದಿರುವನು. ವಿಷ್ಣು ಪುರಾಣ ಹೇಳುವಂತೆ - ಆಸ್ತಿಯಿಂದಾಗಿ ದೊಡ್ಡಸ್ತಿಕೆಯುಂಟಾಗುವಲ್ಲಿ, ಸಂಪತ್ತು ಹಿರಿಮೆಯ ಅಳತೆಗೋಲು ಆದಲ್ಲಿ, ಸ್ತ್ರೀಪುರುಷರ ನಡುವೆ ಕಾಮವೇ ಸಂಬಂಧದ ಏಕಮಾತ್ರ ಎಳೆಯಾದಲ್ಲಿ, ಜೀವನದಲ್ಲಿ ವಂಚನೆಯೇ ಸಂತಸದ ಏಕಮಾತ್ರ ಸಾಧನವಾದಲ್ಲಿ, ಬಾಹ್ಯಾಡಂಬರವೇ ಅಂತರ ಸೌಂದರ್ಯವೆಂಬ ತಿಳಿವುಂಟಾದಲ್ಲಿ, ಆಯಾ ಸಮಾಜವು ಶೀಘ್ರವಾಗಿ ಕೊಳೆತುಹೋಗುತ್ತಿರುವ ಸಮಾಜ ಎಂದರ್ಥ. ಅಂತಹ ಸಂದರ್ಭದಲ್ಲಿ ಒಬ್ಬ ಉದ್ಧಾರಕನ ತುರ್ತು ಅಗತ್ಯವುಂಟಾಗುತ್ತದೆ. ಮೋಕ್ಷವೆಂಬುದು ದೇವರೊಡನೆ ಸಮಾನತೆ. (ಈಶ್ವರ ಸಾದೃಶ್ಯ) ರಾಮಾನುಜರ ನಂಬಿಕೆ ವಿಶ್ವಾಸಗಳು ವಿಷ್ಣು, ಭಾಗವತ ಪುರಾಣಗಳ ಆಧಾರದಲ್ಲಿ ಉಂಟಾದವು.

## 13. ರಾಮಾನುಜಾಚಾರ್ಯ:

ಕ್ರಿ.ಶ. 1027 ರಲ್ಲಿ ಶ್ರೀಪೆರಂಬುದೂರಿನಲ್ಲಿ ರಾಮಾನುಜರು ಜನ್ಮ ತಳೆದರು. ತಿರುಮಲೆಯ ಆಲಯಕ್ಕೆ ಅನನ್ಯವಾದ ರೀತಿಯಲ್ಲಿ ಸೇವೆಸಲ್ಲಿಸಿ ಇಲ್ಲಿನ ಪೂಜಾಕ್ರಮಗಳನ್ನು ಪುನರ್ವ್ಯವಸ್ಥೆ ಗೊಳಿಸಿದರು. ತಮ್ಮ ತಂದೆಯವರನ್ನು ಎಳೆಯವಯಸ್ಸಿನಲ್ಲಿಯೇ

ಕಳೆದುಕೊಂಡ ರಾಮಾನುಜರು ವೇದಾಂತವನ್ನು ಯಾದವ ಪ್ರಕಾಶರಲ್ಲಿ ಕಲಿತರು. ಆದರೆ ಅವರ ಎಲ್ಲ ರೀತಿಯ ಸಿದ್ಧಾಂತ ವೇದಾಂತ ವನ್ನು ಒಪ್ಪಲಿಲ್ಲ. ಶ್ರೀರಂಗದಲ್ಲಿ ಮಠಾಧಿಪತಿಗಳಾಗಿದ್ದ ಆಳವಂದಾರ್ - ಯಾಮುನಾಚಾರ್ಯರು ರಾಮಾನುಜರ ತತ್ವದೃಷ್ಟಿ ತಂತ್ರ ಯೋಚನಾಲಹರಿಯ ಬಗ್ಗೆ ಕೇಳಿ ಮೆಚ್ಚಿಕೊಂಡು ಶ್ರೀರಂಗದಲ್ಲಿ ಇವರನ್ನು ನೆಲೆಗೊಳಿಸುವ ಬಗ್ಗೆ ಯೋಚಿಸಿದರು.

ಚಿಂತಾಗ್ರಸ್ತರಾಗಿ ಒಂದು ದಿನ ಪರಮಾತ್ಮನನ್ನೇ ಈ ಬಗ್ಗೆ ವಿಚಾರಿಸಲು ಅರ್ಚಕರಿಗೆ ಅವರು ಹೇಳಿದರು. ದೈವದ ಅಪೇಕ್ಷೆಯನ್ನು ತಿಳಿಸುವ ಒಂದು ಪದ್ಯ ಈ ರೀತಿ ನಡೆಯುತ್ತದೆ - ನಾನೇ ಪರಮ ಸತ್ಯ . ನಾನು ಶ್ರೀ ವಿಶಿಷ್ಟನಾದವ. ಶರಣಾಗತಿಯೇ ಮೋಕ್ಷಕ್ಕೆ ಖಚಿತವಾದ ಸುಲಭಮಾರ್ಗ. ಪುರುಷ ಪ್ರಯತ್ನ ಅತಿ ಅಗತ್ಯವಾದದ್ದು ಎಂದೇನಿಲ್ಲ. ಕೊನೆಗೆ ಬಿಡುಗಡೆ ನಿಶ್ಚಯ. ಆಚಾರ್ಯರಲ್ಲಿ ಪೆರಿಯ ನಂಬಿಯೇ ಅತಿಶ್ರೇಷ್ಠ - ದೇವರು ಹೀಗೆ ಹೇಳಿದರು ಅಥವಾ ಇದನ್ನು ಕೇಳಿದ ರಾಮಾನುಜರು ವಿನಯದಿಂದ ಇದರಂತೆ ನಡೆಯಲು ಮೊದಲು ಮಾಡಿದರು.

ನಂತರ ರಾಮಾನುಜರು ಸನ್ಯಾಸ ಸ್ವೀಕರಿಸಿದರು. ಅವರೆಷ್ಟು ಜನಪ್ರಿಯರಾದರು ಎಂದರೆ ಜನ ಅವರನ್ನು ಮುನಿಗಳ ರಾಜ ಎಂದು ಪ್ರೀತಿಯ ಹೆಸರಿಟ್ಟು ಕರೆದರು. ಯತಿರಾಜ ಎಂದು ಅವರಿಗೆ ಹೆಸರಾಯಿತು. ಶ್ರೀರಂಗದಲ್ಲಿ ನೆಲೆಸಿದ ರಾಮಾನುಜರು ತಿರುವಾಯ್ಮೊಳಿಯನ್ನು ಕರಗತ ಮಾಡಿಕೊಂಡರು. ಬೋಧಾಯನ ವೃತ್ತಿಯನ್ನು ಕಂಠಗತವಾಗಿ ಪಡೆದಿದ್ದ ತಮ್ಮ ಶಿಷ್ಯ ಕುರತ್ತಾಳ್ವಾನ್‌ರ ನೆರವು ಹೊಂದಿದ ರಾಮಾನುಜರು ವೇದಾಂತ ದೀಪ, ವೇದಾಂತ ಸಂಗ್ರಹ, ವೇದಾಂತಸಾರವನ್ನು ಬರೆದರು. ಜೊತೆಗೆ ಬ್ರಹ್ಮಸೂತ್ರ ಭಗವದ್ಗೀತೆಗಳಿಗೆ ಭಾಷ್ಯಗಳನ್ನೂ ಬರೆದರು. ವೈಷ್ಣವರಲ್ಲಿ ಹಿರಿಯರೆಲ್ಲ ಈ ಭಾಷ್ಯಗಳನ್ನು ಒಪ್ಪಿದರು. ಬ್ರಹ್ಮಸೂತ್ರಗಳ ಭಾಷ್ಯವನ್ನು ಶ್ರೀಭಾಷ್ಯವೆಂದೂ ರಾಮಾನುಜರನ್ನು ಶ್ರೀ ಭಾಷ್ಯಕಾರರೆಂದೂ ಕರೆದರು. ರಾಮಾನುಜರು ದಕ್ಷಿಣ ಭಾರತವನ್ನೆಲ್ಲ ಸುತ್ತಿಹಲವಾರು ವೈಷ್ಣವ ಆಲಯಗಳ ಪುನರುದ್ಧಾರ ಮಾಡಿ ವೈಷ್ಣವ ಪಂಥವನ್ನು ಹರಡಿದರು.

ರಾಮಾನುಜರು ತಮ್ಮ ಜೀವಿತಾವಧಿಯನ್ನು ಸಂತಮುನಿಗಳ ಸಂಗದಲ್ಲಿ ಕಳೆದವರು. ಅವರೆಲ್ಲ ಧಾರ್ಮಿಕವಾದ ಒಂದು ವಾತಾವರಣ ನಿರ್ಮಾಣ ಮಾಡುವುದರಲ್ಲಿ ಯಶಸ್ವಿಯಾಗಿದ್ದರು. ಆಳ್ವಾರುಗಳ ಪಾಶುರಗಳು ನಾಡಿನ ಉದ್ದಗಲಕ್ಕೆ ಹರಡಿದ್ದಿತು. ಆಳ್ವಾರರುಗಳಿಗೆ ದೇವರು ಬರೇ ಸೃಷ್ಟಿಕರ್ತನಾಗದೆ ಸನ್ನಿಹಿತನಾದ ಸ್ನೇಹಿತನೂ ಆಗಿದ್ದ. ಹೀಗಾಗಿ ದೇವರನ್ನು ಒಬ್ಬ ವ್ಯಕ್ತಿಯಂತೆ ತಾತ್ವಿಕವಾಗಿ ನೋಡುವ ಒಂದು ಭಾವವನ್ನು ರಾಮಾನುಜರು ಬೆಳೆಸಿದರು.

ರಾಧಾಕೃಷ್ಣನ್ ರಾಮಾನುಜರ ಬಗ್ಗೆ ಹೀಗೆನ್ನುತ್ತಾರೆ - ''ರಾಮಾನುಜರು ಧಾರ್ಮಿಕ ಸ್ಫೂರ್ತಿಯನ್ನು ಬಲವಾಗಿ ನಂಬಿದ್ದರು. ಅದರಿಂದಾಗಿ ದೇವರು ಸೃಷ್ಟಿಯ ಮೂಲಕವಾಗಿ, ತಾತ್ವಿಕತೆಯಿಂದ, ದೇವದೂತರಿಂದ ತನ್ನ ಅವತಾರಗಳ ಮೂಲಕವಾಗಿ ಮನುಷ್ಯನಿಗೆ ದರ್ಶನ ನೀಡುವನೆಂಬ ಆಳವಾದ ಧಾರ್ಮಿಕ ದೃಷ್ಟಿಯನ್ನು ಹರಡಿದರು. ಬ್ರಹ್ಮಸೂತ್ರ ಹಾಗೂ ಉಪನಿಷತ್ತುಗಳಲ್ಲಿ ಅಂತರ್ಗತವಾಗಿ ಗೂಢವಾಗಿದ್ದ ವಿಷಯಗಳನ್ನು ಆತ ತನ್ನ ಆಚಾರ್ಯರುಗಳ ನೆರವಿನಿಂದ ಆಳ್ವಾರರುಗಳ ಪಾಶುರಗಳ ಅಧ್ಯಯನದಿಂದ ಬಹಿರ್ಗತ ಗೊಳಿಸಿದರು. ಒಂದು ಕ್ಷಣವೂ ಕೂಡ ತಾವೊಂದು ಹೊಸ ಪಂಥವನ್ನು ಹುಟ್ಟು ಹಾಕುತ್ತಿದ್ದೇವೆ ಎಂದು ಭಾವಿಸಲಿಲ್ಲ. ಆ ಸಾರ್ವಕಾಲಿಕ ಆಗಿದ್ದ ಬೌದ್ಧಿಕ ಸತ್ಯವನ್ನು ಸಾರಿ ಹೇಳಿದರಷ್ಟೆ''.

ಆತ ತಿರುಮಲೆಯಲ್ಲಿ ಪ್ರವೇಶಗೊಳಿಸಿದ ಎಲ್ಲ ಪುನರ್ನವೀಕರಣಗಳೂ ಪರಿಷ್ಕರಣಗಳೂ ಮೇಲೆ ಹೇಳಿರುವ ಭಕ್ತಿಯ ಪರಿಕಲ್ಪನೆಯ ಆಧಾರದಲ್ಲಿ ಆದವು.

## 14. ಪ್ರಪತ್ತಿ

ದೈವದ ಬಗ್ಗೆ ವ್ಯಕ್ತಿನಿಷ್ಠ ಭಕ್ತಿ ಹೊಂದಿರುವುದೇ ಪ್ರಸಿದ್ಧ ಶ್ರೀವೈಷ್ಣವ ಪಂಥದ ಕೇಂದ್ರ ತತ್ವ. ಇದನ್ನು ಪ್ರಪತ್ತಿಯೆಂದರು. "ಹಿಸ್ಟರಿ ಆಫ್ ಇಂಡಿಯನ್ ಫಿಲಾಸಫಿ"ಯಲ್ಲಿ ಡಾ|| ದಾಸಗುಪ್ತ ಅವರು ಪ್ರಪತ್ತಿ ತತ್ವದ ಬಗ್ಗೆ ಶಾಸ್ತ್ರೀಯವಾದ ಪರಿಭಾವನೆಯನ್ನು ವಿವರಿಸಿದ್ದಾರೆ. ಮಾಹಿತಿಗಾಗಿ ಅದನ್ನಿಲ್ಲಿ ಉದ್ಧರಿಸಲಾಗಿದೆ.

ಪ್ರಾಚೀನರ ಅಭಿಮತದಂತೆ ದೇವರು ತನ್ನ ಶರಣುಬಂದವರನ್ನು ಕಾಯುವಲ್ಲಿ ಗುಣಾತ್ಮಕವಾಗಿ ಸ್ಪಂದಿಸುವನು. ಶರಣು ಹೋಗುವವರಲ್ಲಿ ತಾನು ಆತ್ಮಮಾತ್ರನೇ ಎಂಬ ಭಾವನೆಯಿದ್ದು, ಆ ಒಂದು ಆತ್ಮೈಕ ಭಾವ ಇತರ ಯಾವ ಭಾವನೆಗಳಿಂದಲೂ - ಅಹಂಕಾರ ಮಮಕಾರ ಮುಂತಾದ ಯಾವ ಸಂಕೀರ್ಣಭಾವ ದಿಂದಲೂ -ಹೊರತಾಗಿ ಇರುವುದೇ ಪ್ರಪತ್ತಿ. ಹೀಗೆಂದಾಗ ಇದು ಶರಣಾಗತರಲ್ಲಿರುವ ತಾವು ಭಗವಂತನನ್ನು ಸೇರುವುದೇ ಅಂತಿಮ ಗುರಿಯಾಗಿ ಪರಿಕಲ್ಪನೆ ಹೊಂದಿರುವ ಮನಃಸ್ಥಿತಿಯನ್ನು ತಿಳಿಸುವುದು. ಇತರ ಯಾವುದೇ ಶಾಸ್ತ್ರಸಂಪ್ರದಾಯ ಕರ್ತವ್ಯಭಾರವನ್ನೂ ಹೊಂದಿಲ್ಲದೆ ಆವನನ್ನು ಸೇರುವುದೇ ಗುರಿಯೆಂದಾಯಿತು, ಅಥವಾ ಈ ಪರಮ ಗಂತವ್ಯದಲ್ಲಿ ತಲ್ಲೀನನಾಗಿ ತನ್ನ ಜೀವನದ ಅಂತಿಮ ಲಕ್ಷ್ಯ ದೇವರನ್ನು ಸೇರುವುದೇ ಆಗಿದೆ ಎಂಬ ಆನಂದದಲ್ಲಿ ಮುಳುಗಿರುವುದೇ ಆಗಿರುವುದು, ಇಂತಹ ಮನುಷ್ಯ ಅಂತರ್ ವಿರೋಧವಿಲ್ಲದೆ ಯಾವುದೇ ಪುರಾಣೋಕ್ತ ಕರ್ತವ್ಯಗಳಲ್ಲಿಯೂ ನಿರತನಾಗಲಾರ. ತಪ್ಪು ಗೈದ ಪತ್ನಿಯು ಪತಿಯನ್ನು ಪುನಃ ಸೇರಿ ಅವನಿಗೆ ಶರಣಾಗಿ ತನ್ನನ್ನು ತಾನು ಅವನಿಗೆ ಅರ್ಪಿಸಿಕೊಳ್ಳುವಂತೆಯೇ ಶರಣಾಗತನು ದೇವರೊ ಡನೆ ತನ್ನ ಸಂಬಂಧ ತಿಳಿದುಕೊಂಡು ತನ್ನನ್ನು ತಾನು ಸಮರ್ಪಿಸಿಕೊಳ್ಳುವನು. ಇತರರು ಇಲ್ಲಿ ಐದು ಅಂಶಗಳುಂಟೆಂದು ಅಭಿಪ್ರಾಯಪಡು ವರು. 1)ದೇವರೊಬ್ಬನೇ ರಕ್ಷಿಸಬಲ್ಲ 2) ಅವನೇ ಪರಮಗಂತವ್ಯ -ಚರಮಗುರಿ. 3) ನಮ್ಮ ಎಲ್ಲ ಆಕಾಂಕ್ಷೆಗಳ ಪರಮವಸ್ತು ಆತನೇ 4) ನಾವು ಅವನಿಗೆ ಶರಣಾಗತರಾಗಿ ಅರ್ಪಿತರಾಗಬೇಕು. 5) ಅವನಲ್ಲಿ ಪರಮಭರವಸೆ ಹೊಂದಿ ಗರಿಷ್ಠತಮ ಪ್ರಾರ್ಥನೆ ಸಲ್ಲಿಸಬೇಕು.

ಅಧೀತ ಪ್ರಬಂಧಃ ಪ್ರಪನ್ನಃ - ಎಂದು ಆಳ್ವಾರರ ಪ್ರಬಂಧ ಸಾಹಿತ್ಯವನ್ನು ಓದಿದವನೇ ಪ್ರಪನ್ನ ಎಂದೂ ಹಲವರ ಅಭಿಪ್ರಾಯ ವುಂಟು. ಪ್ರಬಂಧ ಪಠಣ ಮಾತ್ರದಿಂದಲೇ ಪ್ರಪತ್ತಿ ಸಾಧ್ಯವಾಗದು ಎಂದು ಮತ್ತೂ ಹಲವರು ಹೇಳುವರು. ಕರ್ಮಯೋಗ ಭಕ್ತಿ ಯೋಗ ಜ್ಞಾನಯೋಗಗಳ ನಿಧಾನಗಮನದಲ್ಲಿ ಆಸಕ್ತಿ ಇಲ್ಲದವರು ಮಾತ್ರವೇ ಪ್ರಪತ್ತಿಮಾರ್ಗವನ್ನು ಅವಲಂಬಿಸುವರು ಎಂಬುದು ಇವರ ಚಿಂತನೆ. ಪ್ರಪತ್ತಿ ಮಾರ್ಗಾವಲಂಬಿಗಳು ಶಾಸ್ತ್ರೋಕ್ತ ಕರ್ಮಗಳಾದ ಆಶ್ರಮಧರ್ಮವೇ ಮುಂತಾದವುಗಳನ್ನು ಬಿಡಬೇಕು ಎಂದು ಪ್ರಾಚೀನರು ಹೇಳುವರು. ಗೀತೆಯಲ್ಲಿ ಹೇಳುವಂತೆ ಎಲ್ಲ ಧರ್ಮಗಳನ್ನು ತ್ಯಜಿಸಿ ಆತನಿಗೆ ಶರಣಾಗತನಾಗಬೇಕು. ಅದನ್ನೇ ಪರಮಧರ್ಮವಾಗಿ ಆಚರಿಸಬೇಕು. ಇನ್ನೊಂದು ಅಭಿಪ್ರಾಯದಂತೆ ಪ್ರಪತ್ತಿ ಮಾರ್ಗವನ್ನು ಅನುಸರಿಸುವವರೂ ಸಹ ಪುರಾಣೋಕ್ತ ಧರ್ಮಕರ್ತವ್ಯಗಳನ್ನು ಆಚರಿಸಬೇಕು. ಪ್ರಾಚೀನರು ಜ್ಞಾನಮಾರ್ಗವು ಪ್ರಪತ್ತಿ ಮಾರ್ಗಕ್ಕೆ ವಿರುದ್ಧವಾದದ್ದು ಎನ್ನುವರು. ಕಾರಣ ಪ್ರಪತ್ತಿಯು ಜ್ಞಾನದ ಎಲ್ಲ ಅವಧಿಗಳನ್ನೂ ನಿರಾಕರಿಸಿ, ಭಗವಂತನಿಗೆ ಶರಣಾಗುವುದನ್ನು ಮಾತ್ರವೇ ಹೇಳುವುದು. ಕರ್ತವ್ಯಧರ್ಮಗಳು ಹಾಗೂ ಜ್ಞಾನಮಾರ್ಗವು ಒಂದು ರೀತಿಯ ಅಹಂಕಾರಕ್ಕೆ ದಾರಿ ತೆಗೆಯುವುವು. ಹಾಗಾಗಿ ಪ್ರಪತ್ತಿ ಹಾಗೂ ಜ್ಞಾನ ಒಂದರೊಡನೊಂದು ಸಾಮರಸ್ಯದಿಂದ ನಡೆಯಬಲ್ಲವು ಎಂಬುದು ಬದ್ಧವಾಗದ ಮಾತು. ಸ್ವ ಎಂಬುದು ನಮ್ಮದೇ ಆದ ಅಸ್ತಿತ್ವದ ಪ್ರಕೃತಿಯಾಗಿದ್ದು ಬೆಳೆಯುವ ಪ್ರವೃತ್ತಿಯ ಅಹಂಕಾರವಲ್ಲ. ಇತರ ಅಬೋಧ ಅಮಾಯಕರು ತಮ್ಮ ಕರ್ತವ್ಯ ಧರ್ಮಗಳನ್ನು ಪಾಲಿಸದಿರಲು ತಮ್ಮ ಕರ್ಮತ್ಯಾಗದ ದೃಷ್ಟಾಂತವನ್ನು ಉದಾಹರಣೆಯಾಗಿ ನೀಡುವುದನ್ನು ತಪ್ಪಿಸಲು ಪ್ರಪತ್ತಿ ಮಾರ್ಗವನ್ನು ಅವಲಂಬಿಸಿದವರೂ ಸಹ ಕರ್ಮ ನಿರತರಾಗಬೇಕು ಎಂದರೆ ಲೋಕ ಸಂಗ್ರಹಕ್ಕಾಗಿ ಕರ್ಮಗಳನ್ನು ಆಚರಿಸಬೇಕು ಎನ್ನುವವರೂ ಉಂಟು. ಪ್ರಪತ್ತಿ ಮಾರ್ಗವನ್ನು ಅನುಸರಿಸುವವರೂ ಸಹ ಸರ್ವಧರ್ಮಗಳನ್ನು ಭಗವತ್ ಪ್ರೀತ್ಯರ್ಥವಾಗಿ ಮಾಡಬೇಕೆಂದೂ ಹಾಗೆ ಮಾಡದಿದ್ದಲ್ಲಿ ಕರ್ತವ್ಯ ಲೋಪದ ದಂಡಭಾಗಿಗಳಾಗುವರು ಎಂದು ಹೇಳುವವರೂ ಉಂಟು.

ಪ್ರಪತ್ತಿಯ ಉಪಾಂಗಗಳು ಆರು ಎಂದು ಹೇಳುತ್ತ ಅವುಗಳನ್ನು ಹೀಗೆ ವಿವರಿಸಲಾಗಿದೆ -

ಅನುಕೂಲಸ್ಯ ಸಂಕಲ್ಪಃ ಪ್ರಾತಿಕೂಲಸ್ಯ ವರ್ಜನಂ
ರಕ್ಷಿಷ್ಯತೀತಿ ವಿಶ್ವಾಸೋ ಗೋಪ್ತೃತ್ವ ವರಣಂ ತಥಾ
ಆತ್ಮನಿಕ್ಷೇಪ ಕಾರ್ಪಣ್ಯೇ ಷಡ್ವಿಧಾ ಶರಣಾಗತಿಃ

- ಅಹಿರ್ಬುಧ್ನ್ಯ ಸಂಹಿತಾ 37-28-29.

1. ದೇವರ ಇಚ್ಛೆಗೆ ತಕ್ಕಂತೆ ಸರ್ವಕಾಲ ಸರ್ವಾವಸ್ಥೆಯಲ್ಲಿಯೂ ಇರಬೇಕೆಂಬ ಸಂಕಲ್ಪ
2. ದೇವರಿಗೆ ಪ್ರತಿಕೂಲವಾದ ಎಲ್ಲವನ್ನೂ ವರ್ಜಿಸುವುದು ಎಂದರೆ ಭಗವಂತನಿಗೆ ಇಷ್ಟವಾಗದು ಎಂಬ ಎಲ್ಲದರ ಪರಿತ್ಯಾಗ
3. ದೇವರು ರಕ್ಷಿಸಿಯೇ ತೀರುವನೆಂಬ ಭರವಸೆ.
4. ಪರಿಪೂರ್ಣವಾದ ಆತ್ಮಸಮರ್ಪಣೆ - ದೇವರಿಗೆ ತನ್ನನ್ನು ತಾನು ಒಪ್ಪಿಸಿ ಕೊಡುವಿಕೆ.
5. ಆತನೇ ನಮ್ಮನ್ನು ರಕ್ಷಿಸದೆ ಅನ್ಯತ್ರವಲ್ಲವೆಂಬ ಆಯ್ಕೆಯ ಸಂಕಲ್ಪ
6. ಅಕಿಂಚನನಾದ ತನ್ನನ್ನು ಆತ ಕಾಪಾಡಬೇಕು ಎಂಬ ದೈನ್ಯದ ಪ್ರಾರ್ಥನೆ.

ಪ್ರಪತ್ತಿ ಮಾರ್ಗವನ್ನು ಅನುಸರಿಸಿದವರು ಪೂರ್ಣಕಾಮರಾಗಬೇಕಾದ ಇತರ ಯಾವುದೇ ಅಪೇಕ್ಷೆಯನ್ನೂ ಹೊಂದಿರುವುದಿಲ್ಲವಾಗಿ ದೇಶಕಾಲಾನುಗುಣವಾಗಿಯೂ, ಅವರವರ ಮನೋಭಾವಕ್ಕೆ ತಕ್ಕಂತೆಯೂ, ಇವುಗಳಲ್ಲಿನ ಯಾವುದೇ ಒಂದನ್ನಾದರೂ ಆಯ್ದುಕೊಂಡು ಅನುಸರಿಸಬಹುದು ಎಂದು ಪ್ರಾಚೀನರು ಅಭಿಪ್ರಾಯ ಪಡುವರು. ಇತರರು ಅಭಿಪ್ರಾಯ ಪಡುವಂತೆ - ಪ್ರಪನ್ನರು ಯಾವುದೇ ಬಯಕೆಯಿಂದಲೂ ಬಿಡುಗಡೆ ಪಡೆದಿರುವುದರಿಂದ ತಾವು ಭಗವಂತನ ಸದಾದಾಸರೆಂಬ ಭಾವದಲ್ಲಿ ಮುಳುಗಿರುವುದರಿಂದಲೂ, ಇತರತ್ರ ಯಾವುದೇ ಅಗತ್ಯಗಳಿಂದ ಮುಕ್ತರಾಗಿರುವುದರಿಂದಲೂ ಅವರು ಮೇಲಿನ ಆರೂ ಅಂಶಗಳನ್ನು ಆಚರಣೆಯಲ್ಲಿ ತರಬೇಕು.

ಭಗವಂತನು ಮಾತ್ರವೇ ಏಕಮಾತ್ರ ಉತ್ತಾರಕನೆಂದ ಮೇಲೆ ಪ್ರಪತ್ತಿಯು ಅದಕ್ಕೆ ಒಂದೇ ಮಾರ್ಗವಲ್ಲವೆಂದು ಪ್ರಾಚೀನರು ಬಗೆದರೆ, ಆಧುನಿಕರು, ಭಗವಂತನು ತನ್ನ ಭಕ್ತರಲ್ಲಿ ಕರುಣೆ ತೋರಲು ಪ್ರಪತ್ತಿಯೂ ಒಂದು ಮಾಧ್ಯಮವಾದದ್ದರಿಂದ ಅದೂ ಸಹ ಒಂದು ಮುಖ್ಯೋಪಾಯವೆಂದು ತಿಳಿದರು. ಪ್ರಪತ್ತಿ ಮಾರ್ಗದಲ್ಲಿ ನಡೆಯುವವರ ಪಾಪದೋಷಗಳನ್ನೆಲ್ಲ ಭಗವಂತನೇ ದೂರ ಮಾಡುವುದರಿಂದಾಗಿ ಅವರಿಗೆ ಬೇರೆಯೇ ಆದ ಪ್ರಾಯಶ್ಚಿತ್ತ ಕರ್ಮಗಳಿಲ್ಲ ಎಂಬುದು ಪ್ರಾಚೀನರ ಅಭಿಪ್ರಾಯವಾದರೆ, ನೂತನರು ಹೇಳುವಂತೆ - ಪ್ರಪತ್ತಿ ಮಾರ್ಗಾನುಸಾರಿಯು ದೈಹಿಕನಾಗಿ ಶಕ್ತನಾಗಿದ್ದಲ್ಲಿ ಪ್ರಾಯಶ್ಚಿತ್ತ ಕರ್ಮಗಳು ಕಡ್ಡಾಯ. ಒಬ್ಬನು ಎಂಟು ವಿಧ ಭಕ್ತಿಯಿಂದ ಕೂಡಿದ್ದಲ್ಲಿ ಆವನು ಮ್ಲೇಚ್ಛನಾದರೂ ಬ್ರಾಹ್ಮಣನಿಗೆ ಸಮಾನನೆಂದೂ ಅದೇ ರೀತಿಯ ಗೌರವಕ್ಕೆ ಅರ್ಹನೆಂದೂ ಪ್ರಾಚೀನರು ತಿಳಿಯುವರು. ವ್ಯಕ್ತಿಯ ಆತ್ಮದ ಒಳಗನ್ನು ಆವರಿಸುವ ದೇವರ ಅಪಾರ ಶಕ್ತಿಯಿಂದಾಗಿ ಯಾವಾಗ ಬೇಕಾದರೂ ಹಾಗೆ ಮಾಡಬಲ್ಲನೆಂದು ಪ್ರಾಚೀನರೆಂದರೆ, ನೂತನರು ಈ ಆವರಿಸುವಿಕೆ ಹೊರಗಿನಿಂದ ಆಗುವುದು ಅಂತರಂಗದಲ್ಲಿ ಅಲ್ಲವೆನ್ನುವರು. ಭಗವಂತನು ವ್ಯಕ್ತಿಯ ಆತ್ಮವನ್ನು ಸೇರುವುದಿಲ್ಲ. ಪ್ರಾಚೀನರ ಅಭಿಪ್ರಾಯದಲ್ಲಿ ಕೈವಲ್ಯವೆಂದರೆ ಆತ್ಮಸಾಕ್ಷಾತ್ಕಾರ. ಈ ಸ್ಥಿತಿಯನ್ನು ತಲುಪಿದವನು ಮೋಕ್ಷದ ಅಥವಾ ಅಮೃತತ್ವದ ಅತ್ಯುಚ್ಚ ಹಂತವನ್ನು ತಲುಪುವನು. ಆಧುನಿಕರು ಆತ್ಮಸಾಕ್ಷಾತ್ಕಾರದಿಂದ ಮಾತ್ರವೇ ಮುಕ್ತಿಯನ್ನು ಪಡೆಯಲಾಗದು ಎನ್ನುವರು. ಕಾರಣ ಈ ಆತ್ಮಸಾಕ್ಷಾತ್ಕಾರವು ಭಗವಂತನ ಸಂಬಂಧದಲ್ಲಿ ಆತನ ನಿಜದ ನೆಲೆಯನ್ನು ತಿಳಿಸಿಕೊಡುವುದಿಲ್ಲ. ಮೇಲೇರುತ್ತ ನಡೆದು ಹಂತಹಂತವಾಗಿ ಉಚ್ಛ್ರಾಯ ಹೊಂದಿ ವೈಕುಂಠವನ್ನು ತಲುಪಿದಾಗಲೇ ಒಬ್ಬನು ದೇವರ ದಾಸನೆಂದು ತೀರ್ಮಾನವಾಗುತ್ತದೆ. ಈ ಸ್ಥಿತಿಯೇ ಶಾಶ್ವತವೆಂದು ತಿಳಿಯಲಾಗಿದೆ.

## 15. ರಾಮಾನುಜರ ನಂತರದ ಆಚಾರ್ಯರು :

ರಾಮಾನುಜರ ವಿಶಿಷ್ಟಾದ್ವೈತ ತತ್ವವು ರಾಮಾನಂದರನ್ನು (1300 ರಿಂದ 1411) ಕಬೀರ (1398 ರಿಂದ 1527) ನಾನಕ ಹಾಗೂ ತುಲಸೀದಾಸ(1511 ರಿಂದ 1637) ರನ್ನು ಪ್ರಭಾವಿಸಿತು. ಮತ್ತಿತರ ಹಲವು ಹನ್ನೊಂದು ಮಂದಿ ಈ ಪಂಥವನ್ನುಆದರಿಸಿ ಭಾರತಾದ್ಯಂತ ಹರಡಿದರು.

ಇಂತಹದೇ ಒಂದು ಕೃತಿ ಜಯದೇವನ ಗೀತಗೋವಿಂದ. ಈ ಪ್ರಚಾರಾಂದೋಲನದಲ್ಲಿಯೇ ಸಂತಜ್ಞಾನೇಶ್ವರ, ನಾಮದೇವ (ಮಹಾರಾಷ್ಟ್ರ) ನರಸೀಮೆಹೆತಾ (ಗುಜರಾತ್) ಚಂಡಿದಾಸ, ವಿದ್ಯಾಪತಿ, ಸೂರದಾಸ, ಚೈತನ್ಯ, ವಲ್ಲಭಾಚಾರ್ಯ, ಪೋತನ, ಅನ್ನಮಾಚಾರ್ಯ- ಮೊದಲಾದವರೆಲ್ಲರೂ ಬಂದರು.

## 16. ಮುಕ್ತಿ ಸಾಧನವಾಗಿ ಭಕ್ತಿ

ಭಕ್ತಿಯ ಮೂಲಕ ಮುಕ್ತಿಯನ್ನು ಹೊಂದಬಹುದು ಎಂಬುದು ಶ್ರೀವೈಷ್ಣವ ಪಂಥದ ತಿರುಳು. ರಾಮಾನುಜರ ದೃಷ್ಟಿಯು ಸತ್ಯದ ಪರಮಾಭಿವ್ಯಕ್ತಿಯಾದದ್ದು.ನಮ್ಮ ಚಿಂತನೆಗೆ ಸಿಗದಷ್ಟು ಹಿರಿದೂ, ಮಹತ್ವದ್ದೂ ಆದ ಪರದೈವವೊಂದು ಇದೆ ಎಂಬುದು. ಪರಲೋಕದ ಸುಂದರ ವಿವರಗಳು ನಮ್ಮ ಅಂತರಂಗದಲ್ಲಿ ಮಹತ್ವದ ಪ್ರತಿಸ್ಪಂದನವನ್ನುಂಟುಮಾಡುತ್ತವೆ. ಜೀವನದ ಎಲ್ಲ ಮುಖಗಳನ್ನು ಸಮನ್ವಯಗೊಳಿಸಿ ಜಗತ್ತಿನ ಎಲ್ಲ ಚಟುವಟಿಕೆಯನ್ನು ನಿರ್ದೇಶಿಸುವ ಒಬ್ಬ ದೇವರು ಇರುವನೆಂದು ತಿಳಿಸಿಸಿದ್ದಾರೆ. ತರ್ಕವೂ ಇದನ್ನು ಒಪ್ಪುತ್ತದೆ. ಧಾರ್ಮಿಕ ಪ್ರಜ್ಞೆ ಇದನ್ನು ಖಚಿತಪಡಿಸುತ್ತದೆ ಹಾಗೂ ನಮ್ಮಲ್ಲಿನ ಬಹುಮಂದಿ ಇದನ್ನು ಒಪ್ಪುತ್ತೇವೆ. ಹಾಗಾಗಿ ಶ್ರೀವೈಷ್ಣವ ತತ್ವ ಧಾರ್ಮಿಕ ಪ್ರಜ್ಞೆಯ ಉತ್ತುಂಗವನ್ನು ಮುಟ್ಟುವುದು. ಇದರ ಪರಿಕಲ್ಪನೆಗಳು ಉಪನಿಷತ್ತಗಳ, ಪುರಾಣ, ಆಗಮ, ಪ್ರಬಂಧಗಳ ಹಲವು ಹನ್ನೊಂದು ಕಥಾನಕಗಳಲ್ಲಿ ಸುಸ್ಪಷ್ಟವಿದೆ. ಶ್ರೀವೈಷ್ಣವ ಪಂಥ ತನ್ನದೇ ಆದ ವಿಶಿಷ್ಟವಾದ ಧಾರ್ಮಿಕ ಶೈಲಿಯಲ್ಲಿ ಇವುಗಳಿಗೆ ಪ್ರತಿಸ್ಪಂದಿಸುತ್ತದೆ.

ಭಕ್ತಿಯ ಪರಿಕಲ್ಪನೆಯ ತಿರುಳು ಎಂದರೆ ಹಲವಾರು ವಿಭಿನ್ನ ಮೂಲವಸ್ತು ದ್ರವ್ಯಗಳು ಧಾರ್ಮಿಕ ಅನುಭಾವದ ವಾಗತೀತ ಏಕಸೂತ್ರದಲ್ಲಿ ಸೇರಿ ಹೋಗಿದೆ ಎಂಬುದು. ಭಕ್ತಿ ಹಾಗೂ ಶ್ರೀವೈಷ್ಣವ ತತ್ವಗಳು - ಧಾರ್ಮಿಕ ಭಾವನೆಗಳ ಅಗತ್ಯಗಳು ತಾರ್ಕಿಕ ಆಲೋಚನಾ ಸರಳಿಯೊಡನೆ ಸಮನ್ವಯ ಸಾಧಿಸಲು ಪ್ರಯತ್ನಿಸುತ್ತವೆ. ಇದರಿಂದಾಗಿ ನಮಗೆ ಒಂದು ವ್ಯವಸ್ಥಿತವಾದ ಹಾಗೂಪ್ರಾವ ಲಂಬಿಯಾದ ತಾತ್ವಿಕತೆ ದೊರೆತಿದೆ. ಜೊತೆಗೇ ತೋರಿಕೆಗೆ ಪರಸ್ಪರ ವಿರೋಧವೆನಿಸುವ ಧರ್ಮ ಹಾಗೂ ತಾತ್ವಿಕತೆಗಳ ನಡುವಣ ಕಂದಕವನ್ನು ಜೊತೆಗೂಡಿಸುವ ಸೇತುವೆಯಂತೆ ಭಕ್ತಿಯ ಪರಿಕಲ್ಪನೆ ತೀವ್ರಕಾಳಜಿಯಿಂದ ಕೆಲಸ ಮಾಡುತ್ತದೆ.

ಹಿರಿಯ ಪ್ರಬಂಧಕಾರರಾದ ಆಳ್ವಾರರು, ಭಗವದ್ರಾಮಾನುಜರು ತಿರುಮಲೆಯ ಆಚಾರ್ಯ ಪುರುಷರು ಶ್ರೀವೈಷ್ಣವ ಪಂಥ ಸಂತ ಮಹಾಪುರುಷರೆಲ್ಲ ಭಕ್ತಿಪಂಥದ ಒಂದು ಆಮೋದಕರ ಆಹ್ಲಾದದಲ್ಲಿ ಮುಳುಗಿದವರಾಗಿದ್ದು, ತಿರುಮಲೆಯ ಆಲಯದ ಸಪ್ತಗಿರೀಶನು ಧಾರ್ಮಿಕ ಜೀವನದ ಚೈತನ್ಯದಾಯೀ ದಾರಿದೀಪವಾಗಿದ್ದಾನೆ.

## 17. ಮನೋಹರ ಮೂರ್ತಿ

### ದೇವರ ಬಿಂಬ:

ಭಕ್ತರಿಗೆ ಸ್ವಾಮಿಯ ಕಟ್ಯವಲಂಬಿತ ಹಸ್ತದ ವಿಗ್ರಹವು ದೇವರ ಜೀವಂತಮೂರ್ತಿಯಾಗಿದೆ. ದುಃಖದುಮ್ಮಾನಗಳಲ್ಲಿ ಮುಳುಗಿದ ಜನಕ್ಕೆ ಕಾಲದಿಂದಲೂ ಉತ್ತಾರಕ ಶಕ್ತಿಯಾಗಿ ಕೆಲಸ ಮಾಡುತ್ತ ಬಂದಿದೆ. ದುಃಖಿತರಾದ ಜನತೆ ಎಲ್ಲ ಮೂಲೆಗಳಿಂದಲೂ ಬಂದು ಸ್ವಾಮಿಯನ್ನು ದರ್ಶಿಸಿ ಸಮಾಧಾನ ಹೊಂದುವರು.

ಸ್ವಾಮಿಯ ವಿಗ್ರಹವು ಸ್ಥಾನಕ ಎಂದರೆ ನಿಂತಿರುವ ಭಂಗಿಯಲ್ಲಿದೆ. ಆರಾಧನೆಗೆ ಬಂದು ಮುಂದೆ ನಿಂತವರನ್ನೆಲ್ಲ ಸಮಾನವಾಗಿ ನೋಡುವ ಸಮದೃಷ್ಟಿಯಿದು. ಮುಖವು ಸಂತಸವನ್ನು ಸೂಸುತ್ತ ಮುಗುಳ್ನಗೆಯನ್ನು ಹೊಂದಿದೆ. ಅಲೆಯಲೆಯಾಗಿರುವ ಕುರುಳೋ

ಳಿಯು ಭುಜಗಳವರೆಗೆ ಇಳಿದು ಬಂದಿದೆ. ಕಿವಿಗಳಲ್ಲಿ ಸುಂದರವಾದ ಓಲೆಗಳಿವೆ. ಕೊರಳು ಶಂಖದಂತೆ ಸುಂದರವಾಗಿದ್ದು ಸ್ವಾಮಿಯ ದೇಹವು ಸಿಂಹದಂತೆ ಗಂಭೀರವೂ, ಭವ್ಯವೂ ಆಗಿ ಕಂಡುಬರುತ್ತದೆ. ನಾಲ್ಕು ಕೈಗಳಿವೆ. ಮೇಲಿನೆರಡು ಕೈಗಳಲ್ಲಿ ಚಕ್ರ ಶಂಖಗಳಿವೆ. ಕೆಳಗಿನ ಬಲಗೈ ವರದ ಹಸ್ತವಾಗಿದೆ. ಕೆಳಗಿನ ಎಡಗೈ ಕಟ್ಯವಲಂಬಿತ ಹಸ್ತವಾಗಿದೆ. ಇಡೀ ದೇಹವೇ ತ್ರಿಭಂಗಿಯಲ್ಲಿ ಇಲ್ಲದಿದ್ದರೂ ನಡುವಿನ ಕೆಳಭಾಗವು ಸ್ವಲ್ಪ ಎಡಭಾಗಕ್ಕೆ ವಾಲಿದಂತಿದೆ. ಮೊಣಕಾಲುಗಳು ಸ್ವಲ್ಪ ಮಡಚಿದಂತೆ ಹೊರಕ್ಕೆ ತೆರೆದುಕೊಳ್ಳುವಂತಿದ್ದು ವಿಶಿಷ್ಟವಾದ ಶೋಭೆಯನ್ನು ತಂದಿದೆ. ಎದೆಯ ಬಲಗಡೆಯಲ್ಲಿ ಲಕ್ಷ್ಮಿಯು ಕುಳಿತಿರುವಂತಿದೆ. ದೇವರ ವಿಗ್ರಹ ಸೊಂಟದಿಂದ ಕೆಳಕ್ಕೆ ಪಂಚೆಯನ್ನು ಉಟ್ಟಂತಿದೆ. ಸೊಂಟದಲ್ಲಿ ಒಂದು ಕಟಿಬಂಧವಿದೆ. ಕಾಲುಗಳು ಪಾದಗಳು ಸುಂದರವಾಗಿ ಮೂಡಿಬಂದು ಪರಿಪೂರ್ಣತೆಯ ಸಂಕೇತಗಳಾಗಿವೆ. ಇಲ್ಲಿನ ವಿಗ್ರಹವು ಯಾವುದೇ ಆಗಮ ಶಾಸ್ತ್ರದ ನಿಯಮಗಳಿಗೂ ಅನುಸಾರವಾಗಿಲ್ಲವೆಂಬುದು ಬಹುಮುಖ್ಯವಾಗುತ್ತದೆ - ಕಾರಣ ದೇವರು ಆಗಮಶಾಸ್ತ್ರಗಳಿಗೆ ಅತೀತನಾದವನು.

**18. ಸ್ವಾಮಿದರ್ಶನ :**

ಬಹುಮಂದಿ ಭಕ್ತರಿಗೆ ಸ್ವಾಮಿದರ್ಶನವೇ ಒಂದು ಆಧ್ಯಾತ್ಮಿಕ ಸಾಧನೆ, ದರ್ಶನದ ಬಗ್ಗೆ ಹೆಚ್ಚು ಚಿಂತನೆ ಮಾಡಿದಂತೆಲ್ಲ ಅದರ ಅರ್ಥನ್ನು ವಿವರಿಸುವುದು ಕಷ್ಟವಾಗುತ್ತದೆ. ಮಹಾಭಾರತ ಹೇಳುವುದು - ಪವಿತ್ರ ತೀರ್ಥಗಳಲ್ಲಿ ಸ್ನಾನ ಮಾಡುವುದು, ಮೃಣ್ಮೂರ್ತಿ, ಶಿಲಾವಿಗ್ರಹಗಳಿರುವ ಆಲಯಗಳಿಗೆ ಯಾತ್ರೆ ಹೊರಡುವುದು - ಇವುಗಳಿಂದ ಕಡೆಯಲ್ಲಿ ಮನುಷ್ಯ ಪ್ರಕ್ಷಾಳಿತನಾಗಬಹುದು. ಆದರೆ ಮಹಾತ್ಮ ಸಂತರ ದರ್ಶನ ಮಾತ್ರದಿಂದಲೇ ಶುದ್ಧರಾಗಬಹುದು. ಎಂದಾಗ ದರ್ಶನವೆಂದರೆ ದೇವರ ವಿಗ್ರಹವನ್ನು ನೋಡುವ ಮಾತ್ರದ ಒಂದು ಕೆಲಸವೇ ಅಥವಾ ಅದರಲ್ಲಿ ವ್ಯಕ್ತಿ ನಿಷ್ಠವಾದ ಬೇರಾವುದಾದರೂ ವಾಚಾಮಗೋಚರವಾದ ಆಧ್ಯಾತ್ಮಿಕ ಶಕ್ತಿಯಿದೆಯೇ ಎಂಬುದು ಭಾಸವಾಗುತ್ತದೆ. ದರ್ಶನವೆಂಬುದು ಕೇವಲ ಅನುಗ್ರಹ ಆಶೀರ್ವಾದ ಎಂಬಷ್ಟಕ್ಕೆ ನಿಲ್ಲುವುದಿಲ್ಲ. ದರ್ಶನವೆಂಬುದು ಪಡೆಯುವುದೂ ಅಲ್ಲ, ಕೊಡುವುದೂ ಅಲ್ಲ. ಅದು ಆಗುವುದು. ಘಟಿಸುವುದು. ಉದಾಹರಣೆಗೆ ವರ್ಷಾಂತರಗಳಿಂದ ಅದರ ಕೀರ್ತಿಯನ್ನೂ ವಿವರವನ್ನೂ ಕೇಳಿದ ನಂತರ ಮೊದಲಬಾರಿಗೆ ಗಂಗೆಯನ್ನು ಕಾಣುವ ಮನುಷ್ಯ ದರ್ಶನವನ್ನು ಅನುಭವಿಸುತ್ತಾನೆ.

ದರ್ಶನ ಎಂಬುದು ಆಧ್ಯಾತ್ಮಿಕ ಅನುಭವ. ಅದಕ್ಕೆ ಒಂದು ಪರಿಭಾಷೆಯಿಲ್ಲ. ಶತಮಾನಗಳ ಪರಂಪರೆಯ ಹಿನ್ನೆಲೆಯ ನಾವು ಅದನ್ನು ಯೋಚಿಸದೆಯೇ ಸ್ವೀಕರಿಸುತ್ತೇವೆ. ನಮ್ಮ ಸಂಸ್ಕೃತಿಯಿಂದಾಗಿ ಅಥವಾ ಒಂದು ಸ್ಫೂರ್ತ ಶಕ್ತಿಯಿಂದಾಗಿ ನಮ್ಮ ಜನರ ಪ್ರಜ್ಞಾಪಾತಳಿಯಲ್ಲಿ ಶಾಶ್ವತವಾಗಿ ನಿಂತು ಯಾವುದೇ ರೀತಿಯ ಸಂಕೋಚ ಭಯಗಳಿಲ್ಲದೆಯೇ ಹೊಸ ಹೊಸ ವಿಧಾನವನ್ನು ಹುಡುಕುತ್ತದೆ. ಪಾಶ್ಚಾತ್ಯ ಚಿಂತನೆ, ಸಂಪ್ರದಾಯ ಇದ್ದರೂ ಸಹ ಸೂಜಿಗಲ್ಲಿನ ಸೆಳೆತ ಹೊಂದಿದ ಕಬ್ಬಿಣದಂತೆ ದರ್ಶನದತ್ತ ಆಕರ್ಷಿತನಾಗುವಲ್ಲಿ ಈ ಸತ್ಯ ಸ್ಪಷ್ಟವಾಗುತ್ತದೆ. ಇಡೀ ಹಿಂದೂ ಶಿಕ್ಷಣ, ಧರ್ಮ, ತತ್ವಗಳು ಉಸಿರಾಡಿದಂತೆ ಸಹಜವಾಗಿ ನಮಗೆ ವಾರಸಿಕೆಯಾಗಿದಕ್ಕಿದೆ ಎಂಬುದಕ್ಕೆ ಇದೂ ಒಂದು ಸರಳ ಸುಲಭ ಉದಾಹರಣೆ.

ಒಬ್ಬ ಖ್ಯಾತ ಲೇಖಕರೆಂದಂತೆ 'ಒಂದು ಮಹಾನ್ ವ್ಯಕ್ತಿ ವಿಷಯದ ಸನ್ನಿಧಿಯಲ್ಲಿ ಒಂದು ಸುಮೂಹ ಬುದ್ಧಿಯು ಅನುಭವಿಸುವ ಆನಂದದ ಅನುಭಾವವನ್ನು 'ದರ್ಶನ'ವೆಂದು ಹೇಳಬಹುದು. ವ್ಯಕ್ತಿಯನ್ನು ಮೀರಿ ನಿಲ್ಲುವ, ಆನಂದವನ್ನುಟುಮಾಡುವಂತಹ ಗುರುತನ್ನು ಹೊಂದಿದ ವ್ಯಕ್ತಿ ಮತ್ತು ವಿಷಯ ಯಾವುದಾದರೂ ಆಗಬಹುದು. ಹಿಂದಿನ ಇತಿಹಾಸವಾಗಬಹುದು. ಇಂದಿನ ಸಮಾಜ ಆಗಬಹುದು. ಮುಂದಿನ ಭವಿಷ್ಯವೂ ಆಗಿರಬಹುದು. ಈ ಆನಂದವನ್ನು ಅನುಭವಿಸಿದವನು ಮತ್ತೆ ಮತ್ತೆ ಅದಕ್ಕೆ ಹಿಂದಿರುಗುತ್ತಾನೆ. ಇಲ್ಲಿ ಯಾವುದೇ ಮಾತಿಗೂ ಅವಕಾಶವಿಲ್ಲ. ಕಾಣಿಕೆ ನೀಡುವುದು, ಪ್ರಸಾದ ಪಡೆಯುವುದು ಯಾವುದೂ ಬೇಕಿಲ್ಲ. ಇಲ್ಲಿ ಒಂದು ನಿತ್ಯವಾದದ್ದರಲ್ಲಿ ಸ್ವಂತದ ಅಹಂಕಾರವನ್ನು ಅರ್ಪಿಸಿ ಅಗಾಧವಾದ ಆನಂದವನ್ನು ಅನುಭವಿಸುವುದು ಮಾತ್ರವಿದೆ. ಮಹಾ ಸತ್ವದ ಮುಂದೆ ನಿಂತಾಗ ಅಹಂಕಾರ ಶೂನ್ಯವಾಗಿ ಆನಂದವೂ ಅನುಭಾವವಾಗುತ್ತದೆ. ( ಒಂದು ರೀತಿಯಲ್ಲಿ ಇದನ್ನೇ ಸಮಾಧಿ ಸ್ಥಿತಿಯೆನ್ನಬಹುದೇನೋ.)

ದರ್ಶನ ಎಂಬುದು ಮೇಲೆ ಹೇಳಿರುವಂತಹದ್ದೇ ಆದರೆ ಅದಕ್ಕೆ ಯಾರದಾದರೂ ಸ್ಪರ್ಶ, ಉಪಸ್ಥಿತಿ ಬೇಕೇ ಎಂದರೆ ಉತ್ತರ ಇಲ್ಲ ಎಂದಾಗುತ್ತದೆ. ಆಧ್ಯಾತ್ಮಿಕ ಅನುಭಾವವು ಕಾಲದೇಶಗಳನ್ನು ಮೀರಿ ನಿಲ್ಲುತ್ತದೆ. ಆದರೆ ಎಲ್ಲವನ್ನೂ ಕೊಡುವವನ ಲೀಲೆಗಳಲ್ಲಿ ಒಂದು ಎಂದರೆ ನಮಗೆ ಅಹಂಕಾರವಿರುವುದು. ಇದರಿಂದಲೇ ಇರುವಿಕೆ ಸಿದ್ಧವಾಗುವುದು. ಈ ಅಹಂ ಇರುವವರೆಗೆ ಮನುಷ್ಯ ಇದನ್ನು ಹೋಗಲಾಡಿಸಲು ಒಂದು ಹೊರಗಣ ಶಕ್ತಿಯನ್ನು ಬಯಸುವುದು ಸಹಜ. ಈ ಒಂದು ಅಹಂ ಶೂನ್ಯತೆಯ ಆನಂದಕ್ಕಾಗಿ ಅವನ ನೆರವು- ದರ್ಶನದ ನೆರವು ಅಗತ್ಯ.

ನಾವು ಎಷ್ಟು ಮೂರ್ಖರಾಗಿದ್ದೇವೆ ಎಂದರೆ ನಮ್ಮ ಅಹಂಕಾರದ ಚಿಂತನೆಗಳ ಹೊರತಾಗಿ ನಮ್ಮ ಅಪೂರ್ಣತೆಗಳನ್ನು ನೀಗಿ ಅವನ ಕರುಣೆಯನ್ನೂ ನಿತ್ಯವೂ ಅನುಭವಿಸಲು ತಕ್ಕ ವ್ಯವಧಾನವನ್ನೂ ಹೊಂದಿಲ್ಲ. ಅವನ ದರ್ಶನ ಆದ ಮೇಲೆ ಮನುಷ್ಯ ಪರಿವರ್ತಿತನಾಗುತ್ತಾನೆ. ದೇವರು ಹಲವರಿಗೆ ಮಾತ್ರವೇ ಇಂತಹ ಮುಗ್ಧಮನವನ್ನು ಕೊಟ್ಟಿದ್ದಾನಲ್ಲ ಎಂಬ ಅಸೂಯೆಯೂ ಹಲವನ್ನು ಕಂಡಾಗ ಜ್ಞಾನಿಗಳೆಂಬುವರಿಗೆ ಉಂಟಾಗಬಹುದು. ಮುಗ್ಧ ಜನರಿಗೆ ಮನಸ್ಸಿನ ತೊಂದರೆಗಳು ಜೀವನದಲ್ಲಿ ಕಾಡುವುದಿಲ್ಲ. ಅವರಿಗೆ ಭಕ್ತಿ ಉಂಟು, ದೇವರು ಉಂಟು, ಸತ್ಯ ಉಂಟು. ಅಲ್ಲಿಗೆ ಮುಗಿಯಿತು. ಇತರರಿಗೆ ಆತ್ಮದ ಅಂಧಕಾರದ ಬಗ್ಗೆ ಮಾನಸಿಕ ಯಾತನೆಗಳು, ಜೀವನವೆಂಬುದು ವಿವಿಧ ಘರ್ಷಣೆಗಳ ಅರಣ್ಯ. ದೇವರು ನೆರಳಿನಂತೆ ಹಿನ್ನೆಲೆಗೆ ಸರಿಯುವಂತೆ ಕಂಡುಬಂದರೆ ಆಶ್ಚರ್ಯವಿಲ್ಲ. ಜನನ ಮರಣಗಳ ನಡುವೆ ಯಾವ ಕೆಲಸಕ್ಕೂ ಬಾರದ ನಿರರ್ಥಕ ಯಾತ್ರೆಯಂತೆ ಜೀವನ ಕಂಡು ಬರುವುದುಂಟು. ಎಲ್ಲಾ ಪ್ರಶ್ನೆಗಳೂ ಎದ್ದೆದ್ದು ಮುಳುಗಬೇಕಾದ ಮೂಲವಸ್ತುವಿನ ಬಗ್ಗೆಯೇ ಸಂದೇಹ ಸಮ್ಮೋಹಗಳು. ದಶಕಗಳ ಹಿಂದೆ ನಾನು ಮೊದಲ ಬಾರಿಗೆ ತಿರುಮಲೆಯ ಬೆಟ್ಟದಲ್ಲಿ ಕಂಡಾಗ ಗೌರವ ಭಕ್ತಿಗಳಿಂದಾಗಿ ನನ್ನ ಅಂತರಂಗದ ಅಂಧಕಾರ ಅವನ ಅಪಾರವಾದ ದಯೆಯ ಬೆಳಕಿನಿಂದಾಗಿ ತೊಲಗಿತು. ಪೂರ್ಣ ಶರಣಾಗತಿಯ ಆ ಒಂದು ಕ್ಷಣದಿಂದ ಆತ ನನ್ನ ಜೊತೆಗೇ ಇದ್ದಾನೆ. ಇಹಜೀವನದ ಬದುಕನ್ನು ಸಾಗಿಸಲು ನನಗೆ ಬಲಕೊಡುವ ಬೇರೆ ಯಾವ ಬಲಮೂಲವೂ ನನಗೆ ಇಲ್ಲ. ಆತನ ನಿತ್ಯ ಉಪಸ್ಥಿತಿಯಿದ್ದರೂ ಆತನ ಭೌತಿಕ ವಿಗ್ರಹದ ದರ್ಶನಕ್ಕೆ ತನ್ನದೇ ಆದ ಪ್ರಭಾವವುಂಟು. ಇದರಿಂದಾಗಿ ಪ್ರತಿಬಾರಿಯೂ ಹಿಂದಿಲ್ಲದಂತಹ ಒಂದು ಎತ್ತರಕ್ಕೇರುವಿಕೆ ಆನಂದದ ಹೊಸ ಮಜಲು ಮುಟ್ಟುವಿಕೆಗಳುಂಟಾಗುತ್ತದೆ. ಇದಕ್ಕೆ ನೀಡಲು ಯಾವ ಕಾರಣವೂ ಕಂಡು ಬರುವುದಿಲ್ಲ. (ಡಾ।ಎನ್. ರೋಶನ್ ಅವರು ತಮ್ಮ ಅನುಭಾವವನ್ನು ಆರ್ದ್ರವಾಗಿ ಇಲ್ಲಿ ವಿವರಿಸಿರುವುದನ್ನು ಕಾಣಬಹುದಾಗಿದೆ - ಅನುವಾದಕ.)

## 19. ವೆಂಕಟೇಶ್ವರಸ್ವಾಮಿ - ಪವಾಡ- - ಮಾರ್ಗದರ್ಶನ :

ಹಲವಾರು ಭಕ್ತರು ತಮ್ಮ ಅನುಭವಗಳನ್ನು ಕುರಿತು ಹೇಳುವಾಗ ಆತನ ಅತಿಮಾನುಷಸ್ತವ ಗೈಯುವ ಭರದಲ್ಲಿ ಉತ್ಪ್ರೇಕ್ಷೆಯ ಮಾತುಗಳನ್ನಾಡಬಹುದಾದರೂ ಪವಾಡ ಸದೃಶ ಘಟನೆಗಳು ನಡೆದಿಲ್ಲವೆನ್ನುವಂತಿಲ್ಲ. ಸ್ವಾಮಿಯನ್ನು ತಿಳಿಯುವ ನಿಜವಾದ ಪ್ರಯತ್ನ ಪಡುವವರಿಗೆ ಇಂತಹ ಸಂಘಟನೆಗಳು ಅರ್ಥವಿಲ್ಲದಂತಹವು. ಒಂದು ದೀರ್ಘರೋಗ ವಾಸಿಯಾಯಿತು. ಮಕ್ಕಳಿಲ್ಲದವರಿಗೆ ಸಂತಾನ ಪ್ರಾಪ್ತಿಯಾಯಿತು. ಸಮಯೋಚಿತ ಅಪಾಯದ ಸೂಚನೆಯಾಗಿ ಘೋರ ದುರಂತವಾಗುವುದು ತಪ್ಪಿತು, ಮತ್ತು ಇಂತಹವೇ ಪವಾಡಗಳ ಐತಿಹ್ಯಗಳು, ಬಹುಸಂಖ್ಯೆಯವಾದರೂ, ಇವೆಲ್ಲ ಪ್ರಧಾನವಾಗಲಾರವು. ಆತನ ಬಗ್ಗೆ ನಂಬಿಕೆ ವಿಶ್ವಾಸಗಳಿರುವ ಯಾರೇ ಆದರೂ ಆತನ ದರ್ಶನದ ನಂತರ ತಮ್ಮ ಜೀವನದಲ್ಲಿ ಹೊಂದುವ ಅನಿರ್ವಚನೀಯ ಸೂಕ್ಷ್ಮವಾದ ಪರಿವರ್ತನೆಯು ಅತ್ಯಂತ ಹಿರಿಯ ಪವಾಡ ಎನ್ನಬೇಕು. ಆತನ ಬಳಿಗೆ ನಿಜವಾದ ತುರ್ತು ಇದ್ದು ಹೋಗುವ ಮನುಷ್ಯರು ತಮ್ಮ ಭಕ್ತಿ ಶರಣಾಗತಿಗಳಿಂದಾಗಿ ಆತ್ಮಬೋಧೆಯನ್ನು ಪಡೆದಂತೆ ಹದುಳವೂ ಹಗುರುವೂ ಆದ ಸಮಾಧಾನದ ನೆಲೆಯನ್ನು ಮುಟ್ಟುವಂತಾಗಿ ಒಂದು ಭವ್ಯವಾದ ತೃಪ್ತಿಯ ಭಾವವುಂಟಾಗುತ್ತದೆ ಎಂಬುದನ್ನು ಕಾಣಬಹುದು, ಅನುಭವಿಸಬಹುದು.

ಆತನ ಬಳಿ ಮೌನವಾಗಿ ಕುಳಿತಿರುವುದರಿಂದ, ನಿಂತಿರುವುದರಿಂದ ಜನಕ್ಕೆ ಒಂದು ವಿಧದ ಅತಿಹೆಚ್ಚಿನ ಲಾಭವನ್ನು ಪಡೆಯುವಂತಾಗುತ್ತದೆ. ಇದನ್ನು ಸರಿಯಾದ ರೀತಿಯಲ್ಲಿ ಮಾಡಿದ್ದೇ ಆದರೆ ಮಾನವನ ಮನದ ತುಮುಲಗಳು ಶಾಂತವಾಗಿ, ಆತ್ಮೋದ್ಧಾರವಾಗುತ್ತದೆ. ಮನದ ಆಂದೋಲನದ ಅಲೆಗಳು ಹಿಂದೆ ಸರಿದು ಶಾಂತಿ ಆವರಿಸುವುದನ್ನು - ಯಥಾಪ್ರಕಾರ ಸರೋವರದಲ್ಲಿ ಸಣ್ಣ ಅಲೆಗಳೆದ್ದು ಬರುವುದನ್ನು - ಮನುಷ್ಯ ಅನುಭವಿಸಬಹುದಾಗಿದೆ. ಕ್ರಮೇಣ ಸೂರ್ಯನ ಮುಂದೆ ಹಿಮದ ರಾಶಿಕರಗುವಂತೆ ಎಲ್ಲ ತಾಪತ್ರಯಗಳೂ, ಕಷ್ಟಕಾರ್ಪಣ್ಯಗಳೂ ಕರಗಿ ಹೋಗುವ ಅನುಭವ ಆಗುತ್ತದೆ. ಸಣ್ಣ ಸಣ್ಣ ಕಿರಿಕಿರಿಯ ವಿಚಾರಗಳಿಗೆಲ್ಲ ಮನದಲ್ಲಿ ಸ್ಥಳ ನೀಡಿದ ತಮ್ಮ ಸಣ್ಣತನದ ಬಗ್ಗೆ ಪಶ್ಚಾತ್ತಾಪ ಉಂಟಾಗುತ್ತದೆ. ತನ್ನ ಒಳಗೇ ಪರಮಾತ್ಮನನ್ನು ಕಂಡ ಪರಮಾನಂದದಲ್ಲಿ ಅಹಂಕಾರ ಸಂಪೂರ್ಣ ನಾಶವಾಗಿ; ಸಂತಸವುಕ್ಕಿ ದಿವ್ಯಜ್ಞಾನದ ಪರಾಕಾಷ್ಠೆಯನ್ನು ಸೇರಿದಂತಾಗುತ್ತದೆ. ಯಾವುದೇ ಕೆಲಸವನ್ನೂ ಮಾಡದೆ ಈ ಒಂದು ಸುಖ ಸಾಗರದಲ್ಲಿ ಮುಳುಗಿ, ಆ ಮೂಲಕವಾಗಿ (ಅನಿಕೇತನರಾಗಿ - ಮನೆಯಿಲ್ಲದವರಾಗಿ) ಈ ಒಂದು ವಿಶಾಲ ಸಾಗರದ ಮುಂದೆ ಮಾತನಾಡದೆ ನಿಂತಲ್ಲಿ ಆಧ್ಯಾತ್ಮಿಕ ಆನಂದ, ಮೋಕ್ಷಭಾವ ಉಂಟಾಗದಿರದು. ಆದರೆ ವ್ಯಕ್ತಿಯೂ ಈ ಸಮಾಧಿ ಸ್ಥಿತಿಯಿಂದ ಹೊರಕ್ಕೆ ಪುನಃ ಬಂದು ಜಗತ್ತಿನ ಜಂಜಡಗಳಲ್ಲಿ ಒಂದಾಗಿ ಲೋಕದ ಕೊನೆಯಿಲ್ಲದ ಕಲಹಗಳಲ್ಲಿ ಕಾಲುಕೆರೆಯುತ್ತ ಹಲವು ಪ್ರತಿಭಟನೆಯಲ್ಲಿ ಪಾಲುಗೊಂಡು ಪಶ್ಚಾತ್ತಾಪ ದಗ್ಧನಾಗುವನು. ಹಲಕಾಲದ ನಂತರ ಅವನಲ್ಲಿ ಸಂಪೂರ್ಣ ಶರಣಾಗತಿ ಅತ್ಯಗತ್ಯವಾಗುತ್ತದೆ. ದೇವರ ಶಕ್ತಿ ಎಷ್ಟು ಅಪಾರವೆಂದರೆ ಒಬ್ಬ ಸಾಧಕನು ಸಾಧನೆಯನ್ನೇ ಮಾಡದವನಾದರೂ, ಅವನು ಶರಣಾಗತನಾದ ಕೂಡಲೇ ದೇವರೇ ಅವರ ಪರವಾಗಿ ನಿಂತು ನಡೆಸುತ್ತಿದ್ದಾನೆ ಎಂದು ತಿಳಿಯಬೇಕು.

ದೇವರು ಪರಿಪೂರ್ಣವಾಗಿ ಆಧ್ಯಾತ್ಮಿಕ ಲೋಕಕ್ಕೆ ಸೇರಿದವನೆಂದೂ, ದೈನಂದಿನ ಜೀವನದ ಕಠಿಣ ಭವ ತೊರೆಯೊಳಗೆ ಕಷ್ಟಪಟ್ಟು ಈಜುತ್ತಿರುವ ನಮ್ಮಿಂದ ಆತ ದೂರವಾಗಿದ್ದಾನೆ -ಎಂದೂ ತಿಳಿದರೆ ಅದು ಸತ್ಯದೂರವಾದ ಮಾತಾಗುತ್ತದೆ. ಪೂರ್ಣ ವಿರಕ್ತಿಯಲ್ಲಿರುವಂತಹ ಪೂರ್ಣ ಆಸಕ್ತಿ ಅವನಿಗಿದ್ದು, ಸರ್ವಂಕಷವಾದ ಕರುಣೆಯನ್ನು ಹೊಂದಿರುವುದೇ ಅವನ ವೈಶಿಷ್ಟ್ಯ. ಎಲ್ಲರಿಗೂ ಸುಲಭದಲ್ಲಿ ದೊರೆಯಬಲ್ಲದ್ದು ಅವನ ದಯೆ. ಅಸಂಖ್ಯ ಜನರು ತಮ್ಮ ಅಸಂಖ್ಯ ಬೇಡಿಕೆಗಳೊಡನೆ ಅವನಿಗೆ ಅನುದಿನವೂ ಮೊರೆಯಿಡುತ್ತಾರೆ. ಆತನ ದರ್ಶನ ಪಡೆಯತಕ್ಕ ಜನರ ಒಂದು ಪಟ್ಟಿಯಿಂದ ಆತನ ಪ್ರಭಾವದ ವಿಸ್ತಾರವನ್ನು ಗುರುತಿಸಬಹುದು. ಅನಾಥ ವಿಧವೆಯರು, ಪತಿಯಿಂದ ಪರಿತ್ಯಕ್ತರಾದವರು. ಖ್ಯಾತರಾಗದ ವಿದ್ವಾಂಸರು, ಭ್ರಷ್ಟ ಅಧಿಕಾರಿಗಳು, ಕೂದಲು ಸೀಳುವ,ವಾಗ್ಯುದ್ಧ ಮಾಡುವ ಪರಿಣತರು, ನಂಬಿಕೆಯಿಲ್ಲದವರು, ವಿದೇಶಿಯರು, ಮುನಿಗಳು,ಸಂತರು, ರಾಜಕಾರಣಿಗಳು ಅತಿಗಣ್ಯ ವ್ಯಕ್ತಿಗಳು ಕಂಟ್ರಾಕ್ಟರುಗಳು, ಲಾಯರುಗಳು, ವಿದ್ಯಾರ್ಥಿಗಳು, ನಿರಕ್ಷರಿಗಳು, ಡಾಕ್ಟರುಗಳು, ಬೇಸಾಯಗಾರರು, ಕಾರ್ಮಿಕರು, ಆಚಾರ್ಯ ಪುರಷರು, ಉಪಾಧ್ಯಾಯರು, ಅರ್ಚಕರು, ಆಗಮಿಕರು, ಏನಾದರೂ ಮಾಡಲು ಪ್ರಯತ್ನಿಸುತ್ತಿರುವವರು, ಏನೂ ಮಾಡಲಾಗದವರು- ಎಲ್ಲರೂ ಸ್ವಾಮಿ ದರ್ಶನಕ್ಕೆ ಕಾದು ನಿಲ್ಲುತ್ತಾರೆ. ಏನನ್ನಾದರೂ ಆಶಿಸಿ ಬರುವವರು ಕೆಲವರಾದರೆ ಆಸಕ್ತಿಯಿಂದ ಆಗಮಿಸುವವರು ಕೆಲವರು, ಆತ ಮಾತ್ರ ಸರ್ವರಿಗೂ ಸುಲಭ. ಅವರವರ ಭಾವಕ್ಕೆ ಅವರವರ ಭಕುತಿಗೆ ತಕ್ಕಂತೆ ಅವರವರ ಭಾಷೆಯಲ್ಲಿ ಆತ ಮಾತನಾಡುತ್ತಾನೆ.

ಆ ಪರಮಾತ್ಮನ ಆಕಾರವು ಆತನ ಅಂತರಂಗವನ್ನು ಬಿಂಬಿಸುತ್ತದೆ. ಆತನನ್ನು ಹಲವರು ಹಲವು ವಿಧದಲ್ಲಿ ವರ್ಣಿಸಿದ್ದಾರೆ. ಒಬ್ಬರಿಗೆ ಆತ ಶ್ಯಾಮಲವರ್ಣನಾಗಿ ಆಧ್ಯಾತ್ಮಿಕ ಎತ್ತರದ ನೀಳವಾದ, ಸರಳವಾದ ಆಕಾರದವನಾಗಿ ಮಗುವಿನಂತಹ ನಗೆಯ ಮುಖವನ್ನು ಹೊಂದಿದ್ದಾನೆ. ಮೂರನೆಯವರಿಗೆ ಅವನ ಮುಖ ಮಾತ್ರ ಕಂಡು ಬಂದು ಅಲ್ಲಿನ ಕಣ್ಣುಗಳಲ್ಲಿ ಆಕರ್ಷಿತರಾಗುತ್ತಾರೆ. ಆ ಕಂಗಳಲ್ಲಿ ದಯೆ, ಕಾಂತಿ, ಸಹಾನುಭೂತಿಗಳನ್ನು ಮಾತ್ರ ಕಾಣುವರು. ಇನ್ನೊಬ್ಬರು ಆತನ ಸನ್ನಿಧಿಯಲ್ಲಿ ಪ್ರಶಾಂತತೆಯನ್ನು ಅನುಭವಿಸಿದರು. ಜಗತ್ತಿನಾದ್ಯಂತ ಹಲವಾರು ಮಂದಿ ಸ್ವಾಮಿಯ ದರ್ಶನದ ಅನುಭವವನ್ನು ದಾಖಲು ಮಾಡಿದ್ದಾರೆ. ಅವರುಗಳ ವ್ಯಕ್ತಿಗತ

ವಿಚಾರಗಳ ಅನುಭವಗಳಲ್ಲಿ ಯಾವುದೇ ಅಂತರವಿದ್ದರೂ ಮೂಲಭೂತವಾಗಿ ಸ್ವಾಮಿಯ ಆಧ್ಯಾತ್ಮಿಕ ಪ್ರಕಾಶದಲ್ಲಿ, ಆತನ ಸನ್ನಿಧಿಯ ಪ್ರಶಾಂತಿಯಲ್ಲಿ, ಯಾವ ಭಿನ್ನಾಭಿಪ್ರಾಯವೂ ಕಂಡುಬರುವುದಿಲ್ಲ. ಆತನನ್ನು ಕಂಡ ಕೂಡಲೇ ಉಂಟಾಗುವ ಸಂತಸದ ಭಾವನೆಯು ವಿವರದಲ್ಲಿ ಎರಡು ಮಾತಿಲ್ಲ.

ಶ್ರೀ ವೆಂಕಟೇಶ್ವರಸ್ವಾಮಿಯ ಅನುಗ್ರಹ ಪಡೆದ ಯಾರೇ ಆದರೂ ಆತನನ್ನು ಒಪ್ಪುವುದರಲ್ಲಿ ಎಂದೂ ತಡಬಡುವುದಿಲ್ಲ. ಸದ್ವರ್ತನೆಯ ಪೋಷಕ ದ್ರವ್ಯವು ಸತ್ ಚಿತ್‌ನ ಸಮ್ಮುಖದಲ್ಲಿ ಸದಾ ಕಾಲವೂ ದೊರೆಯುತ್ತದೆ ಎಂದು ಹೇಳುತ್ತಾರೆಂದರ ಅನುಭವ ಆದವರಿಗೆ ಯಾವುದೇ ಮಾತಿನ ಪುರಾವೆ ಬೇಕಾಗುವುದಿಲ್ಲ.

ಆಲಯಗಳೆಲ್ಲ ಜೈವಿಕ ಕ್ರಿಯಾಶೀಲತೆಯಿಂದ ಕೂಡಿದ ಸಂಸ್ಥೆಗಳೆನ್ನಲು ಉದಾಹರಣೆಯ ಅಗತ್ಯವಿದೆ ಎಂಬುದಾದರೆ ತಿರುಮಲೆಯ ಆಲಯ ಅಂತಹ ಒಂದು ಜೀವಂತಿಕೆಯ ಉದಾಹರಣೆಯನ್ನಬೇಕು.

## 20. ವೆಂಕಟೇಶ್ವರಸ್ವಾಮಿಯ ಪ್ರಾಧಾನ್ಯ

ಶ್ರೀವೆಂಕಟೇಶ್ವರಸ್ವಾಮಿಯ ದರ್ಶನ ಪಡೆದ ಯಾರಿಗೇ ಆದರೂ ದೇವರು ಇರುವನೊ ಇಲ್ಲವೋ ಎಂಬ ಸಂದೇಹ ಬರುವುದಿಲ್ಲ. ಪಾಶ್ಚಾತ್ಯ ಶಿಕ್ಷಣ, ತರಬೇತಿ, ದೃಷ್ಟಿಕೋನಗಳನ್ನು ಹೊಂದಿದ ಹಲವಾರು ಪರಮಾತ್ಮನ ಬಗ್ಗೆ ಪರಿಪ್ರಶ್ನೆಗಳಲ್ಲಿ ತೊಳಲುತ್ತ ಅವನ್ನು ಹೇಗೆ ಪರಿಹರಿಸಿಕೊಳ್ಳುವುದೆಂಬುದನ್ನು ಹುಡುಕುತ್ತ ಇರುವಾಗ, ಏಳು ಬೆಟ್ಟಗಳ ಒಡೆಯನು ಅವರ ಆಧ್ಯಾತ್ಮಿಕ ಅನ್ವೇಷಣೆಯನ್ನು ಪೂರ್ಣಗೊಳಿಸಿ, ಮಾನಸಿಕ ದೃಷ್ಟಿಕೋನದಲ್ಲಿ ದೂರಗಾಮೀ ಪರಿವರ್ತನೆಗಳನ್ನುಂಟುಮಾಡಿ ಅವರನ್ನು ಒಂದು ಸಮಾಧಾನದ ನೆಲೆಗೆ ತರುವಲ್ಲಿ ಸಾಧನೋಪಾಯನಾಗಿದ್ದಾನೆ ಎಂಬುದು ಅತಿಶಯವಲ್ಲ. ನಾಶವಾಗದ ಎಲ್ಲ ವಸ್ತು ವಿಷಯಗಳ ಒಟ್ಟು ಮೊತ್ತವೇ ಆತ. ಮನುಷ್ಯನಿಗೆ ತಾನಾರೆಂಬುದನ್ನು ತಿಳಿಸಿಕೊಡಲು ಆತನನ್ನು ಕೈಚಾಚಿ ಸ್ಪರ್ಶಿಸಿ, ಅನುಗ್ರಹಿಸುವ ಸ್ವಾಮಿಯನ್ನು ಒಮ್ಮೆ ನಿಜವಾಗಿ ದರ್ಶಿಸಿದವನು ತನ್ನ ಜೀವನದಲ್ಲಿಯೇ ಯಾರನ್ನೂ ದ್ವೇಷಮಾಡಲಾರ. ಎಲ್ಲ ರೀತಿಯ ಜನರೂ ಆತನನ್ನು ನೋಡಲು ನೆರೆಯುವರು. ಪರಿತ್ಯಕ್ತರು, ಪರಿಣಯವಾಗದವರು, ಪತಿವಿಹೀನರು, ಪತ್ನೀದೂರರು, ಬಡವರು, ಬಲ್ಲಿದರು, ಕೆಲಸಗಾರರು, ನಿರುದ್ಯೋಗಿಗಳು, ಅವರವರ ಭಕ್ತಿಗೆ ತಕ್ಕಂತೆ ಅವರವರು ಅವನಲ್ಲಿ ಸಮಾಧಾನ ಸಾಂತ್ವನ ಪಡೆಯುತ್ತಾರೆ. ಎಲ್ಲರೂ ಅವನ ಜನರೇ ಆದಮೇಲೆ ಪರಸ್ಪರರಲ್ಲಿ ಭೇದವೇನು ಬಂತು. ಅವರವರ ಬೇಡಿಕೆಗಳೇನೇ ಇದ್ದರೂ ಸ್ವಾಮಿಯ ದರ್ಶನಾನಂತರ ತಮ್ಮ ತಮ್ಮ ಹಾದಿ ಹಿಡಿದು ಹೊರಟಾಗ ಅವರೆಲ್ಲ ಹೊಸಬರಾಗಿ, ಹೊರಡುತ್ತಾರೆ. ಅವರ ಬೇಡಿಕೆ ಈಡೇರಬಹುದು, ಇಲ್ಲದಿದ್ದರೂ ಮನಶ್ಶಾಂತಿ ದೊರೆಯುವುದು ಸಿದ್ಧ. ಏನೇ ಬಂದರೂ ಎದುರಿಸುವ ಶಕ್ತಿ ಪಡೆಯುವುದು ಖಚಿತ.

ಆತನ ದರ್ಶನವೆನ್ನುವುದು ಒಂದು ಅನುಭಾವ. ತಮ್ಮ ಬೇಡಿಕೆಗಳೊಡನೆ ಹೋದವರೆಲ್ಲ ಆತನನ್ನು ಭೇಟಿಯಾಗಿ ಹೋಗುತ್ತಾರೆ. ಅವರ ನಯನದಲ್ಲಿ ನೀರು ಇದ್ದರೂ ಹೃದಯದಲ್ಲಿ ಸಾತ್ವಿಕ ಅಂಗೀಕೃತ ಭಾವ ತುಂಬಿರುತ್ತದೆ. ದೇವರ ಹಿರಿಮೆಯಿರುವುದು ಈ ಗುರುತರಿಯದ ವಿವರಿಸಲಾಗದ ಪರಿವರ್ತನೆಯನ್ನು ಪ್ರತಿಯೊಬ್ಬರಲ್ಲಿಯೂ ಉಂಟು ಮಾಡುವುದರಲ್ಲಿ. ಇದರಿಂದಾಗಿ ಭಕ್ತಿ ಗೌರವದಿಂದ ನಂಬಿಕೆ ವಿಶ್ವಾಸ ಗಳಿಂದ ಆತನ ಕಡೆ ತಿರುಗುವುದು ಸಹಜವಾಗುತ್ತದೆ. ಉದ್ದುದ್ದ ಪ್ರಶ್ನೆ ಪತ್ರಿಕೆಗಳನ್ನು ಹಿಡಿದು ಅವನ ಬಳಿ ಹೋದವರು ಯಾವುದೇ ಪ್ರಶ್ನೆ ಮಾಡದೆ ಹಿಂದಿರುಗುವುದುಂಟು. ಅವರಿಗೆ ಪ್ರಶ್ನಿಸುವ ಅಗತ್ಯವೇ ಕಂಡುಬರುವುದಿಲ್ಲ.

ಆತನ ಮುಖ ಮುದ್ರೆ ನಸುಗೆಂಪು ನಸುಗಪ್ಪು ಬಣ್ಣದಿಂದ ಕೂಡಿ ಒಂದು ಸೂಕ್ಷ್ಮವಾದ ಆಧ್ಯಾತ್ಮಿಕ ಶೋಭೆಯನ್ನು ಹೊಂದಿರುವುದು. ಆತನ ಮುಖಭಾವ ಸಾಧಾರಣ ಸುಂದರ. ಆತನ ವಿಶಾಲ ನಯನಗಳು ವಿಶೇಷಸುಂದರ ಹಾಗೂ ಶಾಂತ. ಮಧ್ಯಕಾಲೀನ ಮುನಿಗಳನ್ನು ನೆನಪಿಗೆ ತಂದರೂ, ಈ ರೂಪದ ಒಳಗೆ ಯಾವುದೋ ಅಗಾಧ ಸ್ವತೇಜ - ಮೇಲೆ ಕಾಣಿಸುವುದಕ್ಕಿಂತ ಬೇರೆಯೇ

ಆದದ್ದು - ಇದೆಯೆನ್ನಿಸುವುದು. ನಾವು ಪವಿತ್ರವೆಂದು ಭಾವಿಸುವೆಲ್ಲದರ ತವನಿಧಿ ಆತ. ನಿಜವಾದ ಧರ್ಮ ಹಾಗೂ ಉಪನಿಷತ್ತುಗಳ ಸಾರ ಸರ್ವಸ್ವವಾಗಿದ್ದಾನೆ. ಆತನ ಮೂಲಕವೇ ವಾಚಾಮಗೋಚರವಾದ ಪರಮಾದರ್ಶವು ಬಹಿರ್ಗತವಾಗುತ್ತದೆ. ನಾವುಸಾಧಾರಣವಾದ ಪ್ರಾಣಿ ಮಾತ್ರರೇ ಅಲ್ಲವೆಂಬುದನ್ನು ಆತ ನಮಗೆ ತಿಳಿಸಿಕೊಡುತ್ತಾನೆ. ನಾವು ಪರಮಾತ್ಮನ ಒಂದು ಅಂಶವೆಂದೂ,ಪರಮಾತ್ಮನನ್ನು ಪುನಃ ಸೇರುವುದೇ ನಮ್ಮ ಗಂತವ್ಯವೆಂದೂ ಆತ ತಿಳಿಸುತ್ತಾನೆ. ಈ ಕಲಿಯುಗದಲ್ಲಿ ಮಾನವರ ಉತ್ತಾರಣಮಾಡುವುದೇ ಆವನ ಉದ್ದೇಶವಾಗಿ ಅದಕ್ಕಾಗಿಯೇ ಆಲಯದಲ್ಲಿ ನೆಲೆಸಿರುವನು.

ಆತ ಬಯಸುವುದೆಲ್ಲ ಮನಃಪೂರ್ವವಾದ ಆಸಕ್ತಿ. ಪೂರ್ಣ ಮನಸ್ಸಿನಿಂದ ಸಾಕ್ಷಾತ್ಕಾರವನ್ನು ಬಯಸುವವರು ಅವನಿಂದ ಪರಮ ತತ್ವವನ್ನು ಪಡೆಯುವರು. ಮನ ಶುದ್ಧವಾಗಿದ್ದರೆ ಅಲ್ಲಿ ಭಕ್ತಿ ವಿಶ್ವಾಸಗಳನ್ನು ಆತನೇ ಬೆಳೆಸುವನು. ಕೆಲವು ಕಾಲದ ನಂತರ ಎಲ್ಲ ಕೋರಿಕೆ ಕಾಮನೆಗಳೂ ಮರೆಯಾಗುತ್ತ ಕಡೆಗೆ ಸಾಧನೆಯ ಆಸಕ್ತಿಯೂ ಕಳಚಿಕೊಳ್ಳುತ್ತದೆ. ಆತನಿಗೆ ಶರಣಾಗತರಾಗುವುದನ್ನು ಮಾತ್ರವೇ ಅಪೇಕ್ಷಿಸುವಂತಾಗುತ್ತದೆ. ಆತನ ಆಲಯದಲ್ಲಿ ನಿರಂತರವಾದ ಶಾಂತಿ. ಶಮನಗಳನ್ನು ಬಯಸುವಂತೆ ಆಗುತ್ತದೆ. ಕೆಲಕಾಲಾನಂತರ ಆತನಲ್ಲಿ ತನು ಮನಗಳೆಲ್ಲದರ ಸಂಪೂರ್ಣ ಸಮರ್ಪಣೆಯುಂಟಾಗುತ್ತದೆ. ದೇವರು ಬಹಳ ಸೂಕ್ಷ್ಮವಾಗಿ ಆದರೆ ಖಚಿತವಾಗಿ ದಾರಿಯನ್ನು ತೋರಿಸುತ್ತ ನಡೆಸುವನೆಂಬುದು ಸ್ಪಷ್ಟವಾಗಿದೆ. ಆತನಲ್ಲಿ ಶರಣಾಗತರಾದವರಿಗೆ ಸಾಫಲ್ಯಸಿದ್ಧಿಯಾಗುವುದು. ಈ ಮಾತು ಬರೆ ವೇದಾಂತವೆಂದು ಮಾತ್ರವಲ್ಲ. ಅನೇಕರ ಅನುಭವ ಸಿದ್ಧಾಂತವೂ ಹೌದು. ನಾವು ನಮ್ಮ ಪಾಪಪಂಕಿಲವಾದ ವಿಷಯಪೂರಿತವಾದ, ಮುಷ್ಕರ ಹೂಡುವ ಮನಸ್ಸನ್ನು ಆತನಲ್ಲಿ ಶರಣುಗೊಳಿಸಿದಲ್ಲಿ ಆತನಿಂದ ಅಮೂಲ್ಯವಾದ ದಯೆ, ಕರುಣೆ, ಸಹಾನುಭೂತಿಗಳನ್ನು ಪ್ರತಿಯಾಗಿ ಪಡೆದು ಉದ್ಧಾರವಾಗುವುದರಲ್ಲಿ ಸಂದೇಹವಿಲ್ಲ.

❁❁

**ಅನುಬಂಧ - 1**

# ಹರಿದಾಸರು ಕಂಡ ಶ್ರೀನಿವಾಸ

-ಬಿ.ಎನ್. ಶ್ರೀನಿವಾಸನ್

ಕನ್ನಡದಲ್ಲಿ ಒಂದು ಪ್ರಸಿದ್ಧವಾದ ಗಾದೆಯ ಮಾತುಂಟು 'ಗುರುವೆಂದರೆ ಮಂಚಾಲಿಯ ರಾಘಪ್ಪ, ದೇವರೆಂದರೆ ತಿರುಪತಿ ತಿಮ್ಮಪ್ಪ'. ಕನ್ನಡಿಗರ ಅತಿಪ್ರಿಯವಾದ ದೈವರೂಪಗಳಲ್ಲಿ ತಿರುಪತಿ ತಿಮ್ಮಪ್ಪ ಮೊದಲಿಗೇ ಎಣಿಕೆಗೆ ಬರುವ ದೇವರೆಂದೂ ನಡೆದೀತು. ಹಾಗೆಂದೇ ಹರಿಯನ್ನು ಕುರಿತು ಹಾಡಿದ ಹರಿದಾಸರೆಲ್ಲರೂ ತಿರುಪತಿಯ ಶ್ರೀನಿವಾಸನನ್ನು ಕುರಿತು ಹಾಡಿದರು ಎನ್ನಬರುತ್ತದೆ. ಕನ್ನಡ ಕೀರ್ತನ ಸಂಪ್ರದಾಯ ನರಹರಿತೀರ್ಥರಿಂದ ಆರಂಭವಾಯಿತೆಂದರೂ ಅದು ಪ್ರಾಚುರ್ಯ, ಪ್ರಸಿದ್ಧಿ ಗಳಿಸಿದ್ದು ಶ್ರೀಪಾದರಾಜರಿಂದ ಎಂದು ಹೇಳುವುದು ಸೂಕ್ತ. ಅಲ್ಲಿಂದ ಮುಂದಕ್ಕೆ ಬಂದ ಹರಿದಾಸರೆಲ್ಲ ವೆಂಕಟೇಶ್ವರನ ಅನಂತ ಲೀಲೆಗಳನ್ನೂ ಅನಂತ ಗುಣಗಳನ್ನು ಕುರಿತು ಹಾಡಿದವರೇಯೆ. ಶ್ರೀಪಾದರಾಜರು - ಲಕ್ಷ್ಮೀನಾರಾಯಣ ಮುನಿ - ಶ್ರೀರಂಗದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗಲೇ ಅಲ್ಲಿನ ದೈವ ಶ್ರೀರಂಗನಾಥನನ್ನು ತಮಿಳಿನ ಪಾಶುರಗಳಿಂದ ಪೊಗಳುವುದನ್ನು ಕೇಳಿದವರು. ಅದೇ ಧಾಟಿಯಲ್ಲಿ ಕನ್ನಡದಲ್ಲಿಯೂ ಕೀರ್ತನೆಯ ಕಟ್ಟಿ ಹಾಡಿದವರು. ಅವರ ಶಿಷ್ಯ ವ್ಯಾಸರಾಯರು ಕೀರ್ತನ ಸಾಹಿತ್ಯವನ್ನು ಬೆಳೆಸಲೆಂದೇ ದಾಸಕೂಟವನ್ನು ಕಟ್ಟಿದವರು. ಪುರಂದರ, ಕನಕದಾಸರೂ - ವಾದಿರಾಜ - ವೈಕುಂಠದಾಸರೂ ಮುಂದೆ ಕೀರ್ತನ ಸಾಹಿತ್ಯವನ್ನು ಇಮ್ಮಡಿ ಮುಮ್ಮಡಿಯಾಗಿ ಸರ್ವಜನಾಮೋದಕರವಾಗಿ ಬೆಳೆಸಿದರು. ಆನಂತರದಲ್ಲಿ ಬಂದ ವಿಜಯದಾಸ, ಗೋಪಾಲದಾಸ, ಜಗನ್ನಾಥದಾಸ, ಪ್ರಸನ್ನ ವೆಂಕಟದಾಸ, ಮಹಿಪತಿದಾಸ, ಹರಪನಹಳ್ಳಿ ಭೀಮವ್ವ, ಗುರುಜಗನ್ನಾಥದಾಸ, ಹೆಳವನಕಟ್ಟೆ ಗಿರಿಯಮ್ಮ, ಯದುಗಿರಿಯಮ್ಮ, ನಂಜನಗೂಡು ತಿರುಮಲಾಂಬ, ಸರಸ್ವತೀ ಬಾಯಿ, ಶ್ರೀಶವಿಠಲರು, ಶ್ರೀದವಿಠಲರು - ಈ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಎಲ್ಲರೂ ವೆಂಕಟೇಶ್ವರ ಸ್ವಾಮಿಯ ಒಂದಲ್ಲ ಒಂದು ಮುಖವನ್ನು - ಆತ ಅನಂತ ಮುಖದವನು - ಕಂಡು ಹಾಡಿದವರು. ಆ ಸ್ವಾಮಿಯ ಭಕ್ತಿಯ ಸೇವೆಯಲ್ಲಿ ಓಲಾಡಿದವರು. ಅದರ ಒಂದು ಪಕ್ಷಿನೋಟದ ಪ್ರಯತ್ನವಿಲ್ಲಿದೆ.

ಶ್ರೀಪಾದರಾಜರು ಸಂಸ್ಕೃತದ ಪ್ರಕಾಂಡ ಪಂಡಿತರು - ವಾಗ್ವಜ್ರವನ್ನು ಬರೆದು ದ್ವೈತ ತತ್ವವನ್ನು ಪ್ರತಿಪಾದಿಸಿ ಪ್ರಚುರಗೊಳಿಸಿದವರು. 'ಹರೇ ವೆಂಕಟ ಶೈಲ ವಲ್ಲಭ' ಎಂದು ಹರಿಯನ್ನು - ವೆಂಕಟಶೈಲವಲ್ಲಭನನ್ನು ಕೊಂಡಾಡುತ್ತ ಹರಿನಾಮ ಸಂಕೀರ್ತನೆ ಮಾಡುವುದೇ ನಾಲಿಗೆಗೆ ಭೂಷಣವೆನ್ನುವರು. ರಂಗನನು ನೋಡುವುದು ಕಂಗಳಿಗೆ ಭೂಷಣವಾದರೆ ರಂಗವಿಠಲ ನಿಮ್ಮ ನಾಮ ಅತಿ ಭೂಷಣ, ಸುರ ಮುನಿಗಳ ಸಂಜೀವ ಶ್ರೀ ವೆಂಕಟ ವೈಕುಂಠದಿಂದ ಬಂದು ಶೇಷಾಚಲದಲ್ಲಿ ನಿಂದು ಭಕ್ತರ ಪಾಲಿಸಲೆಂದೇ ನಿಂತಿರುವನೆಂದು ಸಾರಿ ಹೇಳುವರು. ಆತನನ್ನು 'ಮನೆಗೆ ಬಾರೋ ಗೋವಿಂದ' ಎಂದು ಕರೆಯುವರು. ತಮ್ಮ ಮನದಲ್ಲಿ ನಲಿದಾಡಬೇಕೆಂದು ಆಹ್ವಾನಿಸುವರು.

ಶ್ರೀಪಾದರಾಜರ ಶಿಷ್ಯರು ವ್ಯಾಸರಾಯರು. ವಿಜಯನಗರದ ಅಧಿಪತಿ ಸಾಳುವ ನರಸಿಂಹ ಶ್ರೀಪಾದರಾಯರನ್ನು ಗುರುವೆಂದ ಗೌರವಿಸಿದವನು. ತಿರುಮಲೆಯ ಆಲಯದಲ್ಲಿ ಅರ್ಚಕ ನಂಬಿ ಸಿರಪ್ಪಯ್ಯ ದೇವರ ತಿರುವಾಭರಣಗಳನ್ನು ಕಳ್ಳತನ ಮಾಡಿದಾಗ ಆತನನ್ನು ದಂಡಿಸಿದ ಸಾಳುವ ನರಸಿಂಹ ಆತನ ಆಸ್ತಿಯನ್ನು ಆಲಯಕ್ಕೆ ಸ್ವಾಧೀನಗೊಳಿಸಿದ. ಆದರೆ ಸ್ವಾಮಿಗೆ ನಿತ್ಯ ಪೂಜೆ ಮಾಡುವವರಿಲ್ಲವಾಯಿತು. ಸಾಳುವ ನರಸಿಂಹರಾಯ ಶ್ರೀಪಾದರಾಯರನ್ನು ಕೇಳಿಕೊಂಡ - ಸ್ವಾಮಿಯ ಪೂಜೆಯನ್ನು ನೋಡಿಕೊಳ್ಳಿ ಎಂದು. ಶ್ರೀಪಾದರಾಯರು ತಮ್ಮ ಶಿಷ್ಯ ವ್ಯಾಸರಾಯರನ್ನು ಕಳುಹಿಸಿದರು. ವ್ಯಾಸರಾಯರು ಹನ್ನೆರಡು ವರ್ಷಕಾಲ ತಿರುಮಲೆಯ ಸ್ವಾಮಿಯ ಸೇವೆ ಮಾಡಿದರೆನ್ನಲಾಗಿದೆ. ಆನಂತರ ಕೃಷ್ಣದೇವರಾಯನ ಕಾಲದಲ್ಲಿನ ಐದು ಶಾಸನಗಳಲ್ಲಿ ವ್ಯಾಸರಾಯರ ತಿರುಪತಿ ಸಂಬಂಧದ ಉಲ್ಲೇಖವುಂಟು. 12-1-1524ರಲ್ಲಿ ಕೃಷ್ಣದೇವರಾಯನು ಒಂದೇ ತಾತ್ಪರ್ಯದ ಮೂರು ಶಾಸನಗಳನ್ನು ಹಾಕಿಸಿ ವ್ಯಾಸರಾಯರಿಗೆ

ತಿರುಮಲೆಯಲ್ಲಿ ತಿರುಪತಿಯಲ್ಲಿ ಮಠಗಳನ್ನು ನಿರ್ಮಿಸಲು ಸ್ಥಳ ನೀಡಿದ್ದೇ ಅಲ್ಲದೆ ಅಲ್ಲಿನ ಯಾತ್ರಾರ್ಥಿಗಳಿಗಾಗಿ ತನ್ನ ದಾನಭಾಗದ ಪ್ರಸಾದಗಳನ್ನೂ ಆ ಮಠಗಳಿಗೆ ನೀಡಬೇಕೆಂದು ಕಟ್ಟಳೆ ಮಾಡಿದನು. ವ್ಯಾಸರಾಯರು 1524ರ ಡಿಸೆಂಬರಿನಲ್ಲಿ ಸ್ವಾಮಿಗೆ ಹಲವು ಸೇವೆಗಳಿಗಾಗಿ 1400 ನರ್ಪಣಗಳನ್ನು ನೀಡಿದರು. 1528ರಲ್ಲಿ ಒಡ್ಡಂಪಟ್ಟಿ ಗ್ರಾಮವನ್ನು ನೀಡುತ್ತ ಗೋವಿಂದರಾಜಸ್ವಾಮಿಗೆ ಪ್ರತಿ ಹುಣ್ಣಿಮೆಯ ದಿನ ತೈಲಾಭಿಷೇಕ ಮಾಡಿ, ಮೆರವಣಿಗೆ ನಡೆಸಬೇಕೆಂದು ಕಟ್ಟಳೆ ಮಾಡಿದರು. ಇಷ್ಟಾದರೂ ವ್ಯಾಸರಾಯರು ವೆಂಕಟೇಶ್ವರ ಸ್ವಾಮಿಯನ್ನು ಕುರಿತು ಬರೆದ ಒಂದೂ ಕನ್ನಡ ಕೀರ್ತನೆ ದೊರೆತಿಲ್ಲ ಎಂಬುದು ಇತಿಹಾಸದ ಸೋಜಿಗ. ಅವರು ಬರೆದ ಒಂದೇ ಒಂದು ಸಂಸ್ಕೃತ ಸಂಕೀರ್ತನೆ ಮೊದಲ ಚರಣ ಹೀಗೆ -

ಪ್ರಾತಃಸ್ಮರಾಮಿ ರಮಯಾ ಸಹ ವೆಂಕಟೇಶಂ
ಮಂದಸ್ಮಿತಂ ಮುಖ ಸರೋರುಹ ಕಾಂತಿ ರಮ್ಯಂ
ಮಾಣಿಕ್ಯ ಕಾಂತಿ ವಿಲಸನ್ಮಕುಟೋರ್ಧ್ವ ಪುಂಡ್ರಂ
ಪದ್ಮಾಕ್ಷ ಲಕ್ಷ ಮಣಿ ಕುಂಡಲ ಮಂಡಿತಾಂಗಂ

ಮೂರು ಚರಣಗಳ ಈ ಸಂಸ್ಕೃತ ಶ್ಲೋಕದಲ್ಲಿ ವ್ಯಾಸರಾಯರ ಅಂಕಿತ 'ಸಿರಿಕೃಷ್ಣ' ಇಲ್ಲವಾದರೂ ಫಲಶ್ರುತಿಯ ಭಾಗದಲ್ಲಿ ಇದು ವ್ಯಾಸರಾಯ ಕೃತವೆಂಬುದು ಸ್ಪಷ್ಟವಾಗಿದೆ.

ವ್ಯಾಸರಾಜಯತಿ ಪ್ರೋಕ್ತಂ ಶ್ಲೋಕತ್ರಯ ಮಿದಂ ಶುಭಂ।
ಪ್ರಾತಃಕಾಲೇ ಪಠೇದ್ಯಸ್ತು ಪಾಪೇಭ್ಯೋ ಮುಚ್ಯತೇ ನರಃ॥

ಹರಿದಾಸರಲ್ಲಿ ಅತಿಹೆಚ್ಚಿನ ಕೀರ್ತನೆಗಳನ್ನು ಬರೆದ ಘನತೆ ಪುರಂದರದಾಸರದ್ದು. ಅವರು ಬರೆದದ್ದು ನಾಲ್ಕು ಲಕ್ಷ ಪ್ಪತ್ತೈದು ಸಾವಿರವೆಂದು ವಿಜಯದಾಸರ ಹೇಳಿಕೆ. ಅವರ ಕೀರ್ತನೆಗಳನ್ನು ಪುರಂದರೋಪನಿಷತ್ತು ಎಂದು ಕರೆದವರು ವ್ಯಾಸರಾಯರು. ಗುರುವಿನಿಂದಲೇ ಈ ಮಾತಿನ ಹೊಗಳಿಕೆ ಬಂದಿದೆಯೆಂದ ಮೇಲೆ ಪುರಂದರದಾಸರ ಪದಗಳ ಹಿರಿಮೆಗೆ ಬೇರೊಂದು ಪ್ರಮಾಣ ಪತ್ರದ ಆಗತ್ಯವೇ ಇಲ್ಲ. ಅವರು ನೂರು ವಿಧದಲ್ಲಿ ವೆಂಕಟೇಶ್ವರನನ್ನು ಹಾಡಿ ಹೊಗಳಿದ್ದಾರೆ. ಆವರ ಸುಪ್ರಭಾತದ ಗೀತೆಗಳೊಬಗೇ ಬೇರೆ. ವೆಂಕಟೇಶ್ವರಸ್ವಾಮಿಯ ಸುಪ್ರಭಾತದ ಹಾಡುಗಳು, ಶ್ರೀ ಬನ್ನಂಜೆ ಗೋವಿಂದಾಚಾರ್ಯರಿಂದ ಕನ್ನಡದಲ್ಲಿ ವ್ಯಾಖ್ಯಾನಕ್ಕೊಳಗಾಗಿವೆ. ಇವು ಪರುಂದರೋಪನಿಷತ್ ಎಂಬ ಹೆಸರಿನಲ್ಲಿ ಪುಸ್ತಕವಾಗಿ ಹಲವು ಮುದ್ರಣಗಳನ್ನು, ಅನುವಾದಗಳನ್ನು ಕಂಡಿವೆ. ಸುಳಾದಿ, ಕೀರ್ತನೆ, ಉಗಾಭೋಗ, ಷಟ್ಪದಿ ಮುಂತಾದ ಹಲವು ವಿಧಗಳಲ್ಲಿ ಕೀರ್ತನೆಗೆ ಒಳಗಾದ ಶ್ರೀನಿವಾಸನ ನಾನಾ ಮುಖಗಳ ಪರಿಚಯ ಮಾಡಿಕೊಳ್ಳಲು ಪುರಂದರ ದಾಸರ ಹಾಡುಗಳು ಒಂದು ಪ್ರಮುಖ ಅಧಾರವಾಗುತ್ತವೆ.

ದಾಸನ ಮಾಡಿಕೊ ಎನ್ನ ಸ್ವಾಮಿ
ಸಾಸಿರ ನಾಮದ ವೆಂಕಟ ರಮಣ

ಈ ಹಾಡು ಆತಿ ಪ್ರಸಿದ್ಧವಾದದ್ದು. ತನ್ನ ಎಂದರೆ - ಜೀವನ - ದುರ್ಬುದ್ಧಿಗಳನ್ನು ಬಿಡಿಸಿ - ದೋಷಗಳನ್ನು ಬಿಡಿಸಿ - ಪೊರೆಯುವಂತೆ ಸ್ವಾಮಿಯಲ್ಲಿ ಬೇಡುವುದು ಇಲ್ಲಿ ಮುಖ್ಯವಾಗುತ್ತದೆ. ಇನ್ನೊಂದು ಕೀರ್ತನೆ ಖರಹರ ಪ್ರಿಯ ರಾಗದ್ದು - ತಿರುಮಲೆಯಪ್ಪನ ಸ್ವಭಾವವನ್ನು - ಪುರಾಣ ಕಥೆಯನ್ನು ದೀರ್ಘವಾಗಿ ಹದಿನೈದು ಚರಣಗಳಲ್ಲಿ ವಿವರಿಸಿ ಆತನ ಕರುಣೆಯನ್ನು ಬೇಡುತ್ತದೆ-

ತಿರುಪತಿ ವೆಂಕಟರಮಣ ನಿನಗೇತಕೆ ಬಾರದೊ ಕರುಣ
ನಂಬಿದೆ ನಿನ್ನಯ ಚರಣ ಪರಿಪಾಲಿಸಬೇಕೋ ಕರುಣ

ಇನ್ನೊಂದು ಕೀರ್ತನೆಯಲ್ಲಿ ಜೀವಿಯ ದೈನ್ಯವನ್ನು ದೌಷ್ಟ್ಯವನ್ನು, ದುರಂತತೆಯನ್ನು ಚಿತ್ರಿಸುತ್ತ ಭಗವಂತನನ್ನು ಬೇಡುತ್ತಾರೆ. ಇದೂ ಒಂದು ದೀರ್ಘ ಕವನವೇ. ಹದಿನೈದು ಚರಣಗಳುಂಟು.

ತಪ್ಪುಗಳೆಲ್ಲ ನೀನೊಪ್ಪಿಕೊಳ್ಳೊ ನಮ್ಮಪ್ಪ ಕಾಯಬೇಕು ತಿಮ್ಮಪ್ಪ ನೀನೆ ।।ಪ।।
ಸತಿ ಸುತರಿಗೆ ಸಂಸಾರಬಲೆಗೆ ಆತಿ ಮತಿಹೀನನಾಗಿ ಸಿಕ್ಕ ಆಸೆಗಳಿಗೆ
ಮಿತಿ ಗಾಣೆನಯ್ಯ ಎನ್ನಪಾಪಗಳಿಗೆ ಮುಂದೆ ಗತಿಯಾವುದಯ್ಯ ಶ್ರೀಪತಿ ಯೆನಗೆ -1-

ಬೆಟ್ಟದೊಡೆಯನನ್ನು ತಾವು ನೋಡಿದಂತೆ ವಿವರಿಸುವ ಕೀರ್ತನ ತನ್ನ ನಿತ್ಯ ನೂತನತೆಯಿಂದ ಗಮನ ಸೆಳೆಯುತ್ತದೆ.

ದಣಿಯ ನೊಡಿದೆನೋ ವೆಂಕಟನ ಮನ
ದಣಿಯ ನೋಡಿದೆ ಶಿಖಾಮಣಿಯ ನಿರ್ಮಲನ

(ಸ್ವಾಮಿಯನ್ನು ನೋಡುತ್ತ ಯಾವ ಭಕ್ತ ತಾನೆ ತೃಪ್ತಿ ಹೊಂದಬಲ್ಲ! ಆದರೆ ಇಲ್ಲಿ ದಾಸರು-ತೃಪ್ತ ಭಾವವನ್ನು ವ್ಯಕ್ತಪಡಿಸುತ್ತಿದ್ದಾರೆ ಎಂದರೆ ಧನ್ಯತೆಯ ಭಾವ ಓದುಗರಲ್ಲಿ ಮೂಡುವುದು.) ಆತನ ಪರಿಸ್ಥಿತಿಯನ್ನು ಮುಂದಿನ ಸಾಲುಗಳು ಚೆನ್ನಾಗಿ ಸೆರೆ ಹಿಡಿಯುತ್ತವೆ.

ಕೇಸಕ್ಕಿ ಆನ್ನ ತಿಂಬುವನ ಬಡ್ಡಿ
ಕಾಸು ಬಿಡದೆ ಹೊನ್ನು ಬಳಸಿಕೊಂಬುವನ
ದೋಸೆ ಅನ್ನವ ಮಾರಿಸುವವನ ತನ್ನ
ದಾಸರ ಮೇಳದಿ ಕುಣಿದಾಡುತಿಹನ -1-
ಗಂಟಿನೊಲ್ಲಿಯ ಪೊದ್ದಿಹನ ಹೊರ
ಹೊಂಟು ಹೋಗಿ ಬೇಟೆಯಾಡುತಲಿಹನ
ಗಂಟೆಯ ನಾದಕೆ ಒಲಿಯುವನ ಭೂ
ವೈಕುಂಠವಿದೆಂದು ಹಸ್ತವ ತೋರುವವನ -2-
ಬೆಟ್ಟದೊಳಗೆ ಇರುತಿಹನ ಮನ
ಮುಟ್ಟಿ ಭಜಿಪ ಭಕುರಿಗೊಲಿದವನ
ಕೊಟ್ಟ ವರವ ತಪ್ಪದವನ ಈ
ಸೃಷ್ಟಿಗಧಿಕ ಪುರಂದರ ವಿಠಲನ -3-

ಸಾಮಾನ್ಯ ದಿನಗಳಲ್ಲಿಯೇ ಅಲ್ಲದೆ ಪುರಂದರದಾಸರು ಸ್ವಾಮಿಯನ್ನು ಹಲವು ಉತ್ಸವಗಳಲ್ಲಿಯೂ ಕಂಡಿದ್ದಾರೆ. ಬ್ರಹ್ಮೋತ್ಸವದಲ್ಲಿ ಮೆರೆಯುತ ಬರುವ ಸಿರಿ ಮಹಿಳೆ ಸಹಿತದ ಸ್ವಾಮಿಯನ್ನು ಸಾಂಗೋಪವಾಗಿ ವರ್ಣಿಸುವ ಕೃತಿ ಅದ್ಭುತ ರಮ್ಯವಾಗಿದೆ.

ಸಕಲ ದುರಿತಗಳ ಪರಿಹಾರ ಮಾಡಿದ್ಯೊ ವೆಂಕಟೇಶ
ಭಕುತಿಗೊಲಿದು ಬಂದು ಭಕ್ತರ ಕಾಯ್ದೆಯೊ ವೆಂಕಟೇಶ

- ಈ ಕೃತಿಯಲ್ಲಿ ಸ್ವಾಮಿಯ ದಶಾವತಾರಗಳ ವರ್ಣನೆಯಿದೆ. ನೀನಿರಲು ನಮಗೇತರ ಭಯವೋ ಎಂಬ ಕೃತಿಯಲ್ಲಿ ತಿರುವೆಂಗಳಪ್ಪನ ರಕ್ಷಣೆಯ ಬಗ್ಗೆ ಭರವಸೆ ಮೂಡಿ ಬಂದಿದೆ.

ಒಂದು ಉಗಾಭೋಗದಲ್ಲಿ ಸ್ವಾಮಿಯ 'ಪುಂಸಾಂ ಮೋಹನ ರೂಪಾಯ' ಸೌಂದರ್ಯ ಮಾತಿನಲ್ಲಿ ಪರಿಸ್ಫುಟವಾಗಿ ಪ್ರಕಟವಾಗಿದೆ -

ಸ್ತ್ರೀಯರಿಗೆ ಪುರುಷರು ಮೋಹಿಸುವರಲ್ಲದೆ
ಪುರುಷರಿಗೆ ಪುರುಷರು ಮೋಹಿಸುವುದೆಂತೋ
ಹರಿ, ಪರಮಪುರುಷ, ಪುರುಷೋತ್ತಮ

ಪುರುಷ  ಬ್ರಹ್ಮಾದಿಗಳು ನಿನಗೆ ಮೋಹಿಸುವರ್ಕೈ
ತಿರುವೆಂಗಳಪ್ಪ ಸಿರಿ ಪುರಂದರ ವಿಠಲರಾಯ
ಜಗದೊಳಗೆ ನೀನು ಮೋಹನ ರೂಪ ಕಾಣೋ
ಹರಿ ಪರಮಪುರುಷ ಪುರುಷೋತ್ತಮಾ ॥

ಪುರಂದರದಾಸರ ಬಗ್ಗೆ ತೆಲುಗು ಕವಿ ಚಿನ್ನನ್ನ ತನ್ನ 'ಅನ್ನಮಾಚಾರ್ಯ ಚರಿತ್ರ' ಕೃತಿಯಲ್ಲಿ ಉಲ್ಲೇಖ ಮಾಡುತ್ತಾನೆ. ಚಿನ್ನನ್ನ ಅನ್ನಮಾಚಾರ್ಯರ ಮೊಮ್ಮಗ. ತನ್ನ ತಾತನ ಜೀವನವನ್ನು ಚಿತ್ರಿಸುತ್ತ ಅನ್ನಮಾಚಾರ್ಯರನ್ನು ಪುರಂದರದಾಸರು ಭೇಟಿಯಾಗಿದ್ದ ಸಂದರ್ಭವನ್ನೂ, ಪರಸ್ಪರ ಗೌರವದಿಂದ ಸಂಭಾವಿಸಿದುದನ್ನೂ ವಿವರಿಸಿದ್ದಾನೆ. ಇಬ್ಬರೂ ಸಂಕೀರ್ತನಕಾರರೇಯ. ಇಬ್ಬರೂ ಭಕ್ತರೇಯ. ಹೀಗಾಗಿ ಭಾವ ಸಾಮೀಪ್ಯ ಉಂಟಾಗುವುದು ಸಹಜ. ಅದರ  ಒಂದು ಉದಾಹರಣೆಯೆಂದರೆ -

ವೆಂಕಟಾಚಲ ನಿಲಯಂ ವೈಕುಂಠ ಪುರವಾಸಂ -

- ಈ ಕೀರ್ತನೆಯ ಕಡೆಯ ಅಂಕಿತ 'ಪುರಂದರ ವಿಠಲ'ವನ್ನು ತೆಗೆದು 'ವೆಂಕಟೇಶ್ವರಸ್ವಾಮಿ'ಯನ್ನು ಜೋಡಿಸಿರುವ ಕೀರ್ತನೆಯಾಗಿದೆ. ಇದೇ ರೀತಿ 'ದೇವ ದೇವಂ ಭಜೇ ದಿವ್ಯಪ್ರಭಾವಂ'. ವೇಟೂರಿ ಪ್ರಭಾಕರ ಶಾಸ್ತ್ರಿಗಳು 'ಶರಣು ಶರಣು....' ಕೀರ್ತನೆಯನ್ನೂ ಉಲ್ಲೇಖಿಸಿ ಪುರಂದರ ದಾಸರ ಮೇಲೆ ಅನ್ನಮಾಚಾರ್ಯರ ಪ್ರಭಾವವನ್ನು ಗುರುತಿಸಿರುವುದುಂಟು. ಚಿಕ್ಕಬಳ್ಳಾಪುರದವಿದ್ವಾಂಸ ಬ.ನ. ಗುಂಡೂರಾಯರು ಇಬ್ಬರೂ ಕವಿಗಳ ಕೀರ್ತನೆಗಳ ಭಾವ ಸಾಮೀಪ್ಯವನ್ನೂ ಭಾಷಾ ಸಾಮೀಪ್ಯವನ್ನೂ ಕುರಿತು ಮತ್ತೂ ವಿಪುಲವಾಗಿ  ಚರ್ಚಿಸಿದ್ದಾರೆ. ಡಾ॥ ಆಕ್ಕಮಹಾದೇವಿ ಆವರ ಅನ್ನಮಾಚಾರ್ಯ ಪುರಂದರ ದಾಸರ ಕೃತಿಗಳ ತೌಲನಿಕ ಅಧ್ಯಯನವೂ ಈ ದಿಸೆಯಲ್ಲಿ ಪ್ರಮುಖವಾಗಿ ಪರಿಗಣಿಸಬೇಕಾದ ಕೃತಿಯೇ ಆಗಿದೆ.

ಪುರಂದರ ದಾಸರು ತಿರುಮಲೆಯ ಸ್ವಾಮಿಯನ್ನು ಕುರಿತು ಹಾಡಿದ ಒಂದು ಕೀರ್ತನೆಯನ್ನು ಪೂರ್ಣವಾಗಿ ಉಲ್ಲೇಖ ಮಾಡಬೇಕು. ಸ್ವಾಮಿ ಮನುಷ್ಯನ ಎಲ್ಲ ಪಾಪಗಳನ್ನು ದೂರ ಮಾಡುತ್ತಾನೆ. ಎಂಬುದು ಇಲ್ಲಿಯ ವಸ್ತು

ಪಾಪೋಸು ಹೋದುವಲ್ಲ ಸ್ವಾಮಿ ಎನ್ನ - ಪ -
ಪಾಪೋಸು ಹೋದುವಲ್ಲ - ಅ.ಪ. -

ಉರಗಾದ್ರಿಯಲಿ ಪುಷ್ಕರಿಣಿ ಮೊದಲಾದ
ಪರಿಪರಿ ತೀರ್ಥ ಸ್ನಾನಗಳ ಮಾಡಿ
ಹರಿದಾಸರ ಕೂಡಿ ಗಿರಿರಾಯನ ಮೂರುತಿ
ದರುಶನದಲ್ಲಿ ಮೈಮರೆತಿರಲು ಎನ್ನ

ಪರಮ ಭಾಗವತರ ಹರಿ ಕಥೆ ಕೇಳಲು
ಪರಮ ಭಕುತಿಯಿಂದ ಕೇಳುತಲಿರೆ
ಪರಮ ಪಾಪಿಗಳ ಪಾಲಾಗಿ ಪೋದವು
ಪರಮ ಪುರುಷನ ಮನಸಿಗೆ ಬಂದೀಗ

ಮಾಯಾದೇವಿ ಎನಗೆ ಮೆಚ್ಚಿ ಕೊಟ್ಟಿದ್ದಳು
ದಾಯಾದಿಗಳು ನೋಡಿ ಸಹಿಸಲಿಲ್ಲ
ಮಾಯಾರಮಣ ನಮ್ಮ ಪುರಂದರ ವಿಠಲನ
ಮಾಯದಿಂದಲಿ ಮಟ್ಟ ಮಾಯವಾದವು ಎನ್ನ

- ಬೆಟ್ಟದ ಮೇಲೆ ದಾಸರು ಪುಷ್ಕರಿಣಿಯಲ್ಲಿ ಸ್ನಾನಮಾಡುವಾಗ ಅವರ ಚಪ್ಪಲಿಯನ್ನು ಯಾರೋ ಎತ್ತಿ ಹಾಕಿದರು. ಅದನ್ನು ಶ್ಲೇಷೆಯಲ್ಲಿ ದಾಸರು ವಿವರಿಸಿದ್ದು ಹೀಗೆ - ಗಿರಿಯಲ್ಲಿ ಗುಡಿಸೇರಿ ಸ್ವಾಮಿಯನ್ನು ನೋಡುವುದರಲ್ಲಿ ಮೈಮರೆತಿರುವಾಗ ಅಷ್ಟೂ ಪಾಪ ಹೋಯಿತಂತೆ. ಮಾಯದೇವಿ ಪ್ರೇಮದಿಂದ ಕೊಟ್ಟ ಪಾಪಗಳೆಲ್ಲ - ಆ ಸಂಪತ್ತೆಲ್ಲ ದಾಯಾದಿಗಳ ಕಣ್ಣಿಗೆ ಕಿಸರಾಯಿತು. ಅವರು ಆ ಪಾಪಗಳನ್ನು ಕಳ್ಳತನದಲ್ಲಿ ಹೊತ್ತೊಯ್ದರು. ಮಾಯೆಗೆ ಒಡೆಯನಾದ ಹರಿಯ ದಯೆಯಿಂದ ಪಾಪಗಳೆಲ್ಲ ನಾಶವಾದವು ಚಪ್ಪಲಿಯ ರೂಪದಲ್ಲಿ - ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಎಪಿಕ್ ಸಿಮಿಲಿ - ಮಹೋಪಮೆ - ಎಂಬ ಮಾತು ಈ ಕೃತಿಯಲ್ಲಿ ಸಾರ್ಥಕವಾಗಿದೆ.

ಕನಕದಾಸರು ಹರಿದಾಸ ಸಾಹಿತ್ಯದ ಕನಕವೇ ಸರಿ. ಆತ ಬಾಡದ ಆದಿಕೇಶವನ ಅಂಕಿತದಲ್ಲಿ ಕೀರ್ತನೆಗಳನ್ನು ಹಾಡಿದ್ದೇ ಅಲ್ಲದೆ ನಳಚರಿತ್ರೆ, ರಾಮಧಾನ್ಯ ಚರಿತ್ರೆ, ಮೋಹನ ತರಂಗಿಣಿ - ಕಾವ್ಯಕೃತಿಗಳನ್ನು ರಚಿಸಿದರು. 'ಹರಿಭಕ್ತಿಸಾರ, ಭಾಮಿನೀ ಷಟ್ಪದಿಯ ಶತಕ ಕೃತಿ. ಆತನಿಗೆ ಬೆಟ್ಟದ ಶ್ರೀನಿವಾಸ ಬಂಧು, ಬಳಗ, ಗೆಳೆಯ, ಸ್ವಾಮಿಯಲ್ಲಿ ಅಷ್ಟು ಸಲಿಗೆ, ಸಾನ್ನಿಹಿತ್ಯ, ಸ್ನೇಹ, ಭಕುತ ವತ್ಸಲನೆಂಬ ಬಿರುದು ಬೇಕಾದಡೆ ಶಕುತ, ಸುಮ್ಮನೆ ಕಾಯೋ ಸುಲಭದಿಂದ, ಸುಕೃತ ಶರಣರು ನಿಮ್ಮನೆನೆವರ್‍ಯೆ ಶೇಷಗಿರಿ ಪ್ರಕಟ ವಾಸಾದಿಕೇಶವ ವೆಂಕಟೇಶ'ಎಂದು ರಕ್ಷಿಸಲು ಕರೆಯುತ್ತಾರೆ. ನಿಂದಾಸ್ತುತಿ ಕನಕದಾಸರಿಗೆ ಸುಲಭ. 'ನೀನಾರ ಬಾಂಧವನೋ ನಿಖಿಳ ಯಾದವರೊಳಗೆ ಮಾನಾಭಿಮಾನ ವೆಳ್ಳನಿತಿಲ್ಲ' ಕೀರ್ತನೆಯಲ್ಲಿ ಪೂತನೆಯ ಸಂಹಾರ, ಕಂಸ ಸಂಹಾರಗಳನ್ನು ಉಲ್ಲೇಖಿಸುತ್ತ ಕಪಟವರಿಯದ ನೃಪನ ಕೈಯೊಳನೃತವ ನುಡಿಸಿ ಉಪಮೆಯಲಿ ಶಸ್ತ್ರ ಪಂಡಿತನ ಕೊಲ್ಲಿಸಿದೆ ಎಂದು ದ್ರೋಣ ವಧೆಯನ್ನು ಅಲ್ಲಿ ಕೃಷ್ಣನ ಪಾತ್ರವನ್ನು ವಿವರಿಸಿದ್ದಾರೆ. ಮಹಾಭಾರತದಲ್ಲಿ ಕೃಷ್ಣನ ಮುತ್ಸದ್ದಿತನವೆಲ್ಲ - ವಂಚನೆ ಎಂಬ ಪ್ರೀತಿಯ ಹೀಯಾಳಿಕೆ - ಈ ವಿಧದೊಳವರ ಸುರಲೋಕದೊಳು ನೆಲೆಗೊಳಿಸಿ ಭಾವಮೈದುನರನು ಐವರನು ರಕ್ಷಿಸಿ ಭೂವಲಯದೊಳು ಕೀರ್ತಿಪಡೆದು ಎಸೆವ ನಮ್ಮದೇವ ನೆಲೆಯಾದಿ ಕೇಶವ ವೆಂಕಟೇಶ - ಎಂಬ ಸ್ತುತಿಯಲ್ಲಿ ಕೊನೆಯಾಗುತ್ತದೆ. ದೇವರಿಗೆ ಲಾಲಿಹಾಡು ಹೇಳುವ ಕನಕದಾಸರು ಆ ಕೀರ್ತನೆಯಲ್ಲಿ ವಿವಿಧಾವತಾರಗಳ ಪಕ್ಷಿನೋಟವನ್ನು ಒದಗಿಸುತ್ತಾರೆ. ಆತ 'ಹಿರಿ ಆದಿಕೇಶವ ಗುರು ಅಪ್ರೇಮ ಸಿರಿಧರ ಶೇಷಗಿರಿ ವರ ತಿಮ್ಮರಾಯ'ಎಂದು ತೂಗುತ್ತಾರೆ. 'ಗೋವಿಂದ ಎನ್ನಲರಿಯದೆ ನೋವಿಂದ ಭಂಗಪಡುವುದು ಚಿತವೆ'ಎಂದು ಆರಂಭಿಸಿ ನಾಮಜಪದ ಹಿರಿಮೆಯನ್ನು ಬಿಡಿಸಿ ಹೇಳುತ್ತಾರೆ.

ವೆಂಕಟೇಶ್ವರ ಸ್ವಾಮಿಗೆ ನಿವೇದನೆಯಾದ ಪ್ರಸಾದಗಳ್ನು ವಿಜಯನಗರ ಅರಸರ ಕಾಲದಲ್ಲಿ ಮಾರಾಟ ಮಾಡುತ್ತಿದ್ದ ಸಂಪ್ರದಾಯವೂ ಇದ್ದಿತು. ಅದನ್ನು ವಿವರಿಸುವ ಕೀರ್ತನೆ ಬಹುಸೊಬಗಿನಿಂದ ಕೂಡಿದೆ.

ಬಂದೆವಯ್ಯ ಗೋವಿಂದ ಶೆಟ್ಟಿ
ಇಂದು ನಿಮ್ಮ ಹರಿವಾಣ ಪ್ರಸಾದವುಂಟೆನಲಾಗಿ -ಪ-

ಅಪ್ಪಾವು ಆತಿರಸ ತುಪ್ಪ ಕಜ್ಜಾಯವು
ಒಪ್ಪುವ ಯಾಲಕ್ಕಿ ಶುಂಠಿ ಮೆಣಸುಗಳ
ಆಪ್ಪರೂಪವಾದ ಕಜ್ಜಾಯ ರಾಶಿಗಳ
ಛಪ್ಪನ್ನ ದೇಶಕ್ಕೆ ಮಾರುವ ಶೆಟ್ಟಿ -1-

ಒಡೆದ ಮಡಕೆಯ ಅರೆದು ನಾಮವ ಮಾಡಿ
ಕೊಡುವೆ ನೀ ಕಾಸಿಗೆ ಒಂದೊಂದನು
ಒಡಲು ತುಂಬಿ ಮಿಕ್ಕ ಓಗರ ಮಾರಿಸಿ
ಒಡವೆಯ ಗಳಿಸುವ ಕಡುಲೋಭಿ ಶೆಟ್ಟಿ -2-

ಶೇಷಗಿರಿಯಲ್ಲಿ ವಾಸ ಮಾಡಿಕೊಂಡು
ದೇಶದೇಶಕ್ಕೆ ಹೆಸರಾದ ಶೆಟ್ಟಿ
ಕಾಸಿಗೆ ಕಾಸು ಬಡ್ಡಿ ಗಳಿಸಿಕೊಂಬ ಆದಿ
ಕೇಶವ ನಾರಾಯಣ ತಿಮ್ಮಶೆಟ್ಟಿ -3-

ಒಟ್ಟಿನಲ್ಲಿ ಕನಕದಾಸರ ಹಾದಿಯೇ ಬೇರೆ. ಆದಿಕೇಶವನನ್ನು ಅವರು ಒಲಿಸಿಕೊಂಡ ಪರಿಯೇ ಬೇರೆ. ಎಲ್ಲವೂ ಆಪಾದ ಮಸ್ತಕ ಸುಂದರ, ಮಧುರ, ಶ್ರುತಿರಮ್ಯ, ಅನುಭವವೇದ್ಯ.

ವ್ಯಾಸರಾಯರಲ್ಲಿ ವಿದ್ಯಾಭ್ಯಾಸ ಮಾಡಿದವರಲ್ಲಿ ವಾದಿರಾಜರ ಹೆಸರು ವ್ಯಾಸಕೂಟ ದಾಸಕೂಟಗಳೆರಡರಲ್ಲಿಯೂ ಪ್ರಧಾನವಾದದ್ದು. ಅವರು ಸೋದೆ ಮಠಾಧೀಶರು. ಸರಸ ಭಾರತೀ ವಿಲಾಸ, ಯುಕ್ತಿ ಮಲ್ಲಿಕಾ - ಮುಂತಾದ ಸಂಸ್ಕೃತ ಕೃತಿಗಳನ್ನು ಬರೆದಿರುವುದೇ ಅಲ್ಲದೆ ಕ್ರಿ.ಶ. 1600ಕ್ಕೂ ಹಿಂದೆಯೇ ಭಾರತ ದರ್ಶನದ ತೀರ್ಥ ಪ್ರಬಂಧವನ್ನು ಸಾದರ ಪಡಿಸಿದವರು. ಅಲ್ಲಿ ತಿರು ಮಲೆಯ ದೇವರಿಗೆಂದು ಪ್ರತ್ಯೇಕವಾದ ಪದ್ಯ ರಚನೆಗಳುಂಟು. ಅವರಿಗೆ ಜನಭಾಷೆಯಲ್ಲಿ ಜನರಿಗೆ ತಿಳಿಯುವ ರೀತಿಯಲ್ಲಿ ದೇವತ್ವವ ವಿವರಿಸುವ ಪ್ರೀತಿ. ಎಂತಲೇ ತುಳುವಿನಲ್ಲಿಯೂ ಕೀರ್ತನೆಗಳನ್ನು ರಚಿಸಿದರು. ಅವರ ಕನ್ನಡ ಸಂಕೀರ್ತನೆಗಳಲ್ಲಿ ವೆಂಕಟೇಶ್ವರಸ್ವಾಮಿ ಮನ ಮೋಹಕವಾಗಿ ಅಭಿವ್ಯಕ್ತವಾಗಿದ್ದಾನೆ. 'ಸೇವಕನೆಲೋ ನಾನು' ಎಂದೇ ಆರಂಭಿಸಿ ತಮ್ಮಿಂದ ಸೇವೆಯನ್ನು ಪಡೆಯಬೇಕೆಂದು ಶೇಷಗಿರಿಯಲ್ಲಿ ನಿಂದ ಗೋವಿಂದನಿಗೆ ಮೊರೆಯಿಡುವರು. ಅವರಿಗೆ ವಿಶೇಷವಾದ ಆದರ, ಕರುಣೆ, ಬೇಕಿಲ್ಲ. 'ದೇಶದೇಶದವರನು ಪೊರೆವಂತೆ ಎನ್ನನೂ ಪೊರೆಯೋ ಶೇಷಾಚಲ ಘನ್ನ' ಎಂಬುದಷ್ಟೆ ಬೇಡಿಕೆ. 'ಇಂದಿನ ದಿನ ಸುದಿನ ಗೋವಿಂದನ ಕಂಡ ಕಾರಣ. ಹಿಂದಿನ ಪಾಪ ವೃಂದವು ಬೆಂದು ಹೋಯಿತು ಎನಗೆ. ಮುಂದಿನ ಮುಕುತಿ ದೊರೆಯಿತು, 'ಶ್ರೀಶ ನೀನಹುದೋ' - ಎಂಬ ಕೀರ್ತನೆ ಯಲ್ಲಿ 'ಅಶೇಷ ಜನರನು ಪಾಲಿಸಿ ಬಡ್ಡಿಕಾಸು ಸೇರಿಸಿ ಗಂಟುಕಟ್ಟುವ ಕ್ಯಾಸಕ್ಕಿ ತಿಮ್ಮಪ್ಪ ನೀನೆ' ಎಂದು ಸ್ವಾಮಿಯ ಗುರುತು ಹಿಡಿಯುತ್ತಾರೆ.

ವಿಜಯನಗರ ಚಕ್ರಾಧಿಪತ್ಯ ಕೊನೆಯಾದದ್ದು ರಕ್ಕಸ ತಂಗಡಿ ಯುದ್ಧದಿಂದ. ಆನಂತರ ವಿಜಯನಗರದರಸರು ಪೆನುಗೊಂಡೆಯಿಂದ ರಾಜ್ಯಭಾರ ಮಾಡುತ್ತ ಮತ್ತೂ ಕೆಳಕ್ಕೆ ಚಂದ್ರಗಿರಿಗೆ ಇಳಿದರು. ಸಾಮ್ರಾಜ್ಯ ಸಣ್ಣದಾಗುತ್ತ ಹೋಯಿತು. ಈ ಹಿನ್ನೆಲೆಯಲ್ಲಿಯೇ ಹರಿದಾಸರ ಹರವೂ ತಗ್ಗುತ್ತ ನಡೆಯಿತು. ನಂತರ ಪ್ರವರ್ಧಮಾನವಾಗಿ ಪ್ರಸಿದ್ಧವಾಗಿ ಬೆಳೆ ಕಂಡುಬರುವುದು ವಿಜಯದಾಸರ ಕಾಲದಿಂದ. ಈ ಮಧ್ಯದಲ್ಲಿ ಹರಿದಾಸ ಸಾಹಿತ್ಯದ ತೊರೆ ಕಿರಿದಾಯಿತಷ್ಟೆ. ಮಹಿಪತಿದಾಸರು ಪ್ರಸನ್ನ ವೆಂಕಟದಾಸರು ಮುಂತಾದವರು ತೆರೆಯ ಮೇಲೆ ಕಾಣಿಸಿಕೊಂಡರು. ಸ್ವಾಮಿ ಪುಷ್ಕರಿಣೀ ತೀರದಲ್ಲಿ ನೆಲೆಸಿದ ವೆಂಕಟೇಶ್ವರಸ್ವಾಮಿಯನ್ನು ಮಹಿಪತಿ ದಾಸರು ಕಂಡು ಹಾಡಿದರೆ ಪ್ರಸನ್ನ ವೆಂಕಟದಾಸರು ಬಹುಕಾಲ ತಿರುಪತಿಯಲ್ಲಿ ನೆಲೆಸಿ ಸ್ವಾಮಿ ಸೇವೆ ಮಾಡಿದರು. ಸ್ವಾಮಿ ಪುಷ್ಕರಿಣಿ ತೀರವಾಸಿಯಾದ ಪುರುಷೋತ್ತಮನನ್ನು ಪ್ರಸನ್ನ ವೆಂಕಟದಾಸರೂ ಹಾಡಿ ನರ್ತಿಸಿದ್ದಾರೆ. 'ಬಿಡೆನೋ ನಿನ್ನಂಘ್ರಿ ಶ್ರೀನಿವಾಸ' ಎಂದು ಹಟ ಹಿಡಿದು ಸೇವೆ ಮಾಡಿಸಿಕೊಳ್ಳುವಂತೆ ಮುಷ್ಕರ ಹೂಡಿ ಹಾಡಿದ್ದಾರೆ. ಸ್ವಾಮಿಗೆ ಜಯಕಾರ ಹಾಕಿ ನಲಿದಿದ್ದಾರೆ.

ಹರಿದಾಸ ಸಾಹಿತ್ಯದ ಎರಡನೆಯ ಹಂತದಲ್ಲಿ ಪ್ರಥಮ ಪರಿಗಣಿತರು ವಿಜಯದಾಸರು. ಪುರಂದರ ದಾಸರ ಪರೋಕ್ಷ ಶಿಷ್ಯರ ಪೀಳಿಗೆಯಲ್ಲಿ ಪರಿಚಯವಾಗುವ ದೊಡ್ಡ ಹೆಸರು. ಚೀಕಲ ಪರಿವಿಯಿಂದ ಆಗಾಗ ತಿರುಮಲೆಗೆ ಬಂದು ಸ್ವಾಮಿಯನ್ನು ಸಂದರ್ಶಿಸಿ ಹಾಡಿದ ಹಿರಿಯರು. ಅವನ ದರುಶನಕ್ಕೆ ಹಾತೊರೆದು ನಿಂತವರು. ಅವರ ಕೀರ್ತನೆಗಳ ಸೊಬಗೇ ಬೇರೆ. ಸುಳಾದಿಗಳಲ್ಲಿ ಅವರು ಸೃಷ್ಟಿಗೀಶನಾದ ಸಪ್ತಗಿರಿವಾಸನನ್ನು ಸಂಕೀರ್ತಿಸಿದರು. ಗಿರಿಯ ಶಿಖರವ ನೋಡುತ್ತಲೇ ಸಾಷ್ಟಾಂಗ ನಮಸ್ಕಾರ ಮಾಡಿರೆಂದು. ಕಾರಣ - ಸುರತರುವಿನಂತೆ ಬೇಡಿದ ಇಷ್ಟಾರ್ಥಗಳನೆಲ್ಲ ಕರೆಯುತಿದೆ ಶಬ್ದಾರ್ಥ ತಿಳಿದ ನರಗೆ; ಅದು ಮೇರುವಿನ ಮಗನಂತೆ ವೆಂಕಟಾಖ್ಯ ನಾಮದಿಂದ ಹೊಳೆದಿದೆ ಎನ್ನುತ್ತಾರೆ. ಸ್ವಾಮಿಯ ಬ್ರಹ್ಮೋತ್ಸವವನ್ನು ವಿವರಿಸುವ ಕೀರ್ತನೆಯೊಂದು ಸೊಗಸಾಗಿದೆ. ಏಳು ದಿನಗಳಲ್ಲಿ ಸಾಗುವ ಗೀತೆಯ ಪಲ್ಲವಿಯೇ ಒಂದು ಸನ್ನಿವೇಶವನ್ನು ಕಟ್ಟಿಕೊಡುತ್ತದೆ.

ನಿನ್ನ ದರುಷನಕೆ ಬಂದವನಲ್ಲವೋ
ಪುಣ್ಯವಂತರ ದಿವ್ಯ ಚರಣ ನೋಡಲು ಬಂದೆ ॥ ಪ ॥

ಆತ ಎಲ್ಲೆಲ್ಲಿಯೂ ಇದ್ದಾನೆ. ಸೊಲ್ಲಿಗೆ ಓಗೊಡುವಂತಹವನು, 'ಧ್ಯಾನಕೆ ಸಿಲುಕುವವನು. ಕರೆದಾಗಲೇ ಓಡಿಬಂದು ಒದಗುವಸ್ವಾಮಿ. ಆದರೆ ಇಷ್ಟು ಮಂದಿ ಭಕ್ತರು ಎಲ್ಲಿ ಸೇರಲು ಸಾಧ್ಯ. 'ಕಠಿಣವೋ ನಿನ್ನ ಭಕುತರ ನೋಡುವ ಭಾಗ್ಯ'. ಹಾಗೆಂದೇ ತಿರುಮಲೆಗೆ ಬಂದರು ದಾಸರು. ಆದರೆ ಹಾಗೆಂದು ತಾವು ಹೇಳಿದ್ದು ತಪ್ಪಾಯಿತೆಂಬ ಭಾವದಿಂದ ಮತ್ತೆ ಕೀರ್ತಿಸುತ್ತಾರೆ-

ನಿನ್ನ ನೋಡಲಿ ಬಂದೆ ನಿತ್ಯತೃಪ್ತ
ಅನ್ಯರಿಂದಲಿ ಎನಗೆ ಏನು ಪ್ರಯೋಜನವೋ

ವಿಜಯದಾಸರ ಒಂದು ಕೀರ್ತನೆ ಸ್ವಾಮಿಯ ಉತ್ಸವದ ಮೆರವಣಿಗೆಯಲ್ಲಿ ಹಾಡಿದ್ದು ಬಹು ಅರ್ಥಪೂರ್ಣವಾಗಿ ಹೃದಯವನ್ನು ಸೂರೆಗೊಳ್ಳುತ್ತದೆ -

ಭಕುತ ಜನ ಮುಂದೆ ನೀನವರ ಹಿಂದೆ
ಯುಕುತಿ ಕೈಗೊಳ್ಳದೋ ಗಯಾ ಗದಾಧರನೆ

- ನದಿಯಲ್ಲಿ ನಾವೆ ಹೊರಡುತ್ತಿರುವಾಗ ಹುಟ್ಟು ಮುಂದೆ, ಹಾಗೆಯೇ ಮೆರವಣಿಗೆಯಲ್ಲಿ ಭಕ್ತರು ಮೊದಲು. ರಾಜನ ಊರ ಸಂದರ್ಶನದಲ್ಲಿ ಮಂಗಳ ವಾದ್ಯಗಳು ಮುಂದೆ - ಆಳು ಮುಂದೆ ಅರಸು ಹಿಂದೆ. ಅದರಂತೆಯೇ-

ಉತ್ಸವ ವಾಹನ ಬೀದಿಲಿ ಮೆರೆಯುತ ಬರಲು
ಸತ್ಸಂಗತಿಗೆ ಹರಿದಾಸರಲ್ಲದೆ
ವತ್ಸ ಸಿರಿ ವಿಜಯ ವಿಠಲ ವೆಂಕಟಾಚಲ
ವತ್ಸ ಮುಂದಲ್ಲದೆ ಧೇನು ಮುಂದೇನೋ!

ಅರ್ಥಾಂತರ ನ್ಯಾಸ ಇದಕ್ಕಿಂತ ಚೆನ್ನಾಗಿರಲು ಸಾಧ್ಯವಿಲ್ಲ. ಕರು ಮುಂದೆ ಹೋದರೆ ಹಸು ಹಿಂದೆ ನಡೆಯುವುದು ಅತಿ ಸಹಜ.

ವಿಜಯದಾಸರ ಶಿಷ್ಯರು ಗೋಪಾಲದಾಸರು. ಅನಂತರ ಜಗನ್ನಾಥದಾಸರು. ಸ್ವಾಮಿಯ ವಿವಿಧ ನೋಟಗಳನ್ನು ನೀಡಿದ್ದಾರೆ. ಗೋಪಾಲದಾಸರು ಗೋವಿಂದನಲ್ಲಿ ಸರ್ವಥಾ ಶರಣರು.

ಏನು ಕೊಡಲಿಲ್ಲ ಏನು ಬೇಡಲಿಲ್ಲ
ಏನು ಪಡೆಯಲೊ ಕರುಣೆಯೆ
ನೀನು ಕೊಟ್ಟ ಸ್ವಾತಂತ್ರ್ಯದ ಫಲ
ನಿನಗೆ ಅರ್ಪಿಸಬೇಕೆನುತ ಇಲ್ಲಿ

- ಬಂದಿರುವುದಾಗಿ ತಿಳಿಸುತ್ತಾರೆ. ಸ್ವಾಮಿಯ ವಿವಿಧ ವಾಹನಗಳ ಸೊಬಗನ್ನು - ಅಲ್ಲಿನ ಮೆರವಣಿಗೆಯ ವಿವರವನ್ನು ನೀಡುವರು. ಜಗನ್ನಾಥ ದಾಸರೂ ಹಾಗೆಯೇ ಸ್ವಾಮಿಯ ಉತ್ಸವಗಳ ಸೊಗಸನ್ನು ಹೃದ್ಯವಾಗಿ ಹಾಡುತ್ತಾರೆ.

ರಥವನೇರಿದ ರಥಿಕನ್ಯಾರೆ ಪೇಳಮ್ಮಯ್ಯ - ಎನ್ನುತ್ತ ಆತ್ಮೀಯವಾಗಿ ವೈಕುಂಠವನ್ನು ಬಿಟ್ಟಿಳಿದು ಭೂತಳದ ಜನರಭಿಲಾಶೆ ಸಲಿಸಲು ವಾತಾಶನ ಗಿರಿಗೆ (ಸರ್ಪಗಿರಿ - ಶೇಷಾದ್ರಿ) ಇಳಿದ ಎಂದು ವಿವರಿಸುವರು. ಇಲ್ಲಿ ಭೌತಿಕದೊಡನೆ ಬೌದ್ಧಿಕವನ್ನು ತೆರೆಗಿಸಿ ರುವುದು ಸುಂದರವಾಗಿದೆ.

ಮುಂದಿನ ಘಟ್ಟದಲ್ಲಿ ಗುರುಜಗನ್ನಾಥ ದಾಸರು, ಶ್ರೀಶವಿಠಲದಾಸರು, ಉರಗಾದ್ರಿವಾಸರು, ಗುರುಗೋವಿಂದ ವಿಠಲರು ಮುಂತಾದವರನ್ನು ನೋಡಬಹುದು. ಈ ಮಧ್ಯದಲ್ಲಿ ಒಬ್ಬರನ್ನು ಹೆಸರಿಸಲೇಬೇಕು. ಅವರೆಂದರೆ ಹರಿದಾಸರನ್ನು ಆದರಿಣೆಯನ್ನು

ಹಿಡಿದು ಕೀರ್ತನೆಗಳನ್ನು ಹಾಡುತ್ತ ಸ್ವಾಮಿಯನ್ನು ಮೆಚ್ಚಿಸಿದ ಗುರು ರಾಘವೇಂದ್ರ ಸ್ವಾಮಿಗಳು. ''ಮಂಚಾಲೆಯ ರಾಘಪ್ಪ ಎಂದು ಗುರುವಿನ ಹಿರಿಮೆಯನ್ನು ಗುರುತಿಸುವ ಮಾತು ಈ ಲೇಖನದ ಮೊದಲವಾಕ್ಯದಲ್ಲಿದೆ. ಅವರು ಬರೆದದ್ದು ಬಹಳ. ಎಲ್ಲವೂ ಸಂಸ್ಕೃತದಲ್ಲಿ. ಆದರೆ ಒಂದು ಕನ್ನಡ ಕೀರ್ತನೆ ಸ್ಪಷ್ಟವಾಗಿ ತಿರುಮಲೆಯ ಸ್ವಾಮಿಯನ್ನು ಕುರಿತಾದದ್ದು ಎನ್ನಬರುತ್ತದೆ. ಅದೆಂದರೆ-

ಇಂದು ಎನಗೆ ಗೋವಿಂದ ನಿನ್ನಯ ಪಾದಾರ
ವಿಂದವ ತೋರೋ ಮುಕುಂದನೇ

- ಭವಬಂಧನದಲ್ಲಿ ಸಿಕ್ಕಿ, ಅರಿಷಡ್ವರ್ಗದ ಸ್ನೇಹದಲ್ಲಿ ಕೆಟ್ಟ ಜೀವನ ತಪನವನ್ನೆಲ್ಲ ಜೀವಿಯ ನೈಚ್ಯಾನುಸಂಧಾನವನ್ನೊಳಿಸುತ್ತ ತಮ್ಮನ್ನು ಮೇಲೆತ್ತಲು ಕಳಕಳಿಯಿಂದ ಮಾಡುವ ಪ್ರಾರ್ಥನೆಯಿದು.

ಗುರುಜಗನ್ನಾಥದಾಸರು ಕೋಸಿಗಿಯವರು. ಶ್ರೀನಿವಾಸ - ನಿನ್ನ ಆಟವನ್ನು ಏನು ವರ್ಣಿಸಲಿ ಎನ್ನುತ್ತ ಅವತಾರಗಳ ಕಥೆಯನ್ನು ಕಿರಿಯ ಪಾದಗಳ ಚರಣಗಳಲ್ಲಿ ನುಡಿಯುವರು. ಯಾಕೆ ನಿನ್ನ ಮನಕೆ ಬಾರೆನೋ ಎನ್ನುತ್ತ ಆವನ ಪೌರಾಣಿಕ ಭಕ್ತರು ಮಾಡಿದ ಯಾವ ಕೆಲಸವನ್ನೂ ತಾನು ಮಾಡಿಲ್ಲವೆಂದು ದೂರುವರು.

ಪದದಿ ಭೃಗುಮುನಿ ನಿನ್ನ ಹೃದಯಕೊದ್ದ ತೆರದಿ ನಾನು
ಬೆದರಿ ನಿನ್ನಒದೆಯಲಿಲ್ಲವೋ ಹೇ ವೆಂಕಟೇಶ -1-
ತೊಂಡ ಪಾರ್ಥ ರಣದಿ ತನ್ನ ಬಂಡಿ ಬೋವನ ಮಾಡಿದಂತೆ
ಬಂಡಿ ಹೊಡಿ ಎಂದು ನಡೆಸಲಿಲ್ಲವೋ ಹೇ ವೆಂಕಟೇಶ -3-
ಕೆಟ್ಟ ಕಾರ್ಯ ಮಾಡಿದವರು ಇಷ್ಟರೆ ಸರಿ ನಿನಗೆ ನಾನು
ಕೆಟ್ಟ ಕಾರ್ಯ ಮಾಡಲಿಲ್ಲವೋ ಹೇ ವೆಂಕಟೇಶ -5-

- ಗುರುಜಗನ್ನಾಥ ವಿಠಲದಾಸರ ದೂರು ನ್ಯಾಯವೇ ಎನ್ನಿಸುವುದರಲ್ಲಿ ಆಶ್ಚರ್ಯವಿಲ್ಲ. ಆದರೂ ಆಕ್ಷೇಪಿಸುವ ಆವರು ಭಕ್ತರ ಗುಣಾತ್ಮಕತೆಯನ್ನು ಧ್ವನಿಸುವರು.

ದಾತ ಶ್ರೀ ಗುರುಜಗನ್ನಾಥ ವಿಠಲನೆಂದು ನಾ
ಪ್ರೀತ ಮನದಿ ಬಂದೆನೋ ವೆಂಕಟೇಶ -7-

ಶ್ರೀನಿವಾಸನಲ್ಲಿ ಶರಣು ಹೊಕ್ಕು - ಶರಣಾಗತಿಯನ್ನು ಹಾಡಿದವರು ಪುರುಷರು ಮಾತ್ರವೇ ಅಲ್ಲ. ಮಹಿಳೆಯರಿಗೂ ಮಹತ್ವದ ಪಾಲುಂಟು. ಹರಪನಹಳ್ಳಿ ಭೀಮವ್ವ, ಹೆಳವನಕಟ್ಟೆ ಗಿರಿಯಮ್ಮ, ನಂಜನಗೂಡು ತಿರುಮಲಾಂಬಾ, ಯದುಗಿರಿಯಮ್ಮ, ಸೊಂಡೂರಿನ ಲಕ್ಷ್ಮೀದೇವಮ್ಮ, ಚಿತ್ರದುರ್ಗದ ಸರಸಾಬಾಯಿ, ಕಳಸದ ಸುಂದರಮ್ಮ - ಮುಂತಾದವರೆಲ್ಲ ತಿರುಮಲೆಯಪ್ಪನ ಕೀರ್ತಿಯನ್ನು ಹಾಡಿದವರೇಯೆ. ಸತ್ವದಲ್ಲಿಯೂ, ಸಂಗೀತದಲ್ಲಿಯೂ, ತತ್ವದಲ್ಲಿಯೂ, ತಿರುಳಿನಲ್ಲಿಯೂ, ಯಾವ ಹರಿದಾಸರಿಗೂ ಕಡಿಮೆಯಿಲ್ಲದ ಭಕ್ತಿಯ ಓಘ, ಛಂದದ ಓರಣ, ಅಲಂಕಾರದ ಸೊಬಗು, ಸರಳತೆಯ ಅರ್ಥ ಲಾಲಿತ್ಯ - ಇವರುಗಳ ಕೀರ್ತನೆಗಳ ಮುಖ್ಯ ಲಕ್ಷಣಗಳು. ತಿರುಮಲೆಯಪ್ಪನ ಕುರಿತ ಹಲವು ಉಲ್ಲೇಖಗಳನ್ನು ಸ್ಥಾಲೀ ಪುಲಾಕ ನ್ಯಾಯದಿಂದ ಎತ್ತಿಕೊಳ್ಳಲಾಗಿದೆ.

ಎಷ್ಟು ಹೇಳಲಿ ವೆಂಕಟಗಿರಿಯ ದೃಷ್ಟಿಗೆ ಬಹುಸಿರಿಯ
ಬೆಟ್ಟವನೆ ಮನಸಿಟ್ಟಿರಲು ಬೇಡಿದ ಇಷ್ಟಾರ್ಥಗಳ ಈಡಾಡುವ ದೊರೆಯು

- ಹರಪನ ಹಳ್ಳಿಯ ಭೀಮವ್ವನವರು ಬೆಟ್ಟದ ದೇವರನ್ನು ವಿವರಿಸುತ್ತಿದ್ದಾರೆ. ಆತ ತಪ್ಪುಗಾಣಿಕೆಯ ಬೇಡುವ ಸಪ್ತಶೈಲದ ತಿಮ್ಮಪ್ಪ, ಕಪ್ಪವ ಕಾಸು ಕವಡೆ ಮುಡಿಪು ಹಾಕದೆ ತಾನೊಪ್ಪ. ಆತನ ಆಲಯದ ಸೊಬಗು ಈ ರೀತಿಯದು-

ಚಿತ್ರ, ವಿಚಿತ್ರದ ಮಹಾದ್ವಾರ ಚಿನ್ನದ ಗೋಪುರ

ಸ್ವಚ್ಛವಾದ ಸ್ವಾಮಿ ಪುಷ್ಕರಿಣಿಯ ತೀರ ಸುತ್ತಲೂ ಪ್ರಾಕಾರ.....

ಆತನ ಅಲಂಕಾರದ ಸೊಬಗು ಮತ್ತೊಂದು ಚರಣದಲ್ಲಿ ಪ್ರತಿಪಾದಿತವಾಗಿದೆ -

ರತ್ನ ಮಾಣಿಕ್ಯದ ಕೇಯೂರ ಕಟ್ಟಿದ ಉಡಿದಾರ

ಉಟ್ಟಿದ್ದ ನಿರಿ ಜರಿಪೀತಾಂಬರ ಕೌಸ್ತುಭ ಮಣಿಹಾರ

ಗಟ್ಟಿ ಕರ್ಣ ಕುಂಡಲಧರ ಚತುರ್ಭುಜದಲಂಕಾರ

ವಕ್ಷಸ್ಥಳದಲ್ಲಿ ಹೊಂದಿದ ಶ್ರೀ ಮಹಾ ಲಕ್ಷ್ಮೀದೇವಿಯರಿಂದೊಲಿವ ಶೃಂಗಾರ

ಆಕಾಶರಾಜನ ಕಿರೀಟ ಚಿತ್ರವು ಬಹುಮಾಟ

ಬಾರಯ್ಯ ಎನ್ನ ಹೃದಯ ಮಂದಿರಕೆ - ಎಂದು ಶೇಷಾದ್ರಿ ವಾಸನನ್ನು ಸರಸಾಬಾಯಿ ಅವರು ಕರೆಯುತ್ತಾರೆ. 'ತಂದೆ ಶ್ರೀನಿವಾಸ ಬಂದು ಕಾಯೋ ಎನ್ನ, ಸ್ವಾಮಿ ನಿಂತು ಕಾಯೋ' ಎಂಬುದು ಅವರ ಪ್ರಾರ್ಥನೆ. 'ಕ್ಷೀರಾಬ್ಧಿಯಿಂದ ನಾರಾಯಣ ಭರದಿ ತಾಬಂದ, ಕಮಲದೊಳಗೆ ಬಂದ ರಮಣಿ ಸಹಿತ ತಾ ನಿಂದ ಭಕುತರ ಪೊರೆಯುತ ಗೋವಿಂದ' ಎಂದು ಯದುಗಿರಿ ಅಮ್ಮನವರು ಹೇಳುವಾಗ ಶೇಷಾದ್ರಿವಾಸನೊಡನೆ ಮಂಗಾಪುರದ ಪದ್ಮಾವತಿಯೂ ಇರುವಳು ಎನ್ನಿಸುವುದು.

'ತಿರುಪತಿ ವಾಸನ ತಿರುಮಲೆ ಶ್ರೀಶನ ವೆಂಕಟವಿಠಲನ ಪಾದಗಳ'ನ್ನು ತಿರುಮಲಾಂಬಾ ಅವರು ಪೂರ್ಣವಾಗಿ ನಂಬಿದವರ ಆನೆ ಬಂತಮ್ಮಾ ಎಂಬ ಕೀರ್ತನೆಯಲ್ಲಿ ಸ್ವಾಮಿ ತಿರುಮಲೆಗೆ ಬಂದ ವೃತ್ತಾಂತವನ್ನು ಹತ್ತು ತ್ರಿಪದಿಗಳಲ್ಲಿ ಸುಂದರವಾಗಿ ವಿವರಿಸಿದ್ದಾರೆ. ಮದಗಜವನ್ನಟ್ಟಿಕೊಂಡು ನಡೆದ ಶ್ರೀನಿವಾಸ ಪದ್ಮಾವತಿಯನ್ನು ಕಂಡದ್ದು ಹೀಗೆ -

ಶನೆ ಬೆನ್ನಟ್ಟಿಕೊಂಡು ನಡೆದಾನೆ ಎಲ್ಲೆಲ್ಲಿಯೂ

ಕಾಣದೆ ಹೋದಾನೆ, ಬಿಸಿಲಲ್ಲಿ ಬಳಲುತ ದಣಿದ್ಯಾನೆ ಅಲ್ಲಿ

ಪದ್ಮಾವತಿಯಳ ಕಂಡಾನೆ

ಶನೈ: ನಿಧಾನವಾಗಿ, ಗಂಭೀರವಾಗಿ - ಕನ್ನಡದ ಜಾನಪದಸೊಗಡಿಗೆ ಸಂಸ್ಕೃತ ಪದವನ್ನು ತಿರುಗಿಸಿರುವುದು ಅಚ್ಚರಿಯನ್ನೂ ಆನಂದವನ್ನೂ ಉಂಟಾಗಿಸುತ್ತದೆ.

ರಾಧಾಬಾಯಿಯವರು ವೆಂಕಟೇಶನನ್ನು ರಕ್ಷಕನಾಗಿ ನಂಬಿದವರು 'ರಕ್ಷಿಸು ವೆಂಕಟೇಶಾ ನಿನ್ನ ನಂಬಿದೆನೈ ಶೇಷಗಿರಿವಾಸಾ' ಎಂಬ ಕೀರ್ತನೆಯಲ್ಲಿ ಶ್ರೀನಿವಾಸ ಪದ್ಮಾವತಿಯರ ಕಥೆಯನ್ನು ಸುಂದರವಾಗಿ ಸರಳವಾಗಿ ರೂಪಿಸಿಕೊಟ್ಟಿದ್ದಾರೆ.

ಹೀಗೆ ಹಲವು ಹತ್ತು ತೆರದಲ್ಲಿ ಹರಿದಾಸರು ತಮ್ಮ ಆರಾಧ್ಯದೈವವಾದ ತಿರುಮಲೆಯಪ್ಪನನ್ನು ವರ್ಣಿಸಲು, ವಿವರಿಸಲು, ಅರ್ಥಮಾಡಿಕೊಳ್ಳಲು, ಹಾಡಿದ್ದಾರೆ. ಅದೊಂದು ಸಮುದ್ರ. ದಡದಲ್ಲಿ ನಿಂತು ನೋಡುವುದೇ ಪ್ರಯಾಸದ ಕೆಲಸ. ಒಂದು ಬೊಗಸೆ ನೀರನ್ನು ಎತ್ತಿಕೊಳ್ಳಲು ಇಲ್ಲಿ ಪ್ರಯತ್ನಪಡಲಾಗಿದೆಯಷ್ಟೆ.

ಅನುಬಂಧ - 2

# ಧರ್ಮಕರ್ತರ ಮಂಡಲಿ - ಅಮೃತೋತ್ಸವ

- ಬಿ.ಎನ್. ಶ್ರೀನಿವಾಸನ್

ಭಾರತೀಯ ಆಲಯ ಚರಿತ್ರೆಯಲ್ಲಿ ತಿರುಮಲೆಯ ಆಲಯ ಒಂದು ವಿಶಿಷ್ಟವಾದ ಔನ್ನತ್ಯ ಪಡೆದದ್ದು. ಇಲ್ಲಿರುವ ದೇವರು ಶ್ರೀವೆಂಕಟೇಶ್ವರಸ್ವಾಮಿ. ಈ ಆಲಯದ ಚರಿತ್ರೆ ಶಾಲಿವಾಹನ ಶಕಕ್ಕಿಂತ ಹಿಂದಕ್ಕೆ ಹೋಗುತ್ತದೆ. ಪುರಾಣಗಳಾದರೋ ವಿಶಾ ನಾಲಿಗೆಗಳಲ್ಲಿ ಸ್ವಾಮಿಯ ಲೀಲೆಯನ್ನೂ, ಮಹಿಮೆಯನ್ನೂ, ಕರುಣೆಯನ್ನೂ ಕಾಲಾತೀತತೆಯನ್ನು ವಿವರಿಸುತ್ತವೆ. ಇಲ್ಲಿನ ದೇವರನ್ನು ಸ್ವಯಂಭು ಎಂದು ಕರೆಯಲಾಗಿದೆ. ದ್ವಾಪರ-ಕಲಿಯುಗ ಸಂಧಿಯಲ್ಲಿ ತಂತಾನೆ ಸ್ವಾಮಿ ಇಲ್ಲಿಗಾಗಮಿಸಿದನೆನ್ನಲಾಗಿದೆ. ಎಂತಲೇ ಒಂದು ಸ್ತೋತ್ರ.

ಕೃತೇತು ನರಸಿಂಹೋ ಭೂತ್ ತ್ರೇತಾಯಾಂ ರಘುನಂದನಃ
ದ್ವಾಪರೇ ವಾಸುದೇವಶ್ಚ ಕಲೌ ವೇಂಕಟ ನಾಯಕಃ॥

ಚರಿತ್ರೆಯಲ್ಲಿ ತಿರುಮಲೆಯ ಉತ್ಸವಗಳನ್ನು ವಿವರಿಸುತ್ತ ಒಂದನೇ ಶತಮಾನದ ಅಂದಾಜಿನ ಪುಸ್ತಕ ಶಿಲಪ್ಪದಿಕಾರಂ ಇಲ್ಲಿ ಉತ್ಸವಗಳನ್ನೂ ವೈಭವಗಳನ್ನೂ ವಿವರಿಸುತ್ತ ವೆಂಗಡವನ್ನು ಸೇರಿದವರು ಊರಿಗೆ ಹಿಂದಿರುಗಲಿಷ್ಟ ಪಡಲಾರರು ಎಂದು ವರ್ಣಿಸಿರುವುದುಂಟು. ಶಾಸನಾಧಾರದಲ್ಲಿ ಪಲ್ಲವರ ಮಹೇಂದ್ರವರ್ಮನ ಆಡಳಿತದ ಹದಿನಾಲ್ಕನೆಯ ವರ್ಷದಲ್ಲಿ - 614 ಎ.ಡಿ.ಯ - ಸಾಮವೈ ಶಾಸನ (ಈಕೆ ಶಕ್ತಿ ವಿಟಂಕನೆಂಬ ಕಾಡವನ ಪೆರುಂದೇವಿ (ಹಿರಿಯರಾಣಿ) ಪಲ್ಲವ ಪೆರ್ಗಡೆಯ (ಹೆಗಡೆ)ಯ ಮಗಳು) ಇಲ್ಲಿನ ಆಲಯದಲ್ಲಿ ಮೂಲವರರನ್ನು ಹೋಲುವ ಒಂದು ಬೆಳ್ಳಿಯ ಮೂರ್ತಿಯನ್ನು ಸ್ಥಾಪಿಸಿ ಪುರಟ್ಟಾಸಿ, ಮಾರ್ಗಳಿ (ಸೌರಮಾಸದ ತಿಂಗಳುಗಳು - ಆಶ್ವಯುಜ, ಮಾರ್ಗಶಿರ) ತಿಂಗಳುಗಳಲ್ಲಿ ಈ ಮೂರ್ತಿಗೆ 9 ದಿನಗಳ ತಿರುನಾಳು (ಬ್ರಹ್ಮೋತ್ಸವ) ನಡೆಸಬೇಕೆಂದು ಹಲವು ಭೂಮಿಯನ್ನು ಆಲಯಕ್ಕೆ ವೆಚ್ಚಗಳಿಗೆಂದು ನೀಡಿದಳು. ಅದಾದ ನಂತರದ ದಕ್ಷಿಣಾಪಥದ ಎಲ್ಲ ರಾಜರೂ ತಂತಮ್ಮ ಹೆಸರಿಗೆ, ಕೀರ್ತಿಗೆ, ಸಿರಿವಂತಿಕೆಗೆ, ತಕ್ಕಂತೆ ಈ ದೇವರಿಗೆ ನಡೆದುಕೊಂಡರು. ಉತ್ಸವ, ಪೂಜೆ, ನೈವೇದ್ಯ, ಅಲಂಕಾರಗಳಿಗೆ ಶಾಶ್ವತ ಸ್ಥಿರ ಆದಾಯ ಮೂಲಗಳನ್ನು ಒದಗಿಸಿದರು. ಈ ಒಂದು ದಾನಗಳ, ಕಾಣಿಕೆಗಳ, ಮುಡಿಪು, ಹರಕೆಗಳ, ಆದಾಯದಿಂದ ಆಲಯದ ಪೂಜೆ ನೈವೇದ್ಯ, ಉತ್ಸವಗಳನ್ನು ವೈಭವದಿಂದ ನಡೆಯುವಂತೆ ನೋಡಿಕೊಂಡವರು ಆಲಯದ ವ್ಯವಹಾರ ನಿರ್ಣಯ ಮಾಡುವ ಸ್ಥಳೀಯರು. ಮೊದಲಿಗೆ ಕೆಲವು ಮಠಾಪತ್ಯ ಮಾಡುವ ಮಂದಿ, ತಿರುಚಾನೂರು ಗ್ರಾಮ ಸಭೆಯವರು ಈ ಕೆಲಸವನ್ನು ನೋಡುತ್ತಿದ್ದರೆ, ನಂತರದ ಕಾಲದಲ್ಲಿ ಸ್ಥಾನತ್ತಾರರು - ಇವರು ಮೊದಲಿಗೆ ಕಾರ್ಯನಿರ್ವಾಹಕರು ಮಾತ್ರವೇ ಆಗಿದ್ದರೂ ನಂತರದ ಕಾಲದಲ್ಲಿ ಧರ್ಮದರ್ಶಿಗಳೂ ಆದರು. ತಿರುಮಲೆಯ ಸ್ಥಳ ವಂದಿಗರು, ತಿರುಪತಿಯ ಶ್ರೀ ವೈಷ್ಣವರು, ಆಲಯದ ಅರ್ಚಕರು ಜೀಯಂಗಾರರು ಈ ಸ್ಥಾನತ್ತಾರರ ಪಾತ್ರವನ್ನು ವಂಶಪಾರಂಪರ್ಯವಾಗಿ ನಿರ್ವಹಿಸುತ್ತ ಬಂದರು.

ವಿಜಯನಗರದ ಕಾಲದಲ್ಲಿ ಆಲಯ ಅತಿ ಉಚ್ಛ್ರಾಯ ಸ್ಥಿತಿ ತಲುಪಿದಂತೆಯೇ ಅದರ ಆಡಳಿತವೂ ವ್ಯಾಪಕವಾಯಿತು. ಸುಮಾರು 150ಕ್ಕೂ ಹೆಚ್ಚಿನ ಹಳ್ಳಿಗಳು ಆಲಯದ ಆದಾಯ ಮೂಲವಾದವು. ಇದಕ್ಕೆ ತಕ್ಕಂತೆ, ದೀಪಕ್ಕೆಂದು ದಾನ ಮಾಡಿದ ಗೋಸಂಪತ್ತು, ಪೂಜಾದಿಗಳ ನಿರ್ವಹಣೆಗೆಂದು ನಿಡಿದ ಪುದುವಟ್ಟು ಧನಸಂಪತ್ತು, ಸ್ವಾಮಿಯ, ಉತ್ಸವಮೂರ್ತಿಗಳ ಅಲಂಕಾರಕ್ಕೆಂದು ನೀಡಿದ ಆಭರಣರಾಶಿ ಆಲಯದ ಆಡಳಿತದ - ಧರ್ಮದರ್ಶಿಗಳ ಜವಾಬುದಾರಿಯನ್ನೂ ಕೆಲಸವನ್ನೂ ಹೆಚ್ಚಿಸಿದ್ದೇ ಅಲ್ಲದೆ ವ್ಯಾಪಕವಾದ ಮೂಲಭೂತ ಸೌಕರ್ಯ ಸೌಲಭ್ಯಗಳ ವ್ಯವಸ್ಥೆಯನ್ನು ಹೊಂದ ಬೇಕಾದ ಪರಿಸ್ಥಿತಿಯನ್ನುಂಟಾಗಿಸಿತು.

## ಧರ್ಮಕರ್ತರ ಮಂಡಲಿ - ಅಮೃತೋತ್ಸವ

ರಕ್ಕಸತಂಗಡಿ ಯುದ್ಧಾನಂತರ ವಿಜಯನಗರದ ಕೇಂದ್ರ ಪೆನುಗೊಂಡೆಯಾಗಿ, ಆ ನಂತರ ಚಂದ್ರಗಿರಿಯಾಗಿ ರಾಜ್ಯ ಜೀರ್ಣವಾಗುತ್ತಿದ್ದಂತೆಯೇ ತಿರುಮಲೆಯ ಆಲಯದ ವೈಭವವೂ ಕಳೆಗುಂದುತ್ತ, ಇತರ ಪ್ರದೇಶಗಳೊಡನೆಯೇ ಆರ್ಕಾಟು ನವಾಬರ ಸ್ವತ್ತಾಯಿತು. 1757ರಲ್ಲಿ ಆರ್ಕಾಟು ನವಾಬಗಿರಿಯನ್ನು ಪಡೆದ ಮಹಮದಾಲಿಯ ನಂತರ 1801ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಕೈ ಸೇರಿತು. ಆ ಮೊದಲೂ ಸಹ ತಿರುಮಲೆಯ ಅಧಿಕ ಆದಾಯವು ಆಂಗ್ಲರ ಕೈಸೇರುತ್ತಿದ್ದದ್ದು ಸ್ಪಷ್ಟವೇ ಆಗಿದ್ದಿತು. ಈಗ ನೇರವಾಗಿ ಆಲಯದ ಆಡಳಿತ, ರಕ್ಷಣೆ, ಎಲ್ಲವೂ ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರ ಪರಿಧಿಗೆ ಬಂದು, ವ್ಯಾಪಾರ ಸಂಸ್ಥೆಯಾಗಿ ಬಂದ ಒಂದು ಕಂಪನಿ - ಕುಂಪಣಿ ಸರ್ಕಾರವಾಗಿ - ಪರಧರ್ಮ ರಕ್ಷಣೆಗೆ ಮುಂದಾದದ್ದು ತಾಯ್ನಾಡಿನಲ್ಲಿ ವಿಮರ್ಶೆಗೆ ಒಳಗಾಗಿ ಅಲ್ಲಿನ ಪಾರ್ಲಿಮೆಂಟಿನಲ್ಲಿಯೂ ಟೀಕೆಗೆ ಗುರಿಯಾದಾಗ, 1858ರ ಧರ್ಮ ವಿಷಯದಲ್ಲಿ ಕೈಹಾಕದಿರುವ ಮಹಾರಾಣಿಯ ಪ್ರಸಿದ್ಧ ಘೋಷಣೆಗೆ 15 ವರ್ಷ ಮೊದಲೇ ಈಸ್ಟ್ ಇಂಡಿಯಾ ಕಂಪನಿ ತಿರುಮಲೆಯ ಆಲಯವನ್ನು ಮಹಂತರಿಗೆ ಒಪ್ಪಿಸಿ ಕೈತೊಳೆದುಕೊಂಡಿತು. 1843ರಲ್ಲಿ, ಹಲವಾರು ಕಡೆ ವಿಚಾರಿಸಿ ಕಡೆಗೆ ಮಹಂತರು ಧಾರ್ಮಿಕವಾಗಿ ಪಂಥೀಯ ವಿಧಾನದಿಂದ ಮೇಲೇರಿದವರೆಂದು ಅವರಿಗೆ ಒಪ್ಪಿಸಿದರು. ಮಹಂತರ ಮಠದ ಸೇವಾದಾಸರು ಮೊದಲನೆಯ ವಿಚಾರಣ ಕರ್ತರಾಗಿ ತಿರುಮಲೆಯ ಆಲಯವು ಹಾಗೂ ಆದಕ್ಕೆ ಸೇರಿದ ತಿರುಪತಿಯ ಆಲಯಗಳಲ್ಲಿ ಹಲವನ್ನೂ, ತಿರುಚಾನೂರು ಆಲಯವನ್ನೂ ನೋಡಿಕೊಳ್ಳತೊಡಗಿದರು. ಅಲ್ಲಿಂದ ತೊಂಬತ್ತು ವರ್ಷಗಳ ಕಾಲ - 1933ರವರೆಗೆ - ಎಂದರೆ ಮದರಾಸಿನ ಆಂಗ್ಲ ಸರ್ಕಾರ ತಿ.ತಿ. ದೇವಸ್ಥಾನಗಳಆಕ್ಟ್ ಅನ್ನು ಅಂಗೀಕರಿಸಿ ಮಹಂತರ ಆಡಳಿತವನ್ನು ಅಂತ್ಯಗೊಳಿಸಿ ಸ್ಥಳೀಯ ತಹಸೀಲ್ದಾರ (ಕಮೀಷನರ್)ರು ಒಂದು ರೈತುವಾರಿ ಸಲಹಾ ಸಂಘ ಹಾಗೂ ಒಂದು ಧಾರ್ಮಿಕ ಸಲಹಾ ಸಂಘದ ನೆರವಿನಿಂದ ಆಡಳಿತ ನಡೆಸುವಂತೆ ಆಗುವವರೆಗೆ, ಆರು ಮಂದಿ ಮಹಂತರು ತಿರುಮಲೆಯ ಆಲಯವನ್ನೂ ಅದಕ್ಕೆ ಸೇರಿದ ಇತರ ಆಲಯಗಳನ್ನು ನಡೆಸಿಕೊಂಡು ಬಂದರು.

ಮಹಂತರ ಈ ತೊಂಬತ್ತು ವರ್ಷಗಳಲ್ಲಿ ಆಲಯವೂ ಪ್ರಗತಿ ಹೊಂದಿತು. ಆಧುನಿಕ ಯಂತ್ರ ಪರಿಕರಗಳು - ಕೊಳವೆಯ ಮೂಲಕ ನೀರು ಹಾಯಿಸುವ ಸೌಲಭ್ಯ, ದೂರವಾಣಿ ಸೌಲಭ್ಯ, ವಿದ್ಯುತ್ ಸೌಲಭ್ಯಗಳು ಆಲಯಕ್ಕೆ ದೊರೆಯುವಂತೆ ಆಯಿತು. ಮುದ್ರಣಾಲಯದ ಸೌಲಭ್ಯವುಂಟಾಗಿ 19ನೆಯ ಶತಮಾನದ ಕೊನೆಯಲ್ಲಿಯೇ ವೆಂಕಟಾಚಲ ಮಹಾತ್ಮೆಯ ಪ್ರಕಟಣೆಯಾಯಿತು. 20ನೇ ಶತಮಾನದ ಆರಂಭದ ಪಾದದ ಕೊನೆಯ ಹೊತ್ತಿಗೆ ಸಾಧುಸುಬ್ರಹ್ಮಣ್ಯಶಾಸ್ತ್ರಿ ದೇವಸ್ಥಾನದ ಶಾಸನಗಳನ್ನೆಲ್ಲ ಓದಿ ಒಂದು ವರದಿಯನ್ನೂ ಅದರ ಭಾಗಗಳನ್ನೂ ಸಿದ್ಧಪಡಿಸಿದ್ದರು. ತಾಳ್ಳಪಾಕದ ಅರೆಯಲ್ಲಿದ್ದ ಅನ್ನಮಾಚಾರ್ಯರ, ಪೆದತಿರುಮಲಾಚಾರ್ಯರ, ಚಿನ್ನ ತಿರುಮಲಾಚಾರ್ಯರ ತಾಮ್ರಪತ್ರಗಳನ್ನು ಹೊರತೆಗೆದು ಕೆಲವೊಂದು ಕೃತಿಗಳನ್ನು ಮುದ್ರಣಕ್ಕೆ ಸಿದ್ಧಪಡಿಸಲಾಗಿತ್ತು. ಅದಕ್ಕೂ ಮೊದಲು ಮದರಾಸಿನ ಖ್ಯಾತ ಇತಿಹಾಸಕಾರ ಡಾ॥ ಎಸ್. ಕೃಷ್ಣಸ್ವಾಮಿ ಅಯ್ಯಂಗಾರರು ತಿರುಮಲೆ ಆಲಯದ ಇತಿಹಾಸವನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಿದ್ದರು. ತಿರುಪತಿಯ ಮೊದಲಸತ್ರವೂ ನಿರ್ಮಾಣವಾಗಿ ಯಾತ್ರಿಕರ ಅನುಕೂಲಗಳ ಬಗ್ಗೆ ಚಿಂತಿಸಲಾಗುತ್ತಿತ್ತು. ಮುಖ್ಯವಾಗಿ ಹಿಂದೆಂದೂ ಇಲ್ಲದಂತೆ ತಿರುಮಲೆಯ ಆಲಯ ವಿದ್ಯೆಗೆ ಪ್ರೋತ್ಸಾಹ ನೀಡುವ ತಾಣವಾಗಿ ಸಂಸ್ಕೃತಪಾಠಶಾಲೆಯೂ, ಪ್ರೌಢಶಾಲೆಯೂ (ವೇಲೂರಿನಲ್ಲಿಯೂ ಒಂದು ಶಾಲೆ ಆರಂಭವಾಯಿತು) ತಿರುಪತಿಯಲ್ಲಿ ಮಹಂತರ ಕಾಲದಲ್ಲಿಯೇ ಆರಂಭವಾಯಿತು. ಆದರೆ ಬೆಳೆಯುತ್ತಿದ್ದ ಯಾತ್ರಿಕ ಅಗತ್ಯಗಳಿಗೆ ತಕ್ಕ ತೀವ್ರತರದ ಸ್ಪಂದನವಿಲ್ಲದೆ ಹೋದದ್ದೇ ಅಲ್ಲದೆ ಕೋರ್ಟು ಕಚೇರಿ ವ್ಯವಹಾರ - ಆದಕ್ಕಾಗಿ ಆಲಯದ ಹಣದ ಅನಗತ್ಯ ವೆಚ್ಚಗಳಿಂದಾಗಿ ಆಂಗ್ಲ ಪ್ರಭುತ್ವದ ಹಸ್ತಕ್ಷೇಪ ಅನಿವಾರ್ಯವಾಗಿ

ಹಲವಾರು ರೀತಿಯ ತರ್ಜನ ಭರ್ಜನೆಗಳು, ವಾದ ವಿವಾದಗಳೂ ಉಂಟಾಗಿ ತರುವಾಯ ಒಂದು ಸನ್ನದು ಮೂಲಕ ಮಹಂತರು ನೋಡಿಕೊಳ್ಳುತ್ತಿದ್ದ ಆಲಯಾಡಳಿತವನ್ನು ಕಮೀಷನರಿಗೆ ವರ್ಗಾಯಿಸಲಾಯಿತು.

ತಿ.ತಿ. ದೇವಸ್ಥಾನಗಳ ಅಧಿನಿಯಮ ಜಾರಿಗೆ ಬಂದ ಮೇಲೆ ಆಲಯಾಡಳಿತ ಸುಧಾರಿಸಿದ್ದೇ ಅಲ್ಲದೆ ಆಲಯದ ಸಾಮಾಜಿಕ ಧಾರ್ಮಿಕ ಸೇವಾಕ್ಷೇತ್ರಗಳೂ ವಿಸ್ತಾರವಾದವು. 1944ರಲ್ಲಿ ಬೆಟ್ಟಕ್ಕೆ ವಾಹನ ಮಾರ್ಗವೇರ್ಪಟ್ಟು ಮದರಾಸಿನ ಗವರ್ನರ್ ಆರ್ಥರ್ ಹೋಪ್ ಮೊದಲ ಬಸ್‌ನಲ್ಲಿ ಪ್ರಯಾಣ ಮಾಡಿದರು. ಅಂದಿನ ಕಮೀಷನರ್ (ನಂತರ ಕಾರ್ಯನಿರ್ವಹಣಾಧಿಕಾರಿ, ತರುವಾಯ ಧರ್ಮಕರ್ತರ ಮಂಡಳಿಯ ಅಧ್ಯಕ್ಷರು) ಸಿ. ಅನ್ನಾರಾಯರು, ಮದರಾಸಿನ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರು ಡಾ॥ ಕೋರಾಡ ರಾಮಕೃಷ್ಣಯ್ಯ, ಮುಂತಾದವರೆಲ್ಲ ಈ ಮೊದಲ ಬಸ್‌ನಲ್ಲಿ ಪ್ರಯಾಣ ಮಾಡಿದವರು. ಆರ್ಥರ್ ಹೋಪ್ ಬೆಟ್ಟವನ್ನು ಕಡಿದು ಮಾಡಿದ ರಸ್ತೆಯಲ್ಲಿ ಬಸ್ ಹೊರಟರೆ ಅಪಾಯವಾಗದು ಎಂಬುದನ್ನು ಸಿದ್ಧಪಡಿಸಿ ತೋರಿಸಲೆಂದೇ ಹತ್ತಿದವರು. ಅದಕ್ಕೂ ಮೊದಲು ವೆಂಕಟೇಶ್ವರ ಪ್ರಾಚ್ಯ ಕಳಾಶಾಲೆಯೂ ತತ್ಸಂಬಂಧಿ ಸಂಶೋಧನ ಪ್ರಕಟನ ಕೇಂದ್ರವೂ ಆರಂಭವಾಗಿದ್ದಿತು. ಅನಾಥಮಕ್ಕಳಿಗಾಗಿ ಎಸ್.ವಿ. ಬಾಲಮಂದಿರ, ಇಂದೂ ನಡೆಯುತ್ತಿರುವ ಒಂದು ಶುಭ್ರವಾದ ಉದ್ದೇಶದ ಸಂಸ್ಥೆಯಾಗಿದೆ. ಸ್ವಾತಂತ್ರ್ಯ ಬಂದನಂತರ ಧರ್ಮಕರ್ತರ ಮಂಡಳಿಯ ಸಂವಿಧಾನಕ್ಕೆ ತಿದ್ದುಪಡಿ ತಂದು 1951ರಲ್ಲಿ ಕಾರ್ಯ ನಿರ್ವಹಣಾಧಿಕಾರಿ ಯೊಬ್ಬರು ಧರ್ಮಕರ್ತರ ಮಂಡಳಿಯ ನೇತೃತ್ವದಲ್ಲಿ ಕೆಲಸ ಮಾಡುವ ವ್ಯವಸ್ಥೆಯಾಯಿತು. ಮತ್ತೊಮ್ಮೆ 1978ರಲ್ಲಿ ತಿದ್ದುಪಡಿಯಾಗಿ ಒಂದು ಕಾರ್ಯನಿರ್ವಾಹಕ ಮಂಡಳಿಯು - ಧರ್ಮಕರ್ತರ ಮಂಡಳಿಯ ಒಳಗೇ ನಿರ್ಮಾಣವಾಯಿತು. ಇದೂ ಹೋಗಿ ಈಗ ಒಬ್ಬ ಐ.ಎ.ಎಸ್. ಅಧಿಕಾರಿ ಕಾರ್ಯ ನಿರ್ವಹಣಾಧಿಕಾರಿಯಾಗಿ ಧರ್ಮಕರ್ತರ ಮಂಡಳಿಯ ನೇತೃತ್ವದಲ್ಲಿ ಇನ್ನೊಬ್ಬ ಐ.ಎ.ಎಸ್. ಅಧಿಕಾರಿ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿಯಾಗಿ ನೆರವು ನೀಡುವ ವ್ಯವಸ್ಥೆಯಾಗಿ ಮುಂದುವರೆದಿದೆ.

1984ರಲ್ಲಿ ಸುವರ್ಣ ಮಹೋತ್ಸವವನ್ನು ಆಂಧ್ರಪ್ರದೇಶದ ಮುಖ್ಯಮಂತ್ರಿ ದಿವಂಗತ ಎನ್.ಟಿ. ರಾಮರಾಯರ ನೇತೃತ್ವದಲ್ಲಿ ಘನವಾಗಿ ಆಚರಿಸಲಾಯಿತು. 2008ರಲ್ಲಿ ಎಪ್ಪತ್ತೈದು ವರ್ಷಗಳ ಅಮೃತೋತ್ಸವವನ್ನು ಆಚರಿಸಲಾಯಿತು. ಈ ನಡುವೆ ಧರ್ಮಕರ್ತರ ಮಂಡಳಿಯ ಸಾಧನೆಗಳು ಹಲವಾರು. ಸಂಗ್ರಹವಾಗಿ ನೆನಪಿಗೆ ಕೂಡಲೇ ಬರುವಷ್ಟನ್ನು ಮಾತ್ರವೇ ಪಟ್ಟಿ ಮಾಡುವುದಾದರೆ ಅದನ್ನು ಹೀಗೆ ಹೇಳಬಹುದು-

ಮಹಂತರ ಕಾಲದಲ್ಲಿ ತಿರುಪತಿಯ ಮೊದಲ ಸತ್ರ ನಿರ್ಮಾಣವಾಗಿ ನಂತರ ಮಂಡಲಿಯ ಕಾಲದಲ್ಲಿ ಇಲ್ಲಿನ ವಿಸ್ತರಣೆ ನಡೆದು, ತಿರುಪತಿಯ ಎರಡನೆ ಮೂರನೇ ಸತ್ರಗಳ ನಿರ್ಮಾಣವಾಯಿತು. ಜೊತೆಗೇ ಎಸ್.ವಿ. ಅತಿಥಿಗೃಹ, ಎಸ್.ಪಿ. ಅತಿಥಿಗೃಹ, ಅಲಿಪಿರಿಯ ಅತಿಥಿಗೃಹಗಳುಂಟಾದವು. ತಿರುಮಲೆಯಲ್ಲಿ ಮೊದಲಿಗೆ 1938ರಲ್ಲಿ ಆಲಯದ ಎದುರಿಗಿನ ಸಾವಿರಕಾಲಿನ ಮಂಟಪ ವನ್ನು ಕೋಣೆಗಳನ್ನಾಗಿ ಪರಿವರ್ತಿಸಿ ಯಾತ್ರಿಕರಿಗೆ ವಸತಿ ಏರ್ಪಾಡು ಮಾಡಲಾಯಿತು. ನಂತರ ಮೊದಲನೆ ಸತ್ರ (ಸುದರ್ಶನ) ಎರಡನೆಯ ಸತ್ರ ಮೂರನೆಯ ಸತ್ರಗಳ ನಿರ್ಮಾಣವಾದವು. ಅದರಂತೆಯೇ ಶಂಕು ಮಿಟ್ಟದ ಕಡೆಯ ಕಾಟೇಜುಗಳು, ಮತ್ತಿತರ ಕಾಟೇಜುಗಳು, ಸಪ್ತಗಿರಿ ಸತ್ರಗಳೇ ಮುಂತಾದವು ತಿರುಮಲೆಯಲ್ಲಿ ಉಂಟಾದರೆ ತಿರುಪತಿಯಲ್ಲಿ ಆಧುನಿಕವಾಗಿ 'ಶ್ರೀನಿವಾಸಂ' ವಸತಿ ಸಮುದಾಯ ಏರ್ಪಾಡಾಯಿತು. ಬೇರೆ ಬೇರೆ ಕಡೆಗಳಲ್ಲಿಯೂ ತಿ.ತಿ.ದೇ. ಸತ್ರಗಳು, ಶ್ರೀಶೈಲ, ರಾಮೇಶ್ವರ, ಮುಂತಾದ ಕಡೆಗಳಲ್ಲಿ ಉಂಟಾಗಿ ಅಲ್ಲಲ್ಲಿನ ಆಲಯಗಳ ಯಾತ್ರಿಕರಿಗೆ ಸೌಲಭ್ಯ ಸಿಗುವಂತಾಯಿತು. ಜೊತೆಗೆ ತಿ.ತಿ.ದೇ. ಕಲ್ಯಾಣ ಮಂಟಪಗಳೂ ಉಂಟಾದವು - ಉಂಟಾಗುತ್ತಿವೆ. ತಿರುಪತಿಯಲ್ಲಿ ಶ್ರೀ ವೆಂಕಟೇಶ್ವರ ರಾಮನಾರಾಯಣ ರೂಯಾ ಆಸ್ಪತ್ರೆಯ ನಿರ್ಮಾಣದಲ್ಲಿ ಸಿಂಹ ಪಾಲು ತಿ.ತಿ.ದೇ.ಗಳದ್ದು. ಅದರಂತೆಯೇ ಸ್ವಿಮ್ಸ್ ಹಾಗೂ ಬರ್ಡ್ ಆಸ್ಪತ್ರೆಗಳು, ತಿರುಮಲೆಯ ಅಶ್ವಿನಿ ಆಸ್ಪತ್ರೆ ತಿರುಪತಿಯ ಕೇಂದ್ರ ಆಸ್ಪತ್ರೆ, ಆಯುರ್ವೇದ ಆಸ್ಪತ್ರೆ - ಉಂತಾದ ಆಸ್ಪತ್ರೆಗಳ ನಿರ್ಮಾಣದಲ್ಲಿ ತಿ.ತಿ.ದೇ. ಮಹತ್ವದ ಪಾತ್ರ ನಿರ್ವಹಿಸಿದೆ. ಅದರಂತೆಯೇ

## ಧರ್ಮಕರ್ತರ ಮಂಡಲಿ - ಅಮೃತೋತ್ಸವ

ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯ ನಿರ್ಮಾಣ, ಶ್ರೀ ಪದ್ಮಾವತೀ ವಿಶ್ವವಿದ್ಯಾಲಯ ಸ್ಥಾಪನೆ ಹಲವು ಹನ್ನೊಂದು ಕಾಲೇಜುಗಳು, ಮೂಗಬಧಿರ ಶಿಕ್ಷಣಶಾಲೆ, ಶಿಲ್ಪಶಿಕ್ಷಣಶಾಲೆ, ಹೊಸದಾಗಿ ಮಕ್ಕಳಲ್ಲಿ ಕಿವುಡು ನಿವಾರಿಸುವ "ಶ್ರವಣಂ". ವೇದ ಪಾಠಶಾಲೆ, ಜೊತೆಗೆ ವೇದವಿಶ್ವವಿದ್ಯಾಲಯ - ಮುಂತಾದವುಗಳೆಲ್ಲ ತಿ.ತಿ.ದೇ. ಧರ್ಮಕರ್ತರ ಮಂಡಳಿಯ ದೂರಗಾಮಿ ಧೋರಣೆಯ ಫಲಗಳೇ ಹೌದು.

ತಿರುಮಲೆಯ ಅರಣ್ಯಾಚ್ಛಾದನೆಯನ್ನು ನಿತ್ಯ ಹರಿದ್ವರ್ಣಕ್ಕೆ ತಿರುಗಿಸಿದ ಖ್ಯಾತಿ ತಿ.ತಿ.ದೇ. ಧರ್ಮಕರ್ತರ ಮಂಡಳಿಗೇ ಸೇರಬೇಕು. ಇಲ್ಲಿನ ಹಸಿರನ್ನು ಹೊಳೆಯುವಂತೆ ಮಾಡಿದ್ದೇ ಅಲ್ಲದೆ ತಿರುಮಲೆಯ ಹೆಚ್ಚುತ್ತಿರುವ ಯಾತ್ರಾರ್ಥಿಗಳ ದಾಹಾರ್ತಿಯನ್ನು ತೀರಿಸಲು ಕಲ್ಯಾಣಿ ಡ್ಯಾಂ, ಗೋಗರ್ಭ ಡ್ಯಾಂ, ಪಾಪನಾಶನಂ ಡ್ಯಾಂಗಳ ನಿರ್ಮಾಣವೂ ತಿ.ತಿ.ದೇ.ಗಳಲ್ಲಿ ಸಂಗ್ರಹವಾದ ಯಾತ್ರಿಕರ ಕಾಣಿಕೆಯಿಂದಾದ ಅಣೆಕಟ್ಟೆಗಳೇ ಹೌದು. ಇದರಲ್ಲಿ ಪಸುಪುಧಾರಾ ಅಣೆಕಟ್ಟು ನಿರ್ಮಾಣದ ಹಂತದಲ್ಲಿರುವ ಮತ್ತೊಂದು ನೀರಿನ ಆಸರೆಯಾಗಿದೆ. 2001ರಲ್ಲಿ ಎಂಭತ್ತು ದಿನಗಳಲ್ಲಿ ಯುದ್ಧ ಪ್ರಾತಿಪದಿಕವಾಗಿ ತಿರುಮಲೆಯ ಬೆಟ್ಟಕ್ಕೆ ಕಲ್ಯಾಣಿ ಅಣೆಕಟ್ಟೆಯಿಂದ ನೀರನ್ನು ಏರಿಸುವ "ಉಲ್ಟಿ ಗಂಗಾ" ಯೋಜನೆ ಒಂದು ಹೇಳತಕ್ಕ ಅಭಿವೃದ್ಧಿಯ ಮಾತು. ಅಂದಿನ ಪ್ರಧಾನಿ ಅಟಲ ಬಿಹಾರಿ ವಾಜಪೇಯಿಯವರು ಕೊಳಾಯಿ ತಿರುಗಿಸಿ ನಲ್ಲಿಯ ಶುದ್ಧ ನೀರನ್ನು ಮೊದಲು ಕುಡಿದವರಾದರು.

ಪುಸ್ತಕರಂಗದ, ಕೀರ್ತನ ರಂಗದ ಮಾತುಗಳು ಹಲವನ್ನು ಗುರುತಿಸಬಹುದು. ಮಹಂತರ ಕಾಲದಲ್ಲಿ ಮದರಾಸಿನಲ್ಲಿ ಆರಂಭವಾದ ತಿ.ತಿ.ದೇ. ಮುದ್ರಣಾಲಯ 1942 ಯುದ್ಧ ಹೊತ್ತಿಗೆ ತಿರುಪತಿಗೆ ವರ್ಗಾಯಿಸಲ್ಪಟ್ಟಿತು. ಆ ಹೊತ್ತಿಗೆ ತಿ.ತಿ.ದೇ. ಶಾಸನಗಳು ಪ್ರಕಟವಾಗಿದ್ದರೂ ಹೆಚ್ಚಿನ ಪ್ರಕಟಣೆಯ ಕೆಲಸವಾಗದೆ ನಿಧಾನಗತಿಯಲ್ಲಿ ನಡೆದಿದ್ದ ಗ್ರಂಥ ಪ್ರಕಟಣೆ ವೇಗವನ್ನು ಪಡೆಯಿತು. ಅನ್ನಮಾಚಾರ್ಯರ ಕೃತಿಗಳು 1982-83ರವರೆಗೆ 31 ಸಂಪುಟಗಳಲ್ಲಿ ಪ್ರಕಟವಾದರೆ (ನಂತರ 29 ಸಂಪುಟಗಳಲ್ಲಿ ಪುನರ್ ಮುದ್ರಣವಾಗಿದೆ) ಭಾರತೀಯ ನಾಟ್ಯ ಶಾಸ್ತ್ರದ ವಿಶ್ವಕೋಶವಾದ ಭರತಕೋಶ 1951ರಲ್ಲಿ ಪ್ರಕಟವಾಯಿತು. (ಕೋಶಕಾರ-ಮಾನವಲ್ಲಿ ರಾಮಕೃಷ್ಣಕವಿ) ಈ ಪುಸ್ತಕ 2001ರಲ್ಲಿ ಪುನರ್ಮುದ್ರಣ ಆಗಿದೆ. ಹಲವಾರು ಭಾಷೆಯಲ್ಲಿ ಹಲವಾರು ರೀತಿಯಲ್ಲಿ ಭಗವದ್ಗೀತೆ ಪ್ರಕಟವಾಗಿವೆ. 1949ರಲ್ಲಿ ತಿ.ತಿ.ದೇ. ಬುಲೆಟಿನ್ ಪ್ರಕಟವಾಗಲು ಮೊದಲಾಯಿತು. ಇದು 1970ರಲ್ಲಿ ಸಪ್ತಗಿರಿಯಾಗಿ 1975ರಲ್ಲಿ ಐದು ಭಾಷೆಗಳಲ್ಲಿ ಬೇರೆ ಬೇರೆಯಾಗಿ ರೂಪುಗೊಂಡು ಈಗ 46ನೆಯ ಸಂಪುಟದಲ್ಲಿ ನಡೆಯುತ್ತಿದೆ. ಒಟ್ಟು ಈ 75 ವರ್ಷಗಳಲ್ಲಿ 750 (ಆ ಮೊದಲ 25 ವರ್ಷದಲ್ಲಿ 250 ಪುಸ್ತಕ ಎಂದರೆ ಒಟ್ಟು ಸಾವಿರ) ಪುಸ್ತಕಗಳು ಪ್ರಕಟವಾಗಿದೆಯೆಂದು ಧೈರ್ಯದಿಂದ ಹೇಳಬಹುದು.) ಕಳೆದ 25 ವರ್ಷಗಳಲ್ಲಿ ಪುಸ್ತಕ ಪ್ರಕಟನಕಾರ್ಯ ಅತಿವೇಗವನ್ನು ಪಡೆದು ಸಾಗುತ್ತಿದೆ. ತೆಲುಗಿನ ಮಹಾಭಾರತ ಅರ್ಥ ತಾತ್ಪರ್ಯ ಸಹಿತ ಪ್ರಕಟವಾಗಿದೆ. ತೆಲುಗು ಭಾಗವತ ತಾತ್ಪರ್ಯ ಸಹಿತ ಪ್ರಕಟವಾಗಿದೆ. ವೇದಗಳ ಅನುವಾದ ಪ್ರಕಟನಾಕಾರ್ಯಗಳು ನಡೆದಿವೆ. ಈಗ ನಡೆದಿರುವ ಧರ್ಮಕರ್ತರ ಮಂಡಲಿ ಪುಸ್ತಕ ವನ್ನೂ ಪ್ರಸಾದವಾಗಿ ನೀಡುವ ಕ್ರಮ ಕೈಗೆತ್ತಿಕೊಂಡಿದೆ. ಧಾರ್ಮಿಕ ಸಾಹಿತ್ಯ ಪ್ರಸಾರ ದೃಷ್ಟಿಯಿಂದ ಕನ್ನಡದಲ್ಲಿ ದಾಸಸಾಹಿತ್ಯ ಪ್ರಾಜೆಕ್ಟ್, ತಮಿಳಿನಲ್ಲಿ ದಿವ್ಯಪ್ರಬಂಧ ಪ್ರಾಜೆಕ್ಟ್, ತೆಲುಗಿನಲ್ಲಿ ವೆಂಗಮಾಂಬ ಪ್ರಾಜೆಕ್ಟ್, ವೇಟೂರಿ ಪ್ರಭಾಕರಶಾಸ್ತ್ರಿ ಪ್ರಾಜೆಕ್ಟ್ ಮುಂತಾದ ಪ್ರಾಜೆಕ್ಟ್‌ಗಳನೇಕವು ಕೆಲಸ ಮಾಡುತ್ತಿವೆ. ಪುಸ್ತಕ ಪ್ರಕಟನೆ ಹೆಚ್ಚಾಗಲು ಒಂದು ಕಾರಣ ಹಿಂದೂ ಧರ್ಮರಕ್ಷಣ ಸಂಸ್ಥೆಯ ಕಲಾಪಗಳು ಹೆಚ್ಚಾಗಿರುವಿಕೆ. ಕಂಚಿಯ ಹಿರಿಯ ಶ್ರೀ ಶ್ರೀ ಚಂದ್ರಶೇಖರ ಸರಸ್ವತೀಸ್ವಾಮಿಜೀ ಅವರಿಂದ ಆರಂಭವಾದ ಈ ಸಂಸ್ಥೆ ಈಗ ತನ್ನ ಕಾರ್ಯಕ್ರಮಗಳನ್ನು ಹಿಗ್ಗಿಸಿಕೊಂಡು ನಡೆದಿದೆ. ತಿ.ತಿ.ದೇ. ಧರ್ಮಕರ್ತರ ಮಂಡಳಿಯ ವತಿಯಿಂದ ಈ ಬಗ್ಗೆ ಮಾರ್ಗದರ್ಶನಕ್ಕಾಗಿ ಈಗಾಗಲೇ ಎರಡು ಬಾರಿ ಸಾಧು ಸಮ್ಮೇಳನಗಳು

ನಡೆದಿವೆ. ಮೊದಲನೆಯ ಬಾರಿ ನಡೆದ ಸಮ್ಮೇಳನದಲ್ಲಿ ಧರ್ಮಾಚಾರ್ಯರು ನೀಡಿದ ಸಲಹೆಗಳಂತೆ ದಲಿತ ಗೋವಿಂದಂ (ದಲಿತರ ಕೇರಿಗೆ ಸ್ವಾಮಿಯ ಉತ್ಸವಮೂರ್ತಿಗಳನ್ನು ಕರೆದೊಯ್ದು ಅಲ್ಲಿ ಪೂಜೆ, ಆರೋಗಣೆ, ನಿದ್ದೆ ಮಾಡುವುದು) ಮತ್ಸ್ಯಗೋವಿಂದಂ (ಮತ್ಸ್ಯಕಾರರಿಗೆ ಪೂಜಾ ವಿಧಾನಗಳನ್ನು ತಿಳಿಸಿಕೊಡುವುದು) ಗಿರಿಜನ ಗೋವಿಂದಂ (ಗಿರಿಜನರಿಗೆ ಪೂಜಾ ರೀತಿಯ ತರಬೇತಿ, ಪೂಜಾಪರಿಕರಗಳ ನೀಡಿಕೆ) ಗಳನ್ನು ನಡೆಸುತ್ತಿರುವುದೇ ಅಲ್ಲದೆ, ವಂದೇ ಗೋಮಾತರಂ (ಗೋಸಂರಕ್ಷಣ ಸ್ಪರ್ಧೆ) ವಿಜ್ಞಾನ ಹಾಗೂ ಆಧ್ಯಾತ್ಮಿಕ ಅನ್ವೇಷಣ - ಧರ್ಮ - ವಿಜ್ಞಾನದ ಹೊಂದಿಕೆ ಬಗ್ಗೆ ಸಮ್ಮೇಳನಗಳನ್ನು ನಡೆಸಲಾಗಿದೆ. ಆಂಧ್ರದ ಮುಖ್ಯಮಂತ್ರಿ ಡಾ॥ ವೈ.ಎಸ್. ರಾಜಶೇಖರರೆಡ್ಡಿ ಅವರ ಸೂಚನೆಯಂತೆ ಹೈಂದವವಿವಾಹ ಪದ್ಧತಿಯನ್ನು ಸದೃಢಗೊಳಿಸಲು ಕಲ್ಯಾಣಮಸ್ತು (ಸಾಮೂಹಿಕ ವಿವಾಹ ಕಾರ್ಯಕ್ರಮ) ಕಾರ್ಯಕ್ರಮಗಳನ್ನು ಮೂರು ಬಾರಿ ನಡೆಸಲಾಗಿದೆ. (ಈ ಮೂರು ಕಾರ್ಯಕ್ರಮಗಳಲ್ಲಿ ಸುಮಾರು 20 ಸಾವಿರ ಜೋಡಿಗಳ ವಿವಾಹಗಳಾಗಿವೆ.) ಇವುಗಳ ಜೊತೆಗೇ ತಿರುಮಲೆಯಲ್ಲಿ ದಿನವೂ ನಡೆಯುವ ಆದರೆ ಕೆಲವೇ ಮಂದಿಗೆ ಭಾಗವಹಿಸಲು ಅವಕಾಶವಾಗುವ ಶ್ರೀನಿವಾಸ ಕಲ್ಯಾಣ ಕಾರ್ಯಕ್ರಮ ವನ್ನು ಬೇರೆ ಬೇರೆ ಊರುಗಳಲ್ಲಿ ಲಕ್ಷಾಂತರ ಜನ ಭಾಗವಹಿಸುವಂತೆ ನಡೆಸಲಾಗುತ್ತಿದೆ. ಅಮೃತೋತ್ಸವದ ನಂತರ "ಶ್ರೀನಿವಾಸ ಕಲ್ಯಾಣ" ಯೋಜನೆಯನ್ನು ಒಬ್ಬ ಪ್ರತ್ಯೇಕಾಧಿಕಾರಿಗೆ ಒಪ್ಪಿಸಿ (ಡಾ॥ ಕೋರಾಡ ರಾಮಕೃಷ್ಣ) ಎರಡ ವರ್ಷ ಕಾಲದಲ್ಲಿ (2011--13) ಸರಿಸುಮಾರು 250ಕ್ಕೂ ಹೆಚ್ಚಿದ ಸ್ಥಳಗಳಲ್ಲಿ ಸ್ವಾಮಿಯ ಕಲ್ಯಾಣವನ್ನು ನಡೆಸಲಾಗಿದೆ. ಭಾರತದಲ್ಲಿಯೇ ಅಲ್ಲದೆ ಅಮೆರಿಕಾ, ಕೆನಡಾ, ಇಂಗ್ಲೆಂಡ್‌ಗಳಲ್ಲಿಯೂ ಶ್ರೀನಿವಾಸ ಕಲ್ಯಾಣಗಳು ನಡೆದಿವೆ.

ಒಂದು ಮುಖ್ಯ ಅಂಶವೆಂದರೆ ಎಸ್.ವಿ. ಭಕ್ತಿ ಚಾನಲ್, ಭಕ್ತಿಯನ್ನು ಹರಡಲು ಕೀರ್ತನೆಗಳ ಎಲ್.ಪಿ. ರಿಕಾರ್ಡ್‌ಗಳು, ಕ್ಯಾಸೆಟ್‌ಗಳು ಆಡಿಯೋ, ವೀಡಿಯೋ ಸಿ.ಡಿ.ಗಳು ಹೊರತಂದಂತೆಯೇ ಈ ಧರ್ಮಕರ್ತರ ಮಂಡಲಿ ಎಸ್.ವಿ. ಭಕ್ತಿ ಚಾನಲ್ ಅನ್ನು ಆರಂಭಿಸಿದೆ. ಇದರಿಂದಾಗಿ ಸ್ವಾಮಿಯ ಸೇವೆ ಉತ್ಸವಗಳನ್ನು ಹತ್ತಿರದಿಂದ ವಿವರವಾಗಿ ನೋಡುವ ಅವಕಾಶವನ್ನು ಕಲ್ಪಿಸಲಾಗಿದೆ.

ತಿರುಮಲೆಯ ಯಾತ್ರಿಕರಿಗೆ ವಸತಿ ಸೌಕರ್ಯ ಕಾಲದಿಂದ ಕಾಲಕ್ಕೆ ಹೆಚ್ಚುತ್ತಿದ್ದಂತೆಯೇ ಆಲಯ ಪರಿಸರದ ಬಯಲ ವಿಸ್ತಾರವೂ ಹೆಚ್ಚುಗೊಳಿಸಿ ಯಾತ್ರಿಕರು ಕುಳಿತು ಉತ್ಸವಗಳನ್ನು ನೋಡಲನುಕೂಲವಾಗುವಂತೆ ಮೆಟ್ಟಿಲ ಅಟ್ಟಣಿಗೆಗಳನ್ನು ಸಿದ್ಧಪಡಿಸಲಾಗುತ್ತಿದೆ. ತಿರುಮಲೆಯ ಮೆಟ್ಟಿಲ ಹಾದಿಯನ್ನು ಮತ್ತಷ್ಟು ಅಭಿವೃದ್ಧಿಗೊಳಿಸಿದ್ದ ಚಂದ್ರಗಿರಿ, ಶ್ರೀನಿವಾಸ ಮಂಗಾಪುರಗಳ ಕಡೆಯ ಶ್ರೀವಾರಿ ಮೆಟ್ಟು ಮೆಟ್ಟಿಲ ಹಾದಿಯನ್ನು ಬಲಗೊಳಿಸಿ ಸೌಲಭ್ಯಕರವನ್ನಾಗಿಸಲಾಗಿದೆ.

ಯಾತ್ರಿಕರ ಭೋಜನ ಸೌಕರ್ಯವನ್ನು ನೋಡಲು ಅನ್ನದಾನ ಯೋಜನೆಯನ್ನು ಆರಂಭಿಸಿದ್ದು, ಇದರ ವ್ಯಾಪ್ತಿಯನ್ನು ದಿನೇ ದಿನೇ ಹೆಚ್ಚಿಸಲಾಗುತ್ತಿದೆ. ಯಾತ್ರಿಕರ ಕಾಯುವ ಕೋಣೆಗಳಿಗೂ ಆಹಾರದ ಪೊಟ್ಟಣ ಉಚಿತವಾಗಿ ಸರಬರಾಜಾಗುತ್ತಿದೆ. ಮುಡಿಕೊಡುವ ಹರಕೆಯ ಕಾರ್ಯವನ್ನು ಉಚಿತ ಮಾಡಲಾಗಿದೆ.

ಧರ್ಮಕರ್ತರ ಮಂಡಲಿಯ ನೇತೃತ್ವದಲ್ಲಿ 21ನೆಯ ಶತಮಾನದಲ್ಲಿ ಯಾತ್ರಿಕ ಸ್ನೇಹಿ ಪರಿವರ್ತನೆಗಳಲ್ಲಿ ಇವು ಕೆಲವು ಮಾತ್ರವೇ ಎಂದು ಹೇಳಲುಂಟು.

(2014 ಜನವರಿ)

❀❀

# ಶ್ರೀ ವೇಂಕಟೇಶ್ವರ ಸುಪ್ರಭಾತ

ಕೌಸಲ್ಯಾ ಸುಪ್ರಜಾ ರಾಮ ಪೂರ್ವಾ ಸಂಧ್ಯಾ ಪ್ರವರ್ತತೇ
ಉತ್ತಿಷ್ಠನರಶಾರ್ದೂಲ ಕರ್ತವ್ಯಂ ದೈವಮಾಹ್ನಿಕಮ್ -1-

ಉತ್ತಿಷ್ಠೋತ್ತಿಷ್ಠ ಗೋವಿಂದ! ಉತ್ತಿಷ್ಠ ಗರಡಧ್ವಜ !
ಉತಿಷ್ಠ ಕಮಲಾಕಾಂತ! ತ್ರೈಲೋಕ್ಯಂ ಮಂಗಳಂ ಕುರು! -2-

ಮಾತಸ್ಸಮಸ್ತ ಜಗತಾಂ ಮಧುಕೈಟಭಾರೇಃ ವಕ್ಷೋವಿಹಾರಿಣಿ ಮನೋಹರ ದಿವ್ಯ ಮೂರ್ತೇ
ಶ್ರೀ ಸ್ವಾಮಿನಿ ಶ್ರಿತಜನಪ್ರಿಯದಾನಶೀಲೇ ಶ್ರೀವೆಂಕಟೇಶದಯಿತೇ ತವ ಸುಪ್ರಭಾತಮ್ -3-

ತವ ಸುಪ್ರಭಾತ ಮರವಿಂದಲೋಚನೇ ಭವತು ಪ್ರಸನ್ನ ಮುಖಚಂದ್ರಮಂಡಲೇ
ವಿಧಿಶಂಕರೇಂದ್ರ ವನಿತಾಭಿರರ್ಚಿತೇ ವೃಷಶೈಲನಾಥ ದಯಿತೇ ದಯಾನಿಧೇ -4-

ಅತ್ರ್ಯಾದಿ ಸಪ್ತ ಋಷಯಸ್ಸಮುಪಾಸ್ಯ ಸಂಧ್ಯಾಂ ಆಕಾಶ ಸಿಂಧುಕಮಲಾನಿ ಮನೋಹರಾಣಿ
ಆದಾಯ ಪಾದಯುಗ ಮರ್ಚಯಿತುಂ ಪ್ರಪನ್ನಾಃ ಶೇಷಾದ್ರಿಶೇಖರವಿಭೋ! ತವ ಸುಪ್ರಭಾತಂ -5-

ಪಂಚನನಾಬ್ಜ ಭವ ಷಣ್ಮುಖ ವಾಸವಾದ್ಯಾಃ ತ್ರೈವಿಕ್ರಮಾದಿಚರಿತಂ ವಿಬುಧಾಃ ಸ್ತುವಂತಿ
ಭಾಷಾಪತಿಃ ಪಠತಿ ವಾಸರಶುದ್ಧಿಮಾರಾತ್ ಶೇಷಾದ್ರಿಶೇಖರವಿಭೋ! ತವ ಸುಪ್ರಭಾತಮ್ -6-

ಈಷತ್ಪ್ರ ಫುಲ್ಲ ಸರಸೀರುಹ ನಾರಿಕೇಳ ಪೂಗದ್ರುಮಾದಿ ಸುಮನೋಹರ ಪಾಲಿಕಾನಾಮ್
ಆವಾತಿ ಮಂದಮನಿಲಸ್ಸಹ ದಿವ್ಯ ಗಂಧೈಃ ಶೇಷಾದ್ರಿಶೇಖರವಿಭೋ ! ತವ ಸುಪ್ರಭಾತಮ್ -7-

ಉನ್ಮೀಲ ನೇತ್ರಯುಗಮುತ್ತಮಪಂಜರಸ್ಥಾಃ ಪಾತ್ರಾವಶಿಷ್ಟಕದಲೀಫಲ ಪಾಯಸಾನಿ
ಭುಕ್ತ್ವಾ ಸಲೀಲಮಥ ಕೇಳಿಶುಕಾಃ ಪಠನ್ತಿ ಶೇಷಾದ್ರಿಶೇಖರವಿಭೋ! ತವ ಸುಪ್ರಭಾತಂ -8-

ತಂತ್ರೀಪ್ರಕರ್ಷ ಮಧುರ ಸ್ವನಯಾ ವಿಪಂಚ್ಯಾ ಗಾಯತ್ಯನಂತಚರಿತಂ ತವ ನಾರದೋಪಿ
ಭಾಷಾಸಮಗ್ರಮಸಕೃತ್ಕರಚಾರುರಮ್ಯಂ ಶೇಷಾದ್ರಿ ಶೇಖರವಿಭೋ! ತವ ಸುಪ್ರಭಾತಂ -9-

ಭೃಂಗಾವಲೀ ಚ ಮಕರಂದ ರಸಾನುವಿದ್ಧ ಝುಂಕಾರಗೀತನಿನದೈಸ್ಸಹ ಸೇವನಾಯ
ನಿರ್ಯಾತ್ಯುಪಾಂತ ಸರಸೀ ಕಮಲೋದರೇಭ್ಯಃ ಶೇಷಾದ್ರಿ ಶೇಖರವಿಭೋ! ತವ ಸುಪ್ರಭಾತಂ -10-

ಯೋಷಾಗಣೇನ ವರದಧ್ನಿ ವಿಮಥ್ಯಮಾನೇ ಘೋಷಾಲಯೇಷು ದಧಿಮಂಥನ ತೀವ್ರಘೋಷಾಃ
ರೋಷಾತ್ಕಲಿಂ ವಿದಧತೇ ಕಕುಭಶ್ಚ ಕುಂಭಾಃ ಶೇಷಾದ್ರಿ ಶೇಖರವಿಭೋ! ತವ ಸುಪ್ರಭಾತಂ -11-

ಪದ್ಮೇಶ ಮಿತ್ರ ಶತಪತ್ರ ಗತಾಳಿವಗಾಃ ಹರ್ತುಂ ಶ್ರಿಯಂ ಕುವಲಯಸ್ಯ ನಿಜಾಂಗಲಕ್ಷ್ಮ್ಯಾ
ಭೇರಿ ನಿನಾದಮಿವ ಭಿಭ್ರತಿ ತೀವ್ರನಾದಂ ಶೇಷಾದ್ರಿ ಶೇಖರವಿಭೋ! ತವ ಸುಪ್ರಭಾತಂ -12-

ಶ್ರೀಮನ್ನಭೀಷ್ಟವರದಾಖಿಲಲೋಕ ಬಂಧೋ ಶ್ರೀ ಶ್ರೀನಿವಾಸ ಜಗದೇಕ ದಯೈಕಸಿಂಧೋ
ಶ್ರೀ ದೇವತಾಗೃಹಭುಜಾಂತರ ದಿವ್ಯಮೂರ್ತೇ ಶ್ರೀ ವೇಂಕಟಾಚಲಪತೇ! ತವ ಸುಪ್ರಭಾತಂ -13-

ಶ್ರೀಸ್ವಾಮಿ ಪುಷ್ಕರಿಣಿಕಾऽऽಪ್ಲವ ನಿರ್ಮಲಾಂಗಾಃ ಶ್ರೇಯೋऽರ್ಥಿನೋ ಹರಿವಿರಿಂಚಸನಂದನಾದ್ಯಾಃ
ದ್ವಾರೇ ವಸಂತಿ ವರವೇತ್ರ ಹತೋತ್ತಮಾಂಗಾಃ ಶ್ರೀವೇಂಕಟಾಚಲಪತೇ! ತವ ಸುಪ್ರಭಾತಂ -14-

ಶ್ರೀಶೇಷಶೈಲ ಗರುಡಾಚಲ ವೇಂಕಟಾದ್ರಿ ನಾರಾಯಣಾದ್ರಿ ವೃಷಾಭಾದ್ರಿ ವೃಷಾದ್ರಿಮುಖ್ಯಾನ್
ಆಖ್ಯಾಂ ತ್ವದೀಯವಸತೇರನಿಶಂ ವದನ್ತಿ ಶ್ರೀವೇಂಕಟಾಚಲಪತೇ! ತವ ಸುಪ್ರಭಾತಂ -15-

ಸೇವಾಪರಾಶ್ಶಿವಸುರೇಶಕೃಶಾನುಧರ್ಮ ರಕ್ಷೋಂಬುನಾಥ ಪವಮಾನ ಧನಾಧಿನಾಥಾಃ
ಬದ್ಧಾಂಜಲಿ ಪ್ರವಿಲಸನ್ನಿಜಶೀರ್ಷದೇಶಾಃ ಶ್ರೀವೇಂಕಟಾಚಲಪತೇ! ತವ ಸುಪ್ರಭಾತಮ್ -16-

ಧಾಟೀಷು ತೇ ವಿಹಗರಾಜ ಮೃಗಾಧಿರಾಜ - ನಾಗಾಧಿರಾಜ ಗಜರಾಜ ಹಯಾಧಿರಾಜಾಃ
ಸ್ವಸ್ವಾಧಿಕಾರ ಮಹಿಮಾದಿಕಮರ್ಥಯಂತೇ ಶ್ರೀ ವೇಂಕಟಾಚಲಪತೇ! ತವ ಸುಪ್ರಭಾತಮ್ -17-

ಸೂರ್ಯೇಂದುಭೌಮ ಬುಧವಾಕ್ಪತಿ ಕಾವ್ಯಸೌರಿ - ಸ್ವರ್ಭಾನುಕೇತು ದಿವಿಷತ್ಪರಿಷತ್ಪ್ರಧಾನಾಃ
ತ್ವದ್ದಾಸದಾಸ ಚರಮಾವಧಿದಾಸ ದಾಸಾಃ ಶ್ರೀವೇಂಕಟಾಚಲಪತೇ! ತವ ಸುಪ್ರಭಾತಮ್ -18-

ತ್ವತ್ಪಾದ ಧೂಳಿಭರಿತ ಸ್ಫುರಿತೋತ್ತಮಾಂಗಾಃ ಸ್ವರ್ಗಾಪವರ್ಗ ನಿರಪೇಕ್ಷ ನಿಜಾಂತರಂಗಾಃ
ಕಲ್ಪಾಗಮಾऽऽಕಲನಯಾऽऽಕುಲತಾಂ ಲಭನ್ತೇ ಶ್ರೀವೇಕಟಾಚಲಪತೇ! ತವ ಸುಪ್ರಭಾತಂ -19-

ತ್ವದ್ಗೋಪುರಾಗ್ರ ಶಿಖರಾಣಿ ನಿರೀಕ್ಷಮಾಣಾಃ ಸ್ವರ್ಗಾಪವರ್ಗಪದವೀಂ ಪರಮಾಂ ಶ್ರಯಂತ
ಮರ್ತ್ಯಾ ಮನುಷ್ಯಭುವನೇ ಮತಿಮಾಶ್ರಯಂತೇ ಶ್ರೀವೇಂಕಟಾಚಲಪತೇ! ತವ ಸುಪ್ರಭಾತಂ -20-

ಶ್ರೀಭೂಮಿನಾಯಕ ದಯಾದಿ ಗುಣಾಮೃತಾಬ್ಧೇ ದೇವಾದಿದೇವ ಜಗದೇಕ ಶರಣ್ಯಮೂರ್ತೇ
ಶ್ರೀಮನ್ನನಂತಗರುಡಾದಿಭಿರರ್ಚಿತಾಂಘ್ರೇ ಶ್ರೀವೇಂಕಟಾಚಲಪತೇ! ತವ ಸುಪ್ರಭಾತಂ -21-

ಶ್ರೀಪದ್ಮನಾಭ ಪುರುಷೋತ್ತಮ ವಾಸುದೇವ ವೈಕುಂಠ ಮಾಧವ ಜನಾರ್ದನ ಚಕ್ರಪಾಣೇ
ಶ್ರೀವತ್ಸಚಿಹ್ನ ಶರಣಾಗತ ಪಾರಿಜಾತ ಶ್ರೀವೇಂಕಟಾಚಲಪತೇ! ತವ ಸುಪ್ರಭಾತಂ -22-

ಕಂದರ್ಪದರ್ಪಹರ ಸುಂದರ ದಿವ್ಯಮೂರ್ತೇ ಕಾಂತಾಕುಚಾಂಬುರುಹ ಕುಟ್ಮಲ ಲೋಲದೃಷ್ಟೇ
ಕಲ್ಯಾಣ ನಿರ್ಮಲಗುಣಾಕರ ದಿವ್ಯಕೀರ್ತೇ ಶ್ರೀವೇಂಕಟಾಚಲಪತೇ! ತವ ಸುಪ್ರಭಾತಂ -23-

ಮೀನಾಕೃತೇ! ಕಮಠ! ಕೋಲ! ನೃಸಿಂಹ ವರ್ಣಿನ್! ಸ್ವಾಮಿನ್ ಪರಶ್ವಥ ತಪೋಧನ! ರಾಮಚಂದ್ರ!
ಶೇಷಾಂಶರಾಮ! ಯದುನಂದನ ! ಕಲ್ಕಿರೂಪ ಶ್ರೀವೇಂಕಟಾಚಲಪತೇ! ತವ ಸುಪ್ರಭಾತಂ -24-

ಏಲಾಲವಂಗ ಘನಸಾರಸುಗಂಧಿ ತೀರ್ಥಂ ದಿವ್ಯಂ ವಿಯತ್ಸರಿತಿ ಹೇಮಘಟೇಷು ಪೂರ್ಣಮ್
ಧೃತ್ವಾಽದ್ಯ ವೈದಿಕಶಿಖಾಮಣಯಃ ಪ್ರಹೃಷ್ಟಾಃ ತಿಷ್ಠಂತಿ ವೇಂಕಟಪತೇ! ತವ ಸುಪ್ರಭಾತಂ -25-

ಭಾಸ್ವಾನುದೇತಿ ವಿಕಚಾನಿ ಸರೋರುಹಾಣಿ ಸಂಪೂರಯಂತಿ ನಿನದೈಃ ಕಕುಭೋ ವಿಹಂಗಾಃ
ಶ್ರೀವೈಷ್ಣವಾಸ್ಸತತ ಮರ್ಥಿತ ಮಂಗಳಾಸ್ತೇ ಧಾಮಾಶ್ರಯಂತಿ ತವ ವೇಂಕಟ! ಸುಪ್ರಭಾತಮ್ -26-

ಬ್ರಹ್ಮಾದಯ ಸ್ಸುರವರಾಸ್ಸ ಮಹರ್ಷಯಸ್ತೇ ಸಂತಸ್ಸನಂದನ ಮುಖಾಸ್ತ್ವಥ ಯೋಗಿವರ್ಯಾಃ
ಧಾಮಾಂತಿಕೇ ತವ ಹಿ ಮಂಗಳವಸ್ತುಹಸ್ತಾಃ ಶ್ರೀವೇಂಕಟಾಚಲಪತೇ! ತವ ಸುಪ್ರಭಾತಂ -27-

ಲಕ್ಷ್ಮೀನಿವಾಸ ನಿರವದ್ಯ ಗುಣೈಕಸಿಂಧೋ ಸಂಸಾರ ಸಾಗರ ಸಮುತ್ತರಣೈಕಸೇತೋ
ವೇದಾಂತವೇದ್ಯ ನಿಜವೈಭವ ಭಕ್ತಭೋಗ್ಯ ಶ್ರೀವೇಂಕಟಾಚಲಪತೇ! ತವ ಸುಪ್ರಭಾತಂ -28-

ಇತ್ಥಂ ವೃಷಾಚಲಪತೇರಿಹ ಸುಪ್ರಭಾತಂ ಯೇ ಮಾನವಾಃ ಪ್ರತಿದಿನಂ ಪಠಿತುಂ ಪ್ರವೃತ್ತಾಃ
ತೇಷಾಂ ಪ್ರಭಾತ ಸಮಯೇ ಸ್ಮೃತಿರಂಗಭಾಜಾಂ ಪ್ರಜ್ಞಾಂ ಪರಾರ್ಥ ಸುಲಭಾಂ ಪರಮಾಂ ಪ್ರಸೂತೇ -29-

# ಶ್ರೀ ವೇಂಕಟೇಶ್ವರ ಸ್ತೋತ್ರ ಃ

ಕಮಲಾಕುಚಚೂಚುಕ ಕುಂಕುಮತೋ
ನಿಯತಾರುಣಿತಾತುಲ ನೀಲತನೋ
ಕಮಲಾಯತಲೋಚನ ಲೋಕಪತೇ
ವಿಜಯೀ ಭವ ವೇಂಕಟ ಶೈಲಪತೇ -1-

ಸ ಚತುರ್ಮುಖ ಷಣ್ಮುಖ ಪಂಚಮುಖ
ಪ್ರಮುಖಾಖಿಲದೈವತಮೌಳಿಮಣೇ
ಶರಣಾಗತವತ್ಸಲ ಸಾರನಿಧೇ
ಪರಿಪಾಲಯ ಮಾಂ ವೃಷಶೈಲಪತೇ -2-

ಅತಿವೇಲತಯಾ ತವ ದುರ್ವಿಷಹೈ
ರನುವೇಲಕೃತೈರಪರಾಧಶತೈಃ
ಭರಿತಂ ತ್ವರಿತಂ ವೃಷಶೈಲಪತೇ
ಪರಯಾ ಕೃಪಯಾ ಪರಿಪಾಹಿ ಹರೇ -3-

ಅಧಿವೇಂಕಟಶೈಲಮುದಾರಮತೇ
ರ್ಜನತಾಭಿಮತಾಧಿಕದಾನರತಾತ್

ಪರದೇವತಯಾ ಗದಿತಾನ್ನಿಗಮೈಃ
ಕಮಲಾದಯಿತಾನ್ನಪರಂ ಕಲಯೇ -4-

ಕಲವೇಣುರವಾವಶ ಗೋಪವಧೂ
ಶತಕೋಟಿವೃತಾತ್ ಸ್ಮರಕೋಟಿಸಮಾತ್
ಪ್ರತಿವಲ್ಲವಿಕಾಭಿಮತಾತ್ಸುಖದಾತ್
ವಸುದೇವಸುತಾನ್ನಪರಂ ಕಲಯೇ -5-

ಅಭಿರಾಮಗುಣಾಕರ ದಾಶರಥೇ
ಜಗದೇಕದನುರ್ಧರ ಧೀರಮತೇ
ರಘನಾಯಕ ರಾಮ ರಮೇಶ ವಿಭೋ
ವರದೋ ಭವ ದೇವ ದಯಾಜಲಧೇ -6-

ಅವನೀತನಯಾ ಕಮನೀಯಕರಂ
ರಜನೀಕರ ಚಾರು ಮುಖಾಂಬುರುಹಂ
ರಜನೀಚರರಾಜ ತಮೋಮಿಹಿರಂ
ಮಹನೀಯ ಮಹಂ ರಘುರಾಮಮಯೇ -7-

ಸುಮುಖಂ ಸುಹೃದಂ ಸುಲಭಂ ಸುಖದಂ
ಸ್ವನುಜಂ ಚ ಸುಕಾಯಮಮೋಘಶರಮ್
ಅಪಹಾಯ ರಘೂದ್ವಹ ಮನ್ಯಮಹಂ
ನ ಕಥಂಚನ ಕಂಚನ ಜಾತು ಭಜೇ -8-

ವಿನಾ ವೇಂಕಟೇಶಂ ನನಾಥೋ ನ ನಾಥಃ
ಸದಾ ವೇಂಕಟೇಶಂ ಸ್ಮರಾಮಿ ಸ್ಮರಾಮಿ
ಹರೇ ವೇಂಕಟೇಶ ಪ್ರಸೀದ ಪ್ರಸೀದ
ಪ್ರಿಯಂ ವೇಂಕಟೇಶ ಪ್ರಯಚ್ಛ ಪ್ರಯಚ್ಛ -9-

ಅಹಂ ದೂರತಸ್ತೇ ಪದಾಂಭೋಜಯುಗ್ಮ
ಪ್ರಣಮೇಚ್ಛಯಾಽಽಗತ್ಯ ಸೇವಾಂ ಕರೋಮಿ
ಸಕೃತ್ಸೇವಯಾ ನಿತ್ಯಸೇವಾಫಲಂ ತ್ವಂ
ಪ್ರಯಚ್ಛ ಪ್ರಯಚ್ಛ ಪ್ರಭೋ ವೇಂಕಟೇಶ -10-

ಅಜ್ಞಾನಿನಾ ಮಯಾ ದೋಷಾನ್ ಅಶೇಷಾನ್ ವಿಹಿತಾನ್ ಹರೇ
ಕ್ಷಮಸ್ವ ತ್ವಂ ಕ್ಷಮಸ ತ್ವಂ ಶೇಷಶೈಲ ಶಿಖಾಮಣೇ -11-

# ಶ್ರೀ ವೇಂಕಟೇಶ ಪ್ರಪತ್ತಿಃ

ಈಶಾನಾಂ ಜಗತೋಽಸ್ಯ ವೇಂಕಟಪತೇಃ ವಿಷ್ಣೋಃ ಪರಾಂ ಪ್ರೇಯಸೀಂ
ತದ್ವಕ್ಷಃಸ್ಥಲ ನಿತ್ಯ ವಾಸರಸಿಕಾಂ ತತ್ ಕ್ಷಾಂತಿ ಸಂವರ್ಧಿನೀಮ್
ಪದ್ಮಾಲಂಕೃತಪಾಣಿಪಲ್ಲವಯುಗಾಂ ಪದ್ಮಾಸನಸ್ಥಾಂ ಶ್ರಿಯಂ
ವಾತ್ಸಲ್ಯಾದಿಗುಣೋಜ್ಜ್ವಲಾಂ ಭಗವತೀಂ ವಂದೇ ಜಗನ್ಮಾತರಮ್ -1-

ಶ್ರೀಮನ್ ಕೃಪಾಜಲನಿಧೇ ಕೃತಸರ್ವಲೋಕ
ಸರ್ವಜ್ಞ ಶಕ್ತ ನತವತ್ಸಲ ಸರ್ವಶೇಷಿನ್
ಸ್ವಾಮಿನ್ ಸುಶೀಲಸುಲಭಾಶ್ರಿತಪಾರಿಜಾತ
ಶ್ರೀವೇಂಕಟೇಶ ಚರಣೌ ಶರಣಂ ಪ್ರಪದ್ಯೇ -2-

ಆನೂಪುರಾರ್ಪಿತ ಸುಜಾತ ಸುಗಂಧಿ ಪುಷ್ಪ -
ಸೌರಭ್ಯ ಸೌರಭಕರೌ ಸಮಸನ್ನಿವೇಶೌ
ಸೌಮ್ಯೌ ಸದಾಽನುಭವನೇಽಪಿ ನವಾನುಭಾವ್ಯೌ
ಶ್ರೀವೇಂಕಟೇಶ ಚರಣೌ ಶರಣಂ ಪ್ರಪದ್ಯೇ -3-

ಸದ್ಯೋವಿಕಾಸಿ ಸಮುದಿತ್ವರ ಸಾಂದ್ರ ರಾಗ -
ಸೌರಭ್ಯನಿರ್ಭರ ಸರೋರುಹ ಸಾಮ್ಯವಾರ್ತಾಮ್
ಸಮ್ಯಕ್ಷು ಸಾಹಸಪದೇಷು ವಿಲೇಖಯಂತೌ
ಶ್ರೀವೇಂಕಟೇಶ ಚರಣೌ ಶರಣಂ ಪ್ರಪದ್ಯೇ -4-

ರೇಖಾಮಯಧ್ವಜ ಸುಧಾಕಲಶಾತಪತ್ರ -
ವಜ್ರಾಂಕುಶಾಂಬುರುಹ ಕಲ್ಪಕ ಶಂಖಚಕ್ರೈಃ
ಭವ್ಯೈರಲಂಕೃತತಲೌ ಪರತತ್ತ್ವ ಚಿಹ್ನೈಃ
ಶ್ರೀವೇಂಕಟೇಶ ಚರಣೌ ಶರಣಂ ಪ್ರಪದ್ಯೇ -5-

ತಾಮ್ರೋದರದ್ಯುತಿಪರಾಜಿತಪದ್ಮರಾಗೌ
ಬಾಹ್ಯೈರ್ಮಹೋಭಿರಭಿಭೂತಮಹೇಂದ್ರನೀಲೌ
ಉದ್ಯನ್ನಖಾಂಶುಭಿರುದಸ್ತಶಶಾಂಕಭಾಸೌ
ಶ್ರೀವೇಂಕಟೇಶ ಚರಣೌ ಶರಣಂ ಪ್ರಪದ್ಯೇ -6-

ಸಪ್ರೇಮಭೀತಿ ಕಮಲಾಕರಪಲ್ಲವಾಭ್ಯಾಂ
ಸಂವಾಹನೇऽಪಿ ಸಪದಿ ಕ್ಲಮಮಾದಧಾನೌ
ಕಾಂಚಾವವಾಙ್ಮನಸಗೋಚರ ಸೌಕುಮಾರ್ಯೌ
ಶ್ರೀವೇಂಕಟೇಶ ಚರಣೌ ಶರಣಂ ಪ್ರಪದ್ಯೇ -7-

ಲಕ್ಷ್ಮೀ ಮಹೀ ತದನುರೂಪ ನಿಜಾನುಭಾವ
ನೀಳಾದಿ ದಿವ್ಯ ಮಹಿಷೀಕರಪಲ್ಲವಾನಾಮ್
ಆರುಣ್ಯ ಸಂಕ್ರಮಣತಃ ಕಿಲ ಸಾಂದ್ರರಾಗೌ
ಶ್ರೀವೇಂಕಟೇಶ ಚರಣೌ ಶರಣಂ ಪ್ರಪದ್ಯೇ -8-

ನಿತ್ಯಾನಮದ್ವಿಧಿಶಿವಾದಿಕಿರೀಟಕೋಟಿ -
ಪ್ರತ್ಯುಪ್ತದೀಪ್ತ ನವರತ್ನಮಹಃ ಪ್ರರೋಹೈಃ
ನೀರಾಜನಾವಿಧಿಮುದಾರಮುಪಾದಧಾನೌ
ಶ್ರೀವೇಂಕಟೇಶ ಚರಣೌ ಶರಣಂ ಪ್ರಪದ್ಯೇ -9-

ವಿಷ್ಣೋಃ ಪದೇ ಪರಮ ಇತ್ಯುದಿತಪ್ರಶಂಸೌ
ಯೌ ಮಧ್ವಉತ್ಸ ಇತಿ ಭೋಗ್ಯತಯಾऽಪ್ಯುಪಾತ್ತೌ
ಭೂಯಸ್ತಥೇತಿ ತವ ಪಾಣಿತಲಪ್ರದಿಷ್ಟೌ
ಶ್ರೀವೇಂಕಟೇಶ ಚರಣೌ ಶರಣಂ ಪ್ರಪದ್ಯೇ -10-

ಪಾರ್ಥಾಯ ತತ್ಸದೃಶ ಸಾರಥಿನಾ ತ್ವಯೈವ
ಯೌ ದರ್ಶಿತೌ ಸ್ವಚರಣೌ ಶರಣಂ ವ್ರಜೇತಿ
ಭೂಯೋಽಪಿ ಮಹ್ಯಮಿಹ ತೌ ಕರದರ್ಶಿತೌ ತೇ
ಶ್ರೀವೇಂಕಟೇಶ ಚರಣೌ ಶರಣಂ ಪ್ರಪದ್ಯೇ -11-

ಮನ್ಮೂರ್ಧ್ನಿ ಕಾಳಿಯಫಣೇ ವಿಕಟಾಟವೀಷು
ಶ್ರೀವೇಂಕಟಾದ್ರಿ ಶಿಖರೇ ಶಿರಸಿ ಶ್ರುತೀನಾಮ್
ಚಿತ್ತೇऽಪ್ಯ ನನ್ಯ ಮನಸಾಂ ಸಮಮಾಹಿತೌ ತೇ
ಶ್ರೀವೇಂಕಟೇಶ ಚರಣೌ ಶರಣಂ ಪ್ರಪದ್ಯೇ -12-

ಆ ಮ್ಲಾನ ಹೃಷ್ಯ ದವನೀತಲ ಕೀರ್ಣಪುಷ್ಪೌ
ಶ್ರೀವೇಂಕಟಾದ್ರಿ ಶಿಖರಾಭರಣಾಯಮಾನೌ
ಆನಂದಿತಾಖಿಲಮನೋನಯನೌ ತವೈತೌ
ಶ್ರೀವೇಂಕಟೇಶ ಚರಣೌ ಶರಣಂ ಪ್ರಪದ್ಯೇ -13-

ಪ್ರಾಯಃ ಪ್ರಪನ್ನ ಜನತಾ ಪ್ರಥಮಾವಗಾಹ್ಯೌ
ಮಾತುಃಸ್ತನಾವಿವ ಶಿಶೋರಮೃತಾಯಮಾನೌ
ಪ್ರಾಪ್ತೌ ಪರಸ್ಪರತುಲಾಮತುಲಾಂತರೌ ತೇ
ಶ್ರೀವೇಂಕಟೇಶ ಚರಣೌ ಶರಣಂ ಪ್ರಪದ್ಯೇ -14-

ಸತ್ತ್ವೋತ್ತರೈಸ್ಸತತಸೇವ್ಯ ಪದಾಂಬುಜೇನ
ಸಂಸಾರತಾರಕ ದಯಾರ್ದ್ರದೃಗಂಚಲೇನ
ಸೌಮ್ಯೋಪಯಂತೃಮುನಿನಾ ಮಮ ದರ್ಶಿತೌ ತೇ
ಶ್ರೀವೇಂಕಟೇಶ ಚರಣೌ ಶರಣಂ ಪ್ರಪದ್ಯೇ -15-

ಶ್ರೀಶ ಶ್ರಿಯಾ ಘಟಿಕಯಾ ತ್ವದುಪಾಯಭಾವೇ
ಪ್ರಾಪ್ಯೇ ತ್ವಯಿ ಸ್ವಯಮುಪೇಯತಯಾ ಸ್ಫುರಂತ್ಯಾ
ನಿತ್ಯಾ ಶ್ರಿತಾಯ ನಿರವದ್ಯಗುಣಾಯ ತುಭ್ಯಂ
ಸ್ಯಾಂ ಕಿಂಕರೋ ವೃಷಗಿರೀಶ ನ ಜಾತು ಮಹ್ಯಮ್ -16-

# ಶ್ರೀ ವೇಂಕಟೇಶ್ವರ ಮಂಗಳಾಶಾಸನ

ಶ್ರಿಯಃ ಕಾಂತಾಯ ಕಲ್ಯಾಣ ನಿಧಯೇ ನಿಧಯೇಽರ್ಥಿನಾಮ್
ಶ್ರೀವೇಂಕಟನಿವಾಸಾಯ ಶ್ರೀನಿವಾಸಾಯ ಮಂಗಳಮ್ -1-

ಲಕ್ಷ್ಮೀಸವಿಭ್ರಮಾಲೋಕ ಸುಭ್ರೂ ವಿಭ್ರಮ ಚಕ್ಷುಷೇ
ಚಕ್ಷುಷೇ ಸರ್ವಲೋಕಾನಾಂ ವೇಂಕಟೇಶಾಯ ಮಂಗಳಮ್ -2-

ಶ್ರೀ ವೇಂಕಟಾದ್ರಿಶೃಂಗಾಗ್ರ ಮಂಗಳಾಭರಣಾಂಘ್ರಯೇ
ಮಂಗಳಾನಾಂ ನಿವಾಸಾಯ ಶ್ರೀನಿವಾಸಾಯ ಮಂಗಳಮ್ -3-

ಸರ್ವಾವಯವ ಸೌಂದರ್ಯ ಸಂಪದಾ ಸರ್ವಚೇತಸಾಮ್
ಸದಾ ಸಮ್ಮೋಹನಾಯಾಸ್ತು ವೇಂಕಟೇಶಾಯ ಮಂಗಳಮ್ -4-

ನಿತ್ಯಾಯ ನಿರವದ್ಯಾಯ ಸತ್ಯಾನಂದ ಚಿದಾತ್ಮನೇ
ಸರ್ವಾಂತರಾತ್ಮನೇ ಶ್ರೀಮತ್ ವೇಂಕಟೇಶಾಯ ಮಂಗಳಮ್ -5-

ಸ್ವತಸ್ಸರ್ವವಿದೇ ಸರ್ವ ಶಕ್ತಯೇ ಸರ್ವಶೇಷಿಣೇ
ಸುಲಭಾಯ ಸುಶೀಲಾಯ ವೇಂಕಟೇಶಾಯ ಮಂಗಳಮ್ -6-

ಪರಸ್ಮೈ ಬ್ರಹ್ಮಣೇ ಪೂರ್ಣ ಕಾಮಾಯ ಪರಮಾತ್ಮನೇ
ಪ್ರಯುಂಜೇ ಪರತತ್ವಾಯ ವೇಂಕಟೇಶಾಯ ಮಂಗಳಮ್ -7-

ಆಕಾಲತತ್ವಮಶ್ರಾನ್ತ ಮಾತ್ಮನಾಮನುಪಶ್ಯತಾಮ್
ಅತೃಪ್ತ್ಯ ಮೃತರೂಪಾಯ ವೇಂಕಟೇಶಾಯ ಮಂಗಳಮ್ -8-

ಪ್ರಾಯಸ್ಸ್ವ ಚರಣೌ ಪುಂಸಾಂ ಶರಣ್ಯತ್ವೇನ ಪಾಣಿನಾ
ಕೃಪಯಾಽದಿಶತೇ ಶ್ರೀಮತ್ ವೇಂಕಟೇಶಾಯ ಮಂಗಳಮ್ -9-

ದಯಾಽಮೃತತರಂಗಿಣ್ಯಾಸ್ತರಂಗೈ ರಿವ ಶೀತಲೈಃ
ಅಪಾಂಗೈ ಸ್ಸಿಂಚತೇ ವಿಶ್ವಂ ವೇಂಕಟೇಶಾಯ ಮಂಗಳಮ್ -10-

ಸ್ರಗ್ಭೂಷಾಂಬರ ಹೇತೀನಾಂ ಸುಷಮಾವಹ ಮೂರ್ತಯೇ
ಸರ್ವಾರ್ತಿ ಶಮನಾಯಾಸ್ತು ವೇಂಕಟೇಶಾಯ ಮಂಗಳಂ -11-

ಶ್ರೀವೈಕುಂಠ ವಿರಕ್ತಾಯ ಸ್ವಾಮಿಪುಷ್ಕರಿಣೀತಟೇ
ರಮಯಾ ರಮಮಾಣಾಯ ವೇಂಕಟೇಶಾಯ ಮಂಗಳಮ್ -12-

ಶ್ರೀಮತ್ಸುಂದರಜಾಮಾತೃಮುನಿಮಾನಸವಾಸಿನೇ
ಸರ್ವಲೋಕ ನಿವಾಸಾಯ ಶ್ರೀನಿವಾಸಾಯ ಮಂಗಳಮ್ -13-

ಮಂಗಳಾಶಾಸನಪರೈಃ ಮದಾಚಾರ್ಯ ಪುರೋಗಮೈಃ
ಸರ್ವೈಶ್ಚ ಪೂರ್ವೈರಾಚಾರ್ಯೈಃ ಸತ್ಕ ೃತಾಯಾಸ್ತು ಮಂಗಳಮ್ -14-